*ಶ್ರೀ ಎಸ್. ಗೋಪಾಲಗೌಡ (ಸಾಗರ-ಹೊಸನಗರ).—ಸಭೆಯ ಮುಂದೆ ಮಂಡಿಸಿರತಕ್ಕಂಥ 56-57ನೇ ಇಸವಿ ಅಂದಾಜು ಆಯವ್ಯಯದ ಮೇಲೆ ನನ್ನ ವಿಮರ್ಶೆಗಳನ್ನು ಕೊಡುವುದಕ್ಕೆ ಮುಂಚೆ ನಾನು ತಮ್ಮ ಗಮನವನ್ನ ಒಂದು ವಿಷಯಕ್ಕೆ ಸೆಳೆಯ ಬಯಸುತ್ತೇನೆ. ತಮಗೆ ಈಗಾಗಲೇ ಗೊತ್ತಿರುವ ಹಾಗೆ ಕೇಂದ್ರದ ಅಂದಾಜು ಪಟ್ಟಿ ಲೋಕಸಭೆಯ ಮುಂದೆ ಅದನ್ನು ಇಡುವುದಕ್ಕೆ ಮುಂಚೆಯೇ ಅದು ಬಯಲಾಗಿದ್ದು ಆ ವಿಷಯದಲ್ಲಿ ತನಿಖೆ ನಡೆಯುತ್ತಿದೆ ಎಂಬುದು ಎಲ್ಲರಿಗೂ ಗೊತ್ತಿರತಕ್ಕ ವಿಷಯ. ನಮ್ಮ ಸಂಸ್ಥಾನದ ಆಯವ್ಯಯ ಪಟ್ಟಿ ಅಂದಾಜನ್ನು ಸಭೆಯ ಮುಂದೆ ಮಂಡಿಸುವುದಕ್ಕೆ ಮುಂಚೆ ಮದರಾಸಿನ ಕೆಲವು ಪತ್ರಿಕೆಗಳಿಗೆ ಕಳುಹಿಸಿ ಕೊಡಲಾಗಿತ್ತು ಎಂದು ಹೇಳಿ ಈಗ ಖಚಿತವಾಗಿ ತಿಳಿದುಬಂದಿದೆ. ಪತ್ರಿಕೆಗಳಲ್ಲೂ ಕೂಡ ಈ ವಿಷಯ ಪ್ರಕಟವಾಗಿದೆ. ಹಿಂದೆ ಇದೇ ಹಣಕಾಸಿನ ಮಂತ್ರಿಗಳು ಯಾವುದೋ ಒಂದು ಪತ್ರಿಕೆಗೆ ಮುಂಚಿತವಾಗಿ ಕೊಟ್ಟು ಇಲ್ಲಿ ಆ ಭಾಷಣವನ್ನು ಓದುತ್ತಿರುವ ಕಾಲದಲ್ಲೇ ಆ ಪತ್ರಿಕೆ ತನ್ನ ಲೇಖನದೊಂದಿಗೆ ಪ್ರಕಟಣೆಯಾಗಿ ಹೊರಬಂತು. ಆ ವಿಷಯ ಈ ಸಭೆಯಲ್ಲಿ ಪ್ರಸ್ತಾಪವಾಯಿತು. ಇದು ಸಭೆಗೆ ಒಂದು ರೀತಿಯ ಅಗೌರವ ಮಾಡತಕ್ಕ ಕೆಲಸ ಮಾತ್ರವಲ್ಲ ಆದರಿಂದ ಆರ್ಥಿಕ ವ್ಯವಸ್ಥೆಗೇ ಹಾನಿ ಕೂಡ ಉಂಟಾಗುತ್ತದೆ ಎಂದು ಹೇಳಿ ನಾವು ತಿಳಿದುಕೊಳ್ಳಬಹುದು. ಆದ್ದರಿಂದ ಸಂಬಂಧಪಟ್ಟ ಮಂತ್ರಿಗಳು ಈ ವಿಷಯದಲ್ಲಿ ಈಗ ಬಂದಿರತಕ್ಕ ವರದಿಯ ಮೇಲೆ ಅವರ ಸ್ಪಷ್ಟ ಹೇಳಿಕೆಯನ್ನು ಕೊಡಬೇಕು. ಆ ರೀತಿ ನಡೆದಿದ್ದರೆ ಅದಕ್ಕೆ ತಾವು ಸೂಕ್ತಕ್ರಮವನ್ನು ಕೈಕೊಳ್ಳಬೇಕು ಎಂದು ಹೇಳಿ ನಾನು ಪ್ರಾರ್ಥಿಸಿಕೊಳ್ಳುತ್ತೇನೆ.

Sri H. K. VEERANNA GOWDH (Maddur).—I want to speak for two hours. If we are given only 15 minutes, better that we do not speak at all. If you do not permit me to speak for two hours, I may as well not speak at all.

Mr. SPEAKER.—If the Hon'ble Member had spoken yesterday or the day before yesterday, he would have had a chance to speak for some length of time. But today there is no time. I only appeal to Hon'ble Members.

Sri P. R. RAMAIYA (Basavanagudi).—On a point of information, Sir.

Mr. SPEAKER.—The Member has not yielded.

ಶ್ರೀ ಎಸ್. ಗೋಪಾಲಗೌಡ.—ಈ ವರ್ಷದ ಆಯವ್ಯಯ ಸರ್ಕಾರದವರು ಹೇಳಿರುವ ಪ್ರಕಾರ ಅಗಾಧ ಕೊರತೆಯಿಂದ ಕೂಡಿದೆ ಮತ್ತು ಅನಿವಾರ್ಯದ ಅಂದಾಜು ಎಂದು ಹೇಳಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಇದು ಬರೀ ಅಗಾಧ ಕೊರತೆಯಿಂದ ಕೂಡಿರತಕ್ಕ ಮತ್ತು ಅನಿವಾರ್ಯದ ಆಯವ್ಯಯ ಮಾತ್ರವಲ್ಲ. . . .

Sri P. R. RAMAIYA.—On a point of order, Sir. The Hon'ble Member Sri S. Gopala Gowda referred to some leakage of the Budget. He referred to something that happened last year and he has also referred to something that happened this year. I was not able to hear him exactly, what he implied, whether there was any leakage of the Budget this year in this Assembly or whether he referred to leakage that took place in the Central Assembly. As far as I know, as one who knows the working of a newspaper concern, it is possible. . . .

Mr. SPEAKER.—No, no. There is no point of order. The Member can reply to all these in his speech. Why do you waste the time of the House?

Sri P. R. RAMAIYA.—The point is whether he referred to the leakage of the Budget this year.

Mr. SPEAKER.—That is no point of order. It is a request for information. Sri Gopala Gowda.

ಶ್ರೀ ಎಸ್. ಗೋಪಾಲಗೌಡ.—ವಾಸ್ತವವಾಗಿ ನೋಡಿದರೆ ಈ ಅಂದಾಜು ಅತಂತ್ರ, ಅಭದ್ರ ಹಾಗೂ ಅಪಾಯಕಾರೀ ಆಯವ್ಯಯವಾಗಿದೆ.

Sri P. R. RAMAIYA.—He has not replied to my point, Sir.

Mr. SPEAKER.—He has stated already.

ಶ್ರೀ ಎಸ್. ಗೋಪಾಲಗೌಡ.—ಇದು ಬರೀ ಮೈಸೂರು ಸಂಸ್ಥಾನದ ಆಯವ್ಯಯದ ಚಿತ್ರ ಮಾತ್ರವಲ್ಲ. ಇಡೀ ಭಾರತದಲ್ಲಿ ಇಂದು ರಾಜ್ಯಭಾರ ನಡೆಸುತ್ತಾ ಇರತಕ್ಕ ಕಾಂಗ್ರೆಸ್ ಸರ್ಕಾರಗಳ ಬಂಡವಾಳ ಕೋರ ನೀತಿಯನ್ನು ಪ್ರತಿಬಿಂಬಿಸುವ ಮತ್ತು ಬಂಡವಾಳ ಶಾಹಿಯನ್ನು ತಬ್ಬಿ ಆಶ್ರಯಿಸಿ ಕೊಂಡಿರುವ ಸುಲಿಗೆ ಮತ್ತು ಶೋಷಣೆಯ ತಳಹದಿಯ ಮೇಲೆ ನಿರ್ಮಿಸಿರುವ ಪ್ರತಿಗಾಮಿ ಆಯವ್ಯಯದ ಅಂದಾಜು ಎಂದು ಹೇಳುವುದರಲ್ಲಿ ಯಾವ ಅನುಮಾನವೂ ಇಲ್ಲ. ಅಥವಾ ಅದು ಸತ್ಯಕ್ಕೆ ದೂರವಾದ ಮಾತೂ ಕೂಡ ಅಲ್ಲ. ಇದನ್ನು ಯಾವ ಆರ್ಥಿಕ ತಜ್ಞರು ಪರೀಕ್ಷೆ ಮಾಡಿದರೂ ಕೂಡ, ವಾಸ್ತವಿಕತೆಯ ದೃಷ್ಟಿಯಿಂದ ನಾನು ಹೇಳಿರತಕ್ಕ ಮಾತು ನೂರಕ್ಕೆ ನೂರು ನಿಜ ಎಂದು ಕಂಡುಕೊಳ್ಳುವುದಕ್ಕೆ ಸಾಧ್ಯ. ಈ ದಿನ ನಮ್ಮ ಮುಂದೆ ಇಟ್ಟಿರತಕ್ಕ ಆಯವ್ಯಯದಲ್ಲಿ ಅದು ಹೇಗೆ ಅತಂತ್ರ ಎಂದು ನೋಡುವುದಾದರೆ ಐದು ಕೋಟಿ ರೂಪಾಯಿ ಹೊರಗಿನ ಸಾಲ, 12 ಕೋಟಿ ರೂಪಾಯಿ ಕೇಂದ್ರದ ಸಾಲ ಇದರಮೇಲೆ ಈ ಅಭಿವೃದ್ಧಿ ಕಾರ್ಯಗಳು ಮತ್ತು ಬಂಡವಾಳದ ಕಾರ್ಯಗಳು ನಡೆಯಬೇಕಾಗಿವೆ.

1 P.M.

ಅವರೇ ಹೇಳಿರುವ ಪ್ರಕಾರ ಮುಂದಿನವರ್ಷ ದ್ವಿತೀಯ ಯೋಜನೆಯ ಕಾರ್ಯಕ್ರಮಗಳ ಪ್ರಗತಿಯು ಕುಂಠಿತವಾಗುವುದು ಅನಿವಾರ್ಯ. ಅಂಥ ಸನ್ನಿವೇಶ ಬರಲಾರದೆಂದು ನನ್ನ ನಿರೀಕ್ಷೆ. ಬರೀ ಒಂದು ಪಯಸ್ ಹೋಪ್ ಇದೆ. ಯಾಕೆಂದರೆ ಕೇಂದ್ರಸರ್ಕಾರಕ್ಕೆ ಆಕಾಶದಿಂದ ಹಣ ಬರುವುದಿಲ್ಲವೆನ್ನುವುದು ಎಲ್ಲರಿಗೂ ಗೊತ್ತಿರತಕ್ಕ ಅಂಶ. ಆದುದರಿಂದ ಕೇಂದ್ರ ಸರ್ಕಾರದವರಿಗಾದರೂ ಪ್ರಾಂತಗಳಲ್ಲಿ ಬಹುತೇಕ ಬಾಳುತ್ತ ಇರತಕ್ಕ ವ್ಯಕ್ತಿಗಳ ಮತ್ತು ಸಂಸ್ಥೆಗಳ ಉತ್ಪಾದನಾ ಶಕ್ತಿಯನ್ನು ಅವಲಂಬಿಸಿ ಅವರ ಆರ್ಥಿಕ ಪದ್ಧತಿ ಮತ್ತು ಅವರ ಬಂಡವಾಳ ರೂಪಿತವಾಗುತ್ತದೆಯೇ ಹೊರತು ಬೇರೆ ಇನ್ನು ಯಾವ ಕಾರ್ಯಕ್ರಮದಿಂದಲೂ ಹಣ ಒದಗುವುದಿಲ್ಲ. ಇಂಥ ಸಂದರ್ಭದಲ್ಲಿ ಈ ಆಯವ್ಯಯವನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಇದರಲ್ಲಿ ಒಂದು ಸಂತೋಷವನ್ನು ಆರ್ಥಿಕ ಮಂತ್ರಿಗಳು ವ್ಯಕ್ತಪಡಿಸಿದರು, ನಾನು ಹೊಸ ತೆರಿಗೆಗಳನ್ನು ಹಾಕುವುದಿಲ್ಲವೆಂದು. ಅವರು ಹೇಳುವ ಪ್ರಕಾರ "ಈ ಸಾರಿ ಯಾವ ತೆರಿಗೆಯನ್ನಾದರೂ ಹೆಚ್ಚಿಸುವ ಸಲಹೆಯನ್ನಾಗಲಿ, ಹೊಸ ತೆರಿಗೆಗಳನ್ನು ವಿಧಿಸುವ ಸಲಹೆಯನ್ನಾಗಲಿ, ತಮ್ಮ ಮುಂದಿಡುವುದಿಲ್ಲ." ಎಂದು ಇದೆ. ಇದರಲ್ಲಿ ಬರೀ ಅಂಕಿಅಂಶಗಳ ವಿಷಯದಲ್ಲಿ ಮಾತ್ರವಲ್ಲ ಇನ್ನೂ ಕೆಲವು ವಿಷಯಗಳಲ್ಲಿ ಅರ್ಥವಾಗದ ರೀತಿಯಲ್ಲಿ ಸತ್ಯಕ್ಕೆ ದೂರವಾದ ಹೇಳಿಕೆಗಳನ್ನು ಕೂಡ ಕೊಡಲಾಗಿದೆ ಎನ್ನುವುದಕ್ಕೆ ಈ ಮಾತು ಸಾಕ್ಷಿ. ಇದರಲ್ಲಿ ಹುಟ್ಟುವಳಿಯು ಹೆಚ್ಚಾಗಿರುವುದಕ್ಕೆ ಕ್ರಮಗಳನ್ನು ಸೂಚಿಸುತ್ತ ಹೇಳಿದ್ದಾರೆ. "ಆದಾಯದ ಹೆಚ್ಚುವರಿಗೆ ಸಹಾಯವಾಗುವ ಅಂಶಗಳೆಂದರೆ: (1) ತಿದ್ದುಪಾಟಾದ ವಿದ್ಯುಚ್ಛಕ್ತಿಯ ದರಗಳನ್ನು ಒಪ್ಪುವುದು." ಇದರಿಂದ ಈಗಿರುವ ವಿದ್ಯುಚ್ಛಕ್ತಿಯ ಮೇಲಿನ ದರಗಳನ್ನು ಹೆಚ್ಚಿಸುತ್ತಾರೆನ್ನುವುದು ಗೊತ್ತಾಗುತ್ತದೆ. "(2) ಆಸ್ತಿಗಳ ಮೇಲಿನ ತೆರಿಗೆಯನ್ನು ವ್ಯವಸಾಯದ ಜಮೀನುಗಳಿಗೂ ಅನ್ವಯಿಸುವುದು, (3) ಹುಟ್ಟುವಳಿಯ ಕೊರತೆಗೆ (Revenue Gap) ಸಂಬಂಧಪಟ್ಟ ಗ್ಯಾರಂಟಿಯಾದ ಹಣವನ್ನು ಕಡಿಮೆಮಾಡದೆ ಇರುವುದು." ಎಂದು ಹೇಳಿದ್ದಾರೆ. ಆದರೆ ಕೊನೆಯಲ್ಲಿ, concluding paragraph ನಲ್ಲಿ ಆ ರೀತಿ ಭಾಷಣವನ್ನು ಮುಕ್ತಾಯಗೊಳಿಸಿದ್ದಾರೆ. ಆದುದರಿಂದ ಒಂದು ಮಾತಿಗೂ ಇನ್ನೊಂದು ಮಾತಿಗೂ, ಒಂದು ಸಂಖ್ಯೆಗೂ ಇನ್ನೊಂದು ಸಂಖ್ಯೆಗೂ ಯಾವ ಸಂಬಂಧವೂ ಇಲ್ಲವೆಂದು ನಾವು ಕಂಡುಕೊಳ್ಳಬಹುದು. ಇದರಲ್ಲಿ ಪಾಂಚವಾರ್ಷಿಕ ಯೋಜನೆಯಲ್ಲಿ ಏನೇನು ಕೆಲಸಗಳು ನಡೆಯಿತು ಎನ್ನುವುದಕ್ಕೆ ಒಂದು ಪಟ್ಟಿಯನ್ನೂ ಕೊಟ್ಟಿದ್ದಾರೆ. ಮತ್ತು ಎರಡನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ಏನೇನು ನಡೆಯುತ್ತದೆ ಎನ್ನುವುದರ ಪಟ್ಟಿಯನ್ನೂ ಸಹ ಕೊಟ್ಟಿದ್ದಾರೆ. 'ಈ ತತ್ವ ಬಹಳ ಮಹತ್ತರವಾದ ತತ್ವ. ಆದುದರಿಂದ ನಾವು ಒಂದು ದೊಡ್ಡ ಕೆಲಸವನ್ನು ಈ ವರ್ಷದಿಂದ ಮಾಡುತ್ತಿದ್ದೇವೆ. ಮೊದಲನೆಯ ಪಾಂಚವಾರ್ಷಿಕ ಯೋಜನೆ ಮುಗಿದು ಎರಡನೆ ಪಾಂಚವಾರ್ಷಿಕಯೋಜನೆಗೆ ಕಾಲಿಡುತ್ತಿದ್ದೇವೆ' ಎಂದು ಹೇಳಿದ್ದಾರೆ. ಇದರಲ್ಲಿ ಇನ್ನೊಂದು ವಿಷಯ. ಕಾಂಗ್ರೆಸ್ ತನ್ನ ನೀತಿಯನ್ನೂ ಧ್ಯೇಯವನ್ನೂ ಕ್ರಮವಾಗಿ ಬದಲಿಸಿಕೊಂಡು ಬಂತು. ಮೊದಲು ಸರ್ವೋದಯವೆಂದು ಹೇಳಿ, ಸುಖೀರಾಜ್ಯ (welfare State) ಎಂದು ಹೇಳಿ, Socialistic Pattern of Society ಎಂದು ಇವೊತ್ತು ತನ್ನ ಧ್ಯೇಯವನ್ನು ದೇಶಕ್ಕೆ ಸಾರುತ್ತಿದೆ. ಇದರಲ್ಲಿ ಎಷ್ಟರ ಮಟ್ಟಿಗೆ ಈ ಧ್ಯೇಯವನ್ನು ಅನುಸರಿಸುವುದಕ್ಕೆ ಅಥವಾ ಕಾರ್ಯತಃ ಮುಟ್ಟುವುದಕ್ಕೆ ಸಾಧನ ಸಂಪತ್ತುಗಳೇನು, ಕಾರ್ಯನೀತಿಯೇನು, ಎನ್ನುವುದನ್ನು ನೋಡಿದರೆ, ಈ ಧ್ಯೇಯವನ್ನು ಮುಟ್ಟಲಾರೆವು ಎನ್ನುವುದು ಬಹು ಸ್ಪಷ್ಟವಾಗಿದೆ. ಈ ಯೋಜನೆಗಳು ಯಾವ ರೀತಿ ಕಾರ್ಯಗತ ಮಾಡಲ್ಪಡುತ್ತವೆ ಎಂದು ನೋಡಿದರೆ ಇದು ನಮಗೆ ಚೆನ್ನಾಗಿ ಗೊತ್ತಾಗುತ್ತದೆ. ಇದು ಅಂಥ ಒಂದು ಸುಖೀರಾಜ್ಯದ ಕಡೆಗೆ, ಸಮಾಜವಾದದ ಮಾದರಿ ಸಮಾಜದ ಕಡೆಗೆ ದೇಶವನ್ನು ತೆಗೆದುಕೊಂಡು ಹೋಗುವುದಕ್ಕೆ ಸರ್ವಥಾ ಸಾಧ್ಯವಿಲ್ಲ ಎನ್ನುವ ಮಾತು ಸ್ಪಷ್ಟವಾಗಿ ಗೊತ್ತಾಗುತ್ತದೆ. ಇದರಲ್ಲಿ ನಮಗೆ ಕಂಡುಬರುವುದು ಏನೆಂದರೆ, ಅಧಿಕಾರಕ್ಕೆ ಅಂಟಿಕೊಳ್ಳಬೇಕು, ಕೈಗೆ ಬಂದಿರತಕ್ಕ ಅಧಿಕಾರವನ್ನು ಕಳೆದುಕೊಳ್ಳಬಾರದು ಎಂಬ ಹೆಬ್ಬಯಕೆ. ಕಾರಣಗಳನ್ನು ಕೊಡುತ್ತೇನೆ. ಇದಕ್ಕಾಗಿ ಇವೊತ್ತು ಯಾರುಯಾರನ್ನು ಆಶ್ರಯಿಸಬೇಕಾಗಿದೆ ಎಂದರೆ ಬಂಡವಾಳಗಾರರನ್ನು ಅಥವಾ ಅವರ ಏಜಂಟರುಗಳನ್ನು; ಮತ್ತು ಅವರ ಎಲ್ಲಸಹಕಾರವನ್ನೂ ಪಡೆಯಲು ಕಾಂಗ್ರೆಸ್ ಆಶ್ರಯಿಸುತ್ತಿದೆ, ಕಾಂಗ್ರೆಸ್ ಸರ್ಕಾರ ಆಶ್ರಯಿಸುತ್ತಿದೆ. ಇದಕ್ಕೆ ಪರಿಹಾರಗಳನ್ನು ನಾವು ನೋಡೋಣ. ಸುಖೀರಾಜ್ಯದ ಕಡೆಗೆ, ಸಮಾಜವಾದದ ಕಡೆಗೆಹೋಗುತ್ತಿರುವ ಪ್ರಯತ್ನ ಧೋರಣೆ, ಕೆಲವು

(ಶ್ರೀ ಎಸ್. ಗೋಪಾಲಗೌಡ.)

ಉದಾಹರಣೆಗಳಿಂದ ನೋಡುವುದಾದರೆ, ನಮಗೆ ಚೆನ್ನಾಗಿ ಅರ್ಥವಾಗುತ್ತದೆ. ಇವೊತ್ತು ರೈತನಿಗೆ ಭೂಮಿಯನ್ನು ಹಂಚತಕ್ಕ ವ್ಯವಸ್ಥೆಯ ಯೋಜನೆಯನ್ನು ಕಾರ್ಯಗತಮಾಡುವುದಕ್ಕೆ ಕಾಂಗ್ರೆಸ್ ಸರ್ಕಾರಕ್ಕೆ ಸಾಧ್ಯವಾಗಲಿಲ್ಲ. ಎರಡನೆಯದಾಗಿ ಕಾರ್ಮಿಕರ ಜೀವನವನ್ನು ಉತ್ತಮಪಡಿಸುವುದಕ್ಕೆ ಈ ಸರ್ಕಾರಕ್ಕೆ ಸಾಧ್ಯವಾಗಲಿಲ್ಲ. ಅಷ್ಟು ದೂರ ಹೋಗಬೇಕಾಗಿಲ್ಲ. ಮೈಸೂರು ಒಂದೇ ತೆಗೆದುಕೊಂಡರೆ ಅಗಸನ ಕತ್ತೆಯಂತೆ, ಅಥವಾ ತೆನಾಲಿರಾಮಕೃಷ್ಣನ ಕುದುರೆಯಂತೆ, ಈ ಸರ್ಕಾರಿ ಯಂತ್ರದಲ್ಲಿ ಸಿಕ್ಕಿಹಾಕಿಕೊಂಡಿರ ತಕ್ಕ 18-20 ರೂಪಾಯಿಗಳು ಪಡೆದು ನರಳುತ್ತಾ ಇರತಕ್ಕ, ಸರ್ಕಾರಿ ನೌಕರರಿಗೆ ಎಷ್ಟು ದಿವಸಗಳಿಂದ ಆಶ್ವಾಸನೆ ಕಾಂಗ್ರೆಸ್ ಸರ್ಕಾರದವರು ಕೊಟ್ಟಿದ್ದಾರೆಂಬುದನ್ನು ಎಲ್ಲರೂ ಚೆನ್ನಾಗಿ ಮನದಟ್ಟು ಮಾಡಿಕೊಳ್ಳಬೇಕು. ಕಳೆದ ಚುನಾವಣೆಗಳಿಗೆ ಮೊದಲು ಹಿಂದಿದ್ದ ಸರ್ಕಾರದವರು 5 ರೂಪಾಯಿಗಳ ಭಕ್ಷೀಸ್ ಕೊಟ್ಟಿದ್ದು ನೆನಪಿದೆ. ಈಗಿನ ಸರ್ಕಾರದವರೂ ಸಹ ಕೆಲವು ತಿಂಗಳ ಹಿಂದೆ ಒಂದು ಸಮಿತಿಯನ್ನು ರಚನೆಮಾಡಿ, ಒಂದು ನಾಟಕವಾಡಿ ಇವೊತ್ತು ಬೇರೆ ಕಾರಣಗಳನ್ನು ಕೊಟ್ಟು ಅವರ ವರದಿಯನ್ನು ಕಾರ್ಯಗತ ಮಾಡುವುದಕ್ಕೆ ಸಾಧ್ಯವಿಲ್ಲವೆಂದರೆ ಅದು ಸಮಂಜಸವಾದ ಕಾರಣವಲ್ಲ. ನಮ್ಮ ಸಂಸ್ಥಾನ ಹಿಗ್ಗುತ್ತದೆ, ಬೇರೆ ಪ್ರಾಂತಗಳು ಬಂದು ನಮ್ಮಲ್ಲಿ ಸೇರುತ್ತವೆ ಮತ್ತು ಕೇಂದ್ರದಿಂದ ಈ ರೀತಿಯಾದಯಾವ ಕಾರ್ಯಕ್ರಮವನ್ನೂ ಕೈಗೊಳ್ಳಕೂಡದು ಎಂದು ಬಂಧಿಸಿದೆ ಎಂಬ ನೆಪವನ್ನು ಮುಂದೊಡ್ಡಿ ನೌಕರರಿಗೆ ಅಗಾಧವಾದ ನಿರಾಸೆಯನ್ನು ಉಂಟುಮಾಡಿದ್ದಾರೆ. ನಿರಾಸೆ ಎಂದು ಮಾತ್ರವೇ ಹೇಳುವುದಕ್ಕಾಗುವುದಿಲ್ಲ; ಹುಣ್ಣಿನ ಮೇಲೆ ಬರೆ ಎಳೆದಂತಾಗಿದೆ ಎಂದು ಹೇಳುತ್ತೇನೆ. ಇದು ಕಾಂಗ್ರೆಸ್ ಸರ್ಕಾರದ ನೀತಿ. ಇನ್ನು ಸುಮ್ಮನೆ ಪ್ರಜಾಪ್ರಭುತ್ವ, ಸುಭಿಕ್ಷ ಎಂದು ಹೇಳಿಕೊಂಡು ಅಷ್ಟು ಗೊಬ್ಬರ ಕೊಡುವುದು, ಅಷ್ಟು ಬೀಜಕೊಡುವುದು ಈ ರೀತಿ ಮಾಡಿದಮಾತ್ರಕ್ಕೆ ಸುಭಿಕ್ಷವುಂಟಾಗಿದೆಯೆನು ? ನಮ್ಮದೇಶದಲ್ಲಿ ಇವೊತ್ತು ಎಷ್ಟರಮಟ್ಟಿನ ಸುಭಿಕ್ಷವುಂಟಾಗಿದೆ ಎನ್ನುವುದಕ್ಕೆ ನೂರು ಮನೆಗಳಲ್ಲಿ ವಿಚಾರಮಾಡಿದರೆ ತಾವು ತಿಳಿದುಕೊಳ್ಳಬಹುದು. ಮತ್ತು ಪ್ರಜಾಪ್ರಭುತ್ವದ ರೀತಿನೀತಿಗಳನ್ನು ಶ್ರೀಮಾನ್ ಮರಿಯಪ್ಪನವರು ನಿನ್ನೆ ದಿವಸ ಬಹಳ ಚೆನ್ನಾಗಿ ಹೇಳಿ ತೋರಿಸಿಕೊಟ್ಟರು. ನಮ್ಮ ಮೈಸೂರು ಸಂಸ್ಥಾನದ ವಿಚಾರ ಮಾತ್ರ ಹೇಳುತ್ತೇನೆ ಮುಖ್ಯಮಂತ್ರಿಗಳು ಯಾವ ರೀತಿ ಪ್ರಜಾಪ್ರಭುತ್ವ ತತ್ವಗಳನ್ನು ಪರಿಪಾಲನೆ ಮಾಡಿಕೊಂಡು ಬಂದಿದ್ದಾರೆ ಎನ್ನುವುದಕ್ಕೆ ಅವರು ಒಳ್ಳೆಯ ರೀತಿಯಲ್ಲಿ ತೋರಿಸಿಕೊಟ್ಟರು. ಅದೇ ಮಾತನ್ನು ನಾನೇನಾದರೂ ಆಡಿದ್ದರೆ ಬಹುಶಃ ವಿರೋಧಪಕ್ಷಕ್ಕೆ ಸೇರಿದವನು ಎನ್ನುವ ಕಾರಣಕ್ಕಾಗಿ ಹೀಗೆಲ್ಲ ಮಾತನಾಡುತ್ತಾನೆ ಎಂದು ಬಾಯಿಗೆ ಬೀಗ ಹೊಡೆಯುತ್ತಿದ್ದರು ಎಂದು ನನ್ನ ಹಿಂದಿನ ಅನುಭವದಿಂದ ಗೊತ್ತಾಗುತ್ತದೆ. ಇದು ಪ್ರಜಾಪ್ರಭುತ್ವದ ನೀತಿಯಲ್ಲ. ಯಾಕೆಂದರೆ ನಾನು ಒಂದು ಸಣ್ಣ ಉದಾಹರಣೆ ಕೊಡುತ್ತೇನೆ. ಮೊನ್ನೆ ಅಪ್ರೋಪ್ರಿಯೇಷನ್ ಬಿಲ್ಲಿನ ಮೇಲೆ ಮಾತನಾಡುವಾಗ ಇಂಡಸ್ಟ್ರಿಯಲ್ ಎಸ್ಟೇಟ್ ಎಂದರೆ ಏನು, ಎಲ್ಲಿ ಆರಂಭ ಮಾಡುತ್ತೀರಿ, ಇದಕ್ಕಾಗಿ ಅಪ್ರೋಪ್ರಿಯೇಷನ್ ಬಿಲ್ಲಿನಲ್ಲಿ ಅಡಿಷನಲ್ ಗ್ರಾಂಟ್‌ನಲ್ಲಿ 10 ಲಕ್ಷರೂಪಾಯಿ ಯಾಕೆ ಸೇರಿಸಿದ್ದೀರಿ, ಈಗ ಬಡ್ಜೆಟ್ ಅಧಿವೇಶನ ನಡೆಯುತ್ತಿರುವುದರಿಂದ ಬಡ್ಜೆಟ್ಟಿನಲ್ಲಿ ಸೇರಿಸಬೇಕಾಗಿತ್ತು, ಅಷ್ಟು ಆತುರವೇನಿತ್ತು ಎಂದು ನಾನು ಟೀಕೆಮಾಡಿದ್ದು ಸತ್ಯವಾದ ಟೀಕೆ. ಎರಡು ವರ್ಷಗಳ ಹಿಂದೆ ಓದಿರತಕ್ಕ ಆಯವ್ಯಯದ ಭಾಷಣವನ್ನು ಕೇಳಿದ್ದೇನೆ. ಸದಸ್ಯರು ಅದನ್ನು ನೆನಪಿಟ್ಟುಕೊಳ್ಳಬೇಕು. ಆ ಸಂದರ್ಭದಲ್ಲಿ ನಾವು ಏನು ಉತ್ತರವನ್ನು ಕೊಡಬೇಕು ಎಂದು ಸಂಬಂಧಪಟ್ಟ, ಜವಾಬ್ದಾರಿ ಹೊತ್ತಿರತಕ್ಕ ಮಂತ್ರಿಗಳು ಉತ್ತರ ಕೊಟ್ಟರಲ್ಲ ಅದು ಯಾವ ಪ್ರಜಾಪ್ರಭುತ್ವ ? ಆ ರೀತಿಯ ಉತ್ತರಗಳನ್ನು ಕೊಡುತ್ತಿದ್ದಾರೆ. ಇನ್ನೂ ನೂರಾರು ಉದಾಹರಣೆಗಳನ್ನು ಕೊಡಬಲ್ಲೆ. ಇವೊತ್ತು ಹೀಗೆ ಪ್ರಜಾಪ್ರಭುತ್ವ ನಡೆದುಕೊಂಡು ಬರುತ್ತಿದೆ. ಇಂಥ ಸಭೆಯಲ್ಲಿ ಒಂದು ಹಕ್ಕನ್ನು (privilege) ವಿಶಿಷ್ಟ ಅಧಿಕಾರವನ್ನು ಹೊಂದಿರುವ ಸದಸ್ಯರಿಗೆ ಹೀಗೆಲ್ಲ ಸರ್ಕಾರದವರು ಉತ್ತರ ಕೊಟ್ಟರೆ ಜನಸಾಮಾನ್ಯರಿಗೆ, ಹೊರಗೆ ಇರತಕ್ಕವರಿಗೆ, ಯಾವ ರೀತಿ ಉತ್ತರ ದೊರೆಯುತ್ತದೆ, ಯಾವ ರೀತಿ ಸರ್ಕಾರ ಅವರ ಬಗ್ಗೆ ವರ್ತಿಸುತ್ತದೆ, ಅವರನ್ನು ಯಾವ ದೃಷ್ಟಿಯಿಂದ ಕಾಣುತ್ತದೆ ಎನ್ನುವುದನ್ನು ಯೋಚಿಸಿದರೆ, ಇದು ಪ್ರಜಾಪ್ರಭುತ್ವವೇ ಅಥವಾ ಇನ್ನೇನಾದರೂ ಪ್ರಭುತ್ವವೇ ಎಂದು ಗೊತ್ತಾಗುತ್ತದೆ. ಆದುದರಿಂದ ಮಾತಿನಲ್ಲಿ ಎಷ್ಟು ಹೇಳುತ್ತಿದ್ದಾರೆಯೋ ಅದನ್ನು ಕಾರ್ಯದಲ್ಲಿ ತರುವುದು ಕಂಡು ಬರಲಿಲ್ಲ. ಇನ್ನು ಕೆಲವು ಮುಖ್ಯವಾದ ವಿಷಯಗಳನ್ನು ಮಾತ್ರ ಪ್ರಸ್ತಾಪಮಾಡಿ ನನ್ನ ಭಾಷಣವನ್ನು ಮುಗಿಸಬೇಕೆಂದಿದ್ದೇನೆ.

ಇದರಲ್ಲಿ, ಬಹುಮಾನ ಸ್ಪರ್ಧೆಗಳಿಗೆ ಸಂಬಂಧಪಟ್ಟ ಕಾನೂನನ್ನು ಜಾರಿಗೆ ತಂದಿರುವುದರಿಂದ R.M.D.C. ಸ್ಪರ್ಧೆಗಳನ್ನು ನಿಲ್ಲಿಸಬೇಕಾಗುತ್ತದೆ ಇದರಿಂದ 7 ಲಕ್ಷ ರೂಪಾಯಿಗಳ ಕೊರತೆಯಾಗುತ್ತದೆ ಎಂದು ಹೇಳಿದ್ದಾರೆ. ಮೊನ್ನೆ ನಾನು ಭಾಷಣ ಮಾಡುವಾಗ R.M.D.C. ಯವರು ಸರಿಯಾದ ಲೆಕ್ಕಪತ್ರಗಳನ್ನು ಕೊಟ್ಟರೇ, ಇಲ್ಲವೇ, ಕೊಟ್ಟಿಲ್ಲವೆಂದು ತಿಳಿದುಬಂದಿದೆ ಎಂದು ಹೇಳಿದಾಗ, ಹಾಗೇನೂ ಇಲ್ಲ, ಅದೆಲ್ಲವೂ ಸರಿಯಾಗಿದೆ ಎಂದು ತಿಳಿಸಿದರು. ನನಗೆ ತಿಳಿದಿರುವ ಪ್ರಕಾರ ಹೇಳುತ್ತೇನೆ.

ಅಧ್ಯಕ್ಷರು.—ಆದಿವಸವೇ ಹೇಳಿದ್ದೀರಲ್ಲ.

ಶ್ರೀ ಎಸ್. ಗೋಪಾಲಗೌಡ.—ಆಗ ಮಾತನಾಡುತ್ತ ಒಂದು ಸಮಿತಿಯನ್ನು ರಚನೆ ಮಾಡಬೇಕೆಂದು ಹೇಳಿದೆ. ಅದಕ್ಕೆ ಏನಾದರೂ ಬೆಲೆಯನ್ನು ಕೊಟ್ಟಿದ್ದಾರೆಯೇ ? 'ಟೀಕೆ ಮಾಡುವುದಕ್ಕೆ ಹೇಳುತ್ತಾರೆ; ಅವರ ಟೀಕೆಗೆ ಏನು ಗಮನ ಕೊಡಬೇಕು ?' ಎನ್ನುವ ಭಾವನೆ ಸರ್ಕಾರದವರಲ್ಲಿ ತುಂಬಿದ್ದರೆ ನಾವು ಏನು ಮಾಡುವುದಕ್ಕೆ ಆಗುತ್ತದೆ ? ಪ್ರಜಾಪ್ರಭುತ್ವವೆಂದರೆ ನಾನು ಅವರನ್ನು ಹೊಡೆಯಬಾರದು ಎನ್ನುವುದಕ್ಕೆ ಮಾತ್ರವಲ್ಲ. ಅದು ಎರಡುಕಡೆಯಲ್ಲಿಯೂ reciprocate ಆದರೆ ಮಾತ್ರ ಪ್ರಜಾಪ್ರಭುತ್ವವೆನ್ನಿಸಿಕೊಳ್ಳುತ್ತದೆ. ನಾನು ಮಾತನಾಡುವುದಕ್ಕೆ ಅಧಿಕಾರವಿಲ್ಲ. ಅದೇ ಇನ್ನೊಬ್ಬರಿಗೆ ಹೊಡೆಯುವುದಕ್ಕೆ ಅಧಿಕಾರವಿದೆ. ಇದು ಮಾತ್ರ ಪ್ರಜಾಪ್ರಭುತ್ವವಲ್ಲವೆ ! ಸರ್ಕಾರವನ್ನು ಕಿತ್ತುಹಾಕುವುದಕ್ಕೆ, ಅನ್ಯಾಯಗಳನ್ನು ತಪ್ಪಿಸುವುದಕ್ಕೆ ಅಧಿಕಾರವಿದೆ; ಪ್ರಜೆಗಳಿಗೆ ಹೆಚ್ಚು ಅಧಿಕಾರವಿದೆ. ಪ್ರಜೆಗಳಿಂದ ನಮೂದಾದ ಕೆಲವು ಸಂಸ್ಥೆಗಳಿಗೆ ಒಂದು ವ್ಯಾಪ್ತಿಯಲ್ಲಿ limited authority ಕೊಡುತ್ತಾರೆಯೇ ಹೊರತು ಪ್ರಜೆಗಳನ್ನು ಗಲ್ಲಿಗೆ ಹಾಕುವ ಅಧಿಕಾರವನ್ನಾಗಲಿ, ಇಂತಹ ಇತರ ಅಧಿಕಾರವನ್ನಾಗಲಿ ಯಾರೂ ಕೊಡುವುದಿಲ್ಲ. ಆದುದರಿಂದ ನಾವು ಹೇಳಿದ ಮಾತು ಕ್ಷುಲ್ಲಕವೆಂದೂ ಅದಕ್ಕೆ ಆಧಾರವಿಲ್ಲವೆಂದೂ ಹೇಳಿದರು. ಈ ಸಂದರ್ಭದಲ್ಲಿ ಈ ಸಂಸ್ಥೆಯವರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ

ಬರೆದಿರುವ ಉತ್ತರದಲ್ಲಿನ ಕೊನೆ ಪ್ಯಾರಾಗ್ರಾಫ್ ಓದುತ್ತೇನೆ:

"With reference to your demand for inspection of our accounts, it is brought to our attention that we are not bound to give any for inspection. We are not prepared to give your officer our accounts for inspection as we have been doing until such time as orders are obtained from the High Court."

Mr. SPEAKER.—If it is not correct, it should not be read, because there is nobody to defend that statement.

ಶ್ರೀ ಎಸ್. ಗೋಪಾಲಗೌಡ.—ನನಗೆ ಗೊತ್ತಿರ ತಕ್ಕದ್ದು ಹೇಳಿದ್ದೇನೆ. ಈ ರೀತಿಯಾಗಿ ಉತ್ತರ ಕೊಟ್ಟಿದ್ದಾರೆಂದು ತಿಳಿದುಬಂದಿದೆ. ಅವರು accounts ಕೊಡುತ್ತಿಲ್ಲವೆಂದು ನನಗೆ ತಿಳಿದು ಬಂದಿರುವುದಾಗಿ ಹೇಳಿದ್ದೇನೆ. ಅದಕ್ಕೋಸ್ಕರ ನಾನು ಹೇಳುವುದು ಏನೆಂದರೆ ತಕ್ಷಣ ಒಂದು ಸಮಿತಿಯನ್ನು ಮಾಡಬೇಕು. ಅವರಿಂದ 7 ಲಕ್ಷ ರೂಪಾಯಿ ಮಾತ್ರವಲ್ಲ ಸುಮಾರು ಒಂದುಕೋಟಿ ರೂಪಾಯಿ ಬರಬೇಕು. ಆದರೆ ಯಾರನ್ನೂ ದೋಚಬೇಕು ಎಂದು ಹೇಳುವುದಿಲ್ಲ. ವ್ಯಾಪಾರ ನಡೆದಿದ್ದೂ, ಲಾಭ ಬಂದಿದ್ದೂ, ಅದನ್ನು ತಗೆದುಕೊಳ್ಳುವುದಕ್ಕೆ ಸರ್ಕಾರದವರಿಗೆ ಏನು ಕಷ್ಟ? ಇವೊತ್ತು ಅವರು ಸಿಲೋನಿಗೆ ಹೋಗಿ ಕುಳಿತುಕೊಂಡರೆ ಏನು ಮಾಡುತ್ತೀರಿ? ಆದುದರಿಂದ ಅಂಥ ವಿಷಯಗಳನ್ನು ಸಭೆಯ ಗಮನಕ್ಕೆ ತಂದಾಗ, ನಾವೂ ಜವಾಬ್ದಾರಿ ಹೊಂದಿರುವವರು, ಯಾರಮೇಲೂ ವೈಯಕ್ತಿಕವಾಗಿ ಅಪಾದನೆಗಳನ್ನು ಮಾಡುವುದಕ್ಕೆ ಬಂದಿರುವುದಿಲ್ಲವೆಂದು ತಿಳಿಯಬೇಕು. ಈ ವಿಷಯಗಳೆಲ್ಲವನ್ನೂ ಸರ್ಕಾರದವರು ಗಮನದಲ್ಲಿಟ್ಟುಕೊಂಡು ಅಂಥ ಹೇಳಿಕೆಗಳಿಗೆ ಎಷ್ಟರಮಟ್ಟಿನ ಗೌರವವನ್ನೂ, ಮಾನ್ಯತೆಯನ್ನೂ ಕೊಡಬೇಕೋ ಅಷ್ಟನ್ನೂ ಕೊಡಲೇಬೇಕಾದದ್ದು ಸರ್ಕಾರದ ಕರ್ತವ್ಯ.

ನಮ್ಮ ದೇಶದಲ್ಲಿ ಹಣಕಾಸಿನ ಪರಿಸ್ಥಿತಿ ಏನಾಗಿದೆ ಎಂದರೆ, ಅಧಿಕಾರದಲ್ಲಿರಬೇಕು ಎನ್ನುವ ಕಾರಣದಿಂದ ಕಾರ್ಮಿಕರಿಗೆ, ಬಡವರಿಗೆ, ಕೂಲಿಗಾರರಿಗೆ, ಮಧ್ಯಮವರ್ಗದವರಿಗೆ, ರೈತರಿಗೆ, ಎಲ್ಲರಿಗೂ ಮುಖಕ್ಕೆ ಧೂಪ ಹಾಕುತ್ತಿದ್ದಾರೆ. ನಿಮಗೆಲ್ಲ ಅನುಕೂಲ ಮಾಡಿಕೊಡುತ್ತೇವೆ, ಮಾಡಿಕೊಡುತ್ತೇವೆ ಎನ್ನುವ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಆದರೆ ಅವರಿಗೆ ಏನೂ ಮಾಡಲಿಲ್ಲ. ವಿದ್ಯುಚ್ಛಕ್ತಿ ಕೆಲಸಗಾರರು ತಮ್ಮ ಬೇಡಿಕೆಗಳನ್ನು ಸರ್ಕಾರದ ಮುಂದೆ ಇಟ್ಟರು. ಒಂದು ಸಮಿತಿ ರಚನೆಯಾಯಿತು. ಅದರ ಬಗ್ಗೆ ಅವರಿಗೆ ನ್ಯಾಯವಾಗಿ ಕೊಡಬೇಕಾದ ಬೇಡಿಕೆಗಳನ್ನು ಕೂಡ ಕೊಟ್ಟಿಲ್ಲ. ಅವರು ಸ್ಟ್ರೈಕ್ ಮಾಡಿದಾಗ ಕೊಡಬೇಕಾಗಿದ್ದ ಭತ್ಯವನ್ನೂಸಹ ಅವರುಗಳಿಗೆ ಕೊಟ್ಟಿಲ್ಲ. ಇಲ್ಲಿ ಸುಮ್ಮನೆ ಕಾರ್ಮಿಕರಿಗೆ ಹೆಚ್ಚಿನ ಭಾಗವನ್ನು ಕೊಡುತ್ತೇವೆಂದು ಹೇಳಿದ್ದಾರೆ. ಅವರಿಂದ ಅಗ್ರಿಮೆಂಟ್ ಮೂರುವರ್ಷ ಅಥವಾ ಆರು ವರ್ಷ ಒಳ್ಳೆಯ ಜನರ ಹಾಗೆ ಕೆಲಸ ಮಾಡಿಕೊಂಡು ಹೋಗಬೇಕೆಂದು ಬರೆಸಿಕೊಳ್ಳುತ್ತಾರೆ. ಅಂಥ ಅಗ್ರಿಮೆಂಟುಗಳು ಇಂಡಿಯಾ ಸರ್ಕಾರದ ಇಂಡಸ್ಟ್ರಿಯಲ್ ಡಿಸ್ಪ್ಯೂಟ್ಸ್ ಆಕ್ಟ್ ಮತ್ತು ಇತರ ಕಾರ್ಮಿಕರಿಗಾಗಿ ಆಗಿರುವ ಕಾನೂನುಗಳಂತೆ ನಡೆಯುತ್ತವೆ. ಆ ಅಗ್ರಿಮೆಂಟುಗಳಿಂದ ಕಾರ್ಮಿಕರಿಗೆ ಕೊಟ್ಟಿರುವ ಹಕ್ಕು ಸಂಪೂರ್ಣವಾಗಿ ಮಾಯವಾಗಿ ಅವರನ್ನು ಗುಲಾಮರಂತೆ ದುಡಿಸಿಕೊಂಡು ವಿಧಾನಸೌಧ ಅಥವಾ ದೇವಸ್ಥಾನ ಕಟ್ಟಿಸುವುದು ಸರ್ಕಾರದ ನೀತಿಯೆ? ಕಾರ್ಮಿಕರ ನೀತಿಯನ್ನು ಉಲ್ಲೇಖಿಸಿರುವುದು ಈ ರೀತಿಯಾಗಿದೆ. ಇದು ಸರಿಯಲ್ಲ.

ಅಮೇಲೆ ಈ ಹೊತ್ತು ತೆರಿಗೆಯನ್ನು ಹಾಕಲಿಲ್ಲವೆಂದು ಹೇಳಿದ್ದಾರೆ. ಯಾರಮೇಲೆ ಹಾಕಲಿಲ್ಲ ಎಂಬ ಪ್ರಶ್ನೆ ಈಗ ಬಂದಿದೆ. ಈ ಭಾಷಣದಲ್ಲಿ ಪ್ರಪಂಚದ ಒಬ್ಬ ದೊಡ್ಡ ವ್ಯಕ್ತಿಯ ಹೆಸರನ್ನು ಉಲ್ಲೇಖಿಸಲಾಗಿದೆ, ಪ್ರಸಿದ್ಧನಾದ ಹೊರದೇಶದ ರಾಜಕಾರಣಿ ಸೂಚಿಸಿರುವ ಅಭಿಪ್ರಾಯವನ್ನು ಕೊಡಲಾಗಿದೆ, ಸ್ವತಂತ್ರ ವಾತಾವರಣದಲ್ಲಿ ಪ್ರಜಾಪ್ರಭುತ್ವದ ನೀತಿಗನುಗುಣವಾಗಿ ಒಂದು ಯೋಜನೆಯನ್ನು ತಯಾರಿಸಿ ನಾವು ಕಾರ್ಯಗತ ಮಾಡುತ್ತಿರುವುದು ಬಹಳ ಪ್ರಶಂಸನೀಯವೆಂದು ಅವರು ಹೇಳಿದ್ದಾರೆ. ಹೊರದೇಶದವರು ನಿಜವಾಗಿಯೂ ಪ್ರಶಂಸೆ ಮಾಡಿರಬಹುದು. ಇದೊಂದು ದೊಡ್ಡ ಪ್ರಯತ್ನವೆಂದು ಒಪ್ಪಿದ್ದರೂ ಕೂಡ ಈ ದಿವಸ ಯೋಜನೆಯನ್ನು ಕಾರ್ಯಗತ ಮಾಡಬೇಕಾದರೆ ಮೂಲಭೂತವಾದ ಕೆಲವು ಕೆಲಸಗಳನ್ನು ಮಾಡಲೇಬೇಕಾಗುತ್ತದೆ. ಅದಷ್ಟು ಬ್ಯಾಂಕಿಂಗ್, ಇನ್ಷ್ಯೂರೆನ್ಸ್ ಇಂಥ ಸಂಸ್ಥೆಗಳನ್ನು ನಾವು ರಾಷ್ಟ್ರೀಕರಣ ಮಾಡಿಕೊಳ್ಳಬೇಕು. ಮೊದಲನೆಯದಾಗಿ ಈ ದಿವಸ ಹೊರದೇಶದ ಬಂಡವಾಳಕ್ಕೂ ದೇಶೀಯ ಬಂಡವಾಳಕ್ಕೂ ಘರ್ಷಣೆಯಿದೆ. ಹೊರದೇಶದ ಬಂಡವಾಳ ಈ ದಿವಸ ದೇಶೀಯ ಬಂಡವಾಳದ ರೂಪತಾಳುತ್ತಿದೆ, ಮುಖ್ಯಮುಖ್ಯವಾದ ಕೈಗಾರಿಕೆಗಳು ಹೊರದೇಶದ ಬಂಡವಾಳದಿಂದ ಸ್ಥಾಪನೆಯಾಗಿವೆ. ಶೇಕಡ 50 ಭಾಗ ಪ್ರಪಂಚದ ಬಂಡವಾಳದಲ್ಲಿ ಈಗಿಲ್ಲ. ಪ್ರತ್ಯೇಕವಾಗಿ ಈ ಕಡೆ ಪ್ರೈವೇಟ್ ಎಂಟರ್‌ಪ್ರೈಸಸ್ ಮಾಡುತ್ತೀರಿ. ರಾಜ್ಯದ ಕೈಗಾರಿಕೆಯನ್ನು ಊರ್ಜಿತ ಮಾಡಬೇಕೆಂದು ಒಂದು ಬಂಡವಾಳವಿದೆ. ಆದರೆ ಇಂಡಿಯಾದೇಶದ ಮತ್ತು ಹೊರದೇಶದ ಖಾಸಗಿ ಬಂಡವಾಳ ಈ ಎರಡರ ಘರ್ಷಣೆಯಲ್ಲಿ ಈ ದಿವಸ ಕೆಲಸ ಸ್ಥಗಿತವಾಗುವುದಕ್ಕೆ ಕಾರಣವಾಗಿದೆ, ಮುಂದುವರಿಯುವುದಕ್ಕೆ ಅವಕಾಶವಾಗಿಲ್ಲ.

ಇನ್ನೊಂದು ರಾಜಮಹಾರಾಜರುಗಳಿಗೆ, ಈ ದಿವಸ ರಾಜಭಕ್ತಿಗೆ ಕಾಲವಿಲ್ಲ ಎಂದು ಹಣಕಾಸಿನ ಸಚಿವರು ಹೇಳಿದ್ದಾರೆ, ನಿಜ; ರಾಜರ ಬಗ್ಗೆ ಭಕ್ತಿಯನ್ನು ಯಾರೂ ವ್ಯಕ್ತಪಡಿಸುತ್ತಿಲ್ಲ, ಆದರೆ ಈ ದಿವಸ ರಾಜರುಗಳನ್ನು ಅವರ ರಾಜ್ಯದ ಪದವಿಯಿಂದ ತೆಗೆದು ಹಾಕಿದರೂ ಕೂಡ ಕರಾರಿನ ಪ್ರಕಾರ ಅನೇಕ ರಾಜರುಗಳಿಗೆ, ನನಗೆ ಗೊತ್ತಿರುವ ಹಾಗೆ, ರಾಜರಾಗಿದ್ದಾಗ ಬರುವ ವರಮಾನದ ಹತ್ತರಷ್ಟು, ಇಪ್ಪತ್ತರಷ್ಟು, ನೂರರಷ್ಟು ವರಮಾನ ಕೊಡಲೇಬೇಕಾಗುತ್ತದೆಂಬುದನ್ನು ಯಾರೂ ಮರೆಯಬಾರದು. ಇಂಥ ಒಪ್ಪಂದದಿಂದ ಈ ದಿವಸ ಪ್ರತಿಯೊಬ್ಬ ರಾಜಮಹಾರಾಜರುಗಳಿಗೂ ಪೆಚ್ಚಹೆಚ್ಚಾಗದೆ, ಅವರ ಆರ್ಥಿಕಸ್ಥಿತಿ ಸುಭದ್ರವಾಗಿದೆ ಎಂದು ಹೇಳಬಹುದು. ಇಂಥ ಆರ್ಥಿಕಪರಿಸ್ಥಿತಿಯಿದೆ. ಇನ್ನೂ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಬಹುದು. ಆದರೆ ಈ ಹಣಕಾಸಿನ ಪರಿಸ್ಥಿತಿ ನೋಡಿದರೆ ಅದು ಯಾವುದೇ ರೀತಿಯಲ್ಲೂ ಪ್ರಗತಿಯನ್ನು ಹೆಚ್ಚಿಸುವಂಥದಲ್ಲ. ಇದು ಸುಮ್ಮನೆ ಆಕಾಶದ ಕಡೆ ನೋಡಿ ಪ್ರಾರ್ಥನೆಮಾಡಿ ಮಳೆಬೆಳೆ ಚೆನ್ನಾಗಿಗೆ, ಆಹಾರ

(ಶ್ರೀ ಎಸ್. ಗೋಪಾಲಗೌಡ.)

ಪದಾರ್ಥ ಈಗ ಹೆಚ್ಚಿದೆ ಎಂದು ಹೇಳಿಕೊಳ್ಳುತ್ತಿರುವುದೇ ಹೊರತು ಮತ್ತೆ ಬೇರೆ ಕೆಲಸವಲ್ಲ. ಆದ್ದರಿಂದ ಇಂಥ ಒಂದು ಆರ್ಥಿಕ ಸ್ಥಿತಿಯನ್ನು ಮುಂದುವರಿಸಿಕೊಂಡು ಹೋಗುವುದರಿಂದ ದೇಶದಲ್ಲಿ ಬೆಳೆದು ಬರುತ್ತಿರುವ ನಿರುದ್ಯೋಗ ಇನ್ನೂ ಹೆಚ್ಚುವುದಕ್ಕೆ ಕಾರಣವಾಗಿದೆ.

ಈ ಹೊತ್ತು ಕೈಗಾರಿಕೆಗೆ ಹೆಚ್ಚು ಪ್ರಾಶಸ್ತ್ಯ ಕೊಡಬೇಕೆಂದು ಒಂದು ಗುರಿಯನ್ನು ಪ್ರತಿಪಾದನೆ ಮಾಡುತ್ತಿದ್ದಾರೆ. ಒಟ್ಟು 80 ಲಕ್ಷ ಜನರಿಗೆ 5 ವರ್ಷಗಳಲ್ಲಿ ಕೆಲಸಕೊಡುತ್ತೇವೆಂದು ಕೇಂದ್ರದವರು ಹೇಳುತ್ತಿದ್ದಾರೆ. ಇಲ್ಲಿ 50 ಸಾವಿರ ಜನರಿಗೆ ನೇರವಾಗಿ ಕೆಲಸ ಕೊಡುತ್ತಾರೆ. ಇಷ್ಟು ಜನರಿಗೆ ಕೆಲಸ ಸಿಕ್ಕಿದರೂ ಕೂಡ ನಮ್ಮ ದೇಶದಲ್ಲಿ ಈ ಹೊತ್ತು ಲಕ್ಷೋಪಲಕ್ಷ ನಿರುದ್ಯೋಗಿಗಳಿದ್ದಾರೆ. ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನಲ್ಲಿ ಈ ದಿನ ಒಂದು ಅಡ್ವರ್ಟೈಸ್‌ಮೆಂಟ್ ಮಾಡಿದರೆ ಸಾವಿರಾರುಜನ ಅರ್ಜಿ ಹಾಕಿಕೊಳ್ಳುತ್ತಾರೆ. ಇಂಥ ಪರಿಸ್ಥಿತಿಯಲ್ಲಿ ಈ ನೀತಿಯನ್ನನುಸರಿಸಿ ಹಣಕಾಸಿನ ಪರಿಸ್ಥಿತಿಯನ್ನು ಶೋಚನೀಯ ಸ್ಥಿತಿಗೆ ತಂದಿರುತ್ತಾರೆ. ಚುನಾವಣೆ ಸಮೀಪಿಸುತ್ತಿರುವುದರಿಂದ ಓಟು ಪಡೆಯಲು ಅವಕಾಶವಿರಬೇಕೆಂದು ಈಗ ಒಂದು ನೀತಿಯನ್ನನುಸರಿಸಿದ್ದಾರೆ. ಒಂದು ಕಡೆ ಜನರು ದಂಗೆಯೇಳಬಹುದೆಂದು ಸಮಿತಿ ಮಾಡಿದ್ದಾರೆ, ಹಣಬಂದರೆ ಕೊಡುತ್ತೇವೆಂದು ಹೇಳಿ ಕಣ್ಣೊರೆಸುತ್ತಿದ್ದಾರೆ. ಕೆಲವು ಬರೀ ಕಾಗದದ ಯೋಜನೆಗಳು. ಅವು ಕಾರ್ಯಗತವಾಗುವ ರೀತಿ ಹೇಗೆಂದರೆ, ಒಂದು ಬ್ಯೂರೋಕ್ರಾಟಿಕ್ ಮೆಷೀನರಿಯಿದೆ, ಅದರ ಮೂಲಕ ಕಾರ್ಯಗತವಾಗಬೇಕು. ನೇರವಾಗಿ ಹಣ ಖರ್ಚಾಗಲು ಅವಕಾಶವಿಲ್ಲ; ಕೇಂದ್ರದಿಂದ ಸಹಾಯಪಡೆದು ಕಾರ್ಯಗತ ಮಾಡುವ ಅನೇಕ ಯೋಜನೆಗಳಿವೆ, ಇಲ್ಲಿ ನಡೆಯುವ ಯೋಜನೆಗಳಿವೆ. ಇದರಿಂದ ಯಾವ ಒಂದು ಕಾರ್ಯವೂ ಸುಗಮವಾದ ರೀತಿಯಲ್ಲಿ ಈ ದಿವಸ ಆಗುತ್ತಿಲ್ಲ ಮತ್ತು ಸರ್ಕಾರದ ನೀತಿಯಿಂದ ಮತ್ತೆ ತೊಡಕಾಗಿದೆ. ಇದನ್ನು ಪ್ರಜೆ ತಾವಾಗಿಯೇ ಮುಂದೆ ಬಂದು ನಿವಾರಣೆ ಮಾಡಬೇಕೇ ಹೊರತು ಈ ಸರ್ಕಾರ ತಾನಂತೂ ಯೋಜನೆಯನ್ನು ತಯಾರಿಸಿ ಆರ್ಥಿಕಸ್ಥಿತಿಯನ್ನು ಮುಂದುವರಿಸಲಾರದು; ಅದು ಈ ವಿಚಾರದಲ್ಲಿ ಬಹುದೂರ ಹೋಗಲಾರದೆಂದು ನಿರಾಶೆಯಾಗಿದೆ. ಬೆಳೆದು ಬರುತ್ತಿರುವ ಖೋತಾ ಮತ್ತು ತೆರಿಗೆ ಹಾಕದೆ ಕೆಲಸ ಮಾಡುತ್ತೇವೆಂದು ಹೇಳುವುದು ಇವುಗಳನ್ನು ನೋಡಿದರೆ ಹೆಚ್ಚಿನ ಇನ್ಫ್ಲೇಷನ್ ಉಂಟಾಗಿ ಹಿಂದಿನಂತೆ ಮತ್ತೆ ಕಂಟ್ರೋಲ್ ಬರಬಹುದು ಎಂದು ಅಶೋಕ ಮೆಹ್ತಾ ಮುಂತಾದ ಮಹನೀಯರು ಅಭಿಪ್ರಾಯ ಪಟ್ಟಿದ್ದಾರೆ. ಚಿಯಾಂಗ್ ಕೈಷೇಕ್ ಸರ್ಕಾರದಂತಾದರೆ ಪ್ರಯೋಜನವಿಲ್ಲ. ಈ ರೀತಿ ಮುಂದುವರಿಯುತ್ತಾ ಹಣದ ಉಬ್ಬರ ಜಾಸ್ತಿಯಾಗಿ ಉತ್ಪತ್ತಿ ಜಾಸ್ತಿಯಾಗದೆ ಹೋಗಬಹುದು. ಉತ್ಪತ್ತಿ ಹೆಚ್ಚಬೇಕು ಮತ್ತು ಉದ್ಯೋಗ ಬೆಳೆಯಬೇಕು. ಇದರ ಜೊತೆಗೆ ಪರ್‌ಕ್ಯಾಪಿಟಾ ಇಣ್ಕಂ, ಕೊಳ್ಳುವ ಶಕ್ತಿ ಬೆಳೆಯಬೇಕು. ಇವೆಲ್ಲಾ ಆಗದೆ ಇವುಗಳಲ್ಲಿ ಒಂದನ್ನು ಬಿಟ್ಟು ಒಂದನ್ನು ಮಾಡಿದರೆ ಅದರಿಂದ ಅನುಕೂಲವಾಗುವುದಿಲ್ಲ. ಸಂಪಾದನಾ ಶಕ್ತಿಯನ್ನು ಹೆಚ್ಚಿಸುವುದಲ್ಲದೆ ಅದರ ಜೊತೆಗೆ ಎಲ್ಲರಿಗೂ ಉದ್ಯೋಗ ಕಲ್ಪಿಸಬೇಕು.

ಶೇಕಡ 18ರಷ್ಟು ನ್ಯಾಷನಲ್ ಇಣ್ಕಂ ಹೆಚ್ಚಾಗಿದೆಯೆಂದು ಹೇಳುತ್ತಾರೆ. ಆದರೆ ಅದಕ್ಕೆ ಒಂದು ಸಮಿತಿ ರಚಿಸಿದ್ದರು. ಆ ಸಮಿತಿಯವರು ಹೆಚ್ಚು ಹೆಚ್ಚಾಗಿ ಅಂಕಿಅಂಶಹಾಕಿ ಹೀಗೆ ತೋರಿಸಿದ್ದಾರೆ, ಶೇಕಡ 18ರಷ್ಟು ಹೆಚ್ಚಿಲ್ಲ ಎಂದು ತೋರಿಸಬಹುದು. ನ್ಯಾಷನಲ್ ಇಣ್ಕಂ ಜೊತೆಗೆ ಪರ್‌ಕ್ಯಾಪಿಟಾ ಇಣ್ಕಂ ಹೆಚ್ಚದಿದ್ದರೆ, ಕೊಳ್ಳುವ ಶಕ್ತಿ ಹೆಚ್ಚದಿದ್ದರೆ, ಅದರಿಂದ ಉಪಯೋಗವಾಗುವುದಿಲ್ಲ. ಲೋಪದೋಷಗಳನ್ನು ತಿದ್ದಿಕೊಂಡು ಹಣ ಖರ್ಚಾಗುವ ಕಡೆ, ಮೊದಲಿನಿಂದ ಹೇಳುವ ಹಾಗೆ, ಗಮನಕೊಟ್ಟ ಹಾಗೆ ಕಾಣುವುದಿಲ್ಲ. ಹಣವನ್ನು ಖರ್ಚುಮಾಡುವಾಗ ಬಹಳ ಹತೋಟಿಯಿರಬೇಕು. ಹಣ ಹೋದಮೇಲೆ ಯಾರ ಕೈಗೆ ಹೋಯಿತೆಂದು ಪ್ರಶ್ನೆಮಾಡುವುದಕ್ಕಾಗುವುದಿಲ್ಲ. ಈ ದಿವಸ ಕೆಲವು ಯೋಜನೆಗಳಿಗಾಗಿ ಹಣ ಖರ್ಚು ಮಾಡುತ್ತಿದ್ದಾರೆ. ಆದರೆ ಅದರಮೇಲೆ ಹತೋಟಿಯಿಲ್ಲ. ಅನೇಕ ಖರ್ಚುಬಾಬುಗಳೂ ಕೂಡ ಈ ದಿವಸ ಹೆಚ್ಚುತ್ತಿವೆ. ಆದ್ದರಿಂದ ಸಂಪೂರ್ಣ ಹತೋಟಿಯನ್ನಿಟ್ಟುಕೊಳ್ಳದೆ ಹಣವನ್ನು ಇದೇ ರೀತಿ ಖರ್ಚುಮಾಡುವುದಾದರೆ, ಯಾವುದಾದರೂ ಒಂದು ಎಸ್ಟಿಮೇಟ್ ಮಾಡಿದರೆ ಅದರಂತೆ ಕೆಲಸ ನಡೆಯದೇ ಹೋದರೆ ಅದರ ಮೇಲೆ ಸಂಪೂರ್ಣ ಹತೋಟಿಯುದೆಯು, ಹೇಗೆ ಎಂಬುದನ್ನು ಯೋಚನೆ ಮಾಡಬಹುದು.

ಇನ್ನು ಶ್ರೀ ವಿ. ನಂಜಪ್ಪನವರ ವಿಷಯವನ್ನು ಪ್ರಸ್ತಾಪ ಮಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ. ತಮಗೆ ತಿಳಿದಿರುವ ಹಾಗೆ ಶ್ರೀಮಾನ್ ಸಿದ್ದಯ್ಯನವರು ಅಧ್ಯಕ್ಷರಾಗಿದ್ದಾಗ ಈ ವಿಷಯದಲ್ಲಿ ಒಂದು ನಿಲುವಳಿ ಸೂಚನೆಯನ್ನು ಈ ಸಭೆಯಲ್ಲಿ ನಾನು ತಂದೆ. ಆ ನಿಲುವಳಿ ಸೂಚನೆಯನ್ನು ಸಭೆಯ ಮುಂದೆ ಮಂಡಿಸಿ ಎದ್ದುನಿಂತು ಸ್ವಲ್ಪ ವಿವರಣೆ ಕೊಡುವುದಕ್ಕೆ ಮುಂಚೆ ಶ್ರೀ ಸಿದ್ದವೀರಪ್ಪನವರು ಮತ್ತು ಶ್ರೀ ಹನುಮಂತಯ್ಯನವರು—ಅವರು ಈಗ ಇಲ್ಲಿಲ್ಲ, ದಯವಿಟ್ಟು ಕ್ಷಮಿಸುತ್ತಾರೆಂದು ನಂಬುತ್ತೇನೆ—ಇಬ್ಬರೂ ಎದ್ದು ಎರಡು ಉದ್ದವಾದ ಭಾಷಣಗಳನ್ನು ಮಾಡಿದರು. ಅದಾದ ಮೇಲೆ ಕೇಸುಗಳು ಇತ್ಯಾದಿ ಎಲ್ಲ ಆಯಿತು. ಆ ತಪಶೀಲು ಈಗ ಬೇಡ. ಈ ಸಂದರ್ಭದಲ್ಲಿ ನಾನು ಆ ದಿನ ಏನು ಕೇಳಿದೆ, ಅದಕ್ಕೇನು ಉತ್ತರ ಕೊಟ್ಟರು ಎಂಬುದು ಎಲ್ಲರಿಗೂ ಗೊತ್ತಿದೆ. ಅದೊಂದೇ ಒಂದು ಕೇಸು ಕಾಂಗ್ರೆಸ್ಸಿನ ಸ್ವಜನಪಕ್ಷಪಾತ, ಅಧಿಕಾರ ದುರುಪಯೋಗ ಮತ್ತು ಕರಪ್ಷನ್, ಅನೀತಿ ಈ ಮೂರನ್ನೂ ಜಗತ್ತಿಗೆ ಎತ್ತಿ ತೋರಿಸತಕ್ಕದ್ದಾಗಿದೆ ಎಂದು ನಾನು ಆಗ ಹೇಳಿದೆ. ಏನು ತತ್ವ ಇದರಲ್ಲಿ ಅಡಕವಾಗಿದೆಯೆಂಬುದನ್ನು ಚೆನ್ನಾಗಿ ಯೋಚನೆ ಮಾಡಬೇಕು. ಹಣದ ವಿಷಯದಲ್ಲಾಗಲಿ ಅಥವಾ ವ್ಯಕ್ತಿ ವಿಷಯದಲ್ಲಾಗಲಿ ನನಗೆ ಯಾವ ಸಂಬಂಧವೂ ಇಲ್ಲ. ಆ ವ್ಯಕ್ತಿ ಅಗ್ರಿಕಲ್ಚರಲ್ ಇಲಾಖೆಯಲ್ಲಿದ್ದರು. ಆ ಇಲಾಖೆಯಲ್ಲಿ ಕೆಲವು ಲೋಪದೋಷಗಳಿವೆ, ಹಣಕಾಸಿನ ದುರುಪಯೋಗ ನಡೆದಿದೆ ಎಂದು ಕೇಸ್ ಆಯಿತು. ಅನಂತರದಲ್ಲಿ ಅವರು ರಾಜೀನಾಮೆ ಕೊಟ್ಟರು. ಇನ್ನಾರಾದರೂ ಆ ಕೆಲಸ ಮಾಡಿದ್ದರೆ ಅವರನ್ನು ಜೈಲಿಗೆ ಹಾಕುತ್ತಿದ್ದರು. ಸಾಧಾರಣವಾಗಿ every individual is equal before law. ಅದರಲ್ಲಿ ತಾರತಮ್ಯವಿಲ್ಲ, ಎಲ್ಲರೂ ಒಂದೆ. ಅದಾಯಿತು. ಆದಾದಮೇಲೆ ಅವರಿಗೆ ಅಗ್ರಿಕಲ್ಚರಲ್ ಡಿಪ್ಲೊಮಾ ಇದೆ ಎಂದು 50 ಎಕರೆ ಜಮೀನನ್ನು ಈ ಸರ್ಕಾರ ಬಹುಮಾನದ ರೂಪದಲ್ಲೋ ಅಥವಾ ಗ್ರಾಂಟ್ ರೂಪದಲ್ಲೋ ಕೊಟ್ಟರು. ಭಾಷಣ ಹಿಂದೆ ಮಾಡಿರುವುದರಲ್ಲೇ ಇದೆಲ್ಲಾ ಇದೆ, ಶ್ರೀ ಸಿದ್ದವೀರಪ್ಪನವರ ಮತ್ತು ಶ್ರೀ ಹನುಮಂತಯ್ಯನವರ ಭಾಷಣದಲ್ಲೇ ಇದೆ. ಅನಂತರ ಬಂದಿರುವ ಹೇಳಿಕೆಗಳನ್ನು ಮಾತ್ರ

ಗಮನಿಸಿ ಈಗ ಒಂದೆರಡು ವಿಚಾರ ಹೇಳುತ್ತಿದ್ದೇನೆ. ಅವರಿಗೆ ಅಗ್ರಿಕಲ್ಚರಲ್ ಡಿಪ್ಲೊಮಾ ಇದೆ ಎಂದೋ ಅಥವಾ ಅವರು ಡಿಗ್ರಿ ಹೋಲ್ಡರೆಂದೋ ಆ ಒಂದು ಆಧಾರದ ಮೇಲೆ ದೇಶದಲ್ಲಿ ಹೆಚ್ಚು ಆಹಾರದ ಬೆಳವಣಿಗೆಗೆ ಸಹಾಯ ಮಾಡುತ್ತಾರೆಂದು ಅವರಿಗೆ ಜಮೀನನ್ನು ಕೊಟ್ಟರು. ಅಲ್ಲಿ ಮೊದಲು ರೈತರಿದ್ದರು. ಅವರಿಂದ ತಪ್ಪಿಸಿ ಇವರಿಗೆ ಕೊಟ್ಟರು. ಇಪ್ಪತ್ತೈದು ವರ್ಷಗಳಿಂದ ಆ ಜಮೀನು ಗೋಮಾಳಕ್ಕೂ ಅಕ್ಯುಯರ್ ಫಾರೆಸ್ಟಿಗೂ ಸೇರಿತ್ತು. ಅದು ನಡೆದಮೇಲೆ ಈ ಸಭೆಯಲ್ಲಿ ಚರ್ಚೆಯಾಗಿದೆ. ಅದನ್ನು ಈಗ ಪ್ರಸ್ತಾಪ ಮಾಡುವುದಿಲ್ಲ; ಅದು ಅಪ್ರಕೃತ, ಕಣ್ಣಿಗೆ ಕಾಣುವುದು. ಅನಂತರ ಒಂದು ದಿವಸ ಪತ್ರಿಕೆಯಲ್ಲಿ ನೆಹ್ರೂ ಅವರು ಸುಮಾರು 13 ಸಾವಿರ ರೂಪಾಯಿ—subject to correction—ನಂಜಪ್ಪನವರಿಗೆ ಪರಿಹಾರವಾಗಿ ಕೊಡಬೇಕೆಂದು ತಿಳಿಸಿದ್ದಾರೆಂದು ಕಂಡುಬಂತು. ಅದೇಕೆ, ಏನು ಎಂಬ ಪ್ರಶ್ನೆಯಿಲ್ಲ. ಲ್ಯಾಂಡ್ ಅಕ್ವಿಜಿಷನ್ ಆಕ್ಟ್ ಪ್ರಕಾರ ಅವರಿಗೆ ಹಣ ಕೊಡಬೇಕು.

1-30 P.M.

ನಾನು ಈಗ ಕೇಳುತ್ತಿದ್ದೇನೆ, ನ್ಯಾಯಾಂಗ ಇಲಾಖೆಯವರು ಅಂದರೆ ನ್ಯಾಯಾಧೀಶರು ಇವರಿಗೆ ಒಂದು ಲಕ್ಷ ಚಿಲ್ಲರೆ ರೂಪಾಯಿಗಳನ್ನು ಪರಿಹಾರ ರೂಪವಾಗಿ ಕೊಡಬೇಕೆಂದು ತೀರ್ಮಾನಮಾಡಿದ್ದಾರೆ ಎಂಬುದಾಗಿ. ಇದೇನು ಸ್ವಾಮಿ ಇದು! ಅವರ ಮೇಲೆ ಆ ಆಂಟಿಕರಪ್‌ಷನ್ ಇಲಾಖೆಯಲ್ಲಿದ್ದ ಕೇಸ್ ಏನಾಯಿತು? ಅದು ಎತ್ತ ಹೋಯಿತು? ಈ ವಿಚಾರಗಳೆಲ್ಲಾ ದೇಶದಲ್ಲಿರತಕ್ಕಂಥ ಜನ ಸಮುದಾಯಕ್ಕೆ ಹೇಗೆ ಗೊತ್ತಾಗುವುದು? ಆ ಜಮೀನನ್ನು ಸರ್ಕಾರದವರು ಅವರಿಗೆ ಯಾವಾಗ ಕೊಟ್ಟರು? ಅದು ಯಾರ ವಶದಲ್ಲಿತ್ತು? ಆ ಜಮೀನು ಇವರ ವಶದಲ್ಲಿ ಎಷ್ಟು ದಿನಗಳಿಂದ ಇತ್ತು? ಅದನ್ನು ಇವರು ಬಿಡಿಸಿಕೊಂಡಿದ್ದು ಯಾವಾಗ? ಆ ಜಮೀನಿನ ಲಕ್ಷಣವೆಂಥಾದ್ದು? ಅದನ್ನು ಎಷ್ಟು ಬೆಲೆಗೆ ಕೊಡಲಾಗಿತ್ತು? ಇದಕ್ಕೆ ಕಾನೂನು ಪ್ರಕಾರ ಒಂದು ಲಕ್ಷ ರೂಪಾಯಿಗಳನ್ನು ಪರಿಹಾರ ರೂಪವಾಗಿ ಕೊಡಬೇಕೆಂದು ಅವರೇನೋ ಹೇಳಿದ್ದಾರೆ ಆವರೆ ಇದೆಲ್ಲಾ ಸರಿಯಾಗಿದೆಯೋ ಎನ್ನುವುದನ್ನು ತಾವುಗಳೆಲ್ಲರೂ ಆಲೋಚನೆ ಮಾಡಿ ನೋಡಬೇಡವೇ? ಆದರೆ ಈ ಹಿಂದೆ ಆ ಶ್ರೀಮಾನ್ ನಂಜಪ್ಪನವರೂ ಸಹ ನನಗೆ ಸಿಕ್ಕಿದ್ದರು. ಆಗ ಅವರು ಈ ವಿಚಾರದಲ್ಲಿ ಕೋರ್ಟಿನ ತೀರ್ಮಾನಕ್ಕೆ ಕಾದಿರುವುದಾಗಿ ತಿಳಿಸಿದರು. ಆಗ ನಾನು ಅವರಿಗೆ ತಾವೇತಕ್ಕೆ ಕೋರ್ಟಿಗೆ ಹೋದಿರಿ, ಸ್ವಾಮಿ. 'ಇದೆಲ್ಲವನ್ನು ತಾವು ಕೈಬಿಟ್ಟುಬಿಟ್ಟಿದ್ದರೆ ಚೆನ್ನಾಗಿತ್ತಲ್ಲಾ' ಎಂಬುದಾಗಿ ತಿಳಿಸಿದೆನು. ಈ ದುಡ್ಡನ್ನೂ ಸಹ ಬಿಟ್ಟುಬಿಡಿ ಎಂಬುದಾಗಿ ನಾನು ತಿಳಿಸಿದೆನು. ನಾನೀಗ ಅವರನ್ನು ತಪ್ಪಿತಸ್ಥರೆಂದು ಕರೆಯುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಈ ದಿವಸ ಒಂದು ವ್ಯವಸ್ಥೆ ಇದೆ, ಒಂದು ಸಮಾಜವಿದೆ; ಆಡಳಿತವಿದೆ. ಆದರೆ ನಾನು ಶ್ರೀ ಹನುಮಂತಯ್ಯನವರದು ಒಂದು ಸರ್ಕಾರ, ಶ್ರೀ ಮರಿಯಪ್ಪನವರದೊಂದು ಸರ್ಕಾರ ಎಂದು ವಿಭಾಗ ಮಾಡುವುದಕ್ಕೆ ಹೋಗುವುದಿಲ್ಲ. ಆ ರೀತಿ ಒಂದು ವಿಭಾಗವನ್ನೂ ಸಹ ಮಾಡಬಾರದೆಂದು ಹೇಳುತ್ತಿದ್ದಾರೆ. ಹಾಗೆ ಮಾಡಿದರೆ ವ್ಯಾಜ್ಯವಾಗುತ್ತದೆಂದು ಹೇಳುತ್ತಿದ್ದಾರೆ. ಆದುದರಿಂದ ಸರ್ಕಾರದವರು ಈಗ ಈ ಕೇಸಿನ ಬಗ್ಗೆ ಸಂಪೂರ್ಣ ವಿವರಣೆ ಕೊಡಬೇಕಾಗಿದೆ. ಇಂಥ ಒಂದು ಹೇಳಿಕೆಯನ್ನು ಸರ್ಕಾರದವರು ನೀಡಿ ಜನರಿಗೆ ಒಂದು ತೃಪ್ತಿಕರವಾದ ರೀತಿಯಲ್ಲಿ ಸಮಾಧಾನ ಹೊಂದುವಂತೆ ಇದಕ್ಕೊಂದು ಪರಿಹಾರ ನೀಡಬೇಕಾಗಿದೆ. ಈ ರೀತಿಯಾಗಿ ಇವರು ಮಾಡದೆ ಇರುವ ಪಕ್ಷದಲ್ಲಿ ಇವರ ಮೇಲೆ ಎಷ್ಟೇ ದಿನಗಳಾಗಲಿ ಇವರ ಮೇಲೆ ಎಂದಿಗೂ ಅಳಿಸಿ ಹೋಗದಂಥ ಒಂದು ಕಳಂಕ ಅನೀತಿ-ಇತ್ಯಾದಿ ಶಬ್ದಗಳು ಇವರ ಮೇಲೆ ಮಕುಟಪ್ರಾಯವಾಗಿ ಕುಳಿತುಕೊಳ್ಳಲು ಅವಕಾಶವಾಗುತ್ತದೆಂದು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಸ್ವಾಮಿ, ಮಾನ್ಯ ಮುಖ್ಯ ಮಂತ್ರಿಗಳು ಬಡ್ಜೆಟ್ ಭಾಷಣದಲ್ಲಿ ಈ P.S.C. ಮತ್ತು ಎಫಿಷಿಯನ್‌ಸಿ ವಿಚಾರಗಳ ಬಗ್ಗೆ ಪ್ರಸ್ತಾಪಿಸುತ್ತಾ 'ನಮ್ಮ ದೇಶದಲ್ಲಿ ಈಗಾಗಲೇ ನಡೆಸಿರತಕ್ಕಂಥ ಈ ಪಾಂಚವಾರ್ಷಿಕ ಯೋಜನೆಯನ್ನು ಇಷ್ಟರ ಮಟ್ಟಿಗೆ ಫಲಕಾರಿಯಾಗಿಯೂ ಮತ್ತು ಯಶಸ್ವಿಯಾಗಿಯೂ ನಡೆಸಿಕೊಂಡು ಬಂದಿರುವುದಕ್ಕೆ ಕಾರಣ ನಮ್ಮ ಅಧಿಕಾರಿಗಳು ಈ ಭಾಗದಲ್ಲಿ ಬಹಳ ಸಹಾಯ ಮಾಡಿದ್ದಾರೆ, ಬಹಳ ಚೆನ್ನಾಗಿ ಅವರು ಕೆಲಸ ಮಾಡಿದ್ದಾರೆ, ಎಂಬ ಕೆಲವು ಮೆಚ್ಚಿಕೆಯ ಮಾತುಗಳನ್ನು ಇಲ್ಲಿ ಆಡಿರುತ್ತಾರೆ' ಆದರೆ ನಾನು ಈ ಅಭಿಪ್ರಾಯವನ್ನು ಸಂಪೂರ್ಣವಾಗಿ ಒಪ್ಪುವುದಕ್ಕೆ ಕಷ್ಟವಾಗಿದೆ. ಅನೇಕ ಸಂದರ್ಭಗಳಲ್ಲಿ ನಮ್ಮ ಹಾಗೆ ನಮ್ಮ ಸರ್ಕಾರಿ ಅಧಿಕಾರಿಗಳಿಗೆ ಈ ರಾಷ್ಟ್ರಾಭಿವೃದ್ಧಿ ಕಾರ್ಯಗಳ ಮೇಲೆ ಅಷ್ಟಾಗಿ ಗಮನವಿದ್ದ ಹಾಗೆ ಕಾಣುವುದಿಲ್ಲ. ಆದರೆ ಎಲ್ಲರೂ ಹೀಗೆ ಇದ್ದಾರೆಂದು ನಾನು ಹೇಳುತ್ತಿಲ್ಲ. ಆದರೆ ಅನೇಕ ನೌಕರರಿಗೆ ಈ ಸರ್ಕಾರಿ ಕೆಲಸ ಕಾರ್ಯಗಳಲ್ಲಿ ಆಸಕ್ತಿ ಕಡಮೆ. ಆದರೆ ನಾನು ಈ ದೂಷಣೆಯನ್ನೆಲ್ಲಾ ಈ ಅಧಿಕಾರಿವರ್ಗದ ಮೇಲೆ ಹಾಕುವುದರಿಂದ ಅಷ್ಟೇನೂ ಪ್ರಯೋಜನವಿಲ್ಲವೆಂದು ತಿಳಿದುಕೊಂಡಿದ್ದೇನೆ. ಇದಕ್ಕೆ ಸರ್ಕಾರದವರೂ ಕೂಡ ಕೆಲವು ಮಟ್ಟಿಗೆ ಕಾರಣವೆಂದು ನಾನು ಸ್ವಲ್ಪ ವಿಷಾದದಿಂದ ಹೇಳಬೇಕಾಗಿದೆ. ನಮ್ಮ ಸಂಸ್ಥಾನದ ಎಂದರೆ ಮೈಸೂರು ಗೆಜೆಟ್ಟಿನಲ್ಲಿ ಪ್ರತಿ ವಾರವು ಪ್ರತಿಯೊಂದರಲ್ಲೂ ಈ ಮಂತ್ರಿಗಳ ಪ್ರವಾಸ ಕಾಲದಲ್ಲಿ—ಇವರಿಗೆ ಯಾರೂ ಈ ಹಾರ-ತುರಾಯಿ ಇತ್ಯಾದಿಗಳನ್ನು ಹಾಕಬಾರದು, ಚಪ್ಪರ ವಗ್ಯೈರೆಗಳ ಆಡಂಬರಕ್ಕೆ ಅವಕಾಶ ಕೊಡಬಾರದು ಎಂಬ ನೋಟಿಫಿಕೇಷನ್ ಇದ್ದೇ ಇರುತ್ತದೆ. ಇದನ್ನು ಸರ್ಕಾರಿ ಅಧಿಕಾರಿಗಳ ಮತ್ತು ಸಾರ್ವಜನಿಕರುಗಳ ತಿಳುವಳಿಕೆಗೋಸ್ಕರವಾಗಿಯೇ ಪಬ್ಲಿಷ್ ಮಾಡಲಾಗುತ್ತದೆ. ಆದರೆ ಈ ವಿಚಾರವನ್ನು ನಾನು ಹಾಗೇ ಆಲೋಚನೆ ಮಾಡಿ ನೋಡಿದಲ್ಲಿ ಹೀಗೆಲ್ಲಾ ಮಾಡಬಾರದೆಂದು ಗೆಜೆಟ್ಟಿನಲ್ಲಿ ಲಿಖಿತ ಮೂಲಕವಾಗಿ ತಿಳಿಸಿದ್ದಾಗ್ಯೂ ಏನು ಈ ಅಧಿಕಾರಿವರ್ಗದವರು ತಾವೇ ಹೀಗೆಲ್ಲಾ ಸ್ವಯಂ ಪ್ರೇರಿತರಾಗಿ ಮಾಡುತ್ತಿದ್ದಾರೋ, ಅಥವಾ ಅವರಿಗೆ ಮಧ್ಯೆ ಮತ್ತೆ ಯಾರಾದರೂ ಸೇರಿಕೊಂಡು ಹೀಗೆಲ್ಲಾ ಮಾಡಬೇಕೆಂದು ಹೇಳಿ ಮಾಡಿಸುತ್ತಿದ್ದಾರೋ ಅಥವಾ ಕೆಲವು ಸಂದರ್ಭಗಳಲ್ಲಿ ಮಂತ್ರಿಗಳೇ ಏನಾದರೂ ಹೀಗೆ ಮಾಡಿಸಿ ಎಂದು ಹೇಳಿ ಮಾಡಿಸಿಕೊಳ್ಳುತ್ತಿದ್ದಾರೋ ಎಂಬ ಇದರ ಮರ್ಮವೇ ನನಗೆ ಗೊತ್ತಾಗುತ್ತಿಲ್ಲ. ಬರವಣಿಗೆಯಲ್ಲಿ ನೋಡಿದರೆ ಹಾಗಿದೆ. ಹೊರಗಡೆ ಆಚರಣೆಯಲ್ಲಿ ನೋಡಿದರೆ ಈ ಹಾರ-ತುರಾಯಿ, ಪೆಂಡಾಲ್ ಎಲ್ಲಾ ಸಿದ್ಧವಾಗಿ ಅವರು ಬರುವ ವೇಳೆಗೆ ತಯಾರಾಗಿರುತ್ತವೆ. ಅದರೆ ಇದರಲ್ಲಿ ಒಂದು ಹೊಸ ವಿಶೇಷವೇನು ಕಂಡುಬರುತ್ತದೆ ಎಂದರೆ—ಮೊದಲಿನ ಮಾದರಿಯ ಹಾರಗಳನ್ನೆಲ್ಲ ಈಗ ಹಾಕುತ್ತಿರುವುದು. ಈಗ ಹಾಕತಕ್ಕ ಹಾರಗಳ ವಿಚಿತ್ರವೇ ಒಂದು ರೀತಿ. ಹಾರ ಹಾಕಿಸಿಕೊಳ್ಳುವ ವ್ಯಕ್ತಿಗಳು ಎಷ್ಟು ಉದ್ದ

(ಶ್ರೀ ಡಿ. ದೇವರಾಜ ಅರಸ್.)

ವಾಗಿರುತ್ತಾರೋ ಅಷ್ಟು ಉದ್ದವಾದ ಹಾರ ಆಗಿರುವುದೊಂದಲ್ಲದೆ ಆ ಉದ್ದಕ್ಕೆ ತಕ್ಕಹಾಗೆ ಗಾತ್ರ ಕೂಡ ಉಳ್ಳಂಥ ಹಾರಗಳನ್ನು ಹಾಕುತ್ತಿದ್ದಾರೆ. ಹೀಗೆ ಒಂದು ಹೊಸ ರೀತಿಯಲ್ಲಿ ಇದು ನಡೆಯುತ್ತಿದೆ. ಆದರೆ ನಮ್ಮ ಸರ್ಕಾರದವರು ಹೇಳುತ್ತಿರುವುದೇನು ? ನಮ್ಮ ಅಧಿಕಾರಿಗಳು ದೇಶ ಪ್ರೇಮವನ್ನಿಟ್ಟುಕೊಂಡು ಕೆಲಸ ಮಾಡಬೇಕು ಅವರು ಆ ರೀತಿ ಕೆಲಸ ಮಾಡಿ ದೇಶದಲ್ಲಿರತಕ್ಕಂಥ ಜನರ ಪ್ರೇಮ-ಪ್ರೀತಿ-ವಿಶ್ವಾಸಗಳನ್ನು ಗಳಿಸಿಕೊಳ್ಳಬೇಕು ಎಂಬುದಾಗಿ ಅವರಿಗೆ ಬೋಧೆ ಮಾಡುತ್ತಿದ್ದಾರೆ. ಹೀಗೆ ಬೋಧೆ ಮಾಡತಕ್ಕ ಅಧಿಕಾರ ವರ್ಗದವರೇ ಇಂಥ ನಡವಳಿಕೆ ನಡೆಸುತ್ತಿದ್ದಾರೆ; ಬರವಣಿಗೆಯಲ್ಲಿರುವುದಕ್ಕೆ ವಿರೋಧವಾಗಿ ಕಾರ್ಯಾಚರಣೆ ನಡೆಸಲು ಅವರಿಗೆ ಪ್ರೋತ್ಸಾಹ ನೀಡುತ್ತಾ ಹೋದರೆ ನಾಳೆ ಈ ಅಧಿಕಾರಿಗಳಿಗೂ ಇವರಿಗೂ ಜನರ ಹಾಗೂ ದೇಶದ ಹಿತದೃಷ್ಟಿಯನ್ನು ಗಮನದಲ್ಲಿಟ್ಟು ಕೆಲಸ ನಡೆಸಲು ಸಾಧ್ಯವಾಗುತ್ತದೆಯೇ ಎನ್ನುವುದನ್ನು ನಾವೀಗ ದೀರ್ಘವಾಗಿ ಆಲೋಚನೆ ಮಾಡಬೇಕಾಗಿದೆ. ಅಗರೇ ಶ್ರೀಮಾನ್ ಟಿ. ಮರಿಯಪ್ಪನವರು ಹೇಳಿದ ಹಾಗೆ, ಸರ್ಕಾರ ಎಂದೂ ಬೇರೆ ಆಗಿರುವುದಿಲ್ಲ. 1947ರಲ್ಲಿ ಯಾವಾಗ ಈ ಆಡಳಿತಾಧಿಕಾರವನ್ನು ನಮ್ಮ ಕಾಂಗ್ರೆಸ್ ಸಂಸ್ಥೆ ವಹಿಸಿಕೊಂಡಿತೋ ಆ ಕಾಲದಿಂದಲೂ ಆ ಮೊದಲಿನವರು ಹಾಕಿಕೊಟ್ಟಂಥ ಪೀಠಿಕೆಯೇ ಈಗಲೂ ನಡೆದುಕೊಂಡು ಬರುತ್ತಿದೆ.

ಶ್ರೀ ಟಿ. ಮರಿಯಪ್ಪ (ಮೈಸೂರು ಉತ್ತರ).--ಈಗ ಮೊದಲಿಗಿಂತಲೂ ಅದರ ಹತ್ತರಷ್ಟು ಜಾಸ್ತಿಯಾಗಿದೆ.

ಶ್ರೀ ಡಿ. ದೇವರಾಜ ಅರಸ್.—ಈಗ ಹತ್ತರಷ್ಟಾಗಿದ್ದರೆ-ಆಗ ಇದರ ಒಂದರಷ್ಟಾದರೂ ಇತ್ತು ಎಂದು ಒಪ್ಪಿಕೊಂಡಹಾಗಾಯ್ತು. ಆದ್ದರಿಂದ ಖಂಡಿತವಾಗಿಯೂ ನಾವು ತಿಳಿದುಕೊಂಡಿರುವ ಹಾಗೆ "ಸರ್ವರೂ ಒಂದೇ" ಎಂದು ಹೇಳುವುದು ಸರಿಯಲ್ಲ. ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಭಾಷಣದಲ್ಲಿ ಒಂದು ಮಾತನ್ನು ಹೇಳಿದ್ದಾರೆ :—"ನಾವು ಹಳೆಯ ಪದ್ಧತಿಗಳನ್ನು ಬಿಡಬೇಕು, ಹಳೇ ರೀತಿಯಲ್ಲಿ ನಾವು ಆಲೋಚನೆ ಮಾಡುವುದನ್ನು ಬಿಡಬೇಕು, ರಾಜರ ಮೇಲಿಟ್ಟಿರತಕ್ಕ ಭಕ್ತಿಯನ್ನು ಬಿಡಬೇಕು" ಎಂಬುದಾಗಿ. ಆದರೆ ಈ ವಿಚಾರಗಳೇನೂ ನಮಗೆ ಹೊಸವಲ್ಲ. ಈ ವಿಚಾರಗಳನ್ನೆಲ್ಲಾ ನಾವು ಬಹಳ ಹಿಂದೆಯೇ ಹೇಳುತ್ತಿದ್ದೆವು. ಈಗಲೂ ನಮಗೆ ಇವೇನೂ ಹೊಸ ವಿಚಾರಗಳಲ್ಲ. ಅವುಗಳನ್ನೆಲ್ಲಾ ಹಾಗೆ ಬಿಟ್ಟುಬಿಡಬೇಕಾದ್ದೂ ಸಹ ನಿಜವೇ ! ಅದೇ ರೀತಿ ನಾವೀಗ ಬಿಡುತ್ತಲೇ ಬಂದಿದ್ದೇವೆ. ಆದರೆ ಬಿಡುತ್ತಿದ್ದೇವೆ ಎಂದರೆ ಅವುಗಳನ್ನು 'ರಿಪ್ಲೇಸ್' ಮಾಡಿಕೊಂಡು ಬರುತ್ತಿದ್ದೇವೆ. ಈ ಹಿಂದೆ ನಾವು ದೊರೆಗಳಿಗೆ ಲಾಯಲ್ಟಿ ತೋರಿಸುತ್ತಿದ್ದೆವು. ಈಗ ಅದು ಅವರಿಗೆ ತಪ್ಪಿಹೋಗಿ-ಆ ಲಾಯಲ್ಟಿಯನ್ನು ನಾವು ಮಂತ್ರಿಗಳಿಗೆ ತೋರಿಸುತ್ತಿದ್ದೇವೆ. ಹಿಂದಿನ ಕಾಲದಲ್ಲಿ ತುಂಬ ಐಶ್ವರ್ಯವಂತರಿಗೂ ಮತ್ತು ಜೋಡಿದಾರರು ಮತ್ತು ಜಹಗೀರ್‌ದಾರರೆಂದು ಯಾರು ಇದ್ದರೋ ಅಂಥವರಿಗೆ ಒಂದು ಹೆಚ್ಚಿನ ಗೌರವ ಸಲ್ಲುತ್ತಿದ್ದಿತು. ಈಗ ಅವರಿಗೆಲ್ಲಾ ಆ ಗೌರವ ರದ್ದಾಗಿಹೋಯಿತು. ಯಾವಾಗ ನಾವು ಆ ಜನರ ಜೋಡಿ-ಜಹಗೀರುಗಳನ್ನೆಲ್ಲಾ ಕಾನೂನು ಮೂಲಕ ರದ್ದುಗೊಳಿಸಿದೆವೋ ಅಂದೇ ಅವರಿಗೆಲ್ಲಾ ಆ ಮರ್ಯಾದೆ ನಿಂತುಹೋಯಿತು. ಈಗ ಆ ಮರ್ಯಾದೆಗೆಲ್ಲಾ ಇನ್ನೊಂದು ಕ್ಲಾಸಿನ ಜನರು ಹುಟ್ಟಿಕೊಂಡಿದ್ದಾರೆ. ಈ ಹೊತ್ತಿನ ಐಶ್ವರ್ಯವಂತರು ಮತ್ತೊಂದು ರೀತಿಯಲ್ಲಿ ಹೊರಗೆ ಬರಲು ಪ್ರಾರಂಭವಾಗಿದೆ. ಈ ಹೊತ್ತು ಈ ಬಿಜನೆಸ್ ಪ್ರಪಂಚದಲ್ಲಿ-ವಾಣಿಜ್ಯ ಪ್ರಪಂಚದಲ್ಲಿ ಲಕ್‌ಪತಿಗಳೆಂದು ಯಾರಿದ್ದಾರೋ ಅಂಥವರಲ್ಲಿ ಯಾರಿಗೆ ಈ ಸರ್ಕಾರದ ಮೇಲೆ ತಮ್ಮ ಪ್ರಭಾವ ಬೀರಲು ಅವಕಾಶವಿರುತ್ತದೆಯೋ ಅಂಥವರಿಗೆ ಈ ದಿವಸ ಮರ್ಯಾದೆ ಸಿಕ್ಕುತ್ತಿದೆ. ಹೀಗೆಲ್ಲಾ ಮಾಡುತ್ತಿರುವುದನ್ನು ನೋಡಿದರೆ ಇದು ನಿಜವಾಗಿಯೂ ಪ್ರಜಾ ಪ್ರಭುತ್ವದ ಮಾರ್ಗದಲ್ಲಿ ಆಡಳಿತ ನಡೆಸತಕ್ಕಂಥ ರೀತಿ ನೀತಿಯೇ ? ಈ ದಿವಸ ನಾವು ಹೇಳುತ್ತಿರುವಂಥ ಸೋಷಿಯಲಿಸ್ಟಿಕ್ ಪ್ಯಾಟರ್ನ್ ಆಫ್ ಸೊಸೈಟಿಯನ್ನು ಜಾರಿಗೆ ತರತಕ್ಕಂಥ ಮಾರ್ಗ ಇದೇನೇನು ? ಇಂಥ ವಿಚಾರಗಳ ಬಗ್ಗೆ ಸರ್ಕಾರದವರು ಕೇವಲ ಈ ಒಂದು ಬಡ್ಜೆಟ್ ಪುಸ್ತಕದಲ್ಲಿ ಹೀಗೆಲ್ಲಾ ಬರೆದು ಪ್ರಿಂಟ್ ಮಾಡಿಸಿ ಹಂಚಿದಾಕ್ಷಣಕ್ಕೇ ಈ ಕಾರ್ಯಕ್ರಮಗಳೆಲ್ಲಾ ಹೀಗೆ ಮುಂದುವರಿಯುತ್ತವೆಂದು ಹೇಳುವುದಕ್ಕಾಗುವುದಿಲ್ಲ. ಇವುಗಳನ್ನು ಕಾರ್ಯತಃ ನಡೆಸಬೇಕು. ಆದರೆ ಈ ದಿವಸ ಇವುಗಳನ್ನೆಲ್ಲಾ ನಿಷ್ಠೆಯಿಂದ ನಾವು ಕಾರ್ಯತಃ ನಡೆಸಿಕೊಂಡು ಬರುತ್ತಿದ್ದೇವೆಂದು ಹೇಳುತ್ತಿರುವ ಸರ್ಕಾರದವರೇ ಹೋದಕಡೆಗಳೆಲ್ಲೆಲ್ಲಾ ದೊಡ್ಡ ದೊಡ್ಡ ಚಪ್ಪರ ಭಾಜಾ-ಭಜಂತ್ರಿಗಳನ್ನು ಹೊಡೆಸಿಕೊಂಡು ಮೆರವಣಿಗೆ ಮಾಡಿಸಿಕೊಳ್ಳುತ್ತಿದ್ದರೆ ಇಂಥವರು ಇತರರಿಗೆ ಹೇಗೆ ಮಾರ್ಗದರ್ಶಕರಾಗಬಲ್ಲರು ಎಂದು ಕೇಳುತ್ತೇನೆ. ಈ ದಿವಸ ಪ್ರಜಾ ಪ್ರಭುತ್ವ ತತ್ವಗಳಿಗನುಸಾರವಾಗಿ ಆಡಳಿತ ನಡೆಸುವಾಗ ಇಂಥ ಆಡಂಬರಗಳಿಗೆಲ್ಲಾ ಕಾಲವಲ್ಲ. ಸರ್ಕಾರದವರು ಮೇಲ್ಪಟ್ಟದಲ್ಲಿ ಹೆಜ್ಜೆ ಹಾಕುತ್ತಾ ಇತರರಿಗೆ ಮಾರ್ಗದರ್ಶಕರಾಗಿರಬೇಕೆಂದು ಈ ಸಂದರ್ಭದಲ್ಲಿ ಈ ಸೂಚನೆಯನ್ನು ಮಾಡಲು ಇಷ್ಟಪಡುತ್ತೇನೆ.

ಇನ್ನು ಈ ದಿವಸ ಸರ್ಕಾರದಲ್ಲಿ ಕೇಂದ್ರೀಕೃತವಾಗಿರತಕ್ಕ ಅಧಿಕಾರವನ್ನು ವಿಕೇಂದ್ರೀಕೃತ ಮಾಡಬೇಕೆಂದು ನಾವೆಲ್ಲರೂ ಪ್ರಯತ್ನ ಮಾಡುತ್ತಿದ್ದೇವೆ. ಇದರಿಂದ ಸರ್ಕಾರದ ಕಾರ್ಯಕಲಾಪಗಳು ಜಾಗ್ರತೆ ನಡೆಸುವ ಹಾಗೆ ಮಾಡಬೇಕೆಂದು ಆಲೋಚನೆ ಮಾಡಲಾಗಿದ್ದಿತು. ಇದನ್ನು ಆದಷ್ಟು ಜಾಗ್ರತೆ ಕಾರ್ಯರೂಪಕ್ಕೆ ತರಬೇಕೆಂದು ಈ ಮಾನ್ಯ ಸಭೆಯವರು ಆಗಿಂದಾಗ್ಗೆ ಒತ್ತಾಯಪಡಿಸುತ್ತಲೇ ಬಂದಿದ್ದಾರೆ. ಈ ಸಂಬಂಧವಾಗಿಯೇ ಈ ಹಿಂದೆ ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಿ ತಾಲ್ಲೂಕ್ ಅಮಲ್ದಾರರುಗಳಿಗೆಲ್ಲಾ ಯಾರಾರಿಗೆ ಜಮೀನಿಲ್ಲವೋ ಅಂಥವರಿಗೆಲ್ಲಾ ಜಮೀನು ಕೊಡಲು ಒಂದು ಅಧಿಕಾರವನ್ನು ಅವರಿಗೆ ಕೊಡಲಾಗಿತ್ತು. ಹಾಗೆ ಮಾಡಿದ್ದರಿಂದ ಸಾರ್ವಜನಿಕರಿಗೆಲ್ಲಾ ಬಹಳ ಅನುಕೂಲವಾಯಿತು. ಆ ರೀತಿ ಮಾಡಿದ್ದರಿಂದ ಸರ್ಕಾರದ ಕೆಲಸ ಕಾರ್ಯಗಳೂ ಸಹ ಸರಾಗವಾಗಿ ನಡೆಯಲು ಒಂದು ಅವಕಾಶವಾಯಿತು. ಅದೇ ರೀತಿಯಾಗಿ ಒಂದು ವ್ಯವಸ್ಥೆಯನ್ನು ಈ ಇಂಜನಿಯರಿಂಗ್ ಇಲಾಖೆಯಲ್ಲೂ ನಡೆಸುವುದು ಅಗತ್ಯವಾಗಿದೆಯೆಂದೂ, ಆ ಬಾಬಿನಲ್ಲಿ ಅಧಿಕಾರವನ್ನು ವಿಕೇಂದ್ರೀಕರಣ ಮಾಡಬೇಕೆಂದೂ ಈ ಹಿಂದೆ ನಾನು ಆ ಎಸ್ಟಿಮೇಟ್ ಕಮಿಟಿಯಲ್ಲಿದ್ದಾಗ ಒಂದು ಸಲಹೆಯನ್ನು ಮಾಡಿದ್ದೆವು. ಆ ನಮ್ಮ ಸಲಹೆಗಳೊಂದೂ ಈವರೆಗೆ ಜಾರಿಗೆ ಬಂದಿಲ್ಲ. ಈಗ ಸೂಪರಿಂಟೆಂಡೆಂಟ್ ಇಂಜನಿಯರಿಗೂ ಮತ್ತು ಎಗ್ಸಿಕ್ಯುಟೀವ್ ಇಂಜನಿಯರಿಗೂ ಎಸ್ಟಿಮೇಟ್ಸ್ ಬಗ್ಗೆ ಮಂಜೂರು ಮಾಡಲು ಇರತಕ್ಕಂಥ ಅಧಿಕಾರವನ್ನು ಇತ್ತೀಚೆಗೆ ಜಾಸ್ತಿ ಮಾಡಿದ್ದೇವೆಂದು ಹೇಳುತ್ತಿದ್ದಾರೆ. ಆದರೆ ಆ ಅಧಿಕಾರದ ವಿಕೇಂದ್ರೀ

ಕರಣವಿನ್ನೂ ಈ ಇಲಾಖೆಯಲ್ಲಿ ಹೆಚ್ಚಾಗಿ ಜಾರಿಗೆ ಬಂದಿಲ್ಲ.

ಇನ್ನು ಈ ರೂರಲ್ ಇಂಡಸ್ಟ್ರಿಯಲ್ ಸೊಸೈಟಿಗಳೆಂದು ಏನಿರುತ್ತವೆಯೋ ಇವುಗಳಲ್ಲಿ ಯಾರಾದರೂ ಕೇವಲ 50-100 ರೂಪಾಯಿಗಳಿಗೆ ಸಾಲಕ್ಕೆ ಅರ್ಜಿ ಹಾಕಿದರೆ ಆ ಸಾಲದ ಅರ್ಜಿಗಳು ತಮ್ಮ ಮಂಜೂರಾತಿಗಾಗಿ ಹೆಡ್ ಆಫೀಸಿಗೆ ಡೈರೆಕ್ಟರವರ ಹತ್ತಿರಕ್ಕೇ ಬರಬೇಕಾಗಿರುವುದರಿಂದ ಯಾರಿಗೂ ಈ ಸೊಸೈಟಿಗಳಲ್ಲಿ ಸಕಾಲಕ್ಕೆ ಸಾಲ ಪಡೆಯಲು ಸಾಧ್ಯವಾಗುತ್ತಿಲ್ಲ. ವರ್ಷಾನುಗಟ್ಟಲೆ ನಿಧಾನವಾಗುತ್ತಿದೆ. ಈ ಇಲಾಖೆಯಲ್ಲೂ ಹೀಗೆ ಅಧಿಕಾರ ಒಂದೇ ಕಡೆ ಕೇಂದ್ರೀಕೃತವಾಗಿರುವುದರಿಂದ ನಾವು ಈ ಸಂಸ್ಥೆಗಳಿಂದ ಎಷ್ಟರಮಟ್ಟಿಗೆ ಸಹಾಯವನ್ನು ನಿರೀಕ್ಷಿಸಿದ್ದೇವೋ ಅಷ್ಟು ಆಗುತ್ತಿಲ್ಲ. ಆದಕಾರಣ ಸರ್ಕಾರದವರು ತಕ್ಷಣ ಈ ಅಧಿಕಾರವನ್ನು ವಿಕೇಂದ್ರೀಕೃತ ಮಾಡಲು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಸೂಚಿಸುತ್ತೇನೆ.

ಸ್ವಾಮಿ, ಇನ್ನು ಈ ವಿದ್ಯಾನಿಲಯಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಈ ದಿವಸ ನಮ್ಮ ಸರ್ಕಾರ ನಮ್ಮ ನೂತನ ಸಮಾಜಕ್ಕನುಗುಣವಾದಂಥ ಏನೊಂದು ವಿದ್ಯಾ ಪದ್ಧತಿಯನ್ನು ಜಾರಿಗೆ ತರುತ್ತೇವೆಂದು ಹೇಳುತ್ತಿದ್ದಾರೋ ಅದಕ್ಕೆ ಅನುಗುಣವಾಗಿ ಈ casteless and classless ಸೊಸೈಟಿಯನ್ನು ಸ್ಥಾಪನೆ ಮಾಡತಕ್ಕಂಥ ಮಾರ್ಗದಲ್ಲಿ ಅವರು ಮುಂದುವರಿಯುತ್ತಿದ್ದೇವೆ ಎಂದು ಹೇಳಿದ್ದಾರೆ. ಅಂಥ ಧ್ಯೇಯಗಳನ್ನು ಇಟ್ಟುಕೊಂಡು ಕೆಲಸ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಈ ಮಾರ್ಗ ಸಾಧನೆಯ ಹಾದಿಯಲ್ಲೇನೋ ಕೆಲವು ಅನುಕೂಲವಾದ ಹೆಜ್ಜೆಗಳನ್ನು ನಮ್ಮ ಸರ್ಕಾರದವರು ಇಟ್ಟಿದ್ದಾರೆ. ಆದರೆ ನನ್ನ ಅಭಿಪ್ರಾಯದಲ್ಲಿ ನಾನು ನಿರೀಕ್ಷಣೆ ಮಾಡಿದ್ದಷ್ಟು ಕೆಲಸ ಈ ಬಾಬಿನಲ್ಲೂ ಸಹ ನಡೆದಿರುವುದಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಇಂಥ ಸಂದರ್ಭದಲ್ಲಿ ನಾವು ಹೆಮ್ಮೆಪಡತಕ್ಕಂಥ ಒಂದು ವಿಚಾರವೇನೆಂದರೆ ನಮ್ಮ ಸರ್ಕಾರದವರು ಈಗಾಗಲೇ ದೇಶದಲ್ಲಿ 14 ಜನರಲ್ ಹಾಸ್ಟಲುಗಳನ್ನು ತೆರೆದಿದ್ದಾರೆ ಎನ್ನುವುದೇ ಆಗಿದೆ. ಇದು ನಮ್ಮೆಲ್ಲರಿಗೂ ಬಹಳ ಸಂತೋಷದ ವಿಚಾರ. ದೇಶದಲ್ಲಿ ಎಲ್ಲಿಯೂ ಈ ಕಮ್ಯೂನಲ್ ಹಾಸ್ಟಲುಗಳೇ ಇರಬಾರದು. ಆದರೆ ಈಗ ಎಲ್ಲೆಲ್ಲಿ ಈ ಕಮ್ಯೂನಲ್ ಹಾಸ್ಟಲ್‌ಗಳು ಇರುತ್ತವೆಯೋ ಅಂಥ ಹಾಸ್ಟಲುಗಳಿಗೆ ಸರ್ಕಾರದವರು ಗ್ರಾಂಟು ಇತ್ಯಾದಿ ಏನನ್ನಾದರೂ ಕೊಡುತ್ತಿದ್ದರೆ ಇನ್ನು ಮುಂದಕ್ಕೆ ಅಂಥ ಹಾಸ್ಟಲುಗಳು ಶೇಕಡ ಇಪ್ಪತ್ತರಷ್ಟು ಇತರ ಕೋಮಿನವರನ್ನು ಅದಕ್ಕೆ ಸೇರಿಸಿಕೊಳ್ಳದಿದ್ದ ಪಕ್ಷದಲ್ಲಿ ಅದಕ್ಕೆ ಸರ್ಕಾರದ ಸಹಾಯ ದೊರೆಯಲಾರದೆಂದು ಹುಕುಂ ಮಾಡಿದ್ದಾರೆಂದು ಕೇಳಿದೆನು. ಆದರೆ ನನ್ನ ಅಭಿಪ್ರಾಯದಲ್ಲಿ ಇದೂ ಕೂಡ ಸರಿಯಲ್ಲ. Casteless society ನಿರ್ಮಾಣ ಮಾಡಬೇಕಾದರೂ ಕೂಡ ಎಲ್ಲಿ ಮೂಲಭೂತವಾಗಿ ನಮ್ಮ ಮುಂದಿನ ಜನರು, ಮುಂದಿನ ದೇಶದ ಪ್ರಜೆಗಳು ತರಬೇತು ಹೊಂದಬೇಕೋ ಅಂಥ ಸ್ಥಳದಲ್ಲಿಯಾದರೂ ಕೂಡ ಈ ಜಾತೀಯ ಮನೋಭಾವ ಬೆಳೆಯದ ರೀತಿಯಲ್ಲಿ ನಾವು ಒಂದು ಸನ್ನಿವೇಶವನ್ನು ಕಲ್ಪಿಸದೇ ಹೋದ ಪಕ್ಷದಲ್ಲಿ ನಮ್ಮ ಗುರಿಯನ್ನು ಸಾಧನೆ ಮಾಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಈ ಜನರಲ್ ಹಾಸ್ಟೆಲುಗಳನ್ನು ಹೆಚ್ಚು ಮಾಡಬೇಕು. ಕಮ್ಯೂನಲ್ ಹಾಸ್ಟಲು ಯಾವುದೇ ಆಗಲೀ ಅದಕ್ಕೆ ಸರ್ಕಾರದಿಂದ ಯಾವ ವಿಧದಲ್ಲೂ ಕೂಡ ಸಹಾಯ ದೊರೆಯಬಾರದು ಎಂದು ನಾನು ಖಚಿತವಾಗಿ ಅಭಿಪ್ರಾಯವುಳ್ಳವನಾಗಿದ್ದೇನೆ.

ಸ್ವಾಮಿ, ನಮ್ಮ ದೇಶದಲ್ಲಿ ಈ ನಿರುದ್ಯೋಗ ಸಮಸ್ಯೆಯನ್ನು ಆಗಿಂದಾಗ್ಗೆ ಪ್ರಸ್ತಾಪ ಮಾಡುತ್ತಾ ಇದ್ದೇವೆ. ನಿರುದ್ಯೋಗ ಹೆಚ್ಚುತ್ತಾ ಇದೆ ಎಂಬುದಾಗಿ ಅನೇಕರು ಅಭಿಪ್ರಾಯಪಟ್ಟರು. ಈಗಿನ ವಿದ್ಯಾಭ್ಯಾಸ ಪದ್ಧತಿಗೂ ಈ ನಿರುದ್ಯೋಗ ಸಮಸ್ಯೆಗೂ ಒಂದು ವಿಧವಾದ ನಿಕಟ ಸಂಬಂಧವಿದೆ. ಹೇಗೆ ಸಂಬಂಧವಿದೆ ಎಂದರೆ, ನಮ್ಮ ದೇಶದಲ್ಲಿ ಬಹುಭಾಗ ನಿರುದ್ಯೋಗ ಸಮಸ್ಯೆಯಿಂದ ಒದ್ದಾಡುತ್ತಾ ಇರತಕ್ಕ ಜನರೆಲ್ಲರೂ ಕೂಡ ವಿದ್ಯಾವಂತರು. ಯಾರು ಎಸ್.ಎಸ್.ಎಲ್.ಸಿ. ಪರೀಕ್ಷೆ ಪಾಸ್ ಮಾಡಿರುತ್ತಾರೆಯೋ ಅಥವಾ ಇನ್ನೂ ಹೆಚ್ಚಿನ ಮಟ್ಟದ ವಿದ್ಯಾಭ್ಯಾಸವನ್ನು ಪಡೆದಿರುತ್ತಾರೆಯೋ ಅವರೆಲ್ಲರೂ ಕೂಡ ತಮಗೆ ಯಾವುದೊಂದು ಕೆಲಸವೂ ದೊರೆಯಲಿಲ್ಲವಲ್ಲ ಎಂದು ಸದಾ ಅಲೆಯುತ್ತಿರುವುದು ಈ ನಿರುದ್ಯೋಗ ಸಮಸ್ಯೆಯ ಒಂದು ಮುಖ. ನನ್ನ ಅಭಿಪ್ರಾಯದಲ್ಲಿ ರೂಢಮೂಲವಾಗಿ ಈ ಸಮಸ್ಯೆಯನ್ನು ಬಗೆಹರಿಸಬೇಕಾದರೆ ಪ್ರತಿಯೊಬ್ಬ ಮನುಷ್ಯನೂ ಕೂಡ ಯಾವುದಾದರೂ ಒಂದೇ ಒಂದು ಕಸಬನ್ನು ಮಾಡುವುದಕ್ಕೆ ಆತನಿಗೆ ಅವಕಾಶವಿರಬೇಕು ಎನ್ನುವ ರೀತಿಯಲ್ಲಿ ಒಂದು ಕಾನೂನು ಮಾಡಿದರೆ ಒಳ್ಳೆಯದೋ ಏನೋ ಎಂದು ನಾನು ಯೋಚಿಸುತ್ತೇನೆ. ಅದು ಹೇಗೆಂದರೆ ಒಬ್ಬ ಮನುಷ್ಯನಿಗೆ ಜಮೀನಿದ್ದರೂ ಕೂಡ ಆ ಮನುಷ್ಯ ವಿದ್ಯಾವಂತನಾದ ಕೂಡಲೇ ತನ್ನ ವ್ಯವಸಾಯದ ಕಸಬನ್ನು ಬಿಟ್ಟು ಬೇರೆ ಕೆಲಸದಲ್ಲಿ ತೊಡಗಿದ್ದರೆ ಅಂಥವನ ಜಮೀನನ್ನು ಕಸಿದುಕೊಳ್ಳಬೇಕು ಎಂದು ನನ್ನ ವಾದ. ಇದೇ ರೀತಿ ವ್ಯವಸಾಯವಲ್ಲದೆ ಇನ್ನಾವುದಾದರೂ ಬೇರೊಂದು ಕಸಬನ್ನು ಮಾಡತಕ್ಕ ಮನುಷ್ಯನಿಗೆ ಒಂದು ಎಕರೆಯಷ್ಟು ಜಮೀನೂ ಕೂಡ ಇರಬಾರದು. ಹೀಗೆ ಯಾವ ಒಬ್ಬ ಮನುಷ್ಯನಿಗೇ ಆಗಲಿ ಒಂದೇ ಒಂದು ಕಸಬು ಇರಬೇಕೇ ವಿನಾ ಆತನು ಎಲ್ಲ ಕಸಬಿನಲ್ಲೂ ಕೈಹಾಕುವುದಕ್ಕೆ ಅವಕಾಶವಿರಬಾರದು. ಹಾಲಿ ಪರಿಸ್ಥಿತಿ ಹೇಗಿದೆಯೆಂದರೆ ಯಾವ ವಿಧವಾದ ಕಸಬೂ ಇಲ್ಲದೆ ನರಳುತ್ತಿರುವ ಜನ ಒಂದು ಕಡೆ, ಎಲ್ಲಾ ಕಸುಬಿನಲ್ಲೂ ಪ್ರವೇಶಿಸಿ ಎಲ್ಲಾ ಫಾಯ್ದೆಯನ್ನು ಪಡೆಯುತ್ತಿರುವ ಜನ ಇನ್ನೊಂದು ಕಡೆ ಇರುವುದನ್ನು ನಾವು ಇಂದು ನೋಡುತ್ತಾ ಇದ್ದೇವೆ.

ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಕೆಲವರಿಗೆ ರಾಜಕೀಯವೇ ಒಂದು ಕೆಲಸವಾಗಿದೆಯಲ್ಲಾ, ಅಂಥವರ ವಿಷಯ ಏನು ಹೇಳುತ್ತೀರಿ!

ಶ್ರೀ ಡಿ. ದೇವರಾಜ ಅರಸ್.—ನಮ್ಮ ದೇಶದಲ್ಲಿ ಈ ರಾಜಕೀಯ ಎನ್ನುವುದನ್ನು ಇನ್ನೂ ಒಂದು ಸಂಪೂರ್ಣವಾದ ಪ್ರೊಫೆಷನ್ ಆಗಿ ಮಾಡಿಕೊಂಡಿಲ್ಲ. ಪಾಶ್ಚಾತ್ಯ ದೇಶಗಳಲ್ಲಿ ಶ್ರೀ ಸೋಲೂರು ಸಿದ್ದಪ್ಪನವರು ಹೇಳುವ ಹಾಗೆ ರಾಜಕೀಯ ಒಂದು ಪ್ರೊಫೆಷನ್ ಆಗಿದೆ. ಅಲ್ಲಿರತಕ್ಕ ವಾತಾವರಣ ಇಲ್ಲಿ ಇಲ್ಲ.

ಸಂಸ್ಕೃತಿ ಪ್ರಚಾರ ಮತ್ತು ವಿದ್ಯಾಭ್ಯಾಸದ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟಂತೆ ಹೇಳಬೇಕಾಗಿರುವುದೇನೆಂದರೆ ಈಗತಾನೆ ಕೆಲವು ದಿವಸಗಳ ಹಿಂದೆ ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ. ಪ್ರೈಮರಿ ಅಥವಾ ಮಿಡ್ಲ್ ಸ್ಕೂಲುಗಳನ್ನು ಕಟ್ಟಿಸಬೇಕಾದರೆ ಇನ್ನು ಮುಂದೆ ಸಂಪೂರ್ಣವಾಗಿ ಸರ್ಕಾರದವರೇ ದುಡ್ಡು ಹಾಕುವುದಕ್ಕೆ ಕಷ್ಟವಾಗುತ್ತದೆ. ಆದ್ದರಿಂದ ಎಲ್ಲಿ ಜನರು ತಾವಾಗಿಯೇ ಮುಂದೆ ಬರುತ್ತಾರೆಯೋ ಅವರಿಗೆ ಪ್ರೈಮರಿ ಸ್ಕೂಲ್ ಕಟ್ಟಡಕ್ಕೆ 500

(ಶ್ರೀ ಡಿ. ದೇವರಾಜ ಅರಸ್).

ರೂಪಾಯಿಗಳ ಸಹಾಯ ದ್ರವ್ಯ ಕೊಡುತ್ತೇವೆ ಎಂದು ಹೇಳುತ್ತಾರೆ. ಸರ್ಕಾರದವರು ಅವುಗಳನ್ನು ಯಾವರೀತಿ ಕಟ್ಟಬೇಕೆಂಬುದಕ್ಕೆ ಸ್ಪೆಸಿಫಿಕೇಷನ್ ಹಾಕಿದ್ದಾರೆ. ಏನೆಂದರೆ ಒಂಬತ್ತು ಇಂಚಿನ ಇಟ್ಟಿಗೆ ಗೋಡೆ ಹಾಕಬೇಕು ಮತ್ತು ಮೇಲ್‌ಚಾವಣಿಗೆ ಆಸ್‌ಬೆಸ್ಟಾಸ್ ಷೀಟು ಹಾಕಬೇಕು. ಇದು ಬಹಳ ಸುಲಭವಾಗಿ ಆಗುತ್ತದೆ, ನಾವು 500 ರೂಪಾಯಿ ಕೊಡುತ್ತೇವೆ ಎಂದು ಹೇಳುತ್ತಾರೆ. ಬಹುಶಃ ಒಟ್ಟು ಅಂದಾಜು ಸಾವಿರದ ಐನೂರು ಅಥವಾ ಎಂಟುನೂರು ಆಗುತ್ತದೆ. ಸರಿಯಾಗಿ ಜ್ಞಾಪಕವಿಲ್ಲ.

ಅಧ್ಯಕ್ಷರು.—ಒಂದು ರೂಮಿಗೆ ಐನೂರು ರೂಪಾಯಿ ಆಗುತ್ತದೆ.

Sri D. DEVARAJ URS.—Total cost of the room comes to nearly Rs. 1,200 or 1,500, I do not know exactly. ಈ ರೂಮಿನ ಚೌಕಟ್ಟು ಎಷ್ಟು ಎಂದರೆ 15-20 ಅಡಿ. ಈ ರೀತಿ ಅನೇಕ ಕಡೆ ಜನರಿಗೆ ಹಿಡಿಸುತ್ತಾ ಇಲ್ಲ. ಕಾರಣ ಇಷ್ಟೆ. ಒಂಬತ್ತು ಇಂಚಿನ ಗೋಡೆ ಹಾಕಿದರೆ ಅನೇಕರು ಅಭಿಪ್ರಾಯಪಟ್ಟರು ಬಲವಾಗಿ ಒಂದು ಸಾರಿ ಒದ್ದರೆ ಬೀಳುತ್ತದೆ ಎಂದು, ಇದು ಒಂದನೆಯದು. ಎರಡನೆಯದು ಮೇಲ್‌ಚಾವಣಿಗೆ ಆಸ್‌ಬೆಸ್ಟಾಸ್‌ಷೀಟು ಹಾಕುತ್ತಾರೆ. ಮಕ್ಕಳು ಆಟವಾಡುತ್ತಾ ಕಲ್ಲು ಹೊಡೆದರೆ ಅದರಲ್ಲಿ ತೂತು ಬೀಳುತ್ತದೆ. ಅದು ಸುಮಾರು 10'x3' ಇರುತ್ತದೆ, ಎಲ್ಲೋ ಒಂದುಕಡೆ ಮೂರು ಕಾಸಿನಷ್ಟಗಲ ತೂತಾದರೆ ಇಡೀ 10'x3' ಇರತಕ್ಕ ಷೀಟನ್ನು ಬದಲಾಯಿಸಬೇಕಾದ ಪ್ರಮೇಯ ಬರುತ್ತದೆ. ಇದು ಜನರಿಗೆ ಹಿಡಿಸುತ್ತಾ ಇಲ್ಲ. ಇದಕ್ಕೆ ನನ್ನ ಸಲಹೆ ಏನೆಂದರೆ ಸ್ಕೂಲು ಕಟ್ಟಡದ ಅವಶ್ಯಕತೆ ನಮಗೆ ದೇಶಾದ್ಯಂತ ಇದೆ. ಸರ್ಕಾರದವರು ಕರ್ಪೊರೇಷನನ್ನಾಗಿ ಒಂದು ಚೌಕಟ್ಟು ಹಾಕಿಕೊಂಡು ಬಂದಿರುತ್ತಾರೆ. ಪಿ.ಡಬ್ಲ್ಯು.ಡಿ. ನವರು 15'x20' ಸ್ಕೂಲು ಕಟ್ಟಡ ಕಟ್ಟಬೇಕಾದರೆ ಮಂಗಳೂರು ಹೆಂಚಿನ ಮೇಲ್‌ಚಾವಣಿಗೆ 2½—3 ಸಾವಿರ ಅಂದಾಜು ಹಾಕಿರುತ್ತಾರೆ. ಅದು ನಮಗೆ ಬಹಳ ದುಬಾರಿ ಆಗುತ್ತದೆ. 500 ರೂಪಾಯಿ ಸಹಾಯ ಕೊಡುತ್ತೇವೆ ಎಂದು ತಾವು ಹೇಳುತ್ತೀರಿ. ಹಾಗಿರುವಾಗ, ಮತ್ತೆ ಕಟ್ಟಡ ಕಟ್ಟುವುದಕ್ಕೆ ಊರಿನವರಮೇಲೆ ಜವಾಬ್ದಾರಿ ಹೊರಿಸಿರುವ ಸಂದರ್ಭದಲ್ಲಿ, ನಿಮ್ಮ ಸ್ಪೆಸಿಫಿಕೇಷನ್ ಏಕೆ ಹಾಕುತ್ತೀರಿ! ದೇವರು ಕೊಟ್ಟ ಮಣ್ಣು ಇದೆ. ಅನೇಕರು ಮಣ್ಣು ಗೋಡೆ ಹಾಕಿಕೊಂಡು ವಾಸಮಾಡುತ್ತಿಲ್ಲವೇ? 50 100-200 ವರ್ಷಗಳಿಂದ ಇರುವ ಆ ಮಣ್ಣಿನ ಗೋಡೆಗಳು ಏನಾಗಿವೆ? ಅದನ್ನು ಯೋಚನೆಮಾಡಿ ಅದಕ್ಕೆ ಏಕೆ ಪ್ರೋತ್ಸಾಹ ಕೊಡಬಾರದು ಎಂದು ಕೇಳುತ್ತೇನೆ. ಅದಕ್ಕೆ ಅವಕಾಶ ಕೊಡಿ ಮತ್ತು ಮೇಲ್‌ಚಾವಣಿಗೆ ಹಳ್ಳಿಗಳಲ್ಲಿ ತಯಾರು ಮಾಡಿದ ನಾಡು ಹೆಂಚುಗಳನ್ನು ಹಾಕುವುದಕ್ಕೆ ಏಕೆ ಅವಕಾಶ ಕೊಡಬಾರದು? ಅದಕ್ಕೆ ಮೈದಾನ ಪ್ರದೇಶದಲ್ಲಿ ಗಳುಗಳ ಅಭಾವವಿದೆ ಎಂಬ ಯೋಚನೆ ಮಾಡಬಹುದು. ನನ್ನ ಸಲಹೆ ಏನೆಂದರೆ, ನಮ್ಮ ಮೈಸೂರು ದೇಶದಲ್ಲಿ ಫಾರೆಸ್ಟ್ ಪ್ರದೇಶ ಸುಮಾರು 1/5 ಭಾಗ ಇದೆ ಎಂದು ಇಟ್ಟುಕೊಳ್ಳೋಣ. ಕಾಡಿನಲ್ಲಿರತಕ್ಕ ಗಳುಗಳೆಲ್ಲವನ್ನೂ ಸಂಪೂರ್ಣವಾಗಿ ಉಪಯೋಗಿಸುತ್ತಾ ಇಲ್ಲ. ವರ್ಷೇ ವರ್ಷೇ ಬೇಸಿಗೆ ಕಾಲದಲ್ಲಿ ಬೆಂಕಿಬಿದ್ದು ಎಷ್ಟೋ ಗಳುಗಳು ನಾಶವಾಗುತ್ತಾ ಇವೆ. ನಮ್ಮ ಫಾರೆಸ್ಟ್ ಇಲಾಖೆಯವರಿಗೆ ನಾನು ಒಂದು ಸಲಹೆ ಮಾಡುತ್ತೇನೆ. ಈ ಗಳುಗಳನ್ನು ಎಲ್ಲಾ ಕಡೆಯಲ್ಲೂ ಹಂಚಿಕೆಯಾಗುವ ವ್ಯವಸ್ಥೆಯನ್ನು ಮಾಡಬೇಕು. ಅದಕ್ಕೆ ಆಗತಕ್ಕಮಜೂರಿ ಮುಂತಾದುವುಗಳನ್ನು ವಸೂಲು ಮಾಡಬಹುದು. ನಮ್ಮ ಮಲೆನಾಡು ಪ್ರದೇಶದಲ್ಲಿ ಮನೆ ಕಟ್ಟುವ ಅನೇಕ ಜನರು ಕಾಡು ಮರಗಳನ್ನು ಉಪಯೋಗಿಸಿ ಮನೆಗಳನ್ನು ಕಟ್ಟುತ್ತಾರೆ. ಮೈದಾನ ಪ್ರದೇಶದಲ್ಲಿ ಮರಗಳ ಅಭಾವ, ಗಳುಗಳ ಅಭಾವ ಇರುವುದರಿಂದ, ಅನೇಕ ಮನೆಗಳನ್ನು ಒಂದುಚೂರು ಮರವನ್ನು ಹಾಕದೇ ಮಣ್ಣು, ಕಲ್ಲು ಬಂಡೆಗಳನ್ನು ಉಪಯೋಗಿಸಿ ಕಟ್ಟಿರತಕ್ಕ ಸನ್ನಿವೇಶವನ್ನು ಕೂಡ ತಾವು ನೋಡಬಹುದು. ಆದ್ದರಿಂದ ಯಾವ ವಸ್ತು ಸುಲಭವಾಗಿ ಒದಗುತ್ತದೆಯೋ ಅದನ್ನು ಸರ್ಕಾರದವರು ಒದಗಿಸುವುದಕ್ಕೆ ತಕ್ಕ ಏರ್ಪಾಡು ಮಾಡಬಹುದು. ಹೀಗೆ ತಮ್ಮ ನೀತಿಯನ್ನು ಬದಲಾವಣೆ ಮಾಡಿಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಸೂಚಿಸುತ್ತೇನೆ.

ಸಂಸ್ಕೃತಿ ಪ್ರಚಾರದ ವಿಷಯದಲ್ಲಿ ಹೇಳುವುದಾದರೆ ಈ ಒಂದು ಯೋಜನೆಯನ್ನು ಸರ್ಕಾರದವರು ಘನ ಉದ್ದೇಶದಿಂದಲೇ ಹಾಕಿ ಇದಕ್ಕೆ ಹಣವನ್ನು ಖರ್ಚು ಮಾಡುತ್ತಾ ಇದ್ದೀರಿ ಎಂದು ನಾವು ಇಟ್ಟುಕೊಳ್ಳೋಣ. ಕಾರ್ಯತಃ ಇದು ಹೇಗೆ ನಡೆಯುತ್ತಾ ಇದೆ ಎಂಬುದನ್ನು ನಾವು ಸ್ವಲ್ಪ ಕೂಲಂಕಷವಾಗಿ ವಿಚಾರ ಮಾಡುತ್ತಾ ಹೋದರೆ, ಇಷ್ಟೊಂದು ಹಣವನ್ನು ಇದಕ್ಕೆ ವ್ಯಯಮಾಡುವುದರಿಂದ ನಿರೀಕ್ಷಣೆ ಮಾಡತಕ್ಕ ಗೊತ್ತಾದ ಒಂದು ಪ್ರತಿಫಲ ಬರದೇ, ಈ ಖರ್ಚು ಬಹಳ ತಪ್ಪಾದೀತೋ ಏನೋ ಎಂದು ನಾನು ಭಾವಿಸುತ್ತೇನೆ. ಈಗ ಈ ಪ್ರಚಾರ ಹೇಗೆ ನಡೆಯುತ್ತಾ ಇದೆ ಎಂಬುದನ್ನು ತೆಗೆದುಕೊಂಡರೆ ಇದರಿಂದ ಏನೂ ಲಾಭವಿಲ್ಲ ಎಂದು ಅರ್ಥವಾಗುತ್ತದೆ. ಸರ್ಕಾರದವರು ಪ್ರಚಾರಕರ ಒಂದು ದೊಡ್ಡ ಪಟ್ಟಿ ಮಾಡಿಬಿಟ್ಟಿದ್ದಾರೆ. ಇಷ್ಟೇ ಜನರು ಸಂಸ್ಕೃತಿ ಪ್ರಚಾರ ಮಾಡುವುದಕ್ಕೆ ಲಾಯಕ್ಕಾದವರು ಎಂದು ಒಂದು ಪಟ್ಟಿ ಇದೆ. ಜೊತೆಗೆ ಪ್ರತಿ ತಾಲ್ಲೂಕಿನಲ್ಲೂ ಕೂಡ ತಿಂಗಳಿಗೆ ಮೂರು ಪ್ರಚಾರ ಸಭೆಗಳಿಗೆ ಕಡಿಮೆ ಇಲ್ಲದಂತೆ ಮಾಡಬೇಕೆಂದು ಅಮಲ್ದಾರರುಗಳಿಗೆ ಸರ್ಕ್ಯುಲರ್ ಕಳುಹಿಸಿದ್ದೀರಿ. ಅಮಲ್ದಾರರು ಮೂರು ಪ್ರಚಾರ ಸಭೆಗಳನ್ನು ಮಾಡಲೇಬೇಕು. ಸರ್ಕಾರದ ಆಜ್ಞೆಗೆ ವಿರುದ್ಧವಾಗಿ ಹೋದರೆ ಡೆಪ್ಯುಟಿ ಕಮೀಷನರವರ ಗಮನಕ್ಕೆ ಬಂದು ಅವರು ಏನುಮಾಡುತ್ತಾರೋ ಎಂಬ ಭಯ. ಇದರಿಂದಾಗಿ ಅವರಿಗೆ ಏನೇ ಕೆಲಸ ಕಾರ್ಯಗಳಿದ್ದರೂ ಬಿಟ್ಟು ಈ ಸಭೆ ನಡೆಸುವುದಕ್ಕೆ ಏರ್ಪಾಡು ಮಾಡುತ್ತಾರೆ. ಈ ಸಭೆ ನಡೆಸುವುದಕ್ಕೆ ಲಿಸ್ಟ್‌ನಲ್ಲಿರತಕ್ಕ ಯಾರೋ ಒಬ್ಬರನ್ನು ಕರೆಸುತ್ತಾರೆ. ನಾನು ಅನೇಕ ಸಭೆಗಳಲ್ಲಿ ನೋಡಿದ್ದೇನೆ, ಸಂಸ್ಕೃತಿ ಪ್ರಚಾರದ ಅಂಗವಾಗಿ ಭಾರತ ಪಠಣ, ಕಾವ್ಯವಾಚನ ಅಥವಾ ಇನ್ನಾವುದಾದರೂ ಒಂದು ಭಾಷಣ ನಡೆಯುತ್ತದೆ. ನಮ್ಮ ಉದ್ದೇಶ ಏನೆಂದರೆ ನಮ್ಮಲ್ಲಿ ಸಂಸ್ಕೃತಿ ಎಂದರೆ ನಾಗರಿಕತೆ ಬೆಳೆಯಬೇಕು ಅದಕ್ಕೆ ನಮ್ಮ ಜನರಲ್ಲಿ ಪ್ರಚಾರವಾಗಬೇಕು. ಯಾವತರಹ ನಾಗರಿಕತೆ ಬೆಳೆಸಬೇಕೆಂದರೆ, ಹಿಂದಿನ ಕಾಲದಿಂದ ಬಂದ ನಾಗರಿಕತೆಯನ್ನು ಬೆಳೆಸಬೇಕೇ ಅಥವಾ ಈಗ ಸಮಾಜವಾದ ಎಂದು ಏನು ಹೇಳುತ್ತೇವೆ, ಮೇಲು, ಕೀಳು ಎಂಬ ಭಾವನೆ ಹೋಗಬೇಕು, ನಮ್ಮಲ್ಲಿರತಕ್ಕ ಜಾತಿ ಭಾವನೆ ಹೋಗಬೇಕು, ನಮ್ಮಲ್ಲಿರತಕ್ಕ ಐಶ್ವರ್ಯವಂತರಿಗೂ, ಬಡವರಿಗೂ ಇರತಕ್ಕ ತಾರತಮ್ಯ ಹೋಗಬೇಕು ಎಂಬ ಧ್ಯೇಯವನ್ನು ರಾಜ್ಯಾಂಗದಲ್ಲೂ ಕೂಡ ಅಳವಡಿಸಿ ಸರ್ಕಾರ ನಡೆಸಿಕೊಂಡು ಹೋಗಬೇಕೆಂದು ಏನು ಹೇಳುತ್ತಾ ಇದ್ದೇವೋ, ಆ ಧ್ಯೇಯಗಳ ಸಾಧನೆಗೆ

ಸಂಸ್ಕೃತಿ ಪ್ರಚಾರ ನಡೆಸಬೇಕೇ ಅಥವಾ ಹಿಂದೆ ಇದ್ದ ಹಾಗೆ ಪುರಾಣ, ಇತಿಹಾಸದ ಕಥೆ ತೆಗೆದುಕೊಂಡು, ಅದರಲ್ಲಿ ಆಳಿಗೂ, ಅರಸನಿಗೂ ಇರಬೇಕಾದ ಒಂದು ಸಂಬಂಧದ ವಿಚಾರದಲ್ಲಿ ಒಂದು ದೊಡ್ಡ ಪ್ರಸ್ತಾಪ ಮಾಡಬೇಕೇ ಅದನ್ನೆಲ್ಲಾ ಪ್ರಸ್ತಾಪ ಮಾಡುವುದು ನಮಗೆ ಇಷ್ಟವೇ? ಎಂದರೆ ನಮ್ಮ ಅಭಿಪ್ರಾಯ ಅಲ್ಲ. ನಮ್ಮ ಅಭಿಪ್ರಾಯದಲ್ಲಿ ಸಮಾಜವಾದವನ್ನು ಬೆಳೆಸಬೇಕು ಎನ್ನುವುದೇ ಹೊರತು ಅರಸ ಹೇಗಿರ ಬೇಕು, ಆಳು ಹೇಗಿರಬೇಕು, ಐಶ್ವರ್ಯವಂತ ಹೇಗಿರ ಬೇಕು, ಬಡವ ಹೇಗಿರಬೇಕು ಎಂದಲ್ಲ. ಐಶ್ವರ್ಯ ವಂತರ ವಿಚಾರ ಹೋಗಲಿ—every Indian wants to be a wealthy fellow. ಈ ರೀತಿ ಪ್ರಚಾರದಿಂದ ಆ ಹಳೆಯ ಮನೋಭಾವವೇ ಮುಂದು ವರಿದಹಾಗಾಗುತ್ತದೆ. ಅಥವಾ ಬಡವನಾಗಿರತಕ್ಕ ವನಿಗೆ 'ಬಡವನಾಗಿರತಕ್ಕದ್ದೇ ನಿನ್ನ ಪೂರ್ವ ಜನ್ಮದ ಪುಣ್ಯ. ನೀನು ಹಿಂದೆ ಮಾಡಿದ ಕರ್ಮ' ಎಂದು ಹೇಳುತ್ತಾ ಹೋದರೆ ಜನತೆಯಲ್ಲಿ ಬಡತನ ಹೋಗ ಲಾಡಿಸುವುದಕ್ಕೆ ಸಾಧ್ಯವಿಲ್ಲ. 'ಇದೆಲ್ಲಾ ಕರ್ಮ ಕಣಯ್ಯ, ಬಡವನಾಗಿದ್ದೀ, ನಿನ್ನ ಕರ್ಮ ಆದ್ದರಿಂದ ಬಡತನಕ್ಕೆ ಔಷಧಿ ಕೊಡುವುದಕ್ಕಾಗುವುದಿಲ್ಲ' ಎಂದು ಪ್ರಚಾರ ಮಾಡಿದ ಹಾಗಾಗುತ್ತದೆ. ವಾಸ್ತವಾಂಶ ಹಾಗಲ್ಲ. ನಾವೆಲ್ಲಾ ತಿಳಿದಿರುವುದೇನೆಂದರೆ ಸಾಮೂ ಹಿಕವಾಗಿ ಯೋಚಿಸಿದ್ದೇ ಆದರೆ, ಸಾಮೂಹಿಕವಾಗಿ ಕೆಲಸ ಮಾಡಿದ್ದೇ ಆದರೆ, ಸಮಾಜದಲ್ಲಿ ಉತ್ಪನ್ನವಾದ ಪದಾರ್ಥಗಳನ್ನೂ ಐಶ್ವರ್ಯವನ್ನೂ ಮತ್ತು ಉತ್ಪನ್ನ ಮಾಡತಕ್ಕ ಮೂಲಗಳನ್ನೂ (Means of Production) ಎಲ್ಲರೂ ಸಮಾನವಾಗಿ ಹಂಚಿಕೊಳ್ಳುವ ಒಂದು ವ್ಯವಸ್ಥೆಯನ್ನು ಮಾಡಿದ್ದೇ ಆದರೆ ನಮ್ಮ ಬಡತನ ವನ್ನು ಹೋಗಲಾಡಿಸುವುದಕ್ಕೆ ಸಾಧ್ಯ ಎಂಬ ಒಂದು ಸಿದ್ಧಾಂತವನ್ನು ಇಟ್ಟುಕೊಂಡಿದ್ದೇವೆ. ಆದರೆ ಈ ಸಂಸ್ಕೃತಿ ಪ್ರಚಾರದಲ್ಲಿ ಅದನ್ನು ಹೇಳುತ್ತಾ ಇಲ್ಲ.

2 P.M.

ಇದಕ್ಕಾಗಿ ಬಹಳ ಹಣ ವ್ಯಯವಾಗುತ್ತಿದೆ. ಇದಕ್ಕೆ ನನ್ನ ಸಲಹೆ ಏನೆಂದರೆ, ಇದನ್ನು ಮುಂದು ವರಿಸಬೇಕಾದರೆ ಈ ರೀತಿಯಾಗಿ ಒಂದು risk ಮಾಡಿ ಯಾವುದೋ ಒಂದು ಅಡಗೂಲಜ್ಜಿ ಕತೆ ಹೇಳುವ, ದಾಸರ ಪುರಾಣ ಹೇಳುವ ಜನರನ್ನೆಲ್ಲ ಸಂಸ್ಕೃತಿ ಪ್ರಚಾರಕ್ಕೆ ಕಳುಹಿಸಿದ್ದೇ ಆದರೆ ನಮ್ಮ ಉದ್ದೇಶ ಖಂಡಿತವಾಗಿಯೂ ಸಾಧನೆಯಾಗುವುದಿಲ್ಲ. ಅದಕ್ಕೋ ಸ್ಕರವಾಗಿ ವಿಷಯವನ್ನು ತಿಳಿದುಕೊಂಡು ಪುರಾಣ ಇತಿಹಾಸಗಳನ್ನು ಸರಿಯಾಗಿ interpret ಮಾಡ ತಕ್ಕ ಜನರಿದ್ದರೆ ಅಂಥವರನ್ನು ನಾವು ಈ ಸಂಸ್ಕೃತಿ ಪ್ರಚಾರಕ್ಕೆ ಕಳುಹಿಸಿದರೆ ಸಾಧ್ಯ. ಅದಿಲ್ಲದಿದ್ದರೆ ಇದನ್ನು ಕ್ಲೋಸ್ ಮಾಡಿದರೂ ತಪ್ಪಾಗುವುದಿಲ್ಲ ವೆಂದು ನನ್ನ ಭಾವನೆ. ಇಷ್ಟು ಮಾತ್ರ ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಚ್. ಕೆ. ವೀರಣ್ಣಗೌಡ (ಮದ್ದೂರು).—ಸ್ವಾಮಿ, ಈ ಆಯವ್ಯಯದ ಸಂಬಂಧವಾಗಿ ನಾಲ್ಕು ಮಾತುಗಳನ್ನು ಆಡುವುದಕ್ಕೆ ಅವಕಾಶ ಕೊಟ್ಟದ್ದಕ್ಕೆ ಮೊದಲು ತಮ್ಮನ್ನು ವಂದಿಸುತ್ತೇನೆ. ಈ ಆಯವ್ಯ ಯದ ವಿಚಾರದಲ್ಲಿ ಮಾತನಾಡುವುದಕ್ಕೆ ಮೊದಲು ಈ ಅಧಿವೇಶನದ ಕಾರ್ಯಕ್ರಮದ ವಿಚಾರದಲ್ಲಿ ಒಂದೆರಡು ಮಾತು ಹೇಳುವುದು ಅಗತ್ಯವೆಂದು ಕಾಣುತ್ತದೆ.

ನಾವೆಲ್ಲ ಊರಿನಲ್ಲಿದ್ದ ಕಾಲದಲ್ಲಿ ನಮಗೆ ಒಂದು ಕಾರ್ಯಕ್ರಮದ ಪಟ್ಟಿ ಬಂತು. ಆ ಪ್ರಕಾರ ಇಲ್ಲಿಂದ ಇಲ್ಲಿಯವರೆಗೆ ಇಂಥಿಂಥ ಕೆಲಸ ನಡೆಯುತ್ತದೆ ಎಂದು ಕಾರ್ಯಕ್ರಮ ಹಾಕಿ ಕಳುಹಿಸಿದ್ದರು. ಅದರಲ್ಲಿ ಒಂದು ಮುಖ್ಯವಾದ ಅಂಶವೆಂದರೆ ಈ ವರ್ಷದ ಅಂತ್ಯದಲ್ಲಿ ಬಡ್ಜೆಟ್ಟಿನ ಮೇಲೆ ಸಾಮಾನ್ಯ ಚರ್ಚೆ ಮಾತ್ರಮಾಡಿ, 31ನೆ ತಾರೀಖಿಗೆ Vote on account ಮೇಲೆ ಎಂದರೆ ಮುಂದೆ ಸಮಜಾಯಿಷಿ ಕೊಡುವು ದಾಗಿ ಹೇಳಿ ಆಯವ್ಯಯವನ್ನು ಮಂಜೂರು ಮಾಡಿಸಿ ಕೊಂಡು, ಒಂದೊಂದು ಇಲಾಖೆಗೂ ಬೇಕಾದ ಮೊಬಲಗನ್ನು (ಡಿಮ್ಯಾಂಡ್‌ಗಳನ್ನು) ನಿಧಾನವಾಗಿ ವಿವರವಾಗಿ ಮಾರ್ಚಿ ತಿಂಗಳು ಮುಗಿದ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶವಿತ್ತು. ಈ ಪದ್ಧತಿ ಪಾರ್ಲಿಮೆಂಟ್‌ನಲ್ಲಿ ಆಚರಣೆಯಲ್ಲಿ ಇದೆಯೆಂದೂ ಇಲ್ಲಿಯೂ ಹಿಂದೆಯೇ ಹೀಗೆ ಆಗಬೇಕಾಗಿತ್ತೆಂದೂ ಈ ಸಾರಿ ಅದನ್ನು ಆಚರಣೆಗೆ ತರಲು ಪ್ರಯತ್ನ ಮಾಡು ವುದು ಒಳ್ಳೆಯದು ಎಂದೂ ಅನೇಕರು ಭಾವಿಸಿದ್ದರು. ಆ ಮೇಲೆ ಇಲ್ಲಿಗೆ ಬಂದ ಮೇಲೆ ಈಗಾಗಲೇ ಮೂರು ನಾಲ್ಕು ಕಾರ್ಯಕ್ರಮಗಳ ಪಟ್ಟಿಗಳು ನಮ್ಮ ಮುಂದೆ ಬಂದು, ಕಡೆಗೆ ಎಲ್ಲಿಗೆ ಬಂತು ಎಂದರೆ ಭಾನುವಾ ರವೂ ಕುಳಿತುಕೊಳ್ಳಬೇಕು ಎಂದಾಯಿತು. ದಿನ ಒಂದಕ್ಕೆ ಹದಿನೈದು ರೂಪಾಯಿ ಕೊಡುತ್ತಾರಲ್ಲ, ಭಾನುವಾರವೂ ಕುಳಿತುಕೊಳ್ಳೋಣವೆಂದರೆ 5 ಘಂಟೆಯ ಮೇಲೂ ಕುಳಿತುಕೊಳ್ಳಬೇಕು ಎಂದರು. 5 ಘಂಟೆಯ ಮೇಲೆ ಕುಳಿತುಕೊಂಡು ಯಾವುದೋ ಒಂದು ಬಿಲ್ಲು ಬರುತ್ತದೆ ಅದರ ಮೇಲೆ ನಾನು ಮಾತನಾಡಬೇಕು ಆ ದಿನ ಎಂದು ಓಡೋಡಿ ಬಂದರೆ ಇಲ್ಲ ಬಾಗಿಲು ಹಾಕಿತ್ತು. ಹೀಗೆ ಘಳಿಗೆಗೊಂದು ಘಂಟೆ ಗೊಂದು ಕಾರ್ಯಕ್ರಮವನ್ನು ನಿರ್ಧರಮಾಡಿ ನಮ್ಮ ಮುಂದೆ ಇಡುತ್ತಿರುವುದು ಈ ಸಭೆಯ ಅಥವಾ ಸದಸ್ಯರ ಸ್ಥಾನ ಮಾನಕ್ಕೆ ಕುಂದು ತಂದಂತಾಗುವುದೆಂದು ನಾನು ಭಾವಿಸುತ್ತೇನೆ. ಈ ರೀತಿ ಇದ್ದಕ್ಕಿದ್ದಹಾಗೆ ಕಾರ್ಯಕ್ರಮವನ್ನು ಬದಲಾಯಿಸುವುದರಿಂದ ನಮಗೆ ಏನು ತೊಂದರೆ ಎಂಬುದನ್ನು ಹೇಳಬೇಕು. ನಾವು ಮೊದಲು ಬಂದ ಕಾರ್ಯಕ್ರಮದ ಪಟ್ಟಿಯನ್ನು ನೋಡಿ ಕೊಂಡು ನಮ್ಮ ಕೆಲಸ ಕಾರ್ಯಗಳನ್ನು ಅದಕ್ಕೆ ಹೊಂದಿಸಿಕೊಂಡು ವ್ಯವಸ್ಥೆ ಮಾಡಿಕೊಂಡು ಬಂದಿರು ತ್ತೇವೆ. ಶನಿವಾರ ಮಧ್ಯಾಹ್ನದ ಮೇಲೆ, ಭಾನುವಾರ ಪೂರ್ತಿ ಸೋಮವಾರ ಮಧ್ಯಾಹ್ನದ ವರೆಗೂ ಅವ ಕಾಶವಿರುತ್ತದೆ ಎಂದು ಸಾಮಾನ್ಯವಾಗಿ ಕಾರ್ಯ ಕ್ರಮವನ್ನು ನಾವು ಹಾಕಿಕೊಂಡಿರುತ್ತೇವೆ ಮತ್ತು ಕಾರ್ಯಕ್ರಮದ ಪಟ್ಟಿಯಲ್ಲಿ ನಮೂದಿಸಿರುವಂತೆ ಇಲ್ಲಿ ಕುಳಿತುಕೊಂಡು ಕೆಲಸ ಮಾಡೋಣವೆಂದಿರುತ್ತೇವೆ. ಆದರೆ ಇದ್ದಕ್ಕಿದ್ದಹಾಗೆ ಕಾರ್ಯಕ್ರಮ ಬದಲಾಯಿ ಸಲು ಅಂಥ ಪ್ರಾಣ ಹೋಗತಕ್ಕ ವಿಚಾರವೇನಿ ದೆಯೋ ನಮಗೆ ಗೊತ್ತಾಗುವುದಿಲ್ಲ. ಪ್ರಾಯಶಃ ಅದ ಕ್ಕಿಂತ ಹೆಚ್ಚಾಗಿರಬಹುದೇನೋ! ಯಾಕೆ ಇಂತಹ ದಬಾದುಬೀ ಕೆಲಸ? ಈ ತಿಂಗಳು ಒಂದನೆ ತಾರೀಖಿ ನಿಂದ 11ನೆಯ ತಾರೀಖಿನ ವರೆಗೂ ವಿರಾಮ ಕೊಟ್ಟರು. ಯಾಕೆ ಹೀಗೆ ಮಾಡಬೇಕಾಗಿತ್ತು? ಅಷ್ಟು ದಿನಗಳು ಆಯವ್ಯಯದ ಪಟ್ಟಿಯನ್ನು ನಿಧಾನವಾಗಿ ಪರಿಶೀಲಿಸಬಹುದಾಗಿತ್ತು. ಹೀಗೆ ಮಾಡದೆ ಈಗ ಒಬ್ಬೊಬ್ಬರು 10 ನಿಮಿಷ ಮಾತನಾಡಿ, 15 ನಿಮಿಷ ಮಾತನಾಡಿ, ನಿಮ್ಮ ಕಾಲ ಪೂರೈಸಿತು ಭಾಷಣ ಬೇಗ ಮುಗಿಸಿ ಎಂದು ತಾವು ಅಪ್ಪಣೆ ಕೊಡಿಸುವು ದೆಲ್ಲ ನಮಗೆ ಟಿಕ್ಕಟ್ಟಿನ ಪ್ರಸಂಗವೆನಿಸುತ್ತದೆ. ಸರ್ಕಾರದವರು ಆಯವ್ಯಯದ ಪಟ್ಟಿಯನ್ನು ತಯಾರು ಮಾಡದೆ ಇದ್ದರೆ, ಅರ್ಥಿಕ ಸಚಿವರಿಗೆ ಅವರ ಭಾಷಣ ಒದಗದೆ ಇದ್ದರೆ ಅದು ನಮ್ಮ ತಪ್ಪೇ? ಅಧಿವೇಶನಕ್ಕೆ ಬನ್ನಿ ಎಂದು ಕರೆಯುವುದು, ನಮಗಿರ

(ಶ್ರೀ ಹೆಚ್. ಕೆ. ವೀರಣ್ಣಗೌಡ)

ತ್ರಕ್ಕ ಕೆಲಸಗಳನ್ನೆಲ್ಲ ಬಿಟ್ಟು ಇಲ್ಲಿ ಬಹಳ ಕೆಲಸ ನಡೆಯುತ್ತದೆ ಎಂದು ನಾವು ಬರುವುದು, ಇದ್ದಕ್ಕಿದಂತೆ ನಾಳೆಯಿಂದ ಸಭೆಯಿಲ್ಲ ಎಲ್ಲರೂ ಊರಿಗೆ ಹೋಗಬಹುದೆಂದು ಹಿಂದಿನ ಸಾಯಂಕಾಲ 5 ಘಂಟೆಗೆ ಹೇಳುವುದು ಇದೆಲ್ಲ ನಗೆಗೀಡಾದ ಕಾರ್ಯವೆಂದು ನನಗನ್ನಿಸುತ್ತದೆ. ಇದನ್ನೆಲ್ಲ ನೋಡಿದರೆ ಸರ್ಕಾರದವರಿಗೆ, ಆಡಳಿತ ನಡೆಸುವವರಿಗೆ, ಅರ್ಹತೆ ಇಲ್ಲವೆನ್ನುವುದು ಚೆನ್ನಾಗಿ ಗೊತ್ತಾಗುತ್ತದೆ. ಇದನ್ನು ಬಹಳ ಮನಸ್ಸು ನೊಂದು ಹೇಳುತ್ತಿದ್ದೇನೆ. ನಮಗೆ ಅನೇಕ ಕಾರ್ಯಕ್ರಮಗಳಿರುತ್ತವೆ. ನಾವೆಲ್ಲರೂ ದೊಡ್ಡ ಲಕ್ಷಾಧಿಪತಿಗಳಲ್ಲದಿದ್ದರೂ, ದೇಶದ ಆಡಳಿತವನ್ನೆಲ್ಲ ಕೈಯಲ್ಲಿಟ್ಟುಕೊಂಡು ನಡೆಸುತ್ತಿರುವ ಮಂತ್ರಿಗಳಲ್ಲದೆ ಇದ್ದರೂ, ನಮ್ಮ ನಮ್ಮ ಮಟ್ಟಿಗೆ, ನಮ್ಮ ನಮ್ಮ ಕಾರ್ಯಗಳು ಇದ್ದೇ ಇವೆ. ಒಂದು ಹದ ಕಬ್ಬಿಗೆ ನೀರು ಹಾಯಿಸದೆ ಹೋದರೆ ಸಾವಿರಾರು ರೂಪಾಯಿಗಳ ನಷ್ಟಪಡಬೇಕಾಗುತ್ತದೆ. ಅದನ್ನು ಸರಿದೂಗಿಸಿಕೊಳ್ಳಬೇಕಾದರೆ ಅನೇಕ ವರ್ಷ ಕಷ್ಟಪಡಬೇಕು. ಅದು ನಮಗೆ ಭಾರಿ ಕೆಲಸ. ಸದಸ್ಯರ ಸ್ವಂತ ಕಾರ್ಯಗಳಿಗೆ ಧಕ್ಕೆ ತರುವಂತೆ ಈ ಅಸೆಂಬ್ಲಿಯ ಕಾರ್ಯಕ್ರಮವನ್ನು ಆಗಾಗ್ಗೆ ಬದಲಾವಣೆ ಮಾಡತಕ್ಕದ್ದು ಬಹಳ ವಿಷಾದಕರ. ಮತ್ತು ಈ ಮಾಹೆ 29ನೆ ತಾರೀಖಿನೊಳಗಾಗಿ ಡಿಮ್ಯಾಂಡುಗಳನ್ನು ಮುಗಿಸಲು ಭಾನುವಾರ ಸಹ ಕುಳಿತುಕೊಳ್ಳಬೇಕು ಎಂದು ಹೇಳುವುದು ನಿಜವಾಗಿಯೂ ಒಪ್ಪತಕ್ಕ ಮಾತಲ್ಲ. ಈ ಸಭೆಯ ನಾಯಕರು ತಮ್ಮೊಡನೆ ಸಮಾಲೋಚನೆ ನಡೆಸಿ ಒಂದು ಕಾರ್ಯಕ್ರಮವನ್ನು ನಿರ್ಧಾರಮಾಡಿದ ಮೇಲೆ ನಡೆದುಕೊಳ್ಳಬೇಕು. ಅದರಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಎಂದರೆ ಒಂದೂವರೆ ತಿಂಗಳ ಕೆಲಸವಾದುದರಿಂದ ಮಧ್ಯೆ ಅಲ್ಪ ಸ್ವಲ್ಪ ವ್ಯತ್ಯಾಸ ಮಾಡಬೇಕಾದ ಸಂದರ್ಭ ಬರಬಹುದು. ಆದರೆ ಯದ್ವಾ ತದ್ವಾ ಬದಲಾವಣೆ ಮಾಡುವುದೂ, ಭಾನುವಾರ ಕುಳಿತುಕೊಂಡು ಕೆಲಸ ಮಾಡಬೇಕು, ಐದು ಘಂಟೆಯ ಮೇಲೆ ಬಿಲ್ ತೆಗೆದುಕೊಳ್ಳುತ್ತೇವೆ ಆಗಲೂ ಇರಬೇಕು ಎನ್ನುವುದೂ ಸರಿಯಿಲ್ಲವೆಂದು ಮಾತ್ರ ಹೇಳುತ್ತೇನೆ.

ಈ ಆಯವ್ಯಯದ ವಿಚಾರದಲ್ಲಿ ಮಾತನಾಡತಕ್ಕದ್ದು ಏನೂ ಇಲ್ಲ ಎನ್ನಿಸುತ್ತದೆ. ನೀರು ಇರತಕ್ಕ ಒಂದು ಲೋಟಕ್ಕೆ ಬೆರಳುಹಾಕಿ ಚೀಪಿನೋಡಿದರೆ ಎಷ್ಟುಮಟ್ಟಿಗೆ ರುಚಿಕರವಾಗಿರುತ್ತದೆಯೋ, ಈ ಆಯವ್ಯಯದ ಪಟ್ಟಿ ಮತ್ತು ಅದರ ಮೇಲೆ ಮಾಡಿದ ಮುಖ್ಯ ಮಂತ್ರಿಗಳ ಭಾಷಣ ಅಷ್ಟೇ ಹಿತಕರವಾಗಿರುತ್ತದೆ, ರುಚಿಕರವಾಗಿರುತ್ತದೆ ಆಯವ್ಯಯದ ಅಂದಾಜಿನಲ್ಲಿ ಏನೋ ಮಾಮೂಲಾಗಿ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಇದರೊಳಗೆ ಸಾಲಸೋಲ, ಪಾಂಚವಾರ್ಷಿಕ ಯೋಜನೆ, ಆಯಾ ಇಲಾಖೆಯ ಆದಾಯ ಖರ್ಚು ಎಲ್ಲವನ್ನೂ ಒಳಗೊಂಡು ಒಂದು ಅಂದಾಜನ್ನು ತಯಾರಿಸಿ ನಮ್ಮ ಮುಂದೆ ಇಟ್ಟಿದ್ದಾರೆ. 20-30 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡುವಾಗ 20-30 ಪುಟಗಳ ಭಾಷಣವನ್ನು ಬರೆಯುವುದಕ್ಕೆ ಏನು ಕಷ್ಟ? ಇಲಾಖೆಗಳಿವೆ; ಕೆಲಸ ಮಾಡುತ್ತವೆ; ಇಂಥಿಂಥ ಇಲಾಖೆಯಲ್ಲಿ ಇಂಥಿಂಥ ಕೆಲಸ ಕಾರ್ಯಗಳು ನಡೆದಿವೆ ಎಂದು ವರದಿಗಳು ಬರುತ್ತವೆ. ಇವುಗಳ ಅಂದಾಜಿನ ಮೇಲೆ ಮುಂದಿನ ವರ್ಷದ ಆದಾಯ ವ್ಯಯಗಳನ್ನು ಊಹಿಸಬಹುದು. ಆದುದರಿಂದ ಈ ಅಂದಾಜಿನಲ್ಲಿ ಅಂಥ ಮಹತ್ತರವಾದ ವಿಷಯ ಕಾಣುವುದಿಲ್ಲ. 30 ಕೋಟಿ ರೂಪಾಯಿ ಖರ್ಚು ಮಾಡಿರುವುದರಲ್ಲಿ 20-30 ಪುಟಗಳನ್ನು ತುಂಬ ಬರೆಯಬಹುದು. ಮುಂದಕ್ಕೆ ಇಂಥದು ಮಾಡುತ್ತೇವೆ ಎಂದು ಹೇಳಬಹುದು. ಕೇಂದ್ರ ಸರ್ಕಾರದ ನಿರ್ದಿಷ್ಟ ಭರವಸೆ ಮೂರು ಕೋಟಿ ರೂಪಾಯಿ ಮಾತ್ರ. ಈ ಸರ್ಕಾರದವರೇನೋ 12 ಕೋಟಿ ಕೇಳುತ್ತಾರೆ. ತಾವು ಕೇಳಿದಷ್ಟು ಹಣ ಬರುತ್ತದೆಂದು ಅಂದಾಜು ಮಾಡಿ ಆಕಾಶದಲ್ಲಿ ಮನೆಯನ್ನು ಕಟ್ಟುತ್ತಾರೆ. ಆಯವ್ಯಯಗಳ ವಿಚಾರದಲ್ಲಿ sanctity, ಅದರಲ್ಲಿ ನಂಬಿಕೆ ಹೋಯಿತು. ಇದರಲ್ಲಿ 10 ಲಕ್ಷ, 25 ಲಕ್ಷವಲ್ಲ, ಕೋಟಿಗಟ್ಟಲೆ ವ್ಯತ್ಯಾಸವಾಗುತ್ತದೆ. ಆದುದರಿಂದ ಈ ಆಯವ್ಯಯಗಳ ವಿಚಾರದಲ್ಲಿ ಯಾವ ಭರವಸೆಯಿಂದಾಗಲಿ ನಿರ್ದಿಷ್ಟವಾಗಿಯಾಗಲಿ ಯಾವ ಮಾತನ್ನೂ ಹೇಳುವುದಕ್ಕೆ ಆಗುವುದಿಲ್ಲ ಎನ್ನಿಸುತ್ತದೆ.

ಆದುದರಿಂದ ಈ ಸಂದರ್ಭದಲ್ಲಿ ಆಡಳಿತ ವಿಚಾರದಲ್ಲಿ ಕೆಲವು ಮಾತುಗಳನ್ನು ಆಡಬೇಕೆಂಬುದು ನನ್ನ ಉದ್ದೇಶ. ಅನೇಕವೇಳೆ ಮಂತ್ರಿಗಳು ಪ್ರಯಾಣ (tour) ಮಾಡುವುದು ತಮಗೆ ಇಷ್ಟವಿಲ್ಲವೆಂದೂ ಆದರೆ ಜನರು ತಮ್ಮನ್ನು ಕರೆಯುತ್ತಾರಾದ್ದರಿಂದ ಯತ್ನವಿಲ್ಲದೆ ಪ್ರಯಾಣ ಮಾಡಬೇಕಾಗಿದೆ ಎಂದೂ ಮುಖ್ಯ ಮಂತ್ರಿಯವರು ಹೇಳಿದರು. ಈ ಮಾತು ಸತ್ಯಕ್ಕೆ ದೂರವಾಗಿದೆಯೆಂದು ಅತ್ಯಂತ ವ್ಯಸನದಿಂದ ಹೇಳುತ್ತೇನೆ. ನೀವು ನಿಮ್ಮ ಊರಿನ ಕಡೆ ನಮ್ಮನ್ನು ಕರೆಯಿಸಿ, ನಿಮ್ಮ ಸ್ಕೂಲು ಕಟ್ಟಲಿಲ್ಲವೋ ಎಂದು ಮುಂತಾಗಿ ಪರೋಕ್ಷವಾಗಿ ಸಲಹೆ ಕೊಟ್ಟು ನಮ್ಮನ್ನು ಕರೆಯಿರಿ ಎಂದು ಮಂತ್ರಿಗಳು ಹೇಳುತ್ತಾರೆ ಎಂಬುದು ನನಗೆ ಗೊತ್ತಿದೆ. ಅಂಥ ಪ್ರಯತ್ನಗಳು ನನಗೆ ಸಂಬಂಧಪಟ್ಟ ಕ್ಷೇತ್ರದಲ್ಲಿ ಒಂದೆರಡು ಸಲ ನಡೆದು ವಿಫಲವಾಗಿವೆ. ಇನ್ನೂ ಅದೇ ಪ್ರಯತ್ನ ನಡೆಯುತ್ತಿದೆ. ಜನರು ನಮ್ಮನ್ನು ಕರೆಯುತ್ತಾರೆ, ನಾವು ಹೋಗುತ್ತೇವೆ ಎಂದು ಹೇಳುವುದು ಬೂಟಾಟಿಕೆ ಮಾತು, ಒಣ ಜಂಭದ ಮಾತು ಎಂದು ಹೇಳಬೇಕಾಗಿದೆ. ಇದಕ್ಕೋಸ್ಕರ ಬಹಳ ಹಣ ಖರ್ಚಾಗುವುದು ನಷ್ಟವಲ್ಲವೇ? ಈ ಸಂದರ್ಭದಲ್ಲಿ ಇನ್ನೊಂದು ಮಾತು ಹೇಳುತ್ತೇನೆ. ನಿನ್ನೆಯ ದಿನ ಚರ್ಚೆಯಾಗುವಾಗ ನಾನು ಇರಲಿಲ್ಲ. ತಾವು ದೆಹಲಿಯ ಹೋಟಲು ಒಂದರಲ್ಲಿ ದಿನಕ್ಕೆ 200 ರೂಪಾಯಿ ಖರ್ಚು ಮಾಡಿರುವುದನ್ನು ಅಂದರೆ 4 ದಿನಗಳಿಗೆ ಆದ 800 ರೂಪಾಯಿಗಳನ್ನು ಸರ್ಕಾರಕ್ಕೆ ಕೊಟ್ಟುಬಿಡುವುದಾಗಿ ಹೇಳಿದರಂತೆ. ಇಷ್ಟೆಲ್ಲ ಚರ್ಚೆ ನಡೆದು ಅವಾಂತರವಾದ ಮೇಲೆ ದುಂದು ವೆಚ್ಚ ಮಾಡಿದ ಹಣವನ್ನು ಹಿಂದಕ್ಕೆ ಕೊಡುವುದಕ್ಕೆ ಬದಲು ಮೊದಲೇ ತೆಗೆದುಕೊಳ್ಳದಿದ್ದರೆ ಚೆನ್ನಾಗಿತ್ತು. ಈಗಲಾದರೂ ಕೊಡುವುದು ತಾನೇ. 800 ರೂಪಾಯಿಗಳನ್ನು ಕೊಟ್ಟರೆ ಏನು, ಕೈಯಲ್ಲಿ ಎಂಟು ಲಕ್ಷ ರೂಪಾಯಿಗಳ ಆಡಳಿತ ನಡೆಸುವ ಅಧಿಕಾರ ಇದ್ದೇ ಇದೆ ಎಂಬ ಮನೋಭಾವನೆಯಿಂದ ಕೂಡಿ ಮಾತಾಡಿದ್ದಾರೆ. ತಾವು ಯದ್ವಾತದ್ವಾ ಖರ್ಚುಮಾಡಿದ್ದೂ ಅಲ್ಲದೆ ಈಗ ತಮ್ಮನ್ನು ನಿಷ್ಠೂರ ಮಾಡಿದ ಹಾಗಾಯಿತಂತೆ! ಬಿಸಾಕಿ ಬಿಡುತ್ತೇನೆಂದರೆ ಏನು ಅರ್ಥ! ಸರ್ಕಾರವನ್ನು ನಡೆಸುವವರು ಆನ್ನುವ ಮಾತೇ ಇದು! ಯಾತಕ್ಕೆ ಇಂಥ ಮಾತುಗಳನ್ನು ಆಡಬೇಕು! ಹಣವನ್ನು ಖರ್ಚು ಮಾಡುವಾಗ ಇದು ನನ್ನ ಹಣವಲ್ಲ ಜನಗಳ ಹಣ ಎಂಬ ಪರಿಜ್ಞಾನ ಆ ಹೊತ್ತು ಅವರಿಗೆ ಇರಲಿಲ್ಲವೇ! ಈ ಸಭೆಯಲ್ಲಿ ಚರ್ಚೆ ಮಾಡತಕ್ಕ ವಿಚಾರವಲ್ಲ ಇದು. ಎಂದು ತಿಳಿದುಕೊಳ್ಳಬೇಕಾಗಿತ್ತು ಮತ್ತು ಆ ರೀತಿ ಆಗದ ಹಾಗೆ ಮಾಡಬೇಕಾಗಿತ್ತು.

ಆಡಳಿತದ ಬೇರೆ ಬೇರೆ ಇಲಾಖೆಗಳನ್ನು ತೆಗೆದುಕೊಂಡು ಅವುಗಳ ವಿಚಾರದಲ್ಲಿ ಹೆಚ್ಚು ಬೆಳೆಸುವುದಕ್ಕೆ ಇಷ್ಟವಿಲ್ಲ. ಪೋಲೀಸು ಇಲಾಖೆಯ ವಿಷಯ ಸ್ವಲ್ಪ ಹೇಳುತ್ತೇನೆ. ಒಬ್ಬರು ಪಾರ್ಲಿಮೆಂಟ್ ಮೆಂಬರು

ಇಬ್ಬರು ಅಸೆಂಬ್ಲಿ ಮೆಂಬರುಗಳು ರಾಮನಗರ ತಾಲ್ಲೂಕಿನಲ್ಲಿ ಸಭೆ ನಡೆಸಲು ಹೋದಾಗ ಕೆಲವು ಗೂಂಡಾ ಜನರು ಅವರನ್ನು ದಾರಿಯಲ್ಲಿ ತಡೆದು, ಮುಂದೆ ಕಾಲಿಟ್ಟರೆ ಕಲ್ಲಿನಿಂದ ಹೊಡೆಯುತ್ತೇವೆ, ಜೋಡಿನಿಂದ ಹೊಡೆಯುತ್ತೇವೆ ಮುಂತಾಗಿ ಬಯ್ಯುವುದು, ಹೆದರಿಸುವುದು ನಡೆದರೂ ಪೋಲೀಸ್ ರಕ್ಷಣೆ ಇರಲಿಲ್ಲ. ಪೋಲೀಸಿನವರು ಬಂದರೆ ಏನು ಮಾಡುತ್ತಾರೆ ಎನ್ನುವ ಮಟ್ಟಿಗೆ ಬಂದಿದೆ ಆ ಪ್ರಾಂತದ ಪರಿಸ್ಥಿತಿ! ಇದೇ ರೀತಿಯಲ್ಲೇ,ಸ್ವಾಮಿ, ಆಡಳಿತ ನಡೆಸುವುದು ಸರ್ಕಾರ? ಸಭೆ ನಡೆಸಲು ಅಡ್ಡಿ ಮಾಡಿದವರು ರೈಲ್ವೆ ಗೇಟನ್ನು ಹಾಕಿಸಿದ್ದು, ಅದನ್ನು ತೆಗೆಸಲು ಪೋಲೀಸಿನವರೂ ನಿಸ್ಸಹಾಯಕರಾದಂಥ ಪರಿಸ್ಥಿತಿ ಆಯಿತು ಎಂದರೆ ಹೇಗೆ! ಆಡಳಿತವೆಂದರೆ ಹೀಗೇನೇ ಮಾಡುವುದು? ಸಜ್ಜನರಿಗೆ ಪೋಲೀಸರಿಂದ ರಕ್ಷಣೆ ಹೀಗೇನೇ ದೊರಕುವುದು? ಸ್ವಾಮಿ, ಇತ್ತೀಚೆಗೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಜಾತ್ರೆ 8 ದಿವಸಗಳು ನಡೆಯುತ್ತದೆ. ಲಕ್ಷಾಂತರ ರಾಸುಗಳು ಆ ಸಂದರ್ಭದಲ್ಲಿ ಸೇರುತ್ತವೆ. ಉತ್ತಮವಾದ ರಾಸುಗಳಿಗೆ ಬಹುಮಾನ ಕೊಡುತ್ತಾರೆ. ಈ ವರ್ಷ ಜಾತ್ರೆ ಮುಗಿದು ನೆರೆದಿದ್ದ ಜನರೆಲ್ಲರೂ ಹೊರಟು ಹೋಗಿ 200-300 ಜನ ಮಾತ್ರವಿದ್ದಾಗ ಉತ್ತಮ ರಾಸುಗಳಿಗೆ ಮುಖ್ಯ ಮಂತ್ರಿಯವರು ಬಹುಮಾನ ಕೊಡುವ ಏರ್ಪಾಡಾಗಿತ್ತು. ಈ ಸಮಾರಂಭಕ್ಕೆ 200-300 ಜನ ಪೋಲೀಸಿನವರ ರಕ್ಷಣೆಯನ್ನು ಒದಗಿಸಲಾಗಿತ್ತು. ಒಬ್ಬ ವ್ಯಕ್ತಿಯ ನೆರವಿಗಾಗಿ ಮೂರು ವ್ಯಾನುಗಳ ತುಂಬ ಬೆಂಗಳೂರು, ಮಂಡ್ಯ, ಮೈಸೂರು ಹೀಗೆ ಜಿಲ್ಲೆ ಜಿಲ್ಲೆಯಿಂದಲೂ ಪೋಲೀಸಿನವರನ್ನು ಕರೆಸುವುದರ ಅಗತ್ಯವೇನಿತ್ತು? ಅಲ್ಲಿ ಪೋಲೀಸಿನವರ ಓಡಾಟವೇ ಓಡಾಟ, ಅವರ ಜಬರದಸ್ತು ಹೇಳಲು ಶಕ್ಯವಿಲ್ಲ. ಒಬ್ಬ ಪಾರ್ಲಿಮೆಂಟ್ ಸದಸ್ಯರು, ಇಬ್ಬರು ಅಸೆಂಬ್ಲಿ ಸದಸ್ಯರುಗಳು ಕಾರಿನಲ್ಲಿ ಹೋದಾಗ ಜೋಡಿನಿಂದ ಹೊಡೆಯುತ್ತೇವೆ, ಕಾರಿನ ಗಾಜನ್ನು ಒಡೆಯುತ್ತೇವೆ, ಕಾರನ್ನು ಪುಡಿಪುಡಿ ಮಾಡುತ್ತೇವೆಂದು ಹೆದರಿಸುವಾಗ ಪೋಲೀಸಿನವರ ರಕ್ಷಣೆಯ ಮಾತೇ ಇಲ್ಲ! ಮಾನ್ಯ ಸದಸ್ಯರಿಗೆ ಪೋಲೀಸ್ ರಕ್ಷಣೆಗೆ ಒದಗಿಸುವುದು ಅಗತ್ಯವಲ್ಲವೆ? ಮುಖ್ಯ ಮಂತ್ರಿಗಳಿಂದ ಮಾತ್ರಕ್ಕೆ, ಯಾವ ಭಯಕ್ಕೂ ಕಾರಣವಿಲ್ಲದಿದ್ದರೂ ಅಗತ್ಯವಿಲ್ಲದಿದ್ದರೂ ಎಷ್ಟೊಂದು ವ್ಯಾನ್, ಎಷ್ಟೊಂದು ಜೀಪುಗಳು, ಈ ಆಡಂಬರ, ಈ ಒಣಜಂಭ, ಈ ಒಂದು ಮೆರವಣಿಗೆ ಇವೆಲ್ಲ ಬೇಕು! ಇದು ನ್ಯಾಯವೇ? ಒಬ್ಬ ವ್ಯಕ್ತಿಗೆ ಮಾತ್ರ ಇಷ್ಟೊಂದು ರಕ್ಷಣೆಬೇಕು; ಬಾಕಿಯವರಿಗೆ ಪ್ರಾಣ ಹೋದರೂ ಚಿಂತೆ ಇಲ್ಲ; ಮಾನ ಹೋದರೂ ಚಿಂತೆ ಇಲ್ಲ; ಪೋಲೀಸಿನವರೂ ಸಹಾಯಕ್ಕೆ ಬರುವಂತೆ ಇಲ್ಲ! ಹೀಗೆ ಇವರಿಗೆ ಇತರರ ಹಿತರಕ್ಷಣೆ ಮಾಡುವ ಉದ್ದೇಶವೂ ಇಲ್ಲ. ಪೋಲೀಸ್ ಆಡಳಿತದ ವೈಖರಿ ಹೀಗೆ ಇದೆ! ಈ ಸರ್ಕಾರದವರು ಇಂಥ ಆಡಳಿತವನ್ನು ನಡೆಸುತ್ತಿದ್ದಾರೆ.

ಕೈಗಾರಿಕೆಯ ಅಭಿವೃದ್ಧಿಗಾಗಿ ಬೇಕಾದಷ್ಟು ಗ್ರಾಂಟ್ ಕೊಡುತ್ತಿದ್ದಾರೆ. ಕೇಂದ್ರದಿಂದಲೂ ಗ್ರಾಂಟ್ ಕೊಡುತ್ತಾರೆ. ಇದರ ವಿತರಣೆ ಯದ್ವಾತದ್ವಾ ನಡೆಯುತ್ತಿದೆ. ವಿಶ್ವೇಶ್ವರಯ್ಯ ಸ್ಕೀಂ ಎರಡು ಜಿಲ್ಲೆಗಳಲ್ಲಿ ಬಹಳ ಯಶಸ್ವಿಯಾಗಿ ನಡೆದುದರಿಂದ ಉಳಿದ ಎಂಟು ಜಿಲ್ಲೆಗಳಲ್ಲೂ ಅದನ್ನು ಆಚರಣೆಗೆ ತಂದಿದ್ದೇವೆ ಎಂದು ಹೇಳಿದ್ದಾರೆ. ಸರ್ಕಾರದ ಆಡಳಿತದಲ್ಲಿ ಎಂದು ನೀತಿ, ಒಂದು ಧರ್ಮ ಇಲ್ಲದೆ ಇರುವುದರಿಂದ ಇಲಾಖೆಗಳಲ್ಲಿ ಕೆಲಸ ಸರಿಯಾಗಿ ನಡೆಯದೆ ಇದೆ. ಗ್ರಾಮಾಂತರ ಕೈಗಾರಿಕೆಗಳ ಅಭಿವೃದ್ಧಿಗಾಗಿ ಹೋಬಳಿಗೊಂದರಂತೆ ಒಂದೊಂದು ಸೊಸೈಟಿಯನ್ನು ಮಾಡಿದ್ದಾರೆ. ಅದಕ್ಕೆ ಸರ್ಕಾರದವರು ಸದಸ್ಯರನ್ನು ನಾಮಕರಣ ಮಾಡಿರುತ್ತಾರೆ. ಆ ಸದಸ್ಯರು ಯಾರೋ ಏನೋ ನನಗೆ ಗೊತ್ತಿಲ್ಲ. ನಾವು ಈ ಸಭೆಯ ಸದಸ್ಯರಾಗಿದ್ದುಕೊಂಡು ನಮ್ಮ ನಮ್ಮ ಕ್ಷೇತ್ರಗಳಲ್ಲಿ ನಡೆಯುವ ವಿಷಯಗಳು ನಮಗೇ ತಿಳಿಯುವುದಿಲ್ಲ. ನನ್ನ ಕ್ಷೇತ್ರದಲ್ಲಿ ಇಂಥ ಮೂರು-ನಾಲ್ಕು ಸೊಸೈಟಿಗಳಿವೆ. ಇವಕ್ಕೆ ಯಾರಾರು ಮೆಂಬರುಗಳಿದ್ದಾರೆ, ಅವರು ಏನು ಕೆಲಸ ಮಾಡುತ್ತಾರೆ ಇವೆಲ್ಲವೂ ನನಗಂತೂ ಗೊತ್ತಿಲ್ಲ. ಈ ಸೊಸೈಟಿಗಳ ಕಾರ್ಯಗಳೆಲ್ಲ ನನ್ನ ತಿಳಿವಳಿಕೆ ಇಲ್ಲದೆಯೇ ನಡೆಯುತ್ತಿವೆ. ಇಲ್ಲಿರುವ ಅಂಶವೇನೆಂದರೆ ಎಲ್ಲವೂ ಪಕ್ಷಪಾತ ದೃಷ್ಟಿಯಿಂದ ನಡೆಯುತ್ತಿವೆ. ಸರ್ಕಾರಕ್ಕೆ ಬೇಕಿಲ್ಲದ ಸದಸ್ಯರ ವಿರುದ್ಧ ಜನರನ್ನು ಎತ್ತಿಕಟ್ಟುವ ಉದ್ದೇಶದಿಂದ ಈ ಗ್ರಾಮಾಂತರ ಕೈಗಾರಿಕೆಗಳ ಅಭಿವೃದ್ಧಿಗಾಗಿ ಏರ್ಪಾಡಾಗಿರುವ ಸೊಸೈಟಿಗಳಿಗೆ 10 ಸಾವಿರ, 20 ಸಾವಿರ ರೂಪಾಯಿ ಕೊಟ್ಟು ಆ ಪ್ರದೇಶದಲ್ಲಿರುವ ಜನರಿಗೆ, ಅಂದರೆ, ಕುಂಬಾರರಿಗೆ, ಇತರ ಗೃಹ ಕೈಗಾರಿಕೆಗಳವರಿಗೆಲ್ಲ ಈ ಹಣ ಕೊಟ್ಟು, ಜನರು ಅವರ ದಾಕ್ಷಿಣ್ಯಕ್ಕೆ ಒಳಗಾಗುವಂತೆ ಮಾಡಿ, ನಮ್ಮಂಥವರ ಪ್ರಭಾವ ಅಲ್ಲಿ ಕಡಿಮೆಯಾಗಬೇಕು ಎಂಬ ದೃಷ್ಟಿಯಿಂದ ಕೆಲಸಮಾಡುತ್ತಿದ್ದಾರೆ. ಇದು ಸರ್ಕಾರ ನಡೆಸತಕ್ಕವರು ಮಾಡುವ ಕಾರ್ಯವಲ್ಲ; ಇದು ಅವರಿಗೆ ಒಪ್ಪತಕ್ಕದ್ದಲ್ಲ. ವ್ಯವಸಾಯಕ್ಕೆ ಎಲ್ಲೆಲ್ಲಿ ನೀರಿನ ಸೌಕರ್ಯ ಕಡಿಮೆಯಾಗಿದೆಯೋ ಅಲ್ಲೆಲ್ಲ ನೀರಿನ ಸೌಕರ್ಯದ ವ್ಯವಸ್ಥೆಮಾಡುವುದಕ್ಕಾಗಿ ಎಷ್ಟು ಬೇಕೋ ಅಷ್ಟನ್ನು ಮಾಡಿದ್ದರೆ ಜನರಿಗೆ ಬಹಳ ಉಪಯೋಗವಾಗುತ್ತಿತ್ತು. ನನ್ನ ಕ್ಷೇತ್ರದಲ್ಲಿರುವ ಒಂದು ಕಡೆ ಒಂದು ಲಕ್ಷ ರೂಪಾಯಿಗಳನ್ನು ಈ ಕಾರ್ಯಕ್ಕೆ ಖರ್ಚು ಮಾಡಿದರೆ ನೂರು ಸಂಸಾರಗಳಿರತಕ್ಕ ಎರಡು, ಮೂರು ಗ್ರಾಮ ಗಳಲ್ಲಿರುವ ಜನರಿಗೆ ಅನುಕೂಲವಾಗುವುದು ಎಂದು ಸಂಬಂಧಪಟ್ಟ ಮಂತ್ರಿಗಳಿಗೆಲ್ಲ ನಾನು ಎಷ್ಟು ಸಾರಿ ಹೇಳಿದರೂ ಉಪಯೋಗವಾಗಿಲ್ಲ. ನಾವು ಇವರುಗಳ ಹತ್ತಿರ ಹೋಗಿ ಭಿಕ್ಷೆ ಬೇಡಬೇಕೇ? ಈ ಮಾನ್ಯ ಸಭೆಯ ಒಬ್ಬ ಸದಸ್ಯರು ಬರೆದ ಕಾಗದಕ್ಕೆ ನಿಗಾ ಕೊಡದೆ ಇದ್ದಮೇಲೆ ಅಂಥ ಸರ್ಕಾರ ಯಾಕೆ ಇರಬೇಕು? ಅವರ ಕ್ಷೇತ್ರದಲ್ಲಿ ಈ ಕಾರ್ಯ ಮಾಡಿದರೆ ಅವರಿಗೆ ಒಳ್ಳೆ ಹೆಸರು ಬರುತ್ತದೆ, ಅದಕ್ಕೆ ಯಾಕೆ ಅವಕಾಶ ಕೊಡಬೇಕು ಎಂದು ಬಯಸಿದರೋ ಏನೋ ಎನ್ನಿಸುತ್ತದೆ. ನನ್ನಂತಹವನ ಕ್ಷೇತ್ರದಲ್ಲಿ ಒಂದು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರೆ ನೂರಾರು ಸಂಸಾರಗಳಿಗೆ ಜೀವನವಾಗತಕ್ಕ ಕೆಲಸವನ್ನು ಮಾಡುವುದಿಲ್ಲ. ಅದೇ ಕೆಂಗೇರಿ ಕೆರೆ ಕೆಳಗೆ 40 ಎಕರೆ ಜಮೀನಿರಬಹುದು—ಶ್ರೀಮಾನ್ ವೆಂಕಟಪ್ಪನವರು 20 ಎಕರೆಗಳಿಗೆ ಮೇಲ್ಪಟ್ಟು ಇಲ್ಲವೆಂದು ಹೇಳುತ್ತಾರೆ—ಇದಕ್ಕೆ ಎಷ್ಟು ಲಕ್ಷ ರೂಪಾಯಿಗಳ ಖರ್ಚು! ಹೋಗಲಿ ಆ ಕೆರೆ ಕೆಳಗೆ ತರೀ ವ್ಯವಸಾಯದ ಬಡಾವಣೆಗೆ ಅವಕಾಶವಿದೆಯೇ ಎಂದರೆ ಆ ಅಚ್ಚುಕಟ್ಟಿನ ಬಡಾವಣೆಗೆ ಅವಕಾಶವೇ ಇಲ್ಲ. ಏಕೆಂದರೆ ಸುತ್ತಲೂ ಹಳ್ಳವಿದೆ. ಇಂಥ ಕಡೆ, 20-25 ಎಕರೆಗಳಿಗೆ ಎಷ್ಟು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ವ್ಯವಸಾಯಕ್ಕೆ ಅನುಕೂಲ ಮಾಡುತ್ತಿದ್ದಾರೆ! ಪಕ್ಷಪಾತ ಇದರಲ್ಲಿ ಇಲ್ಲವೇ? ಎಲ್ಲ ಕಡೆಯೂ ಸಾರ್ವಜನಿಕವಾಗಿ, ಸಾರ್ವತ್ರಿಕವಾಗಿ ಕೆಲಸಗಳನ್ನು ಮಾಡುತ್ತೇವೆಂದು ಬಾಯಲ್ಲಿ ಹೇಳುತ್ತ ಕಾರ್ಯತಃ ನೋಡಿದರೆ ಪಕ್ಷಪಾತದಿಂದ ನಡೆಯುತ್ತಿದ್ದಾರೆ. ಊರಿನ ಮಧ್ಯೆ high road ಹೋಗುವ ಕಡೆಗಳಲ್ಲೆಲ್ಲ ಸಿಮೆಂಟ್ ಕಾಂಕ್ರೀಟ್ ಮಾಡುತ್ತೇವೆ ಎನ್ನುವುದೂ,

(ಶ್ರೀ ಎಚ್. ಕೆ. ವೀರಣ್ಣ ಗೌಡ.)

Sir, these five years he is going up and down from Dodballapur to Bangalore and Bangalore to Dodballapur. If he had only that money with him, which he has spent, he would have got double the extent of land that is granted to him. That is the state of affairs at present. That is one instance wherein one individual has applied for the grant of land. But there have been scores of people who have already applied for land and many are yet to apply. Because there is fear that they have no money to spend in going to these offices, they are keeping quiet. There are several instances where political sufferers are forced to go to these offices. Because there is no other place where land is available. If they come to Government and tell them, they say: show me the place where there is the land and I will grant. They get to know where a survey number is available with great difficulty, going to the Shanbhogues and making all requests to them and if the number is brought to the notice of the Government, they pass an order empowering the Sub-Division Officer to grant them the land in question. But immediately when application is given to the authority for grant of land, he says: 'For want of gomal, land cannot be granted' and an endorsement to that effect is given to the person. There are several instances like that. If the Government are very earnest about granting lands to political sufferers, if they are earnest about redressing their grievances, if they are interested and if they still think that their foundation is built on the sufferings of these people, I appeal to them to see that such applications which are pending before them are disposed of properly without any red tapism and lands sanctioned.

MR. SPEAKER.—The House will now rise and meet at 10-30 A.M.

The House adjourned for Lunch at Five Minutes past Ten of the Clock and reassembled at Thirty-two Minutes past Ten of the Clock.

(MR. SPEAKER in the Chair.)

ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ—ಅನುಸೂಚಿತ ಜಾತಿಗಳು).—ಸ್ವಾಮಿ ಈ ಸಂದರ್ಭದಲ್ಲಿ ಈ ಮಾನ್ಯ ಸಭೆಯ ಗಮನಕ್ಕೆ ಕೆಲವು ಅಂಶಗಳನ್ನು ತರಬೇಕೆಂದು, ನಾನು ಉದ್ದೇಶಪಟ್ಟಿದ್ದೇನೆ. ಈ ಲ್ಯಾಂಡ್ ರೆವೆನ್ಯೂ ಬಾಬಿಗೆ ಸಂಬಂಧಪಟ್ಟಂತೆ ದರಖಾಸ್ತುಗಳ ವಿಚಾರವಾಗಿ ಮಾತನಾಡುವುದಾದರೆ ನಾನು ಅನೇಕ ಸಾರಿ ಇದೇ ಸಭೆಯಲ್ಲಿ ಸರ್ಕಾರದವರ ಗಮನಕ್ಕೆ ತಂದಿದ್ದೇನೆ. ಈ ದರಖಾಸ್ತುಗಳ ವಿಲೇವಾರಿ ಯಾವ ಮಟ್ಟದಲ್ಲಿದೆ ಎಂದರೆ ದರಖಾಸ್ತು ಜಮೀನು ಕೊಡಿ ಎಂದು ನಾವು ಕೇಳುತ್ತಲೇ ಇದ್ದೇವೆ, ನಿರ್ದಿಷ್ಟವಾದ ನೀತಿಯನ್ನು ಹಾಕಿ ಕೊಡುತ್ತೇವೆ ಎಂದು ಹೇಳುತ್ತಲೇ ಇದ್ದೀರಿ. ಜಮೀನು ಮಂಜೂರಾತಿ ವಿಚಾರದಲ್ಲಿ ಸರ್ಕಾರದ ಯಾವ ಒಂದು ಕಾನೂನಿದೆಯೋ ಆ ಕಾನೂನನ್ನು ಸರಿಯಾದ ರೀತಿಯಲ್ಲಿ ಅನುಸರಿಸದೇ ಇರುವುದರಿಂದಲೇ ದರಖಾಸ್ತು ಮಂಜೂರಾತಿ ನಿಧಾನವಾಗಿ ಬಡ ಜನರಿಗೆ ಸಾಕಾದಷ್ಟು ಜಮೀನು ಸಿಕ್ಕುವುದು ಕಷ್ಟವಾಗುತ್ತಾ ಇದೆ. ಮುಖ್ಯವಾಗಿ ಹರಿಜನರ ವಿಚಾರದಲ್ಲಿ ಹೇಳುವುದಾದರೆ ಇವೊತ್ತಿನವರೆಗೂ ಕೂಡ ಸಾಕಾದಷ್ಟು ಜಮೀನು ದೊರೆಯುತ್ತಿಲ್ಲ ಎಂದು ಹೇಳಿದರೆ ತಪ್ಪಿಲ್ಲ. ಈ ವಿಚಾರದಲ್ಲಿ ನಾನು ಹಿಂದೆ ಕೆಲವು ಸಲಹೆಗಳನ್ನು ಮಾಡಿದ್ದೆ. ಹುಜೂರು ಜಮಾಬಂದಿ ಕಾಲದಲ್ಲಿ ಡೆಪ್ಯೂಟಿ ಕಮೀಷನರ ಮತ್ತು ರೆವೆನ್ಯೂ ಆಫೀಸರುಗಳ ಹತ್ತಿರ ಅಹವಾಲು ತಃಖ್ತೆ ಇರುತ್ತದೆ. ಒಂದು ಗ್ರಾಮದಲ್ಲಿ ಜಮಾಬಂದಿ fix up ಮಾಡುವಾಗ ಆ ಗ್ರಾಮದಲ್ಲಿ ಎಷ್ಟು ಜನ ಜಮೀನು ಇಲ್ಲದೇ ಇರುವವರು ಇದ್ದಾರೆ, ವ್ಯವಸಾಯಕ್ಕೆ ಲಾಯಕ್ಕಾದ ಜಮೀನು ಎಷ್ಟಿದೆ ಎಂಬುದು ನಿಗದಿಯಾಗಿರುತ್ತದೆ. ಅದೇನೂ ಇವೊತ್ತು ಮಾಡಿದ್ದಲ್ಲ. ಹಿಂದೆ ಮಾಡಿರತಕ್ಕದ್ದು, ಆಕಾರ ಕಂಡ ಜಮೀನು, ಗೋಮಾಳ, ಡೇಟ್‌ರಿಸರ್ವ್ ಎಲ್ಲೆಲ್ಲಿದೆ, ಎಲ್ಲೆಲ್ಲಿ ಜಮೀನನ್ನು ವಿಲೇವಾರಿ ಮಾಡಬಹುದು ಎಂಬುದನ್ನು ಯೋಚನೆ ಮಾಡಿ ಜಮೀನು ಇಲ್ಲದೆ ಇರುವವರಿಗೆ ಪಟೇಲ್ ಶ್ಯಾನುಭೋಗರು ಅಹವಾಲು ತಃಖ್ತೆಯನ್ನು ತೆಗೆದುಕೊಂಡು ಜಮೀನು ವಿಲೇವಾರಿ ಮಾಡಬೇಕೆಂಬ ವಿಚಾರವನ್ನು ಒತ್ತಿ ಒತ್ತಿ ಹೇಳುತ್ತಾ ಇದ್ದೇನೆ. ಆ ರೀತಿ ಮಾಡುವುದರಿಂದ ಈ ರೆಕಾರ್ಡ್ ವಿಲೇವಾರಿ

(ಶ್ರೀ ಎಂ. ಚಿಕ್ಕಲಿಂಗಯ್ಯ.)

ನಿಧಾನವಾಗುತ್ತಿರುವುದು ತಪ್ಪಿ ಈಗಿರತಕ್ಕ ತೊಂದರೆ ತಪ್ಪುತ್ತದೆ. ಬಡವರಿಗೆ ನ್ಯಾಯ ದೊರೆಯುತ್ತದೆ ಎಂದು ಅನೇಕಸಾರಿ ಹೇಳಿದರೂ ಕೂಡ ಇವೊತ್ತಿನವರೆಗೂ ಆ ಪದ್ಧತಿಯನ್ನು ಅನುಸರಿಸುತ್ತಿಲ್ಲ. ಇದನ್ನು ಮಾಡುವುದಕ್ಕೆ ಏನೋ ತೊಂದರೆ ಇದೆ ಎಂದು ಯೋಚಿಸಬೇಕಾಗಿದೆ.

ಎರಡನೆಯದಾಗಿ ಪೊಲಿಟಿಕಲ್ ಸಫರರ್ಸ್‌ಗೆ ಜಮೀನುಗಳನ್ನು ಶೀಘ್ರವಾಗಿ ಮಂಜೂರು ಮಾಡಬೇಕೆಂದು ಒತ್ತಾಯ ಪಡಿಸುತ್ತಾ ಇದ್ದಾರೆ. ಅವರಿಗೆ ಕೊಡಬೇಡಿ ಎಂದು ನಾನು ಹೇಳುತ್ತಿಲ್ಲ. ಅವರಿಗೆ ಕೊಡುವ ವಿಷಯದಲ್ಲಿ ಯಾವ ನೀತಿಯನ್ನನುಸರಿಸಬೇಕೆಂಬುದನ್ನು ಹಿಂದೆ ಸರ್ಕಾರದವರ ಗಮನಕ್ಕೆ ತಂದಿದ್ದೇನೆ. ಯಾರು ನಿಜವಾಗಿ ದೇಶಕ್ಕಾಗಿ ಹೋರಾಡಿ ಕಷ್ಟಪಟ್ಟಿದ್ದಾರೋ ಅವರಿಗೆ ಸರ್ಕಾರದವರು ಸಂಪೂರ್ಣವಾಗಿ ಸಹಾಯ ಮಾಡಬೇಕಾದದ್ದು ನ್ಯಾಯ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಏನೂ ಇಲ್ಲದೆ, ಕಾಂಗ್ರೆಸ್ಸಿಗೆ ಸೇರಿದ ಮಾತ್ರಕ್ಕೇ ಅಂಥವರಿಗೆ ಯಾವ ತೊಂದರೆಯೂ ಇಲ್ಲದೇ ಇದ್ದರೂ ಎಂಟು ಹತ್ತು ಎಕರೆ ಒಳ್ಳೆಯ ಗದ್ದೆ ಜಮೀನು ಕೊಟ್ಟಿರುವುದನ್ನು ಇವೊತ್ತಿಗೂ ನೋಡುತ್ತಾ ಇದ್ದೇವೆ. ಇವೊತ್ತು ಜಮೀನನ್ನು ಸರ್ಕಾರದವರಿಂದ ಪಡೆದುಕೊಂಡು ಮಾರನೆಯ ದಿನ ಬೇರೆಯವರಿಗೆ ಮಾರುತ್ತಿರುತ್ತಾರೆ. ಅಂತಹ ನಿದರ್ಶನಗಳನ್ನು ಸರ್ಕಾರದವರ ಗಮನಕ್ಕೆ ತಂದು ಶೀಘ್ರವಾಗಿ ಪರಿಶೀಲನೆ ಮಾಡಿ ಎಂದು ಹೇಳಿದರೂ ಕೂಡ ಅದನ್ನು ಪರಿಗಣಿಸದೇ ಒಂದು ಕಡೆ ೫೦ ಸಾವಿರ ರೂಪಾಯಿ ಬೆಲೆ ಬಾಳತಕ್ಕ ಜಮೀನನ್ನು ಮಂಜೂರು ಮಾಡಿದ್ದಾರೆ, ಇನ್ನೊಂದು ಕಡೆ ಒಬ್ಬರಿಗೆ 18 ಎಕರೆ ಜಮೀನನ್ನು ಕೊಟ್ಟಿದ್ದಾರೆ. ಈ ರೀತಿ ಕೊಡುತ್ತಾ ಹೋದರೆ, ಹೇಗೆ ನಾವು ಇಷ್ಟ ಬಂದವರಿಗೆ ಜಮೀನು ಕೊಡುತ್ತೇವೆ ಎಂಬುದಾಗಿ ಒಂದು ಆಜ್ಞೆಯನ್ನು ಹೊರಡಿಸಿ ಬಿಡಿ, ನಾವು ಖಂಡಿತವಾಗಿಯೂ ತಮ್ಮನ್ನು ಏಕೆ ಹೀಗೆ ಮಾಡಿದಿರಿ ಎಂದು ಕೇಳುವುದಿಲ್ಲ. ಒಂದು ನೀತಿಯನ್ನನುಸರಿಸಿ ಕೆಲಸಮಾಡುತ್ತೇವೆ, ಬಡವರಿಗೆ ಸಹಾಯ ಮಾಡುತ್ತೇವೆ, ಪ್ರಜಾ ಪ್ರಭುತ್ವದಲ್ಲಿ ಬಡವರಿಗೆ ಅನುಕೂಲವಾಗುವ ಕೆಲಸಗಳನ್ನೇ ಮಾಡುತ್ತೇವೆ ಎಂದು ಒಂದು ಕಡೆ ಹೇಳುತ್ತಾ ಇನ್ನೊಂದು ಕಡೆ ಅನುಕೂಲಸ್ಥರಿಗೇ ಸಹಾಯ ಮಾಡತಕ್ಕ ನೀತಿಯನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತೇನೆ.

ಅಧ್ಯಕ್ಷರು.—'He should have no property' ಎಂದು ಸರ್ಕಾರಿ ಆಜ್ಞೆಯಲ್ಲೇ ಇದೆಯಲ್ಲ?

ಶ್ರೀ ಎಂ. ಚಿಕ್ಕಲಿಂಗಯ್ಯ.—ಆ ಆಜ್ಞೆಯನ್ನು ಅವರು ಪಾಲಿಸುತ್ತಿಲ್ಲ ಎಂದು ಹೇಳುತ್ತೇನೆ. ಅದಕ್ಕೆ ನಿದರ್ಶನವನ್ನೂ ಕೂಡ ಹೇಳಿದ್ದೇನೆ. ಬೇಕಾದರೆ ಅದನ್ನು ಕೇಳಿ ತಿಳಿದುಕೊಳ್ಳಬಹುದು.

ತೋಟಿ ತಳವಾರರಿಗೆ ಮಿರಾಸೆ ಕೊಡುವ ವಿಚಾರದಲ್ಲಿ ಒಂದು ನೀತಿಯನ್ನು ಅನುಸರಿಸಬೇಕೆಂದು ಒತ್ತಾಯ ಪಡಿಸುತ್ತೇನೆ. ಪಟೇಲ್, ಶ್ಯಾನುಭೋಗರಿಗೆ ಸಹಾಯಕರಾದ ತೋಟಿ ತಳವಾರರಿಗೆ ಅನುಕೂಲ ಮಾಡಿಕೊಡಬೇಕೆಂದು ಪರ್‌ಸನಲ್ ಇನಾಂಸ್ ಮತ್ತು ರಿಲಿಜಿಯಸ್ ಇನಾಂಸ್ ಅಬಾಲಿಷನ್ ಬಿಲ್ ಬಂದಾಗಲೇ ಎಷ್ಟೋ ಒತ್ತಾಯ ಪಡಿಸಿದರೂ ಕೂಡ ಅದನ್ನು ಗಣನೆಗೆ ತೆಗೆದುಕೊಂಡಿಲ್ಲ. ಆ 21 ಸಾವಿರ ಜನರು ವಂಶ ಪಾರಂಪರ್ಯವಾಗಿ ಇನಾಂತಿ ಜಮೀನುಗಳನ್ನೇ ನಂಬಿಕೊಂಡು ಎಷ್ಟೋ ಕಷ್ಟಪಟ್ಟಿದ್ದಾರೆ ಎಂಬುದನ್ನು ಪದೇ ಪದೇ ಸರ್ಕಾರದವರ ಗಮನಕ್ಕೆ ತರುತ್ತಾ ಇದ್ದೇನೆ. ಮಿರಾಸೆ ವಿಚಾರದಲ್ಲಿ ಸರ್ಕಾರದವರು ಸರಿಯಾದ ನೀತಿಯನ್ನು ಕೈಕೊಳ್ಳದೆ ಅವರಿಗೆ ಇರತಕ್ಕ ತೊಂದರೆ ನಿವಾರಣೆಯಾಗಿಲ್ಲ. ಪಟೇಲ್ ಶ್ಯಾನುಭೋಗರುಗಳಿಗೆ ಕಲೆಕ್ಷನ್ ಡ್ಯೂಟೀಸ್‌ಗೆ ಇಷ್ಟು ಪರ್ಸೆಂಟೇಜ್ ಎಂದು ಹೇಳಿಕೊಡುತ್ತಾ ಇದ್ದೀರಿ. ಅವರಂತೆಯೇ ಇವರೂ ಸಹ ಕಷ್ಟಪಡುತ್ತಾರೆ. ಇವರಿಗೆ ಕಡೆಯ ಪಕ್ಷ ರೂಪಾಯಿನಲ್ಲಿ ಅರ್ಧ ಆಣೆಯನ್ನಾದರೂ ಕೊಡಿ ಎಂದು ಒತ್ತಾಯ ಪಡಿಸಿದರೂ ಕೂಡ ಇದುವರೆಗೂ ಕೊಟ್ಟಿಲ್ಲ. ಕೊಡುವುದಕ್ಕೆ ಸರ್ಕಾರದವರಿಗೆ ಇಷ್ಟವಿದೆಯೋ ಇಲ್ಲವೋ, ಯೋಗ್ಯತೆ ಇದೆಯೋ ಇಲ್ಲವೋ ಎಂದು ಸಂದೇಹವಾಗುತ್ತಾ ಇದೆ. ಇದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ. ಸಮತಾವಾದ ಸಮಾಜ ಸ್ಥಾಪನೆ ಮಾಡಬೇಕೆಂಬ ತತ್ವವನ್ನು ಒಪ್ಪಿಕೊಂಡ ಮೇಲೆ ಈ ಜನಗಳ ಕಷ್ಟ ಸುಖವನ್ನು ತಿಳಿದುಕೊಳ್ಳದಿದ್ದರೆ ಖಂಡಿತವಾಗಿಯೂ ದೇಶಕ್ಕೆ ಕಲ್ಯಾಣವಾಗುವುದಿಲ್ಲ ಎಂದು ಸಹಿತ ಹೇಳುತ್ತೇನೆ. 50 ವರ್ಷವಾದರೂ ಕೂಡ ಈ ಮಿರಾಸೆ ಪದ್ಧತಿಯನ್ನು ಸರಿಪಡಿಸುವುದಕ್ಕೆ ಸಾಧ್ಯವಾಗುವುದಿಲ್ಲ. Practical difficulties ಇದ್ದೇ ಇರುತ್ತವೆ. ಸಂಬಳ ಸಾರಿಗೆಗಳನ್ನು ಅವರಿಗೆ ಕ್ರಮವಾಗಿ ಕೊಟ್ಟು ಅನುಕೂಲ ಮಾಡಿಕೊಟ್ಟರೆ ನಮಗೆ ತೃಪ್ತಿಯಾಗುತ್ತದೆ. ಇದನ್ನು ಪರಿಶೀಲನೆ ಮಾಡಬೇಕೆಂದು ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಒಂದೇ ಒಂದು ಮುಖ್ಯವಾದ ವಿಷಯ. ಪೋಡಿನ ವಿಚಾರದಲ್ಲಿ ಕೆಲವು ಅಂಶಗಳನ್ನು ಹೇಳಬೇಕಾಗಿದೆ. ತಾಲ್ಲೂಕು ಆಫೀಸಿಗೆ ಹೋಗಿ ನೋಡಿದಲ್ಲಿ ತಕರಾರು ತಃಖ್ತೆ ಕೇಸುಗಳು ಎಷ್ಟೋ ಪೆಂಡಿಂಗ್‌ನಲ್ಲಿರುವುದು ಕಂಡು ಬರುತ್ತದೆ. ಅವನ್ನು ಫೈಸಲು ಮಾಡಬೇಕೆಂದು ಎಷ್ಟೋ ಸಾರಿ ಹೇಳಿದ್ದೇನೆ. ಪೋಡ್ ಫೀಜನ್ನು ಕೊಟ್ಟಿರುತ್ತಾರೆ. ಪ್ರತಿಯೊಂದು ತಾಲ್ಲೂಕು ಆಫೀಸಿಗೂ ನೂರಾರು ಪೋಡ್ slips ಹೋಗುತ್ತಿವೆ. ಅವುಗಳನ್ನು ತಕ್ಷಣ ಫೈಸಲು ಮಾಡುವುದಕ್ಕೆ ಯಾವ ಏರ್ಪಾಡು ಇದೆಯೋ ಗೊತ್ತಿಲ್ಲ. ಹಿಂದೆ ಇದ್ದ ಏರ್ಪಾಡನ್ನೇ ಈ ಸರ್ಕಾರ ಬಂದ ಮೇಲೂ ಅನುಸರಿಸಿಕೊಂಡು ಬರುತ್ತಾ ಇದ್ದೀರಿ. ಪೋಡ್ ಫೀ ತಾಲ್ಲೂಕು ಆಫೀಸಿಗೆ ಹೋದರೆ ತಕ್ಷಣ ಆ ಖಾತೇದಾರರನ್ನು ಕರೆಯಿಸಿ, ಪೋಡ್‌ಫಿಕ್ಸ್ ಮಾಡಿ ownership rights ಕೊಡುವುದಕ್ಕೆ ಏರ್ಪಾಡು ಮಾಡಬೇಕು. ಮದರಾಸಿನಲ್ಲಿರುವ ಹಾಗೆ ಸಬ್‌ರಿಜಿಸ್ಟ್ರಾರ್‌ರವರ ಆಫೀಸಿನಲ್ಲಿ ರಿಜಿಸ್ಟ್ರೇಷನ್ ಆಗುವುದಕ್ಕೆ ಮುಂಚೆ ವೆರಿಫೈಮಾಡಿ ಟೈಟಲ್‌ಡೀಡ್ಸ್ ಫೈಸಲು ಮಾಡಬೇಕೆಂದು ಹೇಳಿದ್ದೇನೆ. ಅದನ್ನು ಪರಿಶೀಲನೆ ಮಾಡಬೇಕೆಂದು ಸರ್ಕಾರದವರ ಗಮನಕ್ಕೆ ತಂದರೂ ಕೂಡ ಇವೊತ್ತಿನವರೆಗೂ ಪರಿಶೀಲನೆ ಮಾಡಿಲ್ಲ. ಬರಬರುತ್ತ ತಮ್ಮ ಕೆಲಸ ಕಾರ್ಯಗಳು ಹಿಂದೆ ಹಿಂದಕ್ಕೆ ಬೀಳುತ್ತ ಇವೆಯೇ ಹೊರತು ಮುಂದುವರಿಯುತ್ತ ಇಲ್ಲ. ಈ ರೀತಿ ಇರುವುದರ ದೆಸೆಯಿಂದ ಇದು ಖಂಡಿತವಾಗಿಯೂ ಆಡಳಿತ ದಕ್ಷತೆಗೆ ಒಳ್ಳೆಯದಲ್ಲ ಇದರಿಂದ ಬಡವರಿಗೆ ನ್ಯಾಯ ದೊರಕುವುದಿಲ್ಲ ತೊಂದರೆಯಾಗುತ್ತಿದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ನಾನು ಹೆಚ್ಚು ಕಾಲ ತೆಗೆದುಕೊಳ್ಳುವುದಿಲ್ಲ. ನಾನು ನಿರ್ಣಯ ತಂದಿದ್ದೆ ಮತ್ತು ಬಡ್ಜೆಟ್ ಮೇಲೆ ಮಾತನಾಡುವುದಕ್ಕೂ ಕೂಡ ಅಧ್ಯಕ್ಷರು ನನಗೆ ಅವಕಾಶ ಕೊಡಲಿಲ್ಲ. ಈಗಾಗಲೇ ಮಾನ್ಯಸದಸ್ಯರು ತಮ್ಮ ಗಮನಕ್ಕೆ ಅನೇಕ ವಿಷಯಗಳನ್ನು ತಂದಿದ್ದಾರೆ.

ಪ್ರತಿವರ್ಷವೂ ತಾಲ್ಲೂಕು ಜಮಾಬಂದಿ, ಹುಜೂರು ಜಮಾಬಂದಿಗಳು ಮಾಮೂಲಾಗಿ ಸಾವಿರಾರು ವರ್ಷಗಳಿಂದ ನಡೆಯುತ್ತಾ ಇರುವ ಹಾಗೆ ಈಗಲೂ ನಡೆಯುತ್ತಾ ಇವೆ. ಜಮಾಬಂದಿ ವೇಳೆಯಲ್ಲಿ ಜಿಲ್ಲೆಯ ಜಿಲ್ಲಾಧಿಕಾರಿಗಳು ಆಯಾಯಾ ಅರ್ಜಿದಾರರಿಗೆ ಅನುಕೂಲವಾಗುವ ರೀತಿಯಲ್ಲಿ ತೀರ್ಮಾನ ಮಾಡತಕ್ಕ ಪರಿಸ್ಥಿತಿ ಇನ್ನೂ ಜಾರಿಗೆ ಬಂದಿಲ್ಲ. ಈ ಪ್ರಜಾ ಸರ್ಕಾರ ಸ್ಥಾಪನೆಯಾಗಿ ಎಂಟು ವರ್ಷಗಳಾದವು. ಪ್ರಜೆಗಳಿಗೆ ಅನುಕೂಲ ಮಾಡಿಕೊಡುತ್ತೇವೆ, ಪ್ರಜೆಗಳೇ ಸರ್ಕಾರದ ಬೆನ್ನುಮೂಳೆ ಎಂದು ಹೇಳುತ್ತಾ ಇದ್ದು ಪ್ರಜೆಗಳಿಂದ ಚುನಾಯಿತರಾದ ನಾವು ಈ ದಿನ ದೇಶವನ್ನು ಆಳುತ್ತಾ ಇರುವಾಗ ಅವರ ಸ್ಥಿತಿಯನ್ನು ಉತ್ತಮ ಪಡಿಸುತ್ತೇವೆ ಎಂದು ಆ ದಿವಸ ಕೊಟ್ಟ ಭರವಸೆಯನ್ನು ಜಾಗ್ರತೆ ಕಾರ್ಯರೂಪಕ್ಕೆ ತರಲು ಪ್ರಯತ್ನಮಾಡಿಲ್ಲ ಎಂದು ವ್ಯಸನದಿಂದ ಹೇಳಬೇಕಾಗಿದೆ.

ಇದುವರೆಗೂ ನಾನಾ ರೀತಿಯಲ್ಲಿ ಸರ್ಕಾರದವರು ಅನುಕೂಲ ಮಾಡಿದ್ದರೂ ಅತ್ಯವಶ್ಯಕವಾಗಿ ರೈತರ ಕಣ್ಣಿಗೆ ಕಾಣತಕ್ಕ ಮತ್ತು ಪ್ರಜೆಗಳ ಕಣ್ಣಿಗೆ ಕಾಣತಕ್ಕ ಅನೇಕ ವಿಷಯಗಳಲ್ಲಿ ಇನ್ನೂ ಉತ್ತಮಪಡಿಸಿಲ್ಲ ಎಂಬ ಅಂಶವನ್ನು ಈ ಸಂದರ್ಭದಲ್ಲಿ ತಿಳಿಸಬೇಕಾಗಿದೆ.

ಒಂದನೆಯದು ಸರ್ಕಾರದವರಲ್ಲಿ ಕೊಡತಕ್ಕ ಅರ್ಜಿ, ರೆವಿನ್ಯೂ ಕಮೀಷನರವರಲ್ಲಿ ಕೊಡತಕ್ಕ ಅರ್ಜಿ, ಡೆಪ್ಯುಟಿ ಕಮೀಷನರವರಲ್ಲಿ ಕೊಡತಕ್ಕ ಅರ್ಜಿ, ತಾಲ್ಲೂಕು ಲೆವಲ್‌ನಲ್ಲಿ ಕೊಡತಕ್ಕ ಅರ್ಜಿ-ಇವುಗಳೆಲ್ಲವೂ ಹತ್ತು ವರ್ಷಗಳಾದರೂ ಕೂಡ ಫೈಸಲಾಗುವುದಿಲ್ಲ. ಅರ್ಜಿ ಕೊಟ್ಟವನಿಗೆ ನಿನ್ನ ಅರ್ಜಿ ಬಂತು, ಈ ರೀತಿ ತೀರ್ಮಾನ ಮಾಡಲಕ್ಕೆ ಮನಸ್ಸುಮಾಡಿದ್ದೇವೆ ಎಂಬ ಒಂದು ಎಂಡಾರ್ಸ್‌ಮೆಂಟ್ ಕೊಡತಕ್ಕ ವ್ಯವಸ್ಥೆ ಇನ್ನೂ ಜಾರಿಗೆ ಬಂದಿಲ್ಲ.

ಇದೆಲ್ಲ ನೋಡಿದರೆ ಹಳೆಯ ಪದ್ಧತಿ ಇನ್ನೂ ಜಾರಿಯಲ್ಲಿದೆ ಎಂದು ತಿಳಿದುಕೊಳ್ಳಬೇಕೇ ವಿನಾ ಹೊಸ ಪದ್ಧತಿಯನ್ನು ಜಾರಿಗೆ ತಂದಿದ್ದೇವೆ ಎನ್ನತಕ್ಕ ವಿಷಯವನ್ನು ಸಂತೋಷವಾಗಿ ಹೇಳುವುದಕ್ಕೇ ಆಗಲಿ, ಪ್ರಜೆಗಳಿಗೆ ಭರವಸೆಯನ್ನು ಕೊಡುವುದಕ್ಕೇ ಆಗಲಿ ಅವಕಾಶ ತಪ್ಪಿದೆ. ನಾವು ಯಾವುದನ್ನು ಉತ್ತಮಪಡಿಸುತ್ತೇವೆಂದು ಪ್ರಜೆಗಳಿಗೆ ಆಶ್ವಾಸನೆಯನ್ನು ಕೊಟ್ಟಿದ್ದೇವೋ ಅದನ್ನು ಉತ್ತಮಪಡಿಸಬೇಕಾದದ್ದು ಮೊದಲನೆ ಕರ್ತವ್ಯ ಎನ್ನುವುದನ್ನು ನಾವುಗಳು ಮರೆಯಬಾರದು.

ಸರ್ಕಾರಿ ನೌಕರರು ಲಂಚರುಷುವತ್ತುಗಳನ್ನು ಪಡೆಯತಕ್ಕ ಪದ್ಧತಿಯನ್ನು ನಿರ್ಮೂಲಮಾಡಲು ಒಂದು ಕಮಿಟಿಯನ್ನು ಮಾಡಿ ಅದಕ್ಕೆ ಒಬ್ಬರು ಅಧ್ಯಕ್ಷರನ್ನು ಮಾಡಿದ್ದೀರಿ. ಆದರೆ ಒಂದು ವಿಷಯ ಹೇಳಬೇಕಾಗಿದೆ. ತಾಲ್ಲೂಕು ಅಮಲ್ದಾರರು ತಿಂಗಳಿಗೆ 20 ದಿವಸ, ಸಬ್ ಡಿವಿಷನ್ ಅಧಿಕಾರಿಗಳು ತಿಂಗಳಿಗೆ 15 ದಿವಸ ಮತ್ತು ಜಿಲ್ಲಾಧಿಕಾರಿಗಳು ತಿಂಗಳಿಗೆ 15 ದಿವಸ ಸಂಚಾರ ಮಾಡಬೇಕು. ಮತ್ತು ಅವರ ಸಂಚಾರ ಕಾಲದಲ್ಲಿ ಜನಗಳ ಕುಂದುಕೊರತೆಗಳನ್ನು ನಿವಾರಣೆಮಾಡಬೇಕು. ಅರ್ಜಿಗಳನ್ನು ಆಯಾ ಸ್ಥಳಗಳಲ್ಲಿಯೇ ಫೈಸಲ್ಮಾಡಬೇಕು. ಹೀಗೆ ಮಾಡಿದರೆ ಲಂಚರುಷುವತ್ತುಗಳ ಹಾವಳಿ ತಪ್ಪಿ ರೈತ ತಾಲ್ಲೂಕು ಆಫೀಸಿಗೆ ತಿರುಗುವ ಕೆಲಸ ತಪ್ಪಿ, ತನ್ನ ಕೆಲಸವನ್ನು ಮಾಡಿಕೊಳ್ಳಲು ಅವಕಾಶವಾಗುತ್ತದೆಂದು ಹೇಳುತ್ತೇನೆ.

ಕಂದಾಯದ ವಸೂಲಿಯ ವಿಚಾರವಾಗಿ ಶ್ರೀ ನರಸಿಂಹರೆಡ್ಡಿಯವರು ಕೆಲವು ವಿಚಾರಗಳನ್ನು ತಿಳಿಸಿದರು. ಕಂದಾಯ ವಸೂಲಾತಿಯ ಸಂಬಂಧದಲ್ಲಿ ಅಮಲ್ದಾರರ ಒತ್ತಡದ ಮೇಲೆ ಪಟೇಲ್ ಶ್ಯಾನುಭೋಗರುಗಳು ರೆವೆನ್ಯೂ ಕಂದಾಯವನ್ನು ಮಾತ್ರ ವಸೂಲ್ಮಾಡುತ್ತಿದ್ದಾರೆ ; ಇನ್ನೂ ಅನೇಕತರಹ ಕಂದಾಯಗಳನ್ನು ವಸೂಲ್ಮಾಡುವುದಕ್ಕೆ ಅವರಿಗೆ ಮನಸ್ಸು ಇರುವುದಿಲ್ಲವೆಂದು ಹೇಳಿ ಇತರ ಕಂದಾಯಗಳನ್ನೂ ಅಂದರೆ ಪಂಚಾಯಿತಿ ಕಂದಾಯಗಳನ್ನೂ ವಸೂಲ್ಮಾಡಬೇಕೆಂದು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಎಲ್ಲೆಲ್ಲಿ ಪಂಚಾಯಿತಿಯವರು ಕಂದಾಯವನ್ನು ವಸೂಲ್ಮಾಡಿ ತಮ್ಮ ಕೆಲಸ ಕಾರ್ಯಗಳನ್ನು ಮಾಡಿಕೊಳ್ಳುತ್ತಿದ್ದಾರೆಯೋ ಅಂಥ ಗ್ರಾಮಗಳಿಗೆ ತಾವು ಕೊಡತಕ್ಕ ಗ್ರಾಂಟುಗಳನ್ನು ಹೆಚ್ಚಿಗೆ ಕೊಟ್ಟು, ಆ ಗ್ರಾಮಗಳ ನೈರ್ಮಲ್ಯ ಮುಂತಾದ ಕೆಲಸಗಳನ್ನು ಮಾಡಿಸಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಸರ್ಕಾರದವರು ಇದುವರೆಗೂ ಹೆಚ್ಚು ಅನುಕೂಲಗಳನ್ನುಮಾಡಿಲ್ಲ. ಪ್ರಜಾ ಸರ್ಕಾರ ಬಂದ ಮೇಲೆ ಯಾವ ರೀತಿ ಆಡಂಬರಗಳಲ್ಲಿ ಕಾಲಕಳೆದಿದ್ದಾರೆನ್ನುವುದು ಅನಾವಶ್ಯಕ. ಕಾಲಕಳೆದಿದ್ದಾರೆ ಎನ್ನುವ ಮಾತುಗಳನ್ನು ಆಡುವುದು ನನಗೆ ಇಷ್ಟವಿಲ್ಲ. ಕಾರಣ ಅಂಥದು ನಡೆದಿಲ್ಲ. ಪ್ರಜಾ ಸರ್ಕಾರ ಬಂದಮೇಲೆ ಹಗಲಿರುಳೂ, ಹೆಚ್ಚು ಕಷ್ಟದಿಂದ ಪ್ರಜೆಗಳ ಸೇವೆಯನ್ನು ಮಾಡಿದ್ದಾರೆ. ಇನ್ನೂ ಆಗಬೇಕಾದ ಕೆಲಸಗಳಿವೆ. ಈಗ 7-8 ವರ್ಷಗಳಿಂದಲೂ ಆಗಿರುವ ಕೆಲಸವನ್ನು ಅಂಕಿಅಂಶಗಳಿಂದ ತೋರಿಸುವುದಕ್ಕೆ ಅವಕಾಶವಿದೆ. ಇದು ಮಾನ್ಯ ಸದಸ್ಯರಿಗೂ ಗೊತ್ತಿರತಕ್ಕ ವಿಚಾರ. ಸಾಧ್ಯವಾದ ಮಟ್ಟಿಗೂ ಪ್ರಜೆಗಳ ಸೇವೆಯನ್ನು ಸಲ್ಲಿಸಿದ್ದಾರೆ. ಮಾಡಬೇಕಾದ ಕೆಲಸ ಇನ್ನೂ ಬಹಳವಿದೆ. ತಾಲ್ಲೂಕು ಅಮಲ್ದಾರರುಗಳು, ಸಬ್ ಡಿವಿಷನ್ ಅಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳು ತಮಗೆ ಇರತಕ್ಕ ಕಾಲಾವಕಾಶವನ್ನು ಸದುಪಯೋಗಪಡಿಸಿಕೊಂಡು ಆಯಾ ಗ್ರಾಮಗಳಲ್ಲಿ ಅವರು ಸಂಚಾರ ಮಾಡುವಾಗ ರೈತರುಗಳು ಸಲ್ಲಿಸತಕ್ಕ ಅರ್ಜಿಗಳನ್ನು ಸ್ಥಳದಲ್ಲಿಯೇ ಫೈಸಲ್ಮಾಡುವುದರಿಂದ ರೈತಾಪಿ ಜನರಿಗೆ ಹೆಚ್ಚಿನ ಉಪಕಾರ ಮಾಡಿದಂತಾಗುತ್ತದೆ. ಇದಕ್ಕಿಂತಲೂ ಹೆಚ್ಚಿನಸೇವೆ ಮಾಡಬೇಕಾದದ್ದು ಇಲ್ಲ.

ಈ ಸಂದರ್ಭದಲ್ಲಿ ನಮ್ಮ ಕೈಗಾರಿಕಾ ಮಂತ್ರಿಗಳಿಗೆ ಸಂಬಂಧಪಟ್ಟ ವಿದ್ಯುಚ್ಛಕ್ತಿಯ ವಿಚಾರವಾಗಿ ಕೆಲವು ವಿಷಯಗಳನ್ನು ಹೇಳಬೇಕಾದ ಪ್ರಮೇಯವಿದೆ. ಅದರ ಬಗ್ಗೆ ಕೆಲವು ವಿಷಯಗಳನ್ನು ತಮ್ಮ ಗಮನಕ್ಕೆ ತರುತ್ತೇನೆ.

ಅಧ್ಯಕ್ಷರು.—ಈಗ ಡಿಮ್ಯಾಂಡಿನಮೇಲೆ ಮಾತ್ರ ಮಾತನಾಡಿ.

ಶ್ರೀ ಎಸ್. ಸಿದ್ದಪ್ಪ.—ಊಟದ ಮಧ್ಯೆ ಉಪ್ಪಿನಕಾಯಿ ಅಂದಹಾಗೆ ಬರುತ್ತದೆ. ಇದರಲ್ಲಿ ಬೇಕಾದ್ದನ್ನು ಕಡತದಲ್ಲಿ ಸೇರಿಸಿಕೊಳ್ಳಿ, ಬೇಡವಾದದ್ದನ್ನು ಬಿಟ್ಟುಬಿಡಿ. ಅದು ಬೇರೆ ವಿಷಯ. (ನಗು) ನಮಗೆ ಬಡ್ಜೆಟ್‌ಮೇಲಿನ ಚರ್ಚೆಯಲ್ಲಿ ಹೆಚ್ಚಿಗೆ ಕಾಲಾವಕಾಶವನ್ನು ಕೊಡದೆ ಕಡಿಮೆ ಅವಕಾಶವನ್ನು ಕಲ್ಪಿಸಿ ನಮ್ಮ ಬೇಡಿಕೆಗಳನ್ನು, ಜನರ ಅನೇಕ ಕೋರಿಕೆಗಳನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಈ ಸನ್ನಿವೇಶವನ್ನು ಉಪಯೋಗಿಸಿಕೊಳ್ಳುತ್ತಿದ್ದೇವೆ.

ತಾಲ್ಲೂಕು ಮಟ್ಟದಲ್ಲಿ, ಸಬ್ ಡಿವಿಜನ್ ಮಟ್ಟದಲ್ಲಿ ಮತ್ತು ಜಿಲ್ಲಾಮಟ್ಟದಲ್ಲಿ ಅರ್ಜಿಗಳೂ ಮತ್ತು ಮನವಿಗಳೂ ಒಂದು ತಿಂಗಳ ಒಳಗಾಗಿ ಫೈಸಲಾಗುವಂತೆ ಮಾಡಿದ ಹೊರತು ಪ್ರಜೆಗಳಿಗೆ ನಾವು ಕೊಟ್ಟ ಆಶ್ವಾಸನೆ ಖಂಡಿತವಾಗಿಯೂ ನೆರವೇರಿದಂತಾಗುವುದಿಲ್ಲ. ಅಮಲ್ದಾರರ ಮತ್ತು ಸಬ್ ಡಿವಿಜನ್ ಅಧಿಕಾರಿ

(ಶ್ರೀ ಎಸ್. ಸಿದ್ದಪ್ಪ)

ಗಳ ವಿಚಾರದಲ್ಲಿ, ಅವರ ಕರ್ತವ್ಯಗಳ ವಿಚಾರದಲ್ಲಿ ಸರ್ಕಾರ ಗಮನ ಕೊಡಬೇಕು.

ಜಮೀನು ವಿಲೇವಾರಿ ವಿಚಾರದಲ್ಲಿ ಸರ್ಕಾರದ ಅನುಮತಿ ಇಲ್ಲದೆ ಗೋಮಾಳ, ಖರಾಬು, ಅರಣ್ಯ ಇವುಗಳಲ್ಲಿ ಜಮೀನನ್ನು ಉಳುಮೆ ಮಾಡತಕ್ಕವರಿಗೆ ಕೊಟ್ಟಿದ್ದಾರೆ ಎಂದು ಮಾನ್ಯ ಮಿತ್ರರೊಬ್ಬರು ಹೇಳಿದರು. ಸರ್ಕಾರದವರು ಇಂಥ ಜಮೀನುಗಳನ್ನು ಪ್ರಜೆಗಳಿಗೆ ನೇರವಾಗಿ, ಅರ್ಜಿಗಳ ಮೂಲಕ, ಒಂದು ನೀತಿಯನ್ನನುಸರಿಸಿ ಬಡಜನರಿಗೂ, ಜಮೀನು ಇಲ್ಲದವರಿಗೂ ಹಂಚಿ ಅವರು ಕಷ್ಟಪಡುವುದನ್ನು ನಿವಾರಣೆಮಾಡಬೇಕೆಂದೂ, ಇದನ್ನು ಕಾರ್ಯರೂಪಕ್ಕೆ ತರುವುದರಲ್ಲಿ ನಿಧಾನಮಾಡಬಾರದೆಂದೂ ಹೇಳುತ್ತೇನೆ. ಇನಾಂ ಮತ್ತು ಜೋಡಿ ಗ್ರಾಮಗಳಿಗೆ ಸಂಬಂಧಪಟ್ಟ ಕಾನೂನನ್ನು ಕಾರ್ಯರೂಪಕ್ಕೆ ತಂದಿಲ್ಲ. ಇದು ಕೂಡಲೇ ಜಾರಿಗೆ ಬರಬೇಕು. ಈ ಸಂಬಂಧದಲ್ಲಿ ಆಗಬೇಕಾದ ಎಲ್ಲ ಅನುಕೂಲಗಳನ್ನೂ ಕಲ್ಪಿಸಲಾಗಿದೆ. ಇದನ್ನು ಜಾರಿಗೆ ತಂದು ಪ್ರಜೆಗಳಿಗೆ ಪ್ರಯೋಜನವಾಗುವ ರೀತಿಯಲ್ಲಿ ಕಷ್ಟಪಡತಕ್ಕ ಜನಗಳಿಗೆ ಅನುಕೂಲ ಮಾಡಿಕೊಡಬೇಕು ಎಂದು ಹೇಳುತ್ತೇನೆ. ಅಧ್ಯಕ್ಷರು ಬಹಳ ಆತುರರಾಗಿದ್ದಾರೆ. ನನಗೆ ಕೊಟ್ಟಿರುವ ಕಾಲಾವಕಾಶ ಸಾಲದು. ಮತ್ತೊಮ್ಮೆ ಅವಕಾಶ ಕೊಡಬೇಕೆಂದು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ. ಅಧ್ಯಕ್ಷರು ಇಷ್ಟು ಮಾತ್ರ ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ನನ್ನ ಕೃತಜ್ಞತೆಯನ್ನು ಸಲ್ಲಿಸುವುದಕ್ಕೆ ಅಪ್ಪಣೆಬೇಡುತ್ತೇನೆ.

ಶ್ರೀ ಬಿ. ಟಿ. ಕೆಂಪರಾಜ್ (ಬೆಂಗಳೂರು ದಕ್ಷಿಣ—ಅನುಸೂಚಿತ ಜಾತಿಗಳು).—ಸ್ವಾಮಿ, ಸಭೆಯ ಮುಂದೆ ಇಟ್ಟಿರತಕ್ಕ ಈ ಡಿಮ್ಯಾಂಡಿನ ವಿಚಾರವಾಗಿ ಒಂದೆರಡು ಅಂಶಗಳನ್ನು ಪ್ರಸ್ತಾಪಿಸಬೇಕು ಎಂದು ನಿಂತಿದ್ದೇನೆ. ಮುಖ್ಯವಾಗಿ ಪಟೇಲರ ಮತ್ತು ಶ್ಯಾನುಭೋಗರ ವಿಚಾರವಾಗಿ ಬಹಳ ದಿವಸಗಳಿಂದಲೂ ಈ ಸಭೆಯ ಮುಂದೆ ಶ್ರೀ ಬೈರೇಗೌಡರೂ ನಾನೂ ಪ್ರಸ್ತಾಪಮಾಡುತ್ತ ಬಂದಿದ್ದೇವೆ. ಪಟೇಲರು ಮತ್ತು ಶ್ಯಾನುಭೋಗರೂ ವಂಶಪಾರಂಪರ್ಯವಾಗಿ ಅನುಭವಿಸಿಕೊಂಡು ಬರುತ್ತಿದ್ದಾರೆ. ಪಟೇಲರು ಮತ್ತು ಶ್ಯಾನುಭೋಗರಿಗೆ ಕೊಡತಕ್ಕ ಪೋಟಿಗೆ ಬಹಳ ಕಡಿಮೆ ಮತ್ತು ಅವರಿಂದ ಆಗಾಗ ನಿರೀಕ್ಷಿಸತಕ್ಕ ಕೆಲಸ ಬಹಳ ಅಗಾಧವಾಗಿ ಹೆಚ್ಚಾಗುತ್ತಿದೆ. ಅನೇಕ ಪಟೇಲರು ಶ್ಯಾನುಭೋಗರುಗಳಿಗೆ ಪೋಟಿಗೆಯನ್ನು ಕೊಡುವುದಕ್ಕೆ ಕೂಡ ತೊಂದರೆ ಕೊಡುತ್ತಿದ್ದಾರೆ. ಪೋಟಿಗೆ ಕೊಡದೆ ಇದ್ದರೆ ಕಂದಾಯವನ್ನು ವಸೂಲು ಮಾಡುವ ವಿಷಯದಲ್ಲಿ ಸರಿಯಾದ ಜವಾಬ್ದಾರಿಯನ್ನು ವಹಿಸುವುದಿಲ್ಲ. ಹೀಗಾಗಿ ಇಲಾಖೆಗೆ ಬರತಕ್ಕ ಕಂದಾಯವೇನಿದೆ ಅದು ಬಹಳ ಬಾಕಿನಿಲ್ಲುತ್ತಿದೆ. ಇದು ಸರ್ಕಾರಕ್ಕೂ ಗೊತ್ತಿದೆ, ಎಲ್ಲರಿಗೂ ಗೊತ್ತಿದೆ. ಇದನ್ನು ತಪ್ಪಿಸಬೇಕಾದ ಪಕ್ಷದಲ್ಲಿ, ಅವರು ಮಾಡತಕ್ಕ ಕೆಲಸದಲ್ಲಿ ಹೆಚ್ಚಿನ ಜವಾಬ್ದಾರಿ ಮತ್ತು ಹೆಚ್ಚಿನ ನಿಗಾ ವಹಿಸಬೇಕಾದ ಪಕ್ಷದಲ್ಲಿ ಶ್ಯಾನುಭೋಗರು ಮತ್ತು ಪಟೇಲರುಗಳಿಗೆ ನಿಗದಿಯಾದ ಸಂಬಳ ಕೊಟ್ಟು ನೇಮಕ ಮಾಡತಕ್ಕದ್ದು ಸೂಕ್ತ. ಯಾಕೆಂದರೆ ಮದರಾಸು ಮುಂತಾದ ಕಡೆಗಳಲ್ಲಿ ಪಟೇಲರು ಮತ್ತು ಶ್ಯಾನುಭೋಗರುಗಳಿಗೆ, ಗ್ರಾಮ ಅಧಿಕಾರಿಗಳಿಗೆ ಸಂಬಳವಿದೆ ಎಂದು ನಾನು ತಿಳಿದುಕೊಂಡಿದ್ದೇನೆ ಅಲ್ಲದೆ ದಿನೇ ದಿನೇ ಹೆಚ್ಚುತ್ತ ಇರತಕ್ಕ ವಿದ್ಯಾವಂತರ ಸಂಖ್ಯೆ ಮತ್ತು ಅವರ ನಿರುದ್ಯೋಗ ಸಮಸ್ಯೆಯನ್ನು ಪರಿಹಾರ ಮಾಡಬೇಕಾದರೆ ಇದು ಬಹಳ ಜರೂರಾಗಿ ಯೋಚನೆ ಮಾಡಬೇಕಾದ ವಿಚಾರ. ವಿದ್ಯಾವಂತರಾದ ಯುವಕರನ್ನು ಈ ಕೆಲಸಗಳಿಗೆ ನೇಮಿಸುವುದರಿಂದ ಹೆಚ್ಚಿನ ಅನುಕೂಲ ಆಗುತ್ತದೆ ಸಾವಿರಾರು ವರ್ಷಗಳಿಂದ ನಡೆಸಿಕೊಂಡು ಬಂದಿರುವ ಈ ಪದ್ಧತಿಯಲ್ಲಿ ಹೊಸ ರೂಪನ್ನು ತರಬಹುದು ಆದುದರಿಂದ ಸರ್ಕಾರದವರು ಪಟೇಲರು ಮತ್ತು ಶಾನುಭೋಗರು ಇವರುಗಳಿಗೆ ಸಂಬಳವನ್ನು ಕೊಡತಕ್ಕದ್ದು ಮತ್ತು ಈ ಕೆಲಸಗಳಿಗೆ ಬರತಕ್ಕ ಉಮೇದವಾರರು ಕಡೆಯಪಕ್ಷ S. S. L. C. ಆದರೂ ತೇರ್ಗಡೆ ಹೊಂದಿರಬೇಕು. ಎಂಬ ನಿಬಂಧನೆಗಳನ್ನು ಹಾಕುವುದು ಸೂಕ್ತವೆಂದು ನಾನು ಭಾವಿಸುತ್ತೇನೆ.

ಎರಡನೆಯದಾಗಿ, ಈಗಾಗಲೇ ಕೆಲವು ಮಾನ್ಯ ಸದಸ್ಯರು ಹೇಳಿದ್ದಾರೆ. ತಾಲ್ಲೂಕು ಆಫೀಸುಗಳಲ್ಲಿ ನಡೆಯತಕ್ಕ ಕೆಲಸ ಕಾರ್ಯಗಳೇನಿವೆ ಅವು ಅಷ್ಟು ಚುರುಕಾಗಿ ಮತ್ತು ಜಾಗ್ರತೆಯಾಗಿ ಆಗುತ್ತಿಲ್ಲ. ಇದಕ್ಕೆ ಕಾರಣವೇನು ಎನ್ನುವುದು ಗೊತ್ತಾಗುತ್ತಿಲ್ಲ. ಕೆಲವು ಆಫೀಸುಗಳಲ್ಲಿ ನಾವು ಎಷ್ಟೋಬಾರಿ ಹೋಗಿ ಕೆಲಸಗಳು ಆಗಬೇಕು ಎಂದು ಒತ್ತಾಯ ಮಾಡಿದರೂ ಸಹ ಆ ರಿಕಾರ್ಡುಗಳು ಈಚೆಗೆ ಬರುವುದೇ ಇಲ್ಲ. ಅರ್ಜಿಗಳನ್ನು ಕೊಟ್ಟಿದ್ದ ಪಕ್ಷದಲ್ಲಿ ಕೆಲವು ಅರ್ಜಿಗಳು ಇರುವುದೇ ಇಲ್ಲ. ಅರ್ಜಿಗಳ ಬಗ್ಗೆ ಆಫೀಸುಗಳಲ್ಲಿ ರೈತರಿಗೆ ಯಾವ ಬಗೆಯ ದಾಖಲಾತಿಗಳೂ ಸಹ ಸಿಕ್ಕುವುದಿಲ್ಲ. ಆದುದರಿಂದ ಯಾವಾಗಲೂ ಒಬ್ಬ ರೈತನೇ ಆಗಲ, ಯಾರೇ ಆಗಲ, ಅಧಿಕಾರಿಗಳಿಗೆ ಅರ್ಜಿಕೊಟ್ಟ ತಕ್ಷಣ ಅವರಿಗೆ ಒಂದು acknowledgement ಕೊಡತಕ್ಕ ವ್ಯವಸ್ಥೆಯನ್ನು ಮಾಡತಕ್ಕದ್ದು ಸೂಕ್ತವೆಂದು ನಾನು ಭಾವಿಸಿಕೊಂಡಿದ್ದೇನೆ. ಹಾಗೆಯೇ ಡೆಪ್ಯುಟಿಕಮೀಷನರ ಆಫೀಸನ್ನು ತೆಗೆದುಕೊಂಡರೆ ಯಾವ ಒಂದು ರೆಕಾರ್ಡ್ ಆಗಲೀ ವರ್ಷಾನುಗಟ್ಟಲೆ ಕೊಳೆಯುತ್ತ ಕುಳಿತಿರುತ್ತದೆ. ರೈತರು ಅವರು ಮಾಡಬೇಕಾದ ಕೆಲಸಗಳನ್ನು ಬಿಟ್ಟು ಬಿಟ್ಟು ಪ್ರತಿಯೊಂದು ಆಫೀಸಿನಲ್ಲೂ ಇರುವ ಗುಮಾಸ್ತರ ಮೇಜುಗಳ ಬಳಿಯಲ್ಲಿ ಬೆಳಿಗ್ಗೆ 11 ಘಂಟೆಯಿಂದ ಸಾಯಂಕಾಲ $5\frac{1}{2}$—6 ಘಂಟೆಗಳ ವರೆಗೂ ಕಾಯಬೇಕು. ಈ ರೀತಿಯಾಗಿ ಕೆಲಸಗಳು ನಡೆಯುವುದರಿಂದ ರೈತರಿಗೆ ಅನಾನುಕೂಲವಾಗುವುದರ ಜೊತೆಗೆ, ಅವರು, ಮಾಡತಕ್ಕ ಪ್ರತಿದಿನದ ಕೆಲಸಕಾರ್ಯಗಳಿಗೆ ಹೆಚ್ಚಿನ ಅನಾನುಕೂಲವಾಗುತ್ತದೆ ಮತ್ತು ರೈತರಿಗೆ ಬಹಳ ತೊಂದರೆಯಾಗುತ್ತದೆ. ಇದನ್ನು ತಪ್ಪಿಸುವುದು ಬಹಳ ಅವಶ್ಯಕ. ಅದಕ್ಕೋಸ್ಕರವಾಗಿ ಯಾವ ಒಂದು ಅರ್ಜಿಯಾಗಲಿ. ಕಡೆಪಕ್ಷ ಒಂದು ತಿಂಗಳಿಗಿಂತಲೂ ಹೆಚ್ಚು ಕಾಲ ಯಾವ ಆಫೀಸಿನಲ್ಲಿಯೂ ನಿಲ್ಲಬಾರದು. ಯಾವುದಾದರೂ ಆಫೀಸನ್ನು ಬಿಟ್ಟ ತಕ್ಷಣ, ಸಂಬಂಧಪಟ್ಟ ವ್ಯಕ್ತಿಗಳಿಗೆ ಅವರ ಅರ್ಜಿಗಳ ಬಗ್ಗೆ ಯಾವ ಕಾರ್ಯಕ್ರಮವನ್ನು ಇಲಾಖೆಯವರು ತೆಗೆದುಕೊಂಡಿದ್ದಾರೆನ್ನುವುದನ್ನು ತಿಳಿಯಪಡಿಸಲು ಒಂದು ತಿಳಿವಳಿಕೆ ನೋಟೀಸನ್ನು ಕೊಡತಕ್ಕದ್ದು ಅತ್ಯಾವಶ್ಯಕವೆಂದು ನಾನು ಈ ಸಭೆಯ ಮುಂದೆ ಹೇಳುತ್ತೇನೆ.

Sri Mulka GOVINDA REDDY (Chitaldrug).—Mr. Speaker Sir, I oppose this Demand for Rs. 61,88,000. This tax on land is an out-moded tax. It is neither rational nor scientific. It does not vary with the prospects of the raiyat or with the famine conditions. Sir, this tax should be abolished, and a more rational and

scientific tax such as a tax on agricultural incomes should be introduced. Many a time, the owners of land will be asked to pay this tax though the profession that they are pursuing is profitless. Many a time, water cess is collected for the atchkat under a tank though that particular tank does not receive water for a number of years.

I, therefore, urge that this should be done away with. Sir, for the progress of any underdeveloped country and an agricultural country, the policy that a Government pursues regarding the land should be the criterian to judge that. I am sorry to say that the Congress Government has not pursued any rational or radical policy. They are pursuing the same outmoded policy. The very limited measure that the Government wanted to bring in by way of Second Amendment to the Tenancy law in Mysore does not seem to have come out of the shelves of the Government. I think it must be hiding somewhere in the forests of Hunsur or Periyapatna. This Government does not seem to be serious even with a measure which is intended to give some benefits to the tenants. Sir, as I said, the policy that we pursue regarding the ceiling limit on land and distribution of land to the landless determines the progress we aim at or the targets we ought to achieve. We have been pressing for the last eight years that the Government should bring in a comprehensive legislation regarding the problem of land. The land is concentrated in the hands of a few and most of them are absentee landlords; those that own extensive land do not cultivate them nor do they evince much interest in the cultivation of those lands. So much so the land is not yielding as much as we desire it to. If we compare the yield in India with that of other countries, it is not even one third; in some places, it is not even one fourth. The agriculture labour class have no interest in the land. Their sweat is utilised for the well being and the luxurious living of the landlords. Unless the tiller of the soil is made to feel that he is producing for the good of the country, he will not evince any interest in the cultivation. What he is paid is only the wage for the labour power that he gives. This policy should undergo a radical change. I urge that Government should bring a comprehensive legislation where the tillers of the soil are made the owners of the land.

Sir, with regard to the distribution of land to the landless the policy followed by the Government is more in favour of the so called political sufferers. Sir, it is a crime to claim lands for the sacrifice they made. If they claim anything in return to the sacrifice they made, then the sacrifice they made will have no value. They should also be treated with other landless people and there should not be any discrimination in the matter of distribution of land to the landless. I earnestly urge that this policy of giving priority to the political sufferers in the matter of distributing land should be discontinued as it is inconsistent with the policy we have laid down for this country.

ಶ್ರೀ ಟಿ. ಎಸ್. ಮೂಡಲಗಿರಿಗೌಡ (ಕುಣಿಗಲು).—ಸ್ವಾಮಿ, ಈ ಸಂಸ್ಥಾನದ ಕಂದಾಯದ ಲೆಕ್ಕ ಪತ್ರಗಳನ್ನಿಡತಕ್ಕದ್ದು, ಪಂಚಾಯಿತಿ ಲೆಕ್ಕಪತ್ರಗಳನ್ನಿಡತಕ್ಕದ್ದು, ಪಂಚಾಯಿತಿ ಹಣದ ವಸೂಲಿ ಇಂಥ ಕೆಲಸಗಳನ್ನೆಲ್ಲಾ ಪಟೇಲ ಶ್ಯಾನುಭೋಗರಿಗೆ ವಹಿಸಲಾಗಿದೆ; ಇಷ್ಟೊಂದು ದೊಡ್ಡ ಜವಾಬ್ದಾರಿ ಹೊತ್ತಿರುವ ಪಟೇಲ ಶ್ಯಾನುಭೋಗರು ಲೆಕ್ಕಪತ್ರ ಇಡುವುದಕ್ಕೆ ಮತ್ತು ಜನಗಳಿಗೆ ತಿಳುವಳಿಕೆ ಕೊಡುವುದಕ್ಕೆ ಯಾವ ಒಂದು ಟ್ರೈನಿಂಗ್ ಕ್ಲಾಸನ್ನೂ ಇಟ್ಟಿಲ್ಲ. ಪಟೇಲ ಶ್ಯಾನುಭೋಗರುಗಳಿಗಾಗಲಿ ಅಥವಾ ಪಂಚಾಯಿತಿ ಸೆಕ್ರೆಟರಿಗಳಿಗಾಗಲಿ ಯಾವ ರೀತಿಯಲ್ಲೂ ಟ್ರೈನಿಂಗನ್ನು ಕೊಡತಕ್ಕ ಒಂದು ಏರ್ಪಾಡನ್ನು ಸರ್ಕಾರದವರು ಇದುವರೆಗೂ ಮಾಡಿಲ್ಲ. ಅನೇಕ ಸಂದರ್ಭಗಳಲ್ಲಿ ಪಟೇಲರು, ಶ್ಯಾನುಭೋಗರು, ಮತ್ತು ಸೆಕ್ರೆಟರಿಗಳಿಗೆ ಲೆಕ್ಕ ಪತ್ರಗಳನ್ನಿಡತಕ್ಕ ವಿಚಾರದಲ್ಲಿ ಒಬ್ಬರಿಗೊಬ್ಬರಿಗೆ ವಿನಿಮಯವಿರುವುದಿಲ್ಲ. ಯಾವ ಲೆಕ್ಕಕ್ಕೆ ರುಜು ಮಾಡಿದೆ, ಯಾವ ಲೆಕ್ಕ ಬರೆಯಬೇಕಾಗಿತ್ತು ಎಂಬುದುಕೂಡ ಗೊತ್ತಿಲ್ಲದೆ ಅನೇಕ ತಪ್ಪಿತಗಳಿಗೆ ಮತ್ತು ಕಷ್ಟಗಳಿಗೆ ಅವರು ಒಳಗಾಗಿದ್ದಾರೆ. ಇದು ಬಹಳ ಪ್ರಾಮುಖ್ಯವಾದಂಥ ವಿಷಯ. ಈಗ ಪಂಚಾಯಿತಿ ಜನರಲ್ ಎಲೆಕ್ಷನ್ ನಡೆದಿದೆ. ಪಂಚಾಯಿತಿ ಲೆಕ್ಕಪತ್ರ ಇಡುವುದು, ಪಂಚಾಯಿತಿ ಕೆಲಸ ಚೆನ್ನಾಗಿ ನಡೆಸುವುದು ಪಂಚಾಯಿತಿಗಳಿಗೆ ಸೇರಿದ್ದಾಗಿದೆ. ಲೆಕ್ಕ ಪತ್ರ ಹೇಗಿಡಬೇಕು ಮತ್ತು ಹೇಗೆ ಜನರಿಗೆ ತಿಳುವಳಿಕೆ ಕೊಡಬೇಕು ಎಂಬ ವಿಷಯವೇ ಅವರಿಗೆ ಗೊತ್ತಿಲ್ಲದೆ ಹೋದರೆ 17 ಸಾವಿರ ಗ್ರಾಮಗಳ ಅಥವಾ 15 ಸಾವಿರ ಪಂಚಾಯಿತಿಗಳ ಆಡಳಿತವನ್ನು ಹೇಗೆ ನಡೆಸತಕ್ಕದ್ದು ಎಂಬುದೇ ತಿಳಿಯದಾಗಿದೆ. ಸರ್ಕಾರದವರು ಈ ವಿಷಯವನ್ನು ತೀವ್ರವಾಗಿ ಆಲೋಚಿಸಬೇಕು. ಕಂದಾ

(ಶ್ರೀ ಟಿ. ಎನ್. ಮೂಡಲಗಿರಿಗೌಡ)

ಯದ ಬಾಕಿ ಎಷ್ಟಿದೆ, ಜಮೀನು ಹಕ್ಕುಬಾದ್ಯತೆ ಯಾವ ಸ್ಥಿತಿಯಲ್ಲಿದೆ ಎಂದು ಕೇಳಿದರೆ ಹೇಳುವುದಕ್ಕೇ ಅವರಿಗೆ ಶಕ್ತಿಯಿಲ್ಲ. ಪಟೇಲರಿಗೆ ಗೊತ್ತಿರುವ ಲೆಕ್ಕ ಶ್ಯಾನುಭೋಗರಿಗೆ ಗೊತ್ತಿರುವುದಿಲ್ಲ, ಶ್ಯಾನುಭೋಗರಿಗೆ ಗೊತ್ತಿರುವುದು ಪಟೇಲರಿಗೆ ಗೊತ್ತಿರುವುದಿಲ್ಲ. ಶ್ಯಾನುಭೋಗರು ಬರೆದ ಲೆಕ್ಕಕ್ಕೆ ಪಟೇಲರು ರುಜುಮಾಡಿ ತಾಲ್ಲೂಕು ಆಫೀಸುಗಳಲ್ಲಿ ಸಿಕ್ಕಿಕೊಂಡಿರುವ ಸನ್ನಿವೇಶಗಳು ಬೇಕಾದಷ್ಟಿವೆ. ಜಮೀನುಗಳನ್ನು ಹೇಗೆ ಹಂಚಿಕೊಳ್ಳಬೇಕು, ವಿಸ್ತೀರ್ಣ ನಿರ್ಣಯ ಮಾಡುವುದು ಎಂಬುದು ಕೂಡ ಪಟೇಲ ಶ್ಯಾನುಭೋಗರುಗಳಿಗೆ ಗೊತ್ತಿಲ್ಲ. ಮದರಾಸು, ಬೊಂಬಾಯಿ ಮತ್ತು ಇತರ ಪ್ರಾಂತಗಳಲ್ಲಿ ಈ ವಿಲೇಜ್ ಅಕೌಂಟ್ಸ್ ಮತ್ತು ರೈತರಿಗೆ ಸಂಬಂಧಪಟ್ಟ ಎಲ್ಲ ವಿಷಯಗಳಲ್ಲಿಯೂ ಕೂಡ ವಿಲೇಜ್ ಆಫೀಸರು ತಿಳಿವಳಿಕೆ ಕೊಡುವ ಟ್ರೈನಿಂಗ್ ಕೊಟ್ಟು ನೌಕರರು ಯಾವ ವಿಧದಲ್ಲೂ ಬೇರೆ ಆಫೀಸರುಗಳನ್ನು ಅಪ್ರೋಚ್ ಮಾಡದಿರುವ ಸನ್ನಿವೇಶವನ್ನು ಕಲ್ಪಿಸಿದ್ದಾರೆ. ಪಟೇಲ ಶ್ಯಾನುಭೋಗರುಗಳಿಗೆ ಕ್ವಾಲಿಫಿಕೇಷನ್ಸ್ ಕೂಡ ಅಗತ್ಯ. ಲೆಕ್ಕ ಬರೆಯುವುದಕ್ಕೆ ಬರುತ್ತದೆಯೋ, ಇಲ್ಲವೆ ಎಂದು ತಿಳಿಯದೆ ಅವರಿಗೆ ಅಧಿಕಾರ ವಹಿಸುವುದು ಸರಿಯಲ್ಲ ಹಾಗೆ ವಹಿಸಬೇಕಾದರೆ ಮೊದಲು ಟ್ರೈನಿಂಗ್ ಕೊಡಬೇಕು. ಬರೀ ಪಟೇಲ ಶ್ಯಾನುಭೋಗರುಗಳು ಲೆಕ್ಕಪತ್ರ ತಿಳಿದುಕೊಂಡರೆ ಸಾಲದು, ಸಾಮಾನ್ಯ ಜನರಿಗೂಕೂಡ ಈ ಲೆಕ್ಕಪತ್ರವೇನು, ಹೇಗೆ ಬರೆಯುತ್ತಾರೆ, ಅದರಲ್ಲೇನು ತಿಳಿದುಕೊಳ್ಳಬೇಕಾದ ವಿಷಯವಿದೆ ಎಂಬುದು ಗೊತ್ತಾಗುವ ರೀತಿಯಲ್ಲಿ ಲೆಕ್ಕಪತ್ರವಿರಬೇಕು. ಇದು ಬಹಳ ಕಾನ್‌ಫಿಡೆನ್ಷಿಯಲ್ ಎನ್ನುವಹಾಗಾಗಬಾರದು. ಆಧಾರ, ಭೋಗ್ಯ ಕಾಗದಪತ್ರ ಬರೆಸಿಕೊಳ್ಳಬೇಕಾದರೆ ಪಟೇಲ ಶ್ಯಾನುಭೋಗರನ್ನು ಆಶ್ರಯಮಾಡಿ ಅನೇಕ ಸಂದರ್ಭಗಳಲ್ಲಿ ತಮ್ಮ ಅಸ್ತಿತ್ವವನ್ನೆಲ್ಲಾ ಕಳೆದುಕೊಳ್ಳುವಂತಿರಬಾರದು. ಪಂಚಾಯಿತಿ ಲೆಕ್ಕಪತ್ರಗಳ ಆಡಿಟ್ ಆಗಿಲ್ಲ. ಚುನಾವಣೆ ನಡೆದು ವೈಷಮ್ಯ ಜಾಸ್ತಿಯಾಗಿದೆ. ಲೆಕ್ಕಪತ್ರ ಸರಿಯಾಗಿಟ್ಟು ಜವಾಬ್ದಾರಿಯುತವಾದ ಆಡಳಿತವನ್ನು ನಡೆಸಬೇಕೆಂಬ ಮಾರ್ಗ ಗೊತ್ತಿಲ್ಲದೆ ಈ ದಿವಸ ಪಂಚಾಯಿತಿಗಳಲ್ಲಿ ಕೆಲಸಕಾರ್ಯಗಳು ನಿಂತುಹೋಗಿವೆ ಇದಕ್ಕೆ ಸರ್ಕಾರ ಒಂದು ಏರ್ಪಾಡು ಮಾಡಬೇಕು. ಈ ರೀತಿ ಮಾಡತಕ್ಕದ್ದು ಅಗತ್ಯವಾಗಿದೆ. ಇದು ಬಹಳ ಉಪಯುಕ್ತವಾದ ಕೆಲಸ. ಇಂಥ ದೊಡ್ಡ ಜವಾಬ್ದಾರಿಯನ್ನು ಹೊತ್ತಿರುವ ಸಂಸ್ಥೆಯ ಕೆಲಸ ಮಾಡುವವರಿಗೆ ಸರ್ಕಾರ ಯಾವ ತಿಳಿವಳಿಕೆಯನ್ನೂ ಕೊಟ್ಟಿಲ್ಲ. ಯಾವುದೋ ಕಾಲದಿಂದ ವಂಶಪಾರಂಪರ್ಯವಾಗಿ ನಡೆಸಿಕೊಂಡು ಬರುತ್ತಿರುವ ಪದ್ಧತಿ ಮುಂದುವರಿಯುತ್ತಿದೆ. ಅವರಿಗೆ ಸರ್ಕಾರ ಶಿಕ್ಷಣ ಕೊಟ್ಟಿಲ್ಲ. ಆದ್ದರಿಂದ ಸರ್ಕಾರದವರು ಈಗಲಾದರೂ ಟ್ರೈನಿಂಗ್ ಕೊಡಲು ಏರ್ಪಾಡು ಮಾಡಬೇಕು. ಅದರಿಂದ ಸರ್ಕಾರಕ್ಕೆ ಸಹಾಯವಾಗುವುದೂ ಅಲ್ಲದೆ ಜನರಿಗೆ ಕೂಡ ಹೆಚ್ಚು ಪ್ರಯೋಜನವಾಗುತ್ತದೆ ಎಂದು ನಾನು ಅದನ್ನು ಒತ್ತಾಯ ಮಾಡುತ್ತೇನೆ.

Mr. SPEAKER.—I want to bring it to the notice of the House that because we had not much time for the general discussion on the Budget, I think there should be no time restriction to-day or tomorrow. Of course, with the concurrence of the House, I want to extend the time from 12-30 P.M. to 1-30 P.M. I want to cite the relevant rule so that no points of order are raised. According to rule 124 (2) it is not obligatory on my part to put all the Demands to vote at 12-30 P.M. Since we have come to some arrangement, we can extend the time and then put the Demands to vote.

SOME HON'BLE MEMBERS.—1 o'clock would be all right.

Mr. SPEAKER.—We shall see.

ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—ಸ್ವಾಮಿ, ನಮ್ಮ ಮೈಸೂರು ಸಂಸ್ಥಾನದಲ್ಲಿ ಇನಾಂ ರದ್ದಿಯಾತಿ ಮಸೂದೆ ಶಾಸನ ಸಭೆಗಳ ಅಂಗೀಕಾರ ಮುದ್ರೆಯನ್ನು ಪಡೆದು ಇಲ್ಲಿಗೆ ಸುಮಾರು ಎರಡು ವರ್ಷಗಳ ಮೇಲಾಯಿತು. ಆದರೆ ನಮ್ಮ ಬಡ ರೈತರ ದುರದೃಷ್ಟದಿಂದ ಸರ್ಕಾರದವರು ಆ ಆಕ್ಟನ್ನು ಇನ್ನೂ ಜಾರಿಗೆ ಕೊಡದೆ ಹಾಗೆಯೇ ಅದನ್ನು ಮೂಲೆಗಿಟ್ಟಿದ್ದಾರೆ. ಹೀಗೆ ಈ ಆಕ್ಟ್ ಮೂಲೆಯನ್ನು ಸೇರಿದ್ದರಿಂದ ಆ ರೈತರ ಮೇಲೆ ಇತ್ತೀಚೆಗೆ ಅನೇಕ ದುಷ್ಪರಿಣಾಮಗಳುಂಟಾಗಿರುತ್ತವೆ. ಸುಮಾರು ನೂರಾರು ವರ್ಷಗಳಿಂದಲೂ ವ್ಯವಸಾಯ ಮಾಡಿಕೊಂಡು ಬಂದಿದ್ದಂಥ ಅನೇಕ ಖದೀಂ ರೈತರು, ಸರ್ಕಾರದವರು ಈ ಕಾನೂನನ್ನು ಸಕಾಲದಲ್ಲಿ ಜಾರಿಗೆ ತಾರದೆಹೋದಕಾರಣದಿಂದ, ಅವರ ವಶದಲ್ಲಿದ್ದಂಥ ಜಮೀನುಗಳನ್ನು ಈಗಾಗಲೇ ಅನೇಕರು ಕಳೆದುಕೊಂಡಿದ್ದಾರೆ; ಇನ್ನೂ ಅನೇಕರು ಸದ್ಯದಲ್ಲೇ ಅವರ ಭೂಮಿಯನ್ನೂ ಸಹ ಕಳೆದುಕೊಳ್ಳುವುದರಲ್ಲಿದ್ದಾರೆ. ಈ ಒಂದು ನಿದರ್ಶನವನ್ನು ನಾವು ಗಮನಿಸಿ ನೋಡಿದ್ದಾದರೆ ಇಂದಿನ ಸರ್ಕಾರದವರು ದೇಶಕ್ಕೆ ಎಷ್ಟು ಉತ್ತಮವಾದ ಕಾರ್ಯಗಳನ್ನು ಮಾಡುತ್ತಿದ್ದಾರೆ, ಈ ಭೂಸುಧಾರಣೆ ಎನ್ನತಕ್ಕಂಥ ಒಂದು ದೊಡ್ಡ ಪ್ರಶ್ನೆಯ ಬಗ್ಗೆ ಇವರಿಗೆ ಎಷ್ಟರಮಟ್ಟಿಗೆ ಶ್ರದ್ಧೆ-ಆಸಕ್ತಿಗಳಿರುತ್ತವೆ, ಇದನ್ನು ಜಾರಿಗೆ ತರುವುದರಲ್ಲಿ ಇವರಿಗೆ ಎಷ್ಟು ತಾತ್ಸಾರ ಮನೋಭಾವವಿದೆ ಎನ್ನುವುದನ್ನು ಮತ್ತೆ ವರ್ಣಿಸಬೇಕಾಗಿದ್ದಿಲ್ಲ ಎಂಬ ಅಂಶವನ್ನು ಸೂಚಿಸಲು ನಾನು ಬಹಳ ವಿಷಾದಪಡುತ್ತೇನೆ. ಈ ಹಿಂದೆ ನಾನು ಈ ಸಂಬಂಧವಾಗಿ ಒಂದು ಪ್ರಶ್ನೆಯನ್ನೇ ಈ ಸಭೆಯ ಕಾರ್ಯ ನಡೆವಳಿಕೆಗಳಲ್ಲಿ ಸೇರಿಸಿ ಕಳುಹಿಸಿದ್ದೆನು. ಆಲೂರು ಮತ್ತು ಅರಕಲಗೂಡು ತಾಲ್ಲೂಕುಗಳಲ್ಲಿ ಆ ಜಿಲ್ಲೆಯ ಡೆಪ್ಯುಟಿ ಕಮೀಷನರ್ ಅವರ ಅನುಮತಿಯಿಲ್ಲದೇನೇ ಅಲ್ಲಿಯ ಜೋಡೀದಾರರೂ ಮತ್ತು ಇನಾಂದಾರರೂ ಹೇಗೆ ನೂರಾರು ಜನ ರೈತರಿಂದ ಅವರ ವಶದಲ್ಲಿದ್ದ ಜಮೀನುಗಳನ್ನು ಇತರರಿಗೆ ಪರಭಾರೆ ಮಾಡಿರುತ್ತಾರೆಂಬ ವಿಚಾರವನ್ನು ಅಡಕಗೊಳಿಸಿ ಆ ಪ್ರಶ್ನೆಯನ್ನು ಕಳುಹಿಸಿದ್ದೆನು. ಏತಕ್ಕೆಂದರೆ ಈ ದಿವಸ ಅಲ್ಲಿರತಕ್ಕಂಥ ಇನಾಂದಾರರೂ ಮತ್ತು ಜೋಡೀದಾರರೂ ಆ ಜಿಲ್ಲೆಯ ಜಿಲ್ಲಾಧಿಕಾರಿಗಳ ಅಪ್ಪಣೆಪಡೆಯದೆ ಹಾಗೆಯೇ ನೂರಾರು ಜನ ರೈತರ ಜಮೀನನ್ನು ಪರಭಾರೆ ಮಾಡಿದ್ದಾರೆ. ಆದರೆ ವಾಸ್ತವಾಂಶಗಳು ಹೀಗಿರುವುದರಿಂದ ನಮ್ಮ ಸರ್ಕಾರ ವ್ಯವಸಾಯಗಾರರ ಸ್ಥಿತಿಗತಿಗಳನ್ನು ಉತ್ತಮಪಡಿಸುತ್ತಿದ್ದೇವೆ, ರೈತರ ಸ್ಥಿತಿಗತಿಗಳನ್ನು ಉತ್ತಮಪಡಿಸಿ

ದ್ದೇವೆ ಎಂದು ಹೇಳುತ್ತಿರುವ ಹೇಳಿಕೆಗೆ ಬಹಳ ಧಕ್ಕೆ ಬಂದಿದೆ. ಈ ರೈತರ ಸ್ಥಿತಿಗತಿಗಳನ್ನು ಉತ್ತಮಪಡಿಸಬೇಕು ಎಂಬ ವಿಚಾರದಲ್ಲಿ ನಾವು ಸರ್ಕಾರಕ್ಕೆ ಪದೇಪದೇ ಒತ್ತಾಯವನ್ನು ಹಾಕುತ್ತಿದ್ದರೂ ಸಹ ನಮ್ಮ ಸರ್ಕಾರದವರು ಪಾಸಾಗಿರುವ ಆಕ್ಟನ್ನು ಸಹ ಸಕಾಲದಲ್ಲಿ ಜಾರಿಗೆ ಕೊಡದೆ ಅವರಿಗೆ ತುಂಬ ಅನ್ಯಾಯಮಾಡಿದ್ದಾರೆ. ಈ ಇನಾಂ ರದ್ದಿಯಾತಿ ಕಾನೂನು ನಮ್ಮ ದೇಶದಲ್ಲಿ ಬಹಳ ಹಿಂದೆಯೇ ಜಾರಿಗೆ ಬರಬೇಕಾಗಿತ್ತು. ಆದರೆ ಅದು ಇನ್ನೂ ಜಾರಿಗೆ ಬಾರದಿರುವುದು ನಮ್ಮ ದುರದೃಷ್ಟ. ಆದರೆ ಹೀಗೆ ಆ ಇನಾಂದಾರರಿಗೆ ಪಾವತಿಯಾಗಬೇಕಾಗಿದ್ದಂಥ ಪರಿಹಾರದ್ರವ್ಯದ ಪ್ರಶ್ನೆ ಸಹ ಹಿಂದೆಯೇ ತೀರ್ಮಾನವಾಗಿದೆ. ಹೀಗೆ ಸರ್ಕಾರದವರು ಈ ವರ್ಷವಾದರೂ ಈ ಕಾನೂನನ್ನು ಜಾರಿಗೆ ತರಬಹುದೆಂದು ಆಲೋಚನೆ ಮಾಡಲು ಅವರು ಈ ಕಾಂಪೆನ್ಸೇಷನ್ ಬಗ್ಗೆ ಕೊಡಬೇಕಾದ ಮೊಬಲಗಿನ ಬಗ್ಗೆ ಬಡ್ಜೆಟ್ಟಿನಲ್ಲಿ ಯಾವ ಹಣವನ್ನೂ ಒದಗಿಸಿಟ್ಟುಕೊಂಡಿಲ್ಲ. ಆದಕಾರಣ ನಮ್ಮ ಸರ್ಕಾರ ಈ ವರ್ಷವೂ ಸಹ ಈ ಕಾನೂನನ್ನು ಜಾರಿಗೆ ತರಲು ಸಿದ್ಧವಾಗಿಲ್ಲ ಎಂದು ಇದರಿಂದ ಕಂಡುಬರುತ್ತದೆ. ಇದು ನಿಜವಾಗಿಯೂ ನಮಗೆ ಬಹಳ ಆಶ್ಚರ್ಯಕರವಾದಂಥ ವಿಚಾರವಾಗಿದೆ. ಇಂಥ ಒಂದು ಪ್ರಾಮುಖ್ಯವಾದ ವಿಚಾರದಲ್ಲೇ ಸರ್ಕಾರದವರು ಹೀಗೆ ಗಮನ ಕೊಡದೆ ಉದಾಸೀನ ಭಾವದಿಂದ ವರ್ತಿಸುತ್ತಿರುವಾಗ ಇವರು ಇನ್ನು ಯಾವ ವಿಚಾರಕ್ಕೆತಾನೇ ಗಮನ ಕೊಟ್ಟಾರು ಎನ್ನುವುದೇ ನನಗೆ ತಿಳಿಯದಂತಾಗಿದೆ. ಈ ಹಿಂದೆ ಆ ಟೆನೆನ್ಸಿ ಬಿಲ್ ಇದೇ ಸಭೆಯಮುಂದೆ ಎರಡು ದಿನಗಳವರೆಗೆ ಚರ್ಚಿಸಲ್ಪಟ್ಟಿತು. ಆ ಮಸೂದೆ ಬೇಗ ಪಾಸಾಗಿ ಜಾರಿಗೆ ಬರಬೇಕು ಎಂಬ ಅಭಿಪ್ರಾಯ ಈ ಸಭೆಯ ಎಲ್ಲ ಸದಸ್ಯರಿಗೂ ಇತ್ತು. ಅಷ್ಟು ತೀವ್ರವಾದಂಥ ರೀತಿಯಲ್ಲಿ ನಾವುಗಳು ಅಭಿಪ್ರಾಯವನ್ನಿಟ್ಟುಕೊಂಡಿರುವಾಗ ಅದಕ್ಕೆ ಅವಶ್ಯಕವಾದಂಥ ತಿದ್ದುಪಡಿಗಳನ್ನು ಮಾಡಿ ಅದನ್ನು ಆದಷ್ಟು ಬೇಗ ಜಾರಿಗೆ ತರಬೇಕು ಎಂಬ ಮನೋಭಾವ ಸರ್ಕಾರದವರಿಗೆ ಇಲ್ಲದಿರುವುದರಿಂದಲೇ ಇವರು ಈಹೊತ್ತೂ ಕೂಡ ಆ ಮಸೂದೆಯನ್ನು ಈ ಸಭೆಯ ಮುಂದೆ ಮಂಡಿಸಿರುವುದಿಲ್ಲ. ಆದಕಾರಣ ಹೀಗೆ ಸರ್ಕಾರದಲ್ಲಿ ನಡೆಯಬೇಕಾದಂಥ ಅತಿ ಮುಖ್ಯವಾದ ವಿಚಾರಗಳೂ ಸಹ ಸಕಾಲಕ್ಕೆ ಸರಿಯಾಗಿ ನಡೆಯುತ್ತಿಲ್ಲ. ಈಗಲಾದರೂ ಸರ್ಕಾರದವರು ಸದರಿ ಮಸೂದೆಯನ್ನು ಈ ಸಭೆಯಮುಂದಿಟ್ಟು ಅದಕ್ಕೆ ಮುಖ್ಯವಾಗಿ ಆಗಬೇಕಾಗಿರುವ ತಿದ್ದುಪಾಟುಗಳನ್ನು ನಡೆಸಿ ಅದನ್ನು ಬೇಗ ಜಾರಿಗೆ ಕೊಡುವಂತೆ ಏರ್ಪಾಡು ನಡೆಸಬೇಕೆಂದು ನಾನು ಸರ್ಕಾರದವರನ್ನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಈ ವ್ಯಾನ್‌ಗಳ ವಿಚಾರದಲ್ಲಿ ಒಂದು ಮಾತನ್ನು ಹೇಳಬೇಕೆಂದಿದ್ದೇನೆ. ಈಗತಾನೆ ಕೆಲವು ಮಾನ್ಯ ಸದಸ್ಯರು ಈ ತಾಲ್ಲೂಕ್ ಅಮಲ್ದಾರರುಗಳಿಗೆಲ್ಲಾ ಒಂದೊಂದು ಜೀಪನ್ನು ಒದಗಿಸುವ ವಿಚಾರವನ್ನು ಪ್ರಸ್ತಾಪಮಾಡಿದ್ದಾರೆ. ನಾನು ನಮ್ಮ ಜಿಲ್ಲೆಯ ಪರವಾಗಿ ಹೇಳುವುದಾದರೆ ನಮ್ಮ ಜಿಲ್ಲೆಯಲ್ಲಿ ಆ ಜಿಲ್ಲಾಧಿಕಾರಿಗಳಿಗೆ ಕೂಡ ಅಲ್ಲಿ ಒಂದು ವ್ಯಾನ್ ಇರುವುದಿಲ್ಲ. ಈ ಹಿಂದೆ ಶ್ರೀಮಾನ್ ಟಿ. ಮರಿಯಪ್ಪನವರು ಮಂತ್ರಿಗಳಾಗಿದ್ದ ಕಾಲದಲ್ಲಿ ರೂರಲ್ ಡೆವಲಪ್‌ಮೆಂಟ್ ಯೂನಿಟಗಳನ್ನು ಸ್ಥಾಪಿಸಿ-ಅವುಗಳಿಗೆಲ್ಲಾ ಒಂದೊಂದು ವ್ಯಾನನ್ನು ಕೊಟ್ಟಿದ್ದರು. ಈಗ ಅವುಗಳನ್ನೆಲ್ಲಾ ರದ್ದುಗೊಳಿಸಿ ಆ ವ್ಯಾನುಗಳನ್ನೆಲ್ಲಾ ಸರ್ಕಾರದವರು ಹಿಂದಕ್ಕೆ ತೆಗೆದುಕೊಂಡಿದ್ದಾರೆ. ಹೀಗಾದದ್ದು ನಮ್ಮ ದೇಶದ ದುರದೃಷ್ಟ. ಇತ್ತೀಚೆಗೆ ಈ ಜಿಲ್ಲಾಧಿಕಾರಿಗಳಿಗಂತೂ ಅವರ ಕಾರ್ಯಕ್ಷೇತ್ರ ಬಹಳ ವಿಶಾಲವಾಗಿ ಅವರಿಗೆ ಕೆಲಸಗಳು ಹೆಚ್ಚಾಗಿರುತ್ತವೆ. ಯಾವ ಒಂದು ಸಮಿತಿಯನ್ನು ಏರ್ಪಾಡು ಮಾಡಿದರೂ ಅವರು ಅದಕ್ಕೆ ಅಧ್ಯಕ್ಷರಾಗಿರಬೇಕು ಎಂಬುದಾಗಿ ಇರುತ್ತದೆ. ಆದಕಾರಣ ಈ ಸಂದರ್ಭದಲ್ಲಿ ನಾನು ನಮ್ಮ ಹಾಸನ ಜಿಲ್ಲಾಧಿಕಾರಿಗಳಿಗೆ ಒಂದು ವ್ಯಾನನ್ನು ಒದಗಿಸಬೇಕೆಂದು ಪ್ರಾರ್ಥಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—ಸ್ವಾಮಿ, ಈ ಡಿಮ್ಯಾಂಡ್ ಮನವಿ ಬಗ್ಗೆ ಮಾತನಾಡುತ್ತಾ ನಮ್ಮ ಕಡೂರು ತಾಲ್ಲೂಕಿನಲ್ಲಿ ಕೂಡಲೇ ಈ ಸರ್ವೆಸೆಟಲ್‌ಮೆಂಟ್ ಕಾರ್ಯಗಳನ್ನು ಕೈಗೊಳ್ಳಬೇಕಾಗಿರುವ ಆವಶ್ಯಕತೆ ಬಗ್ಗೆ ಈಗ ಒಂದೆರಡು ಅಂಶಗಳನ್ನು ನಾನು ಈ ಮಾನ್ಯ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಈಗ್ಗೆ ಮೂರು ವರ್ಷಗಳಲಾಗಾಯಿತಿನಿಂದಲೂ ನಾನು ಆ ನಮ್ಮ ಕಡೂರು ತಾಲ್ಲೂಕಿನಲ್ಲಿ ಈ ಸರ್ವೆ ಕಾರ್ಯಗಳನ್ನು ನಡೆಸಬೇಕೆಂದು ಸರ್ಕಾರಕ್ಕೆ ಪದೇ ಪದೇ ಒತ್ತಾಯಮಾಡುತ್ತಲೇ ಬಂದಿದ್ದೇನೆ. ಅನೇಕವೇಳೆ ಈ ಮಾನ್ಯ ಸಭೆಯಲ್ಲೇ ಅನೇಕಮಂದಿ ಸದಸ್ಯರು ಈ ದಿವಸ ಜಾರಿಯಲ್ಲಿರತಕ್ಕಂಥ ಭೂಕಂದಾಯದ ದರ ಕೆಲವು ಕಡೆ ಜಾಸ್ತಿ ಕೆಲವುಕಡೆ ಕಮ್ಮಿ ಎಂಬುದಾಗಿ ತಿಳಿಸಿದ್ದಾರೆ. ನಮ್ಮ ಸಂಸ್ಥಾನದಲ್ಲಿ ಈ ಸರ್ವೆ ಸೆಟಲ್‌ಮೆಂಟ್ ಕಾರ್ಯಗಳು ನಡೆದು ಬಹಳ ವರ್ಷಗಳಾಗಿವೆ. ಈದಿವಸ ರೈತರು ಕೊಡುತ್ತಿರುವ ಕಂದಾಯ ಬಹಳ ಹಿಂದೆ ಗೊತ್ತುಮಾಡಿದ್ದಾಗಿದೆ. ಈ ದಿವಸ ಸರ್ಕಾರದವರು ಈ ಸರ್ವೆಕಾರ್ಯವನ್ನು ಕೈಗೊಂಡಿದ್ದೇ ಆದರೆ ಸರ್ಕಾರಕ್ಕೆ ಈಗ ಕಂದಾಯ ರೂಪದಲ್ಲಿ ಏನೊಂದು ವರಮಾನ ಬರುತ್ತಿದೆಯೋ ಅದಕ್ಕಿಂತಲೂ ಸ್ವಲ್ಪ ಹೆಚ್ಚು ವರಮಾನ ಬರುವ ಸಂದರ್ಭವಿದೆ. ಈಗ್ಗೆ ಬಹುದಿವಸಗಳ ಹಿಂದೆ ಈ ಜಮೀನುಗಳ ಬೆಲೆ ಮತ್ತು ಧಾನ್ಯಗಳ ಧಾರಣವಾಸಿಗಳು ಯಾವ ರೀತಿಯಾಗಿದ್ದವೋ ಅದಕ್ಕೆ ಅನುಗುಣವಾಗಿ ಆಗ ವಿಧಿಸಿದಂಥ ಕಂದಾಯವನ್ನೇ ಈದಿವಸವೂ ಸಹ ಆ ಜಮೀನ್ದಾರರು ಕೊಡುತ್ತಿದ್ದಾರೆ. ಅಲ್ಲಿಂದೀಚೆಗೆ ಈ ಜಮೀನುಗಳ ಸರ್ವೆಯೂ ಆಗಿಲ್ಲ, ಕಂದಾಯವನ್ನು ಸಹ ಸರಿಮಾಡಿಲ್ಲ. ಆದರೆ ಇತ್ತೀಚೆಗೆ ಅನೇಕರು ಈ ಜಮೀನು ಸರ್ವೆಗಾಗಿ ಅರ್ಜಿ ಕೊಟ್ಟಿರುತ್ತಾರೆ. ಹಾಗೆ ಅವರು ಸರ್ಕಾರಕ್ಕೆ ಅರ್ಜಿಹಾಕಿಕೊಂಡು 10-15 ವರ್ಷಗಳಾದರೂ ಇನ್ನೂ ಅವರ ಜಮೀನುಗಳು ಸರ್ವೆಆಗಿಲ್ಲ. ಹಾಗೆಯೇ ಇರುತ್ತವೆ. ನಮ್ಮ ತಂದೆಯ ಕಾಲದಲ್ಲಿ ಕೊಟ್ಟ ಅರ್ಜಿಗಳೂ ನನ್ನ ಕಾಲಕ್ಕೂಕೂಡ ಆಗದೆ ಇನ್ನೂ ಹಾಗೆಯೇ ಉಳಿದಿರಬೇಕಾದರೆ ಈ ಸರ್ವೆ ಇಲಾಖೆ ಎನ್ನುವುದು ಇನ್ನು ಯಾವ ರೀತಿ ಕೆಲಸಮಾತ್ತಿದೆಯೋ ನನಗಂತೂ ಅದು ಗೊತ್ತಾಗುವುದಿಲ್ಲ. ಇತ್ತೀಚೆಗೆ ಜಮೀನುಗಳು ಒಬ್ಬರಕೈಯಿಂದ ಮತ್ತೊಬ್ಬರಿಗೆ ಬದಲಾವಣೆಯಾಗಿದ್ದರೂ ದಾಖಲೆಗಳಲ್ಲಿ ಮಾತ್ರ ಯಥಾಪ್ರಕಾರವೇ ಇರುತ್ತದೆ. ಒಂದು ಸರ್ವೆನಂಬರಿನಲ್ಲಿರತಕ್ಕ ಜಮೀನು ಈದಿವಸ ನಾಲ್ಕಾರು ಜನರಿಗೆ ಕ್ರಯವಾಗಿರುತ್ತದೆ. ಹಾಗೆ ಕ್ರಯವಾದ ಜಮೀನನ್ನು ಕ್ರಯದಾರರ ಹೆಸರಿಗೆ ವರ್ಗಾಯಿಸದೇ ಈ ನಾಲ್ಕು ಜನರ ಹೆಸರಿಗೂ ಖಾತೆ ಮಾಡದಿರುವುದರಿಂದ ಆ ಗ್ರಾಮದ ಪಟೇಲ್ ಶ್ಯಾನುಭೋಗರು ಆ ಜಮೀನಿಗೆ ಸಂಬಂಧಪಟ್ಟ ಕಂದಾಯವನ್ನು ಪೂರ್ತಿಯಾಗಿ ಆ ನಾಲ್ಕು ಜನರಿಂದಲೂ ವಸೂಲ್ಮಾಡಿಕೊಳ್ಳುತ್ತಿದ್ದಾರೆ. ಆದರೆ ಆ ಕ್ರಯದಾ

(ಶ್ರೀ ವೈ. ಎಂ. ಚಂದ್ರಶೇಖರಯ್ಯ).

ರರು ಆ ಸರ್ವೆ ನಂಬರಿನ ಜಮೀನಿಗೆ ಪಾವತಿಯಾಗತಕ್ಕ ಕಂದಾಯದಲ್ಲಿ ಪ್ರತಿಯೊಬ್ಬರೂ ನಾಲ್ಕನೇ ಒಂದು ಭಾಗದ ಕಂದಾಯಕ್ಕೆ ಮಾತ್ರ ಹಕ್ಕುದಾರಾಗಿರುತ್ತಾರೆ. ಹಾಗಿದ್ದರೂ ಈದಿವಸ ಅವರಿಂದ ಒಬ್ಬೊಬ್ಬರಿಂದಲೂ ಪೂರಾ ಕಂದಾಯವನ್ನು ವಸೂಲ್ಮಾಡುತ್ತಿದ್ದಾರೆ. ಈ ನ್ಯೂನತೆಗಳನ್ನೆಲ್ಲಾ ಸರಿಪಡಿಸಲು ಸರ್ಕಾರ ಕೂಡಲೆ ಕಡೂರು ತಾಲ್ಲೂಕಿನಲ್ಲೂ ಮತ್ತು ಸಂಸ್ಥಾನದ ಇತರ ಭಾಗಗಳಲ್ಲೂ ಈ ಸರ್ವೆ ಕಾರ್ಯವನ್ನು ಕೂಡಲೇ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಪಟೇಲ್ ಶ್ಯಾನುಬೋಗರುಗಳಿಗೆ ಪಾವತಿಯಾಗುತ್ತಿರುವ ಪೋಟಿಗೆಯನ್ನು ಜಾಸ್ತಿ ಮಾಡಬೇಕೆಂದು ನಾವು ಪದೇಪದೇ ಒತ್ತಾಯ ಮಾಡುತ್ತಲೇ ಬಂದಿದ್ದೇವೆ. ನಾನು ನೋಡಿರುವ ಹಾಗೆ ಒಬ್ಬ ಪಟೇಲನಿಗೆ ವರ್ಷಕ್ಕೆ ಏಳು ರೂಪಾಯಿ ಪೋಟಿಗೆ ಬರುತ್ತಿದೆ. ಇಂಥ ಮನುಷ್ಯನಿಗೆ ಅಲ್ಲಿ ಸರ್ಕಾರದ ಪರ ಕೆಲಸಮಾಡಲು ಹೇಗೆತಾನೆ ಸಾಧ್ಯವಾದೀತು ಎನ್ನುವುದನ್ನು ತಾವೇ ಆಲೋಚಿಸಬೇಕಾಗಿದೆ. ಹಿಂದೆ ಒಂದು ದಿವಸ ಈ ಏಳು ರೂಪಾಯಿ ಪೋಟಿಗೆ ಬರತಕ್ಕ ಪಟೇಲ ತಾಲ್ಲೂಕು ಕಛೇರಿಗೆ ಆ ಪೋಟಿಗೆ ಮೊಬಲಗನ್ನು ತರಲು ಹೋಗಿದ್ದನು. ಆಗ ಆತನು ಆ ಏಳು ರೂಪಾಯಿ ಪೋಟಿಗೆಯಲ್ಲಿ ಎರಡು ರೂಪಾಯಿಗಳನ್ನು ಸಿರಸ್ತೆದಾರರಿಗೆ ಕಾಣಿಕೆ ಕೊಟ್ಟ. ಒಬ್ಬ ಗುಮಾಸ್ತನಿಗೆ ಒಂದು ರೂಪಾಯಿಯನ್ನೂ, ಇನ್ನೊಬ್ಬ ಗುಮಾಸ್ತನಿಗೆ ಮತ್ತೊಂದು ರೂಪಾಯಿಯನ್ನೂ ಕಾಣಿಕೆಯಾಗಿ ಕೊಟ್ಟ, ಬಳಿಕ ಉಳಿದ ಮೊಬಲಗಿನಲ್ಲಿ ಮುಂದೆ ಬಂದು ನಿಂತ ಜವಾನನಿಗೆ ಇನ್ನೊಂದು ರೂಪಾಯಿ ಪಾವತಿಮಾಡಿದ ಮೇಲೆ ಆ ಪಟೇಲನಲ್ಲಿ ಉಳಿದಿದ್ದು ಕೇವಲ ಎರಡು ರೂಪಾಯಿಗಳು ಮಾತ್ರ. ಆಗ ಆತನು ಸೀದಾ ಆ ಅಮಲ್ದಾರರ ಮುಂದೆ ಹೋಗಿ ಆ ಏಳು ರೂಪಾಯಿ ಪೋಟಿಗೆಯಲ್ಲಿ ಖರ್ಚಾಗಿ ಹೋದ ಐದು ರೂಪಾಯಿಗಳು ಜಾತಾ ಉಳಿದಿದ್ದ ಎರಡು ರೂಪಾಯಿಗಳನ್ನು ತಮಗೆ ಕೊಟ್ಟು ಬಿಟ್ಟು ನಾನು ಅನಂತರ ಊರುಕಡೆಗೆ ಹೊರಡೋಣ ಎಂಬುದಾಗಿ ಮನಸ್ಸು ಮಾಡಿಕೊಂಡು ತಮ್ಮಲ್ಲಿಗೆ ಬಂದಿದ್ದೇನೆಂದು ತಿಳಿಸಲು ಆಗ ಆ ಮೊಬಲಗನ್ನೆಲ್ಲಾ ಅವರು ಪುನಃ ವಾಪಸ್ಸು ಕೊಡಿಸಿದರಂತೆ. ಹೀಗಿರುತ್ತದೆ ಸಮಾಚಾರಗಳು. ಇಂಥದರಲ್ಲಿ ಹೀಗೆ ಏಳು ರೂಪಾಯಿ ಪೋಟಿಗೆಗೆ ಕೆಲಸ ಮಾಡತಕ್ಕವನು ಹೇಗೆ ಪಟೇಲಕೆ ನಡೆಸುತ್ತಾನೆ ಎನ್ನುವುದನ್ನು ನಾವು ಸ್ವಲ್ಪ ಆಲೋಚನೆ ಮಾಡಿ ನೋಡಬೇಕಾಗಿದೆ. ಆದ್ದರಿಂದ ಸರ್ಕಾರದವರು ಈ ಪಟೇಲ್ ಶ್ಯಾನುಭೋಗರುಗಳಿಗೆ ಪೋಟಿಗೆ ಜಾಸ್ತಿ ಮಾಡಬೇಕಾದದ್ದು ನ್ಯಾಯವೆಂದು ಹೇಳುತ್ತೇನೆ. ಕಾರಣ ಹೊಟ್ಟೆತುಂಬ ಅನ್ನ ಕೊಟ್ಟರೆ ಅವರು ಕೈತುಂಬ ಕೆಲಸ ಮಾಡುತ್ತಾರೆ.

ಇನ್ನು ನಾನು ಕಡೆಯದಾಗಿ ಅಮಲ್ದಾರರು ಮತ್ತು ಅಸಿಸ್ಟೆಂಟ್ ಇಂಜಿನಿಯರ ಆಡಳಿತ ವೈಖರಿಯ ಬಗ್ಗೆ ಎರಡು ಮಾತುಗಳನ್ನು ಹೇಳಿ ನನ್ನ ಭಾಷಣವನ್ನು ಪೂರೈಸುತ್ತೇನೆ. ಈ ಅಮಲ್ದಾರರುಗಳಿಗೆ ಪ್ರತಿ ತಾಲ್ಲೂಕು ಕಸಬೆಗಳಲ್ಲೂ ಕಛೇರಿಯಲ್ಲಿ ಒಂದು ಆಫೀಸಿದ್ದರೆ ಅವರ ವಾಸದ ಬಂಗಲೆಗಳಲ್ಲೂ ಅವರಿಗೊಂದು ಹೋಂ ಆಫೀಸು ಎಂದಿರುತ್ತದೆ. ಅವರು ಊರು ಹೊರಗಡೆ ಎಲ್ಲಿಯೂ ಹೋಗದೆ—ಹೆಡ್ ಕ್ವಾರ್ಟರ್ಸಿನಲ್ಲೇ ಉಳಿದಿದ್ದರೂ ಅವರು ತಮ್ಮ ತಾಲ್ಲೂಕು ಕಛೇರಿಯಲ್ಲಿರುವ ಆಫೀಸಿಗೆ ದಿನಗಟ್ಟಲೆ ಬರುತ್ತಲೇ ಇಲ್ಲ. ಗ್ರಾಮಾಂತರ ಪ್ರದೇಶಗಳಿಂದ ಜನರು ಪ್ರತಿ ದಿನವೂ ಅವರ ಭೇಟಿಗಾಗಿ ಬಂದು ಕಾದಿರುತ್ತಾರೆ. ಹಾಗೆ ಅವರು 15-20 ಮೈಲಿಗಳಿಂದ ಬಂದು ಕಛೇರಿ ಬಳಿ ದಿನವೆಲ್ಲಾ ಕಾದಿದ್ದರೂ ಅವರ ಅಹವಾಲನ್ನು ಕೇಳತಕ್ಕವರೇ ಇಲ್ಲದಂತಾಗಿ ಅನೇಕ ಕಡೆ ರೈತರಿಗೆ ತುಂಬ ತೊಂದರೆಗಳಾಗಿರುತ್ತವೆ. ಈ ಎಲ್ಲಾ ತೊಂದರೆಗಳನ್ನೂ ನಿವಾರಣೆ ಮಾಡಲು ಈ ಅಮಲ್ದಾರರುಗಳು ಗ್ರಾಮಗಳಿಗೆ ಸರ್ಕೀಟು ಹೋದಂಥ ಕಾಲದಲ್ಲಿ ಆಯಾ ಗ್ರಾಮಕ್ಕೆ ಸಂಬಂಧಪಟ್ಟ ಅರ್ಜಿಗಳನ್ನೆಲ್ಲಾ ಆಯಾ ಗ್ರಾಮದಲ್ಲೇ ಫೈಸಲ್ ಮಾಡುವಂಥ ಒಂದು ಏರ್ಪಾಡನ್ನು ಮಾಡಿದರೆ ಒಳ್ಳೆಯದೆಂದು ನಾನು ಸೂಚಿಸುತ್ತೇನೆ. ಈ ರೈತಾಪಿ ಜನರ ಕಷ್ಟ ನಿವಾರಣೆ ಮಾಡತಕ್ಕ ದೃಷ್ಟಿಯಿಂದಲಾದರೂ ಈ ಎಲ್ಲ ಅಮಲ್ದಾರರುಗಳಿಗೂ ಒಂದೊಂದು ಜೀಪ್ ವ್ಯಾನನ್ನು ಒದಗಿಸುವುದು ತುಂಬ ಅವಶ್ಯಕವೆಂದು ನಾನು ಹೇಳುತ್ತೇನೆ. ನಮ್ಮ ಕಡೂರ್ ತಾಲ್ಲೂಕಿನಲ್ಲೇ ಸುಮಾರು 300 ಹಳ್ಳಿಗಳಿರುತ್ತವೆ. ಆದಕಾರಣ ಎಲ್ಲ ಅಮಲ್ದಾರರುಗಳಿಗೂ ಒಂದು ಜೀಪು ಕಾರನ್ನಾಗಲಿ ಇಲ್ಲವೇ ಒಂದು ವ್ಯಾನನ್ನಾಗಲಿ ಒದಗಿಸುವ ಏರ್ಪಾಡು ಮಾಡಿದರೆ ಜನರಿಗೆ ತುಂಬ ಅನುಕೂಲವಾಗುತ್ತದೆಂದು ಹೇಳಿ ನಾನು ಈ ಕತ್ತರಿ ನಿರ್ಣಯಕ್ಕೆ ನನ್ನ ಬೆಂಬಲ ನೀಡುತ್ತೇನೆ.

ಶ್ರೀ ಸಿ. ಟಿ. ಹನುಮಂತಯ್ಯ (ಪಾವಗಡ-ಅನುಸೂಚಿತ ಜಾತಿಗಳು).—ಸ್ವಾಮಿ, ನಮ್ಮ ಮೈಸೂರು ಸಂಸ್ಥಾನದಲ್ಲಿ 17,000 ಹಳ್ಳಿಗಳಿರುತ್ತವೆ. ಈ ಎಲ್ಲಾ ಹಳ್ಳಿಗಳಲ್ಲೂ ತೋಟಿ-ತಳವಾರರುಗಳು ಕೆಲಸ ಮಾಡಿಕೊಂಡು ಬಹಳ ಹಿಂದಿನ ಕಾಲದಿಂದಲೂ ಎಂದರೆ, ಏತ್‌ನಾಮ ಬಹದ್ದೂರು ಕಾಲದಿಂದಲೂ ಈ ಮೇರೆಗೆ ಮಿರಾಸೆಗಳನ್ನು ಪಡೆದುಕೊಂಡು ಬರುತ್ತಿರುವುದು ವಾಡಿಕೆಯಾಗಿ ಬಂದು ಹೋಗಿದೆ. ಈ ಪದ್ಧತಿಯನ್ನು ಬದಲಾವಣೆ ಮಾಡಬೇಕೆಂದು ನಾವು ಸರ್ಕಾರದವರಲ್ಲಿ ಪದೇ ಪದೇ ಮನವಿಗಳನ್ನು ಮಾಡಿಕೊಳ್ಳುತ್ತಲೇ ಬಂದಿದ್ದೇವೆ. ಏತ್ ನಾಮ ಬಹದ್ದೂರು ಕಾಲದಿಂದ ಎಂದರೆ—ಹಿಂದೆ ಮುಸಲ್ಮಾನರ ದೌಲತ್ ಇದ್ದಂಥ ಕಾಲದಲ್ಲಿ ಬಾರಾ ಬಲೂತಿ ಎಂಬುದಾಗಿ 12 ಕಸಬಿನ ಕೈವಾಡಗಾರರನ್ನು ಗ್ರಾಮನೌಕರರನ್ನಾಗಿ ನೇಮಿಸಿಕೊಂಡು ಕೆಲಸ ಕಾರ್ಯಗಳನ್ನು ನಡೆಸಿಕೊಂಡು ಹೋಗುತ್ತಿದ್ದರು. ಆ 12 ಜನ ಕೈವಾಡಗಾರರು ಯಾರಾರೆಂದರೆ—ಗೌಡ, ಶ್ಯಾನುಭೋಗ, ತೋಟಿ, ತಳವಾರ, ನೀರುಗಂಟಿ, ಗೊಂಡಕಾರ ಅಗಸ, ಅಕ್ಕಸಾಲೆ, ಕಮ್ಮಾರ, ಕುಂಬಾರ, ಹಜಾಮ ಇತ್ಯಾದಿ 12 ಕಸಬಿನ ಜನಗಳಿಗೂ ಅವರು ಮಾಡತಕ್ಕ ಸೇವೆಗೋಸ್ಕರವಾಗಿ ಗ್ರಾಮದ ಜನರು ಎಕರೆಗೆ ಮೂರುಸೇರು ಕಾಳಿನಂತೆ ಕೊಡುತ್ತಿದ್ದರು. ಇದರಲ್ಲಿ ಆ ದೇವಾದಾಯ—ದೇವರ ಪೂಜೆಮಾಡತಕ್ಕ ಪೂಜಾರಿಗೆ ಎಕರೆಗೆ ಮೂರುಸೇರು ಕಾಳನ್ನು ಕೊಡಬೇಕಾಗಿತ್ತು, ಅದೇ ರೀತಿ ಬ್ರಹ್ಮಾದಾಯ—ಪಂಚಾಂಗ ಹೇಳತಕ್ಕವರಿಗೂ ಕೊಡಬೇಕಾಗಿತ್ತು. ಆ ಹಳೆಯ ಕಾಲದಲ್ಲಿ ರಚನೆಯಾದಂಥ ಆಗಿದ್ದ ಸಮಾಜ ಪದ್ಧತಿಯ ಪ್ರಕಾರ ಕೆಲಸ ಮಾಡಬೇಕೆಂದು ವಿಧಿಸಿದ್ದ ಕೆಲಸಗಳನ್ನು ಈ ಹೊತ್ತು ಈ ತೋಟಿ-ತಳವಾರಿಗಳು ಈ ಎಕರೆ ಕಾಳಿನಮೇಲೆ ಮಾಡುತ್ತಲೇ ಬಂದಿದ್ದಾರೆ. ಆದರೆ ಈ ದಿವಸ ಇವರಿಗೆ ಆ ಎಕರೆ ಕಾಳೂ ಸಹ ಸರಿಯಾಗಿ ದೊರೆಯುತ್ತಿಲ್ಲ. ಇದಕ್ಕೆಲ್ಲಾ ಸರಿಯಾದ ದಾಖಲೆ ಇತ್ಯಾದಿಗಳನ್ನಿಟ್ಟು ಕೆಲಸ ಮಾಡಲು ಈ ಜನರು ವಿದ್ಯಾವಂತರಲ್ಲ. ಇವರಿಗೆ ಓದು ಬರಹಗಳು ಯಾವವೂ ಇರುವುದಿಲ್ಲ. ಇವರು ತಮಗೆ ಬರಬೇಕಾದ ಆದಾಯಗಳು ಬರಲಿಲ್ಲವೆಂದು ತಾಲ್ಲೂಕು ಅಮಲ್ದಾರ

ರಿಗೆ ದೂರು ಕೊಟ್ಟರೆ ಅವರು ಕ್ರಮವಾಗಿ ಅವರ ಮೇಲೆ ಅಪೀಲು ತನ್ನಿ ಆಗ ನಾನು ಅದನ್ನೆಲ್ಲಾ ವಿಚಾರ ಮಾಡುತ್ತೇನೆಂದು ಹೇಳುತ್ತಿದ್ದಾರೆ. ಈ ದಿವಸ ಇವರು ಸರ್ಕಾರದ ಬೆನ್ನುಮೂಳೆಯಾಗಿದ್ದುಕೊಂಡು ಕೆಲಸಮಾಡುತ್ತಿದ್ದಾರೆ. ಇವರು ಸರ್ಕಾರಕ್ಕೆ ಈ ದಿವಸ ಸಲ್ಲಿಸುತ್ತಿರುವಷ್ಟು ಸೇವೆಯನ್ನು ಮತ್ತೆ ಯಾರೂ ಸಲ್ಲಿಸುತ್ತಿಲ್ಲ. ಈ ದಿವಸ ನಮ್ಮ ಪಕ್ಕದ ಪ್ರಾಂತ್ಯವಾದ ಮದರಾಸ್ ಸರ್ಕಾರ ಅಲ್ಲಿನ ತೋಟಿ-ತಳವಾರಿಗಳಿಗೆ ತಿಂಗಳೊಂದಕ್ಕೆ 6-7 ರೂಪಾಯಿಗಳಂತೆ ವೇತನ ಕೊಡುತ್ತಿದ್ದಾರೆ. ತಾವೂ ಆ ರೀತಿಯಾಗಿ ಇಲ್ಲಿ ಮಾಡದೆ, ಅವರ ಹೊಟ್ಟೆ-ಬಟ್ಟೆಗೂ ಸರಿಯಾಗಿ ಕೊಡದೆ, ನೀವು ಕೆಲಸಮಾಡಿ ಎಂದು ಹೇಳಿದರೆ ಯಾರುತಾನೆ ಹಾಗೆ ಕೆಲಸ ಮಾಡುತ್ತಾರೆ? ಈ ಪಟೇಲ್-ಶ್ಯಾನುಭೋಗರುಗಳೂ ಕೂಡ ಅವರ ಹಾಗೆ ಎಷ್ಟೋ ವರ್ಷಗಳಿಂದ ಈ ಗ್ರಾಮದ ಕೆಲಸಗಳನ್ನು ಮಾಡಿಕೊಂಡು ಬರುತ್ತಿದ್ದಾರೆ. ಅವರಿಗೂ ಸಹ ಸರ್ಕಾರದವರು ಹೊಟ್ಟೆಗೆ ಸರಿಯಾಗಿ ಕೊಡುತ್ತಿಲ್ಲ. ಸಂಬಳ ಕೊಡುವಂತೆ ಒಂದು ವ್ಯವಸ್ಥೆಯನ್ನು ಈವರೆಗೂ ಮಾಡಲಿಲ್ಲ—ಅಥವಾ ಅವರಿಗೆ ಪೋಟಿಗೆಯನ್ನಾದರೂ ಜಾಸ್ತಿಮಾಡಿ ಎಂದು ಕೇಳಿದರೆ ಅದನ್ನೂ ಸಹ ಮಾಡುವುದಿಲ್ಲ. ಇದಕ್ಕಾಗಿ ಈಗ ದೇಶದಲ್ಲೆಲ್ಲಾ ದೊಡ್ಡ ಕೂಗೇ ಎದ್ದಿದೆ.

ಈ ದಿವಸ ಒಬ್ಬ ರೈತ ಸರ್ಕಾರಕ್ಕೆ ಜಮೀನಿಗಾಗಿ ಒಂದು ಅರ್ಜಿ ಕೊಟ್ಟರೆ, ಅದು ಎಲ್ಲಿ ಹೋಯಿತು ಎಂಬುದನ್ನು ಕಂಡುಹಿಡಿಯುವುದೇ ಬಹಳ ದುಸ್ತರವಾಗಿದೆ. ರೈತರು ಹೀಗೆ ಏನಾದರೂ ಒಂದು ಅರ್ಜಿಯನ್ನು ತಾಲ್ಲೂಕ್ ಕಛೇರಿಗೆ ಕೊಟ್ಟರೆ ಸರ್ಕಾರದವರು ಅವರಿಗೆ ಯಾವ ಒಂದು ರಶೀತಿ ವಗೈರೆಗಳನ್ನೂ ಕೊಡುತ್ತಿಲ್ಲ. ಆದರೆ ಇತಃಪರ ಯಾವ ರೈತನೇ ಆಗಲಿ ಸರ್ಕಾರಕ್ಕೆ ಒಂದು ದರಖಾಸ್ತು ಅರ್ಜಿಕೊಟ್ಟರೆ ಅದನ್ನು ಮೂರು ತಿಂಗಳೊಳಗಾಗಿ ಫೈಸಲ್ಮಾಡುವಂತೆ ಸರ್ಕಾರದವರು ಒಂದು ಹುಕುಂ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಸಲಹೆ ಮಾಡುತ್ತೇನೆ. ಸರ್ಕಾರದವರಿಂದ ನಮಗೆ ಹೆಚ್ಚಿನ ಸೇವೆ ಆಗಬೇಕು, ಮಂತ್ರಿಗಳ ಗಮನ ಹಳ್ಳಿ ಜನರ ಕಡೆಗೆ ಹರಿಯುವಂತೆ ಆಗಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ,

11-30 P.M.

*ಶ್ರೀ ಟಿ. ಮರಿಯಪ್ಪ (ಮೈಸೂರು ಉತ್ತರ).—ಸಣ್ಣ ಪುಟ್ಟ ಪ್ರಶ್ನೆಗಳನ್ನು ಚರ್ಚೆ ಮಾಡುವ ಪ್ರಮೇಯವೇನೂ ಇಲ್ಲ. ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಪ್ಲಾನಿಂಗ್ ಕಮಿಷನವರು ಒಂದು ಚೌಕಟ್ಟನ್ನು ಕೊಟ್ಟಿದ್ದಾರೆ ಅದರಲ್ಲಿ ಸರ್ಕಾರದ ನೀತಿ ಹೇಗಿರಬೇಕೆಂಬುದನ್ನು ತಿಳಿಸಿದ್ದಾರೆ. ಆ ಯೋಜನೆಯ ಪ್ರಕಾರ 1958ನೇ ಇಸವಿಯಲ್ಲಿ ಈ ಭೂಪ್ರಶ್ನೆಯನ್ನು ತೀರ್ಮಾನ ಮಾಡಬೇಕೆಂದು ಖಚಿತವಾಗಿ ಹೇಳಿದ್ದಾರೆ. ಈಗ ಏನಾಗಿದೆ! ಮುಖ್ಯಮಂತ್ರಿಗಳ ಭಾಷಣದಲ್ಲಿ ಈ ವಿಷಯವನ್ನು ಸೂಚಿಸಿಲ್ಲ ಮತ್ತು ಫೈನಾನ್ಷಿಯಲ್ ಮೆಮೋರ್ಯಾಂಡಂನಲ್ಲೂ ಕೂಡ ಸೂಚಿಸಿಲ್ಲ. ನಮಗೆ ಗೊತ್ತಾಗುವುದು ಹೇಗೆ? ಶ್ರೀಮಾನ್ ತಿಮ್ಮಪ್ಪಗೌಡರು ಇನಾಂ ರದ್ದಿಯಾತಿ ಮಾಡುವುದಕ್ಕೆ ಹಣ ಒದಗಿಸಿಲ್ಲ ಎಂದು ಆಗಲೇ ಹೇಳಿದರು. ಈ ವಿಷಯಗಳೆಲ್ಲಾ ಇವೆ. ಸ್ವಲ್ಪ ಕಾಲಾವಕಾಶ ಕೊಟ್ಟರೆ ಉತ್ತಮ ಎಂದು ಹೇಳುತ್ತೇನೆ.

ಅಧ್ಯಕ್ಷರು.—ಇನ್ನು ಚರ್ಚೆ ಮಾಡಬೇಕೆಂದರೆ ಬಾಕಿ ಡಿಮ್ಯಾಂಡುಗಳಿಗೆ ಕಾಲಾವಕಾಶ ಕಡಮೆಯಾಗುತ್ತದೆ. I leave it to the House.

Sri D. DEVARAJ URS (Hunsur).—As mentioned by Sri T. Mariappa, let us know how it would be implemented.

Mr. SPEAKER.—I entirely agree with the Hon'ble Member. But I leave it to the House to take whatever time it wishes to. It can discuss even for two hours. I have no objection. But whether the other Demands will be approached at all is the point.

ಶ್ರೀ ಟಿ. ಮರಿಯಪ್ಪ.—ಸಣ್ಣ ಪುಟ್ಟ ರೀತಿಯಲ್ಲಿರತಕ್ಕ ಸಾಧಕ ಬಾಧಕಗಳನ್ನು ಸರ್ಕಾರದವರ ಗಮನಕ್ಕೆ ತರಬೇಕೆಂದು ಪ್ರಯತ್ನ ಮಾಡುತ್ತಾ ಇದ್ದಾರೆ. ಅದನ್ನು ಸದ್ಯಕ್ಕೆ ನಿಲ್ಲಿಸಿ ಈ ಭೂಪ್ರಶ್ನೆಯ ವಿಚಾರದಲ್ಲಿ ಸರ್ಕಾರದ ಖಚಿತವಾದ ನೀತಿ ಏನು, ಪ್ಲಾನಿಂಗ್ ಕಮೀಷನವರ ಅಭಿಪ್ರಾಯದಂತೆ ಎಷ್ಟುಮಟ್ಟಿಗೆ ಅವರ ಯೋಜನೆಯಂತೆ ಎರಡು ವರ್ಷಗಳಲ್ಲಿ ಕಾರ್ಯಗತ ಮಾಡುವುದಕ್ಕೆ ಸಾಧ್ಯ ಎಂಬುದನ್ನು ಚರ್ಚೆ ಮಾಡುವುದು ಒಳ್ಳೆಯದಲ್ಲವೇ? ಮೂಲಭೂತವಾದ ಈ ಪ್ರಶ್ನೆಯನ್ನು tackle ಮಾಡುವುದು ಹೇಗೆ ಎಂಬುದನ್ನು ಹೇಳುವುದಕ್ಕೆ ಯಾರಾದರೂ ಇಬ್ಬರು-ಮೂರು ಜನ ಮಾತನಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಜಿ. ಪುಟ್ಟಸ್ವಾಮಿ (ಚಿಕ್ಕಮಗಳೂರು—ಮೂಡಿಗೆರೆ ಅನುಸೂಚಿತ ಜಾತಿಗಳು).—ರಾಜಪ್ರಮುಖರ ಭಾಷಣದ ಮೇಲೂ, ಸಪ್ಲಿಮೆಂಟರಿ ಗ್ರ್ಯಾಂಟ್ ಮೇಲೂ ಮಾತನಾಡುವುದಕ್ಕೆ ನನಗೆ ಅವಕಾಶ ಕೊಟ್ಟಿಲ್ಲ.

ಅಧ್ಯಕ್ಷರು.—ಮಾತನಾಡುವುದಕ್ಕೆ ಇಷ್ಟವಿದ್ದರೆ ಈಗ ಮಾತನಾಡಿ.

ಶ್ರೀ ಜಿ. ಪುಟ್ಟಸ್ವಾಮಿ.—ಸ್ವಾಮಿ, ಈ ಅಧಿವೇಶನದಲ್ಲಿ ಒಂದು ಸಾರಿಯೂ ಮಾತನಾಡುವುದಕ್ಕೆ ನನಗೆ ಅವಕಾಶ ಸಿಕ್ಕಲಿಲ್ಲ. ಈಗ ಅವಕಾಶ ಸಿಕ್ಕಿದೆ. ಅದಕ್ಕಾಗಿ ಅಧ್ಯಕ್ಷರಿಗೆ ವಂದಿಸುತ್ತಾ ಈ ಖೋತಾ ನಿರ್ಣಯಕ್ಕೆ ಸಂಬಂಧಪಟ್ಟಂತೆ ಗ್ರಾಮಾಧಿಕಾರಿಗಳ ಪೋಟಿಗೆ ವಿಚಾರದಲ್ಲಿ ಮೊದಲು ಮಾತನಾಡುತ್ತೇನೆ. ಅವರು ಈಗಾಗಲೇ ಪೋಟಿಗೆ ಬೇಡ, ವೇತನದ ರೂಪವಾಗಿ ನಮಗೆ ಸಂಬಳ ಕೊಡಲಿ ಅಥವಾ ನಮ್ಮ ಹುದ್ದೆಗಳನ್ನೇ ರದ್ದುಮಾಡಲಿ ಅಥವಾ ಪೋಟಿಗೆ ಜಾಸ್ತಿ ಮಾಡಲಿ ಎಂದು ಕೇಳುತ್ತಾ ಇದ್ದಾರೆ. ಪಂಚವಾರ್ಷಿಕ ಯೋಜನೆ ವಗೈರೆ ಕೆಲಸ ಜಾಸ್ತಿಯಾಗಿ ಪೋಟಿಗೆ ಜಾಸ್ತಿ ಕೊಡಿ ಎಂದು ವಿಲೇಜ್ ಆಫೀಸರುಗಳು ಕೇಳುತ್ತಾ ಇದ್ದಾರೆ. ಇದು ವಾಸ್ತವವಾದ ವಿಚಾರ ಎಂಬುದನ್ನು ನಾನು ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಗ್ರಾಮಾಧಿಕಾರಿಗಳ ಕೆಲಸ ಕಾರ್ಯಗಳಿಗೆ ತಕ್ಕ ವೇತನ ಕೊಡುವುದನ್ನು ಸರ್ಕಾರ ತೀವ್ರವಾಗಿ ಪರಿಶೀಲಿಸಬೇಕು. ಈಗ ತೋಟಿ, ತಳವಾರರಿಗೆ ಕೂಡ ಕೆಲಸ ತುಂಬ ಜಾಸ್ತಿಯಾಗಿದೆ ಎಂಬುದನ್ನು ಮಾನ್ಯಮಿತ್ರರಾದ ಶ್ರೀ ಸಿ. ಟಿ. ಹನುಮಂತಯ್ಯನವರು ತಮ್ಮ ಗಮನಕ್ಕೆ ತಂದಿದ್ದಾರೆ. ತೋಟಿ ತಳವಾರರಿಗೆ ಯಾವ ಇನಾಮು ಜಮೀನು ಕೊಟ್ಟಿದ್ದೀರೋ ಅವು ಉತ್ಕೃಷ್ಟವಾದ ಜಮೀನಲ್ಲ. ಅಲ್ಲದೆ ಅವರ ವರಮಾನವೂ ಕೂಡ ಬಹಳ ಕಡಮೆಯಾಗಿ ಅವರ ಜೀವನದ ಸ್ಥಿತಿ ಚಿಂತಾಜನಕವಾಗಿದೆ. ಈ ಮಾನ್ಯ ಸಭೆಯಲ್ಲಿ ಅನೇಕ ವರ್ಷಗಳಿಂದಲೂ ಕೂಡ ತೋಟಿ ತಳವಾರರ ಸ್ಥಿತಿಯನ್ನು ಪರಿಶೀಲಿಸಿ ಅವರುಗಳಿಗೆ ಸಲ್ಲತಕ್ಕ ಮಿರಾಸೆಯನ್ನು ಜಾಸ್ತಿ ಮಾಡಬೇಕು ಮತ್ತು ಮಿರಾಸೆ ಸರಿಯಾದ ರೀತಿಯಲ್ಲಿ ಸಲ್ಲುತ್ತಿಲ್ಲ, ಅದನ್ನು ಸರಿಯಾದ ರೀತಿಯಲ್ಲಿ ಸಲ್ಲುವಂತೆ ಏರ್ಪಾಡು

(ಶ್ರೀ ಜಿ. ಪುಟ್ಟಸ್ವಾಮಿ.)

ಮಾಡಬೇಕೆಂದು ಸರ್ಕಾರದವರಲ್ಲಿ ಮನವಿಮಾಡಿಕೊಂಡಿದ್ದಾರೆ. ಆದರೂ ಕೂಡ ತೃಪ್ತಿಕರವಾದ ರೀತಿಯಲ್ಲಿ ಸರ್ಕಾರ ಈ ವಿಚಾರದಲ್ಲಿ ಒಂದು ವ್ಯವಸ್ಥೆಯನ್ನು ಮಾಡಿಲ್ಲ. ಇನ್ನು ಮುಂದಾದರೂ ಕೂಡ ಅದನ್ನು ಮೂಲಭೂತವಾದ ತತ್ವದ ರೀತಿಯಲ್ಲಿ ಸಮಗ್ರವಾಗಿ ಯೋಚನೆಮಾಡಿ ಈ ಗ್ರಾಮಾಧಿಕಾರಿಗಳಿಗೆ ಯಾವ ಒಂದು ಸರಿಯಾದ ವೇತನ ಸಲ್ಲಿಸಬೇಕೋ ಅದನ್ನು ಸಲ್ಲಿಸಿ, ಈ ಕೆಲಸ ತೃಪ್ತಿಕರವಾಗಿ ನಡೆದುಕೊಂಡು ಬರುವುದಕ್ಕೆ ಒಂದು ಯೋಜನೆಯನ್ನಾದರೂ ತಯಾರುಮಾಡಿ ಕ್ರಮಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ದರಖಾಸ್ತು ವಿಚಾರದಲ್ಲಿ ಸ್ವಲ್ಪ ಜಮೀನು ವಿಲೇವಾರಿ ಮಾಡತಕ್ಕ ವಿಷಯದಲ್ಲಿ ಕೆಲವು ಅಂಶಗಳನ್ನು ಈಗಾಗಲೇ ಮಾನ್ಯಸದಸ್ಯರು ಸರ್ಕಾರದವರ ಗಮನಕ್ಕೆ ತಂದಿದ್ದಾರೆ. ಯಾರಿಗೆ ಜಮೀನು ಸೇರಬೇಕೋ ಅವರಿಗೆ ಸೇರದೆ, ಜಮೀನಿರುವವರಿಗೇ ಜಮೀನು ಸೇರುತ್ತಿದೆ ಎಂಬ ಅಂಶವನ್ನು ಕೂಡ ಈ ಮಾನ್ಯ ಸಭೆಯಲ್ಲಿ ಅನೇಕ ಸದಸ್ಯರು ಸರ್ಕಾರದವರ ಗಮನಕ್ಕೆ ತಂದಿದ್ದಾರೆ. ಒಂದು ತತ್ವದ ದೃಷ್ಟಿಯಿಂದ ಜಮೀನು ಯಾರಿಗೆ ಸೇರಬೇಕು ಎಂದರೆ, ಯಾರು ಉಳುತ್ತಾನೆಯೋ ಅವನಿಗೆ ಜಮೀನು ಸೇರಬೇಕು ಎಂಬ ಒಂದು ತತ್ವ ಎಲ್ಲರ ಭಾವನೆಯಲ್ಲೂ ಇದೆ. ಅದಕ್ಕೆ ತಕ್ಕಂತೆ ಕಾನೂನನ್ನು ಕೂಡ ಅನೇಕ ರೀತಿಯಲ್ಲಿ ಮಾರ್ಪಾಡು ಮಾಡಿದ್ದಾರೆ. ಆದರೂ ಸಾಲದು. ಸರ್ಕಾರದವರು ಆಗಿಂದಾಗ್ಗೆ ಸರ್ಕ್ಯುಲರ್ ಮೂಲಕ ರೆವಿನ್ಯೂ ಇಲಾಖೆಯಲ್ಲಿರತಕ್ಕ ಎಲ್ಲಾ ಅಧಿಕಾರಿಗಳಿಗೂ ಜಮೀನು ದರಖಾಸ್ತುಗಳ ವಿಲೇವಾರಿಯನ್ನು ಜಾಗ್ರತೆಯಾಗಿಯೂ ಸರಿಯಾದ ರೀತಿಯಲ್ಲಿಯೂ ಮಾಡಬೇಕೆಂದು ತಿಳಿಸುತ್ತಾ ಇದ್ದಾರೆ. ಆದರೂ ಸಹ ನಿರೀಕ್ಷಿಸಿದಷ್ಟು ಮಟ್ಟದಲ್ಲಿ ಈ ಜಮೀನುವಿಲೇವಾರಿ ಆಗುತ್ತಿಲ್ಲ. ರೈತರಿಗೆ ಸರಿಯಾದ ರೀತಿಯಲ್ಲಿ ಜಮೀನು ದೊರಕುತ್ತಾ ಇಲ್ಲ. ಅಹವಾಲು ತಃಖ್ತೆ ನೋಡಿ ಮಂಜೂರ್ಮಾಡಬೇಕೆಂದು ನಿಯಮವಿದ್ದರೂ ಕೂಡ ಯಾರಿಗೆ ಜಮೀನು ಇರುತ್ತದೆಯೋ ಆತನನ್ನು ಬಿಟ್ಟುಬಿಟ್ಟು ಅದೇ ಕುಟುಂಬದಲ್ಲಿರತಕ್ಕ ಇನ್ನೊಬ್ಬನನ್ನು ಬೇರೆ ಕುಟುಂಬದಲ್ಲಿದ್ದಾನೆ ಎಂಬ ಲೆಕ್ಕವನ್ನು ತೋರಿಸಿ ಒಂದೇ ಕುಟುಂಬದ ಎಲ್ಲರೂ ಜಮೀನು ಪಡೆಯುತ್ತಿದ್ದಾರೆಂಬುದನ್ನು ತನಿಖೆ ಮಾಡಬೇಕು. ಕಾರ್ಯತಃ ಜಮೀನಿಲ್ಲದವರಿಗೆ ಏನು ಒಂದು ಆಶೆ ಇದ್ದೆಯೋ ಅದು ನೆರವೇರುತ್ತಾ ಇಲ್ಲ ಎಂದು ಹೇಳುತ್ತೇನೆ. ನಿರ್ಗತಿಕರಾದ ಬಡವರಿಗಂತೂ ಜಮೀನು ದೊರೆಯದೆ, ಯಾರ ಪ್ರಭಾವ ಹೆಚ್ಚಿರುತ್ತದೆಯೋ, ಯಾರಿಗೆ ಜಮೀನಿರುತ್ತದೆಯೋ ಅವರಿಗೇ ಜಮೀನು ದೊರೆಯುತ್ತಿದೆ ಎಂಬ ಭಾವನೆ ಜನರಲ್ಲಿದೆ. ಇದು ಹೋಗಬೇಕೆಂದು ಅನೇಕ ಮಾನ್ಯಸದಸ್ಯರು ಬಹಳ ವರ್ಷಗಳಿಂದಲೂ ಹೇಳುತ್ತಾ ಇದ್ದಾರೆ. ಈಗಲೂ ಈ ವಿಚಾರದಲ್ಲಿ ಎಷ್ಟೋ ಉತ್ತಮವಾಗಿದ್ದರೂ ಕೂಡ ನಿರೀಕ್ಷಿಸಿದಷ್ಟು ಮಟ್ಟಕ್ಕೆ ಬಂದಿಲ್ಲ. ಹರಿಜನರಿಗಂತೂ ಜಮೀನು ದೊರೆಯುತ್ತಿಲ್ಲ. ಎಲ್ಲಿ ನೋಡಿದರೂ ಕೂಡ ಜಮೀನಿಲ್ಲದವರ ಹೆಸರಿನಲ್ಲಿ ಅರ್ಜಿಹಾಕಿ ಜಮೀನುದಾರನೇ ಜಮೀನನ್ನು ಪಡೆಯುತ್ತಾ ಇದ್ದಾನೆ. ಹರಿಜನರ ದರಖಾಸ್ತು ಅರ್ಜಿಯಮೇಲೆ ಮಾತ್ರ. ಎಲ್ಲಿ ನೋಡಿದರೂ ಸ್ಟೇ ಆರ್ಡರು, ಎಲ್ಲಿ ನೋಡಿದರೂ ಅಪೀಲುಗಳು. ಸರ್ಕಾರದಲ್ಲಿರತಕ್ಕ ಲೆಕ್ಕ ತೆಗೆದುಕೊಂಡರೆ ಮಾತ್ರ ಕಾಣುತ್ತದೆಯೇ ಹೊರತು ಹರಿಜನರಿಗೆ ಹೆಚ್ಚಾಗಿ ಜಮೀನು ಮಂಜೂರ್ಮಾಡುತ್ತಿದೆ ಎಂದು ಬಾಯಲ್ಲಿ ಹೇಳಿದರೆ ಕಾಣುವುದಿಲ್ಲ. ಸರ್ಕಾರದವರು ನಾನು ಹೇಳತಕ್ಕದ್ದು ನಿಜವೇ ಅಥವಾ ಸತ್ಯಕ್ಕೆ ದೂರವಾದದ್ದೇ ಎಂಬುದನ್ನು ಪರಿಶೀಲನೆ ಮಾಡಬಹುದು. ಎಲ್ಲಾ ತಾಲ್ಲೂಕುಗಳಲ್ಲೂ ಕೂಡ ಹರಿಜನರಿಗೆ ಸಂಬಂಧಪಟ್ಟ ದರಖಾಸ್ತು ಅರ್ಜಿಗಳು ಹೆಚ್ಚಾಗಿ ಪೆಂಡಿಂಗ್‌ನಲ್ಲಿರುತ್ತವೆ. ಜಮೀನು ಇಲ್ಲದಂಥಾ ರೈತರ ಅರ್ಜಿಗಳು ಎಷ್ಟೋ ಪೆಂಡಿಂಗ್‌ನಲ್ಲಿವೆ. ಇವು ಎಷ್ಟು ಇವೆ, ಎಷ್ಟು ವರ್ಷಗಳಿಂದ ಇವೆ, ಎಲ್ಲ ದರಖಾಸ್ತು ಅರ್ಜಿಗಳೂ ರಿಜಿಸ್ಟರಾಗುತ್ತಿವೆಯೆ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನಪಟ್ಟು ಈ ಅರ್ಜಿಗಳು ಜಾಗ್ರತೆ ವಿಲೇ ಆಗುವಂತ ಮಾಡಿ ಜಮೀನಿಲ್ಲದವರಿಗೆ ಜಮೀನು ದೊರೆಯುವಂತಾದರೆ ನನಗೆ ತೃಪ್ತಿಯಾಗುತ್ತದೆ ಎಂದು ನಾನು ಮನವಿಮಾಡಿಕೊಳ್ಳುತ್ತೇನೆ.

ಆಮೇಲೆ ಈ ಸರ್ವೇ ಇಲಾಖೆಯಲ್ಲಿ 10-20 ವರ್ಷಗಳಿಂದಲೂ ರಿಕಾರ್ಡ್‌ಗಳು ಫೈಸಲಾಗದೆ ಬಾಕಿ ಇವೆ ಎಂದು ಕೇಳಿದ್ದೇನೆ. ಇದು ನಿಜವಾದ ಪಕ್ಷದಲ್ಲಿ ನಾನು ತುಂಬ ವಿಷಾದಪಡುತ್ತೇನೆ. ಸರ್ವೆ ಇಲಾಖೆಯಲ್ಲಿ ಬಹಳ ದಿವಸಗಳಿಂದಲೂ ಈ ರಿಕಾರ್ಡ್‌ಗಳು ಫೈಸಲಾಗದೆ, ಪೋಡ್ ರೆಕಾರ್ಡ್ಸ್ ಬಾಕಿ ಇವೆ. ನಮ್ಮ ಜಿಲ್ಲೆಗೆ ಸಂಬಂಧಪಟ್ಟಂತೆ ಹಾಸನದಲ್ಲಿ ಅಸಿಸ್ಟೆಂಟ್ ಸೂಪರಿಂಟೆಂಡೆಂಟರವರ ಸರ್ವೇ ಆಫೀಸು ಇದೆ. ಅಲ್ಲಿಗೆ ನಮ್ಮ ಜಿಲ್ಲೆಯವರು ಹೋಗಿ ಬರುವುದಕ್ಕೆ ಆಗುವುದಿಲ್ಲ. ರೈತರು ನೇರವಾಗಿ ಆಫೀಸರುಗಳನ್ನು ನೋಡುವುದಕ್ಕೆ ಆಗುವುದಿಲ್ಲ. ಆಗಾಗ್ಗೆ ಈ ಮೇಲ್ಕಂಡ ಸರ್ವೇ ಆಫೀಸರು ಚಿಕ್ಕಮಗಳೂರಿಗೆ ಬರುತ್ತಾರೆ. ಆಗಲೂ ಸಹ ಅವರು ರೈತಾಪಿ ಜನರ ಕೈಗೆ ಸಿಕ್ಕುವುದಿಲ್ಲ. ಇದರಿಂದ ಎಷ್ಟೋ ತೊಂದರೆಯಾಗಿದೆ. ರೈತರಿಗೆ ನೇರವಾಗಿ ಆಫೀಸರುಗಳನ್ನು ಭೇಟಿ ಮಾಡುವ ಅವಕಾಶ ದೊರೆಯದೆ ತಾಲ್ಲೂಕು ಆಫೀಸಿನಲ್ಲಿರತಕ್ಕ ಅಧಿಕಾರಿಗಳನ್ನು ಕೂಡ ನೋಡುವುದಕ್ಕೆ ಅವಕಾಶವಾಗದೇ ಅವರ ಮನವಿಗಳನ್ನು, ಸಲ್ಲಿಸುವುದಕ್ಕೂ ಅವರ ಕುಂದುಕೊರತೆಗಳನ್ನು ಹೇಳಿಕೊಳ್ಳುವುದಕ್ಕೂ ಅವಕಾಶ ದೊರೆಯದೇ ಎಷ್ಟು ತೊಂದರೆಯಾಗಿದೆ ಎಂಬುದನ್ನು ವಿವರಿಸುವುದಕ್ಕೆ ಸಾಧ್ಯವಿಲ್ಲ. ಎಷ್ಟು ರಿಕಾರ್ಡುಗಳು, ಎಷ್ಟು ವರ್ಷಗಳಿಂದ ಪೆಂಡಿಂಗ್‌ನಲ್ಲಿವೆ ಎಂಬುದನ್ನು ಸರ್ಕಾರದವರು ತಿಳಿದುಕೊಳ್ಳುವುದಕ್ಕೆ ಪ್ರಯತ್ನಮಾಡಬೇಕೆಂದು ಸಲಹೆ ಮಾಡಿ, ಈ ಪೋಡ್ ರಿಕಾರ್ಡು ಆದಷ್ಟು ಜಾಗ್ರತೆ ವಿಲೇ ಆಗಬೇಕು ಮತ್ತು ಸರ್ಕಾರದಿಂದ ದರಖಾಸ್ತು ಮೂಲಕ ಪಡೆದಂಥಾ ಜಮೀನು ಪೋಡಿ ರಿಕಾರ್ಡುಗಳು ಕೂಡ ಅನೇಕ ಕಾರಣಗಳಿಂದ ಬಾಕಿ ಇವೆ, ಅವುಗಳನ್ನು ಕೂಡ ಜಾಗ್ರತೆ ವಿಲೇ ಮಾಡುವುದಕ್ಕೆ ಏರ್ಪಾಡುಮಾಡಬೇಕೆಂದು ಕೇಳುತ್ತೇನೆ ಸ್ವಾಮಿ.

ಶ್ರೀ ಜೆ. ನಾರಾಯಣಪ್ಪ (ಚಿಂತಾಮಣಿ—ಅನುಸೂಚಿತ ಜಾತಿಗಳು).—ಸ್ವಾಮಿ, ಈಗ್ಗೆ ಸುಮಾರು ನಾಲ್ಕು ವರ್ಷಗಳಿಂದಲೂ ತೋಟಿ, ತಳವಾರರ ವಿಚಾರದಲ್ಲಿ ನಿರ್ಣಯಗಳನ್ನೂ, ಪ್ರಶ್ನೆಗಳನ್ನೂ ತಿಳಿಸುತ್ತಾ ಇದ್ದೇನೆ. ಆದರೂ ಕೂಡ ಅವರ ವಿಚಾರದಲ್ಲಿ ಯಾವುದೂ ಇತ್ಯರ್ಥವಾಗಲಿಲ್ಲ. ಆ ವಿಚಾರದಲ್ಲಿ ನನಗೆ ಪೂರ್ಣ ಅನುಭವ ಇದೆ, ಸ್ವಾಮಿ. ಗ್ರಾಮಾಂತರಗಳಲ್ಲಿ ಈ ತಳವಾರನಿಗೆ ನಿರ್ದಿಷ್ಟವಾಗಿ ಇಷ್ಟೇ ಘಂಟೆಗಳ ಕಾಲ ಕೆಲಸಮಾಡಬೇಕೆಂಬ ನಿಗದಿ ಇಲ್ಲ. ಹದಿನೆಂಟು ಡಿಪಾರ್ಟ್‌ಮೆಂಟುಗಳ ಆಫೀಸರುಗಳು ಬಂದರೂ ಅವರ ಸೇವೆ ಅವನು ಮಾಡಬೇಕು. ಪಟೇಲ್ ಶ್ಯಾನುಭೋಗರ ಕೈಕೆಳಗೆ ಒಂದು ಘಳಿಗೆಯೂ ಬಿಡುವಿಲ್ಲದೆ ಹಗಲುಹೊತ್ತು ದುಡಿಯುತ್ತಾ ಇರುತ್ತಾರೆ. ಗ್ರಾಮಗಳಲ್ಲಿ ರಾತ್ರಿ ಹೊತ್ತು ಸರದಿ

ಪ್ರಕಾರ ಕಾವಲು ಕಾಯುತ್ತಾರೆ. ಕೆಲವರಿಗೆ ತಿಂಗಳಿಗೆ ಒಂದು ಸಾರಿ ಬೀಳುತ್ತದೆ. ಈ ನೌಕರರು ಮಾತ್ರ ದಿನವೂ ಇರಬೇಕು. ಒಂದು ದಿನ ತಪ್ಪಿದರೆ ಪೋಲೀಸ್‌ನವರು ಹಿಂದೆಯೇ ಬರುತ್ತಾರೆ. ಈ ನೌಕರರಿಗೆ ಇರತಕ್ಕ ಆದಾಯ ಎಂದರೆ ಮಿರಾಸೆ. ನಿಜವಾಗಿಯೂ ಈ ಮಿರಾಸೆ ಎನ್ನುವುದು ನಿರಾಸೆಯಾಗಿದೆ. ಮಿರಾಸೆಯನ್ನು ದೊಡ್ಡ ದೊಡ್ಡವರಾರೂ ಕೊಡುವುದೇ ಇಲ್ಲ. ಸಣ್ಣ ಪುಟ್ಟ 1-2 ಎಕರೆ ಇಟ್ಟು ಕೊಂಡಿರುವವರು ಲೆಕ್ಕಾಚಾರಮಾಡದೇ ಐದುಸೇರು ಕೊಡುವ ಕಡೆ ಮೂರು ಸೇರು ಕೊಟ್ಟು, ಹಿಂದಿನಿಂದ, ನಮ್ಮಪ್ಪನ ಕಾಲದಿಂದ ಇಷ್ಟೇ ಕೊಡುವುದು ಎಂದು ಹೇಳಿಬಿಡುತ್ತಾರೆ. ನಮ್ಮ ಜಿಲ್ಲೆಯಲ್ಲಿ 100-200 ಸೇರು ಕೊಡಬೇಕಾದವರು ಇದ್ದಾರೆ. ಅಂಥವರು ಕೂಡ ಮೊರದಲ್ಲಿ ಎರಡು ಅಥವಾ ಮೂರು ಸೇರು ಇಟ್ಟು 'ಸಾಲದೇನೋ' ಎಂದು ಹೇಳಿ ಕಳುಹಿಸಿಬಿಡುತ್ತಾರೆ. ಇದೆಲ್ಲಾ ನಿಜ. ನಿಜ ಎಂದರೆ ನನ್ನ ಅನುಭವ ಹಾಗಿದೆ. ಈಗ ಯಾವುದಾದರೂ ಒಂದು ಇಲಾಖೆಯನ್ನು ಸ್ಥಾಪನೆಮಾಡಬೇಕಾದರೆ ಒಂದು ಲಕ್ಷ ಆಗಲಿ, ಹತ್ತು ಲಕ್ಷವಾಗಲಿ ಖರ್ಚುಮಾಡುತ್ತೀರಿ. ಮಾಡಿ ಅದನ್ನು ಬೇಗ ಸ್ಥಾಪನೆಮಾಡುತ್ತೀರಿ. ಈ ಬಡ ನೌಕರರ ವಿಚಾರದಲ್ಲಿ ಗುಂಡಪ್ಪ ಗೌಡರ ಕಾಲದಿಂದಲೂ ಕೇಳುತ್ತಾ ಇದ್ದಾರೆ. ಒಂದು ವರ್ಷದ ಹಿಂದೆ ನಾನು ನಿರ್ಣಯವನ್ನು ಈ ಸಭೆಯಲ್ಲಿ ಮಂಡಿಸಿದಾಗ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಉತ್ತರ ಕೊಡುತ್ತಾ, ಬೇಗ ಸಮಿತಿ ಏರ್ಪಡಿಸಿ ಅವರಿಗೆ ಸಂಬಳ ಬರುವ ರೀತಿಯಲ್ಲಿ ಏನಾದರೂ ಏರ್ಪಾಡು ಮಾಡುತ್ತೇವೆ ಎಂದು ಅಪ್ಪಣೆ ಮಾಡಿದರು. ಆದರೂ ಕೂಡ ಇದುವರೆಗೂ ಆ ಸಮಾಚಾರವೇ ಇಲ್ಲ. ಈಗ ಅವರಿಗೆ ದವಸದ ರೂಪದಲ್ಲಿ ಕೊಡಿಸುತ್ತೇವೆ ಎಂದು ಹೇಳುತ್ತೀರಿ. ರೈಲ್ವೇ ಸೆಸ್ಸು, ಎಜ್ಯುಕೇಷನ್ ಸೆಸ್ಸು ಎಂಬುದಾಗಿ ಅನೇಕ ಸೆಸ್ಸುಗಳನ್ನು ಹಾಕಿ ವಸೂಲು ಮಾಡುತ್ತೀರಿ ; ಅದೇ ರೀತಿ ಮಿರಾಸೆ ಸೆಸ್ಸು ಎಂದು ಹೇಳಿ ಹಾಕಿ ವಸೂಲುಮಾಡಿ ಅದನ್ನು ತೋಟಿ ತಳವಾರರಿಗೆ ದವಸದ ರೂಪದಲ್ಲಿ ಕೊಡುವುದಕ್ಕೆ ಬದಲಾಗಿ ಸಂಬಳದ ರೂಪದಲ್ಲಿ ಕೊಡುವ ಏರ್ಪಾಡುಮಾಡಿದರೆ ಒಳ್ಳೆಯದು. ವಂಶಪಾರಂಪರ್ಯವಾಗಿ ಬಂದಿದ್ದಾರೆ ಎಂದ ಮಾತ್ರಕ್ಕೆ ಅವರನ್ನೆಲ್ಲಾ ಖಾಯಂಮಾಡಬೇಡಿ, ಯಾರು ಸರಿಯಾಗಿ ಕೆಲಸಮಾಡುತ್ತಾರೆಯೋ ಅಂಥವರನ್ನು ಆರಿಸಿಕೊಂಡು ಕೆಲಸಮಾಡುವುದಕ್ಕೆ ತಕ್ಕಂತೆ ಸಂಬಳ ಕೊಡುವುದು ಉತ್ತಮ. ಅವರ ಕಷ್ಟ ಇಷ್ಟು ಅಷ್ಟು ಎಂದು ಹೇಳುವುದಕ್ಕಾಗುವುದಿಲ್ಲ. ಅವನಿಗೆ ಇನಾಂ ಜಮೀನು ಕೊಟ್ಟಿರುತ್ತೀರಿ. ಆದರಲ್ಲಿ ಅವನು ಯಾವಾಗ ಕೆಲಸಮಾಡಬೇಕು? ಅವನಿಗೆ ಬಿಡುವೇ ಇಲ್ಲ. ರಾತ್ರಿ ಹಗಲು ಗ್ರಾಮದ ಕಾವಲು ಕಾದು ಇರಬೇಕು. ಪಟೇಲ್ ಶ್ಯಾನುಭೋಗರಿಂದ ಹಿಡಿದು ಬಂದು ಹೋದ ಆಫೀಸರುಗಳ ಕೆಲಸ ನೋಡಬೇಕು. ಈಗ ಈ ಜಮೀನುಗಳು ಬೀಡು ಬಿದ್ದಿರುತ್ತವೆ. ಅದನ್ನು ನೋಡುವವರೂ ಇಲ್ಲ. ಇವರಿಗೆ ಕೊಡತಕ್ಕ ಮಿರಾಸೆ ಪದ್ಧತಿಯನ್ನು ತಪ್ಪಿಸಿ; ಸ್ವಾತಂತ್ರ್ಯ ಬಂದುದಕ್ಕೆ ಇದು ಒಂದು ಗುರುತಾಗಲಿ. ನಾವು ಯಾವಾಗ ಹೇಳಿದರೂ ಮಾಡುತ್ತೇವೆ ಎನ್ನುವುದರಲ್ಲಿ ಇದೆಯೇ ಹೊರತು ಮಿರಾಸೆ ವಿಚಾರದಲ್ಲಿ ಸರ್ಕಾರದವರು ಮಾತುಕೊಟ್ಟ ಮೇಲೆ ಎಷ್ಟೋ ಕೆಲಸಗಳಾಗಿವೆ, ಆದರೆ ಇದು ಮಾತ್ರ ಆಗಿಲ್ಲ ; ಇದು ಬಹಳ ಅನ್ಯಾಯ.

ಜಮೀನು ವಿಷಯದಲ್ಲಿ ಒಂದೇ ಒಂದು ಮಾತು ಹೇಳುತ್ತೇನೆ. ಅನೇಕ ಕಡೆಗಳಲ್ಲಿ ಗೋಮಾಳ ಇಲ್ಲವೆಂದು ಹೇಳುತ್ತಾರೆ. ಒಂದೊಂದು ಗ್ರಾಮಕ್ಕೆ 10-15 ಎಕರೆ ಗೋಮಾಳ ಇರಬೇಕಾದರೆ ಪಕ್ಕದಲ್ಲಿ ಅರಣ್ಯ (forest) ಇರುತ್ತದೆ. ಅಕ್ಕಪಕ್ಕದ ಗ್ರಾಮಗಳ ಗೋಮಾಳವಿರುತ್ತದೆ. ಅದರಲ್ಲಿ ದನಗಳನ್ನು ಅಲ್ಲಿ ಮೇಯಿಸುತ್ತಾರೆ. ನೂರಾರು ಎಕರೆಗಳ ಗೋಮಾಳವಿರತಕ್ಕ ಗ್ರಾಮಗಳೂ ಇರುತ್ತವೆ. ದನಗಳನ್ನೆಲ್ಲ ಕಾಡಿನಲ್ಲಿ ಮೇಯಿಸಿಕೊಂಡು ಸುಮ್ಮನೆ ಗೋಮಾಳವನ್ನು ಇಟ್ಟುಕೊಂಡಿರುತ್ತಾರೆ. ಇಂತಹ ನಿದರ್ಶನಗಳು ಅನೇಕವಿವೆ. 10 ಎಕರೆ ಗೋಮಾಳ ಎನ್ನುವುದಕ್ಕೆ ಬದಲಾಗಿ ಅದಷ್ಟು ಇದನ್ನು ಕಡಿಮೆಮಾಡಿ, ಗ್ರಾಮದ ಪಕ್ಕದಲ್ಲಿರುವ ಕಾಡಿನಲ್ಲಿ ದನಗಳನ್ನು ಮೇಯಿಸಿಕೊಳ್ಳುವಂತೆ ಮಾಡಿದರೆ ಎಷ್ಟೋ ಅನುಕೂಲವಾಗುತ್ತದೆ. ಚಿಂತಾಮಣಿ ಟೌನ್‌ಗೆ ಸೇರಿದ ಮಾಳಪ್ಪಳ್ಳಿ ಎಂಬ ಗ್ರಾಮವಿದೆ. ಈ ಗ್ರಾಮದಲ್ಲಿ 1951ರಲ್ಲಿ 9 ಜನರಿಗೆ ಒಬ್ಬೊಬ್ಬರಿಗೆ ಎರಡೆರಡು ಎಕರೆಯಂತೆ ಡೆಪ್ಯುಟಿ ಕಮಿಷನರು ವಿಲೇಮಾಡಿದರು. ಟೌನಿಗೆ ಗೋಮಾಳಬೇಕಾಗಿಲ್ಲವೆಂದು ಈ ರೀತಿ ಕೊಟ್ಟರು. ಇದಕ್ಕೆ ಸಾಗುವಳಿ ಚೀಟಿ ಸಹ ಕೊಟ್ಟು ಎರಡು ವರ್ಷಗಳ ಕಾಲ ವ್ಯವಸಾಯ ಮಾಡಿದರು. ಅನಂತರ ಕೆಲವು ಮುಖಂಡರು, ರೆವೆನ್ಯೂ ಕಮಿಷನರ್‌ರವರಲ್ಲಿ ಅಪೀಲುಮಾಡಿ ಅದನ್ನು ವಜಾಮಾಡಿಸಿದ್ದಾರೆ. ಈಗ ಆ ಜನರು ಗ್ರಾಮ ಬಿಟ್ಟುಹೋಗುವುದಕ್ಕೂ ಇಲ್ಲ ಅಲ್ಲಿಯೇ ಇರುವುದಕ್ಕೂ ಇಲ್ಲ ಹೀಗೆ ತೊಂದರೆಯಾಗಿದೆ. ನಾನಾಗಲೇ ಹೇಳಿದಂತೆ ಟೌನ್‌ಗಳಿಗೆ ಗೋಮಾಳ ಬೇಕಾಗಿಲ್ಲ. ಯಾಕೆಂದರೆ ಅಲ್ಲಿ ದನಗಳು ಹೆಚ್ಚಾಗಿ ಇರುವುದಿಲ್ಲ. ಆದರೂ ಅನ್ಯಾಯ ಮಾಡಿದ್ದಾರೆ. ಈ ವಿಚಾರದಲ್ಲಿ ಒಂದು ಅರ್ಜಿಯನ್ನೂ ಸಹ ಕೊಡಿಸಿದ್ದೆ. ಅರ್ಜಿಯನ್ನು ಕೊಟ್ಟಿದ್ದರೂ ಅದನ್ನು ಏನು ಮಾಡಿದರೋ, ಅದು ಏನಾಯಿತೋ ಗೊತ್ತಿಲ್ಲ. ಇಂಥ ನಿದರ್ಶನಗಳು ಅನೇಕವಿವೆ. ಈ ವಿಚಾರದಲ್ಲಿ ಸರಿಯಾದ ಪರಿಶೀಲನೆಮಾಡಬೇಕು ಎಂದು ಹೇಳುತ್ತೇನೆ.

ಪೊಲಿಟಿಕಲ್ ಸಫರರ್ಸ್‌ಗೆ ಜಮೀನು ಕೊಡುತ್ತಿದ್ದಾರೆ. ಇದರಲ್ಲಿ ಸರಿಯಾದ ನೀತಿಯನ್ನನುಸರಿಸುತ್ತಿಲ್ಲ. ಉದಾಹರಣೆಗೆ ಶ್ರೀನಿವಾಸಪುರದ ತಾಲ್ಲೂಕು ಚಲ್ದಿಗಾನ ಹಳ್ಳಿಯಲ್ಲಿ ಜಮೀನು ಇಲ್ಲದೇ ಇರುವವರು ಅನೇಕರು ಜಮೀನಿಗಾಗಿ ಅಲೆಯುತ್ತಿದ್ದಾರೆ. ಆದರೆ 100 ಎಕರೆ, 200 ಎಕರೆ ಜಮೀನು ಹೊಂದಿರುವ (ಪೊಲಿಟಿಕಲ್ ಸಫರರ್ಸ್) ರಾಜಕೀಯದಲ್ಲಿ ನೊಂದಿರುವವರಿಗೆ ಜಮೀನು ವಿಲೇವಾರಿಯಾಗಿದೆ ಎಂದು ತಿಳಿದಿದ್ದೇನೆ. ರಾಜಕೀಯದಲ್ಲಿ ನೊಂದವರು ಎಂದರೆ ಬಡವರೂ ಮತ್ತು ಜಮೀನಿಲ್ಲದವರೂ ಆಗಿದ್ದರೆ ಅಂಥವರಿಗೆ ಕೊಡುವುದು ನ್ಯಾಯವೂ, ಧರ್ಮವೂ ಆಗಿದೆ. ಆದರೆ ಜಮೀನಿಲ್ಲದಿರುವವರು ಜಮೀನು ಕೊಡಿ ಎಂದು ಅಲೆಯುತ್ತಿದ್ದರೂ ಸಹ ಜಮೀನು ಹೊಂದಿರುವವರಿಗೇ ಕೊಡುತ್ತಿದ್ದಾರೆಂಬ ದೂರು ಬಂದಿದೆ.

ಅಧ್ಯಕ್ಷರು.—ಜಮೀನು ಇಲ್ಲದವರಿಗೆ ಮಾತ್ರ ಕೊಡಬೇಕೆಂದು ಆರ್ಡರಾಗಿದೆ.

ಶ್ರೀ ಜೆ. ನಾರಾಯಣಪ್ಪ.—ನಮ್ಮ ಊರಿನ ಹತ್ತಿರ ಬಂದಾರ್ಲಹಳ್ಳಿ ಗ್ರಾಮವಿದೆ. ಅಲ್ಲಿ ಜಮೀನು ಹರಿಜನರಿಗೆ ವಿಲೇವಾರಿಯಾಗಿದ್ದು ಅನಂತರ ಸರ್ಕಾರದ ಆಜ್ಞೆಯಾಗಿ ವಜಾ ಆಯಿತು. ಇಂಥ ಜಮೀನಿಗೆ ಈಗ ಇಬ್ಬರು ಅರ್ಜಿಹಾಕಿದ್ದಾರೆ. ಈ ಸರ್ವೆ ನಂಬರು 22ರಲ್ಲಿ 86 ಎಕರೆ, 24 ಗುಂಟೆ ಜಮೀನಿದೆ. ಈ ಜಮೀನಿನ ನೀರು ಕುರುಬೂರ್ ಅಮಾನಿಕೆರೆಗೆ ಹೋಗುತ್ತದೆ. ಹರಿಜನರ ವಿಚಾರದಲ್ಲಿ ಈ ಜಮೀನನ್ನು ಕೊಡಕೂಡದೆಂದು ಮಾಡಿದ್ದರು. ಆದರೆ ರಾಜಕೀಯದಲ್ಲಿ ನೊಂದವರಿಗೆ (political sufferers) ಒಬ್ಬೊಬ್ಬ

(ಶ್ರೀ ಜಿ. ನಾರಾಯಣಪ್ಪ.)

ರಿಗೆ 20 ಎಕರೆ, 15 ಎಕರೆ ಹೀಗೆ ಕೊಡಬೇಕೆಂದು ಸಿಫಾರಸುಮಾಡಿದ್ದಾರೆಂದು ನನಗೆ ತಿಳಿದು ಬಂದಿದೆ. ನನಗೆ ಹೆಚ್ಚು ಕಾಲವಿಲ್ಲ. ಇಂಥ ವಿಚಾರಗಳಲ್ಲಿ ಸರ್ಕಾರದವರು ಸರಿಯಾಗಿ ಪರ್ಯಾಲೋಚನೆಮಾಡಿ ಬಡವರಿಗೆ ಜಮೀನು ಸಲ್ಲುವಂತೆ ಮಾಡಬೇಕು. Political sufferers ಎಂದರೆ ಸ್ವಾತಂತ್ರ್ಯ ಬಂದಿರುವಾಗ ಒಬ್ಬೊಬ್ಬರೂ ಬಟ್ಟೆ ಹಾಕಿಕೊಂಡು ಹೆಚ್ಚಿಗೆ ತಿರುಗಾಡುವವರು ಮಾತ್ರ political sufferers ಅಲ್ಲ. ನಮಗೆಲ್ಲ ಓಟು ಕೊಟ್ಟು ನಮ್ಮನ್ನು ಮುಂದೆ ತಂದಿರುವವರು political sufferers. ಬಡವರೂ ನಮಗೆ ಸಹಾಯ ಮಾಡಿದವರೂ, ಹರಿಜನರೂ, ಸ್ವಾತಂತ್ರ್ಯ ಬಂದೀತು, ಅವಾಗ ನಮಗೆಲ್ಲ ಅನುಕೂಲವಾಗುತ್ತದೆಂದು ಭಾವಿಸಿದ್ದರು. ಆದುದರಿಂದ ಬಡವರಿಗೂ, ಜಮೀನಿಲ್ಲದವರಿಗೂ ಸಹಾಯಮಾಡಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಡಿ. ಎಂ. ಗೋವಿಂದರಾಜು (ನೆಲಮಂಗಲ).—ಮಾನ್ಯ ಅಧ್ಯಕ್ಷರೇ, ಈ ಖೋತಾ ನಿರ್ಣಯದಲ್ಲಿ ಮುಖ್ಯವಾಗಿ ನಮ್ಮ ಮೈಸೂರು ದೇಶದಲ್ಲಿ ಗ್ರಾಮ ನೌಕರರ ವಿಷಯದಲ್ಲಿ ನಮ್ಮ ಸರ್ಕಾರ ಯಾವ ರೀತಿ ನಡೆಯುತ್ತಿದೆ, ಗ್ರಾಮ ನೌಕರರ ವಿಷಯದಲ್ಲಿ ಯಾವ ವಿಷಯದಲ್ಲಿ ಯಾವ ರೀತಿ ನಮ್ಮ ಸರ್ಕಾರದ ಆಡಳಿತ ನಡೆಯುತ್ತಿದೆ ಎಂಬ ವಿಚಾರವಾಗಿ ಕೆಲವು ಅಂಶಗಳನ್ನು ಹೇಳಬೇಕೆಂದು ನಿಂತಿದ್ದೇನೆ. ಮುಖ್ಯವಾಗಿ ಗ್ರಾಮಗಳಲ್ಲಿ ಗ್ರಾಮ ನೌಕರರು, ಪಟೇಲ್ ಮತ್ತು ಶ್ಯಾನುಭೋಗರು ಬಹಳ ಹಿಂದಿನ ಕಾಲದಿಂದಲೂ, ಅನಾದಿ ಕಾಲದಿಂದಲೂ ಸರ್ಕಾರಕ್ಕೆ ಹೆಚ್ಚಿನ ಸೇವೆಯನ್ನು ಸಲ್ಲಿಸುತ್ತಿದ್ದಾರೆಂಬುದು ನಿರ್ವಿವಾದವಾದ ಸಂಗತಿ. ಯಾಕೆಂದರೆ ಅವರುಗಳಿಲ್ಲದೆ ಯಾವ ಕೆಲಸವೂ ನಡೆಯುವಂತಿಲ್ಲ. ಒಂದು ಗ್ರಾಮದಲ್ಲಿ ಗ್ರಾಮಾಭಿವೃದ್ಧಿಯಾಗಲಿ, ಯಾವ ಕೆಲಸ ಕಾರ್ಯಗಳೇ ಆಗಲಿ ಆಗಬೇಕಾದರೆ ಇವರುಗಳು ಮುಖ್ಯವಾಗಿ ಇರಬೇಕು. ಈ ಗ್ರಾಮ ನೌಕರರುಗಳಿಗೆ ಕೊಡತಕ್ಕ ಪೋಟಗಿ ವಿಷಯ ಹೇಳಿದರೆ ಖಂಡಿತವಾಗಿಯೂ ನಾಚಿಕೆಯಾಗುತ್ತದೆ. ಈಗ ನಮ್ಮ ಸ್ನೇಹಿತರೊಬ್ಬರು ಏಳು ರೂಪಾಯಿಗಳ ಪೋಟಿಗಿ ಪಡೆದು ಕೆಲಸ ಮಾಡುತ್ತಿದ್ದಾರೆ. ಇದು ನಿಜವಾದ ಸಂಗತಿ. ಈ ರೀತಿ ಐದು ರೂಪಾಯಿ, ಏಳು ರೂಪಾಯಿ, ಹತ್ತು ರೂಪಾಯಿ ಹೀಗೆ ಪೋಟಿಗಿಯನ್ನು ಪಡೆದು ಪಟೇಲರು ಮತ್ತು ಶ್ಯಾನುಭೋಗರು ಕೆಲಸ ಮಾಡುತ್ತ ಹೋದರೆ ಖಂಡಿತವಾಗಿಯೂ ಅವರಿಗೆ ಗೌರವವಿರುವುದಿಲ್ಲ, ಒಂದು ಸುಖವಿರುವುದಿಲ್ಲ. ಆದುದರಿಂದಲೇ ಅಧಿಕಾರಿಗಳು ಇವರನ್ನು ತುಚ್ಛವಾಗಿ ಕಾಣುತ್ತಾರೆ ಎಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಈ ಸರ್ಕಾರ ಬಂದ ಮೇಲೂ ಕೂಡ ಗ್ರಾಮಾಧಿಕಾರಿಗಳ ವಿಷಯದಲ್ಲಿ ಬಹಳ ತುಚ್ಛವಾಗಿ ಕಾಣುತ್ತಾರೆ. ಆದುದರಿಂದ ಇದೆಲ್ಲ ತಪ್ಪಬೇಕು. ಇದಾಗಬೇಕಾದರೆ ಪಟೇಲ್ ಮತ್ತು ಶ್ಯಾನುಭೋಗರನ್ನು ವಜಾಮಾಡಿ, ಇಲ್ಲವೇ ಅವರಿಗೆ ಸರಿಯಾದ ಸಂಬಳ ಕೊಡಿ. ಇವರನ್ನು ವಜಾ ಮಾಡುತ್ತೇವೆಂದು ಬಾಯಲ್ಲಿ ಹೇಳುತ್ತಿದ್ದೀರೇ ಹೊರತು ಇದ ವರೆಗೂ ಆ ರೀತಿ ಮಾಡುವುದಕ್ಕೆ ಆಗಿಲ್ಲ. ಇವರನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳುವುದಕ್ಕೆ ಆಗಿಲ್ಲ. ಅವರುಗಳು ಚುನಾವಣೆಗಳಿಗೆ ನಿಲ್ಲಬೇಕು ಎಂದರೆ ಅದಕ್ಕೆ ಅವಕಾಶ ಇಲ್ಲ. ಆತನು ಈ ಸಂಬಂಧದಲ್ಲಿ ಸರ್ಕಾರಿ ನೌಕರನೆಂದೇ ಪರಿಗಣಿಸಲ್ಪಡುತ್ತಾನೆ. ಆದರೆ ಇವರಿಗೆ ದೊರೆಯುತ್ತಿರುವ ಪ್ರತಿಫಲ ಅತ್ಯಲ್ಪ. ಆದುದರಿಂದ ಪಟೇಲ್ ಶ್ಯಾನುಭೋಗರುಗಳಿಗೆ ಸರಿಯಾದ ಸಂಬಳ ಕೊಟ್ಟು ಅವರನ್ನು ನೇಮಕ ಮಾಡಬೇಕು ಮತ್ತು ಅವರ ಸ್ಥಿತಿಯನ್ನು ಉತ್ತಮಪಡಿಸಬೇಕು. ಸಾಧ್ಯವಾದ ಕಡೆಗಳಲ್ಲೆಲ್ಲ ಸಂಬಳದ ಮೇಲೆ ಪಟೇಲ್ ಮತ್ತು ಶ್ಯಾನುಭೋಗರ ಸ್ಥಾನಗಳಿಗೆ ಅರ್ಹರಾದವರನ್ನ ನೇಮಿಸಬೇಕು. ಈ ರೀತಿ ಮಾಡದೆ ಹೋದರೆ ನಾವು ಯಾವ ಉದ್ದೇಶ ಸಾಧನೆ ಮಾಡಬೇಕು ಎಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆಯೋ ಅದನ್ನು ಖಂಡಿತವಾಗಿಯೂ ಸಾಧನೆ ಮಾಡಿದಂತಾಗುವುದಿಲ್ಲ.

ಮುಖ್ಯವಾಗಿ ಅರ್ಜಿಗಳ ವಿಲೇವಾರಿಯ ವಿಷಯದಲ್ಲಿ ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಓಬೇರಾಯನ ಕಾಲದ ಪದ್ಧತಿಯೇ ನಡೆದುಕೊಂಡು ಬರುತ್ತಿದೆ. ಇದು ತಪ್ಪಬೇಕು. ಇಲ್ಲದೆ ಇದ್ದರೆ ನಾವು ಯಾವ ಜನತೆಯ ಪರವಾಗಿ ಇಲ್ಲಿಗೆ ಬಂದಿದ್ದೇವೆಯೋ, ಜನತೆಗೆ ಯಾವ ಭರವಸೆಯನ್ನು ಕೊಟ್ಟಿದ್ದೇವೆಯೋ ಅದು ಖಂಡಿತವಾಗಿಯೂ ಸಾರ್ಥಕವಾಗುವುದಿಲ್ಲ. ಬಡವನಿಗೆ ಅವನು ಕೊಟ್ಟ ಅರ್ಜಿಗೆ ಜವಾಬು ಕೊಟ್ಟು ಅದನ್ನು ಎರಡು ತಿಂಗಳೊಳಗಾಗಿ ಫೈಸಲ್ಮಾಡಿದಲ್ಲಿ ರೈತನಿಗೆ ಎಷ್ಟೋ ಸಹಾಯವಾಗುತ್ತದೆ. ಇದು ನಿಮಿಷಗಳ ಕೆಲಸ. ಅದಕ್ಕೆ ಸುಮಾರು ಮೂರು ನಾಲ್ಕು ತಿಂಗಳು ತಾಲ್ಲೂಕು ಆಫೀಸಿಗೆ ಸುತ್ತಬೇಕು. ಈ ರೀತಿ ಮಾಡದೆ ಇದ್ದರೆ ನಾವು ಯಾವ ಉದ್ದೇಶಕ್ಕಾಗಿ ಸ್ವರಾಜ್ಯವನ್ನು ಸಂಪಾದನೆ ಮಾಡಿದ್ದೇವೆಯೋ ಅದು ಖಂಡಿತವಾಗಿಯೂ ಸಫಲವಾಗುವುದಿಲ್ಲ. ಈ ಪದ್ಧತಿಯನ್ನು ವಾಪರ್ಾಟುಮಾಡಬೇಕು.

ಈಗ ಮುಖ್ಯವಾಗಿ ಎಲ್ಲ ಕಾರ್ಯಗಳಿಗೂ ರೆವೆನ್ಯೂ ಇಲಾಖೆ ಇದೆ. ಯಾವ ಕೆಲಸವನ್ನೂ ರೆವೆನ್ಯೂ ಇಲಾಖೆಗೆ ವಹಿಸುತ್ತಾರೆ. ಅವರಿಗೆ ಏನೇನು ಸೌಕರ್ಯ ಕೊಟ್ಟಿದ್ದೀರಿ ! ಯಾವ ಅನುಕೂಲಮಾಡಿದ್ದೀರಿ ! ಒಬ್ಬ ತಾಲ್ಲೂಕು ಅಮಲ್ದಾರ್ಅವರಿಗೆ ಸುಮಾರು 300–400 ಗ್ರಾಮಗಳಿವೆ. ಈ ಗ್ರಾಮಗಳನ್ನೆಲ್ಲ ಸಂಚರಿಸಿ ಬಡವರ ಕೆಲಸ ಕಾರ್ಯಗಳನ್ನು ಮಾಡಬೇಕಾದರೆ ಅವರಿಗೆ ವಾಹನ ಸೌಕರ್ಯವಿಲ್ಲ. ಕಡೇ ಪಕ್ಷ ಶ್ರೀ ಚಂದ್ರಶೇಖರಯ್ಯನವರು ಹೇಳಿದ ಹಾಗೆ ಪ್ರತಿಯೊಬ್ಬ ಅಮಲ್ದಾರರಿಗೂ ಒಂದೊಂದು 'ಜೀಪ್' ಕೊಟ್ಟರೆ ಕೆಲಸಕಾರ್ಯಗಳು ತೀವ್ರವಾಗಿ ಆಗುವುದಕ್ಕೆ ಅವಕಾಶವಾಗುತ್ತದೆ. ಇದಕ್ಕೆ ಲಕ್ಷಾಂತರ ರೂಪಾಯಿಗಳು ಖರ್ಚಾಗಬಹುದು. ಆದರೆ ಸರಿಯಾದ ಕಾರ್ಯಕ್ಕೆ ಖರ್ಚು ಮಾಡುವುದಕ್ಕೆ ಹಿಂದೆ ಹೋಗಬಾರದು. ಕೆಲವು ಬಾಬುಗಳಿಗೆ ಬೇಕಾದಷ್ಟು ಖರ್ಚುಮಾಡುತ್ತ ಇರುವುದು ತಮಗೆಲ್ಲ ಗೊತ್ತಿದೆ. ಒಬ್ಬ ಅಮಲ್ದಾರರಿಗೆ ಒಂದು ಜೀಪ್ ಕೊಟ್ಟರೆ ಅದಕ್ಕೆ ಹಣ ಖರ್ಚಾಗುತ್ತದೆ, ಆದರೆ ರೈತನಿಗೆ ಇದರಿಂದ ಅನುಕೂಲವಾಗುವುದೇ ಸಾಕ್ಷಿಯಾಗಿರುವುದರಿಂದ ಈ ವಿಷಯವನ್ನು ಬಹಳ ಚೆನ್ನಾಗಿ ಯೋಚನೆಮಾಡಬೇಕು.

ಜಮೀನು ವಿಲೇವಾರಿ ಮಾಡುವಾಗ ಜಮೀನಿಲ್ಲದವರಿಗೆ ಕೊಡಬೇಕು ಎಂದಿದೆ. ಯಾರೇ ಆಗಲಿ, ಜಾತಿ ಮತಗಳ ಭೇದವಿಲ್ಲದೆ ಕೊಡಬೇಕು. ಜಮೀನು ಇಲ್ಲದೆ ಇರುವವರು ಜಮೀನು ಕೊಡಿ ಎಂದು ಎಂಟು ವರ್ಷಗಳಿಂದ ಪ್ರಯತ್ನ ಮಾಡಿದರೂ ಸಾಧ್ಯವಾಗದೆ ಇದ್ದರೆ ಅದಕ್ಕೆ ಏನು ಹೇಳಬೇಕು ? ಹೇಗಾದರೂ ಮಾಡಿ ಇಂಥ ಜನರಿಗೆ ಜಮೀನು ಕೊಟ್ಟು ಉದ್ಧಾರಮಾಡಬೇಕು. ಅನೇಕ ಜನರಿಗೆ ಒಂದು ಎಕರೆ ಜಮೀನೂ ಇಲ್ಲ. ಒಂದು ಸಂಸಾರಕ್ಕೇ ಕಡೆಯ ಪಕ್ಷ ನಾಲ್ಕು ಎಕರೆ ಜಮೀನಾದರೂ ಕೊಡಿ ಎಂದರೆ ಸರ್ಕಾರದವರಿಗೆ ಕೊಡುವುದಕ್ಕೆ ದಕ್ಷತೆ ಮತ್ತು ಶಕ್ತಿ ಇಲ್ಲದೆ ಇದ್ದ

ಮೇಲೆ ನಾವು ಯಾಕೆ ಇಲ್ಲಿ ಸದಸ್ಯರಾಗಿರಬೇಕು ? ಹೊಟ್ಟೆ ತುಂಬ ಅನ್ನ, ಮೈ ತುಂಬ ಬಟ್ಟೆ ಕೊಡಬೇಕೇ ಹೊರತು ಬರೀ ಮಾತಿನಿಂದ ಪ್ರಯೋಜನವಾಗುವುದಿಲ್ಲ. ಮುಖ್ಯವಾಗಿ ಹೇಳಬೇಕೆಂದರೆ ಗ್ರಾಮಗಳ ವಿಷಯದಲ್ಲಿ ನಮ್ಮ ಸರ್ಕಾರದವರು ಎಷ್ಟು ಮಟ್ಟಿನ ನಿಗಾ ತೆಗೆದು ಕೊಳ್ಳಬೇಕೋ ಅಷ್ಟನ್ನು ತೆಗೆದುಕೊಳ್ಳುತ್ತಿಲ್ಲ. ಅವರು ಎಷ್ಟೋ ಕೆಲಸಗಳನ್ನು ಮಾಡಿದ್ದಾರೆ. ಆದರೆ ಮಾಡಬೇಕಾದ ಕೆಲಸ ಇನ್ನೂ ಬಹಳವಿದೆ. ಅದ ಕ್ಕೋಸ್ಕರ ಗ್ರಾಮಾಂತರ ರೈತರ ವಿಷಯದಲ್ಲಿ ಇನ್ನೂ ಹೆಚ್ಚು ನಿಗಾ ತೆಗದುಕೊಳ್ಳಬೇಕೆಂದು ಹೇಳುತ್ತೇನೆ.

ಬೆಂಗಳೂರು, ಮೈಸೂರು ಇಂಥ ಪಟ್ಟಣಗಳಲ್ಲಿ ನೀರಿನ ಸೌಕರ್ಯ ಮಾಡಬೇಕಾಗಿದ್ದರೆ ಎಷ್ಟೋ ಹಣ ಖರ್ಚು ಮಾಡುತ್ತೀರಿ. ಅದೇ ಗ್ರಾಮಗಳಲ್ಲಿ ಒಂದು ಬಾವಿ ಕೇಳಿದರೆ ಕೊಡುತ್ತಿಲ್ಲ. ಪಟ್ಟಣಗಳಲ್ಲಿ ಮನೆ ಮನೆಗೂ ನಲ್ಲಿಗಳು ಇರುತ್ತವೆ, ಹಳ್ಳಿಗಳಲ್ಲಿ ಒಂದು, ಎರಡು, ಮೂರು ಫರ್ಲಾಂಗುಗಳ ದೂರದಿಂದ ನೀರು ತರಬೇಕು. ಇದು ಬಹಳ ಕಷ್ಟವಾಗಿದೆ. ಇದನ್ನೆಲ್ಲ ಸರಿಪಡಿಸಬೇಕು.

Ex-servicemen ಎಂದು ಜಮೀನು ಕೊಡು ತ್ತಾರೆ. ಅವರು ಎಲ್ಲೋ ಇರುತ್ತಾರೆ. ಜಮೀನನ್ನು ಮಾಡುವವರು ಯಾರೋ ಇರುತ್ತಾರೆ. ದೊಡ್ಡ ದೊಡ್ಡವರು ಈ ಜಮೀನುಗಳ ಬೆಳೆಯನ್ನು ತಿನ್ನು ತ್ತಾರೆ. ನಾನು ಯಾಕೆ ಇದನ್ನು ಹೇಳುತ್ತಿದ್ದೇನೆಂದರೆ ನಮ್ಮ ತಾಲ್ಲೂಕಿನಲ್ಲಿ ಕೃಷ್ಣರಾಜಪುರ ಪ್ಲಾಂಟೇಷನ್ ಇದೆ. ಸುಮಾರು ಹತ್ತು ವರ್ಷಗಳಿಂದಲೂ ಬಡ ಜನರಿಗೆ ಈ ಪ್ಲಾಂಟೇಷನ್‌ನಲ್ಲಿ ಜಮೀನು ಕೊಡಿ ಎಂದು ಕೇಳು ತ್ತಿದ್ದರೆ ಅದು ಅವರ ಕಿವಿಗೇ ಬೀಳಲಿಲ್ಲ. ಆದರೆ ಯಾರೋ ಒಬ್ಬರಿಗೆ ಭಾರಿ ಕೈಗಾರಿಕೆ ಸ್ಥಾಪನೆ ಮಾಡ ಬೇಕು ಎಂದು ಕೊಟ್ಟಿದ್ದಾರೆ. ಅಲ್ಲಿ ಕೈಗಾರಿಕೆಯೂ ಇಲ್ಲ, ಏನೂ ಇಲ್ಲ, ಯಾರೋ ಒಬ್ಬರು ಆ ಜಮೀನನ್ನು ಸಾಗುವಳಿ ಮಾಡಿಕೊಂಡು ಸುಖವಾಗಿ ತಿನ್ನುತ್ತಿದ್ದಾರೆ. ಬಡ ಜನರಿಗೆ ಒಂದು ಎಕರೆ ಜಮೀನು ಕೊಡುವುದ ಕ್ಕಾಗಲಿಲ್ಲ. ಯಾಕೆ ಕೊಡಲಿಲ್ಲ ? ಇಂಥ ಸರ್ಕಾರ ಯಾಕೆ ಇರಬೇಕು ? ಅಸೆಂಬ್ಲಿ ಸೇರುವುದಕ್ಕೆ ಮಾತ್ರವೇ ಸರ್ಕಾರ ಇರುವಂತೆ ತೋರುತ್ತದೆ. ಬಡ ಜನರಿಗೆ ಯಾವ ರೀತಿ ಅನುಕೂಲ ಮಾಡಿಕೊಡಬೇಕು, ಯಾವ ರೀತಿ ಸಹಾಯಮಾಡಬೇಕು ಎನ್ನುವುದನ್ನು ಯೋಚನೆ ಮಾಡಬೇಕು. ಅದಕ್ಕೋಸ್ಕರ ನಾನು ತಮ್ಮನ್ನು ಪ್ರಾರ್ಥನೆ ಮಾಡುವುದು ಏನೆಂದರೆ ಇನ್ನು ಮುಂದೆ ಯಾದರೂ ಕೂಡ ಸರ್ಕಾರದವರು ಗ್ರಾಮಾಂತರ ಪ್ರದೇಶಗಳಲ್ಲಿರುವ ಬಡಜನರ ಸ್ಥಿತಿಗತಿಗಳೇನು, ಯಾವ ರೀತಿ ಇದೆ, ಅವರನ್ನು ಉತ್ತಮ ಮಟ್ಟಕ್ಕೆ ತರು ವುದಕ್ಕೆ ಏನು ಕೆಲಸ ಮಾಡಬೇಕು ಎಂದು ಒಂದು plan ಹಾಕಿಕೊಳ್ಳಬೇಕು ಎಂದು ಹೇಳುತ್ತೇನೆ. ಗ್ರಾಮಗಳ ಅಭಿವೃದ್ಧಿಯನ್ನು ಮಾಡಲು ಒಂದು plan ಹಾಕಿಕೊಂಡು ಕಾರ್ಯಕ್ರಮ ಮಾಡುತ್ತ ಹೋದರೆ ಸ್ವರಾಜ್ಯವನ್ನು ಸ್ಥಾಪನೆ ಮಾಡಿ ಬಡಜನರಿಗೆ ಅನುಕೂಲಮಾಡುತ್ತೇವೆಂದು ಏನು ಯೋಚನೆಮಾಡಿ ದ್ದೇವೋ ಅದು ಸಫಲವಾಗುತ್ತದೆ. ಇಲ್ಲದೆ ಹೋದರೆ ಏನೂ ಸಾರ್ಥಕವಾಗುವುದಿಲ್ಲ.

ತಾಲ್ಲೂಕುಗಳಲ್ಲಿ ಜಮಾಬಂದಿ ವಿಚಾರವಾಗಿ ಒಂದೆರಡು ಮಾತು ಹೇಳಿ ನನ್ನ ಭಾಷಣವನ್ನು ನಿಲ್ಲಿಸು ತ್ತೇನೆ. ಪಟೇಲ್ ಮತ್ತು ಶ್ಯಾನುಭೋಗರುಗಳಿಗೆ ತಾಲ್ಲೂಕು ಆಫೀಸಿನಿಂದ ಇಂಥ ದಿನ ಇಷ್ಟು ಘಂಟೆಗೆ ಇಂಥ ಕಡೆ ಜಮಾಬಂದಿ ಇಟ್ಟುಕೊಳ್ಳುತ್ತೇವೆ ಎಂದು ತಿಳಿಸುತ್ತಾರೆ. ಇಂಥ ತಾರೀಖು ಸಾಯಂಕಾಲ ನಾಲ್ಕು ಘಂಟೆಗೆ ಜಮಾಬಂದಿ ಇದೆ ಎಂದು ತಿಳಿಸು ತ್ತಾರೆ. ಪಟೇಲ್, ಶ್ಯಾನುಭೋಗರುಗಳು ಅಮಲ್ದಾರ ರಿಗಾಗಿ ಕಾದುಕುಳಿತಿರುತ್ತಾರೆ. ರಾತ್ರಿ 12 ಘಂಟೆ ಯಾದರೂ ಬರುವುದಿಲ್ಲ. ಆಗ ಬಂದು ಈಗ ನಿದ್ದೆ ಹೊತ್ತಾಗಿರುವುದರಿಂದ ನಾಳೆ ಬೆಳಗ್ಗೆ ಜಮಾಬಂದಿ ಮಾಡುತ್ತೇನೆಂದು ಹೇಳಿಬಿಡುತ್ತಾರೆ. ಅಷ್ಟು ಹೊತ್ತಿ ನಲ್ಲಿ ರಾತ್ರಿ ಅವೇಳೆಯಲ್ಲಿ ಪಟೇಲರು ಶ್ಯಾನುಭೋಗರು ತಮ್ಮ ಗ್ರಾಮಗಳಿಗೆ ವಾಪಸು ಹೋಗಬೇಕಾದರೆ 10—12 ಮೈಲಿಗಳ ದೂರ ಪ್ರಯಾಣ ಮಾಡುವುದಕ್ಕೆ ಬಹಳ ಕಷ್ಟಸಾಧ್ಯವಾದ ಕೆಲಸ. ಇಂಥದನ್ನೆಲ್ಲ ಸರಿಪಡಿಸಬೇಕು. ಒಂದು ಕಡೆ ಜಮಾಬಂದಿ ಮಾಡು ತ್ತೇವೆ, ಇಷ್ಟು ಹೊತ್ತಿಗೆ ಮಾಡುತ್ತೇವೆಂದು ತಿಳಿಸಿದರೆ, ಕಾಲಕ್ಕೆ ಸರಿಯಾಗಿ ಅಧಿಕಾರಿಗಳು ಸ್ಥಳಕ್ಕೆ ಹೋಗಿ ಕೆಲಸ ಮಾಡುವಂತೆ ಸರ್ಕಾರದವರು ಸರಿಯಾಗಿ ರೂಲ್ಸ್ ಮಾಡಬೇಕು. ಅದುಬಿಟ್ಟು ಜಮಾಬಂದಿ ಇಂದು ಇಲ್ಲ, ನಾಳೆ ಬನ್ನಿ ಎಂದು ಹೇಳುವಂತಾಗಬಾರದು. ಇದೆಲ್ಲ ಹೋಗಬೇಕು ಎಂದು ತಿಳಿಸುತ್ತೇನೆ.

12 NOON.

ಶ್ರೀ ವಿ. ಆರ್. ನಾಯ್ಡು (ಮಾಲ್ಲೇಶ್ವರಂ).—ಈಗ ಮಾನ್ಯ ಸಭಾಧ್ಯಕ್ಷರಲ್ಲಿ ವಿನಂತಿ ಮಾಡುವುದೇ ನೆಂದರೆ ತೋಟಿ ತಳವಾರರ ಪ್ರಶ್ನೆ ಬಹಳ ಮುಖ್ಯ ವಾದುದು, ಮಾನ್ಯ ಸದಸ್ಯರು ತುಂಬ ವ್ಯಸನವನ್ನು ಸೂಚಿಸಿದ್ದಾರೆ. ಅವರಲ್ಲಿ ನನಗೆ ತುಂಬ ಗೌರವ ವಿದೆ. ಅವರು ಗ್ರಾಮ ರಕ್ಷಕರು. ಸರ್ಕಾರದವರು ಅವರಿಗೆ ತುಂಬ ಅನುಕೂಲ ಮಾಡಬೇಕು. ಏಕೆಂದರೆ ಈ ದಿವಸ ವೈಸರಾಯರೇ ಬರಲಿ, ರಾಜ ಮಹಾರಾಜರೇ ಬರಲಿ ನಮಗಾರಿಗೂ ಛಾನ್ಸ್ ಇಲ್ಲ, ಅವರಿಗೇ ಮೊದಲು ಪ್ರಾಶಸ್ತ್ಯ, ಕೈಯಲ್ಲಿ ದೊಣ್ಣೆ ಇಟ್ಟುಕೊಂಡಿರುತ್ತಾರೆ. ಹಳ್ಳಿಗಳಿಗೆ ಅಧ್ಯ ಕ್ಷರು, ಮಂತ್ರಿಗಳು ಮುಂತಾದವರು ಬರುತ್ತಾರೆಂದರೆ ಮೊದಲು ತೋಟಿ ತಳವಾರರು ಗೌರವ ನೀಡುತ್ತಾರೆ. ಅವರಿಗೆ ಮಂತ್ರಿಗಳು ಮುಂತಾದವರೂ ನಮಸ್ಕಾರ ಮಾಡುತ್ತಾರೆ. ತೋಟಿ ತಳವಾರರು ದೇವರಿದ್ದ ಹಾಗೆ. ಹಿಂದಿನ ಸಂಪ್ರದಾಯ ಅನುಸರಿಸುವುದು ಬೇಡ. ತೋಟಿ ತಳವಾರರೆಂಬ ಹೆಸರನ್ನು ಮಾತ್ರ ಬದಲಾ ಯಿಸಬೇಕು. ಕಮ್ಯಾಂಡರ್ ಎಂದು ಹೆಸರಿಡಿ. ಅವ ರಿಗೆ ಮಿಲಟರಿ ಉಡುಪು, ಕುದುರೆ ಕೊಡಿ, ಮಂತ್ರಿಗಳಿ ಗಿರುವ ಹಾಗೆ ಬೆಳ್ಳಿ ಕೋಲು ಕೊಡಿ. ಅದರಿಂದ ಸಂಪ್ರದಾಯ ಕಾಪಾಡಿದ ಹಾಗಾಗುತ್ತದೆ. ಹಾಗೆ ಮಾಡುತ್ತೀರೆಂದು ನಂಬಿದ್ದೇನೆ.

ಎರಡನೆಯದು ಬೆಂಗಳೂರು ಮತ್ತು ಇತರ ಡಿಸ್ಟ್ರಿ ಕ್ಟುಗಳಲ್ಲಿ ರಿಕಾರ್ಡು ನಿಧಾನವಾಗುತ್ತದೆಂಬುದಕ್ಕೆ ಕೆಲವು ಕಾರಣ ಕೊಟ್ಟಿದ್ದಾರೆ. ನಮ್ಮ ಬೆಂಗಳೂರು ಜಿಲ್ಲಾಧಿಕಾರಿಗಳ ದಕ್ಷತೆಯನ್ನು ಎಷ್ಟು ಹೊಗಳಿದರೂ ಸಾಲದು. ಉದಾಹರಣೆಗೆ ಬೆಂಗಳೂರು ನಗರಕ್ಕೆ ಇತ್ತೀ ಚೆಗೆ ಅನೇಕ ಪಾಶ್ಚಾತ್ಯ ದೇಶಗಳ ಗಣ್ಯ ವ್ಯಕ್ತಿಗಳು ಬಂದಾಗ, ಅದರಲ್ಲೂ ರಷ್ಯಾದ ನಾಯಕರು ಮತ್ತು ಇತರರು ಬಂದಾಗ, ತಮ್ಮ ಕೆಲಸದ ಜೊತೆಯಲ್ಲಿ ಪ್ರತಿ ಯೊಂದು ವಿಷಯದಲ್ಲೂ ಅವರು ಸಮರ್ಪಕವಾದ ಏರ್ಪಾಡು ಮಾಡಿರುವುದಕ್ಕಾಗಿ ಅವರಿಗೆ ಈ ಸಭೆ ಪರ ವಾಗಿ ಒಂದು ರಿವಾರ್ಡ್ ಕೊಡಬೇಕೆಂದು ಪ್ರಾರ್ಥಿಸು ತ್ತೇನೆ.

ಇನ್ನು ಪೊಲಿಟಿಕಲ್ ಸಫರರ್ಸ್ ವಿಚಾರವಾಗಿ ಒಂದು ಮಾತು. ದೇಶದಲ್ಲಿ ಯಾವ ವಿಧವಾದ ಜಾತಿ ಕುಲ ಎಂಬ ಮನೋಭಾವಕ್ಕೆ ಅವಕಾಶವಿಲ್ಲ. ದೇಶ ಸ್ವಾತಂತ್ರ್ಯಕ್ಕಾಗಿ ಪ್ರತಿಯೊಬ್ಬರೂ ಹೋರಾಟ ನಡೆ ಸಿದ್ದಾರೆ. ಅದರಲ್ಲೂ ಮುಖ್ಯವಾಗಿ ಪೋಲೀಸ್

(ಶ್ರೀ ಪಿ. ಆರ್. ನಾಯ್ಡು.)

ಕಾನ್ಸ್ಟೇಬಲ್ಲುಗಳು, ರಿಸರ್ವ್ ಪೋಲೀಸ್ ಮುಂತಾದವರು ಹೆಚ್ಚಿನ ಸಹಾಯಕರಾಗಿದ್ದರು; ಅವರೂ ಪೊಲಿಟಿಕಲ್ ಸಫರರ್ಸ್; ಅವರು ಒಂದು ತ್ಯಾಗ ಮನೋಭಾವದಿಂದ ದೇಶ ರಕ್ಷಣೆ ಮಾಡಿದ್ದಾರೆ. ಬ್ರಿಟಿಷರ ಆಳ್ವಿಕೆಯಲ್ಲಿ ಆತ್ಮ ಸಂರಕ್ಷಣೆಗೆ ಕೂಡ ಗಮನ ಕೊಡದೆ ಈ ದೇಶದ ಸ್ವಾತಂತ್ರ್ಯಕ್ಕಾಗಿ ಬಹಳ ಯೋಗ್ಯವಾದ ಕೆಲಸ ಮಾಡಿದ್ದಾರೆ. ಆದ್ದರಿಂದ ಜಮೀನು ಕೊಡುವಾಗ ಪೋಲೀಸು ಕಾನ್ಸ್ಟೇಬಲ್ಲುಗಳು, ರಿಸರ್ವ್ ಪೋಲೀಸು ಮತ್ತು ದಫೇದಾರರಿಗೆ ಅಪ್ಲಿಕೇಷನ್ ಇಲ್ಲದೆ ಅರ್ಜಿ ತರಿಸಿಕೊಂಡು ಎಲ್ಲಾದರೂ ಜಮೀನು ಕೊಡಬೇಕೆಂದು ಕೋರುತ್ತೇನೆ.

*ಶ್ರೀ ಎ. ಜಿ. ರಾಮಚಂದ್ರರಾವ್ (ನ್ಯಾಯಾಂಗ ಮತ್ತು ವಿದ್ಯಾ ಇಲಾಖೆಗಳ ಮಂತ್ರಿಗಳು).—ಸ್ವಾಮಿ, ರೆವಿನ್ಯೂ ಇಲಾಖೆಯಲ್ಲಿ ಲೋಪ ದೋಷಗಳೇ ಇಲ್ಲವೆಂದು ನಾನಾದರೂ ಹೇಳುವುದಿಲ್ಲ; ಲೋಪದೋಷಗಳಿವೆ. ಈಗ ಒಂದು ಗಂಟೆಯಲ್ಲಿ ನಾವೇನು ಮಾಡಿದ್ದೇವೆಂದರೆ, ಅನೇಕ ವರ್ಷಗಳಿಂದ ಬಂದಿರುವ ಲೋಪ ದೋಷಗಳನ್ನು ಭೂತಕನ್ನಡಿ ಹಾಕಿಕೊಂಡು ನೋಡಿದ್ದೇವೆ. ಇವು ಸರ್ಕಾರದ ಗಮನದಲ್ಲೂ ಇವೆ. ಅವನ್ನು ಸರಿಪಡಿಸಬೇಕು, ನ್ಯೂನ್ಯಾತಿರಿಕ್ತಗಳಿರಬಾರದು ಎಂಬ ತೀವ್ರಾಸಕ್ತಿ ಸರ್ಕಾರಕ್ಕೂ ಇದೆ. ಈ ಸಭೆಗಿರುವ ಹಾಗೆ ಅಷ್ಟೇ ಮಟ್ಟಿಗೆ ಇದನ್ನು ಸರಿಪಡಿಸಬೇಕೆಂದು ಒಂದು ಸಬ್‌ಕಮಿಟಿ ಕೂಡ ಏರ್ಪಾಡು ಮಾಡಿತ್ತು. ಆ ಸಮಿತಿಗೆ ರೆವಿನ್ಯೂ ಕಮೀಷನರು ಛೇರ್ಮನ್. ಚೀಫ್ ಸೆಕ್ರೆಟರಿ, ಬೆಂಗಳೂರು ಡೆಪ್ಯುಟಿ ಕಮೀಷನರು, ಹಾಸನದ ಡೆಪ್ಯುಟಿ ಕಮಿಷನರು, ಬೆಂಗಳೂರು ಸಬ್‌ಡಿವಿಜನ್ ಆಫೀಸರು, ರಾಮನಗರ ತಾಲ್ಲೂಕು ಅಮಲ್ದಾರರು ಮುಂತಾದವರನ್ನು ಮೆಂಬರುಗಳನ್ನಾಗಿಯೂ, ರೆವಿನ್ಯೂ ಕಮೀಷನರ ಅಡೀಷನಲ್ ಅಸಿಸ್ಟೆಂಟರನ್ನು ಸೆಕ್ರೆಟರಿಯಾಗಿಯೂ ಆ ಸಮಿತಿಗೆ ನೇಮಕ ಮಾಡಿತ್ತು. ಆ ಸಮಿತಿ ವರದಿ ಬಂದು ಅದರ ಬಹುಭಾಗವನ್ನು ಜಾರಿಗೆ ಕೊಟ್ಟಿದೆ. ಇನ್ನು ಕೆಲವು ಭಾಗ ಪಬ್ಲಿಕ್ ಸರ್ವಿಸ್ ಕಮೀಷನರನ್ನು ಕೇಳಬೇಕಾಗಿರುವುದರಿಂದ ಅವರಿಗೆ ಹೇಳಿದೆ. ಇರುವ ನ್ಯೂನತೆಯನ್ನು ಪರಿಹಾರ ಮಾಡಬೇಕೆಂದು ನಮಗೆಲ್ಲಾ ತೀವ್ರಾಸಕ್ತಿಯಿದೆ, ಶ್ರದ್ಧೆಯಿದೆ, ಈ ವಿಚಾರದಲ್ಲಿ ಯಾವ ಭಿನ್ನಾಭಿಪ್ರಾಯವೂ ಇರಬೇಕಾಗಿಲ್ಲ; ಯಾವ ತಾತ್ಸಾರ ಕೂಡ ಸರ್ಕಾರಕ್ಕಿಲ್ಲ ಎಂದು ಪೂರ್ಣವಾಗಿ ಭರವಸೆ ಕೊಡುತ್ತೇನೆ.

ಈ ದಿವಸ ಚರ್ಚೆ ಆಗುತ್ತಿದ್ದಾಗ ಅರ್ಜಿಗಳ ವಿಲೇವಾರಿ, ಗ್ರಾಮಾಂತರ ಪ್ರದೇಶಗಳ ವಿಚಾರ, ಲ್ಯಾಂಡ್ ಪಾಲಿಸಿ, ತೋಟಿ ತಳವಾರರ ಸಂಬಳ ಸಾರಿಗೆ, ಪಟೇಲ ಶ್ಯಾನುಭೋಗರ ಕ್ವಾಲಿಫಿಕೇಷನ್, ಅಮಲ್ದಾರರು ಮತ್ತು ಡೆಪ್ಯುಟಿ ಕಮೀಷನರುಗಳಿಗೆ ಜೀಪುಗಳನ್ನು ಒದಗಿಸುವುದು ಹೀಗೆ ಅನೇಕ ವಿಷಯಗಳು ಪ್ರಸ್ತಾಪಿಸಲ್ಪಟ್ಟಿವೆ. ಅದರಲ್ಲಿ ಅರ್ಜಿಗಳ ವಿಚಾರ ಮೊದಲು ತೆಗೆದುಕೊಳ್ಳೋಣ. ಈಗ ಅರ್ಜಿ ಬರುವುದಂತೂ ಬಹಳ ಜಾಸ್ತಿಯಾಗಿದೆ. ಅದರಲ್ಲೂ ತಾಲ್ಲೂಕು ಆಫೀಸುಗಳಲ್ಲಿ ಆ ಆಫೀಸಿನಲ್ಲಿ ಕೆಲಸ ಮಾಡುವವರೆಲ್ಲರೂ ಅದಕ್ಕೆ ಗಮನಕೊಟ್ಟರೂ ಸಾಲದು. ಮುಖ್ಯವಾದ ವಿಷಯ ಸಾರ್ವಜನಿಕರ ಗಮನಕ್ಕೆ ಬಂದಿಲ್ಲ. ಹಿಂದೆ ಪೋಸ್ಟಲ್ ಫೆಸಿಲಿಟಿಯಿತ್ತು, ಹಣ ಖರ್ಚು ಮಾಡದೆ ಜವಾಬು ಕೊಡಬಹುದಾಗಿತ್ತು. ಈಗ ಸ್ಟಾಂಪ್ ಹಾಕಬೇಕು, ಅದಕ್ಕೆ ಹಣಬೇಕು. ಜವಾಬು ಬೇಕೆಂದು ಕೇಳುವವರು ಪೋಸ್ಟೇಜ್ ಕೊಡಬೇಕು ಎಂದು ಅನೇಕ ಸಲ ಹೇಳಿದೆ, ಈಗಲೂ ಹೇಳುತ್ತಿದ್ದೇನೆ. ಆ ಪದ್ಧತಿಯನ್ನು ಗಮನದಲ್ಲಿಟ್ಟು ಜಾರಿಗೆ ತಂದರೆ ಅನೇಕ ವಿಷಯದಲ್ಲಿ ಸರಿಹೋಗುತ್ತದೆಂದು ಅಂದುಕೊಂಡಿದ್ದೇನೆ.

ಎರಡನೆಯದಾಗಿ . ಸ್ಥಳದಲ್ಲೇ (on the spot) ಇತ್ಯರ್ಥ ಮಾಡಬೇಕೆಂದು ಹೇಳಿ ರೆವಿನ್ಯೂ ವಿಷಯಗಳ ಬಗ್ಗೆ ಅನೇಕ ಸಲ ಚರ್ಚೆಯಾಗಿದೆ. ಹಾಗೆ ಮಾಡುವುದು ಬಹಳ ಕಷ್ಟ. ಎಲ್ಲ ಸಂದರ್ಭಗಳಲ್ಲೂ on the spot ಇತ್ಯರ್ಥ ಮಾಡುವುದಕ್ಕಾಗುವುದಿಲ್ಲ. ಅದೇ ಉದ್ದೇಶದಿಂದ ಜಮಾಬಂದಿ ಮಾಡುವಾಗ ಗಮನ ಕೊಡುತ್ತಿದ್ದಾರೆ, ಸ್ಪೆಷಲ್ ಇನ್ಸ್ಟ್ರಕ್ಷನ್ ಕೂಡ ಆಗಾಗ್ಗೆ ಕೊಡುತ್ತಿದ್ದೇವೆ. ಈ ವ್ಯವಹಾರ ಹೇಗೆ ನಡೆಸಬೇಕು, ನಾವು ಅದಕ್ಕೆ ಸಿಬ್ಬಂದಿ ಯಾವ ರೀತಿ ಏರ್ಪಾಡು ಮಾಡಬೇಕು ಎಂಬ ವಿಷಯದಲ್ಲಿ ಸಾರ್ವಜನಿಕರ ಒಂದು ಸ್ಪೆಷಲ್ ಕಮಿಟಿ ಕೂಡ ಇದೆ. ಆದ್ದರಿಂದ ಇದನ್ನು ಗಮನಕ್ಕೆ ತೆಗೆದುಕೊಂಡಿದೆ.

ಅನಂತರ ಹೆಚ್ಚಾಗಿ ಚರ್ಚೆಗೆ ಬಂದಿರುವುದು ಸರ್ವೆ ಸೆಟ್ಲ್‌ಮೆಂಟ್ ವಿಚಾರ. ಈ ವಿಷಯದಲ್ಲಿ ಈಗಾಗಲೆ ಇದಕ್ಕೆ ಸಿಬ್ಬಂದಿ ಕಡಮೆಯಾಗಿರುವುದು ನಿಜ. ಕೋರ್ಟು ವ್ಯವಹಾರಗಳಿಗೆ ಅವಕಾಶವಾಗಿದೆ, ಅದಾಗಬಾರದೆಂದು ಸ್ಪೆಷಲ್ ಟ್ರೈನಿಂಗ್ ಕೊಟ್ಟು ಸಿಬ್ಬಂದಿ ಜಾಸ್ತಿ ಮಾಡಲು ಪ್ರಯತ್ನ ಮಾಡಿದೆ, ಮತ್ತು ಇರುವ ರೆವಿನ್ಯೂ ಆಫೀಸರುಗಳೂ ಕೂಡ ಸರ್ವೆ ಕೆಲಸ ಮಾಡಲು ಅವಕಾಶ ಮಾಡಿ ಟ್ರೈನಿಂಗ್ ಕ್ಲಾಸ್ ಏರ್ಪಾಡು ಮಾಡಿದೆ. ಆದ್ದರಿಂದ ತಕ್ಕ ಕಾರ್ಯಕ್ರಮವನ್ನು ಸರ್ಕಾರ ಕೈಗೊಂಡಿದೆ.

ಅನಂತರ ಗ್ರಾಮ ಪಂಚಾಯಿತಿ ವಿಷಯದಲ್ಲಿ ಹಣ ವಸೂಲಾಗುವುದು, ಮನೆಗಂದಾಯ, ಬಹಳ ಕಡಮೆಯಾಗಿದೆ, ಅದರಿಂದ ಗ್ರಾಮ ಪಂಚಾಯಿತಿಗೆ ಬರುವ ವರಮಾನ ಕಡಮೆಯಾಗಿದೆ ಎಂದು ಗೊತ್ತಾಗಿದೆ. ಈ ವಿಷಯದಲ್ಲೂ ಕೂಡ ಹೆಚ್ಚು ಗಮನ ಕೊಡಬೇಕು. ಗ್ರಾಮ ಪಂಚಾಯಿತಿಯವರೂ ಹೆಚ್ಚು ಮುತವರ್ಜಿ ವಹಿಸಬೇಕು; ಅವರು ತಾತ್ಸಾರ ಮಾಡಿದರೆ ತೊಂದರೆ. ಆದರೂ ಅಮಲ್ದಾರರೂ, ರೆವಿನ್ಯೂ ಇನ್ಸ್ಪೆಕ್ಟರೂ ಹೆಚ್ಚು ಗಮನಕೊಡಬೇಕು ಎಂದು ಹೇಳಿದೆ. ಆ ಹಣದಿಂದ ಹೆಚ್ಚು ಕೆಲಸವಾಗುವುದಿಲ್ಲ ಎಂದು ಈ ಸಲದ ಬಡ್ಜೆಟ್ ಎಸ್ಟಿಮೇಟಿನಲ್ಲಿ 25 ಲಕ್ಷ ರೂಪಾಯಿಗಳನ್ನು ಡಿಸ್ಟ್ರಿಕ್ಟ್ ಬೋರ್ಡ್‌ಗಳು ಮತ್ತು ಗ್ರಾಮಪಂಚಾಯಿತಿಗಳಿಗೆ ಹಂಚಲು ಕೊಟ್ಟಿದೆ. ಡಿಸ್ಟ್ರಿಕ್ಟ್ ಬೋರ್ಡ್‌ಗಳಿಗೆ ರೆವಿನ್ಯೂನಿಂದ ಕೊಡುತ್ತಿದ್ದುದನ್ನು ಆಕ್ಟ್ ತಿದ್ದುಪಡಿಯಾದಾಗ ಡಿಲೀಟ್ ಮಾಡಿದೆ. ಆದ್ದರಿಂದ ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ರೆವಿನ್ಯೂನಲ್ಲಿ ಈಗ ಯಾವ ಹಣವೂ ಬರುವುದಿಲ್ಲ. ಮತ್ತು ಇನ್ನೊಂದು ಹೊಸದಾಗಿ ಇದರ ವಿಷಯವಾಗಿ ಹೆಚ್ಚು ಗಮನ ಕೊಡುವುದಕ್ಕೆ ಗ್ರಾಮಪಂಚಾಯಿತಿಗಳಿಗೆ ಸೆಕ್ರೆಟರಿ ನೇಮಿಸಬೇಕು, ಅವರು ಅದರ ಮೇಲ್ವಿಚಾರಣೆ ನೋಡಬೇಕು ಎಂಬ ಅಭಿಪ್ರಾಯವಿದೆ. ಈ ವಿಷಯದಲ್ಲೂ ಜಾಗ್ರತೆ ಮುಂದುವರಿಯುವುದಕ್ಕೆ ಪ್ರಯತ್ನ ಮಾಡೋಣ.

ಇನ್ನು ಜಮೀನು ಕೊಡುವ ವಿಷಯದಲ್ಲಿ ಬಹಳ ಚರ್ಚೆಯಾಗಿದೆ. ನಿಮ್ನ ವರ್ಗದವರಿಗೆ ಕೊಡುವುದು, ಜಮೀನಿಲ್ಲದವರಿಗೆ ಕೊಡುವುದು, ಪೊಲಿಟಿಕಲ್ ಸಫರರ್ಸ್‌ಗೆ ಕೊಡುವುದು ಎಂದು ಮೂರು ಭಾಗವಾಗಿ ಜಮೀನು ಕೊಡುವುದನ್ನು ಎಂಗಡಿಸಬಹುದು. ಹೆಚ್ಚಾಗಿ ಚರ್ಚೆಯಾಗಿರುವುದು ಪೊಲಿಟಿಕಲ್ ಸಫರರ್ಸ್ ವಿಚಾರ. ಅವರ ಸಂಖ್ಯೆ ಬಹಳ ಕಡಮೆ, ಬಾಕಿಯವರ ಸಂಖ್ಯೆ ಸಾವಿರಾರಿದ್ದರೆ ಅವರ ಸಂಖ್ಯೆ

ನೂರಾರಿರಬಹುದು ಎಂದು ಹೇಳಿದ್ದಾರೆ. ಎಂಟು-ಹತ್ತು ವರ್ಷಗಳಿಂದ ಸಮರ್ಪಕವಾದ ತೀರ್ಮಾನವಾಗಿರುವುದರಿಂದ ಒಂದೆರಡು ವರ್ಷಗಳಲ್ಲಿ ಪೂರ್ಣವಾಗಿ ತೀರ್ಮಾನ ಮಾಡುವುದಕ್ಕೆ ಗಮನಕೊಟ್ಟಿದೆ. ಆದರೆ ಅವರಿಗೂ ಕೂಡ ಜಮೀನನ್ನು 15 ವರ್ಷ ಏಲಿಯನೇಟ್ ಮಾಡಕೂಡದೆಂದು ತಿಳಿಸಿದೆ ಮತ್ತು ಅದರಲ್ಲೂ ಜಮೀನಿಲ್ಲದಿರುವವರಿಗೆ ಪ್ರಾಶಸ್ತ್ಯ ಕೊಡಬೇಕು, ಹೆಚ್ಚು ಜಮೀನಿರುವವರಿಗೆ ಕೊಡುವುದು ಸರಿಯಲ್ಲ ಎಂದು ಕೂಡ ಹೇಳಿದೆ. ಇಷ್ಟಾದರೂ ಲೋಪದೋಷ ಅಲ್ಪ ಸ್ವಲ್ಪಎದ್ದರೆ ಸರಿಪಡಿಸಬಹುದು.

ಎರಡನೆಯದಾಗಿ ಹರಿಜನರಿಗೆ ಹೆಚ್ಚಾಗಿ ರಿಯಾಯಿತಿ ಕೊಟ್ಟಿದೆ, ಮೊನ್ನೆತಾನೆ ಕಾಂಪೆನ್ಸೇಷನ್ ಕೊಡುವ ವಿಚಾರದಲ್ಲಿ ಅಪ್ಸೆಟ್‌ಪ್ರೈಸ್ ಕನ್ಸೆಷನ್ 100 ರೂಪಾಯಿ ಇದ್ದುದನ್ನು 200 ರೂಪಾಯಿಗಳಿಗೆ ಹೆಚ್ಚಿಸಿದೆ. ಆದ್ದರಿಂದ ಹೆಚ್ಚು ರಿಯಾಯಿತಿಯಿದೆ. ಜಮೀನಿಲ್ಲದವರಿಗೆ ಜಮೀನು ಕೊಡಬೇಕು ಎಂದು ಹೇಳಿ ಒಂದು ಸೀಲಿಂಗ್ ಸಹ ನಿಗದಿ ಮಾಡಿದೆ, 4 ಎಕರೆ ತರಿ, 10 ಎಕರೆ ಖುಷ್ಕಿ ಇದ್ದರೆ ಅಂಥವರಿಗೆ ಕೊಡುವುದು ಅನಾವಶ್ಯಕ ಎಂದು ಹೇಳಿದೆ. ಅದಕ್ಕಿಂತ ಕಡಮೆಯಿದ್ದವರಿಗೆ ಕಡಮೆಯಿರುವುದನ್ನು ಭರ್ತಿ ಮಾಡುವಷ್ಟು ಕೊಡಬೇಕು, ಹೆಚ್ಚಿಗೆ ಬೇಡ ಎಂದು ನಿಗದಿ ಮಾಡಿದೆ.

ಶ್ರೀ ಕೆ. ಪುಟ್ಟಸ್ವಾಮಿ.—ಈಗ ಅನುಸರಿಸುತ್ತಿರುವ ನೀತಿಗೆ ವಿರೋಧವಾಗಿ ಪರಭಾರೆ ವಗೈರೆ ಮಾಡುತ್ತಿದ್ದಾರೆ. ಅದನ್ನು ನಿರ್ಬಂಧಹಾಕಿ ಸರಿಪಡಿಸಬೇಕಾದ್ದು ಅಗತ್ಯವಲ್ಲವೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ರೀತಿ ಹೆಚ್ಚು ಕಡಮೆಯಾಗಿರುವುದು ಗಮನಕ್ಕೆ ಬಂದಿಲ್ಲ, ಬಂದರೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ಮತ್ತು ಈಗ ಮೂರು ವರ್ಷಗಳಿಂದ ಎಷ್ಟು ಜಮೀನು ಕೊಟ್ಟಿದೆಯೆಂಬುದು ಮಾನ್ಯ ಸಭೆ ಗಮನಕ್ಕೆ ಬಂದಿದೆ. ಆದ್ದರಿಂದ ಈ ವಿಚಾರದಲ್ಲಿ ತಾತ್ಸಾರವಿಲ್ಲವೆಂದು ಗೊತ್ತಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಸರ್ಕಾರದವರೇನೋ ಜಮೀನಿಲ್ಲದಿರುವವರಿಗೆ ಕೊಡಬೇಕೆಂದು ಈ ರೀತಿ ಆರ್ಡರು ಮಾಡಿದ್ದಾರೆ. ಈಗ ನಡೆಯುತ್ತಿರುವುದನ್ನು ಸೂಕ್ಷ್ಮವಾಗಿ ನನಗೊಬ್ಬರು ಹೇಳಿದರು. ಸ್ಥಳದಲ್ಲಿರುವವರಿಗೆ ಜಮೀನು ಕೊಡಬೇಕಾಗಿರುವಾಗ ಸರ್ಕಾರದಿಂದ, ರೆವೆನ್ಯೂ ಕಮೀಷನರಿಂದ ಅಥವಾ ಮಂತ್ರಿಗಳ ಮೂಲಕ ಕೆಲವು ಶಿಫಾರ್ಸುಗಳು ಬರುತ್ತವೆ. ಎರಡು ವರ್ಗದ ಜನರಿಗೆ ಈ ಶಿಫಾರ್ಸು ಬರುತ್ತದೆ. ಪೊಲಿಟಿಕಲ್ ಸಫರರ್ಸ್ ಎಂದು ಈಗಲೂ ಕೆಲವರು ಮಂತ್ರಿಗಳ ಹತ್ತಿರ ಅಥವಾ ದೊಡ್ಡ ಅಧಿಕಾರಿಗಳ ಹತ್ತಿರ ಸಂಪರ್ಕವುಳ್ಳವರು ಅಥವಾ ಅಲ್ಲಿ ತಮ್ಮ ಪ್ರಭಾವ ಬೀರುವುದಕ್ಕೆ ಯಾರಿಗೆ ಶಕ್ತಿಯಿದೆಯೋ ಅಂಥವರು, ಶಿವಮೊಗ್ಗ ಜಿಲ್ಲೆ ಅಥವಾ ಬೆಂಗಳೂರಿನಲ್ಲಿದ್ದುಕೊಂಡು, ಪಿರಿಯಾಪಟ್ಟಣ ಅಥವಾ ಹೆಗ್ಗಡದೇವನಕೋಟೆಯಲ್ಲಿ ನಾಲೆ ಬರುತ್ತದೆಂದು ಹೇಳಿದರೆ ಅಲ್ಲಿಗೆ ಅರ್ಜಿ ಹಾಕಿ ಮೇಲಿನಿಂದ ಶಿಫಾರ್ಸು ಮಾಡಿಸಿ ಜಮೀನು ಪಡೆಯಲು ಪ್ರಯತ್ನಿಸುತ್ತಿದ್ದಾರೆ. ಸ್ಥಳದಲ್ಲಿರುವವರಿಗೆ ಜಮೀನು ಕೊಡುವಾಗ ಇತರ ಕಡೆಗಳಲ್ಲಿರುವ ಅಧಿಕಾರವರ್ಗದವರು ಮುಂತಾದವರಿಗೆ ಶಿಫಾರ್ಸು ಮೂಲಕ ಜಮೀನು ಕೊಡುತ್ತಿದ್ದಾರೆ. ಯಾವ ಕಾರಣದಿಂದ ಅಂಥವರಿಗೆ ಜಮೀನು ಕೊಡಬೇಕೆಂದು ಶಿಫಾರ್ಸು ಮಾಡುತ್ತಾರೋ ತಿಳಿಯದು. ಹತ್ತಾರುವರ್ಷಗಳಿಂದ ಅನೇಕ ಅರ್ಜಿಗಳು ವಿಲೆಯಾಗದೆ ಉಳಿದಿವೆ. ಇಂಥ ಕಡೆ ಜಮೀನು ಕೊಡಬೇಕೆಂದು ತಾಲ್ಲೂಕು ಆಫೀಸಿಗೆ ರೆವೆನ್ಯೂ ಕಮೀಷನ ಆಫೀಸಿನಿಂದಲೇ ಬರೆದು ಕಳುಹಿಸಿರುತ್ತಾರೆ. ಇಂಥ ಕಡೆ ಜಮೀನು ಹೇಗಿದೆಯೆಂಬುದು ನಮಗೆ ಗೊತ್ತಾಗುವುದಿಲ್ಲ. ಆ ಸಮಾಚಾರ ತಿಳಿದುಕೊಂಡು ಎಲ್ಲಿ ಚೆನ್ನಾಗಿರುವ ಜಮೀನಿರುತ್ತದೆಯೋ ಅಂಥಕಡೆ ಜಮೀನು ಕೊಡಬೇಕೆಂದು ಬೇಕಾದವರಿಗೆ ಶಿಫಾರ್ಸು ಬರುತ್ತದೆ. ಈಗ ಏನಾಗುತ್ತಿದೆ ಎಂದರೆ ವಾಸ್ತವವಾಗಿಯೂ ನೂರಾರು ವರ್ಷಗಳಿಂದ ಯಾರಿಗೆ ಜಮೀನು ಇತ್ಯಾದಿಗಳೊಂದೂ ಇರುವುದಿಲ್ಲವೋ ಅಂಥವರಿಗೆಲ್ಲಾ ಈ ದಿವಸ ಜಮೀನು ದೊರೆಯುವಂತಾಗಬೇಕು. ಈ ಅಂಶವನ್ನು ಜಮೀನು ವಿಲೇಮಾಡತಕ್ಕ ಸಂದರ್ಭದಲ್ಲಿ ಸರ್ಕಾರದವರು ತಮ್ಮ ಮನಸ್ಸಿಗೆ ತೆಗೆದುಕೊಂಡು, ಇಂಥಿಂಥಾ ಜನಗಳಿಗೇ ಈ ಜಮೀನನ್ನು ಕೊಡಬೇಕು ಎಂಬುದಾಗಿ ತಾವೇನೋ ಒಂದು ಹೊಸ ಸಮಾಜವನ್ನೇ ರಚನೆಮಾಡುತ್ತೇವೆಂದು ಹೇಳುತ್ತಿದ್ದೀರೋ ಆ ತತ್ವಕ್ಕನುಗುಣವಾಗಿ ಈ ಲ್ಯಾಂಡ್‌ಲೆಸ್ ಮತ್ತು ಬೋನಾಫೈಡಿ ಅಗ್ರಿಕಲ್ಚರಿಸ್ಟ್‌ಗಳಿಗೆ ಜಮೀನು ದೊರೆಯುವ ಹಾಗೆ ಮಾಡಲು ಸರ್ಕಾರದವರು ಏನು ಕಾರ್ಯಕ್ರಮವನ್ನು ಕೈಗೊಂಡಿರುತ್ತಾರೆ ಎನ್ನುವುದನ್ನು ಈ ಮಾನ್ಯಸಭೆಗೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಜಿ. ರಾಮಚಂದ್ರರಾವ್.—ಆ ವಿಚಾರವನ್ನು ನಾವು ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ (ದಾವಣಗೆರೆ).—ನಾನು ನಮ್ಮ ದಾವಣಗೆರೆ ತಾಲ್ಲೂಕಿನಲ್ಲಿರುವ 18 ಜನ ಪೊಲಿಟಿಕಲ್ ಸಫರರ್ಸ್‌ಗಳಿಗೆ ಜಮೀನುಗಳನ್ನು ಕೊಡಿಸಬೇಕೆಂದು ಕಳೆದ ಮೂರು ವರ್ಷಗಳಿಂದ ಪ್ರಯತ್ನಪಡುತ್ತಿದ್ದೇನೆ. ನಾವು ಈ ಬಗ್ಗೆ ಒಂದು ಲಿಸ್ಟ್‌ಮಾಡಿದ್ದೇವೆ ಕೊಡುತ್ತೇವೆ ಎಂದು ಹೇಳುತ್ತಿದ್ದಾರೇ ಶಿವಾಯ ಈವರೆಗೂ ಯಾರಿಗೂ ಒಂದು ಎಕರೆ ಜಮೀನ್ ಸಹ ಕೊಟ್ಟಿಲ್ಲ. ಇದೆಲ್ಲಾ ನಾಮಕಾವಾಸ್ತೆ ಹೇಳಿಕೆಗಳೇ ಹೊರತು ಇದರಲ್ಲಿ ತಿಲಮಾತ್ರವೂ ಸತ್ಯವಿಲ್ಲ. ಇದೇನೇನು ತಮ್ಮ ಈ ಜಮೀನು ಹಂಚತಕ್ಕ ರೀತಿ-ನೀತಿ !

ಶ್ರೀ ಎ. ಜಿ. ರಾಮಚಂದ್ರರಾವ್.—ಸ್ವಾಮಿ, ಶ್ರೀ ಡಿ. ದೇವರಾಜ ಅರಸರು ಹೇಳಿದರು—ಮಿಲಿಟರಿಯವರಿಗೆ ಜಮೀನನ್ನು ಕೊಡಲಾಗುತ್ತಿದೆಯಲ್ಲಾ—ಅದು ಯಾವ ನೀತಿಯೋ ನಮಗಂತೂ ಗೊತ್ತಾಗುವುದಿಲ್ಲ'' ಎಂದು. ಇಂಡಿಯನ್ ಆರ್ಮಿ ರೂಲ್ಸ್ ಎಂಡ್ ಇಂಡಿಯನ್ ಆರ್ಮಿ ಕನ್ಸೆಷನ್ ರೂಲ್ಸ್ ಎಂಬ ಒಂದು ಕಾನೂನಿದೆ. ಈ ರೂಲ್ಸ್ ನಮ್ಮ ಮೈಸೂರು ಮಿಲಿಟರಿಯಲ್ಲಿದ್ದು ನಿವೃತ್ತಿಯಾಗಿರತಕ್ಕಂಥ ಜನರಿಗೆ ಮಾತ್ರ ಅನ್ವಯಿಸಿದ್ದಾಗಿರುತ್ತವೆ. ಈ ಜನರಿಗೆ ಆ ರೂಲ್ಸ್ ಮತ್ತು ನಿಬಂಧನೆಗಳಿಗನುಸಾರವಾಗಿ ಮೈಸೂರು ಸಂಸ್ಥಾನದಲ್ಲಿ ಎಲ್ಲೆಲ್ಲಿ ಈ ಕೆರೆಗಳು—ನಾಲೆಗಳು ಆಗುತ್ತಿವೆಯೋ ಅಂಥ ಎಲ್ಲಾ ಪ್ರದೇಶಗಳಲ್ಲೂ ಅವರಿಗೆ ಅವಕಾಶವಿರತಕ್ಕ ಸಂದರ್ಭಗಳಲ್ಲೆಲ್ಲಾ ಜಮೀನನ್ನು ಕೊಡಲಾಗುತ್ತಿದೆ. ಅವರು ನಮ್ಮ ದೇಶದ ಭದ್ರತೆಗಾಗಿ ತಮ್ಮ ಪ್ರಾಣವನ್ನೇ ತೆರಲು ಸಿದ್ಧರಾಗಿದ್ದಂಥ ಜನರು. ಅವರಿಗೆ. . .

Sri D. DEVARAJA URS.—They must verify whether those people are settling on the lands given by the Government.

Sri A. G. RAMACHANDRA RAO.—As far as possible. ನಾನು ಅದಕ್ಕಾಗಿಯೇ ಅದನ್ನು ಪರಿಶೀಲನೆಮಾಡುತ್ತೇನೆಂದು ಆಗಲೇ ಹೇಳಿದೆನು. ಆದರೆ ಈ ಪೊಲಿಟಿಕಲ್ ಸಫರರ್ಸ್‌ಗಳ ಪೈಕಿ ಇನ್ನೂ ಕೆಲವರಿಗೆ ಜಮೀನು ದೊರೆತಿಲ್ಲ. ಈ ಜನರಿಗೆ ಕೆಲಕೆಲವು ಸಂದರ್ಭಗಳಲ್ಲಿ ಮೂರು ನಾಲ್ಕು ಕಡೆಗಳಲ್ಲಿ ಜಮೀನು ಮಂಜೂರಾದಾಗ್ಯೂ ಇವರಿಗೆ ಇತರ ಕೆಲವು ತೊಂದರೆಗಳಿಂದ ಅದು ದೊರೆಯದೆ ಹೋಗಿರುತ್ತದೆ. ಅದಕ್ಕಾಗಿ ಈಗ ಇತರ ಕಡೆಗಳಲ್ಲಿ ಕೊಡುವುದಕ್ಕೇನಾದರೂ ಸಾಧ್ಯವಾಗುತ್ತದೆಯೇ ಎಂಬುದನ್ನೂ ಪರಿಶೀಲನೆಮಾಡಲಾಗುತ್ತಿದೆ. ಆದರೆ ಸದ್ಯಕ್ಕೆ ಈ ಪೊಲಿಟಿಕಲ್ ಸಫರರ್ಸ್‌ಗಳಿಗೇನೋ ಕೆಲವರಿಗೆ ತೊಂದರೆಯಾಗಿದೆ. ಆದರೆ ಇಂಥ ಜನರ ಸಂಖ್ಯೆ ಸಾವಿರಾರೇನೂ ಇಲ್ಲ. ಇದ್ದರೆ ನೂರರೊಳಗಿರಬಹುದು.

Sri M. PALANIYAPPAN.—There are instances where political sufferers have not been granted land. . . .

Sri A. G. RAMACHANDRA RAO.—I have myself admitted it. ಆದರೆ ಈಗ ಈ ಜಮೀನುಗಳನ್ನು ಯಾರು ಲ್ಯಾಂಡ್‌ಲೆಸ್ ಪೀಪಲ್ ಆಗಿದ್ದಾರೋ ಅಂಥವರಿಗೆ ಕೊಡುತ್ತಲೇ ಇಲ್ಲ ಎನ್ನುವುದನ್ನು ನಾನು ಒಪ್ಪುವುದಕ್ಕಾಗುವುದಿಲ್ಲ. ಈ ಬಗ್ಗೆ ನಾನು ಕೆಲವು ಅಂಕಿಅಂಶಗಳನ್ನು ತಮಗೆ ತಿಳಿಸಿದರೆ ಆಗ ತಮಗೇ ಎಲ್ಲ ವಿಷಯಗಳೂ ವೇದ್ಯವಾಗುತ್ತವೆ. 1952-53ರಲ್ಲಿ 61,718 ಎಕರೆ ಜಮೀನನ್ನು ಹಂಚಲಾಗಿದೆ. 1953-54ರಲ್ಲಿ 52,213 ಎಕರೆ ಜಮೀನುಗಳನ್ನೂ 54-55ರಲ್ಲಿ 41,288 ಎಕರೆ ಜಮೀನನ್ನೂ ಹಂಚಿದ್ದೇವೆ. ಹೀಗೆ ಜಮೀನನ್ನು ನಾವು ಅಪಾರವಾಗಿ ಕೊಡುತ್ತಲೇ ಬಂದಿದ್ದೇವೆ. ಇದರಿಂದ ಇತ್ತೀಚೆಗೆ ಈ ಜಮೀನನ್ನು ಕೇಳತಕ್ಕಂಥ ಜನರ ಸಂಖ್ಯೆ ಕೂಡ ಬಹಳ ಕಡಮೆಯಾಗುತ್ತಿದೆಯೆಂಬುದು ಮೇಲಿನ ಅಂಕಿ ಅಂಶಗಳಿಂದ ತಾವೇ ಆಲೋಚಿಸಬಹುದಾಗಿದೆ. ಇನ್ನು ಈ ಜಮೀನನ್ನು ಹಂಚಿಕೆ ಮಾಡತಕ್ಕ ಸಂದರ್ಭದಲ್ಲಿ ಈ ಡಿಪ್ರೆಸ್ಡ್ ಕ್ಲಾಸಿನವರಿಗಾಗಿ ವಿಲೇವಾರಿ ಆಗತಕ್ಕ ಜಮೀನಿನಲ್ಲಿ ಶೇಕಡ 20ರಷ್ಟನ್ನು ಅವರಿಗಾಗಿ ಮೀಸಲಾಗಿಡಬೇಕೆಂದು ಈಗಾಗಲೇ ತೀರ್ಮಾನವಾಗಿದೆ. ಅದರಂತೆ ಈಗ ಅದನ್ನು ಅನುಸರಿಸಲಾಗುತ್ತಿದೆ. ಇನ್ನು ಇವುಗಳಿಗೆ ನಿಗದಿಮಾಡಿರತಕ್ಕಂಥ ಆ ಅಪ್‌ಸೆಟ್ ಬೆಲೆಯನ್ನೂ ಸಹ ಪರಿಶೀಲನೆಮಾಡಿರುತ್ತೇವೆ. ಹೆಚ್ಚಿಗೆ ಇದೆಯೆಂದು ಕಂಡುಬಂದ ಸಂದರ್ಭಗಳಲ್ಲಿ ಅದನ್ನೂ ಪುನಃಪರಿಶೀಲಿಸಿ ಕಡಮೆಮಾಡಿರತಕ್ಕಂಥ ಸಂದರ್ಭಗಳೂ ಸಹ ಇವೆ.

ಇನ್ನು ಈ ಪಟೇಲ್, ಶ್ಯಾನುಭೋಗರುಗಳಿಗೆ ಸಂಬಳ ಸಾರಿಗೆಗಳನ್ನು ಕೊಡಬೇಕೆಂಬ ವಿಚಾರ ಅನೇಕ ವರ್ಷಗಳಿಂದಲೂ ಈ ಸಭೆಯ ಮುಂದೆ ಚರ್ಚೆ ಆಗುತ್ತಲೇ ಬಂದಿದೆ. ಈ ವಿಚಾರವನ್ನು ಸರ್ಕಾರದ ಲೆವಲ್‌ನಲ್ಲಿ ಅನೇಕಾವರ್ತಿ ಪರಿಶೀಲನೆ ಮಾಡಿದ್ದೇವೆ. ಈ ರೀತಿ ಈ ಗ್ರಾಮ ನೌಕರರುಗಳಿಗೆ ಸಂಬಳಸಾರಿಗೆಗಳನ್ನು ಕೊಡಬೇಕೆಂದರೆ ಸರ್ಕಾರಕ್ಕೆ ಬಹಳ ಹಣ ಖರ್ಚಾಗುತ್ತದೆ. ಆದರೆ ಈಗಿರತಕ್ಕ ಪದ್ಧತಿಯೇ ಚೆನ್ನಾಗಿದೆ. ಇದರಲ್ಲೂ ಅಲ್ಪ ಸ್ವಲ್ಪ ತೊಂದರೆಗಳಿರಬಹುದು. ಆದಾಗ್ಯೂ ಈಗ ಇರತಕ್ಕಂಥ ಪದ್ಧತಿಯೇ ಇನ್ನು ಮುಂದಕ್ಕೂ ಮುಂದುವರಿಸಿಕೊಂಡು ಬರಬೇಕೆಂದು ತೀರ್ಮಾನ ಮಾಡಿಕೊಂಡಿದ್ದೇವೆ. ಈಗ ಇದನ್ನು ಇಷ್ಟಕ್ಕೆ ನಿಲ್ಲಿಸಬೇಕೆಂದಿದ್ದೆವು. ಆದರೆ ಇತ್ತೀಚೆಗೆ ಈ ರಾಜ್ಯಗಳ ಪುನರ್ವಿಂಗಡಣೆಗಳ ವಿಚಾರ ಬೇರೆ ನಡೆಯುತ್ತಿದೆ. ನಾನಾಭಾಗಗಳು ಅನೇಕ ವೈವಿಧ್ಯಗಳಿಂದ ಕೂಡಿರತಕ್ಕಂಥವುಗಳೆಲ್ಲಾ ಈಗ ಒಂದಾಗತಕ್ಕಂಥ ಸಂದರ್ಭ ಬಂದಿದೆ. ಇನ್ನು ಆರು ತಿಂಗಳೊಳಗಾಗಿ ಇದನ್ನು ಕಾರ್ಯಗತಮಾಡಬೇಕಾಗಿರುತ್ತದೆ. ಅದೆಲ್ಲವೂ ಆದನಂತರ ಸರ್ಕಾರ ಈ ಬಗ್ಗೆ ಒಂದು ಸುವ್ಯವಸ್ಥಿತವಾದಂಥ ತೀರ್ಮಾನಮಾಡಬೇಕೆಂದು ನಮ್ಮ ಆಲೋಚನೆ ಇದೆ.

ಇನ್ನು ಈ ಪಟೇಲ್, ಶ್ಯಾನುಭೋಗರುಗಳಿಗೆ ಇತ್ತೀಚೆಗೆ ಇವರ ಕೆಲಸಕಾರ್ಯಗಳೇನೋ ಜಾಸ್ತಿಯಾಗಿವೆ— ಅದಕ್ಕನುಸಾರವಾಗಿ ಅವರಿಗೆ ಹೆಚ್ಚು ವರಮಾನ ಬರುವಂತೆ ಏರ್ಪಾಡುಗಳನ್ನು ಮಾಡಿದ್ದೇವೆ. ತಮ್ಮ ನಿತ್ಯಕಾರ್ಯಾಚರಣೆಗಳಲ್ಲದೆ ಅವರು ಹೆಚ್ಚಿಗೆ ಮಾಡತಕ್ಕಂಥ ಕೆಲಸಗಳ ಬಗ್ಗೆ ನಾಲ್ಕಾಣೆ ಹೆಚ್ಚು ವರಮಾನ ಬರುವಂತೆ ಮಾಡಿದ್ದೇವೆ.

Government have been revising the Potgi allowance from time to time, taking into consideration essential factors and the necessity of further enhancement will be examined in due course.

ಈ ತೋಟಿ-ತಳಾರಿಗಳ ವಿಚಾರ ಕೂಡ ಅಂದರೆ ಇವರ ಮಿರಾಸೆ ವಿಚಾರ ಪರಿಶೀಲನೆ ಆಯಿತು. ಇವರಿಗೆ ಸ್ವಲ್ಪ ಜಾಸ್ತಿ ಕೊಡಬೇಕೆಂದರೂ ಸರ್ಕಾರದ ಮೇಲೆ 50 ಲಕ್ಷ ರೂಪಾಯಿಗಳಿಗೂ ಹೆಚ್ಚಿನ ಹೊರೆಬೀಳುತ್ತದೆ. ಇದನ್ನು ಹೊರಲು ಸರ್ಕಾರಕ್ಕೆ ಬಹಳ ಕಷ್ಟವಾಗುತ್ತದೆ, ಈ ಹೊತ್ತಿನ ಪರಿಸ್ಥಿತಿಯಲ್ಲಿ ಇವರಿಗೆ ಮಿರಾಸೆ ರೂಪವಾಗಿ ಬರತಕ್ಕ ವರಮಾನ ಕಡಮೆಯಾಗಿರುತ್ತದೆಂಬ ಉದ್ದೇಶದಿಂದಲೇ ಇವರೆಲ್ಲರಿಗೂ ಉಂಬಳಿ ಜಮೀನುಗಳನ್ನೂ ಸಹ ಕೊಡಲಾಗಿದೆ. ತೋಟಿ-ತಳಾರಿಗಳಿಗೆ ಸಲ್ಲಬೇಕಾದ ಮಿರಾಸೆ ಸರಿಯಾಗಿ ಸಲ್ಲುವಂತೆ ನೋಡಿಕೊಳ್ಳಲು ಮತ್ತು ತಪ್ಪಿತಸ್ಥರ ಬಗ್ಗೆ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿವಳಿಕೆಕೊಡಲಾಗಿದೆ. ಸಾಧ್ಯವಾಗುವುದಾದರೆ ಈ ವಿಚಾರವನ್ನು ಪುನಃ ಸ್ಟೇಟ್-ರೀ-ಆರ್ಗನೈಜೇಷನ್ ಆದನಂತರ ಪರಿಶೀಲನೆ ಮಾಡುವುದಕ್ಕೆ ಅವಕಾಶವಿದೆ.

ಇನ್ನು ಆ ವಿಲೇಜ್ ಪಂಚಾಯಿತಿಗಳ ಸದಸ್ಯರ ವಿಚಾರ ಬೇರೆ ಬಂದಿದೆ. ಅವರು ನಡೆಸಬೇಕಾಗಿರತಕ್ಕ ಕೆಲಸಕಾರ್ಯಗಳಿಗೆ ತಕ್ಕಂತೆ ಅವರಿಗೆ ತಕ್ಕಷ್ಟು ಶಕ್ತಿ, ವಿದ್ಯಾ-ಬುದ್ಧಿಗಳೆಲ್ಲಾ ಇವೆ. ಅವರಿಗೆ ಈಗ ಸಾಧ್ಯವಾದ ಮಟ್ಟಿಗೂ ಒಂದು ಟ್ರೈನಿಂಗನ್ನು ಕೊಡಲು ಯಶವಂತಪುರದ ಹೋಬಳಿಯಲ್ಲಿ ಒಂದು ಏರ್ಪಾಡನ್ನು ಮಾಡಲಾಗಿದೆ. ಈ ವಿಚಾರವನ್ನು ಮ್ಯಾನ್ಯುಯಲ್‌ನಲ್ಲಿ ಕೂಡ ಹೇಳಿದೆ. ಈಗ ಈ ಟ್ರೈನಿಂಗ್ ಕೊಡತಕ್ಕ ವ್ಯವಸ್ಥೆಯನ್ನು ಪ್ರಾಯೋಗಿಕವಾಗಿ ಕೈಗೊಳ್ಳಲಾಗಿದೆ.

ಇನ್ನು ಈ ಸರ್ವೆ ಅಂಡ್ ಸೆಟಲ್‌ಮೆಂಟ್ ವಿಚಾರದಲ್ಲಿ ಹೇಳುವುದಾದರೆ, ಇತ್ತೀಚೆಗೆ ಸ್ಪೆಷಲ್ ಸರ್ವೇ ಸಿಬ್ಬಂದಿಯನ್ನು ನೇಮಕಮಾಡಿಕೊಳ್ಳಲಾಗುತ್ತಿದೆ. ಈಗಾಗಲೇ ಈ ಸರ್ವೆ ಕಾರ್ಯ ಆ ಚಿತ್ರದುರ್ಗ ಜಿಲ್ಲೆಯ ಮೂರು ತಾಲ್ಲೂಕುಗಳಲ್ಲಿ ಮುಗಿಯುತಾ ಬಂದಿದೆ. ಆದಾಗ್ಯೂ ಈ ಸರ್ವೆ ಸಿಬ್ಬಂದಿಯನ್ನು ಇನ್ನೂ ಜಾಸ್ತಿ ಮಾಡಬೇಕೆಂಬ ಆಲೋಚನೆಯಿದೆ. ಶ್ರೀ ಚಂದ್ರಶೇಖರಯ್ಯನವರು ತಿಳಿಸಿರತಕ್ಕಂಥ ಆಧಾರವಾಗಿ ಈ ಸರ್ವೆ ಪರಿಶೀಲನೆ ಬಗ್ಗೆ ಅವರ ಕಡೂರು ಜಿಲ್ಲೆಯ ವಿಚಾರಕ್ಕೆ ಗಮನಕೊಡಲು ಏರ್ಪಾಡು ಮಾಡುತ್ತೇವೆ.

ಇನ್ನು ಈ ರ್ಯಾಂಡ್ ಪಾಲಸಿ ವಿಚಾರವಾಗಿ ಬಹಳ ದೀರ್ಘವಾಗಿಯೇ ಚರ್ಚೆಯಾಯಿತು. ಇನ್ನು ನಮ್ಮ ದೇಶದಲ್ಲಿದ್ದಂಥ ಇನಾಂ ಪದ್ಧತಿಯನ್ನು ರದ್ದುಗೊಳಿಸಿದನಂತರ ನಮ್ಮ ದೇಶದಲ್ಲಿ ದೊಡ್ಡ ದೊಡ್ಡ ಜಮೀನ್ದಾರರುಗಳು ಇರತಕ್ಕಂಥ ಸಂಭವ ತೀರ ವಿರಳವಾಗಿದೆಯೆಂದು ಗೊತ್ತಾಗಿದೆ. ನಮ್ಮ ಸಂಸ್ಥಾನವನ್ನು ಇತರ ಪ್ರಾಂತ್ಯಗಳಿಗೆ ಹೋಲಿಕೆ ಮಾಡಿ ನೋಡಿದರೆ ನಮ್ಮ ಮೈಸೂರಿನಲ್ಲಿ ಈ ದೊಡ್ಡ ಜಮೀನ್ದಾರರ ಸಂಖ್ಯೆ ಬಹಳ ಕಡಮೆಯಾಗಿರುತ್ತದೆ. ಶ್ರೀ ಎಚ್. ಬಿ. ಗುಂಡಪ್ಪಗೌಡರ ಸಮಿತಿಯ ವರದಿಯಲ್ಲೂ ಸಹ ಆಗ ಇದನ್ನು ಪರಿಶೀಲಿಸಿದ್ದಾಯಿತು. ನಮ್ಮ ಸಂಸ್ಥಾನದಲ್ಲಿ ಒಟ್ಟು ದೊಡ್ಡ ಜಮೀನ್ದಾರರುಗಳ ವಶದಲ್ಲಿರತಕ್ಕ ಜಮೀನು ಎಷ್ಟೆಂದರೆ ಅದು ಕೇವಲ 82 ಲಕ್ಷ 63 ಸಾವಿರ ಎಕರೆಗಳು ಮಾತ್ರ. ಈ ಜಮೀನಿನಲ್ಲಿ ಸುಮಾರು 50 ಎಕರೆಗಳಿಗಿಂತಲೂ ಕಮ್ಮಿ ಹೋಲ್ಡಿಂಗ್ಸ್ ಇರತಕ್ಕದ್ದು 12 ಲಕ್ಷ 45 ಸಾವಿರ ಎಕರೆಗಳು. ಇನ್ನು 50 ಎಕರೆಗಳಿಗೆ ಜಾಸ್ತಿ ಇರತಕ್ಕಂಥವರ ಸಂಖ್ಯೆ 12 ಲಕ್ಷದ 36 ಸಾವಿರ. ಹೀಗೆ ಹೆಚ್ಚಿಗೆ ಜಮೀನಿರತಕ್ಕಂಥವರ ಸಂಖ್ಯೆ ನಮ್ಮಲ್ಲಿ ಬಹಳ ಕಮ್ಮಿ. ಈ ಜಮೀನನ್ನು ರಿ-ಡಿಸ್ಟ್ರಿಬ್ಯೂಟ್ ಮಾಡುವಾಗಲೂ ನಾವು ಆ ಹಂಚತಕ್ಕ ಜಮೀನುಗಳು ಒಂದು ಎಕನಾಮಿಕ್ ಹೋಲ್ಡಿಂಗ್ ಆಗಿರುವಂತೆ ನೋಡಿಕೊಂಡು ಮಾಡಬೇಕಾಗಿದೆ. ಸಾಮಾನ್ಯವಾಗಿ 50 ಎಕರೆ ಜಮೀನು ಒಂದು ಎಕನಾಮಿಕ್ ಹೋಲ್ಡಿಂಗ್ ಎಂದು ಇಟ್ಟುಕೊಂಡರೆ-ಆಗ ಸುಮಾರು 15 ಸಾವಿರ ಹೋಲ್ಡಿಂಗ್‌ಗಳಲ್ಲಿ - 50 ಎಕರೆಗೂ ಜಾಸ್ತಿಯಾಗಿ ಜಮೀನಿರುತ್ತದೆಂದು ತಿಳಿದುಬಂದಿದೆ. ಆದರೆ ಈ 15 ಸಾವಿರ ಹೋಲ್ಡಿಂಗ್‌ಗಳಿರುವುದೇನೂ ಅಂಥ ಒಂದು ದೊಡ್ಡ ಸಮಸ್ಯೆ ಅಲ್ಲ. ಇದನ್ನು ತಾವುಗಳ್ಯಾರೂ ಒಂದು ಭೂತಕನ್ನಡಿ ಹಾಕಿ ನೋಡಬೇಕಾದುದಿಲ್ಲ ಎಂಬ ಅಂಶವನ್ನು ನಾನೀಗ ಮಾನ್ಯಸದಸ್ಯರ ಗಮನಕ್ಕೆ ತರಬೇಕಾಗಿದೆ. ಇನ್ನು ಈ 50 ಎಕರೆಗೂ ಮೇಲ್ಪಟ್ಟಿರುವ ಹೋಲ್ಡಿಂಗ್‌ಗಳಲ್ಲಿರುವುದೆಲ್ಲ 82 ಲಕ್ಷ ಎಕರೆ ಜಮೀನು ಮಾತ್ರ. ಆದ್ದರಿಂದ ನಮ್ಮಲ್ಲಿ ಯಾರೂ ಅಂಥ ಹೆಚ್ಚು ಜಮೀನುಳ್ಳ ದೊಡ್ಡ ಜಮೀನ್ದಾರರು ಇರುವುದು ಬಹಳ ಕಡಮೆ ಎಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಈ ಟೆನೆನ್ಸಿ ಬಿಲ್ಲಿಗೆ ತಿದ್ದುಪಡಿಗಳನ್ನು ತರುವುದರಲ್ಲಿ ಸರ್ಕಾರದವರು ತಾತ್ಸಾರ ಮಾಡಿದ್ದಾರೆಂಬ ಆಪಾದನೆ ಬಂದಿದೆ. ಈಗಾಗಲೇ ಈ ಜನರಲ್ ಇನಾಂ ಅಬಾಲಿಷನ್ ಬಗ್ಗೆ ಫೈನಲ್ ಪಬ್ಲಿಕೇಷನ್ ಕೊಟ್ಟಿದ್ದೇವೆ. ಇನ್ನು ಆ ರಿಲಿಜಿಯಸ್ ಇನಾಂ ರದ್ದಿಯಾತಿ ಬಿಲ್ಲು. . .

ಶ್ರೀ ಟಿ. ಮರಿಯಪ್ಪ.—ಐದು ಸಾವಿರ ರೂಪಾಯಿಗಳನ್ನು ಮಾತ್ರ ಒದಗಿಸಿದ್ದೀರಿ.

12-30 P.M.

ಶ್ರೀ ಎ. ಜಿ. ರಾಮಚಂದ್ರರಾವ್.—ಒಂದು ಟೋಕನ್ ಗ್ರಾಂಟ್ ಮಾತ್ರ ಸೂಚಿಸಿದ್ದೇವೆ. ಇನ್ನು ಈ ಸರ್ಕಾರಿ ಗ್ರಾಮಗಳಲ್ಲಿ ಅನೇಕ ಕಡೆ ಈ ಸರ್ವೆ ಅಂಡ್ ಸೆಟಲ್‌ಮೆಂಟ್ ಕಾರ್ಯ ಪೂರೈಸಿದೆ. ಆ ಬಗ್ಗೆ ರೂಲ್ಸು ಕೂಡ ಆಗಿ ಅವು ಈಗಾಗಲೇ ಪಬ್ಲಿಷ್ ಆಗಿರುತ್ತವೆ. ಇನ್ನು ಈ ಬಗ್ಗೆ ಅಷ್ಟೇನೂ ತಡವಾಗುವುದಿಲ್ಲ. ಜಾಗ್ರತೆಯಾಗಿ ಈ ಕೆಲಸವನ್ನು ಮಾಡಲಾಗುತ್ತದೆ. ಸೀಲಿಂಗ್ ವಿಷಯದಲ್ಲಿ ಸ್ಟ್ಯಾಂಡರ್ಡ್ ಎಕರ್ಸ್ ಎಷ್ಟಿರಬೇಕು ಎಂಬ ಪ್ರಶ್ನೆ ಇದೆ. ಒಂದು ಕಡೆ 100 ಎಕರೆ ಇನ್ನೊಂದು ಕಡೆ 25 ಎಕರೆ ಹಾಕಿಕೊಂಡಿದ್ದಾರೆ. ಇಂಡಿಯಾ ಸರ್ಕಾರದವರು ಸ್ಟ್ಯಾಂಡರ್ಡ್ ಎಕರ್ಸ್, ಹೋಲ್ಡಿಂಗ್, ಎಷ್ಟಿರಬೇಕೆಂಬ ವಿಚಾರದಲ್ಲಿ ಪರಿಶೀಲನೆ ಮಾಡುತ್ತಾ ಇದ್ದಾರೆ. ಅದು ಬಂದತಕ್ಷಣ ಸೀಲಿಂಗ್ ಫಿಕ್ಸ್ ಮಾಡುವುದಕ್ಕೆ ಅವಕಾಶವಾಗುತ್ತದೆ. ಟೆನೆನ್ಸಿ ಲೆಜಿಸ್ಲೇಷನ್ ವಿಷಯ ಎಲ್ಲರಿಗೂ ಗೊತ್ತಿದೆ. ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಇದಕ್ಕೆ ಸಂಬಂಧಪಟ್ಟ ತಿದ್ದುಪಡಿಗಳನ್ನು ಜಾಗ್ರತೆ ತರುತ್ತೇವೆ. ಇದು ಅಖಿಲ ಭಾರತದ ಪ್ರಶ್ನೆಯಾದದರಿಂದ ಒಂದು ಯೂನಿಫಾರಂ ಪಾಲಿಸಿಯನ್ನು ಅನುಸರಿಸಬೇಕೆಂದು ಪ್ರಯತ್ನ ಮಾಡುತ್ತಾ ಇದ್ದೇವೆ. ಆದರಿಂದ ಯಾವ್ಯಾವ ಆಕ್ಷೇಪಣೆಗಳು ಬಂದಿವೆಯೋ ಅವುಗಳೆಲ್ಲವೂ ಸರ್ಕಾರದವರ ಗಮನದಲ್ಲಿದೆ. ಸೂಕ್ತವಾದ ಪರಿಹಾರವನ್ನು ಜಾಗ್ರತೆ ಕೊಡಿಸುವುದಕ್ಕೆ ಏರ್ಪಾಡು ಮಾಡುತ್ತಾ ಇರತಕ್ಕ ವ್ಯವಸ್ಥೆಯನ್ನು ಮಾನ್ಯ ಸದಸ್ಯರ ಮುಂದೆ ಇಟ್ಟಿದ್ದೇನೆ. ಆದಕಾರಣ ಆಕ್ಷೇಪಣೆಗಳನ್ನು ವಾಪಸು ತೆಗೆದುಕೊಂಡು ಈ ಡಿಮ್ಯಾಂಡಿಗೆ ತಮ್ಮ ಅನುಮತಿಯನ್ನು ಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

Mr. SPEAKER.—The question is :

"That a sum not exceeding Rs. 61,88,000 be granted to the Government to defray the charges which will come in course of payment during the year ending 31st day of March 1957, in respect of 'Land Revenue'."

The motion was adopted.

DEMAND No. 11—GENERAL ADMINISTRATION.

25. GENERAL ADMINISTRATION (EXCEPT THE SUB-MAJOR HEADS B AND C).

Mr. SPEAKER.—Motion moved:

"That a sum not exceeding Rs. 86,29,900 be granted to the Government to defray the charges which will come in course of payment during the year ending 31st day of March 1957, in respect of 'General Administration' (except the sub-major heads B and C)."

ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರುದುರ್ಗ).—ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರನ್ನು ವಂದಿಸುತ್ತೇನೆ. ಸ್ವಾಮಿ, ಗೆಸ್ಟ್ ಹೌಸ್‌ಗೆ ಸಂಬಂಧಪಟ್ಟಂತೆ ಈ ಮಾನ್ಯ ಸಭೆಯ ಸದಸ್ಯರಿಗೆ ಆಗಿರತಕ್ಕ ಏರ್ಪಾಡಿನ ವಿಷಯದಲ್ಲಿ ಒಂದೆರಡು ಮಾತನ್ನು ಹೇಳಬೇಕೆಂದು ಇಷ್ಟಪಡುತ್ತೇನೆ. ಕೆಲವು ಗೆಸ್ಟ್ ಹೌಸುಗಳಲ್ಲಿ ಅಡಿಗೆಯವರನ್ನು ನೇಮಕ ಮಾಡಿರುತ್ತಾರೆ. ಆದರೆ ಅವರು ಅಲ್ಲಿ ಇರುವುದೇ ಇಲ್ಲ. ಬೇರೆ ಎಲ್ಲಿ ಅವರ ಸೇವೆಸಲ್ಲುತ್ತಾ ಇದೆಯೋ ಗೊತ್ತಿಲ್ಲ. ನಾನು ಕಾರಲ್‌ಟನ್ ಹೌಸ್‌ನಲ್ಲಿ ಸಾಮಾನ್ಯವಾಗಿ ಉಳಿದು

(ಶ್ರೀ ಎಚ್. ಹುಚ್ಚಮಾಸ್ತಿಗೌಡ)

ಕೊಳ್ಳುವುದು. ಅಲ್ಲಿನ ವ್ಯವಸ್ಥೆ ನೋಡಿದರೆ ಅಡಿಗೆಯವರು ಇರುವುದಿಲ್ಲ. ನಮಗೆ ಬೇರೆ ಕಡೆಯಿಂದ ಊಟ ತರಿಸುವುದಕ್ಕೆ ಬಹಳ ತೊಂದರೆ. ಅಂಥ ಸಂಬಂಧದಲ್ಲಿ ಅಲ್ಲಿರುವ ಜವಾನರುಗಳೇ ನಮಗೆ ಅಡಿಗೆಯವರಾಗಬೇಕಾಗುತ್ತದೆ. ಈ ಅಧಿವೇಶನದ ಸಮಯದಲ್ಲಿ ಬೇರೆ ಊಟದ ವ್ಯವಸ್ಥೆ ಅಲ್ಲಿ ಮಾಡಿದರೂ ಕೂಡ, ಪ್ರತಿಯೊಂದು ಕಡೆಯಲ್ಲೂ ಸರಿಯಾದ ವ್ಯವಸ್ಥೆ ಇದೆಯೇ ಇಲ್ಲವೇ ಎಂಬುದನ್ನು ಬಂದು ನೋಡಿಕೊಳ್ಳುವವರು ಯಾರೂ ಇರುವುದಿಲ್ಲ. ಸಂಬಂಧಪಟ್ಟ ಮಂತ್ರಿಗಳು ಇರುವುದಿಲ್ಲ. ಸರ್ಕಾರಿ ಅಧಿಕಾರಿಗಳು ಬಂದಾಗ ಅವರಿಗೆ ತಿಳಿಸಿದರೆ ವ್ಯವಸ್ಥೆ ಏನು ಮಾಡಬೇಕೆಂಬುದು ಅವರಿಗೆ ಗೊತ್ತಿರುವುದಿಲ್ಲ. ಮಾನ್ಯ ಸಭೆಯ ಸದಸ್ಯರು ಇಲ್ಲಿಗೆ ಬಂದು ತಿಂಗಳುಗಟ್ಟಲೆ ಇರುವ ಸಮಯದಲ್ಲಾದರೂ ಕೂಡ ಅವರಿಗೆ ಸರಿಯಾದ ರೀತಿಯಲ್ಲಿ ವ್ಯವಸ್ಥೆ ಮಾಡದಿದ್ದರೆ, ಕೆಲಸ ಮಾಡುವುದಕ್ಕೆ ಬಹಳ ಕಷ್ಟವಾಗುತ್ತದೆ. ಇದಕ್ಕೆ ಸರ್ಕಾರದವರು ಗಮನ ಕೊಡಬೇಕೆಂದು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಇಲ್ಲ ಖಾಯಂ ಆಗಿ ನೇಮಕ ಮಾಡಿರುವ ಅಡಿಗೆಯವರೂ ಕೂಡ ಅಲ್ಲಿ ಇರುವುದಕ್ಕೆ ಏಕೆ ಮನಸ್ಸು ಮಾಡುವುದಿಲ್ಲವೋ ಏನೋ ಗೊತ್ತಿಲ್ಲ. ಅದೂ ಅಲ್ಲದೆ ಇನ್ನೊಂದು ವಿಷಯ. ಒಂದೊಂದು ರೂಮಿನಲ್ಲಿ ನಾಲ್ಕು, ಐದು ಜನ ಇದ್ದು ಏನಾದರೂ ಒಂದು ಅಧ್ಯಯನ ಮಾಡ ಬೇಕೆಂದರೆ ಅದಕ್ಕೆ ಅಲ್ಲಿ ಅವಕಾಶ ಇಲ್ಲ. ಇಂಥ ತೊಂದರೆ ಇದೆ. ಇದನ್ನು ಸರ್ಕಾರದವರ ಗಮನಕ್ಕೆ ತರಲಿಚ್ಛಿಸುತ್ತೇನೆ.

ಸ್ವಾಮಿ, ಈ ಸಭೆ ಬಡ್ಜೆಟ್ ಅಧಿವೇಶನದಲ್ಲಿ ಕುಳಿತಿದ್ದರೂ ಕೂಡ ಹಣಕಾಸಿನ ಸಚಿವರು ಮತ್ತು ಮುಖ್ಯಮಂತ್ರಿಗಳಾಗಿರತಕ್ಕವರು ಈ ಸಭೆಯ ಸದಸ್ಯರುಗಳು ಏನು ಟೀಕೆ ಟಿಪ್ಪಣಿಗಳನ್ನು ಸಭೆಯ ಮುಂದೆ ಇಡುತ್ತಾರೊ ಅವು ಸರ್ಕಾರದ ಪರಿಶೀಲನೆಗೆ ಅರ್ಹವಾದವೇ ಅಲ್ಲವೇ ಎಂಬುದನ್ನು ಕೂಡ ಮನಸ್ಸಿಗೆ ತೆಗೆದುಕೊಳ್ಳದೆ ಇಂಥ ಸಂದರ್ಭದಲ್ಲಿ ಮುಖ್ಯ ಮಂತ್ರಿಗಳು ಪ್ರವಾಸ ಕೈಕೊಳ್ಳುವುದು ಎಂದರೆ ಇದಕ್ಕಿಂತ ಈ ಸಭೆಯನ್ನು ಉದಾಸೀನ ಮಾಡಿರುವ ಉದಾಹರಣೆ ಇನ್ನೆಲ್ಲೂ ಕಾಣುವುದಿಲ್ಲ. ಏಳು-ಎಂಟು ವರ್ಷಗಳ ಮುಂಚೆ ಸ್ವಾತಂತ್ರ ಬರುವುದಕ್ಕೆ ಮೊದಲು ಇಂಥ ಪ್ರಸಂಗ ಅಲ್ಲೊಂದು ಇಲ್ಲೊಂದು ಇರಬಹುದೇ ಹೊರತು ಏಳು ಎಂಟು ವರ್ಷಗಳಿಂದೀಚೆಗೆ ಇದು ಬಹಳವಾಗಿದೆ.

ಶ್ರೀ ಟಿ. ಮರಿಯಪ್ಪ.—ಆಗ ಸಭೆ ಬಿಟ್ಟು ಹೋಗಬೇಕಾದರೆ ಬಹಳ ಹೆದರುತ್ತಾ ಇದ್ದರು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ನಿಜ. ಆ ಹೆದರಿಕೆಯು ತಪ್ಪುತ್ತಿದೆಯೆಲ್ಲಾ ಎಂಬುದೇ ನನ್ನ ಆಕ್ಷೇಪಣೆ. ಇಷ್ಟರಮಟ್ಟಿಗೆ ಉದಾಸೀನ ಮಾಡಿರುವುದು ಒಳ್ಳೆಯದಲ್ಲ. ಇದನ್ನು ತಿದ್ದಿಕೊಳ್ಳಬೇಕು ಎಂದು ಹೇಳಿ ನಾನು ಸರ್ಕಾರದವರಿಗೆ ಈ ಸಭೆಯ ಮುಂದೆ ತಿಳಿಸುತ್ತೇನೆ.

ಇನ್ನು ನಮ್ಮ ಮುಖ್ಯ ಮಂತ್ರಿಗಳು ತಮ್ಮ ಬಡ್ಜೆಟ್ ಭಾಷಣ ಮಾಡುವಾಗ ಕಾರ್ಯದಕ್ಷತೆ ಮತ್ತು ಸರ್ಕಾರಿ ನೌಕರರ ವಿಷಯದಲ್ಲಿ ಒಂದು ಮಾತು ಹೇಳಿದ್ದಾರೆ. ಸರ್ಕಾರದ ಬೇರೆ ಬೇರೆ ಇಲಾಖೆಗಳಲ್ಲಿ ಬಹುಮಟ್ಟಿಗೆ ಒಂದಕ್ಕೊಂದು ಸಂಬಂಧವಿಲ್ಲದೆ ಕೆಲಸ ನಡೆಸಿಕೊಂಡು ಹೋಗುತ್ತಿವೆ, ಇದು ಹೀಗೆಯೇ ಬೆಳೆಯುತ್ತಾ ಬರುತ್ತಿದೆ ಎಂಬ ಒಂದು ಮಾತನ್ನು ಹೇಳಿದ್ದಾರೆ. ಸ್ವಾಮಿ, ಅದನ್ನು ನಾವು ಸ್ವಲ್ಪ ತೀವ್ರವಾಗಿ ಯೋಚನೆ ಮಾಡಬೇಕಾಗಿದೆ. ಮುಖ್ಯಮಂತ್ರಿಗಳು ಒಂದು ಇಲಾಖೆಯವರು ಇನ್ನೊಂದು ಇಲಾಖೆಯವರೊಡನೆ ಹೊಂದಿಕೊಂಡು ಕೆಲಸ ಮಾಡದೇ ಇರುವುದು ಹೆಚ್ಚಾಗುತ್ತಾ ಇದೆ ಎಂದರೆ ಸರ್ಕಾರ ಕೀಳ್ ದರ್ಜೆಗೆ ಬರುತ್ತಿದೆ ಎಂದು ಅರ್ಥ ಬರುವಂತೆ ಹೇಳಿದ ಹಾಗೆ ಆಯಿತು. ಅದಕ್ಕಿಂತ ಬೇರೆ ಅಧೋಗತಿ ಇನ್ನಾವುದೂ ಇಲ್ಲ. ಅಧಿಕಾರಿಗಳು ಒಂದು ಇಲಾಖೆಯವರು, ಇನ್ನೊಂದು ಇಲಾಖೆಯವರೊಂದಿಗೆ ಹೊಂದಿಕೊಂಡು ಕೆಲಸ ಮಾಡದಿದ್ದರೆ ನಾವು ನಿರೀಕ್ಷೆ ಮಾಡುವಷ್ಟು ದಕ್ಷತೆ, ಪ್ರಮಾಣಿಕತೆ ಖಂಡಿತ ಸಿಕ್ಕುವುದಿಲ್ಲ ಎಂದು ಧಾರಾಳವಾಗಿ ಹೇಳಬಹುದು. ಸ್ವಾಮಿ, ಸರ್ಕಾರದವರೇ ಕೆಳಮಟ್ಟದ ಅಧಿಕಾರಿಗಳಿಗೆ ಈ ಪಾಠ ಹಾಕಿಕೊಟ್ಟಿದ್ದಾರೆ ಎಂಬುದಕ್ಕೆ ಕೆಲವು ಉದಾಹರಣೆಗಳನ್ನು ಕೊಡಬಹುದು. ಎಲ್ಲೋ ಒಂದು ಕಡೆ ಚಿತ್ರದುರ್ಗ ಜಿಲ್ಲೆಯಲ್ಲಿ ಎರಡು—ಮೂರು ಕೆರೆಗಳು ಒಡೆದ ಸಂದರ್ಭದಲ್ಲಿ ಯಾರು ತಪ್ಪು ಮಾಡಿದ್ದಾರೆ ಎಂಬುದನ್ನು ಪತ್ತೆ ಮಾಡುವುದಕ್ಕೆ ಒಂದು ಕಮಿಟಿ ಮಾಡಿ, ಆ ಕಮಿಟಿಯ ವರದಿ ಬಂದು ಅದರಲ್ಲಿ ಯಾರು ಹೆಚ್ಚಿನ ಆಕ್ಷೇಪಣೆಗೆ ಗುರಿಯಾಗಿದ್ದರೋ ಅಂಥವರಿಗೆ ಶಿಕ್ಷೆ ಮಾಡುವುದಕ್ಕೆ ಬದಲಾಗಿ ಅವರನ್ನು ಇಲಾಖೆಯ ಮುಖ್ಯಾಧಿಕಾರಿಗಳನ್ನಾಗಿ ಮಾಡಿ ಪ್ರಮೋಷನ್ ಕೊಟ್ಟು ಕೆಲಸ ಮಾಡಿಸಿದರೆ ಕಾರ್ಯದಕ್ಷತೆ ಹೇಗೆ ಉಳಿಯುತ್ತದೆ? ಎಷ್ಟೇ ನಾವು ತಪ್ಪು ಮಾಡಿದರೂ ಕೂಡ ಸರ್ಕಾರದ ದಾಕ್ಷಿಣ್ಯವನ್ನು ಸಂಪಾದನೆ ಮಾಡುವಷ್ಟು ಕೆಲಸ ಮಾಡಿದರೆ ನಮಗೆ ಯಾವ ತೊಂದರೆಯೂ ಆಗುವುದಿಲ್ಲ ಎಂಬ ಧೈರ್ಯ ಅಧಿಕಾರಿಗಳಿಗೆ ಬರಬಾರದು. ನಾನು ಹಿಂದಿನ ಅಧಿವೇಶನದಲ್ಲಿ ಕೇಳಿದಾಗ ಸಂಬಂಧಪಟ್ಟ ಮಂತ್ರಿಗಳು ಯಾರಾರ ಮೇಲೆ ಯಾವ ಯಾವ ಚಾರ್ಜು ಬರುತ್ತದೆ ನೋಡಬೇಕು, ಚೀಫ್ ಇಂಜನಿಯರವರಿಗೆ ಬರೆದಿದ್ದೇವೆ ಎಂದು ಹೇಳಿದರು. ಆಮೇಲೆ ಏನಾಯಿತು ಎಂಬುದು ಸಭೆಯ ಗಮನಕ್ಕೆ ಬರಲಿಲ್ಲ. ಈ ಸಭೆಯಿಂದ ಸರ್ಕಾರ ನೇಮಕ ಮಾಡಿದ್ದ ಸಮಿತಿಯ ವರದಿ ಮೇಲೆ ಯಾವ ಕಾರ್ಯಕ್ರಮ ತೆಗೆದುಕೊಂಡರು ಎಂಬುದು ಈ ಸಭೆಗೆ ವರದಿ ಆಗಲಿಲ್ಲ. ಈ ರೀತಿ ಕೆಲಸ ನಡೆದರೆ ಕಾರ್ಯ ದಕ್ಷತೆ ಹೇಗೆ ಉಳಿಯುತ್ತದೆ ಎಂಬುದನ್ನು ನಾವು ಯೋಚನೆ ಮಾಡಬೇಕು.

ಇನ್ನೊಂದು ವರ್ತಮಾನ ಕೇಳಿದೆ; ಅದು ಎಷ್ಟು ಮಟ್ಟಿಗೆ ನಿಜವೋ, ಸುಳ್ಳೋ ಗೊತ್ತಿಲ್ಲ. ಒಬ್ಬರು ಮಂತ್ರಿಗಳು ಯಾವುದೋ ಒಂದು ಕಳ್ಳತನವನ್ನು ಕಂಡು ಹಿಡಿದರೆ ಇನ್ನೊಬ್ಬ ಮಂತ್ರಿಗಳು ಆ ಕಳ್ಳತನ ನಡೆದಿಲ್ಲ ಎಂದು 'B' ರಿಪೋರ್ಟ್ ತರಿಸಿಕೊಟ್ಟಿದ್ದಾರೆ ಎಂದು ಕೇಳಿದೆ. ಹೀಗೆ ಮಂತ್ರಿಗಳಲ್ಲೇ ಪರಸ್ಪರ ಸೌಹಾರ್ದ ಇಲ್ಲದೇ ಇರುವಾಗ ಇಲಾಖೆಗಳಲ್ಲಿ ಸೌಹಾರ್ದ ಹೇಗೆ ಬರುತ್ತದೆ? ಈ ರೀತಿ ಮೇಲ್‌ಮಟ್ಟದಲ್ಲಿ ಪಾಠ ಹಾಕುತ್ತಾ ಇರುವುದು ನಮಗೆಲ್ಲರಿಗೂ ಕಂಡುಬರುತ್ತಾ ಇದೆ.

ಸ್ವಾಮಿ, ಪಿ. ಡಬ್ಲ್ಯು. ಡಿ. ಮಂತ್ರಿಗಳು ಹಿಂದೆ, ನಾನು ಎಲ್ಲಿ ಹೋದರೂ ಯಾರು ಚನ್ನಾಗಿ ಬಹಳ ದಕ್ಷತೆಯಿಂದ ಕೆಲಸ ಮಾಡುತ್ತಾರೆ ಅವರಿಗೆ ಡಬ್ಬಲ್ ಇಂಕ್ರಿಮೆಂಟ್ ಬೇಕಾದರೂ ಕೊಡುತ್ತೇನೆ ಎಂದು ಸಾರುತ್ತಾ ಬಂದರು. ಇದುವರೆಗೂ ಒಬ್ಬರಿಗೂ ಡಬ್ಬಲ್ ಇಂಕ್ರಿಮೆಂಟ್ ಕೊಡಲಿಲ್ಲ ಮತ್ತು ತಪ್ಪು ಮಾಡಿದವರಿಗೆ ಶಿಕ್ಷೆಯನ್ನೂ ಮಾಡಲಿಲ್ಲ. ಈ ರೀತಿ ಸಾಗುತ್ತಾ ಹೋದರೆ ದಕ್ಷತೆ ಯಾವ ಮಟ್ಟಕ್ಕೆ ಇಳಿಯುತ್ತದೆ ಎಂಬುದನ್ನು ನಾವು ಯೋಚನೆ ಮಾಡಬೇಕು. ಹೀಗೆ ಒಂದಲ್ಲ ಅನೇಕ ಉದಾಹರಣೆ

ಗಳನ್ನು ಕೊಡುತ್ತಾ ಹೋಗಬಹುದು. ಆದರೆ ಇನ್ನೊಂದು ಮುಖ್ಯಮಂತ್ರಿಗಳು ಹೇಳಿರುವುದು ಮಾತ್ರ ಬಹಳ ದೊಡ್ಡ ಮಾತು. ಅದನ್ನು ಅವರು ಆಗ್ಗಾಗ್ಗೆ ಹೇಳುತ್ತಲೇ ಇರುತ್ತಾರೆ. ಪ್ರಕಟಣೆಗಳೂ ಬರುತ್ತಾ ಇರುತ್ತವೆ. ಮಂತ್ರಿಗಳು ಟೂರ್ ಹೋಗಬಾರದು ಆದಷ್ಟು ಕಡಿಮೆ ಮಾಡಬೇಕು ಎಂದು ಹೇಳಿ ಮೂರು ತಿಂಗಳಿಗೆ ಒಂದು ಸಾರಿ ಗೆಜೆಟ್‌ನಲ್ಲಿ ಪ್ರಕಟಣೆ ಬರುತ್ತಲೇ ಇರುತ್ತದೆ. ಇದು ಮಾತ್ರ ನಿಲ್ಲುವುದಿಲ್ಲ. ಹೇಳುವುದು ಒಂದು ವಿಧ ಆದರೆ ಮಾಡುವುದು ಇನ್ನೊಂದು ವಿಧ ಆಗುತ್ತಾ ಇರುವಾಗ ಕೆಳ ಅಧಿಕಾರಿಗಳು ಅದರಿಂದ ಪಾಠ ಕಲಿತುಕೊಳ್ಳುವುದರಲ್ಲಿ ಯಾವ ಅಭ್ಯಂತರವೂ ಇರುವುದಿಲ್ಲ. ಹೀಗಾದರೆ ಸರ್ಕಾರದ ಪ್ರಾಮಾಣಿಕತೆಯನ್ನು ಉತ್ತಮಪಡಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಇನ್ನೂ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಬಹುದು.

ಸ್ವಾಮಿ, ಸಂಬಳಸಾರಿಗೆ ವಿಷಯದಲ್ಲಿ ನಾನು ನಮ್ಮ ಮುಖ್ಯಮಂತ್ರಿಗಳು ಹೇಳಿರುವುದನ್ನು ಸಂಪೂರ್ಣವಾಗಿ ಸ್ವಾಗತಿಸತಕ್ಕವನು.

ಈ ಸಂಬಳ ಸಾರಿಗೆಯನ್ನು ನಿಗದಿ ಮಾಡುವುದಕ್ಕೆ ನೇಮಕವಾದ ಸಮಿತಿಯವರೇ ಒಂದು ವಿಷಯವನ್ನು ಹೇಳಿದ್ದಾರೆ. ಈ ಪ್ರಾಂತಗಳ ಪುನರ್ವಿಂಗಡಣೆಯಾಗುವ ಸಂದರ್ಭವಿರುವಾಗ ಯಾವ ಯಾವ ಪ್ರಾಂತಗಳಲ್ಲಿ ಸಂಬಳ ಸಾರಿಗೆಗಳು ಯಾವ ರೀತಿ ಇದೆ ಎನ್ನುವುದನ್ನು ನಾವು ತಿಳಿದುಕೊಳ್ಳಬೇಕೆಂದು ಹೇಳಿದ್ದಾರೆ. ಆದರೆ ಬೊಂಬಾಯಿನಲ್ಲಿರುವುದಕ್ಕೂ, ಮದರಾಸಿನಲ್ಲಿರುವುದಕ್ಕೂ, ಹೈದರಾಬಾದಿನಲ್ಲಿರುವುದಕ್ಕೂ ನಾವು ಹೋಲಿಸಿ ನೋಡಿದರೆ ಅವಕ್ಕಿಂತಲೂ ನಾವು ಶಿಫಾರಸು ಮಾಡಿರುವುದು ಬಹಳ ಕಡಿಮೆಯಾಗಿದೆ ಎಂದೂ ಹೇಳಿದ್ದಾರೆ. ಈಗ ನಾವು ಆರು ತಿಂಗಳ ಅವಧಿಯಲ್ಲಿ ಸಂಬಳಸಾರಿಗೆಗಳನ್ನು ಜಾಸ್ತಿ ಮಾಡಿದರೂ ಅವರಮಟ್ಟಕ್ಕೇನೂ ತರುವುದಿಲ್ಲ. ಈಗ ಸಂಬಳಸಾರಿಗೆಗಳನ್ನು ಬದಲಾಯಿಸಿ, ಮತ್ತೆ ಆರು ತಿಂಗಳನಂತರ ಪುನಃ ಬದಲಾವಣೆ ಮಾಡುವ ಪ್ರಶ್ನೆಯನ್ನು ಯೋಚಿಸುವುದಕ್ಕೆ ಬದಲು ಪ್ರಾಂತ ಪುನರ್ವಿಂಗಡಣೆ ಆಗುವವರೆಗೂ ಕಾಯುವುದು ಅಗತ್ಯವೆಂದು ಭಾವಿಸುತ್ತೇನೆ. ಆದರೆ ಒಂದು ವಿಷಯವನ್ನು ಮಾತ್ರ ಸರ್ಕಾರದವರು ಚೆನ್ನಾಗಿ ತಿಳಿದುಕೊಳ್ಳಬೇಕು. ಹಿಂದೆ ನಮ್ಮ ರೈಲ್ವೆ ಇಲಾಖೆಯವರು ಕೇಂದ್ರ ರೈಲ್ವೆ ಆಡಳಿತಕ್ಕೆ ಸೇರಿದಾಗ ಮೈಸೂರಿನ ಅಧಿಕಾರಿಗಳಿಗೆ ಆದಂತೆ ತೊಂದರೆ ಇವರಿಗೆ ಆಗದೆ ಇರಲಿ. ಅವರಿಗೆ ಬರುತ್ತಿದ್ದಂಥ Status ಮತ್ತು emoluments ಏನಿತ್ತು ಅದನ್ನು ಅವರಿಗೆ ಅಲ್ಲಿ ಕೊಡದೆ ತೊಂದರೆಯುಂಟಾಯಿತೆಂದು ಕೇಳಿದ್ದೇನೆ. ಮತ್ತೆ ಇವರಿಗೂ ಆ ರೀತಿಯಾಗದಂತೆ ನೋಡಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಮೈಸೂರು ಸರ್ಕಾರದವರು ಅಧಿಕಾರಿಗಳಿಗೆ ಕೊಡುತ್ತಿದ್ದಂಥ ಅಲೋಯನ್ಸುಗಳನ್ನು ನಿಲ್ಲಿಸಲು ಆಜ್ಞೆ ಮಾಡಿದರು. ಅದು ಇನ್ನೂ ಜಾರಿಯಲ್ಲಿದೆ. ಅನೇಕ ನೌಕರರಿಗೆ ಅಲೋಯನ್ಸ್ ಕೊಡುವುದನ್ನು ನಿಲ್ಲಿಸಿದ್ದಾರೆ. ಆದರೆ ಅದು ಮತ್ತೆ ಶುರುವಾಗುತ್ತಿದೆ. ಯಾರಾರಿಗೆ ಶಿಫಾರಸು ಬರುತ್ತಿದೆಯೋ ಅಂಥವರಿಗೆಲ್ಲ ಮೂಲ ಉದ್ದೇಶವನ್ನು ಮರೆತು ಪುನಃ ಪರಿಶೀಲನೆ ಮಾಡಿ ಕೆಲವರಿಗೆ ಕೊಡುತ್ತ ಬಂದರು. ಗೃಹಮಂತ್ರಿಗಳ ಆಫೀಸಿನಿಂದ ಒಂದು ಶಿಫಾರಸು ಬಂದು ಅಲ್ಲಿ ಈ ರೀತಿ ಅಂದರೆ "Rationalisation of allowances drop ಮಾಡಿದ್ದಾರೆ ಸರ್ಕಾರದವರು; ಆದುದರಿಂದ ಇಲ್ಲಿನ ಸಿಬ್ಬಂದಿಗೆ allowances ಕೊಡಬಹುದು" ಎಂದು ಒಂದು ನೋಟ್ ಹಾಕಿದರು. ಅದು ಮುಖ್ಯಮಂತ್ರಿಗಳಿಗೆ ಹೋಯಿತು. ಅದರ ಮೇಲೆ "ಹೋಂ ಮಂತ್ರಿಗಳು ಅವರ ಜೊತೆಯಲ್ಲಿ ಮಾತನಾಡಬೇಕು" ಎಂದು ಮುಖ್ಯಮಂತ್ರಿಗಳು ಬರೆದರು. —ಇದು ನಡೆದದ್ದು ಸುಮಾರು 1952ನೆ ಇಸವಿಯಲ್ಲಿ— ಮತ್ತೆ ಇದನ್ನು ಕೊಡಬಹುದು ಎಂದು ತೀರ್ಮಾನ ಮಾಡಿದರು. ತೀರ್ಮಾನವಾಗಿ ಅಕೌಂಟೆಂಟ್ ಜನರಲ್ ಆಫೀಸಿಗೆ ಹೋದಾಗ "ಈ ಅಲೋಯನ್ಸು ಕೊಡುವುದಕ್ಕೆ ಕಾರಣವೇನು? ಹಿಂದಿನ ಸರ್ಕಾರಿ ಆಜ್ಞೆಗೆ ವಿರೋಧವಾಗಿ ಮಂಜೂರು ಮಾಡಲು ಕಾರಣವೇನು? ಇದನ್ನೆಲ್ಲ ತಿಳಿಸಬೇಕು" ಎಂದು ಅಕೌಂಟೆಂಟ್ ಜನರಲ್‌ರವರು ಸರ್ಕಾರಕ್ಕೆ ಬರೆದರು. ಅದು ಸುಮಾರು 1953ನೆ ಇಸವಿ ಫೆಬ್ರವರಿಯಲ್ಲಿ ಬಂತು. 1953ನೆಯ ಇಸವಿಯಲ್ಲಿ ಬಂದರೆ ಆ ಕಾಗದಕ್ಕೆ ಉತ್ತರವನ್ನು ಬರೆಯಲಿಲ್ಲ. ಅಲೋಯನ್ಸ್ ಮಾತ್ರ ಕೊಟ್ಟುಬಿಟ್ಟರು. ಅದನ್ನು ಡ್ರಾ ಮಾಡುತ್ತಿದ್ದಾರೆ. ಮಂತ್ರಿಗಳ ಸಿಬ್ಬಂದಿಗೆ ಮೊದಲೇ ತಲೆ ಒಂದಕ್ಕೆ 35 ರೂಪಾಯಿ ಅಲೋಯನ್ಸ್ ಅದರ ಜೊತೆಗೆ ಇವರ ಶಿಫಾರಸು ಮಾಡಿದ ಅಲೋಯನ್ಸ್ ಒಬ್ಬರಿಗೆ 15 ರೂಪಾಯಿ, ಇಬ್ಬರಿಗೆ ತಲಾ 10 ರೂಪಾಯಿ, ಇನ್ನೊಬ್ಬರಿಗೆ ಐದು ರೂಪಾಯಿ. ಈ ಅಲೋಯನ್ಸನ್ನು ಏತಕ್ಕೋಸ್ಕರ ಕೊಟ್ಟಿದ್ದೀರಿ ಎಂಬ ಅಕೌಂಟೆಂಟ್ ಜನರಲ್‌ರಿಂದ observation ಬಂದರೂ ಕೂಡ ಅವರಿಗೆ ಜವಾಬು ಕೊಡದೆ allowance draw ಮಾಡುತ್ತಿದ್ದಾರೆ. ಇದರ ಜೊತೆಗೆ ಇನ್ನೂ ಒಂದು allowance ಕೊಡಬೇಕು ಎಂದು ಮತ್ತೆ ಶಿಫಾರಸು ಆಯಿತು. ಇದು ಮೂರನೆಯ allowance. ಈ ಶಿಫಾರಸು ಹೋದಾಗ ಮುಖ್ಯಮಂತ್ರಿಗಳು ಏನು ಬರೆದರು ಅಂದರೆ, 'ಹಿಂದೆ Iron Works ಕೆಲಸ ಮಾಡುವುದಕ್ಕೆ ಕೊಟ್ಟ allowance ವಜಾ ಮಾಡಬೇಕು ಎನ್ನಿಸುತ್ತದೆ. ಆ ಫೈಲನ್ನು ಮುಂದೆ ಇಡಿ' ಎಂದು ಬರೆದರು. ಹಾಗೆ ಬರೆದರೆ ಗೃಹಮಂತ್ರಿಗಳು ಬಹಳ ದಿವಸ ತಮ್ಮಲ್ಲೇ ಇಟ್ಟಿದ್ದು ಅದರ ಮೇಲೆ "file" ಎಂದು ಬರೆದರು. ಈ ರೀತಿಯಾಗಿ ಒಂದು ಕಡೆ ಎರಡು ಮೂರು allowance ಮತ್ತೊಂದು ಕಡೆ allowances rationalise ಮಾಡುತ್ತೇವೆ ಎಂದು ವಜಾಮಾಡಿರುವುದು ಹೀಗಾಗಿದೆ. ಹೀಗೆ allowances ತೆಗೆದುಕೊಳ್ಳತಕ್ಕ ಅಧಿಕಾರಿಗಳು, ಇದ್ದಂಥ allowances ಕಳೆದುಕೊಂಡಿರತಕ್ಕವರು ಒಂದೇ ಸರ್ಕಾರದಲ್ಲಿ ಇರುವಾಗ, ಸಮರ್ಪಕವಾಗಿ, ನ್ಯಾಯವಾಗಿ, ಸತ್ಯವಾಗಿ ಕೆಲಸ ಮಾಡಬೇಕು ಎಂದರೆ ಯಾರುತಾನೇ ಮಾಡುತ್ತಾರೆ!

ಸರ್ಕಾರ ನಡೆಸುವವರು ಬಾಯಲ್ಲಿ ಮಾತ್ರ ಕಾರ್ಯದಕ್ಷತೆ, ಸೇವಾನಿಷ್ಠೆ, ಪ್ರಾಮಾಣಿಕತೆ, ಮುಂತಾದ ದೊಡ್ಡ ದೊಡ್ಡ ಪದಗಳನ್ನು ಹೇಳಿ ಕೆಳದರ್ಜೆ ನೌಕರರಿಗೆ ನಿಮಗೆ ಹೀಗೆ ಮಾಡುತ್ತೇವೆ ಹಾಗೆ ಮಾಡುತ್ತೇವೆ ಎಂದು ಹೇಳುವುದನ್ನಾದರೂ ನಿಲ್ಲಿಸಬೇಕು. ಇಲ್ಲದಿದ್ದರೆ ಹೇಳಿದ ರೀತಿಯಲ್ಲಿ ಕೆಲಸಮಾಡಬೇಕು. ಇಷ್ಟಾದರೂ ಮಾಡದೆ ಹೋದರೆ ಕಾಂಗ್ರೆಸ್ ಸಂಸ್ಥೆಯಿಂದ ರಚಿತವಾಗಿರುವ ಸರ್ಕಾರಕ್ಕೆ ಗೌರವ ಬರುವುದಿಲ್ಲ. ಈ ಪಕ್ಷಕ್ಕೆ ಇರುವ ಮಾನ್ಯತೆ ಉಳಿಯುವುದಿಲ್ಲ. ದೇಶದ ಮುಂದೆ ಜನ ಆಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಇದಕ್ಕೆ ಅವಕಾಶವನ್ನು ಕೊಡಬಾರದು ಎಂದು ಒತ್ತಾಯ ಪೂರ್ವಕವಾಗಿ ಈ ಸರ್ಕಾರಕ್ಕೆ ತಿಳಿಸಬೇಕೆಂದು ಇಷ್ಟಪಡುತ್ತೇನೆ.

ಇನ್ನೂ ಕೆಲವು ಇಲಾಖೆಗಳಿವೆ–ಅವುಗಳ ವಿಷಯದಲ್ಲಿ ಬೇರೆ ಸಂದರ್ಭದಲ್ಲಿ ಹೇಳುತ್ತೇನೆ.

ಒಬ್ಬ ಸದಸ್ಯರು.—ತಾವು ಹೇಳಿದ ವಿಷಯಗಳನ್ನೆಲ್ಲ ಹೇಗೆ ತಿಳಿದುಕೊಂಡಿರಿ?

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಸರ್ಕಾರದಲ್ಲಿ ಹೀಗೆಲ್ಲ ಮಾಡುವುದನ್ನು ತಿಳಿದುಕೊಳ್ಳುವುದಕ್ಕೆ ನಾನಾ ವಿಧಗಳಿವೆ.

ಶ್ರೀ ಎಲ್. ಸಿದ್ದಪ್ಪ (ಚನ್ನಗಿರಿ).—ಇದರಿಂದ ಎಷ್ಟರಮಟ್ಟಿಗೆ administration ಬಗಿಯಾಗಿದೆ ಎಂಬುದು ವ್ಯಕ್ತವಾಗುತ್ತದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಇದು ಹಿಂದಿನಿಂದಲೂ ನಡೆದುಕೊಂಡುಬಂದಿದೆ. ಆದುದರಿಂದಲೇ ಒಳಗೆ ನಡೆಯುವ ಅಕ್ರಮಗಳು, 'ಕುಂಭಕೋಣ' ಜನ ಸಾಮಾನ್ಯರಿಗೆ ಗೊತ್ತಾಗುವುದಕ್ಕೆ ಅವಕಾಶವಿದೆ. ಮತ್ತು ಸರ್ಕಾರದ ವಿಚಾರದಲ್ಲಿ ಅಡಿಕೊಳ್ಳುವುದಕ್ಕೆ ಅವಕಾಶವಿದೆ.

ಒಬ್ಬ ಸದಸ್ಯರು.—'ಕುಂಭಕೋಣ' ಅರಿದರೆ ಏನು ಎಂಬುದನ್ನು ವಿವರಿಸುತ್ತೀರಾ?

ಶ್ರೀ ಎಚ್. ಹುಚ್ಚಮಾಸ್ತಿಗೌಡ.—'ಕುಂಭಕೋಣ' ಎನ್ನುವುದನ್ನು ಇಂಗ್ಲೆಂಡಿನಲ್ಲಿ ಕೂಡ ಒಪ್ಪಿಕೊಂಡು ತಮ್ಮ dictionaryಗೆ ಸೇರಿಸಿದ್ದಾರಂತೆ. ಅದನ್ನು ತಾವೇ ತಿಳಿದುಕೊಳ್ಳಬಹುದು.

ಸರ್ಕಾರದಲ್ಲಿರತಕ್ಕ ದಕ್ಷತೆಯನ್ನು ಹೆಚ್ಚಿಸಿಕೊಳ್ಳುವುದಕ್ಕೆ ಸಮಸ್ತ ಪ್ರಯತ್ನವನ್ನೂ ಸರ್ಕಾರದವರು ಮಾಡಬೇಕು ಎಂದು ಸೂಚಿಸುತ್ತೇನೆ.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ಈ ಡಿಮ್ಯಾಂಡನ್ನು ವಿರೋಧಿಸುತ್ತೇನೆ. ಮುಖ್ಯವಾಗಿ ಸರ್ಕಾರ,—ಯಾವುದೇ ಸರ್ಕಾರವಾಗಲಿ—ಒಂದು ನೀತಿ ನಿಯಮಕ್ಕೆ ಒಳಪಟ್ಟಿರಬೇಕು, ಅವರ ಕಾರ್ಯದಕ್ಷತೆ ಹೆಚ್ಚಬೇಕು ಮತ್ತು ಈಗ ನಮ್ಮ ಮಾನ್ಯ ಸದಸ್ಯರೆಲ್ಲರೂ ಹೇಳಿದಂತೆ 'ನುಡಿದಂತೆ ನಡೆಯಬೇಕು' ಯಾವ ತತ್ವವನ್ನು ಸಾರಿದ್ದೇವೆಯೋ ಅದರಂತೆ ನಡೆದುಕೊಳ್ಳಬೇಕು ಎಂದು ಪ್ರತಿಯೊಬ್ಬರೂ ಸಹ ಇದುವರೆಗೂ ಹೇಳಿದ್ದಾರೆ. ಅಂತೆಯೇ ಈ ಮಾನ್ಯ ಸಭೆಯ ಸದಸ್ಯರೂ ಕೂಡ ಆಡಿದಂತೆ ನಡೆಯಬೇಕು. ಹಾಗಿಲ್ಲದೆ ಹೋದರೆ ಆ ಉದ್ದೇಶ ಖಂಡಿತವಾಗಿಯೂ ಸಾರ್ಥಕವಾಗುವುದಿಲ್ಲ. ಯಾವರೀತಿ ಈ ಸರ್ಕಾರ ನಮ್ಮ ವಿಶ್ವಾಸಕ್ಕೆ ಪಾತ್ರವಾಗಿಲ್ಲ; ಅದು ಮಾಡಬಾರದ ಕೆಲಸ ಮಾಡುತ್ತಿದೆ; ಯಾವೊಂದು ತತ್ವಕ್ಕೂ ಒಳಪಟ್ಟಿಲ್ಲ; ಪ್ರತಿಯೊಂದರಲ್ಲೂ ಕೂಡ ಒಂದು ರೀತಿಯನ್ನು ಹಾಕಿ ಅದಕ್ಕೆ ವಿರೋಧವಾಗಿ ನಡೆದುಕೊಳ್ಳುತ್ತಿದೆ; ಎಂದು ಅಂಕಿಅಂಶಗಳ ಸಮೇತ ಈಗಾಗಲೇ ಮಾನ್ಯ ಸದಸ್ಯರನೇಕರು, ಆಡಳಿತದ ಪಕ್ಷಕ್ಕೆ ಸೇರಿದವರು, ಅಪಾದನೆಮಾಡಿದ್ದಾರೆ. ಹಾಗೆ ಹೇಳಿದವರು ಕೊನೆಯವರೆಗೂಕೂಡ ಅದೇ ರೀತಿ ಇರಬೇಕು. ತಮ್ಮ ಸಂಸ್ಥೆಗೆ ಒಳ್ಳೆಯ ಹೆಸರು ತರಬೇಕು, ಮತ್ತು ದೇಶ ಕೂಡ ಉದ್ಧಾರವಾಗಬೇಕು ಎಂದು ಹೇಳುತ್ತ ಇರುವವರು ಕೊನೆಯವರೆಗೂ ಸಾಧಿಸಿ ಸರ್ಕಾರವನ್ನು ದಾರಿಗೆ ತರಬೇಕು ಮತ್ತು ಸರ್ಕಾರವನ್ನು ತಿದ್ದಬೇಕು ಎಂಬ ಅಭಿಪ್ರಾಯವಿದ್ದರೆ, ಹಾಗೆ ತಿದ್ದುವುದಕ್ಕೆ ಸಾಧ್ಯವಿಲ್ಲದೆ ಹೋದರೆ, ಸರ್ಕಾರವನ್ನೇ ತೆಗೆಯಬೇಕು ಎಂದು ಮನಸ್ಸಿನಲ್ಲಿದ್ದರೆ ಅವರೂ ಕೂಡ ನುಡಿದಂತೆ ನಡೆಯಬೇಕು. ಇಲ್ಲದೆ ಇದ್ದರೆ ಅವರಿಗೆ ಆ ರೀತಿಯಾಗಿ ಹೇಳುವ ಹಕ್ಕೂ ಇಲ್ಲ ಮತ್ತು ಅದು ನ್ಯಾಯವಾದದ್ದಲ್ಲ. ಈ ರೀತಿ ಯಾವ ಯಾವ ವಿಚಾರಗಳಲ್ಲಿ ಲೋಪ ದೋಷಗಳನ್ನು ಎತ್ತಿತೋರಿಸಿದರೋ ಆ ಲೋಪ ದೋಷಗಳನ್ನು ಸರಿಪಡಿಸಬೇಕಾದದ್ದು ಪ್ರಜಾಪ್ರಭುತ್ವದ ಆಡಳಿತದ ಕರ್ತವ್ಯ. ಆಡಳಿತ ಪಕ್ಷದಲ್ಲಿರತಕ್ಕವರು ನೂರಾರು ಖೋತಾ ಸೂಚನೆಗಳನ್ನು (Cut motions) ಕಳುಹಿಸಿ ಅವುಗಳಲ್ಲಿ ಒಂದಕ್ಕೂ ಕೂಡ ಸರಿಯಾದ ದಾರಿಯನ್ನು ತೋರಿಸದೆ ಇದ್ದರೆ ಅವರೂ ಸಹ ಈ ಡಿಮ್ಯಾಂಡಿಗೆ ಓಟುಮಾಡತಕ್ಕದ್ದು ಅವರ ಧರ್ಮಕ್ಕೆ ಸರಿಯಾದದ್ದಲ್ಲ. ಮತ್ತು ಅವರು ಯಾವ ಕ್ಷೇತ್ರದ, ಜನಗಳ ಪರವಾಗಿ ಚುನಾಯಿತರಾಗಿ ಬಂದಿದ್ದಾರೆಯೋ ಅವರ ಇಷ್ಟವನ್ನು ನೆರವೇರಿಸುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತೇನೆ.

ಮೊದಲನೆಯದಾಗಿ ಈ ಸರ್ಕಾರ ಬಂದಮೇಲೆ ಆಫೀಸರುಗಳಿಗೆ ಎಕ್ಸ್‌ಟೆನ್ಷನ್ ಕೊಡುವ ವಿಚಾರದಲ್ಲಿ ಯಾರಿಗೂ ಕೊಡುವುದಿಲ್ಲವೆಂದರು. ಹೀಗೆ ಹೇಳಿದಾಗ ಇದೇ ತತ್ವವನ್ನು ಅವರು ಅನುಸರಿಸಬೇಕಾಗಿತ್ತು. ಆದರೆ ಇಷ್ಟಬಂದವರಿಗೆ ಕೊಟ್ಟಿದ್ದಾರೆ. ಹಾಗೆಯೇ ಇತರ ವಿಚಾರಗಳಲ್ಲಿಯೂ ಮಾಡಿದ್ದಾರೆ. ಎಕ್ಸ್‌ಟೆನ್ಷನ್ ಕೊಡುವುದಿಲ್ಲವೆಂದರೆ ಆ ವಿಚಾರದಲ್ಲಿ ಒಂದು ನಿರ್ಧಾರವೇ ಇಲ್ಲ. ಆದರೆ ಯಾರು ಯಾರಿಗೆ ಕುಂಭಕೋಣ ಮಾಡುವುದಕ್ಕೆ ಸಾಧ್ಯ ಅವರಿಗೆಲ್ಲ ಎಕ್ಸ್‌ಟೆನ್ಷನ್. ಕೆಲವರ ವಿಷಯದಲ್ಲಿ ಒಂದೆರಡು ಎಕ್ಸ್‌ಟೆನ್ಷನ್ ಸಹ ಕೊಟ್ಟಿದ್ದಾರೆ. ಕೆಲವರಿಗೆ ಎಕ್ಸ್‌ಟೆನ್ಷನ್, ಕೆಲವರಿಗೆ re-appointment, ಅಥವಾ ಇನ್ನೊಂದು ಈ ರೀತಿಯಾಗಿ ಕೊಡುವುದು ಸಾಮಾನ್ಯವಾಗಿದೆ.

ಇನ್ನೊಂದು. ಫಾರಿನ್ ಸ್ಕಾಲರ್‌ಷಿಪ್‌ಕೊಡಬೇಕಾದರೆ ಅದಕ್ಕೆ ಒಂದು ನೀತಿ, ನಿಯಮ ಇರಬೇಕು. ಇದಕ್ಕೆ ಒಂದು ಸಮಿತಿ ಮಾಡಿದ್ದೇವೆ, ಅದರ ಸಲಹೆಯಂತೆ ನಡೆಯುತ್ತಿದೆ ಎಂದು ಹೇಳಬಹುದು. ಆದರೆ ಎರಡು ವರ್ಷಗಳಾದರೂ ಆ ಸಮಿತಿ ಸೇರುವುದಿಲ್ಲ, ಅದರಿಂದ ಸಾಕಷ್ಟು ಪ್ರಯೋಜನವಾಗುವುದಿಲ್ಲ. ಶಿಫಾರಸಿನಿಂದ ಇನ್ನೊಂದು ವರ್ಷಕ್ಕೆ ರಿಟೈರ್ ಆಗುವವರನ್ನೂ ಸಹ ಫಾರಿನ್‌ಗೆ ಕಳುಹಿಸಿರುವುದುಂಟು. ಹಾಗೆ ಯಾರಾದರೂ ಶಿಫಾರಸು ತರದಿದ್ದರೆ ಅವರ ಕೇಸ್ ಕೆಟ್ಟುಹೋಗುತ್ತದೆ ಎಂಬ ಭಾವನೆ ಬರುವ ಹಾಗೆ ಮಾಡುತ್ತಿದ್ದಾರೆ.

Sri T. MARIAPPA.—My Hon'ble friend forgets that it would have been more effective if he had disclosed the name of such persons. He has got as much right to criticise the Government as any other member here. But, it is better if he discloses the name so that the House may know what it is.

Sri B. HUTCHE GOWDA.—It is not my intension to disclose it at this stage, Sir.

Sri A. G. RAMACHANDRA RAO (Minister for Law and Education).—When the Hon'ble Member gives the name then we will reply to the point. Anyway, such cases have not come to our notice.

ಶ್ರೀ ಬಿ. ಹುಚ್ಚೇಗೌಡ.—ಮೆಡಿಕಲ್ ಇಲಾಖೆಯಲ್ಲಿ ಮಾತ್ರವಲ್ಲದೆ ಇಂಡಸ್ಟ್ರಿಯಲ್ ಇಲಾಖೆಯಲ್ಲೂ ಮೂರು ತಿಂಗಳಲ್ಲಿ ರಿಟೈರ್ ಆಗಲಿರುವವರನ್ನು ಜಪಾನಿಗೆ ಕಳುಹಿಸಿದ್ದಾರೆ. ಹೀಗಾದರೆ ಆಡಳಿತ ದಕ್ಷತೆ ಹೇಗೆ ಬರುತ್ತದೆ? ಅದು ಬರಬೇಕಾದರೆ ಹೇಗೆ ಮಾಡಬೇಕೆಂಬ ಬಗ್ಗೆ ಶ್ರೀ ಹುಚ್ಚಮಾಸ್ತಿಗೌಡರು ಕೆಲವು ವಿಚಾರ ಹೇಳಿದರು. ಶಿಫಾರಸು ಮಾಡುವಾಗ

ಕರಪ್ಟ್ ಆಗಿರುವವನಿಗೆ, ಶಿಕ್ಷೆಯಾಗಿರುವವನಿಗೆ ಶಿಫಾರ್ಸು ಮಾಡಿರುವ ಪ್ರಸಂಗಗಳನ್ನು ಅನೇಕವಾಗಿ ಮಂತ್ರಿಗಳಿಗೂ ಕೂಡ ಕೆಲವು ವೇಳೆ ತಿಳಿಸಿದ್ದೇವೆ. ರೆವೆನ್ಯೂ ಇಲಾಖೆಯಲ್ಲಿ ಲೋಪದೋಷಗಳಿವೆಯೆಂದು ಮಂತ್ರಿಗಳೇ ಒಪ್ಪಿಕೊಂಡಿದ್ದಾರೆ. ಮಂತ್ರಿಗಳ ದಕ್ಷತೆ ವಿಚಾರವನ್ನು ಹೋದ ವರ್ಷ ಈ ಸಭೆ ಗಮನಕ್ಕೆ ತಂದಿದೆ; ಒಂದೇ ಒಂದು ಉದಾಹರಣೆ ಕೊಡುವುದಾದರೆ, ಸುಮಾರು $1\frac{1}{2}$ ಲಕ್ಷ ಎಕರೆಗಳನ್ನು ಮೂರು ವರ್ಷಗಳಲ್ಲಿ ಕೊಟ್ಟಿದೆಯೆಂದು ಹೇಳಿದರು. ಹತ್ತು ವರ್ಷದ ಹಿಂದೆ ಜಮೀನು ಕೊಡಬೇಕಾದರೆ ಒಂದು ದರ ನಿಗದಿ ಮಾಡಿಕೊಟ್ಟರು. ಈ ದಿವಸ ಅವರು ಸಾವಿರಾರು ರೂಪಾಯಿ ಖರ್ಚುಮಾಡಿ ಆಬಾದು ಮಾಡಿರುವಾಗ ಅವರಿಗೆ ಬೇರೆ ದರ ಹಾಕಿದ್ದಾರೆ. ಇದನ್ನು ಗಮನಕ್ಕೆ ತಂದಿದೆ. ಏನೂ ಹೆಚ್ಚು ಕಡಮೆ ಮಾಡಬಾರದು ಸಾಗುವಳಿ ಚೀಟಿಯಲ್ಲಿರುವ ದರ ಹಾಕಬೇಕೆಂದು ಹೇಳಿದೆ. ಅದನ್ನು ಜಾರಿಗೆ ತರದೆ ಎಕರೆಗೆ ಒಂದು ತಾಲ್ಲೂಕಿನಲ್ಲಿ 75 ರೂಪಾಯಿ ಹಾಕಿ ಇನ್ನೊಂದು ತಾಲ್ಲೂಕಿನಲ್ಲಿ 15 ರೂಪಾಯಿ ಹಾಕಿರುತ್ತಾರೆ. ತಿಪಟೂರು ತಾಲ್ಲೂಕಿಗೇ ಒಂದು ದರ ಅದರ ಪಕ್ಕದ ತುರುವೇಕೆರೆ ತಾಲ್ಲೂಕಿಗೇ ಒಂದು ದರ. ಜಮೀನು, ಸ್ಥಳ ಅಜಮಾಯಿಷಿ ಮಾಡಿ ರೆವಿನ್ಯೂ ಕಮೀಷನರು ವಗೈರೆಯವರು ಸರಿಯಾಗಿ ದರ ನಿಗದಿ ಮಾಡುತ್ತಿಲ್ಲ. ಮತ್ತೆ ಇದೇ ಸಭೆಯಲ್ಲಿ ಖೋತಾ ಸೂಚನೆ ತಂದಾಗ ಕಡ್ಡಾಯವಿಲ್ಲವೆಂದು ಹೇಳಿದೆ, ಅದರಂತೆ ಜಾರಿಗೆ ಬರುತ್ತಿದೆಯೆಂದು ಮಂತ್ರಿಗಳ ಹೇಳಿದರು, ಮುಂದಿನ ಸಲ ನಾವು ಹಿಂದೆ ನಿಗದಿ ಮಾಡಿರುವ ದರದಲ್ಲಿ ಸೇಕಡ 50 ಕಡಮೆ ಮಾಡುತ್ತೇನೆಂದು ಮಂತ್ರಿಗಳು ಹೇಳಿದರು. ಆದರೆ ತುರುವೇಕೆರೆ ತಾಲ್ಲೂಕಿನಲ್ಲಿ $37\frac{1}{2}$ ರೂಪಾಯಿಗಳಿದ್ದರೆ ಪಕ್ಕದ ತಾಲ್ಲೂಕುಗಳಾದ ಗುಬ್ಬಿ, ಚಿಕ್ಕನಾಯಕನಹಳ್ಳಿಗಳಲ್ಲಿ $7\frac{1}{2}$ ರೂಪಾಯಿಗಳಿಗೆ ಸಿಕ್ಕುತ್ತಿದೆ. ಸರ್ಕಾರಿ ಆರ್ಡರಿನ ಸ್ಪಿರಿಟ್ಟಿಗೇ ವಿರೋಧವಾಗಿ ನಡೆದುಕೊಳ್ಳುತ್ತಿದ್ದಾರೆ. ಇದನ್ನು ಕಂಟ್ರೋಲ್ ಮಾಡುವುದಕ್ಕೆ ಸರ್ಕಾರಕ್ಕೆ ದಕ್ಷತೆಯಿಲ್ಲ. ಹೀಗೆ ಬೇಕಾದಷ್ಟು ಹೇಳಬಹುದು. ಕರಪ್ಟ್ ಎಂದು ತಿಳಿದರೂ ಶಿಫಾರ್ಸಿನ ಮೇಲೆ ಬಿಡುಗಡೆಯಾಗಿದೆ. ತ್ರುಪ್ಪದಹಳ್ಳಿ ಮತ್ತು ಸಂಗೇನಹಳ್ಳಿ ಕೆರೆಗಳ ವಿಚಾರ ಏನಾಯಿತು ಎಂಬುದನ್ನು ಇದುವರೆಗೂ ಈ ಸಭೆ ಗಮನಕ್ಕೆ ತಂದಿಲ್ಲ. ಅನೇಕಸಲ ಸಮಿತಿಯಾಗಿ ವರದಿ ಬಂದರೂ ಏನೂ ಮಾಡಿಲ್ಲ.

ಆಮೇಲೆ ಪಂಚಾಯಿತಿ ವಿಚಾರ. ಅಮಲ್ದಾರರ ಕೈಲ ಕೆಲಸ ಮಾಡಿಸುತ್ತೇವೆ, ವಸೂಲು ಮಾಡುತ್ತಿದ್ದೇವೆ ಮತ್ತು ಸೆಕ್ರೆಟರಿ ಕೂಡ ನೇಮಕ ಮಾಡುತ್ತೇವೆ ಎಂದು ಹೇಳಿದರು. ಹಿಂದೆ ಗ್ರೂಪ್ ಇದ್ದಾಗಲೇ ಈ ಕೆಲಸ ನಡೆಯಲಿಲ್ಲ. ಈಗ ಒಂದು ಪಂಚಾಯಿತಿಗೆ 25 ರೂಪಾಯಿಗಳ ಉತ್ಪತ್ತಿಯಿದ್ದರೆ ಅದಕ್ಕೊಬ್ಬ ಪಂಚಾಯಿತಿ ಸೆಕ್ರೆಟರಿ ನೇಮಿಸುತ್ತೇನೆಂದರೆ ಹೇಗೆ? ಹೋದ ಅಸೆಂಬ್ಲಿಯಲ್ಲಿ ನಿದರ್ಶನವಾಗಿ ಚಳ್ಳಕೆರೆ ವಿಚಾರ ಮತ್ತು ಇತರ ವಿಚಾರ ಹೇಳಿದೆ. ಅಮಲ್ದಾರರು ಪಂಚಾಯಿತಿ ಅಭಿಪ್ರಾಯಕ್ಕೆ, ನಿರ್ಣಯಕ್ಕೆ ವಿರೋಧವಾಗಿ ಹಣ ಡ್ರಾ ಮಾಡಿ ಖರ್ಚುಮಾಡುತ್ತಿದ್ದಾರೆ; ನ್ಯಾಯವಿಲ್ಲ, ಕಾನೂನು ಇಲ್ಲ, ಏನೂ ಇಲ್ಲ. ಪಂಚಾಯಿತಿಗೆ ಕೊಡುವ ಹಣ ಶೇಕಡ $12\frac{1}{2}$ ಯೆಂದು ನಿಗದಿಯಾಗಿದ್ದರೂ ಮನಸ್ಸಿಗೆ ತೋರಿದಷ್ಟು ಕೊಡುತ್ತಿದ್ದಾರೆ. ಇದನ್ನು ಸ್ಥಳೀಯ ಸಂಸ್ಥೆ ಸಚಿವರಿಗೆ ಎಷ್ಟೋ ವಿಧವಾಗಿ ಹೇಳಿದ್ದೇವೆ. ಭಾವಿಗಳಿಗೆ, ಕೆರೆಗಳಿಗೆ ಕೊಟ್ಟೆವು ಎಂದು ಹೇಳುತ್ತಾರೆ, ಹಣ ವಿಲೆಮಾಡುವುದಕ್ಕೆ ಸರ್ಕಾರಕ್ಕೆ ಯಾವ ಅಧಿಕಾರವಿದೆಯೆಂದು ಪ್ರಶ್ನೆಮಾಡಿದರೆ ಅದಕ್ಕೆ ಗಮನ ಕೊಡುತ್ತಿಲ್ಲ.

ಆಮೇಲೆ ಅಮಲ್ದಾರರಿಗೆ ಸರ್ವೆ ಟ್ರೈನಿಂಗ್ ಕೊಟ್ಟಿದೆ ಎಂದು ಹೇಳಿದರು. ಹಾಗಿದ್ದರೂ ಸರಿಯಾಗಿ ಕೆಲಸವಾಗುತ್ತಿಲ್ಲ. ಹತ್ತು ವರ್ಷಗಳಾದರೂ ಜಮೀನು ಮೂರು ನಾಲ್ಕು ಸಲ ಬದಲಾವಣೆಯಾದಾಗ ಒಂದೊಂದು ಸಲಕ್ಕೂ ಮೂರು ಮೂರು ರೂಪಾಯಿ ಕೊಟ್ಟರೂ ರಿಕಾರ್ಡ್ ಆಫ್ ರೈಟ್ಸ್ ಆಗಿಲ್ಲ, ಆಗಿದೆಯೆಂದು ಹೇಳಿವರೆ ಒಪ್ಪಿಕೊಳ್ಳಬಹುದು. ದಕ್ಷತೆಯಿದೆಯೇ, ಇಲ್ಲವೇ ಎಂಬುದಕ್ಕೆ ಇದೇ ಉದಾಹರಣೆ.

ಟೂರ್ ಮಾಡುವ ವಿಷಯದಲ್ಲಿ ಒಂದು ಆರ್ಡರಾಗಿದೆ. ಒಬ್ಬ ಮಂತ್ರಿಗಳು ಒಂದು ಡಿಸ್ಟ್ರಿಕ್ಟಿಗೆ ಒಂದು ತಿಂಗಳಲ್ಲಿ ಒಂದು ಸಲ ಒಬ್ಬರೇ ಹೋಗಬೇಕು. ಈಗ ಆಗುತ್ತಿರುವುದು ಒಬ್ಬರಲ್ಲದೆ ನಾಲ್ಕು ಮಂತ್ರಿಗಳೂ ಒಂದೇ ಸಲ ಹೊಗುತ್ತಾರೆ, ಒಂದೇ ದಿವಸದಲ್ಲಿ ಹೋಗುತ್ತಾರೆ. ಇದರಿಂದ ಅಧಿಕಾರಿಗಳಿಗೆ ಕಷ್ಟ. ಟೂರ್ ಮಾಡಬೇಡಿ ಎಂದು ಹೇಳುವುದಿಲ್ಲ. ಟೂರ್ ಮಾಡಬೇಕಾದರೆ ಸಾಕಾದಷ್ಟು ಕೆಲಸ ಮಾಡಬೇಡವೆ? ಒಬ್ಬ ಮಂತ್ರಿಗಳು ಹೋದರೆ ಸಾಲದೆ? ಅವರೇ ಎಲ್ಲವನ್ನೂ ನೋಡಬಾರದೆ? ಹೋಗಿ ಸ್ಥಳದಲ್ಲಿ ಕ್ಯಾಂಪು ಮಾಡಿ ಅಹವಾಲು ಕೇಳಬೇಕಾದ ಆವಶ್ಯಕತೆಯಿಲ್ಲವೇ? ಈಗಿನ ಕಾಲದ ಜಮಾಬಂದಿ ಮಾಡಿದ ಹಾಗೆ ರಾತ್ರಿ 12 ಗಂಟೆಗೆ ಹೋಗಿ ಸ್ನಾನ ಮಾಡಿ ಹೋದರೆ ಹೇಗೆ? ತಕರಾರು ತಃಖ್ತೆ ಎಷ್ಟಿದೆ, ಸ್ಟಾಟ್ ಇನ್ಸ್ಪೆಕ್ಷನ್ ಮಾಡಿದ್ದಾರೆಯೆ ಎಂದು ಲಿಸ್ಟ್ ತರಿಸಿಕೊಂಡು ನೋಡಿ ಸೂಕ್ತ ಕ್ರಮ ಕೈಗೊಳ್ಳಬೇಡವೆ? ಇದೇ ರೀತಿ ಮೈನರ್ ಕೆರೆ ವಿಚಾರ. ಪ್ರತಿಯೊಂದು ಕೆರೆಯನ್ನೂ ಕೂಡ ಒಬ್ಬ ಅಸಿಸ್ಟೆಂಟ್ ಇಂಜನಿಯರಾದರೂ ವರ್ಷಕ್ಕೊಂದು ಸಲವಾದರೂ ಇನ್ಸ್ಪೆಕ್ಟ್ ಮಾಡಬೇಕೆಂದು ಹೇಳಿದರೂ ಅದನ್ನು ಇನ್ಸಿಸ್ಟ್ ಮಾಡುತ್ತಿಲ್ಲ. ಇದು ಈ ಸರ್ಕಾರದ ಅದಕ್ಷತೆಯನ್ನು ಸೂಚಿಸುತ್ತದೆ. ಎಳ್ಳಷ್ಟೂ ನಡೆಯುತ್ತಿಲ್ಲ, ಮಾಡಬೇಕೆಂದಿದ್ದರೂ ಯಾರ ಪ್ರಭಾವದಿಂದಲೋ ಏನೋ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಇದನ್ನು ಹೆಚ್ಚಾಗಿ ಎಲ್ಲ ಸ್ನೇಹಿತರೂ ಹೇಳುತ್ತಿದ್ದಾರೆ; ಮತ್ತೊಂದು ಸಾರಿ ನಾನು ಒತ್ತಾಯ ಮಾಡಿ ಹೇಳುತ್ತೇನೆ.

1 P.M.

ನಾನು ಹೇಳುತ್ತಿರುವುದು ಈ ರಿಕಾರ್ಡುಗಳು ಒಂದು ಆಫೀಸನ್ನು ಬಿಟ್ಟು ಇನ್ನೊಂದು ಆಫೀಸಿಗೆ ಸರಾಗವಾಗಿ ಹೋಗುತ್ತಲೇ ಇಲ್ಲ ಎಂದು. ಹೀಗೆಲ್ಲಾ ಆಗುವುದಕ್ಕೆ ಏನು ಕಾರಣ ಎಂದರೆ ಸರ್ಕಾರದಲ್ಲಿ ಆಡಳಿತ ನಡೆಸತಕ್ಕಂಥ ದಕ್ಷತೆ ಇಲ್ಲದಿರುವುದೇ ಆಗಿದೆ. ಈ ಹಿಂದೆ ನಾನೇ ಅನೇಕ ಸಲ ಇದೇ ಸಭೆಯಲ್ಲಿ ಸೆಸ್ಸುಗಳನ್ನು ವಸೂಲ್ಮಾಡುತ್ತಿರುವ ವಿಧಾನ ಸಕ್ರಮವಾಗಿಲ್ಲ ಎಂದು ದೂರುಗಳನ್ನಿತ್ತ ನಂತರ ಎಫಿಷಿಯೆನ್ಸಿ ಆಡಿಟನ್ನು ಮಾಡಿಸಿದರು. ಆಗ ಸರ್ಕಾರದವರು ರೈತರುಗಳಿಂದ ವಸೂಲ್ಮಾಡುತ್ತಿರುವ ಸ್ಪೆಷಲ್ ಸೆಸ್‌ಗಳ ಸಂಬಂಧದಲ್ಲಿ 2 ಆಣೆಗಳನ್ನು ಹೆಚ್ಚಾಗಿ-ಅವರ ಕಾನೂನಿಗೆ ವಿರೋಧವಾಗಿ ವಸೂಲ್ಮಾಡಿರತಕ್ಕದ್ದು ಕಂಡುಬಂತು. ನಮ್ಮ ತುಮಕೂರು ಜಿಲ್ಲೆಯಲ್ಲಿ ಒಂದು ರೂಪಾಯಿಗೆ 5 ಆಣೆಗಳಂತೆ ಸೆಸ್ಸನ್ನು ವಸೂಲ್ಮಾಡಿದ್ದಾರೆ. ಈ ವಿಚಾರವನ್ನು ನಾನು ಹೋದ ಬಡ್ಜೆಟ್ ಅಧಿವೇಶನದಲ್ಲಿ ಚರ್ಚೆ ಮಾಡಿದಾಗ ಸರ್ಕಾರದವರು ಈ ದುಬಾರಿಯಾಗಿ ವಸೂಲಾಗಿರತಕ್ಕಂಥ ಸೆಸ್ ಮೊಬಲಗನ್ನು ರೀ-ಫಂಡ್

(ಶ್ರೀ ಬಿ. ಹುಚ್ಚೇಗೌಡ).

ಮಾಡುವುದಾಗಿ ತಿಳಿಸಿದ್ದರು. ಆದರೆ ಈತಹಲ್‌ವರೆಗೂ ಅದನ್ನು ರೀ-ಫಂಡ್ ಮಾಡಿಲ್ಲ. ಹೀಗೆ ನೂರಾರು ಅಕ್ರಮಗಳ ನಡವಳಿಕೆಗಳನ್ನು ನಡೆಸಿರತಕ್ಕ ಬಗ್ಗೆ ಯಾವುದಾದರೂ ಒಂದರ ವಿಚಾರದಲ್ಲಿಯಾದರೂ ನಾನದನ್ನು ಸರಿಪಡಿಸಿದ್ದೇನೆ ಎನ್ನುವುದನ್ನು ಸರ್ಕಾರದವರು ತಿಳಿಸಲಿ—ಅಥವಾ ಅಂಥ ಅಕ್ರಮ ನಡವಳಿಕೆ ನಡೆಸಿರತಕ್ಕವರ ಮೇಲೆ ಸೂಕ್ತ ಕಾರ್ಯಕ್ರಮಗಳನ್ನೇನಾದರೂ ಕೈಗೊಂಡಿರುತ್ತಾರೆಯೇ ಎನ್ನುವುದನ್ನಾದರೂ ಹೇಳಲಿ. ಆಗ ನಾನು ಇವರಿಗೆ ತಲೆಬಾಗಿಸುತ್ತೇನೆ. ಆದರೆ ಹಿಂದೆ ಹಾಗೆ ಈ ಹೆಚ್ಚುವರಿಯಾಗಿ ವಸೂಲ್ಮಾಡಿದ್ದಂಥ ತೆರಿಗೆಯನ್ನು ವಾಪಸ್ಸು ಕೊಡುವುದಾಗಿ ತಿಳಿಸಿದ್ದ ಸರ್ಕಾರ, ಈ ಹೊತ್ತು ಆ ಜನರು ಅದನ್ನು ಪ್ರಸ್ತಾಪ ಮಾಡಿದ್ದಕ್ಕೆ ಕೆಲವು ಅಧಿಕಾರಿಗಳು ನೀವು ನಿಮಗೆ ಬರತಕ್ಕ ಒಂದು ಆಣೆ ಎರಡು ಆಣೆ ರೀ-ಫಂಡಾಗತಕ್ಕ ಸಸ್ ಮೊಬಲಗಿಗೆ ಕೋರ್ಟಿಗೆ ಹೋಗಿ ಕ್ರಮ ದಾವ ತನ್ನಿ ಅನಂತರ ನೋಡೋಣ' ಎಂಬುದಾಗಿ ಹೇಳುತ್ತಿದ್ದಾರಂತೆ. ಇಂಥ ಆಡಳಿತ ನಡೆಸತಕ್ಕ ಸರ್ಕಾರದಲ್ಲಿ ಆಡಿದ ಮಾತೇ ಇಲ್ಲ. ಸರ್ಕಾರದ ನಿಯತ್ತೇ ಹೀಗಿರುವುದರಿಂದ ಈ ಆಡಳಿತ ವರ್ಗದ ಜನರೂ ಸಹ ನಾವು ಏನೇ ಮಾಡಿದರೂ ಅದನ್ನು ಯಾರೂ ಕೇಳತಕ್ಕವರೇ ಇರುವುದಿಲ್ಲವೆಂಬ ಧೈರ್ಯದ ಮೇಲೆ ಅವರು ತೀರ ಅಕ್ರಮ ನಡವಳಿಕೆಗಳನ್ನು ನಡೆಸುತ್ತಿದ್ದಾರೆ. ಅಂಥವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಲು ಈ ಸರ್ಕಾರಕ್ಕೆ ಶಕ್ತಿಯಿಲ್ಲ. ಈ ಸರ್ಕಾರಕ್ಕೆ ಅಂಥ ಆಡಳಿತ ದಕ್ಷತೆಯಿಲ್ಲ. ಆದುದರಿಂದ ನಾನು ಈ ಡಿಮ್ಯಾಂಡ್ ಮನವಿಯನ್ನು ಒಪ್ಪಲು ಖಂಡಿತ ಸಾಧ್ಯವಿಲ್ಲವೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಿ. ವೆಂಕಟಪ್ಪ (ಚನ್ನಪಟ್ಟಣ).—ಸ್ವಾಮಿ, ನಮ್ಮ ಸರ್ಕಾರದವರು ಈ ಹೊತ್ತು ಈ ಆಡಳಿತವನ್ನು ಯಾವ ವೈಖರಿಯಲ್ಲಿ ನಡೆಸುತ್ತಿದ್ದಾರೆ ಎನ್ನುವ ವಿಚಾರವನ್ನು ನಿನ್ನೆಯ ದಿವಸ ನನ್ನ ಪರಮ ಮಿತ್ರರಾದಂಥ ಶ್ರೀಮಾನ್ ಎಚ್. ಕೆ. ವೀರಣ್ಣಗೌಡರು ಬಹಳ ಸ್ವಾರಸ್ಯವಾಗಿ ಹೇಳಿದ್ದಾರೆ. ಆದರೆ ಅವರು ಹಾಗೆ ಹೇಳಿರುವುದಕ್ಕಿಂತಲೂ ಇನ್ನೂ ಉತ್ತಮವಾಗಿ ಅಥವಾ ಇನ್ನೂ ಹೆಚ್ಚಿನ ಪರಿಣಾಮಕಾರಿಯಾಗಿರತಕ್ಕ ರೀತಿಯಲ್ಲಿ ಹೇಳುವುದು ಬಹಳ ಕಷ್ಟ. ಶ್ರೀಮಾನ್ ಟಿ. ಮರಿಯಪ್ಪನವರು ಆರೀತಿಯಾಗಿ ಭಾಷಣ ಮಾಡಲು ನನ್ನ ಕೈಲಂತೂ ಖಂಡಿತ ಆಗುತ್ತಲೇ ಇರಲಿಲ್ಲ ಎಂದು ಹೇಳುತ್ತಿದ್ದಾರೆ. ನಾನೂ ಕೂಡ ಅಷ್ಟು ಮನದಟ್ಟುವಂತೆ ಹೇಳಲು ಸಾಧ್ಯವಿಲ್ಲವೆಂದೇ ಭಾವಿಸಿದ್ದೇನೆ.

ಸ್ವಾಮಿ ನಾವು ಈ ಹಿಂದೆ ದೇಶಕ್ಕೆ ಸ್ವಾತಂತ್ರ್ಯವನ್ನು ಸಂಪಾದನೆ ಮಾಡಲು ಹೊರಟಿದ್ದೂ ಮತ್ತು ಅಷ್ಟೊಂದು ಹೋರಾಟಗಳನ್ನು ನಡೆಸಿದ್ದೂ ಯಾವ ಉದ್ದೇಶದಿಂದ ಎನ್ನುವುದನ್ನು ಈಗಿನ ಮಂತ್ರಿಮಂಡಲ ನಡೆಸುತ್ತಿರುವವರು ಬಹುಶಃ ಮರೆತು ಹೋಗಿದ್ದಾರೇನೋ ಎಂದು ನನಗೆ ಅನಿಸುತ್ತಿದೆ.

ಶ್ರೀ ಹೆಚ್. ಕೆ. ವೀರಣ್ಣಗೌಡ (ಮದ್ದೂರು).—ಈಗಿನ ಮಂತ್ರಿಮಂಡಲದಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ಸೇರದಿದ್ದ ಹೊಸಬರೂ ಇದ್ದಾರೆ.

ಶ್ರೀ ವಿ. ವೆಂಕಟಪ್ಪ.—ಹೌದು. ಈಗಿನ ಕಾಂಗ್ರೆಸ್ ಮಂತ್ರಿ ಮಂಡಲದಲ್ಲಿ ಹೊಸಬರೂ ಇದ್ದಾರೆ. ಈ ದಿವಸ ನಮ್ಮ ರಾಜ್ಯಾಂಗದಲ್ಲಿ ಅಡಕವಾಗಿರತಕ್ಕಂಥ ವಾಕ್ ಸ್ವಾತಂತ್ರ್ಯ, ಸಭಾ ಸ್ವಾತಂತ್ರ್ಯ ಮತ್ತು ಪತ್ರಿಕಾ ಸ್ವಾತಂತ್ರ್ಯ ಇತ್ಯಾದಿಗಳೆಲ್ಲವೂ ಬಹಳ ಮಟ್ಟಿಗೆ ಕುಂಠಿತಗೊಳಿಸಲ್ಪಟ್ಟಿವೆ. ದೇಶದಲ್ಲಿ ಮಾತನಾಡುವುದೇ ಬಹಳ ಕಷ್ಟವಾಗಿದೆ ಎಂಬುದಾಗಿ ನಾವೆಲ್ಲರೂ ಹೇಳುತ್ತಿದ್ದಂಥ ಒಂದು ಕಾಲ ಈ ದೇಶದಲ್ಲಿ ಈ ಸ್ವಾತಂತ್ರ್ಯ ಬರುವುದಕ್ಕೆ ಮುನ್ನ ಇತ್ತೆಂದು ಹೇಳುತ್ತಿದ್ದೆವು. ಆದರೆ ಈ ದಿವಸ ಕಾನೂನು ಮೂಲಕವಾಗಿ ನಮ್ಮ ಈ ಹಕ್ಕುಗಳೆಲ್ಲಾ ಕಾದಿಡಲ್ಪಟ್ಟಿವೆ. ಇಂಥ ಕಾಲದಲ್ಲಿಯೂ ಸಹ ನಾನು ಈ ನಮ್ಮ ಹಕ್ಕುಗಳು ಇಲ್ಲದಂತಾಗಿವೆ ಎಂದು ಹೇಳಲು ವಿಷಾದಿಸುತ್ತೇನೆ. ಈ ಹಿಂದೆ ನಾವೆಲ್ಲರೂ ನಮಗೆ ಈ ಹಕ್ಕು ಬಾಧ್ಯತೆಗಳು ಒಂದೂ ಇರುವುದಿಲ್ಲವೆಂದು ಹೇಳುತ್ತಿದ್ದಂಥ ಕಾಲ ಯಾವುದಿತ್ತೋ ಅಂಥ ದಿವಸಗಳಲ್ಲಿ ಕೂಡ ನಮಗೆ ಈ ವಿಚಾರಗಳ ಬಗ್ಗೆ ಎಷ್ಟರ ಮಟ್ಟಿಗೆ, ಎಂದರೆ, ಈ ವಾಕ್ ಸ್ವಾತಂತ್ರ್ಯ, ಸಭಾ ಸ್ವಾತಂತ್ರ್ಯ ಇತ್ಯಾದಿ ವಿಚಾರಗಳ ಬಗ್ಗೆ, ಅವಕಾಶವಿತ್ತೋ ಅಷ್ಟು ಕೂಡ ಈ ದಿವಸ ನಮಗೆ ಈ ಸ್ವಾತಂತ್ರ್ಯಗಳ ಬಗ್ಗೆ ಅವಕಾಶವಿಲ್ಲವಲ್ಲ ಎಂಬ ಅಂಶವನ್ನು ನಾನು ಬಹಳ ಖೇದದಿಂದ ಹೇಳಬೇಕಾಗಿದೆ.

ರಾಮನಗರಂ ತಾಲ್ಲೂಕಿನಲ್ಲಿ ಎಷ್ಟು ಗ್ರಾಮಗಳಿರುತ್ತವೆ, ಯಾವ ಯಾವ ಗ್ರಾಮಗಳ ವಿಚಾರ ಹೇಗಿರುತ್ತದೆ ಎನ್ನುವುದು, ಆ ರಾಮನಗರಂ ತಾಲ್ಲೂಕಿನಿಂದ ಚುನಾವಣೆ ಹೊಂದಿ ಬಂದಿರತಕ್ಕ ಮಾನ್ಯ ಶ್ರೀ ಕೆ. ಹನುಮಂತಯ್ಯನವರಿಗೆ (ಈ ದಿವಸ ಯಾರು ಮುಖ್ಯಮಂತ್ರಿಗಳಾಗಿದ್ದಾರೋ ಅವರಿಗೆ) ಮತ್ತು ಯಾರು ಆ ರಾಮನಗರಂ ತಾಲ್ಲೂಕು ನನ್ನ ಜಹಗಿರಿ ಎಂಬುದಾಗಿ ಭಾವಿಸಿಕೊಂಡಿರುತ್ತಾರೋ ಅವರಿಗಿಂತ ಆ ತಾಲ್ಲೂಕಿನ ವಿಚಾರ ನನಗೆ ಚೆನ್ನಾಗಿ ಗೊತ್ತಿದೆ. ನಾನು ವಿದ್ಯಾರ್ಥಿ ದೆಸೆಯಲ್ಲಿದ್ದಾಗಲೇ ಸಮಾಜ ಸುಧಾರಣೆಯ ವಿಷಯಗಳಲ್ಲಿ ಎಲ್ಲ ಗ್ರಾಮಗಳಲ್ಲೂ ಪ್ರಚಾರ ಭಾಷಣ ಮಾಡಿದ್ದೇನೆ. ಆಗಿನಿಂದಲೂ ಆ ಪ್ರಾಂತ್ಯದಲ್ಲೆಲ್ಲಾ ನಾನು ವಿಶೇಷವಾಗಿ ಪ್ರವಾಸ ಮಾಡಿ ಜನರ ಸಂಪರ್ಕವನ್ನು ಬೆಳಸಿಕೊಂಡು ಬಂದಿದ್ದೇನೆ. ಆದರೆ ಇವರು ಆ ಪ್ರಾಂತ್ಯಕ್ಕೆ ಈ ಸಮಾಜ ಸೇವೆ ಹೆಸರಿನಲ್ಲಿ ಕಾಲಿಟ್ಟದ್ದು ಯಾವಾಗ? ವಾಸ್ತವಾಂಶಗಳು ಹೀಗಿದ್ದಾಗ್ಯೂ ಈ ದಿವಸ ಪ್ರಜಾಪ್ರಭುತ್ವದ ಆಡಳಿತ ದೇಶದಲ್ಲಿ ನೆಲೆಸಿರತಕ್ಕಂಥ ಕಾಲದಲ್ಲಿ, ಆ ಪ್ರಾಂತ್ಯದಲ್ಲಿ ನಮಗೆ ವಾಕ್ ಸ್ವಾತಂತ್ರ್ಯ, ಸಭಾ ಸ್ವಾತಂತ್ರ್ಯ ಇತ್ಯಾದಿಗಳು ಇಲ್ಲದಂತಾಗಿವೆ. ಹನುಮಂತಯ್ಯನವರ ತಮ್ಮಂದಿರು ನನಗೂ ಮತ್ತು ನನ್ನ ಸ್ನೇಹಿತರಿಗೂ "ನಮ್ಮ ತಾಲ್ಲೂಕಿನೊಳಕ್ಕೆ ಬರಲು ನೀವ್ಯಾರು?'' ಎಂಬುದಾಗಿ ಕೇಳಿದರು. ಈ ದಿವಸ ನನಗೆ ಆ ತಾಲ್ಲೂಕಿನಲ್ಲಿ ಈ ಹನುಮಂತಯ್ಯನವರಿಗಾಗಲಿ ಅಥವಾ ಇವರ ತಮ್ಮನಿಗಾಗಲಿ ಇರುವ ಹಕ್ಕಿಗಿಂತ ಹೆಚ್ಚಾಗಿಯೇ ಇದೆ. ಇವರಿಗೆ ಆ ತಾಲ್ಲೂಕಿನಲ್ಲಿ ಇರತಕ್ಕ ಜಮೀನಿನ ಹತ್ತರಷ್ಟು ಜಮೀನು ಅಲ್ಲಿ ನನಗಿದೆ. ಹೀಗಿರುವಾಗ ಅವರು ''ನೀವು ಇಲ್ಲಿಗೇಕೆ ಬರುತ್ತಿದ್ದೀರಿ? ಇಲ್ಲಿ ನಿಮಗೇನು ಹಕ್ಕಿದೆ?'' ಎಂದು ಕೇಳಿದ್ದರ ಬಗ್ಗೆ ಈ ವಿಚಾರವನ್ನು ಮಾನ್ಯ ಸಭೆಯವರು ಸ್ಥೂಲವಾಗಿ ಪರಿಶೀಲನೆ ಮಾಡಬೇಕಾದದ್ದು ಅಗತ್ಯವಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ.

ಇನ್ನೊಂದು ಸಲ ನಾನೂ ಮತ್ತು ನನ್ನ ಸ್ನೇಹಿತರುಗಳಾದ ಶ್ರೀ ಎಚ್. ಕೆ. ವೀರಣ್ಣಗೌಡರೂ, ಶ್ರೀ ಎಲ್. ಹುಚ್ಚಮಾಸ್ತಿಗೌಡರೂ ಅದೇ ತಾಲ್ಲೂಕಿನಲ್ಲಿ ಕೂಟಗಲ್ ಎಂಬ ಗ್ರಾಮಕ್ಕೆ ಒಂದು ಮೀಟಿಂಗ್ ಉದ್ದೇಶವಾಗಿ ಹೊರಟಿದ್ದೆವು. ಆಗ ಆ ರಾಮನಗರಂ ಊರಿನ ಕೆಲವು ಜನರು ರಸ್ತೆಯಲ್ಲಿ ಅಡ್ಡನಿಂತು "ನೀವು ನಮ್ಮ ತಾಲ್ಲೂಕಿನಲ್ಲಿ ಬಂದು ಈ ರೀತಿಯಾಗಿ ಯಾವ ಸಭೆಗಳನ್ನಾಗಲಿ ಅಥವಾ ಮೀಟಿಂಗುಗಳನ್ನಾಗಲಿ ಮಾಡ

ಕೂಡದು" ಎಂಬುದಾಗಿ ನಮಗೆ ಅಡ್ಡಿಪಡಿಸಿದರು. ಆಗ ನಾನು ಆ ಜನರನ್ನು ಉದ್ದೇಶಿಸಿ "ಏಕಪ್ಪಾ ನಾವು ಆ ರೀತಿ ಸಭೆ ಮಾಡಕೂಡದು ಎಂದು ಹೇಳುತ್ತೀರಿ? ನಿಮಗೆ ಇದರಿಂದ ಏನು ಕಷ್ಟವಾಗುತ್ತದೆ? ನೀವು ಕೂಡ ಆ ಸಭೆಗೆ ಬನ್ನಿ, ನೀವೂ ಕೂಡ ಆ ಸಭೆಯಲ್ಲಿ ಭಾಷಣ ಮಾಡಿ, ನಿಮಗೆ ತಿಳಿದಿದ್ದನ್ನು ನೀವು ಮಾತನಾಡಿ" ಎಂದು ಹೇಳುತ್ತಿದ್ದೆನು. ಆಗ ಆ ಜನರು "ನೀವು ನಮ್ಮ ತಾಲ್ಲೂಕಿನೊಳಗೇ ಬರಕೂಡದೆಂದು ಹೇಳತಕ್ಕ ಅಧಿಕಾರ ನಮಗಿದೆ" ಎಂಬುದಾಗಿ ವಾದ ಮಾಡುತ್ತಿದ್ದರು. ಅಷ್ಟು ಹೊತ್ತಿಗೆ ಸರಿಯಾಗಿ ಅಲ್ಲಿಗೆ ಶ್ರೀಮಾನ್ ವೀರಣ್ಣಗೌಡರ ಕಾರೂ ಸಹ ಬಂತು. ಆಗ ಈ ಜನರೆಲ್ಲರೂ ಅವರ ಕಾರಿನ ಹತ್ತಿರಕ್ಕೆ ಹೋದರು. ಆಗಲೂ ಸಹ ಇವರು ಆ ವೀರಣ್ಣಗೌಡರಿಗೂ ಇದೇ ರೀತಿ ಪ್ರಶ್ನೆ ಹಾಕಿದರು. ಆಗ ಶ್ರೀ ವೀರಣ್ಣಗೌಡರು "ನಮ್ಮನ್ನು ಈ ತಾಲ್ಲೂಕಿಗೆ ಬರಕೂಡದೆಂದು ಅಡ್ಡಿ ಮಾಡಲು ನೀವು ಯಾರು?" ಎಂಬುದಾಗಿ ಅವರ ನೈಜವಾದ ರೀತಿಯಲ್ಲಿ ಅವರಿಗೆ ಹೇಳಿ, ಬಿಡೋ ಕಾರನ್ನು ಎಂಬುದಾಗಿ ಡ್ರೈವರಿಗೆ ಹೇಳಿ ಮುಂದಕ್ಕೆ ಹೊರಟೇ ಬಿಟ್ಟರು. ಶ್ರೀಮಾನ್ ಹುಚ್ಚಮಾಸ್ತಿಗೌಡರು ಸ್ವಲ್ಪ ತಡವಾಗಿ ಬಂದರು. ಅವರನ್ನೂ ಸುಮಾರು ಒಂದು ಘಂಟೆಯ ಕಾಲ ತಡೆದು ನಿಲ್ಲಿಸಿದರಂತೆ, ಬಿಡಲಿಲ್ಲ; ಇದಾದ 20 ದಿವಸಗಳ ಮೇಲೆ ಇಂಥದೇ ಮತ್ತೊಂದು ವಿಚಾರ ನಡೆಯಿತು. ಅದು ಆದದ್ದು ಜನವರಿ 12ನೆಯ ತಾರೀಖಿನಲ್ಲಿ. ಆ ಜನವರಿ 12ನೆಯ ತಾರೀಖಿನ ದಿವಸ ಆ ಕ್ಯಾಲಂಚ ಎಂಬ ಗ್ರಾಮದಲ್ಲಿ ಒಂದು ಸಭೆಯನ್ನು ನಡೆಸಬೇಕಾಗಿತ್ತು. ಅಲ್ಲಿಗೆ ಹೋಗುವಾಗ ನಡೆದ ವಿಚಾರವನ್ನೂ ತಿಳಿಸುತ್ತೇನೆ. ಶ್ರೀ ಹನುಮಂತಯ್ಯನವರು ಯಾವಾಗಲೂ ಸತ್ಯವನ್ನೇ ಹೇಳುತ್ತೇನೆಂದು ಹೇಳಿಕೊಳ್ಳುತ್ತಾರೋ ಹಾಗೆ ನಾನು ಹೇಳಿಕೊಳ್ಳದಿದ್ದರೂ ನನ್ನ ಮನಸ್ಸಿಗೆ ಧೃಢವಾಗಿದೆ ನಾನು ಹೇಳುವುದು ವಾಸ್ತವಾಂಶವೆಂದು. ಇದು ನಾವುಗಳು ಯಾರೂ ಶ್ರೀ ಹನುಮಂತಯ್ಯನವರ ಕ್ಷೇತ್ರಕ್ಕೆ ಹೋಗಿ ಜನರಿಗೆ ಅವರ ವಿಷಯದಲ್ಲಿ ತಪ್ಪು ಅಭಿಪ್ರಾಯ ಬರುವಂತೆ ಮಾಡಿಕೊಂಡ ಏರ್ಪಾಡೆಂದು ಶ್ರೀ ಹನುಮಂತಯ್ಯನವರು ತಿಳಿದುಕೊಂಡಿದ್ದರೆ ಅದು ಶುದ್ಧಾಂಗವಾಗಿ ತಪ್ಪು. ಅಲ್ಲಿಯ ಜನರು ಬಂದು ಮೂರು ನಾಲ್ಕು ದಿವಸ ಕಾದಿದ್ದರು. ಆಗ ನಾವು ನಮಗೆ ಬರಲು ವಿರಾಮವಿಲ್ಲವೆಂದು ಹೇಳಿದಾಗ್ಯೂ ಅಲ್ಲಿಯ ಜನರು ತಮಗೆ ಯಾವಾಗ ವಿರಾಮವಾಗುತ್ತೆಂದರೆ ಆಗಲೇ ನಾವು ಆ ಮೀಟಿಂಗನ್ನು ಇಟ್ಟುಕೊಳ್ಳುವುದಾಗಿ ಹೇಳಿದರು. ಅದಕ್ಕೂ ಕೂಡ ನಾನು ಖಂಡಿತ ಅವರಿಗೆ 'ಬರಲು ಸಾಧ್ಯವಿಲ್ಲ—ನಾವು ಅಲ್ಲಿಗೇನಾದರೂ ಬಂದರೆ ಆಗಿದ್ದ ಸಂದರ್ಭದಲ್ಲಿ ಒಂದು ತಪ್ಪು ಭಾವನೆ ಬರಬಹುದು, ಅದಕ್ಕೆಲ್ಲಾ ಏಕೆ ಅವಕಾಶಕೊಡಬೇಕು? ನೀವು ನಮ್ಮನ್ನು ಬಿಡಿ' ಎಂದು ಹೇಳಿದೆನು. ಆದಾಗ್ಯೂ ಅವರು ಒಂದೇ ಹಟ ಹಿಡಿದು ಬರಲೇ ಬೇಕೆಂದು ಹೇಳಿದರು. ಅಲ್ಲಿಯ ಜನರೆಲ್ಲಾ ಶ್ರೀ ಹನುಮಂತಯ್ಯನವರ ತಮ್ಮಂದಿರ ವಿಷಯದಲ್ಲಿ ಹೇಸಿ ಹೋಗಿದ್ದಾರೆ. ಯಾರಾದರೂ ಸರಿಯೇ ನಿಮ್ಮ ಪೈಕಿ ನಾಲ್ಕು ಜನರು ಬಂದು ಅಲ್ಲಿಯ ಜನರಿಗೆ ನಾಲ್ಕು ಮಾತುಗಳನ್ನು ಹೇಳಿ ಎಂಬುದಾಗಿ ಒತ್ತಾಯಪಡಿಸಿದರು. ಇದಕ್ಕಾಗಿ ನಾವು ಆ ಜನವರಿ 12ನೆಯ ತಾರೀಖು ಅಲ್ಲಿಗೆ ಹೋಗಲೇ ಬೇಕಾಗಿತ್ತು.

ಜನವರಿ 12 ನೇ ತಾರೀಖಿನ ದಿವಸ ನಾನು ಬೆಂಗಳೂರಿನಿಂದ ಹೋದೆ, ಹುಚ್ಚಮಾಸ್ತಿಗೌಡರು ಬಸ್ಸಿನಲ್ಲಿ ಹೋಗಿ ಶ್ರೀಮಾನ್ ಮಾದಯ್ಯಗೌಡರ ಮನೆಯಲ್ಲಿದ್ದರು. ಶ್ರೀ ಮಾದಯ್ಯಗೌಡರೂ ನಾನೂ, ಹುಚ್ಚಮಾಸ್ತಿಗೌಡರೂ ಇನ್ನಿಬ್ಬರು ಸ್ನೇಹಿತರೂ, ನನ್ನ ಕಾರಿನಲ್ಲಿ ಹೊರಟು ಕಾನ್‌ಕಾನ್‌ಹಳ್ಳಿ ರಸ್ತೆಯ ರೈಲ್ವೆ ಗೇಟಿನ ಬಳಿ ಹೋದೆವು. ಕೆಲವು ಜನ ಗೇಟಿನಬಳಿ ರಸ್ತೆಗೆ ಅಡ್ಡಲಾಗಿ ನಿಂತುಕೊಂಡಿದ್ದರು. ದಾರಿ ಬಿಡಿರಿ, ಇದೇಕೆ ಈ ರೀತಿ ನಿಂತಿದ್ದೀರಿ ಎಂದರೆ 'ದಾರಿ ಬಿಡುವುದಿಲ್ಲ' ಎಂದರು. ಏನಯ್ಯ ಏಕೆ ಬಿಡುವುದಿಲ್ಲ ಎಂದರೆ, ನೀವು ನಮ್ಮ ತಾಲ್ಲೂಕಿನಲ್ಲಿ ಬಂದು ಇದೆಲ್ಲಾ ಹೇಳಬಾರದು ಎಂದರು. ಅದಕ್ಕೆ ನಾವು "ಬನ್ನಿ, ನೀವೂ ಮಾತನಾಡಿ, ನಿಮಗೆ ಏನು ತೋರುತ್ತದೆಯೋ ಅದನ್ನು ಹೇಳಿ' ಎಂದು ಬಹಳವಾಗಿ ಹೇಳಿದೆವು. ಶ್ರೀ ಮಾದಯ್ಯಗೌಡರು ಬಹಳವಾಗಿ ಪೇಚಾಡಿಕೊಂಡರು. ಬೇಡಿ, ಇದು ಸರಿಯಾದ ಕಾರ್ಯವಲ್ಲ ಎಂದು ಹೇಳಿದರು. ಕೇಳಲಿಲ್ಲ. ನಾನು ಹಿಂದಕ್ಕೆ ಕಾರು ತೆಗೆದುಕೊಂಡು ಹೋಗಿ ಪೋಲೀಸ್ ಇನ್‌ಸ್ಪೆಕ್ಟರಿಗೆ, ಈ ರೀತಿ ಆಗಿದೆ ಇನ್ನು ಅದರಿಂದ ಘರ್ಷಣೆಗಳಿಗೆ ಅವಕಾಶವಾಗಿ ಕೆಡಕಾಗುತ್ತದೆ, ಅದಕ್ಕೆ ಅವಕಾಶ ಕೊಡದೇ ಇರುವುದು ಒಳ್ಳೆಯದು ಎಂದು ಹೇಳಿದೆ. ಒಬ್ಬ ಸಬ್ ಇನ್‌ಸ್ಪೆಕ್ಟರು ಮೊದಲು ಬಂದರು. ಆ ಮೇಲೆ ಇನ್‌ಸ್ಪೆಕ್ಟರು ಬಂದರು. ಅವರಿಗೆ ಏನೇನು ಹೇಳುವುದಕ್ಕೆ ಸಾಧ್ಯವೋ ಅದನ್ನೆಲ್ಲಾ ಹೇಳಿ ಸಮಾಧಾನಪಡಿಸಲು ಪ್ರಯತ್ನಪಟ್ಟರು. ಗೇಟು ತೆಗೆಯುವುದಿಲ್ಲ ಎಂದು ಷುರು ಮಾಡಿದರು. ಕೊನೆಗೆ ಪೋಲೀಸ್ ಇನ್‌ಸ್ಪೆಕ್ಟರು 'ತಡೆಗಟ್ಟಬಾರದು, ತಡೆ ಗಟ್ಟಿದರೆ ನಾವೇನಾದರು ಕಾರ್ಯಕೈಕೊಳ್ಳುತ್ತೇವೆ' ಎಂದು ಹೇಳಿದರು. ಆಮೇಲೆ ದಾರಿಬಿಟ್ಟರು. ಮುಂದೆ ಹೋದೆವು. ಮುಂದೆ ಹೋದರೆ ಅಲ್ಲಿ ಒಂದು ಮೈನರ್ ಫಾರೆಸ್ಟು ಇದೆ. ಅಲ್ಲಿ ಕಲ್ಲುಗಳನ್ನು ಹಿಡಿದುಕೊಂಡು ಒಂದಷ್ಟು ಜನ ಎದುರಿಗೆ ಬಂದರು. ಶ್ರೀಮಾನ್ ಹನುಮಂತಯ್ಯನವರ ತಮ್ಮ ಕಲ್ಲು ಹಿಡಿದುಕೊಂಡು ಕಾರಿನ ಮುಂದುಗಡೆ ಬಂದು ನಿಂತರು. ನಾವು ಕಾರು ಇಳಿದು, 'ಅಯ್ಯಾ ಇಂಥ ತುಂಟತನ ಮಾಡುವುದು ಸರಿಯಲ್ಲ' ಎಂಬುದಾಗಿ ಬಹಳವಾಗಿ ಹೇಳಿದೆವು. 'ಸ್ವಾಮಿ ಇಂತಹ ತುಂಟತನಕ್ಕೆ ನಾವೇನೂ ಹೆದರುವವರಲ್ಲ: ನಮ್ಮಿಂದಲೂ ಇಂಥ ಕೆಲಸ ಮಾಡಲು ಸಾಧ್ಯ. ಆದರೆ ಈಗ ಗಾಂಧಿಯ ಹೆಸರನ್ನು ಹೇಳಿಕೊಂಡು ಹೀಗೆಲ್ಲಾ ಮಾಡುವುದು ಸರಿಯಲ್ಲ. ಏನಾದರೂ ಸ್ವಲ್ಪ ಕೈಮೀರಿದರೆ ನಮಗೆಲ್ಲಾ ಕೆಟ್ಟ ಹೆಸರು ಬರುತ್ತದೆ, ಹೀಗೆಲ್ಲಾ ಮಾಡಬಾರದು, ಇದು ಸರಿಯಾದ ಮಾರ್ಗವಲ್ಲ. ಯಾರು ಬೇಕಾದರೂ ಸಭೆಗೆ ಬಂದು ಭಾಷಣಮಾಡಬಹುದು ಅಥವಾ ಬೇರೆ ಕಾನ್‌ಫರೆನ್ಸ್ ಮಾಡಬಹುದು' ಎಂದು ಬಹಳವಾಗಿ ಸಮಾಧಾನ ಹೇಳಿದರೂ ಕೇಳಲಿಲ್ಲ. ಶ್ರೀಮಾನ್ ಮಾದಯ್ಯಗೌಡರು ಕೆಳಗೆ ಇಳಿದು 'ಏನಯ್ಯ ಪುಟ್ಟಸ್ವಾಮಿ, ನಿನ್ನನ್ನೂ ನನ್ನ ತಮ್ಮ ಎಂದು ತಿಳಿದುಕೊಂಡಿದ್ದೇನೆ, ನೀನು ನನ್ನನ್ನು ತಡೆಯುವುದಕ್ಕೆ ಬರಬಹುದೆ? ಇದೇಕೆ ಕೈಯಲ್ಲಿ ಕಲ್ಲು ಹಿಡಿದಿದ್ದೀಯಲ್ಲ?' ಎಂದು ಕೇಳಿದರು. ಅದಕ್ಕೆ ಆತ 'ನೀವು ಒಂದು ಹೆಜ್ಜೆ ಮುಂದಕ್ಕೆ ಇಟ್ಟರೆ ಕಲ್ಲಿಂದ ಹೊಡೆಯುತ್ತೇನೆ, ಸಾರ್' ಎಂದ. ಸರಿ, ಅಷ್ಟರಲ್ಲಿ ಸ್ವಲ್ಪ ಜನ ಸೇರಿದರು, ಅವರನ್ನು ಬೇರೆ ಕಡೆಗೆ ಕರೆದುಕೊಂಡು ಹೋದರು. ನಾವು ಮುಂದಕ್ಕೆ ಹೋದೆವು. ಮೀಟಿಂಗ್ ಆಗಬೇಕಾಗಿದ್ದ ಸ್ಥಳಕ್ಕೆ ಇನ್ನೂ ಎರಡು ಫರ್ಲಾಂಗು ಇತ್ತು. 2 ಘಂಟೆಗೆ ಮೀಟಿಂಗ್ ನಡೆಯಬೇಕಾಗಿತ್ತು. ಮೀಟಿಂಗ್ ಆಗಬೇಕಾಗಿದ್ದ ಸ್ಥಳಕ್ಕೆ ಸುಮಾರು 200 ಗಜ ದೂರದಲ್ಲಿ ಇದ್ದ ಗೌಡಯ್ಯನ ದೊಡ್ಡಿಯಲ್ಲಿ ಊಟಕ್ಕೆ ಏರ್ಪಾಟಾಗಿತ್ತು. ಅಲ್ಲಿ ಊಟಕ್ಕೆ ಕುಳಿತುಕೊಂಡೆವು. ಹನುಮಂತಯ್ಯನವರ ಇನ್ನೊಬ್ಬ ತಮ್ಮ ಒಂದಷ್ಟು ಜನರನ್ನು ಕಟ್ಟಿ

(ಶ್ರೀ ವಿ. ವೆಂಕಟಪ್ಪ).

ಕೊಂಡು ಬಂದು ಚಪ್ಪರದಲ್ಲಿದ್ದ ಮಹಾತ್ಮಾಗಾಂಧೀಯುವರ ಫೋಟೋ, ಮಹಾರಾಜರವರ ಫೋಟೋ, ಜವಹರಲಾಲ್ ನೆಹರೂಅವರ ಫೋಟೋ ಇವುಗಳನ್ನೆಲ್ಲಾ ಕಿತ್ತು ಎಸೆದು ಚಪ್ಪರ ಉರುಳಿಸಬೇಕೆಂದು ಪ್ರಯತ್ನ ಮಾಡಿದರು. ಊಟ ಮಾಡುತ್ತಾ ನಾವು ಕುಳಿತುಕೊಂಡಿದ್ದೆವು. ಜನಗಳು ಏನು ನಡೆಯುತ್ತದೆಯೋ ಎಂದು ವಿಪರೀತ ಗಾಬ್ರಿ ಆಗಿದ್ದರು. ನಾನೂ ಮಾದಯ್ಯಗೌಡರೂ ಎದ್ದು ಬಂದು 'ಪರಿಸ್ಥಿತಿ ಹೀಗಿದೆ, ಹದಗೆಟ್ಟೀತು, ಅದಕ್ಕೆ ಅವಕಾಶ ಕೊಡಬಾರದು' ಎಂದು ಹೇಳಿ ಒಂದು ಕಾಗದ ಬರೆದು ಪೋಲೀಸ್ ಇನ್ಸ್‌ಪೆಕ್ಟರಿಗೆ ಕಳುಹಿಸಿದೆವು. ಪೋಲೀಸ್ ಇನ್ಸ್‌ಪೆಕ್ಟರು ಗೇಟಿನ ಹತ್ತಿರ ಬಂದಿದ್ದವರು ನಮ್ಮ ಜೊತೆಯಲ್ಲೇ ಬರುತ್ತೇನೆ ಎಂದು ಹೇಳಿದವರು ಬರಲೇ ಇಲ್ಲ. ಕಾರಣ ಶ್ರೀಮಾನ್ ನಂಜಪ್ಪನವರು ಪೋಲೀಸ್ ಇನ್ಸ್‌ಪೆಕ್ಟರವರನ್ನು ವಾಚಾಮಗೋಚರವಾಗಿ ಬೈದು 'ನೀವೂ ಅವರ ಜೊತೆ ಸೇರಿಕೊಂಡು ಪ್ರೊಪಗ್ಯಾಂಡಾಮಾಡುವುದಕ್ಕೆ ಹೋಗಿರಿ. ನೀವು ಕಾಕಿ ಬಟ್ಟೆ ಏಕೆ ಹಾಕಿಕೊಂಡಿದ್ದೀರಿ ! ಅವರಂತೆಯೇ ಬಟ್ಟೆ ಹಾಕಿಕೊಂಡು ಹೋಗಿ', ಎಂದು ನೂರಾರು ಜನರ ಎದುರಿನಲ್ಲಿ ಗದರಿಸಿಕೊಂಡರಂತೆ. ಹೀಗಾಗಿ ಸರ್ಕಾರದ ಅಧಿಕಾರಿಗಳಿಗೆ ತಮ್ಮ ಕರ್ತವ್ಯವನ್ನು ಮಾಡಲು ಅವಕಾಶವಿಲ್ಲದಂತಾಗಿದೆ. ಕಾಗದ ಬರೆದು ಕಳುಹಿಸಿದ ಒಬ್ಬ ಪಾರ್ಲಿಮೆಂಟಿನ ಸದಸ್ಯರ ಮತ್ತು ಒಬ್ಬ ಮೈಸೂರು ಲೆಜಿಸ್ಲೇಟೀವ್ ಅಸೆಂಬ್ಲಿ ಸದಸ್ಯರ ಪ್ರೊಟೆಕ್ಷನ್ ಇಲ್ಲ. ಶ್ರೀಮಾನ್ ಹನುಮಂತಯ್ಯನವರು ಅವರಿಗೆ ಎಷ್ಟು ಪ್ರೊಟೆಕ್ಷನ್ ಬೇಕು, ಅವರ ಪ್ರಾಣ ಎಷ್ಟು ಮುಖ್ಯ ಎಂದು ತಿಳಿದು ಕೊಂಡಿದ್ದಾರೋ ಅಷ್ಟೇ ಮುಖ್ಯ ನಮ್ಮ ಪ್ರಾಣ, ಅಷ್ಟೇ ಪ್ರೊಟೆಕ್ಷನ್ ನಮಗೂ ಕೊಡಬೇಕು ಎಂಬುದನ್ನು ಅವರು ತಿಳಿದುಕೊಳ್ಳಬೇಕು. ಅದನ್ನು ಕೊಡತಕ್ಕ ಭಾರವನ್ನು ಈ ಸರ್ಕಾರ ಹೊತ್ತಿದೆ. ಆದರೆ ಅವೊತ್ತಿನ ದಿವಸ ಸರ್ಕಾರ ಇಲ್ಲದಂತಾಯಿತು. ನಾವು ಕಾಗದ ಬರೆದು ಕಳುಹಿಸಿದರೂ ಕೂಡ ಅವರು ಬರಲಿಲ್ಲ. ನಿನ್ನೆತಾನೆ ಶ್ರೀಮಾನ್ ವೀರಣ್ಣಗೌಡರು ಹೇಳಿದರು, ಹನುಮಂತರಾಯನ ಗುಡಿಯ ಹತ್ತಿರ ದನಗಳ ಪರಿಷೆ ಎಲ್ಲಾ ಮುಗಿದ ಮೇಲೆ ಪ್ರೈಸ್ ಡಿಸ್ಟ್ರಿಬ್ಯೂಷನ್ ಮಾಡಬೇಕಾದರೆ ಡಿ.ಐ.ಜಿ. ವ್ಯಾನ್‌ಗಳಲ್ಲಿ ಪೋಲೀಸ್‌ನವರು ಬಂದು ಕಾದುಕೊಂಡಿದ್ದರು. ಮಂಡ್ಯದಲ್ಲಿ ಒಂದು ಪತ್ರಿಕೆಯ ಪ್ರಕಟಣೆಯ ಉದ್ಘಾಟನೆ ಮಾಡುವುದಕ್ಕೆ ಶ್ರೀಮಾನ್ ಹನುಮಂತಯ್ಯನವರು ದಯಮಾಡಿಸಿದ್ದರು. ಅಲ್ಲಿ ನೋಡಿದರೆ, ಐ.ಜಿ.ಆಫ್. ಪೋಲೀಸ್, ನೂರಾರು ಜನ ಪೋಲೀಸ್‌ನವರು, ಬಾಗಿಲಿನಲ್ಲಿ ಬಂದೂಕ ಹಿಡಿದುಕೊಂಡು ನಿಂತುಕೊಂಡಿರುವ ಶಿಪಾಯಿಗಳು. ಈ ರೀತಿ ಸರ್ಕಾರವನ್ನು ನಡೆಸುತ್ತೇನೆ ಎನ್ನುವುದು ನಿಜವಾಗಿಯೂ ಗೌರವಾರ್ಹವಾದುದಲ್ಲ. ನನ್ನಂತಹವನಾಗಿದ್ದಿದ್ದರೆ ಪ್ರಾಣ ಹೋದರೂ ಪರವಾಗಿಲ್ಲ ಪೋಲೀಸ್‌ನವರ ಸಹಾಯ ಬೇಕಿಲ್ಲ ಎಂದು ಹೇಳುತ್ತ ಇದ್ದೆ. ಪೋಲೀಸ್‌ನವರ ಸಹಾಯದಿಂದ ರಾಜ್ಯಾಡಳಿತ ನಡೆಸತಕ್ಕ ಪರಿಸ್ಥಿತಿಯಲ್ಲಿ ನಾಯಕರು ಇದ್ದರೆ, ಅವರು ನಿಜವಾಗಿಯೂ ದೇಶದ ನಾಯಕರು ಎಂದು ಹೇಳಿಕೊಳ್ಳುವುದು ಯೋಗ್ಯವೇ'ಎಂಬುದನ್ನು ಈ ಸಭೆ ಪರಿಶೀಲನೆ ಮಾಡಬೇಕು.

ಶ್ರೀ ಬಿ. ಹುಚ್ಚೇಗೌಡ.—ಅದಕ್ಕೆ ನೀವೇ ಜವಾಬ್ದಾರರು.

ಶ್ರೀ ವಿ. ವೆಂಕಟಪ್ಪ.—ಅದಕ್ಕೇ ಈ ಪ್ರತಿಫಲವನ್ನು ಅನುಭವಿಸುತ್ತಾ ಇದ್ದೇವೆ. ಇನ್ನೂ ಒಂದು ಸ್ವಾರಸ್ಯ ಇದೆ. ಈ ಮಂತ್ರಿಗಳಿಗೆ ಈ ರೀತಿ ನಡೆದಿದೆ ಸರಿಯಾದ ಕಾರ್ಯಕ್ರಮ ಕೈಗೊಳ್ಳಬೇಕೆಂದು ಬರೆದರೆ ಇಬ್ಬರು ಮಂತ್ರಿಗಳು ಉತ್ತರಕೊಡಲೇ ಇಲ್ಲ. ಇವರು ಜವಾಬ್ದಾರಿ ಸರ್ಕಾರದಲ್ಲಿ ನಮ್ಮಿಂದ ಚುನಾಯಿತರಾದ ಮಂತ್ರಿಗಳು, ಆದರೂ ನಮ್ಮ ಮಾತಿಗೇ ಬೆಲೆಯಿಲ್ಲ. ಶ್ರೀ ಚನ್ನಬಸಪ್ಪನವರು ಮಂತ್ರಿಗಳಾದ ಮೇಲೆ ಮೊದಲನೆಯ ಸಲ ನಮ್ಮ ಊರಿಗೆ ಬಂದ ದಿವಸ ನಾನು ಒಂದು ಪ್ರಾರ್ಥನೆ ಮಾಡಿಕೊಂಡೆ. "ಸ್ವಾಮಿ, ನಮ್ಮ ತಾಲ್ಲೂಕಿನಲ್ಲಿ ಯಾವ ಕೆಲಸವೂ ಆಗಿಲ್ಲ. ಆದರೂ ಚಿಂತೆ ಇಲ್ಲ; ಅದು ಎಂದಾದರೂ ಆಗಿಯೇ ಆಗುತ್ತದೆ. ನೀವು ಏನು ಮಾಡದಿದ್ದರೂ ಪರವಾಗಿಲ್ಲ. ಈ Rule of law ಜಾರಿಯಲ್ಲಿದೆ ಎನ್ನುವ ಮಟ್ಟಿಗೆ ನಮ್ಮ ಸರ್ಕಾರವನ್ನು ನಡೆಸಿದರೆ ಸಾಕು" ಎಂದು ಹೇಳಿದೆ. ಈಗ ಬಹು ಮಟ್ಟಿಗೆ ತಮಗೆ ಬೇಕಾದವರಿಗೆ ಬೇಕಾದ ಕೆಲಸ ಮಾಡಿಕೊಡುವುದು ತಮಗೆ ಬೇಡದವರಿಗೆ ತೊಂದರೆ ಕೊಡುವುದು ಈ ರೀತಿ ಪಕ್ಷಪಾತ ಈ ಸರಕಾರ ಮಾಡುತ್ತಿದೆ ಎಂದು ನಿನ್ನೆ ಶ್ರೀ ವೀರಣ್ಣಗೌಡರು ಏನು ಹೇಳಿದರೋ ಆ ದೃಷ್ಟಿಯಿಂದಲೇ ಎಲ್ಲಾ ಕೆಲಸವೂ ನಡೆಯುತ್ತಿದೆ. ಒಂದು ಉದಾಹರಣೆಯನ್ನು ಕೊಡುತ್ತೇನೆ. ಶ್ರೀ ಹನುಮಂತಯ್ಯನವರು ಕಳೆದ ವರ್ಷ ಕಣ್ವ ಅಚ್ಚುಕಟ್ಟಿಗೆ ನೀರು ಸಾಲದು, ಬೇರೆ ಒಂದು ಕಾಲುವೆ ಮಾಡಿ ನೀರು ಒದಗಿಸಬೇಕೆಂದು ಹೇಳಿದ್ದಕ್ಕೆ, 'ಐದು ಲಕ್ಷ ರೂಪಾಯಿ ಮಂಜೂರಾಗಿದೆ, ಕೆಲಸ ಕೈಗೊಳ್ಳುತ್ತೇವೆ' ಎಂದು ಹೇಳಿದರು. ಅದಕ್ಕೆ ಒಂದು ಅಂದಾಜು ತಯಾರಾಗಿ ಕಾಂಟ್ರಿಬ್ಯೂಷನ್, ವಾಟರ್‌ರೇಟು ಹೆಚ್ಚಿಗೆ ಕೊಡಬೇಕೆಂದೂ, ಅದಕ್ಕೆ ಮುಚ್ಚಳಿಕೆ ಬರೆದು ಕೊಡಬೇಕೆಂದೂ ಮರಾಮತ್ ಇಲಾಖೆಯವರು ಕೇಳಿದರು. ಕಾಂಟ್ರಿಬ್ಯೂಷನ್, ವಾಟರ್ ರೇಟ್ ಎಷ್ಟು ಕೊಡಬೇಕೆಂದು ನಿರ್ಧರಿಸಲು ಮರಾಮತ್ ಇಲಾಖಾ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರನ್ನು ಆ ಪ್ರಾಂತದ ಜನರು ಬಂದು ನೋಡಿದೆವು. ಶ್ರೀ ಮಂಜಪ್ಪನವರು "ಈಗ ಆಖೈರು ಅಂದಾಜು ತಯಾರಾಗಿಲ್ಲ, ಒಟ್ಟು ಮೊಬಲಗು ಎಷ್ಟೆಂಬುದು ಖರಾರುವಾಕ್ಕಾಗಿ ಗೊತ್ತಾದ ಮೇಲೆ ಕಾಂಟ್ರಿಬ್ಯೂಷನ್, ವಾಟರ್ ರೇಟುಗಳನ್ನು ಸರ್ಕಾರದವರು ನಿರ್ಧರಿಸುತ್ತೇವೆ. ನೀವು ಅಂದಾಜು ತಯಾರು ಮಾಡಿರಿ ಎಂದು ಇಲಾಖಾ ಅಧಿಕಾರಿಗಳಿಗೆ ತಿಳಿಸಿದರು. ಈ ಮಧ್ಯೆ ಮುಖ್ಯ ಮಂತ್ರಿಗಳಾದ ಶ್ರೀ ಹನುಮಂತಯ್ಯನವರು ಮರಾಮತ್ ಇಲಾಖೆಯ ಮುಖ್ಯಾಧಿಕಾರಿಗಳನ್ನು ಕರೆಸಿ, ಆ ಹಳ್ಳ ಯಾವ ತಾಲ್ಲೂಕಿನಲ್ಲಿ ಹರಿಯುತ್ತದೆಯೋ ಆ ಪ್ರಾಂತದ ಜನರಿಗೇ ಅದರ ಪ್ರಯೋಜನವಾಗಬೇಕು, ಆದುದರಿಂದ ಈ ಕೆಲಸವನ್ನು ಕೈಗೊಳ್ಳಬೇಡಿರೆಂದು ತಿಳಿಸಿದ್ದಾರಂತೆ. ವಿಶಾಲಮನೋಭಾವವನ್ನು ಇತರರಿಗೆ ಬೋಧಿಸಿ ತಾವು ಈ ರೀತಿ ಸಂಕುಚಿತ ಮತ್ತು ಹೊಟ್ಟೆಕಿಚ್ಚಿನ ಮನೋಭಾವದಿಂದ ಕೂಡಿದ್ದರೆ ಅಂಥವರು ನಮ್ಮ ದೇಶದ ಸರಕಾರವನ್ನು ನಡೆಸಲು ಯೋಗ್ಯರಾಗುತ್ತಾರೆಯೆ ಎಂಬ ಅನುಮಾನವು ವಾಸ್ತವವಾಗಿ ಉಂಟಾಗುವುದರಲ್ಲಿ ತಪ್ಪೇನು ?

ಶ್ರೀ ಹನುಮಂತಯ್ಯನವರು ತಮ್ಮ ಕ್ಷೇತ್ರವಾದ ರಾಮನಗರಕ್ಕೆ ಎಷ್ಟು ಸಲ ಹೋದರೂ ಕೂಡ ಚಪ್ಪರಗಳನ್ನು ಹಾಕಿಕೊಂಡು ಕಾದುಕೊಂಡಿರಬೇಕೆ ? ಇಂತಹ ಆಡಂಬರಗಳನ್ನು ಹಿಂದಿನ ಸರ್ಕಾರದವರು ಮಾಡಿದ್ದರೆ ಇದನ್ನು ನಾವುಗಳೇ ಕಟುವಾಗಿ ಟೀಕಿಸುತ್ತಿದ್ದೆವು. ಈಗ ನಾವೇ ಈ ಕೆಲಸವನ್ನು ಮಾಡಿದರೆ ಜನರು ಏನೆಂದುಕೊಂಡಾರೆಂಬ ಯೋಚನೆಯೇ ಇಲ್ಲದಿರುವುದು ವಿಷಾದಕರ. ಪ್ರವಾಸ ಹೊರಡುತ್ತಾರಲ್ಲ ಆ ಓಡಾಟ, ಆ ಭರಾಟೆ ಏನು ಹೇಳೋಣ ? ಇದರಿಂದ ಒಂದು

ಕಾಸಿನ ಕೆಲಸವೇನಾದರೂ ಆಗುತ್ತಿದೆಯೇ? ಹೋದ ಕಡೆಗಳಲ್ಲೆಲ್ಲ ಮಾನಪತ್ರವನ್ನು ತೆಗೆದುಕೊಂಡು ಅದಕ್ಕೆ ಉತ್ತರವನ್ನು ಹೇಳುವುದು ಇಷ್ಟರಲ್ಲಿ ಆಗಿದೆಯೇ ಹೊರತು ಒಂದು ಆಫೀಸನ್ನೂ ಸಹ ತನಿಖೆ ಮಾಡುವುದಿಲ್ಲ. ಆಫೀಸುಗಳಲ್ಲಿ ಏನು ತೊಂದರೆಗಳಿವೆ, ಜನಗಳಿಗೆ ಅಧಿಕಾರಿಗಳಿಂದ ಏನು ತೊಂದರೆಗಳಿವೆ, ಒಂದು ಸಮಾಜಕ್ಕೆ ಜನತೆಗೆ ಪರಿಹಾರ ಮಾಡಿಕೊಡುವ ಅಥವಾ ಇನ್ನು ಯಾವುದಾದರೂ ಕಾಗದಗಳು ನಿಂತುಹೋಗಿದ್ದಲ್ಲಿ ಅದಕ್ಕೆ ಕಾರಣವೇನು, ಸಿಬ್ಬಂದಿ ಬೇಕಾದಷ್ಟು ಇಲ್ಲದೆ ಸರಿಯಾಗಿ ಕೆಲಸ ಮಾಡುತ್ತಿಲ್ಲವೇ ಎಂಬುದನ್ನು ವಿಚಾರಿಸುತ್ತಿಲ್ಲ. ಇವರುಗಳ ಟೀಪಾರ್ಟಿ ಇವುಗಳ ಸಂತೋಷದಲ್ಲಿ ಕಾಲ ಕಳೆದು ಹೋಗುತ್ತಿದೆಯೇ ಹೊರತು ನಾಲ್ಕು ನಿಮಿಷ ನಿಂತುಕೊಂಡು ಜನರು ಹೇಳುವ ತಮ್ಮ ಕುಂದು ಕೊರತೆಗಳನ್ನು ಕೇಳುವುದಕ್ಕೂ ಪುರಸೊತ್ತೇ ಇಲ್ಲ. ಇಂಥ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದರಿಂದ ಪ್ರಯೋಜನವೇನು? ಒಂದು ದಿವಸವಾದರೂ ಒಂದು ತಾಲ್ಲೂಕಿನಲ್ಲಿದ್ದು ಯಾವ ಯಾವ ಸ್ಥಳಗಳನ್ನು ನೋಡಬೇಕೋ, ಯಾವ ಯಾವ ವಿಷಯಗಳನ್ನು ನೋಡಬೇಕೋ ಅದನ್ನು ಪರಿಶೀಲನೆ ಮಾಡಿ, ಅವು ಉತ್ತಮ ಸ್ಥಿತಿಗೆ ಬರುವುದಕ್ಕೆ ಏನು ಮಾಡಬೇಕು, ಹಳ್ಳಿಯ ರೈತನಿಗೆ ಜಾಗ್ರತೆ ಏನಾದರೂ relief ದೊರೆಯಬೇಕಾದರೆ ಯಾವ ರೀತಿ ಮಾಡಿದರೆ ದೊರೆಯುತ್ತದೆ ಎನ್ನುವುದರ ಕಡೆ ದೃಷ್ಟಿ ಇಲ್ಲದೆ ಇದ್ದರೆ ಇನ್ನೂ ಕೆಲವು ಕಾಲ ಕಾಂಗ್ರೆಸ್ಸನ್ನು ಹೇಗೆ ಉಳಿಸಿಕೊಂಡು ಬರುವುದು? ಮುಂದೆಯೂ ಸಹ ಉಳಿಸಿಕೊಂಡು ಬರಬೇಕಾದರೆ ಏನು ಕಾರ್ಯ ಮಾಡಬೇಕು ಎಂದು ದೃಷ್ಟಿಯಲ್ಲಿದ್ದರೆ ಮಾತ್ರ ದೇಶ ಉತ್ತಮ ಸ್ಥಿತಿಗೆ ಬರುತ್ತದೆ; ಕಾಂಗ್ರೆಸ್ಸಿನವರಿಗೆ ಸರ್ಕಾರವನ್ನು ವಹಿಸಿದ್ದರಿಂದ ಒಂದು ಒಳ್ಳೆಯ ಕೆಲಸವಾಯಿತು ಎಂದು ಹೇಳತಕ್ಕ ಪರಿಸ್ಥಿತಿ ಬರುತ್ತದೆ. ಬೇಕು ಬೇಕಾದ ಕಡೆ ದೊಡ್ಡ ದೊಡ್ಡ ಕೆಲಸಗಳನ್ನು ಮಾಡಿರಬಹುದು. ಆದರೆ ಜನರ ಮನಸ್ಸಿನ ಮೇಲೆ ಆಗಿರುವ ಪರಿಣಾಮ, ಯಾವ ವಿಧದಲ್ಲಿ ಸರ್ಕಾರ ನಡೆಯುತ್ತಿದೆ ಎನ್ನುವುದರ ವಿಷಯದಲ್ಲಿ ಜನರಲ್ಲಿ ಒಂದು ಒಳ್ಳೆಯ ಅಭಿಪ್ರಾಯ ಬಾರದೆ ಇದ್ದರೆ ನಿಜವಾಗಿ ಮುಂದೆ ನಮಗೆ ಬಹಳ ಕೆಟ್ಟ ಕಾಲ ಇದೆ ಎಂದು ನಾನು ಬಹಳ ವಿಷಾದದಿಂದ ಹೇಳುತ್ತೇನೆ.

ಸ್ವಾಮಿ, ಇನ್ನು ಹೆಚ್ಚು ಹೇಳುವುದಕ್ಕೆ ಪ್ರಯತ್ನಪಡುವುದಿಲ್ಲ. ನನ್ನ ಮಿತ್ರರು ಮಾತನಾಡಲು ಕಾತರರಾಗಿ ಇದ್ದಾರೆ. ಆದರೆ ಈ ಒಬ್ಬರಿಗೊಂದು ಒಬ್ಬರಿಗೊಂದು ಕಾರ್ಯ ಮಾಡಬಾರದು. ಕೈಲಂಚದಲ್ಲಿ ಮೀಟಿಂಗ್ನು ನಡೆದ ಮಾರನೆದಿನ ಮೆಟ್ಟಿದೊಡ್ಡಿಯ ಕೆಲವು ಬಡವರ ಮೆದೆಗೆ ಬೆಂಕಿ ಹಾಕಿದ್ದಾರೆ. ಆ ಬಡವರಿಗೆ ಏನೂ ತಿನ್ನುವುದಕ್ಕಿಲ್ಲದಂತಾಗಿದೆ. ಅಂಥವರಿಗೆ ಏನಾದರೂ ಪರಿಹಾರ ಕೊಟ್ಟಿದ್ದಾರೆಯೇ? ಮೆಟ್ಟಿದೊಡ್ಡಿ ರೈತರಮೇಲೆ ಖಾರ ಇದೆ. ಯಾಕೆ ಖಾರವಿದೆ ಎನ್ನುವುದು ಜನರಿಗೆ ಅರ್ಥವಾಗುತ್ತದೆ.

ಆಮೇಲೆ ನಮ್ಮ ತಾಲ್ಲೂಕಿನಲ್ಲಿ ಈಗ ಕೆಲವು ದಿವಸಗಳ ಹಿಂದೆ ಏಳೆಂಟು ಮನೆಗಳು ಬೆಂದುಹೋದವು. ಇದು ನಡೆದದ್ದು ಕುಂತೂ ದೊಡ್ಡಿಯಲ್ಲಿ. ಅಲ್ಲಿ ಆದಿಕರ್ಣಾಟಕರ ಮನೆಗಳು, ಸುಮಾರು 50-60 ಖಂಡುಗ ರಾಗಿ, ಅವರು ಸಂಪಾದಿಸಿದುದೆಲ್ಲಾ ಬೆಂದು ಹೋಯಿತು. ಇದಾಗಿ ಆಗಲೇ 15 ದಿವಸದ ಮೇಲಾಯಿತು. ಇದುವರೆಗೂ ಯಾವ ಪರಿಹಾರವನ್ನೂ ಕೊಟ್ಟಿಲ್ಲ. Fire accident ಆದರೆ ಅದರಿಂದ ನಷ್ಟಪಟ್ಟವರಿಗೆ ಕೊಡುವುದಕ್ಕೆಂದು ಇಲ್ಲಿ ನಾವು ಹಣ ಕೊಡುತ್ತೇವೆ. ತಮಗೆ ಬೇಕಾದಂಥವರಿಗೆ ಮಾತ್ರ ಕೊಡುತ್ತಾರೆ. ಈ ಅನ್ಯಾಯ ನಡೆಯಬಾರದು. ಇದನ್ನು ವಿಚಾರಮಾಡಿ ಅವರಿಗೆ ಆದಷ್ಟು ಜಾಗ್ರತೆ ಪರಿಹಾರ ದೊರಕಿಸಿಕೊಡಬೇಕು ಎಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ (ಗೌರಿಬಿದನೂರು).—ಸ್ವಾಮಿ, ನಾನು General Administration ಮೇಲೆ ಮಾತನಾಡುತ್ತ ದೇಶಕ್ಕೆ ಆಗಿರತಕ್ಕ ಅಪಘಾತವನ್ನು ಇಲ್ಲಿ ಹೇಳಬೇಕು ಎಂದು ಇದ್ದೇನೆ. ಅದೇನೆಂದರೆ, ಕೋಲಾರ ಚಿನ್ನದ ಗಣಿಗಳ ರಾಷ್ಟ್ರೀಕರಣ ವಿಷಯ. ಅದನ್ನು ನಮ್ಮ ರಾಜಪ್ರಮುಖರು ಭಾಷಣದಲ್ಲಿ ಹೇಳಿದ್ದಾರೆ, Bill is being drafted ಎಂದು. ಅದನ್ನು ರಾಷ್ಟ್ರೀಕರಣ ಮಾಡುತ್ತೇವೆಂದು ಹೇಳಿಲ್ಲ. ಆದರೆ ಎರಡನೆ ಪಂಚವಾರ್ಷಿಕ ಯೋಜನೆಯಲ್ಲಾಗಲಿ, ಬಡ್ಜೆಟ್ಟಿನಲ್ಲಾಗಲಿ ಇದಕ್ಕೆ ಒಂದು ಕಾಸನ್ನೂ ತೆಗೆದಿಲ್ಲ. ಇದನ್ನು ನೋಡಿದರೆ ಯಾಕೆ ತೆಗೆಯಲಿಲ್ಲವೆಂದು ನನಗೆ ಅರ್ಥವಾಗುತ್ತಿಲ್ಲ. ಈಗ ಎರಡು ವರ್ಷಗಳ ಕೆಳಗೆ, 1949ನೆಯ ಇಸವಿಯ ಅಗ್ರಿಮೆಂಟ್ ಪ್ರಕಾರ ನಮಗೆ ಯಾವ ವಿಧವಾದ ಆದಾಯವೂ ಸಲ್ಲುತ್ತಿಲ್ಲವಾದುದರಿಂದ ಚಿನ್ನದ ಗಣಿಗಳನ್ನು ರಾಷ್ಟ್ರೀಕರಣ ಮಾಡುವುದು ಅಗತ್ಯವೆಂದು ಆಗ ನಮ್ಮ ಅಸೆಂಬ್ಲಿಯ ಮುಂದೆ ತಂದರು. ನಾವುಗಳು agreementನ್ನು implement ಮಾಡಿದರೆ ಚೆನ್ನಾಗಿರುತ್ತದೆ ಮತ್ತು ಇದರಿಂದ 30-40 ಲಕ್ಷ ರೂಪಾಯಿ ತೆರಿಗೆ ಬರಬಹುದು ಎಂದು ಸಲಹೆಗಳನ್ನು ಕೊಟ್ಟರೆ, ಅಗ್ರಿಮೆಂಟಿಗೆ ಅಷ್ಟು ಗಮನಕೊಟ್ಟು enforce ಮಾಡುವುದಕ್ಕೆ ಬದಲು ಗಣಿಗಳನ್ನು ರಾಷ್ಟ್ರೀಕರಣ ಮಾಡುತ್ತೇವೆಂದು ನಮ್ಮ ಮುಂದೆ ತಂದರು. ಅದನ್ನು ಒಪ್ಪಿಕೊಂಡೆವು. ಆ ದಿವಸ ನಾನು ಭಾಷಣ ಮಾಡುವಾಗ 'ಇವರು ಬ್ರಿಟಿಷರು ; ಖಂಡಿತ ಅವರೇನಾದರೂ sabotage ಮಾಡುತ್ತಾರೆ. ನೀವೇನಾದರೂ ಮಾಡುವಹಾಗಿದ್ದರೆ ಜಾಗ್ರತೆ ಮಾಡಬೇಕು, ಇಲ್ಲದೆ ಇದ್ದರೆ ದೇಶಕ್ಕೆ ಅನ್ಯಾಯವಾಗುತ್ತದೆ' ಎಂದು ಹೇಳಿದೆ. ಆಗ ಹನುಮಂತಯ್ಯನವರು ದೆಹಲಿಗೆ ಟ್ರಂಕ್‌ಕಾಲ್ ಹಾಕಿ, ಅಲ್ಲಿಂದ ಆರ್ಡರ್ ತರಿಸಿ, ತಕ್ಷಣ ಮಾಡುತ್ತೇವೆಂದು ಹೇಳಿದರು. ಎಷ್ಟು ದಿವಸವಾಯಿತು! ಈ ಒಳಗಾಗಿ ಗಣಿಗಳಲ್ಲಿ ಏನಾಗಿದೆ ಎಂದರೆ ಅಲ್ಲಿ ಒಂದು rock burst ಆಗಿದೆಯಂತೆ! ಇದು ನಮ್ಮ ಗ್ರಹಚಾರ. ಅಲ್ಲಿಯ ವ್ಯವಸ್ಥೆಯಲ್ಲಿ ಒಂದು ಭಾಗ ಉತ್ಪತ್ತಿ ಕಡಿಮೆಯಾಗಿದೆ. Rock burst ಆಗಿರುವುದನ್ನು ತೆಗೆಸಬೇಕಾದರೆ ಸುಮಾರು ಐದು ಲಕ್ಷ ರೂಪಾಯಿ ಖರ್ಚಾಗುತ್ತದೆಯಂತೆ. ಗಣಿಗಳನ್ನು ರಾಷ್ಟ್ರೀಕರಣ ಮಾಡುತ್ತೇವೆ ಎನ್ನುವ ಕೋಪದಮೇಲೆ ಆ ಕಂಪೆನಿಯವರು ಇದನ್ನು ತೆಗೆಯುತ್ತಾರೆಯೋ ಇಲ್ಲವೋ ಗೊತ್ತಿಲ್ಲ. ಇನ್ನೊಂದು rock burst ಆದರೆ ಆಯಿತು. ಹೀಗಿರುವ ಪರಿಸ್ಥಿತಿಯಲ್ಲಿ ಸರ್ಕಾರದವರಿಗೆ ಸ್ವಲ್ಪವಾದರೂ seriousness ಬೇಡವೇ? ಇದನ್ನು ಯಾವುದಕ್ಕೆ ಉಪಯೋಗಿಸಿಕೊಳ್ಳಬೇಕೆಂದು ಮಾಡಿದ್ದಾರೆಂದು ನಾನಾಗಲೇ ಹೇಳಿದೆ. ಎಲ್ಲೆಲ್ಲಿ ದುಡ್ಡು ಯಥೇಷ್ಟವಾಗಿದೆಯೋ ಅಲ್ಲೆಲ್ಲ ಬಾಯಿ ಹಾಕುವುದಕ್ಕೆ ಶುರುಮಾಡುತ್ತಾರೆಂದು ಹೇಳಿದೆ. ಇದೇನೂ ಹೊಸ ವಿಷಯವಲ್ಲ. ಮೊನ್ನೆ ಭಾಷಣದಲ್ಲಿ ಕೂಡ ಈ ರಾಷ್ಟ್ರೀಕರಣ (nationalization) ವಿಷಯದಲ್ಲಿ ಹೇಗೆ ಮಾಡುತ್ತಾರೆ, ಇಂಡಿಯಾ ಸರ್ಕಾರದವರು ಏನು ಹೇಳಿದ್ದಾರೆ ಎನ್ನುವುದೇನೂ ಇಲ್ಲ. ಈ ಗಣಿಯಿಂದ ದೇಶಕ್ಕೆ ನಾಲ್ಕು ಕೋಟಿ ರೂಪಾಯಿಗಳ ಉತ್ಪತ್ತಿಯ ಭಂಗಾರವಾಗುವುದು. ಇದು ಇಂಡಿಯಾ ದೇಶದಲ್ಲೆಲ್ಲ ಭಂಗಾರದಲ್ಲಿ ಒಂದು ದೊಡ್ಡ ಕೈಗಾರಿಕೆ. ಇಂಡಿಯಾದಲ್ಲಿ

(ಶ್ರೀ ಎಚ್. ಸಿ. ನಾಗಯ್ಯರೆಡ್ಡಿ)

ಆಗತಕ್ಕ ಉತ್ಪತ್ತಿಯಲ್ಲಿ ನೂರಕ್ಕೆ 98 ಭಾಗ ಭಂಗಾರ ಇಲ್ಲಿ ದೊರೆಯುತ್ತಿದೆ. ಇದನ್ನು ಯಾವ ರೀತಿ ಮಾಡುತ್ತಿದ್ದಾರೆಂದು ನೋಡಿದರೆ ಖಂಡಿತ ಸರ್ಕಾರದವರಿಗೆ ಅಲ್ಲಿ ಕುಳಿತುಕೊಳ್ಳುವುದಕ್ಕೆ ಅರ್ಹತೆ ಇಲ್ಲವೆಂದು ನಾನು ಬಹಳ ಎಚ್ಚರಿಕೆಯಿಂದ ಹೇಳುತ್ತೇನೆ. ಇದು ಇಷ್ಟು ಪ್ರಾಮುಖ್ಯವಾದ ಕೈಗಾರಿಕೆ ಎನ್ನುವುದು ಗೊತ್ತಾಗಿದೆ. ಆದರೂ ಏತಕ್ಕೆ ಹೀಗೆ ಮಾಡಿದರು ಎಂಬುದು ನನಗೆ ಅರ್ಥವಾಗುತ್ತಿಲ್ಲ. ಏಕೆ ಈ ಕೈಗಾರಿಕೆಯನ್ನು ರಾಷ್ಟ್ರೀಕರಣ ಮಾಡಲಿಲ್ಲವೆಂದರೆ ಇಂಡಿಯಾ ಸರ್ಕಾರದವರು ಒಂದು Expert Committee ಮಾಡಿದರು. ಅವರು ಪರಿಶೀಲನೆಮಾಡಿ 'ರಾಷ್ಟ್ರೀಕರಣ ಮಾಡುವುದಕ್ಕೆ ಅಷ್ಟು ಅನುಕೂಲವಾಗಿಲ್ಲ; ಸ್ವಲ್ಪ ಕಾಲ ಕಾದು ನೋಡಿ, ಎಂದರು. ಇಲ್ಲಿ ಏನು ಮಾಡಿದರೆಂದರೆ ಬಿಲ್ ತಂದರು. ನಾವು carry ಮಾಡದೆ ಇದ್ದರೆ the Assembly is not worth its salt ಎಂದು ಶ್ರೀ ಸಿದ್ದವೀರಪ್ಪನವರು ಹೇಳಿದ ಹಾಗೆ ಜ್ಞಾಪಕವಿದೆ. ಈಗ ಆ ಬಿಲ್ಲಿನ ವಿಷಯವೂ ಇಲ್ಲ, ನ್ಯಾಷನಲೈಸ್ ಮಾಡುವ ವಿಷಯವೂ ಇಲ್ಲ, ಅದೇನಾಯಿತೆಂಬುದೂ ಗೊತ್ತಿಲ್ಲ. ಇದು ದೇಶಕ್ಕೆ ಬಹಳ ಅಪಕೀರ್ತಿಯನ್ನು ತರುವ ವಿಷಯ. ಏಕೆ ರಾಷ್ಟ್ರೀಕರಣ ಮಾಡಲಿಲ್ಲವೆಂಬುದೂ ಗೊತ್ತಾಗಲಿಲ್ಲ. ಈ ವಿಷಯವಾಗಿ ಕಂಪೆನಿಯವರನ್ನು ಬೆದರಿಸಿ ಏನಾದರೂ ಉಪಯೋಗ ಪಡೆಯಬೇಕೆಂದು ಹೀಗೆ ಮಾಡಿದ್ದಾರೆಂಬ ವರ್ತಮಾನವಿದೆ. ಏಕೆ, ಸ್ವಾಮಿ, ಹಿಂದೆ ಹೇಳಿದಂತೆ ರಾಷ್ಟ್ರೀಕರಣ ಮಾಡಲಿಲ್ಲ? ಶ್ರೀ ಹನುಮಂತಯ್ಯನವರ ತಮ್ಮಂದಿರು ಗಣಿ ಪ್ರದೇಶಕ್ಕೆ ಹೋಗಿ ನೆಗೋಷಿಯೇಟ್ ಮಾಡುತ್ತಿದ್ದಾರೆ. ನಾನೇ ಖುದ್ದಾಗಿ ನೋಡಿದ್ದೇನೆ. ಇವರಿರುವಾಗ ಇವರ ತಮ್ಮಂದಿರೇಕೆ ಅಲ್ಲಿಗೆ ಹೋಗಿ ನೆಗೋಷಿಯೇಟ್ ಮಾಡಬೇಕು? ಅವರಿಗೂ ಇದಕ್ಕೂ ಸಂಬಂಧವೇನು? ಇಂಥ ಸಂದರ್ಭಗಳಲ್ಲಿ ದೇಶದ ಆಗುಹೋಗುಗಳಿಗೆ ಸಂಬಂಧಪಟ್ಟ ದೊಡ್ಡ ಕೈಗಾರಿಕೆಯ ವಿಷಯದಲ್ಲಿ ಹೀಗೆ ಚಿಲ್ಲರೆ ಪಲ್ಲರೆ ಕೆಲಸ ಮಾಡುತ್ತಿದ್ದರೆ ಹೇಗೆ?

1-30 P.M.

ರೇಸ್‌ಕ್ಲಬ್ಬಿನ ವಿಷಯದಲ್ಲಿ ಕೂಡ ನಿನ್ನೆ ಕೆಲವು ವಿಚಾರ ಹೇಳಿದರು. ಅದನ್ನೆಲ್ಲಾ ನೋಡಿದರೆ ಖಂಡಿತ ಯಾವ ಸರ್ಕಾರಕ್ಕೂ ಯಾವ ಕಾಂಗ್ರೆಸ್ ಸಂಸ್ಥೆಗೂ ಮಾನ ಉಳಿಯುವಹಾಗಿಲ್ಲ. ಸರ್ಕಾರಕ್ಕೂ ರೇಸ್ ಕ್ಲಬ್‌ನವರಿಗೂ ನಡೆದಿರುವ ಕರೆಸ್ಪಾಂಡೆನ್ಸ್ ನಾನು ನೋಡಿದ್ದೇನೆ. ಕ್ಲಬ್ಬಿನಲ್ಲಿ ಒಂದು ಸಮಿತಿ ಮಾಡಿದ್ದಾರೆ. ಅದಕ್ಕೆ ಒಬ್ಬ ಅಬ್ಸರ್ವರ್ ಕೇಳಿದ್ದಾರೆ. ಆ ಜಾಗಕ್ಕೆ ಐನೂರು ರೂಪಾಯಿ ಸಂಬಳ ಬರುವವರನ್ನು ಹಾಕಬೇಕೆಂದಿದ್ದಾರೆ. ಆ ಅಬ್ಸರ್ವರ್‌ಗೆ 950 ರೂಪಾಯಿ ಸಂಬಳ ಕೊಡಬೇಕಂತೆ. ಏಕೆ ಹೀಗೆ ಮಾಡುತ್ತಿದ್ದಾರೆಂದು ನಾನು ಯೋಚನೆ ಮಾಡಿದೆ. ಈಗ ಅಬ್ಸರ್ವರಾಗಿ ಹಾಕಬೇಕೆಂದು ಯಾರ ಹೆಸರನ್ನು ಸೂಚಿಸಲಾಗಿದೆಯೋ ಆ ಅಧಿಕಾರಿಯು ಯಾರೆಂದರೆ, ಶ್ರೀ ನಂಜಪ್ಪನವರಿಗೆ 37 ಸಾವಿರ ರೂಪಾಯಿಗಳ ಅವಾರ್ಡ್ ಕೊಟ್ಟವರು. ಅವರಿಗೆ ಮೆಜಾರಿಟಿ ಬೇಕಾಯಿತು. ಇದರಮೇಲೆ ಮುಖ್ಯ ಮಂತ್ರಿಗಳನ್ನು ಕ್ಲಬ್ಬಿಗೆ ವೈಸ್ ಪೇಟ್ರನ್ ಆಗಿ ಮಾಡಬೇಕಂತೆ. ಅವರಿಗೆ ನಷ್ಟವಾಗುತ್ತಿದ್ದರೆ ಕಂಡೀಷನ್ ಹಾಕಿ ಲೈಸೆನ್ಸ್ ಹಾಕುತ್ತಾರೆ. ರೇಸ್‌ಕ್ಲಬ್ಬಿನಿಂದ ಸರ್ಕಾರಕ್ಕೆ 15 ಲಕ್ಷ ರೂಪಾಯಿ ಉತ್ಪತ್ತಿಯಿದೆ, ಮುನಿಸಿಪಾಲಿಟಿಗೆ ಸುಮಾರು ಎರಡು ಲಕ್ಷ ರೂಪಾಯಿ ಸಿಕ್ಕುತ್ತದೆ, ಹೋಟಲುಗಳಿಗೆ ಮೂರು ತಿಂಗಳು ವ್ಯಾಪಾರವಿರುತ್ತದೆ, ಓದುವ ಹುಡುಗರು ಸುಮಾರು ಒಂದು ಸಾವಿರ ಜನರಿಗೆ 150 ರೂಪಾಯಿ ಸಿಕ್ಕುತ್ತದೆ, ಮೂರು ನಾಲ್ಕು ತಿಂಗಳು ಟೆಂಪೊರರಿಯಾಗಿ ದಿನಕ್ಕೆ ನಾಲ್ಕರಿಂದ ಹತ್ತು ರೂಪಾಯಿವರೆಗೆ ಸಂಬಳ ಕೊಡುತ್ತಾರೆ. ಅದಕ್ಕೆ ಬಿ.ಎ., ಎಂ.ಎ. ಪಾಸು ಮಾಡಿದವರೆಲ್ಲಾ ಹೋಗುತ್ತಾರೆ. ಅಲ್ಲಿ ಆರುನೂರು ಕುದುರೆಗಳಿವೆ. ಕುದುರೆಯೊಂದಕ್ಕೆ ಐನೂರು ರೂಪಾಯಿಗಳಂತೆ ಖರ್ಚಾಗುತ್ತಿತ್ತು. ಈಗ ಲಕ್ಷ ರೂಪಾಯಿ ಕೇಳಿದರು ಎಂದು ಏನೋ ಕ್ಷುಲ್ಲಕ ಕಾರಣ ಹೇಳಿದರು. ರೇಸ್‌ಗೆ ಲೈಸೆನ್ಸ್ ಕೊಡದಿರುವುದಕ್ಕೆ ಹೇಳಿರುವ ಕಾರಣ ಅರ್ಥವಾಗುವುದಿಲ್ಲ. ಈ ಬಾಬಿನ ನಷ್ಟ ನೋಡಿದರೆ ಗಾಬರಿಯಾಗುತ್ತದೆ. ಶ್ರೀ ನಂಜಪ್ಪನವರಿಗೆ 37 ಸಾವಿರ ರೂಪಾಯಿ ಅವಾರ್ಡ್ ಕೊಟ್ಟವರಿಗೆ 950 ರೂಪಾಯಿ ಸಂಬಳ ಕೊಡಲು ಶಿಫಾರ್ಸು ಮಾಡಿದ್ದಾರೆ. ಏಕೆಂದರೆ, ಅವಾರ್ಡ್ ಕೊಡುವಾಗ ಆ ವ್ಯಕ್ತಿ ಸರ್ಕಾರದ ಪರವಾಗಿ ಅನುಕೂಲ ಮಾಡಿದರು.

Sri A. G. RAMACHANDRA RAO.—Sir, that matter is *sub judice*.

Mr. SPEAKER.—The Hon'ble Minister says that the matter is *sub judice*. Therefore, it is better to drop that point.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ಅದು ಸಬ್ ಜುಡಿಸ್ ಅಲ್ಲ, ತೀರ್ಮಾನವಾಗಿಲ್ಲ. ಶ್ರೀ ನಂಜಪ್ಪನವರಿಗೆ ಎಕರೆಗೆ 20 ರೂಪಾಯಿನಂತೆ ಕೊಟ್ಟು 50 ಎಕರೆ ಜಮೀನಿಗೆ ಒಂದು ಸಾವಿರ ರೂಪಾಯಿ ಬೆಲೆಯಾದರೆ ಅದಕ್ಕೆ ಅಲ್ಲಿರುವ ಖುಷ್ಕಿ ಜಮೀನಿನ ಸುತ್ತಲೂ ಗಾರ್ಡನ್ ಲ್ಯಾಂಡ್ಸ್ ಸಹ ಇವೆಯೆಂದು ಈ ದಿವಸ ಅದಕ್ಕೆ ಒಂದು ಲಕ್ಷ 7 ಸಾವಿರ ರೂಪಾಯಿ ಕೊಡಬೇಕೆಂದು ತೀರ್ಮಾನ ಮಾಡಿದರೆ ಅದು ನಿಲ್ಲುತ್ತದೆಯೆ? ಈ ಪ್ರಶ್ನೆ ಸಾರ್ವಜನಿಕವಾಗಿ ಅಸೆಂಬ್ಲಿಯಲ್ಲಿ ಚರ್ಚೆಯಾಗಿದೆ. ಎರಡು ವರ್ಷಗಳ ಕೆಳಗೆ ಸಾವಿರ ರೂಪಾಯಿ ಕೊಟ್ಟ ಜಮೀನಿಗೆ ಈ ದಿವಸ ಒಂದು ಲಕ್ಷ 7 ಸಾವಿರ ರೂಪಾಯಿ ಕೊಡುವುದಾದರೆ ಕಾಂಗ್ರೆಸ್ಸಿಗೆ ಮಾನ ಬರುತ್ತದೆಯೆ? ಇದಕ್ಕೆ ಅಪೀಲು ಮಾಡುತ್ತಾರಂತೆ. ಇಂಥ ಎವಿಡೆನ್ಸ್ ಇರುವಾಗ ಅವಾರ್ಡ್ ಅನುಕೂಲವಾಗಿ ಕೊಟ್ಟಿದ್ದಕ್ಕಾಗಿ ಕೊಟ್ಟವರಿಗೆ ಹೈಕೋರ್ಟ್ ಜಡ್ಜಿ ಶಿಫಾರಸು ಮಾಡಿಸಲಾಗಿದೆ. ರಿಕಾರ್ಡು ಜಾಗ್ರತೆ ಬರಲು ಸಹಾಯ ಮಾಡಿದ ವ್ಯಕ್ತಿಯನ್ನು ಕೂಡಲೆ ಪರ್ಸನಲ್ ಅಸಿಸ್ಟೆಂಟ್ ಮಾಡಿದರು. ಆಮೇಲೆ ಡಿಸ್ಟ್ರಿಕ್ಟ್ ಜಡ್ಜ್ ಯಾರಿದ್ದರೋ ಅವರಿಂದ ಸರಿಯಾದ ಅನುಕೂಲವಾಗುವುದಿಲ್ಲವೆಂದು ತಿಳಿಸಿ ಅವರನ್ನು ಇನ್ನೊಂದು ಕಡೆಗೆ ವರ್ಗಾಯಿಸಿ ಅವರಿದ್ದ ಜಾಗಕ್ಕೆ ಬೇರೆಯವರನ್ನು ಹಾಕಿದರು. ಆಮೇಲೆ ನಂಜಪ್ಪನವರಿಂದ ಅಪ್ಲಿಕೇಷನ್ ಹಾಕಿಸಿ ಕೇಸಿನ ಫೈಲನ್ನು ತರಿಸಿಕೊಂಡು ಕೇಸ್ ನಡೆಸಿದರು. ಐದು ವರ್ಷಗಳಿಂದ ಫೈಸಲಾಗದಿರುವ ರಿಕಾರ್ಡುಗಳಿದ್ದರೂ ಅವನ್ನೆಲ್ಲಾ ಬಿಟ್ಟು ನಂಜಪ್ಪನವರ ಕೇಸನ್ನು ತೆಗೆದುಕೊಂಡು ಒಂದು ಲಕ್ಷ 7 ಸಾವಿರ ರೂಪಾಯಿ ಕೊಡಬೇಕೆಂದು ಜಡ್ಜ್‌ಮೆಂಟ್ ಕೊಟ್ಟರು. ಇದು ನ್ಯಾಯವೆ? ಹಣ ಪಡೆಯಲು ಯಾವರೀತಿ ಮಾಡುತ್ತಾರೆ, ಈ ಸರ್ಕಾರ ಅನುಸರಿಸುತ್ತಿರುವ ನೀತಿಯೇನು ಎಂದು ನೋಡಿದರೆ ಎದೆ ಒಡೆದುಹೋಗುತ್ತದೆ. ಇದು ಎಲ್ಲಾದರೂ ಉಂಟೆ? ಡಿಸ್ಟ್ರಿಕ್ಟ್ ಜಡ್ಜಿಗಳನ್ನು ಇನ್‌ಫ್ಲುಯೆನ್ಸ್ ಮಾಡುವ ನೀತಿ ಎಲ್ಲಾದರೂ ಉಂಟೆ? ಸೇಫ್ಟಿ, ಸೆಕ್ಯೂರಿಟಿ ಇದೆಯೆ? ನಮಗೆ ಬಹಳ ಗಾಭರಿ

ಯಾಗಿದೆ. ಯಾವಾಗ ಏನು ಮಾಡುತ್ತಾರೋ ಎಂದು ಗಾಬರಿಯಾಗಿದೆ. ನಾನು ಈಗ ಮಾತನಾಡಬಾರದೆಂದಿದ್ದೆ. ನಾನು ಈ ಸಲ ಅಸೆಂಬ್ಲಿಯಲ್ಲಿ ಮಾತನಾಡಿದರೆ ಮರ್ಡರ್ ಮಾಡುತ್ತೇವೆಂದು ಬೆದರಿಸಿ ಪತ್ರ ಬರೆದಿದ್ದಾರೆ: ನಾನು ವರ್ಷಕ್ಕೆ ಒಂದೇಸಲ ಮಾತನಾಡುವುದು. ಮೊನ್ನೆ ರಾಜಪ್ರಮುಖರ ಭಾಷಣದ ಮೇಲೆ ಮಾತನಾಡಿದರೆ ಸಾಕು ಈಗ ಮಾತನಾಡುವುದು ಬೇಡ ಎಂದಿದ್ದೆ. ಮೂರು ಸಾರಿ ನಿಂತೆ, ಆದರೂ ಅವಕಾಶ ಸಿಕ್ಕಲಿಲ್ಲ. ನನಗೆ ಪತ್ರ ಬಂದುದರಿಂದ ಮಾತನಾಡಲೇಬೇಕೆಂದು ನಿಂತೆ, ಅದು ಬರದಿದ್ದರೆ ನಾನು ಮಾತನಾಡುತ್ತಿರಲಿಲ್ಲ. ಆ ದಿನ ಮಾಡಿದ ಭಾಷಣವೇ ಈ ಅಧಿವೇಶನಕ್ಕೆಲ್ಲಾ ಸಾಕೆಂದು ಸುಮ್ಮನಿರುತ್ತಿದ್ದೆ. ಪೋಲೀಸಿನವರಿಗೇಕೆ ಈ ಪತ್ರ ಕೊಡಲಿಲ್ಲವೆಂದು ನನ್ನ ಸ್ನೇಹಿತರು ಕೇಳಿದರು. ಅದಕ್ಕೆ ನಾನು ಪೋಲೀಸಿನವರಲ್ಲಿ ನಂಬಿಕೆ ಹೋಗಿದೆಯೆಂದು ಹೇಳಿ ಈ ಪತ್ರವನ್ನು ಶ್ರೀ ನರಸಿಂಹರೆಡ್ಡಿಯವರ ಕೈಗೆ ಕೊಟ್ಟೆ. ಉದಾಹರಣೆಗಾಗಿ, ಪೋಲೀಸಿನವರ ದಕ್ಷತೆಯಬಗ್ಗೆ ಒಂದು ವಿಚಾರ ಹೇಳುತ್ತೇನೆ. ನನ್ನ ಜಮೀನುಪಕ್ಕದ ರೈತ ಮದುವೆ ಮಾಡಿಕೊಂಡ ಹತ್ತು ದಿವಸಗಳಲ್ಲೇ ಅವನ ಹೆಂಡತಿಯ ಒಡವೆಯನ್ನೆಲ್ಲಾ ಕಳೆದುಕೊಂಡ. ನಾನು ಏನಾದರೂ ಮಾಡಿ ಅದನ್ನು ಬರಮಾಡಿ ಕೊಡುತ್ತೇನೆಂದು ಹೇಳಿ ಪೋಲೀಸ್ ಇನ್ಸ್‌ಪೆಕ್ಟರಿಗೆ ಬರೆದೆ. ಅವರು ತನಿಖೆ ನಡೆಸುವುದಾಗಿ ಹೇಳಿದರು. ಪೋಲೀಸ್ ದಫೇದಾರರು, ಕಾನ್ಸ್‌ಟೇಬಲ್ಲುಗಳ ವಿಚಾರದಲ್ಲಿ ನನಗೆ ಅಷ್ಟು ನಂಬಿಕೆಯಿಲ್ಲ. ಇನ್ನು ಮಿಕ್ಕವರಾರಾದರೂ ಹೋದರೆ ಅವರ ಪಾಡೇನಾಗಿರುತ್ತದೆ, ಸ್ವಾಮಿ ! ಆ ಪೋಲೀಸ್ ಇನ್ಸ್‌ಪೆಕ್ಟರೇ ಆತನಿಗೆ ಹೀಗೆ ಉತ್ತರ ಹೇಳಿದ್ದಾರೆ. ಅಂದಮೇಲೆ ಇವರು ದೇಶವನ್ನು ಉತ್ತಮ ರೀತಿಯಲ್ಲಿಟ್ಟುಕೊಳ್ಳುವುದು ಎಂದರೆ ಅದು ಹೇಗೆ ತಾನೆ ? ಇವೊತ್ತಿನ ಸರ್ಕಾರಕ್ಕೆ ಆಡಳಿತ ನಡೆಸತಕ್ಕಂಥ ಇಲ್ಲ ಎಂದು ಹೇಳಿ ಇದನ್ನು ತಳ್ಳಿಹಾಕುವುದಕ್ಕೆ ಮೊದಲೇ ಈ ಮಿನಿಸ್ಟ್ರಿ ಪಲಾಯನ ಮಂತ್ರ ಹೇಳುವುದು ಒಳ್ಳೆಯದೆಂದು ನನಗೆನಿಸುತ್ತಿದೆ. ಸ್ವಾಮಿ, ನಾವು ಮೊದಲೇನೋ ಮಾಡಬಾರದಾಗಿತ್ತು; ಆದರೆ ಏನೋ ಇದನ್ನು ಮಾಡಿದ್ದಾಯಿತು. ಅವಕ್ಕಾಗಿಯೇ ನಾವೀಗ ಇದನ್ನೆಲ್ಲಾ ಅನುಭವಿಸುತ್ತಿದ್ದೇವೆ. ಶ್ರೀ ವೀರಣ್ಣಗೌಡರು ಆಗಲೇ ಹೇಳಿರುವಂತೆ ಈ ಆಡಳಿತವನ್ನು ಅದಷ್ಟು ಬೇಗ ತೆಗೆದುಹಾಕತಕ್ಕದ್ದು ಅತ್ಯಗತ್ಯ ಎಂಬುದಾಗಿ ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

Sri Mulka GOVINDA REDDY (Chitaldrug).—Mr. Speaker, Sir, I oppose the Demand under the head 'General Administration' for Rs. 86,29,900. After the inauguration of the Indian Constitution, general elections were held and the period is now coming to a close. Shortly we are going to have general elections. Under the Constitution of India, freedom of expression, and freedom of association have been guaranteed. After hearing the woeful story as narrated by Sriyuts. Venkatappa and Veeranna Gowdh, I shudder to think whether we are working under a democracy or whether we are under the heels of Police raj. After what has been narrated by Sri Nagiah Reddy that he has received a threatening letter, we can well imagine whether we are really under a democratic form of Government or whether we are really functioning in a Fascist State. We can well imagine when that is the treatment meted out to Congressmen themselves, what would be the nature of treatment that would be meted out to the Opposition parties. When we have to face the elections, when we have to oppose the Congress, I am afraid we may not be allowed to have freedom of expression, freedom of holding meetings, freedom of thought, freedom of association or freedom to do anything. If that were to be the case, is it for this purpose that we fought for independence, is it for this purpose that we drove out the Britishers ? If we examine the conditions that were prevailing in those days and the conditions that are now prevailing, I am afraid one would say : woe be to the Congress Government. For the set eight years what they have been doing and what they have done will not bring them any credit. I was telling you that elections are approaching. Every liberty should be provided to the members of the Opposition to express themselves and to fight in those elections. The electoral rolls are now being prepared. What has been done by the municipalities which are torn with party factions, is, that the electoral rolls are not at all prepared in a manner in which they should be prepared. If I narrate my own case, in 1951 my name was not included in the electoral roll and I had to go before the revising authority to get my name enlisted as one of the voters. They have repeated the same thing even now. I had again to go to the revising authority to get my name corrected. When that is the position, I am afraid the Government is not taking any interest in preparing properand fair electoral rolls. I do not know whether it is done at the instance of the Government or whether the overzealous officials think that by doing such a thing they will be gaining the pleasure of the Government. They might be doing such things but under democracy

(SRI MULKA GOVINDA REDDY.)

such things should not be allowed. We expect that the elections would be fair, free and unfettered by those who possess powers or money. Many a time when elections are held, some of the members who are defeated prefer election petitions. These election petitions are not expeditiously disposed of. Many a time the Election Tribunals that are appointed in the States do not function properly and they have not that atmosphere. It is quite possible that the members of the Election Tribunal are being influenced by the members of the Government concerned. We have a standing instance where an election petition is pending for such a long time, for nearly a year or more.

Sri A. G. RAMACHANDRA RAO.—Where ?

Sri Mulka GOVINDA REDDY.—Sri Channabasappa's election petition.

Mr. SPEAKER.—That is *sub judice.*

Sri Mulka GOVINDA REDDY.—I am not going into the merits. I am questioning the propriety, why nearly 13 months have elapsed and no decision has been announced by the Election Tribunal. I therefore suggest that there should be some other procedure for these Election Tribunals.

Sri A. G. RAMACHANDRA RAO.—I may bring it to the notice of the Hon'ble Member that the Tribunal works under the Election Commission and under the Government of India and it is not within the purview of the Government of Mysore.

Sri Mulka GOVINDA REDDY.—That I know. Though for nominal purposes, for constitutional purposes and legal purposes, it is working within the purview of the Election Commission, the officers that are put as members of the Election Tribunal or as Chairman know pretty well that they are the servants of the Government of Mysore.

Sri A. G. RAMACHANDRA RAO.—I submit once again it is beyond the jurisdiction of this House to take notice of that. He is only a lent officer and he has to discharge the functions under the directions of the Commission and not under officers of Government.

Sri Mulka GOVINDA REDDY.—What I would suggest is, members should not be drawn from Mysore when appointments are made to these Election Tribunals. When an election is held in Mysore, members from outside Mysore should be appointed to the Election Tribunal so that any misuse can be avoided.

Sir, we are for all practical purposes in democracy. The Ministers are expected to behave like true representatives of the people. And when they have sworn by the socialist form of society, the responsibility on them is all the more greater. But the way in which our Ministers are going about, the way in which they are extravagantly spending the public money, one gets ahsamed to think that it is under democracy. Sir, if you compare the standard of living of our Ministers before they became Ministers with that after they became Ministers, one would shudder how on earth such a system could prevail. Have they got any conscience in them to spend so recklessly ? It has come to my notice that some of the Ministers are spending a sum of Rs. 400 to Rs. 500 on electric charges alone per month. Many a time the congress members used to say, used to criticise the old administration. (*A Voice*: shocking.) Yes, it is shocking news no doubt. They were making allegations against Sri Siddappa and Sri Imam. I do not hold any brief for them. But this much I can say. They were not making use of any Government car. They were using their own cars and they were getting higher salary. But if you compare all the emoluments of the then Ministers with the emoluments drawn by the present Ministers, you will see that at any rate they draw at least two to three times what the old Ministers were drawing. Our ministers are going on merrily. Sri Imam purchased one car when he was a Minister and he is still using that car. But our ministers change their cars every year. They have no responsibility. If only they were responsible to the Legislature and to the people, if they had only conscience, they would have made some economy. They would not have

spent moneys so lavishly and so extravagantly.

Sir, coming to Government hospitality organization, dignitaries from foreign countries have done us the honour of visiting the State of Mysore. All hospitality extended to such dignitaries I do not grudge. But the manner and the method in which it was done I take strong objection to. Whenever high dignitaries visit the State of Mysore, the order of precedence for invitations should be given to the members of the Legislature in whose hands the destiny of the State lies. Unfortunately and contrary to what has been said in the speech of the Finance Minister, the members of the Legislature are not cared for. They are not even invited. On the other hand, men in possession of power, men of position and of money, men who can hold some sort of influence are invited. That is an affront and insult to the members of the Legislature. If you follow only the teachings and preachings of the Chief Minister, those of Buddha and Gandhi pales into insignificance before him. Practice he will never attempt to nor does he think of putting into practice what he preaches. The other day he was telling us that the members of the Opposition want to have cheap popularity. But the Chief Minister himself wants to have cheap popularity. I do not grudge, let him have it. The way in which he goes about attending schools and trying to teach something,—I do not know what he teaches,-is ridiculous and if it is not cheap popularity what else is it? He is not meant to teach. He is meant to administer the country in the interests of the people and not for teaching. It is a dereliction of duty with which I charge him, it is his madness. I therefore oppose the Demand.

*ಶ್ರೀ ಎ. ಜಿ. ರಾಮಚಂದ್ರರಾವ್.—ಸ್ವಾಮಿ, ಈ ಡಿಮ್ಯಾಂಡಿನ ಮೇಲೆ ಎರಡು ಘಂಟೆಗಳಿಗಿಂತ ಹೆಚ್ಚಾಗಿ ಚರ್ಚೆಯಾಗಿದೆ. ಅನೇಕ ಮಹನೀಯರು ಅನೇಕ ವಿಷಯಗಳನ್ನು ಹೇಳಿದ್ದಾರೆ. ಆದರೆ ಕೆಲವು ಮೂಲಭೂತವಾದ ಪ್ರಶ್ನೆಗಳನ್ನು ಕೇಳಿದ್ದಾರೆ. ಶ್ರೀಮಾನ್ ಗೋವಿಂದರೆಡ್ಡಿಯವರು "Are we working a Democracy" ಎಂದೇ ಪ್ರಾರಂಭಮಾಡಿದರು. ಆ ವಿಷಯದಲ್ಲಿ ನಾನೂ ಅವರಷ್ಟೇ ಫ್ರ್ಯಾಂಕ್ ಆಗಿ ಹೇಳಬೇಕೆಂದು ನನಗೆ ಅನ್ನಿಸುತ್ತದೆ. ಡೆಮಾಕ್ರಸಿ ಇರುವುದರಿಂದಲೇ ನಾವೆಲ್ಲಾ ಇಲ್ಲಿ ಸೇರಿರುವುದು. ಇದರ ನಡವಳಿಕೆ ಸರಿಯಾಗಿ ನಡೆಯಬೇಕಾದರೆ ಅದು ಪ್ರಜೆಗಳ ಮೇಲೆ ಇರತಕ್ಕ ಒಂದು ದೊಡ್ಡ ಜವಾಬ್ದಾರಿಯ ಮೇಲೆ ಹೋಗುತ್ತದೆ. ಅವರು ಎಂತಹ ಸದಸ್ಯರನ್ನು ಚುನಾವಣೆ ಮಾಡಿ ಆ ಸದಸ್ಯರು ಎಂತಹ ಸರ್ಕಾರವನ್ನು ನೇಮಕ ಮಾಡುತ್ತಾರೋ ಅಂತಹ ಸರ್ಕಾರ ಇರುತ್ತದೆ. ಆದ್ದರಿಂದ ಇದರಲ್ಲಿ ದೋಷಾರೋಪಣೆಗಳನ್ನು ಹಂಚಿಕೆ ಮಾಡುವಾಗ್ಗೆ, ನಾವು ಲೋಪಗಳನ್ನು ಕಾಣಬೇಕು, ಅವನ್ನು ಸರಿಪಡಿಸಬೇಕು. ಎಲ್ಲೆಲ್ಲಿ, ಯಾವ ಯಾವ ಕಾಲದಲ್ಲಿ ಸರಿಪಡಿಸಬೇಕೋ ಆ ಕಾಲದಲ್ಲಿ ಸರಿಪಡಿಸಬೇಕು. ಆ ಒಂದು ದೃಷ್ಟಿಕೋಣವನ್ನು ಬಿಟ್ಟು ನಾನು ಹಿಂದೆ ಜವಾಬು ಹೇಳಿದಹಾಗೆ ಭೂತ ಕನ್ನಡಿ ಹಾಕಿಕೊಂಡು ನೋಡುವಹಾಗೆ ನೋಡಿದರೆ ಯಾವ ಉದ್ದೇಶದಿಂದ ಈ ವಿಷಯಗಳನ್ನು ತಮ್ಮ ಗಮನಕ್ಕೆ ತರುತ್ತೇವೆಯೋ ಆ ಉದ್ದೇಶ ಅಷ್ಟು ಸಫಲವಾಗಲಾರದು. ಈಗ ಸಾಮಾನ್ಯವಾಗಿ ಈ ಒಂದು ಸಭೆ ತೆಗೆದುಕೊಳ್ಳೋಣ; ಈ ಸಭೆಯೊಳಗೆ ಈಗ ಚೀಫ್ ಮಿನಿಸ್ಟರು ಇಲ್ಲ. ಇರಬೇಕಾದದ್ದು ಕರ್ತವ್ಯ ಒಪ್ಪಿಕೊಳ್ಳುತ್ತೇನೆ. ಆ ಚೀಫ್ ಮಿನಿಸ್ಟರು ಇರಬೇಕಾದದ್ದು ಎಷ್ಟು ಕರ್ತವ್ಯವೋ Leader of the Opposition. ಇರಬೇಕಾದದ್ದೂ ಅಷ್ಟೇ ಕರ್ತವ್ಯ. ಮೊದಲೇ ಗೊತ್ತಾಗಿದ್ದಂತೆ ಅವರಿಬ್ಬರೂ ಒಂದೇ ಕಾಲದಲ್ಲಿ ಹೋಗಿದ್ದಾರೆ. ಸಾಮಾನ್ಯವಾಗಿ ಎರಡು ಮೂರು ತಿಂಗಳು ಈ ಸಭೆ ನಡೆದರೆ, ಅನೇಕವೇಳೆ ಹಿಂದೆ ನಿರ್ಣಯವಾಗಿದ್ದು ಮುಖ್ಯವಾದ ಕೆಲಸವಾಗಿದ್ದರೆ ಅದಕ್ಕೆ ಹೋಗಬೇಕಾಗುತ್ತದೆ. ಪ್ರೈಮ್ 'ಮಿನಿಸ್ಟರ್' ಆದಿಯಾಗಿ ಹಾಗೆ ಹೋಗಿರುವುದನ್ನು ನಾವೆಲ್ಲಾ ನೋಡಿದ್ದೇವೆ. ಅದನ್ನು ಪ್ರಮಾದವಾಗಿ ಪರಿಗಣಿಸಬಾರದು. ಆದ್ದರಿಂದ ಈ ಒಂದು ಭಾವನೆಯನ್ನು ನಾವು ಸಂಪಾದಿಸಿಕೊಂಡು ಮಾತನಾಡುವುದು ಬಹಳ ಸೂಕ್ತ ಎಂದು ನನಗಾದರೂ ಅನಿಸುತ್ತದೆ.

2 P.M.

ಮುಖ್ಯ ಮಂತ್ರಿಗಳು ಒಂದು ಪಾಠ ಪ್ರವಚನ ಮಾಡಿದರೆ dereliction of duty ಆಗುತ್ತದೆ ಎಂದು ಹೇಳಿದರು. ತಮ್ಮ ಕೆಲಸದ ಜೊತೆಗೆ ಪಾಠ ಪ್ರವಚನಗಳನ್ನು ಮಾಡಿ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಬೇಕು ಎಂಬ ಉದಾತ್ತ ಧ್ಯೇಯವೇನಿದೆ ಅದು ಇತರರಿಗೆ ಮಾರ್ಗ ದರ್ಶನವಾಗುವುದು. ಇದರಲ್ಲಿ dereliction of duty ಆಗುವುದಿಲ್ಲವೆಂದು ಹೇಳುತ್ತೇನೆ.

ಅದೂ ಅಲ್ಲದೆ ಅವರ ಕ್ಷೇತ್ರ (constituency) ದಲ್ಲಿ ಅನೇಕ ವಿಷಯಗಳು ನಡೆದಿವೆ ಎಂದು ಹೇಳುತ್ತಾರೆ. ಆ ಕ್ಷೇತ್ರದಲ್ಲಿ ಆಗಿರುವ ವಿಷಯಗಳಿಗೆ ಮುಖ್ಯ ಮಂತ್ರಿಗಳ ಮೇಲೆ ಯಾವ ರೀತಿಯ ಜವಾಬ್ದಾರಿಯನ್ನೂ ಹೊರಿಸುವುದು ಸೂಕ್ತವೂ ಅಲ್ಲ, ನ್ಯಾಯವೂ ಅಲ್ಲ. ಅವರು ಒಂದು ಮನವಿ (representation) ಯನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಅದು ಪರಿಶೀಲನೆಯಲ್ಲಿದೆ ಎಂದು ಮಾತ್ರ ಹೇಳಲು ಬಯಸುತ್ತೇನೆ.

ಮುಖ್ಯವಾಗಿ ಕಾರುಗಳ ವಿಷಯ ಹೇಳಿದರು. ಇದರ ವಿಚಾರದಲ್ಲಿ ಒಂದು ನಿಯಮ ಮಾಡಿಕೊಂಡಿದ್ದಾರೆ. 50 ಸಹಸ್ರ ಮೈಲಿ ಆಗುವವರೆಗೂ ಆಯಾ ಮಂತ್ರಿಗಳ ಹತ್ತಿರವೇ ಕಾರುಗಳು ಇರಬೇಕು ಎಂದು ಆ ನಿಯಮವಿದೆ. ನನ್ನ ಹತ್ತಿರವಿರುವ ಕಾರು 50 ಕಾರು ಸಹಸ್ರ ಮೈಲಿ ಮೇಲೆ ಓಡಿದೆ. ಪ್ರತಿ ವರ್ಷವೂ ಗಳನ್ನು ತೆಗೆದುಕೊಳ್ಳುತ್ತಾರೆಂಬುದು ವಾಸ್ತವಾಂಶಕ್ಕೆ

(ಶ್ರೀ ಎ. ಜಿ. ರಾಮಚಂದ್ರರಾವ್.)

ದೂರವಾಗಿರುವ ವಿಷಯವಾಗಿದೆ. ಮತ್ತು ಇದೇ ಸಂಧರ್ಭದಲ್ಲಿ 400 ರೂಪಾಯಿ, 500 ರೂಪಾಯಿ ಹೀಗೆ ವಿದ್ಯುಚ್ಛಕ್ತಿಗೆ ಕೊಡಬೇಕಾಗಿದೆ ಎಂದು ಹೇಳಿದರು. ನಾನಾದರೂ ಅದು ಉತ್ಪ್ರೇಕ್ಷೆ ಎಂದು ತಿಳಿದು ಕೊಂಡಿದ್ದೇನೆ. ನನ್ನ ಸ್ವಂತಕ್ಕೆ ಆಗುತ್ತ ಇರುವುದನ್ನು ನೋಡಿದರೆ. . . .

ಶ್ರೀ ಮುಲ್ಕ ಗೋವಿಂದರೆಡ್ಡಿ.—ಮುಖ್ಯ ಮಂತ್ರಿಗಳ ಮನೆಯಲ್ಲಿ ಖರ್ಚುಮಾಡಿದ್ದಾರೆ. 400-500 ರೂಪಾಯಿಗಳ Electric bills ಕೊಟ್ಟಿದ್ದಾರೆ.

ಶ್ರೀ ಎ. ಜಿ. ರಾಮಚಂದ್ರರಾವ್.—ಪ್ರಾಯಶಃ leak ಆಗಿದ್ದರೂ ಆಗಿರಬಹುದು. ಸಾಮಾನ್ಯವಾಗಿ ಅಷ್ಟು ಆಗುವುದಿಲ್ಲವೆಂದು ನಾವು ತಿಳಿಯಬಹುದು. ಎಲೆಕ್ಷನ್ ಪಟ್ಟಿಗಳ ವಿಷಯದಲ್ಲಿ ಹೇಳಿದ್ದಾರೆ. ಆ ವಿಷಯವನ್ನು ಪರಿಶೀಲನೆ ಮಾಡುವುದಕ್ಕೆ ಈ ಸಭೆಗೆ ಅಧಿಕಾರವಿಲ್ಲವೆಂದು ನನ್ನ ಭಾವನೆ. ಮುನಿಸಿಪಲ್ ಚುನಾವಣೆಗಳ ವಿಷಯವನ್ನು ಹೇಳಿದರು. ಇದರಲ್ಲಿನ ಕೆಲವು ಲೋಪಗಳು ದೇಶಾದ್ಯಂತ ನಮ್ಮ ಗಮನಕ್ಕೆ ಬರುತ್ತವೆ. ಆದರೆ ಅವರು ಹೇಳಿದ ಲೋಪ electoral roll ನಲ್ಲಿ ಹೆಸರು ಇರಲಿಲ್ಲವೆಂಬುದು. ಪಟ್ಟಿಯಲ್ಲಿ ಮತದಾರರ ಹೆಸರು ಇಲ್ಲದೆ ಇದ್ದರೆ ಅದನ್ನು ಸರಿಪಡಿಸಿಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯ. It is the duty of every voter to get his name entered in the list. It is his concern. ಆ ಕೆಲಸ ಮಾಡದೆ ಇದೂ ಒಂದು ಲೋಪವೆಂಬುದಾಗಿಯೂ, 'ಅದರಲ್ಲಿಯೂ ಕೂಡ ಸರ್ಕಾರದವರು ಪ್ರವೇಶ ಮಾಡಬೇಕು, ನನ್ನ ಹೆಸರನ್ನು ಬಿಟ್ಟಿದ್ದಾರೆ' ಎಂದರೆ, ಯಾವ ದೃಷ್ಟಿಕೋನದಿಂದ ಇದನ್ನು ಹೇಳುತ್ತಿದ್ದಾರೆ, ಇದು ಸಾಧ್ಯವಾಗುತ್ತದೆಯೇ ಎಂದು ನೋಡಬೇಕು.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಸರ್ಕಾರದ ಕರ್ತವ್ಯವಲ್ಲವೆಂದು ಹೇಳುತ್ತಾರೆ. ಚುನಾವಣೆಗಳಿಗೆ ಪಟ್ಟಿಯನ್ನು ತಯಾರು ಮಾಡುವುದು ಸರ್ಕಾರದವರ ಕೆಲಸ. ನಮ್ಮಂಥ ಸದಸ್ಯರ ಹೆಸರೇ ಆ ಪಟ್ಟಿಗಳಲ್ಲಿಲ್ಲದ ಮೇಲೆ ಏನು ಹೇಳಬೇಕು?

ಶ್ರೀ ಎ. ಜಿ. ರಾಮಚಂದ್ರರಾವ್.—ಸರ್ಕಾರದವರೂ ಮಂತ್ರಿಮಂಡಳದವರೂ ಭಾಗವಹಿಸಿ ಹೆಸರನ್ನು remove ಮಾಡಿಸಿದರು ಎಂದು ಅಷ್ಟು ದೂರ ಹೋಗುವುದು ಸೂಕ್ತವಲ್ಲವೆಂದು ಹೇಳುತ್ತೇನೆ. Threatening letter ವಿಚಾರ ಬಂತು. ಆ ಕಾಗದವನ್ನು ಪೋಲೀಸು ಇಲಾಖೆಯವರಿಗೆ ಕೊಡದೆ ಹೋದರೆ ಹೇಗೆ ವಿಚಾರ ಮಾಡುವುದು? Threatening letters, ಮತ್ತು anonymous letters ಬೇಕಾದಷ್ಟು ಬರುತ್ತವೆ. ಇಂಥ ಕಾಗದಗಳನ್ನು ಪೋಲೀಸಿನವರಿಗೆ ಕೊಟ್ಟರೆ ಅವರು ವಿಚಾರಿಸುತ್ತಾರೆ.

ಒಬ್ಬ ಸದಸ್ಯರು.—ಪೋಲಿಸು ಇಲಾಖೆಯಲ್ಲಿ ನಂಬಿಕೆಯಿಲ್ಲವಾದುದರಿಂದ ಅವರಿಗೆ ಕಳುಹಿಸುವುದು ಅನಾವಶ್ಯಕವೆಂದು ಹೇಳುತ್ತಾರೆ. ಅದಕ್ಕೆ ಏನು ಹೇಳುತ್ತೀರಿ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಂಥ ಕಾಗದಗಳನ್ನು ಪೋಲೀಸು ಇಲಾಖೆಯವರಿಗೆ ಕೊಟ್ಟು ಪರೀಕ್ಷೆ ಮಾಡಿನೋಡಿ. ಒಂದು ಕಾಗದ ಬಂತು ಅದನ್ನು ಅವರ ಸ್ನೇಹಿತರಿಗೆ ಕೊಟ್ಟರು. ಪೋಲೀಸಿನವರಿಗೆ ಕೊಡದೆ ಇದ್ದರೆ ಅವರು ವಿಚಾರಮಾಡುವುದು ಹೇಗೆ? ಈ ರೀತಿಯ ಆಪಾದನೆಗಳನ್ನು ಎಷ್ಟು ಬೇಕಾದರೂ ಮಾಡಬಹುದು. ಅದರ ಫಲವೇನು ಎನ್ನುವುದನ್ನು ಯೋಚನೆ ಮಾಡಬಹುದು.

ಮೊಟ್ಟೆದೊಡ್ಡಿ ಕೇಸಿನ ಕಾಂಪೆನ್‌ಸೇಷನ್ ವಿಚಾರದಲ್ಲಿ ಅಪೀಲು ಹೋಗಬೇಕು ಎಂದು ಆರ್ಡರ್ ಆಗಿದೆ. ಇದುವರೆಗೆ ಅಪೀಲು ಹೋಗಿರಬಹುದು. ಇದು ಪೂರ್ತಿ ವಿಮರ್ಶೆಯಾಗದೆ ಇರುವ ಸಂದರ್ಭದಲ್ಲಿ ಟೀಕೆ ಟಿಪ್ಪಣಿಗಳನ್ನು ಮಾಡುವುದು ಅಷ್ಟು ಸಮಂಜಸವಲ್ಲ ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

Mr. SPEAKER.—You must inform the House whether it is in appeal.

Sri A. G. RAMACHANDRA RAO.—Government has sent an order to the Advocate-General to file an appeal. But I do not know whether the appeal as such has been filed.

ಅನಂತರ ಕೋಲಾರದ ಚಿನ್ನದ ಗಣಿಗಳನ್ನು ರಾಷ್ಟ್ರೀಕರಣ ಮಾಡುವ ವಿಚಾರವನ್ನು ಪ್ರಸ್ತಾಪಿಸಿದ್ದಾರೆ. ಅದರ ವಿಷಯದಲ್ಲಿ ಸರ್ಕಾರ ಬಹಳ ತೀವ್ರಾಸಕ್ತಿಯಿಂದ ಕೂಡಿದೆ. ಅದು ಮೈಸೂರು ಸರ್ಕಾರಕ್ಕೆ ಮಾತ್ರ ಸಂಬಂಧಪಟ್ಟದ್ದು, ಅವರ ಸ್ವಂತ ಜವಾಬ್ದಾರಿಯಿಂದ ಮಾಡತಕ್ಕ ಕೆಲಸವಲ್ಲ. ಕೇಂದ್ರ ಸರ್ಕಾರದ ಅಪ್ಪಣೆ ಮತ್ತು ಸಲಹೆ ಪಡೆದು ಮುಂದುವರಿಯಬೇಕು. ಅದರ ವಿಷಯದಲ್ಲಿ ತೀವ್ರವಾಗಿರತಕ್ಕ ಟೆಲಿಗ್ರಾಂಗಳು ಹೋಗಿವೆ, personal letters ಹೋಗಿವೆ. ಇದಕ್ಕೆ ಎಷ್ಟು ಗಮನ ಕೊಡಬೇಕೋ ಅಷ್ಟನ್ನೂ ಕೊಡದೆ ಇರುವುದಕ್ಕೆ ಕಾರಣ ಕೊಟ್ಟಿಲ್ಲ; ಇದನ್ನು ತೀವ್ರಾಸಕ್ತಿಯಿಂದ ಮಾಡಿಯೇ ತೀರಬೇಕು ಎಂದು inference ಬರುವ ರೀತಿಯಲ್ಲಿ ಮಾತನಾಡಿದರು. ಅದಕ್ಕೆ ಅವಕಾಶವಿಲ್ಲವೆಂದು ಈ ಸಭೆಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಲ್. ಸಿದ್ದಪ್ಪ.—ಕಾಂಪೆನ್‌ಸೇಷನ್ ಕೊಡುವುದಕ್ಕೆ ಬಡ್ಜೆಟ್‌ನಲ್ಲಿ provide ಮಾಡಿಲ್ಲ.

ಶ್ರೀ ಎ. ಜಿ. ರಾಮಚಂದ್ರರಾವ್.—ಅಲ್ಲಿಂದ ಒಂದು ಜವಾಬು ಬಂದರೆ provide ಮಾಡುವುದು ಸೂಕ್ತ.

Sri N. HUCHMASTHY GOWDA.—A point of information. ಈಗ ಬಿಲ್ ಮಾಡುವುದಕ್ಕೆ ಕೇಂದ್ರದಿಂದ ಅನುಮತಿ ಬಂದಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ನಾವು ಡ್ರಾಫ್ಟ್ ಬಿಲ್ ಮಾಡಿ ಕಳುಹಿಸಿದ್ದೇವೆ. ಚನ್ನಪಟ್ಟಣ ತಾಲ್ಲೂಕಿನಲ್ಲಿ ಮನೆಗೆ ಬೆಂಕಿಬಿದ್ದ ಕೆಲವು incident ಹೇಳಿದರು. ಅದೇರೀತಿಯಾಗಿ ಹರಿಹರದಲ್ಲಿಯೂ ಆದದ್ದು ಮಾನ್ಯ ಸದಸ್ಯರ ಗಮನಕ್ಕೆ ಬಂದಿದೆ. ಇದು ನಮ್ಮ ಗಮನಕ್ಕೆ ಬಂದ ಕೂಡಲೇ ತಕ್ಕ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಚನ್ನಪಟ್ಟಣ ತಾಲ್ಲೂಕಿನ ವಿಷಯದಲ್ಲಿ I will make enquiries and see that the necessary relief is afforded.

ಇನ್ನೂ ಕೆಲವು ಅಸ್ಪಷ್ಟವಾದ ವಿಷಯಗಳನ್ನೂ ಹೇಳಿದರು. ಆಮೇಲೆ ದಕ್ಷತೆಯ ವಿಷಯ ಹೇಳಿದರು. ಮುಖ್ಯಮಂತ್ರಿಗಳ ಮೇಲೆ ಅಪಾದನೆ ಮಾಡುವುದು ಸೂಕ್ತವಲ್ಲ. ಅವರಿಗೂ ಈ ವಿಷಯಗಳಿಗೂ ಸಂಬಂಧ ಮಾಡುವುದು ಸರಿಯಲ್ಲ.

Sri K. PATTABHIRAMAN (Kolar).—Just a clarification, Sir. Sri Venkatappa has made definite allegations which have to be met, namely, that the police were sent for and that the police actually moved but they were prevented from

going further and therefore the police did not function in the locality. That is the definite allegation made for which the responsibility must be taken by the Government.

ಶ್ರೀ ಎ. ಜಿ. ರಾಮಚಂದ್ರರಾವ್.—ಅವರ ಭಾಷಣದಿಂದ ಪೋಲೀಸು ಇನ್ಸ್‌ಪೆಕ್ಟರು ಸಹಕಾರ ಕೊಟ್ಟರು ಮತ್ತು ಅವರ ಜನ ಬಂದು interfere ಮಾಡಿದರು ಎಂದು ತಿಳಿಯಿತು. ಇತರರು ಯಾರಾದರೂ ಹೋಗಿ ಅವರಮೇಲೆ ಆಕ್ಷೇಪಣೆ ಮಾಡಿದ್ದರೆ ಅದು ಬೇರೆ ವಿಷಯ. ಈ ವಿಚಾರದಲ್ಲಿ ಒಂದು ಅರ್ಜಿಕೊಟ್ಟಿದ್ದೇವೆಂದು ಹೇಳಿದ್ದಾರೆ. ಅದರಮೇಲೆ ಕಾರ್ಯಕ್ರಮ ನಡೆಯುತ್ತಿದೆ ಎಂದು ತಿಳಿದುಕೊಂಡಿದ್ದೇನೆ. ಇದರ ಮೇಲೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಸಭೆಗಳು ನಡೆಯುವಾಗ ಘರ್ಷಣೆಗಳು ಆಗುತ್ತವೆ ಎಂದು ನಿರೀಕ್ಷೆ ಮಾಡುವುದು ಪೋಲೀಸಿನವರ ಕರ್ತವ್ಯವಲ್ಲವೇ! ರಾಮನಗರಕ್ಕೆ ಕೇವಲ ಎರಡು, ಮೂರು ಮೈಲಿ ದೂರದಲ್ಲಿ ಸಭೆ ನಡೆಯುತ್ತಿರುವಾಗ ತೊಂದರೆಯಾಗುತ್ತದೆ ಎಂದು ನಿರೀಕ್ಷೆ ಮಾಡದೆ ಇದ್ದರೆ ಪೋಲೀಸಿನವರು ಯಾಕೆ ಇರಬೇಕು!

ಶ್ರೀ ಬಿ. ಎಚ್. ಬೋರಣ್ಣಗೌಡ (ಬೇಲೂರು).—ಸಭೆಗೆ ಅಡ್ಡಿ ಮಾಡಿದ ಸಂದರ್ಭದಲ್ಲಿ ಪೋಲೀಸಿನವರು ಏನು ರಕ್ಷಣೆ ಕೊಟ್ಟರು, ಯಾವ ವಿಧವಾದ ಕಾರ್ಯಕ್ರಮ ತೆಗೆದುಕೊಂಡರು, ಅಲ್ಲಿ ನಡೆದಂಥ ವಿಷಯಗಳಲ್ಲಿ ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ?

Sri K. PATTABHIRAMAN.—I will ask you further. Do you promise an enquiry into the allegations? I am not saying what happened at the meeting. That is a different matter. I am only anxious to see whether the administration against whom a definite allegation is made, namely, that the police did not interfere, did not perform their duty and they were prevented from giving such protection as a citizen of the State was entitled to, deliberately or otherwise—when such allegations are made and the fair name of the administration is assailed, will the Government promise an enquiry and make a categorical statement before the Session closes that, so far as the administration is concerned, its name cannot be tarred?

Sri A. G. RAMACHANDRA RAO.—I have already said; I will get that examined.

Sri D. DEVARAJA URS (Hunsur).—In addition to this, Sri Venkatappa was pleased to state that there was a complaint to the Home Minister and that he also complained but there was no reply so far. This is also a rather serious matter in my opinion. They should have made known to the concerned members who were affected by this as to what action had been taken in the matter by Government. This point may also be clarified.

Sri A. G. RAMACHANDRA RAO.—The points raised by Hon'ble Members will be included in the examination that Government is going to hold in the matter. ಸ್ವಾಮಿ, ಅನಂತರ ದಕ್ಷತೆ ಮತ್ತು ಪಕ್ಷಪಾತದ ವಿಚಾರದಲ್ಲಿ ಕೆಲವು ಆಪಾದನೆ ಮಾಡಿದರು. ಸ್ಪೆಸಿಫಿಕ್ ಇನ್ಸ್‌ಟೆನ್ಸ್ ಯಾವುದೂ ಹೇಳಲಿಲ್ಲ, ಅದನ್ನು ಹೇಳಿದ್ದರೆ ನಮಗೆ ಅನುಕೂಲವಾಗುತ್ತಿತ್ತು, ಆಮೇಲೆ ಹೇಳಿದರೂ ಚಿಂತೆಯಿಲ್ಲ, ಹೇಳಿದರೆ ವಿಚಾರಿಸುತ್ತೇನೆ.

ಅನಂತರ ನಾನ್-ಗೆಜೆಟೆಡ್ ಆಫೀಸರುಗಳ ಸಂಬಳದ ವಿಷಯದ ಮೇಲೆ ಮಾತನಾಡಿದರು. ಮೈಸೂರು ದೊಡ್ಡದಾಗುವುದರಿಂದ ಈ ಸಂದರ್ಭದಲ್ಲಿ ಅದನ್ನು ಪರಿಶೀಲಿಸುವುದು ಸೂಕ್ತವೆಂದು ಶ್ರೀ ಹುಚ್ಚಮಾಸ್ತಿಗೌಡರೂ ಒಪ್ಪಿದ್ದಾರೆ, ಮಾನ್ಯ ಮುಖ್ಯಮಂತ್ರಿಗಳೂ ಅವರ ಭಾಷಣದಲ್ಲಿ ಅದನ್ನು ವಿಶದವಾಗಿ ಹೇಳಿದ್ದಾರೆ. ಈ ವಿಷಯದಲ್ಲಿ ಈ ಸಭೆಯ ಗಮನವನ್ನು ಮುಖ್ಯಮಂತ್ರಿಗಳ ಭಾಷಣದ 5 ಮತ್ತು 6ನೆಯ ಪುಟಗಳ ಕಡೆಗೆ ಸೆಳೆದರೆ ಪೂರ್ಣವಾದ ಉತ್ತರ ಸಿಕ್ಕುತ್ತದೆಂದು ನಂಬಿದ್ದೇನೆ.

ಕೆಲವು ಅಧಿಕಾರಿಗಳಿಗೆ ಶಿಕ್ಷೆಯಾಗಬೇಕು, ಆಗಿಲ್ಲ ಎಂದು ಹೇಳಿದರು. ಅದನ್ನು ವಿಚಾರ ಮಾಡುತ್ತೇನೆ. ಲ್ಯಾಕ್ ಆಫ್ ಕೋ-ಆರ್ಡಿನೇಷನ್ ಇದೆಯೆಂದು ಹೇಳಿದರು. ಎಷ್ಟು ಕೋ-ಆರ್ಡಿನೇಷನ್ ಬೇಕೋ ಅಷ್ಟಿದೆ; ಆದರೆ ಸಮ್ಮಿಳನವಾಗಬೇಕಾದದ್ದು ಆಗುತ್ತಿಲ್ಲ ಎಂದು ಹೇಳಬಹುದೇ ಹೊರತು ಕೋ ಆರ್ಡಿನೇಷನ್ ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಹೊಸ ಕಾರ್ಯಕ್ರಮದಲ್ಲಿ ಸಮಾಜದ ದೃಷ್ಟಿಕೋಣ ಬದಲಾಯಿಸಿ ವೆಲ್‌ಫೇರ್ ಸ್ಟೇಟ್ ಆಗಿದೆ. ಇತರ ಸಂಸ್ಥಾನಗಳಲ್ಲೂ ಇದೇ ರೀತಿಯ ತೊಂದರೆ ಕಂಡು ಬಂದಿದೆ. ಕೋ-ಆರ್ಡಿನೇಷನ್ ಬಯಸುವಷ್ಟಿಲ್ಲವೆಂದು ಹೇಳಬಹುದು.

ಶ್ರೀ ಎಚ್. ಕೆ. ವೀರಣ್ಣಗೌಡ.—ಹಿಂದೆ ಕೋ-ಆರ್ಡಿನೇಷನ್ ಕಮಿಟಿಯೆಂದು ಮಾಡಿದ್ದಿರಿ. ಅದನ್ನು ವಜಾಮಾಡಿದಿರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ, ಅದು ಜಾರಿಯಲ್ಲಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಮುಖ್ಯ ಮಂತ್ರಿಗಳ ಭಾಷಣದ ಏಳನೆಯ ಪುಟದಲ್ಲಿ ಹೇಳಿರುವ ಒಂದು ವಾಕ್ಯವನ್ನು ಓದಿದರೆ ಸ್ಪಷ್ಟವಾಗಿ ಈ ವಿಚಾರ ಗೊತ್ತಾಗುತ್ತದೆ. "ಸರ್ಕಾರದ ಬೇರೆಬೇರೆ ಇಲಾಖೆಗಳು ಬಹುಮಟ್ಟಿಗೆ ಒಂದಕ್ಕೊಂದಕ್ಕೆ ಸಂಬಂಧವಿಲ್ಲದೆ ಕೆಲಸ ನಡೆಸಿಕೊಂಡು ಹೋಗುವ ಪರಿಸ್ಥಿತಿಯೇ ಬೆಳೆಯುತ್ತಾ ಬರುತ್ತಿದೆ." ಎಂದು ಸ್ಪಷ್ಟವಾಗಿ ಮುಖ್ಯಮಂತ್ರಿಗಳು ಹೇಳಿದ್ದಾರೆ. ಎಷ್ಟಿರಬೇಕೋ ಅಷ್ಟಿಲ್ಲವೆಂದು ಹೇಳಿ ಬೆಳೆಯುತ್ತಾ ಬರುತ್ತಿದೆಯೆಂದು ಒಪ್ಪಿಕೊಂಡಿದ್ದಾರೆ.

ಶ್ರೀ ಎ. ಜಿ. ರಾಮಚಂದ್ರರಾವ್.—ಅದಕ್ಕೇ ನಾನು ಹೇಳಿದ್ದು, ಆದ್ದರಿಂದ ಒಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲು ಸಿಕ್ಕಿತು ಎಂದು ಹೇಳುವಹಾಗಿದೆ. ಇಷ್ಟು ಹೇಳಿ ನಾನು ನನ್ನ ಭಾಷಣ ಮುಗಿಸುತ್ತೇನೆ.

Mr. SPEAKER.—The question is :

"That a sum not exceeding Rs. 86,29,900 be granted to the Government to defray the charges which will come in course of payment during the year ending 31st day of March 1957, in respect of 'General Administration (Except the sub-major heads B and C).'"

The motion was adopted.

Sri K. PATTABHIRAMAN.—Just a word, Sir. These friends who wanted to get rid of the Administration have voted for the Demand.

(Laughter.)

DEMAND No. 30—FAMINE RELIEF.

54. FAMINE RELIEF.

Mr. SPEAKER.—Motion moved :

"That a sum not exceeding Rs. 5,95,000 be granted to the Government to defray the charges which will come in course of payment during the year ending 31st day of March 1957, in respect of 'Famine'."

(No member rose to speak.)

Mr. SPEAKER.—The question is :

"That a sum not exceeding Rs. 5,95,000 be granted to the Government to defray the charges which will come in course of payment during the year ending 31st day of March 1957, in respect of 'Famine'."

The motion was adopted.

Mr. SPEAKER.—Now the House will rise and meet at 2 o'clock tomorrow.

The House adjourned at Fifteen Minutes past Two of the Clock to meet at Two of the Clock on Sunday, 18th March 1956.

WD 2896—GPB—550—18-5-56

MYSORE LEGISLATIVE ASSEMBLY

FOURTEENTH DAY

Sunday, 18th March 1956.

The House met in the Assembly Hall, Atara Kacheri, Bangalore, on Sunday, the 18th March 1956, at Two of the Clock.

MR. DEPUTY SPEAKER (SRI R. CHENNIGARAMIAH) in the Chair.

QUESTIONS AND ANSWERS.

Government Press Employees.

Q.—212. Sri D. VENKATESH (Gandhinagar).—

Will the Government be pleased to state:—

(*a*) whether they have received any representations from the Government Press employees as represented by their Association in regard to their grievances; if the answer is Yes, what are they?

(*b*) whether there was any tripartite meeting of representatives of the Government Press Workers, Management and Government in the chambers of the Hon'ble Chief Minister;

(*c*) what action in regard to their redressal has been taken by the Government?

A.—Dr. R. NAGAN GOWDA (Minister for Agriculture).—

(*a*) Yes; *vide* statement appended.

(*b*) Yes.

(*c*) *Vide* statement appended in reply to (*a*).

Representations	*Action Taken.*
1 Grant of Holidays on Balipadyami and Buddha Pournima Day.	1. Holiday on Balipadyami has been conceded in lieu of New Year's Day as agreed to by the Press Employees. Regarding Buddha Pournima decision on Pay Structure Committee Report is awaited.
2 Reduction of rates for the sites allotted to the employees in the Rajaji Nagar Extension.	2. The matter is under consideration in consultation with the Bangalore Improvement Trust Board with whom the question is pending.
3 To waive the recovery of excess pay drawn by certain officials of the Proof Branch.	3. This has been sanctioned in G. O. No. M. 3220-21—P. & S. 20-55-2, dated 19th May 1955.
4 Revival of Steering Committee.	4. This was dropped in consultation with the Director of Stationery and Printing as the Steering Committee is already functioning.
5 Providing advances to officials for building houses through the Labour Housing Corporation.	5. This was not considered by Government as the matter has been taken up by the Department with the Chairman, Labour Housing Corporation.

(DR. R. NAGAN GOWDA.)

Representations	*Action Taken*
6 To overhaul the Press Canteen on the Co-operative basis.	6. Government in their letter No. M. 10308—P. & S., dated 16th August 1955 have intimated that they have no objection to run the canteen on a co-operative basis.
7. To provide the spectacles to certain employees, free of cost.	7. The supply of spectacles free of cost to the Industrial employees of the Government Presses working in Composing and Proof Branches has been sanctioned in G. O. No. M. 18297-98—P. & S. 10-55-46, dated 28th November 1955.
8. Providing a building to the Press Employees' Association.	8. Deferred till the question of expansion of the Government Press is taken up in October 1956.
9. To re-organise the Press and to appoint an Expert Committee for the purpose to enable the employees to get suitable remuneration for the work turned out by them.	9. Decision on the report of the Pay Structure Committee is to be awaited.
10. To revise the scales of pay as per those obtaining in the neighbouring States of the Madras and Bombay Presses.	10 to 15. Decisions on the Pay Structure Committee Report are to be awaited.
11. To make the piece work system permanent.	
12. Abolition of separate grades for the Supervisory staff.	
13. To change the nomenclature "Industrial Establishment" to that of "Technical Establishment."	
14. To give double the ordinary rates of overtime allowance.	
15. To reduce the hours of work.	
16. To sanction increments to officials in the Ministerial Establishment pending due to passing of the Government Press and Allied Office Manual tests.	16. Government in their Order No. E. 8044-144—R. & P. S. 15-55-3, dated 5th August 1955 have allowed time to pass the Departmental Examination or tests to the officials of all Departments up to 15th June 1956.
17. Exemption of all Technical higher grade posts from the Public Service Commission Rules.	17. It is a large question involving recruitment policy which will take some time as the Public Service Commission has to be consulted.

Sri D. VENKATESH.—May I know Sir, what were the points suggested by the Hon'ble the Chief Minister for acceptance by you at the time of the Meeting ?

***Dr. R. NAGAN GOWDA.**—At the time we discussed the matter, the Chief Minister suggested that the Representatives of the Press, myself and the Secretary should sit down and go into details of each one of the representations that they have made. We suggested that the question regarding the salaries, services etc., must go before the Pay Structure Committee, whereas other questions could be discussed in my office. That way, we discussed the whole thing and we have come to agreement on many of the points.

Sri D. VENKATESH.—May I bring to your kind notice, Sir, item I on page 8 regarding the Buddha Purnima ? Will the Government be pleased to grant leave to that extent ?

Dr. R. NAGAN GOWDA.—We had between us, two holidays in question, the Bali Padyami and the Buddha Purnima. We have decided about Bali Padyami and I was glad that the staff were willing to come to some understanding with us. Regarding Buddha Purnima, as has been stated, the Pay Structure Committee is going to decide the number of holidays ; we said we would wait till that report was received.

Sri D. VENKATESH.—Pending that, Sir, is it possible for the Hon'ble Minister to kindly consider that also favourably ?

Dr. R. NAGAN GOWDA.—As the Hon'ble Member knows, we have too many holidays and it is a matter of national importance and so I thought that it would be better to wait till the Pay Structure Committee decisions were considered.

Sri D. VENKATESH.—May I draw your kind attention to item No. 16 ; may I know whether the Minister will be pleased to tell me whether there was a departmental examination held previously, Sir ?

Dr. R. NAGAN GOWDA.—About sanctioning increments to those who had been made permanent, I have been informed by the Director that increments have been given to everybody who had attained that particular age. I am glad to tell you that.

Sri D. VENKATESH.—Will the Government also conduct the examinations contemplated as early as possible?

Dr. R. NAGAN GOWDA.—I will look into that.

Sri D. VENKATESH.—Thank you.

Protected water supply to Villages with a population of over a thousand.

Q.—14. **Sri B. MADHAVACHAR** (Bhadravati).—

Will the Government be pleased to state :—

the policy pursued by them for providing protected water supply to villages having population of over a thousand ?

A.—**Sri T. CHANNIAH** (Minister for Public Health and Local Self-Government).—

Under this scheme individual village or groups of villages having a population of not more than 5,000 inhabitants each are taken up for providing water supply. Preference is given to villages having electric power. Availability of a suitable source of water, incidence in the area of water borne diseases, ability of the Village Panchayet to share a portion of the cost and to maintain the supply after completion are also taken into consideration while selecting villages.

ಶ್ರೀ ಬಿ. ಮಾಧವಾಚಾರ್.—ಗ್ರಾಮಾಂತರಗಳಿಗೆ ನೀರು ಸರಬರಾಜು ಕೊಡುವ ಸಮಯದಲ್ಲಿ ಕೆಲವು ಗ್ರಾಮಗಳಿಗೆ ಒದಗಿಸಿರತಕ್ಕ ಹಣಸಾಲದು ಎಂದೂ, ವಿಸ್ತಾರವಾದ tanks ಕೊಡಬೇಕು ಎಂದೂ ಮನವಿ ಬಂದರೆ ಹೆಚ್ಚು ಹಣವನ್ನು allot ಮಾಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಈಗಾಗಲೇ ನಾವು ಇಂಡಿಯಾ ಸರ್ಕಾರದವರ ಒಪ್ಪಿಗೆಗೋಸ್ಕರ ಕಳುಹಿಸಿದ್ದೇವೆ. ಆದರೆ ಒಂದು ಸಾವಿರದಿಂದ ಐದು ಸಾವಿರದವರೆಗೂ ಪ್ರಜಾಸಂಖ್ಯೆಯುಳ್ಳ ಗ್ರಾಮಗಳಲ್ಲಿ ವಿದ್ಯುಚ್ಛಕ್ತಿ

* Asterisk indicates that the remarks or speeches have not been revised by the Member concerned.

(ಶ್ರೀ ಟಿ. ಚನ್ನಯ್ಯ.)

ಇದ್ದು ಕುಡಿಯುವ ನೀರಿನ ಅನುಕೂಲವಿಲ್ಲ, ಕುಡಿಯುವ ನೀರಿನ ಸೌಕರ್ಯದ ಅವಶ್ಯಕತೆ ಇದೆ ಎಂದು ಕಂಡುಬಂದರೆ ಅದರ ತಃಖ್ತೆಯನ್ನು ಮಾಡಿ ಕಳುಹಿಸಬೇಕೆಂದು ಮತ್ತೊಮ್ಮೆ ಡೆಪ್ಯುಟಿ ಕಮಿಷನರಿಗೆ ಬರೆದು, ತರಿಸಿಕೊಂಡು ಇಂಡಿಯಾ ಸರ್ಕಾರಕ್ಕೆ ಕಳುಹಿಸಿದ್ದೇವೆ.

ಶ್ರೀ ಬಿ. ಮಾಧವಾಚಾರ್.—ಒಂದೊಂದು ಯೂನಿಟ್ಟಿಗೆ ಅಂದರೆ ಒಂದೊಂದು ಹಳ್ಳಿಗೆ ಎಷ್ಟು ಹಣ ಮಂಜೂರು ಮಾಡಿದ್ದೀರಿ?

ಶ್ರೀ ಟಿ. ಚನ್ನಯ್ಯ.—ಪ್ರತಿಯೊಂದು ಸ್ಕೀಂಗೂ ಬೇರೆಬೇರೆಯಾಗಿದೆ. ಮಾನ್ಯಸದಸ್ಯರಿಗೆ ಒದಗಿಸಿರತಕ್ಕ "A Brief Report on the working of the Departments of Medical and Public Health, Prohibition and Excise and Local Self-Governments" ಎಂಬ ಪುಸ್ತಕದಲ್ಲಿ 58, 59, 60, 61 ಪುಟಗಳಲ್ಲಿ ಪ್ರತಿಯೊಂದು ಗ್ರಾಮದ ನೀರಿನ ವ್ಯವಸ್ಥೆಗೆ ಎಷ್ಟೆಷ್ಟು ಹಣ ಬೇಕಾಗುತ್ತದೆ ಎಂದು ಒದಗಿಸಿದ್ದೇವೆ. ಸುಮಾರು 30 ಸಾವಿರದಿಂದ ಹಿಡಿದು 60, 70, 80 ಸಾವಿರದವರೆಗೂ ಒಂದೊಂದು ಸ್ಕೀಮಿಗಾಗುತ್ತದೆ.

ಶ್ರೀ ಬಿ. ಮಾಧವಾಚಾರ್.—ಭದ್ರಾವತಿ ತಾಲ್ಲೂಕು ಹೊಳೆಹೊನ್ನೂರು ಗ್ರಾಮಕ್ಕೆ ಈಗ ಒದಗಿಸಿರುವ ಹಣ ಸಾಲದು, ಇನ್ನೂ ಜಾಸ್ತಿ ಒದಗಿಸಬೇಕು, ಕಂಟ್ರಿಬ್ಯೂಷನ್ ಕೊಡುತ್ತೇವೆ ಎಂದು ಮನವಿ ಸಲ್ಲಿಸಿದ್ದಾರೆ. ಅದನ್ನು ಸಹಾನುಭೂತಿಯಿಂದ ಪರಿಶೀಲಿಸುತ್ತೀರಾ?

ಶ್ರೀ ಟಿ. ಚನ್ನಯ್ಯ.—ಹೊಳೆಹೊನ್ನೂರು ಗ್ರಾಮಕ್ಕೆ 50,000 ರೂಪಾಯಿ ಒದಗಿಸಿದ್ದೇವೆ. ಅವಶ್ಯಕತೆ ಇದ್ದರೆ, ಈಗ ಒದಗಿಸಿರತಕ್ಕ ಹಣ ಸಾಲದು ಎಂದು ಕಂಡುಬಂದರೆ ಅದನ್ನು ಯೋಚನೆ ಮಾಡುತ್ತೇವೆ.

ಶ್ರೀ ಬಿ. ಹುಚ್ಚೇಗೌಡ.—ವಿದ್ಯುಚ್ಛಕ್ತಿಯಿಲ್ಲದಿರುವ ಕಡೆಗೆ ಈ ಸ್ಕೀಂ ಅನ್ವಯಿಸುವುದಿಲ್ಲವೆ?

ಶ್ರೀ ಟಿ. ಚನ್ನಯ್ಯ.—ವಿದ್ಯುಚ್ಛಕ್ತಿಯಿರುವ ಕಡೆಗೆ ಅನ್ವಯಿಸಬೇಕೆಂದಿದೆ. ಆದರೂ ಎಲ್ಲಿ ಅನುಕೂಲವಿಲ್ಲವೋ ಅಂಥ ಕಡೆಗೆ ಡೀಸಲ್ ಎಂಜಿನ್ ಹಾಕಿ ನೀರನ್ನೊದಗಿಸಬೇಕೆಂದು ಸ್ಯಾನಿಟರಿ ಇಂಜನಿಯರಿಗೆ ತಿಳಿಸಿದೆ. ಅವರು ಆದರಂತೆ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಜಿ. ಪುಟ್ಟಸ್ವಾಮಿ.—ಚಿಕಮಗಳೂರು ಜಿಲ್ಲೆಯಲ್ಲಿ ವಿದ್ಯುಚ್ಛಕ್ತಿ ಸರಬರಾಯಾಗಿರುವ ಯಾವ ಸ್ಥಳಗಳಿಗೆ ಹಣ ಮಂಜೂರು ಮಾಡಿದೆ?

ಶ್ರೀ ಟಿ. ಚನ್ನಯ್ಯ.—ನೇರವಾಗಿ ಈಗ ಹೇಳಲಾರೆ, ಒಟ್ಟಿನಲ್ಲಿ ಆ ಜಿಲ್ಲೆಯ 13 ಗ್ರಾಮಗಳಿಗೆ 5,02,500 ರೂಪಾಯಿಗಳ ಅಂದಾಜಾಗಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಚಿಕ್ಕಮಗಳೂರು ಜಿಲ್ಲೆಯಲ್ಲಿ ಆಲ್ದೂರು, ಹಿರೇಬೈಲು, ಕಳಸಾಪುರ, ಸಕ್ರೆಪಟ್ಟಣ ಈ ಗ್ರಾಮಗಳಿಗೆ ಅಂದಾಜು ತಯಾರಾಗಿ ಬಾಕಿಯಿರುವ ಹಣವೆಷ್ಟು?

ಶ್ರೀ ಟಿ. ಚನ್ನಯ್ಯ.—ಆಲ್ದೂರು ಗ್ರಾಮಕ್ಕೆ 44 ಸಾವಿರ ರೂಪಾಯಿ, ಕಳಸಾಪುರಕ್ಕೆ 40 ಸಾವಿರ ರೂಪಾಯಿ, ಸಕ್ಕರೆ ಪಟ್ಟಣಕ್ಕೆ 45 ಸಾವಿರ ರೂಪಾಯಿ ಅಂದಾಜಾಗಿದೆ. ಹಿರೇಬೈಲನ್ನು ಸೇರಿಸಿಲ್ಲ, ಹಿರೇನಲ್ಲೂರನ್ನು ಸೇರಿಸಿದೆ.

ಶ್ರೀ ಜಿ ಪುಟ್ಟಸ್ವಾಮಿ.—ಈ ಅಂದಾಜುಗಳನ್ನು ಜಾಗ್ರತೆ ಮಂಜೂರುಮಾಡಲು ಪ್ರಯತ್ನಪಡುತ್ತೀರಾ?

ಶ್ರೀ ಟಿ. ಚನ್ನಯ್ಯ.—ಬೇಗ ಇನ್ನೊಂದು ವರದಿ ತರಿಸಿ ಬೇಗ ಮಾಡಲು ಪ್ರಯತ್ನಿಸುತ್ತೇವೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಕಡೂರು ತಾಲ್ಲೂಕಿನಲ್ಲಿ ಯಾವಯಾವ ತಾಲ್ಲೂಕುಗಳು ಸೇರಿವೆ?

ಶ್ರೀ ಟಿ. ಚನ್ನಯ್ಯ.—ಸಕ್ಕರೆಪಟ್ಟಣಕ್ಕೆ 45,000 ರೂಪಾಯಿ, ಹಿರೇನಲ್ಲೂರಿಗೆ 41,000 ರೂಪಾಯಿ, ಪಂಚನಹಳ್ಳಿಗೆ 46,000 ರೂಪಾಯಿ ಅಂದಾಜಾಗಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಈ ಕೆಲಸ ಎಲ್ಲಾದರೂ ಪ್ರಾರಂಭ ಮಾಡಿದೆಯೆ?

ಶ್ರೀ ಟಿ. ಚನ್ನಯ್ಯ.—ಮಾಡಿದ್ದಾರೆ.

ಶ್ರೀ ಕೆ. ಪಂಚಾಕ್ಷರಯ್ಯ.—ಅರಸೀಕೆರೆ ತಾಲ್ಲೂಕಿನಲ್ಲಿ ಎಷ್ಟು ಗ್ರಾಮಗಳಿಗೆ ಅಂದಾಜಾಗಿದೆ?

ಶ್ರೀ ಟಿ. ಚನ್ನಯ್ಯ.—ಹಾಸನ ಡಿಸ್ಟ್ರಿಕ್ಟಿಗೆ 14 ಸ್ಥಳಗಳಿಗೆ ನೀರು ಸರಬರಾಯಿಗಾಗಿ 4,59,500 ರೂಪಾಯಿಗಳ ಅಂದಾಜಾಗಿದೆ. ಶಾಂತಿ ಗ್ರಾಮಕ್ಕೆ 30,000 ರೂಪಾಯಿ, ಭೂವನಹಳ್ಳಿಗೆ 37,500 ರೂಪಾಯಿ, ಗೊರೂರಿಗೆ 32,000 ರೂಪಾಯಿ, ನುಗ್ಗಿಹಳ್ಳಿಗೆ 35,000 ರೂಪಾಯಿ, ಕಾಂತರಾಜಪುರಕ್ಕೆ 30,000 ರೂಪಾಯಿ, ಹಿರೆಸಾವೆಗೆ 32,000 ರೂಪಾಯಿ, ಹಳ್ಳಿ ಮೈಸೂರಿಗೆ 26,000 ರೂಪಾಯಿ ಹಳೇಬೀಡಿಗೆ 34,000 ರೂಪಾಯಿ, ಅರೇಹಳ್ಳಿಗೆ 37,000 ರೂಪಾಯಿ, ಕೇರಳಾಪುರಕ್ಕೆ 30,000 ರೂಪಾಯಿ, ಬಾಣಾವರ ಪಟ್ಟಣಕ್ಕೆ 37,000 ರೂಪಾಯಿ, ರಾಮನಾಥಪುರಕ್ಕೆ 17,000 ರೂಪಾಯಿ, ಅಗ್ರಹಾರಕ್ಕೆ 35,000 ರೂಪಾಯಿ, ಹಾರನಹಳ್ಳಿಗೆ 47,000 ರೂಪಾಯಿ ಹೀಗೆ ಅಂದಾಜಾಗಿದೆ.

Second Five-Year Plan.

(Establishment of Industrial Estates)

Q.—149. Sri K. LAKKAPPA (Channarayapatna).—

Will the Government be pleased to state :—

(*a*) whether they have decided to establish Industrial Estates during the Second Five-Year Plan ;

(*b*) the kind of help that Government offer under this scheme for persons who intend to start some industry ;

(*c*) the kinds of industries envisaged under this scheme ;

(*d*) the places selected for implementing this scheme ?

A.—Sri H. M. CHANNABASAPPA (Minister for Industries).—

(*a*) Yes.

(*b*) The requisite site and buildings will be made available on convenient hire purchase or lease terms.

(*c*) Small-scale Industries like light engineering industries which include machine shops, casting and foundry

works, sheet metal works, manufacture of machine spare parts, electroplating, etc.

(*d*) Not finalised yet.

ಶ್ರೀ ಕೆ. ಲಕ್ಕಪ್ಪ.—ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟು ಕಡೆ ಕೈಗಾರಿಕೆ ಎಸ್ಟೇಟುಗಳನ್ನು ಏರ್ಪಡಿಸಲು ಯೋಚನೆ ಮಾಡಲಾಗಿದೆ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಐದು ಸ್ಥಳಗಳಲ್ಲಿ ಮಾಡಬೇಕೆಂದಿದೆ, ಯಾವಯಾವ ಸ್ಥಳಗಳಲ್ಲಿ ಎಂಬುದು ಇನ್ನೂ ನಿರ್ಧಾರವಾಗಿಲ್ಲ.

ಶ್ರೀ ಕೆ. ಲಕ್ಕಪ್ಪ.—ಯಾವಾಗ ನಿರ್ಧಾರ ಮಾಡುವುದು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಶೀಘ್ರದಲ್ಲೇ ಮಾಡುತ್ತೇವೆ.

ಶ್ರೀ ಕೆ. ಲಕ್ಕಪ್ಪ.—ಇದಕ್ಕೆ ಬೇಕಾದ ಎಲ್ಲ ಅನುಕೂಲತೆಗಳೂ ಹಾಸನ ಟೌನಿನಲ್ಲಿದೆಯೆಂಬುದು ಸರ್ಕಾರದ ಅವಗಾಹನೆಗೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ವಿಚಾರ ಮಾಡಬೇಕು.

ಶ್ರೀ ಕೆ. ಲಕ್ಕಪ್ಪ.—ಇದುವರೆಗೆ ಏನಾದರೂ ಪರಿಶೀಲನೆ ನಡೆಸಿದ್ದೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಎಲ್ಲಿ ಯಾವಯಾವ ಅನುಕೂಲತೆಯಿದೆಯೆಂಬ ವಿಷಯ ಸಂಗ್ರಹ ಮಾಡುವವರು ಡೈರೆಕ್ಟರು.

ಶ್ರೀ ಕೆ. ಲಕ್ಕಪ್ಪ.—(*c*) ಪ್ರಶ್ನೆಯ ಉತ್ತರದಲ್ಲಿ ಏರ್ಪಡಿಸಬೇಕೆಂದು ಉದ್ದೇಶಿಸಿರುವ ಕೈಗಾರಿಕೆಗಳ ಹೆಸರನ್ನು ಹೇಳಲಾಗಿದೆ. ಅದಕ್ಕೆ ಕೇಂದ್ರಸರ್ಕಾರದಿಂದ ಯಾವ ರೀತಿ ಸಹಾಯ ಬರುತ್ತದೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಗತ್ಯವಾದ ಎಲ್ಲಾ ಹಣವನ್ನೂ ಕೇಂದ್ರಸರ್ಕಾರ ಕಡಮೆ ಬಡ್ಡಿಯಲ್ಲಿ ದೀರ್ಘಕಾಲಾವಧಿಯ ಸಾಲದರೂಪವಾಗಿ ಕೊಡುತ್ತಾರೆ.

ಶ್ರೀ ಕೆ. ಲಕ್ಕಪ್ಪ.—ಪ್ರೈವೇಟ್ ಕಾರ್ಪೊರೇಷನ್ಸ್ ಈ ಕೈಗಾರಿಕೆ ಪ್ರಾರಂಭಿಸುವುದಾದರೆ ಅವರಿಗೆ ಸಹಾಯ ಮಾಡಲಾಗುವುದೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಾಗೆ ಮಾಡಿದ ಪಕ್ಷದಲ್ಲಿ ಅವರಿಗೂ ಕೂಡ ಹಣ ಸಹಾಯ ಮಾಡುವುದಕ್ಕೆ ಸರ್ಕಾರ ಸಿದ್ಧವಾಗಿದೆ.

Sri B. NARAYANASWAMY.—May I know where the Industrial Estate is proposed to be started in Mysore ?

Sri H. M. CHANNABASAPPA.—In Yadavagiri extension, Mysore City.

Sri B. NARAYANASWAMY.—Have the Government prepared any blue-print with regard to the starting of these Industrial Estates ?

Sri H. M. CHANNABASAPPA.—The nature of the Estate and the kind of help that is proposed to be given is all explained. It is only to help and supplement the resources and encourage the existing industries that are working in various parts of the country.

Sri B. NARAYANASWAMY.—Is it to encourage the cottage industries and small-scale industries ?

Sri H. M. CHANNABASAPPA.—Yes ; also some medium scale industries.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಚಿಕ್ಕಮಗಳೂರು ಜಿಲ್ಲೆಯಲ್ಲೂ ಈ ಒಂದು ಕೈಗಾರಿಕೆಯನ್ನು ಸ್ಥಾಪನೆ ಮಾಡಲಾಗುವುದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸ್ಥಾಪನೆ ಮಾಡುವಾಗ ಅದನ್ನು ಪರ್ಯಾಲೋಚಿಸುತ್ತೇವೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಂದು ಕೈಗಾರಿಕೆಯೂ ಇಲ್ಲದಿರುವುದರಿಂದ ಅಲ್ಲೂ ಈ ಕೈಗಾರಿಕೆಯೊಂದನ್ನು ಸ್ಥಾಪನೆ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಐದು ಕೈಗಾರಿಕೆಗಳನ್ನು ಪ್ರಾರಂಭಿಸಬೇಕೆಂದು ನಿರ್ಧಾರವಾಗಿದೆ. ಎಲ್ಲಿ ಮಾಡಬೇಕೆಂಬ ಬಗ್ಗೆ ತಮ್ಮ ಅಭಿಪ್ರಾಯ ತೆಗೆದುಕೊಳ್ಳುವುದಕ್ಕೆ ಸಿದ್ಧವಾಗಿದ್ದೇವೆ. ಅದನ್ನು ಕೂಲಂಕಷವಾಗಿ ಪರಿಶೀಲಿಸಿ ಎಲ್ಲಿ ಮಾಡಬೇಕೆಂಬುದನ್ನು ತೀರ್ಮಾನ ಮಾಡುತ್ತೇವೆ.

ಶ್ರೀ ಡಿ. ಆರ್. ಕರಿಗೌಡ.—ಮೈಸೂರು ಯಾದವಗಿರಿಯಲ್ಲಿ ಯಾವ ಕೈಗಾರಿಕೆಯನ್ನು ಪ್ರಾರಂಭ ಮಾಡುತ್ತೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಪ್ರಪೋಸಲ್ ಇದೆಯೆಂದು ಹೇಳಿದೆ.

ಶ್ರೀ ಡಿ. ಆರ್. ಕರಿಗೌಡ.—ಅಲ್ಲಿ ಏನೇನು ಮಾಡಬಹುದು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದು ಕೈಗಾರಿಕೆ ಮಾಡುವುದಲ್ಲ. ಕೈಗಾರಿಕೆಯ ಎಸ್ಟೇಟುಗಳನ್ನು ಪ್ರಾರಂಭಿಸುವುದಕ್ಕೆ ಸಂಬಂಧಪಟ್ಟಿದ್ದು.

ಶ್ರೀ ಡಿ. ಆರ್. ಕರಿಗೌಡ.—ಅಲ್ಲಿ ಏನು ಅನುಕೂಲವಿದೆಯೆಂದು ಈ ನಿರ್ಧಾರ ಮಾಡಿದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಲ್ಲಿ ನೀರು, ಪವರ್ ಮುಂತಾದ ಅನುಕೂಲಗಳಿರುವುದರಿಂದ ಅದನ್ನು ಚುನಾಯಿಸಿದೆ.

ಶ್ರೀ ಡಿ. ಆರ್. ಕರಿಗೌಡ.—ಅಲ್ಲಿ ಯಾವ ಕೈಗಾರಿಕೆಗೆ ಅನುಕೂಲವಿದೆ, ಯಾವುದು ಮಾಡಿದರೆ ಚೆನ್ನಾಗಿ ಆಗುತ್ತದೆ ಎಂಬುದನ್ನು ಯೋಚನೆ ಮಾಡಿದ್ದೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮೈಸೂರು ಸಿಟಿಯಲ್ಲಿರುವ ಸಣ್ಣಪುಟ್ಟ ಕೈಗಾರಿಕೆಗಳನ್ನೆಲ್ಲಾ, ಇಂಡಸ್ಟ್ರಿಯಲ್ ಎಸ್ಟೇಟ್ ಮಾಡಿದರೆ, ಮಾಡುವುದಕ್ಕೆ ಏರ್ಪಾಡು ಮಾಡುತ್ತೇವೆ.

Sri K. S. VASAN.—Will the Government consider the desirability of starting one of the Industrial Estates in K.G.F. ?

Sri H. M. CHANNABASAPPA.—That will also be taken into consideration.

Sri M. PALANIYAPPAN.—Is there any proposal before the Government to start an Industrial Estate in Bangalore in view of the numerous industries that are working here ?

Sri H. M. CHANNABASAPPA.—Not at this moment anyway.

Sri M. PALANIYAPPAN.—The Minister was pleased to say that five Industrial Estates were going to be started. Will the Government consider the question of starting one in Bangalore ?

Sri H. M. CHANNABASAPPA.—The question of making any development on the industrial side will depend on the time when we will be able to provide ample water supply at Bangalore.

Sri M. PALANIYAPPAN.—May I know the total cost that would involve for starting it at Mysore ?

Sri H. M. CHANNABASAPPA.—It is expected to cost Rs. 14·5 lakhs.

ಶ್ರೀ ಬಿ. ಮಾಧವಾಚಾರ್.—ತರೀಕರೆ ಮತ್ತು ಭದ್ರಾವತಿಗಳ ಮಧ್ಯೆ ಇಂಥ ಒಂದು ಇಂಡಸ್ಟ್ರಿಯಲ್ ಎಸ್ಟೇಟನ್ನು ಪ್ರಾರಂಭಿಸಲು ಬಹಳ ಪ್ರಶಸ್ತವಾದ ಸ್ಥಳವಿದೆ ಎನ್ನುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕಾನನವಿರ ತಕ್ಕಂಥ ಪ್ರದೇಶಗಳಲ್ಲಿ ಈ ಕಾರ್ಯವನ್ನು ಕೈಗೊಳ್ಳುವುದು ಯಾವಾಗ್ಲೂ ಉಚಿತವಾಗಿಯೇ ಇರುತ್ತದೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಮಳವಳ್ಳಿಯಲ್ಲಿ ಇಂಥ ಒಂದು ಇಂಡಸ್ಟ್ರಿಯಲ್ ಎಸ್ಟೇಟನ್ನು ಪ್ರಾರಂಭಿಸುವ ಏರ್ಪಾಡಿದೆಯೇ ?—ಅಲ್ಲಿ ಒಂದು ಬೈಸಿಕಲ್ ತಯಾರಿಸುವ ಕಾರ್ಖಾನೆಯನ್ನು ಏರ್ಪಾಡು ಮಾಡಬೇಕೆಂದಿದ್ದಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ಇಂಡಸ್ಟ್ರಿಯಲ್ ಎಸ್ಟೇಟಿಗೂ ಆ ಕಾರ್ಖಾನೆಗೂ ಸಂಬಂಧವಿಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಮಳವಳ್ಳಿಯಲ್ಲಿ ಒಂದು ಕೈಗಾರಿಕಾ ಎಸ್ಟೇಟನ್ನು ತೆರೆಯಲು ಹಾಗಾದರೆ ಅವಕಾಶವಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಂದೊಂದು ಕೈಗಾರಿಕೆಗೂ ಇದನ್ನು ಮಾಡುವುದಕ್ಕಾಗುವುದಿಲ್ಲ.

New Railway Lines.

Q.—8. Sri S. KARIAPPA (Virupakshapura).—

Will the Government be pleased to state :—

(*a*) whether they have made any proposals for laying of new Railway lines in the State;

(*b*) if they have so made, the names of those lines;

(*c*) if they have not made, whether they will propose laying of the Mettur-Bangalore line *via* Kodihalli, Kanakapura and Harohalli ?

A.—Sri H. M. CHANNABASAPPA (Minister for Industries).—

(*a*) Yes.

(*b*) 1 Chamarajanagar-Satyamangalam.

2 Chitaldrug-Rayadoorg.

3 Kadur-Chickmagalur-Mangalore.

4 Kottur-Davangere or Harihar *via* Harapanahalli;

5 Rayadoorg to Tiptur, and

6 Mysore or Krishnarajanagar to Coorg.

(*c*) No.

ಶ್ರೀ ಎಸ್. ಕರಿಯಪ್ಪ.—ಸೇಲಂನಿಂದ ಬೆಂಗಳೂರಿಗೆ—ಆನೆಕಲ್ ಮಾರ್ಗವಾಗಿ ರೈಲು ಹಾಕಲು ಒಂದು ಸರ್ವೆ ಕಾರ್ಯ ನಡೆಸಲಾಗಿದ್ದಿತು ಎಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೇ ?

Sri H. M. CHANNABASAPPA.—I want notice for that.

ಶ್ರೀ ಎಸ್. ಕರಿಯಪ್ಪ.—ಮೆಟ್ಟೂರು ಮಾರ್ಗವಾಗಿ ನೇರವಾಗಿ ಬೆಂಗಳೂರಿಗೆ ರೈಲುಹಾಕಿದರೆ 100 ಮೈಲಗಳ ಫಾಸಲೆ ಕಡಮೆಯಾಗುತ್ತದೆ ಎನ್ನುವುದು ತಮ್ಮ ಅವಗಾಹನೆಗೆ ಬಂದಿದೆಯೇ ?

*Sri H. M. CHANNABASAPPA.—I will examine it.

ಶ್ರೀ ಎಸ್. ಕರಿಯಪ್ಪ.—ತಾವು ಈ ಮಾರ್ಗವನ್ನೇ ಕೈಗೊಂಡಪಕ್ಷದಲ್ಲಿ ದೊಡ್ಡ ದೊಡ್ಡಕಾಡುಗಳು ಸಿಕ್ಕದೆ, ದೊಡ್ಡ ಊರುಗಳೂ ಪಟ್ಟಣಗಳೂ ಸಿಕ್ಕುತ್ತವೆ ಎಂಬ ಅಂಶ ತಮಗೆ ಗೊತ್ತಿದೆಯೇ ?

Sri H. M. CHANNABASAPPA.—There are no two opinions on that.

ಶ್ರೀ ಎಸ್. ಕರಿಯಪ್ಪ.—ಮುಂದೆ ಈ ರೈಲ್ವೆ ಲೈನ್‌ಗಳನ್ನು ಹಾಕತಕ್ಕ ಸಂದರ್ಭ ಬಂದಾಗ ತಮ್ಮ ಸಲಹೆಗಳನ್ನು ಸಂಬಂಧಪಟ್ಟವರಿಗೆ ನೀಡತಕ್ಕ ಸಮಯದಲ್ಲಿ ಈ ಅಂಶಗಳಿಗೆ ತಾವು ಗಮನ ಕೊಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ತಮ್ಮ ಸಲಹೆ ಅಷ್ಟು ಉತ್ತಮ ಎಂದು ಕಂಡುಬಂದರೆ ಇದನ್ನು ಕಾರ್ಯಗತ ಮಾಡಲು ಕೈಗೊಳ್ಳಲಾಗುವುದು.

Sri V. M. MASCARENHAS.—Has the Government recommended Kadur-Chickmagalur Mangalore Railway line?

Sri H. M. CHANNABASAPPA.—Yes.

Sri V. M. MASCARENHAS.—Do not this Government know that the Government of India has almost decided on Hassan-Mangalore line ?

Sri H. M. CHANNABASAPPA.—The Government of India has not made any communication to that effect. Anyway, survey is going on.

Sri V. M. MASCARENHAS.—If survey is going on, is it not an admitted fact that the line will be given preference and taken up immediately under the Second Five-Year Plan ?

Sri H. M. CHANNABASAPPA.—All things which are surveyed and examined may not be taken up also.

Sri V. M. MASCARENHAS.—Are not the Government aware that when these discussions came up, the Chief Minister

made it very clear that it was almost a kind of admission by the Central Government that Hassan-Mangalore line would be given immediate preference ?

Sri H. M. CHANNABASAPPA.—I do concede that there are immediate prospects of the line being taken up.

Mr. DEPUTY SPEAKER.—They have just mentioned what this Government has recommended.

Sri V. M. MASCARENHAS.—I want to tell them that that recommendation is not very wise.

Sri H. M. CHANNABASAPPA.—Whether it is wise or not, is a matter of opinion.

ಶ್ರೀ ಎಂ. ಚಿಕ್ಕಲಿಂಗಯ್ಯ.—ಸ್ವಾಮಿ, 1952ರಲ್ಲಿ ಮದ್ದೂರು-ಮಳವಳ್ಳಿ ಮಾರ್ಗವಾಗಿ ಕೊಳ್ಳೇಗಾಲಕ್ಕೆ ಒಂದು ರೈಲ್ವೆ ಲೈನನ್ನು ಹಾಕಲು ಶಿಫಾರ್ಸು ಮಾಡಲಾಗಿತ್ತು ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ವಿಚಾರ ನನಗೆ ಜ್ಞಾಪಕವಿಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈ ಹಿಂದೆ ಕೇಂದ್ರ ಸರ್ಕಾರಕ್ಕೆ ಶಿಫಾರ್ಸು ಮಾಡಲು ಅಲ್ಲಿಂದ ಒಂದು ರೆಸಲ್ಯೂಷನ್ ಕೂಡ ಪಾಸಾಗಿ ಬಂದಿತ್ತು, ಹಾಗಿದ್ದರೂ ತಮಗೆ ಈ ವಿಚಾರ ತಿಳಿದಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ಮಾನ್ಯ ಸಭೆಯು ಅದನ್ನು ತೀರ್ಮಾನ ಮಾಡಿದ್ದರೆ ಮಾತ್ರ ಮಾಡಲಾಗುವುದು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಆ ರೀತಿ ಈ ಲೈನನ್ನು ಈ ಹಿಂದೆಯೇ ನಿರ್ಣಯಮಾಡಿ ಅಂಗೀಕಾರ ಮಾಡಿದ್ದರೂ ತಾವೇಕೆ ಈಗ ಇದನ್ನು ತಮ್ಮ ಪಟ್ಟಿಯಲ್ಲಿ ಸೇರಿಸಿಲ್ಲ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ವಿಚಾರವನ್ನು ಪರಿಶೀಲನೆ ಮಾಡಲಾಗುವುದು.

ಶ್ರೀ ಎಸ್. ಎಚ್. ತಮ್ಮಯ್ಯ.—ಈ ಹಿಂದೆ ಮೈಸೂರಿನಿಂದ ಅರಕಲಗೂಡು ಮಾರ್ಗವಾಗಿ ಹಾಸನ-ಮಂಗಳೂರಿಗೆ ಒಂದು ರೈಲ್ವೆ ಲೈನು ಸರ್ವೆ ಆಗಿದ್ದ ವಿಚಾರ ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ಬಗ್ಗೆ ಸರ್ವೆ ಕಾರ್ಯಗಳೇನೂ ಆಗಿಲ್ಲ. ಶಿಫಾರ್ಸು ಮಾತ್ರ ಮಾಡಲಾಗಿತ್ತು ಅಷ್ಟೇನೆ.

I wish to inform Sri Chikkalingaiya that about Maddur-Kollegal Line *via* Malavalli I will examine and if no action has been taken, necessary action will be taken.

Sri D. DEVARAJ URS.—Government are pleased to answer that all these six lines have been recommended to the Government of India. What are the various stages in which these works are pending ?

Sri H. M. CHANNABASAPPA.—The Hon'ble Member had already an answer on the floor of this House some time back.

ಈಗ ಹೆಂಡಕ್ಕೆ ಬದಲು ಟಾನಿಕ್ ಎಂದು ಷುರುವಾಗಿದೆ. ಅಶ್ವಗಂಧಿ ಟಾನಿಕ್, ಶ್ರೀ ಕೃಷ್ಣ ಟಾನಿಕ್, ಮಹಾತ್ಮಾ ಗಾಂಧಿ ಟಾನಿಕ್ ಎಂದು ಏನೇನೋ ಹೆಸರುಗಳನ್ನು ಮತ್ತು ಔಷಧದ ಹೆಸರುಗಳನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿದ್ದಾರೆ. ಡಾಕ್ಟರ್ ನಾಗನಗೌಡರು ಅಜ್ಜಂಪುರಕ್ಕೆ ಬಂದಿದ್ದ ಕಾಲದಲ್ಲಿ ಅವರಿಗೆ ಇಂಥ ಟಾನಿಕ್ ಸೀಸೆಯೊಂದನ್ನು ಸ್ಯಾಂಪಲ್‌ಗಾಗಿ ತೋರಿಸಿಕೊಡಲಾಯಿತು. ಅದರಮೇಲೆ ಅವರು ಏನು ಕ್ರಮ ತೆಗೆದುಕೊಂಡರೆಂಬುದು ಗೊತ್ತಿಲ್ಲ. ಈ ಟಾನಿಕ್ಕುಗಳಲ್ಲಿ ಸುಮಾರು ಶೇಕಡ 70, 80 ಭಾಗ ಆಲ್ಕೋಹಾಲ್ ಇರುತ್ತದೆ. ಇಂಥದು ಮಾರಾಟವಾಗುತ್ತಿದೆ. ಇದರ ಮಾರಾಟಕ್ಕೆ ಯಾರು ಪರ್ಮಿಟ್ ಕೊಟ್ಟರೋ ದೇವರೇ ಬಲ್ಲ. ಶ್ರೀ ಕೃಷ್ಣ ಪರಮಾತ್ಮ, ಮಹಾತ್ಮಾ ಗಾಂಧಿ, ಹರಿಶ್ಚಂದ್ರ ಎಂದು ಏನೇನೋ ಹೆಸರು ಇಟ್ಟು alcohol ಮಾರತಕ್ಕ ಕಾಲ ಬಂದಿದೆ. ಇದು ಬಹಳ ನಾಚಿಕೆಗೇಡಿನ ವಿಷಯವೆಂದು ನಾನು ವಿಷಾದದಿಂದ ಹೇಳಬೇಕಾಗಿದೆ. ಕಡೂರು ಟೌನಿನಲ್ಲಿ, ನಾನು ಇಲ್ಲಿಗೆ ಅಸೆಂಬ್ಲಿಗೆ ಬರುವುದಕ್ಕೆ ಎರಡು-ಮೂರು ದಿನಗಳ ಮುಂಚೆ, ಒಂದು ದಿನ ಸಾಯಂಕಾಲ ಸುಮಾರು ಏಳು ಘಂಟೆ ಸಮಯದಲ್ಲಿ, ನಾನೂ ಮತ್ತು ನನ್ನ ಮಿತ್ರರೊಬ್ಬರೂ ಹೋಗುತ್ತಿದ್ದಾಗ ಒಬ್ಬ ಬಳೆಗಾರ, ಹೆಗಲಮೇಲೆ ಬಳೆಹಾಕಿಕೊಂಡು, ಈ ಟಾನಿಕ್ ಕುಡಿದಿದ್ದು ನಮ್ಮ ಮೇಲೆ ಬಿದ್ದ ಎಂದು ಮೊನ್ನೆತಾನೆ ಹೇಳಿದ್ದೇನೆ. ಇಂಥ ಟಾನಿಕ್ ಎಲ್ಲೆಲ್ಲಿ ಪಾನನಿರೋಧ ಜಾರಿಯಲ್ಲಿದೆಯೋ ಅಲ್ಲೆಲ್ಲ ಮಾರಾಟವಾಗುತ್ತಿದೆ. ನಾನೂ ಒಬ್ಬ ಅಸೆಂಬ್ಲಿ ಸದಸ್ಯನಾಗಿ ಇದನ್ನೆಲ್ಲ ಹೇಳುತ್ತಿದ್ದೇನೆ. ಇಂಥದಕ್ಕೆ ಸರ್ಕಾರದವರು ಗಮನ ಕೊಡದೆ ಇದ್ದರೆ, ಇಂಥ ಟಾನಿಕ್‌ಗಳನ್ನು ಮಾಡಿ ಮಾರುತ್ತಿದ್ದರೆ ಎಷ್ಟು ನಾಚಿಕೆಗೇಡಿನ ಕೆಲಸವಾಗಿದೆ ಎನ್ನಿಸುತ್ತದೆ. ದೇಶದಾದ್ಯಂತ ಪಾನನಿರೋಧವನ್ನು ಜಾರಿಗೆ ಕೊಡಬೇಕು. ಈಗೇನಾಗಿದೆಯೆಂದರೆ ಹೆಂಡ ಹೆಚ್ಚಾಗಿ ಕುಡಿಯುವವರು ಬಿಟ್ಟಿದ್ದಾರೆ; ಗಾಂಧಿ ತತ್ವ ಹೇಳುವುದಕ್ಕೆ ಹೊರಟಿರುವವರು, ಕಾವ್ಯ ಹೇಳುವವರು, ಶ್ರೀ ಕೃಷ್ಣ ಪರಮಾತ್ಮನ ಹೆಸರನ್ನು ಹೇಳುವವರು ಕುಡಿಯುವುದಕ್ಕೆ ಷುರುಮಾಡಿದ್ದಾರೆ. ಇಂಥ ಕಾಲದಲ್ಲಿ ಸರ್ಕಾರದವರು ಈಗಲಾದರೂ ಗಮನ ಕೊಡಬೇಕು. ಒಂದು ಬಾಟಲಿಗೆ ಒಂದು ರೂಪಾಯಿ ಒಂದಾಣೆಯಂತೆ ಟಾನಿಕ್ ಮಾರಾಟವಾಗುತ್ತಿದೆ. ಅನೇಕ ಪೌರಸಭೆಗಳಿಗೆ ಮೊನ್ನೆತಾನೆ ಚುನಾವಣೆ ನಡೆದಿದೆ. ಕಡೂರು ಟೌನಿನಲ್ಲಿ ನಡೆದ ಒಂದು ಉದಾಹರಣೆ ಹೇಳುತ್ತೇನೆ. ಚುನಾವಣೆ ನಡೆದ ದಿವಸ ಈ ಟಾನಿಕ್ ಸುಮಾರು ಐದು ಸಾವಿರ ಸೀಸೆ ಆ ಒಂದು ಟೌನಿನಲ್ಲಿ ಖರ್ಚಾಗಿದೆ. ಗಿರಿ ಎಕ್ಸ್‌ಪ್ರೆಸ್ ಹನ್ನೆರಡು ಘಂಟೆಗೆ ಇಲ್ಲಿಗೆ ಬಂದು ಮೂರು ಘಂಟೆಗಳಿಗೆ ಇಲ್ಲಿಂದ ಹೋಗುತ್ತದೆ. ಅದರಲ್ಲೂ ಈ ಟಾನಿಕ್ ಸಾಗುತ್ತದೆ. ಈ ಟಾನಿಕ್ ಹೆಸರನ್ನು ಹೇಳಿಕೊಂಡು ಕಳ್ಳಬಟ್ಟಿ ಶರಾಬನ್ನೂ ಸರಬರಾಯಿ ಮಾಡುತ್ತಿದ್ದಾರೆ. ಚಿಕ್ಕಮಗಳೂರು, ಕಡೂರು ಕಡೆಗೆ ಜಾಸ್ತಿ ಹೋಗುತ್ತಿವೆ, ಈಗ ಕಳ್ಳಬಟ್ಟಿ ಸಾರಾಯಿನ ಜಾಗದಲ್ಲಿ ಅಶ್ವಗಂಧಿ ಟಾನಿಕ್, ಶ್ರೀ ಕೃಷ್ಣ ಪರಮಾತ್ಮ ಟಾನಿಕ್ ಮುಂತಾದ ಟಾನಿಕ್ಕುಗಳು

(ಶ್ರೀ ವೈ.ಎಂ. ಚಂದ್ರಶೇಖರಯ್ಯ)

ಉಪಯೋಗಿಸಲ್ಪಡುತ್ತಿವೆ. ಆ ಟಾನಿಕ್ಕಿನಲ್ಲಿ ಆಲ್ಕೋಹಾಲ್ ಶೇಕಡ ಸುಮಾರು 70, 80 ರಷ್ಟು ಇದೆ. ಅದು ಬೆಂಗಳೂರಿನಲ್ಲಿ ಖೋಡೆ ಲ್ಯಾಬೊರೇಟರಿಯಲ್ಲಿ ತಯಾರಾಗುತ್ತಿದೆ. ಅದಕ್ಕೆ ಐ.ಜಿ.ಪಿ. ಪರ್ಮಿಷನ್ ಕೊಟ್ಟಿದ್ದಾರೆಂದು ಹೇಳುತ್ತಾರೆ. ಅದನ್ನು ವಿಚಾರಿಸಿ ನಾನು ಸೀಸೆ ತೆಗೆದುಕೊಂಡು ಬಂದು ಡಾಕ್ಟರ ಹತ್ತಿರ ಪರೀಕ್ಷೆ ಮಾಡಿಸಿದ್ದೇನೆ. ಅದಕ್ಕೆ ಸ್ಪಿರಿಟ್ ಕೂಡ ಹಾಕಿದ್ದಾರೆ. ನೆಲದ ಮೇಲೆ ಹಾಕಿ ಹತ್ತಿಸಿದರೆ ಉರಿಯುತ್ತದೆ. ಈಗಲಾದರೂ ಇದನ್ನು ಗಮನಿಸಿ ಸರ್ಕಾರದವರು ದೇಶದಾದ್ಯಂತ ಪಾನನಿರೋಧವನ್ನು ಜಾರಿಗೆ ತರಬೇಕು. ಪಾನನಿರೋಧ ಜಾರಿಯಲ್ಲಿರುವ ಕಡೆ ಈ ಟಾನಿಕ್ಕನ್ನು ಮಾರಲು ಅವಕಾಶ ಕೊಡಬಾರದು. ಜಿಲ್ಲಾಧಿಕಾರಿಗಳು ಸರ್ಟಿಫೈ ಮಾಡಬೇಕು. ಅದನ್ನು ಮಾಡದಿದ್ದರೆ ಯಾರೂ ಕೇಳುವುದಿಲ್ಲ. ನಾವು ಕೇಳುವ ಹಾಗಿಲ್ಲವೆಂದು ಜಿಲ್ಲಾಧಿಕಾರಿಗಳು ಹೇಳುತ್ತಾರೆ. ಜಿಲ್ಲಾಧಿಕಾರಿಗಳ ಗಮನಕ್ಕೂ ಬಾರದೆ ಇಂತಹ ಆಲ್ಕೋಹಾಲ್ ಬೆರೆತಿರುವ ಟಾನಿಕ್ಕನ್ನು ಮಾರುವುದು ಬಹಳ ಶೋಚನೀಯ. ಡಾಕ್ಟರ್ ನಾಗನಗೌಡರಿಗೆ ತೋರಿಸಿ ಸೀಸೆಯನ್ನು ಪರೀಕ್ಷೆ ಮಾಡಿಸಿ ಎಂದು ಹೇಳಿದ್ದೆವು. ಅವರು ಮರೆತರೋ ಏನೋ ಗೊತ್ತಿಲ್ಲ. ಈ ರೀತಿಯಾಗಿ ನಡೆಯುವುದನ್ನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಸಾಮಾನ್ಯವಾಗಿ ಪಾನನಿರೋಧ ಜಾರಿಯಲ್ಲಿರುವ ಕಡೆ ಕುಡಿಯದಿರುವವರೂ ಇದ್ದಾರೆ. ಮುಖ್ಯವಾಗಿ ಈ ಟಾನಿಕ್ ಇರುವಾಗ ಯಾರಿಗೂ ಮಾನ ಮರ್ಯಾದೆ ಬರುವಹಾಗಿಲ್ಲ. ಸುಮಾರು ಒಂದು, ಒಂದೂವರೆ ವರ್ಷದಿಂದ ಅದರಲ್ಲೂ ಎರಡು ತಿಂಗಳಿಂದೀಚೆಗೆ ಬೆಂಗಳೂರಿಗೆ ಬಂದು ಟಾನಿಕ್ ತೆಗೆದುಕೊಂಡು ಹೋಗುವುದು ಜಾಸ್ತಿಯಾಗಿದೆ. ಅದಕ್ಕೆ ದೇವರ ಹೆಸರು, ದೊಡ್ಡವರ ಹೆಸರು ಇಟ್ಟು ಒಳ್ಳೊಳ್ಳೆಯ ಹೆಸರಿನಿಂದ ಮಾರುವುದಕ್ಕೆ ಅಂಗಡಿಗಳಿಗೆ ಅವಕಾಶ ಕೊಟ್ಟಿರುವುದು ನಾಚಿಕೆಗೇಡು. ಈಗಲಾದರೂ ಎಷ್ಟೇ ಕಷ್ಟ ಬರಲಿ, ಏನೇ ಬರಲಿ ಸಂಸ್ಥಾನಾದ್ಯಂತ ಪಾನನಿರೋಧ ಜಾರಿಗೆ ತರಬೇಕು. ಎರಡು ಕೋಟಿ ರೂಪಾಯಿ ಉತ್ಪತ್ತಿ ನಿಂತರೂ ಚಿಂತೆಯಿಲ್ಲ. ಈ ಉತ್ಪತ್ತಿ ಕಡಿಮೆಯಾದರೆ ಕೊಡಿಸಬೇಕಾದರೆ ಒಂದು ಕೆರೆ ಕಟ್ಟುವುದನ್ನಾದರೂ ನಿಲ್ಲಿಸಿ. ಯಾರೇ ಕುಡಿಯಲಿ ಶಿಕ್ಷೆಮಾಡಿ. ಎಕ್ಸೈಜ್ ಇಲಾಖೆಯಲ್ಲಿ, ಪೋಲೀಸ್ ಇಲಾಖೆಯಲ್ಲಿ ಸರಿಯಾದ ರೀತಿ ನೀತಿ ಇಟ್ಟುಕೊಂಡಿಲ್ಲ. ಸಂಸ್ಥಾನಾದ್ಯಂತ ಒಂದು ರೂಪಾಯಿನಲ್ಲಿ ಹನ್ನೆರಡು ಆಣೆ ಭಾಗ ಪೋಲೀಸಿನವರೇ ಕುಡಿಯುತ್ತಾರೆ. ಪೋಲೀಸಿನವರು ಯಾರು ಕುಡಿಯುತ್ತಾರೋ ಅವರಿಗೆ ಡಿಸ್‌ಮಿಸ್ ಮಾಡಬೇಕು. ಕಳ್ಳನ ಕೈಗೆ ಗಂಟುಕೊಟ್ಟಹಾಗಾಗಿರುವುದರಿಂದ ಪೋಲೀಸಿನವರು ತಪ್ಪಿತಸ್ಥರನ್ನು ಹಿಡಿಯುವುದು ಹೇಗೆ! ಈ ರೀತಿಯಾಗಿ ಸಿಬ್ಬಂದಿ ಖರ್ಚು ಸರ್ಕಾರದಲ್ಲಿ ಜಾಸ್ತಿಯಾಗಿದೆಯೇ ವಿನಾ ಅದರಿಂದ ಸಾಕಷ್ಟು ಪ್ರಯೋಜನವಾಗುತ್ತಿಲ್ಲ. ಸ್ವಾತಂತ್ರ್ಯ ಬಂದಿರುವಾಗ ವ್ಯವಸ್ಥಿತ ರೀತಿಯಲ್ಲಿ ದೇಶಾದ್ಯಂತ ಪಾನನಿರೋಧವನ್ನು ಜಾರಿಗೆ ತರಬೇಕು. ಈಗ ನಾನು ಹೇಳಿದ ಟಾನಿಕ್ಕನ್ನು ಕುಡಿದು ಕಡೂರು ಟೌನಿನಲ್ಲಿ ಇಬ್ಬರು ಸತ್ತಿದ್ದಾರೆ. ಪತ್ರಿಕೆಯಲ್ಲಿ ಅದನ್ನು ನೋಡಬಹುದು. ಇಂಥ ಟಾನಿಕ್ ಕುಡಿದುದರಿಂದ ಹೀಗಾಗಿದೆಯೆಂದು ಪರೀಕ್ಷೆಮಾಡಿ ಹೇಳಿದ್ದಾರೆ. ಇಂಥ ಅನ್ಯಾಯ ದೇಶದಲ್ಲಾಗುತ್ತಿರುವುದು ಬಹಳ ಶೋಚನೀಯ, ಅದೂ ನಮ್ಮ ಸಂಸ್ಥಾನದಲ್ಲಿ ಪಾನ ನಿರೋಧ ಜಾರಿಯಲ್ಲಿರುವ ಕಡೆ ಅತಿಯಾಗಿ ನಡೆಯುತ್ತಿದೆ. ಇದಕ್ಕೆ ತಕ್ಕ ಬಂದೋಬಸ್ತು ಮಾಡಬೇಕು. ಈ ವರ್ಷ ಸಂಸ್ಥಾನದಲ್ಲೆಲ್ಲಾ ಪಾನನಿರೋಧ ಜಾರಿಗೆ ತರಬೇಕು. ಎರಡು ತಿಂಗಳ ಹಿಂದೆ ನಮ್ಮ ಕಡೆ ಪೋಲೀಸ್ ಇನ್ಸ್‌ಪೆಕ್ಟರ್ ಒಂದು ಸಮಿತಿ ಮಾಡಿ ಕಳ್ಳಬಟ್ಟಿ ಇಳಿಸುವುದನ್ನು ತಪ್ಪಿಸಲು ಕ್ರಮ ಕೈಗೊಂಡರೆಂದು ಹೇಳುತ್ತಾರೆ. ಆ ರೀತಿ ಸಲಹೆ ಬೇಕಾದರೆ ಕೊಡಿ. ಸರಿಯಾದ ಏರ್ಪಾಡು ಮಾಡಿ ಬಂದೋಬಸ್ತು ಮಾಡುವುದು ಸೂಕ್ತ. ಈಗಲಾದರೂ ಸರ್ಕಾರದವರು ದಯಯಿಟ್ಟು ನಾನು ಹೇಳಿದ ಟಾನಿಕ್ ಶೋಧನೆ ಮಾಡಿಸಬೇಕು. ಅಂಥಾದ್ದಕ್ಕೆ ಆಲ್ಕೋಹಾಲ್ ಶೇಕಡ ಒಂದು ಭಾಗವನ್ನೂ ಕೊಡಕೂಡದು.

3-30 P.M.

ಶ್ರೀ ಆರ್. ಅನಂತರಾಮನ್ (ಚಾಮರಾಜಪೇಟೆ).—ಸ್ವಾಮಿ, ಈ ಕಾಂಗ್ರೆಸ್ ಸಂಸ್ಥೆಯವರು ಅಧಿಕಾರಕ್ಕೆ ಬರುವ ಮುಂಚೆ ಈ ಭರತಖಂಡದಲ್ಲಿ ಸಂಪೂರ್ಣವಾಗಿ ಈ ಪಾನನಿರೋಧವನ್ನು ತಾವು ಅಧಿಕಾರಕ್ಕೆ ಬಂದ ಮೇಲೆ ಜಾರಿಗೆ ತರುತ್ತೇವೆಂಬುದಾಗಿ ಪ್ರತಿಜ್ಞೆ ಮಾಡಿದ್ದರು. ಈಗ ಈ ಸಂಸ್ಥೆಯವರು ಅಧಿಕಾರಕ್ಕೆ ಬಂದಿದ್ದಾರೆ. ಇವರು ಅಧಿಕಾರಕ್ಕೆ ಬಂದನಂತರ ತಾವು ಹೇಳುತ್ತಿದ್ದ ಪ್ರಕಾರ ಈಗಾಗಲೇ ಕೆಲವು ಸಂಸ್ಥಾನಗಳಲ್ಲಿ ಈ ಪಾನನಿರೋಧವನ್ನು ಸಂಪೂರ್ಣವಾಗಿ ಜಾರಿಗೆ ತಂದಿದ್ದಾರೆ. ಆದರೆ ನಮ್ಮ ಮೈಸೂರಿನಲ್ಲಿ ನಮ್ಮ ಸರ್ಕಾರದವರು ಇದನ್ನು ಇಲ್ಲಿ ಸಂಪೂರ್ಣವಾಗಿ ಜಾರಿಗೆ ತರಲು ಅಷ್ಟು ಹೆಚ್ಚಿನ ಪ್ರಯತ್ನವನ್ನೇನೂ ಪಟ್ಟಿಲ್ಲ. ಮೊನ್ನೆತಾನೆ ಒಂದು ಪ್ರಶ್ನೆಗೆ ಉತ್ತರವಾಗಿ ಮಾನ್ಯ ಅಬ್ಕಾರಿ ಮಂತ್ರಿಗಳು ತಾವು ಅಧಿಕಾರಕ್ಕೆ ಬಂದಮೇಲೆ ಈ ಪಾನನಿರೋಧವನ್ನು ಐದು ವರ್ಷಗಳ ಅವಧಿಯಲ್ಲಿ ಇದನ್ನು ಕೇವಲ ಎರಡು ತಾಲ್ಲೂಕುಗಳಲ್ಲಿ ಮಾತ್ರ ಜಾರಿಗೆ ತಂದಿರುವುದಾಗಿ ತಿಳಿಸಿದರು. ಇದನ್ನು ಇನ್ನೂ ಏತಕ್ಕಾಗಿ ಸಂಸ್ಥಾನಾದ್ಯಂತವೂ ತಾವು ಜಾರಿಗೆ ತರಲಿಲ್ಲವೆಂದು ಕೇಳಿದ್ದಕ್ಕೆ ಉತ್ತರವಾಗಿ ಇದನ್ನು ಸಂಸ್ಥಾನಾದ್ಯಂತವೂ ಜಾರಿಗೆ ತಂದಪಕ್ಷದಲ್ಲಿ ಈ ದಿವಸ ನಮ್ಮ ಸರ್ಕಾರಕ್ಕೆ ಈ ಅಬ್ಕಾರಿ ಬಾಬಿನಿಂದ ಬರುತ್ತಿರುವಂಥಾ ಒಂದು ಕೋಟಿ 64 ಲಕ್ಷ ಚಿಲ್ಲರೆ ರೂಪಾಯಿಗಳ ಆದಾಯ ನಿಂತುಹೋಗಿ ನಮ್ಮ ದೇಶಾಭಿವೃದ್ಧಿ ಕಾರ್ಯಗಳ ಬಗ್ಗೆ ನಮಗೆ ಹಣದ ತೊಂದರೆ ಜಾಸ್ತಿಯಾಗುತ್ತದೆಯೆಂದೂ, ಇದರ ಪರಿಣಾಮವಾಗಿ ಅನೇಕ ಅಭಿವೃದ್ಧಿ ಕಾರ್ಯಗಳನ್ನೇ ನಾವು ಕೈಬಿಡತಕ್ಕಂಥ ಸಂದರ್ಭವಿರುತ್ತದೆಂದೂ ಹೇಳಿದರು. ಆದರೆ ಇತ್ತೀಚೆಗೆ ಆ ಇಂಡಿಯಾ ಸರ್ಕಾರದವರಿಂದ ಈ ಬಗ್ಗೆ ಒಂದು ವರದಿಯನ್ನು ಒಪ್ಪಿಸಲು ನೇಮಕವಾಗಿದ್ದಂಥ ಶ್ರೀ ಅಗರ್‌ವಾಲಾ ಸಮಿತಿಯವರು ಕೇಂದ್ರ ಸರ್ಕಾರಕ್ಕೆ ಒಪ್ಪಿಸಿರುವ ಅವರ ವರದಿಯಲ್ಲಿ ಈ ಪಾನನಿರೋಧ ಕಾರ್ಯವನ್ನು ಇಂಡಿಯಾ ದೇಶಾದ್ಯಂತವೂ ಸಂಪೂರ್ಣವಾಗಿ 1958ರ ಹೊತ್ತಿಗೆ ಜಾರಿಗೆ ತರಲೇಬೇಕೆಂದು ತಿಳಿಸಿರುತ್ತಾರೆ. ಹಾಗೆ ಆ ಸಮಿತಿಯವರು ಶಿಫಾರಸು ಮಾಡಿರುವುದರಿಂದ ನಮ್ಮ ಸರ್ಕಾರದವರು ಇತ್ತೀಚೆಗೆ ಆ ಕೇಂದ್ರ ಸರ್ಕಾರಕ್ಕೊಂದು ಮನವಿಯನ್ನು ಬರೆದುಕೊಂಡಿದ್ದಾರೆಂದೂ, ಅದರಲ್ಲಿ ಇವರು ಈ ಪಾನನಿರೋಧ ಕಾರ್ಯವನ್ನು ನಮ್ಮ ಸಂಸ್ಥಾನಾದ್ಯಂತವೂ ಈ ಕೂಡಲೇ ಜಾರಿಗೆ ತರಬೇಕೆಂದು ಹೇಳುವುದಾದರೆ ನಮಗೆ ಈ ದಿವಸ ಈ ಬಾಬಿನಿಂದ ಇದನ್ನು ಜಾರಿಗೆ ತರುವುದರಿಂದ ಆಗತಕ್ಕ ಲುಕ್ಸಾನು ಏನಿದೆಯೋ ಅದನ್ನು ಕೂಡಿಸಿ ಕೊಡುವುದಾದರೆ ತಾವು ಈ ಕಾರ್ಯವನ್ನು ಸಂಪೂರ್ಣವಾಗಿ ಕೈಗೊಳ್ಳಲು ಸಿದ್ಧವಿರುವುದಾಗಿ ಬರೆದಿರುತ್ತೇವೆಂದು ಮಾನ್ಯ ಮಂತ್ರಿಗಳೇ ತಿಳಿ

ಸಿದ್ದಾರೆ. ಆದರೆ ಈ ಸಂಸ್ಥೆಯವರು ಯಾವ ಉದ್ದೇಶವನ್ನಿಟ್ಟುಕೊಂಡು ಈ ರಾಜ್ಯಾಡಳಿತವನ್ನು ಕೈಕೊಂಡರೋ ಅಂಥ ಉದ್ದೇಶವನ್ನೇ ಈ ದಿವಸ ಇವರು ಸಂಪೂರ್ಣವಾಗಿ ಮರೆತುಹೋಗಿರುವಂತೆ ಕಾಣುತ್ತದೆ. ಈ ಅಂಶವನ್ನು ಈಗಾಗಲೇ ಅನೇಕ ಮಾನ್ಯ ಸದಸ್ಯರು ವ್ಯಕ್ತಪಡಿಸಿದ್ದಾರೆ. ಆದರೆ ನಮಗೆ ಈ ಪಾನನಿರೋಧ ಕಾರ್ಯವನ್ನು ಕೈಗೊಂಡರೆ ಮಾತ್ರವೇ ಬಡ್ಜೆಟ್ ಖೋತಾ ಆಗುತ್ತದೆ, ಇಲ್ಲದಿದ್ದರೆ ಇಲ್ಲ ಎನ್ನುವ ಹಾಗೇನೂ ಇಲ್ಲ. ನಾವು ಒಂದು ವೇಳೆ ಈ ಪಾನನಿರೋಧವನ್ನು ಜಾರಿಗೆ ತರದೆ ಕೈಬಿಟ್ಟರೂ ಕೂಡ ನಮಗೆ ವರ್ಷೇ ವರ್ಷೇ ಈ ಖೋತಾ ಬಡ್ಜೆಟ್ ಅನ್ನುವುದು ಆಗಲೂ ಇದ್ದೇ ಇರುತ್ತದೆ. ಆದುದರಿಂದ ಈ ಪಾನನಿರೋಧವನ್ನು ಜಾರಿಗೆ ತಂದರೆ ಇದರಿಂದ ಈಗ ನಮಗೆ ಬರುತ್ತಿರುವ ಒಂದೂವರೆ ಕೋಟಿ ರೂಪಾಯಿಗಳು ಲುಕ್ಸಾನಾಗುತ್ತದೆ, ಆದ್ದರಿಂದ ನಾವು ಈ ಕಾರ್ಯವನ್ನು ಮುಂದಕ್ಕೆ ಹಾಕುತ್ತೇವೆ ಎಂದು ಹೇಳುವುದು ಸರ್ವಥಾ ನ್ಯಾಯವಾದ ಕಾರಣವಲ್ಲ. ಈ ಸಭೆಯಲ್ಲಿರತಕ್ಕಂಥ ಪ್ರತಿಯೊಬ್ಬ ಮಾನ್ಯ ಸದಸ್ಯರೂ ಕೂಡ ಈ ಪಾನನಿರೋಧವನ್ನು ಅವರ ಜಿಲ್ಲೆಗಳಲ್ಲಿ ಸಂಪೂರ್ಣವಾಗಿ ಜಾರಿಗೆ ತರಬೇಕೆಂದು ಸರ್ಕಾರದವರನ್ನು ಪದೇ ಪದೇ ಒತ್ತಾಯಪಡಿಸುತ್ತಿದ್ದಾರೆ. ಆದ್ದರಿಂದ ಮಂತ್ರಿಗಳು ಇದರ ಹಣದ ಮುಗ್ಗಟ್ಟಿಗೇನೂ ಯೋಚನೆ ಮಾಡಬೇಕಾಗಿಲ್ಲ. ಇವರಿಗೆ ಈ ಧ್ಯೇಯದಲ್ಲಿ ನಂಬಿಕೆಯೊಂದು ಇರುವುದಾದರೆ ಇದನ್ನು ಸಂಪೂರ್ಣವಾಗಿ ಜಾರಿಗೆ ತರಲು ಯಾವ ಕಷ್ಟಗಳೂ ಇರಲಾರವು. ಈಗಾಗಲೇ ಈಗಿರತಕ್ಕ ಮಂತ್ರಿ ಮಂಡಲಕ್ಕೆ ಅವರ ಅವಧಿ ಪೂರೈಸುತ್ತಾ ಬಂದಿದೆ. ಇವರು ನಾಳೆ ತಮ್ಮ ಅಧಿಕಾರವನ್ನು ಬಿಟ್ಟು ಆಚೆಗೆ ಹೋದಂಥಾ ಕಾಲದಲ್ಲಿ "ನೀವು ಐದು ವರ್ಷಕಾಲ ಅಧಿಕಾರ ನಡೆಸಿ—ಕೇವಲ ಎರಡು ತಾಲ್ಲೂಕುಗಳಲ್ಲಿ ಮಾತ್ರ ಈ ಪಾನನಿರೋಧ ಕಾರ್ಯವನ್ನು ಜಾರಿಗೆ ತಂದಿದ್ದೇವೆ" ಎಂದು ಹೇಳಿಕೊಂಡರೆ ನಿಮಗೆ ಇದು ಅವಮಾನವಾಗುವುದಿಲ್ಲವೇ! ಹಾಗೂ ಒಂದುವೇಳೆ ಸರ್ಕಾರದವರು ಈ ಬಾಬಿನಿಂದ ಬರತಕ್ಕ ವರಮಾನ ಏಕ್‌ದಂ ನಮ್ಮ ಕೈಬಿಟ್ಟು ಹೋಗುತ್ತದೆ—ನಮಗೆ ಒಂದು ಕೋಟಿ 64 ಲಕ್ಷ ರೂಪಾಯಿಗಳು ಖೋತಾ ಆಗುತ್ತದೆ ಎನ್ನುವುದಾಗಿದ್ದರೆ ಒಂದೊಂದು ವರ್ಷ ಒಂದೊಂದು ಜಾತಿಯ ಮಾದಕ ವಸ್ತುಗಳ ಬಳಕೆಯನ್ನು ಎಂದರೆ ಈ ವರ್ಷ ಗಾಂಜ, ಅಫೀಮು, ಅದರ ಮುಂದಿನ ವರ್ಷ ಷರಾಬು, ಕಡೇ ವರ್ಷ ಈ ಹೆಂಡವನ್ನು ಮಾರುವುದನ್ನು ನಿಲ್ಲಿಸಿ ಸಂಪೂರ್ಣವಾಗಿ ಪಾನನಿರೋಧವನ್ನು ತರಬಹುದು. ಆದರೆ ಆಗಲೇ ಮಾತನಾಡುತ್ತ ಶ್ರೀ ಕಳಸಿಯಪ್ಪನ್‌ರವರು ಆ ಸೆಪಿಂಗ್ಸ್ ರೋಡ್-ತಿಮ್ಮಯ್ಯ ರೋಡ್ ಇತ್ಯಾದಿ ರಸ್ತೆಗಳಲ್ಲಿ ಈ ಪಾನೀಯ ಸೇವಕರಿಂದ ವಿಶೇಷ ಗಲಾಟೆ ಮತ್ತು ತೊಂದರೆಗಳು ಆಗುತ್ತಿದೆಯೆಂದು ತಿಳಿಸಿದರು. ಆದರೆ ಈ ರಸ್ತೆಗಳ ವಿಚಾರ ಹಾಗಿರಲಿ. ದೇವಸ್ಥಾನದ ಪಕ್ಕದಲ್ಲೇ ಈ ಹೆಂಡದ—ಸಾರಾಯಿನ ಅಂಗಡಿಗಳನ್ನಿಟ್ಟಿರುತ್ತಾರೆ. ಅಲ್ಲಿಗೆ ಈ ಕಾರಣದಿಂದ ಹೆಂಗಸರು-ಮಕ್ಕಳು ಯಾರೂ ಹೋಗುವ ಹಾಗೆಯೇ ಇಲ್ಲ. ಎಲ್ಲರೂ ಹೆದರಿಕೊಂಡು ಆ ದೇವಸ್ಥಾನಗಳಿಗೆ ಹೋಗುವುದನ್ನೇ ಕೈಬಿಟ್ಟಿದ್ದಾರೆ. ಹೀಗೆ ಬೆಂಗಳೂರಿನಲ್ಲಿ ಒಂದೆರಡು ಕಡೆ ಆಗಿದೆ. ಆ ಪ್ರದೇಶದ ಜನರು ಈ ವಿಚಾರದಲ್ಲಿ ಕಾರ್ಪೊರೇಷನ್ ಅವರ ಮುಂದೆ ಮೊರೆಯಿಟ್ಟುಕೊಂಡರು. ಆಗ ನಾನೇ ಅಲ್ಲಿ ಈ ಬಗ್ಗೆ ಒಂದು ರೆಸಲ್ಯೂಷನ್ ಕೂಡ ಪಾಸ್ ಮಾಡಿಸಿ ಸರ್ಕಾರಕ್ಕೆ ಬರೆದು, ಆ ಹೆಂಡದ ಅಂಗಡಿಗಳನ್ನು ಆ ದೇವಸ್ಥಾನಗಳ ಪಕ್ಕದಿಂದ ಬೇರೆಯ ಕಡೆಗಾದರೂ ವರ್ಗಾಯಿಸಬೇಕೆಂದು ಕೇಳಿಕೊಳ್ಳಲಾಗಿತ್ತು. ಈ ಬಗ್ಗೆ ನಾನು ಹೋದ ಅಧಿವೇಶನದಲ್ಲಿ ಇದೇ ಸಭೆಯ ಮುಂದೆ ವಿಶೇಷವಾಗಿ ಚರ್ಚೆಯನ್ನು ಕೂಡ ಮಾಡಿದ್ದೇನೆ. ಆದರೆ ಇವರು ಈ ಪಾನನಿರೋಧವನ್ನು ಜಾರಿಗೆ ತರದಿದ್ದರೂ ಹೋಗಲಿ—ಈ ಅಂಗಡಿಗಳನ್ನಾದರೂ ಆ ದೇವಸ್ಥಾನಗಳ ಅಕ್ಕ ಪಕ್ಕದಲ್ಲಿರುವವುಗಳನ್ನು ಊರಿಂದ ಆಚೆ ಕಡೆಗೆ ವರ್ಗಾಯಿಸುವುದಕ್ಕಾದರೂ ಇವರಿಗೆ ಇರತಕ್ಕ ತೊಂದರೆಯೇನು ಎನ್ನುವುದೇ ನನಗಂತೂ ಗೊತ್ತಾಗುತ್ತಿಲ್ಲ. ಹೀಗೆ ನಾನು ಒಂದೇ ಸಮನಾಗಿ 5-6 ವರ್ಷಗಳಿಂದ ಒತ್ತಾಯಪಡಿಸುತ್ತಲೇ ಬಂದುದರ ಪರಿಣಾಮವಾಗಿ ಮೊನ್ನೆ ಆ ಧರ್ಮರಾಯನ ದೇವಸ್ಥಾನದ ಬಳಿ ಇದ್ದಂಥ ಹೆಂಡದ ಅಂಗಡಿಯನ್ನು ಅಲ್ಲಿಂದ ಬದಲಾವಣೆ ಮಾಡಿರುತ್ತಾರೆ. ಆದರೆ ಅದನ್ನು ಇವರು ಹಾಗೆ ಬದಲಾವಣೆ ಮಾಡಿರುವುದಾದರೂ ಎಲ್ಲಿಗೆ ಎಂದು ಕೇಳಿದರೆ ಅದನ್ನು ಆ ಶಿವಾಜಿ ಟಾಕೀಸ್ ಹತ್ತಿರಕ್ಕೆ ಬದಲಾಯಿಸಿದ್ದಾರೆ. ಆದರೆ ಇನ್ನೊಂದು ದೇವಸ್ಥಾನದ ಬಳಿ ಇರುವುದು ಇನ್ನೂ ಹಾಗೆಯೇ ಇದೆ. ಹೀಗೆ ಈ ಹೆಂಡದ ಮತ್ತು ಸಾರಾಯಿನ ಅಂಗಡಿಗಳು ಆ ದೇವಸ್ಥಾನದ ಬಳಿ ಇರುವುದರಿಂದ ಜನರು ಆ ದೇವಸ್ಥಾನಕ್ಕೆ ಬರುವುದಕ್ಕೂ ಕೂಡ ಬಹಳ ಕಷ್ಟವಾಗಿದೆ. ಏತಕ್ಕೆಂದರೆ ಜನರು ಆ ದೇವಸ್ಥಾನದ ಬಳಿ ಬಂದು ಕುಳಿತ ಕೂಡಲೇ ಇವರೂ ಸಹ ಇಲ್ಲಿಗೆ ಕುಡಿಯುವುದಕ್ಕಾಗಿ ಬಂದಿರಬಹುದು ಎಂದು ಜನರು ಆಡಿಕೊಳ್ಳಬಹುದೆಂಬ ಅನುಮಾನದಿಂದ ಅಲ್ಲಿಗೆ ಜನಗಳು ಯಾರೂ ಸುಳಿಯುತ್ತಿಲ್ಲ. ಪಾನನಿರೋಧವನ್ನು ಜಾರಿಗೆ ತರುವುದಕ್ಕಂತೂ ಕಷ್ಟ. ಆದರೆ ಇದನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ವರ್ಗಾಯಿಸುವುದಕ್ಕೆ ಏನು ತೊಂದರೆಯಿದೆ? ಊರಾಚೆ ಕಡೆ ಒಂದು ಮೈಲಿಯಲ್ಲಿ ಒಂದು ಗುಡಿಸಲನ್ನು ಹಾಕಿದರೆ ಸಾಕು; ಅಲ್ಲಿ ಈ ಅಂಗಡಿಯನ್ನು ಪ್ರಾರಂಭಿಸಬಹುದು. ಇದಕ್ಕಾಗಿ ಅಂಥ ದುಬಾರಿ ಖರ್ಚುಗಳೇನೂ ಬರಲಾರವು. ಹೀಗಿದ್ದರೂ ಈ ಕೆಲಸಮಾಡುವುದಕ್ಕೂ ಸರ್ಕಾರದವರು ಬಹಳವಾಗಿ ಹಿಂದುಮುಂದು ನೋಡುತ್ತಿದ್ದಾರೆ. ಆದರೆ ಈಗತಾನೆ ಶ್ರೀಮಾನ್ ಚಂದ್ರಶೇಖರಯ್ಯನವರೂ ಮತ್ತು ಇತರರೂ ಹೇಗೆ ಈ ಮಾದಕ ದ್ರವ್ಯಗಳನ್ನು ಸೀಸೆಗಳಲ್ಲಿ ತುಂಬಿ ಔಷಧದ ರೂಪವಾಗಿ, ಇತರ ಪಾನೀಯಗಳ ಹೆಸರಿನಲ್ಲಿ ಮಾರಾಟ ಮಾಡುತ್ತಿದ್ದಾರೆ ಎಂಬ ಬಗ್ಗೆ ಸವಿಸ್ತಾರವಾಗಿ ಹೇಳಿದ್ದಾರೆ. ಅವರು ಆ ವಿಚಾರವನ್ನೇ ನನ್ನ ಹತ್ತಿರವೂ ತಿಳಿಸಿ ನನಗೂ ಕೂಡ ಒಂದು ಬಾಟಲನ್ನು ಕೊಟ್ಟಿದ್ದರು. ಅದನ್ನು ಮುಂದಿನ ತನಿಖೆ ಬಗ್ಗೆ ಮಂತ್ರಿಗಳಾದ ಡಾ॥ ನಾಗನಗೌಡರ ಬಳಿಗೆ ಕಳುಹಿಸಲಾಗಿದೆ. ತಾವು ಈ ದಿವಸ ಈ ಆಲ್ಕೋಹಾಲಿನ ವಸ್ತುಗಳನ್ನು ತಯಾರಿಸತಕ್ಕ ಬಗ್ಗೆ ಯಾರು ಯಾರಿಗೆ ಲೈಸೆನ್ಸುಗಳನ್ನು ಕೊಡಲಾಗಿದೆಯೋ ಆ ಪೈಕಿ ಕೆಲವರು ಅದನ್ನು ದುರುಪಯೋಗಪಡಿಸಿಕೊಂಡಿದ್ದಾರೆಂಬುದಾಗಿ ಶ್ರೀಮಾನ್ ನಾಗಯ್ಯರೆಡ್ಡಿಯವರು ತಿಳಿಸಿದ್ದಾರೆ. ಹೀಗೆಲ್ಲಾ ಇದು ನಡೆಯುತ್ತಿರುವಾಗ ಇದನ್ನು ತಡೆಗಟ್ಟಲು ಸರ್ಕಾರದವರು ಏನೇನು ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆಂಬುದನ್ನು ಈ ಮಾನ್ಯ ಸಭೆಗೆ ಸಂಪೂರ್ಣವಾಗಿ ತಿಳಿಸಿದರೆ ಬಹಳ ಉತ್ತಮವಾಗಿರುತ್ತದೆಂದು ನಾನು ಪ್ರಾರ್ಥನೆ ಮಾಡಿಕೊಂಡು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ-ಅನುಸೂಚಿತ ಜಾತಿಗಳು).—ಸ್ವಾಮಿ, ಈ ಎಕ್ಸೈಜ್ ಡಿಮ್ಯಾಂಡಿನಲ್ಲಿ ಸರ್ಕಾರದವರು ಕೇಳಿಕೊಂಡಿರತಕ್ಕಂಥ ಈ ಮನವಿಯನ್ನು ವಿರೋಧಿಸುತ್ತ, ನಾನು ಒಂದೆರಡು ವಿಷಯ

(ಶ್ರೀ ಎಂ. ಚಿಕ್ಕಲಿಂಗಯ್ಯ)

ಗಳನ್ನು ಈ ಮಾನ್ಯ ಸಭೆಯ ಗಮನಕ್ಕೆ ತರಲಿಚ್ಛಿಸಿದ್ದೇನೆ.

ನಾನು ಕಳೆದ ವರ್ಷ ಇದೇ ಅಧಿವೇಶನದಲ್ಲಿ ಸರ್ಕಾರದವರು ಸಂಸ್ಥಾನದಲ್ಲಿ ಎಲ್ಲೆಲ್ಲಿ ಈಗ ಈ ಪಾನನಿರೋಧ ಪದ್ಧತಿಯನ್ನು ಜಾರಿಗೆ ತಂದಿರುತ್ತಾರೋ ಅಂಥ ತಾಲ್ಲೂಕುಗಳ ಅಕ್ಕಪಕ್ಕದಲ್ಲಿರತಕ್ಕಂಥ ವೆಟ್ ಪ್ರದೇಶಗಳನ್ನು ಕೂಡ ಡ್ರೈ ಮಾಡಬೇಕೆಂಬ ವಿಚಾರವನ್ನು ಪ್ರಸ್ತಾಪಿಸುತ್ತಾ ಈ ವರ್ಷವೇ ಆ ನಮ್ಮ ಮಳವಳ್ಳಿ ಮತ್ತು ಮದ್ದೂರು ತಾಲ್ಲೂಕುಗಳಲ್ಲಿ ಈ ಪಾನನಿರೋಧವನ್ನು ಸಂಪೂರ್ಣವಾಗಿ ಜಾರಿಗೆ ಕೊಡಬೇಕೆಂದು ಕೇಳಿಕೊಂಡಿದ್ದೆನು. ಆಗ ಸರ್ಕಾರದವರು ಈ ಅಗರ್‌ವಾಲ ಸಮಿತಿಯವರ ವರದಿಗಾಗಿ ಕಾದಿದ್ದೇವೆ, ಆ ರಿಪೋರ್ಟು ಬರಲಿ, ಅದು ಬಂದಕೂಡಲೆ ನಾವು ಈ ಕಾರ್ಯವನ್ನು ಮುಂದುವರಿಸಬೇಕೆಂದಿದ್ದೇವೆಂಬುದಾಗಿ ತಿಳಿಸಿದ್ದರು. ಸರ್ಕಾರದವರು ಈ ರೀತಿ ಹೇಳಿದಮೇಲೆ ಅವರನ್ನು ವೃಥಾ ಒತ್ತಾಯಪಡಿಸುವುದು ಸರಿಯಾದದ್ದಲ್ಲವೆಂದು ಹೇಳಿ ಆಗ ಸರ್ಕಾರದವರನ್ನು ಈ ಬಗ್ಗೆ ಒತ್ತಾಯಮಾಡಲಿಲ್ಲ. ಆದರೆ ಈಗ ಆ ರಿಪೋರ್ಟು ಬಂದಿದೆ. ಈಗ ಆ ಸಮಿತಿಯವರೇ ಈ ಪಾನನಿರೋಧವನ್ನು ಸಂಪೂರ್ಣವಾಗಿ ದೇಶಾದ್ಯಂತವೂ 1958ರೊಳಗಾಗಿ ಜಾರಿಗೆ ತರಬೇಕೆಂದು ತೀರ್ಮಾನ ಮಾಡಿರುತ್ತಾರೆಂಬುದಾಗಿ ಎಲ್ಲರಿಗೂ ತಿಳಿದುಬಂದಿದೆ. ಆದರೆ ನನಗೀಗ ಈ ವಿಚಾರದಲ್ಲಿ ಏನೊಂದು ಸಂಶಯ ಬಂದಿದೆ ಎಂದರೆ—ಅವರೇನೋ ಆ ರಿಪೋರ್ಟಿನಲ್ಲಿ ಇದನ್ನು 1958ರೊಳಗಾಗಿ ಜಾರಿಗೆ ತರಬೇಕೆಂದು ತಿಳಿಸಿದ್ದಾರೆ. ಆದರೆ ಈ ವಿಚಾರದಲ್ಲಿ ನಮ್ಮ ಸರ್ಕಾರದವರೇನಾದರೂ ಈ ಬಗ್ಗೆ ಆ 1958ರಲ್ಲೇ ಇದನ್ನು ಕೈಗೊಂಡು ಸಂಪೂರ್ಣವಾಗಿ ದೇಶಾದ್ಯಂತವೂ ಜಾರಿಗೆ ತರುತ್ತಾರೋ ಅಥವಾ ಈ ವರ್ಷವೇ ಇದನ್ನು ಪ್ರಾರಂಭಿಸಿ ಆ 1958ರ ವೇಳೆಗೆ ಸರಿಯಾಗಿ ಇದನ್ನು ಪೂರೈಸುತ್ತಾರೋ ಆ ವಿಚಾರ ನನಗೆ ಗೊತ್ತಾಗುತ್ತಿಲ್ಲ. ಈ ಅಂಶವನ್ನು ಸರ್ಕಾರದವರು ಸಭೆಗೆ ತಿಳಿಸಬೇಕಾಗಿದೆ. ಈಗ ನಾನು ಕೇಳುತ್ತಿರುವ ಎರಡು ತಾಲ್ಲೂಕುಗಳಲ್ಲಿ ಈ ವರ್ಷವೇ ಈ ಕಾರ್ಯವನ್ನು ಪ್ರಾರಂಭಿಸಬೇಕೆಂದು ಒತ್ತಾಯಪಡಿಸುತ್ತೇನೆ. ಕಾರಣವಾದರೂ ಇಷ್ಟೆ:—ಅತ್ತ ಕಡೆ ಪಕ್ಕದಲ್ಲಿರುವ ಚನ್ನಪಟ್ಟಣ ತಾಲ್ಲೂಕಿನಲ್ಲಿ ಸಂಪೂರ್ಣ ಪಾನನಿರೋಧವನ್ನು ಜಾರಿಗೆ ತಂದಿದ್ದಾರೆ. ಅತ್ತ ಕ್ಲೋಸ ಪೇಟೆ ಕಡೆಯೂ ಪಾನನಿರೋಧವನ್ನು ಜಾರಿಗೆ ತರಲಾಗಿದೆ. ಅತ್ತ ಆ ಕೊಳ್ಳೇಗಾಲ ತಾಲ್ಲೂಕಿನಲ್ಲೂ ಈ ಪಾನನಿರೋಧ ಜಾರಿಗೆ ಬಂದಿದೆ. ಈ ಎರಡು ತಾಲ್ಲೂಕುಗಳೂ ಎಂದರೆ ಮಳವಳ್ಳಿ ಮತ್ತು ಮದ್ದೂರು—ಈ ಮಧ್ಯೆ ಸಿಕ್ಕಿಕೊಂಡು ಇಲ್ಲಿ ಇಲ್ಲದಂಥ ಸ್ಮಗ್ಲಿಂಗಿಗೆ ಅವಕಾಶವಾಗಿರುತ್ತದೆ. ಈ ಅಕೃತ್ಯಗಳನ್ನೆಲ್ಲಾ ಅಲ್ಲಿ ತಡೆಗಟ್ಟಬೇಕೆಂಬ ದೃಷ್ಟಿಯಿಂದ ಈ ದಿವಸ ನಮ್ಮ ಸರ್ಕಾರದ ಧೋರಣೆ ಎತ್ತ ಕಡೆಗೆ ಹೋಗುತ್ತಿದೆ ಎಂಬುದನ್ನು ಈ ಸಭೆಗೆ ತಿಳಿಸಬೇಕೆಂಬ ಉದ್ದೇಶದಿಂದ ನಾನೀಗ ಈ ವಿಚಾರಗಳನ್ನು ಈ ಮಾನ್ಯ ಸಭೆಯ ಗಮನಕ್ಕೆ ತಂದಿದ್ದೇನೆ.

ನಮ್ಮ ಎಕ್ಸೈಜ್ ಇಲಾಖೆಯಲ್ಲಿ ಎಕ್ಸೈಜ್ ಇಂಟೆಲಿಜೆನ್ಸ್ ಬ್ಯೂರೋ ಎಂಬ ಒಂದು ಇಲಾಖೆ ಇದೆ. ಆ ಇಲಾಖೆ ಪೋಲೀಸ್ ಇಲಾಖೆಯಲ್ಲಿ ಸಿ.ಐ.ಡಿ. ಸೆಕ್ಷನ್ ಯಾವ ರೀತಿ ಇದೆಯೋ ಆ ರೀತಿ ಕೆಲಸ ಮಾಡಬೇಕು. ಆ ಇಲಾಖೆ ಈಗ ಇದೆಯೋ ಇಲ್ಲವೋ, ಏನು ಕೆಲಸ ಮಾಡುತ್ತಾ ಇದೆ ಎಂಬುದನ್ನು ಎಕ್ಸೈಜ್ ಇಲಾಖೆಯವರೇ ಹೇಳಬೇಕು. ಆ ಬ್ರಾಂಚ್ ಇದ್ದಪಕ್ಷದಲ್ಲಿ ಅದು ಯಾವ ರೀತಿ ಕೆಲಸ ಮಾಡುತ್ತಾ ಇದೆ ಮತ್ತು ಇರತಕ್ಕ ಲೋಪದೋಷಗಳನ್ನು ಏಕೆ ಸರ್ಕಾರದವರ ಗಮನಕ್ಕೆ ತರಲಿಲ್ಲ ಎಂಬುದನ್ನು ವಿಚಾರಮಾಡಿದ್ದೇ ಆದರೆ ಆ ಇಲಾಖೆಯ ಅಧಿಕಾರಿಗಳಲ್ಲಿ ಸಂಪೂರ್ಣವಾಗಿ ಆಡಳಿತ ದಕ್ಷತೆಯಿಲ್ಲ ಎಂದು ಹೇಳಿ ಈ ಮಾನ್ಯ ಸಭೆಯಲ್ಲಿ ನಾನು ಘಂಟಾಘೋಷವಾಗಿ ಹೇಳುತ್ತೇನೆ. ಏಕೆಂದರೆ ಈ ಸಭೆಯಲ್ಲಿ ಪಾನನಿರೋಧ ಸರಿಯಾಗಿ ನಡೆಯುತ್ತಿಲ್ಲ, ಸ್ಮಗ್ಲಿಂಗ್ ಜಾಸ್ತಿಯಾಗಿದೆ, ಒಂದು ತಾಲ್ಲೂಕಿನಲ್ಲಿ ಷೆಡ್ಯೂಲ್ ಆಗಿರತಕ್ಕ ಅಂಗಡಿಗಳಿಗಿಂತಲೂ 10-15 ಅಂಗಡಿಗಳು ಅನ್‌ಆಥರೈಸ್ಡ್ ಆಗಿ ತೆಗೆಯಲ್ಪಡುತ್ತಿವೆ. ಇಲಿಸಿಟ್ ಡಿಸ್ಟಿಲೇಷನ್ ಅಥವಾ ಇಲಿಸಿಟ್ ಟ್ಯಾಪಿಂಗ್ ನಡೆಯುತ್ತಾ ಇದೆ ಎಂದು ಹೇಳಿ ಸದಸ್ಯರುಗಳು ಪ್ರತಿ ಸಾರಿಯೂ ಕೂಗುತ್ತಾ ಇದ್ದರೂ ಸಹ ಅಧಿಕಾರಿಗಳು ನಾವು ತಿಳಿಸಿದರೆ ತಾನೆ ಮಂತ್ರಿಗಳು ಉತ್ತರ ಹೇಳುವುದು ಎಂಬ ಒಂದು ಉದಾಸೀನ ಭಾವನೆಯಿಂದ ವರ್ತಿಸುತ್ತಾ ಎಕ್ಸೈಜ್ ಇಲಾಖೆಗೇ ಖಂಡಿತವಾಗಿಯೂ ಕೆಟ್ಟ ಹೆಸರು ತರುತ್ತಾ ಇದ್ದಾರೆ. ಅಧಿಕಾರಿಗಳಲ್ಲಿ ದಕ್ಷತೆ ಇಲ್ಲದಿರುವುದು ಮತ್ತು ಅದರ ಜೊತೆಗೆ ಅವರು ಕಂಟ್ರಾಕ್ಟರುಗಳೊಡನೆ ಸಹಕರಿಸಿ ಕೆಲಸಮಾಡುತ್ತಾ ಇರುವುದು ಖಂಡಿತವಾಗಿಯೂ ಸತ್ಯಾಂಶ ಎಂಬ ವಿಷಯವನ್ನು ಘಂಟಾಘೋಷವಾಗಿ ಹೇಳುತ್ತೇನೆ. ಇದನ್ನು ನಿಜವಾಗಿಯೂ ಕೂಡ ವ್ಯಸನದಿಂದ ಹೇಳಬೇಕಾಗಿದೆ. ಎಕ್ಸೈಜ್ ಕಮಿಷನರ್‌ರೋ ಅಥವಾ ಡೆಪ್ಯುಟೀ ಕಮಿಷನರೋ ಇದನ್ನು ಕಿವಿಗೆ ಹಾಕಿಕೊಂಡು ಪರಿಶೀಲನೆ ನಡೆಸುತ್ತಾರೆಯೇ ಎಂದರೆ ಅದೂ ಕೂಡ ಮಾಡುವುದಿಲ್ಲ. ಹಿಂದಿನ ವರದಿಗಳನ್ನು ತರಿಸಿಕೊಂಡು ಸರಿಯಾಗಿ ನಡೆಯುತ್ತಿದೆಯೋ ಇಲ್ಲವೋ 'Yes' or 'No' ಎಂಬುದನ್ನು ತಿಳಿದುಕೊಂಡು ಬರತಕ್ಕ ಪದ್ಧತಿಯನ್ನು ನೋಡಿದ್ದೇನೆ. ನಾನೂ ಎಕ್ಸೈಜ್ ಇಲಾಖೆಯಲ್ಲಿ ಕೆಲಸಮಾಡಿದವನು. ನನಗೆ ಆ ವಿಷಯದಲ್ಲಿ ಚೆನ್ನಾಗಿ ಗೊತ್ತಿದೆ. ಇದು ಖಂಡಿತವಾಗಿಯೂ ಕೂಡ ನ್ಯಾಯವಲ್ಲ. ಈ ವರ್ಷದಲಾಗಾಯ್ತಿನಿಂದಲಾದರೂ ಇದಕ್ಕೆ ಸರಿಯಾದ ರೀತಿಯಲ್ಲಿ ಗಮನಕೊಟ್ಟು 1958 ರೊಳಗೆ ನೆಮ್ಮದಿಯಾಗಿ, ತೃಪ್ತಿಕರವಾಗಿ ಈ ಪಾನನಿರೋಧ ನೀತಿಯನ್ನು ಸಂಪೂರ್ಣವಾಗಿ ಜಾರಿಗೆ ತರಲು ಸಾಧ್ಯವಾಗುತ್ತದೆಯೇ ಇಲ್ಲವೇ ಎಂಬುದನ್ನು ಕೂಲಂಕಷವಾಗಿ ಪರಿಶೀಲನೆಮಾಡಿ ಒಂದು ಸ್ಕೀಂನ್ನು ಸರ್ಕಾರದವರಿಗೆ ಕೊಟ್ಟಪಕ್ಷದಲ್ಲಿ ಇಷ್ಟು ಜನ ಸದಸ್ಯರು ಈ ಸಭೆಯಲ್ಲಿ ಇದುವರೆಗೂ ಕೇಳಿಕೊಂಡದ್ದಕ್ಕೆ ಸಾರ್ಥಕವಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ.

ಇನ್ನೊಂದು ಖಿಸ್ತು ಬಾಕಿ ಇರುವ ವಿಚಾರ. ಕಾನೂನು ಇರುವುದು ಏನು? ಪ್ರತಿತಿಂಗಳೂ 20ನೇ ತಾರೀಖು ಅದ ತಕ್ಷಣ ಖಿಸ್ತು ಕೊಡದಿದ್ದರೆ ಆ ಷಾಪನ್ನು ಹರಾಜು ಮಾಡಬೇಕೆಂದು ಮ್ಯಾನ್ಯುಯಲ್‌ನಲ್ಲಿ ಇದೆ. ಅದಕ್ಕೇ ಹೇಳುತ್ತಾ ಇದ್ದೇನೆ. ಯಾವ ತಾಲ್ಲೂಕಿನಲ್ಲಿ ಯಾವ ಷಾಪ್‌ನಲ್ಲಿ 20ನೇ ತಾರೀಖು ಅದ ತಕ್ಷಣ ಡಿಪಾರ್ಟ್‌ಮೆಂಟಿನವರು ಕಟ್ಟುನಿಟ್ಟಾಗಿ ಖಿಸ್ತು ವಸೂಲುಮಾಡುತ್ತಾ ಇದ್ದಾರೆ? ಈ ರಿಪೋರ್ಟ್‌ನಲ್ಲಿ ಕೊಟ್ಟಿರುವಂತೆ the arrears are very heavy. ಕರೆಂಟ್ ಡಿಮ್ಯಾಂಡ್ ಎಷ್ಟಿದೆಯೋ ಅದನ್ನು ವಸೂಲು ಮಾಡುತ್ತಾರೆಯೇ ಹೊರತು ಬಾಕಿ ಖಂಡಿತವಾಗಿಯೂ ವಸೂಲು ಮಾಡುವುದಿಲ್ಲ. ಅವರಿಂದ ರಿಮಿಷನ್ನಿಗೆ ಅರ್ಜಿ ತೆಗೆದುಕೊಂಡು ಸರ್ಕಾರದವರಿಗೆ ಶಿಫಾರಸು ಮಾಡುತ್ತಾರೆ. ಇದೇನು ತಮಾಷೆಯೋ? ಏಕೆ ಹಾಗೆ ಮಾಡಬೇಕು? ಇದಕ್ಕೆ ಈ ಇಲಾಖೆ ತಾನೆ ಏಕೆ ಇರಬೇಕು? ಹೇಗೂ ಇಲಾಖೆಯೇ ಹೋಗುತ್ತಾ ಇದೆ, ನಾವೇಕೆ

ಕ್ರಮ ತೆಗೆದುಕೊಳ್ಳಬೇಕು ಎಂಬ ಮನೋಭಾವ ಅಧಿಕಾರಿಗಳಲ್ಲಿ ಇರುವಹಾಗೆ ಕಾಣುತ್ತದೆ. ಏಕೆ ಇಷ್ಟು ಕಠಿಣವಾಗಿ ಮಾತನಾಡುತ್ತಿದ್ದೇನೆ ಎಂದರೆ—ವ್ಯಕ್ತಿಯುತವಾಗಿ ಯಾರಮೇಲೂ ನನಗೆ ಹೇಳಲು ಇಷ್ಟವಿಲ್ಲ—ವರ್ಷೇ ವರ್ಷೇ ಇದು ಬರುತ್ತಾ ಇದೆ, ಪ್ರತಿಯೊಂದು ಪ್ರಶ್ನೆ, ಪ್ರತಿಯೊಂದು ಖೋತಾ ನಿರ್ಣಯದ ಸಂದರ್ಭದಲ್ಲೂ ಈ ಎಕ್ಸೈಜ್ ಇಲಾಖೆಯ ಮೇಲೆ ದೂರು ಬರುತ್ತಾ ಇದ್ದು ಸರ್ಕಾರ ಜವಾಬುಕೊಡಬೇಕಾಗಿರುವಾಗ ಇದನ್ನು ತಪ್ಪಿಸುವುದಕ್ಕೆ ಸಾಧ್ಯವೇ ಎಂಬುದನ್ನು ಇಲ್ಲಿಯವರೆಗೂ ಯೋಚನೆಮಾಡಿಲ್ಲವಲ್ಲ ಎಂಬುದಕ್ಕಾಗಿ ಒತ್ತಿ ಹೇಳಬೇಕಾಗಿದೆ. ಬಾಕಿ ಇರುವ ವಿಚಾರದಲ್ಲಿ ನನಗೆ ತಿಳಿದಿರುವಮಟ್ಟಿಗೆ ಪ್ರತಿಯೊಂದು ತಾಲ್ಲೂಕಿನಲ್ಲೂ 5-10 ವರ್ಷಗಳಿಂದ ಬಾಕಿ ನಿಂತಿದೆ. ಕೆಲವುಕಡೆ ಕಂಟ್ರಾಕ್ಟರುಗಳೇ ಇಲ್ಲ. ಅದೂ ಅಲ್ಲದೆ ಎಕ್ಸೈಜ್ ಸೇಲ್ಸ್ ಟೈಂನಲ್ಲಿ ಯಾವ ಕಂಟ್ರಾಕ್ಟರು ಡಿಫಾಲ್ಟರಾಗಿರುತ್ತಾನೆಯೋ ಅವನು ಬಿಡ್ ಮಾಡಕೂಡದು ಎಂದು ಇದೆ. ಅವನನ್ನು ಬಿಡುವುದು ಅವನ ತಮ್ಮನ ಹೆಸರಿನಲ್ಲಿ ಬಿಡ್ ಮಾಡಿಸಿ ಕೊಡುವುದು ಈ ರೀತಿಯಲ್ಲಿ ನಡೆಯುತ್ತಿದೆ. ಇಲಾಖೆಯವರ ಕನ್ನೈವೆನ್ಸ್‌ನಿಂದ ಈ ರೀತಿ ಆದರೆ ಯಾವ ಕೆಲಸ ತಾನೆ ತೃಪ್ತಿಕರವಾಗಿ ಮಾಡುವುದಕ್ಕೆ ಸಾಧ್ಯವಾಗುತ್ತದೆ ಮತ್ತು ಯಾವ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ ಎಂಬುದನ್ನು ಕೂಲಂಕಷವಾಗಿ ಯೋಚನೆ ಮಾಡಬೇಕೆಂದು ಹೇಳುತ್ತೇನೆ. ನಾನು ಸಲಹೆಮಾಡುವುದೇನೆಂದರೆ ಎಕ್ಸೈಜ್ ಇಂಟೆಲಿಜೆನ್ಸ್ ಇಲಾಖೆಯವರು unauthorised opening of shops detect ಮಾಡಿರುವುದು ಎಷ್ಟು ಕೇಸುಗಳು, detecting cases of illicit distillation ವಗೈರೆ ಎಷ್ಟು ಎಂಬ ವಿಚಾರದಲ್ಲಿ ಒಂದು ವಿಶೇಷ ವರದಿಯನ್ನು ತರಿಸಿಕೊಂಡು, ಸಂಬಂಧಪಟ್ಟ ಅಧಿಕಾರಿಗಳಿಗೆ ಸರಿಯಾಗಿ ಬುದ್ಧಿ ಕಲಿಸಬೇಕು.

ಎರಡನೆಯದಾಗಿ ಅಗರ್‌ವಾಲ್ ಕಮಿಟಿಯವರು 1958ರ ಹೊತ್ತಿಗೆ ಸಂಪೂರ್ಣವಾಗಿ ಪಾನನಿರೋಧವನ್ನು ಜಾರಿಗೆ ತಂದು ಜನಗಳಿಗೆ ಸೌಕರ್ಯವನ್ನೊದಗಿಸಬೇಕೆಂದಿದ್ದಾರೆ. 15 ಲಕ್ಷ ರೂಪಾಯಿ ಬಾಕಿ ಇದೆ. ಅಷ್ಟರೊಳಗೆ ಬಾಕಿ ಬರಬೇಕಾದುದನ್ನೆಲ್ಲ ವಸೂಲು ಮಾಡಿ ಮದ್ದೂರು, ಮಳವಳ್ಳಿ ತಾಲ್ಲೂಕುಗಳಲ್ಲಿ ಈ ವರ್ಷವೇ ಪಾನನಿರೋಧವನ್ನು ಜಾರಿಗೆ ತರಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಕೆ. ವೀರಣ್ಣಗೌಡ (ಮದ್ದೂರು).—ಸ್ವಾಮಿ, ಸಂಸ್ಥಾನದಲ್ಲಿ ಕೆಲವು ಭಾಗದಲ್ಲಿ ಕುಡಿಯುವುದಕ್ಕೆ ಅವಕಾಶ ಕೊಟ್ಟು ಮತ್ತೊಂದು ಕೆಲವು ಭಾಗದಲ್ಲಿ ಅವಕಾಶ ಕೊಡದೇ ಅಲ್ಲಿ ಕುಡಿದವರು ತಪ್ಪಿತಸ್ಥರು ಎಂದು ಅವರನ್ನು ಜೈಲಿಗೆ ಹಾಕಿ ಅವರಿಗೆ ಅನ್ಯಾಯ ಮಾಡುತ್ತಿರುವ ವಿಚಾರದಲ್ಲಿ ನಾನು ಹಿಂದೆ ಒಂದು ಸಾರಿ ಮಾತನಾಡಿದಾಗ ಏನು ಹೇಳಿದೆನೋ ಅದನ್ನೇ ಈಗ ಮತ್ತೆ ಹೇಳಬೇಕಾಗಿದೆ. ಬೆಂಗಳೂರಿನಲ್ಲಿ ಕುಡಿಯುವವರಿಗೆ ಅವರು ಏನೇ ಕುಡಿಯಲಿ ಅದು ಟಾನಿಕ್ಕು. ಅದನ್ನೇ ಚಿತ್ರದುರ್ಗದಲ್ಲಿ ಕುಡಿದರೆ ಅದು ಅಪರಾಧ ಎಂದು ಮಾಡುವುದು ಯಾವ ನೀತಿಯೋ ಗೊತ್ತಿಲ್ಲ. ಈ ಬಗ್ಗೆ ಈ ಸಭೆಯಲ್ಲಿ ಅನೇಕಸಾರಿ ಪ್ರಶ್ನೆಗಳನ್ನು ಕೇಳಿದ್ದಾರೆ, ಚರ್ಚೆ ಮಾಡಿದ್ದಾರೆ. ಕುಡಿತ ತೆಗೆದುಹಾಕಿರುವ ಜಿಲ್ಲೆಗಳಲ್ಲಿ ಏನು ಅನಾಹುತವಾಗಿದೆ ಎಂಬ ವಿಷಯವನ್ನು ಸಹ ಅಷ್ಟಾಗಿ ನಾನು ಇಲ್ಲಿ ಪ್ರಸ್ತಾಪ ಮಾಡುವುದಿಲ್ಲ. ಒಂದು ವಿಚಾರ ಮಾತ್ರ ಹೇಳಬೇಕಾಗಿದೆ. ಮದ್ಯಪಾನ ನಿರೋಧವನ್ನು ಇನ್ನೂ ಹೆಚ್ಚಾಗಿ ಜಾರಿಗೆ ತರುವುದಕ್ಕಾಗುವುದಿಲ್ಲ ಎಂದು ಹೇಳುತ್ತೇನೆ. ಜಾರಿಗೆ ತಂದಿರುವ ಜಾಗದಲ್ಲಿ ಯಶಸ್ವಿಯಾಗಿ ನಡೆಯದೇ ಇರುವುದಕ್ಕೆ ಕಾರಣ, ಅಲ್ಲಿ ಪೋಲೀಸ್‌ನವರು ಕುಡಿಯುತ್ತಾರೆ ಎನ್ನುವುದಾಗಲೀ, ಅಥವಾ ಇನ್ನಿತರ ಕಾರಣಗಳಾಗಲೀ ಅವೆಲ್ಲ ಸಣ್ಣ ಕಾರಣಗಳು. ಅನುಭವಪೂರ್ವಕವಾಗಿ ನನಗೆ ತಿಳಿದಿರುವ ಒಂದು ದೊಡ್ಡ ಕಾರಣ ಇದೆ. ಅದನ್ನು ಹೇಳಬೇಕಾಗಿದೆ. ಯಾರು ಕಳ್ಳಭಟ್ಟಿ ಸಾರಾಯಿ ತಯಾರು ಮಾಡುತ್ತಾರೆಯೋ, ಯಾರು ಶೇಕಡ 80, 90 ಮಾದಕ ಪದಾರ್ಥ ಇರತಕ್ಕ ಟಾನಿಕ್‌ಗಳನ್ನು ಮಾರುತ್ತಾರೆಯೋ ಅವರೆಲ್ಲರೂ ಈಗ ಒಬ್ಬರಲ್ಲಒಬ್ಬ ಮಂತ್ರಿಗಳ ಮಿತ್ರರಾಗಿದ್ದಾರೆ. ಆದುದರಿಂದ ಅವರಿಗೆ ಧೈರ್ಯವಿದೆ. ನಾನು ಹಿಂದೊಂದು ಸಾರಿ ಮಾತನಾಡಿದಾಗ ಹೇಳಿದೆ. ಹಿಂದೆ ಚನ್ನಪಟ್ಟಣದಲ್ಲಿ ಹಿಂದೂ ಮುಸ್ಲಿಂ ಗಲಭೆಯಾದಾಗ ಯಾವ ಮನುಷ್ಯನಿಗೆ ದುಡ್ಡಿಲ್ಲದೆ ಆತನಿಗೆ ನಾವು ರೈಲ್ವೆ ಟಿಕೆಟ್ ಕೊಡಿಸಿಕೊಟ್ಟು ಕೋರ್ಟಿಗೆ ಕಳುಹಿಸುತ್ತಿದ್ದೆವೋ ಅದೇ ಮನುಷ್ಯ ಇವೊತ್ತು ಕಳ್ಳಭಟ್ಟಿ ಸಾರಾಯಿ ತಯಾರುಮಾಡಿ ಲಕ್ಷಾಧಿಪತಿಯಾಗಿದ್ದಾನೆ. ಅಂತಹವರೇ ಈ ದಿನ ಮಂತ್ರಿಗಳಿಗೆ ಹೂವಿನಹಾರ, ತುರಾಯಿ ಹಾಕಿ ಮೆರವಣಿಗೆ ಮಾಡುವುದರಲ್ಲಿ ಮುಂದಾಳುಗಳು. ಅಷ್ಟೇ ಅಲ್ಲದೆ ಯಾವುದೊಂದಕ್ಕೇ ಆಗಲಿ ಚೀಫ್‌ಮಿನಿಸ್ಟರಿಗೆ, ಆ ಮಿನಿಸ್ಟರಿಗೆ ಈ ಮಿನಿಸ್ಟರಿಗೆ ಎಂದು ಹೇಳಿ ಪೋಸ್ಟಾಫೀಸುಗಳಿಂದ ಟೆಲಿಫೋನ್ ಟ್ರಂಕ್‌ಕಾಲ್ ರಿಜಿಸ್ಟರ್ ಮಾಡಿಸುತ್ತಾರೆ. ಅದನ್ನೆಲ್ಲಾ ನೋಡಿದರೆ ಅಧಿಕಾರಿಗಳಿಗೇ ಆಗಲಿ, ಬಾಕಿಯವರಿಗೇ ಆಗಲಿ ಭಯ ಉಂಟಾಗುತ್ತದೆ. ಎಲ್ಲಿ ಹೋಗಿ ಏನು ಹೇಳುತ್ತಾರೆಯೋ ಎಂದು ಹೆದರಿ ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಅನೇಕ ಅಧಿಕಾರಿಗಳಿಗೆ ಧೈರ್ಯ ಸಾಲುವುದಿಲ್ಲ. ಅವರೂ ನಮ್ಮ ಹಾಗೆಯೇ ಮನುಷ್ಯರು. ಮೈಸೂರು ಸಂಸ್ಥಾನದ ಅಧಿಕಾರಿಗಳ ವಿಚಾರದಲ್ಲಿ ನನಗೆ ತುಂಬ ಮೆಚ್ಚಿಗೆ, ತುಂಬಾ ಹೆಮ್ಮೆ ಇದೆ; ಅವರು ಬಹಳ ಧೈರ್ಯವಂತರು, ದಕ್ಷರು, ನಿಸ್ಪೃಹತೆಯಿಂದ ಕೆಲಸ ಮಾಡುವುದರಲ್ಲಿ ಹೆಸರುವಾಸಿಯಾದವರು. ಅಂಥವರೇ ಇಂದು ಕಳ್ಳಭಟ್ಟಿಯನ್ನು ಪತ್ತೆ ಹಚ್ಚುವುದಕ್ಕೆ ನಡುಗಿ ಹೋಗಿದ್ದಾರೆ. ಇನ್ನು ಕೆಲವರಲ್ಲಿ ಮನುಷ್ಯಸ್ವಭಾವ. ಯಾರದೋ ಮದುವೆಯಲ್ಲಿ ಉಂಡವನೇ ಜಾಣ ಎನ್ನುವಹಾಗೆ ಯಾರದೋ ದುಡ್ಡು ಯಾರೋ ತೆಗೆದುಕೊಳ್ಳುತ್ತಾರೆ, ನಮಗೆ ಬಂದಷ್ಟು ಬರಲಿ ಎಂದು ಕೆಲಸ ಮಾಡಿಕೊಂಡು ಹೋಗುವವರೂ ಇದ್ದಾರೆ. ಮನುಷ್ಯಸ್ವಭಾವ. ಅಂತೂ ನಿಷ್ಠಾವಂತ ಅಧಿಕಾರಿಗಳಲ್ಲಿ ಭಯವುಂಟಾಗಿದೆ. ಕಳ್ಳಭಟ್ಟಿ ಸಾರಾಯಿ ತಯಾರು ಮಾಡುವುದನ್ನು ಪತ್ತೆ ಮಾಡಿಕೊಟ್ಟರೂ ಕಣ್ಣುಮುಚ್ಚಿಕೊಂಡಿರುತ್ತಾರೆ. ಈ ವಿಷಯದಲ್ಲಿ ಈಗಾಗಲೇ ಪ್ರಶ್ನೆಗಳನ್ನು ಹಾಕಿ ಈ ಸಭೆಯಲ್ಲಿ ಚರ್ಚೆಯಾಗಿದೆ. ಹೀಗೆ ಅಕ್ರಮ ಮಾರ್ಗದಲ್ಲಿ ನಡೆಯುತ್ತ ಇರತಕ್ಕ ಜನಗಳ ಸಹಾಯ ಅವರ ಸೇವೆಗಳನ್ನು ಪರಿಗ್ರಹಿಸುವುದನ್ನು ಎಂದಿಗೆ ಈ ಮಂತ್ರಿಗಳಾಗಿರುವವರು ಕೈಬಿಡುತ್ತಾರೆಯೋ ಆಗ ಅಧಿಕಾರವರ್ಗದವರಲ್ಲಿ ಧೈರ್ಯ ಬರುತ್ತದೆ, ಅಕ್ರಮವಾಗಿ ನಡೆಯತಕ್ಕವರಮೇಲೆ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಮನಸ್ಸುಂಟಾಗುತ್ತದೆ. ಅಲ್ಲಿತನಕ ಮನಸ್ಸು ಬರುವುದಿಲ್ಲ.

ಆದ್ದರಿಂದ ನಾವು ಸರ್ಕಾರದಲ್ಲಿರತಕ್ಕ ಮಂತ್ರಿಗಳ ಸ್ನೇಹಿತನಾಗಿ, ಅವರ ಜೊತೆಯಲ್ಲಿ ಕೆಲಸ ಮಾಡಿದ ಮನುಷ್ಯನಾಗಿ ಹೇಳುತ್ತೇನೆ. ಅವರು ಈ ರೀತಿ ಹಗಲು ರಾತ್ರಿ ಇಂಥವರ ಜೊತೆಯಲ್ಲಿ ಓಡಾಡುವುದು, ಅವರ ಮಾತಿಗೇ ಬೆಲೆಕೊಡುವುದು, ಅವರಿಗೆ ತಮ್ಮ ಮೆರವಣಿಗೆಗೆ ಏರ್ಪಾಡು ಮಾಡಬೇಕೆಂದು ಹೇಳಿ ಕಳುಹಿಸುವುದು

(ಶ್ರೀ ಎಚ್. ಕೆ. ವೀರಣ್ಣಗೌಡ.)

ಸರಿಯಲ್ಲ. ಇಂಥ ವಿಚಾರಗಳು ಎಲ್ಲಿಯತನಕ ನಿಲ್ಲುವುದಿಲ್ಲವೋ ಅಲ್ಲಿಯತನಕ ಯಾವುದೊಂದು ಡಿಸ್ಟ್ರಿಕ್ಟಿನಲ್ಲಿಯೇ ಆಗಲಿ, ಊರಿನಲ್ಲಿಯೇ ಆಗಲಿ ಪಾನನಿರೋಧ ಯಶಸ್ವಿಯಾಗುವುದಿಲ್ಲ; ಸರ್ಕಾರಕ್ಕೆ ಬರುವ ದುಡ್ಡನ್ನು ಕಳೆದುಕೊಳ್ಳುತ್ತೀರಿ, ಅಲ್ಲದೆ. ಬೆಂಗಳೂರಿನಲ್ಲಿ ಕುಡಿಯುವವನನ್ನು ಭೇಷ್ ಎನ್ನುವುದು, ಚಿತ್ರದುರ್ಗದಲ್ಲಿ ಕುಡಿದರೆ ಕೋರ್ಟಿಗೆ ಕರೆದುಕೊಂಡು ಹೋಗಿ ಜನರ ಎದುರಿಗೆಲ್ಲಾ ಮಾನ ಕಳೆಯುವುದು ಒಬ್ಬರಿಗೊಬ್ಬರಿಗೆ ಬೇದವೆಣಿಸಿದಂತಾಗುತ್ತದೆ. ಇದು ಸರ್ಕಾರಕ್ಕೆ ಯೋಗ್ಯವಲ್ಲವೆಂದು ಮಾತ್ರ ಹೇಳುತ್ತೇನೆ.

*ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—ಕುಡಿತದ ದುಷ್ಪರಿಣಾಮದ ವಿಚಾರದಲ್ಲಿ ನನ್ನ ಅನೇಕ ಸ್ನೇಹಿತರು ಬಹಳವಾಗಿ ಆಗಲೇ ಮಾತನಾಡಿದ್ದಾರೆ. ಅವರು ಹೇಳುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ ಪಾನ ನಿರೋಧವನ್ನು ಸಂಸ್ಥಾನಾದ್ಯಂತ ಆದಷ್ಟು ಬೇಗನೆ ಜಾರಿಗೆ ತರಬೇಕೆಂದು ಹೇಳಿ ಈ ಸಭೆಯ ಆಶಯವಾಗಿದೆ. ಅದನು ಒತ್ತಾಯ ಪೂರ್ವಕವಾಗಿ ಕೂಡ ಈ ಸಭೆಯುವರು ಹೇಳಿದ್ದಾರೆ. ಸಾರ್ವಜನಿಕರ ಅಭಿಪ್ರಾಯವೂ ಕೂಡ ಅದೇರೀತಿಯಿದೆ. ಇಷ್ಟಾದರೂ, ಈ ವಿಚಾರದಲ್ಲಿ ಸರ್ಕಾರದವರು ಅನುಸರಿಸುತ್ತಿರುವ ನೀತಿ ನನಗೆ ಸ್ವಲ್ಪವೂ ಸರಿಯಾಗಿಲ್ಲ. ಸಾರ್ವಜನಿಕರ ಹಿತದೃಷ್ಟಿಯಿಂದ, ಬಡವರ ಆರೋಗ್ಯಾಭಿವೃದ್ಧಿಯ ದೃಷ್ಟಿಯಿಂದ ಮತ್ತು ಅವರ ಆರ್ಥಿಕ ದೃಷ್ಟಿಯಿಂದ ಪಾನನಿರೋಧವನ್ನು ಜಾರಿಗೆ ತರಲೇ ಬೇಕು, ಇದು ಅತ್ಯಗತ್ಯವಾದದ್ದೆಂದು ಹೇಳಿ ಎಲ್ಲರೂ ಒತ್ತಾಯ ಮಾಡುತ್ತಿದ್ದರೂ, ಇಂಥ ವಿಚಾರದಲ್ಲಿ ಸರ್ಕಾರದವರು ತೀವ್ರ ಗಮನಕೊಡದಿರುವುದು, ಸಾರ್ವಜನಿಕರ ಅಭಿಪ್ರಾಯಕ್ಕೆ ಏನೂ ಮನ್ನಣೆ ಕೊಡದಿರುವುದು ಒಂದು ರೀತಿಯ ಮೊಂಡತನದ ನೀತಿ ಎಂದು ತಿಳಿದುಕೊಂಡಿದ್ದೇನೆ. ಸಾಮಾನ್ಯವಾಗಿ ಸರ್ಕಾರವನ್ನು ಪ್ರತಿಯೊಂದಕ್ಕೂ ಟೀಕಿಸುವುದು ನನ್ನ ಪದ್ಧತಿಯಲ್ಲ. ದೇಶಕ್ಕೆ ಒಳ್ಳೆಯದನ್ನು ಮಾಡಿದರೆ ಅದಕ್ಕೆ ಪ್ರಶಂಸೆ ಮಾಡುವವನು ನಾನು. ಹಾಗಿದ್ದರೂ, ಈ ಒಂದು ವಿಚಾರದಲ್ಲಿ ಮಾತ್ರ ಅವರು ಮಾಡುತ್ತಿರುವುದು ಸರಿಯೆಂದು ಯಾರೂ ಹೇಳುವುದಕ್ಕಾಗುವುದಿಲ್ಲ. ಈ ಮಂತ್ರಿಮಂಡಲ ಬಂದ ಮೊದಲನೆಯ ವರ್ಷ ಎರಡು ಮೂರು ತಾಲ್ಲೂಕುಗಳಲ್ಲಿ ತಂದರು. ಅಲ್ಲಿಂದೀಚೆಗೆ ಈ ಮೂರು ನಾಲ್ಕು ವರ್ಷಗಳೂ ಹಣಕಾಸಿನ ನೆಪವನ್ನು ಹಾಕಿಕೊಂಡು ಇದನ್ನು ಮುಂದುವರಿಸದೆ ಹಾಗೆಯೇ ಮುಂದಕ್ಕೆ ಹಾಕಿಕೊಂಡು ಬಂದಿದ್ದಾರೆ. ನಾವಾದರೋ ಈ ವರ್ಷ ಇಲ್ಲದಿದ್ದರೆ ಮುಂದಿನ ವರ್ಷ ಜಾರಿಗೆ ಕೊಡಬಹುದೆಂದು ಭಾವಿಸಿದ್ದೆವು. ಹೋದವರ್ಷ ಕೂಡ, ಈ ಸಾರಿ ಒಂದೆರಡು ಜಿಲ್ಲೆಗಳಲ್ಲಿ ಜಾರಿಗೆ ತರಬೇಕೆಂದು ಕಡ್ಡಾಯವಾಗಿ ಹೇಳಿದ್ದೆವು. ಆದರೆ, ಈ ವರ್ಷ ನೋಡುವಲ್ಲಿ, ಕೇಂದ್ರ ಸರ್ಕಾರವನ್ನು ಹಣಸಹಾಯಕ್ಕಾಗಿ ಕೇಳಿದ್ದೇವೆ, ಅದು ಬಂದ ಮೇಲೆ ಮುಂದಿನ ವರ್ಷ ಒಮ್ಮೆಗೇ ಜಾರಿಗೆ ತರುತ್ತೇವೆಂದು ಹೇಳಿದ್ದಾರೆ. ಕೇಂದ್ರದಿಂದ ಸಹಾಯ ಬಂದರೆ ಇವರು ಜಾರಿ ಮಾಡುತ್ತಾರೆಂಬುದೇನೋ ನಿಜವಿರಬಹುದು. ಆದರೆ, ಈ ವಾದ ಸರಿಯಲ್ಲ. ಅವರು ದುಡ್ಡು ಕೊಡಲಿ, ಕೊಡದಿರಲಿ ನಾವು ಮಾಡಲೇ ಬೇಕು. ನಾವು ಹಿಂದೆ ಪಾನನಿರೋಧವನ್ನು ತರಬೇಕೆಂದು ಹೇಳಿದಾಗ ಕೇಂದ್ರದಿಂದ ಬರುವ ಹಣದ ನಿರೀಕ್ಷಣೆಯನ್ನೇನೂ ಮಾಡಿ ಹೇಳಲಿಲ್ಲ. ಇದಕ್ಕಾಗಿಯೇ ಅಲ್ಲವೇ ಸೇಲ್ಸ್ ಟ್ಯಾಕ್ಸನ್ನು ನಾವು ಜಾರಿಗೆ ತಂದದ್ದು ! ಪಾನನಿರೋಧದಿಂದಾಗುವ ಕೊರತೆವನ್ನು ಸರಿದೂಗಿಸುವುದಕ್ಕಲ್ಲವೇ ಇದನ್ನು ಮಾಡಿದ್ದು ? ಹಾಗಿದ್ದರೂ ಪಾನನಿರೋಧವನ್ನು ಇಷ್ಟಕ್ಕೇ ನಿಲ್ಲಿಸಿದ್ದಾರೆ.

ಶ್ರೀ ಟಿ. ಚನ್ನಯ್ಯ (ಜನಾರೋಗ್ಯ ಮತ್ತು ಸ್ಥಳೀಯ ಸಂಸ್ಥೆಗಳ ಮಂತ್ರಿಗಳು).—ನಮ್ಮ ಒಂದು ಸರ್ಕಾರವೇ ಅಲ್ಲ ಈರೀತಿ ಮಾಡಿರುವುದು. ಪತ್ರಿಕೆಗಳಲ್ಲಿ ಕೂಡ ತಾವು ನೋಡಿರಬಹುದು. ಬೊಂಬಾಯಿ, ಮಧ್ಯ ಪ್ರದೇಶ ಮುಂತಾದ ಪ್ರತಿಯೊಂದು ಪ್ರದೇಶದವರೂ ಪಾನನಿರೋಧವನ್ನು ತಕ್ಷಣವೇ ಜಾರಿಗೆ ತರುವ ವಿಚಾರದಲ್ಲಿ ತಮ್ಮ ಖಚಿತವಾದ ಅಭಿಪ್ರಾಯವನ್ನು ಹೇಳಿದ್ದಾರೆ. ಪಾರ್ಲಿಮೆಂಟಿನಲ್ಲಿ ಒಂದು ಹೇಳಿಕೆ ಕೂಡ ಈ ಬಗ್ಗೆ ಬಂದಿದೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಇರಬಹುದು. ಆದರೆ, ನಮ್ಮದು ಮಾದರಿ ಸಂಸ್ಥಾನ. ಇನ್ನೊಂದು ಸಂಸ್ಥಾನವನ್ನು ನಾವು ಅನುಕರಿಸಬೇಕಾಗಿಲ್ಲ. ನಮ್ಮ ಜನರ ಹಿತದೃಷ್ಟಿಯಿಂದ ಯಾವುದು ಒಳ್ಳೆಯದೆಂಬುದನ್ನು ನಾವು ಹೇಳುತ್ತಿದ್ದೇವೆ. ಒಂದೇ ಸಾರಿ ಸಂಸ್ಥಾನಾದ್ಯಂತ ಜಾರಿಗೆ ತರುವುದಕ್ಕೆ ಸಾಧ್ಯವಿಲ್ಲದೆ ಇದ್ದರೆ, ವರ್ಷವರ್ಷವೂ ಕೆಲವು ಡಿಸ್ಟ್ರಿಕ್ಟ್‌ಗಳಲ್ಲಿ ಯಾವ ವರ್ಷವೂ ತಟಸ್ಥರಾಗದೆ ಪಾನನಿರೋಧವನ್ನು ಜಾರಿಗೆ ಕೊಟ್ಟಿದ್ದರೆ ಇಷ್ಟು ಹೊತ್ತಿಗೆ ಎಲ್ಲ ಡಿಸ್ಟ್ರಿಕ್ಟ್‌ಗಳಲ್ಲೂ ಬರುತ್ತಿತ್ತು. ಅದೂ ಮಾಡಲಿಲ್ಲ. ಈಗೇನು ಪಾನನಿರೋಧ ಜಾರಿಗೆ ತಂದಿದೆಯೆಂದು ಹೇಳಿದ್ದಾರೋ ಅದರಿಂದ ವಾಸ್ತವವಾಗಿ ಏನೂ ಆಗಿಲ್ಲವೆಂದು ಹೇಳಬೇಕು. ಏಕೆಂದರೆ, ಆಗ್ಗೆ ವರಮಾನ ಎಷ್ಟು ಬರುತ್ತಿತ್ತೋ ಈಗಲೂ ಅಷ್ಟೇ ಬರುತ್ತಿದೆ. ಅಂದರೆ, ಪಾನನಿರೋಧವನ್ನು ನೀವು ಎಲ್ಲಿ ಜಾರಿಗೆ ಕೊಟ್ಟಿದ್ದೀರೋ ಅಲ್ಲಿ ಯಶಸ್ವಿಯಾಗಿ ಅದು ನಡೆಯುತ್ತಿಲ್ಲ. ಇದಕ್ಕೆ ಕಾರಣ, ಸರ್ಕಾರದವರು ಇದರ ವಿಷಯದಲ್ಲಿ ಎಷ್ಟು ತೀವ್ರತೆಯಿಂದ ಇರಬೇಕಾಗಿತ್ತೋ ಅಷ್ಟು ತೀವ್ರತೆಯಿಂದ ಇರಲಿಲ್ಲ. ಹೇಗೆ ಚೆನ್ನಾಗಿ ನಡೆಯಬೇಕಾಗಿತ್ತೋ ಹಾಗೆ ನಡೆಸುವುದಕ್ಕೆ ಪ್ರಯತ್ನಮಾಡಿದ್ದರೆ, ಶ್ರೀಮಾನ್ ಚಂದ್ರಶೇಖರಯ್ಯನವರು ಹೇಳಿದ Bottle Tonic ಏನಾಯಿತು ಎಂಬುದನ್ನು ತಿಳಿಯುವುದಕ್ಕೆ ಪ್ರಯತ್ನ ಪಟ್ಟಿದ್ದರೆ ಬಹುಮಟ್ಟಿಗೆ ಪಾನ ನಿರೋಧ ಯಶಸ್ವಿಯಾಗುತ್ತಿತ್ತು. ಮಂತ್ರಿಗಳ ಪ್ರವಾಸದ ವಿಚಾರದಲ್ಲಿ ಬಹಳಮಟ್ಟಿಗೆ ಟೀಕೆಗಳು ಬರುತ್ತಿವೆ. ಪ್ರವಾಸ ಮಾಡುವುದು ತಪ್ಪೆಂದು ನಾನು ಹೇಳುವುದಿಲ್ಲ. ಹಾಸನ ತಾಲ್ಲೂಕಿನಲ್ಲಿ, ಮಂಜರಾಬಾದು ಅರಕಲಗೂಡು ಕಡೆಗೆ ಒಂದು opening ceremonyಯಿದ್ದರೂ ಹೋಗಿ ಮಾಡಿಕೊಂಡು ಬರುತ್ತೀರಿ. ಅದರಂತೆಯೇ, ಆ ಪ್ರದೇಶದಲ್ಲಿ ಪ್ರೊಹಿಬಿಷನ್ ಜಾರಿಗೆ ಕೊಟ್ಟಿರುವಾಗ ಅದು ಯಶಸ್ವಿಯಾಗಿ ನಡೆಸುವ ದೃಷ್ಟಿಯಿಂದ ಹತ್ತಾರು ಕಾನ್ಫರೆನ್ಸುಗಳನ್ನು ಏರ್ಪಾಡುಮಾಡಿ ಜನರಲ್ಲಿ ಈ ವಿಷಯದಲ್ಲಿ ತಕ್ಕಷ್ಟು ಪ್ರಚಾರ ನಡೆಸಿದ್ದರೆ ಖಂಡಿತ ನಿಮ್ಮ ಪ್ರಯತ್ನ ಯಶಸ್ವಿಯಾಗುತ್ತಿತ್ತು. ಈಗಲೂ ತಾವು ಪಾನನಿರೋಧ ಜಾರಿಗೆ ಕೊಟ್ಟಿರುವ ಕಡೆ,—ಪಾನನಿರೋಧ ಏನೂ ಪರಿಣಾಮವನ್ನುಂಟುಮಾಡಿಲ್ಲವೆಂದು ನಾನು ಹೇಳುವುದಿಲ್ಲ—ಶೇಕಡ 50 ರಷ್ಟು ಮಾತ್ರ ಜಯಪ್ರದವಾಗಿದೆಯೆಂದು ಹೇಳಬಹುದು. ನಿಮ್ಮ ತಾತ್ಸಾರ ಭಾವನೆಯಿಂದ ಇನ್ನೂ ಐವತ್ತು ಭಾಗ ಯಶಸ್ವಿಯಾಗಿಲ್ಲವೆಂದು ಹೇಳಬಹುದು. ನಮ್ಮ ಅರಕಲಗೂಡು ತಾಲ್ಲೂಕಿಗೆ ಬಂದಿರತಕ್ಕ ಪೋಲೀಸ್ ಅಧಿಕಾರಿಗಳ ಪೈಕಿ ಬಹುಜನ ದುರದೃಷ್ಟವಶಾತ್ ಕುಡಿಯುವವರೇ ಆಗಿದ್ದಾರೆ. ಅಂಥವರನ್ನು ಅಲ್ಲಿಗೆ ಹಾಕಿದರೆ ಹೇಗೆ ತಾನೆ ಪಾನ ನಿರೋಧ ಯಶಸ್ವಿಯಾದೀತು ! ಪಾನನಿರೋಧವನ್ನು

ಜಾರಿಗೆ ಕೊಡಬೇಕಾದರೆ ಪೋಲೀಸ್ ಅಧಿಕಾರಿಗಳೇ ಜಾರಿಗೆ ಕೊಡಬೇಕೆಂದೇನೂ ಇಲ್ಲ, ನಿಜ. ಆದರೂ ಕುಡಿಯದೆ ಇರತಕ್ಕ ಅಧಿಕಾರಿಗಳನ್ನು, ಪಾನನಿರೋಧದಲ್ಲಿ ನಂಬಿಕೆಯಿರತಕ್ಕ ಅಧಿಕಾರಿಗಳನ್ನು, ನೇಮಕ ಮಾಡಿಕೊಳ್ಳುವುದರಿಂದ ಹೆಚ್ಚಿನ ಪರಿಣಾಮಕಾರಿಯಾಗಿ ಕೆಲಸ ನಡೆಯುತ್ತದೆ. ನಾನೀಗ ಎರಡು ವರ್ಷದಿಂದ ನಮ್ಮ ಅರಕಲಗೂಡು ತಾಲ್ಲೂಕಿನಲ್ಲೇ ಅಲ್ಲಿ ಹಳ್ಳಿ ಹಳ್ಳಿಯಲ್ಲೂ ಸುತ್ತಿನೋಡಿದ್ದೇನೆ. ಪುಣ್ಯವಶಾತ್ ಪೋಲೀಸ್ ಇನ್ಸ್ಪೆಕ್ಟರು, ಸಬ್ ಇನ್ಸಕ್ಟರು ಯೋಗ್ಯರು, ಈ ಸ್ಕೀಮಿನಲ್ಲಿ ನಂಬಿಕೆಯುಳ್ಳವರು. ಆದ್ದರಿಂದಲೇ ಬಹುಮಟ್ಟಿಗೆ ಯಶಸ್ವಿಯಾಗಿ ನಡೆಯುತ್ತಿದೆ. ಕಳ್ಳತನದಿಂದ ಮರಗಳನ್ನು ಕಟ್ಟುವುದು, ಕುಡಿಯುವುದು ಎಲ್ಲಿಯೂ ಕಂಡು ಬರುತ್ತಿಲ್ಲ. ನಮ್ಮ ಜಿಲ್ಲೆಯ ಅಸೆಂಬ್ಲಿ ಸದಸ್ಯರು ಸೇರಿ

4 P.M.

ಹೋದಸಾರಿ ಒಂದು ಅರ್ಜಿಗೆ ರುಜುಮಾಡಿ ಇಂಥಿಂಥ ತಾಲ್ಲೂಕ್‌ಗಳಲ್ಲಿ ಪಾನನಿರೋಧವನ್ನು ಜಾರಿಗೆ ತರಬೇಕೆಂದು ಕೊಟ್ಟಿದ್ದೇವೆ. ಆದರೆ ಆಚೆಕಡೆ ಅರಕಲಗೂಡು, ಆಲೂರ್ ತಾಲ್ಲೂಕ್‌ಗಳ ಎರಡು ಫರ್ಲಾಂಗ್ ದೂರದಲ್ಲಿ ಗೊರೂರಿನಲ್ಲಿ ಸೇಂದಿ ಅಂಗಡಿಗಳನ್ನು ಇಟ್ಟಿದ್ದಾರೆ. ಈ ರೀತಿ ಪಕ್ಕದಲ್ಲಿ ಸೇಂದಿ ಅಂಗಡಿಗಳನ್ನು ಇಟ್ಟಿದ್ದರೆ, ದೇಶದಲ್ಲಿ Prohibition ಜಾರಿಗೆ ಕೊಟ್ಟಿರುವುದು ಜಯಪ್ರದವಾಗಬೇಕು ಎನ್ನುವ ಧ್ಯೇಯ ನಮ್ಮ ಸರ್ಕಾರಕ್ಕೆ ಇದೆ ಎಂದು ಹೇಗೆ ನಂಬುವುದು! ಸರ್ಕಾರಕ್ಕೆ ಹೋದವರ್ಷ ಸೇಂದಿ ಅಂಗಡಿಗಳನ್ನು ದೇಶಾದ್ಯಂತ ಮುಚ್ಚಿಸಬೇಕೆಂದು ಒಂದು ಅರ್ಜಿಯನ್ನು ರುಜುಮಾಡಿ ಕೊಟ್ಟೆವು. ಆದರೂ ಅದೇನೂ ಸಫಲವಾಗಲಿಲ್ಲ. ಸರಕಾರಕ್ಕೆ ಬರುವ ವರಮಾನ ಬರಬೇಕು. Prohibition policy ಸಂಸ್ಥಾನದ ಅನೇಕ ಕಡೆ ನಡೆಸುತ್ತೇವೆ ಎಂದು ಹೇಳಬೇಕು ಎಂಬ ಹಾಗೆ ತೋರುತ್ತದೆ. ಸುಮ್ಮನೆ ಭಾಷಣಗಳನ್ನು ಮಾಡಿ ಪದೇಪದೇ ಇದನ್ನು ಹೇಳುವುದು ಚೆನ್ನಾಗಿಲ್ಲ. ಸರ್ಕಾರದವರು ಈ ವರ್ಷದಲ್ಲಿ ಖರ್ಚುಗಳನ್ನು ಕಡಿಮೆ ಮಾಡಲು ಬೇಕಾದಷ್ಟು ಬಾಬುಗಳಿವೆ. ಪಾನನಿರೋಧದ ವಿಚಾರದಲ್ಲಿ ಜನರನ್ನು ನೀತಿವಂತರನ್ನಾಗಿ, ಸತ್ಯವಂತರನ್ನಾಗಿ ಮಾಡಲು Cultural scheme ಏರ್ಪಡಿಸಿ ಬೆಂಗಳೂರು—ಮೈಸೂರಿನಿಂದ ಹಾಸನದ ಹಳ್ಳಿಗಳಿಗೆ ಭಾಷಣಕಾರರನ್ನು ಕಳುಹಿಸುತ್ತಾರೆ. ಅದಕ್ಕೋಸ್ಕರ 4-5 ಲಕ್ಷ ರೂಪಾಯಿಗಳ ಖರ್ಚನ್ನು ಇಟ್ಟಿದ್ದೀರಿ. ಅವರು ಕುಡಿಯುವುದಕ್ಕೆ ಬಿದ್ದು ಅವರ ಆರೋಗ್ಯವನ್ನು ಹಾಳುಮಾಡಿಕೊಂಡು ಮನುಷ್ಯತ್ವ ಕಳೆದುಕೊಂಡು ಅನೀತಿವಂತರಾಗಿರುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಇನ್ನೊಂದುಕಡೆ ಕುಡಿತ ಅನೀತಿವಂತರನ್ನಾಗಿ ಮಾಡುತ್ತದೆ, ಕಳ್ಳತನ ಮಾಡಬೇಡಿ, ಕುಡಿಯಬೇಡಿ, ದ್ರೋಹಮಾಡಬೇಡಿ ಎಂದು ಅನಾವಶ್ಯಕವಾಗಿ Propaganda ಮಾಡಲು ಜನರನ್ನು ಕಳುಹಿಸುತ್ತಿದ್ದೀರಿ. Top priority ಇಲ್ಲದೇ ಇರುವ ಅನೇಕ ಖರ್ಚು ಬಾಬುಗಳನ್ನು ಕಡಿಮೆ ಮಾಡಿ. ಮುಖ್ಯವಾಗಿ ಜನಗಳ ನೈತಿಕ ಬಲವನ್ನು ಹೆಚ್ಚಿಸುವುದಕ್ಕೆ, ಆರೋಗ್ಯವನ್ನು ಉತ್ತಮಪಡಿಸುವುದಕ್ಕೆ ಪಾನನಿರೋಧ ಎನ್ನುವುದು ಬಹಳ ಮುಖ್ಯವೆಂದು ಪ್ರತಿಯೊಬ್ಬರೂ ತಿಳಿದುಕೊಂಡಿದ್ದೇವೆ, ನಮಗೆ ಈ ಪಾನನಿರೋಧ ವಿಚಾರದಲ್ಲಿ ಅನುಮಾನವಿಲ್ಲ. ಆದರೆ ಪಾನನಿರೋಧವನ್ನು ವಜಾಮಾಡಬೇಕು, ಪುನಃ ಕುಡಿತವನು introduce ಮಾಡಬೇಕು ಎಂದು Kolar Gold Fieldsನಲ್ಲಿ ಜನರು ಅಭಿಪ್ರಾಯ ಪಡುತ್ತಾರೆ ಎಂದು ಹೇಳುತ್ತಿದ್ದಾರೆ. ಅಲ್ಲಿ ಸರಿಯಾಗಿ ಪ್ರಚಾರ ಇಲ್ಲದೇ ಇರುವುದರಿಂದ, ಸರಿಯಾಗಿ ತಿಳಿವಳಿಕೆ ಕೊಡಲು ನಾಯಕತ್ವ ಇಲ್ಲದೇ ಇರುವುದರಿಂದ ಆ ರೀತಿ ಕುಡಿತಬೇಕು ಎಂದು ಹೇಳುತ್ತಿರಬಹುದು. ನಮ್ಮ ಕಡೆಯ ಜನಗಳ ಅಭಿಪ್ರಾಯವನ್ನು ತಿಳಿದುಕೊಂಡಿದ್ದೇನೆ. ಮತ್ತೆ ಪುನಃ ಇದನ್ನು introduce ಮಾಡಬೇಕೆಂದು ಸರ್ಕಾರದ ಅಭಿಪ್ರಾಯವಿದೆ. ನೀವು ಏನು ಹೇಳುತ್ತೀರಿ ಎಂದು ಕೇಳಿದ್ದಕ್ಕೆ, ಕುಡಿಯುವುದಕ್ಕೆ ಖರ್ಚುಮಾಡುವ ದುಡ್ಡನ್ನು ಉಳಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ, ಬಟ್ಟೆಬರೆಗಳನ್ನು ಹೆಚ್ಚಾಗಿ ಹಾಕಿಕೊಳ್ಳುತ್ತಿದ್ದೇವೆ, ಜಮೀನು ಉಳುವುದಕ್ಕೆ ಪ್ರಯತ್ನಮಾಡುತ್ತಿದ್ದೇವೆ ಎಂದು ಹೇಳುತ್ತಾರೆ. ಜನಗಳಿಗೆ Prohibitionನಿಂದ ಆಗಿರತಕ್ಕ ಉಪಕಾರದ ವಿಚಾರದಲ್ಲಿ ಅನುಮಾನವಿಲ್ಲ. ಆದ್ದರಿಂದ ಒಂದು ರೀತಿಯಲ್ಲಿ ನಮ್ಮ ಹಿತದೃಷ್ಟಿಯಿಂದ, ಈ ಸಭೆಯ ಹಿತದೃಷ್ಟಿಯಿಂದ Prohibitionನನ್ನು ಈ ವರ್ಷ ಕೆಲವಾರು ತಾಲ್ಲೂಕುಗಳಲ್ಲಿ ಜಾರಿಗೆ ಕೊಡಬೇಕು. ಹಾಗೆ ಜಾರಿಗೆ ತಾರದೇ ಇದ್ದರೆ, ಜನಗಳಿಗೆ ಎಲ್ಲಕ್ಕಿಂತಲೂ ಮುಖ್ಯವಾಗಿ ಇಂತಹ ಉಪಕಾರ ಕೆಲಸವನ್ನು ಮಾಡದೆ ಅವರನ್ನು ತಾತ್ಸಾರವಾಗಿ ಕಂಡರೆ, ಮುಂದೆ electionನಲ್ಲಿ ಓಟು ಕೇಳಬೇಕಾದರೆ ಬಹಳ ನಾಚಿಕೆಗೇಡಿನ ಕೆಲಸವಾಗುತ್ತದೆ. ಆದ್ದರಿಂದ Prohibitionನನ್ನು ಜಾರಿಗೆ ಖಂಡಿತವಾಗಿ ಕೊಡಬೇಕು ಎಂದು ಹೇಳುತ್ತೇನೆ.

Mr. DEPUTY SPEAKER.—The House will now rise for lunch and meet at 4-35 P.M.

The House rose for Lunch at Five Minutes past Four of the Clock and met again at Thirty-five Minutes past Four of the Clock.

[MR. DEPUTY SPEAKER in the Chair].

* ಶ್ರೀ ವಿ. ಆರ್. ನಾಯ್ಡು (ಮಲ್ಲೇಶ್ವರಂ).—ಮಾನ್ಯಸಭಾಧ್ಯಕ್ಷರೇ, ನನ್ನ ಮಾನ್ಯ ಅನೇಕ ಸದಸ್ಯರೆಲ್ಲರೂ ಕೂಡ ಈ ಪಾನ ನಿರೋಧದ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ಸ್ಪಷ್ಟಪಡಿಸಿದ್ದಾರೆ. ನಮ್ಮ ಸರ್ಕಾರದ ಮತ್ತು ಹಿಂದೂಸ್ಥಾನದ ಸರ್ಕಾರದ ನೀತಿ ಏನಿದೆಯೋ ಅದನ್ನು ನಾನೂ ಕೂಡ ತುಂಬ ಹೃತ್ಪೂರ್ವಕವಾಗಿ ಒಪ್ಪಿಕೊಳ್ಳುತ್ತೇನೆ. ಮಹಾತ್ಮಾ ಗಾಂಧಿಯವರು ಜೀವಂತರಾಗಿದ್ದಾಗ ಯಾವ ಒಂದು ಕೆಲಸ ಮಾಡಬೇಕಾದರೂ ಕೂಡ ತಮ್ಮ ಕೆಲಸವನ್ನು ಜನತೆಯ ಮುಂದೆ ಇಟ್ಟು ಜನತೆಯು ಅದರ ಸಿಕ್ಕಿದರೇನೇ ಆ ಕೆಲಸ ಮಾಡಬೇಕೆಂದು ತನ್ನ ಪ್ರಾರ್ಥನಾ ಸಭೆಯಲ್ಲಿ ಹೇಳಿದ್ದನ್ನು ಕೇಳಿರುವವರಲ್ಲಿ ನಾನೂ ಒಬ್ಬ. ಅದನ್ನು ಸರ್ಕಾರದ ಗಮನಕ್ಕೆ ತರುತ್ತೇನೆ. ಅದನ್ನು ನಾವು ಕೇಳಿರಬೇಕು. ಈ ನೀತಿಗಳಲ್ಲಿ ಪಾನನಿರೋಧದ ನೀತಿ ಕೂಡ ಒಂದು. ಆದರೆ ಹಿಂದೂಸ್ಥಾನ ಸರ್ಕಾರ ಮತ್ತು ನಮ್ಮ ಸರ್ಕಾರದಲ್ಲಿ ಒಂದು ವಿಷಯವನ್ನು ಪ್ರಸ್ತಾಪಮಾಡಬೇಕೆಂದು ಇಷ್ಟಪಡುತ್ತೇನೆ. ಕುಡಿತವನ್ನು ಏತಕ್ಕೋಸ್ಕರ ಹಿಂದಿನ ಕಾಲದಲ್ಲಿ ಒಪ್ಪಿಕೊಳ್ಳುತ್ತಿದ್ದರು, ಕುಡಿತವು ಎಷ್ಟು ವರ್ಷಗಳಿಂದ ಜಾರಿಯಲ್ಲಿದೆ ಎಂಬ ಅಂಶವನ್ನು ನಮ್ಮ ಕೇಂದ್ರ ಸರ್ಕಾರದ

(ಶ್ರೀ ವಿ. ಆರ್. ನಾಯ್ಡು.)

ಮತ್ತು ತಮ್ಮ ಅವಗಾಹನೆಗೆ ತರಬೇಕೆಂದು ಇಷ್ಟಪಡುತ್ತೇನೆ. 3,800 ವರ್ಷಗಳ ಹಿಂದೆ ಸುರ ಮತ್ತು ರಾಕ್ಷಸರು ಇದ್ದಾಗ ಅವರ ದೇವಲೋಕದಲ್ಲಿ ಶಿವತಾಂಡವ ನೃತ್ಯ ಮಾಡುತ್ತಿರುವಾಗ ಸುರಾಪಾನ ಮಾಡುತ್ತಿರಲಿಲ್ಲವೇ ? ಮನುಷ್ಯನ ಶಕ್ತಿಯನ್ನು ಹೆಚ್ಚಿಸುವುದಕ್ಕೋಸ್ಕರ, ಮನುಷ್ಯನ ಗಮನವನ್ನು ಒಂದೇ ಕಡೆ ಇರಿಸುವುದಕ್ಕೋಸ್ಕರ, ಮನುಷ್ಯನಿಗೆ ಒಂದು ಕ್ರೋಧ ಬರುವುದಕ್ಕೋಸ್ಕರ ಕುಡಿಯುತ್ತಿದ್ದರು. ಇದನ್ನು ಕುಡಿದು ಅನೇಕ ರಾಕ್ಷಸರನ್ನು ಧ್ವಂಸ ಮಾಡುತ್ತಿದ್ದರು. ನಮ್ಮ ದೇಶದ ಜನರು ಆ ವಿಷಯವನ್ನು ತಿಳಿದುಕೊಂಡಿದ್ದಾರೆ. ವಿಸ್ಕಿ, ಬ್ರಾಂದಿ, ಎಂದು ಏನು ಹೇಳುತ್ತಿದ್ದೇವೋ ಆ ಹೆಸರು ಆಗ ಇರಲಿಲ್ಲ. ಅನೇಕ ಕಡೆಗಳಲ್ಲಿ ಸನ್ಯಾಸಿಗಳು, ಕುಟೀರದಲ್ಲಿ ಇದ್ದು ಭಂಗಿಯನ್ನು ಸೇವಿಸುತ್ತಿದ್ದರು. ಈ ಸರ್ಕಾರಕ್ಕೂ, ಆ ಸರ್ಕಾರಕ್ಕೂ ಹೇಳುತ್ತಿದ್ದೇನೆ. ಕುಡಿತವು ತಾನಾಗಿ ಹೋಗುವುದಿಲ್ಲ. ಬ್ರಹ್ಮ, ವಿಷ್ಣು, ಮಹೇಶ್ವರರ ಕಾಲದಲ್ಲಿ, ರಾಜಾಧಿರಾಜರ ಕಾಲದಲ್ಲಿ, ದೇವಲೋಕದಲ್ಲಿ ಶಿವ ತಾಂಡವನೃತ್ಯಮಾಡುವ ಕಾಲದಲ್ಲಿ ದೇಶಕಲ್ಯಾಣಕ್ಕೋಸ್ಕರ ಸುರಾಪಾನ ಮಾಡಿ ಸಂತೋಷದಿಂದ ಇರುತ್ತಿದ್ದರು. ಹೀಗಿರುವಾಗ ಇಂತಹ ನಿಬಂಧನೆಗಳನ್ನು ತಂದು ದೇಶಕ್ಕೋಸ್ಕರ ಒಳ್ಳೆಯದನ್ನು ಮಾಡುವುದಕ್ಕೆ ಹೋಗಿ ಹೆಚ್ಚು ಕಡಿಮೆಯಾಗುತ್ತದೆ ಎಂದರೆ ತಪ್ಪಾಗಲಾರದು. ಇದು ದೈವಾಂಶದಿಂದ ಬಂದಿರುವುದು. ಇದನ್ನೆಲ್ಲಾ ಗಮನದಲ್ಲಿಟ್ಟುಕೊಳ್ಳಬೇಕು. ಪಾನನಿರೋಧವನ್ನು ಜಾರಿಗೆ ತಂದಿದ್ದಾರೆ. ಹೇಗೆ ಜ್ಞಾರಿಗೆ ತಂದಿದ್ದಾರೆ ಎಂದು ಯೋಚನೆ ಮಾಡಿದರೆ, ಹಿಂದೆ ಲಕ್ಕವಳ್ಳಿ ಮುಂತಾದ ದೊಡ್ಡ ಕಾಮಗಾರಿಗಳು ನಡೆಯುವ ಸ್ಥಳಗಳಲ್ಲಿ, ಒಂದು ಸಂಸಾರದಲ್ಲಿ ಗಂಡಹೆಂಡತಿ ಐದಾರು ಮಕ್ಕಳು ಇದ್ದರೆ, ಪಾನವನ್ನು ಅಂಗಡಿಯಲ್ಲಿ ಮಾರುತ್ತಿದ್ದ ಕಾಲದಲ್ಲಿ, ಗಂಡ ಎಂಟಾಣೆಯನ್ನು ಜೇಬಿಗೆ ಹಾಕಿಕೊಂಡು ಗುಟ್ಟಾಗಿ ಮನೆಯಲ್ಲಿ ಇನ್ನಾರಿಗೂ ಗೊತ್ತಿಲ್ಲದಂತೆ ಹೋಗಿ ಕುಡಿದು ಬರುತ್ತಿದ್ದ. ಈಗ ಗಂಡ ಕುಡಿಯುವುದಲ್ಲದೆ ಹೆಂಡತಿ ಮಕ್ಕಳು ಕೂಡ, ಕೊನೆಗೆ ಮನೆಯಲ್ಲಿ ಅಕ್ಕಯ್ಯ ಇದ್ದರೆ ಅವಳೂ ಕೂಡ ರುಚಿ ನೋಡುವುದಕ್ಕೆಂದು ಕುಡಿಯುತ್ತಿದ್ದಾರೆ. ಮನೆ ಮನೆಯಲ್ಲಿಯೂ ಕೂಡ ಕಳ್ಳಭಟ್ಟಿ ಆಗುತ್ತಿದೆ. ನಾವು ಅನುಸರಿಸಿದ ನೀತಿ ಏನಾಗಿದೆ ಎಂಬುದನ್ನೂ ನೋಡಬೇಡವೆ ? ಇದು ಏಕೆ ಹೀಗಾಯಿತು ಎಂದು ನನಗೆ ಯೋಚನೆಯಾಗಿದೆ. ಯಾರೂ ನಾನು ಹೇಳುವುದನ್ನು ತಪ್ಪಾಗಿ ಭಾವಿಸಬಾರದು ; ಇರುವುದನ್ನು ಹೇಳುತ್ತೇನೆ. ಭಿನ್ನಾಭಿಪ್ರಾಯವಿದೆ ಎಂದರೆ, ಆ ಗುಂಪಿನವರಿಗೂ ಬೇಡ, ಇವರಿಗೂ ಬೇಡ, ಅವರೂ ಸುಸ್ತಾಗಿದ್ದಾರೆ, ಇವರೂ ಸುಸ್ತಾಗಿದ್ದಾರೆ, ಅಧಿಕಾರವನ್ನು ನನಗೆ ಕೊಡಿ. ಸರ್ಕಾರವನ್ನು ನನಗೆ ಕೊಟ್ಟು ನೋಡಿ. . . .

ಒಬ್ಬ ಸದಸ್ಯರು.—ಮುಖ್ಯಮಂತ್ರಿಗಳ ಪೋರ್ಟ್‌ಫೋಲಿಯೊ ಯಾರಿಗೆ ?

ಶ್ರೀ ವಿ. ಆರ್. ನಾಯ್ಡು.—ಮುಖ್ಯಮಂತ್ರಿಗಳ ಪೋರ್ಟ್‌ಫೋಲಿಯೊ ನನಗೆ ಕೊಡಿ, ಅಧ್ಯಕ್ಷರೆ, ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ರಾಜ್ಯದಲ್ಲಿ ಹೇಗೆ ತಾಂಡವವಾಡಬೇಕೆಂಬುದು ನನಗೆ ಗೊತ್ತು (ನಗು !)

ಉಪಾಧ್ಯಕ್ಷರು.—ಕೊಡುವುದಕ್ಕೆ ನನಗೆ ಅಧಿಕಾರವಿಲ್ಲ (ನಗು !)

ಶ್ರೀ ವಿ. ಆರ್. ನಾಯ್ಡು.—ಪೂರ್ವದಲ್ಲಿ ವಿಜಯನಗರದಲ್ಲಿ ರಾಜ್ಯವನ್ನಾಳುವವರು ಹೇಗೆ ಮಾಡಿದ್ದಾರೋ ಹಾಗೆ ಮಾಡುತ್ತೇನೆ. ಜನರಿಗೆ ಯಾವ ಯಾವ ಸೌಖ್ಯಬೇಕೋ, ಸೌಕರ್ಯಬೇಕೋ ಅದನ್ನೆಲ್ಲಾ ಮಾಡಿಕೊಡುತ್ತೇನೆ.

ಸುರಾಪಾನದ ವಿಷಯ ಹೇಳುವುದಾದರೆ, ಇಂದಿಗೂ ಕೂಡ ಅನೇಕ ಜನಗು ಹೆಂಡ, ಸಾರಾಯಿ ಇವುಗಳನ್ನು ಮುನೇಶ್ವರ, ಕಾಳಮ್ಮ ಮುಂತಾದ ದೇವತೆಗಳಿಗೆ ಕೈಮುಗಿದು ನೈವೇದ್ಯ ಮಾಡುವುದು ತಮಗೂ ಗೊತ್ತಿರುವ ವಿಷಯ. ಹೀಗೆ ಭಕ್ತಿಯ ಪೂಜೆ ಮಾಡಿ ವರ ಪಡೆಯುವುದನ್ನು ತಪ್ಪಿಸಬೇಕೆಂದು ಪ್ರಯತ್ನಪಟ್ಟರೆ ಹೇಗೆ ? ಕುಡಿಯುವವರು ಕುಡಿಯುತ್ತಾರೆ. ಇದರಲ್ಲಿ ಒತ್ತಾಯವೇನೂ ಇಲ್ಲ. ಕ್ಲೋಸ್‌ಪೇಟೆಯ ಗಡಿಯಲ್ಲಿ ಪಾನನಿರೋಧವಿಲ್ಲ, ಅಲ್ಲಿಗೆ ಕೊಯಮತ್ತೂರು, ಸೇಲಂ ಮುಂತಾದ ಕಡೆಗಳಿಂದ ಬಂದು ಕುಡಿಯುತ್ತಾರೆ. ಹಿಂದೆ ಎರಡು ಊರುಗಳಲ್ಲಿ ಆಗುತ್ತಿದ್ದ ಉತ್ಪತ್ತಿ ಈಗ ಒಂದೇ ಊರಿನಲ್ಲಿ ಆಗುತ್ತಿದೆ. ಕುಡಿಯುವುದೂ ತಪ್ಪಿಲ್ಲ, ದೇವತೆಗಳಿಗೂ ತೊಂದರೆ ಕೊಟ್ಟ ಹಾಗಿದೆ. ಹಾಗಾದರೆ ಸುಖವಿಲ್ಲ. ಇದನ್ನು ಪರಿಶೀಲನೆಮಾಡಿ ಸಂಪೂರ್ಣವಾಗಿ ಜಾರಿಗೆ ತಂದರೆ ನನಗೆ ಸಂತೋಷ, ನನ್ನ ಬೆಂಬಲವಿದೆ, ಒಂದು ವರ್ಷ ಹೀಗೆ ತಂದು ನೋಡುವುದು, ಅದೇನಾದರೂ ಯಶಸ್ವಿಯಾಗದಿದ್ದರೆ ಮತ್ತೆ ಬದಲಾಯಿಸಬಹುದು.

ನಮ್ಮ ಸ್ನೇಹಿತರಾದ ಶ್ರೀ ವೈ. ಎಂ. ಚಂದ್ರಶೇಖರಯ್ಯನವರೂ, ಶಿವಪ್ಪನವರೂ ಅಶ್ವಗಂಧಿ ಟಾನಿಕ್ ವಿಷಯ ಹೇಳಿದರು. ಅವರು ಅನುಭವವಿಲ್ಲದೆ ಮಾತನಾಡುತ್ತಾರೆ. ಅದರ ವಿಷಯ ಅವರಿಗೇನು ಗೊತ್ತು ? ಏನೋ ಅದರಮೇಲೆ ಅಂಟಿಸಿರುವ ಚೀಟಿಯನ್ನು ನೋಡಿರಬಹುದು. ಅದರೊಳಗೇನಿದೆ ಎನ್ನುವುದು ಅವರಿಗೆ ಗೊತ್ತಿಲ್ಲ. ಆದುದರಿಂದ ಸ್ವಲ್ಪ ಅನುಭವ ಪಡೆದು ಆಮೇಲೆ ಹೇಳಲಿ (ನಗು !). ಹೆಂಡ ಕುಡಿದರೆ ಏನಾಗುತ್ತದೆಂದರೆ, ಒಬ್ಬ 25 ಬಾಟಲ್ ಕುಡಿದರೂ ಸೋಲ್‌ಜರ್ ಹಾಗಿರುತ್ತಾನೆ, ಇನ್ನೊಬ್ಬ ಸ್ವಲ್ಪ ಕುಡಿದರೂ ಅವನಿಗೆ ತಲೆ ತಿರುಗುತ್ತದೆ. ಅವರಿಗೆ ನೋಟೀಸ್ ನೋಡಿದರೇ ತಲೆ ತಿರುಗುತ್ತದೆ (ನಗು !).

ಯಾರು ಏನು ಮಾಡಿದರೂ ಪೋಲೀಸಿನವರ ಮೇಲೆ ಹಾಕುವುದು ಯಾವ ನ್ಯಾಯ ? ನಾವು ಮಾಡುವ ಅಪರಾಧಕ್ಕೆ ಪೋಲೀಸಿನವರೇನು ಮಾಡುತ್ತಾರೆ ? ತಲೆಮೇಲೆ ಮುಖಕ್ಕೆ ಬಟ್ಟೆ ಹಾಕಿಕೊಂಡು ಹೋಗಿ ಹೆಂಡ ಸಾರಾಯಿ ಕುಡಿದುಕೊಂಡು ಬಂದರೆ ಅವರೇನು ಮಾಡುವುದು ? ಪೋಲೀಸರು ನಮ್ಮ ದೇಶದ ಶಿಸ್ತು ಶಾಂತಿ ಕಾಪಾಡುವವರು, ದೇಶದ ಸೇವಕರು. ಆದುದರಿಂದ ಪೋಲೀಸಿನವರ ವಿಷಯಕ್ಕೆ ಹೋಗದೇ ಯಿರಬೇಕೆಂದು ಪ್ರಾರ್ಥಿಸುತ್ತೇನೆ.

ಕೊನೆಯದಾಗಿ, ಕಲಾಸಿಪಾಳ್ಯ ಬಸ್‌ಸ್ಟ್ಯಾಂಡ್, ಬಿನ್ನಿಮಿಲ್ ಈ ಪ್ರದೇಶಗಳಲ್ಲಿ ಜನ ವಾಸಮಾಡುವ ಜಾಗದ ಹತ್ತಿರ ಹೆಂಡ ಸಾರಾಯಿನ ಅಂಗಡಿಗಳಿವೆ. ಈ ವಿಷಯದಲ್ಲಿ ಸರ್ಕಾರಕ್ಕೆ ನನ್ನ ಒಂದು ಸಲಹೆ ಏನೆಂದರೆ, ಹೀಗೆ ಊರಿನ ಮಧ್ಯೆ ಇಡುವುದಕ್ಕಿಂತ, Drinking colony for Gentlemen ಎಂದು ಏರ್ಪಾಡುಮಾಡಿ, ಅದರಲ್ಲಿ ಹೆಂಡ ಸಾರಾಯಿ ಎಲ್ಲವನ್ನೂ ಇಡಿ. ಇದನ್ನು ಹುಚ್ಚಾಸ್ಪತ್ರೆಯ ಮುಂದಿಟ್ಟುಬಿಡಿ.

ಇಷ್ಟು ಹೇಳಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ನನ್ನ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

Mr. DEPUTY SPEAKER.—Discussion on this Demand will close at 5 o'clock.

*Sri B. HUTCHE GOWDA (Turuvekere).—Sir, I oppose the demand.

ಈ ವಿಚಾರ ಈ ಸಭೆಯಲ್ಲಿ ಪ್ರತಿ ವರ್ಷವೂ ಬರುತ್ತಲೇ ಇದೆ. ಕುಡಿತದಿಂದ ಸಂಪಾದಿಸುವ ಹಣ ಒಳ್ಳೆಯದಲ್ಲ, ಜನರನ್ನು ಕುಡಿಸಿ ಅವರ ಬುದ್ಧಿ ಕೆಡಿಸಿ, ಜನರಲ್ಲಿರುವ ನೀತಿಯ ಮಟ್ಟವನ್ನು ಕಡಮೆ ಮಾಡಿ, ಅನೇಕ ಬಡ ಸಂಸಾರಗಳನ್ನು ಹಾಳುಮಾಡಿ ಈ ಮೂಲಕ ಹಣವನ್ನು ತೆಗೆದುಕೊಳ್ಳುವುದು ಸರಿಯಲ್ಲ ಎನ್ನುವುದರಲ್ಲಿ ಯಾರದೂ ಭಿನ್ನಾಭಿಪ್ರಾಯವಿಲ್ಲವೆಂದು ಈಗತಾನೇ ಹೇಳಿದರು. ಪ್ರಜಾ ಸರ್ಕಾರ ಬಂದ ಮೇಲೂ ಅದಕ್ಕೆ ಮುಂಚೆಯೂ ಕೂಡ ಅನೇಕ ಸಾರಿ ಸರ್ಕಾರ ಕುಡಿತವನ್ನು ನಿಲ್ಲಿಸುವುದಕ್ಕೆ ಪ್ರಯತ್ನ ಮಾಡಿದೆ. ಬೇಕಾದಷ್ಟು ಪ್ರಚಾರ ನಡೆಸಿದೆ. ಅಲ್ಲದೆ ಚನ್ನಪಟ್ಟಣ ಮತ್ತು ಕ್ಲೋಸ್‌ಪೇಟೆ ತಾಲ್ಲೂಕುಗಳಲ್ಲಿ ಪಾನನಿರೋಧವನ್ನು ಜಾರಿಗೆ ತಂದು, ಜನರಿಗೆ ಒಂದು ಅಭಿಪ್ರಾಯ ಬದಲಾವಣೆಯಾಗಿ ಕುಡಿಯುವುದನ್ನು ನಿಲ್ಲಿಸಲೆಂದು ಹಿಂದೆ ಸರ್ಕಾರದವರು ಪ್ರಯತ್ನ ಮಾಡಿದರು. ಆಮೇಲೆ ಒಂದು ಸಮಿತಿಯನ್ನು ನೇಮಕ ಮಾಡಿ ಪೂರ್ಣವಾಗಿ ಕುಡಿತವನ್ನು ನಿಲ್ಲಿಸಬೇಕೆಂದು ಹಿಂದಿನ ಸರ್ಕಾರದವರು ಬಹಳ ಪ್ರಯತ್ನ ಮಾಡಿದರು. 1947-48ರಲ್ಲಿ ಐದನೆಯ ಒಂದು ಭಾಗ ರೆವಿನ್ಯೂ ಕಡಮೆ ಮಾಡಿ ಇನ್ನೂ ಮೂರು ವರ್ಷ ಮಾಡಿದರೆ ಸರಿಹೋಗುತ್ತದೆಂದು ಏರ್ಪಾಡು ಮಾಡಿದರು. ಎಲ್ಲೋ ಹಣ ಬರುತ್ತಿತ್ತು, ನಮ್ಮ ದೇಶದ ಆಡಳಿತ ನಡೆಯುತ್ತಿತ್ತು. ಈ ಸರ್ಕಾರ ಬಂತು, ಜನಕ್ಕೆ ಗ್ರಹಚಾರ ಬಂತು. ಇವರ ಸರ್ಕಾರ ಬಂದ ಕ್ಷಣವೇ, ಅವರು ಮಾಡಿದ್ದು ಸರಿಯಲ್ಲ, ಮಧ್ಯೆ ಕಂಟ್ರಾಕ್ಟರುಗಳಿಗೆ ಹಣ ಕೊಡಿಸಲು ಏರ್ಪಾಡು ಮಾಡುವುದು ಸರಿಯಲ್ಲ, ಈ ನೀತಿ ಸರಿಯಲ್ಲವೆಂದು ಹೇಳಿ ಡಿಸ್ಟ್ರಿಕ್ಟುವಾರು ಮದ್ಯಪಾನವನ್ನು ಕಡಮೆ ಮಾಡಬೇಕೆಂದೂ ವರ್ಷಕ್ಕೆ ಮೂರು ಜಿಲ್ಲೆಗಳಲ್ಲಿ ಕಡಮೆ ಮಾಡಿ ಎರಡು ವರ್ಷಗಳಲ್ಲಿ ಕುಡಿತ ನಿಲ್ಲಿಸುತ್ತೇವೆಂದೂ ಹೇಳಿ 1948ನೆಯ ಜೂನ್‌ನಲ್ಲಿ ಈರೀತಿ ಮೂರು ಜಿಲ್ಲೆಗಳಲ್ಲಿ ಜಾರಿಗೆ ತಂದರು. ನಾವು ನಿಜವಾಗಿಯೂ ಇವರು ಹಾಗೆಯೇ ನಡೆಸುತ್ತಾರೆಂದು ನಂಬಿ ಪ್ರಚಾರಕೂಡ ಮಾಡಿದೆವು. ಇನ್ನು ಖಂಡಿತ ಅನೇಕ ಬಡಜನ ಬದುಕುತ್ತಾರೆ, ಅವರಿಗೆ ಮೋಕ್ಷ ಸಿಕ್ಕಿತು, ಮುಂದೆ ಇಂಥ ಅನಿಷ್ಟ ನಮ್ಮ ದೇಶದಲ್ಲಿರುವುದಿಲ್ಲ, ನಮ್ಮ ದೇಶ ಇತರ ದೇಶಗಳಿಗೆ ಮಾದರಿಯಾಯಿತು ಎಂದು ತಿಳಿದುಕೊಂಡೆವು. ಆದರೆ ಮದರಾಸು ಬೊಂಬಾಯಿ ಎಲ್ಲಕಡೆಯೂ ಪೂರ್ಣವಾಗಿ ಪಾನನಿರೋಧವನ್ನು ತಂದರೆ ಇಲ್ಲಿ ಎರಡು ವರ್ಷ ಎರಡು ಜಿಲ್ಲೆಗಳಲ್ಲಿ ಮಾತ್ರ ಜಾರಿಗೆ ತಂದರು. ಸರ್ಕಾರಕ್ಕೆ ಹೇಳಿದಮೇಲೆ ಎರಡು ಜಿಲ್ಲೆಗಳಲ್ಲಿ ಮಾಡಿದರು. ಆದರೆ ಮುಂದೆ ಆ ತಂಟೆಗೇ ಹೋಗಲಿಲ್ಲ. ಈಚೆಗೆ ಈ ಸರ್ಕಾರ ಬಂದು ನಾಲ್ಕು ವರ್ಷಗಳಾದರೂ ಕೂಡ ಸುಮಾರು ನಾಲ್ಕೈದು ತಾಲ್ಲೂಕುಗಳಲ್ಲಿ ಮಾತ್ರ ನಿಲ್ಲಿಸಿದ್ದಾರೆ. ಇಂಥ ಶೋಚನೀಯವಾದ ಪರಿಸ್ಥಿತಿಗೆ ನಮ್ಮ ದೇಶ ಬಂದಿದೆ. ಕೊಡಗಿನಲ್ಲಿ ಪೂರ್ತಿಯಾಗಿ ಪಾನನಿರೋಧ ಮಾಡಿದ್ದಾರೆ. ಪ್ರಾಂತ ಪುನರ್ವಿಂಗಡಣೆಯ ಸಂಬಂಧದಲ್ಲಿ ಯಾವ ಬದಲಾವಣೆಯನ್ನೂ ಮಾಡಕೂಡದು, ಸಂಬಳ ಸಾರಿಗೆಗಳನ್ನು ಹೆಚ್ಚು ಮಾಡಿದರೆ ಆರ್ಥಿಕಸ್ಥಿತಿ ಬದಲಾವಣೆ ಆಗುತ್ತದೆ ಎಂದು ತಾವು ಇಲ್ಲಿ ನುಡಿದಾಗ, ಕೊಡಗಿನಲ್ಲಿ ಏಕ್‌ದಂ ಪಾನನಿರೋಧವನ್ನು ಜಾರಿಗೆ ತಂದು ಅವರ ಉತ್ಪತ್ತಿಯನ್ನೂ ಮತ್ತು ಅವರಿಗೆ ಬರತಕ್ಕ ವರಮಾನವನ್ನೂ ಕಡಿಮೆ ಮಾಡಿದ್ದಾರೆ. ತಾವು ಮುಂದೆ ಸೇರತಕ್ಕ ನೆರೆಹೊರೆಯ ಪ್ರಾಂತದಲ್ಲಿರುವಂತೆ ತಾವೂ ಇರಬೇಕು ಮತ್ತು ಆ ಜನರನ್ನು ಸೇರಬೇಕು ಎಂಬ ಉದ್ದೇಶದಿಂದ ಪಾನಮಾಡುವುದನ್ನು ನಿಲ್ಲಿಸಿದ್ದಾರೆ. ಹೀಗೆ ಇರಬೇಕಾದರೆ ನಾವು ವರ್ಷೇ ವರ್ಷೇ ಹೇಳಿಕೊಂಡು ಪೂರ್ಣವಾಗಿ ಪಾನನಿರೋಧವನ್ನು ಜಾರಿಗೆ ತರಬೇಕು ಎಂದು ಹೇಳಿದರೆ ಆರೀತಿ ಮಾಡಿಲ್ಲ. ಈ ಸಭೆಯಲ್ಲಿ ಯಾರಾದರೂ ಪಾನನಿರೋಧ ತಪ್ಪು ಎಂದು ಹೇಳಿದ್ದಾರೆಯೇ ಎಂದರೆ ಯಾರೂ ಇಲ್ಲ. ಸರ್ಕಾರದವರೂ ಸಹ ಇದು ಸರಿಯಲ್ಲವೆಂದು ಹೇಳಲಿಲ್ಲ. ಈಗ ತಾನೇ ಶ್ರೀಮಾನ್ ವೀರಣ್ಣಗೌಡರು ನಮ್ಮ ಮಾತು ಏನು ನಡೆಯುತ್ತದೆ, ಏನೂ ನಡೆಯುವುದಿಲ್ಲವೆಂದು ತಮ್ಮ ನಿಸ್ಸಹಾಯತೆಯನ್ನು ತೋರಿಸಿದರು. ಕಾಂಗ್ರೆಸ್ ಸರ್ಕಾರ ನಡೆಯುತ್ತಿದೆ, ಪ್ರಜಾಪ್ರಭುತ್ವ ಸರ್ಕಾರವಿದೆ. ಪ್ರಜೆಗಳ ಅಭಿಪ್ರಾಯಕ್ಕೆ, ಪ್ರಜೆಗಳಿಂದ ಚುನಾಯಿತರಾದ ಮಾನ್ಯ ಸಭೆಯ ಬಹುಮತಕ್ಕೆ ಕುಡಿತವಿರಬೇಕೆಂಬ ಅಭಿಪ್ರಾಯವಿದೆಯೇ ಎಂದರೆ ಖಂಡಿತ ಇಲ್ಲ ಎಂಬುದು ಸ್ಪಷ್ಟವಾಗಿದೆ. ಶ್ರೀಮಾನ್ ವೀರಣ್ಣಗೌಡರು ಇದು ಮೊಂಡು ಸರ್ಕಾರ, ಇದಕ್ಕಿಂತ ಮೊಂಡು ಸರ್ಕಾರ ಬೇರೆ ಇಲ್ಲವೆಂದು ಹೇಳಿದರು. ಯಾತಕ್ಕೆ ಸರ್ಕಾರದ ವಿರುದ್ಧವಾಗಿ ಮಾತನಾಡಿದ್ದಾರೆ ಎಂದು ಯೋಚಿಸಬೇಕು. ಶ್ರೀಮಾನ್ ಚಂದ್ರಶೇಖರಯ್ಯನವರು ಒಂದು ದೊಡ್ಡ ಕತೆಯನ್ನೇ ಹೇಳಿ, ಇಂಥ ನಾಚಿಕೆಗೇಡು ಸರ್ಕಾರ ಇರುವುದಕ್ಕಿಂತ ಇಲ್ಲದೆ ಇರುವುದು ಮೇಲು ಎಂದು ಹೇಳಿದ್ದಾರೆ.

ಸ್ವಾಮಿ, 1947-48ರಲ್ಲಿ 1 ಕೋಟಿ 55 ಲಕ್ಷ ರೂಪಾಯಿಗಳ ಆದಾಯವಿದ್ದುದು 1948-49ರಲ್ಲಿ ಅದು 2 ಕೋಟಿ 16 ಲಕ್ಷ ರೂಪಾಯಿಗಳಿಗೆ ಏರಿತು, 1951-52ರಲ್ಲಿ 2 ಕೋಟಿ 20 ಲಕ್ಷ ರೂಪಾಯಿಗಳಿಗೆ ಏರಿತು. ಈ ರೀತಿ ಸರ್ಕಾರಕ್ಕೆ ದುಡ್ಡು ಹೇಗೆ ಬರುತ್ತದೆ ಎನ್ನುವುದನ್ನು ನೋಡುವುದಾದರೆ ಇದು ಎಷ್ಟು ಜನರ ಕೈಹಾದು ಬರಬೇಕು ಎನ್ನುವುದನ್ನು ಯೋಚಿಸಬೇಕು. ಸರ್ಕಾರಕ್ಕೆ ಬರತಕ್ಕ ಹಣದ ಐದರಷ್ಟು ಹಣವನ್ನು ಈ ಪಾನಮಾಡುವ ಜನಗಳು ಕೊಡಬೇಕಾಗುತ್ತದೆ. ಈ ಲೆಕ್ಕಾಚಾರದ ಪ್ರಕಾರ ಸುಮಾರು ಹತ್ತು ಕೋಟಿ ರೂಪಾಯಿಗಳು ನಮ್ಮ ಜನಗಳಿಗೆ ಉಳಿಯುತ್ತಿತ್ತು. ನಮ್ಮ ದೇಶದ ಬಡಜನರಲ್ಲಿ ಈ ಹತ್ತು ಕೋಟಿ ರೂಪಾಯಿಗಳ ಹಂಚಿಕೆಯಾಗುತ್ತಿತ್ತು. ಇಂಥದನ್ನೂ ತಪ್ಪಿಸಿ, ಈ ಸಭೆಯ ಏಕಾಭಿಪ್ರಾಯಕ್ಕೆ ಮನ್ನಣೆ ಕೊಡದೆ ಇರುವುದು ಒಂದು ನಾಚಿಕೆಗೇಡಿನ ಪ್ರಸಂಗವಾಗಿದೆ ಎಂದು ಹೇಳಿ ಈ ಡಿಮ್ಯಾಂಡನ್ನು ಪೂರ್ಣವಾಗಿ ವಿರೋಧಿಸುತ್ತೇನೆ.

ಶ್ರೀ ಟಿ. ಚನ್ನಯ್ಯ.—ಸ್ವಾಮಿ, ಈ ಮಾನ್ಯ ಸಭೆಯ ಅನೇಕ ಸದಸ್ಯರು ಪಾನನಿರೋಧದ ವಿಷಯದಲ್ಲಿ ಪುನಃ ಪುನಃ, ಅನೇಕಸಾರಿ ಅದೇ ವಿಷಯವಾಗಿ ಶಾಸನ ಸಭೆಗಳಲ್ಲಿ ಪ್ರಸ್ತಾಪಮಾಡಿದ್ದಾರೆ. ಈ ದಿವಸವೂ ಕೂಡ ಅವರು ಹೊಸದಾಗಿ ಯಾವ ಸಲಹೆಗಳನ್ನೂ ಕೊಟ್ಟಂತೆ ಕಾಣುವುದಿಲ್ಲ. ಸುಮಾರು ಮೂರು ನಾಲ್ಕು ವರ್ಷಗಳಿಂದಲಾಗಾಯ್ತು ಇದೇ ಮಾನ್ಯ ಸಭೆಯಲ್ಲಿ, ಇದೇ ವಿಷಯವನ್ನು ಮತ್ತೆ ಮತ್ತೆ ಹೇಳುತ್ತಿದ್ದಾರೆ. ಹೊಸದಾಗಿ ಯಾವುದಾದರೂ ಒಂದು ವಿಷಯವನ್ನಾದರೂ ಹೇಳಿದ್ದಾರೆಯೇ ಎಂದು ನೋಡುವುದಾದರೆ ಯಾವುದೂ ಇಲ್ಲವೆಂದ ಹೇಳಬಹುದು. ಆದರೆ ಈಗ ಕೆಲವು ಮಾನ್ಯ ಮಿತ್ರರು ಅವರಿಗೆ ತೋರಿದ ಕೆಲವು ವಿಷಯಗಳನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಅವುಗಳಿಗೆ ನಾನು ಕೆಲವು ಕಾರಣಗಳನ್ನು ಕೊಡುವುದು ಸೂಕ್ತ

(ಶ್ರೀ ಟಿ. ಚನ್ನಯ್ಯ)

ವಾದದ್ದು. ಕೆಲವು ಮಾನ್ಯ ಸದಸ್ಯರು ಈ ಪಾನನಿರೋಧ ನೀತಿ ಸರಿಯಾಗಿಲ್ಲ, ಇದನ್ನು ಕ್ರಮೇಣ ಸಂಸ್ಥಾನಾದ್ಯಂತ ಜಾರಿಗೆ ತರಬೇಕೆಂಬ ಒಂದು ನೀತಿ ಇದ್ದರೂ ಕೂಡ ಈಗಿನ ಸರ್ಕಾರ ಬಂದಲಾಗಾಯ್ತು ಎರಡು ತಾಲ್ಲೂಕುಗಳಲ್ಲಿ ಮಾತ್ರ ಜಾರಿಗೆ ತಂದು ಉಳಿದ ಕಡೆಗಳಿಗೆ ಮುಂದುವರಿಸದೆ ಹಾಗೆಯೇ ನಡೆಸಿಕೊಂಡು ಬರುತ್ತಿದ್ದಾರೆ, ಇದು ಸರಿಯಾದ ಮಾರ್ಗವಲ್ಲವೆಂದು ಟೀಕೆ ಮಾಡಿದರು. ಮತ್ತೆ ನಮ್ಮ ರಾಜ್ಯಾಂಗ ರಚನೆಯಲ್ಲಿಯೂ ಕೂಡ directive policy, ಎಂದರೆ, ಕ್ರಮೇಣ ಪ್ರತಿ ಸಂಸ್ಥಾನದಲ್ಲಿಯೂ ಕೂಡ ಪಾನನಿರೋಧವನ್ನು ಜಾರಿಗೆ ತರಬೇಕು ಎಂದು ಹೇಳಿದ್ದರೂ ಕೂಡ ಆಯಾ ಸಂಸ್ಥಾನಗಳು, ಅದರಲ್ಲಿಯೂ ಮೈಸೂರು ಸಂಸ್ಥಾನ, ಹೆಚ್ಚು ಮುಂದುವರಿಯದೆ, ಎರಡು ತಾಲ್ಲೂಕುಗಳಿಗೆ ಮಾತ್ರ ಈ ನೀತಿಯನ್ನು ಅನ್ವಯಿಸಿ ಉಳಿದ ಪ್ರದೇಶಗಳಿಗೆ ಜಾರಿಗೆ ಕೊಡದೆ ಇರುವುದು ಸಾಧುವೇ, ಸೂಕ್ತವೇ, ಎಂಬ ವಿಚಾರವನ್ನು ಕೂಡ ಈ ದಿವಸ ಸಭೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಮೈಸೂರು ಸರ್ಕಾರಕ್ಕೆ ಈ ಪಾನನಿರೋಧ ನೀತಿಯನ್ನು ಸಂಸ್ಥಾನಾದ್ಯಂತ ಜಾರಿಗೆ ತರಬೇಕೆಂಬ ಉದ್ದೇಶ ಖಂಡಿತವಾಗಿಯೂ ಇದೆ. ಆದರೆ ಒಂದೇ ಕಾಲದಲ್ಲಿ ಜಾರಿಗೆ ತರುವುದಕ್ಕೆ ಸಾಧ್ಯವಿದ್ದರೂ ಕೂಡ, ತಕ್ಷಣವೇ ಜಾರಿಗೆ ತರಬೇಕು ಎಂಬ ಅಭಿಲಾಷೆ ಇದ್ದರೂ ಕೂಡ, ಕೆಲವು ತೊಂದರೆಗಳಿವೆ. ಮಾನ್ಯ ಮುಖ್ಯ ಮಂತ್ರಿಗಳು ಬಡ್ಜೆಟ್ ಭಾಷಣದಲ್ಲಿ ಪಾನನಿರೋಧ ನೀತಿಯ ವಿಷಯದಲ್ಲಿ ಪ್ರಸ್ತಾಪ ಮಾಡುವಾಗ ಖಚಿತವಾಗಿ ತಿಳಿಸಿದ್ದಾರೆ. ಪಾನನಿರೋಧದ ವಿಷಯದಲ್ಲಿ ನಮ್ಮ ಸರ್ಕಾರದ ಅಭಿಪ್ರಾಯವೇನು ಎನ್ನುವುದನ್ನು ಇಂಡಿಯಾ ಸರ್ಕಾರಕ್ಕೆ ತಿಳಿಸಿ, ಇದನ್ನು ಜಾರಿಗೆ ತರುವುದರಿಂದ ಆಗತಕ್ಕ ನಷ್ಟವನ್ನು ಸರಿದೂಗಿಸಲು ಸಹಾಯ ಮಾಡುವುದಾದರೆ, ತಕ್ಷಣವೇ ಕಾರ್ಯವನ್ನು ತೆಗೆದುಕೊಂಡು ಉಳಿದ ಎಲ್ಲ ಜಿಲ್ಲೆಗಳಲ್ಲಿಯೂ ಕೂಡ ಪೂರ್ಣ ಪಾನನಿರೋಧವನ್ನು ಜಾರಿಗೆ ತರುವುದಕ್ಕೆ ಮೈಸೂರು ಸರ್ಕಾರವು ಖಂಡಿತವಾಗಿಯೂ ಸಿದ್ಧವಾಗಿದೆ ಎಂದು ತಿಳಿಸಿದ್ದೇವೆ. ನಾನೂ ಇದೇ ವಿಷಯವನ್ನು ಕೆಲವು ದಿವಸಗಳ ಹಿಂದೆ ಪ್ರಶ್ನೋತ್ತರಗಳ ಕಾಲದಲ್ಲಿ ಹೇಳಿದ್ದೇನೆ.

ಶ್ರೀ ಡಿ. ಆರ್. ಕರಿಗೌಡ.—ಕೇಂದ್ರ ಸರ್ಕಾರದವರು ಸಹಾಯ ಮಾಡುವುದಕ್ಕೆ ಒಪ್ಪಿಕೊಳ್ಳದೆ ಹೋದರೆ ಏನುಮಾಡುತ್ತೀರಿ ?

ಶ್ರೀ ಟಿ. ಚನ್ನಯ್ಯ.—ಸಹಾಯ ಮಾಡುವುದಿಲ್ಲವೆಂದು ಖಚಿತವಾಗಿ ತೀರ್ಮಾನಕ್ಕೆ ಬಂದಿಲ್ಲ. ಇಂಡಿಯಾ ಸರ್ಕಾರದವರು ಒಂದು ತೀರ್ಮಾನ ತೆಗೆದುಕೊಂಡು, ಕೇಂದ್ರದಿಂದ ಸಹಾಯ ಮಾಡುವುದಕ್ಕಾಗುವುದಿಲ್ಲ, ಮೈಸೂರು ಸರ್ಕಾರದವರೇ ಇದರಿಂದಾಗುವ ನಷ್ಟವನ್ನು ಹೊರಬೇಕು ಎಂದಾದರೂ ತಿಳಿಸಬೇಕು; ಇಲ್ಲದೆಹೋದ ಪಕ್ಷದಲ್ಲಿ ನಾವೂ ಸ್ವಲ್ಪ ಹಣ ಸಹಾಯ ಮಾಡುವುದಕ್ಕೆ ಸಿದ್ಧರಾಗಿದ್ದೇವೆ ಎಂದಾದರೂ ತಿಳಿಸಬೇಕು. ಕೇಂದ್ರ ಸರ್ಕಾರದಿಂದ ಇನ್ನೂ ಯಾವ ಅಭಿಪ್ರಾಯವೂ ಬಾರದೆ ಇರುವುದರ ದೆಸೆಯಿಂದ ಅದಕ್ಕಾಗಿ ಕಾದು ನೋಡುತ್ತಿದ್ದೇವೆ. ಅವರ ಅಭಿಪ್ರಾಯ ತಿಳಿದ ತಕ್ಷಣ ಮುಂದೆ ಯಾವರೀತಿ ತೀರ್ಮಾನ ತೆಗೆದುಕೊಳ್ಳಬೇಕು ಎಂಬತಕ್ಕ ಯೋಚನೆಯನ್ನು ಮಾಡಲಾಗುತ್ತದೆ. ಆದುದರಿಂದ ನಾವು ಕೇಂದ್ರ ಸರ್ಕಾರದವರು ತೆಗೆದುಕೊಳ್ಳತಕ್ಕ ತೀರ್ಮಾನವನ್ನು ಕಾದು ನೋಡತಕ್ಕದ್ದು ಸೂಕ್ತವಾದದ್ದು ಎಂದು ಈ ಸಭೆಯ ಮುಂದೆ ಹೇಳುತ್ತೇನೆ.

5 P.M.

ಇಷ್ಟೇ ಅಲ್ಲ, ಆಗಲೇ ನಾನು ಸ್ವಲ್ಪ ಸೂಕ್ಷ್ಮವಾಗಿ ಸಭೆಯ ಮುಂದೆ ಹೇಳಿದಹಾಗೆ, ನಮ್ಮ ಸಂಸ್ಥಾನದ ಸರ್ಕಾರದವರೂ ಕೂಡ ಕೆಲವು ದಿವಸಗಳಲ್ಲೇ ನಾವು ಈ ಸಂಸ್ಥಾನದಲ್ಲಿ ಪಾನನಿರೋಧವನ್ನು ಪೂರ್ಣವಾಗಿ ಜಾರಿಗೆ ತರುವುದಕ್ಕೆ ಸಿದ್ಧವಾಗಿಲ್ಲ, ಅದರಿಂದ ಸುಮಾರು ಎರಡು ಕೋಟಿ ರೂಪಾಯಿಗಳ ವರಮಾನ ಖೋತಾ ಆಗುತ್ತದೆಂದು ಇಂಡಿಯಾ ಸರ್ಕಾರಕ್ಕೆ ತಿಳಿಸಿದ್ದೇವೆ; ಇದಕ್ಕೆ ಕೇಂದ್ರದವರು ಸಾಕಾದಷ್ಟು ಸಹಾಯ ಮಾಡಿದ ಪಕ್ಷದಲ್ಲಿ ಅದನ್ನು ಜಾಗ್ರತೆ ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಿದ್ದೇವೆ. ಮತ್ತೆ ಬೇರೆ ಸಂಸ್ಥಾನಗಳೂ ಸಹ ಇದೇ ಪ್ರಕಾರವಾಗಿ ಕಳುಹಿಸಿರುವ ಸಲಹೆಯನ್ನೂ ಪ್ರೊಹಿಬಿಷನ್ ಎಂಕ್ವೈರಿ ಕಮಿಟಿ ಶಿಫಾರಸನ್ನೂ ಕೇಂದ್ರಸರ್ಕಾರದ ಮಂತ್ರಿಗಳಾದ ಶ್ರೀ ಮಿಶ್ರಾ ಅವರು ಲೋಕ ಸಭೆಯಲ್ಲಿ ಮೊನ್ನೆ ಪ್ರಸ್ತಾಪಮಾಡಿ ಯಾವರೀತಿ ಪ್ರತಿಯೊಂದು ಸಂಸ್ಥಾನದ ಸರ್ಕಾರದವರೂ ತಮ್ಮ ಪ್ರತಿಕ್ರಿಯೆ ಕಾಣಿಸಿದ್ದಾರೆಂಬುದನ್ನು ಹೇಳಿರುವುದನ್ನು ಪತ್ರಿಕೆಗಳಲ್ಲಿ ನೋಡಬಹುದು. ಯು.ಪಿ., ಮಧ್ಯ ಪ್ರದೇಶ, ಬಂಗಾಳ, ಬೊಂಬಾಯಿ ಮೊದಲಾದ ಪ್ರಾಂತಗಳವರೂ, ತಿರುವಾಂಕೂರು ಕೊಚಿನ್, ಮೈಸೂರು ಮುಂತಾದ ಸಂಸ್ಥಾನಗಳವರನೇಕರೂ ಅವರ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ ಪ್ರತಿಯೊಬ್ಬರೂ ಇದನ್ನು ಹತ್ತು ವರ್ಷಗಳನಂತರ ಪೂರ್ಣವಾಗಿ ಜಾರಿಗೆ ತರಬೇಕೆಂದು ಸಲಹೆ ಮಾಡಿದ್ದಾರೆ, ಕೆಲವರು 1960ನೆಯ ಇಸವಿಯಾದಮೇಲೆ ಜಾರಿಗೆ ತರಬೇಕೆಂದು ಅಭಿಪ್ರಾಯಪಟ್ಟಿದ್ದಾರೆ, ಕೆಲವರು ಈಗ ಪಾನನಿರೋಧವನ್ನು ಪೂರ್ಣವಾಗಿ ಜಾರಿಗೆ ತರುವ ನೀತಿಯನ್ನು ಒಪ್ಪಿಕೊಳ್ಳಬೇಕಾದರೆ ಈ ಸಂಬಂಧವಾಗಿ ಈಗ ಎಷ್ಟು ಉತ್ಪತ್ತಿ ಬರುತ್ತಿದೆಯೋ ಅಷ್ಟನ್ನು ಕೇಂದ್ರ ಸರ್ಕಾರ ಸಹಾಯ ಮಾಡುವುದಾದರೆ ತಕ್ಷಣವೇ ಜಾರಿಗೆ ತರುತ್ತೇವೆಂದು ಹೇಳಿದ್ದಾರೆ. ಖಂಡಿತವಾಗಿಯೂ ಸರ್ಕಾರಕ್ಕೆ ಪಾನನಿರೋಧದ ವಿಷಯದಲ್ಲಿ ಸಹಾನುಭೂತಿಯಿದೆ, ಕೇಂದ್ರ ಸರ್ಕಾರದ ಅಭಿಪ್ರಾಯವನ್ನು ತಿಳಿದು ಒಂದು ನಿರ್ಧಾರಕ್ಕೆ ಬರುತ್ತದೆ ಎಂದು ಇಷ್ಟುಮಾತ್ರ ಹೇಳುತ್ತೇನೆ.

MR. DEPUTY SPEAKER.—The question is:

"That a sum not exceeding Rs. 18,23,000 be granted to the Government to defray the charges which will come in course of payment during the year ending 31st day of March 1957, in respect of 'State Excise Duties'."

The motion was adopted.

DEMAND NO. 3.—STAMPS.

9. STAMPS.

MR. DEPUTY SPEAKER.—Now Demand No. 3. The motion is:

"That a sum not exceeding Rs. 2,91,000 be granted to the

Government to defray the charges which will come in course of payment during the year ending 31st day of March 1957, in respect of 'Stamps'."

*ಶ್ರೀ ಜಿ. ಶಿವಪ್ಪ (ಹೊಳಲ್ಕೆರೆ).—ಸ್ವಾಮಿ, ಈ ಡಿಮ್ಯಾಂಡಿನಮೇಲೆ ಖೋತಾ ಸೂಚನೆಯನ್ನು ನಾನು ಕಳುಹಿಸಿದ್ದೇನೆ. ಅದರಲ್ಲಿ ಸೂಚಿಸಿರುವ ಒಂದಂಶವನ್ನು ಈ ಸಭೆಯ ಗಮನಕ್ಕೆ ತರಬೇಕೆಂದು ಅಪೇಕ್ಷೆ ಪಡುತ್ತೇನೆ. ರೂರಲ್ ಕ್ರೆಡಿಟ್ ಸರ್ವೆ ರೂಲ್ಸ್ ಪ್ರಕಾರ ಕೋ-ಆಪರೇಟಿವ್ ಮೂವ್‌ಮೆಂಟಿಗೆ ಹೆಚ್ಚು ಪ್ರೋತ್ಸಾಹ ಕೊಡಬೇಕೆಂಬುದು ತಮಗೆ ಗೊತ್ತಿರುವ ವಿಚಾರ. ಮಾರ್ಟ್‌ಗೇಜ್ ಬ್ಯಾಂಕಿನಲ್ಲಿ ರಿಜಿಸ್ಟರಾಗತಕ್ಕದಕ್ಕೆ ರಿಜಿಸ್ಟ್ರೇಷನ್ ಫೀಜನ್ನು ಮನ್ನಾ ಮಾಡಬೇಕೆಂದು ನಾನು ಖೋತಾ ಸೂಚನೆ ಕಳುಹಿಸಿದ್ದೇನೆ. ಇದನ್ನು ಹೋದ ವರ್ಷ, ಆಚೆ ವರ್ಷ, ಈ ರೀತಿ ಪ್ರತಿ ವರ್ಷವೂ ಸಹ ಅನೇಕ ಮಾನ್ಯ ಮಿತ್ರರು ಖೋತಾ ಸೂಚನೆ ಕಳುಹಿಸಿ ಕೇಳುತ್ತಿದ್ದಾರೆ. ಶ್ರೀ ಅನಂತರಾಮನ್ ಅವರೂ ಸಹ ಈಗ ಈ ವಿಚಾರ ಪ್ರಸ್ತಾಪಮಾಡಿದರು. ಈ ಸಂದರ್ಭದಲ್ಲಿ ಒಂದು ಬಹಳ ಮುಖ್ಯವಾದ ವಿಚಾರವನ್ನು ಈ ಸಭೆ ಗಮನಕ್ಕೆ ತರಬೇಕೆಂಬ ಅಪೇಕ್ಷೆಯಿದೆ. ಮಾನ್ಯ ಸಭೆಯ ಸದಸ್ಯರಾದ ಶ್ರೀ ಅನಂತರಾಮನ್‌ರವರು ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಪ್ರೆಸಿಡೆಂಟರಾಗಿಯೂ ಒಳ್ಳೆಯ ಲಾಯರಾಗಿಯೂ ಕೆಲಸ ಮಾಡಿದ್ದಾರೆ. ಇದಕ್ಕೆ ವಿನಾಯಿತಿ ಕೊಡಿಸಬೇಕೆಂದು ಅವರನ್ನೂ ಸಹ ಆಗಾಗ್ಗೆ ಕೇಳುತ್ತಿದ್ದೆವು. ಇದನ್ನು ಗಮನಿಸಿ ಆ ರೀತಿ ಮನ್ನಾ ಮಾಡುವುದು ಸೂಕ್ತವಾಗಿರುವುದರಿಂದ ಡಾಕ್ಯುಮೆಂಟುಗಳಿಗೆ ಸ್ಟಾಂಪ್ ಹಾಕತಕ್ಕ ಬಗ್ಗೆ ವಿನಾಯಿತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

*ಶ್ರೀ ಎಚ್. ಎಂ. ಚನ್ನಬಸಪ್ಪ (ಕೈಗಾರಿಕ ಇಲಾಖೆಯ ಮಂತ್ರಿಗಳು).—ಶ್ರೀಮಾನ್ ಶಿವಪ್ಪನವರು ಖೋತಾ ಸೂಚನೆಯನ್ನು ಕಳುಹಿಸಿದ್ದೇನೆಂದು ಹೇಳಿದರು; ಅವರ ಖೋತಾ ಸೂಚನೆ ಈ ಡಿಮ್ಯಾಂಡಿನ ಕೆಳಗೆ ಇಲ್ಲ. ಆದರೂ ಕೋ-ಆಪರೇಟಿವ್ ಸೊಸೈಟಿಗಳಿಗೆ ಸ್ಟ್ಯಾಂಪ್ ಡ್ಯೂಟಿ ಮನ್ನಾ ಮಾಡಿಕೊಡಬೇಕೆಂದು ಹೇಳಿದ್ದಾರೆ. ಈಗಾಗಲೆ ಬಹಳಕಾಲದಿಂದ ಅರ್ಧ ಟ್ಯಾಕ್ಸ್ ಕೊಡಬೇಕೆಂದು ನಿಗದಿಮಾಡಿರುವುದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಈಗ ಈ ಟ್ಯಾಕ್ಸ್ ನಿಂದಲೇ ಸರ್ಕಾರಕ್ಕೆ ಬೇಕಾದಷ್ಟು ನಷ್ಟವಾಗಿದೆ. ಇನ್ನೂ ಹೆಚ್ಚಾಗಿ ರಿಯಾಯಿತಿ ಕೊಡಬೇಕು, ಪೂರ್ಣವಾಗಿ ಮನ್ನಾ ಮಾಡಬೇಕು ಎಂದು ಹೇಳಿದರೆ ಒಂದು ಕಡೆ ಖರ್ಚುಬಾಬುಗಳಿಗೆ ಹಣ ಬೇಕು, ಇನ್ನೊಂದು ಕಡೆ ಹಣ ಉತ್ಪನ್ನವಾಗುವ ಮಾರ್ಗ ಖೋತಾ ಮಾಡಬೇಕು. ಇದು ತಮಗೆ ಗೊತ್ತಿದೆ. ಇದನ್ನು ಸದ್ಯಕ್ಕೆ ಕೇಳುವುದನ್ನು ಬಿಟ್ಟು ಅರ್ಧ ಮನ್ನಾ ಮಾಡಿರುವುದನ್ನು ಸದುಪಯೋಗಪಡಿಸಿಕೊಳ್ಳಿ. ಇನ್ನೂ ಹೆಚ್ಚಾಗಿ ಮನ್ನಾ ಮಾಡಿ ಎಂದು ಒತ್ತಾಯಮಾಡುವುದು ಹಣಕಾಸಿನ ಉತ್ಪನ್ನದ ದೃಷ್ಟಿಯಿಂದ ಸರಿಯಲ್ಲ. ಆದ್ದರಿಂದ ಮಾನ್ಯ ಸದಸ್ಯರೆಲ್ಲರೂ ಕೂಡ ಈ ಬೇಡಿಕೆಗೆ ತಮ್ಮ ಪೂರ್ಣ ಬೆಂಬಲವನ್ನು ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

Mr. DEPUTY SPEAKER.—The question is:

"That a sum not exceeding Rs. 2,91,000 be granted to the Government to defray the charges which will come in course of payment during the year ending 31st day of March 1957, in respect of 'Stamps'."

The motion was adopted.

DEMAND No. 5—REGISTRATION.

II. REGISTRATION.

Mr. DEPUTY SPEAKER.—The motion is:

"That a sum not exceeding Rs. 5,76,000 be granted to the Government to defray the charges which will come in course of payment during the year ending 31st day of March 1957, in respect of 'Registration'."

*ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ-ಅನುಸೂಚಿತ ಜಾತಿಗಳು).—ಸ್ವಾಮಿ, ಇದರಲ್ಲಿ ಮುಖ್ಯವಾದ ಒಂದೆರಡು ಅಂಶಗಳನ್ನು ಮಾತ್ರ ಹೇಳುತ್ತೇನೆ. ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಪೋಡಿ ಫೀಜನ್ನು ವಸೂಲು ಮಾಡಿ ತಾಲ್ಲೂಕಾಫೀಸಿಗೆ ಕಳುಹಿಸುತ್ತಾರೆ. ಇದು ಸಬ್‌ರಿಜಿಸ್ಟ್ರಾರ್ ಆಫೀಸಿನಿಂದ ತಾಲ್ಲೂಕು ಆಫೀಸಿಗೆ ಹೋದ ತಕ್ಷಣ ರಿಜಿಸ್ಟರ್ ಮಾಡಿಕೊಂಡು ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ಕಳುಹಿಸಿ, ಸರ್ವೆ ಆಫೀಸಿಗೆ ತಿಳಿಸಿ ಡಾಕ್ಯುಮೆಂಟ್ ರಿಜಿಸ್ಟರಾದ ತಕ್ಷಣ ಪೋಡು ಮಾಡುವುದಕ್ಕೆ ಏರ್ಪಾಡು ಮಾಡುವ ವಿಚಾರದಲ್ಲಿ ಬಹಳ ನಿಧಾನವಾಗಿದೆ. ಹೇಗೆ ಇದು ನಿಧಾನವಾಗಿದೆಯೆಂಬುದನ್ನು ಈ ಸಂದರ್ಭದಲ್ಲಿ ಗಮನಕ್ಕೆ ತರುತ್ತೇನೆ. ಇದಕ್ಕೇನು ಮಾಡಬೇಕೆಂಬುದಕ್ಕೆ ಸೂಚನೆ ಕೊಡುತ್ತೇನೆ. ಕೆಲವು ಕಡೆ ಮದ್ರಾಸು ಪ್ರೆಸಿಡೆನ್ಸಿಯಲ್ಲಿ ಸಬ್‌ರಿಜಿಸ್ಟ್ರಾರರಿಗೆ ಕೆಲವು ಅಧಿಕಾರಗಳಿವೆ. ರಿಜಿಸ್ಟರ್ ಮಾಡುವುದಕ್ಕೆ ಮುಂಚಿತವಾಗಿ ಪತ್ರ ಬಂದ ತಕ್ಷಣ ಸರ್ವೆ ನಂಬರು ವಗೈರೆ ಎಲ್ಲವನ್ನೂ ವೆರಿಫೈ ಮಾಡಿ ಯಾರಿಗೆ ಯಾವ ರೀತಿ ಖಾತೆಯಿದೆಯೆಂದು ನೋಡಿ ಅದನ್ನು ನಿಷ್ಕರ್ಷೆ ಮಾಡುತ್ತಾರೆ, ಆದಕ್ಕೆ ರೆವೆನ್ಯೂ ಇಲಾಖೆಗೆ ಹೋಗಬೇಕಾಗಿಲ್ಲ. ಆದರಿಂದ ಕೆಲಸ ಸುಲಭವಾಗಿ ಜಾಗ್ರತೆ ಆಗುತ್ತದೆ. ನೇರವಾಗಿ ಸರ್ವೆ ಇಲಾಖೆಗೆ ಹೋದರೆ ಪೋಡ್ ಆಗಲು ಅನುಕೂಲವಾಗುತ್ತದೆ ಎಂದು ಈ ವಿಷಯವನ್ನು ಕಳೆದ ಸಾಲಿನಲ್ಲೇ ಸರ್ಕಾರದ ಗಮನಕ್ಕೆ ತಂದೆ. ಅಲ್ಲದೆ ಈ ವಿಚಾರವನ್ನು ಪದೇ ಪದೇ ಇನ್‌ಸ್ಪೆಕ್ಟಿಂಗ್ ಆಫೀಸರು ಕೂಡ ಅಬ್ಸರ್ವ್ ಮಾಡಿದರೂ ಕೂಡ ಏನೂ ಇತ್ಯರ್ಥವಾಗಿಲ್ಲ. ಸರ್ಕಾರದವರಾದರೂ ಕೂಡ ಇದನ್ನು ಪರೀಕ್ಷೆ ಮಾಡಿ ಸಾಧ್ಯವೆ, ಇಲ್ಲವೆ, ಸಬ್‌ರಿಜಿಸ್ಟ್ರಾರಿಗೆ ಇದನ್ನು ವಹಿಸಬಹುದೆ ಎಂದು ತಿಳಿದು ಒಂದು ತೀರ್ಮಾನ ಕೊಟ್ಟಿಲ್ಲ ಇದನ್ನು ಕೇಳುವುದಕ್ಕೆ ಅವಕಾಶ ಕೂಡ ಸಿಕ್ಕುವುದಿಲ್ಲ. ನಿಜವಾಗಿಯೂ ಈ ಅಂಶವನ್ನು ಸರ್ಕಾರದವರು ಪರಿಶೀಲನೆಮಾಡಬೇಕಾಗಿದೆ. ಇದನ್ನೆಲ್ಲಾ ಸರಿಪಡಿಸುವುದಕ್ಕೆ ಸಾಧ್ಯವಿದೆಯೇ ಅಥವಾ ಇಲ್ಲವೇ ಎಂಬುದರ ವಿಚಾರದಲ್ಲಿ ನಮ್ಮ ಮಾನ್ಯ ಮಂತ್ರಿಗಳಿಗೆ ಬಹಳ ಉತ್ಸಾಹವಿರುತ್ತಾದ್ದರಿಂದ ನಾನಿನ್ನು ಈ ವಿಚಾರವನ್ನು ಇಷ್ಟಕ್ಕೇ ಕೈಬಿಟ್ಟುಬಿಡುತ್ತೇನೆ.

(ಶ್ರೀ ಎಂ. ಚಿಕ್ಕಲಿಂಗಯ್ಯ)

ಇನ್ನು ಈ ಮನಿಲೆಂಡರ್ಸ್ ಆಕ್ಟಿನ ವಿಚಾರವಾಗಿ ಕೆಲವು ಮಾತುಗಳನ್ನಾಡಬೇಕಾಗಿದೆ. ಈ ಆಕ್ಟ್ ಜಾರಿಗೆ ಬಂದದ್ದು 1940ನೆಯ ಇಸವಿಯಲ್ಲಿ. ಆಗ ಜನಗಳೆಲ್ಲಾ, ಅವರು ಲೇವಾದೇವಿ ನಡೆಸತಕ್ಕವರಾಗಿರಲಿ ಅಥವಾ ಇಲ್ಲದವರಾಗಿರಲಿ ಅನೇಕರು, ಗೊತ್ತಿದ್ದೋ ಅಥವಾ ಗೊತ್ತಿಲ್ಲದೇನೋ ಒಂದು ಮೂರು ರೂಪಾಯಿನ ಛಾಪಾಕಾಗದ ಮತ್ತು ಒಂದು ಒಂದೂವರೆ ರೂಪಾಯಿನ ಕಾಗದ ಹೀಗೆ ನಾಲ್ಕೂವರೆ ರೂಪಾಯಿಗಳನ್ನು ಖರ್ಚುಮಾಡಿ ಅನೇಕರು ಈ ಲೈಸೆನ್ಸುಗಳನ್ನು ಪಡೆದುಕೊಂಡರು. ಇದರ ವಿಚಾರ ಆ ವರ್ಷಕ್ಕೇ ಮುಗಿದುಹೋಯಿತೋ ಏನೋ ಎನ್ನುವಂತಾಗಿದೆ. ಆ ದಿನದಿಂದ ಈ ಹೊತ್ತಿನವರೆಗೂ ಯಾವ ಒಬ್ಬ ಆಫೀಸರೇ ಆಗಲಿ ಈ ಮನಿಲೆಂಡರ್ಸ್ ಆಕ್ಟ್ ಎನ್ನುವುದು ಯಾವ ರೀತಿ ಕೆಲಸ ನಡೆಸುತ್ತಿದೆ? ಇದೇನು ಒಂದು ಪರಿಣಾಮಕಾರಿಯಾದಂಥ ಬದಲಾವಣೆಯನ್ನುಂಟುಮಾಡಿದೆಯೇ ಏನು? ಎತ್ತ? ಎನ್ನುವ ಬಗ್ಗೆ ಯಾವ ಒಂದು ತನಿಖೆಯನ್ನೂ ನಡೆಸಿರುವುದಿಲ್ಲ; ಹಾಗೆ ನಡೆಸಿದ್ದನ್ನೂ ನಾನೂ ಸಹ ಎಲ್ಲಿಯೂ ನೋಡಿಲ್ಲ. ಆ ಆಕ್ಟಿನಲ್ಲೇನೋ ಹೇಳಿದೆ: ಸಬ್-ಡಿವಿಜನ್ ಆಫೀಸರುಗಳು ಮಾತ್ರ ಈ ವಿಚಾರದಲ್ಲಿ ತನಿಖೆ ನಡೆಸುವ ಅಧಿಕಾರವುಳ್ಳವರಾಗಿರುತ್ತಾರೆ ಎಂದು. ಆದರೆ ಈತಹಲ್‌ವರೆಗೂ ಯಾರೂ ಎಲ್ಲೂ ಇದನ್ನು ಚೆಕ್‌ಮಾಡಿ ನೋಡಿರುವುದಿಲ್ಲ. ಈ ವ್ಯವಹಾರದ ಬಗ್ಗೆ ಯಾವ ಒಂದು ರೂಲ್ಸ್ ಆಗಲಿ, ಒಂದು ರೆಗ್ಯುಲೇಷನ್ ಆಗಲಿ ಜಾರಿಗೆ ಬಂದ ಹಾಗೆ ನನಗಂತೂ ಕಾಣಬರುತ್ತಿಲ್ಲ. ಅಥವಾ ಈ ವ್ಯವಹಾರದಲ್ಲಿ ತಂಟೆತಕರಾರುಗಳೇನಾದರೂ ಉದ್ಭವಿಸಿದಾಗ ಪಾರ್ಟಿಗಳು ಕೋರ್ಟಿನ ಮುಂದೆ ಹೋಗಿ ಈ ಲೇವಾದೇವಿಗೆ ಸಂಬಂಧಪಟ್ಟ ಡಾಕ್ಯುಮೆಂಟುಗಳನ್ನು ಅಲ್ಲಿ ಹಾಜರ್ಮಾಡಿದಾಗಲಾದರೂ—ಆ ಕೋರ್ಟಿನವರಾದರೂ ಈ ಮನುಷ್ಯ ಲೇವಾದೇವಿ ಮಾಡತಕ್ಕಂಥ ಮನುಷ್ಯನಾಗಿದ್ದಾನೆಯೇ, ಈತನು ಆ ಲೇವಾದೇವಿಗಳನ್ನು ನಡೆಸುವವರ ಕಾನೂನು ಪ್ರಕಾರ ಲೈಸೆನ್ಸನ್ನು ಪಡೆದುಕೊಂಡಿದ್ದಾನೆಯೇ? ಈತನು ಆ ಕಾನೂನು ನಿಬಂಧನೆಗಳಿಗನುಸಾರವಾಗಿ ನಡೆದುಕೊಳ್ಳುತ್ತಿದ್ದಾನೆಯೇ ಎಂಬ ಅಂಶಗಳನ್ನೆಲ್ಲಾ ಮೂದಲಿಸಿದ್ದಾರೆಯೋ ಅಥವಾ ಅವರೂ ಸಹ ಇದನ್ನೆಲ್ಲಾ ಕೈಬಿಟ್ಟಿರುತ್ತಾರೆಯೋ ನನಗೆ ಒಂದೂ ಗೊತ್ತಾಗುತ್ತಿಲ್ಲ. ಈಗ ಸರ್ಕಾರದವರು ನಮಗೆ ಈ ವ್ಯವಹಾರದ ವಿಚಾರಗಳನ್ನೆಲ್ಲಾ ತಿಳಿಸಬೇಕಾಗಿದೆ. ಆದರೆ ಇತ್ತೀಚೆಗೆ ಇದಕ್ಕೆ ಸಂಬಂಧಪಟ್ಟ ಇಲಾಖೆಯ ಮೊಖ್ತೇಸರರು ಈ ಆಕ್ಟಿಗೆ ಒಂದು ಪೀನಲ್ ಕ್ಲಾಜನ್ನು ಸೇರಿಸಿರತಕ್ಕ ಬಗ್ಗೆ ಸರ್ಕಾರಕ್ಕೇನೋ ಒಂದು ನೋಟನ್ನು ಕಳುಹಿಸಿರುತ್ತಾರೆಂದು ಕೇಳುತ್ತಿದ್ದೇನೆ. ಆದರೆ ಈದಿವಸ ಈ ಲೇವಾದೇವಿ ಮಾಡತಕ್ಕವರು ಅನೇಕರು ಅನಕ್ಷರಸ್ಥರಿದ್ದಾರೆ. ಅವರಿಗೆ ಲೆಕ್ಕಪತ್ರಗಳನ್ನು ಸರಿಮಾಡುವುದಕ್ಕೆ ಬರುತ್ತಿಲ್ಲ. ಇತರ ಲೇವಾದೇವಿ ಮಾಡುವವರು ಕ್ರಮವಾದ ದಾಖಲೆಗಳೊಂದನ್ನೂ ಇಡುತ್ತಿಲ್ಲ. ಆದರೆ ಎಷ್ಟೋ ಜನ ಈ ದಿವಸ ಈ ಲೇವಾದೇವಿಯನ್ನು ನಡೆಸುತ್ತಿದ್ದಾರೆ. ಕಾನೂನು ಬದ್ಧವಾಗಿ ಅವರೆಲ್ಲರೂ ಈ ಒಂದು ವ್ಯವಹಾರಕ್ಕೆ ಲೈಸೆನ್ಸು ಪಡೆಯಲು ಬದ್ಧರಾಗಿರುತ್ತಾರೆಯೇ ಅಥವಾ ಇಲ್ಲವೇ ಎಂಬ ವಿಚಾರ ಅನೇಕರಿಗೆ ಗೊತ್ತಿರುವುದಿಲ್ಲ. ಆದರೆ ಯಾರು ಖಾಯಂ ಆಗಿ ಈ ವ್ಯವಹಾರ ನಡೆಸಿಕೊಂಡು ಬರುತ್ತಿದ್ದಾರೋ ಅಂಥವರು ಈ ಬಗ್ಗೆ ಒಂದು ಕ್ರಮವಾದ ಲೈಸೆನ್ಸನ್ನು ಪಡೆಯದೆ ಮತ್ತು ಈ ಬಗ್ಗೆ ಕಟ್ಟುನಿಟ್ಟಾಗಿ ಅನುಸರಿಸಬೇಕಾದಂಥ ನಿಯಮಾವಳಿಗಳನ್ನು ಅನುಸರಿಸದೆ ಉದಾಸೀನ ಮಾಡಿದ್ದರೆ ಅಂಥವರು ತರತಕ್ಕಂಥ ದಾವೆಗಳನ್ನು ಕೋರ್ಟಿನವರು ಖಂಡಿತ ಹಿಡಿಯಕೂಡದೆಂದು ಹೇಳಿ ತನ್ಮೂಲಕ ತಾವು ಇದನ್ನೆಲ್ಲಾ ಸರಿಪಡಿಸಬೇಕೆಂದು ನಾನು ಸಲಹೆಮಾಡುತ್ತೇನೆ.

ಇನ್ನು ರಿಜಿಸ್ಟ್ರೇಷನ್ ಇಲಾಖೆ: ಈ ಸಬ್-ರಿಜಿಸ್ಟ್ರಾರ್ ಅವರ ಕಛೇರಿಯಲ್ಲಿ ನಡೆಯಬಹುದಾದ ನ್ಯೂನತೆಗಳನ್ನು ತಡೆಗಟ್ಟಿ ಈ ಇಲಾಖೆಯ ಆಡಳಿತವನ್ನು ಸುವ್ಯವಸ್ಥಿತಿಗೆ ತರಲು ಇತ್ತೀಚೆಗೆ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್ಸ್ ಎಂಬುದಾಗಿ ಕೆಲವು ಆಫೀಸುಗಳನ್ನು ತೆರೆದಿರುತ್ತಾರೆಂಬ ಸಮಾಚಾರವನ್ನು ನಾನು ಕೇಳುತ್ತಿದ್ದೇನೆ. ಆದರೆ ನಮ್ಮ ಸಂಸ್ಥಾನದಲ್ಲಿ ಅನೇಕ ಆಫೀಸುಗಳಿಗೆ ಬೋರ್ಡೇ ಇರುವುದಿಲ್ಲ. ಆದರೆ ಈ ಸಬ್-ರಿಜಿಸ್ಟ್ರಾರ್ ಆಫೀಸುಗಳಿಗೆ ಮಾತ್ರ ಎಲ್ಲೇ ನೋಡಲಿ ಅಲ್ಲೊಂದು ಬೋರ್ಡನ್ನು ಮಾತ್ರ ಕ್ರಮವಾಗಿ ತಗಲುಹಾಕಿದ್ದಾರೆ. ಈ ಆಫೀಸಿನ ಬಗ್ಗೆ ಆ ಒಂದು ಆಚರಣೆಯನ್ನು ಮಾತ್ರ ಕ್ರಮವಾಗಿ ಅನುಸರಿಸುತ್ತಿದ್ದಾರೆಂಬುದನ್ನು ನಾನ ನೋಡಿದಂತಾಯಿತು. ನಮ್ಮ ದೇಶದಲ್ಲಿ ಯಾವ ಇಲಾಖೆಯನ್ನೇ ತೆಗೆದುಕೊಳ್ಳಲಿ—ಅನೇಕ ಇಲಾಖೆಗಳಲ್ಲಿ ಅಪ್ರತ್ಯಕ್ಷವಾಗಿ 100-200 ರೂಪಾಯಿಗಳವರೆಗೂ ಲಂಚಾ ತೆಗೆದುಕೊಳ್ಳುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಆದರೆ ಈ ಸಬ್-ರಿಜಿಸ್ಟ್ರಾರ್ಸ್ ಅವರ ಕಛೇರಿಯಲ್ಲಿ "ಒಳಫೀಜು" ಎಂಬುದಾಗಿ ಹೇಳಿ ತೆಗೆದುಕೊಳ್ಳುತ್ತಿರುವಂಥ ವಿಚಾರವನ್ನು ಈ ಮಾನ್ಯ ಸಭೆಯಲ್ಲಿ ಪದೇ ಪದೇ ಇಂಥ ವಿಷಯಗಳನ್ನು ತಿಳಿಸತಕ್ಕದ್ದು ನನಗೇನೋ ಅಷ್ಟು ಚೆನ್ನಾಗಿ ಕಾಣುವುದಿಲ್ಲ. ಕಾರಣವೇನೆಂದರೆ ನಾವೇನೋ ಒಂದು ಘನೋದ್ದೇಶವನ್ನಿಟ್ಟುಕೊಂಡು ಈ ಸಭೆಯಲ್ಲಿ ಇಂಥ ವಿಚಾರಗಳನ್ನು ಒಂದೆರಡಾವರ್ತಿ ಹೇಳಿದರೆ—ಇದಕ್ಕೆ ಎಷ್ಟರಮಟ್ಟಿನ ಬೆಲೆಯನ್ನು ಸರ್ಕಾರದವರು ಕೊಡುತ್ತಿದ್ದಾರೆ ಎನ್ನುವುದನ್ನು ನಾವು ಗ್ರಹಿಸಿದ ಬಳಿಕ, ನಾವು ಈ ವಿಚಾರಗಳನ್ನು ವೃಥಾ ಕಾರಣ ಈ ಸಭೆಯ ಮುಂದೆ ಪದೇ ಪದೇ ಹೇಳತಕ್ಕದ್ದು ಸರಿಯಲ್ಲವೆಂದು ನಾನು ಭಾವಿಸಿದ್ದೇನೆ. ಆದರೆ ಇತ್ತೀಚೆಗೇನೋ ಈ ಕಛೇರಿಗಳ ಮೇಲೆಲ್ಲಾ ಒಂದು ವಿಜಿಲೆಂಟ್‌ವಾಚ್ ಇಟ್ಟು ಈ ಅಕ್ರಮಗಳನ್ನೆಲ್ಲಾ ತಡೆಗಟ್ಟಲು ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್ ಒಬ್ಬರನ್ನು ಪರೀಕ್ಷಾರ್ಥವಾಗಿ ಒಂದು ಜಿಲ್ಲೆಗೆ ಮಾತ್ರ ನೇಮಕಮಾಡಿರುತ್ತಾರೆಂದು ತಿಳಿದುಬಂತು. ಇಂಥ ವಿಜಿಲೆಂಟ್ ಆಫೀಸರ ಸಂಖ್ಯೆಯನ್ನು ಇನ್ನೂ ಹೆಚ್ಚುಮಾಡಿ ಇವರು ಸಕಾಲಕ್ಕೆ ಸರಿಯಾಗಿ ಪ್ರತಿಯೊಂದು ಆಫೀಸನ್ನೂ ಇನ್‌ಸ್ಪೆಕ್ಷನ್ ಮಾಡಿ, ಈ ಇಲಾಖೆಗೆ ಇಲ್ಲಿಯವರೆಗೂ ಬಂದಿರತಕ್ಕಂಥ ಅಪವಾದವನ್ನು ತಡೆಗಟ್ಟಬೇಕೆಂದೂ, ಈ ಇಲಾಖೆಯಲ್ಲಿ ಇಂಟೆಂಡಿಂಗ್ ಡಾಕ್ಯುಮೆಂಟುಗಳನ್ನು ಇನ್ನೂ ತ್ವರಿತವಾಗಿ ಕ್ರಮ ಪ್ರಕಾರ ನಡೆಸಲು ಸಾಧ್ಯವಾಗುತ್ತದೆಯೇ ಎಂಬುದನ್ನು ಪರಿಶೀಲನೆ ನಡೆಸಬೇಕೆಂದೂ ಸಲಹೆಮಾಡುತ್ತೇನೆ. ಹೀಗೆ ಮಾಡುವುದರಿಂದ ಈ ಇಲಾಖೆಯ ಉತ್ಪತ್ತಿ ಕೂಡ ಜಾಸ್ತಿ ಆಗುತ್ತದೆಂದು ಈ ಎರಡು ಮಾತುಗಳನ್ನು ಹೇಳಿ, ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಆರ್. ಅನಂತರಾಮನ್ (ಚಾಮರಾಜಪೇಟೆ).—ಸ್ವಾಮಿ, ಈ ರಿಜಿಸ್ಟ್ರೇಷನ್ ಚಾರ್ಜ್ ವಿಚಾರದಲ್ಲಿ ನಾವು ಹಿಂದಂಶವನ್ನು 1952-53 ರಿಂದಲೂ ಒಂದೇ ಸಮನಾಗಿ ತಿಳಿಸುತ್ತಲೇ ಬಂದಿದ್ದೇವೆ. ಅದು ಏನು ವಿಚಾರ ಎಂದರೆ, ಈ ಕ್ರಯ, ಭೋಗ್ಯ, ಆಧಾರ ಇತ್ಯಾದಿ ಪತ್ರಗಳು ರಿಜಿಸ್ಟ್ರಾಗತಕ್ಕ ಬಗ್ಗೆ ಆ ರಿಜಿ

ಸ್ಟ್ರಾರ್ ಆಫೀಸಿನಲ್ಲಿ ಒಂದು ಎನ್‌ಕಂಬ್ರೆನ್ಸ್ ಸರ್ಟಿಫಿಕೇಟನ್ನು ಕೊಡುವಂತೆ ಮಾಡಬೇಕೆಂಬುದೇ ಆಗಿದೆ. ಈ ಬಗ್ಗೆ ಅವರು ಒಂದೇ ಪ್ರತ್ಯೇಕ ದಾಖಲೆಯನ್ನೇ ಇಡುವಂತೆ ಏರ್ಪಾಡಾಗಬೇಕಾಗಿದೆ. ಈ ದಿವಸ ಬೊಂಬಾಯಿ ಪ್ರಾಂತ್ಯದಲ್ಲಿ ಆರೀತಿ ಮಾಡಲಾಗುತ್ತಿದೆಯಂತೆ. ಬೊಂಬಾಯಿ ಪ್ರಾಂತ್ಯದಲ್ಲಿ ಈ ದಿವಸ ಯಾವುದಾದರೊಂದು ಆಸ್ತಿ ಅಥವಾ ಸ್ವತ್ತು ದಾವಾ-ಡಿಕ್ರಿ ಆಯಿತೆಂದರೆ ಆ ಕೋರ್ಟಿನವರು ಕೂಡಲೇ ವಿಚಾರವನ್ನು ಆ ಸಂಬಂಧಪಟ್ಟ ಸರಹದ್ದಿನ ರಿಜಿಸ್ಟ್ರಾರ್ ಆಫೀಸಿಗೆ ರಿಪೋರ್ಟ್ ಮಾಡಿಬಿಡುತ್ತಾರಂತೆ. ಹೀಗೆ ಅಲ್ಲಿ ನಡೆಯುತ್ತಿರುವುದರಿಂದ ಜನರಿಗೆ ತುಂಬ ಅನುಕೂಲವಾಗಿದೆ. ಆಸ್ತಿ ಕೊಳ್ಳತಕ್ಕವರಿಗೆ ಬಹಳ ಅನುಕೂಲವಾಗಿದೆ. ಆದರೆ ನಾವು ಈಚೆಗೆ ನಮ್ಮ ಸಂಸ್ಥಾನದಲ್ಲಿ ಕೋರ್ಟು ಫೀಸ್ ಮತ್ತು ರಿಜಿಷ್ಟ್ರೇಷನ್ ಫೀಜುಗಳನ್ನೇನೋ ಜಾಸ್ತಿ ಮಾಡಿದ್ದೇವೆ. ಆದರೆ ಅದಕ್ಕೆ ತಕ್ಕ ಹಾಗೆ ಜನರಿಗೆ ಅನುಕೂಲವನ್ನು ಮಾತ್ರ ಕಲ್ಪಿಸಿಲ್ಲ. ಆದಕಾರಣ ನಮ್ಮಲ್ಲಿಯೂ ಸಹ ಬೊಂಬಾಯಿನ ಮಾದರಿಯಲ್ಲಿ ಇಲ್ಲಿಯೂ ಜಾರಿಗೆ ತಂದರೆ, ಈ ಎನ್‌ಕಂಬ್ರೆನ್ಸ್ ಸರ್ಟಿಫಿಕೇಟನ್ನು ಕೊಡತಕ್ಕಂಥ ವ್ಯವಸ್ಥೆಯಲ್ಲಿ ಈ ಆಫೀಸಿನಲ್ಲಿ ಕ್ರಮವಾಗಿ ಜಾರಿಗೆ ತಂದರೆ, ಆಗ ಈ ವಿಚಾರ ಜನರಿಗೆಲ್ಲಾ ಚೆನ್ನಾಗಿ ತಿಳುವಳಿಕೆ ಬರುತ್ತದೆ. ಆದರೆ ಈ ದಿವಸ ಆ ಹಳ್ಳಿಯ ಜನರಿಗೆ ಎಷ್ಟೋ ಸಂದರ್ಭಗಳಲ್ಲಿ ಈ ವಿಚಾರವೇ ಅವರಿಗೆ ತಿಳಿಯದೆ ಬಹಳ ತೊಂದರೆಗಳಾಗಿರುತ್ತವೆ. ಈ ಸಬ್ ರಿಜಿಸ್ಟ್ರಾರ್ ಅವರ ಕಛೇರಿಯಲ್ಲಿ ಹತ್ತಾರು ಕೆಲಸಗಳನ್ನು ಅವರು ನಡೆಸುತ್ತಿರುವಾಗ ಈ ಒಂದು ಕೆಲಸವನ್ನೂ ಕೂಡ ಮಾಡಬೇಕೆಂದರೆ ಇದೂ ಅದೇ ಆಗುತ್ತದೆ. ಯಾರಿಗೆ ಬೇಕಾದರೂ ಯಾವ ಹೊತ್ತಿನಲ್ಲಾಗಲಿ ದಾಖಲೆ ದೊರೆಯಲು ಅನುಕೂಲವಾಗುತ್ತದೆ. ಈ ಮಾರ್ಗವನ್ನು ಜಾರಿಗೆ ತಂದು ಜನರು ಮೋಸಹೋಗುವುದನ್ನು ತಪ್ಪಿಸಬೇಕೆಂದು ತಿಳಿಸಿ ನಾನು ಈ ನನ್ನ ಎರಡು ಮಾತುಗಳನ್ನು ಹೇಳಿ ಕುಳಿತುಕೊಳ್ಳುತ್ತೇನೆ.

ಶ್ರೀ ಜಿ. ಶಿವಪ್ಪ (ಹೊಳಲ್ಕೆರೆ—ಅನುಸೂಚಿತ ಜಾತಿಗಳು).—ಸ್ವಾಮಿ, ಈ ಜಮೀನು ಅಡಮಾನ ಬ್ಯಾಂಕಿನವರುಗಳಿಂದ ಅಥವಾ ಜಮೀನು ಅಡಮಾನದ ಬ್ಯಾಂಕಿನವರ ಪರವಾಗಿ, ಎಂದರೆ, ಈ ಸಹಕಾರ ಸಂಘಗಳ ಬಗ್ಗೆ, ನಡೆಸಲಾಗುತ್ತಿರುವ ಎಲ್ಲ ಲೇವಾದೇವಿಗಳ ಬಗ್ಗೆಯೂ ಸಂದಾಯ ಮಾಡಬೇಕಾಗಿದ್ದಂಥ ಸ್ಟಾಂಪ್ ಪೇಪರಿನ ಬಗ್ಗೆ ಅರ್ಧ ರಿಯಾಯಿತಿಯನ್ನು ಕೊಡಲಾಗಿದೆ ಎಂದು ಸರ್ಕಾರದವರು ಹೇಳಿರುತ್ತಾರೆ. ಆದರೆ ಹೀಗೆ ಅವರು ಅರ್ಧ ಫೀಜನ್ನು ಮನ್ನಾ ಮಾಡಿದ್ದೇವೆಂದು ಹೇಳುತ್ತಿರುವ ಸಂದರ್ಭದಲ್ಲಿ ನಾವು ಮುಖ್ಯವಾಗಿ ಎರಡು ಅಂಶಗಳಿಗೆ ಗಮನಕೊಡಬೇಕಾಗಿದೆ. ಒಂದು ದೀರ್ಘ ಕಾಲಾವಧಿ ಸಾಲ ಮತ್ತೊಂದು ಅಲ್ಪ ಕಾಲಾವಧಿಯ ಸಾಲ ಎಂದು ಎರಡು ಭಾಗಮಾಡಿದ್ದಾರೆ. ಲ್ಯಾಂಡ್ ಮಾರ್ಗೇಜ್ ಸೊಸೈಟಿಯಲ್ಲಿ ಲಾಂಗ್ ಟರ್ಮ್ ಲೋನಿಗೆ ಅರ್ಜಿ ಹಾಕತಕ್ಕ ಬಗ್ಗೆ ಪ್ರತಿಯೊಂದು ತಾಲ್ಲೂಕಿನಲ್ಲೂ ಒಂದೊಂದು ಈ ಬ್ಯಾಂಕಿನ ಲ್ಯಾಂಡ್ ಮಾರ್ಗೇಜ್ ಸೊಸೈಟಿಗಳಿರುತ್ತವೆ. ಈ ಸಾಲಕ್ಕೆ ದರಖಾಸ್ತು ಹಾಕಿಕೊಂಡಿರತಕ್ಕವರು ಮೊದಲು ಆ ತಾಲ್ಲೂಕಿನಲ್ಲಿರುವ ಸೊಸೈಟಿಗಳಲ್ಲಿ ಅರ್ಧ ಸ್ಟಾಂಪ್ ಫೀಜನ್ನು ಕೊಟ್ಟು ಅಲ್ಲಿ ತಮ್ಮ ಕಾಗದ ಪತ್ರಗಳನ್ನು ಮೊದಲು ರಿಜಿಸ್ಟರ್ ಮಾಡಿಸಬೇಕಾಗಿದೆ. ಅನಂತರ ಅವರು ಪುನಃ ಅದೇ ಪತ್ರಗಳನ್ನು ಈ ಸೆಂಟ್ರಲ್ ಬ್ಯಾಂಕಿನಲ್ಲೂ ಮತ್ತೊಮ್ಮೆ ರಿಜಿಸ್ಟರ್ ಮಾಡಿಸಿಕೊಡಬೇಕಾಗಿದೆ. ಹೀಗಿರುವುದರಿಂದ ಸರ್ಕಾರದವರು ಈ ಸಹಕಾರ ಸಂಘಗಳ ಲೇವಾದೇವಿಯ ಬಗ್ಗೆ ಅರ್ಧ ಫೀಜನ್ನು ಮನ್ನಾ ಮಾಡಿರುತ್ತೇವೆಂದು ಹೇಳಿಕೊಳ್ಳುತ್ತಿರುವಂತೆ ಇಲ್ಲಿ ಜನರಿಗೆ ಕಾರ್ಯರೂಪದಲ್ಲಿ ಆ ರೀತಿ ಉಳಿತಾಯವೇನೂ ಆಗುತ್ತಿಲ್ಲ. ಹೀಗೆ ಅವರು ತಮ್ಮ ಕಾಗದ ಪತ್ರಗಳನ್ನು ಒಂದು ಕಡೆಗೆ ರಿಜಿಸ್ಟರಾದದ್ದು ಸಾಲದೆಂದು ಹೇಳಿ ಎರಡು ಕಡೆಗಳಲ್ಲಿ ರಿಜಿಸ್ಟರು ಮಾಡಿಸಿಕೊಳ್ಳುತ್ತಿರುವುದರಿಂದ ಈ ಎರಡು ಕಡೆಗಳಲ್ಲೂ ಕೊಡತಕ್ಕ ಫೀಜನ್ನು ಲೆಕ್ಕ ಹಾಕಿಕೊಂಡರೆ ಆಗ ಇವರು ಪೂರ್ತಿ ಛಾರ್ಜನ್ನು ಕೊಟ್ಟ ಹಾಗೆಯೇ ಆಯಿತು. ನಾನು ಆ ಬ್ಯಾಂಕಿನ ಒಬ್ಬ ಡೈರೆಕ್ಟರು. ನಾನು ಅಲ್ಲಿಯ ವಿಚಾರಗಳನ್ನೆಲ್ಲಾ ಚೆನ್ನಾಗಿ ತಿಳಿದುಕೊಂಡು ಬಂದು ಈಗ ಇಲ್ಲಿ ಚರ್ಚೆ ಮಾಡುತ್ತಿದ್ದೇನೆ. ಅಂತೂ ಸರ್ಕಾರದವರು ನೀಡಿರತಕ್ಕಂಥ ಮನ್ನಣೆಯಿಂದ ಆ ಜನರಿಗೆ ಯಾವ ಅನುಕೂಲವೂ ಸಿಕ್ಕುತ್ತಿಲ್ಲ. ಇದರ ಜೊತೆಗೆ ಅವರು ಅಪ್ಲಿಕೇಷನ್ ಫೀಜನ್ನೂ—ರಿಜಿಷ್ಟ್ರೇಷನ್ನೂ ಸಹ ಕೊಡಬೇಕಾಗಿದೆ. ಈ ಅಪ್ಲಿಕೇಷನ್ ಫೀಜು ಎಷ್ಟು ಆಗುತ್ತದೆಯೋ ಅಷ್ಟೇ ಆ ರಿಜಿಸ್ಟ್ರೇಷನ್ ಫೀಜೂ ಆಗುತ್ತದೆ. ಈ ವಿಚಾರವನ್ನು ನಾನು ಹೋದ ವರ್ಷವೇ ಸರ್ಕಾರದವರ ಗಮನಕ್ಕೆ ತಂದಿದ್ದೆನು. ಆಗ ಸರ್ಕಾರದವರು ಇದನ್ನು ಸರಿಪಡಿಸುತ್ತೇವೆಂದು ಭರವಸೆ ನೀಡಿದ್ದರು. ಆದರೆ ಈ ತಹಲ್‌ವರೆಗೆ ಏನೂ ಕೆಲಸವಾಗಿಲ್ಲ.

ಈಗ ಈ ಷಾರ್ಟ್ ಟರ್ಮ್ ಲೋನುಗಳಿಗೆ ಸ್ಟಾಂಪ್ ಫೀಜು ಮತ್ತು ಎನ್‌ಕಂಬ್ರೆನ್ಸ್ ಸರ್ಟಿಫಿಕೇಟಿನ ಬಗ್ಗೆ ಪಾವತಿಮಾಡಬೇಕಾದಂಥ ಫೀಜು ಇತ್ಯಾದಿಗಳನ್ನೆಲ್ಲಾ ಪೂರ್ತಿಯಾಗಿ ಮನ್ನಾ ಮಾಡಿಬಿಟ್ಟಿದ್ದಾರೆ. ಆದರೆ ಆ ಲಾಂಗ್ ಟರ್ಮ್ ಲೋನುಗಳಿಗೂ ಮತ್ತು ಷಾರ್ಟ್ ಟರ್ಮ್ ಲೋನುಗಳಿಗೂ ಹೀಗೊಂದು, ಭೇದ ಅಥವಾ ವ್ಯತ್ಯಾಸ ಮಾಡಿರುವುದು ಖಂಡಿತ ಸರಿಯಾದದ್ದಲ್ಲ.

ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—ಅವರು ಒಂದೇ ವರ್ಷದಲ್ಲಿ ಸಾಲ ತೀರಿಸುತ್ತಾರೆ. ಆದ್ದರಿಂದ ಅವರಿಗೆ ಇವುಗಳನ್ನೆಲ್ಲಾ ಮನ್ನಾ ಮಾಡಿರುತ್ತಾರೆ.

ಶ್ರೀ ಜಿ. ಶಿವಪ್ಪ.—ಆ ಬ್ಯಾಂಕಿನವರೂ ಸಹ ಈ ವಿಚಾರವಾಗಿ ಸರ್ಕಾರಕ್ಕೆ ರಿಪೋರ್ಟು ಮಾಡಿದ್ದಾರೆ. ಇತ್ತೀಚೆಗೆ ದೇಶದಲ್ಲಿ ಈ ಕೋ-ಆಪರೇಟಿವ್ ಮೂವ್‌ಮೆಂಟು ಹೆಚ್ಚುತ್ತಿದೆ. ಅವರು ವೇರ್ ಹೌಸ್—ಇತ್ಯಾದಿ ನಾನಾ ಕಾರ್ಯಕ್ರಮಗಳನ್ನು ನಡೆಸಲು ಪ್ರಯತ್ನಪಟ್ಟಿದ್ದಾರೆ. ಇಂಥ ಸಮಯದಲ್ಲಿ ಈ ಸಂಸ್ಥೆಗಳಿಗೆ ತಾವು ಒಂದು ಅನುಕೂಲವನ್ನು ಕಲ್ಪಿಸಿಕೊಡತಕ್ಕದ್ದು ನ್ಯಾಯ. ಈಗ ಈ ಎಲ್ಲಾ ಸಂಸ್ಥೆಗಳವರೂ ಇಂಥ ಒಂದು ರಿಯಾಯಿತಿಯನ್ನು ನೀಡಬೇಕೆಂದು ಮನವಿಗಳನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ. ತಾವು ಒಂದು ಉದಾರ ರೀತಿಯಿಂದ ವರ್ತಿಸಬೇಕಾದದ್ದು ತಮ್ಮ ಕರ್ತವ್ಯವಾಗಿದೆ. ಈ ಸಂಸ್ಥೆಗಳನ್ನು ಸರ್ಕಾರ ಬೆಳಸಿಕೊಂಡು ಉಳಿಸಿಕೊಂಡು ಬರಬೇಕಾದ್ದು ಅದರ ಜವಾಬ್ದಾರಿ. ಇದರಲ್ಲಿ ತಾವು ಭೇದ ಭಾವನೆಯನ್ನು ತೋರಿಸಬಾರದು, ಎಲ್ಲರಿಗೂ ಒಂದೇ ಸಮನಾದ ಅನುಕೂಲಗಳನ್ನು ನೀಡಬೇಕಾದದ್ದು ಅಗತ್ಯವಾಗಿದೆ. ತತ್ವದೃಷ್ಟಿಯಲ್ಲಿ ನೋಡುವುದಾದರೂ ಕೂಡ ಈ ವಿಚಾರದಲ್ಲಿ ಬೇಧ ಮಾಡಲು ಅವಕಾಶವಿಲ್ಲ. ಆದ್ದರಿಂದ ನಾನೀಗ ಸರ್ಕಾರದವರ ಗಮನಕ್ಕೆ ಈ ಮುಖ್ಯವಾದ ಅಂಶಗಳನ್ನೆಲ್ಲಾ ತಂದಿರುತ್ತೇನೆ.

*ಶ್ರೀ ಎಚ್. ಎಂ. ಚೆನ್ನಬಸಪ್ಪ.—ಸ್ವಾಮಿ, ಈ ಡಿಮ್ಯಾಂಡಿನ ವಿಷಯದಲ್ಲಿ ಶ್ರೀ ಚಿಕ್ಕಲಿಂಗಯ್ಯನವರು ಎರಡು ವಿಷಯಗಳನ್ನು ಪ್ರಸ್ತಾಪಮಾಡಿದರು. ಮೊದಲನೆಯದಾಗಿ ರೆಕಾರ್ಡ್ ಆಫ್ ಲ್ಯಾಂಡ್ ಇಂಡೆಕ್ಸನ್ನು ಸಬ್ ರಿಜಿಸ್ಟ್ರಾರ್‌ರವರು maintain ಮಾಡಬೇಕು, ಅದರಿಂದ ಅನುಕೂಲವಾಗುತ್ತದೆ ಎನ್ನುವುದು. ಇದು ನೋಡುವುದಕ್ಕೆ ಸುಲಭವಾಗಿ ಕಂಡರೂ ಮತ್ತು ಅನುಕೂಲವಾಗುತ್ತದೆ ಎಂಬುದು ಮನಸ್ಸಿಗೆ ಬಂದರೂ ಕೂಡ ಇದರಿಂದ ಕೆಲಸ ವಿಪರೀತವಾಗುತ್ತದೆ. ಆದಕಾರಣ ಇದು ಎಷ್ಟು ಮಟ್ಟಿಗೆ ಸಾಧ್ಯವಾಗುತ್ತದೆ ಎಂಬುದನ್ನು ಪರಿಶೀಲನೆ ಮಾಡುತ್ತೇವೆ ಎಂದು ಹೇಳಿ ಅಷ್ಟು ಮಾತ್ರ ಈಗ ಸದ್ಯದಲ್ಲಿ ಅವರಿಗೆ ಭರವಸೆಕೊಡುತ್ತೇನೆ.

ಮನಿಲೆಂಡರ್ಸ್ ಆಕ್ಟ್ ಇನ್-ಇಫೆಕ್ಟಿವ್ ಆಗಿದೆ ಎಂದು ಹೇಳಿದರು. ಈ ಆಕ್ಟ್ ಪ್ರಕಾರ ಮನೀಲೆಂಡರ್ಸ್ ಎಲ್ಲರೂ ಕೂಡ ರಿಜಿಸ್ಟರ್ ಮಾಡಿಕೊಳ್ಳಬೇಕು. ರೂಲ್ಸ್ ಪ್ರಕಾರ ಅವರ ಸರ್ಟಿಫಿಕೇಟ್ ಏನಿದೆ ಅದನ್ನು ಮೂರು ವರ್ಷಗಳ ಮೇಲೆ ಒಬ್ಬರೂ ಕೂಡ ರಿನ್ಯೂ ಮಾಡಿಕೊಳ್ಳಲಿಲ್ಲ. ಅನೇಕ ವೇಳೆ ಸರ್ಕಾರದವರು ಅವರಿಗೆ ಒತ್ತಾಯಮಾಡಿದರೂ ಕೂಡ ರಿನ್ಯೂ ಮಾಡಿಕೊಳ್ಳಲಿಲ್ಲ. ಅವರ ಮೇಲೆ ಪ್ರಾಸಿಕ್ಯೂಷನ್ ಹಾಕಬೇಕು, ಕಾನೂನು ಪ್ರಕಾರ ಶಿಕ್ಷೆ ಮಾಡಬೇಕೆಂಬುದೇ ಸರ್ಕಾರದವರ ಆಶೆ. ಆದರೆ ನಾವು ಮಾಡಿದ ಕಾನೂನಿನಲ್ಲಿ ಸ್ವಲ್ಪ ಲೋಪದೋಷ ಇದ್ದುದರಿಂದ ಅವರ ಮೇಲೆ ಕಾನೂನು ಪ್ರಕಾರ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ತೊಂದರೆ ಆಯಿತು. ಅದಕ್ಕೆ ಉಗ್ರವಾದ ಒಂದು ಪೀನಲ್ ಕ್ಲಾಸ್‌ನ್ನು ಹಾಕಬೇಕು. ಯಾವ ಮಟ್ಟದಲ್ಲಿ ಮತ್ತು ಯಾವ ರೀತಿ ಮಾರ್ಪಾಡು ಮಾಡಬೇಕೆಂಬುದನ್ನು ಯೋಚನೆಮಾಡಿ ಅದನ್ನು ಈ ಸಭೆಯ ಮುಂದೆ ತರಬೇಕು ಎನ್ನುವುದು ಸರ್ಕಾರದ ಆಶಯವಾಗಿದೆ. ಆದರೆ ಇನ್ನು ಮುಂದೆ ರಾಜ್ಯದ ಪುನರ್‌ವಿಂಗಡಣೆಯಾಗುವುದರಿಂದ ಅದು ಆದ ಮೇಲೆ ಒಂದೇ ಸಲ ಆ ಶಾಸನವನ್ನು ಜಾರಿಗೆ ತರುವುದು ಉತ್ತಮ ಎಂದು ಅಭಿಪ್ರಾಯಪಟ್ಟು ಅದನ್ನು ಇಷ್ಟಕ್ಕೇ ನಿಲ್ಲಿಸಿದ್ದೇವೆಯೇ ವಿನಾ ಸರ್ಕಾರದವರಿಗೆ ಖಂಡಿತವಾಗಿಯೂ ಮನಿಲೆಂಡರ್ಸ್ ಆಕ್ಟ್ ಇಫೆಕ್ಟಿವ್ ಆಗಿರಬೇಕೆಂಬುದರಲ್ಲಿ ಆಶೆ ಇದೆ. ಆ ರೀತಿ ಮಾಡುವುದಕ್ಕೆ ತಕ್ಕ ಏರ್ಪಾಡನ್ನು ಆದಷ್ಟು ಬೇಗ ಮಾಡುತ್ತೇವೆ.

ಮೂರನೆಯದಾಗಿ ಶ್ರೀ ಚಿಕ್ಕಲಿಂಗಯ್ಯನವರು ಈ ಒಳಫೀಜಿನ ವಿಷಯದಲ್ಲಿ ಬಹಳವಾಗಿ ಪಶ್ಚಾತ್ತಾಪಪಟ್ಟರು. ಸಬ್ ರಿಜಿಸ್ಟ್ರಾರ್‌ರ ಆಫೀಸಿನಲ್ಲಿ ಒಳಫೀಜು ಕೊಡಕೂಡದು ಎಂದು ಬೋರ್ಡ್ ಹಾಕಿದ್ದಾರೆ. ಒಪ್ಪಿಕೊಳ್ಳೋಣ. ಎಷ್ಟೋ ಕಡೆ ಲಂಚ ಕಾಣದ ಹಾಗೆ ಕೊಡುತ್ತಾರೆ, ಬಡಪಾಯಿ ಸಬ್ ರಿಜಿಸ್ಟ್ರಾರ್‌ರ ಮೇಲೆ ಸರ್ಕಾರದ ಕಣ್ಣು ಏಕೆ ಬೀಳಬೇಕು ಎಂದು ಕೇಳಿದರು. ಇದಕ್ಕೆ ಕಾರಣ ಸಬ್ ರಿಜಿಸ್ಟ್ರಾರ್ ಆಫೀಸು ಬಹಳ ಕಾಲದಿಂದ ಲಂಚಕ್ಕೆ ಹೆಸರುವಾಸಿ ಆದದ್ದು ಎಂದು ಅಷ್ಟೆ. ಸಬ್ ರಿಜಿಸ್ಟ್ರಾರ್‌ರವರ ಆಫೀಸಿನಲ್ಲೇ ಆಗಲಿ, ತಾಲ್ಲೂಕು ಆಫೀಸಿನಲ್ಲೇ ಆಗಲಿ, ಡಿಸ್ಟ್ರಿಕ್ಟ್ ಆಫೀಸಿನಲ್ಲೇ ಆಗಲಿ ಅಥವಾ ಸರ್ಕಾರದ ಯಾವ ಆಫೀಸಿನಲ್ಲೇ ಆಗಲಿ ಒಳ ಫೀಜು ಎನ್ನುವುದು ಯಾವ ವಿಧದಲ್ಲೇ ಇರಲಿ ಅದನ್ನು ಸಾಧ್ಯವಾದರೆ ಮೂಲೋತ್ಪಾಟನ ಮಾಡಬೇಕು, ಇಲ್ಲದೇ ಇದ್ದರೆ ಹತೋಟಿಯನ್ನಾದರೂ ಮಾಡಬೇಕೆಂಬುದರಲ್ಲಿ ಸರ್ಕಾರದವರಿಗೆ ತುಂಬ ಆಸಕ್ತಿ ಇದೆ. ಆದರೆ ಸರ್ಕಾರದವರಲ್ಲಿ ಆಸಕ್ತಿ ಇದ್ದರೆ ಮಾತ್ರ ಸಾಲದು ; ಸಾರ್ವಜನಿಕರಲ್ಲೂ ಕೂಡ ಆಸಕ್ತಿ ಇರಬೇಕೆಂಬುದು ಭಿನ್ನಾಭಿಪ್ರಾಯಕ್ಕೆ ಆಸ್ಪದವಾದುದಲ್ಲ. ಸಾಮಾನ್ಯವಾಗಿ ಈ ಒಳ ಫೀಜು ಕೊಡುವುದು, ಒಬ್ಬರಿಗೆ ಕಾಣುವಂತೆ ಕೊಡುವುದು ಅಲ್ಲ. ಒಬ್ಬರಿಗೂ ಕಾಣದಂತೆ ಗುಟ್ಟಿನಲ್ಲಿ ಮಾಡತಕ್ಕ ಈ ಕೆಲಸವನ್ನು ಬಹಿರಂಗಪಡಿಸಿ, ಅದನ್ನು ಸಾಬೀತುಮಾಡಿ, ಅದರ ಮೇಲೆ ಉಗ್ರ ಕಾರ್ಯಕ್ರಮ ತಗೆದುಕೊಳ್ಳುವುದು ಸ್ವಲ್ಪ ಕಷ್ಟತಮವಾದ ಕೆಲಸ. ಸರ್ಕಾರದವರಿಗೆ ಆ ವಿಷಯದಲ್ಲಿ ತಾತ್ಸಾರ ಮನೋಭಾವವಿಲ್ಲ, ಸಿಕ್ಕಿದವರನ್ನು ಬಲಿ ಹಾಕಬೇಕೆಂದು ಇದ್ದೇವೆ, ಹಾಕುತ್ತಲೂ ಇದ್ದೇವೆ. ಆದರೆ ಸಿಕ್ಕುವುದೇ ಸ್ವಲ್ಪ ಕಷ್ಟ. ಅಡ್ಡಿ ಆತಂಕಗಳು ಅನೇಕವು ಬರುತ್ತವೆ. ಅವು ನಾನಾ ಕಾರಣಗಳಿಂದ ಬರುತ್ತವೆ. ಒಂದೊಂದು ವೇಳೆ, ಹೊಸದಾಗಿ ರಾಜ್ಯಾಂಗ ಜಾರಿಗೆ ಬಂದ ಮೇಲೆ, ಅನುಮಾನಕ್ಕೆಡೆ ಇಲ್ಲದಂತೆ ಸಾಬೀತಾದರೆ ಮಾತ್ರ ಶಿಕ್ಷೆ ಮಾಡುವುದಕ್ಕೆ ಸಾಧ್ಯವೇ ಹೊರತು ಇಲ್ಲದೇ ಇದ್ದರೆ ಸಾಧ್ಯವಿಲ್ಲ. ಮೊನ್ನೆ ತಾನೆ ಇದಕ್ಕೆ ಸಂಬಂಧಪಟ್ಟ ಪ್ರಶ್ನೆಗೆ ಉತ್ತರ ಕೊಡುತ್ತಾ, ಲಾಯರನ್ನಿಟ್ಟುಕೊಳ್ಳುವುದಕ್ಕೆ ಏಕೆ ಅವಕಾಶ ಕೊಡಕೂಡದು ಎಂಬುದನ್ನು ಹೇಳಿದೆ. ಕಾರಣವೇನೆಂದರೆ, ಆ ರೀತಿ ಮಾಡುವುದರಿಂದ ನಿಧಾನವಾಗುತ್ತದೆ. ಆದ್ದರಿಂದ ನಾನಾದರೂ ತಮ್ಮಲ್ಲಿ ಅರಿಕೆಮಾಡುತ್ತೇನೆ, ಸರ್ಕಾರದವರಿಗೆ ಇದನ್ನು ಶುದ್ಧೀಕರಣಮಾಡಿ, ಈ ಲಂಚಗೂಳಿತನವನ್ನು ಸಾಧ್ಯವಾದಷ್ಟು ಹತೋಟಿಯಲ್ಲಿಡಬೇಕೆಂಬುದರಲ್ಲಿ ತಮಗೆಲ್ಲರಿಗಿಂತಲೂ ಕೂಡ ಹೆಚ್ಚಿನ ಆಸಕ್ತಿ ಇದೆ. ಸಬ್‌ರಿಜಿಸ್ಟ್ರಾರ್‌ರವರ ಆಫೀಸಿನಲ್ಲಿ ''ಒಳಫೀಜು''ನ ನೋಟೀಸ್ ಏಕೆ ಹಾಕಿದ್ದೇವೆ ಎಂದರೆ ಅದು ಜನಗಳ ತಿಳಿವಳಿಕೆಗೆ ಬರಬೇಕು. ಬಾಕಿ ಕಡೆ ಏಕೆ ಹಾಕಬಾರದು ಎಂದು ಕೇಳಿದರು. ಅದು ಬಹಳ ಒಳ್ಳೆಯ ಸಲಹೆ ಅದನ್ನು ಸರ್ಕಾರದವರು ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ನಾರಾಯಣಸ್ವಾಮಿ (ಮೈಸೂರು ದಕ್ಷಿಣ).—''ಒಳಫೀಜು'' ಎಂದು ತಾವು ಬೋರ್ಡ್ ಹಾಕುತ್ತೀರಿ. ಅವರು ಹೊರಗಡೆಯೇ ತೆಗೆದುಕೊಳ್ಳುತ್ತಾರೆ. (ಸಭೆಯಲ್ಲಿ ನಗು !)

ಶ್ರೀ ಎಂ. ಚಿಕ್ಕಲಿಂಗಯ್ಯ.—ಏಕೆ ಹೇಳಿದೆ. ಎಂದರೆ ಸರ್ಕಾರದ ದೃಷ್ಟಿಯಿಂದ ಅದು ಒಳ್ಳೆಯದಲ್ಲ, ಆಡಳಿತಕ್ಕೆ ಚೆನ್ನಾಗಿ ಕಾಣುವುದಿಲ್ಲ.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಅದು ಇಲ್ಲದೇ ಇದ್ದರೆ ಸರ್ಕಾರಕ್ಕೂ ಒಳ್ಳೆಯದು, ತಮಗೂ ಒಳ್ಳೆಯದು. ಒಂದು ವೇಳೆ ಒಳಫೀಜು ಕೊಡಬೇಡಿ ಎಂದು ಹೇಳುವುದರಲ್ಲಿ, ಬೋರ್ಡ್ ಹಾಕುವುದರಲ್ಲಿ ತಪ್ಪೇನಿದೆ ?

ಶ್ರೀ ಎಂ. ಚಿಕ್ಕಲಿಂಗಯ್ಯ.—ಸರ್ಕಾರದವರೇ ಲಂಚಗೂಳಿತನ ಇದೆ ಎಂದು ಒಪ್ಪಿಕೊಂಡಹಾಗಾಯಿತಲ್ಲವೇ !

ಶ್ರೀ ಎಚ್. ಎಂ. ಚೆನ್ನಬಸಪ್ಪ.—ದೇಶದಲ್ಲಿ ಲಂಚಗೂಳಿತನ ಇಲ್ಲ ಎಂದು ಯಾರೂ ಹೇಳುತ್ತಿಲ್ಲ. ಕೊಡತಕ್ಕ ಜನ ಇದ್ದಾರೆ, ತೆಗೆದುಕೊಳ್ಳತಕ್ಕ ಜನ ಇದ್ದಾರೆ. ಅದನ್ನು ಹತೋಟಿಮಾಡಬೇಕು, ಸಾಧ್ಯವಾದಮಟ್ಟಿಗೂ ಮೂಲೋತ್ಪಾಟನ ಮಾಡಬೇಕು ಎಂಬುದೇ ಸರ್ಕಾರದ ಆಶಯ. ಒಟ್ಟಿನಲ್ಲಿ ಈ ಒಳಫೀಜು ಸಬ್‌ರಿಜಿಸ್ಟ್ರಾರ್‌ರವರ ಆಫೀಸಿನಲ್ಲಾಗಲಿ, ಇತರ ಯಾವ ಕ್ಷೇತ್ರದಲ್ಲೇ ಆಗಲಿ ಹತೋಟಿ ಮಾಡುವುದಕ್ಕೆ ತಕ್ಕ ಏರ್ಪಾಡನ್ನು ಸರ್ಕಾರದವರು ಮಾಡುತ್ತಾರೆ, ಈಗಲೂ ಮಾಡುತ್ತಾ ಇದ್ದಾರೆ ಎಂದು ಹೇಳಿದರೆ ಸಾಕಾಗಿದೆ. ಈ ನೋಟೀಸು ಏಕೆ ಇರಬೇಕೆಂಬುದು ಅವರಿಗೇ ಅರ್ಥವಾಗುತ್ತದೆ.

ಒಂದು ಡಿಸ್ಟ್ರಿಕ್ಟ್‌ನಲ್ಲಿ ಮಾತ್ರ ಏಕೆ ಡಿಸ್ಟ್ರಿಕ್ಟ್ ಸೂಪರ್‌ವೈಜರ್‌ನ್ನು ನೇಮಕಮಾಡಿದ್ದೀರಿ, ಅದರಿಂದ ಸ್ವಲ್ಪ ಆದಾಯ ಹೆಚ್ಚಾಯಿತೇ, ಒಳಫೀಜು ಕಮ್ಮಿ ಆಯಿತೇ ಎಂಬ ಅಭಿಪ್ರಾಯ ಬರುವ ರೀತಿಯಲ್ಲಿ ಅವರು ಕೇಳಿದರು. ಉದ್ದೇಶ ಅವಲ್ಲ. ಆ ಡಿಸ್ಟ್ರಿಕ್ಟಿನ ರಿಜಿಸ್ಟ್ರಾರ್ಸ್ ಆಫೀಸುಗಳಲ್ಲಿ ಡಿಫಿಷಿಯೆಂಟ್ ಸ್ಟ್ಯಾಂಪಿಂಗ್ ಏನಾದರೂ ಆಗಿ ಅದರಿಂದ ಸರ್ಕಾರದವರಿಗೆ ಏನಾದರೂ ನಷ್ಟವಾಗಿದೆಯೇ ಎಂಬುದನ್ನು ಸ್ಕ್ರೂಟಿನೈಸ್ ಮಾಡುವುದಕ್ಕೆ ಒಂದು ಜಿಲ್ಲೆಗೆ ಮಾತ್ರ ಒಬ್ಬ ಡಿಸ್ಟ್ರಿಕ್ಟ್ ಆಫೀಸರನ್ನು ಏರ್ಪಾಡುಮಾಡಿದ್ದೇವೆ. ಅದರಿಂದ ಸರ್ಕಾರದವರಿಗೆ ಲಾಭವೇನೋ ಆಯಿತು. ಸುಮಾರು ನಾಲ್ಕು ಸಾವಿರ ರೂಪಾಯಿ ಖರ್ಚಾಗಿದೆ, 12,690 ರೂಪಾಯಿ ಉತ್ಪತ್ತಿ ಆಗಿದೆ. ಒಳಫೀಜು ಕಮ್ಮಿ ಆಯಿತು ಎಂದು ಅಲ್ಲ. ಡಿಫಿಷಿಯೆಂಟ್ ಸ್ಟ್ಯಾಂಪಿಂಗ್ ಇದ್ದು, ಅದನ್ನು ಸ್ಕ್ರೂಟಿನೈಸ್ ಮಾಡಿ, ಉತ್ತಮಪಡಿಸಿದುದರಿಂದ ಹೆಚ್ಚಿಗೆ ಉತ್ಪತ್ತಿ ಆಯಿತು. ಇತರ ಎಲ್ಲಾ ಕಡೆಯೂ ಕೂಡ ಇದೇ ರೀತಿ ಪರಿಶೀಲನೆಮಾಡಬೇಕೆನ್ನುವ ವಿಷಯ ಸರ್ಕಾರದವರ ಪರ್ಯಾಲೋಚನೆಯಲ್ಲಿದೆ ; ಅದನ್ನು ಪರ್ಯಾಲೋಚಿಸಿ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

Mr. DEPUTY SPEAKER.—The question is :

"That a sum not exceeding Rs. 5,76,000 be granted to the Government to defray the charges which will come in course of payment during the year ending 31st day of March 1957, in respect of 'Registration'."

The motion was adopted.

DEMAND No. 17—SCIENTIFIC DEPARTMENTS.

36. SCIENTIFIC DEPARTMENTS.

Mr. DEPUTY SPEAKER.—Motion moved :

"That a sum not exceeding Rs. 9,83,000 be granted to the Government to defray the charges which will come in course of payment during the year ending 31st day of March 1957, in respect of 'Scientific Departments'."

5-30 P.M.

*ಶ್ರೀ ಬಿ. ಮಾಧವಾಚಾರ್ (ಭದ್ರಾವತಿ).—ಸ್ವಾಮಿ, ವಿಜ್ಞಾನ ವಿಷಯಗಳಿಗೆ ಸಂಬಂಧಪಟ್ಟ ಇಲಾಖೆಗಳ ಡಿಮ್ಯಾಂಡಿಗೆ ನಾನು ನನ್ನ ಬೆಂಬಲವನ್ನು ನೀಡುತ್ತೇನೆ. ಈ ಸಂಬಂಧದಲ್ಲಿ ನಾನು ಒಂದೆರಡು ಜರೂರು ವಿಷಯಗಳನ್ನು ಸರ್ಕಾರದವರ ಗಮನಕ್ಕೆ ತರಬಯಸುತ್ತೇನೆ. ಯಾವುದೇ ದೇಶ ನಿಜವಾಗಿಯೂ ಅಭಿವೃದ್ಧಿಯನ್ನು ಹೊಂದಬೇಕಾದರೆ, ಆ ದೇಶದಲ್ಲಿ ವಿಜ್ಞಾನಕ್ಕೆ ಸಂಬಂಧಪಟ್ಟ ಸಂಶೋಧನೆಗಳಿಗೆ ಸಾಕಷ್ಟು ಪ್ರೋತ್ಸಾಹ ಮತ್ತು ಅವಕಾಶವನ್ನು ಕಲ್ಪಿಸಿಕೊಡುವುದು ಸರ್ಕಾರದವರ ಕರ್ತವ್ಯ. ನಮ್ಮ ದೇಶದಲ್ಲಿ ಹೆಮ್ಮೆಪಟ್ಟುಕೊಳ್ಳುವಷ್ಟು ವಿಜ್ಞಾನ ಸಂಶೋಧನೆಗಳು ನಡೆಯದೇ ಇದ್ದರೂ ಕೂಡ, ಅದರ ಪ್ರಾಮುಖ್ಯತೆಯನ್ನು ಚನ್ನಾಗಿ ಅರಿತಿದ್ದೇವೆ. ಈ ಇಲಾಖೆ ಚೆನ್ನಾಗಿ ಕೆಲಸಮಾಡಿ ನಮ್ಮ ಭೂಸಂಪತ್ತು, ಸಸ್ಯ ಸಂಪತ್ತು ಮತ್ತು ಶಿಲಾ ಸಂಪತ್ತು-ಇವುಗಳನ್ನು ಜನತೆಯ ಕಲ್ಯಾಣಕ್ಕಾಗಿ ಉಪಯೋಗಿಸುವ ವಿಧಾನಗಳನ್ನು ಎಷ್ಟೆಷ್ಟು ಪ್ರಮಾಣದಲ್ಲಿ ಕಂಡುಹಿಡಿಯುತ್ತೇವೆಯೋ ಅಷ್ಟಷ್ಟು ಮಟ್ಟಿಗೆ ದೇಶ ಅಭಿವೃದ್ಧಿಗೆ ಬರುತ್ತದೆ. ಈ ದೃಷ್ಟಿಯಿಂದ ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಬೇಕಾಗಿರುವ ವಿಷಯವೇನೆಂದರೆ, ಈಗ ಚಿಕ್ಕಮಗಳೂರು ಜಿಲ್ಲೆಯ ಮತ್ತು ಹಾಸನ ಜಿಲ್ಲೆಯ ಸಹ್ಯಾದ್ರಿಪರ್ವತದ ಭಾಗಗಳಲ್ಲಿ ಏಲಕ್ಕಿ ಬೆಳೆಗೆ ಕೊಟ್ಟ ಪ್ರೋತ್ಸಾಹದ ದೆಸೆಯಿಂದ ಅಲ್ಲಿಯ ಜನರು ಬೇಕಾದಷ್ಟು ಸಂಪಾದನೆ ಮಾಡುತ್ತಿದ್ದಾರೆ. ಆದರೆ, ಇದೇ ಪರ್ವತದ ಉತ್ತರ ಪ್ರದೇಶವಾದ ಶಿವಮೊಗ್ಗ ಜಿಲ್ಲೆಯ ಭಾಗದಲ್ಲಿ ಇದೇ ರೀತಿ ಏಲಕ್ಕಿಯನ್ನು ಬೆಳೆಯುವ ಯಾವ experiment ಸಹ ನಡೆಯದೆ, ಆ ಪ್ರದೇಶ ಬಹಳ ಹಿಂದೆ ಬಿದ್ದಿದೆ. ಅಲ್ಲಿ ಸಾಕಷ್ಟು ಸಂಶೋಧನೆ ನಡೆಸಿದರೆ ಅಲ್ಲಿಯೂ ಸಾಕಷ್ಟು ಬೆಳೆಯಬಹುದು. ಆದ್ದರಿಂದ ಇಲಾಖೆಯವರು ಈ ಬಗ್ಗೆ ಆಸಕ್ತಿವಹಿಸಿ ಸಂಶೋಧನೆಮಾಡಬೇಕೆಂಬುದು ಒಂದು. ಎರಡನೆಯದಾಗಿ ಹೊನ್ನೆಮರಡು ಮುಂತಾದ ಬೃಹತ್‌ಯೋಜನೆಗಳ ಪರಿಣಾಮವಾಗಿ ಆ ಪರ್ವತದ ಅನೇಕ ಪ್ರದೇಶಗಳು ಮುಳುಗಡೆಗೆ ಒಳಪಡುವುದರಿಂದ ಆ ಪ್ರದೇಶದಲ್ಲಿ ಹೇರಳವಾಗಿ ಖನಿಜಗಳು ಸಿಕ್ಕಬಹುದೋ ಏನೋ. ಏಕೆಂದರೆ ಸಮೀಪದಲ್ಲೇ ಕೆಲವು ಪ್ರದೇಶಗಳಲ್ಲಿ ಮ್ಯಾಂಗನೀಸ್ ಖನಿಜಗಳನ್ನು ತೆಗೆಯುತ್ತಿದ್ದಾರೆ. ಆದ್ದರಿಂದ ಶಾಶ್ವತವಾಗಿ ಮುಳುಗಡೆಗೆ ಬರುವ ಈ ಭೂಪ್ರದೇಶದಲ್ಲಿರತಕ್ಕ ಖನಿಜ ಪದಾರ್ಥಗಳನ್ನು ಈಗಲೇ ಪರಿಶೋಧನೆ ಮಾಡಿ ಉಪಯೋಗಿಸಿಕೊಳ್ಳುವುದು ಸೂಕ್ತ ಸಲಹೆಯಾಗಬಹುದೆಂದು ಭಾವಿಸಿ ಅದನ್ನು ನಾನ ಸರ್ಕಾರದ ಗಮನಕ್ಕೆ ತರುತ್ತಾ ಈ ಡಿಮ್ಯಾಂಡಿಗೆ ನನ್ನ ಬೆಂಬಲ ನೀಡುತ್ತೇನೆ.

*ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಅಧ್ಯಕ್ಷರೇ, ನಾನು ಈ ಡಿಮ್ಯಾಂಡನ್ನು ವಿರೋಧಿಸುತ್ತೇನೆ. ಸರ್ಕಾರದವರು ಈ ಇಲಾಖೆಯಿಂದ ಎಷ್ಟರ ಮಟ್ಟಿನ ಪ್ರತಿಫಲ ಹೊಂದಬೇಕೋ ಅಷ್ಟನ್ನು ಹೊಂದುತ್ತಿಲ್ಲ, ಅಲಕ್ಷ್ಯದಿಂದ ವರ್ತಿಸುತ್ತಿದ್ದಾರೆಂಬುದು ನನ್ನ ಆಪಾದನೆ. ಸ್ವಾಮಿ, ಈ ಸಭೆಯ ಒತ್ತಾಯದ ಮೇಲೆ ಭೀಮಪ್ಪನಾಯಕ್ ಕಮಿಟಿಯೆಂದು ಒಂದು ಕಮಿಟಿಯನ್ನು ಸರ್ಕಾರದವರು ನೇಮಕ ಮಾಡಿದರು. ಎಂದೂ ಎಂದಿನಂತೆ ಸರ್ಕಾರ ಈ ಕಮಿಟಿಯನ್ನು ನೇಮಿಸುವುದರಲ್ಲೇನೋ ಬಹಳ ಮಟ್ಟಿನ ಆಸಕ್ತಿಯನ್ನು ತೋರಿಸಿತು. ಆದರೆ, ರಿಪೋರ್ಟ್ ಬಂದದ್ದರ ಮೇಲೆ ಎಳ್ಳಷ್ಟಾದರೂ ಆಸಕ್ತಿಯನ್ನು ಸರ್ಕಾರ ತೋರಿಸಿತೇ? ಆ ರಿಪೋರ್ಟಿನಲ್ಲಿ ಏನಿದೆಯೆಂಬುದನ್ನೂ ಸಹ ನೋಡಿಲ್ಲ. ಯಾವಾಗ ಕೇಳಿದರೂ ಸರ್ಕಾರದವರು ಪರಿಶೀಲಿಸುತ್ತಿದ್ದಾರೆಂದು ಜವಾಬು ಹೇಳುತ್ತಿದ್ದಾರೆ. ಕೊನೆಗೆ ಆ ರಿಪೋರ್ಟು ಮೂಲೆಗೆ ಬಿದ್ದುಹೋಗುತ್ತದೆ. ಇಂಡಿಯಾ ದೇಶದ ಅನೇಕ ಕಾರ್ಖಾನೆಗಳನ್ನು ನೋಡಿಕೊಂಡು ಬಂದಿರುವವರೂ ಅನೇಕ ಭೂಗರ್ಭ ಸಂಶೋಧನೆಗಳನ್ನು ಮಾಡಿದ ಎಂಜಿನಿಯರುಗಳೂ ಸೇರಿ ಮಾಡಿದ ವರದಿ ಇದು. ಇದರಿಂದ ಎಳ್ಳಷ್ಟೂ ಪ್ರಯೋಜನ ಹೊಂದಿಲ್ಲ. ನಮ್ಮ ಜಿಯಾ

(ಶ್ರೀ ಬಿ. ಹುಚ್ಚೇಗೌಡ)

ಲಜಿ ಇಲಾಖೆಯಲ್ಲಿರುವ ಖನಿಜಾಭಿವೃದ್ಧಿ ಶಾಖೆಗೆ ಹೆಚ್ಚಿಗೆ ದ್ರವ್ಯವನ್ನು ಒದಗಿಸಿ ದೇಶದ ಸಂಪತ್ತನ್ನು ಜಾಸ್ತಿ ಮಾಡಿ ತೆರಿಗೆ, ಕಂದಾಯಗಳನ್ನು ಕಡಮೆ ಮಾಡುವ ಯೋಚನೆಯನ್ನು ಇದುವರೆಗೂ ಸರ್ಕಾರ ಮಾಡಿಲ್ಲ. ಈ ಇಲಾಖೆಯಲ್ಲಿ ಖರ್ಚಿಗೆ ತಕ್ಕಷ್ಟು ಉತ್ಪತ್ತಿ ಬರುತ್ತಿಲ್ಲ. ಅನೇಕ ದೂರುಗಳು ಈ ಇಲಾಖೆಯ ವಿಷಯದಲ್ಲಿ ಬಂದಿವೆ. ಖನಿಜಗಳನ್ನು ತೆಗೆಯಲು ಮುಂದೆ ಬರುವವರಿಗೆ ಸಾಕಷ್ಟು ಅನುಕೂಲ ಮಾಡಿಕೊಡುತ್ತಿಲ್ಲ. ಹೆಚ್ಚಿಗೆ ದುಡ್ಡು ಹಾಕಿದರೂ ಪರವಾಯಿಲ್ಲ, ಅವರಿಗೆ ಖನಿಜಗಳನ್ನು ತೆಗೆಯುವುದಕ್ಕೆ ಬೇಕಾದ ಸಲಕರಣೆ, ಸಹಾಯಗಳನ್ನು ಏಕೆ ಸರ್ಕಾರ ಮಾಡಿಕೊಡುವುದಿಲ್ಲವೋ ಗೊತ್ತಿಲ್ಲ. ಪ್ರಾಸ್ಪೆಕ್ಟಿಂಗ್ ಲೈಸೆನ್ಸಿಗೆ, ಮೈನಿಂಗ್ ಲೈಸೆನ್ಸಿಗೆ ಎಲ್ಲಕ್ಕೂ ಸರ್ಕಾರದವರು ಹಣ ತೆಗೆದುಕೊಳ್ಳುತ್ತಾರೆ. ರಾಯಲ್ಟಿ ಬೇರೆ ಸರ್ಕಾರಕ್ಕೆ ಬರುತ್ತದೆ. ಇಷ್ಟಾದರೂ ಅವರಿಗೆ ಬೇಕಾದ ಅನುಕೂಲಗಳನ್ನು ಒದಗಿಸಿಕೊಡದೆ ತಡಮಾಡಿ ಲೈಸೆನ್ಸೀಗಳಿಗೂ ಲುಕ್ಸಾನಾಗುತ್ತಿದೆ, ಸರ್ಕಾರದವರಿಗೂ ನಷ್ಟವಾಗುತ್ತಿದೆ. ಕಾಗದ ಪತ್ರಗಳಿಗೆ ಜವಾಬು ಬರುವುದೇ ಬಹಳ ನಿಧಾನ. ಮೈನಿಂಗ್ ಲೈಸೆನ್ಸ್ ಕೊಡಬೇಕಾದರೆ ಫಾರೆಸ್ಟ್ ಇಲಾಖೆ ಮತ್ತು ರೆವಿನ್ಯೂ ಇಲಾಖೆಗೆ—ಎರಡಕ್ಕೂ ಕಳುಹಿಸಬೇಕಾಗಿರುವುದರಿಂದ ನಿಧಾನವಾಗುತ್ತದೆ ಎಂದು ಸರ್ಕಾರದವರೇನೋ ಹೇಳುತ್ತಾರೆ. ವಾಸ್ತವವಾಗಿ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಕೈ ಬೆಚ್ಚಗೆ ಮಾಡದೆ ಹೋದರೆ ಹೇಗೆ ಕಾಗದ ಪತ್ರಗಳು ಹೊರಗೆ ಬರುವುದಿಲ್ಲವೋ ಹಾಗೆ ಇಲ್ಲಿಯೂ ಕಾಗದಗಳು ಹೊರಗೆ ಬರುವುದಿಲ್ಲ. ಖನಿಜದ ಮಂತ್ರಿಗಳಿಗೆ ಹೇಳಿದರೆ, ನಿಧಾನವಾದರೂ ಖನಿಜ ಎಲ್ಲಿಗೂ ಹೋಗುವುದಿಲ್ಲ, ಭೂಮಿಯಲ್ಲೇ ಇರುತ್ತದೆ, ನಮ್ಮ ಸಂಪತ್ತು ನಮ್ಮಲ್ಲೇ ಇರುತ್ತದೆ ಎಂದು ಹೇಳುತ್ತಾರೆ. ಪ್ರಗತಿ ವಿರೋಧವಾಗಿ ಮಾತನಾಡುವವರಿಗೇನು ಹೇಳುವುದು ! ನಿಧಾನವಾಗುವುದಕ್ಕೆ ನ್ಯಾಯವಾದ time ಇದ್ದರೇನೋ ಪರವಾಯಿಲ್ಲ. ಎಷ್ಟು ನಿಧಾನವಾಗುತ್ತಿದೆಯೆಂಬುದಕ್ಕೆ ಒಂದು ಉದಾಹರಣೆ ಹೇಳುತ್ತೇನೆ. 1952 ನೆಯ ಇಸವಿಯಲ್ಲಿ ಬರೆದ ಒಂದು ಕಾಗದಕ್ಕೆ ಉತ್ತರವನ್ನು 1956ನೆಯ ಇಸವಿಯಲ್ಲಿ ಕೊಡುತ್ತಾ ಡೈರೆಕ್ಟರವರು ಈ ರೀತಿ ಹೇಳಿದ್ದಾರೆ :

Extract from letter :

"7th February 1956 from the Office of the Director of Geology in Mysore, Bangalore.

With reference to your application dated 28th September 1952 for the grant of a prospecting licence for manganese and manganese dioxide over an area of 90 acres of land, I write to state that a portion of the block is already covered by a prospecting licence No. 1416. . . . ."

ನಾವು ಕೊಟ್ಟಿರುವ applicationನ ಜಮೀನು ಆಗಲೇ ಕವರ್ ಆಗಿದೆ ಎಂದು ಹೇಳಬೇಕಾದರೆ ನಾಲ್ಕು ವರ್ಷ ಆಗಿದೆ. Application 28ನೇ ಸೆಪ್ಟೆಂಬರ್ 1952ರಲ್ಲಿ ಕೊಟ್ಟಿದ್ದಕ್ಕೆ 7ನೇ ಫೆಬ್ರುವರಿ 1956ರಲ್ಲಿ reply ಬಂತು. ಜಮೀನು ಕೇಳಿದರೆ ಲೈಸೆನ್ಸ್ ಕೊಡುವ reply ಬರಬೇಕಾದರೆ ನಾಲ್ಕು ವರ್ಷಗಳಾದುವು. ಅದು reasonable time ಎನ್ನಿಸುತ್ತದೆಯೇ? ನಾಲ್ಕು ವರ್ಷಗಳ ಮೇಲೆ ಆ ಅರ್ಜಿಯನ್ನು refer ಮಾಡುವುದರಲ್ಲಿ ಏನು ಅರ್ಥ? ಇಂಥ ಉದಾಹರಣೆಗಳನ್ನು ನೂರಾರು ಕೊಡಬಲ್ಲೆ. ಈ ಇಲಾಖೆಯಲ್ಲಿ ನಡೆಯುತಕ್ಕದ್ದು ಒಂದೇ ಅಲ್ಲ. ಫಾರೆಸ್ಟ್ ಇಲಾಖೆಯಲ್ಲೂ ಅಷ್ಟೆ. Range Officer, District Forest Officer, Chief Conservator of Forests, ಹೀಗೆ ರೆವಿನ್ಯೂ ಡಿಪಾರ್ಟ್‌ಮೆಂಟಿನಲ್ಲಿ ಹೋದ ಹಾಗೆ ಹೋಗಬೇಕು. ಶೇಕುದಾರರಿಂದ, ಅಮಲ್ದಾರ್, ಸಬ್ ಡಿವಿಷನ್ ಆಫೀಸರ್, ಡೆಪ್ಯುಟಿ ಕಮಿಷನರ್, ರೆವಿನ್ಯೂ ಕಮಿಷನರಿಗೆ ಬಂದ ಕಾಗದ ಸರ್ಕಾರಕ್ಕೆ ಹೋದರೆ ಅಲ್ಲಿ ಎರಡು ವರ್ಷ ಮೂರು ವರ್ಷವಾಗುತ್ತದೆ. ಇಂತಹ ಕಾರಣದ ಮೇಲೆ ನಿಂತಿದೆ ಎಂದು ಏತಕ್ಕೆ ಹೇಳ ಕೂಡದು ? ಏತಕ್ಕೆ ಸತಾಯಿಸುತ್ತೀರಿ ? ಆಮೇಲೆ ಸರ್ಕಾರದವರು ಇಂಥಿಂಥ ಬ್ಲಾಕುಗಳಿವೆ ಎಂದು advertise ಮಾಡಿದ್ದಕ್ಕೆ ಅರ್ಜಿಗಳನ್ನು ಹಾಕಿದರೂ ಅವರಿಗೆ ಇವೊತ್ತಿನವರೆಗೂ ವರ್ಷಗಟ್ಟಲೆ ಕೊಟ್ಟಿಲ್ಲ. ಇದಕ್ಕೆ ಏನು ಅರ್ಥ ? ಇಂಥಾದ್ದು ನಿಲ್ಲಿಸಿಕೊಳ್ಳಬೇಕಾದರೆ ಬಾಕಿಯದನ್ನು ಎಷ್ಟು ಮಟ್ಟಿಗೆ ನಿಧಾನ ಮಾಡುತ್ತಾರೆ ಎಂದು ತಾವೇ ತಿಳಿದುಕೊಳ್ಳಬಹುದು. Border ವ್ಯಾಜ್ಯಗಳು ಎಲ್ಲಿಗೆ ನಿಂತಿವೆಯೋ ಅಲ್ಲಿಗೇ ಇರುತ್ತವೆ. ಸರ್ವೇ ಫೀಸ್ ಹಣ ಕೊಟ್ಟುಬಿಟ್ಟು ವರ್ಷಗಟ್ಟಲೆ ಕೆಲಸ ಬಾಕಿ ಇರುತ್ತದೆ. ಎರಡು 'areaಗಳ ಮಧ್ಯೆ ಒಂದು ಫರ್ಲಾಂಗ್ neutral area ಬಿಟ್ಟಿರುತ್ತಾರೆ. ಇನ್ನೊಂದು ಕಡೆ ಬಿಡುವುದಿಲ್ಲ. ಅದಕ್ಕೆ ಏನು ಕಾರಣ ಎಂಬುದು ಗೊತ್ತಾಗುವುದಿಲ್ಲ. ಇದಕ್ಕೆ ಏನೋ motive ಇರುತ್ತದೆ. Mineral Concession ರೂಲ್ಸ್‌ನ್ನು ಸರಿಯಾಗಿ follow ಮಾಡಿ, ಒಂದು policyಯನ್ನು ಸರಿಯಾಗಿ follow ಮಾಡಲಿ ಎಂದು ನಾನು ಹೇಳುತ್ತಾ ಇರುವುದು. ಕೆಲವು ಅರ್ಜಿಗಳು ಬಂದರೆ ಇವೊತ್ತು, ನಾಳೆ ತೀರ್ಮಾನವಾಗುತ್ತದೆ. ಇನ್ನೊಂದು ಬಂದರೆ ವರ್ಷಗಟ್ಟಲೆ ತೀರ್ಮಾನವಾಗುವುದಿಲ್ಲ. ಭದ್ರಾವತಿ ಕಬ್ಬಿಣ ಕಾರ್ಖಾನೆಗೋಸ್ಕರ ಕೆಲವು areaಗಳನ್ನು reserve ಮಾಡಿಕೊಂಡಿದ್ದಾರೆ. ಅದರಲ್ಲಿ ಇಲಾಖೆಯವರು ಕೆಲವನ್ನು ಹೊರಗಡೆಗೆ ಮಾರುತ್ತಾರೆ. ಎಷ್ಟೋ complaints ಕೇಂದ್ರ ಸರ್ಕಾರಕ್ಕೂ ಹೋಗಿದೆ. ಮುಖ್ಯಮಂತ್ರಿಗಳಿಗೆ ಎಷ್ಟೋ ಜನ ಈ ರೀತಿ ಅನಾನುಕೂಲವಾಗಿದೆ, ಅನ್ಯಾಯ ಮಾಡುತ್ತಿದ್ದೀರಿ ಎಂದು ಅರ್ಜಿ ಕೊಟ್ಟಿದ್ದಾರೆ. ಸರಕಾರ ಹೆಚ್ಚಿಗೆ ಫೀಸ್ ಹಾಕಿಕೊಂಡು ಹೆಚ್ಚಿಗೆ royalty ತೆಗೆದುಕೊಳ್ಳಲಿ. ಕೊಟ್ಟರೆ ಮಾಡುತ್ತಾರೆ, ಇಲ್ಲದಿದ್ದರೆ ಇಲ್ಲ. ಯಾವುದೇ ಅರ್ಜಿಯ ಮೇಲೆ ಇಲ್ಲ ಅಥವಾ ಉಂಟು ಎಂದು ಹೇಳುವುದಿಲ್ಲ. ಇದು ಒಂದು business ; ಇವತ್ತು ಇದ್ದಷ್ಟು ನಾಳೆ ಇರುವುದಿಲ್ಲ. ಹಿಂದೆ ಅನೇಕರು ಟನ್ 1ಕ್ಕೆ ಒಂದು ರೂಪಾಯಿನಂತೆ ಮಾರಾಟ ಮಾಡಿದರೂ, ಬಿಟ್ಟು ಹೋದರು. ಹಾಗಿದೆ ಬಿಸಿನೆಸ್ ಎನ್ನುವುದು. ಆದ್ದರಿಂದ ಸರ್ಕಾರದವರು ಆದಷ್ಟು ಮಟ್ಟಿಗೆ ವ್ಯಾಪಾರತನದಿಂದ ವರ್ತಿಸಬೇಕು. ಇಲ್ಲದಿದ್ದರೆ ಬಹಳ ತೊಂದರೆಯಾಗುತ್ತದೆ. ಸರ್ಕಾರಕ್ಕೂ ಅನಾನುಕೂಲವಾಗುತ್ತದೆ. ಆದಷ್ಟು ಜಾಗ್ರತೆ recordನ್ನು ತೀರ್ಮಾನ ಮಾಡಬೇಕು. ನ್ಯಾಯವಾದ ಕಾರಣವನ್ನು ಕೊಟ್ಟರೆ ಒಪ್ಪುತ್ತಾರೆ. ಒಂದು ಘಂಟೆಯಲ್ಲಿ ತೀರ್ಮಾನ ಮಾಡುವುದನ್ನು ನಾಲ್ಕು ವರ್ಷಗಳಲ್ಲೂ ಮಾಡದೆ ಇರುವ

ಎಷ್ಟೋ ನಿದರ್ಶನಗಳಿವೆ. ನಾನು ಇದನ್ನು ವಿರೋಧಿಸುತ್ತೇನೆ.

Mr. DEPUTY SPEAKER.—I want to know if there are more members to speak. Since we have already fixed the time limit, I just want to close the discussion by 6 O'clock. If the members want to sit for some time more, I have no objection.

Sri H. M. CHANNABASAPPA.—Hon'ble Members have made out certain points which are very important and I feel that sufficient time will have to be given to the Government for giving information with a view to satisfy not only the members of this House but also the country.

*ಶ್ರೀ ಸಿ ಎಚ್. ಲಿಂಗದೇವರು (ಚಿಕ್ಕನಾಯಕನಹಳ್ಳಿ).—ಸ್ವಾಮಿ, ಈ ಸಭೆಯ ಮುಂದೆ ಮಂಡಿಸಿರತಕ್ಕ ಈ ಡಿಮ್ಯಾಂಡ್ ವಿಷಯದಲ್ಲಿ ಒಂದೆರಡು ಮಾತುಗಳನ್ನು ಆಡಬೇಕೆಂದು ಇಷ್ಟಪಡುತ್ತೇನೆ. ಜಿಯೋಲಾಜಿಕಲ್ ಇಲಾಖೆಯು 4-5 ವರ್ಷಗಳ ಹಿಂದೆ ನಮ್ಮ ದೇಶದಲ್ಲಿ ಇತ್ತೋ ಇಲ್ಲವೋ ಗೊತ್ತಿಲ್ಲ. ಸಾಮಾನ್ಯವಾಗಿ ಜನರಿಗೆ ಜಿಯೋಲಾಜಿಕಲ್ ಇಲಾಖೆಯ ಹೆಸರೇ ಗೊತ್ತಿರಲಿಲ್ಲ. ಯುದ್ಧಾ ನಂತರದಲ್ಲಿ ಇದರ ಚಟುವಟಿಕೆಗಳು ಜಾಸ್ತಿಯಾಗಿವೆ. ಇದರಲ್ಲಿ ತುಂಬ ಅನುಕೂಲವಿದೆಯೆಂದು ಸರ್ಕಾರದವರು ಕಣ್ಣು ತೆರೆದು Mineral Development Committee ಮಾಡಿ, ಖನಿಜ ಸಂಪತ್ತು ಏನು ಇದೆಯೋ ಅದರಿಂದ ಹೆಚ್ಚಿಗೆ ಉತ್ಪತ್ತಿ ತೆಗೆದುಕೊಳ್ಳಬೇಕೆಂದು "ಬ್ಯುರೋ" ಸ್ಥಾಪನೆ ಮಾಡಿದರು. ಪ್ರತಿವರ್ಷವೂ ಕೂಡ ಇದರಿಂದ ಬೇಕಾದಷ್ಟು ಉತ್ಪತ್ತಿ ಬರುತ್ತದೆ. ಆದರೆ ಅದನ್ನು ಎಷ್ಟು ಅಭಿವೃದ್ಧಿಪಡಿಸಬೇಕೋ ಅಷ್ಟು ಅಭಿವೃದ್ಧಿಪಡಿಸದೆ ಬಹಳ ಹೀನ ಸ್ಥಿತಿಯಲ್ಲಿದೆ. ನಮ್ಮ ಖನಿಜ ಸಂಪತ್ತು ಎಷ್ಟು ಇದೆಯೋ ಅಷ್ಟನ್ನು ಉಪಯೋಗಿಸಬೇಕು ಎನ್ನುವ ಉದ್ದೇಶದಿಂದ ಶ್ರೀ ಭೀಮಪ್ಪನಾಯಕ್ ಕಮಿಟಿಮಾಡಿ ಅವರಿಂದ ಸರ್ಕಾರಕ್ಕೆ ಒಂದು ವರದಿ ಕೂಡ ಬಂತು. ಒಂದು ವರ್ಷವಾದರೂ ಕೂಡ ಇಲ್ಲಿಯವರೆಗೂ ಆ ವರದಿಯನ್ನು ಕಾರ್ಯಗತ ಮಾಡದೇ ಇದ್ದಾರೆ. ಅದನ್ನು ಮಾಡಿದ ಪಕ್ಷದಲ್ಲಿ ಖೋತಾ ಎಷ್ಟಿದೆ, ಅದರ ಎರಡಾಣೆ ಭಾಗವಾದರೂ ಸರಿದೂಗಿಸಬಹುದು, ಎಂದು ಧಾರಾಳವಾಗಿ ಹೇಳಬಹುದು. ಬೆಳ್ಳಾರದಲ್ಲಿರುವ ಭಂಗಾರದ ಗಣಿಯಲ್ಲಿ 23 ಲಕ್ಷ ರೂಪಾಯಿಗಳನ್ನು invest ಮಾಡಿದ್ದಾರೆ. ಕಾರಣಾಂತರದಿಂದ ಹೆಚ್ಚಾಗಿ ಭಂಗಾರ ದೊರೆಯುತ್ತಿಲ್ಲ ಎಂದು ತಾತ್ಕಾಲಿಕ ವರದಿಯನ್ನು ತರಿಸಿಕೊಂಡು ನಿಲ್ಲಿಸಿದ್ದಾರೆ. ಅವರು ಇನ್ನೂ ಧೈರ್ಯವಾಗಿ ಮುಂದೆ ಹೋಗಿದ್ದ ಪಕ್ಷದಲ್ಲಿ ಭಂಗಾರ ಹೆಚ್ಚಿಗೆ ಸಿಕ್ಕಿ ಅನುಕೂಲವಾಗುತ್ತಿತ್ತೋ ಏನೋ. ಆ ಕ್ಷೇತ್ರದ ಜನರು ಹೇಳುತ್ತಿರುವುದರಿಂದ ನನಗೂ ಆ ರೀತಿ ಅನ್ನಿಸುತ್ತದೆ. Private Companyಗಳು ಕೋಲಾರದಲ್ಲಿ ಭಂಗಾರ ಸಿಕ್ಕುವುದಿಲ್ಲ ಎಂದು ವರದಿ ಮಾಡಿದರು. ಹೋದವರುಷ Mines ನಿಲ್ಲಿಸಬೇಕು ಎಂದು ಕೂಡ ಹೇಳುತ್ತಿದ್ದರು. ಇತ್ತೀಚೆಗೆ ಹೊಸಕಡೆ ಭಂಗಾರದ ಗಣಿ ಸಿಕ್ಕಿ ಅದನ್ನು ಜಾಸ್ತಿ ಮಾಡಬೇಕೆಂದು ವರದಿ ಬಂದಿದೆ. ಆ ರೀತಿ ಇಲ್ಲಿಯೂ ಕೂಡ ಹೆಚ್ಚಿಗೆ ಸಿಕ್ಕಬಹುದು ಎಂಬ ಅಭಿಪ್ರಾಯವಿದೆ. ಅದು ಮುಂದೆ ಪರಿಶೀಲನೆ ಮಾಡಬೇಕಾದ ಅಂಶ. ಅದನ್ನು ಮಾಡುತ್ತಾರೆಂದು ತಿಳಿದುಕೊಂಡಿದ್ದೇನೆ. ಇನ್ನು ಬ್ಯುರೋ ಆಫ್ ಮಿನರಲ್ ಡೆವಲಪ್‌ಮೆಂಟ್‌ನವರು white clay ಶುದ್ಧಿಮಾಡಿ ಹೊರಗಡೆಗೆ ಕಳುಹಿಸುತ್ತಿದ್ದಾರೆ. ಪೋರ್ಸಲೇನ್ ಫ್ಯಾಕ್ಟರಿಗೆ ಬೇಕಾದ ಕಚ್ಚಾ ಮಾಲುಗಳನ್ನು ಹೊರದೇಶಗಳಿಂದ ತರಿಸಿಕೊಂಡು ಹೆಚ್ಚಿಗೆ ಮೊಬಲಗನ್ನು ಖರ್ಚು ಮಾಡುವುದಕ್ಕೆ ಬದಲಾಗಿ ನಮ್ಮ ದೇಶದಲ್ಲಿರುವ ಸಂಪತ್ತನ್ನು ಅಭಿವೃದ್ಧಿಪಡಿಸಿದರೆ ಕೈಗಾರಿಕೆಗೆ ಅನುಕೂಲವಾಗುತ್ತದೆ. ನಮ್ಮ ಇಲಾಖೆಗೂ ಹೆಚ್ಚಿಗೆ ಮೊಬಲಗು ಬರುತ್ತದೆ. ತಿಪಟೂರು ಹತ್ತಿರ chrome ore ಇದೆ. ಇಡೀ ಇಂಡಿಯಾ ದೇಶದಲ್ಲೇ ಶೇಕಡ 50, 60 ಇರುವ chrome ore ಎಲ್ಲಿಯೂ ಸಿಕ್ಕುವುದಿಲ್ಲ ಎಂದು ಹೇಳುತ್ತಾರೆ. ಅಂತಹ ದೊಡ್ಡ ಸಂಪತ್ತನ್ನು ಭೂಗರ್ಭದಿಂದ ತೆಗೆಸಿ, ಹೆಚ್ಚಿಗೆ ಹಣವನ್ನು ಸಂಪಾದನೆ ಮಾಡುವುದಕ್ಕೆ ಒಳ್ಳೆಯ ದಾರಿ. ಅದನ್ನು ಕೂಡ ಶೀಘ್ರವಾಗಿ ಹೆಚ್ಚಿಗೆ ತೆಗೆಸಲು ಪ್ರಯತ್ನ ಮಾಡಬೇಕು ಎಂದು ಹೇಳಿ ಈ ಡಿಮ್ಯಾಂಡಿಗೆ support ಕೊಡುತ್ತೇನೆ.

*ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಸ್ವಾಮಿ, ಸಭೆಯ ಮುಂದೆ ಮಂಡಿಸಿರತಕ್ಕ ಈ ಡಿಮ್ಯಾಂಡನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತಾ ಕೆಲವು ವಿಷಯಗಳನ್ನು ಪ್ರಸ್ತಾಪಿಸಬೇಕೆಂದಿದ್ದೇನೆ. ಶ್ರೀಮಾನ್ ಹುಚ್ಚೇಗೌಡರು ಮಾತನಾಡುತ್ತಾ ಈ ಇಲಾಖೆಯ ವಿಷಯದಲ್ಲಿ ಸರ್ಕಾರ ಏನೂ ನಿಗಾ ತೆಗೆದುಕೊಂಡಿಲ್ಲ ಮತ್ತು ಇದರಿಂದ ಎಷ್ಟು ನಿರೀಕ್ಷಿಸಬಹುದಾಗಿತ್ತೋ ಅಷ್ಟು ಆದಾಯವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನಪಟ್ಟಿಲ್ಲ ಎಂದು ಹೇಳಿದರು. ಅಲ್ಲದೆ ಭೀಮಪ್ಪನಾಯಕ್ ಸಮಿತಿಯ ಶಿಫಾರಸ್ಸನ್ನು ಸರ್ಕಾರ ಜಾರಿಗೆ ತಂದಿಲ್ಲ ಆದುದರಿಂದ ಇದನ್ನು ವಿರೋಧಿಸುತ್ತೇನೆಂದು ಹೇಳಿದರು. ಅವರು ಬಡ್ಜೆಟ್ಟನ್ನು ಸರಿಯಾಗಿ ನೋಡಲಿಲ್ಲವೆಂದು ಕಾಣುತ್ತದೆ. ಇದುವರೆಗೂ ಕೂಡ ಸೈಂಟಿಫಿಕ್ ಡಿಪಾರ್ಟ್‌ಮೆಂಟುಗಳಿಗೆ ಅಭಿವೃದ್ಧಿ ಯೋಜನೆಗಳಿಗೆ 5,50.000 ರೂಪಾಯಿ ಒದಗಿಸುತ್ತಿದ್ದೆವು; ಈ ಸಾರಿ 5,50,000 ರೂಪಾಯಿ ಒದಗಿಸಿದ್ದೇವೆ. ನಾನು ನೋಡಿದುದರಲ್ಲಿ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸಮೂದಿಸಿರುವ ಚಟುವಟಿಕೆಗಳನ್ನು ಹೆಚ್ಚಿಸಬೇಕೆಂದು ಈ ಇಲಾಖೆಗೆ ಈ ರೀತಿಯಲ್ಲಿ ಹೆಚ್ಚು ಹಣವನ್ನೊದಗಿಸಿರುವುದು. ಇದು ನಿಜವಾಗಿಯೂ ಸಂತೋಷದ ವಿಚಾರ. ಈ ಇಲಾಖೆ ಬೆಳೆಯುವುದಕ್ಕೆ ಇದು ಆಶಾದಾಯಕವಾಗಿದೆ. ಅಭಿವೃದ್ಧಿ ಯೋಜನೆಗಳನ್ನು ಕೂಡ ಭೀಮಪ್ಪನಾಯಕರ ಸಮಿತಿಯ ಶಿಫಾರಸ್ಸುಗಳ ಆಧಾರದ ಮೇಲೆ ತೆಗೆದುಕೊಂಡು ಸರ್ಕಾರದವರು ಕೆಲವು ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ. ಇದರಲ್ಲಿ ನಮ್ಮ ದೇಶಾದ್ಯಂತ intensive geological and mineral survey ಮಾಡಿ ಎಲ್ಲೆಲ್ಲಿ ಖನಿಜಗಳು ಸಿಕ್ಕುತ್ತವೆ, ಲಾಭದಾಯಕವಾದವು ಎಲ್ಲೆಲ್ಲಿ ಸಿಕ್ಕುತ್ತವೆ ಎಂಬುದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಬೇಕೆಂದು ಶಿಫಾರಸು ಮಾಡಿದ್ದಾರೆ. Exploration‌ಗೆ 35,000 ರೂಪಾಯಿ ಒದಗಿಸಿದ್ದಾರೆ. ಶ್ರೀ ಲಿಂಗದೇವರು ಹೇಳಿದ ಹಾಗೆ ಕ್ರೋಮ್ ಡಿಪಾಜಿಟ್ಸ್ ಬಹಳ ಪ್ರಾಮುಖ್ಯತೆಯನ್ನು ಹೊಂದಿದೆ, ಇದನ್ನು ನಮ್ಮ ಸರ್ಕಾರ ಅಭಿವೃದ್ಧಿ ಮಾಡಬೇಕೆಂದು ಶಿಫಾರಸು ಮಾಡಿದ್ದಾರೆ. ಇದಕ್ಕೂ ಹಣವನ್ನೊದಗಿಸಿದ್ದಾರೆ. ಮ್ಯಾಂಗನೀಸ್ ಗಣಿಗಳನ್ನು exploit ಮಾಡುವುದಕ್ಕೆ ಮೈನಿಂಗ್ ಕೆಲಸ ಮಾಡಲು ಲೈಸೆನ್ಸ್

(ಶ್ರೀ ಡಿ. ದೇವರಾಜ ಅರಸ್)

ಪಡೆದಿರುವವರಿದ್ದಾರೆ. ಇವರು ತಾವು ಕೆಲಸ ಮಾಡಿಸುವ ಕಾಲದಲ್ಲಿ rich ores ಮಾತ್ರ ತೆಗೆದು ಮಾರಾಟ ಮಾಡಿಕೊಂಡು, ಎಲ್ಲಿ low percentage ore ಇರುತ್ತದೆಯೋ ಅದನ್ನು ಬಿಸಾಡಿ ಹೋಗುತ್ತಾರೆ. ಇದರಿಂದ ದೇಶಕ್ಕೆ ನಷ್ಟ. ಇದಕ್ಕೆ ಬೆನಿಫಿಸಿಯೇಷನ್ ಪ್ಲಾಂಟ್ ಎಂಬ ಒಂದು ಯಂತ್ರವನ್ನು ಸರ್ಕಾರದವರು ಹಾಕಿ ಅದರ ಪ್ರಕಾರ low percentage ore ಎಲ್ಲಿದೆಯೋ ಅದನ್ನು ಕೂಡ work ಮಾಡಿಸಬೇಕು. Beneficiation plant ಹಾಕಬೇಕೆಂದು ಏರ್ಪಾಡು ಮಾಡಿದೆ ಎಂದು ಸರ್ಕಾರದಿಂದ ಉತ್ತರ ಬಂದಿದೆ. ಹೀಗೆ ಕೆಲವು ಶಿಫಾರಸುಗಳನ್ನು ವರದಿಯ ಆಧಾರದ ಮೇಲೆ ಸರ್ಕಾರದವರು ಕಾರ್ಯಗತ ಮಾಡಲು ಕಾರ್ಯಕ್ರಮ ಕೈಗೊಂಡಿರುವುದು ಈ ಬಡ್ಜೆಟ್ಟನ್ನು ನೋಡಿದರೆ ವ್ಯಕ್ತವಾಗುತ್ತದೆ. ನಮ್ಮ ದೇಶದಲ್ಲಿ ಅತಿ ಮುಖ್ಯವಾದ ಕೆಲವು ಖನಿಜಗಳಿವೆ. 20ನೆಯ ಶತಮಾನದಲ್ಲಿ, ನಮ್ಮ ಇಂಡಿಯಾ ದೇಶದ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕೈಗಾರಿಕಾಭಿವೃದ್ಧಿ ಮಾಡಬೇಕೆಂಬ ಯಾವ ನೀತಿ ಇದೆಯೋ ಅದಕ್ಕನುಸಾರವಾಗಿ, ನಮ್ಮ ದೇಶದಲ್ಲಿರತಕ್ಕ ಈ ಖನಿಜ ಸಂಪತನ್ನು ಅಭಿವೃದ್ಧಿ ಮಾಡಬೇಕೆಂದು ಈ ಸಮಿತಿಯ ವರದಿಯಲ್ಲಿ ಶಿಫಾರಸು ಮಾಡಿದ್ದಾರೆ. ಈ ಸಲಹೆಗನುಗುಣವಾಗಿ ನಮ್ಮ ದೇಶದ ಖನಿಜ ಸಂಪತ್ತಿನಿಂದ ಸರ್ಕಾರದ ಉತ್ಪತ್ತಿಯನ್ನು ಹೆಚ್ಚಿಸಬೇಕಾದರೆ, ನಾವು ಇನ್ನು ಮುಂದಾದರೂ ಖಾಸಗಿ ಜನರಿಗೆ ಲೈಸೆನ್ಸ್ ಕೊಡುವುವನ್ನು ಕಡಮೆ ಮಾಡಬೇಕು, ಕಾಲಕ್ರಮೇಣ ಇದನ್ನು ಸಂಪೂರ್ಣವಾಗಿ ತಪ್ಪಿಸಬೇಕೆಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡುವುದಕ್ಕೆ ನಿಂತಿದ್ದೇನೆ. ಇದುವರೆಗೆ ನಾವು ಪತ್ರಿಕೆಗಳಲ್ಲಿ ಓದುತ್ತಿದ್ದೇವೆ. ನಮ್ಮ ದೇಶದಲ್ಲಿ ಕೆಲವು ಜನ ಗಣಿ ಕೆಲಸ ವಹಿಸಿಕೊಂಡಿರುವ ಗಣಿ ಮಾಲೀಕರು ಅನೇಕ ತಪ್ಪುಗಳನ್ನು ಮಾಡುತ್ತಿದ್ದಾರೆ. ತಾವು ಲೈಸೆನ್ಸ್‌ಗಳನ್ನು ತೆಗೆದುಕೊಂಡು ದುರುಪಯೋಗ ಮಾಡುತ್ತಿದ್ದಾರೆ. ಲೈಸೆನ್ಸುಗಳನ್ನು ಇತರರಿಗೆ ಮಾರಾಟ ಮಾಡುತ್ತಿದಾರೆ. ಕೆಲವರ ಜೀವನದ ಕಸಬೇನೆಂದರೆ, ಇಲಾಖೆಯಿಂದ 20 ರಿಂದ 100ರ ವರೆಗೆ ತಮ್ಮ ಹೆಸರಿನಲ್ಲಿ ಲೈಸೆನ್ಸ್‌ಗಳನ್ನು ತೆಗೆದಿಟ್ಟುಕೊಂಡು, ಕೆಲಸ ಮಾಡತಕ್ಕ ಬೇರೆ ಕಂಪನಿಗಳು ಅಥವಾ ವ್ಯಕ್ತಿಗಳಿಗೆ ಮಾರಾಟಮಾಡಿ ಲಾಭ ಸಂಪಾದನೆಮಾಡಿ ಜೀವನ ಮಾಡುವುದಾಗಿದೆ.

ಶ್ರೀ ಹುಚ್ಚೇಗೌಡರು ಹೇಳಿದುದನ್ನು ಕೇಳಿ ನನಗೆ ಆಶ್ಚರ್ಯವಾಗುತ್ತದೆ. ಸರ್ಕಾರದವರು ಏನೋ ಒಂದು ಉದ್ದೇಶವನ್ನಿಟ್ಟುಕೊಂಡು ಲೈಸೆನ್ಸುಗಳನ್ನು ಕಾಲಕ್ಕೆ ಸರಿಯಾಗಿ ಕೊಡುತ್ತಿಲ್ಲ, ತೊಂದರೆ ಕೊಡುತ್ತಿದ್ದಾರೆಂದು ಆಪಾದನೆ ಮಾಡಿದರು.

ಶ್ರೀ ಬಿ. ಹುಚ್ಚೇಗೌಡ.—ಸರ್ಕಾರವೇ ಮಾಡಲ; ಆದರೆ ಲೈಸೆನ್ಸ್ ಕೊಡುವುದನ್ನೇಕೆ ನಿಧಾನ ಮಾಡಬೇಕು ?

ಶ್ರೀ ಡಿ. ದೇವರಾಜ ಅರಸ್.—ಇದರಲ್ಲಿ ನೇರವಾಗಿ ಕಾನೂನನ್ನನುಸರಿಸಿ ಕೆಲಸ ಮಾಡತಕ್ಕ ಜನರಿಗೆ ಯಾರಿಗೂ ತೊಂದರೆಯಾಗಿಲ್ಲ, ಯಾರು ಮೋಸ ಮಾಡುತ್ತಿದ್ದಾರೋ ಅವರಿಗೆ ತೊಂದರೆಯಾಗಿರಬಹುದು. ಲೈಸೆನ್ಸ್ ತೆಗೆದುಕೊಂಡ ಮೇಲೆ ಆರು ತಿಂಗಳೊಳಗೆ mining lease ಸರ್ಕಾರಕ್ಕೆ ಬರೆದು ಕೊಡಬೇಕೆಂದು ಕಾನೂನಿದೆ. ಇದನ್ನು ಬರೆದು ಕೊಡದೆ ವರ್ಷಗಟ್ಟಲೆ ಅವರು ಗಣಿ ಕೆಲಸ ನಡೆಸುತ್ತಿದ್ದಾರೆಂದು ನಮ್ಮ ಗಮನಕ್ಕೆ ಬಂದಿದೆ.

ಶ್ರೀ ಬಿ. ಹುಚ್ಚೇಗೌಡ.—ಅಂಥಾದ್ದನ್ನು ವಜಾ ಮಾಡಿ.

ಶ್ರೀ ಡಿ. ದೇವರಾಜ ಅರಸ್.—ಮೈನಿಂಗ್ ಲೈಸೆನ್ಸ್ ಕೊಡುವ ಸಂಬಂಧವಾಗಿ ಕೆಲವು ನಿಬಂಧನೆಗಳಿವೆ. ಅವುಗಳ ಪ್ರಕಾರ ಇಂಥಿಂಥ ಖನಿಜವನ್ನು ಇಷ್ಟು ಪ್ರಮಾಣದಲ್ಲಿ ಲೈಸೆನ್ಸ್ ತೆಗೆದುಕೊಂಡಿರುವ ವ್ಯಕ್ತಿ ಹೊರಗೆ ಸಾಗಿಸಬಹುದೆಂದು ವಿಧಾಯಕವಾಗಿದೆ. ಒಂದೆರಡು ಟನ್‌ಗಳಷ್ಟು ಕಳುಹಿಸಬಹುದು, 20-30 ಟನ್‌ಗಳ ಮೇಲೆ ಹೊರಗೆ ತೆಗೆದುಕೊಂಡು ಹೋಗಿ ಮಾರಾಟ ಮಾಡಬಾರದೆಂದಿದ್ದರೂ ಈಗ ನಮಗೆ ತಿಳಿದು ಬಂದಿರುವಹಾಗೆ ಹತ್ತು ಇಪ್ಪತ್ತು ಸಾವಿರ ಟನ್‌ಗಳಷ್ಟನ್ನು ಬರಿಯ ಪ್ರಾಸ್ಪೆಕ್ಟಿಂಗ್ ಲೈಸೆನ್ಸಿನ ಮೇಲೆ ಹೊರಗೆ ಸಾಗಿಸಿರುವುದು, ಸಾಗಿಸಿಕೊಂಡು ಹೋಗುತ್ತಿರುವುದು ನಮಗೆ ಕಂಡುಬಂದಿದೆ.

ಶ್ರೀ ಬಿ. ಹುಚ್ಚೇಗೌಡ.—ಪರ್ಮಿಟ್ ಇಲ್ಲದೆ ಸಾಗಿಸಿದ್ದಾರೆಂದು ಕಂಡು ಬಂದಿದೆಯೆ ?

ಶ್ರೀ ಡಿ. ದೇವರಾಜ ಅರಸ್.—ಹೌದು.

ಶ್ರೀ ಬಿ. ಹುಚ್ಚೇಗೌಡ.—ಇದು ನಿಮ್ಮ ಸರ್ಕಾರದ ದಕ್ಷತೆಯನ್ನು ತೋರಿಸುತ್ತದೆ.

ಶ್ರೀ ಡಿ. ದೇವರಾಜ ಅರಸ್.—ತಾವು ಮಂತ್ರಿಗಳಾದಾಗ ಏನು ಮಾಡುತ್ತೀರೆಂಬುದನ್ನು ನೋಡೋಣ !

ಹೀಗೆ ಲೈಸೆನ್ಸ್ ಪಡೆದಿರತಕ್ಕ ಕೆಲವು ಜನರು ಈ ಒಂದು ಕಸಬನ್ನು ಇಟ್ಟುಕೊಂಡು, ಇದನ್ನು monopoly ಮಾಡಿಕೊಂಡು, ಒಬ್ಬೊಬ್ಬನೇ ಬೇಕಾದಷ್ಟು ಲೈಸೆನ್ಸ್ ಪಡೆದು ಸಾವಿರಾರು ಟನ್‌ಗಳನ್ನು ಹೊರಗೆ ಸಾಗಿಸುವುದು, ಅಥವಾ ತಮ್ಮ ಊರಿನಲ್ಲಿ ಬೇರೆಯವರಿಗೆ ಮಾರುವುದು ಹೀಗೆ ಮಾಡುತ್ತಿರುವುದು ಕಂಡು ಬಂದಿದೆ.

6 P.M.

ನಾನು ಈ ಸಂದರ್ಭದಲ್ಲಿ ಸರ್ಕಾರದವರಿಗೆ ಪ್ರಶೆ ಮಾಡಬೇಕಾದ್ದೊಂದಿದೆ. ಏನೆಂದರೆ ಇಂಥ ಜನರೂ ಇದ್ದಾರೆಯೇ ? ಇಂಥವರು ಸಿಕ್ಕಿಬಿದ್ದಿದ್ದಾಗ ಸರ್ಕಾರದವರು ತೀವ್ರವಾದ ಕಾರ್ಯಕ್ರಮ ಯಾತಕ್ಕೆ ತೆಗೆದುಕೊಂಡಿಲ್ಲ ! ಹಾಗೇನಾದರೂ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಪಡುತ್ತಿದ್ದಾರೆಯೇ ? ಇದನ್ನು ನಾವು ಅವರಿಂದ ಕೇಳಬೇಕಾಗಿದೆ. ಇದು ಹೊರತು ಅವರನ್ನು ಹಾಗೆಯೇ ಬಿಟ್ಟುಬಿಡಿ, ಅವರಿಗೆ ಏನಾದರೂ ಆಗಲಿ ಲೈಸೆನ್ಸ್ ಕೊಟ್ಟುಬಿಡಿ, ಕಾನೂನು ಪ್ರಕಾರ ನಡೆದಿರಲಿ, ಬಿಟ್ಟಿರಲಿ ಬೇಕಾದಹಾಗೆ ಲೈಸೆನ್ಸ್ ಕೊಡಿ ಎಂದು ಶಿಫಾರಸುಮಾಡುವುದಕ್ಕೆ ನಾನು ನಿಂತಿಲ್ಲ. ಸರ್ಕಾರದವರು ಕಠಿಣವಾಗಿ ವರ್ತಿಸಬೇಕು, ಯಾರ ಪ್ರಭಾವಕ್ಕೂ ಒಳಗಾಗಬಾರದು, ಎಷ್ಟೇ ದೊಡ್ಡ ಮನುಷ್ಯನಾಗಿರಲಿ ಕಾನೂನನ್ನನುಸರಿಸಿ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಆ ರೀತಿ ಮಾಡಿ ಕಾನೂನು ನಿಬಂಧನೆಗಳಿಗೆ ಒಳಪಡಿಸಬೇಕು ಮತ್ತು ಶಿಕ್ಷೆಗೆ ಅರ್ಹರಾದವರಿಗೆ ಶಿಕ್ಷೆ ವಿಧಿಸಬೇಕು ಎಂದು ಈ ಸಂದರ್ಭದಲ್ಲಿ ಒತ್ತಾಯಪೂರ್ವಕವಾಗಿ ಹೇಳುತ್ತಿದ್ದೇನೆ.

ಇನ್ನೊಂದು ವಿಚಾರವೇನೆಂದರೆ, ನಾನು ಮೊದಲೇ ತಿಳಿಸಿದಹಾಗೆ ಇಂಡಿಯಾ ಸರ್ಕಾರದ ಕಾನೂನಿನ ವ್ಯಾಪ್ತಿಗೂ ಕೂಡ ನಮ್ಮ mines, minerals, ಮಾಡುವುದು ಒಳಪಟ್ಟಿದೆ ಎಂದು ತಿಳಿದುಕೊಂಡಿದ್ದೇನೆ. ನಮ್ಮ ಸರ್ಕಾರದವರು ತಾವೇ ನೇರವಾಗಿ ಈ minerals ತೆಗೆಯುವುದನ್ನು ಪ್ರಾರಂಭ ಮಾಡಬೇಕು ಎಂದು ಹೇಳುತ್ತೇನೆ. ಸರ್ಕಾರದವರೇ ಸ್ವಂತಕ್ಕೆ ಇಟ್ಟುಕೊಂಡು ಯಂತ್ರೋಪಕರಣಗಳನ್ನು ಹಾಕಿ ಈ

mines work out ಮಾಡುವುದಕ್ಕೆ ಸಾಧ ವಾಗುತ್ತದೆ ಎಂದು ತಿಳಿದುಕೊಂಡಿದ್ದೇನೆ. ಆ ಮೇಲೆ ನಮ್ಮ ಸರ್ಕಾರದವರೇ ಈ ಕೆಲಸವನ್ನು ಮಾಡಬೇಕಾದರೆ ಇಂಡಿಯಾ ಸರ್ಕಾರದವರ ಬೆಂಬಲ, ಮತ್ತು ಅಭಿಪ್ರಾಯವಾಗಲಿ ಬೇಕಾದ ಪಕ್ಷದಲ್ಲಿ, ನಾನು ಸಲಹೆ ಮಾಡುವುದೇನೆಂದರೆ, ಇನ್ನುಮೇಲೆ ನಾವು socialistic pattern of society build ಮಾಡಬೇಕು ಎಂಬ ಧ್ಯೇಯವನ್ನು ಇಟ್ಟುಕೊಂಡಿರುವುದರಿಂದ ಅದಕ್ಕನುಸಾರವಾಗಿ ಕೆಲಸ ಕಾರ್ಯಗಳನ್ನು ನಡೆಸಬೇಕಾದರೆ ನಮ್ಮ ದೇಶದಲ್ಲಿ ಈಗ ವರ್ಷೇ ವರ್ಷೇ ಉಂಟಾಗತಕ್ಕ ಈ ಬಡ್ಜೆಟ್ಟಿನ ಖೋತಾ ಏನಿದೆ, ಆಯ ವ್ಯಯದಲ್ಲಿ ಹಣ ಕಮಿಯಾಗುತ್ತ ಇರುವುದು ಇದನ್ನು ಭರ್ತಿಮಾಡುವುದಕ್ಕೆ ನಮ್ಮ ಅಭಿವೃದ್ಧಿ ಯೋಜನೆಗಳು ಮತ್ತು ಎರಡನೆ ಪಾಂಚವಾರ್ಷಿಕ ಯೋಜನೆ, ಇವಕ್ಕೆಲ್ಲ ಹಣ ಬೇಕಾಗಿರುವ ಸಂದರ್ಭದಲ್ಲಿ ಇದು ಒಂದು ಹೊಸ source of income ಎಂದು ಸರ್ಕಾರದವರು ತಮ್ಮ ಕೈಗೆ ತೆಗೆದುಕೊಂಡು, ತಾವೇ ಈ minerals work out ಮಾಡುವುದಕ್ಕೆ ಮುಂದೆ ಪ್ರಯತ್ನ ಮಾಡಬೇಕು. ಹಾಗಿಲ್ಲದೆ ಯಾವುದೋ ಕಾಲದಲ್ಲಿ ಬ್ರಿಟಿಷರ ಆಳ್ವಿಕೆಯಲ್ಲಿ minerals ಮತ್ತು mineral deposits ಸಂಬಂಧದಲ್ಲಿ ಸರ್ಕಾರದವರು ತಾವೇ ನೇರವಾಗಿ ಆ ಕಾರ್ಯ ಮಾಡಲು ಎಷ್ಟು ಗಮನ ಕೊಡಬೇಕಾಗಿತ್ತೋ ಅಷ್ಟು ಕೊಟ್ಟಿರಲಿಲ್ಲ ಮತ್ತು ನಮ್ಮ ದೇಶ ಅವರ ಆಳ್ವಿಕೆಯಲ್ಲಿ ಇದ್ದಾಗ ಅವರಿಗೆ ಇಲ್ಲಿ ಆಸ್ತಿ ಕಟ್ಟಬೇಕೆಂದು ಇರಲಿಲ್ಲ. Private individuals ಇದರ ಉಪಯೋಗವನ್ನು ಹೊಂದುತ್ತಿದ್ದರು. ಜೊತೆಗೆ 50 ವರ್ಷಗಳ ಹಿಂದೆಯೋ, 25 ವರ್ಷಗಳ ಹಿಂದೆಯೋ ನಡೆದ ಸಂಗತಿ ಇರಬಹುದು. ನಮ್ಮ ಶ್ರೀಪರ್ವ ಲಿಂಗದೇವರು ಈಗ chromiteಗೆ ಯಾವ ಪ್ರಾಮುಖ್ಯತೆ ಬಂದಿದೆ ಎಂದು ಹೇಳಿದರು. ಅನೇಕ mineralsನಲ್ಲಿ scientific researches ಜಾಸ್ತಿಯಾಗಿ ನಮ್ಮ ವಿಜ್ಞಾನಶಾಸ್ತ್ರ ಮುಂದುವರಿದು ಹೊಸ ಹೊಸ ಸಂಶೋಧನೆಗಳನ್ನು ಮಾಡುತ್ತಿರುವ ಕಾಲದಲ್ಲಿ ಅದರಿಂದ ದೊರಕುವ ಅನುಕೂಲಗಳನ್ನು ಉಪಯೋಗಿಸಿಕೊಳ್ಳದೆ ಈಗಲೂ ಕೂಡ ಹಳೆಯ ಕಂದಾಚಾರವನ್ನೇ ಅನುಸರಿಸಿ, private individualsಗೆ ಲೈಸೆನ್ಸ್ ಕೊಟ್ಟು ಈ ಕೈಗಾರಿಕೆಯನ್ನು ಅವರಿಗೇ ಬಿಟ್ಟುಕೊಂಡು ಬರತಕ್ಕದ್ದು ತೀರ ಸಾಧುವಾದ ಮಾರ್ಗವಲ್ಲ ಮತ್ತು ನಮ್ಮ ದೇಶದ ಆದಾಯವನ್ನು ಹೆಚ್ಚಿಸುವುದಕ್ಕೆ ಅನುಗುಣವಾದ ಮಾರ್ಗವಲ್ಲ. ಇದನ್ನು ಸರ್ಕಾರದವರು ತೀವ್ರವಾಗಿ ಪರ್ಯಾಲೋಚನೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಸಲಹೆ ಮಾಡಿ ಈ ಡಿಮ್ಯಾಂಡನ್ನು ಅನುಮೋದಿಸುತ್ತೇನೆ.

*ಶ್ರೀ ಜಿ. ಶಿವಪ್ಪ (ಹೊಳಲ್ಕೆರೆ).—ಸ್ವಾಮಿ, ಈ ಡಿಮ್ಯಾಂಡನ್ನು ಸಮರ್ಥನೆ ಮಾಡುತ್ತ, ಶ್ರೀಯುತ ದೇವರಾಜ ಅರಸ್‌ರವರು ಏನೇನು ಅಂಶಗಳನ್ನು ಹೇಳಿದರೋ ಅವುಗಳನ್ನು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ಏಕೆಂದರೆ ನನಗೂ ಸಹ ಹೆಚ್ಚಿಗೆ mining ವಿಚಾರದಲ್ಲಿ ನಿಗಾ ಇರಲಿಲ್ಲ. ಇತ್ತೀಚೆಗೆ ಒಂದೆರಡು ಸಂದರ್ಭಗಳಲ್ಲಿ ಮಂತ್ರಿಗಳ ಜೊತೆಯಲ್ಲಿ ಪ್ರವಾಸ ಮಾಡಿದ ಕಾಲದಲ್ಲಿ ಇದರಲ್ಲಿ ಬಹಳ ಅಕ್ರಮಗಳು ಅದಗಿವೆ ಎಂದು ನನಗೂ ಗೊತ್ತಾಯಿತು. ಅವರು ಎಷ್ಟು ಅಕ್ರಮಗಳನ್ನು ಮಾಡಿದ್ದಾರೆಂದರೆ ಇಷ್ಟೇ ಎಂದು ಹೇಳಲು ಸಾಧ್ಯವಿಲ್ಲ. Lease ತೆಗೆದುಕೊಂಡಿರತಕ್ಕವರಲ್ಲಿ ನನಗೆ ಗೊತ್ತಿರತಕ್ಕ ವಿಚಾರ ಮಾತ್ರ ಹೇಳುತ್ತೇನೆ. ಹೊರಗಡೆ ವಿಚಾರ ನನಗೆ ಗೊತ್ತಿಲ್ಲ. ನಮ್ಮ ಊರಿನ ಪಕ್ಕದಲ್ಲಿ ಅನೇಕ mines ಇವೆ. ಅಲ್ಲಿ ನಡೆದಿರುವ ಅಕ್ರಮಗಳನ್ನು ಸ್ವಲ್ಪ ಮಟ್ಟಿಗೆ ಹೇಳುತ್ತೇನೆ. ಆದರೆ ವ್ಯಕ್ತಿಗಳು ಯಾರು ಎಂಬುದನ್ನು ಹೇಳುವುದಿಲ್ಲ. ಒಬ್ಬ ಮನುಷ್ಯನಿಗೆ ಎರಡು ಲೀಸ್‌ಗಳು ಆಗಿವೆ. Prospective Lease (P.L.) ಮತ್ತು Mining Lease (M.L.). M.L. ಕೊಟ್ಟಿರುವ ಸ್ಥಳಕ್ಕೆ ಮುಕ್ಕಾಲು ಮೈಲಿ ಫಾಸಲೆಯಲ್ಲಿ P.L. ಕೊಟ್ಟಿದ್ದಾರೆ. ರೂಲ್ಸು ಪ್ರಕಾರ ಅವರು ತೆಗೆಯತಕ್ಕದ್ದು 1,000, 2,000 ಟನ್ ಎಂದು ಲೆಕ್ಕ ಕೊಡಬೇಕು. ಆದರೆ ಅವರು ಕಡಿಮೆ ಲೆಕ್ಕ ಕೊಟ್ಟು P.L.ನಲ್ಲಿ ತೆಗೆದಿರುವುದನ್ನು M.L.ನಲ್ಲಿ ಲೆಕ್ಕ ಕೊಟ್ಟಿದ್ದಾರೆ. ಅವರನ್ನು ಈ ಸಂಬಂಧದಲ್ಲಿ ವಿಚಾರಿಸಲಾಗಿ ಹೆಚ್ಚಾಗಿ ಮಳೆ ಬಂದುದರ ದೆಸೆಯಿಂದ ಎಲ್ಲಾ ಕೊಚ್ಚಿಕೊಂಡು ಬಂತು ಎಂದು ಮಂತ್ರಿಗಳ ಎದುರಿಗೆ ಹೇಳುತ್ತಾರೆ. ಆಮೇಲೆ ಅಳತೆಯಲ್ಲಿ ಲೆಕ್ಕಾಚಾರ ಒಂದೂ ಇಲ್ಲ. ಮಧ್ಯೆ ಬೌಂಡರಿ ಬಿಡಬೇಕೆಂದು ಅಗ್ರಿಮೆಂಟ್ ಮಾಡುವುದಿಲ್ಲ. ತುಂಬಿದ್ದು, ಹೇರಿದ್ದು, ಕಳುಹಿಸಿದ್ದು ಹೀಗೆ ಅನೇಕ ಅಕ್ರಮವಿದೆ. ಖಾಸಗಿ ಜನರು ಸುತ್ತ ಮುತ್ತಲಿನವರಾದರೆ ತೆಗೆಯಕೂಡದೆಂದು ಕಾನೂನಿದೆ. ಒಬ್ಬ ಮನುಷ್ಯನಿಗೆ 20 ರಿಂದ 60 ರೂಪಾಯಿಗಳ ವರೆಗೆ ಬರುತ್ತದೆ. ಗಾಂಧಿ ನಗರದಲ್ಲೋ, ಬೊಂಬಾಯಿನಲ್ಲೋ ಅಥವಾ ಕಲ್ಕತ್ತದಲ್ಲೋ ಇದ್ದುಕೊಂಡು ಇಲ್ಲಿ ಕೆಲಸ ನಡೆಸುತ್ತಾರೆ, ಸೇಟುಗಳ ಹಾಗೆ ಕೆಲಸ ಮಾಡುತ್ತಾರೆ. ನಮ್ಮವರಿಗೆ ಅವಕಾಶವಿರುವುದಿಲ್ಲ. ಸೇಲ್ಸ್ ರೂಲ್ಸ್ ಪ್ರಕಾರ ಸರ್ಕಾರದ ಅನುಮತಿ ಪಡೆದು ಮಾಡಬೇಕೆಂದಿದೆ. ಐವತ್ತು ಸಾವಿರಕ್ಕೆ, 80 ಸಾವಿರಕ್ಕೆ ವೈಟ್ ಪೇಪರ್ ಲೀಸ್ ಸೇಲ್ಸ್ ಆಗಿರುವುದೂ ಕಂಡು ಬಂದಿದೆ, ನನಗೆ ಎರಡು ಮೂರು ಕೇಸುಗಳು ಗೊತ್ತಾಗಿವೆ. ಎಂಭತ್ತು ಸಾವಿರದಿಂದ 90 ಸಾವಿರರೂಪಾಯಿಗಳಿಗೆ ಪೇಪರ್ ಪರ್ಮಿಷನ್ ಕೊಟ್ಟು ಮಾರಾಟ ಮಾಡಿದ್ದಾರೆ. ನಮ್ಮದು ಸೋಷಿಯಲಿಸ್ಟಿಕ್ ಪ್ಯಾಟರ್ನ್. ಇದೆಷ್ಟು ಸುಲಭವಾಗಿ ಹಣ ಸಂಪಾದನೆ ಮಾಡುವ ಮಾರ್ಗವೆಂಬುದನ್ನು ಊಹಿಸಬಹುದು.

ಆಮೇಲೆ ಬಹಳವಾಗಿ ತೆಗೆಯಬೇಕು, ಸರ್ಕಾರಕ್ಕೆ ಹೆಚ್ಚು ಉತ್ಪನ್ನವಾಗಬೇಕು ಎಂದು ಹೇಳುತ್ತಾರೆ. ಅದಕ್ಕೆ ಒಂದು ಕಾರ್ಪೊರೇಷನ್ ಮಾಡಿ ಎಕ್ಸ್‌ಪೆರಿಮೆಂಟ್ ಮಾಡಿ ಫೇರ್ ಟ್ರಯಲ್ ಕೊಡಲಿ, ಕೆಲವು ವರ್ಷ ಮಾಡಲಿ, ಈ ದಿವಸ 40 ಲಕ್ಷವೋ ಏನೋ ಹಣ ಬರುತ್ತಿದೆ, ಅದಕ್ಕಿಂತ ಹೆಚ್ಚಾಗಿ ಬರುತ್ತದೆ ಮತ್ತು ಖೋತಾ ಬಡ್ಜೆಟ್ ಸರಿದೂಗುವುದಕ್ಕೆ ಅವಕಾಶವಾಗುತ್ತದೆ. ಲೇಬರ್ ಲೆಜಿಸ್ಲೇಷನ್ ಇಲ್ಲೂ ಅನ್ವಯಿಸಿ ಲೇಬರ್ ಕೊಡುತ್ತಿದ್ದಾರೆ. ಆದರೆ ಕಷ್ಟ ಸುಖ ಯಾರೂ ಕೇಳುವುದಿಲ್ಲ. ಅವರು ಹೇಗೆ ಕೆಲಸ ಮಾಡುತ್ತಿದ್ದಾರೆಂಬುದನ್ನು ಸರ್ಕಾರ ನೋಡಿದ್ದರೆ ಚೆನ್ನಾಗಿ ನಡೆಸುವ ಶಕ್ತಿಯಿದೆ. ಅನೇಕ ಕಡೆ ಕೈಗಾರಿಕೆ ನಡೆಸುವವರಿಗೆ ಈ ಗಣಿಗಳನ್ನು ನಡೆಸುವುದಕ್ಕೆ ಶಕ್ತಿಯಿಲ್ಲವೆ? ಅದರಲ್ಲೂ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಮೈನ್ಸ್‌ಗೆ ಹೆಚ್ಚು ಹಣ ಒದಗಿಸಿದೆ. ಇನ್ನೂ ಅನೇಕ ವಿಧವಾದ ಭೂಮಿಯಲ್ಲಡಗಿರುವ ಸಂಪತ್ತನ್ನು ಹೊರಗೆ ತೆಗೆಯಬೇಕಾದರೆ ನಮ್ಮ ಜಿಲ್ಲೆಯಲ್ಲಿರುವ ಮೈನ್ಸ್‌ಗೆ ಗಮನ ಕೊಟ್ಟರೆ ಅವಕಾಶ ಹೆಚ್ಚಾಗಿದೆ. ಸಿಲ್ವರ್ ಸಹ ನಮ್ಮ ಊರ ಪಕ್ಕದಲ್ಲಿ ಮೂರು ನಾಲ್ಕು ಮೈಲಿಯಲ್ಲಿದೆ. ಇಡೀ ಭರತ ಖಂಡದಲ್ಲೇ ಅಷ್ಟಿಲ್ಲ. ಒಂದು ಸಲ ಅಲ್ಲಿರುವ ಪ್ರಮಾಣ ಸಿಕ್ಕಿದರೆ ಭಾರತಕ್ಕೆಲ್ಲಾ ಒದಗಿಸಬಹುದೆಂದು ಮಂತ್ರಿಗಳು ಹೇಳಿದರು. ವರ್ಷಕ್ಕೆ ಎರಡು

(ಶ್ರೀ ಜಿ. ಶಿವಪ್ಪ)

ಕೋಟಿ ರೂಪಾಯಿ ಬೆಲೆ ಬಾಳುವ ಸಲ್ಫ್ಯೂರಿಕ್ ಆಸಿಡ್ ತರಿಸುತ್ತಿದ್ದೇವೆ. ಇಲ್ಲೇ ಅದು ಸಿಕ್ಕುತ್ತದೆ. ಚಿತ್ರದುರ್ಗ ತಾಲ್ಲೂಕಿನಲ್ಲಿ ಹೆಮ್ಮೆ ಪಡುವಷ್ಟು ಅವಕಾಶವಿದೆ. ಡ್ರಿಲ್ಲಿಂಗ್ ಮೆಷೀನ್ ಹಾಕಿ ತೆಗೆಯಬಹುದು. ಮಾನ್ಯ ಚನ್ನಬಸಪ್ಪನವರು ಅಧಿಕಾರಸ್ಥಾನಕ್ಕೆ ಬಂದ ಮೇಲೆ ಭರಾಟೆಯಿಂದ ಕೆಲಸ ನಡೆಯುತ್ತಿದೆ. ಮಣ್ಣು ಕಲ್ಲಿನಲ್ಲಿ ನಡೆದು ಗುಡ್ಡ ಹತ್ತಿ ಇಳಿದು ಅಜಮಾಯಿಷಿ ಮಾಡುತ್ತಿದ್ದಾರೆ. ಅವರ ಜೊತೆಯಲ್ಲಿ ಹೋಗಿ ಬರುವುದಕ್ಕೆ ನನಗೇ ಸಾಕಾಗಿ ಹೋಯಿತು. ಎಂಟು ಹತ್ತು ಮೈನ್ಸ್ ಕಡೆ ಗಮನ ಕೊಟ್ಟಿದ್ದಾರೆ. ಕೆಲವರು ಕಡಮೆಯಾಗಿವೆಯೆಂದು ಹೇಳಿದರು. ನಾನು ಹಾಗೆ ತಿಳಿದುಕೊಂಡಿಲ್ಲ. ಮೊದಲಿದ್ದುದಕ್ಕಿಂತ ಚೆನ್ನಾಗಿ ಆಡಳಿತ ನಡೆಸುತ್ತಿದ್ದಾರೆ, ಎಲ್ಲವನ್ನೂ ಸರಿಪಡಿಸುತ್ತಾರೆ ಎಂಬ ಸಂಪೂರ್ಣ ನಂಬಿಕೆ ನನಗಿದೆ. ಸೇಲ್ ಕೂಡ ಒಂದೇ ಸ್ಥಳದಲ್ಲಿ ಮೂರು ನಾಲ್ಕು ಕಡೆ ಆಗುತ್ತಿದೆ. ಸೇಲ್ಸ್ ಟ್ಯಾಕ್ಸ್ ತಪ್ಪಿಸಿಕೊಳ್ಳುವುದಕ್ಕೆ ಮೈನ್ಸ್ ಓನರ್ಸ್ ಪ್ರಯತ್ನ ಮಾಡುತ್ತಿದ್ದಾರೆ. ವೈಯಕ್ತಿಕವಾಗಿ ಮೈನ್ ಓನರ್ಸ್‌ಗೂ ನನಗೂ ಸಂಬಂಧವಿಲ್ಲ, ಪರಿಚಯಕೂಡ ಹೆಚ್ಚಾಗಿಲ್ಲ. ಹೀಗೆ ಅವರು ಈಗ ತಿಳಿದುಕೊಂಡಿರುವಂಥ ಅಂಶಗಳನ್ನು ಸರಿಪಡಿಸತಕ್ಕದ್ದು ದೇಶದ ಹಿತದೃಷ್ಟಿಯಿಂದ ಮತ್ತು ಸರ್ಕಾರದ ಹಿತದೃಷ್ಟಿಯಿಂದ ಅತ್ಯಾವಶ್ಯಕವೆಂದು ಹೇಳಿ ನಾನು ತಮ್ಮಲ್ಲಿ ಮನವಿ ಮಾಡಿ ಕೊಳ್ಳುತ್ತೇನೆ.

ಶ್ರೀ ಕೆ. ಪಟ್ಟಾಭಿರಾಮನ್ (ಕೋಲಾರ).—ಮಾನ್ಯ ಸಭಾಪತಿಯವರೆ, ಈಗ ಸಭೆಯ ಮುಂದೆ ಇರುವ ವಿಚಾರದಲ್ಲಿ ನಾನು ಎರಡು ಮಾತುಗಳನ್ನು ಹೇಳಬೇಕೆಂದು ಇಚ್ಛೆ ಪಟ್ಟಿದ್ದೇನೆ. ಈ ಸಂದರ್ಭದಲ್ಲಿ ನನಗೆ ಏನು ಒಂದು ಅನಿಸುತ್ತಿದೆಯೆಂದರೆ—ಈ ಮೈನಿಂಗ್ ಬಾಬು ದೇಶಕ್ಕೆ ಬರಬೇಕಾದಂಥ ಅನೇಕ ವರಮಾನದ ಬಾಬುಗಳಲ್ಲಿ ಇದೂ ಕೂಡ ಬಹಳ ಮುಖ್ಯವಾದದ್ದು. ಈ ನಾಲ್ಕೈದು ವರ್ಷಗಳ ಒಂದೊಂದು ಪಟ್ಟಿಯನ್ನೂ ನಾವು ನೋಡುತ್ತಾ ಬಂದರೆ, ಈ ಬಾಬಿನಲ್ಲಿ ಯಾವ ರೀತಿ ವರಮಾನ ಬರುತ್ತಿದೆ, ಇದಕ್ಕೆ ಯಾವ ರೀತಿಯಲ್ಲಿ ಖರ್ಚಾಗುತ್ತಿದೆ ಎಂಬ ಅಂಶಗಳನ್ನು ನಾವು ಗಣನೆಗೆ ತೆಗೆದುಕೊಂಡು ನೋಡುವುದಾದರೆ, ಬರತಕ್ಕ ವರಮಾನಕ್ಕಿಂತಲೂ ಆಗುತ್ತಿರುವ ಖರ್ಚೇ ಹೆಚ್ಚಾಗಿದೆ. ಇದರಿಂದ ನಾವು ಎಷ್ಟು ವರಮಾನ ಬರಬೇಕೆಂದು ನಿರೀಕ್ಷೆ ಮಾಡಿಕೊಂಡಿದ್ದೆವೋ ಅಷ್ಟು ವರಮಾನ ಈ ದಿವಸ ಬರುತ್ತಿಲ್ಲವೆಂಬುದಾಗಿ ಸ್ಪಷ್ಟವಾಗಿ ಕಂಡು ಬರುತ್ತಿದೆ. ಆದುದರಿಂದ ಈಗಾಗಲೇ ಈ ವಿಚಾರದಲ್ಲಿ ಅನೇಕ ಮಾನ್ಯ ಸದಸ್ಯರುಗಳು ತಿಳಿಸಿರುವಂತೆ ಸರ್ಕಾರದವರು ಈ ಬಗ್ಗೆ ತೀವ್ರ ಗಮನವನ್ನು ಕೊಡಬೇಕಾಗಿದೆ. ಅಪಾರವಾಗಿ ಹಣವನ್ನು ತಂದು ಈ ಭೂಮಿಗೆ ಚೆಲ್ಲಿ ಈ ಭೂಗರ್ಭದಲ್ಲಿ ಅಡಗಿರುವ ಅಪಾರವಾದಂಥ ಐಶ್ವರ್ಯವನ್ನು ಪಡೆದು ತಮ್ಮ ಸಂಪಾದನೆಯನ್ನು ಹೆಚ್ಚಿಸಿಕೊಳ್ಳುವ - ಸಲುವಾಗಿ ನಮ್ಮ ದೇಶದಲ್ಲಿ ಮೈನಿಂಗ್ ಡಿಪಾರ್ಟ್‌ಮೆಂಟ್ ಅನೇಕ ವರ್ಷಗಳಿಂದಲೂ ಕೆಲಸ ಮಾಡುತ್ತಿದೆ.

ಆದರೆ, ಈಗ ಸಲ್ಫ್ಯೂರಿಕ್ ಆಸಿಡ್‌ನ್ನು (ಗಂಧಕ ದ್ರವ) ನಮ್ಮಲ್ಲಿಯೇ ತಯಾರಿಸಬೇಕೆಂಬ ವಿಚಾರ ಬಂದಿದೆ. ಅದಕ್ಕಾಗಿ ನಮ್ಮ ದೇಶದಲ್ಲೇ ಒಂದು ಈ ಆಸಿಡ್ ತಯಾರಿಸತಕ್ಕ ಪ್ಲಾಂಟನ್ನು ಹಾಕಬೇಕೆಂದು ಸದಸ್ಯರು ಕೇಳುತ್ತಿದ್ದಾರೆ. ಇದು ಬಹಳ ಪ್ರಾಮುಖ್ಯವಾದಂಥ ವಸ್ತು. ಆದರೆ ಈ ದಿವಸ ಇದನ್ನು ಸರ್ಕಾರದವರು ಬೇರೆ ದೇಶದಿಂದ ಆಮದು ಮಾಡಿ ಕೊಳ್ಳುತ್ತಿದ್ದಾರೆ. ಈ ವಸ್ತುವು ನಮ್ಮ ದೇಶದಲ್ಲೇ ಸಿಕ್ಕುವಂತಿದ್ದಾಗ್ಯೂ ಈ ದಿವಸ ಇದನ್ನು ನಾವು ಅಮೆರಿಕಾದಿಂದ ತರಿಸಿಕೊಳ್ಳುತ್ತಿದ್ದೇವೆ. ಹೀಗೆ ತರಿಸಿಕೊಳ್ಳುವುದರ ಉದ್ದೇಶವನ್ನು ವಿವರಿಸುತ್ತಾ, ಈ ದಿವಸ ನಾವು ಈ ವಸ್ತುವನ್ನು ಇಲ್ಲೇ ತಯಾರಿಸಿದರೆ ತಯಾರಿಕೆಗೆ ಏನು ಬೆಲೆ ಆಗುತ್ತದೆಯೋ ಅದಕ್ಕಿಂತಲೂ ಕಡಮೆ ಬೆಲೆಯಲ್ಲಿ ನಮಗೆ ಅಮೆರಿಕಾದಿಂದ ಈ ವಸ್ತು ದೊರೆಯುತ್ತಿದೆ, ಅದಕ್ಕಾಗಿ ನಾವು ಈಗ ಇದನ್ನು ಅಲ್ಲಿಂದಲೇ ಆಮದು ಮಾಡಿಕೊಳ್ಳುತ್ತಿದ್ದೇವೆಂಬುದಾಗಿ ಸರ್ಕಾರದವರು ಹೇಳಬಹುದು. ಆದರೆ, ಈ ದಿವಸದ ಪ್ರಪಂಚದ ಪರಿಸ್ಥಿತಿಯಿರುವುದನ್ನು ಗಮನಿಸಿದರೆ, ಅದರಲ್ಲೂ ಈ ಎರಡನೇ ಮಹಾ ಯುದ್ಧವಾದನಂತರ, ಈ ಅಂತರಾಷ್ಟ್ರೀಯ ವ್ಯವಹಾರ ದೃಷ್ಟಿಯಿಂದ ಈ ಅಂಶವನ್ನು ನಾವು ಪರಿಶೀಲಿಸಿದ್ದೇ ಆದರೆ, ನಮಗೆ ಇದರಿಂದ ಎಷ್ಟೇ ಖರ್ಚಾಗಲಿ ಏನೇ ಹಣ ವೆಚ್ಚವಾಗಲೀ ನಮ್ಮ ದೇಶದಲ್ಲಿ ಈ ಸಾಮಾನು ದೊರೆಯುವಂತಿದ್ದರೆ ಇದನ್ನು ಇಲ್ಲಿಯೇ ತಯಾರಿಸತಕ್ಕದ್ದು ಅತ್ಯಗತ್ಯವೆಂದು ಹೇಳುತ್ತೇನೆ. ಈ ಭೂಗರ್ಭ ಸಂಶೋಧನೆಯ ಕೆಲಸಗಳನ್ನು ನಮ್ಮ ಸರ್ಕಾರ ಬಹಳ ವರ್ಷಗಳಿಂದಲೂ ನಡೆಸಿಕೊಂಡು ಬರುತ್ತಿದೆ. ಈಗ ನಮ್ಮ ಭಾರತ ಸರ್ಕಾರ ಈ ಎರಡನೇ ಪಾಂಚವಾರ್ಷಿಕ ಯೋಜನೆಯಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡತಕ್ಕಂಥ ನಾನಾ ಯೋಜನೆಗಳನ್ನು ಹಾಕಿಕೊಂಡಿದೆ. ನಮ್ಮ ಸರ್ಕಾರಕ್ಕೆ ಈ ಕಾರ್ಯವನ್ನು ಕೈಗೊಳ್ಳಲು ಹಣದ ಅಭಾವವಿದ್ದರೆ ಇವರು ಕೇಂದ್ರ ಸರ್ಕಾರಕ್ಕೆ ಈ ಬಗ್ಗೆ ಮನವಿ ಮಾಡಿಕೊಂಡು ಅವರಿಂದ ಹಣದ ಸಹಾಯ ಪಡೆದು ಇದನ್ನು ಕಡ್ಡಾಯವಾಗಿ ಮಾಡಲೇಬೇಕು, ಇದು ಬಹಳ ಮುಖ್ಯವಾದಂಥ ವಿಚಾರ. ಇದು ಪ್ರಾಯಶಃ ಮುಂದಿನ ಭವಿಷ್ಯ ದೃಷ್ಟಿಯಿಂದ ಮತ್ತು ಅಂತರಾಷ್ಟ್ರೀಯ ವೈವಿಧ್ಯಗಳ ದೃಷ್ಟಿಯಿಂದ ಈ ವಸ್ತುವನ್ನು ಎಂದರೆ, ಈ ಸಲ್ಫ್ಯೂರಿಕ್ ಆಸಿಡ್ಡನ್ನು, ಇಲ್ಲೇ ತಯಾರಿಸಬೇಕಾದದ್ದು ಅತ್ಯಗತ್ಯ. ಈ ವಿಷಯವನ್ನು ತಾವು ಖಂಡಿತ ಮುಂದಕ್ಕೆ ಹಾಕಿಕೊಂಡು ಹೋಗಬಾರದು. ಇದು ಜಿಯೋಲಾಜಿಕಲ್ ಡಿಪಾರ್ಟ್‌ಮೆಂಟಿಗೆ ಸಂಬಂಧಪಟ್ಟಂಥ ವಿಚಾರ. ಅಲ್ಲದೆ ಇದು ಕೇಂದ್ರದ ಸಬ್‌ಜೆಕ್ಟ್. ಈ ದಿವಸ ಈ ಬಗ್ಗೆ ಎರಡು ಬಹಳ ಮುಖ್ಯವಾದ ಕೆಲಸಗಳು ನಡೆಯಬೇಕಾಗಿದೆ. ಈ ಜಿಯೋಲಾಜಿಕಲ್ ವಿಚಾರದ ಬಗ್ಗೆ ಸರ್ವೆ ನಡೆಸಿ ಎಲ್ಲೆಲ್ಲಿ ಭೂಗರ್ಭದಲ್ಲಿ ಏನೇನು ಸಂಪತ್ತು ಅಡಗಿದೆ ಎಂಬುದನ್ನು ಕಂಡುಹಿಡಿಯಲು ನಮ್ಮ ಸರ್ಕಾರದವರು ನೇಮಿಸಿರತಕ್ಕಂಥ ಇಲಾಖೆ ಬಹಳ ವರ್ಷಗಳಿಂದಲೂ ಈ ಕಾರ್ಯವನ್ನು ನಡೆಸಿಕೊಂಡು ಬರುತ್ತಿದೆ. ಈ ನಮ್ಮ ಇಲಾಖೆಯಲ್ಲಿ ದಕ್ಷರಾದಂಥ, ಪ್ರಾಜ್ಞರಾದಂಥ ಮೇಧಾವಿಗಳಾದಂಥ ಜನರಿದ್ದಾರೆ. ಈ ಇಲಾಖೆಯನ್ನೂ, ಕೇಂದ್ರ ಸರ್ಕಾರದ ಈ ಬಾಬಿನ ಇಲಾಖೆಯನ್ನೂ ಎರಡನ್ನೂ ಗಮನದಲ್ಲಿಟ್ಟುಕೊಂಡು ಹೋಲಿಕೆ ಮಾಡುತ್ತಾ ಹೋದರೆ ಈ ದಿವಸ ನಮ್ಮ ಸರ್ಕಾರದವರು ಕೇಂದ್ರದ ಇಲಾಖೆಯವರು ನಡೆಸಬೇಕಾಗಿದ್ದಂಥ ಕಾರ್ಯವನ್ನು ಈ ನಮ್ಮ ಇಲಾಖೆ ಮೂಲಕ ಈವರೆಗೂ ನಡೆಸಿಕೊಂಡು ಬಂದಿದ್ದಾರೆ. ಹೀಗಿರುವುದರಿಂದ ಈಗ ನಮ್ಮ ಸರ್ಕಾರ ಇಲ್ಲಿಯವರೆಗೂ ಈ ಇಲಾಖೆಗಾಗಿ ವೆಚ್ಚ ಮಾಡಿರುವಂಥ ಮೊಬಲಗನ್ನು ಇಂಡಿಯಾ ಸರ್ಕಾರದವರಿಂದ ವಸೂಲ್ಮಾಡುವುದಕ್ಕೇನಾದರೂ ಅವಕಾಶವಿದೆಯೋ ಎಂಬುದನ್ನು ಈಗ ಪರಿಶೀಲನೆ ಮಾಡಿ ನೋಡಬೇಕಾಗಿದೆ. ಈ ದಿವಸ ಈ ಕೈಗಾರಿಕಾ ನೀತಿಯ ಬಗ್ಗೆ ಕೇಂದ್ರದವರ ನಿಲುವು ಯಾವ ರೀತಿ ಇರುತ್ತದೆ ಎಂಬುದನ್ನು ಸ್ಪಷ್ಟಪಡಿಸುವಂತೆ ಮಾನ್ಯ ಮಂತ್ರಿಗಳು ಪ್ರಯತ್ನ

ಪಡುತ್ತಾರೆಂದು ನಾನು ಭರವಸೆಯುಳ್ಳವನಾಗಿದ್ದೇನೆ. ಹೀಗೆ ಪ್ರಯತ್ನ ಮಾಡಿದ್ದೇ ಆದರೆ ಈ ದಿವಸ ನಾವು ನಮ್ಮ ಸರ್ಕಾರಕ್ಕಾಗುತ್ತಿರುವ ಖರ್ಚನ್ನು ಮಿತವ್ಯಯಗೊಳಿಸುವುದಕ್ಕೂ ಸಹ ಇದರಿಂದ ಅವಕಾಶವಾಗುತ್ತದೆ. ಈ ದಿವಸ ನಿಜವಾಗಿಯೂ ಈ ನಮ್ಮ ಜಿಯೋಲಾಜಿಕಲ್ ಇಲಾಖೆ ಆ ಕೇಂದ್ರಕ್ಕೆ ಸಂಬಂಧಪಟ್ಟಂಥ, ಅದರ ಆಡಳಿತಕ್ಕೊಳಪಟ್ಟಂಥ ಕೆಲಸ ಕಾರ್ಯಗಳನ್ನು ಮಾಡುತ್ತಿರುವುದರಿಂದ ಇದರ ಬಗ್ಗೆ ಅವರು ನಮಗೆ ಒಂದು ದೊಡ್ಡ ಸಹಾಯ ನೀಡಲು ಅವಕಾಶವಿದೆ. ಇದನ್ನು ತಾವು ಮಾಡಬೇಕು.

ಮೂರನೆಯದಾಗಿ ನಮಗೆ ಈಗ ಹೊಸ ಹೊಸ ವಿಚಾರಗಳು ಕಾಣುತ್ತಾ ಇವೆ. ಮೊನ್ನೆ ಪತ್ರಿಕೆಯಲ್ಲಿ ನೋಡಿದೆ ಹೈದರಾಬಾದು ಸಂಸ್ಥಾನದಿಂದ ಕರ್ನಾಟಕಕ್ಕೆ ಬರತಕ್ಕ ರಾಯಚೂರು ಜಿಲ್ಲೆಯಲ್ಲಿ ವಜ್ರ ಸಿಕ್ಕಿದೆ ಎಂದು ಹೇಳುತ್ತಾರೆ. ಈಗತಾನೆ ತೀರ್ಥಹಳ್ಳಿ ತಾಲ್ಲೂಕಿನ ಹತ್ತಿರ ಅಂಬುತೀರ್ಥದಲ್ಲಿ ಪೆಟ್ರೋಲಿಯಂ ವಾಸನೆ ಬರುತ್ತಾ ಇದೆ ಎಂದು ಹೇಳುತ್ತಾ ಇದ್ದರು. ಭೂಗರ್ಭದಲ್ಲಿ ಅಡಗಿರತಕ್ಕ ಖನಿಜಸಂಪತ್ತನ್ನು ಮನುಷ್ಯನಿಂದ ಪೂರ್ಣವಾಗಿ ಸ್ವಾಧೀನಮಾಡಿಕೊಳ್ಳಲಿಕ್ಕೆ ಸಾಧ್ಯವಾಗಿದೆ ಎಂದು ಹೇಳಲು ಆಗುವುದಿಲ್ಲ. ಸ್ವಾಧೀನಮಾಡಿಕೊಳ್ಳತಕ್ಕ ಕಾರ್ಯದಲ್ಲಿ ತೊಡಗಿದ್ದಾರೆ. ಸರ್ಕಾರದವರು ಮುಂದೆ ಭೂಗರ್ಭದಲ್ಲಿರತಕ್ಕ ಖನಿಜ ಸಂಪತ್ತನ್ನು ಪಡೆದುಕೊಳ್ಳಲು ಪ್ರಯತ್ನ ಮಾಡಬೇಕು. ಆದರೆ ಅದರ ಖರ್ಚನ್ನು ಕೇವಲ ಸಂಸ್ಥಾನದ ಸರ್ಕಾರದ ಮೇಲೆ ಹೊರಿಸುವುದು ಸರಿಯಲ್ಲ. ಅದು ಎಲ್ಲೇ ಇದ್ದರೂ ಕೂಡ ಇಡೀ ದೇಶಕ್ಕೆ ಸಂಬಂಧಪಟ್ಟದ್ದು. ದೇಶದ ಸಂಪತ್ತನ್ನು ಹೆಚ್ಚಿಸಿದಂತೆ ಆಗುತ್ತದೆ. ಆದ್ದರಿಂದ ಅದರ ಖರ್ಚನ್ನು ಪೂರ್ಣವಾಗಿ ಇಂಡಿಯಾ ಸರ್ಕಾರದವರೇ ಕೊಡಬೇಕೆಂದು ಒತ್ತಾಯಪಡಿಸುವುದಕ್ಕೆ ಅದು ಒಂದು ಬಹಳ ಮುಖ್ಯವಾದ ಕಾರಣ ಎಂದು ಒಂದು ದೃಷ್ಟಿಯಿಂದ ಅನ್ನಿಸುತ್ತದೆ. ಶ್ರೀ ಭೀಮಪ್ಪ ನಾಯಕರ ರಿಪೋರ್ಟ್ ನೋಡಿದರೆ ಒಂದು ವಿಚಾರ ಕಾಣುತ್ತದೆ. ಇನ್ನೂ ಸ್ವಾಧೀನ ಮಾಡಿಕೊಳ್ಳಬೇಕಾಗಿರತಕ್ಕ ಮೂಲಗಳು ಅನೇಕವಿವೆ. ಅವುಗಳನ್ನು ಏಕೆ ಮಾಡಿಕೊಳ್ಳಲಿಲ್ಲ? ಒಂದು ಮಾತು ಮಾತ್ರ ಸ್ಪಷ್ಟವಾಗಿ ಕಾಣುತ್ತದೆ. ನಮ್ಮ ಮಿತ್ರರಾದ ಶ್ರೀ ದೇವರಾಜ್ ಅರಸ್‌ರವರ ಮತ್ತು ಶ್ರೀ ಶಿವಪ್ಪನವರ ಭಾಷಣಗಳನ್ನು ಕೇಳಿದೆ. ಮತ್ತೊಂದುಕಡೆ ಶ್ರೀ ಹುಚ್ಚೇಗೌಡರ ಭಾಷಣವನ್ನೂ ಕೇಳಿದೆ. ಈ ಡಿಮ್ಯಾಂಡ್ ಮೇಲೆ ಇಷ್ಟು ವಿಧವಾದ ಅಭಿಪ್ರಾಯ ಬರುತ್ತದೆ ಎಂದು ನಿರೀಕ್ಷೆ ಮಾಡಿರಲಿಲ್ಲ ಎಂದು ಕಾಣುತ್ತದೆ. ಹೊಸ ಮಂತ್ರಿಗಳಾದ ಶ್ರೀ ಚನ್ನಬಸಪ್ಪನವರು ಹೆಚ್ಚಿನ ಉತ್ಸಾಹ ತೋರಿಸುತ್ತಾ ಇದ್ದಾರೆ ಎಂಬುದು ನಿರ್ವಿವಾದವಾದದ್ದು, ಆದರೆ ಬರೀ ಉತ್ಸಾಹ ಸಾಲದು. ಅದರ ಜೊತೆಗೆ ಉತ್ಸಾಹಭರಿತವಾದ ಕಾರ್ಯಸಾಧನೆ ಕಾಣಬೇಕು ಎನ್ನುವ ಆಸೆ ಇದೆ. ಒಟ್ಟಿನಲ್ಲಿ ಜಿಯಾಲಜಿ ಡಿಪಾರ್ಟ್‌ಮೆಂಟಿನ ಕೆಲಸದಲ್ಲಿ ಬಹಳ ಶ್ರದ್ಧೆವಹಿಸಿದ್ದಾರೆ. ಸಂಸ್ಥಾನದ ಭೂಗರ್ಭಶಾಖೆ ಬಹಳ ವರ್ಷಗಳಿಂದಲೂ ನಡೆದುಕೊಂಡು ಬಂದಿರುವುದು ಒಂದು ಹೆಮ್ಮೆ, ಹಿರಿಮೆ ಮತ್ತು ವೈಶಿಷ್ಟ್ಯ ಎಂದು ಹೇಳಿದರೂ ತಪ್ಪಾಗಲಾರದು. ಇಲ್ಲಿ ಬಹಳ ಚೆನ್ನಾಗಿ ಕೆಲಸ ಆಗಿದೆ. ಪ್ರಾಯಶಃ ಒಂದಾನೊಂದು ಕಾಲದಲ್ಲಿ ಇಂಡಿಯಾ ಸರ್ಕಾರದವರಿಗೆ ಮಾರ್ಗಸೂಚನೆಯಾಗಿ ಮೈಸೂರು ಸರ್ಕಾರ ಬಹಳವಾಗಿ ಕೆಲಸಮಾಡಿದೆ ಎಂದು ಹೇಳಿದರೆ ಉತ್ಪ್ರೇಕ್ಷೆಯಾಗಲಾರದು. ಅಷ್ಟು ಪ್ರಾವೀಣ್ಯತೆ ಇದೆ ಎಂಬ ಭಾವನೆಯನ್ನು ಸರ್ಕಾರದ ಮುಂದೆ ಇಡಬೇಕೆಂದು ಮಾತ್ರ ಈ ಡಿಮ್ಯಾಂಡಿನ ಮೇಲೆ ಮಾತನಾಡಬೇಕೆಂದು ಇದ್ದೆ. ಇಂಡಿಯಾ ಸರ್ಕಾರದ ನೆರವು ಯಾವ ಪ್ರಮಾಣದಲ್ಲಿ ಬರಬೇಕೆಂಬುದರ ವಿಷಯದಲ್ಲೂ ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಅವರು ಕೊಟ್ಟಿರುವುದು ನನಗೇನೋ ಅಷ್ಟು ತೃಪ್ತಿಕರವಾಗಿ ಕಾಣುತ್ತಿಲ್ಲ. ಮೈಸೂರು ಸಂಸ್ಥಾನದಲ್ಲಿ ಖನಿಜ ಸಂಪತ್ತನ್ನು ಬೆಳೆಸಲಿಕ್ಕೆ ಎಷ್ಟು ಅವಕಾಶವಿದೆ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಒಂದು ಯೋಜನಾ ಉಪಸಮಿತಿಯನ್ನು ಮಾಡಿದ್ದರು. ಅದರಲ್ಲಿ ನಾನೂಕೂಡ ಸದಸ್ಯನಾಗಿದ್ದು ಸಲಹೆಗಳನ್ನು ಕೊಟ್ಟಿದ್ದೇನೆ. ಅಲ್ಲಿ ನಡೆದ ವಿಚಾರಗಳನ್ನು ತಿಳಿದುಕೊಳ್ಳಲಿಕ್ಕೆ ನನಗೆ ಅವಕಾಶ ಉಂಟಾಗಿತ್ತು. ಸಲಹೆಗಳನ್ನು ಕೊಟ್ಟಿದ್ದರೂ ಕೂಡ ಇಂಡಿಯಾ ಸರ್ಕಾರದವರು ಅವನ್ನು ತಳ್ಳಿಹಾಕಿರುವುದರಿಂದ ಮತ್ತೆ ಹೇಳುತ್ತಾ ಇದ್ದೇನೆ. Outside the plan, ಭದ್ರಾವತಿ ಕಬ್ಬಿಣದ ಕಾರ್ಖಾನೆಯ ಕೆಲಸ ಮಾಡುವುದಕ್ಕೆ ಹೇಗೆ ಇಂಡಿಯಾ ಸರ್ಕಾರದವರು ಹೊರಟಿದ್ದಾರೋ ಅದೇ ರೀತಿ ಖನಿಜ ಸಂಪತ್ತಿನ ವಿಚಾರದಲ್ಲೂ ಇದಕ್ಕೆ ಸಂಬಂಧಪಟ್ಟವರನ್ನೆಲ್ಲಾ ಕೂಡಿಸಿ ಆ ಸಲಹೆಗಳನ್ನೆಲ್ಲಾ ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಶ್ರೀ ಚನ್ನಬಸಪ್ಪನವರು ಈಗಾಗಲೆ ಆ ಪ್ರಯತ್ನ ಮಾಡಿದ್ದಾರೆ. ಅದನ್ನು ಒತ್ತಾಯಮಾಡಿ, ಮೈಸೂರು ದೇಶದ ಭವಿಷ್ಯ ಮತ್ತು ಮೈಸೂರು ದೇಶದ ಸಂಪದಭಿವೃದ್ಧಿಗೆ ಈ ಜಿಯಾಲಜಿ ಡಿಪಾರ್ಟ್‌ಮೆಂಟು ಬಹಳ ಮುಖ್ಯವಾದದ್ದು, ಇದು ಚೆನ್ನಾಗಿ ಕೆಲಸ ಮಾಡಬೇಕೆಂದು ಹೇಳುತ್ತೇನೆ.

ಇನ್ನೊಂದು ಅಸಮಾಧಾನ ಬರತಕ್ಕ ಮಾತು ಇದೆ. ಅದೇನೆಂದರೆ ಸಿಬ್ಬಂದಿ ಖರ್ಚು ಜಾಸ್ತಿಯಾಗಿ ಕಾಣುತ್ತಾ ಇದೆ. ಈರೀತಿ ಆಗಬಾರದು. ಮಿತವ್ಯಯ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಮತ್ತು ಇಲಾಖೆಯನ್ನು ಸ್ಥಿರಗೊಳಿಸಿ ಇನ್ನು ತ್ವರಿತವಾಗಿ ಶ್ರೀ ಭೀಮಪ್ಪನಾಯಕರ ಸಮಿತಿಯವರು ಮಾಡಿರತಕ್ಕ ಕೆಲವು ಉಪಯುಕ್ತವಾದ ಸಲಹೆಗಳನ್ನು ಕಾರ್ಯಗತ ಮಾಡಲು ಹೆಚ್ಚಿನ ಆಸಕ್ತಿಯನ್ನು ತೋರಿಸಲು ಅವರನ್ನು ಹುರಿದುಂಬಿಸಬೇಕು. ಕೊನೆಯದಾಗಿ ಇಂಡಿಯಾ ಸರ್ಕಾರದ ನೆರವು ಅನೇಕವಾಗಿ ಬರಬೇಕಾಗಿದೆ, ಅವನ್ನು ದೊರಕಿಸಿಕೊಳ್ಳಬೇಕು. ನನ್ನ ಆಸೆ ಹೀಗಿದೆ, ಈ ಕೈಗಾರಿಕೆಗಳಿಗೆ ಸಂಬಂಧಪಟ್ಟಂತೆ, ಬಡ್ಜೆಟ್‌ನಲ್ಲಿ ಏನು ವರಮಾನ ಬಂತು, ಬೊಕ್ಕಸಕ್ಕೆ ಎಷ್ಟು ಸೇರಿತು ಎಂದು ಹೇಳಿ ಯಾವರೀತಿ ಆಸಕ್ತಿಯಿಂದ ನೋಡುತ್ತೇವೆಯೋ ಅದೇರೀತಿ ಈ ಜಿಯಾಲಜಿ ಡಿಪಾರ್ಟ್‌ಮೆಂಟು ಆಗಬೇಕು. ಆರೀತಿ ಆಗುವವರೆಗೂ ತೃಪ್ತಿಯಾಗುವುದಿಲ್ಲ. ಈ ರೀತಿಯಾಗಿ ಸರ್ವತೋಮುಖವಾದ ಅಭಿವೃದ್ಧಿಯನ್ನು ಬೆಳೆಸುವುದಕ್ಕೆ ನಮ್ಮ ಪರಮ ಮಿತ್ರರಾದ ಮಾನ್ಯ ಸಚಿವರು ಪ್ರಯತ್ನಪಡಲಿ, ಅವರ ಉತ್ಸಾಹ ಈ ಘಾಟಿಯಲ್ಲಿ ಹೊರಹೊಮ್ಮಲಿ ಎಂದು ಆಸೆಪಟ್ಟು ನಾನು ಈ ಎರಡು ಮೂರು ಸಲಹೆಗಳನ್ನು ಸರ್ಕಾರದವರ ಮುಂದಿಡುತ್ತೇನೆ.

*ಶ್ರೀ ಎ. ವಿ. ನರಸಿಂಹರೆಡ್ಡಿ (ಬೆಂಗಳೂರು—ದಕ್ಷಿಣ).—ಮಾನ್ಯ ಸಭಾಪತಿಯವರೇ, ವಿಜ್ಞಾನ ವಿಷಯಗಳಿಗೆ ಸಂಬಂಧಪಟ್ಟ 9 ಲಕ್ಷದ 83 ಸಾವಿರ ರೂಪಾಯಿಗಳ ಈ ಬೇಡಿಕೆಯ ಬಗ್ಗೆ ನಾನು ಒಂದೆರಡು ಅಂಶಗಳನ್ನು ಪ್ರಸ್ತಾಪ ಮಾಡಲು ಬಯಸುತ್ತೇನೆ. ಶ್ರೀವರ್ಮ ಪಟ್ಟಾಭಿರಾಮನ್‌ರವರು ಮಾತನಾಡುತ್ತಾ ಖನಿಜಗಳನ್ನು ತೆಗೆಯುವ ವಿಷಯದಲ್ಲಿ ಮತ್ತು ಹೊಸ ಖನಿಜಗಳು ಎಲ್ಲೆಲ್ಲಿ ಸಿಕ್ಕುತ್ತವೆ ಎಂಬ ಪರಿಶೋಧನೆಯನ್ನು ನಡೆಸುವುದರಲ್ಲಿ ಕೇಂದ್ರದ ನೆರ

(ಶ್ರೀ ಎ. ವಿ. ನರಸಿಂಹರೆಡ್ಡಿ.)

ವನ್ನು ತೆಗೆದುಕೊಳ್ಳುವುದು ಉಚಿತವೇ ಎಂಬುದನ್ನು ಯೋಚನೆ ಮಾಡಿ ಎಂದು ಹೇಳಿದರು. ಖನಿಜದ ಬಾಬು ಕೇಂದ್ರಕ್ಕೆ ಸೇರಿದ್ದೆಂಬುದು ನಿರ್ವಿವಾದ ವಾದ ಅಂಶ. ಆದ್ದರಿಂದ ಪ್ರಾಂತೀಯ ಸರ್ಕಾರ ಕೇಂದ್ರ ಸರ್ಕಾರದಿಂದ ನೆರವನ್ನು ತೆಗೆದುಕೊಂಡರೆ ಈ ಬಾಬಿನಿಂದ ಕೇಂದ್ರ ಸರ್ಕಾರದಿಂದ ನಮಗೆ ಬರುವ ನೆರವು ಕಡಮೆಯಾಗುವುದಿಲ್ಲವೇ ಎಂಬುದನ್ನು ಈ ಸಂದರ್ಭದಲ್ಲಿ ಯೋಚನೆ ಮಾಡುವುದು ಯುಕ್ತ ಎಂಬುದನ್ನು ನಾನು ಹೇಳ ಬಯಸುತ್ತೇನೆ.

ಎರಡನೆಯದಾಗಿ, ಹಣಕಾಸಿನ ದೃಷ್ಟಿ; ನಾವು ಸಂತೋಷದಾಯಕವಾದ ಪರಿಸ್ಥಿತಿಯಲ್ಲಿಲ್ಲ. ಜೊತೆಗೆ ಹೊಸದಾಗಿ ತೆರಿಗೆಗಳನ್ನು ಹಾಕುವ ಯೋಜನೆಯನ್ನು ಕೂಡ ಈ ವರ್ಷ ನಾವು ಕೈಬಿಟ್ಟಿದ್ದೇವೆ. ಆದ್ದರಿಂದ ಸರ್ಕಾರದವರು ಖನಿಜಗಳನ್ನು ತೆಗೆಯುವುದರ ಮೂಲಕ ವರಮಾನವನ್ನು ಹೆಚ್ಚಿಸಿಕೊಳ್ಳುವುದರ ಕಡೆ ತೀವ್ರಾಸಕ್ತಿಯನ್ನು ತೋರಿಸುವುದು ತುಂಬ ಅವಶ್ಯಕವಾಗಿದೆಯೆಂಬುದನ್ನು ನಾವು ಹೇಳಬೇಕಾಗಿಲ್ಲ. ಈ ವರೆಗೆ ನಡೆಯುತ್ತಿರುವ ಕ್ರಮದಲ್ಲಿ ಅನೇಕ ಲೋಪದೋಷಗಳು ತುಂಬಿವೆಯೆಂಬುದನ್ನು ಮಾನ್ಯ ಮಿತ್ರರುಗಳನೇಕರು ಎತ್ತಿ ತೋರಿಸಿದ್ದಾರೆ. ಅಲ್ಲದೆ ಸಾರ್ವಜನಿಕರ ಮುಂದೆ ಬಂದಿದ್ದ ಒಂದೆರಡು ನಿರ್ದಿಷ್ಟವಾದ ಘಟನೆಗಳು ಇನ್ನೂ ಮರೆಯದೆ ಹಾಗೆಯೇ ನಿಂತಿವೆ. ಅವುಗಳ ಬಗ್ಗೆ ಪ್ರಸ್ತಾಪ ನಡೆಸದೆ, ಇರತಕ್ಕ ಅಂಕಿ ಅಂಶಗಳನ್ನು ಸಾರ್ವಜನಿಕರ ಮುಂದೆ ಇಡದೆಹೋದರೆ ಈಗ ಸಾರ್ವಜನಿಕರ ಮನಸ್ಸಿನಲ್ಲಿ ಉಂಟಾಗಿರುವ ಸಂದೇಹ ಹೋಗುವುದಿಲ್ಲವೆಂದು ಭಾವಿಸಿ ನಾನು ಒಂದೆರಡು ವಿಷಯಗಳನ್ನು ಪ್ರಸ್ತಾಪ ಮಾಡಬಯಸುತ್ತೇನೆ. ಹಿಂದೆ, ಮಾನ್ಯ ಸಚಿವರು ಅಧಿಕಾರಕ್ಕೆ ಬಂದ ಮೇಲೆ ಎಸ್. ವಿ. ಸುಬ್ರಮ್ಮಣ್ಯಂರವರಿಗೆ ಲೈಸೆನ್ಸ್ ಇಲ್ಲದೆ ಖನಿಜ ತೆಗೆಯುವುದಕ್ಕೆ ಅವಕಾಶ ಕೊಟ್ಟಿದ್ದರು, ಅವರು ಬೇಕಾದಷ್ಟು ಖನಿಜವನ್ನು ತೆಗೆದು ಸಾಗಿಸುತ್ತಿದ್ದರು ಎಂದು ದೊಡ್ಡ ಕೋಲಾಹಲವೆದ್ದಿತ್ತು. ಅದರ ಮೇಲೆ ವಿಚಾರಣೆ ನಡೆಸುತ್ತಿದ್ದಾರೆಂದು ತಿಳಿದುಬಂದಿತ್ತು. ಆದರೆ, ಅದಾದಮೇಲೆ ಅಲ್ಲಿ, ಇಲ್ಲಿ—ಜನರು ಬಹಿರಂಗವಾಗಿಲ್ಲದಿದ್ದರೂ, ಒಳಗೊಳಗೇ—ಈ ವಿವಾದದ ವಿಷಯದಲ್ಲಿ ತಣ್ಣೀರೆರಚಿದಂತಾಗಿದೆ ಎಂದು ಹೇಳಿಕೊಳ್ಳುತ್ತಿದ್ದಾರೆ. ರಾಷ್ಟ್ರೀಯ ವಿಷಯಗಳಿಂದ ದೂರವಾಗಿದ್ದ ಕೆಲವು ನನ್ನ ಮಿತ್ರರು ಎಸ್. ವಿ. ಸುಬ್ರಮ್ಮಣ್ಯಂರವರು ಖನಿಜವನ್ನು ಸಾಗಿಸುತ್ತಿದ್ದ ವಿಷಯವೇನಾಯಿತು ಎಂದು ಆಸಕ್ತಿಯಿಂದ ಕೇಳುತ್ತಿದ್ದಾರೆ. ಆದ್ದರಿಂದ ಎಲ್ಲಕ್ಕೂ ಸಹಾಯಕವಾಗುವ ರೀತಿಯಲ್ಲಿ ಸರ್ಕಾರದವರು ಎಲ್ಲಾ ವಿಷಯಗಳನ್ನೂ ಬಹಿರಂಗವಾಗಿ ದೇಶದ ಮುಂದಿಡಲಿ ಎಂದು ನಾನು ಕೇಳಿಕೊಳ್ಳುತ್ತೇನೆ.

ಆಮೇಲೆ, ಲೈಸೆನ್ಸ್ ಕೊಡತಕ್ಕ ವಿಷಯದಲ್ಲಿ ಈಗಿರುವ ಕಾನೂನಿನಲ್ಲಿ ಅನೇಕ ಲೋಪದೋಷಗಳಿವೆ.

ಸ್ವಾಮಿ, ಖನಿಜಗಳನ್ನು ತೆಗೆಯತಕ್ಕ ಪ್ರದೇಶವನ್ನು ಯಾರಾದರೂ ವ್ಯಕ್ತಿ ಕೊಡಬೇಕು ಎಂದು ಕೇಳಿದಾಗ ದನ್ನೂ ಸರ್ವೆ ಮಾಡುವುದಕ್ಕೆ ಸ್ವಲ್ಪ ಕಾಲವನ್ನು ಕೊಟ್ಟು, ಆಮೇಲೆ ಖಾಯಂ ಖನಿಜಗಳನ್ನು ತೆಗೆಯುವುದಕ್ಕೂ, ಗುತ್ತಿಗೆ ಕೊಡುವುದಕ್ಕೂ ಮಧ್ಯದಲ್ಲಿ ಕಾಲಾವಕಾಶವನ್ನೂ ಉಂಟುಮಾಡಿದ್ದಾರೆಂದು ಕೇಳಿದ್ದೇನೆ. ಖನಿಜ ಸಿಕ್ಕುವಹಾಗಿದ್ದರೆ ಈ ಸರ್ವೆ ಮಾಡತಕ್ಕದ್ದು, ಖನಿಜತೆಗೆದು ಸಾಗಿಸತಕ್ಕದ್ದು—ಈ ಎರಡು ಕ್ರಮಗಳು ಪ್ರಾಯಶಃ ಕೆಲಸಮಾಡುವ ದೃಷ್ಟಿಯಿಂದ ಅವಶ್ಯಕ ವಿರಬಹುದು. ಸರ್ವೆ ಮಾಡುವ ನೆಪದಲ್ಲಿ ಖನಿಜವನ್ನು ತೆಗೆದು ಸಾಗಿಸುವುದಕ್ಕೆ ಅವಕಾಶ ಕೊಡದರೀತಿಯಲ್ಲಿ ಸರ್ಕಾರದವರು ನಿಗಾ ಇಡುವುದು ಅವಶ್ಯಕವಾಗಿದೆ. ಈ ಒಂದು ಲೋಪದಿಂದ ಶ್ರೀ ಎಸ್ ವಿ. ಸುಬ್ರಹ್ಮಣ್ಯಂರವರ ಪ್ರಸಂಗ ಬೃಹದಾಕಾರವಾಗಿ ಸಾರ್ವಜನಿಕರ ಮುಂದೆ ಬಂತೆಂದು ಆಲೋಚಿಸುತ್ತೇನೆ. ಇನ್ನು ಮುಂದಾದರೂ ಸರ್ಕಾರದವರು ಸರ್ವೆ ಕಾಲದಲ್ಲಿ ಖನಿಜ ತೆಗೆಯುತ್ತಿದ್ದಾರೆಯೇ ಇಲ್ಲವೇ ಎನ್ನುವ ಬಗ್ಗೆ ನಿಗಾವನ್ನು ಇಟ್ಟು ಲೈಸನ್ಸ್ ಕೊಡುವಾಗ ಏನು ಒತ್ತಾಯವನ್ನು ಹಾಕಬೇಕೋ ಅದನ್ನು ಹಾಕಿ ಲೈಸನ್ಸ್ ಪಡೆದವರೀತಿ ಮಾತ್ರ ಖನಿಜವನ್ನು ಸಾಗಿಸುವುದಕ್ಕೆ ಅವಕಾಶವಿರುವಂತೆ ಏರ್ಪಾಡು ಮಾಡಬೇಕು. ಇವೊತ್ತು ಕೇಂದ್ರದ ಕೈಗೆ ಅನೇಕ ಇಲಾಖೆಗಳ ಆಡಳಿತವನ್ನು ವಹಿಸಿ ಅವುಗಳು ಎಷ್ಟರಮಟ್ಟಿಗೆ ನಡೆಯುತ್ತಿವೆ ಎಂಬುದನ್ನು ನೋಡುತ್ತಿದ್ದೇವೆ. ಕೇಂದ್ರದ ನೆರವನ್ನು ಪಡೆದು ಕೇಂದ್ರದವರು ಇಂತಹ ಖನಿಜಗಳನ್ನು ತೆಗೆಸುವ ಕಾರ್ಯವನ್ನು ಮಾಡುವ ವಿಷಯದಲ್ಲಿ ನಾನು ಒಪ್ಪುವುದಿಲ್ಲ. ಈಗಾಗಲೆ ನಾವು ಹಣಕಾಸಿನ ಒಪ್ಪಂದವನ್ನು ಕೇಂದ್ರ ಸರ್ಕಾರದೊಂದಿಗೆ ಮಾಡಿಕೊಳ್ಳುವಾಗ ಅನೇಕ ಆದಾಯ ಬಾಬುಗಳನ್ನು ಕೇಂದ್ರಕ್ಕೆ ಬಿಟ್ಟುಕೊಟ್ಟಿದ್ದೇವೆ. ಹೀಗೆ ಒಪ್ಪಂದ ಮಾಡುವಾಗಲೂಕೂಡ, ಕೇಂದ್ರದಿಂದ ಬರುವ ಹಣವನ್ನು ಕಾಲಕ್ರಮೇಣ ಕಡಿಮೆ ಮಾಡುತ್ತಾರೆಂದು ಹೇಳಿದ್ದಾರೆ. ಅದೃಷ್ಟವಶಾತ್ ಕಳೆದಸಾಲಿನಲ್ಲಿ ಖೋತಾ ಮಾಡದೆ ಕುಳಿತಿದ್ದಾರೆ. ಇದಕ್ಕೆ ಕೇಂದ್ರದವರನ್ನು ಅಭಿನಂದಿಸುತ್ತೇನೆ. ಇಂಥ ಪರಿಸ್ಥಿತಿ ತಪ್ಪಬೇಕು. ಪ್ರಾಂತಗಳು ಆಡಳಿತವನ್ನು ನಡೆಸಿಕೊಂಡು ಹೋಗುವುದಕ್ಕೆ ಸಾಕಷ್ಟು ಆದಾಯವಿರಬೇಕು. ಆ ದೃಷ್ಟಿಯಿಂದ ಪರಿಶೀಲಿಸುವುದಾದರೆ ನಿಜವಾಗಿಯೂ ಆಯಾ ಪ್ರಾಂತದಲ್ಲಿ ಸಂಬಂಧಪಟ್ಟ ಖನಿಜಗಳನ್ನು ತೆಗೆಸುವುದಕ್ಕೆ ಆಯಾ ಪ್ರಾಂತಗಳಿಗೆ ಅಧಿಕಾರವಿರುವುದು ಸೂಕ್ತ. ಹಾಗೇನಾದರೂ ಅಧಿಕಾರವನ್ನು ನಡೆಸುವುದಕ್ಕೆ ಪ್ರಾಂತಗಳಿಗೆ ಚೈತನ್ಯ ಇಲ್ಲದೇ ಹೋದರೆ, ಕೇಂದ್ರದಿಂದ ನೆರವನ್ನು ಸಾಲದ ರೂಪದಲ್ಲಿಯೋ, grant ರೂಪದಲ್ಲಿಯೋ ಪಡೆಯಬೇಕೇ ಹೊರತು, ಕೇಂದ್ರಕ್ಕೆ ಈ ಇಲಾಖೆಯನ್ನು ವಹಿಸಕೂಡದು. ನಾವು ಈ ರೀತಿ ದಾಸ್ಯ ಒಪ್ಪುವುದಿಲ್ಲ. ಏಕೆಂದರೆ, ಪುನರ್ವಿಂಗಡಣೆಯಾದಮೇಲೆ ಎಲ್ಲ ಪ್ರಾಂತಗಳೂ ಕೂಡ ಕೇಂದ್ರದ ದೃಷ್ಟಿಯಿಂದ ಸ್ವಪರಿಪೂರ್ಣ ಆಡಳಿತವನ್ನು ನಡೆಸಬೇಕಾಗಿದೆ. ಹೀಗಿರುವ ಸಂದರ್ಭದಲ್ಲಿ ಹಣಬರುವ ಇಲಾಖೆಗಳನ್ನು ಕೇಂದ್ರಕ್ಕೆ ವಹಿಸುತ್ತಾಹೋದರೆ, ಆಡಳಿತ ಯಂತ್ರವನ್ನು ನಡೆಸುವುದಕ್ಕೆ ಆಗದೆ ಹೋಗುತ್ತದೆ. ಆದ್ದರಿಂದ ಸರ್ಕಾರದವರು ಆದಷ್ಟು ತೀವ್ರವಾದ ರೀತಿಯಲ್ಲಿ ಆದಾಯ ಬರತಕ್ಕ ಇಲಾಖೆಗಳನ್ನು ಚೆನ್ನಾಗಿ ನೋಡಿಕೊಳ್ಳಬೇಕು. ಇಲಾಖೆಗಳೂ ಸಹ ಆದಾಯಬರುವುದಕ್ಕೆ ಪ್ರಯತ್ನ ಪಡಬೇಕು, ತಮಗೆ ಹಣಕಾಸಿನ ಕೊರತೆ ಇದ್ದರೆ, ಹಣಕಾಸಿನ ಸೌಲಭ್ಯ ಕಡಿಮೆಯಾದರೆ, ಕೇಂದ್ರದಿಂದ ಬೇರೆ ರೀತಿ ಯಾದಂತಹ ನೆರವನ್ನು ತೆಗೆದುಕೊಳ್ಳಬೇಕು. ತಮ್ಮ ಅಧೀನದಲ್ಲಿರತಕ್ಕ ಇಲಾಖೆಗಳನ್ನು ಚೆನ್ನಾಗಿ ನಡೆಸಿ ದೇಶದ ಬೊಕ್ಕಸಕ್ಕೆ ಹಣವನ್ನು ಸಿಕ್ಕುವಂತೆ ಏರ್ಪಾಡು ಮಾಡಬೇಕೆಂದು ತಿಳಿಸುತ್ತೇನೆ.

*ಶ್ರೀ ಎಚ್. ಎಂ. ಚನ್ನಬಸಪ್ಪ.—ಸ್ವಾಮಿ, ಈ ಡಿಮ್ಯಾಂಡಿನ ವಿಷಯದಲ್ಲಿ ಅನೇಕ ಮಾನ್ಯ ಸದಸ್ಯರು ಬಹಳ ಸಲಹೆಗಳನ್ನು ಕೊಟ್ಟಿರುವುದಕ್ಕಾಗಿ ಅವರಿ

ಗೌಡ್ರಿಗೆ ನಾನು ತುಂಬ ಕೃತಜ್ಞನಾಗಿದ್ದೇನೆ. ಶ್ರೀ ಹುಚ್ಚೇಗೌಡರು ಟೀಕೆ ಟಿಪ್ಪಣಿಗಳನ್ನು ಮಾಡುವಾಗ ಇಲಾಖೆಯು ಉತ್ತಮವಾಗಬೇಕೆಂಬ ವಿಶಾಲ ಮನೋಭಾವನೆಯಿಂದ ಮಾಡಿದ್ದಾರೆಯೇ ವಿನಾ, ಇಲಾಖೆಯಲ್ಲಿ ತಪ್ಪನ್ನು ಕಂಡುಹಿಡಿಯಬೇಕೆಂಬ ಮನೋಭಾವದಿಂದ ಮಾಡಿಲ್ಲವೆಂದು ತಿಳಿದುಕೊಂಡಿದ್ದೇನೆ. ಶ್ರೀ ಹುಚ್ಚೇಗೌಡರನ್ನು ಡಿಸ್ಟ್ರಿಕ್ಟ್ ಬೋರ್ಡ್ ಅಧ್ಯಕ್ಷರಾಗಿದ್ದಂದಿನಿಂದಲೂ ನಾನು ಬಲ್ಲೆ.

ಶ್ರೀ ಬಿ. ಹುಚ್ಚೇಗೌಡ.—ಇದು ನಾಲ್ಕು ವರ್ಷಗಳಿಂದ delay ಆಗಿದೆ. ತಾವು credit ತೆಗೆದುಕೊಳ್ಳುವ ಹಾಗಿಲ್ಲ. When the letter is delayed for 4 years, how can the Minister take the credit ?

Sri H. M. CHANNABASAPPA.—I am grateful to Sri Hutche Gowda. He wants me to work more efficiently and bring in more money and see that the wealth hidden within the earth is brought out to the benefit of the country. ಖಂಡಿತವಾಗಿ ತೆರಿಗೆ ಹಾಕುವುದು ಬಹಳ ಹೆಚ್ಚಾಗಿದೆ. ಜನಗಳಿಗೆ ಹೆಚ್ಚಾಗಿ ತೆರಿಗೆ ಹಾಕುವುದಕ್ಕೆ ಬದಲಾಗಿ ಬೇರೆ ಮಾರ್ಗಗಳನ್ನು ಅನುಸರಿಸಬೇಕು. ಮೊದಲು ಭೂಗರ್ಭದ ಸಂಪತ್ತನ್ನು ತೆಗೆದು ಜನಗಳ ಅನುಕೂಲಕ್ಕೆ ಮತ್ತು ದೇಶಾಭಿವೃದ್ಧಿಗೆ ಬೇಕಾದ ಸೌಕರ್ಯಗಳನ್ನು ಒದಗಿಸಬೇಕೆಂದು ಹೇಳಿದರು. ಅದು ಬಹಳ ಅತ್ಯುತ್ತಮವಾದ ಸಲಹೆ.

6-30 P.M.

ಇದನ್ನು ಆ ರೀತಿ ಮಾಡಬೇಕೆಂಬ ಸದುದ್ದೇಶದಿಂದ ಈಗ ನಾವು ಭೂಗರ್ಭದಲ್ಲಿರುವ ಸಂಪತ್ತನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಬೇಕೆಂದು ಸ್ವಲ್ಪ ಬಿಗಿ ಮಾಡಿದ್ದರಿಂದ, ಕೆಲವು ಜನರು ಅಲ್ಲಲ್ಲಿ ನಮಗೆ ಬಹಳ ಕಷ್ಟವಾಗಿದೆಯೆಂದು ಹೇಳುವುದು ಸ್ವಾಭಾವಿಕ. ನ್ಯಾಯಕ್ಕೆ ವಿರೋಧವಾಗಿ, ಕಾನೂನಿಗೆ ವಿರೋಧವಾಗಿ ನಾವು ಯಾರಿಗಾದರೂ ತೊಂದರೆ ಕೊಟ್ಟಿದ್ದರೆ ಅದು ತಪ್ಪು, ನಾನು ಒಪ್ಪಿಕೊಳ್ಳುತ್ತೇನೆ. ಇಂಥ ತಪ್ಪಾಗಿದೆಯೆಂದು ತೋರಿಸಿದ ಪಕ್ಷದಲ್ಲಿ ಕೂಡಲೆ ಇಪ್ಪತ್ತನಾಲ್ಕು ಗಂಟೆಯೊಳಗೆ ಅದನ್ನು ಸರಿಪಡಿಸಲು ಸಿದ್ಧವಾಗಿದ್ದೇನೆ.

ಇನ್ನೊಂದೆರಡು ವಿಷಯಗಳಿಗೆ ಉತ್ತರ ಹೇಳಬೇಕಾಗಿದೆ. ಕೆಲವು ದಿವಸಗಳಿಂದ ಉತ್ಪತ್ತಿ ಕಡಮೆಯಾಗಿದೆ ಎಂಬ ವಾದವನ್ನು ಮುಂದಿಟ್ಟಿದ್ದಾರೆ. ಹಿಂದಿನಂತೆ ಸುಲಭವಾಗಿ ಈಗ ಲೈಸೆನ್ಸ್ ಸಿಕ್ಕುವುದಿಲ್ಲ ಈಗ ಕಷ್ಟ, ನಿಜ. ಒಬ್ಬ ಮನುಷ್ಯ ಎಷ್ಟು ಭೂಮಿಯಲ್ಲಿ ಅಗೆಯುವುದು ಸಾಧ್ಯ ಎಂಬುದನ್ನು ನೋಡಬೇಕು. ಒಂದೆಕರೆ, ಎರಡೆಕರೆಯಲ್ಲಿ ಮಾಡಬಹುದು, ಅದು ಬಿಟ್ಟು ನೂರಾರು, ಸಾವಿರಾರು ಎಕರೆಯನ್ನು ಒಬ್ಬನಿಗೆ ಕೊಟ್ಟರೆ, ಇದು social pattern of societyಗೆ ವಿರೋಧ. ಒಬ್ಬ ಮನುಷ್ಯನಿಗೆ ಸಾವಿರ ಎಕರೆ ಕೊಡಬೇಕೆಂದು ಹೇಳುವುದು ನಮ್ಮ ಈ ಸಮಾಜವಾದಿ ತತ್ವಕ್ಕೆ ಸಲ್ಲದು. ಇದನ್ನು ಸರಿಪಡಿಸಬೇಕೆಂದು ಪ್ರಯತ್ನ ಮಾಡಿದರೆ, ಅದಕ್ಕೆ ಅಡ್ಡಿ ಆತಂಕಗಳು ಬರುತ್ತವೆ. ಒಬ್ಬೊಬ್ಬ ಮನುಷ್ಯ ಸುಮ್ಮನೆ ಲೈಸೆನ್ಸ್‌ಗಾಗಿ ಅರ್ಜಿ ಹಾಕಿಕೊಂಡು ಪ್ರತಿಸಾರಿಯೂ ಅವನಿಗೇ ಕೊಟ್ಟರೆ, ಅವನಿಗೆ monopoly ಬರುತ್ತದೆ. ಬಸ್ ಲೈಸೆನ್ಸ್ ತೆಗೆದುಕೊಂಡಹಾಗೆ ತೆಗೆದುಕೊಂಡು, ಅದನ್ನು ಹೇಗೆ ತಿಂಗಳಿಗೆ ನೂರು, ಇನ್ನೂರು, ಸಾವಿರ ರೂಪಾಯಿಗಳಿಗೆ ಮಾರಿಕೊಂಡು ಜೀವನ ಮಾಡುತ್ತಿದ್ದರೋ ಹಾಗೆ ಈ ಲೈಸೆನ್ಸನ್ನೂ ಮಾರಿಕೊಂಡು ಜೀವನ ಮಾಡಿಕೊಳ್ಳುವ ಜನರೂ ಇದ್ದಾರೆ. ಇದನ್ನು ತಪ್ಪಿಸಿ ಸರಿಪಡಿಸುವುದು ತಪ್ಪೆ ಎಂಬುದನ್ನು ಮಾನ್ಯ ಸದಸ್ಯರೇ ಹೇಳಲಿ. ಕಾನೂನಿನಲ್ಲಿ ಅವಕಾಶವಿದೆ ಎಂದು ಮಾರುವುದಕ್ಕೆ ಹೊರಟು ಐದು, ಹತ್ತು ಸಾವಿರ ರೂಪಾಯಿ ಸಂಪಾದನೆ ಮಾಡುತ್ತಾರೆ. ಕಾನೂನು ದೃಷ್ಟಿಯಿಂದ ಒಬ್ಬರನ್ನು ಸಾಹುಕಾರರಾಗಿ ಮಾಡಿ ಇನ್ನು ಮಿಕ್ಕವರನ್ನು ಗರೀಬರಾಗಿ ಮಾಡುವುದು ಕಾನೂನಲ್ಲ. ಈ ಸಂಬಂಧವಾಗಿ ಕೆಲವು ಅಂಕಿ ಅಂಶಗಳನ್ನು ಕೊಟ್ಟರೆ ಅವುಗಳು ತಮ್ಮಷ್ಟಕ್ಕೆ ತಾವೇ ಮಾತನಾಡುತ್ತವೆ.

ಉತ್ಪತ್ತಿಯ ವಿಷಯ ಹೇಳಿದರು. ಜಿಯಲಾಜಿಕಲ್ ಇಲಾಖೆಯಲ್ಲಿ royalty, rent, other receipts, Bureau of Mineral Department ಈ ರೀತಿ ಇದೆ:—

Last year's receipts... 9,12,000 rupees.

Year before last year. 6,31,000 ,,

and year before ... 4 lakhs and odd.

I will give you the figures for the last six years.

		Rs.
1945-46	...	1,12,000
1946-47	...	1,00,000
1950-51	...	1,39,000
1952-53	...	4,27,000
1953-54	...	6,31,000
1954-55	...	9,12,000

1955-56 up to 13th March 1956 Rs. 12,13,250-5-2 ಹೀಗೆ ಬಂದಿದೆ. ಹೀಗಿರುವಾಗ ಉತ್ಪತ್ತಿ ಕಡಮೆಯಾಗಿದೆ ಎನ್ನುವುದು ಸರಿಯೇ ?

ಶ್ರೀ ಬಿ. ಹುಚ್ಚೇಗೌಡ.—ಸಿಬ್ಬಂದಿ ಖರ್ಚು ಎಷ್ಟಾಗಿದೆ ಎಂಬ ವಿಷಯ ಹೇಳಿ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದನ್ನೂ ಹೇಳುತ್ತೇನೆ.

ಇದರಲ್ಲಿ ಉತ್ಪತ್ತಿಯನ್ನು ಇನ್ನೂ ಹೆಚ್ಚು ಮಾಡಬೇಕೆಂಬಿದೆ. ಹನ್ನೆರಡು ಲಕ್ಷದಿಂದ ಒಂದು ಕೋಟಿ ರೂಪಾಯಿ ಆಗಬೇಕು; ಹಾಗಾದರೆ, I shall be exceedingly happy and I am sure, in the years to come, it is possible to make one crore and even two crores and I and you will live to see that day.

ಇನ್ನು ಶ್ರೀ ಭೀಮಪ್ಪನಾಯಕರ ಇಡೀ ವರದಿಯನ್ನು ಬದಿಗೊತ್ತಿದ್ದಾರೆಂದು ಹೇಳಿದರು. ಅದನ್ನು ಕೇಳಿ ನನ್ನ ಮನಸ್ಸಿಗೆ ಬಹಳ ನೋವಾಯಿತು. ಅವರು ನನ್ನ ಮಿತ್ರರು. ನಾವು ಅವರ ವರದಿಯನ್ನು ಹಿಂದಕ್ಕೆ ಹಾಕಿಲ್ಲ. ಹಿಂದಕ್ಕೆ ಹಾಕುವುದು ಕಷ್ಟ. ಶ್ರೀಮಾನ್ ಭೀಮಪ್ಪನಾಯಕರ ವರದಿ ಸರ್ಕಾರಕ್ಕೆ ಬಂದದ್ದು 1955ನೆಯ ಇಸವಿ ಫೆಬ್ರವರಿಯಲ್ಲಿ. ಕೇವಲ ನಾಲ್ಕೈದು ತಿಂಗಳೊಳಗಾಗಿ ಅದನ್ನು ಪರಿಶೀಲನೆ ಮಾಡಿ ಏನೇನು ಕಾರ್ಯಕ್ರಮಗಳನ್ನು ಈಗಿರತಕ್ಕ ಪರಿಸ್ಥಿತಿಯಲ್ಲಿ ತೆಗೆದುಕೊಳ್ಳಬೇಕೋ ಅಷ್ಟನ್ನೂ ಸರ್ಕಾರ ತೆಗೆದುಕೊಂಡಿದೆ. ಉದಾಹರಣೆಗೆ ಹೇಳುವು

(ಶ್ರೀ ಎಚ್. ಎಂ. ಚನ್ನಬಸಪ್ಪ.)

ದಾದರೆ ಭೀಮಪ್ಪನಾಯಕರ ಸಮಿತಿ ವರದಿಯ 96ನೆ ಪುಟದಲ್ಲಿ ಎಂಟು ಮುಖ್ಯವಾದ ಶಿಫಾರ್ಸುಗಳನ್ನು ಮಾಡಿದ್ದಾರೆ. ಇವುಗಳಲ್ಲಿ ಐದು ಶಿಫಾರ್ಸುಗಳನ್ನು ಜಾರಿಗೆ ತರತಕ್ಕ ವ್ಯವಸ್ಥೆ ಮಾಡಿದ್ದೇವೆ.

ಒಬ್ಬ ಸದಸ್ಯರು.—ಆ ವರದಿ ಬಂದು ಆಗಲೇ ಒಂದು ವರ್ಷವಾಯಿತಲ್ಲವೇ ?

Sri H. M. CHANNABASAPPA.—I ask you, in the history of the administration, has any report been as quickly implemented as this report ? You cannot accuse the Government of indifference to this report. On the other hand, in the heart of hearts, you will congratulate the Government for taking prompt action in this matter. ಮೊದಲನೆಯದಾಗಿ Utilisation of sulphide deposits in Chitaldrug District. ಇದಕ್ಕಾಗಿ ಪಂಚವಾರ್ಷಿಕ ಯೋಜನೆಯಲ್ಲಿ 2,50,000 ರೂಪಾಯಿಗಳನ್ನು ಸೇರಿಸಿದ್ದೇವೆ. ಎರಡನೆಯದು Expansion of Chromite mining industry by putting beneficiation and concentration plant. ಇದಕ್ಕಾಗಿ ಐದು ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇನೆ. ಮೂರನೆಯದು Starting of China Clay Industry near Thirthahalli in Malnad area ಇದಕ್ಕಾಗಿ ಆರು ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ. ನಾಲ್ಕನೆಯದು Putting beneficiation plant and upgrading manganese ores in Kumsi area. ಇದಕ್ಕೆ ಐದು ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆಂದು ತಿಳಿಸಿದೆ. ಮತ್ತೆ ಐದನೆಯದು Organisation of diamond drilling units ಇದಕ್ಕಾಗಿ ಎರಡೂವರೆ ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಈ ರೀತಿಯಾಗಿ ಅವರು ಮಾಡಿರತಕ್ಕ ಎಂಟು ಶಿಫಾರ್ಸುಗಳಲ್ಲಿ ಐದನ್ನು ಒಪ್ಪಿಕೊಂಡು ಅದಕ್ಕೆ ಅವಶ್ಯಕವಾದ ಹಣವನ್ನು ಒದಗಿಸಿ, ಆ ಬಗ್ಗೆ ಕಾರ್ಯಕ್ರಮವನ್ನು ಇದೇ ಏಪ್ರಿಲ್ ಒಂದನೇ ತಾರೀಖಿನಿಂದ ತೆಗೆದುಕೊಳ್ಳಬೇಕೆಂದು ನಿರ್ಧರ ಮಾಡಿರುವಾಗ ಈ ವರದಿಯನ್ನು ಓದಿಗೊತ್ತಿದ್ದೀವೆಂದು ಹೇಳಿ ನನ್ನ ಮನಸ್ಸನ್ನು ನೋಯಿಸಿದರಲ್ಲ ಎಂದು ಖೇದವಾಗುತ್ತದೆ.

ಶ್ರೀ ಬಿ. ಹುಚ್ಚೇಗೌಡ.—ಆರು ಲಕ್ಷ ಉತ್ಪತ್ತಿ ಇದ್ದದು 12 ಲಕ್ಷವಾಗಿದೆ ಎಂದು ತಿಳಿಸಿದಿರಿ. ರೇಟು ಒಂದಕ್ಕೆರಡರಷ್ಟು ಜಾಸ್ತಿ ಮಾಡಿದ್ದರಿಂದಲ್ಲವೇ ಹೀಗೆ ಹೆಚ್ಚಾಗಿ ಬಂದಿರುವುದು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಂಬತ್ತು ಲಕ್ಷದಿಂದ 12 ಲಕ್ಷವಾಗಿದೆ. I will explain to you in detail, even to the last pie. I am prepared to stand all the criticism.

ಮತ್ತೆ ಸರಿಯಾದ ಪ್ರಗತಿಯನ್ನು ಹೊಂದಬಹುದಾಗಿತ್ತು, ಆದರೆ ನಾಯಕರ ವರದಿಯನ್ನು ಅನಾದರಣೆಯಿಂದ ನೋಡಿದ್ದಾರೆ ಎನ್ನುವುದು ಸರಿಯಲ್ಲವೆಂಬುದನ್ನು ತಮ್ಮ ಮನಸ್ಸಿಗೆ ಮುಂದಿಟ್ಟು ಮಾಡಿಕೊಡಲು ಹೇಳುತ್ತಿದ್ದೇನೆ. ಮತ್ತೆ ಇಚೀಚೆಗೆ ಬಹಳ complaints ಬರುತ್ತಿವೆ, ಕಾನೂನುಗಳನ್ನು ಮೀರಿ ಕೆಲವರು ನಡೆಯುತ್ತಿದ್ದಾರೆಂದು. ಅಂಥ ಜನಗಳಿಗೆ ಒಂದು ಬಾಗಿಲನ್ನು ತೋರಿಸಿ ಇಲ್ಲಿಯೇ ಹೋಗಬೇಕು, ಎಂದು ಹೇಳಲು ಸಾಧ್ಯವಾಗಲಾರದು. ಅವರುಗಳ ಮೇಲೆ ಕಾನೂನು ಬದ್ಧವಾದ ವ್ಯವಹಾರ ನಡೆಯಬೇಕು. ಕಾನೂನು ತಪ್ಪಿ ಕೆಲವರು ನಡೆಯುತ್ತಿದ್ದಾರೆ ಎನ್ನುವುದನ್ನು ಮಾತ್ರ ಒಪ್ಪಿಕೊಳ್ಳುತ್ತಿದ್ದೇನೆ.

ಎಸ್. ವಿ. ಸುಬ್ರಹ್ಮಣ್ಯಂರವರ ವಿಚಾರ ಪ್ರಸ್ತಾಪ ಮಾಡಿದರು. ಆ ವಿಷಯ ಜನರಿಗೆ ತಿಳಿಯಬೇಕು. ಅದು ತಾವು ಹೇಳುವುದಲ್ಲ. ಎಲ್ಲೋ ಮೀರಿ ಸರ್ಕಾರಿ ಜಾಗದಲ್ಲಿ ಗಣಿ ತೆಗೆದಿದ್ದಾರೆಂಬ ಅಪಾದನೆ ಈ ದಿವಸ ಬಂದಿದೆ. ಒಂದು ದಿವಸ ನಾನು ಆಜಮಾಯಿಷಿ ಮಾಡಲು ಹೋದಾಗ ಶ್ರೀ ಹುಚ್ಚೇಗೌಡರೂ ಸಹ ನನ್ನ ಜೊತೆಯಲ್ಲಿದ್ದರು, ಬಿಸಿಲಿನಲ್ಲಿ ಗುಡ್ಡವನ್ನು ಹತ್ತಿ ನೋಡಿಕೊಂಡು ಬರುವಾಗ ಮೈಯಲ್ಲೆಲ್ಲಾ ಬೆವರು ಬಹಳವಾಗಿ ಹರಿದು ಬಟ್ಟೆಯಲ್ಲಾ ನೆನೆಯಿತು. ಅವರು ಪಕ್ಕದಲ್ಲಿರುವ ಬೇರೆ ಸರ್ಕಾರಿ ಜಮೀನಿನಲ್ಲಿ ತೆಗೆದರೆಂಬ ಅಪಾದನೆಯಿತ್ತು. ಅದನ್ನು ಪೋಲೀಸಿನವರು ಇನ್‌ವೆಸ್ಟಿಗೇಟ್ ಮಾಡಿದರು. ಆಗ ಹಿಂದಿನ ಡೈರೆಕ್ಟರು ಬಂದು ನಿರ್ಧಾರಮಾಡಿ ಜಾಗ ತೋರಿಸಿದ್ದರೆಂದು ವಾದ ಮಾಡಿದರು. ಹಿಂದಿನ ಡೈರೆಕ್ಟರು ಬಂದು ತೋರಿಸಿದ್ದರೆಂದು ಹೇಳಿದ್ದರಿಂದ ಕ್ರಿಮಿನಲ್ ಅಪರಾಧವಾಗುವುದಿಲ್ಲವೆಂದು ನಿರ್ಧಾರವಾಯಿತು. ಕ್ರಿಮಿನಲ್ ಇಂಟೆನ್ಷನ್ ಇಲ್ಲವೆಂದು ಕೋರ್ಟಿನವರು ಅಭಿಪ್ರಾಯಪಟ್ಟರು. ಆದ್ದರಿಂದ ಅದು ಅಪರಾಧಕ್ಕೆ ಗುರಿಯಾಗಿಲ್ಲ. ಅದರಲ್ಲೂ ಸರ್ಕಾರದವರು ನಿರ್ದಿಷ್ಟವಾಗಿ ತಪ್ಪು ಮಾಡಿದವರನ್ನು ಶಿಕ್ಷೆ ಮಾಡಲು ಸ್ವಲ್ಪವೂ ಹಿಂದೆಗೆಯುವುದಿಲ್ಲವೆಂದು ಘಂಟಾ ಘೋಷವಾಗಿ ತಿಳಿಸುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಹಿಂದೆ ಡೈರೆಕ್ಟರು ತೋರಿಸಿದ್ದರೇ ಎಂಬುದನ್ನು ಪರಿಶೀಲಿಸಲಾಗಿದೆಯೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಡೈರೆಕ್ಟರೇ ಹೇಳಿದರು. ಆದ್ದರಿಂದಲೇ ಅಪರಾಧವಿಲ್ಲವೆಂದು ತೀರ್ಮಾನವಾಯಿತು.

Sri D. DEVARAJ URS.—Was the Director made responsible for that ?

Sri H. M. CHANNABASAPPA.—He is not there as a Director.

ಆ ಜಮೀನು ಸರ್ಕಾರದ್ದು ಎಂದು ಅವರು ಒಪ್ಪಿಕೊಂಡಿದ್ದಾರೆ, ಅದನ್ನು ಕೊಡಿ ಎಂದು ಹೇಳುತ್ತಿದ್ದಾರೆ. ಅದಾಗಬೇಕು, ಸರಿಯಾಗಿ ಪರೀಕ್ಷೆ ಮಾಡುತ್ತೇವೆ, ಅದು ಬೇರೆ ವಿಚಾರ. ಆದ್ದರಿಂದ ಆ ವಿಷಯದಲ್ಲಿ ತಪ್ಪಭಿಪ್ರಾಯ ಇಟ್ಟುಕೊಳ್ಳಬೇಕಾಗಿಲ್ಲ. ಎಲ್ಲಾದರೂ ತಪ್ಪು ಮಾಡಿದ್ದಾರೆಯೆ ಎಂದು ಕೇಳಿದರು. ಒಬ್ಬ ಮನುಷ್ಯ ತಪ್ಪು ಮಾಡಿದ್ದ; ಪಿ. ಎಲ್. ಇಟ್ಟುಕೊಂಡು ಕಮರ್ಷಿಯಲ್ ಮೈನಿಂಗ್ ಹೆಚ್ಚಾಗಿ ಮಾಡಿದ್ದರಿಂದ 9,600 ರೂಪಾಯಿಗಳ ಜುಲ್ಮಾನೆ ಹಾಕಿದ್ದೇವೆ. ಅದಕ್ಕಿಂತಲೂ ಹೆಚ್ಚಿನ ಕಠಿಣ ಶಿಕ್ಷೆ ವಿಧಿಸುವುದಕ್ಕೆ ಸಾಧ್ಯವೆ ?

ಶ್ರೀ ಬಿ. ಹುಚ್ಚೇಗೌಡ.—ಅದು ಸಾಲದು, ಇನ್ನೂ ಕಠಿಣವಾದ ಶಿಕ್ಷೆ ವಿಧಿಸಬೇಕಾಗಿತ್ತು.

Sri H. M. CHANNABASAPPA.—That is the maximum punishment that could be imposed under the law. I would like to inform the Hon'ble Members that there is absolutely no intention whatsoever on the part of the Government to give any trouble to anybody except those who violate the law and act in a manner which is

detrimental to the interest of the State. ಅದೇ ಪರಮಾವಧಿ ಶಿಕ್ಷೆ, ಕಾನೂನು ಪ್ರಕಾರ ಉಗ್ರವಾದ ಶಿಕ್ಷೆ. ಆದ್ದರಿಂದ ತಪ್ಪು ಮಾಡಿದವರಿಗೆ ಉಗ್ರವಾದ ಶಿಕ್ಷೆ ಕೊಡಬೇಕೆಂಬುದೇ ಸರ್ಕಾರದ ಆಶಯ. ಜನರ ಹಿತ ಸಾಧನೆ ಮಾಡಬೇಕೆಂಬ ವಿಷಯದಲ್ಲಿ ನಮಗೂ ನಿಮಗೂ ಭಿನ್ನಾಭಿಪ್ರಾಯವಿಲ್ಲ. ಯಾರಿಗೂ ತೊಂದರೆಯಾಗದಂತೆ ದೇಶದ ಹಿತವನ್ನು ಸಾಧಿಸಬೇಕಾಗಿದೆ.

ಇನ್ನೊಂದು ವಿಷಯ ಹೇಳಿದರು. ಪಿ. ಎಲ್. ನಿಂದ ಎಂ. ಎಲ್. ಗೆ ಟ್ರಾನ್ಸ್ಫರ್ ಮಾಡಿದೆ, ಮೈನಿಂಗ್ ಲೀಸ್ ಹೀಗಾಗಿದೆ ಎಂದು ಹೇಳಿದರು. ಅದರಲ್ಲಿ ಮ್ಯಾಂಗನೀಸೇ ಇಲ್ಲ, ಗುಡ್ಡದಿಂದ ಮಳೆಯಲ್ಲಿ ಜಾರಿಕೊಂಡು ಬಂದಿದೆ ಎಂದು ಎಕ್ಸ್‌ಪ್ಲನೇಷನ್ ಕೊಟ್ಟಿದ್ದಾರೆ.

ಶ್ರೀ ಬಿ. ಹುಚ್ಚೇಗೌಡ.— ಅಷ್ಟು ತೆಗೆದರೂ 40 ಟನ್ ತೆಗೆದರೂ ನಿಮ್ಮ ಇಲಾಖೆ ಏನು ಮಾಡಿದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದಕ್ಕೆ ಯಾರು ಜವಾಬ್ದಾರರೆಂದು ಕೂಲಂಕಷವಾಗಿ ಪರಿಶೀಲಿಸಿ ಯಾರನ್ನು ಶಿಕ್ಷೆಗೆ ಗುರಿ ಮಾಡಬೇಕೋ ಅವರನ್ನು ಗುರಿಮಾಡಲು ಆಜ್ಞೆ ಮಾಡಿದೆ. ಆದ್ದರಿಂದ ಶ್ರೀ ಹುಚ್ಚೇಗೌಡರು ಈಗ ಸಮಾಧಾನ ಪಡಬೇಕು. ಇನ್ನೊಂದು ಸಂದರ್ಭ ಬಂದಾಗ ಶಿಕ್ಷೆ ಮಾಡಿರುವುದನ್ನು ತಿಳಿಸುತ್ತೇನೆ. It is a decision of the court of law. I cannot question it. It is not my decision. I, it were left to my decision, things would have been different.

(*a*) the number of applications received every year since the last two years from Anekal Taluk requesting to grant aid for constructing Harijan houses;

(*b*) out of the abovesaid applicants, the number that are granted aid;

(*c*) the amount of aid granted each year;

(*d*) whether it has come to their notice that the Taluk Development Committee has adopted a resolution requesting to grant more amount and sent it to the Government since the abovesaid sum is too small when compared to the number of applicants ?

A.—Sri T. CHANNIAH (Minister for Public Health and Local Self-Government).—

	1953-54		*1954-55*
(*a*)	578	...	112
(*b*)	54	...	55
(*c*)	10,000	...	13,800

(*d*) Yes.

Rural Improvement Works in Hoskote and Anekal Taluks.

Q.—591. Srimathi LAKSHMIDEVI RAMANNA (Hoskote-Anekal).—

Will the Government be pleased to state :—

(*a*) the number of petitions received in Hoskote and Anekal Taluks since the past two years for rural improvement works;

(*b*) the amount provided in this behalf for the abovesaid Taluks during each year since the last two years ?

A.—Sri T. CHANNIAH (Minister for Public Health and Local Self-Government).—

(*a*)—

		Hoskote	*Anekal*
1954-55	...	49	86
1955-56	...	54	96

(*b*)—

		Rs.	Rs.
1954-55	...	37,330	38,813
1955-56	...	41,625	42,750

Unauthorised Cultivation in Magadi Taluk.

Q.—609. Sri S. SIDDAPPA (Magadi).—

Will the Government be pleased to state :—

the extent of forest land that is being cultivated unauthorisedly in each village in Magadi Taluk ?

A.—Dr. R. NAGAN GOWDA (Minister for Agriculture).—

Acres	*Guntas*
120	25

Details

Madabal : Over 118 acres and 35 guntas.

Kasaba Hobli, Solur : One acre and 30 guntas.

BUDGET FOR 1956-57—DEMANDS FOR GRANTS (*Contd.*)

Sri R. ANANTARAMAN (Chamarajpet).—I have got a suggestion to make regarding the allotment of timings for discussion of Demands. Demand No. 7 one hour. Demand No. 14 two hours. Demand No. 15 half an hour.

Mr. SPEAKER.—Demand No. 7 : One hour and 15 minutes. If there are more number of members anxious to speak on this Demand, I will increase it to one and a half hours. Demand No. 14 : One and a half hours, Demand No. 15 : Half an hour.

DEMAND No. 7—GENERAL SALES-TAX, OTHER TAXES AND DUTIES—ADMINISTRATION.

13. OTHER TAXES AND DUTIES.

Mr. SPEAKER.—Motion moved :

"That a sum not exceeding Rs. 17,61,000 be granted to the Government to defray the charges which will come in course of payment during the year ending 31st day of March 1957, in respect of 'Other Taxes and Duties'."

*Sri M. RAJASEKHARA MURTHY (Yelandur).—The Bangalore Race Club has been figuring in the news every now and then. I feel that it is necessary to present a correct statement of facts about this Club. My friend Sri Mariappa who sympathised with the Opposition Party and who almost played the role of a member of the Opposition Party, made two important observations on the Bangalore Race Club. The first one is that the Government is unnecessarily interfering with the internal autonomy of the Bangalore Race Club which is a private social institution ; secondly, there has been a delay on the part of the Government in issuing licence to the Bangalore Race Club, resulting in a heavy loss of revenue to the Government. The Bangalore Race Club was started somewhere in the year 1919 with 50 members and Brigadier Hill from 1923 to 1949 rendered yeoman service and built up a huge reserve of Rs. 7 lakhs and some people who have some ill-feeling or some bitterness towards that man, made certain allegations. The Bangalore Race Club appointed a sub-committee to enquire into the allegations made against him. Four members as against one submitted a report that the charges levelled against him were baseless. The recommendation of the sub-committee was approved by the general body. There were two

1 P.M.

parties. One is majority party and the other is a minority party. Members of the minority party had tremendous influence with the Government. They

(SRI M. RAJASEKHARA MURTHY).

approached the then Government in 1949 and secured an order in their favour stating that all Government officers should resign. That order was passed in 1949. Consequent to that order the majority party became the minority party and the minority party became the majority party. How that order was passed, why that order was passed, for whom that order was passed I am not going to enter into on merits. I just leave it to the members to consider it for themselves. I only. . .

Sri T. MARIAPPA (Mysore City-North).—Government had never a majority.

Sri M. RAJASEKHARA MURTHY.—Not the Government. There were two parties among the members. In 1949 an order was passed by the then Government and as a consequence of that, soon after that order was passed by the Government, there was reaction in the Press also. I would like to quote one or two instances of what appeared in the 'Hindu' dated 15th September 1949.

> "It has been suggested that it amounts to taking side. . . in the normal management of the club and it is intended to support a minority with bias and partiality in respect of internal autonomy of a private. . . and that the interference with the normal. . ."

Sri A. G. NARASIMHA REDDY (Bangalore South).—Sir, on a point of order. Is any Hon'ble Member permitted to read newspaper extracts ? He has been reading some opinion that might have appeared in the Press in 1949. He is reading from a newspaper cutting. Is that permitted according to the procedure of the House ?

Sri M. RAJASEKHARA MURTHY.—He has mistaken me and I am only giving an extract from the news that appeared in the 'Hindu' of that date.

*Sri A. BHEEMAPPA NAIK (Molakalmuru).—Extract from what ? From the editorial or from some pseudonymous letter ? Is anything that appears in the columns of a newspaper an authority to be quoted here ?

Mr. SPEAKER.—Of course, what appears in the Press cannot be considered to be an authority. Without disclosing the source, what is the use of reading it ?

Sri A. BHEEMAPPA NAIK.—It may be his own version.

Sri M. RAJASEKHARA MURTHY.—I made it clear already that it appeared in the 'Hindu' of 15th September 1949. Let him make a reference to it.

Sri A. BHEEMAPPA NAIK.—By whom was this sent ? Is this an article or the editorial quotation ? You do not say anything. You simply say, it appears. Anything may appear in the 'Hindu'. There were many deaths on that day and that may appear. That is also a statement that appears in the 'Hindu'. So many other things also, for instance advertisements, appeared the 'Hindu'.

Sri M. RAJASEKHARA MURTHY.—It has appeared in the news column.

Sri A. BHEEMAPPA NAIK.—Such reading of extracts cannot be permitted, Sir.

Mr. SPEAKER.—Any news referred to in the Press cannot be considered as authoritative.

Sri M. RAJASEKHARA MURTHY.—It is on account of this unwarranted interference by the Government by passing the order in 1949 that the subsequent developments have taken place in the Bangalore Race Club, and but for that, present interference on the part of this Government would not have arisen at all. All the Government officers who were members of the Race Club, other than those nominated should resign from the Race Club—that is what the order said.

Sri K. PUTTASWAMY (Srirangapatna).—The point made is 'interference by the Government'. So the Hon'ble Member admits that there has been interference by the Government.

Sri M. RAJASEKHARA MURTHY.—I said that the present interference in the affairs of the Race Club is in continuance of the interference made by the then Government in 1949.

Regarding the second point that there has been delay in issuing licence to the Race Club and consequent loss of revenues to the exchequer, I would like to say a few words. In accordance with the assurance given by the Government and taking note of certain allegations made by some Hon'ble Member—if I remember correctly it was Sri Srinivasa Iyengar,—the Government constituted a special committee consisting of four persons. This committee submitted a report stating that the rules of the Club should be modified and until such modification no licence shall be issued. The recommendations were approved by the Government in toto. On the assurance held out to the Managing Committee of the Race Club, on the understanding that the Government may appoint a special officer till such modifications are effected in the rules, licence was issued. Soon after the licence was issued. . .

Sri T. MARIAPPA.—Is it understanding or a Government order ?

Mr. SPEAKER.—Hon'ble Member should not exceed the time limit, because there are many members to speak.

Sri M. RAJASEKHARA MURTHY.—Government issued licence. Soon after, there was change in the attitude of the Race Club. They appointed a negotiating committee in order to meet the Home Minister. The committee met the Home Minister several times and arrived at a compromise formula regarding the quantum of Governments' representation on the management. But the Managing Committee of the Race Club turned down the compromise formula arrived at between the Negotiating Committee and the Government.

(*Interruption by Sri N. C. Nagiah Reddy*)

Mr. SPEAKER.—The Hon'ble Member is not in his seat at all. And the Hon'ble Member Sri Rajasekhara Murthy must close his remarks. Only a little time is left for the other members to speak.

Sri M. RAJASEKHARA MURTHY.—This committee placed the matter before the general body but the meeting of the general body did not take place. It was being postponed now and then quite against the rules of the Race Club and the Senior Steward who happened to be a member of the second negotiating committee is reported to have met two days prior to the meeting of the general body of the Race Club, the Chief Minister who is alleged to have said that licence cannot be issued in view of the difference between the Government and the management. That was reported to the general body and the general body authorised the management to take such action as is necessary against the members of the special committee appointed by the Government for making certain statements in the report. And the things are in that state. Now the question is, whether the future of the Race Club should depend upon or should be dictated by some recalcitrant elements in the Race Club or whether the Government should surrender themselves to the terms of the Race Club or whether the Government should keep this question under suspension for a long time merely because the Club has developed a kind of apathy towards any kind of compromise with the Government or whether the Government is not entitled to conduct negotiations with any other agency who are interested in running the races. In my opinion Government should conduct negotiations with those who are interested in running the races irrespective of the attitude of the Race Club who have imported irrelevant considerations in their conduct towards the Government.

I would like to say only one or two words about the sales-tax on silk and cocoons.

Mr. SPEAKER.—The Hon'ble Member has exceeded the time limit.

Sri M. RAJASEKHARA MURTHY.—Only two points. Government are levying sales-tax on cocoons and silk. Sericultural industry is a cottage industry. Various associations representing different industries have appealed to Government that the tax on both silk and cocoons should be abolished. The technical committee which met in Bombay last May have

(SRI M. RAJASEKHARA MURTHY).

made a request to the State Government that tax on silk and cocoons should not be levied. The Karve Committee appointed by the Government of India which prepared a plan for the development of cottage industry have said that the tax on cottage industry products should be avoided. The Silk Association, the Reelers Association and several organisations, in their conferences held now and then, and attended by sericulturists have requested the Government to abolish sales-tax on silk and cocoons. But still the Government have not taken suitable action.

Regarding the levy of tax, the Cocoon Act says that cocoon sold by rearers is not liable for taxation. That means that if cocoons are directly sold by the rearers other than the producer to the reeler, the tax will not be collected. If it is sold by an agent other than the agent who deals in that, he should pay the tax. The tax is paid for purposes of convenience, to get supply through the agents. The tax that they pay is only 2 pies per rupee. But the sales-tax now levied by the Government is 3 pies a rupee. But the actual receipts by the agents is only one per cent; and the money which comes from these agents who are dealing in cocoons has been prescribed for non payment of taxes. Cases have been pending before the Government and many of them have no profit at all. I request in the interest of the cottage industries, this tax and the tax both on cocoons as well as raw silk and charka silk and silk produced in domestic basins not driven by power are removed. Thank you very much.

*ಶ್ರೀ ಎಸ್. ಶ್ರೀನಿವಾಸಐಯ್ಯಂಗಾರ್ (ಟಿ.-ನರಸೀಪುರ).—ಸ್ವಾಮಿ, ಸೇಲ್ಸ್‌ಟ್ಯಾಕ್ಸ್ ವಿಚಾರದಲ್ಲಿ ಬಹಳವಾಗಿ ಹೇಳುವುದು ಇದೆ. ಸೇಲ್ಸ್ ಟ್ಯಾಕ್ಸಿನಿಂದ ವರ್ಷ ವರ್ಷೇ ವರಮಾನ ಹೆಚ್ಚಾಗುತ್ತಿದೆ ಎಂದು ಹೇಳಿದರೆ ಅದು ವಸೂಲಿ ಕ್ರಮದಲ್ಲಿ ಬಹಳ ಮುತುವರ್ಜಿ ವಹಿಸಿ ಮಾಡಿದ್ದರಿಂದ ಹೆಚ್ಚಾಗಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಹೋದವರ್ಷದಿಂದ ಸುಮಾರು 43 ಪದಾರ್ಥಗಳ ಮೇಲೆ single point levy ಹಾಕಿದ್ದರಿಂದ ತೆರಿಗೆ ಹೆಚ್ಚಾಗಿ ಬಂದು ವರಮಾನ ಹೆಚ್ಚಿದೆಯೇ ಹೊರತು ಆಡಳಿತದಕ್ಷತೆಯಿಂದ ಈ ವರಮಾನ ಹೆಚ್ಚಿದೆ ಎಂದು ನಂಬುವುದಕ್ಕಾಗುವುದಿಲ್ಲ. ಈಗ ಮಾರಾಟ ತೆರಿಗೆಯ ಒಂದು ಐಟಂನಲ್ಲಿ 50 ಲಕ್ಷರೂಪಾಯಿ ಬಾಕಿ ಇದೆ. ಇದು ಯಾವಾಗ ವಸೂಲಾಗುತ್ತದೆಯೋ ಗೊತ್ತಿಲ್ಲ. ಈಗ ಸುಮಾರು 1948ನೆ ಇಸವಿಯಲ್ಲಿ ಇದು ಜಾರಿಗೆ ಬಂದು 1949ನೆ ಇಸವಿಯಿಂದ ಪ್ರಾರಂಭವಾಯಿತು. ಇಲ್ಲಿಯವರೆಗೆ 50 ಲಕ್ಷ ರೂಪಾಯಿ ಮಾರಾಟ ತೆರಿಗೆ ಬಾಕಿ ಇದೆ. ಇದನ್ನು ಯಾವಾಗ waive ಮಾಡುತ್ತಾರೋ ಗೊತ್ತಿಲ್ಲ. ಇಷ್ಟು ಭಾರಿ ಮೊತ್ತದ ಹಣವನ್ನು ಬಾಕಿ ಬಿಡುವುದಕ್ಕೆ ಕಾರಣವೇನು ? ಸಿಬ್ಬಂದಿಗೆ ಲಕ್ಷಾಂತರ ರೂಪಾಯಿ ಖರ್ಚು ಮಾಡುತ್ತಿದ್ದಾರೆ. ಅನೇಕರ ಹತ್ತಿರ ಮಾರಾಟ ತೆರಿಗೆಯ ವಸೂಲಿಗೆ ಬೇಕಾದಷ್ಟು ಬಲವಂತವಾದ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ. ಅಂಥದರಲ್ಲೂ ಇಷ್ಟು ಬಾಕಿ ಇರಬೇಕಾದರೆ ಏನು ಕಾರಣ? ಏತಕ್ಕೆ ಸರ್ಕಾರದವರು ದಕ್ಷತೆಯಿಂದ ಕೆಲಸಮಾಡಲಿಲ್ಲ? ಇದನ್ನು ಮೊದಲು ವಿಚಾರಣೆ ಮಾಡಬೇಕು. ಮಾರಾಟ ತೆರಿಗೆ ಬಾಬಿನಲ್ಲಿ ಬಾಕಿ ಇರುವ 50 ಲಕ್ಷ ರೂಪಾಯಿಗಳನ್ನು ಕೂಡಲೇ ವಸೂಲ್ಮಾಡಬೇಕು. ಸುಮ್ಮನೆ ಆಡಳಿತ ತೆಗೆದುಕೊಳ್ಳಬಾರದು. ಬಡ್ಜೆಟ್ಟಿನಲ್ಲಿ ತಂದರೆ, ಈ ಬಾಬಿನಲ್ಲಿ ಸರಿಯಾಗಿ ಕೆಲಸ ನಡೆಯುತ್ತಿದೆಯೇ, ಇಲ್ಲವೇ ಎನ್ನುವುದನ್ನು ವಿಮರ್ಶೆ ಮಾಡತಕ್ಕ ದಕ್ಷತೆ ಇಲ್ಲದೆ ಹೋದರೆ ಹೇಗೆ ನಡೆಯುತ್ತದೆ. ನಾವುಗಳೆಲ್ಲ ಯಾತಕ್ಕೆ ಕಂದಾಯಗಳನ್ನು ಸಲೀಸಾಗಿ ಕೊಡಬೇಕು. ಮಾರಾಟ ತೆರಿಗೆಯನ್ನು ವಸೂಲ್ಮಾಡುವುದಕ್ಕೆ ಆಗದೆ ಹೋದಮೇಲೆ ಕಂದಾಯಗಳನ್ನು ಇನ್ನು ಮೇಲೆ ಕೊಡುವುದಿಲ್ಲ. ಯಾತಕ್ಕೆ ಕೊಡಬೇಕು ?

ಎರಡನೆಯದಾಗಿ Assistant Sales-tax Officer ನೇಮಕದ ವಿಚಾರದಲ್ಲಿ ಸರ್ಕಾರ ಮನಸ್ಸಿಗೆ ಬಂದಹಾಗೆ ವರ್ತಿಸುತ್ತಿದೆ. ಅವರಿಗೆ ತೋಚಿದ ಹಾಗೆ ಮಾಡುತ್ತಿದ್ದಾರೆ. ಮೂರು ಜನರನ್ನು ಸೇಲ್ಸ್‌ಟ್ಯಾಕ್ಸ್ ಇಲಾಖೆಯಲ್ಲಿ ಅಸಿಸ್ಟೆಂಟ್ ಸೇಲ್ಸ್‌ಟ್ಯಾಕ್ಸ್ ಆಫೀಸರ ಹುದ್ದೆಗೆ ಭರ್ತಿಮಾಡಬೇಕಾಯಿತು. ಇಲಾಖೆಯಲ್ಲಿದ್ದ ನಾಲ್ಕು ಜನ ಗುಮಾಸ್ತರಲ್ಲಿ ಪ್ರಮೋಷನ್ ಕೊಟ್ಟು ಈ ಹುದ್ದೆಗಳಿಗೆ ನೇಮಿಸಿದರು. ಅವರಿಗೆ ಗುಮಾಸ್ತರಾಗಿ 80 ರೂಪಾಯಿ, 90 ರೂಪಾಯಿ, 100 ರೂಪಾಯಿ ಹೀಗೆ ಸಂಬಳ ಬರುತ್ತಿತ್ತು. ಇಂಥವರನ್ನು ಅಸಿಸ್ಟೆಂಟ್ ಸೇಲ್ಸ್ ಟ್ಯಾಕ್ಸ್ ಆಫೀಸರುಗಳೆಂದು 150, 200 ರೂಪಾಯಿ ಸಂಬಳ ಕೊಟ್ಟು Gazetted rankಗೆ ಪ್ರಮೋಷನ್ ಕೊಟ್ಟರು. ಇವರುಗಳಲ್ಲಿ ಯಾರೂ ಸಹ ಪದವೀಧರರಲ್ಲ; ಎಲ್ಲರೂ under-graduates. ಇಂಥವರನ್ನು ಏಕ್‌ದಂ Gazetted Officers ಮಾಡಿದರು. ಆಗ ನಾನು ಒಂದು ಖೋತಾ ಸೂಚನೆ ಕಳುಹಿಸಿ, "ಗೆಜೆಟೆಡ್ ಹುದ್ದೆಗೆ ಯಾರನ್ನಾದರೂ ನೇಮಿಸಬೇಕಾದರೆ, First Division Clerks ಆಗಿದ್ದರೆ ಪ್ರಮೋಷನ್ ಕೊಡಬೇಕಾಗಿತ್ತು; Second Division ನಲ್ಲಿ ಇದ್ದವರಿಗೆ ಪ್ರಮೋಷನ್ ಕೊಟ್ಟದ್ದು ತಪ್ಪು; ಒಂದು ಅಕ್ರಮ, ಅನ್ಯಾಯ ಮಾಡುತ್ತಿದ್ದೀರಿ. ಯಾವುದೋ ಒಂದು ದೃಷ್ಟಿಯಿಂದ ಕೆಲಸ ಮಾಡುತ್ತಿದ್ದೀರಿ, ಇದು ಬಹಳ ತಪ್ಪು. ಒಂದು ಪದ್ಧತಿ ಇಟ್ಟುಕೊಂಡು, ಸರ್ಕಾರದಲ್ಲಿ ಕೆಲಸ ಮಾಡತಕ್ಕ ನೌಕರರಿಗೆ ನಂಬಿಕೆ ಬರುವಂತೆ ಕೆಲಸಗಳನ್ನು ಮಾಡಬೇಕು. ನೀವು ಮಾಡಿರುವಂಥ ಕಾರ್ಯವನ್ನು ನೋಡಿದರೆ ಅಕ್ರಮವಾದ ಕೆಲಸಗಳನ್ನು ಮಾಡುತ್ತಿದ್ದೀರಿ" ಎಂದು ಆಕ್ಷೇಪಣೆ ಮಾಡಿದೆ. ಅದಕ್ಕೆ ಹೇಳಿದರು "ಅಂಥದೇನೂ ಇಲ್ಲ. ಪಬ್ಲಿಕ್ ಸರ್ವಿಸ್ ಕಮಿಷನ್ನಿಗೆ ಕೇಳುತ್ತಿದ್ದೇವೆ; graduates ಇಲ್ಲ, under-graduates ಇದ್ದಾರೆ" ಎಂದು ಮುಂತಾಗಿ ಹೇಳಿದರು. ಇದು ಬಹಳ ತಪ್ಪು, ಧೋರಣೆ. ಪಬ್ಲಿಕ್ ಸರ್ವಿಸ್ ಕಮಿಷನ್ನಿಗೆ ಬರೆದರಂತೆ, ಅವರು ಶಿಫಾರ್ಸು ಮಾಡಿದರಂತೆ,

ಸರ್ಕಾರದವರು confirm ಮಾಡಿದರಂತೆ. ಈ ಒಂದು ನಾಟಕ ಏತಕ್ಕೆ? ಅಲ್ಲದೆ "ಈ ಇಲಾಖೆಯಲ್ಲಿರುವವರು ಬಹಳ ದಕ್ಷರು, ಗುಮಾಸ್ತೆ ಕೆಲಸ ಮಾಡಿರತಕ್ಕವರಿಗೆ ಕೆಲಸ ಗೊತ್ತಿರುತ್ತದೆ. ಅಂಥವರನ್ನು ಗೆಜೆಟೆಡ್ ಹುದ್ದೆಗೆ ಏರಿಸಿ Assistant Sales-tax Officer ಮಾಡಿದರೆ ವಸೂಲಿ ಕೆಲಸ ಚೆನ್ನಾಗಿ ಆಗುತ್ತದೆ. ಆದುದರಿಂದ ಇವರನ್ನೇ ತೆಗೆದುಕೊಳ್ಳುತ್ತೇವೆ. ಬೇರೆ ಇಲಾಖೆಯಿಂದ ತೆಗೆದುಕೊಂಡರೆ ಸರಿಹೋಗುವುದಿಲ್ಲ, ಅವರು ಕೆಲಸವನ್ನು ಕಲಿಯಬೇಕಾದರೆ ಬಹಳ ದಿವಸಗಳಾಗುತ್ತವೆ" ಎಂದರು. ಒಂದು ವರ್ಷ ಕಳೆಯಿತು. ಇಲಾಖೆಯಿಂದ ತೆಗೆದುಕೊಳ್ಳಬೇಕಾದ ಕಾಲ ಬಂದು, ಸೀನಿಯಾರಿಟಿ ಪ್ರಕಾರ ಕೊಡಬೇಕಾದಾಗ ತಮ್ಮ ನೀತಿಯನ್ನು ಬದಲಾಯಿಸಿ ಇನ್ನು ಮೇಲೆ ಇಲಾಖೆಯಿಂದ ತೆಗೆದುಕೊಳ್ಳುವುದಿಲ್ಲ, ಅಮಲ್ದಾರರನ್ನು ತೆಗೆದುಕೊಳ್ಳುತ್ತೇವೆ ಎಂದರು. ಅಮಲ್ದಾರರ postings ಆಯಿತು. ಇಲಾಖೆಯಲ್ಲಿ ಪ್ರಮೋಷನ್ ಸಿಕುತ್ತದೆಂದ ಕಾದಿದ್ದವರು ಸರ್ಕಾರದ ನೀತಿಯಿಂದ ಬಹಳ ನಿರಾಶರಾದರು. Gazetted Officers ಆಗಿ ಹಾಕಬೇಕಾದರೆ ಅಮಲ್ದಾರರ ರ್‍ಯಾಂಕಿನವರನ್ನು ಹಾಕಿ. 200 ರೂಪಾಯಿ 300 ರೂಪಾಯಿ ಸಂಬಳ ತೆಗೆದುಕೊಳ್ಳತಕ್ಕ ಅಮಲ್ದಾರರನ್ನು ಈ ಹುದ್ದೆಗಳಿಗೆ ಹಾಕಿದರೆ ಹೆಚ್ಚು ಖರ್ಚಾಗುವುದಿಲ್ಲ. ಅದು ಬಿಟ್ಟು 70 ರೂಪಾಯಿ, 80 ರೂಪಾಯಿ 100 ರೂಪಾಯಿ ಈ ರೀತಿ ಸಂಬಳ ಪಡೆಯತಕ್ಕ ಎರಡನೆ ದರ್ಜೆ ಗುಮಾಸ್ತರನ್ನು ಏಕ್‌ದಂ Assistant Sales-tax Officer ಆಗಿ ಮಾಡಿದರೆ, 250 ರೂಪಾಯಿಗಳ ಬೇಸಿಕ್ ಸಂಬಳ ಕೊಡಬೇಕಾದರೆ ಯಾರ ಮನೆ ದುಡ್ಡು ಎಂದು ಕೊಟ್ಟಿರಿ? ಹೆಚ್ಚಿಗೆ ಖರ್ಚಾಗದ ರೀತಿಯಲ್ಲಿ Assistant Sales-tax Officer ಹುದ್ದೆಗಳನ್ನು ಭರ್ತಿ ಮಾಡಬೇಕೇ ಹೊರತು ಹೆಚ್ಚಿಗೆ ಖರ್ಚಾಗಬಾರದು ಎಂದು ಒಂದು ಸಲಹೆಯನ್ನು ಕೊಟ್ಟೆ. ಸರ್ಕಾರದವರು ಆಗ ಅದೇ ರೀತಿಯಾಗಿ ಮಾಡಿದರು. ಇದಾದ ಸ್ವಲ್ಪ ದಿವಸದ ಮೇಲೆ ನಾವು ಏನನ್ನು ಮಾಡಬಾರದು ಎಂದು ಹೇಳಿದೆವೋ ಅದನ್ನೇ ಪುನಃ ಮಾಡಿದ್ದಾರೆ. ನಾನು ಆ ವ್ಯಕ್ತಿಯ ಹೆಸರನ್ನು ಹೇಳುವುದಿಲ್ಲ. ಒಬ್ಬ ಅಧಿಕಾರಿ, ಅದೇ ಇಲಾಖೆಯಲ್ಲಿ under-graduate ಆಗಿ ಇದ್ದಂಥವನನ್ನು Assistant Sales-tax Officer ಮಾಡಿ exemption ಕೊಟ್ಟು confirm ಮಾಡಿದ್ದಾರೆ. ಇದರಲ್ಲಿ ಒಂದು ನೀತಿ ಇರಬೇಡವೇ? ಒಂದು ನೀತಿಯ ಮೇಲೆ ಮಾಡುವಹಾಗಿದ್ದರೆ ಯಾವುದನ್ನಾದರೂ ಮಾಡಿ. ಹಾಗೆ ಯಾವ ಒಂದು ನೀತಿಯನ್ನೂ ಅನುಸರಿಸದೆ, ಟೀಕೆಮಾಡುತ್ತೀರಿ ಎಂದರೆ ಏನು ಪ್ರಯೋಜನ. ಬೇಕಾದವರಿಗೆ ಮಾಡುವುದು. ಒಬ್ಬ I.A.S. ಆಫೀಸರ ಬಂಧು ಎಂದು ಮಾಡಿದರೆ ಅದು ಧರ್ಮವೇ?

*Sri H. M. CHANNABASAPPA (Minister for Industries).—I would like to know if the Hon'ble Member is prepared to give specific cases of injustice on the lines that is now being narrated by the Hon'ble Member.

ಶ್ರೀ ಎಸ್. ಶ್ರೀನಿವಾಸಐಯ್ಯಂಗಾರ್.—ಈಗ ವ್ಯಕ್ತಿ, ಇಂಥವನು ಎಂದು ಗೊತ್ತಿದೆ. ನಾನು ಹೆಸರು ಹೇಳಲು ಇಷ್ಟಪಡುವುದಿಲ್ಲ. ಇಲಾಖೆಯಲ್ಲಿ ಇಂಥ ಅನೀತಿ ಕೆಲಸ ನಡೆಯುತ್ತಿದೆ. ಸರ್ಕಾರದವರು ಕಾನೂನು ಪ್ರಕಾರ, ಒಂದು ಗೊತ್ತಾದ ಪದ್ಧತಿಯ ಪ್ರಕಾರ ಯಾವ ಕೆಲಸವನ್ನೂ ಮಾಡುತ್ತಿಲ್ಲ. ಒತ್ತಾಯಕ್ಕೆ ಅವಕಾಶ ಕೊಡುತ್ತಿದ್ದಾರೆ; influenceಗೆ ಅವಕಾಶಕೊಡುತ್ತಿದ್ದಾರೆ. ಆದುದರಿಂದ ಅದನ್ನು ಮಾಡಬಾರದೆಂದು ಹೇಳುತ್ತಿದ್ದೇನೆಯೇ ಹೊರತು ವ್ಯಕ್ತಿಯ ಹೆಸರನ್ನು ಹೇಳುವುದಕ್ಕೆ ಸಿದ್ಧನಾಗಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ನೀವು ಹೆಸರನ್ನು ಹೇಳಿ, ಅದರಿಂದ ತೊಂದರೆ ಇಲ್ಲ.

Sri S. SRINIVASA IYENGAR.—If the Hon'ble Minister is so anxious, I will give the name. His name is Sir Gangaiya brother of Sri Thipperudriah.

Sri H. M. CHANNABASAPPA.—I would like to submit that Government is anxious to know facts. If he gives out the name, I am not going to take it amiss. On the other hand, it is helpful to find out if there is anything wrong.

Sri A. BHEEMAPPA NAIK.—To take individual cases in the open Assembly is not correct. Government should not try to force names to be brought in on the floor of this House. We are here concerned only with policies.

Sri S. SRINIVASA IYENGAR.—It is not correct. But I did not want to give out names. But when the Hon'ble Minister wanted to know definitely, I had to give the name. I agree we are not concerned with individuals here. We have to comment only on policies of the Government.

ಪ್ರಮೋಷನ್ ಮಾಡತಕ್ಕ ಕಾಲದಲ್ಲಿ ಯಾವುದಾದರೂ ಒಂದು ತತ್ವವಿರಬೇಕು. Assistant Sales-tax Officer ಕೇಡರ್‌ಗೇ ಆಗಲಿ, ಯಾವ ಕೇಡರ್‌ಗೇ ಆಗಲಿ ಒಂದು ಇಲಾಖೆಯಲ್ಲಿ ಪ್ರಮೋಷನ್ ಕೊಡಬೇಕಾದರೆ ಒಂದು ತತ್ವವಿರಬೇಕು. ಪ್ರೊಬೇಷನರುಗಳಿಗೆ ಇಷ್ಟು, ಇಲಾಖೆಯಲ್ಲಿ ಪ್ರಮೋಷನ್ ಕೊಡುವುದಕ್ಕೆ ಇಷ್ಟು, ಎಂದು ಒಂದು ನಿಗದಿ ಮಾಡಿಕೊಂಡು ಅದರಂತೆ ಖಾಲಿ ಬಿದ್ದ ಜಾಗಗಳಿಗೆ ಭರ್ತಿ ಮಾಡಬೇಕು. ಅದು ಬಹಳ ಒಳ್ಳೆಯದು. ಇದಕ್ಕೆ ಏನು percentage ಬೇಕಾದರೂ ಗೊತ್ತುಮಾಡಿ. ಅದು ಆಡಳಿತಕ್ಕೆ ಸಂಬಂಧಪಟ್ಟ ವಿಷಯ. ಒಂದು ತತ್ವವನ್ನು ಅನುಸರಿಸಬೇಕು. ಅದನ್ನು ಬಿಟ್ಟು ಒತ್ತಾಯಕ್ಕೆ ಮತ್ತು influenceಗೆ ಜಾಗ ಕೊಡಬಾರದು ಎನ್ನುವುದು ಒಂದು.

ಇನ್ನೊಂದು ವಿಷಯ ಮಾರಾಟ ತೆರಿಗೆಯನ್ನು assess ಮಾಡುತ್ತಾರಲ್ಲ ಅದರಲ್ಲಿ ದೊಡ್ಡ ದಾಂಧಲೆ ನಡೆಯುತ್ತದೆ. ಅದನ್ನು ತಡೆಯುವುದಕ್ಕಾಗುವುದಿಲ್ಲ. ಸಣ್ಣ ಸಣ್ಣ ಹಿಟ್ಲರ್‌ಗಳ ಅವಾಂತರವನ್ನು ತಡೆಯುವುದಕ್ಕಾಗುವುದಿಲ್ಲ. ಈ Assistant Sales-tax ಆಫೀಸರುಗಳ ಬಳಿ ಹೋಗಿ ಬಂದ ವರ್ತಕರು ಅವರು ಪಡುವ ಕಷ್ಟವನ್ನು ಹೇಳುತ್ತಾರೆ. ಅವರೇನೋ ಶಕ್ತಿ ಮೀರಿ ದುಡಿದು ಬೇಕಾದ ಹಾಗೆ ಸಂಪಾದಿಸುತ್ತಾರೆ.

(SRI S. SRINIVASA IYENGAR.)

ಆದರೆ ಈ Assistant Sales-tax Officer ಗಳಿಗೆ ಲೆಕ್ಕಗಳನ್ನೊಪ್ಪಿಸಿ, ಅವರನ್ನು ಅನುಕರಣೆ ಮಾಡಿಕೊಂಡು ಹೋಗತಕ್ಕ ಕೆಲಸ ಬಹಳ ಕ್ಲಿಷ್ಟವಾದುದು ಎಂದು ಹೇಳುತ್ತಾರೆ. ಇಷ್ಟು ಅಕ್ರಮಗಳು ಜರುಗುತ್ತಿವೆ ಎಂದು ತಿಳಿದಿದ್ದೇನೆ. Preliminary assessment ಇದೆಯಲ್ಲ ಅದನ್ನು ಹೆಚ್ಚಿಗೆ ಹಾಕಿದರೆ ಆಶ್ರಯ ಮಾಡುವುದಕ್ಕೆ ಬರುತ್ತಾರೆಂದು ಹೆಚ್ಚಿಗೆ ಹಾಕುತ್ತಾರೆ. ಅನಂತರ final assessmentನಲ್ಲಿ ಕಡಿಮೆ ಹಾಕುತ್ತಾರೆ. Preliminary assessment ಎಷ್ಟು ಹಾಕಿದ್ದಾರೆ, final assessment ಎಷ್ಟಕ್ಕೆ ಇಳಿದಿದೆ ಎಂಬುದನು ಯಾರು ನೋಡಿದ್ದಾರೆ? ಇದನ್ನು ಇಲಾಖೆಯವರು ನೋಡಬೇಕು. Preliminary assessment, provisional assessment ಏನು ದಾಖಲ್ಮಾಡಿದ್ದಾರೆ, final assessment ಏನು ದಾಖಲಾಗಿದೆ ಎಂಬುದನ್ನು ಪರೀಕ್ಷೆ ಮಾಡಬೇಕು. ಸರ್ಕಾರದವರು ಎರಡೆರಡು ಕೇಸುಗಳನ್ನು ತೆಗೆಸಿ ನೋಡಿದರೆ ಆಗ ನಾನು ಹೇಳಿದ ಮಾತುಗಳಲ್ಲಿ ಸಂಪೂರ್ಣ ನಿಜವಿದೆ ಎನ್ನುವುದು ಗೊತ್ತಾಗುತ್ತದೆ. ಇದರಿಂದ ಯಾರಿಗೆ ನಷ್ಟವೆಂಬುದನ್ನು ನೋಡಬೇಕು. Provisional assessment ಹೆಚ್ಚಾಗಿದ್ದು final assessment ಬಹಳ ಕಡಿಮೆ ಇದ್ದರೆ ನಷ್ಟವಾದದ್ದು ಯಾರಿಗೆ? ಸರ್ಕಾರಕ್ಕೇ ತಾನೇ? ಇದಕ್ಕೆ ಕಾರಣರು Sales-tax Officer ಮತ್ತು Assistant Sales-tax Officer ಎಂದು ತಾವೇ ತಿಳಿದುಕೊಳ್ಳಬಹುದು. ಆದುದರಿಂದ ಇದಕ್ಕೆ ಏನಾದರೂ ಒಂದು ಹತೋಟಿ ಇಟ್ಟುಕೊಳ್ಳಬೇಕು. Provisional Assessmentಗೂ final assessmentಗೂ ಬಹಳ wide variations ಇದ್ದರೆ ಏನು ಕಾರಣದಿಂದ ಆಗಿರಬಹುದು ಎನ್ನುವುದನ್ನು ಸರ್ಕಾರದವರು ತಿಳಿದುಕೊಳ್ಳಲು ಹತೋಟಿಯನ್ನಿಟ್ಟುಕೊಂಡು ಆಗಾಗ್ಗೆ ತನಿಖೆ ಮಾಡಿದರೆ ವರಮಾನವು ಹೆಚ್ಚಾಗುತ್ತದೆ.

ಶ್ರೀಮಾನ್ ರಾಜಶೇಖರ ಮೂರ್ತಿಗಳು ರೇಷ್ಮೆ ಗೂಡಿನ ಮೇಲೆ ಮಾರಾಟದ ತೆರಿಗೆಯನ್ನು ಹಾಕುವ ವಿಷಯವನ್ನು ಹೇಳುತ್ತಿದ್ದರು. ಅದನ್ನು ಸರಿಯಾಗಿ ವಿವರಣೆ ಮಾಡುತ್ತೇನೆ. ಹಳ್ಳಿಗಳಲ್ಲಿ ನಾವೆಲ್ಲ ರೇಷ್ಮೆ ಗೂಡನ್ನು ಬೆಳೆಸುತ್ತೇವೆ. ಸಾಮಾನ್ಯವಾಗಿ ಹಿಪ್ಪುನೇರಳೆ ತೋಟವನ್ನು ಇಟ್ಟುಕೊಂಡಿರುವವರು ರೇಷ್ಮೆ ಗೂಡನ್ನು ಬೆಳೆಸುತ್ತಾರೆ. ಸ್ವಂತವಾಗಿ ಹಳ್ಳಿಯಲ್ಲಿ ರತಕ್ಕ ಚರಕದಲ್ಲಿ ರೇಷ್ಮೆ ತೆಗೆಯಬೇಕಾದರೆ ಅದಕ್ಕೆ ತೊಂದರೆ ಇಲ್ಲ. ನಾವೇ ರೇಷ್ಮೆಯನ್ನು ತೆಗೆದು ಅದನ್ನು ಬಿಕರಿ ಮಾಡುತ್ತೇವೆ. Silk Filaturesಗೆ ಗೂಡು ಬೇಕು. ಅವರಿಗೆ ಗೂಡು ಬೇಕಾದರೆ ಒಂದು ಪದ್ಧತಿ ಮಾಡಿಕೊಂಡು ದಳ್ಳಾಳಿಗಳನ್ನು ಗೊತ್ತುಮಾಡಿಕೊಂಡಿದ್ದಾರೆ. ಈ ದಳ್ಳಾಳಿಗಳು ಏನುಮಾಡುತ್ತಾರೆಂದರೆ ಹಳ್ಳಿ ಹಳ್ಳಿಗೆ ಹೋಗಿ ರೇಷ್ಮೆ ಗೂಡನ್ನು (cocoons) ಕೊಂಡುಕೊಂಡು ಫ್ಯಾಕ್ಟರಿಗೆ ತಂದು ಕೊಡುತ್ತಾರೆ. ಫ್ಯಾಕ್ಟರಿಯವರು ಈ ದಳ್ಳಾಳಿಗಳಿಗೆ ನೂರು ರೂಪಾಯಿಗಳಿಗೆ ಒಂದು ರೂಪಾಯಿ ಕಮಿಷನ್ ಕೊಡುತ್ತಾರೆ. ಸಿಲ್ಕ್ ಫ್ಯಾಕ್ಟರಿಗೆ ಹತ್ತಾರು ದಳ್ಳಾಳಿಗಳಿದ್ದಾರೆ. ಫ್ಯಾಕ್ಟರಿಗೆ ಬೇಕಾದ ಗೂಡುಗಳನ್ನು ದಳ್ಳಾಳಿಗಳು ಸುತ್ತಮುತ್ತಲಿನ ಎಲ್ಲ ಗ್ರಾಮಗಳನ್ನೂ ತಿರುಗಿ, ಕೊಂಡುಕೊಂಡುಬಂದು ಫ್ಯಾಕ್ಟರಿಗೆ ಕೊಡುತ್ತಾರೆ. ಕಾನೂನು ಪ್ರಕಾರ ಅಂಥ ದಳ್ಳಾಳಿಗಳು ಸಿಲ್ಕ್ ಫ್ಯಾಕ್ಟರಿಗೆ ಕೊಟ್ಟಿರತಕ್ಕ ವ್ಯಾಪಾರದ ಮೇಲೆ ಸೇಕಡ ರೂ. 1-9-0 ಅಥವಾ ರೂಪಾಯಿ ಒಂದಕ್ಕೆ ಮೂರು ಕಾಸಿನಂತೆ 1949ನೆ ಇಸವಿಯಿಂದ ತೆರಿಗೆ ಕೊಡಬೇಕು ಎಂದು ನೋಟೀಸ್ ಕೊಟ್ಟಿದ್ದಾರೆ.

1-30 P.M.

ಅವರು ಮಾಡಿರುವುದು ದಳ್ಳಾಳಿ ವ್ಯಾಪಾರ, 1949ನೆಯ ಇಸವಿಯಿಂದ ಮಾಡಿರುವ ವ್ಯಾಪಾರದ ಮೇಲೆ ಹಾಕಿದ್ದಾರೆ. ದೊಡ್ಡ ವ್ಯಾಪಾರಸ್ತರು ಸುಮಾರು 8-10 ಲಕ್ಷ ರೂಪಾಯಿಗಳ ವ್ಯಾಪಾರ ಮಾಡಿರುತ್ತಾರೆ. ಅದಕ್ಕೆಲ್ಲಾ ಕೇಂದ್ರಸರ್ಕಾರಕ್ಕೆ ತೆರಿಗೆಕೊಡಬೇಕೆಂದು ಒಂದು ನೀತಿಯನ್ನನುಸರಿಸಿ ಹಿಂದಿನದಕ್ಕೆಲ್ಲಾ ಒಟ್ಟಿಗೆ ಒಂದುಸಲ ಕೇಳಿದರೆ ಹಾಗೆ ಕೊಡುವುದಕ್ಕಾಗುವುದಿಲ್ಲ. ಅವರಿಗೆ ತಾವು ಹೇಳುವಷ್ಟು ಕಮಿಷನ್ ಬಂದಿರುವುದಿಲ್ಲ. ಅದೂ ಅಲ್ಲದೆ ಕೊಂಡುಕೊಳ್ಳುವಾಗ ಸಿಲ್ಕ್ ಫ್ಯಾಕ್ಟರಿಯವರೇ ಕೊಡಬೇಕಾಗಿತ್ತು. ದಳ್ಳಾಳಿಗಳಿಗೆ ಹಾಕಿ ಅವರ ಮನೆ ಹರಾಜು ಮಾಡುವುದು ಬೇಡ. ಇದನ್ನು ಸರ್ಕಾರ ಬಹಳ ಸಹಾನುಭೂತಿಯಿಂದ ವಿಮರ್ಶೆಮಾಡಿ ಅವರಿಗೆ ಪರಿಹಾರ ನೀಡಬೇಕು. ಹಿಂದಿನ ತೆರಿಗೆ ವಜಾ ಮಾಡಬೇಕು. ಮುಂದೆ ಕೊಡಬೇಕೆಂದು ಹೇಳಬಹುದು. ಕಮಿಷನ್ ವ್ಯಾಪಾರ ಮಾಡುವವರಿಗೆ ರಿಯಾಯಿತಿ ಮಾಡಬೇಕೆಂದು ನಾನು ಹೇಳುತ್ತಿಲ್ಲ. ಇಷ್ಟು ತೆರಿಗೆ ಹಿಂದಿನಿಂದ ಹಾಕುತ್ತೀರೆಂಬುದು ಅವರಿಗೆ ಗೊತ್ತಿರಲಿಲ್ಲ. ಗ್ರಾಮದಲ್ಲಿರುವವನಿಗೆ ಸೇಲ್ಸ್‌ಟ್ಯಾಕ್ಸ್ ಕಾನೂನು ವಿಚಾರವೇ ಗೊತ್ತಿಲ್ಲ. 1950ನೆಯ ಇಸವಿಯಲ್ಲೇ ಏಕೆ ಡಿಮ್ಯಾಂಡ್ ಹಾಕಿ ವಸೂಲುಮಾಡಲಿಲ್ಲ? ಹಾಗೆ ಮಾಡದೆ ಈಗ 1949ರಿಂದ ಕೊಡಬೇಕೆಂದು ಹೇಳುವುದರಿಂದ ತೆರಿಗೆ ಹಣ ಹೆಚ್ಚಾಯಿತು. ಆದ್ದರಿಂದ ಇಂಥ ವಿಷಯವನ್ನು ಸಹಾನುಭೂತಿಯಿಂದ ಪರಿಶೀಲಿಸಬೇಕು.

ಎರಡನೆಯದು ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ವಿಷಯ. ಸ್ವಾಮಿ, ಸಿನಿಮಾಕ್ಕೆ ಈ ತೆರಿಗೆ ಹಾಕಿದ್ದಾರೆ. ಸಿನಿಮಾಕ್ಕೆ ನಾವು ಹೋದರೆ ಟಿಕೆಟ್ ದರದಲ್ಲೇ ತೆರಿಗೆ ಸೇರಿರುವುದರಿಂದ ಅದನ್ನು ತೆಗೆದುಕೊಂಡಾಗಲೇ ಆ ತೆರಿಗೆ ಕೊಡುತ್ತೇವೆ. ಇಲ್ಲಿ ಕೊಡುವ ತೆರಿಗೆಯಲ್ಲದೆ ಅಲ್ಲೂ ಕೊಡಬೇಕು. ಇದನ್ನು ವಸೂಲು ಮಾಡುವವರು ಸಿನಿಮಾದವರು. ಅವರು ಎಷ್ಟುಮಟ್ಟಿಗೆ ಎಲ್ಲೆಲ್ಲಿ ಮೋಸ ಮಾಡಬಹುದೋ ಅಲ್ಲೆಲ್ಲಾ ಮಾಡಲು ಪ್ರಯತ್ನಿಸುತ್ತಾರೆ. ಹೇಗೆಂದರೆ ಟಿಕೆಟ್ ಕೊಟ್ಟರೆ ತಾನೆ ಸ್ಟ್ಯಾಂಪ್ ಹಾಕಬೇಕಾದದ್ದು ಎಂದು ಅವರು ಪಾಸು ಕೊಟ್ಟು ತೆರಿಗೆ ತಪ್ಪಿಸಿಕೊಳ್ಳುತ್ತಾರೆ. ಹಾಗೆ ಮಾಡಿದಾಗ ಯಾರಿಗೂ ತೆರಿಗೆ ಬೀಳುವುದಿಲ್ಲ. ಇದರಿಂದ ನೂರು ರೂಪಾಯಿಗಳ ತೆರಿಗೆ ಬಂದರೆ 87-8-0 ರೂಪಾಯಿ ಸ್ಥಳೀಯ ಸಂಸ್ಥೆಗಳಿಗೂ 12-8-0 ರೂಪಾಯಿ ಸರ್ಕಾರಕ್ಕೂ ಹೋಗುತ್ತದೆ. ಸಿಬ್ಬಂದಿ ಖರ್ಚು ವಗೈರೆಗಾಗಿ ಸರ್ಕಾರ ಕೊಂಚಭಾಗ ಇಟ್ಟುಕೊಳ್ಳುತ್ತದೆ. ನಾಲ್ಕೈದು ವರ್ಷಗಳಿಂದ ಸ್ಥಳೀಯ ಸಂಸ್ಥೆಗಳಿಗೆ ಎಷ್ಟು ಕೊಡಬೇಕಾಗಿತ್ತೋ ಅಷ್ಟನ್ನು ಕೊಟ್ಟಿಲ್ಲ. ಕಾರಣ ಕೇಳಿದರೆ ಲೆಕ್ಕ ಸಮಜಾಯಿಷಿಯಾಗಿಲ್ಲವೆಂದು ಹೇಳುತ್ತಾರೆ. ಸ್ಥಳೀಯ ಸಂಸ್ಥೆಗಳಿಗೆ ಈ ವರಮಾನ ತೆಗೆದುಕೊಳ್ಳುವುದಕ್ಕೆ ಅವಕಾಶವಿದೆಯೇ ವಿನಾ ಅದರ ಮೇಲೆ ಉಸ್ತುವಾರಿ ನೋಡಲು ಸಿನಿಮ್ಯಾಟೋಗ್ರಾಫ್ ಆಕ್ಟ್ ಪ್ರಕಾರ ಅಧಿಕಾರವಿಲ್ಲ. ಈ ರೀತಿ ಸಿನಿಮಾಗಳಿಂದ ಬರಬೇಕಾದ ತೆರಿಗೆ ಪೂರ್ಣವಾಗಿ ಬರಲು ಟಿಕೆಟ್‌ಗಳಿಗೆ ಎಂಬಾಸ್ ಮಾಡಬೇಕು. ಸರ್ಕಾರದಲ್ಲಿ ಸ್ಟಾಂಪ್ ತಯಾರಿಸುವವರೇ ಎಂಬಾಸ್ ಮಾಡುವಂತೆ ಬೇಕಾದ ರೀತಿಯಲ್ಲಿ ರೂಲ್ಸ್ ಮಾಡಿಕೊಳ್ಳಿ. ಹಾಗೆ ಮಾಡದತೆ ತೆರಿಗೆಯ ಮೊತ್ತವನ್ನು

ಪೂರ್ಣವಾಗಿ ಕಟ್ಟಬೇಕಾಗಿ ಆಗ ಲೆಕ್ಕ ಗೊತ್ತಾಗುತ್ತದೆ. ತಕ್ಷಣ ಸ್ಥಳೀಯಸಂಸ್ಥೆಗಳ ಭಾಗ ಕೊಡಬೇಕಾದ್ದನ್ನು ಕೊಡಬಹುದು. ಟಿಕೆಟ್ ಹಿಂದೆ ಸ್ಟ್ಯಾಂಪ್ ಅಂಟಿಸದಿದ್ದರೆ ಹೇಗೆ ತೆರಿಗೆ ಬರುತ್ತದೆ?

ಶ್ರೀ ಎ. ಭೀಮಪ್ಪನಾಯಕ್.—ಅವರು ಅದನ್ನು ಮಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಆ ವಿಷಯ ನಾನು ಹೇಳುತ್ತೇನೆ. 16 ವರ್ಷಗಳು ನಾನು ಪ್ರೆಸಿಡೆಂಟಾಗಿದ್ದೆ. ಎಷ್ಟುಮಟ್ಟಿಗೆ ಅವರು ಮಾಡುತ್ತಾರೆಂಬುದನ್ನು ಕಣ್ಣಾರೆ ನೋಡಿದ್ದೇನೆ. ಸ್ಟ್ಯಾಂಪ್ ಅಂಟಿಸುವುದನ್ನು ತಪ್ಪಿಸಿಕೊಳ್ಳುವ ಉದಾಹರಣೆಗಳು ಬೇಕಾದಷ್ಟಿವೆ. ಅದನ್ನು ತಪ್ಪಿಸಲು ಎಂಬಾಸ್ ಮಾಡುವುದು ಮೊದಲನೆಯದು. ಎರಡನೆಯದು ಸ್ಥಳೀಯ ಸಂಸ್ಥೆಗಳಿಗೆ ಕೊಡಬೇಕಾದ ತೆರಿಗೆ ಭಾಗ ಕೂಡಲೆ ಕೊಡುವುದಕ್ಕೆ ಎಂಬಾಸ್ ಮಾಡುವುದರಿಂದ ಲೆಕ್ಕವಿರುತ್ತದೆ. ಮೂರನೆಯದು ಗೇಟ್‌ಪಾಸು ಕೊಟ್ಟು ಟಿಕೆಟ್ ಕೊಡದೆ ಮೋಸಮಾಡುವುದನ್ನು ತಪ್ಪಿಸಲು ಸ್ಥಳೀಯಸಂಸ್ಥೆಗಳಿಗೆ ಮೇಲ್ವಿಚಾರಣೆಗೆ ಸ್ವಲ್ಪ ಅವಕಾಶ ಮಾಡಬೇಕು; ಈಗ ಅದಕ್ಕೆ ಅವಕಾಶವಿಲ್ಲ. ಸಿನಿಮ್ಯಾಟೋಗ್ರಾಫ್ ಆಕ್ಟ್ ಪ್ರಕಾರ ಈಗ ಡಿಸ್ಟ್ರಿಕ್ ಮ್ಯಾಜಿಸ್ಟ್ರೇಟರಿಗೆ ಮಾತ್ರ ಅಧಿಕಾರವಿದೆ. ಅವರು ಬೇಕಾದರೆ ಅದನ್ನು ಯಾರಿಗಾದರೂ ಡೆಲಿಗೇಟ್ ಮಾಡಬಹುದೆಂದಿದೆ. ಎರಡುವರ್ಷಗಳ ಕೆಳಗೆ ಹೊಸದಾಗಿ ಸರ್ಕ್ಯುಲರ್ ಹೊರಡಿಸಿ ಗುಮಾಸ್ತೆಗೆ ಆ ಅಧಿಕಾರವನ್ನು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಕೊಡಬಹುದೆಂದು ಸೂಚಿಸಿದರು. ಆದರೆ ಅದು ಎಫೆಕ್ಟಿವ್ವಾಗಿಲ್ಲ. ಅದರ ಬದಲು ಆಕ್ಟನ್ನೇ ತಿದ್ದುಪಡಿ ಮಾಡುವುದು ಸೂಕ್ತ.

ಮೂರನೆಯದು ರೇಸ್‌ಕೋರ್ಸ್ ವಿಚಾರ. ಇದನ್ನು ಹೆಚ್ಚಾಗಿ ಹೇಳುವುದಿಲ್ಲ, ಈಗಾಗಲೆ ಕೆಲವರು ಹೇಳಿದ್ದಾರೆ. ಆದರೆ ಶ್ರೀ ರಾಜಶೇಖರಮೂರ್ತಿಯವರು ಸರಿಯಾಗಿ ಹೇಳಲಿಲ್ಲ. ಬೆಂಗಳೂರು ರೇಸ್ ಕ್ಲಬ್ ಪ್ರೈವೇಟ್ ಸಂಸ್ಥೆ, ಅದು ಲಿಮಿಟೆಡ್ ಸಂಸ್ಥೆಯಲ್ಲ. ಅದಕ್ಕೆ ಲೈಸೆನ್ಸ್ ಕೊಡಲು ಸರ್ಕಾರಕ್ಕೆ ಅಧಿಕಾರವಿದೆ. ಆ ರೀತಿ ರೇಸ್‌ಕೋರ್ಸ್ ಆಕ್ಟಿನಲ್ಲಿ ನಮೂದಾಗಿದೆ. ಅದರ ಪ್ರಕಾರ ಲೈಸೆನ್ಸ್ ಕೊಡುತ್ತಾರೆ ಅದಕ್ಕೆ ಕಂಡೀಷನ್ಸ್ ಇವೆ. ಆ ಸಂಸ್ಥೆಯನ್ನು ಬೆಂಗಳೂರಿನಲ್ಲಿ ಕುದುರೆ ಜೂಜು ನಡೆಯುವುದನ್ನು ಮತ್ತು ಅದಕ್ಕೆ ಸಂಬಂಧಪಟ್ಟಿರುವ ವಿಷಯವನ್ನು ನೋಡಿ ಅದರಮೇಲೆ ನಿಗಾ ಇಡಬೇಕೆಂದು ಮಾಡಿದರು; ರೇಸ್‌ಕೋರ್ಸ್ ಕುದುರೆ ಸಾಕುವುದಕ್ಕೆ ಮತ್ತು ಇತರ ಟೆಕ್ನಿಕಲ್ ಮ್ಯಾಟರ್ಸ್ ನೋಡಿಕೊಳ್ಳಲು ಮಾಡಿದರು. ಅದಕ್ಕೆ ಸರ್ಕಾರಿ ಜಾಗ ಕೊಟ್ಟು ಒಂದು ಒಪ್ಪಂದ ಮಾಡಿಕೊಂಡರು. ಕೆಲವು ಕಾಲವಾದ ಮೇಲೆ ಅದರ ಮೇಲೆ ಸ್ವಲ್ಪ ಆಡಳಿತ ಹೆಚ್ಚಿ ಆ ವಿಚಾರ ಚರ್ಚೆಗೆ ಬಂತು. ಈಗ ರೇಸ್‌ಕೋರ್ಸ್ ಸಂಸ್ಥೆಯವರು ಅವರ ಆಡಳಿತವನ್ನೆಲ್ಲಾ ಬೈಲಾಕ್ಕೆ ಅನುಸಾರವಾಗಿ ಮಾಡುತ್ತಾರೆ. ಬೈಲಾ ಬದಲಾಯಿಸುವುದಕ್ಕೆ ಜನರಲ್ ಬಾಡಿಗೆ ಅಧಿಕಾರವಿದೆಯೆ ಅಥವಾ ಸರ್ಕಾರ ಮಾರ್ಪಾಡು ಮಾಡಬಹುದೆ ಎಂಬ ವಿಷಯ ಚರ್ಚೆಗೆ ಬಂತು. ಅದು ಏತರಿಂದ ಬಂತು ಎಂದರೆ ರೇಸ್‌ಕೋರ್ಸ್ ಸಂಸ್ಥೆಯವರು ತಮ್ಮ ಬೈಲಾ ಬದಲಾಯಿಸಿ ಸರ್ಕಾರಕ್ಕೆ ಅಪ್ರೂವಲ್‌ಗೆ ಕಳುಹಿಸುತ್ತಾರೆ. ಆದರೆ ಒಂದು ಸಂಸ್ಥೆ ತನ್ನ ಬೈಲಾ ಪ್ರಕಾರ ಕೆಲಸ ಮಾಡುವಾಗ ಅವರ ತಿದ್ದುಪಡಿಯನ್ನೇಕೆ ಸರ್ಕಾರದ ಅಪ್ರೂವಲ್‌ಗೆ ಕಳುಹಿಸಬೇಕು? ಕಳುಹಿಸಬೇಕಾಗಿರಲಿಲ್ಲ. ಅದು ಖಾಸಗಿ ಸಂಸ್ಥೆ, ಬೈಲಾಕ್ಕನುಗುಣವಾಗಿ ಆಡಳಿತ ನಡೆಸುತ್ತಿದೆ, ಬೈಲಾ ಮಾಡುವ ಅಧಿಕಾರ ಜನರಲ್ ಬಾಡಿಗಿದೆ, ಜನರಲ್ ಬಾಡಿಯಲ್ಲಿರುವವರು ರೇಸ್‌ಕೋರ್ಸ್ ಸಂಸ್ಥೆ ಮೆಂಬರಾಗಿರುವರು, ಆದ್ದರಿಂದ ಅವರು ಬೈಲಾ ಬದಲಾವಣೆ ಮಾಡುವುದಕ್ಕೂ ಸರ್ಕಾರಕ್ಕೂ ಸಂಬಂಧವಿಲ್ಲ ಎಂದು ಹೇಳಿದರು. As approved by Government ಎಂದು ಇರುವುದರಿಂದ ಬೈಲಾ ಬದಲಾವಣೆ ಮಾಡಿದ್ದನ್ನು ಸರ್ಕಾರದ ಅನುಮತಿಗೆ ಕಳುಹಿಸಬೇಕು, ಅವರು ಅದನ್ನು ಒಪ್ಪಬೇಕು ಎಂದು ಅರ್ಥವಾಗುತ್ತದೆ. ಸರ್ಕಾರದ ಅನುಮತಿಯಿಲ್ಲದೆ ಮಾಡಿಕೊಳ್ಳುವುದಕ್ಕಾಗುವುದಿಲ್ಲ, ಅದು ರಿಜಿಸ್ಟರ್ಡ್ ಸಂಸ್ಥೆಯಲ್ಲ. ಕೆಲವು ಬದಲಾವಣೆ ಮಾಡಿದರೆ ಅನುಕೂಲ ಎಂದು ಹೇಳಿದರು. ಅದನ್ನು ಜನರಲ್‌ಬಾಡಿ ಒಪ್ಪಲಿಲ್ಲ. ಆ ಸಮಿತಿಯಲ್ಲಿ ಅವರು ನಿರ್ವಾಹ ಮಾಡುವ ಕೆಲಸ ಕಾರ್ಯ ಸುಗಮವಾಗಿ ನಡೆಯಲೆಂಬ ದೃಷ್ಟಿಯಿಂದ ಬೈಲಾಕ್ಕೆ ಬದಲಾವಣೆ ಸೂಚನೆ ಮಾಡಲಾಯಿತು, ಹಾಗೆ ಮಾಡದಿದ್ದರೆ ಮೈಸೂರು ದೇಶದಲ್ಲಿ ರೇಸು ನಡೆಯುವ ಮಾತೇ ಬೇಡ, ಕುದುರೆ ಜೂಜೇ ತಪ್ಪಿಸೋಣ, ಅದರಿಂದ ಸಾವಿರಾರು ಜನಕ್ಕೆ ಅನಾನುಕೂಲವಾಗುತ್ತದೆ ಎಂದು ಹೇಳಿದರು.

Sri D. DEVARAJ URS (Hunsur).—The Hon'ble Member may give us more details.

Mr. SPEAKER.—Is the Hon'ble Member a member of the committee?

Sri S. SRINIVASA IYENGAR.—Yes, Sir; that is why I am in a better position to place facts before the House.

ಶ್ರೀ ಎ. ಭೀಮಪ್ಪನಾಯಕ್.—ಅದನ್ನು ಬೇರೆ ಕಾಲದಲ್ಲಿ ಹೇಳಿ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಇತರ ವಿಧವಾದ ವರಮಾನಗಳು ಎಂಬ ಬಾಬಿನಲ್ಲಿ ರೇಸ್‌ಕೋರ್ಸ್‌ನಿಂದ ಏನು ವರಮಾನ ಬರಬಹುದಾಗಿತ್ತೋ ಆ ವರಮಾನ 1956-57ಕ್ಕೆ ಬರುವುದಿಲ್ಲ ಎಂದು 1956-57ರ ಬಡ್ಜೆಟ್ ಎಸ್ಟಿಮೇಟಿನಲ್ಲಿ ನಮೂದಾಗಿದೆ. ಏಕೆ ಬರುವುದಿಲ್ಲ ಅಂದರೆ ಕುದುರೆ ಜೂಜು ಮೈಸೂರು ಸಂಸ್ಥಾನದಲ್ಲಿ ಈ ವರ್ಷ ನಡೆಸಲು ಅನುಮತಿ ಕೊಡುವುದಿಲ್ಲವೆಂದು ಸರ್ಕಾರದವರು ಹೇಳಿದ್ದಾರೆ. ಯಾವಾಗ ಜೂಜು ನಡೆಯುವುದಿಲ್ಲವೋ ಆಗ ವರಮಾನ ಬರುವುದಿಲ್ಲ. ಇದರಿಂದ ಇತರ ವಿಧವಾದ ತೆರಿಗೆ ಹಾಕಬೇಕಾಗುತ್ತದೆ.

ಆಮೇಲೆ ಬೆಂಗಳೂರಿನಲ್ಲಿ ಕಾರ್ಯ ನಿರ್ವಾಹ ಮಾಡುತ್ತಿರುವ ರೇಸ್‌ಕೋರ್ಸ್ ಸಂಸ್ಥೆ ದಕ್ಷಿಣ ಇಂಡಿಯಾದ ರೇಸ್ ಟರ್ಫ್ ಕ್ಲಬ್ ಎಂದೇನು ಮದರಾಸಿನಲ್ಲಿದೆಯೋ ಅದಕ್ಕೆ ಅಸೋಸಿಯೇಟಾಗಿದೆ. ಮದರಾಸು ಮತ್ತು ಬಂಗಾಳದಲ್ಲಿರುವ ಸಂಸ್ಥೆಗಳನ್ನನುಸರಿಸಿ ಕುದುರೆ ಜೂಜನ್ನು ನಡೆಸುತ್ತಿದೆ. ಈ ರೇಸ್‌ಕೋರ್ಸ್ ಕ್ಲಬ್ಬಿಗೆ ಒಂದು ಕಾರ್ಯನಿರ್ವಾಹಕ ಸಮಿತಿಯಿದೆ. ಅದಕ್ಕೆ ಶ್ರೀಮನ್ಮಹಾರಾಜರು ಒಬ್ಬ ಪ್ರತಿನಿಧಿಯನ್ನು ಕಳುಹಿಸುತ್ತಾರೆ. ಸರ್ಕಾರದವರೂ ಪ್ರತಿನಿಧಿ ಕಳುಹಿಸುತ್ತಾರೆ. ಸರ್ಕಾರದ ಪ್ರತಿನಿಧಿಯೂ ಕಾರ್ಯ ನಿರ್ವಾಹಕ ಸಮಿತಿಯಲ್ಲಿದ್ದಾರೆ. ಅವರೆಲ್ಲಾ ಸೇರಿ ಒಂದು ತೀರ್ಮಾನ ಮಾಡಬೇಕು. ಅವರ ಕಾರ್ಯ ಕಲಾಪ ಆ ಸಮಿತಿಯ ತೀರ್ಮಾನಕ್ಕೆ ಒಳಪಟ್ಟಿದೆ. ಆ ಸಮಿತಿ ವ್ಯವಹಾರ ಜನರಲ್‌ಬಾಡಿ ಮೀಟಿಂಗಿನ ಹತೋಟಿಗೆ ಒಳಪಟ್ಟಿದೆ. ಸರ್ಕಾರದಿಂದ ನಿಯಮಿತವಾದ

(ಶ್ರೀ ಎಸ್. ಶ್ರೀನಿವಾಸಯ್ಯಂಗಾರ್).

ಪ್ರತಿನಿಧಿ ಸರ್ಕಾರಕ್ಕೆ ಯಾವ ವಿಧವಾದ ವರದಿಗಳನ್ನೂ ಸಹ ಬಹಳ ದಿವಸಗಳಿಂದ ಕೊಟ್ಟಿಲ್ಲ. ಅದರಲ್ಲಿ ಮೆಂಬರಾಗಿರುವವರೊಬ್ಬರು ವಿಷಯ ಹೇಳಿದರು. ಈಗೇಕೆ ಈ ಪ್ರಶ್ನೆ ಬಂದಿದೆಯೆಂದರೆ ಈಗ ಎರಡನೆಯ ವರ್ಷದಲ್ಲಿ ಬೆಟ್ಟಿಂಗ್ ಟ್ಯಾಕ್ಸ್ ಸೇಕಡ 25 ಹಾಕಿತ್ತು. ಕುದುರೆ ಜೂಜು ಕಡಮೆಯಾಗಿಲ್ಲ, ಸಾವಿರಾರುಜನ ಬರುತ್ತಿದ್ದಾರೆ, ಹೋಟಲುಗಳಲ್ಲಿ ಜಾಗವೇ ಇಲ್ಲ. ಇಷ್ಟಿದ್ದರೂ ತೆರಿಗೆ ಕಡಮೆಯಾಗುವುದಕ್ಕೆ ಷುರುವಾಯಿತು, ಹಿಂದೆ 1946-47ರಿಂದ ಬಡ್ಜೆಟ್ ಅಂಕಿಅಂಶ ನೋಡಿದರೆ ಕಡಮೆ ತೆರಿಗೆಯಿದ್ದಾಗ ಹೆಚ್ಚು ವರಮಾನವಿತ್ತು. ಶ್ರೀ ಮರಿಯಪ್ಪನವರು ಹಿಂದೆ ಹೇಳಿದ್ದೂ ನಿಜ, ಬೈಪಾಸ್ ಆಗುತ್ತಿದೆ. ತೆರಿಗೆ ಹೆಚ್ಚಾಗಿ ಕೊಡಬೇಕೆಂದು ಹಿಂದು ಮುಂದೆ ನೋಡುತ್ತಾರೆ. ತೆರಿಗೆ ಹೆಚ್ಚಾದರೆ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಶೇಕಡ $12\frac{1}{2}$ ತೆರಿಗೆಯಿದ್ದಾಗ 18-19 ಲಕ್ಷ ರೂಪಾಯಿಗಳ ವರಮಾನ ಬರುತ್ತಿತ್ತು, ಶೇಕಡ 25 ರಷ್ಟು ತೆರಿಗೆ ಹಾಕಿದಾಗ 13 ಲಕ್ಷ ರೂಪಾಯಿಗಳ ವರಮಾನ ಬಂತು. ತೆರಿಗೆ ಹೆಚ್ಚಿದರೂ ವರಮಾನವೇಕೆ 5-6 ಲಕ್ಷದಷ್ಟು ಕಡಮೆಯಾಯಿತೆಂದು ಪ್ರಶ್ನೆ ಹಾಕಿದೆ. ಬಕೆಟ್ ಷಾಪ್ ಎಂದು, ಒಳಗೆ ಜೂಜಾಡಿದರೆ ತಾನೆ ತೆರಿಗೆ ಕೊಡಬೇಕಾದದ್ದು ಎಂದು ಹೊರಗಡೆ ಆಡುವುದಕ್ಕೆ ಷುರು ಮಾಡಿದರೆಂದು ಗೊತ್ತಾಯಿತು. ಬುಕ್ಕೀಸ್ ಎಂದಿರುವವರು ಸರಿಯಾಗಿ ತೆರಿಗೆ ವಸೂಲು ಮಾಡುವುದಿಲ್ಲ. ಈ ತೆರಿಗೆ ವಸೂಲು ಮಾಡುವವರು ಬುಕ್ಕೀಸ್, ಅವರು ಸರಿಯಾಗಿ ವಸೂಲು ಮಾಡುವುದಿಲ್ಲ ಎಂದು ಹೇಳುತ್ತಾರೆ. ಬಹುಮಾನ ಕೊಡುವಾಗ ಕೂಡ ಬಹಳ ಅಚಾತುರ್ಯವಾಗಿದೆಯೆಂದು ಹೇಳುತ್ತಾರೆ. ಆದ್ದರಿಂದ ಸಾರ್ವಜನಿಕರ ಹಿತದೃಷ್ಟಿಯಿಂದ ಸರ್ಕಾರವನ್ನು ಕೇಳಿದರೆ, ಅವರು ಪರಿಶೀಲನೆ ಮಾಡುತ್ತೇವೆ ಯಾವ ರೀತಿಯಿದೆಯೆಂಬುದು ನಮಗೆ ಗೊತ್ತಿಲ್ಲ ಎಂದು ಹೇಳಿದರು, ಸುಮ್ಮನಾದೆ. ಅದಕ್ಕೆ ಸಮಿತಿ ಮಾಡಿ ನನ್ನನ್ನೂ ಮೆಂಬರನ್ನಾಗಿ ತೆಗೆದುಕೊಂಡರು. ಆಗ ಚರ್ಚೆಗೆ ಬಂತು. ಗವರ್ನಮೆಂಟ್ ಸ್ಟೂವರ್ಡ್‌ನ್ನು ಕಾಲಕ್ಕೆ ಸರಿಯಾಗಿ ಏಕೆ ವರದಿ ಮಾಡಲಿಲ್ಲವೆಂದು ಕೇಳಲಾಯ್ತು. ಏನು ಹೇಳಿದರೂ ಅದಕ್ಕೆ ಬೆಲೆಯಿಲ್ಲ, ಕಾರ್ಯನಿರ್ವಾಹಕ ಸಮಿತಿಯಲ್ಲಿ ಬಹುಸಂಖ್ಯೆಯು ವಿರೋಧಾಭಿಪ್ರಾಯವಿದೆ. ಆದ್ದರಿಂದ ಸಾರ್ವಜನಿಕ ಹಿತದೃಷ್ಟಿಯಿಂದ ಸರ್ಕಾರಕ್ಕೆ ಬಹು ಸಂಖ್ಯೆ ಬೆಂಬಲವಿದ್ದರೆ ಅನುಕೂಲವಾಗುತ್ತದೆ. ಆದ್ದರಿಂದ ವರ್ಕ್ಸ್ ಕಮಿಟಿಯಲ್ಲಿ ಸರ್ಕಾರಕ್ಕೆ ಮೆಜಾರಿಟಿಯಿರುವ ಹಾಗೆ ಬೈಲಾ ಅಮೆಂಡ್ ಮಾಡೋಣ ಎಂದು ಸಲಹೆ ಬಂತು. ನಾವು ಅದನ್ನು ಅಮೆಂಡ್ ಮಾಡುವುದಕ್ಕೆ ನಮಗೆ ಅಧಿಕಾರವಿಲ್ಲ. ಈ ಬೈಲಾ ಅಮೆಂಡ್ ಮಾಡುವ ಅಧಿಕಾರ ಯಾವಾಗಲೂ ಜನರಲ್ ಬಾಡಿಗೆ ಸೇರಿದಂಥ ವಿಷಯ. ಆದರೆ ಈ ವಿಷಯವನ್ನು ಇವರು ರೇಸ್ ಕ್ಲಬ್ಬಿನ ಜನರಲ್ ಬಾಡಿ ಮುಂದೆ ಇಡಲಿಲ್ಲ. ಇದಕ್ಕೆ ಹಿಂದಿನಿಂದಲೂ ಏನೋ ಒಂದು ರೀತಿಯಲ್ಲಿ ಈ ಬೈಲಾವನ್ನು ಅಮೆಂಡ್ ಮಾಡಿದಾಗ್ಗೂ ಅದನ್ನು ಅಂಗೀಕಾರ ಮಾಡತಕ್ಕ ಅಥವಾ ಅದನ್ನು ತಿರಸ್ಕಾರ ಮಾಡತಕ್ಕಂಥ ಅಧಿಕಾರವನ್ನು ಸರ್ಕಾರದವರೇ ಇಟ್ಟುಕೊಂಡು ಬಂದಿದ್ದಾರೆ. ಆದರೆ ಇಡೀ ಇಂಡಿಯಾ ದೇಶದಲ್ಲಿ ಈ ಕಾರ್ಯ ನಿರ್ವಾಹವನ್ನು ಇವರು ಬಹಳ ದಕ್ಷತೆಯಿಂದ ನಡೆಸುತ್ತಿದ್ದಾರೆ ಎಂಬತಕ್ಕಂಥ ಒಂದು ಭರವಸೆ ಈ ದಿವಸ ಸಾರ್ವಜನಿಕರಲ್ಲಿ ಇರುವುದಿಲ್ಲ. ಆ ಒಂದು ದೃಷ್ಟಿಯಿಂದ, ಸಾರ್ವಜನಿಕರ ಹಿತದೃಷ್ಟಿಯಿಂದ, ಈ ವ್ಯವಹಾರವನ್ನು ಒಂದು ಭದ್ರವಾದ ತಳಹದಿಯಮೇಲೆ ಉತ್ತಮ ಗೊಳಿಸಲಿ ಎಂಬ ಅಭಿಪ್ರಾಯವನ್ನು ಇಟ್ಟುಕೊಂಡು ನಾವು ಈ ವಿಚಾರಗಳನ್ನೆಲ್ಲಾ ಸರ್ಕಾರದವರು ಪರಿಶೀಲನೆ ಮಾಡಿ ಎಂದು ಕೇಳಿದೆವು. ಆದರೆ ಈಗತಾನೆ ಶ್ರೀ ರಾಜಶೇಖರಮೂರ್ತಿಗಳೇನೋ ಕೆಲವು ವಿಚಾರಗಳನ್ನು ಹೊರಗೆಡವಿದ್ದಾರೆ. ಆ ರೀತಿ ಒಟ್ಟಿನ ಸಂಗತಿಗಳನ್ನು ಗ್ರಹಿಸುವುದಕ್ಕೆ ಅವರಿಗೊಂದು ಅವಕಾಶವಿದೆ. ಆದ್ದರಿಂದ ಅವರು ಆ ವಿಚಾರಗಳನ್ನೆಲ್ಲಾ ಗ್ರಹಿಸಿ ಹಾಗೆ ಹೇಳಿರಬಹುದು. ಆದರೆ ಸಾರ್ವಜನಿಕರಾದ ನಮಗೆ ಆ ವಿಚಾರಗಳಾವುವೂ ಇನ್ನೂ ತಿಳಿದು ಬಂದಿಲ್ಲ. ಅವರು ಒಂದು ಅಂಶವನ್ನು ಹೇಳಿದರು — ಸರ್ಕಾರಿ ಅಧಿಕಾರಿಗಳಾಗಿದ್ದವರೂ ಅದರಲ್ಲಿ ಸದಸ್ಯರುಗಳಾಗಿದ್ದರು ಎಂತಲೋ ಏನೋ ಅರ್ಥಾಂಬರ್ಥವಾಗಿ ಹೇಳಿದರು. ಆದರೆ ಅದು ಅಷ್ಟೇ ಅಲ್ಲ ಈ ರೇಸ್ ಕ್ಲಬ್ ಎನ್ನುವುದು ಒಂದ ಅನ್‌ರಿಜಿಸ್ಟರ್ಡ್ ಪ್ರೈವೇಟ್ ಇನ್‌ಸ್ಟಿಟ್ಯೂಷನ್. ಆದಕಾರಣ ಈ ಕುದುರೇ ಜೂಜಿನಲ್ಲಿ ಆಸಕ್ತಿ ಇರತಕ್ಕಂಥವರು ಯಾರೇ ಆಗಲಿ ಅವರು ಸರ್ಕಾರಿ ಅಧಿಕಾರಿಗಳೇ ಆಗಿರಲಿ ಅಥವಾ ಖಾಸಗೀ ಜನರೇ ಆಗಿರಲಿ ಇದರಲ್ಲಿ ಸದಸ್ಯರಾಗಿರಲು ಯಾವ ಅಭ್ಯಂತರವೂ ಇಲ್ಲ ಎಂಬುದಾಗಿ ರಿವೈಸ್ ಮಾಡಿದರು. ಆದರೆ ಇದಕ್ಕೆ ಹಿಂದೆ ಈ ರೇಸ್‌ಕ್ಲಬ್ಬಿಗೆ ಅನೇಕ ಮಂದಿ ಸರ್ಕಾರಿ ದೊಡ್ಡ ದೊಡ್ಡ ನೌಕರಿಯಲ್ಲಿರತಕ್ಕಂಥ ಜನರೂ ಕೂಡ ಸದಸ್ಯರಾಗಿದ್ದರು. ಆಗ ಸರ್ಕಾರದವರು ಈ ಸರ್ಕಾರಿ ಅಧಿಕಾರಿಗಳೇಕೆ ಈ ರೇಸ್‌ಕ್ಲಬ್ಬಿನಲ್ಲಿ ಸದಸ್ಯರಾಗಿರಬೇಕು ? ಇವರುಗಳು ಯಾರೂ ಇದರಲ್ಲಿ ಇರಲೇಬಾರದೆಂದು ಒಂದು ಆಜ್ಞೆಯನ್ನು ಹೊರಡಿಸಿದರು. ಆಗ ಸರ್ಕಾರಿ ಆಫೀಸರುಗಳ ಮೆಂಬರ್‌ಷಿಪ್ ಎಲ್ಲಾ ಸೀಜ್ ಆಯಿತು. ಯಾವಾಗ ಅವರಿಗಿದ್ದ ಮೆಂಬರ್‌ಷಿಪ್‌ಸೀಜ್ ಆಗಿ ಹೋಯ್ತೋ ಆಗಲೇ, ಅವರ ಪೈಕಿ ಕೆಲವರು ವರ್ಕಿಂಗ್ ಕಮಿಟಿಯಲ್ಲೂ ಸದಸ್ಯರಾಗಿದ್ದವರು, ಅವರ ಆ ವರ್ಕಿಂಗ್ ಕಮಿಟಿಯಲ್ಲಿದ್ದ ಸದಸ್ಯತ್ವವೂ ಕೂಡ ರದ್ದಾಯಿತು. ಆಮೇಲೆ ಸರ್ಕಾರದವರು ಪುನಃ ಅವರೂ ಸಹ ಇರಬಹುದೆಂದು ಮತ್ತೊಂದು ಆರ್ಡರನ್ನು ಹೊರಡಿಸಿದರು.

* ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—1949 ರಲ್ಲಿ ಅಧಿಕಾರಿಗಳನ್ನೆಲ್ಲಾ ತೆಗೆದು ಹಾಕಲಾಯಿತು ಎಂದು ಶ್ರೀ ರಾಜಶೇಖರಮೂರ್ತಿಗಳು ಹೇಳಿದರು. ಆಗಿನ ಕಾಲ ಶ್ರೀ ಮರಿಯಪ್ಪನವರದೋ ಅಥವಾ ಶ್ರೀ ಕೆ. ಸಿ. ರೆಡ್ಡಿಯವರದೋ ಅದು ನನಗೆ ಗೊತ್ತಿಲ್ಲ. ಆದರೆ ಆ ಆರ್ಡರು ಪುನಃ ರಿವೈಜ್ ಆಯ್ತು ಎಂದು ಈಗ ಶ್ರೀ ಶ್ರೀನಿವಾಸಯ್ಯಂಗಾರ್ ಅವರು ಹೇಳುತ್ತಿದ್ದಾರೆ. ಅದು ಯಾವಾಗ ಹಾಗೆ ಪುನರಪಿ ಆರ್ಡರಾಯಿತು ಎನ್ನುವುದನ್ನು ಅವರು ತಿಳಿಸಿದರೆ ಉತ್ತಮ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಬಹುಶಃ ಇದನ್ನು ಮಾಡಿದ್ದು 1950-51 ರಲ್ಲಿ ಇರಬಹುದು. ಇದು ಒಂದು ಖಾಸಗೀ ವ್ಯವಹಾರ. ಇದರಲ್ಲಿ ಸರ್ಕಾರದವರೇಕೆ ಪ್ರವೇಶ ಮಾಡಬೇಕು ಎಂಬುದಾಗಿಹೇಳುತ್ತ, ಅವರೂ ಸಹ ಸದಸ್ಯರಾಗಿರಬಹುದು ಎಂದು ಮತ್ತೊಂದು ಹುಕುಂ ಸಾದರು ಮಾಡಿದರು. ಅಷ್ಟೇ ಶಿವಾಯಿ ಅವರ ಮೆಂಬರ್‌ಷಿಪ್ಪುಗಳನ್ನೇನೂ ಅವರು ಪುನಃ ರೆಸ್ಟೋರ್ ಮಾಡಲಿಲ್ಲ. ಆದರೆ ಆ ವರ್ಕಿಂಗ್ ಕಮಿಟಿಯಲ್ಲಿ ಅವರಿಗೆಯಾರಿಗೂ ಸ್ಥಾನವಿರಲಿಲ್ಲ. ಅನೇಕ ವಿಚಾರಗಳನ್ನು ನಾನು ಈ ಬಗ್ಗೆ ಹೇಳಬಹುದಾಗಿದೆ. ಆದರೆ ಅವೆಲ್ಲಾ ಬಹಳ ವಿವರಣೆಗಳಿಗೆ

ಸಂಬಂಧಪಟ್ಟಂಥ ವಿಚಾರಗಳು. ನನಗೆ ಅವುಗಳನ್ನೆಲ್ಲಾ ಈಗ ಪ್ರಸ್ತಾಪಿಸಲು ಕಾಲಾವಕಾಶವಿಲ್ಲ.

ಆದರೆ ನಾವು ಈ ವಿಚಾರಗಳನ್ನೆಲ್ಲಾ ಯಾವ ದೃಷ್ಟಿಯಿಂದ ಈ ಆಡಳಿತವನ್ನು ಪುನರ್ವ್ಯವಸ್ಥೆಗೊಳಿಸಬೇಕು, ಇದನ್ನು ಇನ್ನೂ ಉತ್ತಮಪಡಿಸಬೇಕು ಎಂಬುದಾಗಿ ಹೇಳಿದ್ದೇವೋ ಎಂದರೆ, ಅದು ಕೇವಲ ಈ ಕುದುರೆ ಜೂಜಿನ ವ್ಯವಹಾರದ ಬಗ್ಗೆ ಸಾರ್ವಜನಿಕರಿಗೆ ಯಾವ ಒಂದು ಅನುಮಾನವೂ ಇಲ್ಲದಿರುವಂಥ ಒಂದು ಸನ್ನಿವೇಶದಲ್ಲಿ ಇವುಗಳನ್ನು ನಡೆಸಿಕೊಂಡ ಹೋಗಬೇಕಾದ್ದು ಅಗತ್ಯ ಎಂಬ ದೃಷ್ಟಿಯಿಂದ ಒತ್ತಾಯಪಡಿಸಿದ್ದೇ ಹೊರತು ಇದರಲ್ಲಿ ಇನ್ನಾವ ಅಭಿಪ್ರಾಯವೂ ಇಲ್ಲ. ಇದರಲ್ಲಿ ಯಾವ ಒಂದು ಪಕ್ಷದ ದೃಷ್ಟಿಯಾಗಲಿ ಅಥವಾ ವ್ಯಕ್ತಿಯ ದೃಷ್ಟಿಯಾಗಲಿ ಖಂಡಿತ ಇರುವುದಿಲ್ಲ. ಆದರೆ ಈ ದಿವಸ ಈ ಕುದುರೆ ಜೂಜನ್ನು ನಡೆಸಿಕೊಂಡು ಬರುತ್ತಿರುವ ವಿಚಾರದಲ್ಲಿ ಅನೇಕ ಫುಕಾರುಗಳು ಬಂದಿವೆ. ಅದಕ್ಕಾಗಿ ನಾನು ಅವುಗಳನ್ನು ಸರ್ಕಾರದ ಮುಂದೆ ತಿಳಿಸಿ—ತಾವು ಅವುಗಳನ್ನು ವಿಚಾರಮಾಡಿ ಅವುಗಳೆಲ್ಲಾ ನಿಜವೇ. ಅಥವಾ ಸುಳ್ಳೇ ವಿಚಾರಮಾಡಿ ಎಂಬುದಾಗಿ ಕೇಳಿದ್ದೆನು. ಅದಕ್ಕಾಗಿ ಆ ದಿವಸ ಸರ್ಕಾರದವರು ಒಂದು ಸಮಿತಿಯನ್ನು ನೇಮಕಮಾಡುವುದಾಗಿ ತಿಳಿಸಿದ್ದರು. ಈಗಲೂ ಸಹ ಇದರಲ್ಲಿ ಆ ಸರ್ಕಾರದ ಸ್ಟ್ಯೂವರ್ಡ್‌ಗಳು ಇದ್ದರೆಂದು ಅವರು ಹೇಳಿದರು. ಆದರೆ ಹಾಗೆ ಅವರು ಅದರಲ್ಲಿದ್ದುದು ನಿಜವೇ, ಅವರಿಗೇನಾದರೂ ಆ ವರ್ಕಿಂಗ್ ಕಮಿಟಿಯಲ್ಲಿ ಪ್ರಭಾವವಿತ್ತೊ ಎಂಬತಕ್ಕ ಅಂಶಗಳ ಬಗ್ಗೆ ಈಗ ಸರ್ಕಾರದವರು ಜವಾಬನ್ನು ಕೊಡಬೇಕಾಗಿದೆ. ಆ ಸರ್ಕಾರಿ ಅಧಿಕಾರಿಗಳಿಗೆ ನೀವು ಆ ಸಮಿತಿಯಲ್ಲಿದ್ದರೂ ಕೂಡ ಈ ರೇಸ್ ಕೋರ್ಸಿನ ವಿಚಾರವಾಗಿ ಯಾವುದನ್ನೂ ಪ್ರಸ್ತಾಪಿಸಬಾರದು—ನೀವು ಸುಮ್ಮನೆ ಅದರಲ್ಲಿ ಕುಳಿತಿದ್ದು ಬರಬೇಕೆಂಬುದಾಗಿ ಅವರಿಗೆಲ್ಲಾ ಹೇಳಲಾಗಿತ್ತೆಂದೂ, ಅವರು ಈ ರೇಸಿನ ಬಗ್ಗೆ ಯಾವ ಒಂದು ಸಲಹೆಯನ್ನೂ ಕೂಡ ಮಾಡಬಾರದೆಂಬ ಒತ್ತಾಯವನ್ನು ಅವರ ಮೇಲೆ ಹಾಕಲಾಗಿತ್ತೆಂದೂ ವದಂತಿಯಿದೆ. ಈ ಬಾಬಿನಿಂದ ಸರ್ಕಾರಕ್ಕೆ ತುಂಬ ಆದಾಯ ಬರುತ್ತದೆ. ಅದಕ್ಕೆ ಸರಿಯಾಗಿ ಇದರ ಬಗ್ಗೆ ಸಾರ್ವಜನಿಕರಿಗೊಂದು ಹಿತರಕ್ಷಣೆಯೂ ಕೂಡ ಆಗಬೇಕಾದದ್ದು ಅಗತ್ಯ ಎಂಬ ದೃಷ್ಟಿಯಿಂದ ನಾನು ಈ ವಿಷಯವನ್ನೀಗ ಚರ್ಚೆಮಾಡುತ್ತಿದ್ದೇನೆ. ಇದರಿಂದ ಸರ್ಕಾರಕ್ಕೆ ಬರುವ ಆದಾಯವನ್ನು ಹೆಚ್ಚಿಸಬೇಕೆಂಬ ಉದ್ದೇಶವಿದೆಯೇ ಹೊರತು ಇದರಲ್ಲಿ ಯಾವ ಪಕ್ಷ—ಪಾರ್ಟಿ, ವ್ಯಕ್ತಿ ವಿಚಾರಗಳೂ. ನನ್ನ ಮನಸ್ಸಿನಲ್ಲಿಲ್ಲ. ಆ ವಿಚಾರಗಳು ಅಷ್ಟಾಗಿ ನನಗೆ ಬೇಕಾಗಿಯೂ ಇಲ್ಲ.

ಇನ್ನು ಕೊನೆಯದಾಗಿ ಈ ಬೆಟ್ಟಿಂಗ್ ಟ್ಯಾಕ್ಸ್ ವಿಚಾರ. ಈ R.M·D.C. ಅವರ ಕಾಂಪಿಟಿಷನ್ ಬಗ್ಗೆ ಈಗಾಗಲೇ ಶ್ರೀ ಗೋಪಾಲಗೌಡರೂ ಇತರ ಸದಸ್ಯರೂ ಎಲ್ಲ ವಿಚಾರಗಳನ್ನೂ ಬಹಳ ಚೆನ್ನಾಗಿ ತಿಳಿಸಿದ್ದಾರೆ. ಆದರೆ ನಾನು ಈ ಬಗ್ಗೆ ಒಂದು ಪ್ರಾಮುಖ್ಯವಾದ ವಿಚಾರವನ್ನು ಮಾತ್ರ ತಿಳಿಸಬೇಕೆಂದಿರುತ್ತೇನೆ. ಈ ಸಂಸ್ಥೆಯವರಿಗೆ ಬಹಳವಾಗಿ ಹಣ ವಸೂಲಿ ಆಗುತ್ತಿದೆ. ಆದರೆ ಹಾಗೆ ವಸೂಲಾಗತಕ್ಕ ಹಣದಲ್ಲಿ ಒಂದು ಭಾಗವನ್ನು ಸರ್ಕಾರದವರಿಗೆ ಕೊಡಬೇಕೆಂಬುದಾಗಿ ಆಕ್ಟಿನಲ್ಲಿ ಹೇಳಿದೆ. ಆದಕಾರಣ ಅವರು ಖಚಿತವಾಗಿ ಪ್ರತಿಯೊಂದು ಕಾಂಪಿಟಿಷನ್ನಿಗೂ ಎಷ್ಟೆಷ್ಟು ಮೊಬಲಗು ವಸೂಲಾಗುತ್ತಿದೆಯೆಂಬುದನ್ನು ನಿಗಾ ಇಟ್ಟು ಅದರ ಬಗ್ಗೆ ಸರ್ಕಾರಕ್ಕೆ ಬರಬೇಕಾದ ಮೊಬಲಗನ್ನು ಕಡ್ಡಾಯವಾಗಿ ವಸೂಲ್ಮಾಡಿಕೊಳ್ಳಬೇಕಾದದ್ದು ಸರ್ಕಾರದವರ ಆದ್ಯಕರ್ತವ್ಯವಾಗಿತ್ತು. ಹೀಗೆ ಮಾಡಬೇಕಾಗಿದ್ದುದು ಇವರ ಕರ್ತವ್ಯವಾಗಿರಲಿಲ್ಲವೇ ಎಂದು ಕೇಳುತ್ತೇನೆ?

Out of the total amounts collected, such and such per cent shall be credited to the Government, shall belong to the Government. ಇವರಿಗೆ ಎಷ್ಟೆಷ್ಟು ಹಣ ವಸೂಲಾಗುತ್ತಿದೆ ಎಂಬುದರ ಮೇಲ್ವಿಚಾರಣೆ ನೋಡಿಕೊಳ್ಳಲು ಅಧಿಕಾರಿಗಳನ್ನು ನೇಮಕ ಮಾಡತಕ್ಕಂಥ ಒಂದು ದಕ್ಷತೆ ನಮ್ಮ ಸರ್ಕಾರಕ್ಕೆ ಇಲ್ಲದೆ ಹೋಯಿತಲ್ಲಾ ಎಂದು ನನಗೆ ಅನ್ನಿಸುತ್ತಿದೆ. ಈ ದಿವಸ ತಾವು ದೇಶದಲ್ಲಿ ಯಾವ ಮೂಲೆಯಲ್ಲಿ ಹೋಗಿ ನೋಡಿ—ಎಲ್ಲಾ ಬೀದಿಗಳಲ್ಲೂ—ಓಣಿಗಳಲ್ಲೂ ಈ R.M.D.C. ಕಲೆಕ್ಷನ್ ಪೆಟ್ಟಿಗೆಗಳನ್ನು ಇಟ್ಟಿರತಕ್ಕದ್ದು ತಮ್ಮೆಲ್ಲರಿಗೂ ಕಂಡುಬರುತ್ತದೆ. ಹೇಗೆ ಇವರು ಎಷ್ಟೆಷ್ಟು ಹಣವನ್ನು ವಸೂಲ್ಮಾಡುತ್ತಿದ್ದಾರೆ ಎಂಬ ಬಗ್ಗೆ ತಿಳಿಸಲು ತಮ್ಮಲ್ಲಿ ಯಾವ ದಾಖಲೆಗಳಾದರೂ ಇವೆಯೇ? ಇವರಿಗೆ ಹಾಗೆ ಅಪಾರವಾಗಿ ಹಣ ವಸೂಲಾಗದೆ ಇದ್ದಿದ್ದರೆ ಒಂದೊಂದು ಕಾಂಪಿಟಿಷನ್ನಿಗೂ 13 ಲಕ್ಷ-14 ಲಕ್ಷ ರೂಪಾಯಿಗಳ ಬಹುಮಾನವನ್ನು ಹೇಗೆ ಹಂಚುತ್ತಾರೆ? ಒಂದೊಂದು ಕಾಂಪಿಟಿಷನ್ನಿಗೆ 1 ಲಕ್ಷ ರೂಪಾಯಿಗಳ ಬಹುಮಾನ ಕೊಡಲಾಗುತ್ತದೆ ಎಂದು ಅವರು ಯಾವ ಧೈರ್ಯದಿಂದ ಹಾಗೆ ಬರೆಯುತ್ತಾರೆ? ಅವರು ಅಷ್ಟು ಹಣವನ್ನು ವಸೂಲ್ಮಾಡಿಕೊಳ್ಳುವಂಥ ಭರವಸೆ ಅವರಿಗಿರುವುದರಿಂದಲೇ ಅಲ್ಲವೇ ಅವರು ಹಾಗೆಲ್ಲಾ ಬರೆಯುತ್ತಿರುವುದು—ಕೊಡುತ್ತಿರುವುದು? ಈ ವಿಚಾರಗಳನ್ನೆಲ್ಲಾ ಸರ್ಕಾರದವರು ಕೂಲಂಕಷವಾಗಿ ವಿಮರ್ಶೆ ಮಾಡತಕ್ಕದ್ದು ಅಗತ್ಯ. ಇದರ ಬಗ್ಗೆ ಒಂದು ಸರಿಯಾದ ವ್ಯವಸ್ಥೆ ಮಾಡಿ ಸರ್ಕಾರಕ್ಕೆ ಬರಬೇಕಾದಂಥ ಹಣವನ್ನು ವಸೂಲ್ಮಾಡಿಕೊಳ್ಳಲು ಈಗಲಾದರೂ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಾರೆಂಬುದಾಗಿ ನಾನು ಭರವಸೆ ಹೊಂದಲು ಸರ್ಕಾರ ಈ ಅಂಶಗಳಿಗೆಲ್ಲಾ ಸಾಕಷ್ಟು ವಿವರಣೆ ಕೊಡತಕ್ಕದ್ದು ಅಗತ್ಯ. ಇದರಲ್ಲಿ ಪಾರ್ಟಿ-ಪಕ್ಷದ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

*Sri B. NARAYANASWAMY (Mysore City-South).—Sir, after hearing Sri Srinivasa Iyengar, I thought he would clarify to a very great extent the affairs of the Bangalore Race Club. Of course, it was on Sri Srinivasa Iyengar's motion this Government responded for the appointment of a committee and a committee was constituted under the chairmanship of the Home Minister and Sri Srinivasa Iyengar was a member. Though there has been a response, what is the kind of response that we got from this Government; that is the point. Sri Mariappa the other day was telling us that in a democratic set up a democratic Government should properly respond to the criticisms of the opposite party or

(SRI B. NARAYANA SWAMY).

any member of the House. But in this case, in my opinion, the response from the Government is most undemocratic. A report was given by the committee and the way that report has been treated by this Government, does not do any credit to this Government. From what I have heard it was more a question of *izzat* that has prevailed in coming to a decision whether licence should be issued to the Race Club or not and the result has been that we have lost a substantial revenue to the State. As a matter of fact, this Government has never announced that racing has been stopped in Mysore. The other day when Sri Mariappa was speaking on this matter, the Chief Minister during his reply said that licence was not granted because the Race Club authorities did not apply in time. But he also said that they subsequently applied but they did not send the necessary amount that was required, namely, the fee. I would like to ask what was the Special Officer that was appointed doing. A Special Officer was appointed to look after the Race Club. Why did he not look into this question of applying for a licence in time? That, the Minister has to answer. It is no use saying that he was merely an observer. He is not an expert in races. Anyhow we have lost a substantial revenue and I think the Government ought to have taken all necessary precautions before coming to any decision of not issuing a licence. Even supposing there was some delay in applying for licence, Government could have asked them to deposit the amount. They ought not to have been sticklers in enforcing the rules or regulations concerning races. Anyhow, personally I feel that there has not been happy relationship between the Government and the Race Club authorities. That much I say.

I have tabled two cut motions, one relating to the entertainment tax and the other about the administration of the Sales Tax Act. Regarding the entertainment tax, I join with Sri Srinivasa Iyengar and say that there has been a good deal of evasion in the collection of entertainment tax and secondly, that there has been a good deal of delay in the payment of the amount due to the several municipalities. If the Minister will kindly look into the payment that has been made in the year 1954-55, that is, the actuals, the receipt has been nearly to about Rs. 7 lakhs and odd, whereas the amount paid to the several municipalities or local bodies has been only Rs. 1,81,000. Why this vast difference? What about the rest of the amount, what has happened to the amount? As a matter of fact, the complaint of the several municipalities is that there has been a good deal of delay in the payment of the amount towards the entertainment tax that is due to the municipality.

As regards the Sales Tax Act, I am constrained to say that the officers or the authorities concerned in the administration of the Sales Tax Act are treating the assessees in the most discourteous manner and in an atmosphere of suspicion and prejudice. Of course, there is a good deal of evasion of payment of seles-tax for which the sales-tax authorities themselves are responsible. They allow this short of evasion to go on. I know that honest merchants (*Interruption*) get a good deal of pin pricks from the sales-tax authorities when the latter look into the accounts while issuing licence. I know a case where an officer wanted to ill-treat an assessee merely because he was wearing good dress.

2 P.M.

I would like to bring to the notice of the Government about the pitiable position of some of the contractors—building and sanitary contrrctors. These contractors are not liable to pay licence fee but still they are compelled to pay licence fee because the articles they deal with, that they use are mostly those that come under single point. Articles like cement, iron and steel are all controlled articles. Only dealers who deal with them under the respective control orders are recognised dealers and they have to obtain licence and it is for them to collect and pay tax whereas the building and sanitary contractors take the materials for construction of houses. Even they are compelled to pay the tax though they

are not entitled to pay the same. As a matter of fact, some cases are pending before courts. It is for the Government to look into these matters. I know that several merchants in Mysore have made representations to the Minister concerned to look into all these grievances and rectify the matters. I hope the Government will do the needful in the matter.

*ಶ್ರೀ ಆರ್. ಅನಂತರಾಮನ್ (ಚಾಮರಾಜಪೇಟೆ).—ಸ್ವಾಮಿ, ಈ ಸೇಲ್ಸ್ ಟ್ಯಾಕ್ಸ್ ವಿಚಾರದಲ್ಲಿ ಒಂದು ಮಾತು ಹೇಳಬೇಕೆಂದು ಇಷ್ಟಪಡುತ್ತಾ ಇದ್ದೇನೆ. ಮರದ ಸಾಮಾನುಗಳಿಗೆ ರೂಪಾಯಿಗೆ ಒಂದಾಣೆ ಸೇಲ್ಸ್ ಟ್ಯಾಕ್ಸ್ ಹಾಕಿದ್ದೀರಿ. ಅದು ಏನಾಗಿದೆ ಎಂದರೆ ಇಂಟರ್ ಪ್ರಿಟೇಷನ್ ಮಾಡುವಾಗ ಈ ಮ್ಯೂಸಿಕಲ್ ಇನ್‌ಸ್ಟ್ರುಮೆಂಟ್ಸ್‌ಗೂ ಕೂಡ ಒಂದಾಣೆ ತೆರಿಗೆ ಹಾಕಿದ್ದಾರೆ. ಹಾರ್ಮೋನಿಯಂ ಮುಂತಾದ ಮ್ಯೂಸಿಕಲ್ ಇನ್‌ಸ್ಟ್ರುಮೆಂಟ್ಸ್‌ನ್ನು ಉಪಯೋಗಿಸುವವರು ಬಹಳ ಕಮ್ಮಿ ಜನ. ಮದರಾಸಿನಲ್ಲಿ ರೂಪಾಯಿಗೆ ಮೂರ ಕಾಸು ಇದೆ. ಅದರಂತೆಯೇ ನಮ್ಮ ಸರ್ಕಾರದವರೂ ಸಹ ರೂಪಾಯಿಗೆ ಮೂರು ಕಾಸು ತೆರಿಗೆ ವಸೂಲು ಮಾಡುವುದು ಒಳ್ಳೆಯದು. ಅದೂ ಅಲ್ಲದೆ ಈ ಬಾಬಿನಿಂದ 500, 600 ರೂಪಾಯಿ ಕೂಡ ಬರುವುದಿಲ್ಲ. ಆದ್ದರಿಂದ ಈ ಆರ್ಟಿಸ್ಟ್‌ಗೆ ಉತ್ತೇಜನ ಕೊಡುವ ದೃಷ್ಟಿಯಿಂದ ನಾನು ಆಗಲೇ ಹೇಳಿದಂತೆ ರೂಪಾಯಿಗೆ ಮೂರು ಕಾಸಿನಂತೆ ತೆರಿಗೆ ವಸೂಲು ಮಾಡುವುದು ಒಳ್ಳೆಯದು ಎಂದು ಕಾಣುತ್ತದೆ.

ಇನ್ನೊಂದು ಕುದುರೆ ಜೂಜಿನ ವಿಚಾರ. ಹಿಂದಿನ ಸರ್ಕಾರದವರಿಗೆ ಕುದುರೆ ಜೂಜನ್ನು ತೆಗೆಯಬೇಕೆಂದು ಕೆಲವರು ಸಲಹೆ ಮಾಡಿದಾಗ, ತೆಗೆಯುವುದಕ್ಕಾಗುವುದಿಲ್ಲ ಎಂದು ಅವರು ಹೇಳಿದರು. ಈ ಸರ್ಕಾರದವರೂ ಸಹ ಈಗ ನಮ್ಮ ಮುಖ್ಯ ಮಂತ್ರಿಗಳ ಭಾಷಣದಲ್ಲಿ ನೋಡಿದರೆ ಈ ಲೈಸೆನ್ಸ್ ಕೊಡುವುದನ್ನು ಯೋಚನೆ ಮಾಡುತ್ತಾ ಇದ್ದೇವೆ, ತೆಗೆದು ಹಾಕಿಲ್ಲ ಎಂದು ಹೇಳುತ್ತಾರೆ ಮತ್ತು ನಮ್ಮ ಕಾಂಗ್ರೆಸ್‌ನವರು ಮಾತನಾಡುವಾಗ ಪಾನನಿರೋಧಕ್ಕೆ ಎಷ್ಟು ಬೆಂಬಲ ಕೊಡುತ್ತಾರೋ ಅಷ್ಟು ಬೆಂಬಲ ಇದಕ್ಕೆ ಕೊಡುತ್ತಾ ಇಲ್ಲ. ಕುದುರೆಯ ಜೂಜಿನಿಂದ ಬರತಕ್ಕ 10—15 ಲಕ್ಷ ರೂಪಾಯಿ ಬರಬೇಕೆಂದು ನೋಡುತ್ತಾ ಇದ್ದೇವೆಯೇ ಹೊರತು ಅದರಿಂದ ಎಷ್ಟು ಅನರ್ಥವಾಗುತ್ತಾ ಇದೆ ಎಂಬುದನ್ನು ಯೋಚನೆ ಮಾಡುತ್ತಾ ಇಲ್ಲ. ಆದಾಯ ಹೊರಟು ಹೋಯಿತು ಎಂದು ಹೇಳುತ್ತಾರೆಯೇ ಹೊರತು ಕುದುರೆ ಜೂಜನ್ನು ವಜಾ ಮಾಡಿ ಎಂದು ಹೇಳುವುದಿಲ್ಲ. ಇದು ಬಹಳ ವ್ಯಥೆಯನ್ನುಂಟುಮಾಡುವ ವಿಚಾರ. ಈ ಜೂಜಿನಿಂದ ಎಷ್ಟು ಅನರ್ಥವಾಗುತ್ತಿದೆ ಎಂಬುದನ್ನು ಬೆಂಗಳೂರಿನಲ್ಲಿ ಇರುವ ನಾನು ನೋಡಿದ್ದೇನೆ. ಈ ಕುದುರೆ ಜೂಜಿನ ಕಮಿಟಿಯಲ್ಲಿರತಕ್ಕವರೆಲ್ಲರೂ ದೊಡ್ಡ ದೊಡ್ಡ ಕುದುರೆಗಳನ್ನಿಟ್ಟುಕೊಂಡಿರುತ್ತಾರೆ. ತಮ್ಮ ಕುದುರೆಗೆಲ್ಲಾ ಬೇಕು. ತಮಗೆ ಬೇಕಾದವರು ಯಾರು ಬೆಟ್ ಮಾಡುತ್ತಾರೋ ಅವರಿಗೇ ಹಣ ಸಿಕ್ಕಬೇಕು ಎಂದು ನೋಡುತ್ತಾರೆಯೇ ಹೊರತು ಬಡವನಿಗೆ ಎರಡು ಮೂರು ರೂಪಾಯಿ ಜೂಜು ಕಟ್ಟಿದರೂ ಕೂಡ ಮೂರು ಕಾಸೂ ಬರುವುದಿಲ್ಲ, ಹೀಗೆ ಇದು ನಡೆಯುತ್ತಾ ಇದೆ. ಎಷ್ಟು ಅಕ್ರಮವಾಗಿ ನಡೆಯುತ್ತಿದೆ ಎಂಬುದನ್ನು ಶ್ರೀ ಶ್ರೀನಿವಾಸಅಯ್ಯಂಗಾರ್‌ರವರು ಬಹಳ ಚೆನ್ನಾಗಿ ಹೇಳಿದ್ದಾರೆ. ಹೋದ ವರ್ಷ ಒಂದು ಸಾರಿ ಏನಾಯಿತು ಎಂದರೆ ಒಬ್ಬ ನ್ಯೂಯಾರ್ಡ್‌ರವರ ಕುದುರೆ ಬಹಳ ಚೆನ್ನಾಗಿತ್ತು, ಅದು ಫಸ್ಟ್ ಬಂದೇ ಬರುತ್ತದೆ ಎಂದು ನಿರೀಕ್ಷೆ ಮಾಡಿಕೊಂಡಿದ್ದರು. ಆದರೆ ಕುದುರೆಗಳು ಹೊರಡುವಾಗ ಆ ಕುದುರೆ ಬರುವುದು ಸ್ವಲ್ಪ ನಿಧಾನವಾಯಿತು. ಆಗ ತಕ್ಷಣವೇ ಇತರ ಕುದುರೆಗಳು ಹೊರಡುವುದನ್ನು ಕ್ಯಾನ್ಸಲ್ ಮಾಡಿ ತಿರುಗಿ ಅರ್ಧ ಘಂಟೆ ಆದ ಮೇಲೆ ಬಿಟ್ಟರು. ಅವರ ಕುದುರೆಗೇ ಫಸ್ಟ್ ಪ್ರೈಸ್ ಬಂತು.

ಈ ಕುದುರೆ ಜೂಜಿನಿಂದ ಕಾರ್ಪೊರೇಷನ್‌ಗೆ ಮೂರು ಕಾಸಿನ ಆದಾಯವೂ ಇಲ್ಲ. ನೀರು ಇಲ್ಲದೆ, ನೀರಿಗೆ ಅಭಾವವಾಗಿರುವ ಈ ಕಾಲದಲ್ಲಿ ಅವರಿಗೆ ನಾವು ನೀರು ಒದಗಿಸಬೇಕು. ಇದರಿಂದ ಮತ್ತೆ ನಗರದಲ್ಲಿರುವ ಜನರಿಗೆ ಬಹಳ ಕಷ್ಟವಾಗುತ್ತದೆ. ಸರ್ಕಾರದವರಿಗೆ ಸ್ವಲ್ಪ ಆದಾಯ ಬರಬಹುದೇ ಹೊರತು ಜನಕ್ಕೆ ಸ್ವಲ್ಪವೂ ಅನುಕೂಲವಿಲ್ಲ. ಅದೂ ಅಲ್ಲದೇ ಸಾವಿರಾರು ಜನರ ಮನೆಗಳು ಹಾಳಾಗಿ ಹೋಗಿವೆ. ಅದರಲ್ಲಿ ಬಡವರೇ ಜಾಸ್ತಿ. ಬಡವರಿಗೆ ಅನುಕೂಲಮಾಡಬೇಕೆಂಬ ದೃಷ್ಟಿಯಿಂದ ನಮ್ಮ ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಪಾನನಿರೋಧ ಸಂಪೂರ್ಣವಾಗಿ ಜಾರಿಗೆ ತರಬೇಕೆಂದು ಹೇಳುತ್ತಾ ಇದ್ದೇವೆ. ಆರ್. ಎಂ. ಡಿ. ಸಿ. ಮೇಲೆ ಹತೋಟಿ ಇಟ್ಟು ಆ ರೀತಿ ಜೂಜಾಡುವುದನ್ನು ನಿಲ್ಲಿಸಬೇಕೆಂದು ಪ್ರಯತ್ನಮಾಡುತ್ತಾ ಇದ್ದೇವೆ. ಹಾಗಿದ್ದೂ ಕೂಡ ಕಾಂಗ್ರೆಸ್ಸಿನವರೇ ಈ ಕುದುರೆಯ ಜೂಜು ನಡೆಯಬೇಕೆಂದು ಹೇಳುತ್ತಿರುವುದನ್ನು ನೋಡಿದರೆ ನನಗೆ ನಾಚಿಕೆಯಾಗುತ್ತಿದೆ. ಇನ್ನಾದರೂ ಯೋಚನೆ ಮಾಡಿ ಈ ಕುದುರೆ ಜೂಜನ್ನು ಖಂಡಿತವಾಗಿಯೂ ನಿಲ್ಲಿಸಬೇಕೆಂದು ಒತ್ತಾಯಮಾಡುವುದು ಒಳ್ಳೆಯದು. ಈಗ ಸರ್ಕಾರದವರು ಈ ವರ್ಷ ಕುದುರೆ ಜೂಜು ನಡೆಯುವುದಕ್ಕೆ ಅವಕಾಶಕೊಟ್ಟಿಲ್ಲ. ಇನ್ನು ಮುಂದೂ ಕೂಡ ಇದೇ ರೀತಿ ವಜಾ ಮಾಡಿದರೆ ನಿಜವಾಗಿಯೂ ಅವರಿಗೆ ಒಳ್ಳೆಯ ಹೆಸರು ಬರುತ್ತದೆ ಎಂದು ಹೇಳುತ್ತೇನೆ. ಇದರಿಂದ 10 ಲಕ್ಷ ರೂಪಾಯಿಗಳ ಆದಾಯವೇನೋ ಬರುತ್ತದೆ. ಆದರೆ ಇದನ್ನು ನಿಲ್ಲಿಸಿದರೆ ಎಷ್ಟೋ ಜನಕ್ಕೆ ಕ್ಷೇಮವಾಗುತ್ತದೆ. ಬಡಬಗ್ಗರು ಉಳಿದುಕೊಳ್ಳುತ್ತಾರೆ. ಇಲ್ಲದೇ ಇದ್ದರೆ ದೇಶಕ್ಕೆ ಅನಾಹುತವಾಗುತ್ತದೆ ಎಂದು ಹೇಳುತ್ತೇನೆ.

Sri V. M. MASCARENHAS (St. John's Hill).—I fully support Sri R. Anantaraman on the subject of the Race Course. I am surprised that the Government has done a grievous wrong in delaying a decision regarding the Race Club. If prohibition is a thing to be achieved, in my opinion abolition of racing is a better achievement. The misery and the hardship caused to innumerable inhabitants in Bangalore by racing is perhaps well known to us all, and so for the sake of Rs. 10. lakhs revenue, let the Government not grudge stopping racing.

Coming to sales-tax, this is perhaps one of the best sources of revenue for the State and a most flexible one. When we introduced single point

(SRI V. M. MASCARENHAS.)

levy in place of multi-point levy there were some misgivings that revenues from the sales-tax might be affected. I am gratified to find that not only it is not so but our revenues are definitely upwards. But, as Sri Srinivasa Iyengar pointed out, it is not on account of the Act but because we have put a very heavy levy, I still believe that the department should wake up and if the officers do a little better work I am sure that larger amounts can be realised.

Mr. SPEAKER.—What Sri Srinivasa Iyengar said was that on account of increase in the sales-tax, there would be better collection.

Sri V. M. MASCARENHAS.—I readily agree. But I feel that if the departmental officers are awake and put up a little more effort, another 20 per cent extra revenue will come. As I have pointed out in the past, sales-tax officers should have their representatives at every octroi office to have an idea of the various kinds of goods that come into the State and which may evade sales-tax. I do not know if the Government have taken any step in that direction. I only feel that the Sales-tax Department should try their utmost to see that the revenues are not in any way curtailed.

I have also heard that the department consists of most inefficient men in the whole State. I trust the new Minister who is handling the portfolio is aware of this fact. If you want to improve the department it is necessary that you put in some new blood in the department and also see that some top men with real accountancy and business acumen are there to tone up the entire administration. If that is done, I am sure that the revenues will exceed Rs. 2 crores.

One word more, about entertainment tax in the field of sports. The Government of India has abolished this tax. My earnest request to the Government of Mysore is that on sport and other activities please do not levy any entertainment tax. That will be an indirect fillip for the progress of sports and games.

*ಶ್ರೀ ಡಿ. ದೇವರಾಜ ಅರಸ್.—ಸ್ವಾಮಿ, ಈ ಪ್ರೈಸ್ ಕಾಂಪೆಟಿಷನ್‌ನಿಂದ ಈ ಸಾಲಿನಲ್ಲಿ ವರಮಾನ ಬಹಳ ಕಡಿಮೆ ಆಗಿದೆ. ಇದಕ್ಕೆ ಕಾರಣವು ಕೂಡ ನಮಗೆ ಗೊತ್ತಿದೆ. ನಾವು ಇದಕ್ಕೆ ಸಂಬಂಧಪಟ್ಟ ಇಂಡಿಯಾ ಸರ್ಕಾರದ ಮಸೂದೆಯನ್ನು ನಮ್ಮ ಸಂಸ್ಥಾನದಲ್ಲಿ ಜಾರಿಗೆ ತರಬೇಕೆಂದು ತೀರ್ಮಾನಮಾಡಿ ಆ ಪ್ರಕಾರ ನಡೆಯಬೇಕೆಂದು ಏರ್ಪಾಡು ಮಾಡಿದ್ದೇವೆ. ಸರ್ಕಾರದವರಿಗೆ ಬಹಳ ಹೆಚ್ಚಿಗೆ ವರಮಾನ ಕೊಡತ್ತಿದ್ದಂಥ, ಇದುವರೆಗೂ ಈ ರೀತಿಯಾದ ಕಾಂಪೆಟಿಷನ್ ನಡೆಸುತ್ತಿದ್ದಂಥ ಆರ್. ಎಂ. ಡಿ. ಸಿ. ಅವರ ವಿಚಾರವಾಗಿ ನಮ್ಮ ಈ ಮಾನ್ಯ ಸಭೆಯಲ್ಲಿ ಬಹಳವಾಗಿ ಪ್ರಸ್ತಾಪ ನಡೆದಿದೆ. ಅದರ ಮುಖ್ಯ ಸಾರಾಂಶವೇನೆಂದರೆ ನಮ್ಮ ದೇಶಕ್ಕೆ ಈ ಕಾಂಪೆಟಿಷನ್‌ನಿಂದ ಎಷ್ಟು ವರಮಾನ ಬರಬೇಕಾಗಿತ್ತೋ ಅಷ್ಟು ವರಮಾನ ಬಂದಿಲ್ಲ. ಅವರು ಪ್ರತಿಯೊಂದು ರೀತಿಯಲ್ಲೂ ಕೂಡ ಲೆಕ್ಕ ಪತ್ರಗಳನ್ನು ಒದಗಿಸದೆ, ವರಮಾನ ಸರ್ಕಾರಕ್ಕೆ ಕೊಡಬೇಕಾದಷ್ಟು ಕೊಡದೇ ಇರುವ ಪ್ರಯತ್ನ ನಡೆಸಿದ್ದಾರೆ ಎಂದು ಹೇಳಿ ಒಂದು ಆಪಾದನೆ ಇದೆ. ಮೈಸೂರು ಸರ್ಕಾರದವರು ಪ್ರೈಸ್ ಕಾಂಪೆಟಿಷನ್ ಆಕ್ಟ್ ಪ್ರಕಾರ ಅವರಿಗೆ ಮತ್ತೆ ಲೈಸೆನ್ಸ್ ಕೊಡುವುದಕ್ಕೆ ಶುರು ಮಾಡಿದಮೇಲೆ ಅವರು ಇದುವರೆಗೂ ಸುಮಾರು 200 ಕಾಂಪೆಟಿಷನ್‌ಗಳನ್ನು ನಡೆಸಿದ್ದಾರೆ ಎಂದು ಹೇಳಿ ಕೂಡ ನಮಗೆ ತಿಳಿದುಬಂದಿದೆ. ಈ 200 ಕಾಂಪೆಟಿಷನ್‌ಗೂ ಕೂಡ ಇದುವರೆಗೂ ಒಂದು ದಾಮಾಷಾ ಪ್ರಕಾರ ಅವರಿಗೆ ಕಲೆಕ್ಟ್ ಆಗಿರತಕ್ಕ ದುಡ್ಡನ್ನು ಲೆಕ್ಕಾ ಹಾಕಿದರೆ ಒಂದು ಕಾಂಪೆಟೀಷನ್‌ಗೆ ಸರಾಸರಿ ಸುಮಾರು ಐದರಿಂದ ಆರು ಲಕ್ಷ ರೂಪಾಯಿಗಳವರೆಗೂ ಬರಬಹುದು. ಒಟ್ಟು ಇದುವರೆಗೆ 12 ಕೋಟಿ ರೂಪಾಯಿಗಳಷ್ಟು ವರಮಾನ ಸಂಗ್ರಹವಾಗಿರಬಹುದು. ಆದರೆ ಅವರು ಸರ್ಕಾರಕ್ಕೆ ಕೊಟ್ಟಿರತಕ್ಕ ತೆರಿಗೆ ಇದುವರೆಗೂ ಸುಮಾರು 25 ಲಕ್ಷ ರೂಪಾಯಿಗಳು ಮಾತ್ರ ಎಂದು ಹೇಳಿದೆ. 12 ಕೋಟಿ ರೂಪಾಯಿನ ಅಂದಾಜಿನ ಪ್ರಕಾರ ಲೆಕ್ಕ ಹಾಕಿದ್ದರೆ ಇನ್ನು ಒಂದೂ ಚಿಲ್ಲರೆ ಕೋಟಿ ರೂಪಾಯಿ ಸರ್ಕಾರಕ್ಕೆ ಬರಬೇಕಾದ ವರಮಾನ ಬಂದಿಲ್ಲ, ಅದನ್ನು ಅವರು ಅನೇಕ ವಿಧದಲ್ಲಿ ಇವೇಡ್ ಮಾಡಿದ್ದಾರೆ ಎಂದು ಹೇಳಿ ತಿಳಿದುಬರುತ್ತಾ ಇದೆ. ಆ ರೀತಿ ಇವೇಡ್ ಮಾಡಿದ್ದಾರೆ ಎಂದು ಹೇಳುವುದಕ್ಕೆ ಕೆಲವು ಸಕಾರಣಗಳು ಕಂಡುಬರುತ್ತಾ ಇವೆ. ಅವರ ಒಂದು ಸ್ಕ್ರೂಟಿನಿ ಕಮಿಟಿ ಎಂಬುದು ಇದೆ, ಅದರಲ್ಲಿ ಸರ್ಕಾರದವರ ಪ್ರತಿನಿಧಿ ಇದ್ದಾರೆ. ಅವರಿಗೆ ಸಾಕಾದಷ್ಟು ಅವಕಾಶವಿಲ್ಲದೆ ಅವರ ಲೆಕ್ಕ ಪತ್ರಗಳನ್ನು ನೋಡುವುದಕ್ಕೆ ಸಾಧ್ಯವಾಗಲಿಲ್ಲ. ಆಡಿಟ್ ರಿಪೋರ್ಟಿನಲ್ಲಿ ತಿಳಿಸಿರುವಂತೆ ಕಾನೂನು ಪ್ರಕಾರ ಪ್ರತಿಯೊಂದು ಕಾಂಪೆಟಿಷನ್‌ಗೂ ಬರತಕ್ಕಂಥ ಲೇವಾದೇವಿಯ ಲೆಕ್ಕಾಚಾರವನ್ನು ಕೊಡಬೇಕೆಂದು ಒತ್ತಾಯಪಡಿಸಿದರೂ ಕೂಡ ಆರ್. ಎಂ. ಡಿ. ಸಿ. ಯವರು ಆ ರೀತಿಯಾಗಿ ಲೆಕ್ಕಪತ್ರಗಳನ್ನು ಒದಗಿಸದೇ ಮೂರು ತಿಂಗಳಿಗೆ ಒಂದುಸಾರಿ ಒಟ್ಟಿನಲ್ಲಿ ಅವರಿಗೆ ಬೇಕಾದಂಥ ಲೆಕ್ಕಪತ್ರಗಳನ್ನು ಮಾತ್ರ ಒದಗಿಸಿದ್ದಾರೆ. ಈ ರೀತಿಯಾಗಿ ಕಾನೂನನ್ನು ದುರುಪಯೋಗಪಡಿಸಿ ಅವರು ಕೊಡಬೇಕಾದದ್ದು ತೆರಿಗೆಯನ್ನು ಕೊಡದೆ ಇವೇಡ್ ಮಾಡಿದ್ದಾರೆ ಎಂದು ಹೇಳಿ ದೂಷಣೆಗಳು ಬಂದಿವೆ.

ಈ ವಿಚಾರವಾಗಿ ಸಭೆಯಲ್ಲಿ ಕೂಡ ಅನೇಕರು ಪ್ರಸ್ತಾಪ ಮಾಡಿದ್ದಾರೆ. ನನಗೆ ತೋರುವುದು ಸರ್ಕಾರದವರು ಕೂಲಂಕಷವಾಗಿ ಪರಿಶೀಲನೆ ಮಾಡ, ಬೇಕಾದರೆ ಕೂಡಲೆ ಒಂದು ಸಮಿತಿಯನ್ನು ರಚನೆಮಾಡಿ ಅವರು ಲೆಕ್ಕಪತ್ರಗಳನ್ನು ಯಾವರೀತಿ evade ಮಾಡಿ

ದ್ವಾರೆ, ನಮಗೆ ಬರಬೇಕಾದ ತೆರಿಗೆ ಸಂಪೂರ್ಣವಾಗಿ ಬಂದಿದೆಯೋ, ಈ ಎಲ್ಲ ವಿಷಯಗಳನ್ನೂ ಪರಿಶೀಲನೆ ಮಾಡಿ ಬಂದುವೇಳೆ ಅವರು evade ಮಾಡಿರುವುದು ಕಂಡುಬಂದರೆ ಆ ರೀತಿಯಾಗಿ ಮಾಡಿರುವುದಕ್ಕೆ ಏನೇನು ಕಾರ್ಯ ಕ್ರಮಗಳನ್ನು ಸರ್ಕಾರದವರು ತೆಗೆದುಕೊಳ್ಳ ಬೇಕೋ ಅವನ್ನು ಕೂಡಲೇ ತೆಗೆದುಕೊಳ್ಳುವ ರೀತಿ ಏರ್ಪಾಡು ಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯಮಾಡಿ, ಈ ಮನವಿಯನ್ನು ಅನುಮೋದಿ ಸುತ್ತೇನೆ.

*Sri M. PALANIYAPPAN (Ulsoor).—Sir, the policy of issuing licences to the Race Club seems to be something like the policy of Prohibition we are adopting today. On the one side, we allow drinking and on another side we say that it is an offence. Sir, the issue of licences to Race Clubs is something similar to that. On the one side we have passed legislation making Satta gambling and such other things punishable, and on the other side, we issue licences to horse races and the gambling that goes on behind that in the shape of betting. Sir, if the Government thinks that they should stop what they consider to be an offence, then strictly and uniformly with a certain definite policy they should adopt one general. To say on the one side that gambling is punishable and on the other side to allow, by issuing licence, betting in horse races, seems to be an inconsistent policy. It may be true, Sir, that Government is getting a sum of Rs. 10 lakhs from Races. But that is not the criterion to run the Government. If the Government wants money, there are many forms by which they can get revenue. Have we not found alternative sources of revenue in order to introduce prohibition? When we are convinced that a certain thing constitutes an evil and will have evil consequences on society as such, it is the duty of the Government of the day to take steps to eradicate that evil. I therefore feel that the policy of issuing licences to the Race Course is bad as we have already prohibited gambling as such. This Race is not only affecting the poor people, but also brings down the morale of the common man. We can see, Sir, every day people starting from top-ranking officers of the State down to the ordinary common man in the street comes to the Race Course and spends his day's earning there and returns home with disappointment and cursing the Government. If the Government is earnest about safeguarding the interest and preventing these people who are susceptible to this temptation, I think it is the duty of the Government to see that racing is abolished forthwith. Let us not give room for any controversy. I can see some of my friends who are very much interested in Races are advocating the issue of licence to the Race Course. I would only appeal to them that in the interests of the country and in the interests of the poor people, let them not issue licence to this racing. If they are going to give licence to the Race Club, they will be doing the greatest injustice possible to the poor people.

Sir, coming to the sales-tax, the other day I had an opportunity to say something on this matter. Even before hearing the arguments of the Auditor and even before the explanation of the Auditor begins, the sales-tax officer begins to say: "No, No, I am not prepared to accept your accounts. They are all false accounts and they have not been written in the presence of any officer of the Sales-tax Department." Why I say this is, the Officer always starts with a biased mind even before he hears the explanation of the Auditor. That is the mentality of these officers when the merchants approach them. Even when they approach a merchant they say that the accounts produced by the merchant are all wrong, and with that presumption, if they proceed to assess the party concerned, what would be the fate of that merchant, Sir? An officer with powers to assess should always start with an unbiased mind. He should think that the accounts produced by the merchant are *bona fide* correct unless he can prove the contrary. On the other hand, even before the accounts are placed before the officer, if the officer starts saying that he would not accept the accounts, what is to be done? Where is justice and where is protection to the merchant, Sir? Ordinarily, every merchant wants to pay the taxes that are due by him. Nobody grudges paying what is rightly due to the Government. Perhaps there are a

(SRI M. PALANIYAPPAN.)

few people who may want to evade, but such people are rare.

One further point I would like to bring to the notice of the Government is that some Sales-tax Officers do not know accountancy properly sir. Because the Revenue Officers are often posted to the Sales-tax department and they are placed in higher positions and such officers always bring to bear their own authoritarian methods and they will not be in a mood to listen to the grievances of the merchants. There are so many officers in the Sales-tax Department who are waiting for promotion. Many of them have started as probationers in that Department even. But very often the claims of persons in the Department are over-looked and Revenue Officers are posted to the Department. I therefore suggest that such a practice should not be continued and ordinarily the claims of the people in the Department should be recognised when places at the top have to be filled, because they know their job and they are duly qualified.

*ಶ್ರೀ ಪಿ. ಆರ್. ರಾಮಯ್ಯ (ಬಸವನಗುಡಿ).—ಸ್ವಾಮಿ, ರೇಸ್‌ಕೋರ್ಸ್ ವಿಚಾರವಾಗಿ ಚರ್ಚೆಯಾಗಿದೆ. ಆದರೆ ನಾವು ಈ ಸರ್ವೋದಯ ತತ್ವವನ್ನು, ಸಮಾಜವಾದ ಮಾದರಿಯ ತತ್ವವನ್ನು ಆಚರಿಸಬೇಕು, ಅದನ್ನು ಜಾರಿಗೆ ತರಬೇಕು ಎಂಬ ಆಲೋಚನೆಯುಳ್ಳ ಇರತಕ್ಕವರು, ಜೂಜಾಟಕ್ಕೆ ಪ್ರೋತ್ಸಾಹ ಕೊಡತಕ್ಕ ರೇಸನ್ನು ವಜಾ ಮಾಡುವುದು ಅತ್ಯಗತ್ಯ. ಈಗ ಇಂಡಿಯಾ ದೇಶದಲ್ಲಿ ಬೊಂಬಾಯಿನಲ್ಲಿ ಹಂಗಾಮಿಯಾಗಿ ರೇಸ್‌ಕ್ಲಬ್ಬಿಗೆ ಅವಕಾಶ ಕೊಟ್ಟಿದ್ದಾರೆ ಎಂಬ ಸಂಗತಿ ನನಗೆ ಗೊತ್ತಾಗಿದೆ. ಅಲ್ಲಿಯೂ ಕೂಡ ಈ ವಿಷಯವನ್ನು ಆಲೋಚನೆ ಮಾಡುತ್ತಿದ್ದಾರೆ. ಇನ್ನು ಇತರ ಕಡೆಗಳಲ್ಲಿಯೂ ಕೂಡ ಇಂಡಿಯಾ ಸರ್ಕಾರದವರು ಈ ರೇಸಿನ ವಿಷಯವಾಗಿ ಯಾವ ತತ್ವವನ್ನು ಅನುಸರಿಸಿ ಸಂಸ್ಥಾನಗಳಿಗೆ ಏನು directive ಕೊಡುತ್ತಾರೆ ಎನ್ನುವುದನ್ನು ಈಗ ಆಲೋಚನೆ ಮಾಡುತ್ತಿದ್ದಾರೆ. ಆದುದರಿಂದ ಈ ರೇಸಿನ ವಿಷಯದಲ್ಲಿ ಇಷ್ಟು ಗೊಂದಲವನ್ನು ಮಾಡುವುದು ಅನಾವಶ್ಯಕ. ಈ ವಿಷಯದಲ್ಲಿ ಸಭೆಯಲ್ಲಿರತಕ್ಕ ಮಾನ್ಯ ಸ್ನೇಹಿತರುಗಳು ರೇಸಿಂಗ್ ಹೋಗತಕ್ಕುದಕ್ಕೆ ಬಹಳ ಮನ್ನಣೆ ಕೊಟ್ಟಿದ್ದಾರೆ. ಮುಖ್ಯವಾಗಿ ನಮ್ಮ ಸ್ನೇಹಿತರಾದ ಶ್ರೀಮಾನ್ ವಿ. ಎಂ. ವ್ಯಾಸ್ಸರೆನ್ನಾಸ್‌ರವರು ಈ ಜೂಜು ಎನ್ನುವುದು ಬಹಳ ತೀವ್ರವಾಗಿ ವಿರೋಧಮಾಡಲ್ಪಡತಕ್ಕದ್ದಾಗಿದೆ ಎಂದು ಪ್ರೋತ್ಸಾಹ ಕೊಟ್ಟಿದ್ದಕ್ಕಾಗಿ ಅವರಿಗೆ ವಂದನೆಗಳನ್ನು ಅರ್ಪಿಸುತ್ತೇನೆ. ಹಾಗೆಯೇ ಇನ್ನೊಬ್ಬ ಸದಸ್ಯರೂ ಸಹ ಪ್ರೋತ್ಸಾಹ ಕೊಟ್ಟಿದ್ದಾರೆ.

ಎರಡನೆ ವಿಷಯ ಪ್ರೆಸ್ ಕಾಂಪಿಟಿಷನ್‌ಗೆ ಸಂಬಂಧಿಸಿದ್ದು. ಇದರ ವಿಷಯದಲ್ಲಿ ಸರ್ಕಾರದವರು ಇನ್ನೂ ಹೆಚ್ಚು ಎಚ್ಚರಿಕೆಯಿಂದ ವರ್ತಿಸಬೇಕಾಗಿತ್ತು ಎಂಬುದಾಗಿ ನಾನು ಖಂಡಿತವಾಗಿ ಹೇಳಬೇಕಾಗುತ್ತದೆ. ಯಾತಕ್ಕೆ ಹೇಳಬೇಕು ಎಂದರೆ ಅದರಿಂದ ಬಹಳ ಅನರ್ಥವಾಗಿದೆ. ಈ ಕಾಂಪಿಟಿಷನ್ ವಜಾ ಮಾಡಿದ್ದರೆ ಚೆನ್ನಾಗಿತ್ತು. ಆದರೆ ಈಗ ಮೈಸೂರಿನಲ್ಲಿಯೂ ಒಂದು ಸಾವಿರದವರೆಗೆ ಲಿಮಿಟ್ ಇಡಬೇಕೆಂದಾಗಿದೆ. ಪ್ರೆಸ್ ಕಮಿಷನ್ ವರದಿಯೊಳಗೆ 500 ರೂಪಾಯಿಗಳ ಮಿತಿಯನ್ನು ಹಾಕಿದ್ದರು. ಆದರೆ ಇಂಡಿಯಾ ಸರ್ಕಾರದವರು, ಅವರು ಮಾಡಿರತಕ್ಕ ಮಸೂದೆಯಲ್ಲಿ ಈ ಮಿತಿಯನ್ನು ಹೆಚ್ಚಿಸಿದ್ದಾರೆ. ಆದರೆ ಈ ಪತ್ರಿಕೆಗಳು ನಿಜವಾಗಿ, ಪ್ರಾಮಾಣಿಕವಾಗಿ ಬರೀ ಪತ್ರಿಕಾ ವ್ಯವಸ್ಥೆಯಲ್ಲಿ ಮುಂದೆ ಬರಬೇಕಾಗಿದೆ. ಈ ಪತ್ರಿಕೆಗಳೂ ಪ್ರಗತಿಗೆ ಬರಬೇಕಾದದ್ದು ಅತ್ಯಾವಶ್ಯಕ. ಇದು ಸಾಮಾನ್ಯವಾಗಿ circulation ಜಾಸ್ತಿ ಮಾಡುವುದಕ್ಕೋಸ್ಕರ, advertise ಮಾಡಿ ನಮ್ಮ ಪತ್ರಿಕೆ ಇಷ್ಟು ಸಾವಿರ ಪ್ರಚಾರವಿದೆ ಎಂದು ಹೇಳಿಕೊಳ್ಳುವುದಕ್ಕೆ ಮಾಡಿರುವ ಒಂದು ಯುಕ್ತಿ. ಇದರಿಂದ ನಿಜವಾದ ಪತ್ರಿಕೆಗಳು ಪ್ರಗತಿಗೆ ಬರುವುದಕ್ಕೆ ಅವಕಾಶವಿಲ್ಲ. ಆದುದರಿಂದ ಈ ಕಾನೂನನ್ನು ತಿದ್ದುಪಡಿ ಮಾಡಿದ್ದಾರೆ. ಆದರೆ ಅದನ್ನು ಪೂರ್ತಿಯಾಗಿ ವಜಾ ಮಾಡಬೇಕು ಎಂದು ಮೊಟ್ಟಮೊದಲನೆಯದಾಗಿ ಹೇಳುತ್ತೇನೆ. ಮೂರನೆಯ ವಿಷಯ ತೆರಿಗೆ ವಸೂಲಿ ವಿಷಯ. ಈ ಸಭೆಯಲ್ಲಿ ಸದಸ್ಯರು ತೆರಿಗೆ ವಸೂಲಿ ವಿಷಯದಲ್ಲಿ ವಸೂಲಿ ಮಾಡಕೂಡದೆಂದು ಹೇಳುವುದಿಲ್ಲ, ಆದರೆ ಮನುಷ್ಯರ ಮಾನ ಮರ್ಯಾದೆಯನ್ನು ಕಾಪಾಡಿ, ಅವರೂ ಬಹಳ ಸಂತೋಷದಿಂದ ಇರುವಹಾಗೆ ಮಾಡುವುದು ಅತ್ಯಾವಶ್ಯಕವೆಂದು ಮಾತ್ರ ತಿಳಿಸಿದರು. ಆರೀತಿಯಾಗಿ ಆಗುತ್ತಿರುವುದಕ್ಕೆ ಕಾರಣವೇನು ಎಂದರೆ ಅಧಿಕಾರಿಗಳಿಗೆ ಲೆಕ್ಕವನ್ನು ಕೊಟ್ಟಲ್ಲಿ ತೆರಿಗೆ ಕೊಡತಕ್ಕುದಕ್ಕೆ ಲೆಕ್ಕ ಸರಿಯಾಗಿಲ್ಲವೆಂದು ತಿಳಿಸುತ್ತಾರೆ. Tax Accountancy ಎನ್ನುವುದು, ಮತ್ತು ಆ ಲೆಕ್ಕಗಳನ್ನು ಬರೆಯುವ ವ್ಯವಸ್ಥೆ ಹೊಸದಾಗಿ ಬಂದಿದೆ. ಪೂರ್ವದ ರೀತಿಯಾಗಿ ಲೆಕ್ಕವನ್ನು ಇಟ್ಟುಕೊಂಡರೆ ಅದರಿಂದ ಬಹಳ ತೊಂದರೆಯಾಗುತ್ತದೆ. ಆದುದರಿಂದ ಈ ವಿಷಯದಲ್ಲಿ ಇದೇ ರೀತಿಯಾಗಿ ಲೆಕ್ಕಗಳನ್ನು ಬರೆಯಬೇಕು ಎಂದು ಒಂದು ಮಾದರಿಯ ಫಾರಂ ಕೊಟ್ಟರೆ ವ್ಯಾಪಾರಗಾರರಿಗೆ ಅದರಿಂದ ಬಹಳ ಸಹಾಯವಾಗುತ್ತದೆ ಮತ್ತು ಈ ರೀತಿ ಇಂಥಿಂಥ ಐಟಂ ಹೀಗೆಯೇ ಇರಬೇಕು ಎಂದು ತಿಳುವಳಿಕೆ ಕೊಟ್ಟರೆ ಸಾಮಾನ್ಯವಾಗಿ, ಬಹುಮಟ್ಟಿಗೆ ಕಿರುಕುಳ ಕಡಿಮೆಯಾಗುತ್ತದೆ. ಸರ್ಕಾರ ನಡೆಯಬೇಕಾದರೆ ತೆರಿಗೆಯನ್ನು ವಸೂಲ್ಮಾಡಬೇಕಾಗುತ್ತದೆ. ಆದರೆ ಅದನ್ನು ವಸೂಲ್ಮಾಡುವುದರಲ್ಲಿ ಪ್ರಜಾ ಸರ್ಕಾರ ತತ್ವಗಳನ್ನು ಗಮನದಲ್ಲಿಟ್ಟುಕೊಂಡು ಯಾವ ರೀತಿ ವಸೂಲ್ಮಾಡಬೇಕೋ ಹಾಗೆ ಮಾಡಬೇಕು.

ಇನ್ನೊಂದು ಮುಖ್ಯವಾದ ವಿಷಯ. 1917ರಲ್ಲಿ ನಮಗೆ ಸ್ವಾತಂತ್ರ್ಯ ಬಂದಾಗಿನಿಂದ, ಈ ಎಂಟು ವರ್ಷಗಳಲ್ಲಿ ಎಷ್ಟರಮಟ್ಟಿಗೆ ನಾವು ತೆರಿಗೆಗಳನ್ನು ಹಾಕುತ್ತಿದ್ದೇವೆಯೋ ಆ ತೆರಿಗೆಗಳು ಜಾಸ್ತಿಯಾಗಿವೆಯೋ, ಇನ್ನೂ ಹೆಚ್ಚು ತೆರಿಗೆ ಹಾಕಬೇಕಾಗುತ್ತದೆಯೋ ಎಂದು ನೋಡುವುದಕ್ಕೆ ಹೋದರೆ ಸಾಮಾನ್ಯವಾಗಿ ಭಯವಾಗುತ್ತದೆ. ಏಕೆಂದರೆ ದೇಶದಲ್ಲಿ ಅಡಲ್ಟ್ ಫ್ರಾಂಚೈಸ್ ಇದೆ. ಇವರಲ್ಲಿ ಕಂದಾಯ ಕೊಡದೆ ಇರತಕ್ಕವರೇ ಬಹಳ ಜಾಸ್ತಿ. ಕಂದಾಯ ಕೊಟ್ಟವರು ಬಹುಶಃ ನೂರಕ್ಕೆ ಐದು ಜನ ಸಿಕ್ಕುತ್ತಾರೆಯೋ ಇಲ್ಲವೋ? ನೂರಕ್ಕೆ 95 ಜನರು ಕಂದಾಯ ಕೊಡುವುದಿಲ್ಲ.

2-30 P.M.

ಅಡಲ್ಟ್ ಫ್ರಾಂಚೈಸ್‌ನಲ್ಲಿ ಶೇಕಡ 95 ಮಂದಿ ಕಂದಾಯ ಕೊಡುತ್ತಿಲ್ಲ. ಕೊಡದೇ ಇರುವವರು ಕೊಡುವವರಮೇಲೆ ಇನ್ನೂ ಹೆಚ್ಚುಹೆಚ್ಚಾಗಿ ಹಾಕುವ ಒಂದು ಪರಿಸ್ಥಿತಿಯಿದೆ. ಈಗ ಕ್ಲಾಸ್‌ಲೆಸ್ ಸೊಸೈಟಿ ಆಗಬೇಕೆಂದಿದೆ. ಹಾಗೆ ಇಲ್ಲೂ ಒಂದು ಆಗಬೇಕು. ಏಕೆಂದರೆ, ಶೇಕಡ 5ರಷ್ಟು ಮಂದಿ ಕಂದಾಯ ಕೊಡುವವರೂ, ಶೇಕಡ 95 ಮಂದಿ ಕೊಡದಿರುವವರೂ ಈಗಿದ್ದಾರೆ. ಡೈರೆಕ್ಟ್ ಮತ್ತು ಇನ್‌ಡೈರೆಕ್ಟ್ ಟ್ಯಾಕ್ಸೇಷನ್ ಇದೆಯೆಂದು ನಾವು ಹೇಳಬಹುದು. ಆದರೆ ಡೈರೆಕ್ಟ್ ಟ್ಯಾಕ್ಸೇಷನ್ ಬೇಡ, ಎಲ್ಲಾ ಇನ್‌ಡೈರೆಕ್ಟ್ ಟ್ಯಾಕ್ಸೇಷನ್ ಮಾಡಿಬಿಡಿ, ಟ್ಯಾಕ್ಸ್‌ಲೆಸ್ ಸೊಸೈಟಿಯಾಗುವಂತೆ ಮಾಡಿ ಎಂದು ನಾನು ಹೇಳುತ್ತೇನೆ. ಬೇಕಾದರೆ ನಾನು ಯೋಚನೆಮಾಡಿ ಇದಕ್ಕೆ ಒಂದು ಸ್ಕೀಂ ಕೊಡಬೇಕೆಂದಿದ್ದೇನೆ. ಪ್ರತಿಯೊಬ್ಬ ಮನುಷ್ಯನಿಗೂ ಅವನ ಆವಶ್ಯಕತೆಗೆ ಬೇಕಾದ್ದನ್ನು ಅವನಿಂದ ಕೆಲಸ ತೆಗೆದುಕೊಂಡು ಅವನಿಗೆ ಒದಗಿಸಿಕೊಡಬೇಕು. ಆದರೆ ಕ್ಲಾಸ್‌ಲೆಸ್ ಸೊಸೈಟಿಯೆಂಬುದು ಬಹು ದೂರವಿದೆ. ಆದಾಗ್ಯೂ ಕೂಡ ಟ್ಯಾಕ್ಸ್ ವಸೂಲು ಮಾಡುವಾಗ ಬಹಳ ನ್ಯಾಯವಾಗಿ ಮಾಡಬೇಕು. ಇದನ್ನು ವರ್ಷೇ ವರ್ಷೇ ನಾವು ಹೇಳುತ್ತಿದ್ದೇವೆ. ಇನ್‌ಕಂಟ್ಯಾಕ್ಸ್, ಸೇಲ್ಸ್‌ಟ್ಯಾಕ್ಸ್ ಇವೆರಡರಲ್ಲೂ ಸಾಮಾನ್ಯವಾಗಿ ಕೊಡುವವರಿಗೆ ಬಹಳ ಕಿರುಕುಳವಾಗುತ್ತಿದೆ. ಇದನ್ನು ತಪ್ಪಿಸಬೇಕು. ಯಾವರೀತಿ ತಪ್ಪಿಸಬೇಕೆಂಬುದನ್ನು ಸರ್ಕಾರದವರು ಯೋಚನೆಮಾಡಬೇಕು. ಈ ಕಂದಾಯವನ್ನು ಹಾಕಿ ಹೀಗೆ ಇದೇ ರೀತಿಯಾಗಿ ನೀವು ಕಿರುಕುಳ ಜಾಸ್ತಿ ಮಾಡಿದರೆ ಅದರಿಂದ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಈ ಕಿರುಕುಳಗಳನ್ನು ತಪ್ಪಿಸಿ ಎಷ್ಟು ಬೇಕಾದರೂ ಕಂದಾಯ ವಸೂಲುಮಾಡಿ, ಈ ರೀತಿಯಾಗಿ ಮಾಡುವ ಏರ್ಪಾಡನ್ನು ಮಾಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಇನ್ನೊಂದು ವಿಷಯ, ಬಡ್ಜೆಟ್ ಮೆಮೊರ್ಯಾಂಡಂನ 19ನೆಯ ಪುಟದಲ್ಲಿ "B. Receipts from Electricity Duties—Revised Estimate, 1955-66—26 lakhs" ಎಂದಿದೆ. 1956-57ರ ಬಡ್ಜೆಟ್ ಎಸ್ಟಿಮೇಟ್ 30 ಲಕ್ಷ ಎಂದಿದೆ. ಆದ್ದರಿಂದ ನಾಲ್ಕು ಲಕ್ಷ ರೂಪಾಯಿಗಳನ್ನು ಹೆಚ್ಚಾಗಿ ವಸೂಲು ಮಾಡಬೇಕಾಗಿದೆ. ಇದನ್ನು ಮುಖ್ಯಮಂತ್ರಿಗಳು ತಮ್ಮ ಭಾಷಣದಲ್ಲಿ ಪ್ರಸ್ತಾಪಮಾಡಿದ್ದಾರೆ. ವಿವರ ಮೆಮೊರಾಂಡ ನಲ್ಲಿ ಕೊಟ್ಟಿಲ್ಲ. ಅದನ್ನು ಈಗ ಅಪ್ಪಣೆ ಕೊಡಿಸಿದರೆ ಬಹಳ ಸಂತೋಷವಾಗುತ್ತದೆ.

*Sri T. MARIAPPA (Mysore City-North).- A reference was made to me and therefore I want to speak for two minutes; otherwise, I did not want to speak on this. I thought the Race Club affairs had ended after the Finance Minister said that he would go into the whole matter. I am surprised my Hon'ble friend Sri Rajasekhara Murthy trying to expose the case of one party. I did not plead for any party on that day. Because I happened to look into the Financial Memorandum and there was no receipt under the heading 'Betting tax' and the Government had said that they proposed not to issue a licence, I raised that point. Sri Imam also raised that point. But Sri Rajasekhara Murthy raised the whole history of the case. Suffice it to say that he is not properly briefed. He seems to be more loyal than the king himself.

(*Laughter*)

*ಶ್ರೀ ಎಚ್. ಎಂ. ಚನ್ನಬಸಪ್ಪ (ಕೈಗಾರಿಕಾ ಶಾಖೆಯ ಮಂತ್ರಿಗಳು).—ಸೇಲ್ಸ್‌ಟ್ಯಾಕ್ಸ್ ಆಡಳಿತದ ವಿಷಯದಲ್ಲಿ ಕೆಲವು ಬಹಳ ಪ್ರಾಮುಖ್ಯವಾದಂಥ ಸಲಹೆಗಳನ್ನು ಸ್ನೇಹಿತರು ಕೊಟ್ಟಿರುವುದಕ್ಕೆ ಋಣಿಯಾಗಿದ್ದೇನೆ. ಸಾಮಾನ್ಯವಾಗಿ ಅವರು ಎತ್ತಿರುವ ಕೆಲವು ಪ್ರಶ್ನೆಗಳಿಗೆ ಸಮಾಧಾನ ಹೇಳಬೇಕಾದದ್ದು ನನ್ನ ಕರ್ತವ್ಯ. ಮೊಟ್ಟಮೊದಲನೆಯದಾಗಿ ಶ್ರೀ ಶ್ರೀನಿವಾಸಯ್ಯಂಗಾರ್‌ರವರು ಸುಮಾರು 50 ಲಕ್ಷ ರೂಪಾಯಿಗಳಷ್ಟು ಬಾಕಿಯಿದೆ, ಇಷ್ಟು ಹಣ ಬಾಕಿಯಿರುವುದಕ್ಕೆ ಕಾರಣವೇನು, ಇದರ ವಸೂಲಾತಿಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಪ್ರಶ್ನೆಮಾಡಿದರು. ಅದನ್ನು ಒಪ್ಪಬಹುದು. ಟ್ಯಾಕ್ಸೇಷನ್ ಜಾರಿಯಲ್ಲಿರುವಾಗ ಅದನ್ನು ಕ್ರಮವಾಗಿ ವಸೂಲು ಮಾಡುವುದು, ನ್ಯಾಯಕ್ಕೆ ವಿರೋಧವಿಲ್ಲದಿರುವಹಾಗೆ ವಸೂಲು ಮಾಡುವುದು ಕರ್ತವ್ಯ. ಈ ಸಭೆಗೆ ಸರಿಯಾದ ಅಂಕಿ ಅಂಶಗಳನ್ನು ತಿಳಿಸುವುದಾದರೆ ಈ ಹೊತ್ತು 46,73,000 ರೂಪಾಯಿಗಳ ಬಾಕಿಯಿದೆ. ಅದರಲ್ಲಿ 5,93,000 ರೂಪಾಯಿಗಳ ಬಾಕಿ ಬಳ್ಳಾರಿ ಜೊತೆಯಲ್ಲಿ ಬಂದಿದೆ. ಬಳ್ಳಾರಿ ನಮ್ಮಲ್ಲಿ ಮರ್ಜ್ ಆದಾಗ ಇಷ್ಟಾಯಿತು. ಈ ಹಣವನ್ನು ಆದಷ್ಟು ಬೇಗ ವಸೂಲುಮಾಡಬೇಕೆಂಬ ವಿಷಯದಲ್ಲಿ ಸರ್ಕಾರಕ್ಕೆ ತುಂಬ ಆಸಕ್ತಿಯಿದೆ. ನಮಗೆ ಕೆಲವು ಅಡ್ಡಿ ಆತಂಕಗಳಿವೆ. ಆ ಅಡ್ಡಿ ಆತಂಕಗಳನ್ನು ತಮಗೆ ತಿಳಿಸಿದರೆ ಬಹುಶಃ ನಮಗೆ ಇನ್ನೂ ಸಹಾಯವಾಗಬಹುದೆಂದು ತಿಳಿಸುತ್ತೇನೆ. ಇದರಲ್ಲಿ ಯಾವ ಯಾವ ಬಾಬಿನಲ್ಲಿ ಎಷ್ಟೆಷ್ಟು ಹಣ ನಿಂತಿದೆಯೆಂದು ತಿಳಿಸುವುದು ಆವಶ್ಯಕ. ರೆವೆನ್ಯೂ ಇಲಾಖೆ ಈಗ ಸೇಲ್ಸ್‌ಟ್ಯಾಕ್ಸ್ ವಸೂಲು ಮಾಡುವುದಿಲ್ಲವೆಂಬುದನ್ನು ಗಮನಿಸಬೇಕು. ನಾವು ಅಸೆಸ್ ಮಾಡಿದಮೇಲೆ ವಸೂಲಾತಿಗೆ ಕಳುಹಿಸುವುದು ರೆವೆನ್ಯೂ ಇಲಾಖೆಗೆ, ರೆವೆನ್ಯೂ ಇಲಾಖೆ ಸೇಲ್ಸ್‌ಟ್ಯಾಕ್ಸ್ ಇಲಾಖೆಗೆ ಹಣ ವಸೂಲು ಮಾಡಬೇಕು; ಅದಕ್ಕೆ ಕ್ರಮವಿದೆ. ರೆವೆನ್ಯೂ ಇಲಾಖೆ ವಸೂಲು ಮಾಡಬೇಕೆಂದು ಕಳುಹಿಸಿರುವುದು 28,75,000 ರೂಪಾಯಿಗಳು ಇನ್ನು ಸ್ಟೇ ಆರ್ಡರ್ ಇಷ್ಯೂ ಆಗಿ ಹೈಕೋರ್ಟ್ ರೆವೆನ್ಯೂ ಕಲೆಕ್ಷನ್ ಅಪೆಲೇಟ್ ಆರ್ಡರ್ಸ್, ಸ್ಟೇ ಆರ್ಡರ್ಸ್ ಇಷ್ಯೂ ಆಗಿರುವುದು 6 ಲಕ್ಷ ಚಿಲರೆ, ಮತ್ತು ಸೇಲ್ಸ್‌ಟ್ಯಾಕ್ಸ್ ಕೋರ್ಟುಗಳಲ್ಲಿ ಪ್ರಾಸಿಕ್ಯೂಟ್ ಆಗಿ ವಸೂಲು ಮಾಡಬೇಕೆಂದು ವಾರಂಟ್ ಇಷ್ಯೂ ಆಗಿರುವುದು 2 ಲಕ್ಷ 7 ಸಾವಿರ ರೂಪಾಯಿಗಳು, ಇನ್ನೂ ಕಲೆಕ್ಷನ್ನಿಗೆ ರೈಪ್ ಆಗಿರುವುದು 6,45,000 ರೂಪಾಯಿಗಳು, ಅಪೆಲೇಟ್ ರಿವಿಷನ್ 2 ಲಕ್ಷ ರೂಪಾಯಿಗಳು. ಒಟ್ಟು 46,73,000 ರೂಪಾಯಿಗಳನ್ನು ವಸೂಲು ಮಾಡುವುದಕ್ಕೆ ಅಡ್ಡಿಯೇನೆಂಬುದನ್ನು ಸ್ವಲ್ಪಮಟ್ಟಿಗೆ ಯೋಚನೆ ಮಾಡಬೇಕು. 28,75,000 ರೂಪಾಯಿಗಳು ಇದರಲ್ಲಿ ಬಹುಭಾಗವಾಗಿದೆ. ಸೇಲ್ಸ್‌ಟ್ಯಾಕ್ಸ್ ಆಫೀಸರು ನೇರವಾಗಿ ವಸೂಲು ಮಾಡದಿರುವುದು ಮತ್ತು ವಸೂಲು ಮಾಡುವುದಕ್ಕೆ

(ಶ್ರೀ ಎಚ್. ಎಂ. ಚನ್ನಬಸಪ್ಪ.)

ರೆವಿನ್ಯೂ ಅಧಿಕಾರಿಗಳ ಮೇಲೆ ನಿಲ್ಲಬೇಕಾಗಿರುವುದು ಒಂದು ಕಾರಣ. ಜೊತೆಗೆ ಸ್ಟೇ ಆರ್ಡರುಗಳ ಮೇಲೆ ಹೈಕೋರ್ಟಿಗೆ ಹೋಗಿ ರಿವಿಷನ್ ಅರ್ಜಿ ಹಾಕಿರುವುದ ರಿಂದ ಅನೇಕ ಹಣ ನಿಂತಿದೆ. ಕಾರಣವೇನೇ ಇರಲಿ ಅಗತ್ಯವಾದ ಸಿಬ್ಬಂದಿ ಒದಗಿಸಿ ಆವಶ್ಯಕವಾದ ಮಾರ್ಗ ಗಲ್ಲಿ ನ್ಯಾಯವಾಗಿ ವಸೂಲು ಮಾಡುವುದನ್ನು ಯೋಚನೆ ಮಾಡಲಾಗುತ್ತಿದೆ, ಸರ್ಕಾರಕ್ಕೆ ಆಸಕ್ತಿಯಿದೆ, ಜಾಗ್ರತೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ ಎಂದು ಭರವಸೆ ಕೊಡುತ್ತೇನೆ.

ಎರಡನೆಯದು ವರ್ಕಿಂಗ್ ಆಫ್ ದಿ ಆಕ್ಟ್ ವಿಚಾರ, ಈ ಕಾನೂನು ಜಾರಿಗೆ ಕೊಡುವುದರಲ್ಲಿ ಬಹಳ ಕಷ್ಟ ನಷ್ಟ ಜನರಿಗಾಗುತ್ತಿದೆ, ಸತ್ಯದಿಂದ, ನಿಷ್ಠೆಯಿಂದ ನಡೆಯುವ ವರ್ತಕರಿಗೆ ಬಹಳ ಕಷ್ಟವಾಗಿದೆ ಎಂದು ಪ್ರಸ್ತಾಪ ಮಾಡಿದರು. ನಮ್ಮ ಆಶಯವಾದರೂ ಕೂಡ ಸತ್ಯದಿಂದ, ನಿಷ್ಠೆಯಿಂದ ನಡೆಯುವ ವರ್ತಕರಿಗೆ ಎಳ್ಳಷ್ಟೂ ಕೂಡ ಮನಸ್ಸು ನೋಯದಂತೆ ಕೆಲಸವಾಗ ಬೇಕೆಂಬುದು. ತೆರಿಗೆ ಹಾಕುವುದು, ವಸೂಲು ಮಾಡುವುದು ಈ ಎರಡೂ ಕೂಡ ಬಹಳ ಕಷ್ಟತರವಾದ ವಿಷಯಗಳೆಂಬುದನ್ನು ಗಮನಿಸಬೇಕು. ತೆರಿಗೆ ಹಾಕುವ ಮನುಷ್ಯ, ವಸೂಲು ಮಾಡುವ ಮನುಷ್ಯ ಸಾಮಾನ್ಯ ವಾಗಿ ಜನರಲ್ಲಿ ವಿಶ್ವಾಸವನ್ನು ಹೆಚ್ಚಾಗಿ ಗಳಿಸುವುದು ಬಹಳ ಕಷ್ಟ, ಅದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಇದರಲ್ಲಿ ನೋಡಬೇಕಾದದ್ದು ಶಾಸನವನ್ನು ಸರಿಯಾದ ರೀತಿ ಯಲ್ಲಿ ಜಾರಿಗೆ ಕೊಡುತ್ತಿದ್ದಾರೆಯೇ, ಇಲ್ಲವೇ ಅಥವಾ ದುರುದ್ದೇಶದಿಂದ ಜನಗಳಿಗೆ ಕಿರುಕುಳ ಕೊಡುತ್ತಿದ್ದಾ ರೆಯೇ ಎಂಬುದು. ಟ್ಯಾಕ್ಸ್ ಹಾಕಿದಮೇಲೆ ಯಾರೂ ಕೂಡ ದೇಶದಲ್ಲಿ ಸಂತೋಷದಿಂದ ಹಾಕಿರುವುದನ್ನೆಲ್ಲಾ ಸರಿಯಾಗಿ ಸಲೀಸಾಗಿ ಕೊಡುವುದು ಬಹಳ ಅಪರೂಪ. ಅಸೆಸ್‌ಮೆಂಟ್ ಮಾಡಿದಾಗ ಕಾನೂನಿಗೆ ವಿರೋಧವಾಗಿ ಅಸೆಸ್ ಮಾಡುತ್ತಾರೆಂಬ ಆಪಾದನೆ ಬಂದಿದೆ. ಮತ್ತು ಲೆಕ್ಕಪತ್ರ ಇಟ್ಟರೆ ನಮ್ಮ ಲೆಕ್ಕ ನಂಬುವುದಿಲ್ಲ ವೆಂದು ಬಿಸಾಕಿ ಅವರೇ ಬೇರೆ ಹೆಚ್ಚಾಗಿ ಅಸೆಸ್‌ಮೆಂಟ್ ಮಾಡುತ್ತಾರೆಂಬುದು ಎರಡನೆಯದು. ಮೂರನೆ ಯದು ಅಸೆಸ್‌ಮೆಂಟ್ ಮಾಡಿದಮೇಲೆ ಪುನಃ ರಿವಿಷನ್ ಆಗಿ ಅದಕ್ಕೂ ಇದಕ್ಕೂ ಇರುವ ಅಂತರ ಕಂಡುಹಿಡಿದು ರಿವೈಜ್ ಆದಮೇಲೆ ಎರಡಕ್ಕೂ ಕಾರಣ ಕೊಡಬೇಕು ಹೆಚ್ಚಿಸಿದಾಗ ಏಕೆ ಹಾಗೆ ಮಾಡಿದೆಯೆಂದು ಕೇಳಿದರೆ ಹೇಳುವುದು ನ್ಯಾಯವಾಗಿದೆ. ಈ ಮೂರು ವಿಷಯ ಗಳಲ್ಲೂ ಸರ್ಕಾರಕ್ಕೂ ಮತ್ತು ಸದಸ್ಯರಿಗೂ ಭಿನ್ನಾಭಿ ಪ್ರಾಯವಿಲ್ಲ. ಸಾಮಾನ್ಯವಾಗಿ ಓವರ್ ಅಸೆಸ್‌ಮೆಂಟ್ ಮಾಡುವುದು ಶುದ್ಧ ತಪ್ಪು, ಅಂಡರ್ ಅಸೆಸ್‌ಮೆಂಟ್ ಮಾಡುವುದೂ ಸರಿಯಲ್ಲ. ಈ ಎರಡನ್ನೂ ಕೂಡ ಸರಿಯೆಂದು ಸರ್ಕಾರ ಹೇಳುವುದು ಕಷ್ಟ. ಆದರೆ ಈ ಅಸೆಸ್‌ಮೆಂಟ್ ಮಾಡುವಾಗ ಪ್ರೊಫೆಷನಲ್ ಅಸೆಸ್ ಮೆಂಟ್ ಏನಿದೆ ಅದನ್ನು ಅಸೆಸ್ ಮಾಡತಕ್ಕದ್ದು ಬಹಳ ಕಷ್ಟವಾದ ಕೆಲಸ. ಒಂದುವೇಳೆ ಸತ್ಯವಾಗಿ ಮಾಡ ಬೇಕಾದರೆ ಒಬ್ಬ ಮನುಷ್ಯ ಹಿಂದೆ ಬೇಕಾದಷ್ಟು ವ್ಯಾಪಾರ ಮಾಡುತ್ತಿದ್ದರೂ ಈ ವರ್ಷ ಪಾಪರಾಗ ಬಹುದು ಅಥವಾ ಹೆಚ್ಚು ಮಾಡಿದರೂ ಮಾಡಬಹುದು. ಹಿಂದಿನ ಆಧಾರದಮೇಲೆ ಪ್ರೊಫೆಷನಲ್ ಅಸೆಸ್ ಮೆಂಟ್ ಮಾಡುತ್ತಾರೆ. ಈ ವರ್ಷ ವ್ಯಾಪಾರ ಹೆಚ್ಚಾಗಿ ಮಾಡಿಲ್ಲ, ಹಿಂದೆ ಕಡಮೆ ತೆರಿಗೆ ಹಾಕಿ ಈಗೇಕೆ ಹೆಚ್ಚಾಗಿ ಹಾಕಿದೆ ಎಂದು ಕೇಳಿದರೆ ಹೆಚ್ಚು ವ್ಯಾಪಾರ ವಾಗಿದೆಯೆಂದು ಹೇಳಬಹುದೇ ವಿನಾ ಬೇರೆ ಹೇಳಲು ಸಾಧ್ಯವಿಲ್ಲ. ಟರ್ನ್ ಓವರ್ ಬಹಳ ಹೆಚ್ಚಾಗಿದೆ, ಕಡಮೆ ಅಸೆಸ್‌ಮೆಂಟ್ ಮಾಡಿದೆ ಎಂದು ಹೇಳುವುದು ವಿಚಾರಮಾಡಲು ಅರ್ಹವಾದ ವಿಷಯ. ಅಂತೂ ಈ ವಿಷಯವನ್ನು ಸರ್ಕಾರ ಪರ್ಯಾಲೋಚಿಸಿ ಅಂಡರ್ ಅಸೆಸ್‌ಮೆಂಟ್, ಓವರ್ ಅಸೆಸ್‌ಮೆಂಟ್ ಈ ಎರಡನ್ನೂ ಕೂಡ ಸಂಪೂರ್ಣವಾಗಿ ತೆಗೆಯುವುದು ಕಷ್ಟವಾದರೂ ಕೂಡ ಮಿನಿಮೈಸ್ ಮಾಡಿ ಹತೋಟಿ ಯಲ್ಲಿಡಬೇಕೆಂಬ ಆಸಕ್ತಿಯಿದೆ ನಾನು ಸೂಕ್ತ ಕಾರ್ಯ ಕ್ರಮ ತೆಗೆದುಕೊಳ್ಳುತ್ತೇವೆ.

ಅಧಿಕಾರಿಗಳು ವರ್ತಕರ ವಿಷಯದಲ್ಲಿ ಬಹಳ ಅಗೌರ ವದಿಂದ ವರ್ತಿಸುತ್ತಾರೆಂಬ ಆಪಾದನೆ ಮಾಡಿದ್ದಾರೆ. ಈ ಸಭೆಗೆ ಸರ್ಕಾರದ ಪರವಾಗಿ ಕೊಡುವ ಭರವಸೆ ಯಾವ ಸತ್ಯವಾದಿಯಾದ ವ್ಯಾಪಾರಸ್ಥ, ಅಸೆಸಿ ಎಂದು ಹೇಳುತ್ತಾರೋ ಅವರಿಗೆ ಯಾವುದಾದರೂ ಒಂದು ಅಕ್ರಮವಾದ ರೀತಿಯಲ್ಲಿ ತೊಂದರೆಮಾಡಿ ಅವರ ಗೌರವ ಕಡಮೆಯಾಗುವ ರೀತಿಯಲ್ಲಿ ವರ್ತನೆಮಾಡಿದರೆ ಅದನ್ನು ಗಮನಕ್ಕೆ ತಂದರೆ ಖಂಡಿತವಾಗಿಯೂ ಉಗ್ರ ವಾದ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಅವರೂ, ಇವರೂ ಇಬ್ಬರೂ ಇರುವ ಕಾಲದಲ್ಲಿ ನಾನು ಈ ಮಾನ್ಯ ಸಭೆಗೆ ಒಂದು ವಿಷಯವನ್ನು ತಿಳಿಸ ಬೇಕಾಗಿರುತ್ತದೆ. ಯಾವ ಅಧಿಕಾರಿಯೇ ಆಗಲಿ ಯಾರೊಬ್ಬರ ವಿಷಯದಲ್ಲೇ ಆಗಲಿ ವಿನಯ-ಗೌರವ ಗಳಿಂದ ವರ್ತಿಸಬೇಕೆಂದು ಕಟ್ಟಾಜ್ಞೆ ಕೊಟ್ಟಿದ್ದೇನೆ. ಒಂದುವೇಳೆ ಹಾಗೇನಾದರೂ ಅವರು ಈ ಆಜ್ಞೆಗೂ ಮೀರಿ ಹಾಗೆ ಅಕ್ರಮವಾಗಿ ವರ್ತಿಸಿದ್ದಾರೆಂಬ ವಿಚಾರವನ್ನು ನನ್ನ ಗಮನಕ್ಕೆ ತಂದರೆ-ಅದನ್ನು ರುಜು ವಾತು ಮಾಡಿಕೊಟ್ಟರೆ ಅಂಥವರಮೇಲೆ ಖಂಡಿತವಾ ಗಿಯೂ ಉಗ್ರ ಕಾರ್ಯಕ್ರಮಗಳನ್ನು ಕೈಗೊಳ್ಳಲು ಸಿದ್ಧವಾಗಿದ್ದೇವೆ. ಈಗ ಕಾಲ ಬರಬರುತ್ತಾ ನಾಜೂಕಾಗುತ್ತಿದೆ. ಕೋರ್ಟುಗಳಲ್ಲಿ ವ್ಯವಹಾರ ನಡೆಯಲು ಅವಕಾಶ ಕೊಟ್ಟರೆ ನಾಳೆ ನಾವು ಅಲ್ಲಿ ನಮ್ಮ ನಿಲುವನ್ನು ರುಜುವಾತು ಮಾಡಬೇಕಾದರೆ ಬಹಳ ಕಷ್ಟವಿರುತ್ತದೆ. ಎಷ್ಟೋ ಸಂದರ್ಭಗಳಲ್ಲಿ ವಾಸ್ತ ವಾಂಶಗಳಿಗೆ ವಿರುದ್ಧವಾಗಿ ತೀರ್ಮಾನವಾಗಿ ನ್ಯಾಯಕ್ಕೆ ಬೆಲೆ ದೊರೆಯದೆ ಹೋಗಿದೆ. . . .

ಶ್ರೀ ಡಿ. ದೇವರಾಜ ಅರಸ್.—ಈ ಓವರ್ ಅಸೆಸ್ ಮೆಂಟ್ ಮತ್ತು ಅಂಡರ್ ಅಸೆಸ್‌ಮೆಂಟ್ ವಿಚಾರದಲ್ಲಿ ತಾವು ಏನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದಿ ದ್ದಿರೋ ಅದೆಲ್ಲಾ ಮುಂದೆ ನಡೆಯತಕ್ಕಂಥ ವಿಚಾರ ಗಳಿಗೆ ಸಂಬಂಧಪಟ್ಟದ್ದಾಗಿದೆ. ಈಗ, ಆ ಅಧಿಕಾರಿ ಗಳು ಈ, ಪಾಪಿಷ್ಟರಾದಂಥ ವರ್ತಕರ ವಿಚಾರದಲ್ಲಿ, ಏತಕ್ಕೆಂದರೆ ಈ ವರ್ತಕರು ಯಾವಾಗ್ಲೂ ಪಾಪಿಷ್ಟರೆ, ಅಧಿಕಾರಿಗಳು ಸರಿಯಾದ ರೀತಿಯಲ್ಲಿ ವರ್ತಿಸತಕ್ಕ ಬಗ್ಗೆ 4-5 ಸಾರ್ತಿ ಸರ್ಕಾರ ಆಜ್ಞೆಯನ್ನು ಹೊರಡಿಸಿ ದ್ದಾಯಿತು. ಆದರೆ ಈ ವರೆಗೂ ಇದನ್ನು ಸರಿಪಡಿಸು ವುದಕ್ಕೆ ತಮ್ಮ ಕೈಲಿ ಆಗಲಿಲ್ಲ.

Why should they not be courteous to the merchants?

Sri H. M. CHANNABASAPPA.—Probably he is very anxious to see that all people in the country are treated with respect. We do our utmost to see that it is enforced, but in cases of breach Government are prepared to take to task any person who is proved to have behaved like that. ನಾನು ಹೇಳಿ ದ್ದರಲ್ಲೇ ಎಲ್ಲಾ ಅಂಶಗಳೂ ಅರ್ಥಗರ್ಭಿತವಾಗಿ ರುತ್ತವೆಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ಈ ಅಧಿಕಾರಿಗಳ ವಿಚಾರವನ್ನು ಪ್ರಸ್ತಾಪಿಸುತ್ತಾ ಇವರಲ್ಲಿ ದಕ್ಷತೆ, ಸೇವಾತತ್ಪರತೆ, ಸತ್ಯಸಂಧತೆ ಇತ್ಯಾದಿಗಳು ಹೆಚ್ಚಾಗುವಂತೆ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂಬುದಾಗಿ ಸೂಚನೆ ಮಾಡಿದ್ದಾರೆ. ಇದೇನೋ ಬಹಳ ಗಮನಾರ್ಹವಾದ ವಿಚಾರ. ಈ ಇಲಾಖೆಯು ಅಧಿಕ ವರಮಾನವನ್ನು ಸರ್ಕಾರಕ್ಕೆ ತರತಕ್ಕಂಥಾದ್ದಾಗಿದೆ. ನ್ಯಾಯವಾಗಿಯೂ ಸರ್ಕಾರಕ್ಕೆ ಎಷ್ಟು ಹಣ ಈ ಬಾಬಿನಿಂದ ಬರಬೇಕೋ ಅಷ್ಟನ್ನೂ ಸರ್ಕಾರಕ್ಕೆ ಸಂಪೂರ್ಣವಾಗಿ ಸೇರುವಂಥ ರೀತಿಯಲ್ಲಿ ಕೆಲಸ ನಡೆಸತಕ್ಕಂಥ ದಕ್ಷರಾದ, ಶಕ್ತರಾದ ಅಧಿಕಾರಿಗಳನ್ನು ಈ ಕ್ಷೇತ್ರದಲ್ಲಿ ಕೆಲಸಕ್ಕೆ ನೇಮಿಸಿಕೊಳ್ಳುವ ಸಮಯದಲ್ಲಿ ನೋಡಿ ಅಂಥವರನ್ನೇ ಆರಿಸಿಕೊಳ್ಳಬೇಕೆಂಬ ಅಭಿಪ್ರಾಯವನ್ನು ಸರ್ಕಾರದವರು ಸಂಪೂರ್ಣವಾಗಿ ತಮ್ಮ ಗಮನದಲ್ಲಿಟ್ಟುಕೊಂಡಿರುತ್ತಾರೆ ಎನ್ನುವ ಭರವಸೆಯನ್ನು ನಾನೀಗ ತಮಗೆ ನೀಡಬಲ್ಲೆ. ಇನ್ನು ಈ ಇಲಾಖೆಯಲ್ಲಿ ಕೆಲಸ ಮಾಡತಕ್ಕಂಥ ಅಧಿಕಾರಿಗಳಿಗೆ ಭಡ್ತಿ ಕೊಟ್ಟಿರುವ ವಿಚಾರವನ್ನು ಸೂಕ್ಷ್ಮವಾಗಿ ಚರ್ಚೆ ಮಾಡಿದ್ದಾರೆ. ಈ ಹಿಂದೆ 1944 ರಲ್ಲಿ ಕೆಲವು ಅಧಿಕಾರಿಗಳನ್ನು ಈ ಇಲಾಖೆಗೆ ನೇಮಕ ಮಾಡಿಕೊಳ್ಳಲಾಗಿತ್ತು. ಅವರಿಗೆ ಈಗ ಪ್ರಮೋಷನ್ ಕೊಟ್ಟು ಈಗ ಅವರನ್ನು ಅಸಿಸ್ಟೆಂಟ್ ಸೇಲ್ಸ್ ಟ್ಯಾಕ್ಸ್ ಆಫೀಸರುಗಳನ್ನಾಗಿ ನೇಮಕ ಮಾಡಲಾಗಿದೆ. ಇವರು ಇದೇ ಇಲಾಖೆಯಲ್ಲಿ 8-10 ವರ್ಷಗಳಿಂದ ದಕ್ಷತೆಯಿಂದ ಕೆಲಸ ಮಾಡಿಕೊಂಡು ಬಂದಿದ್ದಾರೆಂಬ ಅಂಶದಮೇಲೆ ಇವರಿಗೆ ಹಾಗೆ ಪ್ರಮೋಷನ್ ಕೊಡಲಾಯಿತು. ಆದರೆ ಇತ್ತೀಚೆಗೆ 1954ರಲ್ಲಿ ಮತ್ತೊಂದು ಸರ್ಕಾರಿ ಹುಕುಂ ಹೊರಡಿಸಿ ಈ ಹುದ್ದೆಗಳನ್ನು ಪದವೀಧರರಾಗಿತಕ್ಕವರಿಗೆ ಮಾತ್ರವೇ ಕೊಡಬೇಕೆಂದು ತಿಳಿಸಿದೆ.

ಇನ್ನು ಈ ಕಕೂನ್ ಮತ್ತು ರೇಷ್ಮೆ ಮಾರಾಟಗಾರರ ವಿಚಾರವನ್ನು ಪ್ರಸ್ತಾಪಮಾಡಿದ್ದಾರೆ. ಆದರೆ ಈ ದಿವಸ ಈ ರೇಷ್ಮೆ ಗೂಡುಗಳನ್ನು ಯಾರು ಬೆಳೆಯುತ್ತಾರೋ ಅವರೇ ಅವುಗಳ ಮಾರಾಟವನ್ನು ಮಾಡಿದ ಪಕ್ಷದಲ್ಲಿ ಅವರು ಯಾವ ಮಾರಾಟದ ತೆರಿಗೆಯನ್ನು ಕೊಡಬೇಕಾಗಿಲ್ಲ. ಆದರೆ ಈ ಗೂಡುಗಳು ಮಧ್ಯಸ್ಥಗಾರರಿಂದ ಮಾರಾಟ ಆಗಬೇಕಾಗಿದ್ದರೆ ಆ ಮಧ್ಯಸ್ಥಗಾರನು ಈ ಬಗ್ಗೆ ಲೈಸೆನ್ಸ್ ಪಡೆಯಬೇಕು ಎಂಬುದಾಗಿ ಕಾನೂನಿದೆ. ಆದರೆ ಯಾರು ಈ ದಿವಸ ಹಾಗೆ ಆ ಲೈಸೆನ್ಸನ್ನು ಪಡೆಯದೆ ಈ ಮಾರಾಟವನ್ನು ಮಾಡುತ್ತಿದ್ದಾರೋ ಅಂಥವರ ಮೇಲೆ ಮಾತ್ರ ನಾವೀದಿವಸ ಈ ಸೇಲ್ಸ್ ಟ್ಯಾಕ್ಸನ್ನು ಹಾಕಿದ್ದೇವೆ. ಹೀಗೆ ನಾವು ಈಹೊತ್ತು ಇವರಿಂದ ಈ ಟ್ಯಾಕ್ಸ್ ವಸೂಲ್ಮಾಡುತ್ತಿರುವುದು ನ್ಯಾಯವೇ ಅಲ್ಲವೇ ಎಂಬುದನ್ನು ನೀವೇ ತೀರ್ಮಾನ ಮಾಡಿ. ಆದರೆ ಶ್ರೀಮಾನ್ ಶ್ರೀನಿವಾಸಯ್ಯಂಗಾರ್ ಅವರು ಹೇಳಿದರು—"ಅವರು ಮುಗ್ಧರು—ಅವರಿಗೆ ತಿಳವಳಿಕೆ ಇರುವುದಿಲ್ಲ ಅದಕ್ಕಾಗಿ ಅವರು ಲೈಸೆನ್ಸ್ ತೆಗೆದುಕೊಂಡಿಲ್ಲ" ಎಂಬುದಾಗಿ. ಆದರೆ ಕಾನೂನಿನಲ್ಲೇ ಬರೆದಿದೆ 'Ignorance of law is not excusable ಎಂದು.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಈ ಮಾರಾಟ ತೆರಿಗೆ ಜಾರಿಗೆ ಬಂದದ್ದು 1948ರಲ್ಲಿ. ತಾವು ಆಗಿನಿಂದ ಏಕೆ ಇದನ್ನು ಡಿಮ್ಯಾಂಡ್ ಮಾಡಲಿಲ್ಲ? ಐದುವರ್ಷಗಳತನಕ ಡಿಮ್ಯಾಂಡ್ ಮಾಡದೆ ಹಾಗೆಯೇ ಸುಮ್ಮನಿದ್ದು ಈಗ ಏಕೆ ಏಕಾಏಕಿ ನೋಟೀಸ್ ಕೊಟ್ಟಿದ್ದೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಂದು ಅಂಶವನ್ನು ನಾನು ಹೇಳುವುದಾದರೆ ಇದರಿಂದ ಮುಖ್ಯವಾಗಿ ಆ ಬಡ ಜನಗಳಾರಿಗೂ ತೊಂದರೆಯಾಗಬಾರದು, ಈ ಗೃಹಕೈಗಾರಿಕೆಗೆ ಯಾವಥಕ್ಕೆಯೂ ಆಗಬಾರದು ಎನ್ನುವ ಅಂಶ ಸರ್ಕಾರದವರ ಗಮನದಲ್ಲಿದೆ. ಆದರೆ ಈ ಕಕೂನ್ ತಯಾರು ಮಾಡತಕ್ಕವರೂ—ಈ ಕಕೂನ್‌ಗಳನ್ನು ಮಾರಾಟಮಾಡತಕ್ಕವರೂ ಒಟ್ಟಿಗೆ ಸೇರಿಕೊಂಡು ಒಂದು ಸಹಕಾರ ಸಂಘವನ್ನು ಸ್ಥಾಪಿಸಿಕೊಂಡಿದ್ದೇ ಆದರೆ ಆಗ್ಗೆ ಈ ತೊಂದರೆಗಳೆಲ್ಲಾ ತಾವಾಗಿಯೇ ತಪ್ಪಿ ಹೋಗುತ್ತವೆ. ಆದರೆ ಈ ಮಧ್ಯವರ್ತಿ ಜನರು ಇತ್ತಲಾಗಿ ಲೈಸೆನ್ಸನ್ನೂ ತೆಗೆದುಕೊಳ್ಳದೆ—ಅತ್ತಲಾಗಿ ಟ್ಯಾಕ್ಸನ್ನೂ ಕೊಡದೆ ತಪ್ಪಿಸಿಕೊಂಡು ಹೋಗುತ್ತಿದ್ದರೆ ಇಂಥವರನ್ನು ಹಿಡಿದು ಅವರ ಮೇಲೆ ಈ ತೆರಿಗೆಯನ್ನು ಹಾಕಿರತಕ್ಕದು ಸೂಕ್ತವೇ ಅಲ್ಲವೇ ಏಂಬುದನ್ನು ನೀವೇ ಆಲೋಚನೆ ಮಾಡಿ. ಈ ಕಾನೂನು 1948ರಲ್ಲಿ ಜಾರಿಗೆ ಬಂದವರೂ ಆಗಿನಿಂದ ತಾವು ಸುಮ್ಮನಿದ್ದು ಈಗ ಏಕಾಏಕಿ ಇವರ ಮೇಲೆ ಕಾರ್ಯಕ್ರಮಗಳನ್ನು ಕೈಗೊಳ್ಳಲು ಕಾರಣವೇನೆಂದು ಕೇಳಿದ್ದಾರೆ. ಆದರ ಹೀಗೆ ಇವರ ಮೇಲೆ ಈ ತೆರಿಗೆಹಾಕತಕ್ಕದು ಸೂಕ್ತವೆ—ಅಲ್ಲವೇ ಎಂಬ ಅಂಶವನ್ನು ಕಾನೂನು ದೃಷ್ಟಿಯಿಂದ ವಿಮರ್ಶೆ ಮಾಡಲ್ಪಡುತ್ತಿತ್ತು. ಆದರೆ ಈಗ ಇವರ ಮೇಲೆ ಈ ತೆರಿಗೆ ಹಾಕಲು ಕಾನೂನಿನಲ್ಲಿ ಅವಕಾಶವಿದೆ. ಆದ್ದರಿಂದ ಈಗ ಅವರ ಮೇಲೆ ಈ ತೆರಿಗೆ ಹಾಕಲಾಗಿದೆ ಎಂಬುದನ್ನು ತಿಳಿಸಿದರೆ ಆಗ ಶ್ರೀಮಾನ್ ಶ್ರೀನಿವಾಸಯ್ಯಂಗಾರ್ ಮನಸ್ಸಿಗೂ ಕೂಡ ಸಮಾಧಾನವಾಗಬಹುದೆಂದು ನಾನು ಭಾವಿಸಿದ್ದೇನೆ. 20 ಸಾವಿರಕ್ಕೂ ಮೇಲಲ್ಲದೆ ಮತ್ತು ಈ ಮೊಬಲಗಿಂತ ಕಡಮೆ ವ್ಯವಹಾರ ಮಾಡತಕ್ಕವರಿಗೆ 100 ರೂಪಾಯಿ ಮಾರಾಟ ತೆರಿಗೆಯನ್ನು ಕೊಡ ಬೇಕೆಂದು ಕಾನೂನಿನಲ್ಲೇ ಬರೆದಿದೆ. ಒಂದು ವೇಳೆ ಅವರು ನೇರವಾಗೇ ಈ ತೆರಿಗೆಯನ್ನು ಕೊಡುವುದಾದರೆ ಅಂಥವರಿಗೆ ಇನ್ನೂ ಕಡಿಮೆ ತೆರಿಗೆಯನ್ನು ಗೊತ್ತು ಮಾಡಿದ್ದೇವೆ. ಆದ್ದರಿಂದ ತಮಗೆ ಈ ವಿಚಾರದಲ್ಲಿ ಹೆಚ್ಚಿನ ಭಿನ್ನಾಭಿಪ್ರಾಯವಿಲ್ಲದಿರುವುದರಿಂದ ಈ ವಿಚಾರವನ್ನು ಇಷ್ಟಕ್ಕೇ ಬಿಟ್ಟುಬಿಡುತ್ತೇನೆ. ಆದರೆ ಇದೇ ಮಾನ್ಯ ಸಭೆಯಲ್ಲಿ ಶ್ರೀ ಎಸ್. ಕರಿಯಪ್ಪನವರೂ ಶ್ರೀಮಾನ್ ಯು. ಎಂ. ಮಾದಪ್ಪನವರೂ, ಶ್ರೀಮಾನ್ ರಾಜಶೇಖರ ಮೂರ್ತಿಯವರೂ ಈ ವಿಚಾರದಲ್ಲಿ ವಿಶೇಷವಾಗಿ ಚರ್ಚೆಮಾಡಿ ಈ ತೆರಿಗೆದಾರರಿಗೆ ತಾವು ಇದರ ಬಗ್ಗೆ ಕೊಂಚ ರಿಲೀಫ್ ಕೊಟ್ಟರೆ—ಆ ರೀತಿ ಸರ್ಕಾರ ಒಂದು ಆಜ್ಞೆ ಹೊರಡಿಸಿದ್ದೇ ಆದರೆ ಇದರಲ್ಲಿ ಟ್ಯಾಕ್ಸ್ ಇವೇಜನ್ ತಪ್ಪಿಹೋಗಿ ಇನ್ನೂ ಹೆಚ್ಚಿನ ವರಮಾನ ಬರುವುದಕ್ಕೆ ಅವಕಾಶವಿದೆಯೆಂದು ಸಲಹೆ ಮಾಡಿದ್ದರು. ಅದೇ ರೀತಿ ಸರ್ಕಾರಕ್ಕೂ ಕೂಡ ಒಂದು ಮನವಿ ಬಂತು. ಆಗ ಈ ವಿಚಾರಗಳನ್ನೆಲ್ಲಾ ವಿಮರ್ಶೆ ಮಾಡಲು Taxation Enquiry Committee ಎಂಬುದಾಗಿ ಒಂದು ಸಮಿತಿಯನ್ನು ನೇಮಕ ಮಾಡಿ ಅದಕ್ಕೆ ಈ ಬಗ್ಗೆ ಒಂದು ಸೂಕ್ತ ಸಲಹೆ ನೀಡಬೇಕೆಂದು ಕೇಳಲಾಯಿತು. ಆ ಸಮಿತಿಯವರು ಈ ಬಗ್ಗೆ ಒಂದು ವಿಜಿಲೆನ್ಸ್ ಸಮಿತಿಯನ್ನು ನೇಮಕ ಮಾಡಿ ಕೆಲವು ಗೂಢಚಾರರನ್ನು ಇಟ್ಟುಕೊಂಡು ಕೆಲಸ ಮಾಡಿದರೆ ಆಗ ಒಂದು ಹೆಚ್ಚಿನ ದಕ್ಷತೆಯಿಂದ ಕೆಲಸ ಮಾಡುವುದಕ್ಕೂ ಮತ್ತು ಈ ಟ್ಯಾಕ್ಸ್ ಇವೇಜನ್ನನ್ನು ತಪ್ಪಿಸುವುದಕ್ಕೂ ಅನುಕೂಲವಾಗುವುದೆಂದು ಶಿಫಾರ್ಸು ಮಾಡಿದರು. ಈಗ ಆ ಶಿಫಾರ್ಸುಗಳಿಗನುಗುಣವಾಗಿ ಕೆಲಸವನ್ನು ಕೈಗೊಳ್ಳಲು ಸರ್ಕಾರದವರು ಆಲೋಚನೆ ಮಾಡುತ್ತಿದ್ದಾರೆ.

(ಶ್ರೀ ಎಚ್. ಎಂ. ಚನ್ನಬಸಪ್ಪ).

ಇನ್ನು ಈ ಕಂಟ್ರಾಕ್ಟರ ವಿಚಾರ ಬಂತು. ಆದರೆ ಈ ಕಂಟ್ರಾಕ್ಟರುಗಳು ಲೈಸೆನ್ಸದಾರರಾಗಿರಬೇಕು ಎಂದು ಕಾನೂನಿನಲ್ಲಿ ವಿಧಾಯಕ ಮಾಡಲಾಗಿದೆ. ಹೀಗಿದ್ದಮೇಲೂ ಅವರು ಈ ಲೈಸೆನ್ಸನ್ನು ಪಡೆಯದೆ ಕಾನೂನು ಉಲ್ಲಂಘನೆ ಮಾಡಿದ್ದಕ್ಕೆ ಅವರಿಗೆ ಶಿಕ್ಷೆ ಮಾಡುವುದರಲ್ಲಿ ತಪ್ಪೇನೂ ಇಲ್ಲ. ಈ ದಿವಸ ಈ ಸಿಮೆಂಟ್, ಕಬ್ಬಿಣ—ಇತ್ಯಾದಿ ಸಾಮಾನುಗಳ ಬಗ್ಗೆ ಆತನು ಮೊದಲನೆ ಡೀಲರ್ರೆ ಆಗಿರಲಿ. ಅಥವಾ ಎರಡನೆ ಡೀಲರ್ರೆ ಆಗಿರಲಿ ಆತನು ಆ ಸೆಕ್ಷನ್ 2 (B) (C) ಪ್ರಕಾರ. . . .

Sri B. NARAYANASWAMY.—The contractor is only a consumer. He is not a dealer. He is a purchaser of some commodity.

Sri H. M. CHANNABASAPPA.—It is a question of interpretation of law.

Sri B. NARAYANASWAMY.—It is a misinterpretation by your officer. You please see the definition of 'dealer'.

Sri H. M. CHANNABASAPPA.—That is a matter of opinion. Whether a contractor comes within the term 'dealer' or not, it is for the Courts to interpret; it is not for me to interpret it. ಇದರಲ್ಲಿ ಒಂದು ಮುಖ್ಯವಾದ ವಿಚಾರವಿದೆ. ಅವರು ಈ ಸಿಮೆಂಟು, ಕಬ್ಬಿಣ—ಇತ್ಯಾದಿ ಸಾಮಾನುಗಳನ್ನು ನೇರವಾಗಿ ನಮ್ಮ ಭದ್ರಾವತಿ ಕಾರ್ಖಾನೆಯಲ್ಲೇ ತೆಗೆದುಕೊಳ್ಳಬೇಕು ಎಂಬ ನಿರ್ಬಂಧವಿಲ್ಲ. . . .

Sri B. NARAYANASWAMY.—There are separate agents who are registered delers.

Sri H. M. CHANNABASAPPA.—Why don't you have the patience to hear me? ಅವರು ಭದ್ರಾವತಿಯಲ್ಲಾದರೂ ತೆಗೆದುಕೊಳ್ಳಬಹುದು—ಮತ್ತೆಲ್ಲಾದರೂ ತೆಗೆದು ಕೊಳ್ಳಬಹುದು. ಭದ್ರಾವತಿಯಲ್ಲಾದರೆ ನಮಗೆ ಟ್ಯಾಕ್ಸ್ ಬರುತ್ತದೆ. ಆದರೆ ಅದಕ್ಕೆ ಬದಲಾಗಿ ಅವರು ಮದರಾಸಿಗೆ ಹೋಗಿ ಅಲ್ಲಿಂದ 10,000 ಮೂಟೆ ಸಿಮೆಂಟನ್ನು ತಂದರೆ ಆಗ ಅವನು ಫಸ್ಟ್ ಡೀಲರ್ ಆಗುತ್ತಾನೋ ಇಲ್ಲವೋ? ಆದರೆ ಕಡ್ಡಾಯವಾಗಿ ಅವರೆಲ್ಲರೂ ಆ ಭದ್ರಾವತಿಯಲ್ಲೇ ತೆಗೆದುಕೊಳ್ಳ ಬೇಕೆಂಬ ನಿರ್ಬಂಧವೇನೂ ಇಲ್ಲ. ಈ ಕಾರಣದಿಂದ ಈ ದಿವಸ ಅವರು ಬೇರೆ ಕಡೆಯಿಂದ ಈ ಮಾಲು ಗಳನ್ನು ತಂದರೆ ಆಗ ಅವರು ಫಸ್ಟ್ ಡೀಲರ್ ಆಗಲು ಅವಕಾಶವಿದೆ. ಒಂದು ವೇಳೆ ಹೀಗೆ ಯಾರಾದರೊಬ್ಬ ಮದರಾಸಿಗೆ ಹೋಗಿ ಒಂದು ಹತ್ತು ಸಾವಿರ ಸಿಮೆಂಟ ಮೂಟೆಗಳನ್ನು ತಂದಿದ್ದ ಪಕ್ಷದಲ್ಲಿ ಆಗಲೂ ಕೂಡ ತಾವು ಏಕೆ ಆತನ ಮೇಲೆ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳಲಿಲ್ಲ ಎಂದು ಕೇಳುತ್ತೀರಿ. But anyway that is a point which we have got to see. Government have some difficulties in these matters. It is not my intention that people who do not come within the operation of this Act should be taxed. But there should not be tax evasion. I hope I have the backing of all the members in this regard. I do not want tax evasion to take place. ಇನ್ನು ಈ ಮ್ಯೂಜಿಕಲ್ ಇನ್ಸ್ಟ್ರುಮೆಂಟ್ಸ್‌ಗಳ ಬಗ್ಗೆ ವಿಚಾರ ಎತ್ತಿದ್ದಾರೆ. ಇದರಲ್ಲಿ ತಂತಿ ಮತ್ತು ಮರ ಈ ಎರಡನ್ನೂ ಸೇರಿಸಿ ಈ ಮ್ಯೂಜಿಕಲ್ ಇನ್ಸ್ಟ್ರುಮೆಂಟ್‌ಗಳನ್ನು ತಯಾರಿಸುತ್ತಿದ್ದಾರೆ. ಇಂಥ ಉಪಕರಣದ ಮೇಲೆ ಈಗ ಒಂದಾಣೆ ಟ್ಯಾಕ್ಸನ್ನು ಮಾತ್ರ ಹಾಕಿದ್ದೇವೆ. ಇದರಲ್ಲಿ ತಪ್ಪೇನಿದೆ? ಆದರೆ ಈಗ ಸದ್ಯಕ್ಕೆ ಇದನ್ನು ವಜಾಮಾಡುವುದಕ್ಕಾಗುವುದಿಲ್ಲ. ಮುಂದೆ ಬೇಕಾದರೆ ನೋಡೋಣ. I think I have answered almost all points.

ಇನ್ನು ಕೊನೆಯದಾಗಿ ಈ ರೇಸ್ ಕ್ಲಬ್ಬಿನ ವಿಚಾರ ಬಹಳವಾಗಿ ಪ್ರಸ್ತಾಪಿಸಲ್ಪಟ್ಟಿದೆ. ರೂಲ್ 7ರ ಪ್ರಕಾರ ಮಾನ್ಯ ಮುಖ್ಯ ಮಂತ್ರಿಗಳವರು ಒಂದು ಹೇಳಿಕೆಯನ್ನೇ ಈ ಸಭೆಯ ಮುಂದೆ ಮಾಡಿರುತ್ತಾರೆ. ಆ ರೇಸ್ ನಡೆಸುತ್ತಿದ್ದವರಿಗೆ ಈಗ ಇದರಲ್ಲಿ ಅಷ್ಟು ಉತ್ಸಾಹವಿಲ್ಲ. ಆ ರೇಸಿನವರಿಗೆ ಇದರಿಂದ ಸಾಕಷ್ಟು ಹಣ ಬರುವಂತೆ ಕಾಣುಬರಲಿಲ್ಲ. ಆಗಲೂ ಅವರಲ್ಲಿ ಕೆಲವರು ಇದಕ್ಕೆ ಅಪ್ಲಿಕೇಷನ್ ಹಾಕಿಕೊಂಡಿದ್ದರು. ಆದರೆ ಆ ಅಪ್ಲಿಕೇಷನ್‌ಗಳು ಇನ್‌ವ್ಯಾಲಿಡ್ ಎಂಬುದಾಗಿ ತೀರ್ಮಾನವಾಯಿತು. ಆ ಬಗ್ಗೆ ನಾವು ಶೇಕಡ 17ರಷ್ಟು ತೆರಿಗೆ ರೂಪದಲ್ಲಿ ಕೊಡಬೇಕೆಂದು ಷರತ್ತು ಹಾಕಿದ್ದೆವು. ಅದನ್ನು ಅವರು ಬಹಳ ಜಾಸ್ತಿ ಎಂದು ಹೇಳುತ್ತಿದ್ದಾರೆ. ನಾವು ಕಮ್ಮಿ ಮಾಡಲು ಸಾಧ್ಯವಿಲ್ಲವೆಂದು ನಾವು ತಿಳಿಸುತ್ತಿದ್ದೇವೆ. ಈ ನಾನಾ ಕಷ್ಟಗಳಿಂದ ಅವರು ಈಗ ತಾವಾಗೇ ಸ್ವಲ್ಪ ಸುಮ್ಮನಿರುವ ಹಾಗೆ ಕಾಣುತ್ತಿದೆ. ಅವರಲ್ಲಿ ಈ ದಿವಸ ಇದರ ಬಗ್ಗೆ ಅಷ್ಟು ಉತ್ಸಾಹವಿದ್ದಂತೆ ಕಂಡುಬರುತ್ತಿಲ್ಲ. ಮೊದಲಿನಂತೆ ಉತ್ಸಾಹ ಈಗ ಇರುವುದಿಲ್ಲ.

ಎರಡನೆಯದಾಗಿ ಈ ಸಭೆಯಲ್ಲಿ ಎರಡು ವಾದಗಳು ಇವೆ. ವಜಾಮಾಡಬೇಕೆಂಬ ಅಭಿಪ್ರಾಯನ್ನೂ ಕೂಡ ಕೊಟ್ಟಿದ್ದಾರೆ. ಅದರಲ್ಲಿ ನ್ಯಾಯವಿಲ್ಲದ್ದೇ ಇಲ್ಲ. ಈ ಕಾಲದಲ್ಲಿ ಜೂಜುವಗೈರೆಗಳಿಂದ ಬಡವರ ಸಂಸಾರಗಳು ಹಾಳಾಗುತ್ತಿವೆ ಎಂದು ಹೇಳತಕ್ಕ ಜನರು ದೇಶದಲ್ಲಿ ಇದ್ದಾರೆ. ಕುದುರೆ ಜೂಜನ್ನು ನಡೆಸಬೇಕೆಂದು ಹೇಳತಕ್ಕ ಜನರೂ ಸಹ ದೇಶದಲ್ಲಿ ಇದ್ದಾರೆ.

ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಸೋಷಿಯಲಿಸ್ಟಿಕ್ ಪ್ಯಾಟರ್ನ್ ಆಫ್ ಸೊಸೈಟಿ ಬರಬೇಕೆಂದು ನಮ್ಮ ನಾಯಕರು ಹೇಳುತ್ತಾ ಇರುವಾಗ ಕುದುರೆ ಜೂಜು ವಗೈರೆ ವಜಾಮಾಡಬೇಕಾದ್ದು ನ್ಯಾಯವಲ್ಲವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ವಿಷಯವನ್ನು ಈಗ ಸದ್ಯದಲ್ಲಿ ಅಷ್ಟು ಹೆಚ್ಚಾಗಿ ಪ್ರಸ್ತಾಪ ಮಾಡುವುದು ಅನಾವಶ್ಯಕ. ದೇಶದ ಹಿತದೃಷ್ಟಿಯಿಂದ ಯಾವರೀತಿ ಮಾಡಬೇಕೆಂಬ ಬಗ್ಗೆ ಸರ್ಕಾರದವರು ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಲಿಕ್ಕೆ ಕಾತರರಾಗಿದ್ದಾರೆ. ಅಷ್ಟು ಹೇಳಿದರೆ ಸಾಕು. ಆರ್.ಎಂ.ಡಿ.ಸಿ. ವಿಚಾರದಲ್ಲಿ. . . .

3 P.M.

Sri K. HANUMANTHAIYA (Chief Minister).—Sir, regarding R.M.D.C. I wanted to make a detailed statement. In fact I have got papers with me here

and I wanted to do so particularly because several wreckless allegations are made. I now learn that Sri Chamarbaugwala has filed a case against the Government demanding that the collection of the tax cannot be made legally and the suit is pending. Therefore I am unable to explain the position, since the matter is *sub judice*.

Sri K. PUTTASWAMY.—When did he file the suit?

Sri K. HANUMANTHAIYA.—About a year ago or even earlier. I do not know the exact date. I learnt today that it has been pending for some time.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದ್ದರಿಂದ ಆ ವಿಷಯದ ಬಗ್ಗೆ ಸದ್ಯದಲ್ಲಿ ಪ್ರಸ್ತಾಪಮಾಡಬೇಕಾದದ್ದು ಅನಾವಶ್ಯಕ. ಒಟ್ಟಿನಲ್ಲಿ ಈ ಸೇಲ್ಸ್‌ಟ್ಯಾಕ್ಸ್ ಡಿಮ್ಯಾಂಡಿನ ವಿಷಯದಲ್ಲಿ ಮಾನ್ಯ ಸದಸ್ಯರು ಯಾವ ಯಾವ ರಚನಾತ್ಮಕವಾದ ಸಲಹೆಗಳನ್ನು ಕೊಟ್ಟಿದ್ದಾರೋ ಅವೆಲ್ಲವನ್ನೂ ವಿಶ್ವಾಸದಿಂದ ಪರಿಶೀಲನೆ ಮಾಡಿ, ಅವುಗಳನ್ನು ಉಪಯೋಗಿಸಿಕೊಳ್ಳಲಿಕ್ಕೆ ಸರ್ವಪ್ರಯತ್ನವನ್ನು ಕೂಡ ಮಾಡುತ್ತೇವೆ ಮತ್ತು ನಾನು ಕೊಟ್ಟಿರತಕ್ಕ ವಿವರಣೆಗಳಿಂದ ಮಾನ್ಯ ಸದಸ್ಯರ ಮನಸ್ಸಿನಲ್ಲಿ ಏನು ಶಂಕೆ ಇತ್ತೋ ಅದು ಪರಿಹಾರವಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ, ಆದಕಾರಣ ಇದಕ್ಕೆ ತಮ್ಮ ಸಂಪೂರ್ಣ ಬೆಂಬಲವನ್ನು ಕೊಡಬೇಕೆಂದು ಹೇಳುತ್ತೇನೆ.

*Sri Mulka GOVINDA REDDY (Chitaldrug).—I want one explanation whether they are going to appoint staff to detect tax evasion. While making a statement there may be some split personalities, speaking one thing and doing another. It is well known that in most of these departments, especially in the Anti-corruption and Prohibition Departments, allegations have been made on the floor of this House. Even against the Police allegation has been made that the Police are conniving at with regard to Prohibition. Also that some of the staff, not all, of the Anti-Corruption Department are not free from corruption. When I interjected and said that such a thing should not happen, the Minister was pleased to make a certain remark. I would like to have an explanation given on that.

Sri H. M. CHANNABASAPPA.—I made the remark that the world consists of good and bad people and that it is rather difficult to avoid all bad people and select only good people. That is my explanation.

*ಶ್ರೀ ಎಸ್. ಗೋಪಾಲಗೌಡ (ಸಾಗರ-ಹೊಸನಗರ).—ನಿಮ್ಮ ಸರ್ಕಾರಿ ಆಫೀಸರುಗಳ ಪೈಕಿ ಎಷ್ಟು ಜನ ಕೆಟ್ಟವರು, ಎಷ್ಟು ಜನ ಒಳ್ಳೆಯವರು ಇದ್ದಾರೆ? ಪರ್ಸೆಂಟೇಜ್ ಕೊಟ್ಟರೆ ಸಾಕು.

Sri H. M. CHANNABASAPPA.—Very well.

Mr. SPEAKER.—The question is.—

"That a sum not exceeding Rs. 17,61,000 be granted to the Government to defray the charges which will come in course of payment during the year ending 31st day of March 1957, in respect of 'Other Taxes and Duties'."

The motion was adopted.

Mr. SPEAKER.—The House will now adjourn and meet at 3-35 P.M.

The House adjourned for lunch at Five Minutes past Three of the Clock and re-assembled at Forty Minutes past Three of the Clock.

[MR. SPEAKER in the Chair.]

DEMAND NO. 14—ADMINISTRATION OF JUSTICE.

27. ADMINISTRATION OF JUSTICE.

Mr. SPEAKER.—Motion moved:

"That a sum not exceeding Rs. 28,05,600 be granted to the Government to defray the charges which will come in course of payment during the year ending 31st day of March 1957 in respect of 'Administration of Justice'."

*Sri H. C. LINGA REDDY (Malur).—I support the demand. While doing so, I would like to bring to the notice of the Government a few points. I had tabled a few cut motions covering a few points. The first one was about the implementation of Mallappa's Committee Report on the question of pecuniary and territorial jurisdiction. This Report was submitted by the Committee a year ago. It contains very many important aspects relating to the administration of justice. Whenever certain points were raised on the floor of this House with regard to the

(SRI H. C. LINGA REDDY.)
separation of the judiciary from the Executive, with regard to reorganisation of courts in the State and such other things, the Government were pleased to tell us that as soon as the Committee submitted its report the various points would be attended to, that the separation of the Judiciary from the Executive would be effected and that courts also would be reorganised and so on and so forth. But now though this Report was submitted by the Committee as long as a year ago, I am afraid very precious little has been done by the Government and very many issues that are outstanding in the Department of Judiciary remain undecided. It is said that justice delayed is justice denied. Today our courts are congested; work is accumulating and the litigant public will have to travel a long distance to reach the seats of courts. We have to take justice as near the litigant public as possible and justice should be cheap. It should not be expensive. It is from that point of view the Government were pleased to appoint a Committee and that Committee gave their Report, as I said, a long time back. Amongst so many other things this Committee has mentioned in the Report, the location of a few courts in taluk headquarters is one; it is in a way decentralising the administration of justice. For instance, in respect of Kolar District they have said—of course they have said that there should not be additional courts, increasing the number of courts that one of the courts at Kolar may be located at Chintamani for the benefit of the litigant public of Chintamani, Bagepalli and Srinivasapur Taluks and that the Munsiff's Court at Kolar may be converted into Munsiff-Magistrate Court. Similarly the Committee have made some other recommendations for the Kolar District without prejudice to finance. The number of courts will be the same but the accumulation of courts in one place is avoided and courts are decentralised in a way. They are recommended to be located, one of them being shifted from district headquarters to some other place. Thereby justice will have been taken as near as possible to the litigant public. Therefore, from this point of view if the Committee's Report had been implemented, it would have been of great advantage to the litigant public. Justice will no doubt be taken nearer but litigation cannot be avoided. As long as human nature is what it is, the establishment of courts is inevitable and instead of accumulating all courts in one place, it is better they are decentralised. It is from that point of view some of the courts are recommended to be shifted to places which are more convenient to the litigant public.

And again Sir, another recommendation that has been made by this Committee as contained in the Report is about the changes to be made with regard to the pecuniary jurisdiction of the various courts. The Munsiffs' Courts for example are now vested with the power to try cases of the value not exceeding Rs. 1,500. They have now suggested that they may try suits of the value of Rs. 3,000 and that small cause suits may be of the value of Rs. 200 and they have similarly suggested that the District Magistrate cum Civil Judges Courts that will be coming into being may try cases ranging between Rs. 10,000 and Rs. 20,000 and the present Subordinate Judge's Courts may try suits up to the value of Rs. 2,500 up to Rs. 10,000. If these recommendations had been implemented, it would have been very convenient as I said at the very outset for the litigant public.

Another point I would like to refer to in this connection is Sir, about the remuneration to be paid to the Copyists. Even last year, some representations were made to the Government by Hon'ble Members of this House that the way the Copyists are paid now is not conducive to the quick and smooth working of the copying sections in the Judiciary. Formerly Copyists used to be paid a moiety of the cost of copying sheets and now Copyists are paid regular salary. And this change in the mode of payment to the Copyists has brought about a good deal of corruption and

has led to many mal practices among the Copyists. Because they are paid salaries, they become lazy and they are not particular about the preparation of copies and they go on whiling away their time. The Advocates and litigant public will not be in a position to get copies in time. In the result, it will be very difficult for the parties to obtain stay order or prefer an appeal as the case may be. While formerly because their remuneration depended upon the copies prepared, they were quite vigilant and they were active and doing their duty properly and in time. This system of payment of regular salary to the Copyists has led to this laziness and corruption and malpractices as, I said already. The Government Sir, even in the last Budget Session said that the question of changing the system was under consideration of the Government. But I do not know why action has not so far been taken in the matter.

With these few observations, I support the Demand.

ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—ಸ್ವಾಮಿ, ಕಡೂರಿನಲ್ಲಿ ಒಂದು ಕೋರ್ಟು ಆಗಬೇಕು ಎಂದು ಪದೇ ಪದೇ ಹೇಳುವುದಕ್ಕೆ ನನಗೆ ನಾಚಿಕೆಯಾಗುತ್ತದೆ. ನಾನು ಅಸೆಂಬ್ಲಿ ಮೆಂಬರಾಗಿ ನಾಲ್ಕು ವರ್ಷವಾಯಿತು. ಆಗಿನಿಂದಲೂ ಕೇಳುತ್ತಿದ್ದೇನೆ. ಇನ್ನೂ ಕೊಟ್ಟಿಲ್ಲ. ಇನ್ನೂ ಎಂಟು ತಿಂಗಳಿಗೆ ನಮ್ಮ ಸದಸ್ಯತ್ವದ ಅವಧಿ ಮುಗಿಯುತ್ತದೆ. ನಮ್ಮ ತಂದೆಯವರು ಮಿರ್ಜಾ ಸಾಹೇಬರ ಹತ್ತಿರ ಕೂಡ ಕಡೂರಿಗೆ ಒಂದು ಕೋರ್ಟು ಕೊಡಬೇಕೆಂದು ಕೇಳಿದ್ದರು. ಆವಾಗಿನಿಂದಲೂ ಕೇಳುತ್ತಿದ್ದೇವೆ. ಪ್ರಾಯಶಃ ನನ್ನ ಮಗ ಸದಸ್ಯನಾದಾಗ ಏನಾದರೂ ಕೊಡುತ್ತಾರೆಯೋ ಏನೋ ಗೊತ್ತಿಲ್ಲ. ಕಡೂರು 1,20,000 ಜನ ಸಂಖ್ಯೆ ಇರುವ ತಾಲ್ಲೂಕು. ಚಿಕ್ಕಮಗಳೂರು ಜಿಲ್ಲೆಯ ಜನಸಂಖ್ಯೆ ನಾಲ್ಕು ಲಕ್ಷ. ನಮ್ಮ ಜಿಲ್ಲೆಯಾದ ಚಿಕ್ಕಮಗಳೂರಿನಲ್ಲಿ ಚಿಕ್ಕಮಗಳೂರು ಮತ್ತು ತರೀಕೆರೆ ಈ ಎರಡು ಕಡೆಗಳಲ್ಲಿ ಮಾತ್ರ ಕೋರ್ಟು ಇದೆ. ಹಿಂದೆ ಶ್ರೀ ಮಲ್ಲಪ್ಪ ಕಮಿಟಿಯವರು ಬಂದಕಾಲದಲ್ಲಿ ಕಡೂರು ಟೌನಲ್ಲಿ ಅನೇಕರು ಸೇರಿ ಅಂಕಿ ಅಂಶಗಳನ್ನೂ ಕೊಟ್ಟೆವು. ಕಡೂರು ತಾಲ್ಲೂಕಿಗೆ ಒಂದು ಕೋರ್ಟು ಕೊಡತಕ್ಕದ್ದು ನ್ಯಾಯವೆಂದು ಆ ಸಮಿತಿಯವರೂ ಕೂಡ ಹೇಳಿದ್ದರು. ಏಕೆಂದರೆ ತರೀಕೆರೆ ಮತ್ತು ಚಿಕ್ಕಮಗಳೂರು ಕೋರ್ಟುಗಳಲ್ಲಿನ ಕೇಸುಗಳ ದಾಖಲಾತಿಯನ್ನು ತೆಗೆದುಕೊಂಡರೆ ಎರಡು ಕೋರ್ಟುಗಳಲ್ಲಿಯೂ ಹೆಚ್ಚಾಗಿರತಕ್ಕದು ಕಡೂರು ತಾಲ್ಲೂಕಿನ ಕೇಸುಗಳು. ಕಡೂರು ತಾಲ್ಲೂಕಿನ ಜನಸಂಖ್ಯೆಯೂ ಜಾಸ್ತಿ, ಕೇಸುಗಳೂ ಜಾಸ್ತಿ. ಕಡೂರು ತಾಲ್ಲೂಕಿನ ಕೊನೆಯಲ್ಲಿರುವ ಒಂದು ಹಳ್ಳಿಯಿಂದ ಚಿಕ್ಕಮಗಳೂರು ಮತ್ತು ತರೀಕೆರೆ ಈ ಸ್ಥಳಗಳಿಗೆ ಹೋಗಬೇಕಾದರೆ 50-60 ಮೈಲಿ ಫಾಸಲೆಯಾಗುತ್ತದೆ. ಕಡೂರು ತಾಲ್ಲೂಕಿನ ಕೆಲವು ಹೋಬಳಿಗಳನ್ನು ತರೀಕೆರೆ ಕೋರ್ಟಿಗೂ, ಕೆಲವನ್ನು ಚಿಕ್ಕಮಗಳೂರು ಕೋರ್ಟಿಗೂ ಸೇರಿಸಿದ್ದಾರೆ. ಹಿಂದೆ ಒಂದು ಸಲ ಚೀಫ್ ಜಸ್ಟಿಸ್‌ರವರು ಚಿಕ್ಕಮಗಳೂರಿಗೆ ಬಂದಕಾಲದಲ್ಲಿ ಅನೇಕರು ಮನವಿಯನ್ನು ಒಪ್ಪಿಸಿದರು. ಅವರೂ ಸಹ ಅಂಕಿ ಅಂಶಗಳನ್ನು ನೋಡಿ ಕಡೂರಿಗೆ ಒಂದು ಕೋರ್ಟು ಕೊಡುವುದು ನ್ಯಾಯವಾದದ್ದು ಎಂದು ಹೇಳಿದರು. ಹೀಗೆಯೇ ಬೇರೆ ಕಮಿಟಿಗಳವರೂ ತಮ್ಮ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ನಾನೂ ಮತ್ತು ಕಡೂರು ತಾಲ್ಲೂಕಿನ ಅನೇಕ ಸ್ನೇಹಿತರೂ ಈಗಿರತಕ್ಕ ಮುಖ್ಯ ಮಂತ್ರಿಗಳನ್ನು ಕಂಡು ನಮ್ಮ ಕಷ್ಟ ಸುಖಗಳನ್ನು ಹೇಳಿಕೊಂಡೆವು. ಅವರು ಮಲ್ಲಪ್ಪ ಕಮಿಟಿಯವರ ಶಿಫಾರಸುಗಳು ಯಾವರೀತಿ ಬರುತ್ತವೆಯೋ ಅದನ್ನು ನೋಡಿಕೊಂಡು ಸಾಧ್ಯವಾದ ಮಟ್ಟಿಗೆ ಕಡೂರು ತಾಲ್ಲೂಕಿಗೆ ಒಂದು ಕೋರ್ಟು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಿದರು. ಇಷ್ಟಾದರೂ ಕೂಡ ನನಗೆ ಕಡೂರು ತಾಲ್ಲೂಕನ್ನು ಎಲ್ಲ ವಿಧದಲ್ಲಿಯೂ ಕೂಡ ಮೈಸೂರು ಭೂಪಟದಿಂದ ಅಳಿಸಿ ಬಿಟ್ಟಿದ್ದಾರೆಯೋ ಏನೋ ಎಂಬ ಸಂಶಯವುಂಟಾಗುತ್ತಿದೆ. ಅಲ್ಲದೆ ಅನೇಕ ಸಾರಿ ನಮ್ಮ ಕಷ್ಟ ಸುಖಗಳನ್ನು ಶಾಸನ ಸಭೆಗಳಲ್ಲಿ ಕೂಲಂಕಷವಾಗಿ ಸರ್ಕಾರದ ಗಮನಕ್ಕೆ ಬರುವ ರೀತಿಯಲ್ಲಿ ಹೇಳಿದರೂ ಕೂಡ ಹೆಚ್ಚು ಗಮನ ಕೊಡದೆ ಇರುವುದನ್ನು ನೋಡಿದರೆ ನಾವಾದರೂ ಕೂಡ ಈ ಶಾಸನ ಸಭೆಗಳಿಗೆ ಯಾಕೆ ಸದಸ್ಯರಾಗಿ ಬರುತ್ತೇವೆಯೋ ಎಂದೆನ್ನಿಸುತ್ತದೆ. ಸರ್ಕಾರದವರು ಕಡೂರಿಗೆ ಒಂದು ಕೋರ್ಟು ಕೊಡುವ ವಿಷಯದಲ್ಲಿ ಸುಮ್ಮನೆ ಇರುವುದನ್ನು ನೋಡಿದರೆ ಮಲ್ಲಪ್ಪ ಕಮಿಟಿಯವರು ಯಾವ ರೀತಿ ವರದಿ ಮಾಡಿದ್ದಾರೆಯೋ, ಏನೋ, ಅಥವಾ ಅವರೂ ಕೂಡ ಕಡೂರು ತಾಲ್ಲೂಕನ್ನು ಮರೆತಿದ್ದಾರೆಯೋ ಏನೋ ಅನ್ನಿಸುತ್ತದೆ. ಸರ್ಕಾರದವರು ಈ ವಿಷಯದಲ್ಲಿ ಉದಾಸೀನ ಭಾವದಿಂದ ಇರಬಹುದು ಎಂಬ ಅನುಮಾನ ಬರುವುದಕ್ಕೆ ಕೂಡ ಅವಕಾಶವಾಗಿದೆ. ನಮ್ಮ ಜಿಲ್ಲೆಯಿಂದ ಸದಸ್ಯಣಿಯರಾಗಿ ಬಂದಿರತಕ್ಕ ಶ್ರೀಮತಿ ಸುಬ್ಬಮ್ಮನವರೇನಾದರೂ ಮಂತ್ರಿಗಳಾಗಿದ್ದರೆ ನಮ್ಮ ಕಷ್ಟ ಸುಖಗಳನ್ನು ಕೇಳುತ್ತಿದ್ದರೋ ಏನೋ. ನಮ್ಮ ಜಿಲ್ಲೆಯವರು ಯಾರೂ ಮಂತ್ರಿಗಳಾಗಿ ಇಲ್ಲದೆ ಇರುವುದರಿಂದ ಇಷ್ಟಕ್ಕೆ ಕಾರಣವಾಗಿದೆಯೋ ಏನೋ ಎಂದು ಆಗಾಗ ನನಗನ್ನಿಸುತ್ತದೆ. ಆದುದರಿಂದ ಸರ್ಕಾರದವರು ಈಗಲಾದರೂ ಮಲ್ಲಪ್ಪ ಕಮಿಟಿ ರಿಪೋರ್ಟು ಬಂದೊಡನೆಯೇ ಈ ವಿಚಾರವನ್ನು ಪುನರ್ವಿಮರ್ಶೆ ಮಾಡಿ ಕಡೂರು ತಾಲ್ಲೂಕಿಗೆ ಒಂದು ಕೋರ್ಟನ್ನು ಸಾಧ್ಯವಾದ ಮಟ್ಟಿಗೂ ಈ ವರ್ಷ ಕೊಡಬೇಕು. ಕಡೂರು ತಾಲ್ಲೂಕಿನ ಪ್ರಜೆಗಳಿಗೆ ಚಿಕ್ಕಮಗಳೂರು ಅಥವ ತರೀಕೆರೆ ಕೋರ್ಟುಗಳಿಗೆ ಹೋಗಿ ಬರಬೇಕಾದರೆ ಬಹಳ ದೂರವಾಗುವುದರಿಂದ ವ್ಯವಹಾರ ನಡೆಸಲು ಬಹಳ ತೊಂದರೆ ಇದೆ. ಸರ್ಕಾರದವರು ದೊಡ್ಡ ಮನಸ್ಸು ಮಾಡಿ ಕಡೂರು ತಾಲ್ಲೂಕಿಗೆ ಒಂದು ಕೋರ್ಟನ್ನು ಕೊಡಬೇಕು ಎಂದು ಹೇಳುತ್ತೇನೆ. ಇಷ್ಟು ಮಾತ್ರ ಹೇಳಿ ಈ ಡಿಮ್ಯಾಂಡನ್ನು ಸಮರ್ಥಿಸುತ್ತೇನೆ.

(SRI K. PATTABHIRAMAN B.A., B.L., in the Chair).

*ಶ್ರೀ ಎಸ್. ಶ್ರೀನಿವಾಸಐಯ್ಯಂಗಾರ್ (ಟಿ. ನರಸಿಪುರ).—ಮೈಸೂರು ಸಂಸ್ಥಾನದಲ್ಲಿರುವ ಕೋರ್ಟುಗಳಲ್ಲಿ ಮೊಕದ್ದಮೆಗಳನ್ನು ಫೈಸಲಾತಿ ಮಾಡುವುದಕ್ಕೆ ಎಷ್ಟು ವಾಯಿದೆ ಇರಬೇಕು ಎನ್ನುವ ವಿಚಾರದಲ್ಲಿ

(ಶ್ರೀ ಎಸ್. ಶ್ರೀನಿವಾಸಯ್ಯಂಗಾರ್).

ಹೈಕೋರ್ಟಿನವರು ಒಂದು ಸರ್ಕ್ಯುಲರ್ ಕಳುಹಿಸಿ ಕೊಟ್ಟಿದ್ದಾರೆ. ಸಾಧಾರಣವಾಗಿ one year old rule ಎಂದು ಮಾತನಾಡತಕ್ಕ ಕಾಲದಲ್ಲಿ ಪ್ರಸ್ತಾವನೆ ಮಾಡುತ್ತಾರೆ. ಅಂದರೆ ಒಂದು ಮೊಕದ್ದಮೆಯನ್ನು ಇವೊತ್ತು ಹೂಡಿದರೆ, ಹೂಡಿದ ತಾರೀಖಿನ ಲಾಗಾಯ್ತು ಒಂದು ವರ್ಷದೊಳಗೆ ಅದನ್ನು ತಿರ್ಮಾನ ಮಾಡಬೇಕು, ಸಾಧ್ಯವಾದಷ್ಟು ತೀರ್ಮಾನ ಮಾಡಬೇಕು ಎಂದು ಕಡ್ಡಾಯ ಮಾಡಬೇಕು ಎಂದು ಇದೆ. ಆದರೆ ಈಚೀಚೆಗೆ ಅನೇಕ ಕೋರ್ಟುಗಳಲ್ಲಿ ತೀರ್ಮಾಮಾನವಾಗದೆ ಉಳಿಯುವ ಕೇಸುಗಳು ಬಹಳವಾಗಿವೆ. ಎಂದರೆ ಹೈಕೋರ್ಟಿನವರು ಕೊಟ್ಟಿರ ತಕ್ಕ ಸರ್ಕ್ಯುಲರನ್ನು ಅಕ್ಷರಶಃ ಪಾಲನೆ ಮಾಡುತ್ತಿಲ್ಲ, ಹಾಗೆ ಪಾಲನೆ ಮಾಡದೆ ಇರುವುದಕ್ಕೆ ಕಾರಣವೇನು ಎನ್ನುವುದನ್ನು ತಿಳಿದುಕೊಳ್ಳಬೇಕು ಎಂದಿದ್ದೇನೆ.

ಇದೂ ಅಲ್ಲದೆ ಕೋರ್ಟುಗಳು ಎಷ್ಟಿದ್ದರೂ ಕೂಡ ಕೇಸುಗಳ ಬಾಕಿ ಹೆಚ್ಚಾಗಿವೆ ಎಂದು ಗೊತ್ತಾಗಿದೆ. ಮುನ್ಸೀಫ್ ಕೋರ್ಟುಗಳಲ್ಲಿ, ಡಿಸ್ಟ್ರಿಕ್ಟ್ ಕೋರ್ಟು ಗಳಲ್ಲಿ ಮತ್ತು ಹೈ ಕೋರ್ಟುಗಳಲ್ಲಿ ಬಹಳವಾಗಿ ಕೇಸು ಗಳು ತೀರ್ಮಾನವಾಗದೆ ನಿಂತುಹೋಗಿವೆ ಎಂದು ಸಹ ತಿಳಿದು ಬಂದಿದೆ. ಇದಕ್ಕೆ ಏನು ಕಾರಣ, ಯಾತಕ್ಕೆ ಇಷ್ಟೊಂದು pendency ಇದೆ ಎನ್ನುವುದು ಒಂದು ವಿಷಯ.

ಮತ್ತೊಂದು, ಹೈಕೋರ್ಟಿನಲ್ಲಿ ಖಾಲಿ ಬಿದ್ದಿರತಕ್ಕ ಹೈಕೋರ್ಟ್ ಜಡ್ಜಿಗಳ ನೇಮಕದ ವಿಚಾರ.

4-P.M.

ಈ ಸಭೆಯಲ್ಲಿ ಈ ವಿಚಾರದಲ್ಲಿ ಪ್ರಶ್ನೋತ್ತರಗಳು ಸಹ ನಡೆದಿವೆ. ಆಗ ಮಾನ್ಯ ಮುಖ್ಯ ಮಂತ್ರಿಗಳು ಉತ್ತರವನ್ನು ಸಹ ಕೊಟ್ಟಿದ್ದಾರೆ. ಹೈಕೋರ್ಟಿನಲ್ಲಿ ಜಡ್ಜಿಗಳ ಸ್ಥಾನ ಇರುವುದು ಆರು, ಈಗ ನಾಲ್ಕು ಜನ ಮಾತ್ರ ಇದ್ದಾರೆ, ಇನ್ನೊಬ್ಬರ ನೇಮಕ ಅನೇಕ ದಿವಸಗಳಿಂದ ನಿಂತುಹೋಗಿದೆ ಎಂಬುದು ಒಂದು ವಿಷಯ. ಇದಕ್ಕೆ ಸರ್ಕಾರದವರೂ ಸಹ ಸಲಹೆ ಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದರು, ಆ ಸಲಹೆಯನ್ನು ಕೇಂದ್ರ ಸರ್ಕಾರದವರು ನಿರಾಕರಿಸಿ ಒಂದಲ್ಲ ಎರಡುಸಲ ಕಳುಹಿಸಿದ್ದಾರೆ ಎಂದು ಅಲ್ಲಲ್ಲಿ ಗುಸುಗುಸು ಎಂದು ಮಾತನಾಡುತ್ತಾರೆ. ನಮಗೆ ಆ ವಿಷಯ ಗೊತ್ತಿಲ್ಲ. ಸರ್ಕಾರದಿಂದ ಕಾರಣ ಸೂಚಿಸಲ್ಪಟ್ಟಿಲ್ಲ. ಕೇಂದ್ರದಿಂದ ತಿರಸ್ಕಾರಮಾಡಿ ಮೈಸೂರು ಸರ್ಕಾರಕ್ಕೆ ಕಳುಹಿಸಿದ ಹಾಗೆ ಅಲ್ಲಲ್ಲಿ ಹೇಳುತ್ತಿದ್ದಾರೆ. ಆದ್ದರಿಂದ ಏಕೆ ನಿಧಾನವಾಗಿದೆ, ಏನು ಕಾರಣದಿಂದ, ಒಂದು ನಿಯಮವಿಲ್ಲವೆ, ಶಿಪಾರ್ಸು ಮಾಡುವುದಕ್ಕೆ ಒಂದು ತತ್ವವಿಲ್ಲವೆ, ಅದರ ಪ್ರಕಾರ ಮಾಡುತ್ತಿದ್ದಾರೆಯೆ ಅಥವಾ ಸರ್ಕಾರಕ್ಕೆ ಬಹಳ ಆಪ್ತರಾಗಿರುವ ಒಬ್ಬ ವ್ಯಕ್ತಿಯಿದ್ದರೆ ಆ ವ್ಯಕ್ತಿ, ಉತ್ಸುಕತೆ ಮತ್ತು ಇನ್‌ಫ್ಲುಯೆನ್ಸ್ ಆಧಾರದ ಮೇಲೆ ಸೂಚನೆ ಮಾಡುತ್ತಾರೆಯೋ ಎಂದು ತಿಳಿದು ಕೊಳ್ಳಬೇಕಾಗಿದೆ. ಹಾಗೆ ಮಾಡಿದ್ದರೆ ಅದು ಬಹಳ ದೊಡ್ಡ ತಪ್ಪು ಎಂದು ಭಾವಿಸಬೇಕು.

ಮೂರನೆಯದು ಮಲ್ಲಪ್ಪ ಕಮಿಟಿ ಶಿಫಾರ್ಸು ವಿಚಾರ. ನಾನೂ ಸಹ ಪ್ರತಿ ತಾಲ್ಲೂಕಿನಲ್ಲೂ ಒಂದೊಂದು ಕೋರ್ಟನ್ನು ಸ್ಥಾಪನೆಮಾಡಿ ಎಂದು ವಾದ ಮಾಡುತ್ತಿದ್ದೆ, ಈಚೆಗೆ ಸ್ವಲ್ಪ ಬದಲಾಯಿಸಿ ಕೊಳ್ಳಬೇಕೆಂದು ಅನ್ನಿಸಿದೆ. ಎಷ್ಟೋ ತಾಲ್ಲೂಕು ಹೆಡ್‌ಕ್ವಾರ್ಟರುಗಳಲ್ಲಿ ಕೋರ್ಟುಗಳಿಗೆ ಕೆಲಸವೇ ಇರುವುದಿಲ್ಲ, ಮಧ್ಯಾಹ್ನ ಒಂದು ಗಂಟೆ ಹೊತ್ತಿಗೆ ಕೆಲಸ ಪೂರೈಸಿರುತ್ತದೆ. ಇದಲ್ಲದೆ ಅನುಭವದಿಂದ ಕೆಲವು ವಿಚಾರಗಳು ತಿಳಿದಿವೆ. ಸಮ್ಮರಿ ಡಿಸ್ಪೋ ಸಲ್ ಮಾಡಿ ಅನುಕೂಲ ಮಾಡಲೆಂದು ಚೆನೆನ್ನಿ ಕೋರ್ಟಿನಲ್ಲಿ ತಾಲ್ಲೂಕು ಅಮಲ್ದಾರರಿಗೆ ಅಧಿಕಾರ ಕೊಟ್ಟರು. ಇದಾದ ಮೇಲೆ ಪಟ್ಟಣಗಳಿಂದ ಲಾಯರು ಗಳನ್ನು ನೂರಾರು ರೂಪಾಯಿಗಳನ್ನು ಖರ್ಚುಮಾಡಿ ಚೆನೆನ್ನಿಕೋರ್ಟಿಗೆ ಇಂದು ಕರೆಸುತ್ತಿದ್ದಾರೆ. ಹೀಗೆ ತಾಲ್ಲೂಕು ಹೆಡ್‌ಕ್ವಾರ್ಟರುಗಳಲ್ಲಿ ಕೋರ್ಟನ್ನು ಸ್ಥಾಪನೆ ಮಾಡಿದ್ದರಿಂದ ಒರಿಜಿನಲ್ ಸೈಡ್‌ನಲ್ಲಿ ಬರುವ ಕೇಸುಗಳನ್ನು ಸಾಧಿಸುವುದಕ್ಕೆ ಈಗ ಹೆಚ್ಚಾಗಿ ಖರ್ಚಾಗುತ್ತಿದೆ. ನಿಷ್ಣಾತರು ಪಟ್ಟಣಗಳಲ್ಲಿರುತ್ತಾರೆ. ಅವರನ್ನು ತಾಲ್ಲೂಕುಗಳಿಗೆ ಕರೆಸುವುದರಿಂದ ಹೆಚ್ಚು ಖರ್ಚಾಗುತ್ತದೆ. ಆದ್ದರಿಂದ ಶ್ರೀ ತಿಮ್ಮಪ್ಪಗೌಡರು ಹೇಳಿದ ಹಾಗೆ ಪ್ರತಿಯೊಂದು ವ್ಯಾಜ್ಯವೂ ಇರುವ ಜಾಗದಲ್ಲೇ ಇರಲಿ ಎಂದು ಬದಲಾಯಿಸಬೇಕಾಗುತ್ತ ದೆಯೆ ಎಂದು ಅನುಮಾನ ಬರುತ್ತಿದೆ. ಆದರೆ ಕೆಲವು ಸಣ್ಣ ಸಣ್ಣ ಅಪರಾಧಗಳಿವೆ; ಗಾಡಿಗೆ ದೀಪವಿರಲಿಲ್ಲ ಎಂದು ಹೇಳುವುದು ಮುಂತಾದ ಸಣ್ಣ ತಪ್ಪು ಮಾಡಿ ದರೆ ಅದನ್ನು ವಿಮರ್ಶೆ ಮಾಡುವುದಕ್ಕೆ ತಾಲ್ಲೂಕು ಗಳಲ್ಲಿ ಅವಕಾಶವಿರಬೇಕು. ಅಂಥ ಸಂದರ್ಭದಲ್ಲೂ ಸಹ ಮೈಸೂರು ಸಿಟಿಗೆ ಬಂದು ಅಥವಾ ದೊಡ್ಡ ಪಟ್ಟಣಕ್ಕೆ ಬಂದು ನ್ಯಾಯಪಡೆಯಬೇಕೆಂದು ಹೇಳಿದರೆ ಬಹಳ ದುಬಾರಿ ಖರ್ಚಾಗುತ್ತದೆ. ಆಗ ತಾಲ್ಲೂಕು ಗಳಲ್ಲೇ ನ್ಯಾಯ ದೊರೆಯುವ ಹಾಗೆ ಅಥವಾ ತಾಲ್ಲೂಕುಗಳಲ್ಲೇ ಪರಿಶೀಲಿಸಿ ಶಿಕ್ಷೆಯಾಗುವ ಹಾಗೆ ಏರ್ಪಾಡು ಮಾಡಿದರೆ ಅನುಕೂಲವಾಗುತ್ತದೆಂಬುದು ನನ್ನ ಅಭಿಪ್ರಾಯ.

ಮಲ್ಲಪ್ಪ ಕಮಿಟಿ ಸಮಿತಿ ಶಿಪಾರ್ಸುಗಳಲ್ಲಿ ಸರ್ಕಾರ ದವರು ಜಾರಿಗೆ ತಂದಿರುವುದು ಎರಡು ವಿಷಯ. ಸರ್ಕಾರದವರು ನೇಮಕ ಮಾಡಿದ್ದ ಅನೇಕ ಸಮಿತಿ ಗಳಲ್ಲಿ ತೀರ್ಮಾನವಾಗಿರುವುದನ್ನು ಸರ್ಕಾರ ವಿಮರ್ಶೆ ಮಾಡಿ ತೀರ್ಮಾನ ಮಾಡಿರುವುದು ಎರಡು ಸಮಿತಿ ವಿಚಾರ. ಈ ನಾಲ್ಕು ವರ್ಷಗಳ ಅನುಭವದಲ್ಲಿ ಹತ್ತಾರು ಸಮಿತಿಗಳಾದರೂ ಅವುಗಳ ಶಿಫಾರ್ಸನ್ನು ಜಾರಿಗೆ ತಂದಿಲ್ಲ, ತಂದಿರುವುದು ಥ್ಯಾಕರ್ ಸಮಿತಿ ಶಿಪಾರ್ಸಿನಂತೆ ಹೈಡ್ರೋಎಲೆಕ್ಟ್ರಿಕ್ ಟ್ಯಾರಿಫ್‌ರೇಟ್ ರಿವೈಸ್ ಮಾಡುವುದು ಮತ್ತು ಡಿಸ್ಟ್ರಿಕ್ಟ್ ಜಡ್ಜಿಗಳಿಗೆ ಸಂಬಳ ಹೆಚ್ಚಿಸುವುದು. ಮಲ್ಲಪ್ಪ ಕಮಿಟಿ ಶಿಪಾರ್ಸಿ ನಂತೆ ಎರಡು ಶಿಫಾರ್ಸನ್ನು ಜಾರಿಗೆ ತಂದರು, ಡಿಸ್ಟ್ರಿಕ್ಟ್ ಜಡ್ಜಿಗಳ ಸಂಬಳ ಹೆಚ್ಚಿಸಿದರು, ಸಿವಿಲ್ ಜಡ್ಜಿಗಳನ್ನು ನೇಮಕ ಮಾಡಿದರು. ಬಾಕಿ ಇನ್ನಾ ವುದನ್ನೂ ಮಾಡಿಲ್ಲ. ನ್ಯಾಯಾಂಗ ಮತ್ತು ಕಾರ್ಯಾಂಗ ಬೇರ್ಪಾಡು ಮಾಡುವುದಕ್ಕೇನುಮಾಡ ಬೇಕೋ ಅದನ್ನು ಕಡ್ಡಾಯವಾಗಿ ಮಾಡಬೇಕು. ಆಡಳಿತ ದೃಷ್ಟಿಯಿಂದ ಟೆರಿಟೋರಿಯಲ್ ಜ್ಯೂರಿಸ್ ಡಿಕ್ಷನ್ ಅಗಿದ್ದರೂ ಅದರ ವಿಚಾರದಲ್ಲಿ ತೀರ್ಮಾನ ತೆಗೆದುಕೊಳ್ಳುವಾಗ ಸರಿಯಾಗಿ ಯೋಚನೆ ಮಾಡ ಲಿಲ್ಲ. ಬೇರ್ಪಡಿಸುವ ವಿಷಯ ಕೂಡಲೇ ಜಾರಿಗೆ ತರ ಬೇಕು, ನಿಧಾನ ಮಾಡಿದರೆ ದೇಶಕ್ಕೆ ಅಷ್ಟಾಗಿ ಅನು ಕೂಲವಾಗುವುದಿಲ್ಲ ಎಂಬುದು ನನ್ನ ದೃಷ್ಟಿ.

ಇನ್ನೊಂದು ವಿಷಯವಿದೆ. ಕೋರ್ಟಿಗೆ ಹೋದರೆ ಅಲ್ಲಿ ಕೇಸು ನಡೆಸುವುದಕ್ಕಿಂತ ಹೊರಗಡೆ ಬಿಸಿಲಲ್ಲಿ ಒಣ ಗುವುದು ಬಹಳ ಕಷ್ಟ. ಕುಡಿಯುವುದಕ್ಕೆ ನೀರಿಲ್ಲದೆ, ತಿನ್ನುವುದಕ್ಕೆ ಅಹಾರ ಸಿಕ್ಕದೆ ಬಿಸಿಲಲ್ಲಿ ನಿಂತು ಹಾಹಾಕಾರ ಪಡುವ ಕೆಲಸವಲ್ಲದೆ ಮತ್ತೆ ಬೇರೆ ಇಲ್ಲ. ಕೋರ್ಟುಗಳಲ್ಲಿ ದಾವಾ ಹಾಕುವುದೂ ಬೇಡ, ಬಿಸಿಲಲ್ಲಿ ನಿಂತಿರುವುದೂ ಬೇಡ ಎಂದು ಅನ್ನಿಸುತ್ತದೆ.

ವರವಮಾನ ಕೊಡುವವರಿಗೆ, ಸ್ಟ್ಯಾಂಪ್ ಕೊಡುವವರಿಗೆ ಅಥವಾ ಫೀಜು ಕೇಳುವವರಿಗೆ ನಿಂತುಕೊಳ್ಳುವುದಕ್ಕಾಗಲಿ ಅಥವಾ ಕುಳಿತುಕೊಳ್ಳುವುದಕ್ಕಾಗಲಿ ಜಾಗ ವಿರುವುದಿಲ್ಲ, ವರಾಂಡಗಳಲ್ಲಿ ಕಂಬ ಒರಗಿಕೊಂಡು ನಿಂತಿರಬೇಕು. ಅಲ್ಲಿ ಕೂತುಕೊಳ್ಳಲು ಜಾಗವಿರಬೇಕು, ನ್ಯಾಯ ಕೇಳುವವರಿಗೆ ಕೂತುಕೊಳ್ಳಲು ಅವಕಾಶ ಮಾಡಬೇಕು. ಎಲ್ಲಾ ಕೋರ್ಟುಗಳಲ್ಲೂ, ಪ್ರತಿಯೊಂದು ಜಿಲ್ಲೆಯಲ್ಲೂ ಎಲ್ಲಿ ಕೋರ್ಟುದೆಯೋ ಅಲ್ಲಿಗೆ ಲಿಟಿಗೆಂಟ್ಸ್ ಬಂದರೆ ಕುಳಿತುಕೊಳ್ಳುವುವಕ್ಕೆ, ಕುಡಿಯುವುದಕ್ಕೆ ನೀರು ದೊರೆಯುವುದಕ್ಕೆ ಸರ್ಕಾರ ಸೌಕರ್ಯ ಮಾಡಬೇಡವೆ ? ಇವನ್ನು ಕೂಡಲೆ ಮಾಡಬೇಕೆಂಬುದು ನನ್ನ ಅಭಿಪ್ರಾಯ.

*ಶ್ರೀ ಎಸ್. ಗೋಪಾಲಗೌಡ (ಸಾಗರ-ಹೊಸನಗರ).—ಸ್ವಾಮಿ, ನ್ಯಾಯಾಂಗಕ್ಕೆ ಸಂಬಂಧಪಟ್ಟಿರುವಂಥ ಈ ಡಿಮ್ಯಾಂಡ್ ಮಾನವಿಯನ್ನು ವಿರೋಧಿಸುತ್ತಾ ಒಂದೆರಡು ವಿಷಯಗಳನ್ನು ತಿಳಿಸುತ್ತೇನೆ. ಈಗಾಗಲೆ ಮಾತನಾಡಿರತಕ್ಕ ಶ್ರೀ ಲಿಂಗಾರೆಡ್ಡಿಯವರು ತಮ್ಮ ಅನುಭವದಲ್ಲಿ ಕಂಡುಬಂದಿರತಕ್ಕ ಲೋಪ ದೋಷಗಳನ್ನು ತಿಳಿಸಿದ್ದಾರೆ. ನಾನು ಮುಖ್ಯವಾಗಿ ಹೈಕೋರ್ಟಿನಲ್ಲಿ ಮತ್ತು ಇತರ ಕೋರ್ಟುಗಳಲ್ಲಿ ಕೇಸುಗಳನ್ನು ತಡವಾಗಿ ಬಗೆಹರಿಸುವ ವಿಷಯದಲ್ಲಿ ಸಭೆಯ ಗಮನವನ್ನು ಸೆಳೆಯುವುದಕ್ಕೆ ಆಸೆ ಪಡುತ್ತೇನೆ. ಮುಖ್ಯವಾಗಿ ರಿಟ್ ವಿಷಯ. ಎಷ್ಟು ರಿಟ್‌ಗಳು ಕಳೆದ ಮೂರು ವರ್ಷಗಳಿಂದ ಹೈಕೋರ್ಟಿಗೆ ಬಂದಿದ್ದವು, ಎಷ್ಟು ಬಗೆಹರಿಸಲ್ಪಟ್ಟವು ಮತ್ತು ಬೇರೆ ಅಪೀಲು ಇತ್ಯಾದಿ ಎಷ್ಟಿವೆ ಎಂದು ನಾನು ಒಂದು ಪ್ರಶ್ನೆ ಕೂಡ ಕಳುಹಿಸಿದ್ದೆ. ಶ್ರೀಮಾನ್ ಶ್ರೀನಿವಾಸಯ್ಯಂಗಾರ್‌ರವರು ಹೇಳಿದ ಹಾಗೆ ಮೊದಲು ಮೈಸೂರು ಸಂಸ್ಥಾನದಲ್ಲಿ 5 ಜನ ಹೈಕೋರ್ಟ್ ಜಡ್ಜಿಗಳಿರುತ್ತಿದ್ದರು, ಈಗ 4 ಜನ ಮಾತ್ರ ಇದ್ದಾರೆ, ಇನ್ನೂ 2 ಸ್ಥಾನಗಳು ಖಾಲಿ ಬಿದ್ದಿವೆ, ಅದನ್ನು ಭರ್ತಿ ಮಾಡದಿರುವುದು ಈ ರೀತಿ ಕೇಸುಗಳು ತಡವಾಗುವುದಕ್ಕೆ ಕಾರಣವಾಗಿದೆ ಎಂದು ಹೇಳಿದ್ದಾರೆ. ಅದು ನಿಜವಾಗಿಯೇ ಇದೆ.

ಇನ್ನೊಂದೇನೆಂದರೆ ಮೈಸೂರಿಗೆ ಈಗ ನ್ಯಾಯಾಂಗದ ವಿಷಯದಲ್ಲಿ ಬಳ್ಳಾರಿ ಮತ್ತು ಕೊಡಗು ಎರಡೂ ಸೇರಿರುವುದರಿಂದ ಜ್ಯೂರಿಸ್ ಡಿಕ್ಷನ್ ಹೆಚ್ಚಾಗಿದೆ ಮತ್ತು ಕೇಸುಗಳ ಸಂಖ್ಯೆ ಕೂಡ ಈಚೆಗೆ ಹೆಚ್ಚಾಗಿದೆ. ಆದ್ದರಿಂದ ಖಾಲಿ ಬಿದ್ದಿರುವ ಸ್ಥಾನಗಳನ್ನು ಭರ್ತಿ ಮಾಡುವುದು ಸರ್ಕಾರದ ಮೊದಲನೆಯ ಕರ್ತವ್ಯ.

ರಿಟ್ ವಿಚಾರದಲ್ಲಿ ಸ್ಥಾನಗಳನ್ನು ಭರ್ತಿ ಮಾಡದಿರುವುದರಿಂದ ತಡವಾಗಿದೆಯೆನ್ನುವ ಅಭಿಪ್ರಾಯವನ್ನು ಯಾರಾದರೂ ಹೇಳಿದರೆ ತಪ್ಪಾಗುವುದಿಲ್ಲ. ಏಕೆಂದರೆ ಸಾಮಾನ್ಯವಾಗಿ ಒಂದು ಮೂಲಭೂತವಾದ ಹಕ್ಕಿಗೆ ತೀವ್ರವಾದ ಧಕ್ಕೆ ಬಂದಾಗ ಹೈಕೋರ್ಟಿಗೆ ರಿಟ್ ಹಾಕುತ್ತೇವೆ. ಅಂಥ ಸಂದರ್ಭದಲ್ಲಿ ಹೈಕೋರ್ಟು ತಡಮಾಡಿದರೆ ಆ ರಿಟ್ ಯಾವ ನ್ಯಾಯವನ್ನೂ ದೊರಕಿಸಿಕೊಡಲಾರದು. ಉದಾಹರಣೆ ಹೇಳಬೇಕೆಂದರೆ ಹಿಂದೆ ವಿದ್ಯಾರ್ಥಿಗಳನ್ನು ಸೆಲೆಕ್ಟ್ ಮಾಡಿದಾಗ ಯಾರೋ ಒಬ್ಬರು ಸೀಟುಕೊಟ್ಟಿಲ್ಲ, ನನಗೆ ಅನ್ಯಾಯವಾಗಿದೆ ಎಂದು ರಿಟ್‌ಹಾಕಿದರು. ಅದನ್ನು ಕಳೆದ ತಿಂಗಳಲ್ಲಿ ಫೈಸಲು ಮಾಡಿದ್ದಾರೆಂದು ಪತ್ರಿಕೆಯಲ್ಲಿ ಹಾಕಿದ್ದಾರೆ. ಇದನ್ನು ಯೋಚನೆ ಮಾಡಬೇಕು. ಹೀಗಾದರೆ ಮೂಲಭೂತವಾದ ಹಕ್ಕಿಗೆ ಧಕ್ಕೆ ಬಂದ ಹಾಗಾಗುತ್ತದೆ. ರಿಟ್ ವರ್ಷಗಟ್ಟಲೆ ತೀರ್ಮಾನವಾಗದಿದ್ದರೆ ಎಷ್ಟುಮಟ್ಟಿನ ನ್ಯಾಯ ದೊರಕುತ್ತದೆಂದು ಕೇಳಬೇಕಾಗಿದೆ. ಹೀಗೆ ನ್ಯಾಯ ದೊರಕಿಸುವುದರಲ್ಲಿ ತಡವಾದರೆ ಶ್ರೀ ಲಿಂಗಾರೆಡ್ಡಿಯವರು ಹೇಳಿದಹಾಗೆ ನ್ಯಾಯ ದೊರಕಿಸಿಲ್ಲವೆಂದು ಹೇಳಬಹುದು. ಅಪೀಲುಗಳ ವಿಚಾರವೂ ಇಷ್ಟೆ. ಅವು ಬಹು ದಿವಸಗಳವರೆಗೆ ತಡವಾಗುವುದೂ ಉಂಟು. ಕೆಲವು ಸಂದರ್ಭಗಳಲ್ಲಿ ಸಂಬಂಧಪಟ್ಟವರು ತೀರಿಹೋದಮೇಲೆ ಕೇಸು ಫೈಸಲಾಗುವುದೂ ಉಂಟು. ಈ ರೀತಿಯಾದರೆ ನ್ಯಾಯ ದೊರೆಯುವುದಿಲ್ಲ. ನಮ್ಮ ದೇಶದಲ್ಲಿ ಮೂಲಭೂತವಾದ ಒಂದು ತೊಡಕಿದೆ. ಈಗ ಬ್ರಿಟನ್ನಲ್ಲಿ ಏನೊಂದು ಪದ್ಧತಿಯಿದೆಯೋ ಅದನ್ನು ನಾವು ಒಪ್ಪಿದ್ದೇವೆ, ಅಲ್ಲಿರುವಂತೆಯೇ ಕಾನೂನಿದೆ. ಅದರ ಜೊತೆಯಲ್ಲಿ ಇಂಗ್ಲೀಷ್ ಭಾಷೆಯನ್ನು ಒಪ್ಪಿಕೊಂಡಿದ್ದೇವೆ. ಈ ಭಾಷೆ ಬಹಳವಾಗಿ ತೊಡಕಿನದಾಗಿದೆಯೆಂದು ಈ ದಿವಸ ಆಲೋಚಿಸುತ್ತಿದ್ದೇವೆ. ಏಕೆಂದರೆ ಮುಖ್ಯವಾಗಿ ಜಡ್ಜಿಗಳಾಗಲಿ ಅಥವಾ ವಕೀಲರಾಗಲಿ ಎಲ್ಲರೂ ಕಾನೂನನ್ನು ಇಂಗ್ಲೀಷ್ ಭಾಷೆಯಲ್ಲೇ ಕಲಿತವರಾಗಿರಬೇಕು. ಮತ್ತು ಆ ಭಾಷೆಯನ್ನೇ ಈ ದಿವಸ ಮುಂದುವರಿಸುತ್ತಿದ್ದೇವೆ. ನಾನು ಸಾಮಾನ್ಯ ಮನುಷ್ಯನ ದೃಷ್ಟಿಯಿಂದ ಈ ಕಾನೂನನ್ನು ನೋಡಿದೆ. ನೋಡಿದಾಗ ಅನೇಕವೇಳೆ ಒಬ್ಬ ಮನುಷ್ಯ ಕೋರ್ಟಿನಲ್ಲಿ ಹಾಜರಿದ್ದರೂ ತನ್ನ ತಕ್ರೀರು ವಿಷಯದಲ್ಲಿ ಏನು ಚರ್ಚೆಯಾಯಿತು, ತನ್ನ ಪರವಾಗಿ ಹೇಳಿದರೇ ಅಥವಾ ವಿರೋಧವಾಗಿ ಹೇಳಿದರೇ ಎಂದು ತಿಳಿಯದೆ ಸುಮ್ಮನಿರುತ್ತಾನೆ. ಇದೊಂದು ದೊಡ್ಡ ಅಡಚಣೆಯೆಂದು ತಿಳಿದಿದ್ದೇನೆ. ಈ ಒಂದು ಅಡಚಣೆಯನ್ನು ಬಗೆಹರಿಸುವುದಕ್ಕೆ ತೀವ್ರವಾದ ಪ್ರಯತ್ನ ನಡೆಯಬೇಕು.

ಇನ್ನೊಂದು : ಕೋರ್ಟುಗಳಲ್ಲಿ ಸಾಮಾನ್ಯವಾಗಿ ಕೇಸ್ ಮುಂದೆ ಹಾಕುತ್ತಾರೆ. ಅನೇಕ ಸಂದರ್ಭಗಳಲ್ಲಿ ನೋಡಿರುವಹಾಗೆ ನ್ಯಾಯವಾದಿಗಳು ಈ ಹೊತ್ತು ಅಧ್ಯಕ್ಷರಾಗಿದ್ದಾರೆ. ವಕೀಲರ ಮತ್ತು ಮ್ಯಾಜಿಸ್ಟ್ರೇಟರ ಅನುಕೂಲಕ್ಕೆ ತಕ್ಕಹಾಗೆ ಕೇಸನ್ನು ಮುಂದಕ್ಕೆ ಅಡ್ಜರ್ನ್ ಮಾಡಿಕೊಂಡು ಹೋಗುತ್ತಾರೆ. ಇದರಿಂದ ರೈತರಿಗೆ, ಬಡವರಿಗೆ ಸಾಮಾನ್ಯವಾಗಿ ಇಂಥ ಮೊಕದ್ದಮೆಗಳಲ್ಲಿ ಸಿಕ್ಕಿದವರಿಗೆ ಹೆಚ್ಚಿನ ತೊಂದರೆ. ಮುಖ್ಯವಾಗಿ ಶೀಘ್ರವಾಗಿ ನ್ಯಾಯ ದೊರೆಯಬೇಕು, ಇದನ್ನು ದೊರಕಿಸಲು ಸರ್ಕಾರ ತೀವ್ರ ಕಾರ್ಯಕ್ರಮ ಕೈಗೊಳ್ಳಬೇಕು. ಮೊದಲಿನಿಂದ ಚರ್ಚೆ ಮಾಡುವಾಗ ನ್ಯಾಯಾಂಗ ಮತ್ತು ಕಾರ್ಯಾಂಗ ಬೇರ್ಪಡಿಸಬೇಕೆಂದು ಹೇಳುತ್ತಿದ್ದುದನ್ನು ಗಮನಿಸಿ ಮೈಸೂರು ಸರ್ಕಾರದವರು ಸದ್ಯದಲ್ಲೇ ಅದನ್ನು ಬೇರ್ಪಡಿಸುವರೆಂದು ಮುಖ್ಯಮಂತ್ರಿಗಳು ತಮ್ಮ ಭಾಷಣದಲ್ಲಿ ತಿಳಿಸಿದ್ದಾರೆ. ಈ ಕೆಲಸ ನಾಲ್ಕಾರು ವರ್ಷಗಳ ಹಿಂದೆಯೇ ಆಗಬೇಕಾಗಿತ್ತು. ಈಗ ಆಗುತ್ತಿರುವುದು ಒಂದು ಒಳ್ಳೆಯ ಸೂಚನೆ, ಈ ವಿಚಾರದಲ್ಲಿ ಹೆಚ್ಚು ತಡವಿಲ್ಲದೇನೆ ಕೆಲಸ ಮುಂದುವರೆಯಬೇಕು. ಯಾರನ್ನು ನೇಮಕಮಾಡಬೇಕೆಂಬ ಸಮಸ್ಯೆ ಸರ್ಕಾರದ ಮುಂದೆ ಬರಬಾರದು. ಇಂಥ ಸ್ಥಾನಕ್ಕೆ ಯಾರನ್ನು ಹಾಕಬೇಕೆಂಬ ಸಮಸ್ಯೆ ಮುಂದೆ ಬಂದು ವರ್ಷಗಟ್ಟಲೆ ಕೆಲವು ಸಂದರ್ಭಗಳಲ್ಲಿ ಹಣ ಬೇಕಾದ್ದನ್ನು ಒದಗಿಸದೆ ಸ್ಥಾನ ಭರ್ತಿಮಾಡದೆ ಮುಂದುವರೆದಿರುವುದುಂಟು. ಆದ್ದರಿಂದ ಧೈರ್ಯದಿಂದ ನಿಷ್ಪಕ್ಷಪಾತವಾಗಿ ಮೈಸೂರು ಸರ್ಕಾರ ಈ ಕೆಲಸವನ್ನು ಆದಷ್ಟು ಬೇಗ ಕಾರ್ಯಗತ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಟಿ. ಕೆಂಪರಾಜ್ (ಬೆಂಗಳೂರು ದಕ್ಷಿಣ- ಅನುಸೂಚಿತ ಜಾತಿಗಳು).—ಸ್ವಾಮಿ, ಈಗ ನ್ಯಾಯಾಂಗಕ್ಕೆ 28,05,600 ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಸರ್ಕಾರ ಈ ಡಿಮ್ಯಾಂಡನ್ನು ಸಭೆಯ ಮುಂದೆ

(ಶ್ರೀ ಬಿ. ಟಿ. ಕೆಂಪರಾಜ್)

ಇಟ್ಟಿದೆ. ಈಗ ಬೆಂಗಳೂರಿನಲ್ಲಿರತಕ್ಕ ಕೋರ್ಟುಗಳು ಎಲ್ಲೆಲ್ಲಿವೆಯೆಂದು ಯೋಚನೆ ಮಾಡುವುದಾದರೆ ಮ್ಯಾಜಿಸ್ಟ್ರೇಟ್ ಕೋರ್ಟು ಕಾರ್ಪೊರೇಷನ್ ಆಫೀಸಿನ ಹತ್ತಿರ ಇದೆ. ಆಮೇಲೆ ಸಿವಿಲ್ ಕೋರ್ಟುಗಳು ಡೆಪ್ಯುಟಿ ಕಮಿಷನರ ಆಫೀಸ್ ಪ್ರೆಮಿಸಸ್‌ನಲ್ಲಿವೆ.

ಆಮೇಲೆ ಇನ್ನೂ ಕೆಲವು ಕೋರ್ಟುಗಳು ಈ ಬೆಂಗಳೂರಿನ ನಾನಾ ಭಾಗಗಳಲ್ಲಿರುತ್ತವೆ. ಆ ಎಲ್ಲಾ ಕೋರ್ಟುಗಳಿಗೂ ಈ ವಾದಿ-ಪ್ರತಿವಾದಿಗಳ ಲಾಯರ್‌ಗಳು ಹೋಗಿ ಅವರವರ ಕೇಸುಗಳನ್ನು ನಡೆಸುವುದಕ್ಕೆ ಬಹಳ ಕಷ್ಟವಾಗಿದೆ. ಹೀಗೆ ಒಂದೊಂದು ಕೋರ್ಟು ಒಂದೊಂದುಕಡೆ ಇರುವುದರಿಂದ ಅನೇಕ ಕೇಸುಗಳಿಗೆ ಈ ಲಾಯರುಗಳು ಹೋಗುವುದಕ್ಕೆ ಸಾಧ್ಯವಾಗದೆ ಕಕ್ಷಿಗಾರರುಗಳಿಗೆ ಬಹಳ ತೊಂದರೆಯಾಗುತ್ತಿದೆ. ಈ ಹಿಂದೆ ಈ ವಿಚಾರವೆತ್ತಿದ ಕೂಡಲೇ ಸರ್ಕಾರದವರು ವಿಧಾನಸೌಧದ ಕಟ್ಟಡ ಪೂರೈಸಲಿ, ಆಗ ಈ ಅಠಾರ ಕಛೇರಿಯಲ್ಲಿರತಕ್ಕಂಥ ಆಫೀಸುಗಳೆಲ್ಲಾ ಆ ಹೊಸ ಬಿಲ್ಡಿಂಗಿಗೆ ಹೋಗುತ್ತವೆ, ಆಗ ಈ ಅಠಾರಾ ಕಛೇರಿ ಕಟ್ಟಡವನ್ನೆಲ್ಲಾ ನಾನಾ ಕೋರ್ಟುಗಳನ್ನು ಒಂದೇ ಕಡೆ ನಡೆಸಲು ಅನುಕೂಲವಾಗಿರುವಂತೆ ಮಾಡಲು ಬಿಟ್ಟುಕೊಡುವುದಾಗಿ ಹೇಳುತ್ತಲೇ ಬಂದರು. ಆದರೆ ಈ ಹಿಂದೆ ಆ ರೀತಿ ಕೊಟ್ಟಿದ್ದಂಥ ಭರವಸೆಗೆ ವಿರುದ್ಧವಾದ ಸಮಾಚಾರವನ್ನು ನಾನೀಗ ಕೇಳುತ್ತಿದ್ದೇನೆ. ಅದೇನೆಂದರೆ ಈಗ ಈ ಅಠಾರ ಕಛೇರಿ ಬಹಳ ವಿತರಣೆಯಿಂದ ಇಟ್ಟುಕೊಂಡು ಬರಲಾಗಿದೆ ಅಂಥ ಈ ಕಟ್ಟಡವನ್ನು ಈ ದಿವಸ ಈ ಕೋರ್ಟುಗಳಿಗೆ ಬಿಡಿಸಿಕೊಟ್ಟರೆ ಆಗ್ಗ ಈ ಕಟ್ಟಡವೆಲ್ಲಾ ಬಹಳ ಕೆಟ್ಟು ಹೋಗುತ್ತದೆ, ಆದ್ದರಿಂದ ಇಲ್ಲಿ ಕೋರ್ಟುಗಳಿಗೆ ಸ್ಥಳ ಕೊಡುವುದಿಲ್ಲವೆಂಬ ಸಮಾಚಾರ ಕೇಳುತ್ತಿದ್ದೇನೆ. ಈ ಸಂದರ್ಭದಲ್ಲಿ ನಾವೀಗ ಒಂದು ಅಂಶವನ್ನು ಆಲೋಚನೆ ಮಾಡಬೇಕಾಗಿದೆ. ಈ ದಿವಸ ಡೆಪ್ಯುಟಿ ಕಮಿಷನರ್ ಆಫೀಸಿನಲ್ಲಿ ನಡೆಸಲಾಗುತ್ತಿರುವ ಕೋರ್ಟುಗಳಲ್ಲಿ ಎಂದರೆ ಆ ಕೋರ್ಟು ಹಾಲಿನಲ್ಲಿ ಲಾಯರುಗಳಿಗೆ ಕುಳಿತು ಕೊಳ್ಳುವುದಕ್ಕೆ ಸ್ಥಳವಿಲ್ಲ. ಬರತಕ್ಕಂಥ ಪಾರ್ಟಿಗಳಿಗೆ ಅಲ್ಲಿ ನಿಲ್ಲುವುದಕ್ಕೆ ಅವಕಾಶವಿಲ್ಲ. ಆಡಳಿತದಲ್ಲಿ ಆದಾಯ ಹೆಚ್ಚಿದಂತೆಲ್ಲಾ ವೆಚ್ಚವೂ ಅಧಿಕವಾಗುತ್ತಿದೆ, ಆನಾಗ್ಯೂ ಲಾಯರ್‌ಗಳಿಗೆ ಮಾತ್ರ ಸರಿಯಾದ ಅನುಕೂಲಗಳನ್ನು ಕಲ್ಪಿಸುತ್ತಿಲ್ಲ. ಹೀಗೆ ಮಾಡುತ್ತಿರುವುದು ಲಾಯರುಗಳ ಸ್ಥಾನಕ್ಕೇ ಬಹಳ ಕುಂದುಕವನ್ನುಂಟು ಮಾಡಿದಂತಾಗಿದೆ. ಈ ದಿವಸ ಈ ಬೆಂಗಳೂರು ಒಂದರಲ್ಲೇ ಸುಮಾರು 500 ಜನ ಲಾಯರುಗಳಿರುತ್ತಾರೆ. ಇದರ ಜೊತೆಗೆ ಹೊರಗಡೆಯಿಂದಲೂ ಬಂದು ಇಲ್ಲಿ ಕೇಸುಗಳನ್ನು ನಡೆಸತಕ್ಕಂಥ ಲಾಯರುಗಳ ಸಂಖ್ಯೆ ಕೂಡ ಜಾಸ್ತಿಯಾಗಿದೆ. ಆದಕಾರಣ ಈ ದಿವಸ ಈ ಎಲ್ಲಾ ಕೋರ್ಟುಗಳೂ ಒಂದೇ ಕಡೆಯಲ್ಲಿ ನಡೆಯುವಂತೆ ಮಾಡಿದರೆ ಬಹಳ ಅನುಕೂಲವಾಗುತ್ತದೆ. ಈಗಾಗಲೇ ಶ್ರೀ ಗೋಪಾಲಗೌಡರು ಹೇಳಿದಹಾಗೆ ಲಾಯರುಗಳು ಒಂದೊಂದು ಕಡೆ ಒಂದೊಂದು ಕೋರ್ಟು ಇರುವುದರಿಂದ ಇವರು ಅನೇಕ ಕೋರ್ಟುಗಳಿಗೆ ಹೋಗಿ ಬರಬೇಕಾಗಿರುವುದರಿಂದ ಈ ಲಾಯರುಗಳೇನಾದರೂ ಸಕಾಲಕ್ಕೆಬಾರದೆ ಸ್ವಲ್ಪತಡವಾದರೆ ಆ ಕೋರ್ಟಿನ ನ್ಯಾಯಾಧೀಶರು ಅದೇ ಒಂದು ಕಾರಣದಮೇಲೆ ಆ ಕೇಸುಗಳನ್ನೇ ಮುಂದಕ್ಕೆ ಅಡ್‌ಜರ್ನ್‌ಮಾಡಿ ಬಿಡುತ್ತಿದ್ದಾರೆ. ಇದರಿಂದ ಲಿಟಿಗೆಂಟ್ಸ್‌ಗಳಿಗೆ ಬಹಳ ತೊಂದರೆ ಆಗುತ್ತಾ ಇದೆ. ಆದರೆ ನಾವು ಈ ದಿವಸ ಇಲ್ಲಿ ಕುಳಿತುಕೊಂಡು ಯಾರಿಗೆ ನ್ಯಾಯ ಬೇಗ ದೊರೆಯಬೇಕು, ಸುಲಭವಾಗಿ ಅದು ಅತನಿಗೆ ಲಭಿಸಬೇಕು ಎಂದು ಏನು ವಾದ ಮಾಡುತ್ತಿದ್ದೇವೋ ಅಂಥಾ ಮನುಷ್ಯನಿಗೇ ಈ ದಿವಸ ಆ ನ್ಯಾಯದ ಅನುಕೂಲತೆಗಳು ಸರಿಯಾಗಿ ದೊರೆಯದಂತಾಗಿದೆ. ಅತನಿಗೆ ಹೆಚ್ಚು ಅನಾನುಕೂಲವಾಗಿದೆ. ಈಗ ನಾನು ಹೇಳಿದಂಥ ತೊಂದರೆಗಳಿಂದ ಅತನಿಗೆ ನ್ಯಾಯ ಬೇಗ ದೊರೆಯುವಂತೆ ಮಾಡಲು ಅವಕಾಶವಿಲ್ಲ. ಅದಕ್ಕಾಗಿಯೇ ನಾನೀಗ ಈ ಎಲ್ಲ ಕೋರ್ಟುಗಳನ್ನೂ ಎಲ್ಲಿಯಾದರೂ ಅನುಕೂಲವಿರುವಂಥ ಸ್ಥಳದಲ್ಲಿ ಒಂದುಕಡೆ ಕೇಂದ್ರೀಕೃತ ಮಾಡಬೇಕೆಂದು ಹೇಳುತ್ತಿದ್ದೇನೆ.

ಇನ್ನು ಎರಡನೆಯದಾಗಿ ಈ ಎರಡನೇ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಒಬ್ಬ ಸ್ಟೆನೋಗ್ರಾಫರ್ ಇಲ್ಲ. ಇದರಿಂದ ಎಷ್ಟು ತೊಂದರೆಯುಂಟಾಗಿದೆ ಎನ್ನುವುದು ಲಾಯರುಗಳಿಗೇ ಗೊತ್ತು—ಆ ವಿಚಾರ ಆ ಕಕ್ಷಿಗಾರರಿಗೇ ಗೊತ್ತು. ಈ ಒಂದು ಕಾರಣದಿಂದ ಅನೇಕ ತಿಂಗಳುಗಳವರೆಗೆ ಅನೇಕ ಕೇಸುಗಳು ನಿಧಾನವಾಗುತ್ತಿವೆ. ಈಗ ಈ ಸ್ಟೆನೋಗ್ರಾಫರುಗಳು ಎಲ್ಲ ಕೋರ್ಟಿನಲ್ಲೂ ಇದ್ದಾರೆ. ಆದರೆ ಇವರು ಎರಡನೇ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಇಲ್ಲದೆ ಇರುವುದರಿಂದ ಬಹಳ ತೊಂದರೆಗಳುಂಟಾಗಿರುತ್ತವೆ. ಈ ದಿವಸ ಈ ತೊಂದರೆಗಳಿಗೆ ಸರಿಯಾಗಿ ಕೋರ್ಟಿನಲ್ಲಿ ಕೇಸುಗಳು ಬೇರೆ ದಿನದಿನಕ್ಕೂ ಜಾಸ್ತಿಯಾಗುತ್ತಿವೆ. ಮ್ಯಾಜಿಸ್ಟ್ರೇಟರೇ ಕುಳಿತುಕೊಂಡು ಈ ಎಲ್ಲ ಕೇಸುಗಳ ತೀರ್ಮಾನವನ್ನೂ ಬರೆಯಬೇಕೆಂದರೆ ಬಹಳ ಕಷ್ಟವಿದೆ. ಅವರು ಕೇಸುಗಳನ್ನೂ ವಿಚಾರಣೆಮಾಡಿ ತೀರ್ಮಾನಗಳನ್ನೂ ಅವರೇ ಬರೆಯಬೇಕೆಂದರೆ ಅವರಿಗೆ ತುಂಬ ಕಷ್ಟವಾಗುತ್ತದೆ. ಇದರಿಂದ ಬಹಳ ಕಾಲ ಹಿಡಿಯುತ್ತದೆ. ಈ ಕಾಲ ಪರಿಮಿತಿಯನ್ನು ಕಾಪಾಡಬೇಕಾಗಿದ್ದರೆ ಸ್ಟೆನೋಗ್ರಾಫರುಗಳು, ಅಗತ್ಯ ಬೇಕೇ ಬೇಕು. ಇವರುಗಳಿದ್ದರೆ ಕೇಸುಗಳ ತೀರ್ಮಾನದ ಬಗ್ಗೆ ಜಡ್ಜ್‌ಮೆಂಟ್ ಬರೆಯಲು ನ್ಯಾಯಧೀಶರಿಗೆ ತುಂಬ ಸಹಾಯವಾಗುತ್ತದೆ. ಆದ್ದರಿಂದ ಈ ಎರಡನೆಯ ನ್ಯಾಯಾಧೀಶರ ಕೋರ್ಟುಗಳಿಗೂ ಸ್ಟೆನೋಗ್ರಾಫರುಗಳನ್ನು ಕೂಡಲೇ ನೇಮಿಸುವಂತೆ ಮಾಡಬೇಕೆಂದು ನಾನು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

*ಶ್ರೀ ಎ. ಜಿ. ರಾಮಚಂದ್ರರಾವ್ (ನ್ಯಾಯಾಂಗ ಮತ್ತು ವಿದ್ಯಾ ಶಾಖೆಗಳ ಮಂತ್ರಿಗಳು).—ಸ್ವಾಮಿ, ಇಲ್ಲಿಯವರೆಗೂ ನಡೆದಿರತಕ್ಕಂಥ ಚರ್ಚೆಯಲ್ಲಿ ಒಂದು ಬಹಳ ಮುಖ್ಯವಾದಂಥ ವಿಚಾರ ಎಂದರೆ ಅದು ಶ್ರೀ ಮಲ್ಲಪ್ಪ ಸಮಿತಿಯವರ ವಿಚಾರ. ಆ ಶ್ರೀ ಮಲ್ಲಪ್ಪ ಸಮಿತಿಯವರ ಶಿಫಾರಸುಗಳಿಗೆ ಸರ್ಕಾರ ಎಷ್ಟರ ಮಟ್ಟಿಗೆ ಗಮನ ಕೊಡಬೇಕಾಗಿತ್ತೋ ಅಷ್ಟರ ಮಟ್ಟಿಗೆ ಗಮನ ಕೊಡಲಿಲ್ಲ, ಅಷ್ಟರ ಮಟ್ಟಿಗೆ ಅದನ್ನು ಕಾರ್ಯಗತ ಮಾಡಲಿಲ್ಲ ಎಂಬ ಅಂಶವನ್ನು ಮಾನ್ಯ ಸದಸ್ಯರು ಪ್ರಸ್ತಾಪಮಾಡಿದ್ದಾರೆ. ನಿಜ. ಈ ಬಗ್ಗೆ ಕೊಂಚ ಕಾಲವಿಳಂಬವಾಗಿದೆ ಎನ್ನುವುದನ್ನು ನಾನೂ ಸಹ ಒಪ್ಪಿಕೊಳ್ಳುತ್ತೇನೆ. ಆದರೆ ಆ ಸಲಹೆಗಳಲ್ಲಿ ಅನೇಕ ವಿಷಯಗಳಿಗೆ ಸರ್ಕಾರದವರು ಪೂರ್ಣ ಗಮನವನ್ನು ಕೊಟ್ಟಿದ್ದಾರೆ. ಅನೇಕ ವಿಷಯಗಳನ್ನು ಈಗಾಗಲೇ ಪರಿಶೀಲನೆಮಾಡಿದ್ದಾರೆ. ಮತ್ತೆ ಕೆಲವು ಪ್ರಾಮುಖ್ಯವಾದಂಥ ವಿಚಾರಗಳ ಬಗ್ಗೆ ಹೈಕೋರ್ಟಿನವರ ಸಲಹೆಗಳನ್ನೂ ಮತ್ತು ಅವರ ಅಭಿಪ್ರಾಯಗಳನ್ನೂ ಕೇಳಿ ತಿಳಿದುಕೊಳ್ಳಲಾಗಿದೆ. ಆದರೆ ಇದೇ ಸಂದರ್ಭದಲ್ಲಿ ಹಾಸನ ಮೈಸೂರುಗಳಲ್ಲಿ ಕೋರ್ಟುಗಳು ರೀ-ಆರ್ಗನೈಜ್ ಆಗತಕ್ಕ ವಿಚಾರದಲ್ಲಿ ಈಗಾಗಲೇ ಚರ್ಚೆ ನಡೆದು ಅದು ಫೈನಲಾಗುವಮಟ್ಟದಲ್ಲಿದೆ ಎಂದು ತಿಳಿಸಲಚ್ಛಿಸುತ್ತೇನೆ. ಇನ್ನೂ ನಾವು ಬಾಕಿ ಜಿಲ್ಲೆಗಳ

ವಿಚಾರಕ್ಕೆ ಬಂದಿಲ್ಲ. ಅಂತೂ ಎಲ್ಲಾ ಜಿಲ್ಲೆಗಳ ಕೋರ್ಟಿನ ಬಗ್ಗೆಯೂ ಆದಷ್ಟು ಜಾಗ್ರತೆ ಕಾರ್ಯಕ್ರಮವನ್ನು ಕೈಗೊಳ್ಳುತ್ತೇವೆ.

ನ್ಯಾಯಾಂಗವನ್ನು ಕಾರ್ಯಾಂಗದಿಂದ ಪ್ರತ್ಯೇಕ ಮಾಡುವ ತತ್ವವನ್ನು ನಾವು ಅಂಗೀಕಾರ ಮಾಡಿದ್ದೇವೆ. ಇದನ್ನು ಕಾರ್ಯರೂಪಕ್ಕೆ ತರಲು ಒಂದು ಹೊಸ ದರ್ಜೆಯ ಸಿವಿಲ್ ಜಡ್ಜುಗಳ ಸ್ಥಾನದ ಬಗ್ಗೆ ಸ್ವಲ್ಪ ಚರ್ಚೆ ಆಗಬೇಕಾಗಿತ್ತು. ಈಗ ಅದೂ ಸಹ ತೀರ್ಮಾನವಾಯಿತು. ಆ ಬಗ್ಗೆ ಅಗತ್ಯವಾದ ತಿದ್ದುಪಡಿಗಳನ್ನೂ ಕೂಡ ಕಾನೂನಿನಲ್ಲಿ ಅಡಕ ಮಾಡಲಾಗಿದೆ. ಈ ದಿವಸವೇ ಇದನ್ನು ಪ್ರತ್ಯೇಕ ಮಾಡುವುದಕ್ಕೂ ಕೂಡ ಅವಕಾಶವಿದೆ. ಇನ್ನು ಮುನಿಸಿಫ್ ಕೋರ್ಟುಗಳಲ್ಲಿ 1—2 ಸ್ಥಾನಗಳು ಖಾಲಿ ಬೀಳುವಂಥಾ ಪ್ರಸಂಗವಿತ್ತು. ಅವುಗಳನ್ನೂ ಸಹ ಭರ್ತಿ ಮಾಡುವುದಕ್ಕೆ ಸೂಕ್ತ ಅಮೆಂಡ್‌ಮೆಂಟುಗಳನ್ನು ಕಾನೂನಿನಲ್ಲಿ ಸೇರಿಸಲಾಗಿದೆ. ಆದ್ದರಿಂದ ಈ ವಿಚಾರವನ್ನು ವಿನಾಕಾರಣ ಸರ್ಕಾರಕ್ಕೆ ಮುಂದುವರಿಸಿಕೊಂಡು ಹೋಗಬೇಕೆಂಬ ಉದ್ದೇಶ ಖಂಡಿತ ಇಲ್ಲ. ಅನೇಕ ವರ್ಷಗಳಿಂದ ಏನೊಂದು ಈ ವಿಚಾರವಾಗಿ ನಾವೆಲ್ಲರೂ ಬಹಳವಾಗಿ ವಾದ ಮಾಡುತ್ತಿದ್ದೆವೋ ಅದು ಈಗ ಸಧ್ಯದಲ್ಲೇ ಕಾರ್ಯಗತವಾಗತಕ್ಕ ಮಟ್ಟಕ್ಕೆ ಮುಟ್ಟಿದೆ ಎಂಬ ಭರವಸೆಯನ್ನು ನಾನೀಗ ಈ ಮಾನ್ಯ ಸಭೆಗೆ ನೀಡಬಲ್ಲೆ.

ಕಡೂರು ಕೋರ್ಟಿನ ವಿಚಾರದಲ್ಲಿ ರಿಪೋರ್ಟು ಬಂದಿದೆ. ಈ ದಿವಸ ಅಲ್ಲೇ ಅಕ್ಕಪಕ್ಕಗಳಲ್ಲಿ ತರಿಕೆರೆ ಮತ್ತು ಚಿಕ್ಕಮಗಳೂರಿನಲ್ಲಿ ಕೋರ್ಟುಗಳಿರುತ್ತವೆ. ಆ ಕೋರ್ಟುಗಳಿಗೇ ಅಲ್ಲಿ ಸಾಕಷ್ಟು ಕೆಲಸಗಳಿಲ್ಲ. ಹೀಗೆ ಅಲ್ಲೇ ಸ್ಥಾಪನೆ ಮಾಡಿರುವ ಒಂದೆರಡು ಕೋರ್ಟುಗಳಿಗೇ ಕೆಲಸವಿಲ್ಲದಿರುವಾಗ ನಾವು ಈಗ ಪುನಃ ಅಲ್ಲೇ ಮತ್ತೊಂದು ಹೊಸ ಕೋರ್ಟನ್ನು ಸ್ಥಾಪನೆ ಮಾಡುವುದು ಸರಿಯಾದದ್ದೇ ಎಂಬುದನ್ನು ಮಾನ್ಯ ಸದಸ್ಯರುಗಳೇ ಆಲೋಚನೆ ಮಾಡಬೇಕಾಗಿದೆ.

ಕೋರ್ಟುಗಳ ಎಕ್ವಿಪ್‌ಮೆಂಟ್ ವಿಚಾರದಲ್ಲಿ ಚರ್ಚೆ ಮಾಡಲಾಯಿತು. ಕುರ್ಚಿ—ಮೇಜು ಇತ್ಯಾದಿ ಸಣ್ಣ ಪುಟ್ಟ ಸಾಮಾನುಗಳ ಬಗ್ಗೆ ಈಗಾಗಲೇ ನಾವು ಬಡ್ಜೆಟ್ಟನಲ್ಲಿ 80 ಸಾವಿರ ರೂಪಾಯಿಗಳನ್ನು ತೆಗೆದಿಟ್ಟಿದ್ದೇವೆ. ಆ ಹಣ ಇನ್ನೂ ಸಾಲದೆಂದು ಕಂಡು ಬಂದರೆ ಮತ್ತಷ್ಟು ಹಣವನ್ನು ಕೊಡುವುದಕ್ಕೆ ನಾವು ಸಿದ್ಧವಾಗಿದ್ದೇವೆ. ಇನ್ನು ಲಿಟಿಗೆಂಟ್ಸ್ ಪಬ್ಲಿಕ್ಕಿಗೆ ಸೌಕರ್ಯಗಳನ್ನು ಒದಗಿಸಬೇಕಾದ ಬಗ್ಗೆ ಪ್ರಸ್ತಾಪಮಾಡಿದ್ದಾರೆ. ಆದರೆ ಇದರಲ್ಲೊಂದು ತೊಂದರೆಯಿದೆ. ಈ ದಿವಸ ಕೆಲವು ಕಡೆ ಕೋರ್ಟುಗಳು ಸರ್ಕಾರಿ ಬಿಲ್ಡಿಂಗ್‌ನಲ್ಲಿವೆ. ಮತ್ತೆ ಕೆಲವು ಕಡೆಗಳಲ್ಲಿ ಬಾಡಿಗೆ ಕಟ್ಟಡಗಳಲ್ಲಿ ಕೋರ್ಟುಗಳನ್ನು ನಡೆಸಲಾಗುತ್ತಿದೆ. ಇಂಥ ಬಾಡಿಗೆ ಕಟ್ಟಡಗಳಲ್ಲಿ ಆ ಕೋರ್ಟುಗಳು ಎಷ್ಟು ಕಾಲದವರೆಗೆ ಕೆಲಸ ಮಾಡುತ್ತವೆಂಬುದನ್ನು ಖಚಿತವಾಗಿ ಹೇಳುವುದಕ್ಕಾಗುವುದಿಲ್ಲ. ಹೀಗಿರುವಾಗ ಸರ್ಕಾರದವರು ಆ ಬಾಡಿಗೆ ಕಟ್ಟಡಗಳ ಬಳಿ ಈ ರೀತಿ ಕೋರ್ಟುಗಳಿಗೆ ಬರತಕ್ಕ ಜನರಿಗೆ ಅನುಕೂಲಗಳನ್ನು ಕಲ್ಪಿಸಲು ಸರ್ಕಾರಿ ಕಟ್ಟಡಗಳನ್ನು ಕಟ್ಟಿಸುವುದಕ್ಕೆ ಸಾಧ್ಯವಿದೆಯೇ ಎಂಬುದು ತಾವೆಲ್ಲರೂ ಆಲೋಚನೆ ಮಾಡಬೇಕಾದಂಥ ವಿಚಾರ. ಈಗಾಗಲೇ ಇಂಥ 13 ಕಡೆಗಳಲ್ಲಿ ಅನುಕೂಲ ಕಲ್ಪಿಸಿಕೊಡಿ ಎಂದು ಕೇಳುತ್ತಿದ್ದಾರೆ. ನಾವು ಈಗ ಆರು ಕಡೆಗಳಲ್ಲಿ ವಿಟ್ನೆಸ್ ಷೆಡ್‌ಗಳನ್ನು ಹಾಕಿಸಲು ಆರ್ಡರ್ ಮಾಡಿದ್ದೇವೆ. ಆದರೆ ಆ ಜನಗಳಿಗೆ ಈ ಪರಿಹಾರಗಳೆಲ್ಲಾ ದೊರೆಯಬೇಕಾಗಿದ್ದರೆ ಸ್ವಲ್ಪ ಕಾಲ ಬೇಕು. ಎಲ್ಲಾ ಕಡೆಗಳಲ್ಲೂ ಏಕ ಕಾಲಕ್ಕೇ ಈ ಅನುಕೂಲಗಳನ್ನು ಕಲ್ಪಿಸಬೇಕೆಂದರೆ ಬಹಳ ಕಷ್ಟವಿದೆ.

ಇನ್ನು ಕಾಪಿಯಿಸ್ಟ್‌ಗಳ ಸಂಬಳದ ಬಗ್ಗೆ ಚರ್ಚೆ ನಡೆದಿದೆ. ಈ ದಿವಸ ಅವರಿಗೆ ಕೆಲವು ಭಾಗ ಸಂಬಳದ ರೂಪವಾಗಿಯೂ ಕೆಲವು ಭಾಗ ಕಮಿಷನ್ ಮೂಲಕವಾಗಿಯೂ ಕೊಡಲಾಗುತ್ತಿದೆ. ಮೊದಲೆಲ್ಲ ಇವರು ಆ ಕಮಿಷನ್ ಒಂದರ ಮೇಲೇ ಕೆಲಸಮಾಡಿಕೊಂಡು ಬರುತ್ತಿದ್ದರು. ಆದರೆ 1949ರಿಂದೀಚೆಗೆ ಈ ಎರಡು ರೀತಿಯಲ್ಲಿ ಅವರಿಗೆ ಈಗ ಸಂಭಾವನೆ ದೊರೆಯುತ್ತಿದೆ. ಮೊದಲು ಇವರು ಕಮಿಷನ್ ತೆಗೆದುಕೊಂಡು ಕೆಲಸ ಮಾಡುತ್ತಿದ್ದಾಗ ಚೆನ್ನಾಗಿ ಸಂಪಾದನೆ ಮಾಡುತ್ತಿದ್ದರು. ಈಚೆಗೆ ಸಂಬಳ ಗೊತ್ತು ಮಾಡಿದ ಮೇಲೆ ಇವರಲ್ಲಿ ಸೋಮಾರಿತನ ಜಾಸ್ತಿಯಾಗಿದೆ. ಅಷ್ಟೇ ಶಿವಾಯಿ ಇವರಿಗೆ ಸಂಬಳ ಕಮ್ಮಿ ಎನ್ನುವುದಕ್ಕೆ ಆಸ್ಪದವೇ ಇಲ್ಲ. ಆದ್ದರಿಂದ ಇವರಿಗೆ ಕೆಲವು ಭಾಗ ಸಂಬಳದ ರೂಪದಲ್ಲಿ—ಕೆಲವು ಭಾಗ ಕಮಿಷನ್ ರೂಪದಲ್ಲಿ ಕೊಡುವುದನ್ನೇ ಮುಂದುವರಿಸಿದರೆ ಅನುಕೂಲವಾಗಿರುತ್ತದೆಂದು ತಿಳಿದು ಬಂದಿದೆ. ಈ ವಿಚಾರದಲ್ಲಿ ನಾವೀಗ ಹೈಕೋರ್ಟಿನವರ ಅಭಿಪ್ರಾಯವನ್ನು ಕೇಳಿದ್ದೇವೆ. ಅವರ ಅಭಿಪ್ರಾಯವನ್ನು ತಿಳಿದುಕೊಂಡ ನಂತರ ಇದನ್ನು ಒಂದು ಅನುಕೂಲ ವಾದ ರೀತಿಯಲ್ಲಿ ತೀರ್ಮಾನ ಮಾಡಬಹುದು.

Sri M. LINGANNA (Nanjangud).—On a point of information. Now so far as the Copyists are concerned, in view of the changed Criminal Procedure Code, I believe most of the copies are given to the parties concerned, including the statement of witnesses and also charge-sheets, but there is no necessity to copy out the charge-sheets or the statements made before the Police. In view of the changed position, how would the Government react to these Copyists?

Sri A. G. RAMACHANDRA RAO.—I do not quite catch the point made by the Hon'ble Member.

Mr. CHAIRMAN (SRI K. PATTABHIRAMAN).—Under the amended Criminal Procedure Code, the Police are expected to supply copies to the accused even before the trial starts. To that extent, the necessity of the Copying staff being enlisted to make the copies will be minimised.

Sri A. G. RAMACHANDRA RAO.—That is the least part of the work of the Copyists. Much work has to be done by the Copyists. Compared to that, the supply of copies of charge-sheets is a very small item. Therefore, it does not materially alter the situation.

(SRI A. G. RAMACHANDRA RAO.)

Regarding the vacancy in the High Court, a statement was made that there was provision for six Judges. The maximum fixed for the High Court is six, but both the High Court and the Mysore Government have accepted that it would be five and on the basis of adequacy of five Judges, the work is going on. Of the five, there is one vacancy. It is true the Government are trying their best, as has been explained on previous occasions, to fill up the vacancy and I hope it will be done very early. There are no vacancies in the Munsiffs' cadre or in the Subordinate Judges' cadre. There is one vacancy in the District Judges' cadre.

ಈ ಒಂದೇ ಕಾರಣದಿಂದಲೇ ಕೇಸುಗಳು ಡಿಲೇ ಆಗುತ್ತವೆಯೆಂದು ಹೇಳುವುದು ಸರಿಯಲ್ಲ. ಜಡ್ಜಿಗಳನ್ನು ನೇಮಕ ಮಾಡದಿರುವುದರಿಂದಲೇ ಕೇಸುಗಳ ತೀರ್ಮಾನ ನಿಧಾನವಾಗುತ್ತಿಲ್ಲ. ಈ ನಿಧಾನಕ್ಕೆ ಕಾರಣ ತ್ರಿಗುಣಾತ್ಮಕವಾಗಿದೆ. ಒಂದು ಕಡೆ ಕಕ್ಷಿಗಾರರು ಸಕಾಲಕ್ಕೆ ಸರಿಯಾಗಿ ತಮ್ಮ ತಮ್ಮ ಕಡೆಯ ಸಾಕ್ಷಿಗಾರರನ್ನು ಕರೆತರದಿರುವುದೂ ಕೇಸುಗಳ ಡಿಲೆಗೆ ಒಂದು ಮುಖ್ಯ ಕಾರಣವಾಗಿದೆ. ಇನ್ನು ಎರಡನೆಯದಾಗಿ ಜಡ್ಜಿಗಳಿಲ್ಲದಿರುವುದೂ ಸಹ ಒಂದು ಕಾರಣ. ಮೂರನೆಯದಾಗಿ ಲಾಯರ್‌ಗಳು ಸರಿಯಾಗಿ ಕೇಸುಗಳಿಗೆ ಹಾಜರಾಗದೆ ಇರುವುದು. ಹೀಗೆ ಈ ಮೂರು ಕಾರಣಗಳಿಂದಲೂ ಕೇಸುಗಳ ತೀರ್ಮಾನ ನಿಧಾನವಾಗುತ್ತಿದೆ. ಈಗಾಗಲೇ ಈ ಸಂಬಂಧವಾಗಿ ಸ್ಟ್ರಿಕ್ಟ್ ಸರ್‌ಕ್ಯುಲರ್‌ಗಳನ್ನು ಎಲ್ಲರಿಗೂ ಕಳುಹಿಸಿದ್ದೇವೆ. ಈಗ ನಮ್ಮ ಪಾರ್ಲಿಯಮೆಂಟಿನ ಮುಂದೆ ಈ ಸಿವಿಲ್ ಮತ್ತು ಕ್ರಿಮಿನಲ್ ಕೋರ್ಟುಗಳ ಹೊಂದಾವಣಿಕೆಯ ಬಗ್ಗೆ ಒಂದು ಅಮೆಂಡ್‌ಮೆಂಟ್ ಕೊಡತಂದು ಅದನ್ನು ಸರಿಪಡಿಸಬೇಕೆಂಬುದು ಆಲೋಚನೆಯಲ್ಲಿದೆ. ಅದು ಆದ ಬಳಿಕ ಈ ಕೋರ್ಟುಗಳ ಕಾರ್ಯಕ್ರಮಗಳೆಲ್ಲಾ ಸರಿಹೋಗಬಹುದೆಂದು ಕಾಣುತ್ತದೆ. ಆದ ಪ್ರಯುಕ್ತ ಈಗ ತಾವುಗಳೆಲ್ಲರೂ ಈ ಡಿಮ್ಯಾಂಡ್ ಮನವಿಯಲ್ಲಿ ಕೇಳಿಕೊಂಡಿರುವ ಮೊಬಲಗಿಗೆ ತಮ್ಮ ಅಂಗೀಕಾರವನ್ನು ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. CHAIRMAN.—The question is :

"That a sum not exceeding Rs. 28,05,600 be granted to the Government to defray the charges which will come in course of payment during the year ending 31st day of March 1957, in respect of 'Administration of Justice'."

The motion was adopted.

4-30 P.M.

DEMAND NO. 15.—JAILS.

28. JAILS AND CONVICT SETTLEMENTS.

Mr. CHAIRMAN.—Motion moved :

"That a sum not exceeding Rs. 15,77,000 be granted to the Government to defray the charges which will come in course of payment during the year ending 31st day of March 1957, in respect of 'Jails and Convict Settlements'."

*ಶ್ರೀ ಎಸ್. ಶ್ರೀನಿವಾಸಯ್ಯಂಗಾರ್ (ಟಿ-ನರಸೀಪುರ).—ಸ್ವಾಮಿ, ಈ ಬಂದೀಖಾನೆಗಳಲ್ಲಿ ಕೈಗಾರಿಕೆಯನ್ನು ಸ್ಥಾಪಿಸಬೇಕು. ತನ್ಮೂಲಕ ಶಿಕ್ಷೆಗೆ ಒಳಗಾದಂಥಾ ಬಂದಿಗಳಿಗೆ ಕಸಬನ್ನು ಕಲಿಸಿಕೊಟ್ಟ ಹಾಗಾಗುತ್ತದೆ. ಅವರು ಬಂದೀಖಾನೆಗೆ ಬಂದು, ಬಿಡುಗಡೆ ಆದ ತಕ್ಷಣ ಸಮಾಜದಲ್ಲಿ ನ್ಯಾಯವಾದ ಜೀವನವನ್ನು ಮಾಡುವುದಕ್ಕೆ ಅನುಕೂಲವಾಗುತ್ತದೆ ಎಂಬ ದೃಷ್ಟಿಯೂ ಒಂದು. ಈಗ ಬೆಂಗಳೂರಿನಲ್ಲಿರುವ ಸೆಂಟ್ರಲ್ ಜೈಲಿನಲ್ಲಿ ಡ್ರುಗೆಟ್ಸ್ ತಯಾರು ಮಾಡುತ್ತಾರೆ ಮತ್ತು ಇನ್ನು ಅನೇಕ ವಿಧವಾದ ಬಟ್ಟೆಗಳನ್ನು ತಯಾರು ಮಾಡುತ್ತಾರೆ. ನಮ್ಮ ದೇಶದಲ್ಲಿ ಮತ್ತು ಹೊರಗಡೆಯೂ ಸಹ ಈ ಡ್ರುಗೆಟ್ಸ್‌ಗೆ ಬಹಳ ಗಿರಾಕಿ ಇದೆ, ರಫ್ತು ಕೂಡ ಮಾಡುತ್ತೇವೆ. ಆದ್ದರಿಂದ ಏಕೆ ನಾವು ಇದನ್ನು ಇನ್ನು ಹೆಚ್ಚಿಸಿಕೊಳ್ಳಬಾರದು ? ಮೈಸೂರಿನಲ್ಲಿರತಕ್ಕ ಬಂದೀಖಾನೆ, ಬೆಂಗಳೂರಿನಲ್ಲಿರತಕ್ಕ ಬಂದೀಖಾನೆ, ಬಳ್ಳಾರಿಯಲ್ಲಿರತಕ್ಕ ಬಂದೀಖಾನೆ ಇವುಗಳಲ್ಲಿ ಅವಕ್ಕೆ ಯಾವ ಯಾವ ಯಂತ್ರ ಸಾಮಗ್ರಿಗಳು ಬೇಕೋ ಅವನ್ನು ಒದಗಿಸಿಕೊಟ್ಟು, ಅಲ್ಲಿರತಕ್ಕವರೆಲ್ಲರಿಗೂ ಅಭ್ಯಾಸ ಮಾಡಿಸಿ ಹೆಚ್ಚು ಪದಾರ್ಥಗಳನ್ನು ತಯಾರು ಮಾಡಿ ತನ್ಮೂಲಕ ಅವರಿಗೆ ಕಸಬನ್ನು ಕಲಿಸಬಹುದು. ಎರಡನೆಯದು ಬಂದೀಖಾನೆಗಳಿಗೆ ಆಗತಕ್ಕ ಖರ್ಚು ಕೂಡ ಕಡಿಮೆ ಮಾಡಿದಹಾಗಾಗುತ್ತದೆ ಎಂದು ನನ್ನ ಭಾವನೆ. ಈಗ ಈ ಬಡ್ಜೆಟ್ ಅಂದಾಜಿನ ಪ್ರಕಾರ ಬಂದೀಖಾನೆಯಲ್ಲಿರತಕ್ಕ ಬಂದಿಗಳಿಗೆ ಆಹಾರಕ್ಕಾಗಿ 7 ಲಕ್ಷ ರೂಪಾಯಿ ಖರ್ಚಾಗುತ್ತಾ ಇದೆ. ಎರಡು ಹೊತ್ತು ಕೊಡತಕ್ಕ ಊಟಕ್ಕೆ, ಅದು ಸ್ವಲ್ಪವೇ ಆದರೂ ಕೂಡ, 7 ಲಕ್ಷ ರೂಪಾಯಿ ಖರ್ಚಾಗುತ್ತಾ ಇದೆ. ಆದ್ದರಿಂದ ಅವರಿಗೆ ಆದಷ್ಟು ಕಸಬನ್ನು ಕಲಿಸಿ, ತಯಾರಾದ ಪದಾರ್ಥಗಳನ್ನು ಮಾರಾಟ ಮಾಡಿದ್ದೇ ಆದರೆ ಆ ಮೂಲಕ ಆರ್ಥಿಕಸ್ಥಿತಿ ಉತ್ತಮವಾಗುತ್ತದೆ ಎಂಬ ದೃಷ್ಟಿಯಿಂದ ಯೋಚನೆ ಮಾಡುತ್ತಾ ಇದ್ದೇನೆ. ಈಗ ಅಲ್ಲಿ ತಯಾರಾಗತಕ್ಕ ಪದಾರ್ಥಕ್ಕೆ ಸರಿಯಾದ ಪ್ರಚಾರ ಇಲ್ಲ. ಜೈಲುಗಳಲ್ಲಿ ಏನು ತಯಾರಾಗುತ್ತಿದೆ ಎಂಬುದಕ್ಕೆ ಪ್ರಚಾರ ಕಡಿಮೆ. ಈ ಪ್ರಚಾರದ ಜೊತೆಗೆ ತಯಾರಾದ ಪದಾರ್ಥಗಳನ್ನು ಎಕ್ಸಿಬಿಷನ್‌ನಲ್ಲಿ ಇಟ್ಟದ್ದೇ ಆದರೆ ಹೆಚ್ಚು ಪ್ರಚಾರವಾಗುತ್ತದೆ.

ಶ್ರೀ ಎ. ಜಿ. ರಾಮಚಂದ್ರರಾವ್.—ಈಗಲೂ ಇಡುತ್ತಾ ಇದ್ದಾರೆ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಬಹಳ ಕಡಿಮೆ ಮಟ್ಟದಲ್ಲಿ ಆಗುತ್ತದೆ, ಇನ್ನೂ ಹೆಚ್ಚಾಗಿ ಮಾಡಬೇಕು. ಬಂದೀಖಾನೆಯಲ್ಲಿ ಶಿಕ್ಷೆ ಅನುಭವಿಸಿ

ಬಿಡುಗಡೆಯಾಗಿ ಬಂದನಂತರ ಅವನನ್ನು ದೂರ ತಳ್ಳುವುದಕ್ಕಾಗುವುದಿಲ್ಲ. ಅವನು ಸಮಾಜದಲ್ಲಿ ಇರಬೇಕು. ಸಮಾಜದಲ್ಲಿ ಇರಬೇಕಾದರೆ ನ್ಯಾಯವಾದ ರೀತಿಯಲ್ಲಿ ಜೀವನ ಸಾಗಿಸುವುದಕ್ಕೆ ಸಹಾಯಕವಾದ ಕಸಬನ್ನು ಕಲಿಸಿಕೊಡಬೇಕು. ವಿಧಾನಸೌಧದಲ್ಲಿ ಅವರಿಂದ ಕೆಲಸವಾಡಿಸುತ್ತಿದ್ದೀರಿ. ಅವರಿಗೆ ಎಷ್ಟು ಹಣ ಕೂಲಿ ರೂಪದಲ್ಲಿ ಪಾವತಿ ಮಾಡುತ್ತಿದ್ದೀರಿ, ಎಷ್ಟು ಹಣ ಅವರ ಲೆಕ್ಕದಲ್ಲಿದೆ ಎಂಬುದು ಗೊತ್ತಿಲ್ಲ. ಹೋದ ವರ್ಷ ಒಂದು ಪ್ರಶ್ನೆ ಕೇಳಿದಾಗ ಪೀಸ್‌ವರ್ಕ್ ಸಿಸ್ಟಂ ಪ್ರಕಾರ ಏನು ಕೆಲಸ ಮಾಡುತ್ತಾನೋ ಅದಕ್ಕೆ ತಕ್ಕಷ್ಟು ಕೂಲಿ ಕೊಡುತ್ತೇವೆ, ಅದನ್ನು ಅವನ ಲೆಕ್ಕದಲ್ಲಿ ಇಟ್ಟು ಬಿಡುಗಡೆ ಆದ ನಂತರ ಅವನಿಗೆ ಕೊಡುತ್ತೇವೆ ಎಂದು ಹೇಳಿದರು. ಆ ವಿಷಯದಲ್ಲಿ ಸರ್ಕಾರದವರು ಹೆಚ್ಚು ಗಮನ ಕೊಡಬೇಕೆಂಬ ದೃಷ್ಟಿಯಿಂದ ಈ ಕತ್ತರಿ ನಿರ್ಣಯವನ್ನು ಸೂಚಿಸುತ್ತೇನೆ.

ಶ್ರೀ ಪಿ. ಆರ್. ರಾಮಯ್ಯ (ಬಸವನಗುಡಿ).—ಸ್ವಾಮಿ, ಚಿಕ್ಕ ವಯಸ್ಸಿನ ಅಪರಾಧಿಗಳ ವಿಚಾರವನ್ನು ಚರ್ಚೆಮಾಡಬೇಕೆಂದು ಒಂದು ಖೋತಾ ನಿರ್ಣಯವನ್ನು ತಂದಿದ್ದೇನೆ. ಈ ಚಿಕ್ಕ ವಯಸ್ಸಿನ ಅಪರಾಧಿಗಳ ವಿಷಯದಲ್ಲಿ ಅನೇಕ ಹೊಸ ಗ್ರಂಥಗಳು ಬಂದಿವೆ. ಈ ಅಪರಾಧ ಮಾಡತಕ್ಕದ್ದು ಚಿಕ್ಕತನದ ಮನೋವೃತ್ತಿ ಒಂದೇ ಅಲ್ಲ, ಅವನು ಯಾವ ಸಮೂಹದಲ್ಲಿ ಬೆಳೆಯುತ್ತಾನೆ ಮತ್ತು ಅವನು ಹುಟ್ಟಿದಾಗಿನಿಂದ ಯಾವ ಪರಿಸ್ಥಿತಿಯಲ್ಲಿ ಇದ್ದಾನೆ ಎಂಬುದರ ಮೇಲೆ ಅವನಲ್ಲಿ ತಪ್ಪುಮಾಡತಕ್ಕ ಗುಣ, ಅಪರಾಧ ಮಾಡತಕ್ಕ ಬುದ್ಧಿ ಅವಲಂಬಿಸಿರುತ್ತದೆ ಎಂದು ಈ ವಿಷಯದಲ್ಲಿ ಆಲೋಚನೆ ಮಾಡಿರತಕ್ಕವರು ವೈಜ್ಞಾನಿಕವಾಗಿ ಪರಿಶೋಧನೆ ಮಾಡಿ ಹೇಳಿದ್ದಾರೆ. ಈ ವಿಷಯದಲ್ಲಿ ನಾವು ಈಗಿನ ಆಧುನಿಕ ನಾಗರಿಕತೆಯ ಕಾಲಕ್ಕನುಗುಣವಾಗಿ ನಡೆದುಕೊಳ್ಳಬೇಕಾಗಿದೆ. ನಮ್ಮ ಹಿಂದೂ ಶಾಸ್ತ್ರವನ್ನು ಮತ್ತು ಸಂಪ್ರದಾಯವನ್ನು ತೆಗೆದುಕೊಂಡರೆ ಈ ಸಭೆಯಲ್ಲಿ ಅನೇಕರಿಗೆ ಗೊತ್ತಿರುವಂತೆ ಸಾಮಾನ್ಯವಾಗಿ 5 ವರ್ಷಗಳವರೆಗೂ ಯಾವ ಮಗುವೇ ಆಗಲಿ ಯಾವ ಅಪರಾಧವನ್ನೇ ಮಾಡಲಿ ಅದು ದೋಷವಲ್ಲ ಎಂದು ಹೇಳತಕ್ಕ ಸಂಪ್ರದಾಯವಿದೆ, ಆ ರೀತಿ ಹೇಳುತ್ತಾರೆ. ಎಂದರೆ ಆ innocence ಇರುವುದು 5 ವರ್ಷದವರೆಗೂ ಇರುತ್ತದೆ ಎಂದು ಹೇಳಿ ಈ ಒಂದು ರೀತಿಯಾದ ಸಂಪ್ರದಾಯ ಶಾಸ್ತ್ರವಾಗಿ ಬೆಳೆದುಕೊಂಡು ಬಂದಿದೆ. ಅದನ್ನೇ ಇನ್ನು ಸ್ವಲ್ಪ ಹೆಚ್ಚು ವಯಸ್ಸಿನವರಿಗೂ ಬೆಳೆಸಿಕೊಂಡು ಬರಬಹುದು. ಸಾಮಾನ್ಯವಾಗಿ 15-16 ವರ್ಷದವರೆಗೂ ಕೂಡ ಕೆಲವು ಮಕ್ಕಳನ್ನು ಹತೋಟಿಗೆ ತರುವುದು ಕಷ್ಟ. ಸ್ಕೂಲಿನಲ್ಲಿ ಅವರನ್ನು ಹತೋಟಿಗೆ ತರುವುದಕ್ಕೆ ಆಗುವುದಿಲ್ಲ. ಮನೆಯಲ್ಲಿ ಹತೋಟಿಗೆ ತರುವುದಕ್ಕೆ ಆಗುವುದಿಲ್ಲ. ಇದು ಅವರಲ್ಲಿ ಸರ್ವೇಸಾಧಾರಣವಾಗಿ ಹುಟ್ಟುಗುಣವಾಗಿ ಬಂದಿರುತ್ತದೆ. ಕೆಟ್ಟ ಉದ್ದೇಶ ಇಲ್ಲದೆ, ಮಗುವು ಯಾವ ರೀತಿ ಹಾಲು ಕುಡಿಯುತ್ತದೆಯೋ ಅದೇ ರೀತಿ ಗಲಭೆ ಮಾಡುವುದೂ ಕೂಡ ಅವರಲ್ಲಿ ಹುಟ್ಟುಗುಣವಾಗಿ ಬಂದಿರುತ್ತದೆ. ಆದ್ದರಿಂದ ಆ ವಿಷಯದಲ್ಲಿ ಶಿಕ್ಷಣ ಯಾವ ರೀತಿಯಾಗಿ ನಡೆಯಬೇಕು ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಚಿಕ್ಕಮಕ್ಕಳು ಅಪರಾಧಗಳನ್ನು ಮಾಡುವುದಕ್ಕೆ ಸಿನಿಮಾಗಳು ಬಹುಮಟ್ಟಿಗೆ ಜವಾಬ್ದಾರಿಯಾಗಿವೆ ಎಂದು ಹೇಳಬಹುದು. ಸಿನಿಮಾದಲ್ಲಿ ಬರತಕ್ಕ ಚಿತ್ರಗಳಲ್ಲಿ ಕಳವು ಹೇಗೆ ಮಾಡುತ್ತಾನೆ, ಯಾವ ರೀತಿಯಾಗಿ ದರೋಡೆ ಮಾಡುತ್ತಾನೆ, ಯಾವ ರೀತಿಯಾಗಿ ಪಿಕ್‌ಪಾಕೆಟ್ ಮಾಡುತ್ತಾನೆ ಎಂಬುದನ್ನೆಲ್ಲಾ ತೋರಿಸುತ್ತಾರೆ. ಅದನ್ನೆಲ್ಲಾ ನೋಡಿಕೊಂಡು ನಮ್ಮ ಹುಡುಗರು ನಮ್ಮ ಜಾಣತನ ಹೇಗೆ ಇದೆ ಪ್ರಯೋಗ ಮಾಡೋಣ ಎಂದು ಹೇಳಿ ಪ್ರಯೋಗ ಮಾಡುತ್ತಾರೆ. ಆದ್ದರಿಂದ ಇದು ಬಹಳ ಕಷ್ಟತರವಾದ ಸಮಸ್ಯೆ. ನನಗೆ ಇರತಕ್ಕ ಈ ಅಲ್ಪ ಕಾಲದಲ್ಲಿ ಅದನ್ನೆಲ್ಲಾ ಲಂಬಿಸಿ ಭಾಷಣ ಮಾಡುವುದಕ್ಕೆ ಹೋಗುವುದಿಲ್ಲ. ಯಾವ ರೀತಿ ಅಪರಾಧ ಮಾಡಿದರೆ ಜೈಲಿಗೆ ಹೋಗುತ್ತೇನೆ, ಸಮಾಜದಲ್ಲಿ ಗಣ್ಯಸ್ಥಾನ ದೊರಕುವುದಿಲ್ಲ ಎಂಬ ಭಾವನೆ ಈ ಚಿಕ್ಕ ಅಪರಾಧಿಗಳ ಮನಸ್ಸಿನಲ್ಲಿ ಮೂಡುವಂತೆ ಮಾಡುವುದಕ್ಕೆ ಯಾವ ರೀತಿ ಸಾಧ್ಯವಿದೆ ಎಂಬುದನ್ನು ಯೋಚನೆಮಾಡಿ ಅದಕ್ಕೆ ತಕ್ಕ ಏರ್ಪಾಡು ಮಾಡಬೇಕು. ಅದಕ್ಕೆ ಬಾರ್‌ಸ್ಟಲ್ ಸ್ಕೂಲು ಮುಂತಾದುವೆಲ್ಲಾ ಇವೆ. ಅಲ್ಲಿ ಸರ್ಕಾರದವರು ಏನು ಕ್ರಮ ಕೈಕೊಂಡಿರುವರೋ ಗೊತ್ತಿಲ್ಲ. ಈ ವಿಷಯದಲ್ಲಿ ಉತ್ತರ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

*Sri H. C. LINGA REDDY (Malur).—I rise to support this Demand. I do not know whether the jails or the lock-ups we have now got are called convict settlements.

Sri S. SRINIVASA IYENGAR.—That is the general head of account.

Sri H. C. LINGA REDDY.—I think the words 'convict settlements' are very advisedly used, because if we see our jails and lock-ups, I am afraid they are not in a properly settled place. They are very insanitary, very congested. They are either in urban areas or in localities round which there are a number of houses. It is said that man is a creature of his environment. Specially it is so in the case of a convict. It is only when his surroundings are happy, good and attractive, he can be a healthy creature. I think our present jails and lock-ups in various district headquarters, from that point of view, require a good deal of attention, especially the lock-ups. No doubt some of the jails in Bangalore, namely, the Central Jail and the Sub-Jail at Hassan and a number of jails in Bellary are supposed to house our prisoners. In these areas we have some industries for these prisoners. But in the other district headquarters where we have lock-ups, they are very much congested and they are very narrow and insanitary and it will be very difficult for the convicts to develop a healthy sort of life. I think it is necessary, specially in the district lock-ups in some district headquarters, to make the atmosphere of the surroundings as congenial as

(SRI H. C. LINGA REDDY.)

possible. We do not want any industries started for the benefit of these convicts in the district lock-ups. I think prisoners sentenced to imprisonment for one month and less are lodged in district lock-ups and those sentenced to more than one month will be transferred to the Central Jail or the Jail in Hassan or probably to the several jails in Bellary. In the district lock-ups as I have said already the surroundings are very bad, the area is very narrow and conjested and it is better we take away the lock-ups from those areas and build a sort of convict settlement far removed from the town so that in those settlements we may give them various kinds of local industries and we may start agricultural occupations also for these convicts. Government have collected a very vast extent of land for the use of the young children so that they may learn agriculture and other avocations and also start some industries akin to agriculture. I think it is necessary we should have some lands acquired for the sake of convicts, whether it be for the convicts in the urban areas like the cities of Bangalore, Mysore or other places or whether it is for the prisoners that have to be lodged in the district lock-ups. The idea of punishment in the ancient days was in accordance with the theory of retributive punishment and later we have had the theory of deterrent punishment. But in modern days the theory is one of reforming the person. We have to reform the person. As Sri Ramaiya submitted, on account of circumstances people become criminals. For example, take the offence of theft. Theft occurs as a result of poverty. I think that many prisoners go to jail because of thefts committed by them. Of course there will be various other reasons also. If there is no poverty and they are sufficiently prosperous, I think many of the crimes can be avoided. It is from that point of view that we have to reform the prisoner. We have to create a good environment. We have to create opportunities for him to lead a healthy sort of life and give up bad habits. We have got to make him earn a living for himself. We have to teach him some handicrafts so that after his term of imprisonment he may become a healthy civilised human being. Both from the point of view of reform of the prisoner and also from the point of view of having sufficient income to the State Exchequer as Sri Srinivasa Iyengar also was submitting, we may have some agriculture and other handicrafts introduced in the jails and make the convicts there useful citizens. In order to do that, it is very necessary to take away the Central jail out of the City here and other jails out of the urban area and establish a sort of convict settlement. If we do that, I am sure we will be in a position to reform convicts to a very great extent and also at the same time bring sufficient money to the State. I think it is very necessary that the Government should set up a Committee to go into this question of Jail Reform so that they make suitable recommendations which we may act upon and they will be of much use to the convicts.

With these few words, I support the Demand, Sir.

*ಶ್ರೀ ಎಸ್. ಗೋಪಾಲಗೌಡ (ಸಾಗರ-ಹೊಸನಗರ).—ಸ್ವಾಮಿ, ಜೈಲುಗಳ ವಿಷಯದಲ್ಲಿ ಕಳೆದ ವರ್ಷ ಬೀಡಿ ಬೇಡಿಕೆಯನ್ನು ಮಾನ್ಯ ಮಂತ್ರಿಗಳ ಮುಂದೆ ಇಟ್ಟಿದ್ದೆ. ಅದರ ಬಗ್ಗೆ ಇನ್ನೂ ಸರ್ಕಾರದವರು ಏನೂ ಮಾಡಿದಂತೆ ಕಾಣ ಬರಲಿಲ್ಲ. ನಾವು ಎಲ್ಲಿಯಾದರೂ ವಿಧಾನ ಸೌಧದ ಹತ್ತಿರ ಹೋಗಿದ್ದರೆ ನಮ್ಮ ಬೀಡಿ ಬೇಡಿಕೆ ಉಳಿದು ಹೋಯಿತು ಎಂದು ಹೇಳುತ್ತಾರೆ. ಇದಕ್ಕೆ ಖರ್ಚಾಗುವ ಹಣ ಕಡಿಮೆ. ಆದರೂ ನಾಲ್ಕು ಗೋಡೆಗಳ ಮಧ್ಯೆ ಇರತಕ್ಕ ಪರಿಸ್ಥಿತಿಯಲ್ಲಿ ತಂಬಾಕು ಬಹಳ ಸ್ನೇಹಿತನಂತೆ ಅವರಿಗೆ ಮನಸ್ಸಿಗೆ ಒಂದು ರೀತಿಯ ಸ್ವಾಸ್ಥ್ಯವನ್ನು ಕೊಡುತ್ತದೆ ಎಂಬ ಅಭಿಪ್ರಾಯವನ್ನು ಕೇಳಿದ್ದೇನೆ. ಖೈದಿಗಳು ಈ ಒಂದು ಬೇಡಿಕೆಯನ್ನು ಕೇಳುತ್ತಾರೆ. ಹೋದಸಲ ಸರ್ಕಾರದವರು ಇದಕ್ಕೆ ಎಷ್ಟೋ ರೂಪಾಯಿ ಖರ್ಚಾಗುತ್ತದೆ, ಪರಿಶೀಲನೆ ಮಾಡುತ್ತೇವೆ ಎನ್ನುವ ಉತ್ತರ ಕೊಟ್ಟರು. ಅದು ಇನ್ನೂ ನೆರವೇರಿಲ್ಲ. ಆದುದರಿಂದ ಈ ಸಲವೂ ಕೂಡ ನಾನು ಖೈದಿಗಳ ಪರವಾಗಿ ಈ ಬೀಡಿ ಬೇಡಿಕೆಯನ್ನು ಸರ್ಕಾರದವರ ಮುಂದೆ ಇಡುತ್ತೇನೆ. ಇವರಲ್ಲಿ ಎಲ್ಲರೂ ಬೀಡಿ ಸೇದುವುದಿಲ್ಲ. ಬೀಡಿ ಸೇದುವವರು ತಮಗೆ ಕೊಟ್ಟಿರುವ ಅನ್ನವನ್ನು ಮಾರಾಟ ಮಾಡಿ ಬೀಡಿ ಪಡೆಯುತ್ತಾರೆಂದು ಕೇಳಿದ್ದೇನೆ. ಬೆಂಗಳೂರಿನಲ್ಲಿರುವ ಜೈಲಗೆ ಹೋಗಿ ನೋಡಿದರೆ ಖೈದಿಗಳು ಇದಕ್ಕೆ ಒಂದು ವ್ಯವಸ್ಥೆಯನ್ನು ಮಾಡಿಕೊಂಡಿರುತ್ತಾರೆ. ಇದು ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿರುವ ವಿಚಾರ.

ಶ್ರೀ ಲಿಂಗಾರೆಡ್ಡಿಯವರು ಲಾಕ್-ಅಪ್ಸ್ ವಿಷಯ ಹೇಳಿದರು. ನಾನೂ ಅದೇ ವಿಷಯವನ್ನು ಹೇಳಬೇಕೆಂದಿದ್ದೆ. ಲಾಕ್-ಅಪ್ಸ್ ಬಹಳ ಚಿಕ್ಕದಾಗಿರುತ್ತವೆ,

ಮತ್ತು ಸಾಕಷ್ಟು ಚೊಕ್ಕಟವಾಗಿರುವುದಿಲ್ಲ. ಇದರಲ್ಲಿ ಇನ್ನೊಂದೇನೆಂದರೆ, ಕ್ರಿಮಿನಲ್ ಏನಾದರೂ ತಕ್ಸೀರು ಮಾಡಿ ಸಿಕ್ಕಿದನೆಂದರೆ ಅವನನ್ನು ನೋಡಿಕೊಳ್ಳುವ ರೀತಿ, ನಮ್ಮ ಸ್ನೇಹಿತರು ಪೋಲೀಸಿನವರು ಯಾವ ರೀತಿಯ ಭಾಷೆ ಉಪಯೋಗಿಸುತ್ತಾರೆಂದರೆ ತಕ್ಷಣವೇ ಏಕವಚನದಲ್ಲಿ ಷುರು ಮಾಡಿ ಕೈ ಹಾಕಿ ಕಾಲಿನಿಂದ ಮೆಟ್ಟುವ ಸ್ಥಿತಿ ಬರುತ್ತದೆ. ಸರ್ಕಾರದವರು ಈ ವಿಚಾರದಲ್ಲಿ ಅವರಿಗೆ ಸ್ವಲ್ಪ ವಿದ್ಯಾಭ್ಯಾಸವನ್ನು ಮಾಡಿಸಬೇಕು. ಮೊದಲು ಪೋಲೀಸಿನವರಿಗೆ ಮತ್ತು ಜೈಲು ವಾರ್ಡರುಗಳಿಗೆ ಈ ವಿದ್ಯಾಭ್ಯಾಸ ಕೊಡಬೇಕು. ಯಾಕೆಂದರೆ, ಈಗ ಅಂಡರ್ ಟ್ರಯಲ್ ಪ್ರಿಸನರ್ಸ್ ಇರುತ್ತಾರೆ. ಯಾವುದಾದರೂ ತಕ್ಸೀರಿನಲ್ಲಿ ಗುಮಾನಿ ಮೇಲೆ ಹಿಡಿದು ಜೈಲಿನಲ್ಲಿಟ್ಟಿರುತ್ತಾರೆ. ನಾನು ಮಟ್ಟೆದೊಡ್ಡಿ ಕೇಸಿನ ಸಮಯದಲ್ಲಿ ರಾಮನಗರದ ಲಾಕ್-ಅಪ್‌ಗೆ ಹೋಗಿದ್ದೆ. ಸುಮಾರು 20 ಜನರು ಇದ್ದರು ಎಂದು ಕಾಣುತ್ತದೆ. ಜಾನುವಾರುಗಳನ್ನೂ ಕೂಡ ಅಷ್ಟು ಒತ್ತಾಗಿ ಕೂಡುವುದಿಲ್ಲ, ಹಾಗೆ ಕೂಡಿದ್ದರು. ಒಳಗಿದ್ದವರನ್ನು ಹೊರಗಡೆ ಬಯಲಿಗೆ ಹೋಗಬೇಕಾದರೂ ಬಿಡದೆ ಇದ್ದರು. ಆ ಕೊಠಡಿಗೆ ಮೇಲ್ಗಡೆ ಒಂದು ಕಿಟಕಿ ಇತ್ತು. ಅವರು ಅದರಿಂದ ಕೂಗಿ ಕೂಗಿ ಬಹಳ ಕಷ್ಟಪಟ್ಟರು. ಈ ರೀತಿಯ ಮನೋಭಾವ ತೀರ ಕೆಟ್ಟದ್ದು. ಅವರಿಗೆ ಸ್ನಾನ ಮಾಡಿಸಿ, ಒಳ್ಳೆಯ ಊಟ ಕೊಟ್ಟು ಉಪಚಾರಮಾಡಿ ಬಹಳ ಗೌರವದಿಂದ ಕಾಪಾಡಿಕೊಂಡು ಹೋಗಬೇಕು ಎಂಬ ಅಭಿಪ್ರಾಯದಿಂದ ಹೇಳುತ್ತಿಲ್ಲ. ಸಾಮಾನ್ಯವಾಗಿ ಮನುಷ್ಯನಿಗೆ ಯೋಗ್ಯವಾದ ರೀತಿಯಲ್ಲಿ, ನಡೆದುಕೊಳ್ಳಬೇಕಾದ ರೀತಿಯಲ್ಲಿ ನಡೆದುಕೊಳ್ಳುವುದಿಲ್ಲ. ನಾನು ಅನೇಕ ಕಡೆ ಇದನ್ನು ನೋಡಿದ್ದೇನೆ. ಅಲ್ಲೆಲ್ಲ ದೊಡ್ಡ ಲಾಕ್-ಅಪ್ ಬೇಕಾಗಿಲ್ಲ. ಸ್ಯಾನಿಟೆರಿ ಕಂಡೀಷನ್ಸ್ ಇರಲಿಲ್ಲವೆಂದು ಮಾತ್ರ ಹೇಳಿದೆ. ಇದನ್ನು ಸರಿಯಾಗಿ ನಡೆಸಿಕೊಂಡು ಹೋಗದೆ ಇದ್ದರೆ ಹೇಗೆ? ಬೆಂಗಳೂರು ಜೈಲಿನಲ್ಲಿ 3-4 ಮೂತ್ರಿಗಳನ್ನು ಕೊಟ್ಟಿದ್ದಾರೆ. ಆದರೆ ಈ ಮೂತ್ರಿಗಳನ್ನು ತೊಳೆಯದೆ ಎಷ್ಟು ಗಲೀಜಾಗಿವೆ ಎಂದು ಹೇಳಲು ಅಸಾಧ್ಯ. ಆದುದರಿಂದ ಈ ಮನೋಭಾವವೇನಿದೆ ಅದು ಹೋಗಬೇಕು. ಮಾನ್ಯಮಂತ್ರಿಗಳು ಪ್ರವಾಸ ಹೋದಾಗ ಜೈಲುಗಳಿಗೆ ಒಂದು ಸಲ ಭೇಟಿ ಕೊಟ್ಟು ಇವನ್ನೆಲ್ಲ ನೋಡಿ, ಸರಿಪಡಿಸಬೇಕು. ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ, ಮುಖ್ಯವಾಗಿ ಜೈಲು ವಾರ್ಡರುಗಳು ಮತ್ತು ಪೋಲೀಸಿನವರು ಇವರುಗಳಿಗೆ ತಿಳಿವಳಿಕೆ ಕೊಟ್ಟು ಖೈದಿಗಳನ್ನು ಸರಿಯಾದ ರೀತಿಯಲ್ಲಿ ನೋಡಿಕೊಳ್ಳಬೇಕು. ಇನ್ನು ಮುಂದಾದರೂ ಈಗಿನಂತೆಯೇ ವರ್ತಿಸಬಾರದು ಎಂದು ಹೇಳಬೇಕು. ಮೇಲ್ಕಂಡ ವಿಷಯಗಳನ್ನೆಲ್ಲ ಸರ್ಕಾರದವರು ಗಮನಕ್ಕೆ ತೆಗೆದುಕೊಂಡು ಅದಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡಿದರೆ ಒಳ್ಳೆಯದೆಂದು ಹೇಳುತ್ತೇನೆ.

*ಶ್ರೀ ವಿ. ವೆಂಕಟಪ್ಪ (ಚನ್ನಪಟ್ಟಣ).—ಸ್ವಾಮಿ, ಒಂದು ಪ್ರಶ್ನೆ ಕೇಳುತ್ತೇನೆ. ಜೈಲಿನಲ್ಲಿ ಉತ್ಪತ್ತಿ ಮಾಡತಕ್ಕ ಪದಾರ್ಥಗಳು ಸ್ವಾಭಾವಿಕವಾಗಿ ಚೆನ್ನಾಗಿವೆ ಮತ್ತು ಬೆಲೆಯೂ ಸಾಧಾರಣವಾಗಿದೆ ಎಂದು ಅನೇಕರ ಭಾವನೆ. ಹಾಗಿದ್ದರೂ ಕೂಡ ಸಂಪಾದನೆಗಿಂತ ಖರ್ಚು ಹೆಚ್ಚಾಗಿದೆಯಲ್ಲ. ಅದರಲ್ಲೂ ಈ ವರ್ಷ ಪ್ರೊವೈಡ್ ಮಾಡಿರುವುದರಲ್ಲಿ! 1,10,000 ರೂಪಾಯಿಗಳ ಉತ್ಪತ್ತಿ ಬರುತ್ತದೆ ಎಂದು ನಿರೀಕ್ಷಿಸಿದ್ದೀರಿ. ಮತ್ತು 1,36,000 ರೂಪಾಯಿಗಳ ಬೆಲೆ ಬಾಳುವ ಕಚ್ಚಾ ಪದಾರ್ಥಗಳನ್ನು ಕೊಂಡುಕೊಳ್ಳುವುದಕ್ಕೆ ಎಂದು ಒದಗಿಸಿದ್ದೀರಿ. ಆದುದರಿಂದ 1,36,000 ರೂಪಾಯಿಗಳ ಪದಾರ್ಥಗಳನ್ನು ಕೊಂಡು ಕೊಂಡು, 1,10,000 ರೂಪಾಯಿಗಳ ವರಮಾನವನ್ನು ನಿರೀಕ್ಷಿಸಿದರೆ, ಇದು ಹೇಗೆ ಎಂದು ಸ್ವಲ್ಪ ತಿಳಿಸಿದರೆ ಒಳ್ಳೆಯದು.

* ಶ್ರೀ ಎ. ಜಿ. ರಾಮಚಂದ್ರರಾವ್ (ನ್ಯಾಯಾಂಗ ಮತ್ತು ವಿದ್ಯಾ ಶಾಖೆಯ ಮಂತ್ರಿಗಳು)—ಸ್ವಾಮಿ, ಜೈಲುಗಳನ್ನು ಲಾಕ್-ಅಪ್‌ಗಳು, ಸಬ್ ಜೈಲುಗಳು ಮತ್ತು ಜೈಲುಗಳು ಎಂದು ಮೂರು ಭಾಗವಾಗಿ ವಿಂಗಡಣೆ ಮಾಡಬಹುದು ಎಂದು ಕಾಣುತ್ತದೆ. ಇವೆಲ್ಲ ಸಾರ್ವಜನಿಕ ಸ್ಥಳಗಳು. ಇವು ಚೊಕ್ಕಟವಾಗಿರಬೇಕು, ಸ್ಯಾನಿಟರಿ ಕಂಡೀಷನ್ಸ್ ಇರಬೇಕು ಎನ್ನುವುದರಲ್ಲಿ ಯಾವ ವಿವಾದವೂ ಇಲ್ಲ. ಆದರೆ ಚೊಕ್ಕಟವಾಗಿಲ್ಲದೆ ಇರುವುದಕ್ಕೆ ಅನೇಕ ಕಾರಣಗಳಿವೆ. ಸರಿಯಾದ ರೀತಿಯಲ್ಲಿಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ, ಮತ್ತು ಇನ್ನೂ ಉತ್ತಮಪಡಿಸುತ್ತಿದ್ದೇವೆ ಎಂದು ಭರವಸೆ ಕೊಡುತ್ತೇನೆ. ಮೂತ್ರಿ ವಗೈರೆ ಸ್ವಚ್ಛ ಮಾಡಿಸುತ್ತಿಲ್ಲವೆಂಬುದಾಗಿ ಹೇಳಿದರು. ಸಿಬ್ಬಂದಿಯನ್ನು ಕೊಟ್ಟು ಈ ಕೆಲಸವನ್ನೂ ಮಾಡುವುದಕ್ಕೆ ಏರ್ಪಾಡು ಮಾಡುತ್ತಿದ್ದೇವೆ. ನಾನು ಜೈಲುಗಳು ಮತ್ತು ಸಬ್ ಜೈಲುಗಳಿಗೆ ಭೇಟಿಯನ್ನೂ ಕೊಟ್ಟಿದ್ದೇನೆ. ಲಾಕ್-ಅಪ್‌ಗಳನ್ನು ಮಾತ್ರ ನೋಡಿಲ್ಲ. ಲಾಕ್-ಅಪ್‌ಗಳು ಪೋಲೀಸು ಇಲಾಖೆಯ ಆಡಳಿತದಲ್ಲಿರುತ್ತವೆ. ಇನ್ನು ಮುಂದೆ ಅವನ್ನೂ ಭೇಟಿ ಮಾಡುತ್ತೇನೆ.

ಜೈಲುಗಳಲ್ಲಿ ಕೈಗಾರಿಕೆಗಳನ್ನು ಮಾಡಬೇಕು ಎಂದು ಸೂಚನೆ ಬಂದಿದೆ. ಈ ಕೈಗಾರಿಕೆಗಳು ನಡೆಯುತ್ತಿವೆ. ಅವನ್ನು ಇನ್ನೂ ಹೆಚ್ಚು ಮಾಡಬೇಕೆಂಬ ಪ್ರಯತ್ನವಿದೆ. ಈಗ ಎಲ್ಲ ಜೈಲುಗಳಲ್ಲಿಯೂ ಇವು ನಡೆಯುತ್ತಿಲ್ಲ. ಬೆಂಗಳೂರು, ಮೈಸೂರು ಮತ್ತು ಬಳ್ಳಾರಿ ಜೈಲುಗಳಲ್ಲಿದೆ. ಅದರ ಬಗ್ಗೆ ಅಂಕಿ ಅಂಶಗಳನ್ನೂ, ಉತ್ಪತ್ತಿಯನ್ನೂ ಕೊಡುತ್ತೇನೆ. ಉತ್ಪತ್ತಿಗಿಂತ ಕಚ್ಚಾ ಪದಾರ್ಥಗಳಿಗೆ ಖರ್ಚು ಹೆಚ್ಚಾಗುತ್ತಿದೆ ಎಂಬುದರ ಬಗ್ಗೆ ಹೇಳಬೇಕೆಂದರೆ ಇದರಲ್ಲಿ ಯಂತ್ರೋಪಕರಣಗಳ ಭಾಗವೂ ಇರುತ್ತದೆ, ಕಚ್ಚಾ ಪದಾರ್ಥಗಳ ಭಾಗವೂ ಇರುತ್ತದೆ. ಇದರಲ್ಲಿ ನಿಖರವಾದ ಲೆಕ್ಕಪತ್ರಗಳನ್ನೂ ಬೇಕಾದರೆ ತರಿಸಿಕೊಡುತ್ತೇನೆ. ಸಂಸ್ಥಾನದ ಜೈಲುಗಳಲ್ಲಿ ಈ ಕೆಳಗೆ ಕಂಡಂತೆ ಕೈಗಾರಿಕೆಯ ಕೆಲಸಗಳು ನಡೆಯುತ್ತಿವೆ. ಬೆಂಗಳೂರು ಜೈಲಿನಲ್ಲಿ handloom, powerloom, spinning plant, tailoring, mat-weaving, rattan work, carpentry, foundry, smithy, printing and hand-spinning ಇವೆ. ಇದರ ಪೈಕಿ ಪ್ರಿಂಟಿಂಗ್‌ನಲ್ಲಿ ಬಹಳ ಚೆನ್ನಾಗಿ ಕೆಲಸ ನಡೆಯುತ್ತಿದೆ. ಅದನ್ನು ಈಗ ಎರಡುವರ್ಷಗಳಿಂದ ಅಭಿವೃದ್ಧಿ ಮಾಡಲಾಗಿದೆ. ಮೈಸೂರು ಜೈಲ್‌ನಲ್ಲಿ textile, handloom, tailoring, mat-weaving, carpentry, carpet-weaving and agriculture ಇವೆ. ಬಳ್ಳಾರಿ ಸೆಂಟ್ರಲ್ ಜೈಲ್‌ನಲ್ಲಿ kambli-weaving, textile, wool spinning, carpentry, book-binding ಇವೆ. ಆಲಿಪುರಂ ಜೈಲಿನಲ್ಲಿ weaving, stone blasting and carpentry ಇವೆ. ಇವುಗಳನ್ನು ಇನ್ನೂ ಅಭಿವೃದ್ಧಿ ಮಾಡುವುದಕ್ಕೆ ಅವಕಾಶವಿದೆ, ಅದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಈಗ ಚರಕ ಇದೆ, ಅಂಬರ್ ಚರಕವನ್ನು ಹಾಕಬೇಕೆಂದು ಹೇಳುತ್ತಾ ಇದ್ದೇವೆ, ಈ ಸಂಬಂಧದಲ್ಲಿ ಕಮಿಟಿ

(ಶ್ರೀ ಎ. ಜಿ. ರಾಮಚಂದ್ರರಾವ್.)

ರಿಪೋರ್ಟ್ ಬಂದಮೇಲೆ ಎಷ್ಟುಮಟ್ಟಿಗೆ ಮಾಡುವುದಕ್ಕೆ ಸಾಧ್ಯವೋ ಅಷ್ಟನ್ನೂ ಮಾಡಲಾಗುತ್ತದೆ.

ಮತ್ತೆ ಈಗಿರುವ ಸಿಸ್ಟಂ ಬದಲಾವಣೆಯಾಗಬೇಕು, ಇದರಲ್ಲಿ ಶಿಕ್ಷೆಯ ರೂಪದಲ್ಲಿ ಇರಬೇಕೇ, ಶಿಕ್ಷಣ ರೂಪದಲ್ಲಿ ಇರಬೇಕೇ ಎಂಬ ಬಗ್ಗೆ ವಿವಾದ ಬಹಳ ದಿನಗಳಿಂದ ನಡೆಯುತ್ತಿದೆ. ಶಿಕ್ಷೆಯಿಂದ ಶಿಕ್ಷಣಕ್ಕೆ ಬದಲಾಯಿಸಿ ಅದನ್ನು ಪ್ರಯೋಗ ಮಾಡಿ ಎಲ್ಲೆಲ್ಲಿ ಫಲಕಾರಿಯಾಗಿದೆ ಎಂದು ವಿಮರ್ಶೆ ಮಾಡಿನೋಡಬೇಕಾದದ್ದು ಅತ್ಯಾವಶ್ಯಕ. ಆದರೆ ಚಿಕ್ಕಮಕ್ಕಳಿಗೆ ಶಿಕ್ಷಣವೇ ಪ್ರಾಧಾನ್ಯವಾಗಿರಬೇಕು ಮತ್ತು ದೊಡ್ಡವರಿಗೆ ಶಿಕ್ಷೆಯೇ ಪ್ರಾಧಾನ್ಯವಾಗಿರಬೇಕು ಎಂದು ತೆಗೆದುಕೊಳ್ಳಬಹುದು. ಚಿಕ್ಕಮಕ್ಕಳಿಗೆ ಬಾರ್ಸ್ಟಲ್ ಸ್ಕೂಲು ಬಳ್ಳಾರಿಯಲ್ಲಿದೆ. ಇದರ ಒಂದು ಅಂಗವನ್ನು ಬೆಂಗಳೂರಿನಲ್ಲಿ ಸ್ಥಾಪನೆ ಮಾಡಬೇಕೆಂದಿದ್ದೇವೆ. ಆದರೆ ಕರ್ಣಾಟಕ ಪ್ರಾಂತವಾದ ಮೇಲೆ ಮೈಸೂರು ವಿಸ್ತಾರವಾಗುವುದರಿಂದ ಮುಂದೆ ಯಾವ ಯಾವ ಕಡೆಗಳಲ್ಲಿ ಯಾವ ಯಾವ ಅನುಕೂಲಗಳಿವೆಯೊ ನೋಡಬೇಕಾಗಿದೆ. For instance, in Bijapur there is a very good jail. ಆದುದರಿಂದ ಇರತಕ್ಕ ಎಲ್ಲ ಅನುಕೂಲಗಳನ್ನೂ ಇಟ್ಟುಕೊಳ್ಳಬೇಕು, ಆತುರ ಪಡಬಾರದು ಎಂಬ ದೃಷ್ಟಿಯಿಂದ ಇನ್ನು ಹೆಚ್ಚಾಗಿ ಹೇಳುವುದಿಲ್ಲ. ಬೆಂಗಳೂರಿನಲ್ಲಿ ಸಾಮಾನ್ಯವಾಗಿ ಅಂಡರ್ ಟ್ರಯಲ್ ಪ್ರಿಸನರ್ಸ್. 400-500 ಜನ ಇರುತ್ತಾರೆ. ಒಂದು ವರ್ಷಕ್ಕೆ ಕಡಿಮೆ ಶಿಕ್ಷೆಯಾಗಿರುವವರು 500 ಜನ, ಒಂದು ವರ್ಷಕ್ಕೆ ಮೇಲ್ಪಟ್ಟವರು 500 ಜನ ಮತ್ತು ಸಿವಿಲ್ ಪ್ರಿಸನರ್ಸ್ ಕೆಲವರು ಇರುತ್ತಾರೆ. ಆದರೆ ಎಮರ್ಜೆನ್ಸಿ ಪರ್ಪಸಸ್‌ಗಾಗಿ 1,000-1,500 ಜನಕ್ಕೆ ಅವಕಾಶವಿರುತ್ತದೆ. ಬೆಂಗಳೂರಿನಲ್ಲಿ ಜೈಲು ತಗೆದುಹಾಕಬೇಕು ಎಂದರೆ ಸಧ್ಯಕ್ಕೆ ಅದು ಸಾಧ್ಯವಾಗದ ಕೆಲಸ. ಆದರೆ ಇದರಲ್ಲಿ ಒಂದು ವರ್ಷಕ್ಕಿಂತ ಹೆಚ್ಚಾಗಿ ಶಿಕ್ಷೆಯಾಗಿರುವವರು ಇರುವುದು ಸೂಕ್ತವಲ್ಲವೆಂದು ಅವರನ್ನು ಬೇರೆ ಕಡೆಗೆ ವರ್ಗಾಯಿಸಿದ್ದೇವೆ.

Sri H. C. LINGA REDDY.—What I said was, that the Central Jail should be shifted from its present place to a more healthy environment.

ಶ್ರೀ ಎ. ಜಿ. ರಾಮಚಂದ್ರರಾವ್.—ಸೆಂಟ್ರಲ್ ಜೈಲನ್ನು ಈಗಿರುವ ಸ್ಥಳದಿಂದ ಬದಲಾವಣೆ ಮಾಡುವುದು ಸೂಕ್ತ. ಇದನ್ನು ವಿಶ್ವವಿದ್ಯಾನಿಲಯಕ್ಕೆ ಕೊಡಬೇಕೆಂದು ಆಲೋಚಿಸಿ, ಎಷ್ಟುಮಟ್ಟಿಗೆ ಅವಕಾಶವಿರಬೇಕೋ ಅಷ್ಟು ಜನರಿಗೆ ಹತ್ತಿರದಲ್ಲೇ ಒಂದು ಜೈಲು ಕಟ್ಟಬೇಕೆಂದು ಮಾಡಿದ್ದೇವೆ.

ರಿಫಾರಂಸ್ ಕಮಿಟಿ ಆಗಬೇಕು ಎಂದು ಹೇಳಿದರು. 1940 ನೆ ಇಸವಿಯಲ್ಲಿ ಒಂದು ಕಮಿಟಿ ನೇಮಕವಾಗಿದ್ದು ಅವರ ಶಿಫಾರಸುಗಳನ್ನೆಲ್ಲ ಕಾರ್ಯಗತ ಮಾಡಲಾಗಿದೆ. ಮೈಸೂರು ದೊಡ್ಡದಾದ ಮೇಲೆ ಸುಧಾರಣೆಗಳನ್ನು ಕೈಗೊಳ್ಳಲು ಬೇಕಾದ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದು ಸೂಕ್ತವೆಂದು ಕಾಣುತ್ತದೆ. With these remarks I submit, Sir, that the Demand for this item may be passed.

Sri SIRASAPPA IJARI.—Is there any idea of abolishing the Borstal School in Bellary?

Sri A. G. RAMACHANDRA RAO.—No.

Sri H. C. LINGA REDDY.—About District Lock-ups, I had pleaded that they may be improved by introducing agriculture, industries, etc.

ಶ್ರೀ ಎ. ಜಿ. ರಾಮಚಂದ್ರರಾವ್.—ಲಾಕ್-ಅಪ್‌ಗಳಲ್ಲಿ ಕೈಗಾರಿಕೆ ವಗೈರೆಗಳನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಕೆಲವಾರು ದಿವಸಗಳು ಮಾತ್ರವಿರುವವರು ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ. ಸ್ವಚ್ಛವಾಗಿಟ್ಟುಕೊಂಡಿರಬೇಕು ಎಂಬ ನೀತಿಯನ್ನು ಒಪ್ಪುತ್ತೇವೆ.

Sri R. ANANTARAMAN.—Sir, we learn that the Andhra Government is due to this Government some money for the maintenance of their prisoners. Is that amount settled, Sir?

Sri A. G. RAMACHANDRA RAO.—We expect an early settlement, Sir.

5 P.M.

Mr. CHAIRMAN.—The question is:

"That a sum not exceeding Rs. 15,77,000 be granted to the Government to defray the charges which will come in course of payment during the year ending 31st day of March 1957, in respect of 'Jails and Convict Settlements'."

The motion was adopted.

THE MADRAS VILLAGE PANCHAYETS (MYSORE AMENDMENT) BILL, 1956.

Motion to consider.

Sri T. CHANNIAH (Minister for L.S.-G. and Public Health).—Sir, I move:

"That the Madras Village Panchayets (Mysore Amendment) Bill, 1956 be taken into consideration."

Sir, under Section 10 of the Madras Village Panchayets Act, 1950 the term of office of members of Panchayets in Bellary District is three years extensible by a period of three months. The term of three years of the members of the existing Panchayets has now been extended by three months, and as it will take some time for extending

the Mysore Village Panchayets and District Boards Act, 1952, to Bellary District, it is considered necessary to take power to extend the term by a period not exceeding two years.

Sri Mulka GOVINDA REDDY (Chitaldurg).—On a point of order, Sir. During voting on Demands, Government is not competent to move any legislative measure. I urge that the Minister should not be allowed to move this Bill.

Mr. CHAIRMAN.—There is already a precedent about it. A day or two ago this House has permitted the Minister to move a Bill. Following that precedent I allow the Minister for Local Self-Government to continue.

Sri T. CHANNIAH.—The term of office of some of these panchayets have expired and the term of some others will expire in the course of a few months. To extend the Mysore Village Panchayets and District Boards Act to Bellary it will take some time. Therefore this Bill is brought.

Mr. CHAIRMAN.—Motion moved:

> "That the Madras Village Panchayets (Mysore Amendment) Bill, 1956 be taken into consideration."

Sri Mulka GOVINDA REDDY.—I want to know when the term of office of these Panchayets expired and by the extention that is given, when it will expire.

Sri T. CHANNIAH.—There are a number of Village Panchayets in that District. It is not that the term of office of all those Panchayets expire simultaneously; it is in the case of those whose term of office expire in the near future, action will have to be taken immediately to amend section 10.

*ಶ್ರೀ ಎಸ್. ಶ್ರೀನಿವಾಸಅಯ್ಯಂಗಾರ್ (ಟಿ. ನರಸೀಪುರ).—ಸ್ವಾಮಿ, ಈ ಮಸೂದೆಯನ್ನು ವಿರೋಧಿಸುವುದಲ್ಲದೆ ಸರ್ಕಾರದ ಭಾವನೆಯನ್ನು ಕಟುವಾಗಿ ಟೀಕಿಸಬೇಕೆಂಬುದು ನನ್ನ ಉದ್ದೇಶವಾಗಿದೆ. ಮದರಾಸು ಶಾಸನದಲ್ಲಿರುವ ಸೆಕ್ಷನ್ ಓದುತ್ತೇನೆ. 1950ನೆಯ ಇಸವಿ ಮದರಾಸು ಗ್ರಾಮ ಪಂಚಾಯಿತಿಗಳ ಆಕ್ಟ್ 10ನೆಯ ಸೆಕ್ಷನ್‌ನ ಸಬ್ ಸೆಕ್ಷನ್ (1) ಈ ರೀತಿಯಿದೆ :—

> "10. (1) The Term of office of the members of every panchayet who are elected at ordinary elections shall, save as otherwise expressly provided in, or may be prescribed under this Act, be three years beginning at noon on the day on which the vacancies occur :

ಅದರ ಉದ್ದೇಶವೇನೆಂದರೆ ಇದು ಎಂದು ಈ ರೀತಿ ಹೇಳಿದೆ :—

> "Provided that the Inspector may, by notification, for sufficient cause which shall be stated therein, direct that the term of office of the members of any panchayet as a whole be extended or reduced by such period not exceeding three months as may be specified in the notification."

ಮೂರು ವರ್ಷಕ್ಕೆ ಜಾಸ್ತಿ ಚುನಾವಣೆಗಳಲ್ಲಿ ಬಂದಿರುವವರಿಗೆ ಮುಂದಕ್ಕೆ ಅವಧಿ ಹೆಚ್ಚಿಸಕೂಡದು. ಒಂದು ವೇಳೆ ಏನಾದರೂ ವಿಶೇಷವಾದ ಕಾರಣವಿದ್ದರೆ ಮೂರು ತಿಂಗಳ ಕಾಲ ಇನ್ಸ್‌ಪೆಕ್ಟರ್ ಹೆಚ್ಚಿಸಬಹುದು. ಅದಕ್ಕೆ ಸರಿಯಾದ ಕಾರಣವಿರಬೇಕು. ಅಥವಾ ಮೂರು ತಿಂಗಳಿಗೆ ಮುಂಚೆ ಬೇಕಾದರೂ ಅವಧಿ ತಗ್ಗಿಸಬಹುದು ಎಂದು ಕೊಟ್ಟಿರುವ ಅಧಿಕಾರ ಉಪಯೋಗಿಸಿ ಈ ಸರ್ಕಾರ ಚುನಾವಣೆ ಎರಡು ವರ್ಷ ಮುಂದಕ್ಕೆ ಹಾಕಿ ಮೂರು ವರ್ಷ ಮೊದಲಿದ್ದುದನ್ನು ಐದುವರ್ಷ ಮಾಡುತ್ತೇವೆಂದು ತಂದಿರುವುದರ ಮನೋಭಾವನೆ ಅನುಮಾನಕ್ಕೆ ಅವಕಾಶಕೊಟ್ಟಿದೆ. ಕಾನೂನಿನಲ್ಲಿರುವ ಪ್ರಾವಿಸೋದಲ್ಲಿ ಚುನಾವಣೆ ಮಾಡುವುದಕ್ಕೆ ತೊಂದರೆ ಬಂದರೆ ಇನ್ಸ್‌ಪೆಕ್ಟರ್ ಮಾರ್ಪಾಡು ಮಾಡಬಹುದು ಎಂದಿದ್ದರೆ ಇನ್ಸ್‌ಪೆಕ್ಟರ್ ಸ್ಥಳವೇನಿದೆ ಅದು ಈ ಆಕ್ಟಿನಲ್ಲಿ ಸರ್ಕಾರಕ್ಕೆ ಬರುವುದು.

Government of Mysore want to get into the place of the Inspector.

ಇದು ಬಹಳ ತಪ್ಪು. ಈ ವಿಲೇಜ್ ಪಂಚಾಯಿತಿ ಮತ್ತು ಡಿಸ್ಟ್ರಿಕ್ಟ್ ಬೋರ್ಡ್ಸ್ ಆಕ್ಟ್ ಪಾಸಾಗಿದ್ದರೂ ಮೂರು ನಾಲ್ಕು ವರ್ಷಗಳಿಂದ ಇದನ್ನು ಜಾರಿಗೆ ಕೊಡಲಿಲ್ಲ. ಈಗಾಗಲೇ ಆ ಬಳ್ಳಾರಿ ನಮ್ಮ ಮೈಸೂರಿಗೆ ಬಂದು ಮೂರು ವರ್ಷಗಳ ಮೇಲಾಯಿತು. ಆದಾಗ್ಯೂ ಈ ನಮ್ಮ ಆಕ್ಟನ್ನು ತಾವು ಈ ವರೆಗೆ ಬಳ್ಳಾರಿ ಜಿಲ್ಲೆಗೆ ಏಕೆ ಎಕ್ಸ್‌ಟೆಂಡ್ ಮಾಡಲಿಲ್ಲ ! ಆ ಮದರಾಸ್ ಪಂಚಾಯಿಟ್ಸ್ ಆಕ್ಟಿನಲ್ಲಿ ಸದಸ್ಯರ ಅವಧಿ ಮೂರು ವರ್ಷಗಳಿಗೆ ಮಾತ್ರವೇ ಇರುತ್ತದೆ ಎಂಬುದು ಅದರಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ. ಹೀಗೆ ಇಲ್ಲಿಯತನಕ ತಾವು ಸುಮ್ಮಗೆ ಕೈಕಟ್ಟಿ ಕುಳಿತುಕೊಂಡಿದ್ದು ಈ ದಿವಸ ಕೆಲವು ಭಾಗದಲ್ಲಿ ಈ ಆಕ್ಟನ್ನು ಜಾರಿಗೆ ತಂದು ಮತ್ತೆ ಕೆಲವು ಭಾಗದಲ್ಲಿ ಇದನ್ನು ಜಾರಿಗೆ ತರದೆ, ಆ ಪ್ರದೇಶಕ್ಕೆ ಸೂಕ್ತ ತೋರಿದಂತೆ ಮಾಡಲು ಈಗ ಸರ್ಕಾರದವರಿಗೊಂದು ಅಧಿಕಾರ ಕೊಡಿ ಎಂದು ಕೇಳಲು ಈ ತಿದ್ದುಪಡಿಯನ್ನು ತಂದಿರುತ್ತೀರಿ. ಈ ರೀತಿ ಮಾಡುವುದು ನ್ಯಾಯದ ದೃಷ್ಟಿಯಲ್ಲಿ ಸರಿಯಾದದ್ದಲ್ಲ. ಆದರೆ ಇದರಲ್ಲಿ ಒಂದು ಏನು ಎದ್ದು ಕಾಣುತ್ತಿದೆ ಎಂದರೆ ನಮ್ಮ ಸರ್ಕಾರದವರಲ್ಲಿ ಒಂದು ಪಕ್ಷಪಾತದ ಮನೋಭಾವವಿದೆ ಎನ್ನುವುದು ಇದರಿಂದ ಎದ್ದು ಕಾಣುತ್ತಿದೆ. ಅಂಥ ಒಂದು ಮನೋಭಾವವಿಲ್ಲದಿದ್ದರೆ ತಾವು ಹೀಗೇಕೆ ಮಾಡುತ್ತಿದ್ದಿರಿ ? ಹೀಗೇ ತಾವು ಒಂದಲ್ಲ ಒಂದು ನೆಪ

(ಶ್ರೀ ಎಸ್. ಶ್ರೀನಿವಾಸಯ್ಯಂಗಾರ್).

ಹೇಳಿಕೊಂಡು ಈ ದಿವಸ ಆ ಬಳ್ಳಾರಿ ಮುನಿಸಿಪಾಲಿಟಿಗೆ ಹೊಸದಾಗಿ ಸದಸ್ಯರನ್ನು ತುಂಬ ಬಾರದೆಂದು ಹೇಳುತ್ತಿದ್ದೀರಿ. ಆದರೆ ತಾವು ಏನು ಬೇಕಾದರೂ ಮಾಡಬಹುದು. ತಮಗೊಂದು ಪಕ್ಷದ ಬೆಂಬಲವಿದೆ ಎಂಬ ಧೋರಣೆಯಿಂದ ಮಾಡಬಾರದ ಕೆಲಸಗಳನ್ನೆಲ್ಲಾ ಮಾಡುತ್ತಿದ್ದೀರಿ. ಆದರೆ ಇಂಥ ನಡವಳಿಕೆಗಳಿಂದ ಪ್ರಜಾಪ್ರಭುತ್ವ ತತ್ವಗಳ ಧ್ಯೇಯಕ್ಕೆ ಧಕ್ಕೆಯನ್ನು ತಾವು ತರುತ್ತಿದ್ದೀರಿ. '' ಏನು ಬೇಕಾದರೂ ''— ಎಂದರೆ ಯಾವ ಈ ಒಂದು ತಿದ್ದುಪಡಿಯೂ ಪ್ರಜಾಪ್ರಭುತ್ವ ತತ್ವಕ್ಕೆ ತುಂಬ ವಿರೋಧವಾಗಿದ್ದರೂ ಈ ಸಭೆಯಲ್ಲಿ ನಿಮ್ಮ ಪಕ್ಷಕ್ಕೆ ಬಹುಮತದ ಬೆಂಬಲವಿರುವುದರಿಂದ ನೀವು ಹೀಗೆ ಮಾಡಬಾರದ್ದನ್ನು ಮಾಡಲು ನಿಮಗೆ ಧೈರ್ಯವಿರುವುದರಿಂದ ಈ ದಿವಸ ಈ ತಿದ್ದುಪಡಿಯನ್ನು ಆ ಒಂದು ಭಾವನೆಯಿಂದ ತಂದಿದ್ದೀರಿ ಎಂಬುದನ್ನು ತಿಳಿಸಲು ಹಾಗೆ ಹೇಳಿದ್ದೇನೆ. ಏನೋ ಒಂದು ಸಣ್ಣ ಪುಟ್ಟ ನೆಪ ಸಿಕ್ಕಿದರೆ ಸಾಕು. ಅದಕ್ಕೆ ಇಷ್ಟೊಂದು ಅಡ್ಡದಾರಿ ಹಿಡಿಯಲು ತಮಗೆ ಪಕ್ಷದ ಬೆಂಬಲವಿರುವುದೇ ಒಂದು ಮುಖ್ಯಕಾರಣ. ತಾವು ಈ ದಿವಸ ಯಾವ ಆಧಾರದ ಮೇಲೆ ಹೀಗೆ 'not exceeding two years' ಎಂದು ಬರೆದಿರಿ? ನಾನು ಹೇಳುತ್ತೇನೆ 'not exceeding four years' ಎಂದು ಏಕೆ ಬರೆಯಬಾರದಾಗಿತ್ತು? ಅದೇಕೆ ಎರಡು ವರ್ಷಗಳು ಎಂದು ಬರೆದಿರಿ? ಆರು ತಿಂಗಳು ಎಂದು ಏಕೆ ಬರೆಯಬಾರದಾಗಿತ್ತು? ಈ ದಿವಸ ಬಳ್ಳಾರಿ ಜಿಲ್ಲೆಯಲ್ಲಿ ಎಷ್ಟು ಗ್ರಾಮ ಪಂಚಾಯಿತಿಗಳಿವೆ ಎಂಬ ಬಗ್ಗೆ ಇದರಲ್ಲಿ ಏನಾದರೂ ಒಂದು ಅಂಕಿ ಅಂಶಗಳ ತಪಶೀಲನ್ನು ಕೊಟ್ಟಿದ್ದೀರಾ? ಈ ದಿವಸ ತಾವು ಈ ರೀತಿ ಮಾಡತಕ್ಕದ್ದು ಅಪ್ರಕೃತ. ಖಂಡಿತ ಸರಿಯಲ್ಲ. ಈ ದಿವಸ ತಾವು ಮಾಡಲು ಹೊರಟಿರುವ ಪ್ರಯತ್ನದಿಂದ ಈ ಪ್ರಜಾಪ್ರಭುತ್ವ ಯುಗದಲ್ಲಿ ಈ ಸ್ಥಳೀಯ ಸಂಸ್ಥೆಗಳ ಸ್ವಾತಂತ್ರ್ಯಕ್ಕೆ ತುಂಬ ಧಕ್ಕೆ ತಂದಂತಾಗಿದೆ. ಇದನ್ನು ನಾನು ಖಂಡಿತ ಒಪ್ಪುವುದಕ್ಕಾಗುವುದಿಲ್ಲ. ನಾನು ಇದನ್ನು ತೀವ್ರವಾಗಿ ವಿರೋಧಿಸುತ್ತೇನೆ.

*ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ನಾನು ಈ ತಿದ್ದುಪಡಿಯ ಮಸೂದೆಯನ್ನು ವಿರೋಧಿಸುತ್ತೇನೆ. ಏತಕ್ಕೆಂದರೆ—ಇಂಥ ಒಂದು ತಿದ್ದುಪಡಿಯೇ ಇಲ್ಲದೆ ಇದ್ದರೂ ನಮ್ಮ ಸರ್ಕಾರ ಈ ಗ್ರಾಮ ಪಂಚಾಯಿತಿ ಮತ್ತು ಜಿಲ್ಲಾ ಬೋರ್ಡುಗಳ ಚುನಾವಣೆಯನ್ನು ಎರಡು ವರ್ಷ, ನಾಲ್ಕು ವರ್ಷಗಳತನಕ ಮುಂದಕ್ಕೆ ಹಾಕತಕ್ಕಂಥ ಚಮತ್ಕಾರಗಳನ್ನು ಇಟ್ಟುಕೊಂಡು ಕೆಲಸಮಾಡುತ್ತಿದ್ದಾರೆ ಎನ್ನುವುದು ನಮಗೆ ಗೊತ್ತಾಗಿದೆ. ಈಗಾಗಲೇ ಈ ಗ್ರಾಮ ಪಂಚಾಯಿತಿ ಮತ್ತು ಜಿಲ್ಲಾ ಬೋರ್ಡುಗಳ ಆಕ್ಟು ಪಾಸಾಗಿ ನಾಲ್ಕು ವರ್ಷಗಳ ಮೇಲಾಯಿತು. ಆದರೆ ಇಲ್ಲಿಯವರೆಗೂ ಚುನಾವಣೆಗಳನ್ನು ಮಾತ್ರ ನಡೆಸಲಿಲ್ಲ. ಈ ಹಿಂದೆ ಒಂದಾವರ್ತಿ ಈ ಆಕ್ಟಿಗೆ ಯಾವುದೋ ಒಂದು ತಿದ್ದುಪಡಿಯನ್ನು ತಂದಿದ್ದ ಕಾಲದಲ್ಲಿ ಆಗ ನಾವೆಲ್ಲರೂ ಅದಕ್ಕೆ ವಿರೋಧವನ್ನು ವ್ಯಕ್ತಪಡಿಸಿದ್ದಕ್ಕೆ ಆ ದಿವಸ ಸರ್ಕಾರದವರು ಇನ್ನು ಆರು ತಿಂಗಳೊಳಗಾಗಿಯೇ ಈ ಸಂಸ್ಥೆಗಳಿಗೆಲ್ಲಾ ಚುನಾವಣೆ ನಡೆಯುವಂತೆ ಏರ್ಪಾಡು ಮಾಡುತ್ತೇವೆಂದು ಭರವಸೆ ಕೊಟ್ಟಿದ್ದರು.

Sri R. ANANTARAMAN (Chamarajpet).—How is that relevant?

ಶ್ರೀ ಬಿ. ಹುಚ್ಚೇಗೌಡ.—ಸಂಬಂಧವಿದೆ. ಈ ದಿವಸ ಇಲ್ಲಿ ಹೀಗೆ ಎರಡು ವರ್ಷಕಾಲ ಎಂದು ಕೇಳಿರುವುದನ್ನು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ. ಇವರಿಗೆ ಇಷ್ಟು ನಾಚಿಕೆಯೇ ಇಲ್ಲದೆ ಇಂಥ ವಿಷಯಗಳನ್ನು ಮೇಲಿಂದ ಮೇಲೆ ತರುತ್ತಲೇ ಇದ್ದಾರೆ.

ಚುನಾವಣೆ ಈಗ ನಡೆಯುತ್ತದೆ, ಆಗ ನಡೆಯುತ್ತದೆ ಎಂದು ಹೇಳುತ್ತಾ ಕೊನೆಗೆ ಅದರ ಸುದ್ದಿಯನ್ನೇ ಮುಂದಕ್ಕೆ ಹಾಕಿದ್ದೀರಿ. ಹೀಗೆ ಪ್ರಜಾಪ್ರಭುತ್ವ ತತ್ವಕ್ಕೆ ತಿಲಾರ್ಪಣೆ ಕೊಟ್ಟು ಎಷ್ಟೋ ದಿವಸ ಆಗಿದೆ. ಬಳ್ಳಾರಿ ಡಿಸ್ಟ್ರಿಕ್ಟು ಈಚೆಗೆ ಸೇರಿದ್ದು. ಅದಕ್ಕೂ ಕೂಡ ಈ ಕಾನೂನು ಅನ್ವಯಿಸುವುದಕ್ಕೆ ಇಷ್ಟಪಡುತ್ತಿಲ್ಲ. ನಾಲ್ಕು ವರ್ಷದಮೇಲೆ ಪಂಚಾಯಿತಿ ಎಲೆಕ್ಷನ್ ಮಾಡಿದರು. ಎಲೆಕ್ಷನ್ ಮಾಡಿದರೂ ಕೂಡ ಇವತ್ತಿನವರೆಗೂ ಪಂಚಾಯಿತಿಗಳಲ್ಲಿ ಚುನಾಯಿತರಾದ ಸದಸ್ಯರು ಅಧಿಕಾರವನ್ನು ವಹಿಸಿಕೊಂಡು ಕೆಲಸ ನಡೆಸುತ್ತಾ ಇಲ್ಲ. ಹಿಂದಿನ ಸದಸ್ಯರೇ, ಹಿಂದಿನ ಚೇರ್ಮನ್‌ರೇ ಇವೊತ್ತು ಅಧಿಕಾರ ನಡೆಸುತ್ತಾ ಇದ್ದಾರೆ. ಈ ಎಲೆಕ್ಷನ್ ನಡೆಸುವುದು ಒಂದು ಫಾರ್ಸು. ಇವೊತ್ತು ಎಲೆಕ್ಷನ್ ಮಾಡುತ್ತೇವೆ ಎಂದು ಹೇಳುತ್ತಾರೆ ಆದರೆ ಎಲೆಕ್ಷನ್ ನಡೆಯುವುದೇ ಇಲ್ಲ. ಅದೂ ಅಲ್ಲದೆ ಹೋದ ಜನವರಿ 1955ರಲ್ಲಿ ಚುನಾಯಿತರಾದ ಅನೇಕ ಪಂಚಾಯಿತಿ ಸಭೆಗಳಿಗೆ ಇವೊತ್ತಿನವರೆಗೂ ಕೂಡ ಅಧಿಕಾರ ವಹಿಸಿಕೊಟ್ಟಿಲ್ಲ. ಈರೀತಿ ನಡೆಯುತ್ತಾ ಇದೆ. ಇದನ್ನು ಯಾರಿಗೆ ಹೇಳಿಕೊಳ್ಳಬೇಕು ಎನ್ನುವುದು ಕೂಡ ರೂಲ್ಸ್‌ನಲ್ಲಿ ಸ್ಪಷ್ಟವಾಗಿಲ್ಲ. ಇಲ್ಲಿ ಬಂದು ಸ್ಥಳೀಯ ಸಂಸ್ಥೆಗಳ ಸಚಿವರನ್ನು ಕೇಳಿದರೆ, ಡೆಪ್ಯೂಟಿ ಕಮಿಷನರನ್ನು ಕೇಳಿ ಎನ್ನುತ್ತಾರೆ. ಡೆಪ್ಯೂಟಿ ಕಮಿಷನರು ಇಂಟರ್‌ಫಿಯರ್ ಆಗುವುದಿಲ್ಲ ಎಂದು ಹೇಳುತ್ತಾರೆ. ಯಾವರೀತಿ ಎಲೆಕ್ಷನ್ ಮಾಡಬೇಕು, ಯಾರು ಫೈನಲ್ ಆಗಿ ತೀರ್ಮಾನ ಮಾಡುವವರು ಎನ್ನುವುದು ಅವರಿಗೆ ಗೊತ್ತಿಲ್ಲ. ಕೆಲವು ಪಂಚಾಯಿತಿಗಳಲ್ಲಿ ಅಮಲ್ದಾರರನ್ನು ಕೇಳದೆ ತಾವೇ ಪಂಚಾಯಿತಿ ಚೇರ್ಮನ್ ಎಂದು ಅಧಿಕಾರ ನಡೆಸುವವರು ಅಧಿಕಾರ ನಡೆಸುತ್ತಲೇ ಇದ್ದಾರೆ. ಯಾರು ಅಮಲ್ದಾರರನ್ನು ಚುನಾವಣೆ ನಡೆಸುವುದಕ್ಕೆ ತಾರೀಖು ಗೊತ್ತುಮಾಡಿ ಕೊಡಿ ಎಂದು ಕೇಳುತ್ತಾರೆಯೋ ಅಂಥ ಕಡೆ ಇವೊತ್ತಿನವರೆಗೂ ಚುನಾವಣೆ ಆಗಿಲ್ಲ, $1\frac{1}{2}$ ವರ್ಷದಿಂದ ಸುಮ್ಮನೆ ಕೈಕಟ್ಟಿಕೊಂಡು ಕುಳಿತಿದ್ದಾರೆ. ಒಂದು ಉದಾಹರಣೆ ಹೇಳುವುದಾದರೆ ನಮ್ಮ ತಾಲ್ಲೂಕಿನಲ್ಲಿ ಹತ್ತು ಗ್ರಾಮಗಳಿವೆ. ಇವತ್ತಿಗೂ ಕೂಡ $1\frac{1}{2}$ ವರ್ಷದ ಹಿಂದೆ ಇದ್ದ ಪಂಚಾಯಿತಿ ಚೇರ್ಮನ್‌ರೇ ಇದ್ದಾರೆ. ಸರ್ಕಾರದವರು ಅಧಿಕಾರ ವಹಿಸಿಕೊಂಡಿಲ್ಲ. ಈ ರೀತಿ ಅವ್ಯವಸ್ಥೆ ಇರಬೇಕಾದರೆ ಈ ಸರ್ಕಾರದವರಿಗೆ ಹೊಸದಾಗಿ ಅಧಿಕಾರ ಕೊಡುವುದು ಸರ್ವಥಾ ಸರಿಯಲ್ಲ. ನನ್ನ ಅನುಭವದಿಂದ ನಾನಾದರೂ ಹೇಳುವುದು ಇಷ್ಟೇ—ನಾಲ್ಕು ವರ್ಷಗಳಿಂದ ಈ ಸ್ಥಳೀಯ ಸಂಸ್ಥೆಗಳಿಗೆ ತಗಲಿರುವಷ್ಟು ಧಕ್ಕೆ ಇನ್ನಾವುದಕ್ಕೂ ತಗಲಲಿಲ್ಲ. ಈ ರೀತಿ ಪ್ರಜಾ ಪ್ರಭುತ್ವ ತತ್ವಕ್ಕೇ ತಿಲಾರ್ಪಣೆ ಮಾಡಿದ್ದಾರೆ. ಆದ್ದರಿಂದ ಖಂಡಿತವಾಗಿಯೂ ಇದನ್ನು ಒಪ್ಪುವುದು ಸರಿಯಲ್ಲ. ಈಗಲಾದರೂ ಸರ್ಕಾರದವರು ಪ್ರಜಾಭಿಪ್ರಾಯಕ್ಕೆ ಮನ್ನಣೆಕೊಟ್ಟು ಇಂಥ ಕಾನೂನುಗಳನ್ನು ತರದೇ ಈಗ ತಂದಿರುವ ಮಸೂದೆಯನ್ನು ವಾಪಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

*ಶ್ರೀ ಸಿರಸಪ್ಪ ಇಜಾರಿ (ಹರಪನಹಳ್ಳಿ).—ಸ್ವಾಮಿ, ಒಂದೆರಡು ವಿಚಾರಗಳನ್ನು ತಮ್ಮ ಮೂಲಕ ಸಭೆಯ ಗಮನಕ್ಕೆ ತರಬೇಕೆಂದಿದ್ದೇನೆ. ಬಳ್ಳಾರಿ ಜಿಲ್ಲೆಗೆ ಮೈಸೂರು ಆಕ್ಟು ಮತ್ತು ರೂಲ್ಸ್‌ನ್ನು ಜಾರಿ ಮಾಡುವುದಕ್ಕೆ ಹೋದವರ್ಷ ಬಡ್ಜೆಟ್ ಸೆಷನ್ನಲ್ಲೇ ಸರ್ಕಾರದವರಿಗೆ ಅಧಿಕಾರ ಕೊಟ್ಟಿದ್ದೇವೆ. ಈಗ ಒಂದು ವರ್ಷ ಕಾಲ ಆಯಿತು. ಈ ಒಂದು ವರ್ಷದ ಕಾಲದಲ್ಲಿ

ಮೈಸೂರು ವಿಲೇಜ್ ಪಂಚಾಯಿತಿ ಆಕ್ಟನ್ನೇ ಜಾರಿಗೆ ತರಬಹುದಾಗಿತ್ತು. ಇದುವರೆಗೂ ಮಾಡಿಲ್ಲ. ಈಗಾಗಲೇ ಪಂಚಾಯಿತಿಗಳಿಗೆ ಒಂದು ಎಕ್ಸ್‌ಟೆನ್‌ಷನ್ ಕೊಟ್ಟಿದ್ದಾರೆ ಎಂದು ತಿಳಿದುಬರುತ್ತದೆ. ಈ ರೀತಿ ಮಾಡುವುದರಿಂದ ಕೆಲವು ಪ್ರಸಂಗಗಳಲ್ಲಿ ಜನಗಳಿಗೆ ಅನಾನುಕೂಲ ಉಂಟಾಗುತ್ತದೆ ಎಂಬುವನ್ನೂ ಸರ್ಕಾರದವರ ಗಮನಕ್ಕೆ ತರಲಿಚ್ಛಿಸುತ್ತೇನೆ. ಉದಾಹರಣೆಗೆ ಮದರಾಸ್ ಆಕ್ಟ್ ಪ್ರಕಾರ ಇದ್ದ ಕೆಲವು posts ಮೈಸೂರು ಸರ್ಕಾರದವರು ವಜಾ ಮಾಡಿದ್ದಾರೆ. ಇಲ್ಲಿ ಚುನಾವಣೆ ನಡೆಸುವುದಕ್ಕೆ ಮೈಸೂರು ಆಕ್ಟ್ ಮತ್ತು ರೂಲ್ಸನ್ನು ಅನ್ವಯಿಸಿಲ್ಲ ಎನ್ನುವುದು ಅಷ್ಟು ಸರಿಯಾಗಿ ಕಾಣುವುದಿಲ್ಲ. ಆಮೇಲೆ ಇನ್ನೊಂದು ತೊಂದರೆ ಇವೆ. ಟೌನ್ ಮುನಿಸಿಪಾಲಿಟಿಗಳಿಗೆ ಮೈಸೂರು ಸರ್ಕಾರದವರು ಗ್ರ್ಯಾಂಟ್ ಮತ್ತು ಸಾಲಗಳ ರೂಪವಾಗಿ ವಿಶಿಷ್ಟ ಪರಿಹಾರವನ್ನು ಕೊಡುತ್ತಿದ್ದಾರೆ. ಅದೇ ಸೌಲಭ್ಯ ನಮ್ಮ ಬಳ್ಳಾರಿ ಜಿಲ್ಲೆಗೂ ಸಹ ಸಿಕ್ಕಬೇಕೆಂದು ಕೇಳಿದರೆ, ಅಲ್ಲಿಗೆ ಮೈಸೂರು ಆಕ್ಟ್ ಅನ್ವಯಿಸದೆ ಇರುವುದರಿಂದ ಬಳ್ಳಾರಿಯಲ್ಲಿರುವ ಮೇಜರ್ ಪಂಚಾಯಿತಿಗಳಿಗೆ ಗ್ರ್ಯಾಂಟು ಮತ್ತು ಸಾಲದ ರೂಪದಲ್ಲಿ ಹಣ ಸಹಾಯ ಸಿಕ್ಕುವುದು ದುರ್ಲಭವಾಗಿದೆ. ಎರಡು ಮೂರು ವರ್ಷಗಳಿಂದ ನಗರಗಳ ಜನರ ಅನುಕೂಲಕ್ಕಾಗಿ ಮಾಡಬೇಕಾಗಿರುವ ಕಾರ್ಯಕ್ರಮಗಳೆಲ್ಲ ನಿಂತುಹೋಗಿವೆ ಎಂದು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಆದದರಿಂದ ಮೈಸೂರು ಆಕ್ಟ್ ಮತ್ತು ರೂಲ್ಸ್‌ಗಳನ್ನು ಶೀಘ್ರವಾಗಿ ಬಳ್ಳಾರಿ ಜಿಲ್ಲೆಯಲ್ಲಿ ಜಾರಿಗೆ ತಂದು ಆದಷ್ಟು ತೀವ್ರವಾಗಿ ಚುನಾವಣೆಗಳನ್ನು ಮಾಡಿ ಟೌನ್ ಮುನಿಸಿಪಾಲಿಟಿಗಳನ್ನು ಮಾಡಿ, ಜನಗಳಿಗೆ ಹೆಚ್ಚು ಹೆಚ್ಚಾಗಿ ಅನುಕೂಲವಾಗುವಂಥ ಕಾರ್ಯಕ್ರಮಗಳನ್ನು ಮಾಡಬೇಕೆಂದು ಹೇಳಿ ಈ ಸೂಚನೆಯನ್ನು ತಮ್ಮ ಮೂಲಕ ಸರ್ಕಾರಕ್ಕೆ ಕೊಡುತ್ತಿದ್ದೇನೆ.

*ಶ್ರೀ ಎ. ಜಿ. ರಾಮಚಂದ್ರರಾವ್ (ನ್ಯಾಯಾಂಗ ಮತ್ತು ವಿದ್ಯಾಶಾಖೆಗಳ ಮಂತ್ರಿಗಳು).—ಸ್ವಾಮಿ, ಈ ಚರ್ಚೆಗೆ ಎರಡು ಭಾಗವಾಗಿ ಉತ್ತರ ಹೇಳಬಹುದು. ಮೊದಲನೆಯದು ಬಳ್ಳಾರಿಗೆ ನಾವು ಮೈಸೂರು ಜಿಲ್ಲಾ ಬೋರ್ಡು ಮತ್ತು ಗ್ರಾಮ ಪಂಚಾಯಿತಿಗಳಿಗೆ ಸಂಬಂಧಪಟ್ಟ ಆಕ್ಟನ್ನು extend ಮಾಡಿಲ್ಲ. ಮಾಡುವ ಮಧ್ಯಕಾಲದಲ್ಲಿ ನಿಂತಿದ್ದೇವೆ. ಈ ಮಧ್ಯೆ ಕೆಲವು ಗ್ರಾಮಪಂಚಾಯಿತಿಗಳಿಗೆ—ಇನ್ನೂ ಕೆಲವಾರು ಹಾಗೆಯೇ ಇವೆ—ಮೈಸೂರು ಆಕ್ಟನ್ನು extend ಮಾಡುವವರೆಗೂ ಅವು ಅದೇ ರೀತಿಯಲ್ಲಿ ಇರತಕ್ಕದ್ದು ಸೂಕ್ತ. ಮೈಸೂರು ಆಕ್ಟನ್ನು ಯಾಕೆ extend ಮಾಡಲಿಲ್ಲವೆಂದು ಕೇಳಬಹುದು. ಈವಾಗ ಅನೇಕ ಭಾಗಗಳು ಒಂದು ಪ್ರಾಂತದಲ್ಲಿ ಸೇರುವುದರಿಂದ ಅಲ್ಲಿ ಯಾವ ರೀತಿ ಇದೆಯೆಂದು ತಿಳಿಯಬೇಕಾದ್ದು ಸೂಕ್ತ. ಹೈದರಾಬಾದಿನಲ್ಲಿ ಗ್ರಾಮ ಪಂಚಾಯಿತಿಗಳು ಇವೆಯೋ ಇಲ್ಲವೋ ಎನ್ನುವುದು ಅನುಮಾನವಾಗಿದೆ. ಬೊಂಬಾಯಿನಲ್ಲಿ ಒಂದು ರೀತಿ ಇದೆ; ಮದರಾಸಿನಲ್ಲಿ ಒಂದು ರೀತಿ ಇದೆ. ಮೂಲಭೂತವಾಗಿ ಮೈಸೂರು ಆಕ್ಟನ್ನು ಬದಲಾವಣೆ ಮಾಡಬೇಕಾಗಬಹುದು. ಈಗ ಒಂದು ಸಲ ಮದರಾಸು ಆಕ್ಟನ್ನು ಬದಲಾವಣೆಮಾಡಿ, ಮೈಸೂರು ಆಕ್ಟನ್ನು ಜಾರಿಗೆ ತಂದು, ಮತ್ತೆ ಪುನಃ ಬದಲಾಯಿಸುವುದು ಹೀಗೆ ಮೂರು ತಿಂಗಳಿಗೆ, ವರ್ಷಕ್ಕೆ ಬದಲಾಯಿಸುವುದು ಸೂಕ್ತವಲ್ಲ. ಈಗಿರತಕ್ಕ ಪರಿಸ್ಥಿತಿ ಹಾಗೆಯೇ ಇರಲಿ ಎಂದು ಈ ರೀತಿ ಮಾಡಿದೆವು. ಈ ವಿವರಣೆಯನ್ನು ಬರೆಯಬೇಕಾದದ್ದು ಅನಾವಶ್ಯಕ, ತಮಗೆಲ್ಲ ಗೊತ್ತಿದೆ ಎಂದು ಇದರಲ್ಲಿ ಸೇರಿಸಲಿಲ್ಲ. ಆದುದರಿಂದ ಎರಡು ವರ್ಷಗಳಕಾಲ ಈಗಿರತಕ್ಕ ಪರಿಸ್ಥಿತಿಯಲ್ಲಿಯೇ ಇರಲಿ ಎಂದು ಎರಡು ವರ್ಷಗಳ ಕಾಲ ಬಿಲ್ಲಿನಲ್ಲಿ ಹಾಕಲಾಗಿದೆ. ಬಳ್ಳಾರಿಯಲ್ಲಿರುವ ವಿಲೇಜ್ ಪಂಚಾಯಿತಿಗಳಿಗೆ ಕೊಡತಕ್ಕ ಅನುಕೂಲಗಳನ್ನು ಕೊಟ್ಟಿಲ್ಲವೆಂಬ ಅಂಶವನ್ನು ಹೇಳಿದ್ದಾರೆ. ಅದು ಯಥಾರ್ಥವಾದದ್ದಲ್ಲ. ಮದರಾಸು ವಿಲೇಜ್ ಪಂಚಾಯಿತಿಗಳ ಕಾನೂನು ಅಲ್ಲಿ ಜಾರಿಯಲ್ಲಿದ್ದರೂ ಸಹ Rural Development ಗ್ರ್ಯಾಂಟಿನಿಂದ 1,75,000 ರೂಪಾಯಿಗಳನ್ನು ಆ ಪಂಚಾಯಿತಿಗಳಿಗೆ ಕೊಡಲಾಗಿದೆ. ಆದುದರಿಂದ ಮೈಸೂರು ಗ್ರಾಮಪಂಚಾಯಿತಿಗಳಿಗೆ ಏನು ತತ್ವವನ್ನು ಅನ್ವಯಿಸುತ್ತಿದ್ದೇವೆಯೋ, ಅದೇ ತತ್ವಗಳನ್ನೇ ಬಳ್ಳಾರಿಗೂ ಅನ್ವಯಿಸುತ್ತಿದ್ದೇವೆ ಎಂಬ ವಿಷಯವನ್ನು ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ.

ಚುನಾವಣೆಗಳ ವಿಷಯವನ್ನು ಬಹಳವಾಗಿ ಪ್ರಸ್ತಾಪ ಮಾಡಿದರು. ಈಗಾಗಲೇ ಅನೇಕ ಟೌನ್ ಮುನಿಸಿಪಾಲಿಟಿಗಳಲ್ಲಿ ಚುನಾವಣೆಗಳು ನಡೆದು, ಬಹಳ ಕಡೆಗಳಲ್ಲಿ ಚುನಾವಣೆಗಳು ನಿಂತುಬಿಟ್ಟರೆ ಸಾಕು ಎಂಬ ಸ್ಥಿತಿಗೆ ಬಂದಿದೆ. ಮತ್ತು ಅನೇಕ ಗ್ರಾಮಪಂಚಾಯಿತಿಗಳು ನಮಗೆ ಪಂಚಾಯಿತಿ ಬೇಡ ಎಂದು ಹೇಳತಕ್ಕ ಸ್ಥಿತಿಗೆ ಬಂದಿವೆ. ಆದುದರಿಂದ ಪ್ರಜಾಪ್ರಭುತ್ವವನ್ನು ನಾವು ಸರಿಯಾಗಿ ರೂಪಿಸಿ ಸುವ್ಯವಸ್ಥೆ ಮಾಡುವುದಕ್ಕೆ ಪ್ರಯತ್ನಮಾಡಬೇಕು ಮತ್ತು ಇರತಕ್ಕ ಕಾನೂನನ್ನು ಜಾರಿಗೆ ಕೊಡಬೇಕಾದದ್ದು ನಿಜ. ಆದರೆ ಈ ಒಂದು ಭಾಗವನ್ನೂ ನಾನಾಗಲೇ ಹೇಳಿದಂತೆ ಪರಿಶೀಲಿಸಬೇಕು. ಪ್ರಜಾಪ್ರಭುತ್ವ ಸರಿಯಾಗಿ ನಡೆಯಬೇಕು ಎನ್ನುವುದನ್ನು ಅವರ ದೃಷ್ಟಿಗೆ ತರಬೇಕಾಗಿದೆ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ವಿಲೇಜ್ ಪಂಚಾಯಿತಿ ಆಕ್ಟ್ ಪ್ರಕಾರ ಮೈಸೂರು ದೇಶದಲ್ಲಿ ಚುನಾವಣೆಯಾಗತಕ್ಕ ಸದಸ್ಯರುಗಳಿಗೆ ಅವಧಿ ಇರುವುದು ನಾಲ್ಕು ವರ್ಷ; ಬಹಳವಾದರೆ ಅದೇ ಆಕ್ಟ್ ಪ್ರಕಾರ ಅವಧಿ ಐದು ವರ್ಷವಾಗುತ್ತದೆ.

ಶ್ರೀ ಬಿ. ಹುಚ್ಚೇಗೌಡ.—ಪ್ರಜಾಪ್ರಭುತ್ವವನ್ನು ಉಳಿಸಬೇಕೆನ್ನುವುದು ಅನಿವಾರ್ಯ, ಮುಂದೆಯೂ ಅದಕ್ಕೆ ಸಹಾಯ ಮಾಡುತ್ತೇವೆ.

ಶ್ರೀ ಎ. ಜಿ. ರಾಮಚಂದ್ರರಾವ್.—ಪ್ರಾಂತಗಳ ಪುನರ್ವಿಂಗಡಣೆಯಾಗಿ ಒಂದು ಸಮಗ್ರವಾದ ಪ್ರಾಂತವಾದ ಮೇಲೆ ಎಲ್ಲ ದೃಷ್ಟಿಗಳಿಂದಲೂ ಪರಿಸ್ಥಿತಿಯನ್ನು ಯೋಚಿಸಿ ಒಂದೇಸಲ ಕಾನೂನನ್ನು ಜಾರಿಗೆ ತರುವುದು ಉತ್ತಮವೆಂದು ಭಾವಿಸುತ್ತೇನೆ. ಅದಕ್ಕಾಗಿಯೇ ಈಗ ಎರಡು ವರ್ಷ ಮಾತ್ರ ಅವಧಿಯನ್ನು ಹೆಚ್ಚಿಸಬೇಕು ಎಂದು ತಂದಿದ್ದೇವೆ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಮದರಾಸ್ ವಿಲೇಜ್ ಪಂಚಾಯಿತಿ ಆಕ್ಟ್ scrap out ಆಗದೆ. . . .

ಶ್ರೀ ಎ. ಜಿ. ರಾಮಚಂದ್ರರಾವ್.—Scrap out ಆಗುವುದಿಲ್ಲ. Only for three months and after that fresh elections will have to be held. ಅದು clear ಆಗಿದೆ. ಅದನ್ನು ಒಡಂಬಡಿಕೆ—ಒಪ್ಪೋಣವಾಗಲಿ. ಆದುದರಿಂದ ಈ ತಿದ್ದುಪಡಿಯನ್ನು ತಂದಿದ್ದೇವೆ. ಮೊದಲೇ ಹೇಳಿದ ಹಾಗೆ ಪ್ರಜಾಪ್ರಭುತ್ವ ದೃಷ್ಟಿಯಿಂದ ನಾವು ಇನ್ನೂ ಕೂಡ. . . .

ಶ್ರೀ ಬಿ. ಹುಚ್ಚೇಗೌಡ.—ಪದೇ ಪದೇ ನಾಲ್ಕು ವರ್ಷಗಳಿಂದಲೂ ಒತ್ತಾಯ ಮಾಡಿದರೂ ಕೂಡ ಸರ್ಕಾರ ಏನೂ action ತೆಗೆದುಕೊಂಡಿಲ್ಲ. . . .

Mr. CHAIRMAN.—The Hon'ble Minister does not yield.

Sri A. G. RAMACHANDRA RAO.—I am not yielding, Sir.

(At this stage Sri S. Srinivasa Iyengar, Sri Mulka Govinda Reddy, Sri S. Gopala Gowda, Sri U. M. Madappa and Sri B. Hutche Gowda, left the hall.)

ಆದುದರಿಂದ ಈಗ ತಂದಿರತಕ್ಕ ಮಸೂದೆ ಸಾಧು ವಾಗಿದೆ, ಅಗತ್ಯವಾಗಿದೆ. ಇದಕ್ಕೆ ಸಭೆಯವರು ಬೆಂಬಲ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

Sri SIRASAPPA IJARI.—I would be very grateful if you can assure me that all the facilities that are extended to local bodies and panchayets under the Madras Act would be extended hereafter also.

Sri A. G. RAMACHANDRA RAO.—Unless the existing laws at Bellary disable us, we are giving every facility to the Bellary local bodies.

Mr. CHAIRMAN.—The question is :

"That the Madras Village Panchayets (Mysore Amendment) Bill, 1956 be taken into consideration."

The motion was adopted.

Mr. CHAIRMAN.—Clause 2. The question is :

"That clause 2 stand part of the Bill."

The motion was adopted.

Clause 2 was added to the Bill.

Mr. CHAIRMAN.—Clause 1 and the Title and the Preamble. The question is :

"That Clause 1, the Title and the Preamble stand part of the Bill."

The motion was adopted.

Clause 1 and the Title and the Preamble were added to the Bill.

Motion to pass.

Sri T. CHANNIAH.—Sir, I beg to move :

"That the Madras Village Panchayets (Mysore Amendment) Bill, 1956 be passed."

Mr. CHAIRMAN.—The question is :

"That the Madras Village Panchayets (Mysore Amendment) Bill, 1956 be passed."

The motion was adopted.

The House adjourned at Twenty Minutes past Five of the Clock to meet at Twelve of the Clock on Tuesday, 20th March 1956.

WD 2896—GPB—550—20-6-56

MYSORE LEGISLATIVE ASSEMBLY.

SIXTEENTH DAY.

Tuesday, 20th March 1956.

The House met in the Assembly Hall, Atara Kacheri, Bangalore, at Twelve of the Clock.

MR. SPEAKER (SRI H. S. RUDRAPPA, B.SC., LL.B.) in the Chair.

QUESTIONS AND ANSWERS

Mellekav Tank, Koratagere Taluk. (Restoration).

Q.—374. Sri MUDDURAMIAH (Koratagere-Madhugiri).—

Will the Government be pleased to state:—

(*a*) whether it is a fact that the estimate for the restoration of Mallekav Tank, Koratagere Taluk, is sanctioned;

(*b*) if so, the action taken so far to restore the tank?

A.—Sri H. M. CHANNABASAPPA. (Minister of Industries).—

(*a*) No.

(*b*) No restoration is contemplated.

ಶ್ರೀ ಮುದ್ದುರಾಮಯ್ಯ.—ಈ ಮಲ್ಲೇಕಾವು ಕೆರೆಯ ಅಚ್ಚುಕಟ್ಟು ಎಷ್ಟೆಂಬುದನ್ನು ಹೇಳಬಲ್ಲಿರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—135 ಎಕರೆಗಳು.

ಶ್ರೀ ಮುದ್ದುರಾಮಯ್ಯ.—ಅಲ್ಲಿ ಈಗ 50 ಎಕರೆ ಕೂಡ ಸಾಗುವಳಿ ಆಗುತ್ತಿಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇಲ್ಲ.

ಶ್ರೀ ಮುದ್ದುರಾಮಯ್ಯ.—ಆದಷ್ಟು ಜಾಗ್ರತೆಯಾಗಿ ಈ ಕೆರೆಯನ್ನು ರಿಪೇರಿ ಮಾಡಿಸಲು ಏರ್ಪಾಡು ಮಾಡುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ವಿಷಯ ಈಗ ಸರ್ಕಾರದವರ ಪರಿಶೀಲನೆಯಲ್ಲಿದೆ.

New Tanks at Koratagere and Madhugiri Constituency (Construction).

Q.—378. Sri MUDDURAMIAH (Koratagere-Madhugiri).—

Will the Government be pleased to state:—

(*a*) the number of estimates prepared for the construction of new tanks at Koratagere-Madhugiri Constituency with details;

(*b*) what action has been taken on them?

A.—Sri H. M. CHANNABASAPPA (Minister for Industries).—

(*a*) and (*b*) Details are furnished below.—

Taluk	Name of new tank	Area to be benefited	Amount of estimate	Action taken
		Acres	Rs.	
Koratagere ...	New tank at Voddagere.	(1) 127 (2) 36	1,42,000 71,600	These alternative projects are under examination in the Public Works Department.
Koratagere ...	New tank at Hosahalli.	102	1,36,000	This and another alternative project for a lesser capacity are under investigation.
Madhugiri ...	New tank at Thimmanahalli.	301	2,80,000	Under investigation.
Koratagere ...	New tank at Huluvangala.	30	31,000	Under examination.
Madhugiri ...	New tank at Laxmanapalya.	19	13,000	Under scrutiny by the Chief Engineer.

ಶ್ರೀ ಮುದ್ದುರಾಮಯ್ಯ.—ಈ ಪ್ರತಿಯೊಂದು ಕೆರೆಯ ಅಂದಾಜು ತಯಾರಾಗಿ ಎಷ್ಟು ವರ್ಷಗಳಾದವು ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ಒಡ್ಡಗೆರೆ ಕೆರೆ ಅಂದಾಜು ತಯಾರಾದ್ದು ಇದರಲ್ಲಿ ಆಲ್ಟರ್ ನೇಟೀವ್ ಪ್ರಪೋಜಲ್ಸ್‌ಗಳಿವೆ, ಮೊದಲನೆಯ ಅಂದಾಜು ತಯಾರಾದ್ದು ಜುಲೈ 1953ರಲ್ಲಿ 2ನೆಯ ಅಂದಾಜು ತಯಾರಾದ್ದು ಮೇ 1955ರಲ್ಲಿ.

ಶ್ರೀ ಮುದ್ದುರಾಮಯ್ಯ.—ಈ ಒಡ್ಡಗೆರೆ ಕೆರೆಯ ಅಂದಾಜು 1944 45ರಲ್ಲೇ ತಯಾರಾಗಿತ್ತು ಎನ್ನುವ ಅಂಶ ಸರ್ಕಾರದವರಿಗೆ ಗೊತ್ತಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ವಿಚಾರ ನನಗೆ ಗೊತ್ತಿಲ್ಲ.

ಶ್ರೀ ಮುದ್ದುರಾಮಯ್ಯ.—ಈ ಕೆರೆಗಳಿರುವ ಪ್ರದೇಶ ಬಹಳ ಕ್ಷಾಮಪೀಡಿತ ಪ್ರದೇಶ ಎಂಬ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ವಿಚಾರ ಆಯಾ ವರ್ಷದ ಮಳೆಯನ್ನು ಅವಲಂಬಿಸಿಕೊಂಡು ಹೋಗತಕ್ಕಂಥ ವಿಚಾರ.

ಶ್ರೀ ಮುದ್ದುರಾಮಯ್ಯ.—ರಾಮಮೂರ್ತಿ ಸಮಿತಿಯವರೂ ಕೂಡ ಇದು ಕ್ಷಾಮಪೀಡಿತ ಪ್ರದೇಶವೆಂದು ತೀರ್ಮಾನಿಸಿರುವುದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ವಿಚಾರ ನಮ್ಮ ಗಮನಕ್ಕೇನೋ ಬಂದಿದೆ. ಆದರೆ ಅಲ್ಲಿ ಈ ಕೆಲಸಗಳನ್ನು ಕೈಗೊಂಡರೆ ಸರ್ಕಾರಕ್ಕೆ ಇದರಿಂದ ಬರುವ ರಿಟರ್ನ್ 23·4 ಆದ್ದರಿಂದ ಅಲ್ಲಿಯ ರೈತರು ಹೆಚ್ಚು ಕಂದಾಯ, ಕಾಂಟ್ರಿಬ್ಯೂಷನ್ ಕೊಡುವುದಾದರೆ ಮಾಡಬಹುದು. ಈ ವಿಚಾರದಲ್ಲಿ ಈಗಾಗಲೇ ಆ ಶ್ರೀ ನಾಗನಗೌಡರ ನೇತೃತ್ವದಲ್ಲಿ ನೇಮಕ ಮಾಡಲಾಗಿದ್ದ ಸಮಿತಿಯವರು ಒಪ್ಪಿಸಿರುವ ಶಿಫಾರ್ಸುಗಳಿಗೆ ಗಮನ ಕೊಡುವ ಆಲೋಚನೆ ಸರ್ಕಾರಕ್ಕೆ ಇದೆ.

ಶ್ರೀ ಮುದ್ದುರಾಮಯ್ಯ.—ಅಲ್ಲಿಯ ರೈತರು ಈಗ ಎಕರೆ ಒಂದಕ್ಕೆ 500 ರೂಪಾಯಿ ಕಾಂಟ್ರಿಬ್ಯೂಷನ್ ಕೊಡಲು ಮುಂದೆ ಬಂದಿದ್ದಾರೆಂಬ ವಿಚಾರ ಸರ್ಕಾರದವರ ಗಮನಕ್ಕೆ ಬಂದಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೆಲವರು ಹಾಗೆ ಕೊಡಲು ಒಪ್ಪಿರಬಹುದು. ಆದರೆ ಇನ್ನು ಕೆಲವರು ಒಪ್ಪದೆ ಇರಬಹುದು. ಶೇಕಡ 2 ಮೇಲೆ ರಿಟರ್ನ್ ಬಂದರೆ ಸರ್ಕಾರ ಇದನ್ನು ಪರಿಶೀಲಿಸಬಹುದು.

ಶ್ರೀ ಮುದ್ದುರಾಮಯ್ಯ.—ಈ ಪ್ರದೇಶ ಕ್ಷಾಮಪೀಡಿತ ಪ್ರದೇಶವಾದದ್ದರಿಂದ ಇಲ್ಲಿಗೆ ರಿಟರ್ನ್ ಕಡಮೆಯಾದರೂ ತಾವು ಒಂದು ವಿಶೇಷ ರಿಯಾಯಿತಿ ಕೊಟ್ಟು ಸಹಾಯ ಮಾಡಲು ಮನಸ್ಸು ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ತಮ್ಮ ಪ್ರಶ್ನೆಯನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇವೆ.

Nagavalli Amani Tank, Tumkur Taluk (Repairs).

Q.—496. Sri T. N. MUDALAGIRI GOWDA (Kunigal).—

Will the Government be pleased to state :—

(*a*) whether the Nagavalli amani tank of Tumkur taluk has developed a leak in its central bund after the last rainy season ;

---

* Asterisk indicates that the remarks or speeches have not been revised by the Members concerned.

(*b*) whether it is a fact that, every time the tank begins to discharge, a leak develops in the same spot behind the tank;

(*c*) whether it is true that when there was *kodi* this time, the tank bund was endangered as a result of digging a trench there without the guidance of any Engineer;

(*d*) the capacity of this tank;

(*e*) when was the bund restoration and earthwork of this tank last undertaken?

A.—Sri H. M. CHANNABASAPPA (Minister for Industries).—

(*a*) Yes.

(*b*) This has happened on three occasions.

(*c*) No.

(*d*) 1,250 units.

(*e*) The tank was restored in the year 1890-91.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಈ ಕೆಲಸವನ್ನು ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಏನಾದರೂ ತೆಗೆದುಕೊಳ್ಳಬೇಕೆಂಬ ಆಲೋಚನೆ ಇತ್ತೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ಕೆಲಸವನ್ನು ಸಾಮಾನ್ಯ ಬಡ್ಜೆಟ್ಟಿನಲ್ಲೇ ನಡೆಸಲು ಸಾಧ್ಯವಿದೆ.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಈ ಕೆರೆಯ ಸಾಲಾಬಾದು ಕಾಂಗಾರಿಯನ್ನು ಸುಮಾರು 60 ವರ್ಷಗಳಾದಾಗ್ಯೂ ಕೈಗೊಳ್ಳದಿರುವುದರಿಂದ ಈ ಕೆರೆ ಈ ದಿವಸ ಬಹಳ ಹೀನಸ್ಥಿತಿಯಲ್ಲಿದೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೆಲವು ಕಾಲದಿಂದ ಈ ಕೆರೆಯ ಸಾಲಾಬಾದು ಕಾಂಗಾರಿಗಳು ನಿಂತುಹೋಗಿ ಇದು ಅನಾದರಣೆಯ ಸ್ಥಿತಿಯಲ್ಲಿದೆ ಎನ್ನುವ ಅಂಶ ಸರ್ಕಾರದವರ ಗಮನಕ್ಕೂ ಬಂದಿದೆ.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಈ ಏರಿಯ ಬಳಿ ಒಂದು ಮಟ್ಟಿಯನ್ನು ತೋಡಿದ್ದರಿಂದ ಅಲ್ಲಿ ನೀರು ಜಿನುಗುವುದಕ್ಕೆ ಅವಕಾಶವಾಯಿತು ಎನ್ನುವ ಅಂಶ ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇಲ್ಲ. ಆ ಕೆರೆಗೆ ಬಹಳ ಕಾಲದಿಂದಲೂ ಸಾಲಾಬಾದು ಕಾಂಗಾರಿಯಿಲ್ಲದೆ ಹಾಗಾಯಿತು ಎಂದು ನಮಗೆ ತಿಳಿದುಬಂದಿದೆ.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಈಗ ಈ ಕೆರೆಯಲ್ಲಿ 1,250 ಯೂನಿಟ್ ನೀರು ನಿಲ್ಲಲು ಭದ್ರತೆ ಇದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ 1,250 ಯೂನಿಟ್ ನೀರು ಆ ಕೆರೆ ಕೆಪ್ಯಾಸಿಟಿ ಎಂದು ನಿರ್ಧರ ಆದದ್ದು 1908ರಲ್ಲಿ. ಈಗ ಆ ಕೆಪ್ಯಾಸಿಟಿ ಇನ್ನೂ ಕಡಮೆಯಾಗಿರಬೇಕು. ಕೆರೆ 'ಸಿಲ್ಟ್ ಅಪ್' ಆಗಿದೆ.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಆ ಕೆರೆಯ ಸಾಲಾಬಾದು ಕಾಂಗಾರಿ ನಡೆಸದೆ ಇರುವುದರಿಂದ ಆ ಕೆರೆಯ ಪರಿಸ್ಥಿತಿ ಏನಾಗಿರಬಹುದು?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ಕೆಲಸವನ್ನು ರೈತರು ನಡೆಸಬೇಕಾಗಿದೆ. ಹಾಗೆ ಅವರು ಅದನ್ನು ನಡೆಸದೆ ತಾತ್ಸಾರ ಮಾಡಿದರೆ ಆ ಕೆಲಸವನ್ನು ಸರ್ಕಾರದವರೇ ಕೈಗೊಂಡು ಆ ಬಗ್ಗೆ ಬರತಕ್ಕ ವಿಶಿಷ್ಟ ಖರ್ಚು ವೆಚ್ಚಗಳನ್ನು ಆ ರೈತರ ಮೇಲೆ ಹಾಕಿ ವಸೂಲ್ಮಾಡಿಕೊಳ್ಳಲಾಗುತ್ತದೆ.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಇವರೆಗೆ ಆ ರೀತಿ ಏನಾದರೂ ಆಲೋಚನೆ ಮಾಡಿದ್ದೀರಾ?

ಶ್ರೀ ಎಚ್. ಎಂ ಚನ್ನಬಸಪ್ಪ.—ಪ್ರಸಂಗ ಒದಗಿದಾಗ ಮಾಡುತ್ತೇವೆ.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಈ ಲೀಕೇಜ್ ಎಷ್ಟು ಸಾರ್ತಿ ಆಗಿದೆ? ಸುಮಾರು 15-20 ವರ್ಷಗಳಿಂದಲ್ಲೂ ಹೀಗೆ ಲೀಕೇಜಾಗುತ್ತಿದೆ ಎನ್ನುವ ಬಗ್ಗೆ ನಿಮ್ಮಲ್ಲಿ ಏನಾದರೂ ಅಂಕೀ ಅಂಶಗಳಿರುತ್ತವೆಯೇ? ಆ ರೀತಿ ತಮ್ಮಲ್ಲಿ ಯಾವ ಅಂಕೀ ಅಂಶಗಳಿಲ್ಲ ಎಂದರೆ ತಾವು ಏನು ಹೇಳುತ್ತೀರಿ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ವಿವರಗಳೆಲ್ಲಾ ನಮ್ಮಲ್ಲಿರುತ್ತವೆ. 1943ನೆಯ ಅಕ್ಟೋಬರಿನಲ್ಲಿ ಒಂದಾವರ್ತಿ ಲೀಕೇಜ್ ಆಯಿತು. ಆಗ ನಾವು ಅದನ್ನು effective ಆಗಿ ಮುಚ್ಚಿದ್ದೇವೆ. ಪುನಃ 1949ರಲ್ಲಿ ಇನ್ನೊಂದು ಸಲ ಲೀಕಾಯಿತು. ಆಗಲೂ ಸಹ ನಾವು ಅದನ್ನು effective ಆಗಿ ಮುಚ್ಚಿದ್ದೇವೆ. ಕೊನೆಗೆ 1955ರಲ್ಲಿ ಅಕ್ಟೋಬರಿನಲ್ಲಿ ಒಂದಾವರ್ತಿ ಲೀಕಾಯಿತು. ಅದನ್ನು ಸಹ effective ಆಗಿ ಮುಚ್ಚಿದ್ದೇವೆ.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—1955 ರಲ್ಲಿ ಲೀಕೇಜ್ ಕಂಡಾಗ ಅದರಿಂದ ಅಂಥ ಪರಿಣಾಮವೇನೂ ಆಗಲಿಲ್ಲ ಎಂದು ಹೇಳಿದ್ದೀರಿ. ಆ ಸ್ಥಳದಲ್ಲಿದ್ದ ಗ್ರಾಮಸ್ಥರು ಕೆಲವರು ಕೆರೆ ಒಡೆದುಹೋಗುತ್ತದೆ ಎಂದು ಹೇಳಿ ಆ ಗ್ರಾಮ ಬಿಟ್ಟು ತಮ್ಮ ಸಾಮಾನುಗಳನ್ನೆಲ್ಲಾ ತೆಗೆದುಕೊಂಡು ಬೇರೆ ಕಡೆಗೆ ಹೊರಟುಹೋದ ವಿಷಯ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ನನಗೆ ಸಧ್ಯದಲ್ಲಿ ಗೊತ್ತಿಲ್ಲ, ನೋಟೀಸ್ ಕೊಟ್ಟರೆ ಹೇಳುತ್ತೇನೆ.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ನೋಟೀಸ್ ಕೊಟ್ಟಿರುವುದರಿಂದಲೇ ಕೇಳುತ್ತಾ ಇರುವುದು. ಲೀಕೇಜ್ ಇತ್ತು, ಅದರ ದೆಸೆಯಿಂದ ಉಂಟಾದ ಪರಿಣಾಮವೇನು ಎಂದು ಪ್ರಶ್ನೆ ಕೇಳಿದ್ದೇನೆ. ಅಂಥ ಪರಿಸ್ಥಿತಿ ಒದಗಿದ್ದರೂ ಅದರಮೇಲೆ ಸರಿಯಾದ ಒಂದು ಏರ್ಪಾಡು ಮಾಡುವುದಕ್ಕೆ ಏಕೆ ಕಾರ್ಯಕ್ರಮ ಕೈಗೊಳ್ಳಲಿಲ್ಲ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಲೀಕೇಜ್ ಆದ ಮೇಲೆತಾನೆ ಲೀಕ್ ಇದೆ ಎಂಬುದು ಗೊತ್ತಾಗಿ ಕಾರ್ಯಕ್ರಮ ತೆಗೆದುಕೊಳ್ಳುವುದು! ಲೀಕೇಜ್ ಆದನಂತರ ಕೂಡಲೇ ಕಾರ್ಯಕ್ರಮ ತೆಗೆದುಕೊಂಡು ಲೀಕೇಜ್ ಮುಚ್ಚಿದ್ದೇವೆ.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಕೋಡಿಬಿದ್ದ ಕಾಲದಲ್ಲಿ ಟೆಕ್ನಿಕಲ್ people ಸಲಹೆ ತೆಗೆದುಕೊಳ್ಳದೇ ಅಲ್ಲಿ ಒಂದು ಕಂದಕವನ್ನು ಹೊಡೆದುದರಿಂದ ಈ ಅಲ್ಲೋಲ ಕಲ್ಲೋಲ ಪರಿಸ್ಥಿತಿಗೆ ಅವಕಾಶವಾಯಿತಲ್ಲವೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದಕ್ಕೆ ಉತ್ತರ ಕೊಟ್ಟಿದ್ದೇವೆ.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಈ ಸಾರಿ ಜಾಗ್ರತೆ ಪರಿಶೀಲನೆಗೆ ತೆಗೆದುಕೊಂಡು ಇದರ maintenance ಗೆ ತಕ್ಕ ಏರ್ಪಾಡು ಮಾಡುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗಾಗಲೇ 21 ಸಾವಿರ ರೂಪಾಯಿನ ಅಂದಾಜು ಮಂಜೂರಾಗಿದೆ. ನಾನೂ ಕೂಡ ಅಲ್ಲಿಗೆ ಹೋಗಿ ತಮ್ಮ ಹಾಗೆಯೇ ನೋಡಿದ್ದೇನೆ. ಆದಷ್ಟು ಜಾಗ್ರತೆ ಕೆಲಸ ಮಾಡಿಸುತ್ತೇವೆ.

ಶ್ರೀ ಬಿ. ಹುಚ್ಚೇಗೌಡ.—ಇದು ಮೇಜರ್ ಕೆರೆ, ರಸ್ತೆ ಪಕ್ಕದಲ್ಲಿ ಇದೆ. ವರ್ಷಕ್ಕೆ ಒಂದು ಸಾರಿ ಆದರೂ ಅಸಿಸ್ಟೆಂಟ್ ಇಂಜನಿಯರಾಗಲಿ, ಎಕ್ಸಿಕ್ಯೂಟೀವ್ ಇಂಜನಿಯರಾಗಲಿ ತನಿಖೆಮಾಡಿ ರಿಪೋರ್ಟ್ ಮಾಡಿದ್ದಾರೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ರೆವಿನ್ಯೂ ಡಿಪಾರ್ಟ್‌ಮೆಂಟಿನ ಮೇಲ್ವಿಚಾರಣೆಯಲ್ಲಿದೆ ಎಂಬುದು ಮಾನ್ಯ ಸದಸ್ಯರಿಗೂ ಗೊತ್ತಿದೆ ಎಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಬಿ. ಹುಚ್ಚೇಗೌಡ.—ಅಂದಾಕ್ಷಣಕ್ಕೆ ಆ ರೀತಿ ಮಾಡಬಾರದು ಎಂದಿದೆಯೇ ? ಇಂಜನಿಯರಿಂಗ್ ಇಲಾಖೆಯ ಎಕ್ಸಿಕ್ಯೂಟಿವ್ ಇಂಜನಿಯರು ಈ ರೀತಿ ಡಿಫೆಕ್ಟ್ ಇದೆ ಎಂದು ವರದಿಮಾಡಿ ಎಷ್ಟು ವರ್ಷಗಳಾದವು ?

ಶ್ರೀ ಎಚ್. ಎಂ. ಚನ್ನಬಸಪ್ಪ.—1943 ನೇ ಇಸವಿಯಲ್ಲಿ ಲೀಕೇಜ್ ಇದೆ ಎಂದು ಮೊದಲು ವರದಿ ಆಯಿತು, ಆಗ ಮುಚ್ಚಿದೆವು. 1949 ರಲ್ಲಿ ಒಂದು ಸಾರಿ, 1955 ರಲ್ಲಿ ಒಂದು ಸಾರಿ ಲೀಕೇಜ್ ಆಗಿದೆ.

ಶ್ರೀ ಬಿ. ಹುಚ್ಚೇಗೌಡ.—ಹಾಗಾದರೆ ಆ ರೀತಿ ಆಗಿದ್ದ ಲೀಕೇಜನ್ನು ಸರಿಯಾಗಿ ಮುಚ್ಚಲಿಲ್ಲ ಎಂದು ತಿಳಿದುಕೊಳ್ಳೋಣವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸರಿಯಾಗಿ ಮುಚ್ಚಿದ್ದರೂ ಕೂಡ, ಇನ್ನೂ ಅನೇಕ ಕಾರಣಗಳು ಇವೆ. ಅಲ್ಲಿ ಕೆಲವು ಮರಗಳು ಇದ್ದವು. ಆ ಮರಗಳನ್ನು ಕಡಿದಿದ್ದರಿಂದ ಆ ಮರಗಳ ಬೇರುಗಳು ನಶಿಸಿಹೋಗಿ ಆ ಮೂಲಕ ನೀರು ಹೋಗುತ್ತಾ ಇತ್ತು.

ಶ್ರೀ ಬಿ. ಹುಚ್ಚೇಗೌಡ.—ಅದನ್ನು ಕಂಡು ಹಿಡಿಯುವುದಕ್ಕೆ ಇಷ್ಟು ವರ್ಷ ಬೇಕಾಯಿತೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಬೇರುಗಳು ಎಲ್ಲೆಲ್ಲಿ ಒಳಗೆ ಹೋಗಿವೆ ಎಂಬುದು ಸಾಮಾನ್ಯವಾಗಿ ಗೊತ್ತಾಗುವುದಿಲ್ಲ.

Mr. SPEAKER.—You are discussing the question. You are not asking for information.

Sri B. HUTCHE GOWDA.—When was the leakage found out ?

Sri H. M. CHANNABASAPPA.—That has been answered.

ಶ್ರೀ ಬಿ. ಹುಚ್ಚೇಗೌಡ.—ಯಾವ ಒಂದು ಕೆರೆ ಏರಿ ಅಗಲ ಅಥವಾ ತೂಬು ಅಗಲ ಅದರಲ್ಲಿ ಡಿಫೆಕ್ಟ್ ಇದ್ದೇ ಇರಬೇಕು ಎಂಬುದು ಸರ್ಕಾರದ ಅಭಿಪ್ರಾಯವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಾಗೆ ಇರಬಾರದು ಎಂಬುದೇ ನಮ್ಮ ಆಶಯ.

Ramasamudra Tank, Chamarajanagar Taluk (Repairs).

Q.—545. Sri U. M MADAPPA (Chamarajanagar).—

Will the Government be pleased to state:—

(*a*) whether estimate has been prepared for repairing the Ramasamudra Tank in Chamarajanagar Taluk;

(*b*) if so, the amount of the estimate;

(*c*) the number of acres of land under cultivation below the tank;

(*d*) whether the raiyats have executed mutchalika to pay the contribution;

(*e*) when the estmate was prepared;

(*f*) the date on which the raiyats executed the mutchalika ?

A.—Sri H. M. CHANNABASAPPA (Minister for Industries).—

(*a*) Yes.

(*b*) Rs. 1,08,300.

(*c*) 1,650 acres and 36 guntas.

(*d*) Yes.

(*e*) 1953-54.

(*f*) On 12th September 1954.

ಶ್ರೀ ಯು. ಎಂ. ಮಾದಪ್ಪ.—ಈ ಅಂದಾಜು ಯಾವ ಆಫೀಸಿನಲ್ಲಿದೆ ಸ್ವಾಮಿ, ಸೂಪರಿಂಟೆಂಡಿಂಗ್ ಇಂಜನಿಯರ ಆಫೀಸಿನಲ್ಲಿದೆಯೋ, ಚೀಫ್ ಇಂಜನಿಯರ ಆಫೀಸಿನಲ್ಲಿದೆಯೋ ಅಥವಾ ತಮ್ಮ ಹತ್ತಿರ ಇದೆಯೋ ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಚೀಫ್ ಇಂಜನಿಯರ ಆಫೀಸಿನಲ್ಲಿದೆ.

ಶ್ರೀ ಯು. ಎಂ. ಮಾದಪ್ಪ.—ಚೀಫ್ ಇಂಜನಿಯರ ಆಫೀಸಿಗೆ ಬಂದು ಎಷ್ಟು ದಿವಸವಾಯಿತು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ಸಮಾಚಾರ ಈಗ ಸಧ್ಯದಲ್ಲಿ ಇಲ್ಲ.

ಶ್ರೀ ಯು. ಎಂ. ಮಾದಪ್ಪ.—ಇದು ರೆಮ್ಯೂನರೇಟೀವ್ ಆಗಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹೌದು, ರೆಮ್ಯೂನರೇಟೀವ್ ಆಗಿದೆ.

ಶ್ರೀ ಯು. ಎಂ. ಮಾದಪ್ಪ.—ಈ ಸಾರಿ ಕೆಲಸ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ಸಾರಿ ಕೆಲಸ ತೆಗೆದುಕೊಳ್ಳುವುದನ್ನು ಪರ್ಯಾಲೋಚನೆ ಮಾಡುತ್ತೇವೆ.

ಶ್ರೀ ಬಿ. ರಾಚಯ್ಯ.—ಈ ಕೆರೆಯ ನಾಲೆ ದುರಸ್ತು ಮಾಡುವುದು ಕೂಡ ಈ ಮೊಬಲಗಿನಲ್ಲಿ ಸೇರಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾಲೆ ದುರಸ್ತು ಮಾಡುವುದು ಸೇರಿಲ್ಲ. ಕೆರೆ ಕೋಡಿಯನ್ನು ಒಂದು ಅಡಿ ಎತ್ತರಿಸಬೇಕೆಂದು ಅಂದಾಜಾಗಿದೆ.

ಶ್ರೀ ಬಿ. ರಾಚಯ್ಯ.—ಒಂದು ಅಡಿ ಎತ್ತರಿಸುವುದರಿಂದ ಕೆರೆ ಏರಿ ಭದ್ರವಾಗಿರುತ್ತದೆ ಎಂದು ತಮ್ಮ ಅಭಿಪ್ರಾಯವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದರಿಂದ ಏನಾದರೂ ಏರಿಗೆ ದುಷ್ಪರಿಣಾಮವಾಗುವುದಿದ್ದರೆ ಆ ರೀತಿ ಆಗದೆ ಇರುವಂತೆ ತಕ್ಕ ಬಂದೋಬಸ್ತು ಮಾಡಬೇಕೆಂದು ಮಾಡಿದ್ದೇವೆ.

ಶ್ರೀ ಬಿ. ರಾಚಯ್ಯ.—1954ನೇ ಇಸವಿಯಲ್ಲಿ ಅಂದಾಜು ತಯಾರಾದರೂ ಇನ್ನು ಕೂಡ ಇದನ್ನು ಮಂಜೂರುಮಾಡದೇ ಇರುವುದಕ್ಕೆ ಕಾರಣವೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸ್ವಲ್ಪಮಟ್ಟಿಗೆ ಪತ್ರವ್ಯವಹಾರ ನಡೆದದ್ದರಿಂದ ನಿಧಾನವಾಗಿದೆ. ಈ ವರ್ಷವೇ ಕೆಲಸ ಪ್ರಾರಂಭಮಾಡುವ ವಿಷಯವನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇವೆ.

Chikkakere of Sulibele, Hoskote Taluk (Repairs).

Q.—592. Srimathi LAKSHMIDEVI RAMANNA (Hoskote-Anekal).—

Will the Government be pleased to state :—

(*a*) when the estimate for repairing the Chikkakere of Sulibele village in Hoskote Taluk was prepared ;

(*b*) the reasons for the delay in taking up the abovesaid tank work ?

A.—Sri H. M. CHANNABASAPPA (Minister for Industries).—

(*a*) In 1952.

(*b*) Several alternative proposals are being examined and the estimate has still to be finalised.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—(ಬಿ) ಪ್ರಶ್ನೆಗೆ ಉತ್ತರವಾಗಿ ಅನೇಕ ಬೇರೆ ಬೇರೆ ಅಂದಾಜುಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ಹೇಳಿದ್ದೀರಿ. ಈ ಅಂದಾಜಿನ ಪರಿಶೀಲನೆ ಯಾರ ಸಲಹೆಮೇಲೆ ನಡೆದದ್ದು?

*ಶ್ರೀ ಎಚ್. ಎಂ. ಚನ್ನಬಸಪ್ಪ.—ನಿನ್ನೆ ದಿವಸ ಬೇರೆ ಒಂದು ಪ್ರಶ್ನೆ ಬಂದಾಗ ಇದೇ ವಿಷಯದ ಮೇಲೆ ಉತ್ತರ ಕೊಟ್ಟೆ. ಎರಡು ಅಂದಾಜುಗಳು ತಯಾರಾಗಿವೆ. ಒಂದಕ್ಕೆ 40 ಸಾವಿರ ರೂಪಾಯಿ ಕಾಂಪೆನ್ಸೇಷನ್ ಕೊಡಬೇಕೆಂದು ವ್ಯವಸ್ಥೆಮಾಡಿದ್ದೇವೆ. 40 ಸಾವಿರ ರೂಪಾಯಿ ಕಾಂಪೆನ್ಸೇಷನ್ ಕೊಡುವುದರ ಜೊತೆಗೆ ಆ ಜಮೀನಿನ ಮಣ್ಣು ತೆಗೆದು ಅದರ ಎತ್ತರ ಹೆಚ್ಚಿಸಿದರೆ ಮುಳುಗಡೆ ಆಗುವುದು ಕಮ್ಮಿ ಆಗುತ್ತದೆ ಎಂದು ಅಂದಾಜುಮಾಡಿದೆ.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ಈಗಾಗಲೇ ನಾಲ್ಕು ವರ್ಷಗಳಿಂದ ಪರಿಶೀಲನೆಯಲ್ಲಿದೆ. ಆಖೈರು ತೀರ್ಮಾನ ತೆಗೆದುಕೊಳ್ಳಲಿಕ್ಕೆ ಇನ್ನು ಎಷ್ಟು ವರ್ಷ ಬೇಕಾಗುತ್ತದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಉತ್ಪತ್ತಿ ಎಷ್ಟು ಬರುತ್ತದೆ, ರೈತರು ಎಷ್ಟು ಕಾಂಟ್ರಿಬ್ಯೂಷನ್ ಕೊಡುತ್ತಾರೆ ಎನ್ನುವುದರಮೇಲೆ ಹೋಗುತ್ತದೆ. ಈಗಿರುವ ರೀತ್ಯಾ ಶೇಕಡ 1·8 ಬರುತ್ತದೆ ಎಂದು ನಿರ್ಧಾರವಾಗಿದೆ. ಇನ್ನೂ ಸ್ವಲ್ಪ ಹೆಚ್ಚಿಗೆ ಬಂದರೆ ಬೇಗ ಸಹಾನುಭೂತಿಯಿಂದ ಪರಿಶೀಲನೆ ಮಾಡುವುದಕ್ಕೆ ಅವಕಾಶವಾಗುತ್ತದೆ.

Sri A. V. NARASIMHA REDDY.—What is the estimated cost of desilting ?

Sri H. M. CHANNABASAPPA.—Desilting will cost about Rs. 3.16 lakhs.

Sri A. V. NARASIMHA REDDY.—For repairing the tank ?

Sri H. M. CHANNABASAPPA.—To improve the capacity of the tank it will cost Rs. 1.09 lakhs.

Sri A. V. NARASIMHA REDDY.—Which is more remunerative ?

Sri H. M. CHANNABASAPPA.—Naturally the second one.

Sri A. V. NARASIMHA REDDY.—Therefore, in view of the remunerativeness of the tank. . . .

Sri H. M. CHANNABASAPPA.—I said comparatively it is advantageous.

*ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ನಾನೂ ಕೂಡ ವಿದ್ಯಾಮಂತ್ರಿಗಳಾದ ಶ್ರೀ ರಾಮಚಂದ್ರರಾಯರು ಹೇಳಿದ ಮಾತುಗಳನ್ನು ಅನುಮೋದಿಸುತ್ತೇನೆ. ಶ್ರೀ ನಂಜಯ್ಯ ಶೆಟ್ಟರು ಮಧುಗಿರಿಯವರು. ಅವರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದರು. ಅವರು ನನಗೂ ಕೂಡ ಬಹಳ ಪರಿಚಿತರು. ಸಾರ್ವಜನಿಕ ಕಾರ್ಯಗಳಲ್ಲಿ ಯಾವಾಗಲೂ ಮುಂದೆ ಇರುತ್ತಿದ್ದರು. ಅವರು ಅನೇಕ ಧರ್ಮ ಕಾರ್ಯಗಳನ್ನು ಮಾಡಿದ್ದಾರೆ. ಇಂಥವರ ನಿಧನದಿಂದ ನಮಗೆ ಉಂಟಾಗಿರತಕ್ಕ ಸಂತಾಪವನ್ನು ನಾನು ವ್ಯಕ್ತಪಡಿಸುತ್ತೇನೆ. ಭಗವಂತನು ಅವರ ಕುಟುಂಬವರ್ಗದವರಿಗೆ ಅವರ ವಿಯೋಗದಿಂದ ಉಂಟಾಗಿರುವ ದುಃಖವನ್ನು ಭರಿಸಲು ಶಕ್ತಿಯನ್ನೀಯಲಿ ಎಂದು ಪ್ರಾರ್ಥಿಸುತ್ತೇನೆ.

ಶ್ರೀ ಸಿ. ಟಿ. ಹನುಮಂತಯ್ಯ (ಪಾವಗಡ—ಅನುಸೂಚಿತ ಜಾತಿಗಳು).—ಸ್ವಾಮಿ, ಶ್ರೀ ನಂಜಯ್ಯ ಶೆಟ್ಟಿಯವರು ಮಧುಗಿರಿಯವರು. ಅವರು ಈಗ ಎರಡು ಮೂರು ತಿಂಗಳಿಂದಲೂ ಖಾಯಿಲೆಯಿಂದ ಇದ್ದು ಇಲ್ಲಿನ ಆಸ್ಪತ್ರೆಯಲ್ಲಿ ಗುಣಹೊಂದುತ್ತಿದ್ದರು. ಆದರೆ ದೈವೇಚ್ಛೆಯಿಂದ ಅವರು ಪರಲೋಕಕ್ಕೆ ತೆರಳಿದರು. ಅವರು ಬಹಳ ಹಳೆಯ ಕಾಂಗ್ರೆಸ್ ಕೆಲಸಗಾರರು ಮತ್ತು 1939 ನೇ ಇಸವಿಯಲ್ಲಿ ನಡೆದ ಅರಣ್ಯ

ಸತ್ಯಾಗ್ರಹದಲ್ಲಿ ಭಾಗವಹಿಸಿ ಅನೇಕ ಕಷ್ಟ ನಷ್ಟಗಳನ್ನು ಅನುಭವಿಸಿದ್ದಾರೆ. ಶ್ರೀ ನಂಜಯ್ಯ ಶೆಟ್ಟಿಯವರು ನಮಗೆ ಹೆಚ್ಚಿನ ಸೇವೆಯನ್ನು ಸಲ್ಲಿಸಿದ್ದಾರೆ. ತುಮಕೂರು ಜಿಲ್ಲೆಯಲ್ಲಿ ಹಿರಿಯ ಕಾಂಗ್ರೆಸ್ ಮನುಷ್ಯರು ಎಂದರೆ ಮದುಗಿರಿ ನಂಜಯ್ಯ ಶೆಟ್ಟಿಯವರು. ಇವರು ನಮ್ಮ ಹರಿಜನ ಸೇವಕ ಸಂಘಕ್ಕೆ ಮತ್ತು ಮಧುಗಿರಿಯಲ್ಲಿ ಹರಿಜನರಿಗಾಗಿ ಒಂದು ಹಾಸ್ಟೆಲನ್ನು ತೆರೆಯುವ ಸಂದರ್ಭದಲ್ಲಿ ಅಮೋಘವಾದ ಸೇವೆಯನ್ನೂ ಸಲ್ಲಿಸಿದ್ದಲ್ಲದೆ ನಮಗೆ ಹಣಸಹಾಯವನ್ನೂ ಮಾಡಿದರು. ಹರಿಜನ ವಿದ್ಯಾರ್ಥಿ ನಿಲಯಕ್ಕೆ ಯಾರೂ ಕಟ್ಟಡವನ್ನು ಕೊಡಲಿಲ್ಲ. ಆಗ ಶ್ರೀ ನಂಜಯ್ಯ ಶೆಟ್ಟಿಯವರ ಹತ್ತಿರ ಹೋಗಿ ನಮ್ಮ ಕಷ್ಟವನ್ನು ತಿಳಿಸಲಾಗಿ ತಾವೇ ಮುಂದೆ ಬಂದು ತಮ್ಮ ಕಟ್ಟಡದಲ್ಲಿ ವಿನ್ಯಾರ್ಥಿ ನಿಲಯವನ್ನು ನಡೆಸಲು ಅವಕಾಶ 'ಕೊಟ್ಟರು. ಆವಾಗ ಕೆಲವರು ನೀವು ಹರಿಜನರಿಗೆ ಮನೆಯನ್ನು ಕೊಡಕೂಡದಾಗಿತ್ತು, ನಿಮಗೆ ಸಮಾಜ ಬಹಿಷ್ಕಾರ ಹಾಕುತ್ತೇವೆ ಎಂದು ಬೆದರಿಸಿದರು. ಆಗ ಅವರು ನಾನು ಕಾಂಗ್ರೆಸ್ ಸಂಸ್ಥೆಗೆ ಸೇರಿದವನು, ಕಾಂಗ್ರೆಸ್ ತತ್ವಗಳನ್ನು ಅನುಸರಿಸುತ್ತಿದ್ದೇನೆ, ನಮಗೆ ಕೋಮುವಾರು ಭಾವನೆ ಇಲ್ಲ ಎಂದು ಹೇಳಿದರು. ಇಂಥ ಮಹನೀಯರು ಈ ಲೋಕವನ್ನು ಬಿಟ್ಟು ಪರಲೋಕಕ್ಕೆ ತೆರಳಿದ್ದಾರೆ. ಅವರ ಆತ್ಮಕ್ಕೆ ದೇವರು ಶಾಂತಿಯನ್ನೀಯಲಿ ಎಂದೂ ಮತ್ತು ಅವರ ಮನೆಯವರಿಗೆ ಉಂಟಾಗಿರುವ ಅಪಾರವಾದ ದುಃಖವನ್ನು ಭರಿಸಲು ಅವರಿಗೆ ಶಕ್ತಿಯನ್ನು ಕೊಡಲಿ ಎಂದೂ ಭಗವಂತನನ್ನು ಪ್ರಾರ್ಥಿಸುತ್ತೇವೆ.

ಶ್ರೀ ಟಿ. ಎನ್. ಮೂಡಲಗಿರಿಗೌಡ (ಕುಣಿಗಲ್).—ಸ್ವಾಮಿ, ಶ್ರೀ ನಂಜಯ್ಯ ಶೆಟ್ಟಿಯವರ ನಿಧನವಾರ್ತೆಯನ್ನು ಕೇಳಿ ವೈಯಕ್ತಿಕವಾಗಿ ನನಗೆ ಬಹಳ ವ್ಯಸನವುಂಟಾಗಿದೆ. ಶ್ರೀ ನಂಜಯ್ಯ ಶೆಟ್ಟರು ನನಗೆ 20 ವರ್ಷಗಳಿಂದ ಪರಿಚಯಸ್ಥರು. ಅವರು ಸುಮಾರು ಏಳೆಂಟು ವರ್ಷಗಳಕಾಲ ಅಸೆಂಬ್ಲಿಯಲ್ಲಿ ನನ್ನ ಜೊತೆಯಲ್ಲಿದ್ದರು. ಅವರು ಕಾಂಗ್ರೆಸ್ ಪಕ್ಷಕ್ಕೆ ಸೇರಿದವರು. ಕಾಂಗ್ರೆಸ್ ಪಕ್ಷದಲ್ಲಿ ಸಂಶಯಗಳೇನಾದರೂ ಬಂದರೆ ಅಂಥ ಸಂದರ್ಭಗಳಲ್ಲಿ ನಂಜಯ್ಯ ಶೆಟ್ಟರು ಸಭೆಯವರೆಲ್ಲ ಮೆಚ್ಚುವಂತೆ ತೂಕವಾದ ನಿರ್ಧಾರವನ್ನೂ ತೀರ್ಮಾನವನ್ನೂ ಹೇಳುತ್ತಿದ್ದರು. ಅಂಥ ವ್ಯಕ್ತಿಗಳು ಮಧುಗಿರಿ ಟೌನಿನಲ್ಲಿ ಆ ಊರಿಗೆಲ್ಲ ಒಬ್ಬ ಯಜಮಾನರಿದ್ದ ಹಾಗೆ, ಯಜಮಾನಿಕೆಯನ್ನು ವಹಿಸಿಕೊಂಡಿದ್ದರೋ ಏನೋ ಎನ್ನುವಂತೆ 30 ಸಹಸ್ರ ಪ್ರಜಾಸಂಖ್ಯೆ ಇರತಕ್ಕ ಆ ಊರಿನಲ್ಲಿ ಜೀವನವನ್ನು ನಡಿಸಿಕೊಂಡು ಬಂದರು. ಅವರು ಸರ್ವರಲ್ಲಿಯೂ ವಿಶ್ವಾಸವನ್ನು ಗಳಿಸಿಕೊಂಡಿದ್ದರು ಎಂದು ತಿಳಿಸಬೇಕಾಗಿದೆ. ಮಧುಗಿರಿಯಲ್ಲಿ ಕಳೆದ ಸಾಲಿನಲ್ಲಿ ನಡೆದ ಎಂ.ಪಿ.ಸಿ.ಸಿ. ಅಧಿವೇಶನ ನಡೆಯಿತು. ಆ ಕಾಲದಲ್ಲಿ ಆ ಸಮಿತಿಯ ಛೇರ್ಮನ್ನರಾಗಿ, ಅವರಿಗೆ ವಯಸ್ಸಾಗಿ ದೇಹಸ್ಥಿತಿ ಸರಿಯಾಗಿಲ್ಲದೇ ಇದ್ದರೂ ಕೂಡ ಕಾಂಗ್ರೆಸ್‌ನಲ್ಲಿ ಅವರಿಗಿದ್ದ ಭಕ್ತಿ, ದೇಶಪ್ರೇಮ, ಇವುಗಳಿಂದ ಅವರು ಅಲ್ಲಿ ಬಂದು ಕುಳಿತು ಮಾತನಾಡಿದ್ದನ್ನು ಕಂಡು ಅಲ್ಲಿ ಸೇರಿದ್ದ ಜನರಿಗೆ ಬಹಳ ಆಶ್ಚರ್ಯವಾಯಿತು, ಅಂಥ ದೇಶಭಕ್ತರು ಮತ್ತು ದೇಶದ ಸ್ವಾತಂತ್ರ್ಯಕ್ಕೋಸ್ಕರವಾಗಿ ಹೋರಾಡಿದವರು, ಮತ್ತು ಅಷ್ಟು ಹಿರಿಯರಾದವರು ನಮ್ಮಲ್ಲಿ ಇದ್ದುದು ಹೆಚ್ಚಿನ ವಿಷಯ. ನಮಗೆಲ್ಲರಿಗೂ ಕೂಡ ಸಮಯದಲ್ಲಿ ತಿಳಿವಳಿಕೆ ಮತ್ತು ಬುದ್ಧಿಯನ್ನು ಹೇಳತಕ್ಕ ಯೋಗ್ಯತೆ ಅವರಿಗಿತ್ತು ಎಂದು ಭಾವಿಸುತ್ತೇನೆ. ಅಂಥ ಮಹನೀಯರು ನಮ್ಮನ್ನಗಲಿ ಹೋಗಿದ್ದಾರೆ. ಭಗವಂತನು ಅವರ ಆತ್ಮಕ್ಕೆ ಶಾಂತಿಯನ್ನುಂಟುಮಾಡಲಿ ಎಂದು ನಾನೂ ಸಹ ಇದರಲ್ಲಿ ಭಾಗಿಯಾಗುತ್ತೇನೆ.

Mr SPEAKER.—The Chair associates itself with the sentiments and feelings expressed by the Hon'ble Minister Sri A. G. Ramachandra Rao and the other Hon'ble Members who followed him. I request the Hon'ble Members to rise up for a minute as a mark of respect to the departed soul.

The House stood in silence for a minute.

Member's representations.

Sri S. GOPALA GOWDA (Sagar—Hosanagar).—Sir, I would like to bring to the notice of the Chair that the Hon'ble Chief Minister yesterday made a statement on the floor of the House with regard to the R.M.D.C. He stated that he was to make a statement, but in view of the fact that the R.M.D.C. had a case pending in a court of law, he said that it would be *sub judice* and that he could not make such a statement. He observed that some of the Members who spoke on the Bill and about the Prize Competitions of the R.M.D.C. have made reckless allegations and so on. In this matter, my contention is, at this time the Prize Competition Amendment Bill was introduced, myself and some of the Members I think made some relevant remarks about R.M.D.C. I do not think our discussion in any way was *sub judice*. We only requested the Government to come out with a factual report about R.M.D.C. affairs. So, in my opinion, the contention of the Chief Minister that the case about the R.M.D.C. is pending in a court of law would be *sub judice* and that he would not make a statement with regard to the affairs of the R.M.D.C. is untenable. I would request the Chair to give a statement clarifying the situation whether it would be *sub judice* or not.

Mr. SPEAKER.—Next item of the Agenda.

MYSORE MINES (AMENDMENT) BILL, 1956.

Motion to extend time for presentation of Select Committee Report.

Sri T. CHANNIAH (Minister for Local Self-Government and Public Health).—Sir, I beg to move:

"That the time appointed for the presentation of the report of the Select Committee on the Mysore Mines (Amendment) Bill, 1955, be extended and that the report be presented before the close of the present Session of the Assembly."

Mr. SPEAKER.—Motion moved:

"That the time appointed for presentation of the report of the Select Committee on the Mysore Mines (Amendment) Bill, 1955, be extended and that the report be presented before the close of the present session of the Assembly."

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್ (ಟಿ-ನರಸೀಪುರ).—ಮುಖ್ಯವಾಗಿ ಎಷ್ಟು ಸಲ ಸೆಲೆಕ್ಟ್ ಕಮಿಟಿ ಅವರಿಗೆ ಕೊಟ್ಟ ಅವಧಿಯೊಳಗೆ ಸೇರಿತ್ತು; ಒಂದು ಸಲವಾದರೂ ಸೇರಿತ್ತೇ ಅಥವಾ ಒಂದು ಸಲವೂ ಸೇರದೆ extension of time ಎಂದರೆ ಹೇಗೆ ಎಂಬುದನ್ನು ಹೇಳಬೇಕು. Extension ಯಾಕೆ ಬೇಕು ಎಂಬುದನ್ನು ಹೇಳಬೇಕಾಗಿತ್ತು. ಅದನ್ನು ಬಿಟ್ಟು ಸುಮ್ಮನೆ ಈ ಸೂಚನೆಯನ್ನು ಮಂಡಿಸಬಾರದಾಗಿತ್ತು.

Sri K. S. VASAN (Kolar Gold Fields).—Sir, when the Bill was referred to the Select Committee, it was directed that the Report of the Select Committee should be submitted very early. I am one of the Members of the Select Committee and I can say that the Select Committee has not met even once. Now there is the motion for permitting the report to be submitted before the close of this present Session. I would like to know whether, after the submission of the report of the Select Committee, the Bill would be taken up in the present Session of the House alone or not.

Sri T. CHANNIAH.—Sir, I think the Select Committee will first of all meet and it will present the report before this House. I think it has not yet met. It will meet in due course. Why it has not met so far, I will be able to inform the House only after ascertaining the position.

Mr. SPEAKER.—The question is:

"That the time appointed for the presentation of the report of the Select Committee on the Mysore Mines (Amendment) Bill, 1955, be extended and that the report be presented before the close of the present Session of the Assembly."

The motion was adopted.

Sri K. S. VASAN.—Sir, I have not got a reply to my request, Sir, whether the Bill will be taken up in the present Session after the report of the Select Committee is submitted.

Mr. SPEAKER.—That is why the Government is asking for extension of the time.

House Committee.

Motion for Election.

Sri T. CHANNIAH (Minister for Local Self-Government and Public Health).—Sir, I beg to move:

"That this Assembly do proceed to the election of six members to the House Committee in accordance with sub-rule 2 of rule 175 of the Rules of Procedure and Conduct of Business in the Mysore Legislative Assembly."

Mr. SPEAKER.—The question is:

"That this Assembly do proceed to the election of six members to the House Committee in accordance with sub-rule 2 of rule 175 of the Rules of Procedure and Conduct of Business in the Mysore Legislative Assembly."

The motion was adopted.

Mr. SPEAKER.—The Chair desires to inform the House that for the purpose of election of six members to the House Committee, the Office

of the Secretary will be open to receive notice of candidature up to 3 P.M. on Wednesday, the 21st March 1956 and that the election, if necessary, will take place on Friday, the 23rd March 1956, in the Assistant Secretary's room between the hours of 3 P.M. and 5 P.M. The election will be conducted as laid down in rule 175 of the Rules of Procedure and Conduct of Business in the Mysore Legislative Assembly in accordance with the principle of proportional representation by means of the single transferable vote.

Public Health Board.

Motion for election of two Members.

Sri T. CHANNIAH (Minister for Public Health and Local Self-Government).—Sir, I beg to move :

> " That this Assembly do proceed to the election of two members to the Public Health Board in accordance with sub-section 1 (*d*) of Section 4 of the Mysore Public Health Act, 1944."

Mr. SPEAKER.—The question is :

> " That this Assembly do proceed to the election of two members to the Public Health Board in accordance with sub-section 1 (*d*) of Section 4 of the Mysore Public Health Act, 1944."

The motion was adopted.

Mr. SPEAKER.—The Chair desires to inform the House that for the purpose of election of two members to the Public Health Board the office of the Secretary will be open to receive notice of candidature up to 3 P.M. on 22nd March 1956 and that the election, if necessary, will take place on Saturday, the 24th March 1956, in the Assistant Secretary's room between the hours of 9 A.M. and 11 A.M. The election will be conducted according to the majority system of vote.

Board of Industries.

Motion for Election of a Member

Sri T. CHANNIAH (Minister for Public Health and Local Self-Government).—Sir, I beg to move :

> " That this Assembly do proceed to the election of one member to the Board of Industries in accordance with Section 4 of the Mysore Aid to Industries Act, 1951 in the manner set out in rule 11 of the Mysore State Aid to Industries Rules, 1951."

Mr. SPEAKER.—The question is :

> " That this Assembly do proceed to the election of one member to the Board of Industries in accordance with Section 4 of the Mysore Aid to Industries Act, 1951 in the manner set out in rule 11 of the Mysore State Aid to Industries Rules 1951."

The motion was adopted.

Mr. SPEAKER.—The Chair desires to inform the House that for the purpose of election of one member the Board of Industries, the office of the Secretary will be open to receive notice of candidature up to 3 P.M. on 23rd March 1956 and that the election, if necessary, will take place on Sunday, the 25th March 1956, in the Assistant Secretary's room between the hours 3 P.M. and 5 P.M. The election will be conducted as laid down in rule 11 of the Mysore State Aid to Industries Rules, 1951, in accordance with the principle of proportional representation by means of the single transferable vote.

BUDGET FOR 1956-57—DEMANDS FOR GRANTS.

Mr. SPEAKER.—Next item of business is Demands. There are four Demands, *viz.*, Nos. 6, 16, 39 and 43. As Sri H. Siddaveerappa, the Home Minister, is unable to participate in the discussion on all these Demands, he desires that Demand No. 16 be taken

(MR. SPEAKER.)

up first ; Sri H. M. Channabasappa will reply to the debate on the other three Demands.

Regarding time-limit, I feel that 1½ hours may be allotted for Demand No. 16 and the rest of the time may be divided between the other three Demands.

MEMBERS.—Yes.

DEMAND No. 16—POLICE.

29. POLICE.

Mr. SPEAKER.—Motion moved :

"That a sum not exceeding Rs. 1,27,17,860 be granted to the Government to defray the charges which will come in course of payment during the year ending 31st day of March 1957, in respect of 'Police'."

* **ಶ್ರೀ ಎಸ್. ಶ್ರೀನಿವಾಸಯ್ಯಂಗಾರ್** (ಟಿ. ನರಸೀಪುರ).—ಸ್ವಾಮಿ, ವರ್ಷೇ ವರ್ಷೇ ಈ ಕತ್ತರಿ ನಿರ್ಣಯಗಳನ್ನು ಮಂಡಿಸತಕ್ಕ ಕಾಲದಲ್ಲಿ ನಾವು ಪೋಲೀಸ್ ಬಾಬಿನ ಖರ್ಚು ಕಡಮೆ ಮಾಡಬೇಕು, ಬರಬರುತ್ತಾ ಬಹಳ ಹೆಚ್ಚಾಗಿದೆ ಎಂದು ಹೇಳುತ್ತಿದ್ದೇವೆ. ಈಗ ನಾಲ್ಕು ವರ್ಷಗಳಿಂದಲೂ ಇದನ್ನು ಹೇಳುತ್ತಿದ್ದೇವೆ. ಸರ್ಕಾರದವರೂ ಸಹ ಒಂದೇ ರೀತಿಯಾದ ಜವಾಬನ್ನು ಕೊಡುತ್ತಿದ್ದಾರೆ. ಆ ಇಲಾಖೆಯನ್ನು ಮಾರ್ಪಾಡು ಮಾಡುವುದರ ಮೂಲಕ ಖರ್ಚನ್ನು ಕಡಮೆ ಮಾಡುವುದಾಗಲಿ ಅಥವಾ ಇಲಾಖೆ ಮಾರ್ಪಾಟನ್ನಾಗಲಿ ಏನೂ ಮಾಡಿಲ್ಲ. ಹೆಚ್ಚಾಗಿ ನಾವು ಇದನ್ನು ಹೇಳುತ್ತಿದ್ದರೆ ಜವಾಬು ಹೇಳುವಾಗ ಹೇಳಿದ್ದೇ ಹೇಳುತ್ತಿದ್ದಾರೆಂದು ಆಕ್ಷೇಪಣೆ ಮಾಡತಕ್ಕದ್ದೂ ಇದೆ. ಸರ್ಕಾರದವರು ಅನೇಕಸಾರಿ ಹೀಗೆಯೇ ಹೇಳಿದ್ದಾರೆ.

ಈಗ ಒಂದು ವಿಷಯ ತಮ್ಮ ಗಮನಕ್ಕೆ ತರಬೇಕೆಂದಿದ್ದೇನೆ. 1946-47ರಲ್ಲಿ ಈ ಪೋಲೀಸ್ ಇಲಾಖೆಗೆ 29 ಲಕ್ಷ ರೂಪಾಯಿಗಳ ಖರ್ಚು ಮಾತ್ರ ಇತ್ತು. ಕಾಂಗ್ರೆಸ್ ಸರ್ಕಾರ ಅಧಿಕಾರ ವಹಿಸಿಕೊಂಡ ವರ್ಷ 1950-51ರ ಲೆಕ್ಕ ತೆಗೆದುಕೊಂಡರೆ ಆ ವರ್ಷದಲ್ಲಿ ಪೋಲೀಸು ಇಲಾಖೆಗೆ 88 ಲಕ್ಷ ರೂಪಾಯಿ ಖರ್ಚಾಯಿತು. ಈ ದಿವಸ 1956-57ರ ಬಡ್ಜೆಟ್ ಆಗಿರುವುದು ಒಂದು ಕೋಟಿ 27 ಲಕ್ಷ ರೂಪಾಯಿಗಳಿಗೆ. 1946-47ರಲ್ಲಿ 29 ಲಕ್ಷ ರೂಪಾಯಿಗಳ ಖರ್ಚಿತ್ತು. ಮೈಸೂರು ಸರ್ಕಾರದಲ್ಲಿ ಪೋಲೀಸು ಇಲಾಖೆಗೆ ಹತ್ತು ವರ್ಷಗಳು ಕಳೆದಮೇಲೆ ಅಂದಾಜಾಗಿರುವುದೆಷ್ಟು ಎಂದರೆ ಅಗ್ಗಿಂತ ಸುಮಾರು ಒಂದು ಕೋಟಿ ಹೆಚ್ಚು. ಬೇಕಾದಷ್ಟು ಕಾರಣ ಇದಕ್ಕೆ ಹೇಳಬಹುದು. ಸರ್ಕಾರದವರೇ ಸೂಚಿಸಿದ್ದಾರೆ, ಹೋದ ವರ್ಷ ಹೇಳಿದ್ದಾರೆ; ಜ್ಞಾಪಕವಿದೆ. ಆದರೆ ನಮಗೇನಾದರೂ ಇಷ್ಟು ಖರ್ಚು ಮಾಡುವುದಕ್ಕೆ ಶಕ್ತಿಯಿದೆಯೆ ಅಥವಾ ಅಗತ್ಯವಿದೆಯೆ ಎಂದು ನಾನು ಕೇಳುವುದು. ಯಾವಾಗ ನಮ್ಮ ಮುಂದೆ ಬಡ್ಜೆಟ್ ಅಂದಾಜಿಟ್ಟರೋ ಆಗ ಅಗತ್ಯವಿದೆಯೆಂದೇ ಭಾವಿಸಬೇಕು. ಆದರೆ ಇದರಲ್ಲಿ ಉಳಿತಾಯ ಮಾಡುವುದಕ್ಕೆ ಅವಕಾಶವಿದೆಯೆಂದು ನಾವು ಹೇಳಬೇಕಾಗಿದೆ. ಯಾವ ರೀತಿ ಉಳಿತಾಯ ಮಾಡುವುದಕ್ಕೆ ಅವಕಾಶ ಇದೆ ಎಂದು ಕೇಳಿದರೆ : ಈಗ ಆ ಇಲಾಖೆಯಲ್ಲೇನಾಗಿದೆಯೆಂದರೆ, ಪೋಲೀಸು ಕಾನ್‌ಸ್ಟೇಬಲ್ಲುಗಳ ಸಂಖ್ಯೆ ಸುಮಾರು 10 ಸಾವಿರವಿದೆ, ಅಧಿಕಾರಿಗಳು ಸುಮಾರು 2,212 ಜನರಿದ್ದಾರೆಂದು ಕಾಣುತ್ತದೆ. ಮಾನ್ಯ ಗೃಹ ಸಚಿವರು ನಮಗೆಲ್ಲಾ ಈ ಅಂಕಿ ಅಂಶಗಳ ವಿಚಾರವಾಗಿ ಒಂದು ಪುಸ್ತಕವನ್ನು ಹಂಚಿದ್ದಾರೆ. ಅದು ಬಹಳ ಉಪಯುಕ್ತವಾಗಿದೆ. ಅದರ ಪ್ರಕಾರ ಮೈಸೂರು ಸಂಸ್ಥಾನದ 1,132 ಪ್ರಜೆಗಳಿಗೆ ಒಬ್ಬ ಪೋಲೀಸು ಅಧಿಕಾರಿಯಿದ್ದಾರೆಂದೂ ಮತ್ತು ಸಂಸ್ಥಾನದಲ್ಲಿರುವ ಪ್ರತಿಯೊಬ್ಬ ಪ್ರಜೆಗೂ ಪೋಲೀಸು ಇಲಾಖೆ ವಿಚಾರದಲ್ಲಿ ರೂ. 1-3-0 ಖರ್ಚಾಗುತ್ತಿದೆಯೆಂದೂ ಗೊತ್ತಾಗುತ್ತದೆ. ಇತರ ಸಂಸ್ಥಾನಗಳಿಗಿಂತ ಇದು ಹೆಚ್ಚಾಗಿರಲಾರದು, ಕಡಮೆ ಇರಬಹುದು. ನಮ್ಮ ಸಂಸ್ಥಾನದಲ್ಲಿ ನಾವು ಪೋಲೀಸು ಇಲಾಖೆಗೆ ಖರ್ಚು ಮಾಡುವುದು ಇತರ ಸಂಸ್ಥಾನಗಳಿಗಿಂತ ಬಹಳ ಕಡಮೆಯೆಂದು ಅನೇಕಸಾರಿ ಹೇಳಿದ್ದಾರೆ, ನಿಜ. ಏತರಿಂದ ಕಡಮೆಯಾಗಿದೆಯೆಂಬುದನ್ನು ನೋಡಬೇಕು. ನಮ್ಮಲ್ಲಿ ಕಾನ್‌ಸ್ಟೇಬಲ್‌ಗೆ 22 ರೂಪಾಯಿಗಳ ಸಂಬಳವಿದ್ದರೆ ಬೊಂಬಾಯಿನಲ್ಲಿ 40 ರೂಪಾಯಿಗಳಿವೆ ; ನಮ್ಮಲ್ಲಿ ಇನ್‌ಸ್ಪೆಕ್ಟರಿಗೆ 150 ರೂಪಾಯಿಗಳಿಂದ 200 ರೂಪಾಯಿಗಳವರೆಗಿದೆ, ಬೊಂಬಾಯಿನಲ್ಲಿ ಬಹಳ ಹೆಚ್ಚಾಗಿದೆ. ನಮ್ಮಲ್ಲಿ ಮೇಲಿರುವ ಅಧಿಕಾರಿಗಳಿಗೆ ಹೆಚ್ಚು ಹೆಚ್ಚಾದ ಸಂಬಳವಿದೆ. ಐ. ಜಿ. ಪಿ.ಗೆ 1,600 ರೂಪಾಯಿಗಳಿರಬಹುದು, ಇತರ ಪ್ರಾಂತಗಳಲ್ಲಿ 3,000 ರೂಪಾಯಿಗಳವರೆಗಿದೆ. ಆದ್ದರಿಂದ ಇತರ ಪ್ರಾಂತಗಳಲ್ಲಿ ಸಂಬಳ ಬಹಳ ಹೆಚ್ಚಿನ ದರದಲ್ಲಿ ಕೊಡುವುದರಿಂದ ನಮ್ಮ ಖರ್ಚು ಬಹಳ ಕಡಮೆಯೆಂದು ಹೇಳಿಕೆ ಕೊಡುವುದು ಸರಿಹೋಗುತ್ತದೆಯೆ ! ನಮ್ಮಲ್ಲಿ ನೌಕರಮಾನೇರುಗಳಿಗೆ ಇತರ ಎಲ್ಲಾ ಪ್ರಾಂತಗಳಿಗಿಂತ ಬಹಳ ಕಡಮೆ ದರದಲ್ಲಿ ಸಂಬಳಕೊಟ್ಟು ಖರ್ಚು ಬಹಳ ಕಡಮೆಯೆಂದು ಹೇಳುವುದು ಅಷ್ಟು ಸಾಧುವಲ್ಲ ಮತ್ತು ಇಲ್ಲಿನ ನಿಜವಾದ ಪರಿಸ್ಥಿತಿಗೆ ಈಗ ಕೊಡುವುದು ಸಾಲದು ಎಂಬುದು ನನ್ನ ಭಾವನೆ.

ಎರಡನೆಯದು ನಮ್ಮ ಪೋಲೀಸು ಇಲಾಖೆಯಲ್ಲಿ ಕಾರ್ಯಕಲಾಪ ನಿರ್ವಹಿಸುವುದಕ್ಕೆ ಒಂದು ಶಾಸನವಿದೆ. ಬಹುಶಃ ಅದು 1905 ಅಥವಾ 1902ನೆಯ ಇಸವಿಯಲ್ಲಿ ಜಾರಿಗೆ ಬಂದಿರಬಹುದು. ಆ ಶಾಸನದ ರೀತಿಯಲ್ಲಿ ಕಾರ್ಯ ಕಲಾಪ ನಡೆಯುತ್ತಿದೆ. ಆಗಿನ ಸನ್ನಿವೇಶವೇನೆಂದು ನೋಡಿದರೆ ಆಗ ಬ್ರಿಟಿಷರ ಆಳ್ವಿಕೆಯಿತ್ತು. ಆಗ ಪೋಲೀಸ್ ಎಂದರೆ ಒಂದು ತರಹ ಭಯಪಡಿಸುವ ರೀತಿಯಲ್ಲಿತ್ತು. ಈಗ ಪೋಲೀಸ್ ಎಂದರೆ ಸಾರ್ವಜನಿಕರ ಮಿತ್ರ ಎಂಬ ಭಾವನೆಯನ್ನಿಟ್ಟುಕೊಳ್ಳಬೇಕೆಂದು ಹೇಳಿದ್ದಾರೆ. ಆ ಭಾವನೆಗನುಗುಣವಾಗಿ ಆ ಶಾಸನವಿದೆಯೆಂದು ವಿಮರ್ಶೆಮಾಡಿ ಅದನ್ನು ಸರಿಯಾಗಿ ಬದಲಾಯಿಸಬೇಕಾದದ್ದು ಮೊದಲನೆಯ ಕೆಲಸ. ಎರಡನೆಯದು ಆ ಶಾಸನದ ಪ್ರಕಾರ ಎ. ಎಸ್ ಪಿ. ಮತ್ತು ಡಿ. ಐ. ಜಿ.ಗಳಿಗೆ ಶಾಸನ ದತ್ತವಾದ ಅಧಿಕಾರವಿಲ್ಲ. ಈಗ ಅವರು ಚಲಾವಣೆ ಮಾಡುವ ಅಧಿಕಾರವಾದರೂ ಡೆಲಿಗೇಟೆಡ್ ಪವರ್ಸ್. ಅವರ ಮೇಲ್ಪಟ್ಟ ಅಧಿಕಾರಿಗಳಿಗೆ ಯಾವ ವಿಧವಾಗಿ ಅಧಿಕಾರಕೊಡುವುದಕ್ಕೆ ಅವಕಾಶವಿದೆಯೋ ಅಂಥ ಅಧಿಕಾರವನ್ನು ಅವರು ವಹಿಸಿದರೆ ಆ ರೀತಿ ದತ್ತವಾದ ಅಧಿಕಾರವನ್ನು ಚಲಾಯಿಸುವ ಹಕ್ಕು

ಎ. ಎಸ್. ಪಿ. ಮತ್ತು ಡಿ. ಐ. ಜಿ. ಗಳಿಗಿದೆ. ಇದನ್ನು ನಾಲ್ಕು ವರ್ಷಗಳಿಂದ ನಾನು ಹೇಳುತ್ತಿದ್ದೇನೆ. ಅವರಿಗೆ ಶಾಸನ ದತ್ತವಾದ ಅಧಿಕಾರವಿಲ್ಲ. ಒಂದುವೇಳೆ ಹಾಗೆ ಅವನ್ನು ಇಟ್ಟುಕೊಳ್ಳಬೇಕಾದ ಒಂದು ಆವಶ್ಯಕತೆ ಕಂಡರೆ ಶಾಸನ ಪೂರ್ವಕವಾದ ಅಧಿಕಾರ ಅವರಿಗೆ ಕೊಡಿ, ಈ ಅಳತೆಗೆ ತಿದ್ದುಪಡಿ ಶಾಸನಮಾಡಿ ಎಂದು ಹೇಳುತ್ತಿದ್ದೇನೆ. ಬಹುಶಃ ಯಾವ ದೃಷ್ಟಿಯಿಂದ ಮಾಡಬಾರದೆಂದಿದ್ದಾರೋ ಗೊತ್ತಿಲ್ಲ. ಪೋಲೀಸು ಇಲಾಖೆಯಲ್ಲಿ ಡೆಪ್ಯುಟಿ ಕಮಿಷನರಿಗಿರುವ ಅಧಿಕಾರ ಡಿ. ಐ. ಜಿ.ಗೆ ಇಲ್ಲ. ಪೋಲೀಸು ಇಲಾಖೆಯಲ್ಲಿ ರೂಲ್ಸ್ ಪ್ರಕಾರ ಐ. ಜಿ. ಪಿ. ಇಲಾಖಾ ಮುಖ್ಯಾಧಿಕಾರಿಯಾಗಿದ್ದಾರೆ. ಡಿ. ಐ. ಜಿ. ಎಂದು ಹೇಳುವಾಗ ಡೆಪ್ಯುಟಿ ಎಂಬ ಪದಕ್ಕೆ ಅರ್ಥವೇ ಇಲ್ಲ. ಈಗ ಡಿ. ಎಸ್. ಪಿ. ಮೇಲೆ ಅಪೀಲು ಡೆಪ್ಯುಟಿ ಕಮಿಷನರಿಗಿದೆ; ಡಿ. ಐ. ಜಿ.ಗೆ ಇಲ್ಲ. ಆದ್ದರಿಂದ ಕೇವಲ ಪೋಸ್ಟ್ ಆಫೀಸು ತರಹ ಇದ್ದರೆ ಈ ಅಧಿಕಾರಿಯ ಸ್ಥಾನ ತಪ್ಪಿಸಿ; ಅಥವಾ ಆಡಳಿತ ದೃಷ್ಟಿಯಿಂದ ಬೇಕೇ ಬೇಕು ಎಂದು ಕಂಡರೆ ಆ ಸ್ಥಾನಕ್ಕೆ ಶಾಸನದತ್ತವಾದ ಅಧಿಕಾರ ಕೊಟ್ಟು ತನ್ಮೂಲಕ ಆ ಇಲಾಖೆಯ ಆಡಳಿತದ ದಕ್ಷತೆಯನ್ನು ಹೆಚ್ಚಿಸತಕ್ಕದ್ದು ಎಂದು ನಾಲ್ಕು ವರ್ಷಗಳಿಂದ ಹೇಳುತ್ತಿದ್ದೇನೆ; ಏನು ಕಾರ್ಯಕ್ರಮ ಕೈಗೊಂಡಿದ್ದಾರೋ ಗೊತ್ತಿಲ್ಲ, ಅದು ನಮಗೆ ಇದುವರೆಗೂ ತಿಳಿದಿಲ್ಲ. ಮತ್ತು ಈಗ ಬರುಬರುತ್ತಾ ಖರ್ಚು ಹೆಚ್ಚುಹೆಚ್ಚಾಗುತ್ತಾ ಕ್ರೈಮ್ಸ್ ಬಹಳ ಹೆಚ್ಚಾಗುತ್ತಿದೆ. ಈಗ ಸರ್ಕಾರದವರು ಕೊಟ್ಟಿರುವ ವರದಿಯೇನಿದೆಯೋ ಅದರ ಪ್ರಕಾರ ವರ್ಷೇ ವರ್ಷೇ ಕ್ರೈಮ್ಸ್ ಸಂಖ್ಯೆ ಬಹಳ ಹೆಚ್ಚಾಗುತ್ತಿದೆ. ಇದಕ್ಕೆ ಕಾರಣವೇನು ? ಹಾಗೆಯೇ ಈಗ ನಮಗೆ ಬೊಂಬಾಯಿ, ಮದರಾಸು ಮತ್ತು ಹೈದರಾಬಾದು ಈ ಭಾಗಗಳ ಕೆಲವು ಪ್ರದೇಶ ಸೇರಿ ಒಂದು ವಿಶಾಲವಾದ ಮೈಸೂರು ಆಗುವ ಕಾಲ ಬಂದಿದೆ. ಈಗಲಾದರೂ ಈ ಇಲಾಖೆಗಳಲ್ಲಿ ಇನ್ಸ್‌ಪೆಕ್ಟರ್ ಅವರಿಗೆ ಏನು ಅಧಿಕಾರ ಕೊಡಬೇಕು, ಅವರ ಆಡಳಿತ ವ್ಯಾಪ್ತಿ ಎಷ್ಟಿರಬೇಕು ಎಂಬುದನ್ನು ನೋಡಿ ಅದಕ್ಕೆ ತಕ್ಕ ವಾಪಾರ್ಡು ಮಾಡಿ ದಕ್ಷತೆ ಹೆಚ್ಚಿಸುವುದಕ್ಕೆ ಸರ್ಕಾರದವರು ಏರ್ಪಾಡು ಮಾಡುತ್ತಾರೆಂದು ನಂಬಿದ್ದೇನೆ.

ಮತ್ತೊಂದು ವಿಷಯ. ಈಗ ಈ ಇಲಾಖೆಗೆ ಮೋಟಾರ್ ಕಾರು ತೆಗೆದುಕೊಳ್ಳಬೇಕು, ವೈರ್‌ಲೆಸ್ ಸೆಟ್ ತೆಗೆದುಕೊಳ್ಳಬೇಕು ಎಂಬ ಮನವಿಯಿದೆ. ಮನವಿಗಳಲ್ಲಿ ಎಷ್ಟು ಬೇಕೆಂಬುದು ಸರಿಯಾಗಿ ಗೊತ್ತಾಗುವುದಿಲ್ಲ. ಕಳೆದ ಮೂರು ವರ್ಷಗಳಿಂದ 1½ ಲಕ್ಷ ರೂಪಾಯಿಗಳನ್ನು ಕೇಳುತ್ತಿದ್ದಾರೆ. ಪೋಲೀಸ್ ಇಲಾಖೆ ವಾಹನಗಳಿಗೆ ಇಷ್ಟು ರೂಪಾಯಿಗಳು ಬೇಕೆಂದು ಕೇಳಿರುವುದಕ್ಕೆ ವಿವರ ಕೊಡಬೇಕು. ಎಷ್ಟು ವರ್ಷಗಳವರೆಗೆ ಅಲಾಟ್‌ಮೆಂಟ್ ಆಗಬೇಕು, ಎಷ್ಟು ಅಗತ್ಯವಿದೆ ಎಂಬುದನ್ನು ನಮಗೆ ತಿಳಿಸಬೇಕು.

ಮತ್ತೊಂದು ವಿಷಯ ಹೇಳಬೇಕೆಂದಿದ್ದೇನೆ. ಈ ಪೋಲೀಸ್ ಇಲಾಖೆಯಲ್ಲಿ ಕನ್ನಡ ಷಾರ್ಟ್‌ಹ್ಯಾಂಡ್ ಅಭ್ಯಾಸ ಮಾಡುವ ಒಂದು ವಿಭಾಗವಿದೆ. ಕನ್ನಡದಲ್ಲೇ ವರದಿಗಳನ್ನು ಕಳುಹಿಸಬೇಕಾದರೆ ಶೀಘ್ರಲಿಪಿಗಾರರ ಅಗತ್ಯ ಬಹಳವಾಗಿದೆ ಅದೂ ನಮ್ಮ ಸಭೆಗಳಲ್ಲಿ ಎಲ್ಲ ಭಾಷೆಗಳಲ್ಲೂ ಈ ಆವಶ್ಯಕತೆಯಿದೆ. ಕನ್ನಡ ಭಾಷೆಯಲ್ಲಿ ನಾವು ಭಾಷಣ ಮಾಡುವುದನ್ನು ಬರೆದುಕೊಳ್ಳುವುದಕ್ಕೆ ಲಿಪಿಗಾರರು ಬೇಕು. ಈಗ ಪೋಲೀಸ್ ಟ್ರೈನಿಂಗ್ ಸ್ಕೂಲಿನಲ್ಲಿ ಒಂದು ವಿಭಾಗವಿದೆ. ಅದರಲ್ಲಿ ದಫೇದಾರರಿಗೆ ಶಿಕ್ಷಣ ಕೊಡುತ್ತಾರೆ, ಬಹುಶಃ ಇತರರನ್ನು ತೆಗೆದುಕೊಳ್ಳಲಾರರು. ದಫೇದಾರರಿಗೆ ಗೊತ್ತಾದ ಅವಧಿಯಲ್ಲಿ ಆ ಶಿಕ್ಷಣವನ್ನು ಕೊಟ್ಟು ಅವರ ಹುದ್ದೆಗಳಿಗೆ ವಾಪಸು ಕಳುಹಿಸುತ್ತಾರೆ. ಹೋದ ಜಾಗವಲ್ಲಿ ಕಲಿತವಿದ್ಯೆಯನ್ನು ಅಭ್ಯಾಸ ಮಾಡುವುದಕ್ಕೆ ಅವರಿಗೆ ಅವಕಾಶವಿರುವುದಿಲ್ಲ. ಆದ್ದರಿಂದ ಮರೆತಿರುತ್ತಾರೆ. ಪುನಃ ರಿಫ್ರೆಷರ್ ಕೋರ್ಸ್ ಎಂದು ಮಾಡಿದರೆ ಆಗ ಪುನಃ ಶ್ರೀ ಓನಾಮದಿಂದ ಪ್ರಾರಂಭವಾಗಬೇಕಾಗುತ್ತದೆ. ಇದು ಸರಿಯಲ್ಲ. ಅಲ್ಲಿ ಬಹಳ ನುರಿತವರು ಅರಿತವರು ಇದ್ದಾರೆ. ಇದಕ್ಕೆ ಸರಿಯಾದ ಮಾರ್ಗ ಕಂಡುಹಿಡಿದು ತಿಳುವಳಿಕೆ ಕೊಟ್ಟು ಸರಿಯಾದ ಏರ್ಪಾಡು ಮಾಡಬೇಕಾದದ್ದು ಆವಶ್ಯಕ. ಒಟ್ಟಿನಲ್ಲಿ

1-30 P.M.

ಸರ್ಕಾರದವರು ಈ ಪೋಲೀಸ್ ಇಲಾಖೆಗೆ ಹೆಚ್ಚು ಗಮನಕೊಟ್ಟು ಈ ಕೇಸುಗಳ ಸಂಖ್ಯೆ ಕಡಮೆಯಾಗುವಂತೆ ಈ ಇಲಾಖಾ ಅಧಿಕಾರಿಗಳು ದಕ್ಷತೆಯಿಂದ ಕೆಲಸಮಾಡುವಂತೆ ಮಾಡಬೇಕಾಗಿದೆ. ಆದರೆ ಈ ದಿವಸ ನಮ್ಮ ಸ್ಟೇಟಿನಲ್ಲಿ ಈ ಪೋಲೀಸ್ ಕಾನ್ಸ್‌ಟೇಬಲ್‌ಗಳಿಗೆ ಕೊಡತಕ್ಕ ಸಂಬಳಸಾರಿಗೆಗಳ ದರ್ಜೆ ಬಹಳ ಕಡಮೆಯಾಗಿದೆ. ನಮ್ಮ ಸಂಸ್ಥಾನಕ್ಕೆ ಆ ಬೊಂಬಾಯಿ ಪ್ರಾಂತ್ಯದ ಅನೇಕ ಭಾಗಗಳು ಬಂದು ಸೇರುವುದಿದೆ. ಬೊಂಬಾಯಿ ಪ್ರಾಂತ್ಯದಲ್ಲಿ ಪೋಲೀಸ್ ಕಾನ್ಸ್‌ಟೇಬಲ್‌ಗಳಿಗೆ ತಿಂಗಳಿಗೆ 40-45 ರೂಪಾಯಿಗಳ ಸಂಬಳವಿದೆ. ನಮ್ಮಲ್ಲಿ ಈ ಪೋಲೀಸ್ ಕಾನ್ಸ್‌ಟೇಬಲ್‌ಗಳಿಗೆ 22 ರೂಪಾಯಿಗಳ ಸಂಬಳವಿದೆ. ಈ ನಮ್ಮ ಸಂಸ್ಥಾನದ ನೌಕರ ಮಾನೇರ ಸಂಬಳ ಸಾರಿಗೆಗಳನ್ನು ಉತ್ತಮಪಡಿಸಬೇಕೆಂದು ಅನೇಕಸಾರ್ತಿ ಒತ್ತಾಯಪಡಿಸಿದ ನಂತರ ಇಲ್ಲಿ ಒಂದು 'ಪೇಸ್ಟ್ರಕ್ಚರ್' ಕಮಿಟಿ ಎಂದು ನೇಮಕವಾಯಿತು. ಆ ಸಮಿತಿಯವರು ಈ ಅಂಶಗಳನ್ನೆಲ್ಲಾ ವಿಮರ್ಶೆಮಾಡಿ ಸರ್ಕಾರಕ್ಕೆ ಒಂದು ವರದಿ ಒಪ್ಪಿಸಿದರು. ಆದರೆ ಏನೂ ಪ್ರಯೋಜನವಾಗಲಿಲ್ಲ. ಇತರ ನೌಕರರ ವಿಚಾರ ಹಾಗಿದ್ದರೂ ಇರಲಿ. ಈ ಪೋಲೀಸ್ ಕಾನ್ಸ್‌ಟೇಬಲ್‌ಗಳ ಸಂಬಳವನ್ನು ನಮ್ಮ ಅಕ್ಕಪಕ್ಕದ ಪ್ರಾಂತ್ಯಗಳ ಪೋಲೀಸಿನವರ ಮಟ್ಟಕ್ಕೆ ತರುವುದಕ್ಕಾದರೂ ಇವರಿಗೇನು ತೊಂದರೆಯಿದೆ ! ಈ ಅಂಶವನ್ನು ಸರ್ಕಾರದವರು ಕೂಲಂಕಷವಾಗಿ ವಿಮರ್ಶೆಮಾಡಿ, ಈ ಇಲಾಖೆಯಲ್ಲಿ ಏನಾದರೂ ಉಳಿತಾಯ ಮಾಡಲು ಸಾಧ್ಯವಿದೆಯೇ ಈ ಇಲಾಖೆಯನ್ನು ಇನ್ನೂ ಉತ್ತಮಪಡಿಸಲು ಸಾಧ್ಯವಿಲ್ಲವೇ ಎಂಬುದನ್ನೆಲ್ಲಾ ತಿಳಿದುಕೊಳ್ಳುವ ಉದ್ದೇಶದಿಂದ ನಾನು ಈ ಅಂಶಗಳನ್ನು ಈಗ ಸರ್ಕಾರದವರ ಗಮನಕ್ಕೆ ತಂದಿದ್ದೇನೆ. ಅವರು ಸೂಕ್ತ ಉತ್ತರಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ಆರ್. ರಾಮಯ್ಯ (ಬಸವನಗುಡಿ).—ಸ್ವಾಮಿ, ಈ ಪೋಲೀಸ್ ಇಲಾಖೆಯ ಬಗ್ಗೆ ನಾನಾ ಜನರಲ್ಲಿ ಏನೇನು ಭಾವನೆಗಳುಂಟಾಗಿವೆ ಎನ್ನುವುದರ ಬಗ್ಗೆ ನಾನೀಗ ಕೆಲವು ವಿಚಾರಗಳನ್ನು ಹೇಳಬೇಕಾಗಿದೆ.

ಈ ನಗರಗಳಲ್ಲಿ ಕೆಲಸಮಾಡುತ್ತಿರುವ ಪೋಲೀಸ್ ಕಛೇರಿಗಳ ಆಡಳಿತವನ್ನು ತೆಗೆದುಕೊಂಡರೆ—ಇದರಲ್ಲಿ ಎರಡು ಶಾಖೆಗಳಿರುತ್ತವೆ. ಒಂದು ಟ್ರಾಫಿಕ್ ಬ್ರಾಂಚ್ ಎಂದೂ, ಮತ್ತೊಂದು ಕ್ರೈಂ ಬ್ರಾಂಚ್ ಎಂದೂ ಇದರಲ್ಲಿ ಎರಡು ಭಾಗಗಳಿವೆ. ಆದರೆ ಈ ಟ್ರಾಫಿಕ್ ಶಾಖೆಯಲ್ಲಿ ಕೆಲಸಮಾಡತಕ್ಕ ಪೋಲೀಸ್ ಸಿಬ್ಬಂದಿ ಏನಿದೆಯೋ ಅದು ತನ್ನ ಎದುರಿನಲ್ಲೇ ಏನಾದರೂ ತಕ್ಸೀರುಗಳು ನಡೆಯುತ್ತಿದ್ದರೆ—ಎಂದರೆ ಈ ಕಳವು ಇತ್ಯಾದಿ ತಕ್ಸೀರುಗಳು ನಡೆಯುತ್ತಿದ್ದರೆ ಅವರು ಆ ಕೇಸುಗಳ ಬಗ್ಗೆ ನಿಗಾ ತೆಗೆದುಕೊಳ್ಳುತ್ತಿಲ್ಲ. ಅಥವಾ ನಾವಾ

ಇವರು ನಾವು ಈ ಫಿರ್ಯಾದುಗಳನ್ನೆಲ್ಲಾ ಹಿಡಿಯುವುದಿಲ್ಲ; ಅದು ನಮಗೆ ಸಂಬಂಧವಿಲ್ಲ; ನೀವು ಈ ಫಿರ್ಯಾದುಗಳನ್ನು ತೆಗೆದುಕೊಂಡು ಹೋಗಿ ಪೋಲೀಸ್ ಸ್ಟೇಷನ್ನಲ್ಲಿ ದಾಖಲ್ಮಾಡಿ ಎಂಬುದಾಗಿ ಹೇಳುತ್ತಾರೆ. ಉದಾಹರಣೆಗಾಗಿ ಹೇಳುವುದಾದರೆ—ಕೆಲವು ದಿವಸಗಳ ಕೆಳಗೆ ನಾನು ಆ ಕಲಾಸಿಪಾಳ್ಯದ ಬಸ್‌ಸ್ಟಾಂಡಿಗೆ ಹೋಗಿದ್ದಾಗ ಅಲ್ಲಿ ಒಂದು ಸಂಸಾರದವರು ದೇವರ ದರ್ಶನಕ್ಕಾಗಿ ತಿರುಪತಿಗೆ ಹೋಗತಕ್ಕವರಾಗಿದ್ದರು. ಅವರು ಅಲ್ಲಿ ಟಿಕೆಟ್ಟುಗಳನ್ನು ಪಡೆದು ಬಸ್ಸಿನಲ್ಲಿ ಹತ್ತುವುದರೊಳಗಾಗಿ ಅವರು ಇಟ್ಟುಕೊಂಡಿದ್ದ 150 ರೂಪಾಯಿಗಳನ್ನು ಯಾರೋ ಪಿಕ್-ಪಾಕೆಟ್ ಮಾಡಿಬಿಟ್ಟರು. ಆ ವೇಳೆಯಲ್ಲಿ ಅಲ್ಲೇ ಒಬ್ಬ ಪೋಲೀಸ್ ಕಾನ್‌ಸ್ಟೇಬಲ್ ಕೂಡ ಇದ್ದ. ಆಗ ಅವರು ದಿಕ್ಕುಕೆಟ್ಟುಹೋದರು.

ಒಬ್ಬ ಮಾನ್ಯ ಸದಸ್ಯರು.—ಏನು ಆ ಪೋಲೀಸಿನವರೇ ಹೊಡೆದುಬಿಟ್ಟರೋ? (ನಗು).

ಶ್ರೀ ಪಿ. ಆರ್. ರಾಮಯ್ಯ.—ಆ ರೀತಿ ನಾನು ಹೇಳಲಾರೆ. ಆ ವಿಚಾರವನ್ನು ನಾನು ಹೇಳುವುದಕ್ಕಾಗುವುದಿಲ್ಲ. ಆಗ ಆ ಜನರು ಆ ವಿಚಾರವನ್ನು ಅಲ್ಲೇ ಇದ್ದ ಟ್ರಾಫಿಕ್ ಪೋಲೀಸಿನವರಿಗೆ ತಿಳಿಸಿದರು. ಪಾಪ! ಅವರು ಹಳ್ಳಿಜನರು! ಅವರಿಗೆ ಈ ಟ್ರಾಫಿಕ್-ಪೋಲೀಸ್ ಎಂದರೇನು ಎಂಬ ವಿಚಾರಗಳೆಲ್ಲ ಗೊತ್ತಿರಲಿಲ್ಲ. ಏನಾದರೂ ಮಾಡಿ ಆ ಹಣವನ್ನು ಪತ್ತೆಮಾಡಿ ಕೊಡಿಸಬೇಕೆಂದು ಅವರು ಕೇಳಿಕೊಳ್ಳುತ್ತಿದ್ದರು. ಆಗ ಆ ಪೋಲೀಸಿನವರು ಇದು ನಮಗೆ ಸಂಬಂಧವಿಲ್ಲ, ನೀವು ಆ ಕಲಾಸಿಪಾಳ್ಯಂ ಪೋಲೀಸ್ ಸ್ಟೇಷನ್‌ಗೆ ಹೋಗಿ ವರದಿ ಮಾಡಿ ಎಂದು ತಿಳಿಸಿಬಿಟ್ಟರು. ಹಾಗೆ ಅವರು ಹೇಳಿದ್ದು ಎಷ್ಟು ಅವ್ಯವಹಾರಿಕವಾದುದಾಗಿದೆ ಎನ್ನುವುದು ತಮ್ಮೆಲ್ಲರಿಗೂ ಗೊತ್ತಾಗಲಿ ಎಂಬ ಉದ್ದೇಶದಿಂದ ಹೇಳಿದೆನು. ಇತ್ತೀಚೆಗೆ ಈ ಬೆಂಗಳೂರು ನಗರದಲ್ಲಿ ಈ ಪಿಕ್‌ಪಾಕೆಟ್ ಅಫೆನ್ಸ್‌ಗಳು ವಿಶೇಷವಾಗಿ ನಡೆಯುತ್ತಿವೆ. ಈ ನಗರಕ್ಕೆ ಹೊರಗಡೆಯಿಂದ ಹೊಸ ಹೊಸ ಜನರು ಬರುತ್ತಿರುವುದು ಜಾಸ್ತಿಯಾಗುತ್ತಿದೆ. ಇಲ್ಲಿ ನಿರುದ್ಯೋಗಿ ಜನರ ಸಂಖ್ಯೆ ಹೆಚ್ಚಾಗುತ್ತಿದೆ. ಒಟ್ಟಿನಲ್ಲಿ ಹೇಳುವುದಾದರೆ ಈ ಪಟ್ಟಣಗಳು ದಿನೇದಿನೇ ಈ ನಿರುದ್ಯೋಗ ತಂಡದ ಜನಗಳಿಗೆ ಆವಾಸಸ್ಥಾನಗಳಾಗುತ್ತಾ ಬರುತ್ತಿವೆ. ಈ ಜನರಿಗೆ ಯಾವ ಉದ್ಯೋಗಗಳೂ ಸಿಕ್ಕುವಹಾಗಿಲ್ಲ. ಈ ನಾನಾ ಕಾರಣಗಳಿಂದ ಇತ್ತೀಚೆಗೆ ಹೆಣ್ಣುಮಕ್ಕಳು ಬೀದಿಗಳಲ್ಲಿ ಧೈರ್ಯವಾಗಿ ತಿರುಗಾಡುವ ಹಾಗಿಲ್ಲ. ಅವರ ಆಭರಣಗಳನ್ನೆಲ್ಲಾ ಕಿತ್ತುಕೊಂಡು ಹೋಗುತ್ತಿದ್ದಾರೆ. ಈ ನಿರುದ್ಯೋಗಿ ಜನರ ಚಲನವಲನಗಳನ್ನು ಕಂಡುಹಿಡಿಯುವುದಕ್ಕೇ ಆಗುವುದಿಲ್ಲ. ಏನೋ ಬಹಳ ದೊಡ್ಡಮನುಷ್ಯರ ಹಾಗೆ ಬಂದುಬಿಡುತ್ತಾರೆ. ಹಾಗೆ ಬಂದವರು ಈ ಹೆಣ್ಣುಮಕ್ಕಳಿಗೆ ಏನೋ ಸಹಾಯ ಮಾಡುವವರ ಹಾಗೆ ನಟಿಸುತ್ತ ಆ ಮಕ್ಕಳನ್ನು ಬನ್ನಿ ನಿಮ್ಮನ್ನ ಸರಿಯಾದ ರಸ್ತೆಯಲ್ಲಿ ಕರೆದುಕೊಂಡು ಹೋಗುತ್ತೇವೆಂದು ಹೇಳಿ ಅವರನ್ನು ಯಾವುದೋ ಕಡೆಗೆ ಕರೆದುಕೊಂಡು ಹೋಗಿ ಅವರ ಮೈಮೇಲಿದ್ದಂಥ ಆಭರಣಗಳನ್ನೆಲ್ಲಾ ಕಿತ್ತುಕೊಂಡು ಹೋಗಿಬಿಡುತ್ತಾರೆ. ನಾನು ಈ ವಿಚಾರಗಳನ್ನೇನೂ ಹೊಸದಾಗಿ ಹೇಳುತ್ತಿಲ್ಲ. ಈ ವಿಚಾರಗಳೆಲ್ಲಾ ಈಗಾಗಲೇ ಪತ್ರಿಕೆಗಳಲ್ಲಿ ಬಂದಿರತಕ್ಕಂಥ ಕೃತ್ಯಗಳು ನಡೆಯುತ್ತಿರುವುದಕ್ಕೆ ಕಾರಣವೇನು? ಇದಕ್ಕೆಲ್ಲಾ ಅವರಿಗೆ ಹೇಗೆ ಅವಕಾಶವಿರುತ್ತದೆ? ಪೋಲೀಸಿನವರು ತಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸುತ್ತಿದ್ದಾರೆಯೇ? ಇಂಥ ಕೃತ್ಯಗಳನ್ನು ತಡೆಗಟ್ಟಲು ಸರ್ಕಾರದವರಿಗೇನೂ ಸಾಧ್ಯವೇ ಇಲ್ಲವೇ ಎಂಬುದನ್ನು ನಾನೀಗ ಕೇಳಬೇಕಾಗಿದೆ. ನಾನು ಇಷ್ಟೆಲ್ಲಾ ಹೇಳಿದ್ದೇನೆ. ಆದರೆ ಎಷ್ಟೋ ಸಂದರ್ಭಗಳಲ್ಲಿ ನನಗೇನೇ ಆ ಪೋಲೀಸಿನವರು ಇಂಥ ಕಡಮೆ ಸಂಬಳದ ಮೇಲೆ ಹೇಗೆ ಜೀವನ ನಡೆಸುತ್ತಾರೆ ಇವರು ದಿನವೆಲ್ಲಾ ಹೀಗೆ ನಿಂತ ಕಡೆಯಲ್ಲೇ ನಿಂತಿರಬೇಕಾದರೆ ಎಷ್ಟು ಕಷ್ಟವಾಗುತ್ತದೆ ಎಂದು ನನ್ನ ಮನಸ್ಸಿನಲ್ಲೇ ಯೋಚನೆಗಳು ಬಂದು ನಾನು ಅವರ ಬಗ್ಗೆ ಕನಿಕರವನ್ನೂ ಪಟ್ಟಿದ್ದೇನೆ. ಒಂದೊಂದು ಸಾರ್ತಿ ಅವರನ್ನು ನೋಡಿದರೆ ಹೀಗೆ ಕನಿಕರವೂ ಬರುತ್ತದೆ. ಇವರಮೇಲೆ ನಾವೇತಕ್ಕೆ ಅಪಾದನೆ ಮಾಡಬೇಕು, ಹೀಗೆಲ್ಲಾ ಹೇಳಬಾರದಾಗಿತ್ತಲ್ಲವೇ ಎನ್ನುವ ಭಾವನೆಯೂ ಬರುತ್ತದೆ. ಆದರೆ ಇಂಥ ನಾಗರಿಕರಿರತಕ್ಕಂಥ ನಗರಗಳಲ್ಲೇ ಈ ರೀತಿ ಅಕೃತ್ಯಗಳು ನಡೆಯುತ್ತಿರುವುದನ್ನು ನೋಡಿದರೆ ಇವುಗಳನ್ನು ಯಾವ ಯಾವ ರೀತಿ ತಪ್ಪಿಸಬೇಕು ಎಂಬುದನ್ನು ಈ ಪೋಲೀಸ್ ಇಲಾಖೆಯವರು ತಮ್ಮ ಗಮನಕ್ಕೆ ತೆಗೆದು ಕೊಳ್ಳದೆ ಉದಾಸೀನ ಮಾಡಿರತಕ್ಕಂಥ ನಿದರ್ಶನಗಳು ಅನೇಕವಾಗಿವೆ. ಹಿಂದೆ ರಾತ್ರಿ ಕಾಲದ ಬೀಟುಗಳು ಸರಿಯಾಗಿ ಚೆನ್ನಾಗಿ ನಡೆಯುತ್ತಿದ್ದವು. ಈಚೆಗೆ ಇದು ಸರಿಯಾಗಿ ನಡೆಯುತ್ತಿಲ್ಲ. ಈಗ ಈ ಬೀಟ್ ತಿರುಗುವುದು ಬಹಳ ಕಡಮೆಯಾಗಿದೆ. ಈ ದಿವಸ ನಾವುಗಳೇ ಕೈಯಿಂದ ದುಡ್ಡು ಕೊಟ್ಟು ರಾತ್ರಿಕಾವಲನ್ನು ಘೂರ್ಕರಿಂದ ನಡೆಸಿಕೊಂಡು ಹೋಗಬೇಕಾದಂಥ ಕಾಲ ಬಂದಿದೆ. ಈ ವಿಚಾರಗಳನ್ನೆಲ್ಲಾ ನಾನೀಗ ಸರ್ಕಾರದವರ ಗಮನಕ್ಕೂ ಮತ್ತು ಪೋಲೀಸ್ ಇಲಾಖಾ ಗಮನಕ್ಕೂ ತಂದಹಾಗಾಯಿತು. ಇಲ್ಲಿಯವರೆಗೂ ನಮ್ಮ ಸಿಟಿಯಲ್ಲಿರತಕ್ಕಂಥ ಪೋಲೀಸಿನವರಿಗೆ ಈ ಜೇಬು ಕಳ್ಳರನ್ನು ಪತ್ತೆಮಾಡಿ, ಈ ಕೃತ್ಯಗಳನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗಿಲ್ಲ. ಇವು ದಿನೇ ದಿನೇ ಹೆಚ್ಚಾಗುತ್ತಿವೆ. ಈ ಕೃತ್ಯಗಳು ಈಗ ಸಿಟಿಮಾರ್ಕೆಟ್, ಕಲಾಸಿಪಾಳ್ಯಂ ಬಸ್‌ಸ್ಟ್ಯಾಂಡ್, ರೈಲ್ವೆಸ್ಟೇಷನ್ ಇಂಥ ಕಡೆಗಳಲ್ಲಿ ವಿಶೇಷವಾಗಿ ನಡೆಯುತ್ತಿರುತ್ತವೆ. ಈ ವಿಚಾರಗಳಿಗೆ ಟ್ರಾಫಿಕ್ ಪೋಲೀಸಿನವರು ಗಮನವನ್ನೇ ಕೊಡುವುದಿಲ್ಲ. ಆದರೆ ಈಗ ಟ್ರಾಫಿಕ್ ವಿಚಾರವನ್ನೇ ತೆಗೆದುಕೊಳ್ಳೋಣ. ನಮ್ಮ ಸಿಟಿಯಲ್ಲಿ ಇಷ್ಟೊಂದು ಟ್ರಾಫಿಕ್ ರೆಗ್ಯುಲೇಷನ್, ಪೋಲೀಸ್ ಆಕ್ಟ್ ಎಲ್ಲಾ ಇದ್ದರೂ ಎಷ್ಟು ಭಯಂಕರವಾದಂಥ ಎಷ್ಟು ಆಕ್ಸಿಡೆಂಟ್ಸ್ ಆಗುತ್ತಿವೆ! ಇವರಿಗೆ ಇಂಥ ಆಕ್ಸಿಡೆಂಟ್‌ಗಳನ್ನು ತಪ್ಪಿಸುವುದಕ್ಕಾಗುತ್ತಿರಲಿಲ್ಲವೇ ಎಂದು ನಾನೀಗ ಪ್ರಶ್ನೆ ಮಾಡಬೇಕಾಗಿದೆ. ಮೋಟಾರ್‌ಗಳು, ಕೆಲವು ಆಟೋಮೊಬೈಲ್‌ಗಳೂ, ಲಾರಿಗಳೂ ಇವುಗಳನ್ನೆಲ್ಲ ಸರಿಯಾಗಿ ಕಾಲಕಾಲಕ್ಕೆ ಇನ್ಸ್‌ಪೆಕ್ಷನ್ ಮಾಡಿ ನೋಡುತ್ತಿಲ್ಲ. ಹಾಗೆ ಅವುಗಳನ್ನು ಒಂದು ವಿಧಾಯಕವಾದ ರೀತಿಯಲ್ಲಿ ಪರೀಕ್ಷೆಮಾಡದೆ ಇರುವುದರಿಂದ ಹೀಗೆಲ್ಲಾ ಆಕ್ಸಿಡೆಂಟ್‌ಗಳಾಗಲು ಅವಕಾಶವಾಗಿರುತ್ತದೆ. ಎಲ್ಲಾ ಇಲಾಖೆಗಳಿಗಿಂತಲೂ ಈ ಪೋಲೀಸ್ ಇಲಾಖೆ ಎನ್ನುವುದು ಬಹಳ ಸನಾತನವಾದಂಥ ಇಲಾಖೆ. ಈ ದಿವಸ

ಇಷ್ಟೊಂದು ಪೋಲೀಸರಿದ್ದಾಗ್ಯೂ ಆ ಹಳ್ಳಿ ಜನರ ನೆಮ್ಮದಿ ನಮಗಿಲ್ಲ ಎಂಬ ಅಂಶವನ್ನು ಈ ನಿದರ್ಶನಗಳಿಂದ ನಾವು ಊಹಿಸಬಹುದಾಗಿದೆ. ಇನ್ನು ಈ ನಗರಗಳಲ್ಲೇ ಈ ಕಳವು-ಬರ್ಗ್ಲರಿ ಇತ್ಯಾದಿ ಕೃತ್ಯಗಳೂ ಜಾಸ್ತಿಯಾಗುತ್ತಿವೆ. ಇವುಗಳನ್ನು ತಪ್ಪಿಸುವುದೇ ಬಹಳ ಕಷ್ಟವಾಗಿದೆ. ಹಾಗೇ ಆಲೋಚನೆ ಮಾಡಿದಲ್ಲಿ ಈ ಪೋಲೀಸ್ ಇಲಾಖೆ ಒಂದರಿಂದಲೇ ಈ ಕಾರ್ಯ ಅಷ್ಟು ಯಶಸ್ವಿಯಾಗಿ ನಡೆಯಲಾರದೆಂದೂ ಇದಕ್ಕಾಗಿ ಈ ನಾಗರಿಕ ನಗರದ ಜನರ ಸಹಕಾರವನ್ನು ಯಾವ ರೀತಿ ಪಡೆದುಕೊಂಡರೆ ಈ ಕೃತ್ಯಗಳನ್ನೆಲ್ಲಾ ತಡೆಗಟ್ಟಲು ಸಾಧ್ಯವಿದೆ ಎಂಬುದನ್ನು ಈಗ ಆಲೋಚನೆ ಮಾಡಬೇಕಾಗಿದೆ. ಈ ದಿವಸ ಬಹಳ ಮಟ್ಟಿಗೆ ವಿದ್ಯಾವಂತ ತರುಣರು ನಿರುದ್ಯೋಗಿಗಳಾಗಿದ್ದಾರೆ; ಈ ಯುವಕರಿಗೆ ಈ ದಿವಸ ಯಾವ ಕೆಲಸವೂ ಇಲ್ಲ. ಆದ್ದರಿಂದ ಇಂಥ ಜನರ ಸಹಕಾರವನ್ನು ಯಾವ ರೀತಿ ಬಳಸಬಹುದೆಂಬುದನ್ನು ಪರಿಶೀಲನೆ ಮಾಡಬೇಕಾಗಿದೆ. ಈ ದಿವಸ ಯಾವ ಕೆಲಸವೂ ಇಲ್ಲದಿರತಕ್ಕಂಥ ಜನರು ಸೇರಿಕೊಂಡು ಅವರ ಒಂದು ಗ್ಯಾಂಗ್‌ನ್ನು ಕಟ್ಟಿಕೊಂಡಿದ್ದಾರೆ. ಇವರ ಜೊತೆಗೆ ಇನ್ನು ಚಿತ್ತೂರು, ಸೇಲಂ, ವೆಲ್ಲೂರು ಇತ್ಯಾದಿ ಕಡೆಗಳಿಂದ ಎಷ್ಟೋ ಜನರು ಇಲ್ಲಿಗೆ ಹೊಸಹೊಸದಾಗಿ ದಿನೇದಿನೇ ಬಂದು ಇಳಿಯುತ್ತಿದ್ದಾರೆ. ಹೀಗೆ ಬರತಕ್ಕ ಜನರ ಸಂಖ್ಯೆ ಏನೆಂಬುದನ್ನು ಯಾರೂ ಗಮನವಿಟ್ಟು ನೋಡುತ್ತಿಲ್ಲ. ಹೀಗೆ ಜೀವನಕ್ಕೆ ಎಲ್ಲಿಯೂ ಆಧಾರವಿಲ್ಲದಂಥ ಜನಗಳೆಲ್ಲ ಈ ನಗರಕ್ಕೆ ಬರುತ್ತಿರುವುದು ಬಹಳ ಜಾಸ್ತಿ ಆಗುತ್ತಿದೆ. ನಾನು ಎಷ್ಟೋ ಸ್ಲಂ ಏರಿಯಾಗಳಲ್ಲಿ ತಿರುಗುತ್ತಿದ್ದೇನೆ. ಅದರೆ ಅಲ್ಲಿ ಒಂದು ಕೃತ್ಯಗಳೂ ನಡೆದಿಲ್ಲ. ಈ ಪೋಲೀಸ್ ಸಿಬ್ಬಂದಿಯ ವಿಚಾರದಲ್ಲಿ ನನಗೆ ಬಹಳ ಸಹಾನುಭೂತಿ ಇದೆ. ಈ ಇಲಾಖೆಯಲ್ಲಿ ಬಹಳ ಸಾಧ್ಯಸ್ಥರೂ ಇದ್ದಾರೆ. ಈ ಇಲಾಖೆಯಲ್ಲಿ ಈ ಆರ್ಗನೈಜೇಷನ್ ಎನ್ನುವುದು ಇನ್ನೂ ಹೆಚ್ಚಾಗಿ ಆಗಬೇಕು. ಈ ವಿಷಯಗಳನ್ನೆಲ್ಲ ಪರಿಶೀಲನೆಮಾಡಲು ಸರ್ಕಾರದವರು ಒಂದು ಸಮಿತಿಯನ್ನು ಬೇಕಾದರೂ ನೇಮಕಮಾಡಬಹುದು. ಇದರ ಸಂಬಂಧದಲ್ಲಿ ತಾವು ಕಾರ್ಪೊರೇಷನ್ ಸಹಾಯವನ್ನು ಕೂಡ ತೆಗೆದುಕೊಳ್ಳಬಹುದು ಅಂತೂ ಒಟ್ಟಿನಲ್ಲಿ ಏನೇನು ಸಾಧ್ಯವಿದೆಯೋ ಅದನ್ನೆಲ್ಲಾ ನಡೆಸಿ ಈ ಕಳವು-ಜೇಬು ಕಳ್ಳತನ-ಇತ್ಯಾದಿ ಅಪರಾಧಗಳನ್ನು ತಡೆಗಟ್ಟಲು ಪ್ರಯತ್ನ ಮಾಡಬೇಕು. ಇನ್ನು ಈ ಬೆಂಗಳೂರಿನಲ್ಲಿ ಕೃಷ್ಣರಾಜೇಂದ್ರ ರೋಡಿನಲ್ಲೂ, ಅವೆನ್ಯೂ ರಸ್ತೆಯಲ್ಲೂ, ಟ್ರಾಫಿಕ್ ಬಹಳ ಜಾಸ್ತಿ ಆಗಿದೆ. ಅಲ್ಲಿ ತಿರುಗಾಡುವುದೇ ಬಹಳ ಕಷ್ಟವಾಗಿದೆ., ಬಳೇಪೇಟೆಯಲ್ಲಂತೂ ಈ ಟ್ರಾಫಿಕ್ most congested. ಅಲ್ಲಿ ಸಾಯಂಕಾಲದ ವೇಳೆಯಲ್ಲಿ ಇರುವೆ ಕೂಡ ಸಂಚರಿಸಲು ಸಾಧ್ಯವಿಲ್ಲ. ಅಲ್ಲಿ ಅಷ್ಟು ಹೆವಿ ಟ್ರಾಫಿಕ್ ಇದೆ. ಇಂಥ ರಸ್ತೆಗಳ ಬಗ್ಗೆ One-Way Traffic ಏರ್ಪಡಿಸತಕ್ಕದ್ದು ಅತ್ಯಗತ್ಯ. ದೊಡ್ಡಪೇಟೆಗೂ One-Way Traffic ಮಾಡಬೇಕಾದದ್ದು ಅಗತ್ಯ. ಜನರ ಹಿತದೃಷ್ಟಿಯಿಂದ ಅವರ ಸುರಕ್ಷತೆಯ ದೃಷ್ಟಿಯಿಂದ ಇದನ್ನು ಆದಷ್ಟು ಬೇಗ ಮಾಡುವುದು ಒಳ್ಳೆಯದು. ಚಿಕ್ಕಪೇಟೆ ಮತ್ತು ಬಳೇಪೇಟೆ ಪೋಲೀಸ್ ಸ್ಟೇಷನ್‌ಗಳಿಗೊಂದು ನೇರವಾದ ಸಂಬಂಧವನ್ನು ಕಲ್ಪಿಸಬೇಕಾದದ್ದು ವಿಚಾರವಾಗಿ ಕಳೆದ 25 ವರ್ಷಗಳಿಂದಲೂ ಚರ್ಚೆ ಆಗುತ್ತಲೇ ಇದೆ. ಈ ಟ್ರಾಫಿಕ್ಕನ್ನು ಸರಿಯಾಗಿ ಕಂಟ್ರೋಲ್ ಮಾಡಬೇಕಾಗಿದ್ದರೆ ಈ ಹೊಸ ರಸ್ತೆ ಆಗಲೇಬೇಕು. ಎಷ್ಟೋಸಾರಿ ಪರ್ಸನಲ್ಲಾಗಿ ಇಂಥ ವಿಷಯ ಆಗಿದೆ ಸರಿಪಡಿಸಬೇಕು ಎಂದು ಮಿನಿಸ್ಟರ್ ಅವರ ಗಮನಕ್ಕೆ ತಂದಿದ್ದೇವೆ. ಅವರೂ ಗಮನ ಕೊಟ್ಟಿದ್ದಾರೆ. ಆದರೂ ಕೂಡ ಇನ್ನೂ ಈ ಇಲಾಖೆಯನ್ನು ಸರಿಯಾಗಿ ಮಾರ್ಪಾಡು ಮಾಡಬೇಕೆಂದು ನಾನು ವಿನಯವಾಗಿ ಸಲಹೆ ಮಾಡುತ್ತೇನೆ.

*ಶ್ರೀ ಶಿವನಂಜೇಗೌಡ (ಮೈಸೂರು ತಾಲ್ಲೂಕು).—ಸ್ವಾಮಿ, ಪೋಲೀಸ್ ಇಲಾಖೆಯ ವ್ಯವಸ್ಥೆಯನ್ನು ಪುನರ್ ವ್ಯವಸ್ಥೆಮಾಡಬೇಕೆನ್ನುವ ವಿಚಾರದಲ್ಲಿ ಒಂದೆರಡು ವಿಚಾರಗಳನ್ನು ಹೇಳಬೇಕೆಂದು ನನ್ನಲ್ಲಿ ಬಹಳ ಆಸಕ್ತಿ ಇತ್ತು. ಅದನ್ನು ಹೇಳಬೇಕೆಂದಿದ್ದೇನೆ. ಈ ಪೋಲೀಸ್ ಇಲಾಖೆಯವರು ಯಾರನ್ನೂ ಕೇಳದೆ ಅವರೇ ತಮಗೆ ಇಷ್ಟಬಂದಂತೆ ಯಾವ ವ್ಯವಸ್ಥೆಬೇಕೋ ಆ ವ್ಯವಸ್ಥೆಯನ್ನು ಮಾಡಿಕೊಳ್ಳುತ್ತಾ ಇದ್ದಾರೆ. ಮೈಸೂರು ದಕ್ಷಿಣ ತಾಲ್ಲೂಕಿನಲ್ಲಿ ಒಂದು ಪೋಲೀಸ್ ಸ್ಟೇಷನ್ ಬಹಳ ಕಾಲದಿಂದ ಇತ್ತು, ಮೈಸೂರಿಗೆ 5 ಮೈಲಿ ದೂರದಲ್ಲಿ ಅಣಕಲ್ ಎಂಬ ಒಂದು ಗ್ರಾಮ ಇದೆ. ಆ ಗ್ರಾಮದಲ್ಲಿದ್ದ ಪೋಲೀಸ್ ಸ್ಟೇಷನನ್ನು ತೆಗೆದು ಬೇರೆ ಕಡೆಗೆ ಬದಲಾಯಿಸಿದ್ದಾರೆ. ಅಲ್ಲಿ ಏನೇನೂ ಸೌಕರ್ಯವಿಲ್ಲ, ಅಲ್ಲಿಗೆ ಹೋಗಬೇಕಾದರೆ ಬಸ್ಸಿನಲ್ಲಿ ಹೋಗಬೇಕು, ಇಲ್ಲದೇ ಇದ್ದರೆ ನಡೆದುಕೊಂಡು ಹೋಗಬೇಕು. ಅದೂ ಅಲ್ಲದೆ ಅಲ್ಲಿ ಬೇರೆ ಇನ್ಯಾವ ಅನುಕೂಲವೂ ಇಲ್ಲ. ಇಂಥ ವ್ಯವಸ್ಥೆಯನ್ನು ಪೋಲೀಸ್‌ನವರು ಮಾಡಿಕೊಂಡಿದ್ದಾರೆ. ಇದು ಸರ್ಕಾರದವರಿಗೆ ಗೊತ್ತಿತ್ತೋ ಇಲ್ಲವೋ ಗೊತ್ತಿಲ್ಲ. ಅಲ್ಲಿನ ಡೆಪ್ಯುಟಿ ಕಮೀಷನರನ್ನಾಗಲಿ, ಅಮಲ್ದಾರರನ್ನಾಗಲಿ ಅಥವಾ ಆ ತಾಲ್ಲೂಕಿನಲ್ಲಿರತಕ್ಕ ಈ ಸಭೆಯ ಸದಸ್ಯರಾದ ನಮ್ಮನ್ನಾಗಲಿ ಈ ರೀತಿ ಮಾಡಿದರೆ ಅನುಕೂಲವೇ, ಅನಾನುಕೂಲವೇ ಎಂಬ ವಿಷಯವನ್ನು ಯಾರೂ ಕೂಡ ಕೇಳಿಲ್ಲ. ಆ ರೀತಿ ಕೇಳಿರುವುದು ನನಗೆ ಗೊತ್ತಿಲ್ಲ. ಅಲ್ಲಿಗೆ ನಾನು ಮೊನ್ನೆ ಭಾನುವಾರ ಹೋಗಿದ್ದೆ. ಅಲ್ಲಿ ಒಂದು ಜಗಳ ಆಯಿತು, ಆ ವಿಷಯವನ್ನು ಪೋಲೀಸ್‌ನವರಿಗೆ ತಿಳಿಸಬೇಕೆಂದು ಪೋಲೀಸ್ ಸ್ಟೇಷನ್ನಿಗೆ ಅನೇಕರು ಹೋದರು. ಹೋದರೆ ಅಲ್ಲಿ ಪೋಲೀಸ್‌ನವರು ಇರಲೇ ಇಲ್ಲ. ಅವರು ಎಲ್ಲಿರುತ್ತಾರೋ ಏನೋ ಒಂದೂ ಗೊತ್ತೇ ಆಗುವುದಿಲ್ಲ. ಕೊನೆಗೆ ನನ್ನ ಹತ್ತಿರ ಬಂದು ದೂರು ಕೊಟ್ಟರು. ನಾನು ಹೋಂ ಮಿನಿಸ್ಟರ್‌ಗೆ ಹೇಳಿದೆ. ಅದು ಒಂದು ಕಥೆ ಅನ್ನಿ !

ಒಬ್ಬ ಸದಸ್ಯರು.—ಹೋಂ ಮಿನಿಸ್ಟರ್ ಅವರಿಗೆ ನೀವೇ ಹೇಳಿದ್ದೀರಲ್ಲಾ ಇನ್ನೇನು !

ಶ್ರೀ ಶಿವನಂಜೇಗೌಡ.—ಈ ರೀತಿ ಒಂದು ವ್ಯವಸ್ಥೆ ಮಾಡುವಾಗ ಅವರ ಮನಸ್ಸಿಗೆ ಬಂದಂತೆ ಯಾರನ್ನೂ ಕೇಳದೆ, ಯಾರಿಗೂ ಗೊತ್ತಿಲ್ಲದೇ ಈ ರೀತಿ ಬದಲಾಯಿಸುವುದು ಯಾವ ನ್ಯಾಯ? ಜನಗಳು ಏನು ಮಾಡಬೇಕು ! ಮೈಸೂರು ಸಿಟಿಯಿಂದ ಸುತ್ತಮುತ್ತಲೂ 15 ಮೈಲಿ ಫಾಸಲೆ ಆಗುತ್ತದೆ. ಎಲ್ಲಿ ಏನೇ ಆದರೂ ಕೂಡ ಎಲ್ಲಕ್ಕೂ ಮೈಸೂರು ಸಿಟಿಗೆ ಬರುವುದಕ್ಕಾಗುತ್ತದೆಯೇ? ಮೊದಲು ಯಾವ ಅನುಕೂಲ ಇತ್ತೋ ಆ ಅನುಕೂಲವನ್ನು ತಪ್ಪಿಸಿ ಆ ಸ್ಟೇಷನನ್ನು ಬೇರೆ

(ಶ್ರೀ ಶಿವನಂಜೇಗೌಡ.)

ಕಡೆಗೆ ಹಾಕಿದ್ದಾರೆ. ಇದೇನು ಈ ರೀತಿ ಮಾಡಿದ್ದಾರೆ ಎಂದು ಯಾರನ್ನು ಕೇಳಿದರೂ, ಯಾರಿಗೂ ಸಂಬಂಧ ಇಲ್ಲ ಎಂದು ಹೇಳುತ್ತಾರೆ. ಏಕೆ, ಪೋಲೀಸ್‌ನವರಿಗೆ ಯಾವ ರೀತಿ ಬೇಕೋ ಆ ರೀತಿ ಮಾಡಿಕೊಳ್ಳಬಹುದೇ? ಹಾಗಾದರೆ ನಾವೇಕೆ ಇರುವುದು? ಜನಗಳಿಗೆ ಅನುಕೂಲ ಮಾಡಿಕೊಡಬೇಕು, ಅವರ ಕೆಲಸ ಕಾರ್ಯಗಳನ್ನು ಸುಲಲಿತವಾಗಿ ಜರುಗಿಸಿಕೊಡಬೇಕು, ಅವರ ಕಷ್ಟ ಸುಖ ಕೇಳಬೇಕು, ಅವರು ಸುಖವಾಗಿ ಜೀವನ ನಡೆಸುವುದಕ್ಕೆ ಸೌಕರ್ಯ ಕಲ್ಪಿಸಿಕೊಡಬೇಕು ಎಂದು ಹೇಳುವಾಗ ಈ ರೀತಿ ಅನಾನುಕೂಲ ಮಾಡಿದರೆ ನೀವೆಲ್ಲಾ ಇದ್ದೂ ಕೂಡ ಇಂಥ ಅನ್ಯಾಯವಾಗುತ್ತಾ ಇದೆ ಎಂದು ನಮ್ಮನ್ನು ಆ ಜನಗಳು ಕೇಳದೇ ಬಿಡುತ್ತಾರೆಯೇ? ನಿಜವಾಗಿಯೂ ಸರ್ಕಾರದವರಿಗೆ ಕೆಟ್ಟ ಹೆಸರು ಬಂದೇ ಬರುತ್ತದೆ. ಈ ರೀತಿ ಮಾಡಲಿಕ್ಕೆ ಕಾರಣವೇನು? ಇದನ್ನು ಮಾನ್ಯ ಹೋಂ ಮಿನಿಸ್ಟರವರಿಗೆ ತಿಳಿಸಬೇಕೆಂದು ನಾನು ಇಷ್ಟಪಡುತ್ತೇನೆ.

ಅಧ್ಯಕ್ಷರು.—ಮೊದಲೇ ತಿಳಿಸಿದ್ದೇನೆ ಎಂದು ಹೇಳಿದಿರಲ್ಲ!

ಶ್ರೀ ಶಿವನಂಜೇಗೌಡ.—ಆದರೂ ಕೂಡ ಈ ಸಂದರ್ಭದಲ್ಲಿ ಹೇಳಬೇಕಾಗಿ ಬಂದಿದೆ. ನಮ್ಮ ಸರ್ಕಾರ ಬಂತು, ಹತೋಟಿಗಳನ್ನೆಲ್ಲಾ ತೆಗೆದು ಹಾಕಿದರು, ಜನಗಳಿಗೆ ಸೌಕರ್ಯ ಮಾಡಿಕೊಡುತ್ತಾ ಇದ್ದಾರೆ ಎಂದು ನಾವು ಸ್ವಲ್ಪ ಸುಮ್ಮನೆ ಇದ್ದೆವಲ್ಲಾ ಅದಕ್ಕೇ ಹೀಗಾಯಿತೋ ಏನೋ! ಮೈಸೂರಿನಲ್ಲಿರುವ ಆಯುರ್ವೇದ ಕಾಲೇಜನ್ನು ಬೆಂಗಳೂರಿಗೆ ವರ್ಗಾಯಿಸಬೇಕೆಂದು ಮಾಡಿದ್ದಾರೆ.

ಅಧ್ಯಕ್ಷರು.—ಪೋಲೀಸ್ ಇಲಾಖೆಗೆ ಸಂಬಂಧಪಟ್ಟಂತೆ ಮಾತ್ರ ಈಗ ಮಾತನಾಡಿ.

ಶ್ರೀ ಶಿವನಂಜೇಗೌಡ.—ಆಗಲಿ ಸ್ವಾಮಿ. ನಾನು ಮೊದಲೇ ಹೇಳಿದಂತೆ ಮೈಸೂರು ದಕ್ಷಿಣ ತಾಲ್ಲೂಕಿನಲ್ಲಿ ಪೋಲೀಸ್ ಸ್ಟೇಷನ್ ಮೊದಲು ಎಲ್ಲಿತ್ತೋ ಅಲ್ಲೇ ಇರುವುದು ಒಳ್ಳೆಯದು, ಅಲ್ಲಿಗೆ ಪುನಃ ಬದಲಾವಣೆ ಮಾಡಿ ಜನಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಎನ್. ಬೋರಣ್ಣಗೌಡ (ಬೇಲೂರು).—ಸ್ವಾಮಿ, ಮಾನ್ಯ ಅರ್ಥ ಸಚಿವರು 6 ಡಿಸ್ಟ್ರಿಕ್ಟ್ 4 ತಾಲ್ಲೂಕುಗಳಲ್ಲಿ ಪಾನನಿರೋಧ ಜಾರಿಯಲ್ಲಿದೆ ಎಂದು ಹೇಳಿದ್ದಾರೆ. ಈ ಪಾನನಿರೋಧ ಜಾರಿಯಲ್ಲಿರತಕ್ಕ ಜಿಲ್ಲೆಗಳಲ್ಲಿ ಯಾರುಯಾರು ಕಳ್ಳ ಭಟ್ಟಿ ಮತ್ತು ಕದ್ದು ಸಾಗಾಣಿಕೆ ಇಂಥ ಕೆಲಸಗಳನ್ನು ಮಾಡಿ ಹಣ ಸಂಪಾದನೆ ಮಾಡುತ್ತಾರೆಯೋ ಅಂಥವರನು ನೋಡಿಕೊಳ್ಳುವುದಕ್ಕೆ ಅಂಥವರ ಮೇಲೆ ಕೇಸು ಹಾಕುವುದಕ್ಕೆ ಸಾಕಾದಷ್ಟು ಸಿಬ್ಬಂದಿ ಇಲ್ಲದೆ ಪೋಲೀಸ್ ಇಲಾಖೆಯಲ್ಲಿ ಬಹಳ ತೊಂದರೆಯಾಗಿದೆ. ಎಲ್ಲಾದರೂ ಒಂದು ಕೇಸು ಪತ್ತೆ ಆಗಿ ಕಳ್ಳಭಟ್ಟಿ ಮಾಡುತ್ತಾ ಇದ್ದಾರೆ ಎಂದು ಹೇಳಿ ಸಮಾಚಾರ ಕಳುಹಿಸಿದರೆ, ಪೋಲೀಸ್ ಹೆಡ್‌ಕ್ವಾರ್ಟ್ರು 40-50 ಮೈಲಿ ದೂರದಲ್ಲಿರುತ್ತದೆ, ಅವರು ಬಾಡಿಗೆಗೆ ಹೋಗುತ್ತಾ ಇರತಕ್ಕ ವ್ಯಾನ್‌ಅನ್ನೋ ಅಥವಾ ಇನ್ನಾರದಾದರೂ ಕಾರನ್ನೋ ದಾಕ್ಷಿಣ್ಯಕ್ಕೆ ತೆಗೆದುಕೊಳ್ಳಬೇಕು. ಆ ಬಾಬಿಗಾಗಿ ಅವರಿಗೆ ಹಣ ಕೊಡುವುದಿಲ್ಲ. ಆ ರೀತಿ ಕಾರನ್ನು ತೆಗೆದುಕೊಂಡು ಪೆಟ್ರೋಲ್ ಹಾಕಿಸಿಕೊಂಡು ಆ ಸ್ಥಳಕ್ಕೆ ಹೋಗುವುದರೊಳಗೆ ಈ ಕಳ್ಳಭಟ್ಟಿ ಮಾಡುತ್ತಾ ಇರತಕ್ಕವರಿಗೆ ಅವರ ಕಡೆಯವರು ಈ ರೀತಿ ಪೋಲೀಸ್‌ನವರು ಬರುತ್ತ ಇದ್ದಾರೆ ಎಂಬುದನ್ನು ತಿಳಿಸಿ ಅದು ಕಾಣದಂತೆ ಮಾಡತಕ್ಕ ಸನ್ನಿವೇಶ ಎಷ್ಟೋ ಇದೆ. ಹೀಗೆ ಮಲೆನಾಡಿನಲ್ಲಿ ಸಾಧಾರಣವಾಗಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗುವುದು ಕಷ್ಟ, ತೊಂದರೆ. ಮಲೆನಾಡಿನಲ್ಲಿ ಕಳ್ಳಭಟ್ಟಿ ತಯಾರು ಮಾಡುವುದು, ಮಾದಕ ಪದಾರ್ಥಗಳನ್ನು ಕದ್ದು ಸಾಗಿಸುವುದು ಇಂಥದನ್ನೆಲ್ಲಾ ನೋಡಿಕೊಳ್ಳಲಿಕ್ಕೆ ಸಾಕಾದಷ್ಟು ಸಿಬ್ಬಂದಿ ಇಲ್ಲ. ಯಾವುದಾದರೂ ಒಂದು ಕಾನೂನು ಪಾಸಾದರೆ ಆ ಕಾನೂನಿಗೆ ವ್ಯತಿರಿಕ್ತವಾಗಿ ನಡೆಯತಕ್ಕ ಜನಗಳು ನಮ್ಮ ದೇಶದಲ್ಲಿ ಹೆಚ್ಚಾಗಿದ್ದಾರೆ. ಯಾವುದಾದರೂ ಒಂದು ಕೇಸು ಇದೆ ಎಂದರೆ ಇವತ್ತು ಒಂದು ಶಿಕಾರಿ ಸಿಕ್ಕಿತು ಎಂದು ಪೋಲೀಸ್‌ನವರು ಹೋಗುತ್ತಾರೆ. ಜನಗಳೂ ಕೂಡ ಅಂಥ ಶಿಕಾರಿ ಸಿಕ್ಕರೆ ಸಾಕು ಮಧ್ಯಸ್ಥಿಕೆ ವಹಿಸಿ ಏನಾದರೂ ಲಪಟಾಯಿಸೋಣ ಎಂದು ಇರುತ್ತಾರೆ. ಹೀಗಾಗಿ ಪ್ರೊಹಿಬಿಷನ್ ಕೆಲಸ ಬಹಳ ಅತೃಪ್ತಿಕರವಾಗಿ ನಡೆಯುತ್ತಾ ಇದೆ. ಮೇಲಾಗಿ ಸಾಕಾದಷ್ಟು ಸಿಬ್ಬಂದಿ ಇಲ್ಲ. ಮಲೆನಾಡಿನಲ್ಲಿ ಪೋಲೀಸ್ ಸ್ಟೇಷನ್‌ಗಳು ಬಹಳ ವಿರಳವಾಗಿವೆ. 20-25 ಮೈಲಿಗೆ ಒಂದೊಂದು ಪೋಲೀಸ್ ಸ್ಟೇಷನ್ ಇರುತ್ತದೆ. ಆ ಪೋಲೀಸ್ ಸ್ಟೇಷನ್‌ನಲ್ಲಿರತಕ್ಕ ಸಬ್ ಇನ್‌ಸ್ಪೆಕ್ಟರು ಒಬ್ಬ ರಾಜನಂತೆ ಇರುತ್ತಾನೆ. ಆತನನ್ನು ಯಾರೂ ಮಾತನಾಡಿಸುವ ಹಾಗಿಲ್ಲ. ಜನಗಳ ಕಷ್ಟ ಏನು, ಅವರ ದೂರು ಏನಿದೆ, ಅವರ ಕಷ್ಟನಿವಾರಣೆ ಮಾಡುವುದಕ್ಕೆ ತಾನು ಎಷ್ಟರಮಟ್ಟಿಗೆ ಶಕ್ತ ಎನ್ನುವುದೂ ಕೂಡ ಅವರಲ್ಲಿರುವುದಿಲ್ಲ. ದೂರು ಕೊಟ್ಟ ಮೇಲೆ ಮಾಮೂಲು ಕೊಡಲೇ ಬೇಕಾಗುತ್ತದೆ. ಇಂಥ ಕೆಟ್ಟ ಕೆಲಸ ಆಯಿತು ಅಥವಾ ಹಸುವನ್ನು ಕದ್ದುಕೊಂಡು ಹೋಗಿದ್ದಾರೆ ಎಂದು ಯಾವನಾದರೂ ಪೋಲೀಸ್ ಸ್ಟೇಷನ್ನಿಗೆ ಹೋಗಿ ದೂರು ಕೊಟ್ಟ ಎಂದರೆ ಷುರು ಆಯಿತು ಎಂತಲೇ! ಕೇಸು ಮುಗಿಯುವವರೆಗೂ ಅವನನ್ನು ಬಿಡುವುದಿಲ್ಲ; ರೈತ ತನ್ನ ಮನೆಯಲ್ಲಿದ್ದ ಅಷ್ಟಿಷ್ಟು ಪದಾರ್ಥಗಳನ್ನೆಲ್ಲಾ ಮಾರಿ ಮನೆ ಹಾಳು ಮಾಡಿಕೊಳ್ಳಬೇಕು, ಅಲ್ಲಿಯವರೆಗೂ ಸತಾಯಿಸುತ್ತಾರೆ. ಹೀಗಾಗಿ ಮಲೆನಾಡಿನಲ್ಲಿರತಕ್ಕವರಿಗೆ ಬಹಳ ತೊಂದರೆ ಯಾಗಿದೆ. ಪೋಲೀಸ್ ಸಿಬ್ಬಂದಿ ಇದ್ದರೂ ಕೂಡ ಇಲ್ಲದಂತಾಗಿದೆ.

ಈ ಸಂದರ್ಭದಲ್ಲಿ ಪ್ರೊಹಿಬಿಷನ್‌ಗಾಗಿಯೇ ಬೇರೆ ಒಂದು ಸಿಬ್ಬಂದಿ ಏರ್ಪಾಡು ಮಾಡುವುದು ಬಹಳ ಸೂಕ್ತ ಮತ್ತು ಅವರ ಸಂಚಾರಕ್ಕೆ ವ್ಯಾನ್ ಅಥವಾ ಜೀಪುಗಳನ್ನು ಕೊಡಬೇಕಾದದ್ದು ಬಹಳ ಅಗತ್ಯ ಎಂದು ಹೇಳುತ್ತೇನೆ. ಈಗ ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟರಿಗೆ ಒಂದು ಜೀಪು ಇದೆ. ಬಾಕಿ ಇನ್ನಾವ ಕೆಲಸಕ್ಕೂ ಆ ಜೀಪಿನ ಸೌಕರ್ಯ ಸಿಕ್ಕುವುದಿಲ್ಲ. ಅವರು ನಾನಾ ಕೆಲಸಗಳಿಗಾಗಿ ಅದರಲ್ಲಿ ಹೋಗುತ್ತಾ ಇರಬೇಕಾಗುತ್ತದೆ. ಈ ಜೀಪುಗಳನ್ನು ಕೊಡುವಾಗಲೂ ಸಹ ಸರಿಯಾದ ಜೀಪುಗಳನ್ನು ಕೊಟ್ಟಿಲ್ಲ. ಹಾಸನದಲ್ಲಿರುವ ಜೀಪು ಕೆಟ್ಟುಹೋಗಿ ಬೇರೆಕಡೆಯಿಂದ ತರಿಸಿಕೊಳ್ಳಬೇಕಾಯಿತು. ಆದ್ದರಿಂದ ಈ ವಿಷಯದಲ್ಲಿ ಸರಿಯಾದ ವ್ಯವಸ್ಥೆ ಮಾಡಬೇಕು. ಈ ಜೀಪುಗಳ ರಿಪೇರಿಗೆ ಸ್ಪೇರ್ ಪಾರ್ಟ್ಸ್ ಬೇಕಾದರೆ ಎಸ್. ಪಿ. ಸಿ.ಗೆ ಬರೆಯಬೇಕು. ಬರೆದು ಅಲ್ಲಿಂದ ಮಂಜೂರಾಗಿ ಬರುವವರೆಗೂ ಏನೂ ಮಾಡುವ ಹಾಗಿಲ್ಲ. ಹೀಗೆ ಅನಿವಾರ್ಯಗಳು ಬೇಕಾದಷ್ಟಿವೆ. ಈ ಅನಿವಾರ್ಯಗಳನ್ನು ತಡೆಗಟ್ಟಿ ಈ ವಿಚಾರದಲ್ಲಿ ಸ್ವಲ್ಪ ಹೆಚ್ಚಿನ ಶ್ರದ್ಧೆವಹಿಸಿ ಕೆಲಸಕಾರ್ಯಗಳನ್ನು ಮಾಡುವುದಕ್ಕೆ ಅನುಕೂಲವಾಗುವಂತೆ ಪ್ರೊಹಿಬಿಷನ್ ಸಿಬ್ಬಂದಿಗೆ ಒಂದೊಂದು ಜೀಪನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮೇಲಾಗಿ ಅಲ್ಲಿಗೆ ಜನಗಳನ್ನು

ಹಾಕುವಾಗ ಸರಿಯಾಗಿ ಯೋಚನೆ ಮಾಡಿ ಯಾರು ನಿಸ್ಪೃಹತೆಯಿಂದ ಕೆಲಸ ಮಾಡುತ್ತಾರೋ ಅಂಥವರನ್ನು ಹಾಕಬೇಕು. ಸಾಧಾರಣವಾಗಿ ಪೋಲೀಸ್ ಇಲಾಖೆಯಲ್ಲಿ 100 ಜನ ಇದ್ದರೆ 95 ಜನಕ್ಕೆ ಕಡಿಮೆ ಇಲ್ಲದಂತೆ ಎಲ್ಲರೂ ಕುಡಿಯುತ್ತಾರೆ ಎಂದರೆ ಅತಿಶಯೋಕ್ತಿಯಾಗಲಾರದು.

ಅಧ್ಯಕ್ಷರು.—ತಾವು ಹೇಳುವ ಉಪಾಯ ವೇನು ?

ಶ್ರೀ ಟಿ. ಎಚ್. ಬೋರಣ್ಣಗೌಡ.—ಅದನ್ನು ಆ ಇಲಾಖೆಯವರಿಗೇ ಬಿಟ್ಟಿದ್ದೇನೆ. ಇದಕ್ಕಾಗಿ ಒಂದು ಬೇರೆ ಕಮಿಟಿ ಮಾಡಿ ಅದಕ್ಕೆ ಇದನ್ನು ವಹಿಸಿ ಎಂದರೆ ಅವರು ತಯಾರಾಗಿಲ್ಲ. Remedy ಏನು ಎಂಬುದನ್ನು ಹೇಳುತ್ತೇನೆ. ಆದರೂ ಅವರೇ ಯೋಚನೆ ಮಾಡಬೇಕು. 100ಕ್ಕೆ 95 ಮಂದಿ ಕುಡಿಯುತ್ತಾರೆ ಎಂದ ಮೇಲೆ, ಕುಡಿಯುವವರನ್ನು ಹಿಡಿಯುವುದಕ್ಕೆ ಅವರನ್ನು ಹಾಕುವುದರಿಂದ ಏನು ಪ್ರಯೋಜನ ಎಂಬುದನ್ನು ತಮ್ಮ ಮುಂದೆ ಇವತ್ತು ಹೇಳಬೇಕಾಗಿದೆ. ವಿಚಿತ್ರವಾದ ಒಂದು ಕೇಸು. ಒಬ್ಬರು ಒಂದು ಬ್ರಾಂದಿ ಸೀಸೆ ತೆಗೆದುಕೊಂಡು ಹೋಗುತ್ತಾ ಇದ್ದರು. ಪ್ರೊಹಿಬಿಷನ್ ಚೆಕ್‌ಗೇಟು ಎಂದು ಗೊತ್ತಾದ ಕೂಡಲೇ ಅವುಗಳನ್ನೆಲ್ಲಾ ಹಿಂದಕ್ಕೆ ತೆಗೆದುಕೊಂಡು ಬಂದು, ಅಲ್ಲಿದ್ದ ಪೋಲೀಸ್‌ನವರಿಗೆ ಕೆಲವು ಬ್ರಾಂದಿ ಬಾಟಲ್‌ಗಳನ್ನು ಕೊಟ್ಟರು. ಹಾಗೆ ಕೊಟ್ಟಮೇಲೆ ಅವರೇ ಸಾವಿರಗಟ್ಟಲೆ ಸೀಸೆಗಳನ್ನು ತೆಗೆದುಕೊಂಡು ಹೋದರು. ಹೀಗೆ ಪೋಲೀಸ್‌ನವರೇ ಸೇರಿಕೊಂಡು ಪೆಟ್ಟಿಗೆ ಪೆಟ್ಟಿಗೆ ಬ್ರಾಂದಿಬಾಟಲ್‌ಗಳನ್ನು ತುಂಬಿ ಸಾಗಿಸಿಕೊಂಡು ಹೋದರೆ ಅಂಥವರ ಮೇಲೆ ಯಾವ ಕೇಸೂ ಇಲ್ಲ. ಅದೇ ಯಾವನೋ ಒಬ್ಬ ಅಕಸ್ಮಾತ್ತಾಗಿ ಸಿಕ್ಕಿಬಿದ್ದರೆ ಅಂಥವನನ್ನು ಹಿಡಿದುಕೊಂಡುಹೋಗಿ 50 ರೂಪಾಯಿ ಜುಲ್ಮಾನೆ ಹಾಕುತ್ತಾರೆ. ಈ ರೀತಿ ಅನೀತಿಯುತವಾಗಿ ವರ್ತಿಸುತ್ತಿರುವುದನ್ನು ಅನೇಕ ಸಾರಿ ಹೇಳಿದ್ದೇನೆ. ಬೆಂಗಳೂರಿನಿಂದ ಪೆಟ್ಟಿಗೆಗಳು ಕೋಕೋ ಎಂದು ಹೇಳಿ ಸೀಲ್ ಆಗಿಬರುತ್ತವೆ. ಒಳಗೆ ಇರುವುದು ಬ್ರಾಂದಿ ಬಾಟ್ಲು. ಇದನ್ನು ತರಿಸುವವರು ಯಾರು ? ದೊಡ್ಡ ದೊಡ್ಡ ಸಾಹುಕಾರರು, ಬ್ರಾಂದಿ ಉಪಯೋಗಿಸದೇ ಇರತಕ್ಕ ಬ್ರಾಹ್ಮಣರು, ಲಿಂಗಾಯಿತರು, ಒಳ್ಳೊಳ್ಳೆಯ ಶ್ರೀಮಂತರು, ಪ್ಲಾಂಟರುಗಳು ಆಗಿದ್ದಾರೆ. ಎಷ್ಟೋ ಸಾರಿ ಇಂಥ ಕಡೆ, ಇಂಥ ಕಡೆ ಸೋಪಿನ ಪೆಟ್ಟಿಗೆ ಎಂದು ಸೀಲ್ ಆಗಿ ಬ್ರಾಂದಿ ಬಾಟಲ್ ಹೋಗುತ್ತಾ ಇದೆ, ಚೆಕ್ ಮಾಡಿ ಎಂದು ಪೋಲೀಸ್ ಸೂಪರಿಂಟೆಂಡೆಂಟರಿಗೆ ಹೇಳಿದ್ದೇನೆ. ಅಂಥ ಸಂದರ್ಭದಲ್ಲಿ ಏನುಮಾಡುತ್ತಾರೆ ಎಂದರೆ—ಹಿಂದೆ ಒಬ್ಬರು ಇದ್ದರು, ಈಗ ಆ ರೀತಿ ನಡೆಯುತ್ತಾ ಇಲ್ಲ, ಈಗಿರುವವರು ಒಳ್ಳೆಯವರು—ಅವರು ಏನು ಮಾಡುತ್ತಿದ್ದರು ಎಂದರೆ ತಾವೇ ಬ್ರಾಂದಿ ಕುಡಿದು, ಆ ಬಾಟ್ಲುಗಳನ್ನೆಲ್ಲಾ ತಮ್ಮ ವ್ಯಾನ್‌ನಲ್ಲಿಟ್ಟುಕೊಂಡು ಮನೆಗೆ ಸಾಗಿಸಿಕೊಂಡು ಬರುತ್ತಿದ್ದರು. ಈ ದಿನ ಪಾನನಿರೋಧ ಜಾರಿ ಮಾಡಿರುವ ಕಡೆ ಎಲ್ಲೆಲ್ಲಿ ಇಂಥ ಪರಿಸ್ಥಿತಿ ಇದೆ, ಯಾವ ಯಾವ ರೀತಿಯಲ್ಲಿ ಸಾಗಿಸುತ್ತಾ ಇದ್ದಾರೆ ಎಂಬುದನ್ನು ಕಂಡುಹಿಡಿದು ಅಂಥವರ ಮೇಲೆ ಉಗ್ರ ಕಾರ್ಯಕ್ರಮ ತೆಗೆದುಕೊಳ್ಳದಿದ್ದ ಪಕ್ಷದಲ್ಲಿ ಈ ಡಿಪಾರ್ಟ್‌ಮೆಂಟು ಇದ್ದರೆ ಎಷ್ಟು ಪ್ರಯೋಜನವೋ ಇಲ್ಲದೇ ಇದ್ದರೂ ಅಷ್ಟೇ. ಎಲ್ಲಾ ಕಡೆಯೂ ಪ್ರೊಹಿಬಿಷನ್ ಸ್ಟಾಫ್ ಇದೆ, ಸ್ಟಾಫ್ ಸಾಲದು ಎಂದು ಹೇಳುವುದರ ಜೊತೆಗೆ ಅವರೇ ಇಂಥ ಕೆಲಸಮಾಡುವವರಿಗೆ ನೆರವಾಗಿ ಸರಿಯಾದ ನಿಗಾ ಕೊಡದಿದ್ದರೆ ಈ ಪಾನನಿರೋಧ ಈಗ ಅರ್ಧಾಂತತವಾಗಿರುವುದು ಕೊನೆಗೆ ಪೂರ್ಣವಾಗಿ ಜಾರಿಯಲ್ಲಿ ಇಲ್ಲವೇ ಇಲ್ಲವೇನೋ ಎನ್ನುವ ಪರಿಸ್ಥಿತಿಗೆ ಬರುವುದರಲ್ಲಿ ಆಶ್ಚರ್ಯ

2 P.M.

ವೇನೂ ಇಲ್ಲ. ಅಂಥ ಕಡೆ prohibition ಗೋಸ್ಕರ ಕೇಸುಗಳನ್ನು ಅವರ ಮೇಲೆ ಹಾಕುವುದಕ್ಕೆ ಅವಕಾಶವಿದೆ. Prohibition cases ಹಿಡಿದು ಬೇಕಾದಷ್ಟು 10-20 ಡ್ರಾಂ ಅಲ್ಲ, ಹಂಡೆಗಳಲ್ಲಿ ಹೆಚ್ಚು ಪ್ರಮಾಣದಲ್ಲಿ ಮಾಡುವವರನ್ನು ಹಿಡಿದುಕೊಂಡು ಬಂದರೆ ಕೋರ್ಟಿನಲ್ಲಿ 50 ರೂಪಾಯಿ ಜುಲ್ಮಾನೆ ಹಾಕುತ್ತಾರೆ. 50 ರೂಪಾಯಿ ಜುಲ್ಮಾನೆ ಎಂದು ಹೇಳಿದ ತಕ್ಷಣ ಸೊಂಟದಿಂದ ನೋಟುಗಳನ್ನು ತೆಗೆದು 50 ರೂಪಾಯಿಯಲ್ಲದೆ ಇದ್ದರೆ 60 ರೂಪಾಯಿ ತೆಗೆದುಕೊಳ್ಳಿ ಎಂದು ಮ್ಯಾಜಿಸ್ಟ್ರೇಟರ ಮುಖಕ್ಕೆ ಚೆಲ್ಲಿ ಹೊರಟುಹೋಗುತ್ತಾರೆ. ಸಂಜೆಯ ವೇಳೆಗೆ 50 ರೂಪಾಯಿಗಳಲ್ಲ ಅದರ ಹತ್ತರಷ್ಟು ಸಂಪಾದನೆ ಮಾಡುತ್ತಾರೆ. ಹೀಗೆ ಅನೀತಿಯಲ್ಲಿ ಸಂಪಾದನೆ ಮಾಡತಕ್ಕವರು ಹೆಚ್ಚಾಗಿದ್ದಾರೆ. ಈ ರೀತಿಯಾಗಿ ಸಂಪಾದನೆ ಮಾಡುತ್ತಿದ್ದಾರೆಂದು ಪ್ರತಿ ದಿವಸ, ಪ್ರತಿ ಘಂಟೆ ಪೋಲೀಸಿನವರಿಗೆ ತಿಳಿಸುತ್ತಿದ್ದೇವೆ ಮತ್ತು ಸ್ಥಳಗಳನ್ನು ಕೂಡ ಹೇಳುತ್ತೇವೆ. ಆದರೂ ಸೂಕ್ತ ಕ್ರಮ ತೆಗೆದುಕೊಳ್ಳುತ್ತಿಲ್ಲ. ಇದಕ್ಕಾಗಿ ಇಲಾಖೆಯಲ್ಲಿ ಸರಿಯಾದ ಬಂದೋಬಸ್ತು ಮಾಡಬೇಕು ಎಂದು ಸವಿನಯ ಪ್ರಾರ್ಥನೆ ಸಲ್ಲಿಸುತ್ತಿದ್ದೇನೆ.

ಶ್ರೀ ಟಿ. ಹನುಮಯ್ಯ (ಹಿರಿಯೂರು-ಅನುಸೂಚಿತ ಜಾತಿಗಳು).—ಮಾನ್ಯ ಅಧ್ಯಕ್ಷರೇ, ಸಾಧಾರಣವಾಗಿ ಮಾನ್ಯ ಮಂತ್ರಿಗಳು ದಕ್ಷತೆಯಿಂದ ಕೆಲಸಮಾಡುತ್ತಿದ್ದಾರೆಂದು ನಾನಾದರೂ ತಿಳಿದುಕೊಂಡಿದ್ದೇನೆ. ಆದರೆ ಪೋಲೀಸು ಇಲಾಖೆಯಲ್ಲಿ ಅಷ್ಟು ದಕ್ಷತೆ ಇದೆಯೇ ಎಂದು ಅವರ ಗಮನಕ್ಕೆ ತರಲಿಚ್ಛಿಸುತ್ತೇನೆ. ಸಾಧಾರಣವಾಗಿ ಗ್ರಾಮಾಂತರಗಳ ವಿಚಾರ ತೆಗೆದುಕೊಳ್ಳೋಣ. ಸರ್ಕಾರದವರು ಸುಮಾರು ಆರೇಳು ವರ್ಷಗಳ ಕೆಳಗೆ ಮಸೂದೆಗಳನ್ನು ಪಾಸ್ ಮಾಡಿಸಿ ಅವನ್ನು ಪ್ರತಿಯೊಂದು ಇಲಾಖೆಗೂ ಕೂಡ ಕಳುಹಿಸಿದ್ದಾರೆ. ಒಂದು ಉದಾಹರಣೆ ಕೊಡುತ್ತೇನೆ. ಕಾಂಗ್ರೆಸ್ ಸರ್ಕಾರ ಬರುವುದಕ್ಕೆ ಮುಂಚೆ ಗ್ರಾಮಗಳಲ್ಲಿ ದೇವೀ ಜಾತ್ರೆಗಳನ್ನು ಮಾಡಲು ಲೈಸೆನ್ಸ್ ತೆಗೆದುಕೊಳ್ಳುತ್ತಿದ್ದರು. ಈಚೆಗೆ ದೇವೀಜಾತ್ರೆಗಳಲ್ಲಿ ಕುರಿ, ಕೋಣ ಕಡಿಯಬಾರದು ಎಂದು ಕಾನೂನು ಇದ್ದರೂ ಸಹ ಪೋಲೀಸಿನವರೇ ಕಾವಲು ನಿಂತುಕೊಂಡು ಗ್ರಾಮಗಳಲ್ಲಿ ಕುರಿ, ಕೋಣ ಕಡಿಸುತ್ತಾರೆ. ಇದನ್ನೆಲ್ಲ ನಾವು ಪೋಲೀಸು ಸೂಪರಿಂಟೆಂಡೆಂಟರ ಗಮನಕ್ಕೆ ತಂದಿದ್ದೇವೆ. ಆದರೆ ಅವರು ಏನೂ ಕ್ರಮ ತೆಗೆದುಕೊಂಡಿಲ್ಲ. ದೇವರ ಗುಡಿ ಮುಂದೆ ಕಡಿಸುವುದಕ್ಕೆ ಇಷ್ಟೆಲ್ಲ ಹೇಳುತ್ತಿದ್ದೇನೆ. ಮನೆಗಳಲ್ಲಿ ಕಡಿಯುವುದಕ್ಕೆ ಏನೂ ಹೇಳುವುದಕ್ಕಾಗುವುದಿಲ್ಲ. ಆದರೆ ಇದನ್ನೆಲ್ಲ ನೋಡಿದರೆ ತುಂಬ ವ್ಯಸನವಾಗುತ್ತದೆ. ಕಾಂಗ್ರೆಸ್ ಸರ್ಕಾರ ಬರುವುದಕ್ಕೆ ಮುಂಚೆ ದೇವೀ ಜಾತ್ರೆಗಳು ಬಹಳ ಬಿಕ್ಕಟ್ಟಿನಿಂದ ನಡೆಯುತ್ತಿದ್ದುವು. ದೇವೀಜಾತ್ರೆಗಳನ್ನು ಮಾಡುವುದಕ್ಕೆ ಬಹಳ ಹೆದರುತ್ತಿದ್ದರು. ಆದರೆ ಇವೊತ್ತಿನ ದಿವಸ ಯಾವ ಗ್ರಾಮದಲ್ಲಿ ಹೋಗಿ ನೋಡಿದರೂ ಕೂಡ ದೇವಿ ಜಾತ್ರೆಗಳು ಸಂಭ್ರಮದಿಂದ ನಡೆಯುತ್ತಿವೆ. ಪೋಲೀಸಿನವರು ಆ ಗ್ರಾಮಗಳಿಗೆ ಹೋಗಿ ಕಳ್ಳಭಟ್ಟಿಸಾರಾಯಿ ತರಿಸಿಕೊಂಡು ಕುಡಿದು ಜಾತ್ರೆಯನ್ನು ಮಾಡಿಸಿ ವಾಪಸು ಬರುತ್ತಾರೆ. ಆದುದರಿಂದ ಸರ್ಕಾರದವರು ನಿರ್ದಾಕ್ಷಿಣ್ಯವಾಗಿ ಕ್ರಮತೆಗೆದುಕೊಳ್ಳಬೇಕು. ಪೋಲೀಸ್

(ಶ್ರೀ ಟಿ. ಹನುಮಯ್ಯ)

ಇಲಾಖೆ ಜನರಿಗೆ ತಂದೆ ತಾಯಿಗಳಹಾಗೆ. ಇವರು ಜನರ ಹಿತರಕ್ಷಣೆಯನ್ನು ನೋಡಿಕೊಳ್ಳಬೇಕು. ಇವರು ಪ್ರಜೆಗಳನ್ನು ಸರಿಯಾಗಿ ರಕ್ಷಣೆ ಮಾಡುವುದಿಲ್ಲವೆಂದರೆ ತಂದೆತಾಯಿಗಳೇ ಮಕ್ಕಳನ್ನು ಕೊಂದುಹಾಕಿದಹಾಗಾಗುತ್ತದೆ. ಹೀಗೆ ಮಾಡುವುದರಿಂದ ಪ್ರಯೋಜನವಾಗುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ.

ಇಷ್ಟೇ ಅಲ್ಲದೆ ಅನೇಕ ಕಡೆ ಪಾನನಿರೋಧ ಯಶಸ್ವಿಯಾಗಿಲ್ಲವೆಂದು ಅನೇಕರು ಹೇಳುತ್ತಿದ್ದಾರೆ. ಇದಕ್ಕೆಲ್ಲ ಮುಖ್ಯವಾಗಿ ಪೋಲೀಸಿನವರೇ ಕಾರಣಕರ್ತರು ಎಂದು ಹೇಳಿಕೊಳ್ಳುತ್ತಿದ್ದಾರೆ. ಏಕೆಂದರೆ ಪೋಲೀಸಿನವರು ವಾರಕ್ಕಿಷ್ಟು, ಹದಿನೈದು ದಿವಸಗಳಿಷ್ಟು ಎಂದು ಕೆಲವು ಮಾಮೂಲುಗಳನ್ನು ಮಾಡಿಕೊಂಡಿದ್ದಾರೆ. ಇದನ್ನು ಎಲ್ಲರೂ ಹಂಚಿಕೊಂಡು ಕಳ್ಳಭಟ್ಟಿ ಸಾರಾಯಿ ಮಾಡಿಸುತ್ತಿದ್ದಾರೆ. ಪೋಲೀಸ್ ಇಲಾಖೆಗೆ ಈ ಕೆಲಸವನ್ನು ತಪ್ಪಿಸಿ ಸೇವಾದಳದವರಿಗೆ ಅಧಿಕಾರವನ್ನು ಕೊಡಿ. ಕಳ್ಳಭಟ್ಟಿ ಸಾರಾಯಿ ತಯಾರಿಸುವವರನ್ನು ಹಿಡಿಯುವುದಕ್ಕೆ, ಒಂದು ತಿಂಗಳೊಳಗಾಗಿ ಪೋಲೀಸು ಇಲಾಖೆಗಿಂತಲೂ ಯಶಸ್ವಿಯಾಗಿ ಕೆಲಸ ಮಾಡಿದರೆ ಒಪ್ಪಿಕೊಳ್ಳಿ. ಇಲ್ಲದೆ ಇದ್ದರೆ ಬೇಡ. ನಾನು ಇಷ್ಟು ಏಕೆ ಹೇಳುತ್ತಿದ್ದೇನೆಂದರೆ ಪೋಲೀಸಿನವರು ಇವೊತ್ತು ನಿಜವಾಗಿಯೂ ದಕ್ಷತೆಯಿಂದ ಕೆಲಸ ಮಾಡುತ್ತಿಲ್ಲ. ಮುಖ್ಯವಾಗಿ ಇದರಿಂದ ಕಳ್ಳಭಟ್ಟಿ ಸಾರಾಯಿ ತಯಾರಿಕೆ ಜಾಸ್ತಿಯಾಗಿದೆ. ಎಲ್ಲೆಲ್ಲೂ ಇದರ ತಯಾರಿಕೆ ಹೆಚ್ಚಾಗಿದೆ. ಜನಗಳೂ ಹೆಚ್ಚಾಗಿ ಕುಡಿಯುತ್ತಿದ್ದಾರೆ. ಕೇಸುಗಳನ್ನೂ ಹಾಕುತ್ತಾರೆ. ಆದರೆ ಏನು ಫಲ? ಸರಿಯಾದ ಒಂದು ಕೇಸನ್ನೂ ಹಿಡಿಯುವುದಿಲ್ಲ. ಸರ್ಕಾರದವರು ಪ್ರತಿ ತಿಂಗಳೂ ಇಷ್ಟಿಷ್ಟು ಕೇಸುಗಳನ್ನು ಹಾಕಬೇಕೆಂದು ಹೇಳಿರುತ್ತಾರೆ. ನಿಜವಾಗಿ ತಯಾರು ಮಾಡುವವರನ್ನು ಹಿಡಿಯುವುದೇ ಇಲ್ಲ. ಯಾರೋ ಒಬ್ಬ innocent ಆಗಿರುವವನ ಮನೆಯಬಳಿ ಕಳ್ಳಭಟ್ಟಿ ಸಾರಾಯಿ ತಯಾರಿಸುವ ಪದಾರ್ಥ, ಪಾತ್ರೆ ವಗೈರೆ ರಾತ್ರಿವೇಳೆ ಕಳ್ಳತನದಲ್ಲಿ ತಂದಿಟ್ಟು, ಬೆಳಗಾಗುವ ವೇಳೆಗೆ ಅವನನ್ನು ಪೋಲೀಸಿನವರು ಹಿಡಿದುಕೊಂಡು ಹೋಗುತ್ತಾರೆ. ಅವನ ಮೇಲೆ ಕೇಸು ಹಾಕುತ್ತಾರೆ. ಈ ರೀತಿಯಾಗಿ ನಡೆಯುತ್ತಿದೆ. ಮುಖ್ಯವಾಗಿ ಪೋಲೀಸಿನವರ ದಕ್ಷತೆ ಕಡಿಮೆಯಾಗಿರುವುದರಿಂದ ಕಳ್ಳಭಟ್ಟಿ ಸಾರಾಯಿ ತಯಾರಿಕೆ ಹೆಚ್ಚಾಗಿದೆ ಎಂದು ಹೇಳಬಹುದೇ ವಿನಾ ದಕ್ಷತೆ ಇದ್ದರೆ ಹೆಚ್ಚಾಗುವುದಕ್ಕೆ ಕಾರಣವಿಲ್ಲವೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳಬೇಕಾಗಿದೆ.

ಸಾಧಾರಣವಾಗಿ ಹಿಂದೆ ಅನ್ಯದೇಶೀಯರು ಬಂದರೆ, ವೈಸ್‌ರಾಯ್‌ಗಳು ಬಂದರೆ ಕಂಭಕ್ಕೆ ಒಬ್ಬೊಬ್ಬರಂತೆ ಪೋಲೀಸು ಕಾನ್ಸ್‌ಟೇಬಲುಗಳನ್ನು ನಿಲ್ಲಿಸುತ್ತಿದ್ದರು. ಈಗಲೂ ಕೂಡ ಅದೇ ರೀತಿ ಮಾಡಿದರೂ ಸಹ ನಮ್ಮ ಅಭ್ಯಂತರವಿಲ್ಲ. ಆದರೆ ಈ ಕಳ್ಳಭಟ್ಟಿ ಸಾರಾಯಿ ತಯಾರಿಕೆಯು ನಿಲ್ಲಬೇಕು.

ಮುಖ್ಯವಾಗಿ ಪೋಲೀಸು ಇಲಾಖೆಯಲ್ಲಿ ದಕ್ಷತೆ ಕಡಿಮೆಯಾಗಿದೆ. ಸಂಬಂಧಪಟ್ಟ ಅಧಿಕಾರಿಗಳ ಹತ್ತಿರ ಹೇಳಿದರೆ ನಮ್ಮ ನಮ್ಮ ಕೆಲಸ ಸರಿಯಾಗಿ ಮಾಡುತ್ತೇವೆ; ನೀವು ಬಂದು ಏಕೆ ಹೇಳಬೇಕು ಎನ್ನುತ್ತಾರೆ. ಪ್ರಜೆಗಳಲ್ಲಿ ಅನ್ಯಾಯ ನಡೆಯುತ್ತಿದೆ ಎಂದು ಅಧಿಕಾರಿಗಳಿಗೆ ಹೋಗಿ ತಿಳಿಸಿದರೆ ಅವರು ಕಿವಿಯಲ್ಲಿ ಹಾಕಿಕೊಳ್ಳುವುದಿಲ್ಲ. ಈ ತರಹ ದಕ್ಷತೆ ಕಡಿಮೆಯಾಗುತ್ತಿರುವುದನ್ನು ತಾವು ಪರಿಶೀಲನೆ ಮಾಡಬೇಕು. ಖಂಡಿತವಾಗಿಯೂ ಕೂಡ ಅನೇಕ ಕಡೆ ಕಳ್ಳತನ ಮತ್ತು ದರೋಡೆಗಳು ಹೆಚ್ಚಾಗುತ್ತಿವೆ. ಚಿತ್ರದುರ್ಗ ಜಿಲ್ಲೆಯಲ್ಲಿ ಒಬ್ಬ ಪೋಲೀಸು ಕಾನ್ಸ್ಟೇಬಲ್ ತನ್ನ ಹೆಂಡತಿಯನ್ನು ಹೊಡೆದುದರ ಪರಿಣಾಮವಾಗಿ ಆಕೆಯನ್ನು ಆಸ್ಪತ್ರೆಗೆ ಸೇರಿಸಿದ್ದಾರೆ. ಕೇಳುವವರೇ ದಿಕ್ಕಿಲ್ಲದಹಾಗಾಗಿದೆ. ಆದುದರಿಂದ ಏತಕ್ಕೋಸ್ಕರವಾಗಿ ದಕ್ಷತೆ ಹೀನವಾಗಿದೆ, ಕಡಿಮೆಯಾಗಿದೆ ಎನ್ನುವುದನ್ನು ತಾವು ಚೆನ್ನಾಗಿ ಪರಿಶೀಲನೆ ಮಾಡಬೇಕು. ದೇಶದ ರಕ್ಷಣೆಗೋಸ್ಕರ ಪೋಲೀಸ್ ಇಲಾಖೆ ಇರುವುದರಿಂದ ಹೆಚ್ಚಿನ ಮಹನತ್ತಿನಿಂದ ಕೆಲಸ ಮಾಡಲು ತರದೂದು ಮಾಡಬೇಕೆಂದು ಪ್ರಾರ್ಥನೆ ಮಾಡಿ ನನ್ನ ಭಾಷಣವನ್ನು ನಿಲ್ಲಿಸುತ್ತೇನೆ.

*ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ಈ ಡಿಮ್ಯಾಂಡನ್ನು ವಿರೋಧಿಸಿ ಒಂದೆರಡು ವಿಚಾರಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಹೇಳಬೇಕಾದ ಅನೇಕ ವಿಷಯಗಳನ್ನು ಶ್ರೀ ಶ್ರೀನಿವಾಸ ಐಯ್ಯಂಗಾರ್ಯರವರು ಹೇಳಿದ್ದಾರೆ. ಒಂದು ವಿಚಾರವೇನೆಂದರೆ ಪೋಲೀಸ್ ಇಲಾಖೆಯಲ್ಲಿ ದಕ್ಷತೆ ಇಲ್ಲ, ಇದನ್ನು ಉತ್ತಮಪಡಿಸಬೇಕು ಎನ್ನುವುದು ವರ್ಷೇ ವರ್ಷೇ ನಾವು ಹೇಳತಕ್ಕ ಅಂಶ. ನನ್ನ ಮಾನ್ಯ ಸ್ನೇಹಿತರು ಈ ಇಲಾಖೆಯಲ್ಲಿ ಎಷ್ಟರಮಟ್ಟಿಗೆ ವ್ಯವಸ್ಥೆ ಇಲ್ಲವೆನ್ನುವುದನ್ನೂ ದಿವಸ ದಿವಸಕ್ಕೆ ದಕ್ಷತೆ ಕಡಿಮೆಯಾಗುತ್ತಿದೆ ಎನ್ನುವುದನ್ನೂ ಹೇಳಿದ್ದಾರೆ. ನಾನಾದರೂ ಒಂದು ವಿಚಾರ ಹೇಳುತ್ತೇನೆ. ದಕ್ಷತೆ ಕಡಿಮೆಯಾಗದೆ ಇರುವುದಕ್ಕೆ ಸಂಬಳ ಸಾರಿಗೆಗಳನ್ನು ಹೆಚ್ಚಾಗಿ ಕೊಡಬೇಕು ಮತ್ತು ನೌಕರ ವರ್ಗದವರನ್ನೂ ಹೆಚ್ಚು ಮಾಡಬೇಕು ಎನ್ನುವುದು ಸಾಮಾನ್ಯವಾಗಿ ಹೇಳತಕ್ಕ ಅಂಶ. ಅದೇನಾದರೂ ಕಡಿಮೆಯಾಗಿದೆಯೇ ಎಂದರೆ, ಕಳೆದ ಹತ್ತು ವರ್ಷಗಳಲ್ಲಿ 100ಕ್ಕೆ 540ರಷ್ಟು ಹೆಚ್ಚಾಗಿ ಈ ಇಲಾಖೆಗೆ ಖರ್ಚಾಗುತ್ತಿದೆ ಎಂದು ಹೇಳಬಹುದು. 1946-47 ರಲ್ಲಿ 24 ಲಕ್ಷ ರೂಪಾಯಿ ಖರ್ಚಾಗುತ್ತಿದ್ದುದು ಈ ವರ್ಷ 127 ಲಕ್ಷ ರೂಪಾಯಿ ಖರ್ಚಾಗುತ್ತಿದೆ. ಇಷ್ಟು ಹೆಚ್ಚಾಗಿ ಕೊಟ್ಟಮೇಲೆ ಹಣವನ್ನು ಕೊಡುತ್ತಿಲ್ಲವೆಂದು ಹೇಳುವುದಕ್ಕೆ ಮಾತ್ರ ಖಂಡಿತವಾಗಿಯೂ ಕಾರಣವಿಲ್ಲ. ಈ ಹಣ ಯಾವ ರೀತಿ ವಿನಿಯೋಗವಾಗಿದೆ ಎಂದು ತಿಳಿಸುತ್ತೇನೆ. ಈ ಇಲಾಖೆಯಲ್ಲಿ ಕಡಿಮೆ ದರ್ಜೆಯ ಜನರು ಬಹಳ ಮಂದಿ ಇದ್ದಾರೆ. 9,837 ಜನ ಕಾನ್ಸ್ಟೇಬಲುಗಳೂ ಮತ್ತು 1,200 ಜನ ದಫೇದಾರರೂ ಮತ್ತು ಜಮೇದಾರರೂ ಇದ್ದಾರೆ. ಇಷ್ಟು ಜನರಿಗೂ ಬಹಳ ಕಡಿಮೆ ಸ್ಕೇಲು ಸಂಬಳ ಸಿಗುತ್ತದೆ. ಅವರಿಗೆ ಜೀವನಕ್ಕೆ—ಒಂದು ಸಂಸಾರಕ್ಕೆ ಬೇಕಾಗಿಲ್ಲ—ಒಬ್ಬನ ಮಟ್ಟಿಗಾದರೂ ಆಗುವ ಹಾಗೆ ಇದೆಯೇ ಎಂದರೆ ಖಂಡಿತ ಇಲ್ಲವೆನ್ನಬಹುದು. ಅವನೇನಾದರೂ ಹೊಟ್ಟೆ ಬಟ್ಟೆಗೆ ಸರಿಯಾಗಿ ನೋಡಿಕೊಳ್ಳಬೇಕಾಗಿದ್ದರೆ ಸಂಬಳ ಸಾಲದೆ ಹೊರಗಡೆ ಸಂಪಾದನೆ ಮಾಡಿಕೊಳ್ಳಬೇಕು. ಹಾಗೇನಾದರೂ ಹೊರಗಡೆ ಸಂಪಾದನೆಗೆ ಹೊರಟರೆ ಕೆಳಗಿನಿಂದ ಮೇಲಿನವರೆಗೂ ಕೂಡ ಅವರವರ ಸಂಬಳದ ದಾಮಾಷಾ ಪ್ರಕಾರ ಹೋಗಬೇಕಾಗುತ್ತದೆ. ಒಬ್ಬನೇನಾದರೂ ಅನೀತಿಗೆ ಇಳಿದನೆಂದರೆ ಎಲ್ಲರೂ ಅನೀತಿಗೆ ಇಳಿಯುವುದಕ್ಕೆ ಸಾಧ್ಯವಿದೆ. ಈ ರೀತಿಯ ಸಂಪಾದನೆಯನ್ನು ತಪ್ಪಿಸಬೇಕು. ಹಾಗೆ ತಪ್ಪಿಸಲು ಆಗದೆ ಇದ್ದರೆ ತಾವೂ ಕೂಡ ಅದರಲ್ಲಿ ತೆಗೆದುಕೊಳ್ಳಬೇಕು. ಈ ಅಂಶಗಳನ್ನು ಎಷ್ಟೋ ವರ್ಷಗಳಿಂದ ಒತ್ತಿ ಒತ್ತಿ ಹೇಳುತ್ತಿದ್ದೇವೆ. ಒಬ್ಬ ಪೋಲೀಸ್ ಕಾನ್ಸ್ಟೇಬಲ್ ಸಂಬಳ 22-32 ಎಂದು ನಿಗದಿಯಾಗಿದೆ. ಇದೇ ಅತ್ಯಂತ ಹೆಚ್ಚಿನ ರಿಯಾಯಿತಿ ಎಂದು ನಮ್ಮ ಸರ್ಕಾರದವರು ಹೇಳಿಕೊಳ್ಳುವುದು. 22 ರೂಪಾಯಿ

ಸಂಬಳದಲ್ಲಿ ಯಾವ ರೀತಿ ಒಬ್ಬ ಮನುಷ್ಯ ಜೀವನ ಮಾಡಬೇಕು ಎನ್ನುವುದನ್ನು ಯೋಚನೆಮಾಡಬೇಕು. ಕೈಗಾರಿಕಾಬಾಬಿನಲ್ಲಿ ಒಬ್ಬ ಕೂಲಿಯವನಿಗೆ ಏನು ಸಂಬಳ ಕೊಡಬೇಕು ಎಂದು ನಿಷ್ಕರ್ಷೆ ಮಾಡಿದ್ದೀರೋ, ಇನ್ನೂ ಆರ್ಗನೈಜ್ ಆಗದೆ ಇದ್ದರೂ ಕೂಡ ವ್ಯವಸಾಯದ ಬಾಬಿನಲ್ಲಿ ಒಬ್ಬ ಕೂಲಿಗಾರನಿಗೆ ಏನು ಕೊಡಬೇಕು ಎಂದು ಮಾಡಿದ್ದೀರೋ ಅದಕ್ಕಿಂತಲೂ ಇವರಿಗೆ ಕೊಡತಕ್ಕ ಸಂಬಳ ಬಹಳ ಕಡಿಮೆ. ಮುಖ್ಯವಾಗಿ ಪ್ರಜೆಗಳ ಮಾನ, ಪ್ರಾಣ ಮತ್ತು ಅವರ ಆಸ್ತಿ ಎಲ್ಲವನ್ನೂ ಸಂರಕ್ಷಣೆ ಮಾಡತಕ್ಕ ಜವಾಬ್ದಾರಿಯನ್ನು ಮತ್ತು 24 ಘಂಟೆಯೂ ಕೂಡ ಕೆಲಸಕ್ಕೆ ಸಿದ್ಧರಾಗಿರತಕ್ಕ ಜವಾಬ್ದಾರಿಯನ್ನು, ಕೇವಲ 22 ರೂಪಾಯಿ ಸಂಬಳ ಕೊಟ್ಟು, ಪೋಲೀಸಿನವರಿಗೆ ವಹಿಸುವುದು ಸರಿಯಾದದ್ದೆ? ನಾನು ಹೇಳಿದಂತೆ ಒಂದಕ್ಕೆ ಐದರಷ್ಟು ಖರ್ಚು ಹೆಚ್ಚಾಗಿದ್ದರೂ ಕೂಡ ಎಷ್ಟರಮಟ್ಟಿಗೆ ಜನಗಳಿಗೆ ನೀವು ಅನುಕೂಲ ಮಾಡಿದ್ದೀರಿ ಎಂದು ಪ್ರಶ್ನೆ ಹಾಕುತ್ತೇನೆ. ಈ ಇಲಾಖೆಯಲ್ಲಿ ದೊಡ್ಡ ದೊಡ್ಡ ಅಧಿಕಾರಿಗಳಿಗೆ ಎಷ್ಟುಮಟ್ಟಿಗೆ ಸಂಬಳ ಹೆಚ್ಚಿಸಿದ್ದೀರಿ ಎಂದರೆ ಒಂದಕ್ಕೆ ಮೂರರಷ್ಟು ಎಂದು ಧಾರಾಳವಾಗಿ ಹೇಳಬಹುದು. 400 ರೂಪಾಯಿ ಸಂಬಳವಿದ್ದವರಿಗೆ 1,200, 1,400, 1,600, 1,950 ಹೀಗೆ ಕೊಡುತ್ತಿದ್ದೀರಿ. ಇದೂ ಅಲ್ಲದೆ ಒಂದೇ ದರ್ಜೆಯಲ್ಲಿರುವವರಲ್ಲಿ ಕೂಡ disparity ಎಷ್ಟಿದೆ ಎಂಬುದನ್ನು ತಿಳಿಸುತ್ತೇನೆ. ಮೈಸೂರಿನ ಕಾನ್ಸ್ಟೇಬಲುಗಳಿಗೆ 22 ರೂಪಾಯಿ ಕೊಟ್ಟರೆ ಬಳ್ಳಾರಿಯಲ್ಲಿರುವವರಿಗೆ 30 ರೂಪಾಯಿ ಕೊಡುತ್ತಿದ್ದೀರಿ; ಇಲ್ಲಿ ಇನ್ಸ್ಪೆಕ್ಟರುಗಳಿಗೆ 150-250 ರೂಪಾಯಿ ಇದ್ದರೆ, ಅಲ್ಲಿ 275 ಮ್ಯಾಕ್ಸಿಮಂ ಗ್ರೇಡ್ ಇದೆ. ಸಬ್ ಇನ್ಸ್ಪೆಕ್ಟರ್, ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಹೀಗೆ ಎಲ್ಲರ ಸಂಬಳ ಮತ್ತು ಗ್ರೇಡುಗಳಲ್ಲಿ ಇಲ್ಲಿಗೂ ಬಳ್ಳಾರಿಗೂ ವ್ಯತ್ಯಾಸವಿದೆ. ಹೀಗೆ ಒಂದೇ ಇಲಾಖೆಯಲ್ಲಿ ಒಂದೇ ಅಧಿಕಾರಕ್ಕೆ ಒಂದೇ ರೀತಿಯ ಕೆಲಸಕ್ಕೆ ಬೇರೆ ಬೇರೆ ಸಂಬಳಗಳಿವೆ. ಇದನ್ನು ಮೊದಲಿನಿಂದಲೂ ಹೇಳಿಕೊಂಡು ಬಂದಿದ್ದೇವೆ. ಇನ್ನು ಮುಂದೆ ನಮ್ಮ ಸಂಸ್ಥಾನವು ಇನ್ನೂ ಐದು ಸಂಸ್ಥಾನಗಳೊಡನೆ ಸೇರಬೇಕಾಗಿದೆ. ಈಗ ಬಳ್ಳಾರಿಯ ಐದಾರು ತಾಲ್ಲೂಕುಗಳನ್ನು ಸೇರಿಸಿಕೊಂಡಿರುವಾಗಲೇ ಸರಿಸಮಾನವಾದ ಸ್ಥಿತಿಗೆ ತರದೆ ಇರಬೇಕಾದರೆ, ಮದರಾಸ್, ಹೈದರಾಬಾದು, ಬೊಂಬಾಯಿ ಮತ್ತು ಕೊಡಗು, ಈ ಭಾಗಗಳು ಬರುವಾಗ ಅನೇಕ ವಿಧವಾದ ಸ್ಕೇಲುಗಳು ಇರುವುದರಿಂದ ಯಾವ ಕಾಲಕ್ಕೆ ಸರಿ ಹೊಂದಿಸುತ್ತೀರಿ? ನಾನು States Reorganisation Bill ಕೂಡ ನೋಡಿದ್ದೇನೆ. ಅದರಲ್ಲಿ ಯಾರಾರಿಗೆ ಯಾವ ಯಾವ ಗ್ರೇಡುಗಳಿವೆಯೋ ಅದೇ ಗ್ರೇಡುಗಳನ್ನೇ ಮುಂದುವರಿಸಬೇಕು, ಹಾಗಿಲ್ಲದೆ ಹೋದರೆ ಕೇಂದ್ರ ಸರ್ಕಾರದವರು ಏರ್ಪಾಡು ಮಾಡುತ್ತಾರೆ ಎಂದು ಹೇಳಿದ್ದಾರೆ. ಆಗ ಇಲ್ಲಿಯವರ ಅವಸ್ಥೆ ಏನಾಗುತ್ತದೆ ಎಂಬುದನ್ನು ಈ ಸಂದರ್ಭದಲ್ಲಿ ಯೋಚನೆ ಮಾಡಬೇಕು. ಏತಕ್ಕೋಸ್ಕರ ಈ ಸರ್ಕಾರದವರು ನಾಲ್ಕಾರು ವಿಧವಾದ ಸ್ಕೇಲುಗಳನ್ನು ಇಟ್ಟುಕೊಂಡು ಬಂದಿದ್ದಾರೆ, ಅದನ್ನು ಸಾಧ್ಯವಾದ ಮಟ್ಟಿಗೆ ಏತಕ್ಕೆ ಹೊಂದಾಣಿಕೆ ಮಾಡಬಾರದಾಗಿತ್ತು ಎಂದು ಸಹ ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ.

ಕಾನ್ಸ್ಟೇಬಲುಗಳಿಗೆ ಸಂಬಳ ಜಾಸ್ತಿ ಮಾಡಬೇಕು, ಒಂದಕ್ಕೆ ಐದರಷ್ಟು ಜಾಸ್ತಿ ಮಾಡಿದರೂ ಒಳ್ಳೆಯದು ಎಂದು ಹೇಳುತ್ತೇನೆ. ಅವರಿಗೆ ನಾಲ್ಕೈದು ರೂಪಾಯಿಗಳನ್ನು ಜಾಸ್ತಿ ಮಾಡಿರುವುದು ಸಾಲದು. ಆದುದರಿಂದ ಆದಷ್ಟು ಜಾಗ್ರತೆ, ಅವರ ಜೀವನಕ್ಕೆ ಯಾವ ವಿಧವಾದ ಕೊರತೆಯೂ ಇಲ್ಲದ ರೀತಿಯಲ್ಲಿ ಸಂಬಳ ಕೊಡಬೇಕು. ಹೀಗೆ ಮಾಡುವಾಗ ದೊಡ್ಡ ದೊಡ್ಡ ಅಧಿಕಾರಿಗಳಿಗೆ ಸಂಬಳವನ್ನು ಕಡಿಮೆ ಮಾಡಿದರೂ ತೊಂದರೆ ಇಲ್ಲ. ಕಾನ್ಸ್ಟೇಬಲುಗಳಿಗೆ ಮಾತ್ರ ಸಂಬಳ ಜಾಸ್ತಿ ಮಾಡಬೇಕು ಎಂದು ಹೇಳುತ್ತೇನೆ. ಅದೂ ಅಲ್ಲದೇನೆ ಒಂದೇ ಗ್ರೇಡಿನಲ್ಲಿ ನಾಲ್ಕಾರು ತರಹ ಸಂಬಳ ಗೊತ್ತು ಮಾಡಿ ಒಂದೇ ತರಹ ಕೆಲಸ ಮಾಡಿಸಿಕೊಳ್ಳುವುದು ಸರಿಯಲ್ಲ. ಇದರಲ್ಲಿ ವ್ಯಾಪಕವಾದ ನೀತಿಯನ್ನನುಸರಿಸಿ ಬಹಳ ಮಟ್ಟಿಗಿರುವ ಅಸಮಾಧಾನ ಮತ್ತು ಅತೃಪ್ತಿಗಳ ಅವಕಾಶವನ್ನು ಹೋಗಲಾಡಿಸಬೇಕು. ಇದರಿಂದ ಲಂಚಕೋರರಿಗೆ ಅನುಕೂಲವಾಗಿದೆ. ಈ ಇಲಾಖೆ ವಿಚಾರ ಈಗಾಗಲೆ ಮಾನ್ಯ ಮಿತ್ರರು ಹೇಳಿದ್ದಾರೆ. ನಾನು ಹೇಳಿದರೆ ಅಷ್ಟು ಬೆಲೆ ಬರುವುದಿಲ್ಲ. ಶ್ರೀ ಬೋರಣ್ಣಗೌಡರೂ ಕೂಡ ಹೇಳಿದ್ದಾರೆ. ನಾವು ಎಷ್ಟು ಹೇಳಿದರೂ ಪೋಲೀಸಿನವರಾಗಲಿ ಅಥವಾ ಸರ್ಕಾರವಾಗಲಿ ಅದಕ್ಕೆ ಗಮನಕೊಡುವುದಿಲ್ಲ ಅದರಲ್ಲೂ ಪಾನನಿರೋಧದ ವಿಚಾರದಲ್ಲಿ ಪೋಲೀಸಿನವರು ಎಳ್ಳಷ್ಟೂ ಸಾರ್ವಜನಿಕರ ಅಭಿಪ್ರಾಯಕ್ಕೆ ಬೆಲೆಕೊಡುವುದಿಲ್ಲ. ಪೋಲೀಸಿನವರು ತಾತ್ಸಾರ ಮಾಡುತ್ತಿದ್ದರು, ಕಳ್ಳಬಟ್ಟಿ ತಯಾರಿಸುತ್ತಿದ್ದಾಗ ನಾನೇ ಹಿಡಿದು ಬುಕ್ ಮಾಡಿಸಿ ಬಂದಿದ್ದೇನೆ ಎಂದು ಕೈಗಾರಿಕಾ ಮಂತ್ರಿಗಳು ಕೂಡ ಹೇಳಿದ್ದಾರೆ. ರಾತ್ರಿ ಕಾವಲು ಹಾಕಿ ಬಂದೋಬಸ್ತು ಮಾಡಿ ಕಳ್ಳಬಟ್ಟಿ ಇಳಿಸುತ್ತಿದ್ದುದನ್ನು ಹಿಡಿದು ಹಾಕಿದ್ದೇನೆಂದು ಹೇಳಿದ್ದಾರೆ.

*Sri H. M. CHANNABASAPPA (Minister for Industries).—On a point of personal explanation. I have only told the Hon'ble Member an incident that happened in Shimoga where a few persons were carrying on trade in illicit liquor and the police made an Herculian effort to seize the property and take necessary action. It speaks only of the efficient work that the police people did.

Sri B. HUTCHE GOWDA.—With the direction of the Industries Minister. I do not think the police would have done all that and taken so much trouble. In that case, why did they not do it so far ? It is going on for years together. ವಿರೋಧ ಪಕ್ಷದವರ ಮಾತು ಹಾಗಿರಲಿ, ಸರ್ಕಾರ ನಡೆಸುವ ಪಕ್ಷದವರೇ ಅವರ ನಿಸ್ಸಹಾಯಕತೆಯನ್ನು ಮಾನ್ಯ ಸಭೆಯಲ್ಲಿ ಹೇಳಿಕೊಂಡರು. ನಮ್ಮ ಮಾತಿಗೆ ಬೆಲೆಯಿಲ್ಲವೆಂದು ಶ್ರೀ ಬೋರಣ್ಣಗೌಡರೇ ಹೇಳಿದರು. ನಾವು ಹೇಳುವುದನ್ನು ಲೆಕ್ಕಕ್ಕೇ ತೆಗೆದುಕೊಳ್ಳುವುದಿಲ್ಲ ಎಂದು ಅಷ್ಟು ನಿಸ್ಸಹಾಯಕರಾಗಿ, ನಿರಾಶಾ ಮನೋಭಾವದಿಂದ ಎಲ್ಲರೂ ಮಾತನಾಡಿದ್ದಾರೆ. ಅದನ್ನು ನೋಡಿ ನನಗೂ ಕೂಡ ಬಹಳ ಮಟ್ಟಿಗೆ ವ್ಯಥೆಯಾಗುತ್ತದೆ. ಯಾವ ದೇಶದಲ್ಲಾಗಲಿ ಜನರ ಮಾನ, ಪ್ರಾಣ, ಆಸ್ತಿ ವಗೈರೆ ಕಾಪಾಡುವ ಪೋಲೀಸಿನವರ ದಕ್ಷತೆಗೆ ಧಕ್ಕೆ ಬರಬಾರದು. ಇದಕ್ಕೆ ಒಂದು ಕಾರಣ ಮುಂದು ಮಾಡುವುದು; ಕಡಮೆ ದರ್ಜೆ ನೌಕರರಿಗೆ ಹೆಚ್ಚು

(SRI B. HUTCHE GOWDA).

ಖರ್ಚಾಗುತ್ತದೆ, ಸಂಬಳ ಹೆಚ್ಚು ಮಾಡಿದರೆ ದೇಶಕ್ಕೆ ಕ್ಷೇಮವಾಗುವುದಿಲ್ಲ ಎಂಬುದು. ಈ ಇಲಾಖೆಗೆ ಕೊಡುವ 127 ಲಕ್ಷ ರೂಪಾಯಿಗಳನ್ನು ಕೂಡ ಯಾವ ರೀತಿ ವಿನಿಯೋಗ ಮಾಡಿದರೆ, ಯಾವ ರೀತಿ ಸಂಬಳ ಸಾರಿಗೆ ಮಾರ್ಪಾಟು ಮಾಡಿದರೆ ಜನರಿಗೆ ಅನುಕೂಲವಾಗುತ್ತದೆ, ದೇಶದಲ್ಲಿ ಶಾಂತಿ ಸಮಾಧಾನ ನೆಲೆಸುತ್ತದೆ ಎಂಬುದನ್ನು ಯೋಚನೆಮಾಡಿ ಅದರಂತೆ ಮಾಡಿ ದಕ್ಷತೆ ಹೆಚ್ಚಿಸಬೇಕು ಮತ್ತು ನಮ್ಮ ದೇಶಕ್ಕೆ ಕೀರ್ತಿ ತರುವಂತೆ ಈ ಇಲಾಖೆಯು ಕೆಲಸ ನಡೆಸಬೇಕು ಎಂದು ಸೂಚಿಸಿ ಈ ಡಿಮ್ಯಾಂಡ್ ಮನವಿಯನ್ನು ವಿರೋಧಿಸುತ್ತೇನೆ.

*ಶ್ರೀ ಎಲ್. ಸಿದ್ದಪ್ಪ (ಚನ್ನಗಿರಿ).—ಸ್ವಾಮಿ, ಅಧ್ಯಕ್ಷರೆ, ಭದ್ರಾವತಿ ರಿಸರ್ವಾಯರ್ ಪ್ರಾಜೆಕ್ಟಿನ ಮತ್ತು ಛಾನಲ್ ಡಿವಿಷನ್‌ಗಳಲ್ಲಿ ಬಹಳ ಜನ ಕೆಲಸ ಮಾಡುತ್ತಿದ್ದಾರೆ, ಬಹು ಜನ ಆಂಧ್ರರು ಮತ್ತು ತಮಿಳರು ಕೆಲಸ ಮಾಡುತ್ತಿದ್ದಾರೆ. ಅವರಲ್ಲಿ ರೌಡೀಸ್ ಬಹಳ ಜಾಸ್ತಿ. ಅಲ್ಲಿ ಯಾವ ಪ್ರದೇಶವನ್ನು ಬಂದೋಬಸ್ತಿನಲ್ಲಿಡಬೇಕೋ ಅದಕ್ಕೆ ಪೋಲೀಸು ಸಿಬ್ಬಂದಿ ಏರ್ಪಾಡು ಮಾಡಬೇಕು. ನಾನು ಪರಿಶೀಲಿಸಿದ್ದರಲ್ಲಿ ಈ ಪ್ರಾಜೆಕ್ಟಿನಲ್ಲಿ ಇದಕ್ಕೆ ಪ್ರಾವಿಷನ್ ಇದೆಯೆಂದು ತಿಳಿಯಬಂತು. ಸಂಬಂಧಪಟ್ಟ ಪಬ್ಲಿಕ್ ವರ್ಕ್ಸ್ ಇಲಾಖೆಯವರು ಪ್ರಪೋಸಲ್ ಕಳುಹಿಸಿ ತಕ್ಕಷ್ಟು ಪೋಲೀಸು ಇಲಾಖೆ ಸಿಬ್ಬಂದಿಯನ್ನು ಏರ್ಪಾಡು ಮಾಡುತ್ತೇವೆಂದು ಹೇಳಿದರು. ಆದರೆ ಲಾ ಅಂಡ್ ಆರ್ಡರ್ ಮೈಂಟೈನ್ ಮಾಡುವ ದೃಷ್ಟಿಯಿಂದ ಯಾವಾಗ ಅಲ್ಲಿ ಜನ ಹೆಚ್ಚಾಗಿ ಸೇರುತ್ತಿದ್ದಾರೋ ಆಗ ಅದಕ್ಕೆ ತಕ್ಕ ಹಾಗೆ ಕೂಡಲೆ ಪೋಲೀಸು ಸಿಬ್ಬಂದಿ ಏರ್ಪಾಡು ಮಾಡುವುದು ಪೋಲೀಸು ಇಲಾಖೆ ಮತ್ತು ಪಬ್ಲಿಕ್ ವರ್ಕ್ಸ್ ಇಲಾಖೆ ಈ ಎರಡು ಇಲಾಖೆಗಳ ಕರ್ತವ್ಯ. ಈ ಸಂದರ್ಭದಲ್ಲಿ ಒಂದು ಉದಾಹರಣೆ ಹೇಳುತ್ತೇನೆ. ಚನ್ನಗಿರಿ ತಾಲ್ಲೂಕು ಟನಲ್ ಡಿವಿಷನ್‌ನಲ್ಲಿ ಎರಡು ಕಡೆಯ ಜನರಿಗೆ ವ್ಯಾಜ್ಯವಾಗಿ ಅಂಚಿನ ಸಿದ್ದಾಪುರದಲ್ಲಿ ಬಹಳ ಗಲಾಟೆಯಾಗಿ ಮರ್ಡರ್ ಸಹ ಮಾಡಿದರೆಂದು ತಿಳಿದುಬಂದಿದೆ. ಈ ತರಹ ಆಂಧ್ರ ಮತ್ತು ತಮಿಳು ನಾಡಿನ ಜನರು ಹೆಚ್ಚಾಗಿ ಸೇರಿರುವ ಕಡೆ ತಕ್ಕ ಬಂದೋಬಸ್ತು ಮಾಡುವ ಕಾರ್ಯ ಕೈಕೊಳ್ಳುವುದು ಸರ್ಕಾರದ ಕರ್ತವ್ಯ. ಇದನ್ನು ಸರ್ಕಾರದ ಗಮನಕ್ಕೆ ತರುತ್ತೇನೆ.

ಎರಡನೆಯದು ಪಾನನಿರೋಧದ ವಿಚಾರದಲ್ಲಿ ಪೋಲೀಸಿನವರ ದಕ್ಷತೆ ಕಡಮೆಯಾಗಿದೆಯೆಂದು ಈ ಸಂದರ್ಭದಲ್ಲಿ ವಾದ ನಡೆದಿದೆ. ನನ್ನ ಅಭಿಪ್ರಾಯವನ್ನು ಹಿಂದಿನ ವರ್ಷದ ಬಡ್ಜೆಟ್ ಭಾಷಣ ಮಾಡುವಾಗ ಹೇಳಿದ್ದೆ. ಈ ಪಾನನಿರೋಧ ಮಾಡಿರುವ ಕಡೆ ಅದಕ್ಕೆ ಬೇಕಾದಷ್ಟು ಸಿಬ್ಬಂದಿಯನ್ನು ಯಾವ ಸರ್ಕಾರವೂ ಒದಗಿಸುವುದಕ್ಕಾಗುವುದಿಲ್ಲ. ಒಂದು ವೇಳೆ ತಪ್ಪಿತಸ್ತರನ್ನು ಹಿಡಿದು ಜುಲ್ಮಾನೆ ಹಾಕಿದರೆ, ಶ್ರೀ ಬೋರಣ್ಣ ಗೌಡರು ಹೇಳಿದ ಹಾಗೆ ಜುಲ್ಮಾನೆ ಕೊಟ್ಟು ಅದರ ನಾಲ್ಕೈದರಷ್ಟು ದುಡಿಮೆ ಮಾಡಬೇಕೆಂದು ತಮ್ಮ ಕೆಲಸವನ್ನು ಮುಂದುವರಿಸುತ್ತಾರೆ. ಇಂಥ ಮನೋಭಾವನೆ ಬೆಳೆದು ಬಂದಿದೆ. ಪೋಲೀಸಿನವರು ಸರಿಯಾದ ಕಾರ್ಯಕ್ರಮ ತೆಗೆದುಕೊಳ್ಳುವುದಿಲ್ಲವೆಂದು ಫಿರ್ಯಾದು ಮಾಡುತ್ತಿಲ್ಲ. ಆದರೆ ಪಾನನಿರೋಧದನೀತಿ ಜಯಪ್ರದವಾಗುವುದಿಲ್ಲವೆಂಬುದು ನನ್ನ ವಾದ. ಹಿಂದೆ ಶ್ರೀ ಸಿ. ರಾಜಗೋಪಾಲಚಾರಿಯವರು ಮದರಾಸಿನಲ್ಲಿ ಹೇಳಿದ ಹಾಗೆ ಕುಡಿಯುವವರಿಗೆ ಪ್ರಿವೆಂಟಿವ್ ಡಿಟೆನ್ಷನ್ ಎಂದು ಮಾಡಿದರೆ ಒಂದು ವೇಳೆ ಸಾಧ್ಯವಾಗ ಬಹುದೋ ಏನೋ! ವಿಧಾನ ಸೌಧ ಕಟ್ಟಿದ ಹಾಗೆ ತಾಲ್ಲೂಕು ಹೆಡ್‌ಕ್ವಾರ್ಟರುಗಳಲ್ಲಿ ಒಂದು ದೊಡ್ಡ ಜೈಲನ್ನು ಕಟ್ಟಿದರೆ ಸಾಧ್ಯವಾಗಬಹುದು, ಅಲ್ಲಿಯವರೆಗೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಚನ್ನಗಿರಿ ಮತ್ತು ಭದ್ರಾವತಿ ತಾಲ್ಲೂಕುಗಳಲ್ಲಿ ಈ ಎರಡು ಕಡೆ ಪ್ರಾಜೆಕ್ಟ್ ಕೆಲಸ ಹೇರಳವಾಗಿ ನಡೆಯುತ್ತಿರುವುದರಿಂದ, ರೌಡೀಸ್ ಬಹಳ ಜನರಿರುವುದರಿಂದ ಲೋಕಲ್ ಪಾಪ್ಯುಲೇಷನ್ ಸೌಕರ್ಯಕ್ಕೆ ತಕ್ಕ ಬಂದೋಬಸ್ತು ಮಾಡುವುದು ಸರ್ಕಾರದ ಕರ್ತವ್ಯ. ಸರ್ಕಾರದ ಗಮನವನ್ನು ಈ ಕಡೆ ಸೆಳೆಯಲು ನಾನು ಇದನ್ನೆಲ್ಲಾ ಹೇಳಿದೆ.

*Sri P. M. SWAMIDURAI (K.G.F.—Scheduled Castes).—Sir, I want to bring to the notice of the Government some undue excesses on the part of some of the police. I say 'some' because there are good officials also in the department. In the Kolar Gold Fields in the year 1950 or so there was a Superintendent of Police who appeared to be very rough outwardly, but his attitude towards the public was very good. In the year 1953-54 or so, there was another officer who appeared to be very nice but was a dangerous person to the public. He was doing more harm to the public than good.

Sri H. SIDDAVEERAPPA (Minister for Home).—It was during his regime that a case was launched against you, I suppose.

Sri P. M. SWAMIDURAI.—According to rules he has done it. I have no grievance about that nor have I any complaint. I have taken it smoothly. There is another officer who is said to be very good; but I had no occasion to meet him except once, and form any opinion. I want to bring a specific instance to the notice of Government and that is, with regard to the traffic control. Traffic control has recently been introduced and it is very good. But, there is a particular policeman—I think he is a Jamedar—whose behaviour towards the public is very unhappy. I suppose he is not an Indian. He shouts at people in a very rough manner and in a manner which irritates anybody. Once, I was passiag through that road where he was on duty and I saw him shouting at a person going on the other side in a very rude way. I advised him not to do that and told him that he should make use of the whistle that is supplied to him instead of shouting at people.

No doubt those who violate law must be punished. But there is a way in which they should be cautioned and guided.

Sir, there was a police lock-up incident in Oorgaum. A man died in the lock-up. People say many things about the incident. Some say, he was murdered; some other say, he committed suicide. There is a strong impression about this in the mind of the people there that that individual was harassed by the people and he was tortured. People say that he committed suicide due to the excess torture by the police; some say that he was actually murdered by the police. The police version is that the man committed suicide in the lock-up. Sir, why should a man commit suicide in the lock-up? When he was in the custody of the police, it was their sacred duty to see that his life was safe. Instead of that, he is finished and I do not know how he was finished. I cannot say for certain whether it was a suicide or a murder; but the inquest of the Doctor says that it was suicide. But the point that I want to bring to the notice of the House and the Government is that that man was kept in police custody for more than 24 hours without the permission of the Magistrate. The Munsiff-Magistrate came there and conducted the inquest. I was present there. The police all the while insisted the Magistrate to have the evidence of the witness of a man who was a co-accused with the deceased that night. The Magistrate refused.

2-30 P.M.

Then another third party came in and gave evidence that the man in the lock-up was there for about 10 days because that man was also an accused and he was put in that particular lock-up along with him and he said that the man was already there for about 10 days and that was what the deceased person had said to him.

Mr. SPEAKER.—I want to know whether that case is pending.

Sri P. M. SWAMIDURAI.—No. If the case were pending, the Hon'ble Home Minister would have objected to my raising the matter here. There was the information that the man was in the lock-up for more than 24 hours. Then the Magistrate insisted that the other witness whom the Police wanted to cite be brought. That man was brought and he gave evidence. The Police said that these two accused were brought on a particular Saturday and that this particular accused died early morning on Sunday. But that co-accused gave evidenee saying that he was brought alone and nobody else was brought, that this particular accused was in the lock-up already and that he did not know for how long. This co-accused said that he was brought on Friday, whereas the Police said that both the accused were brought on Saturday. There is the other evidence that the accused in question was in the lock-up for more than 24 hours. So I urge the Government to enquire into this particular incident and find out why the Police are keeping persons in the lock-up for more than 24 hours without the permission of the Magistrate. Thereby I do not mean that the Police should obtain the permission and keep the man and torture him. I know some of the local people were also detained like that. I represented this to one of my best friends, an Hon'ble Member of the Legislature, an efficient Advocate and he said "These are the ways of the Police. It is going on." Then I kept quiet. My point is that it should not go on like that.

Another thing. With regard to the use of the loud speaker, you know with what intention that Act was passed this year. Why they want to exercise undue power, is my question. In some cases when a party goes and approaches the Police for a licence to use the loud speaker for marriage, for playing music and other local functions, they seem to direct the party not to include as speaker, certain X, Y, Z and I ask that party to come with me to give evidence. He is afraid and says' You know what will be my fate'. Such is the affair. We expect the Police to be reasonable and use discretion in this matter. It is true that we have to regulate and control, but there should be no undue control and regulation.

Mr. SPEAKER.—The Hon'ble Member must close.

Sri P. M. SWAMIDURAI.—If that is the will of the Speaker, I close my speech. I thank you very much for having given me an opportunity to speak. I only appeal to the Government to take note of all these points and make an enquiry and do the needful.

Sri K. S. VASAN.—I won't repeat what my friends Sri Boranna Gowda and Sri Hanumiah said with regard to the behaviour of the Police in respect of enforcement of prohibition. While in K.G.F. too the Policemen misbehave, I will not be uncharitable to them and make them wholly responsible for the failure of prohibition. I always hold that even if all the Policemen are honest, prohibition cannot be a success and prohibition can never be a success in K.G.F. in any case. Further I only want to bring to the notice of the House an incident that occurred in Oorgaum Police Station on the 5th February. One grave—digger, an ex-mine worker by name Natesan was taken into Police custody on the 26th January on a complaint.

Sri H. SIDDAVEERAPPA.—You may put an interpellation. I will answer that.

Sri K. S. VASAN.—I only appeal to the Government that in the interests of fair administration of Police, an enquiry into this incident by a high judicial officer be ordered.

***Sri B. T. KEMPARAJ** (Bangalore South—Scheduled Castes).—On this demand, I want to make only one point clear to the Government. Though the matter is a very simple one, it is creating greatest injury and also financial loss to the public. It is a well known fact that the Majestic Square is a bus stand. There are no police constables there to supervise the traffic or to control the passengers that get into the buses. It is my daily experience that after the cinema is over at about 9-30 P.M. there will be a rush to get into the bus. Then the pick-pockets also pretend to get into the bus and commit pick-pocketing. Three or four or half a dozen persons will lose their purses. Once a passenger lost a purse containing about Rs. 300. On a Sunday the military people from Jalahalli come to the City. At that time the pick-pockets stand there and they will cut the pockets very easily. Coolies come to the City and while they enter into the bus, their purses will be lost. Though I have brought this to the notice of the concerned Police officer, nothing has been done hitherto. Therefore, I urge upon the Government to take this matter seriously into consideration and see that the traffic is controlled properly and also the queue system is maintained as it was previously, in almost all the bus stands in the Bangalore City and Civil Station.

ಶ್ರೀ ಕೆ. ಕೊಟ್ರ ಬಸವನ ಗೌಡ (ಕೂಡ್ಲಿಗಿ).—ಮಾನ್ಯ ಸಭಾಧ್ಯಕ್ಷರೇ, ನಾನು ಈಗ ಆ ನಮ್ಮ ಬಳ್ಳಾರಿ ಜಿಲ್ಲೆಯ ಪೋಲೀಸ್ ಆಡಳಿತದ ವಿಚಾರವಾಗಿ ಒಂದೆರಡು ವಿಷಯಗಳನ್ನು ಸರ್ಕಾರದವರ ಗಮನಕ್ಕೆ ತರಬಯಸುತ್ತೇನೆ. ಸಾಧಾರಣವಾಗಿ ಈ ಪೋಲೀಸ್ ಇಲಾಖೆಯಲ್ಲಿ ಈ ಎರಡನೇ ಯುದ್ಧಾನಂತರ—1945 ನೆಯ ಇಸವಿಯಿಂದೀಚೆಗೆ ಈ ಕರಪ್ಷನ್ ಎನ್ನುವುದು ವರ್ಷ ವರ್ಷ ಈ ಸಂವತ್ಸರಗಳು ಏರುತ್ತಿರುವಂತೆ ಇದೂ ಏರುತ್ತಿದೆ. ಈ ಲಂಚ-ರುಷವತ್ತುಗಳು ವಿಪರೀತವಾಗಿ ಹೆಚ್ಚುತ್ತಿದೆ. ಅದರಲ್ಲೂ ಆ ನಮ್ಮ ಬಳ್ಳಾರಿ ಜಿಲ್ಲೆ ಮೈಸೂರಿಗೆ ಸೇರಿದ ಮೇಲಂತೂ ಇದಿನ್ನೂ ವಿಶೇಷವಾಗಿದೆ. ಈ ಪೋಲೀಸ್ ಇಲಾಖೆಯಿರುವುದೇನು ದೇಶದಲ್ಲಿ whether to keep law and order or to disturb the law or order ಎನ್ನುವುದೇ ನಮ್ಮ ಜಿಲ್ಲೆಯ ಜನರಿಗೆ ತುಂಬಾ ಸಂಶಯಾಸ್ಪದವಾಗಿದೆ. ಅದರಲ್ಲೂ ನಮ್ಮ ಆ ವೆಸ್ಟರ್ನ್ ತಾಲ್ಲೂಕುಗಳಲ್ಲಿ ಈ ಲಂಚ-ರುಷವತ್ತು ಇನ್ನೂ ವಿಶೇಷವಾಗಿದೆ. ಪೋಲೀಸಿನವರು ಕೆಲವು ರೌಡೀಸ್‌ಗಳನ್ನೂ ಮತ್ತು ದಳ್ಳಾಳಿ ಜನರನ್ನು ಮಾಡಿಕೊಂಡಿದ್ದಾರೆ. ಈ ರೌಡೀಸ್‌ಗಳು ಆ ಪೋಲೀಸರ ಸಹಾಯದಿಂದ ದೊಡ್ಡ ದೊಡ್ಡ ಮನುಷ್ಯರುಗಳಿಗೂ ಮತ್ತು ಲಾ ಅಬೈಡಿಂಗ್ ಜನಗಳಿಗೂ ಅನವಶ್ಯಕವಾಗಿ ತೊಂದರೆಗಳನ್ನು ಕೊಡುತ್ತಿದ್ದಾರೆ. ಇಷ್ಟೇ ಅಲ್ಲದೆ ಆ ಪೋಲೀಸಿನವರೇ ಕೆಲವುಸಾರಿ ತಾವೇ ಒಳಸಂಚುಮಾಡಿ ಈ ಕಳ್ಳತನಗಳನ್ನು ನಡೆಸುತ್ತಿದ್ದಾರೆ. ಇನ್ನು ಕೆಲವು ಸಂದರ್ಭಗಳಲ್ಲಿ ಕಳ್ಳತನವಾಗಿದೆ ಎಂದು ಮಾಲನ್ನು ಕಳೆದು ಕೊಂಡವರು ಫಿರ್ಯಾದನ್ನು ಕೊಟ್ಟರೆ ಅಂಥಾ ಸಮಯದಲ್ಲಿ ಈ ಪೋಲೀಸರು ಯಾರಿಂದಲೋ ಒಂದು ಸುಳ್ಳು ರಿಪೋರ್ಟನ್ನು ತಮಗೆ ಬರುವಂತೆ ಮಾಡಿಕೊಂಡು ಆ ಮೂಲಕ ಊರಿನಲ್ಲಿರತಕ್ಕಂಥ ದೊಡ್ಡ ಮನುಷ್ಯರಿಗೆ—ಹಣವಂತರಿಗೆ ಹೆದರಿಸಿ-ಬೆದರಿಸಿ ವಿನಾ ತೊಂದರೆಗಳನ್ನು ಕೊಡುತ್ತಿದ್ದಾರೆ. ಅಂಥವರಿಂದ ನೂರಾರು ರೂಪಾಯಿಗಳ ಲಂಚವನ್ನು ಹೊಡೆಯುತ್ತಿದ್ದಾರೆ. ಹೀಗೆ ಲಂಚ ಬಂದಕೂಡಲೇ ಅವರನ್ನು ಬಿಟ್ಟುಬಿಡುತ್ತಾರೆ. ಊರಿನಲ್ಲಿರತಕ್ಕಂಥ ಯಾರಾದರೂ ದೊಡ್ಡ ಮನುಷ್ಯರು—ಗೌರವಸ್ಥರಾಗಿರತಕ್ಕಂಥವರು ಪೋಲೀಸ್ ಅಧಿಕಾರಿಗಳ ಬಳಿ ಹೋಗಿ ನಿಮ್ಮ ನೌಕರರು ಹೀಗೆಲ್ಲಾ ಮಾಡುತ್ತಿದ್ದಾರೆ, ಜನರಿಗೆ ಬಹಳ ಕಿರುಕುಳ ಕೊಡುತ್ತಿದ್ದಾರೆ, ವಿಪರೀತವಾಗಿ ಲಂಚ

ತೆಗೆದುಕೊಳ್ಳುತ್ತಿದ್ದಾರೆ ಎಂದು ಫಿರ್ಯಾದು ಕೊಟ್ಟರೆ-ಕೆಲವು ದಿವಸಗಳವರೆಗೂ ಹಾಗೇ ಸುಮ್ಮನಿದ್ದು ಅನಂತರ ಆ ಪೋಲೀಸಿನವರೇ ಆ ರೌಡೀಸ್‌ಗಳನ್ನು ಬಿಟ್ಟು—ಅವರಿಗೆ ಇವರೇ ಚುಚ್ಚಿಕೊಟ್ಟು ಆ ಮರ್ಯಾದಸ್ಥರಿಗೆಲ್ಲಾ ಬೀದಿಗಳಲ್ಲಿ ಅವಮಾನ ಪಡಿಸುವುದು, ಅವರ ಬಗ್ಗೆ ಸುಳ್ಳು ಆರೋಪಣೆಗಳನ್ನು ಹೊರಿಸುವುದು, ಅವರ ಮೇಲೆ ಸುಳ್ಳು ಫಿರ್ಯಾದುಗಳನ್ನು ಮಾಡುವುದು, ಅವರ ಬಗ್ಗೆ ಅಲ್ಲದ-ಸಲ್ಲದ ರಿಕಾರ್ಡುಗಳನ್ನು ಮಾಡುವುದು-ಹೀಗೆಲ್ಲ ಮಾಡಿ ಇವರ ಮೇಲೆ ದೂರು ಹೇಳಿದಂಥ ಜನರಿಗೆ ತೊಂದರೆಗಳನ್ನು ಕೊಡುತ್ತಿದ್ದಾರೆ. ಹೀಗಾಗಿ ಆ ಜಿಲ್ಲೆಯಲ್ಲಿ ಜನರು ಅಸಾಧ್ಯ ತೊಂದರೆಗೀಡಾಗಿದ್ದಾರೆ. ಅಲ್ಲಿಯ ಸಾರ್ವಜನಿಕರಿಗೆಲ್ಲಾ ಈ ಪೋಲೀಸ್ ಇಲಾಖೆಯ ಜನರು ಎಂದರೆ ಒಂದು ದೊಡ್ಡ ಪ್ರಾಬ್ಲಂ (ಸಮಸ್ಯೆ) ಆಗಿದೆ. ಈ ಬಗ್ಗೆ ಆ ಪೋಲೀಸ್ ಅಸಿಸ್ಟೆಂಟ್ ಮತ್ತು ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟರಿಗೆ ಫಿರ್ಯಾದು ಕೊಟ್ಟರೆ ಅವರು ಸರಳವಾಗಿ ಆಗಲಿ ನಾವು ನೋಡುತ್ತೇವೆ ಎಂದು ಹೇಳಿಬಿಡುತ್ತಾರೆ. ಈ ಇಲಾಖೆಯಲ್ಲಿ ಪೋಲೀಸ್ ಕಾನ್ಸ್‌ಟೇಬಲ್‌ನಿಂದ ಹಿಡಿದು ಪೋಲೀಸ್ ಇನ್ಸ್‌ಪೆಕ್ಟರ ಗ್ರೇಡಿನ ವರೆಗೂ ಇರತಕ್ಕ ಎಲ್ಲಾ ನೌಕರರೂ ಪಬ್ಲಿಕ್ ರಸ್ತೆಗಳಲ್ಲೇ ಬಹಿರಂಗವಾಗಿ ಲಂಚ ಕೇಳುತ್ತಿರುತ್ತಾರೆ. ಇವರು ನಿರ್ಭಯವಾಗಿಯೇ ಆ ಪ್ಲೀಡರ್ಸ್ ಮತ್ತು ದೊಡ್ಡ ದೊಡ್ಡ ಮರ್ಯಾದಸ್ಥ ಜನರ ಸಮಕ್ಷದಲ್ಲೇ ಲಂಚವನ್ನು ಕೇಳುತ್ತಿರುತ್ತಾರೆ.

ಇನ್ನು ಈ ಪಾನ ನಿರೋಧದ ವಿಚಾರ ತೆಗೆದುಕೊಂಡರೆ ಇದು ಶೇಕಡಾ 90 ರಷ್ಟು ಫೆಯಿಲ್ಯೂರ್ ಆಗಿದೆ. ಈ ಹರಿಜನರನ್ನು ಮತ್ತು ಇತರ ಬಹಳ ಬಡವರಾಗಿರತಕ್ಕಂಥ ಜನರನ್ನು ಬಿಟ್ಟರೆ ಉಳಿದವರಲ್ಲೆಲ್ಲಾ ಈಗ ಕುಡಿತ ಬಹಳ ಹೆಚ್ಚಾಗಿದೆ. ಪ್ರೊಹಿಬಿಷನ್ ಹೆಸರಿಗೆ ಮಾತ್ರ ಇದೆ. ಆದರೆ ಪ್ರತಿ ಹಳ್ಳಿಯಲ್ಲೂ—ಪ್ರತಿ ದಿನವೂ ಕುಡಿಯುವುದೂ—ಮತ್ತು ಮಾದಕ ವಸ್ತುಗಳ ಮಾರಾಟಗಳೂ ನಡೆಯುತ್ತಲೇ ಇದೆ. ಪೋಲೀಸ್ ಕಾನ್ಸ್‌ಟೇಬಲ್ ನಿಂದ ಹಿಡಿದು ಇನ್ಸ್‌ಪೆಕ್ಟರ ವರೆಗೂ ಒಂದು ಮಾಮೂಲಿ ಮಾಡಿಕೊಂಡಿದ್ದಾರೆ. ಆ ಮಾಮೂಲಿ ಹಣ ಇವರ ಕೈಗೆ ಬಿದ್ದರೆ ಅಲ್ಲಿ ಈ ಇಲಿಸಿಟ್ ಡಿಸ್ಟಿಲೇಷನ್‌ಗೆ ಸದಾ ಅವಕಾಶವಿದ್ದೇ ಇರುತ್ತದೆ. ಈ ವಿಚಾರ ಅಲ್ಲಿನ ಎಲ್ಲ ಅಧಿಕಾರಿಗಳಿಗೂ, ಎ.ಎಸ್.ಪಿ. ಮತ್ತು ಡಿ.ಎಸ್.ಪಿ. ಇವರೆಲ್ಲರಿಗೂ ತಿಳಿದಿದ್ದರೂ—ಇದು ಆ ಬಳ್ಳಾರಿ ಟೌನಿನಲ್ಲೇ ಬಹಿರಂಗವಾಗಿ ನಡೆಯುತ್ತಿದ್ದರೂ ಈ ಬಗ್ಗೆ ಯಾರೂ ಏನೂ ಕ್ರಮವನ್ನು ಕೈಗೊಂಡಿಲ್ಲ. ಇದನ್ನೆಲ್ಲಾ ನೋಡಿದರೆ ಈ ಮೈಸೂರು ಆಫೀಸರ್ಸ್‌ಗಳ ಮೃದು ಸ್ವಭಾವವೇ ಕಾರಣವೆಂದು ನನಗೆ ಅನ್ನಿಸುತ್ತಿದೆ. ಅಲ್ಲಿಯ ಪೋಲೀಸ್ ನೌಕರರು ನಮಗೆ ಮೈಸೂರು ಸರ್ಕಾರ ಬಹಳ ಕಮ್ಮಿ ಸಂಬಳ ಕೊಡುತ್ತಿದೆ, F.T.A. ಬಹಳ ಕಡಮೆ ಇದೆ, ಅದಕ್ಕೋಸ್ಕರವಾಗಿ ನಾವು ಈ ಲಂಚವನ್ನು ತೆಗೆದುಕೊಳ್ಳುತಿದ್ದೇವೆ, ಹೀಗೆ ಮಾಡದಿದ್ದರೆ ನಮ್ಮ ಖರ್ಚಿಗೆ ಹಣ ಸಾಲದೆ ಬರುತ್ತದೆ ಎಂದು ಹೇಳುತ್ತಿದ್ದಾರೆ. ಆದಕಾರಣ ದಯಮಾಡಿ ಸರ್ಕಾರದವರು ಆ ನಮ್ಮ ಜಿಲ್ಲೆಯ ಸಂಪೂರ್ಣ ಪೋಲೀಸ್ ಸಿಬ್ಬಂದಿಯನ್ನು ಬೇರೆ ಜಿಲ್ಲೆಗೆ ವರ್ಗಾಯಿಸಿ, ಈ ಕಡೆಯ ಭಾಗದಲ್ಲಿರುವ ಪೋಲೀಸಿನವರನ್ನೇ ಆ ಸ್ಥಳಕ್ಕೆ ಹಾಕಬೇಕೆಂದು ನನ್ನ ಅರಿಕೆ.

ಇನ್ನು ಈ ಪೋಲೀಸಿನವರೇ ಲಂಚ ತೆಗೆದುಕೊಂಡು ದೇವಿ ಜಾತ್ರೆಗಳಲ್ಲಿ ಈ ಕುರಿ-ಕೋಣ, ಮೇಕೆ ಇತ್ಯಾದಿ ಪ್ರಾಣಿಗಳನ್ನು ಕಡಿಸುತ್ತಿದ್ದಾರೆ. ಹಳ್ಳಿಗಳಲ್ಲಿ ಜನರು ಬೈಲಾಟ ಇತ್ಯಾದಿಗಳನ್ನು ಆಡಬೇಕೆಂದು ಕೇಳಿದರೆ—ಅವರಿಗೆ ಇಲ್ಲದ ತೊಂದರೆಗಳನ್ನು ಕೊಟ್ಟು ಅವರಿಂದ ಹಣ ತೆಗೆದು ಕೊಂಡು ಅನಂತರ ಅವರಿಗೆ ಆಡುವುದಕ್ಕೆ ಅವಕಾಶ ಕೊಡುತ್ತಿದ್ದಾರೆ.

ಇನ್ನು ಈ ಸಾಲುಮರಗಳನ್ನು ಯಾರಾದರೂ ಕಡಿಯುತ್ತಿದ್ದರೆ—ಅದನ್ನು ಈ ಪೋಲೀಸಿನವರು ನೋಡಿದರೂ ಅವರ ಬಗ್ಗೆ ಇವರು ಯಾವ ಕ್ರಮವನ್ನೂ ಕೈಗೊಳ್ಳುತ್ತಿಲ್ಲ. ಅಥವಾ ಅಂಥ ಜನರನ್ನು ಹೆದರಿಸುವುದೂ ಸಹ ಇಲ್ಲ. ಆದಕಾರಣ ಈ ಪೋಲೀಸಿನವರಿಗೆ ಈ ಸಾಲುಮರಗಳ ಬಗ್ಗೆ ನಿಗಾ ಇಡುವಂತೆ ಒಂದು ಸೂಚನೆಯನ್ನು ಸರ್ಕಾರದವರು ಕೊಡುವಂತೆ ಮಾಡಬೇಕೆಂದು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಕೆ. ವಿ. ಬೈರೇಗೌಡ (ಬೆಂಗಳೂರು ಉತ್ತರ).—ಮಾನ್ಯ ಅಧ್ಯಕ್ಷರೇ ಈ ಡಿಮ್ಯಾಂಡಿನ ಮೇಲೆ ಮಾತನಾಡುತ್ತಾ ಒಂದೆರಡು ವಿಷಯಗಳಕಡೆಗೆ ಸರ್ಕಾರದವರ ಗಮನವನ್ನು ಸೆಳೆಯಬೇಕೆಂದು ಆಶಿಸುತ್ತೇನೆ. ಮಾನ್ಯ ಸ್ನೇಹಿತರನೇಕರು ಈ ವಿಷಯದಲ್ಲಿ ಸರ್ಕಾರದವರಿಗೆ ಚೆನ್ನಾಗಿ ಮನದಟ್ಟಾಗುವಂತೆ ಹೇಳಿದ್ದಾರೆ. ಈಗ ಬೆಂಗಳೂರು ಸಿಟಿ ಸುತ್ತಮುತ್ತಲೂ ಇಂಡಸ್ಟ್ರಿಯಲ್ ಏರಿಯಾ ಬಹಳ ಜಾಸ್ತಿಯಾಗಿ ಅದರ ಅವಾಂತರ ಎಷ್ಟರಮಟ್ಟಿಗೆ ಆಗಿದೆ ಎಂದರೆ ಅಲ್ಲಿ ರೈತಾಪಿ ಜನರು ವಾಸಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವಷ್ಟರಮಟ್ಟಿಗೆ ಆಗಿದೆ. ಅದೂ ಅಲ್ಲದೇ ಈ ಮಿಲಿಟರಿಯವರ ಸಂಖ್ಯೆಯೂ ಕೂಡ ಬಹಳ ಜಾಸ್ತಿಯಾಗಿದ್ದು ಸಾಕಾದಷ್ಟು ಪೋಲೀಸ್ ಸಿಬ್ಬಂದಿ, ಪೋಲೀಸ್ ಪಹರೆ ಇಲ್ಲದೆ ರೈತಾಪಿ ಜನರ ಕೆಲಸ ಕಾರ್ಯಗಳಿಗೆ ಬಹಳ ಕಷ್ಟವಾಗಿದೆ. ಐ. ಪಿ. ಸೆಟ್ಸ್ ಇಟ್ಟುಕೊಂಡು ಕೆಲಸ ಮಾಡುತ್ತಿರುವವರು, ಪಂಪ್ ಹೌಸಿನಲ್ಲಿ ಸಾಮಾನುಗಳನ್ನಿಟ್ಟುಕೊಂಡು ಅವುಗಳನ್ನು ಸುರಕ್ಷಿತವಾಗಿ ಕಾಪಾಡುವುದಕ್ಕೆ ಸಾಧ್ಯವಿಲ್ಲದೆ ಅನೇಕ ತೊಂದರೆಗಳಿಗೆ ಈಡಾಗುತ್ತಾ ಇದ್ದಾರೆ. ಪಂಪ್ ಹೌಸ್‌ನಲ್ಲಿರತಕ್ಕ ಸಾಮಾನುಗಳನ್ನು ಕಳುವು ಮಾಡುತ್ತಾರೆ. ಅವರ ಐಡೆಂಟಿಫಿಕೇಷನ್ ಪ್ರೂವ್ ಮಾಡುವುದಕ್ಕೆ ಸಾಧ್ಯವಿಲ್ಲದೆ ಏನು ಮಾಡುವುದಕ್ಕೂ ಆಗುತ್ತಿಲ್ಲ. ಪೋಲೀಸ್‌ನವರ ವಿಜಿಲೆನ್ಸ್ ಸಾಲದು. ಈಗ ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಪೋಲೀಸ್ ಇನ್ಸ್‌ಪೆಕ್ಟರಿಗೂ, ಸಬ್ ಇನ್ಸ್‌ಪೆಕ್ಟರಿಗೂ ಸರಿಯಾದ ಒಂದು ಹೊಂದಾಣಿಕೆ (understanding) ಇಲ್ಲದೆ, ಅವರ ಮೇಲೆ ಇವರು, ಇವರ ಮೇಲೆ ಅವರು ಹೇಳಿಕೊಂಡು ಸರಿಯಾದ ರಕ್ಷಣೆ ಕೊಡುತ್ತಾ ಇಲ್ಲ. ಸಾರ್ವಜನಿಕರು ಸಬ್ ಇನ್ಸ್‌ಪೆಕ್ಟರನ್ನು approach ಮಾಡಿದರೆ ಇನ್ಸ್‌ಪೆಕ್ಟರು ಅವರ ಮುಖಾಂತರವೇ ಕೆಲಸ ಮಾಡಿಸಿಕೊಳ್ಳಿ ಎನ್ನುವುದು, ಇನ್ಸ್‌ಪೆಕ್ಟರನ್ನು approach ಮಾಡಿದರೆ ಸಬ್ ಇನ್ಸ್‌ಪೆಕ್ಟರು, ಇನ್ಸ್‌ಪೆಕ್ಟರ ಮುಖಾಂತರವೇ ಕೆಲಸ ಮಾಡಿಸಿಕೊಳ್ಳಿ ಎನ್ನುವುದು ಹೀಗಾಗಿ ಅವರವರಲ್ಲಿ ಹೊಂದಾಣಿಕೆ ಇಲ್ಲದೆ ಜನರು ಸರಿಯಾದ ರಕ್ಷಣೆ ಸಿಕ್ಕದೆ ಬಹಳ ಕಷ್ಟವನ್ನು ಅನುಭವಿಸುತ್ತಾ ಇದ್ದಾರೆ.

ಇದೆಲ್ಲಕ್ಕಿಂತಲೂ ಹೆಚ್ಚಾಗಿ ಬೆಂಗಳೂರಿನಲ್ಲಿ ಇನ್ನೊಂದು ಅವಾಂತರ ಬಹಳ ಹೆಚ್ಚಾಗಿದೆ. ಬೆಂಗಳೂರು ಸಿಟಿ ಮತ್ತು ಸಿವಿಲ್ ಸ್ಟೇಷನ್‌ನಲ್ಲಿ ಎಸ್.ಪಿ.ಸಿ.ಎ. ಮತ್ತು ಎಸ್.ಪಿ.ಕೆ.ಎ. ಎಂಬ ಎರಡು ಸಂಸ್ಥೆಗಳು ಕೆಲಸ ಮಾಡುತ್ತಾ ಇವೆ. ಈ ಸಂಸ್ಥೆಗಳವರು ದನಗಳಿಗೆ ರಕ್ಷಣೆ ಕೊಡುತ್ತೇವೆ ಎಂದು ಹೇಳಿಕೊಂಡು ಹಳ್ಳಿಗಳಿಂದ ಬರತಕ್ಕ ಎತ್ತಿನ ಗಾಡಿಗಳನ್ನು ಹಿಡಿದು ಎತ್ತಿನ ಕಾಲನಲ್ಲಿ ರಕ್ತ ಸುರಿಯುತ್ತಿದೆ ಹಾಗಿದೆ, ಹೀಗಿದೆ

(ಶ್ರೀ ಕೆ. ವಿ. ಬೈರೇಗೌಡ).

ಎಂದು ಹೇಳಿ ಅವರಿಂದ ಏನಾದರೂ ಒಂದಷ್ಟು ದುಡ್ಡು ಕಸಿದುಕೊಂಡು ಬಿಟ್ಟು ಬಿಡುತ್ತಾರೆ. ಒಂದು ವೇಳೆ ಅವರು ದುಡ್ಡು ಕೊಡದೇ ಇದ್ದರೆ ಕಾನೂನು ಪ್ರಕಾರ ಕೇಸು ಹಾಕುತ್ತಾರೆ. ಎಂದೋ ಒಂದು ದಿವಸ ಬೆಂಗಳೂರಿಗೆ ಧಾನ್ಯ ತೆಗೆದುಕೊಂಡು ಬಂದು ಮಾರಾಟಮಾಡಿ ಲಾಭ ಬಂತು ಪರವಾಗಿಲ್ಲ ಎಂದು ಅವನು ಅಂದುಕೊಂಡಿದ್ದ ಕಾಲದಲ್ಲಿ ಮ್ಯಾಜಿಸ್ಟ್ರೇಟರ ಕೋರ್ಟಿಗೆ ಹೋಗಿ ಅಲೆಯಬೇಕಾಗುತ್ತದೆ. ಇದನ್ನು ನಾವು ಕಣ್ಣಾರ ನೋಡಿದ್ದೇವೆ. ಎಷ್ಟೋ ಕುದುರೆಗಳಿಗೆ ಕಾಲಿನಲ್ಲಿ ರಕ್ತ ಸುರಿಯುತ್ತಿರುತ್ತದೆ. ಅಂಥ ಕುದುರೆಗಳನ್ನು ಕಟ್ಟಿದ್ದರೂ ಕೂಡ ಅದನ್ನು ಸುಮ್ಮನೆ ಬಿಟ್ಟುಬಿಡುತ್ತಾರೆ. ಪೋಲೀಸ್‌ನವರಿಗೂ ಮತ್ತು ಈ ಸಂಸ್ಥೆಯವರಿಗೂ ಒಂದು understanding ಇದೆ. ಸಾಧಾರಣವಾಗಿ ಬಡ ರೈತರನ್ನೇ ಅವರು ಹಿಡಿದುಕೊಂಡು ಕೋರ್ಟಿನಲ್ಲಿ ಕೇಸು ಹಾಕುತ್ತಾರೆ. ಈ ವಿಷಯವನ್ನು ಸರ್ಕಾರದವರ ಗಮನಕ್ಕೆ ತಂದಿದ್ದೇನೆ. ಇದನ್ನು ಕೂಡಲೇ ವಿಚಾರಣೆ ಮಾಡಬೇಕು. ಕಾನೂನು ದೃಷ್ಟಿಯಿಂದ ಯಾವುದು ಮಾಡಬೇಕೋ ಅದನ್ನು ಮಾಡದೆ, ಬೇರೆ ಮಾರ್ಗವನ್ನನುಸರಿಸುತ್ತಿರುವುದು ರೈತರಿಗೆ ನಿಜವಾಗಿಯೂ ಬಹಳ ತೊಂದರೆಯಾಗಿದೆ. ಅದಕ್ಕೆ ಸಾಕಾದಷ್ಟು ಗಮನ ಕೊಡದೇ ಇರುವುದು ಬಹಳ ವ್ಯಸನಕರವಾಗಿದೆ.

ನಮ್ಮ ಮಾನ್ಯ ಮಿತ್ರರಾದ ಶ್ರೀ ಕೆಂಪರಾಜ್‌ರವರು ಮೆಜಸ್ಟಿಕ್ ಚೌಕದ ಹತ್ತಿರ ನಡೆಯುತ್ತಿರುವ ವಿಷಯವನ್ನು ಹೇಳಿದರು. ಯಲಹಂಕ, ಜಾಲಹಳ್ಳಿ ಕಡೆಗೆ ಹೋಗುವ ಬಸ್ಸು ಪ್ರತಿ 45 ನಿಮಿಷಕ್ಕೆ ಒಂದು ಸಾರಿ ಹೋಗುತ್ತದೆ ಎಂದು ಹಾಕಿದ್ದಾರೆ. ಬಸ್ ಸ್ಟ್ಯಾಂಡಿನಲ್ಲಿ 45 ನಿಮಿಷ ಕುಳಿತುಕೊಂಡಿರಬೇಕು. ಅಲ್ಲಿ ಬಸ್ ಹತ್ತುವಾಗ ಜನಸಂದಣಿ (rush) ಎಷ್ಟಿರುತ್ತದೆ ಎಂದರೆ ಒಳ್ಳೆಯ ಡೀಸೆಂಟ್ ಆಗಿರುವವರು ಯಾರಿಗೂ ಬಸ್ಸಿನ ಒಳಕ್ಕೆ ಹೋಗಲು ಸಾಧ್ಯವಾಗುವುದಿಲ್ಲ. ಜಾಲಹಳ್ಳಿಗೆ ಹೋಗುವ ಬಸ್ಸಿಗೆ ಮಿಲಿಟರಿಯವರು ಬರುತ್ತಾರೆ. ಅವರ ಹತ್ತಿರ ಇತರರು ಯಾರೂ ಸೇರುವ ಹಾಗೇ ಇಲ್ಲ. ಯಾರಾದರೂ ಹೋದರೆ ಅವರ ಗತಿ ಆಯಿತು ಬೂಡ್ಸ್ ಕಾಲಿನಿಂದ ತುಳಿದುಬಿಡುತ್ತಾರೆ. ನಮ್ಮ ಪೋಲೀಸ್‌ನವರು ಅಲ್ಲೇ ಇರುತ್ತಾರೆ. ಪಕ್ಕದಲ್ಲೇ ಒಂದು ಪೋಲೀಸ್ ಔಟ್ ಪೋಸ್ಟು ಇದೆ. ಅವರಿಗೆ ಯಾರಾದರೂ ಹೋಗಿ ಸ್ವಲ್ಪ ತಹಬಂದಿಗೆ ತನ್ನಿ ಎಂದರೆ ಅವರು ಅದಕ್ಕೆ ಗಮನವನ್ನೇ ಕೊಡುವುದಿಲ್ಲ. ಈ ರೀತಿ ಅವ್ಯವಸ್ಥೆ ಇದೆ. ಇದು ಒಂದು ದೊಡ್ಡ ಅಸಹ್ಯ.

ಇನ್ನೊಂದು ವಿಷಯವನ್ನು ಮಾನ್ಯ ಮಂತ್ರಿಗಳಾದ ಶ್ರೀ ಸಿದ್ದವೀರಪ್ಪನವರ ಗಮನಕ್ಕೆ ತರಬೇಕಾಗಿದೆ. ಟ್ರ್ಯಾಫಿಕ್ ಪೋಲೀಸ್‌ನವರ ಪೈಕಿ 3-4 ಜನ ಆಂಗ್ಲೋ ಇಂಡಿಯನ್ಸ್ ಇದ್ದಾರೆ. ಅವರಿಗೆ ಬೇರೆ ಏನೂ ಕೆಲಸವೇ ಇಲ್ಲ. ಲಕ್ಷಣವಾಗಿ ಬಟ್ಟೆ ಹಾಕಿಕೊಂಡು ಮೆಜೆಸ್ಟಿಕ್ ಸರ್ಕಲ್, ಅಲ್ಲಿ ಇಲ್ಲಿ ತಿರುಗಾಡುತ್ತಿರುವುದು, ಸಾಯಂಕಾಲ ಆದಕೂಡಲೇ ಬೆಂಗಳೂರಿಗೆ ಹೊರಗಡೆಯಿಂದ ಲಾರಿಗಳು ಎಲ್ಲಿ ಬರುತ್ತವೆಯೋ ಅಲ್ಲಿ ಕಾದುಕೊಂಡಿದ್ದು ಅವತ್ತಿನ ದಿವಸ ಕುಡಿಯುವುದಕ್ಕೆ ಎಷ್ಟು ಬೇಕೋ ಅಷ್ಟು ದುಡ್ಡುಮಾಡಿಕೊಳ್ಳುವುದು ಇದೇ ಕೆಲಸ. ಮದರಾಸ್ ಸ್ಟೇಟ್‌ನಿಂದ, ಬೊಂಬಾಯಿ ಸ್ಟೇಟ್‌ನಿಂದ ಅನೇಕ ಲಾರಿಗಳು ಬರುತ್ತವೆ. ಅವುಗಳಲ್ಲಿ ಏನೇ ನ್ಯೂನತೆಗಳಿದ್ದರೂ ಅವನ್ನು ಗಮನಕ್ಕೆ ತೆಗೆದುಕೊಳ್ಳುವುದೇ ಇಲ್ಲ. ಇದಕ್ಕೆಲ್ಲಾ ಕಾರಣ regular ಮಾಮೂಲು ಇರುತ್ತದೆ. ಇದು ಟ್ರ್ಯಾಫಿಕ್ ಪೋಲೀಸ್‌ನವರಿಗೆ ಮರ್ಯಾದೆ ತರತಕ್ಕ ವಿಷಯವಲ್ಲ ಎಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಈ ವಿಷಯವನ್ನು ಗಮನದಲ್ಲಿಟ್ಟುಕೊಂಡು ಇನ್ನು ಮುಂದಾದರೂ ಪೋಲೀಸ್‌ನವರಲ್ಲಿರಬೇಕಾದ ಗೌರವವನ್ನು ಕಾಪಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಕೆ. ಪ್ರಭಾಕರ್ (ನೆಲಮಂಗಲ—ಅನುಸೂಚಿತ ಜಾತಿಗಳು).—ಸ್ವಾಮಿ, ಈ ಪೋಲೀಸ್ ಇಲಾಖೆಯ ವಿಚಾರದಲ್ಲಿ ಎಷ್ಟೇ ಹೇಳಿದರೂ ಕೂಡ, ಪರವಾಗಿ ಮತ್ತು ವಿರೋಧವಾಗಿ ಎರಡು ಕಡೆಯೂ ಹೇಳತಕ್ಕ ವಿಚಾರ ಇದ್ದೇ ಇದೆ. ಒಂದು ಸರ್ಕಾರ ಬದಲಾವಣೆಯಾಗಿ, ಒಂದು ಹೊಸ ಸರ್ಕಾರದ ನೀತಿ ಬಂದ ಮೇಲೆ ಪೋಲೀಸ್‌ನವರೂ ಕೂಡ ಒಂದು ಹೆಚ್ಚಿನ ರೀತಿಯಲ್ಲಿ ಕೆಲಸ ಕಾರ್ಯಗಳನ್ನು ಮಾಡಬೇಕೆಂದು ಹೇಳಿ ಸಾರ್ವಜನಿಕರು ಅಪೇಕ್ಷಿಸುವುದು ಸರಿ. ಆದರೆ ಈ ಪೋಲೀಸ್‌ನವರು ಹಾಗೆ ಮಾಡುತ್ತಾರೆ, ಹೀಗೆ ಮಾಡುತ್ತಾರೆ ಎಂದು ಹೇಳಿ ಆಗಿಂದಾಗ್ಗೆ ಸರ್ಕಾರದವರ ಗಮನಕ್ಕೆ ತರುವುದು ನಮ್ಮ ಕರ್ತವ್ಯವೇ. ಆದರೂ ಕೂಡ ಸಾರ್ವಜನಿಕರೂ ಸಹ ಪೋಲೀಸಿನವರೊಂದಿಗೆ ಸಹಕರಿಸಿ ಕೆಲಸ ಮಾಡಬೇಕೆಂಬುದನ್ನು ನಾವು ಮರೆಯಬಾರದು. ಇದನ್ನು ಹೇಳುವುದರ ಉದ್ದೇಶವೇನೆಂದರೆ ನಾವು ಎಷ್ಟರಮಟ್ಟಿಗೆ ವಿಜಿಲೆಂಟಾಗಿ ಪೋಲೀಸ್‌ನವರಿಗೆ ಬೆಂಬಲ ಕೊಡುತ್ತೇವೆಯೋ ಅಷ್ಟರಮಟ್ಟಿಗೆ ನಾವು ನಿರೀಕ್ಷಿಸುವಷ್ಟು ಕೆಲಸವನ್ನು ಅವರು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಪೋಲೀಸ್‌ನವರು ಚೆನ್ನಾಗಿ ಕೆಲಸ ಮಾಡುವ ರೀತಿಯಲ್ಲಿ ಆಗಬೇಕಾದರೆ ಅವರು ತಕ್ಷಣ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗಲು ತಕ್ಕ ಸೌಕರ್ಯ ಮಾಡಿಕೊಡಬೇಕು. ಇಲ್ಲದೇ ಇದ್ದರೆ ಯಾವ ಕೇಸನ್ನೇ ಆಗಲಿ ಹಿಡಿಯುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ಹೇಳಿ ಅನೇಕ ಸಂದರ್ಭಗಳಲ್ಲಿ ಅವರಿಗೆ ಇರತಕ್ಕ ಕೊರತೆಗಳನ್ನು ಸರ್ಕಾರದವರಿಗೆ ತಿಳಿಸಿದ್ದೇನೆ. ತಾಲ್ಲೂಕ್ ಲೆವಲ್‌ನಲ್ಲಿ ಆಗತಕ್ಕ ತಕ್ಸೀರುಗಳನ್ನು ಜಾಗ್ರತೆ ತನಿಖೆ ಮಾಡಬೇಕೆಂದರೆ ಅವರಿಗೆ ಒಂದು ಬೈಸಿಕಲ್ಲೂ ಕೂಡ ಇರುವುದಿಲ್ಲ. ಅವರು ಸ್ಥಳದ ಬಸ್ಸಿನಲ್ಲೋ, ಕುದುರೆ ಗಾಡಿಯಲ್ಲೋ ಕೊನೆಗೆ ನಡೆದುಕೊಂಡೋ ಆ ಸ್ಥಳಕ್ಕೆ ಹೋಗುವುದರೊಳಗೆ ಅಲ್ಲಿ ಏನಾಯಿತು ಎನ್ನುವುದೇ ಪತ್ತೆ ಹಚ್ಚುವುದಕ್ಕೆ ಕಷ್ಟವಾಗುತ್ತದೆ. ಈಗ ತಾವು ಈ ಆಡಳಿತಕ್ಕಾಗಿಯೂ ಎಷ್ಟೋ ಖರ್ಚು ಮಾಡುತ್ತಾ ಇದ್ದೀರಿ. ಪ್ರತಿಯೊಂದು ಪೋಲೀಸ್ ಸ್ಟೇಷನ್‌ನಲ್ಲೂ ಕೂಡ ಕನಿಷ್ಠ ಪಕ್ಷ ಒಂದು ಬೈಸಿಕಲ್ ಇರುವಹಾಗೆ ವ್ಯವಸ್ಥೆ ಮಾಡಿದ್ದೇ ಆದರೆ ಅವರ ಕೆಲಸ ಕಾರ್ಯಗಳಿಗೆ ಬಹಳ ಅನುಕೂಲವಾಗುತ್ತದೆ ಎಂದು ನನಗೆ ಅನ್ನಿಸುತ್ತದೆ. ಈ ಪೋಲೀಸ್ ಇಲಾಖೆಯಲ್ಲಿ ಇರತಕ್ಕವರು ಬಹಳ ದಕ್ಷತೆ ಮತ್ತು ಗೌರವದಿಂದ ಕೆಲಸ ಮಾಡುವವರು. ಕೆಲವು ಅಧಿಕಾರಿಗಳು ಮೇಲಿನ ಅಧಿಕಾರಿಗಳಿಗೆ ಹೊಂದಿಕೊಂಡು ಹಳ್ಳಿಗಳನ್ನೇ ಕಾಣದ ಜನ ಕೆಲವರಿದ್ದಾರೆ. ಅವರಿಗೆ ಎಷ್ಟೋ ವೇಳೆ ಶಹಬಾಸ್‌ಗಿರಿ ಸಿಕ್ಕಿ, ಚೆನ್ನಾಗಿ ಕೆಲಸ ಮಾಡುವ ಜನ ಇನ್ನಿತರರು ಯಾರಿದ್ದಾರೋ ಅವರ ಮನಸ್ಸಿಗೆ ಬೇಜಾರಾಗಿ ಈ ಇಲಾಖೆಗೆ ಏಕೆ ಬಂದು ಸೇರಿಕೊಂಡೆವೋ ಎಂದು ನೊಂದುಕೊಂಡಿರುವವರು ಪೋಲೀಸ್ ಇಲಾಖೆಯಲ್ಲಿ ಇದ್ದಾರೆ. ಈಗ ಪೋಲೀಸ್ ಖಾತೆಯಿರತಕ್ಕ ಹೋಂ ಮಿನಿಸ್ಟರ್‌ರವರಿಗೆ he has a very shrewd common sense, ಯಾರುಯಾರು ಚೆನ್ನಾಗಿ ಕೆಲಸ

ಮಾಡುತ್ತಾರೆ ಎಂಬುದನ್ನು ತಿಳಿದುಕೊಳ್ಳುವ ಶಕ್ತಿ ಅವರಲ್ಲಿದೆ. ಈ ವಿಚಾರಕ್ಕೆ ಹೆಚ್ಚು ಗಮನ ಕೊಟ್ಟು ಚೆನ್ನಾಗಿ ಕೆಲಸ ಮಾಡುವವರಿಗೆ ಪ್ರೋತ್ಸಾಹ ಕೊಡಬೇಕೆಂದು ಹೇಳುತ್ತೇನೆ.

ಇತ್ತೀಚೆಗೆ ನಮ್ಮ ಈ ಪೋಲೀಸ್‌ನವರಲ್ಲಿ ಒಂದು ವರ್ತನೆ ಬಹಳ ಹೆಚ್ಚಾಗಿ ಕಂಡುಬರುತ್ತ ಇದೆ. ಬಸ್‌ಸ್ಟ್ಯಾಂಡುಗಳಲ್ಲಿ, ಸಾರ್ವಜನಿಕರು ಸೇರುವ ಸ್ಥಳಗಳಲ್ಲಿ ಕೆಲವು ನೋಟೀಸ್‌ಗಳನ್ನು ಹಾಕಿರುತ್ತಾರೆ. ಆ ನೋಟೀಸ್‌ಗಳಿಗೆ ಮೊದಲು ವ್ಯತಿರಿಕ್ತವಾಗಿ ನಡೆಯುವವರು ಎಂದರೆ ಈ ಪೋಲೀಸ್‌ನವರು. ಅಷ್ಟೇ ಅಲ್ಲದೆ ಯಾರಾದರೂ ಕೆಲವರು ಯಾವುದಾದರೂ ಒಂದು ವಿಷಯವನ್ನು ಆಸಕ್ತಿಯಿಂದ ಮಾತನಾಡುತ್ತ ಇದ್ದರೆ ಅವರೂ ಕೂಡ ಮಧ್ಯೆ ಬಾಯಿಹಾಕಿ ಮಾತನಾಡುವುದನ್ನು ನೋಡಿದ್ದೇವೆ. ತಾಲ್ಲೂಕು ಕಚೇರಿಗಳಲ್ಲಿ ಈ ಪೋಲೀಸ್‌ನವರು ಸುಖವಾಗಿ ಕಾಲು ಚಾಚಿಕೊಂಡು ಬೀಡಿ ಸೇದುತ್ತಾ ಕುಳಿತುಕೊಂಡಿರುತ್ತಾರೆ. ಈ ರೀತಿಯಲ್ಲಿ ವರ್ತಿಸಿ ಕಾಕಿ ಬಟ್ಟೆಗೆ ಸಾರ್ವಜನಿಕರ ಮನಸ್ಸಿನಲ್ಲಿ ಯಾವಭಯವಿದೆಯೋ ಅದನ್ನು ಸಡಿಲ ಮಾಡುತ್ತಾ ಇದ್ದಾರೆ, ಮತ್ತು ಅದರಿಂದ ಸಾರ್ವಜನಿಕರಲ್ಲಿ ಪೋಲೀಸ್‌ನವರ ಮೇಲೆ ಯಾವ ಒಂದು ಗೌರವವಿರಬೇಕೋ ಅದು ಮಾಯವಾಗುವುದಕ್ಕೆ ಕಾರಣವಾಗಿದೆ. ಆದ್ದರಿಂದ ಈ ವಿಚಾರದಲ್ಲಿ ಅವರಿಗೆ ಸರಿಯಾದ ಎಚ್ಚರಿಕೆ ಕೊಡಬೇಕು.

ಕೆಲವು ಕೇಸುಗಳನ್ನು ಹಿಡಿಯುವ ವಿಚಾರದಲ್ಲಿ ಸಾರ್ವಜನಿಕಾಭಿಪ್ರಾಯ ಪದೇ ಪದೇ ಬರುತ್ತಿದೆ. ನಮ್ಮ ನೆಲಮಂಗಲ ತಾಲ್ಲೂಕಿನಲ್ಲಿ ಒಂದು ಕೇಸು ಆಯಿತು. ಎವಿಡೆನ್ಸ್ ಏನೋ ಅಲ್ಪ ಸ್ವಲ್ಪ ಪತ್ತೆ ಮಾಡಿದರು, ಕೊನೆಗೆ ಅಂತಹ ಘಟನೆ ನಡೆಯಲೇ ಇಲ್ಲ ಎಂಬುದಾಗಿ ವರದಿ ಮಾಡಿದರು ಎಂದು ಅಲ್ಲಿನ ಜನಗಳು ಹೇಳುತ್ತಾರೆ. ಆ ಸಂದರ್ಭದಲ್ಲಿ ಅಲ್ಲಿನ ಪೋಲೀಸ್ ಇನ್ಸ್‌ಪೆಕ್ಟರು ಕೊಂಚ ದಿವಸ ರಜದ ಮೇಲೆ ಹೋದರು. ಅದಕ್ಕೆ ಜನಗಳು ಏನೋ ಸಂಭಾವನೆ ಸಿಕ್ಕಿತು ಎಂದು ಕಾಣುತ್ತದೆ ಅದಕ್ಕೇ ರಜದ ಮೇಲೆ ಹೋದರು ಎಂದು ಆಡಿಕೊಳ್ಳುತ್ತಿದ್ದರು. ಇಂಥಾದ್ದಕ್ಕೆಲ್ಲಾ ಅವಕಾಶ ಕೊಡದಂತೆ ಯಾರಾದರೂ ದೂರು ಕೊಟ್ಟಾಗ ತನಿಖೆ ಮಾಡುವ ಸಂದರ್ಭದಲ್ಲಿ ಅದಕ್ಕೆ ಸಂಬಂಧಪಟ್ಟ ಎವಿಡೆನ್ಸ್‌ನ್ನು ಅಲ್ಲಿರತಕ್ಕ ಎಂ.ಎಲ್.ಎ.,, ಗಳು ಮುಂತಾದವರ ಎದುರಿನಲ್ಲಿ ತೆಗೆದುಕೊಂಡದ್ದೇ ಆದರೆ ಅಂಥ ಆಕ್ಷೇಪಣೆಗೆ ಅವಕಾಶ ವಿರುವುದಿಲ್ಲ ಎಂದು ನಾನು ಅಂದುಕೊಂಡಿದ್ದೇನೆ.

ಇನ್ನು ಈ ಪ್ರಾಣಿವಧೆ ವಿಚಾರದಲ್ಲಿ ಪೋಲೀಸ್‌ನವರು ಶಾಮೀಲಾಗುತ್ತಾರೆ ಎಂದು ಮಾನ್ಯ ಮಿತ್ರರು ಹೇಳಿದರು. ಸತ್ಯಾಂಶವೇನೆಂದರೆ ಜಾತ್ರೆಗಳನ್ನು ಮಾಡುವಾಗ ಪ್ರಾಣಿ ಬಲಿ ಕೊಡುವುದನ್ನು ಯಾರೂ ವಿರೋಧಿಸುವುದಿಲ್ಲ. ಪೋಲೀಸ್‌ನವರಿಗೆ ದೂರು ಕೊಡಿ ಎಂದರೆ ಯಾರೂ ಕೊಡುವುದಕ್ಕೆ ಮುಂದೆ ಬರುವುದಿಲ್ಲ. ಅಕಸ್ಮಾತ್ ಯಾರಾದರೂ ಒಬ್ಬರು ದೂರು ಕೊಟ್ಟರೆ ಅವನು ಆ ಗ್ರಾಮದಲ್ಲಿ ಉಳಿಯುವುದೇ ಕಷ್ಟವಾಗುತ್ತದೆ. ಮುಂಚಿತವಾಗಿ ಎಚ್ಚರಿಕೆ ಕೊಟ್ಟರೂ ಕೂಡ ಈ ಪಾಶವೀ ಕೃತ್ಯವನ್ನು ಆ ಜನರು ಮಾಡುತ್ತಾರೆ. ಅದಕ್ಕೆ ಬಂದೋಬಸ್ತು ಮಾಡಬೇಕಾದದ್ದು ಸರ್ಕಾರದವರ ಕರ್ತವ್ಯ ಎಂದು ಹೇಳುತ್ತೇನೆ.

ಇನ್ನು ಪೋಲೀಸ್ ಕಾನ್ಸ್‌ಟೇಬಲ್‌ಗಳ ವಿಚಾರದಲ್ಲಿ ಒಂದು ಮಾತು ಹೇಳಬೇಕಾಗಿದೆ. ಗ್ರಾಮಾಂತರಗಳಲ್ಲಿ ರಾತ್ರಿ ಹೊತ್ತು ಚಾವಡಿಯಲ್ಲಿ ಮಲಗುವ ಪದ್ಧತಿ ಇದೆ. ಪೋಲೀಸ್ ಕಾನ್ಸ್‌ಟೇಬಲ್ ಬಂದು ಚೆಕ್ ಮಾಡುತ್ತಾನೆ. ಯಾವುದಾದರೂ ಒಬ್ಬ ಆಸಾಮಿಯನ್ನು ಬುಕ್ ಮಾಡಬೇಕೆಂದು ಅವನಿಗೂ ಆ ಗ್ರಾಮಾಧಿಕಾರಿಗಳಿಗೂ ಒಂದು understanding ಇದ್ದರೆ ಅವನನ್ನು ಬುಕ್‌ಮಾಡಿ ಅವನ ಮೇಲೆ ಕೇಸು ಅಂಟಿಸತಕ್ಕ ಪದ್ಧತಿ ಇದೆ. ಈ ರೀತಿ ಆಗದಂತೆ ತಕ್ಕ ಬಂದೋಬಸ್ತು ಮಾಡಬೇಕೆಂದು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ.

Mr. SPEAKER.—The House will now rise and meet at 3-30 P.M.

The House adjourned for Lunch at Three of the Clock and reassembled at Thirty Minutes past Three of the Clock.

[MR. SPEAKER in the Chair]

*ಶ್ರೀ ಸಿ. ಟಿ. ಹನುಮಂತಯ್ಯ (ಪಾವಗಡ-ಅನುಸೂಚಿತ ಜಾತಿಗಳು).—ಸ್ವಾಮಿ, ಪೋಲೀಸು ಅಧಿಕಾರಿಗಳ ವಿಷಯದಲ್ಲಿ ಕೆಲವು ಮಾತುಗಳನ್ನು ಹೇಳುತ್ತೇನೆ, ಅವರಿಗೆ ಕೊಡತಕ್ಕ ಸಂಬಳ ಬಹಳ ಕಡಿಮೆ. "ನಮಗೆ 23 ರೂಪಾಯಿ ಸಂಬಳ ಕೊಡುತ್ತಾರೆ, ನಮ್ಮ ಜೀವನ ಬಹಳ ಕಷ್ಟ. ನಮಗೆ ಎಂಟು ಹತ್ತು ಜನ ಮಕ್ಕಳಿದ್ದಾರೆ. ಹೆಚ್ಚಿನಸಂಬಳ ಕೊಡಿಸಿದರೆ, ನಾವೂ ತೃಪ್ತರಾಗಿ ಕೆಲಸಮಾಡುವುದಕ್ಕೆ ಅನುಕೂಲವಾಗುತ್ತದೆ" ಎಂದು ಹೇಳಿದ್ದಾರೆ. ಪೋಲೀಸು ಇಲಾಖೆಯಲ್ಲಿ ಕಾನ್ಸ್‌ಟೇಬಲುಗಳಿಗೆ, ದಫೇದಾರರುಗಳಿಗೆ ಮತ್ತು ಜಮೇದಾರರುಗಳಿಗೆ ಸಂಬಳ ಬಹಳ ಕಡಿಮೆ. ಸಬ್‌ಇನ್ಸ್‌ಪೆಕ್ಟರ ಮೇಲ್ಪಟ್ಟವರಿಗೆ ಗ್ರೇಡು ಹೆಚ್ಚಾಗಿದೆ. ಕಡಿಮೆ ದರ್ಜೆಯ ನೌಕರರಿಗೆ ಹೆಚ್ಚು ಸಂಬಳ ಕೊಡಬೇಕೆಂದು ಸಲಹೆ ಮಾಡುತ್ತೇನೆ.

ಕಳ್ಳಭಟ್ಟಿ ಸಾರಾಯಿ ತಯಾರುಮಾಡುವ ಕಡೆಗಳಲ್ಲಿ ಅಂಥವರನ್ನು ಹಿಡಿಯಲು ಪೋಲೀಸಿನವರು ಹೋಗುತ್ತಾರೆ. ಅವರಿಗೆ ಸಾಕಾದಷ್ಟು ಸಹಾಯವಿಲ್ಲ, ಕುಮ್ಮಕ್ಕು ಇಲ್ಲ. ಅವರಿಗೆ ಸಾಕಾದಷ್ಟು ಕುಮ್ಮಕ್ಕು ಕೊಟ್ಟಪಕ್ಷದಲ್ಲಿ ಪಾನನಿರೋಧ ಕೆಲಸ ಯಶಸ್ವಿಯಾಗಿ ನಡೆಯುತ್ತದೆ ಎಂದು ಸಲಹೆಮಾಡುತ್ತೇನೆ.

ಪೋಲೀಸಿನವರು ಕೆಲವು ಕಡೆ ಗ್ರಾಮಾಧಿಕಾರಿಗಳ ಕೈಯಲ್ಲಿ ಸಿಕ್ಕಿಕೊಂಡಿದ್ದಾರೆ. ದಾಕ್ಷಿಣ್ಯಕ್ಕೆ ಒಳಗಾಗಿದ್ದಾರೆ. ಪೋಲೀಸಿನವರು ಹಳ್ಳಿಗಳಿಗೆ ಹೋದಾಗ ರಾತ್ರಿಕಾಲದಲ್ಲಿ ಚಾವಡಿ ಕಾವಲು ಹಾಕುತ್ತಾರೆ. ಆ ಚಾವಡಿ ಕಾವಲಿನಲ್ಲಿ ಸರದಿ ಕಾಯುವಾಗ ಕೆಲವು ಲೋಪಗಳಿವೆ. ಇದನ್ನು ಕ್ರಮಪಡಿಸಬೇಕೆಂದು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಸರ್ಕಾರದವರು ಕೆಲವು ಕಾನೂನುಗಳನ್ನು ಮಾಡಿದ್ದಾರೆ. ಅವುಗಳನ್ನು ಜಾರಿಗೆ ಕೊಡುವಾಗ ಪೋಲೀಸು ಅಧಿಕಾರಿಗಳಿಗೆ ತಾವು ಸರಿಯಾಗಿ ತಿಳುವಳಿಕೆ ಕೊಡಬೇಕು. ಇಲಾಖಾ ಮುಖ್ಯಾಧಿಕಾರಿಗಳನ್ನು ಮತ್ತು ಜಿಲ್ಲಾ ಪೋಲೀಸು ಸೂಪರಿಂಟೆಂಡೆಂಟರು ವಗೈರೆಯವರನ್ನು ಕಂಡು ಸ್ವಲ್ಪ ಆಡಳಿತದಲ್ಲಿ ಬಿಗಿ ಇರಬೇಕು, ದಕ್ಷತೆ ಇರಬೇಕು, ಧೈರ್ಯವಿರಬೇಕು ಮತ್ತು ಆಡಳಿತ ವರ್ಗದಲ್ಲಿ ಕೈ, ಬಾಯಿ, ಶುದ್ಧವಿರಬೇಕು ಎಂದು ಅನೇಕ ಸಂದರ್ಭಗಳಲ್ಲಿ ಹೇಳಿದ್ದೇನೆ. ಮುಖ್ಯವಾಗಿ ಪಬ್ಲಿಕ್ ಹೆಲ್ತ್

(ಶ್ರೀ ಸಿ. ಟಿ. ಹನುಮಂತಯ್ಯ).

ಆಕ್ಟ್‌ನಲ್ಲಿ 108 ಮತ್ತು 110ನೆ ಸೆಕ್ಷನ್, ಇಂಡಿಯನ್ ಪೀನಲ್ ಕೋಡಿನ 372ನೆ ಸೆಕ್ಷನ್, Social and Civil Disabilities Act ಮತ್ತು Removal of Untouchability Act ಇವುಗಳನ್ನು ಜಾರಿಗೆ ಕೊಟ್ಟರೆ ಕ್ಷೇಮ, ಮತ್ತು ಅಸ್ಪೃಶ್ಯತೆಯ ನಿವಾರಣೆ ಯಾಗುತ್ತದೆ. ಆದುದರಿಂದ ಇವುಗಳನ್ನು ಜಾರಿಗೆ ಕೊಟ್ಟು ಸಹಾಯ ಮಾಡಬೇಕೆಂದು ಈ ಮೂಲಕ ಪ್ರಾರ್ಥಿಸುತ್ತೇನೆ.

ಮಾರಿ ಜಾತ್ರೆಗಳನ್ನು ಮಾಡಕೂಡದೆಂದು ಗೊತ್ತಿದ್ದರೂ ಸಹ ಎಲ್ಲೆಲ್ಲೂ ಈ ಜಾತ್ರೆಗಳು ನಡೆಯುತ್ತಿವೆ. ಕೆಲವು ಗ್ರಾಮಗಳಲ್ಲಿ ಗ್ರಾಮಸ್ಥರೂ ಮತ್ತು ಪಟೇಲರೂ ಸೇರಿಕೊಂಡು ಪೋಲೀಸಿನವರಿದ್ದರೆ ಚೆನ್ನಾಗಿರುವುದಿಲ್ಲವೆಂದು ಅವರನ್ನು ನಾವು ಇಲ್ಲಿ ಇರುವುದು ಬೇಡ, ಕಾಫಿ ತಿಂಡಿಗೆ ಹೋಗೋಣ ಬನ್ನಿ ಎಂದು ಕರೆದುಕೊಂಡು ಹೋಗುತ್ತಾರೆ. ಅನಂತರ ಜಾತ್ರೆಗಳಲ್ಲಿ ಕುರಿಕೋಣ ಕಡಿಯುತ್ತಾರೆ. ಅರೀತಿ ದಾಕ್ಷಿಣ್ಯಗಳಿಗೆ ಒಳಗಾಗದೆ, ನಿರ್ದಾಕ್ಷಿಣ್ಯವಾಗಿ ಕೆಲಸ ಮಾಡಬೇಕು. ದೇವರ ಹೆಸರಿನಲ್ಲೇ ಆಗಲಿ, ಯಾವ ಕಾರಣದಿಂದಲೇ ಆಗಲಿ ಪ್ರಾಣಿವಧೆ ಮಾಡಕೂಡದು ಎಂದು ಕಾನೂನು ಮಾಡಿದ್ದೀರಿ. ಇದನ್ನು ಜಾರಿಗೆ ಕೊಡುವಂತೆ ಮಾಡಬೇಕು ಮತ್ತು ದೇಶದ ಎಲ್ಲ ಕಡೆಗಳಲ್ಲಿಯೂ ಕೂಡಲೇ ಜಾರಿಗೆ ಬರುವಂತೆ ಮಾಡಿಸಿ ಕೊಡಬೇಕೆಂದು ನನ್ನ ಪ್ರಾರ್ಥನೆ.

ಶ್ರೀ ಎ. ಮುನಿಯಪ್ಪ (ಶಿಡ್ಲಘಟ್ಟ-ಚಿಕ್ಕಬಳ್ಳಾಪುರ-ಅನುಸೂಚಿತ ಜಾತಿಗಳು).—ಸ್ವಾಮಿ, ಪೋಲೀಸು ಇಲಾಖೆಯ ದಕ್ಷತೆ ಕಡಿಮೆಯಾಗಿದೆ ಎಂದು ಹೇಳುವವರಲ್ಲಿ ನಾನೂ ಒಬ್ಬ. ಇದರ ಬಗ್ಗೆ ಕೆಲವು ವಿಚಾರಗಳನ್ನು ಸರ್ಕಾರದವರ ಗಮನಕ್ಕೆ ತರಬೇಕೆಂದು ಇಷ್ಟಪಡುತ್ತೇನೆ. ಪೋಲೀಸು ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲವೆನ್ನುವುದಕ್ಕೆ ಕೆಲವು ಉದಾಹರಣೆಗಳನ್ನು ಕೊಡುತ್ತೇನೆ. ಚಿಕ್ಕಬಳ್ಳಾಪುರದಲ್ಲಿ ಒಬ್ಬ ಪೋಲೀಸಿನವನು ಕಳ್ಳಭಟ್ಟಿ ಸಾರಾಯಿ ಮಾಡುತ್ತಿದ್ದು, ಪೋಲೀಸ್ ಇನ್‌ಸ್ಪೆಕ್ಟರ ಕೈಗೆ ಸಿಕ್ಕಿ ಬಿದ್ದ. ಆತನು ಪುನಃ ಅಲ್ಲಿಯೇ ಡ್ಯೂಟಿ ಮೇಲಿದ್ದಾನೆ. ಇದನ್ನು ನೋಡಿದರೆ ಪೋಲೀಸ್ ಅಧಿಕಾರಿಗಳ ದಕ್ಷತೆ ಎಷ್ಟು ಎನ್ನುವುದು ಗೊತ್ತಾಗುತ್ತದೆ. ಆಮೇಲೆ ಪೋಲೀಸ್ ಅಧಿಕಾರಿಗಳು ಭಟ್ಟಿಸಾರಾಯಿ ಏಜಂಟರ ಹತ್ತಿರ ಹೋಗಿ ಬೆಳಿಗ್ಗೆ ಇಂಥಿಂಥವರನ್ನು ಪ್ರೊಹಿಬಿಷನ್ ಡ್ಯೂಟಿಗೆ ಹಾಕಿದ್ದಾರೆ ಎಂದು ಹೇಳಿಬರುತ್ತಾರೆ. ಈ ಡ್ಯೂಟಿಗೆ ಹಾಕಿರುವ ಪೋಲೀಸು ಕಾನ್‌ಸ್ಟೇಬಲುಗಳಿಗೆ ಪ್ರತಿಯೊಬ್ಬರಿಗೂ 5 ರೂಪಾಯಿ, 10 ರೂಪಾಯಿ ಹೀಗೆ ಮಾಮೂಲು ಕೊಡುತ್ತಾರೆ. ರಾತ್ರಿ ಕೆಹೊತ್ತು ಭಟ್ಟಿ ಸಾರಾಯಿಯನ್ನು ಬೇರೆಯವರು ತಂದರೆ ಪೋಲೀಸಿನವರು ಹಿಡಿದುಕೊಳ್ಳುತ್ತಾರೆನ್ನುವ ಉದ್ದೇಶದಿಂದ, ಪೋಲೀಸ್ ಅಧಿಕಾರವನ್ನೇ ಉಪಯೋಗಿಸಿಕೊಂಡು, ಕೆಲಸ ಮಾಡುತ್ತಿದ್ದಾರೆ. ಪೋಲೀಸಿನವರೇ ಈ ಸಾರಾಯಿಯನ್ನು ತಂದು ಏಜಂಟರಿಗೆ ಸಪ್ಲೈ ಮಾಡುತ್ತಿರುವುದು ಚಿಕ್ಕಬಳ್ಳಾಪುರದಲ್ಲಿ ನಡೆಯುತ್ತಿದೆ. ಈ ವಿಚಾರದಲ್ಲಿ ಮಾನ್ಯಮಂತ್ರಿಗಳಾದ ಚನ್ನಯ್ಯನವರಿಗೂ ಮತ್ತು ಗೃಹಮಂತ್ರಿಗಳಿಗೂ ಎಷ್ಟೋ ಸಲ ತಿಳಿಸಿದ್ದೇನೆ. ಆದರೆ ಅವರು ಏನೂ ಕಾರ್ಯಕ್ರಮವನ್ನು ತೆಗೆದುಕೊಂಡಹಾಗೆ ಕಾಣುವುದಿಲ್ಲ. ಬಂದ ಹಣದಲ್ಲಿ ಪೋಲೀಸ್ ಇನ್‌ಸ್ಪೆಕ್ಟರು, ಸಬ್ ಇನ್‌ಸ್ಪೆಕ್ಟರಾದಿಯಾಗಿ ಎಲ್ಲರೂ ಹಂಚಿಕೊಳ್ಳುತ್ತಾರೆ. ಇಂಥದನ್ನೆಲ್ಲ ತಡೆಗಟ್ಟಲು ಸರ್ಕಾರದವರು ಸರಿಯಾದ ವ್ಯವಸ್ಥೆ ಮಾಡದೆ ಇದ್ದರೆ, ನಾಗರಿಕರಾದ ಪ್ರತಿಯೊಬ್ಬ ಪ್ರಜೆಯೂ ಓಡಾಡುವುದಕ್ಕೇ ಬಹಳ ಕಷ್ಟವಾಗುತ್ತದೆ.

ಸ್ವಾತಂತ್ರ್ಯ ಬಂದಿದೆ. ಸ್ವಾತಂತ್ರ್ಯ ಬಂದಮೇಲೆ ಪ್ರತಿಯೊಬ್ಬರಿಗೂ ಸಮಾನವಾದ ಹಕ್ಕುಗಳು ಬರಬೇಕೆಂದು ಹೇಳುತ್ತಿದ್ದೇವೆ. ಆದರೆ ಶಿಡ್ಲಘಟ್ಟ ತಾಲ್ಲೂಕು ಶೀಗೇಹಳ್ಳಿ ಎಂಬ ಗ್ರಾಮದಲ್ಲಿ ಹರಿಜನ ಹೆಂಗಸರು ಹೂವು ಮುಡಿಯುವುದಕ್ಕೆ ಸ್ವಾತಂತ್ರ್ಯ ಬಂದಿಲ್ಲ. ಇದನ್ನು ಗೃಹಮಂತ್ರಿಗಳಿಗೂ ಮತ್ತು ಪೋಲೀಸ್ ಅಧಿಕಾರಿಗಳಿಗೂ ಎಷ್ಟೋಸಲ ಈಗ ನಾಲ್ಕು ವರ್ಷಗಳಿಂದ ತಿಳಿಸಿದ್ದೇನೆ. ಒಂದು ಊರಿನ ಒಬ್ಬ ಹರಿಜನ ಹೆಂಗಸು ಹೂವು ಮುಡಿಯುವುದಕ್ಕೆ ಸ್ವಾತಂತ್ರ್ಯವಿಲ್ಲವಲ್ಲ ಎನ್ನುವ ವಿಷಯದಲ್ಲಿ ಸರ್ಕಾರಕ್ಕೂ ಸುಮಾರು 25 ಅರ್ಜಿಗಳನ್ನು ನಾನೇ ಕೊಟ್ಟಿದ್ದೇನೆ. ಶಿಡ್ಲಘಟ್ಟದ ಇನ್‌ಸ್ಪೆಕ್ಟರವರು ಯಾರದಾದರೂ ಪ್ರಾಣಹೋಗಲಿ ಆಗಬಂದು ವಿಚಾರಿಸುತ್ತೇವೆಂದು ಜವಾಬು ಕೊಡುತ್ತಾರೆ.

ಶ್ರೀ ಎಚ್. ಸಿದ್ದವೀರಪ್ಪ.—ಈವಾಗ ಆರೀತಿ ಹೂವು ಮುಡಿಯುವುದಕ್ಕೆ ಪ್ರತಿಬಂಧಕವಿರುವುದಿಲ್ಲ.

ಶ್ರೀ ಎ. ಮುನಿಯಪ್ಪ.—ಕಾನೂನುಗಳಾಗಿವೆ. ಆದರೆ ಅವೆಲ್ಲ ಕಡತದಲ್ಲಿ ಸೇರಿವೆಯೋ ಹೊರತು ಕಾರ್ಯಗತವಾಗಿಲ್ಲ. ಆದುದರಿಂದ ಕಾನೂನನ್ನು ಜಾರಿಗೆ ಕೊಟ್ಟು ಹರಿಜನರಿಗೆ ದೊರಕಬೇಕಾದ ಸೌಲಭ್ಯಗಳನ್ನೆಲ್ಲ ದೊರಕಿಸಿ ಕೊಡಬೇಕು ಎಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಸಿವಿಲ್ ಸ್ವಭಾವದ ಅನರ್ಹತೆಗಳ ಆಕ್ಟ್ ದೇಶದಲ್ಲಿ ಜಾರಿಯಲ್ಲಿದೆ. ಅದನ್ನು ಕಾರ್ಯಗತಮಾಡುವುದು ಸರ್ಕಾರದ ಕೈಯಲ್ಲಿದೆ. ಆದುದರಿಂದ ಎಲ್ಲಿ ತೊಂದರೆಗಳಿವೆಯೋ ಅವು . . . .

ಶ್ರೀ ಎಚ್. ಸಿದ್ದವೀರಪ್ಪ.—ಪೋಲೀಸಿನವರು ಏನು ಮಾಡಬೇಕು ಎಂದು ಹೇಳುತ್ತೀರಿ ?

ಶ್ರೀ ಎ. ಮುನಿಯಪ್ಪ.—ತಾವು ಒಂದು ಕಾನೂನು ಮಾಡಿದ್ದೀರಿ. ಅದಕ್ಕೆ ವಿರೋಧವಾಗಿ ನಡೆದರೆ ಅಂಥವರನ್ನು ಹಿಡಿದು ಪೋಲೀಸ್ ಅದಕ್ಕೆ ತಕ್ಕ ಬಂದೋಬಸ್ತು ಮಾಡಬೇಕು.

ಶ್ರೀ ಎಚ್. ಸಿದ್ದವೀರಪ್ಪ.—ಅದನ್ನು ಮಾಡಿ ಕೊಡುತ್ತೇವೆ.

ಶ್ರೀ ಎ. ಮುನಿಯಪ್ಪ.—ಚಿಕ್ಕಬಳ್ಳಾಪುರದಲ್ಲಿ ವೆಂಕಟಪ್ಪ ಎಂಬವನನ್ನು ಅರ್ಧ ಕ್ಷೌರಮಾಡಿ ಹರಿಜನನೆಂಬ ಕಾರಣಕ್ಕಾಗಿ ಓಡಿಸಿದರು. ಕುಂದಲಗುರ್ಕಿ ಗ್ರಾಮದಲ್ಲಿ ಹರಿಜನರ ಮದುವೆ ಆದರೆ ಆ ಊರಿನಲ್ಲಿ ಹುಟ್ಟಿದಾಗಿನಿಂದಲೂ ಹೂವು ಮುಡಿಯುವುದು ಇಲ್ಲವೇ ಇಲ್ಲವೆಂದು ಹೇಳುತ್ತಿದ್ದಾರೆ. ಘಂಟಾಘೋಷವಾಗಿ ಮದುವೆ ಮಾಡಬೇಕಾದ್ದರೆ ಆ ಊರಿಗೆ ಹೂವು ತೆಗೆದುಕೊಂಡು ಹೋಗಕೂಡದು. ಇಂಥ ತೊಂದರೆಗಳು ಇವೆ. ಇಂಥ ವಿಚಾರಗಳು ಎಷ್ಟೋ ಇವೆ. ಇನ್ನೊಂದು ವಿಷಯ. ಚಿಕ್ಕಬಳ್ಳಾಪುರದಲ್ಲಿ ತಾಳೂಳ್ಳು ನಾರಾಯಣಪ್ಪನವರ ಮನೆಯಲ್ಲಿ ಒಬ್ಬ ಹೆಣ್ಣು ಹುಡುಗಿ ಪತ್ತೆ ಇಲ್ಲದೆ ಆಗಿ ಒಂಭತ್ತು ತಿಂಗಳಾಯಿತು. ಪೋಲೀಸಿನವರು ಮೊದಮೊದಲು ಬಹಳ ಬಿರುಸಿನಿಂದ, ಕೆಲಸ ಕಾರ್ಯಗಳನ್ನು ಬಹಳ ಮುತುವರ್ಜಿಯಿಂದ ಮಾಡಿದರು. ವಿಚಾರಣೆ ವಗೈರೆ ಮಾಡಿದರು. ಆದರೆ ಆ ಹುಡುಗಿ ಏನಾಯಿತೋ ಅವರ ಮನೆಯವರು ಮತ್ತು ಸಂಬಂಧಪಟ್ಟವರಮೇಲೆ ಏನು ಕಾರ್ಯಕ್ರಮ ತೆಗೆದುಕೊಂಡರೋ ಗೊತ್ತಿಲ್ಲ. ಆ ಕೇಸು ಸಹ ಪತ್ತೆ ಇಲ್ಲದೆ ಆಗಿದೆಯೆಂದು ತಿಳಿಯುತ್ತೇನೆ. ಆ ಹುಡುಗಿಯ ಗಂಡನಾದವನು ನನ್ನ ಹೆಂಡತಿ ಪತ್ತೆ

ಇಲ್ಲವೆಂದೂ, ಆಕೆ ಇಂಥ ಕಡೆ ಇದ್ದಾಳೆಂದು ತಿಳಿದು ಬಂದಿದೆ ಎಂದೂ ಅರ್ಜಿಕೊಟ್ಟರೆ ಒಬ್ಬ ಪೋಲೀಸು ಅಧಿಕಾರಿಯೂ ಇದನ್ನು ಗಮನಕ್ಕೆ ತೆಗೆದುಕೊಂಡಿಲ್ಲವೆಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ನಮ್ಮ ಊರಿನಲ್ಲಿ ಒಬ್ಬರೊಬ್ಬರಿಗೆ ಆಗದೆ ಇದ್ದ ಮನೆಯಲ್ಲಿ ಜಗಳವಾಗಿ, ಹುಡುಗಿಯನ್ನು ಪತ್ತೆ ಇಲ್ಲದೆ ಮಾಡುವುದಕ್ಕೋಸ್ಕರ ಇದು ನಡೆದಿದೆ. ಈ ವಿಷಯದಲ್ಲಿ ಸರಿಯಾಗಿ ವಿಚಾರಣೆ ನಡೆಸಿ ಆ ಹುಡುಗಿ ಪ್ರಾಣದಿಂದಿದ್ದಾಳೆಯೇ ಅಥವಾ ಇಲ್ಲವೇ ಎನ್ನುವುದನ್ನು ತಿಳಿಸಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಇನ್ನೂ ಒಂದೇ ಒಂದು ವಿಷಯವನ್ನು ಮಾತ್ರ ಹೇಳುತ್ತೇನೆ. ಬಸ್ಸುಗಳ ಹತ್ತಿರ ಪೋಲೀಸಿನವರು ಸರಿಯಾಗಿ ನೋಡಿಕೊಳ್ಳದೆ ಓವರ್‌ಲೋಡ್ ಮಾಡುವುದಕ್ಕೆ ಅವಕಾಶವಾಗಿದೆ. ಇತ್ತೀಚೆಗೆ ಶಿಡ್ಲಘಟ್ಟದ ಹತ್ತಿರ "ಜಮುನ ಎಕ್ಸ್‌ಪ್ರೆಸ್" ಎಂಬ ಬಸ್ಸು ಆಕ್ಸಿಡೆಂಟ್ ಆಗಿ ಇಬ್ಬರು ಸ್ಥಳದಲ್ಲಿಯೇ ಮೃತಪಟ್ಟರು. ಓವರ್ ಲೋಡ್ ಅಂದರೆ ಎಷ್ಟು ಎಂಬುದನ್ನು ಹೇಳುತ್ತೇನೆ. ಆ ಬಸ್ಸಿನಲ್ಲಿ 62 ಜನ ಪ್ಯಾಸೆಂಜರುಗಳು, ಮೇಲ್ಗಡೆ 30 ಮೂಟೆ ಸಿಮೆಂಟ್ ಮತ್ತು ಒಂದು ಮೂಟೆ ಸಕ್ಕರೆ, ಇಷ್ಟೂ ಹಾಕಿದ್ದರು. ಆ ದಿನದ ಆಕ್ಸಿಡೆಂಟ್‌ನಲ್ಲಿ ನಾನೂ ಒಬ್ಬ ಇದ್ದೆ. ಆ ಬಸ್ಸಿನಲ್ಲಿ ಶಿಡ್ಲಘಟ್ಟ ಅಮಲ್ದಾರರ ಗರ್ಭಿಣಿ ಹೆಂಡತಿ ಸಹ ಇದ್ದರು. ಅವರಿಗೆ ಪ್ರಾಣ ಹೋಗುವ ಸ್ಥಿತಿಯಲ್ಲಿತ್ತು. ಆಕೆಯನ್ನು ತಕ್ಷಣವೇ ಚಿಕ್ಕಬಳ್ಳಾಪುರದ ಮಿಷನ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಮಾಡಿಸಿದರು. ದೈವವಶಾತ್ ಆಕೆ ಉಳಿದುಕೊಂಡರು. ಇಂಥ ವಿಚಾರದಲ್ಲಿ ಪೋಲೀಸಿನವರು ಕಟ್ಟುನಿಟ್ಟಾಗಿರುವಂತೆ ವ್ಯವಸ್ಥೆ ಮಾಡಬೇಕು. ಒಂದು ವ್ಯವಸ್ಥಿತ ರೀತಿಯಲ್ಲಿ ಪೋಲೀಸಿನವರು ವರ್ತಿಸಿದರೆ ಜನರಿಗೆ ಕ್ಷೇಮ. ಆದುದರಿಂದ ಸರ್ಕಾರದವರು ಈ ವಿಚಾರಗಳಲ್ಲಿ ಸರಿಯಾದ ಸೌಕರ್ಯಗಳನ್ನು ಒದಗಿಸಿ ಕೊಡಬೇಕೆಂದು ಹೇಳಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

*Sri H. SIDDAVEERAPPA (Home Minister).—Sir, I request you to kindly permit me to sit and reply. I have heard with very rapt attention to the various criticisms levelled by Hon'ble Members. They have painted the Police, some of them, in the darkest colour and have said that the administration is as bad as it could be. But, however, there are friends like Sri Prabhakar who have taken a dispassionate view of things and have said that the Police after all have to act in liaison with the public, and the measure of the success of police administration is proportionately dependent on the responsive co-operation given by the public. Even if God is made a police officer, I am sure, as soon as he wears Khaki, He is bound to get the same criticism. The job is such. I feel, Sir, the work of the Police is bound to come into public criticism because the nature of work they do is such. I am not one of those to say that the policeman is a perfect being. I am not one of those who advocate that the police administration is hundred per cent flawless. If the efficiency of the department is to be measured by the number of cases detected and the number of convictions secured in any area, I have got the authenticated document prepared by Government of India. It is 'Crime in India' published by the Intelligence Bureau, Ministry of Home Affairs, Government of India.

Sri B. NARAYANASWAMY (Mysore South).—May I know whether it is based on the report furnished by Mysore Government ?

Sri H. SIDDAVEERAPPA.—They collect statistics and it is the Director of Intelligence Bureau, Government of India, that has published this pamphlet.

Sri B. NARAYANASWAMY.—I want to know whether the facts collected by the Bureau of Intelligence is on the basis of the figures furnished by Mysore Government.

Sri H. SIDDAVEERAPPA.—Naturally the States Governments. But, I do not think my friend disputes facts as such.

Sri B. NARAYANASWAMY.—I am not disputing facts. But, unfortunately, I have no occasion to speak.

Sri H. SIDDAVEERAPPA.—Sir, it is clear and obvious that these facts were furnished by the Government of Mysore. It could be seen from one of the important abstracts here that the average of cases convicted to true cases in India comes to 31.3 for one lakh of population ; but the percentage of cases convicted to cases on trial—the Indian average is 59.2. In Mysore the percentage of cases convicted to true cases investigated is 51.2, whereas the percentage of cases convicted to cases tried is 70.8. I have got the figures to show for various States, but I think it is unnecessary for me to detail all those figures. It is sufficient to say that when compared with the all-India average, the figures of Mysore stand a good and better comparison.

Sri B. NARAYANASWAMY.—All very good consolation.

Sri H. SIDDAVEERAPPA.—It is a matter for judgment. There are gentlemen in this country—I must thank them—who appreciate the good work of the police. My esteemed friend Sri Venkatappa has addressed a letter to me in the month of September 1955 congratulating the good work done by the Assistant Superintendent of Police and the Police Inspector of that area, more particularly in prohibition. I am indeed thankful to such gentlemen who, when they find that there are good officers doing good work, appreciate the work, pat them and extract more and more good from them. Therefore, I have got quite a large number of records to show that in some cases our people have done splendid work.

I may give an illustration of a case which happened in Mysore State last year. An international criminal who has dozens of dacoities and robberies to his credit, was caught red-handed here and when he was caught red-handed, he had actual cash in currency notes to the tune of three lakhs and odd. The entire money was offered by him to the Police. The Police refused to touch it and they produced him and they produced the entire money. This was appreciated by Government of India.

Sri J. MOHAMED IMAM (Jagalur).—But he escaped.

Sri H. SIDDAVEERAPPA.—He escaped elsewhere, not here. Therefore, Sir, I may assure the Hon'ble Members that in the administration there are people who are really doing good work. It was said that the material in the department was bad. Yes; to a certain extent it may be true. That is a story not only here but elsewhere in India. We have been thinking how to eliminate the handicaps in the present Police Department. The most important is one of proper recruitment. Government of India, in consultation with the State Government, has been formulat-ing a policy regarding proper recruitment which, I am sure, ere long, will be put into practice.

Sir, it has been said by my friends that the Police budget has swelled and during the last ten years it has swelled enormously. When compared with international standards, generally in India the police are undermanned. That is more so in our State. I think it is not necessary for me to quote figures now because every year I am doing it. In our State for every lakh of population, when compared with other parts, the number is not really as much as it ought to be. The Hon'ble Member Sri Srinivasa Iyengar wanted to know as to what has happened to the revision of the Police Act. I agree with him that the Act we are now having is out of tune. It requires a revision. The Act was meant for a different purpose, but after 1947 that requires substantial modification and revision. We have appointed an officer for that purpose and a District Superintendent of Police has been at it. But, just at the time when I was about to introduce the Police Act, it has now happened that the State of Mysore will be much more enlarged; various other areas come to Mysore and Mysore becomes greater Mysore. Therefore, Government thought that instead of introducing the Bill now, it would be much more advantageous to have an Act after October 1956 when the State would have been reorganised. It is for this reason, Sir, the Police Act would not be introduced earlier.

The Hon'ble Member Sri P. R. Ramaiya brought to my notice some of the small thefts happening in Bangalore. I will pay my personal attention to it and see what can be done in the matter. Sri Sivananje Gowda said about some local complaint about the transfer of the police station; I will get the matter examined. The report is that it is within the jurisdiction; anyhow, even now if it is possible to give him any relief, I shall see what could be done. I agree with Sri Boranna Gowda that prohibition staff should be augmented. It is not necessary to repeat the figures about prohibition cases because it has already been given in the Note given by me to the Hon'ble Members about the working of the Department. There are large number of handicaps and difficulties not to make the prohibition as successful as it ought to be. One of the most important reasons is the lenient punishments given by the courts

over which we have no control. Hitherto these cases used to be adjourned for a long time. But, now after the amendment of the Criminal Procedure Code, I am sure things would improve and we would be able to give a better account of ourselves. The idea of having a special prohibition staff has attracted my attention and I shall see what could be done in the matter.

Regarding working of the Acts for the eradication of untouchability and various other things, I have got the figures and I may say without fear of contradiction, that things today are much more better than what they were earlier. There is public awakening that we can no longer treat our brethren in the manner we were treating them once. As time advances these things would further improve.

Sri Hutche Gowda referred to the scale of pay of the police officials. The Indian Police Service are on an All-India scale. There

4 P.M.

is much force in what he says as to what we are going to do after the new State comes into force. This is the time for us to think. So far as various other matters that arise after integration are concerned, Government will certainly examine and see that these disparities are reduced or eliminated within the minimum period. (*Sri B. Hutche Gowda.—Regarding Police Constables?*) The Chief Minister in his budget speech has referred to it. I do not think you expect a special reference from me. That is a matter of real grievance. We have to examine it and face it one day or the other.

Sri L. SIDDAPPA.—I think I have said that special Police arrangements will have to be made in the construction of Bhadra Reservoir Project.

Sri H. SIDDAVEERAPPA.—That will be examined. Hon'ble Members have referred to various other points. I have noted them. They will receive my attention. I shall see what can be done so far as those things are concerned. When all is said, we should not forget that the policeman has to discharge his duties under very trying circumstances. Especially during the year 1955 they had to face critical situations, and various developments. I have no hesitation in saying that with commendable tact and courage they have discharged their duties to the satisfaction of the Government. I therefore pray that this Demand may be voted.

Mr. SPEAKER.—The question is:

"That a sum not exceeding Rs. 1,27,17,860 be granted to the Government to defray the charges which will come in course of payment during the year ending 31st day of March 1957, in respect of 'Police'."

The motion was adopted.

Unparliamentary Words.

Mr. SPEAKER.—Before we take up other Demands, I want to give my ruling on the points raised by some Hon'ble Members.

On the 16th instant, during the Hon'ble Finance Minister's reply to the Budget debate, the Minister commenced a sentence by saying "These Hon'ble four members have made a combination . . . " referring among others to Hon'ble Member Sri K. Puttaswamy. Hon'ble Member Sri Nagaiah Reddy interrupting said "That is stupid talk". Objection was taken to the use of these expressions by the Hon'ble Finance Minister as well as the Hon'ble Member Sri Nagaiah Reddy. I stated that on first impression the word 'Stupid' was unparliamentary and should be expunged. After certain members had intervened I stated that I would examine the use of these expressions by the two Hon'ble members and would give a ruling later.

In the cut and thrust of debate, in the heat of argument or in ventilating grievances and in meeting those charges it is inevitable that certain words are apt to find ready expression. But Hon'ble Members will appreciate that it cannot be said that only unparliamentary words should not be used in the Assembly and that words which fall short of being unparliamentary

(MR. SPEAKER.)

could be used without hindrance. It does not add to the force of debate or to the dignity of the House to use expressions which are not proper. In the present instance since the Hon'ble Finance Minister had not completed the sentence which he commenced by saying "these four Hon'ble Members have made a combination . . ." it is not possible to say to what particular combination he referred to, and whether the use of these expressions would therefore be unparliamentary or not. Similarly the word 'stupid' cannot be said to be unparliamentary precluding its use under any circumstance within the precincts of the House. But while I am not prepared to hold that these words are unparliamentary I am quite clear in my mind that such expressions ought not to be used in the House since they detract from the dignity of the proceedings and are not in keeping with the status of the House. I can only express the hope that Hon'ble Members would refrain from using strong language which is not only undesirable but is also calculated to hurt the feelings of other Hon'ble Members.

DEMANDS FOR GRANTS 1956-57 (*Contd*).

DEMAND No. 6—MOTOR VEHICLES ACT—ADMINISTRATION.

12. CHARGES ON ACCOUNT OF MOTOR VEHICLES ACT.

MR. SPEAKER.—There are three Demands. We can take up all the Demands together. I will move only one of the Demands and discussion can take place on all the three. Demand No. 6. Motion moved:

"That a sum not exceeding Rs. 3,79,100 be granted to the Government to defray the charges which will come in course of payment during the year ending 31st day of March 1957, in respect of 'Charges on account of Motor Vehicles Act'."

*ಶ್ರೀ ಎಸ್. ಶ್ರೀನಿವಾಸಯ್ಯಂಗಾರ್ (ಟಿ. ನರಸೀಪುರ).—ಸ್ವಾಮಿ, ಈಗ ಈ ಬಾಬಿನಲ್ಲಿ ಕೇಳಿರತಕ್ಕ ಹಣ ಈ ಮೋಟಾರ್ ವೆಹಿಕಲ್ಸ್ ಆಕ್ಟಿನಲ್ಲಿರುವ ಶಾಸನ ನಿಬಂಧನೆಗಳನ್ನು ಜಾರಿಗೆ ತರಬೇಕೆಂಬ ಉದ್ದೇಶದಿಂದ ಕೇಳಲಾಗಿದೆ. ಆದರೆ ಈ ಮೋಟಾರು ವಾಹನಗಳ ನಿಬಂಧನೆಗಳು ಬಹಳವಟ್ಟಿಗೆ ಜಾರಿಯಲ್ಲಿಲ್ಲ. ಅವುಗಳನ್ನು ನಾನು ಏತಕ್ಕಾಗಿ ಜಾರಿಯಲ್ಲಿಲ್ಲ ಎಂದು ಹೇಳುತ್ತಿದ್ದೇನೆಂದರೆ—ಮೋಟಾರ್ ವೆಹಿಕಲ್ಸ್ ಆಕ್ಟ್ ಪ್ರಕಾರ ಓವರ್‌ಲೋಡ್ ಮಾಡಬಾರದು ಎಂದಿದೆ—ಎಂದರೆ ಮೋಟಾರ್ ವಾಹನಗಳಲ್ಲಿ ವಿಧಾಯಕವಾಗಿರುವ ಪ್ರಮಾಣಕ್ಕಿಂತ ಮಿತಿಮೀರಿ ಭಾರವನ್ನು ಹೇರಿದರೆ ಅಥವಾ ವಿಧಾಯಕವಾಗಿರತಕ್ಕಂಥ ಪ್ರಯಾಣಿಕರ ಸಂಖ್ಯೆಗಿಂತ ಹೆಚ್ಚು ಜನರನ್ನು ಕೂಡಿಸಿದರೆ ಅಂಥವರಿಗೆ ಶಿಕ್ಷೆ ವಿಧಿಸಬೇಕು ಎಂದು ವಿಧಿಯಿದೆ. ಆದರೆ ಈ ನಿಬಂಧನೆಗಳೆಲ್ಲಾ ಈ ದಿವಸ ಶಾಸನ ಕಡತದಲ್ಲಿರುತ್ತವೆಯೇ ಹೊರತು ಜಾರಿಯಲ್ಲೆಲ್ಲೂ ಇಲ್ಲ. ಈ ದಿವಸ ಅನೇಕ ಬಸ್ ಮಾಲೀಕರುಗಳು ಓವರ್ ಲೋಡನ್ನು ಮಾಡುತ್ತಿದ್ದಾರೆ. ಆದರೆ ಈ ಹಿಂದೆ ಹೀಗೆಲ್ಲಾ ಮಾಡುತ್ತಿರಲಿಲ್ಲ. ಆಗ ಈ ನಿಯಮಗಳಿಗೆಲ್ಲ ಹೆದರಿಕೊಂಡು ಕೆಲಸ ನಡೆಸುತ್ತಿದ್ದರು. ಆದರೆ ಇತ್ತೀಚೆಗೆ ನಮ್ಮ ಸರ್ಕಾರದವರು ರೋಡ್ ಟ್ರಾನ್ಸ್‌ಪೋರ್ಟ್ ಎಂಬುದಾಗಿ ಹೇಳಿ ಈ ಒಂದು ಬಸ್ ಓಡಿಸತಕ್ಕ ಉದ್ಯಮಕ್ಕೆ ಇವರು ಕೈಹಾಕಿದಮೇಲೆ ಹಿಂದಿನಿಂದಲೂ ಬಹಳ ಹೆದರಿಕೆಯಿಂದ ಯಾರು—ಈ ಉದ್ಯಮವನ್ನು ಯಾವ ನಿಯಮಗಳನ್ನೂ ಉಲ್ಲಂಘನೆ ಮಾಡದ ಹಾಗೆ ನಡೆಸಿಕೊಂಡು ಬರುತ್ತಿದ್ದರೋ ಅಂಥವರುಗಳಿಗೆಲ್ಲಾ ಈ ದಿವಸ ಈ ನಿಯಮಗಳನ್ನು ಉಲ್ಲಂಘನೆ ಮಾಡಲು ಅವರಿಗೆಲ್ಲಾ ಬಹಳ ಧೈರ್ಯ ಬಂತು. ಹೀಗಾಗಿ ಈ ದಿವಸ ಓವರ್‌ಲೋಡ್ ಎಂಬತಕ್ಕದ್ದು ಬಹಳ ಹೆಚ್ಚಾಗುತ್ತಿದೆ. ಅಂಥವರ ಮೇಲೆ ಈಹೊತ್ತು ಯಾವ ಕಾರ್ಯಕ್ರಮಗಳನ್ನೂ ಕೈಗೊಳ್ಳುತ್ತಿಲ್ಲ. ಆದರೆ ಈ ಮೋಟಾರ್ ವೆಹಿಕಲ್ಸ್ ಆಕ್ಟಿನ ನಿಯಮಾವಳಿಗಳನ್ನು ಯಾರು ಉಲ್ಲಂಘನೆ ಮಾಡಿದರೂ ಶಿಕ್ಷೆಗೆ ಗುರಿಯಾಗಲೇಬೇಕೆಂದು ಕಾನೂನಿನಲ್ಲಿ ವಿಧಾಯಕ ಮಾಡಲಾಗಿದೆ. ಈಗ ನಮ್ಮ ಸರ್ಕಾರದವರು ನಡೆಸುತ್ತಿರುವ ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆಯಲ್ಲಿ ಕೆಲಸ ಮಾಡತಕ್ಕವರು ಓವರ್‌ಲೋಡ್ ಇತ್ಯಾದಿಗಳನ್ನು ಮಾಡಿದರೆ—ಆ ತಪ್ಪುಗಳಿಗೆಲ್ಲಾ ಅವರಿಗೆ ವಿನಾಯಿತಿ ಕೊಡಲಾಗಿದೆ ಎಂಬುದಾಗಿ ಎಲ್ಲಿಯೂ ತಿಳಿಸಿಲ್ಲ. ಹಾಗೆ ಅವರಿಗೆ ವಿನಾಯಿತಿ ಕೊಡುವುದಕ್ಕೆ ಅವಕಾಶವೂ ಇಲ್ಲ. ಹೀಗಿದ್ದಾಗ್ಗೂ ಸರ್ಕಾರದವರು ಒಂದು ಸರ್ಕ್ಯುಲರನ್ನೇ ಹೊರಡಿಸಿ ಈ ಸರ್ಕಾರಿ ಬಸ್ಸುಗಳಲ್ಲಿ ಏನಾದರೂ ಓವರ್‌ಲೋಡ್ ಇದ್ದಪಕ್ಷಕ್ಕೆ—ಎಂದರೆ ಮಿತಿಯಾಗಿರಬೇಕಾದ ಸಂಖ್ಯೆಗಿಂತ ಹೆಚ್ಚು ಜನ ಪ್ರಯಾಣಿಕರೇನಾದರೂ ಇದ್ದರೆ ಈ ಬಸ್ಸುಗಳಮೇಲೆ ಕೇಸನ್ನು ಹಾಕಬಾರದು ಎಂದು ತಿಳಿಸಲಾಗಿದೆ ಎಂಬುದಾಗಿ ನಾನು ಕೇಳುತ್ತಿದ್ದೇನೆ. ಆದರೆ ಇದು ಎಷ್ಟರಮಟ್ಟಿಗೆ ಸತ್ಯವೋ ಆ ವಿಚಾರ ನನಗೆ ತಿಳಿಯದು. ಈ ಅಂಶವನ್ನು ಈಗ ಅವರೇ ನನಗೆ ತಿಳಿಸಬೇಕಾಗಿದೆ. ಆದರೆ ಈ ದಿವಸ ಈ ಸರ್ಕಾರದವರು ನಡೆಸುತ್ತಿರುವ ಬಸ್ಸುಗಳಲ್ಲಿ ಮಿತಗೊಳಿಸಿರತಕ್ಕ ಸಂಖ್ಯೆಗಿಂತಲೂ ಹೆಚ್ಚು ಸಂಖ್ಯೆಯಲ್ಲಿ ಜನರು ಪ್ರಯಾಣ ಮಾಡುತ್ತಿದ್ದಾರೆ ಎಂಬುದನ್ನು ನಿರ್ಭಯವಾಗಿ ಹೇಳಬಹುದು. ಆದರೆ ಈ ದಿವಸ ಸರ್ಕಾರದವರು ನಡೆಸುತ್ತಿರುವ ಬಸ್ಸುಗಳ ಆಡಳಿತವನ್ನು ಖಾಸಗೀ ಜನರ ಬಸ್ಸಿನ ಆಡಳಿತಕ್ಕೆ ಹೋಲಿಸತಕ್ಕ ಪ್ರಸಂಗವೇ ಇಲ್ಲಿಲ್ಲ. ಈ ದಿವಸ ಸರ್ಕಾರದವರು ಈ ಉದ್ಯಮವನ್ನು ಏತಕ್ಕಾಗಿ ಕೈಗೊಂಡರು

ಖಾಸಗೀ ಜನರ ಕೈಲಿ ಈ ವ್ಯವಹಾರವಿದ್ದರೆ ಅವರು ತಮ್ಮ ಅಧಿಕ ಲಾಭದ ದೃಷ್ಟಿಯಿಂದ ಅತಿಯಾಗಿ ಓವರ್‌ಲೋಡ್ ಮಾಡಿ ಜನರಿಗೆ ಸರಿಯಾದ ಸೌಕರ್ಯಗಳನ್ನೊದಗಿಸುವುದಿಲ್ಲ, ಆದಕಾರಣ ಪ್ರಯಾಣೀಕರಿಗೆ ಹೆಚ್ಚು ಸೌಕರ್ಯವನ್ನುಂಟುಮಾಡಿಕೊಡುತ್ತೇವೆ ಎಂಬ ದೃಷ್ಟಿಯಿಂದ ಇವರು ಇದಕ್ಕೆ ಕೈಹಾಕಿದರು. ಖಾಸಗೀ ಜನರು "ಅತಿಯಾಗಿ ಓವರ್‌ಲೋಡ್ ಮಾಡುತ್ತಿದ್ದರು" ಎಂದು ಹೇಳಿರುವುದರ ಅರ್ಥ, ನೀವು ಅಷ್ಟು ಓವರ್‌ಲೋಡ್ ಮಾಡುವುದಿಲ್ಲ, ಅದಕ್ಕಿಂತ ಕಡಮೆ ಮಾಡುತ್ತಿದ್ದೀರಿ ಎಂಬ ಅಂಶವನ್ನು ನೀವೂ ಸಹ ಒಪ್ಪಿಕೊಂಡಿದ್ದೀರಿ ಎಂತಲೇ ಆಯಿತು. ಇದರಿಂದಲೇ ಅದು ವ್ಯಕ್ತವಾಗುತ್ತದೆ. ಆದರೆ ಈಗ ಇವರು ಈ ಡಿಮ್ಯಾಂಡ್‌ನಲ್ಲಿ ಈ ಹಣವನ್ನು ಕೇಳಿರತಕ್ಕ ಉದ್ದೇಶ ಈ ಸಿಬ್ಬಂದಿಯ ವೆಚ್ಚವನ್ನು ಇನ್ನೂ ಕಡಮೆ ಮಾಡಿ—ಇದರಲ್ಲಿ ಹೆಚ್ಚು ವರಮಾನ ಬರುವಂತೆ ಕಾರ್ಯಕ್ರಮಗಳನ್ನು ಕೈಗೊಳ್ಳಲು ಈ ಮೊಬಲಗನ್ನು ಕೇಳಿದ್ದಾರೆ. ಆದರೆ ಸರ್ಕಾರದವರು ಇಂಥ ವಿಚಾರಗಳಲ್ಲಿ ಇತರರಿಗೆ ಮಾರ್ಗದರ್ಶಿಗಳಿರಬೇಕಾದದ್ದು ನ್ಯಾಯ ಮತ್ತು ಧರ್ಮ. ಇವರು ಆ ರೀತಿ ನಡೆಯುತ್ತಿದ್ದರೆ ಇತರರಿಗೆ ಈ ಕಾನೂನುಗಳನ್ನು ಉಲ್ಲಂಘನೆ ಮಾಡಲು ಅವರಿಗೆ ಧೈರ್ಯ ಬರುವುದಿಲ್ಲ. ಆದರೆ ಇವರು ಆ ಸ್ಟ್ಯಾಂಡಿಂಗ್ ಅಕಾಮಡೇಷನ್ ಎಂದು ಹೇಳಿ ಜನರನ್ನು ತುಂಬುತ್ತಿದ್ದಾರೆ. ಅದೆಂಥಾ ಸ್ಟ್ಯಾಂಡಿಂಗ್ ಅಕಾಮಡೇಷನ್ನೋ ನನಗೆ ಅದು ಅರ್ಥವಾಗದು. ಬೆಂಗಳೂರಿನಿಂದ—ಮೈಸೂರಿಗೆ ಒಂದು ಎಕ್ಸ್‌ಪ್ರೆಸ್ ಬಸ್ಸನ್ನು ಬಿಡುತ್ತಿದ್ದಾರೆ. ಈ ಉದ್ಯಮವನ್ನು ಇವರು ಪ್ರಯಾಣೀಕರ ಸೌಕರ್ಯಗಳನ್ನು ಉತ್ತಮಪಡಿಸುವ ಉದ್ದೇಶದಿಂದ ಕೈಗೊಂಡಿರುತ್ತೇವೆ ಎಂದು ಬಾಯಲ್ಲಿ ಹೇಳುತ್ತ ಬೆಂಗಳೂರಿನಿಂದ—ಮೈಸೂರಿಗೆ ಹೋಗುವವರೆಗೂ ಸುಮಾರು 88 ಮೈಲಿಗಳ ಫಾಸಲ ಪ್ರಯಾಣದಲ್ಲಿ ಈ ಪ್ಯಾಸೆಂಜರ್‌ಗಳು ಬಸ್ಸಿನಲ್ಲಿ ನಿಂತುಕೊಂಡೇ ಪ್ರಯಾಣ ಮಾಡಬೇಕೆಂದರೆ ಇದೆಂಥಾ ಸೌಕರ್ಯ! ನಿಂತರೆ ತಲೆಗೆ ಬಡಿಯುತ್ತದೆ, ಅಂಥ ಇಕ್ಕಟ್ಟಿನಲ್ಲಿ ಕೊಡುವ ದುಡ್ಡನ್ನೂ ಸರಿಯಾಗಿ ಕೊಟ್ಟು ಅಷ್ಟು ದೂರ ನಿಂತುಕೊಂಡೇ ಪ್ರಯಾಣ ಮಾಡಬೇಕೆಂದರೆ ಇದೆಂಥಾ ಸಂತೋಷಕರವಾದ ಉಲ್ಲಾಸದ ಪ್ರಯಾಣವೋ ನೀವೇ ಹೇಳಬೇಕು. ಇತ್ತಕಡೆ ನನ್ನ ಪಕ್ಕದಲ್ಲಿ ಕುಳಿತಿರುವ, ಮಾನ್ಯ ಸದಸ್ಯರು ಹೀಗೆ ಹಣ ಸಂಪಾದನೆ ಮಾಡುವುದು. It is most inhuman ಎಂದು ಹೇಳುತ್ತಿದ್ದಾರೆ. ನಿಜವಾಗಿಯೂ ನನಗೂ ಸಹ ಹಾಗೇ ಅನಿಸುತ್ತಿದೆ. ಈ ರೀತಿ ನಿಂತುಕೊಂಡು 88 ಮೈಲಿ ಪ್ರಯಾಣ ಮಾಡುವುದು ಬಹಳ ಕಷ್ಟ.

ಇನ್ನು ಎರಡನೆಯದಾಗಿ ಈ ಓವರ್‌ಲೋಡುಗಳನ್ನು ಯಾರೂ ಕೂಡ ಮಾಡಲೇಬಾರದು. ಆದರೆ ಈ ಮನಾಪಲಿ ರಸ್ತೆಗಳಲ್ಲಿ ಆ ಸರ್ಕಾರಿ ಬಸ್ಸುಗಳ ವಿನಾ ಬೇರೆ ಯಾವ ಬಸ್ಸುಗಳನ್ನೂ ಆ ರಸ್ತೆಗಳಲ್ಲಿ ಓಡಿಸುವಂತಿಲ್ಲ. ಹೀಗೆ ಖಾಸಗೀ ಜನರಿಗೆ ಅಲ್ಲಿ ಅವಕಾಶವಿಲ್ಲ. ಇತ್ತಲಾಗಿ ಸರ್ಕಾರದವರಾದರೂ ಆ ರಸ್ತೆಗಳಲ್ಲಿ ಸಾಕಷ್ಟು ಬಸ್ಸುಗಳನ್ನು ಓಡಿಸುವ ಹಾಗೂ ಇಲ್ಲ. ಈ ಓವರ್‌ಲೋಡನ್ನು ಮಾಡತಕ್ಕ ಉದ್ದೇಶ ಹೆಚ್ಚು ಲಾಭ ತೋರಿಸಬೇಕು ಎಂಬುದಾಗಿ. ಆದರೆ ಅದು ಸರಿಯಾದ ಮಾರ್ಗವಲ್ಲ—ಲಾಭ ಸಂಪಾದನೆಗೆ ಸರ್ಕಾರದವರು ಆ ರೀತಿ ಓವರ್‌ಲೋಡ್ ಮಾಡದೇನೇ ಲಾಭ ತೋರಿಸಿದರೆ ಅದು ನಿಜವಾದ ಮತ್ತು ನ್ಯಾಯವಾದ ಲಾಭ. ಹೋದ ವರ್ಷ ಈ ಬಾಬಿನಲ್ಲಿ ಎಂಟೂವರೆ ಲಕ್ಷ ರೂಪಾಯಿಗಳ ಲಾಭ ತೋರಿಸಿದ್ದಾರೆ. ಆದರೆ ಇದು ಲಾಭವಲ್ಲ. ಈ ವಿಚಾರವಾಗಿ ಆ ಅಕೌಂಟೆಂಟ್ ಜನರಲ್‌ರವರು ಬಹಳ ಚೆನ್ನಾಗಿ ಹೇಳಿದ್ದಾರೆ—ಅದು ಈ ರೀತಿಯಾಗಿದೆ:

"*Net Profit.*—The net income after providing for Depreciation and interest amounted to Rs. 8,57,838 as against Rs. 25,729 in 1952-53. The reasons for increase in net results during 1953-54 were:—

1. Increase in earnings due to monopoly and the enthusiasm evinced by the staff in bringing good collections.

2. Decrease in operational expense due to the reduction in depreciation to be charged and also reduction in operational mileage."

ಇದು ಆ ಅಕೌಂಟೆಂಟ್ ಜನರಲ್‌ರವರು ಬರೆದಿರುವ ಅಭಿಪ್ರಾಯ. ಇದರ ಮೂಲಕ ನಾವು ಈಗ ಆಲೋಚನೆ ಮಾಡಿಕೊಳ್ಳಬಹುದು. ಈ ಲಾಭ ಹೇಗಾದರೂ ಬರಲಿ—ಅಡ್ಡಿಯಿಲ್ಲ ಎನ್ನುವ ಪಕ್ಷಕ್ಕೆ ಪ್ರಜೆಗಳಿಗೆ ಅನುಕೂಲ ಮಾಡಬೇಕೆಂಬ ಉದ್ದೇಶವೇ ಅಲ್ಲಿ ಉದ್ಭವಿಸುವುದಿಲ್ಲ. ಆ ಖಾಸಗೀ ಜನರು ಈ ಉದ್ಯಮವನ್ನು ನಡೆಸುತ್ತಿದ್ದಾಗ ಅವರು ಬಂಡವಾಳ ಹಾಕಿ ಅದಕ್ಕೆ ಬಡ್ಡಿ ತೆತ್ತು, ಹಾಗೂ ಲಾಭ ಸಂಪಾದನೆ ಮಾಡುತ್ತಿದ್ದರು. ಆ ದಿವಸವೂ ಪ್ರಯಾಣೀಕರಿಗೆ ಇಷ್ಟೇ ಸೌಕರ್ಯಗಳಿದ್ದವು. ಆದರೆ ಈ ದಿವಸ ಸರ್ಕಾರ ಈ ಉದ್ಯಮವನ್ನು ತೆಗೆದುಕೊಂಡು—ಇದಕ್ಕೆ ಹಾಕಿರುವ ಬಂಡವಾಳಕ್ಕೆ ಬಡ್ಡಿ, ಸಿಬ್ಬಂದಿಯ ವೆಚ್ಚ, ಡಿಪ್ರೀಸಿಯೇಷನ್ ಇಷ್ಟನ್ನೆಲ್ಲಾ ಕಳೆದನಂತರವೂ ಇಷ್ಟೊಂದು ಅಧಿಕ ಪ್ರಮಾಣದಲ್ಲಿ ಲಾಭ ಬಂದಿರಬೇಕಾದರೆ ನೀವು ಆ ಪ್ರಯಾಣೀಕರು ತೆರುತ್ತಿರುವ ದರವನ್ನು ಏಕೆ ಇಳಿಸಬಾರದು? ಅಂಥವರಿಂದ ಬರತಕ್ಕ ಲಾಭದಲ್ಲಿ ಅವರಿಗೇಕೆ ತಾವು ಹೆಚ್ಚಿನ ಅನುಕೂಲತೆಗಳನ್ನು ಮಾಡಿಕೊಡಬಾರದು? ಈ ದಿವಸ ತಾವು ತಮ್ಮ ಆ ಸಿಬ್ಬಂದಿ ಬಗ್ಗೆ—ಡಿಪ್ರೀಸಿಯೇಷನ್ ಬಗ್ಗೆ ಮತ್ತು ಇತರ ಖರ್ಚು ವೆಚ್ಚಗಳ ಬಗ್ಗೆ ಏನು ಹಣವನ್ನು ವಿನಿಯೋಗ ಮಾಡುತ್ತಿದ್ದೀರಿ ಎನ್ನುವುದು ನಮಗೆ ಈಗ ಈ ಅಕೌಂಟೆಂಟ್ ಜನರಲ್‌ರವರು ಕೊಟ್ಟಿರುವ ಹೇಳಿಕೆಯಿಂದ ಗೊತ್ತಾಗುತ್ತದೆ. ಮೈಸೂರು ಸರ್ಕಾರ ನಡೆಸುತ್ತಿರುವ ಈ ರೋಡ್ ಟ್ರಾನ್ಸ್‌ಪೋರ್ಟ್ ಸರ್ವಿಸ್ಸಿನಲ್ಲಿ ಮೈಲಿ ಒಂದಕ್ಕೆ ಒಂದು ಬಸ್ಸಿಗೆ ಆಗುತ್ತಿರುವ ಉತ್ಪತ್ತಿ ರೂ. 0—12—10. ಸರ್ಕಾರದವರು ಇದಕ್ಕೆ ಹಾಕಿರತಕ್ಕ ಬಂಡವಾಳಕ್ಕೆ ಕೊಡಬೇಕಾದ ಬಡ್ಡಿ, ಸಿಬ್ಬಂದಿ ವೆಚ್ಚ ಮತ್ತು ಇತರ ಡಿಪ್ರೀಸಿಯೇಷನ್ ಇತ್ಯಾದಿ ಖರ್ಚುಗಳೆಲ್ಲಾ ಸೇರಿಕೊಂಡರೂ ಒಂದು ಮೈಲಿಗೆ 10 ಕಾಸುಗಳು ಬರುತ್ತವೆಂದು ಅಕೌಂಟೆಂಟ್ ಜನರಲ್‌ರವರು ಒದಗಿಸಿರುವ ಅಂಕೀಅಂಶಗಳಿಂದ ಗೊತ್ತಾಗುತ್ತದೆ. ಒಂದು ಮೈಲಿಗೆ 10 ಕಾಸುಗಳು ಸಾಕೆಂದು ಅವರು ತಿಳಿಸಿದ್ದಾರೆ. ಅಲ್ಲಿಗೆ ಒಂದು ಮೈಲಿಗೆ ಈ ದಿವಸ ಇವರಿಗೆ ಬರುತ್ತಿರುವ ವರಮಾನ 13 ಆಣೆ 8 ಕಾಸುಗಳಾಯಿತು. ಈ ದಿವಸ ಇವರು ಹಾಕುತ್ತಿರುವ ದರ ಒಂದು ಮೈಲಿಗೆ 8 ಕಾಸುಗಳು. ಒಂದು ಬಸ್ಸಿನಲ್ಲಿ 40 ಸೀಟುಗಳಿರುತ್ತವೆ. ಸಾಮಾನ್ಯವಾಗಿ ಈ ರೋಡ್ ಟ್ರಾನ್ಸ್‌ಪೋರ್ಟ್ ಬಸ್ಸುಗಳಲ್ಲಿ ಯಾವಾಗಗೂ ಸ್ಥಳ ಖಾಲಿಯಿರುವುದಿಲ್ಲ. ಇದರ ಜೊತೆಗೆ ಆ ಓವರ್‌ಲೋಡ್ ಬೇರೆ ಇರುತ್ತದೆ.

(ಶ್ರೀ ಎಸ್. ಶ್ರೀನಿವಾಸಯ್ಯಂಗಾರ್)

ಈ ಎಲ್ಲಾ ಅಂಶಗಳನ್ನೂ ಗಣನೆಗೆ ತೆಗೆದುಕೊಂಡು ನೋಡಿದರೆ ಈ ರೋಡ್ ಟ್ರಾನ್ಸ್‌ಪೋರ್ಟ್ ಸರ್ವೀಸ್ ಬಸ್ಸುಗಳಿಗೆ ಒಂದು ಮೈಲಿಗೆ ರೂ. 1—10—8 ವರಮಾನ ಬರುತ್ತಿದೆಯೆಂದು ಹೇಳಬಹುದು.

ಹಾಗೂ ಅಷ್ಟು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ, ಸದಾ ಭರ್ತಿ ಇರುವುದಿಲ್ಲ, ಎಷ್ಟೋ ಸಾರಿ ಖಾಲಿ ಇರುತ್ತದೆ, ಅದಕ್ಕೂ ಅವಕಾಶವಿರಬೇಕು, ಎಂದು ಲೆಕ್ಕ ಹೇಳಿದರೂ ಸಹ ಸರ್ವೇಸಾಧಾರಣವಾಗಿ ಒಂದು ಮೈಲಿಗೆ $1\frac{1}{4}$ ರೂಪಾಯಿಗೆ ಕಡಿಮೆ ಇಲ್ಲದಂತೆ ವರಮಾನ ಇದೆ. ಅಕೌಂಟೆಂಟ್ ಜನರಲ್‌ರವರು ಒಂದು ರೂಪಾಯಿಗೆ $1\frac{1}{4}$ ಆಣೆ ಮಾತ್ರ ವರಮಾನ ಬರುತ್ತಾ ಇದೆ ಎಂದು ಹೇಳುತ್ತಾರೆ, ದುಡ್ಡು ಏನಾಯಿತು ಎಂಬ ವಿಷಯ ಬೇರೆ. ಆ ವಿಷಯಕ್ಕೆ ಹೋಗುವುದಿಲ್ಲ. ನನ್ನ ಉದ್ದೇಶವೇನೆಂದರೆ ನಮಗೆ ಬಹಳವಾಗಿ ಲಾಭ ಬರುತ್ತಾ ಇರತಕ್ಕ ಕಾಲದಲ್ಲಿ ದರವನ್ನು ಏಕೆ ಕಡಿಮೆ ಮಾಡಬಾರದು? ಪ್ಯಾಸೆಂಜರ್ಸ್‌ಗೆ ದರವನ್ನು ಸ್ವಲ್ಪ ಕಡಿಮೆ ಮಾಡಿ ಪ್ರಯಾಣ ಮಾಡತಕ್ಕವರಿಗೆ ಸ್ವಲ್ಪ ಅನುಕೂಲ ಮಾಡಿಕೊಡಿ. ಮೈಸೂರು ಸರ್ಕಾರದ ರೋಡ್ ಟ್ರಾನ್ಸ್‌ಪೋರ್ಟ್‌ನವರು ಸಾಮಾನು ಸಾಗಾಣಿಕೆಗೆ ತೆಗೆದುಕೊಳ್ಳತಕ್ಕ ದರ ನೋಡಿದರೆ ಬಹಳವಾಗಿ ತೆಗೆದುಕೊಳ್ಳುತ್ತಾ ಇದ್ದಾರೆ. ಇದು ರೇನ್‌ಬೆನೆಟ್ ಚಾರ್ಜಸ್ ಆಗಿದೆ. ಹಿಂದೆ ರೇನ್‌ಬೆನೆಟ್ ಕಂಪೆನಿ ಎಂಬುದಾಗಿ ಒಂದು ಕಂಪೆನಿ ಇತ್ತು. ಅವರು ಬಹಳ ಹೆಚ್ಚು ಬೆಲೆ ಹಾಕತಕ್ಕವರು ಎಂಬ ಒಂದು ಪ್ರತೀತಿ ಇತ್ತು. ಆ ರೀತಿ ಇವರು ಬಹಳ ಹೆಚ್ಚು ದರ ಹಾಕುತ್ತಾ ಇದ್ದಾರೆ. ಇದರಿಂದ ಬಹಳ ತೊಂದರೆಯಾಗಿದೆ ಎಂದು ಜನಗಳು ಹೇಳುತ್ತಾರೆ. ಈಗ ಪ್ರಯಾಣಿಕರ ದರದಿಂದ ನಿಮಗೆ ಲಾಭ ಬಂದಿದೆ. ಆದ್ದರಿಂದ ನಮಗೆ ಒಂದು ಸೌಕರ್ಯ ಮಾಡಿಕೊಡಿ ಎಂದು ತಮ್ಮಲ್ಲಿ ತಿಳಿಯಪಡಿಸಬೇಕೆಂಬುದೇ ನನ್ನ ಉದ್ದೇಶ.

ಎರಡನೆಯದಾಗಿ, ಸರ್ಕಾರಿ ರೋಡ್ ಟ್ರಾನ್ಸ್‌ಪೋರ್ಟ್ ಬಸ್ಸುಗಳಲ್ಲಿ ಸ್ಟ್ಯಾಂಡಿಂಗ್ ಅಕಾಮೊಡೇಷನ್ ಎಂದು ಏನಿದೆ ಅದನ್ನು ಮೊದಲು ರದ್ದುಪಡಿಸಬೇಕು.

ಮೂರನೆಯದು ಈ ರೋಡ್ ಟ್ರಾನ್ಸ್‌ಪೋರ್ಟ್ ಬಸ್ಸುಗಳಲ್ಲಿ ಮಾನ್ಯ ಮಂತ್ರಿಗಳು ಯಾವಾಗಲಾದರೂ ಒಂದು ಸಾರಿ ಪ್ರಯಾಣ ಮಾಡಬೇಕೆಂಬುದೇ ನನ್ನ ಕೋರಿಕೆ.

ಶ್ರೀ ಎಚ್. ಎಂ. ಚನ್ನಬಸಪ್ಪ (ಕೈಗಾರಿಕೆ ಶಾಖೆಯ ಮಂತ್ರಿಗಳು).—ನಾನೂ ಪ್ರಯಾಣ ಮಾಡಿದ್ದೇನೆ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ನೀವೂ ಪ್ರಯಾಣ ಮಾಡಿದ್ದೀರಿ. ಆದರೆ ಆಗ ನೀವಿನ್ನೂ ಮಂತ್ರಿಗಳಾಗಿರಲಿಲ್ಲ. ಆ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ ಅದರ ಕಷ್ಟ ಗೊತ್ತಾಗುತ್ತದೆ. ಬಸ್ಸುಗಳು ಚೆನ್ನಾಗಿವೆ. ಒಳಗಡೆ ಕುಳಿತುಕೊಳ್ಳುವುದಕ್ಕೆ leg space ಸಾಲದು. ಈಗಿರತಕ್ಕ ಬಸ್ಸುಗಳಲ್ಲಿ ಕುಳಿತುಕೊಂಡರೆ ಸ್ಕೂಲುಗಳಲ್ಲಿ ಕುರ್ಚಿ ಕುಳಿತುಕೊಂಡ ಹಾಗೆ ಕುಳಿತುಕೊಳ್ಳಬೇಕು. 80-90 ಮೈಲಿ ಈ ರೀತಿ ಕುಳಿತುಕೊಳ್ಳುವುದಕ್ಕೆ ಬಹಳ ಕಷ್ಟ, ಸಾಧ್ಯವಿಲ್ಲ. ಇದು ಸಣ್ಣ ವಿಷಯ, ಇದನ್ನು ಬದಲಾಯಿಸಬೇಕು.

ಶ್ರೀ ಕೆ. ಹನುಮಂತಯ್ಯ (ಮುಖ್ಯ ಮಂತ್ರಿಗಳು).—ಏರೋಪ್ಲೇನ್‌ನಲ್ಲೂ ಕೂಡ ಹಾಗೆಯೇ ಇರುತ್ತದೆ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಏರೋಪ್ಲೇನ್‌ನಲ್ಲಿರುವುದು ಸ್ವಲ್ಪ ಅಸಿಲೇಟಿಂಗ್ ಸೀಟ್ಸ್ ಎಂದು ಕೇಳಿದ್ದೇವೆ. ಆದ್ದರಿಂದ ಡಿಸೈನ್ ಮಾಡುವಾಗ ಒಳ್ಳೆಯ ಡಿಸೈನ್ ಮಾಡಿಸಿದರೆ ಉತ್ತಮ.

ಇನ್ನೊಂದು ವಿಷಯ ಹೇಳಬೇಕೆಂದಿದ್ದೇನೆ. Long Distance Amenities Committee ಎಂದು ಹೇಳಿ ಇಂಡಿಯಾ ಸರ್ಕಾರದವರು ಒಂದು ಸಾರಿ ಒಂದು ಕಮಿಟಿ ನೇಮಕ ಮಾಡಿದ್ದರು. ಆ ಸಮಿತಿಯವರು ಅನೇಕ ಶಿಫಾರಸುಗಳನ್ನು ಕೊಟ್ಟರು, ಬಹಳ ದೂರ ಪ್ರಯಾಣ ಮಾಡತಕ್ಕ ಪ್ರಯಾಣಿಕರಿಗೆ ಏನು ಸೌಕರ್ಯ ಕೊಡಬೇಕು ಎನ್ನುವುದನ್ನು ಅವರು ವಿಮರ್ಶೆ ಮಾಡಿ ಸಲಹೆ ಕೊಟ್ಟಿದ್ದಾರೆ. ಆ ಸಲಹೆಗಳನ್ನು ಮೈಸೂರು ಸರ್ಕಾರದವರು ಯಾವಾಗ ಬಸ್ಸುಗಳನ್ನು ಓಡಿಸುವ ಕೆಲಸ ವಹಿಸಿಕೊಂಡರೋ ಅವೊತ್ತೇ ಏಕೆ ಜಾರಿಗೆ ತರಬಾರದಾಗಿತ್ತು? ಒಂದು ಸಣ್ಣ ಉದಾಹರಣೆ ಹೇಳುತ್ತೇನೆ. ಬೆಂಗಳೂರಿನಿಂದ ಮೈಸೂರಿಗೆ 88 ಮೈಲಿ. ಹೆಂಗಸರು, ಮಕ್ಕಳು, ಮುದುಕರು ಆದಿಯಾಗಿ ಎಲ್ಲರೂ ಪ್ರಯಾಣ ಮಾಡುತ್ತಾರೆ. ಮಧ್ಯೆ ಚನ್ನಪಟ್ಟಣದಲ್ಲಿ ಇಳಿದರೆ ಬಸ್ ಸ್ಟ್ಯಾಂಡಿನ ಹತ್ತಿರವೇ ಒಂದು ದೊಡ್ಡ ಮೋರಿ ಇದೆ, ಅದರಿಂದ ಕೊಳೆತು ನಾಥ ಹೊಡೆಯುತ್ತಿರುತ್ತದೆ. ಯಾರಾದರೂ ಪ್ರಯಾಣ ಮಾಡಿದರೆ ಅದು ಅವರಿಗೆ ಗೊತ್ತಾಗುತ್ತದೆ. ಪ್ರತಿಯೊಬ್ಬರೂ ಕೂಡ ಅದನ್ನು ಅನುಭವಿಸಿದ್ದಾರೆ. ಆ ತರಹ ಒಂದು ಅಮಾನುಷ ರೀತಿಯಲ್ಲಿರತಕ್ಕ ವಾತಾವರಣವನ್ನು ಯಾರಾದರೂ ನೋಡಿದರೆ ನಮ್ಮನ್ನು ಅನಾಗರಿಕರು ಎಂದು ಕರೆಯುತ್ತಾರೆ. ಯಾವಾಗ ಮನಾಪಲಿ ರೂಟ್ ಆಯಿತೋ ಆಗ 10 ಅಥವಾ 20 ಮೈಲಿಯ ದೂರದಲ್ಲಿ ಯಾವುದಾದರೂ ಒಂದು ದೊಡ್ಡ ಊರಿನ ಹತ್ತಿರ ವಿಶಾಲವಾದ ರೆಸ್ಟ್ ಹೌಸ್ ಕಟ್ಟಬೇಕು. ಆ ರೀತಿ ಈಗ ಕಟ್ಟಿಲ್ಲ. ಆ ಸೌಕರ್ಯ ಮಾಡಿಕೊಡಿ. ಸಾಧಾರಣವಾಗಿ ಬಹಳ ದೂರ ಪ್ರಯಾಣ ಮಾಡತಕ್ಕ ಪ್ರಯಾಣೀಕರಿಗೆ ಏನು ಸೌಕರ್ಯ ಬೇಕೋ ಅದನ್ನು ಅಲ್ಲಿ ಒದಗಿಸಿಕೊಡುವುದು ತಮ್ಮ ಜವಾಬ್ದಾರಿ. ಆ ರೀತಿ ಯಾವುದನ್ನೂ ಮಾಡದೇ ಸುಮ್ಮನೆ ಈ ಉದ್ಯಮವನ್ನು ಜಯಪ್ರದವಾಗಿ ನಡೆಸಿದ್ದೇವೆ ಎಂದರೆ ಏನೂ ಪ್ರಯೋಜನವಿಲ್ಲ.

ಇನ್ನೊಂದು ವಿಷಯ. ಈ ಬಸ್ಸುಗಳಿಗೆ ವರ್ಷಕ್ಕೆ ಒಂದು ಸಾರಿ ಅಥವಾ ಆರು ತಿಂಗಳಿಗೆ ಒಂದು ಸಾರಿ ಬ್ರೇಕ್ ಸರ್ಟಿಫಿಕೇಟ್ ಕೊಡುವ ಪದ್ಧತಿ ಇದೆ. ಈ ಬ್ರೇಕ್ ಸರ್ಟಿಫಿಕೇಟ್ ಕೊಡುವುದೆಲ್ಲಾ ಹೆಚ್ಚಾಗಿ ಮಾಮೂಲು ಪ್ರಕಾರ ಹೋಗುತ್ತದೆ. 30 ಜನ ಕೂಡುವ ಬಸ್ಸಿಗೆ 5 ರೂಪಾಯಿ, 40 ಜನ ಕೂಡುವ ಬಸ್ಸಿಗೆ 10 ರೂಪಾಯಿ ಎಂದು ಹೇಳಿ ಅದಕ್ಕೆಲ್ಲಾ ಅವರು ಮಾಮೂಲು ಇಟ್ಟುಕೊಂಡಿದ್ದಾರೆ. ಪ್ರಿಸ್ಕ್ರೈಬ್ಡ್ ಫೀ, ಟ್ಯಾರಿಫ್ ಎಲ್ಲಾ ಇದೆ. ಅದನ್ನು ಕೊಡುವುದಿಲ್ಲ ಎಂದು ಧೈರ್ಯವಾಗಿ ಯಾರಿಗೂ ಹೇಳುವುದಕ್ಕೆ ಶಕ್ತಿ ಇಲ್ಲ. ಇಲ್ಲಿ ಧೈರ್ಯವಾಗಿ ಹೇಳುತ್ತೇವೆ. ಏಕೆಂದರೆ ನಮ್ಮ ಮೇಲೆ ಏನೂ ಮಾಡುವುದಕ್ಕೆ ಆಗುವುದಿಲ್ಲ. ಅದನ್ನು ತಿದ್ದಿ ಸರಿಪಡಿಸಬೇಕು. ಅದೊಂದು ಬಹಳ ಕರಪ್ಟ್ ಪ್ರಾಕ್ಟೀಸ್ ಆಗಿದೆ. ಒಂದು ದಿವಸಕ್ಕೆ 30-40 ಬ್ರೇಕ್ ಸರ್ಟಿಫಿಕೇಟ್ ಕೊಡಬೇಕೆಂದರೆ ಯಾವ ಮನುಷ್ಯನಿಗೆ ತಾನೆ ಸಾಧ್ಯ? ಅದನ್ನು ಸರಿಪಡಿಸಬೇಕು. ನ್ಯಾಯವಾಗಿ, ಬಸ್ಸುಗಳಿಗೆ ಸರಿಯಾಗಿ ಬ್ರೇಕ್ ಇದೆಯೋ ಇಲ್ಲವೇ ಎಂಬುದನ್ನು ಪರೀಕ್ಷೆ ಮಾಡಿ ಸರ್ಟಿಫಿಕೇಟ್ ಕೊಡಬೇಕು ಎಂದು ನನ್ನ ಅರಿಕೆ. ಕೆಲವರು ಬಹಳ ಇನ್‌ಫ್ಲುಯನ್ಸ್ ಇರುವವರು ಹೋದರೆ ಗಾಡಿಯನ್ನು ತರಬೇಕಾಗಿಯೇ ಇಲ್ಲ, ಇದ್ದ ಜಾಗದಲ್ಲೇ ಸರ್ಟಿಫಿಕೇಟು ಬರು

ತ್ತದೆ. ಇಂಥ ಪದ್ಧತಿ ಇರುವುದನ್ನು ಮಾರ್ಪಾಡು ಮಾಡಿಕೊಂಡರೆ ಒಳ್ಳೆಯದಾಗುತ್ತದೆ ಎನ್ನುವ ದೃಷ್ಟಿಯಿಂದ ಹೇಳುತ್ತೇನೆ.

ಪರ್ಮಿಟ್ ಹೋಲ್ಡರ್ಸ್ ವಿಷಯ. ಎಲ್ಲಾ ಕಾಂಗ್ರೆಸ್‌ನವರಿಗೇ ಪರ್ಮಿಟ್‌ಗಳು ಬಹಳ ಹೆಚ್ಚಾಗಿ ಸಿಕ್ಕುತ್ತಿವೆ. ಅವರು ಅದರದೇ ಒಂದು ವ್ಯಾಪಾರ ಮಾಡುತ್ತಾ ಇದ್ದಾರೆ. ಒಬ್ಬರ ಹತ್ತಿರ ಬಸ್ಸೇ ಇಲ್ಲ, ಪರ್ಮಿಟ್ ಇದೆ, ವರ್ಷಕ್ಕೆ 1,000, 2,000 ರೂಪಾಯಿ ಕೊಡಬೇಕೆಂದು ಮಾತನಾಡಿಕೊಂಡು ಇತರರಿಗೆ ಪರ್ಮಿಟ್ ಕೊಟ್ಟು ಬಸ್ಸುಗಳನ್ನು ನಡೆಸುತ್ತಾ ಇದ್ದಾರೆ. ಸರ್ಕಾರದವರು ಬೇಕಾದರೆ ಪರೀಕ್ಷೆ ಮಾಡಿಸಿ.

Mr. SPEAKER.—You must give instances.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಬೇಕಾದಷ್ಟು ನಿದರ್ಶನಗಳಿವೆ. ಈಗ ಎಷ್ಟೋ ಜನ. . . .

ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—On a point of order Sir, ಶ್ರೀ ಶ್ರೀನಿವಾಸಯ್ಯಂಗಾರ್ಯರು ಕಾಂಗ್ರೆಸ್‌ನವರಿಗೇ ಪರ್ಮಿಟ್ ಸಿಕ್ಕಿದೆ ಎಂದು ಹೇಳಿದರು. ಅದನ್ನು ಒಪ್ಪುವುದಕ್ಕಾಗುವುದಿಲ್ಲ. ಅವರು ವಾಪಸು ತೆಗೆದುಕೊಳ್ಳಬೇಕು.

Mr. SPEAKER.—You have made a general statement—that is what he says.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಎಲ್ಲಾ ಕಾಂಗ್ರೆಸ್‌ನವರಿಗೇ ಪರ್ಮಿಟ್ಟುಗಳು ಬಹಳ ಹೆಚ್ಚಾಗಿ ಸಿಕ್ಕುತ್ತಿವೆ ಎಂದು ಹೇಳಿದೆ, ಇನ್ನೂ ಕೆಲವರಿಗೆ ಸಿಕ್ಕಿರಬಹುದು. ಆ ಕೆಲವರಿಗೆ ಈ ಪರ್ಮಿಟ್‌ಗಳು ಅವರ ಹೆಸರಿನಲ್ಲಿವೆ. ಆದರೆ ಅವರ ಹತ್ತಿರ ಬಸ್ಸು ಇಲ್ಲ. ಪರ್ಮಿಟ್ ಮಾತ್ರ ಇದೆ. ನನ್ನ ಸಲಹೆ ಏನೆಂದರೆ ಬಸ್ಸು ಇಲ್ಲದೆ, ಅಥವಾ ಬಸ್ಸು ನಡೆಸುವುದಕ್ಕೆ ಶಕ್ತಿ ಇಲ್ಲದೆ ಇರುವವರಿಗೆ ಪರ್ಮಿಟ್ ಏಕೆ ಕೊಡಬೇಕು ?

ಒಬ್ಬ ಸದಸ್ಯರು.—ತಾವು ಈ ರೀತಿ ಪರಿಮಿತಿ ಇಲ್ಲದೇ ಮಾತನಾಡಿದರೆ overload ಆಗುವುದಿಲ್ಲವೇ

(ನಗು!)

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಅದ್ದರಿಂದ ಟ್ರಾನ್ಸ್‌ಪೋರ್ಟ್ ಅಥಾರಿಟಿಯವರು ಪರ್ಮಿಟ್ ಕೊಡುವಾಗ ಆಗಲಿ, ಸರ್ಕಾರದವರು ಪರ್ಮಿಟ್ ಮಂಜೂರು ಮಾಡುವಾಗ ಆಗಲಿ ಪರ್ಮಿಟ್‌ಗೆ ಅರ್ಜಿ ಹಾಕಿರುವವರು ಬಸ್ಸು ನಡೆಸುತ್ತಾ ಇದ್ದಾರೆಯೇ ಎಂಬುದನ್ನು ವಿಮರ್ಶೆ ಮಾಡಿಕೊಡಬೇಕು. ಇಷ್ಟೊತ್ತು ತಾವೇ ಬೇಕಾದರೆ ಹೋಗಿ ತನಿಖೆ ಮಾಡಿ, ಯಾರ ಹೆಸರಿನಲ್ಲೋ ಪರ್ಮಿಟ್ ಇರುತ್ತದೆ, ಯಾರೋ ಬಸ್ಸು ನಡೆಸುತ್ತಾ ಇರುತ್ತಾರೆ. ನಾನು ಹೇಳುವುದು ಆಕ್ಷೇಪಣೆ ಅಲ್ಲ. ಅಕ್ಷರಶಃ ನಿಜ ಎಂಬುದು ತಮಗೇ ಗೊತ್ತಾಗುತ್ತದೆ. ಅಂತಹ ಪರ್ಮಿಟ್ಟುಗಳನ್ನು ಕೂಡಲೇ ವಜಾ ಮಾಡಬೇಕು. ಆ ತರಹ ಮಾಡಿದರೆ ನೆಮ್ಮದಿಯಾಗುತ್ತದೆ ಮತ್ತು ಕಾನೂನು ದೃಷ್ಟಿಯಿಂದ ಕೆಲಸ ಮಾಡಿದ ಹಾಗಾಗುತ್ತದೆ ಎಂದು ಹೇಳುತ್ತೇನೆ.

*ಶ್ರೀ ಎ. ವಿ. ನರಸಿಂಹರೆಡ್ಡಿ (ಬೆಂಗಳೂರು ದಕ್ಷಿಣ).—ನಾನು ಮತ್ತು ನನ್ನ ಸ್ನೇಹಿತರಾದ ಶ್ರೀ ಬೈರೇಗೌಡರು ಕೆಲವು ಖೋತಾ ನಿರ್ಣಯಗಳನ್ನು ಕಳುಹಿಸಿದ್ದೆವು. ಅವು ಈ ಡಿಮ್ಯಾಂಡಿನ ಪಟ್ಟಿಯಲ್ಲಿ ಪ್ರಿಂಟ್ ಆಗಿಲ್ಲ. ಆದರೂ ಅಧ್ಯಕ್ಷರು ನನಗೆ ಅವಕಾಶ ಕೊಟ್ಟಿದ್ದಾರೆ. ಈಗಿನ ಲೆಕ್ಕವನ್ನು ತೆಗೆದು ಈ ಬಸ್ಸುಗಳ ಪರ್ಮಿಟ್ ಹೆಚ್ಚಾಗಿ ಹೊಂದಿರುವವರು ಯಾರು ಎಂದು ನಾವು ನೋಡಿದರೆ ಪ್ರಾಯಶಃ ಕಾಂಗ್ರೆಸ್ಸೇತರ ಸದಸ್ಯರೇ ಹೆಚ್ಚಿನ ಸಂಖ್ಯೆಯಲ್ಲಿ ಹೊಂದಿದ್ದಾರೆ ಎಂಬುದು ವ್ಯಕ್ತಪಡುತ್ತದೆ. ಅಲ್ಲದೆ ಶ್ರೀ ಶ್ರೀನಿವಾಸ ಐಯ್ಯಂಗಾರ್ಯರು ಹೇಳಿದ ರೀತಿಯಲ್ಲಿ ಏನಾದರೂ ಪರ್ಮಿಟ್ ಇಟ್ಟುಕೊಂಡು ಅದನ್ನು ಬೇರೆಯವರಿಗೆ ಕಮಿಷನ್‌ಗಾಗಿ ಕೊಟ್ಟಿದ್ದರೆ, ಅದೂ ಕೂಡ ಹೆಚ್ಚಿನ ಸಂಖ್ಯೆಯಲ್ಲಿ ಈ ಲೆಕ್ಕಾಚಾರದ ಪ್ರಕಾರ ಅವರಲ್ಲೇ ಸಿಕ್ಕಬೇಕು. ಅದು ಸ್ವಯಂವೇದ್ಯ. ಈ ಬಸ್ಸುಗಳು ಓಡಾಡುತ್ತಾ ಇರುವಾಗ ಮಂತ್ರಿಗಳು ಪ್ರಯಾಣ ಮಾಡಬೇಕು. ಅದರಲ್ಲೂ ಮುಖ್ಯವಾಗಿ ಚನ್ನಪಟ್ಟಣದಲ್ಲಿ ಇಳಿದು ಅಲ್ಲಿರತಕ್ಕ ಒಂದು ಬಚ್ಚಲ ಹತ್ತಿರ ನೋಡಬೇಕೆಂದು ಸಲಹೆ ಮಾಡಿದರು. ಅದನ್ನು ನಾನೂ ನೋಡಿದ್ದೇನೆ. ಇದು ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಪಟ್ಟ ಅಂಶ ಎನ್ನುವುದನ್ನು ಮಾನ್ಯ ಮಿತ್ರರು ಏಕೆ ಮರೆತರೋ ಗೊತ್ತಿಲ್ಲ. ಚನ್ನಪಟ್ಟಣದ ಟೌನಲ್ಲಾಗಲಿ, ಮೈಸೂರು ಸಿಟಿಯಲ್ಲಾಗಲಿ, ಬೆಂಗಳೂರು ಪಟ್ಟಣದಲ್ಲಾಗಲಿ, ಕಾರ್ಪೊರೇಷನ್ ಅಥವಾ ಸ್ಥಳೀಯ ಸಂಸ್ಥೆಗಳು ಆ ಕೆಲಸ ಮಾಡುತ್ತಾ ಇರುವುದು. ಅಲ್ಲಿನ ಪ್ರಯಾಣಿಕರಿಗೆ ಸೌಲಭ್ಯ ಕಲ್ಪಿಸಬೇಕಾದದ್ದು ಅವರ ಕರ್ತವ್ಯ. ನೇರವಾಗಿ ರೋಡ್‌ಟ್ರಾನ್ಸ್‌ಪೋರ್ಟ್‌ನವರು ಕಾರ್ಯಕ್ರಮ ತೆಗೆದುಕೊಳ್ಳುವುದು ಆಡಳಿತ ದೃಷ್ಟಿಯಿಂದ ಸರಿಯಾದ ಕ್ರಮವಾಗುವುದಿಲ್ಲ ಎಂಬುದು ಅವರಿಗೆ ತಿಳಿದಿದ್ದೇವೆ. ಅದನ್ನು ತಿಳಿದೂ ಆ ವಿಚಾರವನ್ನು ಈ ಬೇಡಿಕೆ ಬಂದಾಗ ಪ್ರಸ್ತಾಪ ಮಾಡುವುದು ಸರಿಯೇ ಎನ್ನುವುದನ್ನು ಯೋಚನೆ ಮಾಡುವುದಕ್ಕೆ ಅವರಿಗೇ ಬಿಡುತ್ತೇನೆ.

ಸ್ವಾಮಿ, ಮೈಸೂರು ಸಂಸ್ಥಾನದಲ್ಲಿ ಸಂಚಾರ ಸೌಲಭ್ಯಗಳನ್ನ ಸರ್ಕಾರದವರು ರಾಷ್ಟ್ರೀಕರಣ ಮಾಡಿದ್ದಾರೆ. ನಾವು ದೇಶದ ಆದಾಯವನ್ನು ಹೆಚ್ಚಿಸಿ ಸರ್ಕಾರದ ಆಡಳಿತವನ್ನು ಸುಲಲಿತವಾಗಿ ನಡೆಸಬೇಕಾಗಿದ್ದರೆ ಆದಾಯ ಬರತಕ್ಕ ಎಲ್ಲ ಬಾಬುಗಳನ್ನೂ ರಾಷ್ಟ್ರೀಕರಣ ಮಾಡಬೇಕಾದದ್ದು ಅತ್ಯವಶ್ಯಕ ಎನ್ನುವುದು ಇವತ್ತು ನಮಗೆಲ್ಲರಿಗೂ ತಿಳಿದಂಥ ಅಂಶ. ಆ ದೃಷ್ಟಿಯಿಂದ ಸಲಹೆ ಮಾಡುವುದಾದರೆ ಕೇವಲ ಬೆಂಗಳೂರು ಪಟ್ಟಣದಲ್ಲಿರುವ ಬಸ್ಸುಗಳನ್ನ ರಾಷ್ಟ್ರೀಕರಣ ಮಾಡುವುದು, ಅಥವಾ ಮೈಸೂರು ಸಿಟಿಯಲ್ಲಿರುವ ಬಸ್ಸುಗಳನ್ನು ರಾಷ್ಟ್ರೀಕರಣ ಮಾಡುವುದು ಅಥವಾ ಕೆಲವು ರಸ್ತೆಗಳನ್ನು ಮನಾಪಲಿ ಮಾಡಿಕೊಂಡು ಅದರಲ್ಲಿ ಬಸ್ಸುಗಳನ್ನು ನಡೆಸುವುದರಲ್ಲಿ ತೃಪ್ತರಾಗದೇ ಇಡೀ ಸಂಸ್ಥಾನದ ಸಂಚಾರ ಮಾರ್ಗಗಳನ್ನೆಲ್ಲಾ ರಾಷ್ಟ್ರೀಕರಣಮಾಡಿ ಆ ಮೂಲಕ ಜನಗಳಿಗೆ ಸೌಲಭ್ಯಗಳನ್ನು ಹೆಚ್ಚಿಸಬೇಕು ಮತ್ತು ಸರ್ಕಾರದ ಆದಾಯವನ್ನು ಹೆಚ್ಚುಮಾಡಿಕೊಳ್ಳಬೇಕೆಂದು ಹೇಳಿ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—ನಮ್ಮ ಮುಂದೆ ಇರತಕ್ಕ ಈ ಡಿಮ್ಯಾಂಡನ್ನ ಅನುಮೋದಿಸುತ್ತಾ ಕೆಲವು ವಿಚಾರಗಳನ್ನು ಹೇಳಬೇಕೆಂದು ಇದ್ದೇನೆ. ಶ್ರೀ ಶ್ರೀನಿವಾಸಯ್ಯಂಗಾರ್‌ರವರು ಮೊದಲು ಮಾತನಾಡುತ್ತಿದ್ದಾಗ ಬಹಳ ಚೆನ್ನಾಗಿತ್ತು. ಸಾಮಾನ್ಯವಾಗಿ ಏನಾದರೂ ಕೆಲಸಕಾರ್ಯಗಳನ್ನು ಮಾಡಿದರೆ, ಅದು ಸರಿಯಾಗಿದ್ದರೆ ಸರಿ, ಹಾಗಲ್ಲದೆ ಏನಾದರೂ ಅನ್ಯಾಯವಾಗಿದ್ದರೆ ಆ ಅನ್ಯಾಯವನ್ನ ಸರಿಪಡಿಸುವುದಕ್ಕೆ ಸಲಹೆ ಮಾಡುವುದು ಧರ್ಮ. ಮೈಸೂರು ಸರ್ಕಾರದವರು ರೋಡ್‌ಟ್ರಾನ್ಸ್‌ಪೋರ್ಟ್ ವ್ಯವಸ್ಥೆಯನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡಮೇಲೆ ನಮ್ಮ ಮೈಸೂರು ದೇಶದಲ್ಲಿ ಮಾಡಿರತಕ್ಕಷ್ಟು ಅನುಕೂಲತೆ, ಇಂಡಿಯಾ ದೇಶದಲ್ಲಿ ಯಾವ ಕಡೆಯಲ್ಲೂ ಮಾಡಿಲ್ಲ. ಸರ್ಕಾರಿ ಬಸ್ಸುಗಳಲ್ಲಿ ಹೆಚ್ಚು

(ಶ್ರೀ ವೈ. ಎಂ. ಚಂದ್ರಶೇಖರಯ್ಯ).

ಆದಾಯ ಬರುತ್ತಿದೆ. ಕಾಂಗ್ರೆಸ್ ಸರ್ಕಾರ ಬಂದು ಅನೇಕ ರೂಟ್‌ಗಳನ್ನು ಇತ್ತೀಚೆಗೆ ಮನಾಪಲಿ ಮಾಡಿ ಕೊಂಡಮೇಲೆ—ಶ್ರೀ ಶ್ರೀನಿವಾಸಯ್ಯಂಗಾರ್ ರವರಿಗೆ ಹೇಳಬೇಕಾದದ್ದು—ಮೈಸೂರು ದೇಶದಲ್ಲಿ ಬಸ್ಸು ಸಂಚಾರ ಮಾಡತಕ್ಕವರನ್ನು ಯಾವಕಡೆ ಕೇಳಿದರೂ ಕೂಡ ಸರ್ಕಾರದವರು ಬಹಳ ಉಪಕಾರ ಮಾಡಿದ್ದಾರೆ, ಬಸ್ಸುಗಳು ಬಹಳ ಚೆನ್ನಾಗಿವೆ, ಟೈಂಗೆ ಸರಿಯಾಗಿ ಹೋಗುತ್ತವೆ, ಸೀಟುಗಳು ಬಹಳ ಚೆನ್ನಾಗಿವೆ ಎಂದು ಹೇಳುತ್ತಾರೆ. ಖಾಸಗೀ ಬಸ್ಸುಗಳಲ್ಲಿ ಶ್ರೀ ಶ್ರೀನಿವಾಸಯ್ಯಂಗಾರ್ಯರು ಕುಳಿತುಕೊಂಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಯಾರಾದರೂ ಒಬ್ಬೊಬ್ಬರು ಗರ್ಭಿಣಿ ಹೆಂಗಸರು ಕುಳಿತುಕೊಂಡು ಪ್ರಯಾಣ ಮಾಡಿದ್ದೇ ಆದರೆ ಅವರು ಊರು ತಲಪುವಷ್ಟರಲ್ಲೇ ಪ್ರಸವವಾಗಿ ಹೋಗುತ ದೆ. ಸರ್ಕಾರಿ ಬಸ್ಸುಗಳಲ್ಲಿ ಹೋದರೆ ಪಾಂಟಿಯಾಕ್ ಕಾರಿನಲ್ಲಿ ಹೋದಹಾಗೆ ಆಗುತ್ತದೆ. ಖಾಸಗಿ ಬಸ್ಸಿನಲ್ಲಿ ಯಾರಾದರೂ ಬೆಂಗಳೂರಿನಿಂದ ಶಿವಮೊಗ್ಗಕ್ಕೆ ಆಗಲಿ, ಅಥವಾ ಮೈಸೂರಿಗೆ ಆಗಲಿ 50 ಮೈಲಿಗೆ ಮೇಲ್ಪಟ್ಟು ಪ್ರಯಾಣ ಮಾಡಿದ್ದೇ ಆದರೆ ಆ ಮನುಷ್ಯ ಯಾರೇ ಆಗಲಿ ಮೂರುದಿವಸ ಸುಧಾರಿಸಿಕೊಳ್ಳಬೇಕು.

4-30 P.M.

ಸರ್ಕಾರಿ ಬಸ್ಸುಗಳಲ್ಲಿ 150 ಮೈಲಿ ದೂರ ಪ್ರಯಾಣಮಾಡಿದರೂ ಕೂಡ ಪಾಂಟಿಯಾಕ್ ಕಾರಿನಲ್ಲಿ ಪ್ರಯಾಣಮಾಡಿದಹಾಗೆ ಸುಖವಾಗಿರುತ್ತದೆ. ಈ ಬಸ್ಸುಗಳು ಅಷ್ಟು ಚೆನ್ನಾಗಿವೆ. ಮೈಸೂರು ದೇಶದಲ್ಲಿರುವ ಎಲ್ಲಾ ಖಾಸಗಿ ಬಸ್ ಮಾರ್ಗಗಳನ್ನೂ ಮನಾಪಲಿ ಮಾಡಿ ಇಲ್ಲೆಲ್ಲ ಸರ್ಕಾರದವರೇ ಬಸ್ಸುಗಳನ್ನು ನಡೆಸಿದರೆ ಒಳ್ಳೆಯದೆಂದು ಹೇಳುತ್ತೇನೆ. ಶ್ರೀ ಶ್ರೀನಿವಾಸಯ್ಯಂಗಾರ್ಯರು ಈ ವಿಚಾರದಲ್ಲಿ ಬರೀ ಟೀಕೆಮಾಡಿದ್ದಾರೆಯೇ ಹೊರತು ಅದನ್ನು ಸರಿ ಪಡಿಸಬೇಕಾದರೆ ಯಾವರೀತಿ ಮಾಡಬೇಕು ಎಂದು ಸಲಹೆಮಾಡಿಲ್ಲ, ಯಾವರೀತಿ ಮಾಡಿದರೆ ಸರಿಹೋಗುತ್ತದೆ, ಯಾವರೀತಿ ಮಾಡಿದರೆ ಸರ್ಕಾರಕ್ಕೆ ಆದಾಯ ಬರುತ್ತದೆ, ಇದರಲ್ಲಿ ಅನುಕೂಲ ಅಥವಾ ಅನಾನುಕೂಲ ಏನಿವೆ ಎಂದು ಹೇಳಲ್ಲ. ಅಂತೆಯೇ ದೇಶಕ್ಕೆ, ಪ್ರಜೆಗಳಿಗೆ. ಅನುಕೂಲವಾಗುವ ಒಂದು ಸಲಹೆಯನ್ನೂ ಇದುವರೆಗೆ ಕೊಟ್ಟಹಾಗೆ ನನ್ನ ಅನುಭವದಲ್ಲಿ ಕಾಣುವುದಿಲ್ಲ. Standing seats ನಿಗದಿಮಾಡುವಾಗ 25 ಜನ ಕೂಡತಕ್ಕ ಬಸ್ಸಿಗೆ ನಾಲ್ಕು-ಐದು ಜನರಿಗೆ ಮಾತ್ರ standing seats ಹಾಕಲು ಪರ್ಮಿಷ್ ಕೊಡುತ್ತಾರೆ. ಬೆಂಗಳೂರಿನಿಂದ ಮೈಸೂರಿಗೆ ಹೋಗಬೇಕಾದರೆ 80 ಮೈಲಿಗಳ ಉದ ಕ್ಕೂ ನಿಂತುಕೊ ಡು ಪ್ರಯಾಣಮಾಡಬೇಕು ಎಂದು ತಿಳಿಸಿದರು. ಬಸ್ಸಿನಲ್ಲಿ ಚನ್ನಪಟ್ಟಣ, ರಾಮನಗರ, ಮದ್ದೂರು, ಮುಂತಾದ 20 ಮೈಲಿ 30 ಮೈಲಿ ದೂರವಿರುವ ಊರುಗಳಿಗೆ ಹೋಗುವವರು ಎಷ್ಟೋ ಜನರಿರುತ್ತಾರೆ. ಕುಳಿತಿರುವ ಪ್ರಯಾಣಿಕರು ಮಧ್ಯದಲ್ಲಿ ಇಳಿದಾಗ ನಿಂತುಕೊಂಡು ಪ್ರಯಾಣಮಾಡುತ್ತಿರುವವರು ಕುಳಿತುಕೊಳ್ಳಲು ಅವಕಾಶವಾಗುತ್ತದೆ. ಬಹಳ ದೂರ ಪ್ರಯಾಣಮಾಡುವಾಗ ಅಷ್ಟು ದೂರವೂ ನಿಂತುಕೊಂಡು ಪ್ರಯಾಣಮಾಡುವುದು ನಿಜವೇ? ಇದು ಅನುಭವವಿಲ್ಲದೆ ಹೇಳುವ ಮಾತು, ಈ ರೀತಿಯಾದ ಟೀಕೆ ಟಿಪ್ಪಣಿಗಳನ್ನು ಮಾಡಬಾರದು. ನಾವು ಮಾಡುವ ಟೀಕೆಗಳಿಂದ ಸರ್ಕಾರದಲ್ಲಿರಬಹುದಾದ ತಪ್ಪುಗಳನ್ನು ತಿದ್ದಿ ಕೊಳ್ಳುವುದಕ್ಕೆ ಅವಕಾಶವಿರಬೇಕು. ಅದೇ ರೀತಿಯಾಗಿ ಸಲಹೆಗಳನ್ನು ಕೊಡಬೇಕಾದರೂ ಕೂಡ ಉತ್ತಮವಾದ ಸಲಹೆಗಳನ್ನು ಕೊಟ್ಟು ಮಹಾಜನರಿಗೆ ಅನುಕೂಲವಾಗುವುದಕ್ಕೆ ಏರ್ಪಾಡು ಮಾಡಬೇಕು. ಸರ್ಕಾರದವರು ಇತ್ತೀಚೆಗೆ ಅನೇಕ ಬಸ್ ರೂಟುಗಳನ್ನು ಮನಾಪಲಿ ಮಾಡಿದ್ದಾರೆ. ಆ ಸಂದರ್ಭದಲ್ಲಿ ಚಿಕ್ಕಮಗಳೂರಿಗೆ ಒಂದು ಸರ್ಕಾರಿ ಬಸ್ಸು ಹಾಕಿದ್ದಾರೆ. ರೈಲಿನಲ್ಲಿ ಪ್ರಯಾಣಮಾಡಿ ಚಿಕ್ಕಮಗಳೂರಿನಿಂದ ಬೆಂಗಳೂರಿಗೆ ಬರಬೇಕಾದರೆ ಒಂದು ದಿವಸವೆಲ್ಲ ಹಿಡಿಯುವುದು ಎಲ್ಲರಿಗೂ ಅನುಭವದಲ್ಲಿರಬಹುದು. ಅದೇ ಸರ್ಕಾರಿ ಬಸ್ಸಿನಲ್ಲಿ ಪ್ರಯಾಣಮಾಡಿದರೆ ಕಡಿಮೆ ಕಾಲದಲ್ಲಿ ಬರಬಹುದು. ಪ್ರಯಾಣದ ದರವೂ ಸಹ ಹೆಚ್ಚಾಗುವುದಿಲ್ಲ. ರೈಲಿನಲ್ಲಿ ಕಡೂರಿನಿಂದ ಬೆಂಗಳೂರಿಗೆ ರೂ. 4-3-0 ಕೊಟ್ಟರೆ, ಬಸ್ಸಿನಲ್ಲಿ ರೂ. 4-9-0 ಕೊಡಬೇಕು. ಐದು-ಆರು ಆಣೆ ಜಾಸ್ತಿ ಇರುವುದರಿಂದಲೇ ಪ್ರಯಾಣದ ದರ ಹೆಚ್ಚು ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಸರ್ಕಾರದವರು ಎಲ್ಲ ಕಡೆಗಳಲ್ಲಿಯೂ ಬಸ್ಸುಗಳನ್ನು ಹಾಕಬೇಕು, ಅದರ ವ್ಯವಸ್ಥೆಯನ್ನೆಲ್ಲ ಸಮರ್ಪಕವಾಗಿ ಮಾಡಬೇಕೆಂದರೆ ತಕ್ಷಣದಲ್ಲಿಯೇ ಮಾಡುವುದಕ್ಕೆ ಸಾಧ್ಯವಿಲ್ಲ. ಉದಾಹರಣೆಗೆ ಒಂದು ಮಗು ಹುಟ್ಟಿದರೆ, ಅದು ಹುಟ್ಟಿದಕೂಡಲೇ ಪಾಠ ಕಲಿತು, ಅಸೆಂಬ್ಲಿ ಸದಸ್ಯನಾಗಿ ಬರುವುದಿಲ್ಲ. ಮಗುವಾದದ್ದು ಆಹಾರ ತೆಗೆದುಕೊಂಡು ಹುಡುಗನಾಗಿ, ಅನಂತರ ದೊಡ್ಡವನಾಗಿ ಪಾಠ ಕಲಿತು, ವಿದ್ಯಾವಂತನಾಗಿ ಮುಂದೆ ಬರಬೇಕು. ಇದೇ ರೀತಿಯಲ್ಲಿ ರಾಷ್ಟ್ರೀಕರಣ ವ್ಯವಸ್ಥೆಯಲ್ಲಿಯೂ ಮುಂದುವರಿಯುತ್ತಿದ್ದೇವೆ. ಆದುದರಿಂದ ಬಸ್ಸುಗಳಲ್ಲಿ overload ಮಾಡುತ್ತಾರೆ, standing seats ಹಾಕುತ್ತಾರೆ ಮುಂತಾಗಿ ಹೇಳತಕ್ಕದು ಬಹಳ ಅನನುಗುಣವಾದದ್ದು. ಬಡ್ಜೆಟ್ ವಿಮರ್ಶೆ ಮಾಡಿನೋಡಿದರೂ ಕೂಡ ಸರ್ಕಾರದವರು ಅನೇಕ ರೂಟ್‌ಗಳನ್ನು ಮನಾಪಲಿ ಮಾಡಿಕೊಂಡಮೇಲೆ ಅದರಿಂದ ಚೆನ್ನಾಗಿ ಲಾಭ ಬಂದಿದೆ. ಆದುದರಿಂದ ಸರ್ಕಾರದವರು ಎಲ್ಲ ಮಾರ್ಗಗಳನ್ನೂ ಮನಾಪಲಿ ಮಾಡುವುದು ಸಾಧುವಾದದ್ದು. ಮೊನ್ನೆತಾನೇ ಗೃಹ ಸಚಿವರು ಬೆಂಗಳೂರಿನಿಂದ ಎಲ್ಲ ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರುಗಳಿಗೂ ಸರ್ಕಾರದ ಬಸ್ಸನ್ನು ಓಡಿಸುವುದಾಗಿ ತಿಳಿಸಿದರು. ಇದುವರೆಗೂ ಶಿವಮೊಗ್ಗ ಕಡೆಗೆ ಒಂದು ಬಸ್ಸನ್ನೂ ಹಾಕಿಲ್ಲ. ಅಲ್ಲದೆ ಶೃಂಗೇರಿ ನಮ್ಮ ದೇಶದಲ್ಲಿ ಬಹಳ ಪ್ರಾಮುಖ್ಯವಾದ ಸ್ಥಳ. ಅನೇಕ ಸಾರಿ ಶೃಂಗೇರಿಗೆ ಒಂದು ಬಸ್ ಲೈನ್ ಹಾಕಬೇಕೆಂದು ಹೇಳಿದ್ದೇನೆ. ಶೃಂಗೇರಿಗೆ ಹೋಗತಕ್ಕ ಪ್ರಯಾಣಿಕರು ಅನೇಕರಿರುತ್ತಾರೆ. ಸರ್ಕಾರದವರು ಈಗಲಾದರೂ ದೊಡ್ಡಮನಸ್ಸು ಮಾಡಿ ಶೃಂಗೇರಿ ಮತ್ತು ಶಿವಮೊಗ್ಗ ಈ ಎರಡು ಸ್ಥಳಗಳಿಗೂ ಸಹ ಮುಖ್ಯವಾಗಿ ಸರ್ಕಾರಿ ಬಸ್ಸುಗಳನ್ನು ಹಾಕಬೇಕೆಂದು ಪ್ರಾರ್ಥನೆಮಾಡಿಕೊಳ್ಳುತ್ತೇನೆ.

ಬೆಂಗಳೂರು ನಗರದಲ್ಲಿ ಓಡುತ್ತಿರುವ ಬಸ್ಸುಗಳನ್ನು ಬಿ.ಟಿ.ಸಿ.ಯಿಂದ ಸರ್ಕಾರದವರು ತಾರೀಖು 1-4-56 ರಿಂದ ತೆಗೆದುಕೊಳ್ಳುತ್ತಾರೆಂದು ಕೇಳಿ ನನಗೆ ಬಹಳ ಸಂತೋಷವಾಯಿತು. ಮುಂದಿನ ಬಡ್ಜೆಟ್ಟಿನಲ್ಲಿ ಹಣವನ್ನೊದಗಿಸಿ ಮೈಸೂರು ದೇಶದಲ್ಲಿರುವ ಎಲ್ಲ ಬಸ್ ಲೈನ್‌ಗಳನ್ನೂ ಸರ್ಕಾರದವರು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಕಾಂಗ್ರೆಸ್‌ನವರಿಗೆ ಬಸ್ ಲೈನ್‌ಗಳೆಲ್ಲವನ್ನೂ ಕೊಡುತ್ತಿದ್ದಾರೆ, ಇತರರಿಗೆ ಕೊಡುತ್ತಿಲ್ಲ. ಇವರಿಗೆಮಾತ್ರ ಹೆಂಡತಿಮಕ್ಕಳು ಇರಬೇಕು, ಇತರರಿಗೆ ಇರಬಾರದು ಎನ್ನುವರೀತಿ ಇದೆ ಎಂದು ಹೇಳಿದರು. ಮೈಸೂರು ದೇಶದಲ್ಲಿ ಕೊಡುವ 50 ಪರ್ಮಿಟ್ಟುಗಳಲ್ಲಿ ನಾಲ್ಕೈದು ಜನ ಮಾತ್ರ ಕಾಂಗ್ರೆಸ್ಸಿನವರು ಇರ

ಬಹುದು. ಏಕೆಂದರೆ ನಾನು ಚಿಕ್ಕಮಗಳೂರು ಜಿಲ್ಲೆಯ ಬಸ್ ಕಮಿಟಿಯಲ್ಲಿ ಒಬ್ಬ ಮೆಂಬರಾಗಿದ್ದೇನೆ. ಅಲ್ಲಿ ಕೊಟ್ಟಿರುವ ಪರ್ಮಿಟ್‌ಗಳಲ್ಲಿ ಒಬ್ಬೊಬ್ಬರು ಮಾತ್ರ ಕಾಂಗ್ರೆಸ್ಸಿನವರು, ಮತ್ತು 35 ಜನ ಖಾಸಗಿಯವರು.

ಶ್ರೀ ಜೆ. ಮಹಮ್ಮದ್ ಇಮಾಂ (ಜಗಳೂರು).—ಖಾಸಗಿ ಜನ ಎಂದರೆ ಯಾರು ?

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಖಾಸಗಿ ಜನ ಎಂದರೆ non-Congressmen ಎಂದು ನನ್ನ ಭಾವನೆ. ಶ್ರೀ ಶ್ರೀನಿವಾಸಯ್ಯಂಗಾರ್‌ರವರು ಹೇಳಿದರು. ಬಸ್ ಲೈನ್ ತೆಗೆದುಕೊಂಡು ಅದನ್ನು ಖಾಸಗಿಯವರಿಗೆ ಮಾರುತ್ತಾರೆ ಎಂದು. ಪಿ.ಎಸ್.ಪಿ.ಗೆ ಸೇರಿದವರು ಸುಮಾರು ಆರು ವರ್ಷಗಳಿಂದಲೂ ಬಸ್ ಎಷ್ಟು ಮಾಡಿದ್ದಾರೆ ಮತ್ತು ಲೈನು ಎಷ್ಟು ಮಾಡಿದ್ದಾರೆ. ಖಾಸಗೀ ಜನ ಮತ್ತು ಪಿ.ಎಸ್.ಪಿ. ಜನ ಒಂದು ಲೆಕ್ಕ ಇಡಲಿ, ನಾನೂ ಒಂದು ಲೆಕ್ಕ ಇಡುತ್ತೇನೆ. ಆಗ ಇದರ ವಿವರಗಳು ತಿಳಿಯುತ್ತವೆ. ಕೋತಿ ಬುತ್ತಿ ತಿಂದು ಮೇಕೆ ಬಾಯಿಗೆ ಒರೆಸಿತು ಎಂದ ಹಾಗಿದೆ ಈ ಪರಿಸ್ಥಿತಿ. ಈ ರೀತಿ ಹೇಳುವುದು ಒಳ್ಳೆಯದಲ್ಲವೆಂದು ಹೇಳುತ್ತೇನೆ. ಯಾರಾದರೂ ಕೂಡ ಒಂದು ಒಳ್ಳೆ ಕೆಲಸ ಮಾಡಿದರೆ ಅದನ್ನು ಸರಿ ಎಂದು ಹೇಳುವುದು ಮನುಷ್ಯನ ಧರ್ಮ, ಕಾಂಗ್ರೆಸ್ಸಿನವರ ಸೋಗು ಹಾಕಿಕೊಂಡು ನಾನ್-ಕಾಂಗ್ರೆಸ್ಸಿನವರು ಮಾಡುವ ಕೆಲಸಗಳಿಗೆ ಕಾಂಗ್ರೆಸ್‌ನವರನ್ನು ಟೀಕೆ ಮಾಡುವುದು ಸರಿಯಾದದ್ದಲ್ಲವೆಂದು ಹೇಳಿದರೆ ತಪ್ಪಾಗಲಾರದು.

ನಮ್ಮ ಸರ್ಕಾರದವರು ದೊಡ್ಡ ಮನಸ್ಸುಮಾಡಿ ಯಾವ ಯಾವ ಕಡೆಗಳಿಂದ ಜನರ ಬೇಡಿಕೆಗಳು ಬರುತ್ತವೆಯೋ ಅಲ್ಲೆಲ್ಲ ಆದಷ್ಟು ಜಾಗ್ರತೆ ಸರ್ಕಾರಿ ಬಸ್ಸುಗಳನ್ನು ಹಾಕತಕ್ಕುದು ಬಹಳ ಸಾಧುವಾದದ್ದು. ಸಂಸ್ಥಾನಾದ್ಯಂತವೂ ಸರ್ಕಾರದವರು ಬಸ್ ಮಾರ್ಗಗಳನ್ನು ಮನಾಪಲಿ ಮಾಡಿಕೊಂಡು ಸರ್ಕಾರಿ ಬಸ್ಸುಗಳನ್ನು ಹಾಕಿ ಖಾಸಗಿ ಜನಗಳಿಗೆ ಬಸ್ ಮಾರ್ಗ ತಪ್ಪಿಸಬೇಕೆಂದು ಪ್ರಾರ್ಥನೆಮಾಡುತ್ತೇನೆ.

*ಶ್ರೀಮತಿ ಬಳ್ಳಾರಿ ಸಿದ್ದಮ್ಮ (ದಾವಣಗೆರೆ).—ಸ್ವಾಮಿ, ಬಸ್ಸುಗಳ ವಿಚಾರದಲ್ಲಿ ಎರಡು ಮಾತು ಹೇಳಬೇಕೆಂದು ಇಷ್ಟಪಡುತ್ತೇನೆ. ತುಂಗಭದ್ರ ಎಕ್ಸ್‌ಪ್ರೆಸ್ ಎಂದು ಹರಿಹರದಿಂದ ಬೆಂಗಳೂರಿಗೆ ಬರುತ್ತದೆ. ಅದು ಬಹಳ ಜಾಗ್ರತೆ ಬರುತ್ತದೆ. ಅದರಲ್ಲಿ ಆಕ್ಷೇಪಣೆ ಇಲ್ಲ. ಆದರೆ ಒಂದು ಅಂಶವನ್ನು ಮಾತ್ರ ಯೋಚನೆ ಮಾಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ. ಖಾಸಗಿ ಜನರು ತಮ್ಮ ಬಸ್ಸುಗಳಲ್ಲಿ ಬಹಳ ಜನರನ್ನು ಹಾಕಿ overload ಮಾಡುವುದು ನಿಜ. ಅವರನ್ನು ಕೇಳಿದರೆ ಸರ್ಕಾರಿ ಬಸ್ಸುಗಳಲ್ಲಿ ಸಹ ಓವರ್‌ಲೋಡ್ ಹಾಕುತ್ತಾರೆ ಎಂದು ಹೇಳುತ್ತಾರೆ. ಸರ್ಕಾರವೆಂದ ಮೇಲೆ ದೇಶಕ್ಕೆಲ್ಲ 'ರಕ್ಷಣೆ ಕೊಡುವುದು ಸರ್ಕಾರದ ಕಾರ್ಯ. ಸರ್ಕಾರದವರು ಇತರರಿಗೆ ಮಾರ್ಗದರ್ಶಕರಾಗಿರಬೇಕು ಎನ್ನುವಾಗ ಸರ್ಕಾರಿ ಬಸ್ಸುಗಳಲ್ಲಿ ಓವರ್ ಲೋಡ್ ಮಾಡುವುದು ಉಚಿತವಾದದ್ದಲ್ಲ. ಹೀಗೆ ಮಾಡಿದರೆ ಖಾಸಗಿಯವರಿಗೆ ನಾವು ಬುದ್ಧಿ ಹೇಳುವುದಕ್ಕೆ ಕಷ್ಟವಾದೀತು. ಕಾನೂನು ಎಲ್ಲರಿಗೂ ಒಂದೇ. ಯಾರೋ ಒಬ್ಬರು ಹೇಳುತ್ತಾರೆ ಓವರ್ ಲೋಡ್ ಮಾಡುತ್ತಾರೆಂದು. ಅದನ್ನು ತಮ್ಮ ಗಮನಕ್ಕೆ ತರುವುದು ನಮ್ಮ ಕರ್ತವ್ಯ. ಇಂಥದಕ್ಕೆಲ್ಲ ಅವಕಾಶ ಕೊಡಬಾರದೆಂದು ಅರಿಕೆ ಮಾಡಿಕೊಳ್ಳುತ್ತೇನೆ. ಖಾಸಗಿಯವರು ಹತ್ತು ಜನರನ್ನು ಹೆಚ್ಚಾಗಿ ಹಾಕಿದರೂ ಅದರಲ್ಲಿ ಧರ್ಮವಿದೆ ಎಂದು ಹೇಳುತ್ತೇನೆ. ಮೇಲಾಗಿ ಅವರು ಪ್ರಯಾಣಿಕರ ಕಷ್ಟಸುಖಗಳು ಮತ್ತಿನ್ನಾವುದರ ಕಡೆಗೂ ಗಮನ ಕೊಡದೆ ಓವರ್ ಲೋಡ್ ಹಾಕುತ್ತಾರೆ. ಅವರ ಮೇಲೆ ಕೇಸು ಹಾಕಿದಾಗ ತೊಂದರೆ ಪಡುತ್ತಾರೆ. ಹೀಗಿರುವಾಗ ಸರ್ಕಾರದವರೇ ವಿಪರೀತ ಓವರ್ ಲೋಡ್ ಹಾಕಿದರೆ ಯಾರಿಗೆ ಹೇಳಬೇಕು ? ಈ ರೀತಿ ಮಾಡುವುದು ತಪ್ಪು. ಬಸ್ಸಿನ ಮೇಲೆ 43 ಜನರು ಕೂಡತಕ್ಕದ್ದು ಮತ್ತು ಎಂಟು ಜನರು ನಿಲ್ಲತಕ್ಕದ್ದು (ಸ್ಟ್ಯಾಂಡಿಂಗ್) ಎಂದು ಬರೆದಿರುತ್ತಾರೆ. ವಾಸ್ತವವಾಗಿ ಬಸ್ಸಿನಲ್ಲಿರುವವರನ್ನು ಎಣಿಸಿ ನೋಡಿದರೆ 60-70 ಜನರಿರುತ್ತಾರೆ. ಇದು ಮುಚ್ಚು ಮರೆ ಮಾತಲ್ಲ. ಆದರೆ ಇದರಲ್ಲಿ ಒಂದು ವಿಚಾರವಿದೆ. ಬಸ್ಸಿನ ಕಂಡಕ್ಟರನ್ನು ಕುರಿತು 'ಯಾಕೆ ಓವರ್ ಲೋಡ್ ಮಾಡುತ್ತೀರಿ, ನಿಮಗೆ ಈ ರೀತಿ ಮಾಡಲು ಅವಕಾಶ ಕೊಟ್ಟಿದ್ದಾರೆಯೇ' ಎಂದರೆ, 'ಪಾಪ, ಏನು ಮಾಡುವುದು, ಪ್ರಯಾಣಿಕರು ದೂರದ ಊರಿಗೆ ಹೋಗಬೇಕಾಗಿದೆ. ಅವರಿಗೆ ಬಸ್ಸಿನಲ್ಲಿ ಸ್ಥಳ ಕೊಡದೆ ಇದ್ದರೆ ಮಧ್ಯದಲ್ಲಿಯೇ ಇರಬೇಕು ಆದುದರಿಂದ ಓವರ್ ಲೋಡ್ ಆದರೂ ಇಂಥ ಪ್ರಯಾಣಿಕರಿಗೆ ತೊಂದರೆಯಾಗದೆ ಇರಲಿ ಎಂದು ಕರೆದುಕೊಂಡು ಹೋಗುತ್ತೇವೆ' ಎಂದು ಹೇಳುತ್ತಾರೆ. ಜನರ ಕಷ್ಟವನ್ನು ನೋಡಿದರೆ, ಅವರನ್ನು ಮಧ್ಯ ದಾರಿಯಲ್ಲಿ ಬಿಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದರೆ ಒಂದು ಪರಿಮಿತಿ ಇಟ್ಟುಕೊಂಡು ಈ ರೀತಿ ಹೆಚ್ಚಿಗೆ ಜನರನ್ನು ಹಾಕುವುದಕ್ಕೆ ಅವಕಾಶ ಕೊಡಬೇಕು.

ಮತ್ತೊಂದು ವಿಚಾರವೇನೆಂದರೆ ಹರಿಹರದಿಂದ ಬೆಂಗಳೂರಿಗೆ ತುಂಗಭದ್ರ ಎಕ್ಸ್‌ಪ್ರೆಸ್ ಎಂದು ಹಾಕಿದ್ದಾರೆ. ಬೆಳಿಗ್ಗೆ ಎಂಟು ಘಂಟೆಗೆ ಒಂದು ಮತ್ತು ಒಂಭತ್ತು ಘಂಟೆಗೆ ಒಂದು, ಹೀಗೆ ಎರಡು ಬಸ್ಸು ಹೊರತಾಗಿ ಬೆಂಗಳೂರು ಹರಿಹರದ ಮಧ್ಯೆ ಬೇರೆ ಯಾವ ಬಸ್ಸೂ ಇಲ್ಲ. ಆದುದರಿಂದ ಮತ್ತೊಂದು ಬಸ್ಸನ್ನು ಹಾಕಿ, ಅದು ಮೂರು ಘಂಟೆಗೆ ಹೊರಡುವ ವ್ಯವಸ್ಥೆ ಮಾಡಿದರೆ ಬಹಳ ಅನುಕೂಲವಾಗುತ್ತದೆ. ಈ ಅನುಕೂಲವನ್ನು ಕಲ್ಪಿಸಿಕೊಡಬೇಕೆಂದು ತಮ್ಮ ಗಮನಕ್ಕೆ ತರುತ್ತೇನೆ. ಈಗ ಸಾಯಂಕಾಲ ನಾಲ್ಕು ಘಂಟೆಗೆ ಜೋಗಿಮಟ್ ಎಕ್ಸ್‌ಪ್ರೆಸ್ ಇದೆ, ಮತ್ತೊಂದು ಬಸ್ ಹಾಕುವುದಕ್ಕೆ ತೊಂದರೆಯಾಗುತ್ತದೆ ಎನ್ನುವ ಅಭಿಪ್ರಾಯ ಸರ್ಕಾರದವರಿಗಿದ್ದರೆ, ನಾಲ್ಕು ಘಂಟೆಗೆ ಹೊರಡುವ ಜೋಗಿಮಟ್ ಎಕ್ಸ್‌ಪ್ರೆಸ್ ಚಿತ್ರದುರ್ಗದಲ್ಲಿ ನಿಲ್ಲುವುದನ್ನು ಬದಲಾಯಿಸಿ ಹರಿಹರದವರೆಗೂ ಹೋಗಿ ಅಲ್ಲಿ ನಿಲ್ಲುವಂತೆ ಮಾಡಿದರೆ ಬಹಳ ಅನುಕೂಲವಾಗುತ್ತದೆ ಎಂಬ ಅಂಶವನ್ನು ತಮ್ಮ ಗಮನಕ್ಕೆ ತರುತ್ತೇನೆ. ಈ ಎರಡು ಮಾತುಗಳನ್ನು ಹೇಳಲು ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದಿಸುತ್ತೇನೆ.

*ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).—ಸ್ವಾಮಿ, ಬಸ್ಸುಗಳಲ್ಲಿ ಓವರ್ ಲೋಡ್ ಹಾಕತಕ್ಕ ವಿಷಯ ಎಲ್ಲರಿಗೂ ತಿಳಿದೇ ಇದೆ. ಖಾಸಗಿ ಬಸ್ಸುಗಳು ಮತ್ತು ಸರ್ಕಾರಿ ಬಸ್ಸುಗಳು ಇವೆರಡರಲ್ಲಿಯೂ overload ಹಾಕುತ್ತಾರೆನ್ನುವುದು ಈ ಸಭೆಯ ಗಮನದಲ್ಲಿದೆ, ಹೊರಗಡೆಯೂ ಇದೆ. ಏಕೆ overload ಹಾಕುತ್ತಿದ್ದಾರೆನ್ನುವುದಕ್ಕೆ ಕೆಲವು ವಾದಗಳಿವೆ. ಸರ್ಕಾರದವರೇ ಮಾರ್ಗದರ್ಶಕರಾದುದರಿಂದ ಅವರನ್ನು ನೋಡಿ ಇತರರಲ್ಲಿಯೂ ಓವರ್ ಲೋಡ್ ಹಾಕತಕ್ಕ ಮನೋಭಾವ ಹೆಚ್ಚಾಗಿದೆ ಎನ್ನುವುದು ಒಂದು ವಾದ. ಇನ್ನೊಂದು ವಾದವನ್ನು ಹೇಳುವುದಾದರೆ ಸರ್ಕಾರಿ ಅಧಿಕಾರಿಗಳ ಮನೋಭಾವನೆಯಿಂದಲೂ, ಪೋಲೀಸ್ ಅಧಿಕಾರಿಗಳಲ್ಲಿ ಕರ್ತವ್ಯ ದೃಷ್ಟಿಯಿಂದ

ಈಗ ಎಷ್ಟು ಓವರ್ ಲೋಡ್ ಮಾಡಬಹುದೆಂದು ಒಂದು ಪರಿಮಿತಿಯಿಲ್ಲ, ಎಷ್ಟು ಬೇಕಾದರೂ ಹಾಕ

ಪ್ರೊಲಟಿಕಲ್ ಪರ್ಪಸ್ ಅಂದರೆ ಹೇಗೆ ಏನು ಎಂದು ವಿವರ ಹೇಳಿ.

ಮಾನ್ಯ ಮಿತ್ರರು ಹೇಳಿದ ಹಾಗೆ ಕೆಲವು ತೊಂದರ ಹಾಸನಕ್ಕೆ [illegible]
ಗಳಿವೆ, ಓವರ್ ಲೋಡಿಂಗ್ ಸ್ವಲ್ಪ ತಪ್ಪಿಸಬೇಕಾಗಿದೆ. ದರೆ ಮಧ್ಯೆ ದಾರಿಯಲ್ಲಿ ಯಾರೂ ಚೆಕ್ ಮಾಡುತ್ತಿಲ್ಲ,

(ಶ್ರೀ ಜಿ. ಎ. ತಿಮ್ಮಪ್ಪಗೌಡ.)

ಓವರ್ ಲೋಡಿಂಗ್ ಇದೆಯೆ ಅಥವಾ ಟಿಕೆಟ್ ಕೊಡದೆ ಹಣ ಜೇಬಿಗೆ ಬಿಡುತ್ತಾರೆಯೆ ಎಂದು ಯಾರೂ ನೋಡುತ್ತಿಲ್ಲ. ಆದ್ದರಿಂದ ನಿರ್ಭಯವಾಗಿ ಈ ಕೆಲಸ ಮಾಡುತ್ತಿದ್ದಾರೆ. ಡ್ರೈವರುಗಳು ಮತ್ತು ಕಂಡಕ್ಟರುಗಳು ಬೀಡಿ ಅಥವಾ ಸಾಮಾನ್ಯ ಸಿಗರೇಟನ್ನು ಸೇದದೆ ಯಾವಾಗಲೂ ಪ್ಲೇಯರ್ಸ್ ಸಿಗರೇಟನ್ನೇ ಸೇದುತ್ತಾರೆ. ಈ ವಿಚಾರದಲ್ಲಿ ಇಲಾಖೆಯು ನಿಗಾ ತೆಗೆದುಕೊಂಡರೆ 12 ಲಕ್ಷ ರೂಪಾಯಿಗಳಿಗಿಂತ ಹೆಚ್ಚು ಉತ್ಪತ್ತಿ ಪಡೆಯಬಹುದು. ಆ ಮೇಲೆ ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರುಗಳಲ್ಲಿ ಬಸ್ಸು ಮಧ್ಯೆ ಕೆಟ್ಟುಹೋದರೆ ರಿಪೇರಿ ಮಾಡಲು ಬಹಳ ಅನಾನುಕೂಲವಿದೆ. ಈಗ ಇದಕ್ಕಾಗಿ ಒಂದು ಯೋಜನೆಯಿದೆಯೆಂದು ಕೇಳಿದ್ದೇನೆ. ಅದಕ್ಕೆ ಹಣ ಒದಗಿಸಿದೆ. ಪ್ರತಿಯೊಂದು ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರುಗಳಲ್ಲೂ ಒಂದು ವರ್ಕ್‌ಷಾಪನ್ನು ಬೇಗ ಸ್ಥಾಪಿಸಿದರೆ ಬಹಳ ಅನುಕೂಲವಾಗುತ್ತದೆ.

ಇನ್ನೂ ಉತ್ತಮರೀತಿಯಲ್ಲಿ ಈ ಇಲಾಖೆಯ ಆಡಳಿತ ನಡೆಸಲು ಬಹು ಬೇಗ ಕಾರ್ಯಕ್ರಮ ಹಾಕಿ ಆ ಮೂಲಕ ಹೆಚ್ಚಿನ ಆದಾಯವನ್ನು ಪಡೆಯುವುದಕ್ಕೆ ಸರ್ಕಾರದವರು ಪ್ರಯತ್ನಿಸಬೇಕು.

*ಶ್ರೀ ಎಸ್. ಗೋಪಾಲಗೌಡ (ಸಾಗರ—ಹೊಸನಗರ).—ಸ್ವಾಮಿ, ಈ ರೋಡ್ ಟ್ರಾನ್ಸ್‌ಪೋರ್ಟ್ ವಿಷಯದಲ್ಲಿ ಶ್ರೀ ತಿಮ್ಮಪ್ಪಗೌಡರು ತಮ್ಮ ಅಭಿಪ್ರಾಯ ಹೇಳಿದರು, ನಾನೂ ಒಂದೆರಡು ಮಾತನ್ನಾಡಿ ನನ್ನ ಅನುಭವವನ್ನು ಹೇಳುತ್ತೇನೆ. ನಮಗೆ ಹೆದರಿ ನಮ್ಮನ್ನು ಮುಂದಿನ ಸೀಟಿನಲ್ಲಿ ಕೂಡಿಸುತ್ತಾರೆ, ಉಪಚಾರಮಾಡುತ್ತಾರೆ, ನ್ಯೂನಾತಿರಿಕ್ತದ ಪ್ರಶ್ನೆ ಮಾಡಿರಿ ಕಾಲಿಗೆ ಬಿದ್ದು ಕೇಳಿ ಕೊಂಡರು ಎಂದು ಅವರು ಹೇಳಿದರು. ನನ್ನ ಅನುಭವ ಹೇಳುವುದಾದರೆ ಬೆಂಗಳೂರು ಕಲಾಸಿಪಾಳ್ಯದಲ್ಲಿ ಒಂದು ಬಸ್ ಸ್ಟ್ಯಾಂಡ್ ಇದೆ. ಅಲ್ಲಿ ಮೊದಲು ಟಿಕೆಟ್ ಕೊಡುವುದಿಲ್ಲ, ಕೆಲವು ಟಿಕೆಟ್‌ಗಳನ್ನು ರಿಸರ್ವ್ ಮಾಡುತ್ತಾರೆ, ಅದು ಬಿಟ್ಟು ಬಸ್ಸು ಒಂದು ಸ್ಥಳದಲ್ಲಿ ನಿಂತಿದ್ದರೂ ಟಿಕೆಟ್ ಬೇರೆಯವರಿಗೆ ಕೊಡುವುದಿಲ್ಲ. ಖಾಸಗಿ ಬಸ್ಸಿನವರು ಸ್ಟ್ಯಾಂಡುಗಳಲ್ಲಿ ಉಪಚಾರ ಕೂಡ ಮಾಡುತ್ತಾರೆ, ಬನ್ನಿ, ಕುಳಿತು ಕೊಳ್ಳಿ ಎಂದು ಬಹಳ ಕಡೆ ಉಪಚಾರ ಕೂಡ ಮಾಡುತ್ತಾರೆ, ಕೆಲವು ಕಡೆ ಸ್ಪರ್ಧೆ ಕೂಡ ಇದೆ, ಬಸ್ ಹೋಗದಿದ್ದರೂ ಟಿಕೆಟ್ ಮುಂಚೆ ಕೊಟ್ಟಿರುತ್ತಾರೆ. ದಾವಣಗೆರೆ ಬಸ್ ಸ್ಟ್ಯಾಂಡಿನಲ್ಲಿ ಇದನ್ನು ನೋಡಬಹುದು. ನನ್ನ ಬಸ್ಸು ಮುಂಚೆ ಹೋಗುತ್ತದೆಂದು ಕರೆದು ಕೂಡಿಸುತ್ತಾರೆ. ಆಮೇಲೆ ಎರಡು ಮೂರು ಬಸ್ಸು ಹೋದರೂ ಮುಂಚೆ ಹೋಗುವುದಾಗಿ ಹೇಳಿದವನ ಬಸ್ಸು ಸ್ಟ್ಯಾಂಡಿಗೇ ಬಂದಿರುವುದಿಲ್ಲ. ಎಷ್ಟು ಹೊತ್ತಿಗೆ ಹೊರಡುತ್ತದೆಂದು ಕೇಳಿದರೆ ಅಲ್ಲಿ ಹೋಗಿ ಕೇಳಿ ಎಂದು ಒಂದು ಕಡೆಗೆ ತೋರಿಸಿ ಬಿಡುತ್ತಾರೆ. ನಾಲ್ಕಾಣೆ ಕೊಟ್ಟರೆ ರಿಸರ್ವ್ ಮಾಡುತ್ತಾರೆ. ಕೆಲವು ವೇಳೆ ಎಷ್ಟೋ ವೇಳೆಯಾದರೂ ಬಸ್ಸೇ ಬರುವುದಿಲ್ಲ. ಕಾದುಕಾದು ಸಾಕಾಗಿ ಹೋಗುತ್ತದೆ. ಬಸ್ಸು ಬಂದ ಕೂಡಲೆ ನುಗ್ಗಿ ಮುಂಚೆ ಬಸ್ಸಿನಲ್ಲಿ ಕೂಡುವವರಿಗೆ ಟಿಕೆಟ್ ಕೊಡುತ್ತಾರೆ. ನುಗ್ಗಿ ಕುಳಿತುಕೊಳ್ಳುವುದಕ್ಕಾಗದಿದ್ದವರಿಗೆ ಸೀಟೇ ಸಿಕ್ಕುವುದಿಲ್ಲ. ಎಷ್ಟು ಜನ ಕುಳಿತುಕೊಳ್ಳಬಹುದೋ ಅದಕ್ಕಿಂತ ಹೆಚ್ಚಾಗಿ ಜನರನ್ನು ತುಂಬುತ್ತಾರೆ, 40 ಜನರಿಗೆ ಜಾಗವಿದ್ದರೆ 80 ಜನರು ಒಳಗಿರುತ್ತಾರೆ. ಮುಂಚೆ ಕೆಲವರು ನುಗ್ಗಿ ಕುಳಿತುಕೊಳ್ಳುತ್ತಾರೆ. ಆ ಮೇಲೆ ಜಗಳ ಪ್ರಾರಂಭವಾಗುತ್ತದೆ.

5 P.M.

ಹೀಗೆ ಅವರು ಆ ಟಿಕೆಟ್ಟುಗಳನ್ನೂ ಸಹ ಕೊಡುತ್ತಿಲ್ಲ. ಬಸ್ಸು ಬರುವವರೆಗೂ ಟಿಕೆಟ್‌ಗಳನ್ನು ಕೊಡಲಾಗುವುದಿಲ್ಲ ಎಂದು ಹೇಳುತ್ತಾರೆ. ಆ ರೀತಿ ಹೇಳಿದ್ದಾಗ್ಯೂ ಕೆಲವರಿಗೆ ಆ ಬಸ್ಸುಗಳು ಬರುವುದಕ್ಕೆ ಮುಂಚಿತವಾಗಿಯೇ ಟಿಕೆಟ್‌ಗಳನ್ನು ಕೊಟ್ಟುಬಿಡುತ್ತಾರೆ. ಕೆಲವರು ಬಸ್ಸಿನೊಳಕ್ಕೆ ಟಿಕೆಟ್ ತೆಗೆದುಕೊಳ್ಳದೆ ಹಾಗೆಯೇ ಹತ್ತಿ ಕುಳಿತು ಕೊಂಡಿದ್ದವರು ಇವರು ಏನು ಹೇಳಿದರೂ ಕೆಳಗೆ ಇಳಿಯಲೇ ಇಲ್ಲ. ನಾನು ಒಂದಾವರ್ತಿ ಎಲ್ಲಿಗೋ ಪ್ರಯಾಣ ಮಾಡಬೇಕೆಂದು ಆ ಬಸ್ ಸ್ಟ್ಯಾಂಡಿಗೆ ಹೋಗಿ ಘಂಟೆ ಗಟ್ಟಲೆ ಕಾದಿದ್ದು ಆ ಬಸ್ಸಿನಲ್ಲಿ ಒಂದು ಸೀಟನ್ನು ಪಡೆಯುವುದಕ್ಕೆ ಸಾಧ್ಯವಾಗದೆ ಹಾಗೇ ವಾಪಸ್ಸು ಬಂದು ಬಿಟ್ಟೆನು. ಆಗ ನನಗೇ ಹೀಗೆ ಬಸ್ಸಿನಲ್ಲಿ ಒಂದು ಸೀಟನ್ನು ಪಡೆದುಕೊಳ್ಳಲು ಸಾಧ್ಯವಾಗಲಿಲ್ಲವಲ್ಲ ಎಂದು ನಾಚಿಕೆಯಿಂದ ವಾಪಸ್ಸು ಹೊರಟು ಬಂದೆ; ಮಾರನೆಯ ದಿವಸ ಹೇಗೋ ಮಾಡಿಕೊಂಡು ಹೋದೆ. ಆ ಬಸ್ ಸ್ಟ್ಯಾಂಡುಗಳಲ್ಲಿರತಕ್ಕ ಏಜಂಟರು ಆ ಬಸ್ಸುಗಳು ಬರುವುದಕ್ಕೆ ಮುಂಚೆ ಟಿಕೆಟ್ಟುಗಳನ್ನು ಕೊಡಲು ಯಾವ ತೊಂದರೆಯೂ ಇರುವುದಿಲ್ಲ. ಹಾಗೆ ಟಿಕೆಟ್ಟುಗಳನ್ನು ಕೊಡುವ ವೇಳೆಯಲ್ಲಿ ಅವರಿಗೆ ಅಷ್ಟು ಬೇಕೆಂದರೆ ಒಂದು ಪ್ರಯಾರ್ಟಿ ಬೇಸಿಸ್ಸನ್ನು ಇಟ್ಟುಕೊಂಡು ಟಿಕೆಟ್ಟುಗಳನ್ನು ಕೊಡಬಹುದು. ಹೇಗೆ ಎಂದರೆ—ಈ ದಿವಸ ಬೆಂಗಳೂರಿಂದ ಒಂದು ಬಸ್ಸು ಮೈಸೂರಿಗೆ ಹೋಗುತ್ತದೆ ಎಂದಿದ್ದರೆ—ಆಗ ಯಾರು ಮೈಸೂರಿಗೆ ಹೋಗುತ್ತಾರೋ ಅಂಥ ಪ್ರಯಾಣಿಕರಿಗೆ ಮೊದಲು ಟಿಕೆಟ್ಟುಗಳನ್ನು ಕೊಡಲಿ, ಅನಂತರ ಮದ್ದೂರು ಅನಂತರ ಮಂಡ್ಯ, ಆಮೇಲೆ ಚನ್ನಪಟ್ಟಣ ಹೀಗೆ ಪ್ರಯಾಣ ಮಾಡತಕ್ಕವರನ್ನು ನೋಡಿಕೊಂಡು ಟಿಕೆಟ್ಟುಗಳನ್ನು ಕೊಟ್ಟರೆ ಅದರಲ್ಲೇನೂ ತೊಂದರೆ ಇರಲಾರದು. ಆದರೆ ಇವರು ಈ ದಿವಸ ನಡೆಸುತ್ತಿರುವಂಥ ವ್ಯವಸ್ಥೆ ತುಂಬ ಅಸಮಾಧಾನಕರವಾಗಿ ಕಾಣುತ್ತದೆ. ನಾವು ರೋಡ್ ಟ್ರಾನ್ಸ್‌ಪೋರ್ಟು ಬಸ್ಸುಗಳಲ್ಲಿ ಓವರ್ ಲೋಡ್ ಮಾಡಲೇ ಕೂಡದೆಂದು ಹೇಳುತ್ತಿದ್ದೇವೆ. ಆದರೆ ಅದನ್ನು ಸರ್ಕಾರದವರು ಇಲ್ಲಿಯತನಕ ತಡೆಗಟ್ಟಲು ಮನಸ್ಸು ಮಾಡಿದ ಹಾಗೆ ಕಾಣುವುದಿಲ್ಲ. ಇನ್ನಾದರೂ ಇದನ್ನು ನಿಲ್ಲಿಸುತ್ತಾರೆಂದು ನಾನು ಆಶಿಸಿ ಬಯಸುತ್ತೇನೆ. ಮೊದಲು ಒಂದು ಗೌರ್ನಮೆಂಟ್ ಬಸ್ ಸರ್ವೀಸನ್ನು ಬೆಂಗಳೂರಿಂದ ಶಿವಮೊಗ್ಗಕ್ಕೆ ಓಡಿಸುತ್ತಿದ್ದರು. ಆದರೆ ಏಕೋ ಅದನ್ನು ಇತ್ತೀಚೆಗೆ ನಿಲ್ಲಿಸಿ ಬಿಟ್ಟಿದ್ದಾರೆ. ಶಿವಮೊಗ್ಗಾ ಜಿಲ್ಲೆಯಲ್ಲಿ ಲಕ್ಕವಳ್ಳಿ ಪ್ರಾಜೆಕ್ಟು, ಶಿವಮೊಗ್ಗಾದ ಬಳಿ ಒಂದು ಸಕ್ಕರೆ ಕಾರ್ಖಾನೆ, ಭದ್ರಾವತಿ ಐರನ್ ವರ್ಕ್ಸ್ ಮತ್ತು ಹೈಡ್ರೋ ಎಲೆಕ್ಟ್ರಿಕ್ ಯೋಜನೆಗಳು ನಡೆಯುತ್ತಿರುವುದರಿಂದ ಅಲ್ಲಿ ಪ್ರಯಾಣಿಕರ ಸಂಖ್ಯೆ ದಿನದಿನಕ್ಕೂ ಜಾಸ್ತಿಯಾಗುತ್ತಿದೆ. ಈಗ ಪ್ರಯಾಣಿಕರ ಸಂಖ್ಯೆ ಒಂದಕ್ಕೆ ನೂರರಷ್ಟು ಜಾಸ್ತಿಯಾಗಿದೆಯೆಂದು ಕಂಡುಬರುತ್ತದೆ. ನಮ್ಮ ಮೈಸೂರು ರೈಲ್ವೆ ಆಡಳಿತ ಕೇಂದ್ರ ಸರ್ಕಾರದವರ ಕೈ ಸೇರಿದ ಮೇಲಂತೂ ರೈಲ್ವೆ ಪ್ರಯಾಣದ ತೊಂದರೆಗಳನ್ನು ಹೇಳಲಸಾಧ್ಯವಾಗಿದೆ. ರೈಲ್ವೆ ಮ್ಯಾಪಿನಲ್ಲಿ ಬಹಳ ಪ್ರಾಧಾನ್ಯವಾಗಿ ದಪ್ಪಗೆರೆಗಳಾಗಿ ಕಾಣುತ್ತಿರುವುದು ಯಾವ ರೈಲುಗಳೆಂದರೆ—ಬ್ರಾಡ್‌ಗೇಜ್‌ಗಳು, ಪಂಜಾಬ್ ಎಕ್ಸ್ ಪ್ರೆಸ್, ಗ್ರಾಂಡ್ ಟ್ರಂಕ್ ಎಕ್ಸ್‌ಪ್ರೆಸ್ ಇತ್ಯಾದಿ ರೈಲುಗಳು ಬಹಳ ಪ್ರಾಧಾನ್ಯವಾಗಿ ಕಾಣಿಸುತ್ತಿವೆ. ಆದಕ್ಕಾಗಿ ಕೇಂದ್ರ ಸರ್ಕಾರದವರ ಗಮನವೆಲ್ಲಾ ಆ ರೈಲುಗಳ ಮೇಲೆ ಇದ್ದು

ಹೋಗಿದೆ. ನಮ್ಮ ಮೀಟರ್ ಗೇಜ್‌ಗಳ ಲೈನೇ ಬಹಳ ಸೂಕ್ಷ್ಮವಾಗಿರುವಾಗ ಇನ್ನು ನಮ್ಮ ಶಿವಮೊಗ್ಗದಿಂದ ಬೇರೂರಿಗೆ ಬರತಕ್ಕಂಥ ನ್ಯಾರೊ ಗೇಜು ಗಳ ಲೈನಂತೂ ಎಷ್ಟು ಸಣ್ಣದಾಗಿದೆ ಎಂದರೆ ಕೇಂದ್ರದ ರೈಲ್ವೆ ಮಂತ್ರಿಗಳಾದ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಗಳ ಕಣ್ಣಿಗೆ ಬೀಳುವಷ್ಟು ಕೂಡ ದೊಡ್ಡದಾಗಿಲ್ಲ. ನಾನು ನೋಡುತ್ತಿರುವ ಹಾಗೆ ಈ ದಿವಸ ರೈಲ್ವೆ ಪ್ರಯಾಣ ಇನ್ನೂ ಹದಗೆಟ್ಟು ಹೋಗಿದೆ. ಜನರು ಪ್ಲಾಟ್‌ಫಾರಂನಿಂದ ಆ ಗಾಡಿಗಳೊಳಕ್ಕೆ ಕಿಟಕಿಗಳಿಂದ ತೂರಿ ಹತ್ತಿ ಒಬ್ಬರ ಮೇಲೊಬ್ಬರು ಕುಳಿತು ಪ್ರಯಾಣ ಮಾಡುತ್ತಿದ್ದಾರೆ. ಹಾಗೆ ತೂರಲು ದಕ್ಷತೆ ಇದ್ದವರಿಗೇ ಈ ದಿವಸ ಸರಾಗವಾಗಿ ಪ್ರಯಾಣ ಮಾಡಲು ಅವಕಾಶವಿದೆ. ಒಂದಾವರ್ತಿ ನಾನು ರೈಲಿಗೆ ಹೊರಟಿದ್ದವನು ಈ ನೂಕು ನುಗ್ಗಲನ್ನು ನೋಡಿ ಗಾಡಿ ಹತ್ತಲು ಸಾಧ್ಯವಾಗದೆ ಬೇರೂರು ಸ್ಟೇಷನ್ನಲ್ಲೇ ಉಳಿದು ಬಿಟ್ಟೆ. ಇದನ್ನು ನೋಡಿದರೆ ಅಲ್ಲಿ ಪ್ರಯಾಣಿಕರ ಸಂಖ್ಯೆ ಎಷ್ಟು ಜಾಸ್ತಿಯಾಗಿರುತ್ತದೆ ಎಂಬುದು ಗೊತ್ತಾಗುತ್ತದೆ. ಹೀಗಿದ್ದರೂ ರೈಲಿನಲ್ಲಿ ಜನರು ಕುಳಿತು ಪ್ರಯಾಣ ಮಾಡತಕ್ಕಂಥ ಸೌಲಭ್ಯಗಳಿರುವುದಿಲ್ಲ. ಅವುಗಳನ್ನು ಒದಗಿಸಲು ಅವರಿಗೆ ಮನಸ್ಸೂ ಇಲ್ಲ. 300 ಜನ ಕುಳಿತುಕೊಳ್ಳಲು ಅವಕಾಶವಿರುವ ರೈಲು ಬಂಡಿಯಲ್ಲಿ 3,000 ಜನರು ಪ್ರಯಾಣ ಮಾಡುತ್ತಿರುತ್ತಾರೆ. ಅಂಥ ಕಡೆಗಳಲ್ಲಿ ರೈಲುಗಳ ಸಂಖ್ಯೆಯನ್ನೇನೂ ಹೆಚ್ಚಿಸುವುದಾಗಲೀ—ಹೊಸ ಲೈನುಗಳನ್ನು ತೆರೆಯುವುದಾಗಲಿ, ಏನೂ ಇದ್ದ ಹಾಗೆ ಕಾಣುವುದಿಲ್ಲ, ಆದರೆ ಪರಿಸ್ಥಿತಿ ಹೀಗಿರುವಾಗ ಚಿತ್ರದುರ್ಗ ಜಿಲ್ಲೆಗೇನೋ, ಎಂದರೆ ಅದು ಮಂತ್ರಿಗಳಿರತಕ್ಕಂಥ ಜಿಲ್ಲೆ, ಅದಕ್ಕಾಗಿ ಅಲ್ಲಿಗೆ ಈ ಅನುಕೂಲತೆಗಳನ್ನು ಹೆಚ್ಚಿಸಲು ಪ್ರಯತ್ನ ಮಾಡಿದ್ದಾರೆ ಎಂದು ನಾವು ಹೇಳಬಾರದು, ಅಲ್ಲಿ ಈ ಬಸ್ಸಿನ ಅನುಕೂಲತೆ ಹೆಚ್ಚಿಸಿದ್ದಾರೆ. ಆದರೆ ನಮ್ಮ ಶಿವಮೊಗ್ಗ ಜಿಲ್ಲೆಗೂ ಸಹ ಬೆಂಗಳೂರಿನಿಂದ ಒಂದೆರಡು ಬಸ್ಸುಗಳನ್ನು ಬಿಟ್ಟರೆ ಬಹಳ ಅನುಕೂಲವಾಗುತ್ತದೆಂದು ನಾನು ಹೇಳುತ್ತೇನೆ.

ಇನ್ನು ಗ್ರ್ಯಾಜುಯಲ್ ಆಗಿ ಖಾಸಗೀ ಜನರು ಅಲ್ಲಿ ಇಲ್ಲಿ ನಡೆಸಿಕೊಂಡು ಹೋಗುತ್ತಾ ಇರತಕ್ಕ ದೊಡ್ಡ ದೊಡ್ಡ ರೂಟ್ಸ್ ಏನಿವೆ ಮತ್ತು ಹೆಚ್ಚು ಹಣ ಬರತಕ್ಕ, ಹೆಚ್ಚು ಜನ ಪ್ರಯಾಣ ಮಾಡತಕ್ಕ ರೂಟ್ಸ್ ಏನಿವೆ, ಅವನ್ನೆಲ್ಲಾ ಸರ್ಕಾರದವರೇ ನಿರ್ವಹಿಸುವುದಕ್ಕೆ ಈಗಿನಿಂದಲೇ ಒಂದು ಸರಿಯಾದ ಫಂಡು ಮತ್ತು ಸಿಬ್ಬಂದಿ ಇತ್ಯಾದಿಗಳನ್ನು ಸಿದ್ಧಮಾಡಿಕೊಂಡು ತಯಾರಾಗಿರಬೇಕಾಗಿದೆ. ಸಿ.ಪಿ.ಎಸ್., ಗಜಾನನ ಕಂಪೆನಿ, ದಕ್ಷಿಣ ಕನ್ನಡದ ಕೆಲವು ಕಂಪೆನಿಗಳು ಮತ್ತು ನಮ್ಮ ಸಂಸ್ಥಾನದಲ್ಲೂ ಒಂದೆರಡು ಕಂಪೆನಿಗಳು ಈಗ ಇವೆ. ಅವರಿಗೆ ಈ ವಿಧವಾದ ಅನುಕೂಲತೆಗಳನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಅವರು ಕಡಿಮೆ ಚಾರ್ಜಿನಲ್ಲಿ ನಡೆಸಿಕೊಂಡು ಹೋಗುವುದಕ್ಕೆ ಸಾಧ್ಯವಿಲ್ಲ. ಇತ್ತೀಚೆಗೆ ಸರ್ಕಾರದವರು ಹೊರಡಿಸಿರತಕ್ಕ ಆಜ್ಞೆ ಏನಿದೆ ಅದರಂತೆ ಹೊಗೆ ಬರಬಾರದು, ನೀರು ಸುರಿಯಕೂಡದು, ಹೊಸ ಬಸ್ಸುಗಳನ್ನೇ ಹಾಕಬೇಕು. ಆ ರೀತಿ ಹೊಸ ಬಸ್ಸುಗಳನ್ನು ಹಾಕಿ ಖಾಸಗಿಯವರಿಂದ ನಡೆಸುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಸರ್ಕಾರದವರು ಕ್ರಮವಾಗಿ ಎಲ್ಲಾ ಬಸ್ಸುಗಳನ್ನೂ ರಾಷ್ಟ್ರೀಕರಣ ಮಾಡತಕ್ಕ ಯೋಜನೆಯನ್ನು ಶೀಘ್ರವಾಗಿ ಕೈಕೊಳ್ಳಬೇಕೆಂದು ಹೇಳಿ ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಒಂದೇ ಒಂದು ಅಂಶ. ಕಾಂಗ್ರೆಸ್‌ನವರಾಗಿರಲಿ ಅಥವಾ ಪಿ.ಎಸ್.ಪಿ.ಯವರಾಗಿರಲಿ, ಯಾರೇ ಆಗಿರಲಿ, ಈ Landlords ಮತ್ತು ಟೆನೆಂಟ್ಸ್ ಸಿಸ್ಟಂನ್ನು ಇದರಲ್ಲಿ introduce ಮಾಡುವುದು ಬಹಳ ಹಾನಿಕರ ಎಂದು ನಾನು ತಿಳಿದುಕೊಂಡಿದ್ದೇನೆ. ಯಾರಿಗೆ ಬಸ್ಸನ್ನು ನಡೆಸುವುದಕ್ಕೆ ಸಾಧ್ಯವಿಲ್ಲವೋ ಅಂತಹವರು ಪರ್ಮಿಟ್ಟನ್ನು ಹೊಂದಿದ್ದರೆ ಅದು ಗೊತ್ತಾದ ತಕ್ಷಣ ಅದನ್ನು ತಕ್ಕೇರು ಎಂದು ಭಾವಿಸಿ ಅವರ ಹೆಸರಿನಲ್ಲಿರತಕ್ಕ ಲೈಸೆನ್ಸ್‌ನ್ನು ವಜಾ ಮಾಡಬೇಕು. ಆ ರೀತಿ ಮಾಡುವುದು ಬಹಳ ಸೂಕ್ತ.

ಕೊನೆಯದಾಗಿ ಆರ್. ಟಿ. ಎ. ಮತ್ತು ಎಸ್.ಟಿ.ಎ.ನಲ್ಲಿ ಯಾರೂ ತಪ್ಪು ತಿಳಿದುಕೊಳ್ಳುವುದಿಲ್ಲ ಎಂದು ಅಂದುಕೊಂಡಿದ್ದೇನೆ. ಕಾಂಗ್ರೆಸ್ ಸದಸ್ಯರನ್ನೇ ತಮಗೆ ಬೇಕಾದವರನ್ನೂ ನಾಮಕರಣ ಮಾಡುವುದು ಅಧಿಕವಾಗಿ ನಡೆದಿದೆ. Fairplay and justice ದೊರೆಯಬೇಕಾದರೆ ಅಂಥಾ ಸ್ಟ್ಯಾಚ್ಯುಟರಿ ಬಾಡೀಸ್‌ನಲ್ಲಿ ನಾಮಕರಣ ಮಾಡಿ. ಆದರೆ ದುರುಪಯೋಗವಾಗದ ರೀತಿಯಲ್ಲಿ ಮಾಡುವುದು ಒಳ್ಳೆಯದು ಎಂದು ಹೇಳುತ್ತೇನೆ.

*ಶ್ರೀ ಜಿ. ಶಿವಪ್ಪ (ಹೊಳಲ್ಕೆರೆ).—ಸ್ವಾಮಿ, ಈ ಡಿಮ್ಯಾಂಡನ್ನು ಸಮರ್ಥನೆ ಮಾಡುತ್ತಾ ಕೆಲವು ಅಂಶಗಳನ್ನು ಸರ್ಕಾರದವರ ಗಮನಕ್ಕೆ ತರಬೇಕೆಂದು ಆಶೆಪಡುತ್ತೇನೆ. ಮುಖ್ಯವಾಗಿ ಈ ರೋಡ್ ಟ್ರಾನ್ಸ್‌ಪೋರ್ಟ್ ಡಿಪಾರ್ಟ್‌ಮೆಂಟ್ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ ಎಂದು ಹೇಳಬೇಕಾಗಿದೆ. ಆ ರೀತಿ ಹೇಳಿದರೆ ಸರ್ಕಾರದವರನ್ನು ಹೊಗಳಿದಂತೆ ಆಗುವುದಿಲ್ಲ. ಇಲ್ಲಿ ಕೊಟ್ಟಿರತಕ್ಕ ಅಂಕಿಅಂಶಗಳೇ ಆ ವಿಚಾರವನ್ನು ವ್ಯಕ್ತಪಡಿಸುತ್ತವೆ. ಜನಾಭಿಪ್ರಾಯ ಏನಿದೆ ಎಂದರೆ ತಾವು ಯಾರನ್ನಾದರೂ ಕೇಳಿ. ಸಾರ್ವಜನಿಕರ ಅಭಿಪ್ರಾಯ ಮತ್ತು ಸದಸ್ಯರ ಅಭಿಪ್ರಾಯವಿರತಕ್ಕದ್ದು ಈ ಡಿಪಾರ್ಟ್‌ಮೆಂಟನ್ನು ಅಭಿವೃದ್ಧಿಗೊಳಿಸಬೇಕೆಂಬ ಅಭಿಪ್ರಾಯವಿದೆ. ಕೆಲವು ಮಾನ್ಯ ಸದಸ್ಯರು ಖಾಸಗೀ ಬಸ್ಸುಗಳಲ್ಲಿ ಬಹಳ ಅನಾನುಕೂಲವಿದೆ ಎಂದು ಹೇಳಿದರು. ಅದಕ್ಕೆ ಆ ಬಸ್‌ನವರಿಗೆ ಇರತಕ್ಕ ಕುಂದುಕೊರತೆಗಳೇ ಮುಖ್ಯ ಕಾರಣ ಎಂದು ಹೇಳಿದರೆ ತಪ್ಪಾಗಲಾರದು. ಪ್ರೈವೇಟ್ ಬಸ್‌ನವರಿಗೆ ಅನೇಕ ತೊಂದರೆಗಳಿವೆ. ಅದನ್ನೆಲ್ಲಾ ಹೇಳುವುದು ಈಗ ಅನಾವಶ್ಯಕ. ಪೋಲೀಸ್‌ನವರಿಂದ ಅವರಿಗೆ ಆಗತಕ್ಕ ಕಷ್ಟ ಒಂದು ಮತ್ತು ಹೆಚ್ಚು ಬಂಡವಾಳ ಹಾಕಿ ಸರಿಯಾದ ರೀತಿಯಲ್ಲಿ ನಡೆಸತಕ್ಕ ಶಕ್ತಿ ಅವರಲ್ಲಿ ಇಲ್ಲ. ಈ ರೀತಿ ಅನೇಕ ಕಾರಣಗಳಿಂದ ಅವರು ಜಯಪ್ರದವಾಗಿ ಆ ಬಸ್ಸುಗಳನ್ನು ನಡೆಸುವುದಕ್ಕೆ ಸಾಧ್ಯವಿಲ್ಲ. ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆಯವರು ಬಹಳ ಚೆನ್ನಾಗಿ ನಡೆಸುತ್ತಾ ಇದ್ದಾರೆ. ಬಸ್ಸುಗಳು ಸರಿಯಾದ ಕಾಲಕ್ಕೆ ಹೊರಡುತ್ತವೆ. ನಮ್ಮ ಚಿತ್ರದುರ್ಗದ ಲೈನ್‌ನಲ್ಲೇ ಈ ಇಲಾಖೆಯ $\frac{1}{3}$ ಭಾಗದಷ್ಟು ಆದಾಯ ಬರುತ್ತಾ ಇದೆ. ಅಲ್ಲಿ ಇನ್ನು 3-4 ಕಡೆಗೆ ಲೈನ್ ಹಾಕಲಿಕ್ಕೆ ಅವಕಾಶವುಂಟು. ಮೊನ್ನೆತಾನೆ ಗೃಹ ಸಚಿವರಾದ ಶ್ರೀ ಸಿದ್ಧವೀರಪ್ಪನವರು ಎರಡು ಲಕ್ಷ ರೂಪಾಯಿನ ವೆಚ್ಚದಲ್ಲಿ ಏರ್ಪಡಿಸಿರುವ ಒಂದು ವರ್ಕ್‌ಷಾಪನ್ನು ಪ್ರಾರಂಭಿಸಿದರು. ಚಿತ್ರದುರ್ಗದಿಂದ ಶಿವಮೊಗ್ಗಕ್ಕೆ ಬಸ್ಸು ಹಾಕುವುದು ಅತ್ಯಾವಶ್ಯಕ ಎಂದು ಹೇಳಿ ನಾನು ತಿಳಿದುಕೊಂಡಿದ್ದೇನೆ.

ಶ್ರೀ ಗೋಪಾಲಗೌಡರು ಮಾತನಾಡುತ್ತ ಶಿವಮೊಗ್ಗದಿಂದ ಬೆಂಗಳೂರಿಗೆ ಬಸ್ ಹಾಕಬೇಕೆಂದು ಹೇಳಿದರು. ಶಿವಮೊಗ್ಗದಿಂದ ಬೆಂಗಳೂರಿಗೆ 170 ಮೈಲಿ ದೂರವಾಗುತ್ತದೆ. ಬಹಳ ಬಸ್ಸುಗಳಲ್ಲಿ ದೂರ ಪ್ರಯಾಣಕ್ಕೆ ಅಷ್ಟು ಸುಖವಾಗಿರುವುದಿಲ್ಲ. ಶಿವಮೊಗ್ಗದಿಂದ ಚಿತ್ರದುರ್ಗದ ಮಾರ್ಗ ಬಹಳ ಒಳ್ಳೆಯ ಮಾರ್ಗ. ಯಾಕೆಂದರೆ

(ಶ್ರೀ ಜಿ. ಶಿವಪ್ಪ)

ಅಲ್ಲಿ ಲಕ್ಕವಳ್ಳಿಯಲ್ಲಿ ಬಹಳ ಕೆಲಸ ನಡೆಯುತ್ತಿದೆ. ಅನೇಕರು manganese mines ಕೆಲಸ ಮಾಡುತ್ತಿದ್ದಾರೆ. ಈ ಮಾರ್ಗ ಚೆನ್ನಾಗಿ ಸಂಪಾದನೆ ಕೊಡತಕ್ಕ ಮಾರ್ಗವಾಗಿರುವುದರಿಂದ ಶಿವಮೊಗ್ಗದಿಂದ ಚಿತ್ರದುರ್ಗಕ್ಕೆ ಸರ್ಕಾರಿ ಬಸ್ ಹಾಕಬೇಕು. ಮಾನ್ಯ ಗೃಹ ಸಚಿವರು 15 ದಿನಗಳೊಳಗಾಗಿ ಈ ಲೈನಿಗೆ ಆರ್ಡರು ಮಾಡುತ್ತೇನೆಂದು ಹೇಳಿದ್ದರು. ಇಲ್ಲಿಯವರೆಗೂ ಬಸ್ಸು ಹಾಕದೆ ಇರುವುದಕ್ಕೆ ಕಾರಣವೇನು ಎನ್ನುವುದು ಗೊತ್ತಾಗಲಿಲ್ಲ. ಇದೇ ರೀತಿಯಾಗಿ ಚಿತ್ರದುರ್ಗದಿಂದ ಬಳ್ಳಾರಿಗೂ ಒಂದು ಲೈನ್ ಹಾಕುವುದಕ್ಕೆ ಅವಕಾಶವಿದೆ. ಶ್ರೀಮತಿ ಬಳ್ಳಾರಿ ಸಿದ್ದಮ್ಮನವರು ಚಿತ್ರದುರ್ಗದಿಂದ ದಾವಣಗೆರೆಗೆ ಬಸ್‌ಗಳಿರುವುದು ಸಾಲದೆಂದು ಹೇಳಿದರು. ಇಷ್ಟರಲ್ಲಿಯೇ ವಿಶಾಲ ಮೈಸೂರು ಆಗುವುದರಿಂದ ಧಾರವಾಡ, ಬದರೆ ಮುಂತಾದ ಮುಖ್ಯ ಸ್ಥಳಗಳಿಗೂ ಬಸ್ಸುಗಳನ್ನು ಹಾಕಬೇಕು. ಈಗ ಎರಡು ಲಕ್ಷ ರೂಪಾಯಿಗಳ ಖರ್ಚಿನಲ್ಲಿ ಒಂದು workshop ಪ್ರಾರಂಭ ಮಾಡಿದ್ದಾರೆ. ಅದಕ್ಕೆ ಇನ್ನೂ ಹೆಚ್ಚಿನ ಹಣ ಹಾಕಿ ಉತ್ತಮವಾದ workshop ಇಟ್ಟುಕೊಳ್ಳಬೇಕಾದ ಅವಶ್ಯಕತೆ ಇದೆ ಎಂದು ಹೇಳುತ್ತೇನೆ.

ಶ್ರೀ ಆರ್. ಅನಂತರಾಮನ್ (ಚಾಮರಾಜಪೇಟೆ).—ಸ್ವಾಮಿ, ಅಧ್ಯಕ್ಷರೇ ನನ್ನ ಸ್ನೇಹಿತರು ಹೇಳಿದಹಾಗೆ ರೈಲ್ವೆ ಲೈನನ್ನು ಕೇಂದ್ರ ಸರ್ಕಾರದವರು ತೆಗೆದುಕೊಂಡಮೇಲೆ ನಮ್ಮ ಸಂಸ್ಥಾನಕ್ಕೆ ಬಹಳ ನಷ್ಟವಾಗಿದೆ. ಕಳೆದುಕೊಂಡಿರತಕ್ಕ ಹಣವನ್ನು ನಾವು ಇನ್ನೊಂದು ವಿಧದಲ್ಲಿ ಗಳಿಸಬೇಕು. ಮೈಸೂರು ಮುಂದೆ ವಿಶಾಲ ಮೈಸೂರು ಆದಮೇಲೆ ಇತರ ಭಾಗಗಳಲ್ಲಿಯೂ ನಮ್ಮ ಸರ್ಕಾರದವರು ಬಸ್ಸುಗಳನ್ನು ಹಾಕುವುದರಿಂದ ಸಂಪಾದನೆ ಮಾಡಬಹುದು. ಈ ಇಲಾಖೆ ಚೆನ್ನಾಗಿ ಕೆಲಸ ಮಾಡುತ್ತಿದೆ. ಎಷ್ಟೋ ಕಡೆ ನಷ್ಟವಾಗುತ್ತಿದೆ, ಚೆಕಿಂಗ್ ಇರುವುದಿಲ್ಲ ಮತ್ತು overloading ಹೆಚ್ಚಾಗಿದೆ. ಇವೆಲ್ಲವೂ ತಪ್ಪಬೇಕಾದದ್ದು ಅವಶ್ಯಕ. ಹೆಚ್ಚಾಗಿ ಹಣ ಸಂಪಾದನೆ ಮಾಡುವುದಕ್ಕಿಂತಲೂ ಜನತೆಗೆ ಸೌಕರ್ಯಗಳನ್ನು ಒದಗಿಸಬೇಕಾದದ್ದು ಅವಶ್ಯಕ. ಮತ್ತು ಹಾಗೆ ಮಾಡುವುದು ಸರ್ಕಾರದವರ ಕರ್ತವ್ಯ ಅದಕ್ಕೋಸ್ಕರ ತಾವು ಶೀಘ್ರವಾಗಿ ಬಸ್ ಲೈನ್‌ಗಳನ್ನು ಹೆಚ್ಚಿಸಬೇಕು ಮತ್ತು ಅದಷ್ಟುಮಟ್ಟಿಗೆ ಆದಾಯವನ್ನು ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡಬೇಕು.

ಇನ್ನು ರಸ್ತೆಗಳನ್ನು monopolise ಮಾಡತಕ್ಕ ವಿಚಾರ. ಸರ್ಕಾರದವರು monopolise ಮಾಡುವಾಗ ದೊಡ್ಡ ರಸ್ತೆಗಳನ್ನೂ ದೂರ ಪ್ರಯಾಣದ ಮಾರ್ಗಗಳನ್ನೂ ಮಾತ್ರ ತೆಗೆದುಕೊಳ್ಳಬೇಕೇ ಹೊರತು 10, 15, 20 ಮೈಲಿ ಇರುವ ಹತ್ತಿರ ಪ್ರಯಾಣದ ಮಾರ್ಗಗಳನ್ನು monopolise ಮಾಡಿಕೊಂಡರೆ ಬಹಳ ತೊಂದರೆಯಾಗುತ್ತದೆ. ಖಾಸಗಿ ಬಸ್ ಮಾಲಿಕರಿಗೆ ಬಹಳ ತೊಂದರೆಯಾಗುತ್ತದೆ. ಮುಂದೆ ವಿಶಾಲ ಮೈಸೂರಾಗುವುದರಿಂದ 300-400 ಮೈಲಿಗಳ ರಸ್ತೆಗಳು ಸಿಗುತ್ತವೆ. ಇಂಥ ಮಾರ್ಗಗಳನ್ನು ಸರ್ಕಾರದವರು ತೆಗೆದುಕೊಂಡು ಚಿಕ್ಕ ಚಿಕ್ಕ ಮಾರ್ಗಗಳನ್ನು ಖಾಸಗಿ ಬಸ್ ಮಾಲಿಕರಿಗೇ ಬಿಡಬೇಕು. ಈ ಲೈನ್‌ಗಳಲ್ಲಿ ನಮಗೆ ಬೇಕಾದಷ್ಟು ತೆರಿಗೆಗಳು ಬಂದು ಆದಾಯ ಹೆಚ್ಚುತ್ತದೆ. ಇನ್ನೂ ಒಂದು ಕೋಟಿರೂಪಾಯಿ motor vehicle taxes ಬರುತ್ತದೆ ಎಂದು ಹೇಳಬಹುದು. ಆದುದರಿಂದ ಸರ್ಕಾರದವರು ಇದನ್ನೆಲ್ಲ ಗಮನದಲ್ಲಿಟ್ಟುಕೊಂಡು ಬಸ್ ಮಾರ್ಗಗಳನ್ನು monopolise ಮಾಡಬೇಕು.

ಇನ್ನೊಂದು ವಿಚಾರವೇನೆಂದರೆ ನಮ್ಮ ಸ್ನೇಹಿತರು ಕೆಲವರು ಕಾಂಗ್ರೆಸ್ಸಿನವರಿಗೆ ಬಸ್ ಪರ್ಮಿಟ್‌ಗಳನ್ನು ಜಾಸ್ತಿಯಾಗಿ ಕೊಡುತ್ತಿದ್ದಾರೆಂದು ಹೇಳಿದರು. State Transport Authority ಮುಂದೆ ನಾನು ಲಾಯರಾಗಿ ಪ್ರಾಕ್ಟಿಸ್ ಮಾಡುತ್ತಿದ್ದೇನೆ. ಅಲ್ಲಿ ಏನು ಮಾಡುತ್ತಾರೆಂದರೆ ಮೊದಲು ಇಂಥ ಮಾರ್ಗಕ್ಕೆ ಅರ್ಜಿ ಹಾಕಬಹುದು ಎಂದು ಅಡ್ವರ್ಟೈಸ್ ಮಾಡುತ್ತಾರೆ. ಹತ್ತಾರು ಜನರ ಪೈಪೋಟಿ ಇರುತ್ತದೆ. ಅಲ್ಲಿ ಖಾಸಗಿಯವರೂ ಇದ್ದಾರೆ, ಕಾಂಗ್ರೆಸ್ಸಿನವರೂ ಇದ್ದಾರೆ.

ಶ್ರೀ ಬಿ. ಹುಚ್ಚೇಗೌಡ.—ಅದರಲ್ಲಿ ಕಾಂಗ್ರೆಸ್ಸಿನವರೇ ವಿಶೇಷವಾಗಿದ್ದಾರೆ.

ಶ್ರೀ ಆರ್. ಅನಂತರಾಮನ್.— ಅದರಲ್ಲಿ ಶ್ರೀ ಕೆ. ಪಟ್ಟಾಭಿರಾಮನ್‌ರವರಿದ್ದಾರೆ. ಅವರು ಒಬ್ಬರೇ ಸಾಕು. ಅವರು ಗಣ್ಯ ವ್ಯಕ್ತಿಗಳು. ಅದರಲ್ಲಿ ಬರೀ ಕಾಂಗ್ರೆಸ್ಸಿನವರಿಗೇ ಸ್ಥಾನಗಳನ್ನು ಕೊಟ್ಟಿಲ್ಲ. ಬಸ್ ಲೈನ್‌ಗಳಿಗೆ ಬಹಳ ಕಾಂಪಿಟಿಷನ್ ಇರುವಾಗ ಏನಾಗುತ್ತದೆಂದರೆ ಅಲ್ಲಿ ಏನಾದರೂ ಹೆಚ್ಚು ಕಡಿಮೆ ಆದರೆ ಸರ್ಕಾರದ ಮುಂದೆ ಅಪೀಲು ಬರುತ್ತಾರೆ. ಅಲ್ಲಿಯೂ ಅನಾನುಕೂಲವಾದರೆ ಹೈಕೋರ್ಟಿನಲ್ಲಿ ರಿಟ್ ಅರ್ಜಿ ಹಾಕುತ್ತಾರೆ. ಸುಮ್ಮನೆ, ಆಧಾರವಿಲ್ಲದೆ ಕಾಂಗ್ರೆಸ್ಸಿನವರಿಗೆ ಬಸ್ ಪರ್ಮಿಟ್ ಕೊಡುತ್ತಾರೆ ಎನ್ನುವುದು ನಿಜವಲ್ಲ. ಈ ರೀತಿಯ ಅಪಾದನೆಗಳನ್ನು ಮಾಡುವುದರಲ್ಲಿ ಎಳ್ಳಷ್ಟು ಹುರುಳಿಲ್ಲವೆಂದು ಕಾಣುತ್ತದೆ.

ಶ್ರೀ ಎಸ್. ಗೋಪಾಲಗೌಡ.—ತಾವೇನೋ ಹೇಳಿದಿರಿ. ಆದರೆ ಅದರಲ್ಲಿ ಎಷ್ಟು percentage ಸಿಕ್ಕುತ್ತಾರೆಂದು ಹೇಳುತ್ತೀರಾ? ಕಾಂಗ್ರೆಸ್ ಎಂದರೆ ಸುಮ್ಮನೆ ಕಾಂಗ್ರೆಸ್ಸಿಗೆ ಬೆಂಬಲ ಕೊಡುವವರ ಪ್ರಶ್ನೆ ಬಿಡಿ. ಯಾವುದಾದರೂ ಸಂದರ್ಭದಲ್ಲಿ ಬೆಂಬಲ ಕೊಡುವವರನ್ನೂ ಕಾಂಗ್ರೆಸ್ ಎಂದು ನಾನು ಹೇಳುವುದಿಲ್ಲ. Full fledged Congress ನವರು ಎಷ್ಟು ಜನರಿದ್ದಾರೆ ಮತ್ತು non-Congressನವರು ಎಷ್ಟು ಜನರಿದ್ದಾರೆ?

*ಶ್ರೀ ಎ. ಭೀಮಪ್ಪನಾಯಕ್ (ಮೊಳಕಾಲ್ಮೂರು).—ಮೆಂಬರುಗಳೆಲ್ಲ ಕಾಂಗ್ರೆಸ್ಸಿನವರೇ ಇದ್ದಾರೆ, ಬಸ್ ಪರ್ಮಿಟ್‌ಗಳನ್ನೆಲ್ಲ ಅವರಿಗೇ ಕೊಡುತ್ತಾರೆ ಎನ್ನುವಾಗ ಅವರ percentage ಏನೆಂದು ತಿಳಿಸಿದರೆ ಅದನ್ನು ಒಪ್ಪಬಹುದು. ಯಾರಲ್ಲಿ ನಂಬಿಕೆ ಇಟ್ಟುಕೊಂಡಿರುತ್ತಾರೆಯೋ ಯಾರು ಕೆಲಸ ಮಾಡುತ್ತಾರೆಯೋ ಅವರಿಗೆ ಕೊಡುತ್ತಾರೆ. ಅವರು ಕಾಂಗ್ರೆಸ್‌ನವರಾಗಬಹುದು, ನಾನ್-ಕಾಂಗ್ರೆಸ್‌ನವರಾಗಬಹುದು. ಮೊನ್ನೆ ದಿವಸ ಶ್ರೀ ಶ್ರೀನಿವಾಸಯ್ಯಂಗಾರ್‌ರವರನ್ನೂ ಮತ್ತು ಮಹಮದ್ ಇಮಾಂರವರನ್ನೂ ಎರಡನೆಯ ಪಾಂಚವಾರ್ಷಿಕ ಯೋಜನೆ ಸಂಬಂಧದಲ್ಲಿ ಆಲೋಚನೆ ಮಾಡುವಾಗ ಹಾಕಿಕೊಂಡಿದ್ದರು. ಅದರಲ್ಲಿ ತಪ್ಪೇನು? ಹೆಚ್ಚಾಗಿ ಕಾಂಗ್ರೆಸ್‌ನವರು ಮೆಂಬರುಗಳಾಗಿದ್ದ ಮಾತ್ರಕ್ಕೆ ತಪ್ಪೇನು? ಬಸ್ ಲೈನ್‌ಗಳೆಲ್ಲವನ್ನೂ ಕಾಂಗ್ರೆಸ್ಸಿನವರಿಗೇ ಕೊಟ್ಟಿದ್ದಾರೆ ಎಂದರೆ ಅದು ಬೇರೆ ಮಾತಾಗುತ್ತದೆ.

ಶ್ರೀ ಆರ್. ಅನಂತರಾಮನ್.—ಈಗ ಸರ್ಕಾರಕ್ಕೆ ಮತ್ತು ಹೈಕೋರ್ಟಿಗೆ ರಿಟ್ ಹಾಕುವ ಸಂದರ್ಭವಿರುವಾಗ ಅದಕ್ಕೆ ಕಾರಣವಿರಬೇಕು. ಹೊಸ ಲೈನು

ಕೊಡಬೇಕಾದರೆ ಅದನ್ನು ಸರಿಯಾಗಿ ಪರಿಶೀಲಿಸಿ ಕೊಡಬೇಕು. ಇಲ್ಲದಿದ್ದರೆ ಸೀದಾ ಹೈಕೋರ್ಟಿಗೆ ಹೋಗುತ್ತಾರೆ. ಆದ್ದರಿಂದ ಕೋರ್ಟಿಗೆ ಹೋಗಲು ಅವಕಾಶ ಕೊಡುವುದು ಚೆನ್ನಾಗಿಲ್ಲ.

ಇನ್ನೊಂದು ಬಿ. ಟಿ. ಸಿ. ನ್ಯಾಷನಲೈಸ್ ಮಾಡುವ ವಿಚಾರ. ಬೆಂಗಳೂರಿನಲ್ಲಿ ಸಾಮಾನ್ಯವಾಗಿ ಎಲ್ಲಾ ಕಡೆಯೂ ಟಾರು ರಸ್ತೆಯಿದೆ. ಈಗ ಬಸ್ಸುಗಳು ಕಡಮೆಯಿರುವುದರಿಂದ ಪ್ರಯಾಣಿಕರಿಗೆ ಬಹಳ ತೊಂದರೆಯಾಗಿದೆ. ಸರ್ಕಾರದವರು ಇದನ್ನು ವಹಿಸಿಕೊಂಡು ಈಗಿರುವುದರ ಎರಡರಷ್ಟು ಬಸ್‌ಗಳನ್ನು ಹಾಕಿ ಬೇಕಾದಷ್ಟು ಸಂಪಾದನೆ ಮಾಡಬಹುದು. ಚಿಕ್ಕ ಬಸ್ ರೂಟುಗಳನ್ನು ಮನಾಪಲೈಸ್ ಮಾಡುವುದನ್ನು ಬಿಟ್ಟು ಇದಕ್ಕೆ ಹೆಚ್ಚು ಗಮನ ಕೊಟ್ಟರೆ ದಿವಸಕ್ಕೆ ಈಗಿರುವ ಸುಮಾರು 20 ಸಾವಿರ ರೂಪಾಯಿಗಳ ಆದಾಯವನ್ನು ಹೆಚ್ಚಿಸಿಕೊಳ್ಳಬಹುದು; ಈಗಿರುವುದರ ಎರಡರಷ್ಟು ಬಸ್ಸುಗಳನ್ನು ಹಾಕಿದರೆ ಸುಮಾರು 40 ಸಾವಿರ ರೂಪಾಯಿಗಳ ಆದಾಯ ಬರಬಹುದು. ಇಷ್ಟು ಹೇಳಿ ಸರ್ಕಾರದವರು ಈ ಇಲಾಖೆಯನ್ನು ಚೆನ್ನಾಗಿ ನಡೆಸಬೇಕು, ಇದು ಬಹಳ ಆದಾಯ ಬರುವ ಇಲಾಖೆ, ಶ್ರೀ ತಿಮ್ಮಪ್ಪಗೌಡರು ಹೇಳಿದಂತೆ ಈಗ ಸುಮಾರು 12 ಲಕ್ಷ ರೂಪಾಯಿಗಳ ಆದಾಯ ಬರುತ್ತಿದೆ, ಚೆನ್ನಾಗಿ ಕೆಲಸ ಮಾಡಿದರೆ ಇನ್ನೂ ಹೆಚ್ಚಾಗಿ ಬರುತ್ತದೆ ಎಂದು ಸೂಚಿಸುತ್ತೇನೆ.

*Sri M. RAJASEKHARA MURTHY (Yelandur).—Sir, I want to make a few observations on this Demand. I have been hearing Sri S. Srinivasa Iyengar for the last four years and he has been repeating the same old argument in the same old fashion. He has levelled allegations against private bus owners; but, I do not take notice of that. Sri Srinivasa Iyengar is a money-lender and not a businessman.

Sri S. SRINIVASA IYENGAR.—On a point of personal explanation. I must offer my explanation when the Hon'ble Member says something which I did not say. He is naming me as a money-lender. It is not so. He is operating six routes; I do not know whether he holds six permits. He is a Congressman.

Sri M. RAJASEKHARA MURTHY.—I am operating four buses and hold four permits. I became a permit holder even before the Congress Government came into power.

Sri S. SRINIVASA IYENGAR.—Congress Government is in existence in Mysore for the past nine years; he has become an operator recently.

Sri M. RAJASEKHARA MURTHY.—I became a bus owner prior to Congress Government came to power.

Sri S. SRINIVASA IYENGAR.—Probably, you became a bus owner when you were still a student! (*Laughter*)

Sri M. RAJASEKHARA MURTHY.—Sir, Sri Y. M. Chandrasekhariah referred to an important thing, that is, the journey in private buses. It is true, Sir, that private operators are running old buses; they are not putting new buses on the routes. The reason as to why they are not doing it is a point that this House should consider. It is not because that private operators are not willing to put new buses on the routes. It is not because private operators are incapable of investing money on new buses. It is not because that private operators are unwilling to provide amenities to the travelling public. But, it is because there is no certainty of their future in the scheme of nationalisation. It is because there is no sense of security in the mind of private operators regarding the future of their business. If you go into the reasons, you will know why the private operators are not putting new buses on the road. The Government Transport Department every now and then put some buses on certain routes. Immediately they withdraw those buses and put them on some other routes. They change the routes as frequently as ladies change their dress. Because they have no sense of security, private operators are not coming forward to withdraw old buses and put new buses. Putting new buses will involve very heavy investment. The cost of the chassis will be about Rs. 27,000 and the cost of constructing the body will be Rs. 8,000. The total investment comes to Rs. 35,000. Suppose he puts a new bus on the route; to-morrow the Government may say that they are going to put their own bus on the route; then what is he going to do with the bus? That is a point to be considered. It is because of this difficulty, old buses are running on the road and not because private operators are unwilling, or incapable of putting a new bus. I request the Government to specify the routes that they are going to take in future and tell the private operators that for certain period to come, they are not going to take up certain routes

(SRI M. RAJASEKHARA MURTHY)

and that they will take up the routes on such and such dates, so that the private operators may be definite about the future of their business.

ಶ್ರೀ ಟಿ. ಎನ್. ಮುಡಲಗಿರಿಗೌಡ (ಕುಣಿಗಲ್).—
ಸ್ವಾಮಿ, ಈಗ ನಾನು ಕೆಲವು ಸಲಹೆಗಳನ್ನು ಕೊಡ
ಬೇಕೆಂಬ ಉದ್ದೇಶದಿಂದ ಎರಡು ಮಾತುಗಳನ್ನಾಡ
ಬೇಕೆಂದಿರುತ್ತೇನೆ. ಈಗಾಗಲೇ ಅನೇಕರು ಈ
ಸರ್ಕಾರಿ ಬಸ್ಸುಗಳ ಬಗ್ಗೆ ಅನೇಕ ವಿಷಯಗಳನ್ನು
ತಿಳಿಸಿದ್ದಾರೆ. ಅದರಲ್ಲಿ ಕೆಲವು ನಿಜಾಂಶಗಳೂ ಇವೆ.
ಈ ಸರ್ಕಾರಿ ಬಸ್ಸುಗಳಲ್ಲಿ ಖಾಸಗೀ ಬಸ್ಸುಗಳಲ್ಲಿ
ಇರುತ್ತಿದ್ದುದಕ್ಕಿಂತ ಹೆಚ್ಚಿನ ಓವರ್ ಲೋಡ್ ಇರು
ತ್ತೆಂದು ಕೆಲವರು ಟೀಕೆ ಮಾಡಿರುತ್ತಾರೆ. ಆದರೆ
ಸರ್ಕಾರಿ ಬಸ್ಸುಗಳ ಬಗ್ಗೆ ಟೀಕೆ ಮಾಡಬಾರದು
ಎಂದು ಹೇಳತಕ್ಕವರು ಕೂಡ ಈ ಬಗ್ಗೆ ಕೊಂಚ
ನಿಜಾಂಶವಿದೆ ಎಂದು ಒಪ್ಪಿಕೊಳ್ಳಬಹುದು. ಈ ದಿವಸ
ಸರ್ಕಾರದವರು ಈ ಬಾಬಿನಲ್ಲಿ 12 ಲಕ್ಷ ರೂಪಾಯಿಗಳ
ಆದಾಯವನ್ನು ತೋರಿಸಿದ್ದಾರೆ. ಆದರೆ ನನಗೆ ಅನಿಸು
ತ್ತಿದೆ ಈ ರೂಟುಗಳು ಮನಾಪಲಿ ಆಗುವುದಕ್ಕೆ ಮುಂಚೆ
ಖಾಸಗೀ ಬಸ್ಸಿನವರು ಪ್ರಯಾಣ ದರವನ್ನು ಎಷ್ಟು
ಹಾಕುತ್ತಿದ್ದರೋ ಈ ದಿವಸ ಅದಕ್ಕಿಂತ ಹೆಚ್ಚಿನ ದರ
ವನ್ನು ಇವರು ಹಾಕಿದ್ದಾರೆ ಎಂದು ತಿಳಿಯಬರುತ್ತದೆ.
ಇವರು ಹಾಕಿರತಕ್ಕ ರೇಟು ಬಹಳ ಮಿತಿಮೀರಿ
ಹೋಗಿದೆ. ತುಮಕೂರಿನಿಂದ ಬೆಂಗಳೂರಿಗೆ ನಾಲ್ಕಾಣೆ
ಛಾರ್ಜು ಬಹಳ ದಿವಸಗಳಿಂದಲೂ ಅಂದರೆ 10-20
ವರ್ಷಗಳಿಂದಲೂ ಇತ್ತು. ಈಗ ಅದು 1-13-0 ರೂ.
ಆಗಿದೆ. ಆದರೆ ಈ ಹಿಂದೆ ಅಷ್ಟು ಓವರ್ ಲೋಡ್
ಕೂಡ ಇರುತ್ತಿರಲಿಲ್ಲ. ಆದಾಗ್ಗೂ ಆ ದಿವಸ ಖಾಸಗೀ
ಬಸ್ ಮಾಲೀಕರುಗಳಿಗೆ ಎಷ್ಟರಮಟ್ಟಿನ ಆದಾಯ
ಬರುತ್ತಿತ್ತು ಎನ್ನುವುದನ್ನು ನಾವೀಗ ನೋಡಬೇಕಾ
ಗಿದೆ. ಆದರೆ ಈ ದಿವಸ ಸರ್ಕಾರದವರು ಶಿಬ್ಬಂದಿ
ವೆಚ್ಚ; ಓವರ್‌ಹೆಡ್ ಛಾರ್ಜಸ್, ಇತ್ಯಾದಿ ಖರ್ಚು
ಗಳನ್ನು ಕಳೆದು 12 ಲಕ್ಷ ರೂಪಾಯಿಗಳ ಆದಾಯ
ವನ್ನು ತೋರಿಸಿದ್ದಾರೆಂದರೆ ಇದೇನು ಅರ್ಥ!
ಖರ್ಚು ಬಾಬುಗಳನ್ನು ಕಮ್ಮಿ ಮಾಡಬೇಕು, ದಕ್ಷತೆ
ಯನ್ನು ಹೆಚ್ಚಿಸಬೇಕು, ಜನರಿಗೆ ಸೌಕರ್ಯಗಳನ್ನು
ಜಾಸ್ತಿ ಮಾಡಬೇಕು ಅದಕ್ಕಾಗಿ ರೇಟುಗಳನ್ನು ಜಾಸ್ತಿ
ಮಾಡಿದ್ದೇವೆ ಎಂದು ಹೇಳಿದರೆ ಇದು ಅರ್ಥವಿಲ್ಲದ
ಮಾತು. ಇವರು ನ್ಯಾಯವಾಗಿ ಈ ರೇಟನ್ನು ಇನ್ನೂ
ಕಡಮೆ ಮಾಡಬೇಕು. ಸಿಬ್ಬಂದಿಯನ್ನು ತಗ್ಗಿಸಬೇಕ,
ದಕ್ಷತೆಯನ್ನು ಹೆಚ್ಚಿಸಬೇಕು, ಪ್ರಯಾಣ ಮಾಡತಕ್ಕ
ಜನರಿಗೆ ಒಂದು ಕ್ರಮವಾದ ವ್ಯವಸ್ಥೆಯನ್ನೇರ್ಪಡಿಸ
ಬೇಕು. ಬೆಂಗಳೂರಿನಲ್ಲಿ ಕಾರ್ಪೊರೇಷನ್ ಬಸ್
ಸ್ಟ್ಯಾಂಡಿನಲ್ಲಿ ಯಾವ ರೀತಿ ಕ್ಯೂ ಸಿಸ್ಟಂ ಮಾಡಿದ್ದಾರೆ
ಆ ರೀತಿ ಮಾಡುವುದು ಒಳ್ಳೆಯದು ಅಥವಾ ಮೊದಲೇ
ಬಸ್‌ಸ್ಟ್ಯಾಂಡಿಗೆ ಹೋಗಿ ಎಲ್ಲಿ ಬುಕ್ಕಿಂಗ್ ಆಫೀಸು
ಇದೆ ಅಲ್ಲಿ ಟಿಕೆಟ್ ಕೊಂಡುಕೊಳ್ಳಲು ಅವಕಾಶವಿರ
ಬೇಕು. ಈಗ ಬಸ್ ಸ್ಟ್ಯಾಂಡಿಗೆ ಬರುವವರೆಗೂ
ಟಿಕೆಟ್ ಕೊಂಡುಕೊಳ್ಳಲು ಅವಕಾಶವಿರುವುದಿಲ್ಲ.
ಬಸ್ಸು ಸ್ಟ್ಯಾಂಡಿಗೆ ಬಂದಾಗ ಗುಂಪಿನಲ್ಲಿ ಯಾರು
ಗೌರವಬಿಟ್ಟು ಮುಂದೆ ನುಗ್ಗಿ ಬಸ್ಸಿನೊಳಗೆ ಹೋಗು
ತ್ತಾರೆಯೋ ಅವರಿಗೆ ಸೀಟು ಸಿಕ್ಕುತ್ತದೆ. ಇಲ್ಲದೇ
ಇದ್ದರೆ 50 ಮೈಲಿ, 100 ಮೈಲಿ ನಿಂತುಕೊಂಡೇ
ಪ್ರಯಾಣ ಮಾಡಬೇಕಾಗುತ್ತದೆ. ಇದನ್ನು ಸ್ವಲ್ಪ
ಕ್ರಮಪಡಿಸಬೇಕು.

ಈ ವರ್ಷ ಈ ರೋಡ್ ಟ್ರ್ಯಾನ್ಸ್‌ಪೋರ್ಟ್ ಇಲಾಖೆ
ಯಲ್ಲಿ ಬಸ್ಸುಗಳ ಬಾಡಿಬಿಲ್ಡ್ ಮಾಡುತ್ತಾ ಇದ್ದೀರಿ.
ಮೊದಲು ಪ್ರಾರಂಭದಲ್ಲೇನೋ ಕೆಲವು ವರ್ಷ ಬಸ್ಸು
ಗಳನ್ನೇ ಕೊಂಡುಕೊಂಡಿರಿ. ಆಮೇಲೆ ತಾವೇ
ಬಿಲ್ಡ್ ಮಾಡುವುದು ಉಚಿತ ಎಂದು ಹೇಳಿ ಬಿಲ್ಡ್
ಮಾಡುತ್ತಾ ಇದ್ದೀರಿ. ಒಪ್ಪಿಕೊಳ್ಳುತ್ತೇನೆ. ಅದಕ್ಕೆ
ಬೇಕಾದ ಸಾಮಾನುಗಳು ಕೆಲವು ಭದ್ರಾವತಿ ಐರನ್
ವರ್ಕ್ಸಿನಲ್ಲಿ ಸಿಕ್ಕುತ್ತವೆ ಮತ್ತೆ ಕೆಲವು ಪದಾರ್ಥಗ
ಳನ್ನು ಹೊರಗಡೆ ಕೊಂಡುಕೊಳ್ಳಬೇಕಾಗುತ್ತದೆ.
ಸರ್ಕಾರದ ನಾನಾ ಇಲಾಖೆಗಳವರು ತಮಗೆ ಬೇಕಾದ
ಸಾಮಾನುಗಳನ್ನು ಸ್ಟೋರ್ಸ್ ಪರ್ಚೇಸ್ ಕಮಿಟಿಯವರ
ಮೂಲಕ ಕೊಂಡುಕೊಳ್ಳುತ್ತಾರೆ. ಅದೇ ರೀತಿ
ಇಲ್ಲಿಯೂ ಸಹ ಒಂದು ನಟ್ ಆಗಲೀ, ಹಾಮರ್
ಆಗಲಿ ಕೊಂಡುಕೊಳ್ಳಬೇಕಾಗಿದ್ದರೆ ಸ್ಟೋರ್ಸ್
ಪರ್ಚೇಸ್ ಕಮಿಟಿಯವರ ಮೂಲಕ ಕೊಂಡುಕೊಳ್ಳತಕ್ಕ
ಪದ್ಧತಿ ಇಲ್ಲ ಎಂದು ಕೇಳಿದ್ದೇನೆ. ಸ್ಟೋರ್ಸ್ ಪರ್ಚೇಸ್
ಕಮಿಟಿ ಮೂಲಕ ಸಾಮಾನುಗಳನ್ನು ಕೊಂಡು ಬಾಡಿ
ಬಿಲ್ಡ್ ಮಾಡುವುದಿಲ್ಲ ಎನ್ನುವುದು ನನ್ನ ಗಮನಕ್ಕೆ
ಬಂದಿದೆ. ಬಾಡಿಬಿಲ್ಡ್ ಮಾಡಬೇಕಾದರೆ ಟೆಂಡರ್ಸ್
ಕಾಲ್‌ಫಾರ್ ಮಾಡಿ ಯಾವುದಾದರೂ ಒಂದು ಕಂಪೆ
ನಿಗೆ ವಹಿಸಬೇಕು. ಇಲ್ಲದೇ ಹೋದರೆ ತಾವೆ ಬಾಡಿ
ಬಿಲ್ಡ್ ಮಾಡುವಾಗ ಪ್ರತಿಯೊಂದು ಸಾಮಾನನ್ನು ಕೂಡ
ರೂಲ್ಸ್ ಪ್ರಕಾರ ಸ್ಟೋರ್ಸ್ ಪರ್ಚೇಸ್ ಕಮಿಟಿ ಮೂಲ
ಕವೇ ಕೊಂಡು ಅನ್ಯಾಯವಾಗುವುದಕ್ಕೆ ಅವಕಾಶ
ವಾಗದ ರೀತಿಯಲ್ಲಿ ಏರ್ಪಾಡು ಮಾಡಬೇಕು. ಹಾಗೆ
ಮಾಡದಿದ್ದರೆ ಬಹಳವಾಗಿ ಅಕ್ಷೇಪಣೆಗಳಿಗೆ, ಅನು
ಮಾನಕ್ಕೆ ಅವಕಾಶವಾಗುತ್ತದೆ ಎಂದು ನಾನು
ಸೂಚನೆ ಮಾಡುತ್ತೇನೆ.

ಖಾಸಗಿ ಬಸ್ಸಿನ ವಿಚಾರ ಹೇಳಿದರು. ಈ ಖಾಸಗೀ
ಬಸ್ಸುಗಳನ್ನು ವರ್ಷಕ್ಕೊಮ್ಮೆ ಇನ್‌ಸ್ಪೆಕ್ಟ್ ಮಾಡು
ತ್ತಾರೆ. ಆ ಬಸ್ಸುಗಳು ಐದು ವರ್ಷ ಆರು ವರ್ಷ
ಹತ್ತು ವರ್ಷ ಕೆಲಸಮಾಡಿ ಅವುಗಳ life ಎಲ್ಲಾ ಆಗಿ
ಹೋಗಿರುತ್ತದೆ. ಇನ್ಸ್‌ಪೆಕ್ಷನ್ ಮಾಡುವ ಕಾಲಕ್ಕೆ
ಎಷ್ಟುಬೇಕೋ ಅಷ್ಟು ರಿಪೇರಿ ಮತ್ತೊಂದು ಮಾಡಿ
ಕೊಂಡು ಬಸ್ಸನ್ನು ತರುತ್ತಾರೆ. ಇನ್ಸ್‌ಪೆಕ್ಷನ್ ಆದ
15 ದಿವಸ ಅಥವಾ 2-3 ತಿಂಗಳೊಳಗೆ ಆ ಬಸ್ಸುಗಳು
ದಾರಿಯಲ್ಲೇ ಕೆಟ್ಟುಹೋಗಿ ನಿಂತಿರುವ ಸಂದರ್ಭಗ
ಳನ್ನು ಅನೇಕವಾಗಿ ನಾವು ನೋಡಿದ್ದೇವೆ. ಬ್ರೇಕ್
ಇನ್ಸ್‌ಪೆಕ್ಟರು ಎಂದು ಇರುತ್ತಾರೆ. He is an
Inspector who puts break for running
of buses ಎಂದು ಜನಗಳು ಹೇಳುತ್ತಾರೆ. ಈ ರೀತಿ
ಎಲ್ಲಾ ಸೂಪರ್‌ವಿಷನ್ ಇದ್ದರೂ ಕೂಡ ಸರಿಯಾದ
ವ್ಯವಸ್ಥೆ ಆಗುತ್ತಿಲ್ಲ. ಆದ್ದರಿಂದ ಅದನ್ನು ಸರಿಯಾದ
ರೀತಿಯಲ್ಲಿ ನೋಡಿಕೊಳ್ಳಬೇಕು.

5-30 P.M.

ರೋಡ್ ಟ್ರಾನ್ಸ್‌ಪೋರ್ಟಿನಲ್ಲಿರುವ ಡ್ರೈವರುಗಳ
ಮತ್ತು ಕಂಡಕ್ಟರುಗಳ ವಿಚಾರವನ್ನು ಶ್ರೀಮಾನ್
ತಿಮ್ಮಪ್ಪಗೌಡರು ಹೇಳಿದರು. ಇವರ ಬಗ್ಗೆ ನಾನು
ಕೇಳಿರುವ ವಿಷಯವನ್ನು ತಿಳಿಸುತ್ತೇನೆ. ಡ್ರೈವರು
ಗಳೂ ಮತ್ತು ಕಂಡಕ್ಟರುಗಳೂ ಯಾವ ಯಾವ ರೀತಿ
ಯಲ್ಲಿ ನಡೆದುಕೊಳ್ಳಬೇಕೋ ಆರೀತಿ ನಡೆದುಕೊಳ್ಳದೆ
ಹೋದರೆ ಅವರು ಬಹಳ ದಿವಸ ಕೆಲಸ ಮಾಡುವುದಕ್ಕೆ
ಸಾಧ್ಯವಿಲ್ಲ. ಯಾರಾದರೂ ಕಟ್ಟುನಿಟ್ಟಾಗಿ ಕೆಲಸ
ಮಾಡಿಕೊಂಡು ಹೋಗತಕ್ಕ ಕಂಡಕ್ಟರ್ ಇದ್ದರೆ
ಅಕಸ್ಮಾತ್ತಾಗಿ ಅವನು ಟಿಕೆಟ್ ಕೊಡುತ್ತಿರುವಾಗಲೇ
ಏನಾದರೂ ಒಂದು ಕಾರಣದಿಂದ ಅವನನ್ನು ಹಿಡಿದು,

ಅವನ ಮೇಲೆ ಇಲ್ಲದ ಸಲ್ಲದ ಅಪಾದನೆಗಳನ್ನು ಮಾಡಿ
ಅವನನ್ನು ಮನೆಗೆ ಕಳುಹಿಸತಕ್ಕ ಸಂದರ್ಭಗಳಿರು
ತ್ತವೆ. ಉದ್ದೇಶಪೂರ್ವಕವಾಗಿಯೇ ಕಂಡಕ್ಟರುಗಳನ್ನು
ಮನೆಗೆ ಕಳುಹಿಸತಕ್ಕ ಸಂದರ್ಭಗಳಿರುತ್ತವೆ. ಆದುದ
ರಿಂದ ನಿಜವಾಗಿಯೂ ಚೆನ್ನಾಗಿ, efficient ಆಗಿ,
ಕೆಲಸಮಾಡತಕ್ಕ ಕಂಡಕ್ಟರುಗಳು ಯಾರು ಯಾರು
ಇರುತ್ತಾರೆಯೋ ಅಂಥವರಿಗೆ ರಕ್ಷಣೆ ಇರಬೇಕು,
ಅಂಥವರನ್ನು ಚೆನ್ನಾಗಿ ಪಾಲಿಸಬೇಕು ಮತ್ತು
ಅಂಥವರು ಹೆಚ್ಚು ಹೆಚ್ಚಾಗಿ ಬೇಕು. ಇದಕ್ಕೆ ಏನು
ರಕ್ಷಣೆ ಮಾಡಬೇಕು, ಯಾವ ರೀತಿ ರಕ್ಷಣೆಯನ್ನು
ಕೊಡಬೇಕು ಎಂದು ಯೋಚನೆ ಮಾಡಬೇಕು. ಬರೀ
overloading ಹಾಕುವುದರಿಂದ ಹೆಚ್ಚಾಗಿ ಹಣ
ಬಂದು ಅದರಿಂದ ನಮಗೆ ಹೆಚ್ಚಿನ ಆದಾಯ ಬರುತ್ತದೆ
ಎಂದು ಭಾವಿಸಬಾರದು. Overloading ಹಾಕು
ವುದರಿಂದ ಖಂಡಿತವಾಗಿ ಸರ್ಕಾರಕ್ಕಾಗಲಿ, ಸಾರ್ವ
ಜನಿಕರಿಗಾಗಲಿ, ಆದಾಯ ಹೆಚ್ಚಾಗಿ ಬರುವುದಿಲ್ಲ.
Efficiency ಹೆಚ್ಚು ಮಾಡಿದರೆ ಮಾತ್ರ ಆದಾಯ
ಹೆಚ್ಚಾಗಿ ಬರುತ್ತದೆ ಎಂಬುದನ್ನು ಗಮನದಲ್ಲಿಡ
ಬೇಕು.

ಮನಾಪಲಿ ರೂಟ್‌ಗಳಲ್ಲಿ ಪ್ರಯಾಣಿಕರಿಗೆ ಬಸ್ಸಿನಲ್ಲಿ
ಜಾಗ ದೊರೆಯುವಂತಿರಬೇಕು. ಈ ಮಾರ್ಗ
ಗಳಲ್ಲಿ ತಿರುಗಾಡುವ ಸರ್ಕಾರಿ ಬಸ್ಸುಗಳಲ್ಲಿ
ಪ್ರಯಾಣಿಕರಿಗೆ ಸೀಟು ಸಿಕ್ಕಬೇಕು. Overload
ಖಂಡಿತ ಮಾಡಕೂಡದು. ಪ್ರಯಾಣಿಕರ ಒತ್ತಡ
ವಿದ್ದರೆ ನಾಲ್ಕು ಬಸ್ ಹಾಕುವ ಕಡೆ ಐದು ಬಸ್ಸುಗ
ಳನ್ನು ಹಾಕಿ ಜನಗಳಿಗೆ ಅನುಕೂಲ ಮಾಡಿ ಕೊಡುವ
ಪ್ರಯತ್ನವನ್ನು ಮಾಡಬೇಕೇ ಹೊರತು 40 ಜನರು
ಕೂಡುವ ಬಸ್ಸಿನಲ್ಲಿ 80 ಜನರನ್ನು ತುಂಬಿ ಎಲ್ಲರಿಗೂ
ಸಂಚಾರಕ್ಕೆ ಅವಕಾಶ ಮಾಡಿಕೊಟ್ಟು 12 ಲಕ್ಷ
ರೂಪಾಯಿ ಸಂಪಾದನೆ ಮಾಡಿದ್ದೇವೆಂದರೆ, ಜನರಿಗೆ
ಅದರಿಂದ ತೃಪ್ತಿಯಾಗುವುದಿಲ್ಲ. ಆದರೆ ಇದರಿಂದ ಜನ
ರಿಗೆ ನೋವುಂಟಾಗುವುದು. ಆದರೆ 25 ಜನರನ್ನು
standing seat ಹಾಕಿ ಅವರೆಲ್ಲ ಕುಳಿತಿರುವವರ
ಕೈಕಾಲು ತುಳಿದುಕೊಂಡು ಹೋಗತಕ್ಕ ರೀತಿಯಲ್ಲಿ
ಪ್ರಯಾಣಿಕರನ್ನು ತುಂಬಿಕೊಂಡು ಹೋಗಬಾರದು.
ಹಿಂದೆ overload ಹಾಕಬಾರದು ಎಂದು ಆ ಪದ್ಧತಿ
ಯನ್ನು ನಿಲ್ಲಿಸಿಬಿಟ್ಟಿದ್ದರು. ಈವಾಗ ಪುನಃ ಅವಕಾಶ
ಕೊಟ್ಟಿದ್ದಾರೆ. ನಮ್ಮ ಆದಾಯ ಎಷ್ಟರಮಟ್ಟಿಗೆ
ಹೆಚ್ಚುತ್ತದೆ, ಅಥವ ಕಡಿಮೆಯಾಗುತ್ತದೆ ಎಂಬುದನ್ನು
ನೋಡೋಣವೆಂದು ಹೀಗೆ ಮಾಡಿದ್ದಾರೆಯೋ ಅಥವ
ಇನ್ಯಾವ ಕಾರಣದ ಮೇಲೆ ಮಾಡಿದ್ದಾರೆಯೋ
ಗೊತ್ತಿಲ್ಲ. ಅಂತೂ ಪುನಃ overload ಮಾಡುವುದಕ್ಕೆ
ಅವಕಾಶವಿತ್ತಿದ್ದಾರೆ.

ಬಿ. ಟಿ. ಸಿ. ಬಸ್ಸುಗಳನ್ನು 1ನೇ ಏಪ್ರಿಲ್ 1956
ರಿಂದ ರಾಷ್ಟ್ರೀಕರಣ ಮಾಡುತ್ತೇವೆಂದು ಹೇಳುತ್ತಿ
ದ್ದಾರೆ. ಮನಾಪಲಿ ಮಾಡಿಕೊಂಡು ಬಸ್‌ಗಳನ್ನು
ಹೆಚ್ಚು ಹಾಕಿ ಹೆಚ್ಚಿನ ಸೌಲಭ್ಯಗಳನ್ನು ಮಾಡುವುದಕ್ಕೆ
ಅವಕಾಶವನ್ನು ಮಾಡದೆ ಇದ್ದರೂ ಕೂಡ ಸರ್ಕಾರದ
ವರು ಆದಾಯ ಕಡಿಮೆ ಮಾಡಿಕೊಂಡಿಲ್ಲ. ಬಿ. ಟಿ. ಸಿ.
ಯನ್ನು ಸರ್ಕಾರದವರು ತೆಗೆದುಕೊಂಡರೂ ಕೂಡ
complaints ಬರಬಾರದು. ಈಗ ಕಂಪೆನಿಯವರು
ಹೇಗೆ ನಡೆಸುತ್ತಿದ್ದಾರೆಯೋ ಅದಕ್ಕಿಂತಲೂ efficient
ಆಗಿ ನಡೆಯುವ ಹಾಗೆ ವ್ಯವಸ್ಥೆ ಮಾಡಬೇಕು ಮತ್ತು
ಮನಾಪಲಿ ಮಾರ್ಗಗಳಲ್ಲಿ ಸೌಲಭ್ಯಗಳನ್ನು ಹೆಚ್ಚಿಸ
ಬೇಕು. ಹೀಗೆ ಯಾವ ಯಾವ ಮಾರ್ಗಗಳನ್ನು ತೆಗೆದು
ಕೊಂಡರೂ ಕೂಡ ಸೌಲಭ್ಯವನ್ನು ಹೆಚ್ಚಿಸಬೇಕು.
ಆದಾಯ ಬರುವುದನ್ನು ಮಾತ್ರ ದೃಷ್ಟಿಯಲ್ಲಿಟ್ಟು
ಕೊಳ್ಳದೆ ಜನಗಳಿಗೆ ಸೌಲಭ್ಯ ಹೆಚ್ಚಿಸುವುದನ್ನು ದೃಷ್ಟಿ
ಯಲ್ಲಿಟ್ಟುಕೊಂಡು ಕೆಲಸ ಮಾಡಬೇಕು.

ಬಸ್ಸುಗಳ ಬಾಡಿ ಕಟ್ಟತಕ್ಕ ವಿಷಯದಲ್ಲಿ ಯಾವ
ತರದ ಅನುಮಾನಕ್ಕೂ ಅವಕಾಶವಿಲ್ಲದ ರೀತಿಯಲ್ಲಿ
ಸರ್ಕಾರದವರು ಗಮನಿಸಬೇಕು ಎಂದು ನನ್ನ
ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಎಚ್. ಎಂ. ಚನ್ನಬಸಪ್ಪ (ಕೈಗಾರಿಕಾ
ಶಾಖೆಯ ಮಂತ್ರಿಗಳು).—ಸ್ವಾಮಿ, ಆರನೆಯ
ಡಿಮ್ಯಾಂಡಿನ ಮೇಲೆ ಮಾತನಾಡುತ್ತಾ ಅನೇಕ ಮಾನ್ಯ
ಸದಸ್ಯರು ಅನೇಕ ಒಳ್ಳೆಯ ಸಲಹೆಗಳನ್ನು ಕೊಟ್ಟಿ
ದ್ದಾರೆ ಮತ್ತು ಕೆಲವು ವಿಷಯಗಳಲ್ಲಿ ಅವರು ರಚನಾ
ತ್ಮಕವಾದ ಟೀಕೆಗಳನ್ನು ಮಾಡಿದ್ದಾರೆ. ಒಂದೊಂದು
ವೇಳೆ ಆ ರಚನಾತ್ಮಕವಾದ ಟೀಕೆಗಳನ್ನು ಮಾಡುವಾಗ
ಸ್ವಲ್ಪ ಅದಕ್ಕೆ ವಿರುದ್ಧವಾದ ಟೀಕೆಗಳೂ ಅದರ ಜೊತೆ
ಯಲ್ಲಿ ಬಂದುಬಿಟ್ಟಿವೆ. ಮುಖ್ಯವಾಗಿ ಈ ಬಸ್ಸು
ಗಳಲ್ಲಿ, ಸರ್ಕಾರಿ ಬಸ್ಸುಗಳಲ್ಲಿ ಓವರ್‌ಲೋಡ್ ತಪ್ಪ
ಬೇಕೆಂಬುದೊಂದು, ಮತ್ತು ಅಲ್ಲಲ್ಲಿ ಲಂಚರುಷುವತ್ತಿಗೆ
ಅವಕಾಶವಿದ್ದರೆ ಅದನ್ನು ತಪ್ಪಿಸಬೇಕು, ಪರ್ಮಿಟ್ಟು
ಗಳು ಮಾರಾಟವಾಗುವುದು ತಪ್ಪಬೇಕು, ಬಸ್
ಸ್ಟ್ಯಾಂಡ್‌ಗಳನ್ನು ಕಟ್ಟಬೇಕು, ದರಗಳು ಕಡಮೆ
ಯಾಗಬೇಕು, ದಕ್ಷತೆ ಹೆಚ್ಚಾಗಬೇಕು ಮತ್ತು ಸಾಧ್ಯ
ವಾದರೆ ರಾಷ್ಟ್ರೀಕರಣ ಮಾಡಬೇಕು, ಈ ಸಲಹೆ
ಗಳೆಲ್ಲಾ ಬಂದಿವೆ. ಒಂದು ವಿಷಯ ಮಾತ್ರ
ತುಂಬ ಸಂತೋಷಕರವಾಗಿದೆ. ಸರ್ಕಾರಿ ಬಸ್ಸನ್ನು
ಓಡಿಸುವುದರಿಂದ, ಜನರಿಗೆ ಹೆಚ್ಚಿನ ಅನುಕೂಲ
ವಾಗುತ್ತಿದೆಯೆಂಬುದು ನಿರ್ವಿವಾದ ವಾದ ವಿಷಯ.
ಹಾಗೆಯೇ ಹೆಚ್ಚಿನ ಅನುಕೂಲವಾಗಬೇಕೆಂದು ಕೇಳಿ
ರುವುದು ವಾಸ್ತವವಾಗಿಯೂ ಸಂತೋಷಕರವಾದ
ವಿಷಯವೇ. ಮನುಷ್ಯನಲ್ಲಿ ಒಂದು ಹಂತದಿಂದ
ಇನ್ನೊಂದು ಹಂತಕ್ಕೆ ಹೋಗಬೇಕೆಂದಿರುವ ಕುತೂ
ಹಲ ಪ್ರಗತಿಭಾವನೆಯನ್ನು ತೋರುತ್ತದೆಯೇ ವಿನಾ
ಅನ್ಯಥಾ ಇಲ್ಲ. ಈಗಿರುವ ಅನುಕೂಲತೆಗೆ ತಕ್ಕಂಥ
ಮಟ್ಟದಲ್ಲಿ ಹೆಚ್ಚಿನ ಅನುಕೂಲತೆ ಒದಗಿಸಬೇಕೆಂದು
ಹೇಳುವುದರ ವಿಷಯದಲ್ಲಿ ಸ್ವಲ್ಪವೂ ಭಿನ್ನಾಭಿಪ್ರಾಯ
ವಿಲ್ಲ. ಆದರೆ ಎಷ್ಟರಮಟ್ಟಿಗೆ ವ್ಯವಹಾರದಲ್ಲಿ ಸಾಧ್ಯ
ವೆಂಬುದನ್ನು ನಾವು ಯೋಚನೆ ಮಾಡಬೇಕು.

ಮೊಟ್ಟಮೊದಲು ನಾವು ಓವರ್‌ಲೋಡ್ ವಿಚಾರ
ತೆಗೆದುಕೊಳ್ಳೋಣ. ಒಂದು ವಿಷಯ ಅರಿಕೆ ಮಾಡಿ
ಕೊಳ್ಳುತ್ತೇನೆ. ಎಲ್ಲ ವಿಷಯಗಳನ್ನೂ ಕೂಡ ಕಾನೂನಿ
ನಿಂದಲೇ ಹತೋಟಿಗೊಳಿಸುವುದಕ್ಕೆ ಸಾಧ್ಯವಿಲ್ಲವೆಂಬು
ದನ್ನು ಮಾನ್ಯ ಸದಸ್ಯರು ಒಪ್ಪಬೇಕು. ಸತ್ಸಂಪ್ರ
ದಾಯಗಳನ್ನು ನಾವು ಅನುಸರಿಸಬೇಕು, ಎಲ್ಲವನ್ನೂ
ತಪ್ಪಿಸುವುದಕ್ಕೆ ಒಂದು ವಿಧಾನ ಸತ್ಸಂಪ್ರದಾಯವನ್ನ
ನುಸರಿಸುವುದು. ಬಹುಶಃ ಈ ಸತ್ಸಂಪ್ರದಾಯಗಳಿಂದ
ಹೆಚ್ಚಿನ ಪ್ರತಿಫಲದೊರೆಯುತ್ತದೆ, ಜನರಿಗೆ ಹೇರಳವಾದ
ಅನುಕೂಲ ದೊರೆಯುತ್ತದೆ ಎಂದು ಶ್ರೀ ಮೂಡಲ
ಗಿರಿಗೌಡರು ಹೇಳಿದರು. ಇದನ್ನು ಕಾನೂನು
ಮೂಲಕ ತಡೆಗಟ್ಟುವುದು ಬಹಳ ಕಷ್ಟ. ಜನರು
ಸಹಕರಿಸಿದರೆ ಎಷ್ಟೋ ಅನುಕೂಲವಾಗುತ್ತದೆ.
ಸಂದರ್ಭಗಳಿಗೆ ತಕ್ಕಂತೆ ಕಾನೂನು ಮಾಡುವುದು
ಸ್ವಲ್ಪ ಕಷ್ಟ. ಜನರ ಸಹಕಾರ ಯಾವುದಕ್ಕೂ ಅತ್ಯಾ
ವಶ್ಯಕ. ಮಾನ್ಯ ಮಿತ್ರರ ಸಲಹೆಗಳನ್ನು ಜಾರಿಗೆ
ತರಲು ಸಾರ್ವಜನಿಕರು, ಸರ್ಕಾರದವರು, ಅಧಿಕಾರಿ
ಗಳು ಎಲ್ಲರೂ ಸಹಕರಿಸಿ ಕೆಲಸ ಮಾಡಬೇಕು. ಇನ್ನು
ಓವರ್‌ಲೋಡ್ ತಪ್ಪಿಸಬೇಕೆಂದು ಹೇಳಿದ್ದಾರೆ. ಅದ
ಕ್ಕೇನು ಮೂಲಕಾರಣವೆಂಬುದನ್ನು ನೋಡಬೇಕು.
ಸರ್ಕಾರಿ ಬಸ್ಸುಗಳಲ್ಲಿ ಅನುಕೂಲಗಳು ಹೆಚ್ಚಾಗಿರುವುದ

(ಶ್ರೀ ಎಚ್. ಎಂ. ಚೆನ್ನಬಸಪ್ಪ.)

ರಿಂದ ಜನರೆಲ್ಲರೂ ಸರ್ಕಾರಿ ಬಸ್ಸುಗಳಲ್ಲೇ ಹೋಗಲು ಇಷ್ಟಪಡುತ್ತಾರೆ. ಓವರ್‌ಲೋಡ್ ಸರ್ಕಾರಿ ಬಸ್ಸುಗಳಲ್ಲಿ ಅನುಕೂಲ ಹೆಚ್ಚಾಗಿರುವುದನ್ನು ತೋರಿಸುತ್ತದೆ. ಇದು ಒಂದು ಭಾಗದಲ್ಲಿ ಭುಜತಟ್ಟಿಕೊಳ್ಳುವ ವಿಚಾರ. ಎರಡನೆಯದು, ಮಾರ್ಗದಲ್ಲಿ ಹೋಗುವಾಗ ಒಂದೊಂದು ವೇಳೆ ಹೆಂಗಸರು, ಮಕ್ಕಳು ಎಲ್ಲರನ್ನೂ ಕಟ್ಟಿಕೊಂಡು ಬಂದು ಅಕಾಲದಲ್ಲಿ ಜನರು ಬಸ್ಸಿಗಾಗಿ ಕಾದಿರುತ್ತಾರೆ. ಆಗ ಜಾಗವಿಲ್ಲವೆಂದು ಅವರಿಗೆ ಸೀಟು ಕೊಡದಿದ್ದರೂ ಕಷ್ಟವಾಗುತ್ತದೆ. ಬಿಸಿಲಿನಲ್ಲಿ ಆರೇಳು ಗಂಟೆಗಳಿಂದ ಕಾದು ಸಾಕಾಗಿದೆ, ದಯವಿಟ್ಟು ಕೂಡಿಸಿ ಎಂದು ಅನೇಕರು ಕೇಳುವುದನ್ನು ನಾನೂ ನೋಡಿದ್ದೇನೆ. ಆಗ ಕಾನೂನನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕೆ ಎಂಬುದನ್ನು ಹ್ಯುಮಾನಿಟೇರಿಯನ್ ಕನ್‌ಸಿಡರೇಷನ್‌ನಿಂದ ಸ್ವಲ್ಪ ಯೋಚನೆ ಮಾಡಬೇಕು. ಸರ್ಕಾರದ ದೃಷ್ಟಿಯಿಂದ ಕಾನೂನನ್ನು ಚಾಚೂತಪ್ಪದೆ ಜಾರಿಗೆ ಕೊಡುವುದಕ್ಕೆ ಯಾವ ಅಭ್ಯಂತರವೂ ಇಲ್ಲ. ಹಾಗೆ ನೋಡುವುದಾದರೆ ಅಂಕಿ ಅಂಶ ಕೊಡುತ್ತೇನೆ. ಸರ್ಕಾರಿ ಬಸ್ಸುಗಳಲ್ಲಿ ಓವರ್‌ಲೋಡ್ ಮಾಡಿದ್ದಕ್ಕೆ ಶಿಕ್ಷೆಯಾಗಿರುವುದಕ್ಕೆ ರುಜುವಾತು ನಮ್ಮ ಮುಂದಿದೆ.

ಈ ಸರ್ಕಾರಿ ಬಸ್ಸುಗಳಲ್ಲಿ ಓವರ್‌ಲೋಡ್ ಮಾಡಿದ್ದ ಬಗ್ಗೆ ಸುಮಾರು 23 ಕೇಸುಗಳನ್ನು ಹಾಕಲಾಗಿದೆ. If Hon'ble Members want any more information, I will be very glad to furnish the same. I do not want to hide anything. It is all public matter. ಅದನ್ನೆಲ್ಲಾ ಹೇಳುತ್ತೇನೆ. ಈ ಕೇಸುಗಳನ್ನು ಹಾಕಿರತಕ್ಕಂಥ ವಿಚಾರಗಳೆಲ್ಲಾ ಈಗ ನನ್ನ ಮುಂದೆ ಇರುತ್ತವೆ. After all, facts cannot be denied. Let us face facts. If there is any defect, we shall remedy it. Let us take everything objectively. Government is not here to say that everything is quite O.K. in all sectors. Wherever there is any lacuna or omission, we will see that things are rectified. ಆದುದರಿಂದ ಸರ್ಕಾರದವರು ಅವರ ಬಸ್ಸುಗಳಲ್ಲಿ ಮಾತ್ರ ಹಾಗೆ ಓವರ್‌ಲೋಡ್ ಮಾಡಲು ಅವಕಾಶಕೊಟ್ಟು—ಸಾರ್ವಜನಿಕರು ನಡೆಸುತ್ತಿರುವಂಥ ಬಸ್ಸುಗಳಲ್ಲಿ ಮಾತ್ರ ಈ ನೀತಿಯನ್ನು ಒತ್ತಾಯಪಡಿಸುವುದು ಸರ್ವಥಾ ಸಾಧುವಾದದ್ದಲ್ಲ ಎಂಬುದನ್ನು ಎಲ್ಲರೂ ಒಪ್ಪಿಕೊಳ್ಳಲೇ ಬೇಕಾಗಿದೆ. ಸರ್ಕಾರದವರು ಬಸ್ಸಿನ ಉದ್ಯಮದಲ್ಲಿ ಈ ರೀತಿ ಸಂಪಾದನೆ ಮಾಡತಕ್ಕದ್ದು ಬಹಳ ಇನ್‌ಹ್ಯೂಮನ್ ಎಂಬುದಾಗಿ ಹೇಳಿದರು. ಆದರೆ ಆ ರೀತಿ ಏನೂ ಇಲ್ಲ. ಮಂತ್ರಿಗಳು ಯಾರೂ ಈ ಬಸ್ಸುಗಳಲ್ಲಿ ಪ್ರಯಾಣ ಮಾಡುತ್ತಿಲ್ಲ; ಅದರಿಂದ ಅವರಿಗೆ ಇವುಗಳ ಆಡಳಿತದ ರೀತಿ ನೀತಿ ಗೊತ್ತಾಗುತ್ತಿಲ್ಲ ಎಂದು ಹೇಳಿದರು. ಆದರೆ ನಾನು ಈ ಮಂತ್ರಿ ಪದವಿಯನ್ನು ಅಂಗೀಕಾರ ಮಾಡಿಕೊಳ್ಳುವವರೆಗೂ ಬಸ್ಸುಗಳಲ್ಲೇ ಪ್ರಯಾಣ ಮಾಡುತ್ತಿದ್ದೆನು. ಜನರು ಅನುಭವಿಸುತ್ತಿದ್ದಂಥ ತೊಂದರೆಗಳನ್ನೂ ನಾನು ನೋಡಿದ್ದೇನೆ. ಆಗಲೇ ಶ್ರೀ ಗೋಪಾಲಗೌಡರು ಹೇಳಿದಹಾಗೆ ಟಿಕೆಟ್‌ಗಳನ್ನು ಕೊಡುವುದರಲ್ಲಿ ಕೊಂಚ ತೊಂದರೆಯಿತ್ತು. ಆದರೆ ಈ ದಿವಸ ಈ ತೊಂದರೆಗಳನ್ನೆಲ್ಲಾ ಸಾರ್ವಜನಿಕರ ಹಿತದೃಷ್ಟಿಯಲ್ಲಿ ನಿವಾರಣೆ ಮಾಡತಕ್ಕದ್ದು ಅತ್ಯಗತ್ಯ ಎಂಬ ಅಂಶವನ್ನು ಸರ್ಕಾರದವರು ಚೆನ್ನಾಗಿ ಮನಗಂಡಿದ್ದಾರೆ. ಅದಕ್ಕಾಗಿ ಎಲ್ಲ ಪ್ರಯತ್ನಗಳನ್ನೂ ಸತತವಾಗಿ ನಡೆಸತಕ್ಕವರಾಗಿದ್ದಾರೆಂಬ ಭರವಸೆಯನ್ನು ಎಲ್ಲ ಮಾನ್ಯ ಸದಸ್ಯರ ಮನಸ್ಸಿನಲ್ಲೂ ಚೆನ್ನಾಗಿ ಮುದ್ರಿತವಾಗತಕ್ಕಂಥ ರೀತಿಯಲ್ಲಿ ಕೊಡಬೇಕೆಂಬ ಆಸೆ ನನಗೆ ಪೂರ್ತಿಯಾಗಿದೆ. ಈ ಬಗ್ಗೆ ಈ ಮಾನ್ಯ ಸಭೆಯ ಸದಸ್ಯರೂ ಕೂಡ ಸಾರ್ವಜನಿಕರಲ್ಲಿ ಒಂದು ಒಳ್ಳೆಯ ಸಹಕಾರ ಮನೋಭಾವನೆ ಮಾಡುವಂತೆ ಅವರಿಗೆಲ್ಲ ತಿಳಿವಳಿಕೆಯನ್ನು ಕೊಡಬೇಕಾದದ್ದು ಅಗತ್ಯವೆಂಬುದಾಗಿ ನಾನು ತಮ್ಮೆಲ್ಲರಲ್ಲೂ ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಬಸ್ ಲೈಸೆನ್ಸುಗಳ ವಿಚಾರದಲ್ಲಿ ಈಗ ಬ್ಲಾಕ್‌ಮಾರ್ಕೆಟ್ ನಡೆಯುತ್ತಿದೆಯೆಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ಆದರೆ ನಾನು ಮಂತ್ರಿಯಾಗುವುದಕ್ಕೆ ಮೊದಲು ಈ R.T.A.ನಲ್ಲಿ ಒಬ್ಬ ಸದಸ್ಯನಾಗಿದ್ದೆ. ಆಗ್ಗೆ ಇದನ್ನು ತಪ್ಪಿಸಲು ಉಗ್ರವಾದ ರೀತಿಯಲ್ಲಿ ವಾದ ಮಾಡುತ್ತಿದ್ದವರ ಪೈಕಿ ನಾನೂ ಒಬ್ಬನಾಗಿದ್ದೆನು. (*Interruption*) You need not presume that. Even to-day I am as anxious as you yourself are and even more anxious to see that trading in licence, wherever it be, whether in bus licence or prospecting licence or mining licence, is put an end to. ಈ ವಿಷಯದಲ್ಲಿ ಸರ್ಕಾರದವರಿಗೆ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಆದರೆ ನಮಗೆ ಇದರಲ್ಲಿ ಇರತಕ್ಕಂಥ ಕಷ್ಟ ಏನೆಂದರೆ ಈ ಟ್ರೇಡಿಂಗ್ ಮಾಡುತ್ತಿರುವ ಜನರು ನಮ್ಮೆಲ್ಲರಿಗಿಂತಲೂ ಬಹಳ ಬುದ್ಧಿವಂತರು. ಅವರು ಈ ಕಾನೂನಿನ ಹಿಡಿತಕ್ಕೆ ಸಿಕ್ಕದಂತೆ ಕೆಲಸ ಮಾಡುತ್ತಿದ್ದಾರೆ. ಅವರು ಶಿಕ್ಷಾರ್ಹರೆಂಬ ವಿಷಯದಲ್ಲಿ ಭಿನ್ನಾಭಿಪ್ರಾಯವೇ ಇಲ್ಲ. ಆದರೆ ಅವರು ಅಪ್ಪಿತಪ್ಪಿ ನಮ್ಮ ಕೈಗೆ ಹಾಗೊಂದು ವೇಳೆ ಸಿಕ್ಕಿಬಿದ್ದರೂ ಅವರ ಕೇಸು ಕೋರ್ಟಿನ ಮುಂದೆ ಹೋದಾಗ ತಮ್ಮ ಕೇಸನ್ನು ಸುಲಭವಾಗಿ ಗೆದ್ದು ಕೊಂಡು ಬಿಡುತ್ತಾರೆ. ಆಗ್ಗೆ ನೀವೇ ಈ ಸರ್ಕಾರ ಬುದ್ಧಿವಂತಿಕೆಯಿಂದ ಕೆಲಸ ಮಾಡುತ್ತಿಲ್ಲ ಎಂದು ವಾದಕ್ಕೆ ಪ್ರಾರಂಭ ಮಾಡುತ್ತೀರಿ. ಆದಕಾರಣ ಈ ಬಗ್ಗೆ ಸಾರ್ವಜನಿಕರಲ್ಲಿ ನೀತಿಯ ಮಟ್ಟ ಹೆಚ್ಚಬೇಕು. ನಾವು ಇಂಥ ಅಕ್ರಮ ಮಾರ್ಗದಲ್ಲಿ ನಡೆಯಬಾರದು ಎಂಬ ಅಂಶ ಅವರಿಗೆ ಅರಿವಾಗಬೇಕು. ನಮ್ಮಲ್ಲಿ ಅಂಥ ಅಕೃತ್ಯಗಳೇನಾದರೂ ನಡೆದರೆ ನಾವು ಆ ಬಗ್ಗೆ ಉಗ್ರ ಕಾರ್ಯಕ್ರಮಗಳನ್ನು ಕೈಗೊಳ್ಳಲು ಸಿದ್ಧವಾಗಿದ್ದೇವೆ. ಹೀಗೆ ಕಾರ್ಯಕ್ರಮಗಳನ್ನು ಕೈಗೊಳ್ಳಲು ನಾವೀಗ ಸೂಕ್ತ ರೀತಿಯಲ್ಲಿ ಈ ಕಾನೂನನ್ನು ಕೂಡ ತಿದ್ದುಪಡಿ ಮಾಡಬೇಕೆಂಬ ಉದ್ದೇಶವನ್ನಿಟ್ಟುಕೊಂಡಿದ್ದೇವೆ. ಇತ್ತೀಚೆಗೆ ಈ ಲೈಸನುಗಳನ್ನು ಪಡೆಯತಕ್ಕವರಿಗೆಲ್ಲಾ ಸಾಲ್ವೆನ್ಸಿ ಸರ್ಟಿಫಿಕೇಟುಗಳನ್ನು ಹಾಜರ್ಪಡಿಸಬೇಕೆಂದು ನಿಯಮವನ್ನು ಹಾಕಿದ್ದೇವೆ. 50 ಸಾವಿರ ರೂಪಾಯಿಗಳ ಸಾಲ್ವೆನ್ಸಿ ಸರ್ಟಿಫಿಕೇಟನ್ನು ಅವರು ಕೊಡಬೇಕಾಗಿದೆ. ಆದರೆ ಅಂಥ ಸಾಲ್ವೆಂಟ್ ಅಲ್ಲದ ಜನರೂ ಕೂಡ ಎಷ್ಟೋ ಸಂದರ್ಭಗಳಲ್ಲಿ ಈ ಲೈಸೆನ್ಸ್‌ಗಳನ್ನು ಪಡೆದುಕೊಂಡಿರುತ್ತಾರೆ. ಇತ್ತೀಚೆಗೆ ಯಾರಾರು ಹೀಗೆ ಸರಿಯಾದ ಸಾಲ್ವೆನ್ಸಿ ಸರ್ಟಿಫಿಕೇಟನ್ನು ಹಾಜರ್ಮಾಡಿರುವುದಿಲ್ಲವೋ ಅಂಥವರಿಗೆಲ್ಲಾ ಈ ಲೈಸನುಗಳನ್ನು ರದ್ದುಪಡಿಸಬೇಕೆಂದು ಸರ್ಕ್ಯುಲರ್, ಕೂಡ ಹೊರಡಿಸಿದ್ದೇವೆ. ಆದರೆ,

ಅಂಥದರಲ್ಲೂ ಅವರು ರಾತ್ರಾನುರಾತ್ರಿ ಹೋಗಿ ಯಾರದೋ ಹೆಸರಿನಲ್ಲಿದ್ದ ಮಾವನೋ—ಅಳಿಯನೋ— ಅಂಥವರ ಹೆಸರಿನಲ್ಲಿದ್ದ ಆಸ್ತಿಗಳನ್ನೆಲ್ಲಾ ತಮ್ಮ ಹೆಸರಿಗೆ ಬರೆಸಿಕೊಂಡು ಇಲ್ಲಿಗೆ ಬಂದು ಸಾಲ್‌ವೆನ್ಸಿ ಸರ್ಟಿಫಿಕೇಟನ್ನು ಹಾಜರ್ಮಾಡಿದ ಕೂಡಲೆ ಆ ವರ್ಗ ಮಾಡಿಸಿಕೊಂಡಿದ್ದ ಆಸ್ತಿಗಳನ್ನೆಲ್ಲಾ ಅವರಿಗೆ ಹಿಂದಕ್ಕೆ ಕೊಟ್ಟರತಕ್ಕಂಥ ನಿದರ್ಶನಗಳೂ ಸಹ ಇವೆ. ಹೀಗೆಲ್ಲಾ ಅನೇಕ ತೊಂದರೆಗಳಿವೆ. ಈ ತೊಂದರೆಗಳನ್ನು ನಿವಾರಣೆ ಮಾಡಬೇಕೆಂಬ ವಿಚಾರದಲ್ಲಿ ನಿಮಗೂ ನಮಗೂ ಯಾವ ಭಿನ್ನಾಭಿಪ್ರಾಯವೂ ಇಲ್ಲ.

ಆಮೇಲೆ ಈ ಬಸ್ ಬಾಡಿಬಿಲ್ಡ್ ಮಾಡತಕ್ಕ ವಿಷಯದಲ್ಲಿ ಮಾನ್ಯ ಸದಸ್ಯರಾದ ಶ್ರೀ ಮೂಡಲಗಿರಿಗೌಡರು ಸರಿಯಾದ ಕ್ರಮವನ್ನು ಅನುಸರಿಸಬೇಕೆಂದು ಹೇಳಿದರು. ಟೆಂಡರ್ ಕಾಲ್‌ಫಾರ್‌ಮಾಡಿ ಕಾನೂನು ರೀತ್ಯಾ ಯಾವ ಕ್ರಮ ಅನುಸರಿಸಬೇಕೋ ಅದನ್ನು ಅನುಸರಿಸಿ ಕೆಲಸ ಮಾಡುತ್ತ ಇದ್ದೇವೆ.

ಅಕಾಮೊಡೇಷನ್ ಉತ್ತಮವಾಗಬೇಕೆಂದು ಹೇಳಿದರು. ಈಗ ರೂಲ್ಸ್‌ನಲ್ಲಿ ಏನು ವಿಧಾಯಕವಾಗಿದೆಯೋ ಅದಕ್ಕಿಂತಲೂ ಇನ್ನೂ ಹೆಚ್ಚು ಸ್ಥಳವನ್ನು ಕೊಟ್ಟಿದ್ದೇವೆ. ಮೈಸೂರು ಮೋಟಾರ್ ವೆಹಿಕಲ್ಸ್ ಆಕ್ಟ್‌ನಲ್ಲಿ ಸೀಟು ಇಷ್ಟಿಷ್ಟೇ ಅಗಲ, ಇಷ್ಟಿಷ್ಟೇ ಉದ್ದ ಇರಬೇಕೆಂದು ವಿಧಾಯಕವಾಗಿದೆ. ಆ ರೀತಿ ವಿಧಾಯಕವಾಗಿರುವುದಕ್ಕಿಂತಲೂ ಹೆಚ್ಚು ಸ್ಥಳವನ್ನು ನಾವು ಈ ಬಸ್‌ನಲ್ಲಿ ಒದಗಿಸಿದ್ದೇವೆ. ಇನ್ನೂ ಹೆಚ್ಚು ಒದಗಿಸಬೇಕೆಂಬ ವಿಷಯ ಬೇರೆ. ಆದ್ದರಿಂದ ಆ ವಿಷಯದಲ್ಲಿ ಮಾನ್ಯ ಸದಸ್ಯರಿಗಿರತಕ್ಕ ಶಂಕೆ ಹೋಗಬೇಕು.

ದರ ಕಮ್ಮಿಮಾಡಿ ಎಂದು ಹೇಳಿದರು. ಎರಡು ಕಾರಣಗಳಿಗಾಗಿ ಬಸ್ಸುಗಳನ್ನು ಓಡಿಸುತ್ತೇವೆ. ಒಂದನೆಯದು ಜನಗಳಿಗೆ ಅನುಕೂಲ ಒದಗಿಸಬೇಕೆಂಬುದು. ಎರಡನೆಯದು ಇದರಲ್ಲಿ ಬರತಕ್ಕ ಸಂಪಾದನೆಯನ್ನು ದೇಶದ ಜನತೆಗೆ ಅನುಕೂಲವಾಗುವ ದೇಶಾಭಿವೃದ್ಧಿ ಕೆಲಸ ಕಾರ್ಯಗಳಿಗೆ ವಿನಿಯೋಗಿಸಬೇಕು ಎಂಬುದು. ಇದು ಒಂದು ಅಪ್ರತ್ಯಕ್ಷ ತೆರಿಗೆ. ನೇರವಾಗಿ ಜನಗಳ ಮೇಲೆ ತೆರಿಗೆ ಹಾಕುವುದಕ್ಕೆ ಬದಲಾಗಿ ಒಂದು ವೇಳೆ ಇದರಲ್ಲಿ ನಾಲ್ಕು ಕಾಸು ಹೆಚ್ಚಾಗಿ ಬಂದರೆ ಆ ಹಣ ತಮಗೆ ಹೋಗುತ್ತದೆ. ಆದ್ದರಿಂದ ಕಮ್ಮಿ ಮಾಡಿ ಎಂದು ಹೇಳುವುದರಲ್ಲಿ ಎಷ್ಟುಮಟ್ಟಿಗೆ ಸಮಂಜಸತೆಯಿದೆ ಎನ್ನುವುದನ್ನು ಮಾನ್ಯ ಸದಸ್ಯರೇ ಯೋಚನೆ ಮಾಡಬೇಕು.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಒಂದು ವೇಳೆ ನಮ್ಮಲ್ಲೇ ಹಣ ಉಳಿದರೆ ಪುನಃ ಸರ್ಕಾರದವರಿಗೇ ಬರುವುದಿಲ್ಲವೇ ?

Sri H. M. CHANNABASAPPA.—We want money and more money, because we have to do so many things. So we have to spend more. Therefore earn more. Therefore this is one method of earning. I am sure the Hon'ble Member will agree with me that the rates must be as they are to-day.

ಓವರ್‌ಲೋಡ್ ಕಮ್ಮಿ ಮಾಡಬೇಕಾದರೆ ಎಲ್ಲಿ ಹೆಚ್ಚು ಜನಗಳು ಬರುತ್ತಾರೋ ಆ ಕಡೆಗೆ ಹೆಚ್ಚು ಬಸ್ಸುಗಳನ್ನು ಹಾಕುವುದು ಒಂದು ಮಾರ್ಗ ಮತ್ತು ವರಮಾನವೂ ಕೂಡ ಹೆಚ್ಚುತ್ತದೆ. ಆದ್ದರಿಂದ ಎಲ್ಲಿ ಅವಶ್ಯಕತೆ ಇದೆ ಎಂಬುದನ್ನು ಯೋಚನೆ ಮಾಡಿ ಅದರ ಕಡೆಗೆ ಖಂಡಿತವಾಗಿಯೂ ಗಮನಕೊಡುತ್ತೇವೆಂದು ಹೇಳಿದರೆ ಮಾನ್ಯ ಸದಸ್ಯರಿಗೆ ತೃಪ್ತಿಯಾಗಬಹುದು.

ಶ್ರೀಮಾನ್ ಮುನಿಸ್ವಾಮಯ್ಯನವರು ಖಾಸಗೀ ಬಸ್ಸುಗಳನ್ನು ನಡೆಸುವವರು ಉತ್ತಮವಾದ ಹೊಸ ಹೊಸ ಬಸ್ಸುಗಳನ್ನು ಹಾಕುವುದಕ್ಕೆ ತೊಂದರೆ ಏನಿದೆ ಎಂದು ಪ್ರಶ್ನೆ ಮಾಡಿದರು. ಈಗ ನಾವು ಯಾವ ಲೈನನ್ನು ತೆಗೆದುಕೊಳ್ಳುತ್ತೇವೆ ಎನ್ನುವುದು ಸಾರ್ವಜನಿಕರಿಗೆ ಗೊತ್ತಿಲ್ಲದೇ ಇರುವಾಗ 25 ಸಾವಿರ, 30 ಸಾವಿರ ರೂಪಾಯಿ ಖರ್ಚುಮಾಡಿ ಹೊಸ ಬಸ್ಸುಗಳನ್ನು ಹಾಕಬೇಕೆಂದರೆ, ನೋಡೋಣ ಸರ್ಕಾರದ ಧೋರಣೆ ಏನಿದೆಯೋ ಎಂಬುದಾಗಿ ನಿಧಾನಿಸುವುದು ಸ್ವಾಭಾವಿಕವಾದದ್ದು.

ಮುಂದಿನ ಪಾಂಚವಾರ್ಷಿಕ ಯೋಜನೆಯಲ್ಲಿ ಈ Nationalise Scheme ಬಡಾವಣೆ ಮಾಡಬೇಕೆಂದು ಈಗಾಗಲೇ ನಾಲ್ಕು ಕೋಟಿ ರೂಪಾಯಿಗಳನ್ನು ಒದಗಿಸಿರುವುದು ತಮಗೆ ಗೊತ್ತು. ಇನ್ನೂ ಆರು ಮಾರ್ಗಗಳನ್ನು ಮನಾಪಲೈಸ್ ಮಾಡಬೇಕು ಎನ್ನುವುದು ಸರ್ಕಾರದ ದೃಷ್ಟಿಯಲ್ಲಿದೆ. ಯಾವುದನ್ನು ಮನಾಪಲೈಸ್ ಮಾಡಬೇಕು ಎನ್ನುವುದನ್ನು ಪೂರ್ವಭಾವಿಯಾಗಿ ತಿಳಿಸಿದಲ್ಲಿ ಅವುಗಳನ್ನೆಲ್ಲ ಸರ್ಕಾರದವರು ಗಮನದಲ್ಲಿಟ್ಟುಕೊಂಡು ತೀರ್ಮಾನ ತೆಗೆದುಕೊಳ್ಳುತ್ತಾರೆ. ಹಾಗೆ ನಾವು ಮಾಡುವಾಗ ಏನೇನು ಮಾರ್ಗಗಳನ್ನು ಹಿಂದೆ ಅನುಸರಿಸುತ್ತಿದ್ದೆವು ಎನ್ನುವುದು ಮಾನ್ಯ ಸದಸ್ಯರಿಗೆ ಗೊತ್ತು. ಅದರಂತೆಯೇ ಮುಂದೆಯೂ ಅನುಸರಿಸುತ್ತೇವೆ.

ಓವರ್‌ಲೋಡ್ ತಪ್ಪಿಸುವುದಕ್ಕೆ ಕಾನೂನು ಮಾಡಬೇಕು ಎಂದರು. ಈಗಾಗಲೇ ಅದಕ್ಕೆ ಕಾನೂನು ಇದೆ. ಪರ್ಮಿಟ್‌ಗಳನ್ನು ಕೊಡುವಾಗಲೇ ಓವರ್‌ಲೋಡ್ ಮಾಡಕೂಡದು ಎಂದು ಒಂದು ಕಂಡಿಷನ್ ಹಾಕುತ್ತಾರೆ. ಮತ್ತು ಓವರ್‌ಲೋಡ್ ಮಾಡುವುದು ಕಂಡುಬಂದ ಪಕ್ಷದಲ್ಲಿ ಲೈಸೆನ್ಸ್ ಸಸ್ಪೆಂಡ್ ಮಾಡಬಹುದು ಎಂದು ಇದೆ. ಓವರ್‌ಲೋಡ್ ಮಾಡಕೂಡದು ಎನ್ನುವುದು ಪರ್ಮಿಟ್ ಕೊಡುವುದರಲ್ಲಿ ಒಂದು ಕಂಡಿಷನ್.

Section 59 says that if any person overloads and if it is proved, he is liable to lose his permit either temporarily or permanently.

ಆಮೇಲೆ ಬಸ್‌ಮಾಲಿಕರೂ ಮತ್ತು ಪೋಲೀಸ್‌ನವರೂ ಒಂದು ಮಾಮೂಲು ಮಾಡಿಕೊಂಡಿರುತ್ತಾರೆ ಅದನ್ನು ತಪ್ಪಿಸಬೇಕೆಂದು ಹೇಳಿದರು. ಇದು ಸರಿ ಎಂದು ಯಾರು ತಾನೇ ಹೇಳುತ್ತಾರೆ ? ಅದರಲ್ಲಿಯೂ ಸರ್ಕಾರದವರು ಸರಿ ಎಂದು ಹೇಳುವುದಕ್ಕೆ ಸಾಧ್ಯವೇ ? ಇಂಥ ಅಕ್ರಮಗಳು ನಡೆದ ಪಕ್ಷದಲ್ಲಿ ಅವುಗಳನ್ನು ತಪ್ಪಿಸಬೇಕು ಎನ್ನುವುದರಲ್ಲಿ ನಮಗೂ ನಿಮಗೂ ಭಿನ್ನಾಭಿಪ್ರಾಯವಿಲ್ಲ. ಅದು ಎಲ್ಲಿಲ್ಲದೆ, ಯಾವಯಾವ ಪ್ರಮಾಣದಲ್ಲಿದೆ, ಇವೆಲ್ಲವೂ ಕೂಡ ಆಯಾ ಕ್ಷೇತ್ರದಲ್ಲಿರುವ ಜನಗಳ ಮನೋಧರ್ಮದಮೇಲೆ ಹೋಗುತ್ತದೆ. ಇದನ್ನು ಎಲ್ಲೆಲ್ಲಿ ತಪ್ಪಿಸುವುದಕ್ಕೆ ಸಾಧ್ಯವೋ ಅಲ್ಲೆಲ್ಲ ತಪ್ಪಿಸುವುದಕ್ಕೆ ಒಂದು ವ್ಯವಸ್ಥೆಯನ್ನು ಸಾಧ್ಯವಾದಷ್ಟುಮಟ್ಟಿಗೆ ಮಾಡುತ್ತೇವೆ ಎಂಬ ಭರವಸೆಯನ್ನು ಕೊಡುತ್ತೇನೆ.

ಬ್ರೇಕ್ ಇನ್ಸ್‌ಪೆಕ್ಟರ್ ವಿಷಯ ಬಹಳ ಪ್ರಸ್ತಾಪಕ್ಕೆ ಬಂತು. ಬ್ರೇಕ್ ಇನ್ಸ್‌ಪೆಕ್ಷನ್ ವಿಷಯದಲ್ಲಿ ಒಂದು ಮಾಮೂಲಾಗಿದೆ ಅದನ್ನು ತಪ್ಪಿಸಬೇಕು ಎಂದು ಹೇಳಿದರು. ಅದನ್ನು ತಪ್ಪಿಸಬೇಕಾದದ್ದು ವಾಸ್ತವ. ಎಲ್ಲ ಪ್ರಯತ್ನಗಳನ್ನೂ ಮಾಡಿ ನಾವು ಈ ಪದ್ಧತಿಯನ್ನು ತಪ್ಪಿಸಬೇಕು. ಈಗ ಮಾಡಿರುವ ಪ್ರಯತ್ನ

(SRI H. M. CHANNABASAPPA.)

ಗಳು ಸಾಲದು ಎಂದು ಮಾನ್ಯ ಸದಸ್ಯರ ಅಭಿಪ್ರಾಯವಾಗಿರುವ ಪಕ್ಷದಲ್ಲಿ, ಅದನ್ನು ಇನ್ನೂ ಉತ್ತಮಪಡಿಸುವುದಕ್ಕೆ ಏರ್ಪಾಡು ಮಾಡಬೇಕು ಎನ್ನುವ ಪಕ್ಷದಲ್ಲಿ, ಸರ್ಕಾರದವರು ಅದನ್ನು ಬಹಳ ವಿಶ್ವಾಸದಿಂದ ಪರಿಶೀಲನೆ ಮಾಡಿ ಸಾಧ್ಯವಾದಷ್ಟು ಕಡ್ಡಾಯವಾದ ಕ್ರಮಗಳನ್ನ ತೆಗೆದುಕೊಳ್ಳುತ್ತಾರೆ.

ಶ್ರೀ ಯು. ಎಂ. ಮಾದಪ್ಪ.—ಪೋಲೀಸು ಅಧಿಕಾರಿಗಳು overload ಕೇಸುಗಳನ್ನು ಹಾಕಬೇಕು ಎಂಬ ಮನೋಭಾವದಿಂದ ಕೂಡಿರಬಾರದು; ಆದರೆ ಆ ರೀತಿ ಆಗುವುದನ್ನು ತಪ್ಪಿಸಬೇಕು ಎಂಬ ಮನೋಭಾವವನ್ನು ಹೊಂದಿರಬೇಕು.

Sri H. M. CHANNABASAPPA.—These are very small matters, though of course very important. Nobody can say that police people should be encouraged to put up overload cases. It is not that. Cases have got to be put up only when there are overloads whether 20 or 50 or 100. But mere putting of cases will not result in prosecution also, because it is very difficult to find proof in court of law. Unfortunately it is one of the difficulties that we have observed. Sometimes there will be some small lacuna in the Act and people will take advantage. It is difficult to adduce evidence and even people who see these things do not have enough civic sense as to come forward to depose in courts of law. I request Hon'ble Members to bring such defects to our notice and also suggest ways and means of overcoming these things in the light of the facts that are before us.

R.T.A. ಮತ್ತು S.T.A. ವಿಷಯ ಹೇಳಿದರು. ಇವೆರಡೂ quasi-judicial bodies. ಪರ್ಮಿಟ್ ಕೊಡತಕ್ಕ ಕ್ರಮದಲ್ಲಿ rule 46 and 47 are very clear. ಅದೆಲ್ಲವನ್ನೂ ವಿಧಾಯಕ ಮಾಡಿದ್ದಾರೆ. ಯಾವ ಯಾವ ರೀತಿ ಪರ್ಮಿಟ್ ಕೊಡಬೇಕು ಎಂದು ವಿಧಾಯಕ ಮಾಡಿದ್ದಾರೆ. ಪರ್ಮಿಟ್ ಕೊಡಬೇಕಾದರೆ ಯಾರು ಲೈನ್ ಮಾಡುತ್ತಾರೆಯೋ ಅವರಿಗೇ ಕೊಡಬೇಕು ಎನ್ನುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಕ್ರಮಗಳನ್ನು ಜಾರಿಗೆ ಕೊಡುವಾಗ quasi-judicial bodies ಕ್ರಮಗಳನ್ನು ಬಿಟ್ಟು ಹೋಗುತ್ತಾರೆನ್ನುವುದನ್ನು ನಾನು ನಂಬಲಿಲ್ಲ. ಹಾಗೇನಾದರೂ ಅವರು ಹೋದ ಪಕ್ಷದಲ್ಲಿ ಅವರಮೇಲೆ ಅಪೀಲ್ ಇದೆ, R.T.A. ಮೇಲೆ S.T.A. ಇದೆ, S.T.A. ಮೇಲೆ ಸರ್ಕಾರ ಇದೆ. ಅವರ ತೀರ್ಮಾನದಮೇಲೆ ಹೈಕೋರ್ಟಿಗೆ ಹೋಗಬಹುದು. ಈ ಕಾಲದಲ್ಲಿ ಒಂದು ವ್ಯವಹಾರವನ್ನು ಒಬ್ಬರಿಗೆ ಅನುಕೂಲವಾಗುವಂತೆ ಮಾಡುವುದಕ್ಕೆ ಅವಕಾಶ ಬಹಳ ಕಡಿಮೆ ಎಂದು ನಾನು ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಆದ್ದರಿಂದ ಅಲ್ಲಲ್ಲಿ ಲೋಪದೋಷ ಇದ್ದ ಪಕ್ಷದಲ್ಲಿ ಅದು ಅಪೀಲೆಬಲ್ ಕೇಸಸ್‌ನಲ್ಲಿ ಹಾಗಾಗಿರಬಹುದು. It is no sin for any Congressman to be in any committee. It is no sin for a Congressman to do any business whether it is agriculture or it is running a bus line.

Sri S. SRINIVASA IYENGAR.—It is not a question of sin; it is a question of nomination.

Sri J. MOHAMED IMAM.—It is no sin for a Congressman to be in a committee. But it is certainly a sin that all the members of a committee should be Congressmen.

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರಿಗೆ, ಮುಖ್ಯ ಮುಖ್ಯವಾದ ಕ್ಷೇತ್ರಗಳಲ್ಲಿ ಕೆಲಸ ಮಾಡುವ ಅನೇಕರಿಗೆ, ಸರ್ಕಾರದ ವಿರೋಧಪಕ್ಷದವರಿಗೆ ಈಗಿರುವ ಪ್ರೊವಿಷನ್ ಗೊತ್ತಿದೆಯೆಂಬುದು ತುಂಬ ಹೆಮ್ಮೆಯ ವಿಷಯ. ಯಾವುದೋ ಒಂದು ಟೀಕೆ ಮಾಡಬೇಕೆಂದು ಮಾಡುವುದು ಬೇಡ. ಈಗ ವಿರೋಧಪಕ್ಷದವರಾದ ಶ್ರೀ ಸಿದ್ದಪ್ಪನವರು, ಶ್ರೀ ಇಮಾಂರವರು, ಶ್ರೀ ಶ್ರೀನಿವಾಸಯ್ಯಂಗಾರ್‌ರವರು, ಶ್ರೀ ಗೋಪಾಲಗೌಡರು ಮುಂತಾದವರನ್ನು ಮುಖ್ಯ ಮುಖ್ಯವಾದ ಸಮಿತಿಗಳಿಗೆ ನೇಮಿಸಿ ಅವರ ಅಭಿಪ್ರಾಯ ಪಡೆಯಬೇಕು, ಸಹಕಾರವಿರಬೇಕು, ರಾಜ್ಯದಲ್ಲಿ ಉಭಯತ್ರರ ಅಭಿಪ್ರಾಯ ತೆಗೆದುಕೊಂಡು ದೇಶದ ಬೆಳವಣಿಗೆ ಮಾಡಬೇಕು ಎಂದು ಅಭಿಪ್ರಾಯವುಳ್ಳವರಾಗಿ ಯಾವ ಯಾವ ಪ್ರಮಾಣದಲ್ಲಿ ವಿರೋಧಪಕ್ಷಕ್ಕೆ ಅವಕಾಶ ಮಾಡಿದ್ದೇವೆಂಬುದನ್ನು ಜ್ಞಾಪಕ ಮಾಡಿಕೊಂಡರೆ ಬಹುಶಃ ಆ ವಿಷಯದಲ್ಲಿ ಹೆಮ್ಮೆಪಡುವ ರೀತಿಯಲ್ಲಿ ಕೆಲಸ ಮಾಡುತ್ತಿದ್ದೇವೆಂದು ಹೇಳಿದರೆ ತಪ್ಪಾಗಲಾರದು.

ಆಮೇಲೆ ಶಿವಮೊಗ್ಗಾಕ್ಕೆ ಬಸ್ಸು ಹಾಕಬೇಕೆಂದು ಹೇಳಿದರು. ಅದನ್ನು ಬಹಳ ಸಹಾನುಭೂತಿಯಿಂದ ಪರಿಶೀಲಿಸುತ್ತೇವೆ. ನ್ಯಾಷನಲೈಸ್ ಮಾಡುವ ವಿಷಯದಲ್ಲಿ ಒಂದು ಮಾತನ್ನು ಹೇಳಿ ನನ್ನ ಭಾಷಣವನ್ನು ಮುಕ್ತಾಯಮಾಡುತ್ತೇನೆ. ಸ್ವಲ್ಪ ಸ್ವಲ್ಪವಾಗಿ ಮುಂದುವರಿಸಿಕೊಂಡು ಹೋಗಬೇಕೆಂಬುದು ನಮ್ಮ ನೀತಿಯಾಗಿದೆ. ಏಕಾಏಕಿ ದೇಶದಾದ್ಯಂತ ರಾಷ್ಟ್ರೀಕರಣ ಮಾಡುವುದಕ್ಕಿಂತಲೂ, ಸ್ವಲ್ಪಸ್ವಲ್ಪವಾಗಿ ಮುಂದುವರಿದು ಅನುಕೂಲ ಅನಾನುಕೂಲ ಸಾಧ್ಯಾಸಾಧ್ಯತೆ ಪರಿಶೀಲಿಸಿ ಮುಂದುವರಿಯುವುದು ಸೂಕ್ತ ಎಂಬುದೇ ಸರ್ಕಾರದ ಆಶಯ. ಎಲ್ಲವನ್ನೂ ಮಾಡುವುದಾಗಿ ನಾವು ಒಪ್ಪಿಕೊಂಡಿಲ್ಲ. ಕೇಂದ್ರ ಸರ್ಕಾರದ ಅಭಿಪ್ರಾಯ ಕೂಡ ರಾಷ್ಟ್ರೀಕರಣ ಮಾಡಬೇಕೆಂದಿಲ್ಲ. ಒಂದು ಕಾರ್ಪೊರೇಷನ್ ಮಾಡಿ ಎಲ್ಲ ಸಂಸ್ಥಾನಗಳಲ್ಲೂ ಇದನ್ನು ಮಾಡಬೇಕೆಂಬುದು ಸರ್ಕಾರದ ಅಭಿಪ್ರಾಯವಾಗಿದೆ. ಆ ಪ್ರಕಾರ ನಾವೂ ಹೋಗಬೇಕೆಂಬ ಅಭಿಪ್ರಾಯವಿದೆ. ಈಗ ಸುಮಾರು 330 ಮೈಲಿಗಳಷ್ಟು ರಾಷ್ಟ್ರೀಕರಣ ಮಾಡಿದೆ. ಮುಂದಿನ ಐದುವರ್ಷಗಳಲ್ಲಿ ಆರು ರೂಟುಗಳನ್ನು ಮನಾಪಲೈಸ್ ಮಾಡಬೇಕೆಂಬ ಯೋಚನೆ ಸರ್ಕಾರಕ್ಕಿದೆಯೆಂದು ತಿಳಿಸಿದ್ದೇನೆ. ಅದಕ್ಕೆ 42 ಲಕ್ಷ ರೂಪಾಯಿಗಳು ಬೇಕೆಂದು ತಿಳಿಸಿದ್ದೇನೆ. ಆದ್ದರಿಂದ ಈ ವಿಷಯದಲ್ಲಿ ಮಾನ್ಯ ಸದಸ್ಯರು ಹೇಳಿರತಕ್ಕಂಥ ವಿಷಯಗಳಿಗೆಲ್ಲಾ ಸಮರ್ಪಕವಾದ ಉತ್ತರ ಕೊಟ್ಟಿದ್ದೇನೆಂದು ತಿಳಿದುಕೊಂಡಿದ್ದೇನೆ. ತಾವುಗಳೆಲ್ಲಾ ಈ ಡಿಮ್ಯಾಂಡಿಗೆ ಸಂಪೂರ್ಣ ಬೆಂಬಲ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

Mr. SPEAKER.—The question is :

"That a sum not exceeding Rs. 3,79,100 be granted to the Government to defray the charges which will come in course of payment during the year ending 31st day of March 1957, in respect of 'Charges on account of Motor Vehicles Acts'."

The motion was adopted.

DEMAND No. 39—WORKING EXPENSES—ROAD TRANSPORT SCHEMES.

XLVI-A. RECEIPTS FROM ROAD AND WATER TRANSPORT SCHEMES—WORKING EXPENSES.

Mr. SPEAKER.—The question is :

"That a sum not exceeding Rs. 91,30,200 be granted to the Government to defray the charges which will come in course of payment during the year ending 31st day of March 1957, in respect of 'Receipts from Road and Water Transport Schemes—Working Expenses'."

The motion was adopted.

DEMAND No. 43—MISCELLANEOUS CAPITAL ACCOUNT.

83-B. CAPITAL OUTLAY ON ROAD TRANSPORT SCHEMES.

Mr. SPEAKER.—The question is :

"That a sum not exceeding Rs. 53,00,000 be granted to the Government to defray the charges which will come in course of payment during the year ending 31st day of March 1957, in respect of 'Capital Outlay on Road Transport Schemes'."

The motion was adopted.

The House adjourned at Six of the Clock to meet at Twelve of the Clock on Wednesday, 21st March 1956.

WD 2896—GPB—550—21-6-56

V-, 31 N 56
N57 - 14 - part II
(B) 4725

MYSORE LEGISLATIVE ASSEMBLY

SEVENTEENTH DAY.

Wednesday, 21st March 1956.

The House met in the Assembly Hall, Atara Kacheri, Bangalore, at Five Minutes past Twelve of the Clock.

MR. DEPUTY SPEAKER (SRI R. CHENNIGARAMIAH) in the Chair.

QUESTIONS AND ANSWERS

City Municipality for the Old and New Bhadravati Towns.

Q.—16. Sri B. MADHAVACHAR (Bhadravati).—

Will the Government be pleased to state :—

(*a*) whether it is a fact that some leading citizens of Bhadravati have been representing to Government for bringing both the New Town and the Old Town under one administration by constituting either a City Municipality or a Sanitary Board in order to achieve proper and uniform development of the whole area ;

(*b*) the steps taken by Government to fulfil their needs ?

A.—Sri T. CHANNIAH (Minister for Public Health and Local Self-Government).—

(*a*) Yes.

(*b*) The matter is under examination.

ಶ್ರೀ ಬಿ. ಮಾಧವಾಚಾರ್.—ಈ ಮನವಿ ಸರ್ಕಾರದವರಿಗೆ ಬಂದದ್ದು ಯಾವಾಗ, ಯಾವ ತಾರೀಖಿನಲ್ಲಿ ?

ಶ್ರೀ ಟಿ. ಚನ್ನಯ್ಯ.—6-4-1953ರಲ್ಲಿ ಮೊದಲನೆಯ ಸಾರಿ ಮನವಿ ಬಂತು.

ಶ್ರೀ ಬಿ. ಮಾಧವಾಚಾರ್.—ಪರಿಶೀಲನೆ ಯಾವ ಹಂತದಲ್ಲಿ ಇದೆ ?

ಶ್ರೀ ಟಿ. ಚನ್ನಯ್ಯ.—ಡಿಪಾರ್ಟ್‌ಮೆಂಟಲ್ ಆಫೀಸರುಗಳ ಸಲಹೆ ಮತ್ತು ಅಭಿಪ್ರಾಯ ಪಡೆಯಬೇಕಾಗಿದೆ. ಭದ್ರಾವತಿ ನ್ಯೂಟೌನು ಚೇರ್ಮನ್‌ರವರು ಅಭಿಪ್ರಾಯವನ್ನು ಶೇಖರಿಸಿ ಡೆಪ್ಯುಟಿ ಕಮೀಷನರ ಮುಖಾಂತರ ಸರ್ಕಾರದವರಿಗೆ ಕಳುಹಿಸಬೇಕು ಅವರು ಇನ್ನೂ ಕಳುಹಿಸಿಲ್ಲ.

Text Books (Delay in publishing).

Q.—300. Sri B. HUTCHE GOWDA (Turuvekere).—

Will the Government be pleased to state :—

(*a*) whether it has come to their notice that there is delay to the extent of 4 to 5 months after the opening of schools in prescribing the text-books for schools in the Education Department ;

(*b*) whether much inconvenience is not being caused, particularly to children in rural parts, on account of the text-books not being printed and made available in time ;

(*c*) whether they would now make necessary arrangements—

(i) to publish the list of Text-books at least 2 months prior to the commencement of schools, and

(ii) to print such books and make them available in sufficient numbers to meet the requirements of students in the rural parts ?

A.—Sri A. G. RAMACHANDRA RAO (Minister for Law and Education).—

(*a*) No.

(*b*) The lists of text-books for the school year 1956 were announced on 30th November 1955, *i.e.* nearly two months prior to commencement of schools on 30th January 1956.

(*c*) (i) and (ii) The several authors and publishers whose books have been

(SRI A. G. RAMACHANDRA RAO.) prescribed for the school year 1956 have been requested to release the prescribed text-books and make them available for sale to the public by the 15th January 1956.

Many books have come out and a few are in the course of release. Efforts will however be made in future years to do things much earlier than this year.

Sri J. MOHAMED IMAM.—Sri Hutche Gowda has given a letter authorising me to put his question and supplementaries also.

Mr. DEPUTY SPEAKER.—Yes.

ಶ್ರೀ ಜೆ. ಮಹಮ್ಮದ್ ಇಮಾಂ.—ಸಾಧಾರಣವಾಗಿ ಎಲ್ಲಾ ಕಡೆಯೂ ಈ ಪಠ್ಯಪುಸ್ತಕಗಳು ಮುದ್ರಿತವಾಗಿ ವಿದ್ಯಾರ್ಥಿಗಳಿಗೆ ದೊರಕುತ್ತಿಲ್ಲ ಎಂಬ ದೂರು ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

*ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ಜೆ. ಮಹಮ್ಮದ್ ಇಮಾಂ.—ಆ ರೀತಿಯಾಗಿ ಇದೆಯೇ ಇಲ್ಲವೇ ಎಂಬ ಸತ್ಯಾಂಶವನ್ನು ವಿಚಾರಮಾಡಿ ನೋಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ವಿಚಾರಿಸುತ್ತೇನೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಸ್ಕೂಲು ಪ್ರಾರಂಭವಾದಮೇಲೆ ನಾಲ್ಕೈದು ತಿಂಗಳವರೆಗೂ ಪಠ್ಯಪುಸ್ತಕಗಳು ವಿದ್ಯಾರ್ಥಿಗಳಿಗೆ ದೊರೆಯದೆ ಪಾಠ ಸರಿಯಾಗಿ ನಡೆಯುತ್ತಿಲ್ಲ ಎಂಬುದು ತಮಗೆ ಗೊತ್ತೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೋದಸಲ ಸ್ವಲ್ಪ ತಡವಾದದ್ದು ನಿಜ. ಈ ಸಲ ಎಂದರೆ 1956 ನೇ ಸ್ಕೂಲು ಸಾಲಿನ ಪಠ್ಯಪುಸ್ತಕಗಳ ಪಟ್ಟಿಯನ್ನು 1955ನೇ ನವೆಂಬರ್ 30 ನೇ ತಾರೀಖೇ ಪ್ರಕಟ ಮಾಡಲಾಗಿತ್ತು. ಮತ್ತು ಜನವರಿ 15ನೇ ತಾರೀಖಿನೊಳಗೆ ಮಾರಾಟಕ್ಕೆ ದೊರಕುವಂತೆ ಮಾಡಬೇಕೆಂದು ಇನ್‌ಸ್ಟ್ರಕ್ಷನ್ ಕೊಟ್ಟಿದ್ದೇವೆ. ಇನ್ನೂ ತಡವಾಗುತ್ತಿದೆ ಎನ್ನುವುದಾದರೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಪಠ್ಯಪುಸ್ತಕ ಒಂದುಸಲ ಗೊತ್ತಾದಮೇಲೆ ಅದು ಇಷ್ಟೇ ವರ್ಷ ಇರಬೇಕು ಎಂದು ಹೇಳಿ ನಿಬಂಧನೆ ಏನಾದರೂ ಇದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ನಿಬಂಧನೆ ಇಲ್ಲ. ಪದೇ ಪದೇ ಬದಲಾವಣೆ ಮಾಡುವುದರ ಅವಶ್ಯಕತೆ ಎಷ್ಟುಮಟ್ಟಿಗೆ ಇದೆ ಎಂಬುದನ್ನು ನೋಡಬೇಕು. ಪದೇ ಪದೇ ಬದಲಾವಣೆ ಮಾಡುವುದು ಸೂಕ್ತವಲ್ಲ ಎಂದು ಟೆಕ್ಸ್ಟ್‌ಬುಕ್ ಸಮಿತಿಯವರಿಗೆ ಸೂಚನೆ ಕೊಡಲಾಗಿದೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಸಾಧಾರಣವಾಗಿ ಗ್ರಂಥಕರ್ತರಿಗೆ ಪ್ರೋತ್ಸಾಹ ಕೊಡಬೇಕು ಎಂದು ಹೇಳಿ ಪ್ರತಿ ವರ್ಷವೂ ಪಠ್ಯಪುಸ್ತಕಗಳನ್ನು ಬದಲಾಯಿಸುತ್ತಿರುವುದರಿಂದ ಹುಡುಗರಿಗೆ ಬಹಳ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಗ್ರಂಥಕರ್ತರಿಗೆ ಸಹಾಯ ಮಾಡಬೇಕೆಂಬ ಉದ್ದೇಶದಿಂದ ಆ ರೀತಿ ಮಾಡುವುದಿಲ್ಲ. ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆಯೇ ಇಲ್ಲವೆ ಎಂಬ ದೃಷ್ಟಿಯಿಂದ ಬದಲಾವಣೆ ಅವಶ್ಯಕವಾದರೆ ಬದಲಾವಣೆ ಮಾಡುತ್ತೇವೆ.

ಶ್ರೀ ಜೆ. ಮಹಮ್ಮದ್ ಇಮಾಂ.—ನಾನು ಮತ್ತು ಮಾನ್ಯ ಮಿನಿಸ್ಟರ್‌ರವರು ಚಿಕ್ಕವಯಸ್ಸಿನಲ್ಲಿರಬೇಕಾದರೆ ನಮ್ಮ ಹಿರಿಯರು ಓದಿದ ಪಠ್ಯಪುಸ್ತಕಗಳನ್ನೇ ನಾವೂ ಓದುತ್ತಾ ಇದ್ದುದು ಅವರ ಜ್ಞಾಪಕದಲ್ಲಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ನಮ್ಮ ಅಣ್ಣಂದಿರು ಓದಿದ ಪುಸ್ತಕ ನಾನು ಓದಿದ್ದು ನಿಜ.

ಶ್ರೀ ಜೆ. ಮಹಮ್ಮದ್ ಇಮಾಂ.—ಬಡ ಹುಡುಗರಿಗೆ ಅನುಕೂಲವಾಗುವಂತೆ 5-6 ಅಥವಾ 8-10 ವರ್ಷ ಪಠ್ಯಪುಸ್ತಕಗಳನ್ನು ಖಾಯಂ ಆಗಿ ಇಡುವುದು ಸೂಕ್ತವಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—8-10 ವರ್ಷ ಬಹುಶಃ ಸ್ವಲ್ಪ ಹೆಚ್ಚಾಗಬಹುದು. ಬದಲಾವಣೆ ಮಾಡುವುದನ್ನು ಆದಷ್ಟು ಕಡಮೆ ಮಾಡುವುದಕ್ಕೆ ಪ್ರಯತ್ನಮಾಡುತ್ತೇವೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಈ ರೀತಿ ಆಗಿಂದಾಗ್ಗೆ ಬದಲಾವಣೆ ಮಾಡುತ್ತಿರುವುದರಿಂದ ಹೈಪೋಟಿ ಹೆಚ್ಚಾಗಿ under—hand dealings ನಡೆಯುವುದಕ್ಕೆ ಅವಕಾಶವಾಗಿದೆ, ಎಲ್ಲಾ ತರಗತಿಗಳಿಗೂ ಇಲಾಖೆಯವರೇ ಏಕೆ ಪಠ್ಯಪುಸ್ತಕಗಳನ್ನು ತಯಾರು ಮಾಡಬಾರದು ?

ಶ್ರೀ ಎ. ಜಿ. ರಾಮಚಂದ್ರರಾವ್.—ಪ್ರಾಥಮಿಕ ವರ್ಗಗಳಿಗೆ ಮೊದಲನೆ 8 ವರ್ಷ ಸಾಮಾನ್ಯವಾಗಿ ಡಿಪಾರ್ಟ್‌ಮೆಂಟಲ್ ಟೆಕ್ಸ್ಟ್ ಇಡುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದೇವೆ. ಹೈಸ್ಕೂಲ್ ಕೋರ್ಸ್‌ಗೆ ಬೇಕಾದ ಪುಸ್ತಕಗಳನ್ನು ಡಿಪಾರ್ಟ್‌ಮೆಂಟಲ್ ಆಗಿ ಮಾಡುವುದಕ್ಕೆ ಕಷ್ಟವಾಗುತ್ತದೆ. ಅದನ್ನು ಖಾಸಗಿ ಜನರಿಂದ ತೆಗೆದುಕೊಳ್ಳಬೇಕು. ಅದೂ ಕೂಡ ಆದಷ್ಟು ಹೆಚ್ಚು ಬದಲಾವಣೆ ಆಗದ ಹಾಗೆ ನೋಡಿಕೊಳ್ಳುತ್ತೇವೆ.

ಶ್ರೀ ಪಿ. ಆರ್. ರಾಮಯ್ಯ.—ಪಠ್ಯಪುಸ್ತಕಗಳನ್ನು ಎಷ್ಟು ವರ್ಷಗಳಿಗೊಮ್ಮೆ ಬದಲಾಯಿಸಬೇಕೆಂದು ನಿಯಮವನ್ನು ಇಟ್ಟುಕೊಂಡಿದ್ದೀರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಂಥ ಖಡಾಖಂಡಿತವಾದ ನಿಯಮವೇನೂ ಇಲ್ಲ.

ಶ್ರೀ ಪಿ. ಆರ್. ರಾಮಯ್ಯ.—ಅಂಥ ನಿಯಮವಿಲ್ಲದೆ ಇರುವುದರಿಂದ, ಆವಶ್ಯಕತೆ ಇಲ್ಲದೆ ಇದ್ದರೂ ಕೂಡ ಕೆಲವರಿಗೆ ಪ್ರೋತ್ಸಾಹ ಕೊಡಬೇಕೆಂಬ ದೃಷ್ಟಿಯಿಂದ ಹಠಾತ್ತಾಗಿ ಪಠ್ಯಪುಸ್ತಕಗಳನ್ನು ಬದಲಾಯಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ಪಿ. ಆರ್. ರಾಮಯ್ಯ.—ಪಠ್ಯಪುಸ್ತಕಗಳನ್ನು ಗೊತ್ತುಮಾಡುವಾಗ ಇಡೀ ಸಂಸ್ಥಾನಕ್ಕೇ ಕೆಲವು ಪುಸ್ತಕಗಳು ಮತ್ತು ಡಿವಿಷನ್‌ಗಳನ್ನು ಮಾಡಿ ಆಯಾ ಡಿವಿಷನ್ ಪ್ರಕಾರ ಕೆಲ ಕೆಲವು ಪುಸ್ತಕಗಳು - - ಈ ರೀತಿ ಬೇರೆಬೇರೆಯಾಗಿ ಮಾಡುತ್ತೀರಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸಾಮಾನ್ಯವಾಗಿ ಇಡೀ ಸಂಸ್ಥಾನಕ್ಕೇ ಮಾಡುವುದು. ಆದರೆ ಕೆಲವು ಪ್ರಾಥಮಿಕ ವರ್ಗಗಳಲ್ಲಿ, ಬಹಳ ವಿಶಾಲವಾದ ಕ್ಷೇತ್ರವಾಗಿರುವುದರಿಂದ, ಒಬ್ಬರೇ ಗ್ರಂಥಕರ್ತರ ಪುಸ್ತಕವನ್ನು ಗೊತ್ತು ಮಾಡುವುದರಿಂದ ಅವರಿಗೆ monopoly ಯಾಗುತ್ತದೆ. ಇದನ್ನು ತಪ್ಪಿಸುವ ಸಲುವಾಗಿ ಡಿವಿಜನ್‌ಗಳನ್ನು ಏರ್ಪಾಡು ಮಾಡುತ್ತೇವೆ.

* Asterisk indicates that the remarks or speeches have not been revised by the Member concerned.

ಶ್ರೀ ಪಿ. ಆರ್. ರಾಮಯ್ಯ.—ಪಠ್ಯಪುಸ್ತಕಗಳನ್ನು ಗೊತ್ತುಮಾಡಲು ಸಂಸ್ಥಾನವನ್ನು ಎಷ್ಟು ಡಿವಿಷನ್‌ಗಳಾಗಿ ಮಾಡಿದ್ದೀರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ಎಷ್ಟು ಜನ ಗ್ರಂಥಕರ್ತರಿದ್ದಾರೆಂದು ನೋಡಿಕೊಂಡು ಅದರಮೇಲೆ ವಿಭಾಗ ಮಾಡುತ್ತೇವೆ.

ಶ್ರೀ ಪಿ. ಆರ್. ರಾಮಯ್ಯ.—ಸಂಸ್ಥಾನವನ್ನು ಎರಡು ಭಾಗ, ಮೂರು ಭಾಗ, ಹೀಗೆ ಎಷ್ಟು ವಿಭಾಗ ಮಾಡಿದ್ದೀರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಾಗೇನೂ ವಿಂಗಡಣೆಮಾಡಿಲ್ಲ. ಒಂದೇ ವಿಷಯದ ಮೇಲೆ ನಾಲ್ಕು ಜನ ಗ್ರಂಥಕರ್ತರ ಪುಸ್ತಕವಿದ್ದರೆ, ಅವೆಲ್ಲವನ್ನೂ ಅಂಗೀಕಾರ ಮಾಡಿದರೆ, ಆಗ ಎಲ್ಲ ಗ್ರಂಥಕರ್ತರಿಗೂ ಒಂದೇ ಸಂಖ್ಯೆಯಲ್ಲಿ ಪುಸ್ತಕಗಳು ಇರುವಂತೆ ಸಂಸ್ಥಾನವನ್ನು ನಾಲ್ಕು ಭಾಗವಾಗಿ ವಿಂಗಡಿಸುತ್ತೇವೆ.

ಶ್ರೀ ಪಿ. ಆರ್. ರಾಮಯ್ಯ.—ಪಠ್ಯಪುಸ್ತಕಗಳನ್ನು ಗೊತ್ತುಮಾಡುವ ವಿಷಯದಲ್ಲಿ, ಇಂಥ ಪಠ್ಯಪುಸ್ತಕಗಳು ಅಶುದ್ಧವಾಗಿವೆ, ಇವು ಪಠ್ಯಪುಸ್ತಕಗಳಾಗಿಡಲು ಸರಿಯಾಗಿಲ್ಲವೆಂಬ ದೂರುಗಳೇನಾದರೂ ಇದ್ದರೆ ಅವನ್ನು ಯಾರು ತೆಗೆದುಕೊಳ್ಳುತ್ತಾರೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಯಾರಿಗೆ ಕೊಡುತ್ತಾರೆಯೋ ಅವರು ತೆಗೆದುಕೊಳ್ಳುತ್ತಾರೆ; ಸರ್ಕಾರಕ್ಕೆ ಕೊಡಬೇಕಾದರೆ ಸಂಬಂಧಪಟ್ಟ ಸೆಕ್ರೆಟರಿ ತೆಗೆದುಕೊಳ್ಳುತ್ತಾರೆ. ವಿದ್ಯಾ ಇಲಾಖೆಯ ಡೈರೆಕ್ಟರವರಿಗೆ ಕೊಟ್ಟರೆ ಅವರು ತೆಗೆದುಕೊಳ್ಳುತ್ತಾರೆ; ಟೆಕ್ಸ್ಟ್ ಬುಕ್ ಕಮಿಟಿಯವರಿಗೆ ಕೊಟ್ಟರೆ ಅವರೂ ತೆಗೆದುಕೊಳ್ಳುತ್ತಾರೆ.

ಶ್ರೀ ಪಿ. ಆರ್. ರಾಮಯ್ಯ.—ದೂರುಗಳು ಬಂದರೆ ಅವನ್ನೆಲ್ಲ ಶೇಖರಿಸಿ, ವಿಮರ್ಶೆ ಮಾಡುವವರು ಸರ್ಕಾರದವರೋ ಅಥವಾ ಟೆಕ್ಸ್ಟ್‌ಬುಕ್ ಕಮಿಟಿಯವರೋ ?

ಶ್ರೀ ಎ. ಜಿ. ರಾಮಚಂದ್ರರಾವ್.—ಟೆಕ್ಸ್ಟ್‌ಬುಕ್ ಕಮಿಟಿಗೆ ಅವುಗಳನ್ನು ಕಳುಹಿಸುತ್ತೇವೆ.

ಶ್ರೀ ಪಿ. ಆರ್. ರಾಮಯ್ಯ.—ಈಗ ಅನುಸರಿಸುತ್ತಿರತಕ್ಕ ವ್ಯವಸ್ಥೆಯಾವುದು ?

ಶ್ರೀ ಎ. ಜಿ. ರಾಮಚಂದ್ರರಾವ್.—ಆಗಲೇ ಹೇಳಿದ ಹಾಗೆ ನಮಗೆ ಅರ್ಜಿ ಬಂದರೆ ಅದನ್ನು ಟೆಕ್ಸ್ಟ್‌ಬುಕ್ ಕಮಿಟಿಗೆ ಕಳುಹಿಸುತ್ತೇವೆ.

ಶ್ರೀ ಪಿ. ಆರ್. ರಾಮಯ್ಯ.—ದೂರುಗಳು ಬಂದರೆ ಅದರಮೇಲೆ ಆಖೈರು ತೀರ್ಮಾನವನ್ನು ಯಾರು ಮಾಡುತ್ತಾರೆ ? ಟೆಕ್ಸ್ಟ್‌ಬುಕ್ ಕಮಿಟಿಯವರೇ, ವಿದ್ಯಾಭ್ಯಾಸದ ಇಲಾಖೆಯ ಡೈರೆಕ್ಟರೇ ಅಥವ ಸರ್ಕಾರದವರೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಟೆಕ್ಸ್ಟ್‌ಬುಕ್ ಕಮಿಟಿಯವರದೇ ಆಖೈರು ತೀರ್ಮಾನ.

ಶ್ರೀ ಜಿ. ಶಿವಪ್ಪ.—ಈಗಲೂ ಸಹ S.S.L.C.ಗೆ ಸಂಬಂಧಪಟ್ಟ ಕೆಲವು-ಪಠ್ಯಪುಸ್ತಕಗಳು ದೊರೆಯದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ಜಿ. ಶಿವಪ್ಪ.—ಹಾಗೇನಾದರೂ ಇದ್ದರೆ ಅದನ್ನು ವಿಚಾರಿಸಿ ಜಾಗ್ರತೆಯಾಗಿ ಸರಿಪಡಿಸುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮಾನ್ಯ ಸದಸ್ಯರು specific instances ಹೇಳಿದರೆ ಅದನ್ನು ವಿಚಾರ ಮಾಡುತ್ತೇವೆ.

Sri G. SIVAPPA.—May I bring to the notice of the Government that the text-books prescribed for the S.S.L.C. are not in the market ?

Sri A. G. RAMACHANDRA RAO.—I will get it examined.

ಶ್ರೀ ಜಿ. ಶಿವಪ್ಪ.—ಸರ್ಕಾರದವರು ಶಾಲೆಗಳು ಪ್ರಾರಂಭವಾಗುವುದಕ್ಕೆ ಮುಂಚೆಯೇ, ಸಕಾಲದಲ್ಲಿ ಪುಸ್ತಕಗಳನ್ನು ಹೆಚ್ಚು ಸಂಖ್ಯೆಯಲ್ಲಿ ಪ್ರಿಂಟ್‌ಮಾಡಿಸಿ ಹಂಚುವುದಕ್ಕೆ ಏನು ತೊಂದರೆ ಇದೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸರ್ವೋದಯ ದಿನದಿಂದ ಶಾಲೆಗಳು ಪ್ರಾರಂಭವಾಗುವುದರಿಂದ ಇದುವರೆಗೂ ಪುಸ್ತಕಗಳನ್ನು ಪ್ರಿಂಟ್‌ಮಾಡಿಸಿ ಸಕಾಲದಲ್ಲಿ ಹಂಚಲು ಸ್ವಲ್ಪ ತೊಂದರೆಯಾಗಿದೆ. ಹೋದವರ್ಷಕ್ಕಿಂತ ಈ ವರ್ಷ ಸ್ವಲ್ಪ ಉತ್ತಮಗೊಂಡಿದೆ. ಮುಂದಿನ ವರ್ಷದಿಂದ ಕಾಲಕ್ಕೆ ಸರಿಯಾಗಿ ಪುಸ್ತಕಗಳು ದೊರೆಯುವಂತೆ ಮಾಡಲು ಪ್ರಯತ್ನಿಸುತ್ತೇವೆ.

Sri G. SIVAPPA.—In spite of it, even today there are complaints by the purchasing public that there are no textbooks in the shop ?

Sri A. G. RAMACHANDRA RAO.—As I submitted, if the Hon'ble Member were to indicate the place where this difficulty is felt, I will see that the difficulty is removed.

Sri B. NARAYANASWAMY.—In the case of text-books that have not been released within the time prescribed, have Government made any alternative arrangement Sir, for Government publication of text-books ?

Sri A. G. RAMACHANDRA RAO.—Just for a small delay we cannot make alternative arrangement. We have been pressing upon authors to see that these text-books are released immediately.

Sri B. NARAYANASWAMY.—Sir, in the case of authors who are not in a position to release text-books, what is the position Sir, if the Government do not make alternative arrangement ?

Sri A. G. RAMACHANDRA RAO.—If the supply were to become impossible, we will make some arrangement.

Sri B. NARAYANASWAMY.—Sir, is there any maximum time-limit for the publishers to release text-books ?

Sri A. G. RAMACHANDRA RAO.—Time-limit is given as in the case of all human institutions. Some marginal time-limit will be given and if that time limit is exceeded, the Government will have to make alternative arrangements.

Sri B. NARAYANASWAMY.—What is the marginal date by which these publishers should release text-books ?

Sri A. G. RAMACHANDRA RAO.—15th January was the date fixed. No exact period has been prescribed because it depends upon the number of books that one author has to print and supply.

Sri B. NARAYANASWAMY.—Will it not cause a good deal of hardship to students in case these text-books are not released or if they are released very late, because students will not be having the necessary teaching in the class-room ?

Sri A. G. RAMACHANDRA RAO.—I am of the view that there should not be any hardship. I will try my best to see that the hardship is removed.

ಶ್ರೀ ಡಿ. ಆರ್. ಕರಿಗೌಡ.—ಮಾಧ್ಯಮಿಕ ಶಾಲೆಗಳಿಗೆ ಕನ್ನಡ ಭೂವಿವರಣೆ ಒಂದೊಂದು ಜಿಲ್ಲೆಗೆ ಒಂದೊಂದು ಮಾಡಿದ್ದೀರಿ, ಅವು ಯಾವುವು ?

Sri A. G. RAMACHANDRA RAO.—I want notice.

ಶ್ರೀ ಡಿ. ಆರ್. ಕರಿಗೌಡ.—ಕಮಿಟಿಯವರು ಸೆಲೆಕ್ಟ್ ಮಾಡಿರುವ ಪುಸ್ತಕ ಇನ್ನೊಬ್ಬ ಗ್ರಂಥಕರ್ತರ ಪುಸ್ತಕದಿಂದ ಕಾಪಿ ಮಾಡಿದ್ದಾರೆಂದು ಕೋರ್ಟಿನಲ್ಲಿ ಇತ್ಯರ್ಥವಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಂದಿದೆ.

ಶ್ರೀ ಡಿ. ಆರ್. ಕರಿಗೌಡ.—ಅದಕ್ಕೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇನ್ನೊಂದು ಪುಸ್ತಕವನ್ನು ಬೇರೊಬ್ಬರು ಕೊಟ್ಟಿದ್ದಾರೆ. ಅದನ್ನು ಟೆಕ್ಸ್ಟ್ ಬುಕ್ ಕಮಿಟಿಗೆ ಕಳುಹಿಸಿಕೊಟ್ಟಿದ್ದೇವೆ.

ಶ್ರೀ ಡಿ. ಆರ್. ಕರಿಗೌಡ.—ಈಗಾಗಲೇ ಪಾಠಶಾಲೆಗಳು ಪ್ರಾರಂಭವಾಗಿ ಎರಡು ತಿಂಗಳಾಯಿತಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆಗಿದೆ.

ಶ್ರೀ ಡಿ. ಆರ್. ಕರಿಗೌಡ.—ಕಮಿಟಿಯವರು ಇನ್ನೊಂದು ಸಲ ಸೇರಲು ಇನ್ನೂ ಮೂರು ತಿಂಗಳ ಕಾಲವಾಗುತ್ತದೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಂದಿದೆ.

ಶ್ರೀ ಡಿ. ಆರ್. ಕರಿಗೌಡ.—ಆದುದರಿಂದ ಸರ್ಕಾರದವರು ಕೂಡಲೇ ಒಂದು ಆಜ್ಞೆ ಹೊರಡಿಸಿ ಯಾವುದಾದರೂ ಒಂದು ಪುಸ್ತಕವನ್ನು ನಿಗದಿಮಾಡುವುದು ಅತ್ಯಗತ್ಯವಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆದಷ್ಟು ಜಾಗ್ರತೆ ತೀರ್ಮಾನ ತೆಗೆದುಕೊಳ್ಳಬೇಕೆಂದು ಪಠ್ಯ ಪುಸ್ತಕ ಸಮಿತಿಯವರಿಗೆ ತಿಳಿಸುತ್ತೇವೆ.

Mr. DEPUTY SPEAKER.—You have got sufficient scope to argue the cause because the Demand for "Education" is going to come up before the House to-day. You can discuss the matter in detail then.

Sri D. R. KARI GOWDA.—Only one question, Sir. ಕೆಲವು ಜಿಲ್ಲೆಗಳಲ್ಲಿ ಒಂದೇ ತರಗತಿ ಹುಡುಗರಿಗೆ ಹನ್ನೆರಡಾಣೆಯ ಪುಸ್ತಕ, ಮತ್ತೆ ಕೆಲವು ಜಿಲ್ಲೆಗಳಲ್ಲಿ ಐದಾಣೆಯ ಪುಸ್ತಕ ಗೊತ್ತುಮಾಡಿರುವುದು ತಪ್ಪಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಒಂದೇ ತರಹ ಪುಸ್ತಕಗಳನ್ನು ಒಂದುಕಡೆ ನಿಗದಿಮಾಡಿದ್ದರೆ ಅವುಗಳಲ್ಲಿ ಯಾವುದು ಬೇಕೋ ಅದನ್ನು ಇಟ್ಟುಕೊಳ್ಳುವುದಕ್ಕೆ ಶಾಲಾಧ್ಯಾಪಕರುಗಳಿಗೆ ಅವಕಾಶವಿದೆ.

ಶ್ರೀ ಡಿ. ಆರ್. ಕರಿಗೌಡ.—ಒಂದುಕಡೆ ಹನ್ನೆರಡಾಣೆ ಪುಸ್ತಕ 250 ಪುಟಗಳುಳ್ಳದ್ದು, ಮತ್ತೊಂದು ಕಡೆ ಐದಾಣೆ ಪುಸ್ತಕ 80 ಪುಟಗಳುಳ್ಳದ್ದು, ಹೀಗೆ ಗೊತ್ತುಮಾಡಿದರೆ ವಿದ್ಯಾಭ್ಯಾಸ ವಿಚಾರಗಳಲ್ಲಿ ಒಂದೊಂದು ಕಡೆಗೂ ವ್ಯತ್ಯಾಸವಾಗುವುದಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಾಗಿದ್ದರೆ ನಮ್ಮ ಗಮನಕ್ಕೆ particular instances ತಂದರೆ ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಜಿ. ದುಗ್ಗಪ್ಪ.—ವಿದ್ಯಾಭ್ಯಾಸದ ಇಲಾಖೆಯವರೇ ಒಂದೇ ಬಗೆಯ ಪಠ್ಯಪುಸ್ತಕಗಳನ್ನು ಅಚ್ಚುಹಾಕಿಸಿ ಅವನ್ನು ಪ್ರಕಟಿಸಿ, ಒದಗಿಸುವುದರಿಂದ ಈ ಎಲ್ಲ ತೊಂದರೆಗಳೂ ತಪ್ಪಿಹೋಗುವುದಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆಗಲೇ ಜವಾಬು ಹೇಳಿದ್ದೇನೆ. ಪ್ರಾಥಮಿಕ ವರ್ಗಗಳಿಗೆ ಸಾಧ್ಯವಾದ ಮಟ್ಟಿಗೂ departmental text-books ಮಾಡಬೇಕೆಂದು ಉದ್ದೇಶಿಸಲಾಗಿದೆ. ಸೆಕಂಡರಿ ವಿದ್ಯಾಭ್ಯಾಸಕ್ಕೆ ಮಾತ್ರ ಸದ್ಯದಲ್ಲಿ ಆಗುವುದಿಲ್ಲ. ಆದುದರಿಂದ ಖಾಸಗಿ ಜನರ ಪುಸ್ತಕಗಳನ್ನು ಸೆಕಂಡರಿ ಕೋರ್ಸಿಗೆ ಗೊತ್ತುಮಾಡುತ್ತೇವೆ.

ಶ್ರೀ ಜಿ. ದುಗ್ಗಪ್ಪ.—ವಿದ್ಯಾಭ್ಯಾಸ ಸುಧಾರಣಾ ಸಮಿತಿಯವರು, ಶಿಫಾರಸು ಮಾಡಿರತಕ್ಕ ರೀತಿಯಲ್ಲಿ, ಇಲಾಖೆಯಲ್ಲಿ ಪುಸ್ತಕಗಳನ್ನು ಬರೆಯತಕ್ಕ ತಜ್ಞರ ಸಮಿತಿಯನ್ನು ಮಾಡಿ, ಆ ಸಮಿತಿಯವರಿಗೆ ಪ್ರೈಮರಿ ಮತ್ತು ಸೆಕೆಂಡರಿ ವಿದ್ಯಾಭ್ಯಾಸದ ಎಲ್ಲ ದರ್ಜೆಗಳಿಗೂ ಸರಿಯಾದ ಪಠ್ಯ ಪುಸ್ತಕಗಳನ್ನು ಬರೆಯುವ ಕೆಲಸವನ್ನು ವಹಿಸಿ, ಇಲಾಖೆಯವರು ಪ್ರಕಟಿಸಬೇಕು, ಎಂಬುದನ್ನು ಸರ್ಕಾರದವರು ಗಮನದಲ್ಲಿಟ್ಟುಕೊಂಡು ಅದನ್ನು ಜಾರಿಗೆ ತರುತ್ತಾರೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಎಲ್ಲ ಸಬ್ಜೆಕ್ಟುಗಳಲ್ಲಿಯೂ, ಎಲ್ಲ ವರ್ಗಗಳಿಗೂ ಮಾಡಬೇಕು ಎಂದು ಅವರು ಶಿಫಾರ್ಸು ಮಾಡಿಲ್ಲ. ಅವರು ಹೇಳಿರತಕ್ಕ ನೀತಿಗನುಸಾರವಾಗಿ, ಕಾರ್ಯಕ್ರಮ ನಡೆಸುತ್ತಿದ್ದೇವೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈಗಿನ ಸರ್ಕಾರದ ನೀತಿ ಎಷ್ಟು ಗ್ರಂಥಕರ್ತರ ಪುಸ್ತಕಗಳು ಸರಿಯಾಗಿವೆ ಎಂದು ಪಠ್ಯ ಪುಸ್ತಕ ಸಮಿತಿಯವರು ಗೊತ್ತುಮಾಡುತ್ತಾರೆಯೋ ಆ ಸಂಖ್ಯೆಯನ್ನಿಟ್ಟುಕೊಂಡು ಜೋನ್‌ಗಳನ್ನು ವಿಂಗಡಿಸುತ್ತೇವೆಂದು ಹೇಳಿದರು. ಈಗ ಮೂರು ನಾಲ್ಕು ಮಂದಿ ಗ್ರಂಥಕರ್ತರ ಪುಸ್ತಕಗಳಿಗೆ ಈ ರೀತಿ ಮಾಡುತ್ತಿದ್ದೀರಿ. 10-12 ಜನ ಗ್ರಂಥಕರ್ತರ ಪುಸ್ತಕಗಳು ಸರಿಯಾಗಿವೆ ಎಂದರೆ ಆಗ ಒಬ್ಬೊಬ್ಬರಿಗೆ ಒಂದೊಂದು ಜೋನ್ ವಿಂಗಡಿಸಬೇಕು ಎಂದರೆ ಅದು ಸರಿಯಾದ ನೀತಿಯೇ? ಆದುದರಿಂದ ಇವೆಲ್ಲವನ್ನೂ ಪರಿಶೀಲನೆ ಮಾಡಿ ಡೆಪ್ಯುಟಿ ಡೈರೆಕ್ಟರುಗಳ ಡಿವಿಷನ್‌ಗಳಂತೆ, ಅವುಗಳನ್ನೇ ಪಠ್ಯ ಪುಸ್ತಕ ಗೊತ್ತುಮಾಡುವುದಕ್ಕೂ ಜೋನ್‌ಗಳಾಗಿ ವಿಂಗಡಿಸಿದರೆ ಉತ್ತಮವಲ್ಲವೆ ? ಮತ್ತು ತಮ್ಮ ಈಗಿನ ನೀತಿ ಸರಿಯಾದ ರೀತಿಯಲ್ಲಿ work out ಆಗುತ್ತದೆಯೇ ಎಂದು ಹೇಳುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಪ್ರಶ್ನೆಯೊಳಗೆ ಬಹಳ ವಿಷಯಗಳಿವೆ, ಕಂಡಿಷನ್‌ಗಳಿವೆ. ಅದಕ್ಕೆ ಜವಾಬು ಹೇಳುವುದು ಕಷ್ಟ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈ ಪುಸ್ತಕಗಳನ್ನು ಪ್ರಿಂಟ್ ಮಾಡುವುದು ನಿಧಾನವಾಗುತ್ತಿರುವುದರಿಂದ ಮತ್ತು ಪ್ರತಿವರ್ಷವೂ ವಿದ್ಯಾರ್ಥಿಗಳಿಗೆ ಪುಸ್ತಕಗಳು ಬದಲಾವಣೆಯಾಗುವುದರಿಂದ ಜೋನ್ಸ್ ಮಾಡುವುದು ಇಡೀ ವಿದ್ಯಾಭ್ಯಾಸ ಮುಂದುವರಿಯಲು ಆತಂಕವಾಗಿ ರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

Mr. DEPUTY SPEAKER.—It is a matter of opinion; Hon'ble Member can make all these observations when the Demand for Education is taken up.

ಶ್ರೀ ಯು. ಎಂ. ಮಾದಪ್ಪ.—ಸೆಕೆಂಡರಿ ಎಜುಕೇಷನ್‌ಗೂ ಇಲಾಖೆಯಿಂದ ಪುಸ್ತಕಗಳನ್ನು ಒದಗಿಸಲು ಏಕೆ ಸಾಧ್ಯವಿಲ್ಲ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಲ್ಲಿನ ಮಟ್ಟ ಜಾಸ್ತಿಯಿರುತ್ತದೆ ಮತ್ತು ಉತ್ತಮವಾದ ಗ್ರಂಥಗಳನ್ನೇನು ಬರೆದಿರುತ್ತಾರೋ ಅವನ್ನು ಉಪಯೋಗ ಮಾಡಿಕೊಂಡರೆ ವಿದ್ಯಾರ್ಥಿಗಳಿಗೂ ಅನುಕೂಲವಾಗುತ್ತದೆ.

ಶ್ರೀ ಯು. ಎಂ. ಮಾದಪ್ಪ.—ಹಾಗಾದರೆ ಉತ್ತಮವಾದ ಗ್ರಂಥಗಳನ್ನು ಬರೆಸಿ ಇಲಾಖೆಯವರೇ ಪ್ರಿಂಟು ಮಾಡಿಸುವುದಕ್ಕೆ ತೊಂದರೆಯೇನು ?

Sri A. G. RAMACHANDRA RAO.—Sir, good work of art cannot be produced for order.

ಶ್ರೀ ಯು. ಎಂ. ಮಾದಪ್ಪ.—ಆ ರೀತಿ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಪರಿಶೀಲಿಸಿ ತಿಳಿದುಕೊಳ್ಳಲಾಗಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸಾಧ್ಯವಿರುವುದನ್ನು ಪ್ರಯತ್ನ ಮಾಡಬೇಕು. We must prescribe standard authors. ಅದನ್ನು ಬರೆಸುವುದಕ್ಕಾಗುವುದಿಲ್ಲ. ಬಾಕಿಯಾದವನ್ನು ಬರೆಸಲು ಪ್ರಯತ್ನ ಮಾಡುತ್ತೇವೆ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಒಂದು ಡಿಸ್ಟ್ರಿಕ್ಟಿನಲ್ಲಿ ಒಂದು ಕ್ಲಾಸಿನಲ್ಲಿ ಪಾಠ ನಡೆದು ಇನ್ನೊಂದು ಡಿಸ್ಟ್ರಿಕ್ಟಿನಲ್ಲಿ ಆ ಪಾಠ ನಡೆಯದಿರುವುದು ಗೊತ್ತೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಕೆಲವು ಪಬ್ಲಿಷರ್ಸ್‌ಗೆ ಪಬ್ಲಿಷ್ ಮಾಡಿ ಎಂದು ಹೇಳಿ ಆಥರೈಸ್ ಮಾಡಿರುತ್ತೀರಿ. ಅವರ ಹತ್ತಿರ ಹಣವಿಲ್ಲದಿದ್ದರೆ ಅವರು ಹೇಗೆ ಪಬ್ಲಿಷ್ ಮಾಡುವುದು ? ಹೇಗೆ ಒದಗಿಸುವುದು ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಂಥ ಪ್ರಸಂಗ ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಗ್ರಂಥಕರ್ತ ಬರೆಯುತ್ತೇನೆಂದು ಹೇಳುತ್ತಾನೆ. ಪಬ್ಲಿಷ್ ಮಾಡುವುದಕ್ಕೆ ಅವನ ಹತ್ತಿರ ಬಂಡವಾಳವಿಲ್ಲದಿದ್ದರೆ ಆಗ ಸಹಾಯಮಾಡಿ ಜಾಗ್ರತೆ ಪಬ್ಲಿಷ್ ಮಾಡಲು ಏರ್ಪಾಡು ಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದಕ್ಕೆ ಪ್ರಾವಿಷನ್ ಇದೆ. ಅಂಥ ಸಂದರ್ಭ ಯಾವುದೂ ನಮ್ಮ ಗಮನಕ್ಕೆ ಬಂದಿಲ್ಲ. ಒಂದುವೇಳೆ ಅಂಥ ಸಂದರ್ಭಗಳನ್ನು ಗಮನಕ್ಕೆ ತಂದರೆ ಪರಿಶೀಲಿಸುತ್ತೇವೆ.

Central Technical Education Board Examinations.

Q.—569. Sri M. PALANIYAPPAN (Ulsoor).—

Will the Government be pleased to state:—

(*a*) whether they are aware of the introduction of new scheme in the Sri Jayachamarajendra Occupational Institute, Bangalore, under the Central Board of Technical Education in 1952;

(*b*) whether it is a fact that the Central Technical Board conducted the Public Examinations in S.J.O.I., Bangalore, for both the old and new scheme students in 1953;

(*c*) whether it is a fact that both old and new scheme students who passed the Diploma Examinations in 1953 conducted by Central Technical Education Board, were awarded Diploma with the privilege to use the titles like L.C.E., L.M.E., L.E.E., etc., in their respective trades;

(*d*) whether it is a fact that the Managing Committee of S.J.O.I. Bangalore, recommended to Government in 1954 to permit the Diploma holders under the old scheme, who passed out prior to 1953 to use titles like L.C.E., L.M.E., etc., on the grounds that:

(i) the syllabi under the old and new scheme were almost the same standard;

(ii) the old scheme diploma holders would be in a disadvantageous position in securing jobs if they were not permitted to use the titles like L.C.E., etc.;

(iii) the old scheme students who appeared and passed in 1953 and studied even the old scheme syllabus, were also awarded Diplomas with the privilege to use titles like L.C.E, L.M.E., etc.;

(*e*) if, so, whether they will be pleased to expedite the matter?

A.—Sri A. G. RAMACHANDRA RAO (Minister for Law and Education).—

(*a*) Yes.
(*b*) Yes.
(*c*) Yes.
(*d*) (i), (ii) & (iii) Yes.

(*e*) The matter will be finalised as early as possible.

Sri M. PALANIYAPPAN.—May I know the old scheme according to Government ?

*Sri A. G. RAMACHANDRA RAO.—As the question itself suggests, the standard of the two examinations are not identical; they are almost identical. The duration of the courses also, one is probably two years and the other is three years; therefore, there is difference.

Sri M. PALANIYAPPAN.—May I know when the Central Board of Examination introduced this scheme ?

Sri A. G. RAMACHANDRA RAO.—I think about two years ago.

Sri M. PALANIYAPPAN.—When did the first batch of Diploma holders pass out of the school ?

Sri A. G. RAMACHANDRA RAO.—I want notice.

Sri M. PALANIYAPPAN.—May I know the number of Diploma holders who have passed out of this Institution since 1946?

Sri A. G. RAMACHANDRA RAO.—I will have to get the information and supply.

Sri M. PALANIYAPPAN.—Have the old Diploma holders represented to Government or to the Principal to permit them to suffix the Diploma to their names ?

Sri A. G. RAMACHANDRA RAO.—It has come to the notice of the Government and we are getting it examined with a view to give relief early.

Sri M. PALANIYAPPAN.—Are the Government aware that when the syllabus are almost identical, nearly 1,000 students are made to suffer in securing appointments and other things?

Sri A. G. RAMACHANDRA RAO.—I do not think that such a large number have become victims of this.

Sri M. PALANIYAPPAN.—Has it come to the notice of the Government that the students who have passed under the old scheme are not recognised for Government appointment both in the State and outside ?

Sri A. G. RAMACHANDRA RAO.—I have already answered that question.

Sri M. PALANIYAPPAN.—Will the Government at least give an assurance that they would pass orders in this behalf favourably and early ?

Sri A. G. RAMACHANDRA RAO.—As early as possible we will do it; we are at it.

College and High School (Government) for Kolar Gold Fields.

Q.—393. Sri K. S. VASAN (Kolar Gold Fields).—

Will the Government be pleased to state :—

(*a*) whether they have received representations for a Government College and a High School for the City of Kolar Gold Fields;

(*b*) if so, what steps they propose to take to meet this long-felt need of that City ?

A.—Sri A. G. RAMACHANDRA RAO (Minister for Law and Education).—

(*a*) and (*b*) The accepted policy of Education Reform do not warrant the opening of Intermediate Colleges and the existing Intermediate Colleges have to undergo transformation.

Representations have been received for the starting of a Government High School at K.G.F.

It is the policy of Government to encourage private agencies in cities and towns to start and maintain High Schools.

Sri K. S. VASAN.—Will the Government extend some financial assistance to private agency to expand the High School they are running now ?

* Sri A. G. RAMACHANDRA RAO.—Yes; as per rules, they will be given grants-in-aid.

Sri K. S. VASAN.—Have not the Government appealed to the Mining

Company to help starting a college in K.G.F. ?

Sri A. G. RAMACHANDRA RAO.—Yes, we have appealed to the Mining Company to help the institution.

Sri K. S. VASAN.—What is their response ?

Sri A. G. RAMACHANDRA RAO.—So far there is no reaction from them.

Sri K. S. VASAN.—Will the Government again move the matter ?

Sri A. G. RAMACHANDRA RAO.—I do not think it is proper to move the Company again.

Sri A. BHEEMAPPA NAIK.—When are those Companies quitting the Mysore State ?

Sri A. G. RAMACHANDRA RAO.—I am not an astrologer.

Sri A. BHEEMAPPA NAIK.—Would this not be one of the reasons to go out from the Mysore State ?

Sri A. G. RAMACHANDRA RAO.—That cannot be a proper reason.

Sri A. V. NARASIMHA REDDY.—In view of the large college-going population there, is it not necessary that Government should think of starting a college there ?

Sri A. G. RAMACHANDRA RAO.—No, Sir.

Sri A. V. NARASIMHA REDDY.—Does it mean that the Government do not feel the necessity of providing a College for the college-going population there ?

Sri A. G. RAMACHANDRA RAO.—The view of the Government is this : in respect of starting of Colleges, it is the private bodies that should come forward to start colleges.

Sri A. V. NARASIMHA REDDY.—Is it not within the powers of the Government and the Minister for Education to direct the University to start a college wherever necessary ?

Sri A. G. RAMACHANDRA RAO.—I have already answered it. It is not a question of power ; it is a question fo obligatory duties and there is no obligation. Even so, Government is prepared to give all aids if private bodies come forward to start colleges.

Sri A. V. NARASIMHA REDDY.—So long as Government is there and so long as the people urge that there is necessity for starting a college, is it not the obligatory duty of the Government to consider the matter ?

Sri A. G. RAMACHANDRA RAO.—I will make the point clear, Sir. Regarding Primary Education there is the obligation in the Constitution and Government are, as early as possible, bound to give free and compulsory education to all school-going boys and girls between the ages of 6 and 14. Regarding Secondary and Collegiate Education there is no such obligation. Even so, they have got to encourage education. We are not able to give free and compulsory Primary Education. We are not in a position to give Secondary and Collegiate Education. Therefore, we request the public to come forward with donation to start institutions in which case Government promises as much help as is possible ; that is the position.

12-30 P.M.

Intermediate College at Chikmagalur (Construction of a Building)

Q. - 487. Srimathi B. L. SUBBAMMA (Chikmagalur-Mudigere).—

Will the Government be pleased to state :—

(*a*) whether any representation has been received praying for the construction of a building for the Intermediate College at Chikmagalur ;

(*b*) since how many years the said request is being made ;

(*c*) whether they would consider this matter early ?

A.—Sri A. G. RAMACHANDRA RAO (Minister for Law and Education).—

(*a*) No.

(*b*) Does not arise.

(*c*) Does not arise.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—(*a*) ಪ್ರಶ್ನೆಗೆ ಉತ್ತರವಾಗಿ 'ಇಲ್ಲ' ಎಂದು ತಿಳಿಸಿದ್ದೀರಿ. ಎಂದರೆ, "ಈ ಕೋರಿಕೆಯ ಮನವಿಗಳು" ಎಂದರೆ ಆ ಜನರು ಕೇಳಿಕೊಂಡರೇನೇ "ಕೋರಿಕೆಯ ಮನವಿಗಳು" ಹಾಗಿಲ್ಲದೆ ಈ ಶಾಸನ ಸಭಾ ಸದಸ್ಯರು ಕೇಳಿಕೊಂಡರೆ ಅದು ಮನವಿಯಾಗುವುದಿಲ್ಲ ಎಂದು ತಾವು ಭಾವಿಸಿರುವಂತಿದೆಯಲ್ಲವೇ ?

*ಶ್ರೀ ಎ. ಜಿ. ರಾಮಚಂದ್ರರಾವ್.—ಆ ರೀತಿಯೇನೂ ಇಲ್ಲ. ಈ ಮಾನ್ಯ ಸದಸ್ಯರು ಹೇಳಿರುವುದೂ ನಿಜ. ಸರ್ಕಾರದವರೂ ಕೂಡ ಈ ಬಗ್ಗೆ ಪ್ರಯತ್ನಪಡುತ್ತಿದ್ದಾರೆಂಬುದೂ ನಿಜ. ಈ ಅಂಶ ಮಾನ್ಯ ಸದಸ್ಯರಿಗೂ ಗೊತ್ತಿದೆ. ನಾವೀಗ ಆ ಜಿಲ್ಲಾ ಬೋರ್ಡಿನವರನ್ನು ಒಪ್ಪಿಸಿಕೊಂಡು ಆ ಕಟ್ಟಡವನ್ನು ಬಿಡಿಸಿಕೊಂಡರೆ ಎಲ್ಲಾ ಸರಿಹೋಗಬಹುದೆಂದು ಆಲೋಚನೆ ಮಾಡಿದ್ದೇವೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಫಾರೆಸ್ಟ್ ಇಲಾಖೆಗೆ ಸೇರಿದ್ದಂಥ ಗಂಧದ ಕೋಠಿಯನ್ನು ಈ ದಿವಸ ಜಿಲ್ಲಾ ಬೋರ್ಡಿನವರ ವಶಕ್ಕೆ ಕೊಟ್ಟಿರುತ್ತಾರೆ. ಈ ಕಟ್ಟಡವನ್ನು ಆ ಜಿಲ್ಲಾ ಬೋರ್ಡಿನವರಿಂದ ಈ ಕಾಲೇಜ್ ಕಟ್ಟಡಕ್ಕಾಗಿ ಬಿಡಿಸಿಕೊಡುತ್ತೇವೆಂದು ಹೇಳಿದ್ದ ವಿಚಾರ ಇಲ್ಲಿಯುವರೆಗೂ ಏಕೆ ನಿಧಾನವಾಯಿತು ?

ಶ್ರೀ ಎ. ಜಿ ರಾಮಚಂದ್ರರಾವ್.—ಮಧ್ಯೆ ಕೆಲವು ತಕರಾರುಗಳು ಬಂದುವು. ಈಗ ಅವುಗಳನ್ನು ಬಗೆಹರಿಸಲು ಪ್ರಯತ್ನಪಡುತ್ತಿದ್ದೇವೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಈ ಹಿಂದೆ ಶ್ರೀ ನಾಗರಾಜರಾಯರು ಅಲ್ಲಿ ಜಿಲ್ಲಾಧಿಕಾರಿಗಳಾಗಿದ್ದಾಗಲೇ ಸುಮಾರು ಒಂದು ಲಕ್ಷ ರೂಪಾಯಿಗಳನ್ನು ಈ ಬಗ್ಗೆ ಸರ್ಕಾರದಲ್ಲಿ ಡಿಪಾಜಿಟ್ ಮಾಡಲಾಗಿದೆ. ಆದಕಾರಣ ನಾನೀಗ ಅರಣ್ಯ ಮಂತ್ರಿಗಳು ಇಲ್ಲೇ ಇರುವುದರಿಂದ ಅವರು ಈ ಬಗ್ಗೆ ಸೂಕ್ತ ವಿವರಗಳನ್ನು ಹೇಳಬಹುದಲ್ಲವೇ ?

ಉಪಾಧ್ಯಕ್ಷರು.—ಈ ಸಮಯದಲ್ಲಿ ತಾವು ಆ ರೀತಿ ಕೇಳುವುದಕ್ಕೆ ಅವಕಾಶವಿಲ್ಲ.

ಶ್ರೀ ಎ. ಜಿ. ರಾಮಚಂದ್ರರಾವ್.—ಮೊದಲು ಈ ಕಟ್ಟಡ ಫಾರೆಸ್ಟ್ ಇಲಾಖೆಯವರ ವಶದಲ್ಲಿತ್ತು. ಅನಂತರ ಅದನ್ನು ಅವರು ಸಂದಲ್ ಕೋಠಿಗಾಗಿ ಜಿಲ್ಲಾ ಬೋರ್ಡಿನವರಿಗೆ ವರ್ಗಾಯಿಸಿ ಕೊಟ್ಟರು. ಈಗ ಆ ಜಿಲ್ಲಾ ಬೋರ್ಡಿನವರು ಅದನ್ನು ಆ ನರ್ಸರಿಗೆ ವರ್ಗಾಯಿಸಿದ್ದಾರೆ. ಈ ಕಟ್ಟಡವನ್ನು ಕಾಲೇಜಿಗೋಸ್ಕರವಾಗಿ ಬಿಟ್ಟುಕೊಡಬೇಕೆಂದು ಸಾರ್ವಜನಿಕರು ಅರ್ಧ ಹಣವನ್ನು ಡಿಪಾಜಿಟ್ ಮಾಡಿದ್ದಾರೆ. ಈಗಾಗಲೇ ಆ ಕಟ್ಟಡದಲ್ಲಿ ಕೆಲವು ಭಾಗಗಳನ್ನು ಬಿಟ್ಟುಕೊಡಲಾಗಿದೆ. ಉಳಿದ ಭಾಗಗಳನ್ನು ಬಿಡಿಸಿಕೊಳ್ಳಲು ಜಿಲ್ಲಾ ಬೋರ್ಡಿನವರ ಕೆಲವು ತಕರಾರುಗಳಿವೆ. ಅವು ಪೂರೈಸಿದನಂತರ ಇದನ್ನು ಬಿಡಿಸಿಕೊಡಲಾಗುವುದು.

Dr. R. NAGAN GOWDA.—I do not know anything about this. Until I get the information, I cannot give it. If you want information on this, I will be able to supply information to-morrow.

ಶ್ರೀ ಜಿ. ಪುಟ್ಟಸ್ವಾಮಿ.—ಇಲ್ಲಿಯ ಇಂಟರ್ ಕಾಲೇಜಿನಲ್ಲಿ ಹೆಚ್ಚು ಹುಡುಗರಿಗೆ ಅಭ್ಯಾಸ ಮಾಡಲು ಅವಕಾಶವಿಲ್ಲದಿರುವುದರಿಂದ ತಾನೆ ಈ ದಿವಸ ಈ ಜಿಲ್ಲೆಯ ಅನೇಕ ಹುಡುಗರು ಶಿವಮೊಗ್ಗ ಕಾಲೇಜಿಗೆ ಹೋಗಿ ಸೇರಿರುವುದು ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ರೀತಿ ತೊಂದರೆ ಏನೂ ಆಗಿಲ್ಲ.

Rural Industrial Societies, Chamarajanagar Taluk.

Q.—48. Sri B. RACHIAH (Yelandur-Scheduled Castes).—

Will the Government be pleased to state :—

(*a*) the number and names of Rural Industrial Societies in Chamarajanagar Taluk ;

(*b*) out of them, the names of craft societies ;

(*c*) the total share amount of each society ;

(*d*) the number and names of persons who have been granted loans and the amounts granted (community-war details may be given) ?

A.—Sri H. M. CHANNABASAPPA (Minister for Industries).—

(*a*) The following are the six Rural Industrial Co-operative Societies in Chamarajanagar Taluk :—

(1) Chamarajanagar Kasaba Hobli R.I.C. Society.
(2) Harave Hobli R.I.C. Society.
(3) Santhemarahalli Hobli R.I.C. Society.
(4) Ummathur Hobli R.I.C. Society.
(5) Haradanahalli Hobli R.I.C. Society.
(6) Chandakavadi Hobli R.I.C. Society.

(*b*) Nil.

(*c*)

	Rs.	a.	p.
(1) Chamarajanagar Kasaba Rural Industrial Co-operative Society.	3,787	0	0
(2) Harave R.I.C. Society	3,595	11	0
(3) Ummathur ,, ...	3,465	8	0
(4) Santhemarahalli ,, ...	3,454	2	0
(5) Haradanahalli ,, ...	4,156	6	0
(6) Chandakavadi ,, ...	3,706	1	0
Total ...	22,164	12	0

(*d*) Please see Statement appended.

Sl. No.	Name of Industrialist	Place	Loan sanctioned	Community
			Rs.	
	Harave Hobli.			
	Sriyuths—			
40	M. C. Basappa ...	Malayuru ...	2,000	Lingayet
41	B. Puttanniah ...	Hudigala ...	350	"
42	Siddaiah ...	Kalalipura ...	1.000	"
43	M. Mahadevasetty ...	Hudigala ...	300	Ganiga
44	Mallappa ...	Kallapura ...	800	Lingayet
45	Gurubasappa ...	Harave ...	500	"
		Total ...	4,950	
	Haradanahalli Hobli.			
46	Madappa ...	Hankanasettypura ...	200	Lingayet
47	R. Bheema Rao ...	Basavapura ...	200	Brahmin
48	R. Krishnamurthy ...	" ...	200	"
49	Patel Lingasetty ...	Bedamodulu ...	200	Melusakkare
50	Madappa ...	Honnahalli ...	400	Lingayet
51	Doddabasappa ...	" ...	200	"
52	R. Subba Rao ...	Basavapura ...	600	Brahmin
53	S. Subramanyaraj Urs.	Amachavadi ...	350	Urs
54	H. L. Mallikarjunaiah.	Hossur ...	300	Lingayet
55	Ranganaika ...	Amachavadi ...	300	Parivara
56	G. P. Chikkaputtaraja Urs.	" ...	350	Urs
		Total ...	3,300	
	Santhemarahally Hobli.			
57	P. Madappa ...	Santhemarahalli ...	400	Lingayet
58	K. Nagappa ...	Kasthur ...	300	Brahmin
59	Puttasubbappa ...	Kuderu ...	100	Lingayet
60	Puttamadappa ...	Santhemarahalli ...	500	"
61	H. V. Gopalaswamy ...	Hanahalli ...	600	Brahmin
		Total ...	1,900	

ಶ್ರೀ ಬಿ. ರಾಚಯ್ಯ.—(*b*) ಪ್ರಶ್ನೆಗೆ ಉತ್ತರವಾಗಿ ಇಲ್ಲ ಎಂದು ಹೇಳಿದ್ದೀರಿ, ಈ ಕಸಬಿನ ಸಂಘಗಳವರಿಂದ ತಮಗೆ ಮನವಿಗಳು ಯಾವುವೂ ಬಂದಿಲ್ಲವೇ ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ನೋಟೀಸ್.

ಶ್ರೀ ಬಿ. ರಾಚಯ್ಯ.—ಚಂದಕವಾಡಿ ಹೋಬಳಿಯಲ್ಲಿ ಹಗ್ಗ ತಯಾರು ಮಾಡತಕ್ಕಂಥ ಒಂದು ಕೈಗಾರಿಕೆ ಅಲ್ಲಿ ತೆರೆಯಬೇಕೆಂದು ಒಂದು ನಿರ್ಣಯವನ್ನು ಮಾಡಿ ಅಲ್ಲಿನ ರೈತರು ಸರ್ಕಾರಕ್ಕೆ ಅದನ್ನು ಕಳುಹಿಸಿದ್ದಾರೆಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ವಿಚಾರ ನನಗೀಗ ಮಾನ್ಯ ಸದಸ್ಯರೇ ತಿಳಿಸಿರುತ್ತಾರೆ.

ಶ್ರೀ ಬಿ. ರಾಚಯ್ಯ.—ಆ ಚಾಮರಾಜನಗರ ತಾಲ್ಲೂಕಿನಲ್ಲಿ ಈ ರೂರಲ್ ಇಂಡಸ್ಟ್ರಿಯಲೈಜೇಷನ್ ಸ್ಕೀಂನಲ್ಲಿ ಹೆಚ್ಚು ಸಾಲ ಕೊಡಬೇಕೆಂದು ನಿರ್ಣಯ ಮಾಡಿ ಕಳುಹಿಸಿರತಕ್ಕ ವಿಚಾರ ತಮ್ಮ ಗಮನಕ್ಕೆ ಬಂದಿದೆಯೇ ?

Sri H. M. CHANNABASAPPA.—I would like to have notice for that.

ಶ್ರೀ ಬಿ. ರಾಚಯ್ಯ.—ಈಗ ಅಲ್ಲಿ ತಾವು ಕೊಡುತ್ತಿರುವ ಹಣದಿಂದ ಕೇವಲ ಷೇರುದಾರರಿಂದ ಎಷ್ಟು ಹಣ ಷೇರ್ ರೂಪವಾಗಿ ವಸೂಲಾಗಿದೆಯೋ ಅದಕ್ಕಿಂತ ಒಂದು-ಎರಡು ಸಾವಿರ ರೂಪಾಯಿಗಳನ್ನು ಮಾತ್ರ ಜಾಸ್ತಿಯಾಗಿ ಮಂಜೂರು ಮಾಡುತ್ತಿದ್ದಾರೆ. ಹೀಗಾದರೆ ಉಳಿದವರ ಗತಿಯೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕ್ರಮವಾಗಿ ಅರ್ಜಿ ಬಂದರೆ ಸೆಕ್ಯೂರಿಟಿ ಕೊಟ್ಟರೆ ಎಲ್ಲರಿಗೂ ಸಾಲ ದೊರೆಯುವುದಕ್ಕೆ ಅವಕಾಶವಿದೆ.

ಶ್ರೀ ಬಿ. ರಾಚಯ್ಯ.—ಕ್ರಮವಾಗಿ ಅರ್ಜಿ ಹಾಕತಕ್ಕ ಷೇರುದಾರರಿಗೂ ಸಾಲ ಮಂಜೂರಾಗಲು ತೊಂದರೆ ಆಗುತ್ತಿದೆ ಎಂಬುದು ತಮಗೆ ಗೊತ್ತಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ತೊಂದರೆಗೆ ಕಾರಣಗಳು ನಾನಾ ರೂಪವಾಗಿರಬಹುದು.

ಶ್ರೀ ಬಿ. ರಾಚಯ್ಯ.—ಅವರು ಪರ್ಸನಲ್ ಸೆಕ್ಯೂರಿಟಿ ಕೊಟ್ಟರೆ ಅಂಥವರಿಗೆ ಸಾಲ ಮಂಜೂರು ಮಾಡುತ್ತೀರಾ ? ಆ ರೀತಿ ಸರ್ಕಾರದಿಂದ ಒಂದು ಆಜ್ಞೆ ಹೊರಡಿಸುವಿರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ರೀತಿ ಪರ್ಸನಲ್ ಸೆಕ್ಯೂರಿಟಿಮೇಲೆ ಮುನ್ನೂರು ರೂಪಾಯಿಗಳ ವರೆಗೂ ಸಾಲ ಮಂಜೂರು ಮಾಡಲು ಸರ್ಕಾರದ ಆಜ್ಞೆ ಈಗಾಗಲೇ ಆಗಿದೆ. ಸಾಲ ಅಪೇಕ್ಷಿಸತಕ್ಕವರು ಸಕ್ರಮವಾಗಿ ಅರ್ಜಿ ಹಾಕಿಕೊಳ್ಳಬೇಕು. ಆ ಸೊಸೈಟಿಗಳವರೂ ಸಹ ಶ್ರದ್ಧೆಯಿಂದ ಕೆಲಸ ನಡೆಸಬೇಕು. ಆಗ ಈ ತೊಂದರೆಗಳೊಂದೂ ಇರುವುದಿಲ್ಲ.

ಶ್ರೀ ಪಿ. ಆರ್. ರಾಮಯ್ಯ.—ತಾವು ಈ ಪ್ರಶ್ನೆಗೆ ಉತ್ತರವಾಗಿ ಕೋಮುವಾರುಗಳ ಹೆಸರನ್ನು ಸೂಚಿಸಿದ್ದೀರಿ. ಈ ಕೋಮುವಾರು ಸೂಚನೆ ಅನಗತ್ಯವಾಗಿತ್ತಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದರಿಂದ ಬಾಧಕವೇನೂ ಇಲ್ಲ. ಮಾನ್ಯ ಸದಸ್ಯರು ಕೇಳಿದ್ದರೆ ಅದನ್ನು ನಿರಾಕರಿಸಲು ಸಾಧ್ಯವಾಗುವುದಿಲ್ಲ.

ಶ್ರೀ ಪಿ. ಆರ್. ರಾಮಯ್ಯ.—ತಾವು ಕೋಮುವಾರು ಆಧಾರದಮೇಲೆ ಈ ಸಾಲವನ್ನು ಮಂಜೂರು ಮಾಡುತ್ತಿಲ್ಲ ಅನ್ನುವುದಾಗಿದ್ದರೆ, ಅಂಥ ಪಾಲಿಸಿ ಇದ್ದಿದ್ದರೆ ತಾವು ಇದನ್ನು ತಿಳಿಸಬೇಕಾದದ್ದೇ ಇರಲಿಲ್ಲ. ಅಂಥ ಪಾಲಿಸಿ ಇದ್ದರೆ ಆಗ ನೀವು ತಿಳಿಸಬಹುದಿತ್ತು, ಅಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಪ್ರಶ್ನೆಯನ್ನು ಕಳುಹಿಸಿರತಕ್ಕ ಸದಸ್ಯರು ಯಾವ ಯಾವ ಕೋಮಿನವರು ಎಂಬುದನ್ನು ತಿಳಿಸಬೇಕೆಂದು ಕೇಳಿದ್ದಾರೆ, ಅದಕ್ಕೆ ಸರ್ಕಾರದವರು ತಿಳಿಸಿದ್ದಾರೆ.

Mr. DEPUTY SPEAKER.—There is no necessity for argument. The Hon'ble Minister has answered the question properly. The member wanted the names of the persons who have taken loans communitywise ; they have been given.

Sri P. R. RAMAIYA.—Is it the Government policy to distribute these loans according to communities ?

Mr. DEPUTY SPEAKER.—The question of policy does not arise.

Sri P. R. RAMAIYA.—Have the Government distributed these loans in this particular taluk according to communities ?

Sri H. M. CHANNABASAPPA.—It is not so.

ಶ್ರೀ ಯು. ಎಂ. ಮಾದಪ್ಪ.—ಅಲ್ಲಿ ಸಾಲಕ್ಕಾಗಿ ಹಾಕತಕ್ಕ ದರಖಾಸ್ತು ಅರ್ಜಿಗಳೆಲ್ಲಾ ನೇರವಾಗಿ ಡೈರೆಕ್ಟರಿಗೇ ಬಂದು ಅವು ಮಂಜೂರಾಗಬೇಕೆಂಬ ನಿರ್ಬಂಧವಿರುವುದರಿಂದ ಅವರಿಗೆ ಸಾಲ ಮಂಜೂರಾಗುತ್ತಿರುವುದು ಬಹಳ ನಿಧಾನವಾಗುತ್ತಿದೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಗೊತ್ತಿದೆ.

ಶ್ರೀ ಯು. ಎಂ. ಮಾದಪ್ಪ.—ಈ ಕಾರಣದಿಂದ ಈ ಅಧಿಕಾರವನ್ನು ಈಗ ವಿಕೇಂದ್ರೀಕರಣ ಮಾಡಿ ಕೆಳಗಿನ ಅಧಿಕಾರಿಗಳಿಗೆ ಈ ಅಧಿಕಾರವನ್ನು ಹಂಚಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಪರಿಶೀಲನೆ ಮಾಡೋಣ.

ಶ್ರೀ ಯು. ಎಂ. ಮಾದಪ್ಪ.—ಡೈರೆಕ್ಟರ್ ಅವರು ಪರ್ಸನಲ್ ಸೆಕ್ಯೂರಿಟಿಮೇಲೆ ಸಾಲ ಕೊಡಲು ಅವಕಾಶವಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನೋಟೀಸ್.

ಶ್ರೀ ಕೆ. ವಿ. ಬೈರೇಗೌಡ.—ಪರ್ಸನಲ್ ಸೆಕ್ಯೂರಿಟಿ ಮೇಲೆ ಸಾಲ ಮಂಜೂರು ಮಾಡುವುದಾಗಿ ಹೇಳಿದರು. ಆದರೆ ಅವರ ಯೋಗ್ಯತೆ ಇತ್ಯಾದಿಗಳನ್ನು ನೋಡದೆ ಹಾಗೆಯೇ ಕೊಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಎಲ್ಲ ಅಂಶಗಳನ್ನೂ ದೃಷ್ಟಿಯಲ್ಲಿಟ್ಟುಕೊಂಡು ಸಾಲ ಮಂಜೂರು ಮಾಡಲಾಗುತ್ತದೆ.

Rural Industrial Scheme.

Q.—74. Sri K. Kotra BASAVANA GOUD (Kudligi).—

Will the Government be pleased to state :—

(*a*) what propaganda and publicity arrangements have been made to popularise Rural Industrial Scheme ;

(*b*) the other work they are doing besides granting loans ?

A.—Sri H. M. CHANNABASAPPA (Minister for Industries).—

(*a*) The Superintendents and Supervisors and other Executive Staff appointed under the Rural Industrialisation Scheme are doing propaganda which forms an important part of their work.

(*b*) All other work coming under the Scheme indicated in the booklet on "Rural Industrialisation" by *Bharata-ratna* Dr. M. Visvesvaraya (copy placed on the Table) [Placed in Legislature Library No. 10—L. A. 1956].

ಶ್ರೀ ಕೆ. ಕೊಟ್ರ ಬಸವನಗೌಡ.—(ಎ)ಗೆ ಉತ್ತರವಾಗಿ ಪ್ರಚಾರ ಕಾರ್ಯಕ್ರಮವನ್ನು ಮಾಡುತ್ತಿದ್ದಾರೆಂದು ತಿಳಿಸಿದೆ. ಆ ಪ್ರಚಾರ ಕಾರ್ಯಕ್ರಮದಲ್ಲಿ ಏನೇನು ಐಟಂಗಳು ಸೇರಿವೆ ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ನಾನಾ ದರ್ಜೆಯ ಸಿಬ್ಬಂದಿ ವರ್ಗದವರು ಗ್ರಾಮಗಳಿಗೆ ಹೋಗಿ ಯಾವ ಯಾವ ಗ್ರಾಮದಲ್ಲಿ ಏನೇನು ಕೈಗಾರಿಕೆಗಳನ್ನು ನಡೆಸಬಹುದು ಎಂಬುದನ್ನು ಪರಿಶೀಲನೆಮಾಡಿ ಅದಕ್ಕನುಗುಣವಾಗಿ ಜನರಿಗೆ ಏನೇನು ತಿಳಿವಳಿಕೆಗಳನ್ನು ಕೊಡಬೇಕೋ ಆ ಬಗ್ಗೆ ಅವರು ಈ ಪ್ರಚಾರ ಕಾರ್ಯ ಕೈಗೊಂಡಿದ್ದಾರೆ.

ಶ್ರೀ ಕೆ. ಕೊಟ್ರ ಬಸವನಗೌಡ.—ಭಾಷಣಗಳ ಮೂಲಕವೇ ಹೇಗೆ? ನಾನಾ ರೀತಿಯಲ್ಲಿ ಎಂದು ಹೇಳಿದ್ದೀರಿ. ಆ ಪೈಕಿ ಮುಖ್ಯವಾದ ಒಂದೆರಡು ರೀತಿಗಳನ್ನಾದರೂ ತಿಳಿಸಬಲ್ಲಿರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇತರ ಕಾರ್ಯಗಳು ಎಂದರೆ—ಈ ಕ್ರಾಫ್ಟ್ ಸೊಸೈಟಿಗಳನ್ನು ಡೆವಲಪ್ ಮಾಡುವುದು; ಮುಖ್ಯವಾದ ವಿಚಾರಗಳನ್ನು ಜನರಿಗೆ ಪ್ರಚಾರಮಾಡುವುದು; ಈ ಸಾಲದ ಪತ್ರಗಳನ್ನೂ ರೆಕಾರ್ಡ್‌ಗಳನ್ನೂ ಬಿಲ್ಡ್ ಅಪ್ ಮಾಡುವುದು ಇತ್ಯಾದಿ ಕೆಲಸಗಳನ್ನು ಕೈಗೊಳ್ಳುತ್ತಾರೆ.

ಶ್ರೀ ಕೆ. ಕೊಟ್ರ ಬಸವನಗೌಡ.—ಇದಕ್ಕೆ ಜೀಪು—ವ್ಯಾಕ್ ಇತ್ಯಾದಿಗಳನ್ನು ಒದಗಿಸಿದ್ದೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ-ಬಗ್ಗೆ-ಒಂದು ಸೆಂಟ್ರಲ್ ಬೋರ್ಡು ಸ್ಥಾಪನೆಮಾಡಿ ಸೂಕ್ತ ಶಿಬ್ಬಂದಿಯನ್ನು ಇಡಬೇಕೆಂಬ ಆಲೋಚನೆ ಪರಿಶೀಲನೆಯಲ್ಲಿದೆ.

ಶ್ರೀ ಸಿರಸಪ್ಪ ಇಜಾರಿ.—ಪರ್ಸನಲ್ ಷ್ಯೂರಿಟಿ ಮೇಲೆ 300 ರೂಪಾಯಿಗಳ ಸಾಲವನ್ನು ಕೊಡುವುದಕ್ಕೆ ಅವಕಾಶವಿದೆ ಎಂದು ಹೇಳಿದೆ. ಗ್ರಾಮಾಂತರಗಳಲ್ಲಿ ಕೈಗಾರಿಕೆಗೆ ಪ್ರೋತ್ಸಾಹ ಕೊಡಲು 300 ರೂಪಾಯಿ ಕೊಟ್ಟರೆ ಸಾಕಾಗುತ್ತದೆಯೋ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಯಾರಿಗೆ ಸಾಕು ಎಂದು ತಿಳಿದುಕೊಂಡಿದ್ದಾರೆಯೋ ಅವರೇ apply ಮಾಡುತ್ತಾರೆ. ಅವರಿಗೆ ಕೊಡುತ್ತೇವೆ.

ಶ್ರೀ ಸಿರಸಪ್ಪ ಇಜಾರಿ.—ಅವರಿಗೆ ಸರಿಯಾದ ಉತ್ತೇಜನ ಸಿಕ್ಕಬೇಕಾದರೆ ಗ್ರಾಮಾಂತರಗಳಲ್ಲಿ ತಯಾರಾದ ಸಾಮಾನುಗಳ ಮಾರಾಟಕ್ಕೆ ತಕ್ಕ ಏರ್ಪಾಡು ಮಾಡಬೇಕು. ಅದಕ್ಕೇನಾದರೂ ವ್ಯವಸ್ಥೆ ಮಾಡಿದ್ದೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ಒಂದು ಮುಖ್ಯವಾದ ವಿಷಯ. ಆ ವಿಷಯದಲ್ಲಿ ಪರ್ಯಾಲೋಚನೆ ಮಾಡುತ್ತಾ ಇದ್ದೇವೆ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಗ್ರಾಮಾಂತರಗಳಲ್ಲಿ ಉತ್ಪನ್ನವಾದ ಸಾಮಾನುಗಳನ್ನು ಮಾರಾಟ ಮಾಡುವುದಕ್ಕೆ ತಕ್ಕ ವ್ಯವಸ್ಥೆ ಮಾಡದೇ ಇರುವುದರಿಂದ ತಾವು ಸಾಲ ಕೊಡುವುದರ ಉದ್ದೇಶ ಸಫಲವಾಗುವುದಿಲ್ಲ ಎಂದು ಹೇಳಿದರೆ ಒಪ್ಪಿಕೊಳ್ಳುತ್ತೀರಾ?

Mr. DEPUTY SPEAKER.—Your supplementary question must arise out of the answers already given. But you are putting a question outside the scope of the main question.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಅಲ್ಲಿ ತಯಾರಾದ ಸಾಮಾನುಗಳ ಪ್ರಚಾರಮಾಡುವುದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ?

Mr. DEPUTY SPEAKER.—That supplementary does not come in here.

Sri H. M. CHANNABASAPPA.—I did not follow the Hon'ble Member.

Mr. DEPUTY SPEAKER.—I do not allow those questions to be put. Sri Sivappa.

ಶ್ರೀ ಜಿ. ಶಿವಪ್ಪ.—ಈ ಸ್ಯಾಂಕ್ಷನ್ ಮಾಡತಕ್ಕ ಅಧಿಕಾರವೆಲ್ಲಾ ಒಂದೇ ಕಡೆ ಕೇಂದ್ರೀಕೃತವಾಗಿದೆ. ವಿಕೇಂದ್ರೀಕರಿಸುವುದಕ್ಕೆ ಯೋಚನೆ ಮಾಡುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ವಿಷಯ ತೀವ್ರ ಪರ್ಯಾಲೋಚನೆಯಲ್ಲಿದೆ ಎಂದು ಆಗಲೇ ಹೇಳಿದೆ.

Sri G. SIVAPPA—Is it not a fact that on account of non-sanction immediately, things are not done quickly and hence people have lost faith in the Government now?

Sri H. M. CHANNABASAPPA.—People have not lost faith on account of this. But anyway the idea has been thrown out by the Hon'ble Member and it will be borne in mind.

Sri G. SIVAPPA.—To sanction—is it not one of the ways to make it more popular?

Sri H. M. CHANNABASAPPA.—It is assuredly one of the ways of making it popular.

Cottage and Small Scale Industries.

Q.—248. Sri A. BHEEMAPPA NAIK (Molakalmuru).—

Will the Government be pleased to state :—

(*a*) the number and names of cottage and small-scale industries started in the State either directly or otherwise by the Government;

(*b*) the places in which these industries have been started;

(*c*) how they are working?

A.—Sri H. M. CHANNABASAPPA (Minister for Industries).—

(*a*) and (*b*) 39, *vide* list appended.

(*c*) Fairly satisfactorily.

(SRI H. M. CHANNABASAPPA.)

Statement furnishing the details of Cottage Industries Centres run by the Department of Industries and their location.

Sl. No.	Name of the Centre	Location
	Bangalore District.	
1	Pottery Centre	Ramanagaram
2	Mould-making Centre	Krishnarajapuram
3	Red-clay Production Unit ...	Do
4	Glass Bangle Centre	Yeswantapur
5	Mat-weaving Centre	Kengeri
6	Hand-made Paper Centre ...	Bangalore
7	Smithy Centre	Ramanagaram
8	Do ...	Sugganahalli
9	Carpentry Centre	Do
10	Tailoring Centre	Bannikuppe
11	Japanese Machinery Secn. ...	Bangalore
	Mandya District.	
12	Smithy Centre	Malavalli
13	Do	Nagamangala
14	Carpentry Centre	Do
15	Mat-weaving Centre	Do
16	Brass Centre	Do
	Mysore District.	
17	Rattan Centre	Jalapuri (Mysore)
18	Coir Centre	Nanjangud
	Hassan District.	
19	Mat-weaving	Hassan
	Chikmagalur District.	
20	Lacquerware Centre	Chikmagalur
21	Rattan Centre	Do
22	Leather Stitching Centre	Birur
	Shimoga District.	
23	Mat-weaving	Anandapuram
24	Carpentry Centre	Do
25	Rattan Industry	Shimoga
26	Lacquerware	Do
27	Carpentry and Cart manufacture ...	Anavatti } Run under Community Project area.
28	Pith and Hat manufacture ...	Sorab }
29	Rattan Centre ...	Sagar }
30	Tailoring	Do }
31	Mat-weaving	Kumblur }
	Kolar District.	
32	Tile-making	Bagepalli

Sl. No.	Name of the Centre	Location
	Chitaldrug District.	
33	Mat-weaving Centre	Hiriyur
34	Palm-Gur Centre	Kodaganur
35	Leather Stitching	Doddasiddavvanahalli
	Tumkur District.	
36	Tannery Centre	Hulikunte
37	Flaying Centre	Do
38	Tanning, Flaying and Leather Stitching ...	Pavagada
39	Mat-weaving	Amrutur

ಶ್ರೀ ಎ. ಭೀಮಪ್ಪನಾಯಕ್.—ಇದರಲ್ಲಿ ತಾವೇ ನೇರವಾಗಿ ಪ್ರಾರಂಭ ಮಾಡಿರತಕ್ಕ ಕೈಗಾರಿಕೆಗಳು ಯಾವ್ಯಾವುವು ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಅದನ್ನು ಪಟ್ಟಿಯಲ್ಲಿ ಕೊಟ್ಟಿದ್ದೇವೆ.

ಶ್ರೀ ಎ. ಭೀಮಪ್ಪನಾಯಕ್.—ಇದರಲ್ಲಿ ನೇರವಾಗಿ ನೀವೇ ಪ್ರಾರಂಭ ಮಾಡಿರುವುದು ಯಾವ್ಯಾವುದು ಬೇರೆ ರೀತಿಯಲ್ಲಿ ಪ್ರಾರಂಭ ಮಾಡಿರುವುದು ಯಾವ್ಯಾವುದು ಎಂದು ಎರಡನ್ನೂ ಕೇಳಿದ್ದೇನೆ. ಆ ವಿವರ ಕೊಟ್ಟಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—39 ಕೇಂದ್ರಗಳು ಇವೆ. ಅವು ಅಷ್ಟು ನೇರವಾಗಿ ಸರ್ಕಾರದ ನೇತೃತ್ವದಲ್ಲಿ ನಡೆಯುತ್ತಾ ಇವೆ.

ಶ್ರೀ ಎ. ಭೀಮಪ್ಪನಾಯಕ್.—Directly started by Government ಎಷ್ಟು ಎಂದು ಕೇಳುತ್ತಾ ಇದ್ದೇನೆ. ನೇತೃತ್ವದಲ್ಲಿ ಎನ್ನುವುದು ಬೇರೆ ಆಯಿತು.

Sri H. M. CHANNABASAPPA.—They are all directly under the control of Government.

ಶ್ರೀ ಎ. ಭೀಮಪ್ಪನಾಯಕ್.—ಇತರ ಬೇರೆ ರೀತಿಯಲ್ಲಿ ಏರ್ಪಡಿಸಿರುವ ಕೈಗಾರಿಕೆಗಳು ಯಾವುವು ಎಂದು ಕೇಳಿದ್ದೇನೆ. ಅದನ್ನು ಕೊಟ್ಟಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಇತರ ಬೇರೆ ವಿಧ ಎನ್ನುವುದು ಅರ್ಥವಾಗುತ್ತಿಲ್ಲ. ಅದನ್ನು ಅರ್ಥ ಮಾಡಿದರೆ ಒಳ್ಳೆಯದು.

ಶ್ರೀ ಎ. ಭೀಮಪ್ಪನಾಯಕ್.—ಈ ಸಣ್ಣಪುಟ್ಟ ಅಂಶಗಳೆಲ್ಲಾ ಪ್ರಶ್ನೆ ನೋಡಿದರೇ ಗೊತ್ತಾಗುತ್ತದೆ ಗ್ರಾಂಟು ಮತ್ತು ಇತರ ಇಂಡಸ್ಟ್ರಿಯಲ್ ಎಯ್ಡ್ಸ್ ಬೇಕಾದಷ್ಟಿವೆ. ಅದನ್ನು ಅರ್ಥಮಾಡಿಕೊಳ್ಳುವುದು ಬಹಳ ಕಷ್ಟವಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—Directly or otherwise ಎಂದು ಕೇಳಿರುವುದರಿಂದ ಸರಿಯಾಗಿ ಅರ್ಥವಾಗದೇ ಉತ್ತರ ಕೊಡಲಿಕ್ಕೆ ಆಗಲಿಲ್ಲ. ಈಗ ಪ್ರಶ್ನೆ ಕೇಳಿದರೆ ತಿಳಿಸುತ್ತೇನೆ.

ಶ್ರೀ ಎ. ಭೀಮಪ್ಪನಾಯಕ್.—ಈಗ ಆ ವಿಷಯ ಏನಾದರೂ ಗೊತ್ತಿದೆಯೋ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನೋಟೀಸ್.

ಶ್ರೀ ಎ. ಭೀಮಪ್ಪನಾಯಕ್.—ತಾವು ತಯಾರು ಮಾಡುವ ಪದಾರ್ಥಗಳ ಮೇಲೆ ಎಸ್ಟಾಬ್ಲಿಷ್‌ಮೆಂಟ್ ಚಾರ್ಜಸ್ ಮತ್ತು ಕಚ್ಚಾಮಾಲುಗಳ ಬೆಲೆ ಎರಡನ್ನೂ ಹಾಕಿ ಮಾರಾಟ ಮಾಡುತ್ತೀರಾ ಅಥವಾ ಬರೀ ಮ್ಯಾನ್ಯುಫ್ಯಾಕ್ಚರಿಂಗ್ ಚಾರ್ಜಸ್ ಮಾತ್ರ ಹಾಕಿ ಮಾರಾಟ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇವು ವ್ಯಾಪಾರ ಸಂಸ್ಥೆಗಳಲ್ಲಿ. ಜನಗಳಿಗೆ ಟ್ರೈನಿಂಗ್ ಕೊಡುವುದು ಮತ್ತು ಕಚ್ಚಾ ಮಾಲುಗಳನ್ನು ಕೊಂಡುಕೊಳ್ಳುವುದು ಎರಡೂ ನಡೆಯುತ್ತವೆ.

ಶ್ರೀ ಎ. ಭೀಮಪ್ಪನಾಯಕ್.—ನನ್ನ ಪ್ರಶ್ನೆಯನ್ನು ತಾವು ದಯವಿಟ್ಟು ಅರ್ಥಮಾಡಿಕೊಳ್ಳಿ. ಇಲ್ಲಿ ತಯಾರಾದ ಪದಾರ್ಥಗಳನ್ನು ಮಾರಾಟ ಮಾಡುವಾಗ ತಮ್ಮ ಆಡಳಿತದ ಖರ್ಚನ್ನೂ ಕೂಡ ಅದರ ಮೇಲೆ ಹಾಕಿ ಮಾರಾಟ ಮಾಡುತ್ತೀರಾ ಅಥವಾ ಆಡಳಿತದ ಖರ್ಚನ್ನು ನೀವೇ ವಹಿಸಿಕೊಂಡು ಸಾಮಾನನ್ನು ತಯಾರು ಮಾಡುವುದಕ್ಕೆ ಆದ ಖರ್ಚನ್ನು ಮಾತ್ರ ಅವರ ಮೇಲೆ ಹಾಕಿ ಮಾರಾಟ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಯಾವ ಆಧಾರದ ಮೇಲೆ ಬೆಲೆ ನಿರ್ಧಾರ ಮಾಡುತ್ತಾರೆ ಎಂಬ ವಿಷಯ ಈಗ ನನ್ನ ಮುಂದೆ ಇಲ್ಲ. ನೋಟೀಸ್ ಕೊಟ್ಟರೆ ಹೇಳುತ್ತೇನೆ.

ಶ್ರೀ ಎ. ಭೀಮಪ್ಪನಾಯಕ್.—ಕಚ್ಚಾಮಾಲು ತೆಗೆದುಕೊಂಡು ತಯಾರುಮಾಡಿದ half-baked parts ನ್ನು ಪೂರ್ಣಗೊಳಿಸಿ ಮಾರಾಟಕ್ಕೆ ಸಿದ್ಧಗೊಳಿಸಲು ಯಾವುದಾದರೂ ಒಂದು ಕೈಗಾರಿಕಾ ಕೇಂದ್ರವನ್ನು ಇಟ್ಟುಕೊಂಡಿದ್ದೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—Half-baked ಎನ್ನುವುದು ಅರ್ಥವಾಗಲಿಲ್ಲ.

ಶ್ರೀ ಎ. ಭೀಮಪ್ಪನಾಯಕ್.—Half-finished ಎಂದು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಸಾಮಾನ್ಯವಾಗಿ ಆ ಕೇಂದ್ರಗಳಲ್ಲಿ ತಯಾರುಮಾಡುವಾಗ ಮಾರಾಟಕ್ಕೆ ಸಿದ್ಧವಾಗಿರುವ ರೀತಿಯಲ್ಲೇ ತಯಾರು ಮಾಡುತ್ತಾರೆ.

ಶ್ರೀ ಎ. ಭೀಮಪ್ಪನಾಯಕ್.—ತಾವು ನಡೆಸುತ್ತಾ ಇರುವ ಕೇಂದ್ರಗಳು ಹೇಗೆ ಕೆಲಸಮಾಡುತ್ತಾ ಇವೆ ಎಂದು ಕೇಳಿದ್ದೇನೆ. ಅವು ಯಾವಾಗಲೂ ಲಾಭದಾಯಕವಾಗಿ ಕೆಲಸಮಾಡುತ್ತಿವೆಯೋ ಅಥವಾ ಯಾವಾಗಲೂ ಲುಕ್ಸಾನೇನೋ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇವು ಟ್ರೈನಿಂಗ್ ಕೇಂದ್ರಗಳು ; ಆದ್ದರಿಂದ ಲಾಭದಾಯಕವಾಗ ಬೇಕೆಂದು ಸರ್ಕಾರ ನಿರೀಕ್ಷಣೆ ಮಾಡುವುದಿಲ್ಲ.

ಶ್ರೀ ಎ. ಭೀಮಪ್ಪನಾಯಕ್.—ಈ ಹಿರಿಯೂರು, ಕೊಡಗನೂರು, ದೊಡ್ಡಸಿದ್ದವ್ವನ ಹಳ್ಳಿ ಕೇಂದ್ರಗಳ ಬಹಳ ಹಿಂದೆ ಪ್ರಾರಂಭವಾದವು, ತಾವು ಇದರ ಫೋರ್ಟ್ ಪೋಲಿಯೋ ವಹಿಸಿಕೊಳ್ಳುವುದಕ್ಕಿಂತಲೂ ಮುಂಚಿನಿಂದಲೇ ಇದ್ದುವು ಅಲ್ಲವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹೌದು.

ಶ್ರೀ ಎ. ಭೀಮಪ್ಪನಾಯಕ್.—ಸರ್ಕಾರದ ಕೈಗಾರಿಕಾ ಇಲಾಖೆಯವರು ಆ ಕೇಂದ್ರಗಳು business-like ಆಗಿ ಕೆಲಸಮಾಡುತ್ತಿವೆಯೋ ಇಲ್ಲವೇ ಎಂಬುದನ್ನು ನೋಡುತ್ತಾರೆಯೇ?

Sri H. M. CHANNABASAPPA.—I have already said that these are not purely production centres. Some of them are training *cum* production centres and some are purely training centres.

ಶ್ರೀ ಎ. ಭೀಮಪ್ಪನಾಯಕ್.—ದೊಡ್ಡ ಸಿದ್ದವ್ವನ ಹಳ್ಳಿ ಕೇಂದ್ರ ಶುರುವಾಗಿ ಎಷ್ಟು ದಿವಸ ಆಯಿತು; ಅದು ನಡೆಯುತ್ತಾ ಇದೆ ಎಂದು ತಿಳಿದುಕೊಂಡಿದ್ದೀರಾ? ಅದು ನಿಂತುಹೋಗಿ ಎಷ್ಟೋ ವರ್ಷಗಳಾದವು ಎಂಬುದು ತಮಗೆ ಗೊತ್ತೆ?

Sri H. M. CHANNABASAPPA.—I am not aware of that. Notice.

ಶ್ರೀ ಎ. ಭೀಮಪ್ಪನಾಯಕ್.—ನೀವು ಕೊಟ್ಟಿರುವ ಕೇಂದ್ರಗಳಲ್ಲಿ ಅನೇಕ ಕೇಂದ್ರಗಳು ಮುಚ್ಚಿವೆ ಅಥವಾ ಹೆಸರಿಗೆ ಮಾತ್ರ ಬೋರ್ಡುಗಳು ಇವೆ, ಕೆಲಸ ಮಾಡುತ್ತಿಲ್ಲ ಎಂಬುದು ತಮಗೆ ಗೊತ್ತೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ತಾವು ಹೇಳುವುದು ಸರಿಯಲ್ಲ. ನಮಗೆ ಬಂದಿರುವ ವರದಿಯ ಪ್ರಕಾರ ಯಾವುದೂ ಮುಚ್ಚಿಲ್ಲ. ಹಾಗೇನಾದರೂ ಇದ್ದರೆ ವಿಚಾರಿಸಿ ತಿಳಿಸುತ್ತೇನೆ.

ಶ್ರೀ ಎ. ಭೀಮಪ್ಪನಾಯಕ್.—ಈ ದೊಡ್ಡ ಸಿದ್ದವ್ವನಹಳ್ಳಿ ಕೇಂದ್ರದಲ್ಲಿ ಈ ದಿವಸ ಯಾರೂ ಕೆಲಸಗಾರರು ಇಲ್ಲ ಎಂಬುದು ತಮಗೆ ಗೊತ್ತೇ?

Mr. DEPUTY SPEAKER.—He has already said that he wants notice in respect of Doddasiddavvanahalli Centre.

ಶ್ರೀ ಎ. ಭೀಮಪ್ಪನಾಯಕ್.—ನೋಟೀಸ್ ಎಂದರೆ ಉತ್ತರ ಸಿಕ್ಕುವುದು ಮುಂದಿನ ವರ್ಷವೇ? ಸ್ವಾಮಿ, (ನಗು)

Sri H. M. CHANNABASAPPA.—I take objection to that. If the Hon'ble Member gives me notice, I will give him information within 24 hours.

Sri A. BHEEMAPPA NAIK.—Then I would like very much that this question is taken up for further supplementaries to-morrow.

Mr. DEPUTY SPEAKER.—Notice means notice. I cannot fix a time-limit for notice.

ಶ್ರೀ ಎ. ಭೀಮಪ್ಪನಾಯಕ್.—ಅವೆಲ್ಲಾ ಹೇಗೆ ಕೆಲಸ ಮಾಡುತ್ತಾ ಇವೆ ಎಂಬ ಪ್ರಶ್ನೆ ಇಲ್ಲದೇ ಇದ್ದಿದ್ದರೆ ನೋಟೀಸ್ ಕೇಳುವುದರಲ್ಲಿ ಅರ್ಥ ಇದೆ. ಮುಚ್ಚಿವೆಯೋ, ತೆರೆದಿವೆಯೋ ಎನ್ನುವುದಕ್ಕೂ ಹೇಗೆ ಕೆಲಸ ಮಾಡುತ್ತವೆ ಎನ್ನುವುದಕ್ಕೂ ವ್ಯತ್ಯಾಸವೇನಾದರೂ ಇದೆಯೇ ಸ್ವಾಮಿ?

Mr. DEPUTY SPEAKER.—You must allow him some breathing time to examine and explain.

ಶ್ರೀ ಎ. ಭೀಮಪ್ಪನಾಯಕ್.—ಮತ್ತೆ ನೋಟೀಸ್ ಎಂದರೆ ನಾನು ಏನು ತಿಳಿಸಲಿ? I will have to keep quiet. ನೋಟೀಸ್ ಎನ್ನುವುದಕ್ಕೆ ಅರ್ಥವೇ ಇಲ್ಲದ ಹಾಗಾಗುತ್ತದೆ.

Sri H. M. CHANNABASAPPA.—It is not the intention of Government to shut out any information.

Sri T. MARIAPPA.—It may be working but it has not been working for the last two months.

Sri H. M. CHANNABASAPPA.—No. I have visited the place and it is working.

Sri T. MARIAPPA.—It is not a fact.

Sri H. M. CHANNABASAPPA.—I challenge.

Mr. DEPUTY SPEAKER.—Both of you seem to have lost your trend. Members must address the Chair and not each other. I do not allow such cross-examinations. If the Hon'ble Members do not enable the Chair to conduct the House in a manner expected of it, I am very sorry it will not be possible to conduct the proceedings of the House. You must all co-operate with the Chair in the conduct of business here.

Sri K. S. VASAN.—Do all the Departments of the Government buy the products of these units of small scale industries?

Sri H. M. CHANNABASAPPA.—Invariably the products of these training centres are sold then and there in the local market.

Sri K. S. VASAN.—I want to know whether the Government buy these products for their departmental requirements.

Sri H. M. CHANNABASAPPA.—The production of these centres is so small and the distances are so great that it is not economical to transport them. When we have been able to find a ready sale in the local market, why should we carry them over distances?

Sri K. S. VASAN.—Is it because that the products of these industries are not up to specification, that the Government Departments do not buy these products?

Sri H. M. CHANNABASAPPA.—When they find a ready sale in the

local market, why should Government purchase ?

Sri M. LINGANNA.—May I know out of these 39 centres, how many are closed and how many are working ?

Sri H. M. CHANNABASAPPA.—It is presumed that all are working.

Sri M. LINGANNA.—I want a definite statement, Sir.

Sri H. M. CHANNABASAPPA.—From the information I have before me, all are working, Sir.

Sri M. LINGANNA.—May I know Sir, whether out of these 39, 30 per cent of them are closed ?

Sri H. M. CHANNABASAPPA.—It is not correct.

Sri M. LINGANNA.—Will the Government examine as to the exact number of centres that are completely working and the number closed, Sir ?

Sri H. M. CHANNABASAPPA.—If there are any closed, I will intimate to the House.

Sri M. LINGANNA.—In view of the fact that the Hon'ble Minister wants time to know the facts, I request that this question may be treated as a postponed question and it may be taken up later Sir.

Sri H. M. CHANNABASAPPA.—If the Hon'ble Member wants, I will give him all information within 24 hours.

ಶ್ರೀ ಜಿ. ದುಗ್ಗಪ್ಪ.—ತಾವು ಕೊಟ್ಟಿರತಕ್ಕ ಕೇಂದ್ರಗಳಲ್ಲಿ ಅನೇಕ ಕೇಂದ್ರಗಳು training centres ಆಗಿರುವುದರಿಂದ ಈ ಸ್ಥಿತಿಗೆ ಬಂದಿವೆ. ಅವುಗಳನ್ನು ಉತ್ತಮಪಡಿಸಬೇಕಾಗಿದ್ದರೆ training *cum* production centres ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೇಂದ್ರಗಳೆಲ್ಲ ಉತ್ತಮವಾಗಿ ಕೆಲಸ ಮಾಡಲು ಯಾವ ರೀತಿ ಮಾಡಬೇಕೆಂಬ ವಿಷಯ ಸರ್ಕಾರದವರ ತೀವ್ರ ಪರಿಶೀಲನೆಯಲ್ಲಿದೆ.

ಶ್ರೀ ಜಿ. ದುಗ್ಗಪ್ಪ.—ನಾನು ಖಚಿತವಾಗಿ ಕೇಳುತ್ತಿದ್ದೇನೆ. Training *cum* production centre ಆಗಿ ಮಾರ್ಪಾಟು ಮಾಡಿದರೆ ಒಳ್ಳೆಯದಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—Training *cum* production centre ಮಾಡಬೇಕೇ ಅಥವ technical centres ಮಾಡಬೇಕೇ ಎಂಬ ವಿಷಯ ಪರ್ಯಾಲೋಚನೆಯಲ್ಲಿದೆ.

ಶ್ರೀ ಜಿ. ದುಗ್ಗಪ್ಪ.—ಚಿತ್ರದುರ್ಗದಲ್ಲಿ Leather Industries ಎಂದು ಒಂದು ಸಂಸ್ಥೆ ಪ್ರಾರಂಭವಾಗಿ ಕೆಲಸ ಮಾಡುತ್ತಿರುವುದೂ ಮತ್ತು ಆ ಸಂಸ್ಥೆ ಹಣ ಸಹಾಯ ಕೇಳಿರುವುದೂ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಅಲ್ಲಿಗೆ ಹೋದಾಗ ಸಹಾಯ ಬೇಕೆಂದು ಕೇಳಿದರು. ಕ್ರಮವಾಗಿ ಒಂದು ಅರ್ಜಿ ಕೊಡಿ ಎಂದು ಹೇಳಿದೆ. ಅವರಿಂದ ಇದುವರಿಗೂ ಬಂದಿಲ್ಲ.

Government of India Industries in and around Bangalore.

Q.—397. Sri K. S. VASAN (Kolar Gold Fields).—

Will the Government be pleased to state :—

(*a*) the names of the Industries started by them in and around Bangalore in the last two years ;

(*b*) the number of employees engaged in such industries ;

(*c*) the production figures relating to these industries since their inception.

A—Sri H. M. CHANNABASAPPA (Minister for Industries).—

(*a*), (*b*) and (*c*) Nil.

Sri K. S. VASAN.—What are the industries started in the last two years in and around Bangalore by the Government of India, Sir.

*Sri H. M. CHANNABASAPPA.—That is not the question before us.

Rural Industrialization Scheme (Loans to Shimoga and Tumkur Towns).

Q.—518. Srimathi Bellary SIDDAMMA (Davanagere).—

Will the Government be pleased to state :—

(*a*) whether the industrial loan granted to small industries is not being sanctioned for Tumkur and Shimoga Towns ;

(*b*) whether they intend to extend this benefit to Davanagere also ?

A.—Sri H. M. CHANNABASAPPA (Minister for Industries).—

(*a*) Loans under rural Industrialisation Scheme are sanctioned in Tumkur and Shimoga Towns.

(*b*) No.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಶಿವಮೊಗ್ಗ ಮತ್ತು ತುಮಕೂರು ಟೌನ್‌ಗಳಿಗೆ ಮಾತ್ರ ಸಣ್ಣ ಕೈಗಾರಿಕೆಗಳಿಗೆ ಹಣ ಮಂಜೂರು ಮಾಡಿ ದಾವಣಗೆರೆಗೆ ಮಂಜೂರು ಮಾಡುವುದಕ್ಕಾಗುವುದಿಲ್ಲವೆಂದು ಹೇಳಿರುವುದಕ್ಕೆ ಕಾರಣವೇನು ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ದಾವಣಗೆರೆ 'ಸಿಟಿ' ಎನ್ನಿಸಿಕೊಳ್ಳುತ್ತದೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—'ಸಿಟಿ' ಎಂದು ಅನ್ನಿಸಿಕೊಂಡದ್ದೇ ಪಾಪವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮೈಸೂರು, ಬೆಂಗಳೂರು, ದಾವಣಗೆರೆ ಮತ್ತು ಕೋಲಾರದ ಚಿನ್ನದಗಣಿ ಪ್ರದೇಶ ಇವು ನಾಲ್ಕು ಕ್ಷೇತ್ರಗಳಿಗೂ ಈ ಯೋಜನೆ ಅನ್ವಯವಾಗುವುದಿಲ್ಲ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಬೆಂಗಳೂರಿನಲ್ಲಿ ದೊಡ್ಡ ದೊಡ್ಡ ಕೇಂದ್ರಗಳನ್ನಿಟ್ಟಿದ್ದೀರಿ. ಅದೇ ದಾವಣಗೆರೆಗೆ ಏಕೆ ಅನ್ವಯಿಸುವುದಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಬೆಂಗಳೂರಿನಲ್ಲಿ ಒಂದು ಟ್ರೈನಿಂಗ್ ಸೆಂಟರ್ ಇಟ್ಟುಕೊಂಡಿದ್ದೇವೆ. Rural Industrialisation Schemeನಲ್ಲಿ ಬೆಂಗಳೂರು ಸಿಟಿ ಇರಲಿ ಎಂದು ಮಾಡಿದ್ದೇವೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಚಿತ್ರದುರ್ಗ ಜಿಲ್ಲೆಯಲ್ಲಿ ನೀವು ಕೊಟ್ಟಿರುವ ಮೂರು ಕೇಂದ್ರಗಳಲ್ಲಿ ಒಂದೂ ಕೆಲಸ ಮಾಡುತ್ತಿಲ್ಲ. ಕೊಡಗನೂರಿನಲ್ಲಿರುವ ಕೇಂದ್ರದಲ್ಲಿ ಕೆಲಸ ನಿಂತು ಹೋಗಿ ಎಷ್ಟೋ ದಿವಸಗಳಾಯಿತು. ಆದುದರಿಂದ ಈಗಲಾದರೂ ಒಂದು ಕೇಂದ್ರವನ್ನು ದಾವಣಗೆರೆಯಲ್ಲಿ ಪ್ರಾರಂಭಮಾಡಿ ಅನುಕೂಲ ಮಾಡಿಕೊಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೊಡಗನೂರಿನಲ್ಲಿರುವ ಕೇಂದ್ರ ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂಬ ವಿಷಯ ನನ್ನ ಗಮನಕ್ಕೆ ಬಂದಿದೆ ಆ ವಿಚಾರದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತಿದ್ದೇವೆ ?

ಶ್ರೀ ಟಿ. ಹನುಮಯ್ಯ.—ಹರಿಜನರಿಗೆ ಸಂಬಂಧಪಟ್ಟ ಚರ್ಮದ ಕೈಗಾರಿಕೆ ಮತ್ತು ಚಕ್ಕೆ ಕೈಗಾರಿಕೆಯನ್ನು ಅಭಿವೃದ್ಧಿಪಡಿಸುವುದಕ್ಕೆ ಸರ್ಕಾರದವರು ಏನು ಏರ್ಪಾಡು ಮಾಡುತ್ತಿದ್ದಾರೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕ್ರಾಫ್ಟ್ಸ್ ಸೊಸೈಟಿಗಳನ್ನು ಮಾಡಿಕೊಂಡು, ಮುಂದೆ ಬಂದ ಪಕ್ಷದಲ್ಲಿ ಷೇರು ತೆಗೆದುಕೊಳ್ಳುವುದಕ್ಕೆ ಶೇಕಡ 75 ಕೊಡುತ್ತೇವೆ ಮತ್ತು ಅವರ ಮುಂದಿನ ಬಂಡವಾಳಕ್ಕೆ ಶೇಕಡ 75 ರಷ್ಟು ಸಹಾಯ ಕೊಡುತ್ತೇವೆ. ಇತರ ಸಹಾಯ ಬೇಕು ಎಂದರೆ ಆ ರೀತಿ ಸಹಾಯ ಮಾಡುವುದಕ್ಕೂ ಒಂದು ವ್ಯವಸ್ಥೆ ಇದೆ.

ಶ್ರೀ ಟಿ. ಹನುಮಯ್ಯ.—ಈ ಹಳೆಯ ಕಾಲದ ಪದ್ಧತಿಯನ್ನನುಸರಿಸಿ, ಚಕ್ಕೆ ಕೈಗಾರಿಕೆಯನ್ನು ಹರಾಜು ಮಾಡಿ, ಹರಿಜನರಿಗೆ ದೊರೆಯದಂತೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ಈ ಭಾಗಕ್ಕೆ ಸಂಬಂಧಪಟ್ಟಿಲ್ಲ.

Sri T. HANUMIAH.—It is a home industry of the rural parts of the State belonging mostly to Harijans.

ಉಪಾಧ್ಯಕ್ಷರು.—ಲೋನ್ ವಿಚಾರ ಇದರಲ್ಲಿದೆ. Industrial loan ವಿಚಾರ ಮಾತ್ರ ಕೇಳಬಹುದು.

ಶ್ರೀ ಟಿ. ಹನುಮಯ್ಯ.—ಲೋನ್ ವಿಚಾರವಲ್ಲ. ಕೈಗಾರಿಕೆ ವಿಚಾರ ಸಹ ಇದೆ. ಆದುದರಿಂದ ಹರಿಜನರಿಗೆ ಸಂಬಂಧಪಟ್ಟ ಕೈಗಾರಿಕೆಗಳನ್ನು ಉತ್ತಮಪಡಿಸುವುದಕ್ಕೆ ಸರ್ಕಾರದವರು, ಹಿಂದಿನ ಕಾಲದ ಸರ್ಕಾರದವರು ಯೋಚನೆ ಮಾಡುತ್ತಿದ್ದುದಕ್ಕೆ ಬದಲಾಗಿ ಯೋಚನೆಮಾಡಿ ಹರಿಜನರ ಪುರೋಭಿವೃದ್ಧಿಗೆ ಬೇಕಾದ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನಾಗಲೇ ತಿಳಿಸಿದಂತೆ ಯಾವ ಯಾವ ಕೈಗಾರಿಕೆಗಳನ್ನು ಅಭಿವೃದ್ಧಿಮಾಡಬೇಕೆಂಬ ಅಭಿಪ್ರಾಯವಿದೆಯೋ ಆ ಕೈಗಾರಿಕೆಗಳವರು ಸೊಸೈಟಿಗಳನ್ನು ಮಾಡಿಕೊಂಡು ಮುಂದೆ ಬಂದ ಪಕ್ಷದಲ್ಲಿ ಅದಕ್ಕೆ ಸಹಾಯ ಮಾಡುವುದಕ್ಕೆ ಅನೇಕ ಮಾರ್ಗಗಳಿವೆ. ಅದನ್ನು ಮಾಡುವುದಕ್ಕೆ ತಕ್ಕ ಸಹಾಯ ಮಾಡುತ್ತೇವೆ.

ಶ್ರೀ ಟಿ. ಹನುಮಯ್ಯ.—ಸರ್ಕಾರದವರು ಸೊಸೈಟಿಗಳನ್ನು ಮಾಡಿಕೊಂಡಿದ್ದರೆ, ಅಂಥ ಸೊಸೈಟಿಗಳ ಮೂಲಕ ಕೈಗಾರಿಕೆಯನ್ನು ಅಭಿವೃದ್ಧಿಪಡಿಸುತ್ತೇವೆಂದು ಹೇಳಿದರೆ ಸರ್ಕಾರದವರು ಸಹಾಯ ಮಾಡುತ್ತಾರೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಗತ್ಯವಾಗಿ ಮಾಡುತ್ತೇವೆ.

1 P.M.

ಶ್ರೀ ಜಿ. ಪುಟ್ಟಸ್ವಾಮಿ.—ಚಿಕ್ಕಮಗಳೂರಿನಲ್ಲಿ ಅರಗಿನಿಂದ ಸಾಮಾನುಗಳನ್ನು ತಯಾರಿಸುವ ಕೇಂದ್ರವಿದೆಯೆಂದು ಹೇಳಿದ್ದೀರಿ. ಅದಿರುವುದು ನಿಜವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನನಗೆ ಬಂದಿರುವ ಸಮಾಚಾರದ ಪ್ರಕಾರ ನಿಜ.

ಶ್ರೀ ಜಿ. ಪುಟ್ಟಸ್ವಾಮಿ.—ಅದು ಕೆಲಸ ಮಾಡುತ್ತಿದೆಯೇ ಇಲ್ಲವೇ ಎಂಬುದನ್ನು ವಿಚಾರಿಸುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ವಿಚಾರಿಸುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ.—ಚರ್ಮ ಹದಮಾಡುವುದು, ಚರ್ಮ ಸುಲಿಯುವುದು, ಚರ್ಮ ಹೊಲಿಯುವುದು ಮುಂತಾದ ಗೃಹ ಕೈಗಾರಿಕೆಗಳನ್ನು ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿ ಹೆಚ್ಚಾಗಿ ಏರ್ಪಡಿಸಲಾಗಿದೆ. ಉಳಿದ ಜಿಲ್ಲೆಗಳಲ್ಲೂ ಕೂಡ ಇವುಗಳ ಕೇಂದ್ರವನ್ನು ಏರ್ಪಾಡು ಮಾಡಲು ಯೋಚನೆ ಮಾಡಿದ್ದೀರಾ ?

Mr. DEPUTY SPEAKER.—That question does not arise out of the answers given here. The question relates to industrial loans and the Hon'ble Member is asking about starting of new industries.

Devarahalli Tank, Bommalapura Tank and anecut across Kalakatte Halla (Estimates).

Q.—529. Sri H. K. SIVARUDRAPPA (Gundlupet-Heggadadevankote).—

Will the Government be pleased to state :—

(*a*) whether the estimates for Devarahalli tank, Bommalapura tank and the anecut across the Kalakatte halla near Hullepura, Gundlupet Taluk have been sanctioned ;

(b) if so, the amount of each estimate; if not, the reason for not sanctioning and the estimate which has not been sanctioned ;

(c) whether the said works would be undertaken in the budget year itself?

A.—Sri H. M. CHANNABASAPPA (Minister for Industries).—

(a) (i) Devarahalli tank—Sanctioned.

(ii) Bommalapura tank—Sanctioned.

(iii) Kallakattehalla near Hullepura—Not sanctioned.

		Rs.
(b) (i) Devarahalli tank estimate	...	89,000
(ii) Bommalapura tank estimate	...	57,900
(iii) Anicut across Kallakattehalla estimate	..	1,45,000

This is under consideration.

(c) The first two will be taken up during the year 1956-57 subject to the ryots agreeing to pay contribution and water rate as prescribed.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಉತ್ತರದಲ್ಲಿ ಕಾಳ ಕಟ್ಟೆ ಹಳ್ಳಕ್ಕೆ ಅಡ್ಡಲಾಗಿ ಒಂದು ಅಣೆಕಟ್ಟನ್ನು ಕಟ್ಟುವುದಕ್ಕೆ 1,45,000 ರೂಪಾಯಿಗಳ ಅಂದಾಜಾಗಿದೆಯೆಂದು ಹೇಳಿದೆ. ಅದನ್ನು ಕೈಬಿಡಬೇಕೆಂದು ಛೀಫ್ ಇಂಜನಿಯರಿಗೆ ಶಿಫಾರ್ಸು ಮಾಡಿದ್ದೀರಾ ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾಡಿದೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಏಕೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ಅಣೆಕಟ್ಟನ್ನು ಕಟ್ಟಿದರೆ ಗುಂಡಲುಪೇಟೆಯ ಅಮಾನಿಕೆರೆಗೆ ತೊಂದರೆಯಾಗುತ್ತದೆ. ಅದಕ್ಕೆ ನೀರು ಸಾಲದೆ ಅಲ್ಲಿನ ಬೆಳೆ ಒಣಗುವ ಪರಿಸ್ಥಿತಿ ಬರುತ್ತದೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಹಾಗಾದರೆ ಯಾವ ಜಮೀನುಗಳಿಗಾಗಿ ಅಣೆಕಟ್ಟನ್ನು ಕಟ್ಟಬೇಕೆಂದು ಕೇಳಿತ್ತೋ ಆ ಜಮೀನುಗಳಿಗೆ ನೀರಿಲ್ಲದೆ ಹೋಗುತ್ತದೆ. ಆ ಜಮೀನುಗಳು ಖಾಯಂ ತರಿಯಾಗಿದ್ದು ತರೀ ಕಂದಾಯ ಅವಕ್ಕೆ ತೆಗೆದುಕೊಂಡಮೇಲೆ ಆ ಜಮೀನುಗಳಿಗೆ ನೀರನ್ನೊದಗಿಸಬೇಕಾದ ಜವಾಬ್ದಾರಿ ಸರ್ಕಾರದ ಮೇಲೆ ಇಲ್ಲವೆ ?

*ಶ್ರೀ ಡಿ. ಆರ್. ಕರಿಗೌಡ (ಹಾಸನ).—ಸ್ವಾಮಿ, ಈ ದಿವಸ ನಮ್ಮ ಸರ್ಕಾರ ದೇಶದಲ್ಲಿರತಕ್ಕ ಜನರನ್ನು ವಿದ್ಯಾವಂತರನ್ನಾಗಿ ಮಾಡುವುದಕ್ಕೋಸ್ಕರ ದೇಶದ ಉತ್ಪತ್ತಿಯಲ್ಲಿ ಐದನೇ ಒಂದು ಭಾಗದಷ್ಟು ಹಣವನ್ನು ಎಂದರೆ—ಸುಮಾರು ಐದು ಕೋಟಿ ರೂಪಾಯಿಗಳನ್ನು ಈ ವಿದ್ಯಾಭ್ಯಾಸದ ಬಾಬಿಗಾಗಿ ಖರ್ಚು ಮಾಡುತ್ತಿದೆ. ಆದರೆ ನಮ್ಮ ಸಂವಿಧಾನದಲ್ಲಿ ದೇಶದಲ್ಲಿರತಕ್ಕಂಥ ಎಲ್ಲಾ ಮಕ್ಕಳಿಗೂ ಕಡ್ಡಾಯವಾಗಿ ಉಚಿತ ವಿದ್ಯಾಭ್ಯಾಸವನ್ನು ಅವರ 14ನೆಯ ವಯಸ್ಸಿನವರೆಗೂ ನೀಡಲೇಬೇಕೆಂದು ಅಡಕವಾಗಿದೆ. ಆದರೆ ಹಾಗೆ ವಿದ್ಯಾವಂತರನ್ನಾಗಿ ಮಾಡಲು ಈ ದಿವಸ ನಮ್ಮ ಸರ್ಕಾರ ಹೋಗುತ್ತಿರುವ ಧಾಟಿಯಲ್ಲೇ ಮುಂದುವರಿಯುವುದಾದರೆ ನಮ್ಮ ಮಕ್ಕಳು ಇನ್ನು ಒಂದು ನೂರು ವರ್ಷಗಳ ಮೇಲಾದರೂ ಹಾಗೆ ವಿದ್ಯಾವಂತರಾಗುತ್ತಾರೋ ಏನೋ ಎಂದು ಆಶಿಸುವುದಕ್ಕೂ ಕೂಡ ನನಗೆ ಭರವಸೆ ಕಾಣುತ್ತಿಲ್ಲ. ಈ ದಿವಸ ನೂರಕ್ಕೆ 90 ರಷ್ಟು ಜನ ವಾಸ ಮಾಡುತ್ತಿರುವಂಥಾ ಗ್ರಾಮಾಂತರ ಪ್ರದೇಶಗಳಲ್ಲೆಲ್ಲಾ ಇರತಕ್ಕ ಪಾಠಶಾಲೆಗಳನ್ನು ತೆಗೆದುಕೊಂಡರೆ ಅವುಗಳೆಲ್ಲ ಸಿಂಗಲ್ ಟೀಚರ್ಸ್ ಸ್ಕೂಲುಗಳಾಗಿರುತ್ತವೆ. ಒಂದೊಂದು ಪಾಠಶಾಲೆಯಲ್ಲೂ 4-5 ತರಗತಿಗಳಿರುತ್ತವೆ. ಆ ಎಲ್ಲ ತರಗತಿಗಳಿಗೂ ಪಾಠ ಹೇಳಲು ಒಬ್ಬ ಉಪಾಧ್ಯಾಯರು ಇರುತ್ತಾರೆ- ಎಂದಮೇಲೆ ಆ ಹಳ್ಳಿಗಳಲ್ಲಿ ಕೊಡುತ್ತಿರುವಂಥ ವಿದ್ಯಾಭ್ಯಾಸ ಯಾವ ಮಟ್ಟದ್ದು ಎಂಬುದನ್ನು ತಾವೆಲ್ಲರೂ ಆಲೋಚಿಸಬೇಕಾಗಿದೆ. ಆದರೆ ಅದೇ ವಿದ್ಯಾಭ್ಯಾಸ ಈ ನಗರಗಳಲ್ಲಿ ಯಾವ ರೀತಿಯಾಗಿ ನಡೆಯುತ್ತಿದೆ ಎಂಬುದನ್ನು ತೆಗೆದುಕೊಂಡರೆ ಒಂದೊಂದು ತರಗತಿಗೂ ಒಬ್ಬೊಬ್ಬ ಉಪಾಧ್ಯಾಯರಿರುತ್ತಾರೆ. ಹೀಗೆ ಹೆಚ್ಚು ಸಂಖ್ಯೆಯಲ್ಲಿ ಉಪಾಧ್ಯಾಯರುಗಳಿರುವುದರಿಂದ ಬಾಲಕರಿಗೆ ಅವರ ಮನಸ್ಸಿಗೆ ಚೆನ್ನಾಗಿ ನಾಟುವಂತೆ ಪಾಠ ಪ್ರವಚನಗಳನ್ನು ನಡೆಸಲು ಅನುಕೂಲವಿದೆ. ಆದರೆ ಹಳ್ಳಿಯ ಪಾಠಶಾಲೆಗಳಿಗೆ ಇಂಥ ಅನುಕೂಲವಿಲ್ಲ. ಅಲ್ಲಿರತಕ್ಕ ಒಬ್ಬರೇ ಉಪಾಧ್ಯಾಯರು 4-5 ತರಗತಿಗಳಿಗೂ—ಎಂದರೆ ಚರಿತ್ರೆ, ಭೂಗೋಳ, ವ್ಯಾಕರಣ, ಗಣಿತ ಇತ್ಯಾದಿ ಎಲ್ಲ ಪಾಠಗಳನ್ನೂ ನಡೆಸಬೇಕಾಗಿದೆ. ಆದರೆ ಅಲ್ಲಿ ಈ ಸ್ಕೂಲುಗಳನ್ನು ಸರ್ಕಾರದವರು ನಾಮಕಾವಾಸ್ತೆಗೋಸ್ಕರ ಮಾಡಿರುವಂತೆ ಭಾಸವಾಗುತ್ತಿದೆ. ಬಾಲಕರಿಗೇನೂ ಪ್ರಯೋಜನವಿಲ್ಲ. ಹುಡುಗರ ಮೇಲೆ ಸರಿಯಾಗಿ ನಿಗಾ ಇಡುವುದಕ್ಕಾಗಲೀ ಅಥವಾ ಅವರಿಗೆ ಕ್ರಮವಾಗಿ ಪಾಠಗಳನ್ನು ಹೇಳುವುದಕ್ಕಾಗಲೀ ಆ ಒಬ್ಬ ಉಪಾಧ್ಯಾಯರಿಂದ ಖಂಡಿತ ಸಾಧ್ಯವಿಲ್ಲ. ಇದಕ್ಕಾಗಿ ಸರ್ಕಾರದವರು ಖರ್ಚು ಮಾಡುತ್ತಿರುವುದು ಬಹಳ ನಿರರ್ಥಕ. ಇಂಥ ಅಪ್ರಯೋಜಕ ವಿದ್ಯಾಭ್ಯಾಸವನ್ನು ಕೊಡುವುದಕ್ಕೆ ಬದಲಾಗಿ ಆ ಸ್ಕೂಲುಗಳನ್ನು ಮುಚ್ಚಿಸುವುದೇ ಲೇಸೆಂದು ಹೇಳುತ್ತೇನೆ. ಹಾಗೆ ತಮಗೆ ಗ್ರಾಮಾಂತರ ಪ್ರದೇಶದ ಜನರ ಮಕ್ಕಳು ವಿದ್ಯಾವಂತರಾಗಲಿ, ಬುದ್ಧಿವಂತರಾಗಲಿ, ಎಂಬ ಕುತೂಹಲವಿದ್ದುದೇ ಆದರೆ ತಾವು ಕೂಡಲೇ ಈ ಸಿಂಗಲ್ ಟೀಚರ್ಸ್ ಪಾಠಶಾಲೆಗಳನ್ನೆಲ್ಲಾ ಸರಿಯಾದ ರೀತಿಯಲ್ಲಿ ಬದಲಾವಣೆ ಮಾಡಿ 2-3 ಜನರು ಉಪಾಧ್ಯಾಯರಿರುವಂತೆಯಾದರೂ ಮಾಡಲೇಬೇಕು.

ಇನ್ನು ಈ ಪ್ರಾಥಮಿಕಶಾಲಾ ಉಪಾಧ್ಯಾಯರುಗಳ ನೇಮಕದ ವಿಚಾರ ತೆಗೆದುಕೊಂಡರೆ ಅವರಲ್ಲಿ ಬಹಳ ಜನ ಉಪಾಧ್ಯಾಯರಿಗೆ ಈ ಮಕ್ಕಳ ಮನಸ್ಸನ್ನು ಅರ್ಥಮಾಡಿಕೊಂಡು, ಅವರ ಮನಸ್ಸು ಯಾವ ರೀತಿಯಿರುತ್ತದೆ ಎಂಬುದನ್ನು ತಿಳಿದುಕೊಂಡು ಅದಕ್ಕೆ ತಕ್ಕ ಹಾಗೆ ಅವರ ಮನಸ್ಸಿಗೆ ಚೆನ್ನಾಗಿ ನಾಟುವ ರೀತಿಯಲ್ಲಿ ಪಾಠಗಳನ್ನು ಹೇಳತಕ್ಕ ಚೈತನ್ಯವಿರುವುದಿಲ್ಲ. ಅನೇಕರಿಗೆ ತಿಳಿವಳಿಕೆಯೇ ಸಾಲದು. ಸಿ. ಆರ್. ಬಿ.ಗೆ ಅರ್ಜಿ ಹಾಕಿಕೊಂಡಿರತಕ್ಕಂಥಾ ಹುಡುಗರನ್ನು ಏಕ್‌ದಂ ಈ ಶಾಲೆಗಳಿಗೆ ಉಪಾಧ್ಯಾಯರನ್ನಾಗಿ ನೇಮಿಸಿಬಿಡುತ್ತಿದ್ದಾರೆ. ಅವರಿಗೆ ಟ್ರೈನಿಂಗ್ ಅಗದ ವಿನಾ ಈ ವೃತ್ತಿಗೆ ಅವರನ್ನು ನೇಮಿಸಬಾರದೆಂದು ಹೇಳುತ್ತೇನೆ. ಅವರು ಜನರಲ್ ಕ್ವಾಲಿಫಿಕೇಷನ್ ಜೊತೆಗೆ ಟ್ರೈನಿಂಗನ್ನೂ ಸಹ ಅವರೇ ಮಾಡಿಕೊಂಡಿದ್ದರೆ ಅಂಥವರಿಗೇ ಈ ಹುದ್ದೆಗಳನ್ನು ಕೊಡತಕ್ಕದ್ದು ಆವಶ್ಯಕ. ಇದಕ್ಕಾಗಿ ತಾವು ಎಲ್ಲಾ ಕಡೆಗಳಲ್ಲೂ ಈ ಟ್ರೈನಿಂಗ್ ಶಾಲೆಗ

ಳನ್ನು ತೆರೆಯಬೇಕೆಂದು ಹೇಳುತ್ತೇನೆ. ಆದರೆ ಈ ದಿವಸ ಸರ್ಕಾರದವರು ನಗರಗಳಲ್ಲಿ ವಾಸಮಾಡತಕ್ಕ ಜನರ ಬಗ್ಗೆ ಅವರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಲಕ್ಷಾಂತರರೂಪಾಯಿಗಳನ್ನು ವೆಚ್ಚಮಾಡುತ್ತಿದ್ದಾಗ್ಯೂ ಹಳ್ಳಿಗಳಿಗೆ ತಮ್ಮ ಗಮನವನ್ನೇ ಕೊಡದೆ ತಿರಸ್ಕಾರ ಮಾಡಿದ್ದಾರೆ. ಹಳ್ಳಿಗಳಲ್ಲಿ ಒಂದು ಸ್ಕೂಲನ್ನು ಕಟ್ಟಿಸಿಕೊಡಿ ಎಂದು ಕೇಳಿದರೆ ಅದಕ್ಕೆ ನಾವು 500 ರೂಪಾಯಿಗಳನ್ನು ಹಾಕುತ್ತೇವೆ, ನೀವು 500 ರೂಪಾಯಿಗಳನ್ನು ಹಾಕಿ ಎಂದು ಹೇಳುತ್ತಿದ್ದಾರೆ. ಆದರೆ ಪಟ್ಟಣಗಳಲ್ಲಿ ಯಾವತ್ತೂ ಸರ್ಕಾರದವರೇ ಎಲ್ಲಾ ಖರ್ಚುಗಳನ್ನು ಹಾಕಿ ಪಾಠಶಾಲೆಗಳನ್ನು ಕಟ್ಟಿಸಿಕೊಡುತ್ತಿದ್ದಾರೆ. ಆದರೆ ಹಳ್ಳಿಗಳಿಗೆ ಮಾತ್ರ 500 ರೂಪಾಯಿಗಳನ್ನು ಕೊಡಿ ಎಂದು ಕೇಳುತ್ತಾರೆ. ಅದರಲ್ಲೂ ಒಂದು ವಿಚಿತ್ರವಿದೆ. ನಾವು ನಮ್ಮ ಭಾಗದ ಹಣವನ್ನು ಹಾಕಿದರೂ ಅವರು ಅವರಭಾಗದ ಹಣವನ್ನು ಸರಿಯಾಗಿ ಕೊಡುತ್ತಿಲ್ಲ. ಅನೇಕ ಸಂದರ್ಭಗಳಲ್ಲಿ ಕಟ್ಟಡದ ಕೆಲಸ ಪೂರೈಸಿದ ನಂತರವೂ ಇವರ ಹಣ ಬರಬೇಕಾಗಿದ್ದರೆ ಎಷ್ಟೋ ಡಿಲೇ ಆಗುತ್ತದೆ.

ಇನ್ನು ಈ ಗ್ರಾಮಾಂತರ ಪ್ರದೇಶಗಳಲ್ಲಿ ಮತ್ತು ಇತರ ಕಡೆಗಳಲ್ಲಿ ನಡೆಸಲಾಗುತ್ತಿರುವ ಮುನಿಸಿಪಲ್ ಮತ್ತು ಜಿಲ್ಲಾಬೋರ್ಡ್ ಹೈಸ್ಕೂಲುಗಳಿಗೆ ಸರ್ಕಾರದವರು ಗ್ರ್ಯಾಂಟನ್ನು ಕೊಡುತ್ತಿದ್ದಾರೆ. ಹೀಗೆ ಸರ್ಕಾರದವರೇ ಮುಕ್ಕಾಲು ಭಾಗದಷ್ಟು ಹಣವನ್ನು ಕೊಡುತ್ತಿದ್ದರೂ ಆ ಶಾಲೆಗಳ ಆಡಳಿತವನ್ನು ಜಿಲ್ಲಾ ಬೋರ್ಡ್ ಅಧ್ಯಕ್ಷರಿಗೋ ಅಥವಾ ಉಪಾಧ್ಯಕ್ಷರಿಗೋ ವಹಿಸಿರುತ್ತಾರೆ. ಈ ದಿವಸ ಆ ಸ್ಕೂಲುಗಳು ಸರಿಯಾಗಿ ನಡೆಯುತ್ತಿಲ್ಲ. ಅಲ್ಲಿ ಕೆಲಸ ಮಾಡುವ ಉಪಾಧ್ಯಾಯರನ್ನು ಸರ್ಕಾರಿ ಶಾಲೆಗಳಿಗೆ ವರ್ಗಾಯಿಸಲು ಅವಕಾಶವಿಲ್ಲ. ಆ ಸ್ಕೂಲುಗಳಲ್ಲಿ ಈ ದಿವಸ ಮುತವರ್ಜಿ ವಹಿಸಿ ಯಾರೂ ಪಾಠ ಹೇಳುತ್ತಿಲ್ಲ. ಅವರಿಗೆ ಸರಿಯಾಗಿ ಸಂಬಳಗಳೂ ಕೂಡ ಪಾವತಿಯಾಗುತ್ತಿಲ್ಲ, ಕುಣಿಗಲ್ ಹೈಸ್ಕೂಲಿನಲ್ಲಿ ಅಲ್ಲಿನ ಉಪಾಧ್ಯಾಯರಿಗೆ ಸಂಬಳಗಳನ್ನು ಪಾವತಿ ಮಾಡದೆ ಇರುವುದರಿಂದ ಅವರೆಲ್ಲರೂ ಈಗ ಸತ್ಯಾಗ್ರಹ ಹೂಡಬೇಕೆಂದಿದ್ದಾರೆಂಬ ಸಮಾಚಾರವನ್ನು ಕೇಳುತ್ತಿದ್ದೇನೆ. ನಮ್ಮ ಹಾಸನ ಜಿಲ್ಲೆಯಲ್ಲಿ ಇಡೀ ಸಂಸ್ಥಾನದಲ್ಲಿರತಕ್ಕ ಎಲ್ಲ ಹೈಸ್ಕೂಲುಗಳಿಗಿಂತಲೂ ಬಹಳ ದಕ್ಷತೆಯಿಂದ ಕೆಲಸ ಮಾಡಿಕೊಂಡು ಹೆಚ್ಚು ವಿದ್ಯಾರ್ಥಿಗಳನ್ನು ಪಾಸ್ ಮಾಡಿಸುತ್ತಿದ್ದಂಥ ಶಾಂತಿಗ್ರಾಮ ಹೈಸ್ಕೂಲಿನ ಉಪಾಧ್ಯಾಯರುಗಳಿಗೂ ಕೂಡ ಸಂಬಳ ಕೊಟ್ಟಿಲ್ಲವೆಂದು ನಾನು ಕೇಳುತ್ತಿದ್ದೇನೆ. ಆದರೆ ಜಿಲ್ಲಾ ಬೋರ್ಡಿನವರೇ ಸಂಬಳ ಕೊಡಲಿ ಅಥವಾ ಮುನಿಸಿಪಾಲಿಟಿಯವರೇ ಸಂಬಳ ಕೊಡಲಿ, ಅಥವಾ ಸರ್ಕಾರದವರೇ ಕೊಡಲಿ, ಅದನ್ನು ಕಾಲಕ್ಕೆ ಸರಿಯಾಗಿ ಕೊಡಬೇಕು. ಇದಕ್ಕೆಲ್ಲಾ ಹೆಚ್ಚು ನಿಗಾ ಇಟ್ಟು ಕೆಲಸ ಮಾಡಬೇಕು. ಅದಕ್ಕಾಗಿ ಸರ್ಕಾರದವರೇ ಈ ಶಾಲೆಗಳನ್ನೆಲ್ಲಾ ಅವರ ಆಡಳಿತಕ್ಕೆ ತೆಗೆದುಕೊಳ್ಳುವುದು ಒಳ್ಳೆಯದು ಎಂದು ಹೇಳುತ್ತೇನೆ.

* ಶ್ರೀ ಎಸ್. ಶ್ರೀನಿವಾಸಯ್ಯಂಗಾರ್ (ಟಿ. ನರಸೀಪುರ).—ಸ್ವಾಮಿ, ಮೊದಲನೆಯದಾಗಿ ಯೂನಿವರ್ಸಿಟಿ ಕೌನ್ಸಿಲ್ಲಿನ ಆಡಳಿತದಲ್ಲಿರುವ ಅನೇಕ ಕಾಲೇಜುಗಳಿಗೆ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳತಕ್ಕ ಸಂಬಂಧವಾಗಿ ಏರ್ಪಡಿಸಿರತಕ್ಕಂಥ ಅಡ್ಮಿಷನ್ ಸಮಿತಿಗಳನ್ನು ರದ್ದುಪಡಿಸುವುದಕ್ಕೆ ಸರ್ಕಾರದವರು ಒಂದು ಸೂಚನೆ ಕೊಡಬೇಕು ಎಂಬುದು ಮೊದಲನೆಯ ವಿಚಾರ. ಇಂಥ ಸಮಿತಿಗಳಿರುವುದರಿಂದ ಈ ದಿವಸ ಬಹಳ ತೊಂದರೆಗಳಾಗುತ್ತಿವೆ. ಅದಕ್ಕಾಗಿ ಈ ಅಡ್ಮಿಷನ್ ಸಮಿತಿಗಳನ್ನು ಕೂಡಲೇ ರದ್ದುಪಡಿಸಬೇಕು ಎನ್ನುವುದು ಒಂದಂಶ.

ಇನ್ನು ಎರಡನೆಯದಾಗಿ ಈ ಯೂನಿವರ್ಸಿಟಿಗಳಿಗೆ ಎರಡುಮೂರು ವರ್ಷಗಳಿಂದಲೂ ಕೆಲವು ಪ್ರೊಫೆಸರ್ ಮತ್ತು ಅಸಿಸ್ಟೆಂಟ್ ಪ್ರೊಫೆಸರ್‌ಗಳನ್ನು ನೇಮಕ ಮಾಡಿಕೊಂಡಿರುವ ವಿಚಾರದಲ್ಲಿ ಬಹಳ ಟೀಕೆಗಳಾಗಿರುತ್ತವೆ. ಈ ಜನರ ಅಪಾಯಿಂಟ್‌ಮೆಂಟ್‌ಗಳೆಲ್ಲಾ ಒಂದು ಇನ್‌ಫ್ಲುಯೆನ್ಸಿಗೆ ಒಳಗಾಗಿರುತ್ತವೆ ಎಂಬ ಪುಕಾರು ಎದ್ದಿದೆ. ಅಲ್ಲಿರತಕ್ಕವರ ಸೀನಿಯಾರಿಟಿಯನ್ನು ತಳ್ಳಿಹಾಕಿದ್ದಾರೆಂದು ವರ್ತಮಾನಕೇಳುತ್ತೇನೆ. ಆದರೆ ಈ ಸೀನಿಯಾರಿಟಿ ಕೈಬಿಟ್ಟಿರುವ ವಿಚಾರವಾಗಿ ಇದೇ ಸಭೆಯ ಮುಂದೆ ಅನೇಕವೇಳೆ ಚರ್ಚೆಗಳು ನಡೆದಿವೆ. ಆದರೆ ಈ ಸಂದರ್ಭದಲ್ಲಿ ಆ ಹುದ್ದೆಗಳೆಲ್ಲಾ ಸೆಲೆಕ್ಷನ್ ಪೋಸ್ಟ್‌ಗಳಾಗಿದ್ದವು—ಪ್ರಮೋಷನ್ ಪೋಸ್ಟ್‌ಗಳಾಗಿರಲಿಲ್ಲ ಎಂಬುದಾಗಿ ಸರ್ಕಾರದವರು ಜವಾಬ್ ಕೊಟ್ಟಿದ್ದಾರೆ. ಆದರೆ ನಾನು ಈಗ ಹೇಳುತ್ತಿರುವುದು ಈ ಸೆಲೆಕ್ಷನ್ ಪದ್ಧತಿಯನ್ನು ಕೂಡಲೇ ರದ್ದುಪಡಿಸಿ ಎಂದು. ಇಂಥ ಸ್ಥಾನಗಳಿಗೆ ಅದೇ ಕಾಲೇಜಿನಲ್ಲಿ ಕೆಲಸ ಮಾಡುತ್ತಿರುವ ಲೆಕ್ಚರರ್‌ಗಳನ್ನು ಅಸಿಸ್ಟೆಂಟ್ ಪ್ರೊಫೆಸರ್‌ಗಳನ್ನಾಗಿಯೂ, ಅಸಿಸ್ಟೆಂಟ್ ಪ್ರೊಫೆಸರ್‌ಗಳನ್ನು ಪ್ರೊಫೆಸರ್‌ಗಳನ್ನಾಗಿಯೂ ನೇಮಕ ಮಾಡಲು ಯಾವ ಅಡ್ಡಿಯೂ ಇರಬಾರದು. ಆದರೆ ಈ ದಿವಸ ಅಲ್ಲಿ ಯಾರೋ ಒಬ್ಬರು—ಒಬ್ಬ ದೊಡ್ಡ ವಿದ್ಯಾವಂತರ ಮಕ್ಕಳು First Grade College ನಲ್ಲಿ ವಿದ್ಯಾರ್ಥಿಯಾಗಿದ್ದುಕೊಂಡು ಮಹಾರಾಣಿ ಕಾಲೇಜಿನಲ್ಲಿ ಲೆಕ್ಚರರ್ ಆಗಿದ್ದಾರಂತೆ. ಇದೇನು ನಿಜವೋ ಅಥವಾ ಅಲ್ಲವೋ ಎನ್ನುವುದನ್ನು ಸರ್ಕಾರದವರು ಪರಿಶೀಲನೆ ಮಾಡಿ ಎಂದು ಹೇಳುತ್ತೇನೆ. ಹೀಗೆಲ್ಲಾ ಆಗಬಾರದು ಎಂದು ನನ್ನ ಅಭಿಪ್ರಾಯ.

ಇನ್ನು ಈ ಪ್ರೈಮರಿ ಸ್ಕೂಲುಗಳ ವಿಚಾರ. ಎಷ್ಟೋಕಡೆ ಸ್ಕೂಲುಗಳಿವೆ. ಆದರೆ ಅಲ್ಲಿ ಉಪಾಧ್ಯಾಯರಿರುವುದಿಲ್ಲ. ಈ ವಿಚಾರದಲ್ಲಿ ಎಜ್ಯುಕೇಷನ್ ರಿಫಾರಂಸ್ ಸಮಿತಿಯವರು ತಮ್ಮ ವರದಿಯಲ್ಲಿ ಹೀಗೆ ಹೇಳಿದ್ದಾರೆ :—

> "As things are at present, one hears that in some places, grants are drawn while no schools are in existence. If the villagers and teachers are friendly no complaints will be received."

ಇದು ಅಕ್ಷರಶಃ ನಿಜ. ಇದಕ್ಕೆ ಕಾರಣವೇನಿರಬಹುದು ! ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಲು ಈ ಸ್ಕೂಲುಗಳನ್ನು ಸರ್ಕಾರದವರು ಮಂಜೂರು ಮಾಡಿದ್ದಾರೆ. ವಿದ್ಯಾಭ್ಯಾಸದ ಒಟ್ಟು ವೆಚ್ಚದ ಪೈಕಿ ಎಂದರೆ ನಾಲ್ಕು ಕೋಟಿ ಎಂಬತ್ತೆಂಟು ಲಕ್ಷ ಚಿಲ್ಲರೆಯಲ್ಲಿ ಈ ಪ್ರೈಮರಿ ವಿದ್ಯಾಭ್ಯಾಸಕ್ಕಾಗಿ ಸುಮಾರು ಅರ್ಧ ಭಾಗದಷ್ಟು ಹಣವನ್ನು ಎಂದರೆ ಎರಡು ಕೋಟಿ ಹದಿನಾಲ್ಕು ಲಕ್ಷ ಚಿಲ್ಲರೆ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಇನ್ನು ಈ ಪ್ರೈಮರಿ ಸ್ಕೂಲಿನಲ್ಲಿ ಅಭ್ಯಾಸ ಮಾಡತಕ್ಕ ವಿದ್ಯಾರ್ಥಿಗಳ ಸಂಖ್ಯೆಯನ್ನು ತೆಗೆದುಕೊಂಡರೆ 1951ನೆಯ ಸೆನ್ಸಸ್ ಲೆಕ್ಕಗಳ ಪ್ರಕಾರ ಆರು ವರ್ಷಕ್ಕೆ ಮೇಲ್ಪಟ್ಟು 12 ವರ್ಷದೊಳಗಿದ್ದಂಥ ಹುಡುಗರ ಸಂಖ್ಯೆ 14 ಲಕ್ಷದ 33 ಸಾವಿರ. ಇಷ್ಟು ಜನ ಹುಡುಗರಿಗೂ ಈ ಪ್ರಾಥಮಿಕ ಶಿಕ್ಷಣವನ್ನು

(ಶ್ರೀ ಎಸ್. ಶ್ರೀನಿವಾಸಯ್ಯಂಗಾರ್).

ಕೊಡುತ್ತಿದ್ದಾರೆಯೇ ಎಂದರೆ ಅದೂ ಕೂಡ ಇಲ್ಲ. ಈ ದಿವಸ ಪ್ರೈಮರಿ ವಿದ್ಯಾಭ್ಯಾಸ ಮಾಡುತ್ತಿರುವ ಹುಡುಗರ ಸಂಖ್ಯೆ ಎಂಟು ಲಕ್ಷದ ನಲವತ್ತಾರು ಸಾವಿರ. ಈ ಹುಡುಗರಿಗೇ ಇನ್ನೂ ಪ್ರೈಮರಿ ಸ್ಕೂಲುಗಳನ್ನು ಒದಗಿಸಲು ನಮ್ಮ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಈ ದಿವಸ ನಾವು ಈ ಬಾಲಕರಿಗೆ ಶೇಕಡ 59 ರಷ್ಟು ಪಾಠಶಾಲೆಗಳನ್ನೂ ಕೂಡ ಒದಗಿಸಲು ಸಾಧ್ಯವಾಗಿಲ್ಲ, ಶಕ್ತರಾಗಿಲ್ಲ. ಇಂಥ ಸನ್ನಿವೇಶದಲ್ಲಿ ನಾವು ಈಗ ಇಷ್ಟೊಂದು ಹಣವನ್ನು ಖರ್ಚುಮಾಡಿ ಇಟ್ಟಿರತಕ್ಕಂಥ ಸ್ಕೂಲುಗಳ ಸ್ಥಿತಿಯಾದರೂ ಯಾವರೀತಿಯಾಗಿದೆ ಎನ್ನುವುದನ್ನು ಸ್ವಲ್ಪ ನೋಡೋಣ. ಈ ದಿವಸ ಗ್ರಾಮಾಂತರಗಳಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಉಪಾಧ್ಯಾಯರುಗಳೆಲ್ಲಾ ಬಹುಮಟ್ಟಿಗೆ ತಾಲ್ಲೂಕು ಕಸಬೆಗಳಲ್ಲಿ ವಾಸಿಸುತ್ತಿದ್ದಾರೆ. ಸ್ಕೂಲಿರತಕ್ಕಂಥ ಗ್ರಾಮದಲ್ಲಿ ಯಾರೂ ವಾಸ ಮಾಡುತ್ತಿಲ್ಲ. ಕಾರಣ ಅವರಿಗೆ ಅಲ್ಲಿ ಸೌಕರ್ಯಗಳಿಲ್ಲ. ವಾಸಕ್ಕೆ ಮನೆಯೂ ಇಲ್ಲ. ಈ ಕಾರಣಗಳಿಂದ ಅವರು ಪ್ರತಿ ದಿವಸವೂ ಬೈಸಿಕಲ್ ಮೇಲೆ ಬಂದು ಹೋಗುವ ಪದ್ಧತಿ ಸರಿಯಲ್ಲ. ಇದನ್ನು ಆದಷ್ಟು ಬೇಗ ತಪ್ಪಿಸುವುದುತ್ತಮ. ಅದಕ್ಕಾಗಿ ನಾನು ಈಗ ಒಂದು ಸಲಹೆಯನ್ನು ಸರ್ಕಾರಕ್ಕೆ ನೀಡಬೇಕೆಂದಿದ್ದೇನೆ. ಈಗ ಸರ್ಕಾರದವರು ಲೋ-ಇಕಂ-ಗ್ರೂಪ್ ಹೌಸಿಂಗ್ ಸ್ಕೀಂ ಎಂಬುದಾಗಿ ಒಂದು ಯೋಜನೆಯನ್ನು ತಯಾರು ಮಾಡಿದ್ದಾರೆ. ಈ ಯೋಜನೆಯ ಪ್ರಕಾರ ಸರ್ಕಾರದವರು ಈ ಹಳ್ಳಿ ಉಪಾಧ್ಯಾಯರುಗಳು ಆಯಾ ಸ್ಕೂಲಿರತಕ್ಕ ಹಳ್ಳಿಯಲ್ಲೇ ವಾಸಿಸಲು ಅನುಕೂಲವಾಗುವಂತೆ ಅವರುಗಳಿಗೆ ಏಕೆ ಮನೆಗಳನ್ನು ಕಟ್ಟಿಸಿ ಕೊಡಬಾರದು? ಈ ಉಪಾಧ್ಯಾಯರುಗಳೆಲ್ಲಾ ಲೋ-ಇಕಂ-ಗ್ರೂಪಿನಲ್ಲಿ ಸೇರಿರುತ್ತಾರೆ. ಇವರಿಗೆ ಮನೆಗಳನ್ನು ಕಟ್ಟಿಸಿಕೊಟ್ಟು ಅವರ ಸಂಬಳದಲ್ಲಿ ಬಾಡಿಗೆರೂಪವಾಗಿ ಆ ಖರ್ಚು ವೆಚ್ಚಗಳನ್ನೆಲ್ಲಾ ಹಿಡಿದುಕೊಂಡು ಅವರಿಗೇಕೆ ಈ ರೀತಿ ಅನುಕೂಲ ಒದಗಿಸಬಾರದು? ಈ ದಿವಸ ನಮ್ಮಲ್ಲೆಲ್ಲಾ ಬಹುಶಃ 10 ಸಾವಿರ ಪ್ರೈಮರಿ ಸ್ಕೂಲುಗಳಿರಬಹುದು. ಅದಕ್ಕಾಗಿ ತಾವು ಹತ್ತುಸಾವಿರ ಮನೆಗಳನ್ನು ಕಟ್ಟಿಸಲು ಯಾವ ಅಭ್ಯಂತರವೂ ಇಲ್ಲ. ಆ ಉಪಾಧ್ಯಾಯರುಗಳ ಸಂಬಳದಲ್ಲಿ ಪ್ರತಿ ತಿಂಗಳೂ ಅದರ ಬಾಡಿಗೆಯನ್ನು ವಸೂಲ್ಮಾಡಿಕೊಳ್ಳಬಹುದು. ಇದರಲ್ಲಿ ಯಾವ ಅಡಚಣೆಯಾಗಲೀ ಅಡ್ಡಿ-ಆತಂಕಗಳಾಗಲೀ ಇರುವುದಿಲ್ಲ. ಈ ಸ್ಕೀಮನ್ನು ಜಾರಿಗೆ ತಂದಿರುವ ಸಂಬಂಧದಲ್ಲಿ ನಮಗೆ ಕೇಂದ್ರ ಸರ್ಕಾರದಿಂದ ಸಹಾಯ ಬರುತ್ತಿದೆ. ಆ ಸಹಾಯವನ್ನು ಸಂಪೂರ್ಣವಾಗಿ ತಾವು ಉಪಯೋಗಿಸಿಕೊಂಡು ಈ ಕೆಲಸವನ್ನು ಏಕೆ ಮಾಡಬಾರದು? ನಾನೀಗ ತಮಗೆ ಸಲಹೆಯನ್ನು ಕೊಡುತ್ತಿದ್ದೇನೆ. ತಾವು ಇದನ್ನು ವಿಮರ್ಶೆ ಮಾಡಿ. ತಾವು ಈ ಕಾರ್ಯವನ್ನು ಕೈಗೊಂಡರೆ ಉಪಾಧ್ಯಾಯರು ಆ ಹಳ್ಳಿಗಳಲ್ಲೇ ವಾಸಿಸಲು ಅನುಕೂಲವಾಗಿ ಆ ಪಾಠಶಾಲೆಗಳ ಕೆಲಸ ಕಾರ್ಯಗಳು ಉತ್ತಮಗೊಳ್ಳಲು ಅವಕಾಶವಾಗುತ್ತದೆ.

ಈ ಪ್ರೀ-ಪ್ರೈಮರಿ ಕೋರ್ಸು ಎಂದು ಜಾರೀಲಿದೆ. ಇದನ್ನು ಇನ್ನೂ ಉತ್ತಮಗೊಳಿಸಬೇಕು. ಇವು ಇನ್ನೂ ಹೆಚ್ಚಿನ ಪ್ರೋತ್ಸಾಹದಿಂದ ಕೆಲಸ ನಡೆಸುವಂತೆ ತಾವು ಶ್ರಮಿಸಬೇಕಾಗಿದೆ.

ಇನ್ನು ಮೂರನೆಯದಾಗಿ ಮಿಡಲ್ ಸ್ಕೂಲುಗಳ ವಿಚಾರ. ಈ ಸ್ಕೂಲುಗಳಿಗೋಸ್ಕರವಾಗಿ ಈ ದಿವಸ ವಿದ್ಯಾದಾನ ಭೂದಾನ ಚಳುವಳಿಯಿಂದ ಸಾವಿರಾರು ಎಕರೆ ಜಮೀನು ದೊರೆತಿದೆ. ಇದಕ್ಕಾಗಿ ಈಗ ನಮ್ಮ ಸರ್ಕಾರದವರು ತಮಗೊಂದು ಶಹಬಾಸ್‌ಗಿರಿ ಕೊಡಬೇಕೆಂದು ಕೇಳುತ್ತಿದ್ದಾರೆ. ಆದರೆ ಈಗ ಆ ರೀತಿ ದಾನರೂಪದಲ್ಲಿ ಬಂದಿರತಕ್ಕಂಥ ಜಮೀನಿನ ಲಕ್ಷಣವೇನು? ಅವರ ಯೋಗ್ಯತೆಯೇನೆಂಬ ವಿಚಾರಗಳಿಗೆ ಪ್ರವೇಶಿಸುವುದಿಲ್ಲ. ಆದರೆ ಇಷ್ಟುಮಾತ್ರ ಹೇಳುತ್ತೇನೆ ಪ್ರತಿಯೊಂದು ಮಿಡಲ್ ಸ್ಕೂಲಿಗೂ ಹೊಂದಿಕೊಂಡಿರುವ ಹಾಗೆ ಕನಿಷ್ಠ ಪಕ್ಷ ಎರಡೆರಡೇಕರೆ ಜಮೀನಿರಬೇಕು. ಈಗ ತಮಗೆ ದಾನದ ರೂಪವಾಗಿ ಎಲ್ಲೆಲ್ಲಿಯೋ ದೊರೆತಿರುವ ಜಮೀನನ್ನು ವಾರಾಟ ಮಾಡಿ, ಇಲ್ಲವೇ ಅವುಗಳನ್ನು ಇತರರಿಗೆ ಬದಲಾಯಿಸಿ ಬಿಟ್ಟು ಆಯಾಯ ಸ್ಕೂಲಿನ ಅಕ್ಕಪಕ್ಕದಲ್ಲೇ ಜಮೀನಿರುವಂತೆ ಮಾಡಿ. ಆ ಜಮೀನುಗಳನ್ನೆಲ್ಲಾ ಮೊದಲು ರಿಜಿಷ್ಟರ್ ಮಾಡಿಸಿ.

2-30 P.M.

ಎರಡನೆಯದಾಗಿ ಈ ಭೂದಾನದಲ್ಲಿ ಹೊಂದಿರತಕ್ಕ ಜಮೀನುಗಳನ್ನು ಸಾಗುವಳಿ ಮಾಡುವುದಕ್ಕೆ 3½ ಲಕ್ಷ ರೂಪಾಯಿ ತೆಗೆದುಕೊಂಡಿದ್ದೀರಿ. ಮುಂಚೆ ಪ್ರತಿ ಮಿಡಲ್ ಸ್ಕೂಲಿಗೂ ಒಂದು ಬಾವಿ ತೋಡಿಸಿ ಆ ದುಡ್ಡನ್ನು ಖರ್ಚುಮಾಡಿ. ಪ್ರಾರಂಭದಲ್ಲಿ ಒಂದು ಬಾವಿ ಅದಕ್ಕೆ ಸಂಬಂಧ ಪಟ್ಟ ಒಂದು ಲಫ್ಟ್ ಇರಿಗೇಷನ್ ಪಂಪು ಇವುಗಳನ್ನೆಲ್ಲಾ ಇಟ್ಟುಕೊಂಡು ಮುಂದೆ ವ್ಯವಸಾಯ ಮಾಡುವುದರ ಕಡೆಗೆ ಗಮನ ಕೊಡಿ. ಬಿತ್ತನೆ ಬಿತ್ತು ಮಳೆ ಇಲ್ಲದೇ ಇದ್ದರೆ ಕಷ್ಟ ಪಟ್ಟಿದ್ದೆಲ್ಲಾ ಹೋಯಿತು. ಆ ರೀತಿ ಆಗದೇ ಇರಲಿ ಪ್ರತಿ ಮಿಡಲ್ ಸ್ಕೂಲಿನ ಆವಣರದಲ್ಲೂ ಸದಾ ಕಾಲ ನೀರು ಇರುವ ಒಂದು ಬಾವಿ, ಆ ಬಾವಿಯಿಂದ ನೀರು ಹಾಯಿಸುವುದಕ್ಕೆ ಒಂದು ಪಂಪಿನ ಏರ್ಪಾಡು ಇದನ್ನೆಲ್ಲಾ ಮಾಡಿದರೆ ನಿಜವಾಗಿಯೂ ಭೂಧಾನದಿಂದ ಬಂದಿರತಕ್ಕ ಜಮೀನನ್ನು ಉಪಯೋಗ ಮಾಡಿಕೊಳ್ಳಲಕ್ಕೆ ಸಾಧ್ಯವಾಗುತ್ತದೆ.

ಇನ್ನೊಂದು ವಿಷಯ. ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಪ್ರೈವೇಟ್ ವಿದ್ಯಾರ್ಥಿಗಳನ್ನು ಎಂದರೆ ಸ್ಕೂಲಿಗೆ ಹೋಗದೇ ಓದಿರತಕ್ಕ ಸ್ವಲ್ಪ ವಯಸ್ಸಾಗಿರತಕ್ಕ ವಿದ್ಯಾರ್ಥಿಗಳು ಒಂದು ವೇಳೆ ಅವರು ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕುಳಿತುಕೊಳ್ಳುತ್ತೇವೆ ಎಂದು ಇಷ್ಟಪಟ್ಟರೆ ಪರೀಕ್ಷೆಗೆ ಕುಳಿತುಕೊಳ್ಳಲು ಅವರಿಗೆ ಅವಕಾಶ ಕೊಡಬೇಕು. ಏಕೆಂದರೆ ಎಷ್ಟೋ ಜನ ಆರ್ಥಿಕ ದುಸ್ಥಿತಿಯಿಂದ ಕೆಲಸಕ್ಕೆ ಹೋಗುತ್ತಾ ಇರುತ್ತಾರೆ. 16-17 ವಯಸ್ಸಾಗಿರುತ್ತದೆ. ಅವಕಾಶವಿದ್ದಾಗ ಓದುತ್ತೇನೆ, ಎಸ್. ಎಸ್. ಎಲ್. ಸಿ. ಆಗಿದೆ ಎಂದು ಒಂದು ಹೆಸರು ಇರಲಿ ಎಂಬ ಅಭಿಲಾಷೆ ಅವರಲ್ಲಿರುತ್ತದೆ. ಅಂಥ ಹುಡುಗರಿಗೆ, ಪ್ರೈವೇಟ್ ಆಗಿ ಪರೀಕ್ಷೆಗೆ ಕುಳಿತುಕೊಳ್ಳುತ್ತೇವೆ ಎಂದರೆ ಅವಕಾಶ ಕೊಡುವ ಹಾಗೆ ಏರ್ಪಾಡು ಮಾಡಬೇಕು. ಇಷ್ಟು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಡಿ. ಎಂ. ಗೋವಿಂದರಾಜು (ನೆಲಮಂಗಲ).—ಮಾನ್ಯ ಅಧ್ಯಕ್ಷರೇ, ಹೈಸ್ಕೂಲುಗಳಲ್ಲಿ ಮುನಿಸಿಪಲ್ ಹೈಸ್ಕೂಲುಗಳು, ಸರ್ಕಾರಿ ಹೈಸ್ಕೂಲುಗಳು, ಡಿಸ್ಟ್ರಿಕ್ಟ್ ಬೋರ್ಡ್ ಹೈಸ್ಕೂಲುಗಳು ಎಂದು ನಾನಾ ರೀತಿಯ ಹೈಸ್ಕೂಲುಗಳಿರುವುದು ನಮಗೆಲ್ಲರಿಗೂ ಗೊತ್ತಿದೆ. ಇವುಗಳ ಕಾರ್ಯ ಕ್ರಮ ಎಲ್ಲ ಹೈಸ್ಕೂಲುಗಳಿಗೂ ಕೂಡ ಒಂದೇ ರೀತಿಯಾಗಿರುತ್ತದೆ. ಮುನಿಸಿಪಲ್ ಹೈಸ್ಕೂಲುಗಳಲ್ಲಿ ಉಪಾಧ್ಯಾಯರಿಗೆ ಸಂಬಳ ಸಿಕ್ಕಬೇಕಾಗಿದ್ದರೆ ಖಂಡಿತವಾಗಿಯೂ ಬಹಳ ಕಷ್ಟವಾಗಿದೆ.

ಅನೇಕ ಮುನಿಸಿಪಲ್ ಹೈಸ್ಕೂಲುಗಳಲ್ಲಿ ಈಗಾ
ಗಲೇ ಸ್ಕೂಲು ಪ್ರಾರಂಭವಾಗಿ ಎರಡು ತಿಂಗಳಾದರೂ
ಕೂಡ ಉಪಾಧ್ಯಾಯರಿಗೆ ಸಂಬಳ ಸಿಕ್ಕದೇ ಇರುವ
ಅನೇಕ ಹೈಸ್ಕೂಲುಗಳು ಇವೆ. ನಾವು ಅನೇಕ
ವೇಳೆ ಮುನಿಸಿಪಲ್ ಹೈಸ್ಕೂಲು, ಡಿಸ್ಟ್ರಿಕ್ಟ್ ಬೋರ್ಡ್
ಹೈಸ್ಕೂಲುಗಳನ್ನು ಅವರು ಎಷ್ಟು ಕೋಟಾ
ಕೊಡಬೇಕೋ ಅಷ್ಟನ್ನು ತೆಗೆದುಕೊಂಡು ಸರ್ಕಾರಿ
ಹೈಸ್ಕೂಲುಗಳನ್ನಾಗಿ ಪರಿವರ್ತನೆ ಮಾಡಿ ಎಂದು
ಸರ್ಕಾರದವರನ್ನು ಪ್ರಾರ್ಥನೆ ಮಾಡಿಕೊಂಡಿದ್ದೇವೆ.
ಆ ರೀತಿ ಪರಿವರ್ತನೆ ಮಾಡುವುದಕ್ಕೆ ಏನು ತೊಂದರೆ
ಇದೆಯೋ ಗೊತ್ತಿಲ್ಲ. ಹಾಗೆ ಮಾಡದಿದ್ದರೆ ಈ ಮುನಿ
ಸಿಪಲ್ ಹೈಸ್ಕೂಲುಗಳ ಕೆಲಸ ಕಾರ್ಯಗಳು ಹೆಚ್ಚಿನ
ಮಟ್ಟದಲ್ಲಿ ಆಗದೇ ಅಲ್ಲಿನ ಹುಡುಗರ ವಿದ್ಯಾಭ್ಯಾಸ
ಚೆನ್ನಾಗಿ ನಡೆಯುವುದಕ್ಕೆ ಬಹಳ ತೊಂದರೆಯಾಗು
ತ್ತದೆ. ಈಗಲಾದರೂ ನಮ್ಮ ಸರ್ಕಾರದವರು ಎಲ್ಲಾ
ಮುನಿಸಿಪಲ್ ಹೈಸ್ಕೂಲುಗಳನ್ನೂ ಸರ್ಕಾರಿ
ಹೈಸ್ಕೂಲುಗಳನ್ನಾಗಿ ಪರಿವರ್ತನೆ ಮಾಡಿ ಆಯಾ
ಮುನಿಸಿಪಾಲಿಟಿಯವರ ಕೋಟಾ ಎಷ್ಟು ಎಂಬುದನ್ನು
ಗೊತ್ತು ಮಾಡಿದರೆ ಖಂಡಿತವಾಗಿಯೂ ಬಹಳ ಉಪ
ಕಾರವಾಗುತ್ತದೆ ಎಂದು ಹೇಳುತ್ತೇನೆ.

ಪ್ರೈಮರಿ ಸ್ಕೂಲುಗಳ ಕಟ್ಟಡಗಳ ವಿಷಯ ಹೇಳ
ಬೇಕೆಂದರೆ ಖಂಡಿತವಾಗಿಯೂ ಬಹಳ ವಿಷಾದವಾಗು
ತ್ತದೆ. ಅನೇಕ ಗ್ರಾಮಗಳಲ್ಲಿ ಪ್ರೈಮರಿ ಸ್ಕೂಲು
ಗಳು ಹುಲ್ಲು ಜೋಪಡಿಗಳಲ್ಲೋ ಅಥವಾ ಮರಗಳ
ನೆರಳಿನಲ್ಲೋ ನಡೆಯುತ್ತಿವೆ. ಇದರಿಂದ ಹುಡು
ಗರಿಗೂ ಮತ್ತು ಉಪಾಧ್ಯಾಯರಿಗೂ ಬಹಳ
ತೊಂದರೆಯಾಗಿದೆ. ಮಳೆಗಾಲದಲ್ಲಂತೂ ಮಳೆಯ
ದೆಸೆಯಿಂದ ಪಾಠಗಳನ್ನು ಮಾಡುವುದೇ ಕಷ್ಟ.
ಸ್ಕೂಲಿನ ತುಂಬ ನೀರು ನಿಂತುಕೊಂಡಿ
ರುತ್ತದೆ. ಈ ರೀತಿ ಆದರೆ ಅಲ್ಲಿನ ವಿದ್ಯಾರ್ಥಿಗಳ
ವಿದ್ಯಾಭ್ಯಾಸಕ್ಕೆ ಎಷ್ಟು ತೊಂದರೆ ಎಂಬುದನ್ನು
ತಾವೇ ಯೋಚನೆ ಮಾಡಿ. ಪಟ್ಟಣಗಳಲ್ಲಿರತಕ್ಕ
ದೊಡ್ಡ ದೊಡ್ಡ ಹೈಸ್ಕೂಲು ಮುಂತಾದುವುಗಳಿಗೆ
ತಾವು ಬೇಕಾದಷ್ಟು ಹಣ ವ್ಯಯ ಮಾಡುತ್ತೀರಿ.
ಅದೇರೀತಿ ಗ್ರಾಮಾಂತರಗಳಲ್ಲಿರತಕ್ಕ ಪ್ರೈಮರಿ
ಸ್ಕೂಲುಗಳಿಗೂ ಹಣ ವ್ಯಯ ಮಾಡಿದರೆ ಖಂಡಿತವಾ
ಗಿಯೂ ಪ್ರಯೋಜನವಾಗುತ್ತದೆ. ನಮಗೆ ಸ್ವರಾಜ್ಯ
ಬಂದ ಮೇಲೆ ನಾವು ವಿದ್ಯಾಭ್ಯಾಸದ ವಿಷಯದಲ್ಲಿ
ಬಹಳ ಪ್ರಗತಿದಾಯಕವಾಗಿ ಕೆಲಸ ಮಾಡುತ್ತಿರುವುದು
ಖಂಡಿತವಾಗಿಯೂ ಬಹಳ ಸಂತೋಷದ ವಿಷಯ.
ಆದರೆ ಇತರ ಸಂಸ್ಥಾನಗಳಲ್ಲಿ ಶೇಕಡಾವಾರು
ವಿದ್ಯಾವಂತರ ಸಂಖ್ಯೆ ಹೆಚ್ಚಾಗಿರುವಾಗ ನಮ್ಮಲ್ಲಿ
ಇನ್ನೂ ಕಡಿಮೆಯಾಗಿದೆ. ಅದಕ್ಕೆ ನಮ್ಮ
ಸರ್ಕಾರದವರು ಕಂಪಲ್‌ಸರಿ ಎಜ್ಯುಕೇಷನ್ನನ್ನು
ಜಾರಿಗೆ ತಂದು ತನ್ಮೂಲಕ ಕೆಲವೇ ವರ್ಷಗಳಲ್ಲಿ
100ಕ್ಕೆ 50 ಜನ ವಿದ್ಯಾವಂತರಾಗುವುದಕ್ಕೆ ಅವಕಾಶ
ಕಲ್ಪಿಸಬೇಕು. ಮತ್ತು ಬಡವರಿಗೆ ಹರಿಜನರಿಗೇ
ಆಗಲೀ ಯಾವ ಜಾತಿಯವರಿಗೇ ಆಗಲೀ, ಖಾಸಗಿಯವ
ರಾಗಲೀ, ಸರ್ಕಾರಿ ನೌಕರರಾಗಲೀ ಬಡ ವಿದ್ಯಾರ್ಥಿ
ಗಳಿಗೆ ಫ್ರೀ ಎಜ್ಯುಕೇಷನ್ ಕೊಡಬೇಕು ಮತ್ತು ಅವರಿಗೆ
ಹಾಸ್ಟೆಲುಗಳನ್ನು ನಿರ್ಮಾಣ ಮಾಡಿ ಅವರ ವಿದ್ಯಾ
ಭ್ಯಾಸಕ್ಕೆ ಸಹಾಯವಾಗುವಂತೆ ಏರ್ಪಾಡು ಮಾಡಲು
ಪ್ರಯತ್ನ ಮಾಡಬೇಕು. ಇವತ್ತು ಈ ಹಾಸ್ಟೆಲುಗಳು
ಸಿಟಿಗಳಲ್ಲಿ ಹೆಚ್ಚಾಗಿ ಇವೆಯೇ ಹೊರತು ಗ್ರಾಮಾಂತರ
ಗಳಲ್ಲಿ ಯಾವುವೂ ಇಲ್ಲ. ನಮ್ಮ ನೆಲಮಂಗಲ
ತಾಲ್ಲೂಕ್ ತ್ಯಾಮಗೊಂಡ್ಲುವಿನಲ್ಲಿ ಹೈಸ್ಕೂಲು
ಇದೆ. ಐನೂರು ಜನ ವಿದ್ಯಾರ್ಥಿಗಳು ಇದ್ದಾರೆ.
ಅನೇಕರು 8—10 ಮೈಲಿ ದೂರದಿಂದ ಬರಬೇಕು.
ಎಂಟು ಹತ್ತು ಮೈಲಿ ದೂರದಿಂದ ಬಂದು ವಿದ್ಯಾ
ಭ್ಯಾಸ ಮಾಡಬೇಕೆಂದರೆ ಎಷ್ಟು ಕಷ್ಟ, ಎಷ್ಟು
ತೊಂದರೆ ಇದೆ ಎಂಬುದನ್ನು ತಾವೇ ಯೋಚನೆಮಾಡಿ.
ಆದ್ದರಿಂದ ಗ್ರಾಮಾಂತರಗಳಲ್ಲಿ ಒಂದೊಂದು ಜನರಲ್
ಹಾಸ್ಟೆಲುಗಳನ್ನು ಏರ್ಪಾಡು ಮಾಡಿ ತನ್ಮೂಲಕ
ಗ್ರಾಮಾಂತರದಲ್ಲಿರತಕ್ಕ ವಿದ್ಯಾರ್ಥಿಗಳಿಗೆ ಅನುಕೂಲ
ವನ್ನೊದಗಿಸಬೇಕಾದ್ದು ನಮ್ಮ ಸರ್ಕಾರದವರ
ಮುಖ್ಯ ಕರ್ತವ್ಯ ಎಂದು ನಾನು ಹೇಳುತ್ತೇನೆ.

ಇನ್ನು ಪಾರಿಭಾಷಿಕ ವಿದ್ಯಾಭ್ಯಾಸದ ವಿಚಾರದಲ್ಲಿ
ಹೇಳುವುದಾದರೆ, ವಿದ್ಯಾರ್ಥಿಗಳಿಗೆ ಹೆಚ್ಚು ಸೀಟು
ಗಳನ್ನು ಅಲ್ಲಿ ಒದಗಿಸಬೇಕು. ಏಕೆಂದರೆ ಈಗ ಪಾರಿ
ಭಾಷಿಕ ವಿದ್ಯಾಭ್ಯಾಸಕ್ಕೆ ಬಹಳ ಪ್ರಾಮುಖ್ಯತೆ ಇದೆ.
ಅದರಲ್ಲೂ ಗ್ರಾಮಾಂತರ ಪ್ರದೇಶಗಳಿಂದ ಬರತಕ್ಕ
ವಿದ್ಯಾರ್ಥಿಗಳಿಗೆ ಪ್ರಿಫರೆನ್ಸ್ ಕೊಟ್ಟು ಅವರಿಗೆ ಹೆಚ್ಚು
ಸೀಟುಗಳು ದೊರಕುವಂತೆ ಮಾಡಬೇಕಾದದ್ದು ನಮ್ಮ
ಸರ್ಕಾರದ ಕರ್ತವ್ಯವಾಗಿದೆ.

ಗ್ರಾಮಾಂತರಗಳಲ್ಲಿ ಈಗ ಅನೇಕ ಬೇಸಿಕ್ ಸ್ಕೂಲು
ಗಳನ್ನು ಸ್ಥಾಪನೆ ಮಾಡಿದ್ದೀರಿ. ಇದು ಬಹಳ ಸಂತೋ
ಷದ ವಿಷಯ. ಬೇಸಿಕ್ ಸ್ಕೂಲುಗಳನ್ನು ಇನ್ನೂ
ಹೆಚ್ಚು ಹೆಚ್ಚಾಗಿ ಸ್ಥಾಪನೆ ಮಾಡಬೇಕಾದದ್ದು ಸರ್ಕಾರ
ದವರ ಕರ್ತವ್ಯ ಮತ್ತು ಅವುಗಳಿಗೆ ಏನು ಸಲಕರಣೆ
ಗಳು ಬೇಕೋ ಅವುಗಳನ್ನೆಲ್ಲಾ ಆದಷ್ಟು ಜಾಗ್ರತೆ
ಒದಗಿಸಬೇಕೆಂದು ಸಲಹೆ ಮಾಡುತ್ತೇನೆ.

*ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).—
ವಿಶ್ವವಿದ್ಯಾನಿಲಯದವರಿಗೂ ಮತ್ತು ಸರ್ಕಾರದವ
ರಿಗೂ ಕೆಲವು ವರ್ಷಗಳ ಹಿಂದಿನಿಂದಲೂ ಖಾಸಗೀ
ಕಾಲೇಜುಗಳನ್ನು ಸ್ಥಾಪನೆ ಮಾಡಿಸುವ ವಿಷಯದಲ್ಲಿ
ಉತ್ಸಾಹವಿದ್ದುದರಿಂದ ಅನೇಕ ಖಾಸಗೀ ಕಾಲೇಜು
ಗಳನ್ನು ದೇಶಾದ್ಯಂತ ಸ್ಥಾಪನೆ ಮಾಡಲಿಕ್ಕೆ ಅವಕಾಶ
ಮಾಡಿಕೊಟ್ಟರು. ಅವರು ಯಾವ ಒಂದು ರೂಲ್ಸನ್ನು
ಗೊತ್ತು ಮಾಡಿದರೋ ಆ ರೂಲ್ಸಿನ ಚೌಕಟ್ಟಿನಲ್ಲಿ ಆ
ಕಾಲೇಜುಗಳು ಆದಿಯಿಂದಲೂ ನಡೆದುಕೊಂಡು
ಬಂದಿವೆ ಎಂಬುದು ಈಗಾಗಲೇ ಸರ್ಕಾರದವರ ಗಮ
ನಕ್ಕೆ ಬಂದಿದೆ. ಮೇಂಟೆನೆನ್ಸ್ ಗ್ರಾಂಟು, ಎಕ್ವಿಪ್
ಮೆಂಟ್ ಗ್ರಾಂಟು, ಬಿಲ್ಡಿಂಗ್ ಗ್ರಾಂಟು ಎಂದು
ಹೇಳಿ ಮೂರು ವಿಧವಾದ ಗ್ರಾಂಟುಗಳನ್ನು ಯೂನಿ
ವರ್ಸಿಟಿಯವರು ಅವರಿಗೆ ಕೊಡುತ್ತಾರೆ. ಆ ರೀತಿ
ಕೊಡುವಾಗ ವಿದ್ಯಾರ್ಥಿಗಳಿಂದ ಬರತಕ್ಕ ಫೀಜು,
ಮತ್ತು ಅವರಿಗೆ ಇರತಕ್ಕ ಖರ್ಚು ಇವುಗಳನ್ನೆಲ್ಲಾ
ಯೋಚನೆ ಮಾಡಿ ಒಟ್ಟು ಖರ್ಚಿನಲ್ಲಿ ಅರ್ಧ ಭಾಗವನ್ನು
ಆಯಾ ಕಾಲೇಜಿನ ಮ್ಯಾನೇಜ್‌ಮೆಂಟಿನವರು
ವಹಿಸಿಕೊಳ್ಳಬೇಕೆಂತಲೂ ಉಳಿದ ಅರ್ಧ ಭಾಗವನ್ನು
ಯೂನಿವರ್ಸಿಟಿಯವರು ಕೊಡುವುದಾಗಿಯೂ ತಿಳಿಸಿರು
ತ್ತಾರೆ. ಆದರೆ ಹಿಂದೆ ಈ ರೀತಿ ಒಂದು ಕಾನೂನನ್ನು
ಮಾಡಿದಾಗ ಹಣದ ಉಬ್ಬರ ಏನಿತ್ತು, ಇವತ್ತು ಏನಿದೆ
ಎಂಬುದನ್ನು ಸರ್ಕಾರದವರು ಗಣನೆಗೆ ತೆಗೆದುಕೊಳ್ಳ
ಬೇಕು. ಈ ದಿವಸ ಮ್ಯಾನೇಜ್‌ಮೆಂಟಿನವರು ವಹಿಸ
ಬೇಕಾಗಿರುವ ಶೇಕಡ 50 ಭಾಗದ ಖರ್ಚನ್ನೂ
ವಹಿಸುವುದಕ್ಕೆ ಅವರಿಗೆ ಬಹಳ ಕಷ್ಟವಾಗಿದೆ.
ಆದ್ದರಿಂದ ಗ್ರಾಂಟ್ ಇನ್ ಏಡ್ ರೂಲ್ಸನ್ನು ಬದ
ಲಾವಣೆ ಮಾಡಬೇಕೆಂದು ಹೇಳುತ್ತೇನೆ. ಆ ರೀತಿ
ಮಾಡಲಿಕ್ಕೆ ಸರ್ಕಾರದವರಿಗೇ ಪೂರ್ಣ ಹಕ್ಕು ಇದೆ.
ಅದು ಶಾಸನ ಸಭೆಯ ಮುಂದೆ ಬರಬೇಕಾಗಿಲ್ಲ ಎಂದು
ನಾನು ತಿಳಿದುಕೊಂಡಿದ್ದೇನೆ.

ಗ್ರಾಂಟ್ ಇನ್ ಏಡ್ ರೂಲ್ಸಿಗೆ ಸಂಬಂಧಪಟ್ಟಂತೆ
ಸರ್ಕಾರದವರು ಸರ್ಕ್ಯುಲರ್ ಕಳುಹಿಸುತ್ತಾರೆ. ಆ

(ಶ್ರೀ ಯು. ಎಂ. ಮಾದಪ್ಪ)

ಸರ್ಕ್ಯುಲರ್ ಬಂದಾಗ ಯೂನಿವರ್ಸಿಟಿ ಅಥಾರಿಟೀಸ್ ತಮಗೆ ಯಾವುದೋ ಒಂದು ಅಂಶ ಅರ್ಥವಾಗಲಿಲ್ಲ ಎನ್ನುವುದರಮೇಲೆ ಕರೆಸ್‌ಪಾಂಡೆನ್ಸ್ ನಡೆಸುತ್ತಾರೆ. ಅದೇ ಬಹಳ ದಿನ ತೆಗೆದುಕೊಂಡು ಬಿಡುತ್ತದೆ. ಆದ್ದರಿಂದ ಸರ್ಕಾರದವರಿಗೆ ನಾನು ಹೇಳುವುದೇನೆಂದರೆ ಗ್ರಾಂಟ್ ಇನ್ ಏಡ್ ರೂಲ್ಸ್ ಪ್ರಕಾರ ಕೊಡತಕ್ಕ ಮೇಂಟನೆನ್ಸ್ ಗ್ರಾಂಟನ್ನು ಪೂರ್ತಿಯಾಗಿ ಸರ್ಕಾರದವರೇ ವಹಿಸಿಕೊಳ್ಳಬೇಕು. ಇನ್ನು ಬಿಲ್ಡಿಂಗ್ ಗ್ರಾಂಟ್ ಮತ್ತು ಎಕ್ವಿಪ್‌ಮೆಂಟ್ ಗ್ರಾಂಟಿನಲ್ಲಿ ⅓ ಭಾಗವನ್ನು ನ್ಯಾಷನಲ್ ಎಕ್ಸ್‌ಟೆನ್‌ಷನ್ ಸ್ಕೀಂನವರು ವಹಿಸಿಕೊಳ್ಳುವಂತೆ ಮಾಡಬೇಕು. ಹಾಸ್ಟೆಲುಗಳ ವಿಷಯದಲ್ಲಿ ಸರ್ಕಾರದ ಒಂದು ಆರ್ಡರು ಇದೆ. ಸಾರ್ವಜನಿಕ ಹಾಸ್ಟೆಲುಗಳನ್ನು ಕಟ್ಟಿಸಬೇಕಾದರೆ ಕಟ್ಟಡಕ್ಕೆ ಸೇಕಡ 75 ರಷ್ಟು ಗ್ರಾಂಟ್ ಕೊಡಲಾಗುತ್ತದೆ ಎಂದು ಇದೆ. ಅದೇ ಆರ್ಡರು ಈ ಕಾಲೇಜುಗಳಿಗೂ ಸಹ ಅನ್ವಯಿಸುವಂತೆ ಏರ್ಪಾಡು ಮಾಡಿಕೊಡಬೇಕೆಂದು ಸರ್ಕಾರದವರ ಗಮನಕ್ಕೆ ತರುತ್ತೇನೆ.

ಶ್ರೀ ಎ. ಭೀಮಪ್ಪನಾಯಕ್ (ಮೊಳಕಾಲ್ಮೂರು).—ಅದು ಅಫಿಲಿಯೇಟೆಡ್ ಕಾಲೇಜುಗಳಿಗೆ ಅನ್ವಯವಾಗುವುದಿಲ್ಲ. It will apply to constituent colleges run by Government and not by private enterprise.

ಶ್ರೀ ಯು. ಎಂ. ಮಾದಪ್ಪ.—ಅಫಿಲಿಯೇಟೆಡ್ ಕಾಲೇಜಿಗೆ apply ಆಗಬೇಕೇ, ಕಾನ್ಸ್ಟಿಟ್ಯುಯಂಟ್ ಕಾಲೇಜಿಗೆ apply ಆಗಬೇಕೇ ಎನ್ನುವುದನ್ನು ಸರ್ಕಾರದವರಿಗೆ ಬಿಡುತ್ತೇನೆ. ಈಗಿನ ಹಣಕಾಸಿನ ಸ್ಥಿತಿ ಏನಿದೆ ಅದನ್ನು ನೋಡಿದರೆ, ಈ ಕಾಲೇಜುಗಳನ್ನು ಮ್ಯಾನೇಜ್ ಮಾಡುವುದಕ್ಕೆ ಸಾಧ್ಯವೇ ಇಲ್ಲದಂತಾಗಿದೆ. ಈಗಾಗಲೇ ಅನೇಕ ಏರ್ಪಾಡುಗಳನ್ನು ಮಾಡಿದ್ದರೂ ಕೂಡ ಅಫಿಲಿಯೇಟೆಡ್ ಕಾಲೇಜುಗಳಲ್ಲಿ ಸರಿಯಾದ ಎಕ್ವಿಪ್‌ಮೆಂಟ್ ಇಲ್ಲ ಎಂಬ ಭಾವನೆ ಜನಗಳಲ್ಲಿ ಬರುತ್ತಾ ಇದೆ. ಆದರೂ ಕೂಡ ಸರ್ಕಾರಿ ಕಾಲೇಜುಗಳಲ್ಲೇ ಹೆಚ್ಚಿಗೆ ಪ್ರಮಾಣದಲ್ಲಿ ವಿದ್ಯಾರ್ಥಿಗಳು ಫೇಲ್ ಆಗುತ್ತಾರೆ ಅಫಿಲಿಯೇಟೆಡ್ ಕಾಲೇಜಿನಲ್ಲಿ ಅಷ್ಟು ಇಲ್ಲ ಎಂದು ಹೇಳುತ್ತಾರೆ.

ಶ್ರೀ ಎ. ಭೀಮಪ್ಪನಾಯಕ್.—ಅಂಕಿಅಂಶ ಕೊಡಿ.

ಶ್ರೀ ಯು. ಎಂ. ಮಾದಪ್ಪ.—ಅಂಕಿಅಂಶಗಳನ್ನು ತೋರಿಸುವ ಒಂದು ವರದಿ ಶ್ರೀ ಭೀಮಪ್ಪನಾಯಕರ ಹತ್ತಿರವೂ ಇದೆ ಎಂದು ತಿಳಿದುಕೊಂಡಿದ್ದೇನೆ. ಸೆನೆಟ್‌ನಲ್ಲಿ ಅವರೂ ಮಾತನಾಡಿದ್ದಾರೆ. ನಾನು ಸೆನೆಟ್ ಮೆಂಬರು, ನನಗೆ ಚೆನ್ನಾಗಿ ಗೊತ್ತು ಅವರಿಗೂ ರಿಪೋರ್ಟ್ ಬಂದಿರಬೇಕು ; ಆ ದೃಷ್ಟಿಯಿಂದ ಹೇಳುತ್ತೇನೆ. ಅಫಿಲಿಯೇಟೆಡ್ ಕಾಲೇಜುಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಫೇಲ್ ಆಗುತ್ತಿಲ್ಲ ಎಂಬುದು ನಿಜವಾದ ಅಂಶ. ಸರ್ಕಾರದವರು ಮಾಡಬೇಕಾದ ಕಾರ್ಯವನ್ನು ಖಾಸಗೀ ಜನರು ಮುಂದೆ ಬಂದು ಮಾಡುತ್ತಾ ಇರುವಾಗ—ನಿಜ, ಕಾನ್ಸ್ಟಿಟ್ಯೂಷನ್ ಪ್ರಕಾರ higher education ಸರ್ಕಾರದ obligatory duties ಅಲ್ಲ—ಸರ್ಕಾರದವರು ಖಾಸಗೀ ಜನರಿಗೆ ಪ್ರೋತ್ಸಾಹ ಕೊಡಬೇಕೆಂಬ ದೃಷ್ಟಿಯಿಂದ ಇದನ್ನು ಯೋಚನೆಮಾಡಬೇಕೆಂದು ಪ್ರಾರ್ಥಿಸುತ್ತೇನೆ.

*ಶ್ರೀಮತಿ ಬಿ. ಎಲ್. ಸುಬ್ಬಮ್ಮ (ಚಿಕ್ಕಮಗಳೂರು-ಮೂಡಿಗೆರೆ).—ಈ ಡಿಮ್ಯಾಂಡಿನ ವಿಷಯದಲ್ಲಿ ಮಾತನಾಡುತ್ತಾ ಮಾನ್ಯ ಸದಸ್ಯರು ಅನೇಕ ವಿಷಯಗಳನ್ನು ತಿಳಿಸಿದ್ದಾರೆ. ಆದರೂ ಅಧ್ಯಕ್ಷರು ನನಗೆ ಐದು ನಿಮಿಷಗಳಿಗಿಂತ ಜಾಸ್ತಿ ಕಾಲಾವಕಾಶ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಯೂನಿವರ್ಸಿಟಿ ಅಸಿಸ್ಟೆಂಟ್ ಪ್ರೊಫೆಸರುಗಳಿಗೆ ಬಡ್ತಿ ಕೊಡುವ ವಿಷಯದಲ್ಲಿ ಅನೇಕ ವಿಧವಾದ ಚರ್ಚೆ ಈ ಸಭೆಯಲ್ಲಿ ನಡೆದಿದೆ, ನನಗಂತೂ ಅದು ಬಹಳವಾಗಿ ಮನಸ್ಸಿಗೆ ನೋವನ್ನುಂಟುಮಾಡಿದೆ. ದೇಶದ ಮುಂದಿನ ಜನಾಂಗವನ್ನು ತರಪೇತು ಮಾಡತಕ್ಕ ವಿಶ್ವವಿದ್ಯಾನಿಲಯಗಳಲ್ಲಿ ಮತ್ತು ವೈದ್ಯಕೀಯ ಸಂಸ್ಥೆಗಳಲ್ಲಿ ಈ ತರಹ ಅನ್ಯಾಯವಾದರೆ ಉತ್ತಮ ರೀತಿಯಲ್ಲಿ ಕೆಲಸ ನಡೆಯುವುದು ಕಷ್ಟ. ಮುಂದಿನ ಪ್ರಜೆ, ಮುಂದಿನ ಪೀಳಿಗೆ ಬಹಳವಾಗಿ ಅವರನ್ನೇ ಅನುಸರಿಸಿ ನಿಂತಿದೆ ಎಂಬುದನ್ನು ನಾವು ನಿಜವಾಗಿಯೂ ತಿಳಿದುಕೊಳ್ಳಬೇಕು. ದಕ್ಷತೆಯಿಂದ ಕೆಲಸ ಮಾಡುವವರಿಗೆ, ನಿಸ್ವಾರ್ಥತೆಯಿಂದ ಕೆಲಸ ಮಾಡುವವರಿಗೆ ಸರ್ಕಾರದವರು ಮತ್ತು ಆಯಾ ಸಂಸ್ಥೆಗಳವರು ಬೆಂಬಲ ಕೊಡದೇ ಹೋದಪಕ್ಷದಲ್ಲಿ ಅವರು ಎಷ್ಟುಮಟ್ಟಿಗೆ ದೇಶಾಭಿಮಾನದಿಂದ ಕೆಲಸ ಮಾಡಬಲ್ಲರು ಎಂಬುದನ್ನು ನಾವು ಮೊದಲು ಪರಿಶೀಲನೆ ಮಾಡಬೇಕು. ವಿದ್ಯಾ ಸಂಸ್ಥೆಗಳಲ್ಲಿ ಮತ್ತು ವೈದ್ಯಕೀಯ ಸಂಸ್ಥೆಗಳಲ್ಲಿ ನಾನು ಹೇಳುವುದಾದರೆ, ಜಾತಿಮತ ಭಾವನೆಯನ್ನಿಟ್ಟುಕೊಂಡು ಅದಕ್ಕೆ ಉತ್ತೇಜನ ಕೊಡುತ್ತಾ ಹೋದರೆ ಖಂಡಿತವಾಗಿಯೂ ದೇಶದಲ್ಲಿ ಅನ್ಯಾಯವಾಗುತ್ತವೆ. ಯಾರು ಬುದ್ಧಿವಂತರೋ ಯಾರು ದಕ್ಷತೆಯಿಂದ ಕೆಲಸ ಮಾಡಬಲ್ಲರೋ ಯಾರಿಗೆ ಉತ್ತೇಜನವನ್ನು ನಿರೀಕ್ಷಿಸುವ ಹಕ್ಕು ಇದೆಯೋ ಅಂಥವರನ್ನ ಪ್ರೋತ್ಸಾಹಿಸಿ ಮುಂದಕ್ಕೆ ತರುವುದು ದೇಶದ ದೃಷ್ಟಿಯಿಂದ ಬಹಳ ಒಳ್ಳೆಯದು. ನಿಜವಾಗಿಯೂ ದಕ್ಷರಾಗಿರುವವರು, ದೇಶಾಭಿಮಾನಿಗಳಾಗಿರತಕ್ಕ ಅಧ್ಯಾಪಕವರ್ಗ ಮತ್ತು ಅಧಿಕಾರವರ್ಗದಲ್ಲಿ ಕೆಲವು ಅನ್ಯಾಯಗಳಾಗಿವೆಯೆಂದು ತಿಳಿದು ಬಂದಿದೆ. ಅವನ್ನು ಘನತರವಾದ ಈ ಸಭೆಯ ಮುಂದೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದರಿಂದ ಆಗಿರತಕ್ಕ ಲೋಪದೋಷಗಳನ್ನು ಸರ್ಕಾರದವರು ತಮ್ಮ ಗಮನಕ್ಕೆ ತೆಗೆದುಕೊಂಡು ಈ ರೀತಿಯ ಲೋಪದೋಷಗಳು ಇನ್ನು ಮುಂದೆ ಆಗದ ರೀತಿಯಲ್ಲಿ ನಡೆಸಿಕೊಂಡು ಬರಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ. ಈ ವಿಶ್ವವಿದ್ಯಾನಿಲಯದ ವಿಷಯದಲ್ಲಿ ನನ್ನ ಕಿವಿಗೆ ಅನೇಕ ವಿಧವಾದ ದೂರುಗಳು ಬಂದಿವೆ. ಯೂನಿವರ್ಸಿಟಿ ಕೌನ್ಸಿಲಿನ ಮೆಂಬರು ಅಲ್ಲದಿರುವುದರಿಂದ ಅಲ್ಲಿ ಇದನ್ನು ಚರ್ಚಿಸುವುದಕ್ಕೆ ಅವಕಾಶವಿಲ್ಲ. ಆದರೂ ನಾನು ಅದಕ್ಕೆ ಸಂಬಂಧಪಟ್ಟಂಥ ಸದಸ್ಯರಿಗೆ, ಮತ್ತು, ಸರ್ಕಾರದ ವಿದ್ಯಾಭ್ಯಾಸದ ಇಲಾಖಾ ಮಂತ್ರಿಗಳ ಗಮನಕ್ಕೆ ಈ ಅನ್ಯಾಯವನ್ನು ತಂದೆ. ಆದರೆ ಅವರು ಇದನ್ನು ತೀರ್ಮಾನಿಸತಕ್ಕ ಜವಾಬ್ದಾರಿಯನ್ನು ತೆಗೆದುಕೊಳ್ಳಲಿಲ್ಲವೆಂದು ವ್ಯಸನಪಡುತ್ತಿದ್ದೇನೆ. ಆದುದರಿಂದ ಇದನ್ನು ಸರ್ಕಾರದವರು ಸರಿಪಡಿಸಬೇಕು. ನಿಜವಾಗಿಯೂ ದಕ್ಷರಾಗಿರುವಂಥವರಿಗೆ ಹೆಚ್ಚಿನ ಬೆಂಬಲ ಕೊಡಬೇಕು ಎಂದು ಸರ್ಕಾರದವರಲ್ಲಿ ಪ್ರಾರ್ಥನೆಮಾಡುತ್ತೇನೆ.

ಇನ್ನೂ ಒಂದು ವಿಷಯ. ಯಾರ್ಯಾರು ಜೊತೆಯಲ್ಲಿ ಹಿಂದುಗಡೆ ತಿರುಗಾಡುತ್ತಾರೋ, ಅಂಥವರಿಗೆ ಪ್ರೊಫೆಸರುಗಳು, ಅಸಿಸ್ಟೆಂಟ್ ಪ್ರೊಫೆಸರುಗಳು ಈ ಸ್ಥಾನಗಳಿಗೆ ಪ್ರಮೋಷನ್ ದೊರೆಯುತ್ತಿದೆ. ದಕ್ಷರಾಗಿ ಇರತಕ್ಕವರು, ಯೋಗ್ಯತೆ ಇರುವವರು ಸಾಮಾನ್ಯವಾಗಿ ಯಾರ ಜೊತೆಯಲ್ಲಿಯೂ ಸೇರುವುದಿಲ್ಲ. ಇಂಥವರು ಯೋಗ್ಯತೆಗೆ ಬೆಲೆ ಕೊಟ್ಟರೆ ಕೊಡಲಿ, ಇಲ್ಲದೆ ಇದ್ದರೆ ಬಿಡಲಿ ಎಂಬ ಮನೋಧರ್ಮವನ್ನು ಹೊಂದಿರುತ್ತಾರೆ.

ನಾನು ಸರ್ಕಾರದ ಮುಂದೆ ಮತ್ತು ಸಭೆಯ ಮುಂದೆ
ಈ ವಿಷಯವನ್ನು ಇಡುತ್ತಾ ಇದ್ದೇನೆ. ಸ್ವತಂತ್ರ
ಭಾರತಕ್ಕೆ ನಾವು ನಿಜವಾದ ಒಂದು ಒಳ್ಳೆಯ ಮಾರ್ಗ
ವನ್ನು ಹಾಕತಕ್ಕ ನಿಯಮಗಳನ್ನು ಸರ್ಕಾರದವರು
ಅನುಸರಿಸಬೇಕೆಂದು ಸರ್ಕಾರದವರಲ್ಲಿ ಪ್ರಾರ್ಥನೆ
ಮಾಡುತ್ತೇನೆ.

ಪಠ್ಯ ಪುಸ್ತಕಗಳ ವಿಷಯ. ಇವುಗಳನ್ನು ನಾಲ್ಕು
ವರ್ಷಗಳ ಕಾಲವಾದರೂ ಬದಲಾವಣೆ ಮಾಡ
ಕೂಡದು. ಯಾರಾದರೂ ಪುಸ್ತಕವನ್ನು ಬರೆಯು
ವವರು, ಹಣ ಸಂಪಾದನೆ ಮಾಡುವುದರಲ್ಲಿ ಆಸಕ್ತ
ರಾಗಿರುವವರು ತಮ್ಮ ಪಠ್ಯ ಪುಸ್ತಕಗಳನ್ನು ಇಡ
ಬೇಕೆಂದು ಪ್ರಯತ್ನ ಮಾಡುತ್ತಾರೆ. ಹೀಗಾಗಿ
ವರ್ಷ ವರ್ಷಕ್ಕೆ ಪುಸ್ತಕಗಳನ್ನು ಬದಲಾಯಿಸಿದರೆ
ಬಡವರ ಮತ್ತು ರೈತರ ಪಾಡು ಹೇಗೆ, ಒಬ್ಬನಿಗೆ
ಐದಾರು ಜನ ಮಕ್ಕಳು ಇದ್ದು ಅವನು ಪ್ರತಿವರ್ಷವೂ
ಬೇರೆ ಬೇರೆ ಪುಸ್ತಕಗಳನ್ನು ಕೊಂಡುಕೊಳ್ಳಬೇಕು
ಎಂದರೆ ಅದು ಎಷ್ಟು ಕಷ್ಟ ಸಾಧ್ಯವಾದ ಕೆಲಸ
ವೆಂಬುದನ್ನು ಯೋಚನೆ ಮಾಡಬೇಕು. ಒಂದೇ ಪಠ್ಯ
ಪುಸ್ತಕವನ್ನು ಕೆಲವಾರು ವರ್ಷಗಳ ಕಾಲವಾದರೂ
ಮುಂದುವರಿಸಿದರೆ ಒಬ್ಬ ಹುಡುಗನು ಓದಿದ ಪುಸ್ತಕ
ವನ್ನು, ಅದನ್ನು ಅಚ್ಚುಕಟ್ಟಾಗಿ ಇಟ್ಟುಕೊಂಡ ಪಕ್ಷ
ದಲ್ಲಿ ಇತರರೂ ಸಹ ಅದೇ ಪುಸ್ತಕಗಳನ್ನು ಉಪ
ಯೋಗಿಸಬಹುದು. ಇದರಿಂದ ತಂದೆತಾಯಿಗಳಿಗೆ
ಎಷ್ಟೋ ಸಹಾಯ ಮಾಡಿದಹಾಗಾಗುತ್ತದೆ. ಅವ
ರಿಗೆ ಹಣಕಾಸಿನ ಉಳಿತಾಯ ಎಷ್ಟಾಗುತ್ತದೆ ಎಂಬು
ದನ್ನು ತಿಳಿದುಕೊಳ್ಳಬೇಕು. ಅಲ್ಲದೆ ಸರ್ಕಾರದವರು
ತಜ್ಞರಿಂದಲೂ ಮತ್ತು ವಿದ್ಯಾಭ್ಯಾಸದ ಉತ್ತಮ
ರಾದ ನಿಪುಣರಿಂದಲೂ ಪಠ್ಯ ಪುಸ್ತಕಗಳನ್ನು ಮಾಡಿಸಿ,
ಸರ್ಕಾರದವರೇ ಆ ಪುಸ್ತಕಗಳನ್ನು ಒದಗಿಸುವ
ವ್ಯವಸ್ಥೆ ಮಾಡಬೇಕು. ಇಷ್ಟೇ ಅಲ್ಲ. ನಮ್ಮ ಚಿಕ್ಕ
ಮಗಳೂರಿನಲ್ಲಿ ಅಲ್ಲಿಗೆ ಬೇಕಾದ ಪುಸ್ತಕಗಳಿರುವುದಿಲ್ಲ.
ಬೆಂಗಳೂರಿಗೆ ಬಂದು ನೋಡಿದರ ಇಲ್ಲಿ ದೊರೆಯು
ತ್ತವೆ. ಈ ವರ್ಷ ಸ್ಕೂಲು ಪ್ರಾರಂಭವಾಗಿ ಎರಡು
ತಿಂಗಳಾದರೂ ಸಹ ಕೆಲವು ಕಡೆ ಇನ್ನೂ ಪಠ್ಯ ಪುಸ್ತಕ
ಗಳು ಸಪ್ಲೈ ಆಗಿಲ್ಲ. ಇದರಿಂದ ಹುಡುಗರಿಗೆ ಬಹಳ
ತೊಂದರೆಯುಂಟಾಗಿದೆ. ಆದುದರಿಂದ ಸರ್ಕಾರ
ದವರು ಈ ವಿಷಯದಲ್ಲಿ ಹೆಚ್ಚಿನ ನಿಗಾ ತೆಗೆದುಕೊಳ್ಳ
ಬೇಕೆಂದು ಸರ್ಕಾರದವರನ್ನು ಪ್ರಾರ್ಥನೆ ಮಾಡಿ
ಕೊಳ್ಳುತ್ತೇನೆ.

ಔದ್ಯೋಗಿಕ ಶಾಲೆಗಳ ವಿಷಯದಲ್ಲಿ ಹೇಳುವುದಾದರೆ
ಚಿಕ್ಕಮಗಳೂರಿನಲ್ಲಿ ಒಂದು ಸಂಸ್ಥೆಯೂ ಇಲ್ಲ.
ಚಿಕ್ಕಮಗಳೂರು ಮಲೆನಾಡಿಗೆ ಸೇರಿದ ಒಂದು ಜಿಲ್ಲೆ.
ಇದು ಹಿಂದೆಬಿದ್ದ ಜಿಲ್ಲೆಯಾಗಿದೆ. ವಿದ್ಯಾ ಮಂತ್ರಿಗಳು
ಪ್ರಶ್ನೆಯೊಂದಕ್ಕೆ ಉತ್ತರ ಕೊಡುವ ಪ್ರಸಂಗ
ಬಂದಾಗ, ತುಮಕೂರು ಮತ್ತು ಚಿಕ್ಕಮಗಳೂರು
ಜಿಲ್ಲೆಗಳಿಗೆ ಔದ್ಯೋಗಿಕ ಶಾಲೆಗಳನ್ನು, ಅಲ್ಲಿಯ ಜನರು
ಮುಂದೆ ಬಂದು ಧನ ಸಹಾಯಮಾಡಿದರೆ, ಕೊಡುವು
ದಾಗಿಯೂ ತಿಳಿಸಿದರು.

ಈ ಶಾಲೆಗಳಲ್ಲಿ ಓದಬಹುದಾದ ವಿದ್ಯಾರ್ಥಿಗಳಿಗೆ
ಸಹಾಯ ಮಾಡಲು ಚಿಕ್ಕಮಗಳೂರಿನಲ್ಲಿ ಕೂಡಲೇ
ಒಂದು ಔದ್ಯೋಗಿಕ ಶಾಲೆಯನ್ನು ತೆರೆಯಬೇಕು.
ಈ ಸಂದರ್ಭದಲ್ಲಿ ನಮ್ಮ ಜಿಲ್ಲೆಯವರ ಪರವಾಗಿ,
ಅದಕ್ಕೆ ಬೇಕಾದ ಎಲ್ಲ ಸಹಾಯಗಳನ್ನೂ ಮಾಡು
ವುದಕ್ಕೆ ಸಿದ್ಧರಾಗಿದ್ದೇವೆಂದು ತಿಳಿಸುತ್ತೇನೆ.

ಚಿಕ್ಕಮಗಳೂರಿನಲ್ಲಿ ಒಂದು Intermediate
College ಇದೆ. ನನ್ನ ಪ್ರಶ್ನೆಗೆ ಉತ್ತರ ಹೇಳಿದ
ಕಾಲದಲ್ಲಿ ಕಾಲೇಜಿಗೆ ಸರಿಯಾದ ಸ್ಥಳವಿಲ್ಲದೆ ಐದಾರು
ಕಡೆ ತರಗತಿಗಳನ್ನು ನಡೆಸುತ್ತಿರುವುದಾಗಿ ತಿಳಿಸಿದರು.
ಇಲ್ಲಿ ಸುಮಾರು 200-250 ಜನ ವಿದ್ಯಾಭ್ಯಾಸ
ಮಾಡುತ್ತಿದ್ದಾರೆ. ದೊಡ್ಡವರೂ ಭಾಗ್ಯವಂತರೂ
ಆದವರು ತಮ್ಮ ಮಕ್ಕಳನ್ನು ಬೆಂಗಳೂರಿನಲ್ಲಿ
ಸೆಂಟ್ರಲ್ ಕಾಲೇಜ್, ಮೌಂಟ್ ಕಾರ್ಮೆಲ್
ಕಾಲೇಜ್, ಇತ್ಯಾದಿಗಳಿಗೆ ವ್ಯಾಸಂಗಕ್ಕೆ ಕಳುಹಿಸು
ತ್ತಿದ್ದಾರೆ. ಕಾರಣವೇನೆಂದರೆ, ಚಿಕ್ಕಮಗಳೂರಿನಲ್ಲಿ
ಓದಲು ಇರತಕ್ಕ ಅನಾನುಕೂಲ ಮತ್ತು ಐದಾರು
ಕಡೆಗಳಿಗೆ ಓಡಾಡುತ್ತ ಇರಬೇಕು. ಬಡವರು ಮತ್ತು
ಬೇರೆ ಕಡೆ ಹೋಗಿ ಓದಲು ಶಕ್ತಿ ಇಲ್ಲದವರು ಈ
ಕಾಲೇಜಿನಲ್ಲಿ ಓದುತ್ತಿದ್ದಾರೆ. ಆದುದರಿಂದ ಚಿಕ್ಕ
ಮಗಳೂರು ಕಾಲೇಜಿಗೆ ಒಂದು ಕಟ್ಟಡವನ್ನು ಕೊಡಲು
ವಿಶಾಲ ಮನೋಭಾವದಿಂದ ಪರಿಶೀಲಿಸುತ್ತಾರೆಂದು
ನಂಬಿದ್ದೇನೆ. ಜಾಗ್ರತೆ ಒಂದು ಕಟ್ಟಡವನ್ನು
ಕೊಡುವ ಏರ್ಪಾಡು ಮಾಡಬೇಕೆಂದು ಪ್ರಾರ್ಥಿಸು
ತ್ತೇನೆ.

ಸರ್ಕಾರದವರು ಈಗ ಸಾರ್ವಜನಿಕ ಹಾಸ್ಟಲು
ಗಳನ್ನು ಮಾಡಬೇಕೆಂಬ ಒಂದು ದೊಡ್ಡ ಉದ್ಯಮ
ವನ್ನು ಕೈಗೊಂಡಿದ್ದಾರೆ. ಇದು ಬಹಳ ಯಶಸ್ವಿಯಾದ
ವಿಷಯ. ದೇಶದಲ್ಲಿ ಪ್ರಜಾಪ್ರಭುತ್ವ ಯಶಸ್ವಿಯಾಗ
ಬೇಕಾದರ ಜಾತಿ ಹಾಸ್ಟಲುಗಳ ವ್ಯವಸ್ಥೆ ಹೋಗ
ಬೇಕು. ಇದೇ ದೇಶದ ಉನ್ನತಿಗೆ ಕಾರಣ. ಜಾತಿ
ಹಾಸ್ಟಲುಗಳಿಗೆ ಕೊಡತಕ್ಕ ಪ್ರೋತ್ಸಾಹ ಕಡಿಮೆ
ಯಾಗಿ ಸಾರ್ವಜನಿಕ ಹಾಸ್ಟಲುಗಳು ಜರೂರಾಗಿ
ಸ್ಥಾಪನೆಯಾಗಬೇಕು.

ಇನ್ನೊಂದು ವಿಚಾರ. ಸಾರ್ವಜನಿಕ ಹಾಸ್ಟಲು
ಗಳನ್ನು ತೆರೆಯುವಾಗ ಗಂಡುಹುಡುಗರಿಗೆ ಮಾತ್ರ
ತೆರೆಯುತ್ತಿದ್ದೀರಿ. ಹೆಣ್ಣು ಮಕ್ಕಳು ಕಾಲೇಜು ಮತ್ತು
ಔದ್ಯೋಗಿಕ ಶಾಲೆಗಳಿಗೆ ವ್ಯಾಸಂಗ ಮಾಡಲು ಬರ
ಬೇಕಾಗಿರುವುದರಿಂದ ಅವರಿಗೆ ಹಾಸ್ಟಲು ಇಲ್ಲದೆ
ಬಹಳ ತೊಂದರೆಯಾಗಿದೆ. ಐಶ್ವರ್ಯವಂತರ ಮಕ್ಕಳ
ವಿಷಯದಲ್ಲಿ ಹೆಚ್ಚು ಹೇಳಬೇಕಾಗಿಲ್ಲ. ಬಡವರಿಗೆ
ಬಹಳ ಕಷ್ಟವಾದುದರಿಂದ ಕಡಿಮೆ ಖರ್ಚಿನಲ್ಲಿ ಹೆಣ್ಣು
ಮಕ್ಕಳಿಗೆ ಹಾಸ್ಟಲುಗಳನ್ನು ಎಲ್ಲಾ ಕಡೆಗಳಲ್ಲಿಯೂ
ಒದಗಿಸುವ ವ್ಯವಸ್ಥೆಯನ್ನು ಸರ್ಕಾರದವರು ಮಾಡ
ಬೇಕು. ದೇಶದ ಪ್ರಜಾಸಂಖ್ಯೆಯಲ್ಲಿ ಅರ್ಧಭಾಗ
ವಿರತಕ್ಕ ಹೆಣ್ಣುಮಕ್ಕಳ ಹಾಸ್ಟಲು ವಿಚಾರದಲ್ಲಿ
ಸರ್ಕಾರದವರು ವಿಶಾಲ ದೃಷ್ಟಿಯಿಂದ ನೋಡಬೇಕು
ಎಂದು ಹೇಳುತ್ತೇನೆ. ನಮ್ಮ ಸರ್ಕಾರದವರು ದಯ
ಮಾಡಿ ಹೆಣ್ಣು ಮಕ್ಕಳ ಹಾಸ್ಟಲುಗಳನ್ನು ಕೆಲವು ಕಡೆ
ಗಳಲ್ಲಾದರೂ ಪ್ರಾರಂಭ ಮಾಡಬೇಕೆಂದು ಪ್ರಾರ್ಥನೆ
ಮಾಡುತ್ತೇನೆ.

ವಿದೇಶಗಳಿಗೆ ಡಾಕ್ಟರುಗಳನ್ನು ಕಳುಹಿಸಿ ಕೊಡ
ತಕ್ಕ ವಿಚಾರದಲ್ಲಿ ಒಂದೆರಡು ಮಾತು. ನಮ್ಮ ದೇಶ
ದಲ್ಲಿ ತಜ್ಞರಾದ ಅನೇಕ ಜನ ಡಾಕ್ಟರುಗಳಿದ್ದಾರೆ.
ಅವರಿಗೆಲ್ಲ ವಯಸ್ಸಾಗುತ್ತಿದೆ. ಇನ್ನು ಅವರ ನಂತರ
ನಮಗೆ ಸರಿಯಾದ ಡಾಕ್ಟರುಗಳು ಸಿಗದೆ ತೊಂದರೆ
ಬರಬಹುದು. ಈಗ ಬೆಂಗಳೂರು ಮತ್ತು ಮೈಸೂರು
ನಗರಗಳಲ್ಲಿ ದೊಡ್ಡ ದೊಡ್ಡ ಡಾಕ್ಟರುಗಳಿದ್ದಾರೆ.
ಹಳ್ಳಿಗಳ ಕಡೆ ಒಳ್ಳೆಯ ಡಾಕ್ಟರುಗಳು ಅತಿವಿರಳ.
ಚಿಕ್ಕಮಗಳೂರಿನಲ್ಲಿ ಒಂದು ಆಪರೇಷನ್ ಆಗಬೇಕಾ
ದರೆ, ಅದಕ್ಕಾಗಿ ಬೆಂಗಳೂರಿಗೆ ಡಾಕ್ಟರ್ ಆಡಿಕೇಶ
ವಲುರವರಲ್ಲಿಗೆ ಬರಬೇಕು. ಡಿಸ್ಟ್ರಿಕ್ಟ್ ಹೆಡ್‌ಕ್ವಾ
ರ್ಟರುಗಳಲ್ಲಿ ಒಳ್ಳೊಳ್ಳೆಯ ಸರ್ಜನ್ಸ್ ಮತ್ತು ಫಿಸಿಷಿ
ಯನ್ಸ್ ಹಾಕಿದರೆ ಬಹಳ ಅನುಕೂಲವಾಗು
ತ್ತದೆ. ಮತ್ತು ಬಡವರು, ಇತರರು ಬೆಂಗಳೂರಿಗೆ
ಬಂದು ಖರ್ಚು ಮಾಡಬೇಕಾದದ್ದು ಉಳಿತಾಯವಾಗು

(ಶ್ರೀಮತಿ ಬಿ. ಎಲ್. ಸುಬ್ಬಮ್ಮ).

ತ್ತದೆ. ಆದುದರಿಂದ ವಿದೇಶಗಳಿಗೆ ಡಾಕ್ಟರುಗಳನ್ನು ಸರ್ಜರಿ ಮೆಡಿಸಿನ್ ಮತ್ತು ಇತರ ವಿಭಾಗಗಳಲ್ಲಿ ಉಚ್ಚ ಶಿಕ್ಷಣವನ್ನು ಪಡೆಯಲು ಜಾಗ್ರತೆ ಕಳುಹಿಸಿ ಕೊಡುವ ಏರ್ಪಾಡು ಮಾಡಬೇಕು ಎಂದು ಹೇಳುತ್ತೇನೆ.

ಪಟ್ಟಣಗಳಲ್ಲಿ ಎರಡು ಮೂರು ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಸ್ಕೂಲು ಕಟ್ಟಡಗಳನ್ನು ಕಟ್ಟಿ ಶಾಲೆಗಳನ್ನು ನಡೆಸುತ್ತಿದ್ದಾರೆ. ಹಳ್ಳಿಗಳಲ್ಲಿ ಕಟ್ಟಡವಿಲ್ಲದೆ ಎಷ್ಟು ಕಷ್ಟಪಡುತ್ತಿದ್ದಾರೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಹಳ್ಳಿಗಳಲ್ಲಿ ಒಂದು ಸ್ಕೂಲು ಕಟ್ಟಡ ಕಟ್ಟುತ್ತೇವೆಂದರೆ 500 ರೂಪಾಯಿ ಕೊಡುತ್ತಾರೆ. ಆದರೆ ಅದನ್ನು ಪ್ಲಾನ್ ಪ್ರಕಾರವೇನಾದರೂ ಕಟ್ಟಿದರೆ ಈ ಹಣ ಸಾಲುವುದಿಲ್ಲ ಮತ್ತು ಹಳ್ಳಿಯವರು ಉಳಿದ ಹಣವನ್ನು ಹಾಕಿ ಕಟ್ಟಿಸಲು ಮುಂದೆ ಬರುವುದಿಲ್ಲ. ಆದುದರಿಂದ ಹಳ್ಳಿಯವರು ಬಿದಿರು, ಬೊಂಬು, ವಗೈರೆ ಹಾಕಿ ಹೇಗಾದರೂ ಕಟ್ಟಿಕೊಳ್ಳಲಿ ಎಂದು ಸರ್ಕಾರದವರು ಕೊಡತಕ್ಕ lumpsum grant ಕೊಟ್ಟು ಹಳ್ಳಿಯವರ ವಿದ್ಯಾಭ್ಯಾಸಕ್ಕೆ ಸಹಾಯ ಮಾಡಬೇಕು. ಕಟ್ಟಡವಿಲ್ಲದೆ ಬಹಳ ಕಷ್ಟವಾಗಿದೆ ಮತ್ತು ಹಳ್ಳಿಗಳ ವಿಷಯದಲ್ಲಿ ತುಂಬ ತೊಂದರೆಯಾಗಿದೆ. ಆದುದರಿಂದ ಮೈಸೂರು ದೇಶಾದ್ಯಂತ ಶಾಲಾ ಕಟ್ಟಡಗಳ ವಿಷಯದಲ್ಲಿ ಉದಾರವಾಗಿ ಸಹಾಯ ಮಾಡಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಸಿ. ಟಿ. ಹನುಮಂತಯ್ಯ (ಪಾವಗಡ-ಅನುಸೂಚಿತ ಜಾತಿಗಳು). - ಸ್ವಾಮಿ, ಸರ್ಕಾರದವರ ವಿದ್ಯಾಭ್ಯಾಸದ ಕಾನೂನನ್ನು ಸರಿಯಾದ ರೀತಿಯಲ್ಲಿ ಸುವ್ಯವಸ್ಥೆಗೊಳಿಸಿದ್ದಾರೆ. ಮೈಸೂರು ಸಂಸ್ಥಾನದಲ್ಲಿ 1913ನೆ ಇಸವಿಯಲ್ಲಿ ಬಲಾತ್ಕಾರ ವಿದ್ಯಾಭ್ಯಾಸದ ಕಾನೂನನ್ನು ಜಾರಿಗೆ ತಂದಾಗ ಬಹಳ ಅನುಕೂಲವಾಗಿತ್ತು. ನಮ್ಮ ಹರಿಜನರು ಆಗ ಬಹಳ ಹಿಂದುಳಿದಿದ್ದರು. ಬಲಾತ್ಕಾರದ ವಿದ್ಯಾಭ್ಯಾಸದ ಕಾನೂನು ಜಾರಿಗೆ ಕೊಟ್ಟನಂತರ ನಮ್ಮ ಜನರ ಪ್ರಗತಿಗೆ ಅನುಕೂಲವಾಯಿತು. ಆ ಕಾನೂನನ್ನು ಪುನಃ ಜಾರಿಗೆ ಕೊಡಬೇಕು. ಅದಕ್ಕೆ ಎಷ್ಟು ದುಡ್ಡು ಖರ್ಚಾದರೂ ಸರಿಯೇ, ಬಲಾತ್ಕಾರ ವಿದ್ಯಾಭ್ಯಾಸ ಪದ್ಧತಿಯನ್ನು ಪುನಃ ಜಾರಿಗೆ ಕೊಟ್ಟಪಕ್ಷದಲ್ಲಿ, ಎಲ್ಲ ಜನಗಳಿಗೂ ಕೊಡುವುದಕ್ಕೆ ಸಾಧ್ಯವಿಲ್ಲದಪಕ್ಷದಲ್ಲಿ, ಹರಿಜನರಿಗಾದರೂ ಇದನ್ನು ಅನ್ವಯಿಸಲು ಒಂದು ಕಾನೂನನ್ನು ಜಾರಿಗೆ ಕೊಡಬೇಕು ಎಂದು ಮನವಿ ಮಾಡಿಕೊಳ್ಳುತ್ತೇನೆ.

ಕೆಲವು ಕಡೆ ದೇವಸ್ಥಾನಗಳಲ್ಲಿ ಪಾಠಶಾಲೆಗಳನ್ನು ನಡೆಸುತ್ತಿದ್ದಾರೆ. ಅಲ್ಲಿ ಹರಿಜನ ಹುಡುಗರನ್ನು ಬಿಡುವುದಿಲ್ಲ. ಶಿವಮೊಗ್ಗ ಜಿಲ್ಲೆಯಲ್ಲಿ 10-12 ಸ್ಕೂಲುಗಳು ದೇವಸ್ಥಾನಗಳಲ್ಲಿ ನಡೆಯುತ್ತಿವೆ. ಅಲ್ಲೆಲ್ಲ ಹರಿಜನರನ್ನು ದೇವಸ್ಥಾನದೊಳಕ್ಕೆ ಬಿಡುವುದಿಲ್ಲ. ಉದಾಹರಣೆಗೆ ಎಷ್ಟು ಬೇಕಾದರೂ ಹೇಳುತ್ತೇನೆ. ತುಮಕೂರು ಜಿಲ್ಲೆ ಸಿರಾ ತಾಲ್ಲೂಕು ದ್ವಾರನಕುಂಟೆ ಗ್ರಾಮದಲ್ಲಿ ಹರಿಜನರ ಹುಡುಗರನ್ನು ಸೇರಿಸುವುದಿಲ್ಲ. ಆದುದರಿಂದ ಇಂಥ ಕಡೆಗಳಲ್ಲೆಲ್ಲ ಹರಿಜನ ಹುಡುಗರನ್ನು ಪಾಠಶಾಲೆಗಳಿಗೆ ಸೇರಿಸಬೇಕು ಎಂದು ಹೇಳುತ್ತೇನೆ. ಕೆಲವು ಕಡೆ ದೇವಸ್ಥಾನಗಳಲ್ಲಿ ಪಾಠಶಾಲೆಗಳು ನಡೆಯುವುದನ್ನು ತಪ್ಪಿಸಿ ಎಲ್ಲ ಜನಾಂಗಗಳಿಗೂ ಅನುಕೂಲವಾಗುವಂತೆ ಒಂದು ಗುಡಿಸಲು ಕಟ್ಟಿಸಿ ಅಲ್ಲಿ ನಡೆಸಿ ಅಥವಾ ಒಂದು ಮರದ ಕೆಳಗೆ ಬೇಕಾದರೂ ನಡೆಸಿ. ಅದಕ್ಕೆ ಬೇಡವೆನ್ನುವುದಿಲ್ಲ. ಹೀಗೆ ನಮ್ಮಲ್ಲಿ ದೇವಸ್ಥಾನಗಳಲ್ಲಿ ಶಾಲೆಗಳನ್ನು ನಡೆಸುವುದರಿಂದ ಇರುವ ತೊಂದರೆಗಳು, ಮತ್ತು ಇನ್ನೂ ಕೆಲವು ಕಡೆ ಇರುವ ಅಡ್ಡಿ ಆತಂಕಗಳು, ಇವುಗಳನ್ನೆಲ್ಲ ತಪ್ಪಿಸಿ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಸಿ ಕೊಡಬೇಕೆಂದು ಸಲಹೆ ಮಾಡುತ್ತೇನೆ.

ಪಾವಗಡ ತಾಲ್ಲೂಕು, ವೈ. ಎನ್. ಹೊಸಕೋಟೆಯಲ್ಲಿ ಮುನಿಸಿಪಾಲಿಟಿಯವರು ಒಂದು ಹೈಸ್ಕೂಲನ್ನು ತೆರೆದಿದ್ದಾರೆ. ಅದಕ್ಕೆ ಸರ್ಕಾರದವರು ಯಾವ ವಿಧವಾದ ಸಹಾಯವನ್ನೂ ಕೊಟ್ಟಿಲ್ಲ. ಒಂದು ಸಾವಿರ ರೂಪಾಯಿಗಳು ಮಾತ್ರ ಕೊಟ್ಟಿದ್ದಾರೆ. ಅಷ್ಟು ಮಾತ್ರ ಏನೇನೂ ಸಾಲದು. ಈ ಹೈಸ್ಕೂಲನ್ನು ಸರ್ಕಾರದವರೇ ವಹಿಸಿಕೊಂಡು ನಡೆಸಬೇಕೆಂದು ಅನೇಕಸಾರಿ ಮನವಿ ಮಾಡಿಕೊಂಡೆ. ಇದುವರೆಗೂ ಮಾಡಿಲ್ಲ. ಈ ಸಲವಾದರೂ ಸಹಾಯ ಮಾಡಬೇಕು. ಆ ಸ್ಥಳಕ್ಕೆ 20 ಮೈಲಿ ಫಾಸಲೆಯಲ್ಲಿ ಎಲ್ಲಿಯೂ ಹೈಸ್ಕೂಲು ಇಲ್ಲ. ಇಲ್ಲಿರುವ ಸ್ಕೂಲು ಬಹಳ ಉಪಯುಕ್ತವಾಗಿದೆ. ಇದು ಒಂದು ಮೂಲೆಯಲ್ಲಿದೆ. ಅಂಥ ಕಡೆ ಒಂದು ಸರ್ಕಾರಿ ಹೈಸ್ಕೂಲು ಇದ್ದರೆ ಎಲ್ಲ ಜನಗಳಿಗೂ ಬಹಳ ಅನುಕೂಲವಾಗುತ್ತದೆಂದು ಸಲಹೆ ಮಾಡುತ್ತೇನೆ.

ಪಾವಗಡ ತಾಲ್ಲೂಕಿನಲ್ಲಿ ಅರಸೀಕೆರೆ ಮತ್ತು ಗುಂಡಲಹಳ್ಳಿ ಗ್ರಾಮಗಳಿಗೆ ಎರಡು ಮಿಡಲ್ ಸ್ಕೂಲುಗಳು ಬೇಕು. ಗ್ರಾಮಸ್ಥರು ಸ್ಕೂಲಿಗೆ ಕಟ್ಟಡ ಮತ್ತು ಉಪಾಧ್ಯಾಯರ ವಾಸಕ್ಕೆ ಮನೆಗಳನ್ನೂ ಕೊಡುವುದಕ್ಕೆ ತಯಾರಾಗಿದ್ದಾರೆ. ಇಷ್ಟೆಲ್ಲ ಕೊಡುತ್ತೇವೆಂದರೂ ಕೂಡ ಸರ್ಕಾರದವರು ಇಲ್ಲಿ ಮಾಧ್ಯಮಿಕ ಶಾಲೆಗಳನ್ನು ಕೊಟ್ಟಿಲ್ಲ. ಅವರಿಗೆ ಏನು ಕಷ್ಟವಿದೆಯೋ ನನಗೆ ಅರ್ಥವಾಗುತ್ತಿಲ್ಲ. ಈ ಗ್ರಾಮಗಳಿಗೆ ಮಾಧ್ಯಮಿಕ ಶಾಲೆಗಳನ್ನು ಮಂಜೂರು ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಹರಿಜನ ವಿದ್ಯಾರ್ಥಿಗಳಿಗೆ ಹಿಂದೆ ಕೊಡುತ್ತಿದ್ದ ಹಾಗೆ ಪಠ್ಯ ಪುಸ್ತಕಗಳನ್ನು ಮುಫತ್ತಾಗಿ ಕೊಡುವ ಹಾಗೆ ಮಾಡಬೇಕು. ಹಿಂದೆ ನಾವು ಓದುತ್ತಿದ್ದಾಗ 1918ನೆ ಇಸವಿಯಲ್ಲಿ 7ರಿಂದ 12 ವರ್ಷ ವಯಸ್ಸಿನ ಹುಡುಗರೆಲ್ಲ ಶಾಲೆಗೆ ಹೋಗಬೇಕಾಗಿತ್ತು. ಆಗ ವಿದ್ಯಾರ್ಥಿಗಳಿಗೆ ಪುಸ್ತಕ, ಸ್ಲೇಟು, ಬಟ್ಟೆ ಮತ್ತು ಹೆಣ್ಣು ಹುಡುಗಿಯರಿಗೆ ಸೀರೆ ಕೊಡುತ್ತಿದ್ದರು. ಆ ಸೌಕರ್ಯವನ್ನು ಪುನಃ ಸರ್ಕಾರದವರು ಒದಗಿಸಿ ಕೊಡಬೇಕು ಎಂದು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ನಮ್ಮ ಸಂಸ್ಥಾನದಲ್ಲಿ ಅನೇಕ ಕಡೆಗಳಲ್ಲಿ ಉಪಾಧ್ಯಾಯರುಗಳಿಗೆ ಮನೆಗಳಿಲ್ಲ. ಅನೇಕರನ್ನು ಊರಿಂದೂರಿಗೆ ವರ್ಗಮಾಡುತ್ತಾರೆ. ಹಾಗೆ ವರ್ಗಮಾಡಿದರೆ ಅವರಿಗೆ ಕೆಲವು ಕಡೆ ಮನೆಯನ್ನು ಕೊಡುತ್ತಿಲ್ಲ. ಭಾವಿಯಿಂದ ನೀರು ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಡುವುದಿಲ್ಲ. ಉಪಾಧ್ಯಾಯರುಗಳು ಇಂಥ ಕಷ್ಟಕ್ಕೆ ಒಳಗಾಗದಂತೆ ಮಾಡಬೇಕು. ಇದಕ್ಕಾಗಿ ಮಂತ್ರಿಗಳು ದೊಡ್ಡ ಮನಸ್ಸುಮಾಡಿ ಹಳ್ಳಿಗಳಲ್ಲಿ ಉಪಾಧ್ಯಾಯರುಗಳಿಗೆ ಮನೆಗಳು ಸಿಕ್ಕುವಂತೆ ಒಂದು ವ್ಯವಸ್ಥೆಯನ್ನು ಮಾಡಿ ನಮ್ಮ ದೇಶದ ಹದಿನೇಳು ಸಾವಿರ ಹಳ್ಳಿಗಳಲ್ಲಿರುವ ರೈತರ ಮಕ್ಕಳನ್ನೂ ಉದ್ಧಾರ ಮಾಡಬೇಕೆಂದು ಹೇಳುತ್ತೇನೆ. ಇದನ್ನು ಮಾಡದೆ ಇದ್ದರೆ ಯಾವ ರಾಜ್ಯಕ್ಕೂ ಒಳ್ಳೆಯದಲ್ಲ. ಪ್ರಜಾರಾಜ್ಯ, ಪ್ರಜಾಸತ್ತಾತ್ಮಕ ರಾಜ್ಯವೆಂದು ಬಾಯಲ್ಲಿ ಹೇಳಿದರೆ ಮಾತ್ರ ಸಾಲದು. ಅದನ್ನು ಕಾರ್ಯರೂಪಕ್ಕೆ ತರಬೇಕು. ಹಿಂದಿನ ಸರ್ಕಾರದವರು ಅಲ್ಪ ದುಡ್ಡನ್ನು ವಿದ್ಯಾಭ್ಯಾಸಕ್ಕೆ ಖರ್ಚು

ಮಾಡುತ್ತಿದ್ದರು. ಈಗ ಹೆಚ್ಚಾಗಿ ಖರ್ಚು ಮಾಡುತ್ತಿದ್ದಾರೆ. ಅದಕ್ಕೆ ಈಗಿನ ಸರ್ಕಾರವನ್ನು ಅಭಿನಂದಿಸಬೇಕಾಗಿದೆ. ಸರ್ಕಾರದವರು ತಾವು ಮಾಡಿದ ಆರ್ಡರ್ ಮೇಲೆ ಕೆಲಸ ಸರಿಯಾಗಿ ನಡೆಯುತ್ತದೆಯೇ ಇಲ್ಲವೇ ಎಂಬುದನ್ನು guage ಮಾಡಬೇಕು. ಮತ್ತು ಸರಿಯಾಗಿ ಕಾರ್ಯಕ್ರಮ ತೆಗೆದುಕೊಳ್ಳುವಂತೆ ಮಾಡಬೇಕು ಎಂದು ಹೇಳಿ ಅಷ್ಟಕ್ಕೆ ನಿಲ್ಲಿಸುತ್ತೇನೆ.

The House adjourned for Lunch at Three of the Clock and reassembled at Thirty Minutes past Three of the Clock.

[MR. DEPUTY SPEAKER in the Chair]

*ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ ವಿದ್ಯಾಭ್ಯಾಸದ ಈ ಡಿಮ್ಯಾಂಡನ್ನು ವಿರೋಧಿಸಿ ಸರ್ಕಾರದ ಆಡಳಿತ ನೀತಿಯನ್ನು ಪ್ರಸ್ತಾಪಿಸಲು ನಾನು ಇಷ್ಟಪಡುತ್ತೇನೆ. ವಿದ್ಯಾಭ್ಯಾಸದ ಆವಶ್ಯಕತೆ ದೇಶದಲ್ಲಿ ಸರ್ವರಿಗೂ ಇದೆ. ಇದನ್ನು ದೇಶದಲ್ಲಿರತಕ್ಕ ಪ್ರತಿಯೊಬ್ಬ ಪ್ರಜೆಗೂ ಒದಗಿಸಬೇಕೆಂದು ಇಪ್ಪತ್ತು ವರ್ಷಗಳಿಂದಲೂ ಈ ಸಭೆಯಲ್ಲಿ ಒತ್ತಾಯ ಮಾಡುತ್ತಿದ್ದೇವೆ. ಇದನ್ನು ಹಿಂದಿನ ಸರ್ಕಾರದವರು ಮನಗೊಂಡು ಸ್ವಲ್ಪಮಟ್ಟಿಗೆ ಕಾರ್ಯರೂಪಕ್ಕೆ ತಂದರು. ಕಂಪಲ್ಸರಿ ವಿದ್ಯಾಭ್ಯಾಸವನ್ನು ಸುಮಾರು 36 ತಾಲ್ಲೂಕುಗಳಲ್ಲಿ ವರ್ಷಕ್ಕೆ ಒಂಭತ್ತು ತಾಲ್ಲೂಕುಗಳಂತೆ ಜಾರಿಗೆ ಕೊಟ್ಟರು. ವರ್ಷ ವರ್ಷಕ್ಕೆ ನೂರು ಸ್ಕೂಲುಗಳಂತೆ ನಾನೂರು ಪ್ರೈಮರಿ ಸ್ಕೂಲುಗಳನ್ನು ಕೊಡುತ್ತಾ ಬಂದರು. ಆದರೆ ಈಗ ಪ್ರಜಾಪ್ರಭುತ್ವ ಬಂದಿದೆ. ಅದು ಬಂದಮೇಲೆ ಜನರಿಗೆ ವಯಸ್ಕರ ಮತದಾನದ ಹಕ್ಕು ಬಂತು. ಸ್ವಾತಂತ್ರ್ಯವನ್ನು ನಾವು ಅನುಭವಿಸಬೇಕಾದರೆ ಮತ್ತು ದೇಶದ ಇಲಾಖೆಯಲ್ಲಿ ಪ್ರತಿಯೊಬ್ಬರಿಗೂ ಕೂಡ ಆಡಳಿತ ನಡೆಸತಕ್ಕಂಥ ಒಂದು ಶಕ್ತಿ ಸರಿಯಾಗಿ ಬರಬೇಕಾದರೆ ಅಕ್ಷರಾಭ್ಯಾಸ, ಅದರ ಜ್ಞಾನ ಬಹಳಮಟ್ಟಿಗೆ ಆವಶ್ಯಕವಾದುದು. ಇದನ್ನು ಕಡ್ಡಾಯವಾಗಿ ಜಾರಿಗೆ ತರಬೇಕೆಂದು ನಮ್ಮ ರಾಜ್ಯಾಂಗದಲ್ಲೂ ಕೂಡ ವಿಧಾಯಕವಾಗಿದೆ; 14 ವರ್ಷಗಳವರೆಗೆ ಪ್ರತಿಯೊಬ್ಬ ಪ್ರಜೆಗೂ ಕೂಡ ವಿದ್ಯಾಭ್ಯಾಸ ಮಾಡಿಸಬೇಕೆಂದು ಹೇಳಿದೆ. ಆದರೆ ಇದಕ್ಕೆ ಇಲ್ಲಿಯವರೆಗೂ ಸಾಕಾದಷ್ಟು ಪ್ರೋತ್ಸಾಹವಿಲ್ಲ. ವರ್ಷೇ ವರ್ಷೇ ಸಂಖ್ಯೆ ಕಡಮೆಯಾಗುತ್ತಾ ಇದೆ. ಈ ವರ್ಷ ಐದು ಕೋಟಿ ರೂಪಾಯಿಗಳವರೆಗೆ ಇಷ್ಟೊಂದು ಹಣ ಒದಗಿಸಿದ್ದರೂ ಪ್ರಜೆಗಳಿಗೆ ಉಪಯೋಗವಾಗುವುದು ಬಹಳ ಕಡಮೆ. ಯಾರಿಗೆ ವಿದ್ಯಾಭ್ಯಾಸ ಒದಗುತ್ತಿದೆಯೋ ಅವರಿಗೇ ಹೆಚ್ಚು ಅವಕಾಶನಾಗುತ್ತಿದೆಯೇ ವಿನಾ ಉಳಿದವರಿಗಿಲ್ಲ. ನಮ್ಮ ದೇಶದಲ್ಲಿ ಸ್ಕೂಲುಗಳಿಗೆ ಹೋಗುವ ಜನ 14 ಲಕ್ಷ 33 ಸಾವಿರ ಇದ್ದರೂ ಎಂಟು ಲಕ್ಷ ಜನರು ಮಾತ್ರ ಹೋಗುತ್ತಿದ್ದಾರ; 16,634 ಗ್ರಾಮಗಳಲ್ಲಿ ಆರೂವರೆ ಸಾವಿರ ಗ್ರಾಮಗಳಿಗೆ ಮಾತ್ರ ಸ್ಕೂಲುಗಳಿವೆ, ಇನ್ನು ಹತ್ತು ಸಾವಿರ ಗ್ರಾಮಗಳಿಗೆ ಸ್ಕೂಲೇ ಇಲ್ಲ. ಇನ್ನೂರು ಪ್ರಜೆಗಳಿಗಿಂತ ಕಡಮೆಯಿರುವ ಗ್ರಾಮಗಳನ್ನು ಬಿಟ್ಟು ಅದಕ್ಕೆ ಮೇಲ್ಪಟ್ಟು ಜನಸಂಖ್ಯೆಯಿರುವ ಮೂರು ಸಾವಿರ ಗ್ರಾಮಗಳಿಗಾದರೂ ಸ್ಕೂಲು ಕೊಡಿ, ಒಂದೇಸಾರಿ ನೀವು ಖರ್ಚುಮಾಡುವ ಹಣದಲ್ಲಿ 15 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದರೆ ಈ ಮೂರು ಸಾವಿರ ಗ್ರಾಮಗಳಿಗೆ ಈ ವರ್ಷ ಮಂಜೂರು ಮಾಡಬಹುದು. ಐದು ಕೋಟಿ ರೂಪಾಯಿಗಳಲ್ಲಿ ಹದಿನೈದು ಲಕ್ಷ ಕೊಟ್ಟರೆ ಈ ಮೂರು ಸಾವಿರ ಗ್ರಾಮಗಳಿಗೆ ಸ್ಕೂಲು ಕೊಡಬಹುದು. ಹಾಗೆ ಕೊಟ್ಟರೆ ಕಡ್ಡಾಯವಾಗಿ ಪ್ರತಿಯೊಬ್ಬ ಪ್ರಜೆಯೂ ಸ್ಕೂಲಿಗೆ ಹೋಗುವುದಕ್ಕೆ ಅವಕಾಶವಾಗುತ್ತದೆ. ಪ್ರೈಮರಿ ಸ್ಕೂಲುಗಳನ್ನು ಮೂರು ಸಾವಿರ ಹೆಚ್ಚಿಸಿದರೆ ಮುಂದೆ ಪ್ರಜೆಗಳಿಗೆ ಒಂದೆರಡು ಮೈಲಿಗಳಲ್ಲೇ ಸ್ಕೂಲಿನ ಅನುಕೂಲ ದೊರೆಯುತ್ತದೆ. ಇಷ್ಟು ಮಾತ್ರ ಮಾಡಿ ಎಂದು ಕಡ್ಡಾಯವಾಗಿ ಕೇಳುತ್ತೇನೆ. ಇಷ್ಟು ಮಾಡಬೇಕಾದರೆ 15-20 ಲಕ್ಷ ರೂಪಾಯಿಗಳು ಸಾಕು. ಅನೇಕ ಗ್ರಾಮಗಳಲ್ಲಿ ಸ್ಕೂಲು ಕಟ್ಟಡ ಕಟ್ಟಿಕೊಟ್ಟಿದ್ದಾರೆ. ಉಪಾಧ್ಯಾಯರಿಗೆ ವಾಸದ ಮನೆ ಕೊಟ್ಟಿದ್ದಾರೆ; ಆದರೂ ಅಲ್ಲಿಗೆ ಸ್ಕೂಲೇ ಕೊಟ್ಟಿಲ್ಲ. ಬೊಮ್ಮೇನಹಳ್ಳಿ ಗ್ರಾಮದಲ್ಲಿ ಸುಮಾರು ಎಂಟು ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಸ್ಕೂಲನ್ನೂ ಮತ್ತು ಸುಮಾರು ಆರು ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಉಪಾಧ್ಯಾಯರಿಗೆ ವಾಸದ ಮನೆಯನ್ನೂ ಕಟ್ಟಿಕೊಟ್ಟಿದ್ದರೂ ಸಹ ಅಲ್ಲಿಗೆ ಸ್ಕೂಲೇ ಕೊಟ್ಟಿಲ್ಲ. ಸರ್ಕಾರದವರೇ ಸ್ಕೂಲುಗಳನ್ನು ಕೊಟ್ಟು ಪ್ರತಿಯೊಬ್ಬರಿಗೂ ಕಡ್ಡಾಯವಾಗಿ ವಿದ್ಯಾಭ್ಯಾಸ ನೀಡಬೇಕಾದ ಕರ್ತವ್ಯದ ಜವಾಬ್ದಾರಿಯನ್ನು ಹೊತ್ತಿದ್ದರೂ, ಪ್ರಜಾ ಪ್ರಭುತ್ವದ ನೀತಿಯು ಅದೇ ಆಗಿದ್ದರೂ ಆ ರೀತಿ ಮಾಡುವುದೇ ಕಷ್ಟವಾಗಿದೆ. ಆದ್ದರಿಂದ ಎಷ್ಟೇ ಕಷ್ಟವಾದರೂ ಸರಿ. ನಾನು ಹೇಳಿದಂತೆ ಮೂರು ಸಾವಿರ ಗ್ರಾಮಗಳಿಗೆ ಸ್ಕೂಲನ್ನು ಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

ಉಪಾಧ್ಯಾಯರಿಗೆ ಟ್ರೈನಿಂಗ್ ಆಗಿಲ್ಲವೆಂದು ಹೇಳುತ್ತಾರೆ. ಇಪ್ಪತ್ತಾರು ಸಾವಿರ ಜನರಿಗಿಂತ ಹೆಚ್ಚು ಉಪಾಧ್ಯಾಯರಿದ್ದಾರೆ, ಅದರಲ್ಲಿ ಹತ್ತು ಸಾವಿರಕ್ಕೆ ಮೇಲ್ಪಟ್ಟ ಮಂದಿಗೆ ಟ್ರೈನಿಂಗ್ ಆಗಿದೆ, ಉಳಿದವರಿಗಿಲ್ಲ. ಇನ್ನೊಂದು ವಿಷಯ. ಕ್ವಾಲಿಟಿ ಮುಖ್ಯ, ಕ್ವಾಂಟಿಟಿ ಮುಖ್ಯವಲ್ಲ ಎಂದು ಈ ಸರ್ಕಾರ ಹೇಳುತ್ತಾರೆ. ಪ್ರಾಥಮಿಕಶಾಲೆ ಹಂತದವರೆಗೆ ಕ್ವಾಲಿಟಿ ಮುಖ್ಯವಲ್ಲ, ವಿದ್ಯದ ಗಂಧವೇ ಇಲ್ಲದಿರುವವರಿಗೆ ಒಳ್ಳೆಯ ವಿದ್ಯಾಭ್ಯಾಸ ಕೊಡಬೇಕು, ಬಿ.ಎ. ಆದವನ ಕೈಲೇ ವಿದ್ಯಾಭ್ಯಾಸ ಮಾಡಿಸಬೇಕೆಂದು ಹೇಳಿದರೆ ಹೇಗೆ? ಮೊದಲು ಓನಾಮ ಕಲಿಸಿ, ಅವನ ಹಕ್ಕನ್ನು ಅವನಿಗೆ ತೋರಿಸಿ. ದೇಶದಲ್ಲಿರುವ ಪ್ರತಿಯೊಬ್ಬ ಪ್ರಜೆಯೂ ಕೂಡ ಸಾಕಾದಷ್ಟು ತಿಳಿವಳಿಕೆಯುಳ್ಳವನಾಗಬೇಕು. ಪ್ರಜಾ ಪ್ರಭುತ್ವದ ಆಳ್ವಿಕೆಯಲ್ಲಿ ತನ್ನ ದೇಶದಲ್ಲಿ ಪ್ರತಿಯೊಬ್ಬನೂ ತನ್ನ ಹಕ್ಕನ್ನು ತಿಳಿದುಕೊಂಡು ಅವನ್ನು ಚಲಾಯಿಸಿ ದೇಶೋದ್ಧಾರ ಮಾಡಲು ಅವಕಾಶ ಕೊಡಬೇಕು.

ನಮ್ಮ ತುರುವೇಕೆರೆ ತಾಲ್ಲೂಕಿನಲ್ಲಿ ಥೇಂಜ್ ಆಫೀಸಿಲ್ಲ. 120 ಮೈಲಿ ಪ್ರದೇಶವಿರುವ ಅಲ್ಲಿಗೆ ಅದು ಆವಶ್ಯಕ ಎಂದು ಹೇಳಿದಮೇಲೆ ಇದೇ ಸಭೆಯಲ್ಲಿ ಈ ವರ್ಷ ಮಂಜೂರು ಮಾಡುತ್ತೇವೆಂದು ವಾಗ್ದಾನ ಮಾಡಿದ್ದರು. ಆದರೂ ಆ ತಾಲ್ಲೂಕಿಗೆ ಇಲ್ಲಿಯವರೆಗೂ ಒಂದು ಸ್ಕೂಲ್ ರೇಂಜ್ ಆಗಿಲ್ಲ. ಕೆಲವು ತಾಲ್ಲೂಕುಗಳಿಗೆ ಎರಡು ರೇಂಜುಗಳನ್ನು ಕೊಟ್ಟಿದ್ದರೂ ಈ ತಾಲ್ಲೂಕಿಗೆ ಒಂದು ರೇಂಜೂ ಕೊಟ್ಟಿಲ್ಲ. ಇದರಿಂದ ತಾಲ್ಲೂಕಿನವರಿಗೆ ತೊಂದರೆಯಾಗಿದೆ. ಇದನ್ನು ಜಾಗ್ರತೆ ಮಂಜೂರು ಮಾಡಬೇಕು.

ಇನ್ನೊಂದು, ಆರು ವರ್ಷಗಳಾದಮೇಲೆ ಮಕ್ಕಳಿಗೆ ಸಾಮಾನ್ಯವಾಗಿ ಎಲ್ಲಾ ಕಡೆಯೂ ವಿದ್ಯಾಭ್ಯಾಸ ಮಾಡಲು ಅವಕಾಶವಿದೆ. ಅದಕ್ಕೆ ಮುಂಚೆ ಗ್ರಾಮ

(ಶ್ರೀ ಬಿ. ಹುಚ್ಚೇಗೌಡ.)

ಗಳಲ್ಲಿ ಅವಕಾಶವಿಲ್ಲ. ಪಟ್ಟಣಗಳಲ್ಲಾದರೆ ಬೇಕಾದಷ್ಟು ಅನುಕೂಲವಿದೆ. ಗ್ರಾಮಗಳು ಹಿಂದುಳಿದಿವೆ. ಮುಂದಿನ ಭಾವಿ ಜನಾಂಗ ಉತ್ತಮವಾಗಬೇಕಾದರೆ ಅವರಿಗೆ ಸರಿಯಾದ ವ್ಯವಸ್ಥೆಯಾಗಿ ಅವರ ಆರೋಗ್ಯ ಹೆಚ್ಚಬೇಕಾದದ್ದೂ ಅವಶ್ಯಕ. ಆದ್ದರಿಂದ ಮೂರರಿಂದ ಆರು ವರ್ಷಗಳಲ್ಲಿರುವ ಮಕ್ಕಳಿಗೆ ಎಲ್ಲ ಊರುಗಳಲ್ಲೂ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಬೇಕು. ಸ್ಥಳದವರಿಂದಲೇ ಸಹಾಯ ಪಡೆದುಕೊಂಡಾದರೂ ವಿದ್ಯಾಭ್ಯಾಸ ನೀಡಬೇಕಾದದ್ದು ಅಗತ್ಯ. ಮೇಲ್ಮಟ್ಟದ ವಿದ್ಯಾಭ್ಯಾಸಕ್ಕಿಂತ ಚಿಕ್ಕಮಕ್ಕಳ ವಿದ್ಯಾಭ್ಯಾಸಕ್ಕೆ ಸಾಮಾನ್ಯವಾಗಿ ಬಡವರು, ಹರಿಜನರು, ಇಂಥವರ ಮಕ್ಕಳ ವಿದ್ಯಾಭ್ಯಾಸಕ್ಕೆ ಗಮನಕೊಟ್ಟು ಚಿಕ್ಕ ವಯಸ್ಸಿನಲ್ಲೇ ಅವರಿಗೆ ಸಾಕಾದಷ್ಟು ವಿದ್ಯೆ ಸರಿಯಾಗಿ ಬರುವಂತೆ ಮಾಡಲು ತಕ್ಕ ಪ್ರಯತ್ನ ಮಾಡಬೇಕು.

ಶ್ರೀ ಬಿ. ಸಿ. ನಂಜುಂಡಯ್ಯ (ಕೋರ).—ಸ್ವಾಮಿ, ಗ್ರಾಮಾಂತರ ವಿದ್ಯಾಭ್ಯಾಸದ ವಿಚಾರದಲ್ಲಿ ಕೆಲವು ಮಾತನ್ನು ಹೇಳುತ್ತೇನೆ. ನಿನ್ನೆತಾನೆ ಆಕ್ಯುಪೇಷನಲ್ ಇನ್ಸ್ಟಿಟ್ಯೂಟನ್ನು ತುಮಕೂರು ಟೌನಿನಲ್ಲಿ ಹೊಸದಾಗಿ ಏರ್ಪಾಡು ಮಾಡುತ್ತೇವೆಂದು ಮಾನ್ಯ ವಿದ್ಯಾ ಮಂತ್ರಿಗಳು ಹೇಳಿದರು. ಈ ವರ್ಷವೇ ಅದನ್ನು ಸ್ಥಾಪಿಸಲು ತುಮಕೂರಿನಲ್ಲಿ ಅನುಕೂಲವಿದೆ. ಡಿಸ್ಟ್ರಿಕ್ಟ್ ಬೋರ್ಡ್ ಆಫೀಸು ಕಾಂಪೌಂಡಿನಲ್ಲಿ ಫಸ್ಟ್‌ಗ್ರೇಡ್ ಕಾಲೇಜಿರುವುದು ಅದಕ್ಕೆ ಖಾಯಮ್ಮಾದ ಕಟ್ಟಡವಾದಾಗ ಅಲ್ಲಿಗೆ ಹೋಗಲಿರುವುದರಿಂದ ಈಗ ಆ ಕಾಲೇಜಿರುವ ಕಟ್ಟಡ ರಿಲೀಸ್ ಆಗುತ್ತದೆ. ಅಲ್ಲಿ ಬೇಕಾದರೂ ಆಕ್ಯುಪೇಷನಲ್ ಇನ್ಸ್ಟಿಟ್ಯೂಟನ್ನು ನಡೆಸಬಹುದು. ಅಥವಾ ಫಾರೆಸ್ಟ್ ಇಲಾಖೆ ವುಡ್ ಫ್ಯಾಕ್ಟರಿಯನ್ನು ತೆರದಿದೆ. ಅಲ್ಲಿ ನಾಲ್ಕೈದು ಷೆಡ್ ಇವೆ, ಆದರೆ ಆ ಫ್ಯಾಕ್ಟರಿಯಲ್ಲಿ ಮರದ ಸರಬರಾಯಿ ಸಾಕಷ್ಟಾಗದೆ ಕೆಲಸ ಸರಿಯಾಗಿ ನಡೆಯುತ್ತಿಲ್ಲ. ಏಕೆಂದರೆ ಅಲ್ಲಿಗೆ ಶಿವಮೊಗ್ಗ, ಮೈಸೂರು ಕಡೆಗಳಿಂದ ಮರ ಬರಬೇಕು, ಮರ ಕಟ್ ಸೈಜಿಗೆ ಬರುವುದು ಸಾಲದೆ ಕೆಲಸ ಸಾಕಷ್ಟಿಲ್ಲವಾಗಿದೆ. ಆ ದೃಷ್ಟಿಯಿಂದ ಫಾರೆಸ್ಟ್ ಇಲಾಖೆಯವರು ಈ ವುಡ್ ಫ್ಯಾಕ್ಟರಿಯನ್ನು ಶಿವಮೊಗ್ಗಾಕ್ಕೆ ಬದಲಾಯಿಸಬೇಕೆಂದಿರುವುದಾಗಿ ತಿಳಿದುಬಂದಿದೆ. ಇದಕ್ಕಾಗಿ ಸುಮಾರು ಹನ್ನೆರಡು ಎಕರೆ ಭೂಮಿ ಅಕ್ವೈರಾಗಿದೆ. ಅಲ್ಲಿ ಬೇಕಾದರೂ ಆಕ್ಯುಪೇಷನಲ್ ಇನ್ಸ್ಟಿಟ್ಯೂಟ್ ಸ್ಥಾಪಿಸಬಹುದು; ಹಾಗೆ ಮಾಡುವುದಕ್ಕಾಗದಿದ್ದರೆ ಲೇಬರ್ ಮಿನಿಸ್ಟ್ರಿ ಇಂಡಿಯಾ ಸರ್ಕಾರದ ಪರವಾಗಿ ನಡೆಸುತ್ತಿರುವ ಮೆಕನೈಸೇಷನ್ ಸ್ಕೂಲು ರೇಸ್‌ಕೋರ್ಸ್ ಹತ್ತಿರ ಇರುವುದನ್ನು ಆದರೂ ಅಲ್ಲಿಂದ ಬದಲಾಯಿಸಿ ತುಮಕೂರಿನಲ್ಲಿ ಸ್ಥಾಪಿಸಿದರೆ ಅದರಿಂದ ಸಾಕಷ್ಟು ಉಪಯೋಗವಾಗುತ್ತದೆ. ಇದಕ್ಕೆ ಸರ್ಕಾರ ಗಮನ ಕೊಡಬೇಕು.

ಇನ್ನೊಂದು ವಿಷಯ, ವಿದ್ಯಾ ಇಲಾಖೆಗೆ ಸಂಬಂಧಪಟ್ಟ ಕಟ್ಟಡಗಳ ರಿಪೇರಿ ಸಕಾಲದಲ್ಲಿ ಆಗುತ್ತಿಲ್ಲ. ಉದಾಹರಣೆಗೆ ತುಮಕೂರಿನಲ್ಲಿ ಮಾರ್ಕೆಟ್ ಹತ್ತಿರ ಗರ್ಲ್ಸ್ ಮಿಡ್ಲ್‌ಸ್ಕೂಲಿತ್ತು. ಅಲ್ಲಿ ಪ್ಲೇಗಿನ ಹೆದರಿಕೆಯಿದೆಯೆಂದು ಅದನ್ನು ಅಲ್ಲಿಂದ ತೆಗೆದು ಬೇರೆ ಕಡೆಗೆ ಸಾಗಿಸಿ ಗಂಡು ಹುಡುಗರ ಮಿಡ್ಲ್‌ಸ್ಕೂಲು ಕಟ್ಟಡದಲ್ಲಿ ನಡೆಸುತ್ತಿದ್ದಾರೆ. ಆ ಕಟ್ಟಡದಲ್ಲಿ ಹೆಣ್ಣುಮಕ್ಕಳಿಗೆ ಬೆಳಿಗ್ಗೆ ಏಳೂವರೆ ಗಂಟೆಯಿಂದ ಹನ್ನೆರಡು ಗಂಟೆಯವರಿಗೆ ಸ್ಕೂಲು ಮಾಡಿ ಆಮೇಲೆ ಗಂಡು ಹುಡುಗರಿಗೆ ಪಾಠ ಹೇಳುತ್ತಾರೆ. ಆದರೆ ಅಲ್ಲೇನೂ ಭಯಕ್ಕೆ ಆಸ್ಪದವಿಲ್ಲ, ಕೆಲವು ಮೀಟಿಂಗುಗಳು ನಡೆದಿವೆ. ಮೊನ್ನೆ ತೆಪ್ಪೋತ್ಸವವಾದಾಗ ಅದೇ ಮಾರ್ಕೆಟ್ ಹತ್ತಿರವಿರುವ ಕಟ್ಟಡದಲ್ಲಿ ಅನ್ನಶಾಂತಿ ಬೇರೆ ನಡೆಯಿತು. ಇಷ್ಟೆಲ್ಲಾ ಆದರೂ ಆ ಕಟ್ಟಡವನ್ನೇಕೆ ಉಪಯೋಗಿಸದೆ ಬಿಟ್ಟರೋ ತಿಳಿಯದು. ಅಲ್ಲದೆ ಆ ಕಟ್ಟಡದ ಪಕ್ಕದಲ್ಲೇ ಉರ್ದು ಸ್ಕೂಲಿದೆ. ಅಲ್ಲಿ ಕುಸ್ತಿ ಮಾಡಲು ಜಾಗ ಸಹ ಕೊಟ್ಟಿದ್ದಾರೆ, ಐವತ್ತು ರೂಪಾಯಿಗಳ ಬಾಡಿಗೆ ಬರುತ್ತಿದೆ. ಘೋಷಾ ಗರ್ಲ್ಸ್‌ಸ್ಕೂಲು ಪಕ್ಕದಲ್ಲೇ ಇದೆ, ಆ ಗರ್ಲ್ಸ್‌ಸ್ಕೂಲು ಪಕ್ಕದಲ್ಲೇ ಕುಸ್ತಿ ನಡೆಯುವುದಕ್ಕೆ ಅವಕಾಶ ಮಾಡಿರುವುದರಿಂದ ಅಲ್ಲಿರುವ ಗರ್ಲ್ಸ್ ಸ್ಕೂಲನ್ನು ಬೇರೆ ಕಡೆಗೆ ಬದಲಾಯಿಸಬೇಕು.

ಇನ್ನು ವಿದ್ಯಾಭ್ಯಾಸದ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಪಾರ್ಟ್‌ಟೈಂ ಹಿಂದಿ ಉಪಾಧ್ಯಾಯರ ವಿಷಯದಲ್ಲಿ ಒಂದೆರಡು ವಿಚಾರ ಗಮನಕ್ಕೆ ತರುತ್ತೇನೆ. ಅವರಿಗೆ ಹದಿನೈದು ರೂಪಾಯಿಗಳ ಅಲೋಯನ್ಸ್ ಇದೆ. ಅನೇಕರು ಎರಡು ಮೂರು ವರ್ಷದಿಂದ ಹಂಗಾಮಿಯಾಗಿ ಈ ಕೆಲಸ ಮಾಡುತ್ತಿದ್ದಾರೆ. ಅವರು ಎಸ್.ಎಸ್.ಎಲ್.ಸಿ. ಪಾಸು ಮಾಡಿದ್ದಾರೆ. ಅವರಿಗೆ ಹಿಂದಿ ಪಾಠವಲ್ಲದೆ ಬೇರೆ ಪಾಠ ಹೇಳುವುದಕ್ಕೂ ಶಕ್ತಿಯಿದೆ. ಅಂಥವರಿಗೆ ಖಾಯಂ ಕೆಲಸವನ್ನೇಕೆ ಕೊಡಬಾರದು? ಅದಕ್ಕೆ ಕಷ್ಟವೇನೋ ಅರ್ಥವಾಗುವುದಿಲ್ಲ. ಹಿಂದಿಭಾಷೆ ರಾಷ್ಟ್ರಭಾಷೆಯಾಗಬೇಕು, ಅದಕ್ಕೆ ಉತ್ತೇಜನ ಕೊಡುತ್ತೇವೆ ಎಂದು ಹೇಳುವಾಗ ಆ ಸಂದರ್ಭದಲ್ಲಿ ಕೆಲಸ ಮಾಡುವವರಿಗೆ ಸಾಕಷ್ಟು ಗ್ಯಾರಂಟಿಯಿಲ್ಲದಿದ್ದರೆ ಹೇಗೆ? ಹಿಂದೆ ಸರ್ಕಾರೀ ಆರ್ಡರು ಮಾಡಿ ಮೂರು ವರ್ಷ ಕೆಲಸ ಮಾಡಿದವರನ್ನು ಕನ್‌ಫರ್ಮ್ ಮಾಡುತ್ತಿದ್ದರು. ಅದನ್ನು ಈಗಲೂ ಮುಂದುವರೆಸುವುದಕ್ಕೇನೂ ತೊಂದರೆಯಿಲ್ಲ. ಅದನ್ನು ಮುಂದುವರೆಸಿ ಮೂರು ವರ್ಷ ಕೆಲಸ ಮಾಡುವ ಹಿಂದಿ ಉಪಾಧ್ಯಾಯರಿಗೆ ಬೇರೆ ಪಾಠ ಹೇಳಲು ಅವಕಾಶಕೊಟ್ಟು ಅವರಿಗೆ ಕೆಲಸ ಖಾಯಂ ಮಾಡಬೇಕು.

ಇನ್ನೊಂದು ವಿಚಾರ. ಯೂತ್ ಆರ್ಗನೈಜೇಷನ್ನಿಗೆ ಗ್ರಾಂಟನ್ನು ಕೊಡುವಾಗ ಅಡ್ವೈಸ್ ಮಾಡುವುದಕ್ಕೆ ಕೋ-ಆರ್ಡಿನೇಷನ್ ಕಮಿಟಿ ಎಂಬ ಒಂದು ಸಮಿತಿಯಿದೆ. ಅದರ ಶಿಫಾರ್ಸಿನ ಪ್ರಕಾರ ಗ್ರಾಂಟನ್ನು ಕೊಡಬೇಕು. ಆದರೆ ಕೆಲವು ಸಂಸ್ಥೆಗಳಿಗೆ ಹೆಚ್ಚು ಗ್ರಾಂಟನ್ನೂ ಇನ್ನು ಕೆಲವಕ್ಕೆ ಕಡಮೆ ಗ್ರಾಂಟನ್ನೂ ಕೊಡುತ್ತಾರೆ, ಕೆಲವು ಸಂಸ್ಥೆಗಳಿಗೆ ಕೊಡುವುದೇ ಇಲ್ಲ. ಇದು ಸರಿಯಲ್ಲ. ಕೋ-ಆರ್ಡಿನೇಷನ್ ಕಮಿಟಿ ಶಿಫಾರ್ಸು ಮಾಡಿರುವ ರೀತಿಯಲ್ಲಿ ಕೊಡಬೇಕಾದ್ದು ಆವಶ್ಯಕ. ಆ ದೃಷ್ಟಿಯಿಂದ ಯಾವುದಾದರೂ ಸಂಸ್ಥೆ ದೇಶದ ಹಿತದೃಷ್ಟಿಯಿಂದ ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ಗೊತ್ತಾದರೆ ಸರ್ಕಾರ ಅದಕ್ಕೆ ಗ್ರಾಂಟನ್ನು ಕಡಮೆ ಮಾಡಬಹುದು, ಕೆಲಸ ಮಾಡದಿರುವುದನ್ನು ತೆಗೆದುಹಾಕಬಹುದು. ಅದನ್ನು ಬಿಟ್ಟು ಸರಿಯಾಗಿ ಕೆಲಸ ಮಾಡಿಕೊಂಡು ಹೋಗುವ ಸಂಸ್ಥೆಗಳಿಗೆ ಹೆಚ್ಚು ಕಡಮೆ ಮಾಡಬಾರದು. ಈಗ ಆ ರೀತಿ ಮಾಡುತ್ತಿರುವುದು ಸರಿಯಲ್ಲ. ಈಗಿನ ನೀತಿಯಿಂದ ಯಾರು ಅಧಿಕಾರದಲ್ಲಿರುತ್ತಾರೋ ಅವರಿಗೆ ಬೇಕಾದವರಿಗೆ ಹೆಚ್ಚು ಸಹಾಯ ದೊರೆಯುತ್ತದೆ, ಬೇರೆಯವರಿಗೆ ದೊರೆಯುವುದಿಲ್ಲ ಎಂದು ಹೇಳುವುದಕ್ಕೆ ಸರ್ಕಾರದವರು ಅವಕಾಶ ಕೊಡಬಾರದು. ಪ್ರತಿಯೊಂದು ಸಂಸ್ಥೆಯನ್ನೂ ಸಮಾನಾದ ದೃಷ್ಟಿಯಿಂದ ನೋಡಿ ಕೆಲಸಕಾರ್ಯ ಮಾಡುವುದರ ದೃಷ್ಟಿಯಿಂದ, ಕಾರ್ಯಕ್ರಮದ ದೃಷ್ಟಿಯಿಂದ ಈ ಗ್ರಾಂಟನ್ನು ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಟಿ. ಹನುಮಯ್ಯ (ಹಿರಿಯೂರು—ಅನುಸೂಚಿತ ಜಾತಿಗಳು).—ಸ್ವಾಮಿ, ಸಾಧಾರಣವಾಗಿ ವಿದ್ಯಾ

ಭ್ಯಾಸದ ವಿಷಯದಲ್ಲಿ ಎಲ್ಲರೂ ಮಾತನಾಡಿದ್ದಾರೆ. ನಮ್ಮ ಮೈಸೂರು ದೇಶದಲ್ಲಿ ಸುಮಾರು ಐದು ಕೋಟಿ ರೂಪಾಯಿಗಳು ಇದಕ್ಕಾಗಿ ಖರ್ಚಾಗುತ್ತಿದೆ. ಆದರೆ ಈ ಹಣ ಪಟ್ಟಣ ವಾಸಗಳಲ್ಲಿರುವ ಜನರಿಗೇ ಹೆಚ್ಚಾಗಿ ವಿನಿಯೋಗವಾಗುತ್ತಿದೆ, ಕಡಮೆ ಜನಸಂಖ್ಯೆಯಿರುವ ಸ್ಥಳಗಳಲ್ಲೇ ಖರ್ಚಾಗುತ್ತಿದೆ, ಗ್ರಾಮಾಂತರ ಪ್ರದೇಶಗಳಲ್ಲಿ ಸಾಕಷ್ಟು ಖರ್ಚಾಗುತ್ತಿಲ್ಲ. ಬಡ ಸ್ಕೂಲು ಉಪಾಧ್ಯಾಯರಿಗೆ ಸರಿಯಾದ ವ್ಯವಸ್ಥೆಯಿಲ್ಲ. ಈ ದಿವಸ ಸಾಧಾರಣವಾಗಿ ಕಾಲೇಜು, ಹೈಸ್ಕೂಲು, ಮಿಡ್ಲ್ ಸ್ಕೂಲ ಮತ್ತು ಪ್ರೈಮರಿ ಸ್ಕೂಲುಗಳಿಗೆ ಒಂದು ಕೋಟಿ ರೂಪಾಯಿಗಳಿಗೆ ಮೇಲ್ಪಟ್ಟು ಸಂಬಳಕ್ಕಾಗಿ ಖರ್ಚಾಗುವುದರಲ್ಲಿ ಪ್ರೈಮರಿ ಸ್ಕೂಲು ಉಪಾಧ್ಯಾಯರುಗಳಿಗೆ 15–20 ಲಕ್ಷ ರೂಪಾಯಿಗಳು ಮಾತ್ರ ಸಂಬಳಕ್ಕಾಗಿ ಖರ್ಚು ಮಾಡುತ್ತಿದ್ದರೆ ಈ ಬಡ ಉಪಾಧ್ಯಾಯರುಗಳು ಯಾವ ರೀತಿ ಜೀವನ ಮಾಡಬೇಕೆಂಬುದನ್ನು ಸರ್ಕಾರದವರು ಯೋಚನೆ ಮಾಡಬೇಕು. ನಮ್ಮ ದೇಶದಲ್ಲಿ ಸ್ಟ್ಯಾಂಡರ್ಡ್ ಆಫ್ ಲಿವಿಂಗ್ ಎಷ್ಟಿದೆಯೆಂದು ತಿಳಿದಿದ್ದರೂ ಕೂಡ ಉಪಾಧ್ಯಾಯರಿಗೆ ಅದರಲ್ಲೂ ಕೂಡ ಪ್ರೈಮರಿ ಸ್ಕೂಲು ಉಪಾಧ್ಯಾಯರಿಗೆ ಹೆಚ್ಚು ಸಂಬಳ ಕೊಡುವುದು ಅಗತ್ಯವೆಂದು ಭಾವಿಸಿ ಅದರಂತೆ ಕೊಡುತ್ತಿಲ್ಲ, ಹಾಗೆ ಕೊಡಬೇಕಾದ್ದು ಅಗತ್ಯ ಎಂದು ಸರ್ಕಾರದಲ್ಲಿ ನಾನು ಮನವಿಮಾಡಿಕೊಳ್ಳುತ್ತೇನೆ. ಏಕೆಂದರೆ ಅನೇಕ ಗ್ರಾಮಗಳಲ್ಲಿ ಈ ದಿವಸ ಸ್ಕೂಲು ಮಾಸ್ತರುಗಳಿಗೆ ವಾಸಕ್ಕೆ ಮನೆಗಳಿರುವುದಿಲ್ಲ. ಅವರಿಗೆ ಬರತಕ್ಕ ಸಂಬಳವಾದರೋ ತೀರಾ ಕಡಮೆ. ಅವರು ಬಹಳ ಕಷ್ಟತರದಿಂದ ಜೀವನ ನಡೆಸಬೇಕಾಗಿದೆ. ಸರ್ಕಾರದವರು ಮುಖ್ಯವಾಗಿ ಇಂಥ ಕಡಮೆ ಸಂಬಳ ಬರತಕ್ಕವರಿಗೆ ನ್ಯಾಯವಾಗಿ ಮೊದಲು ಪ್ರೋತ್ಸಾಹ ನೀಡಬೇಕು. ಈ ರೀತಿ ಮಾಡತಕ್ಕದ್ದು ತೀರಾ ಅತ್ಯಗತ್ಯ. ಪ್ರತಿಯೊಬ್ಬ ಮನುಷ್ಯನಿಗೂ ತನ್ನ ಜೀವನದ ಮಟ್ಟವನ್ನು ಹೆಚ್ಚಿಸಿಕೊಳ್ಳಬೇಕೆಂಬ ಆಸೆ ಇದ್ದೇ ಇರುತ್ತದೆ. ಆದರೆ ಆ ರೀತಿ ತಮ್ಮ ಜೀವನ ಮಟ್ಟವನ್ನು ಹೆಚ್ಚು ಮಾಡಿಕೊಳ್ಳಲು ಈ ದಿವಸ ಈ ಉಪಾಧ್ಯಾಯರುಗಳಿಗೆ ಸಾಕಷ್ಟು ಸಂಬಳ ದೊರೆಯುತ್ತಿಲ್ಲ. ನಮ್ಮ ದಿನವಹಿ ವ್ಯವಹಾರ ತೆಗೆದುಕೊಂಡರೆ ನೂರು ರೂಪಾಯಿಗಳ ಸಂಬಳದಾರನು ಹೋಟಲಿಗೆ ಬಂದು ಕಾಫಿ ಕುಡಿದರೆ ಆತನು ಎರಡು ಆಣೆ ಕೊಡಬೇಕು, 15 ರೂಪಾಯಿ ಸಂಬಳ ಬರತಕ್ಕ ಮನುಷ್ಯನೂ ಎರಡು ಆಣೆ ಕೊಟ್ಟು ಕಾಫಿ ಕುಡಿಯಬೇಕು. ಹೀಗೆ ಎಲ್ಲ ಜನರ ಜೀವನದ ಮಟ್ಟ ದಿನಚರಿಯಲ್ಲಿ ನಡೆದುಕೊಂಡು ಹೋಗುತ್ತಿದೆ. ಆದುದರಿಂದ ತಾವು ಎಲ್ಲರಿಗೂ ಅವರವರ ಜೀವನಕ್ಕಾದರೂ ಸಾಕಷ್ಟು ಸಂಬಳ ಸಾರಿಗೆಗಳನ್ನು ಕೊಡಬೇಕಾದದ್ದು ಅತ್ಯಗತ್ಯ. ತಾವು ಇದನ್ನು ಆದಷ್ಟು ಜಾಗ್ರತೆ ಮಾಡಲೇಬೇಕು. ಆದರೆ ಈ ದಿವಸ ದೇಶದಲ್ಲಿ ಪ್ರಜಾಪ್ರಭುತ್ವಾಡಳಿತ ನೆಲಸಿದೆ. ಸೋಷಿಯಲಿಸ್ಟಿಕ್ ಪ್ಯಾಟರನ್ ಆಫ್ ಸೊಸೈಟಿಯ ತತ್ವಗಳಿಗನುಸಾರವಾಗಿ ಕಾರ್ಯಗಳು ಮುಂದುವರಿಯಬೇಕೆಂದು ಹೇಳುತ್ತಿದ್ದಾರೆ. ಇಂಥ ವೇಳೆಯಲ್ಲಿ ಒಬ್ಬರಿಗೆ ತೀರ ಹೆಚ್ಚಾಗಿ ಸಂಬಳ ಕೊಟ್ಟು—ಮತ್ತೊಬ್ಬರಿಗೆ ತೀರಾ ಕಡಮೆ ಸಂಬಳ ಕೊಡತಕ್ಕ ನೀತಿ ಈ ಪ್ರಜಾಪ್ರಭುತ್ವ ತತ್ವಕ್ಕೇ ವಿರುದ್ಧವಾಗಿದೆ. ಈ ವ್ಯತ್ಯಾಸವನ್ನು ಸರ್ಕಾರದವರು ಕೂಡಲೆ ಸರಿಪಡಿಸಬೇಕೆಂದು ಅವರಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಸರ್ಕಾರದವರು ಈ ಗ್ರಾಮಾಂತರ ಪ್ರದೇಶಗಳಿಗೆ ಸ್ಕೂಲುಗಳನ್ನು ಕೊಡುವುದರ ಸಂಬಂಧದಲ್ಲಿ ಇವರು ಒಂದು ಸರಿಯಾದ ನೀತಿಯನ್ನು ಇಟ್ಟುಕೊಳ್ಳಬೇಕಾದುದು ಅಗತ್ಯವೆಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ನಗರಗಳಲ್ಲಿ ಪಾಠಶಾಲೆಗಳು ಆಗಬೇಕೆಂದರೆ ಸರ್ಕಾರದವರೇ ಬೀದಿ ಬೀದಿಗಳಲ್ಲೂ ಸರ್ಕಾರದ ಖರ್ಚಿನಿಂದಲೇ ಕಟ್ಟಡಗಳನ್ನು ಕಟ್ಟಿಸಿ—ಅವರಿಗೆ ಬೇಕಾದ ಆಟ ಪಾಠಗಳ ಸೌಕರ್ಯಗಳನ್ನೆಲ್ಲಾ ಒದಗಿಸುತ್ತಿದ್ದಾರೆ. ಆದರೆ ಈ ದಿವಸ ಸರ್ಕಾರದ ಖಜಾನೆಗೆ ಹಣವನ್ನು ಭರ್ತಿಮಾಡುತ್ತಿರುವಂಥ ಆ ಹಳ್ಳೀ ಜನರ ಮಕ್ಕಳಿಗೆ ಪಾಠಶಾಲೆಗಳನ್ನು ಕೊಡಬೇಕೆಂದರೆ ಸರ್ಕಾರದವರಿಗೆ ಬಹಳ ಕಷ್ಟವಾಗಿದೆ. ನಗರಗಳಲ್ಲಿ ಈ ಸ್ಕೂಲು ಕಟ್ಟಡಗಳಿಗೆ ತಗಲುವ ವಿಶಿಷ್ಟ ವೆಚ್ಚವನ್ನು ಮತ್ತು ಪಾಠಶಾಲೆಗಳಿಗೆ ಬೇಕಾದಂಥ ಸಲಕರಣೆಗಳು, ಕುರ್ಚಿ, ಮೇಜು, ಬೆಂಚ್ ಇತ್ಯಾದಿಗಳನ್ನೆಲ್ಲಾ, ಸರ್ಕಾರದವರೇ ಒದಗಿಸುತ್ತಿದ್ದಾರೆ. ಹಳ್ಳಿಗಳಿಗೆ ಕೇಳಿದರೆ "ನೀವು ಅರ್ಧ ಖರ್ಚುಕೊಡಿ, ನಾವರ್ಧ ಹಾಕುತ್ತೇವೆ" ಎಂದು ಹೇಳುತ್ತಾರೆ. ಇದು ಯಾವ ನೀತಿಯೋ ನಾನಂತೂ ಕಾಣೆ! ಈ ದಿವಸ ಎಲ್ಲಾ ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರ್ಸ್‌ಗಳಲ್ಲಿರತಕ್ಕಂಥ ಕಾಲೇಜುಗಳನ್ನೂ ಮತ್ತು ಆಸ್ಪತ್ರೆಗಳನ್ನೂ ಸರ್ಕಾರದವರೇ ಹಣ ಹಾಕಿ ಕಟ್ಟಿಸಿರುತ್ತಾರೆ. ಆದರೆ ಅದೇಕೋ ಈ ಗ್ರಾಮಾಂತರ ಪ್ರದೇಶಗಳಲ್ಲಿ ಕಟ್ಟಬೇಕಾದ ಶಾಲಾ ಕಾಲೇಜುಗಳಿಗೆ ಸರಿಯಾಗಿ ಸರ್ಕಾರದವರು ಗ್ರಾಂಟನ್ನೂ ಕೂಡ ಕೊಡುತ್ತಿಲ್ಲ. ಉದಾಹರಣೆಯಾಗಿ ತಿಳಿಸುವುದಾದರೆ—ನಮ್ಮ ಚಿತ್ರದುರ್ಗ ಜಿಲ್ಲೆಯಲ್ಲಿರತಕ್ಕಂಥ ಕಾಲೇಜನ್ನು ಸಾರ್ವಜನಿಕರ ಧನ ಸಹಾಯದಿಂದ ಕಟ್ಟಿಸಲಾಗಿದೆ. ಅದೇ ರೀತಿಯಾಗಿ ಅಲ್ಲಿರತಕ್ಕಂಥ ಆಸ್ಪತ್ರೆಯನ್ನೂ ಕಟ್ಟಿಸಿರುತ್ತೆ. ಆದರೆ ಅದೇ ನಮ್ಮ ಜಿಲ್ಲೆಯ ಪಕ್ಕದ ಜಿಲ್ಲೆಗಳ ವಿಚಾರ ತೆಗೆದುಕೊಂಡರೆ ಪ್ರತಿಯೊಂದು ಕಾಲೇಜು—ಆಸ್ಪತ್ರೆಗಳನ್ನೆಲ್ಲಾ ಸರ್ಕಾರದವರೇ ಹಣ ಹಾಕಿ ಕಟ್ಟಿಸಿಕೊಟ್ಟಿದ್ದಾರೆ. ಹೀಗೆ ಮಾಡತಕ್ಕದ್ದು ಸರಿಯೇ—ನ್ಯಾಯವೇ ಎಂಬುದನ್ನು ಈ ಮಾನ್ಯ ಸಭೆಯೇ ತೀರ್ಮಾನಮಾಡಲಿ. ಇನ್ನಾದರೂ ಸರ್ಕಾರದವರು ಇಂಥ ಒಂದು ಪಕ್ಷಪಾತ ಮನೋಭಾವವನ್ನು ತಾಳದೆ ಇರತಕ್ಕ ಹಣವನ್ನು ಎಲ್ಲಾ ಜಿಲ್ಲೆಗಳಿಗೂ ಒಂದು ಸರಿ ಸಮನಾದ ರೀತಿಯಲ್ಲಿ ಹಂಚಿಕೆ ಮಾಡುವಂತೆ ಒಂದು ನೀತಿಯನ್ನು ಹಾಕಿಕೊಳ್ಳಬೇಕೆಂದು ನಾನು ಸೂಚಿಸಲಿಚ್ಛಿಸುತ್ತೇನೆ.. ಅದೇ ರೀತಿ ಗ್ರಾಮಾಂತರ ಪ್ರದೇಶಗಳಿಗೂ ಸಹ ಹಣವನ್ನು ಹಂಚಬೇಕಾದದ್ದು ನ್ಯಾಯ. ಆದರೆ ಈ ದಿವಸ ಗ್ರಾಮಾಂತರ ಪ್ರದೇಶಗಳಲ್ಲಿ ತೆರೆಯಲಾಗಿರತಕ್ಕ ಅನೇಕ ಹೈಸ್ಕೂಲುಗಳಲ್ಲಿ ಸರಿಯಾದ ಲ್ಯಾಬೊರೇಟರಿಗಳಿಲ್ಲ. ಪಾಠಪ್ರವಚನಗಳನ್ನು ನಡೆಸಲು ಸಾಕಾದಷ್ಟು ಉಪಾಧ್ಯಾಯರುಗಳಿರುವುದಿಲ್ಲ. ಅವುಗಳ ಆಡಳಿತದ ವಿಚಕ್ಷಣೆ ತಂಬಾ ಶೋಚನೀಯವಾಗಿದೆ. ಆದರೆ ಈ ದಿವಸ ಈ ಬೆಂಗಳೂರು ನಗರದಲ್ಲಿರುವ ಫೋರ್ಟ್ ಹೈಸ್ಕೂಲನ್ನು ನಾವು ತೆಗೆದುಕೊಳ್ಳೋಣ. ಅದಕ್ಕೇಕೆ ಇವರು ಇಂಥ ಲ್ಯಾಬೋರೇಟರಿ ಮತ್ತು ಇತರೇ ಎಲ್ಲಾ ಸಲಕರಣೆಗಳನ್ನು ಹೇಗೆ ಒದಗಿಸುತ್ತಾರೆ? ಇದೇ ರೀತಿ ಗ್ರಾಮಾಂತರ ಪ್ರದೇಶಗಳ ಹೈಸ್ಕೂಲುಗಳಿಗೂ ಏಕೆ ಒದಗಿಸಬಾರದು? ಹಾಗೆ ಒಂದನ್ನೂ ಅಲ್ಲಿಗೆ ಒದಗಿಸದೆ ಇರುವುದರಿಂದ ಈ ದಿವಸ ಆ ಪಾಠಶಾಲೆಗಳಲ್ಲಿ ಅಭ್ಯಾಸಮಾಡುತ್ತಿರುವ ಹುಡುಗರಿಗೆ ಕೆಮಿಸ್ಟ್ರಿ ಎಂದರೇನು! ಫಿಜಿಕ್ಸ್ ಎಂದರೇನು! ಬಯಾಲಜಿ ಎಂದರೇನು ಎಂಬುದೊಂದೂ ಗೊತ್ತಿರುವುದಿಲ್ಲ. ಆದುದರಿಂದ ಸರ್ಕಾರದವರು ಈ ಸ್ಕೂಲುಗಳನ್ನು ಕೊಡತಕ್ಕ ವಿಚಾರದಲ್ಲಿ ಯಾವುದಾದರೂ ಒಂದು ಮುಖ್ಯವಾದ ನೀತಿಯನ್ನಿಟ್ಟುಕೊಂಡು, ಆ ನೀತಿ ತತ್ವಗಳ

(ಶ್ರೀ ಟಿ. ಹನುಮಯ್ಯ.)

ಗನುಸಾರವಾಗಿ ಕಾರ್ಯಕ್ರಮಗಳನ್ನು ನಡೆಸಬೇಕೆಂದು ಸಲಹೆ ಮಾಡುತ್ತೇನೆ. ಈ ದಿವಸ ನಮ್ಮ ಮೈಸೂರು ಸಂಸ್ಥಾನದ ಪ್ರಜಾ ಸಂಖ್ಯೆಯಲ್ಲಿ ಶೇಕಡಾ 75 ರಷ್ಟು ಪ್ರಜಾ ಸಂಖ್ಯೆ ಗ್ರಾಮಾಂತರ ಪ್ರದೇಶದಲ್ಲಿದೆ. ಆ ಜನರಿಗೆ ಸರ್ಕಾರದವರು ಹೆಚ್ಚು ಅನುಕೂಲತೆಗಳನ್ನು ಕಲ್ಪಿಸಬೇಕಾದ್ದು ಧರ್ಮ. ಆದರೆ ಈ ದಿವಸ ಹಾಗೆ ಆಗುತ್ತಿಲ್ಲ.—ಹಿಂದಿದ್ದ ಸರ್ಕಾರ ಏನೊಂದು ನೀತಿಯನ್ನು ಅನುಸರಿಸುತ್ತಿದ್ದಿತೋ ಅದೇ ನೀತಿಯನ್ನೇ ಅನುಸರಿಸುತ್ತಿದೆ. ಇದನ್ನು ಆದಷ್ಟು ಬೇಗ ಬದಲಾವಣೆ ಮಾಡಬೇಕು.

ಇನ್ನು ಹರಿಜನ ವಿದ್ಯಾಭ್ಯಾಸದ ಬಗ್ಗೆ ಅವರಿಗೆ ನೀಡಿರತಕ್ಕ ಸೌಲಭ್ಯಗಳನ್ನು ತೆಗೆದುಕೊಂಡರೆ ಇಂದಿನ ಸರ್ಕಾರ ಅವರಿಗೆ ತುಂಬ ಸಹಾಯಗಳನ್ನು ನೀಡಿದ್ದಾರೆ. ಇವರ ಪ್ರಗತಿ ಸಾಧನೆಗಾಗಿ ಹೆಚ್ಚು ಸಹಾಯ ಮಾಡಿದ್ದಾರೆ. ಆದರೆ ಅಲ್ಲಲ್ಲೇ ಇನ್ನೂ ಕೆಲವು ಕಡೆ ಸ್ಕೂಲುಗಳಿಗೆ ಹರಿಜನ ಬಾಲಕರನ್ನು ಸೇರಿಸಲು ಅಡ್ಡಿ ಆತಂಕಗಳಿರುತ್ತವೆಂದು ತಿಳಿದುಬರುತ್ತದೆ. ಎಜ್ಯುಕೇಷನ್ ಮ್ಯಾನ್ಯುಯಲ್‌ನಲ್ಲಿ ಸೂಕ್ತ ಬದಲಾವಣೆ ಮಾಡಿ ಇದನ್ನು ಸರಿಪಡಿಸಬೇಕೆಂದು ಹೇಳುತ್ತೇನೆ. ಇನ್ನು ಕೆಲವು ಕಡೆ ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲಿರತಕ್ಕಂಥ ಹರಿಜನ ವಿದ್ಯಾರ್ಥಿಗಳಿಗೆ ಗ್ರಾಂಟ್ ಕೊಡತಕ್ಕ ಬಗ್ಗೆ ಬಹಳ ತೊಂದರೆಯನ್ನುಂಟುಮಾಡುತ್ತಿದ್ದಾರೆ. ಆದರೆ ಹರಿಜನರ ವಿಚಾರದಲ್ಲಿ ಈ ಸಂಬಂಧವಾದ ಎಲ್ಲಾ ರೂಲ್ಸುಗಳನ್ನೂ ಇವರ ಅಭಿವೃದ್ಧಿ ದೃಷ್ಟಿಯಿಂದ ಸಡಿಲ ಮಾಡಬೇಕಾದ್ದು ನ್ಯಾಯವಾದ್ದು. ಎಲ್ಲ ಜನಾಂಗದವರಂತೆ ಈ ಜನಾಂಗವೂ ಕೂಡ ಭುಜಕ್ಕೆ ಭುಜ ಕೊಟ್ಟು ದೇಶದ ಸ್ವಾತಂತ್ರ್ಯಕ್ಕೆ ಹೆಚ್ಚಾಗಿ ದುಡಿದಿದ್ದಾರೆ. ಆದಕಾರಣ ಸರ್ಕಾರದವರು ಹರಿಜನರಿಗಿರತಕ್ಕ ನಾನಾ ತೊಂದರೆಗಳನ್ನು ನಿವಾರಣೆ ಮಾಡಿ ಅವರಿಗೆ ಹೆಚ್ಚಿನ ಅನುಕೂಲಗಳನ್ನು ಕಲ್ಪಿಸುವುದು ತುಂಬಾ ಅಗತ್ಯವೆಂದು ಸರ್ಕಾರದವರಲ್ಲಿ ಮನವಿಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ

Sri SYDNEY A. THOMAS (Nominated).—It was not my intention to take part in this discussion to-day, but I was provoked into doing so on reading certain cut motions tabled by Hon'ble Sri Palaniyappan, namely, Nos. 22 and 23 and I felt that it was my duty in fairness to the schools concerned to explain the position as it exists to-day. On reading these cut motions, and anticipating Sri Palaniyappan, I paid a visit to some of the important schools—European Schools—I prefer to call them Anglo-Indian Schools—and I interviewed the heads in order to find out whether there was any truth as alleged in these cut motions and I regret to say that neither of them was based on fact. Cut Motion No. 22 reads as follows :—

"To discuss the immediate need of implementing 'Samskrithi Prachar' in European High Schools in Civil Station, Bangalore."

On interviewing the heads of these Schools, I was given to understand that not only are they implementing the Samskrithi Prachar scheme . . . .

Sri A. G. RAMACHANDRA RAO (Minister for Law and Education).—I believe that Cut motion refers to the reputation of the institution mentioned by my Hon'ble friend. I made enquiries. Just now Sri Palaniyappan who has tabled that cut motion, told me that he did not refer to that School and by mistake it has come up and he mentioned some other institution. I asked him to further verify before giving currency to such an information. Therefore, on that point the Hon'ble Member need not pursue. I am very glad he has brought it to the notice of the House.

Sri SYDNEY A. THOMAS.—I want to disabuse the minds of members of any wrong impression which may gain currency as a result of the cut motion. It is likely to do harm to the school concerned.

Sri A. G. RAMACHANDRA RAO.—We have not heard any allegation against that School. Therefore, that mistake will have to be corrected and I believe Hon'ble Member Sri Palaniyappan will also do so. He informed me about half an hour back and I wanted to bring it your notice.

Sri SYDNEY A. THOMAS.—It was I who drew the attention of Hon'ble Member Sri Palaniyappan. I wish he had acted with some sense of responsibility before tabling cut motions. For Sri Palaniyappan's information I will describe the incident which took place. As the Hon'ble Minister for Education has said, it was not in Baldwin Boys' High School.

Sri A. G. RAMACHANDRA RAO.—Let him verify it and give it. Why do you mention ?

Sri SYDNEY A. THOMAS.—I hope he will gracefully withdraw this cut motion.

Mr. DEPUTY SPEAKER.—He has not moved his cut motion. It is only a general discussion.

Sri SYDNEY A. THOMAS.—In view of what the Hon'ble Minister said, I will leave the matter at that.

*ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—ಸ್ವಾಮಿ, ಮಿಡಲ್ ಸ್ಕೂಲು ವಿದ್ಯಾಭ್ಯಾಸದ ಪದ್ಧತಿಯಲ್ಲಿರತಕ್ಕಂಥ ಲೋಯರ್ ಸೆಕೆಂಡರಿ ಪರೀಕ್ಷೆ ಎಂಬುದನ್ನು ಈಗ ವಜಾಮಾಡಲಾಗಿದೆ. ಹೀಗೆ ಆ ಪರೀಕ್ಷೆಯನ್ನು ತೆಗೆದುಹಾಕಿದ್ದು ಬಹಳ ಅನಾನುಕೂಲವಾಗಿದೆ ಎಂಬುದಾಗಿ ಇತ್ತೀಚೆಗೆ ತಿಳಿದುಬರುತ್ತಿದೆ. ಈ ಹಿಂದೆ ಇಂಥ ಚಿಕ್ಕ ಚಿಕ್ಕ ಮಕ್ಕಳಿಗೆ ಇಷ್ಟು ಎಳೆಯ ವಯಸ್ಸಿನಲ್ಲೇ ಹೀಗೆ ಒಂದು ಪರೀಕ್ಷೆಯನ್ನಿಡತಕ್ಕದ್ದು ಸರಿಯಾದದ್ದಲ್ಲ, ಹೀಗೆ ಮಾಡಿದರೆ ಆ ಮಕ್ಕಳ ವಿದ್ಯಾಭ್ಯಾಸಕ್ಕೆ ತುಂಬ ಅಡಚಣೆಯುಂಟಾಗುತ್ತದೆಂಬಭಾವನೆಯಿಂದ, ಅದು ಸರಿಯಾದದ್ದಲ್ಲವೆಂದು ತೀರ್ಮಾನ ಮಾಡಿ ಅದನ್ನು ವಜಾ ಮಾಡಲಾಯಿತು. ಆದರೆ ಆ ದಿವಸ ಹಾಗೆ ಮಾಡಿದ್ದು ಅಷ್ಟು ಸೂಕ್ತವಾದ್ದಲ್ಲ ಎಂಬುದಾಗಿ ಈಗ ಕಂಡುಬರುತ್ತಿದೆ. ನನ್ನ ಅಭಿಪ್ರಾಯದಲ್ಲಿ ಮತ್ತು ಈ ಬಾಲಕರ ಪೋಷಕರಾದಂಥ ತಂದೆ ತಾಯಿಗಳ ಅಭಿಪ್ರಾಯದಲ್ಲಿ ಹಾಗೂ ಉಪಾಧ್ಯಾಯರುಗಳ ಅಭಿಪ್ರಾಯದಲ್ಲಿ ಎಲ್. ಎಸ್. ಪರೀಕ್ಷೆಯನ್ನು ಮತ್ತೆ ಜಾರಿಗೆ ತರತಕ್ಕದ್ದು ಉತ್ತಮವೆಂದು ಕಂಡುಬರುತ್ತಿದೆ. ಈಗ ನಡೆಯುತ್ತಿರುವಂಥ ರೀತಿಯಲ್ಲೇ ಇಂದಿನ ವಿದ್ಯಾಭ್ಯಾಸ ಪದ್ಧತಿಯನ್ನು ನಾವು ಮುಂದುವರಿಸಿಕೊಂಡು ಹೋದ ಪಕ್ಷದಲ್ಲಿ ಇದರಿಂದ ನಮ್ಮ ವಿದ್ಯಾಭ್ಯಾಸ ಪರಿಣಾಮಕಾರಿಯಾಗಿ ಆಗುವುದಿಲ್ಲವೆಂಬುದಾಗಿ ಕಂಡುಬರುತ್ತದೆ. ಈ ದಿವಸ ಕ್ಲಾಸ್ ಪರೀಕ್ಷೆಗಳು ಎಂಬುದಾಗಿ ನಡೆಯುತ್ತಿವೆ. ಅನೇಕ ಹುಡುಗರು ಮುಂದಿನ ಕ್ಲಾಸಿಗೆ ವರ್ಷ ವರ್ಷೇ ಬರುತ್ತಲೇ ಇದ್ದಾರೆ. ಆದರೆ ಆ ಪೈಕಿ ಯಾವ ಯಾವ ವಿದ್ಯಾರ್ಥಿಯ ಯೋಗ್ಯತೆ ಎಷ್ಟೆಷ್ಟರಮಟ್ಟಿಗಿದೆ ಎಂಬುದನ್ನು ಮಾತ್ರ ಹೇಳುವುದಕ್ಕಾಗುವುದಿಲ್ಲ. ಅಂತೂ ಒಟ್ಟಿಗೆ ಎಲ್ಲರಿಗೂ ಪ್ರಮೋಷನ್ ದೊರೆಯುತ್ತಿದೆ. ಆದರೆ ಹಾಗೆ ಕ್ರಮವಾಗಿ ಪ್ರಮೋಷನ್ ಹೊಂದತಕ್ಕ ಹುಡುಗರ ಪೈಕಿ ಅನೇಕರು ಸರಿಯಾಗಿ ಪಾಠಶಾಲೆಗೇ ಅಟೆಂಡ್ ಆಗುತ್ತಿಲ್ಲ. ಅವರ ತಂದೆ ತಾಯಿಗಳು ಹೋಗಿ ಉಪಾಧ್ಯಾಯರನ್ನು ಹೆದರಿಸಿ ಬೆದರಿಸಿ ಅವರ ಹುಡುಗರನ್ನು ಮುಂದಿನ ತರಗತಿಗಳಿಗೆ ಹಾಕಿಸಿಕೊಂಡಿರತಕ್ಕಂಥ ನಿದರ್ಶನಗಳೂ ಕೂಡ ಅನೇಕ ಇರುತ್ತವೆ. ಹೀಗೆ ಅನೇಕ ಅನಾನುಕೂಲಗಳಿವೆ. ಇದೂ ಅಲ್ಲದೆ ವಿದ್ಯಾಭ್ಯಾಸ ಪ್ರಾರಂಭವಾದ ತಾರೀಖಿನಲಾಗಾಯಿತು 12 ವರ್ಷಗಳತನಕ ಆತನಿಗೆ ಯಾವ ಒಂದು ಪರೀಕ್ಷೆಯನ್ನೂ ಮಧ್ಯದಲ್ಲಿ ಇಡದೆ ಇರುವುದರಿಂದ ಹುಡುಗರು ಆಸಕ್ತಿವಹಿಸಿ ಸರಿಯಾದ ಕ್ರಮದಲ್ಲಿ ವಿದ್ಯಾಭ್ಯಾಸ ಮಾಡಲು ಅವಕಾಶವಿಲ್ಲ. ಅವರು ಬಹಳ ಸೋಮಾರಿಗಳಾಗುತ್ತಿದ್ದಾರೆ. ಆದಕಾರಣ ಈಗಿನ ವಿದ್ಯಾಭ್ಯಾಸ ಕ್ರಮ ಅಷ್ಟೇನೂ ಅನುಕೂಲವಾದದ್ದಲ್ಲ. ಇದೇ ಅಭಿಪ್ರಾಯವನ್ನು ನಾನು ಅನೇಕ ಕಡೆಗಳಲ್ಲಿ ಕೇಳುತ್ತಿದ್ದೇನೆ. ಆದುದರಿಂದ ಈಗ ಮತ್ತೆ ಲೋಯರ್ ಸೆಕೆಂಡರಿ ಪರೀಕ್ಷೆಯನ್ನು ಪ್ರಾರಂಭಿಸುವುದು ಬಹಳ ಸಾಧುವಾಗಿದೆ. ಹೀಗೆ ಮಾಡಿದರೆ ಬಾಲಕರ ಮುಂದಿನ ವಿದ್ಯಾಭ್ಯಾಸಕ್ಕೆ ಹೆಚ್ಚು ಸಹಾಯ ಮಾಡಿದಂತಾಗುತ್ತದೆಂಬುದು ನನ್ನ ಖಚಿತವಾದ ಅಭಿಪ್ರಾಯ. ಈ ದಿವಸ ಹೀಗೆ ಒಂದು ಬಿಗಿಯಾದ ಪರೀಕ್ಷೆಯಿಲ್ಲದೆ ಕೇವಲ ಕ್ಲಾಸ್ ಪರೀಕ್ಷೆ ನಡೆಸುತ್ತಿರುವುದರಿಂದ ಎಲ್ಲಾ ಹುಡುಗರನ್ನೂ ಅವರು ಮುಂದಕ್ಕೆ ತಳ್ಳುತ್ತಿದ್ದಾರೆ. ಇದರಿಂದ ಈ ದಿವಸ ಹುಡುಗರಿಗೆಲ್ಲಾ ಹೈಸ್ಕೂಲುಗಳಲ್ಲಿ ಸೀಟನ್ನು ಒದಗಿಸುವುದಕ್ಕೆ ತುಂಬ ಕಷ್ಟವಾಗಿದೆ. ಅವರಿಗೆ ಕುಳಿತುಕೊಳ್ಳುವುದಕ್ಕೂ ಕೂಡ ಸ್ಥಳ ಸಿಕ್ಕುವುದಿಲ್ಲ. ಈ ನಾನಾ ಕಾರಣಗಳಿಂದ ಈ ದಿವಸ ಪುನಃ ಎಲ್. ಎಸ್. ಪರೀಕ್ಷೆಯನ್ನು ಪ್ರಾರಂಭಿಸುವುದು ಅತ್ಯವಶ್ಯಕವೆಂದು ನಾನು ಅಭಿಪ್ರಾಯಪಟ್ಟಿದ್ದೇನೆ. ಈ ಒಂದು ಪರೀಕ್ಷೆಯನ್ನು ತೆಗೆದುಹಾಕಿದ್ದರಿಂದ ಈ ದಿವಸ ಹೈಸ್ಕೂಲ್ ಸ್ಟ್ಯಾಂಡರ್ಡ್ ಕೂಡ ಬಹಳ ಕಡಮೆಯಾಗುತ್ತಿದೆ. ಆದಕಾರಣ ಇಂದಿನ ರೀತಿಯಲ್ಲೇ ನಮ್ಮ ವಿದ್ಯಾಭ್ಯಾಸ ಕ್ರಮವನ್ನು ಮುಂದುವರಿಸಿದಪಕ್ಷದಲ್ಲಿ ಇದರ ಮುಂದಿನ ಪರಿಣಾಮ ಅಷ್ಟು ಒಳ್ಳೆಯದಾಗಿರುವುದಿಲ್ಲವೆಂದು ನಾನು ಖಚಿತವಾಗಿ ತಿಳಿಸಬಲ್ಲೆ.

ಇನ್ನು ಸ್ಕಾಲರ್‌ಷಿಪ್‌ಗಳ ವಿಚಾರ. ಈ ದಿವಸ ಬ್ಯಾಕ್‌ವರ್ಡ್ ಮತ್ತು ಡಿಪ್ರೆಸ್ಡ್ ಕ್ಲಾಸ್ ಸ್ಕಾಲರ್‌ಷಿಪ್ಸ್ ಎಂದು ಹೇಳಿ ಕೊಡುತ್ತಿದ್ದಾರೆ. ಆದರೆ ಇಲ್ಲಿಗೆ 15—20 ವರ್ಷಗಳ ಹಿಂದೆ ಇದು ಯಾವ ರೀತಿಯಾಗಿ ನಡೆದುಕೊಂಡು ಬರುತ್ತಿತ್ತೋ ಇಂದೂ ಅದೇ ರೀತಿ ನಡೆದುಕೊಂಡು ಹೋಗುತ್ತಿದೆ. ಓದತಕ್ಕ ಹುಡುಗರ ಸಂಖ್ಯೆ ಹೆಚ್ಚಾಗಿರಲಿ—ಕಡಮೆಯಾಗಿರಲಿ ಇದು ಮಾತ್ರ ಹೆಚ್ಚು ಕಡಮೆ ಆಗುತ್ತಿಲ್ಲ. ಓದತಕ್ಕ ಹುಡುಗರ ಸಂಖ್ಯೆ ಈ ದಿವಸ ವಿಪರೀತ ಹೆಚ್ಚಾಗಿದೆ. ಆದರೆ 20 ವರ್ಷಗಳ ಕೆಳಗೆ ಈ ಬಾಬಿಗೆ ಎಷ್ಟು ಹಣವನ್ನು ಕೊಡುತ್ತಿದ್ದರೋ ಈಗಲೂ ಅಷ್ಟೇ ಹಣವನ್ನು ಕೊಡುತ್ತಿದ್ದಾರೆ. ನಾನು ಸ್ಕಾಲರ್‌ಷಿಪ್ ಸಮಿತಿಯಲ್ಲಿ ಸದಸ್ಯನಾಗಿದ್ದು ಕೆಲಸ ಮಾಡಿದ್ದೇನೆ. ಈ ದಿವಸ ಒಂದು ನೂರು ಬಡ ಹುಡುಗರಿದ್ದರೆ ಆ ಪೈಕಿ ಒಂದೊಂದು ಕೋಮಿಗೆ ಸ್ಕಾಲರ್‌ಷಿಪ್ ದೊರೆಯುವುದು ಕೇವಲ ಒಬ್ಬನಿಗೋ ಅಥವಾ ಇಬ್ಬರಿಗೋ. ಹೀಗಾಗಿ ಈ ಒಂದು ವ್ಯವಸ್ಥೆಯನ್ನು ಸರ್ಕಾರದವರು ಏರ್ಪಾಡು ಮಾಡಿದ್ದರೂ ನಿಜಾಂಶದಲ್ಲಿ ಇದರಿಂದ ಉಪಕಾರ ಶೇಕಡ 95 ಜನರಿಗೆ ಆಗುತ್ತಿಲ್ಲ. ಉಪಕಾರ ಮಾಡಬೇಕೆಂದಿದ್ದರೆ ಸರಿಯಾದ ರೀತಿಯಲ್ಲಿ ಮಾಡಿ; ಇಲ್ಲದಿದ್ದರೆ ಇದನ್ನು ತೆಗೆದು ಹಾಕಿಬಿಡಿ.

4 P.M.

ಕೊನೆಯದಾಗಿ, ಸ್ಕೂಲು ಕಟ್ಟಡಗಳ ವಿಷಯ. ಸುಮಾರು 10—15 ವರ್ಷಗಳ ಹಿಂದೆಯೇ ಗ್ರಾಮಸ್ಥರು ಕಟ್ಟಡಕ್ಕೆ ಹಣವನ್ನು ಡಿಪಾಜಿಟ್ ಮಾಡಿದ್ದರೂ ಕೂಡ ತಹಲ್‌ವರೆಗೂ ಆ ಕಟ್ಟಡಗಳನ್ನು ಕಟ್ಟಿಸಿಲ್ಲ. ಇಂಥಾ ಅನೇಕ ನಿದರ್ಶನಗಳನ್ನು ಮಾನ್ಯ ವಿದ್ಯಾಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ನಮ್ಮ ತಾಲ್ಲೂಕಿನಲ್ಲಿ ಎಂದರೆ, ಅರಕಲಗೂಡು ತಾಲ್ಲೂಕಿನ ಗಂಗೂರು ಗ್ರಾಮದಲ್ಲಿ 10—12 ವರ್ಷದ ಹಿಂದೆಯೇ ಹಣ ಡಿಪಾಜಿಟ್ ಮಾಡಿದ್ದಾರೆ. ಪ್ಲಾನು ಮತ್ತು ಎಸ್ಟಿಮೇಟ್ ತಯಾರಾಗಿ ಡಿ. ಪಿ. ಐ. ಅವರ ಆಫೀಸಿಗೆ ಬಂದಿದ್ದುದನ್ನು ನಾನು ಎರಡು ವರ್ಷಗಳ ಹಿಂದೆ ನೋಡಿದ್ದೆ. ಆ ಪ್ಲಾನು ಎಸ್ಟಿಮೇಟು ಏನಾಯಿತೋ ಏನೋ ಅದು ಇಲ್ಲವೇ ಇಲ್ಲ. ಮತ್ತೊಂದು ಪ್ಲಾನು ಮಾಡಿ ಎಂದರೆ ತಹಲ್‌ವರೆಗೂ ಪ್ಲಾನ್ ಮತ್ತು ಎಸ್ಟಿಮೇಟ್ ತಯಾರಾಗಿಲ್ಲ, ಇಂಥ ನಿದರ್ಶನ ಬೇಕಾದಷ್ಟಿದೆ. ಈಗ ಹೊಸದಾಗಿ 500 ರೂಪಾಯಿ ಕಟ್ಟಡಕ್ಕೆ ಕೊಡುತ್ತೇವೆ ಎಂದು ಹೇಳಿ ರೂಲ್ಸ್ ಮಾಡಿದ್ದೀರಿ. 10—15 ವರ್ಷಗಳಿಗೆ ಹಿಂದೆಯೇ ಯಾವ ಗ್ರಾಮಸ್ಥರು ಕಟ್ಟಡಕ್ಕಾಗಿ ಹಣವನ್ನು ಡಿಪಾಜಿಟ್ ಮಾಡಿದ್ದಾರೋ ಅದಕ್ಕೆ ಹೊಸ ರೂಲ್ಸನ್ನು ಅನ್ವಯಿಸದೆ ಹಿಂದಿನ ರೂಲ್ಸ್ ಪ್ರಕಾರವೇ ಹಣವನ್ನು ಕೊಟ್ಟು ಆ ಗ್ರಾಮಗಳಿಗೆ ಕಟ್ಟಡಗಳನ್ನು ಕಟ್ಟಿಸಿ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಟಿ. ಜಿ. ತಿಮ್ಮೇಗೌಡ (ತಿಪಟೂರು).—ಮಾನ್ಯ ಅಧ್ಯಕ್ಷರೇ, ಸಂಸ್ಥಾನದಲ್ಲಿ ಸರ್ಕಾರದ ಭರವಸೆಯಮೇಲೆ ಮಾನ್ಯ ಸದಸ್ಯರು ಹೇಳಿದಂತೆ ಸಾರ್ವಜನಿಕರು ಕಟ್ಟಡಕ್ಕಾಗಿ ಬೇಕಾದಷ್ಟು ಹಣವನ್ನು ಡಿಪಾಜಿಟ್ ಮಾಡಿಕೊಂಡು ಬಂದಿರುತ್ತಾರೆ. ಸರ್ಕಾರದವರು ಇಲ್ಲಿಯವರೆಗೂ ಹಣ ಡಿಪಾಜಿಟ್ ಮಾಡಿ ಏಳು—ಎಂಟು ವರ್ಷಗಳಾಗಿದ್ದರೂ ಕೂಡ ಅನೇಕ ಗ್ರಾಮಗಳಲ್ಲಿ ಕಟ್ಟಡಗಳನ್ನು ಕಟ್ಟಿಸಿಕೊಟ್ಟಿಲ್ಲ. ಈ ರೀತಿಯಾದರೆ ಸರ್ಕಾರದವರಲ್ಲಿ ಸಾರ್ವಜನಿಕರಿಗಿರತಕ್ಕ ಒಂದು ನಂಬಿಕೆ ಹೋಗಲಿಕ್ಕೆ ಅವಕಾಶವಾಗುತ್ತದೆ. ಈಗ ಮಾನ್ಯ ಸದಸ್ಯರು ಹೇಳಿದಂತೆ ಆ ಕಟ್ಟಡಗಳನ್ನು ತುರ್ತಾಗಿ ಕಟ್ಟಿಸಬೇಕಾದ್ದು ಸರ್ಕಾರದ ಜವಾಬ್ದಾರಿಯಾಗಿದೆ. ಅನೇಕ ಕಡೆ ಕಟ್ಟಡಗಳು ಇಲ್ಲದೆ ವಿದ್ಯಾರ್ಥಿಗಳು ಷೆಡ್ಡುಗಳು ಮತ್ತು ದೇವಾಲಯಗಳಲ್ಲಿ ವ್ಯಾಸಂಗ ಮಾಡುತ್ತಾಯಿರುತ್ತಾರೆ. ನಮ್ಮ ತಿಪಟೂರು ತಾಲ್ಲೂಕು ನೊಣವಿನಕರೆಯಲ್ಲಿ ಸಾರ್ವಜನಿಕರು ಹೈಸ್ಕೂಲು ಕಟ್ಟಡಕ್ಕಾಗಿ 28 ಸಾವಿರ ರೂಪಾಯಿಗಳನ್ನು ಡಿಪಾಜಿಟ್ ಮಾಡಿ ಐದು ವರ್ಷಗಳಾಗುತ್ತಾ ಬಂದಿದೆ. ಸರ್ಕಾರದವರು ಇಲ್ಲಿಯವರೆಗೂ ಕಟ್ಟಡವನ್ನು ಕಟ್ಟಿಸಿಲ್ಲ. ಹೀಗಾದರೆ ಆ ವಿದ್ಯಾರ್ಥಿಗಳು ಎಲ್ಲಿ ವ್ಯಾಸಂಗ ಮಾಡಬೇಕು ಅವರಿಗೆ ಎಷ್ಟು ಕಷ್ಟವಿದೆ ಎಂಬುದನ್ನು ಸರ್ಕಾರದವರು ನಿಜವಾಗಿಯೂ ಪರಿಶೀಲನೆ ಮಾಡಬೇಕು. ಅನೇಕ ಕಡೆ ದೇವಾಲಯದಲ್ಲಿ, ಛತ್ರಗಳಲ್ಲಿ ಮತ್ತು ಪಂಚಾಯಿತಿ ಹಾಲ್‌ನಲ್ಲಿ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಾಯಿದ್ದಾರೆ, ಆದ್ದರಿಂದ ಸರ್ಕಾರದವರು ಕೂಡಲೇ ಪರಿಶೀಲನೆ ಮಾಡಿ ಕಟ್ಟಡಗಳನ್ನು ತುರ್ತಾಗಿ ಕಟ್ಟಿಸಿಕೊಡಬೇಕೆಂದು ಪ್ರಾರ್ಥಿಸುತ್ತೇನೆ. ಅದೇ ಹೋಬಳಿ ಆಲಬೂರಿನಲ್ಲಿ ಒಂದು ಸ್ಕೂಲು ಮಂಜೂರಾಗಿ ಅದಕ್ಕೆ ಕಟ್ಟಡಕ್ಕಾಗಿ ಒಂದು ಎಸ್ಟಿಮೇಟ್ ತಯಾರಾಗಿತ್ತು. ಅದು ಒಂದು ವರ್ಷಕ್ಕೆ ಮೇಲ್ಪಟ್ಟಾಗಿದೆ. ಅಲ್ಲಿ ವ್ಯಾಸಂಗಮಾಡುತ್ತಾಯಿರತಕ್ಕ ವಿದ್ಯಾರ್ಥಿಗಳು ಷೆಡ್‌ನಲ್ಲಿ ವ್ಯಾಸಂಗ ಮಾಡುತ್ತಾಯಿದ್ದಾರೆ, ಒಂದು ಸಾರಿ ಅದರ ಹತ್ತಿರ ಇದ್ದ ಮರ ಬಿದ್ದು ಅದು ಜಖಂ ಆಗಿದೆ. ಈ ರೀತಿ ಎಲ್ಲಾ ಇರುವುದರಿಂದ ಸರ್ಕಾರದವರು ಸ್ಕೂಲುಗಳನ್ನು ಮಂಜೂರುಮಾಡಿದ ಕೂಡಲೇ ಕಟ್ಟಡವನ್ನು ಸಹ ಕಟ್ಟಿಸಲಿಕ್ಕೆ ಖಂಡಿತವಾಗಿಯೂ ಪ್ರಯತ್ನ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ನಾನು ಈ ಡಿಮ್ಯಾಂಡಿಗೆ ಸಂಬಂಧಪಟ್ಟಂತೆ ತಿಪಟೂರಿನಲ್ಲಿ ಒಂದು ಇಂಟರ್‌ಮೀಡಿಯೆಟ್ ಕಾಲೇಜನ್ನು ಸ್ಥಾಪನೆ ಮಾಡಬೇಕೆಂದು ಖೋತಾ ನಿರ್ಣಯವನ್ನು ಕಳುಹಿಸಿದ್ದೇನೆ. ತಿಪಟೂರು ಟೌನ್ 18 ಸಾವಿರ ಪ್ರಜಾಸಂಖ್ಯೆವುಳ್ಳದ್ದಾಗಿದೆ. ವಿದ್ಯಾರ್ಥಿ ವಿದ್ಯಾರ್ಥಿನಿಯರು ಸುಮಾರು 700ರವರೆಗೂ ರೇಪಲೂರು ಹೈಸ್ಕೂಲಿನಲ್ಲಿ ವ್ಯಾಸಂಗ ಮಾಡುತ್ತಾಯಿದ್ದಾರೆ. ತಿಪಟೂರು ಒಂದು ಸಬ್‌ಡಿವಿಜನ್ ಆಗಿ ತಿಪಟೂರು ಸಬ್ ಡಿವಿಜನ್‌ನ ಮೂರು ತಾಲ್ಲೂಕುಗಳಿಂದ ಏಳು—ಎಂಟು ಹೈಸ್ಕೂಲುಗಳಿದ್ದು 3,000 ವಿದ್ಯಾರ್ಥಿಗಳವರೆಗೂ ವ್ಯಾಸಂಗ ಮಾಡತಕ್ಕ ಸ್ಥಳವಾಗಿದೆ. ತಿಪಟೂರು ಟೌನ್ ವ್ಯಾಪಾರ ಕೇಂದ್ರವಾಗಿದೆ. ಅಲ್ಲಿ ವ್ಯಾಸಂಗಮಾಡತಕ್ಕ 3,000 ಜನ ವಿದ್ಯಾರ್ಥಿಗಳು ಎಸ್ ಎಸ್.ಎಲ್.ಸಿ. ಪರೀಕ್ಷೆ ಆದಕೂಡಲೇ ಮುಂದಿನ ವ್ಯಾಸಂಗಕ್ಕೆ ಬೆಂಗಳೂರಿಗೆ ಬರಬೇಕಾಗಿದೆ. ಬೆಂಗಳೂರಿಗೆ ಬರಬೇಕೆಂದರೆ ಅನೇಕ ತೊಂದರೆಗಳುಂಟಾಗಿ ಆ ಬಡವಿದ್ಯಾರ್ಥಿಗಳು ಅಲ್ಲಿಗೇ ತಮ್ಮ ವ್ಯಾಸಂಗವನ್ನು ನಿಲ್ಲಿಸಬೇಕಾಗುತ್ತದೆ. ಆದ್ದರಿಂದ ನಾನು ಈ ಸಂದರ್ಭದಲ್ಲಿ ಸರ್ಕಾರದವರನ್ನು ಕೇಳಿಕೊಳ್ಳುವುದೇನೆಂದರೆ ತಿಪಟೂರು ಒಂದು ಕೇಂದ್ರ ಸ್ಥಳವಾಗಿದ್ದು, ತುಮಕೂರು, ಹಾಸನ, ಅರಸೀಕೆರೆ ಈ ಪ್ರಾಂತ್ಯಗಳಿಗೆ ಮಧ್ಯದಲ್ಲಿದೆ. ಮಧ್ಯದಲ್ಲಿರುವುದರಿಂದ ತಿಪಟೂರಿಗೆ ಒಂದು ಇಂಟರ್‌ಮೀಡಿಯೆಟ್ ಕಾಲೇಜನ್ನು ಕೊಡಿಸಿಕೊಡಬೇಕು. ಅಲ್ಲದೇ ಇದಕ್ಕೆ ಬೇಕಾದ ಎಲ್ಲ ಸೌಲಭ್ಯಗಳೂ ಅಲ್ಲಿ ಇದೆ. ಒಂದು ಸೈಟನ್ನು ಕೂಡ ಮುನಿಸಿಪಾಲಿಟಿಯವರು ಕೊಟ್ಟಿದ್ದಾರೆ. ಬೇಕಾದಷ್ಟು ಜಾಗ ಇದೆ. ನೀರಿನ ವಸತಿ ಇದೆ. ವಾಯುಗುಣ ಚೆನ್ನಾಗಿದೆ. ಈ ಎಲ್ಲಾ ವಿಷಯಗಳನ್ನು ಯೋಚನೆ ಮಾಡಿ ತಿಪಟೂರು ಟೌನ್‌ಗೆ ಒಂದು ಇಂಟರ್‌ಮೀಡಿಯೆಟ್ ಕಾಲೇಜನ್ನು ತುರ್ತಾಗಿ ಕೊಡಿಸಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—ಸ್ವಾಮಿ, ಈ ಡಿಮ್ಯಾಂಡನ್ನು ಸರ್ವಾನುಮತದಿಂದ ಎಲ್ಲರೂ ಕೂಡ ಅನುಮೋದಿಸಬೇಕು. ಆ ರೀತಿ ಅನುಮೋದಿಸುವವರ ಪೈಕಿ ನಾನೂ ಒಬ್ಬ. ನಮ್ಮ ಮೈಸೂರು ಸರ್ಕಾರದವರು ಒಂದು ಹೆಮ್ಮೆ ಪಡತಕ್ಕ ವಿಚಾರ ಎಂದರೆ ಇಂಡಿಯಾ ದೇಶದಲ್ಲಿ ಯಾವ ಪ್ರಾಂತ್ಯದಲ್ಲೂ ಕೂಡ ಖರ್ಚುಮಾಡದೇ ಇರುವಷ್ಟು ಹಣವನ್ನು ಈ ವಿದ್ಯಾಭ್ಯಾಸಕ್ಕಾಗಿ ಖರ್ಚುಮಾಡುತ್ತಾ ಇದ್ದಾರೆ, ಸುಮಾರು 4 ಕೋಟಿ 87 ಲಕ್ಷ 50 ಸಾವಿರ ರೂಪಾಯಿಗಳು ಖರ್ಚಾಗುತ್ತಾ ಇವೆ. ಮೈಸೂರು ದೇಶದ ಉತ್ಪತ್ತಿಯಲ್ಲಿ ಸುಮಾರು ಕಾಲ ಭಾಗದಷ್ಟು ಹಣವನ್ನು ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡಿದರೂ ಕೂಡ ಇದರ ವ್ಯವಸ್ಥೆ ಸ್ವಲ್ಪಮಟ್ಟಿಗೆ ಸರಿಯಾಗಿಲ್ಲವೇನೋ ಎಂದು ನನಗೆ ಅನ್ನಿಸುತ್ತದೆ. ಏಕೆಂದರೆ ನಮ್ಮ ಸ್ನೇಹಿತರು ಹೇಳಿದಂತೆ ಅನೇಕಕಡೆ ಸ್ಕೂಲುಗಳನ್ನು ಚಾವಡಿಯೊಳಗೆ, ದೇವಸ್ಥಾನದಲ್ಲಿ ನಡೆಸತಕ್ಕ ಪರಿಸ್ಥಿತಿ ಈಗಲೂ ಕೂಡ ನಮ್ಮ ಕಡೆ ಇದೆ. ಸಾಮಾನ್ಯವಾಗಿ ಹರಿಜನರ ಪ್ರವೇಶಕ್ಕೆ ಅವಕಾಶವಿಲ್ಲ ಎಂದು ಹೇಳತಕ್ಕ ಕಾಲ ಹೋಗಿ ಸವರ್ಣ ಹಿಂದೂಗಳು ಮತ್ತು ಹರಿಜನರು ಎಲ್ಲರೂ ಕಲೆತು ವಿದ್ಯಾಭ್ಯಾಸ ಪಡೆಯುತ್ತಾಯಿರತಕ್ಕ ಈ ಕಾಲದಲ್ಲಿ ಎಲ್ಲಾ ಗ್ರಾಮದಲ್ಲೂ ಕೂಡ ಶಾಲಾ ಕಟ್ಟಡಗಳನ್ನು ಕಟ್ಟಿಸುವುದು ಬಹಳ ಸಾಧುವಾದದ್ದು. ಮೈಸೂರು ದೇಶದಲ್ಲಿರತಕ್ಕ ಎಲ್ಲಾ ಹಳ್ಳಿಗಳಲ್ಲೂ ಕೂಡ ಪ್ರತಿಯೊಬ್ಬ ರೈತರೂ ಎಜ್ಯುಕೇಷನ್ ಸೆಸ್ ಕೊಡುತ್ತಾ ಇರುವುದು ಎಲ್ಲರ ಗಮನದಲ್ಲೂ ಇದೆ. ತಾವು ಪಟ್ಟಣಗಳಲ್ಲೇ ಹೆಚ್ಚು ಹೆಚ್ಚು ಸ್ಕೂಲುಗಳನ್ನು ಮತ್ತು ಕಾಲೇಜುಗಳನ್ನು ತೆಗೆದು ಹಣ ಖರ್ಚುಮಾಡುತ್ತಾ ಇರುವುದನ್ನು ನೋಡಿದರೆ ಹಳ್ಳಿಯಲ್ಲಿರತಕ್ಕ ರೈತರು ವಿದ್ಯಾಭ್ಯಾಸಕ್ಕೆ ಕೊಡತಕ್ಕ ಕಂದಾಯ ಸರ್ಕಾರದವರ ಗಮನದಲ್ಲಿ ಇದೆಯೋ ಇಲ್ಲವೋ ಎಂದು ಅನುಮಾನವಾಗುತ್ತಾ ಇದೆ.

ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಬೇಕೆಂದಿದ್ದೇನೆ. ಮೊನ್ನೆತಾನೆ ಡೈರೆಕ್ಟರ್ ಸಾಹೇಬರವರು ಒಂದು ಆರ್ಡರನ್ನು ಹೊರಡಿಸಿದ್ದಾರೆ. ಒಂದು ಪ್ರೈಮರಿ ಶಾಲಾ ಕಟ್ಟಡ ಕಟ್ಟಬೇಕಾಗಿದ್ದರೆ ಸರ್ಕಾರದವರು 500 ರೂಪಾಯಿ ಕೊಡುತ್ತಾರೆ ಗ್ರಾಮಸ್ಥರು ಇನ್ನು ಉಳಿದ 500 ರೂಪಾಯಿ ಕೊಡಬೇಕೆಂದು ಆ ಆಜ್ಞೆಯಲ್ಲಿ ತಿಳಿಸಲಾಗಿದೆ. ಇದೇನೋ ಅನುಕೂಲವಾದದ್ದು. ಡೈರೆಕ್ಟರ್ ಸಾಹೇಬರವರು ನಮ್ಮಲ್ಲಿಗೆ ಬಂದಿದ್ದಾಗ ನಾನೂ ಕೂಡ ಅವರೊಡನೆ ಮಾತನಾಡಿದೆ. ಈ ಕಟ್ಟಡಗಳಿಗೆ ಮೇಲ್‌ಛಾವಣಿ ಹಾಕುವುದು ಯಾವುದೆಂದರೆ ಆಸ್‌ಬೆಸ್ಟಾಸ್‌ಷೀಟುಗಳು. ಸ್ವಾಮಿ ಸಾಮಾನ್ಯವಾಗಿ ಹಳ್ಳಿಗಳಲ್ಲಿ ಈ ಸ್ಕೂಲುಗಳಿರುವುದು ಊರಿನ ಹೊರಗಡೆ, ಅಲ್ಲಿ ವಿಷ

ರೀತಿ ಗಾಳಿ ಬೀಸುತ್ತದೆ. ಜೋರಾಗಿ ಗಾಳಿ ಬೀಸಿತು ಎಂದರೆ ಆ ಷೀಟುಗಳೆಲ್ಲಾ ಹಾರಿಹೋಗುತ್ತವೆ, ಯಾವ ತಂದೆತಾಯಿಗಳು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುತ್ತಾರೋ ಆ ಮಕ್ಕಳು ವಾಪಸ್ಸು ಹೋಗುವುದೇ ಕಷ್ಟ. ಆದ್ದರಿಂದ ಸರ್ಕಾರದವರು ಯೋಚನೆ ಮಾಡಿ ಇದಕ್ಕೆ ತಕ್ಕ ವ್ಯವಸ್ಥೆ ಮಾಡಬೇಕು ಮತ್ತು ಈ ಕಟ್ಟಡಗಳ ಮ್ಯಾನೇಜ್‌ಮೆಂಟನ್ನು ಇಂಜನಿಯರಿಂಗ್ ಇಲಾಖೆಗೆ ವಹಿಸದೇ ಇದಕ್ಕೇ ಬೇರೆ ಒಬ್ಬ ಅಧಿಕಾರಿಗಳನ್ನು ಇಟ್ಟು ಅವರ ವಶಕ್ಕೆ ವಹಿಸುವುದು ಒಳ್ಳೆಯದು ಎಂದು ಹೇಳುತ್ತೇನೆ.

ಶ್ರೀ ಎಚ್. ಕೆ. ಸಿದ್ದಯ್ಯ (ಬೇಲೂರು-ಅನುಸೂಚಿತ ಜಾತಿಗಳು).—ಸ್ವಾಮಿ, ಮಲೆನಾಡಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಬಹಳ ಕಡಿಮೆ, ಅದರಲ್ಲೂ ಹರಿಜನರ ಮಕ್ಕಳಲ್ಲಿ ವಿದ್ಯಾಭ್ಯಾಸ ಮಾಡುವವರ ಸಂಖ್ಯೆ ಬಹಳ ಕಡಿಮೆಯಾಗಿದೆ, ಏಕೆಂದರೆ ಮಲೆನಾಡಿನಲ್ಲಿ ವಿದ್ಯಾಭ್ಯಾಸ ಮಾಡುವುದಕ್ಕೆ ಬಡವರಿಗೆ ಅನುಕೂಲವಿಲ್ಲ. ಮಲೆನಾಡಿನಲ್ಲಿ ಕಾಫಿ, ಏಲಕ್ಕಿ ಬೆಳೆಯುತಕ್ಕ ಪ್ಲಾಂಟರುಗಳೇ ಜಾಸ್ತಿ. ಅವರೆಲ್ಲರೂ ಶ್ರೀಮಂತರು, ಅವರಿಗೆ ಏನು ಅನುಕೂಲಬೇಕಾದರೂ ಸಿಕ್ಕುತ್ತದೆ. ಅದೇ ಬಡವರಿಗೆ ಯಾವ ಅನುಕೂಲವೂ ಸಿಕ್ಕದೇ ಅವರು ಜೀವನ ಮಾಡುವುದೇ ಬಹಳ ಕಷ್ಟವಾಗಿದೆ. ಆದ್ದರಿಂದ ಅವರ ಮಕ್ಕಳ ವಿದ್ಯಾಭ್ಯಾಸಕ್ಕೂ ಕೂಡ ಬಹಳ ಕಷ್ಟ. ಮೈಸೂರು ದೇಶದ ಮಲೆನಾಡಿನಲ್ಲಿ ನಮ್ಮ ವಿದ್ಯಾ ಇಲಾಖೆಯವರು ಒಂದು ಕಡೆಯಿಂದ ಸರ್ವೇ ಮಾಡಿ ನೋಡಿದರೆ ಈ ಮಕ್ಕಳ ವಿದ್ಯಾಭ್ಯಾಸ ಯಾವ ಮಟ್ಟದಲ್ಲಿ ಜರುಗುತ್ತಾಯಿದೆ ಎಂಬುದು ಅವರಿಗೇ ಗೊತ್ತಾಗುತ್ತದೆ. ನಮ್ಮ ಘನ ಸರ್ಕಾರದವರು ಈ ಮಕ್ಕಳ ವಿದ್ಯಾಭಿವೃದ್ಧಿಗಾಗಿ ಐದು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಾಯಿರುವುದು ನಮಗೆಲ್ಲರಿಗೂ ಗೊತ್ತಿದೆ. ಬೇಕಾದಷ್ಟು ಹಣ ಖರ್ಚು ಮಾಡುತ್ತಾ ಇದ್ದಾರೆ. ಬೇಕಾದಷ್ಟು ಸಹಾಯವನ್ನು ನೀಡುತ್ತಾಯಿದ್ದಾರೆ. ಆದರೆ ಈ ಸಹಾಯ ಎಲ್ಲಿ ವಿದ್ಯಾಭ್ಯಾಸಕ್ಕೆ ಹೆಚ್ಚು ಅನುಕೂಲವಿಲ್ಲವೋ ಅಂಥ ಕಡೆಗೆ ಸಿಕ್ಕದೆ ಜನರು ಬಹಳವಾಗಿ ಒದ್ದಾಡುತ್ತಾಯಿದ್ದಾರೆ ಎಂದು ನಾನು ಹೇಳುತ್ತೇನೆ. ಮಿಡ್ಲ್‌ಸ್ಕೂಲು, ಹೈಸ್ಕೂಲು, ಪ್ರೈಮರೀ ಸ್ಕೂಲುಗಳನ್ನು ಕೊಡುವಾಗ ಮೈಸೂರು ದೇಶದ ಮಲೆನಾಡಿನ ಭಾಗವನ್ನು ಬಿಟ್ಟು ಇತರ ಭಾಗಗಳಿಗೇ ಹೆಚ್ಚಾಗಿ ಕೊಡುತ್ತಾ ಇದ್ದೀರಿ. ಒಂದು ಸರ್ವೇ ಮಾಡಿ ನೋಡಿದರೆ ಅದು ತಮಗೇ ಗೊತ್ತಾಗುತ್ತದೆ. ಆದ್ದರಿಂದ ಈ ವರ್ಷವಾದರೂ ಹೈಸ್ಕೂಲುಗಳನ್ನು ಕೊಡುವಾಗ ಮಲೆನಾಡಿನ ಕಡೆಗೆ ಹೆಚ್ಚು ಗಮನ ಕೊಡುತ್ತೀರೆಂದು ನಂಬಿದ್ದೇನೆ. ಒಟ್ಟಿನಲ್ಲಿ ಮಲೆನಾಡಿನ ಮಕ್ಕಳ ವಿದ್ಯಾಭ್ಯಾಸಕ್ಕೆ ಸರ್ಕಾರದವರು ಇನ್ನು ಹೆಚ್ಚು ಹಣಖರ್ಚುಮಾಡಿ ಪ್ರೈಮರಿ, ಮಿಡ್ಲ್, ಹೈಸ್ಕೂಲು ಆದಿಯಾಗಿ ಕಡ್ಡಾಯ ಶಿಕ್ಷಣಕ್ಕೆ ಏರ್ಪಾಡು ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಕೆ. ಲಕ್ಕಪ್ಪ (ಚನ್ನರಾಯಪಟ್ಟಣ).—ಶ್ರೀಮಾನ್ ತಿಮ್ಮಪ್ಪಗೌಡರು ಮಾತನಾಡುತ್ತಾ ಮಿಡ್ಲ್ ಸ್ಕೂಲ್ ಲೋಯರ್ ಸೆಕೆಂಡರಿ ಪರೀಕ್ಷೆಯನ್ನು ಪುನಃ ಜಾರಿಗೆ ತರಬೇಕೆಂದು ಹೇಳಿದರು. ಅದನ್ನು ನಾನು ಬಹಳ ತೀವ್ರವಾಗಿ ವಿರೋಧಿಸುತ್ತೇನೆ. ಕೆಲವು ವರ್ಷಗಳ ಹಿಂದೆ ಈ ವಿಚಾರದಲ್ಲಿ ಕೂಲಂಕಷವಾಗಿ ಯೋಚನೆ ಮಾಡಿ ಈ ಪರೀಕ್ಷೆಯನ್ನು ತೆಗೆದುಹಾಕುವುದರ ಅವಶ್ಯಕತೆಯನ್ನು ಮನಗಂಡು ತೆಗೆದುಹಾಕಲಾಯಿತು. ಇದು ಈಗಾಗಲೇ ನಾಲ್ಕಾರು ವರ್ಷಗಳಿಂದ ಜಾರಿಯಲ್ಲಿ ಬಂದಿದೆ. ಹಿಂದೆ ಎಲ್. ಎಸ್. ಪರೀಕ್ಷೆಯನ್ನಿಟ್ಟುಕೊಂಡಿದ್ದಾಗ ಪ್ರಾಥಮಿಕ ಪಾಠಶಾಲೆಗಳಿಗೆ ಎಲ್. ಎಸ್. ಪರೀಕ್ಷೆ ಪಾಸ್‌ಆದವರನ್ನು ಉಪಾಧ್ಯಾಯರುಗಳನ್ನಾಗಿ ನೇಮಕ ಮಾಡಿಕೊಳ್ಳುತ್ತಾಯಿದ್ದರು. ಆದರೆ ಈಗಿನ ಕ್ರಮದ ಪ್ರಕಾರ ಕೊನೆ ಪಕ್ಷ ಎಸ್. ಎಸ್. ಎಲ್. ಸಿ. ಆದರೂ ಆಗಿರಬೇಕು, ಎಂದು ಹೇಳಿ ವಿಧಾಯಕವಾಗಿರುವ ಸಂದರ್ಭದಲ್ಲಿ ಮಿಡ್ಲ್‌ಸ್ಕೂಲ್ ಎಲ್. ಎಸ್. ಪರೀಕ್ಷೆಯನ್ನು ಪುನಃ ಜಾರಿಗೆ ತರುವುದು ಖಂಡಿತವಾಗಿಯೂ ಸಾಧುವಾದುದಲ್ಲ. ಪಟ್ಟಣದಲ್ಲಿ ಇರತಕ್ಕವರಿಗೆ ಮತ್ತು ಮಕ್ಕಳನ್ನು ಓದಿಸಿ ಅವರನ್ನು ವಿದ್ಯಾವಂತರನ್ನಾಗಿ ಮಾಡಬೇಕೆಂಬ ಮನೋಭಾವವಿರತಕ್ಕವರಿಗೆ ಮತ್ತು ಮಕ್ಕಳನ್ನು ಓದಿಸುವುದಕ್ಕೆ ಅನುಕೂಲತೆ ಇರತಕ್ಕವರಿಗೆ ಮಿಡ್ಲ್‌ಸ್ಕೂಲ್ ಪರೀಕ್ಷೆಯಲ್ಲಿ ಫೇಲ್ ಆದರೂ ಸಹ ಓದಿಸತಕ್ಕ ಶಕ್ತಿಯಿರುತ್ತದೆ, ಓದಿಸುತ್ತಾರೆ. ಆದರೆ ಗ್ರಾಮಾಂತರಗಳಲ್ಲಿ ಓದುತ್ತಾಯಿರತಕ್ಕ ಮಕ್ಕಳಿಗೆ ಒಂದು ವೇಳೆ ಅವರೇನಾದರೂ ಎಲ್. ಎಸ್. ಪರೀಕ್ಷೆಗೆ ಕಟ್ಟಿ ಫೇಲ್ ಆದರು ಎಂದರೆ ಅವರ ವಿದ್ಯಾಭ್ಯಾಸ ಅಲ್ಲಿಗೇ ಮುಗಿಯಿತು. ಖಂಡಿತವಾಗಿಯೂ ಅವರ ವಿದ್ಯಾಭ್ಯಾಸವನ್ನು ಮುಂದುವರಿಸುವುದಿಲ್ಲ. ಗ್ರಾಮಾಂತರಗಳಲ್ಲಿರತಕ್ಕ ಜನಗಳ ಮನೋಭಾವ ನಮಗೆ ಗೊತ್ತು. ಇತ್ತೀಚೆಗೆ ಸರ್ಕಾರದವರು ಕೊನೆ ಪಕ್ಷ ಹೈಸ್ಕೂಲು ಮಟ್ಟದ ವಿದ್ಯಾಭ್ಯಾಸವನ್ನಾದರೂ ಮಕ್ಕಳಿಗೆ ಕೊಡಬೇಕಾದ್ದು ಅಗತ್ಯ ಎಂದು ಭಾವಿಸಿ ದೇಶಾದ್ಯಂತ ಅನೇಕ ಹೈಸ್ಕೂಲುಗಳನ್ನು ಸ್ಥಾಪನೆ ಮಾಡಿದ್ದಾರೆ. ಆದ್ದರಿಂದ ಮಿಡ್ಲ್ ಸ್ಕೂಲ್ ಪರೀಕ್ಷೆಯನ್ನು ಪುನಃ ಜಾರಿಗೆ ತರದೇ ಈಗಿರುವಂತೆಯೇ ಮುಂದುವರಿಸಿಕೊಂಡು ಹೋಗುವುದು ಸೂಕ್ತವಾಗಿದೆ.

*ಶ್ರೀ ಕೆ. ವಿ. ಬೈರೇಗೌಡ (ಬೆಂಗಳೂರು ಉತ್ತರ).—ಸ್ವಾಮಿ, ಎರಡು ಅಂಶಗಳನ್ನು ಮಾತ್ರ ಮಾನ್ಯ ವಿದ್ಯಾಮಂತ್ರಿಗಳ ಗಮನಕ್ಕೆ ತರಬೇಕೆಂದು ಇಷ್ಟಪಡುತ್ತೇನೆ. ಈಗಾಗಲೇ ಕೆಲವು ಸ್ನೇಹಿತರು ಬಹಳವಾಗಿ ಹೇಳಿದ್ದಾರೆ. ಮುನಿಸಿಪಲ್ ಮತ್ತು ಜಿಲ್ಲಾ ಬೋರ್ಡು ಹೈಸ್ಕೂಲುಗಳನ್ನು ಸರ್ಕಾರದ ಆಡಳಿತಕ್ಕೆ ತೆಗೆದುಕೊಳ್ಳಬೇಕು. ಹಾಗೆ ತೆಗೆದುಕೊಳ್ಳದೆ ಹೋದ ಪಕ್ಷದಲ್ಲಿ ಅವುಗಳನ್ನು ನಡೆಸುವುದಕ್ಕೆ ಅಸಾಧ್ಯವೆಂಬ ಅಂಶವನ್ನು ಮಂತ್ರಿಗಳ ಗಮನಕ್ಕೆ ತರುತ್ತೇನೆ.

ಯಲಹಂಕ ಮಾಧ್ಯಮಿಕ ಶಾಲೆಗೆ ಕಟ್ಟಡದ ಅವಶ್ಯಕತೆ ಇದೆ ಎಂದು ಹೋದ ವರ್ಷವೇ ಹೇಳಿದ್ದೆ. ಹಾಲಿ ಈ ಸ್ಕೂಲು ಅಲ್ಲಿರುವ ಮುಸಾಫರ್‌ಖಾನೆಯಲ್ಲಿ ನಡೆಯುತ್ತಿದೆ. ಕೊಠಡಿಗಳು ಬಹಳ ಚಿಕ್ಕವು. ಹುಡುಗರಿಗೆ ಸ್ಥಳವೇ ಸಾಲದು. ಇವೊತ್ತಿನವರೆಗೂ ಕಟ್ಟಡದ ಕೆಲಸವನ್ನು ಮಾಡಲು ಜಾರಿಗೆ ಕೊಟ್ಟಿಲ್ಲ. ಮುನಿಸಿಪಾಲಿಟಿಯವರೇನೋ ಹಣವನ್ನು ಖರ್ಚುಮಾಡಿ 8 ಎಕರೆ ಜಮೀನನ್ನು ಅಕ್ವೈರ್ ಮಾಡಿದ್ದಾರೆ. ಹೈಸ್ಕೂಲು ಮತ್ತು ಮಿಡಲ್‌ಸ್ಕೂಲು ಎರಡು ಕಟ್ಟಡಗಳಿಗೂ ಬೇಕಾಗುವಷ್ಟು ಸ್ಥಳವಿದೆ. ಈಗಿರುವ ಕಟ್ಟಡದಲ್ಲಿ ಬೇಸಿಗೆಯಲ್ಲಿ ಪಾಠ ಪ್ರವಚನಗಳನ್ನು ನಡೆಸುವುದಕ್ಕೆ ಸಾಧ್ಯವಿಲ್ಲವೆಂದು ಸ್ಪಷ್ಟವಾಗಿ ಹೇಳಬೇಕಾಗಿದೆ. ಆದುದರಿಂದ ಸ್ಕೂಲು ಕಟ್ಟಡ ಜಾಗ್ರತೆಯಾಗಿ ತಯಾರಾಗಲು ಏರ್ಪಾಡು ಮಾಡಬೇಕು.

Social Welfare Board ಗೆ ಒಂದು ಲಕ್ಷ ಚಿಲ್ಲರೆ ರೂಪಾಯಿಗಳನ್ನು ಒದಗಿಸಿದ್ದಾರೆ. ಅಲ್ಲಲ್ಲಿ ನರ್ಸರಿ ಶಾಲೆಗಳನ್ನು ತೆರೆದು ಸಣ್ಣ ಬಾಲಕರಿಗೆ ಅದರಲ್ಲೂ ಸ್ವಲ್ಪ ಕಡಮೆ ಮಟ್ಟದಲ್ಲಿರುವವರಿಗೆ ಅನುಕೂಲ ಮಾಡಿಕೊಡಬೇಕು.

ಈ ರೀತಿಯಲ್ಲಿ ನರ್ಸರಿ ಶಾಲೆಗಳನ್ನು ತೆರೆಯುವುದರಿಂದ ಹಳ್ಳಿಗಾಡಿನ ಜನರಿಗೆ ಬಹಳ ಪ್ರಯೋಜನವಾಗುತ್ತದೆ. ಅದಕ್ಕಾಗಿ ಬರತಕ್ಕ social workers

(ಶ್ರೀ ಕೆ. ವಿ. ಬೈರೇಗೌಡ).

ಎಲ್ಲರೂ S.S.L.C. ಮಟ್ಟದ ಶಿಕ್ಷಣವನ್ನು ಪಡೆದಿರಬೇಕು. ಇಂಥಾ ವಿದ್ಯಾವಂತರಾದ ಕಾರ್ಯಕರ್ತರು ಬಂದರೆ ಹಳ್ಳಿಗಾಡಿನ ಮಕ್ಕಳಿಗೆ ನರ್ಸರಿ ಶಾಲೆಗಳಲ್ಲಿಯೇ ವಿದ್ಯಾಭ್ಯಾಸವೂ ಸರಿಯಾಗಿ ದೊರಕುತ್ತದೆ. ಈ ಶಾಲೆಗಳನ್ನು ತೆರೆಯಲು ಎಷ್ಟು ಖರ್ಚಾದರೂ ಕೂಡ ನಾವು ಹಿಂಜರಿಯಬಾರದು. ಇದರಿಂದ ಬಹಳ ಒಳ್ಳೆಯದಾಗುವುದರಿಂದ Social Welfare Board ಗೆ ಒದಗಿಸಿರುವ ಹಣವನ್ನು ಇಂತಹ ಕಾರ್ಯಗಳಿಗೆ ಉಪಯೋಗಿಸಬೇಕೆಂದು ತಿಳಿಸುತ್ತೇನೆ.

ವಿಶ್ವವಿದ್ಯಾನಿಲಯದಲ್ಲಿ ರಾಜಕೀಯ ತುಂಬಿದೆ. ದೇಶದ ಭದ್ರತೆಗೆ ವಿದ್ಯಾಭ್ಯಾಸದ ಮೇಲೆ ನಿಲ್ಲಬೇಕು. ಪ್ರತಿಯೊಂದು ಕಡೆಯೂ ರಾಜಕೀಯ ಜಾಸ್ತಿಯಾಗಿದೆ ವಿಶ್ವವಿದ್ಯಾನಿಲಯದಲ್ಲಿಯೂ ರಾಜಕೀಯ ಹೊಕ್ಕಿರುವುದು ವಿಷಾದದ ಸಂಗತಿ. ವಿದ್ಯಾಸಂಸ್ಥೆಗಳಲ್ಲಿ ರಾಜಕೀಯವು ಹೋದ ಹೊರತು ಅದರ ಆಡಳಿತ ಸರಿ ಹೋಗುವುದಿಲ್ಲ. ಆದುದರಿಂದ ವಿದ್ಯಾ ಸಂಸ್ಥೆಗಳಲ್ಲಿಯೂ, ವಿಶ್ವವಿದ್ಯಾನಿಲಯಗಳಲ್ಲಿಯೂ ರಾಜಕೀಯವಿರುವುದನ್ನು ತಪ್ಪಿಸಬೇಕೆಂದು ಹೇಳುತ್ತೇನೆ.

Mr. DEPUTY SPEAKER.—This House has fixed a time limit and many Hon'ble Members have made important observations. The Hon'ble Minister will require at least ten minutes to reply. We will have to close the discussion on this demand at 4-30. I cannot help it. The Hon'ble Minister will now reply.

*ಶ್ರೀ ಎ. ಜಿ. ರಾಮಚಂದ್ರರಾವ್.—ಸ್ವಾಮಿ, ಮಾನ್ಯ ಸದಸ್ಯರು ಅನೇಕ ವಿಷಯಗಳನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಅದರಲ್ಲಿ ಮುಖ್ಯವಾದ ಕೆಲವು ಪ್ರಶ್ನೆಗಳಿಗೆ ನಾನು ಜವಾಬು ಕೊಡುವುದಕ್ಕೆ ಇಷ್ಟಪಡುತ್ತೇನೆ. ಮೊದಲನೆಯದಾಗಿ ವಿಶ್ವವಿದ್ಯಾನಿಲಯದಲ್ಲಿನ ಲೆಕ್ಚರರುಗಳು, ಅಸಿಸ್ಟೆಂಟ್ ಪ್ರೊಫೆಸರುಗಳು ಇತ್ಯಾದಿಗಳ ವಿಷಯ.

[SRI A. V. NARASIMHA REDDY in the Chair].

ಇದಕ್ಕೆ ಈಗಾಗಲೇ ಮುಖ್ಯ ಮಂತ್ರಿಗಳು ಜವಾಬು ಕೊಟ್ಟಿದ್ದಾರೆ. ಹಾಗೇನಾದರೂ ಅನ್ಯಾಯವಾಗಿದ್ದರೆ ಯಾರಿಗೆ ಅನ್ಯಾಯವಾಗಿದೆಯೋ ಅವರಿಂದ ಒಂದು ಅರ್ಜಿಯೂ ಬಂದಿಲ್ಲ; ನೇರವಾಗಿಯೂ ಬಂದಿಲ್ಲ; ವೈಸ್ ಛಾನ್ಸಲರ ಮುಖಾಂತರವೂ ಬಂದಿಲ್ಲ. ಆ ರೀತಿ ಅರ್ಜಿ ಬಂದರೆ ಅದನ್ನು ಪರಿಶೀಲನೆ ಮಾಡಲು ಸಿದ್ಧರಾಗಿದ್ದೇವೆ.

ಮತ್ತೆ Compulsory education ವಿಷಯದಲ್ಲಿ ಕೆಲವು ಸದಸ್ಯರು ಬಹಳವಾಗಿ ಮಾತನಾಡಿದರು. ನಾನು ಒಂದು ವಿಷಯವನ್ನು ಮಾತ್ರ ಅವರ ಗಮನಕ್ಕೆ ತರಲು ಇಷ್ಟ ಪಡುತ್ತೇನೆ. Compulsory education ಎಂದರೆ ಎಲ್ಲೆಲ್ಲಿ ಜನಗಳು ವಿದ್ಯಾಭ್ಯಾಸವನ್ನು ಹೊಂದಲು ಮುಂದೆ ಬರುವುದಿಲ್ಲವೋ ಅಲ್ಲೆಲ್ಲ ಕಡ್ಡಾಯವಾಗಿ ವಿದ್ಯಾಭ್ಯಾಸ ಮಾಡಿಸುವುದು ಅತ್ಯಾವಶ್ಯಕ. ಆದರೆ ಈಗ ಪರಿಸ್ಥಿತಿ ಏನಾಗಿದೆ ಎಂದು ನೋಡೋಣ. ವಿದ್ಯಾಭ್ಯಾಸ ಪಡೆಯಲು ಮುಂದೆ ಬರುವವರಿಗೇ ವಿದ್ಯಾಭ್ಯಾಸವನ್ನು ಕೊಡುವುದಕ್ಕೆ ಕಷ್ಟವಾಗಿದೆ. ಮಾನ್ಯ ಸದಸ್ಯರಿಗೆಲ್ಲ ಗೊತ್ತಿರುವ ಹಾಗೆ ಬಹಳ ಕಡೆಗಳಿಂದ ಜನರು ನಮಗೊಂದು ಸ್ಕೂಲು ಕೊಡಿ ಎಂದು ಬರುತ್ತಿದ್ದಾರೆ. ಆದರೆ ಹಾಗೆ ಎಲ್ಲ ಕಡೆಗಳಲ್ಲಿಯೂ ಸ್ಕೂಲುಗಳನ್ನು ಕೊಡುವುದಕ್ಕಾಗಿಲ್ಲ! ಈಗ ಪ್ರಜೆಗಳೆಲ್ಲರೂ ಜಾಗೃತಿಗೊಂಡಿದ್ದಾರೆ ಮತ್ತು ತಾವಾಗಿಯೇ ವಿದ್ಯಾಭ್ಯಾಸ ಪಡೆಯಲು ಮುಂದೆ ಬರುತ್ತಿದ್ದಾರೆ. ಆದರೆ ಕಾರಣಾಂತರದಿಂದ ಶಾಲೆಗೆ ಬಾಲಕರನ್ನು ಸೇರಿಸದೆ ಇರಬಹುದು. ಕಡಮೆ ಹುಡುಗರಿರುವ ಪಕ್ಷದಲ್ಲಿ Compulsory Scheme ಒತ್ತಾಯ ಮಾಡಿ ತರುವ ಕಾಲಬರುತ್ತದೆ. ಆವಾಗ ಆ ವಿಚಾರ ನೋಡೋಣ. ಈಗ ಇರುವಷ್ಟು ಡಿಮ್ಯಾಂಡಿಗೆ ಒದಗಿಸಿದರೆ ನಾವು ಕೃತಾರ್ಥರಾಗುತ್ತೇವೆಂದು ಹೇಳುತ್ತೇನೆ.

ಉಪಾಧ್ಯಾಯರುಗಳಿಗೆ extension ಕೊಡುವ ವಿಚಾರವನ್ನು ಪ್ರಸ್ತಾಪ ಮಾಡಿದರು. 60 ವರ್ಷದ ವರೆಗೂ ಉಪಾಧ್ಯಾಯರುಗಳಿಗೆ extension ಕೊಡುತ್ತಿಲ್ಲ; 58 ವರ್ಷದವರೆಗೆ ಮಾತ್ರ ಕೊಟ್ಟಿದೆ. ಯಾರಿಗೆ ಟ್ರೈನಿಂಗ್ ಕ್ವಾಲಿಫಿಕೇಷನ್ ಆಗಿದೆಯೋ, ಯಾರಿಗೆ ಕೆಲಸಮಾಡುವುದಕ್ಕೆ ಇನ್ನೂ ಶಕ್ತಿ ಮತ್ತು ಸಾಮರ್ಥ್ಯಗಳಿವೆಯೋ ಅಂಥವರಿಗೆ ಪಾಠ ಹೇಳಿಕೊಡುವುದಕ್ಕೆ 3 ವರ್ಷಗಳಕಾಲ, ಒಂದೊಂದು ವರ್ಷದಂತೆ extension ಕೊಡಬೇಕು ಎಂದು ಮಾಡಿದೆ. ಇದರ ಮುಖ್ಯ ಉದ್ದೇಶವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. Qualification ಇದ್ದು, 55 ವರ್ಷಗಳ ಮೇಲ್ಪಟ್ಟು ವಯಸ್ಸಾಗಿದ್ದರೆ ಅಂಥವರ qualification, ಮತ್ತು ಅನುಭವ ಇತರರಿಗೆ ದೊರಕಲಿ ಎಂಬ ಉದ್ದೇಶದಿಂದ extension ಕೊಡುತ್ತಿದ್ದೇವೆ. ಉಪಾಧ್ಯಾಯ ವೃತ್ತಿಯಲ್ಲಿರುವವರಿಗೆ ಅನುಭವವಿದ್ದು, ಟ್ರೈನಿಂಗ್ ಆಗಿದ್ದರೆ ಆ ಅನುಭವ ಮತ್ತು ಟ್ರೈನಿಂಗ್ ಇನ್ನೂ ಮೂರು ವರ್ಷಗಳ ಕಾಲ ದೊರಕಲಿ ಎಂಬ ಉದ್ದೇಶದಿಂದ ಕೊಟ್ಟಿದೆ. ಇನ್ಸ್ಪೆಕ್ಟರಾಗಿರುವವರು ಟ್ರೈನಿಂಗ್ ಪಡೆದಿದ್ದು ಅವರನ್ನೂ ಉಪಾಧ್ಯಾಯರಂತೆ ಉಪಯೋಗಿಸಿಕೊಂಡು 3 ವರ್ಷಗಳಕಾಲ extension ಕೊಡುವುದಕ್ಕೆ ಅಡ್ಡಿ ಇಲ್ಲ, ಈ ಇಲಾಖೆಯವರಿಗೆ ಕೊಟ್ಟಿರುವ ವಿನಾಯಿತಿಯಿಂದ ಇತರ ಇಲಾಖೆಯವರಿಗೆ ಅಸಮಾಧಾನವಾಗಿದೆ. ಆದರೆ ಅವರ ಮಕ್ಕಳಿಗೇ ಸರಿಯಾದ ವಿದ್ಯಾಭ್ಯಾಸವಾಗಬೇಕು ಎಂದು ಟ್ರೈನಿಂಗ್ ಆಗಿರುವವರು, ಶಕ್ತಿ ಇರುವವರು, ಮಾತ್ರ ಉಪಾಧ್ಯಾಯರುಗಳಾಗಿ ಮೂರು ವರ್ಷ ಕಾಲ ಹೆಚ್ಚಿಗೆ ಇರುವುದಕ್ಕೆ ಅವಕಾಶ ಕೊಟ್ಟಿದೆ ಎಂದು ವಿವರಣೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ.

ಭೂದಾನದ ವಿಷಯದಲ್ಲಿ ಮಾನ್ಯ ಸದಸ್ಯರನೇಕರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಈ ವಿಷಯದಲ್ಲಿ ಸರ್ಕಾರದವರು ಬಹಳ ಶ್ರದ್ಧೆ ವಹಿಸಿಕೊಂಡು, ಈ ಜಮೀನು ಪೋಲಾಗಬಾರದು, ಅದರಲ್ಲಿ ಉತ್ಪತ್ತಿ ಸರಿಯಾಗಿ ಆಗಬೇಕು, ಯಾವ ಕೆಲಸಕ್ಕಾಗಿ ಕೊಟ್ಟಿದ್ದಾರೆಯೋ ಅದು ನೆರವೇರಿ ಇದೂ ಒಂದು ಆಧಾರವಾಗಿರಬೇಕು, ವಿದ್ಯಾರ್ಥಿಗಳಿಗೆ ಮತ್ತು ಉಪಾಧ್ಯಾಯರುಗಳಿಗೆ ಅನುಕೂಲವಾಗಬೇಕು ಎಂಬ ಕಾರಣಗಳಿಂದ ಒಬ್ಬ Land Utilisation Officer ನೇಮಕ ಮಾಡಿದ್ದೇವೆ. ಮತ್ತು ವ್ಯವಸಾಯ ಇಲಾಖೆಯವರು ಶ್ರದ್ಧೆವಹಿಸಿ ಮುಂದೆ ಬಂದಿದ್ದಾರೆ. ಎಲ್ಲೆಲ್ಲಿ ಸ್ಕೂಲುಗಳಿವೆಯೋ, ಎಲ್ಲೆಲ್ಲಿ ಭೂಮಿ ಸಿಕ್ಕಿದೆಯೋ ಅಲ್ಲೆಲ್ಲ, ಟ್ರೈನಿಂಗ್ ಆಗಿರತಕ್ಕ ಅಗ್ರಿಕಲ್ಚರಲ್ ಇನ್ಸ್ಪೆಕ್ಟರುಗಳನ್ನು ಪಾಠ ಪ್ರವಚನಗಳನ್ನು ಹೇಳಿಕೊಡುವುದಕ್ಕೆ ಕಳುಹಿಸುತ್ತೇವೆ ಎಂದು ತಿಳಿಸಿದ್ದಾರೆ. ಅಗ್ರಿಕಲ್ಚರಲ್ ಇನ್ಸ್ಪೆಕ್ಟರುಗಳು ಇದುವರೆಗೂ ಯಾವ ಕೆಲಸವಿತ್ತೋ ಅದನ್ನೂ ಮಾಡುವುದಕ್ಕೆ ಸಿದ್ಧರಾಗಿದ್ದಾರೆ. ಅವರನ್ನು ಉಪಯೋಗಿಸಿಕೊಂಡು ಕೆಲಸ ಮಾಡುತ್ತೇವೆ. ಈಗಾಗಲೇ 40 per cent of

schools have been covered and 60 per cent of the schools have yet to be covered. ಇದನ್ನು ಸುವ್ಯವಸ್ಥಿತ ರೀತಿಯಲ್ಲಿ ತಂದು ಬಂದಿರುವ ಜಮೀನನ್ನು ಸ್ವಾಧೀನಕ್ಕೆ ತೆಗೆದುಕೊಂಡು ಮುಂದುವರಿಯಲು ಬೇಕಾದ ಕಾರ್ಯ ಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ.

ಇಂಟರ್‌ಮೀಡಿಯಟ್ ಕಾಲೇಜನ್ನು ಸ್ಥಾಪನೆ ಮಾಡ ತಕ್ಕ ವಿಷಯದಲ್ಲಿ ತಿಪಟೂರಿನಿಂದ ಬಹಳ ಒತ್ತಾಯ ಬರುತ್ತಿದೆ. ಈಗ ಮಾನ್ಯ ಸದಸ್ಯರಿಗೆ ತಿಳಿದಿರುವ ಹಾಗೆ University Draft Bill ಸೆಲೆಕ್ಟ್ ಕಮಿಟಿಯ ಮುಂದೆ ಇದೆ. ಅದರ ಪ್ರಕಾರ ಇಂಟರ್‌ಮೀಡಿಯಟ್ ಕಾಲೇಜುಗಳು ಇರುವುದಿಲ್ಲ. ಇದು ತೀರ್ಮಾನ ವಾಗುವವರೆಗೂ ಹೊಸದಾಗಿ ಇಂಟರ್‌ಮೀಡಿಯಟ್ ಕಾಲೇಜುಗಳನ್ನು ಸ್ಥಾಪನೆ ಮಾಡುವುದು ಸೂಕ್ತವಲ್ಲ. ಆದುದರಿಂದ ಈ ವಿಚಾರವನ್ನು ಸ್ವಲ್ಪ ಹಿಂದೆ ಬಿಡು ವುದು ಸೂಕ್ತ. ಮತ್ತು ಹೊಸದಾಗಿ ಕಾಲೇಜು ಗಳನ್ನು ಸ್ಥಾಪನೆ ಮಾಡಬೇಕಾದರೆ ನಾವು ಯಾವ ಕ್ರಮವನ್ನನುಸರಿಸಬೇಕು ಎನ್ನುವುದನ್ನು ಕೂಡ ಈ ಸಭೆಯವರ ಗಮನಕ್ಕೆ ತರುವುದಕ್ಕೆ ಇಷ್ಟ ಪಡುತ್ತೇನೆ. ನಮ್ಮ ಮೈಸೂರಿನಲ್ಲಿ ಕಾರಣಾಂತರ ದಿಂದ ಅನೇಕ ಸರ್ಕಾರಿ ಕಾಲೇಜುಗಳಿವೆ. ಈಗ 8-10 ವರ್ಷಗಳಿಂದ ಅನೇಕ ಕಾಲೇಜುಗಳಾಗಿವೆ. ಇದೇ ಕಾಲದಲ್ಲಿ ಮದರಾಸಿನ ವಿಷಯ ತೆಗೆದುಕೊಂಡರೆ ಅಲ್ಲಿ 44 ಕಾಲೇಜುಗಳಾಗಿವೆ. ಅವುಗಳನ್ನು ಸ್ಥಾಪನೆ ಮಾಡಬೇಕಾದರೆ ಸರ್ಕಾರದ ಸಹಾಯ ಬಹಳ ಕಡಿಮೆ. ಹೆಚ್ಚಾಗಿ ಸಾರ್ವಜನಿಕರು ಭಾಗ ವಹಿಸಿಕೊಂಡದ್ದ ರಿಂದ ಅಲ್ಲಿ ಕಾಲೇಜು ವಿದ್ಯಾಭ್ಯಾಸ ಜಾಸ್ತಿಯಾಗಿದೆ. ಡಾಕ್ಟರ್ ಲಕ್ಷ್ಮಣಸ್ವಾಮಿ ಮೊದಲಿಯಾರ್‌ರವರ ಸಂಗಡ ಚರ್ಚೆ ಮಾಡುವಾಗ ಈ ವಿಷಯ ತಿಳಿಯಿತು. ಪ್ರತಿಯೊಂದು ಕಾಲೇಜು ಸ್ಥಾಪನೆ ಯಾಗಬೇಕಾದರೂ 5 ಲಕ್ಷ ರೂಪಾಯಿ equipment ಗಾಗಿ ಕೊಡಬೇಕು ಮತ್ತು 5 ಲಕ್ಷ ರೂಪಾಯಿ ಕೊಡಬೇಕು. ಈ ಕಾರಣ ದಿಂದ ಅಲ್ಲಿಯ ಕಾಲೇಜುಗಳು ಸುವ್ಯವಸ್ಥಿತ ರೀತಿಯಲ್ಲಿ ಮುಂದುವರಿಯುವುದಕ್ಕೆ ಅವಕಾಶವಾಗಿದೆ. ಸರ್ಕಾ ರದ ಮೇಲೆ ಅದರ ಹೊರೆ ಕಡಿಮೆ. ಹೀಗೆ ಸರ್ಕಾರದ ಮತ್ತು ವಿಶ್ವವಿದ್ಯಾನಿಲಯದ ಮೇಲೆ ಕಾಲೇಜು ವಿದ್ಯಾ ಭ್ಯಾಸದ ಹೊರೆ ಕಡಿಮೆಯಾಗಿರುವುದರಿಂದ Secondary Education ವಿಷಯದಲ್ಲಿ ಹೆಚ್ಚಿಗೆ ಗಮನ ಕೊಡುವುದಕ್ಕೆ ಸಾಧ್ಯವಾಗಿದೆ. ಇಲ್ಲಿ ಕಾಲೇಜುಗಳಿಗೆ ಕೊಡತಕ್ಕ ಸಹಾಯವನ್ನೂ, ಮದರಾಸಿನಲ್ಲಿ ಕಾಲೇಜು ಗಳಿಗೆ ಕೊಡತಕ್ಕ ಸಹಾಯವನ್ನೂ ಹೋಲಿಕೆ ಮಾಡಿ ನೋಡಿದರೆ ಅಲ್ಲಿಗಿಂತಲೂ ಇಲ್ಲಿ ಉತ್ತಮವಾಗಿದೆ. ಸಾರ್ವಜನಿಕರ ಮೇಲೆ ಅವಲಂಬಿಸುವುದನ್ನು ತಪ್ಪಿಸಿ, ಸರ್ಕಾರದ ಮೇಲೆ ಅವಲಂಬಿಸಿದರೆ ಬಹಳ ಕಷ್ಟವಾಗು ತ್ತದೆ, ಅಸಾಧ್ಯವಾಗುತ್ತದೆ ಮತ್ತು ಒಳ್ಳೆಯದಲ್ಲ ವೆಂದು ನನ್ನ ಅಭಿಪ್ರಾಯ. ಕಾಲೇಜು ವಿದ್ಯಾಭ್ಯಾ ಸಕ್ಕೆ ಸರ್ಕಾರದಿಂದ ಹೆಚ್ಚಿಗೆ ಹಣವನ್ನು ಖರ್ಚುಮಾಡಿ ದರೆ ಪ್ರೈಮರಿ ಮತ್ತು ಸೆಂಕಡರಿ ವಿದ್ಯಾಭ್ಯಾಸವು ಕುಂಠಿತವಾಗುತ್ತದೆ. ಆದುದರಿಂದ ಈ ವಿಷಯವನ್ನು ವಿಧಾನಸಭೆಯವರು ಖಂಡಿತವಾಗಿಯೂ ಒಪ್ಪು ತ್ತಾರೆಂದು ನಂಬಿದ್ದೇನೆ. ಇಷ್ಟು ಹಣ ಉಳಿದರೆ ಅದನ್ನು ಉಳಿಸಿದರೆ, ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಖರ್ಚು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈ ವಿಚಾರ ದಲ್ಲಿ ಸರ್ಕಾರದವರ ನೀತಿ ಏನಿದೆಯೋ ಅದನ್ನು ಒಪ್ಪು ತ್ತಾರೆಂದು ನಂಬಿದ್ದೇನೆ.

ಇನ್ನು Occupational Institutions ವಿಚಾರ. ಈಗ ಸಾಮಾನ್ಯವಾಗಿ ಎಲ್ಲ ಜಿಲ್ಲೆಗಳಲ್ಲಿಯೂ ಒಂದೊಂದು Occupational Institute ಇರು ವುದು ಒಳ್ಳೆಯದೆನ್ನುವ ದೃಷ್ಟಿಯಿಂದ ಈಗಾಗಲೇ ಯಾವ ಯಾವ ಜಿಲ್ಲೆಗಳಲ್ಲಿ ಈ ಶಾಲೆಗಳಿವೆಯೋ ಅವನ್ನು ಬಿಟ್ಟು ಉಳಿದ ಜಿಲ್ಲೆಗಳಲ್ಲಿ ಕೊಡಬೇಕೆಂಬುದು ಸರ್ಕಾರದ ಉದ್ದೇಶ. ಈಗ ಶಾಲೆಗಳಿರುವ ಜಿಲ್ಲೆಗಳ ವರ ಮುಂದೆ ಬಂದ ರೀತಿಯಲ್ಲಿ ಬಾಕಿ ಜಿಲ್ಲೆಗಳವರೂ ಮುಂದೆ ಬಂದರೆ ಬಹಳ ಜಾಗ್ರತೆಯಾಗಿ ಶಾಲೆಗಳನ್ನು ಪ್ರಾರಂಭಿಸಬಹುದು.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ತುಮಕೂರಿ ನಲ್ಲಿ ಡಿಸ್ಟ್ರಿಕ್ಟ್ ಬೋರ್ಡ್ ಕಟ್ಟಡವನ್ನು ಐದಾರು ವರ್ಷಗಳ ಹಿಂದೆಯೇ ಬಿಟ್ಟುಕೊಟ್ಟಿದ್ದಾರೆ.

ಶ್ರೀ ಎ. ಜಿ. ರಾಮಚಂದ್ರರಾವ್.—ಮತ್ತೆ ಇದೇ ಸಂದರ್ಭದಲ್ಲಿ ಚಿಕ್ಕಮಗಳೂರು ಜಿಲ್ಲೆಯನ್ನು ಪ್ರತಿನಿಧಿಸಿ ಶ್ರೀಮತಿ ಸುಬ್ಬಮ್ಮನವರು ಉದಾರವಾಗಿ ಏನೇನು ಸಹಾಯಬೇಕೋ ಆ ಸಹಾಯವನ್ನೆಲ್ಲ ಮಾಡುವುದಕ್ಕೆ ಸಿದ್ಧರಾಗಿದ್ದೇವೆಂದು ಹೇಳಿದುದನ್ನು ಮೆಚ್ಚಿಕೊಳ್ಳ ಬೇಕಾಗಿದೆ. ಇದರಿಂದ ಹೆಚ್ಚು ಸಹಾಯ ಎಲ್ಲಿಂದ ಬರುತ್ತದೆಯೋ ಅಲ್ಲಿಗೆ ಮೊದಲು Occupational Institute ಬರುತ್ತದೆ ಎಂದು ಹೇಳಬಹುದಾಗಿದೆ.

Hindi part-time teachers ವಿಷಯವನ್ನು ಕುರಿತು ಬಹಳವಾಗಿ ಹೇಳಿದರು. ಒಬ್ಬ ಉಪಾಧ್ಯಾಯ ರಿಗೆ ಪೂರ್ತಿಯಾಗಿ ಆಗುವಷ್ಟು ಕೆಲಸ ಇದ್ದರೆ ಆಗ full-time ಉಪಾಧ್ಯಾಯರನ್ನು ತೆಗೆದುಕೊಳ್ಳುವುದು ಸಾಧುವಾದದ್ದು ಎಂದು ಹೇಳುತ್ತೇನೆ. ಆದರೆ ದಿವಸಕ್ಕೆ 3-4 ಘಂಟೆಗಳ ಕೆಲಸಮಾತ್ರವಿದ್ದರೆ ಆಗ full time ಉಪಾಧ್ಯಾಯರುಗಳನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಪೂರ್ತಿ ಕೆಲಸವಿರತಕ್ಕ ಕಡೆ full-time ಉಪಾಧ್ಯಾಯರುಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನಮಾಡುತ್ತೇವೆ. ಹತ್ತು, ಹದಿನೈದು ವರ್ಷಗಳ ಕಾಲ part-time teachers ಆಗಿ ಕೆಲಸಮಾಡಿದ್ದಾ ರೆಂದು ಹೇಳಿದರು. ಅದಕ್ಕೇನಾದರೂ ಪರಿಹಾರ ವನ್ನೊದಗಿಸುವುದಕ್ಕೆ ಸಾಧ್ಯವಿದ್ದರೆ ಯೋಚನೆಮಾಡು ತ್ತೇನೆ.

ಆಮೇಲೆ ದೇವಸ್ಥಾನಗಳಲ್ಲಿ ಸ್ಕೂಲುಗಳು ನಡೆಯು ತ್ತಿವೆ, ಅಲ್ಲಿ ಹರಿಜನರಿಗೆ ಅವಕಾಶವಿಲ್ಲವೆಂಬ ವಿಷಯವನ್ನು ಗಮನಕ್ಕೆ ತಂದಿದ್ದಾರೆ. ದೇವಸ್ಥಾನದಲ್ಲಿ ಸ್ಕೂಲು ಮಾಡತಕ್ಕದ್ದು ಕೆಟ್ಟದ್ದಲ್ಲ. ಅನೇಕ ಕಡೆ ಹಿಂದಿನಿಂದಲೂ ದೇವಸ್ಥಾನಗಳಲ್ಲಿ ನಡೆಯುತ್ತಿದೆ. ಇತರ ಕಡೆಗಳಲ್ಲಿಯೂ ನಡೆಯುತ್ತಿದೆ. ಅದರ ಜೊತೆಗೆ ಹರಿಜನ ವಿದ್ಯಾರ್ಥಿ ಗಳನ್ನೂ ದೇವಸ್ಥಾನದೊಳಕ್ಕೆ ಬಿಡಿಸುವುದು ಒಳ್ಳೆಯ ಪದ್ಧತಿ. ಆದುದರಿಂದ ಎಲ್ಲೆಲ್ಲಿ ಈ ಕಷ್ಟದ ಅನುಭವ ಉಂಟಾಗಿದೆಯೋ ಅದನ್ನು ಪರಿಶೀಲನೆಮಾಡಿ ಪರಿಹಾರ ಮಾಡುವುದಕ್ಕೆ ಪ್ರಯತ್ನಮಾಡುತ್ತೇವೆ.

ಸ್ಕೂಲು ಕಟ್ಟಡಗಳ ವಿಷಯದಲ್ಲಿ ಒಂದು ಮುಖ್ಯ ವಾದ ವಿಷಯವನ್ನು ಸಭೆಯ ಗಮನಕ್ಕೆ ತರುತ್ತೇನೆ. Cheap but durable buildings, new type buildings ಕಟ್ಟುವುದಕ್ಕೆ ಪ್ರಾರಂಭಮಾಡಿದ್ದೇವೆ. ಅದಕ್ಕೆ ಒಂದು ಕೊಠಡಿಗೆ 1,500 ರೂಪಾಯಿ ಮಾತ್ರ ಖರ್ಚಾಗುತ್ತದೆ. ಈಗ 500 ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದೇವೆ ಇನ್ನುಮುಂದೆ ಸರ್ಕಾರದವರು 750 ರೂಪಾಯಿಗಳನ್ನೂ, ಖಾಸಗಿ ಯವರು 750 ರೂಪಾಯಿಗಳನ್ನೂ ಕೊಟ್ಟರೆ ಜಾಗ್ರತೆ ಯಾಗಿ ಕಟ್ಟಡ ಪೂರ್ತಿಯಾಗುತ್ತದೆಂದು ಈ ಸಭೆಯ ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ. ಉಳಿದ ವಿಷಯಗಳನ್ನು ಗಮನಕ್ಕೆ ತೆಗೆದುಕೊಳ್ಳುತ್ತೇವೆಂದು ಹೇಳಿ ಈ ಡಿಮ್ಯಾಂಡಿಗೆ ಸಭೆಯವರು ಬೆಂಬಲ ಕೊಡ ಬೇಕೆಂದು ಪ್ರಾರ್ಥಿಸುತ್ತೇನೆ.

4-30 P.M.

Mr. CHAIRMAN (SRI A. V. NARASIMHA REDDY).—The question is :

"That a sum not exceeding Rs. 4,87,53,000 be granted to the Government to defray the charges which will come in course of payment during the year ending 31st day of March 1957, in respect of 'Education'."

The motion was adopted.

DEMAND No. 28—MISCELLANEOUS DEPARTMENTS.

47. MISCELLANEOUS DEPARTMENTS.

Mr. CHAIRMAN (SRI A. V. NARASIMHA REDDY).—The motion moved :

"That a sum not exceeding Rs. 45,04,100 be granted to the Government to defray the charges which will come in course of payment during the year ending 31st day of March 1957, in respect of 'Miscellaneous Departments'."

*ಶ್ರೀ ಎಸ್. ಶ್ರೀನಿವಾಸಯ್ಯಂಗಾರ್ (ಟಿ.-ನರಸೀಪುರ).—ಸ್ವಾಮಿ, ಈ ಡಿಮ್ಯಾಂಡನ್ನು ವಿರೋಧಿಸುತ್ತೇನೆ. ಇಂಗ್ಲೆಂಡಿನಲ್ಲಿ ಟ್ರೇಡ್ ಕಮೀಷನರ ಆಫೀಸೆಂಬುದೊಂದು ಇದೆ. ಅದು ಎಲ್ಲರಿಗೂ ಗೊತ್ತಿದೆ. ಬಹಳ ದಿವಸಗಳಿಂದಲೂ ಇದೆ, 1888ರಿಂದ ಅಥವಾ ಅದರ ಹಿಂದಿನಿಂದ ಇರಬಹುದು, ಖಚಿತವಾಗಿ ಗೊತ್ತಿಲ್ಲ. ಅಲ್ಲಿ ಆ ಆಫೀಸನ್ನಿಟ್ಟುಕೊಳ್ಳುವುದಕ್ಕೆ ಆಗಿನ ಸನ್ನಿವೇಶ ಬೇರೆಯಾಗಿತ್ತು. ಮೈಸೂರು ರಾಜ್ಯದಲ್ಲಿ ರೆಸಿಡೆಂಟ್ ಇದ್ದರು, ಇಂಗ್ಲೀಷರ ಆಡಳಿತವಿತ್ತು. ವ್ಯಾಪಾರದ ವಿಚಾರದಲ್ಲಿ ಮೇಲ್ವಿಚಾರಣೆಗಾಗಿ ಇರಲಿ ಎಂದು ನಮ್ಮ ದೇಶದ ಹಿತದೃಷ್ಟಿಯಿಂದ ಅಲ್ಲಿ ಆ ಆಫೀಸಿತ್ತು. ಅದಕ್ಕೀಗ ವರ್ಷೇ ವರ್ಷ 1,03,050 ರೂಪಾಯಿಗಳು ಖರ್ಚಾಗುತ್ತಿವೆ. ಇಷ್ಟು ಖರ್ಚು ಮಾಡಿಕೊಂಡು ಅಲ್ಲಿ ಆ ಆಫೀಸನ್ನೇಕೆ ಇಡಬೇಕು ! ಈಗ ಇಂಡಿಯಾ ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ ಇಂಡಿಯಾ ಸರ್ಕಾರದ ಪರವಾಗಿ ಹೈಕಮೀಷನರ ಆಫೀಸು ಲಂಡನ್‌ನಲ್ಲಿದೆ. ಅವರ ಮುಖಾಂತರ ವ್ಯಾಪಾರ ಮಾಡುವುದಕ್ಕೆ ಅವಕಾಶವಿದೆ, ಹಾಗಿರುವಾಗ ಮೈಸೂರು ಸರ್ಕಾರ ಕನ್ಸಾಲಿಡೇಟೆಡ್ ಫಂಡಿನಿಂದ ಈ ಬಾಬಿಗೇಕೆ ಖರ್ಚುಮಾಡಬೇಕೆಂದು ಪ್ರಶ್ನೆ ಮಾಡುತ್ತೇನೆ.

ಎರಡನೆಯದು ಈ ಸಂಸ್ಥಾನದಲ್ಲಿ ಸಹಸ್ರಾರು ದೇವಸ್ಥಾನಗಳಿವೆ. ಅವಕ್ಕಾಗಿ ಸುಮಾರು 2,35,000 ರೂಪಾಯಿಗಳನ್ನು ಕೊಡುತ್ತಿದ್ದೇವೆ. ಈಹೊತ್ತು ಈ ಭಾಗದಲ್ಲಿ ಇದು ಸೇರಿದೆ. ಈ ದೇವಸ್ಥಾನಗಳಲ್ಲಿ ನೌಕರರಿಗೆ ಸಂಬಳ ಹೇಗಿದೆಯೆಂದರೆ ಒಂದು ತಿಂಗಳಿಗೆ ಆರು ಕಾಸು ಸಂಬಳ ಬರುವವರೂ ಇದ್ದಾರೆ, ತಿಂಗಳೆಲ್ಲಾ ಕೆಲಸಮಾಡಿದರೆ ಅವರಿಗೆ ಬರುವ ಬಟವಾಡೆಯಿದು, ಕೆಲವುಕಡೆ ಆರು ರೂಪಾಯಿ ಕೊಟ್ಟರೆ ಅದೇ ಹೆಚ್ಚು ಎಂದು ಕಾಣುತ್ತದೆ. ಇದನ್ನು ಯಾವ ಕಾಲದಲ್ಲಿ ಹೇಗೆ ಗೊತ್ತುಮಾಡಿದರೋ ಏನೋ ತಿಳಿಯದು. ಬಹುಶಃ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ 1800ನೆಯ ಇಸವಿಯಲ್ಲಿ ಗೊತ್ತುಮಾಡಿದರೆಂದು ಕಾಣುತ್ತದೆ. ಈ ಸಂಬಳ ಬಹಳ ಕಡಮೆ. ಇದನ್ನು ವಿಮರ್ಶೆಮಾಡಬೇಕೆಂದು ಸಲಹೆಮಾಡುತ್ತೇನೆ.

ಇನ್ನೊಂದು ಬಹಳ ದೇವಸ್ಥಾನಗಳಿಗೆ ಸರ್ಕಾರ ಕೊಡುವ ಕ್ಯಾಷ್ ಗ್ರಾಂಟೇ ಮುಖ್ಯ ಆಧಾರ ಅದರಲ್ಲೂ ನಾನು ಬರುತ್ತಿರುವ ಕ್ಷೇತ್ರದಲ್ಲಿರುವ ಶ್ರೀ ಗುಂಜಾ ನರಸಿಂಹಸ್ವಾಮಿ ದೇವಸ್ಥಾನಕ್ಕೆ ಇದೇ ಆಧಾರ. ಈ ಬಗ್ಗೆ ಸಲಹೆ ಕೊಡುವುದಕ್ಕೆ ಧರ್ಮದರ್ಶಿಗಳನ್ನು ನೇಮಕಮಾಡಿದ್ದಾರೆ. ಧರ್ಮದರ್ಶಿಗಳ ಸಮಿತಿಯಿದೆ. ಆ ಸಮಿತಿ ಹೇಗಿದೆಯೆಂದರೆ ಬೇಕಾದರೆ ಸಲಹೆ ಕೊಡಬಹುದು, ಇಲ್ಲದಿದ್ದರೆ ಇಲ್ಲ, ಈ ಸ್ವಭಾವದಲ್ಲಿದೆ. ಇದರಿಂದ ಬಹಳ ತೊಂದರೆಯಾಗಿದೆ. ಮುಜರಾಯಿ ಅಧಿಕಾರಿಗಳು ಕಾಲಕ್ಕೆ ಸರಿಯಾಗಿ ಪೂಜೆ ಪುನಸ್ಕಾರ, ಇತರ ಕಾರ್ಯಕಲಾಪ ನಡೆಯುತ್ತಿದೆಯೋ ಎಂದು ನೋಡುವುದಕ್ಕಾಗುವುದಿಲ್ಲ. ಧರ್ಮದರ್ಶಿಗಳಿಗೆ ಪ್ರವೇಶಮಾಡಿ ಹೇಳುವುದಕ್ಕೆ ಅಧಿಕಾರವಿಲ್ಲ ; ಕೇವಲ ಸಲಹಾರೂಪವಾಗಿ ವಿಷಯ ಹೇಳಬಹುದು, ಅವರ ಅಭಿಪ್ರಾಯ ಪಡೆದು ಮಾಡಬಹುದು ಎಂದು ಮುಜರಾಯಿ ಮ್ಯಾನ್ಯುಯಲ್‌ನಲ್ಲಿದೆ. ಇದು ಹಿಂದಿನಕಾಲಕ್ಕೆ ಸರಿಹೋಗುತ್ತಿತ್ತು. ಈಗ ದೇವಸ್ಥಾನದ ಪ್ರವೇಶಕ್ಕೆ ಯಾರಿಗೂ ಯಾವ ವಿಧವಾದ ಅಡ್ಡಿಯೂ ಇಲ್ಲ, ಎಲ್ಲರೂ ದೇವರ ದರ್ಶನ ಮಾಡಬಹುದು. ಒಳ್ಳೆಯ ಆಡಳಿತವಿದ್ದರೆ ಎಲ್ಲರಿಗೂ ಅನುಕೂಲವಾಗುತ್ತದೆ, ಆದ್ದರಿಂದ ಧರ್ಮದರ್ಶಿಗಳ ಕಮಿಟಿಗಳಿಗೆ ಶಾಸನಬದ್ಧವಾದ ಕೆಲವು ಅಧಿಕಾರ ಕೊಡುವುದು ಉತ್ತಮ. ಇದಕ್ಕೆ ಬೇಕಾದ ಶಾಸನವನ್ನು ಸರ್ಕಾರದವರು ಮಂಡಿಸಬೇಕೆಂಬ ದೃಷ್ಟಿಯಿಂದ ವಿರೋಧವನ್ನು ವ್ಯಕ್ತಪಡಿಸುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ (ಚಿಕ್ಕಮಗಳೂರು—ಮೂಡಿಗೆರೆ-ಅನುಸೂಚಿತ ಜಾತಿಗಳು).—ಸ್ವಾಮಿ, ಖೋತಾ ನಿರ್ಣಯಗಳನ್ನು ಕಳುಹಿಸುವಾಗ ಕೆಲವು ರಚನಾತ್ಮಕ ಸಲಹೆಗಳನ್ನು ಮಾನ್ಯ ಸದಸ್ಯರು ಕೊಡಬೇಕೆಂದು ಇಚ್ಛೆಯುಳ್ಳವರಾಗಿರುತ್ತಾರೆ. ಅಂಥವರಿಗೆ ಮಾತನಾಡುವುದಕ್ಕೆ ಅವಕಾಶ ಸಿಕ್ಕದಿದ್ದರೆ ಬಹಳ ನೊಂದುಕೊಳ್ಳುತ್ತಾರೆ ಎಂದು ಹೇಳಿ ಈಗ ಅವಕಾಶ ಸಿಕ್ಕಿರುವುದಕ್ಕಾಗಿ ವಂದಿಸುತ್ತಾ ಖೋತಾ ನಿರ್ಣಯದಮೇಲೆ ಮಾತನಾಡುತ್ತೇನೆ.

ಸ್ವಾಮಿ, ಮೈಸೂರು ಸಂಸ್ಥಾನದಲ್ಲಿ ಮುಜರಾಯಿ ದೇವಸ್ಥಾನಗಳೇನಿವೆಯೋ ಅವುಗಳಲ್ಲಿ ಹರಿಜನರನ್ನು ಧರ್ಮದರ್ಶಿಗಳಾಗಿ ನಾಮಕರಣ ಮಾಡಿಕೊಳ್ಳಬೇಕೆಂದು ಸರ್ಕಾರಿ ಆಜ್ಞೆಯಿದೆ. ಕೆಲವು ಕಡೆಗಳಲ್ಲಿ ಹರಿಜನ ಸದಸ್ಯರನ್ನು ನಾಮಕರಣ ಮಾಡಿಕೊಳ್ಳದಿರುವುದು ಈ ಮಾನ್ಯ ಸಭೆಯ ಅನೇಕ ಸದಸ್ಯರಿಗೆ ತಿಳಿದಿರಬಹುದೆಂದು ಭಾವಿಸುತ್ತೇನೆ. ಈಗ ಕೆಲವು ಸದಸ್ಯರನ್ನು ಮುಜರಾಯಿ ದೇವಸ್ಥಾನಗಳಿಗೆ ನಾಮಕರಣ ಮಾಡಿದರೂ ಸಹ ಅವರನ್ನು ಮುಜರಾಯಿ ದೇವಸ್ಥಾನಗಳಿಗೆ ಬರಮಾಡಿಕೊಳ್ಳುವುದಾಗಲಿ ಅಥವಾ ದೇವಸ್ಥಾನದ ಆಡಳಿತದ ವಿಚಾರದಲ್ಲಿ ಅವರು ಭಾಗವಹಿಸುವುದೇ ಆಗಲಿ ಯಾವುದೂ ನಡೆಯುತ್ತಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಅವರನ್ನು ದೇವಸ್ಥಾನಕ್ಕೆ ಸೇರಿಸದಿರುವುದು, ಆಡಳಿತ ವಿಚಾರದಲ್ಲಿ ಉದ್ದೇಶಪೂರ್ವಕವಾಗಿ ಅವರಿಗೆ ಮನವರಿಕೆ ಕೊಡದಿರು

ವುದು ನಮಗೆ ತಿಳಿದುಬಂದಿದೆ. ಇದು ತುಂಬಾ ವಿಷಾಧಕರ, ಈಗಲಾದರೂ ಸರ್ಕಾರದವರು ಯಾವ ಒಂದು ಸದುದ್ದೇಶದಿಂದ ದೇವಸ್ಥಾನಗಳಿಗೆ ಹರಿಜನ ಧರ್ಮದರ್ಶಿಗಳನ್ನು ನಾಮಕರಣ ಮಾಡುತ್ತಾರೋ ಆ ಉದ್ದೇಶ ನೆರವೇರುವಂತಾಗಲು ಎಲ್ಲ ಮುಜರಾಯಿ ದೇವಸ್ಥಾನಗಳಿಗೂ ಕೂಡ ಹರಿಜನ ಸದಸ್ಯರನ್ನು ಕಡ್ಡಾಯವಾಗಿ ನಾಮಕರಣ ಮಾಡಿಕೊಳ್ಳಬೇಕೆಂಬ ತಿಳಿವಳಿಕೆಯನ್ನು ಕೊಡುವುದೂ ಅಲ್ಲದೆ ನಾಮಕರಣ ಮಾಡಲ್ಪಟ್ಟ ಹರಿಜನ ಸದಸ್ಯರು ದೇವಸ್ಥಾನಗಳ ಆಡಳಿತದಲ್ಲಿಯೂ ನೇರವಾಗಿ ಭಾಗವಹಿಸುವಂತೆ ಸರಿಯಾದ ರೀತಿಯಲ್ಲಿ ಎಲ್ಲ ಕಾರ್ಯಕ್ರಮಗಳನ್ನೂ ಕೈಕೊಳ್ಳಬೇಕು ಎಂದು ಈ ಸಮಯದಲ್ಲಿ ಹೇಳುತ್ತೇನೆ. ಅಲ್ಲದೆ ಮುಜರಾಯಿ ದೇವಸ್ಥಾನಗಳಲ್ಲಿ ಅನೇಕ ಪುರಾತನ ದೇವಸ್ಥಾನಗಳಿವೆ. ಸಂಸ್ಥಾನವಲ್ಲಿ ಈಗ ಚಿಕ್ಕಮಗಳೂರು ಟೌನಿಗೆ ಸೇರಿದ ಹಿರೇಮಗಳೂರಿನ ಶ್ರೀ ಕೋದಂಡರಾಮಸ್ವಾಮಿ ದೇವಸ್ಥಾನ ಬಹಳ ಪುರಾತನ ದೇವಸ್ಥಾನ. ಅನೇಕ ಪುರಾತನ ದೇವಸ್ಥಾನಗಳು ಇಂಡಿಯಾ ಸರ್ಕಾರಕ್ಕೆ ಸೇರಿವೆ. ಯಾವ ಕಾರಣದಿಂದ ಹಿರೇಮಗಳೂರು ದೇವಸ್ಥಾನ ಇಂಡಿಯಾ ಸರ್ಕಾರಕ್ಕೆ ಸೇರಿಲ್ಲವೋ ಗೊತ್ತಿಲ್ಲ. ಈಗ ದೇವಸ್ಥಾನಗಳು ಎಷ್ಟುಮಟ್ಟಿಗೆ ಅಭಿವೃದ್ಧಿಯಾಗಬೇಕೋ ಅಷ್ಟುಮಟ್ಟಿಗೆ ಆಗುತ್ತಿಲ್ಲ. ಇದಕ್ಕೆ ಸರ್ಕಾರದವರು ಸರಿಯಾದ ಕಾರ್ಯಕ್ರಮಗಳನ್ನು ಕೈಕೊಂಡು ಹಳೆಯ ದೇವಸ್ಥಾನಗಳು ಸರಿಯಾದ ರೀತಿಯಲ್ಲಿ ಕೆಲಸಮಾಡುವಂತೆಯೂ, ದೇವಸ್ಥಾನಗಳ ಕಟ್ಟಡಗಳು ಹಾಳಾಗದಂತೆಯೂ, ಅನೇಕ ರೀತಿಯಲ್ಲಿ ಎಲ್ಲರೂ ಸಂತೋಷಪಡುವಂತೆಯೂ, ನೋಡುವುದಕ್ಕೆ ರಮ್ಯವಾಗಿಯೂ ಇದ್ದು ಪೂಜೆ ಪುನಸ್ಕಾರಾದಿಯಾಗಿ ಎಲ್ಲ ವಿಚಾರಗಳಲ್ಲೂ ಸಮರ್ಪಕವಾಗಿರುವಂತೆಯೂ ಏರ್ಪಾಡು ಮಾಡಿ ಕಲಾಕೌಶಲ್ಯವುಳ್ಳ ಇಂತಹ ದೇವಸ್ಥಾನಗಳಿಗೆ ಪ್ರೋತ್ಸಾಹ ಕೊಡುವುದು ಸರ್ಕಾರದ ಕರ್ತವ್ಯವೆಂದು ಈ ಸಂದರ್ಭದಲ್ಲಿ ಸೂಚಿಸುತ್ತೇನೆ. ನಾನು ಈ ಮೇಲೆ ಹೇಳಿರುವ ಹಿರೇಮಗಳೂರು ಶ್ರೀ ಕೋದಂಡರಾಮಸ್ವಾಮಿ ದೇವಸ್ಥಾನವನ್ನು ಅಜಮಾಯಿಷಿ ಮಾಡಿಸಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಪಿ. ಆರ್. ರಾಮಯ್ಯ (ಬಸವನಗುಡಿ).—ಈ ಸಂದರ್ಭದಲ್ಲಿ ಎರಡು ಮೂರು ವಿಷಯಗಳನ್ನು ಹೇಳಬೇಕಾಗಿದೆ. ನಮ್ಮ ದೇವಸ್ಥಾನಗಳ ಆಡಳಿತ ವಿಚಾರ ಮೊದಲನೆಯದು, ದೇವಸ್ಥಾನಗಳ ಕಟ್ಟಡಗಳು ಶಿಥಿಲವಾಗುತ್ತಿರುವುದನ್ನು ದುರಸ್ತುಮಾಡಿ ಅವುಗಳನ್ನು ಒಳ್ಳೆಯ ಸ್ಥಿತಿಯಲ್ಲಿಡತಕ್ಕದು ಎರಡನೆಯದು, ಮೂರನೆಯದು ಅಸ್ಪೃಶ್ಯತಾ ನಿವಾರಣೆಯ ಸಂಬಂಧವಾಗಿ ಎಲ್ಲ ದೇವಾಲಯಗಳಿಗೂ ಹರಿಜನರನ್ನು ಬಿಡಬೇಕೆಂಬುದು. ಈ ಮೂರು ವಿಷಯಗಳನೂ ಪ್ರಸ್ತಾಪ ಮಾಡಿ ಈ ವಿಷಯಗಳಲ್ಲಿ ಸರ್ಕಾರದವರು ಕೈಕೊಳ್ಳಬೇಕಾದ ಕಾರ್ಯ ಕ್ರಮವನ್ನು ತಿಳಿಸಬೇಕಾಗಿದೆ. ದೇವಸ್ಥಾನಗಳ ವಿಷಯದಲ್ಲಿ ಹಿಂದೆ ಸರ್ಕಾರದವರು ಎಷ್ಟೋ ಶ್ರದ್ಧೆವಹಿಸಿ ಅವುಗಳ ಮೇಲ್ವಿಚಾರಣೆ ನೋಡಿಕೊಂಡು ಕಟ್ಟಡಗಳನ್ನು ಕಾಪಾಡಿಕೊಂಡು ಬರುತ್ತಿದ್ದರು ಮತ್ತು ಅವುಗಳು ಇನ್ನೂ ಅಭಿವೃದ್ಧಿಯಾಗುವಂತೆ ಏರ್ಪಾಡು ಮಾಡುತ್ತಿದ್ದರು ಆದರೆ ಈ ವಿಷಯದಲ್ಲಿ ಈಗಿನ ಸರ್ಕಾರದ ಕಟ್ಟುಪಾಡಿನ ರೀತಿ ಬಹಳ ನಿರಾಶೆಯನ್ನುಂಟುಮಾಡಿದೆ. ಇದು ಕಾಲಧರ್ಮ. ಇದು ಸೆಕ್ಯುಲರ್ ಸ್ಟೇಟ್ ತತ್ವಕ್ಕೆ ವಿರೋಧವಾಗಿದೆ, ದೇವಸ್ಥಾನಗಳ ವಿಚಾರದಲ್ಲಿ ಹೆಚ್ಚು ಮಮತೆ ತೋರದೆ ಈಗಿನ ಸರ್ಕಾರದವರು ಬಹಳ ಉದಾಸೀನ ಮಾಡಿದ್ದಾರೆ ಎಂದು ನಾನು ಹೇಳಬೇಕಾಗಿದೆ. ಆದರೆ ಇದಕ್ಕೆ ನಾನು ಸಲಹೆ ಮಾಡುವುದು ಸರ್ಕಾರದವರು ದೇವಸ್ಥಾನಗಳ ಆಡಳಿತವನ್ನು ಬೇರೆ ಸಂಸ್ಥೆಗಳಿಗೆ ವಹಿಸಿಬಿಡುವುದು ಯುಕ್ತವಾಗಿದೆ. ದೇವಸ್ಥಾನಗಳನ್ನು ಕಾಪಾಡಿಕೊಂಡು ಬರುವುದಕ್ಕೆ ಯಾವನೀತಿಯನ್ನನುಸರಿಸಬೇಕು ಮತ್ತು ಅವುಗಳನ್ನು ಇನ್ನೂ ಹೆಚ್ಚು ಅಭಿವೃದ್ಧಿ ಮಾಡಬೇಕಾದರೆ ಎಷ್ಟು ಹಣ ಸಂಗ್ರಹ ಮಾಡ ಮಾಡಬೇಕು ಎಂಬುದನ್ನು ದೇವಸ್ಥಾನದ ಸಮಿತಿ ಮುಜರಾಯಿ ಇಲಾಖೆಗೆ ತಿಳಿಸಬೇಕು. ಆ ಸಮಿತಿಯನ್ನು ಸರ್ಕಾರದಿಂದ ಬೇರೆ ಮಾಡಿ ಸೆಕ್ಯುಲರ್ ಸ್ಟೇಟು ತತ್ವಗಳಿಗೆ ಏನೂ ತೊಂದರೆಯಿಲ್ಲದಿರುವ ಹಾಗೆ ಹಿಂದೂ ದೇವಾಲಯಗಳು ಚೆನ್ನಾಗಿ ನಡೆದುಕೊಂಡು ಬರುವ ರೀತಿಯಲ್ಲಿ ಏರ್ಪಾಡು ಮಾಡಬೇಕು. ಇದು ಕಾನೂನಿಗೆ ಸಂಬಂಧಪಟ್ಟ ವಿಷಯ ಮತ್ತು ದೂರದೃಷ್ಟಿಯಿಂದ ನಡೆಸಬೇಕಾದ ಕ್ರಮ. ಇದನ್ನು ಈಗಲೇ ನಾವು ಯೋಚನೆ ಮಾಡುತ್ತಾ ಬರಬೇಕು. ಏಕೆಂದರೆ ಸೆಕ್ಯುಲರ್ ಸ್ಟೇಟ್‌ಗೆ ತೊಂದರೆಯಾಗಬಾರದು. ದೇವಾಲಯಗಳ ಕೆಲಸ ಕಾರ್ಯಗಳೂ ಕೂಡ ತಮ್ಮಷ್ಟಕ್ಕೆ ತಾವೇ ಸರ್ಕಾರಕ್ಕೆ ಯಾವ ತೊಡಕೂ ಇಲ್ಲದೆ ನಡೆದುಕೊಂಡು ಹೋಗುವುದಕ್ಕೂ ಆಯಾ ಮತ ಸಂಪ್ರದಾಯ ಸರಿಯಾಗಿ ನಡೆದುಕೊಂಡು ಹೋಗುವುದಕ್ಕೂ ಒಂದು ಏರ್ಪಾಡು ಮಾಡುವುದು ಆವಶ್ಯಕ. ಇದು ಮುಂದೆ ಮಾಡಬೇಕಾದ್ದು ಯಾವರೀತಿ ಮಾಡಬೇಕೆಂಬುದನ್ನು ಯೋಚನೆ ಮಾಡೋಣ. ಈಗ ದೇವಾಲಯಗಳು ಶಿಥಿಲವಾಗುತ್ತಿವೆ. ಅವುಗಳ ಕಡೆ ಗಮನ ಕೊಡಬೇಕಾಗಿದೆ. ಇಂಡಿಯಾದಲ್ಲಿ ಎಷ್ಟೋ ದೇವಾಲಯಗಳನ್ನು, ಬಹಳ ದೊಡ್ಡ ದೇವಾಲಯಗಳನ್ನು ಬಹಳ ವ್ಯವಸ್ಥಿತವಾಗಿ ಹಿಂದಿನವರು ಕಟ್ಟಿಸಿದ್ದರು. ಈಗೇನಾದರೂ ಕಲ್ಲು ಸಡಿಲವಾದರೆ, ಯಾವುದಾದರೂ ಕಂಬ ಬಿದ್ದುಹೋಗುವಹಾಗಿದ್ದರೆ ಅದನ್ನು ಸರಿಪಡಿಸಬೇಕಾದ್ದು ಅತ್ಯಂತ ಆವಶ್ಯಕ. ಹಾಗೆಯೇ ಬಿಟ್ಟರೆ ಆ ದೇವಾಲಯಗಳಿಗೆ ಪೂಜೆ ಪುನಸ್ಕಾರಗಳಿಗೆ ಹೋಗುವ ಭಕ್ತರಿಗೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಆ ವಿಷಯದಲ್ಲಿ ಸರ್ಕಾರದವರು ಏನಾದರೂ ಒಂದು ವ್ಯವಸ್ಥೆ ಮಾಡಬೇಕು.

ಎರಡನೆಯದು ಅಸ್ಪೃಶ್ಯತಾ ನಿವಾರಣೆಗೆ-ಹರಿಜನರು ದೇವಾಲಯಗಳಿಗೆ ಪ್ರವೇಶಮಾಡಬೇಕೆಂಬುದು. ಅಸ್ಪೃಶ್ಯತೆ ವಿಷಯದಲ್ಲಿ ಕಾನೂನು ನಿರ್ಬಂಧ ಹಾಕಿದ್ದರೂ ಕೂಡ ಕಾಲೋಚಿತವಾಗಿ ನಮ್ಮ ಸರ್ಕಾರ ಈ ವಿಷಯದಲ್ಲಿ ಮುಂದೆ ನುಗ್ಗಿ ಒಂದು ಕಾರ್ಯಕ್ರಮ ಅನುಸರಿಸಬೇಕಾದರೆ ಅಮಲ್ದಾರರುಗಳಿಗೆ ಒಂದು ತಾಕೀತು ಮಾಡಬೇಕು. ಯಾವುದಾದರೂ ಸಂದರ್ಭಗಳಲ್ಲಿ ಹರಿಜನರನ್ನು ದೇವಾಲಯಗಳಿಗೆ ಕರೆದುಕೊಂಡು ಹೋಗುವ ಒಂದು ಸಮಾವೇಶವನ್ನು ಆವಶ್ಯಕವಾಗಿ ಕಲ್ಪಿಸಿಕೊಳ್ಳಬೇಕು. ಏಕೆಂದರೆ ಪೂರ್ವದಿಂದ ಬಂದಿರುವ ಸಂಪ್ರದಾಯ ಹೋಗಬೇಕಾದರೆ ಒಂದು ಹೊಸ ವ್ಯವಸ್ಥೆಯಾಗಬೇಕು. ಇದನ್ನು ಸಮಾಜಕ್ಕೇ ಬಿಟ್ಟರೆ ಆಗುವುದಿಲ್ಲ. ಸರ್ಕಾರ ಅಸ್ಪೃಶ್ಯತೆ ನಿವಾರಣೆ ಮಾಡಬೇಕೆಂದು ರಾಜ್ಯಾಂಗದಲ್ಲೇ ಹೇಳಿರುವುದರಿಂದ ಇದನ್ನು ಮಾಡಲೇಬೇಕು. ಇದು ಧರ್ಮದ ವಿಷಯವಲ್ಲ, ಇದು ಜನಾಂಗ ತೀರ್ಮಾನ ಮಾಡುವ ವಿಷಯ. ಆದ್ದರಿಂದ ಇದಕ್ಕೆ ಸರ್ಕಾರದವರು ಕಾಲೋಚಿತವಾಗಿ ಕೆಲವು ಒಳ್ಳೆಯ ಏರ್ಪಾಡುಗಳನ್ನು ಮಾಡಿಕೊಳ್ಳಬೇಕು. ಇದಕ್ಕಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ದೇವಾಲಯಗಳಿಗೆ ಹರಿಜನರನ್ನು ಕರೆದುಕೊಂಡು ಹೋಗುವ ಕೆಲಸವನ್ನು ಅಮಲ್ದಾರರುಗಳಿಗೇ ಬಿಡಬೇಕು. ಅವರೇ ಈ ಕೆಲಸಮಾಡಲಿ ಎಂದು ಇದಕ್ಕೆ ಬೇಕಾದ ಏರ್ಪಾಡು ಮಾಡಿದರೆ ಎರಡು ಮೂರು

(ಶ್ರೀ ಪಿ. ಆರ್. ರಾಮಯ್ಯ.)

ವಿಷಯದಲ್ಲಿ ಯಾವ ಒಂದು ಅಡ್ಡಿಯಿದೆ ಅದು ಮಾಯವಾಗಿ ಅಸ್ಪೃಶ್ಯತೆ ಸಂಪೂರ್ಣವಾಗಿ ನಿವಾರಣೆಯಾಯಿತೆಂಬ ನಂಬಿಕೆ ಸಮಾಜಕ್ಕೆ ಬರುತ್ತದೆ. ಆದ್ದರಿಂದ ಈ ಸಲಹೆಗಳನ್ನು ನಾನು ಕೊಡುತ್ತೇನೆ.

ನಾನು ಈಗ ತಮಗೆ ಇನ್ನೊಂದು ವಿಷಯ ಹೇಳಬೇಕೆಂದಿದ್ದೇನೆ. ನಮ್ಮ ಸಂಸ್ಥಾನದಲ್ಲಿ ಚಾಮುಂಡಿ ದೇವಸ್ಥಾನ ಇತ್ಯಾದಿ ಕೆಲವು ದೇವಾಲಯಗಳು ಬಹಳ ಪ್ರಖ್ಯಾತಿಯಾದಂಥವುಗಳಾಗಿವೆ. ಈ ದೇವಾಲಯಗಳಲ್ಲಿರತಕ್ಕಂಥ ಶಿಲ್ಪಕಲಾ ಕೌಶಲ್ಯಗಳನ್ನು ನೋಡಬೇಕೆಂಬ ಉತ್ಸಾಹದಿಂದ ಅನೇಕ ಪರದೇಶದ ಜನರುಗಳು ಇಲ್ಲಿಗೆ ಕಾರಣಾಂತರಗಳಿಂದ ಬಂದಾಗ್ಗೆ, ಬರುತ್ತಾರೆ. ಆದರೆ ಇಲ್ಲಿ ಏನೋ ಒಂದು ಹಳೇ ಸಾಂಪ್ರದಾಯವನ್ನಿಟ್ಟುಕೊಂಡು ಹೊರಗಡೆ ದೇಶದ ಜನರನ್ನು ಒಳಕ್ಕೆ ಬಿಡುತ್ತಿಲ್ಲ. ಕೆಲವು ದೇವಾಲಯಗಳಲ್ಲಿ ಈಗಲೂ ಬಿಡುತ್ತಿಲ್ಲ. ಮೊನ್ನೆ ಇಲ್ಲಿಗೆ ECAFE ಸಮ್ಮೇಳನಕ್ಕೆ ಬಂದಿದ್ದಂಥ ಕೆಲವರು ಹಾಗೆ ಈ ದೇವಾಲಯಗಳನ್ನು ನೋಡುವುದಕ್ಕೆ ಹೋಗಿದ್ದಾಗ ಅವರನ್ನು ವಿದೇಶೀಯ ಜನರೆಂದು ಅವರನ್ನು ಒಳಕ್ಕೆ ಬಿಡಲಿಲ್ಲವೆಂದು ಹೇಳಿದರು. ನಾವು ಈ ದಿವಸ ಇಲ್ಲಿ ಈ ಅಸ್ಪೃಶ್ಯತಾ ನಿವಾರಣೆ ಮಾಡಬೇಕೆಂದು ಹೇಳುತ್ತಿರುವಾಗ ಈ ದೇವಾಲಯಗಳಲ್ಲಿರುವ ವಾಸ್ತವ ಚಿತ್ರಕಲೆಗಳನ್ನು ನೋಡಲು ಬರತಕ್ಕವರೆಲ್ಲರಿಗೂ ಒಳಕ್ಕೆ ಬರಲು ಅವಕಾಶವಿರಬೇಕು. ಈ ಅಂಶಕ್ಕೆ ಸರ್ಕಾರದವರು ಗಮನಕೊಡಬೇಕೆಂದು ಸೂಚಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಚ್. ಕೆ. ವೀರಣ್ಣಗೌಡ (ಮದ್ದೂರು).—ಸ್ವಾಮಿ, ನಮ್ಮ ಮದ್ದೂರು ಟೌನಿನಲ್ಲಿರತಕ್ಕ ಶ್ರೀ ಉಗ್ರನರಸಿಂಹಸ್ವಾಮಿಯ ಮುಜರಾಯಿ ದೇವಾಲಯದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಮದ್ದೂರಿನಲ್ಲಿ ಇದೊಂದು ಬಹಳ ಪುರಾತನವಾದಂಥ ಮುಜರಾಯಿ ದೇವಾಲಯ. ಈ ದೇವಾಲಯವನ್ನು ಕಟ್ಟಿ ಒಂದು ಸಾವಿರ ವರ್ಷಕ್ಕೂ ಮೇಲಾಗಿದೆ ಎಂದು ಅಲ್ಲಿನ ಜನರು ಹೇಳುತ್ತಿದ್ದಾರೆ. ಈ ದೇವಾಲಯಕ್ಕೆ ಬೇಕಾದಷ್ಟು ಮಾನ್ಯ—ಮಿರಾಸೆಗಳೂ, ಇನಾಂತಿ ಜಮೀನುಗಳೂ ಇರುತ್ತವೆ. ಈಗ ಈ ದೇವಸ್ಥಾನ ಬಹಳ ಶಿಥಿಲವಾಗಿದೆ. ದೊಡ್ಡ ಗೋಪುರವೆಲ್ಲಾ ಬಿರುಕುಬಿಟ್ಟಿದೆ; ಒಳಕ್ಕೆ ಹೋಗತಕ್ಕವರು ಪ್ರಾಣದ ಮೇಲಿನ ಆಶೆಯನ್ನು ತೊರೆದು ಹೋಗಬೇಕು ಎನ್ನುವಷ್ಟರ ಮಟ್ಟಿಗೆ ಈ ದೇವಸ್ಥಾನ ಶಿಥಿಲವಾಗಿದೆ. ಸರ್ದಾರ್ ಶ್ರೀ ಕಾಂತರಾಜೇ ಅರಸಿನವರು ಈ ದೇವರ ಒಕ್ಕಲು, ಅವರ ಸಂತತಿಯವರು ಈಗಲೂ ಈ ದೇವಸ್ಥಾನಕ್ಕೆ ಕಾಣಿಕೆ, ಮುಡುಪು ಇತ್ಯಾದಿಗಳನ್ನು ವಿಶೇಷವಾಗಿ ಕೊಡುತ್ತಿದ್ದಾರೆ. . . . .

ಶ್ರೀ ಎ. ಜಿ. ರಾಮಚಂದ್ರರಾವ್.—ಹಾಗಾದರೆ ಅದೇನು ಏನ್‌ಷೆಂಟ್ ಮಾನ್ಯುಮೆಂಟೋ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅಲ್ಲಿ ಆ ವಿಧವಾದ ಬೋರ್ಡನ್ನೇನೂ ಹಾಕಿಲ್ಲ. ಅಂತೂ ಇದೊಂದು ಬಹಳ ಪುರಾತನ ದೇವಸ್ಥಾನ; ರಾಜಮನೆತನದವರು ಬಂದು ಹೋಗುತ್ತಿರುವಂಥ ದೇವಸ್ಥಾನ. ಇಂಥ ದೇವಾಲಯ ಈ ದಿವಸ ಬಹಳ ದುರವಸ್ಥೆಯಲ್ಲಿದೆ. ಈ ದೇವಾಲಯವನ್ನು ಜೀರ್ಣೋದ್ಧಾರ ಮಾಡಿಸಲು ಈ ಹಿಂದೆ 60—70 ಸಾವಿರ ರೂಪಾಯಿಗಳ ಒಂದು ಅಂದಾಜನ್ನು ತಯಾರಿಸಲಾಗಿತ್ತೆಂದು ಕೇಳುತ್ತೇನೆ. ಅದೀಗ ಸರ್ಕಾರದಲ್ಲಿ ಎಲ್ಲೋ ಮೂಲೆಯಲ್ಲಿ ಬಿದ್ದಿದೆ. ಅದನ್ನು ಈಗಲಾದರೂ ದಯವಿಟ್ಟು ಈಚೆಗೆ ತೆಗೆಸಿ ಆ ದೇವಸ್ಥಾನವನ್ನು ಆ ದೇವರ ದರ್ಶನಕ್ಕಾಗಿ ಬರತಕ್ಕಂಥ ಜನರ ತಲೆಯ ಮೇಲೆ ಬೀಳದಂತೆ ಸರಿಪಡಿಸಬೇಕೆಂದು ನನ್ನ ಮೊದಲನೆಯ ಕೋರಿಕೆ.

ಇನ್ನು ನಾನು ಕೊಡಬೇಕೆಂದಿರುವ ಸಲಹೆ ಏನೆಂದರೆ—ಸಂಸ್ಥಾನಾಮುಳೆಯಿರತಕ್ಕ ಈ ಮುಜರಾಯಿ ದೇವಾಲಯಗಳ ಕಾರ್ಯಕ್ರಮಗಳನ್ನೂ ಮತ್ತು ಇವುಗಳ ಆಡಳಿತವನ್ನೂ ನೋಡಿಕೊಳ್ಳುವುದಕ್ಕಾಗಿ ಈ ದಿವಸ ಕೆಲವು ಧರ್ಮದರ್ಶಿಗಳನ್ನು ನೇಮಕ ಮಾಡಲಾಗುತ್ತಿದೆ. ಹಾಗೆ ನೇಮಕ ಮಾಡಲ್ಪಡುವ ಧರ್ಮದರ್ಶಿಗಳಿಗೂ ಈ ಮಾನ್ಯ ಸಭೆಗೂ ಏನೂ ಸಂಬಂಧವಿರುವುದಿಲ್ಲ. ಆದ್ದರಿಂದ ಆ ದೇವಾಲಯಗಳ ಆಡಳಿತ ಮತ್ತು ಅವುಗಳ ಸ್ಥಿತಿಗತಿಗಳನ್ನು ತಿಳಿದುಕೊಂಡು ಮುಂದೆ ಅವುಗಳ ಬಗ್ಗೆ ಏನನ್ನಾದರೂ ಮಾಡಬೇಕೆಂಬ ಸಲಹೆ ಮಾಡುವುದಕ್ಕೆ ಈ ಸಭೆಯವರಿಗೆ ಅವಕಾಶವಿರುವುದಿಲ್ಲ. ಅದಕ್ಕಾಗಿ ಈ ಮಾನ್ಯ ಸಭೆಯ ಸದಸ್ಯರ ಪೈಕಿ ಒಬ್ಬರು ಆ ಧರ್ಮದರ್ಶಿಗಳ ಸ್ಥಾನದಲ್ಲಿದ್ದರೆ ಆ ದೇವಸ್ಥಾನಗಳ ವಿಚಾರವನ್ನು ಈ ಸಭೆಯ ಗಮನಕ್ಕೆ ತರಲು ಅವಕಾಶವಾಗುತ್ತದೆ. ಇಂಥ ಒಂದು ಅವಕಾಶವನ್ನು ಈ ಸಭೆಯ ಸದಸ್ಯರಿಗೆ ದೊರೆಯುವಂತೆ ಮಾಡಬೇಕೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. CHAIRMAN.—I want to know what time the Hon'ble Minister requires to reply ?

Sri A. G. RAMACHANDRA RAO.—Sri. Channabasappa requires a few minutes and myself another few minutes.

Mr. CHAIRMAN.—Let both of you together have five minutes.

ಶ್ರೀ ಎಸ್. ಗೋಪಾಲಗೌಡ (ಸಾಗರ—ಹೊಸನಗರ).—ಸ್ವಾಮಿ, ನಾನು ಈ ಡಿಮ್ಯಾಂಡನ್ನು ವಿರೋಧಿಸುತ್ತ ಒಂದು ವಿಷಯವನ್ನು ಸರ್ಕಾರದವರ ಗಮನಕ್ಕೆ ತರಲು ಅಪೇಕ್ಷಿಸುತ್ತೇನೆ. ಈಗ ನಾನು ಆ ಲೇಬರ್ ವೆಲ್‌ಫೇರ್ ಇಲಾಖೆಯ ವಿಷಯದಲ್ಲಿ ಒಂದೆರಡು ವಿಷಯಗಳನ್ನು ಪ್ರಸ್ತಾಪಿಸಬೇಕೆಂದಿದ್ದೇನೆ.

ನಮ್ಮ ಮೈಸೂರು ಸರ್ಕಾರದವರು ಅನೇಕ ಸಂದರ್ಭಗಳಲ್ಲಿ ಈ ಕಾರ್ಮಿಕರ ಬೇಡಿಕೆಗಳನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತಿಲ್ಲ ಎನ್ನುವುದಾಗಿ ನನ್ನ ಗಮನಕ್ಕೆ ಬಂದಿದೆ. ರಾಜೀ ಸಂಧಾನದ ಪ್ರಯತ್ನಗಳು ಮುರಿದುಬಿದ್ದು ಹೋದ ನಂತರ ಆ ಕಾರ್ಮಿಕರು ಅವರ ಬೇಡಿಕೆಯನ್ನು ಒಂದು ಟ್ರಿಬ್ಯುನಲ್‌ಗೆ ಒಪ್ಪಿಸಿ ಎಂಬುದಾಗಿ ಅವರು ಕೇಳಿಕೊಂಡಿದ್ದರೂ ಅದನ್ನು ಅನೇಕ ಸಂದರ್ಭಗಳಲ್ಲಿ ಈ ಸರ್ಕಾರ ತಳ್ಳಿಹಾಕಿದೆ; ಸಾಧ್ಯವಿಲ್ಲವೆಂದು ಹೇಳಿದ್ದರ ಮೇಲೆ ಅನೇಕ ಸ್ಟ್ರೈಕುಗಳೂ ಕೂಡ ನಡೆದಿವೆ. ಎಲೆಕ್ಟ್ರಿಕ್ ಇಲಾಖೆಯ ನೌಕರರ ಸ್ಟ್ರೈಕೇ ಇದಕ್ಕೊಂದು ಸಾಕ್ಷಿ. ಹೀಗೆ ಮಾಡತಕ್ಕದ್ದು ಬಹಳ ಹಿಂದಿನಕಾಲದ ನೀತಿಯೆಂದು ಹೇಳಬಹುದು. ಈ ನೀತಿ ಒಂದು ಮಿಡೀವಿಯಲ್ ಕಾಲದ ನೀತಿ. ಇದನ್ನು ನಮ್ಮ ಸರ್ಕಾರ ಇನ್ನೂ ಕೈಬಿಟ್ಟಿದ್ದ ಹಾಗೆ ಕಾಣುತ್ತಿಲ್ಲ. ಇದರಿಂದ ಕಾರ್ಮಿಕ ವರ್ಗಕ್ಕೆ ಬಹಳ ತೊಂದರೆಯಾಗಿದೆ. ಕಾರ್ಮಿಕರ ಹಿತರಕ್ಷಣೆಗಳ ಬಗ್ಗೆ ಇಂಡಿಯಾ ಪಾರ್ಲಿಯಮೆಂಟಿನಲ್ಲಿ ಪಾಸಾಗಿ ಈ ದಿವಸ ಮೈಸೂರು ಸರ್ಕಾರದವರು ಇಲ್ಲಿ ಜಾರಿಗೆ ತಂದಿರತಕ್ಕಂಥ ಕಾನೂನುಗಳು

ಎಷ್ಟರಮಟ್ಟಿಗೆ ಈ ದಿವಸ ಆ ಕಾರ್ಮಿಕರಿಗೆ ರಕ್ಷಣೆ ಕೊಡಬೇಕೋ ಅಷ್ಟನ್ನು ಕೊಡುವಂತೆ ಮಾಡಲು ಸರ್ಕಾರ ಮುಂದೆ ಬರಬೇಕಾಗಿದೆ. ಈ ಟ್ರಿಬ್ಯುನಲ್‌ಗಳು ಅವಾರ್ಡನ್ನು ಕೊಟ್ಟಾಗ ಅದರ ಫಲ ಅವರಿಗೆ ಸಲ್ಲುವ ಹಾಗೆ ಮಾಡಬೇಕು ಎಂಬುದಾಗಿ ಕಾನೂನಿನಲ್ಲಿ ತಿಳಿಸಿದ್ದರೂ ಕೂಡ ಮೈಸೂರು ಸರ್ಕಾರ ತನ್ನ ಒಂದು ಉದಾಸೀನತೆಯನ್ನು ತೋರಿಸಿ ಇವರಿಗೆ ತೊಂದರೆ ಕೊಟ್ಟಿದೆ.

ಶಿವಮೊಗ್ಗಾ ಜಿಲ್ಲೆಯಲ್ಲಿ ಈ ದಿವಸ ಈ ಷಾಪ್ಸ್ ಅಂಡ್ ಎಷ್ಟಾಬ್ಲಿಷ್‌ಮೆಂಟ್ ವರ್ಕ್ಸ್ ಆಕ್ಟ್ ಜಾರಿಯಲ್ಲಿದೆ. ಅಲ್ಲಿಯ ಜನರ ಹಿತವನ್ನು ನೋಡಿಕೊಳ್ಳುವುದಕ್ಕಾಗಿ ಒಬ್ಬ ಇನ್‌ಸ್ಪೆಕ್ಟರಿದ್ದಾರೆ. ಈ ವೆಲ್‌ಫೇರ್ ಆಫೀಸರ್ ಎನ್ನತಕ್ಕವರು ನಡೆಸುತ್ತಿರುವ ಕಾರ್ಯಕ್ರಮಗಳು ಆ ಮ್ಯಾನೇಜ್‌ಮೆಂಟಿನವರ ಹಿತಸ್ಥರೂ, ಅವರ ಆಪ್ತ ಸ್ನೇಹಿತರೂ ಎನ್ನುವ ಮಟ್ಟಕ್ಕೆ ಹೋಗಿದೆ. ಆದರೆ ಅವರು ಆ ಮಟ್ಟದಲ್ಲಿ ವರ್ತಿಸುತ್ತಿದ್ದಾರೆಂದು ಆಪಾದನೆ ಮಾಡುತ್ತಿಲ್ಲ. ಇವರು ಆ ಮ್ಯಾನೇಜ್‌ಮೆಂಟಿನವರ ಹಿತಸ್ಥರಾಗಿರುವುದರಿಂದ ಆ ನೌಕರರಿಗೆ ಏನೇನು ರಕ್ಷಣೆಗಳನ್ನು ಕೊಡಬೇಕಾಗಿತ್ತೋ, ಅವರಿಗೇನೇನು ಸಹಾಯಗಳನ್ನು ನೀಡಬೇಕಾಗಿತ್ತೋ ಅವುಗಳ ಕಡೆಗೆ ಇವರು ತಮ್ಮ ಗಮನವನ್ನು ಕೊಟ್ಟಿಲ್ಲ. ಇಂಥ ಕಾನೂನನ್ನು ಸರ್ಕಾರದವರು ಸಾಮಾನ್ಯವಾಗಿ ನಾಲ್ಕಾರು ಸಾವಿರ ಜನಸಂಖ್ಯೆ ಇರತಕ್ಕಂಥ ಎಲ್ಲಾ ಪಟ್ಟಣಗಳಲ್ಲೂ ಜಾರಿಗೆ ತರತಕ್ಕದ್ದು ಒಳ್ಳೆಯದು. ಆದರೆ ಆ ಪಟ್ಟಣದ ಜನರು ಕೇಳಿದರೆ ನಾವು ಕೊಡುತ್ತೇವೆ ಎಂದು ಸರ್ಕಾರದವರು ಹೇಳುತ್ತಿದ್ದಾರೆ. ಈ ದಿವಸ ಇದನ್ನು ಆ ಚನ್ನಗಿರಿ, ಹೊನ್ನಾಳಿ, ತೀರ್ಥಹಳ್ಳಿ, ಹೊಸನಗರ ಇತ್ಯಾದಿ ತಾಲ್ಲೂಕುಗಳಿಗೆಲ್ಲ ವಿಸ್ತರಿಸಬಹುದು, ಆ ಶಿವಮೊಗ್ಗದಲ್ಲಿರುವ ವೆಲ್‌ಫೇರ್ ಆಫೀಸರು ಈ ತಾಲ್ಲೂಕುಗಳಿಗೆಲ್ಲಾ ಹೋಗಿ ನೋಡಿಕೊಳ್ಳಬಹುದು. ಈ ವಿಷಯವನ್ನು ಸರ್ಕಾರದವರು ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ (ಕೈಗಾರಿಕಾ ಸಚಿವರು).—ಸ್ವಾಮಿ, ಆ ಲಂಡನ್ ಪಟ್ಟಣದಲ್ಲಿ ನಮ್ಮ ಒಬ್ಬ ಟ್ರೇಡ್ ಏಜಂಟರು ಅಲ್ಲಿ ಇರಕ್ಕದ್ದು ಏತಕ್ಕೆ? ಇದು ಅನವಶ್ಯಕ, ಅಲ್ಲಿ ಈಗಾಗಲೇ ಒಬ್ಬರು ಇಂಡಿಯಾ ದೇಶದ ಹೈ ಕಮಿಷನರ್ ಇದ್ದಾರೆ, ಹೀಗೆ ಇವರು ಇದ್ದಾಗ್ಯೂ ನಾವು ಅಲ್ಲಿ ನಮ್ಮ ಟ್ರೇಡ್ ಏಜಂಟರನ್ನು ಇಟ್ಟುಕೊಂಡಿರುವುದರಿಂದ ನಮ್ಮ ಸರ್ಕಾರಕ್ಕೆ ವೃಥಾ ಒಂದು ಲಕ್ಷದ ಮೂವತ್ತು ಸಾವಿರ ರೂಪಾಯಿಗಳು ಖರ್ಚಾಗುತ್ತಿದೆ, ಇವರು ಅಲ್ಲಿರತಕ್ಕದ್ದು ಅನಾವಶ್ಯಕ ಎಂಬುದಾಗಿ ಶ್ರೀಮಾನ್ ಶ್ರೀನಿವಾಸಯ್ಯಂಗಾರ್ ಅವರು ಹೇಳಿದರು. ನಮಗೂ ಮೊದಲು ಹೀಗೇ ಅನ್ನಿಸಿತು. ಆದರೆ ನಾವು ವಿಚಾರಗಳನ್ನೆಲ್ಲಾ ಕೂಲಂಕಷವಾಗಿ ವಿಮರ್ಶೆ ಮಾಡಿದ ನಂತರ ನಮ್ಮ ಅಭಿಪ್ರಾಯಗಳನ್ನು ಬದಲಾಯಿಸಬೇಕಾಗಿ ಬಂತು. ಇವರನ್ನು ತೆಗೆದುಹಾಕತಕ್ಕದ್ದು ಅಷ್ಟು ಸುಲಭವಲ್ಲ. ಇದರಲ್ಲಿ ಅನೇಕ ಸಾಧಕ ಬಾಧಕಗಳಿವೆ. ಈ ದಿವಸ ನಾವು ಇವರ ಮೂಲಕ ಅನೇಕ ಮಾಲುಗಳನ್ನು ತರಿಸುತ್ತಿದ್ದೇವೆ. ನಮಗೆ ಈ ಪಾಂಚವಾರ್ಷಿಕ ಯೋಜನೆಯ ಸಂಬಂಧವಾಗಿ ಅನೇಕ ಮೆಷನರಿ ಸಾಮಾನುಗಳ ಅಗತ್ಯ ಬಹಳವಾಗಿದೆ. ನಾವು ಇವರನ್ನು ತೆಗೆದು ಹಾಕತಕ್ಕದ್ದು ಈ ಸಂದರ್ಭದಲ್ಲಿ ಲಾಭಕರವಾದದ್ದಲ್ಲ ಎಂಬ ಅಂಶಗಳನ್ನೆಲ್ಲಾ ಭಾರತ ಸರ್ಕಾರದವರಿಗೆ ತಿಳಿಸಿ ಅವರೊಡನೆ ಸಂಧಾನ ನಡೆಸಿ ಇವರನ್ನು ಈಗ ತೆಗೆದು ಹಾಕುವುದರಿಂದ ನಮಗೆ ಅನೇಕ ತೊಂದರೆಗಳುಂಟಾಗುತ್ತವೆಂದು ತಿಳಿಸಿದ್ದರಮೇಲೆ ಅವರು ನಮಗೆ ಈ ಟ್ರೇಡ್ ಏಜಂಟರನ್ನು ಇಟ್ಟುಕೊಳ್ಳಲು ಅನುಮತಿ ಕೊಟ್ಟಿದ್ದಾರೆ. ಇದರಿಂದ ನಮಗೆ ಈ ದಿವಸ ನೇರವಾಗಿ ಇವರ ಮೂಲಕ ಅನೇಕ ಸಾಮಾನುಗಳನ್ನು ಕೊಂಡುಕೊಳ್ಳಲು ತುಂಬ ಅನುಕೂಲವಿರುತ್ತದೆ. ಅದೂ ಅಲ್ಲದೆ ಆ ಪರದೇಶದಲ್ಲಿ ನಮ್ಮ ಗಂಧದ ಎಣ್ಣೆಯನ್ನು ಮಾರಾಟ ಮಾಡಲು ಮತ್ತು ನಮ್ಮೊಂದಿಗೆ ಈ ಸಂಬಂಧವಾಗಿ ಎಲ್ಲ ಪತ್ರವ್ಯವಹಾರಗಳನ್ನೂ ನಡೆಸಲು ಇವರು ಅಲ್ಲಿ ಇಲ್ಲದೆ ಇದ್ದಿದ್ದರೆ ನಾವು ಒಬ್ಬ ಟ್ರೇಡ್ ಏಜನ್ಸಿಯನ್ನು ಅಲ್ಲಿ ಇಟ್ಟುಕೊಳ್ಳಬೇಕಾಗಿತ್ತು ಮತ್ತು ಅದಕ್ಕಾಗಿ ನಾವು ಒಂದು ಲಕ್ಷಕ್ಕೆ ಮೀರಿ ಕಮಿಷನ್ ಕೊಡಬೇಕಾಗಿತ್ತು. ನಾವು ಪ್ರತಿವರ್ಷವೂ ಸುಮಾರು ನಮ್ಮ S.P.C. ಗೆ 62 ಲಕ್ಷದ 32 ಸಾವಿರ ರೂಪಾಯಿಗಳ ಪದಾರ್ಥಗಳನ್ನು ತರಿಸಿಕೊಳ್ಳುತ್ತಿದ್ದೇವೆ. ಇದಕ್ಕೆ ನಾವು ಅವರಿಗೆ ಶೇಕಡ 1ರ ಹಾಗೆ ಛಾರ್ಜು ಕೊಡಬೇಕಾಗುತ್ತದೆ. ಇದರಿಂದ ಭಾರತ ಸರ್ಕಾರ 52-53 ಸಾವಿರ ರೂಪಾಯಿಗಳನ್ನು ತೆರಬೇಕಾಗುತ್ತದೆ. ಇದಲ್ಲದೆ ನಾವು ಆ ಯುನೈಟೆಡ ಸ್ಟೇಟ್ಸ್ ಆಫ್ ಅಮೆರಿಕಾದವರಿಗೆ ಕಮಿಷನ್ ಬೇರೆ ಕೊಡಬೇಕಾಗುತ್ತದೆ. ಹೋದ ವರ್ಷ ನಡೆದ ವ್ಯಾಪಾರಕ್ಕಾಗಿ ಸುಮಾರು ಶೇಕಡ 2½ ಯಂತೆ 37 ಸಾವಿರ ರೂಪಾಯಿಗಳಷ್ಟು ಕಮಿಷನ್ನನ್ನೇ ಕೊಡಬೇಕಾಯಿತು. ಹೀಗೆ ಈ 37 ಸಾವಿರ ಮತ್ತು ಆ 67 ಸಾವಿರ ಸೇರಿದರೆ ಒಟ್ಟು ಒಂದು ಲಕ್ಷ ಚಿಲ್ಲರೆ ರೂಪಾಯಿಗಳಿಗೆ ಬರುತ್ತದೆ. ಇದೂ ಕೂಡ ಅಷ್ಟೇ ಆಯಿತು. ಆದರೆ ಅಲ್ಲಿ ನಮ್ಮ ಒಬ್ಬ ಟ್ರೇಡ್ ಏಜಂಟರು ಇಲ್ಲದಿದ್ದರೆ ವ್ಯಾಪಾರದಲ್ಲಿ ಬಹಳ ಏರುಪೇರು ಆಗುತ್ತದೆ ಎಂಬುದಾಗಿ ಗೊತ್ತಾಯಿತು. ನಾವು ಸಾಮಾನುಗಳನ್ನು ಖರೀದಿ ಮಾಡುವಾಗ ಅವರಿಗೆ ತಿಳಿಸಿದರೆ ಅವರು ನಮಗೆ ಈ ಬೆಲೆಗಳ ವಿಚಾರದಲ್ಲಿ ಅನೇಕ ವಿಷಯಗಳನ್ನು ಗೊತ್ತು ಮಾಡಿಕೊಂಡು ತಿಳಿಸುತ್ತಿದ್ದಾರೆ. ನಮ್ಮ ಗಂಧದ ಎಣ್ಣೆಯ ಮಾರಾಟಕ್ಕೂ ಮತ್ತು ನಮ್ಮ S.P.C. ಗೆ ಬೇಕಾದ ಸಾಮಾನುಗಳನ್ನು ತರಿಸಿಕೊಳ್ಳುವುದಕ್ಕೂ ನಾವು ಇವರ ಮೂಲಕ ವ್ಯವಹಾರ ನಡೆಸುತ್ತಿರುವುದರಿಂದ ನಮ್ಮ ಕೆಲಸ ಕಾರ್ಯಗಳೆಲ್ಲಾ ಬೇಗ ನಡೆಸಲು ಅನುಕೂಲವಾಗುವಂತೆ ಅವರು ನಮಗೆ ಬೇಕಾದ ಎಲ್ಲ ಸಾಮಾನುಗಳನ್ನೂ ಕಳುಹಿಸುತ್ತಿದ್ದಾರೆ. ಇವರು ನಮ್ಮ ಪರವಾಗಿ ಅಲ್ಲಿರುವುದರಿಂದ ನಮಗೆ ಯಾವ ನಷ್ಟವೂ ಆಗುವುದಿಲ್ಲ. ಇನ್ನೂ ಇವರಿಂದ ನಮಗೆ ಹೆಚ್ಚು ಸಹಾಯವಾಗುತ್ತಿದೆ. ಈ ಕಾರಣಗಳಿಂದ ನಾವು ಈ ಟ್ರೇಡ್ ಏಜಂಟರನ್ನು ಅಲ್ಲಿ ಇಟ್ಟಿರುತ್ತೇವೆಂದು ತಿಳಿಸಿದರೆ ಮಾನ್ಯ ಸದಸ್ಯರ ಮನಸ್ಸಿನಲ್ಲಿದ್ದ ಸಂಶಯಗಳೆಲ್ಲ ಪರಿಹಾರವಾಗಿರುತ್ತವೆಂದು ಭಾವಿಸುತ್ತೇನೆ. ಆದುದರಿಂದ ಎಲ್ಲಾ ಮಾನ್ಯ ಸದಸ್ಯರೂ ಈ ಡಿಮ್ಯಾಂಡಿನಲ್ಲಿ ಸೇರತಕ್ಕ ಮೊಬಲಗಿನ ಬಗ್ಗೆ ತಮ್ಮ ಅನುಮತಿ ನೀಡಬೇಕೆಂದು ಕೇಳಿ ಕೊಳ್ಳುತ್ತೇನೆ.

*ಶ್ರೀ ಎ. ಜಿ. ರಾಮಚಂದ್ರರಾವ್ (ನ್ಯಾಯಾಂಗ ಮತ್ತು ವಿದ್ಯಾ ಇಲಾಖೆಗಳ ಮಂತ್ರಿಗಳು).—ಸ್ವಾಮಿ, ಈಗ ಕೆಲವು ಮಾನ್ಯ ಸದಸ್ಯರು ಮುಜರಾಯಿ ದೇವಸ್ಥಾನಗಳ ಬಗ್ಗೆ ಮಾತನಾಡಿದ್ದಾರೆ. ಇದನ್ನು ಈಗ ನಾವು ಮೂರು ಭಾಗವಾಗಿ ವಿಂಗಡಿಸಬಹುದು. ಎನ್‌ಷೆಂಟ್ ಮಾನ್ಯುಮೆಂಟ್ಸ್ ಎಂಬುದು ಮೊದಲನೆಯದು.

ಶ್ರೀ ಎ. ಭೀಮಪ್ಪನಾಯಕ್.—ಅವುಗಳನ್ನು ಇಂಡಿಯಾ ಸರ್ಕಾರ ನೋಡಿಕೊಳ್ಳುತ್ತದೆ.

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು. ಇನ್ನು ಯಾವ ಯಾವ ಮುಜರಾಯಿ ದೇವಸ್ಥಾನಗಳು ಇವೆಯೋ ಅವುಗಳಿಗೆ ಇನಾಂತಿಗಳು—ಫಂಡುಗಳು ಇತ್ಯಾದಿಗಳನ್ನು ಯಾವ ದಾನಿಗಳು ಮಾಡಿಟ್ಟಿದ್ದಾರೋ ಆ ಷರತ್ತುಗಳ ಪ್ರಕಾರ ಅವು ಅನೂಚಾನವಾಗಿ ನಡೆದುಕೊಂಡು ಬರುತ್ತಿವೆ.

ಇನ್ನು ಮೂರನೆಯವುಗಳಿಗೆ ಯಾವ ವರಮಾನವೂ ಇರುವುದಿಲ್ಲ. ಇಂಥ ದೇವಸ್ಥಾನಗಳಿಗೆ ಸರ್ಕಾರದವರು ಏನೂ ಸಹಾಯ ಮಾಡುವುದಕ್ಕಾಗುವುದಿಲ್ಲ. ಇಂಥ ದೇವಾಲಯಗಳಿಗೆ ಸಾರ್ವಜನಿಕರು ತಮ್ಮ ಒಂದು ಸೇವೆಯನ್ನು ಸಲ್ಲಿಸದಿದ್ದರೆ ಅವು ಮೂಲೆಗೆ ಬೀಳುವುದು ಸ್ವಾಭಾವಿಕ. ಈ ದಿವಸ ಇಂಥ ಪ್ರತಿಯೊಂದು ದೇವಸ್ಥಾನ, ಧರ್ಮಸಂಸ್ಥೆ ಇತ್ಯಾದಿಗಳಿಗೆಲ್ಲ ಸರ್ಕಾರ ಬೆಂಬಲ ನೀಡಬೇಕೆಂದರೆ ಅದು ಸಾಧ್ಯವಿಲ್ಲದ ಮಾತು. ಈ ವಿಚಾರಗಳನ್ನೆಲ್ಲಾ ಹೆಚ್ಚುಮಟ್ಟಿಗೆ ಸಾರ್ವಜನಿಕರೇ ನಡೆಸಿಕೊಂಡು ಬರುವುದು ಉತ್ತಮ ಎಂಬ ಅಂಶವನ್ನು ಈ ಮಾನ್ಯ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಇನ್ನೂ ಬಾಕಿ ತಿಳಿಸಬೇಕಾಗಿದ್ದ ಕೆಲವು ವಿಷಯಗಳಿದ್ದವು. ಆದರೆ ಅಧ್ಯಕ್ಷರು ಇನ್ನು ಕಾಲಾವಕಾಶವಿಲ್ಲವೆಂದು ಅಪ್ಪಣೆ ಕೊಡಿಸುತ್ತಿದ್ದಾರೆ. ಆದ್ದರಿಂದ ನಾನು ಆ ವಿಷಯಗಳನ್ನು ಬೇರೆ ಸಂದರ್ಭ ಸಿಕ್ಕಿದಾಗ ಹೇಳುತ್ತೇನೆ.

Mr. CHAIRMAN.—The question is:

"That a sum not exceeding Rs. 45,04,100 be granted to the Government to defray the charges which will come in course of payment during the year ending 31st day of March 1957, in respect of 'Miscellaneous' Department."

The motion was adopted.

---

5 P.M.

Half-hour Debate on question No. 238 *re*: Implementation of Award with respect to Dispute between the Management and Labour of Mysore Spun Silk Mills, Ltd.

Mr. CHAIRMAN.—Now discussion on Question No. 238 will be taken up. I call upon Sri V. Venkatappa to make a statement.

Sri A. G. RAMACHANDRA RAO (Minister for Law and Education).—Before proceeding further, only one point I wish to bring to the notice of the Chair. The case between the parties is pending before the Court and the Government. If the Hon'ble Member wants to put forward his case, I have no objection. But whether he can take it up afterwards or now I will leave it to him.

A MEMBER.—It becomes *sub judice* then.

ANOTHER MEMBER.—It cannot be *sub judice*.

ಶ್ರೀ ಎ. ಜಿ. ರಾಮಚಂದ್ರರಾವ್.—ತಾವು ಕಳುಹಿಸಿರತಕ್ಕ ಪ್ರಶ್ನೆಯೇನಿದೆ ಆ ವಿಷಯದಲ್ಲಿ ಸರ್ಕಾರದ ಒಂದು ಕೇಸು ಇದೆ. ಅದು ತಮಗೂ ಗೊತ್ತು. ಅಲ್ಲಿ ತೀರ್ಮಾನವಾದಮೇಲೆ ಇದನ್ನು ತೆಗೆದುಕೊಂಡು ತೀರ್ಮಾನ ಮಾಡುವುದು ಉತ್ತಮವೆ ಅಥವಾ ಈಗಲೇ ಚರ್ಚೆ ಮಾಡುವುದು ಸೂಕ್ತವೆ ಎಂಬುದನ್ನು ತಮಗೇ ಬಿಡುತ್ತೇನೆ.

ಶ್ರೀ ವಿ. ವೆಂಕಟಪ್ಪ (ಚನ್ನಪಟ್ಟಣ).—ಪೆಂಡಿಂಗ್ ಆಗಿರುವುದು ಜಾಗ್ರತೆ ತೀರ್ಮಾನ ಆಗಬೇಕು ಎನ್ನುವುದಕ್ಕೇ ಈಗ ವಿಷಯವನ್ನು ಚರ್ಚೆ ಮಾಡಬೇಕಾಗಿದೆ.

ಶ್ರೀ ಎ. ಜಿ. ರಾಮಚಂದ್ರರಾವ್.—ಜಾಗ್ರತೆ ತೀರ್ಮಾನ ಮಾಡುತ್ತೇವೆ.

Mr. CHAIRMAN.—Let us know what the Hon'ble Member has got to say.

Sri A. G. RAMACHANDRA RAO.—I have no objection.

*ಶ್ರೀ ವಿ. ವೆಂಕಟಪ್ಪ.—ಸ್ವಾಮಿ ಈ ಸಭೆಗೆ ಪ್ರಶ್ನೋತ್ತರಗಳ ಕಾಲ ಬಹು ಮುಖ್ಯವಾದ ಕಾಲ ಎಂದು ಹೇಳಿ ತಿಳಿದುಕೊಂಡು ಸರ್ಕಾರದವರು ಈ ಕಾರ್ಯಕ್ರಮವನ್ನು ಏರ್ಪಾಡುಮಾಡಿ ನಡೆಸುತ್ತಾ ಇದ್ದಾರೆ ಎನ್ನುವುದನ್ನು ಅವರ ಗಮನಕ್ಕೂ ಮತ್ತು ಸಭೆಯ ಗಮನಕ್ಕೂ ತರುತ್ತೇನೆ. ಸರ್ಕಾರದವರು ಎಷ್ಟರಮಟ್ಟಿಗೆ ತಮ್ಮ ಕಾರ್ಯನಿರ್ವಹಣೆ ಮಾಡುತ್ತಾ ಇದ್ದಾರೆ ಎಂಬುದನ್ನು ತೋರಿಸುವುದಕ್ಕೆ ಉಪಯೋಗ ಮಾಡಿಕೊಳ್ಳಬೇಕಾದ ಕಾಲ ಅದು. ಅದನ್ನು ಸರ್ಕಾರದವರು ಬಹುಮಟ್ಟಿಗೆ ಮನಸ್ಸಿಗೆ ತಂದುಕೊಂಡಿರುವಂತೆ ನನಗೆ ಕಾಣುವುದಿಲ್ಲ. ಕಾರಣ ಪ್ರಶ್ನೆಗಳಿಗೆ ಉತ್ತರವನ್ನು ಬಹಳ ಜಾಗರೂಕತೆಯಿಂದ, ಸರಿಯಾದ ರೀತಿಯಲ್ಲಿ ಅದರಲ್ಲೂ ವಾಸ್ತವಾಂಶವನ್ನು ಕೊಡಬೇಕಾದದ್ದು ಅಗತ್ಯ. ಹಾಗೆ ಆಗದೇಯಿರತಕ್ಕ ಪ್ರಸಂಗಗಳು ಅನೇಕವಿವೆ. ಅದನ್ನು ನಾನು ಈಗ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಈಗ ಚರ್ಚೆಗೆಯಿರತಕ್ಕ ಪ್ರಶ್ನೆ ಹೀಗಿದೆ:—

"ಚನ್ನಪಟ್ಟಣದಲ್ಲಿರುವ ಮೈಸೂರು ಸ್ಪನ್ ಸಿಲ್ಕ್ ಮಿಲ್ಸ್, ಲಿಮಿಟೆಡ್ ಕಂಪನಿಯವರಿಗೂ ಮತ್ತು ಅಲ್ಲಿನ ಕೆಲಸಗಾರರಿಗೂ ಏರ್ಪಟ್ಟ ವಿವಾದದಲ್ಲಿ (1952-53ನೆಯ ಸಾಲಿಗೆ ಐ. ಸಿ. ನಂ. 31 ಮತ್ತು 62) 'ಅವಾರ್ಡು' ತೀರ್ಪನ್ನು ಕೊಟ್ಟುದು ಯಾವಾಗ" ಎಂದು ಕೇಳಿದರೆ "1. 54ನೇ ಇಸವಿ ಡಿಸೆಂಬರ್ 4ನೆಯ ತಾರೀಖಿನಲ್ಲಿ" ಎಂದು ಉತ್ತರ ಕೊಟ್ಟಿದ್ದಾರೆ. ಇದು ಸರಿಯಾದ ಉತ್ತರವಲ್ಲ. ಅಕ್ಟೋಬರ್ 14ನೇ ತಾರೀಖಿನ ದಿವಸ ಅವಾರ್ಡ್ ಆಗಿರುವುದು. ಇಷ್ಟು ಸಣ್ಣ ವಿಷಯದಲ್ಲಿ ಅದೇಕೆ ಹೀಗೆ ಮಾಡಿದ್ದಾರೋ ಗೊತ್ತಾಗುವುದಿಲ್ಲ. ಈ ವಿಷಯವನ್ನು ಯಾರು ಕೊಡುತ್ತಾರೆಯೋ, ಅವರು ನೋಡಿ, ಪರಿಶೀಲನೆಮಾಡಿ ತಪ್ಪು ಉತ್ತರ ಕೊಡುವುದಕ್ಕೆ ಅವಕಾಶವಿಲ್ಲದ ಹಾಗೆ ಏಕೆ ಮಾಡುವುದಿಲ್ಲವೋ ಅರ್ಥವಾಗುವುದಿಲ್ಲ. ಸರ್ಕಾರದವರು ಬಹುಮಟ್ಟಿಗೆ ಎಚ್ಚರಿಕೆ

ಯಿಂದ, ಈ ಪ್ರಶ್ನೆಗಳಿಗೆ ಉತ್ತರ ಕೊಡುವಾಗ ಯಾರು ಉತ್ತರವನ್ನು ಕೊಡುತ್ತಾರೆಯೋ ಅವರು ಒಂದೆರಡು ಸಲವಾದರೂ ಗಮನಕ್ಕೆ ತೆಗೆದುಕೊಂಡು ಪರಿಶೀಲನೆ ಮಾಡಿ ನೋಡಿದರೆ ಈ ರೀತಿ ತಪ್ಪು ಉತ್ತರ ಕೊಡುವುದಕ್ಕೆ ಅವಕಾಶವಿರುವುದಿಲ್ಲ.

ಆಮೇಲೆ 'ಅವಾರ್ಡ್' ತೀರ್ಮಾನದ ಎಲ್ಲ ನಿಯಮಗಳನ್ನೂ ಜಾರಿಗೆ ತರಲಾಗಿದೆಯೋ ; ಇಲ್ಲದೇ ಇದ್ದರೆ ಕಾರಣವೇನು ? ಎಂದು ಕೇಳಿರುವುದಕ್ಕೆ ಅಧಿಕಾರವರ್ಗದವರು "ಅವಾರ್ಡ್" ತೀರ್ಪನ್ನು ಬೇರೆ ರೀತಿಯಲ್ಲಿ ಅರ್ಥ ಮಾಡಿರುತ್ತಾರೆ ಮತ್ತು ಹಣಕಾಸಿನ ಅಭಾವವನ್ನೂ ಮತ್ತು ಇತರ ಕಾರಣಗಳನ್ನೂ ಸಹ ಸೂಚಿಸಿರುತ್ತಾರೆ ಎಂದು ಹೇಳಿದ್ದಾರೆ. ಈ ರೀತಿ ಅರ್ಥ ಮಾಡುವುದಕ್ಕೆ ಅವರು ಯಾರು ? ಅವರ ಮನಸ್ಸಿಗೆ ಬಂದಂತೆ ಅರ್ಥ ಮಾಡಿಕೊಂಡು ಅವಾರ್ಡ್‌ನ್ನು ಪಾಸ್ ಮಾಡಿಲ್ಲ ಎಂದರೆ ಸರ್ಕಾರ ಸುಮ್ಮನೆ ಇತ್ತೇ ಅಥವಾ ಸಂಬಂಧಪಟ್ಟ ಅಧಿಕಾರಿಗಳು ಏನೋ ಕಾರ್ಯಕ್ರಮ ತೆಗೆದುಕೊಂಡರು, ಹಣದ ಅಭಾವದಿಂದ ಜಾರಿಗೆ ಕೊಡಲಿಲ್ಲ ಎಂದರೆ ಈ ಅವಾರ್ಡ್‌ನ್ನು ಒಪ್ಪುವಾಗ ಇದರ ಇಂಪ್ಲಿಕೇಷನ್ ಏನು ? ಎಷ್ಟು ಹಣ ಕೊಡಬೇಕಾಗುತ್ತದೆ ಎಂಬುದನ್ನು ಕಂಪೆನಿಯವರು ಯೋಚನೆ ಮಾಡಲಿಲ್ಲವೇ ? ಇದಕ್ಕಿಂತಲೂ ಹೆಚ್ಚಾಗಿ ಟ್ರಿಬ್ಯೂನಲ್ ಬೇರೆ ರೀತಿಯಲ್ಲಿ ತೀರ್ಮಾನ ಕೊಟ್ಟರೆ ಹಣ ಕೊಡಬೇಕಾಗುತ್ತದೆ. ಆದ್ದರಿಂದ ಈ ರೀತಿಯಲ್ಲೇ ಒಪ್ಪಿಕೊಳ್ಳತಕ್ಕದ್ದು ಸರಿ ಎಂದು ಹೇಳಿ ಅವರು ಈ ಅವಾರ್ಡನ್ನು ಒಪ್ಪಿಕೊಳ್ಳಲಿಲ್ಲವೇ ? ಈ ಅವಾರ್ಡಿನಲ್ಲಿ ಹೇಳಿರುವ ಪ್ರಕಾರ ಯಾವಯಾವ ವಿಷಯಗಳಲ್ಲಿ ಅವರು ಸರಿಯಾಗಿ ನಡೆದುಕೊಂಡಿಲ್ಲ ಎಂದು ಕೇಳಿದರೆ ಸುಮ್ಮನೆ ವೇಗ್ ಆಗಿ. ಈರೀತಿ ಏನೋ ಒಂದು ತರಹ ಉತ್ತರವನ್ನು ಸರ್ಕಾರದವರು ಹೇಳಿರುವುದು ಏಕೆ? ಸರ್ಕಾರಕ್ಕೆ ಈ ವಿಷಯ ನಾಲ್ಕಾರು ಸಾರಿ ಬಂದಿದೆ. ಅಧಿಕಾರಿಗಳು ತಮಗೆ ಇಷ್ಟಬಂದಂತೆ ಏನೋ ಒಂದು ಅರ್ಥ ಮಾಡಿಕೊಂಡಿದ್ದಾರೆ ಎನ್ನುವುದಕ್ಕೆ ಅವಕಾಶವೇ ಇಲ್ಲ. ಸರ್ಕಾರದವರು ಅವರು ತಪ್ಪುಮಾಡಿದ್ದಾರೆಯೋ, ಅವಾರ್ಡಿಗನುಸಾರವಾಗಿ ನಡೆದುಕೊಂಡಿದ್ದಾರೆಯೋ ಇಲ್ಲವೇ ಎಂಬುದನ್ನು ತಮ್ಮ ಡಿಪಾರ್ಟ್‌ಮೆಂಟಿನವರನ್ನು ಕನ್‌ಸಲ್ಟ್‌ಮಾಡಿ ಅವರು ಮಾಡಿರತಕ್ಕದ್ದು ಸರಿಯಲ್ಲ ಎಂದು ಹೇಳಿ ಅವರ ಅಭಿಪ್ರಾಯವನ್ನು ಪಡೆದು, ಈ ರೀತಿ ಸರಿಯಾಗಿ ನಡೆಯದೇಯಿರುವುದಕ್ಕಾಗಿ ನಿಮ್ಮನ್ನೇಕೆ ಪ್ರಾಸಿಕ್ಯೂಟ್ ಮಾಡಬಾರದು ಎಂದು ಹೇಳಿ ಸರ್ಕಾರದಿಂದ ಅವರಿಗೆ ನೋಟೀಸ್ ಹೋಗಿದ್ದರೂ ಕೂಡ ಅವರ ಲೆಕ್ಕದ ಪ್ರಕಾರ 1,300 ಜನರನ್ನು ಕೆಲಸದಿಂದ ತೆಗೆದು ಹಾಕಿದ್ದಾರೆ. ಈ ಸಾವಿರಾರು ಜನರ ಜೀವನ ಹೇಗೆ ನಡೆಯಬೇಕು ? ಈ ಅವಾರ್ಡಿನಲ್ಲಿ ಯಾರನ್ನು ಕೆಲಸದಿಂದ ತೆಗೆದು ಹಾಕಿದ್ದಾರೆಯೋ ಅವರನ್ನು ಆದಷ್ಟು ಜಾಗ್ರತೆ ಕೆಲಸಕ್ಕೆ ತೆಗೆದುಕೊಳ್ಳಬೇಕು ಎಂದು ಇದೆ. ಅವರನ್ನು ತೆಗೆದು ಹಾಕಿದಮೇಲೆ ಹೊಸದಾಗಿ ಯಾರನ್ನಾದರೂ ಸೇರಿಸಿಕೊಂಡಿದ್ದರೆ, ಅವರೆಲ್ಲರನ್ನೂ ತೆಗೆದುಹಾಕಿ ಹಿಂದೆ ಯಾರನ್ನು ತೆಗೆದುಕೊಂಡಿದ್ದರೋ ಅಂಥವರನ್ನೇ ಸೇರಿಸಿಕೊಳ್ಳಬೇಕೆಂದು ಅವಾರ್ಡಿನಲ್ಲಿದ್ದರೆ ಅದನ್ನು ಲಕ್ಷ್ಯಕ್ಕೆ ತೆಗೆದುಕೊಂಡಿಲ್ಲ. ಅವಾರ್ಡ್ ಆದ ಒಂದು ತಿಂಗಳಿನಲ್ಲೇ 30 ಜನರನ್ನು ಕೆಲಸದಿಂದ ತೆಗೆದಿದ್ದಾರೆ. ಅವರು ಎಂಥವರು ? ಅವರನ್ನು ತೆಗೆಯುವುದಕ್ಕೆ ಅಧಿಕಾರವೇ ಇಲ್ಲ. ಮಿಲ್ಲು ಹುಟ್ಟಿದಾಗಿನಿಂದ ಯಶಸ್ವಿಯಾಗಿ ಕೆಲಸ ಮಾಡಿಕೊಂಡು ಬಂದಿರುವವರು ಅವರು. ಹೊರಗಡೆಯಿಂದ ಬಂದ ಪ್ರವೀಣರು ಹಿಂದೆ ಇದ್ದಂಥ ಕೆಲಸಗಾರರನ್ನು ಕರೆಸಿಕೊಂಡು ಅವರ ಕೆಲಸವನ್ನು ನೋಡಿ ಇಂಥ ಒಳ್ಳೆಯ ಕೆಲಸಗಾರರನ್ನು ಹೇಗೆ ತೆಗೆದರು ಎಂದು ಹೇಳಿ ಆಶ್ಚರ್ಯಪಟ್ಟಿದ್ದಾರೆ. ಅಂಥವರನ್ನು ಪಾರ್ಟಿಫೀಲಿಂಗ್ ಮೇಲೆ ಇತರರ ಮಾತನ್ನು ಕೇಳಿಕೊಂಡು ಕೆಲಸದಿಂದ ತೆಗೆದಿದ್ದಾರೆ.

ಆಮೇಲೆ ಎರಡೆರಡಾಣೆ ಇನ್‌ಕ್ರಿಮೆಂಟ್ ಕೊಡಬೇಕೆಂದು ಹೇಳಿ ನಿಯಾಮಕವಾಗಿದೆ. ಈ ಎರಡಾಣೆ ಇನ್‌ಕ್ರಿಮೆಂಟನ್ನೂ ಕೂಡ ಕೊಟ್ಟಿಲ್ಲ. ಕೆಲವರಿಗೆ ಒಂದಾಣೆ ಮಾತ್ರ ಕೊಟ್ಟಿದ್ದಾರೆ. ಕೆಲಸಕ್ಕೆ ಸೇರಿಸಿಕೊಂಡವರಿಗೂ ಕೂಡ ಹಿಂದೆ ಎಷ್ಟು ಕಾಲ ಬಿಟ್ಟಿದ್ದರೋ ಅದನ್ನೂ ಸೇರಿಸಿಕೊಂಡು ಕೊಡಬೇಕೆಂದು ಒಪ್ಪಿಗೆ ಮಾಡಿಕೊಂಡಿದ್ದರು ; ಅದನ್ನು ಕೂಡ ಮಾಡಿಕೊಟ್ಟಿಲ್ಲ. ಮತ್ತು 16 ಜನರನ್ನು ಒಂದು ವಾರದ ಒಳಗಾಗಿ ಕೆಲಸಕ್ಕೆ ನಿಯಮಿಸಿಕೊಳ್ಳಬೇಕು ಎಂದು ಒಪ್ಪಿಕೊಂಡಿದ್ದರು. ಅದರಂತೆ 16 ಜನರನ್ನು ಕೆಲಸಕ್ಕೆ ತೆಗೆದುಕೊಂಡು 15 ದಿವಸದೊಳಗಾಗಿ ತೆಗೆದುಕೊಂಡವರ ಪೈಕಿ ಒಬ್ಬರನ್ನು ಕೆಲಸದಿಂದ ತೆಗೆದಿದ್ದಾರೆ. ಯಾವ ಆಧಾರದಮೇಲೆ ತೆಗೆದರು ? ಕಾರಣ ಏನೆಂದರೆ ಅವನು ಕುಡಿದಿದ್ದ ಎಂಬ ಕಾರಣದ ಮೇಲೆ ತೆಗೆದಿದ್ದಾರೆ. ಕುಡಿದಿದ್ದರೆ ಪೋಲೀಸ್‌ನವರಿಗೆ ತಿಳಿಸಬೇಕಾಗಿತ್ತು. ಆ ಊರಿನಲ್ಲಿ ಪಾನನಿರೋಧ ಜಾರಿಯಲ್ಲಿದೆ. ಆದ್ದರಿಂದ ಅವನು ಕುಡಿದಿದ್ದಾನೆ, ತಕ್ಸೀರು ಮಾಡಿದ್ದಾನೆ ಎಂದು ಪೋಲೀಸ್‌ನವರಿಗೆ ತಿಳಿಸಿದ್ದರೆ ಅವರು ವಿಚಾರಣೆಮಾಡಿ ತಕ್ಕ ಶಿಕ್ಷೆ ಕೊಡುತ್ತಿದ್ದರು. ಈರೀತಿ ಮನಸ್ಸಿಗೆ ಬಂದಂತೆ ಒಂದು ವರ್ಷದಮೇಲೆ ಐದಾರು ತಿಂಗಳಾಗಿದ್ದರೂ ಕೂಡ ಯಾವ ಒಂದು ನಿಯಮವನ್ನೂ ಸರಿಯಾಗಿ ಪಾಲಿಸದೆ ಬಂದಿರುವುದು ಸರ್ಕಾರದವರ ಗಮನಕ್ಕೆ ಮೂರು ನಾಲ್ಕು ವೇಳೆ ಬಂದಿದ್ದರೂ ಕೂಡ ಇದನ್ನು ಪುನಃ ಹಿಂದಕ್ಕೆ ಕಳುಹಿಸುವುದು ಮುಂದಕ್ಕೆ ತರುವುದು ಈರೀತಿ ಮಾಡುತ್ತಾಯಿರುವುದರಿಂದ ಏನು ಅಭಿಪ್ರಾಯ ಬಂದಿದೆ ಎಂದರೆ ಸರ್ಕಾರದವರು ಒಂದು ಪಕ್ಷವನ್ನು ವಹಿಸಿ ಕೆಲಸ ಮಾಡುತ್ತಾ ಇದ್ದಾರೆಯೋ ಏನೋ ಎಂಬ ಅನುಮಾನಕ್ಕೆ ಆಸ್ಪದವಾಗಿದೆ. ಇದಕ್ಕೆ ಉದಾಹರಣೆಯಾಗಿ ಹೇಳುವುದಾದರೆ, ನಮ್ಮ ಚೀಫ್ ಮಿನಿಸ್ಟರ್‌ರವರು, ಅಲ್ಲಿ ಎರಡು ಯೂನಿಯನ್‌ಗಳು ಇವೆ; ಒಂದು ಲೇಬರ್ ಅಸೋಸಿಯೇಷನ್, ಇನ್ನೊಂದು ಲೇಬರ್ ಯೂನಿಯನ್. ಲೇಬರ್ ಅಸೋಸಿಯೇಷನ್‌ನವರು ಮಿಲ್‌ನವರ ಜೊತೆಗೆ ಸೇರಿಕೊಂಡು ಲೇಬರ್ ಯೂನಿಯನ್ನಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ವರ್ಕ್ಸ್ ಡೇ ಮಾಡುತ್ತಾ ಇದ್ದಾರೆ. ಆದ್ದರಿಂದ ಸರ್ಕಾರದವರು ಯಾರಿಗಾದರೂ ಆಗಲಿ ಅನುಕೂಲವಾಗಿದ್ದಾರೆ ಎಂಬ ಮನೋಭಾವ ಬರುವ ರೀತಿಯಲ್ಲಿ ನಡೆದುಕೊಳ್ಳಬಾರದು ಎಂದು ಹೇಳಿ ಚೀಫ್ ಮಿನಿಸ್ಟರ್‌ಅವರಿಗೆ ಹೇಳಿದರೂ ಕೂಡ ಅವರು ವರ್ಕ್ಸ್ ಡೇಗೆ ಪ್ರಿಸೈಡ್ ಮಾಡುತ್ತೇನೆ ಎಂದರು. ಅವರ ಗಮನಕ್ಕೆ ಈ ವಿಷಯವನ್ನು ತಂದಮೇಲೆ ಬೇಡವೆಂದು ಹೇಳಿದರು. ಮುಖ್ಯಮಂತ್ರಿಗಳು ಪುನಃ ಒಪ್ಪಿಕೊಂಡಿದ್ದಾರೆ, ಅವರೇ ಬರುತ್ತಾರೆಂದು ಅಲ್ಲಿ ಹೇಳಿಕೊಳ್ಳುತ್ತಿದ್ದಾರೆ. ಏತಕ್ಕೆ ಈ ಹೆಸರುಗಳನ್ನು ಉಪಯೋಗಿಸಿಕೊಳ್ಳುತ್ತಾರೆಂದರೆ ಸರ್ಕಾರದಲ್ಲಿ ಬೇಕಾದಷ್ಟು ಸಹಾನುಭೂತಿ ಇದೆ, ನಾವು ಹೇಳುವುದನ್ನೆಲ್ಲ ಸರ್ಕಾರದವರು ಕೇಳಿ ಏನು ಬೇಕಾದರೂ ಮಾಡಬಹುದು ಎಂದು ಕೆಲಸ ಮಾಡುತ್ತಿದ್ದಾರೆ. ಲೇಬರ್ ಯೂನಿಯನ್‌ನಲ್ಲಿ ವೈಸ್‌ಪ್ರೆಸಿಡೆಂಟರಾಗಿ ಯಾರು ಇದ್ದಾರೆಯೋ ಅವರು ಇವೊತ್ತಿನ ದಿವಸ ಮಿಲ್‌ನವರ ಜೊತೆಯಲ್ಲಿ ಸೇರಿಕೊಂಡು ಈ ಕೆಲಸ

(ಶ್ರೀ ವಿ. ವೆಂಕಟಪ್ಪ.)

ಮಾಡುತ್ತಿದ್ದಾರೆ. ಶ್ರೀಮಾನ್ ಹನುಮಂತಯ್ಯನವರು ಮುಖ್ಯಮಂತ್ರಿಗಳಾಗಿ ಯಾವಾಗ ಎಂ.ಪಿ.ಸಿ.ಸಿ. ಮೀಟಿಂಗಿಗೆ ಆ ಊರಿಗೆ ಬಂದರೂ ಅವರನ್ನು ಮೆರವಣಿಗೆ ಮಾಡಿ ಕರೆದುಕೊಂಡು ಹೋಗುತ್ತಾರೆ. ಅಂಥವರ ಜೊತೆಯಲ್ಲಿ ಇವರು associate ಮಾಡಿಕೊಳ್ಳುತ್ತಿದ್ದಾರೆ. ಹಾಗೆಯೇ ಶ್ರೀ ಎ. ಜಿ. ರಾಮಚಂದ್ರರಾಯರ ವಿಷಯದಲ್ಲಿಯೂ ಕೆಲವು ವಿಷಯಗಳನ್ನು ಹೇಳುತ್ತಿದ್ದಾರೆ. ಅದನ್ನು ನಾನು ಹೇಳುತ್ತೇನೆ. ಅದು ನಿಜವಾಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಸ್ವಲ್ಪ ದಿವಸಗಳ ಕೆಳಗೆ ಅವರು ಮಿಲ್ಲಿಗೆ ಹೋಗಿದ್ದರು. ಅಲ್ಲಿ ಹೋಗಿದ್ದಾಗ ಕೆಲವು ಬಟ್ಟೆಗಳನ್ನು ತೆಗೆದುಕೊಂಡರು. ಬಿಲ್‌ಹಾಕಿ ಎಂದರೆ, ರೇಟ್‌ನೋಡಿ ಹಾಕುತ್ತೇವೆ ಎಂದು ಹೇಳಿದರು. ಇವರು ಬಂದನಂತರ ಅಲ್ಲಿಯ ಜನಗಳು ಮಂತ್ರಿಗಳಿಗೇ ತಲೆ ಸವರಿಬಿಟ್ಟಿದ್ದೇವೆಂದು ಹೇಳಿಕೊಂಡರು. ಈ ರೀತಿ ಅವರು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ.

Sri A. G. RAMACHANDRA RAO.—I have sent the cheque and I have paid.

ಶ್ರೀ ವಿ. ವೆಂಕಟಪ್ಪ.—ಅನೇಕ ವಿಧದಲ್ಲಿ ಅಲ್ಲಿನ ಕೆಲಸಗಾರರಿಗೆ ತೊಂದರೆ ಕೊಟ್ಟದ್ದರಿಂದ ಅಸಮಾಧಾನವುಂಟಾಗಿದೆ. ಇವೊತ್ತಿನ ದಿವಸ ಇಂಡಿಯಾ ದೇಶದಲ್ಲೆಲ್ಲ, South East Asiaದಲ್ಲೆಲ್ಲ ಇಂಥ ಒಂದು ಮಿಲ್ ಇಲ್ಲವೆಂದು ಹೇಳುತ್ತೇನೆ. ಅಂಥ ಮಿಲ್ ಇವೊತ್ತು ಕೆಲಸಮಾಡಬೇಕಾದರೆ ಯಾರಾದರೂ ಅದನ್ನು ತೆಗೆದುಕೊಂಡು ನಡೆಸಬೇಕು. ಇಂಥ ಸ್ಥಿತಿಗೆ ಬಂದಿದೆ. ಸರ್ಕಾರದವರು, ಶ್ರೀ ಸಿದ್ಧವೀರಪ್ಪನವರು ಕೈಗಾರಿಕೆ ಮಂತ್ರಿಗಳಾಗಿದ್ದಾಗ ಇದನ್ನು ತೆಗೆದುಕೊಳ್ಳುವುದಕ್ಕೆ ಕೆಲವು ಪ್ರಯತ್ನಗಳು ನಡೆದುವು. ಅದು ಪೂರ್ಣವಾಗಲಿಲ್ಲ. ಈಗ ಶ್ರೀ ಚನ್ನಬಸಪ್ಪನವರು ಬಂದಿದ್ದಾರೆ. ಅವರೂ ಕೂಡ ಇದನ್ನು ಯೋಚನೆ ಮಾಡುತ್ತೇನೆಂದು ಹೇಳಿದರು. ಈಗ ಅದು ಯಾವ ಘಟ್ಟಕ್ಕೆ ಬಂದಿದೆ, ಇನ್ನು ಯಾರಿಗಾದರೂ ವಹಿಸಿ ಬಿಡುತ್ತಾರೆಯೇ ಅಥವಾ ಸರ್ಕಾರದವರೇ ವಹಿಸಿಕೊಳ್ಳುತ್ತಾರೆಯೇ ಎಂದು ಯೋಚನೆ ಮಾಡುತ್ತಿದ್ದೇನೆ. ಅದರ ವಿಚಾರವಾಗಿ ಹೆಚ್ಚು ಹೇಳುವುದಕ್ಕೆ ಇಷ್ಟಪಡುವುದಿಲ್ಲ.

ಅನೇಕ ಸಂದರ್ಭಗಳಲ್ಲಿ ಅಲ್ಲಿರುವ ಕೆಲಸಗಾರರಿಗೆ ಅನ್ಯಾಯವಾಗುತ್ತಿದೆ ಎಂದು ಸರ್ಕಾರದ ಗಮನಕ್ಕೆ ತೆಗೆದುಕೊಂಡು ಬಂದಿದ್ದೇವೆ. ಅಲ್ಲದೆ ಅವಾರ್ಡ್‌ಆಗಿ ಬಹಳ ದಿನಗಳಾದರೂ ಕೂಡ ಅದನ್ನು ಜಾರಿಗೆ ತರದೆ ಇದ್ದಮೇಲೆ, ಯಾವ ಕ್ರಮವನ್ನೂ ತೆಗೆದುಕೊಳ್ಳದೆ ಇದ್ದಮೇಲೆ, ಸರ್ಕಾರದವರು ಒತ್ತಾಸೆಯಾಗಿದ್ದಾರೆ ಎಂಬ ಮನೋಭಾವ ಬರುತ್ತದೆ. ಇದರಿಂದ ಅನೇಕರಿಗೆ ತೊಂದರೆಯಾಗಿದೆ.

ಆ ಕಾರ್ಖಾನೆ ಈಗ ಬಹಳ ದುಸ್ಥಿತಿಗೆ ಬಂದಿದೆ. ಅಲ್ಲಿ ಒಳ್ಳೆಯ ಕೆಲಸಗಾರರು, ಒಳ್ಳೆಯ ಸುಶಿಕ್ಷಿತ, ನುರಿತ technical men ಇಲ್ಲ. ಇದೆಲ್ಲವನ್ನೂ ನೋಡಿದರೆ ಆ ಕಾರ್ಖಾನೆಯನ್ನು ಮಾರುವುದಕ್ಕೆ ಇಟ್ಟಿದ್ದಾರೆಯೇ ಇಲ್ಲವೇ ಅಭಿವೃದ್ಧಿ ಮಾಡುವುದಕ್ಕೆ ಇಟ್ಟಿದ್ದಾರೆಯೇ ಎಂದು ಕೇಳುತ್ತೇನೆ. ಇಷ್ಟೇ ಅಲ್ಲದೆ ಕಾರ್ಖಾನೆ ವಿಷಯ ಏನೂ ಗೊತ್ತಿಲ್ಲದೆ ಇರತಕ್ಕ ಒಬ್ಬ ಸ್ಟೆನೋಗ್ರಾಫರ್‌ನನ್ನು ಮ್ಯಾನೇಜರ್ ಕೆಲಸಕ್ಕೆ ನೇಮಿಸಿದ್ದಾರೆ. ಈ ವಿಚಾರವನ್ನು ಸರ್ಕಾರದ ಮತ್ತು ಇಲಾಖೆಯ ಗಮನಕ್ಕೆ ತಂದರೂ ಸಹ ಅವರು ಯಾವ ಬದಲಾವಣೆಯನ್ನೂ ಮಾಡಿಲ್ಲ. ಕಾರ್ಖಾನೆಯನ್ನು ಸರಿಯಾಗಿ ನೋಡಿಕೊಳ್ಳದೆ ಇರುವುದರಿಂದಲೂ, ಇದು ಟೆಕ್ನಿಕಲ್ ಕೆಲಸವಾಗಿ ಆತನಿಗೆ ಮಾಹಿತಿ ಇಲ್ಲದೆ ಇರುವುದರಿಂದಲೂ ಕಾರ್ಖಾನೆ ಸರಿಯಾಗಿ ಕೆಲಸಮಾಡುತ್ತಿಲ್ಲವೆಂದು ತಿಳಿದು ಬಂದಿದೆ. ಮೈಸೂರು ದೇಶದಲ್ಲಿ ರೇಷ್ಮೆ ಕೈಗಾರಿಕೆಯಲ್ಲಿ ಕೆಲಸ ಮಾಡುವವರಿಗೆ ಈ ಕಾರ್ಖಾನೆಯಿಂದ ಸ್ವಲ್ಪಮಟ್ಟಿಗೆ ಸಹಾಯವಾಗಿದೆ. ಈ ಕಾರ್ಖಾನೆಯನ್ನು ಅಭಿವೃದ್ಧಿಪಡಿಸಬೇಕು ಎನ್ನುವ ದೃಷ್ಟಿಯಿಂದ ಎಷ್ಟು ಪ್ರಯತ್ನ ಮಾಡಿದರೂ ಬಹಳ ಉದಾಸೀನ ಮನೋಭಾವದಿಂದ ಇದನ್ನು ನೋಡುತ್ತಿದ್ದಾರೆ. ಸರ್ಕಾರದವರು ಕೊಟ್ಟಿರುವ ಉತ್ತರಗಳು ಸರಿಯಿಲ್ಲ. ಈ ರೀತಿಯಲ್ಲಿ ಮನಸ್ಸಿಗೆ ಸರಿ ಎಂದು ತೋರುವ ರೀತಿಯಲ್ಲಿ ಸರ್ಕಾರದವರು ಉತ್ತರಗಳನ್ನು ಕೊಡದೆ evasive, ಪೂರ್ಣವಾಗಿಲ್ಲದಿದ್ದರೂ ತಪ್ಪು ಉತ್ತರಗಳನ್ನು ಕೊಟ್ಟಿರತಕ್ಕದ್ದು ಬಹಳಮಟ್ಟಿಗೆ ಅಸಮಾಧಾನವನ್ನುಂಟುಮಾಡಿದೆ.

*ಶ್ರೀ ಎ. ಜಿ. ರಾಮಚಂದ್ರರಾವ್.—ಸ್ವಾಮಿ, ಮೊದಲನೆಯದಾಗಿ I have issued the cheque on 22-2-1956 immediately on receipt of the Bill. ಇದರಲ್ಲಿ ಒಂದು ವಿಷಯವನ್ನು ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದಿದ್ದಾರೆ. ಅವಾರ್ಡ್ ತಾರೀಖು 14-10-1954 ಇರಬೇಕೆಂದು ಹೇಳಿದ್ದಾರೆ. ಇದು ಏಕೆ ತಪ್ಪುಬಿದ್ದಿದೆ ಎಂದು ವಿಚಾರಿಸುತ್ತೇನೆ. ಎರಡನೆಯದಾಗಿ ಅವಾರ್ಡ್ ಆದ ತಕ್ಷಣ ನೋಟಿಫಿಕೇಷನ್ ಆಗಬೇಕು. ನೋಟಿಫಿಕೇಷನ್ ಆದ ಎರಡು ತಿಂಗಳಿಗೆ ಲೆಕ್ಕಾಚಾರ ಪ್ರಾರಂಭವಾಗುತ್ತದೆ.

ಶ್ರೀ ವಿ. ವೆಂಕಟಪ್ಪ.—ಅವಾರ್ಡ್ ಆದ ದಿವಸದಿಂದ ಜಾರಿಗೆ ಬರಬೇಕು ಎಂದು ಒಪ್ಪಿಕೊಂಡಿದ್ದಾರೆ.

ಶ್ರೀ ಎ. ಜಿ. ರಾಮಚಂದ್ರರಾವ್.—ಅದು ಕಾನೂನು ಪ್ರಕಾರ regulate ಆಗಿದೆ. ಅವಾರ್ಡ್ ಪಾಸ್‌ಮಾಡಿದ ತಕ್ಷಣ ಜಾರಿಗೆ ಬರುವುದಿಲ್ಲ.

ಶ್ರೀ ವಿ. ವೆಂಕಟಪ್ಪ.—ಅವಾರ್ಡ್ ಇಂಥ ದಿವಸದಿಂದ ಜಾರಿಗೆ ಬರಬೇಕೆಂದು ತೀರ್ಮಾನವಾಗಿದೆ. ಆದ್ದರಿಂದ, ಆ ದಿವಸದಿಂದಲೇ ಜಾರಿಗೆ ಬರಬೇಕು. ಒಪ್ಪಿಕೊಂಡಿದ್ದಮೇಲೆ ಹೀಗೆ ಹೇಳುವುದು ಸರಿಯಲ್ಲ.

Sri A. G. RAMACHANDRA RAO.—Sir, Government is not a party to it. The award after it is secured by the parties, will have to be notified in case the time-limit has been fixed under the law from which date it will become effective for implementation. Regarding this award he says the answer given is 4-12-1954 Sri Venkatappa contends it is 14th October 1954.

ಶ್ರೀ ವಿ. ವೆಂಕಟಪ್ಪ.—ಇದು ನಿಜವಲ್ಲವೆ ಎಂದು ಕೇಳುತ್ತೇನೆ. ನಿಜವಾಗಿರುವುದನ್ನು ಒಪ್ಪಿಕೊಳ್ಳದೆ 'contends' ಎಂದರೆ ಹೇಗೆ ಸ್ವಾಮಿ ?

Sri A. G. RAMACHANDRA RAO.—As to why 4-12-1954 has been put instead of 14th October 1954 is a matter which I have to examine.

After the award is passed, it has to be implemented by the party,

particularly when it is by an agreement of parties. Apparently it was referred to the Labour Commissioner on 29th July, 1955. On the report received from the Commissioner of Labour on the above subject, he stated that as the award given by the Industrial Tribunal in this case envisaged Industrial peace for a period of one year, the Management was not expected to retrench any workers and had committed a breach of the award. The action of the Management was detrimental to the interests of the workers. He requested that his interpretation might be further examined and the correct position intimated to him.

The Chairman, Industrial Tribunal, who was consulted, was unable to furnish an opinion for the reason that the matter was liable to different interpretations and views and may lead to conciliation proceedings and a reference being made by the Government for adjudication and award.

That was the position. They did not agree about the interpretation of the Labour Commissioner and the Chairman of the Conciliation Board. In the meanwhile the President, Spun Silk Mills Labour Association—it may be noted here that there are two labour Associations there . . . .

Sri S. GOPALA GOWDA (Sagar-Hosanagar).—I would like one clarification, whether both the associations have been recognised and are functioning regularly.

Sri A. G. RAMACHANDRA RAO.—Yes. That Labour Association was constituted on 22-10 and it stated that the Management have duly implemented the terms of the Award and no congnisance be taken of the allegations made by the rival Unions, *viz.*, the Mysore Spun Silk Mills Employees' Union against the Management. The Secretary of the Employees' Union requested that the period of operation of the award may be extended for a year more from 14th October 1955 as the terms of the Award are not fully implemented.

Therefore between these two Labour Associations there was *inter se* conflict; one party said it has been implemented and the other party said and urged that it should be extended to a further period of one year.

On 12th December 1955 the Commissioner of Labour reported that the Managemant did not accept that there was a breach. He reported that the terms remaining to be implemented related to the reinstatement of 30 workers, reduction of wages to jobbers and oilers and collection of amount towards charitable purposes.

As there are different interpretations about the implementation of the Award on the side of labour itself, the Government have been trying to bring about an understanding between the Management and Employees' Union which complains of non-implementation and to secure relief to the members thereof.

That is the position.

Mr. CHAIRMAN.—The House will now adjourn and meet at Twelve on Friday, the 23rd March.

The House adjourned at Twenty-five Minutes past Five of the Clock to meet again at Twelve of the Clock on Friday, the 23rd March 1956.

WD 2896—GPB—550—22-6-56.

MYSORE LEGISLATIVE ASSEMBLY

EIGHTEENTH DAY.

Friday, 23rd March 1956.

The House met in the Assembly Hall, Atara Kacheri, Bangalore, at Twelve of the Clock.

MR. DEPUTY SPEAKER (SRI R. CHENNIGARAMIAH) in the Chair.

QUESTIONS AND ANSWERS.

Cottage Industries.

Q.—107. Sri D. DEVARAJ URS (Hunsur).—

Will the Government be pleased to state:—

(*a*) the various cottage industries established in the State by the Cottage Industries Department of the Central Government;

(*b*) the total amount of financial aid given to the several cottage industries in the State ?

A.—Sri H. M. CHANNABASAPPA (Minister for Industries).—

(*a*) and (*b*) The Government of India have not established any Cottage Industries in the State ; but they have sanctioned financial assistance to the schemes detailed in the statement appended below.

Serial No.	Name of the Scheme	Total estimated expenditure	Financial Aid from the Government of India	
			Grant	Loan
		Rs.	Rs.	Rs.
1	Expansion of Rattan Industry at Shimoga.	36,300	7,500	...
2	Manufacture of Utilitarian glass articles.	7,930	7,500	...
3	Expansion of the Hand-made Paper Centre, Central Industrial Workshop, Bangalore.	40,240	14,000	...
4	Expansion of the Mat-Weaving Centre, Central Industrial Workshop, Bangalore.	26,580	11,000	...
5	Pottery (Red-Clay Production Unit), Krishnarajapuram.	22,200	4,500	...
6	Expansion of the Leather Industry ...	64,498	47,300	...
7	Model Smithy Centres ...	1,68,000	70,500	48,000
8	Model Carpentry Centres ...	3,00,000	1,42,720	54,560
9	Village Oil Ghani ...	16,000	8,550	2,000

ಶ್ರೀ ಡಿ. ದೇವರಾಜ ಅರಸ್.—ಭಾರತ ಸರ್ಕಾರದಿಂದ ಸಹಾಯ ದ್ರವ್ಯ ಕೊಡುತ್ತಿದ್ದಾರೆಂದು ಒಂಭತ್ತು ಗೃಹ ಕೈಗಾರಿಕೆಗಳನ್ನು ಪಟ್ಟಿಯಲ್ಲಿ ಕೊಟ್ಟಿದ್ದೀರಿ. ಒಂಭತ್ತು ಕೈಗಾರಿಕೆಗಳು ಮಾತ್ರವೇ ಅಥವ ಇನ್ನೂ ಹೆಚ್ಚಾಗಿವೆಯೇ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಇನ್ನೊಂದು ಇದೆ. ಅದು Palmgur Industry.

ಶ್ರೀ ಡಿ. ದೇವರಾಜ ಅರಸ್.—Hand-pound rice ಇದರಲ್ಲಿ ಸೇರುವುದಿಲ್ಲವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದನ್ನು ನಮ್ಮ ಸರ್ಕಾರದವರು ಒಂದು centre ಆಗಿ ನಡೆಸುತ್ತಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಹಾಗಾದರೆ ಅದಕ್ಕೆ ಸಹಾಯ ದ್ರವ್ಯವನ್ನು ಯಾರು ಒದಗಿಸುತ್ತಿದ್ದಾರೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಯಂತ್ರ ಕೈಗಾರಿಕೆಗಳ basis ಮೇಲೆ hand-pound industry ಯನ್ನು ನಡೆಸುವುದಕ್ಕೆ ಅಪೇಕ್ಷೆ ಪಟ್ಟವರಿಗೆ ಭಾರತ ಸರ್ಕಾರದವರು ಸಹಾಯ ಮಾಡುತ್ತಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ಕೇಂದ್ರ ಸರ್ಕಾರದವರು ಸ್ಥಾಪನೆ ಮಾಡಿಲ್ಲ ಎಂದು ಉತ್ತರ ಕೊಡಲಾಗಿದೆ. ಹಾಗಾದರೆ ಸಂಸ್ಥಾನದಲ್ಲಿ ಅವರು ಸ್ಥಾಪನೆ ಮಾಡಿರುವ ಗೃಹಕೈಗಾರಿಕೆಗಳಿಲ್ಲವೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೈಗಾರಿಕೆಗಳಿಲ್ಲ. ಟ್ರೈನಿಂಗ್ ಸೆಂಟರುಗಳನ್ನು ಸ್ಥಾಪಿಸಿಕೊಂಡು ಬಂದಿದ್ದಾರೆ. ನಾವು ಕಳುಹಿಸತಕ್ಕ ಯೋಜನೆಗಳಿಗನುಗುಣವಾಗಿ ಅವರು ಸಹಾಯ ಮಾಡುತ್ತಾರೆ.

ಶ್ರೀ ಡಿ. ದೇವರಾಜ ಅರಸ್.—ಈ ಕೈಗಾರಿಕೆಗಳ ಮೇಲೆ ಯಾವ ಸರ್ಕಾರದ ಹತೋಟಿ ಇದೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವು ನೇರವಾಗಿ ಮೈಸೂರು ಸರ್ಕಾರದ ಹತೋಟಿಯಲ್ಲಿವೆ.

ಶ್ರೀ ಡಿ. ದೇವರಾಜ ಅರಸ್.—ಹಾಗಾದರೆ ಈ ಕೈಗಾರಿಕೆಗಳೆಲ್ಲ ಸಮರ್ಪಕವಾಗಿ ಕೆಲಸ ಮಾಡುತ್ತಿವೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೆಲವು ಚೆನ್ನಾಗಿ ಕೆಲಸ ಮಾಡುತ್ತಿವೆ; ಇನ್ನೂ ಕೆಲವನ್ನು ಉತ್ತಮಪಡಿಸುವ ಅವಶ್ಯಕತೆ ಇದೆ.

Sri A. V. NARASIMHA REDDY.—In what year these grants have been sanctioned to these centres, Sir?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮೊದಲನೆಯದು 1954-55ರಲ್ಲಿ, ಎರಡನೆಯದು 1955-56ರಲ್ಲಿ, ಮೂರನೆಯದು 1953-54ರಲ್ಲಿ, ನಾಲ್ಕನೆಯದು 1953-54ರಲ್ಲಿ, ಐದನೆಯದು 1953-54ರಲ್ಲಿ, ಆರನೆಯದು 1954-55ರಲ್ಲಿ ಮಂಜೂರಾದವು. The rest are fresh ones.

Sri A. V. NARASIMHA REDDY.—Is it not a fact that Kisan Products located in Krishnarajapuram taluk have also applied for loan or grant?

Sri H. M. CHANNABASAPPA.—Kisan Products do not come under the centres managed by the Government.

Sri A. V. NARASIMHA REDDY.—May I know whether these grants are from the Government of India or the Government of Mysore?

Sri H. M. CHANNABASAPPA.—The Government of India has given assistance to the Government of Mysore.

Sri A. V. NARASIMHA REDDY.—Is it to manage these industries?

ಶ್ರೀ ಎ. ಜಿ. ರಾಮಚಂದ್ರರಾವ್.—ಅದಕ್ಕೇ ಯೋಚನೆ ಮಾಡುತ್ತೇವೆಂದು ಹೇಳಿದ್ದೇನೆ.

Sri A. V. NARASIMHA REDDY.—Since when are the Government considering the confirmation of teachers in local boards High Schools ?

Sri A. G. RAMACHANDRA RAO.—There have been some irregularities from 1950. Records were got and stopped up to 1953. There are further irregularities which have got to be set right. These are the two aspects.

ಶ್ರೀ ಕೆ. ಲಕ್ಕಪ್ಪ.—ಹಂಗಾಮಿ ಉಪಾಧ್ಯಾಯರನ್ನು ಹಾಕಿರುವುದರಿಂದ, ಸಾಕಷ್ಟು ನಿಗಾ ತೆಗೆದುಕೊಳ್ಳದೆ ಸ್ಕೂಲಿನ ಪಾಠಗಳು ಸರಿಯಾಗಿ ನಡೆಯುತ್ತಿಲ್ಲವೆಂದು ಗೊತ್ತಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದೊಂದೇ ಕಾರಣದಿಂದಲ್ಲ, ಅವರನ್ನು ಖಾಯಂ ಮಾಡದೇಯಿರುವುದರಿಂದ ಸ್ವಲ್ಪ ಅಸಮಾಧಾನವಾಗಿದೆ.

ಶ್ರೀ ಕೆ. ಲಕ್ಕಪ್ಪ.—ಇದನ್ನು ನಿವಾರಿಸಲು ಬೇರೆ ಸರಿಯಾದ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಈಗಲೂ ಅವರು ಬೇರೆ ಉಪಾಧ್ಯಾಯರುಗಳನ್ನು ನೇಮಕ ಮಾಡುತ್ತೇವೆಂದು ಹೇಳಿದರೆ ನಮ್ಮ ಅಡ್ಡಿಯೇನೂ ಇಲ್ಲ.

Industrial School building, Chikmagalur.

Q.—486. Srimati B. L. SUBBAMMA (Chikmagalur-Mudigere).—

Will the Government be pleased to state :—

(*a*) the stage at which the Chikmagalur Industrial School building work stands at present ;

(*b*) since how many years the matter is under their consideration ?

A.—Sri H. M. CHANNABASAPPA (Minister for Industries).—

(*a*) The following items of building work have been completed :—

1. Dismantling the existing Tile Shed, Industrial School, Chikmagalur ;
2. Earth work ;
3. Chunam concrete bed for foundation ;
4. Size stone foundation ;
5. Size stone basement ;
6. Cement concrete slab work over the basement ;
7. Superstructure brick wall 3' high ;
8. T.W. door frames and window frames ;
9. Collection of granite baby metal, Iron, etc., etc.

(*b*) The matter is no longer under consideration. The work is being executed.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಕಳೆದಸಾರಿ ದಸರಾ ಅಧಿವೇಶನದಲ್ಲಿ ಮೈಸೂರಿನಲ್ಲಿ ಇದೇ ಉತ್ತರವನ್ನು ನನ್ನ ಪ್ರಶ್ನೆಗೆ ಕೊಟ್ಟಿರಲಿಲ್ಲವೆ ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಹೌದು, ಕೊಟ್ಟಿದ್ದೇವೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ದಾನಿಗಳು ಇದಕ್ಕಾಗಿ ಹಣ ಕೊಟ್ಟು ಎಷ್ಟು ದಿವಸವಾಯಿತು ?

ಶ್ರೀ ಎಚ್. ಎಂ. ಚನ್ನಬಸಪ್ಪ.—1950ರಲ್ಲಿ ಕೊಟ್ಟರು.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಇಷ್ಟು ತಡವಾಗಲು ಕಾರಣವೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮೊದಲು ಕಟ್ಟಡ ಸೋರುತ್ತಿತ್ತು. ನಾವು ತೆಗೆದುಕೊಂಡು ಅಂದಾಜು ಮಾಡಿಸಿ ಕೆಲಸ ಮಾಡುವಾಗ ಕಟ್ಟಡದಲ್ಲಿ ಗೋಡೆಗಳು ಸಮರ್ಪಕವಾಗಿಲ್ಲವೆಂದೂ ಅವುಗಳನ್ನು ತೆಗೆಯಬೇಕೆಂದೂ ಹೇಳಿದ ಮೇಲೆ ಪುನಃ ಅಂದಾಜು ಮಾಡಲಾಯಿತು ; ಆಮೇಲೆ ಕೈಗಾರಿಕೆ ಇಲಾಖೆಯಿಂದ ಕೆಲಸ ಪ್ರಾರಂಭವಾಯಿತು, ಇಂಜಿನಿಯರಿಂಗ್ ಇಲಾಖೆ ಮಾಡಬೇಕೆಂಬ ಕಾರಣದಿಂದ ನಿಧಾನವಾಯಿತು. ತಕ್ಷಣ ಮಾಡಿ ಪೂರೈಸಲು ವ್ಯವಸ್ಥೆ ಮಾಡುತ್ತೇವೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಚೆನ್ನಾಗಿದ್ದ ಕಟ್ಟಡವನ್ನು ಕೆಡವಿ ಎಷ್ಟು ದಿವಸವಾಯಿತು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಚೆನ್ನಾಗಿದ್ದುದನ್ನು ಕೆಡವಿಸಲಿಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಸ್ಕೂಲು ನಡೆಯುವುದಕ್ಕೆ ತೊಂದರೆಯಾಗಿರಲಿಲ್ಲ, ಅಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ತೊಂದರೆಯಾಗಿದ್ದ ಕಾರಣದಿಂದಲೇ ರಿಪೇರಿ ಕೆಲಸ ತೆಗೆದುಕೊಂಡದ್ದು. ಅದು ಹೀಗಾಯಿತು. ಆದಷ್ಟು ಬೇಗ ಮುಗಿಸಲು ಪ್ರಯತ್ನ ಮಾಡುತ್ತೇವೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಇಂಜಿನಿಯರಿಂಗ್ ಇಲಾಖೆಯವರು ಅಂದಾಜು ಕೊಟ್ಟಿದ್ದಾರೆಯೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆಗಲೇ ಅರಿಕೆ ಮಾಡಿದ್ದೇನೆ, ಇಂಜಿನಿಯರಿಂಗ್ ಇಲಾಖೆಯಿಂದ ನಡೆಯಬೇಕೋ ಅಥವಾ ಕೈಗಾರಿಕೆ ಇಲಾಖೆಯಿಂದ ನಡೆಯಬೇಕೋ ಎನ್ನುವುದನ್ನು ತೀರ್ಮಾನ ಮಾಡಲು ಕಾಲವಿಳಂಬವಾಯಿತು ; ಸಾಧ್ಯವಾದಷ್ಟು ಬೇಗ ಮಾಡುತ್ತೇವೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಈಗ ಯಾರು ಮಾಡಬೇಕೆಂದು ತೀರ್ಮಾನವಾಯಿತು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೈಗಾರಿಕೆ ಇಲಾಖೆಯಲ್ಲಿರುವ ಇಂಜಿನಿಯರಿಂಗ್ ಶಾಖೆಯವರೇ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಆದಷ್ಟು ಬೇಗ ಮಾಡುತ್ತೇವೆ.

QUESTIONS FOR ANSWERS ON THE DAY

(but not taken up)

Large Scale Industry at K.G.F. (Starting of)

Q.—183. Sri P. M. SWAMIDURAI (K.G.F.—Scheduled Castes).—

Will the Government be pleased to state :—

(*a*) the recommendations of the Committee constituted to go into the question of starting a large scale industry at K.G.F. ;

(*b*) the action taken by the Government on the recommendations ?

A.—Sri H. M. CHANNABASAPPA (Minister for Industries).—

(*a*) The recommendations of the Committee are awaited.

(*b*) Does not arise in view of answer to (*a*).

Industries in K.G.F. (Proposal to Start)

Q.—391. Sri K. S. VASAN (Kolar Gold Fields).—

Will the Government be pleased to state :—

whether they propose to start any industries in Kolar Gold Fields ?

A.—Sri H. M. CHANNABASAPPA (Minister for Industries).—

Government have appointed a Committee to examine the possibility of starting an industry at K.G.F. and the report of the Committee is awaited.

Municipal High School Teachers (Grant of Pension).

Q.—416. Sri H. T. PUTTAPPA (Hoskote-Anekal—Scheduled Castes).—

Will the Government be pleased to state:—

the reason for not granting pension to the Municipal High School teachers while it is being paid to the Corporation High School teachers ?

A.—Sri A. G. RAMACHANDRA RAO (Minister for Law and Education).—

Sanction of pension for the employees of the Municipal High Schools has to await happier financial time.

Four-Year Primary Schools (Steps to upgrade into Eight-Year Basic Schools).

Q.—466. Sri H. C. LINGA REDDY (Malur).—

Will the Government be pleased to state :—

(*a*) the steps taken to upgrade the present four-year primary schools into eight-year integrated basic primary schools in the State ;

(*b*) the policy pursued by the Government in this behalf ?

A.—Sri A. G. RAMACHANDRA RAO (Minister for Law and Education).—

(*a*) Thirty-one Primary Schools were upgraded to New Type Middle Schools during 1955-56 and 18 Middle Schools were started during the same year.

Thirty New Type Middle Schools and 10 Middle Schools have since been sanctioned.

Additional 5th class to Primary Schools in 600 villages is under active consideration.

(*b*) The Second Five-Year Plan provides for the appointment of 7,750 teachers for upgrading the Four-year Schools to Five-year Schools [and for upgrading the Junior Primary Schools] to Senior Primary Schools. All the Senior Schools will be given the 5th class and then upgraded to full fledged eight-year schools as far as possible subject to financial provision.

New Primary Schools.

Q.—638. Sri G. PUTTASAWAMY (Chikmagalur- Mudigere—Scheduled Castes).—

Will the Government be pleased to state :—

(*a*) the number and names of new (Elementary) Primary Schools sanctioned during 1955-56 ;

(*b*) the reason for not according sanction of Primary Schools to Chandgodu, Aldur Range, Chikmagalur ?

A.— Sri A. G. RAMACHANDRA RAO (Minister for Law and Education).—

(*a*) 233 Schools, *vide* list appended.

(*b*) There was no recommendation from the District Educational Officer.

Names of places where New Primary Schools were sanctioned during 1955-56.

No.	Taluk	Place	No.	Taluk	Place
		I. CITY DISTRICT, BANGALORE.			
1	Bangalore City	... Rajajinagar	8	Civil Station	... Katharina Palyam
2	Do	... Gandhinagar	9	Do	... Jeevanahalli (Telugu)
3	Do	... Kemmanagundi Road	10	Do	... Do (Tamil)
4	Do	... Sunkenahalli	11	Do	.. Deskanahalli
5	Do	... Chamarajpet (West)	12	Do	... Santhinagar (Urdu)
6	Do	... Munireddy Palya.	13	Do	... Shoolay (Urdu Girls)
7	Civil Station	... Jeevanahalli			
		II. BANGALORE DISTRICT.			
14	South Taluk	... Pattanadur Agrahar	32	Magadi	... Maralagondlu
15	Do	... Varalsandra	33	Nelamangala	... Kamasandra
16	Do	... Durvanipura	34	Hoskote	... Naganaikanakote Hemadayahalli.
17	Do	... Saraipalya			
18	Do	... Kyalasanahalli	35	Kanakapura	... Sathanur (Harijan Keri)
19	Do	... Kundalahalli	36	Devanahalli	... Doddakurubahalli
20	Do	.. Mestripalya	37	Channapatna	... Kamasandra
21	Do	... Sarabandepalya	38	Devanahalli	... Gonengollahalli
22	Do	... Uttarahalli	39	Nelamangala	... Devaganahalli
23	Do	... Kanminike	40	Nelamangala	... Yedehalli
24	North Taluk	... Hessaraghatta Grass Farm	41	Kanakapura	... Gorakanapura
25	Do	... Guddadahalli	42	Do	... Pradesirampura
26	Do	... Marasandra	43	Magadi	... Kalur
27	Do	... Venkatesapura	44	Anekal	... Naginaikanahalli
28	Dodballapur	... Garudagalli	45	Do	... Sakalakere
29	Do	... Katilasahalli	46	Do	... Solur
30	Channapatna	... Harur	47	Ramanagaram	... Lakkappanahalli
31	Ramanagaram	... Anchipura (Harijan Colony)	48	Do	... Vajarahalli
			49	Dodballapur	... Khasbog

(SRI A. G. RAMACHANDRA RAO.)

	Taluk	Place		Taluk	Place
		III. SHIMOGA DISTRICT.			
50	Bovi Colony	... Bhadravati	62	Thirthahalli	... Yedahalli
51	Thirthahalli	... Jaddinaggadde	63	Do	... Kodemakki
52	Do	... Katlehokkalu	64	Do	... Hiresara
53	Shimoga	... Ittigehalli	65	Do	... Kukke
54	Shikaripur	... Ambarakoppa	66	Honnali	... Marikoppa
55	Honnali	... Chickbasur	67	Hosnagar	... Guddekoppa
56	Sagar	... Mathikoppa	68	Sagar	... Othegodu
57	Bhadravati	... Bullapura	69	Do	... Malur
58	Channagiri	... Bhimaneri	70	Channagiri	... Kengapura
59	Honnali	... Bidarahalli Tanda	71	Sorab	... Kuntagalale
60	Do	... Sowlanga	72	Do	... Kyasanur
61	Thirthahalli	... Sankadahole	73	Honnali	... Ganjanahalli
		IV. MYSORE DISTRICT.			
74	Mysore City	... Sindi Primary	85	Periyapatna	... Hasuveen Kaval
75	Periyapatna	... Handitavalli	86	Hunsur	... Biligere
76	Do	... Bhootanahalli	87	Mysore	... Bommenhalli
77	Hunsur	... Uyyigowdanahalli	88	K. R. Nagar	... Manuganahalli
78	Do	... Aswale	89	Chamarajanagar	... Modalvadi
79	Mysore	... Yereganahalli	90	Nanjangud	... Mubbahalli
80	Do	... Keranahalli	91	T.-Narasipur	... Thothavadi
81	Do	... Salhundi	92	K. R. Nagar	... Hanthehalli
82	Do	... Kellahalli	93	Nanjangud	... Godnehalli
83	K. R. Nagar	... Sannegowdanakoppal	94	Nanjangud	... Bhogaravalundi
84	Periyapatna	... Navilur			

V. CHITALDRUG DISTRICT.

95	Davangere	... Tamil Primary School	107	Challakere	... Veeradhimmanahalli
96	Do	... Azad Nagar Extension (Urdu Primary School)	108	Hiriyur	... Pitlali
			109	Hiriyur	... Kundalagura
97	Do	... Hadadi Extension (Urdu Primary School)	110	Holalkere	... Amruthapura
			111	Harihar	... Lakkasettihalli
98	Hiriyur	... Tamil Primary School	112	Harihar	... Voderabasapura
99	Chitaldrug	... Horapet Primary School	113	Do	... Ganganarasi
100	Jagalur	... Santhepet Primary School	114	Do	... Pammenahalli
101	Harihar	... Halladakeri Primary School	115	Challakere	... Visweswarapura
102	Davangere	... Chikkathogaleri	116	Do	... Karekattlehalli
103	Harihar	... Golalahalli	117	Do	... Bombarahalli
104	Harihar	... Budihal	118	Holalkere	... Agrahara
105	Jagalur	... Sagaleghatta	119	Molakalmuru	... Yervenahal i
106	Chitaldrug	... Balighatta	120	Do	... Megalahatti

VI. CHIKMAGALUR DISTRICT.

121	Narasimharajapura	... Petta Primary School	131	Koppa	... Huligaradi
122	Tarikere Town	... Kambadabeedi	132	Do	... Adikesagodu
123	Chikmagalur	... Jodihampapura	133	Chikmagalur	... Katramane
124	Do	... Bendiga	134	Kadur	... Swamikatte
125	Mudigere	... Halemudigere	135	Do	... Seegehadlu
126	Do	... Phalguni	136	Mudigere	... Kolur
127	Koppa	... Kalekoppa	137	Chikmagalur	... Gadabanahalli
128	Do	... Asandalu	138	Do	... Dasarahalli
129	Chikmagalur	... Voderahalli	139	Mudigere	... Balige
130	Mudigere	... Doddanandi			

(SRI A. G. RAMACHANDRA RAO.)

	Taluk	Place		Taluk	Place
		VII. KOLAR DISTRICT.			
140	Mulbagal Town	... Someswarapalya	151	Sidlaghatta	... Varadanaikanahalli
141	Chikballapur	... Chalamenahalli	152	Kolar	... Ramasandra
142	Bagepalli	... Pathbagepalli	153	Chintamani	... Rochapura
143	Bangarpet	... Yelesandra	154	Sidlaghatta	... Goramadugu
144	Sidlaghatta	... Settikere	155	Gauribidanur	... Holaganahalli
145	Malur	... Nagapura	156	Chintamani	.. Jeedarahalli
146	Chintamani	... Mavukere	157	Mulbagal	... V. Guttahalli
147	Gauribidanur	... Vatadahosahalli	158	Sidlaghatta	... Doddadasarahalli
148	Do	... Kadirenahalli	159	Bagepalli	... Manugamakalapalli
149	Kolar	... Koragondahalli	160	Srinivasapur	... Dalasanur
150	Bangarpet	... Nayakarahalli			
		VIII. HASSAN DISTRICT.			
161	Hassan Town	... Hospital locality	171	Holenarsipur	... Hoovinahalli
162	Belur	... Hirekotle	172	Do	... Bittagondahalli
163	Arsikere	... Gollarahalli	173	Arkalgud	... Siddapura
164	Channarayapatna	... Kallahalli	174	Do	... Hentigenkoppal
165	Do	... Booka	175	Channarayapatna	... Dadadahalli
166	Holenarsipur	... Arekalhosahalli	176	Holenarsipur	... Marahalli
167	Sakalespur	... Kangahalli	177	Do	... Bendiganahalli
168	Sakalespur	... Guddanahalli	178	Do	... Uddur
169	Hassan	... Banavasi	179	Sakalespur	... Dodakumdure
170	Arkalgud	... Banagundi	180	Hassan	... Javanahalli

IX. MANDYA DISTRICT.

181	Nagamangala	... Hullenahalli
182	Do	... Cholenahalli
183	Srirangapatna	.. Marasinganahalli
184	Do	... Kodisettipura
185	Malavalli	... Amruteswarahalli
186	Do	... Kurubanapura
187	Mandya	... Tavarekere
188	Do	... Banakanahalli
189	Do	... Halahalli
190	Pandavapura	... Hulikere-Koppal
191	Srirangapatna	... Chinnanahalli
192	Mandya	... Gannaikanahalli
193	Do	... Tumbagere
194	Do	... Kagehallada doddi
195	Malavalli	... Aladahalli
196	Do	... Channappanakoppal
197	Mandya	... Manakibbahalli
198	Malavalli	... Hombegowdanahalli
199	Maddur	... Byadarahalli
200	Do	... Yeladahalli
201	Do	... Haralahalli

X. TUMKUR DISTRICT.

202	Gubbi	... Bagur
203	Do	... Sanganahalli
204	Chicknaikanahalli	... Beligenahalli
205	Tiptur	... Siddlahalli
206	Do	... Naganahaghatta
207	Kunigal	... Handalagere
208	Pavagada	... Rajavanti
209	Tumkur	... Amruthagiri
210	Chicknaikanahalli	... Hoyisalakatte
211	Madhugiri	... Tavaladahalli
212	Gubbi	... Pathiyappanapalya
213	Turuvekere	... Haridasanahalli
214	Kunigal	... Doddakallahalli
215	Do	... Hosapura
216	Madhugiri	... Pulamaghatta
217	Gubbi	... Gaddahalli
218	Gubbi	... Bellahalli
219	Turuvekere	... Yelladabagi
220	Do	... Anadagu
221	Do	... Karidigere
222	Do	... Bommenahalli
223	Do	... Somalapura
224	Kunigal	... Sabaganahalli
225	Do	... Hosahalli
226	Do	... Hosahalli (Kothagere Hobli)
227	Do	... Chalamasandra
228	Do	... Hongarahalli
229	Do	... Hithalapura
230	Do	... Nodemavinapura
231	Do	... Kempanahalli
232	Do	... Kenchanahalli
233	Do	... Mavinakatte

Minister's Statement *re* : leather industry at Doddasiddavvanahalli.

Sri H. M. CHANNABASAPPA (Minister for Industries).—Sir, the other day I had promised Sri Bheemappa Naik to give a certain clarification with regard to the leather industry at Doddasiddavvanahalli. I would like to submit for the information of this House and Sri Bheemappa Naik that at Doddasiddavvanahalli, leather industry was starred on 5th January 1956 and eight students are being trained there.

1 P.M.

House Committee Elections.

Mr. DEPUTY SPEAKER.—The Chair desires to announce that as the number of candidates that have signified their intention to stand for election to the House Committee is equal to the number of places to be filled up, the following members are declared elected:

Sriyuts—

T. G. Thimme Gowda
Mudduramiah,
U. M. Madappa
P. M. Swamidurai
B. Chikkanna
Shivananje Gowda.

Under sub-rule (2) of Rule 175 of the Rules of Procedure and Conduct of Business in the Mysore Legislative Assembly, the Deputy Speaker of the Assembly will be the Chairman of the Committee.

Elections to the Public Health Board.

Mr. DEPUTY SPEAKER.—The Chair desires to announce that till the last hour fixed for the receipt of candidature applications two candidates had signified their intention to stand for election to the Public Health Board. As the number of candidates is equal to the number of places to be filled up by election, the following members are declared elected:—

Sri C. H. Linga Devaru
Sri A. Muniyappa.

BUDGET FOR 1956-57—DEMANDS FOR GRANTS.

Mr. DEPUTY SPEAKER.—The House will now take up Financial business. Demands Nos. 19, 20 and 23, relating to Medical, Public Health and Rural Development. If the House has no objection, I will move Demand No. 19 but Demand No. 20 also may be discussed. Is that agreeable?

HON'BLE MEMBERS.—Yes.

DEMAND NO. 19—MEDICAL.

38. MEDICAL.

Mr. DEPUTY SPEAKER.—Motion moved:

"That a sum not exceeding Rs. 1,21,76,000 be granted to the Government to defray the charges which will come in course of payment during the year ending 31st day of March 1957, in respect of 'Medical'."

We will have two hours for these two Demands up to lunch, and reassembling after lunch at 3-30, we will have one hour and a half the Rural Development Demand. Is that agreeable?

HON'BLE MEMBERS.—Yes.

Sri B. NARAYANASWAMY (Mysore South).—Sir, on Demand No. 19, I have tabled three cut motions, one relating to the retention of the Ayurvedic and Unani College at Mysore, second regarding the reasons that led to the abolition of the Medical School in Bangalore and third, regarding the deputation of medical men to foreign countries for higher studies. Sir, I will take one by one.

Sir, regarding the abolition of the Medical School at Bangalore, I will be satisfied if the Government would let me know the reasons. Sir, the Medical School has been in existence for the last several years, and Government without giving any inkling as to the abolition of the Medical School, all of a sudden announced the abolition of the Medical School in Bangalore. I would like to know whether the main

object in abolishing the Medical School is to convert it into a Medical College. If that is so, I am satisfied.

Secondly, as regards the deputation of Medical men in Government service, there is a good deal of discontent and many of the senior medical men are complaining that their chances are becoming fewer and they are being deprived of their opportunities by deputing junior men to foreign countries for higher studies. The aim of sending or deputing medical men to higher studies is very obvious. We want medical men in our country to be very efficient and we want the best of services that are needed. As such, I request the Hon'ble Minister to kindly clarify the policy of the Government regarding this question of deputation of medical men to foreign countries for higher studies.

Sir, the third cut motion in which I am very much interested and which has affected me and to some extent upset me also, is regarding the transfer of the Ayurvedic College from Mysore to Bangalore. I hope the Hon'ble Minister will kindly bear with me. As Hon'ble Members are aware the Ayurvedic College is an institution that has been in Mysore for the last several years. It has come up due to the donation of a philonthropist and Ayurvedic Pandit Sri Gundlu Pandit Lakshmanachar who in 1928 donated a sum of Rs. 15,000 for the construction of an Ayurvedic College and later in 1930 donated another Rs. 6,000 for the construction of a dispensary, and Government have equally donated similar sums as a result of which today we are having the Ayurvedic College and also the dispensary attached to that college at Mysore. Sir, this news of transfering the Ayurvedic College from Mysore to Bangalore came to me like a bolt from the blue. Last year the Hon'ble Minister was good enough to reply to some of our questions that the Ayurvedic College would not be transferred from Mysore to Bangalore. I do not know what reasons came in the way of Government retaining that institution in Mysore. Sir, certain reasons that have been given for this by the Government, in my opinion, do not appear to be good reasons. That much I will say. The main reason for the Government deciding to transfer the Ayurvedic College from Mysore to Bangalore seems to be the agitation that is being carried on by students that they are not getting necessary facilities and as such that Institution may be transferred to Bangalore. I would like to ask the Government whether this is a good reason for transfering the Ayurvedic College which has been a gift—a munificent gift of a philanthropist. Sir, what pains me most is that the Hon'ble Minister in some other place has stated certain things which are not palatable particularly to the citizens of Mysore City and the representatives of the Mysore City. Sir, this news of transfer of the Ayurvedic College from Mysore to Bangalore has affected me and also my Hon'ble friend Sri T. Mariappa in whose constituency this College is situated. I would earnestly appeal to the Health Minister who has been very good to us, to kindly revise the decision and see that Mysore City is not made an "Economic Sahara."

Sri V. M. MASCARENHAS (St. John's Hill).—Sir, I would first like to refer to the observation made by my friend Sri Narayanaswamy. He seems to think that colleges, institutions and things like that, should be given on the basis of constituencies.

Mr. DEPUTY SPEAKER.—Hon'ble Member need not dilate on that point; he may give his own suggestions.

Sri V. M. MASCARENHAS.—Very well, Sir. Attention of Government has repeatedly been drawn and repeated representations have been made about the poor and unsatisfactory conditions of hospitals, particularly, in the City of Bangalore. All along our big hospitals were very bright. But, now unfortunately we find that the number of patients has enormously increased but there is no corresponding increase in the medical or in the accommodation side. Particularly, the nursing staff has been put to very severe strain in these hospitals so much so not only they suffer but the patients are also put to considerable inconvenience. Every year,

(SRI V. M. MASCARENHAS.)

every member, particularly members from Bangalore, have been impressing upon the Government the need for increased accommodation and increased medical facilities. If Government want to run hospitals, let them run them on first-class lines; otherwise, let them say that accommodation in the hospitals is limited and no further patients could be admitted.

But, as long as we are very generous to take in whosoever that comes in, let not the Government forget that in every hospital there should be not only fair accommodation but also adequate medical and nursing staff.

Next, Sir, for the last two years I having been bringing to the notice of the Government that the Tuberculosis Hospital on the Old Madras Road is generally catering to the needs of the poor people of Civil area. I have been requesting the Government to increase the bed strength by at least 20 beds. Last year, the Hon'ble Minister promised me that 20 more beds would be added in this hospital. I must, with great regret, say that till to-day Government have not taken any action in the matter. May I once again request, Sir, that immediate steps be taken to see that in this Hospital the bed strength is increased by at least 20 so that the poor people of Bangalore City may derive the benefit.

*ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).—ಔಷಧಿಗಳು ಮತ್ತು ಆಸ್ಪತ್ರೆಗಳನ್ನು ಒದಗಿಸುವಾಗ ನಮ್ಮ ಮೈಸೂರು ಸರ್ಕಾರದವರು ಗ್ರಾಮಾಂತರದ ಹಿತದೃಷ್ಟಿಯನ್ನು ಹೆಚ್ಚಾಗಿಟ್ಟುಕೊಳ್ಳಬೇಕೆಂದು ನಾನು ಪ್ರಾರ್ಥಿಸುತ್ತೇನೆ. ಈ ಹೊತ್ತಿನ ದಿವಸ ಸರ್ಕಾರದ ಒಂದು ಗುರಿ ಸಿಟಿಗಳು ಮತ್ತು ಜಿಲ್ಲಾ ಹೆಡ್‌ಕ್ವಾರ್ಟರುಗಳ ಮೇಲಿದೆಯೇ ವಿನಾ ತಾಲ್ಲೂಕು ಹೆಡ್‌ಕ್ವಾರ್ಟರುಗಳ ಕಡೆಗೆ ಅವರ ಗಮನ ಅಷ್ಟಾಗಿಲ್ಲ ಎಂದು ನಾನು ಘಂಟಾಘೋಷವಾಗಿ ಹೇಳಬಲ್ಲೆ. ಕಾರಣ ಇಷ್ಟೆ. ಜಿಲ್ಲಾ ಬೋರ್ಡುಗಳು ಮತ್ತು ಮುನಿಸಿಪಾಲಿಟಿಗಳು ತಮ್ಮ ಕೋಟಾ ಕೊಡಬೇಕು. ಎಲ್. ಎಫ್. ಡಿಸ್ಪೆನ್ಸರಿಗಳು ಪ್ರತಿಯೊಂದು ತಾಲ್ಲೂಕುಗಳಲ್ಲೂ ಇವೆ. ಅವಕ್ಕೆ ಇಂಥ ಕೋಟಾ ಬರಬೇಕು, ಇಲ್ಲದಿದ್ದರೆ ಸರ್ಕಾರ ಗ್ರಾಂಟೇ ಕೊಡುವುದಿಲ್ಲ ಎಂಬ ಭಾವನೆಯಿದೆ. ಅನೇಕ ವರ್ಷಗಳಿಂದ ಕೆಲವು ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಮುನಿಸಿಪಾಲಿಟಿಯಿಂದ ಕೋಟಾ ಬಂದಿಲ್ಲ, ಅದನ್ನು ಸರ್ಕಾರದವರೇ ಕೊಡುತ್ತಿದ್ದಾರೆ. ಸರ್ಕಾರ ಇದಕ್ಕೆ ಒಂದು ಏರ್ಪಾಡು ಮಾಡಬೇಕು. ಡಿಸ್ಟ್ರಿಕ್ಟ್ ಬೋರ್ಡ್ ಮತ್ತು ಮುನಿಸಿಪಾಲಿಟಿಗಳೇನಾದರೂ ಅವುಗಳ ಕೋಟಾ ಕೊಡದಿದ್ದರೆ ಸರ್ಕಾರದವರು ತಾವಾಗಿಯೇ ಕೊಡಬೇಕಾದ್ದನ್ನು ಛಾರ್ಜ್ ಮಾಡಿ ತೆಗೆದುಕೊಳ್ಳುವುದಕ್ಕೆ ಒಂದು ಅವಕಾಶ ಕಲ್ಪನೆ ಮಾಡಬೇಕು. ಹಾಗಾದರೆ ಒಂದು ಸುವ್ಯವಸ್ಥಿತವಾದ ರೀತಿಯಲ್ಲಿ ಔಷಧಿಗಳನ್ನೊದಗಿಸುವುದಕ್ಕೆ ಮತ್ತು ಆಸ್ಪತ್ರೆಗಳನ್ನು ಮೈಂಟೈನ್ ಮಾಡುವುದಕ್ಕೆ ಅವಕಾಶವಾಗುತ್ತದೆ ಎಂದು ಗಮನಕ್ಕೆ ತರುತ್ತೇನೆ.

ಇನ್ನೊಂದು ವಿಷಯ. ಸಿಟಿಗಳಲ್ಲಿರುವ ಆಸ್ಪತ್ರೆಗಳಿಗೆ ಹೆಚ್ಚು ಸೌಲಭ್ಯಗಳಿವೆ, ಸಲಕರಣೆಗಳಿವೆ. ಈಗ ಎಕ್ಸ್‌ರೇ ತೆಗೆಯಬೇಕಾದರೆ ಮತ್ತು ಕೆಲವು ಟೆಸ್ಟ್ ಮಾಡಬೇಕಾದರೆ ರೋಗಿಗಳು ಜಿಲ್ಲಾ ಹೆಡ್‌ಕ್ವಾರ್ಟರುಗಳಿಗೆ ಬರಬೇಕು. ಕಾಲು ಮುರಿದರೆ ತಕ್ಷಣ ಅಲ್ಲಿಗೆ ಬರಬೇಕು, ಬರುವುದಕ್ಕೆ ಅವಕಾಶವಾದರೂ ಆಗಬಹುದು ಅಥವಾ ದಾರಿಯಲ್ಲೇ ಸಾಯಬಹುದು. 40 ಮೈಲಿಗಳಿಂದ ಜಿಲ್ಲಾ ಹೆಡ್‌ಕ್ವಾರ್ಟರುಗಳಿಗೆ ಬರುವುದಕ್ಕೆ ಬದಲಾಗಿ ತಾಲ್ಲೂಕು ಹೆಡ್‌ಕ್ವಾರ್ಟರುಗಳಲ್ಲೇ ಎಕ್ಸ್‌ರೇ ಮುಂತಾದುವುಗಳಿಗೆ ವ್ಯವಸ್ಥೆ ಮಾಡಬೇಕು. ಇಂಥ ಸಂದರ್ಭದಲ್ಲಿ ಸರ್ಕಾರದವರೇ ಮುನಿಸಿಪಾಲಿಟಿ ಕೋಟಾ ಅಪೇಕ್ಷೆ ಮಾಡದೆ ತಾವೇ ಒಂದು ಗ್ರಾಂಟು ಕೊಟ್ಟು ಏರ್ಪಾಡೇನಾಗಬೇಕೋ ಅದನ್ನು ಮಾಡಬೇಕಾದದ್ದು ಬಹಳ ಆವಶ್ಯಕವೆಂದು ಒತ್ತಾಯಮಾಡುತ್ತೇನೆ.

ಈ ವಿಚಾರದಲ್ಲಿ ಒಂದು ಉದಾಹರಣೆ ಹೇಳುತ್ತೇನೆ. ವಾರ್ಡುಗಳಲ್ಲಿ ಹೆಂಗಸರು ಮತ್ತು ಗಂಡಸರಿಗೆ ಸ್ಥಳ ಒದಗಿಸಿರುವುದು ತಾಲ್ಲೂಕುಗಳಲ್ಲಿರುವ ಸಬ್ ಜೈಲಿನೋಪಾದಿಯಲ್ಲಿದೆ. ಚಾಮರಾಜನಗರಕ್ಕೆ ಸುಮಾರು ಒಂದು ತಿಂಗಳ ಹಿಂದೆ ಮೆಡಿಕಲ್ ಆಫೀಸರು ಬಂದು ಆಸ್ಪತ್ರೆಯನ್ನು ಅಜಮಾಯಿಷಿ ಮಾಡಿದರು. ಅದು ನರಕವಿದ್ದ ಹಾಗಿತ್ತು, ಸುಣ್ಣ ಸಹ ಬಳಿದಿರಲಿಲ್ಲ, ಮಲಗಿಕೊಳ್ಳುವುದಕ್ಕೆ ಅಲ್ಲಿ ಹಾಸಿಗೆಯಾಗಲಿ ಅಥವಾ ಮಂಚವಾಗಲಿ ಇರಲಿಲ್ಲ, ರೋಗಿಗಳಿಗೆ ನೊಣ ಮುತ್ತುತ್ತಿರುವುದನ್ನು ನೋಡಲು ವ್ಯಥೆಯಾಗುತ್ತಿತ್ತು. ಈ ರೀತಿಯಿರುವುದರಿಂದ ಅಲ್ಲಿರುವ ರೋಗಿಗಳು ಅನುಭವಿಸುವ ರೋಗಗಳು ಹರಡುತ್ತವೆಯೋ ಏನೋ ಎಂಬ ಭಯವುಂಟಾಗುತ್ತಿದೆ. ಅಲ್ಲಿ ಹಾಸಿಗೆ ವಗೈರೆ ಏಕಿಲ್ಲವೆಂದು ಕೇಳಿದರೆ ಮುನಿಸಿಪಾಲಿಟಿ ಕೋಟಾ ಬರುತ್ತಿಲ್ಲವೆಂದು ಹೇಳುತ್ತಾರೆ. ಇದಕ್ಕೆ ಅವಕಾಶ ಕೊಡಬಾರದು. ತಮ್ಮ ಕೋಟಾ ಕೊಡಬೇಕಾದದ್ದು ಮುನಿಸಿಪಾಲಿಟಿಯ ಅಬ್ಲಿಗೇಟರಿ ಡ್ಯೂಟಿ ಎಂದು ಮಾಡಿ ಸಕಾಲದಲ್ಲಿ ಕೋಟಾ ಒದಗಿಸುವಂತೆ ಮಾಡಬೇಕು. ಈಗಿರುವ ಪರಿಸ್ಥಿತಿಗೆ ಅವಕಾಶವಾಗಬಾರದು, ಆದ್ದರಿಂದ ಇಂಥ ಆಸ್ಪತ್ರೆಗಳ ಸೂಪರ್‌ವಿಷನ್ ಬಹಳ ಚೆನ್ನಾಗಿ ನಡೆದು ಅಲ್ಲಿನ ನ್ಯೂನತೆಗಳು ಕೂಡಲೆ ಪರಿಹಾರವಾಗಲು ತಕ್ಕ ಕ್ರಮ ಕೈಕೊಳ್ಳಬೇಕು. ಮುನಿಸಿಪಾಲಿಟಿ ಸರಬರಾಯಿ ಸರಿಯಾಗಿ ಬಾರದಿದ್ದರೂ "found correct and kept clean" ಎಂದು ಬರೆದರೆ ಪ್ರಯೋಜನವಿಲ್ಲ. ನಿಜವಾಗಿಯೂ ಕ್ಲೀನ್ ಆಗಿರಬೇಕು. ಯಾವರೀತಿ ವ್ಯವಸ್ಥೆಯಿದೆ, ಔಷಧಿ ಸರಿಯಾಗಿ ಸರಬರಾಯಾಗುತ್ತದೆಯೆ ಎಂಬುದನ್ನು ನೋಡಬೇಕು. ಸಾಧಾರಣವಾಗಿ ತಾಲ್ಲೂಕು ಹೆಡ್‌ಕ್ವಾರ್ಟರುಗಳಲ್ಲಿ ಉಪ್ಪು ಸಹ ಸಿಕ್ಕುತ್ತಿಲ್ಲ. ಇದನ್ನು ತಕ್ಷಣ ಒದಗಿಸಿ ಸಿಕ್ಕುವುದಕ್ಕೆ ಅವಕಾಶ ಕೊಡಬೇಕು.

ಇನ್ನೊಂದು ಡಾ॥ ಮೋದಿಯವರ ವಿಷಯವನ್ನು ಸರ್ಕಾರ ಈ ಸಾರಿ ಕೈಬಿಟ್ಟಿರುವುದು ವಿಷಾದಕರ, ಅವರು ಕಳೆದ ವರ್ಷ ದೇಶಾದ್ಯಂತ ಸಂಚಾರ ಮಾಡಿ ಕಣ್ಣಿಗೆ ಔಷಧಿ ಹಾಕಿ ಆಪರೇಷನ್ ಮಾಡುವುದಕ್ಕೆ ಅವ

ಕಾಶವಿತ್ತು. ಈ ವರ್ಷ ಆ ರೀತಿ ಮುಂದಾದರೂ ಅವಕಾಶ ಮಾಡುತ್ತಾರೆಂದು ನಂಬಿದ್ದೇನೆ.

ಶ್ರೀ ಜಿ. ಪುಟ್ಟಸ್ವಾಮಿ (ಚಿಕ್ಕಮಗಳೂರು—ಮೂಡಿಗೆರೆ—ಅನುಸೂಚಿತ ಜಾತಿಗಳು).—ಸ್ವಾಮಿ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಂದು ಮೊಬೈಲ್ ಡಿಸ್ಪೆನ್ಸರಿ ವ್ಯಾನ್ ಇದೆ ಮತ್ತು ಒಂದು ಆಂಬುಲೆನ್ಸ್ ವ್ಯಾನ್ ಇದೆ. ಎರಡು ವರ್ಷಗಳಲ್ಲಿ ಸುಮಾರು ಎರಡು ಮೂರು ಸಲಕ್ಕಿಂತಲೂ ಜಾಸ್ತಿಯಾಗಿ ಅವು ಕೆಟ್ಟು ಹೋಗಿವೆ. ಹೀಗೆ ಕೆಟ್ಟು ಹೋದ ಕಾಲದಲ್ಲಿ ಹಳ್ಳಿಗಳಲ್ಲಿ ರೋಗಿಗಳು ಬಾಯಿಲೆಗೆ ಔಷಧಿ ಪಡೆಯಲು ವ್ಯಾನ್ ಬರುತ್ತದೆಂದು ಕಾದು ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ವ್ಯಾನು ಬಾರದೆ ನಿರಾಶರಾಗಿ ಮನೆಗೆ ಹೋಗಿದ್ದಾರೆ. ಹೀಗೆ ಅನೇಕ ಗ್ರಾಮಗಳಲ್ಲಿ ಕಾದು ಕಾದು ಸಾಕಾಗಿದ್ದಾರೆ. ಈ ವ್ಯಾನ್ ಅನೇಕ ದಿವಸ ಬಾರದೆ ವ್ಯಾನ್ ಕೆಟ್ಟು ಹೋಗಿದೆಯೆಂಬ ವರ್ತಮಾನ ತಿಳಿಯದೆ ಅನೇಕರು ಬಹಳ ತೊಂದರೆ ಪಟ್ಟಿದ್ದಾರೆ. ಆದ್ದರಿಂದ ಈ ವ್ಯಾನ್ ಕೆಟ್ಟು ಹೋಗಿದ್ದ ಪಕ್ಷದಲ್ಲಿ ಅದನ್ನು ಗ್ರಾಮಾಂತರಗಳಿಗೆ ತಿಳಿಸಿ ಇಷ್ಟು ದಿವನಗಳ ಕಾಲ ವ್ಯಾನ್ ಬರುವುದಿಲ್ಲವೆಂದು ಹೇಳಬೇಕು. ಹಾಗೆ ಮಾಡಿದರೆ ರೋಗಿಗಳನ್ನು ಬೇರೆ ಕಡೆಗಾದರೂ ಕರೆದುಕೊಂಡು ಹೋಗಿ ಚಿಕಿತ್ಸೆ ಮಾಡಿಸುವುದಕ್ಕೆ ಅನುಕೂಲವಾಗುತ್ತದೆ. ಸರ್ಕಾರದವರು ಈ ವಿಚಾರದಲ್ಲಿ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ಈ ವ್ಯಾನುಗಳು ಆಗಾಗ್ಗೆ ಕೆಟ್ಟುಹೋಗದಿರುವಂತೆ ನೋಡಿಕೊಳ್ಳಬೇಕು. ಕೆಟ್ಟು ಹೋದ ವ್ಯಾನುಗಳನ್ನು ಬೇಗ ರಿಪೇರಿ ಮಾಡುವುದಕ್ಕೆ ಗ್ರಾಮದ ಅಧಿಕಾರಿಗಳಿಗಾದರೂ ಅಧಿಕಾರ ಕೊಟ್ಟು ಸ್ಥಳದಲ್ಲೇ ಯಾವುದಾದರೂ ಕಾರ್ಖಾನೆಗಳಿದ್ದರೆ ಅಲ್ಲಿ ಸಣ್ಣ ಪುಟ್ಟ ರಿಪೇರಿಗಳನ್ನು ಮಾಡಿಸುವುದಕ್ಕಾದರೆ ಅದನ್ನು ಮಾಡಿಸಬೇಕು. ದೊಡ್ಡ ರಿಪೇರಿಯಾಗಬೇಕಾದರೂ ಸಹ ಬೇಗ ರಿಪೇರಿ ಮಾಡುವುದಕ್ಕೆ ಸರ್ಕಾರ ಹಣ ಮಂಜೂರು ಮಾಡಿ ಜಾಗ್ರತೆ ಈ ವ್ಯಾನು ಸರಿಯಾಗಿ ಕೆಲಸಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ಅಲ್ಲದೆ ಈಗ ಒಂದು ಡಿಸ್ಟ್ರಿಕ್ಟಿಗೆಲ್ಲಾ ಒಂದೇ ಮೊಬೈಲ್ ಡಿಸ್ಪೆನ್ಸರಿ ವ್ಯಾನ್ ಇರುವುದು. ಅದು ಸಾಕಾಗುವುದಿಲ್ಲ. ಈ ವಿಚಾರವನ್ನು ಕೂಡ ಸರ್ಕಾರ ಆಲೋಚಿಸಬೇಕಾದದ್ದು ಆದ್ಯಕರ್ತವ್ಯವೆಂದು ಹೇಳುತ್ತೇನೆ.

ಈಗ ಇರತಕ್ಕ ಒಂದು ವ್ಯಾನ್ ನೂರಾರು ಮೈಲಿಗಳನ್ನು ತಿರುಗಿಕೊಂಡು ಬಂದು ತಾಲ್ಲೂಕು ಹೆಡ್ ಕ್ವಾರ್ಟರ್ಸ್ ಅಥವಾ ಹೋಬಳಿ ಗ್ರಾಮಗಳಲ್ಲೋ ನಿಲ್ಲಬೇಕಾಗಿರುತ್ತದೆ. ಗ್ರಾಮಗಳಲ್ಲಿ ನಿಲ್ಲಲು ಅವಕಾಶವಿಲ್ಲ. ಚಿಕ್ಕಮಗಳೂರು ಜಿಲ್ಲೆಗೆ ಒದಗಿಸಿರುವ ಒಂದು ವ್ಯಾನ್ ಖಂಡಿತ ಸಾಲದು. ಆಜಿಲ್ಲೆಗೆ ತಾವು ಇನ್ನೂ ಒಂದು ಮೊಬೈಲ್ ವ್ಯಾನನ್ನೂ ಮತ್ತು ಇನ್ನೊಂದು ಆಂಬುಲೆನ್ಸ್ ವ್ಯಾನನ್ನೂ ಸಹ ಮಂಜೂರುಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಸ್ವಾಮಿ, ಚಿಕ್ಕಮಗಳೂರಿನಲ್ಲಿ ಶ್ರೀ ಮಲ್ಲೇಗೌಡ ಜನರಲ್ ಆಸ್ಪತ್ರೆ ಎಂದು ಒಂದು ಆಸ್ಪತ್ರೆಯಿದೆ. ಅದಕ್ಕೆ ಮಾನ್ಯ ಆರೋಗ್ಯಮಂತ್ರಿಗಳೂ ಸಹ ಭೇಟಿ ಕೊಟ್ಟಿದ್ದಾರೆ. ಹಾಗೆ ಇವರು ಭೇಟಿಕೊಟ್ಟಿದ್ದಾಗ ಅಲ್ಲಿನ ಜನರೂ, ಪುರಪ್ರಮುಖರುಗಳೂ ಆ ಆಸ್ಪತ್ರೆಯ ಅನೇಕ ಕುಂದುಕೊರತೆಗಳನ್ನು ಮಾನ್ಯ ಸಚಿವರ ಗಮನಕ್ಕೆ ತಂದಿದ್ದಾರೆ. ಆ ಆಸ್ಪತ್ರೆಯಲ್ಲಿ ರೋಗಿಗಳಿಗೆ ಸಾಕಷ್ಟು ಮಂಚ ಮತ್ತು ಹಾಸಿಗೆಗಳಿಲ್ಲ. ಈಗ ಅವರು ನೆಲದಮೇಲೇ ಮಲಗುತ್ತಿದ್ದಾರೆ. ಈರೀತಿ ಮಲೆನಾಡಿನಲ್ಲಿ ರೋಗಿಗಳು ನೆಲದಮೇಲೆ ಮಲಗಿದರೆ ರೋಗ ಇನ್ನೂ ಪ್ರಬಲವಾಗುತ್ತದೆ; ಹೀಗೆ ಮಾಡುವುದು ತುಂಬಾ ಅನಾರೋಗ್ಯಕರವಾದದ್ದು. ಆದಕಾರಣ ಸರ್ಕಾರದವರು ಕೂಡಲೆ ಹೆಚ್ಚು ಹಾಸಿಗೆಗಳನ್ನೂ ಮತ್ತು ಹೆಚ್ಚು ಮಂಚಗಳನ್ನೂ ಒದಗಿಸಲು ಆಜ್ಞೆ ಹೊರಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇಷ್ಟೇ ಅಲ್ಲದೆ ಇತ್ತೀಚೆಗೆ ಆ ಆಸ್ಪತ್ರೆಗೆ ಔಷಧಿಗಳು ಕೂಡ ಕಡಮೆ ಮಟ್ಟದಲ್ಲಿ ಸರಬರಾಯಿ ಆಗುತ್ತಿವೆಯೆಂದು ಕೇಳುತ್ತಿದ್ದೇನೆ. ಆದುದರಿಂದ ತಾವು ಅಲ್ಲಿಗೆ ಇನ್ನೂ ಹೆಚ್ಚಿನ ಔಷಧಿಗಳನ್ನೂ ಒದಗಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಅಲ್ಲಿರತಕ್ಕ ಹೆರಿಗೆ ಆಸ್ಪತ್ರೆಗೂ ಕೂಡ ಸಾಕಷ್ಟು ಹಾಸಿಗೆಗಳೂ ಮತ್ತು ಮಂಚಗಳೂ ಇಲ್ಲ ಅವುಗಳನ್ನು ಮಂಜೂರುಮಾಡಬೇಕೆಂಬುದಾಗಿ ಅಲ್ಲಿನ ಡಾಕ್ಟರಿಂದ ಶಿಫಾರ್ಸು ಬಂದಿರುತ್ತದೆಯೆಂದು ಕೇಳುತ್ತೇನೆ. ಅದನ್ನು ತಾವು ಬೇಗ ಮಂಜೂರುಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಮಲೆನಾಡಿನಲ್ಲಿ ಅನೇಕ ಕಡೆ ಡಾಕ್ಟರಿದ್ದರೆ ಔಷಧಿ ಇರುವುದಿಲ್ಲ, ಔಷಧಿಯಿದ್ದರೆ ಡಾಕ್ಟರಿರುವುದಿಲ್ಲ ಇದನ್ನು ಸರಿಪಡಿಸಬೇಕು.

* ಶ್ರೀ ಎ. ವಿ. ನರಸಿಂಹರೆಡ್ಡಿ (ಬೆಂಗಳೂರು ದಕ್ಷಿಣ ತಾಲ್ಲೂಕು).—ಸ್ವಾಮಿ, ಈ ದಿವಸ ಸರ್ಕಾರದವರು 19ನೆಯ ಡಿಮ್ಯಾಂಡ್ ಮನವಿಯ ಬಗ್ಗೆ 1,21,76,000 ರೂಪಾಯಿಗಳನ್ನು ಮತ್ತು ಡಿಮ್ಯಾಂಡ್ ನಂಬರ್ 20ರ ಮನವಿಯ ಬಗ್ಗೆ 52,73,000 ರೂಪಾಯಿಗಳನ್ನು ಖರ್ಚುಮಾಡಲು ಈ ಸಭೆಯ ಮಂಜೂರಾತಿಯನ್ನು ಕೇಳಿಕೊಂಡಿದ್ದಾರೆ. ಆದರೆ ನಾನು ಈ ಎರಡು ಡಿಮ್ಯಾಂಡುಗಳ ಬಗ್ಗೆಯೂ ಹೆಚ್ಚಿನ ಸಂಖ್ಯೆಯಲ್ಲಿ ಖೋತಾ ಸೂಚನೆಗಳನ್ನು ಕಳುಹಿಸಿರುತ್ತೇನೆ.

ಉಪಾಧ್ಯಕ್ಷರು.—ಆದಾಗ್ಯೂ ತಮಗೆ ಮಾತನಾಡಲು ಅವಕಾಶ ಸಿಕ್ಕುವುದು ಮಾತ್ರ ಒಂದೇ ಸಲ. You need not read the cut motions.

Sri A. V. NARASIMHA REDDY.—My difficulty is, if I don't read them, I will not be able to cover all these matters in my speech.

Mr. DEPUTY SPEAKER.—You know what subjects you have tabled by way of cut-motions. You may cover all those points in your speech.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈ ದಿವಸ ವಿಕ್ಟೋರಿಯ ಆಸ್ಪತ್ರೆಯಲ್ಲಿ ಮೆಡಿಕಲ್ ಕಾಲೇಜಿನಲ್ಲಿ ಎಂ.ಬಿ.ಬಿ.ಎಸ್. ಡಿಗ್ರಿ ಪ್ರಶಸ್ತಿ ಪಡೆದು, ಪದವೀಧರರಾದಂಥವರು ಆರು ತಿಂಗಳಕಾಲ ಹೋಂ ಸರ್ಜನ್ ಆಗಿ ಕೆಲಸಮಾಡಬೇಕೆಂಬ ನಿಯಮ ಇದೆ. ಆದರೆ ಇದು ಎಷ್ಟೋ ದೊಡ್ಡ ಕೋರ್ಸ್ ಮತ್ತು ಇದಕ್ಕಾಗಿ ಐದು ವರ್ಷಕಾಲ ಆ ವಿದ್ಯಾರ್ಥಿಗಳ ತಂದೆತಾಯಿಗಳು ಎಷ್ಟು ಹಣವನ್ನು ಖರ್ಚುಮಾಡಿಕೊಂಡಿರುತ್ತಾರೆ ಎಂಬುದನ್ನು ನಾನು ಹೆಚ್ಚು ವರ್ಣಿಸಬೇಕಾದ್ದಿಲ್ಲ. ಹೀಗಿರುವಾಗ ಇಂಥ ಜನರಿಂದ ಸರ್ಕಾರದವರು ಅವರಿಗೆ ಯಾವ ಒಂದು ಪ್ರತಿಫಲವನ್ನೂ ಕೊಡದಹಾಗೆ ಅವರಿಂದ ಯಾವ ಸೇವೆಯನ್ನೂ ಇವರು ನಿರೀಕ್ಷಿಸಬಾರದು. ಆದರೆ ಈ ದಿವಸ ಹಾಗೆ ಹೋಂ ಸರ್ಜನ್ ಆಗಿ ಕೆಲಸ ಮಾಡತಕ್ಕಂಥ ಕೆಲವು ವಿದ್ಯಾರ್ಥಿಗಳಿಗೆ 70-75 ರೂಪಾಯಿಗಳನ್ನು ಒಂದು ಸ್ಟೈಪೆಂಡ್ಸ್ ರೀತಿ ಕೊಡುತ್ತಿದ್ದಾರೆ. ಈ ದಿವಸ ಎಷ್ಟುಮಂದಿ ಹುಡುಗರು ಆರೀತಿ ಪದವೀಧರರಾಗಿ ಈಚೆಗೆ ಬರು

(ಶ್ರೀ ಎ. ವಿ. ನರಸಿಂಹರೆಡ್ಡಿ)

ತ್ತಾರೋ ಮತ್ತು ಎಷ್ಟು ಜನರನ್ನು ಸರ್ಕಾರದವರು ಹ್ಯಾಗೆ ಹೋಂ ಸರ್ಜನ್‌ಗಳನ್ನಾಗಿ ಆರಿಸಿಕೊಳ್ಳು ತ್ತಾರೋ ಅಂಥ ಪ್ರತಿಯೊಬ್ಬರಿಗೂ ಕೂಡ ಸರ್ಕಾರ ದವರು ಈ ಸ್ಟೈಪೆಂಡ್ಸ್‌ನ್ನು ಒದಗಿಸಬೇಕೆಂದು ಕೇಳಿ ಕೊಳ್ಳುತ್ತೇನೆ.

ಇನ್ನು ಎರಡನೆಯದಾಗಿ ವಿಕ್ಟೋರಿಯಾ ಆಸ್ಪತ್ರೆಗೆ ಈ ದಿವಸ ಸರಬರಾಯಿ ಆಗುತ್ತಿರುವ ಹಾಲು ಮತ್ತು ಅಲ್ಲಿ ರೋಗಿಗಳಿಗೆ ಕೊಡಲಾಗುತ್ತಿರುವ ಆಹಾರ ಇವು ಉತ್ತಮ ದರ್ಜೆಯಲ್ಲಿಲ್ಲವೆಂದು ನಾನು ಕೇಳುತ್ತಿದ್ದೇನೆ. ನಾನು ಈ ದಿವಸ ಆ ಆಸ್ಪತ್ರೆಯ ಪಕ್ಕದಲ್ಲೇ ವಾಸ ಮಾಡುತ್ತಿದ್ದೇನೆ. ಈ ವಿಚಾರವನ್ನು ಅಲ್ಲಿ ಅನೇಕ ಜನರು ಮಾತನಾಡಿಕೊಳ್ಳುತ್ತಿದ್ದಾರೆ. ಆದರೆ ಈ ಹೊತ್ತು ಆ ಆಸ್ಪತ್ರೆಗೆ ಸರಬರಾಯಿ ಆಗುತ್ತಿರುವ ಹಾಲು ಇತ್ಯಾದಿ ಸಾಮಾನುಗಳ ಬಗ್ಗೆ ಆಸ್ಪತ್ರೆಯವರು ಯಾವ ಒಂದು ಟೆಂಡರ್ ಇತ್ಯಾದಿಗಳನ್ನು ಕರೆಯದೆ ಹಾಗೇ ಯಾರಿಗೋ ಆ ಕೆಲಸವನ್ನೊಪ್ಪಿಸಿರುತ್ತಾರೆಂದು ಕೇಳುತ್ತಿದ್ದೇನೆ. ಅಂತೂ ಹೀಗಾಗಿ ಈ ದಿವಸ ಆ ಆಸ್ಪತ್ರೆಗೆ ಒಳ್ಳೆಯ ಹಾಲು ಸರಬರಾಯಿ ಆಗುತ್ತಿಲ್ಲ ವೆಂದು ತಿಳಿದುಬಂದಿದೆ. ಇದನ್ನು ಸರ್ಕಾರದವರು ಕೂಡಲೇ ಸರಿಪಡಿಸಬೇಕೆಂದು ಕೋರುತ್ತೇನೆ.

ಇನ್ನು ಮೈಸೂರು ಮೆಡಿಕಲ್ ಕಾಲೇಜಿಗೆ ವಸತಿ ಸೌಕರ್ಯ ಸಾಲದೆಂದು ನಾವು ಈ ಹಿಂದೆ ಮೈಸೂರು ಅಧಿವೇಶನಕ್ಕೆ ಹೋಗಿದ್ದಂಥ ಕಾಲದಲ್ಲಿ ಆ ಸ್ಥಳಕ್ಕೆ ಸಂಬಂಧಪಟ್ಟ ಮಾನ್ಯಮಂತ್ರಿಗಳನ್ನೇ ಕರೆದುಕೊಂಡು ಹೋಗಿ ತೋರಿಸಿ ಎಲ್ಲ ವಿಚಾರಗಳನ್ನೂ ಅರಿಕೆಮಾಡಿ ಕೊಂಡಿದ್ದೆವು. ಆ ಮೆಡಿಕಲ್ ಕಾಲೇಜನ್ನು ಅಲ್ಲಿ ಎಷ್ಟೋ ವರ್ಷಗಳಿಂದ ನಡೆಸಿಕೊಂಡು ಬರುತ್ತಿದ್ದಾರೆ. ಆದರೆ ಅಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಸಾಕಷ್ಟು ವಸತಿ ಸೌಕರ್ಯಗಳಿಲ್ಲದಿದ್ದರೆ ಅವರು ತಮ್ಮ ವಿದ್ಯಾಭ್ಯಾಸವನ್ನು ನಿರಾತಂಕವಾಗಿ ನಡೆಸಲು ಹೇಗೆ ಸಾಧ್ಯವಾಗುತ್ತದೆ? ಇಲ್ಲಿಯತನಕ ಸರ್ಕಾರ ದವರ ಆಲೋಚನೆಯಲ್ಲಿ ಮೈಸೂರಿನಲ್ಲಿರತಕ್ಕ ಮೆಡಿಕಲ್ ಕಾಲೇಜನ್ನು ಬೆಂಗಳೂರಿಗೆ ವರ್ಗಾಯಿಸ ಬೇಕೆಂಬುದಾಗಿತ್ತು. ಆದರೆ ಈಗ ಆ ಅಭಿಪ್ರಾಯ ವನ್ನು ಸರ್ಕಾರದವರು ಬದಲಾಯಿಸಿ ಆ ಕಾಲೇಜನ್ನು ಅಲ್ಲೇ ಉಳಿಸಲು ಒಪ್ಪಿಕೊಂಡಿದ್ದಾರೆಂದು ತಿಳಿದುಬರು ತ್ತಿದೆ. ಈ ಕಾರಣದಿಂದ ಸರ್ಕಾರದವರು ಮುಂದಿನ ಸಾಲಿನಲ್ಲಿ ಆದರೂ ಆ ಕಾಲೇಜು ವಿದ್ಯಾರ್ಥಿಗಳಿಗೆ ಹಾಸ್ಟಲ್ ಸೌಕರ್ಯವನ್ನೂ ಒದಗಿಸಬೇಕೆಂದು ಕೇಳಿ ಕೊಳ್ಳುತ್ತೇನೆ. ಈ ದಿವಸ ಅಲ್ಲಿರತಕ್ಕ ನಾನ್ ವೆಜಿ ಟೇರಿಯನ್ ಹಾಸ್ಟಲಿನ ಪಕ್ಕದಲ್ಲೇ ಬೇಕಾದಷ್ಟು ಜಾಗ ಇದೆ. ಆದರೂ ಅಲ್ಲಿ ಈ ಕಟ್ಟಡದ ವ್ಯವಸ್ಥೆ ಮಾಡದೆ ಆ ಸ್ಥಳವನ್ನು ರೋಟರಿ ಕ್ಲಬ್ಬಿನವರಿಗೆ ಬಿಟ್ಟುಕೊಟ್ಟಿದ್ದಾರೆ. ಇದರಿಂದ ವಿದ್ಯಾರ್ಥಿಗಳಿಗೆ ಪರೀಕ್ಷೆ ಕಾಲದಲ್ಲಿ ಎಷ್ಟರಮಟ್ಟಿಗೆ ತೊಂದರೆಯಾಗು ತ್ತಿದೆ ಎಂಬ ಅಂಶವನ್ನು ನಾವು ಆ ಮೈಸೂರಿನಲ್ಲಿ ಅಧಿ ವೇಶನ ನಡೆಯುತ್ತಿದ್ದ ಕಾಲದಲ್ಲಿ ನಮ್ಮನ್ನು ಅಲ್ಲಿಗೆ ಆ ವಿದ್ಯಾರ್ಥಿಗಳು ಕರೆದುಕೊಂಡುಹೋಗಿ ತೋರಿಸಿದ್ದರು, ಆಗ ಆ ವಿಚಾರಗಳನ್ನೆಲ್ಲಾ ನಾವು ಮಾನ್ಯ ವಿದ್ಯಾಮಂತ್ರಿಗಳ ಗಮನಕ್ಕೆ ಅಲ್ಲೇ ತಂದಿ ದ್ದೆವು. ಆದರೆ ಆ ಬಗ್ಗೆ ಸರ್ಕಾರದವರು ಇನ್ನೂ ನಿಗಾ ಕೊಟ್ಟಿರುವುದಿಲ್ಲ. ಈಗಲಾದರೂ ಸರ್ಕಾರದವರು ಆ ವಿದ್ಯಾರ್ಥಿಗಳಿಗೆ ಏನೇನು ಸೌಕರ್ಯಗಳು ಬೇಕೋ ಅವು ಗಳನ್ನೂ ಕೂಡಲೆ ಒದಗಿಸಲು ಸೂಕ್ತ ಕಾರ್ಯಕ್ರಮ ಗಳನ್ನು ಕೈಗೊಳ್ಳಬೇಕೆಂದು ಸೂಚಿಸುತ್ತೇನೆ.

ಇನ್ನು ಬೆಂಗಳೂರು ರೂರಲ್ ತಾಲ್ಲೂಕಿನಲ್ಲಿ ಕೆಲವು L.F. ಡಿಸ್ಪೆನ್ಸರಿಗಳಿರುತ್ತವೆ. ಇವುಗಳಿಗೆ ಶಿಬ್ಬಂದಿಯಾಗಲೀ ಅಥವಾ ಔಷಧಿಗಳ ಸರಬರಾಯಿ ಆಗಲೀ ಸರಿಯಾಗಿ ಆಗುತ್ತಿಲ್ಲ. ಅಲ್ಲಿಂದ ಒಬ್ಬ ಡಾಕ್ಟರ್ ವರ್ಗವಾದರೆ ಮತ್ತೊಬ್ಬ ಡಾಕ್ಟರು ಎಷ್ಟೋ ದಿನಗಳಾದರೂ ಬರುವುದಿಲ್ಲ. ಆಸ್ಪತ್ರೆಗಳನ್ನೇ ಮುಚ್ಚಿ ಬಿಟ್ಟಿರುತ್ತಾರೆ. ಇಂಥಾದ್ದನ್ನೆಲ್ಲಾ ಸರಿಪಡಿಸಬೇಕೆಂದು ಸೂಚಿಸುತ್ತೇನೆ.

ಇನ್ನು ನಾನು ಬೆಂಗಳೂರು ದಕ್ಷಿಣ ತಾಲ್ಲೂಕಿನ ವಿಚಾರವಾಗಿ ಅನೇಕ ವಿಷಯಗಳನ್ನು ತಿಳಿಸಬೇಕಾ ದ್ದಿತ್ತು. ಈ ದಿವಸ ಮೈಸೂರು-ಬೆಂಗಳೂರು, ಮತ್ತು ಸಂಸ್ಥಾನದ ಇತರ ಕಡೆಗಳಲ್ಲಿ ದೊಡ್ಡದೊಡ್ಡ ನಗರಗಳಲ್ಲಿ ಬೀದಿಗಳಲ್ಲೇ ಅಂಟುರೋಗಿಗಳು ಬಿದ್ದಿರುತ್ತಾರೆ. ಅವರನ್ನು ಹಾಗೆ ರಾಜಬೀದಿಗಳಲ್ಲಿ ಬಿದ್ದಿರಲು ಅವಕಾಶ ಕೊಡಬಾರದು. ಇದನ್ನು ಕೂಡಲೆ ತಪ್ಪಿಸಬೇಕೆಂದು ಹೇಳುತ್ತೇನೆ.

ಈಗ ಬೆಂಗಳೂರಿನ ಸುತ್ತಮುತ್ತಲೂ 10 ಮೈಲಿ ಫಾಸಲೆಯೊಳಗೆ ಸೊಳ್ಳೆಗಳ ಕಾಟ ವಿಪರೀತವಾಗಿದೆ. ಇದಕ್ಕೆ ಮೂಲ ಕಾರಣ ಕಾರ್ಪೊರೇಷನ್ ಪ್ರದೇಶ ದಲ್ಲಿ ಹೊರಡತಕ್ಕ ಗಲೀಜು ನೀರನ್ನು ಊರು ಹೊರಗೆ ದೂರವಾಗಿ ಸಾಗಿಸುತ್ತಿರುವುದೇ ಆಗಿದೆ. ಈ ಬಗ್ಗೆ ಕಾರ್ಪೊರೇಷನವರಿಗೆ ಸೂಚನೆಕೊಟ್ಟರೂ ಅವರು ಡಿ.ಡಿ.ಟಿ. ಎರಚುವ ಪ್ರಯತ್ನ ಕೈಗೊಂಡಿಲ್ಲ. ಈ ಬಗ್ಗೆ ಸರ್ಕಾರದವರಾದರೂ ಈವರೆಗೆ ಏನೂ ಆಲೋಚನೆಮಾಡಿಲ್ಲ. ಕಾರ್ಪೊರೇಷನವರು ಈ ವಿಚಾರದಲ್ಲಿ ಜನಾರೋಗ್ಯ ಇಲಾಖೆಗೆ ತಿಳಿಸಿ ಎಂದು ಹೇಳುತ್ತಿದ್ದಾರೆ. ಈ ವಿಚಾರವನ್ನು ತಾವು ಕೂಡಲೇ ಸರಿಪಡಿಸಿ ಬೆಂಗಳೂರು ಸುತ್ತ 10 ಮೈಲಿ ಪ್ರದೇಶ ದೊಳಗಿರತಕ್ಕ ಎಲ್ಲಾ ಗ್ರಾಮಗಳಿಗೂ ಡಿ. ಡಿ. ಟಿ. ಸ್ಪ್ರೇ ಮಾಡಲು ಅವಕಾಶ ಕಲ್ಪಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

1-30 P.M.

*ಶ್ರೀಮತಿ ಬಿ. ಎಲ್. ಸುಬ್ಬಮ್ಮ (ಚಿಕ್ಕಮಗಳೂರು-ಮೂಡಿಗೆರೆ).—ಈ ಆರೋಗ್ಯ ಇಲಾಖೆಯ ಡಿಮ್ಯಾಂಡಿನ ಮೇಲೆ ಮಾತನಾಡುತ್ತಾ ನಾನು ನಮ್ಮ ಮಲೆನಾಡಿನ ವಿಷಯದಲ್ಲಿ ಒಂದೆರಡು ಅಂಶಗಳನ್ನು ಸರ್ಕಾರದವರ ಗಮನಕ್ಕೆ ತರಬೇಕೆಂದು ಆಶಿಸುತ್ತೇನೆ. ಸ್ವಾಮಿ, 1947ರಲ್ಲಿ ಮಾನ್ಯ ಸಭೆಯ ಸದಸ್ಯರಾದ ಶ್ರೀ ಎಲ್. ಸಿದ್ದಪ್ಪನವರು ಮಂತ್ರಿಗಳಾಗಿದ್ದಾಗ ಮೂಡಿಗೆರೆ ತಾಲ್ಲೂಕು ಬಾಳೆಹೊಳೆ ಗ್ರಾಮದಲ್ಲಿ ಅಲ್ಲಿನ ಪ್ಲಾಂಟರ್ ಮಹನೀಯರೊಬ್ಬರು ಆಸ್ಪತ್ರೆ ಕಟ್ಟಡ ಮತ್ತು ಡಾಕ್ಟರು ವಾಸಮಾಡುವುದಕ್ಕೆ ಬಿಲ್ಡಿಂಗು ಕೊಟ್ಟರು. ಇನ್ನೇನು ಆಸ್ಪತ್ರೆ ಪ್ರಾರಂಭವಾಗುತ್ತದೆ ಎಂದು ಎಲ್ಲರೂ ತಿಳಿದುಕೊಂಡಿದ್ದರು ಆದರೆ ಆಮೇಲೆ ನೋಡುವಾಗ ಅಲ್ಲಿ ಹೆಲ್ತ್ ಯೂನಿಟ್ ಇರುವುದರಿಂದ ಆಸ್ಪತ್ರೆ ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದರು, ಇನ್ನೂ ಆಸ್ಪತ್ರೆ ಕೊಟ್ಟಿಲ್ಲ. ಅದು ಮಲೆನಾಡಿನ ಮೂಲೆ ಯಲ್ಲಿದೆ. ಹೆಂಗಸರಿಗೆ ಹೆರಿಗೆ ಕಾಲದಲ್ಲಿ ವೈದ್ಯಕೀಯ ಸಹಾಯ ದೊರಕದೆ ಅವರ ಕಷ್ಟ ಹೇಳತೀರದು. ಅದೇ ರೀತಿ ಹುಡುಗರು ಮಕ್ಕಳಿಗೂ ಕೂಡ ಖಾಯಿಲೆ ಬಂದು ಔಷಧಿಗಳು ಸಕಾಲಕ್ಕೆ ಸಿಕ್ಕದೆ ಬಹಳ ತೊಂದರೆ ಯಾಗಿದೆ ಎಂದು ಸರ್ಕಾರದವರ ಗಮನಕ್ಕೆ ಎಷ್ಟೋ ಸಾರಿ ತಂದರೂಕೂಡ ಪ್ರಯೋಜನವಾಗಿಲ್ಲ. ಈಗ ಲಾದರೂ ಸರ್ಕಾರದವರು ಈ ಆಸ್ಪತ್ರೆ ವಿಷಯದಲ್ಲಿ ಹೆಚ್ಚು ನಿಗಾ ತೆಗೆದುಕೊಳ್ಳಬೇಕೆಂದು ನಾನು ಹೇಳು ತ್ತೇನೆ.

ಶ್ರೀ ಚಿಕ್ಕನಂಜಪ್ಪನವರು ಮಲ್ಲೇನ ಹಳ್ಳಿಯಲ್ಲಿ ಒಂದು ಆಸ್ಪತ್ರೆ ಒದಗಿಸಬೇಕೆಂದು 30 ಸಾವಿರ ರೂಪಾಯಿಗಳನ್ನು ಉದಾರವಾಗಿ ಕೊಟ್ಟು 7-8 ವರ್ಷಗಳಾದವು ಅಲ್ಲಿ ಇನ್ನೂ ಆಸ್ಪತ್ರೆ ಕಟ್ಟಡ ಆಗಲಿಲ್ಲ. 20-25 ಮೈಲಿ ದೂರದವರೆಗೂ ಮಲ್ಲೇನಹಳ್ಳಿ ಯವರು ಆಸ್ಪತ್ರೆ ಔಷಧಿಗಳಿಗಾಗಿ ಅಲೆಯಬೇಕಾಗಿದೆ. ಅದನ್ನು ಜಾಗ್ರತೆ ಮಾಡಿಸಿಕೊಡಬೇಕಾಗಿ ಕೇಳಿಕೊಳ್ಳುತ್ತೇನೆ.

ಇನ್ನು ಚಿಕ್ಕಮಗಳೂರು ಜನರಲ್ ಆಸ್ಪತ್ರೆಯ ವಿಷಯದಲ್ಲಿ ಒಂದೆರಡು ಅಂಶಗಳನ್ನು ತಮ್ಮ ಗಮನಕ್ಕೆ ತರುವುದಾದರೆ ಅಲ್ಲಿ ಒಂದು ಮೊಬೈಲ್ ವ್ಯಾನು ಇದೆ. ಅದರ ಒಂದು ಚಕ್ರ ಮುರಿದುಹೋಗಿ ಸುಮಾರು ಎರಡು ವರ್ಷವಾಯಿತು. ಅದಕ್ಕೆ ಬೇಕಾದ ಸಾಮಾನು ತೆಗೆದುಕೊಳ್ಳಲು ಸ್ಟೋರ್ಸ್ ಪರ್ಚೇಸ್ ಕಮಿಟಿಯವರಿಗೆ ಬರೆದಿದ್ದೇವೆ ಎಂದು ಹೇಳುತ್ತಾರೆ. ಈ ಸ್ಟೋರ್ಸ್ ಪರ್ಚೇಸ್ ಕಮಿಟಿಗೆ ಎಷ್ಟು ಸಾರಿ ಬರೆದರೂ ಮಂಜೂರಾಗಿ ಬರುವುದಿಲ್ಲ. ಹೀಗಾಗಿ ಆ ಮೊಬೈಲ್ ವ್ಯಾನಿನಿಂದ ಜನಗಳಿಗೆ ಎಷ್ಟು ಸೌಲಭ್ಯ ಒದಗಬೇಕಾಗಿತ್ತೋ ಅಷ್ಟು ಒದಗದೆ ಬಹಳ ಕಷ್ಟವಾಗಿದೆ. ಅದನ್ನು ಸರ್ಕಾರದವರು ಪರಿಶೀಲನೆಮಾಡಿ ಜಾಗ್ರತೆ ಅದರ ಸೌಲಭ್ಯವನ್ನೂ ಒದಗಿಸಿಕೊಡಬೇಕೆಂದು ಹೇಳುತ್ತೇನೆ.

ಅಲ್ಲಿನ ಜನರಲ್ ಆಸ್ಪತ್ರೆಗೆ ಅನೇಕ ಜನ ಗರ್ಭಿಣಿಯರು ಬರುತ್ತಾರೆ, ಮತ್ತು ರೋಗಿಗಳು ತುಂಬ ಜನ ಇದ್ದಾರೆ, ಅಷ್ಟು ಜನರನ್ನು ನೋಡಿಕೊಳ್ಳುವುದಕ್ಕೆ ಮೂರು ಜನ ಡಾಕ್ಟರುಗಳು ಮಾತ್ರ ಇದ್ದಾರೆ. ಅಷ್ಟು ಸಾಲದು. ಇನ್ನೂ ಹೆಚ್ಚು ಜನರನ್ನು ನೇಮಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮಳೆಗಾಲದಲ್ಲಿ ಬಹಳ ಶೀತ ಇರುವುದರಿಂದ ಮಲಗಿಕೊಳ್ಳುವುದಕ್ಕೆ ಮಂಚ ಹಾಸಿಗೆ ಇಲ್ಲದೆ ಬಾಣಂತಿಯರಿಗೆ ಮತ್ತು ಖಾಯಿಲೆಯವರಿಗೆ ಬಹಳ ತೊಂದರೆಯಾಗಿದೆ ಆದ್ದರಿಂದ ಇನ್ನೂ ಹೆಚ್ಚಿನ ಹಾಸಿಗೆ ಮತ್ತು ಮಂಚಗಳನ್ನು ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ವೈದ್ಯ ಇಲಾಖೆಗೆ ಬೇಕಾದಷ್ಟು ದುಡ್ಡು ಖರ್ಚುಮಾಡುತ್ತಾ ಇದ್ದೀರಿ. ಆಸ್ಪತ್ರೆಯಲ್ಲಿ ಕೆಲಸಮಾಡತಕ್ಕ ಜವಾನರುಗಳಿಗೆ, ಗುಮಾಸ್ತರುಗಳಿಗೆ, ಬಡ ಉಪಾಧ್ಯಾಯರುಗಳಿಗೆ ಅವರೇನಾದರೂ ಖಾಯಿಲೆ ಬಿದ್ದು ಆಸ್ಪತ್ರೆಗೆ ಬಂದರೆ ಇಂಜಕ್ಷನ್ ಸಿಕ್ಕುವುದಿಲ್ಲ. ಆದ್ದರಿಂದ ಇಂಜಕ್ಷನ್ ಟ್ಯೂಬು ಗಳನ್ನೂ ಸರಬರಾಯಿ ಮಾಡಬೇಕು. ಈರೀತಿ ಮಲೆನಾಡಿನವ ಕಷ್ಟಸುಖ ತಿಳಿದು ಈ ಆಸ್ಪತ್ರೆಗಳ ವಿಷಯದಲ್ಲಿ ಸರ್ಕಾರದವರು ಹೆಚ್ಚಿನನಿಗಾ ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

ಮದರಾಸು ಕಡೆಯಿಂದ ಬರತಕ್ಕ ತಮಿಳರು ಕೂಲಿಯವರು ಯಾರಿದ್ದಾರೆ ಅವರ ಮಕ್ಕಳ ಸ್ಥಿತಿಯನ್ನು ನೋಡುವುದಕ್ಕಾಗುವುದಿಲ್ಲ. ಅವರು ಬಹಳ ಕಷ್ಟಸ್ಥಿತಿಯಲ್ಲಿದ್ದಾರೆ. ಅಂಥವರಿಗಾಗಿಯೇ ಚಿಕ್ಕಮಗಳೂರಿನ ಆಸ್ಪತ್ರೆಯಲ್ಲಿ ಒಂದು ವಾರ್ಡನ್ನು ತೆಗೆದರೆ ಒಳ್ಳೆಯದಾಗುತ್ತದೆ.

ಚಿಕ್ಕಮಗಳೂರಿನ ವಿಷಯ ಮಾತನಾಡುವಾಗ, ಯಾವಾಗಲೂ ಇದು ಸಣ್ಣ ಜಿಲ್ಲೆ ಎಂದು ಹೇಳಿ ಬಹಳ ನಿಕೃಷ್ಟವಾಗಿ ಕಾಣುತ್ತಿದ್ದಾರೋ ಏನೋ ಎಂದು ಅನುಮಾನವಾಗುತ್ತಾ ಇದೆ. ಇದರ ವ್ಯಾಪ್ತಿ ದೊಡ್ಡದುಮಾಡಿ ಎಂದರೆ ಅದನ್ನು ಕೂಡ ಮಾಡುವುದಿಲ್ಲ. ಚಿಕ್ಕಮಗಳೂರು ಜಿಲ್ಲೆ ಆಸ್ಪತ್ರೆಗಳ ವಿಷಯದಲ್ಲಿ ಬಹಳ ಹಿಂದುಳಿದಿದೆ ಇದಕ್ಕೆ ಸರ್ಕಾರದವರು ಹೆಚ್ಚಿನ ನಿಗಾ ಕೊಟ್ಟು ಮಲೆನಾಡಿನ ಜನಗಳಿಗೆ ಸಹಾಯಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀಮತಿ ಬಳ್ಳಾರಿ ಸಿದ್ದಮ್ಮ (ದಾವಣಗೆರೆ).—ಸ್ವಾಮಿ, ಸಭಾಪತಿಗಳೇ, ಆಸ್ಪತ್ರೆ ವಿಚಾರದಲ್ಲಿ ಹೋದ ವರ್ಷ ನಮ್ಮ ಮಾನ್ಯಮಂತ್ರಿಗಳು ಡಾಕ್ಟರ್ ಮೋದಿಯವರಿಗೆ ಒಂದು ಲಕ್ಷ ರೂಪಾಯಿಗಳನ್ನು ಒದಗಿಸಿದ್ದುದು ಬಹಳ ಸಂತೋಷದ ಸಮಾಚಾರ. ಆದರೆ ಈ ಸಾರಿ ಅವರಿಗೆ ಏನೂ ಒದಗಿಲ್ಲ. ಏಕೆ ತೆಗೆದು ಹಾಕಿದ್ದಾರೋ ಏನೋ ಗೊತ್ತಿಲ್ಲ. ಅವರು ಮಾಡುತ್ತಾ ಇರತಕ್ಕ ಸೇವೆಯನ್ನು ಪ್ರಶಂಸೆ ಮಾಡಬೇಕಾದ ಅಗತ್ಯವಿಲ್ಲ. ಏಕೆಂದರೆ ಇಡೀ ದೇಶವೇ ಹೊಗಳುತ್ತಾ ಇದೆ, ಅದನ್ನು ಎಲ್ಲರ ಬಾಯಿಂದಲೂ ನಾವು ಕೇಳಿದ್ದೇವೆ. ಅವರೇ ಬಂದು ಹಣ ಕೇಳಲಿ ಎಂದರೆ ನಿಜವಾಗಿಯೂ ಅವರು ಸ್ವತಃ ಬಂದು ಕೇಳುವವರಲ್ಲ. ಬಡಜನರಿಗೆ ಸಹಾಯ ಮಾಡುವವರು ಎಂದರೆ ಡಾಕ್ಟರ್ ಮೋದಿಯವರು ಎಂದು ಹೇಳಿ ಪ್ರಸಿದ್ಧಿಯಾಗಿದ್ದಾರೆ. ಮತ್ತಿನ್ನಾರೂ ಅಷ್ಟು ಶ್ರದ್ಧೆಯಿಂದ ಕೆಲಸಮಾಡುತ್ತಿರುವುದು ಕಾಣುವುದಿಲ್ಲ. ಅಂತಹವರಿಗೆ ಮಂಜೂರು ಮಾಡಿರುವ ಹಣವನ್ನು ಈ ವರ್ಷ ಏಕೆ ನಿಲ್ಲಿಸಿದ್ದಾರೋ ಗೊತ್ತಿಲ್ಲ. ಆದ್ದರಿಂದ ದಯವಿಟ್ಟು ಹೋದಸಾರಿ ಅವರಿಗೆ ಹಣ ಒದಗಿಸಿದ್ದಂತೆಯೇ ಈ ವರ್ಷವೂ ಒದಗಿಸಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ.

ಮತ್ತೊಂದು ವಿಷಯವೇನೆಂದರೆ ಈ ಹಿಂದೆ ಎರಡು ಮೂರು ಸಾರಿ ಕೇಳಿದ್ದಕ್ಕೆ ದಾವಣಗೆರೆಗೆ ಒಬ್ಬ ಡಾಕ್ಟರನ್ನು ಹಾಕಿದ್ದೀರಿ. ಅದಕ್ಕಾಗಿ ತಮ್ಮನ್ನು ವಂದಿಸುತ್ತೇನೆ. ಆದರೆ ನರ್ಸುಗಳು ಮತ್ತು ಆಯಾಗಳಿಲ್ಲದೆ ಬಹಳ ತೊಂದರೆಯಾಗಿದೆ ಅದನ್ನು ಸರಿಪಡಿಸಬೇಕು. ಇನ್ನೂ ಸ್ವಲ್ಪ ಜನರನ್ನು ಅಲ್ಲಿಗೆ ಹಾಕಬೇಕೆಂದು ಅರಿಕೆಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಚಾರ. ದಾವಣಗೆರೆಯಲ್ಲಿ ನೀರಿಗೆ ಬಹಳ ಅವಸ್ಥೆಯಾಗಿದೆ ; ಯಾವಾಗ ನೋಡಿದರೂ ಸರಿಯಾಗಿ ನೀರು ಸರಬರಾಜಾಗುವುದಿಲ್ಲ. ಒಂದು ಕೊಡ ನೀರು ಸಿಕ್ಕಬೇಕಾದರೂ ಬಹಳ ಕಷ್ಟ. ಜನರು ಇಷ್ಟು ತೊಂದರೆಪಡುತ್ತಾಯಿದ್ದರೂ ಕೂಡ ಯಾರೂ ಗಮನಕ್ಕೆ ತೆಗೆದುಕೊಳ್ಳದೆ ಬಹಳ ಉದಾಸೀನವಾಗಿ ಕಾಣುತ್ತಾ ಇದ್ದಾರೆ. ದಾವಣಗೆರೆ ನೀರಿನ ವ್ಯವಸ್ಥೆಗೆ ಒಂದು ಟ್ಯಾಂಕ್ ಕಟ್ಟಬೇಕಾಗಿದೆ. ಅದಕ್ಕೆ ಬೇಕಾದ ಸಾಮಾನು ಸಪ್ಲೈ ಆಗುವುದಕ್ಕೆ ಇನ್ನೂ ಮೂರು ವರ್ಷ ಆದರೂ ಬೇಕು ಎಂದು ಹೇಳುತ್ತಾರೆ. ಮೂರು ವರ್ಷಗಳವರೆಗೂ ಇದೇ ಪರಿಸ್ಥಿತಿ ನಡೆದುಕೊಂಡು ಹೋಗಬೇಕೇ ಎನ್ನುವುದನ್ನು ತಾವೇ ಆಲೋಚನೆ ಮಾಡಿ. ಆಸ್ಪತ್ರೆಗೆ ಹೋದರೆ ಯಾವಾಗಲೂ ಸ್ವಚ್ಛವಾಗಿರಬೇಕು. ಸ್ವಚ್ಛವಾಗಿಟ್ಟಿರುವುದಕ್ಕೆ ನೀರು ಬೇಕು. ಆ ಆಸ್ಪತ್ರೆಯಲ್ಲಿರುವ ನಲ್ಲಿಗಳಲ್ಲಿ ಒಂದು ತಂಬಿಗೆ ನೀರೂ ಕೂಡ ಬರುವುದಿಲ್ಲ. ಈ ರೀತಿ ಆದರೆ ಅವರೇನು ಮಾಡಬೇಕು ? ಇದಕ್ಕೆ ಸರಿಯಾದ ವ್ಯವಸ್ಥೆ ಮಾಡಿ ನೀರು ಯಾವಾಗಲೂ ಬರುವಹಾಗೆ ಮಾಡದಿದ್ದರೆ ರೋಗಗಳು ಹರಡುವುದಕ್ಕೆ ಇದೇ ಒಂದು ಕಾರಣವಾಗುತ್ತದೆ ಎಂದು ಹೇಳಿ ಕೂಡಲೇ ತಕ್ಕ ವ್ಯವಸ್ಥೆಮಾಡಲು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಅರಿಕೆಮಾಡಿಕೊಳ್ಳುತ್ತೇನೆ.

*ಶ್ರೀ ಎಚ್.ಕೆ. ಸಿದ್ದಯ್ಯ (ಬೇಲೂರು-ಅನುಸೂಚಿತ ಜಾತಿಗಳು).—ಸ್ವಾಮಿ, ಸಕಲೇಶಪುರ ತಾಲ್ಲೂಕು ಕೆಸ್ತೂರಿನಲ್ಲಿ ಡಾಕ್ಟರು ಇಲ್ಲದೆ ಜನರು ಬಹಳವಾಗಿ ಪೇಚಾಡುತ್ತಾ ಇದ್ದಾರೆ. ಅಲ್ಲಿಗೆ ಜಾಗ್ರತೆ ಡಾಕ್ಟರನ್ನು ಕಳುಹಿಸಿಕೊಡಬೇಕೆಂದು ಹೇಳುತ್ತೇನೆ. ಈ ಆಸ್ಪತ್ರೆಗಳಿಗೆ ಇಂಜಕ್ಷನ್ ಟ್ಯೂಬುಗಳು ವಗೈರೆ ಇಷ್ಟಿಷ್ಟು ಪ್ರಮಾಣದಲ್ಲಿ ಸರಬರಾಯಿ ಮಾಡಬೇಕೆಂದು

(ಎಚ್. ಕೆ. ಸಿದ್ದಯ್ಯ.)

ನಿಗದಿಯಾಗಿದೆ. ಮತ್ತು ಅವುಗಳನ್ನು ಬಡವರಿಗೆ ಮುಫತ್ತಾಗಿ ಕೊಡಬೇಕೆಂದಿದೆ. ಆದರೆ ಕೆಲವು ಆಸ್ಪತ್ರೆಗಳಲ್ಲಿ ಇವುಗಳು ಬಡವರಿಗೆ ಸಿಕ್ಕದೇ ಅವರೇ ದುಡ್ಡುಕೊಟ್ಟು ತೆಗೆದುಕೊಂಡು ಬರಬೇಕೆಂದು ಹೇಳುತ್ತಾ ಇದ್ದಾರೆ. ಇದನ್ನು ಸರ್ಕಾರದವರು ಕೂಡಲೆ ಪರಿಶೀಲನೆಮಾಡಿ, ಹಾಗೇನಾದರೂ ಲೋಪ ದೋಷಗಳು ನಡೆಯುತ್ತಾ ಇದ್ದರೆ ಅದನ್ನು ಸರಿಪಡಿಸ ಬೇಕೆಂದು ಪ್ರಾರ್ಥಿಸುತ್ತೇನೆ.

ಇನ್ನೊಂದು ವಿಷಯ. ಎಸ್ಲೂರಿನಲ್ಲಿ ಒಂದು ಆಸ್ಪತ್ರೆ ಇದೆ. ಈ ಆಸ್ಪತ್ರೆಯಲ್ಲಿ ಖಾಯಿಲೆಯವರು ಬಂದರೆ ಕುಳಿತುಕೊಳ್ಳುವುದಕ್ಕೆ ಸ್ಥಳವಸತಿಯನ್ನು ಕಲ್ಪಿಸಿದ್ದೀರಿ. ಆದರೆ ಅದು ಸಾಲದು. ಮತ್ತು ಇನ್ನೂ 8-10 ಹಾಸಿಗೆಗಳನ್ನು ಜಾಸ್ತಿಯಾಗಿ ಹಾಕ ಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಹಾಸನ ಡಿಸ್ಟ್ರಿಕ್ಟಿನ ಅನೇಕ ಪ್ರದೇಶಗಳಲ್ಲಿ ಆಸ್ಪತ್ರೆ ಗಳಿಲ್ಲದೆ ಬಹಳ ತೊಂದರೆಯಾಗಿದೆ. ಎಲ್ಲಿ ತೊಂದರೆ ಇದೆ ಎಂದು ತಮಗೆ ಮನವಿಗಳು ಬರುತ್ತವೆಯೋ ಆ ಪ್ರದೇಶಗಳಿಗೆ ಆದಷ್ಟು ಜಾಗ್ರತೆ ಆಸ್ಪತ್ರೆ ಸೌಕರ್ಯ ವನ್ನೊದಗಿಸಿ ಆ ತೊಂದರೆ ನಿವಾರಣೆ ಮಾಡಬೇಕೆಂದು ಹೇಳುತ್ತೇನೆ. ಹಾಸನದ ಜನರಲ್ ಆಸ್ಪತ್ರೆಯಲ್ಲಿರ ತಕ್ಕ ಡಾಕ್ಟರುಗಳು ಬಹಳ ಚೆನ್ನಾಗಿ ಕೆಲಸಮಾಡುತ್ತಾ ಇರುತ್ತಾರೆ. ಅವರ ವಿಚಾರದಲ್ಲಿ ತೆಗಳಬೇಕಾದ ವಿಷಯವೇನೂ ಇಲ್ಲ. ಆದರೆ ಆಸ್ಪತ್ರೆಗೆ ಬೇಕಾದ ಇನ್ನು ಅನೇಕ ಸೌಕರ್ಯಗಳು ಸಾಲದಾಗಿವೆ. ಆದ್ದ ರಿಂದ ಸರ್ಕಾರದವರು ಹಾಸನದ ಡಿಸ್ಟ್ರಿಕ್ಟ್ ಆಸ್ಪತ್ರೆ, ಸಕಲೇಶಪುರದ ಆಸ್ಪತ್ರೆ ಮತ್ತು ಬೇಲೂರು ಆಸ್ಪತ್ರೆ ಗಳಿಗೆ ಇನ್ನೂ ಹೆಚ್ಚಿನ ಹಾಸಿಗೆಗಳನ್ನು ಮತ್ತು ಇತರ ಉಪಕರಣಗಳನ್ನು ಒದಗಿಸಿಕೊಡಬೇಕೆಂದು ಈ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

1-30 P.M.

ಶ್ರೀ ವಿ. ಆರ್. ನಾಯ್ಡು (ಮಲ್ಲೇಶ್ವರಂ).—ಸಂಸ್ಥಾನದಲ್ಲಿರುವ ಎಲ್ಲಾ ಆಸ್ಪತ್ರೆಗಳಲ್ಲೂ ಜವಾನರುಗಳ ಸಂಬಳ ಎಷ್ಟು ಎಂದರೆ, ಇಡೀ ಮೈಸೂರು ದೇಶದಲ್ಲೇ ಅವರಷ್ಟು ಕಡಮೆ ತೆಗೆದುಕೊಳ್ಳುವವರಿಲ್ಲವೆಂದರೆ ಎಲ್ಲರೂ ಒಪ್ಪಿ ಕೊಳ್ಳಬೇಕಾದ್ದೆ. ಅವರ ಕೆಲಸದಲ್ಲಿ ಮಟ್ಟಿಗೆ ಯಾವ ರೀತಿಯಾದ ನಿಯಮಗಳೂ ಇಲ್ಲ. ಕೆಲಸಕ್ಕೆ ಕಾಲ ನಿಗದಿಯೆಂಬುದಿದ್ದರೂ ಅದರ ಪ್ರಕಾರ ನಡೆಯು ವುದಕ್ಕೂ ಆಗುವುದಿಲ್ಲ. ಏಕೆಂದರೆ ರೋಗಿಗಳ ಸೇವೆ ಯಲ್ಲಿ ಅವರು ಸರ್ವದಾನಿರತರಾಗಿರಬೇಕಾಗುತ್ತದೆ. ರೋಗಿಗಳ ಸೇವೆಯೆಂದರೆ ಮಾನವನು ಮಾಡುವ ಸೇವೆಗಳಲ್ಲಿ ಬಹಳ ದೊಡ್ಡಸೇವೆ. ಅದಕ್ಕಿಂತ ಹೆಚ್ಚಿನ ಸೇವೆ ಯಾವುದೂ ಇಲ್ಲ. ಆದ್ದರಿಂದ ಸರ್ಕಾರದವರು ಇಂಥ ಸೇವೆಯಲ್ಲಿ ನಿರತವಾಗಿರುವವರಿಗೆ ಹೆಚ್ಚಿನ ಸಹಾಯ ಮಾಡಬೇಕು. ಆಸ್ಪತ್ರೆಯಲ್ಲಿ ಪರಿಶುದ್ಧ ವಾಗಿರಬೇಕೆಂದು ಹೇಳುತ್ತಾರೆ. ಆದರೆ ಇವರಿಗೆ ಕೊಡುವುದು ಒಂದು ಜೊತೆ ಬಟ್ಟೆ ನೈರ್ಮಲ್ಯದ ದೃಷ್ಟಿಯಿಂದಲಾದರೂ ಅವರಿಗೆ ಇನ್ನೊಂದು ಜೊತೆ ಬಟ್ಟೆ ಕೊಡಬೇಕು. ಬೇರೆ ಎಲ್ಲಾ ಕಡೆಗಳಲ್ಲೂ ಅದೇ ರೀತಿ ಕೊಡುತ್ತಿದ್ದಾರೆ. Ward Boysಗೂ ಹಾಗೆಯೇ ಒಂದು ಜೊತೆ ಬಟ್ಟೆ. ಕೊಡಬೇಕು. ಮೇಲಾಗಿ ಅವರ ಮಕ್ಕಳಿಗೆ ಉಚಿತ ವಿದ್ಯಾಸೌಕರ್ಯ ವನ್ನೊದಗಿಸುವುದು ಅಗತ್ಯ.

ಇನ್ನೊಂದು ವಿಷಾದಕರ ವಿಷಯವೇನೆಂದರೆ, ಬೆಳ್ಳ ಗಿರುವ ನರ್ಸ್‌ಗಳಿಗೆ ಸಂಬಳ ಜಾಸ್ತಿಯಂತೆಯೂ ಕಪ್ಪಗಿರುವ ನರ್ಸ್‌ಗಳಿಗೆ ಸಂಬಳ ಕಮ್ಮಿಯಂತೆಯೂ ಮಾಡಿದ್ದಾರೆ. ಏಕೆ ಹೀಗೆ ಕಡಮೆ ಮಾಡಿದ್ದಾರೋ ಅರ್ಥವಾಗುವುದಿಲ್ಲ. ನಿನ್ನೆ ತಾವೇನೋ ಒಂದು ವಿಧದಲ್ಲಿ ನನಗೆ ಸಮಾಧಾನವಾಗುವ ರೀತಿಯಲ್ಲಿ ಒಂದು ಉತ್ತರ ಕೊಟ್ಟಿರಿ. ಆದರೆ ಒಂದು ವಿಷಯ ತಾವು ಯೋಚನೆ ಮಾಡಬೇಕು. ನಾನೀಗ ಸ್ವಲ್ಪ ಬೆಳ್ಳಗೆ ಇದ್ದೇನೆ, ತಾವು ಸ್ವಲ್ಪ ಕಪ್ಪಗಿದ್ದೀರಿ. ತಾವು ಕಪ್ಪಾಗಿರುವ ಮಾತ್ರಕ್ಕೆ Cabinet ನಲ್ಲಿ ಕಮ್ಮಿ ಸಂಬಳ ತಮಗೆ ಕೊಡುತ್ತಾರೆಯೇ? ಆದ್ದರಿಂದ ನಾನು ತಮ್ಮ ಗಮನಕ್ಕೆ ತರುವುದು ತಾವಿದನ್ನು ಸ್ವಲ್ಪ ಕೂಲಂಕಷವಾಗಿ ಪರಿಶೀಲಿಸಬೇಕು. 'ನಿನ್ನೆ ಯಲ್ಲಾ ಕಪ್ಪಗಿರುವ ನರ್ಸ್‌ಗಳೆಲ್ಲಾ ಮರದಕೆಳಗೆ ಕುಳಿತು ಅತ್ತಿದ್ದಾರೆ, ತಾವು ಕಪ್ಪಾಗಿ ಹುಟ್ಟಿದ್ದೇ ತಪ್ಪಾಯಿತೇ? ಎಂದು. ತಾವು ದಯವಿಟ್ಟು ಚರ್ಮದ ಮೇಲೆ ಸಂಬಳವನ್ನು ನಿಗದಿಮಾಡುವುದಕ್ಕೆ ಹೋಗ ಬೇಡಿ. ಬೆಳ್ಳಗಿರಲಿ, ಕಪ್ಪಗಿರಲಿ ಎಲ್ಲರಿಗೂ ಒಂದೇ ರೀತಿಯಲ್ಲಿ ಸಂಬಳ ಕೊಡಿ. ಆಂಗ್ಲೋ ಇಂಡಿಯನ್ ಜಾತಿಯವರೆಂದು ಹೆಚ್ಚಿಗೆ ಕೊಡುವುದು ಉಚಿತವಲ್ಲ.

ನಮ್ಮ ದೇಶದಲ್ಲಿ ಬೌರಿಂಗ್ ಆಸ್ಪತ್ರೆ, ಸ್ಯಾನಿಟೋರಿ ಯಂ ಆಸ್ಪತ್ರೆ ಹಾಗೂ ವಿಕ್ಟೋರಿಯಾ ಆಸ್ಪತ್ರೆಯ ಮೆಡಿಕಲ್ ಆಫೀಸರುಗಳು ನಿಜವಾಗಿಯೂ ರೋಗಿಗಳ ವಿಷಯದಲ್ಲಿ ಉತ್ತಮಸೇವೆ ಸಲ್ಲಿಸುತ್ತಿದ್ದಾರೆ. ಅವ ರೆಲ್ಲರಿಗಿಂತ ಹೆಚ್ಚಾಗಿ ಇಲಾಖಾ ಡೈರೆಕ್ಟರಾದ ಪೂಜ್ಯ ಡಾ॥ ವೆಂಕಟಸುಬ್ಬರಾಯರು ರೋಗಿಗಳಿಗಾಗಿ ಶ್ರಮಿಸುತ್ತಿದ್ದಾರೆಂದರೆ ತಪ್ಪಲ್ಲ. ಆದರೆ ಇವಿಷ್ಟ ರಿಂದಲೇ ರೋಗಿಗಳ ಕಷ್ಟನಿವಾರಣೆಯಾದಂತಾಗು ವುದಿಲ್ಲ. ರೋಗಿಗಳು ಬಂದವರಿಗೆಲ್ಲಾ ಇಂಜಕ್ಷನ್ ಟ್ಯೂಬುಗಳನ್ನು ಬರೆದುಕೊಟ್ಟು ಬಿಟ್ಟರೆ ಆಯಿತೇ? ಆ ಬಡರೋಗಿಗಳು ಎಲ್ಲಿಂದ ತಂದುಕೊಡುವುದು, ಸರ್ಕಾರದವರು ಆಸ್ಪತ್ರೆಗಳಿಗೆ ಲಕ್ಷಾಂತರ ರೂಪಾಯಿ ಗಳ ಗ್ರಾಂಟನ್ನು ಏಕೆ ಕೊಡುತ್ತಿದ್ದಾರೆ? ಇತ್ತೀಚೆಗೆ ಆಸ್ಪತ್ರೆಗಳಲ್ಲಿ ಕೆಲವು ಜನಸೇರಿಕೊಂಡು ಯಾವ ಔಷಧಿಗಳೂ ಸಹ ನಿಜವಾಗಿ ಯಾವ patientsಗೆ ಸಲ್ಲಬೇಕೋ ಅವರಿಗೆ ಸಲ್ಲದಂತಾಗಿದೆ. ಶ್ರೀಮಂತ ರೋಗಿಗಳಿಗಾದರೋ ಉಚಿತವಾಗಿ ಎಲ್ಲವೂ ಸಿಕ್ಕು ತ್ತದೆ, ಬಡರೋಗಿಗಳನ್ನು ಕೇಳುವವರಿಲ್ಲ. ಈ ಬಗ್ಗೆ ಸರ್ಕಾರದವರು ಗಮನಕೊಡಬೇಕೆಂದು ಹೇಳು ತ್ತೇನೆ.

ಕೊನೆಯದಾಗಿ, ಮಲ್ಲೇಶ್ವರ ಬಡಾವಣೆಯಲ್ಲಿ ಒಂದು ಜನರಲ್ ಆಸ್ಪತ್ರೆ ಅಗತ್ಯವಾಗಿ ಆಗಬೇಕಾ ಗಿದೆ. ಹೆಚ್ಚು ಜನ ಕಾರ್ಮಿಕರು ಆ ಭಾಗದಲ್ಲಿ ವಾಸ ಮಾಡುತ್ತಿದ್ದಾರೆ. ಸರ್ಕಾರದವರು ಈ ಬೇಡಿಕೆಯನ್ನು ಮನ್ನಿಸುತ್ತಾರೆಂದು ನಂಬಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಜಿ. ಬಸಪ್ಪ (ಹೊಸದುರ್ಗ).—ಅಧ್ಯಕ್ಷರೇ, ಈಗ ನಮ್ಮ ಮುಂದಿರತಕ್ಕ ಡಿಮ್ಯಾಂಡಿನ ಸಂಬಂಧ ದಲ್ಲಿ ನಮ್ಮ ತಾಲ್ಲೂಕಿಗೆ ಸಂಬಂಧಪಟ್ಟಂತೆ ಒಂದೆ ರಡು ವಿಷಯಗಳನ್ನು ಮಾತ್ರ ನಾನು ಹೇಳಲಿಚ್ಛಿಸು ತ್ತೇನೆ. ಹೊಸದುರ್ಗ ತಾಲ್ಲೂಕಿನಲ್ಲಿ ಅನೇಕ ಗ್ರಾಮಗಳಲ್ಲಿ—ಕೆರೆಯ ಆಸರೆಯ ಗ್ರಾಮಗಳಲ್ಲಿ ಮಲೇರಿಯಾ ಹಾವಳಿ ಹೆಚ್ಚಾಗಿದ್ದು ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರ ಗಮನಕ್ಕೆ ತಂದರೂ ಅವರು ಯಾವ ಪರಿಶೀಲನೆಯನ್ನೂ ಮಾಡದೆ ಯಾವ ಕಾರ್ಯ ಕ್ರಮವನ್ನೂ ಕೈಗೊಂಡಿಲ್ಲ. ಆದ್ದರಿಂದ ಕೆರೆಯ ಆಸರೆ ಎಲ್ಲೆಲ್ಲಿದೆಯೋ ಅಲ್ಲಾದರೂ ಕೂಡ ಕೂಡಲೇ D.D.T. spray ಕೆಲಸವನ್ನು ಕೈಕೊಳ್ಳಬೇಕೆಂದ ನಾನು ಹೇಳುತ್ತೇನೆ.

ಎರಡನೆಯದಾಗಿ ಹೊಸದುರ್ಗ ಟೌನ್ ಪ್ರದೇಶದ ಎಲ್.ಎಫ್. ಡಿಸ್ಪೆನ್ಸರಿ ಮತ್ತು ಮೆಟರ್ನಿಟಿ ಆಸ್ಪತ್ರೆಯಲ್ಲಿ ರೋಗಿಗಳಿಗೆ ವಸತಿ ಸೌಕರ್ಯವಿಲ್ಲದೆ ಬಹಳ ತೊಂದರೆಯಾಗಿದೆ. ರೋಗಿಗಳಿಗೆ ಅನುಕೂಲವಾಗಲೆಂದು ಹೇಳಿ ಯಾರೋ ಮಹಾತ್ಮರು ಒಂದು ವಾರ್ಡನ್ನು ಕಟ್ಟಿಕೊಟ್ಟಿದ್ದರೆ ಸರ್ಕಾರದವರು ಅದನ್ನಾದರೂ ಉಪಯೋಗಿಸಿಕೊಳ್ಳುವ ಯೋಚನೆಮಾಡಿಲ್ಲ. ಪುಣ್ಯಾತ್ಮರು ವಾರ್ಡ್ ಕಟ್ಟಿಸಿಕೊಟ್ಟರಲ್ಲ ಎಂದು ತೃಪ್ತಿಪಡದೆ, ಈಗ ಅವರನ್ನೇ ಅದರ ಬಗ್ಗೆ ಆಗುವ ಲೈಟಿಂಗ್ ಚಾರ್ಜನ್ನೂ ವಹಿಸಿಕೊಳ್ಳಬೇಕೆಂದು ಸರ್ಕಾರದವರು ಹೇಳುತ್ತಾ, ಈಗ ಆ ವಾರ್ಡನ್ನು ಉಪಯೋಗಿಸುತ್ತಿಲ್ಲ. ಸರ್ಕಾರದವರು ದಯವಿಟ್ಟು Recurring lighting ಚಾರ್ಜನ್ನು ವಹಿಸಿಕೊಳ್ಳಬೇಕೆಂದು ನಾನು ಸೂಚಿಸುತ್ತೇನೆ. ಇದುವರೆಗೂ ಸರ್ಕಾರದವರು ಇದಕ್ಕೊಪ್ಪದೇ ದಾನಿಗಳಾದ ನಾಗಪ್ಪಶೆಟ್ಟರೇ ಅದನ್ನೂ ವಹಿಸಿಕೊಳ್ಳಬೇಕೆಂದು ಹೇಳಿದುದರಮೇಲೆ, ಅವರು ಏನೂ action ತೆಗೆದುಕೊಳ್ಳದ ಕಾರಣ ಈಗ ಆ ವಾರ್ಡ್ ಉಪಯೋಗವಿಲ್ಲದೆ ನಿಂತಿದೆ. ಇವರ ಹಾಗೆಯೇ ಇನ್ನೊಬ್ಬರು ದಾನಿಗಳು ನಾಲ್ಕೈದು ಸಾವಿರ ರೂಪಾಯಿಗಳನ್ನು ಕೊಟ್ಟು ಆಸ್ಪತ್ರೆಯ ಕಟ್ಟಡಕ್ಕೆ ಸಹಾಯ ಮಾಡಲು ಮುಂದೆ ಬಂದಿದ್ದರು. ಅವರನ್ನು ಹಾಸಿಗೆ, ಮಂಚಗಳನ್ನು ಹೊಂದಿಸಿಕೊಡಬೇಕೆಂದು ಹೇಳಿದ್ದರಮೇಲೆ ಅದೂ ಹಾಗೆಯೇ ನಿಂತಿದೆ. ಇಂಥದನ್ನೆಲ್ಲಾ ಪರಿಶೀಲನೆಮಾಡಿ ಬೇಗ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ).—ಶಿವಮೊಗ್ಗ ಜಿಲ್ಲೆಗೆ ಸಂಬಂಧಪಟ್ಟಹಾಗೆ ಹೋದಸಾರಿ ಅರಿಕೆಮಾಡಿಕೊಂಡು 18 ಆಸ್ಪತ್ರೆಗಳಲ್ಲಿ ಡಾಕ್ಟರುಗಳಿಲ್ಲವೆಂದು ಹೇಳಿ ಒಂದು ವರ್ಷ ಕಾದು ನೋಡಲಾಗಿದೆ. ಮೊನ್ನೆ ಮೊನ್ನೆಯೇನೋ ಒಂದು ತಿಂಗಳ ಹಿಂದೆ 9 ಜನ ಡಾಕ್ಟರುಗಳನ್ನು post ಮಾಡಿದೆಯೆಂದು ಡಿ.ಎಂ.ಓ.ರವರು ಹೇಳಿದರು. ಆದರೆ, ಇದುವರೆಗೂ ಅವರೊಬ್ಬರೂ ಬಂದಿಲ್ಲ. ಒಂದು ವರ್ಷವಾದರೂ ಅನೇಕ ಆಸ್ಪತ್ರೆಗಳಲ್ಲಿ ಡಾಕ್ಟರುಗಳಿಲ್ಲ! ಕಾಂಪೌಂಡರುಗಳಿಲ್ಲ ಎಂದರೆ ಹೇಗೆ? ಅಲ್ಲಿನ ಸ್ಥಿತಿ, ಆಸ್ಪತ್ರೆಯಿದೆ, ಡಾಕ್ಟರುಗಳಿಲ್ಲ—ಹೀಗಾಗಿದೆ. ಆದ್ದರಿಂದ ಮಲೆನಾಡು ಸರ್ವಿಸ್ ಎನ್ನುವುದನ್ನು ಪ್ರತಿಯೊಬ್ಬ ಡಾಕ್ಟರಿಗೂ ಐದು ವರ್ಷವಾದರೂ ಕಡ್ಡಾಯವಾಗಿರಬೇಕೆಂದು ಮಾಡಿದರೆ ಡಾಕ್ಟರುಗಳು ಬಂದೇ ಬರುತ್ತಾರೆ.

ಇನ್ನೊಂದು ನ್ಯೂನತೆಯಿದೆ ಈ ಮಲೆನಾಡಿನ ಆಸ್ಪತ್ರೆಗಳಲ್ಲಿ. ಕೆಲವುಕಡೆ ಆಸ್ಪತ್ರೆಗಳಲ್ಲಿ ಒಳ್ಳೆಯ ಡಾಕ್ಟರುಗಳಿರುತ್ತಾರೆ. ಅವರು ಅಲ್ಲಿ ಸಂತೋಷವಾಗಿ ಕೆಲಸಮಾಡುತ್ತೇವೆಂದು ಹೇಳಿದರೂ ವಿನಾ ಕಾರಣ ಅವರನ್ನು ವರ್ಗಾಮಾಡುತ್ತಾರೆ. ತಾವು ಮಲೆನಾಡಿನಲ್ಲೇ ಇರುತ್ತೇವೆಂದರೂ ಬೇಕೆಂತಲೇ ಮದ್ದೂರಿಗೋ ಕೋಲಾರಕ್ಕೋ ವರ್ಗಾಮಾಡುತ್ತಾರೆ.

ಒಬ್ಬ ಸದಸ್ಯರು.—ಹಾಗಾದರೆ ಇರತಕ್ಕ ರೂಲ್ಸನ್ನು ಬದಲಾಯಿಸಬೇಕೆಂದು ಹೇಳುತ್ತೀರಾ?

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ರೂಲನ್ನು ಬದಲಾಯಿಸುವ ಪ್ರಶ್ನೆಯಿಲ್ಲ. ಜನರೇ ಬರದೆ ಇರುವಾಗ ಇರುವ ಡಾಕ್ಟರುಗಳನ್ನೂ ವರ್ಗಾಯಿಸಿ ಯಾರೂ ಇಲ್ಲದಂತೆ ಮಾಡುವುದು ಸರಿಯಲ್ಲ. ಹಾಲಿ ಇರುವ ಆಸ್ಪತ್ರೆಗಳಲ್ಲೇ 15 ಕಡೆಗಳಲ್ಲಿ ಡಾಕ್ಟರುಗಳಿಲ್ಲವೆಂದು ಹೇಳುವಾಗ, ಇರುವ ಆಸ್ಪತ್ರೆಗಳ ಡಾಕ್ಟರುಗಳನ್ನೂ ಹೊರಗೆ ಕಳುಹಿಸುವುದು ಇನ್ನೂ ಕಷ್ಟವನ್ನುಂಟುಮಾಡುತ್ತದೆ. ಈ ಕಷ್ಟದ ನಿವಾರಣೆಗಾಗಿ ಮಲೆನಾಡಿನ ವಿದ್ಯಾರ್ಥಿಗಳಿಗೆ ಇನ್ನೂ ಹೆಚ್ಚಿನ ಸ್ಥಾನಗಳನ್ನು ಮೆಡಿಕಲ್ ಕಾಲೇಜುಗಳಲ್ಲಿ ಕೊಡಲಿ ಎಂದು ಕೇಳಿಕೊಂಡರೆ ಒಂದು ವರ್ಷಕ್ಕೆ ಇಬ್ಬರು-ಮೂವರು ವಿದ್ಯಾರ್ಥಿಗಳಿಗೂ ಸಿಕ್ಕುತ್ತಿಲ್ಲ. ಜೊತೆಗೆ ಮಲೆನಾಡಿನವರಾಗಿ ಶಿಕ್ಷಣ ಪಡೆದ ಹಲಕೆಲವು ಜನರನ್ನು ಇಲ್ಲಿ ಬೆಂಗಳೂರಿನಲ್ಲಿ ಸೇವೆಮಾಡುವುದಕ್ಕೆ ಹಾಕಿದ್ದೀರಿ. ಅಂಥವರಿಗೆ ವರ್ಗಾಮಾಡಿದರೆ ಅವರು ಮಲೆನಾಡಿನಲ್ಲಿ ಕೆಲಸಮಾಡುವುದಕ್ಕೆ ಸಿದ್ಧವಾಗಿದ್ದಾರೆ. ಆದ್ದರಿಂದ ಸರ್ಕಾರದವರು ದಯವಿಟ್ಟು ಮಲೆನಾಡಿನವರಾಗಿ ಶಿಕ್ಷಣ ಪಡೆದಿರುವವರು ಯಾರಾದರೂ ತಮ್ಮ ಮಲೆನಾಡಿಗೆ ವರ್ಗಮಾಡಬೇಕೆಂದು ಕೇಳಿದರೆ ಅವರನ್ನು ವರ್ಗಮಾಡಿಕೊಡಬೇಕೆಂದು ಹೇಳುತ್ತೇನೆ.

ಬೆಂಗಳೂರು ನಗರವು ಅನೇಕ ಕಾರ್ಖಾನೆಗಳ ಕೇಂದ್ರ. ಹೀಗಿರುವ ಮೈಸೂರಿನ ಶಾಂತಿ ವಾತಾವರಣದಿಂದ, ವಿದ್ಯಾಭ್ಯಾಸಕ್ಕೆ ಅನುಕೂಲವಾಗಿರುವ ಸ್ಥಳದಿಂದ ಆಯುರ್ವೇದ ಕಾಲೇಜನ್ನು ಬೆಂಗಳೂರಿಗೆ ವರ್ಗಾಯಿಸುವುದು ಸರಿಯಲ್ಲ. ಅಲ್ಲದೆ ಎಲ್ಲಾ ಇನ್ಸ್ಟಿಟ್ಯೂಷನ್‌ಗಳು, ವಿದ್ಯಾ ಸಂಸ್ಥೆಗಳು ಮತ್ತು ಕಾರ್ಖಾನೆಗಳನ್ನೂ ಬೆಂಗಳೂರಿನಲ್ಲಿಯೇ concentrate ಮಾಡುವ ಪದ್ಧತಿಯೂ ಸರ್ವಥಾ ಸರಿಯಲ್ಲ. ಮುಖ್ಯವಾಗಿ ಮೈಸೂರಿನಲ್ಲಿ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕೆ ಒಳ್ಳೆಯ ವಾತಾವರಣವಿದೆ. ಹೆಚ್ಚಿನ ವ್ಯಾಮೋಹವಿರುವುದಿಲ್ಲ. ಬೆಂಗಳೂರಿನಲ್ಲಾದರೋ 35-40 ಸಿನಿಮಾ ಕೇಂದ್ರಗಳಿರುವುದರಿಂದ ವಿದ್ಯಾರ್ಥಿಗಳಿಗೆ ಸಿನಿಮಾಗಳ ಕಡೆ ಆಕರ್ಷಣೆ ಹೆಚ್ಚು. ಈ ಕಾರಣ, ಆಯುರ್ವೇದ ಕಾಲೇಜು ಮೈಸೂರಿನಲ್ಲಿರುವುದೇ ಉತ್ತಮ. ಹಾಗೂ ತಮಗೆ ಕಾಲೇಜನ್ನು upgrade ಮಾಡಬೇಕೆಂದು ಇಷ್ಟವಿದ್ದರೆ, ಇಲ್ಲಿ ಇನ್ನೊಂದು ಆಯುರ್ವೇದ ಕಾಲೇಜನ್ನು ಏರ್ಪಾಡುಮಾಡಿ. ಅಷ್ಟೇ ಹೊರತು ಮೈಸೂರಿನಲ್ಲಿ ಅನೇಕ ವರ್ಷಗಳಿಂದ ಇರುವುದನ್ನು ಬದಲಾಯಿಸುವುದು ಸರಿಯಲ್ಲ. ಆದ್ದರಿಂದ ಅಲ್ಲಿರುವ ಕಾಲೇಜನ್ನು ಅಲ್ಲಿಯೆ ಇಟ್ಟು, ಬೆಂಗಳೂರಿನಲ್ಲಿ ಅವಶ್ಯಕವಿದ್ದರೆ ಇನ್ನೊಂದು ಕಾಲೇಜನ್ನು ಪ್ರಾರಂಭಿಸಬಹುದೆಂದು ಹೇಳುತ್ತೇನೆ.

ವಿದ್ಯಾರ್ಥಿಗಳ ಸಂಖ್ಯೆಯನ್ನೇನಾದರೂ ಅಷ್ಟು ಹೆಚ್ಚು ಮಾಡುವುದಕ್ಕವಕಾಶವಿಲ್ಲವೆಂದು ಹೇಳುವುದಾದರೆ ಅಲ್ಲಿ 50 ಜನರಿಗೋ ನೂರು ಜನರಿಗೊ ಮಾತ್ರ ಅವಕಾಶ ಮಾಡಲಿ, ಅವರು ಅಲ್ಲಿ ಶಿಕ್ಷಣಪಡೆಯಲಿ, ಇನ್ನು ಮಿಕ್ಕವರು ಬೆಂಗಳೂರಿನಲ್ಲಿ ಪಡೆಯಲಿ, ಅಲ್ಲಿರುವುದನ್ನುಪಯೋಗಿಸಿಕೊಂಡು ಅಲ್ಲೇ ಮುಂದುವರಿಸಿ ಇಲ್ಲಿ ಬೇರೊಂದು ಕಾಲೇಜನ್ನು ಮಾಡಿ ಎಂದು ಸಲಹೆ ಮಾಡುತ್ತೇನೆ.

ಶಿವಮೊಗ್ಗ ಜಿಲ್ಲೆಯಲ್ಲಿ ಆಯನೂರು, ಹೊಳಲೂರು ಗ್ರಾಮಗಳಿಗೆ ಹತ್ತಾರು ಮೈಲಿ ಸುತ್ತಮುತ್ತ ವೈದ್ಯಸಹಾಯ ದೊರಕುತ್ತಿಲ್ಲ. ಹತ್ತು ಸಾವಿರ ರೂಪಾಯಿ ಬೆಲೆ ಬಾಳುವ ಕಟ್ಟಡವನ್ನು ಆಯನೂರು ಗ್ರಾಮದವರು ಕೊಟ್ಟಿದ್ದಾರೆ ಮತ್ತು ಅಲ್ಲಿ ಹೆಲ್ತ್ ಸೆಂಟರ್ ಏರ್ಪಾಡುಮಾಡಿ ಎಂದು ನಾಲ್ಕೈದು ವರ್ಷಗಳಿಂದಲೂ ಕೇಳುತ್ತಿದ್ದಾರೆ. ಈ ಗ್ರಾಮಗಳಿಗೆ ಹೆಲ್ತ್ ಸೆಂಟರ್ ಏರ್ಪಾಡುಮಾಡಿ ಈ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಕೆ. ವಿ. ಬೈರೇಗೌಡ (ಬೆಂಗಳೂರು—ಉತ್ತರ).—ಸ್ವಾಮಿ, ಸಂಸ್ಥಾನದ ಎಲ್ಲ ಜನರಿಗೂ ವೈದ್ಯಸಹಾಯ ಕೊಡಬೇಕಾದುದು ಸರ್ಕಾರದ ಜವಾಬ್ದಾರಿ. ಜನತೆಯಲ್ಲಿ ಶ್ರೀಮಂತರಾಗಲಿ, ಬಡವರಾಗಲಿ ಅವರಿಗೆ ಆರೋಗ್ಯ ಮುಖ್ಯ. ಬೆಂಗಳೂರಿನ ಸುತ್ತಮುತ್ತಿನ ಕೈಗಾರಿಕೆ ಕೇಂದ್ರಗಳು ಹೆಚ್ಚುತ್ತಿವೆ. ಇದರ

(ಶ್ರೀ ಕೆ. ವಿ. ಬೈರೆಗೌಡ)

ಪರಿಣಾಮವಾಗಿ ಆರೋಗ್ಯದ ಕಡೆ ಹೆಚ್ಚು ಗಮನ ಕೊಡಬೇಕಾದುದು ಅಗತ್ಯ. ಬೆಂಗಳೂರು ನಗರದೊಳಗೆ ಕಾರ್ಪೊರೇಷನವರು ಹೆಚ್ಚಿನ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದರ ಪರಿಣಾಮವಾಗಿ ಇಲ್ಲಿ ಆರೋಗ್ಯ ಉತ್ತಮವಾಗಿದ್ದರೂ ನಗರದ ಸುತ್ತಮುತ್ತ ಹತ್ತು ಮೈಲಿ ಪ್ರದೇಶದಲ್ಲಿ ಇದೇರೀತಿ ಕ್ರಮಗಳನ್ನು ತೆಗೆದುಕೊಳ್ಳದೇ ಹೋದರೆ ರೋಗಗಳು ಹರಡಿ ಎಷ್ಟು ಹಣವನ್ನು ಖರ್ಚುಮಾಡಿದರೂ ಪ್ರಯೋಜನವಿಲ್ಲದಂತಾಗುತ್ತದೆ. ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಅನೇಕ ಗ್ರಾಮಗಳಿವೆ. ಅಲ್ಲಿ ದೇವರ ಜೀವನಹಳ್ಳಿ ಎಂಬ ಗ್ರಾಮವಿದೆ. ಅದನ್ನು ಮಂತ್ರಿಗಳು ನೋಡಿದ್ದಾರೆ. ಅಲ್ಲಿರುವ ಟ್ಯಾನರಿಯ ಬಳಿ ಜನ ಸಂಖ್ಯೆಯ ಒತ್ತಡ ಹೆಚ್ಚಾಗಿ ಆರೋಗ್ಯ ವ್ಯವಸ್ಥೆಯಿಲ್ಲದೆ ಅದೊಂದು ನರಕವಾಗಿದೆ. ಅಲ್ಲಿನ ಜನ ಹೇಗೆ ಜೀವನ ಮಾಡುತ್ತಿದ್ದಾರೆಂಬುದನ್ನು ಯಾರು ನೋಡಿದರೂ ನೊಂದುಕೊಳ್ಳುತ್ತಾರೆ. ಆ ಟ್ಯಾನರಿಯನ್ನು ಸರಿಯಾಗಿ ವ್ಯವಸ್ಥೆಮಾಡದೆ ಹೋದರೆ ಬಹಳ ತೊಂದರೆಯಾಗುತ್ತದೆ. ಅದನ್ನು ಮುಚ್ಚಿದರೂ ಚಿಂತೆಯಿಲ್ಲ. ಪ್ರತಿವರ್ಷವೂ ಅಲ್ಲಿ ಸಾಂಕ್ರಾಮಿಕರೋಗ ಬರುತ್ತಿದೆ. ಈ ರೋಗವಿಲ್ಲದ ವರ್ಷವೇ ಇಲ್ಲ. ಆ ಪ್ರದೇಶದಲ್ಲಿ Family Planning ಅಥವ ಕುಟುಂಬ ಯೋಜನೆಯನ್ನು ಜಾರಿಗೆ ತರದೇ ಹೋದರೆ ಬಹಳ ಕಷ್ಟ. ಆ ಜನರಿಗೆ ಹೇಳಿದರೆ, ಏನು ಮಾಡುವುದು ನಮಗಿರುವ ಸುಖ ಇದೊಂದೇ ಎಂದು ಹೇಳುತ್ತಾರೆ. ಅಲ್ಲಿ ಕೆಲಸ ಮಾಡತಕ್ಕ ಜನ ಹತ್ತು ಹನ್ನೆರಡು ಮಕ್ಕಳನ್ನು ಮರಗಳ ಕೆಳಗೆ ಮಲಗಿಸಿ ಕೆಲಸಕ್ಕೆ ಹೊರಟು ಹೋಗುತ್ತಾರೆ. ಕುಟುಂಬ ಯೋಜನೆಯ ಸಲಹೆ ಅವರಿಗೆ ಅಗತ್ಯವಾಗಿ ಬೇಕು. ಎಲ್ಲ ಸಲಹೆ ದೊರೆಯುತ್ತದೆ ಎಂಬುದು ಅವರಿಗೆ ಗೊತ್ತಿಲ್ಲ. ಈ ಒಂದು ಅನುಕೂಲವನ್ನು ಕಲ್ಪಿಸಿದರೆ ನಿಜವಾಗಿಯೂ ಅವರಿಗೆ ಬಹಳ ಉಪಕಾರವಾಗುತ್ತದೆ.

ಯಲಹಂಕದಲ್ಲಿ ಶ್ರೀ ಮುನಿಯಪ್ಪ ಎಂಬುವರು ಕಂಬೈನ್ಡ್ ಆಸ್ಪತ್ರೆಗಾಗಿ ಒಂದು ಕಟ್ಟಡವನ್ನು ಕಟ್ಟಿದ್ದಾರೆ. ಈಗ ಆ ಕಟ್ಟಡದಲ್ಲಿ ದನಗಳೂ ಕತ್ತೆಗಳೂ ವಾಸಮಾಡುತ್ತವೆ. ಯಲಹಂಕ ರಸ್ತೆಯ ಪಕ್ಕದಲ್ಲೇ ಕಾಣುತ್ತದೆ. ಅದನ್ನು ಭೇಗ ಕಂಬೈಂಡ್ ಆಸ್ಪತ್ರೆಯಾಗಿ ಮಾಡಬೇಕು.

ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ surgical side ನಲ್ಲಿ ಯಾವುದೋ ವಾರ್ಡಿನಿಂದ ದುರ್ವಾಸನೆ ಬರುತ್ತಿದೆ. ಇದಕ್ಕೇನು ಕಾರಣವೋ ಗೊತ್ತಿಲ್ಲ. ಆಸ್ಪತ್ರೆಯಲ್ಲಿ ಹೀಗಿರಬಾರದು. ಆಸ್ಪತ್ರೆಗೆ ಸಾಕಷ್ಟು ಡಾಕ್ಟರುಗಳು ಸಲಕರಣೆಗಳನ್ನು ಕೊಡದೇ ಹೋದರೆ ಸರಿಯಾಗಿಡಲು ಸಾಧ್ಯವಾಗುವುದಿಲ್ಲ. ಹೆಚ್ಚು ಗಮನ ಕೊಡಬೇಕು.

ದೇವನಹಳ್ಳಿ ತಾಲ್ಲೂಕು ನಲ್ಲೂರಿನಲ್ಲಿ ಒಂದು ಆಸ್ಪತ್ರೆಯಾಗಬೇಕೆಂದು ಜಸ್ಟಿಸ್ ಬಾಳೆಪುರ ಸುಬ್ಬಣ್ಣನವರು ಮಧ್ಯರಾಷ್ಟ್ರದಲ್ಲಿ ಆಸ್ಪತ್ರೆಗೆ ಸ್ಥಳವನ್ನೂ ಡಾಕ್ಟರಿರುವುದಕ್ಕೆ ಕಟ್ಟಡವನ್ನೂ ಕೊಟ್ಟಿದ್ದಾರೆ. ಅಲ್ಲಿಗೆ ಆದಷ್ಟು ಬೇಗ ಆಸ್ಪತ್ರೆಯನ್ನು ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

*Sri M. RAJASEKHARA MURTHY (Yelandur).—Sir, my friend Sri Narayanaswamy, while speaking on the Demand, made an eloquent speech as to why the Ayurvedic College should not be shifted from Mysore to Bangalore. He is a lawyer. Rou know sometimes that when cases are weak, arguments will be strong. Sri Narayanaswamy took up a weak case and made strong arguments. But he has not made out a case as to why it should not be shifted to Bangalore, and he has not mentioned the comparative advantages for not shifting the College to Bangalore. He has stated that the transfer of this College from Mysore to Bangalore came just like a bolt from the sky. But it is not so. The question is pending from a long time. Only recently Government took it up. Sir, there are certain disadvantages in Mysore City. The first one is: the building accommodation is very insufficient. Formerly the College was intended to train very few students, but of recent years, the strength has increased. I am a member on the Board and I have inspected the College. There are no waiting rooms either for boys or girls. There are no separate urinals. There is no room to keep dead bodies. Sometimes dead bodies are being eaten by crows and dogs. Therefore, it was thought better to shift the College from Mysore to Bangalore. Secondly, there is no bed strength in that College. There are only 12 beds and this number is small for the students to get trained. There is not even sufficient accommodation for the students of the College and the dispensary attached. There are only 12 beds which are insufficient. There is inadequacy of clinical materials. This is another reason why the College should be shifted from Mysore to Bangalore. Lastly, there is a research institute situated in Bangalore called the Sri Jayachamarajendra Institute of Indian Medicines. There are good number of beds, which will be convenient for the students to get more knowledge in several subjects. Therefore, for these reasons, the Government have thought it desirable to shift the college from Mysore to Bangalore. I welcome the move taken by the Government.

A Maternity Home was constructed in the year 1950 in Yelandur Taluk. It was due to the munificence of Sri Puttalingappa. Till now, no staff has been sanctioned to that hospital. The

building has almost become the bed-room for donkeys. I have to think that there is no sincerity on the part of the Government to give the staff. I request the Government to immediately provide the facilities required by the public.

2 P.M.

*ಶ್ರೀ ಕೆ. ಲಕ್ಕಪ್ಪ (ಚನ್ನರಾಯಪಟ್ಟಣ).—ಸ್ವಾಮಿ, ಶ್ರೀಮಾನ್ ಬೈರೇಗೌಡರು Family Planning ವಿಚಾರವಾಗಿ ಆಗಲೇ ಮಾತನಾಡಿದ್ದರೂ ಸಹ ನಾನು ಅದನ್ನು ಪ್ರತಿಪಾದಿಸಿ ಮಾತನಾಡಬೇಕೆಂದಿದ್ದೇನೆ. ಕಾರಣ ಈಗ ನಮ್ಮ ಇಂಡಿಯಾ ದೇಶದಲ್ಲಿ ಸ್ವಾತಂತ್ರ್ಯ ಬಂದಮೇಲೆ ನಾವು ಅನೇಕ ಯೋಜನೆಗಳನ್ನು ಮಾಡಿಕೊಂಡು ಹೋಗುತ್ತಿದ್ದೇವೆ. ಆ ಯೋಜನೆಗಳೆಲ್ಲ ಎಷ್ಟು ಅಗತ್ಯವೋ, ಎಷ್ಟು ಪ್ರಾಮುಖ್ಯವೋ, ಈ Family planning ಸಹ ಅಷ್ಟೇ ಪ್ರಾಮುಖ್ಯ, ಅಷ್ಟೇ ಅಗತ್ಯವೆಂದು ಕಂಡುಬರುತ್ತದೆ. ಇದನ್ನು ಇನ್ನೂ ಸ್ವಲ್ಪ ದೀರ್ಘವಾಗಿ ಪ್ರಸ್ತಾಪವಾಡಬೇಕೆಂದು ಯೋಚಿಸುತ್ತಿದ್ದೇನೆ. ಈ ಸಂಬಂಧದಲ್ಲಿ ಬೆಂಗಳೂರು, ಮೈಸೂರು ಪಟ್ಟಣಗಳಲ್ಲಿ ಆಸ್ಪತ್ರೆಗಳಲ್ಲಿ ವಾರಕ್ಕೆ ಒಂದೆರಡು ದಿವಸ Family Planning ವಿಚಾರದಲ್ಲಿ ಅಲ್ಲಿಗೆ ಬಂದವರಿಗೆಲ್ಲ ತಿಳಿವಳಿಕೆ ಕೊಡುವ ಬಗ್ಗೆ ವ್ಯವಸ್ಥೆ ಮಾಡಿದ್ದಾರೆಂದು ತಿಳಿದು ಬಂದಿದೆ. ಆದರೆ ಬೆಂಗಳೂರು ಮತ್ತು ಮೈಸೂರು ಪಟ್ಟಣಗಳಲ್ಲಿರತಕ್ಕ ಜನರು ವಿದ್ಯಾವಂತರು. ಇವರಿಗೆ Family Planning ವಿಚಾರದಲ್ಲಿ ನಂಬಿಕೆ ಇದೆ, ಮಾನವರಿಕೆಯಾಗಿದೆ. ಆದಕಾರಣದಿಂದ ಅವರು ಆಗಾಗ್ಗೆ ಹೋಗಿ cousult ಮಾಡಿ, ಅನೇಕರು ಅದನ್ನು ಆಚರಣೆಯಲ್ಲಿ ಸಹ ತರುತ್ತಿದ್ದಾರೆ. ಆದರೆ ಬಹು ಹೆಚ್ಚಾಗಿ ಪ್ರಜಾಸಂಖ್ಯೆ ಬೆಳೆಯುತ್ತಿರುವುದು ಹಳ್ಳಿಗಾಡಿನ ಭಾಗದಲ್ಲಿ. ಅಲ್ಲಿರತಕ್ಕ ಜನಗಳಿಗೆ ಇದರ ಅವಶ್ಯಕತೆ ಅಷ್ಟು ಚೆನ್ನಾಗಿ ಮನದಟ್ಟಾಗಿಲ್ಲ. ಜೊತೆಗೆ ಈ ಭಾವನೆ ಅವರಿಗೆ ಮನಸ್ಸಿಗೆ ಹೋಗುವುದಿಲ್ಲ. ಈ ರೀತಿ ಇರತಕ್ಕ ಹಳ್ಳಿಗಾಡಿನ ಪ್ರಾಂತದಲ್ಲಿ Family Planning ವಿಷಯದ ಪ್ರಚಾರ ಹೆಚ್ಚು ಅಗತ್ಯವಾಗಿದೆ, ಮತ್ತು ಇದನ್ನು ಜಾರಿಗೆ ತರತಕ್ಕ ಅವಶ್ಯಕತೆ ಇದೆ. ಈ ಕಾರಣದಿಂದ ಹಳ್ಳಿಗಾಡಿನ ಕಡೆ ಇರುವ ಎಲ್ಲ L.F. ಡಿಸ್ಪೆನ್ಸರಿಗಳಲ್ಲಿಯೂ ಸಹ ಈ ಬಗ್ಗೆ ಸಾಕಷ್ಟು ಪ್ರಚಾರವನ್ನು ಕೈಗೊಳ್ಳುವುದಕ್ಕೆ ಜರೂರಾಗಿ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಸೂಚಿಸುತ್ತೇನೆ. ಇದಕ್ಕೆ ಹೆಚ್ಚು ಹಣ ಖರ್ಚಾಗುವುದಿಲ್ಲ. ಇದರ ಪ್ರಚಾರದ ಬಗ್ಗೆ ಎಷ್ಟು ಗಮನ ಕೊಡಬೇಕೋ ಅಷ್ಟನ್ನು ಕೊಟ್ಟರೆ ಮಾತ್ರ ಸಾಕಾಗಿದೆ. ಆದುದರಿಂದ ಈ ಯೋಜನೆಯನ್ನು ಯಶಸ್ವಿಯಾಗಿ ನಡೆಸುವುದಕ್ಕೆ ಮತ್ತು ಚುರುಕಾಗಿ ಇದನ್ನು ಪ್ರಚಾರ ಮಾಡುವುದಕ್ಕೆ ಸಾಕಾದಷ್ಟು ಅವಶ್ಯಕತೆ ಇದೆ ಎಂಬುದನ್ನು ಸರ್ಕಾರದವರು ಮನಗಂಡು ಹೆಚ್ಚು ಪ್ರಭಾವಯುತರಾಗಿ ಮಾಡುವುದು ಅತ್ಯಾವಶ್ಯಕವಾಗಿದೆ. ಇದನ್ನು ಎಲ್ಲ ಭಾಗಗಳಲ್ಲಿಯೂ ಜಾರಿಗೆ ತರಬೇಕೆಂದು ಸೂಚನೆ ಕೊಡುತ್ತೇನೆ.

ಎರಡನೆಯದಾಗಿ ಎಲ್ಲ ಆಸ್ಪತ್ರೆಗಳಿಗೂ ಬಡಬಗ್ಗರಿಗೋಸ್ಕರ ಮುಫತ್ತಾಗಿ ಔಷಧಿಗಳನ್ನು ಕೊಡಲು ಹಣವನ್ನು ಹಂಚುತ್ತೀರಿ. ಹಾಗೆ ಹಂಚುತ್ತಿರುವುದರ ಅಂಕಿಅಂಶಗಳನ್ನು ನೋಡಿದರೆ ಬಹು ಹೆಚ್ಚು ಭಾಗದ ಹಣವನ್ನು ಮೈಸೂರು, ಬೆಂಗಳೂರು, ಮೊದಲಾದ ದೊಡ್ಡ ಪಟ್ಟಣಗಳಲ್ಲಿರುವ ಆಸ್ಪತ್ರೆಗಳಿಗೆ ಕೊಡುತ್ತಿದ್ದೀರಿ. ಅಲ್ಲಿ ಕಾಯಿಲೆಯವರ ಸಂಖ್ಯೆ ಜಾಸ್ತಿ ಅಲ್ಲಿ ಹೆಚ್ಚಾಗಿ ಕೊಡಬೇಕಾದದ್ದು ನ್ಯಾಯ. ಆದರೆ ಒಂದು ತತ್ವದಮೇಲೆ, ಒಂದು ಆದಾರದಮೇಲೆ ಕೊಡುತ್ತಿಲ್ಲವೆಂದು ಕಂಡುಬಂದಿದೆ. ಜಿಲ್ಲಾ ಹೆಡ್ ಕ್ವಾರ್ಟರುಗಳಲ್ಲಿ ಇರುವ ಆಸ್ಪತ್ರೆಗಳಿಗೆ ಎಷ್ಟು ಜನ ಬಡಬಗ್ಗರು ಬರುತ್ತಾರೆ, ಇತರ ದೊಡ್ಡ ದೊಡ್ಡ ಆಸ್ಪತ್ರೆಗಳಿಗೆ ಎಷ್ಟು ಜನ ಬರುತ್ತಾರೆಂಬ ಲೆಕ್ಕ ತೆಗೆದುಕೊಂಡು, ಆಯಾ ಆಸ್ಪತ್ರೆಗಳಿಗೆ ಬರತಕ್ಕ ಬಡಬಗ್ಗರ ದಾಮಾಷಾ (proportion) ಪ್ರಕಾರ ಹಣವನ್ನು ಹಂಚಿದರೆ ಯಾರೂ ಚರ್ಚೆ ಮಾಡುವುದಕ್ಕೆ ಅವಕಾಶವಿರುವುದಿಲ್ಲ. ಈ ರೀತಿಯಾದ ತತ್ವವನ್ನನುಸರಿಸದೆ ಮನಸ್ಸಿಗೆ ಬಂದ ರೀತಿಯಲ್ಲಿ ಹಣವನ್ನು ಕೊಡುತ್ತ ಇರುವುದರಿಂದ ಕೆಲವು ಡಿಸ್ಟ್ರಿಕ್ ಹೆಡ್‌ಕ್ವಾರ್ಟರುಗಳಲ್ಲಿರುವ ಆಸ್ಪತ್ರೆಗೆ ಬರತಕ್ಕ ಬಡವರಿಗೆ ಮುಫತ್ತಾಗಿ ಔಷಧಿಗಳನ್ನು ಕೊಡುವುದಕ್ಕೆ ಅವಕಾಶವಿಲ್ಲದೆ. ಕಾಯಿಲೆ ವಾಸಿಯಾಗದೆ ವಾಪಸು ಹೋಗತಕ್ಕ ಸನ್ನಿವೇಶಗಳಿವೆ. ಆದುದರಿಂದ ಈ ಹಣದ ಹಂಚಿಕೆ ವಿಚಾರದಲ್ಲಿ ನಾನು ಮೇಲೆ ಹೇಳಿದ ಸಲಹೆಯಂತೆ ಮಾಡುತ್ತಾರೆಂದು ನಂಬಿದ್ದೇನೆ.

ಒಂದೇ ಒಂದು ಸಣ್ಣ ಸೂಚನೆ. ಇತ್ತೀಚೆಗೆ ಎಲ್ಲ ಮುನಿಸಿಪಾಲಿಟಿಗಳಿಗೂ ಡಿ.ಡಿ.ಟಿ. ಸ್ಪ್ರೇ ಮಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ. ಅದೇ ರೀತಿ ಹಾಸನದಲ್ಲಿಯೂ ಕೂಡ ವ್ಯವಸ್ಥೆ ಮಾಡಿದ್ದೀರಿ. ಆದರೆ ಡಿ.ಡಿ.ಟಿ. ಮನೆಗಳಿಗೆ ಹೊಡೆಯುವುದರಿಂದ ಮಾತ್ರವೇ ಸೊಳ್ಳೆಗಳು ಸಂಪೂರ್ಣವಾಗಿ ಹೋಗುವುದಿಲ್ಲ. ಸೊಳ್ಳೆಗಳು ಎಲ್ಲಿ ಮನೆ ಮಾಡಿಕೊಂಡು ಮರಿ (ಬ್ರೀಡ್) ಮಾಡುತ್ತವೆ ಅಂಥ ಸ್ಥಳಗಳಲ್ಲಿ ಸೊಳ್ಳೆಯ ಮರಿಗಳನ್ನು ಹೋಗಲಾಡಿಸತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳದೆ ಹೋದರೆ ಡಿ.ಡಿ.ಟಿ. ಸ್ಪ್ರೇ ಮಾಡುವುದು ಯಶಸ್ವಿಯಾಗುವುದಿಲ್ಲ ; ಮತ್ತು ಸ್ಪ್ರೇ ಮಾಡಿದ 8-10 ದಿವಸದ ಮೇಲೆ ಸೊಳ್ಳೆಗಳು ಪುನಃ ಬರುತ್ತವೆ. ಆದುದರಿಂದ ಬ್ರೀಡಿಂಗ್ ಆಗುವ ಸ್ಥಳಗಳಲ್ಲೆಲ್ಲ ಸೊಳ್ಳೆಗಳನ್ನು ನಾಶಮಾಡಲು ತಕ್ಕ ಕಾರ್ಯಕ್ರಮವನ್ನು ಹಾಕಿಕೊಂಡು ಸೊಳ್ಳೆಗಳ ಹಾವಳಿಯನ್ನು ತಪ್ಪಿಸುವುದಕ್ಕೆ ವ್ಯವಸ್ಥೆ ಮಾಡಬೇಕು ಎಂದು ಸೂಚನೆ ಕೊಡುತ್ತೇನೆ.

*ಶ್ರೀ ಶಿವನಂಜೇಗೌಡ (ಮೈಸೂರು ತಾಲ್ಲೂಕು).—ಸ್ವಾಮಿ, ಆಸ್ಪತ್ರೆಗಳ ವಿಚಾರದಲ್ಲಿ ಹೇಳಬೇಕಾಗಿದ್ದರೆ ಹಳ್ಳಿಗಾಡಿನಲ್ಲಿರತಕ್ಕ ಆಸ್ಪತ್ರೆಗಳಲ್ಲಿನ ದುರವಸ್ಥೆಯನ್ನು ಹೇಳಲು ಸಾಧ್ಯವಿಲ್ಲ. ಈ ಆಸ್ಪತ್ರೆಗಳಿಗೆ ಸಾಕಾದಷ್ಟು ಪ್ರಮಾಣದಲ್ಲಿ ಔಷಧಿಗಳು ಬರುತ್ತಿಲ್ಲ. ಡಿಸ್ಪೆನ್ಸರಿಗಳಲ್ಲಿಯೂ ಮತ್ತು ಜಿಲ್ಲಾ ಬೋರ್ಡು ಆಸ್ಪತ್ರೆಗಳಲ್ಲಿಯೂ ಒಂದೇ ತೆರನಾದ ಪರಿಸ್ಥಿತಿ ಇದೆ. ಒಂದು ವಾರಕ್ಕೆ ಆಗುವಷ್ಟು ಔಷಧಿಗಳು ಎಂದು ಕೊಟ್ಟಿರುವುದು ಮೂರು ದಿನಗಳಿಗೆ ಸಾಕಾಗುವುದಿಲ್ಲ. ಈಗ ಎಲ್ಲೆಲ್ಲೂ ಮಲೇರಿಯಾ ಕಾಯಿಲೆ ಪ್ರಾರಂಭವಾಗಿದೆ. ಇತ್ತೀಚೆಗೆ ಉಪಯೋಗಿಸುತ್ತಿರುವ ಡಿ.ಡಿ.ಟಿ.ಯಿಂದ ಏನೂ ಪ್ರಯೋಜನವಿಲ್ಲ. ಇದರಿಂದ ಪುನಃ ಮಲೇರಿಯಾ ಕಾಯಿಲೆ ಬಂದಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಹಿಂದೆ ಉಪಯೋಗಿಸುತ್ತಿದ್ದ ಡಿ.ಡಿ.ಟಿ. ಬಹಳ ಚೆನ್ನಾಗಿತ್ತು. ಇಷ್ಟು ದುಡ್ಡು ಕೊಟ್ಟು ತರುವಾಗ ಒಳ್ಳೆಯ ಡಿ.ಡಿ.ಟಿ. ಪುಡಿಯನ್ನು ತರಿಸಬೇಕು. ಇಷ್ಟೊಂದು ಜನ ಡಾಕ್ಟರುಗಳು, ಹೆಲ್ತ್ ಆಫೀಸರುಗಳು ಇರುವಾಗ ಈ ಡಿ.ಡಿ.ಟಿ. ಒಳ್ಳೆಯದೇ ಕೆಟ್ಟದ್ದೇ ಎಂದು ಅಜಮಾಯಿಸಿ ಮಾಡಿ ತರಿಸಿ ನಂತರ ಉಪಯೋಗಿಸಬೇಕು. ಚೆನ್ನಾಗಿರುವ ಡಿ.ಡಿ.ಟಿ.ಯನ್ನು

(ಶ್ರೀ ಶಿವನಂಜೇಗೌಡ.)

ತರಿಸಿ ಉಪಯೋಗಿಸದೆ ಹೋದರೆ ಸುಮ್ಮನೆ ಹಣ ಖರ್ಚು, ಮತ್ತು ಹತ್ತಾರು ಜನ ಸಿಬ್ಬಂದಿ ಇಟ್ಟು ಕೆಲಸ ಮಾಡಿದ್ದಕ್ಕೆ ಏನು ಫಲ ಬಂದಹಾಗಾಯಿತು. ಈಗ ಮಾರ್ಚಿ ತಿಂಗಳು. ಮಲೇರಿಯಾ ಕಾಯಿಲೆ ಹೆಚ್ಚುವುದು ಈಗಲೇ. ಇದೇ ಕಾಲದಲ್ಲಿ ಆಸ್ಪತ್ರೆಗಳಲ್ಲಿ ಔಷಧಿಗಳಿಲ್ಲ. ಆದುದರಿಂದ ಈ ವಿಚಾರದ ಕಡೆ ಸರ್ಕಾರದವರು ತಕ್ಷಣ ಗಮನ ಕೊಡಬೇಕು.

ಡಾಕ್ಟರುಗಳಿಗೆ ಮತ್ತು ಕಾಂಪೌಂಡರುಗಳಿಗೆ ಹಳ್ಳಿಗಾಡಿನಲ್ಲಿ ವಾಸಕ್ಕೆ ಮನೆಗಳನ್ನು ಕಟ್ಟಿಕೊಟ್ಟಿಲ್ಲ. ಇವರಿಗೆ ವಾಸದ ಮನೆಗಳಿಲ್ಲದೆ ಬಹಳ ತೊಂದರೆಯಾಗಿದೆ. ವಾಸ ಮಾಡಲು ಇವರುಗಳು ಪಟ್ಟಣಕ್ಕೆ ಹೋಗಬೇಕು. ಅಲ್ಲಿಂದ ಬಂದು ಹಳ್ಳಿಯಲ್ಲಿ ಕೆಲಸ ಮಾಡಬೇಕು. ಆದುದರಿಂದ ಸರ್ಕಾರದವರು ಎರಡನೆ ಪಾಂಚವಾರ್ಷಿಕ ಯೋಜನೆಯಲ್ಲಾದರೂ ಡಾಕ್ಟರುಗಳಿಗೆ ಕಾಂಪೌಂಡರುಗಳಿಗೆ ಮತ್ತು ಇತರ ಸಿಬ್ಬಂದಿಗೆ ಮನೆಗಳನ್ನು ಕಟ್ಟಿಸಿಕೊಟ್ಟರೆ ಬಹಳ ಉಪಕಾರ ಮಾಡಿದ ಹಾಗಾಗುತ್ತದೆ.

ಮೈಸೂರಿನಲ್ಲಿರುವ ಆಯುರ್ವೇದ ಕಾಲೇಜಿನ ಬಗ್ಗೆ ಒಂದೆರಡು ಮಾತು. ಆಯುರ್ವೇದ ಶಿಕ್ಷಣಕ್ಕೆ ಮೈಸೂರು ಚೆನ್ನಾಗಿದೆ ಎಂದು ಒಬ್ಬ ಮಹಾನುಭಾವರು ಆಯುರ್ವೇದ ಕಾಲೇಜನ್ನು ಮೈಸೂರಿನಲ್ಲಿ ಪ್ರಾರಂಭ ಮಾಡಿದರು. ಅದು ಆಗಿನಿಂದ ಬೆಳೆದುಕೊಂಡು ಬಂದು ಅಭಿವೃದ್ಧಿಯಾಗಿ ಈಗ ಎಲ್ಲರೂ ಆಯುರ್ವೇದಕ್ಕೆ ಪ್ರಾಶಸ್ತ್ಯ ಕೊಡುತ್ತ ಅದರಲ್ಲಿ ಪರಿಶ್ರಮ ಹೊಂದಬೇಕು ಎಂದು ಬಹಳ ಜನ ಆಕಾಂಕ್ಷೆ ಪಡುತ್ತಿದ್ದಾರೆ. ಕಳೆದ ಈ ವಿಚಾರದಲ್ಲಿ ಪ್ರಸ್ತಾಪ ಮಾಡಿದಾಗ ಆಯುರ್ವೇದ ಕಾಲೇಜನ್ನು ಬೆಂಗಳೂರಿಗೆ ಬದಲಾಯಿಸುವುದಿಲ್ಲವೆಂದು ಮಂತ್ರಿಗಳು ಹೇಳಿದ್ದರು. ಅಲ್ಲದೆ ನಾವು ಮಾನ್ಯ ಮಂತ್ರಿಗಳಲ್ಲಿ ಹೇಳಿಕೊಂಡಾಗ ಕಾಲೇಜನ್ನು ಅಭಿವೃದ್ಧಿಪಡಿಸುತ್ತೇವೆಂದು ಸಹ ವಾಗ್ದಾನಮಾಡಿದ್ದವರು ಈಗಾಗಲೇ ಅಯುರ್ವೇದ ಕಾಲೇಜನ್ನು ಬೆಂಗಳೂರಿಗೆ ತರಬೇಕೆಂದು ಹೇಳುವುದು ಯಾವ ನ್ಯಾಯ ? ಒಳ್ಳೆಯ ಸರ್ಕಾರವೆಂದು ಜನರೆಲ್ಲ ಹೇಳುತ್ತ ಇರುವಾಗ ಈ ರೀತಿಯ ತೀರ್ಮಾನಗಳನ್ನು ತೆಗೆದುಕೊಳ್ಳುವುದನ್ನು ನೋಡಿದರೆ ಯಾಕೆ ಹೀಗಾಯಿತು ಎಂದು ಆಶ್ಚರ್ಯವಾಗುತ್ತದೆ. ಮೈಸೂರು ಒಳ್ಳೆಯ ಪಟ್ಟಣ. ಬೆಂಗಳೂರು ಪಟ್ಟಣ ಕೆಟ್ಟದ್ದು ಎಂದು ಹೇಳುವುದಿಲ್ಲ. ಬೆಂಗಳೂರಿಗೆ ಬೇಕಾದರೆ ಬೇರೆ ಒಂದು ಕಾಲೇಜನ್ನು ಮಾಡಿಕೊಳ್ಳಿ. ಅದು ಬಿಟ್ಟು ಇರುವ ಕಾಲೇಜನ್ನು ಬದಲಾಯಿಸುವ ಗೋಜಿಗೆ ಯಾಕೆ ಹೋಗಬೇಕು? ಮೈಸೂರಿನಲ್ಲಿ ಈಗಿರುವ ಕಟ್ಟಡದಲ್ಲಿ ಸ್ಥಳಾವಕಾಶವಿಲ್ಲದೆ ಇದ್ದರೆ, ಪಕ್ಕದಲ್ಲಿಯೇ ರೈಲ್ವೆ ಆಫೀಸಿನ ಕಟ್ಟಡವಿದೆ. ಅದರಲ್ಲಿ ಎಷ್ಟೋ ಭಾಗ ಖಾಲಿ ಇದೆ. ಈಗಿರುವ ಕಟ್ಟಡದಲ್ಲಿಯೇ 100 ಹುಡುಗರಿಗೆ ವಿದ್ಯೆಯನ್ನು ಹೇಳಿಕೊಡುತ್ತಿದ್ದಾರೆ. ಅಲ್ಲಿನ ವಿದ್ಯಾರ್ಥಿಗಳಿಗೆಲ್ಲ ಬಹಳ ತೊಂದರೆಯಾಗುತ್ತದೆ. ಆದುದರಿಂದ ಆಯುರ್ವೇದ ಕಾಲೇಜನ್ನು ಮೈಸೂರಿನಲ್ಲಿಯೇ ಉಳಿಸಿಕೊಡಬೇಕು. ಕಾಲೇಜನ್ನೇನಾದರೂ ಬೆಂಗಳೂರಿಗೆ ಬದಲಾಯಿಸಿದರೆ ಎಷ್ಟೋ ವಿದ್ಯಾರ್ಥಿಗಳಿಗೆ ಓದಲು ಬಹಳ ಅನಾನುಕೂಲವಾಗುತ್ತದೆ. ಹೋದವರ್ಷ ಕೊಟ್ಟ ವಚನವನ್ನು ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಯಾತಕ್ಕೆ ಸರ್ಕಾರದವರು ಹೀಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳುತ್ತಿಲ್ಲವೋ ಗೊತ್ತಿಲ್ಲ. ಇದಕ್ಕೆ ಔಷಧಿ ಕೊಡುವವರು ಯಾರು ? ಇದಕ್ಕೆ ಜನಗಳೇ ಔಷಧಿ ಕೊಡಬೇಕು. ಹತ್ತಾರು ಲಕ್ಷ ಜನ ಆಯುರ್ವೇದ ಕಾಲೇಜು ಮೈಸೂರಿನಲ್ಲಿಯೇ ಇರಬೇಕೆಂದು ಪ್ರತಿಪಾದಿಸುತ್ತಿದ್ದಾರೆ. ರೈಲ್ವೆ ಆಫೀಸು ಕಟ್ಟಡಗಳನ್ನು ಉಪಯೋಗಿಸಿಕೊಂಡರೆ 200-300 ವಿದ್ಯಾಥಿಗಳಿಗೆ ಬೇಕಾದರೂ ಅವಕಾಶವಾಗುತ್ತದೆ ಲಕ್ಷಾಂತರ ರೂಪಾಯಿಗಳ ಖರ್ಚಿನಲ್ಲಿ ಬೆಂಗಳೂರಿನಲ್ಲಿ ಒಂದು ಹೊಸ ಕಾಲೇಜು ಕಟ್ಟಡವನ್ನು ಕಟ್ಟುವುದಕ್ಕೆ ಬದಲು ಈಗ ಇರುವಂತೆ ಮೈಸೂರಿನಲ್ಲಿಯೇ ಉಳಿಸಿದರೆ ಬಹಳ ಒಳ್ಳೆಯದು ಎಂದು ಹೇಳುತ್ತೇನೆ.

ಒಟ್ಟಿನಲ್ಲಿ ಹಳ್ಳಿಗಾಡಿನಲ್ಲಿರುವ ಆಸ್ಪತ್ರೆಗಳಿಗೆ ಸರಿಯಾಗಿ ಔಷಧಿಗಳನ್ನು ಒದಗಿಸಿಕೊಡಬೇಕು ; ಡಾಕ್ಟರುಗಳು ಕಾಂಪೌಂಡರುಗಳು ಮುಂತಾದ ಸಿಬ್ಬಂದಿಯವರಿಗೆ ಹಳ್ಳಿಗಳಲ್ಲಿ ವಾಸಕ್ಕೆ ಮನೆಗಳನ್ನು ಕಟ್ಟಿಸಿಕೊಡಬೇಕು. ಡಿ.ಡಿ.ಟಿ. ಸ್ಪ್ರೇ ಮಾಡುವಾಗ ಉತ್ತಮವಾದದ್ದನ್ನು ಮತ್ತು ಸರಿಯಾದ ಪ್ರಮಾಣದಲ್ಲಿ ಉಪಯೋಗಿಸುವಂತೆ ವ್ಯವಸ್ಥೆ ಮಾಡಬೇಕು. ಮತ್ತು ಆಯುರ್ವೇದ ಕಾಲೇಜನ್ನು ಮೈಸೂರಿನಲ್ಲಿಯೇ ಉಳಿಸಿಕೊಡಬೇಕು ಎಂದು ಹೇಳಿ ನನ್ನ ಮಾತುಗಳನ್ನು ನಿಲ್ಲಿಸುತ್ತೇನೆ.

*Sri H. C. LINGA REDDY (Malur).—Sir, I rise to support the Demands. While so doing, I would like to bring certain facts to the notice of the Government. As many as eight members have tabled cut-motions about the necessity for making provisions of one lakh of rupees for Dr. Modi's camp which he has been carrying on in the State for the last few years. It is well known that Dr. Modi has been rendering yeoman service to the State in the matter of eradication of blindness and even the Government of India have recognised his services and have been pleased to confer the title of PADMASREE on him. When the Government of India have recognised his services, it is unfortunate that no provision has been made by the State for the treatment of eye defect which Dr. Modi has been doing in this State for the last three years. It is very unfortunate that numerous people suffer from this eye disease. Many people are blind. They have various kinds of defects.

Sir, we have been spending a crore and seventy five lakhs for Medical and Public Health. To make a provision of a lakh of rupees for Dr. Modi's camp should not be a difficult thing to Government, when we see the service that is being rendered by him to the country. He does all this without any remuneration. The special feature of his service is, he goes to the very doors of the patient. He travels through various districts and taluks and gets

the patients to the camp for treatment. It is very necessary on the part of our Government to give him as much help as possible to Dr. Modi.

Next, Sir, we have been urging upon Government, time and again, to open mobile dispensaries in each taluk with all the medical facilities so that it may save starting of dispensaries in taluk headquarters and districts. I consider, Sir, instead of having a number of hospitals in hobli headquarters, if there is a mobile van fully equipped, in each hobli headquarter, better service could be rendered because medical treatment would be taken to the very doors of the patients. Our village flock is illiterate and ignorant. They do not know that they should go to the hobli headquarter when they are ill and consult the Doctor and take treatment. When such is the condition of our society, instead of having hospitals in each hobli headquarter, it is far better and useful to have mobile hospitals. As my friend Sri G. Puttaswamy pointed out, the mobile vans in several places are not in good condition. For many of them repairs have got to be effected. Our Road Transport Department is working so well and the buses that go out of order are so speedily repaired and made fit to ply. I do not know where the mobile vans will have to undergo repairs when they go out of order. The mobile van in Chintamani was out of repair. As Sri G. Puttaswamy pointed out, that is the fate of many such vans. I do not know why they should not be got repaired expeditiously and made fit for service. The patients in the villages would be waiting for the van expecting that it would come and when the van does not come there, they will have to return disappointed. When the van is out of order and when it could not be taken to the scheduled place, at least intimation could be sent to that place so that they may not be made to wait unnecessarily. In the last Budget Government were saying that the L.F. hospitals would be converted into Health Units. If that is done, both the curative as well as preventive aspect could be tackled. With these Health Units and the Mobile Hospitals better medical service could be rendered.

About the hospital in Tekal Hobli, the Health Minister was pleased to sanction; but nothing has been done so far. There is a building belonging to Government. Recently, myself, the Medical Officer and the Executive Engineer visited the place. I was told that an estimate for Rs. 3,200 had been prepared. I request Government to sanction that amount and effect the repairs and start a hospital there.

ಶ್ರೀ ಆರ್. ಮುನಿಸ್ವಾಮಯ್ಯ (ಬೆಂಗಳೂರು-ಉತ್ತರ—ಅನುಸೂಚಿತ ಜಾತಿಗಳು).—ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಸೋಷಿಯಲ್ ವೆಲ್‌ಫೇರ್ ಸೆಂಟರ್ ಒಂದು ಪ್ರಾರಂಭವಾಗಿದೆ. ಇದಕ್ಕೆ ಸುಮಾರು 42 ಹಳ್ಳಿಗಳು ಸೇರಿವೆ. ಅಲ್ಲಿಯ ಜನರಿಗೆ ಅನುಕೂಲವೊದಗಿಸಲು ವಿಕ್ಟೋರಿಯಾ ಆಸ್ಪತ್ರೆ ಮತ್ತು ಬೌರಿಂಗ್ ಆಸ್ಪತ್ರೆ ಡಾಕ್ಟರುಗಳು ಮತ್ತು ಖಾಸಗಿ ಡಾಕ್ಟರುಗಳು ಸಹ ವಾರಕ್ಕೆ ಎರಡು ಮೂರು ದಿನ ಬಂದು ರೋಗಿಗಳನ್ನು ಪರೀಕ್ಷೆಮಾಡಿ ಚಿಕಿತ್ಸೆ ಮಾಡುತ್ತಿದ್ದಾರೆ. ಆದರೆ ಅವರಿಗೆ ಸ್ವಂತವಾಗಿ ಕೈಯಿಂದ ಖರ್ಚಿಟ್ಟು ಔಷಧಕೊಟ್ಟು ಉಪಚಾರ ಮಾಡುವುದಕ್ಕೆ ಸಾಧ್ಯವಿಲ್ಲ. ಅದಕ್ಕೆ ಸರ್ಕಾರದವರು ಅಲ್ಲಿಗೆ ಹೋಗುವ ಡಾಕ್ಟರುಗಳಿಗೆ ಅಲ್ಲಿ ಹೋಗಿ ಸೇವೆ ಮಾಡುವುದಕ್ಕೆ ಅವಕಾಶಕೊಡಲು ಸುಮಾರು ಒಂದು ಲಕ್ಷ ರೂಪಾಯಿಗಳನ್ನಾದರೂ ಆ ಸೆಂಟರಿನಲ್ಲಿ ಒಂದು ಕಡೆ ಠೇವಣಿಯಾಗಿಟ್ಟು ಔಷಧಗಳನ್ನು ಒದಗಿಸಬೇಕು, ಅಲ್ಲದೆ ಒಂದು ವ್ಯಾನನ್ನು ಸಹ ಅವರಿಗೆ ಒದಗಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ದೇವನಹಳ್ಳಿ ತಾಲ್ಲೂಕು ವಿದ್ಯಾನಗರದಲ್ಲಿ ಒಂದು ಉಪಾಧ್ಯಾಯರ ಶಿಕ್ಷಣ ಕೇಂದ್ರವಿದೆ. ಅದು ಎಲ್ಲ ಕೇಂದ್ರಗಳಿಗಿಂತಲೂ ಬಹಳ ದೊಡ್ಡದಾಗಿದೆ. ಅಲ್ಲಿ ಬಹಳ ವರ್ಷಗಳಿಂದ ದಿನದಿನಕ್ಕೆ ಜನಸಂಖ್ಯೆ ಬೆಳೆಯುತ್ತಿದೆ. ಆದ್ದರಿಂದ ಅಲ್ಲಿಗೆ ಒಂದು ದೊಡ್ಡ ಆಸ್ಪತ್ರೆ ಬೇಕಾಗಿದೆ. ಈಗಿರುವ ಆಸ್ಪತ್ರೆಯಲ್ಲಿ ಔಷದಗಳನ್ನೊದಗಿಸಿರುವುದು ಸಾಲದು. ಬಹಳ ದಿವಸಗಳ ಹಿಂದಿದ್ದ ಸರ್ಜಿಕಲ್ ಇನ್‌ಸ್ಟ್ರುಮೆಂಟ್ಸ್ ಹಳೆಯವಾಗಿ ಈಗ ಉಪಯೋಗಕ್ಕೆ ಬಾರದಂತಾಗಿವೆ. ಆದ್ದರಿಂದ ಜಾಗ್ರತೆ ಇಲ್ಲಿಗೆ ಬೇಕಾದ ಸಹಾಯ ನೀಡಬೇಕು.

ಅಲ್ಲದೆ ದೇವನಹಳ್ಳಿ ತಾಲ್ಲೂಕು ಬಾಗಲೂರಿನಲ್ಲಿ ಒಂದು ಆಯುರ್ವೇದಿಕ್ ಡಿಸ್ಪೆನ್ಸರಿಯಿದೆ. ಅಲ್ಲಿ ಒಬ್ಬ ಸೂಲಗಿತ್ತಿಯ ಆವಶ್ಯಕತೆ ಬಹಳವಾಗಿದೆ. ಆ ಪ್ರದೇಶಕ್ಕೆ ಒಬ್ಬ ಸೂಲಗಿತ್ತಿಯನ್ನ ಕೂಡಲೇ ನೇಮಕವಾಡಬೇಕು.

ಬೆಟ್ಟಹಲಸೂರಿಗೆ ಒಂದು ಆಸ್ಪತ್ರೆಯನ್ನು ಮಂಜೂರು ಮಾಡಬೇಕು. ಅಲ್ಲಿ ಕಮ್ಯೂನಿಟಿ ಪ್ರಾಜೆಕ್ಟ್ ಕೆಲಸ, ಅಡಲ್ಟ್ ಎಜುಕೇಷನವರು ನಡೆಸುತ್ತಿದ್ದಾರೆ. ಅಲ್ಲಿ ಜನಸಂಖ್ಯೆ ಹೆಚ್ಚಿದೆ. ಅಲ್ಲದೆ ಹೊಸದಾಗಿ ರೋಗಗಳು ಹೆಚ್ಚಿ ಜನರು ನರಳುತ್ತಿದ್ದಾರೆ. ಆದ್ದರಿಂದ ಆ ಸ್ಥಳಕ್ಕೆ ಹೊಸದಾಗಿ ಒಂದು ಲೋಕಲ್ ಫಂಡ್ ಆಸ್ಪತ್ರೆಯನ್ನು ಕಮ್ಯೂನಿಟಿ ಸೆಂಟರ್‌ಗೆ ಕೊಡಬೇಕು. ಅದು ಸಾಧ್ಯವಾಗದಿದ್ದರೆ ಒಂದು ಆಯುರ್ವೇದಿಕ್ ಆಸ್ಪತ್ರೆಯನ್ನಾದರೂ ಕೊಡಬೇಕು.

(ಶ್ರೀ ಆರ್. ಮುನಿಸ್ವಾಮಯ್ಯ.)

ಬೆಂಗಳೂರು ಕಸಬಾ ಹೋಬಳಿಯಲ್ಲಿ ದೇವರ ಜೀವನಹಳ್ಳಿಯೆಂಬ ಗ್ರಾಮವಿದೆ. ಮಾನ್ಯ ಆರೋಗ್ಯ ಮಂತ್ರಿಗಳೂ ಸಹ ಅಲ್ಲಿಗೆ ಭೇಟಿ ಕೊಟ್ಟಿದ್ದಾರೆ. ಜನರು ಅಲ್ಲಿ ಹಳ್ಳಕೊಳ್ಳ ಪ್ರದೇಶದಲ್ಲಿ ಹುಳಗಳಂತೆ ವಾಸ ಮಾಡುತ್ತಿದ್ದಾರೆ. ಅಲ್ಲಿಗೆ ಒಂದು ಆರೋಗ್ಯ ಕೇಂದ್ರ ವನ್ನು ಮಂಜೂರು ಮಾಡಬೇಕು.

ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಬೇಕಾದಷ್ಟು ಕಾರ್ಖಾನೆಗಳು ಪ್ರಾರಂಭವಾಗಿ ಆಂಧ್ರ ಮತ್ತು ತಮಿಳುನಾಡಿನಿಂದ ಅನೇಕ ಜನರು, ಬೇಕಾದಷ್ಟು ಕೂಲಿಗಳು ಬಂದು ಸೇರಿ ಗುಡಿಸಲುಗಳನ್ನು ಹಾಕಿ ಕೊಂಡಿದ್ದಾರೆ. ಜನಸಂಖ್ಯೆ ಒಂದಕ್ಕೆ ಐದರಷ್ಟು ಹೆಚ್ಚಾಗಿದೆ. ಶ್ರೀ ಬೈರೇಗೌಡರು ಹೇಳಿದಹಾಗೆ ಅವರೊಂದಿಗೆ ಲೆಕ್ಕವಿಲ್ಲದಷ್ಟು ಮಕ್ಕಳಿವೆ. ಅವರಿಗೆ ಸರಿಯಾದ ವ್ಯವಸ್ಥೆ ಮಾಡುವುದಕ್ಕೆ ಪ್ರಯತ್ನಪಡಬೇಕು. ಒಬ್ಬ ಹೆಲ್ತ್ ಇನ್ಸ್‌ಪೆಕ್ಟರನ್ನಾದರೂ ಕೊಡಬೇಕು.

ಶ್ರೀ ಟಿ. ಜಿ. ತಿಮ್ಮೇಗೌಡ (ತಿಪಟೂರು).—ಸ್ವಾಮಿ, ಸಂಸ್ಥಾನಾಮಳೆಯಿರತಕ್ಕ ಆಸ್ಪತ್ರೆಗಳಿಗೆ ಅಗತ್ಯ ವಾಗಿ ಬೇಕಾದಂಥ ಸಾಮಾನುಗಳನ್ನು ಕೂಡ ಸರ್ಕಾರದವರು ಸರಿಯಾಗಿ ಒದಗಿಸುತ್ತಿಲ್ಲ. ನಮ್ಮ ತಿಪಟೂರಿನಲ್ಲೊಂದು ಹೆರಿಗೆ ಆಸ್ಪತ್ರೆ ಇದೆ. ಅಲ್ಲಿ ಸಾಕಷ್ಟು ಹಾಸಿಗೆಗಳಿಲ್ಲ. ಈಗಲಾದರೂ ಸರ್ಕಾರದ ವರು ಆ ಹೆರಿಗೆ ಆಸ್ಪತ್ರೆಗೆ ಹೆಚ್ಚಿನ ಬೆಡ್ಡುಗಳನ್ನು ಒದ ಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನೂ ಆ ತಿಪ ಟೂರು ಟೌನಿಗೊಂದು ಜನರಲ್ ಆಸ್ಪತ್ರೆಯನ್ನು ಕೊಡಬೇಕೆಂದು ಅಲ್ಲಿನ ಪುರಜನರೂ ಮತ್ತು ನಾನೂ ಸರ್ಕಾರದವರನ್ನು ಒತ್ತಾಯಪಡಿಸುತ್ತಲೇ ಬಂದಿ ದ್ದೇವೆ. ಆದರೆ ಆ ವಿಚಾರಕ್ಕೆ ಸರ್ಕಾರದವರೇನೂ ಗಮನ ಕೊಟ್ಟಹಾಗೆ ಕಂಡುಬರುವುದಿಲ್ಲ. ಸರ್ಕಾರ ದವರು ಅಲ್ಲಿಗೊಂದು ಜನರಲ್ ಆಸ್ಪತ್ರೆಯನ್ನು ಮಂಜೂರು ಮಾಡುವ ಪಕ್ಷಕ್ಕೆ ಅಲ್ಲಿಯ ಮುನಿಸಿಪಾಲಿಟಿ ಯವರು 60 ಸಾವಿರ ರೂಪಾಯಿಗಳನ್ನು ಡಿಪಾಜಿಟ್ ಮಾಡಲು ಒಪ್ಪಿಕೊಂಡಿರುತ್ತಾರೆ. ಹಾಗೇ ಅಲ್ಲಿಯ ಸಾರ್ವಜನಿಕರಿಂದ 40 ಸಾವಿರ ರೂಪಾಯಿಗಳ ಫಂಡನ್ನು ವಸೂಲ್ಮಾಡಿ ಒಟ್ಟು ಒಂದು ಲಕ್ಷ ರೂಪಾ ಯಿಗಳನ್ನು ಸರ್ಕಾರಕ್ಕೆ ಕೊಡಲು ಅಲ್ಲಿಯ ಜನರು ಮುಂದೆ ಬಂದಿದ್ದಾರೆ. ಆದರೆ ಸರ್ಕಾರದವರು ಇಲ್ಲಿಯ ವರೆಗೂ ಆ ವಿಚಾರವಾಗಿ ಯಾವ ಒಂದು ಭರವಸೆ ಯನ್ನೂ ಕೊಟ್ಟಿರುವುದಿಲ್ಲ. ಈ ದಿವಸ ಸರ್ಕಾರದ ವರು ಆ ಒಂದು ಲಕ್ಷಕ್ಕೆ ಮೇಲ್ಪಟ್ಟು ಬರತಕ್ಕಂಥ ಖರ್ಚು ವೆಚ್ಚಗಳನ್ನು ವಹಿಸಿಕೊಳ್ಳುವುದಕ್ಕೆ ತಯಾರಾಗಿ ದ್ದೇವೆಂದು ಸರ್ಕಾರದವರು ಒಂದು ಭರವಸೆ ಕೊಟ್ಟರೆ ಆ ಟೌನಿನವರು ಈಗಲೂ ಒಂದು ಲಕ್ಷ ರೂಪಾಯಿ ಗಳನ್ನು ಸರ್ಕಾರದಲ್ಲಿ ಡಿಪಾಜಿಟ್ ಮಾಡಲು ಸಿದ್ಧವಾ ಗಿರುತ್ತಾರೆ. 15 ಸಾವಿರ ರೂಪಾಯಿಗಳ ಬೆಲೆಬಾಳ ತಕ್ಕಂಥ ಒಂದು ನಿವೇಶನವನ್ನೂ ಸಹ ಇದಕ್ಕಾಗಿ ಕೊಂಡು ರಿಜರ್ವ್ ಮಾಡಿಡಲಾಗಿದೆ. ಆ ತಿಪಟೂರು ಟೌನ್ ಹದಿಮೂರು ಸಾವಿರ ಪ್ರಜಾ ಸಂಖ್ಯೆಯಿರ ತಕ್ಕಂಥ ಟೌನ್. ದೊಡ್ಡ ವ್ಯಾಪಾರ ಕೇಂದ್ರ. ಹತ್ತಿರದಲ್ಲಿ 40—50 ಮೈಲಿ ಫಾಸಲೆಯೊಳಗೆ ಮತ್ತೆ ಯಾವ ದೊಡ್ಡ ಆಸ್ಪತ್ರೆಗಳಿರುವುದಿಲ್ಲ. ಆದಕಾರಣ ಈ ಟೌನಿಗೆ ಒಂದು ಜನರಲ್ ಆಸ್ಪತ್ರೆಯನ್ನು ಜಾಗ್ರತೆ ಸರ್ಕಾರದವರು ಮಂಜೂರು ಮಾಡತಕ್ಕದ್ದು ಅಗತ್ಯ. ಈ ಸಂಬಂಧದಲ್ಲಿ ಮೊದಲೇ ಒಂದು ಲಕ್ಷ ರೂಪಾಯಿ ಗಳನ್ನು ಸರ್ಕಾರದಲ್ಲಿ ಡಿಪಾಜಿಟ್ ಮಾಡಿದ ಪಕ್ಷಕ್ಕೆ, ಸರ್ಕಾರದವರು ತಮ್ಮ ಭಾಗದ ಹಣವನ್ನು ಕೊಡದೆ ನಿಧಾನಮಾಡಿದಲ್ಲಿ ಆಗ ಈ ಹಣ ಮುಲ್ಕ ಬೀಳುತ್ತದೆ. ಆಗ ನಮಗೆ ತುಂಬ ಅನಾನುಕೂಲವಾಗುತ್ತದೆ. ಆದಕಾರಣ ಈ ಬಗ್ಗೆ ಸರ್ಕಾರದವರು ಒಂದು ಖಚಿತ ವಾದಂಥ ಅವರ ಅಭಿಪ್ರಾಯವನ್ನು ತಿಳಿಸಿ ಒಂದು ಭರವಸೆ ಕೊಟ್ಟರೆ ಅವರು ಈ ದಿವಸವೇ ಒಂದು ಲಕ್ಷ ರೂಪಾಯಿಗಳನ್ನು ಕೊಡುವುದಕ್ಕೆ ಸಿದ್ಧವಾಗಿದ್ದಾರೆ. ಆದಕಾರಣ ಈಗಲಾದರೂ ಅಲ್ಲಿಗೆ ಒಂದು ಜನರಲ್ ಆಸ್ಪತ್ರೆಯನ್ನು ಬೇಗ ಮಂಜೂರು ಮಾಡುತ್ತಾರೆಂದು ಆಶಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

*Sri M. PALANIYAPPAN (Ulsoor).—The Medical Department as well as the Public Health Department under the control of the Hon'ble Minister has received elaborate improvements and other things. I must really congratulate the Government for having given him these portfolios. One or two years back we were just complaining that this hospital is bad, that this thing is bad and so on. Now we see that the members are giving a word of praise to the Hon'ble Minister for having brought so many improvements in these departments. I would just add to the improvements that have been made. The Hon'ble Minister was kind enough to give so many good doctors to the Bowring Hospital and I would like to request him just to enlarge the Ophthalmic section and the X-Ray section. That hospital building was constructed to last for only ten years; but it is 22 years since it has been constructed and it needs immediate demolition and re-construction. I would request the Government to sanction at least Rs. 5 lakhs for reconstructing that building.

As Sri Mascarenhas has said, in the case of the old Madras Road T. B. Hospital, there are some people who came forward to make donations. I request the Hon'ble Minister to see that some operation theatres are installed there immediately.

As regards the Lady Curzon Hospital, the Hon'ble Minister was kind enough to post same efficient male doctors there. I know the dearth of Lady doctors. I request him to kindly post the best of the lot he has for that hospital.

I have been repeatedly requesting the Government to send some more doctors for foreign studies, especially ladies. We have hardly one or two F.R.C.S. and after retirement, we will

be having no Lady Surgeons and no Lady Physicians either. So I would urge on the Government to send some more doctors for the study of M.R.C.P., F.R.C.S. and such other courses.

The Malleswaram Hospital for Women and Children needs the attention of the Hon'ble Minister. He was kind enough to grant to that hospital an operation theatre. I would request him to make it a general hospital for women and children in addition to maternity facilities.

Coming to the Public Health Department, I would congratulate him for having the idea of amalgamating both the departments—Medical and Public Health. My only fear is that it should not take much time. He must see that these departments are amalgamated before the 1st of October. The report must be placed before Government and considered as early as possible so that there is no delay, or else more complications would arise after the greater State is formed. Much improvement has been done in the Public Health Department. D.D.T. spraying has been done in all parts of the State. A little more mosquitoes are seen near and round about Bangalore City area. I request the Hon'ble Minister to see that more of D.D.T. spraying and other things are done in these places.

Regarding the shifting of Ayurvedic Hospital, I think the matter has received your attention and if it is shifted to Bangalore and if it is made useful to the people, I will be much obliged.

*ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ಈ ಸಾಲಿನ ಬಡ್ಜೆಟ್ಟಿನಲ್ಲಿ ಈ ಮೆಡಿಕಲ್ ಬಾಬಿಗೆ ಸ್ವಲ್ಪ ಹೆಚ್ಚು ಹಣವನ್ನು ಕೇಳಿದ್ದಾರೆ. ಅದಕ್ಕೆ ಕಾರಣ ಈಗ ಇರತಕ್ಕಂಥ ಮೆಡಿಕಲ್ ಸ್ಕೂಲನ್ನು ತೆಗೆದುಹಾಕಿ ಅದಕ್ಕೆ ಪ್ರತಿಯಾಗಿ ಒಂದು ಮೆಡಿಕಲ್ ಕಾಲೇಜನ್ನು ತೆರೆಯುತ್ತೇವೆಂದು ಹೇಳಿದ್ದಾರೆ. ಇದೊಂದು ಸಂತೋಷಪಡತಕ್ಕ ವಿಚಾರ. ಇದನ್ನು ನಾನು ಸ್ವಾಗತಿಸುತ್ತೇನೆ. ಏತಕ್ಕೆಂದರೆ ಈ ದಿವಸ ಈ ರೋಗಿಗಳಿಗೆ ಉಪಚಾರ ಮತ್ತು ರೋಗ ಚಿಕಿತ್ಸೆ ನಡೆಸುವುದರಲ್ಲಿ ಒಬ್ಬ ವೈದ್ಯರಿಗೂ ಇನ್ನೊಬ್ಬ ವೈದ್ಯರಿಗೂ ಅವರಿಗೆ ಕೊಡತಕ್ಕಂಥ ವಿದ್ಯೆಯಲ್ಲಿ ಹೆಚ್ಚು ಕಡಮೆ ಇತ್ತು. ಹಾಗೆ ಹೆಚ್ಚು ಕಡಮೆ ಇರುವಾಗ ಅವರು ಒಂದೇ ಸಮಾನವಾದಂಥ ಟ್ರೀಟ್‌ಮೆಂಟನ್ನು ಕೊಡುವುದಕ್ಕೆ ಅವಕಾಶವಿರಲಿಲ್ಲ. ಆದರೆ ಈ ದಿವಸ ಇವರೆಲ್ಲರಿಗೂ ಒಂದೇ ಮಟ್ಟದ ವಿದ್ಯಾಭ್ಯಾಸವನ್ನು ಕೊಡಲು ವ್ಯವಸ್ಥೆ ಮಾಡಿದ್ದಾರೆ. ಇದು ಅಗತ್ಯವಾಗಿ ಆಗಬೇಕಾದ್ದು. ಈ ದಿವಸ ಇದನ್ನು ಮಾಡಲು ಸರ್ಕಾರ ಮುಂದೆ ಬಂದುದಕ್ಕಾಗಿ ನಾನು ಸಂತೋಷ ಪಡುತ್ತೇನೆ. ಆದರೆ ಈಗ ಕಾಲೇಜನ್ನು ಪ್ರಾರಂಭಿಸತಕ್ಕ ವೇಳೆಯಲ್ಲೇ ಹೆಚ್ಚು ಮಂದಿ ವಿದ್ಯಾರ್ಥಿಗಳಿಗೆ ವ್ಯಾಸಂಗ ಮಾಡಲು ಅವಕಾಶವನ್ನು ಕೂಡ ಕಲ್ಪಿಸಬೇಕೆಂದು ಹೇಳುತ್ತೇನೆ.

ಇನ್ನು ಮೈಸೂರಿನಲ್ಲಿರುವ ಆಯುರ್ವೇದ ಕಾಲೇಜನ್ನು ಬೆಂಗಳೂರಿಗೆ ವರ್ಗಾಯಿಸುವುದು ಬಹಳ ಒಳ್ಳೆಯದು. ಈಗ ಅಲ್ಲಿ ಕೇವಲ 36 ಬೆಡ್‌ಗಳು ಮಾತ್ರ ಇದ್ದುವು. ಬೆಂಗಳೂರಿನಲ್ಲಿ 136 ಬೆಡ್‌ಗಳಿಗೆ ಅವಕಾಶವಿದೆ. ಆದುದರಿಂದ ಈ ಕಾಲೇಜನ್ನು ಈಗ ಬೆಂಗಳೂರಿಗೆ ವರ್ಗಾಯಿಸುವುದರಿಂದ ಇದರ ಅಭಿವೃದ್ಧಿಗೆ ಒಂದು ಹೆಚ್ಚಿನ ಅವಕಾಶ ದೊರೆತಹಾಗಾಯಿತು. ಈ ಆಯುರ್ವೇದ ಕಾಲೇಜಿಗೆ ಕನಿಷ್ಠಪಕ್ಷ 500 ಬೆಡ್‌ಗಳಾದರೂ ಇರಬೇಕಾಗುತ್ತದೆ. ಅಂಥಾದ್ದರಲ್ಲಿ ಓದತಕ್ಕ ಹುಡುಗರ ಸಂಖ್ಯೆ ಜಾಸ್ತಿಯಿದ್ದು ಅಲ್ಲಿ ಕಡಮೆ ಬೆಡ್‌ಗಳಿದ್ದಾಗ್ಯೂ ಕೇವಲ ಒಂದು ಸ್ಥಳಾಭಿಮಾನಕ್ಕಾಗಿ ಇದನ್ನು ಬದಲಾಯಿಸಕೂಡದೆಂದು ಹೇಳುವುದು ಸರಿಯಾದದ್ದಲ್ಲ. ಇಂಥ ಕಾಲೇಜುಗಳನ್ನು ಮುಖ್ಯವಾಗಿ ವಿದ್ಯಾರ್ಥಿಗಳಿಗೆ ಅನುಕೂಲ ಹೆಚ್ಚಾಗಿರುವ ಕಡೆಗಳಲ್ಲಿ ನಡೆಸತಕ್ಕದ್ದು ಅಗತ್ಯ. ನಾವು ನಮ್ಮ ಆಯುರ್ವೇದ ವೈದ್ಯ ಬಾಬಿಗೆ ಹೆಚ್ಚು ಪ್ರೋತ್ಸಾಹ ನೀಡಬೇಕಾದದ್ದು ಅತ್ಯಾವಶ್ಯಕ. ಇದಕ್ಕಾಗಿ ಬೇಕಾದಂಥ ವಿಜ್ಞಾನವನ್ನು ಪಡೆಯಲು ಸಂಪೂರ್ಣ ಪ್ರಯತ್ನ ನಡೆಸಬೇಕು. ಇದಕ್ಕಾಗಿ ಸಂಶೋಧನೆಗಳನ್ನೂ ಸಹ ನಡೆಸಬೇಕಾಗಿದೆ. ಈ ಹೊತ್ತು ಸಹ ಗ್ರಾಮಾಂತರ ಪ್ರದೇಶಗಳಲ್ಲಿ ಅನೇಕ ರೀತಿಯ ಉತ್ತಮ ಔಷಧಿಗಳನ್ನು ಜನರು ತಯಾರು ಮಾಡುತ್ತಿದ್ದಾರೆ. ಇಂಥಾದ್ದನ್ನೆಲ್ಲಾ ಒಂದು ಕ್ರಮವಾದ ರಿಸರ್ಚಿಗೆ ಒಳಪಡಿಸಿ ಅವುಗಳನ್ನು ಒಂದು ಪೇಟೆಂಟ್ ಮೆಡಿಸಿನ್‌ಗಳ ಮಟ್ಟಕ್ಕೆ ತರಲು ಅನುಕೂಲವಾಗುವಂತೆ ರಿಸರ್ಚ್ ಕಾರ್ಯಗಳು ನಡೆಯಬೇಕು. ಹೀಗೆ ಮಾಡಿದರೇನೇ ಈ ಆಯುರ್ವೇದ ಔಷಧಿಗಳು ಹೆಚ್ಚು ಹೆಚ್ಚಾಗಿ ಜನರ ಬಳಕೆ ಬರುತ್ತವೆ. ಈ ದಿವಸ ಆ ಇಂಗ್ಲೀಷ್ ಔಷಧಿಗೆ ದುಡ್ಡನ್ನು ತೆರಲು ನಮ್ಮ ಜನರಿಗೆ ಶಕ್ತಿ ಇಲ್ಲ. ಆದಷ್ಟು ಬೇಗ ಪರದೇಶದ ಔಷಧಿಗಳಿಗೆ ದುಡ್ಡನ್ನು ಹಾಕುವುದನ್ನು ನಾವು ತಡೆಗಟ್ಟಬೇಕು. ನಮ್ಮ ಆಯುರ್ವೇದ ಔಷಧಿಗಳಿಗೆ ಉತ್ತೇಜನ ದೊರೆಯುವಂತೆ ಕಾರ್ಯಕ್ರಮ ಕೈಗೊಳ್ಳಬೇಕು. ಅದಕ್ಕಾಗಿ ಈ ವೈದ್ಯ ಬಾಬಿಗೆ ಸರ್ಕಾರ ಹೆಚ್ಚು ಹಣವನ್ನು ಒದಗಿಸಬೇಕಾದದ್ದು ಅತ್ಯಗತ್ಯ. ಇನ್ನು ಈ ಸರ್ಟಿಫಿಕೇಟುಗಳನ್ನು ಕೊಡತಕ್ಕ ವಿಚಾರದಲ್ಲಿ ಒಂದು ಸರಿಯಾದ ವ್ಯವಸ್ಥೆ ಮಾಡಬೇಕು. ಇದಕ್ಕಾಗಿ ಸರ್ಕಾರ ಒಂದು ತಜ್ಞರ ಸಮಿತಿಯನ್ನು ನೇಮಿಸುವುದು ಅತ್ಯಗತ್ಯ.

2-30 P.M.

ಮೂರನೆಯದಾಗಿ ಡಾ. ಮೋದಿಯವರ ವಿಚಾರ ಅನೇಕರು ಹೇಳಿದ್ದಾರೆ. ಅವರು 1954ನೇ ಏಪ್ರಿಲ್‌ನಿಂದ 2,919 ಜನಕ್ಕೆ ಚಿಕಿತ್ಸೆ ಮಾಡಿದ್ದಾರೆ. ನಾನು ಅನೇಕ ಕಡೆ ನೋಡಿದ್ದೇನೆ. ಹಳ್ಳಿಗಳಿಗೆ ಹೋಗಿ ಸ್ವಲ್ಪವೂ ಖರ್ಚಿಲ್ಲದೆ, ಯಾರಿಗೂ ತೊಂದರೆಯಿಲ್ಲದಂತೆ ಬಡಬಗ್ಗರನ್ನೂ ಕರೆಸಿಕೊಂಡು ಅವರೆಲ್ಲರಿಗೂ ಚಿಕಿತ್ಸೆ ಮಾಡತಕ್ಕ ನವೀನ ಪದ್ಧತಿಯನ್ನನುಸರಿಸಿ ಅವರು ನಿಸ್ವಾರ್ಥತೆಯಿಂದ ಕೆಲಸಮಾಡುತ್ತಾ ಇದ್ದಾರೆ. ಅವರಿಗೆ ಸರ್ಕಾರದವರು ಪ್ರೋತ್ಸಾಹ ಕೊಟ್ಟಿರುವುದು ಬಹಳ ಸಂತೋಷ. ಹಿಂದಿನ ವರ್ಷಗಳಲ್ಲಿ ಅವರಿಗೆ ಸ್ವಲ್ಪ ಹಣವನ್ನು ಬಡ್ಜೆಟ್ಟಿನಲ್ಲಿ ಒದಗಿಸಿದ್ದೀರಿ. ಈ

(ಶ್ರೀ ಬಿ. ಹುಚ್ಚೇಗೌಡ.)

ವರ್ಷ ಒದಗಿಸದೇಯಿರುವುದು ಸರಿಯಲ್ಲ, ಅದನ್ನು ತಕ್ಷಣ ಒದಗಿಸಿಕೊಡಬೇಕು. ಭಾರತ ಸರ್ಕಾರದವರು ಅವರಿಗೆ ಪದ್ಮಶ್ರೀ ಎಂಬ ಬಿರುದನ್ನು ಕೊಟ್ಟು ಸನ್ಮಾನಿಸಿರುವುದು ನಮ್ಮ ದೇಶಕ್ಕೆ ಹೆಮ್ಮೆಯ ವಿಷಯವಾಗಿದೆ. ಅಂಥವರಿಗೆ ಕಡ್ಡಾಯವಾಗಿ ಪ್ರೋತ್ಸಾಹ ಕೊಡಬೇಕಾದ್ದು ಅತ್ಯವಶ್ಯಕ ಎಂದು ಹೇಳುತ್ತೇನೆ.

ಮೆಡಿಕಲ್ ಡಿಪಾರ್ಟ್‌ಮೆಂಟು ಮತ್ತು ಹೆಲ್ತ್ ಡಿಪಾರ್ಟ್‌ಮೆಂಟ್ ಎರಡನ್ನೂ ಒಟ್ಟುಗೂಡಿಸಬೇಕೆಂದು 8-10 ವರ್ಷಗಳಿಂದಲೂ ಒತ್ತಾಯ ಮಾಡುತ್ತಾ ಇದ್ದೇವೆ. ಇಂಡಿಯಾ ಸರ್ಕಾರದವರು ಈ ಸ್ಕೀಂನ್ನು ಅನುಮೋದಿಸಿರುವುದು ಒಂದು ಒಳ್ಳೆಯ ಸಂಗತಿಯೇ ಆಗಿದೆ. ಏಕೆಂದರೆ ಇಬ್ಬರೂ ಕೂಡ ಒಂದೇ ಕೆಲಸ ಮಾಡುವವರು. ಒಬ್ಬರ ಕೆಲಸ ಇನ್ನೊಬ್ಬರು ಮರೆತು ಹೋಗುವುದು ಸರಿಯಲ್ಲ. ಆರೋಗ್ಯ ರಕ್ಷಣೆ ಮತ್ತು ಖಾಯಿಲೆಗಳನ್ನು ತಡೆಗಟ್ಟುವುದು ಇವೆರಡೂ ಒಟ್ಟುಗೂಡಿದರೆ ಅನೇಕ ಖರ್ಚುಗಳು ಕಡಿಮೆಯಾಗುತ್ತವೆ. ಇದಕ್ಕೇ ಒಬ್ಬರು ಅದಕ್ಕೇ ಒಬ್ಬರು ಹೋಗಿ ಗ್ರಾಮಾಂತರಗಳಲ್ಲಿ ಕೆಲಸ ಮಾಡುವುದರಿಂದ ಒಂದೇ ಕೆಲಸವನ್ನು ಇಬ್ಬರು ಮಾಡಿದ್ದ ಹಾಗಾಗುತ್ತದೆ. ಅದೂ ಅಲ್ಲದೆ ಇವರನ್ನೂ ಎಕ್ಸಿಕ್ಯೂಟಿವ್ ಕೆಲಸಕ್ಕೆ ಹಾಕಿದರೆ ಅವರು ಕಲಿತದ್ದು ಕೂಡ ಮರೆತು ಹೋಗುತ್ತದೆ. ಆದ್ದರಿಂದ ಎರಡನ್ನೂ ಒಟ್ಟುಗೂಡಿಸುವುದು ಬಹಳ ಒಳ್ಳೆಯದು. ಇಥನ್ನು ಆದಷ್ಟು ಜಾಗ್ರತೆ ಜಾರಿಗೆ ತರಬೇಕೆಂದು ಹೇಳುತ್ತೇನೆ. ಸ್ಕಾಲರ್‌ಷಿಪ್ ಕೊಡುವ ವಿಚಾರದಲ್ಲಿ ಸಾಕಾದಷ್ಟು ಪರೀಕ್ಷೆ ಮಾಡಬೇಕು. ನಮ್ಮಲ್ಲಿ ಒಂದು ಸ್ಕಾಲರ್‌ಷಿಪ್ ಕಮ್ಮಿ ಇದೆ. ಯಾರ್ಯಾರನ್ನು ಯಾವ್ಯಾವ ಶಾಸ್ತ್ರಕ್ಕೆ ಓದಲು ಕಳುಹಿಸಬೇಕೆಂಬ ವಿಚಾರದಲ್ಲಿ ಸಲಹೆ ಮಾಡಲು ಆ ಸಮಿತಿಯಲ್ಲಿ ಡೈರೆಕ್ಟರ್ ಆಫ್ ಮೆಡಿಕಲ್ ಸರ್ವಿಸಸ್ ಇಲ್ಲ. ಚಿಕ್ಕ ಮಕ್ಕಳ ವ್ಯಾಧಿಗಳಿಗೆ ಚಿಕಿತ್ಸೆ ಮಾಡಲು ಪ್ರವೀಣರಾದ ಡಾಕ್ಟರು ಬೇಕೆಂದು ಮೂರು ವರ್ಷಗಳಿಂದ ಕೇಳಿದರೂ ಕೂಡ ಇನ್ನೂ ಯಾರನ್ನೂ ಕಳುಹಿಸಿಲ್ಲ. ಏಕೆಂದರೆ ಆ ಕಮಿಟಿಯವರು ಮಾಡಿರತಕ್ಕ ಲಿಸ್ಟ್‌ನಲ್ಲಿ ಯಾರನ್ನೂ ಸೇರಿಸಿಲ್ಲ. ಇಂಥ ರೋಗಕ್ಕೆ ಇಂಥ ಚಿಕಿತ್ಸೆ ಮಾಡಬೇಕು ಎಂಬುದನ್ನು ಕಂಡುಹಿಡಿದು ತಕ್ಕ ವ್ಯವಸ್ಥೆ ಮಾಡಲು ಪ್ರವೀಣರ ಅವಶ್ಯಕತೆ ಬಹಳವಾಗಿದೆ. ಇದಕ್ಕೆ ಹೆಚ್ಚು ಗಮನ ಕೊಟ್ಟಿಲ್ಲ. ಯಾವಯಾವ ಶಾಸ್ತ್ರದಲ್ಲಿ ವ್ಯಾಸಂಗ ಮಾಡಿ ಬರಬೇಕು ಎಂದು ವಿದ್ಯಾರ್ಥಿಗಳನ್ನು ಚುನಾಯಿಸುವ ಸಮಿತಿಯಲ್ಲಿ ಡೈರೆಕ್ಟರ್ ಆಫ್ ಮೆಡಿಕಲ್ ಸರ್ವೀಸಸ್‌ರವರೂ ಕೂಡ ಒಬ್ಬರು ಸದಸ್ಯರಾಗಿದ್ದರೆ ಅನುಕೂಲವಾಗುತ್ತದೆ ಎಂದು ಈ ಸಮಯದಲ್ಲಿ ಸರ್ಕಾರದವರ ಗಮನಕ್ಕೆ ತರುತ್ತೇನೆ. ಒಟ್ಟಿನಲ್ಲಿ ಸ್ತ್ರೀಯರು ಮತ್ತು ಮಕ್ಕಳಿಗೆ ಬೇಕಾಗತಕ್ಕ ವೈದ್ಯಕೀಯ ಸಹಾಯವನ್ನು ಹೆಚ್ಚಾಗಿ ಒದಗಿಸಬೇಕು. ಅದರಲ್ಲೂ ಗ್ರಾಮಾಂತರ ಪ್ರದೇಶಗಳಲ್ಲಿ ಮುಖ್ಯವಾಗಿ ತಾಲ್ಲೂಕು ಹೆಡ್‌ಕ್ವಾರ್ಟರಿನಲ್ಲಿ ಮೆಟರ್ನಿಟಿ ಆಸ್ಪತ್ರೆ ಮತ್ತು ರೋಗಿಗಳ ಚಿಕಿತ್ಸೆಗೆ ತಕ್ಕ ಆಸ್ಪತ್ರೆಗಳನ್ನು ಒದಗಿಸಿಕೊಟ್ಟು ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಈಗ ವೈದ್ಯಕೀಯ ವಿಚಾರದಲ್ಲಿ ಈ ಸಭೆಯ ಅನೇಕ ಮಾನ್ಯ ಸದಸ್ಯರುಗಳು ಹೆಚ್ಚಿನ ನಿಗಾ ವಹಿಸಬೇಕೆಂದು ಸರ್ಕಾರದವರಿಗೆ ಹೇಳಿದ್ದಾರೆ. ಮೈಸೂರು ಸಂಸ್ಥಾನದಲ್ಲಿ ಈಗ ನಾಲ್ಕು ವರ್ಷದಿಂದಲೂ ಕೂಡ ಈ ವೈದ್ಯ ಸಹಾಯದ ವಿಷಯದಲ್ಲಿ ಬಹಳ ಹೆಚ್ಚಿನ ಅನುಕೂಲಗಳನ್ನು ಗ್ರಾಮಾಂತರಗಳಿಗೂ ಮತ್ತು ಪಟ್ಟಣಗಳಿಗೂ ಒದಗಿಸಿ ಸರ್ಕಾರದವರು ಬಹಳ ಒಳ್ಳೆಯ ಕೀರ್ತಿಯನ್ನು ಗಳಿಸಿದ್ದಾರೆ ಎಂದು ನಾನು ಹೇಳುತ್ತೇನೆ. ವಿಕ್ಟೋರಿಯಾ ಆಸ್ಪತ್ರೆ, ಕ್ಷಯದ ಆಸ್ಪತ್ರೆ, ಹುಚ್ಚಾಸ್ಪತ್ರೆ, ಕಣ್ಣಾಸ್ಪತ್ರೆ ವಗೈರೆ ಆಸ್ಪತ್ರೆಗಳಲ್ಲೂ ಅದರಲ್ಲೂ ಹೆರಿಗೆ ಆಸ್ಪತ್ರೆಗಳಿಗೂ ಬರತಕ್ಕ ಕೇಸುಗಳಿಗೆ ಸ್ಥಳವಿಲ್ಲದೆ ಬಹಳ ತಾಪತ್ರಯವಾಗುತ್ತಾ ಇದೆ. ಕಾರಣ ಸಂಸ್ಥಾನದಲ್ಲಿ ಪ್ರಜಾ ಸಂಖ್ಯೆ ಜಾಸ್ತಿಯಾಗಿ, ಪರಸ್ಥಳದ ಅನೇಕ ಜನರು ಈ ಊರಿಗೆ ಬಂದು ವಾಸ ಮಾಡುತ್ತಿರುವುದರಿಂದ ಬೆಂಗಳೂರಿನ ಹೆರಿಗೆ ಆಸ್ಪತ್ರೆಗೆ ಬರತಕ್ಕ ಕೇಸುಗಳಿಗೆ ಬಹಳ ಕಷ್ಟವಾಗಿದೆ ಎಂಬುದನ್ನು ನಾನು ಹೇಳುತ್ತಿರುವುದೇ ಅಲ್ಲದೆ, ಮಾನ್ಯ ಮಂತ್ರಿಗಳು ಪರಿಶೀಲನೆ ಮಾಡಿದಾಗ ಅವರ ಗಮನಕ್ಕೂ ಬಂದಿದೆ. ಕ್ಷಯದ ಆಸ್ಪತ್ರೆಯಲ್ಲೂ ಕೂಡ ಅದೇ ಕಷ್ಟ ಬಂದಿದೆ. ಕಟ್ಟಡದ ಅಭಾವ ಬಹಳ ಜಾಸ್ತಿಯಾಗಿದೆ. ಇದಕ್ಕೆ ಹೆಚ್ಚು ಗಮನ ಕೊಟ್ಟು ಪ್ರಜೆಗಳಿಗೆ ಅನುಕೂಲ ಕಲ್ಪಿಸಿಕೊಡಬೇಕೆಂದು ಹೇಳುತ್ತೇನೆ. ಹಳ್ಳಿಗಳಲ್ಲಿರತಕ್ಕ ಆಸ್ಪತ್ರೆಗಳಿಗೆ ಔಷಧಿಗಳನ್ನು ಈಗ ಒದಗಿಸುತ್ತಿರುವುದಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಒದಗಿಸಬೇಕು. ಈಗ ಒದಗಿಸುತ್ತಿರುವ ಔಷಧಿಗಳು ಸ್ವಲ್ಪ ಕಮ್ಮಿ ಮತ್ತು ಎಲ್ಲರಿಗೂ ಅನುಕೂಲವಾದ ರೀತಿಯಲ್ಲಿ ಒದಗಿಸುತ್ತಾ ಇಲ್ಲ. ಗ್ರಾಮಾಂತರದಲ್ಲಿ ಸಂಚಾರದ ಆಸ್ಪತ್ರೆಯ ಏರ್ಪಾಡು ಮಾಡಿದ್ದೀರಿ. ಮಾಗಡಿಯಲ್ಲಿ ಆ ರೀತಿಯ ಸೌಲಭ್ಯ ಒದಗಿಸಬೇಕೆಂದು ಕೇಳಿಕೊಂಡಿದ್ದೆ. ಇನ್ನೂ ಅಲ್ಲಿಗೆ ಆ ಸೌಲಭ್ಯವನ್ನು ಒದಗಿಸಿ ಕೊಟ್ಟಿಲ್ಲ. ಅದು ಬೆಟ್ಟ ಗುಡ್ಡಗಳಿಂದ ಕೂಡಿರತಕ್ಕ ಪ್ರದೇಶ, ಒಂದು ಲಕ್ಷ ಐವತ್ತು ಸಾವಿರ ಪ್ರಜಾ ಸಂಖ್ಯೆ ಇದೆ. ಅಲ್ಲಿಗೆ ಆ ಸೌಲಭ್ಯವನ್ನು ಒದಗಿಸಿಕೊಟ್ಟು ಈಗ ಏರ್ಪಾಡಾಗಿರತಕ್ಕ ಕಂಬೈನ್ಡ್ ಡಿಸ್ಪೆನ್ಸರಿಗೆ ಒಂದು ಕಟ್ಟಡವನ್ನು ಕಟ್ಟಿಸಿಕೊಡುವುದರ ಮೂಲಕ ನಮ್ಮ ಹಳ್ಳಿಗೆ ಹೆಚ್ಚಿನ ವೈದ್ಯ ಸಹಾಯ ಒದಗುವಂತೆ ಮಾಡಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*Sri P. M. SWAMIDURAI (Kolar Gold Fields—Scheduled Castes).—There are very good Hospital buildings in the Kolar Gold Fields. They are in use and are provided with good apparatus—'X' ray appartus and other things. I really appreciate it. But medicines there are not sufficient to be available for the patients there. This complaint we always receive there, especially from the poor people. So the Government must supply a lot of medicine.

I am a member of the Board of Visitors. I see a lot of medicines there. But I cannot understand why the patients do not get the medicines. They are asked to purchase medicines and give them to doctors for the use of patients. It is a labour area where poor people live and the Government must see that the doctors use the medicines supplied and satisfy their patients.

With regard to administration, I want to remind the Health Minister that there are a lot of complaints. Recently also there was a representation by the association representin · the workers in the hospital and they have submitted a petition to the Government. They come and worry me about this. I am very shy of speaking about all these things. Therefore I remind the Hon'ble Minister to take proper steps to see that these things are set right.

The labour area must have a T.B. Sanatorium. Of course it is being constructed now, at Kolar. But in Gold Fields there must be a sanatorium. Because it is a necessity for the underground workers who get contact with syllicosis which is closely related to T.B. So I request Government to provide a sanatorium to Kolar Gold Fields.

I request Government to start a Sick Nurses' Training Centre there. The Civil Hospital is a good one and I request the Government to start the training centre there.

Please provide also Government scholarship to depressed classes.

* ಶ್ರೀ ಎ. ವೆಂಕಟಪ್ಪ (ಚನ್ನಪಟ್ಟಣ).—ಸ್ವಾಮಿ, ಹೇಳದೆ ಇದ್ದರೆ ವಿಧಿಯಿಲ್ಲ, ಹೇಳಿದರೆ ಸರಿಯಿಲ್ಲ. ಏನೇ ಆದರೂ ಹೇಳಿಯೇಬಿಡೋಣವೆಂದು ನಾನು ನಿಂತಿದ್ದೇನೆ. ಇವರು ಮಾಡಿರುವ ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಲೋಕಲ್ ಫಂಡ್ ಡಿಸ್ಪೆನ್ಸರಿಯನ್ನು ಪ್ರಾರಂಭ ಮಾಡಬೇಕೆಂದು ಹೇಳಿ 4 ಲಕ್ಷದ 15 ಸಾವಿರ, 4 ಲಕ್ಷದ 28 ಸಾವಿರ ಮತ್ತು 2 ಲಕ್ಷದ 94 ಸಾವಿರ—ಈ ರೀತಿಯಾಗಿ provide ಮಾಡಿಕೊಂಡಿದ್ದರು. ಈ ವರ್ಷ ಎರಡನೆಯ ಪಂಚವಾರ್ಷಿಕ ಯೋಜನೆಯ ಪ್ರಕಾರ ಹಾಕಿಕೊಂಡಿರುವುದು 50 ಸಾವಿರ. ಇವರು ಹಣ provide ಮಾಡುವುದರ ರೀತಿ ನೀತಿಯೇ ನನಗೆ ಅರ್ಥವಾಗುವುದಿಲ್ಲ. ಮೈಸೂರು ದೇಶದಲ್ಲಿ ಆಗಬೇಕಾದ ಲೋಕಲ್ ಫಂಡ್ ಡಿಸ್ಪೆನ್ಸರಿಗಳೆಲ್ಲಾ ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲೇ ಆಗಿಹೋಗಿದೆಯೋ ಗೊತ್ತಿಲ್ಲ! ಏಕೆಂದರೆ ಇವುಗಳಿಗೆ ಇಷ್ಟು ಕಡಿಮೆ ಹಣ provide ಮಾಡಿದ್ದಾರೆ. ಎಕ್ವಿಪ್‌ಮೆಂಟ್ ಸಾಲದೆಂದು ಹೇಳಿ ಮೇಜರ್ ಆಸ್ಪತ್ರೆಗಳಿಗೆ ಲಕ್ಷಾಂತರ ರೂಪಾಯಿಗಳನ್ನು provide ಮಾಡುತ್ತಲೇ ಇದ್ದೀರಿ. ನಾನು ಮೊದಲಿನಿಂದಲೂ ಹೇಳುತ್ತಿದ್ದೇನೆ; ಶ್ರೀ ಪಟ್ಟಾಭಿರಾಮಯ್ಯರವರು ಬಹಳ ವಿಶದವಾಗಿ ಕೂಡ ಅದನ್ನೇ ಹೇಳಿದ್ದಾರೆ. ಪ್ರೈಯಾರಿಟಿ ನೋಡಿಕೊಂಡು ಯಾವುದನ್ನು ಮೊದಲು ಮಾಡಬೇಕು, ಯಾವ ಯಾವವುದಕ್ಕೆ ಮೊದಲಿನ ಪ್ರಾಶಸ್ತ್ಯವನ್ನು ಕೊಡಬೇಕೆಂಬುದನ್ನು ಯೋಚನೆ ಮಾಡವುದು ಒಳ್ಳೆಯದು. ಮೊದಲು ಎಲ್ಲಿ ಅವಶ್ಯಕವೋ, ಎಲ್ಲಿ ಏನೂ ಅನೂಕೂಲಗಳಿಲ್ಲವೋ ಅಂಥಕಡೆ ಆಸ್ಪತ್ರೆಗಳನ್ನೂ ಮತ್ತು ಇತರ ಅನುಕೂಲಗಳನ್ನೂ ಕೊಡುವುದಕ್ಕೆ ಪ್ರಯತ್ನ ಮಾಡುವುದು ನ್ಯಾಯ ಮತ್ತು ಧರ್ಮ. ಹೋದ ಸಾರಿ ನಾನು ಇದೇ ವಿಷಯವನ್ನು ಹೇಳಿದ್ದಕ್ಕೆ ಮುಖ್ಯ ಮಂತ್ರಿಗಳು, ನಾನು ಹೇಳುವುದು ಸರಿ, ಎಲ್ಲಿ ಕಷ್ಟವಿದೆಯೋ ಅಲ್ಲಿಗೆ ಮೊದಲು ಅನುಕೂಲವನ್ನು ಕಲ್ಪಿಸಿಕೊಡುವುದು ನ್ಯಾಯವೆಂದು ಒಪ್ಪಿದರು. ಆದರೆ ಅವರು ಹೇಳುವುದೆಲ್ಲಾ ಕೇವಲ lip sympathy ಯೆಂದು ಕಾಣುತ್ತದೆ; ಕಿವಿಗೆಹಿತವಾದ ಮಾತುಗಳನ್ನಾಡುತ್ತಾರೆಯೇ ಹೊರತು ನಿಜವಾಗಿ ಅಷ್ಟು ಹಣ provide ಮಾಡಿಲ್ಲ. ಜೊತೆಗೆಹಣ provide ಮಾಡಿದ್ದರಲ್ಲೂ ಎಲ್ಲೆಲ್ಲಿ ಅವಶ್ಯಕತೆಯಿದೆಯೋ, ಎಲ್ಲೆಲ್ಲಿ ವೈದ್ಯ ಸಹಾಯದ ತೊಂದರೆಯಿದೆಯೋ ಅಲ್ಲಿಗೆ ಸಹಾಯ ದೊರಕಿಸುವ ಏರ್ಪಾಡು ಮಾಡಿಲ್ಲ. ಇಂಥ ಸ್ಥಿತಿಯಲ್ಲಿರುವಾಗ ಈಗ 50,000 ರೂಪಾಯಿಗಳನ್ನು ಮಾತ್ರ provide ಮಾಡಿಕೊಂಡರೆ ಈ ಅನ ಕೂಲತೆಗಳನ್ನೆಲ್ಲಾ ಒದಗಿಸುವುದಕ್ಕೆ ಸಾಧ್ಯವೇ? ನಾನು ಚನ್ನಪಟ್ಟಣ ತಾಲ್ಲೂಕಿನ ವಿಷಯ ಹೇಳಿದರೆ, ಶ್ರೀ ಚನ್ನಬಸಪ್ಪನವರು, ಚನ್ನಪಟ್ಟಣದಲ್ಲಿ ಒಂದೇ ಆಸ್ಪತ್ರೆಯಿದ್ದು ಎಲ್ಲ ಕೆಲಸವನ್ನೂ ಸರಿಯಾಗಿ ನಡೆಸುತ್ತಿರುವಾಗ ಬೇರೇ ಆಸ್ಪತ್ರೆಯೇಕೆ ಎಂದು ಹೇಳುತ್ತಲೇ ಇರುತ್ತಾರೆ. ನಮ್ಮ ತಾಲ್ಲೂಕಿಗೆಲ್ಲಾ ಒಂದೇ ಒಂದು dispensary ಯಿದೆ. ಒಂದು Mobile Van ಆದರೂ ಮಾಡಿಕೊಟ್ಟರೆ ನಮ್ಮ ತಾಲ್ಲೂಕಿನವರಿಗೆ ಹೆಚ್ಚು ಪ್ರಯೋಜನವಾಗುತ್ತದೆಂದು ಹೇಳಿದರೆ, ಅದಕ್ಕೂ ಏನೂ ಹೇಳುತ್ತಿಲ್ಲ.

ವಿಕ್ಟೋರಿಯಾ ಆಸ್ಪತ್ರೆಯ ವಿಷಯದಲ್ಲಿ ಹೇಳುವುದು ಬೇಕಾದಷ್ಟಿದೆ. ದೊಡ್ಡದಾಗಿ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ Surgical Block ನ್ನು ಕಟ್ಟಿದ್ದಾರೆ. ಆದರೆ ಅದಕ್ಕೆ equipment ಇಲ್ಲ. ಮತ್ತು ಸ್ಪೆಷಲ್ ವಾರ್ಡ್‌ಗಳೆಂದುಬಿಟ್ಟರೆ ಪ್ರತಿಯೊಂದಕ್ಕೂ ಅಲ್ಲಿಗೆ ಬರುವ ರೋಗಿಗಳು ಖರ್ಚು ವಹಿಸಿಕೊಳ್ಳಬೇಕೆಂದು ಮಾಡಿದ್ದೀರಿ. ಒಂದೊಂದು ಆಪರೇಷನ್‌ಗೆಂದರೆ 50—60—100 ರೂಪಾಯಿಗಳವರೆಗೂ ಚಾರ್ಜ್ ಮಾಡುತ್ತಾರೆ. ಇಷ್ಟೆಲ್ಲಾ ಆದರೂ ಅಲ್ಲಿನ ಏರ್ಪಾಡಾದರೂ ಸಮರ್ಪಕವಾಗಿದೆಯೇ? ಹತ್ತು ಹಾಸಿಗೆಗಳಿಗೆ ಒಬ್ಬರಿದ್ದರೆ ನೋಡಿಕೊಳ್ಳುವುದಕ್ಕೆ ಸಾಧ್ಯವೇ? ಪುಣ್ಯವಂತರಾಗಿದ್ದ ಮಾತ್ರಕ್ಕೇ ಜನ ಸಹಾಯ, ಎಲ್ಲಾ ಅನುಕೂಲವೂ ಇರುತ್ತದೆಂದು ಹೇಳುವುದಕ್ಕಾಗುವುದಿಲ್ಲ. ರೋಗಿ ಕೂಗಿಕೊಂಡರೂ ಎಷ್ಟೋ ವೇಳೆ ಕೇಳುವವರಿಲ್ಲ. ಅಲ್ಲದೆ, ಇನ್ನೊಂದು ವಿಷಾದ ಪರಿಸ್ಥಿತಿಯೇನೆಂದರೆ, ಇಂಥ ದೊಡ್ಡ ಆಸ್ಪತ್ರೆಗೊಂದು electric ಲಾಂಡ್ರಿ ಇಲ್ಲ! ಆ ಬಟ್ಟೆಗಳನ್ನು ನೋಡಿದರೆ ನನಗಂತೂ ಭಯವಾಗುತ್ತದೆ. ಬಟ್ಟೆಗಳೆಲ್ಲಾ ಬರೀ ನೀಲಿ ಬಣ್ಣವಾಗಿರುತ್ತದೆ ಅಷ್ಟೆ. ಏನು ತಪ್ಪಿದ್ದರೂ ಕಾಣುವುದಕ್ಕೆ ಅವಕಾಶವಿರಬಾರದು ಎಂದು ನೀಲಿಯನ್ನು ಭರ್ತಿಮಾಡಿರುತ್ತಾರೆ. ವಿದ್ಯುಚ್ಛಕ್ತಿ ಬೇಕಾದಷ್ಟು ಸಿಕ್ಕುತ್ತಿರುವ ಇಂಥ ಸ್ಥಳದಲ್ಲಿ ಒಂದು ಎಲೆಕ್ಟ್ರಿಕ್ ಲಾಂಡ್ರಿ ಇಲ್ಲವಲ್ಲ. ಹೋದ ಸಲ ಇದನ್ನೇ ಹೇಳಿದ್ದಕ್ಕೆ, ಇದನ್ನು ಮಾಡಿದರೆ ಅಗಸನಿಗೆ ಕೆಲಸ ಹೋದಂತಾಗುತ್ತದೆಂದು ವಾದಿಸಿದರು. ಇದೆಲ್ಲಾ ಉಪಚಾರದ ಮಾತು. ಅವನಿಗೆ ಬೇಕಾದಷ್ಟು ಕೆಲಸವಿದೆ. ಸಂಬಳ ಅವನಿಗೆ ಕೊಡಬೇಡವೆಂದು ನಾನು ಹೇಳುವುದಿಲ್ಲ. ಆದ್ದರಿಂದ ನಮ್ಮ ದೇಶದಲ್ಲಿರುವ ಆಸ್ಪತ್ರೆ ಚೆನ್ನಾಗಿರುವಂತೆ ಮಾಡಬೇಕಾದರೆ ಏನೇನು ಮಾಡಬೇಕೋ ಅದನ್ನು ಮಾಡುವುದು ಸರ್ಕಾರದವರ ಕರ್ತವ್ಯವೆಂದು ಹೇಳಿ ನಾನು ಮುಗಿಸುತ್ತೇನೆ.

ಶ್ರೀ ಟಿ. ಚನ್ನಯ್ಯ (ಜನಾರೋಗ್ಯ ಮತ್ತು ಸ್ಥಳೀಯ ಸಂಸ್ಥೆಗಳ ಮಂತ್ರಿಗಳು).—ಸ್ವಾಮಿ, ಅನೇಕ ಮಾನ್ಯ ಸದಸ್ಯರು ಆಸ್ಪತ್ರೆಗಳಲ್ಲಿರತಕ್ಕ ಕೆಲವು ನ್ಯೂನತೆಗಳ ವಿಷಯದಲ್ಲಿ ಮಾತನಾಡಿದ್ದಾರೆ. ಸದ್ಯಕ್ಕೆ ನಾನು ಎಲ್ಲಕ್ಕೂ ಉತ್ತರ ಕೊಡುವುದಕ್ಕೆ ಹೋಗದೆ ಅವಶ್ಯಕವಾದ ಕೆಲವು ವಿಷಯಗಳಿಗೆ ಮಾತ್ರ ಉತ್ತರ ಕೊಡಲು ಪ್ರಯತ್ನಪಡುತ್ತೇನೆ.

ಮೊಟ್ಟಮೊದಲನೆಯದಾಗಿ ಶ್ರೀ ನಾರಾಯಣ ಸ್ವಾಮಿಯವರು ಮೆಡಿಕಲ್ ಸ್ಕೂಲನ್ನು ಯಾವ ಕಾರಣವೂ ಇಲ್ಲದೆ ತೆಗೆದು ಹಾಕಿದ್ದು ಸರಿಯಲ್ಲವೆಂದು ಹೇಳಿದರು. ಇಂಡಿಯಾದೇಶದಲ್ಲೇ ಬೇರೆ ಯಾವ ಸಂಸ್ಥಾನದಲ್ಲೂ ಮೆಡಿಕಲ್ ಸ್ಕೂಲ್ ಎಂಬುದಿಲ್ಲ, ಈ ಕಾರಣದಿಂದ ನಮಗೆ ಮೆಡಿಕಲ್ ಕೌನ್ಸಿಲ್‌ನವರು ಒತ್ತಾಯ ಮಾಡುತ್ತಿದ್ದಾರೆ. ಇಡೀ ಇಂಡಿಯಾ ದೇಶದಲ್ಲಿ ಒಂದು Uniform Standard of Education ಇರಬೇಕೆಂಬ ದೃಷ್ಟಿಯಿಂದ ನಮಗೆ ಪದೇಪದೇ ನಮ್ಮ ಮೆಡಿಕಲ್ ಸ್ಕೂಲಿನ ವಿಷಯ ಹೇಳುತ್ತಿದ್ದರು. ಮತ್ತು ಹೈದರಾಬಾದಿನಲ್ಲಿ ನಡೆದ ಮೀಟಿಂಗ್‌ನಲ್ಲಿಯೂ ಮತ್ತು ಟ್ರಿವಾಂಡ್ರಂನಲ್ಲಿ ಆದ ಮೀಟಿಂಗ್‌ನಲ್ಲಿಯೂ ನಿರ್ಣಯಮಾಡಿ ಈ ಅಂಶವನ್ನೇ ಒತ್ತಾಯ ಮಾಡಿ ಹೇಳಿದರು. ನಾವೇನೋ ಇದುವರೆಗೂ ತಡ ಮಾಡಿಕೊಂಡೇ ಬಂದೆವು; ಮೈಸೂರು ಸಂಸ್ಥಾನದಲ್ಲಿ ಹಿಂದಿನಿಂದಲೂ ಮೆಡಿಕಲ್ ಸ್ಕೂಲಿನಲ್ಲಿ L.M.P. ಪಾಸ್ ಮಾಡಿದವರಿದ್ದು ಅವರು ಸರ್ವಿಸ್ಸಿನಲ್ಲಿದ್ದಾರೆ. ನಮ್ಮಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚಿನ ಆಸ್ಪತ್ರೆಗಳಿರುವುದರಿಂದ, ಮತ್ತು ಆ ಆಸ್ಪತ್ರೆಗಳಿಗೆ ಎಂ. ಬಿ. ಬಿ. ಎಸ್. ಪಾಸ್ ಮಾಡಿದವರನ್ನು ಹಾಕುವುದಕ್ಕೆ ಸಾಧ್ಯವಿಲ್ಲದಿರುವುದರಿಂದ ಎಲ್.ಎಂ.ಪಿ. ಯವರಾದರೆ ಹಾಕಬಹುದು ಮತ್ತು ಅವರು ಹೋಗುತ್ತಾರೆಂದು ಹೇಳಿ ಇದುವರೆಗೂ L.M.P. ಕೋರ್ಸನ್ನು ಇಟ್ಟುಕೊಂಡೆವು. ಆದರೆ ಇತ್ತೀಚೆಗೆ ಆಲ್ ಇಂಡಿಯಾ ಮೆಡಿಕಲ್ ಕೌನ್ಸಿಲ್‌ನವರ ಒತ್ತಾಯ ಜಾಸ್ತಿಯಾದ್ದರಿಂದ ಮತ್ತು ಮೈಸೂರಿನಲ್ಲೊಂದು ಬೆಂಗಳೂರಿನಲ್ಲೊಂದು ಮೆಡಿಕಲ್ ಕಾಲೇಜಿದ್ದು, ಮೆಡಿಕಲ್ ಸ್ಕೂಲನ್ನು continue ಮಾಡುವುದು ಸರಿಯಲ್ಲವೆಂದು ಭಾವಿಸಿ, ನಮ್ಮ ಸರ್ಕಾರದವರು ಇತರ ಸಂಸ್ಥಾನಗಳಲ್ಲಿರುವಂತೆ ಇರಬೇಕೆಂದು ಹೇಳಿ ಮೆಡಿಕಲ್ ಸ್ಕೂಲನ್ನು ತೆಗೆದುಹಾಕಬೇಕೆಂದು ಹೇಳಿ ಈ ಏಪ್ರಿಲ್‌ನಿಂದ ವಜಾ ಮಾಡಿದ್ದಾರೆ. ಆದರೆ, ಈಗ ಓದುತ್ತಿರತಕ್ಕ ವಿದ್ಯಾರ್ಥಿಗಳಿಗೆ ಮುಂದೆ ತಮ್ಮ ವಿದ್ಯಾಭ್ಯಾಸವನ್ನು continue ಮಾಡುವುದಕ್ಕೆ ಅವಕಾಶ ಮಾಡಿದೆ.

ಎರಡನೆಯದಾಗಿ ಪಾಶ್ಚಾತ್ಯ ದೇಶಗಳಿಗೆ ನಮ್ಮ ಸಂಸ್ಥಾನದಿಂದ ಸಾಕಷ್ಟು ಮೆಡಿಕಲ್ ಗ್ರಾಜ್ಯುಯೇಟರುಗಳನ್ನು ಅದರಲ್ಲೂ ಸೀನಿಯರ್ ಡಾಕ್ಟರುಗಳನ್ನು ಕಳುಹಿಸಿ ಕೊಟ್ಟು specialise ಮಾಡಿಕೊಳ್ಳುವುದಕ್ಕೆ ಮತ್ತು ಉನ್ನತ ಡಿಗ್ರಿ ಪಡೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡುತ್ತಿಲ್ಲವೆಂದು ಒಂದು ಆಕ್ಷೇಪಣೆ ಬಂತು.

ನಮ್ಮ ಮೈಸೂರು ಸಂಸ್ಥಾನದಿಂದ ಬರೀ ಜೂನಿಯರ್ ಡಾಕ್ಟರುಗಳನ್ನೇ ಪಾಶ್ಚಿಮಾತ್ಯ ದೇಶಗಳಿಗೆ ಕಳುಹಿಸುತ್ತಿದ್ದಾರೆಂದು ಹೇಳಿದರು. ಈ ವಿಷಯದಲ್ಲಿ ಜೂನಿಯರ್ ಸೀನಿಯರ್ ಎಂದೇನೂ ತಾರತಮ್ಯವಿಲ್ಲ. ಆದರೆ ಪರದೇಶಗಳಿಗೆ ಹೋಗಿ ಯಾವುದಾದರೂ ವಿಶೇಷ ಶಿಕ್ಷಣ ಪಡೆದು, ಎಂದರೆ F.R.C.S., M.R.C.P. ಇಂಥಾ ಡಿಗ್ರಿ ಡಿಪ್ಲೊಮಾ ಫೆಲೋಷಿಪ್‌ಗಳನ್ನು ಪಡೆದು ಬರಬೇಕೆಂದು ಮಾಡಿದೆ. ಹಾಗಿಲ್ಲದೆ ಸುಮ್ಮನೆ ರಜ ತೆಗೆದುಕೊಂಡು ಹೋಗಿ ಅಲ್ಲಿನ ಆಸ್ಪತ್ರೆಗಳಲ್ಲಿ ಕೆಲಸಮಾಡಿ ನೋಡಿಕೊಂಡು ಬರುತ್ತೇನೆಂದು ಹೇಳಿದರೆ ಅದು ಸರಿಯಲ್ಲ. ಹೋದ ಮೇಲೆ ಏನಾದರೂ ಸರಿಯಾದ ಶಿಕ್ಷಣ ಪಡೆದು ಉತ್ತೀರ್ಣರಾಗಿ ಬರಬೇಕು. ಜೂನಿಯರ್‌ಗಳನ್ನು ಕಳುಹಿಸುವುದರಲ್ಲಿ ಉದ್ದೇಶವಿಷ್ಟೆ: ಮುಂದೆ ಅವರಿಗೆ ಇಲ್ಲಿ ಸೇವೆ ಮಾಡತಕ್ಕ ಅವಕಾಶವಿರಬೇಕು; ವಿಶೇಷ ವಿಷಯಗಳನ್ನು ವ್ಯಾಸಂಗ ಮಾಡಿ, ಪಾಸು ಮಾಡಿಕೊಂಡು ಬರುವವರನ್ನು ಕಳುಹಿಸಬೇಕು. ಇದಕ್ಕೆ ಜನರನ್ನು ಚುನಾಯಿಸಲು ಒಂದು ಸಮಿತಿಯನ್ನು ಮಾಡಿದ್ದೇವೆ. ವಿದೇಶಗಳಿಗೆ ಹೋಗಲಿಚ್ಛಿಸುವವರಿಂದ ಅರ್ಜಿ ಬಂದು, ಇಲಾಖೆಯಿಂದ ಶಿಫಾರಸು ಬಂದರೆ ಅದನ್ನು ಪರಿಶೀಲಿಸಿ ತೀರ್ಮಾನಿಸುತ್ತಾರೆ.

ಮೈಸೂರಿನಲ್ಲಿರುವ ಆಯುರ್ವೇದಿಕ್ ಕಾಲೇಜನ್ನು ಇಲ್ಲಿಗೆ ಬದಲಾಯಿಸುವ ವಿಚಾರದಲ್ಲಿ ಅನೇಕರು ತೀವ್ರವಾಗಿ ಮಾತನಾಡಿದ್ದಾರೆ. ಅನೇಕ ಮಾನ್ಯ ಮಿತ್ರರು ಈ ಸಭೆಯಲ್ಲಿಯೂ, ಕೌನ್ಸಿಲ್‌ನಲ್ಲಿಯೂ ಆಯುರ್ವೇದ ಯುನಾನಿ ಕಾಲೇಜನ್ನು ಮೈಸೂರಿನಲ್ಲೇ ಉಳಿಸಿಕೊಳ್ಳಬೇಕೆಂದು ಹೇಳಿದ್ದಾರೆ. ಡೋನಾರ್ ಇಚ್ಛೆ ಕೂಡ ಅದು ಅಲ್ಲೇ ಇರಬೇಕೆಂಬುದಾಗಿತ್ತು ಎಂದು ಹೇಳಿದರು. ಹಿಂದೆ ಸರ್ಕಾರದವರೂ ಕೂಡ ಅದನ್ನು ಮೈಸೂರಿನಿಂದ ಬೆಂಗಳೂರಿಗೆ ಬದಲಾವಣೆ ಮಾಡಬೇಕೆಂಬ ಇಚ್ಛೆಯಿದ್ದರೂ ಅನೇಕ ಮಾನ್ಯ ಸದಸ್ಯರು ಎರಡು ಸಭೆಗಳಲ್ಲಿಯೂ ಅಲ್ಲೇ ಇರಬೇಕೆಂದು ಇಚ್ಛಿಸಿದ್ದರಿಂದ, ಅಲ್ಲೇ ಇರುವ ಭರವಸೆ ಕೊಟ್ಟರು, ಇದು ನಿಜ. ಆದರೆ ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನವರು ಇದಕ್ಕೆ ಒಪ್ಪಿಗೆ ಕೊಡಲಿಲ್ಲ. ಅಲ್ಲಿರತಕ್ಕ bed strength 36; ವಿದ್ಯಾರ್ಥಿಗಳು ಸುಮಾರು 350 ಜನರವರಿಗೆ ಅಲ್ಲಿ ಓದುತ್ತಿದ್ದಾರೆ. ಅಷ್ಟು ಜನರಿಗೆ clinical facilities ಇರಬೇಕು, ಒಬ್ಬೊಬ್ಬ ವಿದ್ಯಾರ್ಥಿಗಳಿಗೆ ಇಷ್ಟು bed strength ಇರಬೇಕೆಂದು ಗೊತ್ತು ಮಾಡಿದ್ದಾರೆ ಮೆಡಿಕಲ್ ಕೌನ್ಸಿಲ್‌ನವರು. 36 ಬೆಡ್ಸ್ ಇರುವಾಗ ಇಷ್ಟು ಜನರಿಗೆ ಏನೇನೂ ಸಾಲದು. ವಿದ್ಯಾರ್ಥಿಗಳು ಅಷ್ಟು ಸಂಖ್ಯೆಯಲ್ಲಿ ಅಲ್ಲಿ ಬಂದರೆ ಯಾರು ಯಾರು ವಿದ್ಯಾರ್ಥಿಗಳೆಂದು ಗುರುತಿಸುವುದಕ್ಕೂ ಕೂಡ ಆಗುವುದಿಲ್ಲ. ಅಲ್ಲದೆ ಅಲ್ಲಿ ಪಾಸು ಮಾಡಿಕೊಂಡು ಹೋದ ವಿದ್ಯಾರ್ಥಿಗಳು ಬೊಂಬಾಯಿಗೆ ಹೋಗಿ ಅಲ್ಲಿ ಅವರಿಗೆ ಪ್ರೈವೇಟ್ ಪ್ರಾಕ್ಟೀಸ್ ಮಾಡುವುದಕ್ಕೆ ಒಪ್ಪಿಗೆ ಕೊಟ್ಟಿಲ್ಲ. ಮದರಾಸ್ ಸರ್ಕಾರದವರೇನೋ ಕೊಟ್ಟಿದ್ದಾರೆ. ಹೀಗಾಗಿ ನಮ್ಮ ಸಂಸ್ಥಾನದಲ್ಲಿ ತೆಗೆದುಕೊಳ್ಳತಕ್ಕ ಶಿಕ್ಷಣ ಸಾಲದು, clinical facilities ಸಾಲದು ಎಂದು ಅವರು ಅಭಿಪ್ರಾಯ ಪಟ್ಟಿದ್ದಾರೆ. ಆದಕಾರಣ ಸಾಕಷ್ಟು clinical facilities ಇರುವ ಸ್ಥಳಕ್ಕೆ ಬದಲಾಯಿಸಬೇಕು; ಅಲ್ಲದೆ ಸಂಶೋಧನಾ ಕಾರ್ಯಕ್ಕೆ ಏರ್ಪಾಡು ಮಾಡಬೇಕು, ಮೂಲಿಕೆಗಳನ್ನು ಬೆಳೆಸಲು ಅವಕಾಶ ಮಾಡಿಕೊಡಬೇಕು. ಇದಕ್ಕಾಗಿ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಇದಕ್ಕಾಗಿ ಹೆಚ್ಚು ಹಣವನ್ನು ಒದಗಿಸಿದ್ದೇವೆ. ಭಾರತೀಯ ವೈದ್ಯ ಪದ್ಧತಿಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕು. ಗ್ರಾಮಾಂತರಗಳಲ್ಲಿ ಅನುಕೂಲ ಮಾಡಿಕೊಡಬೇಕು ಎಂಬ ಬಗ್ಗೆ ಎರಡನೆಯ ಯೋಜನೆಯಲ್ಲಿ ಅವಕಾಶ ಮಾಡಿದೆ. ಶ್ರೀ ರಾಜಶೇಖರಮೂರ್ತಿಯವರು ಹೇಳಿದ ಹಾಗೆ ಆ ವಿದ್ಯಾರ್ಥಿಗಳಿಗೆ dissection ಮಾಡುವುದರಲ್ಲಿಯೂ ಪಾಶ್ಚಾತ್ಯ ವೈದ್ಯ ಪದ್ಧತಿಯಲ್ಲಿಯೂ ಶಿಕ್ಷಣ ಕೊಡಬೇಕು. ಹಿಂದಿನಿಂದಲೂ ಶುದ್ಧ

ಆಯುರ್ವೇದ ಪದ್ಧತಿ ಮಾಡಬೇಕು, ಆದುದರಿಂದ ಆ ಕಾಲೇಜು ಮೈಸೂರಿನಲ್ಲೇ ಇರಬೇಕೆಂದು ಅಭಿಪ್ರಾಯ ಪಡುತ್ತಿದ್ದರು. ಆದರೆ ಅನೇಕ ವಿದ್ಯಾರ್ಥಿಗಳೂ ಕಾಲೇಜನ್ನು ಬೆಂಗಳೂರಿಗೆ ವರ್ಗಾಯಿಸಬೇಕು, ಅಲ್ಲಿ ಅನುಕೂಲವಿದೆ, ಅಲೋಪತಿಕ್ ಶಿಕ್ಷಣ ಪಡೆಯಲು ಅವಕಾಶವಿದೆ ಎಂದು ಹೇಳುತ್ತಿದ್ದಾರೆ. ಈಗ ಮೈಸೂರಿನ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಅಲ್ಲಿನ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳಿಗೇ ಅನುಕೂಲ ಒದಗಿಸುವುದು ಕಷ್ಟವಾಗಿದೆ. ಅವರ ಜೊತೆಗೆ ಆಯುರ್ವೇದ ಕಾಲೇಜಿನ ವಿದ್ಯಾರ್ಥಿಗಳಿಗೂ ಕೊಡಬೇಕೆಂದರೆ ಕಷ್ಟ.

ಶ್ರೀ ಶಿವನಂಜೇಗೌಡ (ಮೈಸೂರು ತಾಲ್ಲೂಕು).—ಇಲ್ಲಿ ಕೊಡುವುದನ್ನು ಮೈಸೂರಿನಲ್ಲೆ ಏಕೆ ಕೊಡಬಾರದು ? ಅಲ್ಲೇ ಕಟ್ಟಡವನ್ನು ದೊಡ್ಡದು ಮಾಡಿದರೆ, 36 ಬೆಡ್ಸ್ ಇರುವುದನ್ನು 500 ಬೆಡ್ಸ್ ಮಾಡಿದರೆ ಸಾಧ್ಯವಾಗುತ್ತದೆ.

ಶ್ರೀ ಟಿ. ಚನ್ನಯ್ಯ.—ಇಲ್ಲಿ ಜಯಚಾಮರಾಜ ಆಸ್ಪತ್ರೆಯಲ್ಲಿ 230 ಬೆಡ್ಸ್ ಇವೆ. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಅದನ್ನು ಇನ್ನೂ ಹೆಚ್ಚಿಸಬೇಕೆಂದಿದೆ. ಆದುದರಿಂದ ಇಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಏರ್ಪಾಡು ಮಾಡಿದೆ.

ಸಿವಿಲ್ ಸ್ಟೇಷನ್ ಆಸ್ಪತ್ರೆಗಳಲ್ಲಿ ಅನುಕೂಲಗಳನ್ನು ಹೆಚ್ಚು ಮಾಡಬೇಕೆಂದು ಪ್ರತಿ ವರ್ಷವೂ ಒಂದು ಲಕ್ಷಕ್ಕೆ ಮೇಲ್ಪಟ್ಟು ಕೊಡುತ್ತಿದ್ದೇವೆ. ಬೌರಿಂಗ್ ಆಸ್ಪತ್ರೆಯ ವಿಷಯದಲ್ಲಿ ಸಿಬ್ಬಂದಿ, ಸಲಕರಣೆಗಳು ಮುಂತಾದ ಅನುಕೂಲಗಳನ್ನು ಹೆಚ್ಚಿಸಲು ಪ್ರಯತ್ನಿಸುತ್ತಿದ್ದೇವೆ.

Mr. DEPUTY SPEAKER.—It is three o'clock.

Sri T. CHANNIAH.—I have to reply to many things. I am sorry I have no time. With regard to the one point raised by Sri Venkatappa, I wish to say this much. I am also interested in it. He said that an electric laundry should be started in the Victoria Hospital. We are also interested. I am one with him in pursuing the matter. It will be pursued and as far as possible implemented this year.

Mr. DEPUTY SPEAKER.—The question is :

"That a sum not exceeding Rs. 1,21,76,000 be granted to the Government to defray the charges which will come in course of payment during the year ending 31st day of March 1957 in respect of 'Medical'."

The motion was adopted

DEMAND NO. 20—PUBLIC HEALTH.

39. PUBLIC HEALTH.

Mr. DEPUTY SPEAKER.—The question is :

"That a sum not exceeding Rs. 52,73,000 be granted to the Government to defray the charges which will come in course of payment during the year ending 31st day of March 1957 in respect of 'Public Health'."

The motion was adopted

Mr. DEPUTY SPEAKER.—The House will now rise for lunch and meet at 3-30 P.M.

The House rose for Lunch at Three of the Clock and reassembled at Thirty Minutes past Three of the Clock.

[MR. DEPUTY SPEAKER IN THE CHAIR]

(*Quorum was formed at* 3-35)

DEMAND NO. 23—RURAL DEVELOPMENT.

40. RURAL DEVELOPMENT.

Mr. DEPUTY SPEAKER.—Motion moved :

"That a sum not exceeding Rs. 97,20,700 be granted to the Government to defray the charges which will come in course of payment during the year ending 31st day of March 1957 in respect of 'Rural Development."

*ಶ್ರೀ ಬಿ. ಮಾಧವಾಚಾರ್ (ಭದ್ರಾವತಿ).—ಸ್ವಾಮಿ ಗ್ರಾಮಾಭಿವೃದ್ಧಿಗೆ ಸಂಬಂಧಪಟ್ಟ ಡಿಮ್ಯಾಂಡನ್ನು ಸ್ವಾಗತಿಸುತ್ತ ಒಂದೆರಡು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಗ್ರಾಮ ಜೀವನಗಳಲ್ಲಿ ರಸ್ತೆಗಳ ಪಾತ್ರ ಬಹಳ ಮುಖ್ಯವಾದುದು. ಸಾಮಾನ್ಯವಾಗಿ ಜನತೆಗೆ ಅದರಲ್ಲೂ ಗ್ರಾಮಾಂತರ ಜನತೆಗೆ ಏನೇನು ಸೌಕರ್ಯಗಳನ್ನೂ, ಸೌಲಭ್ಯಗಳನ್ನೂ ಹೆಚ್ಚಾಗಿ ಕಲ್ಪಿಸಬೇಕು ಎಂದು ಹೇಳಬೇಕಾದರೆ ಮುಖ್ಯವಾಗಿ ಸಂಚಾರ ಸೌಕರ್ಯವನ್ನು ಅಭಿವೃದ್ಧಿಪಡಿಸಬೇಕು. ಸಂಚಾರ ಸೌಕರ್ಯ ಅಭಿವೃದ್ಧಿಯಾಗದೆ ಅವರ ಆರ್ಥಿಕ ಜೀವನದಲ್ಲಿ ಪ್ರಗತಿಯಾ

(ಶ್ರೀ ಬಿ. ಮಾಧವಾಚಾರ್).

ಗುವಂತಿಲ್ಲ. ಈ ದೃಷ್ಟಿಯಲ್ಲಿ ಈ ಸಾಲಿನಲ್ಲಿ ರಸ್ತೆಗಳ ಅಭಿವೃದ್ಧಿಗಾಗಿ ಇನ್ನೂ ಹೆಚ್ಚಿನ ಮೊಬಲಗನ್ನು ಮಿಸಲಾಗಿಟ್ಟಿದ್ದರೆ ಬಹಳ ಪ್ರಯೋಜನವಾಗುತ್ತಿತ್ತು. ನಾನು ಇಲ್ಲಿ ಒತ್ತಾಯಪಡಿಸುವುದು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಕೆಲವು ರಸ್ತೆಗಳನ್ನು ಜಿಲ್ಲಾ ಬೋರ್ಡು ಕಾರ್ಯಾಚರಣೆಯನ್ನು ಮಾಡುತ್ತಿದ್ದ ಸಮಯದಲ್ಲಿ ಅನೇಕ ಕಡೆಗಳಲ್ಲಿ ರಸ್ತೆಗಳನ್ನು ನಿರ್ಮಾಣ ಮಾಡಿದರು. ರಸ್ತೆಗಳನ್ನು ನಿರ್ಮಾಣ ಮಾಡಿದ ರೆಂದರೆ, ಜೆಲ್ಲಿಹಾಕಿ ಕ್ರಮವಾಗಿ ರಸ್ತೆಯನ್ನು ಮಾಡಿಲ್ಲ. ಬರೀ ಕಾಲುವೆಗಳನ್ನು ತೋಡಿ, ಜಾಗವನ್ನು ಅಕ್ವೈರ್ ಮಾಡಿಕೊಂಡು, ಕೇವಲ ಮಣ್ಣಿನ ರಸ್ತೆಗಳನ್ನು ಮಾತ್ರ ಮಾಡಿದರು. ಜಿಲ್ಲಾಬೋರ್ಡು ರದ್ದಾದಿನಿಂದೀಚೆಗೆ ಆ ರಸ್ತೆಗಳು ಬಹಳ ದುರವಸ್ಥೆಗೆ ಬಂದು ಮಾಡಿದ ಕೆಲಸ ಕೂಡ ಪ್ರಯೋಜನವಿಲ್ಲದಂತಾಗಿದೆ. ಅಂಥ ಮುಖ್ಯ ರಸ್ತೆಗಳ ಪೈಕಿ ಭದ್ರಾವತಿ ತಾಲ್ಲೂಕಿನಲ್ಲಿ ಹೊಳೆಹೊನ್ನೂರಿನಿಂದ ಸನ್ಯಾಸಿ ಕಾಡಮಗ್ಗಿ ಮಾರ್ಗವಾಗಿ ಆನವೇರಿಗೆ ಹೋಗತಕ್ಕ ಒಂದು ರಸ್ತೆ ಸಾವಿರಾರು ಜನರ ಪ್ರಯೋಜನಕ್ಕಾಗಿ ರಚಿಸಲ್ಪಟ್ಟಿತು. ಆದರೆ ಅದಕ್ಕೆ ಇದುವರೆವಿಗೂ ಜೆಲ್ಲಿ ಕಾಮಗಾರಿ ಮಾಡಿಲ್ಲ. ಜೆಲ್ಲಿಕಾಮಗಾರಿ ಕೆಲಸ ಮಾಡಿಸಬೇಕೆಂದು ಈ cut motion ನಾನು ತಂದಿದ್ದೇನೆ.

ಭದ್ರಾವತಿ ತಾಲ್ಲೂಕಿನಲ್ಲಿ ಪ್ರವಹಿಸತಕ್ಕ ಭದ್ರ ಮತ್ತು ತುಂಗಭದ್ರ ನದಿ ದಡಗಳಲ್ಲಿ ಸಾವಿರಾರು ಜನ ಸಂಖ್ಯೆಯುಳ್ಳ ಅನೇಕ ಗ್ರಾಮಗಳಿವೆ. ಆ ಗ್ರಾಮಗಳವರೆಲ್ಲ ತಮ್ಮ ಕುಡಿಯುವ ನೀರಿಗಾಗಿ ಈ ನದಿಗಳ ನೀರನ್ನೇ ಅವಲಂಬಿಸಿರುತ್ತಾರೆ. ಆ ನದಿಗಳಿಗೆ ನೀರು ತರಲು ಹೋಗುವ ಸ್ಥಳಗಳಲ್ಲಿ ಮೆಟ್ಟಲುಗಳಿಲ್ಲದೆ ಆ ಗ್ರಾಮಗಳವರಿಗೆ ತೊಂದರೆಯಾಗಿ ಅನೇಕರು ಇದಕ್ಕೆ ತುತ್ತಾಗುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಆದುದರಿಂದ ಡಣಾಯಕಪುರ, ಸಿದ್ದಿಪುರ, ಸನ್ಯಾಸಿ, ಕಾಡಮಗ್ಗಿ, ಮಂಗೋಟೆ, ನಿಂಬೇಬಂದಿ ಮೊದಲಾದ ಗ್ರಾಮಗಳ ಬಳಿ ನದೀ ದಡಕ್ಕೆ ಮೆಟ್ಟಲುಗಳನ್ನು ಕಟ್ಟಿಸಿ ಈ ಗ್ರಾಮಗಳ ಅಭಿವೃದ್ಧಿಗೆ ಅನುಕೂಲ ಮಾಡಿಸಿ ಕೊಡಬೇಕೆಂದು ಸರ್ಕಾರದವರಲ್ಲಿ ಪ್ರಾರ್ಥನೆಮಾಡಿ ನನ್ನ ಎರಡು ಮಾತುಗಳನ್ನು ಮುಕ್ತಾಯಪಡಿಸುತ್ತೇನೆ.

*ಶ್ರೀ ಎ. ವಿ. ನರಸಿಂಹರೆಡ್ಡಿ (ಬೆಂಗಳೂರು ದಕ್ಷಿಣ).—ಸ್ವಾಮಿ, ಗ್ರಾಮಾಭಿವೃದ್ಧಿಗಾಗಿ ಸರ್ಕಾರದವರು ಕೇಳಿರತಕ್ಕ 23ನೆಯ ಡಿಮ್ಯಾಂಡಿನ 97,20,700 ರೂಪಾಯಿಗಳ ಮನವಿಬಗ್ಗೆ ಒಂದೆರಡು ವಿಷಯಗಳನ್ನು ತಿಳಿಸಬಯಸುತ್ತೇನೆ. ಕಳೆದ ಸಾಲಿನಲ್ಲಿ ಗ್ರಾಮಾಭ್ಯುದಯಕ್ಕೆ ಈ ಶಾಸನ ಸಭೆಯವರು ಹಣವನ್ನು ಖರ್ಚು ಮಾಡುವುದಕ್ಕೆ ಅಧಿಕಾರವನ್ನು ಕೊಟ್ಟಮೇಲೆ ಅದನ್ನು ಜಿಲ್ಲೆಗಳಿಗೂ, ತಾಲ್ಲೂಕುಗಳಿಗೂ ಹಂಚಿ ಹಾಕುವುದು ಗ್ರಾಮಾಭಿವೃದ್ಧಿ ಕಾರ್ಯಗಳಿಗೆ ಒದಗುವಂತೆ ಕಳುಹಿಸುವುದು. ಈ ಕೆಲಸ ಬಹಳ ದೊಡ್ಡದಾಗುತ್ತಿದೆ. ವರ್ಷದ ಕೊನೆಯಲ್ಲಿ ಈ ಹಣ ಕಳುಹಿಸುವುದರಿಂದ ಅದು ಖರ್ಚಾಗದೆ ಹೆಚ್ಚು ಭಾಗ ವ್ಯರ್ಥವಾಗುತ್ತಿದೆ. ಆ ರೀತಿ ಆಗಬಾರದು, ಆಯವ್ಯಯದ ಪಟ್ಟಿಯನ್ನು ಮಾರ್ಚಿ 31ರೊಳಗಾಗಿ ನಾವು ಅಂಗೀಕಾರಮಾಡಿದರೂ ಕೂಡ ಈ ಹಣ ಈ ಬಾಬುಗಳಲ್ಲಿ ಇಂತಹ ತಾಲ್ಲೂಕುಗಳಿಗೆ ಇಷ್ಟು ಕೊಟ್ಟಿದ್ದೇವೆ, ಖರ್ಚು ಮಾಡಬಹುದು ಎಂದು ನಿರ್ದೇಶ ತಾಲ್ಲೂಕುಗಳಿಗೆ ತಲುಪುವುದಕ್ಕೆ ಸುಮಾರು ಆರೇಳು ತಿಂಗಳಕಾಲ ತಡವಾಗುತ್ತದೆ. ಇದಕ್ಕೆ ಕಾರಣವೇನು ಎಂದು ನಾನು ಚೀಫ್ ಸೆಕ್ರೆಟರಿಯವರಿಗೆ ಕಾಗದ ಬರೆದೆ. ಅವರು ಫೈನಾನ್ಸ್ ಸೆಕ್ರೆಟರಿಗಳಿಗೆ ಕಳುಹಿಸಿದರು. ಅದಕ್ಕೆ ಜವಾಬು ಬಂದಿದ್ದರಲ್ಲಿ "ನಿಮ್ಮ ಗಮನವನ್ನು ಫೈನಾನ್ಸ್ ಮೆಮೊರಾಂಡಂ ಕಡೆಗೆ ಸೆಳೆಯುತ್ತೇನೆ" ಎಂದು ಮಾತ್ರ ತಿಳಿಸಲಾಗಿತ್ತು. ಪ್ರತಿಯೊಬ್ಬ ಇಲಾಖಾ ಮುಖ್ಯಾಧಿಕಾರಿ ಎಷ್ಟು ಖರ್ಚುಮಾಡಿಕೊಳ್ಳಬಹುದೆಂದು ಫೈನಾನ್ಷಿಯಲ್ ಮೆಮೊರಾಂಡಂ ಮೂಲಕ ತಿಳಿಸಲಾಗಿದೆ, ಅದನ್ನು ತಾಲ್ಲೂಕುಗಳಿಗೆ ಹಂಚಿಕೊಡುವ ಕೆಲಸ ಅವರದು ಎಂದು ಅವರು ಹೇಳಿದ ಹಾಗಾಯಿತು. ಸರ್ಕಾರದಲ್ಲಿರುವವರು ಈ ರೀತಿ ನಾನು ನನ್ನ ಕೆಲಸ ಮಾಡಿದ್ದೇನೆ, ಇನ್ನೊಬ್ಬರು ಮಾಡುವುದು ತಡ ಎಂದು ಹೇಳುವುದು ಸರಿಯಲ್ಲ ಎಂದು ಭಾವಿಸುತ್ತೇನೆ. ಡಿಸೆಂಬರ್, ಜನವರಿ ತಿಂಗಳುಗಳಲ್ಲಿ ಇಷ್ಟು ತಾಲ್ಲೂಕುಗಳಿಗೆ ಇಷ್ಟು ಹಣ ಕೊಟ್ಟಿದ್ದೇವೆಂದು ಹೇಳುತ್ತಾರೆ. ಆಗ ವರ್ಷದ ಕೊನೆಯ ಭಾಗವಾಗಿರುತ್ತದೆ. ಮಾರ್ಚಿ 31ರೊಳಗಾಗಿ ಖರ್ಚು ಮಾಡದಿದ್ದರೆ ಲ್ಯಾಪ್ಸ್ ಆಗುತ್ತದೆ. ಗ್ರಾಮಾಭಿವೃದ್ಧಿ ಕಾರ್ಯವೊಂದೇ ಅಲ್ಲ, ಇನ್ನೂ ಅನೇಕ ಕಾರ್ಯಗಳಿಗೆ ಕೂಡ ಹಣವನ್ನು ಆರು ತಿಂಗಳ ಮೇಲೆ ಕೊಡುವುದರಿಂದ ಎಲ್ಲಾ ಕೆಲಸಗಳನ್ನು ಒಂದೇ ಸಾರಿ ಷುರು ಮಾಡುವುದರಿಂದ ವ್ಯರ್ಥವಾಗುವುದಕ್ಕೆ ಅವಕಾಶವಿದೆ. ಉದಾಹರಣೆ ಹೇಳುವುದಾದರೆ ಕುಡಿಯುವ ನೀರಿನ ಭಾವಿಗಳಿಗೆ ಹಣ ಕೊಡುತ್ತಾರೆ. ಎರಡು ಮೂರು ಬಾಬಿನಲ್ಲಿ ಇದನ್ನು ಹೇಳಿದ್ದಾರೆ. ಒಂದು ನೇರವಾಗಿ ಸರ್ಕಾರಿ ಗ್ರಾಂಟು ಮೂಲಕ ಕೊಡುವುದು. ಗ್ರಾಂಟು ಅಲಾಟ್‌ಮಾಡಿ ನಗರಕ್ಕೆ, ತಾಲ್ಲೂಕುಗಳಿಗೆ ಇಷ್ಟು ಕೊಟ್ಟಿದ್ದೇವೆಂದು ತಿಳಿಯಪಡಿಸುವುದು ವರ್ಷದ ಕೊನೆಯ ಭಾಗದಲ್ಲಿ, ಆದ್ದರಿಂದ ಹಣ ಖರ್ಚಾಗುವುದಿಲ್ಲ. ಎರಡನೆಯದಾಗಿ ಈ ವರ್ಷ ಒಂದು ವಿಶೇಷವಿದೆ. ಈ ಶಾಸನ ಸಭೆಗಳಿಗೆ ನಾವು ಪ್ರಶ್ನೆ ಕಳುಹಿಸಿದ ಮೇಲೆ ಗ್ರಾಮಾಭಿವೃದ್ಧಿ ಕಮಿಷನರು ಕುಡಿಯುವ ನೀರಿನ ವ್ಯವಸ್ಥೆಗಾಗಿ ಸುಮಾರು ನಾಲ್ಕು ಲಕ್ಷ ರೂಪಾಯಿಗಳು ಇವೆ, ಸಾಧ್ಯವಾದರೆ ತಾಲ್ಲೂಕುಗಳಲ್ಲಿ ಉಪಯೋಗಿಸಿಕೊಳ್ಳಬಹುದು ಎಂದು ಕಾಗದ ಬರೆದಿದ್ದಾರೆ. ಅದು ಬಂದು ನಾಲ್ಕೈದು ದಿವಸವಾಯಿತು. ಮಾರ್ಚಿ 31ನೆಯ ತಾರೀಖಿನೊಳಗಾಗಿ ಖರ್ಚು ಮಾಡದಿದ್ದರೆ ಲ್ಯಾಪ್ಸ್ ಆಗುತ್ತದೆ, ವರ್ಷದ ಕೊನೆಯ ಭಾಗದಲ್ಲಿ ಉಪಯೋಗಿಸಿ ಎಂದು ಹೇಳಿದರೆ ಹೇಗೆ ಖರ್ಚು ಮಾಡುವುದು? ಈ ವರ್ಷ ವಿಶೇಷವಾಗಿ ತಮ್ಮಲ್ಲಿ ಒಂದು ಪ್ರಾರ್ಥನೆ ಮಾಡಶಕ್ತದ್ದು ; ಈ ನಾಲ್ಕುಲಕ್ಷ ರೂಪಾಯಿಗಳನ್ನು ಯಾವ ಯಾವ ತಾಲ್ಲೂಕುಗಳಿಗೆ ಕೇಳುತ್ತಾರೋ ಅಲ್ಲಿಗೆ ಕೊಟ್ಟು ಅದನ್ನು ಗ್ರಾಮಪಂಚಾಯಿತಿ ಹೆಸರಿನಲ್ಲಾಗಲಿ ಅಥವಾ ಬೇರೆ ಹೆಸರಿನಲ್ಲಾಗಲಿ ನಾನ್-ಲ್ಯಾಪ್ಸಬಲ್ ಗ್ರಾಂಟಾಗಿ ಟ್ರೀಟ್‌ಮಾಡಿದರೆ ತಾವು ಹೆಚ್ಚಿನ ಹಣ ಈ ಬಾಬಿಗೆ ಕೊಡಬೇಕೆಂದೇನು ಉದ್ದೇಶವನ್ನಿಟ್ಟುಕೊಂಡಿದ್ದೀರೋ ಅದು ನೆರವೇರುತ್ತದೆ, ಈ ಹಣ ಲ್ಯಾಪ್ಸಾಗದೆ ಸಾರ್ಥಕವಾಗುತ್ತದೆ. ಆದ್ದರಿಂದ ತಾವು ಈ ಮೊಬಲಗನ್ನು ನಾನ್-ಲ್ಯಾಪ್ಸಬಲ್ ಗ್ರಾಂಟಾಗಿ ಮಾಡಬೇಕೆಂದು ಮನವಿ ಮಾಡುತ್ತೇನೆ.

ಅಲ್ಲದೆ ನಾವು ಈಗ ಮೊದಲನೆಯ ಪಂಚವಾರ್ಷಿಕ ಯೋಜನೆ ಕಾರ್ಯಗತಮಾಡಿ ಪೂರೈಸಿದ್ದೇವೆ, ಗ್ರಾಮಗಳಲ್ಲಿ ಸಾಮಾನ್ಯವಾಗಿ ರೈತರ ಆರೋಗ್ಯದೃಷ್ಟಿಯಿಂದ ಪ್ರಜೆಗಳ ಆರೋಗ್ಯದೃಷ್ಟಿಯಿಂದ ಕಲ್ಪಿಸಿಕೊಡಬೇಕಾದ ಪ್ರಾಮುಖ್ಯವಾದ ಕುಡಿಯುವ ನೀರಿನ ವಸತಿಯನ್ನು ಎಲ್ಲಾ ಕಡೆಗೂ ಕಲ್ಪಿಸದಿರುವುದು ಶೋಚ

ನೀಯುವೆಂದು ಭಾವಿಸುತ್ತೇವೆ. ಏಕೆಂದರೆ ಜೀವನದಲ್ಲಿ ನಮಗೆ ಆಹಾರ, ಬಟ್ಟೆ, ವಸತಿ ಹೇಗೆ ಮುಖ್ಯವೋ ಕುಡಿಯುವ ನೀರಿನ ಪ್ರಶ್ನೆ ಕೂಡ ಅಷ್ಟೇ ಪ್ರಾಮುಖ್ಯವಾದುದು. ಆದ್ದರಿಂದ ಎರಡುವರ್ಷಗಳ ಕೆಳಗೆ ಬಹಳ ಮಂದಿ ತಿಳಿವಳಿಕೆ ಕೊಟ್ಟಾಗ ಕುಡಿಯುವ ನೀರಿನ ಭಾವಿಗಳನ್ನು ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಮಾಡುತ್ತೇವೆಂದು ಹೇಳಿದ್ದರು; ಅದನ್ನು ಸಾಧಿಸಿಲ್ಲ, ಅನೇಕ ಕಡೆ ಈ ಸೌಲಭ್ಯ ಕಲ್ಪನೆಯಾಗಿಲ್ಲ. ಇನ್ನೊಂದು ವಿಶೇಷ. ಹಿಂದೆ ಪ್ರತಿ ತಾಲ್ಲೂಕಿಗೂ ಹೆಚ್ಚಾಗಿ ಹಣ ಕೊಡುತ್ತಿದ್ದರು. 1955-56ರಲ್ಲಿ ಡೈರೆಕ್ಟ್ ಗ್ರಾಂಟ್ ಮೂಲಕ ಕೊಡುವುದು ಬಹಳ ಕಡಮೆಯಾಗಿದೆ. ಕಾರಣ ಗೊತ್ತಿಲ್ಲ. ಪ್ರತಿವರ್ಷಕ್ಕಿಂತಲೂ 1955-56ರಲ್ಲಿ ಈ ಬಾಬಿಗೆ ಹೆಚ್ಚು ಹಣ ಬಡ್ಜೆಟ್ಟಿನಲ್ಲಿ ಒದಗಿಸಿದರು. ಆದರೆ, ಅಲಾಟ್ ಮಾಡುವಾಗ ತಾಲ್ಲೂಕುಗಳಿಗೆ ಹಿಂದಿನ ವರ್ಷಕ್ಕಿಂತ ಏಕೆ ಕಡಮೆಯಾಯಿತು, ಹಣ ಎಲ್ಲಿಹೋಯಿತ್ ಎಂದು ವಿಚಾರಮಾಡಿ ಸಮರ್ಪಕವಾದ ಉತ್ತರವನ್ನು ಹೇಳುತ್ತೀರೆಂದು ನಿರೀಕ್ಷೆ ಮಾಡುತ್ತೇನೆ.

ಶ್ರೀ ಟಿ. ಚನ್ನಯ್ಯ (ಜನಾರೋಗ್ಯ ಮತ್ತು ಸ್ಥಳೀಯ ಸಂಸ್ಥೆಗಳ ಮಂತ್ರಿಗಳು).—1955-56ನೆಯ ಸಾಲಿನಲ್ಲಿ ಕುಡಿಯುವ ನೀರಿನ ವ್ಯವಸ್ಥೆಗಾಗಿ ಬಡ್ಜೆಟ್ಟಿನಲ್ಲಿ 10 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೆವು. ಆ ಮೇಲೆ ಲೋಕಲ್ ಡೆವಲಪ್‌ಮೆಂಟ್ ವರ್ಕ್ಸ್‌ಗೆ ಇಂಡಿಯಾ ಸರ್ಕಾರದವರು 15,50,600 ರೂಪಾಯಿಗಳನ್ನು ಕೊಟ್ಟರು. ಅದರಿಂದ ಸುಮಾರು 789 ಬಾವಿಗಳನ್ನು ತೆಗೆಸಲಾಯಿತು. ಇಷ್ಟೇ ಅಲ್ಲದೆ ನ್ಯಾಷನಲ್ ವಾಟರ್ ಸಪ್ಲೈ ಸ್ಕೀಂಗಳಲ್ಲೂ ಕೂಡ 39,89,000 ರೂಪಾಯಿಗಳನ್ನು ಒದಗಿಸಿತ್ತು. ಹೀಗೆ ಒಟ್ಟು 56,45,600 ರೂಪಾಯಿಗಳನ್ನು ಕುಡಿಯುವ ನೀರಿನ ಭಾವಿಗಳಿಗಾಗಿ ಒದಗಿಸಿತ್ತು.

ಶ್ರೀ ಎ. ವಿ. ನರಸಿಂಹರೆಡ್ಡಿ.—ಆದರೆ ತಾಲ್ಲೂಕಾಮಳೆ ನಮ್ಮ ಅನುಭವದ ಮೂಲಕ ಈಗಾಗಿರುವ ಕೆಲಸವನ್ನು ತಿಳಿದು ಹೇಳಬೇಕಾದರೆ ಖಂಡಿತವಾಗಿಯೂ ಎಷ್ಟು ಪ್ರಗತಿ ಸಾಧಿಸಬೇಕೆಂದಿದ್ದೆವೋ ಅಷ್ಟನ್ನು ಸಾಧಿಸಿಲ್ಲ. ಇದನ್ನು ಗಮನಿಸಿ ತೀವ್ರತೆಯಿಂದ ಪರಿಶೀಲಿಸ ಬೇಗ ಈ ಕಾರ್ಯವನ್ನು ನಡೆಸಬೇಕಾಗಿದೆಯೆಂದು ಗಮನಕ್ಕೆ ತರಲು ಬಯಸುತ್ತೇನೆ.

ರಸ್ತೆ ವಿಷಯ ಸ್ವಲ್ಪ ಪ್ರಸ್ತಾಪ ಮಾಡಬೇಕಾಗಿದೆ. ಜಿಲ್ಲಾ ಬೋರ್ಡುಗಳಿಗೆ ಹಾಗೂ ಗ್ರಾಮಪಂಚಾಯಿತಿಗಳಿಗೆ ರಸ್ತೆ ನಿರ್ಮಾಣಮಾಡಲು ಸರ್ಕಾರದವರು ಗ್ರಾಂಟು ಕೊಡುತ್ತಿದ್ದಾರೆ ಆದರೆ ಈ ಗ್ರಾಂಟು ಎಲ್ಲರಿಗೂ ಸಿಕ್ಕುತ್ತಿಲ್ಲ. ಯಾವ ಲೋಕಲ್ ಬೋರ್ಡಿನವರು ಅಥವಾ ಗ್ರಾಮ ಪಂಚಾಯಿತಿಯವರು ಮಾನ್ಯ ಮಂತ್ರಿಗಳನ್ನು ಕರೆದು ಹೆಚ್ಚಾಗಿ ಗಮನ ಸೆಳೆಯುತ್ತಾರೋ ಅವರಿಗೆ ಸಿಕ್ಕುತ್ತದೆ. ಹಾಗಿಲ್ಲದೆ ಮುಖಂಡತ್ವ ಕಡಮೆಯಾಗಿ ಕೇಳದಿರುವವರಿದ್ದರೆ ಅವರಿಗೆ ಸಂಬಂಧಪಟ್ಟ ರಸ್ತೆ ತೆಗೆದುಕೊಳ್ಳುವುದೇ ಇಲ್ಲ. ಏಕೆ ಈ ರೀತಿಯಾಗಿದೆ? ಸರ್ಕಾರಿ ಆಜ್ಞೆ ಪ್ರಕಾರ ಒಂದು ಕಾರ್ಯಕ್ರಮ ಪಟ್ಟಿ ಹಾಕಬೇಕು. ಯಾವ ಯಾವ ಗ್ರಾಮಗಳಿಗೆ ಎಷ್ಟು ಸೌಕರ್ಯವಾಗಬೇಕು ಎಂಬುದಕ್ಕೆ ಪ್ಲಾನ್ ಹಾಕಿ ಅದರ ಪ್ರಕಾರ ಕೆಲಸಮಾಡಿ ಗ್ರಾಂಟ್ ಕೊಟ್ಟರೆ ಎಲ್ಲರಿಗೂ ಸಮಾಧಾನವಾಗುತ್ತವೆ. ಒಂದೇಸಾರಿ ಸರ್ಕಾರ ಎಲ್ಲವನ್ನು ಮಾಡಬೇಕೆಂದು ಹೇಳುವುದಿಲ್ಲ. ಆದರೆ ಬೇಕಾದವರಿಗೆ ಬೇಗ ಸಹಾಯ ಮಾಡುವುದು, ಬೇಡದವರಿಗೆ ಅತ್ಯಾವಶ್ಯಕವಾಗಿದ್ದರೂ ಸಹಾಯ ನೀಡದಿರುವುದು ಸರಿಯಲ್ಲ. ಈಗಿರುವ ಕ್ರಮವನ್ನು ಪರಿಶೀಲಿಸಿ ಇರುವ ಲೋಪದೋಷಗಳನ್ನು ಸರಿಪಡಿಸುತ್ತೀರೆಂದು ನಂಬುತ್ತೇನೆ.

ಶ್ರೀ ಆರ್ ಅನಂತರಾಮನ್ (ಚಾಮರಾಜಪೇಟೆ).—ಈಗ ಮಾತನಾಡಿದ ಮಾನ್ಯ ಸ್ನೇಹಿತರು ನೀರಿನ ವಿಚಾರ ಹೇಳಿದರು. ನಾನು ಹಳ್ಳಿಗಳ ಕಡೆ ಹೋಗುವುದಕ್ಕೆ ಚುನಾವಣೆ ಸಂಬಂಧದಲ್ಲಿ ಅವಕಾಶವಾಗಿದೆ. ಹಳ್ಳಿಗಳ ಕಡೆ ನೀರಿನ ವಸತಿ ಸಾಕಷ್ಟಿಲ್ಲದೆ ಬಹಳ ಕಷ್ಟವಾಗಿದೆ. ಹೋದ ವರ್ಷ ಸಾತನೂರು ಹತ್ತಿರವಿರುವ ಕೆಂಪೇಗೌಡನದೊಡ್ಡಿಗೆ ಒಂದು ಮದುವೆಗಾಗಿ ಹೋಗಿದ್ದೆ. ಅಲ್ಲಿ 120 ಮನೆಗಳಿವೆ. ಮದುವೆಗೆ ಯಾವುದೋ ಹಳ್ಳದಿಂದ ನೀರು ತರುತ್ತಿದ್ದರು. ಹೀಗೆ ಎಷ್ಟೋ ಕಡೆ ಕುಡಿಯುವ ನೀರಿನ ಭಾವಿಗಳು ಕೂಡ ಇಲ್ಲ.

ಶ್ರೀ ಟಿ. ಚನ್ನಯ್ಯ.—ಕುಡಿಯುವ ನೀರಿನ ಭಾವಿಗಳನ್ನು ಕೊಡುತ್ತೇವೆಂದು ಸರ್ಕಾರದವರು ಭರವಸೆ ಕೊಟ್ಟು ಕೊಡುತ್ತಿದ್ದಾರೆ. ನೀರಿಲ್ಲದಿರುವ ಕಡೆಗೆ ಕೊಡುವುದಿಲ್ಲವೆಂದು ಹೇಳಿಲ್ಲ. ಆದರೆ ಗ್ರಾಮಸ್ಥರು ಕೇಳಿ ಮಾಡಿಸಿಕೊಳ್ಳಬೇಕು. ಜಿಲ್ಲಾಧಿಕಾರಿಗಳ ಬಳಿ ಹಣವಿರುತ್ತದೆ. ಯಾರಿಗೆ ಬೇಕೋ ಅವರು ಕೇಳಿ ಮಾಡಿಸಿಕೊಳ್ಳುವುದಿಲ್ಲ.

ಶ್ರೀ ಆರ್. ಅನಂತರಾಮನ್.—ಅವಿದ್ಯಾವಂತರು ಕೇಳುವುದಿಲ್ಲ. ಮಧುವೆಗಾಗಿ ತಂದ ನೀರಿನಲ್ಲಿ ಕಪ್ಪೆ ಸಹ ಇತ್ತು. ಎಷ್ಟೋ ಜನರು ಅದನ್ನು ಕುಡಿದರು. ಹಳ್ಳಿಗಳಲ್ಲಿ ಹರಿಜನರಿರುವ ಎಷ್ಟೋ ಕಡೆಗಳಲ್ಲಿ ನೀರೇ ಇರುವುದಿಲ್ಲ. ಬೇರೆ ಕೋಮುಗಳವರು, ಉತ್ತಮರು ಬಾವಿಯಿದ್ದರೂ ಹರಿಜನರನ್ನು ಅಲ್ಲಿಗೆ ಬಿಡುವುದಿಲ್ಲ. ಹರಿಜನರು ಕೆರೆಗೋ ಕುಂಟೆಗೋ ಹೋಗಿ ನೀರನ್ನು ತರಬೇಕು. ಸರ್ಕಾರದವರು ಹಣ ಕೊಡುತ್ತಿದ್ದರೂ ಅದರಿಂದ ಎಷ್ಟು ಉಪಯೋಗವಾಗಿದೆಯೆಂಬುದನ್ನು ನೋಡಬೇಕು. ಭಾವಿ ತೆಗೆಯಲು ಸರ್ಕಾರದಿಂದ ಹಣ ತೆಗೆದುಕೊಂಡ ಮೇಲೆ ತೆಗೆಯುತ್ತಾರೋ, ಇಲ್ಲವೋ, ಎಂಬ ಅನುಮಾನವಿದೆ, ಮಾನ್ಯ ಮಂತ್ರಿಗಳು ಬಹಳ ಹುಷಾರಾಗಿ ಅದನ್ನು ಪರಿಶೀಲಿಸಬೇಕು. ಹಿಂದೆ ಇರಿಗೇಷನ್ ವರ್ಕ್ಸ್‌ಗೆ ಕೆಲವು ಕಡೆ ಸಬ್ಸಿಡಿ ಕೊಡುತ್ತೇವೆಂದು ಹೇಳಿದಾಗ ಕೆಲವರು ಹಳೇ ಬಾವಿ ತೆಗೆದಿರುವುದನ್ನು ತೋರಿಸಿ ಹಣ ತೆಗೆದುಕೊಂಡರೆಂದು ಹೇಳುತ್ತಾರೆ, ಸರಿಯಾದ ವಿಚಾರ ತಿಳಿಯದು. ಎಷ್ಟೋ ಕಡೆ ಬಾವಿಗಳೇ ಇಲ್ಲವೆಂದು ಹೇಳುವುದನ್ನು ಪರೀಕ್ಷೆ ಮಾಡಿ ನೋಡಬೇಕು. ಹರಿಜನರು ಪೇಟೆಗಳಲ್ಲಿರಲಿ ಅಥವಾ ಹಳ್ಳಿಗಳಲ್ಲಿರಲಿ, ಅವರಿಗೆ ಸೌಕರ್ಯ ನೀಡಬೇಕು. ಬೆಂಗಳೂರು ಕಾರ್ಪೊರೇಷನ್ ಪ್ರದೇಶದಲ್ಲಿ ಹರಿಜನರಿಗೆ ನೀರನ್ನು ಕೊಡದೆ ತೊಂದರೆಯಾಗಿದೆ. ಹರಿಜನ ಕೇರಿಗಳಲ್ಲಿ ಬಾವಿಗಳನ್ನಾದರೂ ತೆಗೆಸಿ ಆ ಜನರಿಗೆ ನೀರು ಸಿಕ್ಕುವ ವ್ಯವಸ್ಥೆ ಮಾಡಬೇಕು. ಮೈಸೂರು ರಸ್ತೆಯಲ್ಲಿರುವ ಅಂಜನಪ್ಪ ಗಾರ್ಡನ್‌ನಲ್ಲಿ ನೀರಿಗೆ ಬಹಳ ಕಷ್ಟವಾಗಿದೆ. ಅಲ್ಲಿ ಒಂದು ಬಾವಿ ತೆಗೆಸಿದರೆ ಒಳ್ಳೆಯದು. ಬಿನ್ನಿಮಿಲ್ ಟ್ಯಾಂಕಿನ ನೀರನ್ನು ತಂದು ಉಪಯೋಗಿಸುವ ಸ್ಥಿತಿಯಿದೆ. ಇಂಥ ಕಡೆಗಳಲ್ಲಿ ಬಾವಿ ತೆಗೆಸಿದರೆ ಒಳ್ಳೆಯದು.

ಶ್ರೀ ಸಿ. ಟಿ. ಹನುಮಂತಯ್ಯ (ಪಾವಗಡ—ಅನುಸೂಚಿತ ಜಾತಿಗಳು).—ಸ್ವಾಮಿ, ಈ ದಿವಸ ಗ್ರಾಮಾಂತರ ಪ್ರದೇಶಗಳಲ್ಲಿ ಜನ ಜಾನುವಾರುಗಳು ತಿರುಗಾಡುವುದಕ್ಕೆ ಸರ್ಕಾರಿ ರಸ್ತೆಗಳಿರುವುದಿಲ್ಲ. ಎಷ್ಟೋ ಸಾರ್ತಿ ನಾವು ಹೋಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ಈ ರಸ್ತೆಗಳನ್ನು ಮಾಡಿಸಿ ಕೊಡುವಂತೆ ಪ್ರಾರ್ಥನೆ ಮಾಡಿಕೊಂಡೆವು. ಆದರೆ ಏನೂ ಸಾರ್ಥ

(ಶ್ರೀ ಸಿ. ಟಿ. ಹನುಮಂತಯ್ಯ.)

ಕವಾಗಲಿಲ್ಲ. ಆದರೆ ಸಂಬಂಧಪಟ್ಟ ಅಧಿಕಾರಿಗಳಲ್ಲಿ ಜನರು ಹೋಗಿ ಅವರಲ್ಲಿ ತಮಗೆಬೇಕಾದ ಕಾರ್ಯಗಳ ಬಗ್ಗೆ ಅರಿಕೆಮಾಡಿಕೊಳ್ಳುತ್ತಿಲ್ಲ. ಅದಕ್ಕಾಗಿ ಆ ಕೆಲಸಗಳು ನಡೆದಿಲ್ಲ ಎಂಬುದಾಗಿ ಈಗತಾನೆ ಮಾನ್ಯ ಮಂತ್ರಿಗಳು ಅಪ್ಪಣೆ ಕೊಡಿಸಿದರು. ಉದಾಹಣೆಗೆ ಹೇಳುವುದಾದರೆ ನಾನೇ ನನ್ನ ಸ್ವಂತ ಖರ್ಚಿನಿಂದ ಆ ಶಿರಾ ತಾಲ್ಲೂಕು ಗುಮ್ಮನಹಳ್ಳಿಯಲ್ಲಿ ಹರಿಜನರಿಗೋಸ್ಕರವಾಗಿ ಒಂದು ಕುಡಿಯುವ ನೀರಿನ ಬಾವಿಯನ್ನು ತೆಗೆಸಿರುತ್ತೇನೆ. ಅಲ್ಲಿ ಈಗ ಮಣ್ಣು ಕೆಲಸವೆಲ್ಲಾ ಪೂರೈಸಿದೆ. ಅದಕ್ಕೆ ಕಲ್ಲು ಕಟ್ಟಿಸಿಕೊಡಿ ಎಂದು ಸರ್ಕಾರಕ್ಕೆ ಕೇಳಿಕೊಂಡೆನು. ಆದರೆ ಆ ಕಾರ್ಯವಿನ್ನೂ ಆಗಿಲ್ಲ. ಹಾಗೇ ಇದೆ. ಇದರಿಂದ ಅಲ್ಲಿ ಒಂದು ಮಗೂ ಸಹ ಬಾವಿಗೆ ಬಿತ್ತು. ಹೀಗೆಲ್ಲಾ ಅನಾನುಕೂಲಗಳಾಗಿ ಆ ಕೆಲಸವಿನ್ನೂ ಆಗಿಲ್ಲ. ಇನ್ನು ಅದೇ ತಾಲ್ಲೂಕಿನಲ್ಲಿ ಗೌಡಗೆರೆ ಹೋಬಳಿ ಗುಂಡಪುಚಿಕ್ಕನಹಳಿಯಲ್ಲಿ ಹೀಗೆ ಒಂದು ಬಾವಿಗೆ ಮಣ್ಣು ಕೆಲಸ ಮುಗಿದು ಕಲ್ಲು ಕಟ್ಟಿಸಲು ಅದೂ ಹಾಗೇ ಉಳಿದಿದೆ. ಆ ಮಧುಗಿರಿ ತಾಲ್ಲೂಕು ದೊಡ್ಡೇರಿ ಹೋಬಳಿ ಹೊಸಹಳ್ಳಿ ಗ್ರಾಮದಲ್ಲಿಯೂ ಕೂಡ ಇದೇ ರೀತಿ ಆಗಿದೆ. ಇನ್ನೂ ಎಷ್ಟೋ ಕಡೆಗಳಲ್ಲಿ ಈ ಹರಿಜನರ ಬಾವಿಗಳಿಗೆ ಸರ್ಕಾರದವರು ದುಡ್ಡನ್ನು ಕೊಟ್ಟಿಲ್ಲ. ಈ ಬಾಬಿಗಾಗಿ ಒದಗಿಸಿರತಕ್ಕ ಫಂಡಿನಲ್ಲಿ ವಿಶೇಷವಾಗಿ ದುಡ್ಡು ಉಳಿದು ಹೋಗಿದೆ. ಆದರೆ ಕೊಟ್ಟಿರತಕ್ಕ ಹಣವನ್ನಾದರೂ ಸಹ ಅವರು ಸರಿಯಾಗಿ ವಿನಿಯೋಗ ಮಾಡುತ್ತಿಲ್ಲ. ಇನ್ನು ಮುಂದಕ್ಕಾದರೂ ಈ ರೀತಿಯ ಪುಕಾರುಗಳಿಗೂ ಮತ್ತು ದೂರುಗಳಿಗೂ ಅವಕಾಶವಿರುವ ರೀತಿಯಲ್ಲಿ ಆಯಾಯ ಜಿಲ್ಲೆಗೆ ಸಂಬಂಧಪಟ್ಟಂಥಾ ಮೊಖ್ತೇಸರರಾದ ಅಧಿಕಾರಿಗಳು ಹಳ್ಳಿ ಹಳ್ಳಿಗೂ ಹೋಗಿ ಎಲ್ಲೆಲ್ಲಿ ಇಂಥ ಬಾವಿಗಳಿಗೆ ಆವಶ್ಯಕತೆ ಇದೆಯೋ ಅಲ್ಲೆಲ್ಲಾ ಈ ಬಾವಿಗಳನ್ನು ತೆಗೆಸಲು ಅವರಿಗೆ ಸೂಕ್ತ ತಿಳಿವಳಿಕೆಯನ್ನು ಕೊಟ್ಟು ಮತ್ತು ಸಾಕಷ್ಟು ಹಣವನ್ನು ಸಹ ಒದಗಿಸಿ ಕೊಡಬೇಕಾಗಿ ಕೋರುತ್ತೇನೆ.

ಇನ್ನು ಈ ರಸ್ತೆಗಳ ವಿಚಾರ. ಕೆಲವು ಕಡೆ ರಸ್ತೆಗಳನ್ನೇನೋ ಮಾಡಿಸಿದ್ದಾರೆ. ಆದರೆ ಆ ರಸ್ತೆಗಳನ್ನು ಮಾಡಿಸುವಾಗ ಸರಿಯಾಗಿ ಎಸ್ಟಿಮೇಟ್ ಮಾಡಿ ಮಾಡಿಸಿಲ್ಲ. ಸುಮ್ಮನೆ ಮಣ್ಣನ್ನು ಎತ್ತಿ ಆ ರಸ್ತೆ ಮೇಲೆ ಹಾಕಿರುತ್ತಾರೆ. ಹಾಗೆ ರಸ್ತೆಗೆ ಹೊಸದಾಗಿ ಮಣ್ಣು ಕಾಂಗಾರಿ ನಡೆಸುವಾಗ ಮೊದಲು ನೀರು ಹಾಕಿ ಅನಂತರ ಮಣ್ಣು ಹಾಕಬೇಕಾಗಿತ್ತು. ಆದರೆ ಆ ರೀತಿ ಮಾಡಿಲ್ಲ. ಮಾನ್ಯ ಪಿ. ಡಬ್ಲ್ಯು. ಮಂತ್ರಿಗಳು ಆ ಕಡೆ ಪ್ರವಾಸ ಬಂದಿದ್ದಾಗ ನಾನು ಇದನ್ನೆಲ್ಲಾ ಅವರಿಗೆ ಪ್ರತ್ಯಕ್ಷವಾಗಿ ತೋರಿಸಿದ್ದೇನೆ. ಪಟ್ಟನಾಯ್ಕನಹಳ್ಳಿಯಿಂದ ಯಂಥೊರೆಗೆ ಒಂದು ರಸ್ತೆ ಮಾಡಿದ್ದಾರೆ. ಆ ರಸ್ತೆಯನ್ನು ಹೀಗೇ ಮಾಡಿದ್ದರು. ನಾನು ಈ ವಿಚಾರವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತಂಧಾಗ ಅವರು ಸ್ವತಃ ಅದನ್ನು ಪರೀಕ್ಷೆ ಮಾಡಿ, ಇಂಥ ಕೆಲಸಕ್ಕಾಗಿ ಯಾರು ಬಿಲ್ಲನ್ನು ಮಂಜೂರು ಮಾಡಿದರು ಎಂಬುದಾಗಿ ವಿಚಾರಣೆ ನಡೆಸಿದರು. ಇಂಥಾ ಅಕೃತ್ಯಗಳನ್ನು ನಡೆಸಿದವರಿಗೆ ಬಿಲ್ ಪಾಸ್ ಮಾಡಬಾರದೆಂದು ಸೂಚನೆ ಸಹ ಕೊಟ್ಟರು. ಆದರೆ ಆ ಹಳೇ ಕಾಲದಲ್ಲಿ ಮಾಡಿದಂಥ ರಸ್ತೆಗಳು ಈಗಲೂ ಚಿರಸ್ಮರಣೀಯವಾಗಿ ಉಳಿದಿವೆ. ಇನ್ನಾದರೂ ಹೀಗೆ ನ್ಯಾಯ, ಧರ್ಮ, ಕರ್ಮಗಳನ್ನು ಬಿಟ್ಟು ಕೆಲಸ ನಡೆಸತಕ್ಕಂಥ ಈ ಹೊಸ ಕಂಟ್ರಾಕ್ಟರುಗಳಿಗೆ ಇಂಥಾ ಕಾಂಗಾರಿಗಳನ್ನು ಖಂಡಿತ ಕೊಡಬಾರದು. ಧರ್ಮಮಾರ್ಗದಲ್ಲಿ ಉತ್ತಮ ದರ್ಜೆಯ ಕೆಲಸ ನಡೆಸತಕ್ಕಂಥ ಪರೋಪಕಾರ ಬುದ್ಧಿಯುಳ್ಳ ಹಳೆಯ ಕಂಟ್ರಾಕ್ಟರುಗಳಿಗೇ ಈ ಕೆಲಸಗಳನ್ನು ಕೊಡತಕ್ಕದ್ದು ಸೂಕ್ತವೆಂದು ಸಲಹೆ ಮಾಡಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಎ. ಹುಚ್ಚಮಾಸ್ತಿಗೌಡ (ಹುಲಿಯೂರುದುರ್ಗ).—ಸ್ವಾಮಿ, ಈಗತಾನೆ ಮಾನ್ಯ ಮಂತ್ರಿಗಳು ಕುಡಿಯುವ ನೀರಿನ ಬಾವಿಗಳಿಗಾಗಿ ಎಷ್ಟೇ ಹಣ ಖರ್ಚಾಗುವುದಾದರೂ ಅಷ್ಟನ್ನೂ ನಾವು ಕೊಡುವುದಕ್ಕೆ ಸಿದ್ಧವಾಗಿದ್ದೇವೆಂದು ಆ ರೀತಿ ಭರವಸೆಯನ್ನೂ ಕೂಡ ಕೊಟ್ಟಿದ್ದೇವೆಂದು ಅಪ್ಪಣೆ ಕೊಡಿಸಿದರು. ಇಷ್ಟೇ ಅಲ್ಲದೆ ಜಿಲ್ಲಾ ಡೆವಲಪ್‌ಮೆಂಟ್ ಅಧಿಕಾರಿಗಳಲ್ಲಿ ಸಹ ಈ ಬಗ್ಗೆ ಬೇಕಾದಷ್ಟು ದುಡ್ಡಿದೆ. ಎಂಬುದಾಗಿ ಹೇಳಿದ್ದಾರೆ. ಆದರೆ ನಮ್ಮ ತುಮಕೂರು ಜಿಲ್ಲೆಯಿಂದ ಕಳೆದ ಡಿಸೆಂಬರ್ ತಿಂಗಳಿನಲ್ಲಿ ಆ ಜಿಲ್ಲೆಯಲ್ಲಿ ಆಗಬೇಕಾಗಿರತಕ್ಕ ಬಾವಿ ಕೆಲಸಕ್ಕಾಗಿ ಎರಡು ಲಕ್ಷ ರೂಪಾಯಿಗಳ ಗ್ರಾಂಟ್ ಬೇಕಾಗಿರುತ್ತದೆ, ಆ ಮೊಬಲಗನ್ನು ಕೂಡಲೇ ಮಂಜೂರು ಮಾಡಬೇಕೆಂದು ಒಂದು ರೆಸಲ್ಯೂಷನ್ನನ್ನು ಮಾಡಿ ಸರ್ಕಾರಕ್ಕೆ ಕಳುಹಿಸಲಾಯಿತು. ನನ್ನ ಒಂದು ತಾಲ್ಲೂಕಿನಲ್ಲೇ ಈ ಸಣ್ಣ ಪುಟ್ಟ ಬಾವಿ ಕಾಂಗಾರಿಗಳ ಬಗ್ಗೆ 48 ಸಾವಿರ ರೂಪಾಯಿಗಳೂ ಬಾಕಿ ನಿಂತುಹೋಗಿದೆ. ಹೀಗಿದ್ದರೂ ಮಂತ್ರಿಗಳು ಬೇಕಾದಷ್ಟು ದುಡ್ಡನ್ನು ಒದಗಿಸಿದ್ದೇವೆ ಎಂದು ಹೇಳಿದ್ದಾರೆ. ನಾವು L.S.G. ಕಮಿಷನರ್ ಹತ್ತಿರಹೋಗಿ ವಿಚಾರ ಮಾಡಿದರೆ ಅವರು ತಮ್ಮಲ್ಲಿ ದುಡ್ಡಿಲ್ಲವೆಂದು ಹೇಳುತ್ತಿದ್ದಾರೆ. ಹೀಗಿರುವಾಗ ಮಾನ್ಯ ಮಂತ್ರಿಗಳು ಅವರಲ್ಲಿ ಬೇಕಾದಷ್ಟು ಉಳಿದಿದೆ ಎಂದು ಹೇಳಿರತಕ್ಕದ್ದು ಬಹಳ ಆಶ್ಚರ್ಯ. ಆದರೆ ನಾನು ಈ ಬಾವಿಗಳ ವಿಚಾರವಾಗಿ ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಕಾರಣ ಈಗಾಗಲೇ ವಿಚಾರಗಳನ್ನೆಲ್ಲಾ ಮಾನ್ಯ ನರಸಿಂಹರೆಡ್ಡಿಯವರು ಬಹಳ ವಿಸ್ತಾರವಾಗಿ ಹೇಳಿದ್ದಾರೆ. ಕಳೆದ ಬಡ್ಜೆಟ್ ಅಧಿವೇಶನದಲ್ಲಿ ಮಾನ್ಯ ಮಂತ್ರಿಗಳಾದ ಶ್ರೀ ಮಂಜಪ್ಪನವರು ಪ್ರತಿಯೊಂದು ಗ್ರಾಮಕ್ಕೂ ಬಾವಿಗಳನ್ನೊದಗಿಸಲು ಎಷ್ಟು ದುಡ್ಡನ್ನು ಒದಗಿಸಬೇಕೋ ಅಷ್ಟು ದುಡ್ಡನ್ನು ಒದಗಿಸುತ್ತೇವೆಂದು ಹೇಳಿದ್ದರು. L.S.G. ಕಮಿಷನರ್ ಅವರು ತಾವೇ ಖುದ್ದಾಗಿ ಗ್ರಾಮಗಳಿಗೆ ಹೋಗಿ ನೋಡಿ ಎಲ್ಲೆಲ್ಲಿ ಈ ಬಾವಿಗಳಿಗೆ ತುಂಬ ಅಗತ್ಯವಿದೆಯೋ ಅದನ್ನು ಪರಿಶೀಲನೆಮಾಡಿ; ಅನಂತರ ದುಡ್ಡನ್ನು ಕೊಡುತ್ತೇವೆಂದು ಹೇಳಿದ್ದರು. ಆದರೆ ಈ ದಿವಸ ಅನೇಕ ಕಡೆ ಬಾವಿಗಳ ಕೆಲಸವನ್ನು ಪೂರೈಸಿದ್ದರೂ ಆ ಕೆಲಸವನ್ನುಮಾಡಿದ ಕಂಟ್ರಾಕ್ಟರುಗಳಿಗೆ ದುಡ್ಡನ್ನು ಪಾವತಿ ಮಾಡಿಲ್ಲ.

ಇನ್ನು ಡಿಸ್ಟ್ರೆಸ್ ರಿಲೀಫ್ ಫಂಡಿನಿಂದ ಕೆಲವು ರಸ್ತೆಗಳನ್ನು ಮಾಡಿಸಿ ಅವುಗಳ ಆಡಳಿತವನ್ನು ಈಗ ಜಿಲ್ಲಾಬೋರ್ಡುಗಳಿಗೆ ವಹಿಸಿರುತ್ತಾರೆ. ಆದರೆ ಆ ರಸ್ತೆಗಳ ಕೆಲಸವಿನ್ನೂ ಪೂರ್ತಿಯಾಗಿರುವುದಿಲ್ಲ ಅನೇಕ ಕಡೆಗಳಲ್ಲಿ ಆ ರಸ್ತೆಗಳಿಗೆ ಸಲ್‌ವರ್ಟ್, ಮೊಹರಿ, ಸೇತುವೆ ಇತ್ಯಾದಿಗಳನ್ನು ಕಟ್ಟಿಸಬೇಕಾಗಿದೆ. ಇದಕ್ಕೂ ವಿಶೇಷ ಹಣವನ್ನು ಖರ್ಚುಮಾಡಬೇಕಾಗಿದೆ. ನೂರಾರು ಮೈಲಿ I.V.C. ರಸ್ತೆಯನ್ನು ಬೇರೆ ಈಗ ಜಿಲ್ಲಾಬೋರ್ಡಿಗೆ ವಹಿಸಿದ್ದಾರೆ. ಆದರೆ ಈ ದಿವಸ I.V.C. ರಸ್ತೆಗಳೂ ಮತ್ತು ಡಿಸ್ಟ್ರೆಸ್ ರಿಲೀಫ್ ಫಂಡಿನಿಂದ ಮಾಡಿಸಿದಂಥ ರಸ್ತೆಗಳೆಲ್ಲಾ ಗ್ರಾಮಾಭಿವೃದ್ಧಿ ನಿಧಿಯಲ್ಲಿ ಸಾಕಷ್ಟು ಹಣವಿಲ್ಲದೆ ಹಾಳಾಗಿ ಹೋಗುತ್ತಿವೆ. ಇನ್ನು ಈ ಬಾಬಿಗೋಸ್ಕರವಾಗಿ

ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ಕೋಟ್ಯಂತರ ರೂಪಾಯಿಗಳನ್ನು ಒದಗಿಸಿದ್ದೇವೆಂದು ಬೇರೆ ಹೇಳುತ್ತಿದ್ದಾರೆ. ಆದರೆ, ಮುಂದೆ ಇದು ಇನ್ನು ಯಾವ ರೀತಿ ಆಗುತ್ತದೆಯೋ ಅದನ್ನೆಲ್ಲಾ ಈಗಲೇ ಹೇಳುವುದಕ್ಕಾಗುವುದಿಲ್ಲ. ಇದಕಾರಣ ನಾನು ಈಗ ಈ I.V.C. ಮತ್ತು D.R.F. ರಸ್ತೆಗಳಿಗೋಸ್ಕರವಾಗಿ ಸರ್ಕಾರದವರು ವಿಶೇಷ ನಿಧಿಯನ್ನೊದಗಿಸಿ ಇವುಗಳನ್ನು ಉಳಿಸಿಕೊಂಡು ಬರಬೇಕೆಂದು ಸಲಹೆ ಮಾಡುತ್ತೇನೆ. ಆದರೆ ಈ ದಿವಸ ಗ್ರಾಮಾಭಿವೃದ್ಧಿ ಸಮಿತಿಗಳವರು ಮಾಡುತ್ತಿರುವ ಶಿಫಾರ್ಸುಗಳೂ ಮತ್ತು ಸಲಹೆಗಳೂ ಒಂದು ಸಫಲವಾಗುತ್ತಿಲ್ಲ. ಅವರಿಗೆ ಬೇಕಾದ ಕಡೆಗಳಲ್ಲಿ ಅವರಿಗೆ ಅನುಕೂಲವಾಗುವಂತೆ ತೀರ್ಮಾನ ಮಾಡಿದ್ದಾರೆ. ಹೀಗೆ ಕಾರ್ಯಗಳು ನಡೆಯುತ್ತಿದ್ದರೆ ಸರ್ಕಾರದವರು ಬಾಕಿ ಗ್ರಾಮಾಭಿವೃದ್ಧಿ ಸಮಿತಿಗಳವರ ತೀರ್ಮಾನಕ್ಕೆ ಯಾವ ಬೆಲೆಯನ್ನೂ ಕೊಟ್ಟಹಾಗೆ ಆಗುವುದಿಲ್ಲ. ಸರ್ಕಾರದವರು ಈ ಬಾವಿಗಳಿಗಾಗಿ 50 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆಂದು ಹೇಳಿವರು. ಮೊಬಲಗಿನಲ್ಲಿ ಸುಮಾರು 33 ಲಕ್ಷಕ್ಕೆ ಮೇಲ್ಪಟ್ಟು ಹಣ ಲ್ಯಾಪ್ಸ್ ಆಗುವ ಸ್ಥಿತಿಯಲ್ಲಿದೆ. ಗ್ರಾಮಸ್ಥರು ಅವರ ಭಾಗದ ದುಡ್ಡನ್ನು ಕೊಡಬೇಕೆಂದು ಕೇಳುವುದಕ್ಕೆ ಮುಂಚಿತವಾಗಿ ಅವರಿಗೆ ಆ ಹಣವನ್ನು ಕೊಡಲು ಶಕ್ತಿಯಿದೆಯೋ ಇಲ್ಲವೇ ಎಂಬುದನ್ನು ಸಹ ತಿಳಿಯದೆ 50 ಲಕ್ಷ ರೂಪಾಯಿಗಳನ್ನು ಈಗಾಗಲೇ ಒದಗಿಸಿದ್ದೇವೆಂದು ಹೇಳಿದ್ದಾರೆ. ಈ ಬಾಬಿಗೆ ನ್ಯಾಯವಾಗಿ ಎಷ್ಟು ಹಣ ಖರ್ಚಾಗುತ್ತದೆ.

ಶ್ರೀ ಟಿ. ಚನ್ನಯ್ಯ.—ಈಗಾಗಲೇ ಕೆಲವು ಪಂಪ್ ಸೆಟ್ಸ್ ಮತ್ತು ಮೋಟಾರುಗಳನ್ನು ಕೊಂಡುಕೊಳ್ಳಲು ಆರ್ಡರ್ ಮಾಡಿದ್ದೇವೆ. 70 ಪಂಪ್‌ಸೆಟ್ಸ್‌ಗಳನ್ನು ಕೊಂಡುಕೊಳ್ಳಲು S.P.C.ಗೆ ತಿಳಿಸಲಾಗಿದೆ. ಈ ಹಣವನ್ನು ನಾವು ಲ್ಯಾಪ್ಸ್ ಆಗುವುದಕ್ಕೇನೂ ಅವಕಾಶ ಕೊಡುವುದಿಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಸಂತೋಷ. ಇನ್ನು ನೀರನ್ನು ಸರಬರಾಯಿ ಮಾಡುವುದಕ್ಕೆ ಸಂಬಂಧಪಟ್ಟ ರಾಷ್ಟ್ರೀಯ ಯೋಜನೆಯ ಬಗ್ಗೆ ಗ್ರಾಮಾಂತರ ಪ್ರದೇಶಗಳ ನೀರಿನ ಸರಬರಾಯಿಗಾಗಿ ದುಡ್ಡನ್ನು ಖರ್ಚುಮಾಡುವುದೇನೋ ಅಗತ್ಯ ಮತ್ತು ಒಳ್ಳೆಯದು. ಆಧರೆ ಈ ಮೊಬಲಗನ್ನು ವರ್ಷಾಖೈರಿನಲ್ಲಿ ಒದಗಿಸಿದ್ದಾರೆ. ಈ ಮೊಬಲಗನ್ನು ಯಾವ ಯಾವ ಡಿಸ್ಟ್ರಿಕ್ಟಿಗೆ ಎಷ್ಟೆಷ್ಟು ಮೊಬಲಗನ್ನು ಒದಗಿಸಬೇಕೋ ಅಷ್ಟನ್ನೂ ಕೂಡಲೇ ಒದಗಿಸಿ, ಆ ಮೊಬಲಗನ್ನೆಲ್ಲ ಆಯಾ ಜಿಲ್ಲೆಯ ಡೆಪ್ಯುಟಿ ಕಮಿಷನರ್‌ಗಳು ಖರ್ಚುಮಾಡಲು ಅವಕಾಶ ನೀಡಬೇಕೆಂದು ತಿಳಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

4 P.M.

ಶ್ರೀ ಎಚ್. ಕೆ. ವೀರಣ್ಣಗೌಡ (ಮದ್ದೂರು).—ಸ್ವಾಮಿ, ಮೊನ್ನೆ ಮುಖ್ಯಮಂತ್ರಿಗಳು ಈ ಆಯವ್ಯಯದ ಚರ್ಚೆಯಮೇಲೆ ಮಾತನಾಡುತ್ತಾ ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆ ಯಾವಾಗ ಮಾಡಬೇಕೆಂಬುದನ್ನು ಇನ್ನೂ ನಿರ್ಧಾರಮಾಡಿಲ್ಲ ಆದರೆ ಈ ಡಿಸ್ಟ್ರಿಕ್ಟ್ ಬೋರ್ಡುಗಳ ಆಡಳಿತವನ್ನು ನಡೆಸುವುದಕ್ಕೆ ಡಿಸ್ಟ್ರಿಕ್ಟ್ ಕಮಿಟಿಗಳನ್ನು ಏರ್ಪಾಡು ಮಾಡಬೇಕೆಂದು ಆಲೋಚನೆ ಮಾಡಿದ್ದೇವೆ ಎಂದು ಹೇಳಿದರು. ಡೆಪ್ಯುಟಿ ಕಮೀಷನರು ಆ ಕಮಿಟಿಗೆ ಪ್ರೆಸಿಡೆಂಟರಾಗಿರಬೇಕು ಅಥವಾ ತಮಗೆ ಬೇಕಾದವರು ಯಾರನ್ನಾದರೂ ಪ್ರೆಸಿಡೆಂಟರನ್ನಾಗಿ ಮಾಡಬಹುದು ಎನ್ನುವ ತರಹದಲ್ಲಿ ಮಾತನಾಡಿದರು. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಸರ್ಕಾರದವರಿಗೆ ಸಲಹೆ ರೂಪದಲ್ಲಿ ಹೇಳಬೇಕೆಂದಿದ್ದೇನೆ. ಏನೆಂದರೆ ಈ ಕಮಿಟಿಗಳಿಗೆ ಸದಸ್ಯರನ್ನು ಚುನಾವಣೆ ಮಾಡುವಾಗ ಅಥವಾ ಆರಿಸಿಕೊಳ್ಳುವಾಗ ಮತ್ತು ನಾಮಕರಣ ಮಾಡುವಾಗ ಅಲ್ಲದೆ ಈ ಕಮಿಟಿಗೆ ಪ್ರೆಸಿಡೆಂಟರು ಅಥವಾ ಚೆರ್ಮನ್‌ರು ಎಂದು ಏನು ಮಾಡುತ್ತೀರೋ ಅವರನ್ನು ಹೀಗೆ ನಿಮಗೆ ಬೇಕಾದವರು ಎಂಬ ಭಾವನೆಯನ್ನು ಬಿಟ್ಟು—ಏಕೆ ಹೇಳುತ್ತೇನೆ ಎಂದರೆ ನಿನ್ನೆ ಅವರು ಹೇಳಿದ ಧೋರಣೆ ಮತ್ತು ಅವರ ಹಿಂದಿನ ನಡವಳಿಕೆಗಳಿಂದ ಹಾಗೆ ಕಾಣುತ್ತದೆ—ನ್ಯಾಯವಾದ ರೀತಿಯಲ್ಲಿ ಚುನಾವಣೆ ನಡೆಸುವುದು ಒಳ್ಳೆಯದು. ಹಾಗಲ್ಲದೆ ನಿಮಗೆ ಬೇಕಾದವರನ್ನು ಚುನಾವಣೆ ಮಾಡಿಕೊಳ್ಳುವುದು ಒಳ್ಳೆಯದಲ್ಲ. ಮಾನ್ಯಸದಸ್ಯರೊಬ್ಬರು ತಾಲ್ಲೂಕು ಕಮಿಟಿಗಳನ್ನು ಮಾಡಿದ್ದೀರಿ ಆದರೆ ಅವರು ಯಾವ ಕಾರ್ಯಕ್ರಮವನ್ನು ಆಚರಣೆಗೆ ತರಲು ಮನಸ್ಸು ಮಾಡಿಲ್ಲ ಎಂದು ಹೇಳಿದರು. ಅದಕ್ಕೆ ಕಾರಣ, ನನ್ನ ಅನುಭವದಲ್ಲಿ ಹೀಗಿದೆ, ಈ ಕಮಿಟಿಗಳಿಗೆ ಯಾವ ಕೆಲಸ ಮಾಡುವುದಕ್ಕೂ ಸಾಧ್ಯವಿಲ್ಲ. ಏಕೆಂದರೆ ಸರ್ಕಾರದವರು ತಮಗೆ ಬೇಕಾದವರನ್ನೇ ಸೇರಿಸಿ ಕೊಂಡು ಈ ಕಮಿಟಿಗಳನ್ನು ಮಾಡಿದ್ದಾರೆ. ಅವರ ಅಭಿಪ್ರಾಯದಲ್ಲಿ ಯಾವುದು ನಡೆಯಬೇಕೆಂದಿರುತ್ತದೋ ಅದು ಜಾರಿಗೆ ಬರುತ್ತದೆ ಇಲ್ಲದೇ ಇದ್ದರೆ ಇಲ್ಲ. ಈ ತಾಲ್ಲೂಕು ಬೋರ್ಡುಗಳಲ್ಲಿ ತಾಲ್ಲೂಕಿನ ಮುಖಂಡರುಗಳನ್ನು ಕೇಳಿ ಅವರ ಸಲಹೆ ತೆಗೆದುಕೊಂಡು ಸದಸ್ಯರುಗಳನ್ನು ನಾಮಕರಣ ಮಾಡಿದ್ದೇವೆ ಎಂದು ಹೇಳುತ್ತಾರೆ. ನಾನು ಹೇಳುತ್ತೇನೆ ನಮ್ಮನ್ನು ಯಾರೂ ಕೇಳಲಿಲ್ಲ. ನಾನು ಅಸೆಂಬ್ಲಿ ಮೆಂಬರಾಗಿದ್ದೇನೆ. ಮಂಡ್ಯ ಡಿಸ್ಟ್ರಿಕ್ಟ್ ಬೋರ್ಡಿನ ಮೆಂಬರಾಗಿದ್ದೆ, ಮತ್ತು ಮದ್ದೂರು ತಾಲ್ಲೂಕಿನವನೇ ಇದ್ದೇನೆ, ಹೀಗಿದ್ದೂ ಕೂಡ ಮದ್ದೂರು ತಾಲ್ಲೂಕು ಬೋರ್ಡ್‌ನ್ನು ರಚನೆ ಮಾಡುವಾಗ ನನ್ನನ್ನು ಯಾರೂ ಕೇಳಲಿಲ್ಲ. ಇನ್ನಾರನ್ನು ಕೇಳಿಮಾಡಿದರೋ ನನಗೆ ಗೊತ್ತಿಲ್ಲ. ಯಾರೋ ತಮಗೆ ಬೇಕಾದವರನ್ನು ಕೇಳಿಕೊಂಡು ತಾಲ್ಲೂಕಿನ ಮುಖಂಡರನ್ನೆಲ್ಲಾ ಕೇಳಿಮಾಡಿದ್ದೇವೆ ಎಂದರೆ ನನಗೇನೋ ಅವರ ಮಾತು ಬಹಳ ವಿಚಿತ್ರವಾಗಿ ಕಾಣುತ್ತದೆ. ಆ ರೀತಿ ನಾಚಿಕೆ ಇಲ್ಲದೆ ಮಾತನಾಡುತ್ತಾರಲ್ಲ ಅದಕ್ಕೆ ಅವರನ್ನು ಮೆಚ್ಚಬೇಕು. ಅಸೆಂಬ್ಲಿ ಮೆಂಬರುಗಳ ಸಲಹೆಯನ್ನು ತೆಗೆದುಕೊಂಡು ಅವರನ್ನು ಅಲ್ಲಿ ನೇಮಕಮಾಡಿದ್ದೇವೆ ಎಂದು ಹೇಳುತ್ತಾರೆ. ಮದ್ದೂರು ತಾಲ್ಲೂಕಿನಲ್ಲಿ ಏನಾಗಿದೆ ಎಂದರೆ ಆ ತಾಲ್ಲೂಕು ಬೋರ್ಡಿಗೆ 14 ಜನರನ್ನು ನಾಮಕರಣ ಮಾಡಿದ್ದಾರೆ. ನನ್ನನ್ನು ಕೂಡ ಅದರಲ್ಲಿ ಸೇರಿಸಿದ್ದಾರೆ. ನಾನು ಅಸೆಂಬ್ಲಿಯ ಮೆಂಬರು ಆದ್ದರಿಂದ ನನ್ನನ್ನು ಬಿಡುವುದಕ್ಕೆ ಆಗಲಿಲ್ಲವೋ ಏನೋ, ನನ್ನ ಹೆಸರೂ ಇದೆ. ನಾಲ್ಕು ಹೋಬಳಿಯಲ್ಲಿ ಒಂದು ಹೋಬಳಿಯಿಂದ 7 ಜನ ಸದಸ್ಯರನ್ನು ತೆಗೆದುಕೊಂಡು ಬಾಕಿ ಮೂರು ಹೋಬಳಿಯಿಂದ ನನ್ನನ್ನೂ ಸೇರಿಕೊಂಡು ಉಳಿದ ಏಳು ಜನರನ್ನು ಆರಿಸಿಕೊಂಡಿದ್ದಾರೆ. ಹೀಗೆ ಸಮಿತಿಗಳನ್ನು ನೇಮಕಮಾಡಿ, ಆ ಸಮಿತಿಗಳು ಕೈಕೊಳ್ಳತಕ್ಕ ನಿರ್ಧಾರಕ್ಕೆ ಯಾರುತಾನೆ ಬೆಲೆ ಕೊಡುತ್ತಾರೆ ಅಥವಾ ಯಾರುತಾನೆ ಅದಕ್ಕೆ ಸಹಕಾರ ನೀಡುತ್ತಾರೆ ! ನಾನು ಈ ಅಸೆಂಬ್ಲಿಯಲ್ಲಿ ಈ ಅಧಿವೇಶನದಲ್ಲೇ ಆಯವ್ಯಯ ಪಟ್ಟಿ ಮೇಲೆ ಮಾತನಾಡುವಾಗಲೂ ಕೂಡ ಹೇಳಿದೆ.

(ಶ್ರೀ ಎಚ್. ಕೆ. ವೀರಣ್ಣಗೌಡ.)

ಈ ಸ್ವಪಕ್ಷ ಪರಪಕ್ಷಗಳ ನೀತಿಯನ್ನು ಅನುಸರಿಸಿ ಪ್ರತಿಯೊಂದು ಸಣ್ಣ ಆಡಳಿತ ಕಾರ್ಯವನ್ನೂ ಕೂಡ ತಮ್ಮನ್ನೇ ಯಾರು ಅನುಸರಿಸಿಕೊಂಡು ಹೋಗುತ್ತಾರೋ ಅವರನ್ನು ಅವನು ಬೀದಿಯಲ್ಲಿ ಹೋಗುವ ದಾಸಯ್ಯನಾಗಲಿ, ಕಳ್ಳಭಟ್ಟಿ ತಯಾರು ಮಾಡುವ ಕೀಳುದರ್ಜೆಯವನಾಗಲಿ ಯಾರಾದರೂ ಆಗಲಿ ಬೆನ್ನು ತಟ್ಟಿ ಅವನ ಹೆಗಲಮೇಲೆ ಕೈಹಾಕಿಕೊಂಡು ಈ ರೀತಿ ಸಮಿತಿಗಳನ್ನು ಮಾಡಿದರೆ ಏನೆಂದು ಹೇಳುವುದು? ಇನ್ನು ಸಮಿತಿಯ ಮೆಂಬರುಗಳಾದ ನನ್ನಂಥವರು ಏನು ಮಾಡುವುದಕ್ಕಾಗುತ್ತದೆ 'ಪರಿಷೆಯಲ್ಲಿ ಗೋವಿಂದ' ಎಂದು ಎಲ್ಲರೂ ಏನು ಹೇಳುತ್ತಾರೋ ಅದರಂತೆ ಹೋಗಬೇಕಾಗುತ್ತದೆ. ನಾನು ಆಗಲೇ ಹೇಳಿದಹಾಗೆ ಈ ತಾಲ್ಲೂಕು ಸಲಹಾ ಸಮಿತಿಗಳಿಗೆ ಮಾನ್ಯಸದಸ್ಯರು ಯಾರಿದ್ದಾರೋ ಅವರಿಗೆ ಪ್ರತಿನಿಧಿಸ್ವರೂಪ ಇಲ್ಲ. ನಮ್ಮ ತಾಲ್ಲೂಕು ಕಮಿಟಿಯಲ್ಲಿ ಇರತಕ್ಕ ಮುಖಂಡರು ಎಂದು ಏನೋ ಹೇಳುತ್ತಾರೋ ಅವರ ಪೈಕಿ ನಾಲ್ಕು ಜನ ನನಗೆ ಚೆನ್ನಾಗಿ ಗೊತ್ತು. ನಾನು ಆ ತಾಲ್ಲೂಕಿನಲ್ಲಿ ಡಿಸ್ಟ್ರಿಕ್ಟ್‌ಬೋರ್ಡ್ ಚುನಾವಣೆ, ವಿಧಾನಸಭೆ ಚುನಾವಣೆ, ಕಾನ್ಸ್ಟಿಟ್ಯೂಯಂಟ್ ಅಸೆಂಬ್ಲಿ ಚುನಾವಣೆಗಳ ಸಂಬಂಧದಲ್ಲಿ ಹತ್ತಾರು ಸಾರಿ ತಿರುಗಿದ್ದೇನೆ; ಆ ತಾಲ್ಲೂಕಿನಲ್ಲಿರತಕ್ಕ ಪ್ರತಿಯೊಂದು ಮನೆಯೂ ನನಗೆ ಗೊತ್ತು. ಆದರೂ ಈ ಕಮಿಟಿಗೆ ನಾಮಕರಣವಾಗಿ ಬಂದಿರತಕ್ಕವರು ಯಾರೋ ಗುರುತಿಲ್ಲದ, ಪರಿಚಯವಿಲ್ಲದವರನ್ನು ನಾಮಕರಣಮಾಡಿ, ಬಹುಭಾಗ ಪ್ರಾತಿನಿಧ್ಯವಿರತಕ್ಕ ಸ್ಥಳೀಯ ಮುಖಂಡರೇ ಇದ್ದಾರೆ ಎಂದು ಮುಖ್ಯಮಂತ್ರಿಗಳು ಹೇಳಿದರೆ ಇದರಲ್ಲಿ ಏನೋ ಒಂದು ವಿಚಿತ್ರವಾದ ಅರ್ಥ ಕಂಡು ಬರುತ್ತಾಯಿದೆ. ಯಾರು ಒಳ್ಳೆಯ ದೃಷ್ಟಿಯಿಂದ ಕಾಂಗ್ರೆಸಿಗೆ ಕೆಟ್ಟಹೆಸರು ಬರದೆ ಇರಲಿ, ಸರ್ಕಾರದ ಪಕ್ಷ ಕಾಂಗ್ರೆಸ್ ಪಕ್ಷ ಒಂದೇ ಎಂಬ ಮನೋಭಾವದಿಂದ ಪ್ರಜೆಗಳಿಗೆ ಒಳ್ಳೆಯದಾಗಲಿ ಎಂದು ಕಟುವಾಗಿ ಟೀಕೆಮಾಡುತ್ತಾರೋ ಅವರ ವಿಷಯದಲ್ಲಿ ಇವನು ಏನೋ ಬಗಿಯಾಗಿದ್ದಾನೆ ಇರಲಿ; ಇವನಿಗೆ ತಕ್ಕ ಬುದ್ಧಿ ಕಲಿಸೋಣ ಎಂಬ ಮನೋಭಾವ ಇರುವ ರೀತಿಯಲ್ಲಿ ಮೊನ್ನೆ ಉತ್ತರ ಕೊಡುವಾಗ ಅವರು ಮಾತನಾಡಿದರು. ಅದು ತಮಗೆ ಗೊತ್ತಾಯಿತೋ ಇಲ್ಲವೋ ನಾನಂತೂ ಆ ರೀತಿ ಮನಗಂಡೆ. ಅಂತೂ ಅವರ ಅಭಿಪ್ರಾಯದಲ್ಲಿ ಪ್ರಾತಿನಿಧ್ಯವುಳ್ಳ ಮುಖಂಡರನ್ನೇ ನೇಮಕಮಾಡಿದ್ದಾರೆ ಎಂದು ಇದೆ. ನನ್ನ ಸಲಹೆ ಏನೆಂದರೆ, ಡಿಸ್ಟ್ರಿಕ್ಟ್ ಕಮಿಟಿಮಾಡಿ, ಅಧ್ಯಕ್ಷರನ್ನು ಚುನಾಯಿಸಿ ಅಥವಾ ನಾಮಕರಣಮಾಡಿ, ಏನಾದರೂ ಮಾಡಿ; ಆದರೆ ಪಕ್ಷಪಾತಮನೋಭಾವವನ್ನು ಮಾತ್ರ ತೋರಿಸಬೇಡಿ. ಸಾರ್ವಜನಿಕ ಕೆಲಸ ಕಾರ್ಯಗಳು ಸುಸೂತ್ರವಾಗಿ ನಡೆಯಬೇಕಾದರೆ ಎಲ್ಲರನ್ನೂ ಯೋಗ್ಯ ರೀತಿಯಲ್ಲಿ ನೋಡಿಕೊಳ್ಳುವ ನೀತಿಯನ್ನು ಸರ್ಕಾರ ಅನುಸರಿಸಬೇಕೆಂದು ಸಲಹೆಮಾಡುತ್ತೇನೆ.

ಶ್ರೀ ಟಿ. ಚನ್ನಯ್ಯ.—ಈ ಸಮಿತಿಗಳಲ್ಲಿ ಸದಸ್ಯರನ್ನು ನೇಮಕಮಾಡುವಾಗ ಸರ್ಕಾರದವರು ಪಕ್ಷಪಾತ ದೃಷ್ಟಿಯಿಂದ ಮಾಡಿಲ್ಲ ಎಂದು ಹೇಳುತ್ತೇನೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ನಿಮಗೆ ಗೊತ್ತಿಲ್ಲ.

ಶ್ರೀ ಟಿ. ಚನ್ನಯ್ಯ.—ಡೆಪ್ಯುಟಿ ಕಮಿಷನರಿಂದ ಹೆಸರುಗಳನ್ನು ತರಿಸಿಕೊಂಡು ನೇಮಕಮಾಡಿದ್ದೇವೆ.

*ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—ಈ ಡಿಮ್ಯಾಂಡನ್ನು ಸಮರ್ಥನೆ ಮಾಡುತ್ತಾ ಕೆಲವು ವಿಚಾರಗಳನ್ನು ಸರ್ಕಾರದವರ ಗಮನಕ್ಕೆ ತರಬೇಕೆಂದಿದ್ದೇನೆ. ಕಡೂರು ತಾಲ್ಲೂಕಿನಲ್ಲಿ ಸುಮಾರು 300 ಗ್ರಾಮಗಳು ಇವೆ. 300 ಗ್ರಾಮಗಳ ಪೈಕಿ ಸರ್ಕಾರದವರು ಕೊಟ್ಟಿರುವ ಲೆಕ್ಕದ ಪ್ರಕಾರ ಇನ್ನೂ 100 ಗ್ರಾಮಗಳಿಗೆ ಕುಡಿಯುವ ನೀರಿನ ಬಾವಿಗಳು ಆಗಬೇಕು ಎಂದು ಹೇಳಿದ್ದಾರೆ. ಮೊದಲನೆ ಪಂಚವಾರ್ಷಿಕ ಯೋಜನೆಯಲ್ಲಿ ಎಲ್ಲಾ ಗ್ರಾಮಗಳಿಗೂ ಕುಡಿಯುವ ನೀರಿನ ಬಾವಿಗಳನ್ನು ಒದಗಿಸುವುದು ಪ್ರಾಮುಖ್ಯ ಎಂದು ಹೇಳಿ ಹಣವನ್ನು ಒದಗಿಸಿದ್ದರು. ಆದರೂ ಕೂಡ ಇನ್ನೂ ಅನೇಕ ಗ್ರಾಮಗಳಲ್ಲಿ ಕುಡಿಯುವ ನೀರಿನ ಬಾವಿಗಳು ಇಲ್ಲ. ಶ್ರೀಮಾನ್ ನರಸಿಂಹರೆಡ್ಡಿಯವರು ಹೇಳಿದಹಾಗೆ, ಈ ಬಾವಿಗಳಿಗಾಗಿ ಕೊಟ್ಟಿರುವ ಗ್ರ್ಯಾಂಟು ಬಹಳ ನಿಧಾನವಾಗಿ ಮಂಜೂರು ಮಾಡಿರುತ್ತೀರಿ. ತಾವಿನ್ನು ಪರಿಶೀಲನೆಮಾಡಿ ಮೊದಲೇ ಹೆಚ್ಚಿಗೆ ಗ್ರ್ಯಾಂಟು ಕೊಡುವುದು ಬಹಳ ಸಾಧುವಾದುದಾಗಿದೆ ಎಂದು ಹೇಳಿ ಸರ್ಕಾರದವರ ಗಮನಕ್ಕೆ ತರುತ್ತೇನೆ. ಕೊನೆಯ ಪಕ್ಷ ಅಕ್ಟೋಬರ್, ನವೆಂಬರ್‌ನಲ್ಲಿ ಕೊಟ್ಟರೂ ಪರವಾಗಿಲ್ಲ. ಅದು ಬಿಟ್ಟು ಜನವರಿ, ಫೆಬ್ರುವರಿ ತಿಂಗಳಿನಲ್ಲಿ ಹಣ ಮಂಜೂರುಮಾಡಿ, ಹಣ ಖರ್ಚು ಮಾಡುವುದಕ್ಕೆ ಅವಕಾಶವಿಲ್ಲದೆ ಲ್ಯಾಪ್ಸ್ ಆಗುವಂತೆ ಮಾತ್ರ ಮಾಡಬಾರದೆಂದು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಎರಡನೆಯದಾಗಿ ನಾನು ಈ ಶಾಸನಸಭೆಗೆ ಬಂದ ಮೇಲೆ 4 ವರ್ಷದಿಂದೀಚೆಗೆ ಗ್ರಾಮಾಂತರಗಳಲ್ಲಿ ಅದರಲ್ಲೂ ಕಡೂರು ತಾಲ್ಲೂಕಿನಲ್ಲಿ ದೊಡ್ಡ ಗ್ರಾಮಗಳಿವೆ, ಸಾವಿರಕ್ಕೆ ಮೇಲ್ಪಟ್ಟಿರತಕ್ಕ 60-70 ಗ್ರಾಮಗಳಿವೆ ಅವಕ್ಕೆ ಸರಿಯಾದ ರಸ್ತೆಗಳು ಇಲ್ಲ ಎಂದು ಅನೇಕಸಾರಿ ಹೇಳಿದ್ದೇನೆ. ಜಿಲ್ಲಾಬೋರ್ಡುಗಳಿದ್ದಾಗ ಅವರ ಗಮನಕ್ಕೆ ತಂದದ್ದಾಯಿತು ಜಿಲ್ಲಾಬೋರ್ಡುರದ್ದಾದ ಮೇಲೆ ಸರ್ಕಾರದವರ ಗಮನಕ್ಕೂ ಮತ್ತು ಮಂತ್ರಿಗಳ ಗಮನಕ್ಕೂ ತಂದು ಹೋದ ಅಸೆಂಬ್ಲಿ ಅಧಿವೇಶನದಲ್ಲೂ ಹೇಳಿದೆ, ಕಡೂರು ತಾಲ್ಲೂಕು ಬಹಳ ಪ್ರಾಮುಖ್ಯವಾದದ್ದು, ನಮ್ಮ ಜಿಲ್ಲೆಯಲ್ಲಿ ಇದು ದೊಡ್ಡ ತಾಲ್ಲೂಕು, ಅನೇಕ ದೊಡ್ಡದೊಡ್ಡ ಗ್ರಾಮಗಳಿವೆ. ಮಾನ್ಯಮಂತ್ರಿಗಳು ಪ್ರವಾಸಮಾಡುವಾಗ ನಮ್ಮ ತಾಲ್ಲೂಕಿಗೆ ಬಂದ ಸಂದರ್ಭದಲ್ಲಿ ಅನೇಕ ಬಿನ್ನವತ್ತಳೆಗಳನ್ನು ಅಲ್ಲಿನ ಜನ ಕೊಟ್ಟಿದ್ದಾರೆ ಮತ್ತು ನಾನು ಈ ಅಸೆಂಬ್ಲಿಯಲ್ಲಿ ಅನೇಕಸಾರಿ ಹೇಳಿದಮೇಲೆ ರಸ್ತೆ ವಿಚಾರದಲ್ಲಿ ಹೆಚ್ಚು ಗಮನಕೊಟ್ಟು ದುರಸ್ತುಮಾಡಿಸುತ್ತೇವೆ ಎಂದು ಪಬ್ಲಿಕ್‌ವರ್ಕ್ಸ್ ಮಂತ್ರಿಗಳು ಜವಾಬು ಕೊಟ್ಟರೂ ಕೂಡ ಇನ್ನೂ ಆ ವಿಷಯದಲ್ಲಿ ಗಮನ ಕೊಟ್ಟಿಲ್ಲ ಎಂಬ ಅಂಶವನ್ನು ತಮ್ಮ ಗಮನಕ್ಕೆ ತರಲು ಇಷ್ಟಪಡುತ್ತೇನೆ. ಅಲ್ಲದೆ ಈ ರಸ್ತೆ ವಗೈರೆಗಳಿಗಾಗಿ ಸರ್ಕಾರದವರು ಗ್ರ್ಯಾಂಟು ಮಂಜೂರುಮಾಡುವಾಗ ಅದಷ್ಟು ಮುಂಚಿತವಾಗಿ ಮಂಜೂರು ಮಾಡುವುದು ಒಳ್ಳೆಯದು ಏಕೆಂದರೆ ಮೊನ್ನೆತಾನೆ ಎರಡು ತಿಂಗಳ ಹಿಂದೆ $1\frac{1}{2}$ ಲಕ್ಷ ರೂಪಾಯಿ ನಮ್ಮ ಜಿಲ್ಲೆಗೆ ಕೊಟ್ಟು. ಮಾರ್ಚಿ ಆಖೈರಿನ ಒಳಗೆ ಖರ್ಚು ಮಾಡಬೇಕೆಂದು ಸಲಹೆಮಾಡಿದ್ದರು. ಈ ಗ್ರ್ಯಾಂಟನ್ನು ಯಾವರೀತಿ ಖರ್ಚುಮಾಡಬೇಕೆಂದು ಹೇಳಿ ನಾನು ಕೇಳಿದೆ. ಸುಮ್ಮನೆ ಎಸ್ಟಿಮೇಟ್‌ಮಾಡಿ ಬಿಟ್ಟುಬಿಟ್ಟರೆ ಆಗಲಿಲ್ಲ. ಸರ್ಕಾರದವರು ಹೆಚ್ಚು ಮುತುವರ್ಜಿವಹಿಸಿ ಟೌನ್‌ಗಳಲ್ಲಿ ಮತ್ತು ಸಿಟಿಗಳಲ್ಲಿ ಕುಡಿಯುವ ನೀರಿಗಾಗಿ ಎಷ್ಟು ಸಹಾಯ ಮಾಡುತ್ತೀರಿ ಅದಕ್ಕಿಂತ ಹೆಚ್ಚಿಗೆ ಎಲ್ಲಾ ಗ್ರಾಮಗಳಿಗೂ ಕುಡಿಯುವ ನೀರಿನ ಬಾವಿಗಳಿಗೆ ವ್ಯವಸ್ಥೆಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎ. ಮುನಿಯಪ್ಪ (ಶಿಡ್ಲಘಟ್ಟ-ಚಿಕ್ಕಬಳ್ಳಾಪುರ-ಅನುಸೂಚಿತ ಜಾತಿಗಳು).—ಸ್ವಾಮಿ, ಸರ್ಕಾರದವರು ತಾಲ್ಲೂಕುಸಲಹಾಸಮಿತಿಗಳನ್ನು, ತಾಲ್ಲೂಕು ಅಡ್ವೈಸರಿ ಕಮಿಟಿಗಳನ್ನು ಮಾಡಿರುವುದರಲ್ಲಿ ಬಹಳ ಪಕ್ಷಪಾತ ಮಾಡಿದ್ದಾರೆಂಬುದರಲ್ಲಿ ಸಂಶಯವಿಲ್ಲ. ನಮ್ಮ ತಾಲ್ಲೂಕಿನಲ್ಲಿ ಹರಿಜನ ಮೆಂಬರುಗಳಿದ್ದಾಗ್ಯೂ ಆ ಹರಿಜನ ಸದಸ್ಯರಾರನ್ನೂ ಅದರಲ್ಲಿ ಸೇರಿಸಿಕೊಳ್ಳದಿರುವುದು ಬಹಳ ಪಕ್ಷಪಾತ ಮಾಡಿದಂತಾಗಿದೆಯೆಂದು ಹೇಳಬೇಕಾಗಿದೆ. ಚಿಂತಾಮಣಿ ಪ್ರದೇಶದಿಂದ ಹನುಮಂತಪ್ಪ ಎಂಬವರನ್ನು ನಾಮಿನೇಷನ್ ಮಾಡಿದ್ದಾರೆ. ಆ ಆಸಾಮಿಯೇ ಊರಲ್ಲಿಲ್ಲ. ಇಂಥವರನ್ನು ನೇಮಕಮಾಡಿದ್ದಾರೆ. ಶಿಡ್ಲಘಟ್ಟದಲ್ಲಿ ಮೇಲೂರು ಗ್ರಾಮದಲ್ಲಿ ನಾಲ್ಕು ಜನರನ್ನು ಒಂದೇ ಗ್ರಾಮದಿಂದ ತೆಗೆದುಕೊಂಡಿದ್ದಾರೆ. ಜಂಗಮಕೋಟೆ ಹೋಬಳಿಯ ಒಂದೇ ಹೋಬಳಿಯಿಂದ ಒಂಬತ್ತು ಜನರನ್ನು ತೆಗೆದುಕೊಂಡಿದ್ದಾರೆ. ಯಾವ ಮಹಾನುಭಾವರು ಹೀಗೆ ಮಾಡಬೇಕೆಂದು ಆಶಿಸಿ ಹೇಳಿದರೋ ಗೊತ್ತಿಲ್ಲ. ಹೀಗೆ ನಾಮಿನೇಷನ್ ಮಾಡುವುದರಲ್ಲೂ ಪಕ್ಷಪಾತ ಮನೋಭಾವನೆಯನ್ನು ತೋರಿಸುವುದೇ? ಎಲ್ಲರನ್ನೂ ಕೇಳಿದ್ದೇವೆ ಎಂದು ಹೇಳುತ್ತಾರೆ: ಶಾಸನ ಸಭೆಯ ಸದಸ್ಯರನ್ನು ಕೇಳಿ ಮಾಡಿದ್ದೇವೆಂದು ಹೇಳುತ್ತಾರೆ. ಆದರೆ ನನಗೆ ತಿಳಿದಮಟ್ಟಿಗೆ ಶಾಸನಸಭೆಯವರನ್ನು ಯಾರನ್ನೂ ಕೇಳಿಲ್ಲ. ಅಲ್ಲದೆ ಹೀಗೆ ಕೇಳಿದ್ದರೂ, ಒಂದೇ ಊರಿನಿಂದ ನಾಲ್ಕು ಜನರನ್ನು ತೆಗೆದುಕೊಳ್ಳಿ ಎಂದು ಯಾರು ಸಲಹೆಯಿತ್ತರೋ ಗೊತ್ತಿಲ್ಲ. ಇನ್ನು ಮುಂದಾದರೂ ನಾಮಿನೇಷನ್ ಮಾಡುವಾಗ ತಾಲ್ಲೂಕು ಮುಖಂಡರನ್ನು ಕೇಳಿ ಮಾಡಬೇಕೆಂದು ನಾನು ಸೂಚಿಸುತ್ತೇನೆ.

ಒಬ್ಬ ಸದಸ್ಯರು.—ನಾಮಿನೇಷನ್ ಇನ್ನೂ ಬೇಕೇ?

ಶ್ರೀ ಎ. ಮುನಿಯಪ್ಪ.—ಈಗ ನಾಮಿನೇಷನ್ ಮಾಡುತ್ತಿದ್ದೀರಲ್ಲಾ. ಅದಿರುವವರೆಗೂ ಒಂದು ರೀತಿ ನೀತಿಯನ್ನನುಸರಿಸುವುದು ನ್ಯಾಯ.

ಬಾವಿಗಳ ವಿಚಾರದಲ್ಲಿ, ಮಂತ್ರಿಗಳು ಹೇಳಿದರು, ಜನರು ಸುಮ್ಮನೆ ಕೇಳುತ್ತಾರೆ ಅರ್ಜಿಗಳನ್ನು ಕೊಡುವುದಿಲ್ಲ ಎಂದು. ಶಿಡ್ಲಘಟ್ಟ ತಾಲ್ಲೂಕು ಗೆಜ್ಜಗಾನಹಳ್ಳಿಗೆ ಊರು ಹುಟ್ಟಿದಲಾಗಾಯ್ತು ಸರಿಯಾದ ನೀರಿನ ವ್ಯವಸ್ಥೆಯಿಲ್ಲದೆ ಕೂಲಿ ಕೊಟ್ಟು ನೀರು ತರಿಸುತ್ತಿದ್ದಾರೆ. ಹತ್ತು ಅರ್ಜಿಗಳನ್ನು ಕೊಟ್ಟಿದ್ದಾಗಿದೆ. ಅನೇಕ ವರ್ಷಗಳಿಂದ ಪ್ರತಿದಿವಸವೂ ಆರು ಆಣೆಯಂತೆ ಕೂಲಿ ಕೊಟ್ಟು ನೀರು ಕೊಂಡುಕೊಳ್ಳುವುದೇ ಆಗಿದೆ.

ಒಬ್ಬ ಸದಸ್ಯರು.—ಹರಿಜನರ ಮನೆಗಳೆಷ್ಟಿವೆ?

ಶ್ರೀ ಎ. ಮುನಿಯಪ್ಪ.—ಮೂವತ್ತು ಮನೆಗಳಿವೆ. ಇಂಥ ಗ್ರಾಮಗಳು ಅನೇಕವಿವೆ. ಆದ್ದರಿಂದ ಸರ್ಕಾರದವರು ಇಂತಹವುಗಳ ವಿಷಯದಲ್ಲಿ ಒಂದು ವರದಿ ತರಿಸಿಕೊಳ್ಳಬೇಕು. ತಾಲ್ಲೂಕ್ ಲೆವಲ್‌ನಲ್ಲಿ ಯಾವ ಯಾವ ಊರಿನಲ್ಲಿ ನೀರಿನ ವ್ಯವಸ್ಥೆ ಸರಿಯಾಗಿಲ್ಲವೆಂಬುದರ ಬಗ್ಗೆ ವರದಿ ತರಿಸಿಕೊಂಡು ಅಂಥವರಿಗೆ ನೀರಿನ ವ್ಯವಸ್ಥೆ ಮಾಡಿಕೊಡಬೇಕೆಂದು ಹೇಳುತ್ತೇನೆ.

ಸ್ಪೆಷಲ್ ಗ್ರಾಂಟ್ ಕೊಡುವ ವಿಚಾರದಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಂದಲೂ ಮತ್ತು ಮುಖಂಡರುಗಳಿಂದಲೂ ಯಾವ ವರದಿಯನ್ನೂ ತರಿಸಿಕೊಳ್ಳದೆ ತಮಗೆ ಬೇಕಾದವರಿಗೆ ಸ್ಪೆಷಲ್ ಗ್ರಾಂಟು ಕೊಡುವುದು ಸರಿಯಲ್ಲ. ನಾನು ಅನೇಕ ಹಳ್ಳಿಗಳಲ್ಲಿ ವಾರದ ಕೆಲಸವನ್ನು ಮಾಡಿಸಿಕೊಟ್ಟಿದ್ದೇನೆ. ಇನ್ನು ಮಿಕ್ಕ ಕೆಲಸವನ್ನು ಮಾಡಿಸಿ ಕೊಡಿ ಎಂದು ಹೇಳಿದರೆ ಗ್ರಾಂಟ್ ಇಲ್ಲವೆಂದು ಹೇಳುತ್ತಾರೆ. ಈಗ ತಾವು ಗ್ರಾಂಟ್ ಕೊಟ್ಟಿರುವ ಎಷ್ಟೋ ಹಳ್ಳಿಗಳಲ್ಲಿ ಹಣ ಖರ್ಚಾಗದಿರುವುದು ಬೇಕಾದಷ್ಟಿದೆ. ಆದ್ದರಿಂದ ಇನ್ನುಮುಂದೆ ಈ ಗ್ರಾಂಟ್‌ಗಳನ್ನು ಕೊಡುವಾಗ ಗ್ರಾಮದ ಮುಖಂಡರುಗಳನ್ನು ಮತ್ತು ಅಧಿಕಾರಿಗಳನ್ನು ಕೇಳಿ, ಗ್ರಾಂಟ್ ಕೊಟ್ಟು ಸರಿಯಾಗಿ ನಡೆಯುತ್ತಿದೆಯೋ ಇಲ್ಲವೇ ಎಂಬದರ ಬಗ್ಗೆ ವರದಿ ತರಿಸಿಕೊಂಡು ಹಂಚಬೇಕೆಂದು ಹೇಳುತ್ತೇನೆ.

*ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ಮೊದಲನೆಯದಾಗಿ ನಾನು ತಾಲ್ಲೂಕ್ ಕಮಿಟಿಗಳ ವಿಚಾರ ಹೇಳಬಯಸುತ್ತೇನೆ. ನಾನು ಮೊದಲಿನಿಂದಲೂ ಇದಕ್ಕೆ ವಿರೋಧಮಾಡುತ್ತಿರುವವನು. ಈಗ ಮಾನ್ಯ ಸದಸ್ಯರು ಮಾತನಾಡುವುದನ್ನು ನೋಡಿದರೆ, ಕಾಂಗ್ರೆಸ್ಸಿನ ಎದುರುಪಕ್ಷದವರೇ ಅಲ್ಲ, ಕಾಂಗ್ರೆಸ್ ಪಕ್ಷದವರೂ ಕೂಡ ಈ ಏರ್ಪಾಡನ್ನು ಬೈಯ್ಯುತ್ತಿದ್ದಾರೆ. ಏಕೆ ಸರ್ಕಾರದವರು ಇಂಥ ಕೆಲಸಮಾಡುತ್ತಾರೋ ಗೊತ್ತಿಲ್ಲ. ಮುಂದೆ ಇಂಥ ಕೆಲಸವನ್ನು ಸರ್ಕಾರದವರು ಮಾಡಬಾರದು ಎಂದು ನಾನು ಸರ್ಕಾರದವರಿಗೆ ಎಚ್ಚರಿಕೆ ಕೊಡುತ್ತೇನೆ. ಡಿಸ್ಟ್ರಿಕ್ಟ್ ಬೋರ್ಡ್ ಕಮಿಟಿಗಳನ್ನು ಮಾಡುವುದರಲ್ಲೂ ಸರಿಯಾಗಿ ಮಾಡಿಲ್ಲ. ಚುನಾವಣೆಯಮೇಲೆ ಮಾಡಿದರೆ ಯಾರಿಂದಲೂ ಆಕ್ಷೇಪಣೆಯಿರುವುದಿಲ್ಲ.

ಆಮೇಲೆ, ರಸ್ತೆಗಳ ವಿಚಾರ, ಮೊದಲು 1,500 ಮೈಲಿಗಳ ರಸ್ತೆಯನ್ನು ಮಾಡಬೇಕೆಂದು ಮಾಡಿದ್ದರು. ಅಂಥಾದ್ದು ಈಗ ಆಗಿರುವ ಪರಿಸ್ಥಿತಿಯನ್ನು ನೋಡಿದರೆ ಕೊನೆಗೆ ಯಾವ ಪರಿಸ್ಥಿತಿಗೆ ಬರುತ್ತದೋ ಅನುಮಾನವಾಗಿದೆ. ಐ.ವಿ.ಸಿ. ರಸ್ತೆಗಳನ್ನು ಮಾಡುವುದರಲ್ಲಿ ಎರಡು ವಿಧವಿತ್ತು. ಒಂದು ಸರ್ಕಾರದವರು ಪಿ.ಡಬ್ಲ್ಯು.ಡಿ. ಇಲಾಖೆಯಿಂದ ಮಾಡತಕ್ಕಂಥಾದ್ದು. ಇನ್ನೊಂದು ಡಿಸ್ಟ್ರಿಕ್ಟ್ ಬೋರ್ಡ್‌ನವರು ಮಾಡತಕ್ಕದ್ದು. ಅದರೆ, ಈ ಐ.ವಿ.ಸಿ. ರಸ್ತೆಗಳನ್ನು ಇವತ್ತಿನವರೆಗೂ maintain ಮಾಡುವವರು ಯಾರೆಂದು ತೀರ್ಮಾನವಾಗಿಲ್ಲ.

ಶ್ರೀ ಟಿ. ಚನ್ನಯ್ಯ.—8-8-1953 ರಲ್ಲಿಯೇ ಇದು ತೀರ್ಮಾನವಾಗಿ ರೆವಿನ್ಯೂ ಏಜೆನ್ಸಿಯಿಂದ ಇವು maintain ಆಗಬೇಕೆಂದು ಆರ್ಡರ್ ಆಗಿದೆ.

ಶ್ರೀ ಬಿ. ಹುಚ್ಚೇಗೌಡ.—ಆದರೆ ರಸ್ತೆಗಳ ಚಾರ್ಜ್ ತೆಗೆದುಕೊಳ್ಳಬೇಕಾದರೆ ಅಲ್ಲಿರುವ materialsಗಳ Statement ಮತ್ತು No Payment Certificateಗಳನ್ನು ಹಾಕಿಕೊಡಬೇಕು. ಅದೊಂದನ್ನೂ ಹಾಕಿಕೊಡುವುದಿಲ್ಲ. ಹೀಗಾಗುತ್ತಿರುವುದು ಇವೊತ್ತಿಂದ ಅಲ್ಲ. ಹಿಂದಿನಿಂದ ಆರ್ಡರ್ ಆಗಿರುವ ರಸ್ತೆಗಳ ವಿಚಾರವೂ ಹಾಗೆಯೇ ಬಿದ್ದಿದೆ.

ಆಮೇಲೆ ರಿಲೀಫ್ ಕಾಮಗಾರಿಗಳಿಗಾಗಿ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿ ರಸ್ತೆಗಳನ್ನು ಮಾಡಿಸಿದ್ದಾರೆ. ಅವುಗಳನ್ನೂ ಡಿಸ್ಟ್ರಿಕ್ಟ್ ಭೋರ್ಡಿನವರು ತೆಗೆದುಕೊಳ್ಳಬೇಕೆಂದು ಆರ್ಡರ್ ಆಗಿದೆ. ಅವೂಕೂಡ ಇದೇ ಸ್ಥಿತಿಯಲ್ಲಿವೆ.

ಇನ್ನು N.E.S. ರಸ್ತೆಗಳ ವಿಚಾರ. ಇವುಗಳನ್ನು ಮುಂದೆ ಯಾರು maintain ಮಾಡಬೇಕೆಂಬುದನ್ನು ಯೋಚನೆಮಾಡಿಲ್ಲ. ಪಂಚಾಯಿತಿಯವರು ಮಾಡುತ್ತಾರೆಯೇ? ಅವರು ಮಾಡುವುದಕ್ಕೆ ಸಾಧ್ಯವಿಲ್ಲ. ರಸ್ತೆಗಳು ತಯಾರಾದಮೇಲೆ ಡಿಸ್ಟ್ರಿಕ್ಟ್ ಬೋರ್ಡಿನವರಿಗೆ ವಹಿಸಿಕೊಡಬೇಕು. ಇಲ್ಲದಿದ್ದರೆ, ಸಾಧ್ಯವಾದರೆ ಈ ರಸ್ತೆಗಳನ್ನು ಡಿಸ್ಟ್ರಿಕ್ಟ್ ಬೋರ್ಡಿನವರೇ ಮಾಡಲಿ.

ಇನ್ನೊಂದು ವಿಷಯ. ಬಾಣಸಂದ್ರದಲ್ಲಿ ನೀರು ಸರಬರಾಯಿ ಮಾಡುವುದಕ್ಕೆ 44 ಸಾವಿರ ರೂಪಾಯಿಗಳ ಒಂದು ಸ್ಕೀಮು ತಯಾರಾಯಿತು. ಆಗಿನ ಕಾಲದಲ್ಲಿ ನೀರಿನ ತೊಂದರೆ ಬಹಳವಾಗಿತ್ತು. ಒಂದು

(ಶ್ರೀ ಬಿ. ಹುಚ್ಚೇಗೌಡ.)

ಮೈಲಿಯಿಂದ ನೀರು ತರಬೇಕಾಗಿತ್ತು. ಕೊನೆಗೆ 35,900 ರೂಪಾಯಿಗಳಿಗೆ ಅದು ಸ್ಯಾಂಕ್ಷನ್ ಆಯಿತು. ಅಂಥಾದ್ದನ್ನು ಇನ್ನೂ ಮಾಡಿಲ್ಲ. ಈಗ ಆ ಸ್ಕೀಮು ಎಲ್ಲಿದೆಯೋ ಗೊತ್ತಿಲ್ಲ. ಯಾವ ಪಟ್ಟಿಯಲ್ಲಿ ನೋಡಿದರೂ ಆ ಎಸ್ಟಿಮೇಟೇ ಕಾಣುವುದಿಲ್ಲ. ಹೋದವರ್ಷ ಎಸ್ಟಿಮೇಟನ್ನು ತರಿಸಿ ನೋಡುತ್ತೇವೆಂದು assurance ಕೊಟ್ಟರು. ಆದರೂ ಏನೂ ಮಾಡಿಲ್ಲ.

ರೂರಲ್ ಡೆವಲಪ್‌ಮೆಂಟ್ ಇಲಾಖೆಯ ಸಂಬಂಧದಲ್ಲಿ ಹಣ ಬಹಳ ಪೋಲಾಗುತ್ತಿದೆ. 33 ಲಕ್ಷ ರೂಪಾಯಿಗಳು ಖರ್ಚಾಗಿದೆಯೆಂದು ಹೇಳಿದ್ದೀರಿ. ಸರಿಯಾಗಿ 33 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದರೆ ನಂದನ ವನವನ್ನು ಮಾಡಬಹುದು. N.E.S. ಬ್ಲಾಕುಗಳಿಗೆ ಕೇಂದ್ರ ಸರ್ಕಾರದವರು ಏನು ಗ್ರಾಂಟ್ ಕೊಡುತ್ತಾರೆಯೋ ಅದನ್ನು ಸಂಸ್ಥಾನದ ಸರ್ಕಾರದವರು ತೆಗೆದುಕೊಂಡು ಯಶಸ್ವಿಯಾದ ಡೈರೆಕ್ಷನ್ ಕೊಟ್ಟು ಕೆಲಸ ನಡೆಸಬೇಕು. ಹಾಗಿಲ್ಲದೆ ಒಂದು ಊರಿನಲ್ಲಿ ಒಂದು ಡ್ರೈನೇಜ್ ಕೆಲಸ ನಡೆದರೂ \ಅದು ಇಂಡಿಯಾ ಸರ್ಕಾರಕ್ಕೆ ಹೋಗಬೇಕೆಂದರೆ ಬಹಳ ಕಷ್ಟ. ಅವರು ದುಡ್ಡು ಕೊಡುವುದು ಇವರು ಉಸ್ತುವಾರಿ ಮಾಡುವುದು ಎಂದರೆ ಆ ಕೆಲಸದಲ್ಲಿ ಉದಾಸೀನತೆಯಿರುತ್ತದೆ. ಇದನ್ನು ಹೇಳುವವರು ಕೇಳುವವರೇ ಇಲ್ಲ. ಆದ್ದರಿಂದ ಎಲ್ಲವನ್ನೂ ಸರ್ಕಾರದವರೇ Bill ಮಾಡಿಕೊಂಡು ಸಾಕಷ್ಟು ಉಸ್ತುವಾರಿ ವಹಿಸಿ ಕೆಲಸಮಾಡಬೇಕೆಂದು ಹೇಳುತ್ತೇನೆ.

ಶ್ರೀ ಜೆ. ನಾರಾಯಣಪ್ಪ (ಚಿಂತಾಮಣಿ—ಅನುಸೂಚಿತ ಜಾತಿಗಳು).—ಸ್ವಾಮಿ, ರಸ್ತೆಗಳಿಗೆ ಸಂಬಂಧಪಟ್ಟಹಾಗೆ ಎರಡು ಮೂರು ವಿಚಾರಗಳನ್ನು ಹೇಳಬೇಕಾಗಿದೆ. ಚಿಂತಾಮಣಿ ತಾಲ್ಲೂಕಿನಲ್ಲಿ ಮುಳಬಾಗಲಿನಿಂದ ಸುಮಾರು 18 ಮೈಲಿ ದೂರ ಮದನಹಳ್ಳಿಯವರೆಗೆ ಒಂದು ಐ.ವಿ.ಸಿ. ರಸ್ತೆಯಿದೆ. ಚಿಂತಾಮಣಿ ತಾಲ್ಲೂಕು ಕೋರಲಪರ್ತಿಯಿಂದ ಕೈವಾರದ ಮೂಲಕ ಹಿರೇಕಟ್ಟಿಗೇನಹಳ್ಳಿಯವರೆಗೆ ಹನ್ನೆರಡು ಮೈಲಿ ಉದ್ದ ರಸ್ತೆಯಾಗಬೇಕಾದುದು ಮಧ್ಯದಲ್ಲಿ ಮೂರೂವರೆ ಮೈಲಿಯಲ್ಲಿ ನಿಂತುಹೋಗಿದೆ. ಕೈವಾರ ಯಾತ್ರಾಸ್ಥಳ. ಪೂರ್ವ ಪಶ್ಚಿಮದ ಕಡೆಗಳಿಂದಲೂ ಯಾತ್ರಾರ್ಥಿಗಳು ಅಲ್ಲಿಗೆ ಬರುತ್ತಾರೆ. ನಾಲ್ಕು ವರ್ಷಗಳ ಹಿಂದೆ ನಾನು ಈ ಸಭೆಗೆ ಸದಸ್ಯನಾದ ಮೇಲೆ ಎರಡುಸಾರಿ ಈ ವಿಷಯವನ್ನು ಸಭೆಯಮುಂದೆ ತಂದಿದ್ದೆ. ಅನೇಕ ಅರ್ಜಿಗಳನ್ನು ಜನ ಕೊಟ್ಟಿದ್ದಾರೆ. ಇಷ್ಟಾದರೂ ಆ ಕೆಲಸ ನಡೆದಿಲ್ಲ. ಇದರಿಂದ ಹತ್ತು ಹನ್ನೆರಡು ಗ್ರಾಮಗಳಿಗೆ ತೊಂದರೆಯಾಗಿದೆ.

ಎರಡನೆಯದು \ ಕೋಲಾರದಿಂದ ಸುಗಟೂರು ಮಾರ್ಗವಾಗಿ ಚಿಂತಾಮಣಿಗೆ ಒಂದು ರಸ್ತೆ ಇದೆ. ಇದನ್ನು ಡಿಸ್ಟ್ರಿಕ್ಟ್ ಬೋರ್ಡಿಗೆ ಸೇರಿಸಿದ್ದಾರೆ. ಅಲ್ಲಿ ಒಂಭತ್ತು ಬಸ್ಸುಗಳು ಸಂಚಾರ ಮಾಡುತ್ತಿವೆ. ಆ ಬಸ್ಸುಗಳಿಂದ ಬಂದ ಹಣವನ್ನು ಆ ರಸ್ತೆಗೆ ಖರ್ಚು ಮಾಡಿದರೂ ಆ ರಸ್ತೆಯನ್ನು ಎಷ್ಟೋ ಚೆನ್ನಾಗಿಡಬಹುದು. ಸುಗಟೂರಿನ ಹತ್ತಿರ ಪಾಲಾರ್ ನದಿ ಹರಿಯುತ್ತಿದೆ. ಆ ನದಿಗೆ ಒಂದು ಸೇತುವೆ ಕಟ್ಟುವುದಕ್ಕೆ ಎಂಟು ಹತ್ತು ವರ್ಷಗಳ ಹಿಂದೆ ಒಂದು ಅಂದಾಜು ತಯಾರು ಮಾಡಿದರು. ಅದೇನಾಯಿತೋ ಗೊತ್ತಿಲ್ಲ. ಮಳೆಗಾಲದಲ್ಲಿ ದಾಟಬೇಕಾದರೆ ಬಹಳ ಕಷ್ಟ. ಹತ್ತು ಹನ್ನೆರಡು ದಿವಸವಾದರೂ ಬಸ್ಸುಗಳಾಗಲಿ ಜನರಾಗಲಿ ಒಂದುಕಡೆಯಿಂದ ಇನ್ನೊಂದು ಕಡೆಗೆ ಬರುವುದಕ್ಕಾಗುವುದಿಲ್ಲ. ಆ ಗ್ರಾಮಗಳಲ್ಲಿ ಯಾರಿಗಾದರೂ ಕಾಯಿಲೆಕಸಾಲೆಯಾಗಿ ಕೋಲಾರಕ್ಕೆ ಹೋಗಬೇಕಾದರೆ ಸಾಧ್ಯವಿಲ್ಲವಾಗಿದೆ. ಕೋರ್ಟು ಗಳಿಗೆ ಬರಬೇಕಾದರೂ ಜನರಿಗೆ ಕಷ್ಟ. ಆದಕಾರಣ, ಸರ್ಕಾರದವರು ಇವಕ್ಕೆ ಗಮನಕೊಟ್ಟು ಸೇತುವೆಯನ್ನು ಕಟ್ಟಿಸಬೇಕು.

ಇನ್ನೊಂದು ಮಾತು. ತಿಮ್ಮಸಂದ್ರ, ಮಹಮದ್ ಪುರ, ಯರ್ರಕೋಟೆ, ಜುಂಜನಹಳ್ಳಿ ಗ್ರಾಮಗಳಲ್ಲಿ ಹರಿಜನಕೇರಿ ಬಡಾವಣೆಗಳಿಗೆ ಭೂಮಿಯನ್ನು ಅಕ್ವೈರ್ ಮಾಡಿಕೊಂಡಿದ್ದಾರೆ. ಐದಾರು ವರ್ಷಗಳ ಹಿಂದೆಯೇ ಅಕ್ವೈರ್ ಮಾಡಿದ್ದಾರೆ. ದೊಡ್ಡ ದೊಡ್ಡ ಅಧಿಕಾರಿಗಳು ಬಂದು ನೋಡಿದ್ದಾರೆ. ಹೀಗಿದ್ದರೂ ಇದುವರೆಗೂ ಕಾರ್ಯತಃ ಏನೂ ಮಾಡಿಲ್ಲ. ಅನೇಕ ಅರ್ಜಿಗಳು ಬಂದಿವೆ. ಇದನ್ನು ಬೇಗ ಮಾಡಿ ಹರಿಜನರಿಗೆ ಸಹಾಯ ಮಾಡಬೇಕು. 'ನಾನಾಗಲೇ ಹೇಳಿದ ರಸ್ತೆ ಕೆಲಸಗಳನ್ನು ಸೇತುವೆ ಕೆಲಸವನ್ನು ಅದರಲ್ಲಿಯೂ ಕೈವಾರ ರಸ್ತೆಯನ್ನು ಜಾಗ್ರತೆ ಮಾಡಿಸಬೇಕೆಂದು ಪ್ರಾರ್ಥಿಸುತ್ತೇನೆ.

Sri T. MARIAPPA (Mysore City North).—I would like to say a few words on this subject. Rural Development works unfortunately received a very severe set-back after 1952-53. When the Development Committees were abolished, I thought the Government would set up Administrative Committees or other agencies to carry on rural development work. For well-nigh three to 3½ years, there was vascillation and no proper arrangements were made to carry on the rural development work. On the very floor of this House, there were criticisms that the rural development work had been neglected. You may remember, Sir, when your predecessor the Hon'ble Sri Siddiah presided on one occasion, it was urged that the Government should take early steps to bring into being an agency to carry on this work without any interruption. If you kindly see the Budget figures, ever since 1952-53, you see that meagre provision had been made for rural development work. Sir, they also changed the administrative set up of the previous Rural Development Department. That was one of the reasons why even the Government under its auspices were not able to carry on the work and even the provision was so meagre. Now we have to think very seriously of the need for properly setting up an agency to carry on the rural development work. In the year 1952-53, since the introduction of Community Development Projects and also the introdution of the N.E.S., we have to revise the set up with

regard to other taluks where N.E.S. blocks have not been introduced. What was done in Mysore ever since 1932, when for the first time the rural development work was undertaken? The Government have set up some agency to look after the immediate needs of the rural areas. To begin with, what are known as model villages were started, where villages were selected and development works were carried out so that the adjoining villages may copy on the same lines. But that did not work up to the expectations of the Government. Therefore they had to re-organise the rural development work again. During the time of Sri Gundappa Gowda, he drew up a plan for five years and he introduced what was known as Hobli Development Scheme. It worked for a period of five years. In accordance with the wishes expressed in this House, the whole thing had to be re-organised so that the administrative set up could be established in each taluk and so that all the taluks could undertake the rural development work at the same time. That was in force for nearly four years. During those years, you will kindly see that enough provision was made not only for rural water supply, inter-village communication, village improvement and sanitation, but also for the amelioration of the Depressed Classes. From the taluk right up to the Centre, there were not only advisory committees, but there were also co-ordinate committees with a view to bring about co-ordination between various development departments. Therefore, they were functioning till the beginning of 1952-53. After 1952-53, those committees were abolished and what happened was, unfortunately, there was no agency to carry on fresh works or even to maintain previous works. In this connection, my friend Sri Hutche Gowda made a suggestion that I.V.C. roads have been neglected and no provision has been made for their maintenance. It is true that the I.V.C. roads have not been properly looked after. Owing to want of maintenance we have lost also considerable length of I.V.C. roads. It is for the purpose of taking up those roads and maintaining them that a Road Re-classification committee was established. According to the recommendations of the committee all the I. V. C. roads were intended to be handed over to District Boards.

Sri T. CHANNIAH.—I want to know from the Hon'ble Member what was the budget provision made before 1952-53 for the amelioration of the Depressed Classes, rural communications, rural water supply, rural sanitation, etc.

Mr. DEPUTY SPEAKER.—About forty lakhs.

Sri T. MARIAPPA.—Between 40 to 52 lakhs. I remember the figures. By looking into the figures you will be pleased to see that we made a provision between 40 to 52 lakhs for all the items.

Mr. DEPUTY SPEAKER.—But so far as Depressed Class amelioration was concerned, there was no agency.

Sri T. MARIAPPA.—Therefore, there was an agency functioning. Unfortunately for the last 3 to 3½ years, there was no agency. Only in the month of September, Government passed an order. It stated that advisory committees would be established for rural development work. But how long did they take up to nominate members to these committees? For want of an agency the Government could not carry on the work.

4-30 P.M.

Sri A. BHEEMAPPA NAIK.—I just want one information. I want to know whether the construction of the hostels was also part of the Depressed Class amelioration fund?

Sri T. MARIAPPA.—No. 19 lakhs had been exclusively set apart for Depressed Class housing.

Mr. DEPUTY SPEAKER.—Your time is up.

Sri T. MARIAPPA.—I do not want to prolong, Sir. The only question is the Government must concentrate and have an agency to look after these normal works in places where the N.E.S. Blocks and Community projects are not taken up. I do not grudge the money that is spent on N.E.S. Blocks,

(SRI T. MARIAPPA.)

but in other places, there must be the normal work of maintenance and that should not suffer.

Sir, it may be remembered that when I handed over charge, nearly 30 lakhs of rupees were needed to make payments to incomplete wells. With the expectation that Government would give grants, people had come forward to dig wells.

I only want that Government should have a proper agency in each taluk to see that the normal work could be carried on.

ಶ್ರೀ ಜಿ. ಪುಟ್ಟಸ್ವಾಮಿ (ಚಿಕ್ಕಮಗಳೂರು-ಮೂಡಿಗೆರೆ-ಅನುಸೂಚಿತ ಜಾತಿಗಳು).—ಸ್ವಾಮಿ, ಈಗ ನಾನು ಗ್ರಾಮಾಭಿವೃದ್ಧಿ ಗ್ರ್ಯಾಂಟ್ ಮನವಿ ವಿಚಾರವಾಗಿ ಕೆಲವು ವಿಷಯಗಳನ್ನು ತಿಳಿಸುತ್ತೇನೆ. ಮಲೆನಾಡಿನಲ್ಲಿ ರಸ್ತೆಗಳ ಅಭಾವ ವಿಪರೀತವಾಗಿದೆ. ಒಂದು ಗ್ರಾಮದಿಂದ ಇನ್ನೊಂದು ಗ್ರಾಮಕ್ಕೆ ಪ್ರಯಾಣ ಮಾಡಲು ರಸ್ತೆಗಳೇ ಇರುವುದಿಲ್ಲ. ಡಿಸ್ಟ್ರಿಕ್ಟ್ ಬೋರ್ಡುಗಳಲ್ಲಿ ಹಣವಿಲ್ಲದೇ ಇರುವುದರಿಂದಲೂ, ಸರ್ಕಾರದವರು ಕೆಲವು ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಗ್ರ್ಯಾಂಟನ್ನು ಮಂಜೂರು ಮಾಡದೆ ಇರುವುದರಿಂದಲೂ ಈ ರಸ್ತೆಗಳ ಕಾಮಗಾರಿ ಬಹಳ ಕಾಲದಿಂದ ನಿಂತುಹೋಗಿದೆ. ಆದುದರಿಂದ ಸರ್ಕಾರದವರು ಜಿಲ್ಲಾ ಬೋರ್ಡುಗಳಿಗೆ ಹಣವನ್ನು ಜಾಗ್ರತೆಯಾಗಿ ಮಂಜೂರು ಮಾಡಬೇಕೆಂದು ಕೇಳುತ್ತೇನೆ. ಈಗ ಗ್ರಾಮಾಂತರಗಳಲ್ಲಿ, ಅದರಲ್ಲೂ ಮಲೆನಾಡಿನಲ್ಲಿ ತುಂಬ ರಸ್ತೆಗಳು ಆಗಬೇಕಾಗಿವೆ. ಈ ಹಣ ಮಂಜೂರಾದ ಪಕ್ಷದಲ್ಲಿ ಹೆಚ್ಚುಹೆಚ್ಚಾಗಿ ರಸ್ತೆಗಳನ್ನು ಮಾಡಲು ಅವಕಾಶವಾಗುತ್ತದೆ.

ನಿಮ್ನ ವರ್ಗದ amelioration grant ವಿಚಾರದಲ್ಲಿ ಮಾತನಾಡುವುದಾದರೆ ಈಗ ಎಲ್ಲಿ ಮನೆಗಳ ಅಭಾವವಿದೆಯೋ ಎಲ್ಲಿ ವಾಸಕ್ಕೆ ಮನೆಗಳಿಲ್ಲವೋ ಅಲ್ಲಿ ಮನೆಗಳನ್ನು ಕಟ್ಟಿಸುವುದಕ್ಕೆ ಗ್ರ್ಯಾಂಟುಗಳನ್ನು ಮಂಜೂರು ಮಾಡದೆ ವಾಸದ ಮನೆಗಳು ಯಾವ ಜಿಲ್ಲೆಗಳಲ್ಲಿ ಹೆಚ್ಚಾಗಿವೆಯೋ ಅಂಥ ಜಿಲ್ಲೆಗಳಿಗೆ ಗ್ರ್ಯಾಂಟು ಹೆಚ್ಚಾಗಿ ಹಂಚಿದರೆ ಬಹಳ ಅನಾನುಕೂಲವಾಗುತ್ತದೆ. ಬೆಂಗಳೂರು ಮೈಸೂರು ಮೊದಲಾದ ದೊಡ್ಡದೊಡ್ಡ ಪಟ್ಟಣಗಳಲ್ಲಿಯೂ ಟೌನ್‌ಗಳಲ್ಲಿಯೂ ವಾಸಕ್ಕೆ ಮನೆಗಳಿದ್ದರೂ ಸಹ ಅಂಥ ಕಡೆ ಹೆಚ್ಚಾಗಿ ಗ್ರ್ಯಾಂಟನ್ನು ಕೊಡುತ್ತಿದ್ದಾರೆ. ಗ್ರಾಮಾಂತರಗಳಲ್ಲಿ, ವಾಸಕ್ಕೆ ಮನೆಗಳಿಲ್ಲದೆ ಚಾವಡಿಗಳಲ್ಲೋ, ಅಥವ ಕೇವಲ ಗಳು, ಬೊಂಬು ಹಾಕಿಕಟ್ಟಿರತಕ್ಕ ಗುಡಿಸಲುಗಳಲ್ಲೋ, ವಾಸಮಾಡುತ್ತಿರುವ ಕಡೆಗಳಲ್ಲಿ ಹೆಚ್ಚಾಗಿ ಗ್ರ್ಯಾಂಟನ್ನು ಕೊಡುತ್ತಿಲ್ಲ. ಇಂಥ ಕಡೆಗಳಿಗೆ ಹೆಚ್ಚಿಗೆ ಗ್ರ್ಯಾಂಟನ್ನು ಮಂಜೂರು ಮಾಡುವುದು ಅವಶ್ಯಕವಾಗಿದೆ. ಹಿಂದೆ ಇಂಥ ಗ್ರ್ಯಾಂಟನ್ನು ಒಂದೊಂದು ತಾಲ್ಲೂಕಿಗೆ ಒಂದು ಲಕ್ಷಕ್ಕೂ ಮೇಲ್ಪಟ್ಟು ಮಂಜೂರು ಮಾಡುತ್ತಿದ್ದರು. ಈಗ ಪ್ರತಿಯೊಂದು ಕಡೆಗೂ ಜನಸಂಖ್ಯೆಯ ಆಧಾರದ ಮೇಲೆ ಗ್ರ್ಯಾಂಟನ್ನು ಹಂಚಬೇಕೆಂದು ಸರ್ಕಾರ ವ್ಯವಸ್ಥೆ ಮಾಡಿದೆ. ಕೆಲವು ಜಿಲ್ಲೆಗಳಿಗೆ 40-50 ಸಾವಿರ ರೂಪಾಯಿ ಮಾತ್ರ ಮಂಜೂರು ಆಗುತ್ತಿರುವುದನ್ನು ನೋಡಿದರೆ ಒಂದು ತಾಲ್ಲೂಕಿನಲ್ಲಿ ಕೇವಲ 10-15 ಮನೆಗಳು ಆಗುವುದಕ್ಕೆ ಕೂಡ ಅವಕಾಶವಿಲ್ಲವಾಗಿದೆ. ಈ ಕಾರಣದಿಂದ ಎಲ್ಲಿ ಮನೆಗಳ ಅಭಾವವಿದೆಯೋ, ಎಲ್ಲಿ ಮನೆಗಳಿಲ್ಲವೋ, ಯಾವಕಡೆ ಮನೆಗಳ ಅವಶ್ಯಕತೆ ಇದೆಯೋ ಅಂಥ ಕಡೆ ಹೆಚ್ಚಾಗಿ ಗ್ರ್ಯಾಂಟನ್ನು ಕೊಡುವುದಕ್ಕೆ ಸರ್ಕಾರ ಮನಸ್ಸು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಮಿಲಿಯೊರೇಷನ್ ಗ್ರ್ಯಾಂಟಿನಿಂದ ಹಣವನ್ನು ತೆಗೆದುಕೊಂಡು ಹಾಸ್ಟಲುಗಳನ್ನು ಕಟ್ಟುತ್ತಿದ್ದಾರೆ. ಈ ಹಣವನ್ನು Depressed Class Hostels ಕಟ್ಟಿಸುವುದಕ್ಕೆಂದು ವಿನಿಯೋಗ ಮಾಡುತ್ತಿದ್ದಾರೆ. ಆದರೆ ಇಂಥ ಹಾಸ್ಟಲುಗಳನ್ನು ಜನರಲ್ ಹಾಸ್ಟಲುಗಳಾಗಿ ಮಾಡಿರತಕ್ಕದ್ದು ಸರಿಯಾದದ್ದಲ್ಲವೆಂದು ಹೇಳದೆ ವಿಧಿ ಇಲ್ಲ. ಆದ್ದರಿಂದ ಜನರಲ್ ವಿದ್ಯಾಭ್ಯಾಸದ ಫಂಡಿನಿಂದ ಜನರಲ್ ಹಾಸ್ಟಲ್ ಕಟ್ಟಿಸಬೇಕೇ ಹೊರತು ಅಮಿಲಿಯೊರೇಷನ್ ಗ್ರ್ಯಾಂಟಿನಿಂದ ನಿಮ್ನ ವರ್ಗದ ಹಾಸ್ಟಲ್ ಕಟ್ಟಿ ಜನರಲ್ ಹಾಸ್ಟಲಾಗಿ ಬದಲಾಯಿಸುವುದು ಸರಿಯಲ್ಲ.

*ಶ್ರೀ ಜಿ. ಬಸಪ್ಪ (ಹೊಸದುರ್ಗ).—ಮಾನ್ಯ ಅಧ್ಯಕ್ಷರೆ ಗ್ರಾಮಾಭಿವೃದ್ಧಿಗೆ ಸಂಬಂಧಪಟ್ಟ ಈ ಡಿಮ್ಯಾಂಡ್ ಮನವಿಯಮೇಲೆ ಒಂದೆರಡು ಸಲಹೆಗಳನ್ನು ಸರ್ಕಾರದ ಗಮನಕ್ಕೆ ತರಲು ಬಯಸುತ್ತೇನೆ. ಇದುವರೆಗೆ ಮಾತನಾಡಿದ ಮಾನ್ಯಸದಸ್ಯರನೇಕರು ತಾಲ್ಲೂಕು ಅಡ್ವೈಸರಿ ಕಮಿಟಿಗಳ ವಿಚಾರದಲ್ಲಿ ಹಲವಾರು ಅಭಿಪ್ರಾಯಗಳನ್ನು ಸೂಚಿಸಿದ್ದಾರೆ. ಹಿಂದಿದ್ದ ಗ್ರಾಮಾಭಿವೃದ್ಧಿ ಸಮಿತಿಗಳು ನಿರ್ದಿಷ್ಟವಾದ ಕಾರ್ಯಕ್ರಮಗಳನ್ನು ಕೈಗೊಂಡು ಹಣವನ್ನು ಮಂಜೂರು ಮಾಡುವ ಅಧಿಕಾರಹೊಂದಿ ಗ್ರಾಮಾಂತರ ಪ್ರದೇಶಗಳಿಗೆ ಹೋಗಿ ಗ್ರಾಮಸ್ಥರ ಸಹಕಾರದಿಂದ ಹೆಚ್ಚಿನ ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಿದ್ದುವು. ಈಗಿರುವ ಸಮಿತಿಗಳಿಗೆ ಯಾವ ಅಧಿಕಾರವೂ ಇಲ್ಲದೆ ಬರೀ ಸಲಹಾ ಸಮಿತಿಗಳಾಗಿರುವುದರಿಂದ ಅವುಗಳಲ್ಲಾಗುವ ತೀರ್ಮಾನಗಳಿಗೆ ಎಷ್ಟುಮಟ್ಟಿನ ಮನ್ನಣೆ ಸಿಕ್ಕುತ್ತದೆಂಬುದನ್ನು ಕಾದು ನೋಡಬೇಕಾಗಿದೆ. ಅಲ್ಲದೆ ಈ ನಾಲ್ಕು ವರ್ಷಗಳ ಅವಧಿಯಲ್ಲಿ ನಡೆದಿರುವ ಕೆಲಸವನ್ನು ಪರಿಶೀಲಿಸಿ ಗ್ರಾಮಾಂತರಗಳಲ್ಲಿ ಬಹು ಕಡಮೆ ಕೆಲಸವಾಗಿ ರಸ್ತೆ ಕಾಂಗಾರಿ ಬಹಳವಾಗಿ ನಿಂತುಹೋಗಿದೆಯೆಂದು ಹೇಳಿದರೆ ಅದು ತಪ್ಪಾಗಲಾರದು. ಈ ನಾಲ್ಕು ವರ್ಷಗಳಲ್ಲಿ ನಮ್ಮ ತಾಲ್ಲೂಕಿನಲ್ಲಿ ಒಂದು ಮೈಲಿ ರಸ್ತೆ ಸಹ ಆಗಿಲ್ಲ. ಡಿಸ್ಟ್ರಿಕ್ಟ್ ಬೋರ್ಡಿನವರು ತಮ್ಮಲ್ಲಿ ಹಣವಿಲ್ಲವೆಂದು ಹೇಳುತ್ತಾರೆ. ಈ ವರ್ಷದ ಬಡ್ಜೆಟ್ಟಿನಲ್ಲಿ ಪ್ರಾವಿಷನ್ ಸಹ ಮಾಡಿಲ್ಲ. ಅಲ್ಲದೆ ಗ್ರಾಮಾಂತರ ರಸ್ತೆಗಳ ಕಾರ್ಯವನ್ನು ಯಾರು ಮಾಡಬೇಕೆಂಬುದನ್ನು ಸರ್ಕಾರದಲ್ಲಿ ಕೇಳಬೇಕಾಗಿದೆ. ಆಮೇಲೆ ಹಿಂದೇನು ಐ.ವಿ.ಸಿ. ರಸ್ತೆ ಕೆಲಸ ನಡೆದಿದೆಯೋ ಅದು ಉಪೇಕ್ಷಿಸಲ್ಪಟ್ಟು ಅದನ್ನು ನೋಡಿಕೊಳ್ಳುವವರೇ ಇಲ್ಲವೇ ಹೋಗಿದೆ. ಅದನ್ನು ಡಿಸ್ಟ್ರಿಕ್ಟ್ ಬೋರ್ಡ್ ಅಥವಾ ಪಂಚಾಯಿತಿ ಅಥವಾ ಸರ್ಕಾರ ಯಾರೂ ನೋಡುವ ಹಾಗಿಲ್ಲ. ಇದು ಸರಿಯಲ್ಲ. ಹಿಂದೆ ಮಾಡಿರುವ ರಸ್ತೆಗಳನ್ನು ಸರಿಯಾದ ಸ್ಥಿತಿಯಲ್ಲಿಡುವುದಕ್ಕೆ ತಕ್ಕ ಏರ್ಪಾಡು ಮಾಡಬೇಕು.

*ಶ್ರೀ ಬಿ. ಟಿ. ಕೆಂಪರಾಜ್ (ಬೆಂಗಳೂರು ದಕ್ಷಿಣ-ಅನುಸೂಚಿತ ಜಾತಿಗಳು).—ಸ್ವಾಮಿ, ತಾಲ್ಲೂಕು ಅಡ್ವೈಸರಿ ಕಮಿಟಿಗಳನ್ನು ಮಾಡಿ ಸುಮಾರು ಆರು ತಿಂಗಳಾಗಿದೆ. ಈ ಆರು ತಿಂಗಳ ಅನುಭವದಲ್ಲಿ ನೋಡುವುದಾದರೆ ಈ ಕಮಿಟಿಗಳನ್ನು ಆದಷ್ಟು

ಜಾಗ್ರತೆ ಬರ್ತರ್ಫುಮಾಡತಕ್ಕದ್ದು ಆವಶ್ಯಕ ಎಂದು ನನಗಾದರೂ ಅನ್ನಿಸುತ್ತದೆ. ಏಕೆಂದರೆ ಈ ಕಮಿಟಿಗಳನ್ನು ಯಾವ ಉದ್ದೇಶಕ್ಕಾಗಿ ಸರ್ಕಾರ ನೇಮಕ ಮಾಡಿತೋ ಅದಕ್ಕೆ ವಿರುದ್ಧವಾಗಿ ಕೆಲಸವಾಗುತ್ತಿದೆ. ಚಿಕ್ಕಚಿಕ್ಕ ಮುಖಂಡರ ವಾಗ್ಯುದ್ಧದಿಂದ ಈ ಕಮಿಟಿಗಳ ಕೆಲಸ ಕಾರ್ಯಗಳು ಯೋಜಿತವಾದ ಕಾರ್ಯಕ್ರಮದ ಪ್ರಕಾರ ನಡೆಯದೆ ಬಹಳ ತೊಂದರೆಯಾಗಿದೆ. ಇದು ಮೊದಲನೆಯ ವಿಚಾರ.

ಎರಡನೆಯದಾಗಿ ನಿಮ್ಮ ತರಗತಿಗಳಿಗೆ ಕೊಡತಕ್ಕ ಗ್ರಾಂಟು, ಹಾಸ್ಟೆಲುಗಳನ್ನು ಕಟ್ಟುವುದಕ್ಕೆ ಖರ್ಚು ಮಾಡುವ ಹಣ, ಹರಿಜನರು ಮತ್ತು ನಿಮ್ಮ ವರ್ಗದವರಿಗೆ ಮನೆ ಕಟ್ಟಿಕೊಳ್ಳುವುದಕ್ಕೆ ಕೊಡುತ್ತಿರುವ ಸಾಮಾನು, ಕಿಟಿಕಿ, ಹೆಂಚು ಮೊದಲಾದುವಕ್ಕೆ ಒದಗಿಸುವ ಮೊಬಲಗು ಈಗ ಬಹಳವಾಗಿ ಕಡಮೆಯಾಗುತ್ತಾ ಇದೆ. ಹಾಸ್ಟಲಿನ ವಿಚಾರದಲ್ಲಿ ಉದಾಹರಣೆ ಕೊಡಬಲ್ಲೆ. ಕೋಲಾರ ಜಿಲ್ಲೆಯಲ್ಲಿ ನಿಮ್ಮ ವರ್ಗದ ಅಮಿಲಿಯೊರೇಷನ್ ಗ್ರಾಂಟಿನಿಂದ ಒಂದು ದೊಡ್ಡ ಹಾಸ್ಟಲನ್ನು ಕಟ್ಟಿರುವುದು ಆನೆಗೆ ನಿಕ್ಕರು ಹೊಲಿಸಿದ ಹಾಗಾಗಿದೆ. ಏಕೆಂದರೆ ಈ ಹಾಸ್ಟಲನ್ನು ಕಟ್ಟಿಸಿದಮೇಲೆ ಈ ಕಟ್ಟಡದ ಮೇಲೆ ಎಲ್ಲರ ಕಣ್ಣೂಬಿದ್ದು ನಿಮ್ಮ ವರ್ಗದವರಿಗೆ ಅಥವಾ ಆದಿಕರ್ಣಾಟಕರಿಗೆ ಇರಬೇಕಾದ ಹಾಸ್ಟಲು ದುರಾದೃಷ್ಟವಶಾತ್ ಜನರಲ್ ಹಾಸ್ಟಲಾಗಿ ಪರಿವರ್ತನೆಯಾಯಿತು. ಈ ದಿವಸ ಒಂದು ಪ್ರಶ್ನೆ ಹಾಕುವುದು ನಿಮ್ಮ ವರ್ಗದವರಿಗೆ ಮೀಸಲಾಗಿದ್ದ ಹಣ ಖರ್ಚುಮಾಡಿ ಒಂದು ದೊಡ್ಡ ಹಾಸ್ಟಲನ್ನು ಕಟ್ಟಿ ಅದನ್ನು ಜನರಲ್ ಹಾಸ್ಟಲಾಗಿ ಪರಿವರ್ತನೆ ಮಾಡಿದರೆ ನಿಮ್ಮ ವರ್ಗದವರಿಗೆ ಅನುಕೂಲವಾಗುವುದಕ್ಕೆ ಬದಲಾಗಿ ಅನಾನುಕೂಲವಾಗುವುದಿಲ್ಲವೆ? ಇದನ್ನು ಮುಖ್ಯವಾಗಿ ಮಾನ್ಯ ಸಚಿವರು ಯೋಚನೆ ಮಾಡಬೇಕು. ಈ ರೀತಿ ಈಗ ಜನರಲ್ ಹಾಸ್ಟಲ್ ಮಾಡಿದ್ದಾರೆ. ಇದನ್ನು ಡಿಪ್ರೆಸ್ಡ್ ಕ್ಲಾಸ್ ತರಗತಿಯವರಿಗೆ ಮೊದಲು ತೆರೆಯಲಾಗಿತ್ತು. . . .

ಶ್ರೀ ಟಿ. ಚನ್ನಯ್ಯ.—ಈ ದಿವಸ ಅದನ್ನು ಜನರಲ್ ಹಾಸ್ಟಲಾಗಿ ಪರಿವರ್ತನೆ ಮಾಡಿದ್ದಾಗ್ಯೂ ಕೇವಲ 20 ಮಂದಿಗೆ ಮಾತ್ರ ಅವಕಾಶ ಕೊಡಲಾಗಿದೆ. ಆದರೆ ನಾವು ಕೊಡತಕ್ಕ ದುಡ್ಡನ್ನು ಕೊಟ್ಟು ಈ ಡಿಪ್ರೆಸ್ಟ್ ಕ್ಲಾಸಿನ ಹಾಸ್ಟಲಿನಲ್ಲಿ ಏಕೆ ಓದಬೇಕು ಎಂದು ಹೇಳಿ ಈ ದಿವಸ ಹುಡುಗರು ಯಾರೂ ಅಲ್ಲಿಗೆ ಬರುತ್ತಿಲ್ಲ. ಈಗ ಅಲ್ಲಿ ಕೇವಲ ಡಿಪ್ರೆಸ್ಡ್ ಕ್ಲಾಸ್ ವಿದ್ಯಾರ್ಥಿಗಳು ಮಾತ್ರವೇ ಇರುತ್ತಾರೆ.

ಶ್ರೀ ಬಿ. ಟಿ. ಕೆಂಪರಾಜ್.—ಈ ಹಾಸ್ಟಲಿಗೆ ಆ ಹರಿಜನೋದ್ಧಾರದ ಫಂಡಿನಿಂದ ದುಡ್ಡು ಹಾಕಿ ಕಟ್ಟಿಸಲಾಗಿತ್ತು. ಈ ದಿವಸ ಇದನ್ನು ಜನರಲ್ ಹಾಸ್ಟಲಿಗೆ ಪರಿವರ್ತನೆ ಮಾಡಿರುವುದರಿಂದ ಅಷ್ಟರಮಟ್ಟಿಗೆ ಈ ನಿಧಿಯಿಂದ ಖರ್ಚು ಮಾಡಿದ್ದ ದುಡ್ಡು ಅನ್ಯಾಯವಾದಂತಾಗಲಿಲ್ಲವೇ ಎಂಬುದು ನನ್ನ ಪ್ರಶ್ನೆ.

*ಶ್ರೀ ಯಂ. ಎಂ. ಮಾದಪ್ಪ (ಚಾಮರಾಜನಗರ)—ಸ್ವಾಮಿ, ಈ ನ್ಯಾಷನಲ್ ರೂರಲ್ ವಾಟರ್ ಸಪ್ಲೈ ಸ್ಕೀಂ ನಲ್ಲಿ ನಮ್ಮ ಮೈಸೂರು ಜಿಲ್ಲೆಯ ಚಾಮರಾಜನಗರ ತಾಲ್ಲೂಕನ್ನೇ ಸಂಪೂರ್ಣವಾಗಿ ಕೈಬಿಟ್ಟಿದ್ದಾರೆ. ಆದರೆ ಈ ನ್ಯಾಷನಲ್ ರೂರಲ್ ವಾಟರ್ ಸಪ್ಲೈ ಸ್ಕೀಂ ಬಗ್ಗೆ ಜಿಲ್ಲಾಧಿಕಾರಿಗಳ ಸಮ್ಮುಖದಲ್ಲಿ ಚರ್ಚೆ ನಡೆಯುತ್ತಿದ್ದಾಗ ಚಾಮರಾಜನಗರ ತಾಲ್ಲೂಕಿಗೂ ಕೂಡ ಈ ಯೋಜನೆಯನ್ನು ವಿಸ್ತರಿಸಬೇಕೆಂದು ಒಂದು ಮನವಿಯನ್ನು ಮಂಡಿಸಿದುದಕ್ಕೆ ಅಧಿಕಾರಿಗಳು ಈ ಯೋಜನೆಯನ್ನು ಈಗ ಎಲ್ಲೆಲ್ಲಿ ವಿದ್ಯುಚ್ಛಕ್ತಿ ಸೌಕರ್ಯಗಳನ್ನು ಒದಗಿಸಲಾಗಿದೆಯೋ ಅಂಥ ಸ್ಥಳಗಳಿಗೆ ಮಾತ್ರವೇ ಒದಗಿಸಲಾಗುವುದೆಂದು ಹೇಳಿದರು. ಆದರೆ ಈ ದಿವಸ ಗುಂಡ್ಲುಪೇಟೆ ತಾಲ್ಲೂಕಿಗೆ ಈ ಸ್ಕೀಮನ್ನು ಮಂಜೂರು ಮಾಡಿದ್ದಾರೆ. ಒಂದು ತಾಲ್ಲೂಕಿನಲ್ಲಿ ಕೆಲವು ಗ್ರಾಮಗಳಿಗೆ ಎಲೆಕ್ಟ್ರಿಸಿಟಿಯನ್ನೊದಗಿಸಿರಬಹುದು. ಇನ್ನು ಕೆಲವು ಗ್ರಾಮಗಳಿಗೆ ಒದಗಿಸದೆ ಇರಬಹುದು. ಹಿಂದೆ ನಮ್ಮ ತಾಲ್ಲೂಕಿನಲ್ಲಿ ಕುಡಿಯುವ ನೀರಿಗೆ ಬಹಳ ತೊಂದರೆಯಿದ್ದ ಕಾರಣ ಶ್ರೀ ಗುಂಡಪ್ಪಗೌಡರ ಕಾಲದಲ್ಲೇ ಅಲ್ಲಿ ಅನೇಕ ಬೋರ್ ವೆಲ್‌ಗಳನ್ನು ಹಾಕಿಸಿದ್ದರು. ಆದರೆ ಈಹೊತ್ತಿಗೂ ಆ ಕೆಲಸಗಳೆಲ್ಲಾ ಹಾಗೇ ನಿಂತು ಬಂದಿವೆ.

ಶ್ರೀ. ಟಿ. ಚನ್ನಯ್ಯ.—ತಾವು ಹೇಳುವ ಹಂಗಳ ಇತ್ಯಾದಿ ಗ್ರಾಮಗಳನ್ನು ಈಗ ಲಿಸ್ಟಿನಲ್ಲಿ ಸೇರಿಸಿದ್ದೇವೆ.

ಶ್ರೀ ಯು. ಎಂ. ಮಾದಪ್ಪ.—ಆ ಗ್ರಾಮಗಳ ವಿಚಾರವನ್ನು ನಾನು ಹೇಳುತ್ತಿಲ್ಲ. ನಾನು ಕೇಳುತ್ತಿರುವುದು ಉಡಿಗಾಲ, ಹೆಗ್ಗಾಲ ಮತ್ತು ಕುದೇರು ಇತ್ಯಾದಿ ಗ್ರಾಮಗಳನ್ನು ಆ ಲಿಸ್ಟಿಗೆ ಸೇರಿಸಬೇಕೆಂದು ಕಳುಹಿಸಲಾಗಿತ್ತು ಆದರೆ ತಾವು ಏಕೆ ಆ ಗ್ರಾಮಗಳನ್ನು ಸೇರಿಸಿಲ್ಲ?

ಆದರೆ ಕೆಲವು ತಾಲ್ಲೂಕುಗಳಿಗೆ ಅವರವರ ಶಿಫಾರ್ಸಿನ ಮೇಲೆ ಅವರವರಿಗೆ ಬೇಕಾದಂಥ ತಾಲ್ಲೂಕುಗಳಿಗೆ ಈ ಸೌಕರ್ಯಗಳನ್ನೊದಗಿಸಿದ್ದಾರೆ. ಈ ದಿವಸ ಒಂದು ಲಕ್ಷ ರೂಪಾಯಿಗಳ ಮೊಬಲಗಿನಲ್ಲಿ 25 ಸಾವಿರ ಮಾತ್ರ ಖರ್ಚಾಗಿರುತ್ತೆಂದೂ ಇನ್ನುಳಿದ ಶೇಕಡ 75 ಮೊಬಲಗು ಲ್ಯಾಪ್ಸಾಗುತ್ತದೆಂದೂ ತಿಳಿದು ಬಂದಿದೆ. ಇದನ್ನು ಎಲ್ಲಾ ಗ್ರಾಮಗಳಿಗೂ ಒದಗುವಂತೆ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಇನ್ನು ರೂರಲ್ ಸ್ಯಾನಿಟೇಷನ್ ಬಗ್ಗೆ ಒಂದು ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಇದು ಏನೇನೂ ಸಾಲದು. ಇದಕ್ಕೆ ನೂರು ಪಾಲು ಹೆಚ್ಚು ಮೊಬಲಗನ್ನು ಒದಗಿಸಿದರೂ ಅದೂ ಕೂಡ ಸಾಲದಂತಲೇ ಹೇಳಬೇಕಾಗುತ್ತದೆ. ಆದಕಾರಣ ಇನ್ನೂ ಹೆಚ್ಚು ಮೊಬಲಗನ್ನು ಈ ಬಾಬಿಗೆ ಒದಗಿಸಿ ತಾವು ಮೊದಲು ಈ ಹೆಲ್ತ್ ಪಾಯಿಂಟಿಗೆ ಹೆಚ್ಚು ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಟಿ. ಚನ್ನಯ್ಯ.—ಸ್ವಾಮಿ, ಈ ಗ್ರಾಮಾಭಿವೃದ್ಧಿ ವಿಚಾರದಲ್ಲಿ ಸರ್ಕಾರದವರು ಯಾವ ಯಾವ ಕಾರ್ಯಕ್ರಮಗಳನ್ನು ಮಾಡುತ್ತಿದ್ದಾರೆ ಎಂಬ ಒಂದೆರಡು ಅಂಶಗಳನ್ನು ಮಾನ್ಯ ಸದಸ್ಯರು ಹೇಳಿರತಕ್ಕ ವಿಷಯವಾಗಿ ನಾನು ಜವಾಬು ಕೊಡಲಿಚ್ಛಿಸುತ್ತೇನೆ. ಮುಖ್ಯವಾಗಿ ನೀರಿನ ವ್ಯವಸ್ಥೆ ಮಾಡತಕ್ಕ ವಿಷಯದಲ್ಲಿ ಈ ವರ್ಷ ಎರಡು ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ. ಲೋಕಲ್ ಡೆವಲಪ್‌ಮೆಂಟ್ ವರ್ಕ್ಸ್‌ನಲ್ಲಿ 18 ಲಕ್ಷ ಚಿಲ್ಲರೆ ರೂಪಾಯಿಗಳನ್ನು ಸರ್ಕಾರದವರು ಕೊಟ್ಟಿದ್ದಾರೆ. ಅದರ ಜೊತೆಗೆ ನ್ಯಾಷನಲ್ ಡೆವಲಪ್‌ಮೆಂಟ್ ವರ್ಕ್ಸ್‌ನಲ್ಲಿ 30 ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಇದರಲ್ಲಿ ಎಷ್ಟೋ ಹಣ ಸಕಾಲಕ್ಕೆ ಖರ್ಚಾಗುತ್ತಾ ಇಲ್ಲ. ಬಾವಿಗಳ ಕೆಲಸ ಜರುಗುತ್ತಿಲ್ಲ ಎಂದು ಅನೇಕರು ಹೇಳಿದರು. ಬಾವಿಗಳನ್ನು ಕಟ್ಟತಕ್ಕ ವಿಷಯದಲ್ಲಿ ಒಂದು ತೊಂದರೆ ಇದೆ. ಅನೇಕ ಗ್ರಾಮಗಳಲ್ಲಿ ಈ ಬಾವಿಗಳ ಕಂಟ್ರಾಕ್ಟ್ ತೆಗೆದುಕೊಳ್ಳುವುದಕ್ಕೆ ಆಯಾಯಾ ಗ್ರಾಮಸ್ಥರು ಮುಂದೆ ಬರುತ್ತಾ ಇಲ್ಲ. ಆದ್ದರಿಂದ ಯಾರಾದರೂ ಪಟ್ಟಣಗಳಲ್ಲಿರತಕ್ಕವರು ಅಥವಾ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರಿನಲ್ಲಿರುವ ಕಂಟ್ರಾಕ್ಟರುಗಳು ಟೆಂಡರ್‌ಗೆ ಅಪ್ಲೈ ಮಾಡಿ, ಸಂಬಂಧಪಟ್ಟ ರೆವಿನ್ಯೂ ಏಜೆನ್ಸಿಯಿಂದ

(ಶ್ರೀ ಟಿ. ಚನ್ನಯ್ಯ.)

ಡೆಪ್ಯೂಟಿ ಕಮಿಷನರ್‌ಗೆ ಕಳುಹಿಸಿ, ಬಾವಿ ಕೆಲಸ ತೆಗೆದುಕೊಳ್ಳಿ ಎಂದು ಬಲತ್ಕಾರ ಮಾಡುವ ಹೊತ್ತಿಗೆ ವರ್ಷದ ಕೊನೆ ಆಗುತ್ತದೆ. ಆದ್ದರಿಂದ ವರ್ಷದ ಪ್ರಾರಂಭದಲ್ಲಿ ಸಕಾಲಕ್ಕೆ ಹಣ ಒದಗಿಸಿದ್ದರೂ ಕಂಟ್ರಾಕ್ಟರುಗಳು ಬಾವಿ ಕೆಲಸ ತೆಗೆದುಕೊಳ್ಳುವುದು ನಿಧಾನ ಮಾಡಿ ಕೆಲಸ ಜಾಗ್ರತೆ ಆಗುವುದಿಲ್ಲ. ಮೊದಲನೆ ಪಂಚವಾರ್ಷಿಕ ಯೋಜನೆಯಲ್ಲಿ 8,000 ಬಾವಿಗಳನ್ನು ಒದಗಿಸಬೇಕೆಂದು ಒಂದು ಕೋಟಿ ರೂಪಾಯಿಗಳನ್ನು ಒದಗಿಸಿದ್ದರು. 8,000 ಕುಡಿಯುವ ನೀರಿನ ಬಾವಿಗಳಲ್ಲಿ ಈಗಾಗಲೇ 6,000 ಬಾವಿಗಳು ತೆಗೆಯಲ್ಪಟ್ಟಿವೆ. ಇನ್ನು ಸುಮಾರು 2,000 ಬಾವಿಗಳು ಆಗಬೇಕಾಗಿವೆ. ಅವುಗಳ ಕೆಲಸ ಕೂಡ ಜಾಗ್ರತೆ ಆಗುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ಹಿಂದೆ ಮಾನ್ಯ ಮಂತ್ರಿಗಳಾದ ಶ್ರೀ ಮಂಜಪ್ಪನವರೂ ಕೂಡ ಹೇಳಿದ್ದಾರೆ. ಕುಡಿಯುವ ನೀರಿನ ಬಾವಿಗಳ ವಿಷಯದಲ್ಲಿ ಗ್ರಾಮಾಂತರಗಳಲ್ಲಿ ಎಲ್ಲೆಲ್ಲಿ ಮುಖ್ಯವಾಗಿ ಆಗಬೇಕೋ ಅಲ್ಲೆಲ್ಲಾ ಮಾಡಿಸಬೇಕೆಂದು ಉದ್ದೇಶವಿದೆ. ಮಾಡಿಸುವುದಕ್ಕೆ ಸಿದ್ಧವಾಗಿದ್ದೇವೆ. ಏನಾದರೂ ಕೆಲವು ಜಿಲ್ಲೆಗಳಲ್ಲಿ ಹಣ ಸಾಲದೆ ಬಾವಿಗಳನ್ನು ತೆಗೆಯಲಿಲ್ಲ ಎಂದು ಹೇಳಿ ಡೆಪ್ಯೂಟಿ ಕಮಿಷನರಿಗೆ ಮತ್ತು ಸರ್ಕಾರದವರಿಗೆ ತಿಳಿಸಿದ ಪಕ್ಷದಲ್ಲಿ ಅಂಥಾ ಜಿಲ್ಲೆಗಳಿಗೆ ನಾವು ಹಣ ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಆದ್ದರಿಂದ ಮಾನ್ಯ ಸದಸ್ಯರು ಯಾರೂ ಕೂಡ ಕುಡಿಯುವ ನೀರಿನಬಾವಿಗಳಿಗೆ ಸರ್ಕಾರ ಏನೂ ಹಣ ಒದಗಿಸಿಲ್ಲ ಎಂದು ಯಾವ ಭಯವನ್ನೂ ಪಡಬೇಕಾಗಿಲ್ಲ. ಮತ್ತು ನ್ಯಾಷನಲ್ ವಾಟರ್ ಸಪ್ಲೈ ಸ್ಕೀಂ ನಲ್ಲಿ ಈಗಾಗಲೇ ಇಂಡಿಯಾ ಸರ್ಕಾರದವರು ಕೊಟ್ಟಿರತಕ್ಕ ಹಣ ಲ್ಯಾಪ್ಸ್ ಆಗುತ್ತದೆ. ಎಂದು ಕೆಲವರು ಶಂಕೆ ಪಟ್ಟರು. ನಾವು ಆ ಅಭಿಪ್ರಾಯವನ್ನು ತಿಳಿದೇ ಮುಂಚಿತವಾಗಿಯೇ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ ಅದಕ್ಕೆ ಬೇಕಾದ ಮೆಷಿನರಿಯನ್ನು ಮಾರ್ಚಿ ಆಖೈರಿನಲ್ಲೇ ಕೊಂಡುಕೊಳ್ಳಲು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಆಜ್ಞೆ ಕೊಟ್ಟಿದ್ದೇವೆ. ಈಗಾಗಲೇ ಅನೇಕ ಮೆಷಿನರಿಗಳನ್ನು ಎಂದರೆ ಪಂಪ್ ಸೆಟ್ಸ್, ಮೋಟಾರ್ಸು ಮುಂತಾದವುಗಳನ್ನು ಕೊಂಡುಕೊಳ್ಳಲಿಕ್ಕೆ ಸಾಕಾದಷ್ಟು ಕಾರ್ಯಕ್ರಮ ತೆಗೆದುಕೊಡಿದ್ದಾರೆ. ಮತ್ತು ಹಣ ಲ್ಯಾಪ್ಸ್ ಆಗುವುದಕ್ಕೆ ಕೂಡ ಅವಕಾಶವಿಲ್ಲ. ಆದ್ದರಿಂದ ನೀರಿನ ವ್ಯವಸ್ಥೆ ವಿಷಯದಲ್ಲಿ ಸರ್ಕಾರದವರು ಬಹಳವಾಗಿ ಶ್ರದ್ಧೆವಹಿಸಿದ್ದಾರೆ ಯಾವ ವಿಧದಲ್ಲೂ ಕೂಡ ಕುಡಿಯುವ ನೀರಿನ ಬಾವಿಗಳನ್ನು ತೆಗೆಯುವುದಕ್ಕೆ ಹಿಂತೆಗೆಯುತ್ತಿಲ್ಲ ಎಂಬುದನ್ನು ತಿಳಿಸಲು ಬಯಸುತ್ತೇನೆ. ಚಾಮರಾಜನಗರ ತಾಲ್ಲೂಕಿನಲ್ಲೂ ಕೂಡ ನ್ಯಾಷನಲ್ ವಾಟರ್ ಸಪ್ಲೈ ಸ್ಕೀಂನಲ್ಲಿ ಐದು ಸಾವಿರ ಜನ ಸಂಖ್ಯೆಯಿರತಕ್ಕ ಕೆಲವು ಗ್ರಾಮಗಳನ್ನು ಸೇರಿಸಿ ಕಳುಹಿಸಬೇಕೆಂದು ಡೆಪ್ಯುಟಿ ಕಮೀಷನರಿಗೆ ಬರೆದಿದ್ದೇವೆ. ಇನ್ನೂ ಯಾವುದಾದರೂ ಗ್ರಾಮಗಳಿಗೆ ಅತ್ಯವಶ್ಯಕವಾಗಿದೆ ಎಂದರೆ ಅದನ್ನೂ ಕೂಡ ಆಲೋಚನೆ ಮಾಡಿ ಎಂದು ತಿಳಿಸುತ್ತೇನೆ.

ರೂರಲ್ ಕಮ್ಯುನಿಕೇಷನ್ ವಿಷಯದಲ್ಲೂ ಕೂಡ ಸರ್ಕಾರದವರು ಚಾಲ್ತಿ ಸಾಲಿನಲ್ಲಿ ನಾಲ್ಕು ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಇದರಲ್ಲಿ ಅನೇಕ ಮಾನ್ಯ ಸದಸ್ಯರು ಮತ್ತು ಇನ್ನೂ ಕೆಲವು ಖಾಸಗಿ ದೊಡ್ಡ ಮನುಷ್ಯರು ಸಲಹೆಗಳನ್ನು ಕೊಟ್ಟಿದ್ದಾರೆ. ಅನೇಕ ಐ.ಪಿ.ಸಿ ರಸ್ತೆಗಳು ಮತ್ತಿತರ ಡಿಸ್ಟ್ರಿಕ್ಟ್ ಬೋರ್ಡ್ ರಸ್ತೆಗಳು ರಿಪೇರಿ ಆಗದೆ ದುರವಸ್ಥೆಯಲ್ಲಿವೆ ಅವುಗಳನ್ನು ಸರಿಯಾಗಿ ಮೈಂಟೇನ್ ಮಾಡಿಕೊಂಡು ಬರಬೇಕು ಎಂಬ ಅಭಿಪ್ರಾಯದಿಂದಲೇ ಸರ್ಕಾರದವರು ಈ ಹಿಂದೆ ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಗ್ರಾಂಟು ಮತ್ತು ಲೋನ್ ರೂಪದಲ್ಲಿ ಬೇಕಾದಷ್ಟು ಹಣವನ್ನು ಕೊಟ್ಟಿದ್ದಾರೆ. ಮತ್ತು ಈಗ ಕೊಟ್ಟಿರತಕ್ಕ ಹಣ ಸಾಲದು ಎಂದು ಹೇಳಿ ಈ ಸಾರಿ 14 ಲಕ್ಷ ರೂಪಾಯಿಗಳನ್ನೂ ಒದಗಿಸಿದ್ದೇವೆ. ಪ್ರತಿಯೊಂದು ಡಿಸ್ಟ್ರಿಕ್ಟ್‌ಗೂ ಕೂಡ ಒಂದು ಲಕ್ಷ 75 ಸಾವಿರ ರೂಪಾಯಿಗಳು ಬರುತ್ತದೆ. ಎರಡು ಜಿಲ್ಲೆಗಳಿಗೆ ಮಾತ್ರ ಒಂದು ಲಕ್ಷ 50 ಸಾವಿರ ರೂಪಾಯಿಗಳು ಬರುತ್ತದೆ.

ಉಳಿದ ಎಲ್ಲಾ ಜಿಲ್ಲೆಗಳಿಗೂ 1,75,000 ರೂಪಾಯಿಗಳನ್ನು ಒದಗಿಸಿದ್ದೇವೆ. ಆದರೆ ಕೆಲವು ಮಾನ್ಯ ಸದಸ್ಯರು 31ನೆಯ ತಾರೀಖಿನೊಳಗಾಗಿ ಈ ಹಣ ಖರ್ಚಾಗದಿದ್ದರೂ ಲ್ಯಾಪ್ಸ್ ಆಗದಂತೆ non-lapsable grant ಆಗಿ ಅದನ್ನು ಮಾಡುವುದಕ್ಕೆ ಸಾಧ್ಯವೇ ಎಂದು ಕೇಳಿದ್ದಾರೆ. ಆದರೆ ಹೀಗೆ ಮಾಡುವುದಕ್ಕೆ ಅಕೌಂಟೆಂಟ್ ಜನರಲ್ ಒಪ್ಪಿಗೆ ಕೊಡುವುದಿಲ್ಲ. ಆದ್ದರಿಂದ ಜಿಲ್ಲಾಧಿಕಾರಿಗಳಿಗೆ ಸಾಧ್ಯವಾದಷ್ಟು ಮಟ್ಟಿಗೆ ಎಲ್ಲೆಲ್ಲಿ ಸೇತುವೆಗಳು ಕಲ್ವರ್ಟ್‌ಗಳು ಮಾಡಬೇಕಾಗಿವೆಯೋ ಅವುಗಳನ್ನು ಜಾಗ್ರತೆಮಾಡಿ ಮುಗಿಸಬೇಕೆಂದು ನಿರ್ದಿಷ್ಟ ಸೂಚನೆಗಳನ್ನು ಕೊಟ್ಟಿದ್ದೇವೆ. ಅವರೂ ಮಾಡುತ್ತೇವೆಂದು ಭರವಸೆಕೊಟ್ಟಿದ್ದಾರೆ.

ಶ್ರೀ ಬಿ. ಹುಚ್ಚೇಗೌಡರು.—ಮುಖ್ಯ ಮಂತ್ರಿಗಳು 20 ಲಕ್ಷ ರೂಪಾಯಿಗಳೆಂದು ಹೇಳಿದರು. ನೀವು 14 ಲಕ್ಷವೆಂದು ಹೇಳಿದಿರಲ್ಲಾ.

ಶ್ರೀ ಟಿ. ಚನ್ನಯ್ಯ.—ನಾನು ಹೇಳಿದ್ದು ಈ ಸಾರಿಗೆ. ಮೊನ್ನೆ 14 ಲಕ್ಷ ರೂಪಾಯಿಗಳನ್ನು ಈ ಮಾನ್ಯ ಸಭೆಯ ಒಪ್ಪಿಗೆ ಪಡೆದು ಕೊಟ್ಟಿದ್ದೇವೆ.

ಆಮೇಲೆ Rural Sanitation ವಿಚಾರದಲ್ಲಿ ಪ್ರತಿಯೊಂದು ಕಡೆಯಲ್ಲೂ ಗ್ರಾಮಾಭಿವೃದ್ಧಿ ಕಾರ್ಯಗಳು ಹಿಂದೆ ಬಿದ್ದಿವೆಯೆಂದು ಹೆಲ್ತ್ ಇಲಾಖೆಯವರೂ, ಅಸಿಸ್ಟೆಂಟ್ ಇನ್‌ಸ್ಪೆಕ್ಟರುಗಳೂ ಎಲ್ಲಾಕಡೆಗೂ ಹೋಗಿ ಸಲಹೆ ಕೊಡುತ್ತಿದ್ದಾರೆ. ಅದರಲ್ಲೂ ಮುಖ್ಯವಾಗಿ N.E.S. ಬ್ಲಾಕುಗಳಲ್ಲಿ intensive ಆಗಿ ಕೆಲಸ ಮಾಡುವುದಕ್ಕೆ ಏರ್ಪಾಡು ಮಾಡಲಾಗಿದೆ. ಎರಡು ಲಕ್ಷ ರೂಪಾಯಿಗಳನ್ನು ಇದಕ್ಕಾಗಿ ಬಡ್ಜೆಟ್ಟಿನಲ್ಲಿ ಒದಗಿಸಲಾಗಿದೆ. ಕುಡಿಯುವ ನೀರಿಗಾಗಿ 14 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಆದ್ದರಿಂದ ರೂರಲ್ ಸ್ಯಾನಿಟೇಷನ್ ಮತ್ತು ನೀರು ಸರಬರಾಯಿ ಹಾಗೂ communicationಗಳ ವಿಚಾರದಲ್ಲಿ ಸರ್ಕಾರದವರು ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಂದು ಭರವಸೆ ಕೊಡುತ್ತೇನೆ.

Amelioration grants ವಿಚಾರದಲ್ಲಿಯೂ ಹಿಂದೆ ಎಷ್ಟು ಹಣ ಕೊಟ್ಟಿತ್ತೋ ಈಗಲೂ ಅಷ್ಟೇ ಕೊಟ್ಟಿದೆ. ಕಡಮೆಮಾಡಿಲ್ಲ. ಪಾಲಿಸಿ ಕಮಿಟಿಯವರು ಯಾವರೀತಿ ಹೇಳುತ್ತಾರೆಯೋ ಅದೇ ರೀತಿ ಮಾಡುತ್ತಿದೆಯೇ ಹೊರತು ಬೇರೆ ರೀತಿಯಲ್ಲಿ ಮಾಡಿಲ್ಲ. ಅಲ್ಲದೆ ನಿಮ್ನ ತರಗತಿಯವರಿಗೆ ಮಾತ್ರವೇ ನಾವು ಖರ್ಚು ಮಾಡುತ್ತಿದ್ದೇವೆ.

1952-53ನೆಯ ಇಸವಿಯಲ್ಲಿ ಡಿಸ್ಟ್ರಿಕ್ಟ್ ಬೋರ್ಡ್ ಮತ್ತು ಪಂಚಾಯ್ತಿಗಳ ಆಕ್ಟು ಜಾರಿಯಾಯಿತು. ಆದರೆ ನಾನಾ ಕಾರಣಗಳಿಂದ ಅದರಂತೆ ವ್ಯವಸ್ಥೆ ಮಾಡಲಿಲ್ಲ. ಕೆಲವು ತಿಂಗಳ ಹಿಂದೆ ತಾಲ್ಲೂಕ್ ಅಡ್ವೈಸರಿ ಕಮಿಟಿಗಳನ್ನು ನಿರ್ಮಿಸಲಾಗಿದೆ. ಅವರು ಸೂಕ್ತ ಸಲಹೆಗಳನ್ನು ಕೊಟ್ಟು ಹೆಚ್ಚಿನ ಕಾರ್ಯಕ್ರಮಗಳು ನಡೆಯುವಂತಾಗಲೆಂಬ ಸದುದ್ದೇಶದಿಂದಲೇ ಮಾಡಿದ್ದೇವೆ. ಗ್ರಾಮಾಭಿವೃದ್ಧಿ ಕಾರ್ಯಗಳಲ್ಲಿ ಅವರು

ತಮ್ಮ ಅಮೂಲ್ಯವಾದ ಸಲಹೆಗಳನ್ನು ಕೊಟ್ಟು ಸರ್ಕಾರದವರು ಒದಗಿಸಿರುವ ಹಣವನ್ನು ಸರಿಯಾದ ರೀತಿಯಲ್ಲಿ ಖರ್ಚುಮಾಡಬೇಕೆಂಬುದೇ ಸರ್ಕಾರದ ಉದ್ದೇಶವಾಗಿದೆಯೇ ಹೊರತು ಸರ್ಕಾರದವರು ಕೊಟ್ಟಿರತಕ್ಕ ಹಣವನ್ನು ಖರ್ಚು ಮಾಡಕೂಡದೆಂದು ಹೇಳಿ ಯಾವ ಸೂಚನೆಯನ್ನೂ ಕೊಟ್ಟಿಲ್ಲ. ಗ್ರಾಮಾಭಿವೃದ್ಧಿ ಕೆಲಸಗಳಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಹೆಚ್ಚು ಹೆಚ್ಚಿಗೆ ಕೆಲಸಗಳಾಗಬೇಕೆಂಬುದೇ ಸರ್ಕಾರದವರ ಆಶಯವಾಗಿದೆ. ಮಾನ್ಯ ಸದಸ್ಯರು ಕೆಲವರು, ಕೆಲವು ಸ್ಥಳಗಳಲ್ಲಿ ರಸ್ತೆಗಳನ್ನು ಮಾಡಿಲ್ಲವೆಂದು ಹೇಳಿದರು. ಅದರ ವಿಷಯದಲ್ಲಿ ಒಂದು ಮಾತು ಹೇಳಲು ಇಷ್ಟಪಡುತ್ತೇನೆ. ಐ. ವಿ. ಸಿ. ರಸ್ತೆಗಳಲ್ಲಿ ಕೆಲವು ಜಿಲ್ಲಾ ಬೋರ್ಡಿಗೆ ಸೇರಿದುವಾಗಿವೆ. ಅವರೇ ಅನೇಕ ಪ್ಯಾಲಿಗಳ ರಸ್ತೆ ಮಾಡಿಸಬೇಕಾಗಿದೆ. ಆದರೆ ಹಣದ ಅಭಾವದ ದೆಶೆಯಿಂದ ಅವು ಮಾಡುವುದಕ್ಕೆ ಸಾಧ್ಯವಾಗಿಲ್ಲ. ಅದಕ್ಕಾಗಿಯೇ ಗ್ರ್ಯಾಂಟ್ ಕೂಡ ಕೊಡಲಾಗಿದೆ. ಆದರೆ, maintenance ವಿಚಾರ ಮಾತ್ರ ಪೂರಾ ಡಿಸ್ಟ್ರಿಕ್ಟ್ ಬೋರ್ಡಿಗೆ ಸೇರಿದೆ. ಸರ್ಕಾರದವರ ಜವಾಬ್ದಾರಿ ಈ ವಿಷಯದಲ್ಲಿ ಏನೂ ಇಲ್ಲ. ಆದರೂ ಕೂಡ ಡಿಸ್ಟ್ರಿಕ್ಟ್ ಬೋರ್ಡಿನವರ ಹಣಕಾಸಿನ ಅಭಾವದ ದೃಷ್ಟಿಯಿಂದ ಅವಕ್ಕೆ ಸಾಕಷ್ಟು ಹಣ ಒದಗಿಸಿದ್ದಾರೆ. ಆದ್ದರಿಂದ ಈಗಿರತಕ್ಕ ರಸ್ತೆಗಳನ್ನು ಸರಿಯಾದ ಸ್ಥಿತಿಯಲ್ಲಿಟ್ಟುಕೊಳ್ಳುವುದಕ್ಕೆ ಜಿಲ್ಲಾ ಬೋರ್ಡುಗಳ ಮುಖಾಂತರ ತಕ್ಕ ಏರ್ಪಾಡುಗಳನ್ನು ಸರ್ಕಾರದವರು ಮಾಡುತ್ತಾರೆಂದು ನಾನು ಹೇಳುತ್ತೇನೆ.

5 P.M.

Sri T. MARIAPPA.—What is the provision for Local Development Works this year?

ಶ್ರೀ ಟಿ. ಚನ್ನಯ್ಯ.—Local Development Works ಎಂದು ಒಂದು 'ಹೆಡ್' ಇತ್ತು. ಆದರೆ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಆ ರೀತಿ ಏನೂ ಇಲ್ಲ.

ಆಮೇಲೆ ತಾಲ್ಲೂಕು ಡೆವಲಪ್‌ಮೆಂಟ್ ಸಮಿತಿಗಳನ್ನು ರಚನೆ ಮಾಡುವ ವಿಚಾರವನ್ನು ಪ್ರಸ್ತಾಪಿಸಿ, ನಾವು ನಮ್ಮ ಮನಸ್ಸಿಗೆ ಬಂದಹಾಗೆ ಈ ಸಮಿತಿಗಳನ್ನು ಮಾಡಿದ್ದೇವೆಂದು ಹೇಳಿದರು. ಖಂಡಿತವಾಗಿ ಹೇಳುತ್ತೇನೆ, ಯಾವ ಅಭಿಮಾನ ಅಥವಾ ರಾಜಕೀಯ ದೃಷ್ಟಿಯನ್ನಾಗಲಿ ಇಟ್ಟುಕೊಂಡು ನಾವು ಮಾಡಿಲ್ಲ. The Committees are purely advisory bodies.

Sri A. BHEEMAPPA NAIK.—But on the advice of some, you have done it.

Sri T. CHANNIAH.—On the advice of responsible elderly persons and also on the recommendation of the Deputy Commissioners, these Committees have been formed.

ಆದುದರಿಂದ ಯಾವ ಸಂಬಂಧ ಅಥವಾ ಅಭಿಮಾನವನ್ನೂ ಇಟ್ಟುಕೊಂಡು ಮಾಡಿಲ್ಲ. ಈ ರೀತಿಯ ಸಮಿತಿಗಳನ್ನು ಮಾಡುವುದರಿಂದ ಯಾವ ಉಪಯೋಗವೂ ಇಲ್ಲವೆಂದು ಹೇಳಿದರು. ಹಣಕಾಸಿನ ಹೊರೆ ಹೊತ್ತು ಕೆಲಸ ಮಾಡುವ ಸಂಭವವಿಲ್ಲದೇಯಿರುವುದರಿಂದ ಅವರೇನೂ ಕಷ್ಟಪಡಬೇಕಾಗಿಲ್ಲ. ಆದುದರಿಂದ ಈ ಡಿಮ್ಯಾಂಡಿಗೆ ಮಾನ್ಯ ಸದಸ್ಯರು ಒಪ್ಪಿಗೆ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

Mr. DEPUTY SPEAKER.—The question is:

"That a sum not exceeding Rs. 97,20,700 be granted to the Government to defray the charges which will come in course of payment during the year ending 31st day of March 1957 in respect of 'Rural Development'."

The motion was adopted.

Mr. DEPUTY SPEAKER.—The half-an-hour debate which is scheduled for today will be taken up on some other day.

The House will now rise and meet at 8-30 A.M. tomorrow.

The House adjourned at Three Minutes past Five of the Clock to meet again on Saturday, the 24th March 1956 at Thirty Minutes past Eight of the Clock.

WD 2896—GPB—550—11-7-56

MYSORE LEGISLATIVE ASSEMBLY

NINETEENTH DAY

Saturday, 24th March 1956.

The House met in the Assembly Hall, Atara Kacheri, Bangalore, at Thirty Minutes past Eight of the Clock.

MR. DEPUTY SPEAKER (SRI R. CHENNIGARAMIAH) in the Chair.

QUESTIONS AND ANSWERS

Mysore Government Insurance Department (Nationalisation)

Q.—296. SRI V. M. MASCARENHAS (St. John's Hill).—

Will the Government be pleased to state :—

the effects on the Mysore Government Insurance Department as a result of the decision of the Central Government to nationalise all insurance in the country ?

A.—SRI K. HANUMANTHAIYA (Chief Minister).—

The Government of India have not decided to nationalise all insurance in the country. They have decided to establish a Corporation which will undertake life insurance business in India as a monopoly and into this Corporation will be integrated all the insurance companies now engaged in life business as also the organisations functioning under the control of the State Governments and conducting such business for the benefit of the public.

The effect of this Bill on the Mysore Government Insurance Department will be that, on the establishment of the Corporation, the Public Branch of the Department will get integrated into the Corporation while the Official Branch and the Motor Branch will continue to be under the State Government.

SRI V. M. MASCARENHAS.—As a result of this integration of the Public Branch, what is the financial commitment to Mysore ?

SRI K. HANUMANTHAIYA.—We have to transfer the assets of the department in the Public Branch.

SRI V. M. MASCARENHAS.—May I know the amount involved ?

SRI K. HANUMANTHAIYA.—The amount is a little less than five crores.

SRI V. M. MASCARENHAS.—Is the decision final or revocable ? Is there a chance of the Government continuing this departmental activity ?

SRI K. HANUMANTHAIYA.—In fact, that is our view. That is the policy I have enunciated in my budget speech. Two Bills are pending before the Parliament in this behalf. I understand that the Government of Travancore-Cochin State is also making a similar representation. We have to await the final shape in which the Bill emerges from the Parliament.

Depressed Class Families in Kadur Taluk (Grant of Lands)

Q.—578. SRI Y. M. CHANDRASEKHARIAH (Kadur).—

Will the Government be pleased to state:—

(*a*) the number of Depressed Class families (*i.e.*, Adikarnatakas, Banajaras, Voddas, Koramas and Korachas) in Kadur Taluk ;

(Sri Y. M. CHANDRASEKHARIAH)

(*b*) out of them, the number having lands (information to be given Depressed Class Communitywar);

(*c*) the number of families among these Depressed Classes having no lands (information to be given community-war)?

A.—Sri K. HANUMANTHAIYA (Chief Minister).—

		No. of families
(*a*)	Adikarnatakas ...	1,650
	Banajar ...	1,504
	Vodda ...	552
	Korama ...	128
	Koracha ...	102
(*b*)	Adikarnatakas ...	1,124
	Banajar ...	822
	Vodda ...	314
	Korama ...	63
	Koracha ...	43
(*c*)	Adikarnatakas ...	526
	Banajar ...	682
	Vodda ...	238
	Korama ...	65
	Koracha ...	59

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಕಡೂರು ತಾಲ್ಲೂಕಿನಲ್ಲಿ ಡೆಪ್ಯುಟಿ ಕಮೀಷನರು ಜಮೀನು ಕೊಡುವುದಕ್ಕೆ ವ್ಯವಸ್ಥೆ ಮಾಡಿದೆಯೆ? ಬೇರೆ ಏನಾದರೂ ವ್ಯವಸ್ಥೆಯಿದೆಯೇ?

ಶ್ರೀ ಕೆ. ಹನುಮಂತಯ್ಯ.—ಡೆಪ್ಯುಟಿ ಕಮೀಷನರ ಮುಖಾಂತರ ಕೊಡತಕ್ಕ ವ್ಯವಸ್ಥೆ ಮಾಡಿದೆ. ಇನ್ಯಾವ ಹೊಸ ವ್ಯವಸ್ಥೆಯನ್ನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಜಮೀನುಗಳಿಗೆ ತೊಂದರೆಯಾಗಿದೆ, ಕೆಲವು ಕಾವಲುಗಳಲ್ಲಿ ಮತ್ತು ಸರ್ಕಾರಿ ಜಮೀನುಗಳಲ್ಲಿ ಜಮೀನನ್ನು ಬಿಡುಗಡೆ ಮಾಡಿ ಬಡವರಿಗೆ ಕೊಡಬೇಕೆಂದು ಡೆಪ್ಯುಟಿ ಕಮೀಷನರಿಗೆ ಅರ್ಜಿ ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕೆ. ಹನುಮಂತಯ್ಯ.— ಬಂದಿದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಕಡೂರು ತಾಲ್ಲೂಕಿನಲ್ಲಿ ಕೆಲವು ಕಡೆ ಕಾವಲು ಇಲ್ಲ. ಅಲ್ಲಿ ಬೇರೆ ಜಮೀನನ್ನು ಕೊಡಬೇಕೆಂದು ಆದಿಕರ್ಣಾಟಕರು, ಬಣಜಾರರು ಮುಂತಾದವರು ಅರ್ಜಿ ಕೊಟ್ಟಿದ್ದಾರೆ. ಜಾಗ್ರತೆ ಜಮೀನನ್ನು ಬಿಡುಗಡೆ ಮಾಡಿಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಕೆ. ಹನುಮಂತಯ್ಯ.—ಗೋಮಾಳ, ಫಾರೆಸ್ಟ್ ಮುಂತಾದ ಜಮೀನುಗಳಿಗೆ ಅರ್ಜಿಕೊಟ್ಟರೆ ಕೊಡುವುದಕ್ಕೆ ಬಹಳ ಕಷ್ಟವಾಗುತ್ತದೆ, ಮಿಕ್ಕ ಕಡೆಯಾದರೆ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಯಾವ ತರಹ ಜಮೀನಿಗೆ ಅರ್ಜಿ ಹಾಕಿದ್ದಾರೆಂಬುದನ್ನು ತಿಳಿದುಕೊಂಡು ಅವರ ಅರ್ಜಿಗಳ ಮೇಲೆ ಆರ್ಡರು ಪಾಸು ಮಾಡಬೇಕಾಗುತ್ತದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.— ಕಡೂರು ತಾಲ್ಲೂಕಿನಲ್ಲಿ ಈಚಲ ಮರಗಳಿಲ್ಲದಿರುವ ರಿಸರ್ವ್ ಪ್ರದೇಶವಿದೆ. ಆ ಜಾಗವನ್ನು ಜಮೀನಿಲ್ಲದಿರುವ ಆದಿಕರ್ಣಾಟಕರಿಗೆ ಕೊಡಲು ಏರ್ಪಾಡು ಮಾಡುತ್ತೀರಾ?

ಶ್ರೀ ಕೆ. ಹನುಮಂತಯ್ಯ.—ಈಚಲ ವನವನ್ನೆಲ್ಲಾ ಕೊಡಬೇಕೆಂಬ ನೀತಿಯನ್ನು ಸರ್ಕಾರದವರು ಒಪ್ಪಿಕೊಂಡಿಲ್ಲ. ಕೆಲವು ಕಡೆ ರಿಸರ್ವ್ ಇರಬೇಕೆಂಬ ಅಭಿಪ್ರಾಯವಿರುವುದರಿಂದ, ಎಲ್ಲವನ್ನೂ ಆ ರೀತಿ ಕೊಡುವುದಕ್ಕಾಗುವುದಿಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಈಚಲು ಮರಗಳಿಲ್ಲದಿರುವ ವನವನ್ನು ಕೇಳುತ್ತಿದ್ದಾರೆ. ಹಿಂದೆ ರೆವೆನ್ಯೂ ಕಮೀಷನರು ಮುಂತಾದವರನ್ನು ಸೇರಿಸಿ ಇದಕ್ಕಾಗಿ ಒಂದು ಸಮಿತಿ ಮಾಡಿದ್ದರು. ಆ ಸಮಿತಿಯವರು ಕೊಡಬಹುದೆಂದು ಶಿಫಾರ್ಸು ಮಾಡಿದ್ದಾರೆ. ಅಂಥ ಜಮೀನನ್ನು ಬಿಡುಗಡೆ ಮಾಡಿಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಕೆ. ಹನುಮಂತಯ್ಯ.—ಆ ರೀತಿ ಹೇಳಿದ್ದರೆ ವಿಚಾರಿಸುತ್ತೇನೆ. ಸಾಧ್ಯವಾದಷ್ಟು ಕೊಡುತ್ತೇವೆ. ತಾವು ಇಂಥ ಊರಿನಲ್ಲಿ ನಿಮ್ಮ ವರ್ಗದವರಿದ್ದಾರೆ, ಅವರಿಗೆ ಇಂಥ ಜಾಗ ಕೊಡಬೇಕು ಎಂದು ಒಂದು ಕಾಗದ ಬರೆದರೆ ಅದರಮೇಲೆ ಕ್ರಮ ಕೈಕೊಳ್ಳುತ್ತೇವೆ.

Health Units in Kanakapura Taluk.

Q.—7. Sri S. KARIAPPA (Virupakshapura),—

Will the Government be pleased to state:—

(*a*) whether there is a proposal to convert all the hoblis of Kanakapura Taluk into health units in view of perpetual cholera outbreak there;

(*b*) if it is a fact, the bare outline of the scheme;

(*c*) whether the scheme will be implemented in the year 1956-57?

A.—Sri T. CHANNIAH (Minister for Public Health and Local Self-Government).—

(*a*) There is a proposal for the conversion of the existing dispensaries at Kanakapura, Harohalli, Kodihalli, Doddalahalli, Doddamaralavadi and Satanur into Health Units.

(*b*) (i) Formation of six Health Units at the places referred to in the reply to (*a*).

(ii) Maintenance of a Mobile Laboratory for Bacteriological and Chemical examinations in the Taluk.

(iii) Provision of drinking water wells and necessary repairs to the existing drinking water wells in the villages of the Taluk.

(c) The proposals are under examination.

ಶ್ರೀ ಎಸ್. ಕರಿಯಪ್ಪ.—ಎನ್. ಇ. ಎಸ್. ಬ್ಲಾಕ್‌ನಿಂದ 10 ಸಾವಿರ ರೂಪಾಯಿಗಳನ್ನೊದಗಿಸಿ ಹಾರೋಹಳ್ಳಿಯಲ್ಲಿ ಆರೋಗ್ಯ ರಕ್ಷಣಾ ಕೇಂದ್ರವನ್ನು ತೆರೆಯಬೇಕೆಂದು ತೀರ್ಮಾನ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಇನ್ನೂ ಆ ತೀರ್ಮಾನಕ್ಕೆ ಸರ್ಕಾರಕ್ಕೆ ಬಂದಿಲ್ಲ.

ಶ್ರೀ ಎಸ್. ಕರಿಯಪ್ಪ.—ಈಗಲಾದರೂ ಗಮನಕ್ಕೆ ತೆಗೆದುಕೊಂಡು ಅಲ್ಲಿ ಆರೋಗ್ಯ ರಕ್ಷಣೆಕೇಂದ್ರವನ್ನು ಬೇಗ ತೆರೆಯಲು ಆಲೋಚನೆ ಮಾಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಆಲೋಚನೆ ಮಾಡುತ್ತೇವೆ.

Mr. DEPUTY SPEAKER.—Question hour is over.

QUESTIONS FOR ANSWERS ON THE DAY

(but not taken up).

Backward classes (Houses constructed and Wells dug in Salagame and Dudda).

Q.—65. Sri H. K. SIDDAIYA (Belur—Scheduled Castes).—

Will the Government be pleased to state :—

(*a*) the number of houses constructed and the number of drinking water wells dug for the backward classes in the two hoblis of Salagame and Dudda in Hassan Taluk ;

(*b*) the number of families of backward classes in these two hoblis ?

A.—Sri T. CHANNIAH (Minister for Public Health and Local Self-Government).—

(*a*) There are no schemes for construction of houses or provision of wells separately for backward classes. The following figures relate to Scheduled Castes :—

Name of hobli.		*No. of houses constructed*		*Wells dug up*
Dudda	...	106	...	5
Salagame	...	84	...	4

(*b*) The number of Scheduled Castes families in each hobli is as follows :—

1	Dudda	...	...	451
2	Salagame	...	...	657

Industrial Finance Corporation.

Q.—118. Sri G. A. THIMMAPPA GOWDA (Arkalgud).—

Will the Government be pleased to state :—

the action taken by them to form the Industrial Finance Corporation ?

A.—Sri H. M. CHANNABASAPPA (Minister for Industries).—

Draft Regulations have been framed and referred to the Reserve Bank of India, for scrutiny. After the Regulations are scrutinised, further action to set up the Corporation will be taken.

Rural Development Works.

Q.—139. Sri K. PUTTASWAMY (Srirangapatna).—

Will the Government be pleased to state :—

(*a*) whether they have allotted funds to the districts for Rural Development Works ; if so, when ;

(*b*) what is the amount allotted to each district ;

(*c*) whether there is any agency to spend the amount on Rural Development Works before the end of March ?

A.—Sri T. CHANNIAH (Minister for Public Health and Local Self-Government).—

(*a*) Funds have been allotted to the Districts during the year 1955-56 under the following heads :—

(i) Rural Water Supply.
(ii) Rural Health and Sanitation.
(iii) Rural Communication.
(iv) Local Development Works and
(v) Land Revenue Assignments.

(*b*) *Vide* Statement 'A' below.

(*c*) The Rural Development Works relating to Village Panchayets are being executed through the Revenue Agency by the Amildars of taluks with the assistance of Village Panchayet Sub-Overseers and those relating to District Boards through the District Board agency. Instructions have been issued to the Deputy Commissioners and the Special Officers of District Boards to utilise the allotments fully before the end of March 1956.

(SRI T. CHANNIAH.)

STATEMENT 'A'

Amount allotted to the Districts for Rural Development Works.

Sl. No.	District	Rural Water Supply		Rural Health and Sanitation		Rural Communication		Local Development Works		Land Revenue Assignment	
		Amount sanctioned	Date of allotment	Amount sanctioned	Date of allotment	Amount sanctioned	Date of allotment	Amount sanctioned	Date of allotment	Amount sanctioned	Date of allotment
1	2	3	4	5	6	7	8	9	10	11	12
1	Bangalore.	Rs. 90,000	G. O. No. L.B. 2419-31—V. P. 2-55-3, dated 9th June 1955.	Rs. 8,000	G. O. No. L.B. 2586-98—V. P. 25-55-4, dated 15th June 1955.	Rs. 1,75,000	G. O. No. L.B. 9030-52—V. P. 20-55-5, dated 13th December 1955.	Rs. 2,19,230	G. O. No. L. B. 5355-68—L.D.W. 1-55-50, dated 31st August 1955, and G. O. No. L. B. 4311-23—L. D. W. 2-55-33, dated 8th August 1955.	Rs. 1,46,000	G. O. No. L. B. 7424-37—V.P. 32-55-20, dated 24th October 1955, and G. O. No. L.B. 10176-90—V.P. 32-55-40, dated 7th January 1956
2	Mandya ...	80,000	do	7,000	do	1,75,000	do	2,00,000	do	97,500	do
3	Mysore ...	90,000	do	8,000	do	1,75,000	do	2,00,500	do	1,20,000	do
4	Hassan ...	80,000	do	7,000	do	1,50,000	do	1,28,070	do	1,29,000	do

5	Chikmagalur.	80,000	do	9,000	do	1,50,000	do	2,39,690	do	85,000	G. O. No. L. B. 7424-37—V.P. 32-55-20, dated 24th October 1955.
6	Shimoga ...	1,10,000	do	8,000	do	1,75,000	do	2,03,070	do	1,00,000	G. O. No. L. B. 7424-37—V.P. 32-55-20, dated 24th October 1955, and G. O. No. L.B. 10176-90—V. P. 32-55-40, dated 7th January 1956.
7	Chitaldrug	1,50,000	do	8,000	do	1,75,000	do	2,39,010	do	1,05,000	G. O. No. L. B. 7424-37—V.P. 32-55-20, dated 24th October 1955.
8	Bellary ...	1,00,000	do	15,000	do	1,75,000	do	1,70,000	do	30,000	do
9	Tumkur ...	1,10,000	do	8,000	do	1,75,000	do	2,67,010	do	1,40,000	do
10	Kolar ...	1,10,000	do	10,000	do	1,75,000	do	2,46,000	do	1,30,000	do
	Total ...	10,00,000		88,000		17,00,000		21,12,580		10,82,500	

Dr. Talati's Scheme, City Municipality, Mysore.

Q.—144. Sri K. PUTTASWAMY (Srirangapatna).—

Will the Government be pleased to state:—

(*a*) whether the City Municipal Council, Mysore, submitted any proposals for increasing the establishment for bringing under wet and garden cultivation an additional extent of 90 acres of dry and fallow lands of Municipal Sewage Farm under a scheme known as "Dr. Talati's Scheme" in their resolution passed in the month of February 1955;

(*b*) whether the Municipal Council submitted a comprehensive scheme for sanction of the Government before the scheme referred to was taken up and what was the staff that was proposed at that time; whether the scheme was not approved;

(*c*) whether the Government made counter proposals and wanted the Council to furnish their remarks in their letter dated 26th August 1955 (the letter in full may be given);

(*d*) whether the Government have sanctioned the staff asked for at a subsequent date; if so, what is the staff sanctioned;

(*e*) if the Government have not sanctioned the establishment asked for by the Municipal Council in full, what are the reasons for refusing to do so;

(*f*) whether there was a letter from the Government asking the Municipality to divide the land of the sewage farm and lease it over for purposes of betel leaf cultivation; if so, when was that proposal made;

(*g*) whether the Municipal Council agreed to the suggestion made by the Government;

(*h*) whether there is any relationship between the proposal made by the Government or leasing out the land and refusing to sanction the establishment asked for by the Municipal Council for purposes of the development of the sewage farm?

A.—Sri T. CHANNIAH (Minister for Public Health and Local Self-Government).—

(*a*) Yes.

(*b*) (i) Yes.

(ii) A lumpsum provision of Rs. 1,900 was made in the scheme for temporary establishment. The following staff with the annual recurring expenditure of not more than Rs. 55,000 was proposed.

		Rs.
1	120 Labourers at Rs. 30 p.m. for 12 months. ...	43,200
2	6 Maistries at one for every 20 labourers at Rs. 42. ...	3,024
3	One Inspector on Rs. 55—5—100—10—150. ...	1,308
4	Upgrading of the Farm Manager by raising the status to an Assistant Director of Agriculture. ...	3,000
5	Pump Operator Rs. 40—2½—50—3—80. ...	720
6	Electric charges, lubrication, etc. ...	3,700
	Total ...	54,952 or 55,000

(iii) It was sanctioned.

(*c*) Yes. (Copy appended below).

(*d*) Yes. The following staff was sanctioned.—

1 One Accounts Clerk in grade Rs. 60—5—90—8—130—10—180 *plus* S.L.A. Rs. 5 *plus* D.A. Rs. 5 *plus* Rs. 27-8-0 Dearness Allowance.

2 One Pump Operator on Rs. 40—2—50—3—80 *plus* Rs. 20 D.A.

3 One Cleaner on Rs. 18—½—22 *plus* D.A.

4 One Maistry on Rs. 20—1—30 *plus* D.A.

5 Ten Labourers: Rs. 10—1—15 *plus* D.A.

(*e*) The establishment asked for by the Municipal Council was sanctioned by Government only with the modification that instead of 30 labourers 10 were approved as this was sufficient in the opinion of Government.

(*f*) (i) Yes.

(ii) In October 1954.

(*g*) No reply is so far received from the Municipal Council.

(*h*) None.

Copy of the letter No. L. 6199—C.M. 101-53-15, dated 26th August 1955, from the Secretary to Government, Education and L.S.-G. Departments, to the Municipal Commissioner, Mysore City Municipality, through the President.

Subject.—**Sewage Development Schemes—Proposals for increasing the establishment—Mysore City Municipality.**

With reference to your letter No. C2. P.R. 185 C. 669—54-55, dated 28th April 1955, on the above subject, I am directed to state that this scheme is a very costly one. The income is about Rs. 1,01,000 and the expenditure is Rs. 97,460 The expenditure includes repayment of loan instalment of Rs. 20,000, thus the actual expenditure will be Rs. 77,460. It is, therefore, considered that it is not always economical if the Municipal Council or Government Department runs the farms. It is better if the land with sewage water is leased for a period of 3 years or 5 years. This will actually give scope to save money which is otherwise spent on lazy coolies, maistries who are sure of their monthly pay whether they work or not. Even the maintenance of a Farm Manager will not be necessary because the lessee will make such arrangements as he deems necessary. A suitable rate may be charged for sewage water. I am to request you to examine the above proposal and furnish the remarks of the Municipal Council in the matter, early.

Industrial Finance Corporation.

Q.—150. Sri K. LAKKAPPA (Channarayapatna).—

Will the Government be pleased to state :—

the steps they have taken to start an Industrial Finance Corporation?

A.—Sri H. M. CHANNABASAPPA (Minister for Industries).—

Draft Regulations have been framed and are under scrutiny by the Reserve Bank of India, Bombay.

Protected Water supply to villages in Chitaldrug District.

Q.—164. Sri Mulka GOVINDA REDDY (Chitaldrug).—

Will the Government be pleased to state :—

the names of villages in Chitaldrug District that are included for providing protected water supply during 1955-56 and 1956-57?

A.—Sri T. CHANNIAH (Minister for Public Health and Local Self-Government):—

Schemes for the supply of safe drinking water to the undermentioned villages in Chitaldrug District have been prepared. They have been forwarded to the Government of India for their approval and for sanctioning the usual grant-in-aid for the implementation of the schemes.

Chitaldrug Taluk

1 Bommenahally
2 Bheemasamudra
3 Doddasiddavvanahally
4 Belaghatta
5 Hayakal

Challakere Taluk

6 Hirehalli
7 Byadareddihally

Molakalmuru Taluk

8 Kondlahally
9 Rampura

(SRI T. CHANNIAH.)

Hiriyur Taluk

10 Adivala
11 Metikurk
12 Harthikotee

Hosadurga Taluk

13 Srirampura
14 Belagur
15 Jankal

Holalkere Taluk

16 Malladihally
17 Gunderi
18 Chikjajur

Harihar Taluk

19 Kondajji
20 Malebennur
21 Sirigere

Davangere Taluk

22 Hadadi

Jagalur Taluk

23 Bilichodu
24 Sokke
25 Palleghatta

Subvention Scheme for building Houses for Harijans

Q.—188. Sri P. M. SWAMIDURAI (K.G.F.—Scheduled Castes).—

Will the Government be pleased to state :—

(*a*) whether it is not a fact that the Scheduled Castes people are making use of the subvention scheme and building more houses every year :

(*b*) in view of the increasing number of houses being constructed every year, whether they will provide special grants to each Taluk in the State, especially in Bangarpet;

(*c*) the number of houses constructed by Scheduled Castes people during the last two years in Bangarpet Taluk with a view to make use of the above scheme ?

A.—Sri K. HANUMANTHAIYA (Chief Minister).—

(*a*) Yes.

(*b*) The grants to be given to taluks depend upon the provision made in the Budget every year.

(*c*) 1953-54 37 houses.
1954-55 58 ,,

Syndicate for Manganese Mining Industry.

Q.—319. Sri V. MASIYAPPA (Hiriyur).—

Will the Government be pleased to state :—

(*a*) the number of manganese mine owners in the State ;

(*b*) whether it is proposed to constitute a syndicate to develop this Industry ?

A.—Sri H. M. CHANNABASAPPA (Minister for Industries).—

(*a*) 99.

(*b*) The matter is under consideration.

Village Panchayets (Elections in Bangalore District).

Q.—330. Sri B. T. KEMPARAJ (Bangalore South—Scheduled Castes).—

Will the Government be pleased to state :—

(*a*) whether the village panchayet elections have been completed in Bangalore District ;

(*b*) the number of villages in which the Chairmen have been elected and taken charge of the panchayets ;

(*c*) the number of villages in which the chairman-elections have not been held (the names of such villages may kindly be furnished) ;

(*d*) the reasons why chairmen were not elected ?

A.—Sri T. CHANNIAH (Minister for Public Health and Local Self-Government).—

(*a*) Yes, except in 25 village panchayets.

(*b*) 1,796.

(*c*) 272, *vide* statement appended below.

(*d*) In some Village Panchayets the election has been completed only recently while in the case of some others, the required number of members has not been elected.

STATEMENT

	Names of villages
	Bangalore North Taluk
1	Gavipur Dasarahalli
2	Cholanaikanahalli
3	Kacharkanahalli
4	Nagasettihalli
5	Saneguruvanahalli
6	Mallathahalli
7	Ramagondanahalli
8	Veerasagara
9	Jakkur
10	Suradhevupura
	Bangalore South Taluk
11	Dodduthogur
12	Byrasandra
13	Ramohalli
	Anekal Taluk
14	Mayasandra
15	Hebbagudi
16	Heeladige
17	Chandapura
	Channapatna Taluk.
18	Lalaghatta
19	Vandenaguppe
20	Sunnaghatta
21	Bommanaikanahalli
22	Thubinakere
23	Jodi Banauthalli
24	Thittamaranahalli
25	Chikkenahally
26	Rampura
27	Thimmasandra
	Davanahally Taluk.
28	Chikkasanne
29	Jogihalli
30	Binnamangala
31	Budhalli
32	Hunnaikanahalli
33	Huttanahalli
34	Palya
35	Singrahally
36	Doddagollahally
37	Sulakunte
38	Solur
39	Mudagalahalli
40	Chikkanahosahalli
41	Chikkempanahalli
42	Balepura
43	Naganaikanahalli
44	Kalluhahalli
45	Budiganahalli
46	Palya
47	Honniganahally
48	Channahosahalli
49	Dharmapura
50	Dandiganahalli
51	Bullahalli
52	Bhatranahalli
53	Hosahalli
54	Gudmanahalli
55	Ranganathapura
56	Settihalli
	Doddaballapur Taluk.
57	Shakaladevanapura
58	Byrasandra
59	Benakinamadagu
60	Rajaghatta
61	Alahalli
62	Adinarayanahosahalli
63	Nagadevahalli
64	Chikathumkur
65	Veerapura
66	Majarahosahalli
67	Thippur
68	Ambaligere
69	Doddahejjaji
70	Kuganahalli
71	Ramapura
72	Daragajogihalli
73	Hanabe
	Kanakapura Taluk.
74	Boodiguppe
75	Kanahalli
76	Aralasandra
77	Anjawadi
78	Chickamuduvadi
79	Allimaranahalli
80	Chiranakuppe
81	Chakanahalli
82	Narayanapura
83	Chickabettahalli
84	Anamanahalli
85	Aranakuppe
86	Baradanahalli
87	Virupasandra

(SRI T. CHANNIAH.)

	Names of villages		Names of villages
88	Deralasandra	138	Honniganahalli
89	Rayasandra	139	Saslapura
90	Belikathanur	140	Hanehuguli
91	Kuthagandanahalli	141	Chickamukodlu
92	Hanumanahalli	142	Bildale
93	Somedyapanahalli	143	Thatiekere
94	Chankasandra	144	Uyyamnalli
95	Mallappanahosahalli	145	Doddakoppa
96	Rampura	146	Harashivanahalli
97	Marasandra	147	Koothagere
98	Aulagundanahalli	148	Kokkarehosahalli
99	Yerahalli		
100	Medanaranahalli		*Nelamangala Taluk.*
101	Kadujakkasandra	149	Baradi
102	Gattigehalli	150	Mandigere
103	Bhimasandra	151	Honnasandra
104	Kanasandra	152	Manthanakurchi
105	Devasandra	153	Vajarahalli
106	Hoskote	154	Jodi Machnaikanahalli
107	Yedamadu	155	Jodi Ananthapura
108	Kadasikoppa	156	Jodi Arakasandra
109	Gollahalli	157	Soldevanahalli (group)
110	Pitchanakal	158	Banasavadi
111	Singasandra	159	Kulipura
112	Aratabele	160	Jodi Bhavikere
113	Chickmaralawadi	161	Obanaikanahalli
114	Zuakasandra	162	Thotadaguddadahalli
115	M. Maniyarural	163	Shivanapura
116	Kallanakuppe	164	Harokyathanahalli
117	Goduru	165	Kadabagere (group)
118	Agara	166	Heggunda
119	T. Hosahalli	167	Lakkur
120	Keranagere	168	Haraiakunte
121	Doddakalbal	169	Goraghatta
122	Jaksandra	170	Karimaramahalli
123	Balagere	171	Mavinakunte
124	Guthal Hunase	172	Guddegowdanachamohalli
125	Devanahalli	173	Chikkanahalli
126	Ajjegowdanavalase	174	Dodderi
127	Mavathur	175	Thippagondanahalli
128	Huyalappanahalli	176	Gundenahalli
129	Gerehalli	177	Kempapura Agrahara
130	Choodahalli	178	Nimbenahalli
131	Kabbalu	179	Lakkasandra
132	Duntoor	180	Beeragondanahalli
133	Kemmale		
134	Sorekayidoddi		*Ramanagaram Taluk.*
135	Chickalahalli	181	Chamanahalli
136	Honnahalli	182	Virupasandra
137	Thenyanajakamahalli	183	Anamanahalli

Names of villages	Names of villages
184 Nelamale	229 Dodderi
185 Hebbakodi	230 Ganapathihalli
186 Bennahalli	231 B) chkuppe
187 Hosahalli	232 Gangenahalli
188 Kotahalli	233 Ajjanahalli
189 Hulakere	234 Peddanapalya
190 Sabkere	235 Ganakal
191 Manchegowdanapalya	236 Varthur
192 Gunur	237 Chickkellurrampur
193 Avverahalli	238 Hebbeldur
194 Nagohalli	
195 Lakkajanahalli	*Hoskote Taluk.*
196 Muddapurakere	239 Kolathur
197 Vajarahalli	240 Dondupalya
198 Manchnayakanahalli	241 Buvanahalli
199 Kempaiahnapalya	242 Sarakarguttahalli
200 Kethaganahalli	243 Bheemakkanahalli
	244 Doddatralagere
Magadi Taluk.	245 Balevahalli
201 Juthanahalli	246 Chikkoligere
202 Karagadahalli	247 Ralkunte
203 Sathanur	248 Bavapura
204 Dubbugothige	249 Yethinavaderapura
205 Halasabele	250 Jodi Thammanarayanaswamy Agrahara.
206 Halasethihalli	251 Jodi Dyavasandra
207 Thaggikuppe	252 Jodi Bettahalli
208 Kanchugaranahalli	253 Kodugodi
209 Upparthi	254 Kannamanpalya
210 Tagachakuppe	255 Rampura
211 Sripathihalli	256 Bilesivala
212 Chandurayanahalli	257 Byrathi
213 Harohalli	258 Biderehalli
214 Dandigorepura	259 Medihalli
215 Hujagal	260 Mendoor
216 Sidaganahalli	261 Avalahalli
217 Harthi	262 Ketamanallur
218 Athingere	263 Belathur
219 Mathikere	264 Jodi Bethahalli
220 Gathpura	265 Khajisonnuahalli
221 Balenahalli	266 Channasandra
222 Kothagaranahalli	267 Jodi Muthukadahalli
223 Belagavadi	268 Jodi Bylahalli
224 Hulkatte	269 Jodi Thimvarajne
225 Shambudevanahalli	270 Jodi Ajjagowdahalli
226 Honniganahalli	271 Jodi Kotoor
227 Muddiapalya	272 Gundoor
228 Dodmaranahalli	

Depressed Classes (upliftment grant for Bangalore District).

Q.—506. Sri D. M. GOVINDARAJU (Nelamangala).—

Will the Government be pleased to state :—

(*a*) the amount of grant allotted to Bangalore District for the upliftment of Depressed Classes for the past five years ;

(*b*) the dates on which they were so allotted ;

(*c*) (i) the principle on which the grants were allotted ;

(ii) the number of houseless Depressed Class families in this district;

(*d*) the amount of grant expended from 1st April 1954 to 31st December 1955 in Bangalore District and the amount remaining unspent (details to be given talukwar) ?

A.—Sri K. HANUMANTHAIYA (Chief Minister).—

			Rs.
(*a*)	1951-52	...	2,38,484
	1952-53	...	1,98,000
	1953-54	...	1,64,100
	1954-55	...	1,90,600
	1955-56	...	1,73,400

			Date
(*b*)	1951-52	...	28-4-1951
	1952-53	...	23-5-1952 and 1-9-1952
	1953-54	...	25-5-1953
	1954-55	...	9-6-1954
	1955-56	...	7-7-1955

(*c*) (i) Grants have been distributed among the Taluks on the basis of population and also on the basis of the need for help.

(ii) Statistics are not maintained.

Taluk		*Grant*	*Expenditure*	*Balance*
		Rs.	Rs.	Rs.
(*d*) Nelamangala	...	12,000	2,992	9,008
Dodballapur	...	8,000	190	7,810
Devanahalli	...	8,500	7,338	1,162
Hosakote	...	9,000	7,206	1,794
Anekal	...	10,000	4,045	5,955
Kanakapura	...	11,000	556	10,444
Channapatna	...	17,000	3,565	13,435
Ramanagaram	...	20,000	2,309	17,691
Magadi	...	14,000	6,730	7,270
Bangalore South	...	13,900	5,297	8,603
Bangalore North	...	15,000	1,467	13,533
Acquisition	...	35,000	26,793	8,207
Total	...	1,73,400	68,488	1,04,912

Special Amelioration grant for Malapalli and other villages in Chintamani Taluk.

Q.—515. Sri J. NARAYANAPPA (Chintamani—Scheduled Castes).—

Will the Government be pleased to state :—

(*a*) when the correspondence was set afoot in respect of providing a special grant out of the Amelioration grant for Malapalli, Hirekattigenahally and Jeedarahally in Chintamani Taluk ;

(*b*) the stage at which the said correspondence is ; whether grant has been sanctioned to the said villages ?

A.—Sri K. HANUMANTHAIYA (Chief Minister).—

(*a*) On 18th March 1955.

(*b*) Special grants of Rs. 3,000 have been sanctioned to Malapalli and Jeedarahalli villages.

Insurance Office (Clerical vacancies).

Q.—550. Sri R. MUNISWAMIAH (Bangalore North-Scheduled Castes).—

Will the Government be pleased to state :—

(*a*) the number of clerks appointed in the Insurance Office from 1st October 1955 to 1st February 1956, whose names are not included in the Public Service Commission list ;

(*b*) when the list of vacancies in that office will be published for the information of the public ;

(*c*) why they appoint local candidates in the vacancies of that office ;

(*d*) whether they are sending for some candidates and appoint them as local candidates whenever vacancies occur ;

(*e*) the number of local candidates working for over three months ?

A.—Sri K. HANUMANTHAIYA (Chief Minister).—

(*a*) 26.

(*b*) It is not published.

(*c*) Local arrangements of an interim nature are made in the interest of work of the Department in the following circumstances :—

(1) When the list of approved candidates is not received in time from the Public Service Commission ;

OR

(2) when there is not sufficient number of candidates in the approved lists received from the Public Service Commission ;

OR

(3) when the candidates of the list assigned by the Public Service Commission do not respond to orders of appointment issued by the Department.

(*d*) Does not arise in view of reply to (*c*) above.

(*e*) 45.

Minto Ophthalmic Hospital.

Q.—555. Sri R. MUNISWAMIAH (Bangalore North-Scheduled Castes).—

Will the Government be pleased to state :—

(*a*) the number of in-patients and out-patients treated in the Minto Ophthalmic Hospital during the years 1952-53, 1953-54, 1954-55 and 1955-56 ;

(*b*) whether it has been contemplated to extend the building ;

(*c*) whether it has been ordered that the doctors of this hospital have to pay weekly visits to District Hospitals ;

(*d*) whether the work of this hospital has suffered on this account ;

(*e*) whether they will consider the desirability of appointing a well qualified eye-specialist to tour throughout the State and treat the patients ?

A.—Sri T. CHANNIAH (Minister for Public Health and Local Self-Government).—

(*a*)—*Year*	*In-patients*	*Out-patients*
1952 ...	2,630	41,321
1953 ...	2,715	38,342
1954 ...	3,234	46,773
1955 ...	4,891	49,972

(*b*) Yes.

(*c*) No. It is only the Superintendent of the Institution that is paying fortnightly visits to certain District Hospitals.

(*d*) No.

(*e*) In view of the scheme for State-wide Intensive Blind Relief through Mobile Eye clinics organised and operated by Dr. M. C. Modi with the assistance of Government, it is considered that the appointment of an Eye Specialist is not necessary at present. Dr. Modi's scheme has been sanctioned by Government for a period of three years at a cost of Rs. 47,840 per annum exclusive of nursing personnel.

Hospitals (Milk Supply by Hessarghatta Dairy Farm)

Q.—566. Sri M. PALANIYAPPAN (Ulsoor).—

Will the Government be pleased to state :—

(*a*) the amount of milk that is supplied by Hessarghatta Dairy Farm to the Hospitals every day;

(*b*) the names of the Hospitals that are getting supply from Hessarghatta;

(*c*) the amount that is required to improve the Dairy enabling the same to cater milk to all the needs of the Government Hospitals in Bangalore ?

A.—Sri T. CHANNIAH (Minister for Public Health and Local Self-Government).—

(*a*) 650 lbs.

(*b*) Combined Hospitals (Victoria, Vani Vilas and Minto Ophthalmic Hospitals), Bangalore.

(*c*) Rs. 1,50,000 approximately.

Rural Credit Scheme.

Q.—572. Sri G. PAPANNA (Sidlaghatta—Chikballapur).—

Will the Government be pleased to state :—

(*a*) the action taken to implement the scheme of giving rural credits through Co-operative Societies as envisaged by the Planning Commission in the Second Five-Year Plan;

(*b*) whether the Co-operative Societies formed for the improvement of Rural Industries will be merged with these Co-operative Societies ?

A.—Dr. R. NAGAN GOWDA (Minister for Agriculture).—

(*a*) Short-term credit is being given to ryots through the Co-operative Societies and this will be enhanced during Second Five-Year Plan by reorganising the societies and strengthening their resources.

(*b*) No.

Mysore Silk Weaving Factory.

Q.—575. Sri G. PAPANNA (Sidlaghatta—Chikballapur).—

Will the Government be pleased to state :—

(*a*) the number of looms in the Mysore Government Silk Weaving Factory;

(*b*) the number of looms that worked throughout the year and the number of looms that worked during a part of a year in each year during the past three years;

(*c*) the quantity of raw silk required if all the looms are worked throughout the year;

(*d*) the quantity of raw silk purchased every year during the past three years;

(*e*) cost of goods manufactured and sold each year during the past three years;

(*f*) the method of purchasing raw silk and whether the silk purchased is being tested ?

A.—Sri H. M. CHANNABASAPPA (Minister for Industries).—

(*a*) 42.

(*b*) Information as desired is not available as all the looms worked intermittently. The average number of looms worked during the years is furnished.

1952-53	1953-54	1954-55
21	32	40

(*c*).—
20,000 lbs.

(*d*).—

1952-53	1953-54	1954-55
8,660 lbs.	8,758 lbs.	15,125½ lbs.

(*e*) Cost of goods manufactured.—

1952-53	1953-54	1954-55
Rs.	Rs.	Rs.
6,19,150	7,52,554	10,20,453.

Value of goods sold.—

1952-53	1953-54	1954-55
Rs.	Rs.	Rs.
6,90,246	8,23,071	9,95,123.

(*f*) By direct purchase. The silk purchased is being tested.

Stoneware Pipe Factory near Banasandra, Tumkur District (Proposal to start).

Q.—305. Sri B. HUTCHE GOWDA (Turuvekere).—

Will the Government be pleased to state :—

(*a*) whether they are aware that enough raw materials are available to start a stoneware pipe factory near Banasandra, Tumkur District;

(*b*) whether it is a fact that the Mysore Stoneware and Potteries, Limited, thought of starting a factory at Banasandra and applied for power and got it sanctioned also;

(*c*) whether it is a fact that the said Company has applied for financial assistance from Government;

(*d*) whether it is true that the Company has given up the enterprise due to the Government's delay in arranging the finance;

(*e*) whether they will take up this question of starting a stoneware pipe factory at Banasandra either by arranging finance to the said Company or by starting another company to manufacture pipes, etc., since this district has no factories so far ?

A.—Sri H. M. CHANNABASAPPA (Minister for Industries).—

(*a*) Yes.

(*b*) Yes.

(*c*) No.

(*d*) Does not arise in view of reply to clause (*c*)

(*e*) If the Company applies for financial assistance from Government, the matter will be considered under the provisions of the Mysore State Aid to Industries Act, 1951.

Election to Board of Industries

Mr. DEPUTY SPEAKER.—The Chair desires to announce that till the last hour fixed for the receipt of candidature applications only one candidate *viz.*, Sri G. Puttaswamy had signified his intention to stand for election to the Board of Industries. As he is the only candidate standing for the one place to be filled up by election, Sri G. Puttaswamy is declared elected.

BUDGET FOR 1956-57—DEMANDS FOR GRANTS (*Contd*).

Mr. DEPUTY SPEAKER.—Demands Nos. 21, 24 and 25.

DEMAND No. 21—AGRICULTURE, HORTICULTURE AND FISHERIES.

40. AGRICULTURE.

Mr. DEPUTY SPEAKER.—Motion moved :

"That a sum not exceeding Rs. 74,21,641 be granted to the Government to defray the charges which will come in course of payment during the year ending 31st day of March 1957, in respect of 'Agriculture'."

Discussion on this Demand will go on till Ten O'clock. For Demand No. 24, I think about half an hour would be sufficient. For Demand No. 25 between 11 and 12-30. I take it that the House agrees to this arrangement.

MEMBERS.—Yes.

*ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—ಸ್ವಾಮಿ, ಈಗ ನಮ್ಮ ಸಭೆಯ ಮುಂದೆ ಮಂಡಿಸಲಾಗಿರತಕ್ಕಂಥ ಡಿಮ್ಯಾಂಡನ್ನು ಸ್ವಾಗತಿಸುತ್ತ ನಾನು ವ್ಯವಸಾಯದ ಇಲಾಖೆಯ ಬಗ್ಗೆ ಕೆಲವು ಸೂಕ್ತ ಸಲಹೆಗಳನ್ನು ಸರ್ಕಾರಕ್ಕೆ ನೀಡಬೇಕೆಂದು ನಿಂತಿದ್ದೇನೆ.

ಮೈಸೂರು ದೇಶದಲ್ಲಿ ಪ್ರಜಾಪ್ರಭುತ್ವಾಡಳಿತ ಬಂದ ಮೇಲೆ ರೈತಾಪಿ ಕಸುಬಿನವರಿಗೆ ಬೇಕಾದ ಸಾಮಾನುಗಳನ್ನು ಒದಗಿಸಲು ನಮ್ಮ ಸರ್ಕಾರದವರು ವಿಪರೀತವಾಗಿ ಹಣವನ್ನು ಖರ್ಚುಮಾಡುತ್ತಿದ್ದಾರೆ. ಅದು ಅಭಿನಂದನೀಯ. ಆದರೆ ಈ ಹಣವನ್ನು ಸರ್ಕಾರದವರು ಒಂದು ಸರಿಯಾದ ಮಾರ್ಗದಲ್ಲಿ ಖರ್ಚು ಮಾಡುತ್ತಿಲ್ಲವೆಂದು ಹೇಳಬೇಕಾಗಿದೆ. ಟೌನ್ ಮತ್ತು ನಗರ ಪ್ರದೇಶಗಳು ಎಂದರೆ ಯಾವ ಯಾವ ಸ್ಥಳಗಳು ಬೇಗ ಅಧಿಕಾರವರ್ಗದವರ ಕಣ್ಣಿಗೆ ಬೀಳುತ್ತವೆಯೋ ಅಂಥ ಪ್ರದೇಶಗಳಿಗೆ ಮಾತ್ರವೇ ಈ ದಿವಸ ಸರ್ಕಾರದವರು ಬೇಗ ಹಣವನ್ನೊದಗಿಸಿ, ಅವರಿಗೆ ಬೇಕಾಗತಕ್ಕಂಥ ವಿಶಿಷ್ಟ ಸಾಮಾನುಗಳನ್ನೂ ಒದಗಿಸಲು ಚುರುಕಾಗಿ ಎಲ್ಲರೂ ಕೆಲಸ ಮಾಡುತ್ತಾರೆ.

---

* Asterisk indicates that the speech has not been revised by the Member concerned.

(ಶ್ರೀ ವೈ. ಎಂ. ಚಂದ್ರಶೇಖರಯ್ಯ)

ಆದರೆ ಅದೇ ರೀತಿಯಲ್ಲಿ ಈ ದಿವಸ ಸರ್ಕಾರದ ಅಧಿಕಾರವರ್ಗ ರೈತನ ಕಷ್ಟಸುಖಗಳನ್ನು ಗಮನಿಸುತ್ತಿಲ್ಲ. ಹಾಗೆ ಅವರ ಗಮನವನ್ನು ಸೆಳೆಯತಕ್ಕಂಥ ಮಾರ್ಗಗಳೂ ಕೂಡ ಇರುವುದಿಲ್ಲ. ಆದರೆ ಸರ್ಕಾರದವರು ರೈತನಿಗೆ ಬೇಕಾಗುವಂಥ ಸಾಮಾನುಗಳ ಬಗ್ಗೆ ಎಂದರೆ ವ್ಯವಸಾಯಕ್ಕೆ ಸಂಬಂಧಪಟ್ಟ ಕುಳ, ಗುಡ, ಇತ್ಯಾದಿ ಸಾಮಾನುಗಳ ವಿಚಾರದಲ್ಲಿ ಒಂದು ಆರ್ಡರನ್ನು ಇನ್ನೂ ಮೊನ್ನೆತಾನೆ ಹೊರಡಿಸಿದ್ದಾರೆ. ಈ ಆರ್ಡರ್ ಪ್ರಕಾರ ಈ ದಿವಸ ರೈತನು ತನಗೆ ಬೇಕಾದ ಒಂದುಕುಳ ಅಥವ ಮತ್ತೆ ಯಾವುದಾದರೂ ಒಂದು ಸಾಮಾನುಬೇಕಾಗಿದ್ದಲ್ಲಿ ಆತನು ರೆವಿನ್ಯೂ ಇನ್ಸ್‌ಪೆಕ್ಟರವರಲ್ಲಿಗೆ ಹೋಗಿ ಅವರಿಂದ ಒಂದು ಸರ್ಟಿಫಿಕೇಟನ್ನು ಬರೆಸಿಕೊಂಡು ಬರಬೇಕೆಂಬ ನಿರ್ಬಂಧ ಹಾಕಿದ್ದಾರೆ. ಈ ರೀತಿಯಾಗಿ ಒಬ್ಬ ರೈತ ದಿವಸ ಒಂದು ಕುಳಕ್ಕೂ ಸಹ ಆ ರೆವಿನ್ಯೂ ಇನ್ಸ್‌ಪೆಕ್ಟರ್ ಅಥವಾ ಅಮಲ್ದಾರರ ಬಳಿ ಹೋಗಿ ಒಂದು ಪರ್ಮಿಟ್ ತಂದು ಅದನ್ನು ಕೊಂಡುಕೊಳ್ಳವಂಥ ಸ್ಥಿತಿ ಬಂತಲ್ಲಾ ಎಂದು ನಾನು ವಿಷಾದಪಡಬೇಕಾಗಿದೆ. ಈ ದಿವಸ ರೈತರು ಈ ಒಂದು ನಾಲ್ಕಾಣೆ ಸಾಮಾನಿಗೂ ಕೂಡ 14-15 ಮೈಲಿ ಹೋಗಿ ಆ ಅಧಿಕಾರಿಗಳಿಂದ ಒಂದು ಚೀಟಿ ತರಬೇಕೆಂದರೆ ಆತನಿಗೆ ಒಂದು ದಿನದ ಬದುಕೇ ಹೋಯಿತು. ಇನ್ನು ಈ ಚೀಟಿ ತಂದ ನಂತರ ಆತನು ಪುನಃ ಸಾಮಾನಿಗೋಸ್ಕರವಾಗಿ ಸೊಸೈಟಿಯೋ ಅಥವಾ ಸಾಮಾನುಗಳ ಮಾರಾಟದ ಡಿಪೋ ಇರತಕ್ಕಂಥ ತಾಲ್ಲೂಕ್ ಹೆಡ್‌ಕ್ವಾರ್ಟರ್ಸಿಗೆ ಹೋಗಿ ಬರಲು ಮತ್ತೊಂದು ದಿನದ ಬದುಕು ಹಾಳು. ಹೀಗೆ ಈ ದಿವಸ ಈ ರೈತನ ಬಾಳು ನಾಲ್ಕಾಣೆಯ ಸಾಮಾನಿಗೂ ಸಹ ಎರಡು ದಿವಸದ ಬದುಕನ್ನು ಹಾಳುಮಾಡಿಕೊಳ್ಳಬೇಕೆಂದು ಹೇಳುತ್ತಿದ್ದರೆ ಇವರ ಕಷ್ಟಸುಖಗಳನ್ನು ನಾವು ಇನ್ನು ಯಾರ ಮುಂದೆ ಹೇಳಿಕೊಳ್ಳಬೇಕೋ ಅದೇ ನನಗಂತೂ ತಿಳಿಯದಾಗಿದೆ. ಆದರೆ ಹಿಂದೆ ಕಂಟ್ರೋಲ್ ಕಾಲದಲ್ಲಿದ್ದ ಹಾಗೆ ಸಾಮಾನುಗಳು ದೊರಕುವುದಕ್ಕೆ ಈ ದಿವಸ ತೊಂದರೆಯೇನೂ ಇಲ್ಲ. ಸಾಮಾನುಗಳು ಹೇರಳವಾಗಿ ಎಲ್ಲಿಬೇಕಾದರೂ ದೊರೆಯುತ್ತಿವೆ. ಹೀಗಿದ್ದಾಗ್ಯೂ ಸರ್ಕಾರ ದಿನಕ್ಕೊಂದು ಆರ್ಡರನ್ನು ಹೊರಡಿಸುತ್ತಿರುವುದು ನ್ಯಾಯವಾದುದಲ್ಲ. ಅತ್ತಲಾಗಿ ಆ ರೈತನ ಸನುಬಾದರೋ ಆತನು ಒಂದು ದಿವಸ ಕೂಡ ಮನೆ ಬಿಟ್ಟು ಹೊರಗೆ ಹೊರಡಲು ಅವಕಾಶವಿರುವುದಿಲ್ಲ. ಆತನಿಗೆ ವಿರಾಮವೆನ್ನುವುದೇ ಇಲ್ಲ. ಮಳೆಗಾಲದಲ್ಲಿ ಉಳುವುದು, ಬೇಸಿಗೆ ಕಾಲದಲ್ಲಿ ಗೊಬ್ಬರ, ಗೋಡುಗಳನ್ನು ಸಾಗಿಸುವುದು, ಬದುಗಳನ್ನು ಹಾಕುವುದು. ಹೀಗೆ ಆತನಿಗೆ ವರ್ಷಾದ್ಯಂತವೂ ಕೆಲಸಗಳಿದ್ದೇ ಇರುತ್ತವೆ. ಆದಕಾರಣ ಇನ್ನಾದರೂ ಸರ್ಕಾರದವರು ರೈತಾಪಿ ವರ್ಗಕ್ಕೆ ಈ ದಿವಸ ಇರತಕ್ಕ ತೊಂದರೆಗಳನ್ನು ತಪ್ಪಿಸಿ ಅವರಿಗೆ ವ್ಯವಸಾಯ ಸಂಬಂಧದಲ್ಲಿ ಬೇಕಾಗತಕ್ಕಂಥ ಬೀಜ, ಗೊಬ್ಬರ, ನೇಗಿಲು, ಮುಟ್ಟುಗಳು, ಮತ್ತು ಇತರೇ ವ್ಯವಸಾಯದ ಉಪಕರಣಗಳನ್ನು ಯಾವ ಅಡ್ಡಿ ಆತಂಕಗಳೂ ಇಲ್ಲದಂತೆ ಅವರಿಗೆ ದೊರೆಯುವ ಹಾಗೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ರೈತನಿಗೆ ಬೇಕಾಗತಕ್ಕಂಥ ವ್ಯವಸಾಯದ ಮರ ಮುಟ್ಟುಗಳನ್ನು ಕೇಳುವುದಕ್ಕೆ ಹೋದರೆ ಫಾರೆಸ್ಟ್ ಇಲಾಖೆಯವರು ಅವು ಮನ್ನಾಜಂಗಲ— ಅಂಥ ಜಂಗಲ ಇಂಥ ಜಂಗಲ ಎಂದು ಹೇಳಿ ಅವರಿಗೆ ಅವಕಾಶ ಕೊಡುತ್ತಿಲ್ಲವೆಂದು ಕೇಳುತ್ತಿದ್ದೇನೆ. ಆದುದರಿಂದ ಆ ರೈತರಿಗೆ ಬೇಕಾಗುವಂಥ ಬೇಸಾಯದ ಮುಟ್ಟುಗಳನ್ನು ಯಾವ ಜಂಗಲಿನಿಂದಲೇ ಆಗಲಿ, ಪುಕ್ಕಟ್ಟೆಯಾಗಿ ದೊರೆಯುವಂತೆ ಸರ್ಕಾರದವರೊಂದು ಏರ್ಪಾಡು ಮಾಡಬೇಕು. ನಮಗೆ ಆಹಾರ ಸಾಮಗ್ರಿಗಳನ್ನು ಬೆಳೆದುಕೊಡುತ್ತಿರುವ ರೈತರ ವಿಚಾರದಲ್ಲಿ ತಾವು ಇಷ್ಟಾದರೂ ಉಪಕಾರ ಮಾಡದಿದ್ದರೆ ಮತ್ತೇನು ಸಹಾಯವನ್ನು ತಾವು ಅವರಿಗೆ ಒದಗಿಸಬಲ್ಲಿರಿ! ಹಳ್ಳಿಯ ಜನರು ಆಹಾರ ವಸ್ತುಗಳನ್ನು ದಿವಸ ಬೆಳೆಯದೆ ಹೋದರೆ ಈ ಸಿಟಿಗಳಲ್ಲಿ ಕುಳಿತುಕೊಂಡು ತಿನ್ನತಕ್ಕ ಜನರ ಗತಿ ಏನಾಗಬಹುದು? ಅಥವಾ ನಿಮ್ಮ ಈ ದೊಡ್ಡ ದೊಡ್ಡ ನಗರಗಳಲ್ಲಿ ಬ್ಯಾಂಕುಗಳ, ಫ್ಯಾಕ್ಟರಿಗಳ ಮತ್ತು ಇತರೇ ಕಾರ್ಖಾನೆಯ ಕೆಲಸಗಾರರು ದಿನ ಬೆಳಗಾದರೆ ಹೂಡುತ್ತಿರುವಂಥ ಮುಷ್ಕರಗಳನ್ನೇನಾದರೂ ಒಂದು ವೇಳೆ ಆ ರೈತಾಪಿ ಜನರು ಹೂಡಿಬಿಟ್ಟರೆ ಆ ದಿವಸವೇ ಜಗತ್ತಿನ ಪ್ರಳಯ ಮತ್ತು ಜನ ಜೀವನದ ಕೊನೆ ಎಂದು ನಾನು ತಿಳಿದುಕೊಂಡಿದ್ದೇನೆ. ಹಾಗೇನಾದರೂ ಆಯಿತೆಂದರೆ ಯಾರಿಗೂ ಆಹಾರ ಸಿಕ್ಕುವುದಿಲ್ಲ. ಎಲ್ಲರೂ ಕೈಲಾಸವಾಸಿಗಳಾಗಬೇಕಾಗುತ್ತದೆ. ಆದರೆ ಆ ರೈತಾಪಿ ಜನರಿಗೆ ದೇವರು ಇನ್ನು ಅಂಥ ಬುದ್ಧಿಯನ್ನು ಕೊಟ್ಟಿಲ್ಲ. ಪರಮಾತ್ಮನು ಅವರಿಗೆ ಬುದ್ಧಿಯನ್ನು ಕೊಡದಿರಲಿ ಎಂದು ನಾನು ಹಾರೈಸುತ್ತೇನೆ. ಆದರೆ ಸರ್ಕಾರದವರು ಹೀಗೇ ಮಾಡುತ್ತಾ ಬಂದರೆ ಕೊನೆಗೆ ಒಂದಲ್ಲಾ ಒಂದು ದಿನ ಈ ರೈತರೂ ಸಹ ಮುಷ್ಕರಗಳನ್ನೂ ಕೂಡ ಹಿಡಿಯುವಕಾಲ ಬಂದರೂ ಬರಬಹುದು. ಇಂಥಾದ್ದಕ್ಕೆ ಸರ್ಕಾರ ಅವಕಾಶ ಕೊಡದಿರಬೇಕೆಂದು ಸೂಚಿಸುತ್ತೇನೆ. ಈಗಾಗಲೇ ಬೇಸಿಗೆ ಪ್ರಾರಂಭವಾಗಿದೆ. ಆದಕಾರಣ ಇನ್ನು ಮುಂಗಾರು ಮಳೆ ಬೇಗ ಪ್ರಾರಂಭವಾಗಲಿದೆ. ಅದಕ್ಕಾಗಿ ರೈತರಿಗೆ ಬೇಕಾಗುವಂಥ ಬೀಜ, ಗೊಬ್ಬರ, ನೇಗಿಲು, ಇತ್ಯಾದಿ ಉಪಕರಣಗಳನ್ನು ಬೇಗತರಿಸಿಟ್ಟುಕೊಂಡು ಅವು ಸಕಾಲಕ್ಕೆ ಸರಿಯಾಗಿ ಅವರಿಗೆ ಒದಗುವಂತೆ ಒಂದು ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ರೈತನು ದೇಶದ ಬೆನ್ನು ಮೂಳೆ. ಈತನಿಗೆ ಎಲ್ಲಾ ಅನುಕೂಲಗಳನ್ನೂ ಕಲ್ಪಿಸಿಕೊಡಬೇಕಾದ್ದು ಸರ್ಕಾರದ ಆದ್ಯ ಕರ್ತವ್ಯ.

ಇನ್ನು ಈ ಟ್ರಾಕ್ಟರುಗಳ ವಿಚಾರ ತೆಗೆದುಕೊಂಡರೆ ಇವುಗಳನ್ನು ಹೆಚ್ಚಾಗಿ ಶ್ರೀ ಟಿ. ಮರಿಯಪ್ಪನವರ ಕಾಲದಲ್ಲಿ ತರಿಸಲಾಗಿತ್ತು. ಆದರೆ ಈ ದಿವಸ ಅವು ಏತಕ್ಕೂ ಬರದ ಹಾಗೆ ಮೂಲೆಯಲ್ಲಿ ಮುರಿದು ಬಿದ್ದಿವೆ. ನಮ್ಮ ಕಡೂರು ತಾಲ್ಲೂಕಿನಲ್ಲೂ ಕೂಡ ಒಂದು ಟ್ರಾಕ್ಟರ್ ಇದೆ. ಅದು ಹಿಂದಕ್ಕೂ ಹೋಗುವುದಿಲ್ಲ, ಮುಂದಕ್ಕೂ ಹೋಗುವುದಿಲ್ಲ, ನಿಂತಲ್ಲೇ ನಿಂತಿದೆ. ಇಂಥ ಟ್ರಾಕ್ಟರುಗಳಿಂದೇನು ಪ್ರಯೋಜನ? ಇದಕ್ಕೆ ರಿಪೇರಿಗಾಗಿ ಬೇಕಾಗುವಂಥ ಪ್ರತಿಯೊಂದು ಮೊಳೆ, ಮರಡು, ಸ್ಪ್ರಿಂಗ್ ಇತ್ಯಾದಿ ಸಾಮಾನುಗಳಿಗೆ ಬೆಂಗಳೂರಿಗೇ ಬರಬೇಕಾಗಿದೆ. ಮೇಲಾಗಿ ಅದನ್ನು ನಡೆಸತಕ್ಕ ಡ್ರೈವರ್ ಕೂಡ ಈ ಬೆಂಗಳೂರಿಂದಲೇ ಬರಬೇಕು. ಅಂತೂ ಆ ಟ್ರಾಕ್ಟರ್ ಈ ದಿವಸ ಕೆಟ್ಟರೆ 8-10 ದಿವಸಗಳ ತನಕ ಅದು ರಿಪೇರಿ ಆಗಲು ಅವಕಾಶವಿರುವುದಿಲ್ಲ. ಸರ್ಕಾರದವರು ಇಂಥ ಟ್ರಾಕ್ಟರುಗಳ ಮೇಲೆ ಲಕ್ಷಾಂತರ ರೂಪಾಯಿಗಳನ್ನು ಚೆಲ್ಲಿದ್ದಾರೆ. ಇನ್ನು ಒಬ್ಬೊಬ್ಬರು ರೈತರು ಇವುಗಳನ್ನು ಕೊಂಡು ಅವರ ಆಸ್ತಿ, ಒಡವೆ, ಮನೆ, ಮಠಗಳನ್ನೆಲ್ಲಾ ಹಾಳು ಮಾಡಿಕೊಂಡಿದ್ದಾರೆ. ಇವುಗಳನ್ನು ನಡೆಸುವ ಹಾಗಿದ್ದರೆ ಸರಿಯಾಗಿ ನಡೆಸಿ, ಇಲ್ಲವೇ ಸಂಪೂರ್ಣವಾಗಿ ತೆಗೆದು ಹಾಕಿ ಬಿಡಿ. ಅಂತೂ ಸರ್ಕಾರದವರು, ಅದರಲ್ಲೂ ಈ ವ್ಯವಸಾಯ ಮಂತ್ರಿಗಳು, ಈ ಇಲಾಖೆಗೆ ಎಲ್ಲಾ ತಿಳುವಳಿಕೆಗಳನ್ನೂ ಕೊಟ್ಟು ರೈತರಿಗೆ ಎಲ್ಲಾ ಸಾಮಾನುಗಳನ್ನು ಸಕಾಲ

ದಲ್ಲಿ ಒದಗಿಸಿ ಅವರು ಗುಡುಗು—ಮಿಂಚಿನ ವೇಗದಲ್ಲಿ ಕೆಲಸ ಮಾಡುವಂತೆ ಇಲಾಖೆಗೆ ಸೂಕ್ತ ತಿಳುವಳಿಕೆಗಳನ್ನು ಕೊಡಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಬಿ. ಚಿಕ್ಕಣ್ಣ (ಜಾವಗಲ್).—ಸ್ವಾಮಿ, ಮೈಸೂರು ಸಂಸ್ಥಾನದಲ್ಲಿ ನೂರಕ್ಕೆ 80 ಜನಗಳು ವ್ಯವಸಾಯವನ್ನು ಅವಲಂಬಿಸಿದ್ದಾರೆ. ಈ ನಮ್ಮ ದೇಶದಲ್ಲಿ ವ್ಯವಸಾಯಕ್ಕೆ ಎಷ್ಟು ಗಮನಕೊಡಬೇಕೋ ಅಷ್ಟು ಗಮನಕೊಟ್ಟಿಲ್ಲ ಎಂದು ಸ್ಪಷ್ಟವಾಗಿ ತಿಳಿಸುತ್ತೇನೆ. ಸ್ವಾಮಿ, ಈ ಇಲಾಖೆಗೆ ವರ್ಷಕ್ಕೆ ¾ ಕೋಟಿ ರೂಪಾಯಿಗಳವರೆಗೂ ಸರ್ಕಾರದವರು ಖರ್ಚುಮಾಡುತ್ತಾರೆ. ಈ ಹಣವೆಲ್ಲಾ ಅನ್ಯಾಯವಾಗುತ್ತಾ ಇದೆ ಎಂದು ಹೇಳದೇ ವಿಧಿಯಿಲ್ಲ. ಏಕೆಂದರೆ ಇಷ್ಟು ಹಣ ಖರ್ಚುಮಾಡಿದರೂ ದೇಶದಲ್ಲಿ ರೈತನಿಗೆ ಏನು ಸಹಾಯ ಒದಗಬೇಕೋ ಅದು ಒದಗದೇ ಎಷ್ಟುಮಟ್ಟಿಗೆ ಫಲಕಾರಿಯಾಗಬೇಕೋ ಅಷ್ಟುಮಟ್ಟಿಗೆ ಆಗದೇಹೋಗಿದೆ. ಇದಕ್ಕೆ ಕಾರಣ ಈ ವ್ಯವಸಾಯದ ಇಲಾಖೆಯಲ್ಲಿರತಕ್ಕ ಅಧಿಕಾರಿಗಳೇ. ನನ್ನ ದೃಷ್ಟಿಯಲ್ಲಿ ಹೇಳುವುದಾದರೆ ಅವರು ಪೂರ್ವಜನ್ಮದಲ್ಲಿ ಪುಣ್ಯಮಾಡಿದ್ದರು. ಏಕೆಂದರೆ ಅವರು ಏನೂ ಕೆಲಸಮಾಡದೇ ಸಂಬಳ ತೆಗೆದುಕೊಳ್ಳತಕ್ಕ ಅಧಿಕಾರಿಗಳು ಎಂದು ನನಗೆ ಗೊತ್ತಾಗಿದೆ. ಅವರು ನಿಜವಾಗಿಯೂ ಮೂರುಕಾಸಿನ ಕೆಲಸವನ್ನು ಮಾಡುವುದಿಲ್ಲ. ಬೀಜ ಹಂಚತಕ್ಕ ಕಾಲದಲ್ಲಿ ಬೀಜಗಳನ್ನು ಸರಬರಾಯಿ ಮಾಡುವುದೆಷ್ಟೋ ಅಷ್ಟು ಕೆಲಸ ಮಾಡಿದರೆ ಮುಗಿಯಿತು. ಬಾಕಿ ದಿವಸಗಳಲ್ಲಿ ಸುಖವಾಗಿ ಕಾಲ ಕಳೆದುಕೊಂಡು 30 ದಿವಸ ಆದಕೂಡಲೇ ಸಂಬಳ ತೆಗೆದುಕೊಳ್ಳುತ್ತಾರೆ. ಇಂಥ ಅನ್ಯಾಯ ಯಾವ ಇಲಾಖೆಯಲ್ಲೂ ನಡೆಯುತ್ತಿಲ್ಲ ಎಂದು ಹೇಳುತ್ತೇನೆ. ಒಂದು ತಾಲ್ಲೂಕಿನಲ್ಲಿ ವ್ಯವಸಾಯದ ಇಲಾಖೆಯ ಆಫೀಸರು 10-12 ಜನ ಇರುತ್ತಾರೆ. ಮೂರು ಕಾಸಿನ ಕೆಲಸ ಮಾಡುವುದಿಲ್ಲ! 4-5 ವರ್ಷದ ಹಿಂದೆ ಮಾಡುತ್ತಾ ಇದ್ದ ಕೆಲಸ ಎಂದರೆ ಗುಳಿ ಮಾರುವುದು, ಗೊಬ್ಬರ ಮಾರುವುದು ಅದೂ ಕೂಡ ಈಗ ತಪ್ಪಿಹೋಗಿದೆ. ನಿರಾಯಾಸವಾಗಿ ಯಾವ ಕೆಲಸವೂ ಇಲ್ಲದೆ ತಿರುಗಾಡಿಕೊಂಡಿದ್ದಾರೆ. ಈ ಅನ್ಯಾಯವನ್ನು ನಮ್ಮ ಸರ್ಕಾರದವರು ಆದಷ್ಟು ಜಾಗ್ರತೆ ಸರಿಪಡಿಸಬೇಕು. ಅವರುಗಳು ದಿನವಹಿ ಇಷ್ಟಿಷ್ಟು ಕೆಲಸಮಾಡಿದ್ದಾರೆ ಎಂಬುದನ್ನು ಬರೆದಿಡುವ ಡೈರಿ ಇಟ್ಟಿದ್ದರೂ ಸಹ ಸುಳ್ಳು ಇಟ್ಟಿದ್ದಾರೆಯೋ ಇಲ್ಲವೋ ಗೊತ್ತಿಲ್ಲ. ಒಂದು ವೇಳೆ ಡೈರಿ ಬರೆಯುತ್ತಾರೆ ಎಂಬುದು ಖಂಡಿತವಾದ ಮಾತು. ಆದುದರಿಂದ ಸರ್ಕಾರದವರು ಯಾವ ತರಹದಲ್ಲಿ ಅವರಿಂದ ಕೆಲಸ ತೆಗೆದುಕೊಳ್ಳಬೇಕು ಎನ್ನುವ ವಿಷಯದಲ್ಲಿ ಪರ್ಯಾಲೋಚನೆ ಮಾಡಿ ಒಂದು ತೀರ್ಮಾನಕ್ಕೆ ಬಂದು ಆದಷ್ಟು ಜಾಗ್ರತೆ ಅವರಿಗೆ ಹೆಚ್ಚಿನ ಕೆಲಸ ಕೊಟ್ಟು ತನ್ಮೂಲಕ ಜನಗಳಿಗೆ ಅನುಕೂಲವಾಗುವಂತೆ ಮಾಡಬೇಕೆಂದು ಹೇಳುತ್ತೇನೆ. ಈ ವಿಷಯದಲ್ಲಿ ತೀವ್ರವಾಗಿ ಆಲೋಚನೆ ಮಾಡಿ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸುತ್ತೇನೆ.

ಕೆಲವು ಕಡೆ ಸರ್ಕಾರದವರು ಸಂಶೋಧನಾ ಕೇಂದ್ರಗಳನ್ನು ತೆರೆದಿದ್ದಾರೆ. ಅರಸೀಕೆರೆಯಲ್ಲಿ ಒಂದು ಸಂಶೋಧನಾ ಕೇಂದ್ರ ಇದೆ. ಅಲ್ಲಿ ನಾಲ್ಕೈದು ವರ್ಷದಿಂದ ಇದುವರೆಗೂ ಒಬ್ಬ ಅಧಿಕಾರಿ ಇದ್ದರು. ಅವರು ಎಂ.ಎಸ್.ಸಿ. ಪಾಸ್ ಮಾಡಿದವರು. ಎಂ.ಎಸ್.ಸಿ. ಪಾಸ್ ಮಾಡಿದ ಒಬ್ಬ ಅಧಿಕಾರಿಗಳು ವ್ಯವಸಾಯದ ಇಲಾಖೆಯ ಸಂಶೋಧನಾ ಕೇಂದ್ರದಲ್ಲಿದ್ದರೆ ಎಷ್ಟುಮಟ್ಟಿಗೆ ಸಂಶೋಧನೆ ನಡೆಯುತ್ತದೆ. ಆದರಿಂದ ವ್ಯವಸಾಯದಲ್ಲಿ ನಿರತರಾದ ಜನಕ್ಕೆ ಎಷ್ಟುಮಟ್ಟಿನ ಅನುಕೂಲವಾದೀತು ಎಂಬುದನ್ನು ತಾವೇ ಯೋಚನೆ ಮಾಡಬೇಕು. ಈಗೇನೋ ಕೆಲವು ದಿವಸಗಳ ಹಿಂದೆ ಬದಲಾಯಿಸಿದ್ದೀರಿ.

ಡಾ॥ ಆರ್. ನಾಗನಗೌಡ (ವ್ಯವಸಾಯ ಇಲಾಖೆಯ ಮಂತ್ರಿಗಳು).—ಬದಲಾಯಿಸಿ ಒಂದು ವರ್ಷ ಆಯಿತು.

ಶ್ರೀ ಬಿ. ಚಿಕ್ಕಣ್ಣ.—ಈ ಸಂಶೋಧನಾ ಕೇಂದ್ರಗಳಲ್ಲಿ ಯಾವ ಸಂಶೋಧನೆಯನ್ನು ನಡೆಸುತ್ತಾರೋ ಗೊತ್ತಿಲ್ಲ. ರೈತರು ಮೊದಲು ಎಷ್ಟು ಫಸಲು ತೆಗೆಯುತ್ತಾ ಇದ್ದರೋ ಅಷ್ಟೇ ಇವೊತ್ತು ಕೂಡ ಬೆಳೆಯುತ್ತಾ ಇದ್ದಾರೆ. ಈ ಕೇಂದ್ರಗಳಿಗೆ ಕೊಟ್ಟಿರತಕ್ಕ ಫಲವತ್ತಾದ ಭೂಮಿಯನ್ನು ಅವರಿಂದ ತೆಗೆದುಕೊಂಡು ಜಮೀನಿಲ್ಲದವರಿಗೆ ಕೊಟ್ಟರೆ ಅವರೇ ಎಷ್ಟೋ ಚೆನ್ನಾಗಿ ಬೆಳೆ ಮಾಡಿಕೊಳ್ಳುತ್ತಾರೆ. ರೈತ ಎಲ್ಲಿ ಚೆನ್ನಾಗಿ ಬೆಳೆದಿದ್ದನೋ ಅಲ್ಲಿಗೆ ಕರೆದುಕೊಂಡುಹೋಗಿ ಮಂತ್ರಿಗಳ ಕಣ್ಣಿಗೆ ಮಣ್ಣು ಎರಚಿ ಇದು ನಮ್ಮ ಸಂಶೋಧನೆಯಿಂದ ಆದುದು ಎಂದು ಘಂಟಾಘೋಷವಾಗಿ ಹೇಳಿಕೊಳ್ಳುತ್ತಾರೆ. ಇಂಥ ಅನ್ಯಾಯವನ್ನು ತಪ್ಪಿಸುವುದಕ್ಕೆ ಸರ್ಕಾರದವರು ಖಂಡಿತವಾಗಿಯೂ ತೀವ್ರವಾಗಿ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ ಎಂದು ಭಾವಿಸುತ್ತೇನೆ.

ಶ್ರೀ ಚಂದ್ರಶೇಖರಯ್ಯನವರು ವ್ಯವಸಾಯದ ಇಲಾಖೆಯಲ್ಲಿ ವ್ಯವಸಾಯಕ್ಕೆ ಬೇಕಾದ ಸಲಕರಣೆಗಳು ರೈತರಿಗೆ ಸಿಕ್ಕುವುದು ತುಂಬ ಕಷ್ಟವಾಗಿದೆ ಎಂದು ಹೇಳಿದರು. ಇದೇ ಸಂಬಂಧದಲ್ಲಿ ಒಂದು ಖೋತಾ ನಿರ್ಣಯವನ್ನು ನಾನು ಹಿಂದೆ ಕಳುಹಿಸಿದ್ದೆ. ದೇವರ ದಯೆಯಿಂದ ಮತ್ತು ರೈತರ ಪುಣ್ಯದಿಂದ ಎಂದು ಕಾಣುತ್ತದೆ. ಮಂತ್ರಿಗಳಿಗೆ ತಿಳಿಸಿ ಒತ್ತಾಯಮಾಡಿದಮೇಲೆ ಮೊನ್ನೆತಾನೆ ಡೈರೆಕ್ಟರವರು ಅದನ್ನು ಒಂದು ಸ್ಥಿತಿಗೆ ತಂದಿದ್ದಾರೆ. ಆದರೂ ಕೂಡ ಇನ್ನೂ ಬಹಳ ತೊಂದರೆ ಇದೆ. ಒಂದು ಗುಳ ತೆಗೆದುಕೊಳ್ಳಬೇಕೆಂದರೆ ರೆವಿನ್ಯೂ ಇನ್ಸ್‌ಪೆಕ್ಟರ ಪರ್ಮಿಷನ್ ತೆಗೆದುಕೊಳ್ಳಬೇಕು. ಒಬ್ಬ ರೈತ ಒಂದು ಹಳ್ಳಿಯಿಂದ ಆ ಇನ್ಸ್‌ಪೆಕ್ಟರು ಇರುವ ಜಾಗಕ್ಕೆ ಹೋಗಿ ಅವನಿಗೆ ಲಂಚ ಕೊಟ್ಟು ನಾಲ್ಕು ಆಣೆ ಗುಳಕ್ಕೆ ನಾಲ್ಕು-ಐದು ರೂಪಾಯಿ ಖರ್ಚುಮಾಡಿ ಅದನ್ನು ತೆಗೆದುಕೊಂಡು ಹೋಗಬೇಕಾದರೆ ಎಷ್ಟು ಕಷ್ಟವಾಗುತ್ತದೆ ಎಂಬುದನ್ನು ನಾವು ಯೋಚನೆಮಾಡಬಹುದು. ಎಂಟು ದಿವಸದಿಂದ ಬಲವಂತಮಾಡಿದಮೇಲೆ ಮೊನ್ನೆತಾನೆ ಡೈರೆಕ್ಟರವರು ಆ ಆರ್ಡರನ್ನು ವಾಪಸು ತೆಗೆದುಕೊಂಡಿದ್ದಾರೆ. ಅದಕ್ಕಾಗಿ ಸರ್ಕಾರದವರಿಗೂ ಮತ್ತು ಡೈರೆಕ್ಟರವರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈರೀತಿ ರೈತರಿಗೆ ಆಗತಕ್ಕ ತೊಂದರೆಗಳನ್ನು ಆದಷ್ಟು ನಿಗಾ ಕೊಟ್ಟು ಬಹಳ ತೀವ್ರವಾಗಿ ಪರಿಹರಿಸಬೇಕೆಂದು ಹೇಳುತ್ತಾ ಇದ್ದೇನೆ. ಈ ಸಭೆಯಲ್ಲಿರುವ ಮಾನ್ಯಮಂತ್ರಿಗಳಾಗಿರತಕ್ಕ ಶ್ರೀ ನಾಗನಗೌಡರು ರೈತರ ಮನೆತನದಲ್ಲಿ ಹುಟ್ಟಿದವರು, ಬಹಳ ತಜ್ಞರಾದಂಥವರು, ಅಂಥವರ ಕೈಯಲ್ಲಿ ಅಧಿಕಾರವಿರುವಾಗ ಇದಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಟ್ಟು ದೇಶದ ಮೇಲೆ ಪರಿಣಾಮಕಾರಿಯಾಗುವಂಥ ಏರ್ಪಾಡನ್ನು ಮಾಡುತ್ತಾರೆ ಎಂದು ಭಾವಿಸುತ್ತೇನೆ.

ಇದಕ್ಕೆ ಸಂಬಂಧಪಟ್ಟಹಾಗೆ, ರೈತ ತಾನು ಬೆಳೆದ ಆಹಾರ ಸಾಮಗ್ರಿಗಳನ್ನು ಮಾರ್ಕೆಟ್ಟಿಗೆ ತೆಗೆದುಕೊಂಡು ಹೋಗಿ ಮಾರಿ ಹೆಚ್ಚಿನ ಬೆಲೆ ಸಂಪಾದನೆಮಾಡಲು ಅನುಕೂಲವಾಗುವಂತೆ ಕೆಲವುಕಡೆ ಮಾರ್ಕೆಟಿಂಗ್ ಆಕ್ಟನ್ನು ಜಾರಿಗೆ ತಂದು ಸಹಾಯಮಾಡಿಕೊಟ್ಟಿದ್ದೀರಿ. ಅದೇ ರೀತಿ ದೇಶಾದ್ಯಂತ ಮಾರ್ಕೆಟಿಂಗ್ ಆಕ್ಟನ್ನು ಜಾರಿಗೆ

(ಶ್ರೀ ಬಿ. ಚಿಕ್ಕಣ್ಣ).

ತಂದು ಆ ಸೌಕರ್ಯವನ್ನು ಏರ್ಪಡಿಸಲು ಆದಷ್ಟು ಜಾಗ್ರತೆ ಸರ್ಕಾರದವರು ಕಾರ್ಯಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ. ಕೆಲವುಕಡೆ ಈ ಮಾರ್ಕೆಟಿಂಗ್ ಆಕ್ಟನ್ನು ಜಾರಿಗೆ ತಂದು ಇನ್ನು ಕೆಲವುಕಡೆ ಜಾರಿಗೆ ತರದೇ ಇದ್ದರೆ ತಮ್ಮ ಉದ್ದೇಶ ಏನಿದೆಯೋ ಅದು ಫಲಕಾರಿಯಾಗುವುದಿಲ್ಲ. ಗೋಡೌನ್‌ಗಳನ್ನು ಕಟ್ಟಿಸಿಕೊಟ್ಟು ಆಯಾ ಜಿಲ್ಲೆಯಿಂದ ಬರುವ ಸಮಸ್ತ ಆಹಾರ ಪದಾರ್ಥಗಳನ್ನು ಅಲ್ಲಿ ಸ್ಟಾಕ್ ಮಾಡುವಹಾಗೆ ಏರ್ಪಾಡು ಮಾಡಿಕೊಡಬೇಕು. ಹಾಗಲ್ಲದೇ ಈಗಿರುವ ಪರಿಸ್ಥಿತಿಯಲ್ಲಿ ರೈತನಿಗೆ ಯಾವ ಅನುಕೂಲವೂ ಆಗುವುದಿಲ್ಲ. ರೆಗ್ಯುಲೇಟೆಡ್ ಮಾರ್ಕೆಟ್ಟುಗಳನ್ನು ಮಾಡುವುದರಿಂದ ಯಾರಿಗೂ ಲುಕ್ಸಾನು ಇಲ್ಲ. ವರ್ಷಕ್ಕೆ 10-20 ಸಾವಿರ ರೂಪಾಯಿ ವರಮಾನ ಇದೆ. ಇಷ್ಟು ವರಮಾನ ಇದ್ದೂಕೂಡ ಸರ್ಕಾರದವರು ಏಕೆ ಹಿಂಜರಿಯುತ್ತಾರೋ ಗೊತ್ತಿಲ್ಲ. ಆದ್ದರಿಂದ ಆದಷ್ಟು ಜಾಗ್ರತೆ ದೇಶಾದ್ಯಂತ ಮಾರ್ಕೆಟಿಂಗ್ ಆಕ್ಟನ್ನು ಜಾರಿಗೆ ತರಬೇಕೆಂದು ಸರ್ಕಾರದವರಿಗೆ ಸಲಹೆಮಾಡುತ್ತೇನೆ.

*ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).—ಸ್ವಾಮಿ, ವ್ಯವಸಾಯದ ಇಲಾಖೆಯ ಮೇಲೆ ಮಾತನಾಡುತ್ತಾ ವ್ಯವಸಾಯಗಾರರು ಬೆಳೆವಂಥಾ ಪದಾರ್ಥಗಳನ್ನು ಮಾರ್ಕೆಟ್‌ನಲ್ಲಿ ಮಾರುವುದಕ್ಕೆ ಸೌಲಭ್ಯಗಳನ್ನು ಏರ್ಪಾಡುಮಾಡಿ ಕೊಡಬೇಕೆಂದು ಹೇಳುತ್ತೇನೆ. ಏಕೆಂದರೆ ಗ್ರಾಮಾಂತರಗಳಲ್ಲಿ ಬೆಳೆ ಬೆಳೆಯುವುದು ಸುಲಭ, ಆದರೆ ಬೆಳೆದಂಥ ಪದಾರ್ಥಕ್ಕೆ ಮಾರ್ಕೆಟ್‌ನಲ್ಲಿ ಸರಿಯಾದ ಬೆಲೆ ಸಿಕ್ಕುವುದಿಲ್ಲ ಎನ್ನುವುದು ಎಲ್ಲರಿಗೂ ತಿಳಿದಂಥ ವಿಷಯ. ಎಲ್ಲಾ ಕಡೆಯಲ್ಲೂ ಮಾರ್ಗ ಸೌಕರ್ಯ ಮತ್ತು ವಾಹನ ಸೌಕರ್ಯ ಇದೆ. ಆದ್ದರಿಂದ ಪ್ರತಿಯೊಂದು ತಾಲ್ಲೂಕಿನಲ್ಲೂ ಈ ಮಾರ್ಕೆಟ್ಟಿನ ವ್ಯವಸ್ಥೆಯನ್ನು ಮಾಡುವುದು ಅತ್ಯವಶ್ಯಕ ಎಂದು ಹೇಳುತ್ತೇನೆ.

ಅಷ್ಟೇ ಅಲ್ಲದೆಪ್ರತಿ ತಾಲ್ಲೂಕು ಹೆಡ್‌ಕ್ವಾರ್ಟರ್‌ನಲ್ಲೂ ಗೋಡೌನ ವ್ಯವಸ್ಥೆಯನ್ನು ಮಾಡಿ, ಗ್ರಾಮಾಂತರಗಳಿಂದ ಬಂದ ಆಹಾರ ಪದಾರ್ಥಗಳನ್ನು ಅಲ್ಲಿ ಸ್ಟಾಕ್ ಮಾಡುವುದಕ್ಕೆ ಅವಕಾಶಮಾಡಿ ಕೊಡಬೇಕು. ಇಲ್ಲದೇ ಇದ್ದರೆ ಕೆಲವು ದೊಡ್ಡ ದೊಡ್ಡ ಸಂತೆಗಳು ಇವೆ. ಆ ಸಂತೆಗಳಲ್ಲಿ ಬಹಳ ಅನೀತಿಯುತವಾಗಿ ವ್ಯಾಪಾರ ನಡೆಯುತ್ತದೆ. ಆ ರೀತಿ ಆಗದಂತೆ ರೆಗ್ಯುಲೇಟೆಡ್ ಮಾರ್ಕೆಟ್ ಏರ್ಪಡಿಸುವುದು ಉತ್ತಮ. ಹಳ್ಳಿಗಳಿಂದ ದೊಡ್ಡ ದೊಡ್ಡ ಪಟ್ಟಣಗಳಿಗೆ ಬಂದು ತಮ್ಮ ಆಹಾರ ಪದಾರ್ಥಗಳನ್ನು ಮಾರಾಟ ಮಾಡಬೇಕೆಂದರೆ ವ್ಯವಸಾಯಗಾರರಿಗೆ ಬಹಳ ಕಷ್ಟ ಮತ್ತು ಹತ್ತಾರುಕಡೆ ಖರ್ಚು ಹೆಚ್ಚಾಗುತ್ತದೆ. ರೈತ ಬೆಳೆ ಮಾಡುವಾಗಲೇ ಎಷ್ಟೋ ಕಷ್ಟ ಇದೆ, ಎಷ್ಟೋ ನಷ್ಟವಾಗುತ್ತದೆ. ಕಳ್ಳಕಾಕರ ಕಾಟ ಅಲ್ಲದೆ ಅನೇಕ ಪ್ರಾಣಿಗಳ ಕಾಟವೂ ಇದೆ. ಕೋತಿಗಳು, ಇಲಿಗಳು ಮತ್ತು ಆನೆಗಳು ಇವು ಮೂರನ್ನು ಸರಿಯಾದ ಮಾರ್ಗದಲ್ಲಿ ನೋಡಿಕೊಳ್ಳದಿದ್ದರೆ ದೇಶದಲ್ಲಿ ಎಷ್ಟು ಉತ್ಪನ್ನ ಆಗುತ್ತದೆಯೋ ಆ ಉತ್ಪನ್ನ ಮನುಷ್ಯರಿಗೆ ಬರುವುದಕ್ಕೆ ಬದಲಾಗಿ ಪ್ರಾಣಿಗಳಿಗೆ ಹೋಗುತ್ತದೆ. ಆದ್ದರಿಂದ ಬೆಳೆದ ಆಹಾರದ ಮೇಲೆ ಪ್ರಾಣಿಗಳಿಗೂ ಮನುಷ್ಯರಿಗೂ ಕಾಂಪಿಟಿಷನ್ ಬೀಳುತ್ತದೆ. ಗ್ರಾಮಾಂತರದಲ್ಲಿ ಬೆಳೆದ ದವಸವನ್ನು ಆತ ತಂದು ಎಲ್ಲಿ ಇಡುತ್ತಾನೆಯೋ ಅಂಥ ಸ್ಥಳಗಳಲ್ಲಿ ಇಲಿಗಳ ಕಾಟ ಇಲ್ಲದಂತೆ ನೋಡಿಕೊಳ್ಳುವುದಕ್ಕೆ ಪ್ರಚಾರಮಾಡಿ ಔಷಧಗಳನ್ನು ಹಂಚುವ ಏರ್ಪಾಡನ್ನು ದೇಶಾದ್ಯಂತ ಮಾಡಬೇಕು. ಹಾಗೆ ಮಾಡದಿದ್ದರೆ ಬಹುಭಾಗದ ಉತ್ಪನ್ನ ಕಡಿಮೆಯಾಗುತ್ತದೆ ಎಂದು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಪಟ್ಟಣಗಳಲ್ಲಿ ಕೋತಿಗಳು ಅಷ್ಟಾಗಿ ಬರುವುದಿಲ್ಲ. ಇಲ್ಲಿಗೆ ಬಂದರೂ ಹಿಡಿದು ಓಡಿಸುತ್ತಾರೆ. ಅವು ಹಳ್ಳಿಗಳಿಗೆ ಬಂದು ಸೇರುತ್ತವೆ. ಅದರಿಂದಾಗತಕ್ಕ ಅನಾಹುತ ಎಷ್ಟೆಂಬುದನ್ನು ಈಗ ಹೆಚ್ಚು ವಿಷದವಾಗಿ ಹೇಳುವುದು ಅನಾವಶ್ಯಕ. ಆನೆಗಳ ಕಾಟ ತತ್ರಾಪಿ ಚಾಮರಾಜನಗರದಲ್ಲಿ ಬಹಳ ಜಾಸ್ತಿ.

9 A.M.

ಈಗಾಗಲೇ ತಮಗೆ ರಿಪೋರ್ಟ ಬಂದಿರಬಹುದು. ಸುಮಾರು 10-12 ದಿವಸದಲ್ಲಿ 8 ಎಕರೆ ಜಾಗದಲ್ಲಿದ್ದ ಸಾವಿರಾರು ತೆಂಗಿನ ಗಿಡಗಳನ್ನು ಅದರಲ್ಲೂ, ಒಳ್ಳೆಯ ಫಲಕ್ಕೆ ಬಂದಿರುವ ಗಿಡಗಳನ್ನು, ಆನೆಗಳು ಕಿತ್ತು ಎಸೆದುವು. ಇಂಥ ಸ್ಥಳಗಳಲ್ಲಿ ಖೆಡ್ಡ ಆಪರೇಷನ್‌ಗಳನ್ನು ಏರ್ಪಾಡುಮಾಡಿ ಆನೆಗಳನ್ನು ಹಿಡಿದು ರೈತರಿಗೆ ಸಹಾಯ ಮಾಡಬೇಕೆಂದು ಹೇಳುತ್ತೇನೆ.

ಆಮೇಲೆ ರೈತನಿಗೆ ಇನ್ನೊಂದು ತೊಂದರೆಯಿದೆ. well subsidy ಕೊಡಬೇಕೆಂದು ತಮ್ಮಲ್ಲಿ ವಿಧಾಯಕವಾಗಿದೆ, ಆದರೆ ತಾಲ್ಲೂಕಿಗೆ 1,000 ರೂಪಾಯಿಗಳನ್ನು ಮಾತ್ರ ಕೊಡುತ್ತೀರಿ. ಈ ಹಣದಲ್ಲಿ ಒಂದು ಬಾವಿಗೆ 250 ರೂಪಾಯಿಗಳನ್ನು ಮಾತ್ರ ಕೊಡಬೇಕೆಂದಿದೆ. Favouritism ಇರತಕ್ಕ ಯಾರೋ ನಾಲ್ಕು ಮಂದಿಗೆ ಈ ಹಣ ಸಿಕ್ಕುತ್ತದೆ. ಅಷ್ಟೆ. ಆದರೆ ವಾಸ್ತವವಾಗಿ ಯಾವ ಸ್ಥಳದಲ್ಲಿ ತಾನೆ 250 ರೂಪಾಯಿಗೆ ಒಂದು ಬಾವಿಯನ್ನು ತೆಗೆಯಬಹುದು? ಏನೋ ಕೆಲವು ಗುಂಡಿಗಳನ್ನು ತೆಗೆಯಿಸಬಹುದು ಅಷ್ಟೆ. ಹಳೆಯ ಬಾವಿಗಳನ್ನೇ ಹೂಳು ತೆಗೆಯಿಸಿ ಹಣ ಪಡೆಯುತ್ತಾರೆ ಅಷ್ಟೆ. ಆದ್ದರಿಂದ ನಿಮ್ಮ ಉದ್ದೇಶ ನಿಜವಾಗಿ ಸಾರ್ಥಕವಾಗಬೇಕಾದರೆ ಬಾವಿಗಳಿಗೆ ಆಗಬೇಕಾದ ಹಣದಲ್ಲಿ ಅರ್ಧದಷ್ಟನ್ನಾದರೂ ಕೊಟ್ಟು ಸಹಾಯ ಮಾಡಬೇಕೆಂದು ಹೇಳುತ್ತೇನೆ.

ಆಮೇಲೆ ನೀವು ಏರ್ಪಡಿಸಿರುವ experimental stationಗಳ ವಿಷಯವಾಗಿ ಒಂದು ಮಾತು ಹೇಳುತ್ತೇನೆ. ಇವು ಮುಖ್ಯವಾಗಿ ಸ್ವಯಂ ಪರಿಪೂರ್ಣತೆಯನ್ನು ಹೊಂದಬೇಕು. ನೀವು ಸಾವಿರಗಟ್ಟಲೆ ಖರ್ಚುಮಾಡಿ ಅದಕ್ಕೆ ತಕ್ಕಷ್ಟು ಪ್ರತಿಫಲ ಹೊಂದದೆ ಇದ್ದರೆ ಏನು ಪ್ರಯೋಜನ? ಹರಪನಹಳ್ಳಿ ಫಾರಂ ತೆಗೆದುಕೊಂಡರೆ, 1950 ನೆಯ ಇಸವಿಯಲ್ಲಿ ತಾವು 8,000 ಚಿಲ್ಲರೆ ಖರ್ಚು ಮಾಡಿರುವುದಕ್ಕೆ ಪ್ರತಿಯಾಗಿ ನಿಮಗೆ ಬಹಳ ಕಡಮೆ, ಕೇವಲ 2,000 ರೂಪಾಯಿಗಳು ಬಂದಿವೆ. ಹೀಗಾಗಿರುವುದಕ್ಕೆ ಏನು ಲೋಪವಿದೆಯೆಂಬುದನ್ನು ಕಂಡುಹಿಡಿದು ತಕ್ಕ ಕಾರ್ಯಕ್ರಮ ಕೈಕೊಂಡಿದ್ದೀರಾ? ಈ ಸಾರಿ ಸ್ವಲ್ಪ ಹೆಚ್ಚಿಗೆ ಬಂದಿದೆ. ಹಿಂದೆ ಕಡಮೆ ಬಂದಿದ್ದಕ್ಕೂ ಈ ಸಾರಿ ಹೆಚ್ಚಿಗೆಯಾದ್ದಕ್ಕೂ ಕಾರಣವನ್ನು ಕಂಡುಹಿಡಿಯಬೇಕು. ಇನ್ನೂ ಹೆಚ್ಚಿಗೆ ಮಾಡುವುದಕ್ಕೆ ಸಾಧ್ಯವಿರಬಹುದು. ಆದ್ದರಿಂದ ಇಂಥ experimental stationಗಳ ಬಗ್ಗೆ ಒಂದು ಕಮಿಟಿಮಾಡಿ ಅವರ ಸಲಹೆಯ ಮೇಲೆ ನಡೆಯುವಂತೆ ಮಾಡುವುದು ಒಳ್ಳೆಯದೆಂದು ನಾನು ಸೂಚಿಸುತ್ತೇನೆ.

*ಶ್ರೀ ಜೆ. ಮಹಮ್ಮದ್ ಇಮಾಂ (ಜಗಳೂರು).—ಸ್ವಾಮಿ, ಅಗ್ರಿಕಲ್ಚರಲ್ ಇಲಾಖೆಯ ವಿಷಯದಲ್ಲಿ ಇದುವರೆಗೆ ಮೆಂಬರುಗಳಿಂದ ಬಂದಿರುವ ಟೀಕೆಗಳನ್ನು ನಾನೂ ಕೂಡ ಅನುಮೋದಿಸುತ್ತೇನೆ. ಈ ಇಲಾಖೆಗೆ ಇತ್ತೀಚೆಗೆ ಬಹಳ ಹಣ ಖರ್ಚಾಗುತ್ತಿದೆ.

ನಾನು ಆಫೀಸಿನಲ್ಲಿರುವಾಗ್ಗೆ ವರ್ಷಕ್ಕೆ 6 ಲಕ್ಷ-7 ಲಕ್ಷ ರೂಪಾಯಿಗಳ ವರೆಗೆ ಖರ್ಚು ಮಾಡುತ್ತಿದ್ದೆವು. ಆದರೆ, ಈಗಿನ ಬಡ್ಜೆಟ್ ಪ್ರಕಾರ 70 ಲಕ್ಷ ರೂಪಾಯಿಗಳ ವರೆಗೂ ಪ್ರತಿವರ್ಷವೂ ಖರ್ಚಾಗುತ್ತಿದೆ. ಆದರೆ ಎಷ್ಟು ಹಣ ಖರ್ಚು ಮಾಡುತ್ತಿದ್ದರೂ ಹಣಕ್ಕನುಗುಣವಾಗಿ ರೈತನಿಗೆ ಪ್ರತಿಫಲ ದೊರೆಯುತ್ತಿಲ್ಲವೆಂಬ ವಾದವನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಸರ್ಕಾರದವರು ಸದುದ್ದೇಶದಿಂದ ಹೆಚ್ಚಿಗೆ ಹಣ ಖರ್ಚು ಮಾಡಬಹುದು. ಆದರೇನೋ ಆ ಇಲಾಖೆಯಿಂದ ರೈತರಿಗೆ ಅಷ್ಟು ಪ್ರಯೋಜನವಾಗುತ್ತಿಲ್ಲ.

ಎರಡನೆಯದಾಗಿ ಈ ಇಲಾಖೆಯಲ್ಲಿ wastage ಬಹಳವಾಗಿದೆ. ಹೋದ ವರುಷ ಇದೇ ವಿಷಯವನ್ನು ಪ್ರಸ್ತಾಪಿಸಿದೆ. ಲಕ್ಷಾಂತರ ರೂಪಾಯಿಗಳನ್ನು ಕೊಂಡು ತಂದು ಬುಲ್‌ಡೋಸರುಗಳನ್ನು ಟ್ರಾಕ್ಟರುಗಳನ್ನು ತಂದುಕೊಟ್ಟರು ಮರಿಯಪ್ಪನವರು. ಆದರೆ ಈ ಟ್ರಾಕ್ಟರುಗಳ ಗತಿ ಏನಾಯಿತು ? ಅವುಗಳ ಹೆಸರು ಕೂಡ ಈಗಿಲ್ಲ. ವರ್ಷ ವರ್ಷವೂ ಟ್ರಾಕ್ಟರುಗಳ ಹೆಸರು ಬರುತ್ತಿದ್ದು ಆ ಮಂತ್ರಿಗಳ ಹೆಸರನ್ನು ಜ್ಞಾಪಕಕ್ಕೆ ತರುತ್ತಿದ್ದಂಥಾದ್ದು ಈಗ ಆ ಹೆಸರೂ ಇಲ್ಲದಹಾಗಾಯಿತು. ಹೀಗೆ 50-60 ಲಕ್ಷ ರೂಪಾಯಿಗಳ ನಷ್ಟವಾಯಿತು. Lame ducksನಂತೆ ಈಗಿವೆ. ಹೋದ ವರ್ಷ ಕೇಳಿದಾಗ 150 ಟ್ರಾಕ್ಟರುಗಳಲ್ಲಿ 120 ಟ್ರಾಕ್ಟರುಗಳು sick ಆಗಿವೆಯೆಂದು ಹೇಳಿದರು ಈಗ ಆಗ sick ಆಗಿರುವಂತವು ಸತ್ತುಹೋದುವೇ ಅಥವಾ ಇನ್ನೂ ಉಳಿದಿವೆಯೋ ಎಂಬುದನ್ನು ಈ ಸಭೆಯಲ್ಲಿ ತಿಳಿಸಬೇಕೆಂದು ಕೇಳುತ್ತೇನೆ.

ಆದ್ದರಿಂದ ನಾನು ಹೇಳುವುದೇನೆಂದರೆ, ಇಂಥ ideological schemeಗಳನ್ನು ತೆಗೆದುಕೊಳ್ಳುವುದರಿಂದ ಸರ್ಕಾರದವರಿಗೆ ಎಷ್ಟು ನಷ್ಟ, ರೈತರಿಗೆ ಎಷ್ಟು ನಷ್ಟ !

ಆಮೇಲೆ ಬಡ್ಜೆಟ್ಟಿನಲ್ಲಿ 11 ಲಕ್ಷ ರೂಪಾಯಿಗಳನ್ನು Value of shortages and losses on account of distribution of seeds and manures to raiyats in written off ಎಂದು ಹೇಳಿದ್ದಾರೆ. So, it is not subsidy. We are asked to vote Rs. 14,60,000. I have been representing to Government that this Department has been incurring a good deal of loss and we have also pointed out that the system of distribution of manure is not free from doubt ; and there has been good deal of flaws and shortages. I am afraid the Government did not take proper care nor has it taken any step to prevent such leakages and losses. Who is responsible for this loss ; have they fixed any responsibility on any ; have they made any attempt to recover this amount ? In my opinion, I must hold the Minister in-charge of the portfolio to be responsible as well as the officers concerned in this Department. I think this amount requires to be recovered from the Minister concerned. 14 lakhs of rupees is not an ordinary amount. In these days of financial stringency, certainly, Government cannot afford to incur such a heavy loss. After all on whom does the loss fall ? It is on the common man. The Government management, I must say, has been very lax, irresponsible and wasteful. This policy of Government really deserves to be condemned. So, I would like to know how this loss was incurred ; is it a continuing loss or is it a loss for one year ? If it is continuing loss, it covers a number of years. Why did not the Government arrange for auditing the accounts of the Department, or for the timely scrutiny of the accounts ; and why did they not take effective steps to check this loss ? They have allowed the loss to accumulate and so much of money has been made to go unaccounted for. This is really a very sad state of affairs. So, I demand an explanation from the Government as to how they are going to reconcile this loss and why did they allow such a leakage to occur.

Another thing which I must submit with great regret is, though we have been urging the Government to reduce the expenditure, to minimise the expenditure, Government is still persisting in inflating the expenditure and burdening the expenditure on the people. Last year, a provision of Rs. 58 lakhs was made and under the revised estimate it was Rs. 56 lakhs and in this year's budget Rs. 70 lakhs has been provided. Thereby there has been an increase in the expenditure to the extent of Rs. 12 lakhs. This is perhaps due to the loss that the Government has incurred and for which they want money. Instead of asking us to vote so much amount, they should have taken every care to reduce the expenditure. The Government is still persisting to inflate the expenditure and commit the Government to more and more expenditure. On these grounds, Sir, I oppose the demand.

*ಶ್ರೀ ಜಿ. ಎಸ್. ಬೊಮ್ಮೇಗೌಡ (ಮಂಡ್ಯ).—ಸ್ವಾಮಿ, ನಾನು ಈ ಡಿಮ್ಯಾಂಡನ್ನು ಸ್ವಾಗತಿಸುತ್ತಾ ಒಂದೆರಡು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. ಹೀಗೆ ಸ್ವಾಗತಿಸುವಾಗ, ಮಂತ್ರಿಗಳಲ್ಲಿ ಒಂದು ರೀತಿಯ ಮನೋಭಾವವಿರುತ್ತದೆ, ಅದರ ವಿಷಯ ಹೇಳಬೇಕಾಗಿದೆ. ನಮ್ಮ ದುರದೃಷ್ಟವಶಾತ್ ನಮ್ಮ ವ್ಯವಸಾಯ ಸಚಿವರು, ನಾವು ಯಾವುದಾದರೂ ಲೋಪದೋಷಗಳನ್ನು ಸರ್ಕಾರದ

(ಶ್ರೀ ಜಿ. ಎಸ್. ಬೊಪ್ಪೇಗೌಡ)

ಮುಂದೆ ತಿಳಿಸಿ ಅದನ್ನು ಸರಿಪಡಿಸಬೇಕೆಂದು ಹೇಳಿದರೆ, ಜಾಗ್ರತೆ ಮಾಡುತ್ತೇನೆಂಬು ಹೇಳುತ್ತಾರೆ; ಆದರೆ ತಿಂಗಳುಗಟ್ಟಲೆ, ವರ್ಷಗಟ್ಟಲೆ ಮಾಡುವುದಿಲ್ಲ. ಅವರಿಗೆ ವ ರವು ಜಾಸ್ತಿ ಎಂದು ಕಾಣುತ್ತದೆ, ಅದರಿಂದ ಅವರು ಹೀಗೆ ಮಾಡುತ್ತಾರೆ. ಹೋದಸಾರಿ ಹೇಳಿದ ಕೆಲವು ವಿಷಯಗಳನ್ನ 'ನಾನು ಜ್ಞಾಪಕ ಇಟ್ಟುಕೊಂಡಿದ್ದೇನೆ, ಮಾಡುತ್ತೇನೆ' ಎಂದು ಹೇಳಿದರು. ಹೀಗೆ ಪದೇಪದೇ ಹೇಳುವುದರಲ್ಲಾಗಿದೆಯೇ ಹೊರತು ಕಾರ್ಯತಃ ಮಾಡುವುದಿಲ್ಲ. ನಮಗೇನು ತೊಂದರೆಗಳಿವೆ ಎಂಬುದನ್ನು ಸರ್ಕಾರದ ಮುಂದಿಡುತ್ತೇವೊ ಅವುಗಳನ್ನು ನಿವಾರಿಸಲು ತಕ್ಕ ಕಾರ್ಯ ಸರ್ಕಾರ ನಡೆಸುತ್ತಿಲ್ಲವಲ್ಲಾ ಎಂಬ ದೃಷ್ಟಿಯಿಂದ ಈಗ ನಾನು ಕೆಲವು ವಿಷಯಗಳನ್ನ ಸಭೆಯ ಮುಂದಿಡಬೇಕೆಂದಿಚ್ಛಿಸುತ್ತೇನೆ.

ಶ್ರೀಮಾನ್ ಇಮಾಂರವರು 'ನಾವು ಮಂತ್ರಿಗಳಾಗಿದ್ದ ಕಾಲದಲ್ಲಿ ಈ ಬಾಬಿಗೆ ವರ್ಷಕ್ಕೆ ಆರೇಳು ಲಕ್ಷ ರೂಪಾಯಿ ಖರ್ಚು ಮಾಡುತ್ತಿದ್ದೆವು, ಈಗ ಎಪ್ಪತ್ತೈದು ಲಕ್ಷ ಖರ್ಚು ಮಾಡುತ್ತಿದ್ದಾರೆ' ಎಂದು ಹೇಳಿದರು. ಆದರೆ ಅವರಿಗೂ ಗೊತ್ತಿರುವಂತೆ, ಆಗ ಜನರಿಗೆ ವ್ಯವಸಾಯ ಇಲಾಖೆ ಇದೆಯೋ ಇಲ್ಲವೋ ಎಂಬುದೇ ಗೊತ್ತಿರಲಿಲ್ಲ. ಈಗಲಾದರೂ 75 ಲಕ್ಷ ಖರ್ಚು ಮಾಡಿದರೂ ಎಷ್ಟೋ ಮಟ್ಟಿಗೆ ಪ್ರಗತಿ ಸಾಧಿಸಿದ್ದೇವೆ ಎಂದು ಹೇಳುವಾಗ ಇದರಲ್ಲಿರತಕ್ಕ ಕೆಲವು ಲೋಪದೋಷಗಳನ್ನು ಸರ್ಕಾರ ಸರಿಪಡಿಸಲಿ ಎಂಬ ಉದ್ದೇಶದಿಂದ ಕೆಲವು ಅಂಶಗಳನ್ನು ಹೇಳುವುದು ಸ್ವಾಭಾವಿಕ. ಎಷ್ಟುಮಟ್ಟಿಗೆ ಪ್ರಗತಿಯಾದರೂ ಅಷ್ಟುಮಟ್ಟಿಗೆ ಮನವಿಗಳೂ ಹೆಚ್ಚುವುದು ಸ್ವಾಭಾವಿಕ. ಆದರೂ ಇರತಕ್ಕ ಲೋಪದೋಷಗಳನ್ನು ಸರಿಪಡಿಸಬೇಕೆಂದು ಹೇಳುತ್ತೇನೆ.

ಬುಲ್‌ಡೋಜರುಗಳು ಮತ್ತು ಟ್ರ್ಯಾಕ್ಟರುಗಳ ವಿಚಾರ ಹೇಳಿದರು. ಹಿಂದೆ ಯಾವ ಯಾವ ಡಿಸ್ಟ್ರಿಕ್ಟುಗಳಿಗೆ ಎಷ್ಟೆಷ್ಟು ಕೊಟ್ಟಿದ್ದಾರೆಂದು ನಾನು ಕೇಳಿದ್ದೆ. ಇವುಗಳನ್ನು ಹಂಚತಕ್ಕ ಕಾಲದಲ್ಲಿ ಎಲ್ಲಿ ಅಗತ್ಯ ಜಾಸ್ತಿ ಇದೆಯೋ ಅಲ್ಲಿಂದ ಮನವಿ ಬಂದರೆ ಅದನ್ನು ಪರಿಶೀಲಿಸಿ ಅಲ್ಲಿಗೆ ಕಳುಹಿಸುತ್ತೇವೆ ಎಂದು ಹೇಳುತ್ತಿದ್ದರು. ವಿಶ್ವೇಶ್ವರಯ್ಯ ನಾಲಾ ಪ್ರದೇಶದಲ್ಲಿ ಅಗತ್ಯವಿದೆ ಎಂಬುದು ಅವರಿಗೂ ಗೊತ್ತು. ಆದರೆ ಅಲ್ಲಿ ಹೆಚ್ಚು ಕೆಲಸವನ್ನು ಸಾಧಿಸಿಲ್ಲವೆಂದು ಹೇಳಬೇಕಾಗಿದೆ. ಎರಡನೆಯದಾಗಿ ವ್ಯವಸಾಯಾಭಿವೃದ್ಧಿಯಾಗಬೇಕೆಂಬ ಅಭಿಲಾಷೆಯುಳ್ಳ ಶ್ರೀಮಾನ್ ಮರಿಯಪ್ಪನವರಿದ್ದ ಕಾಲದಲ್ಲಿ ಏನು ರೇಟಿತ್ತೋ ಈಗ ಅದಕ್ಕರಡರಷ್ಟು ಹೆಚ್ಚಾಗಿದೆ. ಎಕರೆಗೆ ಐದು ರೂಪಾಯಿ ಇದ್ದುದನ್ನು ಹತ್ತು ಹದಿನೈದು ರೂಪಾಯಿ ಕೊಡಬೇಕೆಂದು ಮಾಡಿದ್ದಾರೆ. ಯಾವ ರೈತ ಇಷ್ಟು ಹಣ ಕೊಟ್ಟು ವ್ಯವಸಾಯ ಮಾಡುತ್ತಾನೆ ಎಂಬುದನ್ನು ಯೋಚನೆ ಮಾಡಬೇಕು. ಭೂಮಿಯನ್ನು ಅಭಿವೃದ್ಧಿ ಮಾಡಬೇಕಾದರೆ, ಅವರಿಂದ ಬರುವ ಆದಾಯವೇನೆಂಬುದನ್ನು ನೋಡುತ್ತಾರೆ, ಅವರಿಗೆ ಬರುವ ಆದಾಯಕ್ಕಿಂತ ಹೆಚ್ಚು ಖರ್ಚು ಕೊಡಬೇಕೆಂದರೆ ಕಷ್ಟ. ವ್ಯವಸಾಯ ಸಂಪತ್ತು ಹೆಚ್ಚಾದರೆ, ದೇಶದ ಸಂಪತ್ತು ಹೆಚ್ಚಾಗುತ್ತದೆ. ಇದನ್ನು ಪರಿಶೀಲನೆ ಮಾಡಿ ಹಿಂದಿದ್ದ ಹಾಗೆ ಇದರ ದರವನ್ನು ಆರು ಅಥವಾ ಎಂಟು ರೂಪಾಯಿ ಮಾಡಬೇಕೆಂದು ಹೇಳುತ್ತೇನೆ.

ಹಿಂದೆ ವ್ಯವಸಾಯ ಇಲಾಖೆಯವರು ಒಂದು ಮನವಿಯನ್ನು ಹೊರಡಿಸಿದ್ದರು. 'ಗ್ಲಿರಿಸೀಡಿಯಾ ಡಯಾಂಚ' ಬೀಜವನ್ನು ಹಾಕಿ ಬೆಳೆಸಿ ಎಂದು ರೈತರಿಗೆ ತಿಳಿಸಿದ್ದರು. ಅವು ಒಳ್ಳೆಯ ಗೊಬ್ಬರ, ಬೆಳೆಯುವುದು ಸುಲಭ ಎಂದೆಲ್ಲಾ ತಿಳಿಸಿದ್ದರು. ಆದರೆ ಅದನ್ನು ಕೊಡಿ ಎಂದು ಸಂಬಂಧಪಟ್ಟ ಅಧಿಕಾರಿಗಳನ್ನು ಕೇಳಿದರೆ ಅವರು ನನ್ನಲ್ಲಿಲ್ಲ ಎಂದು ಹೇಳಿದರು. ಇದರಿಂದೇನು ಪ್ರಯೋಜನ? ಇಂಥ ಪ್ರಕಟಣೆ ಹೊರಡಿಸಿದರೆ, ಅದು ಎಲ್ಲಿ ಸಿಕ್ಕುತ್ತದೆ ಎಂಬುದನ್ನು ತಿಳಿಸಿ, ರೈತರಿಗೆ ಅದು ದೊರಕುವ ಏರ್ಪಾಡು ಮಾಡಬೇಕು. ವಿಶ್ವೇಶ್ವರಯ್ಯ ನಾಲಾ ಪ್ರದೇಶದಲ್ಲಿ ಕರಲು ಭೂಮಿ ಇದೆ. ಇದರಲ್ಲಿ ಒಂದು ರೀತಿಯ ಬೀಜವನ್ನು ಬಿತ್ತಿದರೆ ಒಳ್ಳೆಯದು, ಕರಲು ಕೂಡ ಕಡಮೆಯಾಗುತ್ತದೆ ಎಂದು ಹೇಳುತ್ತಾರೆ. ಹೀಗೆ ಹೇಳಿದಮೇಲೆ ಆ ಪ್ರದೇಶಕ್ಕೆ ಎಷ್ಟು ಬೇಕೋ ಅಷ್ಟನ್ನು ಒದಗಿಸಿ ಸಹಾಯ ಮಾಡಬೇಕು.

*ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ—ಅನುಸೂಚಿತ ಜಾತಿಗಳು).—ಸ್ವಾಮಿ, ಈ ವ್ಯವಸಾಯದ ಡಿಮ್ಯಾಂಡನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತೇನೆ. ಈ ಸಭೆಯ ಮುಂದೆ ಪದೇ ಪದೇ ವ್ಯವಸಾಯ ಇಲಾಖೆಯ ವಿಚಾರದಲ್ಲಿ ಮಾತನಾಡಿದಾಗ, ಈ ಇಲಾಖೆಯನ್ನು ಮುಚ್ಚಬೇಕೆಂದು ಒಂದಾನೊಂದು ಕಾಲದಲ್ಲಿ ಶ್ರೀ ಭೀಮಪ್ಪನಾಯಕರೇ ಹೇಳಿದ್ದಾರೆ. ಅದು ಜ್ಞಾಪಕವಿದೆ. . . .

ಶ್ರೀ ಟಿ. ಮರಿಯಪ್ಪ (ಮೈಸೂರು-ಉತ್ತರ).—ಸುಮ್ಮನೆ ಮಾತಿನ ಭರದಲ್ಲಿ ಹಾಗೆ ಹೇಳಿರಬಹುದು.

ಶ್ರೀ ಎಂ. ಚಿಕ್ಕಲಿಂಗಯ್ಯ.—ವ್ಯವಸಾಯ ಇಲಾಖೆ ಬರಿಯ theoretical ಆಗಿ ಹೋಗುತ್ತಿದೆಯೇ ವಿನಾ ಕಾರ್ಯಕ್ಕಿಳಿದು ಭೂಮಿಗಿಳಿದು, ಈ ರೀತಿ ಮಾಡಬೇಕೆಂದು ತಾವೇ experimental farms ನಲ್ಲಿ ಮಾಡಿ ತೋರಿಸಿ, ಹೀಗೆ ಕೆಲಸ ಮಾಡಿದರೆ ವ್ಯವಸಾಯಾಭಿವೃದ್ಧಿಯಾಗುತ್ತದೆಂದು ತೋರಿಸಲು ಕೆಲಸ ಮಾಡುವುದಿಲ್ಲ. ಈ ಕಾಲದಲ್ಲಿ ವಿಜ್ಞಾನ ಶಾಸ್ತ್ರ ಬೇಕಾದಷ್ಟು ಬೆಳೆದಿದೆ. ಶಾಸ್ತ್ರದಲ್ಲಿ ಬೇಕಾದಷ್ಟಿದೆ. ಹೀಗಿರುವಾಗ ಇಂಥಾ ಭೂಮಿಗೆ ಇಂಥಾ ಬೀಜವನ್ನು ಹಾಕಿದರೆ, ಇಂಥಾ ಕಾಲದಲ್ಲಿ ಹಾಕಿದರೆ, ಉತ್ಪತ್ತಿ ಜಾಸ್ತಿಯಾಗುತ್ತದೆ ಎಂಬುದನ್ನು ಕಾರ್ಯತಃ ತೋರಿಸುತ್ತಿಲ್ಲ. ಡೆಮಾನ್‌ಸ್ಟ್ರೇಷನ್ ಫಾರಂಗಳನ್ನು ಅನೇಕ ತಾಲ್ಲೂಕು ಹೆಡ್‌ಕ್ವಾರ್ಟರುಗಳಲ್ಲಿಟ್ಟು 18 ಸಾವಿರ ರೂಪಾಯಿ ಖರ್ಚುಮಾಡಿ ಆರುನೂರು ರೂಪಾಯಿ ಉತ್ಪತ್ತಿಮಾಡುತ್ತಾರೆ. ಉದಾಹರಣೆಗೆ, 'ಹರದನಹಳ್ಳಿ ಫಾರಂನಲ್ಲಿ' ಹೀಗೆ ಮಾಡಿದ್ದಾರೆ. ಏಕೆ ಹೀಗಾಗಿದೆಯೆಂದರೆ, ನಮ್ಮ ನಾಯಕರು ಹೇಳಿದ ಹಾಗೆ, 14 ಲಕ್ಷ ರೂಪಾಯಿನ ಗೊಬ್ಬರ ಬೀಜ ಅನ್ಯಾಯವಾಗಿದೆ. ತಾಲ್ಲೂಕುಗಳಲ್ಲಿ ಫೀಲ್ಡ್‌ಮನ್, ಇನ್‌ಸ್ಪೆಕ್ಟರು ಮುಂತಾದವರು ದಾಕ್ಷಿಣ್ಯಕ್ಕೊಳಗಾಗಿ, ಅನೇಕ ಸದಸ್ಯರಿಗೂ ಮಂತ್ರಿಗಳಿಗೂ ಹೆದರಿ, ಕೆಲವರಿಗೆ ಗೊಬ್ಬರವನ್ನೂ ಬೀಜವನ್ನೂ ಮುಫತ್ತಾಗಿಯೂ ರಿಯಾಯಿತಿಯ ಮೇಲೆಯೂ ಕೊಟ್ಟಿದ್ದಾರೆ. ಈರೀತಿ ಅನ್ಯಾಯಮಾಡಿದ್ದಾರೆಂಬುದಕ್ಕೆ ಅನೇಕ ನಿದರ್ಶನಗಳನ್ನು ಕೊಡಬಲ್ಲೆ. . . .

ಶ್ರೀ ಎ. ಭೀಮಪ್ಪನಾಯಕ್ (ಮೊಳಕಾಲ್ಮುರು).—ಅದರಿಂದ ಈ ನಷ್ಟವೇನೂ ಆಗಿಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಅದರಿಂದ ಹೀಗೆ ನಷ್ಟವಾಗಿದೆ ಎನ್ನುವುದನ್ನು ಅಂಕಿಅಂಶಗಳಿಂದ ಹೇಳುತ್ತೇನೆ.

ಶ್ರೀ ಎ. ಭೀಮಪ್ಪನಾಯಕ್.—ಪುಗಸಟ್ಟೆ ಕೊಟ್ಟಿದ್ದೇ ಇದೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಅದು ಎಷ್ಟೋ ಲೆಕ್ಕಕ್ಕೇ ಬರುವುದಿಲ್ಲ.

ಇದಲ್ಲದೆ defalcation ಆಗಿರುವುದಕ್ಕೂ ಗಮನ ಕೊಟ್ಟಿಲ್ಲ. ಅದನ್ನು ಸರ್ಕಾರ ಇತ್ಯರ್ಥ ಪಡಿಸಿಲ್ಲ. ಈ ರೀತಿ ಅನೇಕ ಲೋಪದೋಷಗಳನ್ನಿಟ್ಟುಕೊಂಡಿರುವಾಗ ಹೇಗೆ ಅಭಿವೃದ್ಧಿಯಾಗುತ್ತದೆ? ನಮ್ಮ ದೇಶದ ಶೇಕಡ 80ರಷ್ಟು ಜನಸಂಖ್ಯೆ ವ್ಯವಸಾಯದಲ್ಲಿರುವುದರಿಂದ ಎಷ್ಟೋ ಶಾಸ್ತ್ರೀಯ ರೀತಿಯಲ್ಲಿ ವ್ಯವಸಾಯ ನಡೆಸಬಹುದು. ಬೇಕಾದಷ್ಟು ಅವಕಾಶವಿದೆ. ಅನೇಕ ಅಧಿಕಾರಿಗಳು ವಿದೇಶಗಳಿಗೆ ಹೋಗಿ ಶಿಕ್ಷಣ ಪಡೆದು ಬಂದಿದ್ದಾರೆ. ಆದರೂ ಹೀಗೇಕೆ ಆಗುತ್ತಿದೆ? ಏಕೆ ವ್ಯವಸಾಯದ ಇಲಾಖೆಯಲ್ಲಿ ಹೀಗೆ ತಾತ್ಸಾರ ಮಾಡುತ್ತಿದ್ದಾರೆ? ನಮ್ಮ ವ್ಯವಸಾಯ ಮಂತ್ರಿಗಳು, ಅವರೇ ಸ್ವತಃ ವ್ಯವಸಾಯದಲ್ಲಿ ಉಚ್ಚಶಿಕ್ಷಣ ಪಡೆದಿದ್ದಾರೆ, ಅನುಭವವಿದೆ. ಹಣ ಖರ್ಚಾದರೂ ಚಿಂತೆಯಿಲ್ಲ ದೇಶದ ಉನ್ನತಿಗಾಗಿ ವರ್ಷವರ್ಷವೂ ಹೆಚ್ಚು ಹೆಚ್ಚು ಅಭಿವೃದ್ಧಿ ಸಾಧಿಸಬೇಕು, ಇಲ್ಲದಿದ್ದರೆ ಏನೂ ಪ್ರಯೋಜನವಾಗುವುದಿಲ್ಲ. ಇಷ್ಟು ಹೇಳಿ ಈ ಡಿಮ್ಯಾಂಡನ್ನು ಸಂಪೂರ್ಣವಾಗಿ ವಿರೋಧಿಸುತ್ತೇನೆ.

ಶ್ರೀ ವಿ. ಆರ್. ನಾಯ್ಡು (ಮಲ್ಲೇಶ್ವರಂ).—ಸ್ವಾಮಿ, ಹಿಂದೆ ಶ್ರೀಮಾನ್ ಮರಿಯಪ್ಪನವರ ಕಾಲದಲ್ಲಿ ಟ್ರಾಕ್ಟರುಗಳು ಎಲ್ಲಿ ನೋಡಿದರೂ ಕೆಲಸ ಮಾಡುತ್ತಿದ್ದುವು; ಎಲ್ಲಿ ನೋಡಿದರೂ ಉಳುತ್ತಿದ್ದುವು. ನಾನು ಹಳ್ಳಿಗಳಕಡೆ ಹೋಗುತ್ತಿದ್ದಾಗ ನೋಡಿದ್ದೇನೆ. ಎಲ್ಲಿಯಾದರೂ ಈ ಟ್ರಾಕ್ಟರುಗಳು ಕೆಟ್ಟುಹೋದರೆ ತಕ್ಷಣವೇ ಮೆಕ್ಯಾನಿಕ್ ಆ ಸ್ಥಳಗಳಿಗೆ ಬಂದು ಅವುಗಳನ್ನು ಸರಿಪಡಿಸಲು ಏನು ಮಾಡಬೇಕೋ ಅದನ್ನೆಲ್ಲಮಾಡಿ ಪುನಃ ಕೆಲಸಮಾಡುವಂತೆ ಮಾಡುತ್ತಿದ್ದರು. ಈಗ ಎಲ್ಲಿ ನೋಡಿದರೂ ಟ್ರಾಕ್ಟರುಗಳು ಅಲ್ಲಲ್ಲೇ ಬಿದ್ದಿರುತ್ತವೆ. ಅವನ್ನು ಸರಿಪಡಿಸಿ ಕೆಲಸಮಾಡುವ ಹಾಗೆ ಮಾಡಲು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಕಬ್ಬನ್‌ಪಾರ್ಕ್ ಮತ್ತು ಲಾಲ್‌ಬಾಗ್ ಉದ್ಯಾನವನಗಳು ಮೈಸೂರಿನಲ್ಲಿ ಕೀರ್ತಿಪಡೆದಿವೆ. ಉದ್ಯಾನವನಗಳ ಶಾಖೆಗೆ ಅಧಿಕಾರಿಗಳಾಗಿರುವ ಶ್ರೀಮಾನ್ ಮರೀಗೌಡರು ನಮಗೆ ಸಿಕ್ಕಿರುವುದು ವಿಶೇಷದ ಸಂಗತಿ. ಅವರು ಪಾಶ್ಚಾತ್ಯ ದೇಶಗಳಲ್ಲಿ ಸಂಚರಿಸಿ ತೋಟಗಳಿಗೆ ಸಂಬಂಧಪಟ್ಟ ವಿಷಯಗಳಲ್ಲಿ ವಿಶೇಷ ಪರಿಶ್ರಮವನ್ನು ಪಡೆದು ಬಂದಿರುತ್ತಾರೆ. ಇದು ಶ್ಲಾಘನೀಯವಾದದ್ದು. ಇವೊತ್ತು ದೇಶಗಳಲ್ಲಿರುವ ನಾಯಕರು ಬೆಂಗಳೂರಿಗೆ ದಯಮಾಡಿಸಿದಾಗ ಅವರಿಗೆ ಔತಣ ಕೂಟಗಳನ್ನು ಲಾಲ್‌ಬಾಗಿನಲ್ಲಿ ಏರ್ಪಾಡುಮಾಡುತ್ತಿದ್ದಾರೆ. ಆದರೆ ಇತ್ತೀಚೆಗೆ ಈ ಉದ್ಯಾನವನಗಳಲ್ಲಿರುವ ರಸ್ತೆಗಳು ತುಂಬ ಅವ್ಯವಸ್ಥೆಯಿಂದ ಕೂಡಿವೆ. ಈ ರಸ್ತೆಗಳಿಗೆ, ಸಂಬಂಧ ಪಟ್ಟವರು ಹೆಚ್ಚು ಹಣವನ್ನು ಸಹಾಯಮಾಡಿ ಇವುಗಳನ್ನು ಉತ್ತಮ ಸ್ಥಿತಿಯಲ್ಲಿಡಬೇಕೆಂದು ಹೇಳುತ್ತೇನೆ. ಇನ್ನೊಂದು ವಿಚಾರ. ಈ ಉದ್ಯಾನವನಗಳನ್ನು ವ್ಯವಸಾಯದ ಇಲಾಖೆಗೆ ಸೇರಿಸಿದರೆ ಬಹಳ ತೊಂದರೆಯಾಗುತ್ತದೆ. ಇವು ಬೇರೆಯಾಗಿಯೇ ಕೆಲಸಮಾಡುತ್ತಿರಬೇಕೆಂದು ಹೇಳುತ್ತೇನೆ.

ರೈತರ ವಿಷಯದಲ್ಲಿ, ಕ್ಷಮಾಪಣೆ ಬೇಡಿ, ಒಂದು ವಿಷಯವನ್ನು ಹೇಳುತ್ತೇನೆ. ರೈತರ ಮತ್ತು ಕಾರ್ಮಿಕ ಅಂತಸ್ತು ಹೆಚ್ಚಬೇಕೆಂದು ಹೇಳುವವರಲ್ಲಿ ನಾನೂ ಒಬ್ಬ. ಆದರೆ ಈಗಿನ ಪರಿಸ್ಥಿತಿ ಏನಾಗಿದೆ ಎಂಬುದನ್ನು ಯೋಚಿಸಬೇಕು. ಭೂಮಿಯನ್ನು ಉಳುತ್ತಿದ್ದ ರೈತನಾದವನು ಮನೆಯೊಳಗೆ ನಿಂತ, ಮನೆಯೊಳಗಿನ ರೈತ ಬೆಂಗಳೂರಿಗೆ ಬಂದು ಬಿಟ್ಟ ಎಂಬಂತೆ ರೈತರು ಪಟ್ಟಣಗಳನ್ನು ಸೇರುತ್ತಿದ್ದಾರೆ. ಮತ್ತು ಜಮೀನಿನಲ್ಲಿ ಬೇಸಾಯ ಮಾಡುವುದನ್ನು ಬಿಡತ್ತಿದ್ದಾರೆ. ಇವೊತ್ತು ಉಳುವವನು ಯಾರು ಎಂದರೆ ತಮಿಳರವನು, ತಿರುವಣ್ಣಾಮಲೆಕಡೆಯಿಂದ ಬಂದಿರುವವನು. ರೈತರಲ್ಲಿ ನನ್ನ ಪ್ರಾರ್ಥನೆ ಏನೆಂದರೆ, ರಾಜ್ಯವಾಳಬೇಕು; ಅಸೆಂಬ್ಲಿಯಲ್ಲಿ ಕುಳಿತುಕೊಳ್ಳಬೇಕು, ಮುಖ್ಯಮಂತ್ರಿ ಆಗಬೇಕು ಎಂಬ ಈ ಬಯಕೆಗಳೆಲ್ಲವು ಇದ್ದರೆ ಹೊಲವನ್ನು ಉಳುವವರು ಯಾರು? ಆದುದರಿಂದ ಇಂಥ ಹಂಬಲಗಳನ್ನು ಬಿಡಬೇಕು ಮತ್ತು ಈ ಅಸೆಂಬ್ಲಿ ಸದಸ್ಯರುಗಳಾಗಿರುವ ರೈತರು ಹೊಲ ಉಳುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ.

*ಶ್ರೀ ಕೆ. ವಿ. ಬೈರೇಗೌಡ (ಬೆಂಗಳೂರು ಉತ್ತರ).—ಸ್ವಾಮಿ, Agriculture, Horticulture and Fisheriesಗೆ ಸಂಬಂಧಪಟ್ಟ 74,21,641 ರೂಪಾಯಿಗಳ ಮನವಿಗೆ ಬೆಂಬಲವನ್ನು ಕೊಡುತ್ತ ಈ ಇಲಾಖೆಗೆ ಇನ್ನೂ ಹೆಚ್ಚು ಹಣ ಕೊಡಬೇಕು ಎಂದು ಹೇಳುತ್ತೇನೆ. ಇವೊತ್ತಿನ ದಿವಸ ದೇಶದ ಪ್ರಗತಿ ವ್ಯವಸಾಯದ ಇಲಾಖೆಯ ಮೇಲೆ ನಿಂತಿದೆ. ಎಲ್ಲಕ್ಕೂ ಮೂಲಭೂತವಾದದ್ದು ವ್ಯವಸಾಯ. ಇಂಥದರಲ್ಲಿ ನಮ್ಮ ಸ್ನೇಹಿತರು ಕೆಲವರು ಇದನ್ನು ಟೀಕಿಸಿದರಲ್ಲ ಎಂದು ಶೋಚನೀಯವಾಗುತ್ತಿದೆ. ಈ ಇಲಾಖೆಯಿಂದ ಪ್ರಯೋಜನವಾಗಿಲ್ಲ, ಇದನ್ನು ರದ್ದುಪಡಿಸುವುದು ಉತ್ತಮವೆಂದು ಹೇಳಿದ್ದಂತೂ ಬಹಳ ಶೋಚನೀಯವಾಗಿದೆ. ಈ ದೇಶದ ಆಹಾರಾಭಾವ ಕಾಲದಲ್ಲಿ, ದೇಶಕ್ಕೆ ಬಂದ ಆಪತ್ಕಾಲದಲ್ಲಿ ವ್ಯವಸಾಯದ ಇಲಾಖೆ ಮಾಡಿರತಕ್ಕ ಕೆಲಸಕಾರ್ಯಗಳನ್ನು ಇನ್ನೂ ಸ್ವಲ್ಪ ಮಟ್ಟಿಗೆ ಜ್ಞಾಪಕಕ್ಕೆ ತೆಗೆದುಕೊಳ್ಳಬಹುದು. ಇವೊತ್ತಿನ ದಿವಸ ಮಾನ್ಯ ಮಂತ್ರಿಗಳಾದ ಡಾಕ್ಟರ್ ಆರ್. ನಾಗನಗೌಡರು ಅಮೇರಿಕಾದಲ್ಲಿ ಕೊಂಚಕಾಲ ವಿದ್ದು ವ್ಯವಸಾಯದಲ್ಲಿ ಹೆಚ್ಚಿನ ಪರಿಶ್ರಮವನ್ನು ಹೊಂದಿದ್ದಾರೆ. ಅಮೆರಿಕಾ ದೇಶದಲ್ಲಿ ಸರ್ಕಾರ ಯಾವ ರೀತಿ ವ್ಯವಸಾಯ ಇಲಾಖೆಗೆ ಹೆಚ್ಚಿನ ದರ್ಜೆಯನ್ನು ಕೊಟ್ಟಿದೆ, ಯಾವ ಕೆಲಸ ಕಾರ್ಯಗಳು ನಡೆಯಬೇಕಾದರೂ ವ್ಯವಸಾಯದ ಇಲಾಖೆಯ ಅಧಿಕಾರಿಗಳು ಹೆಚ್ಚಿನ ಜವಾಬ್ದಾರಿಯನ್ನು ಹೊತ್ತಿದ್ದಾರೆನ್ನುವುದನ್ನು ನಮ್ಮ ಮಂತ್ರಿಗಳು ಅರಿತಿದ್ದರೂ ಸಹ ವ್ಯವಸಾಯ ಇಲಾಖೆಯಲ್ಲಿ ಸಾಕಾದಷ್ಟು ಪ್ರಗತಿದಾಯಕವಾದ ಕೆಲಸ ಮಾಡುವುದಕ್ಕೆ ಪ್ರಯತ್ನ ಪಡುತ್ತಿಲ್ಲ. ರೈತರಲ್ಲಿನ ಏರುಪೇರುಗಳು ಮತ್ತು ಧಾರಣೆ ಪಾಸಿಗಳ ಹತೋಟಿ ಇವು ವ್ಯವಸಾಯ ಇಲಾಖೆಯ ಜವಾಬ್ದಾರಿ. ಇವೊತ್ತಿನ ದಿವಸ ಧಾರಣೆಪಾಸಿಗಳು ಹತ್ತುವುದಕ್ಕೂ ಇಳಿಯುವುದಕ್ಕೂ ಇಲಾಖೆಯೇ ಕಾರಣವೆಂದು ಹೇಳಬಹುದು. ಅಮೆರಿಕಾದಲ್ಲಿ ಇಂಥಿಂಥ ಜಾಗಗಳಲ್ಲಿ ಇಂಥಿಂಥ ದವಸ ಬೆಳೆಯಬೇಕು ಎನ್ನುವುದನ್ನು ಅಲ್ಲಿಯ ವ್ಯವಸಾಯ ಇಲಾಖೆಯವರು ಮೊದಲೇ forecast ಮಾಡುತ್ತಾರೆ. ಅದೇ ರೀತಿಯಲ್ಲಿ ನಮ್ಮ ದೇಶದಲ್ಲಿಯೂ ಸಹ forecast ಮಾಡಿ, ನಮಗೆ ಎಷ್ಟು ಬೇಕಾಗುತ್ತದೆ, ಹೊರಗಡೆಗೆ ಎಷ್ಟು ಕಳುಹಿಸಬೇಕಾಗುತ್ತದೆ, ಹೊರಗಡೆಯ ಡಿಮ್ಯಾಂಡ್ ಎಷ್ಟಿದೆ ಎನ್ನುವುದನ್ನು ತಿಳಿದುಕೊಂಡು ಸರಿಯಾದ statistics collect ಮಾಡಿ ರೈತರಿಗೆ ಅವಕಾಶ ಕಲ್ಪಿಸಿದರೆ ಅವರು ಇನ್ನೂ ಚೆನ್ನಾಗಿ ಬೆಳೆದು ಉತ್ತಮ ರೀತಿಗೆ ಬರುತ್ತಾರೆ. ಈ ರೀತಿ ಮಾಡಲು ಬೇಗ ಗಮನ ಕೊಡಬೇಕು.

ಹಳ್ಳಿಗಳ ಕಡೆ ರೈತರು ಎಷ್ಟು ಕಷ್ಟಪಟ್ಟು ಉತ್ತಮವಾದ ಬೆಳೆಗಳನ್ನು ಬೆಳೆಸಿದರೂ ಸಹ ಅದಕ್ಕೆ ಬರತಕ್ಕ ರೋಗರುಜಿನಾದಿಗಳನ್ನು ತಡೆಗಟ್ಟು

(ಶ್ರೀ ಕೆ. ವಿ. ಬೈರೇಗೌಡ)

ವುದಕ್ಕೆ, ಸಾಮಾನ್ಯ ರೈತವೃತ್ತಿಯನ್ನು ಮಾಡುವವನಿಗೆ ಆಗುವುದಿಲ್ಲ. ಇಲಾಖೆಯಲ್ಲಿ ಒಂದು scientific research section ಕೆಲಸ ಮಾಡುತ್ತಿದ್ದರೂ ಸಹ ರೈತನಿಗೆ ಇದರಿಂದ ಸಹಾಯವಾಗುತ್ತಿಲ್ಲ. ರೈತರು ಹೋಗಿ ಹೇಳಿದರೆ ಆಗ ಬಂದು ನೋಡುತ್ತಾರೆಯೇ ಹೊರತು ಇಲ್ಲದೆ ಇದ್ದರೆ ಬರುವುದಿಲ್ಲ. ಇಂಥ research section ಗಳನ್ನು ತಾಲ್ಲೂಕುಗಳಲ್ಲಿಯೂ ಪ್ರಾರಂಭಮಾಡಿ ಅದರಿಂದ ರೈತನಿಗೆ ಉಪಯೋಗ ವಾಗುವಂತೆ ಮಾಡಬೇಕು. ಅಲ್ಲದೆ ಈ ಶಾಖೆಗೆ ಸಂಬಂಧಪಟ್ಟ ಸಿಬ್ಬಂದಿಯವರು ಆಗಾಗ್ಗೆ ಹಳ್ಳಿಗಳ ಕಡೆ ಹೋಗಿ ಎಲ್ಲೆಲ್ಲಿ ಬೆಳೆಗೆ ರೋಗರುಜಿನಗಳು ಬಂದಿರುತ್ತವೆಯೋ ಅಂಥ ಕಡೆಗಳಲ್ಲೆಲ್ಲ ತಕ್ಷಣ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು.

ಶ್ರೀ ಎಸ್. ಗೋಪಾಲಗೌಡ.—ಒಬ್ಬೊಬ್ಬರಿಗೆ ಐದೈದು ನಿಮಿಷ ಮಾತ್ರ ಅವಕಾಶ ಕೊಟ್ಟರೆ ಏನೂ ಮಾತನಾಡುವುದಕ್ಕೆ ಆಗುವುದಿಲ್ಲ,

Mr. DEPUTY SPEAKER.—Time is fixed. At Ten we close this demand. There is no time ; what is to be done ?

Sri Mulka GOVINDA REDDY.—What is the use of giving two or three minutes, Sir ? We cannot say anything about policies.

Mr. DEPUTY SPEAKER.—You must understand my difficulties. There are very many members who have sent cut motions. They are all anxious to say something about the Department. You cannot curtail their privilege. They must have the opportunity to say a few words. In the interest of members themselves I am compelled to restrict the time for speeches. If it is the desire of the House that any one member may speak at length and others must not press their claim to speak, I have no objection.

Sri A. BHEEMAPPA NAIK.—What is it that we can say in two or three minutes ? I wanted to protest even at the beginning ; it is better we decide the question. What is the meaning of limiting speeches to two or three minutes ? With due respect to the Chair, I must say that we cannot say anything in two minutes.

Mr. DEPUTY SPEAKER.—I leave it to the House. I will put it to the House. We have already taken a decision on this aspect. There must be some sanctity to the decisions taken by the House. 10 O'Clock is the time fixed by the consent of the House, for this Demand. We have to cover many subjects and many Hon'ble Members are anxious to speak. The Hon'ble Minister requires at least 15 minutes for his reply. Please tell me how to proceed.

Sri M. LINGANNA (Nanjangud).—So far as the time limit is concerned, I think it must be left to the good sense of the Chair. If an Hon'ble Member is referring to good points and giving good suggestions which will be appealing to the Ministers, it may be left to the Chair to allow some latitude and the time limit may not be very rigidly enforced in such cases.

Mr. DEPUTY SPEAKER.—Even now there is discretion given to the Chair. If an Hon'ble Member gives statisticla details and speaks on facts and figures, I will show some latitude in his case. Hon'ble Members must have observed that by now.

Sri P. R. RAMAIYA (Basavangudi).—In spite of observing the time limit, some of us have not got chances.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೇ, ಕೆಲವು ಸದಸ್ಯರು ವ್ಯವಸಾಯದ ಇಲಾಖೆ ಕೆಲಸಮಾಡುತ್ತಿಲ್ಲ, ಅದನ್ನು ರದ್ದುಪಡಿಸ ಬೇಕು ಎಂದು ಹೇಳಿದರು. ವಾಸ್ತವವಾಗಿ ನೋಡಿ ದರೆ ದೇಶದಲ್ಲಿರತಕ್ಕ ವ್ಯವಸಾಯಾಭಿವೃದ್ಧಿಗೆ, ನಮ್ಮ ದೇಶದಲ್ಲಿರುವ ವ್ಯವಸಾಯದ ಇಲಾಖೆ ಬಹಳ ಸಹಾಯಕವಾಗಿದೆ. ಶ್ರೀ ಇಮಾಂ ಸಾಹೇಬರು ಹೇಳಿರುವಂತೆ ಹಿಂದೆ ಈ ಇಲಾಖೆಗೆ ಐದು ಲಕ್ಷ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದರು ಎಂದು ಹೇಳಬಹುದಾದರೂ ಈ ಹಣವೆಲ್ಲ ಬರೀ ಸಂಬಳಸಾರಿಗೆ ಗಳನ್ನು ಕೊಡುವುದಕ್ಕೆ ವೆಚ್ಚಮಾಡುತ್ತಿದ್ದರೇ ವಿನಾ experiments, demonstration, ಮುಂತಾದ ಯಾವ ಕೆಲಸಗಳನ್ನೂ ಹಿಂದೆ ಮಾಡುತ್ತ ಇರಲಿಲ್ಲ. ಈಗ ಆಯವ್ಯಯದಲ್ಲಿ ತೋರಿಸಿರುವ 70,47,000 ರೂಪಾಯಿಗಳನ್ನು ತೆಗೆದುಕೊಂಡರೆ ಎಲ್ಲ ವ್ಯವ ಸಾಯದ ಇಲಾಖೆಗೆ ಎಂದು ಇದ್ದರೂ ಕೂಡ ಅದರಲ್ಲಿ 18,74,000 ರೂಪಾಯಿಗಳು ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟಿಗೂ, 22,63,000 ರೂಪಾಯಿಗಳು ಡೆವಲಪ್‌ಮೆಂಟ್ ಸ್ಕೀಮ್ಸ್ ಎಂದರೆ ಅಭಿವೃದ್ಧಿ ಯೋಜನೆಗಳಿಗೂ ವೆಚ್ಚವಾಗುತ್ತದೆ. ಇದಾದನಂತರ 29,10,000 ರೂಪಾಯಿಗಳು ಇಲಾಖೆಗೆ ಉಳಿಯುತ್ತವೆ. ಇದರ ಪೈಕಿ Agricultural demonstration and propaganda ಎಂಬುದಕ್ಕೆ 7,52,000 ರೂಪಾಯಿಗಳೂ Agricultural Experiments and research ಬಾಬಿಗೆ 1,88,000 ರೂಪಾಯಿಗಳೂ ಮತ್ತು Agricultural Education ಬಾಬಿಗೆ 3,65,000 ರೂಪಾಯಿಗಳೂ ಒಟ್ಟು 13 ಲಕ್ಷ ರೂಪಾಯಿಗಳು ಖರ್ಚಾಗಿ ಉಳಿಯುವ 14 ಲಕ್ಷ ರೂಪಾಯಿಗಳು ಇಲಾಖೆಗೆ ಖರ್ಚಾಗುತ್ತವೆ. ಹೋದವರ್ಷದ ಅಂದಾಜು ಬಡ್ಜೆಟ್ಟಿನಲ್ಲಿ ಸುಮಾರು ನಾಲ್ಕು ಲಕ್ಷ ರೂಪಾಯಿ write off ಮಾಡಬೇಕು. manure ನಲ್ಲಿ ನಷ್ಟವಾಗಿದೆ ಎಂದಿತ್ತು. ವಾಸ್ತವ

ವಾಗಿ ಯಾರು ಈ ನಷ್ಟಕ್ಕೆ ಜವಾಬ್ದಾರರೋ ಅವರ ಮೇಲೆ ಕಾರ್ಯಕ್ರಮ ನಡಿಸಿ, ವಿಚಾರಣೆ ನಡೆಸಿ ಹಣ ವನ್ನು ವಸೂಲ್ಮಾಡುವ ಪ್ರಯತ್ನಮಾಡಬೇಕು. ಅದೂ ಅಲ್ಲದೆ ಈ ವರ್ಷ ಒಂದು ಲಕ್ಷ ರೂಪಾಯಿಗಳನ್ನು manure losses ಗಾಗಿ ಒದಗಿಸಿದ್ದಾರೆ. ಪದಾರ್ಥಗಳು ರೈಲ್ವೆಯಲ್ಲಿ ಬಂದಿದ್ದು, ತೂಕ ವಗೈರೆ ಗಳಲ್ಲಿ ಕಮಿಮೆ ಬಂದು ನಷ್ಟವಾಗುವುದಕ್ಕೆ ಒಂದು ಲಕ್ಷ ರೂಪಾಯಿಗಳನ್ನು ಒದಗಿಸಿದೆ, ಮುಂದೆ ಆಗ ಬಹುದಾದ ನಷ್ಟಕ್ಕೆ ಈಗಲೇ ಹಣ ಒದಗಿಸಲಾಗಿದೆ. ಹೀಗೆ ಮಾಡಿರುವುದರಿಂದ ಸಂಬಂಧಪಟ್ಟ ಅಧಿಕಾರಿ ಗಳಿಗೆ ಹೇಗಾದರೂ ನಷ್ಟಬರುತ್ತದೆಂದು ಹಣವನ್ನು ಒದಗಿಸಿದ್ದಾರೆ, ಎಂಬ ಧೈರ್ಯ ಬಂದು ಹೆಚ್ಚು ನಷ್ಟವಾಗುವುದಕ್ಕೆ ಕಾರಣವಾಗಬಹುದು. ಹೀಗೆ ಮಾಡಿರುವುದು ಯುಕ್ತವಾದದ್ದಲ್ಲ. ಆಡಿಟ್ ಇಲಾಖೆ ಯವರು ಲೆಕ್ಕಗಳನ್ನು ತನಿಖೆಮಾಡಿದ ಮೇಲೆ ಅವಶ್ಯಕ ಕಂಡುಬಂದಲ್ಲಿ ಆಬಾಬನ್ನು ಸೇರಿಸುವುದು ಒಳ್ಳೆಯದು. ಹಾಗೆಮಾಡದೆ ಮುಂದೆಯಾಗಬಹುದಾದ ನಷ್ಟಕ್ಕೆ ಈಗಲೇ ಹಣವನ್ನೊದಗಿಸುವುದರಿಂದ ಅಧಿಕಾರಿಗಳಿಗೆ ಅನುಕೂಲವಾಗುತ್ತದೆಂದು ಹೇಳುತ್ತೇನೆ.

Research ಬಗ್ಗೆ ಎರಡು ವಿಷಯ ಹೇಳುತ್ತೇನೆ. ಅಗ್ರಿಕಲ್ಚರಲ್ ಕಾಲೇಜಿನಲ್ಲಿ ವಿದ್ಯಾರ್ಥಿಗಳನ್ನು ಸೇರಿಸಿ ಕೊಳ್ಳುತ್ತಾರೆ. Experts, First-Class ಮತ್ತು ಬರೀ ತೇರ್ಗಡೆ ಹೊಂದಿರುವವರುಗಳಲ್ಲಿ ಮೂರನೆ ದರ್ಜೆಯಲ್ಲಿ ತೇರ್ಗಡೆಯಾಗಿರುವವರನ್ನು ಈ ಕಾಲೇ ಜಿಗೆ ಸೇರಿಸಿಕೊಳ್ಳುತ್ತಾರೆ. First-Class ನಲ್ಲಿ ತೇರ್ಗಡೆ ಹೊಂದಿರುವ ವಿದ್ಯಾರ್ಥಿಗಳಿಗೆ ಹೆಚ್ಚಿನ ಉತ್ತೇಜನ ಕೊಟ್ಟು, ಅವರಿಗೆ ವಿದ್ಯಾರ್ಥಿ ವೇತನ ಗಳನ್ನು ಕೊಟ್ಟರೆ research section ನಲ್ಲಿ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. Third Class ನಲ್ಲಿ ತೇರ್ಗಡೆಯಾಗಿರುವವರು, ತೇರ್ಗಡೆ ಯಾದ ತಕ್ಷಣ administration ಇರತಕ್ಕ ಜಾಗ ಗಳಿಗೆ ಹೋಗುವುದಕ್ಕೆ ನೋಡುತ್ತಾರೆಯೇ ವಿನಾ ವಾಸ್ತವವಾಗಿಯೂ research ಮಾಡುವುದಕ್ಕೆ ಆಗುತ್ತಿಲ್ಲ. Research ಕೆಲಸಕ್ಕೆ ಹಣವನ್ನು ಅಭಿ ವೃದ್ಧಿ ಯೋಜನೆಗಳಲ್ಲಿ ಒದಗಿಸಿದ್ದಾರೆ. ಈ Research ಕೆಲಸಮಾಡುವುದಕ್ಕೆ ಯೋಗ್ಯತೆಯುಳ್ಳ ವರು ನಮ್ಮಲ್ಲಿ ಇಲ್ಲದೆ ಹೋದಪಕ್ಷದಲ್ಲಿ, ಈ ಶಾಖೆಯಲ್ಲಿ ಕೆಲಸ ಚೆನ್ನಾಗಿ ನಡೆಯಬೇಕಾದರೆ, ಉತ್ತಮವಾಗಿ ತೇರ್ಗಡೆ ಹೊಂದಿರುವವರನ್ನು ಹೊರಗಡೆಯಿಂದ ಲಾದರೂ ಕರೆದುಕೊಂಡು ಬಂದು ಈ ಕೆಲಸಕ್ಕೆ ನೇಮಿಸಬೇಕೇ ವಿನಾ Third-Class ನಲ್ಲಿ ತೇರ್ಗಡೆ ಯಾಗಿರುವವರಿಗೆ, ರಿಸರ್ಚ್ ಮಾಡಲು ಅಭಿಲಾಷೆ ಇಲ್ಲದವರಿಗೆ, ಈ ಕೆಲಸಗಳನ್ನು ವಹಿಸಿದರೆ ಅದರಿಂದ ಅನುಕೂಲವಾಗುವುದಿಲ್ಲವೆಂದು ಕಂಡುಬರುತ್ತದೆ.

9-30 A.M.

ಶ್ರೀ ಎ. ಭೀಮಪ್ಪನಾಯಕ್.—ಹಾಗಾದರೆ ಇಂಜ ನಿಯರಿಂಗ್ ಕಾಲೇಜು ಮುಂತಾದ ಬೇರೆ ಕಾಲೇಜು ಗಳನ್ನು ಮುಚ್ಚಬೇಕೇ ?

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ರಿಸರ್ಚ್ ಇನ್‌ಸ್ಟಿಟ್ಯೂಟುಗಳಲ್ಲಿ ಕೆಲಸಮಾಡುವವರಿಗೆ ಹೆಚ್ಚಾಗಿ ವಿದ್ಯಾರ್ಥಿವೇತನ ಕೊಟ್ಟರೆ ಅಲ್ಲಿಗೆ ಫಸ್ಟ್‌ಕ್ಲಾಸ್ ಸ್ಟೂಡೆಂಟ್ಸ್ ಬಂದೇ ಬರುತ್ತಾರೆ.

ಶ್ರೀ ಟಿ. ಜಿ. ತಿಮ್ಮೇಗೌಡ (ತಿಪಟೂರು).—ಮಾನ್ಯ ಅಧ್ಯಕ್ಷರೇ ಈಗಾಗಲೇ ಮಾನ್ಯಮಿತ್ರರು ವ್ಯವಸಾಯದ ಇಲಾಖೆ ವಿಚಾರದಲ್ಲಿ ಅನೇಕ ವಿಷಯಗಳನ್ನು ಹೇಳಿದ್ದಾರೆ. ರೈತರಿಗೆ ಬೇಕಾದ ಬಿತ್ತನೆ ಬೀಜ ಸಕಾಲದಲ್ಲಿ ಒದಗುತ್ತಿಲ್ಲ. ಸೊಸೈಟಿಗಳಲ್ಲೇನೋ ಅದನ್ನು ಮಾರಾಟ ಮಾಡು ತ್ತಾರೆ. ಆದರೆ ಯಾವ ಕಾಲದಲ್ಲಿ ಯಾವ ಬೀಜ ಬೇಕೋ ಆಗ ಸೊಸೈಟಿಗಳಿಗೆ ಹೋಗಿ ಕೇಳಿದರೆ ಆ ಬೀಜವಿರುವುದಿಲ್ಲ. ಸೊಸೈಟಿಗೆ ಯಾವಾಗ ಬರುತ್ತದೆಂಬುದು ರೈತರಿಗೆ ಗೊತ್ತಾಗುವುದಿಲ್ಲ. ಇದನ್ನು ಗಮನಿಸಿ ರೈತರಿಗೆ ಸಕಾಲದಲ್ಲಿ ಬಿತ್ತನೆ ಬೀಜಗಳು ಒದಗುವುದಕ್ಕೆ ಸರಿಯಾದ ಏರ್ಪಾಡು ಮಾಡಬೇಕು. ಜೋಳ, ಬಿತ್ತವಗೈರೆ ಬೇಕಾದ ಎಲ್ಲ ಬೀಜಗಳೂ ರೈತರಿಗೆ ಸುಲಭವಾಗಿ ಬೇಕಾದಾಗ ಸಿಕ್ಕಲು ಅವಕಾಶ ಕಲ್ಪಿಸಿಕೊಡಬೇಕು. ಅಲ್ಲದೆ ರೈತಬಾಂಧವರಿಗೆ ಗುಳ ಮತ್ತು ವ್ಯವಸಾಯಕ್ಕೆ ಸಂಬಂಧಪಟ್ಟ ಎಲ್ಲಾ ಸಾಮಾನುಗಳೂ ಬೇಕಾದ ವೇಳೆಯಲ್ಲಿ ಸಿಕ್ಕುತ್ತಿಲ್ಲ. ಅವುಗಳೂ ಕೂಡ ಸಕಾಲಕ್ಕೆ ಸಿಕ್ಕುವಂತೆ ಏರ್ಪಾಡು ಮಾಡಬೇಕು.

*ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ನಾನು ಈ ಡಿಮ್ಯಾಂಡನ್ನು ವಿರೋಧಿಸಿ ಮಾತನಾಡ ಬೇಕಾಗಿದೆ. ಈ ದೇಶದ ಸೇಕಡ 80 ಜನರ ಕಸಬು ವ್ಯವಸಾಯ. ಇಂಥ ವ್ಯವಸಾಯದ ಡಿಮ್ಯಾಂಡನ್ನು ಯಾವಾಗ್ಲೂ ವಿರೋಧಿಸಬೇಕಾಗಿರುವುದು ಸಂಕಟ ಕರವಾದ ವಿಚಾರ. ಏಕೆಂದರೆ ಇದರ ಕಡೆ ಸರಿಯಾದ ಗಮನ ಕೊಟ್ಟಿಲ್ಲ. ಸಾಯಿಲ್ ಎರೋಷನ್ ನಡೆದೇ ನಡೆಯುತ್ತಿದೆ. ಅನೇಕ ವರ್ಷಗಳಿಂದ ಇದನ್ನು ನಿಲ್ಲಿಸುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದೂ ರೈತ ರಿಗೆ ಅನುಕೂಲಮಾಡಿಕೊಡಬೇಕೆಂದೂ ಹೇಳುತ್ತಿದ್ದರೂ ಕೂಡ ಇದನ್ನು ಗಮನಿಸಿಲ್ಲ. ಮತ್ತು ರೈತರಿಗೆ ಮುಖ್ಯವಾಗಿ ಬೇಕಾದ ಗುಳ, ನೇಗಿಲು, ಗುದ್ದಲಿ ಮೊದಲಾದ ಉಪಕರಣಗಳು ಸಿಕ್ಕಬೇಕಾದರೆ ಬಹಳ ಕಷ್ಟವಿದೆ. ಇಲ್ಲದಿರುವ ತೊಂದರೆ ಮಾಡುತ್ತಾರೆ. ರೈತರ ಮನೆಗಳ ಬಾಗಿಲಿಗೆ ತೆಗೆದುಕೊಂಡು ಹೋಗಿ ಕೊಡುವಷ್ಟು ಸಿಬ್ಬಂದಿಯಿದ್ದರೂ ಸಹ ಸಕಾಲದಲ್ಲಿ ಕೊಡುವುದಿಲ್ಲ. ಮಳೆಗಾಲದಲ್ಲಿ ಬೇಕಾದ ಗುಳ ಬೇಸಿಗೆ ಕಾಲಕ್ಕೆ ಬರುತ್ತದೆ, ಮಳೆಗಾಲದಲ್ಲಿ ಸಿಕ್ಕುವು ದಿಲ್ಲ.

ಇದಲ್ಲದೆ ಡೆವಲಪ್‌ಮೆಂಟ್ ಬಾಬಿನಲ್ಲಿ ಅಡ್ಮಿನಿ ಸ್ಟ್ರೇಷನ್‌ಗೆ 1,60,000 ರೂಪಾಯಿಗಳ ಪ್ರಾವಿಷನ್ ಇದ್ದರೆ 14 ಲಕ್ಷ ರೂಪಾಯಿಗಳನ್ನು ಖರ್ಚು ಮಾಡು ತ್ತಾರೆ. ನಷ್ಟದ ವಿಚಾರ ಶ್ರೀ ಬೈರೇಗೌಡರು ಹೇಳಿ ದರು. 13 ಲಕ್ಷ ಹೆಚ್ಚಾಗಿ ಖರ್ಚುಮಾಡಿರುವುದನ್ನು ನೋಡಿದರೆ ಜವಾಬ್ದಾರಿ ಎಷ್ಟಿದೆಯೆಂಬುದು ತಾನೇ ಗೊತ್ತಾಗುತ್ತದೆ. ಸುಮ್ಮನೆ ಟೀಕೆ ಮಾಡುತ್ತಿಲ್ಲ. ಈ ನಷ್ಟವನ್ನು ಕಾಂಗ್ರೆಸ್ ಪಕ್ಷದಲ್ಲಿರುವ 80 ಜನರ ಮೇಲೆ ಸರ್‌ಚಾರ್ಜ್‌ಹಾಕಿ ವಸೂಲು ಮಾಡಬೇಕು. ಲೋಕಲ್ ಬಾಡಿಯಲ್ಲಿ ಒಂದು ರೂಪಾಯಿ ಟಿ. ಎ. ಹೆಚ್ಚಾಗಿ ತೆಗೆದುಕೊಂಡರೆ ಎಷ್ಟೋ ಗಲಾಟೆಯಾಗು ತ್ತದೆ. ಹಾಗಿರುವಾಗ ಒಂದು ಲಕ್ಷ ಒದಗಿಸಿರುವಾಗ 7 ಲಕ್ಷ, 20 ಲಕ್ಷ ಹೀಗೆಲ್ಲಾ ಖರ್ಚುಮಾಡಿದರೆ ಹೇಗೆ ? ಸಿಕ್ಕಾಪಟ್ಟೆ ಖರ್ಚುಮಾಡಿ ಅದರಮೇಲೆ ಟೀಕೆ ಮಾಡಿ ದಾಗ ಅದರಲ್ಲಿ ಅರ್ಥವಿಲ್ಲವೆಂದು ಹೇಳಿದರೆ ಹೇಗೆ ? ಇಷ್ಟು ವರ್ಷ ಏನು ಮಾಡುತ್ತಿದ್ದರು ? ವರ್ಷೇ ವರ್ಷೇ ಜಡ್ತಿ ಮಾಡುತ್ತಿದ್ದರೇ ಅಥವಾ ಇಲ್ಲವೇ ? ಈ ರೀತಿ ಯಾಗುವುದಕ್ಕೆ ಅವಕಾಶ ಕೊಟ್ಟಿರುವಾಗ 13 ಲಕ್ಷ ವನ್ನು ಓಟು ಪಡೆದು ತೆಗೆದುಕೊಂಡಿದ್ದರೆ, ಹೇಗೆ ಯಾರಿಂದ ತಂದರು ಎಂದು ಪ್ರತಿಯೊಂದು ಕಾಸಿಗೂ ಜವಾಬು ಕೊಟ್ಟರೆ ಒಪ್ಪಿಕೊಳ್ಳಬಹುದು. ಹಾಗಿಲ್ಲದೆ ಏಕ್‌ದಂ 13 ಲಕ್ಷ ವಜಾ ಮಾಡಿ ಎಂಬು ಹೇಳಿದರೆ ಹೇಗೆ ? ಮುಂದೆ ಇದು ಒಂದು ಕೋಟಿ 30 ಲಕ್ಷ

(ಶ್ರೀ ಬಿ. ಹುಚ್ಚೇಗೌಡ)

ಅಥವಾ 13 ಕೋಟಿ ನಿಕಾಗಬಾರದು ಎಂಬುದನ್ನು ಅರಿತುಕೊಳ್ಳಬೇಕು. ಸುಮ್ಮನೆ ಟೀಕೆ ಮಾಡುತ್ತಾರೆಂದು ಸೋಗು ಹಾಕಿಕೊಂಡು ಆಡಳಿತ ನಡೆಸುವುದಕ್ಕಿಂತ ಯಾವ ಟೀಕೆಯೂ ಬರಬಾರದೆಂದು ನಿರೀಕ್ಷಿಸಿದ್ದರೆ ಬಿಟ್ಟು ಹೋಗುವುದು ಕ್ಷೇಮ.

ತುಮಕೂರಿನಲ್ಲಿ ಒಂದು ಹಾರ್ಟಿಕಲ್ಚರಲ್ ಫಾರಂ ಇದೆ. ಅದಕ್ಕೆ ಒಂದು ಬಾವಿಯಿದೆ. ಅದಕ್ಕೊಂದು ಪಂಪು ಹಾಕಿಸಿಕೊಡಿ ಎಂದು ಕೇಳಿದರೆ ಹಣವಿಲ್ಲವೆಂದು ಹೇಳುತ್ತಾರೆ. ಬೇಸಗೆಯಲ್ಲಿ ಆ ಫಾರಂ ಒಣಗುತ್ತಿದೆ, ಅದಕ್ಕೆ ಮೂರು ಸಾವಿರ ರೂಪಾಯಿಗಳನ್ನಾದರೂ ಒದಗಿಸಿ ಪಂಪು ಹಾಕಿಸಿಕೊಡಿ ಎಂದು ಎಷ್ಟೋ ಹೇಳಿದರೂ ಆರು ತಿಂಗಳಿಂದಲೂ ಆ ಕೆಲಸ ಮಾಡಿರುವುದಿಲ್ಲ. ಈ ದಿವಸವಾದರೂ ಜರೂರಾಗಿ ಅದನ್ನು ಮಂಜೂರು ಮಾಡಬೇಕು.

* ಶ್ರೀ ಕೆ. ಲಕ್ಕಪ್ಪ (ಚನ್ನರಾಯಪಟ್ಟಣ).—ಈಗ ಹಾರ್ಟಿಕಲ್ಚರಲ್ ಆಫೀಸಿದೆ. ಅದು ಈಗ ಏನು ಕೆಲಸ ಮಾಡುತ್ತಿದೆಯೆಂದರೆ ನಿಜವಾಗಿಯೂ ಕೇವಲ ಸಂಬಳ ತೆಗೆದುಕೊಂಡು ಹೂವಿನ ಬೀಜ ಮಾರುತ್ತಿದೆಯೇ ವಿನಾ ಅಂಥ ಉಪಯುಕ್ತವಾದ ಕೆಲಸವನ್ನೇನೂ ಮಾಡುತ್ತಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಹಿಂದೆ ರೂರಲ್ ಡೆವಲಪ್‌ಮೆಂಟ್ ಕಮಿಟಿಗಳಿದ್ದಾಗ ಆಫೀಸರುಗಳಿಗೆ ಬಲವಂತಮಾಡಿ ಬಹಳ ಚುರುಕಾಗಿ ಕೆಲಸ ನಡೆಯುವಂತೆ ಮಾಡಲಾಯಿತು, ಅಲ್ಲಿ ಒಂದು ಫಾರಂ ಆದರೂ ಇಟ್ಟು ಹೂವಿನ ಬೀಜ ಮತ್ತು ಹಣ್ಣಿನ ಗಿಡ ಬೆಳೆದು ಜನರಿಗೆ ಒದಗಿಸಿದರೆ ಉಪಯುಕ್ತವೇ ಹೊರತು ಬರೀ ಬೀಜ ಮಾರಿದರೆ ಅನುಕೂಲವಾಗುವುದಿಲ್ಲ ಎಂದು ಒತ್ತಾಯಪಡಿಸಿ ಆ ರೀತಿ ಮಾಡುವಹಾಗೆ ಏರ್ಪಾಡು ಮಾಡಿದ್ದರು. ಇತ್ತೀಚೆಗೆ ರೂರಲ್ ಡೆವಲಪ್‌ಮೆಂಟ್ ಕಮಿಟೀಸ್ ಹೋದುವು, ಈ ಫಾರಂಗಳೂ ಸಹ ಹೋದುವು. ಈ ದಿವಸ ಕೇವಲ ಅಂಗಡಿಯಿರುವ ಹಾಗೆ ಇಟ್ಟುಕೊಂಡು ಹೂವಿನ ಬೀಜವನ್ನು ಮಾರಾಟ ಮಾಡುತ್ತಿದ್ದಾರೆ. ಇದರಿಂದ ಖಂಡಿತ ಯಾರಿಗೂ ಉಪಕಾರವಾಗುವುದಿಲ್ಲ ಮತ್ತು ಸರ್ಕಾರದ ಹಣ ವ್ಯರ್ಥವಾಗುತ್ತಿದೆ. ಇದನ್ನು ಪರಿಶೀಲಿಸಿ ಈಗಲಾದರೂ ಸಂಬಂಧಪಟ್ಟ ಇಲಾಖೆಗೆ ಸೂಚಿಸಿ ಒಂದು ಫಾರಂ ತೆರೆಯುವಂತೆ ಮಾಡಬೇಕು. ಹಾಗೆ ಮಾಡಿ ಆ ಮೂಲಕ ಹಣ್ಣುಗಳ ಗಿಡಗಳು ಮತ್ತು ಹೂವಿನ ಗಿಡಗಳು ಜನರಿಗೆ ದೊರೆಯುವ ಹಾಗೆ ಮಾಡುತ್ತಾರೆಂದು ನಂಬಿದ್ದೇನೆ.

ಎರಡನೆಯದಾಗಿ ಅಗ್ರಿಕಲ್ಚರಲ್ ಇಲಾಖೆ ಸಾಧಿಸಿರುವ ಕೆಲಸಗಳಲ್ಲೆಲ್ಲಾ ಬಹಳ ಮುಖ್ಯವಾದುದು ಜಪಾನ್ ಮೆಥಡ್ ಆಫ್ ಕಲ್ಟಿವೇಷನ್ ಪ್ರಕಾರ ವ್ಯವಸಾಯ ಮಾಡಿಸಿ ಆ ಮೂಲಕ ದೇಶದಲ್ಲಿ ಆಹಾರದ ಉತ್ಪತ್ತಿ ಜಾಸ್ತಿ ಮಾಡಿರುವುದು. ಈ ಒಂದು ಸನ್ನಿವೇಶ ವ್ಯವಸಾಯದ ಇಲಾಖೆ ಸಾಧಿಸಿರುವ ಕೆಲಸಗಳಲ್ಲೆಲ್ಲಾ ಮುಖ್ಯವಾದುದು ಅನ್ನಿಸುತ್ತದೆ. ಅನೇಕ ವರ್ಷಗಳಿಂದ ಈ ಇಲಾಖೆಯು ಇಷ್ಟು ಉಪಯುಕ್ತವಾದ ಕೆಲಸವನ್ನು ಸಾಧಿಸಿರಲಿಲ್ಲ. ಈಚೆಗೆ ಮೂರು ವರ್ಷಗಳಿಂದ ಸಂಸ್ಥಾನಾದ್ಯಂತ ಅನೇಕ ರೈತರು ಇದರ ಅನುಕೂಲ ತಿಳಿದು ವರ್ಷೇ ವರ್ಷೇ ಇದನ್ನು ಜಾಸ್ತಿ ಮಾಡುತ್ತಾ, ತನ್ಮೂಲಕ ಹೆಚ್ಚು ಆಹಾರ ಬೆಳೆದು ದೇಶದ ಆಹಾರ ಪರಿಸ್ಥಿತಿ ಸುಧಾರಿಸಲು ಅವರು ಪ್ರಯತ್ನಪಟ್ಟಿದ್ದಾರೆ. ಇದನ್ನು ವರ್ಷೇ ವರ್ಷೇ ಇನ್ನೂ ಹೆಚ್ಚಾಗಿ ಪ್ರಚಾರಮಾಡಿ ಇನ್ನೂ ಹೆಚ್ಚು ವಿಸ್ತೀರ್ಣದಲ್ಲಿ ಈ ವ್ಯವಸಾಯವನ್ನು ಜಾರಿಗೆ ತಂದು ತನ್ಮೂಲಕ ದೇಶಕ್ಕೆ ಮತ್ತು ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಇದಕ್ಕೆ ಹೆಚ್ಚು ನಿಗ ತೆಗೆದುಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ಸರ್ಕಾರದಲ್ಲಿ ಪ್ರಾರ್ಥಿಸುತ್ತೇನೆ. ಮತ್ತು ಇದರ ಉಪಯೋಗ ಎಷ್ಟಿದೆಯೆಂಬುದು ಜನರಿಗೆ ಮನದಟ್ಟಾಗುವ ರೀತಿಯಲ್ಲಿ ಸರ್ಕಾರದವರು ತಮ್ಮ ಉತ್ತರ ಕೊಡುವಾಗ ಯಾವ್ಯಾವ ವರ್ಷದಲ್ಲಿ ಎಷ್ಟೆಷ್ಟು ಪ್ರದೇಶದಲ್ಲಿ ಇದನ್ನು ಬೆಳೆದಿದ್ದಾರೆ ಮತ್ತು ಎಷ್ಟು ಅದರಿಂದ ಉತ್ಪತ್ತಿಯಾಗಿದೆ ಎಂದು ಅಂಕೀಅಂಶ ಸಹ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

* ಶ್ರೀ ವಿ. ವೆಂಕಟಪ್ಪ (ಚನ್ನಪಟ್ಟಣ).—ಸ್ವಾಮಿ, 14 ಲಕ್ಷ ರೂಪಾಯಿಗಳು ಗೊಬ್ಬರ ಮತ್ತು ಬೀಜಗಳನ್ನು ಕೊಡುವುದರಲ್ಲಿ ಲುಕ್ಸಾನಾಗಿದೆ, ಅವನ್ನು ರೈಟಾಫ್ ಮಾಡಿದ್ದೇವೆ ಎಂದು ಹೇಳಿದ್ದಾರೆ. ಸಾವಿರ ರೂಪಾಯಿಗಳು ಯಾವುದಕ್ಕಾದರೂ ಬೇಕೆಂದು ಕೇಳಿದರೆ ಕೊಡುವುದು ಕಷ್ಟ ಎಂದು ಹೇಳುವ ಸರ್ಕಾರ 13-14 ಲಕ್ಷ ರೂಪಾಯಿಗಳನ್ನು ಯಾವ ಸಂದರ್ಭದಲ್ಲಿ, ಏತಕ್ಕೆ, ವಸೂಲು ಮಾಡುವುದಕ್ಕೆ ಸಾಧ್ಯವಿಲ್ಲದೆ ಹೋಯಿತು, ಎಷ್ಟು ವರ್ಷಗಳಿಗೆ ಸಂಬಂಧಪಟ್ಟಿದೆ, ಒಂದೇ ವರ್ಷದಲ್ಲಿ ಈ 14 ಲಕ್ಷ ರೂಪಾಯಿಗಳ ನಷ್ಟವಾಯಿತೆ ಎಂದು ಏನೂ ವಿವರಣೆಯಿಲ್ಲದೆ, ಈ ರೀತಿಯಾಗಿದೆ, ಮುಂದಿನವರ್ಷ ಇದಕ್ಕೆ ಪ್ರೊವೈಡ್ ಮಾಡಬೇಕು, ಇಂಥಾದ್ದು ರೈಟಾಫ್ ಮಾಡಬೇಕು, ಎಂಬ ವಿವರಗಳನ್ನು ನಮ್ಮ ಮುಂದಿಡದೆ, ಏಳು ಲಕ್ಷ ಪ್ರೊವೈಡ್ ಮಾಡಿದ್ದರೆ 20 ಲಕ್ಷ ಖರ್ಚುಮಾಡಿ, ಖರ್ಚಾಗಿದೆ ಎಂದು ರಿವೈಸ್ಡ್ ಎಸ್ಟಿಮೇಟ್ ತೋರಿಸಿ, ಹೀಗೆ ಈ ಸರ್ಕಾರದವರು ಹಣ ಖರ್ಚು ಮಾಡುತ್ತಿದ್ದಾರೆಂದು ಹೇಳುವುದಾದರೆ ನನಗಂತೂ ಅರ್ಥವಾಗುವುದಿಲ್ಲ. ಇದಕ್ಕೆಲ್ಲಾ ನಾನು ಏನು ಹೇಳಲಿ? ಇವರು ಈ ಕೆಲಸಗಳನ್ನೆಲ್ಲಾ ಯಾರ ಜವಾಬ್ದಾರಿಯಮೇಲೆ ಮಾಡಿದರು ? ಇದಕ್ಕೇನಾದರೂ ಒಂದು ಲೆಜಿಸ್ಲೇಷನ್ ಕ್ರಮವಿದೆಯೇ ಅಥವಾ ಇಲ್ಲವೇ ಎಂಬುದೊಂದೂ ಗೊತ್ತಾಗುತ್ತಿಲ್ಲ. ಇವರು ಈ ಲೆಜಿಸ್ಲೇಟಿವ್ ಅಸೆಂಬ್ಲಿಯ ಮುಂದೆ ಈ ವಿಚಾರಗಳನ್ನೆಲ್ಲಾ ತಂದು ಪ್ರತಿನಿಧಿಗಳಿಗೆ ಸರಿಯಾಗಿ ಅವುಗಳ ಬಗ್ಗೆ ವಿವರಣೆ ಕೊಟ್ಟು, ಅವರ ಒಪ್ಪಿಗೆಯನ್ನು ಪಡೆದನಂತರ ಇವರು ಇವುಗಳನ್ನೆಲ್ಲಾ ಹೀಗೆ ವಜಾ ಮಾಡಬಹುದಿತ್ತು. ಆ ರೀತಿ ಮಾಡಲು ಇವರಿಗಿದ್ದ ತೊಂದರೆ ಏನು ? ಇವರು ಈ ವಿಚಾರಗಳನ್ನೆಲ್ಲ ಈ ಸಭೆಯಮುಂದೆ ಇಟ್ಟು ಇಂತಿಂಥ ಕಾರಣಗಳಿಂದ ಇಂತಿಂಥಾ ಬಾಬಿನಲ್ಲಿ ಇಷ್ಟು ಲುಕ್ಸಾನಾಗಿದೆ, ಇಂತಿಷ್ಟು ಮೊಬಲಗನ್ನು ರಿಕವರ್ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿ ಈ ಮೊಬಲಗನ್ನು ಈ ಸಭೆ ಒಪ್ಪಿಗೆ ಪಡೆದು ರೈಟ್‌ಆಫ್ ಮಾಡಬಹುದಾಗಿತ್ತು. ಹಾಗೇಕೆ ಮಾಡಲಿಲ್ಲ ? ಈರೀತಿ ಇದನ್ನು ಮಾಡಬೇಕಾಗಿದ್ದುದು ಕ್ರಮವೋ ಅಥವಾ ಇವರಿಗೆ ಮನಸ್ಸಿಗೆ ಬಂದಹಾಗೆ ಯಾರ್ಯಾರಿಗೆ ಬೇಕೋ ಅವರಿಗೆ ರೈಟ್ ಆಫ್ ಮಾಡಿದ್ದೇವೆಂದು ಹೇಳಿ ಯಾವುದೋ ಲೆಕ್ಕದಲ್ಲಿ ಸೇರಿಸಿ ಈ ರೀತಿಯೆಲ್ಲಾ ಮಾಡತಕ್ಕದ್ದು ನೋಡಿದರೆ ಈ ಆಡಳಿತ ಒಂದು ಶಾಸನಬದ್ಧವಾದ ರೀತಿಯಲ್ಲಿ ನಡೆಯುತ್ತಿದೆಯೆಂದು ನಾನಂತೂ ನಂಬುವುದಕ್ಕಾಗುವುದಿಲ್ಲ. ಇನ್ನು ಸರ್ಕಾರದವರು ಈ ವ್ಯವಸಾಯದ ಹೆಡ್ಡಿನಲ್ಲಿ—ಬೋಟಾನಿಕಲ್ ಮತ್ತು ಇತರ ಸಾರ್ವಜನಿಕ ಉದ್ಯಾನವನಗಳು ಎಂಬ ಬಾಬಿಗಾಗಿ ಈ ವರ್ಷ 18 ಲಕ್ಷ ಚಿಲ್ಲರೆ ರೂಪಾಯಿಗಳ ವೆಚ್ಚವನ್ನು ತೋರಿಸಿದ್ದಾರೆ. ವಿಧಾನಸೌಧದ ತೋಟಗಳಿಗೆ ನೀರನ್ನು ಸರಬರಾಯಿ ಮಾಡಲು ''ಬೋರ್‌ವೆಲ್'' ಬಾವಿಗಳನ್ನು ತೋಡಿಸುವುದಕ್ಕೂ ಮತ್ತು ಅಲ್ಲಿ ಉಪ

ಯೋಗಿಸುವುದಕ್ಕಾಗಿ ಟ್ರಾಕ್ಟರನ್ನೂ ಕೊಳ್ಳುವುದಕ್ಕಾಗಿ ಹಣವನ್ನೊದಗಿಸಿದ್ದಾರೆ. ಈ ವ್ಯವಸಾಯದ ಬಾಬಿಗೋಸ್ಕರ ಖರ್ಚುಮಾಡಲು ತೆಗೆದಿಟ್ಟಿರುವ ಹಣಕ್ಕೂ ಮತ್ತು ಈ ವಿಧಾನಸೌಧದ ಉದ್ಯಾನವನಕ್ಕೂ ಏನು ಸಂಬಂಧವಿದೆ? ಆ ದಿವಸ ಈ ವಿಧಾನಸೌದದ ಬಗ್ಗೆ ಆಗತಕ್ಕಂಥಾ ಒಟ್ಟು ವೆಚ್ಚದ ಮೊಬಲಗು ಒಂದು ಕೋಟಿ 30 ಲಕ್ಷ ಎಂಬುದಾಗಿ ತಿಳಿಸಿ ಪುನಃ ಈ ದಿವಸ ಈ ವ್ಯವಸಾಯದ ಬಾಬಿನಲ್ಲಿ ಒಂದು 10 ಲಕ್ಷ ವಿದ್ಯುಚ್ಛಕ್ತಿ ಬಾಬಿನಲ್ಲಿ, ಒಂದು 10-15 ಲಕ್ಷ ಇನ್ನೊಂದು ಬಾಬಿನಲ್ಲಿ, ಇನ್ನಷ್ಟು ದುಡ್ಡು ಇನ್ನೊಂದು ಬಾಬಿನಲ್ಲಿ ಹೀಗೆಲ್ಲಾ ಒದಗಿಸಿ ಹೀಗೆ ಕಣ್ಣು ಮುಚ್ಚಿ ಜನರನ್ನು ಮೋಸಗೊಳಿಸತಕ್ಕ ರೀತಿಯಲ್ಲಿ ಕೆಲಸಮಾಡತಕ್ಕದ್ದು ಸರ್ಕಾರಕ್ಕೆ ಸರಿಯಾದ ನೀತಿಯಲ್ಲ. ವ್ಯವಸಾಯದ ಇಲಾಖೆಗೆ ಒದಗಿಸಿದಂಥ ಮೊಬಲಗು ಸಂಪೂರ್ಣವಾಗಿ ಆ ಇಲಾಖೆಯ ಕೆಲಸಕಾರ್ಯಗಳಿಗೇ ವೆಚ್ಚವಾಗಬೇಕು. ಆಯಾ ಇಲಾಖೆಗೆ ಒದಗಿಸತಕ್ಕಂಥ ಮೊಬಲಗು ಆಯಾಯ ಇಲಾಖಾ ಕೆಲಸಕಾರ್ಯಗಳಿಗೇ ಉಪಯೋಗಿಸಲ್ಪಡಬೇಕು. ಈ ರೀತಿಯ ಒಂದು ಸಾಂಪ್ರದಾಯ ಹಿಂದಿನಿಂದಲೂ ಆಚರಣೆಯಲ್ಲಿ ನಡೆದುಕೊಂಡು ಬಂದಿದೆ. ಆದರೆ ಈ ದಿವಸ ಆ ವಿಧಾನಸೌಧದ ಬಗ್ಗೆ ಆಗತಕ್ಕ ಖರ್ಚುಗಳ ಸಂಬಂಧವಾಗಿ ಪ್ರತಿಯೊಂದು ಇಲಾಖೆಗೂ ಅಷ್ಟಷ್ಟು ಸೇರಿಸಿ ಆ ವಿಧಾನಸೌಧಕ್ಕೆ ಕೇವಲ ಒಂದು ಕೋಟಿ 30 ಲಕ್ಷ ರೂಪಾಯಿಗಳು ಮಾತ್ರ ಖರ್ಚಾಯಿತು ಎಂದು ಹೇಳುವುದು ಸರಿಯಾದ್ದಲ್ಲ. ಅದೇನೋ ಕೆಲವರು ಹೇಳುತ್ತಿದ್ದರು "ಆ ಮಂತ್ರಿಗಳ ಕಣ್ಣಿಗೆ ಮಣ್ಣೆರೆಚುವ ಕೆಲಸ" ಎಂದು. . . .

ಉಪಾಧ್ಯಕ್ಷರು.—ಆ ಮೊಬಲಗನ್ನು ವಿಧಾನಸೌಧದ ಗಾರ್ಡನ್ ಬಗ್ಗೆ ಉಪಯೋಗಿಸಲಾಗುತ್ತದೆ.

ಶ್ರೀ ವಿ. ವೆಂಕಟಪ್ಪ.—ಹಾಗಾದರೆ ಆ ವಿಧಾನಸೌಧದ ಬಿಲ್ಡಿಂಗ್ ಬಗ್ಗೆ ಪಿ.ಡಬ್ಲ್ಯು.ಡಿ. ಡಿಪಾರ್ಟ್‌ಮೆಂಟಿಗೂ, ಇನ್ನು ಅದಕ್ಕೆ ಸಂಬಂಧಪಟ್ಟ ರೋಡುಗಳನ್ನು ಮತ್ತೊಂದು ಇಲಾಖೆಗೂ, ಹೀಗೇ ಒಂದೊಂದು ಐಟಂ ಕೆಲಸವನ್ನೂ ಒಂದೊಂದು ಬೇರೆ ಇಲಾಖೆಗೂ ಸೇರಿಸಿಬಿಟ್ಟರೆ ಆ ಕಟ್ಟಡಕ್ಕಾಗಿ ಏನೂ ಖರ್ಚಾದಂತೆಯೇ ಆಗುವುದಿಲ್ಲ. ಆದರೆ ಈ ವಿಷಯಗಳನ್ನೆಲ್ಲಾ ಜನರಿಗೆ ಸರಿಯಾಗಿ ತಿಳಿಸದೆ ಇರುವುದು ಸರ್ಕಾರಕ್ಕೆ ಸರಿಯಾದ ಮಾರ್ಗವಲ್ಲವೆಂದು ಹೇಳುತ್ತೇನೆ.

Mr. DEPUTY SPEAKER.—What time does the Hon'ble Minister require to reply ? Does he require 15 minutes or 10 minutes ?

Dr. R. NAGAN GOWDA.—10 minutes will be all right.

*ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ, ಈ ವಿಧಾನಸೌಧದ ತೋಟಗಳಿಗಾಗಿ ವೆಚ್ಚಮಾಡಬೇಕಾದ ಹಣವನ್ನು ಈಗ ಅಗ್ರಿಕಲ್ಚರಲ್ ಇಲಾಖೆಗೆ ಸೇರಿಸಿದ್ದಾರೆ. ಇದರ ಬಗ್ಗೆ ಮುಖ್ಯಮಂತ್ರಿಗಳು ಏನು ಹೇಳುತ್ತಾರೋ ಅದನ್ನು ತಿಳಿಯಲು, ಪ್ರಾಯಶಃ ಅವರು ವಿಧಾನಸೌಧದ ಬಳಿ ಇರಬಹುದು, ಆದ್ದರಿಂದ ಅವರನ್ನು ಬರಮಾಡಿಕೊಂಡಿದ್ದರೆ ಚೆನ್ನಾಗಿರುತ್ತದೆಂದು ಹೇಳುತ್ತೇನೆ.

Mr. DEPUTY SPEAKER.—That is not my responsibility.

ಶ್ರೀ ಆರ್. ಮುನಿಸ್ವಾಮಯ್ಯ (ಬೆಂಗಳೂರು ಉತ್ತರ—ಅನುಸೂಚಿತ ಜಾತಿಗಳು).—ಸ್ವಾಮಿ, ನಮ್ಮ ಸಂಸ್ಥಾನದಲ್ಲಿ ಜೇನು ಸಾಕುವುದು ಲಾಭದಾಯಕವಾಗಿರುವುದಿಲ್ಲವೆಂದು ಹೇಳುತ್ತೇನೆ. ಈ ಬಾಬಿನಲ್ಲಿ ಸುಮಾರು ಲಕ್ಷಾಂತರ ರೂಪಾಯಿಗಳು ಕೇವಲ ಸಂಬಳ ಸಾರಿಗೆ ರೂಪದಲ್ಲಿ ಖರ್ಚಾಗುತ್ತಿವೆ, ಜೇನು ಸಾಕುವುದರಿಂದ ಸಂಸ್ಥಾನಕ್ಕೆ ಏನು ಆದಾಯ ಬರುತ್ತಿದೆ ಎಂಬುದನ್ನು ಕಂಡುಹಿಡಿಯುವುದಕ್ಕೇ ಸಾಧ್ಯವಿಲ್ಲ.

ಇನ್ನು ಉತ್ತಮ ರೀತಿಯಲ್ಲಿ ವ್ಯವಸಾಯ ಮಾಡುವುದರ ಬಗ್ಗೆ ಪ್ರದರ್ಶನ ಮತ್ತು ಪ್ರಚಾರ ಕಾರ್ಯಗಳನ್ನು ಕೈಗೊಳ್ಳಲು ಈ ಡಿಮ್ಯಾಂಡಿನಲ್ಲಿ ಮೊಬಲಗನ್ನು ಸೇರಿಸಲಾಗಿದೆ. ಆದರೆ ಈ ದಿವಸ ಆ ರೀತಿಯಾಗಿ ಯಾವ ಒಬ್ಬ ಫೀಲ್ಡ್‌ಮನ್ ಕೂಡ ಹಳ್ಳಿಗಳಲ್ಲಿ ಪ್ರಚಾರ ಕಾರ್ಯಗಳನ್ನು ನಡೆಸುತ್ತಿಲ್ಲ. ಸರ್ಕಾರದವರು ಮತ್ತೆ ಎಲ್ಲಿ ಪ್ರಚಾರಗಳನ್ನು ನಡೆಸುತ್ತಾರೋ ಗೊತ್ತಾಗುವುದಿಲ್ಲ. ಆದಕಾರಣ ಇದೊಂದುವೇಳೆ ಹಾಗೆ ಅನುಕೂಲವಾಗುವುದಾದರೆ ಈ ಕಾರ್ಯವನ್ನು ಸೌಕೇಟ್‌ಗಳ ಮೂಲಕ ನಡೆಸಬೇಕೆಂದು ಸಲಹೆಮಾಡುತ್ತೇನೆ.

ಇನ್ನು ಜಿ.ಎಂ.ಎಫ್. ಸ್ಕೀಮಿನ ಬಗ್ಗೆ ನೇಮಿಸಿಕೊಂಡಿದ್ದ ಸಿಬ್ಬಂದಿ, ಆ ಬಾಬು ಮುಗಿದುಹೋಗಿದ್ದಾಗ್ಯೂ ಇನ್ನೂ ಹಾಗೆಯೇ ಇದೆ. ಅವರನ್ನು ಕೂಡಲೆ ಕೆಲಸದಿಂದ ತೆಗೆದುಹಾಕಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಹಾರ್ಟಿಕಲ್ಚರ್ ಎಂಬ ಬಾಬಿನಲ್ಲಿ ಮೈಸೂರಿನ ಜೂಅಲಾಜಿಕಲ್ ಉದ್ಯಾನವನವನ್ನು ಉತ್ತಮಪಡಿಸಲು 40 ಸಾವಿರ ರೂಪಾಯಿಗಳನ್ನು ಒದಗಿಸಿದ್ದಾರೆ. ಅಲ್ಲಿಯ ಪ್ರಾಣಿಗಳ ಆಹಾರಕ್ಕಾಗಿ ಹೆಚ್ಚು ಹಣ ಖರ್ಚಾಗುತ್ತಿದೆ. ವ್ಯಾಕ್ಸಿನ್ ಇನ್‌ಸ್ಟಿಟ್ಯೂಟ್‌ನಲ್ಲೂ, ಅನುಪಯೋಗವಾಗುತ್ತಿರುವಂಥ ಆಕಳು ಇತ್ಯಾದಿಗಳನ್ನು ಅಲ್ಲಿಯ ಸ್ಲಾಟರ್ ಹೌಸುಗಳಿಗೆ ಕಳುಹಿಸಲು ಸೂಕ್ತ ರೀತಿಯಲ್ಲಿ ಈ Cow Slaughter Actನ್ನು ತಿದ್ದುಪಡಿ ಮಾಡಿ ಈ ಮುದಿರಾಸುಗಳನ್ನೆಲ್ಲಾ ಅಲ್ಲಿಗೆ ಕಳುಹಿಸಿದರೆ ಅಲ್ಲಿರುವ ಮೃಗಗಳ ಆಹಾರಕ್ಕಾಗಿ ಇವುಗಳನ್ನು ಉಪಯೋಗಿಸಬಹುದು.

ಇನ್ನು ಟ್ರಾಕ್ಟರುಗಳ ವಿಚಾರ ಹೇಳುವುದಾದರೆ ಅವು ಸದಾ ಸಿಕ್‌ನಲ್ಲೇ ಇರುತ್ತವೆ; ಎಂದರೆ ಖಾಯಿಲೆ ಬಿದ್ದಿರುತ್ತವೆ. ಆದರೆ ನಮ್ಮ ಡಾಕ್ಟರ್ ಅವರು ಅವುಗಳ ಬಗ್ಗೆ ಸರಿಯಾದ ಎಚ್ಚರಿಕೆಯನ್ನು ತೆಗೆದುಕೊಂಡಿಲ್ಲ. ಇವರು ಕುಳಿತಲ್ಲಿಯೇ ಕುಳಿತಿದ್ದಾರೆ; ಎಂದರೆ ಇವರು ಇಲ್ಲಿಯೇ ಕುಳಿತು ಕೆಲಸ ಮಾಡುತ್ತಿದ್ದಾರೆ. ಇವರು ಬೇಗ ಅವುಗಳನ್ನು ಉತ್ತಮಪಡಿಸಲು ಕಾರ್ಯಕ್ರಮ ಕೈಗೊಳ್ಳಬೇಕೆಂದು ಸಲಹೆ ನೀಡಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ

Mr. DEPUTY SREAKER.—The Hon'ble Minister will now reply.

Sri T. MARIAPPA.—I want the Hon'ble Minister to clarify the position with regard to the tractors. It was initiated by Sri L. Siddappa ; it was continued for some time and stopped.

Sri A. BHEEMAPPA NAIK.—With regard to the losses, I want to know whether it is on account of the subsidies; even now I feel that it is on account of the subsidies that have been

(SRI A. BHEEMAPPA NAIK.)
granted for manure, seeds and other things. I want him to clarify the position and from how long these losses have been incurred; is it from the last year?

Mr. DEPUTY SPEAKER.—I hope the Hon'ble Minister will reply satisfactorily to all the points raised.

Sri M. PALANIYAPPAN (Ulsoor).—We have tabled several cut motions. I would also request the Hon'ble Minister to answer the points raised in all those cut motions.

*ಡಾ॥ ಆರ್. ನಾಗನಗೌಡ (ವ್ಯವಸಾಯ ಶಾಖೆಯ ಮಂತ್ರಿಗಳು).—ಈ ವಿಷಯವಾಗಿ ಅನೇಕ ಮಾನ್ಯ ಸದಸ್ಯರು ಈಗ ಅನೇಕ ವಿಷಯಗಳನ್ನು ಹೇಳಿದ್ದಾರೆ. ಹೋದವರ್ಷ ನಾವು ಹದಿನೈದು ನೂರು ಟನ್ ಕಬ್ಬಿಣವನ್ನು ಕೇಳಿದ್ದೆವು. ಅವರು ನಮಗೆ 190 ಟನ್‌ಗಳನ್ನು ಮಾತ್ರವೇ ಕೊಟ್ಟರು. ಹೀಗೆ ಇದು ಬಹಳ ಕಡಮೆ ಪ್ರಮಾಣದಲ್ಲಿ ಸರಬರಾಯಿ ಆಯಿತು. ಆದರೆ ಈಗ ಅವರು 15 ನೂರು ಟನ್ ಕಬ್ಬಿಣ ಕೊಡಲು ಒಪ್ಪಿಕೊಂಡಿದ್ದಾರೆ. ಅದನ್ನು ಬೇಗ ಕಳುಹಿಸುವುದಾಗಿ ತಿಳಿಸಿದ್ದಾರೆ. ಈ 15 ನೂರು ಟನ್ ಕಬ್ಬಿಣವನ್ನು ವ್ಯವಸಾಯೋದ್ದೇಶಗಳಿಗಾಗಿ ಮಂಜೂರಾಗಿದೆ. ಇಷ್ಟೇ ಅಲ್ಲದೆ ಇದರ ಜೊತೆಗೆ 15 ನೂರು ಟನ್ rounds ಗಳನ್ನೂ ಕೂಡ ಮಂಜೂರುಮಾಡಿದ್ದಾರೆ. ಕೋ-ಆಪರೇಟಿವ್ ಸೊಸೈಟಿಗೆ ಅಲಾಟ್ ಮಾಡಿದ್ದೇವೆ. ಈಗಾಗಲೇ ಚಿಕ್ಕಮಗಳೂರು, ತರೀಕೆರೆ, ಚನ್ನಪಟ್ಟಣ ಈ ಸೊಸೈಟಿಗಳಿಗೆ ಕೊಟ್ಟಿದ್ದೇವೆ.

ಶ್ರೀ ಬಿ. ಹುಚ್ಚೇಗೌಡ.—ಅಲಾಟ್ ಮಾಡುವವರು ಯಾರು?

ಡಾ॥ ಆರ್. ನಾಗನಗೌಡ.—ಅಲಾಟ್ ಮಾಡುವವರು ಯಾರೇ ಆದರೂ ಈ ವರ್ಷ ಆ ಪ್ರಶ್ನೆ ಇಲ್ಲ ಎಂದು ತಿಳಿದುಕೊಂಡಿದ್ದೇನೆ.

ಗುಳದ ವಿಷಯ ಅನೇಕ ಸದಸ್ಯರುಗಳು ಹೇಳಿದರು, ಸಣ್ಣ ಪ್ರಮಾಣದಲ್ಲಿ ರೈತರಿಗೆ ಗುಳ ಬೇಕಾದಾಗ ರೆವಿನ್ಯೂ ಇನ್ಸ್‌ಪೆಕ್ಟರಿಂದ ಪರ್ಮಿಷನ್ ತೆಗೆದುಕೊಂಡು ಹೋಗಬೇಕೆಂದರೆ ಕಷ್ಟವಾಗುತ್ತದೆ ಎಂದು ಹೇಳಿದ ಮೇಲೆ ಈಗ 18 ಅಡಿ ಉದ್ದದ ಬಾರು ಪರ್ಮಿಷನ್ ಇಲ್ಲದೆ ತೆಗೆದುಕೊಳ್ಳಬಹುದು ಎಂದು ಹೇಳಿ ಆಜ್ಞೆ ಮಾಡಿದ್ದೇವೆ. ಆ ರೀತಿ ಕೊಡುತ್ತಾ ಇದ್ದಾರೆ. ಇನ್ಸ್‌ಟ್ರಕ್ಷನ್ ಇಷ್ಯೂ ಮಾಡಿ ಸರ್ಕ್ಯುಲರ್ ಕಳುಹಿಸಿದ್ದೇವೆ. ಆದಕಾರಣ ಕಬ್ಬಿಣದ ವಿಷಯದಲ್ಲಿ ನಾವು ಈ ವರ್ಷ ಎಲ್ಲಾ ಸೊಸೈಟಿಗಳಿಗೂ ಕಾಗದ ಬರೆದು ಇಷ್ಟು ನಿಮಗೆ ಅಲಾಟ್ ಮಾಡಿದ್ದೇವೆ, ನೀವು ಅದನ್ನು ತೆಗೆದುಕೊಳ್ಳಬೇಕು ಎಂದು ಹೇಳಿ ಸರ್ಕ್ಯುಲರ್ ಹೊರಡಿಸಿದ್ದೇವೆ. ಎಷ್ಟು ತೆಗೆದುಕೊಂಡಿದ್ದಾರೆ ಎಂಬ ಲೆಕ್ಕ ಕೂಡ ಇಟ್ಟುಕೊಂಡಿದ್ದೇವೆ. ಈ ವರ್ಷ ಕಬ್ಬಿಣದ ವಿಷಯದಲ್ಲಿ ತೊಂದರೆ ಇಲ್ಲ ಎಂದು ತಿಳಿದುಕೊಂಡಿದ್ದೇನೆ.

ಶ್ರೀ ಇಮಾಂರವರು ಟ್ರಾಕ್ಟರ್ ವಿಷಯ ಹೇಳಿದರು. ಅವರ ಗಮನಕ್ಕೆ ನಾನು ಈ ವಿಷಯದಲ್ಲಿ ಒಂದು ಅಂಶವನ್ನು ತರಬೇಕೆಂದು ಇದ್ದೇನೆ. ಈ ಟ್ರ್ಯಾಕ್ಟರುಗಳನ್ನು ಕೊಂಡದ್ದು 1948ರಲ್ಲಿ.

ಶ್ರೀ ಟಿ. ಮರಿಯಪ್ಪ.—1945-46ರಲ್ಲೇ ಕೊಂಡುಕೊಳ್ಳಲಾಗಿತ್ತು.

ಡಾ॥ ಆರ್. ನಾಗನಗೌಡ.—1948ರಲ್ಲಿ ನಮ್ಮ ಹತ್ತಿರ 23 ಟ್ರ್ಯಾಕ್ಟರುಗಳು ಇದ್ದವು. 1948 ರಿಂದ ಇತ್ತೀಚೆಗೆ ನಾವು 128 ಟ್ರ್ಯಾಕ್ಟರುಗಳನ್ನು ಕೊಂಡಿದ್ದೇವೆ. ಯಾವಾಗ ಎಂದರೆ ಸೆಪ್ಟೆಂಬರ್ 48ರಲ್ಲಿ 80, ನವೆಂಬರ್ 48ರಲ್ಲಿ 28, ಆಮೇಲೆ 20 ಟ್ರ್ಯಾಕ್ಟರುಗಳನ್ನು ಕೊಂಡೆವು. ಈ ಟ್ರ್ಯಾಕ್ಟರುಗಳಲ್ಲಿ youngest ಅನ್ನುವುದಕ್ಕೆ ಏಳು ವರ್ಷ ವಯಸ್ಸಾಗಿದೆ. ಈ ಟ್ರ್ಯಾಕ್ಟರ್‌ಗಳು ಕೆಲಸ ಮಾಡುವುದಕ್ಕೆ ಪ್ರತಿ ಟ್ರ್ಯಾಕ್ಟರಿಗೂ 10 ಸಾವಿರ ಘಂಟೆ ಕೆಲಸ ಮಾಡಬಹುದು ಎಂಬ ಒಂದು ಟೈಂಲಿಮಿಟ್ ಇದೆ. ನಾನು ಮೊದಲೇ ಹೇಳಿದ ಹಾಗೆ ಬಹಳ ಕಮ್ಮಿ ವಯಸ್ಸಾಗಿರುವುದು ಎನ್ನುವುದಕ್ಕೆ ಏಳು ವರ್ಷ ವಯಸ್ಸಾಗಿದೆ. ಇನ್ನೂ ಮಿಕ್ಕದಕ್ಕೆ 8-10 ವರ್ಷ ಆಗಿದೆ. ಆದಕಾರಣ ವಯಸ್ಸಾದ ಹಾಗೆಲ್ಲಾ parts wear out ಆಗುತ್ತದೆ, wear out ಆದ ಪಾರ್ಟ್ಸ್‌ನ್ನು ರೀಪ್ಲೇಸ್ ಮಾಡಬೇಕಾಗುತ್ತದೆ. ರೀಪ್ಲೇಸ್ ಮಾಡಿದರೂ ಕೆಲವು ಕೆಲಸ ಮಾಡುವುದಿಲ್ಲ.

ಶ್ರೀ ಎ. ಭೀಮಪ್ಪನಾಯಕ್.—ಯಾವ ಒಂದು ಟ್ರ್ಯಾಕ್ಟರ್ ಆದರೂ ಸಾವಿರ ಘಂಟೆ ಕೆಲಸ ಮಾಡಿದೆಯೇ ಎಂಬುದನ್ನು ಹೇಳುತ್ತೀರಾ?

ಡಾ॥ ಆರ್. ನಾಗನಗೌಡ.—ದೀರ್ಘ ಕಾಲ ಟ್ರ್ಯಾಕ್ಟರುಗಳು ಕೆಲಸ ಮಾಡಿವೆ ಎಂಬುದನ್ನು ತಮ್ಮ ಗಮನಕ್ಕೆ ತಂದೆ, 10 ಸಾವಿರ ಘಂಟೆ ಕೆಲಸ ಮಾಡಬಹುದು, ಐದು ವರ್ಷದೊಳಗೆ ಆ ಲಿಮಿಟ್ ಮೀರುತ್ತದೆ. ಅದೂ ಅಲ್ಲದೆ rust and other things like that happen with regard to them.

Mr. DEPUTY SPEAKER.—Sri Venkatappa has raised a point. He wants a definite reply about the loss of Rs. 14 lakhs.

Dr. R. NAGAN GOWDA.—That is the position with regard to tractors. The losses amounting to Rs. 14 lakhs, that was mentioned, are due to subsidy as per the policy of the Government at that time to sell manure at a reduced price.

ಅದನ್ನು ನಾವು ಅಕೌಂಟ್ಸ್‌ನಲ್ಲಿ ರೀಕೂಪ್ ಮಾಡಿರಲಿಲ್ಲ, ಈಗ ಮಾಡಿದ್ದೇವೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಇದರಲ್ಲಿ ಬಂದಿರುವುದು shortage and loss ಎಂದು, subsidy ಎಂದಲ್ಲ, ಇಲ್ಲಿ ಯಾವುದು ಸಬ್ಸಿಡಿ, ಸಬ್ಸಿಡಿ ಎಷ್ಟು, loss ಎಷ್ಟು, shortage ಎಷ್ಟು ಎಂಬ ವಿವರಗಳನ್ನು, I think the Government is bound to give. It is not found in the Budget.

Mr. DEPUTY SPEAKER.—You have got better opportunity to speak about these at the time of debate on the Appropriation Bill.

Dr. R. NAGAN GOWDA.—The Government had decided to give manure at half the rate and that is being adjusted now. We have got a mobile unit which has been taken into account now and hence the Demand is now asked for.

Sri A. BHEEMAPPA NAIK.—Why don't you give details with regard to subsidy and how much is the loss and how much is the shortage? If the Hon'ble Minister gives those details, the House will be satisfied.

Sri B. HUTCHE GOWDA.—Then that must come in the Budget.

Mr. DEPUTY SPEAKER.—You may raise all these points at the time of discussion on the Appropriation Bill.

Dr. R. NAGAN GOWDA.—I am able to give all those details later on. Now we have allowed about two per cent for shortages, etc. But wherever there had been shortages of more than two per cent, in those cases we have taken action on the people that have been responsible for them. About the details under three Heads, I will be able to give them later on. With regard to the point raised by Sri Byre Gowda about stabilisation of prices, that is a very big problem by itself. ಅದನ್ನು ಸ್ಟೆಬಿಲೈಸ್ ಮಾಡುವುದು ಅಷ್ಟು ಸುಲಭವಾಗಿ ಆಗುವುದಿಲ್ಲ. ಇಷ್ಟೇ ವಿಸ್ತೀರ್ಣ ಬೆಳೆಯಬೇಕು ಹೆಚ್ಚಾಗಿ ಬೆಳೆದರೆ ಮಾರ್ಕೆಟ್ ಸಪ್ಲೈ ಹೆಚ್ಚಾಗಿ ಧಾರಣೆ ಕಮ್ಮಿ ಆಗುತ್ತದೆ ಎಂದು ಹೇಳಿ U.S.A. ನಿದರ್ಶನ ಕೊಟ್ಟರು. ಅದನ್ನು ಮಾಡಿದರೂ ಕೂಡ ಕೆಲವು ಮಟ್ಟಿಗೆ ಫಲಕಾರಿಯಾಯಿತೇ ಹೊರತು ಪೂರ್ಣವಾಗಿ ಫಲಕಾರಿಯಾಗಿದೆ ಎಂದು ಹೇಳುವುದಕ್ಕಾಗುವುದಿಲ್ಲ.

Mr. DEPUTY SPEAKER.—The question is:

"That a sum not exceeding Rs. 74,21,641 be granted to the Government to defray the charges which will come in course of payment during the year ending 31st day of March 1957, in respect of 'Agriculture'."

The motion was adopted.

DEMAND No. 24—VETERINARY.

41. VETERINARY.

Mr. DEPUTY SPEAKER.—Motion moved:

"That a sum not exceeding Rs. 37,09,444 be granted to the Government to defray the charges which will come in course of payment during the year ending 31st day of March 1957, in respect of 'Veterinary'."

10 A.M.

I would request the Whips of the parties concerned to select some few speakers so that I can give them sufficient time to meet all the points; otherwise, it is very difficult for me to allow members to speak.

Sri A. BHEEMAPPA NAIK (Molakalmuru).—This suggestion has just now come from the Chair. Even to select speakers, we need time. Therefore it will be difficult to select persons.

Mr. DEPUTY SPEAKER.—You can realise my difficulty. There are so many Hon'ble Members who have tabled cut motions; we have to give them time. That difficulty also must be realised by you.

*ಶ್ರೀ ಎ. ಭೀಮಪ್ಪನಾಯಕ್.—ಸ್ವಾಮಿ, ಪಶು ವೈದ್ಯ ಶಾಖೆ ಇದುವರೆಗೂ ಚೆನ್ನಾಗಿ ಕೆಲಸ ಮಾಡುತ್ತಿತ್ತು. ಮೈಸೂರು ದೇಶದಲ್ಲಿ ಪ್ರತಿ 28,000 ದನಗಳಿಗೂ ಒಂದು ವೈದ್ಯ ಶಾಲೆಯಿರುವ ರೀತಿಯಲ್ಲಿ ಏರ್ಪಾಡು ಮಾಡಿದ್ದೇವೆ. ಇದು ಬಹಳ ಅಭಿನಂದನೀಯವಾಗಿದೆ. ಆದರೆ ಪಶು ವೈದ್ಯಶಾಲೆಗಳು ಎಷ್ಟರಮಟ್ಟಿಗೆ ಸಾಮಾನುಗಳನ್ನು ಹೊಂದಿವೆ, ಔಷಧಿಗಳನ್ನು ಹೊಂದಿವೆ ಎಂಬುದನ್ನು ಯೋಚನೆಮಾಡಿದರೆ ವಿಷಾದವಾಗುತ್ತದೆ. ಸುಮ್ಮನೆ ಒಬ್ಬರು ಇನ್ಸ್ಪೆಕ್ಟರಿದ್ದರೆ ಅಥವಾ ಡಾಕ್ಟರಿದ್ದರೆ ಅದನ್ನು ಪಶು ವೈದ್ಯಶಾಲೆಯೆಂದು ಕರೆಯುವುದು ಸರಿಯೇ ? ನಾರಾಯಣಸ್ವಾಮಿ ನಾಯ್ಡುರವರು ಬಹಳ ದಿವಸಗಳು ಪಶು ವೈದ್ಯಶಾಲೆಯ ಡಾಕ್ಟರಾಗಿ ಕೆಲಸ ಮಾಡಿಕೊಂಡು ಬಂದರು. ಅವರು ಯಾವ ಕಾರಣಕ್ಕಾಗಿಯೋ ಹೊರಟು ಹೋದರು. ಅವರಾದಮೇಲೆ ಇನ್ನೊಬ್ಬರನ್ನು ನೇಮಿಸಿದರು, ಅವರು ಡ್ಯೂಟಿಗೆ ಬರಲಿಲ್ಲ. ಅದರಮೇಲೆ ಇನ್ನೊಬ್ಬರನ್ನು ನೇಮಕ ಮಾಡಿದರು. ಈಗ ಅದರ ಆಡಳಿತ ಅವರಿಂದ ನಡೆಯುತ್ತಿದೆಯೋ ಅಥವಾ ಇನ್ನಾರಿಂದ ನಡೆಯುತ್ತಿದೆಯೋ ಗೊತ್ತಿಲ್ಲ. ಇದು ಆಡಳಿತದ ಏರ್ಪಾಡಿನ ವೈಖರಿ.

ಇನ್ನೊಂದೇನೆಂದರೆ, ಈ ಇಲಾಖೆಗೆ ಸಂಬಂಧಪಟ್ಟ ಪೋರ್ಟ್‌ಫೋಲಿಯೋ ಮಂತ್ರಿಗಳು ಈ ಇಲಾಖೆಯ ವಿಚಾರವನ್ನು ನೋಡುತ್ತಿದ್ದಾರೋ ಇಲ್ಲವೋ ಗೊತ್ತಿಲ್ಲ. ಏಕೆಂದರೆ ಒಂದು ಸಾರಿ ರಿಂಡರ್‌ಪೆಸ್ಟ್ ರೋಗ ಮೂರು ತಿಂಗಳು ಕಾಲ ಚಳ್ಳಕೆರೆ ತಾಲ್ಲೂಕಿನಲ್ಲಿತ್ತು. ಒಂದೇ ಸಮನೆ ಹೇಳಿದರೂ ಅದಕ್ಕೆ ಜವಾಬೇ ಇಲ್ಲ ! ಜ್ವರಬಂದರೆ ಬಾಯಿದ್ದವರಾದರೆ ಹೇಳಿಕೊಳ್ಳಬಹುದು, ಆದರೆ ಆ ಮೂಕ ಪ್ರಾಣಿಗಳು ಯಾರಿಗೆ ಹೇಳಿಕೊಳ್ಳಬೇಕು ?

ಡಾ॥ ಆರ್ ನಾಗನಗೌಡ (ವ್ಯವಸಾಯ ಇಲಾಖೆಯ ಮಂತ್ರಿಗಳು).—ಯಾವಾಗ ಬಂತು ?

ಶ್ರೀ ಎ. ಭೀಮಪ್ಪನಾಯಕ್.—ಹೋದ ವರ್ಷ 5-6 ತಿಂಗಳ ಹಿಂದೆ ನಾನೇ ಬಂದು ಹೇಳಿದೆ. ಕೊನೆಗೆ ಖುದ್ದಾಗಿ ಡೈರೆಕ್ಟರ್ ಆಫೀಸಿಗೆ ಹೋಗಿ ಹೇಳಿದಮೇಲೆ ಬೇಕಾದ serum, ಇಂಜಕ್ಷನ್ ವಗೈರೆಗಳನ್ನು ಕಳುಹಿಸಿದರು. ಅಷ್ಟು ಹೊತ್ತಿಗೆ ಏನಿಲ್ಲವೆಂದರೂ 200-300 ದನಗಳು ಸತ್ತು ಹೋಗಿದ್ದುವು. ಈ ಪ್ರಕಾರ ಈ ಇಲಾಖೆಯ ಆಡಳಿತ ಸರಿಯಾಗಿ ನಡೆಯು

(ಶ್ರೀ ಎ. ಭೀಮಪ್ಪನಾಯಕ್.)

ತ್ತಿಲ್ಲ. I charge the Minister in this respect. ಕಾರಣ ಇಷ್ಟೆ. ಇಂಥ ಇಲಾಖೆಯಲ್ಲಿ ಇಂಥವರು ಅದರ ಮ್ಯಾನೇಜ್‌ಮೆಂಟ್ ನೋಡಿಕೊಳ್ಳುವವರು ಎಂದು ಒಂದು ಖಾಯಂ ಏರ್ಪಾಡನ್ನು ಮಾಡದೆ ಇದ್ದರೆ ಹೇಗೆ ಈ ಇಲಾಖೆ efficient ಆಗಿ ನಡೆಯುತ್ತದೆಂದು ಕೇಳುತ್ತೇನೆ. ಯಾವ ಆಸ್ಪತ್ರೆಗೆ ಹೋಗಿ ನೋಡಲಿ ನಿರ್ದಿಷ್ಟವಾಗಿ ಏನೇನು ಸಾಮಾನುಗಳು ಬೇಕೋ ಅವು ಸಪ್ಲೈ ಆಗುತ್ತಿಲ್ಲ. ಇದು ವಿಷಾದಕರ. ಸರ್ಕಾರದವರಿಗೆ ಸರಿಯಾಗಿ ಏರ್ಪಾಡುಗಳನ್ನು ಮಾಡುವುದಕ್ಕೆ ಸಾಧ್ಯವಿದ್ದರೆ ಮಾಡಬೇಕು, ಇಲ್ಲದಿದ್ದರೆ ಎಲ್ಲವನ್ನೂ ಮುಚ್ಚಿಬಿಡುವುದು ಲೇಸು.

ಇದೇ ರೀತಿ ವ್ಯವಸಾಯದ ಇಲಾಖೆಯೂ ಆಗಿದೆ. ಅದನ್ನೂ ಮುಚ್ಚಬೇಕೆಂದು ಹೇಳುತ್ತಾರೆ. ಉದ್ದೇಶ ಇಷ್ಟೆ. ಸರಿಯಾಗಿ efficient ಆದ ಏರ್ಪಾಡುಗಳನ್ನಾವುದನ್ನೂ ಮಾಡುತ್ತಿಲ್ಲ. ಅಜ್ಜಂಪುರ ಅಮೃತ ಮಹಲ್ ಫಾರಂ ತೆಗೆದುಕೊಳ್ಳಿ. ಲಕ್ಷಾಂತರ ಎಕರೆಗಳಷ್ಟು ಎಕರೆಗಳನ್ನು ಅವರು ಇಟ್ಟುಕೊಂಡಿದ್ದಾರೆ. ಅನೇಕ ದನಗಳಿವೆ. ಆದರೆ ವರ್ಷೇ ವರ್ಷೇ ನೋಡಿದರೆ ಅಲ್ಲಿ ಹುಟ್ಟುವ ಕರುಗಳಿಗಿಂತ ಸಾಯುವ ದನಗಳ ಸಂಖ್ಯೆಯೇ ಜಾಸ್ತಿಯಾಗಿದೆ. ಇತ್ತೀಚೆಗೇನೋ savings ತೋರಿಸುತ್ತಿದ್ದೇವೆಂದು ಹೇಳುತ್ತಾರೆ. ಇದು ಹೇಗೆ ಆಗಿದೆಯೆಂದರೆ, ದನಗಳಿಗೆ ಹುರುಳಿ ಹಾಕದೆ ಇದ್ದರೆ savings ಆಗಿಯೇ ಆಗುತ್ತದೆ. Savings ಮಾಡುವುದೆಂದರೆ ಈ ರೀತಿ ಅಲ್ಲ. ದನಗಳು ಜಾಸ್ತಿಯಾಗುವುದಕ್ಕೇನಾದರೂ ಮಾಡಿದ್ದೀರಾ? ಕುರಿ ಕುಪ್ಪೆ ಫಾರಂ ಮಾಡಿದ್ದೀರಿ. ಅಲ್ಲಿನ ಖರ್ಚನ್ನು ನೋಡಿದರೆ, ನೀವೇನು ಖರ್ಚುಮಾಡಿ ಎಷ್ಟು ದನಗಳನ್ನು ಸಾಕುತ್ತೀರೋ ಅದಕ್ಕೆರಡರಷ್ಟು ದನಗಳನ್ನು ನೀವು ಖರ್ಚುಮಾಡುವ ಹಣದಿಂದಲೇ ಕೊಳ್ಳಬಹುದು. ಇದು ಪರಿಶೋಧನಾ ರೀತಿಯೇ! ದನಗಳನ್ನು ಅಟ್ಟಿಕೊಂಡು ಹೋಗಿ ಮೇಯಿಸುವುದು, ತಂದು ಕಟ್ಟಿಹಾಕುವುದು—ಇವೇ ನಿಮ್ಮ ಪರಿಶೋಧನಾ ರೀತಿಗಳು? Artificial Insemination ಎಂದು ಹೇಳುತ್ತಲೇ ಇದ್ದೀರಿ. ಎಲ್ಲೆಲ್ಲಿ ಮಾಡಿದ್ದೀರೆಂಬುದನ್ನು ಹೇಳುತ್ತೀರಾ? ಕೇಳಿದರೆ, ಅದಕ್ಕೆಲ್ಲಾ aeroplane ಬೇಕಾಗುತ್ತದೆ, Artificial Insemination ಮಾಡಬೇಕಾದರೆ 24 ಗಂಟೆಗಳೊಳಗೇ ಮಾಡಬೇಕಾಗುತ್ತದೆ, ಅದನ್ನು cold storageನಲ್ಲಿಡಬೇಕೆಂದು ಹೇಳುತ್ತಾರೆ. ಚಿತ್ರದುರ್ಗದಲ್ಲಿ ನಾನಿದ್ದಾಗ ಈ ಬಗ್ಗೆ ಕೇಳಿದ್ದಕ್ಕೆ ಡಿಸ್ಟ್ರಿಕ್ಟ್ ಬೋರ್ಡಿನವರು ತಮ್ಮ ಭಾಗದ ಕೋಟಾ ಕೊಟ್ಟಿಲ್ಲ, ಅವರು ಕೊಟ್ಟಮೇಲೆ ಮಾಡುತ್ತೇವೆ ಎಂದು ಹೇಳಿದರು. ಅವರಿಂದ ಕೋಟಾ, ಇವರಿಂದ ಕೋಟಾ ತೆಗೆದುಕೊಂಡು 100 ಕಡೆ ಏರ್ಪಾಡು ಮಾಡುತ್ತೇವೆನ್ನುವುದಕ್ಕೆ ಬದಲಾಗಿ ಹತ್ತು ಕಡೆ ನೀವೇ ಸ್ವಂತವಾಗಿ ಏರ್ಪಾಡು ಮಾಡಿ.

Castration of Scrub Bulls ಎಂದು ಹೇಳಿ ಶ್ರೀ ಮರಿಯಪ್ಪನವರು ಒಂದು ಕಾನೂನನ್ನೇ ತಂದರು. ಆದರೆ ಅದು ಅದೇ ರೀತಿ ನಿಂತಿದೆ. ಒಂದು ರೀತಿ, ನೀತಿ, ತತ್ವಹಾಕಿಕೊಂಡು ಈ ಇಲಾಖೆಯನ್ನು ಅಭಿವೃದ್ಧಿಪಡಿಸದೆ ಇದ್ದರೆ ಏನೂ ಪ್ರಯೋಜನವಾಗುವುದಿಲ್ಲ. ಎಷ್ಟು ಬೇಕಾದರೂ ಖರ್ಚುಮಾಡಿ; ಕೊಡುವುದಕ್ಕೆ ತಯಾರಾಗಿದ್ದೇವೆ. ಆದರೆ ಇದರಿಂದ ಮನುಷ್ಯನ ಬೆನ್ನುಮೂಳೆಯಾದಂಥ ಗೋಧನ ಬೆಳೆಯದೆ ಹೋದರೆ ಏನೂ ಪ್ರಯೋಜನವಿಲ್ಲ. ಎಷ್ಟೇ ವ್ಯವಸಾಯಗಾರರಾದರೂ ಗಂಡ ಹೆಂಡತಿ ಕೂಡಿ ತಾವೇ ಏನನ್ನು ಎಳೆಯುವುದಕ್ಕಾಗುತ್ತದೆಯೇ? ಗೋಧನವೇ ರೈತನಿಗೆ ಮುಖ್ಯವಾದ ಶಕ್ತಿ. ಅದನ್ನು ಉಳಿಸಿಕೊಂಡು ಬಂದು ರೈತರನ್ನು ಕಾಪಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಶ್ರೀ ಎಚ್. ಕೆ. ವೀರಣ್ಣಗೌಡ (ಮದ್ದೂರು).—ಸ್ವಾಮಿ, ಈ ಇಲಾಖೆಯ ಕಾರ್ಯಕಲಾಪಗಳು ಇತ್ತೀಚೆಗೆ ಹೆಚ್ಚಾಗಿವೆಯೆಂದು ಪುಸ್ತಕದಲ್ಲಿ ಓದಿಕೊಂಡು ಭಾಷಣಗಳಿಂದ ತೃಪ್ತಿಪಡುವುದಿಲ್ಲ. ಅನುಭವದಲ್ಲಿ ಈ ಇಲಾಖೆ ಹೇಗಿದೆಯೆಂಬುದನ್ನು ನೋಡಬೇಕು. ಕೋಳಿ ಸಾಕುವುದು, ಕೋಳಿಯ ತಳಿಯ ಅಭಿವೃದ್ಧಿ ಮಾಡುವುದು—ಈ ಕಾರ್ಯಕ್ರಮವನ್ನು ಈ ಇಲಾಖೆಯವರಿಗೆ ವಹಿಸಿದ್ದಾರೆ. ಇವರು ಒಂದು ಡಜನ್ ಮೊಟ್ಟೆಗೆ ಆರು ರೂಪಾಯಿನಂತೆ ಒಳ್ಳೆಯ ತಳಿಯ ಮೊಟ್ಟೆಗಳನ್ನು ಕೊಡುತ್ತಿದ್ದಾರೆ. ನಾನು ಒಂದು ಡಜನ್ ಮೊಟ್ಟೆಗಳನ್ನು ಕೊಂಡು ಕೊಂಡೆ. ಅವುಗಳಿಂದ ಮೂರು ಮರಿ ಆಯಿತು. ಆ ಮೂರರಲ್ಲೂ ಎರಡು ಸತ್ತು, ಒಂದು ಸಾಯುವುದೂ ಇಲ್ಲ ಬದುಕುವುದೂ ಇಲ್ಲ ಹಾಗಿದೆ! ಈ ಇಲಾಖೆಯವರನ್ನು ಏಕೆ ಹೀಗಾಯಿತು ಎಂದು ಕೇಳಿದರೆ, ಸ್ಥಳದಿಂದ ಸ್ಥಳಕ್ಕೆ ಹೋಗುವಾಗ ಮೊಟ್ಟೆ ಅಲ್ಲಾಡಿ ಹೋಗುತ್ತದೆ, ಒಳಗೆಲ್ಲಾ ನೀರಾಗಿ ಸರಿಯಾಗಿ ಮರಿಯಾಗುವುದಿಲ್ಲ ಎಂದು ಸಮಜಾಯಿಷಿ ಹೇಳುತ್ತಾರೆ. ಹಾಗಾದರೆ ಇದಕ್ಕಿನ್ನು ಏರೋಪ್ಲೇನ್ ಬರಬೇಕೇ, ಹೀಗೆ ಪ್ರತಿಯೊಂದು ಹಳ್ಳಿ ಹಳ್ಳಿಯಲ್ಲೂ ಎಲ್ಲರೂ ಮೊಟ್ಟೆ ತೆಗೆದುಕೊಳ್ಳಬೇಕೆಂದು ಹೇಳಿ ಇಂಥ ಮೊಟ್ಟೆಗಳನ್ನು ಕೊಟ್ಟು ರೈತರಿಗೆ ನಷ್ಟಪಡಿಸುವುದು ಸರಿಯಲ್ಲ.

ಇನ್ನೊಂದು, ನನ್ನ ಅನುಭವ ಹೇಳುತ್ತೇನೆ. ನನ್ನ ಹತ್ತಿರ ಒಂದು ಹುಂಜ ಇತ್ತು. ಈ ಇಲಾಖೆಯವರು ಬಂದು, ನಾಡುಹುಂಜಕ್ಕೆ ಬದಲು ಒಂದು ಸೊಗಸಾದ ಹುಂಜ ಕೊಡುತ್ತೇವೆ ಎಂದು ಹೇಳಿದರು. ನಾನು ಅದೂ ನಿಜವೆಂದು ಭಾವಿಸಿ ಎಲ್ಲರಿಗೂ ಅದೇ ರೀತಿ ಪ್ರಚಾರಮಾಡಿ, ಬದಲು ಹುಂಜಗಳನ್ನು ಎಲ್ಲರಿಗೂ ಕೊಡಿ ಎಂದು ಕೇಳಿದರೆ, ಈಗ ಇಲಾಖೆಯವರು ಎಲ್ಲವೂ ತೀರಿ ಹೋಯಿತು ಎಂದು ಹೇಳುತ್ತಾರೆ. ಹೀಗೇಕೆ ಪ್ರಚಾರ ಮಾಡಬೇಕು ಅವರಿಗೆ ಕೊಡುವುದಕ್ಕೆ ಸಾಧ್ಯವಿಲ್ಲದಮೇಲೆ?

ಆಮೇಲೆ, ರೋಡ್ ಐಲೆಂಡ್ ಜಾತಿಯ ಕೋಳಿ ಇಟ್ಟುಕೊಂಡಿದ್ದೇನೆ. ಒಂದು ದಿನ ನಮ್ಮ ಮನೆಗೆ ಕೋಳಿ ಪ್ರಚಾರ ಮಾಡುವುದಕ್ಕೆ ಸಂಬಂಧಪಟ್ಟ ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟರೂ ನಮ್ಮೂರಿನಲ್ಲಿರುವ ಪಶುವೈದ್ಯ ಡಾಕ್ಟರು ಬಂದರು. ಕೆಲವು ಮೊಟ್ಟೆಗಳನ್ನು ಗಂಟು ಹಾಕಿ ಹೋದರು. ನನ್ನಲ್ಲಿದ್ದ ಕೋಳಿಗಳಿಗೆ ಇಂಜಕ್ಷನ್ ಕೊಡಿಸಿದಿರಾ ಎಂದು ಕೇಳಿದರು. ಇಲ್ಲವೆಂದು ಹೇಳಲು, ಮಾರನೆಯದಿನ ಬಂದು ಅದನ್ನೂ ಕೊಟ್ಟರು. ಹೀಗೆ ಕೊಟ್ಟ ಮೇಲೆ ಎರಡು ಮೂರು ಕೋಳಿಗಳು ಭೇದಿಯಿಂದ ಸತ್ತುಹೋದವು. ಇನ್ನೊಂದು ಕತ್ತನ್ನು ಬಗ್ಗಿಸಿಕೊಂಡು ಬಿದ್ದಲ್ಲೇ ಬಿದ್ದು ಕೊಂಡಿತು. ಇದೇನು ಸಂಶೋಧನೆ? ಹೀಗಾಗುವುದೇ ಇಲ್ಲ ಎಂದು ನಾನು ಹೇಳುವುದಿಲ್ಲ. ಆಸ್ಪತ್ರೆಗಳಲ್ಲಿ ಕೂಡ ಕೆಲವು ಸಂದರ್ಭಗಳಲ್ಲಿ ಆಪರೇಷನ್ ಮಾಡುವಾಗ, ಇಂಜಕ್ಷನ್ ಕೊಡುವಾಗಲೇ ಸತ್ತು ಹೋಗುತ್ತಾರೆ. ಆದರೆ ಹೀಗೆ, ನಾನು ತೆಗೆದುಕೊಂಡ ಮೊಟ್ಟೆಗಳಲ್ಲಿ ಮೂರು ಮರಿಯಾದರು ಎರಡು ಮೊಟ್ಟೆ ಹೋಯಿತು, ಇನ್ನೊಂದು ಒದ್ದಾಡುತ್ತಾ ಇದೆ. ಯಾರು ನನಗೆ ಪ್ರಚಾರ ಮಾಡಲು ಬಂದರೋ ಆ ಅಧಿಕಾರಿ ಮತ್ತೆ ಬಂದರೆ? ವಿಚಾರ ಮಾಡಿದರೆ? ಇಂಜಕ್ಷನ್ ಕೊಟ್ಟ ಮೇಲೆ ಏಕೆ ಹೀಗಾಯಿತು ಎಂದು

ವಿಚಾರಿಸಬೇಡವೇ? ಹಳ್ಳಿಗಳಲ್ಲಿ ಕೊಂಡ ಕೋಳಿಗಳ ಬೆಲೆ ಕಡಮೆಯೇನಿಲ್ಲ, ನಾಲ್ಕಾರು ರೂಪಾಯಿ ಒಂದೊಂದಕ್ಕಾಗುತ್ತದೆ. ಹೀಗಿರುವಾಗ ಅವರು ಹೀಗೆ ಮಾಡಿದರೆ ಹೇಗೆ?

*ಶ್ರೀ ಜೆ. ಮಹಮ್ಮದ್ ಇಮಾಂ (ಜಗಳೂರು).—ಸ್ವಾಮಿ, ಕೋಳಿಗಳ ವಿಚಾರದಲ್ಲಿ ನಾನು ಒಬ್ಬ victim. ಈ ಇಲಾಖೆಯವರು Poultry farms ಗಳನ್ನು ಎಲ್ಲಾ ಕಡೆಯೂ ಮಾಡಬೇಕು, ಇದಕ್ಕೆ ಉತ್ತೇಜನ ಕೊಡಬೇಕೆಂದು ಹೇಳುತ್ತಾರೆ. ನಿಜ, ಇದರಿಂದ ರೈತರಿಗೆ ಒಳ್ಳೆಯದು. ಈ ಇಲಾಖೆಯವರು ಜಗಳೂರಿಗೆ ಕೋಳಿ ಮೊಟ್ಟೆಯನ್ನು ಕಳುಹಿಸಿದರು. ನಾನೂ ಒಂದು ಡಜನ್ ಮೊಟ್ಟೆಗಳನ್ನು ತೆಗೆದುಕೊಂಡೆ, ಅದರಲ್ಲಿ ಒಂಭತ್ತು ಕೋಳಿ ಬಂದವು, ಚೆನ್ನಾಗಿ ಬೆಳೆದವು. ಆಮೇಲೆ ಅವನ್ನು ಅಭಿವೃದ್ಧಿಪಡಿಸಿ ಅವುಗಳಿಂದ 25 ಕೋಳಿಗಳಾದವು. ಹುಡುಗರು ಅವನ್ನು ನೋಡಿ ಬಹಳ ಚೆನ್ನಾಗಿವೆ, ಅವನ್ನು ಕುಯ್ಯಬೇಡಿ ಎಂದು ಹೇಳಿದರು. ಆದರೆ ಈಗ್ಗೆ ಎರಡು ತಿಂಗಳ ಕೆಳಗೆ 'ರಾನಿಕೆಟ್' ರೋಗ ಬಂತು. ಮೊನ್ನೆ ನಾನು ಹೋಗಿ ನೋಡಿದರೆ ಎದೆ ಒಡೆಯಿತು. ಅಲ್ಲಿ ಒಂದು ಕೋಳಿ ಕೂಡ ಇಲ್ಲ! ನೋಡುವುದಕ್ಕೆ ಬಹಳ ಚೆನ್ನಾಗಿದ್ದವು. ಆ ಕಾಯಿಲೆ ಬರದಿದ್ದರೆ 200 ಕೋಳಿಗಳನ್ನು ಮಾಡುತ್ತಿದ್ದೆ. ಆದರೆ ರೋಗ ಬಂದದ್ದರಿಂದ ಎಲ್ಲವೂ ಪಡ್ಚೆ ಆಗಿ ಹೋದುವು. Preventive ಕೊಟ್ಟರೂ ಕೂಡ ಏಕೆ ಅದರಿಂದ ಪ್ರಯೋಜನವಾಗಲಿಲ್ಲ? ರೈತರು ತಾವೇ ಕೋಳಿಗಳನ್ನು ಬೆಳಸುತ್ತಾರೆ. ಆದರೆ ಈ ಪೌಲ್ಟ್ರಿ ಫಾರಂ ಕೋಳಿಗಳನ್ನು ಒಬ್ಬ ಬೆಳಸಿದ್ದ; 120 ಕೋಳಿಗಳನ್ನು ಮಾಡಿದ್ದ, ಅಷ್ಟೂ ಹೋದುವು. ನನ್ನಲ್ಲಿ 25 ವೈಟ್ ಲಾಕ್ಸ್ ಮತ್ತು ರೆಡ್ ಹಾರ್ನ್ ಇದ್ದವು, ಎರಡನೇದಿವಸದಲ್ಲಿ ಎಲ್ಲಾ ಸತ್ತುಹೋದುವು. ಆ ಖಾಯಿಲೆ ಈ ಖಾಯಿಲೆ ಎಂದು ಹೇಳುತ್ತಾರೆ. ರಾನಿಕೆಟ್ ಖಾಯಿಲೆಗೆ ಇನಾಕ್ಯುಲೇಶನ್ ಮಾಡಿಸಿದರೂ ಏಕೆ ಎಲ್ಲಾ ಸತ್ತುಹೋದುವು ಎಂಬುದನ್ನು ಪೌಲ್ಟ್ರಿ ಫಾರಂ ಇಲಾಖೆಯವರು ನೋಡಿ, ರೋಗ ದೋಷಗಳನ್ನು ಸರಿಪಡಿಸಬೇಕು. ಆಗ ಮಾತ್ರ ಇದು ಯಶಸ್ವಿಯಾಗಿ ನಡೆಯುತ್ತದೆ. ಇದಕ್ಕೆ ಮಾಡುವ ಖರ್ಚು ಸಾರ್ಥಕವಾಗುತ್ತದೆ.

ಎರಡನೆಯದಾಗಿ, ವೆಟರಿನರಿ ಇಲಾಖೆ. ಹೆಚ್ಚು ಆಸ್ಪತ್ರೆಗಳನ್ನು ತೆರೆಯಬೇಕೆಂದು ಜನ ಕೇಳುತ್ತಿದ್ದಾರೆ. ಹೆಚ್ಚು ಮಾಡಲು ಸರ್ಕಾರ ಹೆಚ್ಚಿನ ಸಿಬ್ಬಂದಿ ಸಲಕರಣೆ ಒದಗಿಸಬೇಕೆಂದು ಮಾಡಿಕೊಂಡಿದ್ದಾರೆ. ಒಂದು ಹೊಸ ಬಾಬಿಗೆ 5,33,000 ರೂಪಾಯಿ ಒದಗಿಸಿದ್ದಾರೆ: Establishment of Cattle Breeding Stations ಎಂದಿದೆ. ಈಗಿನ ಪರಿಸ್ಥಿತಿಯಲ್ಲಿ ಇಷ್ಟು ಹೆಚ್ಚು ಖರ್ಚು ಮಾಡುವುದಕ್ಕೆ ಹಣವಿದೆಯೇ, ಅವಕಾಶವಿದೆಯೆ, ಎಂಬುದನ್ನು ಯೋಚನೆ ಮಾಡಬೇಕು. ಅಲ್ಲದೆ ಒಂದೊಂದು ಆಸ್ಪತ್ರೆಯಲ್ಲಿ ಒಂದೊಂದು breeding bull, Murra buffaloe ಇಡಬೇಕೆಂದು ಕೇಳುತ್ತಿದ್ದೇವೆ. ಇಲ್ಲಿ ಒದಗಿಸುವ ಹಣದಲ್ಲಿ most of it is spent towards buildings, staff, high price and dearness allowances. ಇದರಿಂದ cattle breeding ಎಷ್ಟು ಜಾಸ್ತಿಯಾಗುತ್ತದೆಯೆಂದು ಹೇಳುವುದಕ್ಕಾಗುವುದಿಲ್ಲ. ಅಲ್ಲದೆ ಹೊಸದಾಗಿ ಎಲ್ಲವನ್ನೂ ಪ್ರಾರಂಭ ಮಾಡಿ, ಕಷ್ಟವಾಗುತ್ತದೆ. We will be committing the State to a permanent recurring expenditure. Is it advisable to incur this extra expenditure and to add to the permanent liability of the State? You know what our resources are. Resources ಇಲ್ಲದೆ ಹಣ ಎಲ್ಲಿಂದ ಬರುತ್ತದೆಯೋ ಗೊತ್ತಿಲ್ಲ. ಇಂಥಾ ideological schemes ಮಾಡಿ, ಇದರ ಮೇಲೆ ಹಣ ಖರ್ಚು ಮಾಡಿದರೆ, ಜನರ ಗತಿ ಏನು? How can we sanction this new item of additional expenditure to the tune of 5,33,000 rupees? I think this can be deleted as well. The Government will not be able to carry it out. They won't have funds. ಎಷ್ಟು breeding stations ಮಾಡುತ್ತೀರಿ, ವರ್ಷಕ್ಕೆ ಎಷ್ಟು ಕೆಲಸ ನಡೆಯುತ್ತದೆ ಎಂಬುದನ್ನು ಹೇಳಬೇಕು. ಅದಿಲ್ಲದೆ ಹೊಸದಾಗಿ ಒಂದು ಬಾಬನ್ನು ಸೇರಿಸಿ ಅದಕ್ಕೆ ಖರ್ಚು ಮಾಡಲು ಹಣ ಕೊಡಿ ಎಂದರೆ ಹೇಗೆ? ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಮಾಡುತ್ತೇವೆಂದು ಹೇಳಬಹುದು; ಆದರೂ ಅದಕ್ಕೂ ಸಾಕಷ್ಟು resources ಇಲ್ಲ.

Sri A. BHEEMAPPA NAIK.—Even if it is carried out, it will be a great loss and not a gain.

ಶ್ರೀ ಜೆ. ಮಹಮ್ಮದ್ ಇಮಾಂ.—ಹೌದು; ಹೊಸ ಸಿಬ್ಬಂದಿ ನೇಮಿಸಿ, ಸಿಬ್ಬಂದಿ ಹೆಚ್ಚಾಗುತ್ತದೆಯೇ ಹೊರತು ಪ್ರಯೋಜನವೇನೂ ಇಲ್ಲ. ಆದುದರಿಂದ ಈ 5,33,000 ರೂಪಾಯಿ ಇದರಿಂದ ತೆಗೆದು ಹಾಕಿ ಎಂದು ನಾನು ಹೇಳುವುದು.

*ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ನಾನು ಒಂದು ವಿಚಾರವನ್ನು ಮಾತ್ರ ಹೇಳುತ್ತೇನೆ. Experimental Farms ಎಂದು ಹೇಳುತ್ತಾರೆ ಅಲ್ಲಿ ಏನೂ experiment ಪ್ರಯೋಜನಕರವಾದುದನ್ನು ಮಾಡುತ್ತಿಲ್ಲ. ಅಜ್ಜಂಪುರದಲ್ಲಿ ಹೆಚ್ಚು ಸಿಬ್ಬಂದಿಯನ್ನಿಟ್ಟಿದ್ದಾರೆ; ಕುರಿ ಕುಪ್ಪೆಯಲ್ಲಿಯೂ ಹೀಗೆಯೇ ಆಗಿದೆ. ದನಗಳನ್ನು ಕೊಂಡುಕೊಳ್ಳಬಹುದು. Dairy Farm ಎಂದು ಕೇಳಿಕೊಂಡಿದ್ದರು. ಒಂದು ಯೋಜನೆ ಮಾಡಿ 300 ಎಕರೆ ಜಮೀನಿನಲ್ಲಿ ಏಳು ಲಕ್ಷ ರೂಪಾಯಿ ಖರ್ಚಿನಲ್ಲಿ ಮಾಡಬೇಕೆಂದು ಮಾಡಿದರು, ಅದೂ ಸರಿಯಾಗಲಿಲ್ಲ. Poultry Farming 30 ಎಕರೆ ಜಮೀನಿನಲ್ಲಿ ಆರು ಲಕ್ಷ ರೂಪಾಯಿ ಖರ್ಚಿನಲ್ಲಿ ಮಾಡುತ್ತೇವೆಂದರು; Pig farmingಗೆ 100 ಎಕರೆ ಜಮೀನು ಎಂಟು ಲಕ್ಷ ರೂಪಾಯಿ ಖರ್ಚು; Fowls farmingಗೆ 20 ಸಾವಿರ; ಹೀಗೆ ಕೊಟ್ಟು ನಡೆಸಿಕೊಂಡು ಹೋಗುತ್ತಾರೆ. ಸರ್ಕಾರ ಮಾಡಿದುದು ಒಂದಾದರೂ ಸರಿಯಾಗಿ ಮಾಡುತ್ತಿಲ್ಲ. ಇಂಡಿಯಾ ಸರ್ಕಾರದಿಂದ ಬರತಕ್ಕ ಹಣವನ್ನು ಖಾಸಗಿ ಜನರಿಗೆ ಕೊಟ್ಟು ಅವರೇ ನಡೆಸಿಕೊಂಡು ಹೋಗುವಂತೆ ಮಾಡಬೇಕು. 20 ಸಾವಿರ ಕೋಳಿ ಮೊಟ್ಟೆಗಳನ್ನು ಮಾರಿದ್ದೇವೆಂದು ಹೇಳಿದರು. ಇಷ್ಟು ಹಣ ಕೊಟ್ಟು ರೈತರು ಕೊಂಡುಕೊಳ್ಳುವುದಕ್ಕಾಗುವುದಿಲ್ಲ. ಒಂದು ಮೊಟ್ಟೆಗೆ ಆರಾಣೆ ಕೊಟ್ಟು ರೈತರು ಕೊಂಡುಕೊಳ್ಳಬೇಕೆಂದು ಹೇಳುವುದರಲ್ಲಿ ಅರ್ಥವೇನು?

ಅಮೃತ ಮಹಲ್ ಜಮೀನು ಬೇಕಾದಷ್ಟಿದೆ ಎಂದು ಮಂತ್ರಿಗಳು ಹೇಳಿದರು. ಹುಲ್ಲು ಗಾವಲುಗಳನ್ನು ಅಭಿವೃದ್ಧಿ ಮಾಡಿ, ಇರತಕ್ಕ ಅರ್ಧ ಜಮೀನಿನಲ್ಲಿ ದನಗಳನ್ನು ಮೇಯಿಸಿಕೊಂಡು ಉಳಿದ ಜಮೀನನ್ನು ಬಿಡುಗಡೆ ಮಾಡಿ ಜನರಿಗೆ ಕೊಡಬಹುದು. ಇಂಡಿಯಾ

(ಶ್ರೀ ಬಿ. ಹುಚ್ಚೇಗೌಡ.)
ಸರ್ಕಾರದವರು ಗ್ರಾಂಟು ಕೊಡುತ್ತಾರೆ. ಎಷ್ಟು ಹಣ ಅಗತ್ಯವೋ ಅಷ್ಟು ಹಣವನ್ನು ಕೊಟ್ಟು ಆ ಹುಲ್ಲು ಗಾವಲುಗಳಲ್ಲಿ ನೀರನ್ನೊದಗಿಸುವುದಕ್ಕೂ ಹುಲ್ಲು ಗಾವಲು ಅಭಿವೃದ್ಧಿ ಮಾಡುವುದಕ್ಕೂ ಸಹಾಯ ಕೊಡಬೇಕೆಂದು ಹೇಳುತ್ತೇನೆ.

*ಡಾ|| ಆರ್. ನಾಗನಗೌಡ (ವ್ಯವಸಾಯ ಶಾಖಾ ಸಚಿವರು).—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಭೀಮಪ್ಪ ನಾಯಕರು ಚಳ್ಳಕೆರೆಯಲ್ಲಿ Rinderpest ನಿಂದ ಬಹಳ ಅನಾಹುತವಾಗಿದೆ ಎಂದು ತಿಳಿಸಿದರು. ಈಗ ನಾವು ಚಿತ್ರದುರ್ಗ, ಬಳ್ಳಾರಿ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಒಂದು campaign ಪ್ರಾರಂಭ ಮಾಡಿದ್ದೇವೆ. ಈ ಮೂರು border district ಗಳಲ್ಲಿಯೂ ಎಲ್ಲ ದನಗಳಿಗೂ Rinderpestಗೆ preventive protection ಕೊಡುತ್ತಿದ್ದೇವೆ, immunisation ಮಾಡಿದ್ದೇವೆ. ಅದಕಾರಣ I don't think it will recur again in that area.

ಈಗ ಅನಿಮಲ್ ಹಸ್ಬೆಂಡ್ರಿ ಇಲಾಖೆಯಲ್ಲಿ ಡಾ|| ಪಿ. ಎಂ. ನಾರಾಯಣಸ್ವಾಮಿ ನಾಯ್ಡುರವರು ಕೇಂದ್ರ ಸರ್ಕಾರಕ್ಕೆ ಹೋದಮೇಲೆ ಡಾ|| ಜೆ. ಮುನಿಯಪ್ಪನವರು ಅವರಿಗೆ next senior ಆದ್ದರಿಂದ, ಆ ಕೆಲಸಕ್ಕೆ ಬಂದರು. ಅವರಿಗೆ ಮೈಸ್ವಸ್ಥವಿಲ್ಲದ್ದರಿಂದ ರಜದಮೇಲಿದ್ದಾರೆ. It is unfortunate that he is ill. I think as soon as he comes back he will occupy that place again.

ಅಜ್ಜಂಪುರದ ಫಾರಂ ವಿಷಯದಲ್ಲಿ there are more deaths than births ಎಂದು ಹೇಳಿದರು. ಇತ್ತೀಚೆಗೆ ಆ figures. . . .

ಶ್ರೀ ಎ. ಭೀಮಪ್ಪನಾಯಕ್.—Economic farms ಎಂದು ಇದೆ. ದನಗಳನ್ನು ಈ farm ನಿಂದ ಮುದಿಯಾಗಿರುವುದನ್ನು ಅಲ್ಲಿಗೆ ಬದಲಾಯಿಸಿ ಚೆನ್ನಾಗಿರುವುದನ್ನು ಇಲ್ಲಿಗೆ ಬದಲಾಯಿಸಿ, ದನಗಳ ಸಾವಿನ ಸಂಖ್ಯೆ ಕಡಿಮೆ ತೋರಿಸುತ್ತಾರೆ. Economic farms ಮತ್ತು ಎಲ್ಲವೂ ಸೇರಿ deaths and births ಎಷ್ಟು ?

ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ—ಅನುಸೂಚಿತ ಜಾತಿಗಳು).—ಅಜ್ಜಂಪುರ ಫಾರಂ ನೋಡಿಕೊಳ್ಳಲು ಒಬ್ಬ Stationary Officer ಇದ್ದಾರೆಂದು ಹೇಳುತ್ತೀರಿ. ಅವರು ಬೆಂಗಳೂರಿನಲ್ಲಿಯೇ ಇದ್ದುಕೊಂಡು ಅಜ್ಜಂಪುರಕ್ಕೂ ಮತ್ತು Kunigal Stud Farm ಗೂ ಭೇಟಿಕೊಡುತ್ತಾರಲ್ಲವೇ ?

ಡಾ|| ಆರ್. ನಾಗನ ಗೌಡ.—ಹಾಗೇನೂ ಇಲ್ಲ. ಅವರು ಅಲ್ಲೇ ಇದ್ದಾರೆ. Dr. Chandrasekhar is the Research Officer, Animal Husbandry. He is there. He is not here at all.

SRI M. PALANIYAPPAN (Ulsoor).—Is there any idea of shifting the Ajjampur Farm to Bangalore and Bangalore Farm to Ajjampur ?

DR. R. NAGAN GOWDA.—It cannot be done. ಯಾಕೆಂದರೆ ಅಜ್ಜಂಪುರದಲ್ಲಿರುವುದು ಅಮೃತ ಮಹಲ್ ದನಗಳು, ಈ ಪ್ರಾಂತಕ್ಕೆ ಅವು ಹೊಂದಿಕೊಳ್ಳುವುದಿಲ್ಲವಾದ್ದರಿಂದ ಇಲ್ಲಿಗೆ ಬದಲಾಯಿಸುವುದಿಲ್ಲ. ಅಮೃತ ಮಹಲ್ ದನಗಳು ಚಿತ್ರದುರ್ಗ, ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳಿಗೆ suit ಆಗುತ್ತವೆ. ಅವನ್ನು ಇಲ್ಲಿಗೆ ತರುವುದಿಲ್ಲ.

ಶ್ರೀಮಾನ್ ಭೀಮಪ್ಪನಾಯಕರು ಸಾಯುವಂಥ ದನಗಳನ್ನು ತೆಗೆದುಬಿಟ್ಟರಿ ಎಂದು ಹೇಳಿದರು. ಯಾವಯಾವವು 10-12 ವರ್ಷಗಳಿಗಿಂತ ಜಾಸ್ತಿ ವಯಸ್ಸಾಗಿರುತ್ತವೆಯೋ ಅಂಥವುಗಳನ್ನು. ತಮಗೆಲ್ಲ ಗೊತ್ತಿರುವ ಹಾಗೆ ಇಲ್ಲಿ ವಯಸ್ಸಾದ ದನಗಳು ಇರಕೂಡದು. . . .

ಶ್ರೀ ಸಿ. ಟಿ. ಹನುಮಂತಯ್ಯ (ಪಾವಗಡ—ಅನುಸೂಚಿತ ಜಾತಿಗಳು).—ನಮ್ಮ ದೇಶದಲ್ಲಿ ದನಗಳನ್ನು ಕೊಲ್ಲಬಾರದು ಎಂದು ಕಾನೂನು ಜಾರಿಯಲ್ಲಿದೆ. ಆದುದರಿಂದ ಇಲ್ಲಿಂದ ದನಗಳನ್ನು ಮದರಾಸು ಪ್ರಾಂತಕ್ಕೆ ಸಾಗಿಸಿ. . . .

DR. R. NAGAN GOWDA.—I bring to your notice, Sir, that it does not arise here. ಅದಕಾರಣ breeding stations ನಿಂದ experimental farm ನಲ್ಲಿ ಇಡುತ್ತಾರೆ. Breeding ಆಗದ, ವಯಸ್ಸಾದ ದನಗಳನ್ನು ಇಟ್ಟುಕೊಂಡರೆ ಏನು ಅನುಕೂಲವಾಗುತ್ತದೆ ? ಆದ್ದರಿಂದ ಎಲ್ಲ ವಯಸ್ಸಾದ ದನಗಳನ್ನೂ ಇಡಲು ಒಂದು farm ಮಾಡಿದ್ದೇವೆ. ಇದರಲ್ಲಿ ತಪ್ಪೇನಿದೆಯೋ ನನಗಂತೂ ಗೊತ್ತಾಗುವುದಿಲ್ಲ. ಅಜ್ಜಂಪುರದಲ್ಲಿ 10 ವರ್ಷಕ್ಕೆ ಒಳಪಟ್ಟ younger cattle ಇಟ್ಟಿದ್ದೇವೆ. ಅದರೊಳಗೆ births are of a high percentage.

ಶ್ರೀ ಬಿ. ಹುಚ್ಚೇಗೌಡ.— 20 ವರ್ಷ ವಯಸ್ಸಿನ ದನಗಳನ್ನು 10 ವರ್ಷಗಳಿಗೇ ತೆಗೆದುಬಿಟ್ಟರೆ ಹೇಗೆ ! ಅವುಗಳಿಗೆ ಚೆನ್ನಾಗಿ ಪ್ರಾಯ ಬರುವುದು ಈ ವಯಸ್ಸಿಗೆ. ಆದುದರಿಂದ 10 ವರ್ಷಗಳಿಗೆ ತೆಗೆಯುವುದೆಂದರೆ ಅರ್ಥವಾಗುವುದಿಲ್ಲ.

ಶ್ರೀ ಎ. ಭೀಮಪ್ಪನಾಯಕ್.—Economic farms ನಲ್ಲಿ 10 ವರ್ಷಕ್ಕೆ ಮೇಲ್ಪಟ್ಟ ದನಗಳಿಲ್ಲ. ಅಲ್ಲಿರುವುವೆಲ್ಲ ಚಿಕ್ಕ ವಯಸ್ಸಿನವು. ಇಲ್ಲಿ ಸಾಯುವ ಹೊತ್ತು ಬಂದಾಗ ಅಲ್ಲಿಗೆ ಕಳುಹಿಸಿ, ಸಾಯುವ ಸಂಖ್ಯೆಯನ್ನು ಕಡಿಮೆ ತೋರಿಸುತ್ತೀರಿ.

ಡಾ|| ಆರ್. ನಾಗನಗೌಡ.—ಕರುಗಳು ಹಾಕದ ಹಸುಗಳನ್ನೆಲ್ಲ ಒಂದು ಕಡೆ ಇಟ್ಟಿದ್ದೇವೆ. ಅದರೊಳಗೆ ಚಿಕ್ಕ ವಯಸ್ಸಿನವುಗಳನ್ನು ಬೆರಸಿಲ್ಲ. There is another farm where we have got these. These have not been added to the four economic farms. I will be able to give more detailed figures later.

ಇನ್ನೊಂದು ಮಾತು ಹೇಳಿದರು, ಕುರಿಕುಪ್ಪೆಯಲ್ಲಿ ರಕ್ತಕ್ಕ ದನಗಳಿಗೆ ಏನು ಖರ್ಚಾಗುತ್ತದೆಯೋ ಅದರಲ್ಲಿ ಅರ್ಧ ಭಾಗ ಕೂಡ ಬರುವುದಿಲ್ಲವೆಂದು ಹೇಳಿದರು. ಈ ಫಾರಮನ್ನು ಮದರಾಸು ಸರ್ಕಾರದವರು ನಡೆಸುತ್ತಿದ್ದರು. ಅದನ್ನು ನಡೆಸುವುದಕ್ಕೆ ಎಷ್ಟು ಖರ್ಚು ಮಾಡುತ್ತಿದ್ದರೋ ಅದರೊಳಗೆ ಅರ್ಧಕ್ಕೆ ನಾವು ಈಗ ಕಡಿಮೆ ಮಾಡಿದ್ದೇವೆ. ಸಾಧ್ಯವಾದಷ್ಟು ಖರ್ಚನ್ನು ಕಡಿಮೆಮಾಡಿ ಇಷ್ಟಕ್ಕೆ ಇಳಿಸಿದ್ದೇವೆ. ಆಮೇಲೆ ಕುರಿಕುಪ್ಪೆ ಎಂಬ ಹೆಸರನ್ನು ತೆಗೆಯಬಾರದು ಎನ್ನುವವರಲ್ಲಿ ನಾನೂ ಒಬ್ಬ. It is one of the finest industries in India. ನಮ್ಮ ಮಾನ್ಯ ನಾಗಯ್ಯ ರೆಡ್ಡಿಯವರಿಗೆ ಛಳಿಯಾದಾಗ ಕಂಬಳಿಯನ್ನು ಹೊದ್ದುಕೊಳ್ಳುವುದಕ್ಕೆ ಮಾತ್ರ ಬೇಕು. ಆದರೆ ಈ ಹೆಸರು ಬದಲಾಯಿಸಬೇಕು ಎನ್ನುತ್ತಾರೆ. ಇದನ್ನು ನಾನು ಒಪ್ಪುವುದಿಲ್ಲ. ಈ ಪ್ರಾಂತದಲ್ಲಿ ಕುರಿಗಳು ಬಹಳವಾಗಿ ಇರುವುದರಿಂದ ಈ ಹೆಸರು ಬಂದಿದೆ. The area between Kudikuni and Hospet—that valley is suited for sheep rearing.

ಇನ್ನು ಕೋಳಿ ಮೊಟ್ಟೆಗಳ ವಿಷಯದಲ್ಲಿ ನಾವು ಈಗ ಮಾರುತ್ತಿರುವುದು ದುಬಾರಿಯಾಗುತ್ತದೆಂದು ಹೇಳಿದರು. ಕಳೆದ ವರ್ಷ ಎಂದರೆ 1954ನೇ ಡಿಸೆಂಬರು ಮತ್ತು 1955 ನೆಯ ಇಸವಿ ಜನವರಿ ಮತ್ತು ಫೆಬ್ರುವರಿ ಮಾಹೆಗಳಲ್ಲಿ just a little under 13,000 eggs were distributed. ಅವುಗಳ hatching percentage ನೋಡಿದ್ದೇವೆ. It is somewhere near 50 per cent. ಆ ತರುವಾಯ ಇತ್ತೀಚೆಗೆ 2-3 ತಿಂಗಳ ಹಿಂದೆ egg survival ಸ್ಥಿತಿಯನ್ನು ನೋಡಿದ್ದೇವೆ. 25 per cent of them are surviving hens and cocks ಎಲ್ಲ ಜೀವಂತವಾಗಿವೆ. . . .

Mr. DEPUTY SPEAKER.—Now I shall put the Demand to the vote of the House. The question is :

"That a sum not exceeding Rs. 37 09,444 be granted to the Government to defray the charges which will come in course of payment during the year ending 31st day of March 1957, in respect of 'Veterinary'."

The motion was adopted.

Mr. DEPUTY SPEAKER.—We have to fix up the time of meeting for tomorrow. Some Hon'ble Members have expressed their desire to have the session from 2 o'clock tomorrow. Is that aggreable ?

HON'BLE MEMBERS.—Yes.

Mr. DEPUTY SPEAKER.—The House will now adjourn and meet at 11 after lunch.

The House adjourned for Lunch at Thirty Minutes past Ten of the Clock and reassembled at Eleven of the Clock.

[MR. DEPUTY SPEAKER in the Chair.]

DEMAND No. 25—CO-OPERATION.

42. CO-OPERATION.

Mr. DEPUTY SPEAKER.—Motion moved :

"That a sum not exceeding Rs. 19,25,410 be granted to the Government to defray the charges which will come in course of payment during the year ending 31st day of March 1957, in respect of 'Co-operation'."

*ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—ಸ್ವಾಮಿ, ಕೋಆಪರೇಟಿವ್ ಸೊಸೈಟಿಗಳು ಅಲ್ಪ ಕಾಲಾವಧಿ ಸಾಲಗಳನ್ನು ರೈತರಿಗೆ ಕೊಡುವುದಕ್ಕೆ ಪ್ರಾರಂಭಿಸಿದಮೇಲೆ ಕೆಲಸ ಮಾಡದೇನೇ ಎರಡು ಮೂರು ವರ್ಷಗಳಿಂದಲೂ ಕೂಡ ಮುಚ್ಚಿದ್ದಂಥ ಅನೇಕ ಮಲ್ಟಿಪರ್ಪಸ್ ಸೊಸೈಟಿಗಳು ಈಗ ಪುನಃ ರಿವೈವಾಗಿ ಚೆನ್ನಾಗಿ ಕೆಲಸಮಾಡುವುದಕ್ಕೆ ಪ್ರಾರಂಭಿಸಿವೆ. ಅಲ್ಪಕಾಲಾವಧಿ ಸಾಲವನ್ನು ಇಷ್ಯೂಮಾಡಿದರು. ಅದರ ನೆಪದಿಂದ ಯಾವ ಸೊಸೈಟಿಗಳು ನಷ್ಟಹೊಂದಿ ಕೆಲಸ ಮಾಡುತ್ತಿರಲಿಲ್ಲವೋ ಆ ಸೊಸೈಟಿಗಳ ಬಾಕಿ ಹಣ ಅನೇಕ ಸೊಸೈಟಿಗಳಲ್ಲಿ ವಸೂಲಾಗಿ ಈಗ ಆ ಸೊಸೈಟಿಗಳೆಲ್ಲಾ ಕೆಲಸ ಮಾಡುವುದಕ್ಕೆ ಪ್ರಾರಂಭಿಸಿವೆ. ಹೋದವರ್ಷ ರೈತರಿಗೆ ವ್ಯವಸಾಯದ ಉತ್ಪತ್ತಿಯನ್ನು ಹೆಚ್ಚಿಸುವುದಕ್ಕೆ ಸುಮಾರು 36-37 ಲಕ್ಷದವರೆಗೂ ಸೊಸೈಟಿಗಳ ಮುಖೇನ ಅಲ್ಪ ಕಾಲಾವಧಿ ಸಾಲವನ್ನು ಕೊಟ್ಟರು. ಈ ವಿಚಾರವನ್ನು ನಾವು ಬಹಳ ಸಂತೋಷದಿಂದಲೂ ಮತ್ತು ಹೆಮ್ಮೆಯಿಂದಲೂ ಹೇಳಬಹುದು. ರೈತರೇನು ಉಪಕಾರ ಮಾಡಬೇಕೆಂದು ಸರ್ಕಾರದವರು ಹೇಳುತ್ತಿದ್ದರೊ ಅದಕ್ಕೆ ತಂಕ್ಕಂತೆ ನಂಬಿಕೆಯನ್ನುಳಿಸಿಕೊಂಡು ಈಗ ತೆಗೆದು ಕೊಂಡಿದ್ದ ಸಾಲವನ್ನೆಲ್ಲಾ ನಿರೀಕ್ಷೆ ಮಾಡಿದ್ದಂತೆ ಸಕಾಲದಲ್ಲಿ ವಾಪಸು ಮಾಡಿದ್ದಾರೆ. ನನಗೆ ನಿನ್ನೆ ಮೊನ್ನೆ ತಿಳಿದ ಹಾಗೆ 36 ಲಕ್ಷ ಚಿಲ್ಲರೆ ರೂಪಾಯಿಗಳ ಸಾಲ ಕೊಟ್ಟಿದ್ದರಲ್ಲಿ ಆಗಲೇ ಸುಮಾರು 35 ಲಕ್ಷದವರೆಗೆ ವಸೂಲಾಗಿದೆಯೆಂದು ಹೆಮ್ಮೆಯಿಂದ ಹೇಳಬಹುದು. ಏಕೆಂದರೆ ನಮ್ಮಕಡೆ ಸುಮಾರು 8½ ಲಕ್ಷ ರೂಪಾಯಿ ಸಾಲ ಕೊಟ್ಟಿತ್ತು. ಅದರಲ್ಲಿ ಒಂದು ಕಾಸೂ ಬಾಕಿಯಿಲ್ಲದೆ ಸಕಾಲದಲ್ಲಿ ವಾಪಸು ಕೊಟ್ಟಿದ್ದಾರೆ. ಶಿವಮೊಗ್ಗ ಡಿಸ್ಟ್ರಿಕ್ಟಿಗೆ 8½ ಲಕ್ಷಕ್ಕೆ ಮೇಲ್ಪಟ್ಟು ಕೊಟ್ಟಿದ್ದರು. ಅಲ್ಲಿನವರೂ ಕೂಡ ಎಲ್ಲಾ ಕೊಟ್ಟಿದ್ದಾರೆಂದು ತಿಳಿದಿದ್ದೇನೆ. ಒಟ್ಟಿನಲ್ಲಿ ಕೊಟ್ಟಿದ್ದ ಸಾಲದಲ್ಲಿ ಸುಮಾರು 35 ಲಕ್ಷದವರೆಗೆ ಬಹಳ ಬಾಕಿ ವಾಪಸು ಬಂದಿದೆ. ಇದರಿಂದ ರೈತರಿಗೆ ಉಪಕಾರವಾಗಿರುವುದರಲ್ಲಿ ಯಾವ ಅನುಮಾನವೂ ಕೂಡ ಇಲ್ಲ. ಇದನ್ನೇಕೆ ಹೇಳುವುದೆಂದರೆ ಸರ್ಕಾರದವರು 36 ಲಕ್ಷ ರೂಪಾಯಿಗಳನ್ನು ಹೋದ ವರ್ಷ ಸಾಲವಾಗಿಕೊಟ್ಟರು, ಅದು ವಸೂಲಾಗಿ ಸಕಾಲದಲ್ಲಿ ಬಂದಿರುವುದರಿಂದ ರೈತರಿಗೆ ಇದರ ಉಪಯೋಗ ಚೆನ್ನಾಗಿ ಗೊತ್ತಾಗಿದೆ. ಮುಂದೆ ಈ ಸಾಲವನ್ನು ಇನ್ನೂ ಹೆಚ್ಚಿನ ಮೊಬಲಗಿನಲ್ಲಿ ತೆಗೆದುಕೊಳ್ಳುವುದಕ್ಕೆ ಸಿದ್ಧವಾಗಿದ್ದಾರೆಂಬುದು ಚೆನ್ನಾಗಿ ವಿದಿತವಾಗುತ್ತಿದೆ. ಮುಂದೆ ಇದರ ಮೇಲೆ ಅಂದಾಜುಮಾಡಿ ಮೈಸೂರು ಸರ್ಕಾರದವರು ರೈತರಿಗೆ ಅಲ್ಪಕಾಲಾವಧಿ ಸಾಲ, ಮೀಡಿಯಂ ಟರ್ಮ್ ಲೋನ್, ದೀರ್ಘಾವಧಿ ಸಾಲ ಕೊಡಲು ಒಂದು ಕೋಟಿ ರೂಪಾಯಿಗಳನ್ನಾದರೂ ಕೂಡ ಒದಗಿಸಬೇಕಾಗಿತ್ತು; ಒದಗಿಸಿಲ್ಲದಿದ್ದರೆ ಬಹಳ ಜಾಗರೂಕರಾಗಿ ಈಗಲಾದರೂ ಅಷ್ಟು ಹಣ ರೈತರಿಗೆ ಒದಗಿಸಲು ಪ್ರಯತ್ನ ಮಾಡಬೇಕು. ಅದರಲ್ಲೂ ಮೀಡಿಯಂ ಟರ್ಮ್ ಲೋನ್ ರೈತರಿಗೆ ಒದಗಿಸಬೇಕಾದ್ದು ಬಹಳ ಅಗತ್ಯ. ನಾನು ಕೇಳಿದ ಹಾಗೆ ಅಪೆಕ್ಸ್ ಬ್ಯಾಂಕಿನಲ್ಲಿ ಮತ್ತು ಡಿಸ್ಟ್ರಿಕ್ಟ್ ಬ್ಯಾಂಕುಗಳಲ್ಲಿ ಷೇರು ಮೊಬಲಗು ಸಾಕಾದಷ್ಟಿಲ್ಲದಿರುವುದರಿಂದ ರಿಸರ್ವ್ ಬ್ಯಾಂಕಿನಿಂದ ಹಣ ಪಡೆಯುವುದಕ್ಕೆ ಸ್ವಲ್ಪ ಕುಂದಕ ಬರಬಹುದೆಂಬ ಶಂಕೆಯಿದೆ. ಆದುದರಿಂದ ಮೈಸೂರು ಸರ್ಕಾರದವರು ಅಪೆಕ್ಸ್ ಬ್ಯಾಂಕಿನಿಂದ ಮತ್ತು ಡಿಸ್ಟ್ರಿಕ್ಟ್ ಬ್ಯಾಂಕುಗಳಿಂದ ಷೇರುಗಳನ್ನು ಹೊಸದಾಗಿ ಈಗಾಗಲೇ ಕೊಂಡುಕೊಂಡು ಷೇರು ಮೊಬಲಗನ್ನು ಹೆಚ್ಚುಮಾಡಿಕೊಂಡು ರಿಸರ್ವ್ ಬ್ಯಾಂಕಿ

(ಶ್ರೀ ಜಿ. ಎ. ತಿಮ್ಮಪ್ಪಗೌಡ).

ನಿಂದ ಒಂದು ಕೋಟಿ ರೂಪಾಯಿಗಳ ಹಣವನ್ನು ಒದಗಿಸಲೇ ಬೇಕಾಗುತ್ತದೆ. ಮೀಡಿಯಂ ಟರ್ಮ್ ಲೋನ್ ಮತ್ತು ದೀರ್ಘಾವಧಿಸಾಲ ಸಾಲವನ್ನು ಡಿಸ್ಟ್ರಿಕ್ಟ್ ಬ್ಯಾಂಕಿನಿಂದ ಮತ್ತು ಸಣ್ಣ ಪ್ರೈಮರಿ ಸೊಸೈಟಿಗಳಿಂದ ಈಗೇನು ರೈತರಿಗೆ ವ್ಯವಸಾಯಕ್ಕಾಗಿ ಒದಗಿಸುತ್ತಿದ್ದರೋ ಅವನ್ನು ಇಂಡಸ್ಟ್ರಿಯಲ್ ಸೊಸೈಟಿಗಳ ಮುಖೇನ, ಅದಕ್ಕೆ ಅಧಿಕಾರಿಗಳಾಗಿರುವ ಶ್ರೀ ಭೀರಪ್ಪನವರ ಮುಖೇನ ಒದಗಿಸುವುದಾಗಿ ಮಾತುಕತೆ ನಡೆದಿದೆಯೆಂದು ಕೇಳಿದ್ದೇನೆ. ಅದು ಕೂಡದು. ವ್ಯವಸಾಯದ ಸಾಲ, ಅಲ್ಪಕಾಲಾವಧಿ ಸಾಲವಾಗಲಿ ಅಥವಾ ಮೀಡಿಯಂ ಟರ್ಮ್ ಸಾಲವಾಗಲಿ ಅಥವಾ ದೀರ್ಘಾವಧಿ ಸಾಲವಾಗಲಿ, ಡಿಸ್ಟ್ರಿಕ್ಟ್ ಬ್ಯಾಂಕುಗಳು ಮತ್ತು ಪ್ರೈಮರಿ ಸೊಸೈಟಿಗಳು ಅದನ್ನು ಎರಡು ವರ್ಷಗಳಿಂದ ಜಯಪ್ರದವಾಗಿ ಕೆಲಸ ಮಾಡಿ ಒದಗಿಸಿರುವುದರಿಂದ ಅವುಗಳ ಮುಖಾಂತರವೇ ಈ ಸಾಲವನ್ನು ಒದಗಿಸಬೇಕಾಗಿದೆ. ನಾನು ಹೇಳುವುದಾದರೆ ಸರ್ಕಾರದವರು ರೈತರಿಗೆ ಸಹಾಯ ಮಾಡಲು ಅನೇಕ ಸ್ಕೀಮುಗಳನ್ನೇನು ಹಾಕಿದ್ದಾರೋ ಅವುಗಳಲ್ಲಿ ಬಹಳ ಜಯಪ್ರದವಾಗಿ ನಡೆದಿರುವ ಒಂದು ಸ್ಕೀಮೆಂದರೆ, ರೈತರಿಗೆ ನೇರವಾಗಿ ಸರ್ಕಾರದವರು ಉಪಕಾರಮಾಡಿರುವ ಸ್ಕೀಮೆಂದರೆ ರೈತರಿಗೆ ಚೆನ್ನಾಗಿ ಮನದಟ್ಟಾಗಿರುವ ಈ ಸಾಲಗಳನ್ನೊದಗಿಸಿರುವ ಸ್ಕೀಮು.

ಇದೇ ಸಂದರ್ಭದಲ್ಲಿ ನಾನು ಇನ್ನೊಂದು ವಿಷಯ ಹೇಳಬೇಕೆಂದರೆ ಪ್ರೈಮರಿ ಸೊಸೈಟಿಗಳಲ್ಲಿ ಸೆಕ್ರೆಟರಿಗಳಿಗೂ ಮತ್ತು ಡಿಸ್ಟ್ರಿಕ್ಟ್ ಬ್ಯಾಂಕು ಸೂಪರ್‌ವೈಜರಗಳಿಗೂ ಟ್ರೈನಿಂಗ್ ಕೊಡುವುದು ಅತ್ಯಾವಶ್ಯಕ, ಹೋದವರ್ಷ ಟ್ರೈನಿಂಗ್ ಸ್ಕೂಲನ್ನು ಪ್ರಾರಂಭಿಸಿ ನೂರಾರು ಜನರಿಗೆ ಟ್ರೈನಿಂಗ್ ಕೊಡಬೇಕೆಂದು ಏರ್ಪಾಡು ಮಾಡಿದರು. ಬಳ್ಳಾರಿಯಲ್ಲೂ ಟ್ರೈನಿಂಗ್ ಕೊಡಬೇಕೆಂದು ಪ್ರಯತ್ನ ನಡೆಯಿತು. ಆದರೆ ರೀ-ಆರ್ಗನೈಜೇಷನ್ ಸ್ಕೀಂ ಜಾರಿಗೆ ಬಂದರೆ ತೊಂದರೆಯಾಗಬಹುದೆಂದು ಆ ಪ್ರಯತ್ನವನ್ನು ಅಲ್ಲಿಗೇ ನಿಲ್ಲಿಸಿದರು. ಹೀಗೆ ನಿಲ್ಲಿಸಿದ್ದು ತಪ್ಪು. ಈ ದಿವಸವಾದರೂ ಕೂಡ ಕೂಡಲೇ ಬೆಂಗಳೂರಿನಲ್ಲಿ ಅಥವಾ ಬಳ್ಳಾರಿಯಲ್ಲಿ ಅನುಕೂಲವಿರುವ ಕಡೆ ಟ್ರೈನಿಂಗ್ ಸೆಂಟರ್ ಬೇಗ ಏರ್ಪಾಡು ಮಾಡಬೇಕು.

ಇದೇ ಸಂದರ್ಭದಲ್ಲಿ ಗಾಡಿ ಬಾಡಿಗೆ ವಿಚಾರ ಹೇಳುತ್ತೇನೆ. ಮಲ್ಟಿ ಪರ್ಪಸ್ ಸೊಸೈಟಿಗಳಿಗೆ ನಾಲ್ಕೈದು ವರ್ಷಗಳಹಿಂದೆ ಕೊಡಬೇಕಾದ ಗಾಡಿ ಬಾಡಿಗೆ ವ್ಯವಸಾಯದ ಇಲಾಖೆಯಿಂದ ಮತ್ತು ಆಹಾರ ಇಲಾಖೆಯಿಂದ ಬರಬೇಕಾಗಿದೆ. ಬರಬೇಕಾದ ಸಿಬ್ಬಂದಿ ಖರ್ಚನ್ನು ಕೊಡುವಹಾಗೆ ತೀರ್ಮಾನವಾಗಿದೆಯೆಂದು ಕಂಡುಬಂದಿದೆ ಮತ್ತು ಹಣ ಕೂಡ ಕೊಟ್ಟಿದ್ದಾರೆ. ಜಾಗ್ರುತೆ ವ್ಯವಸಾಯದ ಇಲಾಖೆಯಿಂದ ಮತ್ತು ಆಹಾರದ ಇಲಾಖೆಯಿಂದ ಬಾಕಿ ಮೊಬಲಗು ಸೊಸೈಟಿಗಳಿಗೆ ಬರುವುದಕ್ಕೆ ಏರ್ಪಾಡು ಮಾಡಬೇಕು. ಹಾಗೆ ಮಾಡಿದರೆ ಈ ಸೊಸೈಟಿಗಳು ಚೆನ್ನಾಗಿ ವ್ಯವಸ್ಥಿತವಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ನಾನಾಗಲೇ ಹೇಳಿದ ಹಾಗೆ ಈಗ ಬ್ಯಾಂಕು ಮತ್ತು ಸೊಸೈಟಿಗಳು ಚೆನ್ನಾಗಿ ಕೆಲಸ ಮಾಡುತ್ತಿವೆ. ಅವು ವ್ಯವಸ್ಥಿತವಾಗಿ ಮುಂದೆ ಕೂಡ ಶ್ರದ್ಧೆಯಿಂದ ಕೆಲಸ ಮಾಡುವ ರೀತಿಯಲ್ಲಿ ಸರ್ಕಾರದವರು ಏರ್ಪಾಡುಮಾಡಿ, ಅಲ್ಲಿಯ ಅಸಿಸ್ಟೆಂಟ್ ರಿಜಿಸ್ಟ್ರಾರ್ ಮತ್ತು ರಿಜಿಸ್ಟ್ರಾರ್ ಸಿಬ್ಬಂದಿಗಳಿಗೆ ಏನು ಅನುಕೂಲ ಕೊಡಬೇಕೊ ಅದನ್ನೆಲ್ಲಾ ಕೊಡಬೇಕು. ಒಟ್ಟಿನಲ್ಲಿ ಹೇಳಬೇಕಾದರೆ ಡಾ॥ ನಾಗನಗೌಡರ ಛಾರ್ಜಿನಲ್ಲಿರುವ ಇಲಾಖೆಗಳಾದ ಸಹಕಾರ, ವ್ಯವಸಾಯ ಮತ್ತು ವೆಟರಿನರಿ ಇಲಾಖೆಗಳೇನಿವೆಯೋ ಅವೆಲ್ಲಾ ರೈತರ ಆರ್ಥಿಕಸ್ಥಿತಿಯನ್ನು ಉತ್ತಮಪಡಿಸುವುದಕ್ಕೆ ಸಹಾಯಕವಾಗುವ ಇಲಾಖೆಗಳು. ಅವು ವ್ಯವಸ್ಥಿತವಾದ ರೀತಿಯಲ್ಲಿ ಚುರುಕಿನಿಂದ ಕೆಲಸಮಾಡಿ ಜನರಿಗೆ ಸಹಾಯ ನೀಡುವಂತೆ ಮಾಡಬೇಕು. ಮಂತ್ರಿಗಳು ಆಸಕ್ತಿವಹಿಸಿ ಜನರಿಗೆ ಉತ್ತಮ ರೀತಿಯಲ್ಲಿ ಸಹಾಯವಾಗುವಂತೆ ಸರ್ವ ಪ್ರಯತ್ನವನ್ನೂ ಮಾಡಬೇಕೆಂದು ಕೋರುತ್ತೇನೆ.

ಶ್ರೀ ಎಚ್. ಕೆ. ವೀರಣ್ಣಗೌಡ (ಮದ್ದೂರು).—ಸ್ವಾಮಿ, ನಾನು ಈ ವಿಚಾರದಲ್ಲಿ ಹೊಸದಾಗಿ ಹೇಳತಕ್ಕಂಥ ವಿಚಾರ ಯಾವುದೂ ಇಲ್ಲ. ಆದರೆ ಈಗಾಗಲೇ ಏನು ವಿಚಾರಗಳನ್ನು ಶ್ರೀ ಜಿ. ಎ. ತಿಮ್ಮಪ್ಪಗೌಡರು ಹೇಳಿರುತ್ತಾರೋ ಅದೇ ವಿಷಯಗಳನ್ನೇ ನಾನೀಗ ಒತ್ತಿ ಹೇಳಲು ನಿಂತಿದ್ದೇನೆ.

ಈಗ ಷಾರ್ಟ್ ಟರ್ಮ್ ಲೋನುಗಳಿಗೆ 500 ರೂಪಾಯಿಗಳೇ ಪರಮಾವಧಿ ಎಂದು ಗೊತ್ತು ಮಾಡಿದ್ದಾರೆ. ಮಂಡ್ಯ ಜಿಲ್ಲೆಯ ಕಬ್ಬಿನ ವ್ಯವಸಾಯಗಾರರಿಗೂ ಮತ್ತು ಮಲೆನಾಡಿನ ಕಾಫಿ ಮತ್ತು ಏಲಕ್ಕಿ ವ್ಯವಸಾಯಗಾರರಿಗೂ ಈ ಮೊಬಲಗು ಏನೇನೂ ಸಾಲದು. 500 ರೂಪಾಯಿಗಳ ಸಾಲ ಪಡೆದುಕೊಳ್ಳುವುದಕ್ಕೂ ರೈತ ಸಾಕಷ್ಟು ಆಸ್ತಿಯನ್ನು ಈಡು ಮಾಡಬೇಕಾಗಿದೆ. ಹೀಗೆ ಆಸ್ತಿ ಈಡು ಮಾಡಿಕೊಡದಿದ್ದರೆ ಸಾಲ ದೊರೆಯುವುದಿಲ್ಲ. ಆದ್ದರಿಂದ ಮಲೆನಾಡಿನಲ್ಲಿ ಅಡಿಕೆ ತೋಟಗಾರರಿಗೂ ಮೈದಾನದಲ್ಲಿ 10 ಎಕರೆ ಭತ್ತದ ವ್ಯವಸಾಯಗಾರರು ಇಲ್ಲವೇ ಐದು ಎಕರೆ ಕಬ್ಬಿನ ವ್ಯವಸಾಯಗಾರರಿಗೆಲ್ಲಾ ಈ ಸಾಲವನ್ನು ಕೊನೇ ಪಕ್ಷ ಒಂದು ಸಾವಿರ ರೂಪಾಯಿಗಳಿಗೆ ಹೆಚ್ಚಿಸತಕ್ಕದ್ದು ಅತ್ಯಗತ್ಯವೆಂದು ನಾನು ಭಾವಿಸಿದ್ದೇನೆ. ಆದಕಾರಣ ಈ ಷಾರ್ಟ್ ಟರ್ಮ್ ಲೋನ್ ಪ್ರಮಾಣವನ್ನು 500 ರೂಪಾಯಿಗಳಿಂದ ಒಂದು ಸಾವಿರಕ್ಕೆ ಹೆಚ್ಚಿಸಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಮೀಡಿಯಂ ಟರ್ಮ್ ಲೋನ್ ವಿಚಾರ—ಈ ಸಾಲವನ್ನು ಕೊಡತಕ್ಕ ಬಗ್ಗೆ ರೂರಲ್ ಕ್ರೆಡಿಟ್ ಸ್ಕೀಂ ಮೇರೆಗೆ ರಿಸರ್ವ್ ಬ್ಯಾಂಕ್‌ನವರು ಎಪೆಕ್ಸ್ ಬ್ಯಾಂಕ್ ಮೂಲಕ ನಡೆಸುವಂತೆ ಏರ್ಪಾಡು ಮಾಡಿಕೊಂಡಿದ್ದಾರೆ. ವ್ಯವಸಾಯಗಾರರಿಗೆ ಬೇಕಾಗುವಂಥ ಸಾಲವನ್ನು ಇಂಡಸ್ಟ್ರಿಯಲ್ - ಕೋ-ಆಪರೇಟಿವ್ ಸೊಸೈಟಿಗಳ ಮೂಲಕ ಒದಗಿಸಲು ಪ್ರಯತ್ನ ನಡೆಯುತ್ತಿದೆಯೆಂದು ಕೇಳಿದೆ. ಈ ವ್ಯವಸ್ಥೆ ಸರಿಯಾಗುವುದಿಲ್ಲ. ರಾಗಿ ಬೆಳೆಯುವುದಕ್ಕೂ ಅಥವ ಭತ್ತ ಬೆಳೆಸುವುದಕ್ಕೂ ಬೇಕಾದಂಥ ಸಾಲ ಕೈಗಾರಿಕೆಗೆ ಹೇಗೆ ಅನ್ವಯಿಸುತ್ತದೆ ಎನ್ನುವುದೇ ನನಗೆ ಅರ್ಥವಾಗುತ್ತಿಲ್ಲ. ರಾಗಿ—ಭತ್ತ ಬೆಳೆಯುವುದನ್ನು ಕೂಡ ಒಂದು ಕೈಗಾರಿಕೆಯೆಂದು ಭಾವಿಸುವುದು ಸರಿಯಲ್ಲ. ಮುಂದೆ ಈ ವ್ಯವಸ್ಥೆಯಲ್ಲಿ ಸಾಲ ಪಡೆಯಲು ತೊಂದರೆಯಾಗಬಹುದು. ಈ ರೀತಿ ಮಾಡಿರತಕ್ಕದ್ದು ತುಂಬಾ ಅಸಮಂಜಸವಾಗಿದೆ. ಕೈಗಾರಿಕೆಗೂ ಮತ್ತು ವ್ಯವಸಾಯೋದ್ಯಮಕ್ಕೂ ಹೀಗೆ ಗಂಟು ಹಾಕುವುದು ಸರಿಯಾದದ್ದಲ್ಲ. ಗುದ್ದಲಿಗಳು ಇತ್ಯಾದಿಗಳನ್ನು ಮಾಡುವುದು ಕೈಗಾರಿಕೆಯ ಬಾಬಾಯಿತು. ಅದರಂತೆಯೇ ರಾಗಿ—ಭತ್ತ ಇತ್ಯಾದಿಗಳನ್ನು ಬೆಳೆಯುವುದೂ ಕೂಡ ಒಂದು ವಿಧವಾದ ಕೈಗಾರಿಕೆ ಎಂದು ಭಾವಿಸಿರತಕ್ಕದ್ದು ಸರಿಯಲ್ಲ. ಆದುದರಿಂದ ಈ ಮೀಡಿಯಂ ಟರ್ಮ್ ಲೋನು ಎಂಬುದು ವ್ಯವಸಾಯಗಾರರಿಗೆ ಖಾಯಂ ಕೆಲಸ

ಗಳಿಗೆ ಎಂದರೆ ಪಂಪ್‌ಸೆಟ್ಸ್‌ಗಳನ್ನು ಕೊಂಡುಕೊಳ್ಳುವುದಕ್ಕೂ ಮತ್ತು ಬಾವಿ ಇತ್ಯಾದಿಗಳನ್ನು ತೆಗೆಸುವುದಕ್ಕೂ ಕೊಡತಕ್ಕಂಥ ಸಾಲವಾಗಿದೆ. ಇಂಥಾ ಬಾಬುಗಳಿಗೆ ಕೊಡತಕ್ಕ ಸಾಲವನ್ನು ಯಾವತ್ತೂ ವ್ಯವಸಾಯಕ್ಕೆ ಸಂಬಂಧಪಟ್ಟ ಐಟಂ ಸಾಲವೆಂದು ಕೊಡಬೇಕೇ ಹೊರತು ಕೈಗಾರಿಕಾ ಸಾಲ ಎಂದು ಕೊಡುವುದರಲ್ಲಿ ಅರ್ಥವಿಲ್ಲ. ಈ ವಿಧವಾದಂಥ ಲೋಪದೋಷಗಳ ಬಗ್ಗೆ ನಾನು ಈ ಹಿಂದೆ ಕೂಡ ಟೀಕೆ ಮಾಡಿದ್ದೇನೆ. ಆದುದರಿಂದ ನಾನು ಪ್ರತಿ ಸಾರ್ತಿಯೂ ಈ ಸಂಬಂಧವಾಗಿ ಟೀಕೆ ಮಾಡಬೇಕೆಂದರೆ ನನಗದು ಸರಿಬೀಳುವುದಿಲ್ಲ. ಈ ಹಿಂದೆ ಸರ್ ಎಂ. ವಿಶ್ವೇಶ್ವರಯ್ಯನವರ ಸ್ಕೀಂ ಜಾರಿಗೆ ತಂದರು. ಆದರೆ ಈ ದಿವಸ ಅವು ಅಷ್ಟು ಸಮರ್ಪಕವಾಗಿ ಕೆಲಸ ನಡೆಯುತ್ತಿಲ್ಲ. ಸರ್ಕಾರದವರು ಅವುಗಳನ್ನೆಲ್ಲಾ ಯಾವುದೋ ಒಂದು ದೃಷ್ಟಿಯನ್ನಿಟ್ಟುಕೊಂಡು ನೇಮಕ ಮಾಡಿದರು. ನಾನು ಪದೇ ಪದೇ ಆ ವಿಚಾರಗಳನ್ನು ಕೆಣಕುವುದಕ್ಕೆ ನನಗೆ ಆಸೆಯಿಲ್ಲ. ಅವುಗಳನ್ನು ಇಲ್ಲಿಯವರೆಗೂ ಸರಿಯಾದ ವ್ಯವಸ್ಥೆಗೆ ತಂದಿಲ್ಲ. ಯಾವುದೋ ಒಂದು ಕಡೆ ಎಂಟು ಜನ ಬಡಗಿಗಳಿಗೂ, ನಾಲ್ಕು ಜನ ಕುಂಬಾರರಿಗೂ, ನಾಲ್ಕಾರು ಜನ ಕಮ್ಮಾರರಿಗೂ ಸಹಾಯ ನೀಡಿಬಿಟ್ಟಾಕ್ಷಣಕ್ಕೇ ಅದೊಂದು ಇಂಡಸ್ಟ್ರಿಯಲ್ aid ಆಯಿತೆ? ಇಂಥಾ ಸ್ಕೀಮುಗಳು ಬಹಳ ಕಾಲ ಬಾಳುವುದಿಲ್ಲ. ಇಂಥ ಸ್ಕೀಮುಗಳ ಮೂಲಕ ಈ ಹೊತ್ತು ವ್ಯವಸಾಯಗಾರರಿಗೂ ಸಹಾಯ ಮಾಡುತ್ತೇವೆ ಎಂಬುದಾಗಿ ಹೇಳುತ್ತಿರುವುದನ್ನು ನಂಬುವುದಕ್ಕಾಗುವುದಿಲ್ಲ. ಆದಕಾರಣ ಮೀಡಿಯಂ ಮತ್ತು ಷಾರ್ಟ್ ಟರ್ಮ್ ಲೋನುಗಳನ್ನು ಮಂಜೂರು ಮಾಡತಕ್ಕ ಅಧಿಕಾರವನ್ನು ಇಂಡಸ್ಟ್ರಿಯಲ್ ಸೊಸೈಟಿಗಳಿಗೆ ವಹಿಸಬಾರದೆಂದೂ ಮತ್ತು ಈ ಸಾಲಗಳನ್ನು ರೈತರಿಗೆ ಏಪೆಕ್ಸ್ ಬ್ಯಾಂಕ್ ಮೂಲಕವೇ ದೊರೆಯುವಂತೆ ಮಾಡಬೇಕೆಂದೂ ಸಲಹೆ ಮಾಡುತ್ತೇನೆ.

ಮತ್ತೊಂದು ನನ್ನ ಸಲಹೆ ಏನೆಂದರೆ ಈ ಮೀಡಿಯಂ ಟರ್ಮ್ ಸಾಲದ ಮೊಬಲಗನ್ನು ಮೂರು ಸಾವಿರಕ್ಕೆ ನಿಗದಿ ಮಾಡಿದ್ದಾರೆ. ಇದು ಏತಕ್ಕೂ ಸಾಲದು. ಈ ಮೊಬಲಗನ್ನು ಕನಿಷ್ಟಪಕ್ಷ ಐದು ಸಾವಿರಕ್ಕಾದರೂ ಹೆಚ್ಚಿಸಬೇಕೆಂದು ಸಲಹೆ ಮಾಡುತ್ತೇನೆ. ಈ ದಿವಸ ಒಂದು ಬಾವಿ ತೆಗೆಸಬೇಕೆಂದರೆ ಐದು ಸಾವಿರ ರೂಪಾಯಿಗಳಿಗೆ ಕಡಮೆಯಾಗುವುದಿಲ್ಲ. ಮೀಡಿಯಂ ಟರ್ಮ್ ಲೋನನ್ನು ಕೊಡತಕ್ಕ ಉದ್ದೇಶವೇ ಇದು. ಈ ಸಾಲವನ್ನು ಯಾವಾಗ್ಲೂ ಖಾಯಂ ಕೆಲಸಗಳನ್ನು ಕೈಗೊಳ್ಳಲು ನೀಡಬೇಕೆಂಬುದೇ ಆಗಿರುತ್ತದೆ. ಈ ಸಾಲದ ಪರಮಾವಧಿಯನ್ನು ಐದು ಸಾವಿರಕ್ಕೆ ನಿಗದಿ ಮಾಡಬೇಕು. ಷಾರ್ಟ್ ಟರ್ಮ್ ಲೋನುಗಳನ್ನು ಒಂದು ಸಾವಿರಕ್ಕೆ ನಿಗದಿ ಮಾಡಬೇಕು. ಇಷ್ಟನ್ನು ಮಾತ್ರ ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

*ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ಈ ಸಹಕಾರ ಬಾಬು ಎನ್ನತಕ್ಕದ್ದು ರೈತರ ಅಭಿವೃದ್ಧಿಗೆ ಬಹಳ ಸಾಧಕವಾದದ್ದು. ಆದರೆ ಈ ದಿವಸ ಈ ಸಹಕಾರ ಸಂಸ್ಥೆಗಳು ರೈತನಿಗೆ ಯಾವ ರೀತಿ ಉಪಕಾರಮಾಡಬೇಕು ಎಂಬುದನ್ನು ನಿರ್ಧರಿಸತಕ್ಕ ವಿಚಾರಗಳಿಗೆ ಸರ್ಕಾರ ತನ್ನ ಗಮನವನ್ನು ಕೊಟ್ಟಿಲ್ಲ. ಈ ಬಗ್ಗೆ ಸರ್ಕಾರಕ್ಕೆ ಒಂದು ಸರಿಯಾದ ಪಾಲಿಸಿ ಇಲ್ಲ. ಈ ಸಂಸ್ಥೆಗಳ ಆಡಿಟ್ಟನ್ನು ಕಾಲಕ್ಕೆ ಸರಿಯಾಗಿ ನಡೆಸುತ್ತಿಲ್ಲ. ಕೆಲವು ಸಂದರ್ಭಗಳಲ್ಲೇನೋ ಕೆಲವು ಸಂಸ್ಥೆಗಳ ಆಡಿಟ್ ಆಗಿದೆ. ಆದರೆ ಅದು ಅಷ್ಟು ತೃಪ್ತಿಕರವಾಗಿಲ್ಲ. ಆದಕಾರಣ ಈ ಸಂಸ್ಥೆಗಳ ಆಡಿಟ್ಟನ್ನು ಇನ್ನೂ ತೃಪ್ತಿಕರವಾದ ರೀತಿಯಲ್ಲಿ ಸಕಾಲಕ್ಕೆ ನಡೆಯುವಂತೆ ಸರ್ಕಾರದವರು ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಸೂಚಿಸುತ್ತೇನೆ. ಉದಾಹರಣೆಗೆ, ನಾವು ಈಗ ಪೋಸ್ಟಲ್ ಡಿಪಾರ್ಟ್‌ಮೆಂಟಿನ ವಿಚಾರ ತೆಗೆದುಕೊಂಡು ಹೇಳುವುದಾದರೆ, ಮೂರು—ನಾಲ್ಕು ಜಿಲ್ಲೆಗಳಿಗೊಬ್ಬ ಇನ್ಸ್‌ಪೆಕ್ಟರಿರುತ್ತಾರೆ. ಎಲ್ಲಿಯಾದರೂ ಒಂದು ಡಿಫಾಲ್ಕೇಷನ್ ಕೇಸ್ ನಡೆಯಿತೆಂದರೆ ಆ ಬಗ್ಗೆ ತಕ್ಷಣ ಅವರು ಕಾರ್ಯಕ್ರಮಕೈಕೊಂಡು ಕೂಡಲೇ ಆ ಅಕ್ರಮ ನಡೆವಳಿಕೆ ನಡೆಸಿದವನನ್ನು ಶಿಕ್ಷೆಗೆ ಒಳಪಡಿಸುತ್ತಾರೆ. ಆ ಒಂದು ಬಗೆ ಆ ಇಲಾಖೆಯಲ್ಲಿರುವುದರಿಂದ ಅಲ್ಲಿ ಈ ದಿವಸ ದುಡ್ಡು ದುರುಪಯೋಗವಾಗುವುದಕ್ಕೆ ಅವಕಾಶವಿಲ್ಲ. ಆದರೆ ಈ ಹೊತ್ತು ಈ ನಮ್ಮ ಇಲಾಖೆಗಳಲ್ಲಿ ಪ್ರತ್ಯಕ್ಷವಾಗಿ ಹಣ ದುರುಪಯೋಗವಾಗಿರತಕ್ಕದ್ದು ಅಧಿಕಾರಿಗಳ ಕಣ್ಣಿಗೆ ಬಿದ್ದರೂ ಸಹ ಆ ಆಫೀಸಿನ ಲೆಕ್ಕ ಪತ್ರಗಳನ್ನು ಆಡಿಟ್ ಮಾಡಿರುವುದಿಲ್ಲವೆಂಬ ನೆಪದಮೇಲೆ ಅಂಥ ಕೇಸುಗಳನ್ನು ಕೈಬಿಟ್ಟು ಕಾಲವನ್ನು ತಳ್ಳಿಕೊಂಡು ಬರುತ್ತಿರುವುದರಿಂದ ಆ ನೌಕರರಿಗೆ ಧೈರ್ಯ ಉಂಟಾಗಿ ಆಡಿಟ್ ನಡೆಯುವ ವೇಳೆಗೆ ಆ ದುಡ್ಡನ್ನೆಲ್ಲಾ ತಿಂದುಹಾಕಿಬಿಟ್ಟಿರುತ್ತಾರೆ. ಈ ಹಿಂದೆ ಶ್ರೀ ಟಿ. ಮರಿಯಪ್ಪನವರ ಕಾಲದಲ್ಲಿ ಮಲ್ಟಿಪರ್ಪಸ್ ಕೋ-ಆಪರೇಟಿವ್ ಸೊಸೈಟಿಗಳನ್ನು ಪ್ರಾರಂಭಿಸಲಾಯಿತು. ಅವುಗಳಮೇಲೆ ನಿಗಾ ನೋಡಿಕೊಳ್ಳಲು ರೆವಿನ್ಯೂ ಇನ್ಸ್‌ಪೆಕ್ಟರಿಗೆ ಅಧಿಕಾರಕೊಡಲಾಗಿತ್ತು. ಅವರೇ ಆ ಹಣವನ್ನೆಲ್ಲಾ ತಿಂದುಹಾಕಿ ಕೂತಿದ್ದಾರೆ. ಆದರೆ ಈ ದಿವಸ ಅವರು ಪತ್ತೆ ಇಲ್ಲ. ಸರ್ಕಾರದವರು ಅವರ ಮೇಲೆ ಸಕಾಲಕ್ಕೆ ಕ್ರಮವನ್ನು ಕೈಗೊಳ್ಳದೆ ಇದ್ದುದರಿಂದ ಅವರು ಪರಾರಿಯಾಗುವುದಕ್ಕೂ ಮತ್ತು ಅವರಿಂದ ಹಣವನ್ನು ವಸೂಲು ಮಾಡಲು ಇದ್ದಂಥ ಅವಕಾಶವನ್ನು ಕಳೆದುಕೊಳ್ಳುವುದಕ್ಕೂ ಕಾರಣವಾಯಿತು.

ಇನ್ನು ಈ ರೈತರಿಗೆ ಸಾಲ ಕೊಡತಕ್ಕ ವಿಚಾರದಲ್ಲಿ ಕೈಗಾರಿಕೆಗಳ ವ್ಯವಹಾರಕ್ಕೂ ಮತ್ತು ವ್ಯವಸಾಯಗಾರರ ವ್ಯವಹಾರಕ್ಕೂ ಯಾವ ಸಂಬಂಧವೂ ಇರಬಾರದು. ಈ ಎರಡೂ ಬೇರೆ ಬೇರೆ ವ್ಯವಹಾರಗಳು. ಇವು ಒಂದಕ್ಕೊಂದು ಬೆರೆಯದಂತೆ ಸ್ವಾತಂತ್ರ್ಯದಿಂದಿರಬೇಕು.

ಈ ದಿವಸ ಸೊಸೈಟಿಗಳ ಮೂಲಕ ರೈತನಿಗೆ ದೊರೆಯುತ್ತಿರುವ ಸಾಲದ ಬಗ್ಗೆ ಬಡ್ಡಿ ದುಬಾರಿ ಆಗಿದೆ. ನಮ್ಮ ದೇಶದ ರೈತರಿಗೆ ಅಷ್ಟು ಹೆಚ್ಚಿನ ಬಡ್ಡಿ ತೆತ್ತು ಸಾಲ ತೀರಿಸುವಷ್ಟು ಶಕ್ತಿ ಇಲ್ಲ. ಈ ದಿವಸ ಆಗಲೇ ರೈತರ ಮೇಲಿರುವ ಸಾಲ 40 ಕೋಟಿ ರೂಪಾಯಿಗಳೆಂದು ಅಂದಾಜು ಮಾಡಲಾಗಿದೆ. ಈ ಸಾಲವನ್ನೆಲ್ಲಾ ಅವರು ಈ ಸಹಕಾರ ಸಂಸ್ಥೆಯ ಸಹಾಯದಿಂದ ತೀರಿಸಬೇಕಾಗಿದೆ. ಮದ್ರಾಸ್ ಪ್ರಾಂತ್ಯದಲ್ಲಿರತಕ್ಕ ಸಹಕಾರ ಸಂಘಗಳು ರೈತನಿಗೆ ಬಹಳ ಉಪಕಾರವಾದಂಥವುಗಳಾಗಿರುತ್ತವೆ. ಈ ದಿವಸ ನಮ್ಮ ಬಳ್ಳಾರಿ ಜಿಲ್ಲೆಯಲ್ಲಿ ಈ ಸಹಕಾರ ಸಂಘಗಳು ಯಾವ ರೀತಿ ಕೆಲಸ ನಡೆಸುತ್ತಿವೆ ಎಂಬುದನ್ನು ನೋಡಿದರೆ ನಮಗೆ ಬಹಳ ಸಂತೋಷವಾಗುತ್ತದೆ. ಆದುದರಿಂದ ನಮ್ಮ ಸರ್ಕಾರ ಕೂಡ ಆ ಪದ್ಧತಿಯನ್ನೇ ಇಲ್ಲಿಯೂ ಜಾರಿಗೆ ತರಬೇಕೆಂದು ಸಲಹೆ ಮಾಡುತ್ತೇನೆ.

ಈ ಷಾರ್ಟ್‌ಟರ್ಮ್ ಲೋನಿನ ಬಗ್ಗೆ ಸರ್ಕಾರ ಕನಿಷ್ಟ ಪಕ್ಷ ಒಂದೊಂದು ಜಿಲ್ಲೆಗೂ ಒಂದು ಕೋಟಿಯಂತೆ

(ಶ್ರೀ ಬಿ. ಹುಚ್ಚೇಗೌಡ)

ಹತ್ತು ಜಿಲ್ಲೆಗೂ 10 ಕೋಟಿ ರೂಪಾಯಿಗಳನ್ನು ಒದಗಿಸಬೇಕೆಂದು ಸಲಹೆ ಮಾಡುತ್ತೇನೆ.

ಈ ದಿವಸ ಲ್ಯಾಂಡ್ ಮಾರ್ಗೇಜ್ ಬ್ಯಾಂಕಿನವರು ರೈತರಿಗೆ ಮಂಜೂರು ಮಾಡತಕ್ಕ ಸಾಲದ ಬಗ್ಗೆ ಶೇಕಡಾ ಆರೂವರೆಯಂತೆ ಬಡ್ಡಿಯನ್ನು ಹಾಕುತ್ತಿದ್ದಾರೆ. ಆದರೆ ಮದ್ರಾಸ್ ಪ್ರಾಂತ್ಯದಲ್ಲಿ ಅವರು ಶೇಕಡ ಮೂರೂವರೆ ಪ್ರಕಾರ ಬಡ್ಡಿ ಹಾಕುತ್ತಿದ್ದಾರೆಂದು ಕೇಳ್ತೇನೆ. ಆದುದರಿಂದ ತಾವು ಇಲ್ಲಿ ಬಡ್ಡಿಯ ದರವನ್ನು ಶೇಕಡ ಮೂರಕ್ಕೆ ಇಳಿಸಬೇಕೆಂದು ಹೇಳುತ್ತೇನೆ. ತಾವು ರೈತನನ್ನು ಉದ್ಧಾರವಮಾಡಬೇಕೆಂದಿದ್ದರೆ ಮತ್ತು ಆತನನ್ನು ಸಾಲಗಾರರ ಕಾಟದಿಂದ ಪಾರು ಮಾಡಬೇಕೆಂಬುದಾಗಿದ್ದರೆ, ಈ ಷಾರ್ಟ್ ಮತ್ತು ಮೀಡಿಯಂ ಟರ್ಮ್ ಲೋನುಗಳ ಬಡ್ಡಿ ದರವನ್ನು ಇಳಿಸಿ ಅದನ್ನು ಶೇಕಡಾ ಮೂರಕ್ಕೆ ನಿಲ್ಲಿಸಬೇಕೆಂದು ಹೇಳುತ್ತೇನೆ. ಮದ್ರಾಸ್ ಪ್ರಾಂತ್ಯದಲ್ಲಿ ಸಹ ಈಗ ಶೇಕಡಾ ಮೂರರಂತೆ ಬಡ್ಡಿ ವಿಧಿಸಲಾಗುತ್ತಿದೆಯಂತೆ. ತಾವೂ ಸಹ ಇಲ್ಲಿ ಶೇಕಡಾ ಮೂರರಂತೆ ಬಡ್ಡಿ ವಿಧಾಯಕ ಮಾಡುವುದು ಒಳ್ಳೆಯದು.

ಈ ದಿವಸ ಸೊಸೈಟಿಗಳ ಸೂಪರ್‌ವಿಷನ್ ನೋಡಿಕೊಳ್ಳುತ್ತಿರುವ ಇನ್ಸ್‌ಪೆಕ್ಟರುಗಳು ಓವರ್‌ಲ್ಯಾಪ್ ಆಗಿದ್ದಾರೆ. ಅವರು ಡೂಪ್ಲಿಕೇಟ್ ಆಗಿದ್ದಾರೆ. ಈ ದಿವಸ N.E.S. ಬ್ಲಾಕುಗಳಲ್ಲಿ ಹೇಗೆ ನಾಲ್ಕು-ಐದು ಬ್ಲಾಕುಗಳಿಗೆ ಒಬ್ಬರು ಇನ್ಸ್‌ಪೆಕ್ಟರುಗಳಿದ್ದಾರೋ ಹಾಗೆಯೇ ಈ ಇಲಾಖೆಯಲ್ಲೂ ಮೂರು-ನಾಲ್ಕು ಸೊಸೈಟಿಗಳಿಗೆ ಒಬ್ಬರು ಇನ್ಸ್‌ಪೆಕ್ಟರು ಇದ್ದರೆ ಸಾಕು. ಹೀಗೆ ಇವರನ್ನು ರೀಡಿಸ್ಟ್ರಿಬ್ಯೂಟ್ ಮಾಡಬೇಕು.

ಇನ್ನು ಈ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ರಿಜಿಸ್ಟ್ರಾರ್ ಅವರನ್ನು ರೆವಿನ್ಯೂ ಇಲಾಖೆಯಿಂದ ನೇರವಾಗಿ ತೆಗೆದುಕೊಂಡಿದ್ದಾರೆ. ಇವರನ್ನು ಖಾಯಂ ಆಗಿ ಇಲ್ಲಿಯೇ ಇಟ್ಟುಕೊಳ್ಳುವಹಾಗಿದ್ದರೆ ಇಟ್ಟುಕೊಳ್ಳಬೇಕು, ಇಲ್ಲವಾದರೆ ಇವರನ್ನು ಕೂಡಲೇ ಆ ಇಲಾಖೆಗೆ ವರ್ಗಾಯಿಸಿ ಇಲ್ಲಿಗೆ ಪ್ರತ್ಯೇಕವಾಗಿ ಒಬ್ಬರನ್ನು ನೇಮಕಮಾಡಿಕೊಳ್ಳುವುದು ಅಗತ್ಯ. ಇಲ್ಲವಾದರೆ ಈ ಇಲಾಖೆಯ ಕೆಲಸಗಳು ಅಷ್ಟು ಉಮೇದಿನಿಂದ ನಡೆಸಲು ಅವರಿಗೆ ಅವಕಾಶವಿರುವುದಿಲ್ಲ. ಇಲ್ಲಿಗೆ ಯಾರೇ ಹಂಗಾಮಿಯಾಗಿ ಬಂದರೂ ಅವರಿಗೆ ಈ ರಿಜಿಸ್ಟ್ರಾರ್ ಅವರ ಗ್ರೇಡನ್ನು ಕೊಡಬೇಕು. ಹಾಗೆ ಕೊಡದೆ ಹೋದರೆ ಕೆಲಸ ಸರಿಯಾಗಿ ನಡೆಯುವುದಿಲ್ಲ. ಅದಕಾರಣ ಯಾರೋ ಒಬ್ಬರನ್ನು ಹೀಗೆ ಹಂಗಾಮಿಯಾಗಿಟ್ಟುಕೊಂಡು ಅವರಿಗೆ ಸಾಕಷ್ಟು ಉತ್ತೇಜನ ಕೊಡದೆ ಅವರನ್ನು ಮುಂದುವರಿಸಿಕೊಂಡು ಹೋಗತಕ್ಕದ್ದು ಇಲಾಖೆಯ ಹಿತದೃಷ್ಟಿಯಿಂದ ಸಾಧುವಾದ್ದಲ್ಲವೆಂದು ಹೇಳುತ್ತೇನೆ.

*ಶ್ರೀ ಬಿ. ಚಿಕ್ಕಣ್ಣ (ಜಾವಗಲ್).—ಸ್ವಾಮಿ, ಇತ್ತೀಚೆಗೆ ಸಹಕಾರ ಸಂಘಗಳು ಉತ್ತಮವಾಗಿ ಕೆಲಸ ಮಾಡುತ್ತಿವೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆದರೆ ಜಮೀನು ಅಡಮಾನದ ಬ್ಯಾಂಕು ಏನಿದೆ ಅಲ್ಲಿ ಕೆಲವು ಲೋಪದೋಷಗಳಿವೆ, ಅವನ್ನು ಸರಿಪಡಿಸಿ ಇನ್ನೂ ಹೆಚ್ಚಿನ ಅನುಕೂಲ ಮಾಡಿಕೊಡಬೇಕೆಂದು ಸಂಬಂಧಪಟ್ಟ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಐದು ಸಾವಿರದಿಂದ 10 ಸಾವಿರ ರೂಪಾಯಿಗಳ ಸಾಲ ಕೊಡುವುದನ್ನು ಈಗ ಸ್ವಲ್ಪ ವಿಮರ್ಶೆ ಮಾಡಬೇಕಾಗಿದೆ. ನಿಜವಾಗಿಯೂ ರೈತನಿಗೆ ಸಾಲ ಇದೆಯೋ ಇಲ್ಲವೊ ಎಂಬುದನ್ನು ಪತ್ತೆ ಹಚ್ಚಿ ಸಾಲ ಕೊಡಬೇಕು. ಈಗ ಏನಾಗಿದೆ ಎಂದರೆ ಸಾಲ ಇಲ್ಲದೇ ಇದ್ದರೂ ಕೂಡ ಸುಳ್ಳು ಪ್ರಾಮಿಸರಿ ಬಾಂಡ್ ತೋರಿಸಿ ಸಾಲ ತೆಗೆದುಕೊಂಡು ವ್ಯವಸಾಯಕ್ಕೆ ಬೇಕಾದ ಜಮೀನನ್ನು ಕೊಂಡುಕೊಳ್ಳುತ್ತಾ ಇದ್ದಾರೆ. ನಿಜವಾಗಿಯೂ ಇವತ್ತು ಯಾವ ರೈತ ಸಾಲಗಾರನಾಗಿದ್ದಾನೆಯೋ ಅವನಿಗೆ ಸಾಲ ದೊರೆಯದೆ ಅವನು ತೊಂದರೆ ಪಡುತ್ತಾ ಇದ್ದಾನೆ. ಅದೇ ಇನ್ನು ಕೆಲವರು ಯಾವ ಕಷ್ಟವೂ ಇಲ್ಲದೆ ಸಾವಿರ, ಎರಡು ಸಾವಿರ ರೂಪಾಯಿಗಳ ಸಾಲ ಪಡೆಯುತ್ತಿದ್ದಾರೆ. ಇನ್ನು ಕೆಲವರು ಹೆಚ್ಚಿನ ಸಾಲ ತೆಗೆದುಕೊಂಡು ದುರುಪಯೋಗಮಾಡಿಕೊಂಡಿದ್ದಾರೆ. ಆದ್ದರಿಂದ ಸಾಲ ಕೊಡುವಾಗ ನಿಜವಾಗಿಯೂ ಸಾಲ ಇದೆಯೇ ಇಲ್ಲವೇ ಎಂಬುದನ್ನು ವಿಮರ್ಶೆಮಾಡಿ, ಯಾರು ಸಾಲ ಪಡೆಯಲಿಕ್ಕೆ ಅರ್ಹರೋ, ಯಾರಿಗೆ ಆಧಾರವಿದೆಯೋ, ಅವರಿಗೆ ಕೊಡುವಂತೆ ತಕ್ಕ ಏರ್ಪಾಡು ಮಾಡಬೇಕು.

ಆ ಮೇಲೆ ಸಾಲ ತೆಗೆದುಕೊಳ್ಳುವಾಗ ಬಡವರಿಗೆ ಬಹಳ ತೊಂದರೆಯಾಗುತ್ತಾ ಇದೆ. ಏಕೆಂದರೆ ಸಾಲಕ್ಕೆ ಅರ್ಜಿ ಹಾಕಿದರೆ ಒಂದು ವರ್ಷವಾದರೂ ಕೂಡ ಮಂಜೂರಾಗಿ ಬರುತ್ತಿಲ್ಲ. ಹಿಂದೆ 4—5 ವರ್ಷ ಆಗುತ್ತಾ ಇತ್ತು, ಈಗ 2—3 ವರ್ಷದಿಂದ ಸ್ವಲ್ಪಮಟ್ಟಿಗೆ ಜಾಗ್ರತೆಆಗುತ್ತಾ ಇದೆ, ಅದಕ್ಕಾಗಿ ತಮ್ಮನ್ನು ವಂದಿಸುತ್ತೇನೆ. ಇದೇ ರೀತಿ ಸುಲಭವಾಗಿ ರೈತನಿಗೆ ಸಾಲ ದೊರೆಯಬೇಕಾದರೆ ಪ್ರತಿಯೊಂದು ತಾಲ್ಲೂಕಿನಲ್ಲೂ ಕೇಸ್ ವರ್ಕರ್ಸ್‌ನ್ನು ನೇಮಕಮಾಡಬೇಕು. ಯಾವ ರೆಕಾರ್ಡು ಯಾವ ರೀತಿ ಬಿಲ್ಡ್ ಅಪ್ ಮಾಡಬೇಕು ಎಂಬುದು ಗೊತ್ತಿಲ್ಲದೇ ಟ್ರೈನಿಂಗ್ ಇಲ್ಲದೇ ಇರತಕ್ಕ ಸೆಕ್ರೆಟೆರಿಯನ್ನು ಇಟ್ಟುಕೊಂಡು ಆಯಾಯಾ ತಾಲ್ಲೂಕಿನಿಂದ ರೆಕಾರ್ಡುಗಳನ್ನು ಕೇಂದ್ರ ಅಡಮಾನದ ಬ್ಯಾಂಕಿಗೆ ಕಳುಹಿಸುತ್ತಾರೆ. ಇಲ್ಲಿಂದ ಹತ್ತು ಹದಿನೈದು ಸಾರಿ ಕ್ವೈರಿ ಹಾಕುತ್ತಾರೆ. ಹೀಗಾಗಿ ವರ್ಷ, ಆರು ತಿಂಗಳು ನಿಧಾನವಾಗುತ್ತದೆ. ಆದ್ದರಿಂದ ಅನುಭವಸ್ಥರಾದ ಕೇಸ್ ವರ್ಕರುಗಳನ್ನು ಪ್ರತಿಯೊಂದು ತಾಲ್ಲೂಕಿನಲ್ಲೂ ಗೊತ್ತು ಮಾಡಿ, ರೆಕಾರ್ಡ್ ಬಂದ ತಕ್ಷಣ ಅದು ಮಂಜೂರಾಗಿ ರೈತನಿಗೆ ಸಾಲ ದೊರೆಯುವಂತೆ ತಕ್ಕ ಏರ್ಪಾಡು ಮಾಡಬೇಕು.

ಈಗ ಇರತಕ್ಕ ಬಡ್ಡಿ ದರವನ್ನು ಕಮ್ಮಿ ಮಾಡಬೇಕು. ಶ್ರೀ ಹುಚ್ಚೇಗೌಡರು ಹೇಳಿದ ಹಾಗೆ, ಬಡ್ಡಿ ದರ ಹೆಚ್ಚಾಗಿದೆ, ಅದನ್ನು ಕಮ್ಮಿ ಮಾಡಬೇಕೆಂದು ಹೇಳಿ ಈ ಸಂದರ್ಭದಲ್ಲಿ ಪ್ರಾರ್ಥಿಸುತ್ತೇನೆ.

*ಶ್ರೀ ಶಿವನಂಜೇಗೌಡ (ಮೈಸೂರು ತಾಲ್ಲೂಕು).—ಜಮೀನು ಅಡಮಾನ ಬ್ಯಾಂಕಿನಲ್ಲಿ ಯಾರಿಗೆ ಆಧಾರವಿದೆಯೋ ಅವರಿಗೆ ಸಾಲ ಕೊಡಬೇಕೆಂದು ಶ್ರೀ ಚಿಕ್ಕಣ್ಣನವರು ಹೇಳಿದರು. ಅದೇನೋ ನಿಜ. ಸಾಮಾನ್ಯವಾಗಿ ಗೌರವಸ್ಥರಾಗಿರುವವರು 10 ಸಾವಿರ, 15 ಸಾವಿರ ರೂಪಾಯಿಗಳವರೆಗೂ ಬರೀ ಬಾಯಿ ಮಾತಿನಲ್ಲೇ ಸಾಲ ಪಡೆದುಕೊಂಡಿರುತ್ತಾರೆ. ಒಂದು ರಸೀತಿಯ ಮೂಲಕ ಹಣ ಪಡೆದಿರುವವರೂ ಇದ್ದಾರೆ. ಆದ್ದರಿಂದ ಅವರ ಗೌರವ ಉಳಿದುಕೊಳ್ಳಬೇಕಾಗಿದ್ದರೆ ರಿಜಿಸ್ಟ್ರೇಷನ್ ಬೇಡ, ಏನೂ ಬೇಡ ಅದನ್ನು ಅವರು ತೀರಿಸಲೇಬೇಕು, ತೀರಿಸಿಯೂ ತೀರಿಸುತ್ತಾರೆ. ಸಾಮಾನ್ಯವಾಗಿ ಅಡಮಾನದ ಬ್ಯಾಂಕಿನಲ್ಲಿ ದುಡ್ಡು ತೆಗೆದುಕೊಳ್ಳಬೇಕಾದರೆ ಬಹಳ ತೊಂದರೆ ಇದೆ. ಯಾವ ರೈತನಿಗೆ ದುಡ್ಡಿನ ಅವಶ್ಯಕತೆ ಇದೆಯೋ ಅವನಿಗೆ ಸಾಲ ದೊರೆಯುವಂತೆ ಏರ್ಪಾಡು ಮಾಡಬೇಕು. ಈ ವರ್ಷ ಸಾಲಕ್ಕೆ ಅರ್ಜಿ ಕೊಟ್ಟರೆ ಮುಂದಿನ ವರ್ಷಕ್ಕೂ ಕೂಡ ಸಾಲ ದೊರೆಯುತ್ತಿಲ್ಲ.

ಅರ್ಜಿ ಮಾತ್ರ ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಅಲ್ಲಿಗೆ ಹೋಗುತ್ತಾ ಇರುತ್ತದೆ. ಸಾಲ ಮಾತ್ರ ಸಿಕ್ಕೋ ಹಾಗೇ ಇಲ್ಲ. ಇದನ್ನು ಸರಿಪಡಿಸಬೇಕು.

ಇನ್ನೊಂದು ವಿಚಾರ. ಮಲ್ಟಿಪರ್‌ಪಸ್ ಸೊಸೈಟಿ ಎಂದು ಹಿಂದೆ ಪ್ರಾರಂಭವಾಯಿತು. ಅಯಾಯ ತಾಲ್ಲೂಕಿನ ಮುಖಂಡರು, ಮತ್ತು ಆಯಾಯಾ ತಾಲ್ಲೂಕಿನ ಅಮಲ್ದಾರರು ಎಲ್ಲಾ ಸೇರಿ ಜನರಿಂದ ದುಡ್ಡು ಶೇಖರಿಸಿ ಇಂತಿಂಥಾ ಅನುಕೂಲ ಮಾಡಿಕೊಡುತ್ತೇವೆ, ಈ ರೀತಿ ಪ್ರಯೋಜನವಾಗುತ್ತದೆ ಎಂದು ಹೇಳಿ ಆ ಸೊಸೈಟಿಗಳೂ ಕೆಲಸಮಾಡುವುದಕ್ಕೆ ಪ್ರಾರಂಭವಾದುವು. 500—50—10—20 ರೂಪಾಯಿ ಈ ರೀತಿ ಎಲ್ಲಾ ಹಣ ಕೂಡಿಸಿಕೊಟ್ಟರು. ಮೈಸೂರು ತಾಲ್ಲೂಕಿನಲ್ಲಿ ಹೀಗೆ ಹಣ ವಸೂಲಾಯಿತು. ಈಗ ಆ ದುಡ್ಡನ್ನೆಲಾ ಅಲ್ಲಿರುವ ಗುಮಾಸ್ತರು ತಿಂದು ಹಾಕಿದ್ದಾರೆ. ಈ ವಿಚಾರವನ್ನು ಮಾನ್ಯ ಮಂತ್ರಿಗಳಲ್ಲೂ ಕೂಡ ಹೋದ ವರ್ಷವೇ ಹೇಳಿದೆ, ಅರ್ಜಿ ಸಹ ಕೊಟ್ಟೆ. ರೆವಿನ್ಯೂ ಇನ್‌ಸ್ಪೆಕ್ಟರು ಸೆಕ್ರೆಟರಿಗಳಾಗಿದ್ದರು. ಯಾರ್‍ಯಾರಲ್ಲಿ ಎಷ್ಟೆಷ್ಟು ಹಣ ಇದೆ, ಯಾರ್‍ಯಾರು ಎಷ್ಟೆಷ್ಟು ತಿಂದುಹಾಕಿದ್ದಾರೆ ಎಂಬುದನ್ನೆಲ್ಲಾ ಆಡಿಟ್ ಮಾಡುತ್ತೇವೆ, ಮಾಡಿಸುತ್ತೇವೆ ಎಂದು ಹೇಳಿ ವರ್ಷಾನುಗಟ್ಟಲೆ ಆಯಿತು. ಇನ್ನೂ ಮಾಡಿಸಿಲ್ಲ. ಇವತ್ತಿನವರೆಗೂ ಕೂಡ ಲೆಕ್ಕ ಪತ್ರಗಳು ಏನಾಯಿತು ಎಂಬುದು ಗೊತ್ತಿಲ್ಲ. ಹಣ ಕೊಟ್ಟವರು ವಾಪಸು ಕೊಡಿಸಿ ಎಂದು ನನ್ನನ್ನು ಬಂದು ಪೀಡಿಸುತ್ತಾ ಇದ್ದಾರೆ. ಹೀಗಾಗಿ ಜನಗಳ ಮನಸ್ಸಿನಲ್ಲಿ ಒಂದು ರೀತಿಯ ಕೆಟ್ಟ ಮನೋಭಾವವುಂಟಾಗಿದೆ.

ವಿಶ್ವೇಶ್ವರಯ್ಯನವರ ಯೋಜನೆ ಪ್ರಕಾರ ರೂರಲ್ ಡೆವಲಪ್‌ಮೆಂಟ್ ಕಮಿಟಿಗಳನ್ನು ಮಾಡಿದ್ದರು. ಅದರಲ್ಲೂ ಕೂಡ ಜನಗಳಿಂದ ಸಾಧ್ಯವಾದಷ್ಟು ಹಣ ವಸೂಲು ಮಾಡಬೇಕೆಂದುಪ್ರಯತ್ನ ಮಾಡಿದಾಗ ಮೂರು ಕಾಸು ಕೂಡ ಯಾರೂ ಕೊಡಲಿಲ್ಲ. ನಮ್ಮ ಹಣ ತೆಗೆದುಕೊಂಡು ನೀವು ಏನು ಮಾಡುತ್ತೀರಿ ಎಂಬುದು ಗೊತ್ತು, ಅದಕ್ಕೇಕೆ ನಾವು ಕೊಡಬೇಕು ಎಂದು ಜನಗಳು ನಮ್ಮನ್ನು ಕೇಳುತ್ತಾ ಇದ್ದಾರೆ. ಮತ್ತು ಯಾರು ದುಡ್ಡು ವಸೂಲು ಮಾಡುತ್ತಾರೋ ಅಂಥವರೇ ತಿಂದು ಹಾಕುತ್ತಾರೆ ಎಂಬ ಆಪಾದನೆ ನಮ್ಮ ಮೇಲೆ ಇದೆ. ಈ ಆಪಾದನೆ ಹೋಗಬೇಕಾದರೆ ಹಿಂದೆ ದುಡ್ಡು ವಸೂಲು ಮಾಡಿದ್ದನ್ನು ಅವರಿಗೆ ವಾಪಸು ಕೊಡುವಂತೆ ಮಾಡಬೇಕು. ಈ ದುಡ್ಡು ತಿಂದಿರುವವರು ಷರಾಯಿ ಹಾಕಿಕೊಂಡು ಕೋಟು ಹಾಕಿಕೊಂಡು ಷೋಕಾಗಿ ತಿರುಗುತ್ತಾರೆ. ಅವರಿಗೆ ಏನೂ ಶಿಕ್ಷೆ ಮಾಡಿಲ್ಲ. ವರ್ಷಾನುಗಟ್ಟಲೆಯಿಂದ ಹೇಳಿದರೂ ಮನಸ್ಸಿಗೆ ತೆಗೆದುಕೊಂಡಿಲ್ಲ. ಇದು ಹತ್ತು ಜನಗಳ ದುಡ್ಡು. ಸರ್ಕಾರದ ದುಡ್ಡಾದರೆ ಬಿಡುತ್ತಾರೆಯೇ ? ಯಾರು ಜವಾಬ್ದಾರರೋ ಅವರನ್ನು ಮುಟ್ಟ ಹಾಕಿಸಿ ಪೋಲಾಗಿರುವ ದುಡ್ಡನ್ನು ತಕ್ಷಣ ವಸೂಲು ಮಾಡುವುದಕ್ಕೆ ತಕ್ಕ ಏರ್ಪಾಡು ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಕೆ. ವಿ. ಬೈರೇಗೌಡ (ಬೆಂಗಳೂರು ಉತ್ತರ).—ಸ್ವಾಮಿ, ನಾನು ಈ ಸಹಕಾರ ಸಂಘಗಳ ವಿಚಾರದಲ್ಲಿ ಮಾತನಾಡಲು ಅಪೇಕ್ಷಿಸುತ್ತೇನೆ. ಈ ಡಿಮ್ಯಾಂಡಿಗೆ ಬೆಂಬಲಕೊಡುತ್ತಾ ಈ ಸಾರಿ ಬೆಂಗಳೂರು ಸಿಟಿಗೆ ರೆಗ್ಯುಲೇಟೆಡ್ ಮಾರ್ಕೆಟ್‌ನ್ನು ಮಂಜೂರು ಮಾಡಿರುವುದಕ್ಕಾಗಿ ನನ್ನ ಹೃತ್ಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತೇನೆ. ಮಂಜೂರು ಮಾಡಿದ ಮಾತ್ರಕ್ಕೇ ಎಲ್ಲವೂ ಉತ್ತಮವಾಗುವುದಿಲ್ಲ. ಇನ್ನೂ ಆಗಬೇಕಾಗಿರತಕ್ಕ ಕಾರ್ಯಭಾರ ಬಹುಮಟ್ಟಿಗೆ ಇದೆ. ಇದಕ್ಕೆ ವೇರ್‌ಹೌಸ್ ಆಗಬೇಕು, ವೇರ್‌ಹೌಸ್‌ಗೆ ತಕ್ಕ ಶಿಬ್ಬಂದಿ ವ್ಯವಸ್ಥೆ ಆಗಬೇಕು. ಅಷ್ಟೇ ಅಲ್ಲದೆ ಹೋದ ಅಧಿವೇಶನದಲ್ಲೂ ಕೂಡ ಒತ್ತಾಯ ಮಾಡಿದೆ ಈಗಲೂ ಮಾಡುತ್ತಾ ಇದ್ದೇನೆ : ಮೈಸೂರು ಸಂಸ್ಥಾನದಲ್ಲೆಲ್ಲಾ ಅಳತೆ ಮತ್ತು ತೂಕ ಯೂನಿಫಾರಂ ಆಗಿ ಇರುವಂತೆ ಮಾಡಬೇಕು. ಯೂನಿಫಾರಂ ವೇಟ್ಸ್ ಅಂಡ್ ಮೆಷರ್ಸ್ ಇಲ್ಲದೆ ಬಹಳವಾಗಿ ಮೋಸ ಆಗುತ್ತಾ ಇದೆ. ಅದನ್ನು ತಮ್ಮ ಗಮನಕ್ಕೆ ತಂದೂ ಕೂಡ ಇನ್ನೂ ಅದಕ್ಕೆ ಗಮನ ಕೊಟ್ಟಿಲ್ಲ. ಆ ಬಗ್ಗೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಸಾಲ ಕೊಡುವ ವಿಚಾರದಲ್ಲಿ ನಮ್ಮ ಸ್ನೇಹಿತರು ಈಗಾಗಲೇ ಅನೇಕ ವಿಷಯಗಳನ್ನು ಹೇಳಿದ್ದಾರೆ. ಒಳ್ಳೆಯದು. ಇನ್ನು ಹೆಚ್ಚು ಹೆಚ್ಚಾಗಿ ಸಾಲಗಳನ್ನು ಕೊಡಿ. ಆದರೆ ಅವುಗಳ ವಸೂಲಾತಿ ಮಾತ್ರ ಕರಾರುವಾಕ್ಕಾಗಿ ಆಗಬೇಕು. ಆ ರೀತಿ ಆಗಬೇಕಾದರೆ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರು ಬಹಳ ಜಾಗ್ರತೆಯಾಗಿ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ, ಹೋಗಿ ತನಿಖೆ ಮಾಡಿ, ಪರಿಶೀಲನೆ ನಡೆಸಬೇಕಾಗುತ್ತದೆ. ಅದಕ್ಕೆ ಬೇಕಾಗತಕ್ಕ ವಾಹನ ಸೌಕರ್ಯ ಮುಂತಾದುವುಗಳನ್ನು ಮಾಡಿಕೊಡಬೇಕೆಂದು ಈ ಸಮಯದಲ್ಲಿ ಪ್ರಾರ್ಥಿಸುತ್ತೇನೆ.

ಈ ಸಹಕಾರ ಸಂಸ್ಥೆಗಳಲ್ಲಿ ಬಹಳ ಜಾಗರೂಕತೆಯಿಂದ ಆಡಿಟ್‌ಮಾಡಿಸಬೇಕು. ಇಲಾಖೆಯಲ್ಲಿರುವವರೇ ಅಲ್ಲದೆ ಖಾಸಗೀ ಮನುಷ್ಯರೂ ಕೂಡ ಇಲ್ಲಿ ಹಣ ದುರುಪಯೋಗವಾಗುವುದಕ್ಕೆ ಜವಾಬ್ದಾರರಾಗಿರುತ್ತಾರೆ. ಆದ್ದರಿಂದ ಆಡಿಟ್ ಮಾಡಿಸಿ ಫಂಡ್ಸು ಮಿಸ್ ಅಪ್ರೋಪ್ರಿಯೇಷನ್ ಆಗಿರುವುದು ಕಂಡು ಬಂದಾಗ ನಿರ್ದಾಕ್ಷಿಣ್ಯವಾಗಿ ಯಾವಪ್ರಭಾವಗಳಿಗೂ ಒಳಗಾಗದೇ ತಪ್ಪಿ ತಸ್ತರನ್ನು ಶಿಕ್ಷೆಗೆ ಒಳಪಡಿಸಬೇಕು. ಈ ಪ್ರಭಾವಗಳಿ ಗೊಳಗಾದರೆ ಯಾವ ಕೆಲಸವನ್ನೂ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಇದಕ್ಕೆ ತಕ್ಕ ಗಮನ ಮಾಡುವುದಕ್ಕೆ ಕೊಡಬೇಕೆಂದು ಹೇಳುತ್ತೇನೆ.

ಹಿಂದೆ ಮಾನ್ಯ ಮಂತ್ರಿಗಳಾಗಿದ್ದ ಶ್ರೀ ಮರಿಯಪ್ಪನವರು ಯಾವ ದೃಷ್ಟಿಯಿಂದ ಮಲ್ಟಿಪರ್‌ಪಸ್ ಕೋ-ಆಪರೇಟಿವ್ ಸೊಸೈಟಿಗಳನ್ನು ಸ್ಥಾಪನೆ ಮಾಡಿದರೋ ಆ ಉದ್ದೇಶ ಬಹಳ ಒಳ್ಳೆಯದು. ಅದರಿಂದ ಬೇಕಾದಷ್ಟು ಪ್ರಯೋಜನ ಆಯಿತು. ಆದರೆ ಕೆಲವು ಕಡೆ ಸರಿಯಾಗಿ ನಡೆಯಿತು, ಕೆಲವು ಕಡೆ ಸರಿಯಾಗಿ ನಡೆಯಲಿಲ್ಲ. ಅದು ಆಯಾಯ ಸೊಸೈಟಿಗಳು ಮಾಡತಕ್ಕ ಕೆಲಸದ ಮೇಲೆ ಹೋಗುತ್ತದೆ. ಚೆನ್ನಾಗಿ ಕೆಲಸ ಮಾಡಿದರೆ ಅಭಿವೃದ್ಧಿಗೆ ಬರುವುದರಲ್ಲಿ ಸಂದೇಹವೇ ಇಲ್ಲ. ಅದಕ್ಕೆ ನೂರಾರು ದೃಷ್ಟಾಂತಗಳು ಇವೆ. ಸಹಕಾರ ಸಂಘಗಳಲ್ಲಿ ಹಣ ಪೋಲಾಗದಂತೆ ನೋಡಿಕೊಳ್ಳಬೇಕಾಗಿದ್ದರೆ ತಾಲ್ಲೂಕು ಇನ್‌ಸ್ಪೆಕ್ಟರುಗಳು ಮತ್ತು ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರು watch dogs ಇದ್ದಹಾಗೆ ಇರಬೇಕು. ಹಾಗಿದ್ದರೆ ಮಾತ್ರ ಈ ಕೋ-ಆಪರೇಟಿವ್ ಮೂವ್‌ಮೆಂಟು ಯಶಸ್ವಿಯಾಗಿ ನಡೆಯುವುದಕ್ಕೆ ಸಾಧ್ಯ ಎಂದು ಹೇಳುತ್ತೇನೆ.

ಈಗ ರೂರಲ್ ಕ್ರೆಡಿಟ್ ಸೊಸೈಟಿಗಳು ಇಂಡಸ್ಟ್ರಿಯಲ್ ಕೋ-ಆಪರೇಟಿವ್ ಸೊಸೈಟಿಗಳು ಎಂದು ಅನೇಕ ಸೊಸೈಟಿಗಳನ್ನು ಪ್ರಾರಂಭ ಮಾಡಿದ್ದೀರಿ. ಇವು ಒಂದಕ್ಕೊಂದು overlap ಆಗುತ್ತವೆ.

11-30 P.M.

ಈ overlap ಆಗುವುದನ್ನು ತಪ್ಪಿಸಿ ಒಂದು ಇಲಾಖೆಯಲ್ಲಿಯೇ concentrate ಮಾಡಿ ಕೆಲಸ

(ಶ್ರೀ ಕೆ. ವಿ. ಬೈರೇಗೌಡ)

ಮಾಡಿದರೆ ನಿಜವಾಗಿಯೂ ಸಹಕಾರ ತತ್ವಕ್ಕೆ ಪ್ರೋತ್ಸಾಹ ಕೊಟ್ಟಂತಾಗುತ್ತದೆ. ಮಾನ್ಯ ಮಂತ್ರಿಗಳು ಇದಕ್ಕೆ ಗಮನ ಕೊಡಬೇಕೆಂದು ಹೇಳುತ್ತೇನೆ.

ಇನ್ನೊಂದು ವಿಷಯ. ಸಾಮಾನ್ಯವಾಗಿ ಪ್ರತಿ ವರ್ಷವೂ ಕೋಟ್ಯಂತರ ರೂಪಾಯಿಗಳ ಬೀಜದ ಆಲೂಗೆಡ್ಡೆ ಹಾಸನ ಜಿಲ್ಲೆಗೆ ಕೋಲಾರದಿಂದ ಬರುತ್ತಿದೆ. ಕೋ-ಆಪರೇಟಿವ್ ಇಲಾಖೆ ಪ್ರಾರಂಭವಾಗಿ ಇಷ್ಟು ವರ್ಷಗಳಾದರೂ, ಪ್ರೊವಿನ್ಷಿಯಲ್ ಮಾರ್ಕೆಟಿಂಗ್ ಸೊಸೈಟಿಯ ಮುಖಾಂತರವಾಗಲಿ ಅಥವಾ ಬೇರೆ ರೀತಿಯಿಂದಲಾಗಲಿ ತರಿಸಿ ಹಂಚುವ ಏರ್ಪಾಡು ಮಾಡಲಿಲ್ಲ. ಹಾಗೆ ಮಾಡಿದರೆ ರೈತರು ಬಹಳಮಟ್ಟಿಗೆ ಉದ್ಧಾರವಾಗುತ್ತಾರೆ. ನನಗೆ ಗೊತ್ತಿರುವಂತೆ ಆಲೂಗೆಡ್ಡೆ ವರ್ತಕರುಗಳು ಒಂದು ಮೂಟೆಗೆ 20 ರೂಪಾಯಿ 30 ರೂಪಾಯಿ ಲಾಭ ತೆಗೆದುಕೊಂಡು ಮಾರುತ್ತಾರೆ. ಇಷ್ಟು ಲಾಭ ಕೊಟ್ಟು ರೈತನು ಬೀಜ ಕೊಂಡುಹೋಗಿ ಸಂಪಾದಿಸುವುದೇನು ? ಇದೊಂದು ಮುಖ್ಯವಿಷಯ. ಆದ್ದರಿಂದ ಕೋ-ಆಪರೇಟಿವ್ ಇಲಾಖೆಯ ಮುಖಾಂತರ ರೈತನಿಗೆ ಹಂಚುವುದಕ್ಕೆ ಪ್ರಯತ್ನಮಾಡಬೇಕೆಂದು ನಾನು ಹೇಳುತ್ತೇನೆ. ಮಾನ್ಯ ಮಂತ್ರಿಗಳು ಇಂಥ ಅನುಕೂಲಗಳನ್ನು ಮಾಡಿಕೊಟ್ಟು ಕೋ-ಆಪರೇಟಿವ್ ಇಲಾಖೆಯಿಂದ ರೈತರು ಏನು ಕೆಲಸವಾಗಬೇಕೆಂದು ನಿರೀಕ್ಷಿಸುತ್ತಾರೋ ಅದನ್ನು ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಡಿ. ಎಂ. ಗೋವಿಂದರಾಜು (ನೆಲಮಂಗಲ).—ಸ್ವಾಮಿ, ಮೈಸೂರು ದೇಶದಲ್ಲಿ ಮಲ್ಟಿಪರ್ಪಸ್ ಕೋ-ಆಪರೇಟಿವ್ ಸೊಸೈಟಿಯೆಂದು ಹಿಂದೆ ಎಲ್ಲಾ ಕಡೆಯಲ್ಲೂ ಷುರು ಮಾಡಿದರು. ಈಗ ಆ ಸೊಸೈಟಿಗಳ ಗತಿಯೇನಾಗಿದೆ ? ಆ ಸೊಸೈಟಿಗಳಿಗೆ ಯಾರ್ಯಾರು ಷೇರುಗಳನ್ನು ತೆಗೆದುಕೊಂಡಿದ್ದಾರೋ ಅವರಿಗೆ ಈಗ ಷೇರು ಹಣವೂ ಕೂಡ ವಾಪಸು ಬಂದಿಲ್ಲ. ಅತ್ತ ಸೊಸೈಟಿಗಳೂ ನಡೆಯುತ್ತಿಲ್ಲ. ಅವುಗಳ ದೆಶೆ ಈ ರೀತಿಯಾಗಿದೆ. ಜನರಲ್ ಬಾಡಿ ಮೀಟಿಂಗ್‌ಗಳೆಂಬುದೇ ಇಲ್ಲ. ಇವುಗಳನ್ನೆಲ್ಲಾ ನೋಡಿ ಜನರಿಗೆ ಸಹಕಾರ ತತ್ವದಲ್ಲಿದ್ದ ನಂಬಿಕೆಯೇ ಸಡಿಲವಾಗುತ್ತಿದೆ. ಆದ್ದರಿಂದ ಮಲ್ಟಿಪರ್ಪಸ್ ಸೊಸೈಟಿಗಳು ಎಲ್ಲೆಲ್ಲಿ ಸ್ಥಾಪಿತವಾಗಿವೆಯೋ ಅಲ್ಲಿನ ಲೆಕ್ಕಪತ್ರಗಳನ್ನು ಆಡಿಟ್ ಮಾಡಿಸುವುದಲ್ಲದೆ ಜನರಲ್ ಬಾಡಿ ಮೀಟಿಂಗ್‌ಗಳು ನಡೆಯುವುದಕ್ಕೆ ಅವಕಾಶವಿದ್ದರೆ ನಡೆಯಿಸಿ, ಇಲ್ಲದಿದ್ದರೆ ಷೇರು ಹಣವನ್ನಾದರೂ ವಾಪಸು ಕೊಡಲು ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ.

ಆಮೇಲೆ ಮಲ್ಟಿಪರ್ಪಸ್ ಸೊಸೈಟಿಗಳಿಗೆ ರೇಷನ್ ಕಾಲದಲ್ಲಿ ಗಾಡಿ ಬಾಡಿಗೆ ಕೊಡಬೇಕೆಂದಿತ್ತು. ರೇಷನ್ ಕೊಡುವುದು ನಿಲ್ಲಿಸಿ ನಾಲ್ಕೈದು ವರ್ಷಗಳಾದರೂ ಇನ್ನೂ ಆ ಗಾಡಿ ಬಾಡಿಗೆ ಬಾಕಿಯನ್ನು ಫೈಸಲು ಮಾಡಿಲ್ಲ. ಇದಕ್ಕೆ ಕಾರಣವೇನೋ ಗೊತ್ತಿಲ್ಲ. ಆದಷ್ಟು ಜಾಗ್ರತೆ ಈ ಹಣವನ್ನು ಪಾವತಿ ಮಾಡುವ ಏರ್ಪಾಡು ಮಾಡಬೇಕು. ಹಿಂದಿನ ವರ್ಷವೂ ಕೂಡ ಇದನ್ನ ಹೇಳಿದ್ದೆವು. ಆದರೂ ಕೂಡ ಇದರ ಬಗ್ಗೆ ಇನ್ನೂ ಏನೂ ಮಾಡಿಲ್ಲ.

ರೈತರಿಗೆ ಸುಲಭವಾಗಿ ಸಾಲ ದೊರಕಿಸಿ ಕೊಡುವುದಕ್ಕಾಗಿ Land Mortgage Bank ಗಳನ್ನು ಏರ್ಪಡಿಸಿದ್ದೀರಿ. ಆದರೆ, ಈ ಬ್ಯಾಂಕಿನಿಂದ ಸಾಲ ತೆಗೆದುಕೊಳ್ಳಬೇಕೆಂದು ಅರ್ಜಿ ಹಾಕಿದರೆ ಮೂರು ವರ್ಷದ ಹೊತ್ತಿಗೆ ಇಲ್ಲ, ಉಂಟು, ಎಂದು ಉತ್ತರ ಬರುತ್ತದೆ. ಹೀಗೆ ನಿಧಾನವಾದರೆ ಸಹಕಾರ ತತ್ವದಲ್ಲಿ ರೈತರಿಗೆ ನಂಬಿಕೆ ಇದ್ದೀತೇ ? ಸಾಲಕ್ಕೆ ಒಂದು ಅರ್ಜಿ ಕೊಟ್ಟರೆ 2-3 ತಿಂಗಳಲ್ಲಿಯಾದರೂ ಸಾಲ ಸಿಕ್ಕುತ್ತದೆ ಅಥವಾ ಇಲ್ಲ ಎಂಬ ಭರವಸೆ ಸಿಕ್ಕದೆ ಹೋದರೆ, ವರ್ಷವೆಲ್ಲಾ ಅವನು ತಿರುಗಿ 500 ರೂಪಾಯಿ ಸಾಲಕ್ಕೆ ನೂರು ರೂಪಾಯಿ ಖರ್ಚು ಮಾಡಬೇಕಾಗುತ್ತದೆ. ಅಸೆಂಬ್ಲಿಯಲ್ಲಿ ಈ ಪ್ರಶ್ನೆಗಳನ್ನೆತ್ತಿದ್ದರೆ ಸರ್ಕಾರದವರೇನಾದರೂ ಸರಿಪಡಿಸುತ್ತಾರೆಂದು ತಿಳಿದಿದ್ದೆವು. ಆದರೆ ಈಗ ನೋಡಿದರೆ ಮೊದಲು ಹೇಗಿತ್ತೋ ಈಗಲೂ ಹಾಗೆಯೇ ಇದೆ. ಅರ್ಜಿಗಳಲ್ಲಿ ಏನು ನ್ಯೂನತೆಯಿವೆಯೋ ಎಲ್ಲವನ್ನೂ ಒಟ್ಟಿಗೆ ಸೇರಿಸಿ ಕಳುಹಿಸುವಂತೆ ಏರ್ಪಾಡುಮಾಡಿ ಕಾಗದಗಳು ವೃಥಾ ಓಡಾಡುವುದನ್ನು ತಪ್ಪಿಸಬೇಕೆಂದು ಹೇಳುತ್ತೇನೆ.

ಸಹಕಾರ ಸಂಘಗಳು ನಮ್ಮ ಮೈಸೂರು ದೇಶದಲ್ಲಿ ವಿಶೇಷವಾಗಿವೆ. ಆದರೆ ಈ ಸೊಸೈಟಿಗಳು ಯಾವ ರೀತಿ ಕೆಲಸ ಮಾಡುತ್ತಿವೆ, ಅವು ಕೆಲಸ ಮಾಡುತ್ತಿವೆಯೇ ಇಲ್ಲವೇ ಎಂದು ಯಾರೂ check ಮಾಡುತ್ತಿಲ್ಲ. ಎಷ್ಟೋ ಸೊಸೈಟಿಗಳು ಕೆಲಸ ಮಾಡುತ್ತಿಲ್ಲ. ಹೀಗೆ ಕೆಲಸ ಮಾಡದಿರುವ ನೂರಾರು ಸೊಸೈಟಿಗಳಿರುವ ಬದಲು ಸರಿಯಾಗಿ ಕೆಲಸ ಮಾಡುವ ನಾಲ್ಕಾರು ಸೊಸೈಟಿಗಳಿದ್ದರೆ ಮೇಲು. ಅಂಥವುಗಳಿಂದ ಮಾತ್ರ ರೈತರಿಗೆ ಸೊಸೈಟಿಗಳಲ್ಲಿ ನಂಬಿಕೆ ಈಗ ಬರುತ್ತವೆ. N.E.S. ಬ್ಲಾಕ್‌ಗಳಲ್ಲಿ ಸಹಕಾರ ಪದ್ಧತಿಯನ್ನು ರೂಢಿಗೆ ತಂದು ಅಲ್ಪಾವಧಿಯ ಸಾಲ, ದೀರ್ಘಾವಧಿಯ ಸಾಲ ಮುಂತಾದುವುಗಳನ್ನೆಲ್ಲಾ ಕೊಡುತ್ತಾರೆ. N.E.S. ರೆವಿನ್ಯೂ ಇನ್ಸ್‌ಪೆಕ್ಟರು N.E.S. ಬ್ಲಾಕ್ ಆಫೀಸರೂ ಇಬ್ಬರೂ ಸೇರಿ ಜಮೀನನ್ನು inspect ಮಾಡಿ, ರಿಕಾರ್ಡ್‌ನ್ನು build up ಮಾಡಬೇಕೆಂದಿದೆ. ಆದರೆ ಅವರಿಬ್ಬರೂ ಸೇರುವುದೇ ಕಷ್ಟ. ಹೀಗಾಗಿ ರಿಕಾರ್ಡ್‌ಗಳು ಯಾವುದೂ ಮೇಲಕ್ಕೆ ಹೋಗುವುದಿಲ್ಲ. ಆದ್ದರಿಂದ ಈ ಸಾಲದ ಅರ್ಜಿಗಳ ಜಾಗ್ರತೆ ಫೈಸಲಾತಿಯ ದೃಷ್ಟಿಯಿಂದ ಯಾರಾದರೂ ಒಬ್ಬರು ರಿಕಾರ್ಡ್‌ಗಳನ್ನು ಮಾಡುವಂತೆ ಮಾಡಬೇಕೆಂದು ನಾನು ಸೂಚಿಸುತ್ತೇನೆ. ಹೇಗಿದ್ದರೂ village workers ಗಳಿಗೆ training ಆಗಿರುತ್ತದೆ. ಅವರಿಗೆ ರಿಕಾರ್ಡುಗಳನ್ನು ತಯಾರಿಸುವುದಕ್ಕೆ ಶಕ್ತಿಯಿರುತ್ತದೆ. ಆದ್ದರಿಂದ ಜಾಗ್ರತೆ ರಿಕಾರ್ಡ್ ನಡೆಸಿ ಬೇಗ ಸಾಲ ದೊರೆಯುವಂತೆ ಮಾಡಬೇಕೆಂದು ನಾನು ಹೇಳುತ್ತೇನೆ.

ಕಡೆಯದಾಗಿ ಮಲ್ಟಿಪರ್ಪಸಸ್ ಸೊಸೈಟಿಗಳ ವಿಚಾರದಲ್ಲಿ ನಾನು ಮತ್ತೊಮ್ಮೆ ಅರಿಕೆ ಮಾಡಿಕೊಳ್ಳುತ್ತೇನೆ. ಅನೇಕ ಷೇರುದಾರರು ಈ ಸೊಸೈಟಿಗಳಿಗೆ ಷೇರು ಕೊಟ್ಟಿದ್ದಾರೆ. ಸೊಸೈಟಿಗಳು ಪ್ರಾರಂಭವಾಗಿ ಎಷ್ಟು ದಿವಸವಾದರೂ ಅವರಿಗೆ ಒಂದು ಕಾಸು ಡಿವಿಡೆಂಡೂ ಬಂದಿಲ್ಲ. ಇತ್ತ ಸೊಸೈಟಿಗಳೂ ಕೆಲಸ ಮಾಡುತ್ತಿಲ್ಲ. ಆದ್ದರಿಂದ ಯಾವ್ಯಾವ ಸೊಸೈಟಿಗಳು ಕೆಲಸ ಮಾಡುತ್ತಿಲ್ಲವೋ ಅವುಗಳ ಸಂಬಂಧದಲ್ಲಿ ಷೇರು ಮೊಬಲಗುಗಳನ್ನಾದರೂ ವಾಪಸು ಮಾಡುವಂತೆ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ.

[SRI G. DUGGAPPA in the Chair].

*ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ-ಅನುಸೂಚಿತ ಜಾತಿಗಳು).—ಸ್ವಾಮಿ, ನಾನು ಕೋ-ಆಪರೇಟಿವ್ ಇಲಾಖೆಗೆ ಸಂಬಂಧಪಟ್ಟ ಈ ಡಿಮ್ಯಾಂಡನ್ನು ವಿರೋಧಿಸುತ್ತಾ ಎರಡು ವಿಷಯಗಳನ್ನು ಮಾತ್ರ ಈ ಮಾನ್ಯ ಸಭೆಯ ಗಮನಕ್ಕೆ ತರಬಯಸುತ್ತೇನೆ.

ಪ್ರಥಮತಃ ಕೋ-ಅಪರೇಟಿವ್ ತತ್ವದ ವಿಷಯ ವನ್ನು ನಾನು ಪ್ರಸ್ತಾಪ ಮಾಡಬಯಸುತ್ತೇನೆ. ಪಾಶ್ಚಿಮಾತ್ಯ ದೇಶಗಳಲ್ಲಿ ಈ ಇಲಾಖೆ ಯಾವ ರೀತಿ ಕೆಲಸ ಮಾಡುತ್ತಿದೆ, ಇಲ್ಲಿ ಯಾವ ರೀತಿ ಕೆಲಸ ಮಾಡು ತ್ತಿದೆಯೆಂಬುದನ್ನು ಯೋಚನೆ ಮಾಡುವುದಾದರೆ, ನಮ್ಮ ದೇಶದವರು ಸಹಕಾರ ತತ್ವದ ಅರಿವನ್ನೇ ಇನ್ನೂ ಹೊಂದಿಲ್ಲವೆನ್ನಬೇಕು. ಹಾಲೆಂಡ್, ಸ್ವಿಟ್ಸರ್ ಲ್ಯೆಂಡ್ ಮುಂತಾದ ದೇಶಗಳಲ್ಲಿ ನಿಜವಾಗಿ ಸಹಕಾರ ಪದ್ಧತಿ ರೂಢಿಯಲ್ಲಿವೆಯೆನ್ನಬೇಕು. ಪ್ರಜಾಪ್ರಭುತ್ವ ಚೆನ್ನಾಗಿ ನಡೆಯಬೇಕಾದರೆ ಸಹಕಾರ ತತ್ವದ ಅರ್ಥದ ಅರಿವನ್ನು ಉಂಟುಮಾಡಿಕೊಳ್ಳುವುದು ಬಹಳ ಮುಖ್ಯ. ನಮ್ಮ ಜನರಿಗೆ ಇದರ ಅರಿವನ್ನು ಮೊದಲು ಉಂಟು ಮಾಡಿಕೊಟ್ಟರೆ, ಈ ಇಲಾಖೆಯಲ್ಲಿ ಕಂಡುಬರುವ ಅನೇಕ ಲೋಪದೋಷಗಳು ಸರಿಹೋಗುತ್ತವೆಂದು ನಾನು ತಿಳಿದಿದ್ದೇನೆ. ಒಂದು ವಿಚಾರವನ್ನು ಹೇಳುವುದಾದರೆ, ಆಯಾ ಪ್ರದೇಶಗಳಲ್ಲಿರುವ ಸಹಕಾರ ಸಂಘಗಳು ಆಯಾ ಪ್ರದೇಶದಲ್ಲಿ ಶ್ರಮಪಟ್ಟು ಬಹು ಮುಖ್ಯವಾಗಿ Debt Survey ಮಾಡಬೇಕು. ಸಾಲ ಎಷ್ಟಿದೆ, ಸಾಲದ ಸ್ವಭಾವವೇನು, short-term loans ಮೂಲಕ ತೀರಿಸಬಹುದೇ, immoveable property ಸಾಲವನ್ನು ಕೊಡಬಹುದೆ ಎಂಬುದನ್ನು ಅವರು ಸುಲಭವಾಗಿ ಕಂಡು ಹಿಡಿಯಬಹುದು. ಆದುದರಿಂದ ಕೂಡಲೇ debt survey ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಎರಡನೆಯದಾಗಿ, ಲ್ಯಾಂಡ್ ಮಾರ್ಟ್‌ಗೇಜ್ ಸೊಸೈಟಿಗಳ ವಿಷಯದಲ್ಲಿ ಒಂದು ಪ್ರಶ್ನೆಯನ್ನು ಕೇಳಿದ್ದೆ; ಅದಕ್ಕೆ ಸರ್ಕಾರದವರು ಉತ್ತರ ಕೊಟ್ಟಿದ್ದಾರೆ. ಅಲ್ಲಿ ರಿಕಾರ್ಡುಗಳು ಬಹಳ ತಡವಾಗುತ್ತಿವೆ, procedure ಬದಲಾಯಿಸಿ ಜಾಗ್ರತೆವಿಲೇ ಆಗುವಂತೆ ಮಾಡಬೇಕೆಂದು ಸೂಚಿಸಿದ್ದೆ. ಅದನ್ನು ಪರಿಶೀಲಿಸಲು ಅಧಿಕಾರಿಗಳನ್ನು ನೇಮಕ ಮಾಡಿದ್ದೇವೆಂದು ಹೇಳಿದ್ದಾರೆ. ಇದರ ಫಲವಾಗಿ ಸಾಲದ ಹೊರೆ ಇರುವ ರೈತರಿಗೆ ಆದಷ್ಟು ಬೇಗ ಪರಿಹಾರ ದೊರೆಯುತ್ತದೆಂದು ನಂಬಿದ್ದೇನೆ.

ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚು ಸಂಖ್ಯೆಯಲ್ಲಿ ಗೃಹನಿರ್ಮಾಣ ಸಹಕಾರ ಸಂಘಗಳನ್ನು ಏರ್ಪಾಡು ಮಾಡಬೇಕು; ಗ್ರಾಮಾಂತರದ ಜನರಿಗೆ ಇದರಿಂದ ಮನೆಗಳನ್ನು ಕಟ್ಟಿಸಿಕೊಳ್ಳಲು ಅನುಕೂಲವಾಗುತ್ತದೆಂದು ಪದೇಪದೇ ಹೇಳುತ್ತಿದ್ದೇನೆ. ಇಂಡಿಯಾ ಸರ್ಕಾರದವರು ಕೋಟ್ಯಾಂತರ ರೂಪಾಯಿ ಇದಕ್ಕಾಗಿ ಕೊಡುತ್ತಿದ್ದಾರೆ. ಕಡಮೆ ಸಂಬಳ ಪಡೆಯುವ ನೌಕರರಿಗೂ ಅಲ್ಪ ವರಮಾನದವರಿಗೂ ಗೃಹ ನಿರ್ಮಾಣ ಮಾಡಿ ಕೊಟ್ಟು ಸಹಾಯ ಮಾಡುವುದಕ್ಕಾಗಿ ಇಂಡಿಯಾ ಸರ್ಕಾರದವರು ಕೊಡುತ್ತಿರುವ ಹಣವನ್ನು ಹೋಬಳಿ ಹೆಡ್ ಕ್ವಾರ್ಟರುಗಳಿಗೂ ಗ್ರಾಮಾಂತರಗಳಿಗೂ ಕೊಟ್ಟರೆ ಗುಡಿಸಲುಗಳಲ್ಲಿ ವಾಸಮಾಡುತ್ತಿರುವ ಬಡ ಜನರಿಗೆ ಮನೆ ಕಟ್ಟಿ ಕೊಳ್ಳಲು ಸಹಾಯವಾಗುತ್ತದೆ. ಇದನ್ನು ಶೀಘ್ರವಾಗಿ ಮಾಡಬೇಕೆಂದು ಕೇಳಿ ಕೊಳ್ಳುತ್ತೇನೆ.

ಇನ್ನೊಂದು ವಿಷಯ. ರಾಷ್ಟ್ರೀಯ ವಿಸ್ತರಣಾ ಯೋಜನೆಯಿರುವ ಸ್ಥಳಗಳಲ್ಲಿ ರಿಕಾರ್ಡುಗಳನ್ನು build up ಮಾಡುವುದರಲ್ಲಿ ತೊಂದರೆಯಿದೆ. ರೆವಿನ್ಯೂ ಇನ್ಸ್‌ಪೆಕ್ಟರಿಗೂ ಜನರಿಗೂ ಜಿಜ್ಞಾಸೆ ಬಂದು ಜಾಗ್ರತೆ ಮಾಡುವುದಕ್ಕೆ ಕೆಲವು ತೊಂದರೆಗಳು ಬಂದಿವೆ. ರೆವಿನ್ಯೂ ಇನ್ಸ್‌ಪೆಕ್ಟರು ಶಾನುಭೋಗರು ಪಟೇಲರನ್ನು ಆಶ್ರಯಿಸಬೇಕು, ಇಲ್ಲದಿದ್ದರೆ ಸರ್ವೆ ನಂಬರುಗಳೇ ಸಿಕ್ಕುವುದಿಲ್ಲ. ಅಮಲ್ದಾರರು ಇದನ್ನು ಮಾಡಬೇಕೆಂದಿದೆ. ಎರಡನೆಯದಾಗಿ village workers ಮಾಡಬೇಕೆಂದಿದೆ. ಇದರಲ್ಲಿ ಕೆಲವು ಕಷ್ಟಗಳಿವೆ. Village Workers ರೆವಿನ್ಯೂ ಇನ್ಸ್‌ಪೆಕ್ಟರುಗಳ ಜೊತೆಗೆ ಹೋಗಿ, ಆದಷ್ಟು ಬೇಗ ಅಮಲ್ದಾರರು ಜಾಗ್ರತೆ ವಿಲೇ ಮಾಡಲು ಅವಕಾಶ ಮಾಡಬೇಕು. Short loan ಬೇಗ ವಿಲೇ ಮಾಡಬೇಕು. ನಾಲ್ಕೈದು ತಿಂಗಳಲ್ಲಿ ಸಾಲವನ್ನು ವಾಪಸು ಕೊಡಬೇಕಾಗಿರುವುದರಿಂದ ಇದನ್ನು ಪರಿಶೀಲನೆ ಮಾಡಬೇಕು. ಮಧ್ಯವರ್ತಿಗಳಿಂದಾಗುತ್ತಿರುವ ತೊಂದರೆಗಳನ್ನು ನಿವಾರಣೆ ಮಾಡಬೇಕು.

ಮಲ್ಟಿ ಪರ್ಪಸ್ ಸೊಸೈಟಿಗಳು ಯಾವ ಉದ್ದೇಶದಿಂದ ಸ್ಥಾಪನೆಯಾದುವೋ ಅದು ಸಾರ್ಥಕವಾಗುತ್ತಿಲ್ಲ. ಸಹಕಾರ ತತ್ವವನ್ನೇ ಅರ್ಥ ಮಾಡಿಕೊಳ್ಳದಿರುವವರಿಂದ ಆ ಇಲಾಖೆಗೆ ಕೆಟ್ಟ ಹೆಸರು ಬಂದಿದೆ. ಈ ಸಂಘಗಳಲ್ಲಿ ಎಷ್ಟೆಷ್ಟು ಹಣ ದುರುಪಯೋಗವಾಗಿದೆ ಎಂಬುದನ್ನು ಪರಿಶೀಲಿಸಲು ಸರ್ಕಾರದವರು ದೊಡ್ಡ ಮನಸ್ಸು ಮಾಡಿ ಒಂದು ಸಮಿತಿ ಮಾಡಬೇಕು. ಯಾವಯಾವ ಸಂಘದಲ್ಲಿ ಎಷ್ಟೆಷ್ಟು ಹಣ ದುರುಪಯೋಗವಾಗಿದೆ ಎಂಬುದನ್ನು ಈ ಸಮಿತಿಯು ಪರಿಶೀಲನೆಗೆ ಬಿಟ್ಟು, ಆ ಸಮಿತಿ ಕೂಲಂಕಷವಾಗಿ ಪರಿಶೀಲನೆ ನಡೆಸಿದ ಮೇಲೆ, ಸರ್ಕಾರದವರು ಈ ಸಭೆಯಲ್ಲಿ ಒಂದು ಹೇಳಿಕೆ ಕೊಟ್ಟರೆ, ಈ ಸಂಘಗಳ ವಿಷಯದಲ್ಲಿ ಜನರಿಗಿರುವ ಸಂದೇಹ ನಿವಾರಣೆ ಯಾಗುತ್ತದೆಯಲ್ಲದೆ ದುರುಪಯೋಗವಾಗಿರುವ ಹಣದ ವಿಚಾರವೂ ಇತ್ಯರ್ಥವಾಗುತ್ತದೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಕೆ. ಪುಟ್ಟಸ್ವಾಮಿ (ಶ್ರೀರಂಗಪಟ್ಟಣ).—ಸ್ವಾಮಿ, ಈ ಡಿಮ್ಯಾಂಡಿನ ಮೇಲೆ ಮಾತನಾಡುವುದಕ್ಕೆ ಮೊದಲು ಸರ್ಕಾರದಿಂದ ಒಂದು ಭರವಸೆ ಬೇಕಾಗಿದೆ. ಒಂದು ಅನುಮಾನವಿರುವುದರಿಂದ ಹೀಗೆ ಕೇಳುತ್ತಿದ್ದೇನೆ. ನಾವು ಏನಾದರೂ ಹೇಳಿದರೆ ಅದನ್ನು ಸ್ವಲ್ಪ serious ಆಗಿ ತೆಗೆದುಕೊಂಡು ಪರಿಶೀಲನೆ ಮಾಡಿ ಜವಾಬು ಹೇಳುತ್ತೀರಾ, ನಾವು ಹೇಳುವುದರಲ್ಲಿ ಏನಾದರೂ ಸತ್ಯಾಂಶವಿದ್ದರೆ ಅದನ್ನು ಗಮನಿಸಿ ಲೋಪ ದೋಷಗಳನ್ನು ಸರಿಪಡಿಸುತ್ತೀರಾ, ಹೀಗೆ ಪ್ರಯತ್ನ ಪಡುವುದಕ್ಕೆ ನಿಮಗೆ ಶಕ್ತಿ ಇದೆಯೇ ಎಂದು ಸರ್ಕಾರದವರನ್ನು ಮೊದಲು ಕೇಳುತ್ತೇನೆ.

ಸಭಾಪತಿಯವರು (ಶ್ರೀ ಜಿ. ದುಗ್ಗಪ್ಪನವರು).—ಪ್ರಯತ್ನ ಮಾಡುವುದಕ್ಕೆ ಶಕ್ತಿ ಇದೆ; ತಾವು ಹೇಳುವುದನ್ನು ಹೇಳಿ.

ಶ್ರೀ ಕೆ. ಪುಟ್ಟಸ್ವಾಮಿ.—ಶಕ್ತಿ ಇದ್ದಿದ್ದರೆ ನಾನು ಈ ಉಪೋದ್ಘಾತವನ್ನು ಹೇಳುವ ಆವಶ್ಯಕತೆಯಿರಲಿಲ್ಲ. ಸಹಕಾರ ಸಂಘಗಳು ಕೆಲಸ ಮಾಡುತ್ತಿರುವುದು ಹೇಗಿದೆಯೆಂದರೆ, ಎಲ್ಲಿ ಅಸಹಕಾರವಿದೆ ಎಂಬುದನ್ನು ಹುಡುಕಬೇಕಾದರೆ, ಇಲ್ಲೇ ಇರುವುದು, ಇನ್ನೆಲ್ಲಿಯೂ ಇಲ್ಲ. ಅದರಲ್ಲಿಯೂ ದೊಡ್ಡ ಪಟ್ಟಣಗಳಲ್ಲಿ, ಮೈಸೂರು ಬೆಂಗಳೂರಿನಲ್ಲಿರುವ ಸಹಕಾರ ಸಂಘಗಳು cliques ಆಗಿವೆ. ಇಲ್ಲಿರತಕ್ಕ ಹೊಲಸು ವ್ಯವಹಾರ ಇನ್ನೆಲ್ಲಿಯೂ ಇಲ್ಲ. ಇದಕ್ಕೆ ಇವುಗಳ ಸದಸ್ಯರಷ್ಟೇ ಜವಾಬ್ದಾರರಲ್ಲ, ಸರ್ಕಾರೀ ಅಧಿಕಾರಿಗಳೂ ಶಾಮೀಲಾಗಿದ್ದಾರೆ. ಉದಾಹರಣೆಗೆ ಮೈಸೂರು ನಗರದಲ್ಲಿರತಕ್ಕ ಸಹಕಾರ ಸಂಘಗಳಲ್ಲಿ ಪ್ರತಿ ವರ್ಷವೂ ಚುನಾವಣೆ ನಡೆಯಬೇಕೆಂದಿದೆ. 1955 ನೆಯ ಸಾಲಿನಲ್ಲಿ ಯಾವುದಾದರೂ ಸಂಘದಲ್ಲಿ ಡೈರೆಕ್ಟರ ಚುನಾವಣೆ ನಡೆದಿದೆಯೇ ಎಂಬುದನ್ನು ಸರ್ಕಾರದವರು ಹೇಳಲಿ. ಒಂದು ವರ್ಷವಾದರೂ ಚುನಾವಣೆ ಸರಿಯಾಗಿ, ಕಾನೂನು ಪ್ರಕಾರ ನಡೆದಿಲ್ಲ. ಒಂದು ವೇಳೆ

(ಶ್ರೀ ಕೆ. ಪುಟ್ಟಸ್ವಾಮಿ).

ಚುನಾವಣೆಯಾದರೆ, ಅದರಲ್ಲಿ ಲೋಪವಿದೆಯೆಂಬ ಭಾವನೆಯಿಂದ ಯಾರಾದರೂ ಒಂದು ಅರ್ಜಿ ಹಾಕಿದರೆ, ಅದಕ್ಕೆ stay order ಕೊಡುವುದು; ಅದನ್ನು ಎಷ್ಟು ವರ್ಷವಾದರೂ ತೀರ್ಮಾನ ಮಾಡುವುದಿಲ್ಲ. 1953ನೆಯ ಇಸವಿಯಲ್ಲಿ ಚುನಾಯಿತರಾದ ಡೈರೆಕ್ಟರುಗಳೇ ಈ ಹೊತ್ತಿನವರೆಗೂ ರಾಜ್ಯಭಾರ ನಡೆಸುತ್ತಿದ್ದಾರೆ. ಅದಕ್ಕೆ ಹೊಸ ಚುನಾವಣೆಗೆ ಅರ್ಜಿ ಮಾಡುವುದಿಲ್ಲ. ಒಂದು ಅರ್ಜಿಯ ಮೇಲೆ stay order ಮಾಡುತ್ತಾರೆ, ಇನ್ನೊಂದು ಪಾರ್ಟಿಯವರು ಬಂದರೆ ಅವರ ಅರ್ಜಿಯ ಮೇಲೂ stay order ಮಾಡುತ್ತಾರೆ. ಎಲೆಕ್ಷನ್ನಿಗೆ ದಿನವನ್ನು ಗೊತ್ತು ಮಾಡಿದರೂ ಆ ದಿನ ಎಲೆಕ್ಷನ್ನು ಮಾಡುವುದಿಲ್ಲ. ವಿರೋಧ ಬರುತ್ತದೆಂದು ಮಾಡುವುದಿಲ್ಲ. ಇದಾದರೂ ಹೋಗಲಿ, ಮಾಡದಿದ್ದರೂ ಚಿಂತೆಯಿಲ್ಲ. ಕೊನೆಗೆ ಆ ಸಾಲು ಕಳೆದ ಮೇಲೂ ಎರಡನೆಯ ಸಾಲಿಗೂ ಇನ್ನೊಂದು ಚುನಾವಣೆ ಆಗುವವರೆಗೆ ಅಧಿಕಾರದಲ್ಲಿ ಅವರೇ ಇರಬಹುದೆಂದು ಹೇಳಿದರೂ ಹೇಳಬಹುದು. 1954 ನೆಯ ಇಸವಿಯಲ್ಲಿ ಆಗದೆ 1955ರಲ್ಲೂ ಚುನಾವಣೆ ನಡೆಸದೇಯಿರುವುದಕ್ಕೆ ಇವರಿಗೆ ಅಧಿಕಾರವಿದೆಯೇ? ಎಷ್ಟು ಸಾರಿ ಅಧಿಕಾರಿಗಳಲ್ಲಿ ಹೋದರೂ ಇದಕ್ಕೆ ಪರಿಹಾರ ದೊರೆಯುತ್ತಿಲ್ಲ. ಒಂದು ವೇಳೆ ಸಹಕಾರ ಸಂಘಗಳ ರಿಜಿಸ್ಟ್ರಾರ್‌ರವರು ಏನಾದರೂ ಒಂದು ಆರ್ಡರ್ ಮಾಡಿದರೆ, ಸರ್ಕಾರ ಇನ್ನೊಂದು ಆರ್ಡರ್ ಕೊಡುತ್ತಾರೆ. ಹೀಗಾಗಿ ಸಾರ್ವಜನಿಕರ ಹಣ ಯಾರು ಗುಂಪನ್ನು ಕಟ್ಟಿಕೊಂಡು ಯಾವುದಾದರೂ ರೀತಿಯಿಂದ ಚುನಾಯಿತರಾಗಿ ಬಂದು ಅಧಿಕಾರಕ್ಕೆ ಬರುತ್ತಾರೋ ಅವರ ಕೈಯ್ಯಲ್ಲೇ ಇರುವ ಹಾಗಾಗಿದೆ, ಅವರೇ ಭದ್ರವಾಗಿ ಕುಳಿತು ಕೊಳ್ಳುತ್ತಾರೆ. ಮೈಸೂರಿನಲ್ಲಿರುವ ದೊಡ್ಡ ಸಂಘಗಳಲ್ಲಿಯೂ ಇದೇ ಹಣೆ ಬರಹ. 1954 ರಲ್ಲಿ ಚುನಾಯಿತರಾಗಿರುವವರು 1955 ರಲ್ಲೂ ಇದ್ದಾರೆ, ಏನು ಕಾರಣವೆಂದರೆ, ಡೈಮಂಡ್ ಜ್ಯೂಬಿಲಿ ಆಗಬೇಕಾಗಿದೆ, ಆದುದರಿಂದ ಅದನ್ನು ನಡೆಸಲು ನಾವೇ ಇರಬೇಕೆಂದು ಹೇಳುತ್ತಾರೆ. ಬೇರೆಯವರು ಮಾಡುವುದಕ್ಕಾಗುವುದಿಲ್ಲವೇ? ಏಕೆ ಈ ರೀತಿ ವ್ಯವಹಾರ ನಡೆಸುತ್ತಿದ್ದಾರೋ ಗೊತ್ತಾಗುವುದಿಲ್ಲ. ಇದಲ್ಲದೆ, ಸಾಲಕೊಡುವ ಸಂಸ್ಥೆಗಳಲ್ಲಿ ಒಂದು ಸಹಕಾರ ಸಂಘಕ್ಕೆ ಸದಸ್ಯರಾಗಿರುವವರು ಬೇರೆ ಕಡೆ ಸದಸ್ಯರಾಗಿರಬಾರದೆಂಬ ನಿಯಮವಿದೆ. ಆದರೆ ಬೇರೆ ಸಂಘಗಳಿಗೂ ಸದಸ್ಯರಾಗಬೇಕೆಂದು ಕೇಳಿ ಕೊಂಡ ಪ್ರತಿಯೊಬ್ಬರಿಗೂ ಅನುಮತಿ ಕೊಡುತ್ತಾರೆ. ಒಂದು ಗುಂಪಿನವರು ಸಹಕಾರ ಕ್ಷೇತ್ರದಲ್ಲಿ 10 ಸಂಘಗಳಿದ್ದರೆ, ಎಲ್ಲ ಕಡೆಯೂ ಹಂಚಿಕೊಳ್ಳುತ್ತಾರೆ. ಒಂದು ಸಂಘದಲ್ಲಿ ಪ್ರೆಸಿಡೆಂಟ್ ಆಗಿರುವವರು ಇನ್ನೊಂದರಲ್ಲಿ ಸೆಕ್ರೆಟರಿ, ಇನ್ನೊಂದರಲ್ಲಿ ವೈಸ್ ಪ್ರೆಸಿಡೆಂಟ್ ಹೀಗೆ ವ್ಯವಹಾರ ನಡೆಸುತ್ತಿದ್ದಾರೆ.

ಪ್ರತಿವರ್ಷ ಚುನಾವಣೆಗಳನ್ನು ನಡೆಸುವುದಕ್ಕೆ ಏನು ಅಡ್ಡಿ ಇದೆ, ಯಾತಕ್ಕೆ ಈ ರೀತಿ ಉಪೇಕ್ಷೆ ಮಾಡುತ್ತಿದ್ದಾರೆಂದು ಕೇಳುತ್ತೇನೆ. ಅದರಲ್ಲಿಯೂ ನಾನು ಹೇಳುವುದು ಮೈಸೂರು ನಗರದಲ್ಲಿರತಕ್ಕ ಕೋ-ಆಪರೇಟಿವ್ ಸೊಸೈಟಿಗಳಲ್ಲಿ ಯಾರಾದರೂ ಡೈರೆಕ್ಟರ್ ಆದರು ಎಂದರೆ ಅವರು ಯಾತಕ್ಕೂ ಪ್ರಯೋಜನವಿಲ್ಲವೆಂದ ಹಾಗಾಗಿದೆ ಅದಕ್ಕಿಂತ ಕೆಟ್ಟದ್ದು ಬೇರೆ ಇಲ್ಲ. ಕೋ ಆಪರೇಟಿವ್ ಸೊಸೈಟಿಗಳ ಡೈರೆಕ್ಟರಾದರೆ ಸಾಕು? ಅದಕ್ಕಿಂತ ಹೆಚ್ಚಿಗೆ ಪ್ರಯತ್ನಪಟ್ಟು ಕೆಟ್ಟ ಹೆಸರು ತೆಗೆದುಕೊಳ್ಳಬೇಕಾಗಿಲ್ಲ. ಇಂಥ ದುಸ್ಥಿತಿ ಇದೆ. ಸಮಾಧಾನವಾಗಿ, ಸಾವಧಾನವಾಗಿ ಕೇಳುತ್ತೇನೆ, ಇದಕ್ಕೆ ಯಾವ ಪರಿಹಾರವನ್ನು ಮಾಡಿದ್ದೀರಿ? ಇದಕ್ಕೆ ನಾನು ಹೇಳುವುದೇನೆಂದರೆ ಸರ್ಕಾರದ ಗಮನಕ್ಕೆ ಇಂಥ ವಿಷಯಗಳು ಬಂದಾಗ ಅವುಗಳನ್ನು ಪರಿಹಾರ ಮಾಡಬೇಕು ಎಂಬ ಮನಸ್ಸಿದ್ದರೆ ದಯವಿಟ್ಟು ಯಾವಯಾವ ಕೋ-ಆಪರೇಟಿವ್ ಸೊಸೈಟಿಗಳಲ್ಲಿ ಚುನಾವಣೆ ನಡೆದಿಲ್ಲವೋ ಅಲ್ಲೆಲ್ಲ ತಕ್ಷಣವೇ ಚುನಾವಣೆಗಳು ನಡೆಯಬೇಕು ಎಂದು ಆಜ್ಞೆಮಾಡಿ, ಚುನಾವಣೆಗಳನ್ನು ನಡೆಸಿ. ಅಲ್ಲಿಯವರೆಗೂ ಆ ಸೊಸೈಟಿಗಳ ಆಡಳಿತವನ್ನೆಲ್ಲ ಎಲ್ಲ ಕಡೆಗಳಲ್ಲಿ Official Secretary ನೇಮಕ ಮಾಡಬೇಕೆಂದಿರುವುದರಿಂದ, ಹಾಗೆಮಾಡಿ ಅವರಿಗೆ ವಹಿಸಿಬಿಡಿ.

ಸರ್ಕಾರದವರು Official Secretary ಗಳನ್ನು ನೇಮಕ ಮಾಡದಹಾಗೆ ಅನೇಕ ಸೊಸೈಟಿಗಳವರು ದಬಾವಣೆ ಮಾಡಿಕೊಂಡು ಹೋಗುತ್ತಿದ್ದಾರೆ. ಪ್ರತಿಯೊಂದಕ್ಕೂ ಒಂದು ರೆಸಲ್ಯೂಷನ್ ಮಾಡಿ Official Secretary ನೇಮಕಮಾಡಲು 6 ತಿಂಗಳ ಅವಕಾಶ ಕೊಡಿ ಎಂದು ಅಷ್ಟು ಅವಧಿ ಪಡೆಯುತ್ತಾರೆ. ನಂತರ ಒಂದುವರ್ಷ ಪಡೆಯುತ್ತಾರೆ. ನಂತರ ಒಂದೂವರೆ ವರ್ಷ ಹೀಗಾಗಿದೆ. ಸಾಮಾನ್ಯವಾಗಿ ಒಂದುಸಲ 6 ತಿಂಗಳ ಅವಕಾಶಕೊಟ್ಟರೆ ಪುನಃ ಒಂದು ತಿಂಗಳೋ ಅಥವ ಎರಡು ತಿಂಗಳೋ ಕೊಡುವುದು ಸ್ವಾಭಾವಿಕ. ಅದು ಬಿಟ್ಟು ಮೊದಲು 6 ತಿಂಗಳು, ನಂತರ ಒಂದು ವರ್ಷ ಹೀಗೆ ಹೆಚ್ಚಿಸಿಕೊಂಡು ಹೋಗುವುದು ಸರಿಯಾದ ಮಾರ್ಗವಲ್ಲ. ಆದುದರಿಂದ ಯಾವುದಾದರೂ ಒಂದು ತೀರ್ಮಾನವನ್ನು ತೆಗೆದುಕೊಂಡರೆ ಅದನ್ನು ಜಾರಿಗೆ ಕೊಡಬೇಕು. ಈ ರೀತಿ ಮಾಡಬೇಕೆಂಬ ಮನಸ್ಸಿಲ್ಲದೆ ಹೋದರೆ ಏನು ತಾನೇ ಮಾಡುವುದಕ್ಕಾಗುತ್ತದೆ. ಈ ವಿಚಾರದಲ್ಲಿ ಮನಸ್ಸಿಲ್ಲದೆ ಕೆಲಸ ಮಾಡುತ್ತಿದ್ದೀರಿ. ಬಾಯಲ್ಲಿ ಹೇಳುವುದೊಂದು, ಕಾರ್ಯದಲ್ಲಿ ಮಾಡುವುದೊಂದು ಆಗಿದೆ. ಒಂದು ಸೊಸೈಟಿಯಲ್ಲಿ ಎರಡು ಗುಂಪುಗಳಿದ್ದರೆ—ಸಾಧಾರಣವಾಗಿ ಇದ್ದೇ ಇರುತ್ತದೆ—ಆ ಎರಡು ಗುಂಪುಗಳಿಗೂ ಸಮಾಧಾನ ಪಡಿಸಿಕೊಂಡು ಹೋಗಬೇಕೆಂದು ಸರ್ಕಾರ ಪ್ರಯತ್ನಪಟ್ಟರೆ ಅದು ಸಾಧ್ಯವಾಗುತ್ತದೆಯೇ! ಸರ್ಕಾರದವರು ತಾವು ಮಾಡಬೇಕಾದ ಕಾರ್ಯವನ್ನು ಸರಿಯಾಗಿ ಮಾಡದೆ ಉದಾಸೀನದಿಂದ ಇರುವುದರಿಂದಲೇ ಸೊಸೈಟಿಗಳು ಹಾಳಾಗುತ್ತಿವೆ.

*ಶ್ರೀ ಬಿ. ಟಿ. ಕೆಂಪರಾಜ್ (ಬೆಂಗಳೂರು ದಕ್ಷಿಣ—ಅನುಸೂಚಿತ ಜಾತಿಗಳು).—ಸ್ವಾಮಿ, ಸಹಕಾರ ಸಂಸ್ಥೆಗಳ ವಿಚಾರವಾಗಿ ಈಗಾಗಲೇ ಅನೇಕರು ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ನಾನೂ ಸಹ ಒಂದೆರಡು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಮೊದಲನೆಯದು Multi-purpose Co-operative Societies ಎಂದು ಪ್ರಾರಂಭವಾಯಿತು. ಅದರ ಜೊತೆಗೆ Rural Industrial Co-operative Societies ಎಂದು ಮತ್ತೊಂದು ಸೇರಿತು. ಮೊದಲಿನಿಂದಲೂ Apex Bank ಮತ್ತು Land Mortgage Bank ಇದ್ದೇ ಇವೆ. ಒಟ್ಟು ನಾಲ್ಕು ಆಯಿತು. ಇದರ ಜೊತೆಗೆ ಈಗೀಗ ಅನೇಕ ಸೊಸೈಟಿಗಳು ಪ್ರಾರಂಭವಾಗುತ್ತಿವೆ. ಅಂದರೆ ಕೋ-ಆಪರೇಟಿವ್ ಸೊಸೈಟಿಗಳು ಹೆಚ್ಚಾಗುತ್ತಿವೆ. ಆದರೆ ಎಲ್ಲದರಲ್ಲಿಯೂ ನಡೆಯತಕ್ಕ ಕಾರ್ಯಗಳು ಒಂದೇ ಬಗೆಯವು. ಆದುದರಿಂದ ಎಲ್ಲ ಸಹಕಾರ ಸಂಸ್ಥೆಗಳ ಕಾರ್ಯದ ಪರಿಮಿತಿ ಏನಿದೆ ಅದನ್ನು ಒಂದು ಯೋಜನೆಯ ಪ್ರಕಾರವಾಗಿ ನಡೆಸುವುದು ಅತ್ಯಾವಶ್ಯಕ. ಈಗ ಒಂದು ಉದಾಹರಣೆ ಕೊಡಬೇಕಾದರೆ, Land Mortgage Bank ಇದೆ, Multi-purpose Co-operative Society

ಇದೆ, Rural Industrial Co-operative Society ಇದೆ. ಇವು ಮೂರು ಸಂಸ್ಥೆಗಳೂ ಮಾಡ ತಕ್ಕ ಕೆಲಸ ಒಂದಲ್ಲ ಒಂದು ವಿಧದಲ್ಲಿ ಒಂದೇ ಆಗಿದೆ. ಆದರೆ ಇವು ಮೂರು ಸಂಸ್ಥೆಗಳೂ ಇದ್ದು ಆ ಕಡೆ ಒಂದು ಸೊಸೈಟಿಗೆ ಸಾಲಕ್ಕೆ ಹಾಕಿ, ಈ ಕಡೆ ಇನ್ನೊಂದು ಸಹಕಾರ ಸಂಸ್ಥೆಗೆ ಸಾಲಕ್ಕೆ ಹಾಕಿ, ಮತ್ತೊಂದು ಕಡೆ Land Mortgage Bankನಲ್ಲಿಯೂ ಸಾಲಕ್ಕೆ ರೈತನು ಹಾಕುತ್ತಾನೆ. ಹೀಗೆ ಮೂರು ಕಡೆಯೂ ಸಾಲಕ್ಕೆ ಹಾಕಿ, ರೈತನಾದವನು ತಿರುಗುವುದಕ್ಕೆ ಪ್ರಯತ್ನ ಮಾಡಿದರೆ ಮೂರು ಸಂಸ್ಥೆಗಳಲ್ಲಿಯೂ ಅವನಿಗೆ ಸಾಲವೇ ಸಿಕ್ಕುವುದಿಲ್ಲ. ಹೀಗಾಗಿ ಸಹಕಾರಕ್ಕೆ ಬದಲಾಗಿ ಅಸಹಕಾರ ಹೆಚ್ಚಿದೆ. Short-term credit ಸೊಸೈಟಿಗಳು ಈಚೀಚೆಗೆ ಪ್ರಾರಂಭವಾಗಿವೆ. ಇದರಲ್ಲಿ ಸಹ ಸಾಲವೇನೋ ಕೊಡುತ್ತಾರೆ. ಕೊಟ್ಟರೂ ಬಹಳ ದಿನಗಳು ಕಳೆದುಹೋಗುತ್ತವೆ. ಇದರಿಂದ ಸಹಕಾರ ಸಂಸ್ಥೆ ಯಾವುದೇ ಆಗಲಿ ಯಾವ ಉದ್ದೇಶ ಕ್ಕಾಗಿ ಪ್ರಾರಂಭಮಾಡಿದೆವೋ, ರೈತರಿಗೆ ಅನುಕೂಲ ವಾಗಲಿ, ಕೈಗಾರಿಕಾ ಕೆಲಸಗಳನ್ನು ಮಾಡುವವರಿಗೆ ಅನುಕೂಲವಾಗಲಿ ಎಂದು ಪ್ರಯತ್ನ ಮಾಡಿದೆವೋ, ಆ ಉದ್ದೇಶ ಫಲಕಾರಿಯಾಗುವುದಿಲ್ಲ. Jack of all but master of none ಎಂದು ಹೇಳಿದ ಹಾಗಾಗುತ್ತದೆ. ಆದುದರಿಂದ ಯಾವ ಸಂಸ್ಥೆಯಲ್ಲಿಯೇ ಆಗಲಿ ಖಚಿತವಾದ, ನಿರ್ದಿಷ್ಟವಾದ ಒಂದು ಯೋಜನೆಯನ್ನು ಹಾಕಿಕೊಂಡು ಅದರಲ್ಲಿ ರೈತರಿಗೆ ಎಷ್ಟು ಸಾಲಕೊಡಬಹುದು, ಸಾಲಮಾಡಿ ದ್ದಾರೆಯೇ, ಇಲ್ಲವೇ ಮಾಡಿದ್ದರೆ ಎಷ್ಟು ಸಾಲಮಾಡಿ ದ್ದಾರೆ, ಅವರ ಶಕ್ತಿ ಮತ್ತು ಸಾಮರ್ಥ್ಯ, ಕಾರ್ಯ ಚತುರತೆ ಇವನ್ನು ತಿಳಿಯಲು concentrate ಮಾಡು ವುದಕ್ಕೆ ಸಾಧ್ಯವಿಲ್ಲದೆ ಹೋಗಿದೆ. ಯಾಕೆಂದರೆ ಎಲ್ಲ ಸಹ ಕಾರ ಸಂಸ್ಥೆಗಳೂ ವಿವಿಧ ರೀತಿಗಳಲ್ಲಿ ಕೆಲಸ ಮಾಡುವು ದಕ್ಕೆ ಪ್ರಾರಂಭಿಸಿರುವುದರಿಂದಲೇ. ಈ ಯೋಜನೆ ಏನಾ ಗಿದೆ, ಅದರಿಂದ ಅನುಕೂಲವಾಗಿದೆಯೋ, ಏನು ಸಹಾಯ ವಾಗುತ್ತಿದೆ, ಎಷ್ಟರಮಟ್ಟಿಗೆ ಕೆಲಸ ನಡೆಯುತ್ತಿದೆ ಎನ್ನುವುದನ್ನು ಅರ್ಥಮಾಡಿ ಕೊಳ್ಳುವುದಕ್ಕೆ ಸಾಧ್ಯ ವಾಗಿಲ್ಲ. ಆದುದರಿಂದ ಸರ್ಕಾರದವರು ಎಲ್ಲ ಸಹಕಾರ ಸಂಸ್ಥೆಗಳ ಕೆಲಸ ಕಾರ್ಯಗಳನ್ನೆಲ್ಲಾ ಕೇಂದ್ರೀಕರಿಸಿ ಯಾವುದಾದರೂ ಒಂದು ರೀತಿಯಲ್ಲಿ, ರೈತರಿಗೆ ಸಹಾಯ ವನ್ನು ಒದಗಿಸತಕ್ಕದ್ದು ಉಚಿತವೆಂದು ಭಾವಿಸಿ ಕೊಂಡಿ ದ್ದೇನೆ.

*ಶ್ರೀ ಎ. ಭೀಮಪ್ಪನಾಯಕ್ (ಮೊಳಕಾಲ್ಮುರು).– ಸ್ವಾಮಿ, ಸಹಕಾರ ಸಂಸ್ಥೆಗಳ ವಿಚಾರದಲ್ಲಿ ಮೊದಲು ಆಡಳಿತವರ್ಗದ ವಿಷಯವಾಗಿ ಕೆಲವು ಮಾತುಗಳನ್ನು ಹೇಳಬೇಕೆಂದಿದ್ದೇನೆ. ವೆಟೆರಿನರಿ ಇಲಾಖೆಯಲ್ಲಿ ಹೇಗೆ ಖಾಯಂ ಆದ ಒಬ್ಬರು ಮುಖ್ಯಾಧಿಕಾರಿಗಳಿಲ್ಲವೋ ಹಾಗೆಯೇ ಸಹಕಾರದ ಇಲಾಖೆಯಲ್ಲಿಯೂ ಖಾಯಂ ಆದ ಮುಖ್ಯಾಧಿಕಾರಿಗಳು ಇಲ್ಲದ ಹಾಗಾಗಿದೆ. ಈಗಿರುವವರೇ ಇನ್ನು ಮುಂದೆಯೂ ಇರುತ್ತಾರೆಯೇ ಇಲ್ಲವೇ ಎಂಬ ನಂಬಿಕೆ ಇಲ್ಲದಹಾಗಾಗಿದೆ. ಈಗಿರುವ ವರಿಗೆ ದಕ್ಷತೆಯಿಂದ ಕೆಲಸ ಮಾಡುವುದಕ್ಕೆ ಶಕ್ತಿ ಇದೆ, ಅನುಭವವಿದೆ. ಆದರೆ ಅವರಿಗೆ ನಿರ್ದಿಷ್ಟವಾದ ಒಂದು ಸ್ಥಳವಿಲ್ಲದೆ ಹೋದರೆ ಹೇಗೆ ಅವರು ಅಧಿಕಾರ ನಡೆಸು ತ್ತಾರೆ, ಯಾವ ಭರವಸೆಯಿಂದ, ನಡೆಸುತ್ತಾರೆ. ಅವರು ಎಷ್ಟು ದಿವಸ ಅಲ್ಲಿರಬೇಕು ? ರಿಜಿಸ್ಟ್ರಾರ್ ಒಂದು ಕಡೆ, ಡೆಪ್ಯುಟಿ ರಿಜಿಸ್ಟ್ರಾರ್ ಒಂದು ಕಡೆ ಹೀಗಾಗಿ ಇಲಾಖೆಗೆ ಸರಿಯಾದ ಅಧಿಕಾರಿಗಳಿಲ್ಲ. ರಿಜಿಸ್ಟ್ರಾರ್‌ರವರಿಗೆ ಖಾಯಂ ಆದ ಸ್ಥಾನವೇ ಇಲ್ಲದ ಹಾಗಾಗಿದೆ. ಹೀಗಾಗಿ ಡಾಕ್ಟರ್ ನಾಗನ ಗೌಡರ ಆಡಳಿತಾಧಿಕಾರದಲ್ಲಿರತಕ್ಕ ವೆಟೆರಿನರಿ ಇಲಾಖೆಯ ವಿಚಾರದಲ್ಲಿ ಹೇಗೆ ಹೇಳಿದೆನೋ ಇದಕ್ಕೂ ಹಾಗೆಯೇ ಹೇಳಬೇಕಾಗಿದೆ. ಒಂದು ವರ್ಷವೇ, ಎರಡು ವರ್ಷವೇ, ವರ್ಷಾನುಗಟ್ಟಲೆ ಖಾಯಂ ಆದ ಏರ್ಪಾಡು ಮಾಡಬೇಡವೇ? ಹಾಗೆ ಮಾಡದೆ ಇದ್ದರೆ ಕೆಲಸ ಕಾರ್ಯಗಳು ಹೇಗೆ ನಡೆಯುತ್ತವೆ ?

ಅನೇಕ ಕಡೆ ಹಣ ದುರುಪಯೋಗವಾಯಿತು ಎಂದು ಹೇಳುತ್ತಾರೆ. ಸೊಸೈಟಿಗಳಿಗೆ audit system ಎಂದು ಮಾಡಿದ್ದಾರೆ. ಈ ಕೆಲಸಕ್ಕೆ ಹಿಂದೆ ಇನ್ಸ್‌ಪೆಕ್ಟರು ಗಳಾಗಿದ್ದು, ಎಷ್ಟು ಮೀಟಿಂಗ್ ಆಯಿತು, ರೆಸ ಲ್ಯೂಷನ್ ಏನೇನಾಯಿತು ಎಂದು ನೋಡುತ್ತಿದ್ದವ ರೆಲ್ಲ ಇವೊತ್ತು ಆಡಿಟರುಗಳಾದರೆ, ಆಡಿಟ್ ಎನ್ನುವು ದನ್ನೇ ತಿಳಿಯದೇ ಇರುವವರು ಆಡಿಟರುಗಳಾದರೆ, ಅವರು ಲೆಕ್ಕಗಳನ್ನು ಎಷ್ಟು ಮಾತ್ರ ಆಡಿಟ್ ಮಾಡ ಬಲ್ಲರು ? ಇಂಥ ಕೆಲಸಕ್ಕೆ ಆಡಿಟ್ ಫೀ ಎಷ್ಟೆಂದರೆ ಆಯಾ ಸೊಸೈಟಿಗಳ ಲಾಭದಲ್ಲಿ ಸೇಕಡ ಹತ್ತರಷ್ಟು ಕೊಡಿ ಎಂದು ಹೇಳುತ್ತಾರೆ. ದುಡ್ಡು ಹಾಕಿ, ಬಂಡ ವಾಳವನ್ನು ಹಾಕಿ ವ್ಯವಹಾರವನ್ನು ನಡೆಸುವ ಸೊಸೈಟಿಗಳು ತಮ್ಮ ಷೇರುದಾರರಿಗೆ ಶೇಕಡ 6¼ ರೂಪಾಯಿಗಿಂತಲೂ ಹೆಚ್ಚಾಗಿ ಕೊಡಕೂಡದು. ಆದರೆ ಆಡಿಟರುಗಳಿಗೆ ಮಾತ್ರ ಶೇಕಡ 10 ರೂಪಾಯಿ ಕೊಡಬೇಕು. ಇದು ಯಾವ ನ್ಯಾಯ. ಅನೇಕ ಸೊಸೈಟಿಗಳಲ್ಲಿ ಬಂದ ಲಾಭವೆಲ್ಲ ಆಡಿಟರಿಗೇ ಹೋಗು ವುದು. ಹಿಂದಿನ ವರ್ಷ ಈ ವಿಷಯವನ್ನು ಹೇಳಿದುದಕ್ಕೆ ಯೋಚನೆ ಮಾಡುತ್ತೇವೆಂದು ತಿಳಿಸಿದರು. ವರ್ಷಾನು ಗಟ್ಟಲೆ ಯೋಚನೆ ಮಾಡುವ ಅಧಿಕಾರಿಗಳಿಂದ ಏನು ಕೆಲಸವಾಗುತ್ತದೆ ? ಯಾವುದಕ್ಕೇ ಆಗಲೀ ಆಲೋ ಚನೆ ಮಾಡಲಾಗುತ್ತದೆ, under consideration ಎಂದು ಹೇಳುತ್ತಾರೆ. ಆದರೆ ಅದರ ಬಗ್ಗೆ ಏನೂ ಕಾರ್ಯ ತೆಗೆದುಕೊಳ್ಳುವುದಿಲ್ಲ.

ಎರಡನೆಯದಾಗಿ consolidate ಮಾಡುವುದಕ್ಕೆ ಅನೇಕ types of societies ಮಾಡಿದ್ದೇವೆ, ಅವಕ್ಕೆ trained personnel ಬೇಕು ಎಂದು ಹೇಳು ತ್ತಾರೆ. ಒಂದು institution ಮಾಡಿ, ಟ್ರೈನಿಂಗ್ ಕೊಟ್ಟು, trained personnel ಹಾಕಿ ಕೆಲಸಗಳನ್ನು ನಡೆಸಲಿ. ಶ್ರೀಮಾನ್ ಮರಿಯಪ್ಪನವರ ಕಾಲದಲ್ಲಿ subsidise ಮಾಡಿ ಅಧಿಕಾರಿಗಳನ್ನು ನೇಮಿಸಿ ಕೆಲವು ವರ್ಷಗಳು ತಮ್ಮ ಕಾಲುಗಳ ಮೇಲೆ ತಾವು ನಿಲ್ಲುವಂತೆ ಮಾಡಲು ಏರ್ಪಡಿಸಿದರು. ಕೆಲಸಕಾರ್ಯಗಳನ್ನು ನಿರ್ವಹಿಸಲು ದಕ್ಷತೆ ಇಲ್ಲದೆ ಅನೇಕ ಕಡೆ ತೊಂದರೆ ಯಾಗಿದೆ. ಅಂಥಕಡೆ ನೀವು ಅಧಿಕಾರಿಗಳನ್ನು ಹಾಕು ತ್ತಿಲ್ಲ. ದುಡ್ಡು ಕೊಡಿ ಹಾಕುತ್ತೇವೆ ಎಂದರೆ ಎಷ್ಟು ದುಡ್ಡು ಕೊಡುವುದು ! ಸರ್ಕಾರಕ್ಕೆ ಆಡಿಟ್ ಫೀಗಾಗಿ ಶೇಕಡ 10ರಷ್ಟು ಕೊಟ್ಟ ಮೇಲೆ ಉಳಿಯುವುದು ಏನು ! ಕೋ-ಆಪರೇಟಿವ್ ಸೊಸೈಟಿಗಳು ಹೇಗೆ ಕೆಲಸಮಾಡಬೇಕು? ಆ ಮೇಲೆ Agricultural Co-operative Society, Co-operative Farm ಎಂದು ಹೇಳಿದ್ದೀರಿ. ಇವು ಸರಿಯಾಗಿ ಕೆಲಸ ಮಾಡುತ್ತಿದೆಯೋ ? ಸರಿಯಾದ trained personnel ನೇಮಕ ಮಾಡಿದ್ದೀರಾ ? ಅದರ ಆದಾಯ ವೆಚ್ಚಗಳು ಏನೂ ಒಂದೂ ಗೊತ್ತಿಲ್ಲ. ಇನ್ನು ಮುಂದೆ ಪ್ರತ್ಯೇಕ ವಾದ Co-operative Committee ನಮ್ಮಲ್ಲಿ ಆಗ ಬೇಕು ಎನ್ನುವಾಗ ಅದರಲ್ಲಿ ಜನಗಳಿಗೆ ನಂಬಿಕೆ ಇಲ್ಲದ ಪರಿಸ್ಥಿತಿ ಉಂಟಾಗುತ್ತಿದೆ.

ಇಂಡಿಯಾ ಸರ್ಕಾರದವರು ಜನತೆಗೆ ಶೇಕಡ 4-5ರ (4 or 5 per cent ಒಳಗಾಗಿ ಹಣಸಿಗಬೇಕು ಎಂಬ ತತ್ವವನ್ನು ಇಟ್ಟುಕೊಂಡಿದ್ದಾರೆ. ಇಲ್ಲಿ, 6½ 7, 7½ per

(ಶ್ರೀ ಎ. ಭೀಮಪ್ಪನಾಯಕ್.)

cent ಹೀಗೆ ಕೊಡುತ್ತ ಇದ್ದೀರಿ. ಕೇಂದ್ರದಿಂದ ನಾಲ್ಕು ಪರ್‌ಸೆಂಟ್ ಪ್ರಕಾರ ಬರುವ ಹಣ ರೈತನಿಗೆ ಸೇರುವುದರೊಳಗಾಗಿ ಎಂಟು ಪರ್‌ಸೆಂಟ್ ಆಗಿರುತ್ತದೆ? ಕೇಂದ್ರ ಸರ್ಕಾರದವರು ಕೊಡತಕ್ಕ ದರದ ಮೇಲೆ ಶೇಕಡ ಒಂದಕ್ಕಿಂತ ಜಾಸ್ತಿ ಇರಕೂಡದು ಎಂದು ಮಾಡಬೇಕು. There are more middle men than the Society people can bear. ಸೆಂಟ್ರಲ್ ಸೊಸೈಟಿಯವರು ಅಷ್ಟು ತೆಗೆದುಕೊಳ್ಳಬೇಕು, ಡಿಸ್ಟ್ರಿಕ್ಟ್ ಸೊಸೈಟಿಯವರು ಅಷ್ಟು ತೆಗೆದುಕೊಳ್ಳಬೇಕು, ಲೋಕಲ್ ಸೊಸೈಟಿಯವರು ಅಷ್ಟು ತೆಗೆದುಕೊಳ್ಳಬೇಕು. ಸೆಂಟ್ರಲ್

12 NOON.

ಸೊಸೈಟಿ, ಡಿಸ್ಟ್ರಿಕ್ಟ್ ಸೊಸೈಟಿ, ಲೋಕಲ್ ಸೊಸೈಟಿ ಇವೆಲ್ಲಾ ಆಡಿಟ್ಟಿಗೆ ಇಷ್ಟು ಪರ್ಸೆಂಟೇಜ್ ತೆಗೆದುಕೊಳ್ಳಬೇಕು. ಇಷ್ಟು ತೆಗೆದುಕೊಂಡರೆ ಮನುಷ್ಯನ ಮೇಲೆ ಹೊರೆ ಎಷ್ಟು ಬೀಳುತ್ತದೆಂಬುದನ್ನು ಯೋಚನೆಮಾಡಿದ್ದೀರಾ? ಕಡಮೆ ತೆಗೆದುಕೊಂಡರೆ ಸರ್ಕಾರವೇ ಆಡಿಟ್ ಫೀಜು, ಮೇಲ್ವಿಚಾರಣೆಗೆ ಅಧಿಕಾರಿಗಳಿಗೆ ಕೊಡಬೇಕಾದ ಖರ್ಚು ಇದೆಲ್ಲಾ ಕೊಡಬೇಕು. ಇದನ್ನು ಆರ್ಗನೈಜ್ ಮಾಡಿಲ್ಲ. ಒಂದು ಡಿಸ್ಟ್ರಿಕ್ಟಿನಲ್ಲಿ ಎಷ್ಟು ತರಹ ಸೊಸೈಟಿಗಳಿವೆ, ಹೇಗೆ ಕೆಲಸಮಾಡುತ್ತಿವೆ, ಎಷ್ಟು ಕೆಲಸವಾಗಿದೆ ಎಂದು ನೋಡಿ ಮಾಡಿಲ್ಲ. ಟ್ರೈನಿಂಗ್ ಕೊಡ ಇಲ್ಲ. ಇನ್ನೂ ಮುಂದೆ ಹೋಗಿ ಹೇಳಬೇಕಾದರೆ ಕೆಲವು ಯಾವಾಗಲೂ ಒಂದೇ ರೀತಿಯಲ್ಲಿವೆ; ಪ್ರಪಂಚ ಹುಟ್ಟಿದ ಲಾಗಾಯ್ತು ಒಂದೇ ರೀತಿ ಒಬ್ಬರೇ ಒಂದೇ ಮನೆತನದವರೇ ನಡೆಸಿಕೊಂಡು ಹೋಗುತ್ತಿದ್ದಾರೆಂದು ಹೇಳುತ್ತಾರೆ. ಇದಕ್ಕೊಂದು ಲಾ ಮಾಡಿದರು; ಈ ಇಲಾಖೆಯವರೇ ಮಾಡಿದರು. ಅದರಿಂದೇನೂ ವ್ಯತ್ಯಾಸವಾಗಿಲ್ಲ. ಚುನಾವಣೆಯ ರೀತಿ ನೀತಿ ಸಹ ಬದಲಾವಣೆಯಾಗಿಲ್ಲ. ಹಿಂದಿನಿಂದ ಯಾರು ಮೇಯುತ್ತಿದ್ದರೋ ಅವರೈ ಈಗಲೂ ಇದ್ದಾರೆ, ಮೇಯುವುದೇನೂ ಕಡಮೆಯಾಗಿಲ್ಲ. ಇದನ್ನೆಲ್ಲಾ ದಯವಿಟ್ಟು ಸರಿಪಡಿಸಬೇಕು. ಈ ಡಿಮ್ಯಾಂಡ್ ಮನವಿಯನ್ನು ನಾನು ಒಪ್ಪುತ್ತೇನೆ.

*ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—ಸ್ವಾಮಿ, ಈ ಡಿಮ್ಯಾಂಡನ್ನು ಅನುಮೋದಿಸುತ್ತಾ, ಮೈಸೂರು ಸಂಸ್ಥಾನದಲ್ಲಿ ರೈತರಿಗೆ ಅನುಕೂಲವಾಗಬೇಕಾದರೆ ಸಂಸ್ಥಾನದಲ್ಲಿ ರೈತರಿಗೆ ಎಷ್ಟು ಸಾಲವಿದೆಯೆಂದು ಸರ್ವೆಮಾಡಿಸಿ ಆದಷ್ಟು ಕಡಮೆ ದರದಲ್ಲಿ ಬಡ್ಡಿ ಹಾಕಿ ರೈತರಿಗೆ ಸರ್ಕಾರ ಸಾಲ ಒದಗಿಸುವುದು ಬಹಳ ಸೂಕ್ತವೆಂದು ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಏಕೆಂದರೆ ಮಾರವಾಡಿಗಳ ಕೈಗೆ ಮತ್ತು ಶ್ರೀಮಂತರ ಕೈಗೆ ಸಿಕ್ಕಿರುವುದರಿಂದ ರೈತರಿಗೆ ಬಹಳ ಕಿರುಕುಳವಾಗಿದೆ. ಆದ್ದರಿಂದ ನಾನು ಹೇಳಿದ ಏರ್ಪಾಡ ಮಾಡುವುದು ಸಾಧುವಾದುದೆಂದು ಸೂಚಿಸುತ್ತೇನೆ.

ಎರಡನೆಯದಾಗಿ ಈಗ ಅಲ್ಪಕಾಲಾವಧಿ ಸಾಲವನ್ನು 36 ಲಕ್ಷ ರೂಪಾಯಿಗಳವರೆಗೆ ಕೊಟ್ಟಿದ್ದರು. ಅದನ್ನು ರೈತರು ತೆಗೆದುಕೊಂಡು ಆರೇಳು ತಿಂಗಳಲ್ಲಿ ಸರ್ಕಾರಕ್ಕೆ ವಾಪಸು ಕೊಟ್ಟರು. ಈ ರೀತಿಯಾಗಿ ಸುಮಾರು 35 ಲಕ್ಷ ಚಿಲ್ಲರೆ ರೂಪಾಯಿಗಳ ಸಾಲವನ್ನು ವಾಪಸು ಕೊಟ್ಟಿರುತ್ತಾರೆ. ಇದೇ ರೀತಿಯಾಗಿ ಈ ವರ್ಷ ಕೂಡ ಈ ಬಾಬಿಗೆ ಹೆಚ್ಚು ಹಣ ಒದಗಿಸಿ ರೈತರಿಗೆ ಅನುಕೂಲ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಮೂರನೆಯದಾಗಿ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನಲ್ಲಿ ಮೊದಲು ಬಡ್ಡಿದರ ಬಹಳ ಕಡಮೆಯಿತ್ತು. ಸೇಕಡ ನಾಲ್ಕರಂತೆ ಇದ್ದುದನ್ನು ಸೇಕಡ 7½ಗೆ ಏರಿಸಿದ್ದಾರೆ. ಇದು ಸರಿಯಲ್ಲ. ಈಗ ಶ್ರೀ ಅನಂತರಾಮನ್‌ರವರು ಅದರ ಆಡಳಿತ ನೋಡಿಕೊಳ್ಳುತ್ತಾರೆಂದು ಕಾಣುತ್ತದೆ. ಅವರು ಬಂದ ಮೇಲೆ ಅಲ್ಲಿ ಶೇಕಡ 6½ ಗೆ ಬಡ್ಡಿದರ ಇಳಿಸಿದ್ದಾರೆ. ಶೇಕಡ 5ಕ್ಕೆ ಮೇಲ್ಪಟ್ಟು ಎಲ್ಲೂ ಹಾಕಿಲ್ಲ. ಈಗಲಾದರೂ ಆ ಬ್ಯಾಂಕಿನವರು ಶೇಕಡ 5 ರಂತೆ ಬಡ್ಡಿ ಹಾಕಿ ರೈತರಿಗೆ ಹೆಚ್ಚು ಸಹಾಯಮಾಡುವಂತೆ ಏರ್ಪಾಡು ಮಾಡಬೇಕೆಂದು ಮನವಿ ಮಾಡುತ್ತೇನೆ.

ಈಗ ಸಾಲ ಕೊಡುವ ವ್ಯವಸ್ಥೆ ಮೂರು ನಾಲ್ಕು ಕಡೆಯಿರುವುದರಿಂದ ಎಲ್ಲಿ ಸಿಕ್ಕುತ್ತದೆಂಬುದು ರೈತರಿಗೆ ಗೊತ್ತಾಗಿಲ್ಲ. ಅನೇಕ ಕಡೆ ಸರ್ಕಾರದವರೇ ಕೊಡುವುದಕ್ಕೆ ಏರ್ಪಾಡು ಮಾಡುವುದಕ್ಕೆ ಬದಲಾಗಿ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕು 10-15 ಕಡೆ ಕೊಡಲು ಏರ್ಪಾಡು ಮಾಡಿದೆ. ಎರಡನೆಯದಾಗಿ ಅಲ್ಪಕಾಲಾವಧಿ ಸಾಲವನ್ನು ಕೊಡುವ ರೀತಿಯಲ್ಲಿ ಏರ್ಪಾಡು ಮಾಡಿ ಒಂದೇ ಕಡೆ ದೀರ್ಘಾವಧಿ ಮತ್ತು ಅಲ್ಪಕಾಲಾವಧಿ ಸಾಲ ಇವೆರಡನ್ನೂ ಕೊಡುವಂತೆ ವ್ಯವಸ್ಥೆ ಮಾಡುವುದು ಬಹಳ ಒಳ್ಳೆಯದು. ಮೂರು ನಾಲ್ಕು ಕಡೆ ಇಂಡಸ್ಟ್ರಿಯಲ್ ಲೋನ್ ವಗೈರೆ ಕೊಡುತ್ತೇವೆಂದು ಹೇಳುವುದಕ್ಕೆ ಬದಲಾಗಿ ಮಿಡ್ಲ್‌ಮೆನ್‌ಗೆ ಅನುಕೂಲವಾಗುವುದನ್ನು ತಪ್ಪಿಸಿ ಒಂದು ಕಡೆ ಕೊಡಲು ಏರ್ಪಾಡು ಮಾಡಬೇಕೆಂದು ಪ್ರಾರ್ಥನೆಮಾಡುತ್ತೇನೆ.

ಈಗ ಅನೇಕ ಕಡೆ ಸಾಲ ಕೊಡುವಾಗ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನಲ್ಲಿ ಕೊಡುವ ಪರ್ಸೆಂಟೇಜ್ ಸ್ವಲ್ಪ ಕಡಮೆಯಾಗಿದೆ. ಮೊದಲು ತೀರ್ಮಾನ ಮಾಡಬೇಕಾದರೆ ಒಂದು ವರ್ಷ ಎರಡು ವರ್ಷ ಬೇಕಾಗುತ್ತಿತ್ತು. ಈಗ ಅದನ್ನು ಮಾರ್ಪಾಡು ಮಾಡಿದೆಯೆಂದು ಹೇಳುತ್ತಾರೆ. ಇನ್ನೂ ಮಾರ್ಪಾಡು ಮಾಡಿ ಜಾಗ್ರತೆ ದೊರೆಯುವ ಹಾಗೆ ಮಾಡಬೇಕು. ಈ ಬ್ಯಾಂಕಿನ ಕೆಲಸ ಸುಲಲಿತವಾಗಿ ನಡೆಯುವಂತೆ ಸರ್ಕಾರ ಗಮನ ಕೊಟ್ಟು ರೈತರಿಗೆ ಅನುಕೂಲ ಮಾಡಿಕೊಡಬೇಕು.

ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಸ್ವಾಮಿ, ಸಂಸ್ಥಾನಾ ಮಳೆ ರೈತರನ್ನು ತಮ್ಮ ಸಾಲ ಸೋಲ್ಲಗಳಿಂದ ಪಾರು ಮಾಡತಕ್ಕ ಬಗ್ಗೆ ನಮ್ಮ ಸರ್ಕಾರದವರು ನಾನಾ ಮುಖವಾಗಿ ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಈಗ ರೈತರಿಗೆ ಈ ನಾನಾ ರೀತಿಯ ಸಾಲಗಳನ್ನು ಮಂಜೂರು ಮಾಡುತ್ತಿರುವ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಜನರಿಗೆ ಇನ್ನೂ ಹೆಚ್ಚು ಹೆಚ್ಚಿನ ರೀತಿಯಲ್ಲಿ ಸಾಲಕೊಡಬೇಕಾದ್ದು ಅತ್ಯಗತ್ಯ. ರೈತರಿಗೆ ಹೀಗೆ ಅನೇಕ ರೀತಿಯಲ್ಲಿ ಸಾಲಗಳನ್ನು ಒದಗಿಸಿ ರೈತಾಪಿ ಜನರ ಆರ್ಥಿಕ ಪರಿಸ್ಥಿತಿ ಉತ್ತಮಗೊಂಡು, ಅವರು ಇನ್ನೂ ಪ್ರಗತಿದಾಯಕವಾದ ರೀತಿಯಲ್ಲಿ ಮುಂದುವರೆಯಲು ಅನುಕೂಲವಾಗುವಂತೆ ನಮ್ಮ ಸರ್ಕಾರ ಸಹಾಯವನ್ನು ನೀಡುತ್ತಿರುವುದು ತುಂಬಾ ಸಂತೋಷದ ಮತ್ತು ಅಭಿನಂದನೀಯವಾದಂಥ ವಿಚಾರ. ಇದಕ್ಕಾಗಿ ನಾನು ಸರ್ಕಾರದವರನ್ನು ವಂದಿಸಬೇಕಾಗಿದೆ. ಆದರೆ ಇದರಲ್ಲಿ ಕೆಲವು ನ್ಯೂನತೆಗಳಿವೆ. ಅವುಗಳನ್ನು ಸರಿಪಡಿಸಬೇಕಾದ್ದು ಸರ್ಕಾರದವರ ಕರ್ತವ್ಯ. ಈ ದಿವಸ ಈ ಹಿಂದಿನ ಸಾಲಗಳ ಬಗ್ಗೆ ಎಲ್ಲೆಲ್ಲಿ ಡಿಕ್ರಿಯಾಗಿವೆಯೋ ಅಲ್ಲೆಲ್ಲಾ ಆ ಮೊಬಲಗನ್ನು ವಸೂಲ್ಮಾಡುವುದು ಅಗತ್ಯ. ಎಲ್ಲೆಲ್ಲಿ ಈ ಸೊಸೈಟಿಗಳ ಆಡಿಟ್ ಕೆಲಸ ಪೂರೈಸಿಲ್ಲವೋ ಅವುಗಳನ್ನು ಬೇಗ ಆಡಿಟ್ ಮಾಡಿಸಬೇಕು. ಅಷ್ಟೇ

ಅಲ್ಲದೆ ಈ ಸಂಸ್ಥೆಗಳನ್ನು ತಾವು ಸರಿಯಾದ ರೀತಿಯಲ್ಲಿ ಪುನರುಜ್ಜೀವನಗೊಳಿಸಿ ಇವು ನವಚೈತನ್ಯದಿಂದ ಕೆಲಸ ಮಾಡುವಂತೆ ಏರ್ಪಾಡು ಮಾಡಬೇಕು. ಈ ಕೆಲಸದಲ್ಲಿ ಸರ್ಕಾರ ಪೂರ್ಣ ಆಸಕ್ತಿಯನ್ನು ವಹಿಸಬೇಕಾಗಿದೆ.

ಇನ್ನು ಈ ಮಧ್ಯಮ ತರಗತಿಯ ಸೊಸೈಟಿಗಳನ್ನು ಹಿಂದಿನ ಮಂತ್ರಿಗಳು ನಿರ್ಮಾಣ ಮಾಡಿದ್ದರು. ಅದರೆ ತಂದೆ ಹಾಕಿದ ಮರವನ್ನು ಮಗನೂ, ಮಗನು ಹಾಕಿದ ಮರವನ್ನು ಮೊಮ್ಮಗನೂ ಅವುಗಳನ್ನು ಬೆಳಸಿ—ಉಳಿಸಿಕೊಂಡು ಹೋಗಬೇಕೆಂಬುದು ಒಂದು ಹಿರಿಯ ಸಾಂಪ್ರದಾಯ. ಇಂಥಾ ಒಂದು ಒಳ್ಳೆಯ ಸಾಂಪ್ರದಾಯವನ್ನು ನಾವು ಆಚರಣೆಗೆ ತಾರದೆ ಹೋದರೆ ನಮ್ಮ ಮುಂದಿನ ಜನಾಂಗಕ್ಕೆ ಮತ್ತು ಆ ಮುಂದಿನ ಪೀಳಿಗೆಗೆ ಬಹಳ ಅನಾನುಕೂಲವಾಗುತ್ತದೆ ಮತ್ತು ಮುಂದಿನ ಜನ ನಮ್ಮ ಬಗ್ಗೆ ಬಹಳ ನೊಂದುಕೊಳ್ಳುತ್ತಾರೆ. ಆದರೆ ಆ ಮಂತ್ರಿಗಳು ಆ ದಿವಸ ಸ್ಥಾಪಿಸಿದಂಥ ಸೊಸೈಟಿಗಳು ಈ ಹೊತ್ತು ಯಿಲ್ಲ. ಹೀಗಾಗಬಾರದಾಗಿತ್ತು ಈಗಿನ ಕಾಲದಲ್ಲಿ ಅನೇಕರು ಸೆಕ್ರೆಟರಿಗಳಾಗಿರತಕ್ಕವರೇ ಈ ಸಂಘ ಸಂಸ್ಥೆಗಳ ಅಧ್ಯಕ್ಷರಾಗಿದ್ದುಕೊಂಡು ಈ ಸಂಘ ಸಂಸ್ಥೆಗಳ ಲೆಕ್ಕಪತ್ರಗಳನ್ನೂ ಸಹ ಆಡಿಟ್ ಮಾಡಿಸದೆ ಹಣದ ದುರುಪಯೋಗಕ್ಕೆ ಅವಕಾಶವಾಗಿದೆ. ಈ ಬಗ್ಗೆ ಸರ್ಕಾರ ಕೂಡಲೇ ಕಾರ್ಯಕ್ರಮ ಕೈಗೊಳ್ಳಬೇಕು. ಪೋಲಾಗಿರುವ ಹಣವನ್ನು ವಸೂಲ್ಮಾಡಿಕೊಳ್ಳಲು ಎಲ್ಲಾ ಪ್ರಯತ್ನಗಳನ್ನೂ ನಡೆಸಬೇಕು. ಎಲ್ಲಿಯವರೆಗೆ ಸರ್ಕಾರದ ಆಜ್ಞೆಗಳಿಗೆ ಗೌರವ ಮನ್ನಣೆಗಳಿರುವುದಿಲ್ಲವೋ ಅಲ್ಲಿಯವರೆಗೆ ಈ ಆಡಳಿತದಲ್ಲಿ ಬಿಗಿ ಇರುವುದಿಲ್ಲ. ಕೆಲಸಗಳೂ ಸಹ ಕುಂಠಿತಗೊಳ್ಳುತ್ತವೆ. ಆದ್ದರಿಂದ ಸರ್ಕಾರದವರು ತಮ್ಮ ಗೌರವ ಮತ್ತು ಕೀರ್ತಿಗಳನ್ನು ಉಳಿಸಿಕೊಳ್ಳತಕ್ಕ ರೀತಿಯಲ್ಲಿ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ಸೂಚಿಸುತ್ತೇನೆ. ಇಂಥ ವಿಷಯಗಳಲ್ಲಿ ಸರ್ಕಾರದವರು ಮುಂಜಾಗ್ರತೆಯ ಕಾರ್ಯಕ್ರಮಗಳನ್ನು ಕೈಗೊಂಡಿಲ್ಲವೆಂಬ ಅಂಶವನ್ನು ನಾನು ಬಹಳ ವ್ಯಸನದಿಂದ ಹೇಳಬೇಕಾಗಿದೆ. ಈ ದಿವಸ ದೇಶಗಳ ಏಳಿಗೆ ಮತ್ತು ಜನಾಂಗದ ಅಭಿವೃದ್ಧಿಗಳೆಲ್ಲಾ ಈ ಸಹಕಾರ ಮನೋಭಾವದಮೇಲೇ ನಿಂತಿರುತ್ತವೆ. ಹೀಗೆ ಇಡೀ ಜಗತ್ತಿನ ಕಲ್ಯಾಣಕ್ಕೇ ಮೂಲಾಧಾರವಾಗಿರತಕ್ಕಂಥ ಮನೋಭಾವ ಸಹಕಾರಗಳನ್ನು ಬೆಳೆಸಿಕೊಂಡು ಬರಲು ಸಹಾಯಕವಾಗಿರತಕ್ಕಂಥ ಈ ಮಹಾ ಸಂಸ್ಥೆಗಳನ್ನು ಸಹಕಾರ ಸಂಘಗಳನ್ನು ಯಾರೇ ಸ್ಥಾಪಿಸಲಿ ಅವುಗಳನ್ನು ಜೀರ್ಣೋದ್ಧಾರಗೊಳಿಸಿಕೊಂಡು ಬರಬೇಕಾದ್ದು ತುಂಬಾ ಆವಶ್ಯಕ. ಈ ದಿವಸ ಲ್ಯಾಂಡ್‌ಮಾರ್ಟ್‌ಗೇಜ್ ಬ್ಯಾಂಕಿಗೆ ಖಾಯಂ ಆದ ಒಬ್ಬ ಡೈರೆಕ್ಟರ್ ಇದ್ದಾರೆ. ತಾವು ಈ ಪದ್ಧತಿಯನ್ನು ತಪ್ಪಿಸಿ ಈ ಹುದ್ದೆಯಲ್ಲಿರತಕ್ಕಂಥವರನ್ನು ಮೂರು ವರ್ಷಗಳಿಗೊಮ್ಮೆ ಬದಲಾವಣೆ ಆಗುವಂಥ ಏರ್ಪಾಡನ್ನು ಮಾಡಬೇಕು. ಈ ಸಂಸ್ಥೆಗಳ ಆಡಳಿತ ಕ್ರಮವು ಎಲ್ಲಾ ಜನರ ಮನಸ್ಸಿಗೆ ಸಂತೋಷಕರವಾಗಿರತಕ್ಕಂಥ ರೀತಿಯಲ್ಲಿ ಮತ್ತು ದೇಶಕ್ಕೆ ಫಲದಾಯಕವಾಗಿರುವಂಥ ಮಾದರಿಯಾಗಿರುವ ಹಾಗೆ ಏರ್ಪಾಡು ಮಾಡಬೇಕು. ಹೀಗೆ ಈ ಇಲಾಖೆಯನ್ನು ಪುನರ್ ವ್ಯವಸ್ಥೆಗೊಳಿಸಿ ಇವುಗಳನ್ನು ಪೂರ್ಣ ಯಶಸ್ವಿಗೊಳಿಸುವಂತೆ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ಈ ಇಲಾಖಾ ಮಂತ್ರಿಗಳಿಗೂ ಮತ್ತು ಈ ಇಲಾಖಾ ಶಿಬ್ಬಂದಿಗೂ ನನ್ನ ವಂದನೆಗಳನ್ನರ್ಪಿಸುತ್ತೇನೆ. ಮತ್ತು ನನಗೆ ಈ ಎರಡು ಮಾತುಗಳನ್ನಾಡಲು ಅವಕಾಶ ಕಲ್ಪಿಸಿಕೊಟ್ಟ ಅಧ್ಯಕ್ಷರಾದ ತಮಗೂ ನನ್ನ ವಂದನೆಗಳನ್ನರ್ಪಿಸಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

*Sri T. MARIAPPA (Mysore—North).—I would like to make one or two observations only on this subject. I have heard the various suggestions offered by the members. I would like the Government to take note of the keen feeling that has been expressed on the floor of this House. We are on the eve of real revolution in the co-operative field. That is the reason why the members have been urging the Government to take stock of the entire situation before they embark on new measures of reforming this field. Sir, may I bring to the notice of the Government the need for co-ordination both at the taluk, district and State levels so far as the co-operative movement is concerned? My friend Sri Bheemappa Naik happened to remark that there are varied types of societies and there is no proper co-ordination among them. Sir, we have come to a stage where we have to abolish most of the inactive societies; and all the languishing societies have to be regenerated and they must be put on their feet so that they should be made to serve the real purpose for which they were established. There is also another aspect of the question which I want the Government to take note of, namely, that after the establishment of rural credit committees, the real time has come when the whole thing has to be reorganised on a very rational basis. But today, the short-term credit, medium-term credit is going to play a very vital role in the regeneration of this area. Sir, as the Committee has happened to remark, we need nearly Rs. 750 crores to circulate in the rural areas if we are really to help the rural population. Sir, what is the percentage of money that the Government and the co-operative institutions are furnishing now to the rural people? It is hardly 6 per cent and 94 per cent of the huge amount is being furnished by the local money-lenders and the big zamindars. Therefore we have to set up an organisation which will be able to handle all this money in the course of the next at least 5 or 10 or 15 years, so that the

(SRI T. MARIAPPA.)

Co-operative Department has to be reorganised on a rational basis. It has to be strengthened and trained people have to be put in various places. It is only then that the Department would be able to handle this huge task of regenerating the rural life. Sir, may I say that the Department has got highly inadequate staff and what is more, unfortunately, recruits are posted to several places without proper training? Therefore, there is need to open at least three or four training centres and as and when people are recruited, they must be trained properly and posted to various places.

Sir, there is another point which I want the Government to take note of, namely that at the taluk level, there is a number of co-operative institutions with diverse purposes. The Government must also consider the feasibility or the desirability of bringing about co-ordination of these various types of societies. For example, the Land Mortgage Bank works in its own way; the Multi-purpose Co-operative Societies are working in their own way; and short term credit institutions in taluk head-quarters are working in their own way. Sir, is it not possible to have a set-up which will bring about co-ordination so that at least the investigating agencies may be one for all these types of societies? Therefore, the Government must have a rational reorganisation of the Department. They must strengthen the staff of the Department and then only they will be able to tackle this big problem. My friend Sri Byre Gowda wanted the most immediate establishment of a regulated market. Sir, regulated markets are part and parcel of the measures which are conceived in the best interests of the agriculturists, namely, producers. Therefore, side by side with the establishment of regulated market, they must also set up warehouses. The Government of India have already introduced a separate department. Suppose that is enacted into law here also, then there will be heavy responsibility on the State Government to set up warehouse corporation and warehouses all over the State. Therefore, they must now alone take measures with a view to rationalise this Department and the various institutions conceived in the best interests of the country must be set up properly and manned properly and they should be made to develop in their own fashion.

One point Sri Puttaswamy has been able to say how unfortunately party factions have eclipsed the co-operative movement. I think Government should look into it immediately and try to eliminate all those anti-social elements which have entered the co-operative field. Let them take power; let them amend the law with regard to co-operation; let them enact a new law so that they could take power and wherever they find mal-practices they must immediately take over such institutions as they take over the local bodies and rehabilitate them and make them function properly and then hand them over to non-official persons. The House will not grudge to give that power to Government. It is much better they look into all these aspects of the case and try to rehabilitate the entire field of co-operation in the best interests of the country.

Mr. CHAIRMAN.—Now the Hon'ble Minister will reply.

Sri M. PALANIYAPPAN (Ulsoor).—I raise a point of order, Sir. Already the House has agreed to allot time for the members who have tabled cut motions. But the members who have tabled cut motions have not been given an opportunity to speak.

Mr. CHAIRMAN.—There is no point of order. The Hon'ble Member may remember that it was agreed to allot time only to a few members who have tabled cut motions. The Hon'ble Minister will require at least 15 minutes to reply. Therefore there is no point of order. Now the Hon'ble Minister will reply to the debate.

*Dr. R. NAGAN GOWDA (Minister for Agriculture).—Mr. Speaker, Sir, a large number of Hon'ble members have spoken on this demand and I appreciate the serious thought that they have given for this important activity of the Government. I may not be able to meet and answer all the points

that have been raised, but I have noted all the points that they have said and will seriously consider them and take action about them.

One of the important things that a very large number of members mentioned was about the multi-purpose societies that were started and the irregularities that have been noticed in some of them. Sir, I might mention here that since December 1954 we have carried on audit work in all these societies and the audit staff have covered about 95 per cent of the societies; in the year 1953-54 they have audited about 90 per cent of the societies and we have collated the societies, we have brought together the societies where they have been irregularities and things like that and we are taking systematic action to set right these irregularities and also take action against people that have been responsible for any mismanagement or misuse of the funds of the societies. I may assure the Hon'ble members here that the Government are very serious about this matter and are taking action in all these matters.

One of the members said that the public have invested in these societies shares and deposits and unless action is taken they would loose the confidence in the co-operative movement. I will only assure them that we are taking all action in this matter. One other important matter that the Hon'ble Member for Mysore Sri K. Puttaswamy suggested was about the disputes and Sri Mariappa also mentioned about that. Now a large number of disputes are filed with the Assistant Registrars and the Registrar. As regards the delay in the disposal of these disputes and the stay orders not vacating in time, I will certainly look into these matters and see that no room is given for any sort of complaints.

Another serious point that was brought to the notice of this House is that we should have election once in every year and no society or the Board of Directors of the Societies should so manupalate to stay in the Society for any length of time. Sir, one of the general questions that was raised by many of the Hon'ble Members was co-ordination of the activities of the various societies in the State. One of the things that has been suggested by the Reserve Bank is that we should have a few large size Co-operative Societies in the State.

We propose to have 400 large size Co-operative Societies this year. Hon'ble Member Sri Mariappa suggested about the godowns for these societies. These societies will be provided with 300 godowns. And then we are going to have also Marketing Societies. Taluk Multi-purpose Societies were organised years ago and have collected huge amount of share capital and deposits. It is our intention to convert these Taluk Multi-purpose Societies into Marketing Societies and provide godowns for these societies. I appreciate the suggestions offered by the Hon'ble Members. So, it is the intention of Government to organise Marketing Societies where the produce that has been taken over from the small societies which have issued credit on short term, will be brought over and sold.

Along with the taluk multi-purpose co-operative societies, a large number of hobli circle societies were organised. A few of these will be converted into societies for giving short term loans for the agriculturists. We propose to rectify, if there are any defects and organise if they are dormant.

Regarding the Regulated Marketes, we have organised a number of markets. Recently we have started a few more and it is the intention of the Government to start Regulated Markets wherever people come for it. In the first place, we need in these matters the co-operation of both the traders and the growers. In some places we come across difficulties but afterwards we find the people there welcoming it.

Hon'ble Sri Hutche Gowda suggested we should get 40 crores of rupees for cultivators. I wish we could find that much money to meet the needs of the cultivators. I think it was 23 crores. 40 crores was the original figure. According to the Second Five-Year Plan, we have been thinking of giving

(DR. R. NAGAN GOWDA.)

about four crores of rupees as long term loans. That is the proposal we have. But the need for a much greater amount being given through the Land Mortgage Bank is recognised by the Government. During the course of the five years, through the rapid way in which the Land Mortage Bank is distributing these loans and the large amount of business it is doing probably we will reach the target much before earlier than five years, for dealing business in large amounts greater organisation is required and also considerable amount of share capital.

A few remarks were made about the delay in Land Mortgage Banks. . . .

Sri G. A. THIMMAPPA GOWDA (Arkalgud).—What about securing one crore of rupees for short-term loans ?

Dr. R. NAGAN GOWDA.—I will come to it. Here I would like to take this opportunity to mention that within the last one year, the Land Mortgage Bank has been able to do good work. It has been able to so organise that the loans are disposed of much more quickly. Also it is to their credit that they have been able to reduce the rate of interest from 7½ per cent to six per cent, which is very considerable. I wish we could reduce it much further. I think Madras has now been giving loans at three per cent. I know that in ceded districts they reduced it to four per cent. But it was subsidised by the Madras Government by one per cent. Lower than that, I do not know if it has been given anywhere.

Sri Thimmappa Gowda wanted to know about our securing loan to the extent of one crore of rupees for giving loans for the next year as short-term loans. It may be possible to give later on. But right now, in the Second Five-Year Plan, we have a programme to give 70 lakhs this year. I wish we could make out a little more. We have given this year 38 lakhs. In the coming year after Ugadi onwards, we will be able to give 30 lakhs as short term credit and we are proposing to give 15 lakhs as medium credit loans. This is something new. It was not in existence up to now. We propose to give short-term loans and whatever share capital that is needed, we will be able to provide and enable the Apex Bank to take that loan.

ಶ್ರೀ ಎಂ. ಚಿಕ್ಕಲಿಂಗಯ್ಯ.—ಮಾನ್ಯ ಸದಸ್ಯರು ಕೆಲವರು ಇಲಾಖಾ ಮುಖ್ಯಾಧಿಕಾರಿಗಳನ್ನು ಸರ್ಕಾರದವರು recognise ಮಾಡಿದ್ದಾರೆಯೇ ಇಲ್ಲವೇ, ರಿಜಿಸ್ಟ್ರಾರ್ ಯಾರು, ಡೆಪ್ಯುಟಿ ರಿಜಿಸ್ಟ್ರಾರ್ ಯಾರು, ಜಾಯಿಂಟ್ ರಿಜಿಸ್ಟ್ರಾರ್ ಯಾರು, ಎಂದು ಕೇಳಿದರು. ಸಿವಿಲ್ ಲಿಸ್ಟ್ ನೋಡಿದರೆ 'vacant' ಎಂದು ಇದೆ. ಇದನ್ನು ಸ್ವಲ್ಪ ತಿಳಿಸಬೇಕು.

ಶ್ರೀ ಬಿ. ಹುಚ್ಚೇಗೌಡ.—ಯಾರಾದರೂ ಒಬ್ಬ ಖಾಸಗಿಯವರನ್ನು ನೇಮಿಸಲು ಯೋಚನೆ ಮಾಡುತ್ತಿದ್ದೀರಾ ?

Dr. R. NAGAN GOWDA.—Sir, the post of Registrar of Co-operative Societies has never been occupied by non-officials. It is always occupied, so far as I know, by members of the permanent service. The post of the Registrar has now been kept vacant and the Joint Registrar has been carrying on the work of the Registrar. He is in charge of the whole Department and he is doing the work.

Sri A. BHEEMAPPA NAIK.—If he has been doing the work for a considerable length of time, why do you not put him down permanently as the Head of the Department ?

Dr. R. NAGAN GOWDA.—That question of filling up the post of Registrar will be considered in due course. The opinion expressed by the Hon'ble Members here will be kept in mind and will be considered.

Then Sir, there was a very important point raised by Sri H. K. Veeranna Gowdha and that was to increase the individual borrowing power of the borrowers up to Rs. 1000. It is Rs. 500 now as it has been fixed. But in places where it is necessary to raise the limit, I think Government has no objection to consider if any recommendation comes from the societies in places were there are wet crops like paddy and sugarcane crops and other garden crops.

Sri A. BHEEMAPPA NAIK.—What about reducing the audit fees ? We have been asking you times without remember.

Dr. R. NAGAN GOWDA.—Since that system was introduced, audit of

societies has taken place all over the State and we have covered 95 per cent of the societies. Whatever has not been covered, it is only because books were not available as they were in law courts. As regards audit fees, I have to say that we have recently made some reduction—may be that it has not come to the notice of the Hon'ble Member. The representation made on the floor of this House has not gone in vain.

There is only one more point and that is about the Training Institute that many of the members mentioned.

12-30 P.M.

At one time it was decided that it should be in Bellary. For some reason we could not start it. But, in the meanwhile, it has become necessary that we should have not one, but two; one will be in Bellary and one in Bangalore. We will start them as quickly as possible.

Mr. CHAIRMAN.—The question is:

"That a sum not exceeding Rs. 19,25,410 be granted to the Government to defray the charges which will come in course of payment during the year ending 31st day of March 1957, in respect of 'Co-operation'."

The motion was adopted.

Mr. CHAIRMAN.—The House will now adjourn and meet tomorrow at Two O'clock.

The House adjourned at Thirty-two Minutes past Twelve of the Clock to meet at Two of the Clock on Sunday, 25th March 1956.

WD 2896—GPB—550—13-7-56.

MYSORE LEGISLATIVE ASSEMBLY

TWENTIETH DAY.

Sunday, 25th March 1956.

The House met in the Assembly Hall, Atara Kacheri, Bangalore, at Two of the Clock.

MR. SPEAKER (SRI H. S. RUDRAPPA, B.SC., LL.B.) in the Chair.

QUESTIONS AND ANSWERS.

Mr. SPEAKER.—Q. 72. Sri Kotra Basavana Goud.

Sri IJARI SIRASAPPA.—I may be permitted to put this question.

Mr. SPEAKER.—I have not received any authorisation letter.

Land Mortgage Bank (Loans to Raiyats, Chitaldrug).

Q.—167. Sri Mulka GOVINDA REDDY (Chitaldrug).—

Will the Government be pleased to state:—

(*a*) how many applications have been received from the raiyats in Chitaldrug District for land improvement loans for the last two years and what is the total amount asked for;

(*b*) how many applications have been sanctioned and how many are still pending;

(*c*) whether it has come to their notice that the present rate of interest charged by the Land Mortgage Bank is excessive and beyond the capacity of the raiyats?

A.—Sri A. G. RAMACHANDRA RAO (Minister for Law and Education).—

(*a*) Applications for the last two years 451.

Total amount asked: Rs. 2,76,750.

(*b*) Applications sanctioned: 318,

Applications pending: 26.

(*c*) No.

Sri Mulka GOVINDA REDDY.—May I know the rate of interest that is charged at present by the Land Mortgage Bank?

*Sri A. G. RAMACHANDRA RAO.—6½ per cent.

Sri Mulka GOVINDA REDDY.—May I know the rate of interest charged by the Land Mortgage Banks in other States?

Sri A. G. RAMACHANDRA RAO.—I will ascertain and let you know of it later.

Sri Mulka GOVINDA REDDY.—Are you aware that under the Housing Scheme the Government is charging only 5 per cent interest?

Sri A. G. RAMACHANDRA RAO.—Yes.

Sri Mulka GOVINDA REDDY.—Why is it that the Government are charging exorbitant rate of interest to the ryots while they are charging only 5 per cent to those who borrow money for construction of houses?

---

* Asterisk indicates that the remarks or speeches have not been revised by the Member concerned

Sri A. G. RAMACHANDRA RAO.—The Housing Scheme, as you know, is a Centrally sponsored scheme and of recent origin, whereas the scheme of the Land Mortgage Bank is old and amounts also are received from the Centre at a specified rate of interest. Therefore, there is the difference.

Sri Mulka GOVINDA REDDY.—At what rate of interest the Government have allocated funds to the Land Mortgage Banks?

Sri A. G. RAMACHANDRA RAO.—5 per cent.

Sri Mulka GOVINDA REDDY.—Why is the Land Mortgage Bank taking 1½ per cent more than what the Governmant have granted?

Sri A. G. RAMACHANDRA RAO.—To cover their working expenses.

Sri Mulka GOVINDA REDDY.—Are the Government aware that in China and other places, only two per cent interest is charged on these loans?

Sri A. G. RAMACHANDRA RAO.—I am not aware.

Sri Mulka GOVINDA REDDY.—Are the Government aware that the people who apply for loans from the Land Mortgage Bank incur additional expenses so much so the interest that they will have to pay will not be less than 12 per cent?

Sri A. G. RAMACHANDRA RAO.—It is only at the start that they incur some expenditure which is not of a recurring nature.

ಶ್ರೀ ಬಿ. ಹುಚ್ಚೇಗೌಡ.—ಮದರಾಸಿನಲ್ಲಿ ಶೇಕಡಾ ನಾಲ್ಕರ ಪ್ರಕಾರ ಬಡ್ಡಿ ಹಾಕಿ ಒಂದು ಪರ್ಸೆಂಟನ್ನು ಸರ್ಕಾರದವರೇ ಸಬ್‌ಸಿಡಿ ರೂಪವಾಗಿ ಕೊಡುತ್ತಿರುವ ಅಂಶ ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ಬಿ. ಹುಚ್ಚೇಗೌಡ.—ನಿನ್ನೆಯ ದಿವಸ ನಮ್ಮ ಸಹಕಾರ ಶಾಖಾ ಸಚಿವರು ಆ ರೀತಿ ಉತ್ತರದಲ್ಲಿ ಹೇಳಿದ್ದಾರಲ್ಲ?

Sri A. G. RAMACHANDRA RAO.—It would appear that in Ceded Districts, as a backward area, they have shown some special concessions, not throughout the State.

ಶ್ರೀ ಬಿ. ಹುಚ್ಚೇಗೌಡ.—ಸ್ವಾಮಿ, ಇಲ್ಲಿಯೂ ಸಹ ಅರ್ಧ ನಾಲ್ಕು ಪರ್ಸೆಂಟನ್ನಾದರೂ ಬಡ್ಡಿ ಹಾಕಲು ಇವರಿಗೆ ಏನು ಅಡ್ಡಿಯಿದೆ?

Sri A. G. RAMACHANDRA RAO.—The debenture rate itself is 4½ per cent. Therefore, it cannot be 4 percent.

ಶ್ರೀ ಬಿ. ಹುಚ್ಚೇಗೌಡ.—ನಾನು ಆ ಡಿಬೆಂಚರ್ ವಿಚಾರ ಕೇಳುತ್ತಿಲ್ಲ. ಈ ದಿವಸ ಆ ಬ್ಯಾಂಕಿನವರು ಶೇಕಡ ನಾಲ್ಕೂವರೆ ಪ್ರಕಾರ ಬಡ್ಡಿಗೆ ಹಣವನ್ನು ತೆಗೆದುಕೊಂಡು ಜನರಿಗೆ ಸಾಲ ಕೊಡುವಾಗ ಅವರು ಶೇಕಡ ಆರೂವರೆ ಹಾಕುತ್ತಿದ್ದಾರೆ. ಇದನ್ನು ಶೇಕಡ ನಾಲ್ಕರ ಪ್ರಕಾರ ಏಕೆ ಕೊಡುವುದಕ್ಕೆ ಆಗುವುದಿಲ್ಲ?

Sri A. G. RAMACHANDRA RAO.—I will get it examined.

Land Grants to Depressed Class Persons.

Q.—427. Sri M. CHIKKALINGIAH (Malavalli—Scheduled Castes).—

Will the Government be pleased to state:—

(*a*) the number of Depressed class persons granted lands from 1st January 1955 to 31st December 1955;

(*b*) the number of applications that are still pending and the duration of their pendency and the reasons for the delay;

(*c*) the number of cases when lands are granted at the enhanced rates of upset prices under Depressed Class Rules from Rs. 100 to 200 (Talukwar figures to be given)?

A.—Sri A. G. RAMACHANDRA RAO (Minister for Law and Education).—

(*a*) 6,504.

(*b*) 2,523.

451 applications pending for less than 3 months.

1,611 applications pending for more than 3 months.

338 applications pending for more than 6 months.

123 applications pending for more than 1 year.

(*c*) Question is not clear.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈ ಒಟ್ಟು ಬಂದಿರ ತಕ್ಕಂಥ ಅಪ್ಲಿಕೇಷನ್‌ಗಳೆಷ್ಟು ಎಂಬುದನ್ನು ತಿಳಿಸುವುದಕ್ಕಾಗುತ್ತದೆಯೇ?

*Sri A. G. RAMACHANDRA RAO.—I have to ascertain the figure and give it.

ಶ್ರೀ ಎಂ. ಚಿಕ್ಕಲಿಂಗಯ್ಯ.—ತಾವು ಕ್ವಾರ್ಟರ್ಲಿ ರಿವ್ಯೂ ಮಾಡುವಾಗ ಈ ಪೆಂಡಿಂಗ್ ಅರ್ಜಿಗಳ ವಿಲೇವಾರಿ ಬಗ್ಗೆ ಏನು ತಿಳುವಳಿಕೆ ಕೊಟ್ಟಿದ್ದೀರಿ?

Sri A. G. RAMACHANDRA RAO.—As could be seen, the pendency is not very heavy. For the first six months it comes to nearly 2,000 and for the next six months and over it comes to 4..0 out of a total of 2,500. So the pendency is not very heavy and we are trying our best to dispose it of early.

ಶ್ರೀ ಎಂ. ಚಿಕ್ಕಲಿಂಗಯ್ಯ.—ಬರಿ ಈ ಡಿಪ್ರೆಸ್ಡ್ ಕ್ಲಾಸಿನವರ ಅರ್ಜಿಗಳೇ ಇಷ್ಟು ಪೆಂಡಿಂಗ್‌ನಲ್ಲಿರುವಾಗ ಇನ್ನು ಬಾಕಿ ಜನರ ಅರ್ಜಿ ಎಷ್ಟೋ ಪೆಂಡಿಂಗ್ ಇರಬಹುದಲ್ಲವೇ?

Sri A. G. RAMACHANDRA RAO.—No, because it has got to be investigated and properly disposed of. It is not very heavy.

ಶ್ರೀ ಎಂ. ಚಿಕ್ಕಲಿಂಗಯ್ಯ.—ನಿಮ್ಮ ತರಗತಿಗಳವರಿಗೆ 100 ರೂಪಾಯಿಗಳಿಂದ 200 ರೂಪಾಯಿಗಳಿಗೆ ಬೆಲೆ ಹೆಚ್ಚಿಸಿ ಜಮೀನು ಮಾರಾಟ ಮಾಡಿದ ಸಂದರ್ಭಗಳೆಷ್ಟು?

Sri A. G. RAMACHANDRA RAO.—I will get that examined.

Backward Communities (Scholarships and appointments, after merger of Bellary).

Q.—240. Sri A. BHEEMAPPA NAIK (Molakalmuru).—

Will the Government be pleased to state:—

(*a*) the population of each community in the Mysore State before Bellary was merged into Mysore State;

(*b*) the present population of each community after the merger of Bellary into Mysore State;

(*c*) whether the present population of each community is taken into consideration in allocating scholarships to Backward communities;

(*d*) whether the present population of each community is taken into consideration in making appointments by the Public Service Commission?

A.—Sri H. M. CHANNABASAPPA (Minister for Industries).—

(*a*) Not available.
(*b*) Not available.
(*c*) No.
(*d*) No.

ಶ್ರೀ ಎ. ಭೀಮಪ್ಪನಾಯಕ್.—ಆಯಾಯಾ ಕೋಮುಗಳಿಗೆ ಸೇರಿದ ಕೋಮುವಾರು ಪ್ರಜಾಸಂಖ್ಯೆ ಎಷ್ಟು ಎಂದು ಕೇಳಿರುವುದಕ್ಕೆ ಉತ್ತರವಾಗಿ ದೊರೆಯುವಂತಿಲ್ಲ ಎಂದು ಹೇಳಿದ್ದೀರಿ. 1941ನೇ ಇಸವಿಯಲ್ಲಿ ಸೆನ್ಸಸ್ ಆದಾಗ ಅಲ್ಲಿ ಅವರು ಕೋಮುವಾರು ಆಧಾರದಮೇಲೆ ಲೆಕ್ಕ ತೆಗೆದು ಕೊಂಡಿರಲಲ್ಲವೇ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ತೆಗೆದುಕೊಂಡಿದ್ದಾರೆ.

ಶ್ರೀ ಎ ಭೀಮಪ್ಪನಾಯಕ್.—ಅದೇ ರೀತಿ ಮೈಸೂರು ಸಂಸ್ಥಾನದಲ್ಲೂ ಕೂಡ ಆ ಸೆನ್ಸಸ್ ತೆಗೆದುಕೊಂಡಿಲ್ಲವೇ?

Sri H. M. CHANNABASAPPA.—The information before me is that they are not available so far as Bellary is concerned. That is in regard to Census on communal basis.

ಶ್ರೀ ಎ. ಭೀಮಪ್ಪನಾಯಕ್.—ಹಾಗಾದರೆ ಈಗ ಸ್ಕಾಲರ್‌ಷಿಪ್ ಅವಾರ್ಡ್ ಮಾಡುವಾಗ ಮತ್ತು ಕೆಲಸಕ್ಕೆ ನೇಮಕಮಾಡುವಾಗ ಆಯಾಯಾ ಕೋಮಿನ ಪ್ರಾತಿನಿಧ್ಯದ ಪ್ರಮಾಣಕ್ಕನುಗುಣವಾಗಿ ಕೊಡುತ್ತೇವೆ ಎಂದು ಹೇಳುತ್ತೀರಲ್ಲಾ, ಅದು ಹೇಗೆ ಮಾಡುತ್ತೀರಾ?

Sri H. M. CHANNABASAPPA.—That is in proportion to the backwardness.

Sri A. BHEEMAPPA NAIK.—On the strength of each community. The Minister may be aware that scholarships are awarded on the population strength of each community.

Sri H. M. CHANNABASAPPA.—The question is, whether the present population of each community is taken into consideration in allotting scholarships to backward communities. For that the answer is given as 'No'.

Sri A. BHEEMAPPA NAIK.—I am telling you that backward class scholarships are awarded on the strength of each community.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದಕ್ಕೆ ಉತ್ತರ 'ಇಲ್ಲ' ಎಂದು ಹೇಳಿದೆ. The very name backward class scholarships suggests that it is given to backward classes.

ಶ್ರೀ ಎ. ಭೀಮಪ್ಪನಾಯಕ್.—ಆಯಾಯಾ ಕಮ್ಯೂನಿಟಿ population ಬೇಸಿಸ್ ಮೇಲೆ scholarship ಕೊಡುತ್ತಾ ಇಲ್ಲವೇ?

Mr. SPEAKER.—Among the backward communities-you put it like that.

Sri A. BHEEMAPPA NAIK.—There is no such thing as backward classes but there is what is called communities which are very backward.

Sri A. G. RAMACHANDRA RAO.—In regard to Bellary we have not got figures on communal basis. It is compiled like that. In Mysore, on a rough basis of communities, scholarships are determined and allocation is made. That is correct.

Sri H. M. CHANNABASAPPA.—Backward class may consist of other communities than backward communities. It need not consist of only one community. So to communities which are really backward, scholarships will be given. On the basis of community it is not given.

Sri A. BHEEMAPPA NAIK.—I request the Minister to verify. . . .

Sri A. G. RAMACHANDRA RAO.—Strength of the communities in the population and strength of the students also are taken into consideration and roughly scholarship is allocated so that there may be some justice.

Sri H. M. CHANNABASAPPA.—It may be some of the communities which are backward. . . .

A MEMBER.—Ministers differ. Nobody knows what the real situation is.

Sri Mulka GOVINDA REDDY.—What the Education Minister says is quite correct.

Sri A. BHEEMAPPA NAIK.—The Hon'ble Minister must know that all communities other than Brahmin community are considered as backward communities and scholarships are awarded to the backward communities on the population of students of each community. Even though a particular community is more in number in Bellary District, that is not taken into consideration and therefore will it not work as injustice to that community ?

Sri A. G. RAMACHANDRA RAO.—We have to take a decision on the point how far communal rules will have to be applied to Bellary and other areas.

Sri A. BHEEMAPPA NAIK.—So long as there is communal rotation in the allotment of scholarships, half-freeships and all that, are you not taking all communities into consideration in awarding the number of scholarships ?

Sri A. G. RAMACHANDRA RAO.—Difficulty is felt in regard to Bellary.

Sri A. BHEEMAPPA NAIK.—Will the Government consider the question of finding out the population strength and try to amend all these anomalies or will they take into consideration that district, and the population of that district with reference to the whole population of Mysore State and then reallot scholarships on that basis ?

Sri A. G. RAMACHANDRA RAO.—We will get it examined.

ಶ್ರೀ ಬಿ. ಹುಚ್ಚೇಗೌಡ.—ಬಳ್ಳಾರಿಯಲ್ಲಿ ಬ್ಯಾಕ್‌ವರ್ಡ್ ಕ್ಲಾಸ್‌ನವರಿಗೆ ಸ್ಕಾಲರ್‌ಷಿಪ್ ಕೊಡುತ್ತಾ ಇದ್ದೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೊಡುತ್ತ ಇದ್ದೇವೆ.

ಶ್ರೀ ಬಿ. ಹುಚ್ಚೇಗೌಡ.—ಹಿಂದೆ ಅಲಾಟ್ ಆಗಿರುವ ಮೊಬಲಗಿನಲ್ಲೇ ಕೊಡುತ್ತಾ ಇದ್ದೀರೋ ಅಥವಾ ಹೆಚ್ಚು ಹಣ ಏನಾದರೂ ಒದಗಿಸಿ ಕೊಡುತ್ತಾ ಇದ್ದೀರಾ?

ಹಣವನ್ನು ಕೊಡಿ ಎಂದು ಸಪ್ಲಿಮೆಂಟರಿ ಡಿಮ್ಯಾಂಡ್ ಕೇಳಿ ತೆಗೆದುಕೊಂಡಿದ್ದಾರೆ, ಮತ್ತು ಕೇಳಿದ್ದಾರೆ. 1954-55 ರಲ್ಲಿ 41·51 ಲಕ್ಷ ರೂಪಾಯಿ ಖರ್ಚು ಮಾಡಲಾಗಿದೆ. ಈಗ ಬಜೆಟ್ ಪ್ರಕಾರ 54·89 ಲಕ್ಷ ಖರ್ಚಾಗುತ್ತದೆಂದು ಇದರಲ್ಲಿ ತೋರಿಸಿದ್ದಾರೆ. ಆದರೆ, ಈ ಅರಣ್ಯ ಇಲಾಖೆ ಉತ್ಪತ್ತಿಯನ್ನು ಹೆಚ್ಚಿಸುವುದಕ್ಕೂ, ಕಣ್ಣಿಗೆ ಕಾಣುವ ನಷ್ಟವನ್ನು (waste) ಕಡಮೆ ಮಾಡುವುದಕ್ಕೂ ಯಾವುದೊಂದು ತೀವ್ರ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ; ಖರ್ಚು ಮಾತ್ರ ಹೆಚ್ಚುತ್ತಿದೆ. ಯಾವ ರೀತಿ ಖರ್ಚು ಗೊತ್ತಿದೆಯೆಂದರೆ, ಕಾಗದದಮೇಲೆ ಹಾಕಿಕೊಂಡಿರುವ ಕೆಲವು ಯೋಜನೆಗಳ ಮೇಲೆ ಖರ್ಚಾಗುತ್ತಿದೆ. ಮರಗಳೇ ಬೆಳೆಯದೇಯಿರುವ ಪ್ರದೇಶಗಳಲ್ಲಿ ಮರ ಬೆಳೆಸುತ್ತೇವೆ, ಗಾಳಿ ಮರ ಬೆಳೆಸುತ್ತೇವೆ ಎಂದು ಹೇಳುತ್ತಾರೆ. ಬೆಂಗಳೂರಿನ ಹತ್ತಿರ ನೋಡಿದರೆ ಕಾಣುತ್ತದೆ, ಆ ಮರದ ಹೆಸರು ನನಗೆ ಗೊತ್ತಿಲ್ಲ. ಇಂಥದಕ್ಕೆ ಹಣವನ್ನು ಖರ್ಚು ಮಾಡುತ್ತಿದ್ದಾರೆ. ಇದನ್ನು ನೋಡಿ ರೈತರು ನಗುತ್ತಾರೆ. ಮರ ನೆಡುವುದಕ್ಕೆ ಇಷ್ಟು ಖರ್ಚು ಮಾಡುತ್ತಿದ್ದಾರೆಂದು ಹೇಳಿದರೆ, ಹೊಟ್ಟೆ ಹುಣ್ಣಾಗುವಷ್ಟು ನಗುತ್ತಾರೆ. ಅಧಿಕಾರಿಗಳು ಮಾಡುವುದರಿಂದ ಅವರೇನು ಮಾಡುತ್ತಾರೆ? ಇಂಥ ಯೋಜನೆಗಳಿಂದ ಖರ್ಚು ಹೆಚ್ಚಾಗಿದೆ ಎನ್ನುವುದು ನಮಗೆ ಕಂಡು ಬಂದಿದೆ. ಮಲೆನಾಡಿನಲ್ಲಿ ಭದ್ರಾ ಜಲಾಶಯವನ್ನು ಈಗ ಕಟ್ಟುತ್ತಿದ್ದಾರೆ; ಅದರಲ್ಲಿ ಬಹಳ ಕಾಡು ಮುಳುಗಿ ಹೋಗುತ್ತಿದೆ, ತುಂಗಾಜಲಾಶಯದಲ್ಲಿ ಮುಳುಗಿಹೋಯಿತು. ಹಿರೇಭಾಸ್ಕರ್‌ನಲ್ಲಿ ಮುಳುಗಿ ಹೋಯಿತು. ಗಣನೀಯವಾದಷ್ಟು ವಿಸ್ತೀರ್ಣದ ಕಾಡು ಮುಳುಗಿಹೋಗುತ್ತಿದೆ. ಇಂಥ ಸಂದರ್ಭದಲ್ಲಿ ಸರ್ಕಾರದವರು ಅಲ್ಲಿರುವ ಟಿಂಬರ್ ಅನ್ನಾದರೂ ಕತ್ತರಿಸಿ ಉಪಯೋಗ ಮಾಡಿಕೊಳ್ಳೋಣ ಎಂದು ಒಂದು ಯೋಜನೆಯನ್ನು ಮಾಡಲಿಲ್ಲ. ಸಾಮಾನ್ಯವಾಗಿ ಟೆಂಡರ್ ಕರೆಯುತ್ತಾರೆ. ಅವರು ಮುಖ್ಯವಾದ ಮರಗಳನ್ನು ಕಡಿದು ಸಾಗಿಸುತ್ತಾರೆ. ಹಿರೇ ಭಾಸ್ಕರ್ ಜಲಾಶಯವನ್ನು ಕಟ್ಟಿ ಹತ್ತು ಹದಿನೈದು ವರ್ಷವಾಯಿತು, ಅದರಲ್ಲಿ ಮುಳುಗಿ ಹೋದ ಮರಗಳು ಕೊಳೆತು ಇನ್ನೂ ವಾಸನೆ ಬರುತ್ತಿದೆ. ಆ ಯೋಜನೆಗೆ ಸಂಬಂಧವಾದ ಏರ್ಪಾಡು ಹೀಗಿದೆ! ಇನ್ನು ಟಿಂಬರ್ ಯಾರ್ಡುಗಳ ವಿಚಾರ ನೋಡಿದರೆ, ತರೀಕೆರೆ ಶಿವಮೊಗ್ಗ ಯಾರ್ಡುಗಳನ್ನು ನೋಡಿದರೆ, ಕೆಲವು ತುಂಡುಗಳು ಅಲ್ಲೇ ಹತ್ತು ವರ್ಷದಿಂದ ಬಿದ್ದಿವೆ, ಯಾರೂ ಮುಟ್ಟಿಲ್ಲ. ಅಲ್ಲಿಗೆ ಯಾರೋ ಒಬ್ಬರು ಅಧಿಕಾರಿ ಬರುತ್ತಾರೆ, ಅದರ ವಿಷಯದಲ್ಲಿ ಇಲಾಖೆಯಲ್ಲಿ ಏನೋ ತಕರಾರಿರುತ್ತದೆ, ಅಲ್ಲಿಗೆ ಬೇರೆಯವರು ಬಂದರೆ ಅವರೂ ಹೀಗೆಯೇ ಮುಂದುವರಿಸಿಕೊಂಡು ಹೋಗುತ್ತಾರೆ. ಅದು ಗೆದ್ದಲು ಹಿಡಿದಿರುತ್ತದೆ, ಕೆಲವು ವರ್ಷಗಳಾದರೆ ಆ ಟಿಂಬರು ಯಾವುದಕ್ಕೂ ಉಪಯೋಗಕ್ಕೆ ಬರುವುದಿಲ್ಲ. ಮಲೆನಾಡಿನಲ್ಲಿ ಟಿಂಬರನ್ನು ಸೀಸನ್ ಮಾಡುವ ಅಥವಾ ಇದಕ್ಕೆ ಸಂಬಂಧಪಟ್ಟ ಯಾವ ಕೈಗಾರಿಕೆಯೂ ಇಲ್ಲ. ಆಧುನಿಕ ಪದ್ಧತಿಗಳನ್ನುಪಯೋಗಿಸಿ ನಾಟಾವನ್ನು ಸರಿಯಾದ ರೀತಿಯಲ್ಲಿಟ್ಟುಕೊಳ್ಳುವುದಕ್ಕೂ, ಉಪಯೋಗಿಸುವುದಕ್ಕೂ ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಕಾಡು ಹೆಚ್ಚಾಗಿರುವ ಮಲೆನಾಡು ಪ್ರದೇಶಗಳಲ್ಲಿ ನಾಟಾಗಳಿಗೆ ಸಂಬಂಧಪಟ್ಟ ಅನೇಕ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬಹುದು. ಮೊದಲನೆಯದಾಗಿ ನಾಟಾ ಕೆಡದೇಯಿರುವ ರೀತಿಯಲ್ಲಿ ಅದನ್ನು preserve ಮಾಡಲು ವ್ಯವಸ್ಥೆ ಮಾಡಬಹುದು.

ಒಬ್ಬ ಸದಸ್ಯರು.—ಭದ್ರಾವತಿಯಲ್ಲಿದೆ.

ಶ್ರೀ ಎಸ್. ಗೋಪಾಲಗೌಡ.—ಅಲ್ಲಿಗೆ ಬರುವ ಹೊತ್ತಿಗೆ ಒಣಗಿ ಕೆಟ್ಟುಹೋಗುತ್ತದೆ. ನಾಟಾ ಕಡಿಯುವುದಕ್ಕೂ ಅಲ್ಲಿಟ್ಟಿರುವುದಕ್ಕೂ ಪ್ರಮಾಣದಲ್ಲಿ ಬಹಳ ಕಡಮೆ, ಅದು ಸಾಲದು. ಎಷ್ಟು ಕಡಿಯುತ್ತೇವೆಯೋ ಅಷ್ಟು ಪ್ರಮಾಣದಲ್ಲಿಲ್ಲ. ನಾಟಾವನ್ನು ಬೇರೆ ಕಡೆ ಸಾಗಿಸುತ್ತೇವೆ. ಇದಕ್ಕೆ ಬದಲು ಇದಕ್ಕೆ ಸಂಬಂಧಪಟ್ಟ ಕೈಗಾರಿಕೆಯನ್ನು ಅಲ್ಲೇ ಸ್ಥಾಪನೆ ಮಾಡಿದರೆ ಹೆಚ್ಚು ಸಂಪಾದನೆ ಮಾಡಬಹುದು. ಈ ಹೊತ್ತು ಮೈಸೂರು ಸರ್ಕಾರ ಗೃಹನಿರ್ಮಾಣ ಯೋಜನೆಯನ್ನಿಟ್ಟು ಕೊಂಡಿದ್ದಾರೆ. ಇದಕ್ಕೆ ಸರಿಯಾದ ರೀತಿಯಲ್ಲಿ ಬಡಗಿಗಳನ್ನಿಟ್ಟುಕೊಂಡು ಕೆಲಸ ಮಾಡಿಸಿದರೆ, ಅಲ್ಲಾಗುವ waste ನಲ್ಲಿ ಲಕ್ಷಾಂತರ ಮನೆಗಳಿಗೆ ಆಗುವಷ್ಟು ಮರದ ಸಾಮಾನುಗಳನ್ನು ಅದರಿಂದ ಮಾಡಿಸಬಹುದು. ಬೆಲೆಯೂ ಕಡಮೆಯಾಗುತ್ತದೆ. ಇದರಿಂದ ಬಡವರಿಗೂ ಅನುಕೂಲವಾಗುತ್ತದೆ. ದೊಡ್ಡ ದೊಡ್ಡ ದಿಮ್ಮಿಗಳನ್ನು ಕಾಡಿನಿಂದ ಆನೆಗಳಿಂದ ಸಾಗಿಸುತ್ತೇವೆ, ಆದರೆ ಬಾಕಿ ಸಣ್ಣವನ್ನು ತರುವುದಿಲ್ಲ, ಅಲ್ಲೇ ಬಿಡುತ್ತೇವೆ. ಆ ಕಾಡಿನಲ್ಲಿ ಕಟ್ಟಿಗೆಯಾಗಿ ಕೂಡ ಇದನ್ನು ಉಪಯೋಗಿಸುವುದಿಲ್ಲ. ಇದನ್ನು ಸರ್ಕಾರದವರು ಯೋಚನೆ ಮಾಡಿ, ಸರಿಯಾದ ರೀತಿಯಲ್ಲಿ ನಾಟಾವನ್ನುಪಯೋಗಿಸಿಕೊಂಡು ಇದರಿಂದ ಬೇಕಾದಷ್ಟು ಫರ್ನಿಚರನ್ನೂ ಮನೆಗಳಿಗೆ ಬೇಕಾದ ಬಾಗಿಲು, ಕಿಟಿಕಿ ಮುಂತಾದ ಮರಮುಟ್ಟುಗಳನ್ನು ಮಾಡಿಕೊಳ್ಳಬಹುದು. ಅಲ್ಲದೆ ಇನ್ನೂ ಸರ್ಕಾರಕ್ಕೆ ಬೇಕಾದ ಮರದ ಸಾಮಾನುಗಳನ್ನೂ ಮಾಡಿಸಬಹುದು.

ಇನ್ನೊಂದು ವಿಷಯ, ಬಿದಿರಿಗೆ ಸಂಬಂಧಪಟ್ಟ ಹಾಗೆ, ಪ್ರತಿವರ್ಷವೂ ಬಿದಿರನ್ನು ಕಡಿದು ಅದರ ಬುಡವನ್ನು ಸುಡುತ್ತಾರೆ. ಇದನ್ನುಪಯೋಗಿಸಿಕೊಳ್ಳುವುದಕ್ಕೆ ಏನೂ ಏರ್ಪಾಡು ಮಾಡಿಲ್ಲ. ಭದ್ರಾವತಿಗೆ ಕೊಡುವುದನ್ನು ಬಿಟ್ಟರೆ ಬೇರೆ ಯಾವುದೂ ಇಲ್ಲ. ಇದನ್ನು ಸರ್ಕಾರ ಪರಿಶೀಲನೆ ಮಾಡಬೇಕು. ಕಾಡೇ ಇಲ್ಲದಿರುವ ತುಮಕೂರಿನಲ್ಲಿ ಫರ್ನಿಚರಿಗೆ ಸಂಬಂಧಪಟ್ಟ ಕೈಗಾರಿಕೆಯನ್ನು ಬಡ್ಡಾವಣೆ ಮಾಡಬೇಕೆಂದು ಹೇಳುತ್ತಾರೆ. ಈಗಿರುವುದನ್ನೇ ಸರಿಯಾಗಿ ನಡೆಸಿಕೊಂಡು ಹೋಗುತ್ತಿಲ್ಲ. ಅಂತೂ ತುಮಕೂರಿನಲ್ಲಿಟ್ಟಿದ್ದಾರೆ, ಯಾವ ಬಲವತ್ತರ ಕಾರಣದಿಂದ ಅಲ್ಲಿಟ್ಟಿದ್ದಾರೋ ಗೊತ್ತಿಲ್ಲ. ಈ ರೀತಿ ಕೆಲಸ ನಡೆಯುವುದರಿಂದ, ಕೇವಲ ತೋರಿಕೆಗಾಗಿ ಮಾಡುತ್ತಾರೆಂದು ಕಾಣುತ್ತದೆ. ಲ್ಯಾಬೊರೇಟರಿ ಇದೆಯೇ ಎಂದು ಕೇಳಿದರೆ ಇದೆ, ಸಂಶೋಧನೆ ನಡೆಸುತ್ತೀರಾ ಎಂದು ಕೇಳಿದರೆ, ನಡೆಸುತ್ತೇವೆ, ತಜ್ಞರು ಇದ್ದಾರೆಯೆ ಎಂದರೆ, ಇದ್ದಾರೆ ಎಂದು ಹೇಳಬಹುದು. ಎಲ್ಲವೂ ಬೆಂಗಳೂರಿನಲ್ಲಿದೆ, ಇಲಾಖೆಯಲ್ಲಿದೆ, ಸರ್ಕಾರಕ್ಕೆ ಸಂಬಂಧಪಟ್ಟ ಬೋರ್ಡುಗಳೂ ಇವೆ. ಗಾಂಧಿನಗರದಲ್ಲಿ ಕೂಡ ಒಂದು ಬೋರ್ಡನ್ನು ನೋಡಬಹುದು.

ಈ ರೀತಿ ಇಲಾಖೆಗಳಿವೆ. ಅವುಗಳನ್ನು ನಿಗಾವಣೆಯಲ್ಲಿಟ್ಟುಕೊಂಡು ಅವು ಯಾವ ಉದ್ದೇಶಕ್ಕಾಗಿ, ಯಾವ ಕೆಲಸಕ್ಕಾಗಿ ಸ್ಥಾಪನೆಯಾಗಿವೆಯೋ ಅದನ್ನು ಮಾಡುತ್ತಿದೆಯೇ, ನಿರ್ವಹಿಸುತ್ತಿದೆಯೇ ಎನ್ನುವುದನ್ನು ನೋಡಿಕೊ ಬೇಕು. ನಮಗೇನೋ ಬಹಳ ಆಸೆ ಇತ್ತು ಡಾಕ್ಟರ್ ನಾಗನಗೌಡರು ಮೈಸೂರಿಗೆ ಬಂದರೆಂದರೆ, ಅವರು ಕೃಷಿಯಲ್ಲಿ ಬಹಳ ತಜ್ಞರು, ಫಾರೆಸ್ಟ್ ವಿಷಯದಲ್ಲಿ ತಜ್ಞರು, ಸಹಕಾರದಲ್ಲಿ

ತಜ್ಞರು, ನಮಗೆ ಬಹಳ ಸಹಾಯವಾಗಿ ಇಲ್ಲಿರತಕ್ಕ ಕೆಲವು ನ್ಯೂನತೆಗ-ನ್ನು ಪರಿಹಾರ ಮಾಡುತ್ತಾರೆಂದು ತಿಳಿದುಕೊಂಡಿದ್ದೆವು.

Mr. SPEAKER.—Now he will take cent per cent interest because Bellary is added on to Mysore.

ಶ್ರೀ ಎಸ್. ಗೋಪಾಲಗೌಡ.—ಸಂಡೂರು ಫಾರೆಸ್ಟ್ ಬಳ್ಳಾರಿಯಲ್ಲಿದೆ. ಅದು ಬಹಳ ದೊಡ್ಡ ಕಾಡು. ಬಳ್ಳಾರಿಯ ಬಗ್ಗೆ ಸ್ವಲ್ಪ ಹೆಚ್ಚಿನ ನಿಗಾ ವಹಿಸುವುದು ಸ್ವಾಭಾವಿಕ.

ಆದುದರಿಂದ ನಮ್ಮ ದೃಷ್ಟಿಯಲ್ಲಿ, ನಮ್ಮ ಇಲಾಖೆಯ ಅಧಿಕಾರಿಗಳ ಮನೋಭಾವ ಶ್ರೀ ನಾಗನಗೌಡರಿಗೆ ಅರ್ಥವಾಗಿರಲಿಲ್ಲವೋ ಏನೋ. ಈಚೆಗೆ ತಿಳಿದುಬರುವುದರಲ್ಲಿ ಇವರೆಲ್ಲ ಸಲೀಸಾಗಿ ಕೆಲಸ ಮಾಡುತ್ತಾರೆಂದು ತಿಳಿದುಕೊಂಡಿದ್ದಾರಂತೆ. ಮದರಾಸಿನಲ್ಲಿ ಹೇಗೆ ನಡೆಯುತ್ತದೆಂದು ಕೇಳಿದ್ದೇನೆ. ಅಲ್ಲಿ ಯಾವ ಒತ್ತಾಯವೂ ಇಲ್ಲದೆ, ಬೇರೊಬ್ಬರ ಶಿಫಾರಸ್ಸಿಲ್ಲದೆ, ಯಾವ ಕಾಗದ ಎಲ್ಲಿಗೆ ಹೋಗಬೇಕೋ, ಎಷ್ಟು ದಿವಸಗಳಲ್ಲಿ ಹೋಗಬೇಕೋ ಮತ್ತು ಕೊನೆಗೆ ಅದಕ್ಕೆ ಏನು ಸಂಸ್ಕಾರವಾಗಬೇಕೋ ಅದೆಲ್ಲ ಆಗುತ್ತದೆಂದು ತಿಳಿದಿದ್ದೇನೆ. ಇಲ್ಲಿಯೂ ಹಾಗೆಯೇ ಕೆಲಸಗಳು ನಡೆಯುತ್ತವೆ ಎಂದು ಅವರು ತಿಳಿದುಕೊಂಡಿದ್ದರೆಂದು ಕಾಣುತ್ತದೆ. ಆ ರೀತಿ ಇಲ್ಲಿ ನಡೆಯುವುದಿಲ್ಲವೆಂದು ಅವರಿಗೆ ಈಗ ತಿಳಿದಿರಬಹುದು. ಮಂತ್ರಿಮಂಡಳವು ತನ್ನ ಕೊನೆಯ ದಿವಸಗಳಲ್ಲಿರುವಾಗ ಗೊತ್ತಾದರೆ ತಾನೆ ಅದರಿಂದ ಏನು ಪ್ರಯೋಜನವಾದೀತು ?

ಈ ವಿಷಯದಲ್ಲಿ ಸರ್ಕಾರದವರು ಫಾರೆಸ್ಟ್ ಸಂಬಂಧದಲ್ಲಿ ಸರಿಯಾದ ರೀತಿನೀತಿಗಳನ್ನನುಸರಿಸಿಲ್ಲ. ಮೊದಲನೆಯದಾಗಿ waste ತಡೆಗಟ್ಟತಕ್ಕದ್ದು ಮುಖ್ಯ, ಮತ್ತು afforestation scheme ಎಂದು ಹಾಕಿಕೊಂಡಿದ್ದಾರೆ. ಅದರಲ್ಲಿ ಹೊಸದಾಗಿ ಕಾಡನ್ನು ಬೆಳೆಸುವುದು ಎಂದರೆ ತೇಗ ಇತ್ಯಾದಿ ಮರಗಳನ್ನು ಬೆಳೆಸವುದು. ಆದರೆ ಸಾಮಾನ್ಯವಾಗಿ ಕಾಡನ್ನು ಈ ರೀತಿ ರಕ್ಷಣೆ ಮಾಡುತ್ತಿಲ್ಲ. ಸರ್ಕಾರದವರು ಇದಕ್ಕೆ ಹೆಚ್ಚಿನ ಗಮನ ಕೊಡಬೇಕು. ಬೆಂಗಳೂರಿನ ಸುತ್ತಮುತ್ತಲೂ ಕಾಡನ್ನು ಬೆಳೆಸುವುದಕ್ಕಿಂತ ದೊಡ್ಡದಾದ ಕಾಡು ಎಲ್ಲಿದೆಯೋ ಅಲ್ಲಿ ಅದನ್ನು ಸರಿಯಾದ ರೀತಿಯಲ್ಲಿ ರಕ್ಷಣೆ ಮಾಡುವುದಕ್ಕೆ, ಅಲ್ಲಿ ಕಾಡನ್ನು ಹೆಚ್ಚಿಗೆ ವಿಸ್ತರಿಸುವುದಕ್ಕೆ ಅವಕಾಶವಿರುವ ಕಡೆ ಮಾಡಬೇಕು.

ಮಲೆನಾಡಿನಲ್ಲಿ ಮನೆಗಳನ್ನು ಕಟ್ಟಬೇಕಾಗಿದ್ದರೆ ಫಾರೆಸ್ಟ್ ಇಲಾಖೆಯಿಂದ ಗುಂಡಿ ಲೈಸೆನ್ಸ್ ಕೊಡುತ್ತಿದ್ದರು. ಈಚೆಗೆ ಈ ಲೈಸೆನ್ಸನ್ನು ಎರಡು ಮೂರು ಕಡೆ ಪಡೆಯಬೇಕಾಗಿದೆ. ಮೊದಲು ಕೊಡುತ್ತಿದ್ದುದಕ್ಕಿಂತಲೂ ಕಡಿಮೆಮಾಡಿದ್ದಾರೆ. ಹಾಗೆ ಮಾಡಿರುವುದರಲ್ಲಿ ಇನ್ನೂ ಒಂದು ತೊಂದರೆ ಏನೆಂದರೆ, ಮರವನ್ನು ಕಡಿದರೆ ಅದನ್ನು ಸಾಗಿಸಿಕೊಂಡು ಬಂದು ಇಂಥಕಡೆಯೇ ಕುಯ್ಯಬೇಕು ಎಂದು ಆಜ್ಞೆ ಮಾಡುತ್ತಾರೆ. ಹಿಂದೆ ಕಾಡುಗಳಲ್ಲಿಯೇ ಗುಂಡಿಯನ್ನು ತೆಗೆದು ಮರವನ್ನು ಕುಯ್ಯುತ್ತಿದ್ದರು. ಇದನ್ನು ತಪ್ಪಿಸಿರುವುದರಿಂದ ರೈತರಿಗೆ ಬಹಳ ತೊಂದರೆಯಾಗಿದೆ. ಇದರಿಂದ ವ್ಯಾಪಾರವನ್ನು ಮಾಡಿಕೊಂಡಿರುವವನಿಗೆ ಮಾತ್ರ ಅನುಕೂಲವಾಗಿದೆ. ಅಲ್ಲಿಗೆ ಯಾರಾದರೂ ಆಫೀಸರು ಬರಲಿ ಅವರ ಹತ್ತಿರ ಒಂದು ರೀತಿಯ ವ್ಯವಸ್ಥೆಯನ್ನು ಮಾಡಿಕೊಂಡು ವ್ಯಾಪಾರಸ್ಥರು ತಮ್ಮ ವ್ಯಾಪಾರವನ್ನು ನಡೆಸಿಕೊಂಡು ಹೋಗುತ್ತಲೇ ಇರುತ್ತಾರೆ ಮತ್ತು ಇದು ಸಾರ್ವೋದ್ಧಾರವಾಗಿ ನಡೆದುಕೊಂಡು ಬರುತ್ತಿದೆ. ವ್ಯವಸ್ಥೆ ಅಂದರೆ ಇಷ್ಟಿಷ್ಟು ಮರಗಳನ್ನು ಕಡಿಯುತ್ತೇನೆ ಮುಂತಾಗಿ ಆಫೀಸರ ಸಮ್ಮುಖದಲ್ಲಿ ಗೊತ್ತುಮಾಡಿಕೊಂಡು ಅದೇ ಒಂದು ರೀತಿಯ ವ್ಯಾಪಾರ ಮಾಡಿಕೊಂಡು ಹೋಗುತ್ತಾನೆ. ಆದುದರಿಂದ ವ್ಯಾಪಾರಗಾರನಿಗೆ ಯಾವ ಕಷ್ಟವೂ ಆಗುವುದಿಲ್ಲ. ನಷ್ಟವೂ ಆಗುವುದಿಲ್ಲ. ಆದರೆ ರೈತನಾದವನು ಸಾಮಾನ್ಯವಾಗಿ ಒಂದು ತಲೆಮಾರಿನಲ್ಲಿ ಒಬ್ಬನು ಒಂದು ಮನೆಯನ್ನು ಕಟ್ಟಬಹುದು. ಪ್ರತಿವರ್ಷವೂ ಮನೆಕಟ್ಟುವುದಕ್ಕೆ ಯಾರೂ ಹೋಗುವುದಿಲ್ಲ. 50 ವರ್ಷ, 100 ವರ್ಷಗಳಿಗೆ ಒಂದು ಮನೆಯನ್ನು ಒಬ್ಬನು ಕಟ್ಟಬಹುದು. ಅಥವಾ 10, 15, ವರ್ಷಗಳಿಗೊಮ್ಮೆ ಮನೆಯನ್ನು ರಿಪೇರಿಮಾಡಬಹುದು. ರೈತನಾದವನು ತನಗೆ ಕೆಲವು ನಾಟಗಳು ಬೇಕು ಎಂದರೆ ಇವೊತ್ತು ಅದಕ್ಕೆ ಬಹಳ ಕಷ್ಟವಾಗಿದೆ. ಮೊದಲು ಹಕ್ಕಿನ ನಾಟ ಎಂದು ಇರುತ್ತಿತ್ತು. ಅವನ ಜಮೀನಿನ ಹತ್ತಿರ ಅಥವಾ ಮನೆಗಳ ಹತ್ತಿರವಿರತಕ್ಕ ಮರಗಳಮೇಲೆ ಅವನಿಗೆ ಹಕ್ಕಿತ್ತು. ಆದರೆ ಈಗ ಅರಣ್ಯ ಇಲಾಖೆಯವರು ಅದನ್ನು ಆಕ್ರಮಿಸಿಕೊಂಡಿದ್ದಾರೆ. ಸ್ವಂತಮನೆಗಳ ಸುತ್ತಮುತ್ತಲೂ ಇರುವ ನಾಟವನ್ನು ಕೂಡ ಅವನು ಕಡಿಯುವ ಹಾಗಿಲ್ಲ. ಅಲ್ಲದೆ ಐದು ಗಾಡಿಗೆ ಎಂದು ಲೈಸೆನ್ಸ್ ಕೊಟ್ಟಿರುವುದರಲ್ಲಿ ಒಂದು ಮರದ ತುಂಡು ಜಾಸ್ತಿಯಾಗಿದ್ದರೂ ಸಹ ಆರು ಗಾಡಿ ಮರವಿದೆ ಎಂದು ಅವನ ಮೇಲೆ ಕೇಸು ಹಾಕುತ್ತಾರೆ. ಆಗ ರೈತನು ತೀರ್ಥಹಳ್ಳಿಗೋ ಇಲ್ಲವೇ ಸಾಗರಕ್ಕೋ ಹೋಗಬೇಕಾಗುತ್ತದೆ. ಅಂಥ ಸಮಯಗಳಲ್ಲಿ ಇರುವ ಮರದ ತುಂಡನ್ನೂ ಬಿಟ್ಟು ಬಿಟ್ಟು ಸಾಲಮಾಡಿಯಾದರೂ ಹತ್ತು ಹದಿನೈದು ರೂಪಾಯಿಗಳನ್ನು ಕೊಟ್ಟು ಕೈಮುಗಿದು ವಾಪಸು ಬರುತ್ತಾನೆ. ಅವನು ಅನಂತರ ಮನೆಯನ್ನೂ ಕಟ್ಟುವುದಿಲ್ಲ, ಕೊಟ್ಟಿಗೆಯನ್ನೂ ಕಟ್ಟುವುದಿಲ್ಲ. ಇಂಥ ಕಷ್ಟ ಪರಿಸ್ಥಿತಿ ಇದೆ. ನಮ್ಮ ಕಡೆಯ ಜನ ಒಂದು ರೀತಿ ಮುಗ್ಧ ಸ್ವಭಾವದವರು, innocent people ಇದ್ದಹಾಗೆ. ಅವರಿಗೆ ಪ್ರತಿವರ್ಷವೂ ಕಾನೂನು ಬದಲಾವಣೆಯಾಗುತ್ತದೆಂಬುದು ಸಹ ಗೊತ್ತಿರುವುದಿಲ್ಲ, ಇಂಥ ಆರ್ಡರು ಬಂತು, ಇಂಥ ಆರ್ಡರು ಹೋಯಿತು ಎಂದು ಅವರಿಗೆ ಗೊತ್ತಿರುವುದಿಲ್ಲ. ಅವರು ಗೆಜೆಟ್ಟನ್ನು ನೋಡುವುದಿಲ್ಲ. ಅವರಿಗೆ ಪ್ರತಿದಿನವೂ ಆಗುತ್ತಿರುವ ಬದಲಾವಣೆಗಳು ತಿಳಿಯುವುದಿಲ್ಲ. ಅವರು ಸಾಮಾನ್ಯವಾದ ಒಂದು ರೀತಿಯ ಕಾಡು ಜೀವನವಿದ್ದ ಹಾಗೆ ನಡೆಸಿಕೊಂಡು ಹೋಗುತ್ತಾರೆ. Ignorant ಆಗಿ ಒಂದು ಸಣ್ಣ ತುಂಡನ್ನು ತಂದರೂ ಅವನಿಗೆ ಶಿಕ್ಷೆ ಮಾಡುತ್ತಾರೆ. ಕಾನೂನು ಪ್ರಕಾರ ಶಿಕ್ಷೆಮಾಡುತ್ತಾರೆಂದರೂ ಕೂಡ, ಪ್ರತಿಯೊಬ್ಬ ರೈತನಿಗೂ ಯಾವ ರೀತಿಯ ಅನಾನುಕೂಲವಾಗಿದೆ ಎಂದು ಪರಿಶೀಲನೆ ಮಾಡಬೇಕು. ಮಲೆನಾಡಿನ ಕಡೆ ಪ್ರವಾಸ ಹೋದ ಕಾಲದಲ್ಲಿ ರೈತರನ್ನು ಕರೆದು ಅವರ ಕಷ್ಟಸುಖಗಳನ್ನು ಅರಿತು ಇದನ್ನು ಪರಿಶೀಲನೆಮಾಡಬೇಕು. ಯಾರೋ ಕಂಟ್ರಾಕ್ಟರ್ ಬಂದು ಇಂಗ್ಲೀಷಿನಲ್ಲಿ ಮಾತನಾಡಿದರೆ, ಅದರಿಂದ ಏನೂ ಸಾರ್ಥಕವಾಗುವುದಿಲ್ಲ. ನಾಟದ ವ್ಯಾಪಾರಕ್ಕೆ ಅನುಕೂಲವಾಗುವಂಥ ಸಲಹೆಗಳನ್ನೇ ಅವನು ಕೊಡುತ್ತಾನೆ. ರೈತರು ಮರಗಳನ್ನು ಕಡಿಯುತ್ತಿದ್ದಾರೆ, restrict ಮಾಡಬೇಕು ಎಂದು ಹೇಳುತ್ತಾನೆ. ಆದುದರಿಂದ ಸರ್ಕಾರದವರು ರೈತರ ಕೆಲವು ಸಮಸ್ಯೆಗಳನ್ನು ಪರಿಹರಿಸುವುದಕ್ಕೆ ಏರ್ಪಾಡು ಮಾಡಬೇಕು ಎಂದು ನಾನು ಮೊದಲಿನಿಂದಲೂ

(ಶ್ರೀ ಎಸ್. ಗೋಪಾಲಗೌಡ).

ಹೇಳುತ್ತಿದ್ದೇನೆ. ಎರಡು ಮೂರು ಲೈಸೆನ್ಸ್‌ಗಳು ದೊರೆಯುತ್ತಿದ್ದುದು ಈಗ ಒಂದಕ್ಕೆ ಬಂದಿದೆ. ರೈತರಿಗೆ ಮಾಫಿ ಲೈಕೆನ್ಸ್ ಕೊಡುತ್ತಾರೆ. ಆದರೆ ಮನೆಯನ್ನು ಕಟ್ಟಿಕೊಳ್ಳಲು ಇನ್ನೂ ಹೆಚ್ಚಿನ ಸೌಕರ್ಯಗಳು ರೈತರಿಗೆ ದೊರೆಯುವಂತೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

Timber smuggling ಆಗುತ್ತಿರುವುದನ್ನು ಸರ್ಕಾರದವರು ತಡಗಟ್ಟುತ್ತೇವೆಂದು ಹೇಳಿದ್ದಾರೆ. ಆದರೆ ಅದನ್ನು ಪೂರ್ತಿಯಾಗಿ ತಡೆಯುವುದಕ್ಕೆ ಸಾಧ್ಯವಾಗಿಲ್ಲ. ಈ ರೀತಿ ಆಗುವುದಕ್ಕೆ ಇಲಾಖೆಯವರು ನಿಸ್ಪೃಹರಾಗಿ ಕೆಲಸ ಮಾಡದೆ ಇರುವುದು ಮೊದಲನೆಯ ಕಾರಣ. ಇದರಲ್ಲಿ ಎಲ್ಲರೂ ಕೆಟ್ಟವರೇ ಇದ್ದಾರೆಂದು ಹೇಳುವುದಕ್ಕಾಗುವುದಿಲ್ಲ. ಒಳ್ಳೆಯ ಅಧಿಕಾರಿಗಳೂ ಇದ್ದಾರೆ; ಬಹಳ ಕಷ್ಟದಿಂದ smuggling ಆಗುವುದನ್ನು ತಡೆಗಟ್ಟುತ್ತಾರೆ. ಕೆಲವು ಸಂದರ್ಭಗಳಲ್ಲಿ smuggle ಆಗುತ್ತಿರುವುದನ್ನು ಹಿಡಿಯಲು ಹೋದರೆ ಪ್ರಾಣಾಪಾಯ ಒದಗುವ ಸಂದರ್ಭಗಳೂ ಇರುತ್ತವೆ. Smuggle ಮಾಡುವವರು ಆ ಕೆಲಸದಲ್ಲಿ ಚೆನ್ನಾಗಿ ನುರಿತ ಕದೀಮರಾಗಿರುತ್ತಾರೆ. ಆದುದರಿಂದ ಅಧಿಕಾರಿಗಳು ಬಹಳ risk ತೆಗೆದುಕೊಂಡು ಕೆಲಸಮಾಡುತ್ತಿದ್ದಾರೆ. ಆದರೂ ಇದರಲ್ಲಿ fool-proof ಆಗಿ ಕೆಲಸ ಮಾಡುವ ದಕ್ಷತೆ ಇಲಾಖೆಗೆ ಬಂದಿಲ್ಲ. ಕಣ್ಣುಮುಚ್ಚಿಕೊಂಡು ನಾವು notice ಮಾಡುವುದಿಲ್ಲ ಎಂದು ಹೇಳಿದ ಹಾಗೆ ಕೆಲಸ ನಡೆಯುತ್ತಿದೆ. ಆನೆ ಹೋದರೂ ಹೋಗಲಿ, ಮರ ಬೇಕಾದರೂ ಹೋಗಲಿ, ಏನುಬೇಕಾದರೂ ಹೋಗಲಿ, ಎಲ್ಲಿಯಾದರೂ ಹೋಗಲಿ, ನಮ್ಮ ಗಮನಕ್ಕೆ ಬರಲಿಲ್ಲವೆಂದು ಹೇಳುತ್ತಾರೆ. ಗಾರ್ಡುಗಳು ಮೊದಲಾದವರು ಬಂದು ತಿಳಿಸಿದರೂ ಸಹ, ಎಲ್ಲಿಯಾದರೂ ಹಾಳಾಗಿ ಹೋಗಲಿ, ಅದನ್ನು ಹಿಡಿದು ಕೇಸು ಹಾಕುವ ತೊಂದರೆ ಯಾಕೆ, ಸುಮ್ಮನೆ ಇರು—ಇನ್ನು ಮುಂದೆ ಹೋಗದೆ ಇರುವ ಹಾಗೆ ನೋಡಿಕೊಳ್ಳೋಣವೆಂದು ಹೇಳುತ್ತಾರೆಂದು ತಿಳಿದಿದ್ದೇನೆ. ಈ ರೀತಿಯಾದರೆ smuggling ನಿಲ್ಲಿಸುವುದಕ್ಕೆ ಆಗುವುದಿಲ್ಲ. ಹಾಸನದಲ್ಲಿ smuggling ಆಗಿದೆ ಎಂದು ನಮಗೆ ತಿಳಿದಿದೆ. ಶಿವಮೊಗ್ಗ ಜಿಲ್ಲೆಯಲ್ಲಂತೂ ಸಾಮಾನ್ಯವಾಗಿ ನಡೆಯುತ್ತದೆ. ಹತ್ತಕ್ಕೆ ಲೈಸನ್ಸ್ ಇದ್ದರೆ ಅದರ ಜೊತೆಯಲ್ಲಿ ಇನ್ನೂ ಹೆಚ್ಚಾಗಿ ಹೋಗುತ್ತವೆ. ಈ ರೀತಿ ಆಗಬಾರದು.

3 P.M.

ಮತ್ತು ಇಲಾಖೆಗಳಲ್ಲಿ ಲಾರಿ ಸರ್ವಿಸಸ್ ಇವೆ, ಆನೆಗಳಿವೆ, ಬೇಕಾದಷ್ಟು ಸಿಬ್ಬಂದಿಯಿದೆ. ಅವನ್ನೆಲ್ಲಾ ಉಪಯೋಗಿಸಿಕೊಂಡು ವನಸಂಪತ್ತನ್ನು ಹೆಚ್ಚಿಸುವುದು, ಮಲೆನಾಡಿನಲ್ಲಿ ಗಿಡ ಕಡಿಯುವುದನ್ನು ತಡೆಗಟ್ಟುವುದು, ಕಡಿದಿರುವ ಭಾಗದಲ್ಲಿ ಪುನಃ ಸಸಿಗಳನ್ನು ನೆಟ್ಟು ಗಿಡ ಬೆಳೆಸುವುದು ಮುಂತಾದ ಕಾರ್ಯವನ್ನು ಕೈಕೊಂಡು ಅದನ್ನು ಮುಂದುವರಿಸಬೇಕೆಂದು ಸರ್ಕಾರಕ್ಕೆ ತಿಳಿಸುತ್ತೇನೆ.

ಮುಖ್ಯವಾಗಿ ಲೈಸೆನ್ಸ್ ಬಗ್ಗೆ ಸರ್ಕಾರದವರು ಸ್ವಲ್ಪ ಗಮನ ಕೊಡಬೇಕು. ಮಲೆನಾಡಿನಲ್ಲಿ ಈ ಲೈಸೆನ್ಸ್ ಬಗ್ಗೆ ಸರ್ಕಾರಕ್ಕೆ ಈಗಾಗಲೇ ಏನು ದೂರು ಬಂದಿದೆಯೋ ಅದನ್ನು ಪರಿಶೀಲಿಸಿ ನಿಮ್ಮ ಇಲಾಖೆ ರೈತರಿಗೆ ತೊಂದರೆ ಕೊಡುತ್ತಿರುವುದನ್ನು ತಪ್ಪಿಸಬೇಕು. ರೈತರನ್ನು ಕಳ್ಳರೆಂಬ ದೃಷ್ಟಿಯಿಂದ ನೋಡುವುದು ಬೇಡ, ಅವರ ಮನೆಗಳಿಗೆ ಸಾಕಾಗುವಷ್ಟು ನಾಟಾ ನೀವೇ ಕೊಡಿಸಿ ಕೊಡಿ, ಪರವಾಗಿಲ್ಲ. ಕಳ್ಳ ಎಂದು ರೈತರನ್ನು ದೂರುವುದಕ್ಕಿಂತ ರೈತರಿಗೆ ಬೇಕಾದ ನಾಟಾ ಕೊಡುವ ಕೆಲಸವನ್ನು ನೀವೆ ತೆಗೆದುಕೊಂಡು ಬೇಕಾದಷ್ಟು ಕೊಡಲು ಇಲಾಖೆಯವರೇ ಬೇಕಾದರೆ ಏರ್ಪಾಡು ಮಾಡಬಹುದು. ನಿಜವಾಗಿಯೂ ರೈತರಿಗೆ ಮನೆ ಕಟ್ಟಲು ನಾಟಾ ಕೇಳಿದರೆ ಅದನ್ನೊದಗಿಸಲು ಹೆಚ್ಚಿನ ಅನುಕೂಲ ಮಾಡಬೇಕು. ನೇಗಿಲಗೆ ಬೇಕಾದ ಮರ ಕಡಿಯುವುದು ಕೂಡ ಕಷ್ಟವಾಗಿದೆ. ವರ್ಷಕ್ಕೆ ಎರಡು ನೇಗಿಲು ಬೇಕು. ಅದಕ್ಕೆ ಬೇಕಾದ ಮರ ತೆಗೆದುಕೊಂಡರೆ, ನಾಟಾ ತೆಗೆದುಕೊಂಡರೆ ಅದರಮೇಲೆ ಕೇಸು ಹಾಕುವುದನ್ನು ನಿಲ್ಲಿಸಬೇಕು. ಇಷ್ಟು ಹೇಳಿ ಈ ಡಿಮ್ಯಾಂಡನ್ನು ವಿರೋಧಿಸುತ್ತೇನೆ.

*ಶ್ರೀ ಎಚ್. ಹುಚ್ಚಮಾಸ್ತಿಗೌಡ (ಹುಲಿಯೂರು ದುರ್ಗ).—ಸ್ವಾಮಿ, ಶ್ರೀ ಗೋಪಾಲಗೌಡರ ಹಾಗೆ ನಾನು ದಟ್ಟವಾದ ಅರಣ್ಯದಲ್ಲಿ ವಾಸ ಮಾಡದಿದ್ದರೂ ಹೊರಗೆ ಬರುವುದಕ್ಕೆ ದಾರಿ ಸಿಕ್ಕುವುದೇ ಕಷ್ಟವಾಗಿದೆ. ಅವರು ದಟ್ಟವಾದ ಕಾಡಿನಲ್ಲಿದ್ದರೂ ಬಯಲು ಸೀಮೆಯವರ ಕಷ್ಟ ತಿಳಿಸಿದ್ದಾರೆ. ನಾನು ಬೈಲು ಸೀಮೆಯಲ್ಲಿ ನೋಡಿದ ಹಾಗೆ ಮೈದಾನದ ಡಿಸ್ಟ್ರಿಕ್ಟಿನಲ್ಲಿ ಫಾರೆಸ್ಟಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೋ ಇಲ್ಲವೋ ಎಂದು ಅನುಮಾನವಾಗಿದೆ. ಇಲಾಖೆಯವರು, ಸಂಬಂಧಪಟ್ಟ ಮಂತ್ರಿಯವರು ಮೈದಾನ ಡಿಸ್ಟ್ರಿಕ್ಟುಗಳಲ್ಲಿರುವ ಫಾರೆಸ್ಟುಗಳನ್ನು ಯಾವಾಗಲಾದರೂ ನೋಡಿದ್ದಾರೆಯೆ, ಇಲ್ಲಿ ಫಾರೆಸ್ಟಿದೆಯೆಂಬುದು ಅವರ ಲೆಕ್ಕದಲ್ಲಿದೆಯೆ ಎಂಬ ಅನುಮಾನಕ್ಕೆ ಆಸ್ಪದವಾಗಿದೆ. ಹೋದ ವರ್ಷ ನಾನು ಈಗಾಗಲೇ ಕೆಲವರು ಹೇಳಿದ ಹಾಗೆ ಅರಣ್ಯ ರೋದನ ಮಾಡಿದ್ದೆ. ಕುಣಿಗಲು ತಾಲ್ಲೂಕಿನಲ್ಲಿ ಸುಮಾರು 23 ಸಾವಿರ ಎಕರೆ ಅರಣ್ಯ ಪ್ರದೇಶವಿದೆ. ಅದರಿಂದ ವರ್ಷಕ್ಕೆ 11 ಸಾವಿರ ರೂಪಾಯಿಗಳ ಖರ್ಚು, ಮೂರು ಸಾವಿರ ರೂಪಾಯಿಗಳ ಉತ್ಪತ್ತಿ ಇದೆ. ಇದು ಸರ್ಕಾರದವರೇ ಕೊಟ್ಟಿರುವ ಉತ್ತರ. ನಾನು ನೋಡಿರುವ ಇಪ್ಪಾಡಿ ಫಾರೆಸ್ಟ್ ಎಂಬುದೊಂದಿದೆ. ಅದರಲ್ಲಿ ಈ 23 ಸಾವಿರ ಎಕರೆಯಲ್ಲಿ ನಾಲ್ಕು ಸಾವಿರ ಎಕರೆ ಪ್ರದೇಶವೇನು ಇದೆಯೋ ಅದರಲ್ಲಿ ಎರಡು ಆಲದ ಮರ ಮಾತ್ರವಿದೆ; ಇದು ನಂಬಿದರೆ ನಂಬಿ, ಬಿಟ್ಟರೆ ಬಿಡಿ ಎಂದು ಹೇಳುವ ಹಾಗಿದೆ. ನಾಲ್ಕು ಸಾವಿರ ಎಕರೆ ಪ್ರದೇಶದಲ್ಲಿ ಎರಡು ಆಲದ ಮರ ಇದೆಯೆಂದರೆ ಆಶ್ಚರ್ಯವಾಗುತ್ತದೆ. ಊರು ಪಕ್ಕದಲ್ಲಿ ರೈತರು ವ್ಯವಸಾಯ ಮಾಡುವ ಜಮೀನಿನಲ್ಲೇ ಒಂದು ಎಕರೆಗೆ 10-12 ಮರಗಳಾದರೂ ಇರುತ್ತವೆ. ಹಾಗಿರುವಾಗ ಸರ್ಕಾರದವರು ಸಾವಿರಾರು ರೂಪಾಯಿ ಖರ್ಚು ಮಾಡುವಾಗ ಎಕರೆಗೊಂದು ಮರ ಸಹ ಇಲ್ಲ, ನಾಲ್ಕು ಎಕರೆಗಳಲ್ಲಿ ಎರಡು ಮರ ಮಾತ್ರ ಹಾಕಿದ್ದಾರೆ ಎಂದು ಹೇಳುವುದು ಬಹಳ ಆಶ್ಚರ್ಯಕರ.

ಇನ್ನೊಂದು ಕಡೆ ಫೈರ್‌ವುಡ್ ಬೆಳೆಸುವ ಯೋಜನೆಯಿದೆ. ಅಲ್ಲಿ ದಟ್ಟವಾಗಿ ಬೆಳೆದಿರುವ ಲಾಂಟಾನ ಮಾತ್ರವಿದೆ, ಅದರಿಂದ ಮೂರು ಸಾವಿರ ರೂಪಾಯಿಗಳ ಉತ್ಪತ್ತಿ ಬರುತ್ತದೆ. ಲಾಂಟಾನವೇ ಅಲ್ಲಿ ಬೆಳೆಸಿರುವ ಸೌದೆ, ಫೈರ್‌ವುಡ್ ಬೇರೆ ಇಲ್ಲ. ಹೋದ ವರ್ಷವೇ ಈ ವಿಚಾರ ಹೇಳಿದೆ. ಸಂಬಂಧಪಟ್ಟ ಮಂತ್ರಿಗಳಾಗಲಿ, ಚೀಫ್ ಕನ್ಸರ್ವೇಟರಾಗಲಿ ಅಥವಾ ಉಳಿದ ಆಫೀಸರುಗಳಾಗಲಿ ಯಾರೂ ಅಲ್ಲಿಗೆ ಬರಲಿಲ್ಲ. ಒಂದು ಎಕರೆಗೂ ಮರ ನೆಡಸುವ ಯೋಜನೆ ಮಾಡಲಿಲ್ಲ.

ಶ್ರೀ ಗೋಪಾಲಗೌಡರು ಮನೆ ಕಟ್ಟುವುದಕ್ಕೆ ನಾಟಾ ಸಿಕ್ಕುವುದಕ್ಕೆ ಬಹಳ ತೊಂದರೆಯಾಗಿದೆಯೆಂದು ಹೇಳಿದರು, ಅದು ನಿಜ, ಬೈಲು ಸೀಮೆಯಲ್ಲಿ ಗಾಡಿ ಮಾಡುವುದಕ್ಕೆ ಮರ ಕೊಡಿ ಎಂದು ಕೇಳಿದರೆ ಅದಕ್ಕೆ ಅರಣ್ಯ ಇಲಾಖೆ ಏನೂ ವ್ಯವಸ್ಥೆ ಮಾಡುತ್ತಿಲ್ಲ. ವ್ಯವಸಾಯಗಾರರಿರುವ ಈ ದೇಶದಲ್ಲಿ ಗಾಡಿಗೆ ಆವಶ್ಯಕವಾಗಿರುವ ಮರ ಬೇಕೆಂದರೆ ಅದನ್ನು ಒದಗಿಸದಿದ್ದರೆ ವ್ಯವಸಾಯ ಮುಂದುವರಿಯುವುದು ಹೇಗೆ? ಸರ್ಕಾರದವರು ರೈತರಿಗೆ ಸಹಾಯ ಮಾಡುತ್ತಾರೆಂಬುದನ್ನು ತಿಳಿಯುವುದು ಹೇಗೆ? ಇದನ್ನು ಸ್ವಲ್ಪ ಯೋಚನೆ ಮಾಡಬೇಕು.

ವನಮಹೋತ್ಸವವೆಂದು ಘಾಡಿ ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿ ಲಕ್ಷಾಂತರ ಗಿಡ ಹಾಕಿದ್ದೇವೆಂದು ಪ್ರೆಸ್ ನೋಟ್ ಹೊರಡಿಸಿ ಅದರಲ್ಲಿ ಎಷ್ಟೋ ಲಕ್ಷ ಗಿಡ ಹಾಕಿದ್ದೇವೆಂದು ತಿಳಿಸುತ್ತಾರೆ. ಏಳೆಂಟು ವರ್ಷಗಳಿಂದ ಆ ಗಿಡಗಳೇನು ಹಾಕಿದ್ದರೋ ಅವೆಲ್ಲಾ ಬೆಳೆದಿದ್ದರೆ ಮೈಸೂರು ದೇಶವೇ ಒಂದು ದೊಡ್ಡ ಕಾಡಾಗಿ ಕಾಣುತ್ತಿತ್ತೋ ಏನೋ. ಲಕ್ಷಾಂತರ ಗಿಡ ಹಾಕಿರುವಕಡೆ ನೂರಾರು ಗಿಡ ಕೂಡ ಕಣ್ಣಿಗೆ ಬೀಳುವುದಿಲ್ಲ. ವ್ಯರ್ಥವಾಗಿ ಇದಕ್ಕೆ ಹಣ ಖರ್ಚಾಯಿತಲ್ಲಾ ಎಂದು ಚಿಂತೆಯಾಗಿದೆ.

ಇನ್ನು ಬೆಂಗಳೂರು-ಮೈಸೂರು ರಸ್ತೆಯಲ್ಲಿ ತೆಂಗಿನ ಗಿಡ ನಡುವ ಯೋಜನೆಯಿದೆ. ಇದು ವನಮಹೋತ್ಸವಕ್ಕೆ ಸೇರಿದೆಯೋ ಅಥವಾ ಫಾರೆಸ್ಟ್ ಇಲಾಖೆಗೆ ಸೇರಿದೆಯೋ ಗೊತ್ತಿಲ್ಲ. ಆರು ರೂಪಾಯಿಗಳನ್ನು ಕೊಟ್ಟು ಒಂದು ಗೂಡು ಕಟ್ಟಿ ನೀರಿಲ್ಲದಿರುವ ಕಡೆ ತೆಂಗಿನ ಗಿಡ ಹಾಕುವ ಪ್ರಯತ್ನವಿದೆ. ತೆಂಗಿನ ತೋಟ ಬೆಳೆಯುವ ಕಷ್ಟ ಸರ್ಕಾರಕ್ಕೆ ಗೊತ್ತಿದ್ದರೆ ಅಲ್ಲಿ ತೆಂಗಿನ ಗಿಡ ಹಾಕುವುದಕ್ಕೆ ಸರ್ಕಾರ ಕೈಹಾಕುತ್ತಿರಲಿಲ್ಲ. ಸಾಮಾನ್ಯವಾಗಿ ರಸ್ತೆ ಪಕ್ಕದಲ್ಲಿ ನೆರಳಿಗಾಗಿ ಮರ ನೆಡುವುದು ಪೂರ್ವದಿಂದ ಬಂದಿರುವ ಪದ್ಧತಿ. ಈ ತೆಂಗಿನ ಗಿಡದಿಂದ ನೆರಳೂ ಇಲ್ಲ, ಆ ಗಿಡ ಬೆಳೆಯುವುದೂ ಇಲ್ಲ; ಇಂಥ ಕಡೆ ತೆಂಗಿನ ಗಿಡ ಹಾಕುವ ವ್ಯವಸ್ಥೆ ವನಮಹೋತ್ಸವಕ್ಕೆ ಸಂಬಂಧಪಟ್ಟಿದೆಯೆ ಅಥವಾ ಫಾರೆಸ್ಟ್ ಇಲಾಖೆ ಅಫಾರೆಸ್ಟೇಷನ್ನಿಗೆ ಸಂಬಂಧಪಟ್ಟಿದೆಯೆ ಅಥವಾ ಬೇರೆ ಯಾವುದಾದರೂ ಯೋಜನೆಗೆ ಸಂಬಂಧಪಟ್ಟಿದೆಯೆ ಎಂಬುದನ್ನು ಮಂತ್ರಿಗಳು ಹೇಳಬೇಕು.

ಇನ್ನು ಫಾರೆಸ್ಟ್ ಇಲಾಖೆಯಲ್ಲಿ ಪ್ರಿಸರ್ವೇಷನ್ ಆಫ್ ವೈಲ್ಡ್ ಲೈಫ್ ಎಂಬ ಬಾಬಿಗೆ ಎರಡು ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಆದರೆ ಅದರ ತಪಶೀಲನ್ನು ನೋಡಿದರೆ 'construction of a hotel, telephone connection, electrical equipment' ಎಂಬುದೆಲ್ಲಾ ಅದರಲ್ಲಿ ಅಡಕವಾಗಿದೆ, ಇದು ಪ್ರಿಸರ್ವೇಷನ್ ಆಫ್ ವೈಲ್ಡ್ ಲೈಫ್, ವನವಿಹಾರಕ್ಕೆ ಹೋಗುವವರ ಸೌಕರ್ಯಕ್ಕಾಗಿ ಹೋಟಲನ್ನು ಕಟ್ಟಿಸುವುದನ್ನು ವೈಲ್ಡ್ ಲೈಫ್ ಪ್ರಿಸರ್ವೇಷನಿಗೆ ಎಂದು ಅರ್ಥಮಾಡಿಕೊಳ್ಳಬೇಕೆ? ಈಗ ಸಾಮಾನ್ಯವಾಗಿ ಕೆ. ಆರ್. ಎಸ್.ನಲ್ಲಿ ಒಂದು ದೊಡ್ಡ ಹೋಟಲನ್ನು ವಿಹಾರಕ್ಕಾಗಿ ಬರುವವರಿಗಾಗಿ ಕಟ್ಟಿದ್ದಾರೆ. ಅದರ ಖರ್ಚನ್ನು ತಡಕೊಂಡರೆ ಸಾಕಾಗಿದೆ, ಹಾಗಿರುವಾಗ ಬಂಡೀಪುರ ಫಾರೆಸ್ಟಿನಲ್ಲಿ ಹೋಟಲನ್ನು ಕಟ್ಟಿ ಟೆಲಿಫೋನ್ ಕನೆಕ್ಷನ್, ಎಲೆಕ್ಟ್ರಿಕಲ್ ಎಕ್ವಿಪ್‌ಮೆಂಟ್ ಇವನ್ನೆಲ್ಲಾ ಒದಗಿಸಿ ಎರಡು ಲಕ್ಷ ರೂಪಾಯಿಗಳ ನಷ್ಟ ಮಾಡುವುದೇಕೋ ಗೊತ್ತಿಲ್ಲ. ಅದೇ ಮುಖ್ಯ ಮಂತ್ರಿಗಳು ಅಸ್ತಿಭಾರ ಶಿಲೆ ಹಾಕಿದ ಸ್ಕೂಲಿನಲ್ಲಿ ಮೂರು ಅಡಿ ಗೋಡೆ ಕೂಡ ಎದ್ದಿಲ್ಲ. ಉದಾಹರಣೆಗೆ ತಿಪಟೂರು ತಾಲ್ಲೂಕು ಅಲ್ಬೂರಿನಲ್ಲಿ ಮಿಡ್ಲ್ ಸ್ಕೂಲು ಕಟ್ಟಡಕ್ಕೆ ಫೌಂಡೇಷನ್ ಸ್ಟೋನ್ ಹಾಕಿ ಮೂರು ವರ್ಷಗಳಾದವು. ಆ ಕಟ್ಟಡ ಇನ್ನೂ ಆಗಿಲ್ಲ. ಹಾಗಿರುವಾಗ ಬಂಡೀಪುರದಲ್ಲಿ ಎರಡು ಲಕ್ಷ ರೂಪಾಯಿಗಳ ಕಟ್ಟಡವೇಕೆ? ಕೆ. ಆರ್. ಎಸ್. ನಲ್ಲಿರುವ ಹಾಗೆ ವನವಿಹಾರಕ್ಕಾಗಿ ಕಟ್ಟಿಸುವುದಾದರೆ ಅದಕ್ಕಿಂತ ಅಕ್ಷಮ್ಯವಾದ ಅಪರಾಧ ಇನ್ನೊಂದಿಲ್ಲವೆಂಬ ಭಾವನೆಯಿದೆ. ಸ್ವಾಮಿ, ರೈತರುಗಳಿಂದ ಬರತಕ್ಕಂಥ ದುಡ್ಡನ್ನು ಖರ್ಚುಮಾಡುವಾಗ ಅದನ್ನು ಒಂದು ಸುವ್ಯವಸ್ಥಿತವಾದ ರೀತಿಯಲ್ಲಿ ಖರ್ಚು ಮಾಡಬೇಕಾದದ್ದೂ ನ್ಯಾಯ. ಹಾಗೆ ಅದನ್ನು ಖರ್ಚು ಮಾಡುವಾಗ ಮೊಟ್ಟಮೊದಲು ಆ ಹಣವನ್ನು ಯಾವ ಬಾಬಿಗೆ ಖರ್ಚುಮಾಡಬೇಕು ಎಂಬುದನ್ನು ಆಲೋಚನೆ ಮಾಡದೆ ಈ ದಿವಸ preservation of wild life ಎಂಬ ಹೆಸರಿಟ್ಟು ಕಾಡಿನಲ್ಲಿ ಹೋಟಲು, ಟೆಲಿಫೋನ್ ಕನೆಕ್ಷನ್ ಮತ್ತು ಎಲೆಕ್ಟ್ರಿಕಲ್ ಎಕ್ವಿಪ್‌ಮೆಂಟ್ ಇತ್ಯಾದಿಗಳನ್ನು ಒದಗಿಸತಕ್ಕ ಬಗ್ಗೆ ಎರಡು ಲಕ್ಷ ರೂಪಾಯಿಗಳನ್ನು ಒದಗಿಸಿರುವುದನ್ನು ನೋಡಿದರೆ ಈ ನಮ್ಮ ಸರ್ಕಾರ ಯಾವ ನೀತಿಯನ್ನು ತೋರಿಸುತ್ತದೆ ಮತ್ತು ಅನುಸರಿಸುತ್ತಿದೆ ಎನ್ನುವುದರ ಜೊತೆಗೆ ಇದು ಯಾವ ದಾರಿಯಲ್ಲಿ ಹೋಗುತ್ತಿದೆ ಎಂಬುದೂ ಗೊತ್ತಾಗುತ್ತದೆ. ಸರ್ಕಾರದವರು ಈಗಲೂ ಕೂಡ ಮನಸ್ಸು ಮಾಡಿ ಈ ಕಾಡನ್ನು ಅಭಿವೃದ್ಧಿಗೊಳಿಸುವುದಕ್ಕೇ ಈ ಮೊಬಲಗನ್ನು ಖರ್ಚುಮಾಡಬೇಕೆಂದು ಹೇಳುತ್ತೇನೆ. ಇದಕ್ಕೆಲ್ಲಾ ಸರ್ಕಾರ ಒಂದು ಸರಿಯಾದ ಕಾರ್ಯಕ್ರಮ ಹಾಕಿಕೊಳ್ಳಬೇಕು. ಈ ಹಿಂದೆ ನಾನು ಆ ಬಂಡೀಪುರದ ಕಾಡಿಗೆ ಹೋಗಿ ಅದನ್ನು ನೋಡತಕ್ಕಂಥ ಸುಯೋಗ ನನಗೆ ಒಂದೆರಡು ಸಾರಿ ದೊರೆತಿತ್ತು. ಅಲ್ಲಿ ಈಗಾಗಲೇ 3-4 ಬಹಳ ಸೊಗಸಾದ ಕಟ್ಟಡಗಳಿವೆ. ಅಂಥ ಕಾಡಿನ ಮಧ್ಯದಲ್ಲಿ ಅಷ್ಟು ಸೊಗಸಾದಂಥ ಕಟ್ಟಡಗಳನ್ನು ಕಟ್ಟಿಸತಕ್ಕಂಥ ಆವಶ್ಯಕತೆ ಏನಿತ್ತು ಅನ್ನುವುದೇ ನನಗೆ ಗೊತ್ತಾಗಲಿಲ್ಲ. ಆದರೆ ಒಟ್ಟಿನಲ್ಲಿ ಹೇಳುವುದಾದರೆ ಹೀಗೆಲ್ಲಾ ಮಾಡುವುದು ಖಂಡಿತ ಸರಿಯಾದದ್ದಲ್ಲ. ಈ ಇಲಾಖೆಗೆ ಒದಗಿಸಿರುವ ಮೊಬಲಗನ್ನು ಅಫಾರಸ್ಟೇಷನಿಗೋಸ್ಕರವೇ ಉಪಯೋಗಿಸಬೇಕೆಂದು ನಾನು ಸಲಹೆ ಮಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಕೆ. ಪ್ರಭಾಕರ್ (ನೆಲಮಂಗಲ-ಅನುಸೂಚಿತ ಜಾತಿಗಳು).—ಸ್ವಾಮಿ, ಈ ಕಾಡುಗಳನ್ನು ಏತಕ್ಕೋಸ್ಕರವಾಗಿ ಉಳಿಸಿಕೊಂಡು ಬರಬೇಕು ಮತ್ತು ಏನು ಈ ಕಾಡುಗಳಿಂದ ನಮಗೆ ಪ್ರಯೋಜನವಿದೆ ಎನ್ನುವುದನ್ನು ಅನೇಕ ಕಾಲದಿಂದ ನಾವು ಸರ್ಕಾರದವರಿಗೆ ತಿಳಿಸುತ್ತಲೇ ಬಂದಿದ್ದೇವೆ. ಆದಕ್ಕೆ ಪ್ರತಿಯಾಗಿ ಅವರೂ ಕೂಡ ಹೇಳಿದ್ದನ್ನೇ ಹೇಳುತ್ತ ಮಾಡುವುದನ್ನು ಮಾಡುತ್ತಲೇ ಬರುತ್ತಿದ್ದಾರೆ. ಆದರೆ ವ್ಯವಸಾಯ ಮಾಡತಕ್ಕ ಜಮೀನು ಇಷ್ಟಿದ್ದರೆ ಅದಕ್ಕೆ ಇಷ್ಟೇ ಕಾಡಿರಬೇಕು ಎಂಬ ಒಂದು ನಿಕಟವಾದ ಸಂಬಂಧ ಇವೆರಡಕ್ಕೂ ಇರುತ್ತದೆ. ಕಾರಣವೇನೆಂದರೆ ಎಷ್ಟು ದೇಶದಲ್ಲಿ ಕಾಡು ಪುಷ್ಕಳವಾಗಿದ್ದರೆ ಅಲ್ಲಿ ಅಷ್ಟು ಮಳೆ ಚೆನ್ನಾಗಿ ಬೀಳುತ್ತದೆ ಎಂಬ ಒಂದು ನಂಬಿಕೆ ಮತ್ತು ಭಾವನೆಗಳು ನಮ್ಮಲ್ಲಿರುತ್ತವೆ. ಈ ಒಂದು ಕಾರಣದಿಂದ ನಾವು ಕಾಡು ಪ್ರದೇಶಗಳನ್ನು ವ್ಯವಸಾಯೋದ್ದೇಶಕ್ಕಾಗಿ ಏಕೆ ಕೇಳಬೇಕು, ನಮ್ಮಿಂದ ಈ ಮಳೆ ಬರುವುದಕ್ಕೆ ಏಕೊಂದು ಅಡ್ಡಿಯಾಗಬೇಕು ಎನ್ನುವ ಉದ್ದೇಶದಿಂದ ನಾವು ಹಾಗೆ ಈ ಭೂಮಿಯನ್ನು ಕೇಳತಕ್ಕ ಆವಶ್ಯಕತೆಯಿದ್ದರೂ ಆ ಭೂಮಿಯನ್ನು ಕೇಳದೆ ಹಾಗೇ

(ಶ್ರೀ ಕೆ. ಪ್ರಭಾಕರ್.)

ಸುಮ್ಮನಿದ್ದೆವು. ಆದರೆ ಸರ್ಕಾರದವರು ಅಲ್ಲಿ ಎಕರೆಗಳನ್ನು ಮಾತ್ರ ಲೆಕ್ಕಕ್ಕೆ ಉಳಿಸಿಕೊಂಡು ಬರುತ್ತಿದ್ದಾರೆಯೇ ಶಿವಾಯಿ ಅಲ್ಲಿ ಮರಗಳನ್ನು ಅಭಿವೃದ್ಧಿಗೊಳಿಸುವುದಾಗಲಿ ಅಥವಾ ಇರತಕ್ಕ ಮರಗಳನ್ನು ಉಳಿಸಿಕೊಂಡು ಬರುವುದಾಗಲಿ ಯಾವುದನ್ನೂ ಮಾಡದೆ ಹಾಗೆಯೇ ಈ ಇಲಾಖೆಯನ್ನು ನಡೆಸಿಕೊಂಡು ಹೋಗುತ್ತಿದ್ದಾರೆ. ನಾವು ಈ ಫಾರೆಸ್ಟ್ ಇಲಾಖೆಯನ್ನು ಒಂದು ಆದಾಯ ತರತಕ್ಕಂಥ ಇಲಾಖೆಯೆಂದು ಭಾವಿಸಿದ್ದೆವು. ಆದರೆ ಈ ಇಲಾಖೆಯ ಹಾಗೆ ವಿದ್ಯಾಭ್ಯಾಸದ ಇಲಾಖೆಯನ್ನ ಭಾವಿಸಲು ಆಗುವುದಿಲ್ಲ. ಅಲ್ಲಿ ಈ ದಿವಸ ಒಬ್ಬ ಉಪಾಧ್ಯಾಯರಿಗೆ ಕೊಡತಕ್ಕ ಸಂಬಳವೇನು? ಅಲ್ಲಿ ಹುಡುಗರಿಂದ ವಸೂಲಾಗುತ್ತಿರುವ ಫೀಜೇನು ಎಂದು ಲೆಕ್ಕ ಹಾಕುವುದಿಲ್ಲ. ಆದಕಾರಣ ಇದನ್ನು ಒಂದು ಅರ್ನಿಂಗ್ ಡಿಪಾರ್ಟ್‌ಮೆಂಟ್ ಎಂದು ಹೇಳುವುದಕ್ಕಾಗುವುದಿಲ್ಲ. ಈಗ ರೈಲ್ವೆ ಇಲಾಖೆ ಇದೆ. ಈ ಇಲಾಖೆಯ ಆದಾಯ ಮತ್ತು ವೆಚ್ಚಗಳನ್ನು ಲೆಕ್ಕ ಹಾಕಿ ಅದಕ್ಕೆ ಒಂದು ಬಡ್ಜೆಟ್ ತಯಾರಿಸಿ ಅದರಿಂದ ಬರುತ್ತಿರುವಂಥ ಆದಾಯವನ್ನು ಇತರ ಬಾಬುಗಳಿಗೆ ಉಪಯೋಗಿಸಲು ಎಂದರೆ ದೇಶಾಭಿವೃದ್ಧಿಯ ಕಾರ್ಯಗಳನ್ನು ನಡೆಸಲು ಆ ಹಣವನ್ನು ತಗೆದುಕೊಳ್ಳಿ ಎಂದು ಹೇಳತಕ್ಕ ಮಟ್ಟದಲ್ಲಿ ರೈಲ್ವೆ ಇಲಾಖೆ ಕೆಲಸ ನಡೆಸುತ್ತಿದೆ. ಆದರೆ ಈ ಫಾರೆಸ್ಟ್ ಇಲಾಖೆ ಆ ಮಟ್ಟದಲ್ಲಿ ಕೆಲಸ ಮಾಡುತ್ತಿಲ್ಲ. ಈ ದಿವಸ ಈ ಫಾರೆಸ್ಟ್ ಇಲಾಖೆಯವರು ನರ್ಸರಿ ಬೆಳೆಸುವ ಕೆಲಸವನ್ನು ಕೈಗೊಂಡಿದ್ದಾರೆಂದು ಹೇಳುತ್ತಿದ್ದಾರೆ. ಆದರೆ ನಾವು ಇದನ್ನು ನಂಬುವುದಕ್ಕಾಗುವುದಿಲ್ಲ. ಈ ಕೆಲಸ ಅಷ್ಟು ಸಮರ್ಪಕವಾದ ರೀತಿಯಲ್ಲಿ ನಡೆಯುತ್ತದೆಂದು ಕೂಡ ಹೇಳುವುದಕ್ಕಾಗುವುದಿಲ್ಲ. ಇನ್ನು ಟಿಂಬರ್‌ಗಳನ್ನು ಖರ್ಚುಮಾಡತಕ್ಕ ಬಗ್ಗೆ ಅವುಗಳಲ್ಲಿ ಅನುಸರಿಸಬೇಕಾದ ಒಂದು ಸಕ್ರಮವನ್ನು ಇವರು ಅನುಸರಿಸುತ್ತಿಲ್ಲ. ಅಂತು ಒಂದು ಸುವ್ಯವಸ್ಥಿತವಾದ ಆಚರಣೆಯನ್ನೇ ಇವರು ಕಂಡುಹಿಡಿದಿಲ್ಲ. ವರ್ಷೇ ವರ್ಷೆ ಸರ್ಕಾರದವರು ತಮ್ಮ ಯೋಜನೆಗಳನ್ನು ಕೊಡುತ್ತಲೇ ಬಂದಿದ್ದಾರೆ. ಆದರೆ ಕೆಲಸ ಮಾತ್ರ ಏನೂ ನಡೆದಿಲ್ಲ. ಆದಕಾರಣ ಈಗ ಇವರು ಹೇಳುತ್ತಿರುವುದನ್ನು ಸರಿಯಾಗಿದೆಯೆಂದು ನಾವು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಈ ಫಾರೆಸ್ಟ್ ಬಾಬಿನಲ್ಲಿ ಎಕ್ಸ್‌ಪರ್ಟುಗಳಾಗಿ ಬರಲು ನಮ್ಮ ಜನರು ಡೆಹರಾಡೂನ್ ಇತ್ಯಾದಿಗಳಿಗೇನೋ ಹೋಗಿ ಬರುತ್ತಿದ್ದಾರೆ. ಆದರೆ ಅವರು ಅಲ್ಲಿಗೆ ಹೋಗಿ ಹೆಚ್ಚಿನ ವಿದ್ಯವನ್ನು ಕಲಿತುಕೊಂಡು ಇಲ್ಲಿಗೆ ವಾಪಸ್ಸು ಬಂದ ಮೇಲೆ ಅವರು ಯಾವ ರೀತಿ ಕೆಲಸ ಮಾಡುತ್ತಿದ್ದಾರೆ ಎನ್ನತಕ್ಕ ಬಗ್ಗೆ ಅಲ್ಲಲ್ಲೇ ಜನರು ಏನೇನೋ ಮಾತನಾಡಿಕೊಳ್ಳುತ್ತಿದ್ದಾರೆ. ಆ ರೀತಿ ಎಕ್ಸ್‌ಪರ್ಟುಗಳಾಗಿ ಬರತಕ್ಕಂಥ ಜನರ ಮನಸ್ಸಿನಲ್ಲೇನೋ ಇಲ್ಲಿಯ ಅರಣ್ಯಗಳನ್ನು ಬಹಳ ಚೆನ್ನಾಗಿಟ್ಟುಕೊಳ್ಳಬೇಕೆಂಬಆಸೆಯಿರುತ್ತದೆ. ತೇಗ, ಹೊನ್ನೆ ಇತ್ಯಾದಿ ಮರಗಳನ್ನು ಹೊಸದಾಗಿ ಬೆಳೆಸುವುದಕ್ಕೂ ಮತ್ತು ಈಗ ಹಾಲಿ ಇರತಕ್ಕಂಥಾ ಮರಗಳನ್ನು ಉಳಿಸಿಕೊಂಡು ಬರುವುದಕ್ಕೂ ಅವರ ಮನಸ್ಸಿನಲ್ಲಿ ಒಂದು ಹೆಚ್ಚಿನ ಆಸೆ ಇದೆ. ಇದಕ್ಕೆ ಸರ್ಕಾರದವರು ಒಂದು ಸರಿಯಾದ ಅವಕಾಶ ಮಾಡಿಕೊಡಬೇಕು.

ಇನ್ನು ಕೆಲವು ಕಡೆಗಳಲ್ಲಿ ಫಾರೆಸ್ಟ್ ಇಲಾಖೆಯವರು ಕೆಲವು ನಾಮಕಾವಾಸ್ತೆ ಫಾರೆಸ್ಟ್‌ಗಳನ್ನು ಇಟ್ಟುಕೊಂಡಿದ್ದಾರೆ. ಅಲ್ಲಿ ಅವನು ಹೆಸರಿಗೆ ಮಾತ್ರ ಕಾಡುಗಳೆಂದು ಕರೆಯುತ್ತಿದ್ದಾಗ್ಯೂ ಅಲ್ಲಿ ಬೆಳೆದಿರತಕ್ಕದ್ದು ಬರಿ ಲಾಂಟಾನ ಮತ್ತು ಇತರ ಮುಳ್ಳುಗಿಡಗಳುಮಾತ್ರ. ಹೀಗೆ ಕೇವಲ ಹೆಸರಿಗೆ ಮಾತ್ರ ಫಾರೆಸ್ಟ್ ಎಂದು ಇಟ್ಟುಕೊಂಡಿರತಕ್ಕ ಜಮೀನನ್ನು ಜಮೀನಿಲ್ಲದ ಜನರಿಗಾದರೂ ವ್ಯವಸಾಯಕ್ಕೆ ಬಿಟ್ಟುಕೊಡಿ ಎಂಬುದಾಗಿ ಎಷ್ಟೇ ಕೇಳಿಕೊಳ್ಳುತ್ತಿದ್ದಾಗ್ಯೂ ಸರ್ಕಾರದವರು ಅದರಲ್ಲಿ ಒಂದು ಇಂಚಿನಷ್ಟು ಜಮೀನನ್ನು ಕೂಡ ಕೊಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಿದ್ದಾರೆ. 'ಎಂದರೆ ನಮ್ಮ ಅರಣ್ಯ ಶಾಖಾಮಂತ್ರಿಗಳು ಮೇಲಿನವರು ಹೇಗೆ ಹೇಳಿದರೆ ಹಾಗೇ ನಡೆದುಕೊಳ್ಳುವಂಥ ಒಂದು ಪಾಲಸಿಯನ್ನು ಉಳಿಸಿಕೊಂಡು ಬರುತ್ತಿದ್ದಾರೆ. ಡಾ॥ ನಾಗನಗೌಡರು ನಮ್ಮ ಸುದೈವದಿಂದ ನಮ್ಮ ಮೈಸೂರಿಗೆ ಮಂತ್ರಿಗಳಾಗಿ ಬಂದಮೇಲೆ ಇವರು ಮೇಲಿನವರ ಮಾತನ್ನು ಒಂದು ಇಂಚೂ ಸಹ ಮೀರಿ ಮುಂದಕ್ಕೆ ಹೋಗುವುದಿಲ್ಲ. ಆ ನೆರಳನ್ನು ಬಿಟ್ಟು ಹೋಗಲು ಇವರಿಗೆ ಸಾಧ್ಯವೇ ಇಲ್ಲ. ಅವರು ಜಮೀನನ್ನು ಕೊಡಿ ಎಂದರೆ ಇವರು ಕೊಡುತ್ತಾರೆ; ಬೇಡ ಎಂದರೆ ಬಿಡುತ್ತಾರೆ. ಈ ರೀತಿಯ ಒಂದು ಪಾಲಸಿಯ ಮೇಲೆ ಇವರು ಹೋಗುತ್ತಿದ್ದಾರೆ. ನಾನು ಇಲ್ಲಿಗೆ 4-5 ವರ್ಷಗಳಿಂದಲೂ ಒಂದೇ ಸಮನಾಗಿ ಆ ನಮ್ಮ ನೆಲಮಂಗಲ ತಾಲ್ಲೂಕಿನಲ್ಲಿ ಕೃಷ್ಣರಾಜಪುರ ಪ್ಲಾನ್ಟೇಷನ್ನಿನಲ್ಲಿರತಕ್ಕ ಜಮೀನನ್ನು ಜಮೀನಿಲ್ಲದ ಬಡಜನರಿಗೆ ಕೊಡಿ ಎಂದು ಕೇಳುತ್ತಲೇ ಬಂದಿದ್ದೇನೆ. ಮಾನ್ಯ ಮಂತ್ರಿಗಳು ಆ ಜಮೀನನ್ನು ಆದಷ್ಟು ಜಾಗ್ರತೆ ಮಂಜೂರು ಮಾಡುವುದಾಗಿ ಹೇಳುತ್ತಲೇ ಬರುತ್ತಿದ್ದಾರೆ. ಆದರೆ ಅದಿನ್ನೂ ಮಂಜೂರಾಗಿಲ್ಲ. ಆ ಜಮೀನಿನಲ್ಲಿ ಹುರುಳಿ ವಿನಾ ಮತ್ತೇನೂ ಬೆಳೆಯುವುದಿಲ್ಲ. ಈ ದಿವಸ ಆ ಕಾಡು ಸುಮ್ಮನೆ ಏಕೆ ಪಾಳುಬಿದ್ದಿರಬೇಕೆಂದು ಬಡ ರೈತರು ಯಾರಾದರೂ ಹುರುಳಿ ಇತ್ಯಾದಿ ಬೆಳೆಗಳನ್ನಿಟ್ಟರೆ ಅದಕ್ಕೂ ಅಲ್ಲಿನ ಅಧಿಕಾರಿಗಳು ತಕರಾರ್, ತಃಖ್ತೆ ಇತ್ಯಾದಿಗಳನ್ನು ಇಡುತ್ತಿದ್ದಾರೆ. ಆದರೆ ಬಹುಶಃ ಸರ್ಕಾರಕ್ಕೆ ಇಂಥ ಬಡವರಿಗೆ ಅನುಕೂಲ ಮಾಡಲು ಮನಸ್ಸಿಲ್ಲವೆಂದು ಕಂಡುಬರುತ್ತಿದೆ. ಹಿಂದಿನ ಕಾಲದಲ್ಲಿ ಶ್ರೀ ಕೆ. ವಿ. ಅನಂತರಾಮನ್ ಇತ್ಯಾದಿ ಅಧಿಕಾರಿಗಳು ಇದ್ದಂಥಾ ಕಾಲದಲ್ಲಿ ಆವರ ಅಡಿಗೆ ಆಳುಗಳು ಇತ್ಯಾದಿಯವರಿಗೇನಾದರೂ ಜಮೀನು ಬೇಕೆಂದು ಅಪೇಕ್ಷಿಸಿದ್ದರೆ ಅವರು ಎಲ್ಲಿಯೇ ಜಮೀನಿದ್ದರೂ ಆದರಲ್ಲಿ 25-30 ಎಕರೆಗಳನ್ನು ಅವರಿಗೆ ಕೂಡಲೇ ಮಂಜೂರು ಮಾಡುತ್ತಿದ್ದರು. ಆದಿವಸ ರೈತರು ಬೇಡವಾಗಿತ್ತು. ಆದರೆ ಈ ಹೊತ್ತೂ ಅದೇರೀತಿ ತಮ್ಮ ಮನಸ್ಸಿನಲ್ಲೂ ಆ ರೈತನ ವಿಚಾರದಲ್ಲಿ ಆಸಕ್ತಿ ಇದ್ದಂತೆ ಕಾಣುತ್ತಿಲ್ಲವೆಂದೇ ಹೇಳಬೇಕಾಗಿದೆ. ಸಾಲದ್ದಕ್ಕೆ ತಾವೀಗ ದೇಶದಲ್ಲಿ ಸೋಷಿಯಲಿಸ್ಟಿಕ್ ಪ್ಯಾಟ್ರನ್ ಆಫ್ ಸೊಸೈಟಿಯ ವ್ಯವಸ್ಥೆಯನ್ನು ಜೇರೆ ಜಾರಿಗೆ ತರುವುದಾಗಿ ಹೇಳುತ್ತಿದ್ದೀರಿ. ಆದರೆ ಜಮೀನಿಲ್ಲದವರಿಗೆ ಜಮೀನು ಕೊಡಿ ಎಂದರೆ ಮಾತ್ರ ಕೊಡುತ್ತಿಲ್ಲ! ಚುಂಚನ ಫಾರೆಸ್ಟಿನಲ್ಲಿ ಹರಿಜನರಿಗೆ ಜಮೀನು ಕೊಡಿ ಎಂದು ಕೇಳಿದರೆ ಇಲ್ಲ ಎಂದು ಹೇಳುತ್ತಿದ್ದಾರೆ. ಕಾರಣ ಅಲ್ಲಿ ಯಾರೋ ಒಬ್ಬರು ಕ್ರಿಶ್ಚಿಯನ್ನರಿದ್ದರು, ಅವರು ಅಲ್ಲಿ ಏನೋ ಒಂದು ಪ್ಲಾನ್ ಹಾಕಬೇಕೆಂದು ಹೇಳಿದ್ದಾರಂತೆ. ಅದಕ್ಕಾಗಿ ಆ ಜಮೀನನ್ನೆಲ್ಲಾ ಅವರಿಗೆ ಕೊಡಬೇಕೆಂದು ಮಾಡಿದ್ದಾರಂತೆ. ಹೀಗೆ "ಎತ್ತು ಈಯಿತೆಂದರೆ ಕೊಟ್ಟಿಗೆಗೆ ಕಟ್ಟು" ಎನ್ನುವಂತೆ ಕೆಲಸಗಳು ನಡೆಯುತ್ತಿವೆಯೇ ಹೊರತು ಒಂದು ಸರಿಯಾದ ನೀತಿಯನ್ನು ಅನುಸರಿಸುತ್ತಿಲ್ಲ.

ಈ ಕಾರಣಗಳಿಂದ ಎಲ್ಲಿ ಫಾರೆಸ್ಟನ್ನು ಬೆಳೆಸುವುದಕ್ಕೆ ಅವಕಾಶವಿಲ್ಲವೋ ಅಂಥ ಭೂಮಿಗಳನ್ನು ಭೂಮಿಯಿಲ್ಲದ ರೈತರಿಗೆ ವ್ಯವಸಾಯಕ್ಕಾಗಿ ಬಿಟ್ಟುಕೊಡುವುದು ಒಳ್ಳೆಯದು. ನಮ್ಮ ದೇಶದಲ್ಲಿ ಜಮೀನಿಲ್ಲದೆ ರೈತರಿಗೆ ಸುಮಾರು 81 ಸಾವಿರ ಎಕರೆ ಸಾಗುವಳಿಯಾಗದ ಭೂಮಿಯಿದೆ, ಅದನ್ನು ಕೊಡಿ ಎಂದು ಕೇಳಿದ್ದಕ್ಕೆ ಮಾನ್ಯ ರೆವಿನ್ಯೂ ಮಂತ್ರಿಗಳಾದ ಶ್ರೀ ಕಡಿದಾಳ್ ಮಂಜಪ್ಪನವರು ಆ ಜಮೀನನ್ನು ಹಂಚಿಕೊಡಲು ಮೂರು ಜನರ ಒಂದು ಕಮಿಟಿಯನ್ನು ಮಾಡುವುದಾಗಿ ಹೇಳಿದ್ದು ಇನ್ನೂ ಆಗುವುದರಲ್ಲೇ ಇದೆ. ಈ ವಿಚಾರದಲ್ಲಿ ಇವರು tossing the baby ಎನ್ನುವ ರೀತಿಯಲ್ಲಿ ಮಾತನಾಡುತ್ತಿದ್ದಾರೆ. ಬಿಲ್ಲನ್ನು ಮುಂಡಿಸುವುದಕ್ಕೆ ತಕ್ಕ ಪ್ರಯತ್ನಗಳನ್ನು ಮಾಡುತ್ತಿದ್ದೇವೆಂದು ಹೇಳಿದ್ದರು ಅದನ್ನೂ ನಿರೀಕ್ಷೆ ಮಾಡಿದ್ದಾಯಿತು. ಆದರೆ ಏನೂ ಉಪಯೋಗವಾಗಲಿಲ್ಲ. ತಾವು ಹಿಂದಿನ ಪದ್ಧತಿಗಳನ್ನೆಲ್ಲಾ ರದ್ದುಮಾಡಿ ಎಲ್ಲೆಲ್ಲಿ ಫಾರೆಸ್ಟನ್ನು ಬೆಳೆಸಲು ಸಾಧ್ಯವಿದೆಯೋ ಅಲ್ಲೆಲ್ಲಾ ಮರಗಳನ್ನು ಅಭಿವೃದ್ಧಿಗೆ ತರಬೇಕೆಂದೂ, ಉಪಯೋಗಕ್ಕೆ ಬಾರದ್ದನ್ನು ವ್ಯವಸಾಯಕ್ಕೆ ಬಿಟ್ಟುಕೊಡಬೇಕೆಂದೂ ಸಲಹೆ ಮಾಡುತ್ತೇನೆ. ಈ ವಿಚಾರಗಳಲ್ಲಿ ತಾವು ಕ್ಯಾಬಿನೆಟ್ ಮೀಟಿಂಗ್ ನಡೆಸುವಾಗ ದೇಶಕ್ಕೆ ಸಂಬಂಧಪಟ್ಟ ಎಲ್ಲಾ ವಿಚಾರದಲ್ಲೂ ಒಂದೇ ರೀತಿ ತೀರ್ಮಾನ ತೆಗೆದುಕೊಳ್ಳಬೇಕು. ವಿನಾಯಿತಿ ಒಬ್ಬರಿಗೆ ಕೊಟ್ಟು ಇನ್ನೊಬ್ಬರಿಗೆ ಇಲ್ಲ ಎನ್ನುವುದು ಸರಿಯಲ್ಲ. ಆದಕಾರಣ ಇನ್ನಾದರೂ ಈ ಅರಣ್ಯಗಳ ಅಭಿವೃದ್ಧಿ ಕಾರ್ಯವನ್ನು ಚೆನ್ನಾಗಿ, ಜಯಪ್ರದರಾಗಿ ನಡೆಸಿಕೊಂಡು ಬರಬೇಕೆಂದು ತಿಳಿಸಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಬಿ. ಮಾಧವಾಚಾರ್ (ಭದ್ರಾವತಿ).—ಸ್ವಾಮಿ, ಈಗ ಮಲೆನಾಡಿನಲ್ಲಿ ಕಾಡು ಬಹಳವಾಗಿ ನಶಿಸಿ ಹೋಗುತ್ತಾ ಇದೆ. ಈಗಾಗಲೇ ಈ ವಿಚಾರವಾಗಿ ಅನೇಕ ಮಾನ್ಯ ಸದಸ್ಯರು ಅನೇಕ ವಿಷಯಗಳನ್ನು ಹೇಳಿದ್ದಾರೆ. ಆದರೆ ನಾನೂ ಸಹ ಇದೇ ವಿಚಾರವಾಗಿ ಒಂದೆರಡು ವಿಷಯಗಳನ್ನು ತಮ್ಮ ಮೂಲಕ ಸರ್ಕಾರದವರಲ್ಲಿ ಅರಿಕೆ ಮಾಡಿಕೊಳ್ಳಬೇಕಾಗಿದೆ, ಆ ಉದ್ದೇಶದಿಂದ ನಾನೀಗ ನಿಂತಿದ್ದೇನೆ. ಈ ದಿವಸ ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಸೌದೆಗಾಗಿ, ಇದ್ದಿಲಿಗಾಗಿ ಎಷ್ಟೋ ಸಾವಿರಾರು ಎಕರೆ ಮಲೆನಾಡು ಪ್ರದೇಶ ಈಗ ಬರಿದಾಗಿದೆ. ಇನ್ನು ಭದ್ರಾ ಛಾನಲ್ ಕಾಲುವೆ ಬಂದನಂತರ ಅದರ ಅಕ್ಕಪಕ್ಕಗಳಲ್ಲಿ ಭತ್ತದ ವ್ಯವಸಾಯಕ್ಕಾಗಿ ಅನೇಕ ಎಕರೆ ಕಾಡಿರತಕ್ಕಂಥ ಭೂಮಿ ಬೀಳಾಗುತ್ತದೆ. ಇದರ ಜೊತೆಗೆ ಇನ್ನೂ ಹೊನ್ನೆ ಮರಡು ಯೋಜನೆ ಪ್ರಾರಂಭವಾದನಂತರ ಅಲ್ಲಿ ಬೇರೆ ಕಾಡು ನಾಶವಾಗುತ್ತದೆ. ಅಂತೂ ಈ ನಾನಾ ಕಾರಣಗಳಿಂದ ಮಲೆನಾಡಿನಲ್ಲಿದ್ದಂಥ ಅರಣ್ಯ ಸಂಪತ್ತು ಈಗ ಬಹಳ ವೇಗವಾಗಿ ಕಮ್ಮಿಯಾಗುತ್ತಿದೆ. ಇನ್ನು ತುಂಗಾ ಬಲಕಾಲುವೆಗಾಗಿ ಈಗಾಗಲೇ ಹತ್ತು ಸಾವಿರ ಎಕರೆ ಭೂಮಿಯನ್ನು ಸಾಗಿಗೆ ತರಲು ಅಂದಾಜು ಮಾಡಲಾಗಿದೆ. ಭದ್ರಾ ಚಾನಲ್ಲಿಗೂ ಹೀಗೆ ಯಥೇಷ್ಟವಾಗಿ ಅರಣ್ಯವಿರತಕ್ಕಂಥಾ ಪ್ರದೇಶವನ್ನು ವ್ಯವಸಾಯಕ್ಕಾಗಿ ಬಿಟ್ಟುಕೊಡಬೇಕಾಗುತ್ತದೆ. ಹೀಗೆ ಈ ಅರಣ್ಯ ಸಂಪತ್ತು ದಿನೇ ದಿನೇ ಮಲೆನಾಡಿನಲ್ಲಿ ಕಡಮೆಯಾಗುತ್ತಾ ಬರುತ್ತಿದೆ. ಆದರೆ ಈಗ ಈ ಅರಣ್ಯ ಸಂಪತ್ತು ಯಾವ ವೇಗದಲ್ಲಿ ಕಡಮೆಯಾಗುತ್ತಿದೆಯೋ ಅದೇ ವೇಗದಲ್ಲಾದರೂ ಹೊಸಗಿಡ-ಮರಗಳನ್ನು ಬೆಳೆಸತಕ್ಕ ಕಾರ್ಯ ಭರದಿಂದ ಸಾಗಬೇಕಾದದ್ದು ತೀರ ಅತ್ಯಗತ್ಯ.

ಇವೊತ್ತು ನಮ್ಮ ಬಡ್ಜೆಟ್ಟನಲ್ಲಾಗಲಿ ಅಥವಾ ಇಲಾಖೆಯ ಪ್ರಯತ್ನಗಳನ್ನಾಗಲಿ ನೋಡಿದರೆ ಆ ಪ್ರಮಾಣಕ್ಕೆ ಸರಿಹೊಂದುವಂಥ ಕಾಡಿನ ಕೆಲಸ ನಡೆಯುತ್ತಾ ಇಲ್ಲ. ಈ ಪರಿಸ್ಥಿತಿಯನ್ನು ಹೀಗೆಯೇ ಮುಂದುವರಿಸಿಕೊಂಡು ಬಂದರೆ ದೇಶದಲ್ಲಿ ಮಳೆಗಳಾಗದೆ, ಹವಾಮಾನದ ಸ್ಥಿತಿ ಕೆಟ್ಟು ಬಹುಶಃ ಅನೇಕ ತೊಂದರೆಗಳನ್ನು ಅನುಭವಿಸಬೇಕಾಗಿ ಬರಬಹುದು. ಆದ್ದರಿಂದ ವಿಶೇಷವಾದಂಥ ಪ್ರಯತ್ನದಿಂದ ಹೊಸ ಹೊಸ ಕಾಡುಗಳನ್ನು ರಚನೆಮಾಡಬೇಕು.

ಅಫಾರಸ್ಟೇಷನ್ ಸ್ಕೀಂನಲ್ಲಿ ಕೆಲವು ಸಾರಿ ಈ ಇಲಾಖೆಯ ಅಧಿಕಾರಿಗಳು ಸುಮಾರು 30-40 ಮೈಲಿ ದೂರ ಕಾಡಿನೊಳಗೆ ಹೋಗಿ ಅಫಾರಸ್ಟೇಷನ್ ಕೆಲಸ ನೋಡಿಕೊಳ್ಳಬೇಕಾಗುತ್ತದೆ. ಈ ಅಧಿಕಾರಿಗಳಿಗೆ ಜೀಪುಗಳನ್ನೊದಗಿಸಿಕೊಟ್ಟರೆ ಅನುಕೂಲ. ಹೆಚ್ಚಿನ ಕೆಲಸ ಆಗುತ್ತದೆ.

ವನಮಹೋತ್ಸವದ ಕಾರ್ಯ ಕೆಲವು ವರ್ಷಗಳ ಹಿಂದೆ ಬಹಳ ಶ್ರದ್ಧೆಯಿಂದ ಪ್ರಾರಂಭವಾಯಿತು. ಆದರೆ ಈಗ ಎರಡು ಮೂರು ವರ್ಷಗಳಿಂದ ಯಾವ ಪ್ರಯತ್ನವೂ ಕಂಡುಬರುತ್ತ ಇಲ್ಲ. ನನ್ನ ಅಭಿಪ್ರಾಯದಲ್ಲಿ ಈ ವನಮಹೋತ್ಸವ ಏನಿದೆ ಇದು ಈ ದೇಶದ ಒಂದು ವೈಶಿಷ್ಟ್ಯ. ಇದು ಒಂದು ಪ್ರಾಮುಖ್ಯವಾದ ರಚನಾತ್ಮಕವಾದ ಕೆಲಸ ಎಂದು ಹೇಳಿ ನಾನು ಭಾವಿಸುತ್ತೇನೆ. ಅನೇಕ ಸದಸ್ಯರು ಇದನ್ನು ಬಹಳ ಲಘುವಾಗಿ ಟೀಕಿಸುವುದುಂಟು. ಆದರೆ ಈ ಕಾರ್ಯಕ್ರಮದ ಉದ್ದೇಶವನ್ನು ಪ್ರತಿಯೊಬ್ಬ ಪ್ರಜೆಯೂ ಅರಿತು ಹೆಚ್ಚು ಶ್ರದ್ಧೆಯಿಂದ ಅಧಿಕಾರಿಗಳು ಮತ್ತು ಸಾರ್ವಜನಿಕರು ನೆಟ್ಟಂಥ ಸಸಿಗಳ ವಿಚಾರದಲ್ಲಿ ಸಾಕಾದಷ್ಟು ರಕ್ಷಣೆಯನ್ನು ತೆಗೆದುಕೊಂಡು, ಆ ಸಸಿಗಳು ಗಿಡಗಳಾಗುವಂತೆ, ಮರಗಳಾಗುವಂತೆ ನೋಡಿಕೊಂಡರೆ ನಮ್ಮ ದೇಶದ ಒಂದು ಬಹು ದೊಡ್ಡ ಸಮಸ್ಯೆಯನ್ನು ಬಹಳ ಸುಲಭವಾಗಿ ಬಿಡಿಸಿದಂತಾಗುವುದರಲ್ಲಿ ಸಂಶಯವಿಲ್ಲ. ಆದ್ದರಿಂದ ಈ ವನಮಹೋತ್ಸವದ ಕಾರ್ಯಕ್ರಮವನ್ನು ತಾತ್ಕಾಲಿಕವಾಗಿ ನಿಲ್ಲಿಸಲ್ಪಟ್ಟಲ್ಲಿ ಅದನ್ನು ಪುನಃ ಪ್ರಾರಂಭಿಸಿ, ದೇಶಾದ್ಯಂತ ಈ ಸಮಸ್ಯೆಯ ಕಡೆಗೆ ಜನತೆಯ ದೃಷ್ಟಿ ಬಿದ್ದು, ಅವರಲ್ಲಿ ಜಾಗ್ರತಿಯುಂಟಾಗಲುಬೇಕಾದಂಥ ಪ್ರಚಾರವನ್ನು ಕೈಕೊಳ್ಳಬೇಕೆಂದು ಈ ಸಮಯದಲ್ಲಿ ಸೂಚಿಸಬಯಸುತ್ತೇನೆ. ಫಾರೆಸ್ಟ್ ಇಲಾಖೆಯಲ್ಲಿರತಕ್ಕವರು ಮತ್ತು ರೆವಿನ್ಯೂ ಅಧಿಕಾರಿಗಳೂ ಕೂಡ ಈ ವನಮಹೋತ್ಸವದ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಬೇಕು; ಮತ್ತು ವನಮಹೋತ್ಸವದಿನಗಳಲ್ಲಿ ನೆಡತಕ್ಕ ಗಿಡಗಳಲ್ಲಿ ಇಂತಿಷ್ಟು ಪರ್ಸೆಂಟೇಜ್ ಗಿಡಗಳಾದರೂ ಬೆಳೆಯಲೇಬೇಕು ಎಂಬ ಒಂದು ನಿಗದಿಯನ್ನು ಹಾಕಬೇಕು ಅಥವಾ ಸ್ಥಳೀಯ ಅಧಿಕಾರಿಗಳ ಮೇಲೆ ಒಂದು ವಿಧವಾದ ಜವಾಬ್ದಾರಿಯನ್ನು ಹೊರಿಸಿ ಈ ಕೆಲಸವನ್ನು ಯಶಸ್ವಿಯಾಗಿ ಮಾಡುವಂತೆ ಸರ್ಕಾರ ಪುನಃ ಈ ಬಗ್ಗೆ ಪ್ರಯತ್ನ ಮಾಡಬೇಕು. ಇಷ್ಟು ಮಾತ್ರ ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ-ಅನುಸೂಚಿತ ಜಾತಿಗಳು).—ಸ್ವಾಮಿ, ಈ ಸಂದರ್ಭದಲ್ಲಿ ನಾನು ಜಮೀನು ವಿಲೇವಾರಿ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಶ್ರೀ ಪ್ರಭಾಕರ್ ಅವರು ಫಾರೆಸ್ಟು ಜಮೀನಿನ ವಿಚಾರದಲ್ಲಿ ಕೆಲವು ವಿಷಯಗಳನ್ನು ಹೇಳಿದ್ದಾರೆ. ನನ್ನದೂ ಕೂಡ ಅದೇ ಅಭಿಪ್ರಾಯವಾಗಿದೆ, ಸ್ವಾಮಿ. ಫಾರೆಸ್ಟ್ ಇಲಾಖೆಯು

(ಶ್ರೀ. ಎಂ. ಚಿಕ್ಕಲಿಂಗಯ್ಯ).

ದರಖಾಸ್ತು ವಿಚಾರದಲ್ಲಿ ಅನೇಕ ರೀತಿಯಾಗಿ ಹೇಳುತ್ತಾರೆ. ಒಂದು ಕಡೆ ಬೆಲೆ ಜಾಸ್ತಿ ಆಗುತ್ತದೆ ಎನ್ನುವುದು, ಇನ್ನೊಂದು ಕಡೆ ಗೋಮಾಳದ ಜಮೀನು ಕೊಡಲಿಕ್ಕೆ ಸಾಧ್ಯವಿಲ್ಲ ಎನ್ನುವುದು ಹೀಗೆಲ್ಲಾ ಹೇಳಿಕೊಂಡು ಬರುತ್ತಾ ಇದ್ದೀರಿ. ನಾನು ಹೇಳುವುದೇನೆಂದರೆ ಈಗ ಫಾರೆಸ್ಟ್ ಇಲಾಖೆಯಲ್ಲಿ ಸರ್ವೇ ಆಗಿ 50 ವರ್ಷ ಆಗಿರಬಹುದು. ಫಾರೆಸ್ಟ್ ಸರ್ವೇ ಇದುವರೆಗೂ ಯಾರೂ ಮಾಡಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಸರ್ಕಾರದವರು ಏನು ಹೇಳುತ್ತಾರೋ ಗೊತ್ತಿಲ್ಲ. ಕೆಲವು ಕಡೆ ಫಾರೆಸ್ಟ್ ಜಮೀನು ಎಂದು ಹೇಳಿ ಫಾರೆಸ್ಟಿಗೆ ಸೇರಿಸಿಕೊಂಡಿದ್ದೀರಿ. ಅಲ್ಲಿ ಗಿಡ ಮರಗಳು ಯಾವುದೂ ಇಲ್ಲ. ದನಕರುಗಳಿಗೂ ಕೂಡ ಮೇವಿಗೆ ಅವಕಾಶವಿಲ್ಲ. ಅಂಥ ಫಾರೆಸ್ಟಿಗೂ ಕೂಡ ನಾಲಾಯಕ್ಕಾದ ಜಮೀನಿದೆ. ಅಂಥ ಜಮೀನನ್ನು ದರಖಾಸ್ತಿನಲ್ಲಿ ಕೊಟ್ಟರೂ ಪ್ರಯೋಜನವಿಲ್ಲ. ಆಕಾರ ಕಂಡ ಜಮೀನು ಬೇಕಾದಷ್ಟು ಇದೆ ಎಂದು ಕೆಲವರು ಹೇಳುತ್ತಾರೆ. ಮಳವಳ್ಳಿ ತಾಲ್ಲೂಕಿನಲ್ಲಿ ಜಮೀನುಬೇಕೆಂದು ಕೇಳಿದರೆ ಶಿವಮೊಗ್ಗಕ್ಕೆ ಹೋಗಿ ಎಂದರೆ ಆಗುತ್ತದೆಯೇ? ಆಗುವುದಿಲ್ಲ. ಅದಕ್ಕೆ ಫಾರೆಸ್ಟ್ ಸರ್ವೇ ಮಾಡಿಸಿ ಎಂದು ಹೇಳುತ್ತೇನೆ. ಈ ವರ್ಷದಲ್ಲಿ ಸ್ವಲ್ಪ ಹಣ ಅಲಾಟ್ ಮಾಡಿದ್ದೀರಿ. ಯಾವ ಯಾವ ಗ್ರಾಮದಲ್ಲಿ ಯಾವ ಯಾವ ಫಾರೆಸ್ಟ್ ಇದೆ, ಯಾವ ಯಾವ ಫಾರೆಸ್ಟನ್ನು ಅಭಿವೃದ್ಧಿ ಮಾಡುವುದಕ್ಕೆ ಅವಕಾಶವಿದೆ ಎಂಬ ವಿಚಾರದಲ್ಲಿ ನಿರ್ದಿಷ್ಟವಾದ ನೀತಿಯನ್ನು ಹಾಕಿಕೊಂಡು, ಎಲ್ಲಿ ಫಾರೆಸ್ಟನ್ನು ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಕಂಡುಬರುತ್ತದೆಯೋ ಅಂಥ ಕಡೆ ಬಡವರು ಎಲ್ಲಿ ಕೇಳುತ್ತಾರೋ ಅಂಥ ಕಡೆ ಎರಡು ಅಥವಾ ನಾಲ್ಕು ಎಕರೆ ಕೊಡುವುದಕ್ಕೆ ಕಷ್ಟವಾಗುವುದಿಲ್ಲ. ಇದನ್ನು ಪರಿಶೀಲನೆ ಮಾಡಬೇಕು. ನಿಜವಾಗಿಯೂ ಕೂಡ ಇದು ಕ್ಯಾಬಿನೆಟ್ ಪ್ರಶ್ನೆ. ಮೈಸೂರು ದೇಶದಲ್ಲಿ ಅರಣ್ಯದ ಜಮೀನು ನಿರ್ದಿಷ್ಟವಾದ ಪರ್ಸೆಂಟೇಜ್ ಇಲ್ಲ ಎಂದು ಹೇಳುತ್ತೀರಿ, ನಿಜ. ಆದರೆ ಅನಾವಶ್ಯಕವಾದ ಜಮೀನಿಟ್ಟುಕೊಂಡು ಏನು ಪ್ರಯೋಜನ?

ಇನ್ನೊಂದು ಕಡೆ ಏನು ಮಾಡಿದ್ದೀರಿ? ಬೇಚರಾಕು ಗ್ರಾಮ ಎಂದು ಹೇಳಿ ಫಾರೆಸ್ಟಿಗೆ ಸೇರಿಸಿಕೊಂಡಿದ್ದೀರಿ. ಆದರೆ ಒಂದು ನಿರ್ದಿಷ್ಟವಾದ ನೀತಿಯನ್ನು ಹಾಕಿಕೊಂಡು ಅಭಿವೃದ್ಧಿ ಮಾಡುವುದಕ್ಕೆ ತಾವು ಯಾವ ಕಾರ್ಯಕ್ರಮವನ್ನೂ ಹಾಕಿಕೊಂಡಿಲ್ಲ. ಇದನ್ನೆಲ್ಲಾ ಕೂಲಂಕಷವಾಗಿ ಪರಿಶೀಲನೆ ಮಾಡಬೇಕು ಎಂದು ಹೇಳಿ ಈ ಸಂದರ್ಭದಲ್ಲಿ ಮನವಿಮಾಡಿಕೊಳ್ಳುತ್ತೇನೆ. ಇನ್ನು ಕೆಲವು ಕಡೆ ಫಾರೆಸ್ಟ್ ಪ್ರದೇಶ ಎಂದು ಇಟ್ಟುಕೊಂಡಿದ್ದೀರಿ. ನಾವು ಪರೀಕ್ಷೆ ಮಾಡಿನೋಡಿದ್ದೇವೆ, ಅಲ್ಲಿ ಮರಗಳೇ ಇರುವುದಿಲ್ಲ, ಅಲ್ಲಿರುವುದು ಮುಳ್ಳಿನ ಗಿಡ ಮಾತ್ರ. ಅದನ್ನು ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವಿಲ್ಲ. ಅಂತಹ ಕಡೆ ಸುತ್ತಮುತ್ತಲೂ ಜಮೀನಿಲ್ಲದೇ ಇರತಕ್ಕವರು ಯಾರಿದ್ದಾರೋ ಅವರಿಗೆ ಎರಡೆರಡು ಎಕರೆ ಜಮೀನು ಕೊಡಿ ಎಂದರೂ ಕೂಡ ಇಷ್ಟು ದಿವಸವಾದರೂ ಏರ್ಪಾಡು ಆಗದೇ ಇರುವುದು ಸರ್ಕಾರದ ಒಂದು ಉದಾಸೀನ ಮನೋಭಾವವೋ ಅಥವಾ ಆ ಜನಗಳ ದುರದೃಷ್ಟವೋ ಗೊತ್ತಿಲ್ಲ.

ಇನ್ನು ಟಿಂಬರ್ ಸಪ್ಲೈಮಾಡತಕ್ಕ ವಿಷಯದಲ್ಲಿ ಒಂದು ಮಾತು ಹೇಳಬೇಕಾಗಿದೆ. ಬಿಲ್ಡಿಂಗ್ ಮೆಟೀರಿಯಲ್ಸ್ ಸಪ್ಲೈಮಾಡುವುದಕ್ಕೆ ಒಂದು ರೇಟ್ ಪ್ರಕಾರ ಸೀನಿಯೊರೇಜ್ ಫಿಕ್ಸ್ ಮಾಡಿ ಲೈಸೆನ್ಸ್ ಕೊಡುತ್ತೀರಿ. 45 ರೂಪಾಯಿ ಬೆಲೆ ಆಗುವುದನ್ನು ಕಾಡಿನಿಂದ 200-300 ಮೈಲಿ ತರಬೇಕಾದರೆ ಮಧ್ಯದಲ್ಲೇ ಬೇರೆ ಯಾರಿಗಾದರೂ ಮಾರಿ ಬ್ಲಾಕ್‌ಮಾರ್ಕೆಟ್ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಹಾಗೆ ಆಗುತ್ತದೆ. ಆದ್ದರಿಂದ ಕಾಡಿಗೆ ಸ್ವಲ್ಪ ಹತ್ತಿರದಲ್ಲೇ ಇರುವ ತೋಪುಗಳಲ್ಲಿ ಮರದ ಸಾಮಾನುಗಳು ಸಿಕ್ಕುವಂತೆ ಮಾಡಿಕೊಡಬೇಕೆಂದು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತಾ ಇದ್ದೇವೆ. ಇವತ್ತಿನವರೆಗೂ ಕೂಡ ನಿರ್ದಿಷ್ಟವಾದ ಜವಾಬು ಬಂದಿಲ್ಲ. ಅದನ್ನು ಕೂಡ ಪರಿಶೀಲನೆ ಮಾಡುತ್ತಾರೆ ಎಂದು ತಿಳಿದುಕೊಂಡಿದ್ದೇನೆ.

ಶ್ರೀ ಗೋಪಾಲಗೌಡರು ಹೇಳಿದ ಹಾಗೆ ಕಾಡಿನಿಂದ ಸೌದೆಯ ಮರಗಳು ಲಾರಿಗಟ್ಟಲೆ ಹೋಗುತ್ತಾ ಇವೆ. ಹಿಂದೆ ಅನೇಕ ಸಾರಿ ಹೇಳಿದ್ದೇನೆ. ಇಂಡಸ್ಟ್ರಿಯಲ್ ವರ್ಕ್‌ಷಾಪ್ಸ್ ಮುಂತಾದ ಕಡೆಗಳಲ್ಲಿ ಎಲ್ಲಾ ಮರಗಳನ್ನು ಸೌದೆಗಾಗಿ ಉಪಯೋಗಿಸುತ್ತಾರೋ ಅಂಥ ಕಡೆ ಅದನ್ನು ತಪ್ಪಿಸಿ ಅವರಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಬೇಕೆಂದು ಸಲಹೆ ಮಾಡಿದ್ದೇನೆ. ಆ ವಿಚಾರದಲ್ಲಿ ಸರ್ಕಾರದವರು ಪರಿಶೀಲನೆ ಮಾಡುತ್ತೇವೆ, ಸಲಹೆ ಬಹಳ ಉತ್ತಮವಾದದ್ದು ಎಂದು ಜವಾಬು ಕೊಟ್ಟಿದ್ದರೂ ಕೂಡ ಇವತ್ತಿನವರೆಗೂ ಏನೇನು ಕಾರ್ಯಕ್ರಮ ಕೈಕೊಂಡಿದ್ದಾರೋ ನನಗೆ ಗೊತ್ತಿಲ್ಲ.

ಫೈರ್ ಪ್ರೊಟೆಕ್ಷನ್ ವಿಚಾರದಲ್ಲಿ ಒಂದು ಮಾತು ಹೇಳಬೇಕಾಗಿದೆ. ಕಾಡುಕಿಚ್ಚು ಬೀಳುತ್ತದೆ ಎಂದು ಹೇಳುತ್ತಾರೆ, ಅದನ್ನು ತಡೆಗಟ್ಟುವುದಕ್ಕೋಸ್ಕರ 50 ಸಾವಿರ ರೂಪಾಯಿಗಳನ್ನು ಬಜೆಟ್ಟಿನಲ್ಲಿ ಒದಗಿಸಿದ್ದೀರಿ. ಯಾರು ಬೆಂಕಿ ಹಾಕುತ್ತಾರೆಯೋ ಏನೋ? ಎಂದೂ ಗೊತ್ತಾಗುವುದಿಲ್ಲ. ನಾವು ಇದಕ್ಕಾಗಿ ಹಣ ಒದಗಿಸಿರುವುದರಿಂದ ಸರಿಯಾಗಿ ಸೂಪರ್‌ವೈಸ್ ಮಾಡಿ ಉದ್ದೇಶಪೂರ್ವಕವಾಗಿ ಯಾರಾದರೂ ಬೆಂಕಿ ಹಾಕುತ್ತಾರೆಯೋ ಅಥವಾ ತನಷ್ಟಕ್ಕೆ ತಾನೇ ಬೆಂಕಿ ಹೊತ್ತಿಕೊಳ್ಳುತ್ತದೆಯೋ ಎಂಬುದರ ಕಡೆಗೆ ನಿಗಾಇಟ್ಟು ಬೆಂಕಿ ಬೀಳದ ಹಾಗೆ ನೋಡಿಕೊಳ್ಳಬೇಕು.

ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಕಾಡಿನಲ್ಲಿ ಜನ ಹೋಗುತ್ತಾರಲ್ಲ ಅವರು ಬೆಂಕಿ ಕಡ್ಡಿ ಗೀರಿ ಆರಿಸದೆ ಹಾಗೆಯೇ ಹಾಕುವುದೂ ಉಂಟು.

3-30 P.M.

ಶ್ರೀ ಎಂ. ಚಿಕ್ಕಲಿಂಗಯ್ಯ.—ಜನಗಳಿಂದ ಏನಾದರೂ ತೊಂದರೆಯಾದ ಪಕ್ಷಕ್ಕೆ ಅದನ್ನು ಇಲಾಖೆಯವರು ಸುಲಭವಾಗಿ ತಪ್ಪಿಸಬಹುದೆಂದು ನನ್ನ ಅಭಿಪ್ರಾಯ.

ಆಮೇಲೆ, ಖೆಡ್ಡ ಆಪರೇಷನ್ನಿಗಾಗಿ ಎರಡು ಸಾವಿರ ರೂಪಾಯಿಗಳನ್ನು ಮಾತ್ರ ಇಟ್ಟಿದ್ದೀರಿ. ಚಾಮರಾಜನಗರ ತಾಲ್ಲೂಕಿನಲ್ಲಿ ಬಸವನಪುರದ ಕಡೆ ಆನೆಗಳು ಬಂದು ಫಸಲನ್ನೂ, ತೆಂಗಿನ ಗಿಡಗಳನ್ನೂ ಫೈಸಲು ಮಾಡುತ್ತಿವೆ. ಬೂದಿಪಡಗನಹಳ್ಳಿಯ ಕಡೆ ಬೇಕಾದಷ್ಟು ಆನೆಗಳಿವೆ. ಸರ್ಕಾರದವರು ಖೆಡ್ಡ ಕಾರ್ಯಕ್ರಮಗಳನ್ನು ಏರ್ಪಡಿಸುವುದರಿಂದ ನಷ್ಟ ಕೂಡ ಇಲ್ಲ. ಆದ್ದರಿಂದ ಈ ಕಾರ್ಯಕ್ರಮವನ್ನು ಇನ್ನೂ ಹೆಚ್ಚಿಸುತ್ತಾರೆಂದು ನಂಬಿದ್ದೇನೆ.

ಚಾಮರಾಜನಗರ ತಾಲ್ಲೂಕಿನಲ್ಲಿ 16-17-18ನೆಯ ಸರ್ವೆ ನಂಬರುಗಳನ್ನು ಹುಲ್ಲುಬನ್ನಿಗೆಂದು ಬಿಟ್ಟಿತ್ತು. ಅದಕ್ಕೊಂದು ದರವನ್ನು ಕೂಡ ಗೊತ್ತುಮಾಡಿದ್ದರು. ರೈತರು ಆ ದರವನ್ನು ಕೊಟ್ಟು ತಮ್ಮ ದನಕರುಗಳನ್ನು ಮೇಯಿಸಬಹುದಾಗಿತ್ತು. ಇಷ್ಟೆಲ್ಲಾ ಆಗುತ್ತಿದ್ದರೂ ಇದುವರೆಗೂ ಆ ಜಮೀನುಗಳನ್ನು ಖೇತವಾರಿ ರಿಜಿಸ್ಟರಿನಿಂದ ತೆಗೆದುಹಾಕಿಲ್ಲ. ಇಂಡೆಕ್ಸ್ ರಿಜಿಸ್ಟರಿನಲ್ಲಿ ಇವತ್ತಿಗೂ ಸೇರಿವೆ. ನೋಡಿದರೆ ಆ ಸರ್ವೆ ನಂಬರಿನಲ್ಲಿ

ಒಂದು ಮರವೂ ಇಲ್ಲ; ಫಾರೆಸ್ಟ್ ಎಂಬ ಚಿಹ್ನೆಯೂ ಇಲ್ಲ. ಬರೀ ಕುರುಚಲು ಗಿಡಗಳು ಮಾತ್ರ ಇವೆ. ಈ ಜಮೀನುಗಳನ್ನು ಹುಲ್ಲುಬನ್ನಿಗಾಗಿ ಬಿಡಿಸಿಕೊಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ಪಿ. ಆರ್. ರಾಮಯ್ಯ (ಬಸವನಗುಡಿ).—ಸ್ವಾಮಿ, ಪಟ್ಟಣಕ್ಕೆ ಸಂಬಂಧಪಟ್ಟ ಹಾಗೆ ಅರಣ್ಯದ ವಿಷಯದಲ್ಲಿ ಸ್ವಲ್ಪ ಮಾತನಾಡಬೇಕೆಂದಿದ್ದೇನೆ. ಅರಣ್ಯ ಇಲಾಖೆಗೆ ಸೇರಿದ್ದಾಗಿ ಬೆಂಗಳೂರಿನಲ್ಲಿ Forest Research Laboratory ಯೊಂದಿದೆ. ಇದು ಬಹಳ ಒಳ್ಳೆಯ ಕೆಲಸ ಮಾಡುತ್ತಿದೆ. ಇದನ್ನು ಈಚೆಗೆ ಇಂಡಿಯಾ ಸರ್ಕಾರದವರಿಗೆ ವಹಿಸಿಕೊಡುತ್ತಾರೆಂದು ಕೇಳಿ ಬಂದಿದೆ. ಇದರಿಂದಾಗಿ ಇದರ ಬಡಾವಣೆಗೆ ಮತ್ತು ಇದು ಮಾಡತಕ್ಕ ಕೆಲವು ಕೆಲಸಗಳಿಗೆ ಬಹಳ ಮಟ್ಟಿಗೆ ಲೋಪಬಂದಿದೆ. ಏಕೆಂದರೆ ಸರ್ಕಾರದವರು ಇದರ ಸಂಬಂಧವಾಗಿ ಒಂದು ಸರಿಯಾದ ನೀತಿಯನ್ನಿಟ್ಟುಕೊಂಡಿಲ್ಲ. ವರ್ಗಾಯಿಸುವುದಾದರೂ ಯಾವಾಗ ಮಾಡುತ್ತಾರೆಂಬುದನ್ನು ತೀರ್ಮಾನ ಮಾಡಬೇಕು. ಏನಿದ್ದರೂ ಬೇಗ ವರ್ಗಾಯಿಸಬೇಕು, ಇಲ್ಲದಿದ್ದರೆ ಅಲ್ಲಿನ ನೌಕರಮಾನೆಯವರಿಗೆ ತಕ್ಕ ಪ್ರೋತ್ಸಾಹ ಕೊಟ್ಟು ಕೆಲಸವನ್ನು ಮುಂದುವರಿಸಬೇಕು. ಹಾಲಿ ಈಗಿರತಕ್ಕ ನೀತಿಯಿಂದ ಈ ರಿಸರ್ಚ್ ಲ್ಯಾಬೊರೇಟರಿಗೆ ಬಹಳ ಆತಂಕವುಂಟಾಗಿದೆಯೆಂದರೆ ತಪ್ಪಲ್ಲ.

ಎರಡನೆಯದಾಗಿ ರೇಂಜರುಗಳನ್ನು ತಯಾರು ಮಾಡತಕ್ಕ ಸ್ಕೂಲು ತೃಪ್ತಿಕರವಾಗಿ ನಡೆಯುತ್ತಿಲ್ಲವೆಂದು ಅನೇಕ ಕಡೆಗಳಿಂದ ದೂರು ಬಂದಿದೆ. ಆದ್ದರಿಂದ ರೇಂಜರುಗಳ ಸ್ಕೂಲನ್ನು ಸರಿಯಾಗಿ ನಡೆಸುವ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ.

ಮೂಲಿಕೆಗಳ ವಿಷಯ. ತಾವು ನಿಜವಾಗಿಯೂ ಆಯುರ್ವೇದಕ್ಕೆ ಪ್ರೋತ್ಸಾಹ ಕೊಡಬೇಕಾದರೆ ನಮ್ಮ ಅರಣ್ಯವನ್ನು ಚೆನ್ನಾಗಿ ಮಾಡಬೇಕು. ಈಗ ಅರಣ್ಯ ಇಲಾಖೆಯಲ್ಲಿ ನಾನಾ ಮೂಲಿಕೆಗಳನ್ನು ತಿಳಿದಿರುವವರು ಇಲ್ಲ, ಅವುಗಳನ್ನು ಶೇಖರಿಸುವವರು ಇಲ್ಲ. ಆದಕಾರಣ ತಾವು ದಯವಿಟ್ಟು ಆಯುರ್ವೇದವನ್ನು ತಿಳಿದಿರುವವರನ್ನು ನೇಮಿಸಿ ಅರಣ್ಯದಲ್ಲಿರುವ ನಾನಾ ಮೂಲಿಕೆಗಳನ್ನು ಶೇಖರಿಸುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ನಾನು ಸೂಚಿಸಬಯಸುತ್ತೇನೆ.

ಶ್ರೀ ಡಿ. ಎಂ. ಗೋವಿಂದರಾಜು (ನೆಲಮಂಗಲ).—ಸ್ವಾಮಿ, ಅರಣ್ಯದ ವಿಷಯವಾಗಿ ಮಾನ್ಯ ಸದಸ್ಯರುಗಳು ಅನೇಕ ವಿಚಾರಗಳನ್ನು ಹೇಳಿದ್ದಾರೆ. ಅರಣ್ಯ ಅಭಿವೃದ್ಧಿಯ ದೃಷ್ಟಿಯಿಂದ ನಮ್ಮ ದೇಶದಲ್ಲಿ ಏರ್ಪಡಿಸಿರುವ ವನಮಹೋತ್ಸವ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಕೇಂದ್ರ ಸರ್ಕಾರದಲ್ಲಿ ಮಂತ್ರಿಗಳಾಗಿದ್ದ ಮಾನ್ಯ ಶ್ರೀ ಮುನ್ಷಿಯವರು ವನಮಹೋತ್ಸವವನ್ನು ಮೊದಲು ನಮ್ಮ ದೇಶದಲ್ಲಿ ಜಾರಿಗೆ ತಂದರು. ದೇಶದ ಅರಣ್ಯಸಂಪತ್ತಿನ ದೃಷ್ಟಿಯಿಂದ ಇದು ಬಹಳ ಅವಶ್ಯಕ. ಇದರಿಂದಾಗಿ ನಮ್ಮ ವನಸಂಪತ್ತು ಅಭಿವೃದ್ಧಿ ಹೊಂದಲು ಬೇಕಾದಷ್ಟು ಅವಕಾಶವಿದೆ. ಒಂದು ಸಾವಿರ ಮರಗಳನ್ನು ಹಾಕಿದರೆ ನೂರು ಮರಗಳಾದರೂ ಉಳಿಯುತ್ತವೆನ್ನಬಹುದು. ಈ ರೀತಿ ಮಾಡುತ್ತಾ ಹೋದರೆ ನಮ್ಮಲ್ಲಿನ ವೃಕ್ಷಸಂಪತ್ತು, ವನಸಂಪತ್ತು ಕ್ರಮೇಣ ವೃದ್ಧಿ ಹೊಂದಿಯೇ ಹೊಂದುತ್ತದೆ. ಈಗ ನಮ್ಮ ಮಾನ್ಯ ಸಚಿವರೂ ಈ ವಿಷಯದಲ್ಲಿ ಹೆಚ್ಚಿನ ಮುತುವರ್ಜಿ ವಹಿಸಿ ಕಾರ್ಯಕ್ರಮ ತೆಗೆದುಕೊಂಡಿದ್ದಾರೆ, ಮತ್ತು ಇನ್ನೂ ಅನೇಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವವರಾಗಿದ್ದಾರೆ.

ಆದರೆ, ನಮ್ಮ ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿರುವ ಕೆಲವು ಫಾರೆಸ್ಟುಗಳ ವಿಷಯ ಹೇಳುವುದಾದರೆ ಅಲ್ಲಿ ವಾಸ್ತವವಾಗಿ ಯಾವ ಗಿಡಮರಗಳೂ ಇಲ್ಲ. ನಾಮಕಾವಸ್ತೆ ಕಾಡಾಗಿದೆ. ಬರೀ ಲಾಂಟಾನಾ ಗಿಡಗಳು ಬೆಳೆಯುತ್ತಿವೆ. ನಮ್ಮ ನೆಲಮಂಗಲ ತಾಲ್ಲೂಕಿನಲ್ಲೇ ಕೃಷ್ಣರಾಜಪುರವೆಂಬ ಒಂದು ಬೇಚರಾಕ್ ಹಳ್ಳಿಯಿದೆ. ಅದನ್ನೀಗ ಅರಣ್ಯವೆಂದು ಭಾವಿಸಿ ಈಗ ನಾವುಗಳು ಸಾಗುವಳಿಗೆ ಎರಡೆರಡು ಎಕರೆಗಳನ್ನು ಜಮೀನಿಲ್ಲದವರಿಗೆ ಕೊಡಿಯೆಂದು ಹೇಳಿದರೂ ಕೊಟ್ಟಿಲ್ಲ. ಕೇಳಿದರೆ ಅಲ್ಲಿ ಯಾವುದೋ ಕೈಗಾರಿಕೆಯನ್ನು ಸ್ಥಾಪಿಸುತ್ತೇವೆಂದು ಹೇಳುತ್ತಾರೆ. ನೋಡಿದರೆ ಲಾಂಟಾನಾ ಬೆಳೆಯುವುದಕ್ಕೆ ಬಿಟ್ಟಿರುವಂತೆ ಕಾಣುತ್ತೆ. ಆದ್ದರಿಂದ afforest ಮಾಡುವುದಕ್ಕೆ ಎಲ್ಲೆಲ್ಲಿ ಸಾಧ್ಯವಿಲ್ಲವೋ ಆ ಪ್ರದೇಶಗಳನ್ನು ಸಾಗುವಳಿಗೆ ಕೊಡುವ ಏರ್ಪಾಡು ಮಾಡಬೇಕು. ದೇಶದಲ್ಲಿ ಈಗ ಫಾರೆಸ್ಟ್ ಎಂದು ಹೇಳಿ ಬಿಟ್ಟಿರುವ ಎಲ್ಲಾ ಭಾಗಗಳನ್ನೂ afforest ಮಾಡಬೇಕಾದರೆ ನೂರಾರು ವರ್ಷ ಬೇಕಾಗುತ್ತದೆ. ಹತ್ತು ವರುಷಗಳಲ್ಲಿ ಮಾಡುತ್ತೇವೆನ್ನುವುದು ಬರೀ ಭ್ರಾಂತಿ. ಆದ್ದರಿಂದ ಎಲ್ಲೆಲ್ಲಿ forest ಇಲ್ಲದೆ ಬರೀ ಲಾಂಟಾನಾಗಳು ಬೆಳೆದಿವೆಯೋ ಅಲ್ಲಿ ಸುತ್ತಮುತ್ತಲ ಗ್ರಾಮಸ್ಥರು ಕೇಳಿದಪಕ್ಷದಲ್ಲಿ ಎರಡೆರಡು ಎಕರೆಗಳನ್ನಾದರೂ ಕೊಟ್ಟು ಸಹಾಯ ಮಾಡಬೇಕೆಂದು ಹೇಳುತ್ತೇನೆ.

ಇನ್ನೊಂದು ಹೊಸ ಸಲಹೆಯನ್ನು ನಾನು ಸರ್ಕಾರದವರಿಗೆ ಕೊಡಬಯಸುತ್ತೇನೆ. ತಮ್ಮ ಉದ್ದೇಶ ಮುಖ್ಯವಾಗಿ afforest ಮಾಡಬೇಕೆಂಬುದೇ ಆಗಿದ್ದರೆ ಮತ್ತು ಮರಗಳನ್ನು ಮುಖ್ಯವಾಗಿ ಬೆಳೆಸಬೇಕೆಂಬುದೇ ಆಗಿದ್ದರೆ, ಸಾಗುವಳಿಗೆ ಈ ಜಮೀನುಗಳನ್ನು ಕೊಡುವುದರಲ್ಲಿ, ಎಕರೆಯೊಂದಕ್ಕೆ 20-30 ಮರಗಳನ್ನು ಬೆಳೆಸಬೇಕೆಂಬ ಒಂದು ಷರತ್ತನ್ನು ಹಾಕಿ ಕೊಡಬಹುದು. ಈ ರೀತಿ ಮಾಡಿದರೆ ನೀವು afforest ಕಾರ್ಯಕ್ರಮದ ಪ್ರಕಾರ ಎಷ್ಟು ಮರಗಳನ್ನು ಬೆಳೆಸಬೇಕೆಂದಿದ್ದೀರೋ ಅದರ ಹತ್ತರಷ್ಟು ಬೆಳೆಸುವುದಕ್ಕೆ ಸಾಧ್ಯವಾಗುತ್ತದೆ. ಈ ರೀತಿಯ ಷರತ್ತು ಹಾಕುವುದರಲ್ಲಿ ತೊಂದರೆಯೇನೂ ಇಲ್ಲ. ಖಂಡಿತವಾಗಿಯೂ ಜಾಗ್ರತೆಯಾಗಿ ಮತ್ತು ಇನ್ನೂ ಹೆಚ್ಚಿಗೆ ಮರಗಳು ಬೆಳೆದು ನೀವು ಯಾವ ಉದ್ದೇಶದಿಂದ ಈ ಪ್ರದೇಶಗಳನ್ನು ಅರಣ್ಯದ ಭಾಗವೆಂದಿಟ್ಟುಕೊಂಡಿದ್ದೀರೋ ಆ ಉದ್ದೇಶ ಸಾರ್ಥಕವಾಗುತ್ತದೆ.

ಕೊನೆಯದಾಗಿ ಇನ್ನೊಂದು ವಿಷಯ. ಅನೇಕ ಹಳ್ಳಿಗಳ ಪಕ್ಕದಲ್ಲೇ ಅರಣ್ಯಗಳಿವೆ. ಅಲ್ಲಿ ದನಗಳನ್ನು ಮೇಯಿಸಬೇಕಾದರೆ ಆ ಅರಣ್ಯಗಳಿಗೇ ಕಳುಹಿಸಬೇಕು. ಏಕೆಂದರೆ ನಮ್ಮ ಕಡೆ ಹಳ್ಳಿಗಳಿಗೆ ಗೋಮಾಳವಿಲ್ಲ. ಇಂಥ ಸಂದರ್ಭಗಳಲ್ಲಿ ಅರಣ್ಯಗಳಲ್ಲಿ ದನಗಳನ್ನು ಮೇಯಿಸಲು ಅವಕಾಶ ಕೊಡದೆ ಇದ್ದರೆ ರೈತರಿಗೆ ಬಹಳ ಅನಾನುಕೂಲವಾಗುತ್ತದೆ. ಆದ್ದರಿಂದ ಸರ್ಕಾರದವರು ಅರಣ್ಯಗಳಲ್ಲಿ ದನಗಳನ್ನು ಮೇಯಿಸುವುದಕ್ಕೆ ಅವಕಾಶ ಕೊಡಬೇಕು. ಬೇಕಾದರೆ ಮೇಕೆಗಳನ್ನು ಬಿಡಬೇಡಿ. ಅವುಗಳನ್ನು ಬಿಟ್ಟು ಮಿಕ್ಕ ದನಗಳಿಗೆ ಅವಕಾಶ ಕೊಡುವುದರಿಂದ ರೈತರಿಗೆ ವ್ಯವಸಾಯಕ್ಕೆ ಬಹಳ ಅನುಕೂಲಮಾಡಿಕೊಟ್ಟಂತಾಗುತ್ತದೆ. ಮಾನ್ಯ ಸಚಿವರು ಬಹಳ ಮೇಧಾವಿಗಳು. ಅರಣ್ಯದ ಸಂಬಂಧದಲ್ಲಿ afforestation ವಿಷಯದಲ್ಲೇ ಅಲ್ಲ, ವ್ಯವಸಾಯದ ವಿಷಯದಲ್ಲಿಯೂ ಅನೇಕ ಮಾರ್ಪಾಡುಗಳನ್ನು ಮಾಡಬೇಕೆಂಬ ಉದ್ದೇಶದಿಂದ ಉತ್ಸಾಹದಿಂದ ಕೆಲಸ ಮಾಡುತ್ತಿದ್ದಾರೆ. ಅವರು

(ಶ್ರೀ ಡಿ. ಎಂ. ಗೋವಿಂದರಾಜು.)

ನನ್ನ ಈ ಕೆಲವು ಸಲಹೆಗಳನ್ನು ಮನಸ್ಸಿಗೆ ತಂದು ಕೊಂಡು ಸೂಕ್ತ ಏರ್ಪಾಡುಗಳನ್ನು ಮಾಡುತ್ತಾ ರೆಂದು ನಂಬಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಟಿ. ಹನುಮಯ್ಯ (ಹಿರಿಯೂರು—ಅನುಸೂಚಿತ ಜಾತಿಗಳು).—ಅಧ್ಯಕ್ಷರೇ, ಸಾಧಾರಣವಾಗಿ ಅರಣ್ಯ ಸಂಪತ್ತನ್ನು ಹೆಚ್ಚಿಸಬೇಕು ಎನ್ನುವ ವಿಷಯದಲ್ಲಿ ಮಾನ್ಯ ಸದಸ್ಯರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ ಎಂದು ಹೇಳಬೇಕಾಗಿದೆ. ಮುಖ್ಯವಾಗಿ ಇಲ್ಲಿ ಅರಣ್ಯ ಸಂಪತ್ತು ಬೆಳೆಯುವುದಕ್ಕೆ ಸಾಧ್ಯವಿಲ್ಲವೇ ಇಲ್ಲ ಎಂಬುದ್ ಆಲೋಚಿಸತಕ್ಕದ್ದು ಪ್ರಥಮ ಕರ್ತವ್ಯ. ಸಾವಿರಾರು ಎಕರೆ ಜಮೀನು ಇದ್ದು ಹತ್ತು ವರ್ಷಗಳಾ ದರೂ ಕೂಡ ಗಿಡಗಳು ಬೆಳೆಯದೆ ಜನರು ಉಪವಾಸ ವಿದ್ದು ಸತ್ತರೂ ಚಿಂತೆಯಿಲ್ಲ. ಭೂಮಿಯನ್ನು ಮಾತ್ರ ಹಾಗೆಯೇ ಬಿಟ್ಟರೆ ಚೆನ್ನಾಗಿರುತ್ತದೆ ಎನ್ನುವ ವಾದ ಸರಿಯಾಗಿಲ್ಲ. ಉದಾಹರಣೆಗೆ ಹಿರಿಯೂರು ತಾಲ್ಲೂ ಕಿನ ಹತ್ತಿರ ಬೋವಿ ಜನಾಂಗದವರಿಗೆ ಕೊಟ್ಟಿರುವ ಜಮೀನನ್ನು ಸರ್ಕಾರದವರು ವಾಪಸ್ಸು ತೆಗೆದು ಕೊಂಡರು, ಎಂದರೆ, ಮಾರೀಕಣಿವೆ ಹತ್ತಿರ ಬೇಚ ರಾಕ್ ವಿಲೇಜ್ ಇರುವುದನ್ನು ಅರಣ್ಯ ಇಲಾಖೆಯವರು ತೆಗೆದುಕೊಂಡಿದ್ದಾರೆ. ಅದನ್ನು ವಾಪಸ್ಸು ಕೊಡಿ. ಜನಗಳು ಜಮೀನು ಮಾಡಬೇಕು ಅಂದರೆ ಇವೊತ್ತಿನ ದಿವಸ ಎಲ್ಲಿಯೂ ಭೂಮಿ ಸಿಕ್ಕುವುದಿಲ್ಲ. ಆದ್ದರಿಂದ ಪ್ರಜಾಪ್ರಭುತ್ವದಲ್ಲಿ ಪ್ರಜೆಗಳಪರವಾಗಿ, ಅಸೆಂಬ್ಲಿ ಪರ ವಾಗಿ, ನಮ್ಮಗಳ ಪರವಾಗಿ ನೀವು ಇಲ್ಲಿ ಕುಳಿತಿರುವಾಗ ಜನಗಳ ಹಿತವನ್ನು ಸರ್ಕಾರದ ಮಂತ್ರಿಗಳಾದ ನೀವು ಪ್ರಜೆಗಳ ಕಷ್ಟಸುಖಗಳೇ ನಮ್ಮ ಕಷ್ಟ ಸುಖಗಳೆಂದು ನೋಡಬೇಕಾದುದು ಪ್ರಜಾಪ್ರಭುತ್ವದ ಮುಖ್ಯ ಲಕ್ಷಣ. ಅಲ್ಲಲ್ಲಿ ದೊಡ್ಡದಾಗಿ ಬೆಳೆದಿರತಕ್ಕ ಗಿಡಗ ಳನ್ನು ಕಡಿಸಿ ಹಾಗೆಯೇ ಜನಗಳಿಗೆ ಕೊಡಿ ಎಂದು ಹೇಳುವದಿಲ್ಲ. ಆದ್ದರಿಂದ ಕಾಡು ಇರುವುದು ಅಗತ್ಯ. ಅರಣ್ಯಸಂಪತ್ತು ಇದ್ದರೆ ಮಳೆ ಬೆಳೆ ಬಂದು ಅನುಕೂಲವಾಗುತ್ತದೆ. ಉದಾರ ಮನೋಭಾವನೆ ಯನ್ನು ಮಾನ್ಯಮಂತ್ರಿಗಳು ಅನುಸರಿಸಬೇಕು. ಪಾಶ್ಚಾ ತ್ಯದೇಶದಲ್ಲಿ ಸಂಚರಿಸಿ ಯಾವ ಯಾವ ದೇಶದಲ್ಲಿ ಏನಿದೆ ಎಂಬುದನ್ನು ನೋಡಿಕೊಂಡು ಮಂತ್ರಿಗಳು ಹೆಚ್ಚಿನ ಅನುಭವವುಳ್ಳವರಾಗಿದ್ದಾರೆ. ದೇಶದ ಹಿತ ದೃಷ್ಟಿ, ಜನಗಳ ಹಿತದೃಷ್ಟಿ ಇಟ್ಟುಕೊಂಡು ಉದಾರ ಮನೋಭಾವನೆಯನ್ನು ಬೆಳೆಸಬೇಕು ಎಂದು ಅರಿಕೆ ಮಾಡಿಕೊಳ್ಳುತ್ತೇನೆ. ಸಾಧಾರಣವಾಗಿ ಪ್ರಜಾಪ್ರಭು ತ್ವದಲ್ಲಿ ನಮ್ಮ ಸರ್ಕಾರ ಬಂದಮೇಲೂ ಕೂಡ, ಶ್ರೀಮಾನ್ ಪ್ರಭಾಕರ್‌ರವರು ಹೇಳಿದಹಾಗೆ, ಹಿಂದಿನ ಸರ್ಕಾರದಲ್ಲಿ ಯಾವ ಪದ್ಧತಿಯನ್ನು ಅನುಸರಿಸಿಕೊಂಡು ಬಂದಿದ್ದಾರೋ ಅದೇ ನೀತಿಯನ್ನು ಅನುಸರಿಸಿ ಕೊಂಡು ಬರುತ್ತಿದ್ದಾರೆ. ಸಂಬಂಧಪಟ್ಟ ಅಧಿಕಾರಿ ಗಳು, ಸರ್ಕಾರದ ನೌಕರರು ಹೀಗಾಗಬೇಕು ಎಂದು ಹೇಳುತ್ತಾರೆ. ಹಾಗೆ ಮಾಡುವುದಕ್ಕೆ ಬಿಡಬಾರದು ಎಂದು ಹೇಳುತ್ತೇನೆ. ಉದಾಹರಣೆಗೆ ಮೈಸೂರು ದೇಶದಲ್ಲಿ ಇವೊತ್ತು ಹರಿಜನರಿಗೆ ಸಾಕಾದಷ್ಟು ಅನು ಕೂಲತೆಗಳಿಲ್ಲ. ಹರಿಜನರಿಗೆ ಎಷ್ಟೋ ದುಡ್ಡನ್ನು ಕೊಡುತ್ತಾರೆ. ಆದರೂ ಅವರು ಬಡವರಾಗಿಯೇ ಇರುತ್ತಾರೆ. ಸರ್ಕಾರದವರು ಬಡವರ ಕೈಗಾರಿಕೆ ಗಳನ್ನು ದೊಡ್ಡದೊಡ್ಡ ಐಶ್ವರ್ಯವಂತರ ಕೈಗೆಕೊಟ್ಟು ಬಡವರು ಕೂಲಿಯ ಆಳುಗಳಾಗಿ ದುಡಿಯುತ್ತಾ ಇರಲಿ ಎಂದು ಹೇಳುವಂತಿದೆ. Socialist patternನಲ್ಲಿ ಬಡವರು ಐಶ್ವರ್ಯವಂತರ ಮಟ್ಟಕ್ಕೆ ಬರುವುದಕ್ಕೆ ಆ ಕೈಗಾರಿಕೆಯನ್ನು ಅವರ ವಶಕ್ಕೆ ಬಿಟ್ಟು, ಸರಕಾರಕ್ಕೆ ಬರುವ ಆದಾಯವನ್ನು ಅವರ ತೆಗೆದುಕೊಳ್ಳುವುದಕ್ಕೆ ಬದಲು ಐಶ್ವರ್ಯವಂತರ ವಶಕ್ಕೆ ಬಡವರನ್ನು ಸಿಕ್ಕಿಸಿ ಉದ್ಧಾರ ಮಾಡುತ್ತೇವೆ ಎಂದು ಹೇಳುವುದು ಸರಿ ಯಲ್ಲ. ಹಿಂದಿನ ಕಾಲದಲ್ಲಿ ಬೇಜವಾಬ್ದಾರಿಯಾಗಿ ಯಾವ ತತ್ವವನ್ನು ಅನುಸರಿಸಿಕೊಂಡು ಬರುತ್ತಿದ್ದೆವೋ ಅದೇ ತತ್ವವನ್ನು ಅನುಸರಿಸುತ್ತಿದ್ದೇವೆಯೇ ಹೊರತು ಒಂದು ಇಂಚ ಕೂಡ ಮುಂದಕ್ಕೆ ಹೋಗಿಲ್ಲ. ನಾವೆಲ್ಲರೂ ಕಷ್ಟಪಟ್ಟು ಪ್ರಜಾಪ್ರಭುತ್ವ ಸರ್ಕಾರವನ್ನು ತಂದಿದ್ದರ, ಹಿಂದೆ ರಬ್ಬರ್ ಟಸ್ಸೆ ಹಾಕಿದಂತೆಯೇ ಇವತ್ತೂ ಹಾಕಿ ಕೊಂಡು ಬರುತ್ತಿದ್ದಾರೆ. ಯಾವ ಕೆಲಸ ಮಾಡಬೇಕಾ ದರೂ, ರೀತಿನೀತಿಗಳನ್ನೂ ಕ್ರಮವನ್ನೂ ಬದಲಾಯಿ ಸಿದರೆ, ದೇಶದಲ್ಲಿರತಕ್ಕ ಜನರು ಅಭಿವೃದ್ಧಿಯಾಗಬಹು ದಾಗಿದೆ. ಮೈಸೂರಿನಲ್ಲಿ ತಂಗಡಿಚಕ್ಕೆ ಕೈಗಾರಿಕೆ ಮುಖ್ಯವಾಗಿ ಹರಿಜನರ ಕೈಗಾರಿಕೆಯಾಗಿರುತ್ತದೆ. ಸರ್ಕಾರದವರು ತಮಗೆ ಬರಬೇಕಾದ ಆದಾಯವನ್ನು ತೆಗೆದುಕೊಂಡ್, ಅವರಿಗೆ ಈ ಕೈಗಾರಿಕೆಯನ್ನು ಕೊಟ್ಟರೆ ಖಂಡಿತವಾಗಿ ಅವರು ಆರ್ಥಿಕ ವಿಷಯದಲ್ಲಿ ಮುಂದುವರಿಯುವುದಕ್ಕೆ ಅನುಕೂಲವಾಗುತ್ತದೆ. ಹಾಗೆ ಮಾಡದೇ ಇದ್ದರೆ, ಹರಿಜನರಿಗೆ ಹೇಗೆ ಜಾಸ್ತಿ ದುಡ್ಡು ಬರುತ್ತದೆ ! ಆಳುಗಳಾಗಿ ದುಡಿಯರಿ ಎನ್ನುವ ಮನೋಭಾವನೆ ಬಿಡಬೇಕು. ಕೇಂದ್ರ ಸರ್ಕಾರದ ವರು ಹರಿಜನರಿಗೆ ಪ್ರಿಫರೆನ್ಸ್ ತೋರಿಸಿ ಎಂದು ಹೇಳುತ್ತಿದ್ದಾರೆ. ಆದರೆ ನಮಗೆ ಏನೂ ಮಾಡುತ್ತಾ ಇಲ್ಲ. ಮುಖ್ಯವಾಗಿ ಹರಿಜನರ ಕೈಯಲ್ಲಿರುವ ಚರ್ಮದ ಕೈಗಾರಿಕೆ, ಚಕ್ಕೆಯ ಕೈಗಾರಿಕೆಗಳನ್ನು ಅವರಿಗೇ ಕೊಟ್ಟು ಸರ್ಕಾರದವರು ತಮಗೆ ಬರುವ ಆದಾಯವನ್ನು ತೆಗೆದುಕೊಂಡು, ಸರ್ಕಾರದವರು ಈ ವಿಷಯಕ್ಕೆ ಹೆಚ್ಚು ಗಮನಕೊಟ್ಟು ಹರಿಜನರಿಗೆ ಸಹಾಯ ಮಾಡುತ್ತಾರೆಂದು ಹೇಳಿ ಈ ಎರಡ್ ಮಾತುಗಳನ್ನು ಮುಗಿಸುತ್ತೇನೆ.

* ಶ್ರೀ ಡಿ. ದೇವರಾಜ್ ಅರಸ್.—ಅನೇಕ ವರ್ಷ ಗಳಿಂದ ಈ ಮಾನ್ಯ ಸಭೆಯಲ್ಲಿ ಅರಣ್ಯ ಶಾಖೆಯ ಆಡಳಿತದ ವಿಷಯವಾಗಿ ಬಹು ಭಾಗವನ್ನು ಟೀಕೆ ಮಾಡಿದ್ದಾರೆ. ಈಗ ಒಂದೆರಡು ವರ್ಷಗಳಿಂದೀಚೆಗೆ ಈ ಇಲಾಖೆಯಲ್ಲಿ ಸ್ವಲ್ಪಮಟ್ಟಿಗೆ ಆಡಳಿತ ದಕ್ಷತೆ ಹೆಚ್ಚುತ್ತಾ ಇದೆ ಎಂದರೆ ಅದು ಅತಿಶಯೋಕ್ತಿಯಲ್ಲ ಆದರ ದಕ್ಷತೆ ಹೆಚ್ಚುತ್ತಾ ಇದೆ ಎಂದ ಮಾತ್ರಕ್ಕೆ ಎಲ್ಲವೂ ಸರಿಯಾಗಿದೆ, ದೇಶಕ್ಕೆ, ಜನರಿಗೆ, ಈ ಅರಣ್ಯ ಇಲಾಖೆಯಿಂದ ಒದಗಬೇಕಾದ ಸೌಕರ್ಯಗಳು ಎಲ್ಲ ರೀತಿಯಲ್ಲೂ ಒದಗುತ್ತಿದೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಇತ್ತೀಚೆಗೆ ಮರಮುಟ್ಟುಗಳ ಬೆಲೆ ಬಹಳವಾಗಿ ಏರುತ್ತಿದೆ. ನಾವು ತೇಗದ ಮರವನ್ನು ತೆಗೆದುಕೊಂಡರೆ, ಸರ್ಕಾರದವರು ಈಗ ಸಾಧಾರಣ ವಾಗಿ ಕೆಳಮಟ್ಟದ ತೇಗದ ಮರವನ್ನು 12-13 ರೂಪಾಯಿಗಳಿಗೆ ಹರಾಜು ಹಾಕುತ್ತಾರೆ. ಉತ್ತಮ ದರ್ಜೆಯ ಮರವನ್ನು 15-20 ರೂಪಾಯಿಗಳಿಗೆ ಹರಾಜು ಹಾಕುತ್ತಾರೆ. ಇದು ಸರ್ಕಾರದ ಡಿಪೋಗಳಲ್ಲಿ ಜಗತಕ್ಕ ಹರಾಜಿನ ವಿಚಾರ. ಅದು ವ್ಯಾಪಾರಗಾರರ ಕೈಗೆ ಸಿಕ್ಕಿ ಮನೆಕಟ್ಟು ವುದಕ್ಕೆ ಮುಟ್ಟುಗಳನ್ನು ಮಾಡುವುದಕ್ಕೆ ಇತ್ಯಾದಿ ಕೆಲಸಗಳಿಗೆ ಉಪಯೋಗ ಮಾಡುವುದಕ್ಕೆ ಇನ್ನೂ ಹೆಚ್ಚಿನ ದುಡ್ಡು ಬೀಳುತ್ತದೆ. ನಮ್ಮ ಕಾಡು ಪ್ರದೇಶ ದಲ್ಲಿ ಅನೇಕ specifications ಮಾಡಿದೆ. Classified timbers ಎಂದು ಒಂದು ಜಾತಿಯ ಮರಗ ಳೆಂದು ಕ್ಲಾಸಿಫೈ ಮಾಡಿ ಇದರ ಜಾತಿ ಕಾಡು ಜಾತಿ ಎಂದು ತಿಳಿದುಕೊಂಡು ಬಂದಿದ್ದಾರೆ. ಅಂತಹ ಮರ ಗಳಲ್ಲಿ ಬಿಲ್ವಾರದಮರ, ಮಾವಿನಮರ, ಇಂತಹ

ಮರಗಳು ಒಂದು ಅಡಿಗೆ 2-3 ರೂಪಾಯಿ ಬೆಲೆಯಾಗುವಂಥ ಸನ್ನಿವೇಶ ಬಂದಿದೆ. ಹಿಂದೆ ಹತ್ತು ಗಾಡಿಗಳಿಗಿಂತಲೂ ಜಾಸ್ತಿ ಇರುವ 100 ಅಡಿ ಮಾವಿನ ಮರವನ್ನಾಗಲಿ, ಬಿಲ್ವಾರದ ಮರವನ್ನಾಗಲಿ ಪುಕಸಟ್ಟೆಯಾಗಿ ಕಡಿದುಕೊಂಡು ಹೋಗಿ ಎನ್ನುವ ಸನ್ನಿವೇಶವಿತ್ತು. ಈಗ ಅದೇ ಮರಕ್ಕೆ 2-3 ರೂಪಾಯಿ ಬೆಲೆ ಬಂದಿದೆ. ಈ ರೀತಿ ಮರದ ಬೆಲೆ ಬಹಳವಾಗಿ ಹೆಚ್ಚುತ್ತಾ ಇರುವಾಗ ನಮ್ಮ ಜನಗಳಿಗೆ ಮನೆ ಕಟ್ಟುವುದಕ್ಕೆ ಮರ ಸಿಕ್ಕುವುದು ಬಹಳ ತೊಂದರೆಯಾಗಿದೆ. ಕುಲುಬೆ, ಮತ್ತಿ ವಗೈರೆ ಮರಗಳು ಇವೆ. ಕುಲುಬೆಮರ ನೇರವಾಗಿ ಒಂದೇ ಸಮನಾಗಿ ಬೆಳೆಯುತ್ತದೆ. ಹಿಂದೆ ಇಂತಹ ಮರಗಳನ್ನು ಪುಕಸಟ್ಟೆಯಾಗಿ ತೆಗೆದುಕೊಂಡು ಹೋಗುವುದಕ್ಕೆ ಅವಕಾಶವಿತ್ತು. ಈಗ ಇಂತಹ ಮರಗಳಿಗೆ ಅಡಿಗೆ 4,5,6 ರೂಪಾಯಿಗಳು ಕೊಡಬೇಕಾದ ಸನ್ನಿವೇಶವಿದೆ. ಹೀಗಿರುವಾಗ ಸರ್ಕಾರದವರು ಮತ್ತು ಇಲಾಖೆಯವರು ಫಾರೆಸ್ಟ್ ಇರುವ ಭಾಗದಲ್ಲಿ ಅದನ್ನು ಸರಿಯಾಗಿ ನೋಡಿಕೊಂಡು ಹೋಗಬೇಕು. ಫಾರೆಸ್ಟ್‌ನಲ್ಲಿ ಹೊಸದಾಗಿ ಪ್ಲಾಂಟೇಷನ್ ಹಾಕಬೇಕು. ತೇಗದ ಮರಗಳು ನಮ್ಮ ಮೈಸೂರು ಸೀಮೆಯ ಅರಣ್ಯ ಇಲಾಖೆಯಲ್ಲಿವೆ. ಹೆಚ್ಚಿನ ಪ್ಲಾಂಟೇಷನ್ ತೇಗದ ಮರ, ಇನ್ನೂ ಕೆಲವು ಕಡೆ ಸೌದೆಗೆ ಉಪಯೋಗವಾದ ಮರಗಳನ್ನೂ ಹಾಕಿದ್ದಾರೆ. ಇದು ವಿನಾ ಬಾಕಿ ಜಾತಿ ಮರಗಳನ್ನು ಬೆಳೆಸುವುದಕ್ಕೆ ಸಾಕಷ್ಟು ಪ್ರಯತ್ನ ನಡೆಯುತ್ತಾ ಇಲ್ಲ. ಜೊತೆಗೆ ಕಾಡು ಜಾತಿ ಮರಗಳನ್ನು ಇದುವರೆಗೆ ಬಿಟ್ಟುಕೊಂಡು ಬಂದಿದ್ದಾರೆ. ಈ ಇಲಾಖೆಯಲ್ಲಿ ಆ ಜಾತಿಯ ಮರಗಳಿಗೆ ಹೆಚ್ಚು ಪ್ರಾಮುಖ್ಯತೆ ಇರಲ್ಲಿಲ್ಲ. ಅಂತಹ ಎಲ್ಲ ಮರಗಳನ್ನೂ ಕೂಡ ಹಿಂದೆ ಸೌದೆಗಾಗಿ ಉಪಯೋಗಿಸುತ್ತಿದ್ದರು. ಉತ್ತಮ ದರ್ಜೆ ಮರಗಳಿಗೆ ಖರೀದಿ ಬಹಳ ಜಾಸ್ತಿಯಾಗಿರುವುದರಿಂದ ಜನಗಳು ಮರಗಳನ್ನು ಮನೆ ಕಟ್ಟಿಕೊಳ್ಳುವುದಕ್ಕೂ ಮತ್ತು ಮರಮುಟ್ಟುಗಳಿಗೂ ಕೂಡ ಉಪಯೋಗಿಸುತ್ತಿದ್ದಾರೆ. ಆದರೆ ಹೀಗೆ ಉಪಯೋಗಮಾಡುವುದರಲ್ಲಿ ಕೆಲವು ನ್ಯೂನತೆಗಳಿವೆ. ಈ ಮರಗಳಿಗೆ ಕ್ರಿಮಿಕೀಟಗಳ ಬಾಧೆ ಜಾಸ್ತಿ. ಈ ಮರಗಳಿಗೆ ವಿಶೇಷವಾಗಿ ಕುಟ್ಟೆ ಹಿಡಿಯುತ್ತದೆ, ಗೆದ್ದಲು ತಿನ್ನುತ್ತದೆ. ಅರಣ್ಯ ಇಲಾಖೆಯಿಂದ ಕಾಡು ಜಾತಿ ಮರಗಳಿಗೆ, ಯಾವುದನ್ನುಪಯೋಗಿಸುತ್ತೇವೋ ಆ ಮರಗಳಿಗೆ, ಕ್ರಿಮಿಕೀಟಗಳ ಬಾಧೆ ತಪ್ಪಿಸುವುದಕ್ಕೆ ವೈಜ್ಞಾನಿಕವಾದ ಯಾವುದೋ ಒಂದು wood preservation plant ಇಟ್ಟಿದ್ದೇವೆಂದು ಹೇಳುತ್ತಾರೆ; ಆದರೆ ಅದು ಸಾರ್ವಜನಿಕರ ಉಪಯೋಗಕ್ಕೆ ಒದಗುವುದಿಲ್ಲ. ಈ ಕಾಡುಮರಗಳು ಸಾರ್ವಜನಿಕರಿಗೆ ಸದುಪಯೋಗವಾಗುವ ರೀತಿಯಲ್ಲಿ, ಚೆನ್ನಾಗಿ ಬಾಳಿಕೆಬರುವ ರೀತಿಯಲ್ಲಿ, ಅರಣ್ಯ ಇಲಾಖೆಯವರು ಯಾವುದಾದರೂ ಸಂಶೋಧನೆ ನಡೆಸಿ, ಏನಾದರೂ ಮಾರ್ಗವನ್ನು ಕಂಡುಹಿಡಿದು, 'ಟ್ರೀಟ್' ಮಾಡಿ, ಅನುಕೂಲ ಮಾಡಿಕೊಡುವ ಅಗತ್ಯತೆ ಬಹಳವಾಗಿದೆಯೆಂದು ಸರ್ಕಾರಕ್ಕೆ ಒತ್ತಾಯವಾಗಿ ಹೇಳುತ್ತೇನೆ.

ಬೊಂಬುಗಳ ವಿಚಾರವನ್ನು ಶ್ರೀ ಗೋಪಾಲಗೌಡರು ಪ್ರಸ್ತಾಪ ಮಾಡಿದರು. ಬೆಂಗಳೂರಿನಲ್ಲಿ ಒಂದು ಸಿನಿಮಾ ಮಂದಿರದ ಹತ್ತಿರ ಒಂದು ಮನೆಯನ್ನು ಕಟ್ಟಿದ್ದಾರೆ. ಅದರಲ್ಲಿ ಬೊಂಬನ್ನೇ ಉಪಯೋಗಿಸಿದ್ದಾರೆ. ತೊಲೆಯನ್ನು ಹಾಕಿ ಕಟ್ಟಿದರೆ ಎಷ್ಟು ಶಕ್ತಿಯಿರುತ್ತದೆಯೋ ಬೊಂಬುಗಳನ್ನು ಜೋಡಿಸಿ, ಮರದಹಾಗೆ ಉಪಯೋಗ ಮಾಡಿದರೂ ಅಷ್ಟೇ ಗಟ್ಟಿಯಾಗಿರುತ್ತದೆ. ಬೊಂಬುಗಳನ್ನು treat ಮಾಡಿ ಮರಕ್ಕೆ ಬದಲು ಉಪಯೋಗಿಸಿರುವುದನ್ನು ನಾನು ನೋಡಿದೆ. ಬೊಂಬನ್ನು ತಿಂಗಳುಗಟ್ಟಲೆ ನೀರಿನಲ್ಲಿ ನೆನೆಹಾಕಿದರೆ ಅದರ ಶಕ್ತಿ ಹೆಚ್ಚುತ್ತದೆ. ಈಗ ಸರ್ಕಾರದವರು ಖಾಸಗಿ ಜನರಿಗೆ ಲೈಸೆನ್ಸ್ ಕೊಟ್ಟು ಅವರೇ ಬೊಂಬುಗಳನ್ನು ಕಡಿದುಕೊಂಡು ಹೋಗುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ಈಗ ಮರದ ಅಭಾವವಿರುವ ಕಾಲದಲ್ಲಿ, ಬೆಲೆ ಜಾಸ್ತಿಯಾಗಿರುವ ಕಾಲದಲ್ಲಿ ಅನೇಕ ಬಡವರಿಗೆ ಬೊಂಬು ಸಿಕ್ಕಿದರೂ ಸಾಕು. ಹೆಂಚನ್ನು ಕುಂಬಾರರು ಸ್ಥಳದಲ್ಲೇ ಮಾಡುವುದರಿಂದ ಅಲ್ಲೇ ತೆಗೆದುಕೊಳ್ಳುತ್ತಾರೆ. ಮನೆ ಕಟ್ಟಲು ಬೊಂಬಿದ್ದರೆ, ನನ್ನ ಅನುಭವಕ್ಕೆ ಬಂದಿರುವ ಹಾಗೆ, ಇನ್ನಾವ ಮರವೂ ಬೇಕಾಗಿಲ್ಲ. ಬೊಂಬನ್ನು ಉಪಯೋಗಿಸಿ ಕಟ್ಟಿದ ಮನೆಗಳು ಮೂವತ್ತು-ನಲವತ್ತು ವರ್ಷ ಬಾಳಿಕೆ ಬರುತ್ತವೆ. ಸರ್ಕಾರದವರು ಅಲ್ಪ ವರಮಾನದವರಿಗಾಗಿ ಗೃಹನಿರ್ಮಾಣ ಯೋಜನೆ ಮಾಡಿದ್ದಾರೆ. ಪಬ್ಲಿಕ್‌ವರ್ಕ್ಸ್ ಇಲಾಖೆಗೆ ಅಂದಾಜು ತಯಾರುಮಾಡಬೇಕೆಂದು ಹೇಳಿದರೆ, ಒಬ್ಬರು ಕುಳಿತುಕೊಳ್ಳುವ ರೂಮನ್ನು ಕಟ್ಟಲು ಎರಡು ಸಾವಿರ ರೂಪಾಯಿನ ಅಂದಾಜು ಮಾಡಿಕೊಡುತ್ತಾರೆ. ಎಲ್ಲ ಕಟ್ಟಡಗಳ ವಿಷಯದಲ್ಲಿಯೂ ಹೀಗೆಯೇ ಮಾಡುತ್ತಾರೆ. ಸುಲಭವಾಗಿ ಪ್ರೈಮರಿ ಸ್ಕೂಲುಗಳನ್ನು ಕಟ್ಟುವುದಕ್ಕೆ ಹೊಸ ವಿಧಾನವೆಂದು ಹೇಳಿ ಒಂಭತ್ತಂಗುಲದ ಗೋಡೆ ಕಟ್ಟಿ ಚಾವಣಿಗೆ ಕಲ್ನಾರು ಷೀಟುಗಳನ್ನು ಹಾಕಿ ಎಂದು ಹೇಳಿದ್ದಾರೆ. ಗೋಡೆಯ ಭದ್ರತೆಯನ್ನು ಯೋಚನೆ ಮಾಡುವುದಿಲ್ಲ. ಇದು ಸ್ವಲ್ಪ ದಿವಸದಲ್ಲೇ ಬಿದ್ದುಹೋಗುತ್ತದೆ. ಹೊರಗಡೆಯ ಗೋಡೆ ಒಂಭತ್ತು ಅಂಗುಲ ದಪ್ಪ ಕಟ್ಟಿದರೆ ಅದು ಶಾಶ್ವತವಾಗಿರುತ್ತದೆಂದು ನಂಬುವುದಕ್ಕಾಗುವುದಿಲ್ಲ. ಕಾಡುಗಳಿರುವ ಪ್ರದೇಶದಲ್ಲೇ ಬೊಂಬುಗಳು ಸಿಕ್ಕುವುದು. ದೇಶಾದ್ಯಂತ ಕಾಡುಗಳಿಲ್ಲ. ಮೈದಾನದಲ್ಲಿ ಬೊಂಬುಗಳು ಸಿಕ್ಕುವುದೂ ಕಷ್ಟ. ಕೋಲಾರ, ಚಿಕ್ಕಮಗಳೂರು ಮುಂತಾದ ಕಡೆಗಳಲ್ಲಿ ಮಾಳಿಗೆ ಮನೆಗಳನ್ನು ಕಟ್ಟುತ್ತಾರೆ. ಅಲ್ಲಿ ಮರಮುಟ್ಟುಗಳೂ ಸಿಕ್ಕುವುದಿಲ್ಲ, ಬೊಂಬುಗಳೂ ಸಿಕ್ಕುವುದಿಲ್ಲ, ಇವುಗಳಿಗೆ ಅಭಾವ, ಆದುದರಿಂದ ಹಂಗರದ ಕಡ್ಡಿಯನ್ನು ಹಾಕಿ ಕಟ್ಟುತ್ತಾರೆ. ವರ್ಷವರ್ಷವೂ ತೂತಾಗಿ ನೀರು ಸೋರುತ್ತದೆ, ಪುನಃ ಮುಚ್ಚುತ್ತಾರೆ, ಹೀಗೆ ಮನೆಗಳನ್ನು ಕಟ್ಟಿಕೊಂಡು ಕಷ್ಟಪಡುತ್ತಿದ್ದಾರೆ. ಆದುದರಿಂದ ಅರಣ್ಯ ಇಲಾಖೆಯವರು ಬೊಂಬುಗಳು ಹೆಚ್ಚು ಶಕ್ತಿ ಮತ್ತು ಬಾಳಿಕೆ ಬರುವ ರೀತಿಯಲ್ಲಿ ಹೇಗೆ ಹದ ಮಾಡಬಹುದೆಂದು ಕಂಡುಹಿಡಿದರೆ, ದೇಶಾದ್ಯಂತ ಬಡವರಿಗೆ ಅನುಕೂಲವಾಗುತ್ತದೆ. ಅನುಕೂಲಸ್ಥರು ತಾರಸಿ ಮನೆಗಳನ್ನು ಕಟ್ಟಿಕೊಳ್ಳುವವರಿಗೆ ಬೊಂಬುಗಳು ಬೇಕಾಗುವುದಿಲ್ಲ. ಆದರೆ ಹಳ್ಳಿಗಳಲ್ಲಿ ಲಕ್ಷಾಂತರ ಬಡಜನರು ಮನೆಗಳನ್ನು ಕಟ್ಟಲು ಹಣವಿಲ್ಲದೆ ಶಕ್ತಿಯಿಲ್ಲದೆಯಿರುವವರಿಗೆ ಸರ್ಕಾರದವರು ನೇರವಾಗಿ ಈ ಬೊಂಬುಗಳನ್ನು ಕಡಿಸಿ, 'ಟ್ರೀಟ್' ಮಾಡಿಕೊಟ್ಟರೆ ಎಷ್ಟೋ ಅನುಕೂಲ. ಇದನ್ನು ವೈಜ್ಞಾನಿಕ ರೀತಿಯಲ್ಲಿ ಹೇಗೆ ಮಾಡಬಹುದೆಂಬುದನ್ನು ಇಲಾಖೆಯವರು ಯೋಚನೆ ಮಾಡಬೇಕು. ಹೀಗೆ ಎಲ್ಲ ಜಿಲ್ಲೆಗಳಲ್ಲಿಯೂ ಎಲ್ಲ ತಾಲ್ಲೂಕುಗಳಲ್ಲಿಯೂ ಯಾವ ಜನರು ಬೊಂಬುಗಳನ್ನುಪಯೋಗಿಸಿ ಮನೆಗಳನ್ನು ಕಟ್ಟಲು ಇಷ್ಟಪಡುತ್ತಾರೋ ಅವರಿಗೆ ಒದಗಿಸುವುದಕ್ಕೆ ಈ ಇಲಾಖೆ ಪ್ರಯತ್ನಮಾಡಬೇಕೆಂದು ಸಲಹೆ ಮಾಡುತ್ತೇನೆ.

ಇನ್ನೊಂದು ವಿಷಯ. ನಮ್ಮ ಕಾಕನಕೋಟೆ, ಹೆಗ್ಗಡದೇವನಕೋಟೆ, ಬಂಡೀಪುರ, ಇಂಥ ಸ್ಥಳ

(ಶ್ರೀ ಡಿ. ದೇವರಾಜ್ ಅರಸ್.)

ಗಳಲ್ಲಿ ಕಾಡಿನಲ್ಲಿ ಬೇಕಾದಷ್ಟು ಹುಲ್ಲು (fodder) ಬೆಳೆದು ಬೇಸಿಗೆಯಲ್ಲಿ ಅದು ಒಣಗಿಹೋಗಿ ಬೆಂಕಿ ಬೀಳುತ್ತದೆ. ಹಳ್ಳಿಗಳಲ್ಲಿ ರೈತರಿಗೆ ಹುಲ್ಲಿನ ಅಭಾವವಿದೆಯಾದುದರಿಂದ ಈ ಹುಲ್ಲನ್ನು ಕತ್ತರಿಸಿ ರೈತರಿಗೊದಗಿಸುವ ಏರ್ಪಾಡು ಮಾಡುವುದು ಸೂಕ್ತವೆಂಬುದನ್ನು ಯೋಚನೆ ಮಾಡಬೇಕು. ಇದು ಕಷ್ಟವೆಂದು ಸರ್ಕಾರದವರು ಹೇಳುವುದಾದರೆ, ಬೊಂಬಾಯಿನಲ್ಲಿ ವಿಕ್ಟೋರಿಯಾ ಗಾಡಿಗಳು ಹೆಚ್ಚು, ಆ ಕುದುರೆಗಳಿಗೂ ದನ ಎಮ್ಮೆಗಳಿಗೂ ಪಶ್ಚಿಮಘಟ್ಟಗಳಿಂದ ಹುಲ್ಲನ್ನು ಸುಮಾರು ನೂರು ಇನ್ನೂರು ಮೈಲಿ ದೂರ ತಂದು ಸರಬರಾಯಿ ಮಾಡುತ್ತಾರೆ, ಅವರಿಗೆ ಹೇಗೆ ಸಾಧ್ಯವೆಂದು ಕೇಳುತ್ತೇನೆ. ನಮ್ಮಲ್ಲಿ ಹುಲ್ಲು ಬೇಕಾದಷ್ಟು ಬೆಳೆದರೂ ಪ್ರಯೋಜನವಿಲ್ಲದೆ, ಬೇಸಿಗೆಯಲ್ಲಿ ಬೆಂಕಿ ಬಿದ್ದು ಹಾಳಾಗುತ್ತಿರುವುದರಿಂದ, ಬೇಸಿಗೆಯಲ್ಲಿ ಅನೇಕ ದನಗಳು ಮೇಯಲು ಹುಲ್ಲಿಲ್ಲದೆ ಸಾಯುತ್ತವೆ. ಹಣ ಕೊಟ್ಟರೂ ಹುಲ್ಲು ಸಿಕ್ಕುವುದಿಲ್ಲ. ಹೀಗಿರುವಾಗ ಈ ಹುಲ್ಲನ್ನು ಅಭಾವವಿರುವ ಕಡೆಗೆ ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕು. ಈ ವಿಚಾರವನ್ನು ಅರಣ್ಯ ಇಲಾಖೆ ತೀವ್ರವಾಗಿ ಯೋಚನೆ ಮಾಡಬೇಕು.

ಇನ್ನು ಸೌದೆಗೆ ರಹದಾರಿ ಕೊಡುವ ವಿಚಾರ. ಯುದ್ಧಕಾಲದಲ್ಲಿ ಮೈಸೂರು, ಬೆಂಗಳೂರು ಇಂಥ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಸೌದೆಯ ಅಭಾವ ಉಂಟಾದ ಕಾರಣ ಲಾರಿಗಳಿಂದ ಸೌದೆಯನ್ನು ಕಾಡುಗಳಿಂದ ಸಾಗಿಸುವುದಕ್ಕೆ ಅನುಕೂಲ ಮಾಡಿದರು. ಕಾಡುಗಳಲ್ಲಿ 'ಕೂಪ್ಸ್' ಎಂದು ಮಾಡಿದರು. ಯಾವುದಾದರೂ ಗೊತ್ತಾದ ಪ್ರದೇಶದಲ್ಲಿ, ಇಷ್ಟು ಪ್ರದೇಶದಲ್ಲಿ ಇಷ್ಟು ಮರಗಳನ್ನು ಕಡಿದು ಸಾಗಿಸಬಹುದೆಂದು ಗೊತ್ತುಮಾಡಿದರು. ಇದಕ್ಕೆ 'ಕೂಪ್ಸ್' ಎಂದು ಹೆಸರು. ಹೊಸದಾಗಿ ಮರಗಳನ್ನು ಕಡಿದು ಲಾರಿಗಳಲ್ಲಿ ಸಾಗಿಸುವುದಕ್ಕೆ ಏರ್ಪಾಡು ಮಾಡಿದರು. ಈ ಪದ್ಧತಿ ಈಗಲೂ ನಡೆದುಕೊಂಡು ಬರುತ್ತಿದೆ. ಕೆಲವು ಪಟ್ಟಣಗಳಿಗೆ ಸೌದೆಯನ್ನು ಕಡಿದು ಕಳುಹಿಸಬೇಕಾದುದು ನ್ಯಾಯ. ಕಾಡಿನ ಹತ್ತಿರವಿರುವ ಅಥವಾ ದೂರದಲ್ಲಿರುವ ರೈತರು ಆ ಕಾಡಿನಿಂದ ಸೌದೆಯನ್ನು ತೆಗೆದುಕೊಂಡು ಹೋಗಬೇಕಾದರೆ ಒಣಸೌದೆಯನ್ನು ಮಾತ್ರ ತರಬಹುದೆಂದು ಕಾನೂನು ಮಾಡಿದ್ದಾರೆ. ಮೊದಲು ಗಾಡಿಗೆ ರಹದಾರಿಗೆ ಆರಾಣೆ ಕೊಡಬೇಕಾಗಿತ್ತು, ಈಗ ಹನ್ನೆರಡಾಣೆ ಮಾಡಿದ್ದಾರೆ. ಒಣಸೌದೆಯನ್ನು ಮಾತ್ರ ತರಬಹುದು, ಹಸಿಸೌದೆಯನ್ನು ತರುವಹಾಗಿಲ್ಲ. ಒಂದು ಸಣ್ಣ ಹಸಿಯ ರೆಂಬೆಯನ್ನು ಸೌದೆಯ ಜೊತೆಗೆ ಹಾಕಿಕೊಂಡು ಬಂದರೆ ಅವರಿಗೆ ಜುಲ್ಮಾನೆ ಹಾಕುತ್ತಾರೆ.

4 P.M.

ಇದನ್ನು ಸರ್ಕಾರದವರಲ್ಲಿ ನಾನು ಈಗಾಗಲೇ ಮನವಿಮಾಡಿಕೊಂಡೆ. ಯಾವ ಒಂದು ಕಾನೂನಿದ್ದರೂ, ಲಾರಿಗಳಲ್ಲಿ ಬೇಕಾದಷ್ಟು ಹಸಿ ಸೌದೆಯನ್ನು ಹಾಕಿ ತರುವುದಕ್ಕೆ ಮಾತ್ರ ಬಿಟ್ಟು, ಒಬ್ಬ ರೈತ ತನ್ನ ಮನೆಗೆ ಒಂದು ಗಾಡಿಯಲ್ಲಿ ಹಸಿ ಸೌದೆ ತರಬೇಕು ಎಂದರೆ ಬಿಡುವುದಿಲ್ಲ. ಹೀಗೆ ಹೇಳಿದರೆ ಇದು ಬಹಳ ವಿಚಿತ್ರವಾಗಿ ಕಾಣುತ್ತದೆ. ಆದುದರಿಂದ ಈ ಕಾನೂನನ್ನು ದಯವಿಟ್ಟು ಬದಲಾಯಿಸಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಆಗಲೇ ಮನವಿ ಮಾಡಿಕೊಂಡಿದ್ದರೂ ಕೂಡ ಆ ರೀತಿ ಮಾಡದೆ ಇರುವುದಕ್ಕೆ ಅವರಿಗೆ ಏನು ಕಷ್ಟವಿದೆಯೋ, ಏನು ಅಡಚಣೆಬಂತೋ ಗೊತ್ತಾಗಲಿಲ್ಲ. ಇದಕ್ಕೆ ಈಗ ನಾವು ಒಂದು ಬುದ್ಧಿವಂತಿಕೆ ಕೆಲಸ ಮಾಡುತ್ತಿದ್ದೇವೆ. ಈ ಕಾಡುಗಳಲ್ಲಿ ಕಾಡುಕುರುಬರಿರುತ್ತಾರೆ. ನಮಗೆ ಬೇಕಾದ ಒಣ ಸೌದೆಯನ್ನು ತರಬೇಕಾದರೆ ಈ ಕಾಡುಕುರುಬರು ಸೌದೆಯನ್ನು ಒಡೆದು ಕೊಡುತ್ತಾರೆ. ಆ ಸೌದೆ ಯಾವಾಗಲೂ ಸಿಕ್ಕುವುದಿಲ್ಲ. ಆದುದರಿಂದ ಇವರ ಹತ್ತಿರ ಒಂದು ಒಪ್ಪಂದವನ್ನು ಮಾಡಿಕೊಂಡು ನಾಲ್ಕೈದು ಮರಗಳನ್ನು ಕಡಿದು ಇಟ್ಟಿರಿ ಎಂದು ಹೇಳಿದರೆ ಅವರು ಹಸಿ ಮರಗಳನ್ನು ಕಡಿದಿರುತ್ತಾರೆ. 15 ದಿವಸ, ಒಂದು ತಿಂಗಳು ಆದಮೇಲೆ ಆ ಮರಗಳನ್ನು ಒಣಸೌದೆ ಎಂದು ತರುವುದು ಈ ರೀತಿಯಾಗಿ ಕೆಲಸಗಳು ನಡೆಯುತ್ತಿವೆ. ಈಗ ಇರುವ ಕಾನೂನನ್ನು ಸ್ವಲ್ಪ ಬದಲಾವಣೆ ಮಾಡಿದರೆ ಈ ರೀತಿ ನಡೆಯುವುದನ್ನು ತಪ್ಪಿಸುವುದಕ್ಕೆ ಸಾಧ್ಯ. ನಾನು ಹೇಳತಕ್ಕದ್ದು ಇನ್ನೊಂದು ವಿಚಾರವಿದೆ. ಹಸಿ ಮರವನ್ನು ಕಡಿದು ತರುವುದಕ್ಕೆ ಲಾರಿಗಳವರಿಗೆ ಲೈಸೆನ್ಸ್ ಕೊಡುತ್ತಾರೆ. ನಮ್ಮ ಕಡೆಗಳಲ್ಲಿ ಇನ್ನೊಂದು ವಿಧವಾದ ಲೈಸೆನ್ಸ್ ಕೊಡುತ್ತಿದ್ದಾರೆ. ಹೊಗೆಸೊಪ್ಪನ್ನು ಒಣಗಿಸುವುದಕ್ಕೆ ಮರ ಗಿಡಗಳು ಬೇಕಾಗುತ್ತವೆ. ಅದಕ್ಕೆ ಐದು ರೂಪಾಯಿ ಕೊಟ್ಟು ಲೈಸೆನ್ಸ್ ತೆಗೆದುಕೊಳ್ಳಬೇಕು ಎಂದು ಇಟ್ಟಿದ್ದಾರೆ. ಆದುದರಿಂದ ಒಣ ಸೌದೆಯನ್ನು ತರುವುದಕ್ಕೆ ಒಂದು ಗಾಡಿಗೆ ಎಂಟು ಆಣೆ ಕೊಡಬೇಕಾಗಿದೆ. ಇದಕ್ಕೆ ಬದಲು ಹನ್ನೆರಡಾಣೆ ಮಾಡಿ, ಒಂದು ರೂಪಾಯಿ ಬೇಕಾದರೂ ಮಾಡಿ, ಹಸಿ ಸೌದೆಯನ್ನು ತರುವುದಕ್ಕೆ ಅವಕಾಶವನ್ನುಂಟು ಮಾಡಿಕೊಡಬೇಕಾದದ್ದು ಅತ್ಯಾವಶ್ಯಕ.

ಮತ್ತೊಂದು ವಿಚಾರ. ನಮ್ಮ ಕಡೆ ಕಾಡುಗಳಿಂದ ಮುಳ್ಳು ತರಬೇಕಾದರೆ ಅದಕ್ಕೂ ಕೂಡ ಲೈಸೆನ್ಸ್ ತೆಗೆದುಕೊಳ್ಳಬೇಕು ಎಂದು ಒಂದು ಅಡ್ಡಿಯನ್ನು ಅರಣ್ಯ ಇಲಾಖೆಯವರು ತಂದೊಡ್ಡಿದ್ದಾರೆ. ಇದನ್ನು ಸರ್ಕಾರದವರು ಆಕ್ಟ್‌ನಲ್ಲಿ ನಮೂದು ಮಾಡಿದ್ದಾರೆಯೋ ಅಥವ ರೂಲ್ಸ್‌ನಲ್ಲಿ ಸೇರಿಸಿದ್ದಾರೆಯೋ ಎನ್ನುವುದು ನನಗೆ ಸರಿಯಾಗಿ ಗೊತ್ತಿಲ್ಲ. ಕಾಡಿನಲ್ಲಿ ಇಲಾಖೆಯವರೇ ದುಡ್ಡು ಕೊಟ್ಟು ಮುಳ್ಳು ತೆಗೆಸಬೇಕಾದದ್ದು ಸೂಕ್ತ. ಅಂಥದರಲ್ಲಿ ಮುಳ್ಳು ತಂದು ಬೇಲಿ ಹಾಕಿಕೊಳ್ಳುವುದಕ್ಕೆ ಲೈಸೆನ್ಸ್ ತೆಗೆದುಕೊಂಡು ಬರಬೇಕು ಎಂದರೆ ಇದು ಆಶ್ಚರ್ಯವಾಗಿ ಕಾಣುತ್ತದೆ. ಹುಣಸೂರಿನಲ್ಲಿ ಕೆಲವರು ಬೇಲಿಹಾಕಲು ಮುಳ್ಳನ್ನು ಲೈಸೆನ್ಸ್ ಪಡೆಯದೆ ತಂದರು ಎಂಬ ಕಾರಣದ ಮೇಲೆ ಅವರಿಗೆ 25 ರೂಪಾಯಿಗಳ ದಂಡ ಹಾಕಿದ್ದಾರೆ. ಈ ರೀತಿಯಾಗಿ ಅನೇಕ ಕಡೆಗಳಲ್ಲಿದೆ ಎಂದು ಹೇಳುತ್ತೇನೆ. ಸರ್ಕಾರದವರು ತಾವಾಗಿಯೇ ಮುಳ್ಳನ್ನು ದುಡ್ಡು ಕೊಟ್ಟು ತೆಗೆಸಬೇಕು. ಅಂಥದನ್ನು ರೈತರು ಹೋಗಿ ತಾವಾಗಿಯೇ ತೆಗೆದರೆ ಅದನ್ನು ಅಪರಾಧವೆಂದು ಪರಿಗಣಿಸಬಾರದು. ಕಾಡಿನಲ್ಲಿ ಮುಳ್ಳು ಹೋಗುವುದರಿಂದ ಇತರ ಜಾತಿಯ ಮರಗಳು ಚೆನ್ನಾಗಿ ಬೆಳೆಯುವುದಕ್ಕೆ ಅನುಕೂಲವಾಗುತ್ತದೆಯೇ ಹೊರತು ಕಾಡಿನಲ್ಲಿರುವ ಮರಗಳಿಗೆ ಯಾವ ವಿಧವಾದ ತೊಂದರೆಯೂ ಆಗುವುದಿಲ್ಲ. ಇದಕ್ಕೆ ಮಾನ್ಯ ಮಂತ್ರಿಗಳು ಗಮನ ಕೊಡಬೇಕು ಎಂದು ಹೇಳುತ್ತೇನೆ.

ಕೊನೆಯದಾಗಿ ಇನ್ನೊಂದು ವಿಚಾರ. ಆನೆಗಳ ಹಾವಳಿಯ ವಿಚಾರವಾಗಿ, ಕಾಡುಗಳ ಸರಹದ್ದಿಗೆ ಸಂಬಂಧಪಟ್ಟ ಗ್ರಾಮಗಳಲ್ಲಿ ಇವುಗಳ ಹಾವಳಿಯನ್ನು ತಪ್ಪಿಸಬೇಕೆಂದು ಬಹು ವರ್ಷಗಳಿಂದ ಸರ್ಕಾರದವರಲ್ಲಿ ಕೇಳುತ್ತಿದ್ದೆವು. Khedda operations, ಆನೆಗಳನ್ನು ಹಿಡಿಯುವ ಕಾರ್ಯಕ್ರಮವನ್ನು ಆಗಾಗ ನಡೆಸುತ್ತಾರೆ. ಇದು ಒಂದು ವಿಧವಾದ preventive measure. ಇದನ್ನು ನಡೆಸಿಕೊಂಡು ಬರುತ್ತಿ

ದ್ದಾರೆ. ಇದರ ಜೊತೆಗೆ ಈಗ ನಾಲ್ಕಾರು ವರ್ಷಗಳಿಂದ ಅರಣ್ಯ ಇಲಾಖೆಯವರು ಒಂದು ಏರ್ಪಾಡನ್ನು ಮಾಡಿದ್ದರು. ಅದೇನೆಂದರೆ ಇಲಾಖೆಯಲ್ಲಿರತಕ್ಕ ಕೆಲವು ಗಾರ್ಡುಗಳಿಗೆ ಬಂದೂಕುಗಳನ್ನು ಕೊಟ್ಟು, ಭತ್ತದ ಬೆಳೆ ಬಂದ ಕಾಲದಲ್ಲಿ, ಭತ್ತ, ರಾಗಿ ಮುಂತಾದ ಫಸಲುಗಳು ನಾಶವಾಗದಂತೆ ರಕ್ಷಣೆಕೊಡುವುದಕ್ಕಾಗಿ, ಬಂದೂಕುಗಳನ್ನು ಹೊಂದಿರುವ ಗಾರ್ಡುಗಳನ್ನು ಈ ಕೆಲಸಕ್ಕೆ ನೇಮಿಸುತ್ತಿದ್ದರು. ಅವರು ಹತ್ತು ಮೈಲಿ ಬೌಂಡರಿಯಲ್ಲಿ ನೋಡಿಕೊಂಡು ಕಾಡಿನಿಂದ ಆನೆಗಳು ಬರುವ ಸಂಭವವಿದ್ದರೆ ಬಂದೂಕುಗಳಿಂದ ಗುಂಡು ಹಾರಿಸಿ, ಶಬ್ದಮಾಡಿ, ಅವುಗಳನ್ನು ಹೆದರಿಸಿ ಫಸಲನ್ನು ನಾಶಮಾಡುವುದಕ್ಕೆ ಬಾರದಹಾಗೆ ತಡೆಯುತ್ತಿದ್ದರು. ಈ ವರ್ಷ ನಮ್ಮ ಕಡೆ ಏನಾಯಿತೆಂದರೆ ಆ ರೀತಿಯ protection ಕೊಡಲಿಲ್ಲ. ಯಾಕೆ ಕೊಡಲಿಲ್ಲವೋ ಗೊತ್ತಾಗಲಿಲ್ಲ. ಈ ವರ್ಷ ಅನೇಕ ಕಡೆ ಆನೆಗಳು ಬಂದು ಗದ್ದೆಗಳಲ್ಲಿನ ಭತ್ತದ ಫಸಲನ್ನು ನಾಶಮಾಡಿಹೋಗಿವೆ. ನಾನು ಅರಣ್ಯ ಇಲಾಖೆಗೆ ಸಂಬಂಧಿಸಿದ ಅಧಿಕಾರಿಗಳನ್ನು ಈ ಬಗ್ಗೆ ಕೇಳಿದಾಗ ಅವರು ನಮ್ಮ ಹತ್ತಿರ ಬಂದೂಕುಗಳಿದ್ದರೂ ಕೂಡ ಅವಕ್ಕೆ ತೋಟಾಗಳನ್ನು ಸರಬರಾಜು ಮಾಡುತ್ತಿಲ್ಲವಾದ್ದರಿಂದ ನಾವು ಏನೂ ಮಾಡುವುದಕ್ಕಾಗುವುದಿಲ್ಲವೆಂದು ಸುಲಭವಾಗಿ ಒಂದೇ ಮಾತಿನಲ್ಲಿ ಹೇಳಿದರು. ತೋಟಾಗಳನ್ನು ಯಾಕೆ ಅವರಿಗೆಲ್ಲ ಕಳುಹಿಸಿಲ್ಲವೋ ನನಗೆ ಗೊತ್ತಿಲ್ಲ. ಈ ಸಂದರ್ಭದಲ್ಲಿ ಕೊರವಂಜಿ ಮಾಸಪತ್ರಿಕೆಯಲ್ಲಿ ಬಂದಿದ್ದ ಒಂದು ಕಥೆ ಜ್ಞಾಪಕಕ್ಕೆ ಬರುತ್ತದೆ—ಒಂದು ಮರವನ್ನು ಹರಾಜು ಹಾಕಬೇಕಾದಾಗ ಒಬ್ಬ ಶೇಕದಾರನನ್ನು ಆ ಕಾರ್ಯಕ್ಕೆ ನೇಮಿಸಿದರಂತೆ. ಆತನು ಸ್ಥಳಕ್ಕೆ ಹೋಗಿ ನೋಡಿ ಅದನ್ನು ಅಳತೆ ಮಾಡುವುದಕ್ಕೆ ತನ್ನಲ್ಲಿ 'ಟೇಪ್' ಇಲ್ಲವೆಂದು ಅಮಲ್ದಾರರಿಗೆ ರಿಪೋರ್ಟ್ ಮಾಡಿದನಂತೆ. ಅಮಲ್ದಾರರು ತಮಗೆ ಮೇಲ್ಪಟ್ಟ ಅಧಿಕಾರಿಗಳಿಗೆ ಬರೆದರಂತೆ. ಅನಂತರ ಅದಕ್ಕೆ ಬಡ್ಜೆಟ್ಟಿನಲ್ಲಿ ಹಣ ಒದಗಿಸಲ್ಪಟ್ಟು ಮುಂದಿನ ವರ್ಷಕ್ಕೆ 'ಟೇಪನ್ನು' ಶೇಕದಾರನಿಗೆ ಕಳುಹಿಸಿಕೊಟ್ಟರಂತೆ. ಒಂದು ವರ್ಷವಾದಮೇಲೆ ಶೇಕದಾರನು ಅಳೆಯುವುದಕ್ಕೆ ಹೋಗಿ ನೋಡಿದರೆ ಅಲ್ಲಿ ಮರವೇ ಇರಲಿಲ್ಲವಂತೆ—ಹೀಗಾಗಬಾರದು ಎಂದೂ, ಇದಕ್ಕೆ ಕೂಡಲೇ ಸರಿಯಾದ ಏರ್ಪಾಡನ್ನು ಇಲಾಖೆಯವರು ಮಾಡಬೇಕೆಂದೂ ನಾನು ಸಲಹೆಮಾಡುತ್ತೇನೆ.

MR. SPEAKER.—The House will now rise and meet at 4-35 P.M.

The House adjourned for Lunch at Ten Minutes past Four of the Clock and reassembled at Thirty-Five Minutes past Four of the Clock.

[MR. SPEAKER in the Chair]

SRI J. MOHAMED IMAM (Jagalur).—With the kind permission of the Chair, I have a representation on behalf of the House, Sir. Tomorrow being a holiday, Shab-e-barat, it is the desire of many Members that we should hold the Session in the morning so that they may be free in the afternoon.

MR. SPEAKER.—They have already come to an arrangement to hold the Session in the morning at 8-30.

SRI K. PATTABHIRAMAN (Kolar).—Very well, Sir.

ಶ್ರೀ ಆರ್. ಮುನಿಸ್ವಾಮಯ್ಯ (ಬೆಂಗಳೂರು ಉತ್ತರ—ಅನುಸೂಚಿತ ಜಾತಿಗಳು).—ಸ್ವಾಮಿ, ಹತ್ತಾರುವರ್ಷಗಳಿಂದೀಚೆಗೆ ಮೈಸೂರು ದೇಶದಲ್ಲಿ ಎಲ್ಲ ಕಡೆಗಳಲ್ಲಿಯೂ ಕಾಡುಗಳಲ್ಲಿ ಮರಗಳನ್ನು ಕತ್ತರಿಸಿ ಪುನಃ ಮರಗಳನ್ನು ನೆಡುತ್ತಿದ್ದಾರೆ. ಆದರೆ ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಮರಗಳನ್ನು ಕಡಿಯುತ್ತಿದ್ದಾರೆಯೇ ಹೊರತು ಗಿಡಗಳನ್ನು ಹಾಕುತ್ತಿರುವುದು ಮಾತ್ರ ಎಲ್ಲಿಯೂ ಕಾಣುತ್ತಿಲ್ಲ. ಹತ್ತಾರು ಮರಗಳನ್ನು ಕಡಿದರೆ ಒಂದು ಗಿಡವನ್ನೂ ಹಾಕುತ್ತಿಲ್ಲ. ಅರಣ್ಯ ಇಲಾಖೆ ವಿಷಯ ಹೀಗಿದೆ. ಮಳೆ ಬರಬೇಕಾದರೆ ಅರಣ್ಯವಿರಬೇಕು ಎಂದು ತಜ್ಞರು ಹೇಳುತ್ತಾರೆ. ಆದರೆ ಹಳ್ಳಿಗಳಲ್ಲಿರುವ ರೈತರು ಮಳೆ ಬರಬೇಕಾದರೆ ಅರಣ್ಯಗಳು ಇರಬೇಕೆಂಬುದನ್ನು ತಿಳಿದುಕೊಂಡಿಲ್ಲ. ಅದಕ್ಕೋಸ್ಕರವಾಗಿ ಈ ಹೆಚ್ಚಿಗೆ ಪ್ರಚಾರ ಕಾರ್ಯ ನಡೆಯಬೇಕು. ಕಾಡುಗಳನ್ನೂ, ಮರಗಳನ್ನೂ ಕತ್ತರಿಸದೆ ಇರುವುದಕ್ಕೆ ಏನೇನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅವನ್ನೆಲ್ಲ ತೆಗೆದುಕೊಳ್ಳುವುದು ಅತ್ಯಾವಶ್ಯಕವೆಂದು ಹೇಳುತ್ತೇನೆ. ಗ್ರಾಮಸ್ಥರು ತಮ್ಮ ಸ್ವಂತ ಮರಗಳನ್ನು ಕತ್ತರಿಸಿದರೂ ಪುನಃ ನೆಡುತ್ತಿಲ್ಲ. ಅದಕ್ಕೋಸ್ಕರವಾಗಿ ನೀಲಗಿರಿ ಎಣ್ಣೆ ಸಸಿಗಳನ್ನೂ ಮತ್ತು ಇತರ ಸಸಿಗಳನ್ನೂ ಅವರಿಗೆ ಉಚಿತವಾಗಿ ಕೊಟ್ಟು, ಇವುಗಳನ್ನು ಹೆಚ್ಚಾಗಿ ರೈತರು ತಮ್ಮ ಸ್ವಂತ ಭೂಮಿಯಲ್ಲಿಯೂ ಮತ್ತು ಗೋಮಾಳಗಳಲ್ಲಿಯೂ ಬೆಳೆಯುವಂತೆ ಏರ್ಪಾಡು ಮಾಡಬೇಕು. ಇದಕ್ಕೆ ರೆವೆನ್ಯೂ ಇಲಾಖೆಯವರೂ ಮತ್ತು ಇತರ ಇಲಾಖೆಗಳವರೂ ಸ್ವಲ್ಪ ಒತ್ತಡವನ್ನು ಹಾಕಿ ಆಯಾ ಪ್ರದೇಶದ ಜನರಿಂದ ಕೆಲಸ ಮಾಡಿಸಬೇಕೆಂದು ಹೇಳುತ್ತೇನೆ.

ಬಿತ್ತನೆ ಬೀಜಗಳಿಗೆ ಈಗ 85 ಸಾವಿರ ರೂಪಾಯಿಗಳನ್ನು ಮಾತ್ರ ಒದಗಿಸಿದ್ದೀರಿ. ಇದು ಸಾಲುವುದಿಲ್ಲ. ಇನ್ನೂ ಹೆಚ್ಚು ಹಣವನ್ನು ಒದಗಿಸಿ, ಹೆಚ್ಚು ಹೆಚ್ಚಾಗಿ ಮರಗಳು ಜಾಗ್ರತೆ ಬೆಳೆಯುವುದಕ್ಕೂ, ದೊಡ್ಡದೊಡ್ಡ ಕಾಡುಗಳು ಜಾಗ್ರತೆ ಬರುವಹಾಗೆಯೂ ಏರ್ಪಾಡು ಮಾಡಬೇಕು. ಬೆಂಗಳೂರು ಉತ್ತರ ತಾಲ್ಲೂಕು ಕಾಡು ಗಿಡಗಳನ್ನು ಸರಿಯಾಗಿ ನೋಡಿಕೊಳ್ಳುವವರೇ ಇಲ್ಲ. ಫಾರೆಸ್ಟ್ ಗಾರ್ಡುಗಳು ಸೌದೆಗಾಡಿ ಹಿಡಿದರೂ ಒಂದಾಣೆ, ಎರಡಾಣೆ ವಸೂಲುಮಾಡಿಕೊಂಡು ಬಿಟ್ಟುಬಿಡುತ್ತಾರೆ. ಅರಣ್ಯಗಳ ಕಡೆ ಹೋಗಿ ಏನಾಗುತ್ತಿದೆಯೆಂಬುದನ್ನು ಸರಿಯಾಗಿ ನೋಡುವವರೇ ಇಲ್ಲ. ಬೆಂಗಳೂರು ಉತ್ತರ ಮತ್ತು ದಕ್ಷಿಣ ತಾಲ್ಲೂಕು ಅರಣ್ಯಗಳಲ್ಲಿ ಹೆಚ್ಚಾಗಿ ಗಿಡಗಳನ್ನು ಹಾಕಬೇಕು. ಕಳ್ಳತನದಲ್ಲಿ ಸೌದೆ, ನಾಟಾ ವಗೈರೆ ಸಾಗಿ ಹೋಗದಿರುವ ಹಾಗೆ ಏರ್ಪಾಡು ಮಾಡಬೇಕು.

ಅಲ್ಲದೆ ಬೆಂಗಳೂರು ಉತ್ತರ ಮತ್ತು ದಕ್ಷಿಣ ತಾಲ್ಲೂಕುಗಳ ಎಷ್ಟೋ ಕಡೆ ಅರಣ್ಯಗಳಲ್ಲಿ ಜಮೀನನ್ನು ವ್ಯವಸಾಯಕ್ಕಾಗಿ ಕೊಟ್ಟಿದ್ದಾರೆ. ಹರಿಜನರು ಕೇಳಿದಾಗ ಫಾರೆಸ್ಟ್ ಜಮೀನನ್ನು ಕೊಡುವುದಕ್ಕಾಗುವುದಿಲ್ಲವೆಂದು ಹೇಳಿ ಬೇರೆಯವರು ಕೇಳಿದಾಗ ಧಾರಾಳ

(ಶ್ರೀ ಆರ್. ಮುನಿಸ್ವಾಮಯ್ಯ.)
ವಾಗಿ ಕೊಡುತ್ತಿದ್ದಾರೆ: ಹೀಗೆ ರಾಮನಗರ, ಮಾಗಡಿ ತಾಲ್ಲೂಕುಗಳಲ್ಲಿ ನೂರಾರು ಎಕರೆಗಳನ್ನು ಕೊಟ್ಟಿದ್ದಾರೆ, ಹರಿಜನರು ಅರ್ಜಿ ಹಾಕಿದಾಗ ನಾವು ಉಳಿದಿರಬೇಕು, ಆ ಭೂಮಿಯನ್ನು ಕೊಡಲು ಆಗುವುದಿಲ್ಲ ಎಂದು ಎಂಡಾರ್ಸ್‌ಮೆಂಟ್ ಕೊಟ್ಟು ಅದಾದಮೇಲೆ ಒಂದೆರಡು ತಿಂಗಳಾದನಂತರ ಬೇರೆಯವರಿಗೆ ಕೊಟ್ಟಿದ್ದಾರೆ. ರಾಮನಗರ, ಮಾಗಡಿ ಮತ್ತು ಬೆಂಗಳೂರು ತಾಲ್ಲೂಕುಗಳಲ್ಲೆ ನೂರಾರು ಎಕರೆ ಜಮೀನನ್ನು ಕೊಟ್ಟಿದ್ದಾರೆ. ಹರಿಜನರು ಜಮೀನು ಕೇಳಿದಾಗ ಮಾತ್ರ ಕಾಡನ್ನು ಕೊಟ್ಟರೆ ನಷ್ಟವಾಗುತ್ತದೆಂದು ಹೇಳಿ ಅದಾದಮೇಲೆ ಬೇರೆಯವರಿಗೆ ಕೊಟ್ಟರೆ ನಷ್ಟವಿಲ್ಲವೆ ? ಇದು ಸರಿಯೆ ಎಂಬುದನ್ನು ಯೋಚನೆ ಮಾಡಬೇಕು. ಜಕ್ಕೂರು ಫಾರೆಸ್ಟ್, ಮಾಕಳಿ ಫಾರೆಸ್ಟ್ ಮುಂತಾದ ಕಡೆ ಜಮೀನನ್ನು ಕೆಲವರಿಗೆ ಕೊಟ್ಟಿದ್ದಾರೆ, ಹರಿಜನರಿಗೆ ಮಾತ್ರ ಅಲ್ಲಿ ಕೊಡುವುದಕ್ಕಾಗುವುದಿಲ್ಲ. ಮಂತ್ರಿಗಳು ಕೂಡ ಎಣ್ಡಾರ್ಸ್‌ಮೆಂಟ್ ಕೊಟ್ಟಿದ್ದಾರೆ. ಹರಿಜನರೂ ಕೂಡ ಬೇರೆಯವರಂತೆ ಪ್ರಜೆಗಳಲ್ಲವೆ. ಈ ವ್ಯತ್ಯಾಸ ಏಕೆ ಮಾಡುವುದು ? 20 ವರ್ಷಗಳಿಂದ ಹರಿಜನರು ಅರ್ಜಿ ಹಾಕಿದರೂ ಕೊಡದೆ ಎರಡು ವರ್ಷಗಳಿಂದ ಅರ್ಜಿ ಹಾಕಿದಂತಹ ಬೇರೆಯವರಿಗೆ ಕೊಡುತ್ತಿದ್ದಾರೆ. ಇದನ್ನು ಪರಿಶೀಲಿಸಿ ಹರಿಜನರಿಗೂ ಈ ಜಮೀನನ್ನು ಕೊಡಲು ಏರ್ಪಾಡು ಮಾಡಬೇಕು.

ಮುಳಿಗಲ್‌ವ್ಯಾಲಿ ಕಾಡುಗಳಲ್ಲಿ ಗಂಧದ ಮರಗಳು ಬೇಕಾದಷ್ಟಿದ್ದುವು. ಯಾವಾಗ ಅವನ್ನು ಕತ್ತರಿಸಿದರೋ ಗೊತ್ತಿಲ್ಲ. ಸರ್ಕಾರದವರೇ ಕತ್ತರಿಸಿಕೊಂಡು ಹೋಗಿದ್ದಾರೆಂದು ಗಾರ್ಡುಗಳು ಹೇಳುತ್ತಾರೆ. ಖಾಸಗಿ ಜನರೂ ಕತ್ತರಿಸಿದ್ದನ್ನು ನಾನು ನೋಡಿದ್ದೇನೆ. ಈಗ ಅಲ್ಲಿ ಸಣ್ಣದು 117 ಗಿಡಗಳು ಮಾತ್ರ ಇವೆ. ಸಾವಿರಾರು ಗಿಡ ಇದ್ದ ಕಡೆ 117 ಗಂಧದ ಸಸಿಗಳು ಮಾತ್ರ ಇವೆ. ಗಂಧದ ಮರಗಳನ್ನು ಸರ್ಕಾರದವರಾದರೂ ಬೆಳೆಸಬೇಕು, ಇಲ್ಲದಿದ್ದರೆ ವ್ಯವಸಾಯಗಾರರಿಗಾದರೂ ಅವಕಾಶ ಕೊಟ್ಟು ಅವರು ಸ್ವಂತವಾಗಿ ಬೆಳೆಸುವುದಕ್ಕೆ ಅವಕಾಶ ಕೊಡಬೇಕು. ಮುಳಿಗಲ್‌ವ್ಯಾಲಿ ಫಾರೆಸ್ಟಿನಲ್ಲಿ ಈ ಪರಿಸ್ಥಿತಿಯಿದೆ. ಅರಣ್ಯ ಇಲಾಖೆ ಮಂತ್ರಿಗಳು ಅದನ್ನು ನೋಡಿಕೊಂಡು ಬಂದು ಒಂದು ವರ್ಷವಾಗಿದೆ. ಇಲ್ಲಿಯವರೆಗೂ ಹೊಸದಾಗಿ ಗಿಡ ಹಾಕುವುದಕ್ಕೆ ಅವಕಾಶ ಮಾಡಿಲ್ಲ. ಗಿಡಗಳನ್ನು ಕಡಿದುಹಾಕಿದ ಕೂಡಲೆ ಬೇರೆ ಮರ ಹಾಕುವುದು ಫಾರೆಸ್ಟ್ ಇಲಾಖೆಯ ಕೆಲಸ, ಅದಕ್ಕೆ ಶ್ರದ್ಧೆ ವಹಿಸಬೇಕು ಎಂದು ಒತ್ತಾಯ ಮಾಡುತ್ತಿದ್ದೇನೆ.

ಗ್ರಾಮಾಂತರದ ಜನರು ಫಾರೆಸ್ಟ್ ಪಕ್ಕದಲ್ಲಿರುವ ಜನರು ಸೌದೆ ಸಾಗಿಸುತ್ತಿದ್ದರೆ ತಡೆಮಾಡಬೇಕು, ಪಟೇಲಶ್ಯಾನುಭೋಗರು ತಡೆಮಾಡಬೇಕು, ಕಡಿದು ಸಾಗಿಸದಂತೆ ಅವರೆಲ್ಲರೂ ಸೇರಿ ಮರಗಳನ್ನು ನೋಡಿಕೊಳ್ಳಬೇಕು ಎಂದು ಅವರ ತಲೆಯಮೇಲೆ ಜವಾಬ್ದಾರಿ ಹೊರಿಸಬೇಕು. ಈಗ ಯಾರೂ ತಡೆಗಟ್ಟುತ್ತಿಲ್ಲ.

ಈಗ ವಿದ್ಯಾಭ್ಯಾಸದ ಸುಧಾರಣೆ ಜಾರಿಗೆ ತರುತ್ತಿದ್ದಾರೆ, ಹಳ್ಳಿಗಳ ಪಕ್ಕದಲ್ಲಿ ಪ್ಲಾಂಟೇಷನ್ ಇದ್ದರೆ ಸ್ಕೂಲಿನವರು ಹೋಗಿ ಗಿಡ ಹಾಕುವುದಕ್ಕೆ ಬಡ್ಜೆಟ್ಟಿನಲ್ಲಿ ಹಣ ಸಾಕಾದಷ್ಟು ಒದಗಿಸಬೇಕೆಂದು ಸಲಹೆಮಾಡುತ್ತೇನೆ.

*ಶ್ರೀಮತಿ ಬಳ್ಳಾರಿ ಸಿದ್ದಮ್ಮ (ದಾವಣಗೆರೆ).—ಸ್ವಾಮಿ, ಫಾರೆಸ್ಟ್ ವಿಚಾರ ಒಂದೆರಡು ಕೇಳಿದ್ದರಿಂದ ನಾಲ್ಕು ಮಾತನಾಡಬೇಕೆಂದು ಆಸೆ ಪಡುತ್ತೇನೆ. ವಿಷಯವೇನೆಂಬುದನ್ನು ಹೇಳುತ್ತೇನೆ. ಏಕೆಂದರೆ ನಮ್ಮ ದೇಶದಲ್ಲಿ ಅರಣ್ಯ ಸಂಪತ್ತು ದೊಡ್ಡದು ಮತ್ತು ಸರ್ಕಾರಕ್ಕೆ ಮುಖ್ಯವಾದುದು ಎಂದು ತಿಳಿದುಕೊಂಡಿದ್ದೇನೆ. ಇಂಥ ಜವಾಬ್ದಾರಿಯಿರುವ ಅರಣ್ಯದ ವಿಚಾರದಾಗಿ ಏಕೆ ಇಷ್ಟು ಉದಾಸೀನತೆಯಿದೆಯೋ ಗೊತ್ತಿಲ್ಲ. ಹಸೀ ಸೌದೆ ಕಡಿಯಕೂಡದೆಂದು ರೂಲ್ಸ್ ಇದ್ದರೂ ನಾನು ನೋಡಿರುವಹಾಗೆ ಬೇಕಾದಷ್ಟು ಹಸೀ ಸೌದೆ ತುಂಬಿದ ಗಾಡಿಗಳು ಲೈನಾಗಿ ಹೋಗುತ್ತಿವೆ. ಸಂಡೂರು ಗುಡ್ಡದಕಡೆ ಏಕೆ ಹೀಗಾಗುತ್ತಿದೆಯೆಂದು ಯೋಚನೆಯಾಗಿದೆ. ಅದು ಬಹಳ ದೊಡ್ಡ ಗುಡ್ಡ. ಅಲ್ಲಿದ್ದ ಉತ್ತಮವಾದ ಬೆಲೆಬಾಳುವ ಮರಗಳು ನಷ್ಟವಾಗಿವೆ. ಅಂಥ ಉತ್ಕೃಷ್ಟವಾದ ಫಾರೆಸ್ಟಿನಲ್ಲಿ ಧನಿಕರು ಅವಕಾಶಪಡೆದು ಸಾವಿರಾರು ಗಿಡಗಳನ್ನು ಕಡಿದು ಸಾಗಿಸಿದುದರಿಂದ ಈ ದಿವಸ ಅಲ್ಲಿರುವ ಸಾವಿರಾರು ಎಕರೆಯಲ್ಲಿ ಒಂದು ಗಿಡವೂ ಇಲ್ಲದಂತಾಗಿದೆ. ಇದು ನಿಜ. ದಿವಸ ಬೆಳಗಾದರೆ 30 ಗಾಡಿ ಸೌದೆ ಹೇರುತ್ತಾರೆ. ಇದಕ್ಕೆ ಕಾರಣವೇನು ? ಇದನ್ನು ಕೇಳಿ ಬಹಳ ಚಿಂತೆಯಾಯಿತು. ಇಂಥ ಅಂದವಾಗಿದ್ದ ಗುಡ್ಡ ಪ್ರದೇಶ, ಹೊರಗಿನಿಂದ ಅನೇಕರು ಬಂದು ನೋಡಿ ಆನಂದಪಡುತ್ತಿದ್ದ ಕಾಡು, ಬೈಲು ಪ್ರದೇಶವಾಗಿದೆ. ಹೀಗಾದರೆ ಯಾವ ಸಂಪತ್ತು ತಾನೆ ಉಳಿಯುತ್ತದೆ ? ಅಲ್ಲೇನಾದರೂ ಹೊಸದಾಗಿ ಮರ ಹಾಕುವುದಕ್ಕೂ ಮುಂದೆ ಈ ರೀತಿ ಹಸೀ ಸೌದೆ ಸಾಗದಿರುವುಕ್ಕೂ ಏರ್ಪಾಡು ಮಾಡಿದ್ದಾರೆಯೆ ಎಂಬುದನ್ನು ತಿಳಿಸಬೇಕು. ಆ ಗುಡ್ಡದಮೇಲೆ ಉತ್ಕೃಷ್ಟವಾದ ಹುಲ್ಲು ಬೆಳೆಯುತ್ತದೆ. ಅದನ್ನು ಹೇಳಬೇಕಾದ ಅಗತ್ಯವಿರಲಿಲ್ಲ, ಶ್ರೀ ದೇವರಾಜ ಅರಸ್‌ರವರು ಹೇಳಿದ್ದರಿಂದ ಅದನ್ನು ಹೇಳಬೇಕಾದ ಸಂದರ್ಭ ಬಂತು. ಈ ಗುಡ್ಡದಮೇಲಿರುವ ಇಡೀ ಹುಲ್ಲು ನಮ್ಮ ದೇಶಕ್ಕೆಲ್ಲಾ ಸರಬರಾಯಾಗಬೇಕೆಂಬ ಉದ್ದೇಶವಿದೆ. ಹಸೀ ಹುಲ್ಲು ಕೆಡದಂತೆ ಒಂದು ವಿಧಾನ ಕಂಡುಹಿಡಿದು ಅದನ್ನು ಕಾಪಾಡಬೇಕು. ಅದಕ್ಕೆ ವಿಧಾನವಿದೆ. ಹಾಗೆ ಮಾಡಿ ವ್ಯವಸಾಯಗಾರರಿಗೆ ಈ ಹುಲ್ಲನ್ನು ಬೇಸಿಗೆ ಕಾಲದಲ್ಲಿ ಉಪಯೋಗಿಸಲು ಸರಬರಾಯಿಮಾಡಿದರೆ ಬಹಳ ಸಹಾಯವಾಗುತ್ತದೆ, ಅದರಿಂದ ಹಾಲು ಮೊಸರಿನ ಅಭಾವವೂ ತಪ್ಪಬಹುದು. ಆದ್ದರಿಂದ ಏನಾದರೂ ವ್ಯವಸ್ಥೆಮಾಡಿ ಹುಲ್ಲನ್ನು ಶೇಖರಿಸಿ ಕೆಡದಂತೆ ಕಾಪಾಡಬೇಕು. ಇದು ಬೊಂಬಾಯಿಗೆ ಬೇರೆ ಹೋಗುತ್ತದೆಂದು ಕೇಳಿದ್ದೇನೆ. ಬೇಕಾದಷ್ಟು ಹುಲ್ಲು ಬೆಳೆಯುವಾಗ ನಮ್ಮ ದೇಶಕ್ಕೇ ಅದರ ಉಪಯೋಗ ದೊರೆಯುವಂತೆ ಅದನ್ನೇಕೆ ಶೇಖರಿಸಬಾರದು ? ಜನರಿಗೂ ಕೆಲಸವಿಲ್ಲದವರಿಗೂ ಕೆಲಸ ಸಿಕ್ಕಿದಂತಾಗುತ್ತದೆ. ಸೌದೆ ಹೆಚ್ಚಾಗಿ ಹೋಗಲು ಕಾರಣ ತಿಳಿಸಬೇಕು, ಮುಂದಾದರೂ ಕ್ರಮ ತೆಗೆದುಕೊಂಡು ಈ ಸಾಗಾಣಿಕೆಯನ್ನು ತಡೆಗಟ್ಟಬೇಕು ಎಂದು ಅರಿಕೆ ಮಾಡುತ್ತೇನೆ.

*ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ಈ ಇಲಾಖೆ ವಿಚಾರದಲ್ಲಿ ನಾವು ವರ್ಷೇ ವರ್ಷೇ ಇದರ ಆದಾಯ ವೆಚ್ಚ ತಿಳಿಸುತ್ತಿದ್ದೇವೆ. ಕಳೆದ ವರ್ಷ ಕೂಡ ಇದರಲ್ಲಿ ನಿವ್ವಳ ಉತ್ಪತ್ತಿಯೆಷ್ಟು ಎಂದು ಕೇಳಿದೆ. ಒದಗಿಸುತ್ತೇವೆಂದು ಮಂತ್ರಿಗಳು ಹೇಳಿದರು, ಹೇಳಿದರೂ ಒದಗಿಸಿಲ್ಲ. ಇದರಲ್ಲಿ ಆದಾಯವಿರುವುದು 102 ಲಕ್ಷ ರೂಪಾಯಿಗಳು, ಖರ್ಚು 54 ಲಕ್ಷ ರೂಪಾಯಿಗಳು, ಉಳಿಯುವುದು 53 ಲಕ್ಷ ರೂಪಾಯಿಗಳ ಆದಾಯ. ಇದರಲ್ಲಿ 47 ಲಕ್ಷ ರೂಪಾಯಿಗಳು ಗಂಧದ ಮರದಿಂದ ಬರುತ್ತದೆ. ಇದು ಸರ್ಕಾರದ ಮನಾಪಲಿ. ಈ 47 ಲಕ್ಷ ಹೋದರೆ ಆರು ಲಕ್ಷ 78 ಸಾವಿರ ರೂಪಾಯಿ ಉತ್ಪತ್ತಿ. ಈ ಇಲಾಖೆ ಇಷ್ಟು ದೊಡ್ಡದಾಗಿ ಕೆಲಸ ಮಾಡಿ ಕೊನೆಗೆ ನೆಟ್ ರಿಸಲ್ಟ್ ಆರು ಲಕ್ಷ 78 ಸಾವಿರ

ರೂಪಾಯಿ ಬರುತ್ತದೆಂದರೆ ಬಹಳ ಮಟ್ಟಿಗೆ ಅದು ಶೋಚನೀಯವಾದುದು. ಗಂಧದ ಮರ ಹೆಚ್ಚಿಸುವುದಕ್ಕೆ ಬಹಳ ಮಟ್ಟಿಗೆ ಅವಕಾಶವಿದೆ. ಆದರೆ ಈ ಸರ್ಕಾರದ ಒಂದು ನೀತಿಯಿಂದ ಗಂಧದ ಮರ ಬೆಳೆಯುವುದು ಮೊಟಕಾಗುತ್ತಿವೆ. ರೈತರು ಬೆಳೆದರೆ ಹಿಂದೆ ಸೇಕಡ 50ರಷ್ಟು ಬೆಲೆ ಅವರಿಗೆ ಕೊಡುತ್ತಿದ್ದರು. ಈಗ ಅದಕ್ಕೆ ಬದಲಾಗಿ ಬೆಳೆದವರಿಗೆ ಅನೇಕವೇಳೆ ಶಿಕ್ಷೆ ಮಾಡುತ್ತಿದ್ದಾರೆ. ಇದರಿಂದ ರೈತರು ಗಂಧದ ಮರ ಬೆಳೆಸಲು ಅವರಿಗೆ ಪ್ರೋತ್ಸಾಹವಿಲ್ಲದಂತಾಗಿದೆ. ಹಿಂದಿನ ಹಾಗೆ ಪ್ರೋತ್ಸಾಹ ಕೊಟ್ಟು ಸೇಕಡ 50ರಷ್ಟು ಹಣ ಕೊಡುವುದಾದರೆ ಸರ್ಕಾರಕ್ಕೂ ಸಹಾಯವಾಗುತ್ತದೆ, ಗಂಧದ ಮರ ಬೆಳೆಸುವುದಕ್ಕೂ ಅವಕಾಶವಾಗಿ ಆದಾಯ ಹೆಚ್ಚುತ್ತದೆ. ಬೆಳೆದವನಿಗೆ ಪ್ರೋತ್ಸಾಹವಿಲ್ಲದಿದ್ದರೆ ಸಸಿಯಾಗಿದ್ದಾಗಲೇ ಗಿಡವನ್ನು ಕಿತ್ತು ಹಾಕುತ್ತಾನೆ. ಗಂಧದ ಮರವನ್ನು ಯಾರಾದರೂ ಮುರಿದರೆ ಕೇಸು ಹಾಕುತ್ತಾರೆ, ರೈತ ಅದಕ್ಕೆ ನಿಗಾ ಇಡಬೇಕಾಗುತ್ತದೆ. ಆದ್ದರಿಂದ ರೈತನಿಗೆ ಪ್ರತಿಫಲಕ್ಕಿಂತ ತೊಂದರೆ ಜಾಸ್ತಿಯೆಂದು ಅವನು ಗಂಧದ ಮರ ತನ್ನ ಜಮೀನಿನಲ್ಲೇ ಬೆಳೆಯಲು ಅವಕಾಶ ಕೊಡುತ್ತಿಲ್ಲ. ಈ ಒಂದೊಂದು ಬಾಬಿನಲ್ಲೂ ಏತಕ್ಕಾಗಿ ಲುಕ್ಸಾನಾಗುತ್ತಿದೆಯೆಂದರೆ ಈ ಮರಗಳ ಸಂಖ್ಯೆ ದಿನದಿನಕ್ಕೂ ಕಡಮೆಯಾಗುತ್ತಿದೆ. ಸೌದೆಗಾಗಿ ಮರಗಳನ್ನು ಕತ್ತರಿಸಲು ಲೈಸೆನ್ಸ್ ಕೊಡುತ್ತಿದ್ದಾರೆ. ಆ ಭದ್ರಾವತಿ ಕಾರ್ಖಾನೆಗೆ ಇದ್ದಿಲು ಸರಬರಾಯಿಗಾಗಿ ಮರಗಳನ್ನು ಕತ್ತರಿಸುತ್ತಿದ್ದಾರೆ. ಕಾಗದದ ಫ್ಯಾಕ್ಟರಿಗಾಗಿ ಬಿದುರು ಬೊಂಬುಗಳನ್ನು ಕತ್ತರಿಸುತ್ತಿದ್ದಾರೆ. ಈ ಕಾಗದದ ಕಾರ್ಖಾನೆಗೆ ಬಿದಿರು ಬೊಂಬುಗಳನ್ನು ಸರಬರಾಯಿ ಮಾಡತಕ್ಕ ಬಗ್ಗೆ ಎರಡು ಲಕ್ಷ ರೂಪಾಯಿಗಳು ಖರ್ಚಾಗುತ್ತಿವೆ. ಆದರೆ ಅದರಿಂದ ಬರತಕ್ಕ ಉತ್ಪತ್ತಿ ಎರಡು ಲಕ್ಷ 45 ಸಾವಿರ ರೂಪಾಯಿಗಳು ಮಾತ್ರ. ಈ 45 ಸಾವಿರಕ್ಕೆ ಏಕೆ ಅಷ್ಟೊಂದು ಕಾಡನ್ನು ಹಾಳು ಮಾಡಬೇಕು ? ಇದೇ ರೀತಿ 1954-55 ಸಾಲಿನ ಆದಾಯ ವೆಚ್ಚಗಳನ್ನು ಪರಿಶೀಲನೆ ಮಾಡಿದರೆ ಈ ಪೇಪರ್ ಮಿಲ್ಲಿಗೆ ಬೊಂಬುಗಳನ್ನು ಸರಬರಾಯಿ ಮಾಡಿದ್ದರಿಂದ ಒಂದು ಲಕ್ಷ 65 ಸಾವಿರ ರೂಪಾಯಿಗಳು ಜಮಾ, ಒಂದು ಲಕ್ಷ 45 ಸಾವಿರ ರೂಪಾಯಿಗಳ ಖರ್ಚು. ಆದರೆ ಈಗಾಗಲೇ ಆ ಶ್ರೀ ಹುಚ್ಚಮಾಸ್ತಿಗೌಡರು ಹೇಳಿದಹಾಗೆ ನಾವು ಇಲ್ಲಿ ಎಷ್ಟು ಹೇಳಿದರೂ ಅದು ಒಂದು ಅರಣ್ಯರೋದನವೇ ಆಗಿದೆ. ಈ ಅರಣ್ಯ ಬಾಬಿನ ಆಡಳಿತವನ್ನು ಸರ್ಕಾರದವರು ಯಾವರೀತಿ ಉತ್ತಮಪಡಿಸಬೇಕೆಂಬ ವಿಚಾರವನ್ನು ಅವರು ಈವರೆಗೂ ವಿಮರ್ಶೆ ಮಾಡಿಲ್ಲ. ಭದ್ರಾವತಿಗೆ ಈ ದಿವಸ ಸೌದೆ ಸರಬರಾಯಿ ಮಾಡುತ್ತಿದ್ದಾರೆ. ಅದರಿಂದ ಬರತಕ್ಕ ಆದಾಯ ಎಂಟು ಲಕ್ಷ 60 ಸಾವಿರ; ಅದಕ್ಕೆ ಆಗುವ ಖರ್ಚು ಎಂಟು ಲಕ್ಷ ಚಿಲ್ಲರೆ. ಇಂಥ ವ್ಯವಹಾರವನ್ನು ನಡೆಸಬೇಡಿ ಎಂದು ನಾನು ಹೇಳುತ್ತಿದ್ದೇನೆ. 1954-55 ಸಾಲಿನಲ್ಲಿ ಈ ಬಾಬಿನಿಂದ 7,69,100 ರೂಪಾಯಿಗಳ ವೆಚ್ಚಕ್ಕೆ ಎಂಟು ಲಕ್ಷದ ಏಳು ಸಾವಿರ ಚಿಲ್ಲರೆ ಆದಾಯ ಬಂದಿದೆ. ಹೀಗೆ ಇಂಥ 38 ಸಾವಿರಕ್ಕೆ ಏಕೆ ಇಷ್ಟೊಂದು ವ್ಯಥೆಪಡಬೇಕು ? ಇಷ್ಟೇ ಅಲ್ಲದೆ ಈ ಸೌದೆ ಸರಬರಾಯಿ ಮಾಡತಕ್ಕ ಕಂಟ್ರಾಕ್ಟರುಗಳಿಗೆ ಎಂಭತ್ತು ಲಕ್ಷದವರೆಗೂ ಸಾಲ ಬೇರೆ ಕೊಟ್ಟಿದ್ದಾರೆ. ಈ ಸಾಲವೆಲ್ಲಾ ಹಾಗೆಯೇ ನಿಂತಿದೆ. ಈ 38 ಸಾವಿರ ರೂಪಾಯಿಗಳ ವರಮಾನ ತರಲು ಹೋಗಿ ಲಕ್ಷಾಂತರ ರೂಪಾಯಿಗಳನ್ನು ಹಾಳು ಮಾಡುವುದು ಸರಿಯಲ್ಲವೆಂದು ಹೇಳುತ್ತೇನೆ.

Mr. SPEAKER.—What about the forest wealth, apart from this? Even that is not an income?

Sri B. HUTCHE GOWDA.—They are getting Rs. 30 to 35 thousands. Why not they get more? ಅದಕ್ಕಾಗಿ ನಾನು ಹೇಳುತ್ತಿರುವುದು ನೀವು ಆ ಮರಗಳನ್ನು ಮಾತ್ರ ಕೊಡಿ, ಅವರೇ ಸಾಗಿಸಿಕೊಂಡು ಹೋಗಲಿ. ಈ ಸಾಗಾಣಿಕೆಯಿಂದಲೇ ವಿಶೇಷ ಹಣ ಖರ್ಚಾಗುತ್ತಿದೆ. ಕೇವಲ 38 ಸಾವಿರ ರೂಪಾಯಿಗಳ ಸಂಪಾದನೆಗಾಗಿ ಒಂದು ಲಕ್ಷ 69 ಸಾವಿರ ರೂಪಾಯಿಗಳನ್ನು ಖರ್ಚು ಮಾಡುವುದು ಖಂಡಿತ ವಿವೇಕಯುತವಾದ ಮಾರ್ಗವಲ್ಲವೆಂದು ಹೇಳುತ್ತೇನೆ. ತಾವು ಬಡ್ಜೆಟ್ ಪುಸ್ತಕದ 9ನೆಯ ಪುಟ ನೋಡಿ.

Mr. SPEAKER.—They are supplying at a nominal rate.

ಶ್ರೀ ಬಿ. ಹುಚ್ಚೇಗೌಡ.—ಅವರೇ ಗಾಡಿಗಳನ್ನು ತಂದು ಬಿದಿರು ಮತ್ತು ಸೌದೆಗಳನ್ನು ತೆಗೆದುಕೊಂಡು ಹೋಗಲಿ ಎಂದು ನಾನು ಹೇಳುತ್ತಿದ್ದೇನೆ. ಅವರೇ ಏಕೆ ಈ ಕೆಲಸ ಕೈಗೊಳ್ಳಬಾರದು ? ಇನ್ನು ಅವರಿಗೆ ಕೆಲವುಕಡೆ ಈ ಸೀನಿಯೋರೇಜ್ ಪ್ರಕಾರ ಮರಗಳನ್ನು ಕೊಟ್ಟಿದ್ದಾರೆ. ಅಡಿಗೆ ಒಂದಾಣೆ, ಒಂದೂವರಾಣೆ ಪ್ರಕಾರ ಇವರು ಕೊಟ್ಟಿದ್ದಾರೆ. ಆದರೆ ಮಲಬಾರಿನಲ್ಲಿ ಈ ಸೀನಿಯೋರೇಜ್ ರೇಟ್ $6\frac{1}{2}$ ಆಣೆ ಇದೆ. ಈ ದಿವಸ ಈ ಫಾರೆಸ್ಟ್ ಇಲಾಖೆಯಲ್ಲಿ ರಿಟೈರಾದವರೇ ಈ ಕಂಪನಿಯಲ್ಲಿ ಡೈರೆಕ್ಟರು, ಮ್ಯಾನೇಜರುಗಳೂ ಆಗಿದ್ದಾರೆ. ಹೀಗೆ ರಿಟೈರಾದವರನ್ನು ಅಲ್ಲಿ ಪುನಃ ಏಕೆ ಕೆಲಸಕ್ಕೆ ಸೇರಿಸಿಕೊಳ್ಳಬೇಕು ! ಇವರ ಪ್ರಭಾವ ಅಲ್ಲಿನ ನೌಕರರಮೇಲೆ ಬಹಳ ಹೆಚ್ಚಾಗಿರುತ್ತದೆ. ಇನ್ನು ಹಾಸನ, ಸಕಲೇಶಪುರ ಇತ್ತಕಡೆಗಳಿಂದ ಸಾಫ್ಟ್ ಉಡ್ಡನ್ನು ಕಡಮೆ ಕಿಮ್ಮತ್ತಿನಲ್ಲಿ ತಂದು ಈ ಯಶವಂತಪುರ ಇತ್ಯಾದಿ ಸ್ಥಳಗಳಲ್ಲಿ ಹೆಚ್ಚಿನ ಬೆಲೆಗೆ ಮಾರಾಟಮಾಡುತ್ತಿದ್ದಾರೆ. ಆದಕಾರಣ ಇದರಲ್ಲಿ ಲೀಕೇಜ್ ಜಾಸ್ತಿ ಇದೆ. ಸರ್ಕಾರದವರು ಖಾಸಗೀ ಜನರಿಗೆ 50 ಟನ್ ಗಂಧದ ಮರಕ್ಕೆ ಲೈಸನ್ಸ್ ಕೊಟ್ಟರೆ ಯಾರೋ ಬಂದು ಕಡಿಯುತ್ತಾರೆ, ಯಾರೋ ಬಂದು ಹೇರಿಕೊಂಡು ಹೋಗುತ್ತಾರೆ. ಯಾರು, ಎಷ್ಟು ಸಾಗಿಸಿದರು ಎಂಬುದನ್ನು ಯಾರೂ ಚೆಕ್‌ಮಾಡುವುದಿಲ್ಲ. ಇದರಲ್ಲಿ ಹೀಗೆ ಲೀಕೇಜ್ ಬಹಳ ಜಾಸ್ತಿ ಆಗುತ್ತಿದೆ. ಈ ವಿಚಾರಗಳಿಗೆಲ್ಲಾ ನಮ್ಮ ಮಂತ್ರಿಗಳು ಉತ್ತರ ಕೊಡುತ್ತಾರೆಂದು ನಾನು ನಂಬಿದ್ದೇನೆ. ಈ ಗಂಧದ ಮರದ ವ್ಯವಹಾರದಲ್ಲಿ ಸರ್ಕಾರದವರ ರೇಟ್ ಜಾಸ್ತಿ, ಲೀಕೇಜ್ ಜಾಸ್ತಿ, ಕಳ್ಳತನದಲ್ಲಿ ವಿಶೇಷವಾಗಿ ಮರಗಳು ಸಾಗಿಹೋಗುತ್ತಿವೆ.

ಇನ್ನು ಜಮೀನು ವಿಚಾರ. ಅನೇಕ ಬಡವರಿಗೆ ವ್ಯವಸಾಯಕ್ಕೆ ಜಮೀನಿಲ್ಲ. ಕಾಡಿನಲ್ಲಿ ಒಂದೂ ಗಿಡ ಮರಗಳಿಲ್ಲ. ಹಾಗಿದ್ದರೂ ಅದನ್ನು ಫಾರೆಸ್ಟ್ ಎಂದು ಕರೆಯುತ್ತಿದ್ದಾರೆ. ಇಂಥ ಪಾಳು ಜಮೀನನ್ನು ಆ ರೈತನಿಗಾದರೂ ಕೊಟ್ಟಿದ್ದರೆ ಇಷ್ಟು ಹೊತ್ತಿಗೆ ಅವನಾದರೂ ನಾಲ್ಕಾರು ನಾನಾ ಜಾತಿಯ ಮರಗಳನ್ನು ಬೆಳೆಸಿರುತ್ತಿದ್ದನು. ರೈತನು ತನ್ನ ಕಂದಾಯದ ಉತ್ಪನ್ನಕ್ಕೂ ಮತ್ತು ನೆರಳು ಇತ್ಯಾದಿ ಆಶೆಗಳಿಂದ ಬೇಗ ಮರಗಳನ್ನು ಬೆಳೆಸುತ್ತಾನೆ. ಇಷ್ಟು ಕೆಲಸವನ್ನೂ ಕೂಡ ಆ ಫಾರೆಸ್ಟ್ ಇಲಾಖೆಯವರು ಈ ದಿವಸ ಮಾಡುತ್ತಿಲ್ಲ. ಅವರೂ ಮಾಡುವುದಿಲ್ಲ. ಬೇರೆ ಮಾಡತಕ್ಕ ಜನರಿಗೂ ಆ ಜಮೀನನ್ನು ಕೊಡುವುದಿಲ್ಲ. ಬರೀ ಫಾರೆಸ್ಟ್ ಎಂಬ

(ಶ್ರೀ ಬಿ. ಹುಚ್ಚೇಗೌಡ.)

ಒಂದು ಹೆಸರು ವಿನಾ ಅಲ್ಲಿ ಈ ಲಾಂಟಾನ ಗಿಡಗಳ ಹೊರತು ಮತ್ತೆ ಯಾವ ಮರಗಳೂ ಇರುವುದಿಲ್ಲ. ಇಂಥ ಜಮೀನನ್ನು ಕೂಡಲೇ ಸರ್ಕಾರದವರು ವ್ಯವಸಾಯಕ್ಕಾದರೂ ಬಿಡಿಸಿ ಕೊಡುವುದು ಉತ್ತಮ.

ಇನ್ನು "ವನಮಹೋತ್ಸವ" ಎಂಬ ಒಂದು ಯೋಜನೆಯನ್ನು ಬೇರೆ ಪ್ರಾರಂಭ ಮಾಡಿದ್ದರು. ಈ ಕಾರ್ಯವನ್ನು ಮೊದಲು ಪ್ರಾರಂಭಿಸಿದ್ದುದು ನಮ್ಮ ತುಮಕೂರು ಜಿಲ್ಲೆಯಲ್ಲೇ. ಅಲ್ಲಿ ಆ ದಿವಸ ಒಂದೇ ಸಾರಿಗೆ 15 ಸಾವಿರ ಗಿಡಗಳನ್ನು ನೆಡಲಾಯಿತು. ಆದರೆ ಈ ಹೊತ್ತು ನೂರಕ್ಕೆ ಒಂದರಂತೆ ಕೂಡ ಉಳಿದಿಲ್ಲ. ಹಾಗಾದರೂ ಉಳಿದಿದ್ದರೆ ನಾನು ಬಹಳ ಸಂತೋಷಪಡುತ್ತಿದ್ದೆ. ಆ ವನಮಹೋತ್ಸವ ಮಾಡಿದ ದಿವಸ ಅಲ್ಲಿಯ ಕೇಟರಿಂಗ್ ನಡೆಸಿದ್ದು ಈ ಬೆಂಗಳೂರಿನ ಹೋಟೆಲ್‌ಗಳವರಿಂದ. ಇದರಿಂದ ಆದ ಪುರುಷಾರ್ಥ ಏನೆಂದರೆ ಆ ಶೇಕ್‌ದಾರನಿಗೆ 600 ರೂಪಾಯಿಗಳ ಹಜಾಮತ್ (ನಗು !) ಆ ವನಮಹೋತ್ಸವ ಅಷ್ಟಕ್ಕೇ ಮುಕ್ತಾಯವಾಯಿತು. ಹೀಗೆ ಈ ಸರ್ಕಾರದವರು ಯಾವ ಕೆಲಸ ಮಾಡಿದರೂ ಅದು ಮುಂದುವರಿಯುವುದು ಮಾತ್ರ ಇಲ್ಲ. ಇವರು ಕೆಳದರ್ಜೆ ನೌಕರರಿಗೆ ಸರಿಯಾದ ತಿಳಿವಳಿಕೆಗಳನ್ನು ಕೊಡುವುದಿಲ್ಲ.

ಇನ್ನು ಬಂಡೀಪುರದ ವಿಚಾರ ನಮ್ಮ ಮಂತ್ರಿಗಳಿಗೇ ಚೆನ್ನಾಗಿ ಗೊತ್ತಿದೆ. ಅಲ್ಲಿ ಇಲ್ಲಿಯವರೆಗೂ ಪಿಕ್‌ನಿಕ್ ಪಾರ್ಟಿಗಳೇ ಆಗುತ್ತಿದ್ದುವು. ಇನ್ನು ಮುಂದಕ್ಕೆ ಕಾಕ್‌ಟೈಲ್ ಪಾರ್ಟಿಗಳೂ ಅಲ್ಲಿ ನಡೆಯುತ್ತವೆ. ಇವರು ಪದೇಪದೇ ಅಲ್ಲಿಗೆ ಹೋಗುತ್ತಿರುವುದರಿಂದ ಆ ಫಾರೆಸ್ಟ್ ಸಿಬ್ಬಂದಿಗೆ ಕಷ್ಟನಷ್ಟಗಳು ಹೆಚ್ಚಾಗುತ್ತಿವೆ. ಅವರಿಗೆ ವಿಶೇಷವಾಗಿ ದುಡ್ಡು ನಷ್ಟವಾಗುತ್ತಿದೆ. ಹಿಂದೆ ಹಾಗೆ ಹೋಗಿದ್ದಕ್ಕೆ ಆ ಫಾರೆಸ್ಟ್ ರೇಂಜರಿಗೆ 600 ರೂಪಾಯಿಗಳು ಖರ್ಚಾಯಿತೆಂದು ಅವರು ಹೇಳಿಕೊಂಡು ಯಾರ ಮುಂದೆಯೋ ಅತ್ತರಂತೆ ! ಇವರ ಖುಷಿಗಳಿಗೆ ಅವರೀದಿವಸ ಹಣವನ್ನು ಖರ್ಚುಮಾಡಬೇಕಾಗಿ ಬಂದಿದೆ. ಇದು ಸರ್ವಥಾ ಸರಿಯಲ್ಲ; ಧರ್ಮವೂ ಅಲ್ಲ. ಈ ವಿಚಾರದಲ್ಲಿ ಅವರು ಮೇಲ್ಪಟ್ಟ ಅಧಿಕಾರಿಗಳಿಗೆ ದೂರನ್ನು ಹೇಳಿಕೊಳ್ಳಲೂ ಸಾಧ್ಯವಿಲ್ಲ. ಹೀಗಿರುವಾಗ ಸರ್ಕಾರದವರು ಏಕೆ ಅಲ್ಲಿ ಮತ್ತೆ ಎರಡು ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಮತ್ತೊಂದು ಹೋಟೆಲನ್ನು ಕಟ್ಟಿಸಬೇಕೋ ನನಗದು ಅರ್ಥವಾಗುತ್ತಿಲ್ಲ.

5 P.M.

ಮುಖ್ಯವಾಗಿ ಈ ಇಲಾಖೆಯಲ್ಲಿ ಅನೇಕ ಆದಾಯಗಳು ಸೋರಿ ಹೋಗುತ್ತಾ ಇವೆ. ಅವುಗಳನ್ನೆಲ್ಲಾ ದಕ್ಷತೆಯಿಂದ ಕಮ್ಮಿ ಮಾಡಬೇಕು. ಕೆಲವು ಕಡೆ ಸಿಬ್ಬಂದಿ ಅವಶ್ಯಕತೆ ಬಹಳವಾಗಿರುತ್ತದೆ. ಅಂಥ ಕಡೆಗೆ ಸಿಬ್ಬಂದಿ ಇರುವುದಿಲ್ಲ. ಇನ್ನು ಕೆಲವು ಕಡೆ ಸಿಬ್ಬಂದಿ ಅವಶ್ಯಕತೆ ಇರುವುದಿಲ್ಲ. ಅಲ್ಲಿಗೆ ಸುಮ್ಮನೆ ಸಿಬ್ಬಂದಿ ಹಾಕುತ್ತೀರಿ. ಉತ್ಪನ್ನ ನೋಡಿಕೊಂಡು ಆಯಾ ಪರಿಸ್ಥಿತಿಗನುಗುಣವಾಗಿ ನಡೆಯಬೇಕು. ಈ ಇಲಾಖೆಯಲ್ಲಿ ಸಾಲಗಳನ್ನು ಕೊಟ್ಟಿದ್ದೀರಿ, ಅವು ಎಷ್ಟುಮಟ್ಟಿಗೆ ವಾಪಸು ಬಂದಿವೆ ಎಂಬುದನ್ನು ತಿಳಿಸುತ್ತೀರಿ ಎಂದು ನಂಬಿದ್ದೇನೆ. ಮುಖ್ಯವಾಗಿ ಗಂಧದ ಮರದ ವ್ಯಾಪಾರದಲ್ಲಿ ಬಹುಮಟ್ಟಿಗೆ ಉತ್ಪನ್ನ ಹೆಚ್ಚು ಮಾಡಲಿಕ್ಕೆ ಅವಕಾಶವಿದೆ. ಮತ್ತು ಆ ಗಿಡಗಳನ್ನು ಬೆಳಸಲಿಕ್ಕೆ ಹೆಚ್ಚು ಗಮನ ಕೊಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಕೆ. ವಿ. ಬೈರೇಗೌಡ (ಬೆಂಗಳೂರು ಉತ್ತರ).—ಈ ಡಿಮ್ಯಾಂಡಿನ ವಿಚಾರದಲ್ಲಿ ಮಾತನಾಡುತ್ತ ಒಂದೆರಡು ಅಂಶಗಳನ್ನು ಸರ್ಕಾರದವರ ಗಮನಕ್ಕೆ ತರಬೇಕೆಂದಿದ್ದೇನೆ. ಬೆಂಗಳೂರು ನಗರದ ಸುತ್ತಮುತ್ತಲೂ ಮೆಷೀನ್ ಟೂಲ್ಸ್ ಫ್ಯಾಕ್ಟರಿ, ಭಾರತ್ ಎಲೆಕ್ಟ್ರಾನಿಕ್ಸ್, ಟೆಲಿಫೋನ್ ಇಂಡಸ್ಟ್ರೀಸ್ ವಗೈರೆ ಫ್ಯಾಕ್ಟರಿಗಳು ಪ್ರಾರಂಭವಾದಮೇಲೆ ಅಲ್ಲಿರತಕ್ಕ ಬಹುಭಾಗದ ಜಮೀನನ್ನೆಲ್ಲಾ ಫ್ಯಾಕ್ಟರಿಗಳಿಗೆ ಅಕ್ವೈರ್ ಮಾಡಿಕೊಂಡಿದ್ದಾರೆ. ಅದರಿಂದಾಗಿ ಅಲ್ಲಿ ವಾಸ ಮಾಡುತ್ತ ಇದ್ದ ರೈತಾಪಿ ಜನರು ಈಗ ಜಮೀನಿಲ್ಲದೇ ಬಹಳವಾಗಿ ತೊಂದರೆ ಪಡುತ್ತಾ ಇದ್ದಾರೆ. ಅವರುಗಳಿಗೆ ಬೆಂಗಳೂರು ಡಿಸ್ಟ್ರಿಕ್ಟಿನ ದೇವನಹಳ್ಳಿ ಮೈನರ್ ಫಾರೆಸ್ಟಿನಲ್ಲಿ ಜಮೀನು ಕೊಡಬೇಕೆಂದು ಹೇಳುತ್ತಾ ಇದ್ದರೂ ಕೂಡ ಅದಕ್ಕೆ ಗಮನ ಕೊಟ್ಟಿಲ್ಲ. ಫಾರೆಸ್ಟ್ ಜಮೀನು ಬೇಕಾದಷ್ಟಿದೆ. ಇಲಾಖೆಯವರು ಅಫಾರೆಸ್ಟೇಷನ್ ಮಾಡಿದ್ದರೆ ಚೆನ್ನಾಗಿತ್ತು. ಮಾಡದೇ ಇರುವಾಗ ಅದನ್ನು ಬೇರೆ ಮಾರ್ಗವಿಲ್ಲದೇ ಇರುವ ಆ ರೈತಾಪಿ ಜನರಿಗೆ ಕೊಟ್ಟಿದ್ದರೆ ಅವರು ತಮ್ಮ ಕಸಬಿನಲ್ಲಿ ನಿರತರಾಗುತ್ತಿದ್ದರು. ವ್ಯವಸಾಯ ವೃತ್ತಿಯನ್ನೇ ಬಿಟ್ಟು ಬಂದಂಥ ಆ ಜನಗಳಿಗೆ ತಾವು ಪರಿಹಾರದ ಮೊಬಲಗನ್ನೇನೋ ಕೊಡುತ್ತೀರಿ. ಆದರೆ ಅವರು ಅದನ್ನು ತೆಗೆದುಕೊಂಡು ವ್ಯಾಪಾರದಲ್ಲೋ ಅಥವಾ ಬೇರೆ ವಿಧವಾಗಿಯೋ ಖರ್ಚುಮಾಡಿ ಲಾಭ ಹೊಂದಿದರೂ ಹೊಂದಬಹುದು, ನಷ್ಟವಾದರೂ ಆಗಬಹುದು. ಆದ್ದರಿಂದ ಅವರಿಗೆ ಜಮೀನನ್ನು ಒದಗಿಸುವುದೇ ನ್ಯಾಯವಾದುದಲ್ಲ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಜಕ್ಕೂರು ಪ್ಲಾಂಟೇಷನ್‌ನಲ್ಲಿ 40 ಎಕರೆ ಜಮೀನಿದೆ. ಈಗ 10 ವರ್ಷದಿಂದ ಅಲ್ಲಿ ಯಾವ ರೀತಿಯಾದ ಅಫಾರೆಸ್ಟೇಷನ್ ಕಾರ್ಯವೂ ನಡೆಯದೇ ಸುಮ್ಮನೆ ಜಮೀನು ಮಾತ್ರ ಹಾಗೆಯೇ ಇದೆ. ಅದರ ಸುತ್ತಮುತ್ತ ಇರತಕ್ಕ ಜಮೀನಿಲ್ಲದ ಜನಗಳು ನಮ್ಮನ್ನು ಬಂದು ಕೇಳುತ್ತಾರೆ. ಅದನ್ನು ಅವರಿಗೆ ಕೊಡಿಸಿ ಕೊಡಿ ಎಂದರೆ ಇಲಾಖೆಯವರು ನರ್ಸರಿಮಾಡುವುದಕ್ಕೆ ಅದನ್ನು ಇಟ್ಟುಕೊಂಡಿದ್ದಾರೆ ಎಂದು ಹೇಳುತ್ತಾ ಇದ್ದಾರೆ. ಜಮೀನು ಮಾತ್ರ ಬಹಳ ಫಲವತ್ತಾದ ಜಮೀನು. ಅದೇ ರೀತಿಯಾಗಿ ಏರೋಡ್ರೋಂ ಪಕ್ಕದಲ್ಲೂ ಬೇಕಾದಷ್ಟು ಜಮೀನು ಇದೆ. 10 ವರ್ಷದಿಂದ ಆ ಜಮೀನೆಲ್ಲಾ ಖಾಲಿ ಬಿದ್ದಿದೆ. ಅದನ್ನು ಜಮೀನಿಲ್ಲದೇಯಿರತಕ್ಕ ಆ ಸುತ್ತುಮುತ್ತಲಿನ ಜನಗಳಿಗೆ ಕೊಡಿಸ ಕೊಡಬೇಕೆಂದು ಹೇಳುತ್ತೇನೆ.

ಅರಣ್ಯದಲ್ಲಿರತಕ್ಕ ಹೊಂಗೆ, ಹುಣಸೆ ಮುಂತಾದ ಮರಗಳನ್ನು ಕಡಿಯದಂತೆ ನೋಡಿಕೊಳ್ಳಬೇಕು. ಮುಖ್ಯವಾಗಿ ಹುಣಸೇಮರ ದೇಶದಲ್ಲಿ ಅತಿ ಹೆಚ್ಚಾಗಿ ಬೆಳೆದಿರುವುದು ಕೋಲಾರ ಮತ್ತು ಬೆಂಗಳೂರು ಡಿಸ್ಟ್ರಿಕ್ಟುಗಳಲ್ಲಿ. ಅದನ್ನು ಕೂಡ ಸೌದೆಯ ಅಭಾವದಿಂದ ಕಡಿಯುತ್ತಾ ಇದ್ದಾರೆ. ಆ ರೀತಿ ಕಡಿಯುತ್ತಾ ಇರುವುದನ್ನೂ ನಿಲ್ಲಿಸಬೇಕೆಂದು ಸರ್ಕಾರದವರು ಪೂರ್ಣ ಮನಸ್ಸು ಮಾಡಬೇಕು. ಕ್ಯಾಸುರಿನ ಪ್ಲಾಂಟೇಷನ್ ಇಲಾಖೆಯವರು ಬೆಳೆಸುತ್ತಾ ಇದ್ದಾರೆ. ಅದನ್ನು ಯಾವ ಮೈನರ್ ಫಾರೆಸ್ಟ್ ಜಮೀನಿದೆಯೋ ಆ ಗ್ರಾಮದವರಿಗೇ ಕೊಟ್ಟು ಲೀಸ್‌ಸಿಸ್ಟಂ ಪ್ರಕಾರ ಬೆಳೆಸುವುದಕ್ಕೆ ಏರ್ಪಾಡು ಮಾಡಿದರೆ ಹೆಚ್ಚಿನ ಅನುಕೂಲವಾಗುತ್ತದೆ. ಅದಕ್ಕೆ ಆಗತಕ್ಕ ಖರ್ಚಿಗಿಂತ ಮಿಗಿಲಾಗಿ ಫಾರೆಸ್ಟ್ ಆದರೂ ಆಗುತ್ತದೆ. ಅದನ್ನು ಪರಿಶೀಲನೆಮಾಡಬೇಕೆಂದು ಸೂಚನೆ ಮಾಡುತ್ತೇನೆ.

ಇನ್ನೊಂದು ವಿಷಯವನ್ನು ಮಾನ್ಯ ಸದಸ್ಯರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಬೆಂಗಳೂರಿನ ಸುತ್ತುಮುತ್ತಲೂ ಇರತಕ್ಕ ರೈತರಿಗೆ ಗಾಡಿಗಳ ಅವಶ್ಯಕತೆ ಬಹಳವಾಗಿದೆ. ಗಾಡಿಗಳಿಲ್ಲದೆ ರೈತ ಯಾವ ಕೆಲಸವನ್ನು ಮಾಡುವುದಕ್ಕೂ ಸಾಧ್ಯವಿಲ್ಲ. ಯುದ್ಧ ಕಾಲದಲ್ಲಿ ಇದರ ಬೆಲೆ ವಿಪರೀತವಾಗಿ ಹೆಚ್ಚು ಹೋಯಿತು. ಇದಕ್ಕೆ ಕಾರಣ ಇಷ್ಟೆ. ಗಾಡಿಗೆ ಹಾಕತಕ್ಕ ತೇಗದಮರ ಬಹಳ ಬೆಲೆಯಾಗಿದೆ. ಸಣ್ಣ ಲಾಗ್ಸ್ ಹಾಕುವುದಕ್ಕಾಗುವುದಿಲ್ಲ. ದೊಡ್ಡ ಲಾಗ್ಸ್ನ ಹಾಕಬೇಕಾಗುತ್ತದೆ. ಲಾಗ್ ತೆಗೆದುಕೊಳ್ಳಬೇಕೆಂದರೆ ಒಂದು ಸಲ ಅಡಿಗೆ 20-22 ರೂಪಾಯಿ ಆಗುತ್ತದೆ. ಆದ್ದರಿಂದ ಗಾಡಿ ತಯಾರು ಮಾಡತಕ್ಕವರಿಗೆ ಒಂದು ರಿಯಾಯಿತಿ ದರದಲ್ಲಿ ಲಾಗ್ಸ್ ಸಪ್ಲೈ ಮಾಡಿಕೊಡಬೇಕೆಂದು ಹೇಳುತ್ತೇನೆ. ರೈತನ ಹಿತದೃಷ್ಟಿಯಿಂದ ಈ ರೀತಿ ಒಂದು ವ್ಯವಸ್ಥೆ ಮಾಡಿದರೆ ಬಡ ರೈತನಿಗೆ ಅನುಕೂಲವಾಗುತ್ತದೆ. ಇದನ್ನು ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೇ, ಈ ಅರಣ್ಯದ ವಿಚಾರದಲ್ಲಿ ನಮ್ಮ ಮೈಸೂರು ಸಂಸ್ಥಾನದಲ್ಲಿ ಸಂಶೋಧನೆ ಏನೇನೂ ನಡೆದಿಲ್ಲ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಕಾರಣವೇನೆಂದರೆ ಜಪಾನ್ ಮುಂತಾದ ದೇಶಗಳಿಗೂ ನಮ್ಮ ದೇಶಕ್ಕೂ ಹೋಲಿಸಿ ನೋಡಿದರೆ ನಮ್ಮ ಸರ್ಕಾರ ಯಾವ ಒಂದು ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಜಪಾನ್ ದೇಶದಲ್ಲಿ ನಮ್ಮ ಹಿಂದೂಸ್ಥಾನದಿಂದ ಬಿದಿರಿನ ಸಸಿಗಳನ್ನು ತೆಗೆದುಕೊಂಡು ಹೋಗಿ ನಟ್ಟು ಪರಿಶೋಧನೆಮಾಡಿ 40-50 ಜಾತಿಯ ಬೊಂಬುಗಳ ಮಾದರಿ ಬೆಳೆಯನ್ನು ಬೆಳೆಸಿದ್ದಾರೆ ಮತ್ತು ಬೊಂಬಿನಿಂದ ಅನೇಕ ಸಾಮಾನುಗಳನ್ನು ತಯಾರುಮಾಡುತ್ತಿದ್ದಾರೆ. ಇಲ್ಲಿ ಗಳ ಮತ್ತು ಬೊಂಬಿನ ವ್ಯವಸಾಯ ಮತ್ತು ಪರಿಶೋಧನೆ ನಡೆದಿಲ್ಲ ಮತ್ತು ಯಾವ ಯಾವ ಕೆಲಸಕ್ಕೆ ಬರುತ್ತದೆ ಎಂಬುದನ್ನು ಕಂಡುಹಿಡಿಯುವ ಚಿನ್ಹೆಯೇ ನಮ್ಮ ದೇಶದಲ್ಲಿ ಇಲ್ಲ. ಯಾವ ಪ್ರದೇಶದಲ್ಲಿ ಬೆಳೆದರೆ ಗಟ್ಟಿಯಾಗಿರುತ್ತದೆ, ಯಾವ ರೀತಿಯಾಗಿ ಟ್ರೀಟ್‌ಮೆಂಟ್ ಕೊಟ್ಟರೆ ನೂರು ವರ್ಷ ಆದರೂ ಇರುತ್ತದೆ ಎಂಬ ವಿಷಯದಲ್ಲಿ ಸಂಶೋಧನೆ ನಡೆಸಲು ಕಾರ್ಯಕ್ರಮ ಕೈಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ.

ಶಿವಮೊಗ್ಗದಲ್ಲಿ ಒಂದು ಸಾ ಮಿಲ್ ಇದೆ. ತಡಸಾದಲ್ಲಿ ಒಂದು ಸಾ ಮಿಲ್ ಇದೆ, ತುಮಕೂರಿನಲ್ಲಿ Central Wood Working and Furniture Workshop ಇದೆ, ಭದ್ರಾವತಿಯಲ್ಲಿ Wood Heating Plant ಇದೆ. ಈ ರೀತಿ ನಾಲ್ಕು ಸ್ಥಳದಲ್ಲಿ ಬೇರೆ ಬೇರೆಯಾಗಿ ವಿಭಜನೆಯಾಗಿರುವುದನ್ನು ಒಂದುಗೂಡಿಸಿ ಒಬ್ಬರ ಮ್ಯಾನೇಜ್‌ಮೆಂಟಿಗೆ ವಹಿಸಿದ್ದೇ ಆದರೆ ಹೆಚ್ಚು ಹಣ ಸಂಪಾದನೆ ಮಾಡಬಹುದು. ಶಿವಮೊಗ್ಗದಿಂದ ತುಮಕೂರಿಗೆ ಮರ ತರಿಸಿ ತುಮಕೂರಲ್ಲಿ ಕೆಲಸ ಮಾಡುತ್ತಿರುವರು. ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಮಾನುಗಳನ್ನು ಸಾಗಿಸಬೇಕೆಂದರೆ ಆರು ತಿಂಗಳಾದರೂ ಅದು ಅಲ್ಲಿಗೆ ಬರುವುದಿಲ್ಲ. ಆದ್ದರಿಂದ furniture workshopನ್ನು ಶಿವಮೊಗ್ಗಕ್ಕೆ ಬದಲಾವಣೆ ಮಾಡಿದರೆ ಕಚ್ಚಾ ಸಾಮಾನುಗಳು ದೊರೆಯುವ ಸ್ಥಳದಲ್ಲಿಯೇ furniture ಸಾಮಾನುಗಳನ್ನು ತಯಾರಿಸಬಹುದು.

ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿರತಕ್ಕ ಕಾಡಿನಲ್ಲಿ ಹಲಸಿನ ಮರ, ಮಾವಿನ ಮರ ಮತ್ತು ಹುಣಸೇ ಮರಗಳು ಬೇಕಾದಷ್ಟಿವೆ. ಈ ಮರಗಳನ್ನು ಕಡಿಯಲಿಕ್ಕೆ ಅವಕಾಶ ಮಾಡಿ ಕೊಟ್ಟು ಅಲ್ಲಿ ವಾಸವಾಗಿದ್ದ ಕೋತಿಗಳು ಪಟ್ಟಣಗಳಿಗೆ ಬರುತ್ತಾ ಇವೆ. ಇದರಿಂದಾಗಿ ಪಟ್ಟಣಗಳಲ್ಲಿ ಅವುಗಳ ಹಾವಳಿ ತಡೆಯುವುದಕ್ಕಾಗದಷ್ಟು ವಿಪರೀತವಾಗಿ ಹೋಗಿದೆ. ಹಿಂದಿನ ಕಾಲದಲ್ಲಿ ಈ ಹಣ್ಣಿನ ಮರಗಳನ್ನು ಪ್ರಾಣಿಗಳಿಗಾಗಿಯೇ ನೆಡುತ್ತ ಇದ್ದರು. ಈಗ ಅವುಗಳನ್ನೆಲ್ಲಾ ಕಡಿಯುತ್ತಾ ಇರುವುದರಿಂದ ಆ ಪ್ರಾಣಿಗಳಿಗೆ ಹಣ್ಣು ಆಹಾರ ಸಿಕ್ಕದೇ ಪಟ್ಟಣಗಳಿಗೆ ಬರುತ್ತಾ ಇವೆ. ಈ ದೃಷ್ಟಿಯಿಂದಲೂ ಕೂಡ ಹಣ್ಣಿನ ಮರಗಳನ್ನು ಕತ್ತರಿಸದಂತೆ ನೋಡಿಕೊಳ್ಳಬೇಕಾದದ್ದು ಬಹಳ ಅಗತ್ಯ ಎಂದು ಕಂಡು ಬರುತ್ತಾ ಇದೆ.

ಆಮೇಲೆ ಹಾಸ್ಟೆಲ್ ಕಟ್ಟಡಗಳಿಗೆ, ಶಾಲಾ ಕಟ್ಟಡಗಳಿಗೆ ಮತ್ತು ಡಿಪ್ರೆಸ್ಡ್ ಕ್ಲಾಸ್‌ನವರ ಮನೆಗಳನ್ನು ಕಟ್ಟಲಿಕ್ಕೆ ನಾಟಾ ಖರೀದಿ ಮಾಡಬೇಕೆಂದು ಫಾರೆಸ್ಟ್ ಇಲಾಖೆಯವರನ್ನು ಕೇಳಿದರೆ ಷೆಡ್ಯೂಲ್ಡ್ ರೇಟ್ ಶೇಕಡ 33 selection charges ಎಂದು ಕೇಳುತ್ತಾರೆ. ಧಾರ್ಮಿಕ ಸಂಸ್ಥೆಗಳವರು ಸಾರ್ವಜನಿಕರ ಪ್ರಯೋಜನಕ್ಕೆ ಹಾಸ್ಟೆಲ್, ಆಸ್ಪತ್ರೆ, ಶಾಲಾ ಕಟ್ಟಡಗಳನ್ನು ಕಟ್ಟಬೇಕಾದರೆ ಫಾರೆಸ್ಟ್ ಡಿಪಾರ್ಟಮೆಂಟಿನವರು ಕಮ್ಮಿ charges ಸೇರಿಸುವುದನ್ನು ಬಿಟ್ಟು ಷೆಡ್ಯೂಲ್ಡ್ ರೇಟಿಗೆ ಒದಗಿಸಿದರೆ ಒಳ್ಳೆಯದು ಮತ್ತು ಹರಾಜಿನಲ್ಲಿ ಗೊತ್ತಾಗುತ್ತದೆ. ಅದೇ ಬೆಲೆಗೆ ಕೊಡಬಹುದು.

ಧಾರವಾಡದಲ್ಲಿ ಬೊಂಬಾಯಿ ಸರ್ಕಾರದ ದಂಡೇರಿ ಫಾರೆಸ್ಟ್ ಸಾಮಿಲ್ಲಿನಲ್ಲಿ ಮರಗಳನ್ನು ಕತ್ತರಿಸಿ ಮಾರಾಟ ಮಾಡುವ ಬೆಲೆಗೂ ಮೈಸೂರು ಬೆಲೆಗೂ ಸಂಬಂಧವೇ ಇಲ್ಲ. ಆದ್ದರಿಂದ ಹೀಗೆ charitable institutionಗಳಿಗೆ ಶೇಕಡ 33⅓ನ್ನು auction charge ಸೇರಿಸಿ ಮಾರಾಟ ಮಾಡುವುದು ಸರಿಯಲ್ಲ. ಅದನ್ನು ವಿನಾಯಿತಿ ಮಾಡಬೇಕೆಂದು ಹೇಳುತ್ತೇನೆ. ಮರಗಳನ್ನು ಹೊರಗಡೆ ಮ್ಯಾಚ್ ಕಂಪನಿಗಾಗಲೀ ಮತ್ತು ಪ್ಲೈವುಡ್ ಕಂಪನಿಗಳಿಗಾಗಲಿ, ಕಮ್ಮಿ ದರದಲ್ಲಿ ಒದಗಿಸುತ್ತಿರುವರು. ಅದೇ ನಮ್ಮವರೇ ನಡೆಸುವ Match factoryಗೆ ಕಮ್ಮಿ ದರಗಳಲ್ಲಿ ಕೊಡುತ್ತಿಲ್ಲ. ಪ್ಲೈವುಡ್ ಫ್ಯಾಕ್ಟರಿಗೆ ಕೇಳಿದರೆ ಒಂದಾಣೆಯಂತೆ ಸಪ್ಲೈ ಮಾಡುತ್ತಾರೆ. ಈ ರೀತಿ ನಮ್ಮ ಅರಣ್ಯ ಇಲಾಖೆಯಲ್ಲಿ ಒಂದು ರೀತಿ ನೀತಿಯಿಲ್ಲ, ಒಂದು ಯೋಜನೆಯಿಲ್ಲ. ಮರಗಳನ್ನು ಕಡಿಸುವುದರಲ್ಲೂ ಒಂದು ಯೋಜನೆ ಬೇಕು. ಸಂಸ್ಥಾನದ ಅರಣ್ಯವನ್ನೆಲ್ಲಾ 60 ಭಾಗಗಳನ್ನಾಗಿ ಮಾಡಿ ಪ್ರತಿ ವರ್ಷ ಒಂದು ಭಾಗವನ್ನು ಕಡಿಸಿ ಮತ್ತೆ ಪೂರ್ತ ಗಿಡಗಳನ್ನು ನೆಡೆಸಿ ಮುಂದಿನ ವರ್ಷ ಇನ್ನೊಂದು ಭಾಗ\ ಅರಣ್ಯಕ್ಕೆ ಹೋಗುವಂತೆ ಒಂದು ಯೋಜನೆ ಹಾಕಿಕೊಂಡರೆ ಒಳ್ಳೆಯದಾಗುತ್ತದೆಂದು ಹೇಳುತ್ತೇನೆ.

ಇನ್ನು smuggling ವಿಚಾರ. ನಾವೀಗ ಗಂಧದ ಮರಗಳನ್ನು ರಾಷ್ಟ್ರೀಕರಣ ಮಾಡಿದ್ದೇವೆ. ಅದೇ ರೀತಿ ಉತ್ತಮ ದರ್ಜೆಯ ಮರ ನಾಟಾಗಳ ವಿಷಯವನ್ನೂ ಸರ್ಕಾರದವರೇ ಪೂರ್ತಿಯಾಗಿ ತಮ್ಮ ಕೈಯಲ್ಲಿಟ್ಟುಕೊಳ್ಳುವುದು ಒಳ್ಳೆಯದು. ಖಾಸಗಿಯವರ ಕೈಗೆ ಬಿಡುವುದು ಒಳ್ಳೆಯದಲ್ಲವೆಂದು ನಾನು ಹೇಳುತ್ತೇನೆ.

ನಿಮ್ಮ Sandal trees preservation ರೀತಿಯನ್ನು ನೋಡುವುದಾದರೆ, ಬಹುಶಃ ಮುಂದೆ ನಾಲ್ಕಾರು ವರ್ಷಗಳಲ್ಲಿ ನಿಮಗೆ ಸಾಕಾದಷ್ಟು ಗಂಧ ಸಿಕ್ಕುವುದಿಲ್ಲವೋ ಏನೋ ಎನಿಸುತ್ತದೆ. ಈಗಿನಿಂದಲೇ ಇದನ್ನು ಗಮನಿಸಿ ಗಂಧದ ಪ್ಲಾಂಟೇಷನ್‌ಗಳನ್ನು

(ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ).

ಜಾಸ್ತಿ ಮಾಡಬೇಕು. ಈಗ ತಾವು ಸಾಮಾನ್ಯವಾಗಿ ಒಂದು ಎಕರೆಗೆ ಪ್ಲಾಂಟೇಷನ್ ಮಾಡುವುದಕ್ಕೆ ಕೊಡುವಹಣ ಸಾಕಾಗುವುದಿಲ್ಲ. ಈ ದರವನ್ನು ಜಾಸ್ತಿಮಾಡಿ plantation ಕೆಲಸ ಚೆನ್ನಾಗಿ ನಡೆಯುವ ಬಗ್ಗೆ ಹೆಚ್ಚಿನ ಗಮನ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಜಿ. ನಾರಾಯಣಪ್ಪ (ಚಿಂತಾಮಣಿ—ಅನುಸೂಚಿತ ಜಾತಿಗಳು).—ಸ್ವಾಮಿ, ಕೋಲಾರ ಜಿಲ್ಲೆಯಲ್ಲಿ ಅನೇಕ ಫಾರೆಸ್ಟ್ ಪ್ರದೇಶಗಳಿವೆ. ಆದರೆ ಅವು ಯಾವುದೂ ಅಭಿವೃದ್ಧಿಯಾಗುವಂತೆ ಕಾಣುವುದಿಲ್ಲ. ಕಾರಣವೇನೆಂದರೆ, ಅಲ್ಲಿ ಮಳೆ ಕಡಮೆ. ಜಮೀನು ಒರತೆಯ ಜಮೀನಲ್ಲ. ಕೋಲಾರ ತಾಲ್ಲೂಕಿಗೆ ಸೇರಿದಂತೆ ಕದಿರೀಪುರ ಕಾಡಿದೆ. ಇದು ಹಿಂದೆ 27ನೆಯ ನಂಬರು ಮತ್ತು ಒಂದನೆಯ ನಂಬರು ಎಂದು ಹೇಳಿ 460 ಎಕರೆಯ ಒಂದು ಗೋಮಾಳವಾಗಿತ್ತು. ಅಲ್ಲಿ ಚಿಗರೆ ಮುಂತಾದ ಮರಗಳನ್ನು ಬೆಳೆಸಬೇಕೆಂದು ಮಾಡಿಕೊಂಡಿದ್ದೆವು. ಆದರೆ ಇತ್ತೀಚೆಗೆ ಅದನ್ನು ಅರಣ್ಯ ಇಲಾಖೆಗೆ ಸೇರಿಸಿಕೊಂಡು ಬಿಟ್ಟರು. ಆ ಕಾಡಿಗೆ ಒಬ್ಬರು forest guard ಎಂದು ಬೇರೆ ಇಟ್ಟಿದ್ದಾರೆ. ಆ ಗಾರ್ಡಿನ ಕೆಲಸವಾದರೂ ಏನು? ಪಕ್ಕದ ಪ್ರಾಂತ್ಯದವರ ಹತ್ತಿರ ಹೋಗಿ ಮೆಣಸಿನ ಕಾಯಿ ಕೇಳಿ ತೆಗೆದುಕೊಳ್ಳುವುದೇ ಹೊರತು ಮತ್ತೇನೂ ಇಲ್ಲ. ಹೋದ ವರುಷ ನಾನೇ ಈ ಅರಣ್ಯದ ಆದಾಯವೇನು ಎಂದು ಕೇಳಿದ್ದೆ. ಸರ್ಕಾರದವರು ಆ ಕಾಡಿಗೆ ಮಾಡುತ್ತಿರುವ ಖರ್ಚು, ಆ ಗಾರ್ಡಿನ ಸಂಬಳ, ತಿರುಗಾಡುವ ಭತ್ಯ ಎಲ್ಲವನ್ನೂ ನೋಡಿಕೊಂಡರೆ ಆದಾಯವೇನೂ ಇಲ್ಲ. ಹೀಗೆ ಮೊದಲು ನಾವು ಮರಗಳನ್ನು ಬೆಳೆಸಿದ ಪ್ರದೇಶ ಮತ್ಯಾವ ರೀತಿಯಲ್ಲೂ ಉತ್ತಮವಾಗದೆ ನಿಂತಿದೆ. ಸರ್ಕಾರಕ್ಕೂ ಆದಾಯವಿಲ್ಲ. ಇಂಥಾದ್ದನ್ನು ನಾವು ನಮ್ಮ ಗ್ರಾಮಗಳ ವಿಲೇಜ್ ಪಂಚಾಯ್ತಿ ಫಾರೆಸ್ಟ್‌ಗೆ ಮತ್ತೆ ಕೊಡಿಯೆಂದರೆ ಕೊಡುವುದಿಲ್ಲ. ಖಂಡಿತವಾಗಿ ಅದನ್ನು ಗ್ರಾಮದ forestಗೇ ಕೊಟ್ಟರೆ ಅವರು ಈಗ ಕಡಿದು ಹಾಕಿರುವ ಮರಗಳನ್ನು ತಿರುಗಿ ಬೆಳೆಸುತ್ತಾರೆಂದು ನಾನು ಹೇಳಬಲ್ಲೆ.

ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಮಲ್ಲಂಪಳ್ಳಿ ಗ್ರಾಮದಲ್ಲೂ ಹೀಗೆಯೇ ಇದೆ. ಅಲ್ಲಿನ ಗೋಮಾಳವನ್ನೂ forestಗೆ ತೆಗೆದುಕೊಂಡರು. ಅಲ್ಲಿ ಯಾವ ಮರಗಳೂ ಇಲ್ಲ. ಹರಿಜನರು ಅಲ್ಲಿ ಮನೆಗಳನ್ನು ಕಟ್ಟಿಸಿಕೊಂಡು ಒಂದು ಕಾಲೊನಿ ಮಾಡಿಕೊಳ್ಳಬೇಕೆಂದಿದ್ದರು. ಅಂಥಾದ್ದನ್ನು ಅರಣ್ಯ ಇಲಾಖೆಯವರು ಅವರನ್ನು ಹೊಡೆದು ಬಡಿದು ಕಿತ್ತುಕೊಂಡರು. ಹಾಗೆಯೇ ಕೋಲಾರ ತಾಲ್ಲೂಕು ನರಸಾಪುರ ಹೋಬಳಿ ವಾಸಹಳ್ಳಿಯೆಂಬುದು ಇನ್ನೊಂದು ಹಳ್ಳಿ, ಒಂದು ಗುಡಿಸಲು ಮಾತ್ರ ಅಲ್ಲಿದೆ. ಕೋಲಾರ ತಾಲ್ಲೂಕು ಸಬಾ ಮೂರಂಡಹಳ್ಳಿ ಫಾರೆಸ್ಟ್‌ನಲ್ಲಿ ಹರಿಜನರು ಆ ಜಮೀನುಗಳನ್ನು ಕೊಡಿ ಎಂದು ದರಖಾಸ್ತು ಹಾಕಿಕೊಂಡರೆ ಆ ಪ್ರದೇಶ ಫಾರೆಸ್ಟ್ ಇಲಾಖೆಗೆ ಸೇರಿದೆಯೆಂದು endorsement ಕೊಟ್ಟಿದ್ದಾರೆ. ನಿಜವಾಗಿಯೂ ಅಲ್ಲಿ ಒಂದು ಗಿಡವಿಲ್ಲ. ಇಂಥ ಪ್ರದೇಶಗಳನ್ನೆಲ್ಲಾ ಸರ್ವೆಮಾಡಿಸಿ ಈ ಕಾಡು ಬೀಡುಗಳನ್ನು ಮತ್ತೆ ಗ್ರಾಮ ಫಾರೆಸ್ಟ್‌ಗೆ ಕೊಡಬೇಕೆಂದು ಹೇಳುತ್ತೇನೆ.

ಕೊನೆಯದಾಗಿ ತಂಗಡಿಚಕ್ಕೆ ಹರಾಜಿನ ವಿಷಯದಲ್ಲಿ ಒಂದು ಮಾತು ಹೇಳ ಬಯಸುತ್ತೇನೆ. ಇದನ್ನು ನಮ್ಮ ಜಿಲ್ಲೆಯಲ್ಲಿ ಮುಸ್ಲಿಮರಿಗೆ ಬಿಟ್ಟು ಮತ್ತೆ ಯಾರಿಗೂ ಕೊಡುವಂತೆ ಕಾಣುವುದಿಲ್ಲ. ಅವರಿಗೆ ಕೊಡುವುದರಿಂದೇನು ಪ್ರಯೋಜನ? ತಂಗಡಿಚಕ್ಕೆ ಬಾಬುತು ರೇಜಿ ಮುಂತಾಗಿ ಎಲ್ಲವನ್ನೂ ಮಾಡುವವರೇ ಹರಿಜನರು. ಇಷ್ಟೆಲ್ಲಾ ಮಾಡುತ್ತಿದ್ದರೂ ಆ ಹರಿಜನರಿಗೆ ತಕ್ಕ ಪ್ರತಿಫಲ ದೊರೆಯುತ್ತಿಲ್ಲ. ಆದರೂ ಅಂಥವರ ಮೇಲೆ ಆ ಮುಸ್ಲಿಮರು, ಪುಂಡ ಪೋಕರಿಗಳು ಸೇರಿಕೊಂಡು ಅವರಿಗೆ ಸರಿಯಾಗಿ ಕೆಲಸ ಮಾಡಲಿಲ್ಲ ಎಂದು ಹಿಂಸೆ ಮಾಡುತ್ತಾರೆ. ಸರ್ಕಾರದವರು ಹರಿಜನರಿಗೆ ಆಗುತ್ತಿರುವ ಈ ಅನ್ಯಾಯವನ್ನು ಗಮನಿಸಿ ಹರಿಜನರಿಗೇ ಪಂಚಸಾಲು ಪ್ರಕಾರವೋ ಅಥವಾ ಇನ್ನಾವುದಾದರೂ ರೀತಿಯಲ್ಲೋ ಈ ಕೆಲಸ ಕೈಸೇರುವಂತೆ ಮಾಡಬೇಕು. ಹರಾಜಿಗಿಟ್ಟರೆ ಹರಿಜನರಿಗೆ ಸಿಕ್ಕುವುದಿಲ್ಲ. ಮಾನ್ಯ ಮಂತ್ರಿಗಳು ಇದನ್ನು ಗಮನಿಸಿ ಸೂಕ್ತ ಏರ್ಪಾಡನ್ನು ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಟಿ. ಎನ್. ಮೂಡಲಗಿರಿಗೌಡ (ಕುಣಿಗಲು).—ಸ್ವಾಮಿ, ಅನೇಕ ವಿಷಯಗಳನ್ನಾಗಲೇ ಮಾನ್ಯ ಸದಸ್ಯರು ತಿಳಿಸಿದ್ದಾರೆ. ಅದರಲ್ಲಿ ಬಹಳ ಮಟ್ಟಿಗೆ ಒತ್ತಾಯಪಡಿಸಿರತಕ್ಕದ್ದು ಎಂದರೆ ಉಪಯೋಗವಿಲ್ಲದ ಅರಣ್ಯವನ್ನಿಟ್ಟುಕೊಂಡು, ಅರಣ್ಯ ಬಹಳವಿದೆಯೆಂದು ಈ ಇಲಾಖೆಯವರು ಲೆಕ್ಕತೋರಿಸುತ್ತಿರುವುದು ಸರಿಯಲ್ಲವೆಂಬುದು. ಯಾವುವು ಉಪಯೋಗಕ್ಕೆ ಬರುತ್ತವೆಂಬುದನ್ನು ನಿರ್ಧಾರ ಮಾಡಿ ಉಪಯೋಗಕ್ಕೆ ಬಾರದಿರುವ ಜಮೀನುಗಳನ್ನು ವ್ಯವಸಾಯಕ್ಕೆ ಬಿಟ್ಟುಕೊಡುವ ಏರ್ಪಾಡು ಮಾಡಬೇಕೆಂದು ಅನೇಕ ವರ್ಷಗಳಿಂದ ಮಾನ್ಯ ಸದಸ್ಯರು ಹೇಳುತ್ತಲೇ ಇದ್ದಾರೆ. ಅನೇಕ ಸಲ ಈ ಸಭೆಯಲ್ಲಿಯೂ ಮತ್ತು ಹಿಂದಿನ ಸಭೆಗಳಲ್ಲಿಯೂ ಇದನ್ನೇ ಒತ್ತಾಯಪಡಿಸಲಾಗಿದೆ. ಆದರೆ ಸರ್ಕಾರದವರಲ್ಲಿ ನಿರ್ದಿಷ್ಟವಾಗಿ ಅರಣ್ಯ ಬೆಳೆಸುವ ಯೋಜನೆ ಯಾವುದೂ ಇಲ್ಲದಿರುವ ಕಾರಣದಿಂದ ಇಂಥ ಉಪಯೋಗವಿಲ್ಲದ ಅರಣ್ಯವನ್ನು ಇಟ್ಟುಕೊಳ್ಳುತ್ತಾ ಬಂದು ಜನಗಳು ವ್ಯವಸಾಯಕ್ಕೆ ಬೇಕೆಂದು ಕೇಳಿದರೂ ಕೂಡ ಅವರ ಮಾತನ್ನು ಗಮನಿಸದಿರುವುದು ತುಂಬಾ ವಿಷಾದಕರವಾದ ವಿಷಯ. ಹಿಂದೆ ಅರಣ್ಯ ಇಲಾಖೆಗೆ ಹೇಗೆ ನಾನಾ ಜಮೀನುಗಳನ್ನು ಸೇರಿಸಿಕೊಂಡರು ಎಂಬ ವಿಚಾರವನ್ನು ಮಾನ್ಯ ಸದಸ್ಯರು ತಿಳಿಸಿದ್ದಾರೆ. ಅನೇಕ ಕಡೆ ಗೋಮಾಳಗಳನ್ನು ಅರಣ್ಯಕ್ಕೆ ಸೇರಿಸಿಕೊಂಡು ಅವುಗಳನ್ನು forest lands ಎಂದು ಹೇಳುತ್ತಾ ಅದನ್ನೀಗ ಜನರು ವ್ಯವಸಾಯಕ್ಕೆ ಬಿಟ್ಟುಕೊಡಬೇಕೆಂದು ಕೇಳಿದರೂ ಅದನ್ನು ಕೊಡದೆಯೂ, ಅತ್ತ ಅದನ್ನು ಉಪಯೋಗ ಮಾಡಿಕೊಳ್ಳದೆಯೂ ಬಿಟ್ಟಿದ್ದಾರೆ. ಇದೆಲ್ಲಾ ಇಲಾಖೆಯವರು ಕೇವಲ ತಮ್ಮ prestige ದೃಷ್ಟಿಯಿಂದ ಹೇಳುತ್ತಿರುವ ಮಾತುಗಳೇ ಹೊರತು ವಾಸ್ತವವಾಗಿ ಅವರ ವಾದದಲ್ಲಿ ಏನೂ ಹುರುಳಿಲ್ಲವೆಂದು ಹೇಳಬೇಕಾಗಿದೆ. ಕೂಡಲೆ ಸರ್ವೆ ಮಾಡಿಸಬೇಕು. ಯಾವ ಅರಣ್ಯದಲ್ಲಿ ಮರಗಳನ್ನು ಬೆಳೆಸುವುದಕ್ಕೆ ತಯಾರಾಗಿದ್ದಾರೆಂಬುದನ್ನು ನಿರ್ದಿಷ್ಟಗೊಳಿಸಬೇಕು. ಯಾವ ಅರಣ್ಯದಲ್ಲಿ ಇವರು ಬೆಳೆಸುವುದಕ್ಕೆ ಸಾಧ್ಯವಿಲ್ಲ ಎಂಬುದನ್ನು ನಿರ್ದಿಷ್ಟ ಮಾಡಿಕೊಂಡು ಅಂಥಾದ್ದನ್ನು ಉಳುಮೆಗೆ ಬಿಟ್ಟುಕೊಡಬೇಕು. ಅರಣ್ಯ ಇಲಾಖೆಯವರಿಗೆ ತಮ್ಮ ಅರಣ್ಯ ಸಂಪತ್ತನ್ನು ಬೆಳೆಸುವುದಕ್ಕೆ ಬೇಕಾದಷ್ಟು ಜಮೀನು ಇದೆ. ಅರಣ್ಯಕ್ಕೆ ಸೇರಿದ ಜಮೀನು ಅಲ್ಲದೆ ಗೋಮಾಳಗಳ ಲ್ಯಾಂಡ್ಸ್ ಇವೆ. Village forestನ್ನು ಗೋಮಾಳ ಭೂಮಿಯಲ್ಲಿ ಅರಣ್ಯ ಇಲಾಖೆಯವರು ಏತಕ್ಕೆ ಬೆಳೆಸಬಾರದು, ಏತಕ್ಕೋಸ್ಕರ ವಿಲೇಜ್ ಪಂಚಾಯಿತಿಯವರ ಸಹಾಯವನ್ನು ತೆಗೆದುಕೊಂಡು ಗ್ರಾಮದ ಗೋಮಾಳದಲ್ಲಿ ವಿಲೇಜ್ ಫಾರೆಸ್ಟ್‌ಗಳನ್ನು ಬೆಳೆಸುವ ಏರ್ಪಾಡನ್ನು ಸರ್ಕಾರ ಏರ್ಪಾಡು ಮಾಡಬಾರದು? ವಿಲೇಜ್

ಫಾರೆಸ್ಟ್‌ಗಳನ್ನು ಮಾಡುವುದರಿಂದ ದೇಶದ ವನ ಸಂಪತ್ತು ಇಮ್ಮಡಿಯಾಗಿ ಬೆಳೆಯುವುದು. ಸುಮಾರು ಲಕ್ಷಾಂತರ ಎಕರೆ ಗೋಮಾಳ ಲ್ಯಾಂಡ್ಸ್ ಇವೆ. ಗೋಮಾಳ ಲ್ಯಾಂಡ್ಸ್ ಹೇಗಿದೆ ಎಂದರೆ ಬೇಸಾಯ ಕಾಲದಲ್ಲಿ ದನಗಳಿಗೆ ನಿಲ್ಲಲು ಆಶ್ರಯ ಭೂಮಿಯಾಗಿದೆ. ಇದಕ್ಕಿಂತ ಹೆಚ್ಚಿಗೆ ಉಪಯೋಗವಿಲ್ಲ. ಆದ್ದರಿಂದ ಫಾರೆಸ್ಟ್ ಇಲಾಖೆಯವರು ವಿಲೇಜ್ ಫಾರೆಸ್ಟನ್ನು ಮಾಡುವುದಕ್ಕೆ ಪ್ರಯತ್ನ ಮಾಡಿದರೆ ಗೋಮಾಳ ಲ್ಯಾಂಡ್ಸ್ improve ಆಗುತ್ತದೆ. ಪ್ರತಿಯೊಂದು ವಿಲೇಜಿಗೂ ಫಾರೆಸ್ಟ್ ಇದ್ದು ಗ್ರಾಮಗಳು ಬೆಳೆಯುವುವು. ಅಂತಹ ಯೋಜನೆಯನ್ನು ಹಾಕಿಕೊಳ್ಳುವುದಕ್ಕೆ ಪ್ರಯತ್ನಮಾಡುತ್ತಾ ಇಲ್ಲ. ಯೋಚನೆಯನ್ನೂ ಕೂಡ ಮಾಡಿಲ್ಲ. ಇದರಿಂದ ಎಷ್ಟು ಉತ್ಪತ್ತಿಯನ್ನು ತೋರಿಸುತ್ತಾರೋ ಅಷ್ಟೇ ಖರ್ಚಾಗಿದೆ ಎಂದು ಹೇಳುತ್ತಾರೆ. ಆದರೆ ಇತ್ತೀಚೆಗೆ teak ಮತ್ತು ಇತರ ಅರಣ್ಯ ಸಂಪತ್ತು ಕಡಿಮೆ ಯಾಗಿ ಹೋಗಿದೆ. ಈ ಡಿಮ್ಯಾಂಡ್ ಜಾಸ್ತಿಯಾಗಿ supply ಖೋತಾ ಬದ್ದು ಧಾರಣೆ ವಾಸಿಗಳು ಹೆಚ್ಚಾಗಿ, ಹೆಚ್ಚಿನ ಉತ್ಪತ್ತಿಯನ್ನು ತೋರಿಸುವುದಕ್ಕೆ ಅವಕಾಶವಾಗಿದೆಯೇ ಹೊರತು ಅದಕ್ಕಿಂತ ಹೆಚ್ಚಿಗೆ ಕಾಣುವುದಿಲ್ಲ. ಶ್ರೀ ದೇವರಾಜ್ ಅರಸಿನವರು, ಇದರ ಬೆಲೆ 5-6 ರೂಪಾಯಿಗಳಿಂದ 15-20 ರೂಪಾಯಿಗಳವರೆಗೂ ಏರಿದೆ ಎಂದು ಹೇಳಿದರು. ಮೈಸೂರು ಫಾರೆಸ್ಟಿನಿಂದ ಲಕ್ಷಾಂತರ ರೂಪಾಯಿಗಳ ಮರಗಳನ್ನು ಹೊರಗಡೆಗೆ ನಾವು ಕಳುಹಿಸಿ ಕೊಡುತ್ತಿದ್ದೇವೆ. ನಮಗೆ ಹೆಚ್ಚಿನ ದುಡ್ಡು ಬರುತ್ತದೆ ಎನ್ನುವ ದೃಷ್ಟಿಯಿಂದ ಕಳುಹಿಸಿಕೊಡುತ್ತಿದ್ದೇವೆ. ನಮ್ಮಲ್ಲಿ ಫಾರೆಸ್ಟ್ ಇದೆ. ನಮ್ಮ ದೇಶದ ಜನಗಳಿಗೆ ಪ್ರಯೋಜನವಾಗುತ್ತದೆಯೇ ಎಂಬುದನ್ನು ಅರಣ್ಯ ಇಲಾಖೆಯವರು ನೋಡುತ್ತಾ ಇಲ್ಲ. ಯಾರು ಚೆನ್ನಾಗಿ ಕೆಲಸ ಮಾಡುತ್ತಾರೋ ಅವರಿಗೆ encouragement ಇಲ್ಲ, ಯಾರು ಕೆಲಸ ಮಾಡುವುದಿಲ್ಲವೋ ಅವರಿಗೆ encouragement ಇದೆ ಎಂಬುದಾಗಿ ಅರಣ್ಯ ಇಲಾಖೆಯಲ್ಲಿ ಒಂದು ಪ್ರತೀತಿ ಇದೆ. ಒಂದು ಸಂದರ್ಭದಲ್ಲಿ ನಾನು ಶಿವಮೊಗ್ಗಾ ಜಿಲ್ಲೆಗೆ ಹೋಗಿದ್ದೆ. ಅಲ್ಲಿ ಅರಣ್ಯ ಬೆಳೆಸುವ ಪ್ರೋಗ್ರಾಂನ್ನು ಹಾಕಿಕೊಂಡಿದ್ದಾರೆ. ಅದು ಬಹಳ ಚೆನ್ನಾಗಿದೆ. ಮೈಲಗಟ್ಟಲೆ ಬೆಳೆಸುತ್ತಾರೆ. ಬಹಳ ಚೆನ್ನಾಗಿದೆ. ಆದರೆ ಹಾಗೆ ಬೇರೆ ಜಿಲ್ಲೆಗಳಲ್ಲಿ, ಅದೇ ಇಲಾಖೆಯವರು ಏತಕ್ಕೆ ಬೆಳೆಸುತ್ತಾ ಇಲ್ಲ ಎಂಬುದನ್ನು ನಾವು ಕೇಳಬೇಕಾಗಿದೆ. ತುಮಕೂರು ತೆಗೆದುಕೊಂಡರೆ, ತುಮಕೂರಿನ ಜಿಲ್ಲೆಯಲ್ಲಿ ಮತ್ತು ದೇವರಾಯನದುರ್ಗ ಫಾರೆಸ್ಟಿನಲ್ಲಿ ಶ್ರೀಗಂಧ ವಿಶೇಷವಾಗಿ ಇದೆ. ಈಗ ಗಂಧದ ಫ್ಯಾಕ್ಟರಿಗೂ ಮತ್ತು ದೇಶಕ್ಕೂ ಧಕ್ಕೆ ಬರುವ ಪರಿಸ್ಥಿತಿ ಒದಗಿದೆ. ಅರಣ್ಯದಲ್ಲಿರುವ ಶ್ರೀಗಂಧದ ಮರಕ್ಕೆ ರೋಗ ತಗಲಿ ಮರಗಳು ನಾಶವಾಗಿ ಹೋಗುತ್ತಿವೆ. ಎಲ್ಲೆಲ್ಲಿ ಉತ್ತಮವಾಗಿ ಬೆಳೆಸುವುದಕ್ಕೆ ಅವಕಾಶವಿದೆಯೋ ಅಲ್ಲಲ್ಲಿ ಶ್ರೀಗಂಧವನ್ನು ಬೆಳೆಸಬೇಕು. ಹಾಗೆಯೇ preserve ಮಾಡಬೇಕು. ಲಕ್ಷಾಂತರ ರೂಪಾಯಿ ಆದಾಯ ಬರತಕ್ಕ ಮರ ಸಂಪತ್ತನ್ನು ಬೆಳೆಸಬೇಕೆಂದು ತೀವ್ರವಾಗಿ ಯೋಚನೆ ಮಾಡುತ್ತಾ ಇಲ್ಲ. ಹಿಂದೆ ಫಾರೆಸ್ಟ್ ಇಲಾಖೆಯಲ್ಲಿ ಶ್ರೀಗಂಧ ಮರ ಹಾಕಿದರೆ ಬೆಳೆಯುವುದಿಲ್ಲ ಎಂಬ ಅಭಿಪ್ರಾಯವಿತ್ತು. ತಾನಾಗಿಯೇ ಬೆಳೆಯಬೇಕು, ಬೀಜ ಹಾಕಿ, ನರ್ಸರೀಸ್‌ನಲ್ಲಿ ಬೆಳೆಸುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಿದ್ದರು. ಈಗ ನರ್ಸರಿ ಮಾಡಿ ಬೆಳೆಸುವುದಕ್ಕೆ ಪ್ರಾರಂಭ ಮಾಡಿದ್ದಾರೆ. ತುಮಕೂರು ಫಾರೆಸ್ಟಿನಲ್ಲಿ ಒಂದು ಮರವೂ ಕೂಡ ಇಲ್ಲ. ತುಮಕೂರು ಜಿಲ್ಲೆ ಶ್ರೀಗಂಧ ಮರಕ್ಕೆ ಉತ್ತಮವಾದ ಮತ್ತು ಶ್ರೇಷ್ಠವಾದ ಪ್ರದೇಶ. ಅಲ್ಲಿ ಸಾಮಾನ್ಯವಾಗಿ ಎಲ್ಲ ಹೊಲಗಳಲ್ಲೂ ಕೂಡ ಶ್ರೀಗಂಧದ ಮರವಿದೆ. ಶ್ರೀ ಹುಚ್ಚೇಗೌಡರು ತಿಳಿಸಿದಹಾಗೆ ಇಲಾಖೆಯವರು ಶ್ರೀಗಂಧದ ಮರವನ್ನು ಬೆಳೆಸುವುದನ್ನು discourage ಮಾಡಿದ್ದಾರೆ. ಸಾರ್ವಜನಿಕರು ಬೆಳೆಸತಕ್ಕ ಮತ್ತು ಉಳಿಸತಕ್ಕ ಮನೋಭಾವ ಕಡಿಮೆ ಮಾಡಿಕೊಂಡಿದ್ದಾರೆ. ಕೇಸು ಹಾಕಿ, ಕಿರುಕುಳ ಕೊಡುವುದನ್ನು ಹೆಚ್ಚು ಮಾಡಿದ್ದರಿಂದ ಜಮೀನಿನಲ್ಲಿರುವ ಗಿಡವನ್ನು ಬೆಳಸಬಾರದು ಅದನ್ನು ಕಿತ್ತು ಹಾಕಬೇಕು, ಇಲ್ಲದಿದ್ದರೆ ಮುಂದೆ ಅದರಿಂದ ತೊಂದರೆ ಬರುತ್ತದೆ ಎಂಬ ಭಾವನೆಯನ್ನುಂಟುಮಾಡಿದ್ದಾರೆ. ಅದು ಸರಿಯಾದುದಲ್ಲ. ಜನರು ಹೊರಗಡೆಗೆ ತೆಗೆದುಕೊಂಡು ಹೋಗಿ ಹಡಗಿನಲ್ಲಿ ರವಾನೆ ಮಾಡುವುದಕ್ಕೆ ಆಗುವುದಿಲ್ಲ. ಧೂಪ ಹಾಕುವುದಕ್ಕೋ, ಇನ್ನೊಂದಕ್ಕೋ ಆ ಮರವನ್ನು ಕಡಿದುಕೊಂಡು ಹೋಗುತ್ತಾರೆ. ಇದಕ್ಕಿಂತ ಹೆಚ್ಚಿಗೆ ಉಪಯೋಗಿಸುತ್ತಾ ಇಲ್ಲ. ವಿಶೇಷ ಕಾನೂನನ್ನು ಉಪಯೋಗಿಸಿ, ಒಂದು ತಿಂಗಳು, ಎರಡು ತಿಂಗಳು ಸಜಾ ವಿಧಿಸಿ, ಜನರನ್ನು ಕೋರ್ಟಿಗೆ ಎಳೆದು, ಈ ರೀತಿ ಪರಿಸ್ಥಿತಿಯನ್ನುಂಟುಮಾಡಿ, ಇಂತಹ ಮರಗಳನ್ನು ಬೆಳೆಸುವುದಕ್ಕೆ discourage ಮಾಡಿದ್ದಾರೆ. ಇದು ಸರಿಯಲ್ಲ. ಹೀಗೆ ಯಾವುದೋ spike disease ಬಂದು, ಫಾರೆಸ್ಟಿನಲ್ಲಿರುವ ಮರ ಪೂರ್ತಿಯಾಗಿ ಹೋಗುವ ಸಂದರ್ಭ ಬಂದಿದ. ಆದ್ದರಿಂದ ವಿಶೇಷವಾಗಿ ಹಣವನ್ನು, ಆದಾಯವನ್ನು ಕೊಡುವ ಇಂತಹ ಮರಗಳನ್ನು ಎಲ್ಲೆಲ್ಲಿ ಬೆಳೆಸುವುದಕ್ಕೆ ಸಾಧ್ಯವೋ ಅಲ್ಲಲ್ಲಿ ಬೆಳೆಸುವುದಕ್ಕೆ ಪ್ರಯತ್ನ ಮಾಡಬೇಕು. ಇಲಾಖೆಯಲ್ಲಿರುವ staff ನಿಂದ afforestation ಮಾಡಬೇಕು. ಆದರೆ ಇಲಾಖೆಯು ವಿಶೇಷ ಆಸಕ್ತಿಯನ್ನು ತೋರಿಸದೆ, ಫಾರೆಸ್ಟಿನಲ್ಲಿರತಕ್ಕ ಲಾಂಟಾನಾ ಬೆಳೆದುಕೊಂಡು ಬಿದ್ದಿರುವಾಗ, ಕುರುಚಲುಗಿಡಗಳು ಇಲ್ಲದೇ ಇರುವುದನ್ನು ಫಾರೆಸ್ಟ್ ಎಂದು ಕರೆದುಕೊಂಡು ಅದು ತಮಗೆ ಬೇಕು ಎಂದು ಹೇಳುವುದರಲ್ಲಿ ಯಾವ ಅರ್ಥವೂ ಇಲ್ಲ ಮತ್ತು ಸರಿಯೂ ಅಲ್ಲ. ಇದರ ಜೊತೆಗೆ ವಿಲೇಜ್ ಫಾರೆಸ್ಟನ್ನು ಬೆಳೆಸಬೇಕು ಎಂದು ನಾನು ಒತ್ತಾಯ ಪೂರ್ವಕವಾಗಿ ಹೇಳಿ ಈ ನನ್ನ ಒಂದೆರಡು ಮಾತುಗಳನ್ನು ಮುಗಿಸುತ್ತೇನೆ.

5-30 P.M.

ಶ್ರೀ ಜಿ. ಪುಟ್ಟಸ್ವಾಮಿ (ಚಿಕ್ಕಮಗಳೂರು—ಮೂಡಗೆರೆ-ಅನುಸೂಚಿತ ಜಾತಿಗಳು).—ಸ್ವಾಮಿ, ಅಧ್ಯಕ್ಷರೆ, ದೇಶಕ್ಕೆ ಅರಣ್ಯ ಸಂಪತ್ತು ಬಹಳ ಮುಖ್ಯವಾದುದು, ಅರಣ್ಯದ ಅಭಿವೃದ್ಧಿಗೆ ಹೆಚ್ಚಿನ ನಿಗಾ ಕೊಟ್ಟರೆ ಸರ್ಕಾರಕ್ಕೆ ಹೆಚ್ಚಿನ ಆದಾಯ ಬರುವ ನಿರೀಕ್ಷೆಯೂ ಇದೆ. ಹೀಗಿದ್ದಾಗ್ಯೂ ಅನೇಕ ವರ್ಷಗಳಿಂದ ಈ ಮಾನ್ಯ ಸಭೆಯಲ್ಲಿಯೂ ಬೇರೆ ಕಡೆಗಳಲ್ಲಿಯೂ ಅನೇಕ ವೇಳೆ ಅರಣ್ಯ ಸಂಪತ್ತನ್ನು ಹೆಚ್ಚಿಸಬೇಕೆಂದು ಹೇಳುತ್ತಿದ್ದರೂ ಪ್ರತಿವರ್ಷವೂ ಅರಣ್ಯ ಸಂಪತ್ತು ನಾಶವಾಗುತ್ತಿದೆ ಎಂದು ದುಃಖದಿಂದ ಹೇಳಬೇಕಾಗಿದೆ. ಮಾನ್ಯ ಸದಸ್ಯರಾದ ಶ್ರೀ ಮಾಧವಾಚಾರ್ಯರು ಅರಣ್ಯ ಸಂಪತ್ತನ್ನು ಅಭಿವೃದ್ಧಿ ಮಾಡದಿದ್ದರೆ ದೇಶಕ್ಕೆ ಎಷ್ಟು ಅನ್ಯಾಯವಾಗುತ್ತದೆಂಬುದನ್ನು ಬಹಳ ಚೆನ್ನಾಗಿ ಹೇಳಿದ್ದಾರೆ. ಅರಣ್ಯಗಳನ್ನು ಅಭಿವೃದ್ಧಿ ಮಾಡುವುದೇ ನಮ್ಮ ಕರ್ತವ್ಯವೆಂದು ಸರ್ಕಾರದವರು ಬಾಯಿನಲ್ಲಿ ಮಾತ್ರ ಹೇಳುತ್ತಿದ್ದರೆ ಸಾಲದು. ಕೆಲವುಕಡೆ ಸಾವಿರಾರು

(ಶ್ರೀ ಜಿ. ಪುಟ್ಟಸ್ವಾಮಿ.)

ಎಕರೆ ಜಮೀನಿನಲ್ಲಿ ಒಂದು ಮರ ಕೂಡ ಇಲ್ಲ, ಇದನ್ನು ಅರಣ್ಯವಾಗಿ ಅಭಿವೃದ್ಧಿಯನ್ನೂ ಮಾಡುವುದಿಲ್ಲ, ಆ ಜಮೀನನ್ನು ಸಾಗುವಳಿಗೂ ಕೊಡುವುದಿಲ್ಲ. ಹತ್ತು, ಇಪ್ಪತ್ತು, ವರ್ಷಗಳಿಂದ ಈ ಅರಣ್ಯದ ಜಮೀನುಗಳನ್ನು ಹಾಗೆಯೇ ಇಟ್ಟುಕೊಂಡು ಬಂದಿರುವುದರಿಂದ ತುಂಬಾ ನಷ್ಟ ಮಾಡಿದ್ದಾರೆಂದು ಹೇಳದೆ ವಿಧಿಯಿಲ್ಲ. ದೊಡ್ಡ ಅರಣ್ಯವಿದ್ದು ಅದು ಕಾಡು ಬೆಳೆಸುವುದಕ್ಕೆ ಸರಿಯಿಲ್ಲದೆ ಫಲವತ್ತಾದ ಜಮೀನಾಗಿದ್ದು ಅದರಲ್ಲಿ ಕೇವಲ ಹತ್ತು ಎಕರೆ ಜಮೀನನ್ನು ಕೂಡ ಜಮೀನಿಲ್ಲದ ಜನರಿಗೂ ನಿರ್ಗತಿಕರಿಗೂ ಕೊಡದೇ ಹೋದರೆ, ಸುಮ್ಮನೆ ತತ್ವ ಹೇಳುವುದರಿಂದ ಪ್ರಯೋಜನವೇನು ? ಸರ್ಕಾರದವರು ಅರಣ್ಯಗಳನ್ನು ಹೆಚ್ಚು ಮಾಡುವ ಅಥವಾ ಕಡಮೆ ಮಾಡುವ ವಿಷಯದಲ್ಲಿ ನಾನು ಅಡ್ಡಿಬರುವುದಿಲ್ಲ. ಆದರೆ ಈ ತತ್ವಕ್ಕೆ ವಿರುದ್ಧವಾಗಿ ಅಥವಾ ಪ್ರತಿಯಾಗಿ ನಡೆಯುತ್ತಿರುವುದು ಸರಿಯಲ್ಲ. ಅರಣ್ಯ ಮಧ್ಯದಲ್ಲಿ ಅರಣ್ಯ ಬೆಳೆಯುವುದಕ್ಕೆ ಅವಕಾಶವಿಲ್ಲದಿರುವಾಗ, ಇದಕ್ಕೆ ಆ ಜಮೀನು ಲಾಯಕ್ಕಾಗಿಲ್ಲದೇಯಿರುವಾಗ, ಈ ಜಮೀನನ್ನು ಹತ್ತಾರು ವರ್ಷಗಳಿಂದ ಸಾಗುವಳಿಗೂ ಕೊಡದೆ ಏಕೆ ಹಾಗೆಯೇ ಬಿಟ್ಟುಕೊಂಡಿರಬೇಕು ? ಇದನ್ನು ಮಂತ್ರಿಗಳು ಪರಿಶೀಲನೆ ಮಾಡಬೇಕು. ಅಲ್ಲದೆ ಈ ಮಂತ್ರಿಗಳು ಡಾ॥ ನಾಗನಗೌಡರು ಬಂದಮೇಲೆ ಈ ಇಲಾಖೆಯ ದಕ್ಷತೆ ಹೆಚ್ಚುತ್ತದೆಂದು ಬಹುಜನರು ನಿರೀಕ್ಷೆ ಮಾಡಿದ್ದರು. ಈಗಂತೂ ಅರಣ್ಯ ಶಾಖೆಯ ಯಂತ್ರದ ದಕ್ಷತೆ ಕಡಮೆಯಾಗುತ್ತಿದೆ ಎಂದು ಅನೇಕ ಜನರು ಹೇಳಿದ್ದಾರೆ. ಉದಾಹರಣೆಗೆ, ಇಲಾಖೆಗೆ ಸೇರಿದ ಜಮೀನು ದರಖಾಸ್ತುಗಳ ಸಂಬಂಧದಲ್ಲಿ valuation ಮಾಡುವುದಕ್ಕೆ ಅರಣ್ಯ ಶಾಖೆಗೆ ಕಳುಹಿಸುತ್ತಾರೆ. ಮೂಡಿಗೆರೆ ತಾಲ್ಲೂಕಿನಲ್ಲಿ ಇಂಥಾ ರಿಕಾರ್ಡು ಅರಣ್ಯ ಶಾಖೆಯ ಅಧಿಕಾರಿಗಳಿಗೆ ಹೋಗಿ ಒಂದು ವರ್ಷಕ್ಕೆ ಮೇಲ್ಪಟ್ಟಾಗಿದ್ದರೂ ಅದು ವಾಪಸ್ಸು ಅವರಿಂದ ಬರಲಿಲ್ಲವೆಂದರೆ, ಇದಕ್ಕೇನು ಹೇಳುವುದು ? ಜನರು ಅನೇಕ ಅರ್ಜಿಗಳನ್ನು ಕೊಟ್ಟು ಪ್ರತಿದಿನವೂ ಅವರಲ್ಲಿಗೆ ಹೋಗುತ್ತಿದ್ದರೂ ಕೂಡ ದರಖಾಸ್ತು ರಿಕಾರ್ಡುಗಳಿಗೆ ಗಮನ ಕೊಡುವುದಿಲ್ಲ. ನಾನೇ ಈ ವಿಷಯದಲ್ಲಿ ಒಂದು ಖೋತಾ ನಿರ್ಣಯವನ್ನು ಮಂಡಿಸಿರುತ್ತೇನೆ. ನಾವು ಮಾತನಾಡತಕ್ಕ ವಿಷಯಗಳನ್ನೂ, ಕೊಡತಕ್ಕ ಸಲಹೆಗಳನ್ನೂ ಕಾರ್ಯಗತ ಮಾಡುವುದಾಗಲೀ, ವಿಚಾರ ಮಾಡುವುದಾಗಲೀ ಇಲಾಖೆಗೆ ಬರೆದು ತನಿಖೆ ಮಾಡುವುದಾಗಲೀ ಮಾಡಿದರೆ ಒಳ್ಳೆಯದು. ಈ ರೀತಿ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಇಲ್ಲವಾದಲ್ಲಿ ಅರಣ್ಯರೋದನವಾಗುತ್ತದೆ. ವ್ಯವಸಾಯದ ಮುಟ್ಟುಗಳನ್ನು ಪಡೆಯುವುದಕ್ಕೆ ರೈತರಿಗೆ ಬಹಳ ಅನಾನುಕೂಲವಾಗಿದೆ. ನೇಗಿಲು, ಕುಂಟೆ, ಮುಂತಾದ ವ್ಯವಸಾಯದ ಮುಟ್ಟುಗಳನ್ನು ಹಸಿ ಮರದಿಂದ ಮಾಡುವುದು, ಆದುದರಿಂದ ರೈತರು ಇವುಗಳಿಗೆ ಬೇಕಾದ ಹಸಿ ಮರವನ್ನು ತರುವುದಕ್ಕೆ ವಿನಾಯ್ತಿ ಕೊಡಬೇಕು; ಇಲ್ಲದಿದ್ದರೆ ರೈತರಿಗೆ ಬಹಳ ತೊಂದರೆ. ಕಾಡಿನಿಂದ ಮುಳ್ಳುಗಳನ್ನು ತರುವುದಕ್ಕೂ ಅಡ್ಡಿಯಿದೆ ಎಂದು ಹೇಳಿದ್ದಾರೆ. ಲೈಸೆನ್ಸ್ ಇಲ್ಲದೆ ಇದನ್ನು ತಂದುಕೊಳ್ಳುವುದಕ್ಕೆ ಅವಕಾಶ ಕೊಡಬೇಕು.

ಮೂಡಿಗೆರೆ ತಾಲ್ಲೂಕು ಬೈರಾಪುರದಲ್ಲಿ ಕಾಡಾನೆಗಳ ಕಾಟ ಜಾಸ್ತಿಯಾಗಿದೆ; ಅದನ್ನು ತಪ್ಪಿಸದೇಯಿದ್ದರೆ ಜನರಿಗೆ ಬಹಳ ತೊಂದರೆಯಾಗುತ್ತದೆ. ಆನೆಗಳನ್ನು ಹಿಡಿಯುವುದಕ್ಕೆ ಪ್ರಯತ್ನ ಮಾಡಬೇಕು. ಒಟ್ಟಿನಲ್ಲಿ, ಮಂತ್ರಿಗಳು ಆಯಾ ಪ್ರದೇಶಗಳಿಗೆ ಹೋದಾಗ ತನಿಖೆ ಮಾಡಿ ಜನರಿಗೆ ಎಷ್ಟು ಸಹಾಯ ಕೊಡಬಹುದು, ಅರಣ್ಯಗಳನ್ನು ಎಷ್ಟು ಅಭಿವೃದ್ಧಿ ಮಾಡಬಹುದುಎಂಬ ವಿಚಾರದಲ್ಲಿ ಸರ್ಕಾರ ನಿಗಾ ತೆಗೆದುಕೊಳ್ಳಬೇಕು.

ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಸ್ವಾಮಿ, ಅರಣ್ಯ ಸಂಪತ್ತಿನ ವಿಚಾರದಲ್ಲಿ ಇದುವರೆಗೆ ವಾದ ವಿವಾದಗಳು ನಡೆದಿವೆ. ಶಾಸನ ಸಭೆಗೆ ಪ್ರಜೆಗಳಿಂದ ಚುನಾಯಿತರಾಗಿ ಬಂದ ಮೇಲೆ, ದೇಶದ ಹಿತದೃಷ್ಟಿಯಿಂದಲೂ ಪ್ರಜೆಗಳ ಹಿತದೃಷ್ಟಿಯಿಂದಲೂ ದೇಶ ಅಭಿವೃದ್ಧಿಯಾಗಬೇಕಾದರೆ ಯಾವ ಯಾವುದು ಅಗತ್ಯವೆಂಬುದನ್ನು ನೋಡಿ ಅರಿಯಬೇಕು. ಈ ಫಾರೆಸ್ಟ್ ಬೇಡಿಕೆಯ ಮೇಲೆ ಮಾತನಾಡುತ್ತಾ ಅನೇಕ ಸದಸ್ಯರು ಅನೇಕ ಅರ್ಜಿಗಳು ಬಂದರೂ ಗಮನಿಸುವುದಿಲ್ಲ, ಫಾರೆಸ್ಟ್ ಇಲಾಖೆಯಲ್ಲಿ ಜಾಗ್ರತೆ ಜಮೀನು ವಿಲೇ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿಲ್ಲವೆಂದು ಹೇಳಿದ್ದಾರೆ. ನನಗೆ ಗೊತ್ತಿರುವಹಾಗೆ ಮೈಸೂರು ಸಂಸ್ಥಾನದಲ್ಲಿ ಇದುವರೆಗೆ ಇದ್ದ ಅರಣ್ಯ ಪ್ರದೇಶ ಈಚೆಗೆ ಕಡಮೆಯಾಗಿದೆ. 1920ರಿಂದೀಚೆಗೆ ಸುಮಾರು ಹದಿನೈದುಸಾವಿರ ಎಕರೆಯಷ್ಟು ಕಡಮೆಯಾಗಿದೆ ಎಂಬುದನ್ನು ಸರ್ಕಾರ ಅರಿಯಬೇಕು. ಯಾವ ಸಂಸ್ಥಾನದಲ್ಲೇ ಆಗಲಿ ಅರಣ್ಯ ಕಡಮೆಯಾದಮೇಲೆ ದೇಶದ ಭದ್ರತೆ ಮತ್ತು ಸಂಪತ್ತು ಕಡಮೆಯಾಗುತ್ತದೆಂಬುದನ್ನರಿಯಬೇಕು. ಇದಕ್ಕೆ ಕಾರಣ, ದೇಶದಲ್ಲಿ ಮಳೆ ಬೆಳೆ ಸರಿಯಾಗಿ ನಡೆಯಬೇಕಾದರೆ, ವನ ಸಂಪತ್ತು ಮುಖ್ಯ. ಎಲ್ಲಿ ವನ ಸಂಪತ್ತಿಲ್ಲವೋ ಅಲ್ಲಿ ಮಳೆ ಬರುವುದಿಲ್ಲ. ಇದನ್ನು ಸರ್ಕಾರದವರು ಚೆನ್ನಾಗಿ ಅರಿತಿದ್ದಾರೆ. ನಾಲ್ಕೈದು ವರ್ಷಗಳಿಂದಲೂ ನಾನು ಅರಣ್ಯಗಳನ್ನು ಅಭಿವೃದ್ಧಿ ಮಾಡಬೇಕು, ಅರಣ್ಯ ಸಂಪತ್ತನ್ನು ಹೆಚ್ಚಿಸಬೇಕು, ಸಾಗವಾನಿ ಮರ ಹೆಚ್ಚು ಮಾಡಬೇಕು. ಇದರಿಂದ ವರಮಾನ ಹೆಚ್ಚುತ್ತದೆಂದು ಹೇಳುತ್ತಿದ್ದೇನೆ. ಇನ್ನೂ ಗಿಡಮೂಲಿಕೆಗಳನ್ನು ಜಾಸ್ತಿಯಾಗಿ ಮಾಡಬೇಕು. ಅರಣ್ಯದ ಜಮೀನನ್ನು ಜನರಿಗೆ ಕೊಟ್ಟು ಬಿಡಬೇಕೆಂದು ಕೆಲವರು ಹೇಳಿದರು. ಇದು ಹೇಗಿದೆಯೆಂದರೆ, ಮಾಂಗಲ್ಯವನ್ನು ಹೆಂಡತಿಗೆ ಕಟ್ಟಿರುತ್ತೇವೆ, ನಮಗೆ ಹೊಟ್ಟೆಗಿಲ್ಲವೆಂದು ಅದನ್ನು ಕಿತ್ತು ಮಾರಿದರೆ ಎಷ್ಟು ಅನ್ಯಾಯವೋ ಅಷ್ಟೇ ಅನ್ಯಾಯವಾಗುತ್ತದೆ; ಅವರು ಹೇಳಿದ ಹಾಗೆ ಮಾಡಿದರೆ, ಫಾರೆಸ್ಟ್ ಇಲಾಖೆಯಲ್ಲಿ ದಕ್ಷತೆ ಕಡಮೆಯಾಗಿದೆ. ಸಾಮಾನ್ಯವಾಗಿ ಫಾರೆಸ್ಟ್ ಮೆಂಡರುಗಳು, ಗಾರ್ಡುಗಳು ಮುಂತಾದ ನೌಕರರು ಅನೇಕ ಕಡೆ ಸುಮಾರು ಹತ್ತು ಹನ್ನೆರಡು ವರ್ಷಗಳಿಂದ ಕಾಡಿನಲ್ಲಿ ಕುರಿ ದನಗಳನ್ನು ಮೇಯಿಸುವವರಿಗೆ ಸೌದೆಗೂ ಮನೆಕಟ್ಟಿಕೊಳ್ಳುವುದಕ್ಕೂ ಮರ ತೆಗೆದುಕೊಂಡು ಹೋಗಲು ಅವಕಾಶ ಕೊಡುತ್ತಿದ್ದಾರೆ. ಇದರಿಂದ ಅರಣ್ಯಸಂಪತ್ತು ಕಡಮೆಯಾಗಿ ಮಳೆ ಬೆಳೆ ಕಡಮೆಯಾಗುವುದಕ್ಕವಕಾಶವಾಗಿದೆ. ದೇಶದ ಹಿತದೃಷ್ಟಿಯಿಂದ ಅರಣ್ಯಗಳನ್ನು ಸುಭದ್ರವಾಗಿಡಬೇಕು. ಈ ಜಮೀನಿನಲ್ಲಿ ಒಂದು ಎಕರೆಯನ್ನು ಕೂಡ ಯಾರಿಗೂ ಕೊಡದೆ ಭದ್ರಪಡಿಸಬೇಕು. ಶ್ರೀ ಮೊಡಲಗಿರಿಗೌಡರು ತೀರಾ ರೈತರು, ಅನುಭವಸ್ಥರು. ಇಂಥವರು ಫಾರೆಸ್ಟ್ ಜಮೀನನ್ನು ದಾನ ಕೊಡಿ ಎಂದು ಅಪ್ಪಣೆ ಕೊಟ್ಟಿರುವುದನ್ನು ಕೇಳಿ ನನಗೆ ಆಶ್ಚರ್ಯವಾಯಿತು. ಅವರಂಥವರು ಬೇಕಾದರೆ ಜಮೀನನ್ನು ಬಿಟ್ಟುಕೊಡಲಿ, ಬೇಡ ಎನ್ನುವುದಿಲ್ಲ. ಆದರೆ ಅರಣ್ಯಸಂಪತ್ತನ್ನು ಕೊಟ್ಟು ಕಡಮೆ ಮಾಡಬಾರದು. ನಮ್ಮ ದೇಶದಲ್ಲಿ ಹಿಂದೆ ಹಿರಿಯರು ಒಂದು ಮರವನ್ನಾದರೂ ಹಾಕಿ

ಸಾಯಬೇಕೆಂದು ಪ್ರತಿಜ್ಞೆ ಮಾಡುತ್ತಿದ್ದರು. ಆದರೆ ಈಗ ಐವತ್ತು ಮರಗಳನ್ನಾದರೂ ಕಡಿದು ಸಾಯಬೇಕೆಂದು ಪ್ರತಿಜ್ಞೆ ಮಾಡುತ್ತಾರೆ. ಶಾಸನ ಸಭೆಗೆ ಜನರಿಂದ ಚುನಾಯಿತರಾಗಿ ಬಂದಿರುವ ನಾವು ದೇಶದ ಹಿತವನ್ನು ರಕ್ಷಣೆ ಮಾಡಬೇಕೆಂಬ ಉದ್ದೇಶದಿಂದ ತಮ್ಮಲ್ಲಿ ಹೇಳುತ್ತಿದ್ದೇನೆ. ಕೊನೆಯದಾಗಿ, ಯಾವ ಯಾವ ಡಿಮ್ಯಾಂಡಿನ ಮೇಲೆ ನಾವು ಏನೇನು ಸಲಹೆ ಮಾಡುತ್ತೇವೋ ಅದನ್ನು ಮುಂದಿನ ಸಾಲಿನಲ್ಲಿ ಕಾರ್ಯಗತ ಮಾಡಿ, ವಿವಿಧ ಇಲಾಖೆಗಳ ದಕ್ಷತೆಯನ್ನು ಹೆಚ್ಚಿಸುವುದಕ್ಕೆ ಅವಕಾಶ ಮಾಡಬೇಕೆಂದು ಈ ಸಭೆಯ ಮೂಲಕ ಪ್ರಾರ್ಥಿಸಿ, ಇಷ್ಟು ಕಾಲಾವಕಾಶವನ್ನು ನನಗೆ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದನೆಗಳನ್ನರ್ಪಿಸುತ್ತೇನೆ.

ಶ್ರೀ ಕೊಟ್ರ ಬಸವನಗೌಡ (ಕೂಡ್ಲಿಗಿ).—ಅಧ್ಯಕ್ಷರೇ, ಅರಣ್ಯಗಳ ವಿಚಾರದಲ್ಲಿ ಬಳ್ಳಾರಿ ಜಿಲ್ಲೆಗೆ ಸಂಬಂಧಿಸಿದ ಕೆಲವು ವಿಷಯಗಳನ್ನು ತಿಳಿಸುವುದಕ್ಕೆ ಇಚ್ಛಿಸುತ್ತೇನೆ. ನಮ್ಮ ಜಿಲ್ಲೆ ಇಲ್ಲಿಗೆ ಸೇರಿ ಎರಡೂವರೆ ವರ್ಷಗಳಾದರೂ ಕೂಡ ಇನ್ನೂ ಕೆಲವು ಕಾನೂನುಗಳು ಪಾಸ್ಆಗಿಲ್ಲ. ಅದರಲ್ಲಿ ಅರಣ್ಯ ಇಲಾಖೆಗೆ ಸಂಬಂಧಪಟ್ಟ ಕಾನೂನು ಒಂದು. ಬಳ್ಳಾರಿ ಜಿಲ್ಲೆಯಲ್ಲಿ ಈಗ ಮದರಾಸು ಕಾನೂನು ಜಾರಿಯಲ್ಲಿದೆ. ಇದರಿಂದ ಫಾರೆಸ್ಟ್ ಇಲಾಖೆಗೆ ಎಷ್ಟೋ ಮಟ್ಟಿಗೆ ತೊಂದರೆಯಾಗಿದೆ. ಮೊದಲನೆಯದಾಗಿ ಈ ಅರಣ್ಯಗಳಲ್ಲಿ ಯಾರಾದರೂ ಮರಗಳನ್ನು ಕಡಿದರೆ ಅರಣ್ಯದ ಬೌಂಡರಿಯಲ್ಲಿರುವಾಗಲೇ ಹಿಡಿಯಬೇಕು. ಬೌಂಡರಿಯನ್ನು ಬಿಟ್ಟು ಹೊರಗೆ ಬಂದ ಮೇಲೆ ಅರಣ್ಯ ಇಲಾಖೆಯವರು ಅವರನ್ನು ಹಿಡಿಯುವುದಕ್ಕೆ ಅಧಿಕಾರವಿಲ್ಲ. ಮದರಾಸ್ ಫಾರೆಸ್ಟ್ ಆಕ್ಟ್‌ನಲ್ಲಿ ಇದು ಒಂದು ಲೋಪ, drawback ಇದೆ. ಎರಡನೆಯದು ಏನೆಂದರೆ ಮದರಾಸ್ ಆಕ್ಟ್ ಪ್ರಕಾರ ಶ್ರೀಗಂಧದ ಮರ ಸರ್ಕಾರದ ಸ್ವತ್ತಲ್ಲ. ಅಲ್ಲದೆ ಸರ್ಕಾರಕ್ಕೆ ಸೇರಿದ ಗಂಧದ ಮರಗಳನ್ನು ಕಡಿದರೂ, ಇತರ ಮರಗಳನ್ನು ಕಡಿದರೆ ಎಷ್ಟು ತಪ್ಪಾಗುತ್ತದೆಯೋ ಗಂಧದ ಮರವನ್ನು ಕಡಿದರೂ ಅಷ್ಟೇ ತಪ್ಪಾಗುತ್ತದೆ. ಗಂಧದ ಮರವು ಕೆಲವು ಕಡೆ ಖಾಸಗಿ ಜಮೀನುಗಳಲ್ಲಿವೆ, ಅದನ್ನು ಕಡಿದರೆ ತೊಂದರೆ ಏನೂ ಇಲ್ಲ. ಅದೇ ಮೈಸೂರು ಆಕ್ಟ್ ಪ್ರಕಾರ ಸರ್ಕಾರಿ ಜಮೀನಿನಲ್ಲಾಗಲಿ, ಖಾಸಗಿ ಜಮೀನಿನಲ್ಲಾಗಲಿ ಇರತಕ್ಕ ಗಂಧದ ಮರಗಳನ್ನು ಕಡಿದರೆ ಅಂಥವರ ಮೇಲೆ ಕೇಸನ್ನು ದಾಖಲ್ಮಾಡುವುದಕ್ಕೆ ವ್ಯವಸ್ಥೆ ಇದೆ. ಆದುದರಿಂದ ಈಗ ಬಳ್ಳಾರಿಯಲ್ಲಿರುವ ಎರಡು ಲೋಪಗಳನ್ನೂ ಹೋಗಲಾಡಿಸಬೇಕಾದರೆ ಮೈಸೂರು ಆಕ್ಟನ್ನು ಜಾರಿಗೆ ತರಬೇಕೆಂದು ಹೇಳುತ್ತೇನೆ.

ಶ್ರೀ ಎಚ್. ಹುಚ್ಚಮಾಸ್ತಿ ಗೌಡ.—ಇಲ್ಲಿನ ಆಕ್ಟನ್ನು ಬಳ್ಳಾರಿಗೂ ಅನ್ವಯಿಸಿದರೆ ನಮ್ಮಲ್ಲಿ ಮರಗಳು ಕಡಿಮೆಯಾಗಿರುವಂತೆ ನಿಮ್ಮಲ್ಲಿಯೂ ಕಡಿಮೆಯಾಗುತ್ತದೆ.

ಶ್ರೀ ಕೊಟ್ರಬಸವನಗೌಡ.—ಕಡಿಮೆ ಯಾಗುವುದಿಲ್ಲವೆಂದು ಹೇಳುತ್ತೇನೆ. ನಾನಾಗಲೇ ತಿಳಿಸಿದಂತೆ ಮೈಸೂರು ಆಕ್ಟಿಗೂ ಮದರಾಸು ಆಕ್ಟಿಗೂ ವ್ಯತ್ಯಾಸವಿದೆ. ಮದರಾಸು ಆಕ್ಟ್ ಪ್ರಕಾರ ಬೌಂಡರಿ ಬಿಟ್ಟು ಒಂದು ಅಡಿ ಮುಂದೆ ಹೋಗಿದ್ದರೂ ಸಹ ಇಲಾಖೆಯವರು ಅವರನ್ನೂ ಹಿಡಿದು ಕೇಸುಹಾಕುವುದಕ್ಕೆ ಆಗುವುದಿಲ್ಲ. ಎಲ್ಲವನ್ನೂ ನಾವು ಮಂತ್ರಿಗಳಿಗೆ ಹೇಳಿದ್ದೇವೆ. ಮೈಸೂರು ಕಾನೂನನ್ನು ಬಳ್ಳಾರಿಯಲ್ಲಿ ಇನ್ನೂ ಜಾರಿಗೆ ತರದಿರುವುದು ವಿಷಾದಕರವಾದ ಸಂಗತಿ.

ಸಂಡೂರು ಅರಣ್ಯ ಪ್ರದೇಶದಲ್ಲಿ ಶ್ರೀಗಂಧದ ಮರ ಬಹಳವಾಗಿದೆ. ನಮ್ಮ ಜಿಲ್ಲೆಯಲ್ಲಿ ಸಂಡೂರು ಫಾರೆಸ್ಟ್ thick forest. ಅರಣ್ಯ ಸಂಪತ್ತು ಚೆನ್ನಾಗಿದೆ. ಅನೇಕರು ಇದರಿಂದ ಲಕ್ಷಾಂತರ ರೂಪಾಯಿ ಸಂಪಾದನೆ ಮಾಡಿಕೊಳ್ಳುತ್ತಿದ್ದಾರೆ. ಕಾಡಿನಲ್ಲಿ ತಮಗೆ ಬೇಕು ಬೇಕಾದ ಮರಗಳನ್ನು ಕಡಿದು ಹಣವನ್ನು ಸಂಪಾದನೆ ಮಾಡುತ್ತಿದ್ದಾರೆ. ಶ್ರೀಗಂಧದ ಮರಗಳನ್ನು ಕಡಿಯುತ್ತಾರೆ. ಸರ್ಕಾರದವರೇ ಇವುಗಳನ್ನೆಲ್ಲಾ ಮಾಡಿದರೆ ಬಹಳ ಲಾಭವಿದೆ. ಈ ಎಲ್ಲ ದೃಷ್ಟಿಯಿಂದಲೂ ಮೈಸೂರು ಕಾನೂನನ್ನು ಬಳ್ಳಾರಿ ಜಿಲ್ಲೆಗೆ ಅನ್ವಯಿಸದೆ ಇರುವುದು ವಿಷಾದಕರವಾದ ಸಂಗತಿ. ಮೈಸೂರು ಕಾನೂನನ್ನು ಬಳ್ಳಾರಿ ಜಿಲ್ಲೆಯಲ್ಲಿ ಜಾರಿಗೆ ತರುವುದರಿಂದ ಸರ್ಕಾರಕ್ಕೆ ಉಪಯೋಗವಾಗುವುದರಿಂದ ಇದನ್ನು ಮಾಡಬೇಕೆಂದು ಹೇಳುತ್ತೇನೆ.

ಇನ್ನೊಂದು ವಿಷಯವೇನೆಂದರೆ, ಇದರಲ್ಲಿ ಲಂಚ ರುಷುವತ್ತುಗಳು ಜಾಸ್ತಿ ಎಂದು ಕೇಳಿದ್ದೇನೆ. ಅರಣ್ಯ ಇಲಾಖೆಗೆ ಸೇರಿದ ಪ್ರತಿಯೊಬ್ಬ ಫಾರೆಸ್ಟ್ ಗಾರ್ಡ್ ಸಹ ತಿಂಗಳಿಗೆ 100 ರೂಪಾಯಿ, 150 ರೂಪಾಯಿ ತಮ್ಮ ಮೇಲ್ಪಟ್ಟವರಿಗೆ ಕೊಡಬೇಕಂತೆ. ಹೀಗಿರಬೇಕಾದರೆ ಈ ಗಾರ್ಡು ಇದರ ಮೂರರಷ್ಟು ನಾಲ್ಕರಷ್ಟು ಸಂಪಾದನೆ ಮಾಡಲು ಪ್ರಯತ್ನ ಮಾಡುತ್ತಾರೆ. ಹೀಗೆ ಮಾಡುವಾಗ ಭಟ್ಟಿ ಇಳಿಸುವವರಿಗೆ ಈ ಅಡವಿಗಳಲ್ಲಿ ಅವಕಾಶಕೊಟ್ಟು ಹಣವನ್ನು 300-400 ರೂಪಾಯಿಗಳನ್ನು ತಾನು ಪಡೆದು ಅದರಲ್ಲಿ 100-150 ರೂಪಾಯಿ ಫಾರೆಸ್ಟರ್‌ಗೆ ಕೊಟ್ಟು ಉಳಿದುದನ್ನು ತಾನು ತೆಗೆದುಕೊಳ್ಳುತ್ತಾನೆ. ಈರೀತಿ ಸಾರೋದ್ಧಾರವಾಗಿ ನಡೆದುಕೊಂಡು ಬರುತ್ತಿದೆ. ಇವರಿಗೆ ಸಂಬಳ ಕೊಟ್ಟು, afforestation ಮಾಡುತ್ತೇವೆ ಎಂದು ಹೇಳುವುದು ಶುದ್ಧ ತಪ್ಪು. ಆದರೆ deforest ಮಾಡುವುದೇ ಅವರ ಕೆಲಸ. ಆದುದರಿಂದ ಸರ್ಕಾರದವರು ಈ ವಿಷಯದಲ್ಲಿ ನಿಗಾಕೊಟ್ಟು ಇಂಥದನ್ನೆಲ್ಲಾ ತಪ್ಪಿಸಬೇಕು ಎಂದು ಹೇಳುತ್ತೇನೆ

ಈ ಇಲಾಖೆಯಲ್ಲಿ Assistant Conservator of Forests, Chief Conservator of Forests, ಮುಂತಾದ ಅಧಿಕಾರಿಗಳು ಅರಣ್ಯಗಳನ್ನು ನೋಡಲು ಬಂದಾಗ ಮುಖ್ಯರಸ್ತೆಗಳಲ್ಲಿ ಬಂದು ನೋಡಿಕೊಂಡು ಹೋಗುತ್ತಾರೆ. ಹೀಗಿರುವಾಗ ಅರಣ್ಯದ ಒಳಭಾಗದಲ್ಲಿ ಕಾಡನ್ನು ಕತ್ತರಿಸುವುದು ಇವರಿಗೆ ಹೇಗೆ ತಿಳಿಯಬೇಕು. ಅಧಿಕಾರಿಗಳು ಸರಿಯಾಗಿ ತನಿಖೆ ಮಾಡದೆ ಇರುವುದರಿಂದಲೋ ಏನೋ ಕಾಡನ್ನು ಕತ್ತರಿಸಿ ಮರಗಳನ್ನು ಸಾಗಿಸುವುದು 3-4 ವರ್ಷಗಳಿಂದ ಈಚೆಗೆ ಮತ್ತಷ್ಟು ಹೆಚ್ಚಾಗಿದೆ. Supervision ಮತ್ತು Checking ಭಯವೇ ಇಲ್ಲದಂತಾಗಿದೆ. ಆದುದರಿಂದ ಮೇಲ್ಪಟ್ಟ ಅಧಿಕಾರಿಗಳು ಸ್ವಲ್ಪ ಶ್ರದ್ಧೆ ತೆಗೆದುಕೊಂಡು ರಸ್ತೆಗಳಲ್ಲಿ ಬಂದು ರಸ್ತೆಗಳ ಅಕ್ಕಪಕ್ಕಗಳಲ್ಲಿ ಮಾತ್ರ ನೋಡಿಕೊಂಡು ಹೋಗದೆ, ಮಧ್ಯ ಅರಣ್ಯದಲ್ಲಿ ಹೋಗಿ ತನಿಖೆ ಮಾಡಿದರೆ ಆಗ ಅವರ ಕೈ ಕೆಳಗಿನ ಅಧಿಕಾರಿಗಳು ಭಯಪಡುತ್ತಾರೆ. Ranger ಆಗಿ ಕೆಲಸ ಮಾಡುವವರು ತಮ್ಮ ಮಾಮೂಲು ಬಂದರೆ ಸುಮ್ಮನೆ ಇರುತ್ತಾರೆ. ಇದಕ್ಕಾಗಿ District Forest Officer, ಮತ್ತು Conservator of Forests ಆಗಾಗ್ಗೆ ಭೇಟಿ ಇತ್ತು ತನಿಖೆಮಾಡಿ afforestation scheme ಸರಿಯಾಗಿ ನಡೆಯುವಂತೆಯೂ ಮತ್ತು deforestation ಆಗದಂತೆಯೂ ನೋಡಿಕೊಳ್ಳಬೇಕು ಈ ವಿಷಯಗಳೆಲ್ಲವನ್ನೂ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

*ಶ್ರೀ ಎಚ್. ಸಿ. ಲಿಂಗಾರೆಡ್ಡಿ (ಮಾಲೂರು).—ಸ್ವಾಮಿ, ಅರಣ್ಯಸಂಪತ್ತನ್ನು ಹೆಚ್ಚಿಸಬೇಕೆಂಬ ನಮ್ಮ

(ಶ್ರೀ ಎಚ್. ಸಿ. ಲಿಂಗಾರೆಡ್ಡಿ)

ಪ್ರಾರ್ಥನೆ ಅರಣ್ಯ ರೋದನವೇ ಆಗಿದೆ ಎಂದು ಹೇಳುವುದರಲ್ಲಿ ಯಾವ ವಿಧವಾದ ಉತ್ಪ್ರೇಕ್ಷೆಯೂ ಇಲ್ಲವೆಂದು ನನಗನ್ನಿಸುತ್ತದೆ. ಯಾಕೆಂದರೆ ನಾನು ನೋಡುತ್ತಿದ್ದೇನೆ. ವರ್ಷೇ ವರ್ಷೇ ಅರಣ್ಯಗಳಲ್ಲಿ ಮರಗಳನ್ನು ನೆಡಸುವ ಕಾರ್ಯಕ್ರಮವನ್ನು ವ್ಯವಸ್ಥಿತ ರೂಪದಲ್ಲಿ ಸರ್ಕಾರದವರು ಹಾಕಿಕೊಂಡು ವನಮಹೋತ್ಸವಗಳ ಮುಖಾಂತರ, ಗಾಂಧಿಜಯಂತಿ, ಸ್ವಾತಂತ್ರ್ಯೋತ್ಸವ ಮೊದಲಾದ ಸಂದರ್ಭಗಳಲ್ಲಿ ಏನಾದರೂ ಒಂದು ಕಾರ್ಯಕ್ರಮ ಹಾಕಿಕೊಂಡು ಮಾಡುತ್ತಿದ್ದಾರೆ. ಒಂದು ವಿಧವಾದ ಪರಿಣಾಮಕಾರಿಯಾದ ರೀತಿಯಲ್ಲಿ ಈ ವನ ಸಂಪತ್ತನ್ನು ಬೆಳೆಸುತ್ತಿಲ್ಲವೆಂದು ಹೇಳಿದರೆ ಅದರಲ್ಲಿ ಯಾವ ಆಶ್ಚರ್ಯವೂ ಕೂಡ ಇಲ್ಲ. ಅರಣ್ಯಸಂಪತ್ತನ್ನು ಹೆಚ್ಚಿಸುವುದಕ್ಕೆ ನಮ್ಮ ಅರಣ್ಯಗಳು ಹೆಚ್ಚು ಹೆಚ್ಚಾಗಬೇಕು. ಮೊದಲನೆಯದಾಗಿ ನಮ್ಮ ಅರಣ್ಯಗಳಲ್ಲಿ ಮತ್ತು ರಸ್ತೆಗಳ ಪಕ್ಕದಲ್ಲಿ ಮರಗಳನ್ನು ನೆಡುವ ಕಾರ್ಯಕ್ರಮಕ್ಕೆ ಹೆಚ್ಚುಗಮನ ಕೊಡಬೇಕೆಂದು ಸೂಚನೆ ಕೊಡ ಬಯಸುತ್ತೇನೆ. ರಸ್ತೆಗಳ ಪಕ್ಕಗಳಲ್ಲಿರುವ ಸಾಲು ಮರಗಳ ರೆಂಬೆಗಳನ್ನೂ ಮತ್ತು ಮರಗಳನ್ನೂ ವಿಶೇಷವಾಗಿ ಕಡಿಯುತ್ತಾ ಇದ್ದಾರೆ. ಈ ವಿಷಯವನ್ನು ಸರ್ಕಾರದವರ ಗಮನಕ್ಕೆ ಮತ್ತು ಅರಣ್ಯ ಇಲಾಖೆಯವರ ಗಮನಕ್ಕೆ ತಂದರೆ ಅವರು ಅದನ್ನು ಕಿವಿಗೆ ಹಾಕಿಕೊಳ್ಳುವುದಿಲ್ಲ, ಗಮನಕ್ಕೆ ತೆಗೆದುಕೊಳ್ಳುದಿಲ್ಲ. ಅರಣ್ಯದಲ್ಲಿ ಒಳ್ಳೆಯ ಮರಗಳಿರುತ್ತವೆ. ಈ ಮರಗಳನ್ನೆಲ್ಲ ಅಲ್ಲಲ್ಲಿ ಕಡಿಯುತ್ತಿದ್ದರೂ, ಹಳ್ಳಿಗಳಲ್ಲಿರುವ ಪಟೇಲರು ಮತ್ತು ಶ್ಯಾನ್‌ಭೋಗರು ಈ ವಿಷಯದಲ್ಲಿ ಸರ್ಕಾರಕ್ಕೆ ಒಂದು ಅರ್ಜಿಯನ್ನೂ ಕೊಡುತ್ತಿಲ್ಲ. ಆ ವಿಷಯವನ್ನು ತಿಳಿಸುವುದ ಕೂಡ ಇಲ್ಲ. ಅವರು ಯಾವ ಕಾರ್ಯಕ್ರಮವನ್ನೂ ತೆಗೆದುಕೊಳ್ಳುತ್ತಿಲ್ಲ. ಅರಣ್ಯ ಇಲಾಖೆಯವರೇ ಆಗಲಿ, ಬೇರೆ ಇಲಾಖೆಯವರೇ ಆಗಲಿ, ಪಟೇಲ್ ಮತ್ತು ಶ್ಯಾನುಭೋಗರುಗಳಿಗೆ ಅರಣ್ಯಗಳಲ್ಲಿ ಮರಗಳನ್ನು ಕಡಿದುಹಾಕುವ ವಿಷಯವನ್ನು ತಿಳಿಸಬೇಕೆಂದು ಸರಿಯಾದ ಎಚ್ಚರಿಕೆಯನ್ನು ಕೊಟ್ಟು ಮರಗಳನ್ನು ಕಡಿಸುವ ಕೆಲಸವನ್ನು ನಿಲ್ಲಿಸಬೇಕೆಂದು ನನಗನ್ನಿಸುತ್ತದೆ.

ಶ್ರೀ ಮೂಡಲಗಿರಿಗೌಡರು ಅರಣ್ಯ ಇಲಾಖೆಯಿಂದ ಜಮೀನನ್ನು ಬಿಡಿಸಿ ರೈತರಿಗೆ ಕೊಡುವ ಕಾರ್ಯಕ್ರಮಕ್ಕೆ ಹೆಚ್ಚುಗಮನ ಕೊಡಬೇಕೆಂದು ಹೇಳುತ್ತಿದ್ದರು. ಯಾವ ಯಾವ ಊರುಗಳ ಹತ್ತಿರ ಇಂಥ ಜಮೀನು ಹೆಚ್ಚಾಗಿದೆಯೋ ಅಲ್ಲಿ ಮಾಡಬಹುದು. ಈಗ ನೋಡುವುದರಲ್ಲಿ ಯಾವ ಊರಿನ ಹತ್ತಿರವೂ ಗೋಮಾಳದ ಜಮೀನು ಹೆಚ್ಚಾಗಿಲ್ಲ. ಅರಣ್ಯದ ಇಲಾಖೆಯ ಜಮೀನು ಕೂಡ ಹೆಚ್ಚಾಗಿಲ್ಲ. ಮೂರನೆ ಒಂದು ಭಾಗದ ಜಮೀನನ್ನು ಗೋಮಾಳಕ್ಕಾಗಿ, ಅರಣ್ಯವಾಗಿ ಉಳಿಸಿಕೊಳ್ಳದೆ ಹೋದರೆ ದನಕರುಗಳ ಮೇವಿಗೆ ಬಹಳ ತೊಂದರೆಯಾಗುತ್ತದೆ. ಮತ್ತು ಈ ಅರಣ್ಯಗಳಲ್ಲಿ ಮರಗಳನ್ನು ಬೆಳೆಸುವುದರಕಡೆ ಗಮನ ಕೊಡಬೇಕು. ನಮಗೆ ಸ್ವರಾಜ್ಯ ಬಂದು 8-10 ವರ್ಷಗಳಾದವು. ನಮ್ಮ ಅರಣ್ಯಗಳೇನಾದರೂ ಅಭಿವೃದ್ಧಿಯಾಗಿದವು ಎಂದು ನೋಡಿದರೆ ನಮ್ಮ ಕೋಲಾರ ಜಿಲ್ಲೆಯಲ್ಲಿ ಅರಣ್ಯಗಳಲ್ಲಿ ಕುರುಚಲು ಗಿಡಗಳು ಮಾತ್ರ ಇವೆಯೇ ಹೊರತು ಒಳ್ಳೆಯಜಾತಿ ಮರಗಳು ಯಾವುವೂ ಇಲ್ಲ. ಹಿಂದಿದ್ದ ಮರ ಕಡಿದುಹಾಕುತ್ತಿದ್ದಾರೆ. ಫಾರೆಸ್ಟ್ ಇಲಾಖೆ ನರ್ಸರಿಗಳಲ್ಲಿ ನಾಮ್ಕಾವಸ್ತೆ ಕೆಲವು ಗಿಡಗಳನ್ನು, ಸಸಿಗಳನ್ನು ಬೆಳೆಸುತ್ತಾರೆ. ಅವನ್ನು ಯಾವುದಾದರೂ ದನಕರುಗಳು ಮೇದು ಹೋಗುತ್ತವೆ, ಯಾರಾದರೂ ತೆಗೆದುಕೊಂಡು ಹೋಗಲೂಬಹುದು. ಅರಣ್ಯ ಇಲಾಖೆ ಗಿಡಗಳನ್ನೇನೋ ಹಾಕಿದರೂ ಅವು ಒಣಗಿ ಹೋಗುತ್ತವೆ. ಹೀಗಾಗಿ ಅರಣ್ಯ ಇಲಾಖೆಯಲ್ಲಿ ಒದಗಿಸಿರುವ ಹಣ ಸಿಬ್ಬಂದಿಗಾಗಿ ಖರ್ಚಾಗುತ್ತಿದೆಯೇ ಹೊರತು ಯಾವ ವಿಧವಾದ ಪ್ರಯೋಜನವೂ ಆಗುತ್ತಿಲ್ಲ. ಇಷ್ಟು ವಿಷಯ ಗಮನಕ್ಕೆ ತಂದು ಈ ಅರಣ್ಯ ಇಲಾಖೆಯಲ್ಲಿ ಮರಹಾಕಿ ಬೆಳೆಸುವ ಕಾರ್ಯಕ್ರಮವೇನಿದೆಯೋ ಅದನ್ನು ವಿಕೇಂದ್ರೀಕರಣಮಾಡಿ ಗ್ರಾಮಾಧಿಕಾರಿಗಳಿಗೆ, ಗ್ರಾಮ ಪಂಚಾಯಿತಿಗಳಿಗೆ ಆ ಕೆಲಸ ವಹಿಸಿ ಆ ಮೂಲಕ ಮರ ಬೆಳೆಸುವುದಕ್ಕೆ ಒಂದು ನಿರ್ದಿಷ್ಟವಾದ ಯೋಜನೆ ಹಾಕಬೇಕೆಂದು ಪ್ರಾರ್ಥನೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

*ಡಾ|| ಆರ್. ನಾಗನಗೌಡ (ವ್ಯವಸಾಯ ಶಾಖೆಯ ಮಂತ್ರಿಗಳು).—ಸ್ವಾಮಿ, ಇಷ್ಟು ಹೊತ್ತಿನವರೆಗೆ ಮಾನ್ಯ ಸದಸ್ಯರು ಎಲ್ಲರೂ ಅಡವಿ ಸಂಪತ್ತನ್ನು ಹೆಚ್ಚಿಸಬೇಕೆಂಬ ವಿಷಯದಲ್ಲಿ ಬಹಳ ತೀವ್ರವಾದ ಆಸಕ್ತಿಯನ್ನು ತೋರಿಸಿ ಅದನ್ನು ಯಾವ ರೀತಿಯಲ್ಲಿ ಮಾಡಬೇಕೆಂಬುದಕ್ಕೆ ನಾನಾ ವಿಧವಾದ ಸೂಚನೆಗಳನ್ನು ಕೊಟ್ಟಿದ್ದಾರೆ. ಅವೆಲ್ಲಕ್ಕೂ ಒಂದೊಂದಾಗಿ ತೆಗೆದುಕೊಂಡು ಜವಾಬು ಹೇಳುವುದಕ್ಕೆ ಪ್ರಾರಂಭಿಸಿದರೆ ಬಹಳ ಕಾಲ ಹಿಡಿಯಬಹುದು. ಆದ್ದರಿಂದ ಪೂರ್ಣವಾಗಿ ಎಲ್ಲಕ್ಕೂ ಈಗ ಜವಾಬು ಹೇಳುವುದಕ್ಕೆ ಸಾಧ್ಯವಾಗಲಿಕ್ಕಿಲ್ಲ ಅಂದುಕೊಂಡಿದ್ದೇನೆ. ಆದಕಾರಣ ಕೆಲವು ಮುಖ್ಯವಾದ ಅಂಶಗಳೇನಿವೆಯೋ ಅವುಗಳ ವಿಷಯವನ್ನು ಮಾತ್ರ ಹೇಳಿ ಆ ತರುವಾಯ ಮಾನ್ಯ ಸದಸ್ಯರೇನು ಹೇಳಿದ್ದಾರೋ ಆ ಪ್ರತಿಯೊಂದು ಅಂಶಕ್ಕೂ ನನ್ನ ತೀವ್ರವಾದ ಗಮನವನ್ನು ಕೊಟ್ಟು ಯಾವ ವಿಧವಾಗಿ ಅವುಗಳ ಬಗ್ಗೆ ಚರ್ಯೆ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ ಎಂದು ಭರವಸೆ ಕೊಡುತ್ತಿದ್ದೇನೆ.

ಮುಖ್ಯವಾಗಿ ಒಂದು ವಿಷಯವನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬೇಕೆಂದಿದ್ದೇನೆ. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಅಫಾರೆಸ್ಟೇಷನ್ನಿಗೆ ಬಹಳ ಹೆಚ್ಚಿನ ಹಣ ಕೊಡುವುದಕ್ಕೂ ಮತ್ತು ಹೆಚ್ಚು ಪ್ರದೇಶವನ್ನು ಅಫಾರೆಸ್ಟ್ ಮಾಡುವುದಕ್ಕೂ ಈಗ ಏರ್ಪಾಡು ಮಾಡಿದ್ದೇವೆಂದು ಹೇಳುವುದಕ್ಕೆ ನನಗೆ ಬಹಳ ಸಂತೋಷವಾಗುತ್ತದೆ. ಈಗ ನಾವು 85 ಲಕ್ಷ ರೂಪಾಯಿಗಳನ್ನು ಸಾಯಿಲ್ ಕನ್ಸರ್ವೇಷನ್ನಿಗೂ ಮತ್ತು ಅಫಾರೆಸ್ಟೇಷನ್ನಿಗೂ ಮೀಸಲಾಗಿಟ್ಟಿದ್ದೇವೆ. Afforestation of waste lands, pilot and administrative schemes have been included in this. ಇದರಲ್ಲಿ ಎಷ್ಟು ವಿಸ್ತೀರ್ಣ ನಾವು ಅಫಾರೆಸ್ಟೇಷನ್ ಮಾಡುತ್ತೇವೆಂದರೆ ಮೈದಾನ ಪ್ರದೇಶದಲ್ಲಿ ಈ ಐದು ವರ್ಷಗಳಲ್ಲಿ 60 ಸಾವಿರ ಎಕರೆ ಅಫಾರೆಸ್ಟೇಷನ್ ಮಾಡಬೇಕೆಂದು ಅಂದುಕೊಂಡಿದ್ದೇವೆ. ಅದೂ ಅಲ್ಲದೆ ಯಾವುದೇ ಒಂದು ಕೆಲಸ ಮಾಡುವುದಕ್ಕೂ ಒಂದು ಸ್ಕೀಂ ತಯಾರಾಗಬೇಕು. ಅದಾದಮೇಲೆ ಅದನ್ನು ಕಾರ್ಯರೂಪಕ್ಕೆ ತರಬೇಕು. ಮಲೆನಾಡು ಪ್ರದೇಶದಲ್ಲಿ, 14 ಸಾವಿರ ಎಕರೆ ಅಫಾರೆಸ್ಟೇಷನ್ ಮಾಡಬೇಕೆಂದಿದೆ. ಮೊದಲನೆ ಪಂಚವಾರ್ಷಿಕ ಯೋಜನೆ ತಯಾರಾದರೆ ಒಂದು ಲಕ್ಷ ಎಕರೆಯಾದರೂ ಅಫಾರೆಸ್ಟೇಷನ್ ಮಾಡಬೇಕೆಂದಿದ್ದೆವು; ಅಷ್ಟು ಸಾಧ್ಯವಾಗಲಿಲ್ಲ. ಅದಕ್ಕೆ ನಾನು ಬಹಳ ವಿಷಾದಪಡುತ್ತಿದ್ದೇನೆ. ಈ ವರ್ಷ ಅದನ್ನು ಏಳು ಸಾವಿರ ಎಕರೆಯವರೆಗಾದರೂ ಮಾಡಲು ಪ್ರಯತ್ನಪಡುತ್ತಿದ್ದೇವೆ. ಆ ತರುವಾಯ ಮುಂದಿನ ಐದು ವರ್ಷ ಆಗುವವರೆಗೆ ಈಗ ಹೇಳಿರುವ ವಿಸ್ತೀರ್ಣ ತಯಾರುಮಾಡುವುದಕ್ಕೆ ಏರ್ಪಾಡು ಮಾಡು-

ತ್ತಿದ್ದೇವೆ. ಅನೇಕ ಸದಸ್ಯರು ಅಫಾರೆಸ್ಟೇಷನ್ ವಿಷಯವನ್ನು ಬಹಳ ತೀವ್ರವಾಗಿ ಕಳಕಳಿಯಿಂದ ಹೇಳಿದ್ದಾರೆ. ಶ್ರೀ ಮುನಿಸ್ವಾಮಯ್ಯನವರು ಬೀಜ ಕೊಡಬೇಕೆಂದು ಹೇಳಿದ್ದಾರೆ. ಇನ್ನೊಬ್ಬ ಮಹನೀಯರು ಅಕ್ಕಪಕ್ಕದಲ್ಲಿರುವ ರೈತರಿಗೆ ಅಫಾರೆಸ್ಟೇಷನ್ ಮಾಡುವುದನ್ನು ವಹಿಸಿಬಿಡಿ ಎಂದು ಹೇಳಿದ್ದಾರೆ. ಈಗ ನಾವು ರೈತರ ಸಹಾಯ ಸಿಕ್ಕುವ ಕಡೆ ತೆಗೆದುಕೊಳ್ಳುವುದಕ್ಕೆ ಸಿದ್ಧವಾಗಿದ್ದೇವೆ. ಆದರೆ ಇಲ್ಲಿನವರೆಗೆ ನಮ್ಮ ಅನುಭವ ಅಷ್ಟು ಸುಖವಾಗಿಲ್ಲ. ಟಾಂಗಾ ಸಿಸ್ಟಂ ಇಟ್ಟು ಕುಮರಿ ಕಲ್ಟಿವೇಷನ್ನಿಗೆ ಕೊಟ್ಟಿರುವ ಕಡೆ ರೈತರು ಅಫಾರೆಸ್ಟೇಷನ್ ಮಾಡಿಲ್ಲ; ಕೆಲವರು ಮಾತ್ರ ಮಾಡಿದ್ದಾರೆ.

ಇನ್ನೊಂದು ವಿಷಯ. ಅಫಾರೆಸ್ಟೇಷನ್ ಜೊತೆಗೆ ಫಾರೆಸ್ಟ್ ಜಮೀನನ್ನು ರಿಲೀಸ್‌ಮಾಡಿ ಎಂದು ಹೇಳಿದ್ದಾರೆ. ಹಿಂದೆ ಫಾರೆಸ್ಟ್ ಜಮೀನನ್ನು ರಿಲೀಸ್ ಮಾಡಬಾರದೆಂದು ಈ ಮಾನ್ಯ ಸಭೆ ಬಹುಮತದಿಂದ ತೀರ್ಮಾನಮಾಡಿದೆ. ಅದನ್ನು ಬಹಳ ಶ್ರದ್ಧೆಯಿಂದ ಪರಿಪಾಲನೆ ಮಾಡಿಕೊಂಡು ಬಂದಿದ್ದೇವೆ. ಇದರೊಳಗೆ ಮುಖ್ಯವಾದ ಕಾರಣವೇನೆಂದರೆ ಈಗ ನಮಗೆ ಶೇಕಡ 14ರಷ್ಟು ಫಾರೆಸ್ಟ್ ಇದೆಯೆಂದು ಹೇಳುತ್ತಿದ್ದೇವೆ; ನಿಜವಾಗಿಯೂ ನೋಡಿದರೆ ಬೆಂಗಳೂರು, ತುಮಕೂರು, ಕೋಲಾರ ಈ ಪ್ರಾಂತಗಳಲ್ಲಿ ಕೇವಲ ಶೇಕಡ ಎಂಟರಷ್ಟು ಸಹ ಇಲ್ಲ. ನಾವು ಮಲೆನಾಡು ಮತ್ತು ಮೈದಾನ ಪ್ರದೇಶ ಎರಡೂ ಕೂಡಿಸಿದರೆ ಶೇಕಡ 14ರಷ್ಟು ಬರುತ್ತದೆ. ತಮಗೆ ತಿಳಿದಹಾಗೆ ಮಲೆನಾಡು ಶೇಕಡ 25—30ಕ್ಕಿಂತ ಹೆಚ್ಚಾಗಿರುವುದರಿಂದ ಸರಾಸರಿ ಇಷ್ಟಾಗುತ್ತದೆ.

ಆಮೇಲೆ ಭೂಮಿ ರೈತರಿಗೆ ಕೊಡಬೇಕೆಂದು ಹೇಳಿದ್ದಾರೆ. ಅಲ್ಲಿ ಭೂಮಿ ತೆಗೆದುಕೊಂಡು ಮಳೆಯಲ್ಲಿ ಬಿಸಿಲಲ್ಲಿ ಕೆಲಸಮಾಡಿದರೂ ಪೈರು ಏಳುವುದಿಲ್ಲ. ಪೈರಾಗುವುದಕ್ಕೆ ಚೆನ್ನಾಗಿ ಮಳೆ ಬರಬೇಕು. ಭೂಮಿ ಬೆಳೆದರೆ ತಾನೆ ಸಾರ್ಥಕವಾಗುವುದು ! ಪೈರು ಬೆಳೆಯದಿರುವ ಸ್ಥಿತಿ ಕ್ರಿಯೇಟ್ ಮಾಡಿದರೆ ಭೂಮಿಯನ್ನು ತೆಗೆದುಕೊಂಡು ಮಾಡುವುದೇನು ? ಇಲ್ಲಿಂದ ಬಳ್ಳಾರಿ ರಸ್ತೆಯಲ್ಲಿ ಹೋದರೆ ಅನೇಕ ಪ್ರದೇಶಗಳಿವೆ, ಅಲ್ಲಿ ಏನೂ ಬೆಳೆದಿಲ್ಲ. ಹೆಚ್ಚಾಗಿ ಮಳೆಯಾಗಿ ಅಲ್ಲೇನಾದರೂ ಬೆಳೆದರೆ ಸಾರ್ಥಕವಾಗುತ್ತದೆ. ಆದಕಾರಣ ಬೇಕಾದಷ್ಟು ಫಾರೆಸ್ಟ್ ಇರಬೇಕು. ಕೆಲವುಕಡೆ ಎರಡು ಎಕರೆ ಕೊಡಿ ಎಂದು ಕೆಲವರು ಸದಸ್ಯರು ಹೇಳಿದರು. ಈಗ ಒಂದು ಕಡೆ ಕೊಡಲು ಶುರುಮಾಡಿದರೆ ಅದನ್ನು ನಿಲ್ಲಿಸುವುದಕ್ಕಾಗುವುದಿಲ್ಲ. It is a matter of degree. ಕೆಲವುಕಡೆ ನೂರು ಎಕರೆ ಪ್ರದೇಶವಿದೆ, ಅಲ್ಲಿ ಫಾರೆಸ್ಟಾಗುವುದಿಲ್ಲ, ಅಂಥಾದ್ದನ್ನೇಕೆ ವ್ಯವಸಾಯಕ್ಕೆ ಕೊಡಬಾರದು ಎಂದು ಕೇಳುತ್ತಾರೆ. ಆದರೆ ಫಾರೆಸ್ಟ್ ಬೆಳೆಯುವುದಕ್ಕೇ ಲಾಯಕ್ಕಾಗಿಲ್ಲದ ಭೂಮಿಯಲ್ಲಿ ಬತ್ತ, ರಾಗಿ ಬೆಳೆಯಲು ಸಾಧ್ಯವೆ ? ಇವರು ಮಲೆನಾಡಿನ ವಿಷಯ ಹೇಳುತ್ತಿದ್ದಾರೆ. ಆ ರೀತಿಯಾಗಿ ನಮ್ಮ ಬೈಲು ದೇಶದಲ್ಲಿ ಒಂದು ಕಾಡೂ ಕೂಡ ಬೆಳೆಯುವುದಿಲ್ಲ. ಹೌದು ಸಾಗು ಮಾಡಿದರೆ ಆಗುತ್ತದೆ. ಅದೇ ರೀತಿ ನಮ್ಮ ಫಾರೆಸ್ಟ್ ಇಲಾಖೆಯವರೂ ಕೂಡ ಅಂಥ ಪ್ರದೇಶದಲ್ಲಿ ಒಂದು ಗುಂಡಿ ತೋಡಿ, ಬೀಜ ನೆಟ್ಟರೆ ಅಂಥ ಪ್ರದೇಶದಲ್ಲೂ ಗಿಡಗಳು ಬೆಳೆಯುತ್ತವೆ. ಇನ್ನು ಶ್ರೀ ಆರ್. ಮುನಿಸ್ವಾಮಯ್ಯನವರು ಅಲ್ಲಾಳಸಂದ್ರದ ಫಾರೆಸ್ಟ್ ವಿಚಾರ ಹೇಳಿದರು. ಆ ಜಮೀನನ್ನು ವ್ಯವಸಾಯಗಾರರಿಗೆ ಕೊಟ್ಟಿದ್ದೇವೆ. ಆದರೆ ಹಾಗೆ ಅಲ್ಲಿ ಜಮೀನನ್ನು ಎಂಥವರಿಗೆ ಕೊಡಲಾಗಿದೆ ಎಂದರೆ ಯಾರು ಯಾರು ತಿಪ್ಪಗೊಂಡನಹಳ್ಳಿ ಕೆರೆಯಕಟ್ಟಡದ ಸಂಬಂಧದಲ್ಲಿ ಜಮೀನನ್ನು ನೀರು ಮುಳುಗಡೆ ಮಾಡಿಕೊಂಡಿದ್ದರೋ ಅಂಥವರಿಗೆ ಮಾತ್ರ ಅಲ್ಲಾಳಸಂದ್ರ ಫಾರೆಸ್ಟಿನಲ್ಲಿ ಜಮೀನು ಕೊಡುವಂತೆ ಒಂದು ಏರ್ಪಾಡು ಮಾಡಿಕೊಂಡಿದ್ದೇವೆ. ಇದೇ ರೀತಿಯಾಗಿ ಇನ್ನೂ ಕೆಲಕೆಲವು ಪ್ರದೇಶಗಳಲ್ಲಿ ದೊಡ್ಡ ದೊಡ್ಡ ರಿಜರ್ವಾಯಿರ್ ಇತ್ಯಾದಿಗಳನ್ನು ನಿರ್ಮಿಸತಕ್ಕ ಸಂದರ್ಭಗಳಲ್ಲಿ ಯಾರಯಾರ ಜಮೀನುಗಳು ನೀರು ಮುಳುಗಡೆ ಆಗಿರುತ್ತವೋ ಅಂಥವರುಗಳಿಗೆ ಮಾತ್ರ ಈ ಜಂಗಲುಗಳಲ್ಲಿ ಜಮೀನು ಕೊಡಬೇಕೆಂದು ಅಂದುಕೊಂಡಿದ್ದೇವೆ. ಈ ಜನರಿಗೆ ಜಮೀನು ಕೊಡುವುದಕ್ಕೆ ಇಂಥಕಡೆ ಬಿಟ್ಟರೆ ಬೇರೆ ಎಲ್ಲಿಯೂ ಅವಕಾಶವಿಲ್ಲ. ಅಂಥ ನಿರ್ವಾಹವಿಲ್ಲದ ಸಂದರ್ಭಗಳು ಬಂದಾಗ ಈ ಕಾಡುಗಳಲ್ಲಿಯೇ ಅವರಿಗೆ ಜಮೀನು ಕೊಡಬೇಕಾಗುತ್ತದೆ.

ಶ್ರೀ ಎಸ್. ಸಿದ್ದಪ್ಪ.—ಜಮೀನಿಲ್ಲದವರಿಗೆ ಕೊಟ್ಟರೆ ಪರವಾ ಇಲ್ಲ. ಹಾಗೆ ಮಾಡದೆ ದೊಡ್ಡ ದೊಡ್ಡ ಜಮೀನ್ದಾರರಂಥ ನಮ್ಮಂಥವರಿಗೇ ತಾವು ಜಮೀನು ಕೊಡುತ್ತಿದ್ದೀರಿ. ಹೀಗೆ ಹೇಳಿ ಹಾಗೆ ಮಾಡತಕ್ಕದ್ದು ಅನ್ಯಾಯವಲ್ಲವೇ ಎಂದು ಕೇಳುತ್ತೇನೆ.

ಡಾ॥ ಆರ್. ನಾಗನಗೌಡ.—ಆ ರೀತಿಯಾಗಿ ಏನಾದರೂ ಅಲ್ಲಾಳಸಂದ್ರ ಫಾರೆಸ್ಟಿನಲ್ಲಿ ಆಗಿದ್ದರೆ ಅದನ್ನು ನಾನು ವಿಚಾರ ಮಾಡುತ್ತೇನೆ. ಇನ್ನು ಶ್ರೀ ಹುಚ್ಚಮಾಸ್ತಿಗೌಡರು ಹೇಳಿದರು—ನೀರು ಮುಳುಗಡೆ ಆಗತಕ್ಕಂಥ ಪ್ರದೇಶದಲ್ಲಿರುವ ಮರಗಳನ್ನು ತೆಗೆಯುತ್ತಿಲ್ಲ ಎಂದು. ಆದರೆ ನಾವು ಈಗಾಗಲೆ ಅನೇಕ ರಿಜರ್ವಾಯಿರ್‌ಗಳನ್ನು ಕಟ್ಟಿಸತಕ್ಕ ಪ್ರದೇಶಗಳಲ್ಲಿ ನೀರು ಮುಳುಗಡೆಯಾಗತಕ್ಕಂಥ ಪ್ರದೇಶದಲ್ಲಿರುವ ದೊಡ್ಡದೊಡ್ಡ ಬೆಲೆ ಬಾಳತಕ್ಕಂಥ ಮರಗಳನ್ನೆಲ್ಲಾ ತೆಗೆಸುತ್ತಿದ್ದೇವೆ. ನುಗು ಇತ್ಯಾದಿ ರಿಜರ್ವಾಯಿರ್ ಪ್ರದೇಶಗಳಲ್ಲಿ ಆ ರೀತಿ ನಡೆಸುತ್ತಿದ್ದೇವೆ. ಇನ್ನು ಶ್ರೀ ಪಿ. ಆರ್. ರಾಮಯ್ಯನವರು ರಿಸರ್ಚ್ ವಿಚಾರ ಪ್ರಸ್ತಾಪ ಮಾಡಿದ್ದಾರೆ. Prevention of soil erosion and conservation of soil ಬಗ್ಗೆ ನಾವು ಈಗಾಗಲೆ ಖಾಯಂ ಪ್ರಯತ್ನಗಳನ್ನು ನಡೆಸುತ್ತಿದ್ದೇವೆ. ಕೇಂದ್ರ ಸರ್ಕಾರದವರು ಈ ರಿಸರ್ಚ್ ಬಾಬಿನಲ್ಲಿ ನಮಗೆ ಸಹಕಾರ ನೀಡುವುದಾಗಿ ಭರವಸೆ ಕೊಟ್ಟಿದ್ದಾರೆ. ಆದರೆ ಆ ಸ್ಕೀಮು ಇನ್ನೂ ಜಾರಿಗೆ ಬಂದಿಲ್ಲ. ಇನ್ನು ಶ್ರೀಮಾನ್ ದೇವರಾಜ ಅರಸರು ಟ್ರೀಟ್‌ಮೆಂಟ್ ಆಫ್ ಟಿಂಬರ್ ಮತ್ತು ಬ್ಯಾಂಬೂ ಟ್ರಾನ್ಸ್‌ಪೋರ್ಟ್ ವಿಚಾರ ಹೇಳಿದರು. ನಮ್ಮಲ್ಲಿ ಟಿಂಬರ್ ಟ್ರೀಟ್‌ಮೆಂಟ್ ವಿಚಾರ ಬಹಳ ಯಶಸ್ವಿಯಾಗಿ ಆಗಿದೆ. ಆದರೆ ಬೊಂಬುಗಳನ್ನು ಸಾಗಿಸತಕ್ಕ ಖರ್ಚು ಬಹಳ ಬರುತ್ತದೆ. ಈ ದಿವಸ ಈ ಬೊಂಬುಗಳು ನಮ್ಮ ಬಳ್ಳಾರಿಗೆ ಬಂದರೆ ಅಲ್ಲಿ ನಾವು ಒಂದೊಂದಕ್ಕೆ ಒಂದೂವರೆ ರೂಪಾಯಿ ಕೊಡಬೇಕಾಗಿರುತ್ತದೆ. ಆದರೆ ಅದೇ ಬೊಂಬು ಶಿವಮೊಗ್ಗಾ ಕಾಡುಗಳಲ್ಲಿ ವಿಶೇಷವಾಗಿ ಹಾಳಾಗುತ್ತಿದೆ. ಅಂತೂ ಇದರ ಟ್ರಾನ್ಸ್‌ಪೋರ್ಟೇಷನ್ ಬಹಳ ದುಬಾರಿ.

ಶ್ರೀ ಡಿ. ದೇವರಾಜ ಅರಸ್.—ಮಾನ್ಯಮಂತ್ರಿಗಳು ಅಪ್ಪಣೆಕೊಡಿಸುತ್ತಿರುವುದು—ಈ ಬೊಂಬುಗಳ ಟ್ರಾನ್ಸ್‌ಪೋರ್ಟ್ ಬಹಳ ಕಷ್ಟವಾಗುತ್ತದೆ ಎಂದು. ಆದರೆ ಅದೇ ಕಷ್ಟ ಟಿಂಬರ್ ಟ್ರಾನ್ಸ್‌ಪೋರ್ಟೇಷನ್ನಿಗೂ ಇದೆ. ಆದರೆ ಈ ಎರಡನ್ನೂ ಹೋಲಿಸಿ ನೋಡಿದರೆ ಟಿಂಬರ್‌ಗಿಂತ ಬೊಂಬುಗಳ ಸಾಗಾಣಿಕೆಗೆ ಖರ್ಚು ಕಡಮೆ ಆಗುತ್ತದೆ ಎಂದು ನಾನು ಹೇಳುತ್ತೇನೆ.

ಡಾ॥ ಆರ್. ನಾಗನಗೌಡ.—ಟಿಂಬರ್‌ನಲ್ಲಿ ಕೆಲವು ಬಹಳ ವ್ಯಾಲ್ಯುಬಲ್ ಮೆಟೀರಿಯಲ್ಸ್ ಆಗುತ್ತವೆ. ಈ ದಿವಸ ಕೆಲವು ಹಳ್ಳಿಗಳಲ್ಲಿ—ಎಂದರೆ ತುಂಗಭದ್ರಾ ನದಿಯ ದಡದಲ್ಲಿರತಕ್ಕಂಥ ಗ್ರಾಮಗಳಲ್ಲಿ—ಹೋಗಿ ನೋಡಿದರೆ ಕೆಲಕೆಲವು ಮನೆಗಳಿಗೆ ಭಾರಿ ತೊಲೆಗಳನ್ನು ಹಾಕಿರುತ್ತಾರೆ. ಅವರನ್ನು ಕೇಳಿದರೆ ಅವು ತೆಪ್ಪದ ತೊಲೆಗಳು ಎಂದು ಹೇಳುತ್ತಾರೆ. ಹಾಗೆ ಅವರು ಹೇಳಲು ಕಾರಣವೇನೆಂದರೆ ಆ ತೊಲೆಗಳನ್ನು ಶಿವಮೊಗ್ಗಾ ಕಡೆಯಿಂದ ತೆಪ್ಪದ ಮೂಲಕ ಸಾಗಿಸಿತಂದಂಥ ತೊಲೆಗಳೆಂದು ಹೇಳುತ್ತಿದ್ದಾರೆ. ಏನೇ ಆಗಲಿ ಈ ಟಿಂಬರ್ ಮತ್ತು ಬೊಂಬುಗಳನ್ನು ತೆಪ್ಪದ ಮೂಲಕವೂ ಸಾಗಿಸಲು ಪ್ರಯತ್ನಮಾಡಲಾಗುತ್ತದೆ. ಇನ್ನು ಕೆಲವು ಮಾನ್ಯಸದಸ್ಯರು ಫಾಡರ್ ವಿಚಾರ ಹೇಳಿದರು. ಈ ದಿವಸ ಬಹಳ ಉತ್ತಮ ದರ್ಜೆಯ ಹುಲ್ಲು ಸಂಡೂರ್ ಅರಣ್ಯದಲ್ಲಿ ಬೆಳೆಯುತ್ತಿದೆ. ಮಳೆಯಿಲ್ಲದ ಕಾಲದಲ್ಲಿ ಈ ಹುಲ್ಲನ್ನು ನಾವು ಕಡಪ—ಬಳ್ಳಾರಿ ಇಂಥ ಕಡೆಗಳಿಗೆ ರವಾನೆಮಾಡುತ್ತಿದ್ದೇವೆ. ಆದರೆ ಬೆಂಗಳೂರಿಗೆ ಕಳುಹಿಸಬೇಕೆಂದರೆ ಚಾರ್ಜ್ ಬಹಳ ದುಬಾರಿ ಬೀಳುತ್ತದೆ ಇನ್ನು ಶಿವಮೊಗ್ಗಾ ಕಡೆಗಳಲ್ಲಿ ಈ ಹುಲ್ಲನ್ನು ಶೇಖರಣೆ ಮಾಡಿಕೊಂಡು ಬರಲು ಒಂದು ಹೊಸ ವಿಧಾನವನ್ನು (silage) ಆಚರಣೆಗೆ ತರಲಾಗುತ್ತಿದೆ. ಈಗಾಗಲೇ ಈ ರೀತಿ ಈ ದನಗಳ ಮೇವನ್ನು ಗುಂಡಿಗಳಲ್ಲಿ ಶೇಖರಣೆ ಮಾಡತಕ್ಕ ವಿಧಾನವನ್ನು ಜಾರಿಗೆ ತರಲು 6-7 ಗುಂಡಿಗಳಲ್ಲಿ ಪ್ರಯೋಗ ನಡೆಸಲಾಗುತ್ತಿದೆ.

ಇನ್ನು ಅರಣ್ಯಗಳಿಗೆ ಬೆಂಕಿ ಬೀಳತಕ್ಕ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಇದನ್ನು ಸಂಪೂರ್ಣವಾಗಿ ತಡೆಗಟ್ಟಬೇಕೆಂದು ಹೇಳಿದ್ದಾರೆ. ನಾವೂ ಸಹ ಹಾಗೇ ಮಾಡಬೇಕೆಂದು ಅಂದುಕೊಂಡಿದ್ದೇವೆ. ಇನ್ನು ನಾವು ಈ ದಿವಸ ಮಾಡುತ್ತಿರುವ ಪ್ಲಾಂಟಿಂಗ್ ವಿಚಾರವಾಗಿ ಖರ್ಚು ಬಹಳ ದುಬಾರಿ ಆಯಿತು ಎಂದು ರೈತರು ನೋಡಿ ನಗುತ್ತಿದ್ದಾರೆ ಎಂಬುದಾಗಿ ಕೆಲವರು ತಿಳಿಸಿದ್ದಾರೆ. ಆದರೆ ನಾವು ಈ ಬಾಬನ್ನು ಎಷ್ಟು ಮಿತವ್ಯಯದಿಂದ ನಡೆಸಬೇಕೋ ಅಷ್ಟೂ ಮಿತವ್ಯಯದಿಂದ ನಡೆಸುತ್ತಿದ್ದೇವೆ. ಇನ್ನು ನಮ್ಮ ಫಾರೆಸ್ಟ್ ಇಲಾಖೆಯವರು ಖಾಸಗೀ ಜನರಿಗೆ ಮರಗಳನ್ನು ಕೊಯ್ಯತಕ್ಕ ಗುಂಡಿಗಳ ಬಗ್ಗೆ ಲೈಸೆನ್ಸ್ ಕೊಡುತ್ತಿದ್ದಾರೆ, ಇದರಿಂದ ಅನೇಕ ರೀತಿಯಲ್ಲಿ ಅರಣ್ಯದಲ್ಲಿ ಮರಗಳ ಕಳವು ನಡೆಯುತ್ತದೆಂದೂ ಅದಕ್ಕಾಗಿ ಈ ಲೈಸೆನ್ಸ್‌ಕೊಡತಕ್ಕ ಪದ್ಧತಿಯನ್ನೇ ವಜಾ ಮಾಡಬೇಕೆಂದೂ ಹೇಳಿದ್ದಾರೆ. ಆದರೆ ಹೀಗೆ ಗುಂಡಿಗಳನ್ನು ಹಾಕಲು ಲೈಸೆನ್ಸ್ ತೆಗೆದುಕೊಳ್ಳಬೇಕಾದ ಆವಶ್ಯಕತೆಯೇನೂ ಇರುವುದಿಲ್ಲ.

ಇನ್ನು ಗಂಧದ ಮರಗಳನ್ನು ಖಾಸಗೀ ಜನರ ಜಮೀನುಗಳಲ್ಲಿ ಬೆಳಸಿದರೆ ಅವರಿಗೆ ಇದರಿಂದ ಯಾವ ಪ್ರೋತ್ಸಾಹವೂ ದೊರೆಯುತ್ತಿಲ್ಲವೆಂದು ಹೇಳಿದರು. ಹೀಗೆ ಖಾಸಗೀ ಜಮೀನುಗಳಲ್ಲಿ ಬೆಳಸಿರತಕ್ಕ ಗಂಧದ ಮರಗಳಿಗೆ ಒಂದು ರೂಪಾಯಿನಿಂದ 20 ರೂಪಾಯಿಗಳವರೆಗೂ ಕಾಂಪೆನ್‌ಸೇಷನ್ ಮೊಬಲಗನ್ನು ಸರ್ಕಾರದವರು ಕೊಡುತ್ತಿದ್ದಾರೆ. ಇದು ಆಯಾ ಮರದ ಸೈಜಿನಮೇಲೆ ಹೋಗುತ್ತದೆ.

ಇನ್ನು ಕಾಡಾನೆ ಇತ್ಯಾದಿ ಮೃಗಗಳಿಂದ ಆಗತಕ್ಕ ಹಾವಳಿಯನ್ನು ತಡೆಗಟ್ಟಲು ಆ ಸಿಬ್ಬಂದಿ ವರ್ಗದವರಿಗೆ ಸಾಕಷ್ಟು ಕಾರ್ಟ್‌ರಿಡ್ಜ್‌ಗಳನ್ನು ಒದಗಿಸಿರಲಿಲ್ಲ ಎಂದು ಆಕ್ಷೇಪಣೆ ಮಾಡಿದ್ದಾರೆ. ಆದರೆ ಈ ವಿಚಾರದಲ್ಲಿ ನಮಗೂ ಕೂಡ ಒಂದೆರಡು ಕಂಪ್ಲೇಂಟ್ಸ್‌ಗಳು ಬಂದಿದ್ದವು. ಅಂಥಾದ್ದನ್ನು ತಡೆಗಟ್ಟಲು ನಾವು ಎಲ್ಲ ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ಅನೇಕ ಮಾನ್ಯಸದಸ್ಯರುಗಳು ಇನ್ನೂ ಅನೇಕ ವಿಷಯಗಳನ್ನು ಹೇಳಿದ್ದಾರೆ. ನಾವು ಸತತವಾಗಿ ಈ ಅರಣ್ಯ ಬಾಬಿನಿಂದ ಹೆಚ್ಚು ಲಾಭ ಬರುವಂತೆ ಮಾಡುವುದಕ್ಕೂ ಮತ್ತು ಈ ಅರಣ್ಯವನ್ನು ಇನ್ನೂ ಹೆಚ್ಚು ಹೆಚ್ಚಾಗಿ ಬೆಳೆಸುವುದಕ್ಕೂ ಪ್ರಯತ್ನಗಳನ್ನು ಮಾಡುತ್ತಲೇ ಇದ್ದೇವೆ. ಆದರೆ ಈ ಇಲಾಖೆಗೇನೂ ಅಷ್ಟು ಹೆಚ್ಚು ಖರ್ಚಾಗುತ್ತಿಲ್ಲ. ತಾವು ಹಿಂದಿನ ಸಾಲುಗಳ ಖರ್ಚು ವೆಚ್ಚಗಳನ್ನು ನೋಡಿದರೆ ಅದು 41 ಲಕ್ಷ, ಅದರ ಮಾರನೆಯ ವರ್ಷ 44 ಲಕ್ಷ, ಅದರ ಮಾರನೆಯ ವರ್ಷ 47 ಲಕ್ಷ ರೂಪಾಯಿಗಳು ಖರ್ಚಾಗಿವೆ. ಈ ವರ್ಷ ಈ ಬಾಬಿಗೆ 54 ಲಕ್ಷದ 88 ಸಾವಿರ ರೂಪಾಯಿಗಳನ್ನು ಮಾತ್ರ ಕೇಳಿದ್ದೇವೆ.

ಹೋದ ವರ್ಷ ಡೆವಲಪ್‌ಮೆಂಟ್ ಸ್ಕೀಂಗೆ 2 ಲಕ್ಷ ರೂಪಾಯಿಗಳನ್ನು ಮಾತ್ರ ಇಟ್ಟಿತ್ತು. ಈ ವರ್ಷ 10 ಲಕ್ಷ 50 ಸಾವಿರ ರೂಪಾಯಿಗಳನ್ನು ಇಟ್ಟಿದ್ದೇವೆ. ತಾವು ದಯಮಾಡಿ ಬಡ್ಜೆಟ್‌ವಾಲ್ಯೂಂ II ಪೇಜ್ 3 ರಲ್ಲಿ ನೋಡಿದರೆ ಡೆವಲಪ್‌ಮೆಂಟ್ ಏನೇನು ಮಾಡಬೇಕೆಂದು ಅಂದು ಕೊಂಡಿದ್ದೇವೆ ಎಂಬುದು ಗೊತ್ತಾಗುತ್ತದೆ.

ಶ್ರೀಮಾನ್ ಹನುಮಯ್ಯನವರು ತಂಗಡಿ ಚಕ್ಕೆ ವಿಷಯ ಹೇಳಿದರು. ಹರಿಜನರೇ ಇದರಲ್ಲಿ ಕೆಲಸ ಮಾಡುವವರು, ಬಹಳ ಮಂದಿ ಇದರಿಂದ ಜೀವನ ಮಾಡುತ್ತಾ ಇದ್ದಾರೆ ಅವರಿಗೆ ಸೊಸೈಟಿ ಮುಖಾಂತರ ಸಹಾಯ ಕೊಡಬೇಕು ಎಂದು ಹೇಳಿದರು. ಸರ್ಕಾರದವರು ಏನೊಂದು ಸಹಾಯ ಮಾಡಿದರೂ ಕೂಡ ಅದು ಆ ಜನಗಳಿಗೆ ನೇರವಾಗಿ ಸಹಾಯವಾಗಬೇಕು. ಆ ಕೆಲಸದಲ್ಲಿ ಯಾರು ನಿರತರಾಗಿದ್ದಾರೋ ಅವರು ಒಂದು ಕೋ-ಆಪರೇಟೀವ್ ಸೊಸೈಟಿಮಾಡಿಕೊಂಡರೆ ಅವರಿಗೆ ಲೈಸೆನ್ಸ್ ಕೊಡುತ್ತೇವೆ. ಮದರಾಸಿನಲ್ಲಿ ಅನೇಕ ಕಡೆ ಕೊಟ್ಟಿದ್ದಾರೆ. ತಪ್ಪುಮಾಡುವುದಕ್ಕೆ ಸಾಧ್ಯವುಂಟು, ಇಲ್ಲ ಎಂದು ಹೇಳುವುದಿಲ್ಲ. ಆದ್ದರಿಂದ ಚಿತ್ರದುರ್ಗ ಜಿಲ್ಲೆಯಲ್ಲಿ ಅಲ್ಲಿರುವ ತಂಗಡಿಚಕ್ಕೆ ತೆಗೆಯುವ ಹೆಣ್ಣುಮಕ್ಕಳು, ಗಂಡುಮಕ್ಕಳು ಎಲ್ಲಾ ಸೇರಿ ಒಂದು ಸೊಸೈಟಿ ಮಾಡಿಕೊಂಡರೆ ಅದರ ಲಾಭ, ಲುಕ್ಸಾನು ಎಲ್ಲಾ ಅವರಿಗೇ ಹೋಗುತ್ತದೆ. ಪ್ರೆಸಿಡೆಂಟರು, ಸೆಕ್ರೆಟರಿ ಮುಂತಾದವರು ಆನರೆರಿ ಆಗಿ ಕೆಲಸಮಾಡಬಹುದು ಅಥವಾ ನೂರಾರು ರೂಪಾಯಿ ಸಂಬಳ ಕೊಡುತ್ತೇವೆ ಎಂದರೆ ಕೊಡಿ, ಆಕ್ಷೇಪಣೆ ಏನೂ ಇಲ್ಲ. ಅಲ್ಲ ಆ ರೀತಿಯ ಒಂದು ಸಂಸ್ಥೆ ಇಲ್ಲ. ಆ ರೀತಿಯ ಒಂದು ಸಂಸ್ಥೆಯನ್ನು ಇಟ್ಟುಕೊಂಡರೆ ಚೆನ್ನಾಗಿರುತ್ತದೆ. ತಂಗಡಿಚಕ್ಕೆ ಹೊಡೆಯುವವರ ಕಷ್ಟ ಎಷ್ಟಿದೆ ಎಂಬುದು ನನಗೆ ಚೆನ್ನಾಗಿ ಗೊತ್ತು. ಆದ್ದರಿಂದ ಯಾರು ತಂಗಡಿಚಕ್ಕೆ ಹೊಡೆಯುತ್ತಾರೆಯೋ ಅವರನ್ನು ಆ ಸೊಸೈಟಿಯ ಮೆಂಬರುಗಳನ್ನಾಗಿ ಮಾಡಿದರೆ ಅವರಿಗೆ ಅನುಕೂಲವಾಗುತ್ತದೆಯೇ ಹೊರತು ಇಲ್ಲದೇ ಇದ್ದರೆ ಆಗಲಿಕ್ಕಿಲ್ಲ ಎಂದು ನನ್ನ ಮನಸ್ಸಿಗೆ ತಿಳಿಯುತ್ತದೆ.

Mr. SPEAKER.—Who is to finance?

Dr. R. NAGAN GOWDA.—We can get plenty of finance from the co-operative movement, if the actual workers are the members. For instance there is a Marketing Society for jaggery producers. The members are all jaggery producers. Similarly society for sugar-cane growers.

ಯಾವುದೇ ಆಗಲೀ ಹಣ ಕೊಡುವುದಕ್ಕೆ ಅನುಕೂಲ ಇದೆ. ಆದರೆ ಸದಸ್ಯರು ಯಾರು ಆಗಬೇಕು ? ಅವರೇ ಆಗಬೇಕು. ಇದು ತಪ್ಪು. ಈ ವಿಷಯವಾಗಿ ಒಂದು ದಿವಸ ಕುಳಿತುಕೊಂಡು ಆಲೋಚನೆ ಮಾಡಬೇಕೆಂದು ನನ್ನ ಅಭಿಪ್ರಾಯ ಇದೆ.

*Sri A. BHEEMAPPA NAIK (Molakalmuru).—I would like to submit one thing. The Hon'ble Minister perhaps does not know that the shareholders are directly those persons, except one gentleman by name T. M. P. Pir who is an expert. All others are the workers, Adikarnatakas. They alone are the members. They are the actual workers and they are the members. Once Government gave it on certain basis and they were working. But suddenly Government wanted them to compete with others. They could not compete and inevitably they had to get money from somewhere else. In spite of requests for finance nothing has happened. Let the Minister appoint a committee today and ask them to give proposals by which all middle men can be eliminated and only the actual workers get the benefit. I will give proposals. Thereby Government will be getting much more than they are getting now. The middle men will all be elimilnated and the whole thing will be worked in such a way that even financial help need not be given by Government. We will give such proposals. They do not think over that. They do not want to help them and they want to allow them to compete with others. That is the position. Anyway let him agree to appoint a committee. Within 15 days we will give proposals by which neither the Government nor the actual workers are adversely affected and at the same time the middle men are eliminated.

*Sri G. DUGGAPPA (Holalkere-Scheduled Castes).—For this only object of helping the people who are working on tangadi the society was organised on co-operative lines. With this object we are working. Perhaps there may be a clerk. Because there was no finance, we had to take the permission of the President who is not in the field. The President of that society is not working actually on tangadi but the thing is he knows the job well being well versed in the business of tangadi bark. The society is mainly meant for the poor people who are actually working. I wanted to make this clear to the Government. As Sri Bheemappa Naik said, will the Government at least now appoint a committee to go into the question of difficulties of the people and organise the tangadi bark finance on co-operative lines ?

*ಶ್ರೀ ಕೆ. ಪ್ರಭಾಕರ್ (ನೆಲಮಂಗಲ-ಅನುಸೂಚಿತ ಜಾತಿಗಳು).—ಈ ತಂಗಡಿ ಚಕ್ಕೆ ಹೊಡೆಯುವವರಿಗೆ ಸಹಾಯ ಮಾಡಬೇಕು ಎಂದು ಹೇಳುವುದರ ಉದ್ದೇಶ ಏನು ಎಂಬುದು ಸರ್ಕಾರದವರಿಗೆ ಗೊತ್ತಿದೆ. ಕೆಲವರು ಇಲ್ಲದ ಸಲ್ಲದ ಹಿನ್ನೆಲೆಯನ್ನು ಸರ್ಕಾರದವರಿಗೆ ಕೊಟ್ಟು ಆ ಯೋಜನೆ ಏನಾಗುತ್ತದೆಯೋ ನೋಡೋಣ ಎಂದು ಇದ್ದಾರೆ. ತಂಗಡಿ ಚಕ್ಕೆ ಹೊಡೆಯುವ ಈ ಬಡಜನರಿಗೆ ಸರ್ಕಾರದವರು ಸಾಧ್ಯವಾದ ಎಲ್ಲಾ ಸಹಾಯಗಳನ್ನು ಮಾಡಿಕೊಡಬೇಕೆಂದು ಹೇಳುತ್ತೇನೆ.

Dr. R. NAGAN GOWDA.—There is only one point about which I wish to say a few words.

Mr. SPEAKER.—I think there is no difference of opinion between the Government and the Members in regard to the help to be given.

Dr. R. NAGAN GOWDA.—Yes ; but I wish to protest against what my Hon'ble friend Sri Bheemappa Naik said that Government have no mind to do this. I wish to tell him that if I have faith in one thing, it is in co-operation, and we as cultivators in our own native village have worked at it and helped ourselves. This society should have every one of the tangadi bark workers as its member. If they get profit from wages, they must either be kept in deposit in reserve fund for the society or should be distributed among the workers. That is the fundamental principle of a co-operative society and one cannot deny that. This is what happened in our society.

Sri A. BHEEMAPPA NAIK.—Have you seen how many members are there?

Sri D. DEVARAJ URS.—Mr, Speaker, Sir, you do not allow us to intervene in the debate but you are allowing others to intervene.

Dr. R. NAGAN GOWDA.—Now this is an important thing which has come up for discussion. I will only request my friend Sri Bheemappa Naik who has great faith in the co-operative movement and who has done much more than what I have done in this

(DR. R. NAGAN GOWDA.)

field and also my other friends, to create a real co-operative society for Chitaldrug District and work out the scheme. I am sure the Government will give them all the help that is needed in this respect. It does not matter even if the Government loses a small amount; but it must render help to the people. And the principle adopted while giving the grant to the society is the average for the last two or three years. That is the usual amount that would be given to a co-operative society without any competition or when putting it into action. It has been done in a large number of cases and I know about them. I only request my other friends to go ahead with the scheme and if they want any help from the Government, I will certainly give them the help and give whatever suggestions I am capable of.

ಶ್ರೀ ಕೆ. ಪುಟ್ಟಸ್ವಾಮಿ (ಶ್ರೀರಂಗಪಟ್ಟಣ).—ಒಂದು ಕಮಿಟಿಯನ್ನು appoint ಮಾಡಬೇಕೆಂದು ಹೇಳಿದರು, ಅದಕ್ಕೆ ಉತ್ತರವನ್ನೇ ತಾವು ಕೊಡಲಿಲ್ಲ. ಸುಮ್ಮನೆ ತಲೆ ಸವರುವ ಮಾತುಗಳಿಂದೇನು ಪ್ರಯೋಜನ ?

Mr. SPEAKER.—You must take the answer given by the Minister.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾ ಒಂದು ಮುಖ್ಯವಾದ ಅಂಶವನ್ನು ಬಿಟ್ಟು ಬಿಟ್ಟಿದ್ದಾರೆ. ಶ್ರೀ ಹುಚ್ಚಮಾಸ್ತಿಗೌಡರು ಸರ್ಕಾರದವರ ಗಮನಕ್ಕೆ ತಂದು ಎರಡು ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಬಂಡೀಪುರದ ಕಾಡಿನಲ್ಲಿ ಒಂದು ಹೋಟಲು ಕಟ್ಟಿ, ಈ ಹಣವನ್ನು Wild Life Preservation head ನಲ್ಲಿ ತೋರಿಸಿರುವುದು ಸರಿಯಲ್ಲ, ಇದು ನ್ಯಾಯವಾದ ಖರ್ಚಲ್ಲವೆಂದು ಹೇಳಿದ್ದಾರೆ. ಎರಡು ಲಕ್ಷ ರೂಪಾಯಿಗಳನ್ನು ಈ Head ನಲ್ಲಿ ಖರ್ಚು ಮಾಡುವುದು ಶುದ್ಧಾಂಗ ತಪ್ಪು, ದಯವಿಟ್ಟು ಮಾನ್ಯ ಮಂತ್ರಿಗಳು ಇದಕ್ಕೆ ಉತ್ತರಕೊಡಬೇಕು.

Dr. R. NAGAN GOWDA.—Sir, the Government of India have come forward with this grant to build a Hotel and other things in Bandipur because they want to develop that area into a Tourists' Centre and that is why we have taken that amount into account here.

Sri K. PUTTASWAMY.—Is this grant made by the Government of India ?

Dr. R. NAGAN GOWDA.—Yes. This amount has been earmarked for that purpose.

Sri K. PUTTASWAMY.—Even then I protest Sir, because that is also the people's money.

Dr. R. NAGAN GOWDA.—I quite agree with my Hon'ble friend, but the Government of India wants to have a Tourists' Centre there. The Government of India have got another sanctuary *viz*, Mudumali in the Madras State which is one of the finest wild life sanctuaries that I have known in India. A large number of tourists come and stay there. We must provide conveniences for those tourists.

My friend Sri, Kotra Basavanna Goud stated about some inconvenience caused in Bellary. We have not been able to introduce the Mysore Act into that area and there we are collecting licence fee for grazing sheep, cattle and buffaloes. That system has worked in Madras very well, in the sense that nobody can get into the forest without a licence. And then he was telling about the permission to be given for taking fencing materials. They could take it by paying 0-8-0 per cartload. The licences are now being issued.

Sri D. DEVARAJ URS.—What about my question regarding giving of licences for the raiyats to carry the green fuel whenever required ?

Mr. SPEAKER.—While Government is giving licences to exploit fuel from the forest, why not that facility be extended to the raiyats ? That is what the Hon'ble Member wants to know.

Dr. R. NAGAN GOWDA.—The other suggestion that was made by my friend Sri Bheemappa Naik is about appointing a Committee. That could be considered; but I would rather suggest to him to put up a proposal on some of the lines which would be helpful to the Tangadi Bark Workers. It is not that it should be absolutely satisfactory to Government, but it must be useful to the poor people that are working day and night there.

*ಶ್ರೀ ಕೆ. ಪ್ರಭಾಕರ್.—ಸ್ವಾಮಿ, ಡಿಪ್ರೆಸ್ಡ್ ಕ್ಲಾಸ್ ಅಮಿಲಿಯೊರೇಷನ್ ಫಂಡಿನಿಂದ ಖರ್ಚು ಹಾಕಿ ನಿಮ್ನ ತರಗತಿಯವರಿಗೆ ಮರಮುಟ್ಟುಗಳನ್ನು ಕೊಡಬೇಕೆಂದಿದ್ದರೂ ಅರಣ್ಯ ಇಲಾಖೆಯವರು ಒಳ್ಳೆಯ ಮರಗಳನ್ನು ಕೊಡದೆ ಆಲದಮರ, ಅತ್ತಿಯಮರ ಮುಂತಾದುವುಗಳನ್ನು ಮಾತ್ರ ಕೊಡುತ್ತಿದ್ದಾರೆ. ಎಷ್ಟು ಒಳ್ಳೆಯ ಮರವನ್ನು ಕೊಡಬಹುದೋ ಅಷ್ಟು

ಒಳ್ಳೆಯ ಮರವನ್ನು ಕೊಡುತ್ತಿಲ್ಲ. ನೀವೇ ಪ್ರಯತ್ನ ಮಾಡಿ ಶಿವಮೊಗ್ಗ ಬೆಂಗಳೂರು ಕೋಲಾರಗಳ ನಡುವೆ ಒಂದು ಕೇಂದ್ರ ಡಿಪೋವೆಂದು ಮಾಡಿ ಅಲ್ಲಿ ಮರ ಮುಟ್ಟುಗಳನ್ನು ತಯಾರಿಸಿ ಎಲ್ಲರಿಗೂ ಸರಬರಾಯಿ ಮಾಡುವಂತೆ ಹೇಳಿದರೂ ಸರ್ಕಾರದವರು ಗಮನ ಕೊಟ್ಟಿಲ್ಲ. ಈಗ ಮರ ಮುಟ್ಟುಗಳನ್ನು ಸಾಗಿಸಿ ಕೊಂಡು ಬರಬೇಕಾದರೇ ಬಹಳ ದುಬಾರಿ ಖರ್ಚಾಗುತ್ತಿದೆ. ಈ ಕಷ್ಟವನ್ನು ಸರಿಪಡಿಸದೆ ಹೋದರೆ, ಸರ್ಕಾರದವರು ನಮ್ಮ ಜನರಿಗೆ ಎಡಗೈಯಲ್ಲಿ ಕೊಟ್ಟದ್ದನ್ನು ಬಲಗೈಯಲ್ಲಿ ತೆಗೆದುಕೊಳ್ಳುವಂತಾಗುತ್ತದೆ. ಅರಣ್ಯ ಶಾಖಾ ಮಂತ್ರಿಗಳು ಇದನ್ನು ದಯವಿಟ್ಟು ಗಮನಿಸಬೇಕೆಂದು ಹೇಳುತ್ತೇನೆ. ಇದೇ ವಿಷಯದಲ್ಲಿ ನಾನೊಂದು ಸೂಚನೆಯನ್ನೂ ಕಳುಹಿಸಿದ್ದೆ. ಈ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—Green Fuelನ್ನು ರೈತರು ತೆಗೆದುಕೊಂಡು ಹೋಗುವುದಕ್ಕೇಕೇ ಅವಕಾಶ ಕೊಡಕೂಡದು?

ಡಾ॥ ಆರ್. ನಾಗನಗೌಡ.—ಲಾರಿಗಳವರ ಲೈಸೆನ್ಸ್ ತೆಗೆದುಕೊಂಡು ಕೂಪಿನಿಂದ ಸೌದೆಯನ್ನು ತೆಗೆದುಕೊಂಡು ಹೋಗುವುದಕ್ಕೆ ಅವಕಾಶ ಕೊಟ್ಟಿದೆ. ಕೂಪುಗಳನ್ನು ಕೊಡಬೇಕಾದರೆ ಮುಂಚೆಯೇ 'ಕೂಪ್' ಎಂದು ಸೌದೆಯನ್ನು ಕತ್ತರಿಸುವ ಜಾಗವನ್ನು ಗೊತ್ತು ಮಾಡಿ 'ಕೂಪ್' ಎಂದು declare ಮಾಡಿ ಅನಂತರ ಲೈಸೆನ್ಸ್ ಕೊಡುವುದಕ್ಕೆ ಏರ್ಪಾಡು ಮಾಡಿದೆ. ಯಾರು ಕಂಟ್ರಾಕ್ಟ್ ತೆಗೆದುಕೊಳ್ಳುತ್ತಾರೋ ಅವರು ಈ ಪ್ರದೇಶದಿಂದ ಲಾರಿಗಳ ಮುಖಾಂತರ ಸೌದೆಯನ್ನು ತೆಗೆದುಕೊಂಡು ಹೋಗುತ್ತಾರೆ. ಆದ್ದರಿಂದ green wood ಬೇಕಾದರೆ ಅಲ್ಲಿಂದಲೇ ತೆಗೆದುಕೊಳ್ಳಬೇಕು. Dry wood ಬೇಕಾದರೆ ಕಾಡಿನಲ್ಲಿ ಎಲ್ಲಿಬೇಕಾದರೂ ತೆಗೆದುಕೊಳ್ಳಬಹುದು.

ಶ್ರೀ ಡಿ. ದೇವರಾಜ ಅರಸ್.—ಕೂಪಿನಿಂದ ತೆಗೆದುಕೊಳ್ಳುವುದು ಕಂಟ್ರಾಕ್ಟರುಗಳಿಗೆ ಮಾತ್ರ ಸಾಧ್ಯ. ಬೇರೆ ಜನರು ತೆಗೆದುಕೊಳ್ಳುವುದಕ್ಕೆ ಹೋದರೆ ಅವರು ಕೊಡುವುದಿಲ್ಲ. ಆದ್ದರಿಂದ ತಾವು ಈ ನ್ಯೂನತೆಯನ್ನು ಸರಿಮಾಡಿ ರೈತರಿಗೇ ಒಂದು ಕೂಪ್ ಮಾಡಿ ಅವರು ತೆಗೆದುಕೊಳ್ಳುವುದಕ್ಕೆ ಅನುಕೂಲ ಮಾಡಿದರೆ. . .

ಡಾ॥ ಆರ್. ನಾಗನಗೌಡ.—ಶ್ರೀ ದೇವರಾಜ ಅರಸ್‌ನವರು ಹೇಳಿದ್ದರಲ್ಲಿ ರೈತರಿಗೆ ಒಂದು ಕಷ್ಟವಿದೆಯೆಂದು ಗೊತ್ತಾಯಿತು. ಇದಕ್ಕೆ ಏನು ಮಾಡಬಹುದೆಂದರೆ, ಗ್ರಾಮದ ಹತ್ತಿರವೇ ಒಂದು ಕೂಪ್‌ಮಾಡಿ ಇಲಾಖೆಯವರನ್ನು ಯಾರನ್ನಾದರೂ ಇಟ್ಟು ರೈತರು ಯಾರು ಬರುತ್ತಾರೋ ಅವರಿಗೆ ಸೌದೆ ಮರ ಕೊಡುವಂತೆ ಏರ್ಪಾಡು ಮಾಡಬಹುದು. ಈ ಪ್ರಕಾರ ಒಂದು pilot scheme ಒಂದನ್ನು ಮಾಡುವ ಯೋಚನೆ ಮಾಡುತ್ತೇವೆ.

ಆ ಮೇಲೆ ಶ್ರೀಮಾನ್ ಪ್ರಭಾಕರ್‌ರವರು ಹೇಳಿದ್ದನ್ನು ಪರಿಶೀಲಿಸುತ್ತೇವೆ. ಏನು ಅನುಕೂಲ ಮಾಡಿ ಕೊಡಬೇಕೋ ಅದನ್ನು ಮಾಡಿಕೊಡುತ್ತೇವೆ. ಶ್ರೀಮಾನ್ ಹುಚ್ಚೇಗೌಡರು ನಾನು ವಿವರಗಳನ್ನು ಕೊಟ್ಟಾಗ ಇರಲಿಲ್ಲ. ಈಗ ಖರ್ಚು ಹೆಚ್ಚಾಗಿದೆ. ಯಾವ ಕಾರಣದಿಂದ ಹೆಚ್ಚಾಗಿದೆ ಎಂಬುದನ್ನು ಆಗಲೇ ತಿಳಿಸಿದ್ದೇನೆ.

ಶ್ರೀ ಬಿ. ಹುಚ್ಚೇಗೌಡ.—ಹೇಗೆ ಖರ್ಚು ಹೆಚ್ಚಾಗಿದೆ? ಭದ್ರಾವತಿ ಕಾರ್ಖಾನೆಗೆ ಸೌದೆಯನ್ನು ಸರಬರಾಯಿ ಮಾಡುತ್ತಿರುವುದರಲ್ಲಿ overhead chargeಗಳು ಕೂಡ ಹುಟ್ಟುತ್ತಿಲ್ಲ. ಬೊಂಬುಗಳನ್ನು ಸಪ್ಲೈ ಮಾಡುವುದು ಕೂಡ ಲಾಭದಾಯಕವಾಗಿಲ್ಲ. ಕೆಲವು ಕಡೆ ಒಂದಾಣೆಗೆ ಒಂದಡಿ ಸೀನಿಯೊರೇಜ್ ಮೇಲೆ ಕೊಡುತ್ತೀರಿ. ಇನ್ನೊಂದು ಕಡೆ ನೀವೇ ಮಾಡಿ ಲುಕ್ಸಾನು ಹೊಂದುತ್ತಿದ್ದೀರಿ. ಇದೇಕೆ ಹೀಗೆ ಮಾಡುತ್ತೀರೆಂಬುದನ್ನು ತಿಳಿಸಬೇಕು.

ಡಾ॥ ಆರ್. ನಾಗನಗೌಡ.—Conservator of Forests ಸಾಮಾನ್ಯವಾಗಿ ಅರಣ್ಯವನ್ನು ನೋಡಿಕೊಳ್ಳುವುದಕ್ಕೆ ಇದ್ದಾರೆ. ಅಲ್ಲಿ ನಮಗೆ timber supply ಮಾಡುತ್ತಿದ್ದಾರೆ. ಖರ್ಚು ಎಂಟು ಲಕ್ಷ ಐವತ್ತು ಸಾವಿರ ಇದೆ. ಆದಾಯ, supply of bamboos to Paper Mills ಎರಡು ಲಕ್ಷ ಇದೆ. We get 2 lakhs and forty-five thousand of rupees, ಕೇವಲ seigniorage ಮಾತ್ರ ನಮಗೆ ಬರುವುದು. It is a factory that is supported by the Government. Supply of charcoal to Iron and Steel Works costs us 8 lakhs of rupees and we get 8 lakhs and fifty thousand rupees.

ಶ್ರೀ ಬಿ. ಹುಚ್ಚೇಗೌಡ.—ನಾವು ಏತಕ್ಕೆ supply ಮಾಡಬೇಕು? ಅವರೇ ಮಾಡಿಕೊಳ್ಳಬಹುದಲ್ಲ.

ಡಾ॥ ಆರ್. ನಾಗನಗೌಡ.—Iron and Steel Worksನವರೇ ಮಾಡಿಕೊಳ್ಳಿ ಎಂದು ಹೇಳಿದ್ದೇವೆ. ಅವರು ಇನ್ನೂ ಒಪ್ಪಿಕೊಂಡಿಲ್ಲ.

Mr. SPEAKER.—The question is :

"That a sum not exceeding Rs. 54,89,000 be granted to the Government to defray the charges which will come in course of payment during the year ending 31st day of March 1957, in respect of 'Forest'."

The motion was adopted.

DEMAND NO. 36—WORKING EXPENSES (FOREST).

X. FOREST—C(1) WOOD PRESERVATION PLANT—WORKING EXPENSES AND SEIGNIORAGE.

Mr. SPEAKER.—The question is :

"That a sum not exceeding Rs. 5,02,000 be granted to the Government to defray the charges which will come in course of payment during the year ending 31st day of March 1957, in respect of 'X. Forest—C(1) Wood Preservation Plant—Working Expenses and Seigniorage'."

The motion was adopted.

DEMAND NO. 33—STATIONERY AND PRINTING.

56. STATIONERY AND PRINTING.

Mr. SPEAKER.—The question is :

"That a sum not exceeding Rs. 26,06,000 be granted to the Government to defray the charges which will come in course of payment during the year ending 31st day of March 1957, in respect of 'Stationery and Printing'."

The motion was adopted.

DEMAND NO. 35-A.—COMMUNITY DEVELOPMENT, ETC.

63-B.—COMMUNITY DEVELOPMENT PROJECTS, NATIONAL EXTENSION SERVICE AND LOCAL DEVELOPMENT WORKS.

Mr. SPEAKER.—The question is :

"That a sum not exceeding Rs. 1,00,92,000 be granted to the Government to defray the charges which will come in course of payment during the year ending 31st day of March 1957 in respect of 'Community Development Projects, National Extension Service and Local Development Works'."

The motion was adopted.

Mr. SPEAKER.—The House will now rise and meet at 8-30 A.M. tomorrow.

The House rose at Thirty-five Minutes past Six of the Clock to meet again at Thirty Minutes past Eight of the Clock on Monday, 26th March 1956.

WD 2896—GPB—550—14-7-56

MYSORE LEGISLATIVE ASSEMBLY

TWENTY-FIRST DAY.

Monday, 26th March 1956.

The House met in the Assembly Hall, Atara Katcheri, Bangalore, at Thirty Minutes past Eight of the Clock.

MR. SPEAKER (SRI H. S. RUDRAPPA, B.SC., LL.B.), in the Chair.

QUESTIONS AND ANSWERS

Dinner and Tea Parties

Q.—489. Sri T. N. MUDALAGIRI GOWDA (Kunigal).—

Will the Government be pleased to state :—

(*a*) (*i*) the number of Tea parties and Dinner parties arranged by them for the guests during the years 1954-55 and 1955-56;

(*ii*) who were the guests to whom these parties were given ;

(*b*) the expenditure for each party ;

(*c*) the number of invitations issued in respect of each party ;

(*d*) the basis on which the List of invitees was prepared ?

A.—Sri K. HANUMANTHAIYA (Chief Minister.)—

(*a*) (*i*) *In 1954-55* :—

Tea Parties ... 8

Dinner Parties ... 5

In 1955-56 :—

Tea Parties ... 9

Dinner Parties ... 17

(*ii*) *Vide* Statement appended below.

(*b*) *Vide* Statement appended below.

(*c*) *Vide* Statement appended below.

(*d*) The basis is the List in existence from a long time.

Statement regarding Tea and Dinner parties given both at Bangalore and Mysore during 1954-55 and 1955-56.

Sl. No.	Guests (*a*) (*ii*)	Expenditure (*b*)	No. of Invitees (*c*)
	Tea Party—1954-55.	Rs. a. p.	
1	His Highness the Rajpramukh of Mysore to felicitate on the occasion of His Birthday.	382 0 0	382
2	Collectors and Development Commissioners of South India who had met at Mysore at a Seminar.	275 0 0	275

(SRI K. HANUMANTHAIYA.)

Sl. No.	Guests (a) (ii)	Expenditure (b)	No. of Invitees (c)
		Rs. a. p.	
3	Air Marshal Muckerjee, Chief of Air Staff ...	334 2 0	350
4	Corporators, Bangalore Corporation	127 7 3	100
5	Smt. Durgabai and Sri Chintaman D. Deshmukh, Finance Minister, New Delhi.	282 0 6	250
6	Indian and Pakistan Cricket Teams ...	245 0 6	300
7	Delegates to the Fourth World Forestry Conference.	88 5 6	80
8	Russian Cultural Delegation and Soccer Team ...	528 10 6	470
	Tea Party—1955-56.		
1	To meet the Local Merchants and Bankers on the occasion of raising the National Development Loan.	96 11 0	95
2	Dr. B. V. Keskar and Sri M. C. Shah, Union Ministers.	152 7 9	150
3	The President and Committee Members of the Federation of Indian Chambers of Commerce and Industries.	430 11 0	250
4	Sri Gopala Reddy, Chief Minister, Andhra and Sri C. Subramanyam, Finance Minister, Madras.	330 1 6	250
5	Dr. Keskar, Union Minister for Information and Broadcasting.	202 6 0	250
6	Dr. Hingorani and Party of Medical Specialists from abroad.	174 13 0	150
7	Press Delegation from Gold Coast ...	23 9 0	10
8	Madam Soong Ching Ling, Vice-Chairman of the Peoples' Congress of China.	1,040 14 0	800
9	Prime Minister, Secretary-General of U. N. O. and E.C.A.F.E. Delegates.	682 8 0	550
	Dinner Party—1954-55.		
1	H. E. Marshal Josip Tito, President of the Federal Peoples Republic of Yugoslovakia.	600 0 0	120
2	H. E. Marshal Josip Tito, President of the Federal Peoples Republic of Yugoslovakia (Bangalore).	1,108 9 0	237
3	Justice Rajamannar, Chief Justice of Madras ...	375 14 0	100
4	Lady Rama Rau, Chairman, Social Hygienic Commission.	192 0 3	50
5	Sri K. C. Reddy, Minister for Production, Government of India, New Delhi.	226 0 0	60

Sl. No.	Guests (a) (ii)	Expenditure (b) Rs.	a.	p.	No. of Invitees (c)
	Dinner Party—1955-56.				
1	Delegates to the States Advisory Board to meet local business magnates and officers on the occasion of raising the National Development Loan (Mysore).	777	13	0	270
2	President of India on the occasion of his visit to Tungabhadra Dam.	320	0	0	80
3	Sri U. N. Dhebar, President, A. I. C. C. ...	538	8	0	200
4	Praja Socalist Leaders (Mysore) ...	375	0	0	75
5	H. M. the King of Nepal (Mysore) ...	700	9	0	130
6	H. M. the King of Saudi Arabia (Mysore) ...	797	15	0	130
7	Sri Chennabasappa Ambli, President, K.P.C.C. ...	463	8	6	250
8	Sri Chidambaram, Mayor of Madras ...	109	1	0	35
9	Indo-American Agricultural Research and the Tennessee State University Survey Team.	168	6	0	29
10	Dr. Hatta, Vice-President of Indonesia ...	1,000	15	9	200
11	Their Majesties the King and Queen of Nepal ...	1,133	11	0	200
12	Their Excellencies Mr. Bulganin and Mr. Khrushchev of Russia.	6,367	14	9	700
13	H. M. the King of Saudi Arabia (Bangalore) ...	3,666	5	6	400
14	Sugarcane Technologists ...	556	3	6	200
15	Artists who participated in the entertainment given to Russian Leaders.	350	0	0	300
16	Heavy Electrical Equipment Site Selection Committee.	160	1	0	24
I7	E.C.A.F.E. Delegates ...	1,063	6	0	140

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಈ ಅತಿಥಿಗಳ ಸಮಾರಂಭದಲ್ಲಿ ಕೆಲ್ವಕೆಲವು ಅತಿಥಿಗಳನ್ನು ಆಹ್ವಾನ ಮಾಡಿದ್ದೀರಿ. ಅವರ ಪಟ್ಟಿಯನ್ನು ಯಾವ ಆಧಾರದ ಮೇಲೆ ಮಾಡಿದ್ದೀರಿ ?

ಶ್ರೀ ಕೆ. ಹನುಮಂತಯ್ಯ.—ಅದಕ್ಕೆ ಉತ್ತರ ಕೊಟ್ಟಿದೆ.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಅದು ಯಾವಾಗ ಮಾಡಿದ್ದು ಸ್ವಾಮಿ ?

ಶ್ರೀ ಕೆ. ಹನುಮಂತಯ್ಯ.—ಅದು 20-30ವರ್ಷಗಳಿಂದಲೂ ಇದೆ. Categroy of Officials and Non-officials ಯಾರ್ಯಾರನ್ನು ಆಹ್ವಾನಿಸಬೇಕೆಂದು ಆ ಪಟ್ಟಿಯಲ್ಲಿ ನಮೂದು ಮಾಡಿದರೆ ಆಯಾ ಸ್ಥಾನದಲ್ಲಿರತಕ್ಕ ಅಧಿಕಾರಿಗಳ ಬದಲಾವಣೆ ಆದಾಗ, ಎಂದರೆ, ಉದಾಹರಣೆಗೆ 'ಈಗ ಒಬ್ಬ ಹೈಕೋರ್ಟ್ ಜಡ್ಜರು ಇರುತ್ತಾರೆ ಅವರು ಬದಲಾವಣೆ ಆದಾಗ ಆ ಹೆಸರನ್ನೂ ಕೂಡ ಬದಲಾವಣೆ ಮಾಡುತ್ತೇವೆ.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಈ 'ಕ್ಯಾಟಗರೀಸ್ ಹಿಂದಿನಿಂದ ಬಂದಿರತಕ್ಕದ್ದು ಸರಿಯಾದ ಪದ್ಧತಿ ಅಲ್ಲ, ಅದನ್ನು ಬದಲಾವಣೆ ಮಾಡಬೇಕು ಎಂದು ಹೇಳಿ ಅನೇಕಸಾರಿ ವ್ಯಕ್ತಪಡಿಸಿರಲಿಲ್ಲವೇ ?

ಶ್ರೀ ಕೆ. ಹನುಮಂತಯ್ಯ.—ಯಾವರೀತಿ ಬದಲಾವಣೆ ಮಾಡಬೇಕೆಂದು ನಿರ್ದಿಷ್ಟವಾಗಿ ಸೂಚನೆ ಕೊಟ್ಟರೆ ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಮಾರ್ಷಲ್ ಬುಲ್ಗಾನಿನ್‌ರವರು ಬೆಂಗಳೂರಿಗೆ ಬಂದಿದ್ದಾಗ ಬೆಂಗಳೂರು ಸಿಟಿಯಲ್ಲಿ ಇದ್ದವರಲ್ಲದೆ ಹೊರಗಡೆಯವರು ಯಾರನ್ನಾದರೂ ಆಹ್ವಾನಿಸಿದ್ದಿರಾ ?

Sri K. HANUMANTHAIYA.—All the members of the Assembly had been invited, and of the Council also. Therefore several people were invited.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಅಂಥ ದೊಡ್ಡ ವ್ಯಕ್ತಿಗಳು ಬರತಕ್ಕ ಸಂದರ್ಭದಲ್ಲಿ ಏರ್ಪಡಿಸುವ ಸಮಾರಂಭಕ್ಕೆ ದೇಶದಲ್ಲಿರತಕ್ಕ ಇತರರರನ್ನೂ ಕೂಡ ಆಹ್ವಾನಿಸುವುದು ಸರಿಯಲ್ಲವೇ ?

ಶ್ರೀ ಕೆ. ಹನುಮಂತಯ್ಯ.—ಎಲ್ಲರನ್ನೂ ಆಹ್ವಾನಿಸುವುದಕ್ಕಾಗುವುದಿಲ್ಲ. ಇಷ್ಟೇ ಜನರನ್ನು ಆಹ್ವಾನಿಸಬೇಕೆಂದು ನಿಗದಿ ಇದೆ. ಆ ಪ್ರಕಾರ ಇನ್ವಿಟೇಷನ್ ಹಂಚಲಾಗುತ್ತದೆ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಅಂಥ ಒಂದು ನಿಗದಿಯನ್ನು ಹಿಂದಿನ ಸರ್ಕಾರ, ಹಿಂದಿನ ಸಂಪ್ರದಾಯಕ್ಕನುಸರಿಸಿ ಮಾಡಿದೆ. ಆ ಪಟ್ಟಿಯನ್ನು ಬದಲಾವಣೆ ಮಾಡುವುದಕ್ಕೆ ಸಾಧ್ಯವಿಲ್ಲವೇ ?

ಶ್ರೀ ಕೆ. ಹನುಮಂತಯ್ಯ.—ನೀವೇನಾದರೂ ಇಂಥವರನ್ನೂ ಸೇರಿಸಿಕೊಳ್ಳಬೇಕೆಂದು ಒಂದು ಪಟ್ಟಿ ಕೊಟ್ಟರೆ ಯೋಚನೆ ಮಾಡುತ್ತೇನೆ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಈ ಖರ್ಚು ಮಾಡಿರತಕ್ಕದ್ದು, ಒಬ್ಬೊಬ್ಬ ಅತಿಥಿಗಳೂ ಬಂದಂಥ ಕಾಲದಲ್ಲಿ ಒಂದೊಂದು ರೀತಿ ಖರ್ಚಾಗಿದೆ. ಇದಕ್ಕೆ ಕಾರಣವೇನು ?

ಶ್ರೀ ಕೆ. ಹನುಮಂತಯ್ಯ.—ಕೆಲವು ಸಲ ಹೆಚ್ಚು ಮಂದಿಯನ್ನು ಆಹ್ವಾನಿಸಿದ್ದೆವು. ಕೆಲವು ಸಲ ಕಡಿಮೆ ಮಂದಿಯನ್ನು ಆಹ್ವಾನಿಸಿದ್ದೇವೆ. ಅದಕ್ಕೆ ಆ ರೀತಿ ಆಗಿದೆ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಈ ಸಮಾರಂಭಗಳಲ್ಲಿ ತಿಂಡಿತೀರ್ಥದ ಏರ್ಪಾಡು ಮಾಡುವವರು ಯಾರು ? ಸರ್ಕಾರದವರೇ ನೇರವಾಗಿ ಆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಕೆ. ಹನುಮಂತಯ್ಯ.—ಯಾವರೀತಿ ಮಾಡುತ್ತಾರೋ ಗೊತ್ತಿಲ್ಲ, ಬಹುಶಃ ರೆಸಿಡೆನ್ಸಿಯಲ್ಲಿರತಕ್ಕ ಸಿಬ್ಬಂದಿಯವರೇ ಆ ಏರ್ಪಾಡು ಮಾಡುತ್ತಿದ್ದಾರೆ ಎಂದು ಕಾಣುತ್ತದೆ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ರೆಸಿಡೆನ್ಸಿಯಲ್ಲಿರತಕ್ಕ ಸಿಬ್ಬಂದಿಯವರು ಮಾಡತಕ್ಕದ್ದು ಅಷ್ಟು ಸಮರ್ಪಕವಾಗಿಲ್ಲ ಎಂಬ ಅಭಿಪ್ರಾಯ ಇದೆ. ಅದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಕೆ. ಹನುಮಂತಯ್ಯ.—ಈ ದಿವಸ ಅದನ್ನು ತಾವು ಹೇಳಿದ್ದೀರಿ.

Schemes for supply of Power to Kanakapura Taluk.

Q.—2. Sri S. KARIAPPA (Virupakshapura).—

Will the Government be pleased to state :—

(*a*) the names of schemes for supply of power for irrigation pumps in Kanakapura Taluk, both sanctioned and those that are for sanction ;

(*b*) in the case of the schemes that have been sanctioned, the names of those that have been implemented ;

(*c*) the progrees that has been made in execution of the schemes that have been sanctioned ;

(*d*) the steps that have been taken to implement the schemes sanctioned and awaiting further action ?

A.—Sri H. M. CHANNABASAPPA (Minister for Industries).—

(*a*).—

SANCTIONED SCHEMES.

1. 23 I.P. sets around Kodihalli Village.
2. 19 I.P. sets at Hosadurga.
3. 30 I.P. sets at Hukkunda and Settikeredoddi.

ESTIMATES TO BE SANCTIONED.

1. 26 I.P. sets around Maralavadi Village.

(*b*) Power supply to 23 I.P. sets at Kodihalli is under progress.

(*c*) Poles have been erected.

(*d*) The scheme pertaining to Hosadurga has to be taken up after that of Kodihalli is completed. The applicants have also to send completion reports. In the case of Hukkunda and Settikeredoddi, the required number of applicants have not executed agreements. Notices have been issued to those concerned.

ಶ್ರೀ ಎಸ್. ಕರಿಯಪ್ಪ.—ಈ ಮರಳವಾಡಿ ಗ್ರಾಮದ ಸುತ್ತಮುತ್ತಲ ಸ್ಥಳಗಳಿಗೆ 26 ಐ.ಪಿ. ಸೆಟ್ಟುಗಳನ್ನು ಒದಗಿಸಿದ್ದೀರಿ. ಇವಕ್ಕೆಲ್ಲಾ ದುಡ್ಡು ಕೊಟ್ಟಿದ್ದೀರಾ ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ದುಡ್ಡು ಕೊಟ್ಟಿರತಕ್ಕ ವಿಷಯ ಈಗ ನನ್ನ ಮುಂದೆ ಇಲ್ಲ.

ಶ್ರೀ ಎಸ್. ಕರಿಯಪ್ಪ.—ಹಾಗಾದರೆ ಇದು ಈಗ ಯಾವ ಹಂತದಲ್ಲಿ ಇದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಎಸ್ಟಿಮೇಟ್ ಫೈನಲೈಸ್ ಮಾಡಿ, ತಕ್ಷಣದಲ್ಲೇ ಮಂಜೂರಾತಿಯ ಬಗ್ಗೆ ಕಳುಹಿಸತಕ್ಕ ಸ್ಟೇಜ್‌ನಲ್ಲಿ ಇದೆ.

ಶ್ರೀ ಎಸ್. ಕರಿಯಪ್ಪ.—ಹಾಗಾದರೆ ಅತ್ಯಲ್ಪ ಕಾಲದಲ್ಲೇ ಮಂಜೂರಾಗುತ್ತದೆ ಎಂದು ನಿರೀಕ್ಷೆ ಮಾಡಬಹುದೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ಬಂದ ಕೂಡಲೇ ಒಂದು ಸಾವಿರ ರೂಪಾಯಿಗೆ ಒಳಪಟ್ಟು ಬರುವುದಾದರೆ ಮಂಜೂರು ಮಾಡಿಕೊಡಲಾಗುತ್ತದೆ.

Educational Reforms *re* Secondary and Primary Education.

Q.—175. Sri B. P. NAGARAJA MURTHY (Malavalli).—

Will the Government be pleased to state :—

(*a*) how far the Educational Reforms pertaining to secondary

---

*Asterisk indicates that the remarks or speeches have not been revised by the Member concerned.

education and primary education have been implemented in the State ;

(*b*) during implementation how many new schools have been started in the State ?

A.—Sri A. G. RAMACHANDRA RAO (Minister for Law and Education).—

(*a*) A note furnishing information about the implementation of the recommendations is placed on the table. (Copy placed in Legislature Library. *Vide* No. 12—L.A., dated 26th March 1956.)

(*b*) The following number of schools were started in the year 1955-56.—

1	Primary Schools ...	233
2	New Type Middle Schools	31
3	Middle Schools ...	18
4	High Schools (5 Government + Aided 1 + District Board 1)	7
5	High Schools for which permission has been granted	6
6	Teacher's Training Institutions	2
7	Basic Training College ...	1
8	Basic Primary Schools ...	160

Q.—597. Srimathi LAKSHMIDEVI RAMANNA (Hoskote—Anekal).—

Will the Government be pleased to state :—

(*a*) the reforms that have already been brought into force according to the recommendations of the Educational Reforms Committee of the State ;

(*b*) whether arrangements have been made to open the fifth class in all primary schools so as to enable the students promoted from the primary fourth class to join the fifth class ?

A.—Sri A. G. RAMACHANDRA RAO (Minister for Law and Education).—

(*a*) A note furnishing information about the implementation of the recommendations is placed on the Table. (Copy placed in Legislature Library. *Vide* No. 12—L.A., dated 26th March 1956.)

(*b*) Thirty-one Primary Schools were upgraded into New Type Middle Schools during the School year 1955-56 and the 1st year Middle School class (or the V year Primary Class under the new pattern) was opened in these schools.

Orders sanctioning the up-grading of 30 more Primary Schools into New Type Middle Schools with effect from 1st March 1956 have also been issued. The next higher class will be opened in these latter Schools also.

The sanction of a scheme to give an additional 5th Class to 4-year Schools in 600 Villages is under active consideration.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಈ 8 ವರ್ಷದ ಪ್ರಾಥಮಿಕ ವಿದ್ಯಾಭ್ಯಾಸವನ್ನು ಕಡ್ಡಾಯ ಮಾಡಬೇಕೆಂದು ಮಾಡಿದ್ದೀರಿ. ಅದನ್ನು ಯಾವಾಗ ಪೂರ್ತಿಯಾಗಿ ಕಾರ್ಯಗತ ಮಾಡುತ್ತೀರಿ?

*ಶ್ರೀ ಎ. ಜಿ. ರಾಮಚಂದ್ರರಾವ್.—ಯಾವಾಗ ಎಂದು ಹೇಳುವುದು ಕಷ್ಟ. ಸಾಧ್ಯವಾದಮಟ್ಟಿಗೆ ಹೆಚ್ಚಿಸಿಕೊಂಡು ಹೋಗುತ್ತಾ ಇದ್ದೇವೆ.

ಶ್ರೀಮತಿ ಲಕ್ಷ್ಮೀದೇವಿರಾಮಣ್ಣ.—1955-56ನೇ ಸಾಲಿನಲ್ಲಿ 31 ಪ್ರೈಮರಿ ಸ್ಕೂಲುಗಳನ್ನು ಮಾತ್ರ ಹೊಸ ಮಾದರಿ ಮಿಡ್ಲ್ ಸ್ಕೂಲುಗಳನ್ನಾಗಿ ಪರಿವರ್ತಿಸಿ ಅಲ್ಲಿ 5ನೇ ತರಗತಿಯನ್ನು ತೆಗೆದಿದ್ದೀರಿ. ಈ ಸ್ಕೇಲಿನಲ್ಲಿ ತೆಗೆಯುತ್ತಾ ಹೋದರೆ ದೇಶಾದ್ಯಂತ 5ನೇ ತರಗತಿಯನ್ನು ತೆಗೆಯುವುದಕ್ಕೆ ಇನ್ನೂ ಎಷ್ಟು ವರ್ಷ ಬೇಕಾದೀತು?

ಶ್ರೀ ಎ. ಜಿ. ರಾಮಚಂದ್ರರಾವ್.—ಪ್ರಾಥಮಿಕ ಪಾಠಶಾಲೆಗಳು 10 ಸಾವಿರ ಇವೆ. ಅಷ್ಟಕ್ಕೂ ತೆಗೆಯಬೇಕಾದ ಕಾರಣ ಇಲ್ಲ. ಎಲ್ಲೆಲ್ಲಿ ಹುಡುಗರ ಸಂಖ್ಯೆ ಜಾಸ್ತಿ ಇದೆಯೋ ಅಲ್ಲಿ ತೆಗೆಯ ಬೇಕಾಗುತ್ತದೆ. ಅದಕ್ಕೆ ಏರ್ಪಾಡು ಮಾಡುತ್ತೇವೆ.

ಶ್ರೀಮತಿ ಲಕ್ಷ್ಮೀದೇವಿರಾಮಣ್ಣ.—1956ನೇ ಸಾಲಿಗೆ ಮಾರ್ಚಿ ಒಂದನೇ ತಾರೀಖಿನಿಂದ ತರಗತಿಯನ್ನು ತೆರೆಯಬೇಕೆಂದು ಆಜ್ಞೆಮಾಡಿದೆ ಎಂದು ಹೇಳಿದ್ದೀರಿ. ಸರ್ವೋದಯದ ದಿನವೇ ಅವನ್ನು ಸಹ ತೆರೆಯಲಿಕ್ಕೆ ಏಕೆ ಆಗಲಿಲ್ಲ?

ಶ್ರೀ ಎ. ಜಿ. ರಾಮಚಂದ್ರರಾವ್.—Financial difficulties ಇದ್ದುವು. ಮಾರ್ಚಿ ಒಂದನೇ ತಾರೀಖು ತೆರೆದರೆ, ಏಪ್ರಿಲ್ ಒಂದನೇ ತಾರೀಖಿನಿಂದ ಸಂಬಳ ಕೊಡಬಹುದು. ಅದಕ್ಕಿಂತ ಮುಂಚೆಯಾದರೆ ಸಂಬಳ ಕೊಡುವುದಕ್ಕೆ ಕಷ್ಟವಾಗುತ್ತಿತ್ತು.

ಶ್ರೀಮತಿ ಲಕ್ಷ್ಮೀದೇವಿರಾಮಣ್ಣ.—ಈ ರೀತಿ ತಾವು ಸ್ಕೂಲು ಪ್ರಾರಂಭವಾದಮೇಲೆ ಹೊಸ ತರಗತಿಗಳನ್ನು ತೆಗೆಯುವುದರಿಂದ ಆ ತರಗತಿಗಳಿಗೆ ಹುಡುಗರು ಸಾಕಷ್ಟು ಜನ ಸೇರುವುದಕ್ಕೆ ಅವಕಾಶವಾಗದೇ ಹೋಗಬಹುದಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು, ಫೈನಾನ್ಸ್-ಡಿಪಾರ್ಟ್‌ಮೆಂಟಿನವರನ್ನು ಕನ್ಸಲ್ಟ್ ಮಾಡಿ ಮಾಡಬೇಕಾಯಿತು. ಈ 31 ಸ್ಕೂಲುಗಳಿಗೆ ಸ್ವಲ್ಪ ತೊಂದರೆ ಆಗಿರಬಹುದು.

ಶ್ರೀಮತಿ ಲಕ್ಷ್ಮೀದೇವಿರಾಮಣ್ಣ.—600 ಗ್ರಾಮಗಳಲ್ಲಿ ಐದನೇ ವರ್ಷದ ವ್ಯಾಸಂಗ ತರಗತಿಯನ್ನು ಏರ್ಪಡಿಸುವ ವಿಚಾರವು ಪರ್ಯಾಲೋಚನೆಯಲ್ಲಿದೆ ಎಂದು ಹೇಳಿದ್ದೀರಿ. ಈ ವರ್ಷವೇ ಮಾಡುತ್ತೀರಾ ಅಥವಾ ವರ್ಷಾನುಗಟ್ಟಲೆ ಬೇಕಾಗುತ್ತದೆಯೋ?

ಶ್ರೀ ಎ. ಜಿ. ರಾಮಚಂದ್ರರಾವ್.—ಆದಷ್ಟು ಜಾಗ್ರತೆ ಮಾಡುತ್ತೇವೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈ ಸ್ಕೀಮಿನಲ್ಲಿ ಮುನಿಸಿಪಲ್ ಹೈಸ್ಕೂಲುಗಳನ್ನು ಸರ್ಕಾರಿ ಹೈಸ್ಕೂಲುಗಳನ್ನಾಗಿ ಪರಿವರ್ತನೆ ಮಾಡಲಿಕ್ಕೆ ಅವಕಾಶವಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಈ ಪ್ರಶ್ನೆ ಹೈಸ್ಕೂಲುಗಳಿಗೆ ಸಂಬಂಧ ಪಡುವುದಿಲ್ಲ. ತಾವು ನಿರ್ದಿಷ್ಟವಾದ ಪ್ರಶ್ನೆ ಹಾಕಿದರೆ ಉತ್ತರ ಹೇಳುತ್ತೇನೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ರಾಮನಗರಂ ಹೈಸ್ಕೂಲನ್ನು ಸರ್ಕಾರಿ ಹೈಸ್ಕೂಲನ್ನಾಗಿ ಪರಿವರ್ತನೆ ಮಾಡಬೇಕೆಂದು ಮನವಿ ಬಂದಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಂದಿದೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—55-56ನೇ ಸಾಲಿನಲ್ಲಿ 7 ಹೈಸ್ಕೂಲುಗಳನ್ನು ಪ್ರಾರಂಭಿಸಲಾಗಿದೆ ಎಂದು ಹೇಳಿದ್ದೀರಿ. ಅವು ಯಾವ ಯಾವುವು ಎಂಬುದನ್ನು ಹೇಳುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೇಳುವುದಕ್ಕೆ ಆಗುತ್ತದೆ, ಸ್ವಲ್ಪ ಕಾಲಾವಕಾಶ ಕೊಟ್ಟರೆ ಹೇಳುತ್ತೇನೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಶಿವನಸಮುದ್ರದಲ್ಲಿ ಕೂಡಲೇ ಒಂದು ಸರ್ಕಾರಿ ಹೈಸ್ಕೂಲನ್ನು ಪ್ರಾರಂಭ ಮಾಡಬೇಕೆನ್ನುವುದನ್ನು ಪರ್ಯಾಲೋಚನೆ ಮಾಡುತ್ತೇವೆ ಎಂದು ತಾವು ಹಿಂದೆ ಉತ್ತರ ಕೊಟ್ಟಿರಲಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಉತ್ತರ ಕೊಟ್ಟದ್ದು ನಿಜ. ನನ್ನ ಅಭಿಪ್ರಾಯದಲ್ಲಿ ಅಲ್ಲಿ ಇದೆ ಎಂದು ತಿಳಿದುಕೊಂಡಿದ್ದೇನೆ. ಇಲ್ಲದೇ ಇದ್ದರೆ ವಿಚಾರಿಸುತ್ತೇನೆ.

Nursery School at Hosadurga Town (Donation by Sri H. N. Siddappa).

Q.—476. Sri G. BASAPPA (Hosadurga).—

Will the Government be pleased to state :—

(*a*) whether one Sri H. N. Siddappa of Hosadurga has promised to donate a sum of Rs. 5,000 for the construction of a Nursery School at Hosadurga Town;

(*b*) whether the municipality has agreed to give its quota towards the maintenance ;

(*c*) since how long they are asking for a teacher to start the school and how many D.O. letters have been written to the District Educational Officer and to the Chairman, Social Welfare Board ;

(*d*) the reason for the delay in sending a teacher ?

A.—Sri A. G. RAMACHANDRA RAO (Minister for Law and Education).—

(*a*) Yes.

(*b*) No.

(*c*) From 3rd October 1955 and only one.

(*d*) Non-availability of trained teachers.

ಶ್ರೀ ಜಿ. ಬಸಪ್ಪ.—ಪ್ಲಾನಿಂಗ್ ಕಮಿಷನ್ನಿನವರು ಪ್ರೈಮರಿ ವಿದ್ಯಾಭ್ಯಾಸಕ್ಕೆ ಆದಷ್ಟು ಗಮನ ಕೊಡಬೇಕೆಂದು ಶಿಫಾರಸು ಮಾಡಿದ್ದಾರೆಯೇ ?

*ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು.

ಶ್ರೀ ಜಿ. ಬಸಪ್ಪ.—ನಮ್ಮಲ್ಲಿ trained teachers ಗಳ ಕೊರತೆಯಿದೆಯೆಂದು ಹೇಳಿದ್ದೀರಿ. ಹಾಗಾದರೆ ಟ್ರೈನಿಂಗ್ ಕೊಡುವುದಕ್ಕೇನಾದರೂ ಏರ್ಪಾಡು ಮಾಡಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ವ್ಯವಸ್ಥೆ ಮಾಡಿತ್ತು. ಆದರೆ ಅದಕ್ಕೆ ಸಾಕಾಷ್ಟು ವಿದ್ಯಾರ್ಥಿಗಳು ಇಲ್ಲದೆ ಹೋದದ್ದರಿಂದ ನಿಂತು ಹೋಯಿತು.

ಶ್ರೀ ಜಿ. ಬಸಪ್ಪ.—ಈಗ ಟ್ರೈನಿಂಗ್ ಆಗಿರುವವರು ಕೆಲವರಿದ್ದಾರೆ ; ಅವರು ಗ್ರಾಮಾಂತರ ಪ್ರದೇಶಗಳಿಗೆ ಹೋಗುವುದಿಲ್ಲ. ಗ್ರಾಮಾಂತರ ಪ್ರದೇಶಕ್ಕೆ ಹೋಗಲು ಸಿದ್ಧವಾಗಿರುವವರಿಗೆ ಟ್ರೈನಿಂಗ್ ಆಗಿಲ್ಲ. ಈ ಸಮಸ್ಯೆಯನ್ನು ಪರಿಹಾರ ಮಾಡಲು ಏನು ಕಾರ್ಯಕ್ರಮ ಕೈಕೊಳ್ಳುತ್ತೀರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆರು ತಿಂಗಳಿನಿಂದ ಯಾರೂ ಸಿಕ್ಕಲಿಲ್ಲ.

ಶ್ರೀ ಜಿ. ಬಸಪ್ಪ.—ಯಾರೂ ಸಿಕ್ಕಲಿಲ್ಲವೆಂದಮೇಲೆ ಈ ವಿಷಯದಲ್ಲಿ ಉತ್ಸಾಹವುಳ್ಳವರಾಗಿರುವವರನ್ನು ನೇಮಿಸಿಕೊಳ್ಳಬಹುದೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಟ್ರೈನಿಂಗ್ ಆಗಿರುವವರನ್ನು ತೆಗೆದುಕೊಂಡರೆ ಅಭ್ಯಂತರವಿಲ್ಲ. ಟ್ರೈನಿಂಗ್ ಆಗದಿರುವವರು ಬಂದರೆ ಯೋಚನೆಮಾಡಬೇಕಾಗುತ್ತದೆ.

Vocational Institute at Kolar.

Q.—516. Sri J. NARAYANAPPA (Chintamani—Scheduled Castes).—

Will the Government be pleased to state :—

(*a*) whether it is a fact that a Vocational Institution has been opened at Kolar for training teachers ;

(*b*) whether it is a fact that the said Institution has been transferred to Garudapalya ;

(*c*) if so, whether dwelling quarters are built for the teachers, students and their families ?

A.—Sri A. G. RAMACHANDRA RAO (Minister for Law and Education).—

(*a*) No.

(*b*) Does not arise in view of answer to (*a*).

(*c*) Does not arise in view of answer to (*a*).

ಶ್ರೀ ಜೆ. ನಾರಾಯಣಪ್ಪ.—(*a*) ಪ್ರಶ್ನೆಗೆ ಉತ್ತರವಾಗಿ ವೃತ್ತಿಶಿಕ್ಷಣ ಶಾಲೆಗಳಿಲ್ಲವೆಂದು ಉತ್ತರಕೊಡಲಾಗಿದೆ. ಈಗ ಒಂದು ವರ್ಷದಿಂದ ಉಪಾಧ್ಯಾಯರುಗಳ ಶಿಕ್ಷಣವೆಂದು ನಡೆಯುತ್ತಿದೆಯಲ್ಲ ಅದು ಯಾವುದು ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದು Vocational Institute ಅಲ್ಲ. ಇದು ಉಪಾಧ್ಯಾಯರುಗಳ ಟ್ರೈನಿಂಗ್ ಇನ್ಸ್ಟಿಟ್ಯೂಟ್ ಆಗಿದೆ.

ಶ್ರೀ ಜೆ. ನಾರಾಯಣಪ್ಪ.—ಹೋದವರ್ಷ 32 ಜನರನ್ನು ತೆಗೆದುಕೊಂಡರು, ಈ ವರ್ಷ 30 ಜನರನ್ನು ತೆಗೆದುಕೊಂಡರು ; ಅದನ್ನು ಗರುಡಪಾಳಯಕ್ಕೆ ವರ್ಗಾಯಿಸಿದರೆಂದು ನಾನು ಕೇಳಿದೆ ಇಷ್ಟೆಲ್ಲಾ ಆಗಿದ್ದರೂ ಇಲ್ಲಿ ನನ್ನ ಪ್ರಶ್ನೆಗೆ ಉತ್ತರವಾಗಿ, 'ನನ್ನ ಪ್ರಶ್ನೆಗೆ ಅವಕಾಶವೇ ಇಲ್ಲವೆಂದು' ಹೇಳಿದ್ದೀರಲ್ಲಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಉಪಾಧ್ಯಾಯರುಗಳ ಟ್ರೈನಿಂಗ್ ಸ್ಕೂಲು ಎಂದು ಹೇಳಿದ್ದರೆ ಒಪ್ಪುತ್ತಿದ್ದೆ.

ಶ್ರೀ ಜೆ. ನಾರಾಯಣಪ್ಪ.—ಇದನ್ನೀಗ ಚಿಂತಾಮಣಿ ತಾಲ್ಲೂಕಿನ ಅಣತಿಗೆ ವರ್ಗಾಯಿಸಿ ಕೊಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನು ಯೋಚನೆ ಮಾಡುತ್ತೇವೆ.

Pahani Accounts, Sorab, Shikarpur and Sagar Taluks (Complaints by Raiyats)

Q.—620. Sri MALLIKARJUNAPPA GOWDA (Sorab-Shikarpur).—

Will the Government be pleased to state :—

(*a*) whether it has come to their notice that the landlords in Sorab, Shikarpur and Sagar taluks, are getting their names written in Pahani Accounts to indicate that their lands were being cultivated by them alone and thus depriving the tenants of those lands they were cultivating, after the Mysore Tenancy Act was brought into force throughout the State ;

(*b*) the relief afforded to those poor raiyats ;

(*c*) the action taken by them against those shanbhogues and patels who have not written true facts ?

A.—Sri A. G. RAMACHANDRA RAO (Minister for Law and Education).—

(*a*) Complaints were received from certain ryots that correct facts were not being entered in the pahanis in the Taluks of Sorab, Shikarpur and Sagar. The enquiry of some complaints is over, while other complaints are still under enquiry. In the cases in which enquiry has been completed, it is found that except in one case the complaints were baseless. In the one case in which there were grounds for complaint, the concerned village officer has been warned.

(*b*) the question is not clear.

(*c*) Please see answer to (*a*).

ಶ್ರೀ ಮಲ್ಲಿಕಾರ್ಜುನಪ್ಪಗೌಡ.—(*a*) ಪ್ರಶ್ನೆಗೆ ಉತ್ತರವಾಗಿ 'It is found that except in one case the complaints were baseless' ಎಂದು ಹೇಳಿದ್ದೀರಿ. ಆ ಒಂದು ಸಂದರ್ಭ ಯಾವುದೆಂದು ಹೇಳುತ್ತೀರಾ ?

* ಶ್ರೀ ಎ. ಜಿ. ರಾಮಚಂದ್ರರಾವ್.—File ನೋಡಿ ಹೇಳುತ್ತೇನೆ.

ಶ್ರೀ ಮಲ್ಲಿಕಾರ್ಜುನಪ್ಪಗೌಡ.—ಆಫೀಸರಿಗೆ ಎಚ್ಚರಿಕೆ ಕೊಡಲಾಗಿದೆಯೆಂದು ಹೇಳಿದ್ದೀರಿ. ಏನು ಎಚ್ಚರಿಕೆ ಕೊಟ್ಟಿದ್ದೀರಿ ?

ಶ್ರೀ ಎ. ಜಿ ರಾಮಚಂದ್ರರಾವ್.—ಈ ರೀತಿ ಅಕ್ರಮಗಳನ್ನು ಮಾಡಕೂಡದೆಂದು ಎಚ್ಚರಿಕೆ ಕೊಟ್ಟಿದೆ.

ಶ್ರೀ ಮಲ್ಲಿಕಾರ್ಜುನಪ್ಪಗೌಡ.—ಪಹಣಿಯನ್ನು ಇಂಥ ಕಾಲದಲ್ಲಿಯೇ ಬರೆಯಬೇಕೆಂದು ನಿಬಂಧನೆಯಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆಯಾ ವರ್ಷದ ಪಹಣಿಯನ್ನು ಆಯಾ ವರ್ಷವೇ ಬರೆಯಬೇಕು.

ಶ್ರೀ ಮಲ್ಲಿಕಾರ್ಜುನಪ್ಪಗೌಡ.—ಈಗ ಪಹಣಿಯನ್ನು ಬರೆಯುವ ರೀತಿ ಸರಿಯಾಗಿಲ್ಲವೆಂದು ಗೊತ್ತಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ಮಲ್ಲಿಕಾರ್ಜುನಪ್ಪಗೌಡ.—ಪಹಣಿಯನ್ನು ಬರೆಯುವ ಫಾರಮ್ಮುಗಳು ಸರಿಯಾಗಿ supply ಆಗುತ್ತಿಲ್ಲನೆಂಬುದು ಗೊತ್ತಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—Prescribed formಅನ್ನೇ ಮುಂದುವರಿಸಿದ್ದೇವೆ.

ಶ್ರೀ ಮಲ್ಲಿಕಾರ್ಜುನಪ್ಪಗೌಡ.—ಪಹಣಿಯನ್ನು ಬರೆಯಬೇಕಾದರೆ ಜಮಾಬಂದಿಯಾದನಂತರ ಜಗಲಿಯ ಕಟ್ಟೆಯಮೇಲೆ ಕುಳಿತು ಬರೆಯುತ್ತಾರೆ ಎಂಬುದು ಗೊತ್ತಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಗೊತ್ತಿಲ್ಲ.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ನೀವು ಮಾಡಿದ enquiryಯಲ್ಲಿ ತಪ್ಪು ಪಹಣಿ ಬರೆದಿದ್ದಕ್ಕೆ ಕಾರಣವನ್ನು ಕೊಟ್ಟಿದ್ದಾರೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಜಾಗರೂಕತೆಯಿಂದ ಬರೆದರೆಂದು ಹೇಳಿದ್ದಾರೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಯಾವ ಉದ್ದೇಶದಿಂದ ಬರೆದರೆಂದು ಗೊತ್ತಾಯಿತೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಯಾವ ಉದ್ದೇಶವೂ ಇದೆಯೆಂದು ಕಾಣಬರಲಿಲ್ಲ. ಅಜಾಗರೂಕತೆಯಿಂದ ಮಾಡಿದ್ದೆಂದು ತಿಳಿದು ಎಚ್ಚರಿಕೆ ಕೊಡಲಾಗಿದೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಜಮಾಬಂದಿ ಆಫೀಸರು ಹೆಚ್ಚು ಶ್ರದ್ಧೆ ತೆಗೆದುಕೊಳ್ಳಬೇಕೆಂದು Instructions ಕೊಡುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—Instructions ಇವೆ. ಪುನಃ ಕೊಡಬೇಕಾದ ಅವಶ್ಯಕತೆಯಿಲ್ಲ.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಜಗಲಿಯ ಮೇಲೆ ಬರೆಯುತ್ತಾರೆ. ಸುಮ್ಮನೆ ರುಜು ಹಾಕಿಸಿಕೊಂಡು ಆಮೇಲೆ ಸೇರಿಸಿ ಬರೆಯುತ್ತಾರೆ ಎಂದು ಹೇಳಿದ್ದೀರಲ್ಲಾ. ಆ ರೀತಿ ಆಗಕೂಡದೆಂದು ತಿಳಿಸುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಅವಶ್ಯಕತೆಯಿದ್ದರೆ, ಮಾಡೋಣ.

ಶ್ರೀ ಜಿ. ಬಸಪ್ಪ.—ಶ್ಯಾನುಭೋಗರುಗಳು ಆಯಾ ಫಿರ್ಕಾದಲ್ಲೇ ವಾಸವಾಗಿಲ್ಲದೆ ಬೇರೆಕಡೆಯಿದ್ದು ಬರೆಯಿಸುವುದರಿಂದ ಹೀಗಾಗುತ್ತಿದೆಯೆಂಬುದು ಗೊತ್ತಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ಜಿ. ಬಸಪ್ಪ.—ಆ ಫಿರ್ಕಾದಲ್ಲಲ್ಲದೆ ಬೇರೆ ಗ್ರಾಮದಲ್ಲಿ ವಾಸವಾಗಿದ್ದರೆ ಏನು ಮಾಡುತ್ತೀರಿ?

ಶ್ರೀ ಎ. ಜಿ. ರಾಮಚಂದ್ರರಾವ್.—ರೂಲ್ಸ್‌ನಲ್ಲಿ ಅದಕ್ಕೆ ಅವಕಾಶವಿದೆ.

Samskruthi Prachara in Tumkur District.

Q.—492. Sri T. N. MUDALAGIRI GOWDA (Kunigal).—

Will the Government be pleased to state:—

(*a*) the expenditure in Tumkur District towards samskruti prachara and arrangements connected with music and gamaka from 1st April 1955 up to 31st January 1956 (information to be given talukwar);

(*b*) the expenditure incurred for arrangements connected with each item, *i.e.*, samskruthi prachara, music and gamaka; and

(*c*) the amount of money given to each person?

A.—Sri A. G. RAMACHANDRA RAO (Minister for Law and Education).—

(*a*)—

	Taluk		*Expenditure* Rs.	a.	p.
1	Tumkur	...	3,544	5	0
2	Gubbi	...	3,085	8	0
3	Kunigal	...	2,463	0	0
4	Tiptur	...	2,786	13	0
5	Turuvekere	...	1,633	1	0
6	Chiknaikanahalli.		1,964	8	0
7	Madhugiri	...	2,956	0	0
8	Pavagada	...	2,550	0	0
9	Sira	...	2,332	13	0
10	Koratagere	...	2,425	15	0
	Total	...	25,741	15	0

(*b*) and (*c*)—

		Rs.
Lectures	...	20 per lecture.
Gamakas	...	15 per recital.
Music	...	150 per performance.
Harikatha or Keerthana.		75 per performance.
Incidental expenses.		25 per programme in places other than District Headquarters, Rs. 40 per programme in District Headquarters.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಉಪನ್ಯಾಸವೊಂದಕ್ಕೆ 20 ರೂಪಾಯಿಗಳೆಂದು ಗೊತ್ತು ಮಾಡಿದ್ದೀರಲ್ಲಾ, ಇದು ಅಸೆಂಬ್ಲಿ ಮೆಂಬರುಗಳಿಗೆ ಕೊಡುವುದಕ್ಕಿಂತ ಜಾಸ್ತಿಯಲ್ಲವೇ?

* ಶ್ರೀ ಎ. ಜಿ. ರಾಮಚಂದ್ರರಾವ್.—ಅಸೆಂಬ್ಲಿ ಮೆಂಬರುಗಳು ಇವಕ್ಕೆ ಬರುವುದಿಲ್ಲವೆಂದು ಭಾವನೆ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಎಷ್ಟು ಘಂಟೆಗಳ ಕಾಲ ಅವರು ಕೆಲಸ ಮಾಡುತ್ತಾರೆ, ಅಸೆಂಬ್ಲಿ ಮೆಂಬರುಗಳು ಎಷ್ಟು ಘಂಟೆಗಳ ಕಾಲ ಕೆಲಸ ಮಾಡುತ್ತಾರೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಅವರನ್ನು ಅಸೆಂಬ್ಲಿ ಮೆಂಬರುಗಳಿಗೆ ಹೋಲಿಸುವುದು ಸೂಕ್ತವಾಗಿ ಕಾಣುವುದಿಲ್ಲ. ಕೆಲಸ ಮಾಡುವುದು ಒಂದೆರಡು ಘಂಟೆಯಾದರೂ ಹೋಗಿಬರುವುದಕ್ಕೆ ಹೆಚ್ಚು ಕಾಲವಾಗುತ್ತದೆ. ಅವರು ಸ್ಥಳಕ್ಕೆ ಹೋಗುವ ಕಾಲವನ್ನೂ ತೆಗೆದುಕೊಂಡರೆ ಜಾಸ್ತಿಯಾಗುತ್ತದೆ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಹೋಗಿಬರುವುದಕ್ಕೆ T.A. ಕೊಡುವುದಿಲ್ಲವೆ? ಬೆಂಗಳೂರಿನಿಂದ ಹರಿಹರಕ್ಕೆ ಹೋದರೆ, ಅದಕ್ಕೆ ಸರಿಯಾಗಿ ಟಿ. ಎ. ಕೊಡುವುದಿಲ್ಲವೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೊಡುತ್ತಾರೆ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಟಿ.ಎ. ಜೊತೆಗೆ ತಾನೆ ತಾವು ಡಿ.ಎ. ಕೊಡುವುದು?

ಶ್ರೀ ಎ. ಜಿ. ರಾಮಚಂದ್ರರಾವ್.—ವಿಚಾರಿಸಬೇಕು. ಬಹುಶಃ ಅದರ ಜೊತೆಗೆ ಕೊಡುತ್ತಾರೆ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಗಮಕಿಗಳಿಗೆ 15 ರೂಪಾಯಿಯೆಂದು ಹೇಳಿದ್ದೀರಿ ಗಮಕಿಗಳೆಂದರೆ, ಒಂದು functionನಲ್ಲಿ ಎಷ್ಟು ಜನ ಇರುತ್ತಾರೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಸಾಮಾನ್ಯವಾಗಿ ಒಬ್ಬರು ಇರುತ್ತಾರೆ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಅವರಿಗೂ ಟಿ. ಎ. ಮತ್ತು ಡಿ. ಎ. ಕೊಡುತ್ತಾರಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಹಾಗಾದರೆ ಒಬ್ಬ ವ್ಯಕ್ತಿಗೆ 100—150 ರೂಪಾಯಿ ಖರ್ಚಾಗುತ್ತದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಒಬ್ಬ ವ್ಯಕ್ತಿಗಲ್ಲ; ಒಂದು ಸಭೆಗೆ ಅಷ್ಟಾಗುತ್ತದೆ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಸಂಗೀತ ಕಚೇರಿಯೆಂದು ಹೇಳಿದಿರಲ್ಲಾ, ಒಂದು ಸಂಗೀತ ಕಚೇರಿಗೆ ಎಷ್ಟು ಜನರು ಹೋಗಬೇಕೆಂದು ಗೊತ್ತು ಮಾಡಿದ್ದೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಎಷ್ಟು ಜನರು ಹೋಗಬೇಕೆಂಬುದನ್ನು ಗೊತ್ತು ಮಾಡಿಲ್ಲ. ಎಷ್ಟು ಜನರು ಬೇಕಾದರೂ ಹೋಗಬಹುದು.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಒಂದು ಸಂಗೀತ ಪಾರ್ಟಿಯಲ್ಲಿ ಎಷ್ಟು ಜನರಿರುತ್ತಾರೆ?

ಶ್ರೀ ಎ. ಜಿ. ರಾಮಚಂದ್ರರಾವ್.—ತಬಲದವರು, ಪಿಟೀಲಿನವರು ಮತ್ತು ವೀಣೆಯವರು ಎಂದು ಮೂರು ನಾಲ್ಕು ಜನರಿರುತ್ತಾರೆ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಇವರಿಗೂ ಬ್ಬೊಬ್ಬರಿಗೂ 150 ರೂಪಾಯಿ ಕೊಡುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಒಟ್ಟು ಕಚೇರಿಗೆ ಅಷ್ಟು.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಸಂಗೀತ ಕಚೇರಿ ಎಂದರೆ ಇಂಥಿಂಥ ಸಂಗೀತಗಾರರೆಂದು ಮೊದಲೇ announce ಮಾಡಿರುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಮೊದಲೇ announce ಮಾಡಿರುತ್ತಾರೆ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಅವರು ಸ್ಥಳದ ಸಂಗೀತಗಾರರಿಗಿಂತ ಉತ್ತಮವಾದವರೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಸ್ಥಳದಲ್ಲಿ ಅವರಿಗಿಂತ ಉತ್ತಮವಾಗಿರುವವರು ಇರಬಹುದು.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಅಂಥವರಿದ್ದರೆ ಅವರನ್ನೂ ಉಪಯೋಗಿಸಿಕೊಳ್ಳುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಸ್ಥಳದಲ್ಲಿರುವವರು 15-20 ರೂಪಾಯಿಗಳಿಗೇ ಸಾಮಾನ್ಯವಾಗಿ ಬರುತ್ತಾರೆಂಬುದು ಗೊತ್ತಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಗೊತ್ತಿಲ್ಲ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಒಂದು ಸಂಗೀತ ಕಚೇರಿಗೆ ಸಾಮಾನ್ಯವಾಗಿ ಎಷ್ಟು ಜನರು attend ಮಾಡುತ್ತಾರೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೇಳುವುದಕ್ಕಾಗುವುದಿಲ್ಲ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಜನರು ಹೊಟ್ಟೆ ತುಂಬ ಊಟ ಮಾಡಿದಮೇಲೆ ಈ ಕಚೇರಿಗೆ attend ಮಾಡುತ್ತಾರೆಯೇ ಅಥವಾ ಹೊಟ್ಟೆಗಿಲ್ಲದೆ ಇದ್ದರೆ attend ಮಾಡುತ್ತಾರೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೊಟ್ಟೆಗಿದ್ದರೇ ಬರುವುದು.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಹಾಗಾದರೆ ಹೊಟ್ಟೆಗೆ ತುಂಬ ಮೊದಲು ಹಾಕಿದಮೇಲೆ ತಾನೆ ತಾವು ಈ ರೀತಿ ಸಂಗೀತವನ್ನು ಕೇಳುವುದಕ್ಕೆ ಏರ್ಪಾಡು ಮಾಡಬೇಕು?

ಶ್ರೀ ಎ. ಜಿ. ರಾಮಚಂದ್ರರಾವ್.—ಆಹಾರದ ಸಮಸ್ಯೆ ಈಗ ಬಗೆಹರಿದಿದೆ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ನಾವು ಮೊದಲು ಹೊಟ್ಟೆಗೆ, ಬಟ್ಟೆಗೆ, ವಾಸಕ್ಕೆ ಮನೆಗೆ ಪರಿಪೂರ್ಣತೆಯನ್ನುಂಟುಮಾಡಿದ ಮೇಲೆ ದೇಶವನ್ನು ಕಟ್ಟುತ್ತೇವೆ, ಅಭಿವೃದ್ಧಿಪಡಿಸುತ್ತಿದ್ದೇವೆ ಎಂದು ಹೇಳುತ್ತಿದ್ದೆವು. ಅದಕ್ಕಿಂತ ಮುಂಚೆ ಇದನ್ನು ಶುರು ಮಾಡಿದಿರಲ್ಲಾ, ಹಾಗಾದರೆ ಅದನ್ನು ಕೈಬಿಟ್ಟಿರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಸರ್ಕಾರದ ಅಭಿಪ್ರಾಯ ಅದಲ್ಲ. ಜನತೆಗೆ ಸಂಬಂಧಪಟ್ಟ ಎಲ್ಲ ಸಮಸ್ಯೆಗಳನ್ನೂ ನೋಡಿ ಪರಿಹಾರ ಮಾಡಬೇಕೆಂಬುದೇ ಆಗಿದೆ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಆಗಲೇ ದೇಶ ಪರಿಪೂರ್ಣತೆಯನ್ನು ಹೊಂದಿ, ಈಗ ಸಂಗೀತ ಕೇಳುವುದಕ್ಕೆ ಹೊರಟಿದೆಯೆಂದು ಹೇಳಬಹುದೇ?

ಅಧ್ಯಕ್ಷರು.—ಡಿಮ್ಯಾಂಡ್ಸ್ ಮೇಲೆ ಮಾತನಾಡುವಾಗ ಈ ವಿಷಯಗಳನ್ನೆತ್ತಬಹುದು.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಬಡ್ಜೆಟ್ಟಿನಲ್ಲಿ ಈ ವಿಚಾರ ಹೇಳುವುದಕ್ಕೆ ಅವಕಾಶವಿಲ್ಲದೇ ಇರುವುದರಿಂದ ಈಗ ಹೇಳುತ್ತಾ ಇದ್ದೇನೆ. ಸರ್ಕಾರದವರು ಸಂಗೀತ ಕಚೇರಿಗಳಿಗೂ, ಉಪನ್ಯಾಸಗಳಿಗೂ ಹಣವನ್ನು ಕೊಡುವುದರಿಂದ ದೇಶದ ಹಣ waste ಆಗುತ್ತದೆ ಅಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ. ಸದುಪಯೋಗ ವಾಗುತ್ತಿದೆ ಎಂದು ಸರಕಾರದ ಅಭಿಪ್ರಾಯ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ದೇಶಕ್ಕೆ ಇದರಿಂದ ತುಂಬ ಅನ್ಯಾಯವಾಗುತ್ತಿದೆ ಎಂದು ದೇಶವೆಲ್ಲಾ ಹೇಳುತ್ತಿದೆ ಅಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಅದನ್ನು ಒಪ್ಪಿಕೊಳ್ಳುವುದಿಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಇದು waste ಆದ್ದರಿಂದ ನಿಲ್ಲಿಸಬೇಕು ಎಂದು ನಾನು ಹೇಳುತ್ತೇನೆ. ಸಭೆಯವರು ಸಾಮಾನ್ಯವಾಗಿ ಇದನ್ನು ಒಪ್ಪುತ್ತಾರೆ. ಇದರಲ್ಲಿ ತಮ್ಮ ಅಭಿಪ್ರಾಯವೇನು?

ಶ್ರೀ ಎ. ಜಿ. ರಾಮಚಂದ್ರರಾವ್.—ಇದನ್ನು ಬಡ್ಜೆಟ್ಟಿನಲ್ಲಿ ಸೂಚಿಸಿದ್ದೇವೆ. ಇದನ್ನು ಮಾನ್ಯ ಸದಸ್ಯರ ಬೆಂಬಲದಿಂದ ಮಾಡಿರುವುದರಿಂದ, ಅವರು ಹೇಳುವುದು ಅಭಿಪ್ರಾಯದ ಮಾತು.

ಶ್ರೀ ಎ. ಭೀಮಪ್ಪನಾಯಕ್.—25 ಸಾವಿರ ರೂಪಾಯಿಗಳನ್ನು ತುಮಕೂರು ಜಿಲ್ಲೆ ಒಂದಕ್ಕೆ ಖರ್ಚು ಮಾಡಿದ್ದೀರಿ, ಇದರಿಂದ ಸಂಸ್ಕೃತಿಯ ಮಟ್ಟ, ಸಂಗೀತದ ಮಟ್ಟ, ಗಮಕದ ಮಟ್ಟ ಎಷ್ಟು ಹೆಚ್ಚಿದೆ ಎಂಬುದನ್ನು ಅಳತೆ ಕೋಲಿನಿಂದ ಅಳತೆ ಮಾಡಿದ್ದೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಸಾಮಾನ್ಯವಾಗಿ ಉತ್ತಮವಾಗುತ್ತಿದೆ. ಆದರೆ ಯಾವ ಅಳತೆ ಕೋಲೂ ಇದಕ್ಕೆ ಇಲ್ಲ.

ಶ್ರೀ ಎ. ಭೀಮಪ್ಪನಾಯಕ್.—ಜನರಲ್ಲಿ ಸುಳ್ಳು ಹೇಳುವುದು ಕಡಮೆಯಾಗಿದೆ, ಕಳ್ಳತನ ಮಾಡುವುದು ಕಡಿಮೆಯಾಗಿದೆ, ನಡೆನುಡಿಗಳಲ್ಲಿ ವ್ಯತ್ಯಾಸವಾಗಿದೆ ಎಂಬುದಕ್ಕೆ ವರದಿಯನ್ನು ತರಿಸಿದ್ದೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ಭಾಗದಲ್ಲಿ ವರದಿಯನ್ನು ತರಿಸುವುದು ಕಷ್ಟ. ಅದು ಅಳತೆ ಕೋಲಿನಲ್ಲಿ ಅಳೆಯುವುದಕ್ಕೆ ಸಿಕ್ಕುವುದಿಲ್ಲ. ಕಾಲಾನುಕ್ರಮದಲ್ಲಿ ಸರಿಹೋಗುತ್ತದೆ.

ಶ್ರೀ ಎ. ಭೀಮಪ್ಪನಾಯಕ್.—ಯಾರೇ ಹೇಳಿದರೂ ಬೇಡ ಎನ್ನುವ ಹಠದಿಂದ ಮುಂದುವರಿಸುತ್ತಿದ್ದೀರೋ ಇಲ್ಲವೇ ನಿಜವಾಗಿಯೂ ದೇಶದ ಹಿತವನ್ನು ಮನಸ್ಸಿನಲ್ಲಿಟ್ಟುಕೊಂಡು ಮುಂದುವರಿಸುತ್ತಿದ್ದೀರೋ?

ಶ್ರೀ ಎ. ಜಿ. ರಾಮಚಂದ್ರರಾವ್.—ಇದು ಹಠವಲ್ಲ, ದೃಢನಿಶ್ಚಯ ದಿಂದ ಒಳ್ಳೆಯದಾಗುತ್ತದೆ ಎನ್ನುವ ಭಾವನೆಯಿಂದ ಮಾಡುತ್ತಿದ್ದೇವೆ.

ಶ್ರೀ ಎ. ಭೀಮಪ್ಪನಾಯಕ್.—ಸಂಸ್ಕೃತಿ ಪ್ರಸಾರ ಮಾಡುವುದಕ್ಕೆ ಪಟ್ಟಿಯನ್ನು ಮಾಡಿದ್ದೀರಿ. ಆ ಪಟ್ಟಿಯಲ್ಲಿರುವ ಹೆಸರುಗಳನ್ನು ಕೊಡುತ್ತೀರಾ?

Mr. SPEAKER.—The list was submitted to the House last time itself.

ಶ್ರೀ ಎ. ಭೀಮಪ್ಪನಾಯಕ್.—ತಾವು ಸಂಸ್ಕೃತಿ ಪ್ರಸಾರಕ್ಕಾಗಿ ಇರುವವರನ್ನು test ಮಾಡಿ ನೇಮಕ ಮಾಡಿದ್ದೀರಾ ? ಯಾರು ಪರೀಕ್ಷೆ ಮಾಡಿದರು ?

ಶ್ರೀ ಎ. ಜಿ. ರಾಮಚಂದ್ರರಾವ್.—ಅವರನ್ನು Deputy Commissionerರವರ ವರದಿಯ ಮೇಲೆ ನೇಮಕ ಮಾಡಿದ್ದೇವೆ. ಅವರೆಲ್ಲರೂ ಈ ಸಭೆಯಲ್ಲಿ ರತಕ್ಕ ಮಾನ್ಯ ಸದಸ್ಯರಿಗೆಲ್ಲಾ ಗೊತ್ತಿರತಕ್ಕ ವ್ಯಕ್ತಿಗಳು. ಅವರ ವಿಷಯದಲ್ಲಿ ಯಾವ ಆಪಾದನೆಯೂ ಕಂಡುಬಂದಿಲ್ಲ.

ಶ್ರೀ ಎ. ಭೀಮಪ್ಪನಾಯಕ್.—ಪ್ರಶ್ನೆಗಳಿಗೆ ಉತ್ತರ ಎಂದು ಹೇಳುವ ಮಾತಲ್ಲ, ನಿಜವಾಗಿ ಪರೀಕ್ಷೆಗಳನ್ನು ಏನಾದರೂ ಮಾಡಿದ್ದೀರಾ ಎಂದು ನಾನು ಕೇಳಿದನೇ ಹೊರತು ಮತ್ತೆ ಬೇರೆ ಅಭಿಪ್ರಾಯದಿಂದಲ್ಲ. ಏನಾದರೂ ಅವರಿಗೆ ದಕ್ಷತೆ ಇದೆಯೇ ಎಂಬುದನ್ನು ಪರೀಕ್ಷೆಮಾಡಿ, ಯಾವುದಾದರೂ expert ಕಮಿಟಿ ಮಾಡಿ, ಅವರಿಗೆ ಉಪನ್ಯಾಸ ಮಾಡುವ ಶಕ್ತಿ ಇದೆಯೇ, ಶುದ್ಧವಾದ ಕನ್ನಡ ಶಬ್ದಗಳನ್ನು ಪ್ರಯೋಗಿಸುವ ಶಕ್ತಿ ಇದೆಯೇ ಎನ್ನುವುದನ್ನು ಪರೀಕ್ಷೆ ಮಾಡಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—Council of Cultural Education ಮತ್ತು ಸಭೆಯ ಸದಸ್ಯರ ಒಪ್ಪಿಗೆ ಈ ವಿಷಯಗಳನ್ನು ಗಮನಕ್ಕೆ ತೆಗೆದುಕೊಂಡು ಅವರನ್ನು ನೇಮಕಮಾಡಿರುವುದು.

ಶ್ರೀ ಎ. ಭೀಮಪ್ಪನಾಯಕ್.—ದೇಶದಲ್ಲಿ ಅನೇಕ ಸಮಸ್ಯೆಗಳು, ಅಂದರೆ, ಹೊಟ್ಟೆ ಮತ್ತು ಬಟ್ಟೆಗೆ ಸಂಬಂಧಪಟ್ಟ ಜರೂರು ಸಮಸ್ಯೆಗಳಿರುವಾಗ, ಇದಕ್ಕೆ preference ಕೊಡುವುದು ನ್ಯಾಯವೇ ಮತ್ತು ಧರ್ಮವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—Preference ಏನೂ ಇಲ್ಲ. ಇದಕ್ಕೆ ಆವಶ್ಯಕತೆ ಇದೆ ಎನ್ನುವ ಭಾವನೆಯಿಂದ ಅದರ ಜೊತೆಗೆ ಈ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಎ. ಭೀಮಪ್ಪನಾಯಕ್.—ಈ ವಿಚಾರದಲ್ಲಿ ಈ ಸಭೆಯ ಒಪ್ಪಿಗೆ ಇದೆಯೇ ಇಲ್ಲವೇ ಎನ್ನುವುದನ್ನು ಒಂದು ವಿಷಯವನ್ನಾಗಿ ಚರ್ಚೆಗೆ ಇಟ್ಟು ಪ್ರತಿಯೊಬ್ಬ ಸದಸ್ಯರಿಗೂ right of independent votingನ್ನು ಕೊಟ್ಟು ಇದನ್ನು ತೀರ್ಮಾನ ಮಾಡುತ್ತಾರೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮಾನ್ಯ ಸಭೆಯವರು ಆ ರೀತಿ ಆಗಬೇಕು ಎಂದರೆ, ಮಾಡಬೇಕಾಗುತ್ತದೆ.

ಶ್ರೀ ಬಿ. ಹುಚ್ಚೇಗೌಡ.—ತುಮಕೂರು ಡಿಸ್ಟ್ರಿಕ್ಟಿನಲ್ಲಿ ಸಂಗೀತ ಕಛೇರಿಗಳು ಎಷ್ಟು ನಡೆದುವು ?

ಶ್ರೀ ಎ. ಜಿ. ರಾಮಚಂದ್ರರಾವ್.—ಬೇಕಾದರೆ ಅಂಕಿ ಅಂಶಗಳನ್ನು ತರಿಸಿ ಹೇಳುತ್ತೇನೆ.

ಶ್ರೀ ಬಿ. ಹುಚ್ಚೇಗೌಡ.—ಇವರಿಗೆಲ್ಲಾ ಒಂದೇ uniform rateನ್ನು ಕೊಡುತ್ತೀರಾ ಅಥವಾ ಅವರವರ ಯೋಗ್ಯತೆ ಮೇಲೆ ಕೊಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸಾಮಾನ್ಯವಾಗಿ ಯೂನಿಫಾರಂ-ರೇಟ್ ಕೊಡುತ್ತೇವೆ. ಅದಕ್ಕೆ exception ಯಾವುದೂ ನನ್ನ ಗಮನಕ್ಕೆ ಬಂದಿಲ್ಲ.

Sri B. NARAYANASWAMY.—I wish the Chief Minister is present to answer.

Mr. SPEAKER.—Sri A. G. Ramachandra Rao is concerned with that portfolio.

Sri B. NARAYANASWAMY.—I think he will be in a better position to answer some of the questions.

Mr. SPEAKER.—The Hon'ble Member knows that Sri Ramachandra Rao is answering all the while and he is in charge of that portfolio.

ಶ್ರೀ ಬಿ. ಹುಚ್ಚೇಗೌಡ.—ಈಗ 10-12 ರೂಪಾಯಿಗಳಿಗೆ ಹರಿಕಥೆ ಮಾಡುತ್ತಾರೆ. ಆ ರೀತಿ ನಾವು ಮಾಡಿಸುತ್ತಿರುವಾಗ್ಗೆ ಈಗ 75 ರೂಪಾಯಿಗಳನ್ನು ಅವರಿಗೆ ಕೊಡುತ್ತೀರಿ. ಏನಾದರೂ standard rateನ್ನು fix ಮಾಡಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಎಲ್ಲೆಲ್ಲಿ ಆ ರೀತಿ ಮಾಡುತ್ತಿದ್ದಾರೋ ಅಂತಹ ಕಡೆ, we do not duplicate the effort.

ಶ್ರೀ ಬಿ. ಹುಚ್ಚೇಗೌಡ.—ಎಪ್ಪತ್ತೈದು ರೂಪಾಯಿಗಳನ್ನು ಕೊಡಬೇಕಾದರೆ ಯೋಗ್ಯತೆ ಎಷ್ಟು ಎಂಬುದನ್ನು ಪರೀಕ್ಷೆ ಮಾಡುವುದು ಹೇಗೆ ?

ಶ್ರೀ ಎ. ಜಿ. ರಾಮಚಂದ್ರರಾವ್. – ಅದನ್ನೆಲ್ಲಾ ಗಮನದಲ್ಲಿಟ್ಟುಕೊಂಡೇ ಅವರನ್ನು ಚುನಾಯಿಸುವುದು.

ಶ್ರೀ ಬಿ. ಹುಚ್ಚೇಗೌಡ.—ನೂರೈವತ್ತು ರೂಪಾಯಿಗಳನ್ನು ಕೊಟ್ಟು ಸಂಗೀತ ಮಾಡಿದರೆ, ದೊಡ್ಡ ಪಂಡಿತರು ಬಂದರೆ, ಕೇಳುವವರು ನಾಲ್ಕು-ಐದು ಜನ ಇರುವುದಿಲ್ಲ. ಅಂತಹ ಸಂಗೀತ ನಡೆದಿದೆ ಎಂದು ವರದಿ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಂತಹ ಪ್ರಸಂಗ ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ಹಿಂದೆ ಪ್ರಶ್ನೆ ಕೇಳಿದಾಗ ಹದಿನೈದರಿಂದ-ಸಾವಿರದಐನೂರು ಜನಗಳು ಇದ್ದರು ಎಂದು ಉತ್ತರ ಕೊಟ್ಟಿದ್ದೀರಿ. ಹದಿನೈದು-ಇಪ್ಪತ್ತು ಜನಗಳಿಗೋಸ್ಕರ ನೂರೈವತ್ತು ರೂಪಾಯಿಗಳ ಸಂಗೀತ ಮಾಡಿಕೊಂಡರೆ ಏನು ಪ್ರಯೋಜನ ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೆಲವು ಕಡೆ ಹಾಗಾಗಿರಬಹುದು.

ಶ್ರೀ ಕೆ. ಲಕ್ಕಪ್ಪ.—ಉಪನ್ಯಾಸಕರು ಒಂದು ಕಡೆಯಿಂದ ಒಂದು ಕಡೆಗೆ ಹೋಗುವುದಕ್ಕೆ ಯಾವ ದರ್ಜೆ travelling allowance ಕೊಡುತ್ತೀರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸೆಕೆಂಡ್ ಕ್ಲಾಸ್-ಸಿಂಗಲ್ ಫೇರ್.

ಶ್ರೀ ಕೆ. ಲಕ್ಕಪ್ಪ.—ಈ ಕಛೇರಿಗಳನ್ನು ತಾಲ್ಲೂಕ್ ಲೆವಲ್, ಡಿಸ್ಟ್ರಿಕ್ಟ್ ಲೆವಲ್‌ನಲ್ಲಿ, ಹಳ್ಳಿಗಾಡಿನಲ್ಲಿ ಏರ್ಪಡಿಸಿದ್ದೀರಿ. ಯಾರು ಈ ತಜ್ಞರನ್ನು ನೇಮಕ ಮಾಡಿರುವುದು ?

ಶ್ರೀ ಎ. ಜಿ. ರಾಮಚಂದ್ರರಾವ್.—ಈ ಕೆಲಸಗಳನ್ನು ಕೂಡ ರೂರಲ್ ಡೆವಲಪ್‌ಮೆಂಟ್ ಕಮಿಟಿಗಳಿಗೆ ವಹಿಸುತ್ತೇವೆ.

ಶ್ರೀ ಕೆ. ಲಕ್ಕಪ್ಪ.—ಹಿಂದೆ ಇದನ್ನು ಯಾರಿಗೆ entrust ಮಾಡಿತ್ತು ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಿಂದೆ ರೆವಿನ್ಯೂ ಇಲಾಖೆಯವರು ಶ್ರದ್ಧೆವಹಿಸಿರತಕ್ಕ ಮುಖಂಡರುಗಳ ಸಲಹೆ ತೆಗೆದುಕೊಂಡು ಮಾಡುತ್ತಾ ಇದ್ದರು.

ಶ್ರೀ ಕೆ. ಲಕ್ಕಪ್ಪ.—ರೆವಿನ್ಯೂ ಇಲಾಖೆಯವರು ಅಂದರೆ, ಯಾರುಯಾರು ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಮಲ್ದಾರರು, ಸಬ್‌ಡಿವಿಜನ್ ಆಫೀಸರ್ ಮತ್ತು ಡೆಪ್ಯುಟಿ ಕಮಿಷನರು,

ಶ್ರೀ ಕೆ. ಲಕ್ಕಪ್ಪ.— ಸಬ್‌ಡಿವಿಜನ್ ಆಫೀಸರುಗಳು, ಅಮಲ್ದಾರರು, ಈ ಕೆಲಸವನ್ನು ರೆವಿನ್ಯೂ ಇನ್‌ಸ್ಪೆಕ್ಟರುಗಳಿಗೆ ನೇಮಕಮಾಡಿ, ಸಂಗೀತ, ಹರಿಕಥೆ ಇತ್ಯಾದಿಗಳನ್ನು ವ್ಯವಸ್ಥೆಮಾಡುವುದಕ್ಕೋಸ್ಕರ ಕೊಡುವ ಹಣವನ್ನು ತಾವು ಸ್ವಾಹಮಾಡಿ ಅವರಿಂದ ಮುಫತ್ತಾಗಿ ಸಂಗೀತ ಮಾಡಿಸಿಕೊಳ್ಳುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಹಳ್ಳಿಗಳಲ್ಲಿ ಸಂಸ್ಕೃತಿ ಪ್ರಸಾರ ಮಾಡುವ ಕಡೆ "ಹೊಟ್ಟೆಗೆ ಹಿಟ್ಟಿಲ್ಲ, ಜುಟ್ಟಿಗೆ ಮಲ್ಲಿಗೆ ಹೂ" ಎಂದು ಜನಗಳ ಅಭಿಪ್ರಾಯ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಎಲ್ಲಾ ಜನಗಳ ಅಭಿಪ್ರಾಯವೂ ಸದುಪಯೋಗವಾಗುತ್ತದೆ ಎಂದು ಇದೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಶಾಸನ ಸಭಾ ಸದಸ್ಯರು ಸಂಸ್ಕೃತಿ ಪ್ರಸಾರ ಕಾರ್ಯಕ್ಕೆ ಒಳಪಟ್ಟರೆ, ಅವರಿಗೂ ಖಂಡಿತವಾಗಿ Daily Allowance ಕೊಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು, ಆ ಪಟ್ಟಿಯೊಳಗೆ ಇದ್ದರೆ, ಅವರಿಗೂ ಕೊಡುತ್ತೇವೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಅಡ್ವೈಸರಿ ಕಮಿಟಿಯ ಸದಸ್ಯರು ಸಂಸ್ಕೃತಿ ಭಾಷಣ ಮಾಡಿದರೆ, ಅವರಿಗೂ Daily Allowance ಮುಂತಾದುವುಗಳನ್ನು ಕೊಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು. ಆ ಪಟ್ಟಿಯಲ್ಲಿದ್ದರೆ, ಅವರಿಗೂ ಕೊಡುತ್ತೇವೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಪ್ರಿಯವಾಗಿರುವ ಜನಗಳಿಗೆ, ಸಂಸ್ಕೃತಿ ಪ್ರಸಾರಕ್ಕಾಗಿ ಬಳ್ಳಾರಿಯಿಂದ ಬೆಂಗಳೂರಿಗೆ, ಬೆಂಗಳೂರಿನಿಂದ ಹರಿಹರಕ್ಕೆ ಹೋಗಿ ಬರುವ ಹಾಗೆ ಅವಕಾಶ ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ರೀತಿಯಾಗಿರುವುದು ನನ್ನ ಗಮನಕ್ಕೆ ಬಂದಿದೆ. ಆದರೆ ಪ್ರಿಯವಾಗಿರುವ ಕಾರಣ ಆ ರೀತಿಯಾಗಿದೆ ಎಂದು ಗಮನಕ್ಕೆ ಬಂದಿಲ್ಲ.

ಅಧ್ಯಕ್ಷರು.—ಸಂಸ್ಕೃತಿಪ್ರಸಾರದ ವಿಷಯದಲ್ಲಿ ಯಾವ ರೀತಿ ಮಾಡಬೇಕೋ ಆ ರೀತಿ ಮಾಡುತ್ತೇವೆ ಎಂದು ಹೇಳಿದ್ದಾರೆ. If you do not want to take further action, what should be done ?

ಶ್ರೀ ಎ. ವಿ. ನರಸಿಂಹರೆಡ್ಡಿ.—ತಾವು ಈ ಅಂಶದ ಬಗ್ಗೆ ಆಯುವ್ಯಯದ ಅಂದಾಜಿನ ವಿಷಯದಲ್ಲಿ ಓಟನ್ನು ತೆಗೆದುಕೊಳ್ಳುವಾಗ ಸದಸ್ಯರಿಗೆ ಸ್ವಾತಂತ್ರ್ಯ ಕೊಟ್ಟು ಓಟನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮಾನ್ಯ ಸದಸ್ಯರಿಗೆ ಆ ಸ್ವಾತಂತ್ರ್ಯ ಇದ್ದೇ ಇದೆ.

ಶ್ರೀ ಜಿ. ದುಗ್ಗಪ್ಪ.—ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡತಕ್ಕ ಹುಡುಗರಿಗೆ, ಹುಡುಗಿಯರಿಗೆ, ಸಂಸ್ಕೃತಿ ಪ್ರಚಾರದಲ್ಲಿ, ಭಾಷಣ ಮಾಡುವುದಕ್ಕೆ, ಗಮಕಿಗಳಿಗೆ, ಸಂಗೀತಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ದರ್ಜೆಯವರು ಸೇರಿರತಕ್ಕದ್ದು ಗಮನಕ್ಕೆ ಬಂದಿಲ್ಲ.

ಶ್ರೀ ಜಿ. ದುಗ್ಗಪ್ಪ.—ಆ ರೀತಿ ಗಮನಕ್ಕೆ ಬಂದರೆ, ತಕ್ಷಣ ಅವರನ್ನು ತೆಗೆಯುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಪರ್ಯಾಲೋಚನೆ ಮಾಡುತ್ತೇವೆ. We will put it before the Committee.

9 A.M.

ಶ್ರೀ ಜಿ. ದುಗ್ಗಪ್ಪ.—ಒಂದು ಸಂಸಾರದಲ್ಲಿ ಒಬ್ಬ ತಂದೆ, ತಾಯಿ ಮತ್ತು ಮಕ್ಕಳು ಇಷ್ಟು ಜನರನ್ನೂ ಏಕಕಾಲದಲ್ಲಿ ಬೆಂಗಳೂರು, ಹರಿಹರ, ದಾವಣಗೆರೆ ಈ ಮೂರು ಜಾಗಗಳಲ್ಲಿ ಸಂಸ್ಕೃತಿ ಪ್ರಸಾರ ಕಾರ್ಯಕ್ರಮಗಳಿಗೆ ಕಳುಹಿಸಿ ಅನುಕೂಲ ಮಾಡಿ ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ನನ್ನ ಗಮನಕ್ಕೆ ಬಂದಿಲ್ಲ ; ಆದರೆ ಹಾಗೆ ಒಂದು ಸಂಸಾರ ಹೆಚ್ಚಿನ ಕೌಶಲ್ಯ ತೋರಿಸಿದರೆ ಅದರಲ್ಲಿ ತಪ್ಪಿಲ್ಲ.

ಶ್ರೀ ಜಿ. ದುಗ್ಗಪ್ಪ.—ಹೀಗೆ ಕೆಲವು ಜನರಿಗೆ ಅನುಕೂಲಮಾಡುವುದಕ್ಕಾಗಿ ಈ ಸಂಸ್ಕೃತಿ ಪ್ರಸಾರವಿದೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಂದಿಲ್ಲ.

ಶ್ರೀ ಜೆ. ಮಹಮ್ಮದ್ ಇಮಾಮ್.—ಈ ಸಭೆಯಲ್ಲಿ ಇದೇ ಅಧಿವೇಶನದಲ್ಲಿ ಪ್ರತಿಯೊಬ್ಬರಿಗೂ ಮತ ಕೊಡುವ ಸ್ವಾತಂತ್ರ್ಯ ಕೊಟ್ಟು ಇದನ್ನ ಮುಂದುವರಿಸಬೇಕೇ ಬೇಡವೇ ಎನ್ನುವ ಬಗ್ಗೆ ತೀರ್ಮಾನಕ್ಕೆ ಬರುತ್ತೀರಾ ? ಶ್ರೀಮಾನ್ ಭೀಮಪ್ಪನಾಯಕರು ಹೇಳಿದ ಹಾಗೆ ಈ ಸಭೆಯ ಅಭಿಪ್ರಾಯವನ್ನು ತೆಗೆದು ಕೊಳ್ಳುತ್ತೀರಾ ?

Sri A. G. RAMACHANDRA RAO.—That also depends on the views of the House.

ಶ್ರೀ ಜೆ. ಮಹಮ್ಮದ್ ಇಮಾಮ್.—ಈ ಸಭೆಯ ಅಭಿಪ್ರಾಯವನ್ನು ಪ್ರತಿಬಿಂಬಿಸಬೇಕಾದರೆ, ಸ್ವತಂತ್ರವಾಗಿ ಓಟು ಮಾಡುವ ಹಕ್ಕನ್ನು ಕೊಟ್ಟರೆ, ಸಭೆಯ ಅಭಿಪ್ರಾಯವೇನಾಗುತ್ತದೆ ಎಂಬುದು ಗೊತ್ತಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ವಿ. ವೆಂಕಟಪ್ಪ.—ಕೆಲವು ಸಂದರ್ಭಗಳಲ್ಲಿ ಜನರೇ ಇಲ್ಲದೆ ಸಭೆಗಳನ್ನು ಮುಂದುವರಿಸಿರುವುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಂದಿಲ್ಲ.

ಶ್ರೀ ವಿ. ವೆಂಕಟಪ್ಪ.—ಹೀಗೆ ಮುಂದುವರಿಸಿದ ಸಂದರ್ಭದಲ್ಲಿ ಹೊರಗಡೆಯಿಂದ ಬಂದಿದ್ದ ಉಪನ್ಯಾಸಕರಿಗೆ ಹಣವನ್ನು ಕೊಟ್ಟಿರುವುದು ಗೊತ್ತಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಗೊತ್ತಿಲ್ಲ.

ಶ್ರೀ ವಿ. ವೆಂಕಟಪ್ಪ.—ಕೆಲವರು ಉಪನ್ಯಾಸಕರು ಹೋಗಿ ಸಭೆ ನಡೆಯದೆ ಅವರಿಗೆ ಸಂಭಾವನೆ ಕೊಡಲಾಗಿದೆಯೆಂದು ದೂರು ಕೊಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೆ !

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ವಿ. ವೆಂಕಟಪ್ಪ.—ಈ ಉತ್ತರದಲ್ಲಿ ತುಮಕೂರು ಜಿಲ್ಲೆಯಲ್ಲಿ 25 ಸಾವಿರ ಚಿಲ್ಲರೆ ಖರ್ಚಾಗಿದೆಯೆಂದು ತಿಳಿಸಿದ್ದೀರಿ, ಇದರಲ್ಲಿ ಟಿ. ಎ. ಕೂಡ ಸೇರಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸೇರಿದೆಯೆಂದು ನನ್ನ ಭಾವನೆ.

ಶ್ರೀ ಟಿ. ಹನುಮಯ್ಯ.—ಸರ್ಕಾರಿ ಅಧಿಕಾರಿಗಳು ಕೂಡ ಸಂಸ್ಕೃತಿ ಪ್ರಚಾರ ನಡೆಸುತ್ತಿರುವುದು ಗೊತ್ತಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಈ ಏರ್ಪಾಡಿಗೆ ಅವರ ಸಹಾಯ ಬೇಕೆಂದು, ಅವರು ಸಹಾಯ ಕೊಡಬಹುದೆಂದು ಹೇಳಿದೆ.

ಶ್ರೀ ಟಿ. ಹನುಮಯ್ಯ.—ಹಾಗಾದರೆ ಅವರಿಗೆ ಇದಕ್ಕೆ ಟಿ.ಎ. ಮತ್ತು ಡಿ.ಎ. ಕೊಟ್ಟಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇದಕ್ಕೆ ಬೇರೆ ಇಲ್ಲ.

ಶ್ರೀ ಟಿ. ಹನುಮಯ್ಯ.—ಸಂಸ್ಕೃತಿ ಪ್ರಸಾರಕ್ಕೆ ಸರ್ಕಾರಿ ನೌಕರರನ್ನೂ ಸೇರಿಸಿರುವುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸಂಸ್ಕೃತಿಗೆ ಅವರೂ ಸಹಾಯ ಮಾಡಬೇಕು, ಅವರ ಸಹಕಾರವೂ ಬೇಕೆಂದು ತಮಗೂ ಗೊತ್ತಿದೆ.

ಶ್ರೀ ಟಿ. ಹನುಮಯ್ಯ.—ಅವರೇ ಖುದ್ದು ಸಂಸ್ಕೃತಿ ಪ್ರಚಾರಕ್ಕೆ ಹೋಗುವುದು ಗೊತ್ತಿದೆಯೆ ?

ಅಧ್ಯಕ್ಷರು.—ಅವರೇ ಸಂಸ್ಕೃತಿ ಪ್ರಸಾರದ ಭಾಷಣಕಾರರಾಗಿ ಹೋಗಿರುವುದು ಗೊತ್ತಿದೆಯೆ ? ಎಂದು ಅವರು ಕೇಳುವುದು.

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ಟಿ. ಹನುಮಯ್ಯ.—ಈ ಸಂಸ್ಕೃತಿ ಪ್ರಚಾರದಿಂದ ಪ್ರತಿ ತಾಲ್ಲೂಕಿನ ಅಮಲ್ದಾರರಿಗೂ ಬಹಳ ತಲೆನೋವು ಬಂದಿರುವುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಂದಿಲ್ಲ.

ಶ್ರೀ ಕೊಟ್ರ ಬಸವನಗೌಡ.—ಸಂಸ್ಕೃತಿ ಪ್ರಸಾರಕ್ಕೆ ಹೋಗುವವರಿಗೆ ನಿರ್ದಿಷ್ಟವಾದ qualification, ಅಂದರೆ ಅರ್ಹತೆಯನ್ನು ಗೊತ್ತು ಮಾಡಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಂಥಿಂಥ ಪರೀಕ್ಷೆ ಪಾಸು ಮಾಡಿರಬೇಕೆಂದೇನೂ ಇಲ್ಲ ; ಸಾಮಾನ್ಯವಾಗಿ ಅವರ ಪ್ರದೇಶದಲ್ಲಿ ಸರಿಯಾದವರಾಗಿದ್ದರೆ, ಸಾರ್ವಜನಿಕರ ಅಭಿಪ್ರಾಯದಮೇಲೆ ಗೊತ್ತು ಮಾಡುತ್ತಾರೆ.

ಶ್ರೀ ಆರ್. ಅನಂತರಾಮರ್.—ಈ ರೀತಿ ಸಂಗೀತ ಕಚೇರಿ, ಭಾಷಣ ಮಾಡಿದರೆ ಸರ್ಕಾರ ಹಣ ಕೊಡುವುದು ಇಂಡಿಯಾ ದೇಶದ ಇನ್ನಾವ ಭಾಗದಲ್ಲಾದರೂ ಇದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಗೊತ್ತಿಲ್ಲ.

ಶ್ರೀ ಬಿ. ಸಿ. ನಂಜುಂಡಯ್ಯ.—defalcation ಮಾಡಿದವರನ್ನೂ ಸೇರಿಸಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ಬಿ. ಸಿ. ನಂಜುಂಡಯ್ಯ.—ತಾವು ಮಾಡಿರುವ ಪಟ್ಟಿಯಲ್ಲಿ defalcation ಅಪಾದನೆಯ ಮೇಲೆ ಡಿಸ್‌ಮಿಸ್ ಆದ ಅಧಿಕಾರಿಗಳೂ ಇದ್ದಾರೆಂಬುದು ಗೊತ್ತಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ ; ತಾವು ಹೇಳಿದರೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಯಾರು ಸಭೆಗೆ ಬರಬೇಕಾಗಿತ್ತೋ ಅವರು ಬಾರದೆ, ಭಾಗವಹಿಸದೆ ಸಭೆ ನಿಂತು ಹೋಗಿರುವುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಸಾವಿರಾರು ಜನ ಸೇರಿರುವ ಸಂದರ್ಭದಲ್ಲಿ ಉಪನ್ಯಾಸಕರು ಬರದೆ, ಖರ್ಚು ಆಗಿ, ಅಲ್ಲಿಯ ಜನರಿಗೆ ತೊಂದರೆಯೂ ಆಗಿರುವುದು, ಯಾವ ಡಿಸ್ಟ್ರಿಕ್ಟಿನಲ್ಲಿಯಾದರೂ ಹೀಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಂದಿಲ್ಲ.

Conciliation Proceedings under the Industrial Disputes Act.

Q.—208. Sri D. VENKATESH (Gandhinagar).—

Will the Government be pleased to state :—

(*a*) the number of failure reports of Conciliation Proceeding under the Industrial Disputes Act from Conciliation Officers throughout the State ;

(i) the date of each such failure report ;

(ii) the date of receipt by the Government of each such failure report ;

(iii) the number of such reports pending disposal by way of reference or otherwise ;

(*b*) in how many and what cases has the Hon'ble Minister for Labour notified and conducted Conciliation Proceedings in his chamber even after receipt of report of failure of Conciliation Proceedings by Conciliation Officess since January 1955.

(*c*) in how many cases has such re-hearing of Conciliation Proceedings been successful ?

A.—Sri A. G. RAMACHANDRA RAO (Minister for Law and Education).—

(*a*) 28 (As no period is mentioned in the Question, the figure for 1955-56 is furnished).

(i) *Vide* Column 2 of the appended Statement.

(ii) *Vide* Column 3 of the appended Statement.

(iii) 26.

(*b*) 6.

(*c*) 2.

STATEMENT.

Sl. No.	Industry—date of failure report	Date of receipt by the Government of failure report
1	Dispute between the Management and Workers of the Mysore Lac and Paint Works, Ltd., Mysore,—5th December 1955.	7th December 1955
2	Dispute between the Workers and Management of Gaffar and Jahangir Beedi Works, Mysore,—28th September 1955.	3rd October 1955, Final report is still awaited.
3	Dispute between Workers and Management of Peer Beedi Factory, Mysore,—30th September 1955.	4th October 1955
4	Dispute between 40 Workers and Management of Sovereign Beedi Factory, Mysore,—12th October 1955.	22nd October 1955
5	Dispute between 16 Employees in Bombay Ananda Bhavan, Chikpet, Bangalore City,—14th July 1955.	22nd July 1955, Final report on 20th February 1956.
6	Dispute between the Workers and Management of Glass and Enamel Works, Ltd., Bangalore,—26th December 1955.	28th December 1955
7	Dispute between the Workmen and the Management of Srinivasa Silk Throwing and Weaving Mills, Bangalore,—28th July 1955.	30th July 1955
8	Dispute between the Management and the Sanitary Board Workers, Vimanapura, Bangalore,—19th August 1955.	23rd August 1955
9	Dispute between the Workers and Management of the Mysore Stoneware Pipes and Potteries, Ltd.,—23rd September 1955.	29th September 1955
10	Dispute between the Workers and the Management of certain 14 Hotels, Bangalore City,—24th August 1955.	10th February 1956, Final report received on 23rd February 1956.
11	Dispute between M/s. Desi Textile Mills and Workers,—24th November 1955.	30th November 1955
12	Dispute between the Management of Messrs. Metro Malleable Manufacturers, Ltd., Bangalore and Workers,—15th December 1955.	16th December 1955, Final report received on 1st February 1956.
13	Dispute between the Workers and Management of Messrs. Metro Malleable Manufacturers, Ltd., Bangalore,—30th September 1955.	16th September 1955 and 21st September 1955.
14	Dispute between the Workers and Management of Mysore State Hides, Skins and Tanners, Bangalore,—14th July 1955.	22nd July 1955
15	Dispute between the Workmen and the Management of Mysore Commercial Union, Ltd., Yeswantapur,—20th August 1955.	22nd August 1955
16	Dispute between the Management and Workers of 7 Beedi Factories of Channapatna,—18th November 1955.	23rd November 1955

(SRI A. G. RAMACHANDRA RAO.)

Sl. No.	Industry—date of failure report	Date of receipt by the Government of failure report
17	Dispute between the Workmen and the Management of Messrs. Tin Industries, Ltd., Dhurvani Nagar, Bangalore,—24th November 1955.	2nd December 1955
18	Dispute between the Workmen and the Management of Messrs. Kirloskar Electric Co., Ltd., Bangalore 3,—1st October 1955.	5th October 1955
19	Dispute between the Workers and the Management of Srinivas Soap Works, Chamarajpet, Bangalore-2,—7th September 1955.	13th October 1955
20	Dispute between the Management and two Workers of India Coffee Board Labour Union, Bangalore Branch,—17th September 1955.	28th September 1955
21	Dispute between the Management and Workers of the Standard Brick and Tile Co., Ltd., Yelahanka, —16th February 1956.	16th February 1956
22	Dispute between Messrs. Kabadi Vittalasa & Sons, Bangalore and Workers,—1st February 1956.	3rd February 1956, Final report is awaited.
23	Dispute between Management and Workers of Messrs. Kabadi Venkusa & Sons,—1st February 1956.	3rd February 1956, Final report is awaited.
24	Dispute between the Workers and the Management of India Publications, Ltd., Bangalore,—1st February 1956.	Final report was received on 22nd February 1956.
25	Dispute between the Workers and the Management of Standard Brick and Tile Co., Yelahanka,—8th February 1956.	9th February 1956
26	Dispute between the Employees' Association and the Management of Hindustan Aircraft, Ltd., Bangalore,—20th January 1955.	25th January 1955
27	Dispute between the Workers and the Management of Mysore Chrome Tanning Co., Ltd.,—10th October 1955.	22nd October 1955
28	Dispute between the Workers and Management of the Singer Sewing Machine Co., and its various branches in Mysore State,—14th November 1955.	21st November 1955

Sri D. VENKATESH.—With regard to (c), what are those two cases in which the Conciliation proceedings have been successful?

*Sri A. G. RAMACHANDRA RAO.—I may give further information. In addition to the above two cases, two more cases, out of six, have been settled. Regarding the cases that have been settled, I will give the answer later.

Sri D. VENKATESH.—On page 11, with regard to answer 10 in the schedule, about fourteen hotels have been mentioned. Regarding No. 10, the concilation failure occurred on 24th August 1955 and the date of receipt of final report was on 26th February

1956. Why was there a delay of six months, Sir?

Sri A. G. RAMACHANDRA RAO.—An interval of only 12 days. I think that time was necessary.

Sri D. VENKATESH.—There was an interval of six months. . . .

Sri A. G. RAMACHANDRA RAO.—The failure of conciliation was on 10th February 1956 and the final report was received on 23rd February 1956. . . .

Sri D. VENKATESH.—No, Sir. On 24th August 1955, the conciliation was a failure and the receipt of the report by the Government was on 26th February. There was a delay of six months.

Sri A. G. RAMACHANDRA RAO.—I will examine that.

Sri D. VENKATESH.—With regard to Sl. Nos. 22 and 23 on page 12, dispute of Vittalasa and Venkusa, even though the report has been received, so far it has not been referred to adjudication. Will the Government consider. . . .

Sri A. G. RAMACHANDRA RAO.—If I remember aright, some individual cases are concerned there and in individual cases, we do not refer to adjudication.

Sri D. VENKATESH.—It is not an individual case, Sir. It is a collective case.

Sri A. G. RAMACHANDRA RAO.—Anyhow, that is my recollection. I will show the file to the Hon'ble Member.

Sri D. VENKATESH.—Is re-conciliation of cases prescribed under the Act even after the failure of conciliation proceedings?

Sri A. G. RAMACHANDRA RAO.—Yes conciliation can go on at any time.

Sri D. VENKATESH.—Is it not a fact that the Commissioner of Labour as well as the Hon'ble Minister re-conciliates after the conciliation proceedings are reported as a failure?

Sri A. G. RAMACHANDRA RAO.—Yes.

Sri D. VENKATESH.—Is it not a fact that when conciliation proceedings have been reported as a failure, the Act does not prescribe re-conciliation?

Sri A. G. RAMACHANDRA RAO.—Conciliation can be taken up at any stage of the case because of the interests concerned.

Sri D. VENKATESH.—With regard to Sl. Number 26—dispute between the Employees' Association and the Management of H. A. L., at what stage is the dispute?

Sri A. G. RAMACHANDRA RAO.—All the issues have been settled therein, except the case of three officers who are there, and I took it up at the instance of the Labour commissioner to the Management. Their view is that they cannot reconsider it.

I will give the answer regarding the cases in which the conciliation proceedings have been successful. Sl. Number 12, between the Management of Metro Malleable Manufacturers, Ltd., and Workers. There were two cases. One was settled yesterday and the other will be referred to the Tribunal. Then as regards the dispute between the Management and Workers of Coffee Board, that has been settled. The dispute between the Workers and the Management of the Mysore Chrome Tanning Co., that has also been settled.

Sri A. V. NARASIMHA REDDY.—In connection with conciliation procedure, the Minister was pleased to answer that conciliation will be carried on at any stage. But the question put by my friend Sri Venkatesh was not about conciliation but about re-conciliation. He said that conciliation at the level of the divisional inspector or at the level of the Labour Commissioner will have been done, and failing which the report is made to the Government and the Government in turn will have to permit the concerned parties to go before the tribunal. Instead, the Minister once again tries to re-conciliate about the matter. Is that procedure prescribed is the question.

Sri A. G. RAMACHANDRA RAO.—After the receipt of the report of the Labour Commissioner, it may be referred to for re-conciliation. Discretion is vested in the Government to refer it to the tribunal or not to refer it to the tribunal, or bring up for further settlement by conciliation. All the three ways are open and Government is adopting the best way possible.

Sri A. V. NARASIMHA REDDY.—Sir, once the Labour Commissioner reports to the Minister that the conciliation procedure has failed and in case the Minister has once again to open the matter and say that he would re-conciliate the matter, will it not amount to dodging in the matter ?

Sri A. G. RAMACHANDRA RAO.—I am sorry for the imputation. I have tried in about 10 cases and I have succeeded in six and in the other four cases I have not been successful. But it has been found to be of great advantage to the parties.

Sri A. V. NARASIMHA REDDY.—In the case of the Spun Silk Mills, Chennapatna, the Labour Commissioner reported that there had been a breach of the agreement so far as the implementation of the award was concerned. The Hon'ble Minister says that after getting legal interpretation of the award he would further negotiate in the matter. This amounts to dodging and nothing else ; is it not correct ?

Sri A. G. RAMACHANDRA RAO.—He is not correct, Sir. In fact the other day we discussed this matter and if necessary, I am prepared to throw further light on that.

Harijans, Bangalore District (Drinking Water Wells)

Q.—414. **Sri H. T. PUTTAPPA** (Hoskote-Anekal-Scheduled Castes).—

Will the Government be pleased to state:—

(*a*) the number of drinking water wells dug for the use of Harijans in Bangalore District ;

(*b*) the number of villages in which there are no such drinking water wells for Harijans (talukwar information may kindly be given) ?

A.—**Sri T. CHANNIAH** (Minister for Public Health and Local Self-Government).—

(*a*) 526.

(*b*) 366.

ಶ್ರೀ ಎಚ್. ಟಿ. ಪುಟ್ಟಪ್ಪ.—ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಹರಿಜನರಿಗಾಗಿ ಕುಡಿಯುವ ನೀರಿನ ಬಾವಿಗಳು ಇಲ್ಲದೇ ಇರುವ ಗ್ರಾಮಗಳ ಸಂಖ್ಯೆ 366 ಎಂದು ತಿಳಿಸಿದ್ದೀರಿ. ಇದರ ಅರ್ಥವೇನು ?

ಶ್ರೀ ಟಿ. ಚನ್ನಯ್ಯ.—366 ಗ್ರಾಮಗಳಲ್ಲಿ ಹರಿಜನರಿಗೆ ಬಾವಿಗಳನ್ನು ತೆಗೆಸಿಕೊಡಬೇಕಾಗಿದೆ ಎಂದು ಅರ್ಥ.

ಶ್ರೀ ಎಚ್. ಟಿ. ಪುಟ್ಟಪ್ಪ.—ಬೆಂಗಳೂರು ಜಿಲ್ಲೆಯಲ್ಲಿ ಎಷ್ಟು ಗ್ರಾಮಗಳಿವೆ ?

ಶ್ರೀ ಟಿ. ಚನ್ನಯ್ಯ.—ನೋಟೀಸು ಬೇಕು.

ಶ್ರೀ ಎಚ್. ಟಿ. ಪುಟ್ಟಪ್ಪ.—ಎರಡೂವರೆ, ಮೂರು ಸಾವಿರ ಗ್ರಾಮಗಳಿವೆಯಲ್ಲವೆ ?

ಶ್ರೀ ಟಿ. ಚನ್ನಯ್ಯ.—ಇಷ್ಟೇ ಇವೆ ಎಂದು ಈಗ ಹೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಚ್. ಟಿ. ಪುಟ್ಟಪ್ಪ.—ಕುಡಿಯುವ ನೀರಿನ ಬಾವಿಗಳು ಇರುವ ಗ್ರಾಮಗಳ ಸಂಖ್ಯೆ 526, ಕುಡಿಯುವ ನೀರಿನ ಬಾವಿಗಳಿಲ್ಲದ ಗ್ರಾಮಗಳ ಸಂಖ್ಯೆ 366 ಎಂದು ಕೊಟ್ಟಿದ್ದೀರಿ. ಇದು ಸರಿಯಾಗಿದೆಯೇ ?

ಶ್ರೀ ಟಿ. ಚನ್ನಯ್ಯ.—ಸರಿಯಾಗಿದೆ ಎಂದು ನಾವು ಭಾವಿಸಿದ್ದೇವೆ.

Sri A. V. NARASIMHA REDDY.—Sir, in your reply you have said 526 villages have been provided with wells and there are 366 yet to be provided for. May I know the number of villages wherein the Harijan friends are living in the Bangalore District ?

Sri T. CHANNIAH.—That information, it is not possible to give at present. In almost all villages where Harijans live in considerable numbers—say 30 to 40 families, we are trying to give wells.

Sri A. V. NARASIMHA REDDY.—The point at dispute is that this information as to the number of villages is not correct, because even looking at the number of villages that are in Bangalore district, in all the eleven taluks they will amount to more than 1,000, where as if both the figures furnished in your answer are totalled, the number will not come to even 900 ; can this figure be correct ?

Sri T. CHANNIAH.—It is correct Sir, because the information given is with regard to villages where wells have still to be dug. There may be other villages where there are already wells in existence and which do not require further wells.

Sri A. V. NARASIMHA REDDY.—Sir . . . .

Mr. SPEAKER.—The answer now given makes it clear that there may be Harijans in other villages where there may be no necessity to dig wells.

Sri A. V. NARASIMHA REDDY.—The question is about the total number of wells dug for the use of Harijans; there is no point in furnishing the answer

omitting the villages where wells have been already dug according to the Minister. Apart from that, Sir, may I know what time you would take to provide drinking water wells to all these 366 villages?

Sri T. CHANNIAH.—The exact time within which they are going to be completed cannot be stated now. As early as possible, wells will be taken up and completed.

Sri A. V. NARASIMHA REDDY.—Is it not a fact, Sir, that the Government have been pleased to provide four lakhs of rupees to provide drinking water wells, just at the tail end of the financial year?

Sri T. CHANNIAH.—Not exclusively for Harijans.

Sri A. V. NARASIMHA REDDY.—In general?

Sri T. CHANNIAH.—That does not arise.

Sri A. V. NARASIMHA REDDY.—It arises, Sir, because that amount is included for providing drinking water wells to Harijans.

Sri. T. CHANNIAH.—Under the removal of Untouchability scheme, I think a certain grant has been given for the construction of these wells and this work will be completed quickly.

Sri A. V. NARASIMHA REDDY.—Taking into account the fact that the financial year is almost at an end, will the Hon'ble Minister be pleased to convert the grant into a non-lapsable grant?

Sri T. CHANNIAH.—I think the rules cannot be changed for this purpose.

Sri A. V. NARASIMHA REDDY.—Sir, the Hon'ble Minister was pleased to state in another connection that the grant given to the Mysore City Municipality for the purpose of putting up Houses for Harijans would be converted into non-lapsable grant; will the Hon'ble Minister be pleased similarly to convert this amount also into a non-lapsable grant so that the well work may be taken up and executed in the course of the next year?

Sri T. CHANNIAH.—That is a different item of work. If the amount provided for this item lapses, the Government will provide an additional amount next year.

Sri A. V. NARASIMHA REDDY.—In that event, will you please bear in mind that the allotment will be intimated to the revenue taluks much earlier than it has been done all these years?

Sri T. CHANNIAH.—I have assured that in the beginning of the year the allotment will be intimated to the several officers who will be requested to take up the work immediately and execute the same as expeditiously as possible.

Sri H. C. LINGA REDDY.—What is the policy of the Government in regard to grant of wells to Harijans and other Castes Hindus? Does the Government give common wells or separate wells to Harijans and Caste Hindus?

Sri T. CHANNIAH.—Wherever Harijans want separate wells, in such villages, separate wells are provided; wherever all the sections of the people agree to have common wells, in such cases, we provide common wells to all sections of people.

Sri H. C. LINGA REDDY.—From the point of view of removal of untouchabilty, is it not better that common drinking water wells are provided both for the Caste Hindus and Harijans in the villages?

Sri T. CHANNIAH.—That is our hope. If the Hon'ble Member works in that direction, he would be helping the cause to a great extent.

Sri H. C. LINGA REDDY.—I want to know whether Government is doing anything in that direction?

Sri T. CHANNIAH.—We have issued suitable instructions to officers in this behalf.

N. E. S. Block, Malavalli Taluk.

Q.—182. Sri B. P. NAGARAJA MURTHY (Malavalli).—

Will the Government be pleased to state :—

(*a*) whether it has come to their notice that nearly eighty villages in Malavalli Taluk have been excluded from N.E.S. block of Malavalli ;

(*b*) if so, the reason for such exclusion ;

(*c*) when they would take steps to include these villages in the N. E. S. Block ?

A.—Dr. R. NAGAN GOWDA (Minister for Agriculture).—

(*a*) Sixty-six villages are excluded.

(*b*) At the time the N. E .S. Block at Malavalli was started the pattern provided by the Community Projects Administration required that the Unit for a Block should be 100 villages covering a population of about 66,000. This had to be followed.

(*c*) The question of immediately bringing the entire area of the Taluk under a N. E. S. Block is under examination.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಯೂನಿಟ್ಟಿಗೆ 66 ಸಾವಿರ ಜನಸಂಖ್ಯೆಯುಳ್ಳ ನೂರು ಗ್ರಾಮ ಸೇರಿರಬೇಕೆಂಬ ತತ್ವ ಈಗಲೂ ಜಾರಿಯಲ್ಲಿದೆಯೇ ?

*ಡಾ॥ ಆರ್. ನಾಗನಗೌಡ.—ಪ್ರಿನ್ಸಿಪಲ್ ಹಾಗೇ ಇದೆ. ಆದರೆ ಇತ್ತೀಚೆಗೆ ಸ್ವಲ್ಪ ಬದಲಾವಣೆ ಮಾಡಿ ಎಲ್ಲಿ ಸಾಧ್ಯವೋ ಅಲ್ಲಿ ಇಡೀ ತಾಲ್ಲೂಕನ್ನೇ ತೆಗೆದು ಕೊಳ್ಳಬೇಕೆಂದಿದ್ದೇವೆ.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಆ ರೀತಿಯಾಗಿ ಯಾವುದಾದರೂ ಇಡೀ ತಾಲ್ಲೂಕನ್ನು ತೆಗೆದುಕೊಳ್ಳುತ್ತಿದ್ದೀರಾ ?

ಡಾ॥ ಆರ್. ನಾಗನಗೌಡ.—ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಈಗ ಗ್ರಾಮಗಳನ್ನು ಚುನಾಯಿಸಿರುವ ಕಡೆ ಪಾಕೆಟ್ ಏರಿಯಾ ಸೆಲೆಕ್ಟ್ ಮಾಡಿದ್ದೀರಾ ?

ಡಾ॥ ಆರ್. ನಾಗನಗೌಡ.—ಅನುಕೂಲವಾದ ಪ್ರದೇಶವನ್ನು ತೆಗೆದುಕೊಂಡಿದ್ದೇವೆ, ಆಡಳಿತಕ್ಕೆ ಮತ್ತು ಕೆಲಸ ನಡೆಸುವುದಕ್ಕೆ ಅನುಕೂಲವಾದದ್ದನ್ನು ತೆಗೆದುಕೊಂಡಿದ್ದೇವೆ.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಮಳವಳ್ಳಿ ತಾಲ್ಲೂಕಿನಲ್ಲಿ ನೀರಾವರಿ ಮುಂತಾದ ಅನುಕೂಲತೆಯಿರುವ ಮೂರು ಗ್ರಾಮಗಳನ್ನು ಚುನಾಯಿಸಿ ಪಾಕೆಟ್ಸ್ ಮಾಡದೆ ಬಿಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ಮಳವಳ್ಳಿ ತಾಲ್ಲೂಕಿನಲ್ಲಿ ಎಲ್ಲವನ್ನೂ ತೆಗೆದುಕೊಳ್ಳಬೇಕೆಂಬುದು ತೀವ್ರಾಲೋಚನೆಯಲ್ಲಿದೆ, ಬಹಳ ಜಾಗ್ರತೆ ತೆಗೆದುಕೊಳ್ಳುತ್ತೇವೆ.

ಶ್ರೀ ಜೆ. ಮಹಮದ್ ಇಮಾಂ.—ಒಂದು ತಾಲ್ಲೂಕಿನಲ್ಲಿರುವ ನೂರು ಗ್ರಾಮ ತೆಗೆದುಕೊಂಡು ಬಾಕಿ 30 ಗ್ರಾಮ ಬಿಡುವುದು ಉಚಿತವಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ಈಗ ಇಡೀ ತಾಲ್ಲೂಕನ್ನೇ ತೆಗೆದುಕೊಳ್ಳಬೇಕೆಂದಿದೆ.

ಶ್ರೀ ಜೆ. ಮಹಮದ್ ಇಮಾಂ.—ಈಗ ಹೊಸದಾಗಿ ತೆಗೆದ ಕೊಂಡರೆ ಪೂರ್ತಿಯಾಗಿ ತೆಗೆದುಕೊಳ್ಳುತ್ತೀರಾ ?

ಡಾ॥ ಆರ್. ನಾಗನಗೌಡ.—ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಹುಚ್ಚೇಗೌಡ.—ಹೀಗೆ ತಾಲ್ಲೂಕುಗಳನ್ನು ಯೂನಿಟ್ಟಾಗಿ ತೆಗೆದುಕೊಂಡಾಗ ಅಮಲ್ದಾರರನ್ನು ಜವಾಬ್ದಾರರನ್ನಾಗಿ ಮಾಡಿ ಅವರನ್ನು ಪ್ರಾಜೆಕ್ಟ್ ಆಫೀಸರಾಗಿ ಮಾಡುವುದು ಅನುಕೂಲವಲ್ಲವೆ ?

ಡಾ॥ ಆರ್. ನಾಗನಗೌಡ.—ಈಗ ಬ್ಲಾಕ್ ಡೆವಲಪ್‌ಮೆಂಟ್ ಆಫೀಸರೆಂದು ಮಾಡಿ ಅವರನ್ನು ಜವಾಬ್ದಾರರನ್ನಾಗಿ ಮಾಡಿದ್ದೇವೆ. ಅಮಲ್ದಾರರು ಮತ್ತು ಇತರ ಅಧಿಕಾರಿಗಳ ಸಹಕಾರವನ್ನೂ ಅದರ ಜೊತೆಗೆ ತೆಗೆದುಕೊಳ್ಳುತ್ತೇವೆ.

Tractors sold for Agricultural purposes.

Q.—247. Sri A. BHEEMAPPA NAIK (Molakalmuru).—

Will the Government be pleased to state :—

(*a*) the names of persons to whom tractors for agricultural purposes were sold by the Government of Mysore ;

(*b*) the loans outstanding against each of such vendees ;

(*c*) whether such tractors are in working order ?

A.—Dr. R. NAGAN GOWDA (Minister for Agriculture).—

(*a*) and (*b*) *Vide* Appendices I and II.

(*c*) Yes.

APPENDIX I

Sl. No.	Name and Address of the parties to whom the new tractors supplied	Loans outstanding Rs.	a.	p.
	Sriyuths—			
1	B. K. Some Gowda son of Basave Gowda, Sakleshpur ...	6,267	13	9
2	Amidala Venkappa and Rangappa, Joladarasi Village, Bellary District.	15,663	10	0
3	M. Aranah, Coffee Planter, Phalguni Village, Mudigere Taluk.	9,955	4	0
4	G. Chennappa and Brothers, Rameswara Village, Honnali Taluk.	14,224	8	6
5	B. M. Anne Gowda, Coffee Planter, Banakal, Mudigere Taluk.	8,972	11	0
6	G. Basappa, M.L.A., Chikkayagati Village, Hosadurga ...	12,373	11	0
7	Patel Gire Gowda, V. Masiappa and Others, Alur Village Hiriyur Taluk.	8,239	7	6
8	Patel K. Halappa, Kariganur, Chennagiri ...	13,362	15	3
9	Patel Marale Gowda, Chengavara Village, Sira Taluk ...	16,005	0	0
10	H. Kenche Gowda, Coffee Planter, Hanabal, Sakleshpur Taluk.	9,603	0	6
11	Narayana Gowda, Patel, Doddagattiganabbe, Hoskote Taluk.	8,257	13	3
12	N. M. Gopala Gowda, son of late Sri Malle Gowda, Coffee Planter, Nandipur, Mudigere Taluk.	10,550	8	0
13	Patel Mopu Reddy, Taralu Village, Bangalore South Taluk...	6,236	3	0
14	N. Ramalinga Reddy, son of Malla Reddy Nagalamadike, Pavagada Taluk.	10,760	8	3
15	H. Sanjeevappa, Hanumanayaka Estate, Mathikere, Bangalore North Taluk.	8,805	7	6
16	J. G. Basettappa, Holalu Village, Hadagalli Taluk, Bellary District.	6,992	4	0
17	H. S. Eswarappa, Hebbahally, Hosadurga ..	10,000	0	0
18	H. N. Nagappa, Hullahalli, Nanjangud Taluk ...	9,770	11	0
19	N. M. Nirvanappa and Brothers, Undiganal Village, Arasikere Taluk.	10,000	0	0

V-38'N56.
N57-14; part II
(B) 4725

(DR. R. NAGAN GOWDA.)

APPENDIX II

Sl. No.	Name of party	Loans outstanding		
		Rs.	a.	p
	Sriyuths—			
1	H. Basappa	5,660	12	0
2	Patel Hanumanthappa	5,409	13	6
3	G. N. Santhaveerappa	7,804	10	0
4	P. S. Basappa	5,165	0	0
5	Setru Siddappa	7,163	0	0
6	K. G. Sivappa	7,723	0	0
7	D. Honnappa	3,865	8	0
8	K. S. Nagendran	3,707	4	0
9	H. Venkatappa	1,223	2	0
10	S. T. Somappa and Brothers.	5,015	0	0
11	C. T. Mudligiri Gowda	4,200	0	0
12	H. C. Viswanath	7,210	7	0
13	K. V. Setty & sons	1,400	0	0
14	Papamia Saheb	1,900	0	0
15	A. R. Siddaramappa and Hosamane Channappa ...	1,875	0	0
16	Patel Channabasappa	900	0	0
17	B. V. Nanjundappa	1,400	0	0
18	C. H. Chandrasekhariah	1,400	0	0
19	B. N. Venkatappa	1,789	0	0
20	*Dharmaprakasha* N. Rudriah	62	8	0
21	B. N. Krishnamurthy	3,426	6	3
22	K. G. Siddappa	746	0	0
23	T. Venkataram	1,300	0	0
24	T. J. Krishnamurthy Rao	2,205	1	0
25	S. Gurusiddappa	3,690	0	0

ಶ್ರೀ ಎ. ಭೀಮಪ್ಪನಾಯಕ್.—ವಿಳಾಸ ಕೇಳಿಲ್ಲದಿದ್ದರೂ ಪರಿಶಿಷ್ಟದ ಒಂದನೆಯ ತಃಖ್ತೆಯಲ್ಲಿ ಹಳೆಯ ಟ್ರ್ಯಾಕ್ಟರುಗಳನ್ನು ಕೊಂಡುಕೊಂಡಿರುವವರ ವಿಳಾಸ ಕೊಡದೆ ಎರಡನೆಯ ತಃಖ್ತೆಯಲ್ಲಿ ಹೊಸ ಟ್ರ್ಯಾಕ್ಟರುಗಳನ್ನು ಕೊಂಡುಕೊಂಡಿರುವವರ ವಿಳಾಸ ಕೊಟ್ಟಿರುವುದಕ್ಕೆ ಕಾರಣವೇನು ?

* ಡಾ|| ಆರ್. ನಾಗನಗೌಡ.—ಇದರೊಳಗೆ ಉದ್ದೇಶ ವೇನೂ ಇಲ್ಲ. ಆಫೀಸರುಗಳ ಕಡೆಯಿಂದ ಪಟ್ಟಿ ಬಂದಿದ್ದರಲ್ಲಿ ಒಂದರಲ್ಲಿ ಮಾತ್ರ ಅಡ್ರೆಸ್ ಇತ್ತು, ಅದನ್ನು ಹಾಗೆಯೇ ಮುದ್ರಿಸಿದ್ದಾರೆ.

ಶ್ರೀ ಎ. ಭೀಮಪ್ಪನಾಯಕ್.—ಈ ಸಭೆಯಲ್ಲಿ ಯಾರಾದರೂ ಈ ಪೈಕಿ ಇದ್ದರೆ ವಿಳಾಸ ಕೊಟ್ಟರೆ ಅನುಮಾನ ಬಂದೀತೆಂದು ಆ ಒಂದು ಉದ್ದೇಶದಿಂದ ಹೀಗೆ ಮಾಡಿದೆಯೆ ?

ಡಾ|| ಆರ್. ನಾಗನಗೌಡ.—ಅಂಥ ಉದ್ದೇಶ ವೇನೂ ಇಲ್ಲ. ತಮಗೆ ಬೇಕಾದರೆ ಮೊದಲನೆಯ ತಃಖ್ತೆಗೂ ವಿಳಾಸ ಕೊಡುತ್ತೇವೆ.

ಶ್ರೀ ಎ. ಭೀಮಪ್ಪನಾಯಕ್.—ಎಷ್ಟು ಕಂತುಗಳ ಮೇಲೆ ಹಳೆಯ ಟ್ರ್ಯಾಕ್ಟರುಗಳನ್ನು ಕೊಟ್ಟಿದ್ದೀರಿ ? ಒಪ್ಪಂದದ ಪ್ರಕಾರ ಕಂತುಗಳು ಬಂದಿವೆಯೆ ?

ಡಾ|| ಆರ್. ನಾಗನಗೌಡ.—ಐದು ಕಂತುಗಳ ಮೇಲೆ ಮೊದಲು ಕೊಟ್ಟೆವು. ಆ ತರುವಾಯ ಹೋದ ವರ್ಷ ಹಳೆಯ ಟ್ರ್ಯಾಕ್ಟರುಗಳ ಮಾಲೀಕರು ಕೆಲವರು ಮನವಿ ಮಾಡಿಕೊಂಡುದರಿಂದ ಮೊದಲೇನು ದರಕ್ಕೆ ಕೊಟ್ಟಿತ್ತೋ ಅದನ್ನು ಮಾರ್ಪಾಡು ಮಾಡಿಕೊಟ್ಟಿದೆ.

ಶ್ರೀ ಎ. ಭೀಮಪ್ಪನಾಯಕ್.—ಇವು ಕೆಲಸಮಾಡುತ್ತಿವೆಯೆಂದು ಹೇಳಿದ್ದೀರಿ. 25 ಗಂಟೆಗಳಮೇಲೆ ಒಂದೂ ಕೂಡ ಕೆಲಸ ಮಾಡಿಲ್ಲವೆಂದು ಈ ಸಭೆಯಲ್ಲಿ ನಾನು ಸವಾಲು ಹಾಕುತ್ತೇನೆ. ಅದಕ್ಕೇನು ಹೇಳುತ್ತೀರಿ ?

ಡಾ|| ಆರ್. ನಾಗನಗೌಡ.—ತೆಗೆದುಕೊಂಡು ಹೋಗುವಾಗ ವರ್ಕಿಂಗ್ ಆರ್ಡರಿನಲ್ಲಿದ್ದುವು. ಆ ತರುವಾಯವೂ ವರ್ಕಿಂಗ್ ಆರ್ಡರಿನಲ್ಲಿದ್ದುವು. ತೆಗೆದುಕೊಂಡು ಹೋಗಿ ವರ್ಷಗಳಾಯಿತು. ಆದ ಕಾರಣ ಕೆಲವು ರಿಪೇರ್ಸ್ ಆಗುವುದುಂಟು, ಪಾರ್ಟ್ಸ್ ಬ್ರೇಕ್ ಆಗುವುದೂ ಉಂಟು. ಹಾಗಾದಾಗ ನಮಗೆ ತಿಳಿಸಿದರೆ ರಿಪೇರಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಎ. ಭೀಮಪ್ಪನಾಯಕ್.—ಇವನ್ನು ವರ್ಕಿಂಗ್ ಆರ್ಡರಿನಲ್ಲಿಡುವುದು ಸರ್ಕಾರದ ಜವಾಬ್ದಾರಿ. ಅದನ್ನು ಈಗಲಾದರೂ ವಹಿಸುತ್ತೀರಾ ?

ಡಾ|| ಆರ್. ನಾಗನಗೌಡ.—ಆ ಜವಾಬ್ದಾರಿ ತಮ್ಮದೇ ಆಗಿದೆ. ಸರ್ಕಾರ ಎಷ್ಟು ಮಾಡಬಹುದೋ ಅಷ್ಟನ್ನು ಮಾಡುತ್ತಿದೆ. ಸರ್ಕಾರ ಹೈರ್ಡ್ ಮೆಕ್ಯಾನಿಕ್ಸ್ ಕೊಡುತ್ತಿದ್ದಾರೆ. ಮಾಲೀಕರು ಕೆಲಸ ಮಾಡುವಾಗ ಹೆಚ್ಚಿನ ಶ್ರದ್ಧೆಯಿಟ್ಟು ಕೆಲಸಮಾಡಬೇಕು. ಕೆಲವು ಮಾಲೀಕರು ಡ್ರೈವರುಗಳನ್ನು ಇಟ್ಟಿರುತ್ತಾರೆ. ಮಾಲೀಕರೇ ಡ್ರೈವರುಗಳನ್ನಿಟ್ಟಿರುವ ಕಡೆ ಕೆಲಸ ಹೆಚ್ಚುಕಾಲ ಮಾಡಲು ಅವಕಾಶವುಂಟು. ನಾನು ತಿಳಿದಿರುವಹಾಗೆ ಒಂದೆರಡು ಸಂದರ್ಭಗಳಲ್ಲಿ ತೊಂದರೆ ಯಾಗಿರಬೇಕು.

ಶ್ರೀ ಎ. ಭೀಮಪ್ಪನಾಯಕ್.—ತೆಗೆದುಕೊಂಡು ಹೋದ ದಿವಸವೇ ಮಧ್ಯೆ ದಾರಿಯಲ್ಲಿ ನಿಂತುಹೋಗಿವೆ. ಆ ದಿವಸದಿಂದ ಸರಿಮಾಡುವುದಕ್ಕಾಗಿಲ್ಲ. ಸರಿಯಾಗಿ ಹಳೆಯ ಟ್ರ್ಯಾಕ್ಟರುಗಳು ಕೆಲಸಮಾಡುತ್ತಿಲ್ಲ, ಸರ್ಕಾರದವರು ಮೋಸ ಮಾಡಿದ್ದಾರೆ ಎಂದು ಅನೇಕ ಜನರಿಂದ ಅರ್ಜಿಗಳು ತಮಗೆ ಬಂದಿಲ್ಲವೆ ?

ಡಾ|| ಆರ್. ನಾಗನಗೌಡ.—ಈಗ ಮಾನ್ಯ ಸದಸ್ಯರು ಸರ್ಕಾರದವರು ಮೋಸಮಾಡಿದ್ದಾರೆಂದು ಹೇಳಿದರೆ ಬಹಳ ಉತ್ಪ್ರೇಕ್ಷೆಯಾಗುತ್ತದೆ, ಅದು ತಪ್ಪಾದೀತು.

ಶ್ರೀ ಎ. ಭೀಮಪ್ಪನಾಯಕ್.—ಅರ್ಜಿಯಲ್ಲಿ ಬರೆದಿರುವ ವಿಷಯ ಹೇಳುತ್ತಿದ್ದೇನೆ. ಕೆಟ್ಟಿದ್ದ ಕೆಲವು ಸಾಮಾನುಗಳನ್ನು, ಭಾಗಗಳನ್ನು ಸರಿಮಾಡಿ ಹಾಕಿ ಚೆನ್ನಾಗಿದೆಯೆಂದು ಸುಳ್ಳುಹೇಳಿ ಸ್ಟಾರ್ಟ್‌ಮಾಡಿ ಕಳುಹಿಸಿದ್ದಾರೆ, ಮೋಸಮಾಡಿದ್ದಾರೆ ಎಂದು ಅರ್ಜಿ ಕಳುಹಿಸಿ ಖುದ್ದಾಗಿ ಡೆಪ್ಯುಟೇಷನ್ ಸಹ ಬಂದು ಹೇಳಿಲ್ಲವೇ?

ಡಾ|| ಆರ್. ನಾಗನಗೌಡ.—ಈ ಟ್ರ್ಯಾಕ್ಟರುಗಳ ಧಾರಣೆ ಹೆಚ್ಚಾಗಿದೆಯೆಂದು ಕೆಲವರು ಹೋದವರ್ಷ ಮನವಿಮಾಡಿದರು. ಅದಕ್ಕಾಗಿ ಒಂದು ಸಮಿತಿ ಏರ್ಪಾಡುಮಾಡಿ ಈ ವಿಷಯ ಚರ್ಚೆಮಾಡಿ ಆ ತರುವಾಯ ಅವರಿಗೆ ರೀನ್ಯೂಡ್ ಟರ್ಮ್ಸ್ ಕೊಟ್ಟೆವು.

ಶ್ರೀ ಎ. ಭೀಮಪ್ಪನಾಯಕ್.—ಟ್ರ್ಯಾಕ್ಟರುಗಳ ಪರಿಸ್ಥಿತಿ ಹೇಗಿದೆಯೆಂಬುದನ್ನು ನೋಡಿ ಅದರ ಮೊಬಲಗನ್ನು ‘ರೈಟಾಫ್’ ಮಾಡಬೇಕು ಅಥವಾ ವಸೂಲು ಮಾಡಬೇಕು ಎಂದು ಟ್ರ್ಯಾಕ್ಟರ್ಸ್ ಸಮಿತಿ ಪರೀಕ್ಷಿಸಿ ವರದಿಮಾಡಿದೆಯೇ ?

ಡಾ|| ಆರ್. ನಾಗನಗೌಡ.—1951 ರಲ್ಲಿ ಈ ಟ್ರ್ಯಾಕ್ಟರುಗಳು ಬೇಕೆಂದು ಬಂದು ನೋಡಿ ಸ್ಟಾರ್ಟ್ ಮಾಡಿಸಿ ಖರೀದಿ ಮಾಡಿದರು. ಈಗ 1954-55ರಲ್ಲಿ ಅವು ಹೀಗಿವೆ, ಆದ್ದರಿಂದ ‘ರೈಟಾಫ್’ ಮಾಡಬೇಕೆಂಬುದನ್ನು ಆಲೋಚಿಸಬೇಕೆಂದರೆ ಅದು ವ್ಯವಹಾರಕ್ಕೆ ವಿರುದ್ಧವಾಗುತ್ತದೆ.

ಶ್ರೀ ಎ. ಭೀಮಪ್ಪನಾಯಕ್.—ಹೊಸ ಟ್ರ್ಯಾಕ್ಟರುಗಳನ್ನು ಕೊಟ್ಟಿದ್ದೀರಿ. ಅವುಗಳ ಕಂತುಗಳನ್ನಾದರೂ ಸರಿಯಾಗಿ ವಸೂಲು ಮಾಡುವುದಕ್ಕೆ ಪ್ರಯತ್ನಮಾಡಿದ್ದೀರಾ ?

ಡಾ|| ಆರ್. ನಾಗನಗೌಡ.—ಸ್ವಲ್ಪ ಸಂಖ್ಯೆ ಬಿಟ್ಟು ಮಿಕ್ಕವರೆಲ್ಲಾ ಮೊದಲನೆಯ ಕಂತನ್ನು ಕೊಟ್ಟಿದ್ದಾರೆ. ಪೂರ್ತಿಯಾಗಿ ಮೂರು ಮಂದಿ ಮಾತ್ರ ಕೊಟ್ಟಿಲ್ಲ. ಅದನ್ನು ವಸೂಲು ಮಾಡುತ್ತೇವೆ.

ಶ್ರೀ ಎ. ಭೀಮಪ್ಪನಾಯಕ್.—ಈ ರೀತಿಯಾಗಿ ವಸೂಲು ಮಾಡುತ್ತೇವೆಂದು ಹೇಳಿ ಕೊನೆಗೆ ರೈಟಾಫ್ ಮಾಡುವ ಪರಿಸ್ಥಿತಿಗೆ ತರುವುದಕ್ಕೆ ಬದಲಾಗಿ ಯಾವ ದಿವಸ ಕಂತು ನಿಂತಿತೋ ಆ ಕೂಡಲೆ ಕ್ರಮ ತೆಗೆದುಕೊಳ್ಳುವುದು ಸೂಕ್ತವಲ್ಲವೆ ?

9-30 A.M.

ಡಾ|| ಆರ್. ನಾಗನಗೌಡ.—ಈಗ 19 ಸಂದರ್ಭಗಳಲ್ಲಿ ಕ್ರಮ ತೆಗೆದುಕೊಂಡಿದ್ದಾರೆ. ಪೂರ್ಣವಾಗಿ ಏನೂ ಕೊಡದಿರುವ ಸಂದರ್ಭಗಳು ಮೂರು ಮಾತ್ರ ಇವೆ. ಅವರಮೇಲೆ ಕ್ರಮ ತೆಗೆದುಕೊಂಡು ನೋಟೀಸ್ ಕೊಟ್ಟಿದ್ದೇವೆ. ಇನ್ನೂ ಉಗ್ರ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನಮಾಡುತ್ತೇವೆ.

ಶ್ರೀ ಎ. ಭೀಮಪ್ಪನಾಯಕ್.—ಕ್ರಮವಾಗಿ ಯಾವ ಯಾವ ಕಂತುಗಳನ್ನು ವಸೂಲ್ಮಾಡಿದ್ದೀರಿ ಎನ್ನುವುದಕ್ಕೆ ನಿಮ್ಮಲ್ಲಿ ಅಂಥ ದಾಖಲೆ ಒಂದಾದರೂ ಇದೆಯೋ ಎನ್ನುವುದಕ್ಕೆ ಹೇಳಿ ನೋಡೋಣ.

Dr. R. NAGAN GOWDA.—I have got here a statement which says 'Due date' and 'Amount paid'.

ಶ್ರೀ ಎ. ಭೀಮಪ್ಪನಾಯಕ್.—ಅಂಥ ಬಾಕಿಗಳೊಂದನ್ನೂ ಕೂಡ ತಾವು ಆ 'ಡ್ಯೂಡೇಟ್'ಗೆ ಸರಿಯಾಗಿ ವಸೂಲ್ಮಾಡಿರತಕ್ಕಂಥ ಸಂದರ್ಭ ಈ 19 ಕೇಸುಗಳಲ್ಲಿ ಒಂದೂ ಇಲ್ಲ. ಅಲ್ಲವೇ ?

ಡಾ|| ಆರ್. ನಾಗನಗೌಡ.—ಆರೀತಿ ಏನೂ ಇಲ್ಲ. ಬಾಕಿವಸೂಲಾಗುತ್ತಿದೆ. 'Amount paid', from that I understand it has been paid.

ಶ್ರೀ ಎ. ಭೀಮಪ್ಪನಾಯಕ್.—ಈಗಲಾದರೂ ತಾವು ಆ ಹಳೇ ಟ್ರ್ಯಾಕ್ಟರುಗಳ ಪೈಕಿ ಯಾವ ಯಾವುವು ಕೆಲಸ ಮಾಡುತ್ತಿಲ್ಲವೋ ಅಂಥವುಗಳ ಬಗ್ಗೆ ಈ ಬಾಕಿಯನ್ನು ವಸೂಲ್ಮಾಡತಕ್ಕದ್ದು ಧರ್ಮವಲ್ಲ, ನ್ಯಾಯವಲ್ಲ ಎಂಬ ವಿಷಯಗಳನ್ನು ಪರಿಶೀಲಿಸಲು ತಾವು ಒಂದು ಸಮಿತಿಯನ್ನು ನೇಮಕ ಮಾಡಿ ಅವರಿಂದ ಒಂದು ವರದಿಯನ್ನು ತರಿಸಿಕೊಳ್ಳಲು ಪ್ರಯತ್ನ ಪಡುತ್ತೀರಾ ?

Dr. R. NAGAN GOWDA.—I said we had a committee last year and we have gone through the whole thing and we have done whatever was found reasonable and agreeable to the whole committee and the Government have accepted the results.

Mr. SPEAKER.—Question time is over.

QUESTIONS FOR ANSWERS ON THE DAY

(but not taken up).

Assistant Controllers (Eligibility List)

Q.—331. Sri B. T. KEMPARAJ (Bangalore South Scheduled Castes).—

Will the Government be pleased to state :—

(*a*) whether they have made appointments of Assistant Controllers according to eligibility list choosing from among the qualified persons in the Department ;

(SRI B, T. KEMPARAJ)

(b) whether the eligibility list prepared has already been exhausted ;

(c) whether they have thought of preparing an eligibility list as is done in the case of Amildars and other officers ;

(d) whether the eligibility list is prepared according to community representation ; if so, what is the proportion ?

A.—Sri K. HANUMANTHAIYA (Chief Minister).—

(a) Appointments have been made from the Selection and Seniority lists approved by the Public Service Commission.

(b) Yes.

(c) A Seniority List is under preparation.

(d) The question of communal proportion will not arise while making promotions on the principle of seniority *cum* merit.

Power Supply from Modaloor to Uligere in Sira Taluk.

Q.—363. Sri B. N. RAME GOWDA (Sira).—

Will the Government be pleased to state :—

(a) whether any estimate was prepared and sanctioned to supply power for irrigation from Modaloor to Uligere in Sira Taluk ;

(b) if so, whether the work has been started and at what stage it is ?

A.—Sri H. M. CHANNABASAPPA (Minister for Industries).—

(a) An estimate has been prepared, but not sanctioned.

(b) The work has not been started.

Harijans (Prevention in using Drinking Water wells in Sidlaghatta and Chikballapur Taluks)

Q.—451. Sri A. MUNIYAPPA (Sidlaghatta--Chikballapur—Scheduled Castes).—

Will the Government be pleased to state :—

(a) whether instructions have been given by them to their officers to see that the Harijans are allowed to take water from the drinking water wells ;

(b) the number of such wells in Sidlaghatta and Chikballapur Taluks from which the Harijans are permitted to use water (villagewar and talukwar details to be furnished) ;

(c) whether the occurance of any disturbances in this respect has come to their notice ; if so, the names of villages in which they occurred and the steps taken by them thereon ?

A.—Sri T. CHANNIAH (Minister for Public Health and Local Self-Government).

(a) Yes.

(b) They can draw water from all Government wells.

(c) No.

Electricity supply for I.P. Sets in Arakalavadi Circle, Chamarajanagar Taluk.

Q.—540. Sri U. M. MADAPPA (Chamarajanagar).—

Will the Government be pleased to state :—

(a) the various villages in Arakalavadi Circle, Chamarajanagar Taluk, the people of which have presented applications to the Electric Office in Gundlupet for supply of electricity to I.P. sets ;

(b) when the applications were presented ;

(c) the names of persons who have and those who have not given security deposits ;

(d) whether estimate has been prepared in this connection ;

(e) if so, the amount of the estimate ?

A.—Sri H. M. CHANNABASAPPA (Minister for Industries).—

(a) (1) Yanagahalli.

(2) Arakalavadi.

(b) Only a petition requesting for power supply to three applicants at Yanagahalli was received during September 1955.

Regular applications with deposits were received from seven applicants of Arakalavadi on 13th December 1955.

(c) *Names of persons who have paid the deposit* :—

Yanagahalli.—Nil.

Arakalavadi.—
Sriyuths.—
1 Siddanaika
2 Puttanaika
3 Veerappa
4 K. Channabasappa
5 Gurulingaiah
6 Ranganaika
7 Mallanaika

Names of persons who have not paid the deposit :—

Yanagahalli.—
Sriyuths.—
1 Linganaika
2 Subbanaika
3 Srimathi Nanjamma

Arakalavadi.—
Sriyuths.—
1 R. Channabasappa
2 Subbanna
3 Rudrappa
4 H. Belliappa
5 Do
6 Do

Sriyuths.—
7 U. M. Madappa
8 Kalappa

(d) No.

(e) Does not arise in view of reply to (d).

Tenancy Act in Kolar District.

Q.—573. Sri G. PAPANNA (Sidlaghatta—Chikballapur).—

Will the Government be pleased to state :—

(a) when the Tenancy Act came into force in Kolar District ;

(b) the number of cases launched in the district under this Act ;

(c) of these, the number of cases launched under the various categories ?

A.—Sri A. G. RAMACHANDRA RAO (Minister for Law and Education).—

(a) The Mysore Tenancy Act, 1952 came into force in the taluks of Bangarapet and Mulbagal on 1st August 1952, and in the other taluks on 1st January 1954.

(b) 625.

(c) *Vide* statement appended below

STATEMENT.

Serial No.	Name of Taluk	The number of cases launched under the various categories (Sections of the Act)						Total No. of Cases
		Section 12	Section 15	Section 22	Section 28	Section 29	Section 30	
1	Kolar ...	...	...	...	...	31	116	147
2	Bangarapet ...	1	7	6	1	25	80	120
3	Malur ...	1	1	...	...	8	34	44
4	Mulbagal ...	...	...	...	...	...	37	37
5	Srinivaspur ...	...	...	...	...	2	18	20
6	Chintamani ...	1	...	2	4	9	26	42
7	Chikballapur ...	1	...	...	...	18	77	96
8	Sidlaghatta ...	...	...	14	3	14	40	71
9	Gauribidanur ...	2	1	1	...	9	30	43
10	Bagepalli ...	...	...	...	2	3	...	5
11	Gudibanda ...	...	...	...	...	...	...	...

Inams Abolition Act (Implementation).

Q.—574. SRI G. PAPANNA (Sidlaghatta—Chikballapur).—

Will the Government be pleased to state:—

(a) when the Inams Abolition Bill was passed; and when it came into force;

(b) the time required for abolishing jodi and inams in the State?

A.—SRI A. G. RAMACHANDRA RAO (Minister for Law and Education).—

(a) The Mysore (Personal and Miscellaneous) Inams Abolition Act 1954, received the assent of the President on 15th March 1955.

It has not yet come into force.

The Mysore (Religious and Charitable) Inams Abolition Act received the assent of the President on 19th August 1955. It has also not been brought into force.

(b) Before implementing the Inams Abolition Acts in full, the Inam Villages which are not surveyed and settled, have to be surveyed and settled. Considering the nature of the work involved, it will take not less than 5 years.

Medical Graduates and L.M.P's. (Scales of pay).

Q.—582. SRI Y. M. CHANDRASEKHARIAH (Kadur).—

Will the Government be pleased to state:—

(a) the scales of pay of the M. B. B. S. doctors;

(b) the scales of pay of the L.M.P. doctors;

(c) the number of L.M.P. Government doctors who have passed M.B.B.S.;

(d) whether these L.M.P. doctors are being given the grade of M.B.B.S. doctors immediately after they pass M.B.B.S.;

(e) the number of doctors to whom this scale of pay is given?

A.—SRI T. CHANNIAH (Minister for Public Health and Local Self-Government).—

(a) Medical Graduates in the Medical Department are appointed as Assistant Surgeons, Grade II (erstwhile Medical Probationers) on Rs. 100 P.M. in grade Rs. 100-10-150 and after one year as and when vacancies occur they will be absorbed as Assistant Surgeons Grade I on Rs. 150-10-250-20-450.

Medical Graduates in the Public Health Department are appointed on Rs. 150 P.M. as Health Probationers for one year and thereafter they will be absorbed as Second Class Health Officers in grade Rs. 200-10-300-20-500.

(b) L.M.Ps are started as Assistant Surgeons, Grade III on Rs. 75-5-150-10-200 in the Medical Department and as Third Class Health Officers on Rs. 100-5-175-10-225 in the Public Health Department.

(c) Seventeen in the Medical Department and three in the Public Health Department.

(d) No. They will have to take their chance along with the other M.B.B.S. Graduates, when vacancies are advertised by the Public Service Commission.

(e) Does not arise in view of reply to clause (d).

Power Supply for Solur and Gudemaranahalli.

Q.—613. SRI S. SIDDAPPA (Magadi).—

Will the Government be pleased to state:—

(a) whether they are aware that Solur and Gudemaranahalli of Magadi Taluk are thickly populated villages having a population of over two and a half thousand;

(b) whether much inconvenience is not being felt by people for want of electricity;

(c) whether they would supply electric power this year alone?

A.—Sri H. M. CHANNABASAPPA (Minister for Industries).—

(*a*) The population figures of these two places as per 1951 Census are as follows:—

Solur ...	2,019
Gudemaranahalli ...	2,115

(*b*) This is a matter of opinion.

(*c*) No.

9-30 A.M.

BUDGET FOR 1956-57—DEMANDS FOR GRANTS.

Mr. SPEAKER.—We have got four Demands—Nos. 8, 37, 39A and 40. All of them can be taken up together.

DEMAND No. 8—IRRIGATION

18. OTHER REVENUE EXPENDITURE FINANCED FROM ORDINARY REVENUE.

Mr. SPEAKER.—Motion moved:

"That a sum not exceeding Rs. 77,96,000 be granted to the Government to defray the charges which will come in course of payment during the year ending 31st day of March 1957, in respect of 'Other Revenue Expenditure financed from Ordinary Revenue'."

*ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ-ಅನುಸೂಚಿತ ಜಾತಿಗಳು).—ಸ್ವಾಮಿ, ಈ ಹಿಂದೆ ಕೆರೆಗಳ ಮತ್ತು ನಾಲೆಗಳ ದುರಸ್ತಿ ಕಾಂಗಾರಿಯನ್ನು ರೆವಿನ್ಯೂ ಇಲಾಖೆಯವರ ಮೂಲಕ ನಡೆಸಿಕೊಂಡು ಬರಲಾಗುತ್ತಿತ್ತು. ಆ ಪದ್ಧತಿಗನುಗುಣವಾಗಿ ಒಂದು ಟ್ಯಾಂಕ್ ಪಂಚಾಯಿತಿ ಎಂಬುದೂ ಕೂಡ ಜಾರಿಯಲ್ಲಿತ್ತು. ಆದರೆ ಅವುಗಳೆಲ್ಲಾ ಈ ದಿವಸ ಇವೆಯೋ ಅಥವಾ ಇಲ್ಲವೋ ಅಥವಾ ಆ ಕೋಡನ್ನೇ revise ಮಾಡಿದ್ದಾರೋ ಒಂದೂ ನನಗೆ ಗೊತ್ತಾಗುತ್ತಿಲ್ಲ. ಈ ಹಿಂದೆ ಆ ಹಳ್ಳಿ ಜನರಿಗೆ ಈ ಕೆರೆಗಳಲ್ಲಿರತಕ್ಕ ಹೂಳನ್ನೂ ಗೋಡನ್ನೂ ತೆಗೆಯುವುದಕ್ಕೂ ಮತ್ತು ಏರಿಗಳನ್ನು ದುರಸ್ತಿ ಮಾಡುವುದಕ್ಕೂ ಒಂದು ಅವಕಾಶ ಕೊಟ್ಟು ಆ ಬಗ್ಗೆ ಜನರಿಗೆ ಆಯಾಯ ಕೆರೆಗಳಲ್ಲಿ ಉಚಿತವಾಗಿ ಮೀನು ಹಿಡಿಯತಕ್ಕಂಥ ಒಂದು ಅವಕಾಶವನ್ನು ಕೊಡುತ್ತಿದ್ದರು. ಅದಕ್ಕಾಗಿ ಆ ದಿವಸ ರೈತರೆಲ್ಲಾ ವರ್ಷದಲ್ಲಿ ಒಂದು ಕಾಲವನ್ನು ಕ್ಲುಪ್ತಮಾಡಿಕೊಂಡು ಆ ವೇಳೆಗೆ ಸರಿಯಾಗಿ ಆ ಕೆರೆಯ ಹೂಳು ತೆಗೆಯುವುದು ಮತ್ತು ಏರಿ ಪೇರಿ ಇತ್ಯಾದಿ ಕೆಲಸಗಳನ್ನು ನಡೆಸಿಕೊಂಡು ಬರತಕ್ಕಂಥ ಒಂದು ಪದ್ಧತಿ ಬಹಳಕಾಲದ ವರೆಗೂ ಜಾರಿಯಲ್ಲಿತ್ತು. ಆದರೆ ಈ ಹೊತ್ತು ಈ ಪದ್ಧತಿಯಂತೂ ನಮ್ಮ ಕಡೆ ಮಾಯವಾಗಿಹೋಗಿದೆ.

ಇನ್ನು ಹಿಕ್ಕಲ್‌ಗಳನ್ನು ರಕ್ಷಿಸಿಕೊಂಡು ಬರುವ ವಿಚಾರದಲ್ಲಿ ಎರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಈ ಹಿಕ್ಕಲ್‌ಗಳನ್ನು ಒಂದು ಕ್ರಮದಲ್ಲಿ ರಿಪೇರಿ ಮಾಡುತ್ತಿದ್ದರೆ ನೀರು ಲುಕ್ಸಾನಾಗುವುದಕ್ಕೆ ಅವಕಾಶ ವಿರುವುದಿಲ್ಲ. ಜನರಿಗೆ ನೀರು ಸರಬರಾಯಿ ಮಾಡಲು ಯಾವ ತೊಂದರೆಯೂ ಇರುವುದಿಲ್ಲ. ಹೀಗೆ ಇಷ್ಟು ಅನುಕೂಲವಿದೆ. ಆದುದರಿಂದ ಸರ್ಕಾರದವರು ಹಿಕ್ಕಲುಗಳನ್ನು ಮತ್ತು ಕೆರೆಗಳನ್ನು ದುರಸ್ತಿ ಮಾಡಲು ಸಾಕಷ್ಟು ಹಣವನ್ನು ಉದಾರವಾಗಿ ಒದಗಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಸಲಹೆ ಮಾಡುತ್ತೇನೆ. ಆದರೆ ಈ ವರ್ಷದ ಕಾರ್ಯಕ್ರಮಗಳಲ್ಲಿ ಇಂಥ ಒಂದು ಬಾಬನ್ನೂ ತಾವು ಸೇರಿಸಿರುವಂತೆ ಕಂಡು ಬರುವುದಿಲ್ಲ. ಇನ್ನು ಚಾನಲ್‌ಗಳ ಮತ್ತು ಕೆರೆಗಳ ಬಗ್ಗೆ ರಿಪೇರಿ ನಡೆಸುವ ಸಂದರ್ಭಗಳಲ್ಲಿ ಕಂಟ್ರಾಕ್ಟರುಗಳೂ ಮತ್ತು ಸಬ್-ಓವರ್‌ಸೀಯರುಗಳೂ ಸರಿಯಾದ ಕಾರ್ಯಕ್ರಮಗಳನ್ನು ಕೈಗೊಂಡು ಕೆಲಸ ನಡೆಸುತ್ತಿಲ್ಲ. ಇನ್ನು ಮುಂದೆ ಆದರೂ ತಾವು ಕಂಟ್ರಾಕ್ಟರುಗಳಿಗೆ ಆಫೀಸರು ಬಿಲ್ಲನ್ನು ಪಾಸ್ ಮಾಡುವ ವೇಳೆಯಲ್ಲಿ ನಾಲೆ ರಿಪೇರಿಗಳನ್ನು ಸರಿಯಾಗಿ ನಡೆಸಿದ್ದಾರೆಯೇ ಅಥವಾ ಇಲ್ಲವೇ ಎಂಬುದನ್ನು ಪರಿಶೀಲನೆ ನಡೆಸಿದನಂತರ ಹಣವನ್ನು ಪಾವತಿ ಮಾಡುವಂತೆ ಒಂದು ನಿಬಂಧನೆಯನ್ನು ಮಾಡಿ, ರೈತರಿಗೆ ಅನುಕೂಲ ಒದಗಿಸುವುದರ ಜೊತೆಗೆ ನೀರೂ ಸಹ ಲುಕ್ಸಾನಾಗದಂತೆ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ಸೂಚಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಟಿ. ಎಸ್. ಮೂಡಲಗಿರಿಗೌಡ (ಕುಣಿಗಲ್).—ಸ್ವಾಮಿ, ಪ್ರಥಮ ಪಾಂಚವಾರ್ಷಿಕ ಯೋಜನೆಯಲ್ಲಿ ಕೆಲವು ಮೈನರ್ ಟ್ಯಾಂಕುಗಳ ರೆಸ್ಟೋರೇಷನನ್ನು ಮಾಡಿದ್ದೇವೆಂದು ತಿಳಿಸಿದ್ದಾರೆ. ಇಷ್ಟೇ ಅಲ್ಲದೆ ಇದರ ಜೊತೆಗೆ ಕೆಲವು ಮೇಜರ್ ಕೆರೆಗಳ ರಿಪೇರಿಯನ್ನೂ ಸಹ ಮಾಡಿದ್ದೇವೆಂದು ಹೇಳಿ ಆ ಬಗ್ಗೆ ಕೆಲವು ಅಂಕಿ ಅಂಶಗಳನ್ನು ಕೂಡ ತಿಳಿಸಿದ್ದಾರೆ. ಇಷ್ಟಾಗಿದ್ದರೂ ವರ್ಷ ವರ್ಷ ಈ ಕೆರೆಗಳ ರಿಪೇರಿ ಜಾಸ್ತಿ ಆಗುತ್ತಿದೆಯೇ ವಿನಾ ಅದೇನೂ ಇಳಿಮುಖವಾಗುತ್ತಿಲ್ಲ. ಹಿಂದೆ ಡಿಸ್ಟ್ರೆಸ್ ರಿಲೀಫ್ ಕಾಂಗಾರಿಗಳನ್ನು ನಡೆಸುತ್ತಿದ್ದಂಥ ಕಾಲದಲ್ಲಿ ಜನರಿಗೆ ಜೀವನಕ್ಕೆ ಮಾರ್ಗವಿಲ್ಲದೆ ಇದ್ದುದರಿಂದ ಅವರಿಗೆ ಕೂಲಿನಾಲಿಗಳನ್ನು ಕೊಡಬೇಕಾದ ಸಂದರ್ಭಗಳು ಉಂಟಾದ್ದರಿಂದ ಈ ರೀತಿಯಾಗಿ ಕೆಲವು ಕೆರೆಗಳ ರಿಪೇರಿ ಇತ್ಯಾದಿ ಕಾರ್ಯಗಳನ್ನು ಕೈಗೊಳ್ಳಲಾಗಿತ್ತು. ಅಂಥ ಕೆಲಸಗಳನ್ನೇ ಈ ದಿವಸ ಸರ್ಕಾರದವರು ಲೆಕ್ಕಕ್ಕೆ ತೆಗೆದುಕೊಂಡು ನಾವು ಕೆರೆಗಳ ರೆಸ್ಟೋರೇಷನ್ ಕಾರ್ಯವನ್ನು ಮುಗಿಸಿದ್ದೇವೆ ಎಂದು ತಿಳಿಸಿದ್ದಾರೆ. ಈ ಬಗ್ಗೆ ಬಡ್ಜೆಟ್ಟಿನಲ್ಲೂ ಕೂಡ ತೋರಿಸಿದ್ದಾರೆ. ಆದರೆ ಈ ರೆಸ್ಟೋರೇಷನ್ ಎಂದರೆ ಇದರ ಬಗ್ಗೆ ಏನೇನು ಕೆಲಸಗಳು ನಡೆಯಬೇಕಾಗಿತ್ತು, ಏನೇನು ಕೆಲಸಗಳು ಪೂರೈಸಿದ್ದರೆ ಅದನ್ನು ರೆಸ್ಟೋರೇಷನ್ ಎಂದು ಕರೆಯಲು ಅವಕಾಶವಾಗುತ್ತಿತ್ತು ಎನ್ನುವ ಅಂಶಗಳಿಗೊಂದಕ್ಕೂ ಇವರು ಪ್ರಾಮುಖ್ಯತೆಯನ್ನು ಕೊಟ್ಟಿಲ್ಲ. ಎಲ್ಲೋ ಅಲ್ಲೊಂದು ಕಡೆ-ಇಲ್ಲೊಂದು ಕಡೆ ಸ್ವಲ್ಪ ಮಣ್ಣನ್ನೆತ್ತಿ ಏರಿಗೆ ಹಾಕಿದ್ದನ್ನೂ ಸಹ ಲೆಕ್ಕಕ್ಕೆ ತೆಗೆದುಕೊಂಡು ಇದನ್ನೂ ಕೆರೆ ರಿಪೇರಿ ಎಂದು ಕರೆದಿದ್ದಾರೆ. ಆದರೆ ಮೊದಲು ಆ ಕೆರೆಯಲ್ಲಿ ನೀರು ಎಷ್ಟು ನಿಲ್ಲುತ್ತಿತ್ತು, ರಿಪೇರಿ ನಡೆಸಿದ್ದರಿಂದ ಎಷ್ಟು ನೀರು ಹೆಚ್ಚಾಗಿ ನಿಲ್ಲುತ್ತದೆ ಎಂಬುದನ್ನೇನೂ ಇವರು ಲೆಕ್ಕ ಹಾಕಿದಂತೆ ಕಂಡುಬರುವುದಿಲ್ಲ. ಅಂತೂ ಲೆಕ್ಕಕ್ಕೆ ಮಾತ್ರ ಆ ಕೆರೆಗೆ 10 ಸಾವಿರ ಖರ್ಚು ಮಾಡಿದ್ದೇವೆ, ಈ ಕೆರೆಗೆ ಐದು ಸಾವಿರ ರೂಪಾಯಿಗಳನ್ನು ಖರ್ಚು

(ಶ್ರೀ ಟಿ. ಎಸ್. ಮೂಡಲಗಿರಿಗೌಡ.)

ಮಾಡಿದ್ದೇವೆ ಎಂದು ಹೇಳುತ್ತಿದ್ದಾರೆ. ಇದನ್ನು ಕೆರೆಗಳ ಜೀರ್ಣೋದ್ಧಾರವೆಂದು ಕರೆದರೆ ಅದು ಅರ್ಥವಿಲ್ಲದ ಮಾತು. ಆದರೆ ಈ ದಿವಸ ಇವರು ಯಾವ್ಯಾವ ಕೆರೆಗಳನ್ನು ಹೇಗೆ ಜೀರ್ಣೋದ್ಧಾರ ಮಾಡಿದ್ದಾರೋ ಆ ಕೆರೆಗಳಲ್ಲೆಲ್ಲಾ ಮೊದಲು ನೀರು ನಿಲ್ಲುತ್ತಿದ್ದುದಕ್ಕಿಂತ ಈ ದಿವಸ ಜಾಸ್ತಿ ನೀರೇನೂ ನಿಲ್ಲಲು ಅವಕಾಶ ಮಾಡಿಲ್ಲ. ಆ ಹಳೆ ಕೆರೆಗಳ ಹಿಂದೆ ಇದ್ದ ಅಚ್ಚುಕಟ್ಟು ಪ್ರದೇಶದಲ್ಲಿ ಸರಿಯಾಗಿ ಸಾಗುವಳಿ ಆಗುತ್ತಿಲ್ಲ. ಕಾಲು ಭಾಗ ಜಮೀನುಗಳಿಗೆ ವರ್ಷಾಖೈರಿನಲ್ಲಿ ನೀರು ಸಾಲದೆ ಬಂದು ಅವುಗಳಲ್ಲೆಲ್ಲಾ ಪೀಕು ನುಕಿ ಆಗುತ್ತಿದೆ; ಏನೋ ಅವರ ಪುಣ್ಯಕ್ಕೆ ಸರಿಯಾಗಿ ಅಪ್ಪಿತಪ್ಪಿ ಒಂದೆರಡು ಹದ ಮಳೆಯೇನಾದರೂ ಆಖೈರಿನಲ್ಲಿ ಬಿದ್ದರೆ ಆಗ ಬೆಳೆಗಳು ಸರಿಯಾಗಿ ಆಗುತ್ತವೆ. ಆದುದರಿಂದ ಕೆರೆ ತುಂಬಿದೆಯೆಂಬ ಆಧಾರದ ಮೇಲೆ ಈ ದಿವಸ ಎಲ್ಲ ಅಚ್ಚುಕಟ್ಟಿನಲ್ಲೂ ಪೂರ್ತಿ ಬೆಳೆಯನ್ನು ತೆಗೆಯುತ್ತೇವೆಂಬ ಭರವಸೆ ಯಾವ ಕೆರೆಯ ಕೆಳಗೂ ಇಲ್ಲ. ಹೀಗಿರುವಾಗ ನಾವು ಪ್ರಥಮ ಪಾಂಚವಾರ್ಷಿಕ ಯೋಜನೆಯಲ್ಲಿ ಕೆರೆಗಳ ರಿಪೇರಿ ಕಾರ್ಯ ನಡೆಸಿದ್ದೇವೆಂದು ಹೇಳುವುದಕ್ಕೂ ಒಂದು ಅರ್ಥವಿರಬೇಕು. ರಿಪೇರಿ ಮಾಡಿದನಂತರ ಆ ಕೆರೆಗಳಿಗೆ ಇಷ್ಟಿಷ್ಟು ಕೆಪ್ಯಾಸಿಟಿ (capacity) ಯನ್ನು ಹೆಚ್ಚಿಸಿದ್ದೇವೆಂದು ಹೇಳಿದರೆ ಅದಕ್ಕೆ ಒಂದು ಅರ್ಥವಿದೆ. ಆದರೆ ಆ ರೀತಿ ಏನೂ ಈ ದಿವಸ ಕೆಲಸ ನಡೆದಿಲ್ಲ. ಈಗ ನಾವು ಮೇಜರ್ ಕೆರೆಗಳ ವಿಚಾರ ತೆಗೆದುಕೊಳ್ಳೋಣ. ಈ ಕೆರೆಗಳ ರೆಸ್ಟೋರೇಷನ್‌ಗಳ ವಿಚಾರದಲ್ಲಿ ಆ ಕೆರೆಗಳ ಅಂದಾಜು 10-15 ವರ್ಷಗಳಾದರೂ ಮಂಜೂರಾಗಿ ಬರುತ್ತಿಲ್ಲ. ತುಂಬ ನಿಧಾನವಾಗುತ್ತಿದೆ. ಕಾಂಗಾರಿಗಳ ಎಸ್ಟಿಮೇಟನ್ನು ತಯಾರಿಸಿದ್ದ ಕಾಲದಲ್ಲಿ ಇದ್ದ ರೇಟಿಗೂ, ಕಾಂಗಾರಿಯನ್ನು ಕೈಕೊಂಡ ಕಾಲದಲ್ಲಿದ್ದ ರೇಟಿಗೂ ವಿಶೇಷ ವ್ಯತ್ಯಾಸವಿದ್ದು ಈ ದಿವಸ ಆ ಕೆಲಸಗಳನ್ನು ನಡೆಸಬೇಕೆಂದರೆ ಅದು ಖಂಡಿತ ಸಾಧ್ಯವಾಗುವುದಿಲ್ಲ. ರೇಟುಗಳು ದಿನದಿನಕ್ಕೂ ಬದಲಾವಣೆ ಆಗುತ್ತಿರುತ್ತವೆ. ಅದಕ್ಕಾಗಿ ಆ ಅಂದಾಜುಗಳನ್ನು ಪುನಃ ಪರಿಶೀಲನೆಗಾಗಿ ಕಳುಹಿಸಿದರೆ ಆ ವೇಳೆಯಲ್ಲಿ ಈಗಿನ ರೇಟುಗಳ ಪ್ರಕಾರ ಈ ಕೆಲಸವನ್ನು 'ಕೈಗೊಳ್ಳಲು ಬಹಳ ಹಣ ಬೇಕಾಗುತ್ತದೆ; ಆದ್ದರಿಂದ ಈ ಕೆಲಸ ಸಾಧ್ಯವಲ್ಲ, ವರ್ಕಬಲ್ ಅಲ್ಲ ಎಂದು ಹೇಳಿ ಆ ಕೆಲಸವನ್ನೇ ಕೈಬಿಟ್ಟುಬಿಡುತ್ತಿದ್ದಾರೆ. ಸರ್ಕಾರಕ್ಕೆ ಈ ಕೆಲಸಗಳನ್ನು ಕೈಗೊಳ್ಳಲು ಎಷ್ಟು ಪರ್ಸೆಂಟ್ ಇವರಿಗೆ ಬರಬೇಕೋ ಅಷ್ಟು ಬಂದರೇನೇ ಕೆಲಸವನ್ನು ಕೈಗೊಳ್ಳಲಾಗುತ್ತದೆ, ಇಲ್ಲದಿದ್ದರೆ ಸಾಧ್ಯವಿಲ್ಲವೆಂದು ಹೇಳತಕ್ಕದ್ದು ಅನೇಕ ಸಂದರ್ಭಗಳಲ್ಲಿ ವ್ಯಕ್ತಪಟ್ಟಿರುತ್ತದೆ. ಈ ವಿಚಾರದಲ್ಲಿ ನಾವು ಎಷ್ಟೋ ವೇಳೆ ಈ ಸಭೆಯಮುಂದೆ ಈ ವಿಚಾರಗಳನ್ನೆಲ್ಲಾ ಹೇಳಿದ್ದೇವೆ. ಆದರೆ ಕೆಲಸಗಳೇನೂ ಉತ್ತಮಗೊಂಡಿಲ್ಲ.

ಹೀಗಾಗಿ ಪರಿಸ್ಥಿತಿ ಏನಾಗಿದೆ ಎಂದರೆ, ನಮ್ಮ ಕೆರೆಗಳ ಜೀರ್ಣೋದ್ಧಾರ ಮಾಡಬೇಕಾಗಿದ್ದರೆ, ಅದನ್ನು ಸರಿಯಾದ ಪರಿಸ್ಥಿತಿಯಲ್ಲಿ ತರಬೇಕಾಗಿದ್ದರೆ ಯಾವ ರೀತಿಯಾಗಿ ಸರ್ಕಾರದಲ್ಲಿ ಪ್ರಯೋಗ ಶಾಲೆಯನ್ನು ನಡೆಸಬೇಕು, ಯಾವ ರೀತಿ ಮಾಡಿದರೆ ಕೆರೆ ಜೀರ್ಣೋದ್ಧಾರವಾದೀತು ಎಂದು ಹೇಳಿ ಜನಗಳು ಅಲೆದಾಡುತ್ತಿರುವುದಾಗಿದೆ. ಯಾವುದಾದರೂ ಒಂದು ಕೆರೆಯ ಜೀರ್ಣೋದ್ಧಾರವಾಗಬೇಕಾಗಿದ್ದರೆ ಅದರ ಅಂದಾಜು ಮಂಜೂರಾಗಿ ಬರಲು ಅದರ ಹಿಂದೆಯೇ ತಿರುಗಬೇಕು. ಆ ಕಾಗದ ಎಲ್ಲಿ ಹೋಯಿತು, ಎಲ್ಲಿ ಇದೆ, ಏನು ಕ್ವೆರಿ ಹಾಕಿದ್ದಾರೆ, ಏನು ಸಮಾಧಾನ ಹೇಳಬೇಕು ಎಂದು ಹೇಳಿ ಆಸಕ್ತಿವುಳ್ಳವರು ಆ ಎಸ್ಟಿಮೇಟಿನ ಹಿಂದೆಯೇ ಪ್ರವೇಶ ಮಾಡಿದ್ದೇ ಆದರೆ ಆ ಎಸ್ಟಿಮೇಟು ಏನಾದರೂ ಒಂದು ರೂಪಕ್ಕೆ ಬರುತ್ತದೆಯೇ ಹೊರತು ಇಲ್ಲದೆ ಹೋದರೆ ಅದು ಅತ್ಯುತ್ತಮವಾದ ರಿಟರ್ನ್ ಹೆಚ್ಚಿಗೆ ಬರತಕ್ಕ ಅಂದಾಜಾಗಿದ್ದರೂ ಕೂಡ ಒಂದು ನಿಗದಿ ಆದಂಥ ಕಾಲದಲ್ಲಿ ಮಂಜೂರಾಗಿ ಬರುತ್ತದೆ ಎಂದು ಇಲ್ಲವೇ ಇಲ್ಲ. ಇದು ಅನೂಚಾನವಾಗಿ ಬಂದಿರತಕ್ಕದ್ದು. ಇವತ್ತು ಹಾಗೆಯೇ ನಡೆದುಕೊಂಡು ಹೋಗುತ್ತ ಇದೆ. ಹೀಗಾಗಿ ಈ ಕೆರೆಗಳ ಜೀರ್ಣೋದ್ಧಾರ ಕಾರ್ಯ ಯಾವುದೋ ಕಾಲದಲ್ಲಿ ನಡೆದಂಥಾ ಕೆಲಸಗಳನ್ನು ಇವತ್ತು ನಮ್ಮ ಮುಂದೆ ಇಡುತ್ತಾ ಇದ್ದಾರೆಯೇ ಹೊರತು ಮೂರು ನಾಲ್ಕು ವರ್ಷಗಳಿಂದ ವ್ಯವಸ್ಥಿತವಾದ ಒಂದು ಪ್ಲಾನ್ ಹಾಕಿಕೊಂಡ ಇಷ್ಟೇ ವರ್ಷಗಳ ಕಾಲದಲ್ಲಿ ಇಂಥಿಂಥ ಕಾಲದಲ್ಲಿ ಇಂಥಿಂಥಾ ಕಾನ್‌ಸ್ಟಿಟ್ಯೂಯನ್ಸಿಯಲ್ಲಿ ಇಷ್ಟಿಷ್ಟು ಮೈನರ್ ಕೆರೆಗಳು ಮತ್ತು ಮೇಜರ್ ಕೆರೆಗಳನ್ನು ರೆಸ್ಟೋರ್ ಮಾಡಿದ್ದೇವೆ ಎಂದು ಧೈರ್ಯವಾಗಿ ಹೇಳುವಷ್ಟು ಅಂಕಿ ಅಂಶ ಅವರಲ್ಲಿ ಈ ದಿನ ಇಲ್ಲ ಎಂದು ಹೇಳುತ್ತೇನೆ. ಮೇಜರ್ ಕೆರೆಗಳಲ್ಲಿ ಜಮೀನಿಗೆ ಸಾಕಾಗುವಷ್ಟು ಸಂಪೂರ್ಣವಾಗಿ ನೀರು ಇದ್ದು ಅವಕಾಶವಿದ್ದರೂ ಕೂಡ ಇವತ್ತಿನ ದಿವಸ ಏನಾಗಿದೆ ಎಂದರೆ ಅವನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳತಕ್ಕ ಏರ್ಪಾಡು ಮಾಡದೇಯಿರುವುದರಿಂದ ಆ ನೀರು ಜಮೀನಿನ ಉಪಯೋಗಕ್ಕೆ ಬರುವುದರ ಬದಲು ಹಳ್ಳಗಳಿಗೆ ಹರಿದು ಹೊರಟು ಹೋಗಿ ನೀರು ಸಾಲುವುದಿಲ್ಲ ಎನ್ನತಕ್ಕ ಪರಿಸ್ಥಿತಿ ಬಂದಿದೆ. ಇದನ್ನು ನಾವು ಬಹಳ ವರ್ಷಗಳಿಂದಲೂ ಹೇಳುತ್ತಾ ಇದ್ದೇವೆ. ಮೇಜರ್ ಕೆರೆಗಳಲ್ಲಿರತಕ್ಕ ನೀರನ್ನು ಸದುಪಯೋಗಪಡಿಸಿಕೊಳ್ಳಲಿಕ್ಕೆ ಒಂದು ಏರ್ಪಾಡನ್ನು ಮಾಡಬೇಕು. ಕಾಲುವೆಗಳು, ಮಡಬಾಯಿಗಳಿಂದ ನೀರು ಹರಿದು ಹೋಗಿ ಹಳ್ಳಕ್ಕೆ ಬೀಳದಂತೆ ತಕ್ಕ ವ್ಯವಸ್ಥೆ ಮಾಡಬೇಕೆಂದು ಬಹಳ ದಿವಸಗಳಿಂದ ಹೇಳುತ್ತಾ ಇದ್ದೇವೆ. ಆ ಕಡೆಗೆ ಗಮನ ಕೊಟ್ಟಿಲ್ಲ. ಯಾವ ಒಂದು ಮೇಜರ್ ಕೆರೆಯನ್ನು ನೋಡಿದರೂ ಕೂಡ ಅದಕ್ಕೆ ಸರಿಯಾದ ಒಂದು ಕಾಲುವೆ ಆಗಲಿ, ಮಡಬಾಯಿ ಆಗಲೀ ಇಲ್ಲ. ಪೂರ್ವದಲ್ಲಿ ಯಾರೋ ಮಹನೀಯರು ಕಟ್ಟಿಸಿದ ಕೆರೆ, ಆ ಕೆರೆಯ ನೀರನ್ನು ಆ ಕಾಲಕ್ಕೆ ಉಪಯೋಗಿಸಿಕೊಳ್ಳಲಿಕ್ಕೆ ತಕ್ಕ ಒಂದು ಕಾಲುವೆ, ಯಾವುದು ಮಾಡಲಾಗಿತ್ತೋ ಅದು ಇವತ್ತೂ ಉಪಯೋಗದಲ್ಲಿದೆ. ಅದೇ ರೀತಿ ವ್ಯವಸಾಯ ಮಾಡುತ್ತಾ ಇದ್ದೇವೆ. ಸರ್ಕಾರದವರು ಕಂದಾಯವನ್ನು ಮಾತ್ರ ಏರಿಸಿ ವಸೂಲು ಮಾಡಿಕೊಂಡು ಬರುತ್ತಾ ಇದ್ದಾರೆ. ಮೊನ್ನೆ ನಾಗವಲ್ಲಿ ಮೇಜರ್ ಕೆರೆಯನ್ನು ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಬಂದು ನೋಡಿದರು. ನೋಡಿದಂಥಾ ಕಾಲದಲ್ಲಿ ಅಲ್ಲಿ ಹೇಗೆ ನೀರು ತೂಬಿನಿಂದ ಬಿಟ್ಟರೆ ಅದರ ಪಕ್ಕದಲ್ಲಿದ್ದ ಹಳ್ಳಕ್ಕೆ ಹೋಗುತ್ತ ಇತ್ತು ಎಂಬುದು ಅವರ ಗಮನಕ್ಕೆ ಬಂದಿದೆ. ಹೀಗೆ ಪ್ರತಿಯೊಂದು ಮೇಜರ್ ಕೆರೆಯ ಕೆಳಗೂ ಕೂಡ ನೀರು ಸಿಕ್ಕಿದ ಕಡೆಯಲ್ಲಿ ಹರಿದು ಹೋಗುತ್ತಾ ಇದೆ. ಹೊಸದಾಗಿ ಕಟ್ಟಿದಂಥಾ ಯಾವ ಕೆರೆಗಳು ಮತ್ತು ರಿಸರ್ವಾಯರುಗಳಿವೆಯೋ ಅವನ್ನು ಪಬ್ಲಿಕ್‌ವರ್ಕ್ಸ್ ಇಲಾಖೆಯವರು ತಾವಾಗಿಯೇ ನೇರವಾಗಿ ತೆಗೆದುಕೊಂಡು ಅಡ್ಮಿನಿಸ್ಟರ್ ಮಾಡತಕ್ಕಂಥ, ಕೆಲವು ಕೆರೆಗಳನ್ನು ಬಿಟ್ಟರೆ ಬಾಕಿ ಎಲ್ಲಾ ಕೆರೆಗಳೂ ಕೂಡ ಇವತ್ತಿನ ದಿವಸ ಬಹಳ ದುರುಪಯೋಗವಾದ ಮತ್ತು ಅಷ್ಟೇ ನಿಷ್ಪ್ರಯೋಜಕವಾದ ಪರಿಸ್ಥಿತಿಯಲ್ಲಿ ಇವೆ. ಅದಕ್ಕೆ

ಸರ್ಕಾರದವರು ಎಲ್ಲಾ ಮೇಜರ್ ಕೆರೆಗಳನ್ನೂ ಎಂದರೆ 300 ಎಕರೆ ಅಂತಲಾದರೂ ಮಾಡಿ, 400 ಎಕರೆ ಅಂತಲಾದರೂ ಮಾಡಿ, ಯಾವುದಾದರೂ ಒಂದು ನಿರ್ದಿಷ್ಟವಾಡಿ, 300 ಅಥವಾ 400 ಎಕರೆಗಳಿಗಿಂತ ಮೇಲ್ಪಟ್ಟ ಅಚ್ಚುಕಟ್ಟು ಇರುವ ಎಲ್ಲಾ ಕೆರೆಗಳನ್ನೂ ಮೇಜರ್ ಕೆರೆಗಳು ಎಂದು ಭಾವಿಸಿ ಆ ಮೇಜರ್ ಕೆರೆಗಳ ನೀರನ್ನು ಹಂಚಿಕೆ ಮಾಡುವುದು, ಕೆರೆಗಳನ್ನು ಮೇಂಟೇನ್ (maintain) ಮಾಡುವುದು ಇದೆಲ್ಲವನ್ನು ಕೂಡ ಪಬ್ಲಿಕ್‌ವರ್ಕ್ಸ್ ಇಲಾಖೆಯುವರೇ ತೆಗೆದುಕೊಳ್ಳ ಬೇಕು. 2000 ಎಕರೆ ಜಮೀನು ಸಾಗುವಳಿ ಇದ್ದರೂ ಕೂಡ ಅದು ರೆವಿನ್ಯೂ ಅಡ್ಮಿನಿಸ್ಟ್ರೇಷನ್‌ನಲ್ಲಿ ಇದೆ ಎಂದು ಹೇಳುತ್ತಾರೆ. ಅವರು ಹತ್ತಾರು ವರ್ಷ ಗಳಾದರೂ ಕೂಡ ಅದು ಯಾವ ಸ್ಥಿತಿಯಲ್ಲಿದೆ ಎಂಬು ದನ್ನು ಕಣ್ಣಿನಿಂದ ನೋಡಿರುವುದಿಲ್ಲ. ಹೀಗಿರುವಾಗ ರೆವಿನ್ಯೂ ಅಡ್ಮಿನಿಸ್ಟ್ರೇಷನ್‌ನಲ್ಲಿದೆ ಎಂದು ಹೇಳುವುದು ಏಕೆ? ಅದನ್ನು ಮೇಂಟೇನ್ ಮಾಡುವುದು ರೈತರಿಗೆ ಸೇರಿದ್ದು. ಅದನ್ನು ಮೇಂಟೇನ್ ಮಾಡಿಸತಕ್ಕ ಜವಾಬ್ದಾರಿ ರೆವಿನ್ಯೂನವರಿಗೆ ಸೇರಿದ್ದು ಎಂದು ಹೇಳಿ ಪಿ.ಡಬ್ಲ್ಯೂ.ಡಿ. ನವರು ಹೇಳಿಕೊಂಡು ಬರುತ್ತಾ ಇದ್ದಾರೆ. ಇದನ್ನು ಹೀಗೆಯೇ ಏನಾದರೂ ಮುಂದು ವರೆಸಿಕೊಂಡು ಬರುವುದಾದರೆ ನೂರಾರು ವರ್ಷಗಳ ಕೆಳಗೆ ನಮ್ಮ ಪೂರ್ವಿಕರು ಕಟ್ಟಿಸಿದ ಕೆರೆಗಳು ಯಾವುವು ಇವೆಯೋ ಅವುಗಳಲ್ಲಿ ಶೇಕಡ 50 ರಷ್ಟು ಕೆರೆಗಳಾದರೂ ನಿಷ್ಪ್ರಯೋಜಕವಾಗುವುದರಲ್ಲಿ ಯಾವ ಅನುಮಾನವೂ ಇಲ್ಲ. ಈ ಹಿಂದೆ ಪೂರ್ವಿಕರು ಕಟ್ಟಿ ಸಿರತಕ್ಕ ಕೆರೆಗಳನ್ನು ಜೀರ್ಣೋದ್ಧಾರ ಮಾಡುವ ಕೆಲಸ ಇವರ ಕೈಯಿಂದ ಆಗಿಲ್ಲ. 1,000 ರೂಪಾಯಿ, 2,000 ರೂಪಾಯಿಗಳ ಕೆಲಸ ಆಗಬೇಕಾಗಿದ್ದರೆ ಅದ ರಲ್ಲಿ ಬಹುಭಾಗ ಪಿಕ್‌ಅಪ್ ಹಾಕುವುದು, ಕಾಲುವೆ ಮಾಡಬೇಕು ಎಂದು ಏನಾದರೂ ಕೇಳಿದರೆ ಕೂಡಲೆ ನಿಮ್ಮ ಕಾಂಟ್ರಿಬ್ಯೂಷನ್ ಏನು ಎಂದು ಕೇಳುತ್ತಾರೆ. ಪ್ರತಿಯೊಂದು ಐಟಂಗೂ ಕೂಡ ಮೊದಲನೆ ರಾಗ ವಾಗಿ ನಿಮ್ಮ ಕಾಂಟ್ರಿಬ್ಯೂಷನ್ ಏನು, ನಿಮ್ಮ ಭಾಗದ ಹಣ ಎಷ್ಟು ಕೊಡುತ್ತೀರಿ ಎಂದು ಕೇಳುವುದು ಪದ್ಧತಿ ಯಾಗಿಬಿಟ್ಟಿದೆ. ಈ ರಾಗ ತಪ್ಪಬೇಕು, 8 ಆಣೆ ಅಥವಾ 1 ರೂಪಾಯಿ ಏಕರೇಜ್ ಮೇರೆ ಒಂದು ಸೆಸ್ ಆದರೂ ಹಾಕಿ ಎಲ್ಲಾ ಮೇಜರ್ ಕೆರೆಗಳನ್ನೂ ಕಡ್ಡಾಯವಾಗಿ ತಮ್ಮ ಸ್ವಾಧೀನಕ್ಕೇ ತೆಗೆದುಕೊಳ್ಳ ಬೇಕು. ಸುಮ್ಮನೆ ಸ್ವಾಧೀನಕ್ಕೆ ತೆಗೆದುಕೊಂಡರೆ ಸಾಲದು. ಈಗ ನಮ್ಮ ತುಮಕೂರು ಡಿಸ್ಟ್ರಿಕ್ಟ್ ನಲ್ಲಿ ನೋಡಿ, ಕುಣಿಗಲ್ ಕೆರೆ ಬಹಳ ದೊಡ್ಡಕೆರೆ 14 ಚದರ ಮೈಲಿ ಇದೆ. ಇದರ ಹಿಂದೆ ವ್ಯವಸಾಯ ಮಾಡತಕ್ಕವರಿಗೇ ಅದರ ಕಷ್ಟ ಗೊತ್ತು. ಪಿ.ಡಬ್ಲ್ಯೂ. ಡಿ. ಅವರು ಅದನ್ನು ತಮ್ಮ ಸ್ವಾಧೀನಕ್ಕೆ ತೆಗೆದು ಕೊಂಡಿದ್ದಾರೆ. ಎರಡು ಮೂರು ವರ್ಷಗಳಾಗಿವೆ. ಏನಾದರೂ ಅಭಿವೃದ್ಧಿ ಮಾಡಿದ್ದಾರೆಯೇ ಎಂದರೆ 1½ ಲಕ್ಷ ರೂಪಾಯಿಗಳ ಕಾಲುವೆ ಕೆಲಸ ಮಾಡಿದರು. 1½ ಲಕ್ಷ ರೂಪಾಯಿಗಳ ಕೆಲಸ ಏನು ಮಾಡಿದರು ಎಂಬು ದನ್ನು trace out ಮಾಡುವುದಕ್ಕೆ ಆಗಿಲ್ಲ. ಮತ್ತು ಮುಂದೆಯೂ ಕೂಡ ಅದನ್ನು ಇಂಪ್ರೂವ್ ಮಾಡು ವುದಕ್ಕೆ ಯಾವಾವ ಏರ್ಪಾಡನ್ನು ಮಾಡಬೇಕು ಎನ್ನು ವುದಕ್ಕೆ ಅವರು ಯಾವ ಕಾರ್ಯಕ್ರಮವನ್ನೂ ತೆಗೆದು ಕೊಂಡಿಲ್ಲ. ಆದ್ದರಿಂದ ಪಿ.ಡಬ್ಲ್ಯೂ.ಡಿ. ಯವರ ಜವಾಬ್ದಾರಿ ಗೊತ್ತಾಗಿರಬೇಕು. ಪಿ.ಡಬ್ಲ್ಯೂ.ಡಿ. ಇಲಾಖೆಯಲ್ಲಿ ಕೆಲಸ ಆಗಬೇಕಾಗಿದ್ದರೆ ಸರ್ಕಾರದ ನೀತಿಗಿಂತಲೂ ಮತ್ತು ಇಲಾಖೆಯ ಒಂದು ದಕ್ಷತೆ ಗಿಂತಲೂ ಕೂಡ ಅಲ್ಲಿ ಕೆಲಸ ಮಾಡತಕ್ಕ ಮನುಷ್ಯರ ದಕ್ಷತೆಯ ಮೇಲೆ ಹೆಚ್ಚಿನ ಒಂದು ಕಾರ್ಯ ಆಗುತ್ತದೆ. ಇವತ್ತಿನ ದಿವಸ ಪಿ.ಡಬ್ಲ್ಯೂ.ಡಿ. ನಲ್ಲಿರತಕ್ಕ ಮನುಷ್ಯ ನಿಗೆ ದಕ್ಷನಾಗಿ ಕೆಲಸ ಮಾಡಬೇಕೆಂಬ ಮನೋಭಾವ ಯಾವನು ಪಡೆದಿರುತ್ತಾನೆಯೋ ಆ ಮನುಷ್ಯನಿರತಕ್ಕ ಕ್ಷೇತ್ರದಲ್ಲಿ ಕೆಲಸ ಕಾರ್ಯಗಳು ಸುಸೂತ್ರವಾಗಿ ನಡೆ ಯುತ್ತವೆಯೇ ಹೊರತು ಸರ್ಕಾರ ಎಷ್ಟೇ ದಕ್ಷತೆಯಿಂದ ಏರ್ಪಾಡು ಮಾಡಿದರೂ ಕೂಡ ಆ ಇಲಾಖೆಯಲ್ಲಿ ಏನು ಕೆಲಸಗಳೂ ಆಗುವುದಿಲ್ಲ. ಒಂದು ವರ್ಷದಿಂದ ನೋಡುತ್ತಾ ಇದ್ದೇನೆ. ನನ್ನ ಕಾನ್‌ಸ್ಟಿಟ್ಯೂಯನ್‌ಸಿನಲ್ಲಿ ನನ್ನ ಪ್ರಯತ್ನಗಳನ್ನೆಲ್ಲಾ, ಸಾಹಸಗಳನ್ನೆಲ್ಲಾ ಮಾಡಿ ದರೂ ಕೂಡ ಸಾಮಾನ್ಯವಾಗಿ ಮಾಡಿಸಬೇಕಾದ ಕೆಲಸ ಗಳನ್ನೂ ಸಹ ಮಾಡಿಸುವುದಕ್ಕೆ ಸಾಧ್ಯವಾಗಿಲ್ಲ. ನನ್ನ ಪ್ರಾರ್ಥನೆ ಇಷ್ಟೆ. ನೀರನ್ನು ಸದುಪಯೋಗ ಪಡಿಸುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳ ಬೇಕೋ ಅದನ್ನು ತಕ್ಷಣ ತೆಗೆದುಕೊಂಡು ಎಷ್ಟು ಹಣ ಖರ್ಚಾಗಬೇಕೋ ಅಷ್ಟು ಹಣ ಖರ್ಚುಮಾಡಿ ತಕ್ಕ ವ್ಯವಸ್ಥೆ ಮಾಡುವುದಕ್ಕಿಂತಲೂ ದೇಶಕ್ಕೆ ಹೆಚ್ಚು ಉಪಯೋಗವಾದಂಥ ಕೆಲಸ ಇನ್ನೊಂದಿಲ್ಲ.

ಅಂಥಾದ್ದಕ್ಕೆ ಹೆಚ್ಚಿನ ನಿಗಾ ಕೊಟ್ಟು, ವಿಶೇಷ ಕಾರ್ಯಕ್ರಮವನ್ನು ಹಾಕಿಕೊಂಡು ಕೆರೆಗಳಲ್ಲಿರುವ ನೀರು ಪೋಲಾಗದಿರುವಂತೆ ಮಾಡಿದರೆ ಇವೊತ್ತಿನ ದಿವಸ ನೂರಾರು ಕೆರೆಗಳನ್ನು ಕಟ್ಟಿದಂಥ ಕೀರ್ತಿಗೆ ಭಾಗಿಗಳಾಗುತ್ತೀರಿ. ಜನರಿಗೆ ಎಷ್ಟೋ ಸೌಲಭ್ಯ ವನ್ನುಂಟು ಮಾಡಿದಂತಾಗುತ್ತದೆ. ಆದ್ದರಿಂದ ಇರ ತಕ್ಕ ಕೆರೆಗಳನ್ನು ಉಪಯೋಗಕ್ಕೆ ತರುವುದನ್ನು ಬಿಟ್ಟು ಹೊಸಕೆರೆಗಳನ್ನು ಕಟ್ಟಲು ಹೊರಡುವುದು ಪ್ರಯೋಜನ ವಿಲ್ಲ. ಅಂದ ಮಾತ್ರಕ್ಕೇ ಕಟ್ಟಬಾರದೆಂದು ನನ್ನ ಅಭಿ ಪ್ರಾಯವಲ್ಲ. ಇರತಕ್ಕದ್ದನ್ನು ಕೈಬಿಟ್ಟು ಹೊಸದನ್ನು ಕಟ್ಟಲು ಹೊರಡುವುದು ವಿವೇಚನೆಯಲ್ಲ. ಆದ್ದರಿಂದ ಹೊಸದಾಗಿ ಇಂಥಿಂಥ ಕೆರೆಗಳನ್ನು ಕಟ್ಟಿದ್ದೇವೆಂದು ಹೆಮ್ಮೆಪಡುವುದರ ಜೊತೆಗೆ ಇರತಕ್ಕದ್ದನ್ನು ಸರಿಯಾದ ಸ್ಥಿತಿಯಲ್ಲಿರಿಸಿಕೊಳ್ಳುವಂಥ ಮಾರ್ಗವನ್ನು ಹಿಡಿಯಬೇ ಕೆಂದು ನಾನು ಸೂಚಿಸುತ್ತೇನೆ.

ಮೈನರ್ ಕೆರೆಗಳ ಪರಿಸ್ಥಿತಿ ಇವೊತ್ತಿಗೆ ಏನಾಗಿದೆ? ಪೂರ್ವದಲ್ಲಿ ಮಣ್ಣುಕಾಂಗಾರಿಗಳನ್ನು ರೈತರುಮಾಡುವ ಪದ್ಧತಿಯಿತ್ತು. ಈಗ ಅವರಿಗಿರತಕ್ಕ ಕೆಲಸಗಳ ಜೊತೆಗೆ ಅನೇಕ ರೀತಿಯ ಕೆಲಸಗಳು ಬಿದ್ದು ಮಣ್ಣು ಕಾಂಗಾರಿಯ ಕೆಲಸವೆಲ್ಲಾ ನಿಂತು ಹೋಗಿದೆ. ಆದ್ದ ರಿಂದ ಮೈನರ್ ಕೆರೆಗಳನ್ನು ಜೀರ್ಣೋದ್ಧಾರಮಾಡುವ ಕೆಲಸವನ್ನು ಅವಶ್ಯಕವಾಗಿ ಕೈಕೊಳ್ಳಬೇಕು. ರೈತರ ಸುಖ ಬಾಳ್ವೆಗೆ ಇದೊಂದು ವಿಶೇಷ ಕಾರ್ಯಕ್ರಮ ಹಾಕಿ ಕೊಳ್ಳಬೇಕಾದ್ದು ಅತ್ಯಗತ್ಯ. ಇಂಥ ಕೆಲಸವನ್ನು ಈಗ ಅಮಲ್ದಾರರಿಗೆ ವಹಿಸಿದ್ದಾರೆ. ಯಾವ ಅಮಲ್ದಾರರೇ ಆಗಲಿ ಸಬ್-ಡಿವಿಜನ್ ಆಫೀಸರು ಡೆಪ್ಯುಟಿ ಕಮಿಷನರೇ ಆಗಲಿ ಇಂಥ ಕೆರೆಗಳನ್ನು ಜೀರ್ಣೋದ್ಧಾರ ಮಾಡಿಸ ಬೇಕೆಂದು ಕಾರ್ಯಕ್ರಮ ಹಾಕಿಕೊಂಡಿರುವುದನ್ನು ತೋರಿಸಬಲ್ಲರಾ? ಅಧಿಕಾರಿಗಳು ಯಾವ ಕೆರೆಯನ್ನು ಜೀರ್ಣೋದ್ಧಾರ ಮಾಡುತ್ತೇವೆಂದು ಹೋದರೂ ಜನರು ನಿಜವಾಗಿ ಸಹಾಯ ಮಾಡುತ್ತಾರೆ. ಮುಖ್ಯ ವಾಗಿ ಮುಖಂಡತ್ವ ಬೇಕೇ ಹೊರತು ಜನಗಳು ಸಹಕಾರ ಕೊಡುವುದಿಲ್ಲವೆಂದು ಹೇಳುವುದಿಲ್ಲ. ರೈತರಲ್ಲಿ ತಾವಾ ಗಿಯೇ ಹೋಗಿ ಕೆಲಸಮಾಡುವ ಮನೋಭಾವ ಬೆಳೆ ಯದೇ ಇದ್ದ ಮಾತ್ರಕ್ಕೇ ಅವರು ಅಧಿಕಾರಿಗಳೊಡನೆ ಸಹಕರಿಸುವುದಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ವಾಸ್ತವವಾಗಿ ರೆವಿನ್ಯೂ ಅಧಿಕಾರಿಗಳು ದೇಶವನ್ನು ಕಟ್ಟತಕ್ಕ ಕೆಲಸದಲ್ಲಿ ಅಷ್ಟು ನಿರತರಾಗಿಲ್ಲ. ಅವರು ಗಳು ಬಹುಮಟ್ಟಿಗೆ ನಾವು ಈ ಮೊದಲೇ ಚರ್ಚೆಮಾಡಿ

(ಶ್ರೀ ಟಿ. ಎನ್. ಮುದಲಗಿರಿಗೌಡ)

ದಂಥ ಸಂಸ್ಕೃತಿ ಪ್ರಚಾರ, ಸಂಗೀತ ಕಛೇರಿ—ಇಂಥ ಕೆಲಸಗಳಲ್ಲಿ ಕಾಲವನ್ನು ವ್ಯಯಮಾಡಿಕೊಂಡು ಬರುತ್ತಿದ್ದಾರೆ. ಕ್ಷಾಮ ಕಾಲದಲ್ಲಾದರೋ ಆಹಾರದ ಅಭಾವವಿತ್ತು; ಅಗ್ಗೆ ದವಸವನ್ನು ವಸೂಲು ಮಾಡಲು ವಿಶೇಷವಾಗಿ ಕೆಲಸ ಮಾಡುತ್ತಿದ್ದರು. ಆ ಚಟುವಟಿಕೆಗಳೆಲ್ಲವೂ ಈಗ ನಿಂತು ಹೋಗಿವೆ. ಅವರಿಗೇನೂ ಕೆಲಸವಿಲ್ಲದೆ ಸಂಗೀತ ಕಛೇರಿಗಳಲ್ಲಿ ಕುಳಿತು ಕೇಳುವ ಪರಿಸ್ಥಿತಿ ಬಂದಿದೆ. ಕಂದಾಯದ ವಸೂಲಿ ಎಂದಿನಂತೆ ಆಗುತ್ತದೆ. ಆದ್ದರಿಂದ ಮೈನರ್ ಕೆರೆಗಳನ್ನು ಜೀರ್ಣೋದ್ಧಾರ ಮಾಡುವ ಕೆಲಸವನ್ನು ರೆವಿನ್ಯೂ ಮತ್ತು ಪಿ.ಡಬ್ಲ್ಯು.ಡಿ. ಇಲಾಖೆಯವರು ಶೀಘ್ರವಾಗಿ ಕೈಕೊಳ್ಳಬೇಕಾದದ್ದು ಅವಶ್ಯಕವಾಗಿದೆ. ಈಗಂತೂ ಅವರಲ್ಲಿ ಒಂದು ಪ್ಲಾನ್ ಇಲ್ಲ. ಯಾವುದಾದರೂ ಯೋಜನೆಯನ್ನಿಟ್ಟುಕೊಂಡು ಇನ್ನು ಎರಡು-ಮೂರು ವರ್ಷಗಳಲ್ಲಿ ಈ ಕೆಲಸವನ್ನು ಮಾಡುವ ಯೋಚನೆಮಾಡಿದರೆ ನಿಜವಾಗಿ ಸಾಧ್ಯವಾಗುತ್ತದೆ.

ಇನ್ನು ಕಟ್ಟಡಗಳ ವಿಚಾರ ಹೇಳುವುದಾದರೆ, ಈಗ ಸಾಮಾನ್ಯವಾಗಿ ಕಟ್ಟಡಗಳನ್ನು ಕಾಂಟ್ರಾಕ್ಟ್ ಕೊಡುತ್ತಿದ್ದಾರೆ. ಇದರ ವೈಖರಿಯನ್ನು ಹೇಳುವುದಕ್ಕಾಗುವುದಿಲ್ಲ. ನಮ್ಮ ಊರಿನ ಹತ್ತಿರ ಒಂದು ಕಟ್ಟಡವನ್ನು ಕಾಂಟ್ರಾಕ್ಟ್ ಕೊಟ್ಟರು. 12 ವರ್ಷಗಳ ಕೆಳಗೆ ಇದನ್ನು ಕಾಂಟ್ರಾಕ್ಟ್ ಕೊಟ್ಟಿದ್ದು, ಅವೊತ್ತಿನ ದಿವಸ ಇದ್ದ ದರವೇನು, ಇವೊತ್ತಿನ ದಿವಸದ ದರವೇನು? 12,000 ರೂಪಾಯಿಗಳಿಗೆ ಕೊಟ್ಟಿದ್ದ ಕಂಟ್ರಾಕ್ಟ್ ಇಂದು 28,000ಕ್ಕೆ ಏರಿದೆ. ಪಿ.ಡಬ್ಲ್ಯು.ಡಿ.ಯವರನ್ನು ಕೇಳಿದರೆ, "ನಾವೇನು ಮಾಡೋಣ; ರೂಲ್ಸ್ ಹಾಗಿವೆ." ಎನ್ನುತ್ತಾರೆ. ಹೀಗಾಗಿ ಈ ಡಿಪಾರ್ಟ್‌ಮೆಂಟಿನ ಕೆಲಸಕಾರ್ಯಗಳು ಎಲ್ಲರಿಗೂ ಅಸಮರ್ಪಕವಾಗಿ ಕಾಣಬರುತ್ತಿವೆ. ದೇಶವನ್ನು ಕಟ್ಟತಕ್ಕಂಥ ಈ ಇಲಾಖೆಯ ಮಟ್ಟಿಗೆ ವಿಶೇಷವಾದ ಆಸಕ್ತಿ ಮತ್ತು ದಕ್ಷತೆ ಕಂಡು ಬರಬೇಕು. ಯಾರು ದೇಶಾಭಿಮಾನದಿಂದ ಕೆಲಸ ಮಾಡುವುದಿಲ್ಲ ಅಂಥವರಿಗೆ ಜವಾಬ್ದಾರಿಯುತವಾದ ಕೆಲಸಗಳನ್ನು ಕೊಡಬೇಡಿ. ಈಗಂತೂ ಕೆಲಸಮಾಡಲಿ, ಮಾಡದಿರಲಿ incrementಗಳು ಬರುತ್ತಿರುತ್ತವೆ. ಅದರಲ್ಲೂ ಮಾಡದಿರುವವನಿಗೇ ಹೆಚ್ಚಿನ increment ಬರುತ್ತಿರುತ್ತದೆ. ಹೀಗಾಗಬಾರದು. ಆದ್ದರಿಂದ ಒಂದು ಯೋಜನಾಬದ್ಧವಾದ ರೀತಿಯಲ್ಲಿ ಕಾರ್ಯಪಟ್ಟಿಯಂತೆ ಕೆಲಸ ನಡೆಸಬೇಕೆಂದು ಹೇಳುತ್ತೇನೆ.

ಶ್ರೀ ಎಚ್. ಕೆ. ವೀರಣ್ಣಗೌಡ (ಮದ್ದೂರು).—ಸ್ವಾಮಿ, ನೀರಾವರಿ ಬಾಬಿನ ವಿಚಾರವಾಗಿ ನಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಒಂದೇ ಒಂದು ವಿಷಯವನ್ನು ಹೇಳುತ್ತೇನೆ. ಸರ್ಕಾರದವರು ಅನೇಕ ವರ್ಷಗಳ ಹಿಂದಿನಿಂದಲೂ ನಮ್ಮ ಪ್ರಾಂತ್ಯಕ್ಕಾಗಿ ಕೃಷ್ಣರಾಜಸಾಗರವನ್ನು ಕಟ್ಟಿ ಜನರಿಗೆ ತುಂಬ ಅನುಕೂಲ ಮಾಡುತ್ತಾ ಬಂದಿದ್ದಾರೆ. ಇದಕ್ಕಾಗಿ ಆ ಪ್ರಾಂತ್ಯದ ಜನರ ಪರವಾಗಿ ಕೃತಜ್ಞತೆಯನ್ನು ನಾನು ಎಷ್ಟೋ ಸಾರಿ ಸಲ್ಲಿಸಿದ್ದೇನೆ.

ಆದರೆ, ಒಂದು ವಿಷಯವನ್ನು ನಾನು ಬಿನ್ನವಿಸಿಕೊಳ್ಳಬೇಕೆಂದಿದ್ದೇನೆ. ಶಿಂಷಾನದಿಯ ಪೂರ್ವ ಭಾಗದಲ್ಲಿರುವ ಮಂಡ್ಯ, ಮದ್ದೂರು ಪ್ರದೇಶದ ಕೆಲವು ಹೋಬಳಿಗಳಿಗೆ ವಿಶ್ವೇಶ್ವರಯ್ಯ ನಾಲಾ ಅನುಕೂಲತೆಯಿಲ್ಲ. ಬೆಂಗಾಡಾದ ಪ್ರದೇಶ ಅದು. ಅಲ್ಲಿ ಸಣ್ಣ ಸಣ್ಣ ಕೆರೆಗಳು ಕೆಲವಿವೆ. ಮೊದಲು ಮದ್ದೂರು ಕೆರೆಗೆ ನೀರು ಒದಗಿಸುವುದಕ್ಕಾಗಿ ತಗ್ಗಹಳ್ಳಿಯ ಹತ್ತಿರ ಒಂದು ಅಣೆಕಟ್ಟು ಕಟ್ಟಿ ನೀರೊದಗಿಸುವ ಏರ್ಪಾಡು ಮಾಡಿದರು. ಈಚೆಗೆ ವಿಶ್ವೇಶ್ವರಯ್ಯ ನಾಲಾ ಬಂದ ಮೇಲೆ ಅದರಿಂದ ಮದ್ದೂರು ಕೆರೆಗೆ ಸೋರು ನೀರು ಬರುತ್ತದೆಂದು ಹೇಳಿ ಆ ಅಣೆಕಟ್ಟಿಗೆ ಇನ್ನೊಂದು left bank channel ಎಂಬುದನ್ನು ಏರ್ಪಡಿಸಿ ಶಿಂಷಾನದಿಯ ಪೂರ್ವಭಾಗದ ಕೆಲವು ಕೆರೆಗಳಿಗೆ ನೀರು ಒದಗಿಸುತ್ತಿದ್ದಾರೆ. ಆದರೆ ಈ ನಾಲೆಯಿಂದ ಭೀಮನಕೆರೆ, ಹಳ್ಳಿಕೆರೆ, ಕಬ್ಬಾಳೆ ಇತ್ಯಾದಿ ಗ್ರಾಮಗಳ ಕೆರೆಗಳಿಗೆ ನೀರು ಹೋಗುವುದಿಲ್ಲ. ಹೀಗಾಗಿ ಈ ಭಾಗದಲ್ಲಿ 20-30 ಹಳ್ಳಿಗಳ ಜನರು ಕುಗ್ಗಿ ಹೋಗಿದ್ದಾರೆ. ಅಲ್ಲಿನ ಜನರಿಗೆ ಮಳೆಬಿದ್ದರೆ ಪೈರುಂಟು ಇಲ್ಲದಿದ್ದರೆ ಇಲ್ಲ. ಈ ಕಷ್ಟವನ್ನು 5-6 ವರ್ಷಗಳಿಂದ ವಿವರಿಸಿ ಆ ಗ್ರಾಮಗಳ ಕೆರೆಗಳನ್ನು ದುರಸ್ತುಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದರೂ ಇದುವರೆಗೂ ಸರ್ಕಾರ

10 A.M.

ಮನಸ್ಸುಮಾಡಿಲ್ಲ. ನನ್ನ ಪ್ರಾರ್ಥನೆಯನ್ನು ಮನ್ನಣೆ ಮಾಡಿ ಕೆಲವು ಕೆರೆಗಳಿಗೆ ಸರ್ವೆ ಅಂದಾಜನ್ನು ಸಹ ಮಾಡಿಸಿದ್ದಾರೆ. ಕೆಲಸ ತೆಗೆದುಕೊಳ್ಳಬೇಕಾದರೆ ಹಾಕುವ ಬಂಡವಾಳದಮೇಲೆ ಶೇಕಡ 3-4ರಂತೆ ಲಾಭ ಬರಬೇಕು ಎಂಬ ನೀತಿ ಇರುವುದರಿಂದ ಈ ಕಾರ್ಯಗಳು remunerative ಅಲ್ಲ, ಅಂದರೆ, ಫಲದಾಯಕವಾಗಿಲ್ಲ, ಪ್ರಯೋಜನವಿಲ್ಲ ಎನ್ನುವ ಕಾರಣದಿಂದ ಅಂದಾಜನ್ನು ಇನ್ನೂ ಕಡಮೆಮಾಡುವುದಕ್ಕೆ ಸಾಧ್ಯವಿದೆಯೇ ನೋಡಿ ಎಂದು ಹಿಂದಕ್ಕೂ ಮುಂದಕ್ಕೂ ಐದಾರು ಸಲ ಎಳೆದಾಡುತ್ತಾ ಆ ಕಾರ್ಯವನ್ನು ಕೈಗೊಂಡಿಲ್ಲ. ನನ್ನ ಅಭಿಪ್ರಾಯದಲ್ಲಿ ಸ್ಪೆಷಲ್ ಆಗಿ ಕೆಲವು ಕಡೆಗಳಲ್ಲಿ ಹಾಕುವ ಹಣಕ್ಕೆ ಸಾಕಷ್ಟು ಬಡ್ಡಿ ಬಾರದಿದ್ದರೂ ಸ್ಪೆಷಲ್ ಆಗಿ ಕಾರ್ಯಗಳನ್ನು ಮಾಡಬೇಕು. ಇದರಿಂದ ಕೇವಲ ಬಡ್ಡಿ ಉತ್ಪತ್ತಿಯಾಗುವ ದೃಷ್ಟಿಗೆ ಗಮನ ಕೊಡದೆ, ಇದರಿಂದ ರೈತರಿಗೆ ಅನುಕೂಲವಾಗುತ್ತದೆ ಎನ್ನುವ ಉದಾರ ದೃಷ್ಟಿಯಿಂದ ಆ ಕಾರ್ಯವನ್ನು ಕೈಗೊಳ್ಳಬೇಕಾಗಿದೆ. ಭೀಮನಕೆರೆ ಮತ್ತು ಹಳ್ಳಿಕೆರೆ ಗ್ರಾಮದ ಕೆರೆಗಳಿಗೆ ಈ ರೀತಿ ಅಂದಾಜು ತಯಾರಾಗಿ 3-4 ವರ್ಷಗಳಾದುವು. ಭೀಮನಕೆರೆ ಗ್ರಾಮದ ಕೆರೆಗಳಿಗೆ ಮೊದಲು 60 ಸಾವಿರ ರೂಪಾಯಿಗಳ ಅಂದಾಜು ಮಾಡಿದರು. ಮತ್ತೆ 1 ಲಕ್ಷಕ್ಕೆ ಕಡಮೆ ಆಗುವುದಿಲ್ಲ ಎಂದು ಹೇಳಿದರು, ಆಮೇಲೆ 80 ಸಾವಿರ ಮತ್ತು 60 ಸಾವಿರ ರೂಪಾಯಿಗಳ ಅಂದಾಜನ್ನು ಒಂದು ಲಕ್ಷಕ್ಕೆ ಏರಿಸಿದರೆ, ಜನಗಳು ಕಷ್ಟಕ್ಕೆ ಗುರಿಯಾಗುತ್ತಾರೆ. ಆ ಕೆರೆಗಳಿಗೆ ನೀರಿನ ಆಸರೆ ಚೆನ್ನಾಗಿದೆ. ಒಂದು ಸಣ್ಣ ಮಳೆ ಬಂದರೆ ಸಾಕು, ಕೆರೆಗಳು ತುಂಬುತ್ತವೆ. Catchment area ಚೆನ್ನಾಗಿದೆ. 3-4 ಕೆರೆಗಳಿಗೆ $1\frac{1}{2}$ ಲಕ್ಷ ರೂಪಾಯಿ ಬೇಕಾಗುವುದಿಲ್ಲ. ಇಷ್ಟು ಹಣವನ್ನು ಧಾರಾಳವಾಗಿ ಖರ್ಚುಮಾಡಲು ಹಿಂದುಮುಂದು ನೋಡಬಾರದು. ಎರಡು ಲಕ್ಷ ರೂಪಾಯಿಗಳನ್ನು ಕೊಡಿ, ಬಂಡಿಪುರದ ಕಾಡಿನಲ್ಲಿ ಮನೆ ಕಟ್ಟುತ್ತೇವೆ, ಫೋನ್ ಹಾಕುತ್ತೇವೆ, ವಿದ್ಯುಚ್ಛಕ್ತಿ ದೀಪ ಹಾಕುತ್ತೇವೆ ಎಂದು ಕೇಳುತ್ತೀರಿ. Wild life preserve ಮಾಡಬೇಕು ಎಂಬ ಉದ್ದೇಶದಿಂದ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಸರ್ಕಾರದವರು ಮುಂದೆ ಬಂದಿದ್ದಾರೆ. ನಾನು ಒಂದೊಂದು ಲಕ್ಷ ರೂಪಾಯಿಗಳ ಖರ್ಚು ಮಾತ್ರದಿಂದಲೇ ಹತ್ತಾರು ಗ್ರಾಮಗಳ ಜನಗಳಿಗೆ ಅನುಕೂಲವಾಗುತ್ತದೆ ಎಂದು ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಂಡರೆ, ನಾನು ಒಬ್ಬ ಸದಸ್ಯನಾಗಿ ವಿನಯದಿಂದ ಕೇಳಿಕೊಂಡರೆ, ಆ ಕಾರ್ಯವನ್ನು ಮಾಡದೆ ಇದ್ದರೆ, "ಈ ಸರ್ಕಾರ ಬೇಡ, ಬೇರೆ ಸರ್ಕಾರ ಬರಲಿ" ಎಂದು ಹೇಳುವ ಸ್ಥಿತಿಗೆ

ಬಂದಿದ್ದೇವೆ. ಆದ್ದರಿಂದ ಅದರಿಂದ ಲಾಭವೋ ನಷ್ಟವೋ, ಒಂದನ್ನೂ ಯೋಚಿಸದೆ ಆ 3-4 ಕೆರೆಗಳ ಕಾಮಗಾರಿಗಳನ್ನು ಜಾಗ್ರತೆ ಮಾಡಿಕೊಡಿ ಎಂದು ಕೇಳಿಕೊಳ್ಳುತ್ತೇನೆ.

Mr. SPEAKER.—Now the House will rise and meet at Thirty-five minutes past Ten of the Clock.

The House rose for Lunch at Five minutes past Ten of the Clock and reassembled at Thirty-Five Minutes past Ten of the Clock.

[Mr. Speaker in the Chair.]

Mr. SPEAKER.—All the four demands Nos. 8,37,39-A and 40 are being discussed together. I will put all the demands at the end to vote.

*ಶ್ರೀ ಕೆ. ಲಕ್ಕಪ್ಪ (ಚನ್ನರಾಯಪಟ್ಟಣ).—ಸ್ವಾಮಿ, ನಮ್ಮ ಸರ್ಕಾರದವರು ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ನಮ್ಮ ಮೈಸೂರು ಸಂಸ್ಥಾನದಲ್ಲಿ ಅನೇಕ ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ಕೈಗೊಳ್ಳಬೇಕೆಂಬ ಉದ್ದೇಶದಿಂದ ಈ ಯೋಜನೆಯನ್ನು ತಯಾರು ಮಾಡಿದ್ದಾರೆ. ಈ ಯೋಜನೆಯ ಪ್ರಕಾರ ಅನೇಕ ಬಹಳ ಪ್ರಾಮುಖ್ಯವಾದಂಥ ನೀರಾವರಿ ಯೋಜನೆಗಳನ್ನು ಅದರಲ್ಲಿ ಸೇರಿಸಿಕೊಂಡಿದ್ದಾರೆ. ಬಹು ಮುಖ್ಯವಾದುವು ಎಂದು ಹೇಳುವ ಯೋಜನೆಗಳಲ್ಲಿ ನಮ್ಮ ಹಾಸನ ಜಿಲ್ಲೆಗೆ ಮತ್ತು ಮಂಡ್ಯ ಜಿಲ್ಲೆಯ ಕೆಲವು ಪ್ರದೇಶಗಳಿಗೆ ಉಪಯೋಗವಾಗತಕ್ಕ ಹೇಮಾವತಿ ನದಿಗೆ ಅಡ್ಡಲಾಗಿ ಗೊರೂರು ಬಳಿ ಅಣೆಕಟ್ಟನ್ನು ಕಟ್ಟಿ ರಿಜರ್ವಾಯರ್ ಮಾಡಿ ಅಲ್ಲಿಂದ ಪ್ರಾಂತಗಳಿಗೆ ನೀರನ್ನು ಒದಗಿಸಬೇಕು ಎನ್ನುವ ಯೋಜನೆ ಸರ್ಕಾರದ ಮುಂದೆ ಇತ್ತು. ಈ ಸಂಬಂಧವಾಗಿ ಬಹಳ ದಿವಸಗಳ ಹಿಂದೆ ಸರ್ವೆ ಆಗಿ ಅನೇಕ ಸಂದರ್ಭದಲ್ಲಿ ತೆಗೆದುಕೊಳ್ಳಬೇಕು ಎನ್ನುವ ಮನೋಭಾವನೆ ಸರ್ಕಾರಕ್ಕೆ ಇತ್ತು. ನಾನು ಅನೇಕ ಸಂದರ್ಭಗಳಲ್ಲಿ ಪ್ರಶ್ನೆಗಳನ್ನು ಹಾಕಿದಾಗ, ಖೋತಾ ಸೂಚನೆಗಳನ್ನು ಕಳುಹಿಸಿದಾಗ ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ಇದನ್ನು ತೆಗೆದುಕೊಳ್ಳುತ್ತೇವೆ ಎಂದು ಒಂದು ರೀತಿಯ ಭರವಸೆಯನ್ನೂ ಸಹ ಕೊಟ್ಟಿದ್ದಾರೆ. ಆದರೆ ಯಾರ ಒತ್ತಾಯದಿಂದಲೋ, ಯಾರ ಕೈವಾಡದಿಂದಲೋ ಕೇವಲ ಮೊದಲು draft proposals ನಲ್ಲಿ ಸೇರಿಸಿಕೊಂಡಿದ್ದು, ಇದ್ದಕ್ಕಿದ್ದ ಹಾಗೆಯೇ ಆಮೇಲೆ ಇದನ್ನು ಕೈಬಿಟ್ಟರು. Draft proposals ನಲ್ಲಿ ಇದನ್ನು ಸೇರಿಸಿಕೊಂಡು ಮಧ್ಯೆ ಕೈ ಬಿಡುವುದಕ್ಕೆ ಏನು ಕಾರಣವೆಂದು ಸ್ವಲ್ಪ ಪ್ರಸ್ತಾಪ ಮಾಡಿದಮೇಲೆ ಪುನಃ ಈ ಯೋಜನೆಯಲ್ಲಿ ಸೇರಿಸಿಕೊಂಡರು. ಈ ಮಧ್ಯೆ ಎಲಿ ಇಂತಹ ದೊಡ್ಡ ದೊಡ್ಡ ಯೋಜನೆಗಳನ್ನು ಕೈಗೊಳ್ಳುತ್ತಾರೋ ಅಂತಹ ಕಡೆಗಳಲ್ಲಿ ಅನೇಕ ಗ್ರಾಮಗಳು ಮತ್ತು ಜಮೀನುಗಳು ಮುಳುಗಡೆಯಾಗುವುದು ಸ್ವಾಭಾವಿಕ. ಇಲ್ಲಿಯೂ ಸಹ ಹೆಚ್ಚು ಜಮೀನು ಮುಳುಗಡೆಯಾಗುತ್ತದೆ ಮತ್ತು ಅನೇಕ ಗ್ರಾಮಗಳು ಹೋಗುತ್ತವೆ ಎಂದು ಈ ಪ್ರದೇಶದ ಜನಗಳು ಮತ್ತು Constituency members ಎಲ್ಲರೂ ಸೇರಿಕೊಂಡು, ಇದು ಕೂಡದು ಎಂದು ಮೀಟಿಂಗ್‌ಮಾಡಿ ದೆಹಲಿಗೂ ಸಹ ಟೆಲಿಗ್ರಾಂಗಳನ್ನು ಕಳುಹಿಸಿದರು. ಅದು ಬಹು ಮುಖ್ಯವಾದ ಯೋಜನೆಯಾಗಿರುವುದರಿಂದ ಈ ದ್ವಿತೀಯ ಪಾಂಚವಾರ್ಷಿಕ ಯೋಜನೆಯೊಳಗೆ ಇದೂ ಸೇರಿಸಿಕೊಂಡು ಮಂಜೂರು ಆಗುತ್ತದೆ ಎಂದು ಅನೇಕ ಜನಗಳು ಎದುರು ನೋಡುತ್ತಾ ಇದ್ದರು. ಆದರೆ ಅಲ್ಲಿಂದ ಬಂದ ಮೇಲೆ ಈ ಯೋಜನೆ ಕೈಬಿಟ್ಟಿರುವ ಹಾಗೆ ತಿಳಿದು ಈ ಪ್ರಾಂತ್ಯದ ಜನಗಳು ನಿರಾಶರಾಗಿದ್ದಾರೆ. ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ಈ ಯೋಜನೆಗೆ ಹೆಚ್ಚಿಗೆ ಖರ್ಚಾಗುವುದರಿಂದ ಇದನ್ನು ಕೈಬಿಡಬೇಕಾಗಿ ಬಂದಿದೆ, ಎಂದು ಹೇಳಿದ್ದಾರೆ. ಹೆಚ್ಚು ಖರ್ಚಾಗುತ್ತದೆ ಎನ್ನುವ ಉತ್ತರ ಸಮಂಜಸವಾದುದಲ್ಲ, ನ್ಯಾಯವಾದುದೂ ಅಲ್ಲ ಎಂದು ಹೇಳುತ್ತೇನೆ. ಇದೇ ಶಿವಮೊಗ್ಗಾ ಜಿಲ್ಲೆಯಲ್ಲಿ ತುಂಗಾ ನದಿಗೆ ಅಡ್ಡಲಾಗಿ ಅಣೆಕಟ್ಟು ಕಟ್ಟಲು 2½ ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಇದರ ಹಿಂದುಗಡೆ ನೀರಾವರಿ ಆಗುವುದು 20-22 ಸಾವಿರ ಎಕರೆಗಳು ಮಾತ್ರ. ಈ 20-22 ಸಾವಿರ ಎಕರೆ ನೀರಾವರಿಗಾಗಿ ಎರಡು ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಅಣೆಕಟ್ಟನ್ನು ಕಟ್ಟಿದ್ದಾರೆ.

ನುಗು ಜಲಾಶಯದ ಯೋಜನೆಗೆ ಸುಮಾರು ಮೂರು ಕೋಟಿ ರೂಪಾಯಿ ಖರ್ಚುಮಾಡಿ ಸುಮಾರು 20-22 ಸಾವಿರ ಎಕರೆ ನೀರಾವರಿಯಾಗುವಂತೆ ಮಾಡಿದ್ದಾರೆ. ಇಲ್ಲಿ ಸುಮಾರು 50 ಸಾವಿರ ಎಕರೆ ನೀರಾವರಿಗೆ ಬರುತ್ತದೆ. ಇದಕ್ಕೆ ಖರ್ಚಾಗುವುದು ಆರು ಕೋಟಿ ರೂಪಾಯಿ ಹೀಗಿರುವಾಗ ಇದು ದುಬಾರಿ ಎಂದು ಹೇಳುವುದರಲ್ಲಿ ಏನೂ ತಿರುಳಿಲ್ಲವೆಂದು ನಾನು ಹೇಳಬೇಕಾಗಿದೆ. ಯಾವ ಕಾರಣಕ್ಕಾಗಿ ಇದನ್ನು ಕೈ ಬಿಟ್ಟರೋ ಗೊತ್ತಿಲ್ಲ. ಚೀಫ್ ಇಂಜನಿಯರ ಹತ್ತಿರ ಹೋಗಿ ಇದನ್ನು ಪ್ರಸ್ತಾಪ ಮಾಡಿದರೆ, ಇದು ಬಹಳ ಮುಖ್ಯವಾದ ಯೋಜನೆ, ಇದನ್ನು ಖಂಡಿತವಾಗಿ ತೆಗೆದುಕೊಳ್ಳಬೇಕೆಂಬ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸಿದ್ದಾರೆ. ಇದನ್ನು ಅಗತ್ಯವಾಗಿ ಒಪ್ಪಿಕೊಳ್ಳುವುದಕ್ಕೆ ಕಾರಣವಿದೆ. ಮದರಾಸು ಸರ್ಕಾರದವರಿಗೂ ಮೈಸೂರು ಸರ್ಕಾರಕ್ಕೂ ಹೇಮಾವತಿ ನೀರನ್ನು ಉಪಯೋಗಿಸಿಕೊಳ್ಳುವ ವಿಚಾರದಲ್ಲಿ ಹಿಂದೆ ಒಂದು ಒಪ್ಪಂದವಾಗಿದೆ. ಒಪ್ಪಂದವಾಗಿ ಸುಮಾರು 30-35 ವರ್ಷಗಳಾಗಿವೆ. ಅದರ ಅವಧಿ ಮುಗಿಯುವುದರಲ್ಲಿದೆ. ಆದುದರಿಂದ ಈ ಯೋಜನೆಯನ್ನ ಬೇಗ ತೆಗೆದುಕೊಳ್ಳುವುದರಿಂದ ಈ ಕಷ್ಟದಿಂದ ತಪ್ಪಿಸಿಕೊಳ್ಳುವುದಕ್ಕೂ ಅವಕಾಶವಿದೆ. ಆದಕಾರಣ ಕೂಡಲೇ ಇದನ್ನು ತೆಗೆದುಕೊಳ್ಳಬೇಕಾದುದು ಸೂಕ್ತವೆಂದು ಹೇಳಬಯಸುತ್ತೇನೆ. ಈಗಾಗಲೇ ಎರಡನೆಯ ಪಾಂಚವಾರ್ಷಿಕ ಯೋಜನೆ ತಯಾರಾಗಿದೆ 150 ಕೋಟಿ ರೂಪಾಯಿಗೆ ಯೋಜನೆ ಹಾಕಿಕೊಂಡು ಹೋಗಿದ್ದವು. ಆದರೆ ಅದನ್ನು 82 ಕೋಟಿಗೆ ಇಳಿಸಿದ್ದಾರೆ ಈ ಕಾರಣದಿಂದ ಅದನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಬಹುದು. ನಮ್ಮ ಮುಖ್ಯ ಮಂತ್ರಿಗಳು ಅವರ ಭಾಷಣದಲ್ಲಿ ಈಗ ಎರಡನೆಯ ಯೋಜನೆಯಲ್ಲಿ ಏನು ಮಂಜೂರಾಗಿದೆಯೋ ಅಷ್ಟಕ್ಕೇ ನಿಲ್ಲುತ್ತದೆಂದು ಭಾವಿಸಬಾರದು ಇದು elastic ಆಗಿದೆ, ನಮ್ಮ ಹಣಕಾಸಿನ ಪರಿಸ್ಥಿತಿ ಅನುಕೂಲವಾದರೆ ಇನ್ನೂ ಕೆಲವು ಯೋಜನೆಗಳನ್ನು ಸೇರಿಸಿಕೊಂಡು ಕೆಲಸ

(ಶ್ರೀ ಕೆ. ಲಕ್ಕಪ್ಪ.)

ಮಾಡುವುದಕ್ಕೆ ಸಾಧ್ಯವಿದೆ ಎಂದು ಹೇಳಿದ್ದಾರೆ. ನಮ್ಮ ಸಂಸ್ಥಾನದ ಉತ್ಪತ್ತಿ ಜಾಸ್ತಿಯಾಗಿ, ಹಣ ಕಾಸಿನ ಪರಿಸ್ಥಿತಿ ಉತ್ತಮವಾದ ಕೂಡಲೆ ಈ ಯೋಜನೆಯನ್ನು ತೆಗೆದುಕೊಂಡು ಕಾರ್ಯಗತಮಾಡಿ ಅದರ ಮೂಲಕ ಆ ಪ್ರಾಂತದ ಜನರಿಗೆ ಅನುಕೂಲ ಮಾಡಬೇಕೆಂಧು ಸರ್ಕಾರದ ಗಮನಕ್ಕೆ ತಂದು ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಸ್ವಾಮಿ, ಇತ್ತೀಚೆಗೆ ಮೈನರ್ ಕೆರೆಗಳ ಕಾಮಗಾರಿ ಹೆಚ್ಚಿನ ಪರಿಮಿತಿಯಲ್ಲಿ ನಡೆಯುತ್ತಿದೆ. ಇದು ಸಂತೋಷಕರವಾದ ವಿಚಾರ. ಆದರೆ ದೇಶಾದ್ಯಂತ ಅನೇಕ ವರ್ಷಗಳಿಂದ ಮೈನರ್ ಮತ್ತು ಮೇಜರ್ ಕೆರೆಗಳ ರಿಪೇರಿ ಕಾಮಗಾರಿ ಆಗಬೇಕೆಂದು ಪ್ರಬಲ ವಾದ ಕೂಗ ದೇಶಾದ್ಯಂತ ಇದ್ದೇ ಇದೆ. ಈ ಸಾಲಿ ನಲ್ಲಿ ಮೈನರ್ ಕೆರೆಗಳ ರಿಪೇರಿಗೂ ಮತ್ತು original worksಗೂ ಕೂಡ ಹೋದ ವರ್ಷಕ್ಕಿಂತ ಕಡಮೆ ಹಣವನ್ನು ಒದಗಿಸಿದ್ದಾರೆ. ಎಂಟನೆಯ ಡಿಮ್ಯಾಂಡ್ 15 ನೆಯ ಐಟಂನಲ್ಲಿ ಕೆರೆಗಳ ರಿಪೇರಿ, ಹೊಸ ಕೆರೆ ಗಳನ್ನು ಕಟ್ಟುವುದು, ಇಂಥದ್ದಕ್ಕಾಗಿ ಪ್ರತ್ಯೇಕವಾಗಿ 1,16,37,000 ರೂಪಾಯಿ ಒದಗಿಸಿದ್ದಾರೆ. ಹೋದ ಸಾಲಿನ ಬಡ್ಜೆಟ್ ಅಂದಾಜು ತೆಗೆದುಕೊಂಡರೆ, 18,98,000 ರೂಪಾಯಿ ಒದಗಿಸಿದೆ. ಹೀಗೆಯೇ maintenance and repairs ಶಿರೋನಾಮೆ ಯಲ್ಲಿ 14,30,000 ರೂಪಾಯಿ ಒದಗಿಸಿದ್ದಾರೆ. ಇದು ಹೋದ ಸಾಲಿಗಿಂತ 11.80 ಲಕ್ಷ ಜಾಸ್ತಿ. ಅಂದರೆ, revised estimateನಲ್ಲಿ 19 ಲಕ್ಷ ಚಿಲ್ಲರೆ ರೂಪಾಯಿ ಅಂದಾಜಾಗಿದೆ, 14 ಲಕ್ಷ ಒದಗಿಸಿದ್ದಾರೆ.

40 ನೆಯ ಡಿಮ್ಯಾಂಡಿನಲ್ಲಿ 68 G.N.E.D. ಎಂದು ಹೊಸದಾಗಿ ಸೇರಿಸಿರುವ head of accountನಲ್ಲಿ ಹಣವನ್ನೊದಗಿಸಿದ್ದಾರೆ. ಇದರಲ್ಲಿ worksಗೆಂದು ಒಟ್ಟು ಮೊತ್ತ ಒಂದು ಕೋಟಿ ಚಿಲ್ಲರೆ ರೂಪಾಯಿ ಒದಗಿಸಿದ್ದಾರೆ. ಈ ಲೆಕ್ಕದ ವಿವರವನ್ನು ನೋಡಿದರೆ, ಹೊಸದಾಗಿ ಕಟ್ಟತಕ್ಕ ಜಲಾಶಯಗಳಿಗೆ ಮಾತ್ರ ಈ ಹಣ ಖರ್ಚಾಗುತ್ತದೆ. Constructio of new tanks and pick-upsಗೆ 2.45 ಲಕ್ಷ ರೂಪಾಯಿ ಇದೆ. Major worksಗೆ 15.80 ಲಕ್ಷ ಇದೆ. ಇದಿಷ್ಟೂ 68 ನೆಯ head of account ನಲ್ಲಿ ಖರ್ಚಾಗತಕ್ಕ ಹಣ. ಈಗ ಹೊಸ ಅಕೌಂಟಿಂಗ್ ಪದ್ಧತಿಯ ಪ್ರಕಾರ 50 ಸಾವಿರ ಮತ್ತು ಅದರ ಮೇಲ್ಪಟ್ಟು ಖರ್ಚಾಗತಕ್ಕ ಕಾಮಗಾರಿಗಳಿಗೆ ಮಾತ್ರ 68 ನೆಯ ಡಿಮ್ಯಾಂಡಿನಲ್ಲಿ ಕೊಟ್ಟಿದ್ದಾರೆ. ಅಂದರೆ, ದೊಡ್ಡ ದೊಡ್ಡ ಕೆರೆಗಳ ನಿರ್ಮಾಣಕ್ಕೆ ಕೊಟ್ಟಿರುವುದು ಹೊರತು 40 ನೆಯ ಡಿಮ್ಯಾಂಡಿನಲ್ಲಿ ಬರತಕ್ಕ ಖರ್ಚು ಬಾಬು ಯಾವುದೂ ಸಣ್ಣ ಕೆರೆಗಳ ಕಾಮಗಾರಿಗಳಿಗೆ ಖರ್ಚು ಮಾಡುವುದಕ್ಕಲ್ಲ.

ಸ್ವಾಮಿ, ಹಿಂದಿನಿಂದ ಅನೇಕ ವರ್ಷಗಳಿಂದ ನಾದು ರಸ್ತಾಗಿರುವ ಕೆರೆಗಳನ್ನು ರಿಪೇರಿ ಮಾಡುವುದಾಗಲೀ ಸಣ್ಣ ಪಟ್ಟ ಕೆರೆಗಳನ್ನು ರಿಪೇರಿ ಮಾಡುವುದಾಗಲೀ ಸರ್ಕಾರಕ್ಕೆ ಮನವಿ ಬಂದರೆ, ಅದಕ್ಕೆ ಏನೋ ಒಂದು ಶೇಕಡಾವಾರು ಪ್ರತಿಫಲ ಬರಬೇಕೆಂದು ಗೊತ್ತು ಮಾಡಿದ್ದಾರೆ. ಸರ್ಕಾರದವರು ಖರ್ಚು ಮಾಡುವ ಮೊತ್ತದ ಮೇಲೆ ಕನಿಷ್ಠ ಪಕ್ಷ ಶೇಕಡ 4 ರಷ್ಟು ಬಡ್ಡಿ ಅಥವಾ 3 ರಷ್ಟು ಬಡ್ಡಿ ಬರುವ ಹಾಗಿದ್ದರೆ ಮಾತ್ರ ಮಾಡುತ್ತೇವೆ. ಅಷ್ಟು ಪ್ರಮಾಣದಲ್ಲಿ ಉತ್ಪತ್ತಿ ಬಾರದೇ ಯಿದ್ದರೆ ಆ ಕೆಲಸಗಳನ್ನು ತೆಗೆದುಕೊಳ್ಳುವುದುಕ್ಕಾಗು ವುದಿಲ್ಲ ಎಂದು ಹೇಳುತ್ತಾರೆ. ಈಗ ದೊಡ್ಡ ದೊಡ್ಡ ಕಾಮಗಾರಿಗಳನ್ನು ಹೇಗೆ ತೆಗೆದುಕೊಳ್ಳುತ್ತಾರೆಂದು ನೋಡೋಣ. ಉದಾಹರಣೆಗೆ, ಕೃಷ್ಣರಾಜಸಾಗರ ಜಲಾಶಯಕ್ಕೆ ಸಂಬಂಧಪಟ್ಟ ನಾಲೆಗಳ ವಿಚಾರವನ್ನು ತೆಗೆದುಕೊಂಡರೆ, ಬಡ್ಜೆಟ್ಟಿನಲ್ಲಿರುವ ಹಾಗೆ, ಈ ವರ್ಷದ ಅಂದಾಜು 10·60 ಲಕ್ಷ ರೂಪಾಯಿ, ಇದಕ್ಕೆ ಖರ್ಚಾಗು ವುದು 9·41 ಲಕ್ಷ. ಇದರ ಜೊತೆಗೆ ಪ್ರತಿವರ್ಷವೂ ಸಾಮಾನ್ಯ ವೆಚ್ಚ ಕೃಷ್ಣರಾಜಸಾಗರ ಕಟ್ಟೆಯಮೇಲೆ 9·41 ಲಕ್ಷವಲ್ಲದೆ ಬೇರೆ ಕಡೆ ಕೂಡ ಇದಕ್ಕೆ ಖರ್ಚು ತೋರಿಸಿದ್ದಾರೆ, ಡಿಮ್ಯಾಂಡ್ ಕೂಡ ಇಟ್ಟಿದ್ದಾರೆ. Demand No. 40 K.R.S. Works—Budget Vol. I page 138-9. ಇದರಲ್ಲಿ 6 ಲಕ್ಷ 57 ಸಾವಿರ 9 ಲಕ್ಷದ 97 ಸಾವಿರ. ಹೀಗೆ 9.97 ಲಕ್ಷ ಒಂದು, 6 ಲಕ್ಷ ಚಿಲ್ಲರೆ ಒಂದು, 9·41 ಲಕ್ಷ ಒಂದು ಇದಿಷ್ಟು ಹಣವೂ ಈ ಕೆ. ಆರ್. ಎಸ್. ಡ್ಯಾಮ್ ಮೇಲೆ ಮತ್ತು ಇದಕ್ಕೆ ಸಂಬಂಧಪಟ್ಟ ನಾಲೆಗಳ ಮೇಲೆ ಖರ್ಚು ಮಾಡುತ್ತಿದ್ದಾರೆ. ಉತ್ಪತ್ತಿ ಮಾತ್ರ 10·60 ಲಕ್ಷ ರೂಪಾಯಿ. ಸಾಲಿಯಾನ ಮಾಡು ತ್ತಿರುವ ಖರ್ಚೆಷ್ಟು. ಇದಲ್ಲದೆ capital investment ಬೇರೆ. ಇದರಿಂದ ಎಷ್ಟು ಪ್ರತಿಫಲ ಶೇಕಡಾ ವಾರು ಬರುತ್ತದೆಂದು ಹಣಕಾಸಿನ ಮಂತ್ರಿಗಳು ಹೇಳಬೇಕು.

MR. SPEAKER.—Financial statement reveals that the return on the project is 8 per cent

ಶ್ರೀ ಡಿ. ದೇವರಾಜ ಅರಸ್.—ಶೇಕಡ 8 ರಂತೆ ಕೂಡ ಬರುವುದಿಲ್ಲವೆಂದು ನನ್ನ ವಾದ. ಯಾಕೆಂದರೆ ಕೃಷ್ಣರಾಜಸಾಗರ ವರ್ಕ್ಸ್‌ಗೆ ವರ್ಷೇ ವರ್ಷೆ ಖರ್ಚು ಮಾಡತಕ್ಕ ದುಡ್ಡನ್ನು ನಾಲ್ಕು ಪುಸ್ತಕಗಳನ್ನೂ ಹುಡುಕಿ ನೋಡಿದ್ದರಲ್ಲಿ, ಒಂದೊಂದನ್ನೂ ಒಂದು ಕಡೆ ತೋರಿಸಿ ಕೊಂಡು ಬಂದಿದ್ದಾರೆ. ಒಂದೇ ಕಡೆ ಇದರ ವಿವರ ಗಳು ಸಿಕ್ಕುವುದಿಲ್ಲ. ಕಣ್ಣಿಗೆ ಎಣ್ಣೆ ಬಿಟ್ಟು ನೋಡಿ ದರೂ ಸಿಕ್ಕುವುದು ಕಷ್ಟವಾಗಿದೆ. ಒಂದು ಕಡೆ ಡಿಮ್ಯಾಂಡ್ 8 ರಲ್ಲಿ ಕೇಳಿದ್ದಾರೆ, ಇನ್ನೊಂದು ಕಡೆ ಡಿಮ್ಯಾಂಡ್ 40 ರಲ್ಲೂ ಕೂಡ ಕೇಳಿದ್ದಾರೆ. ಇದೇ ರೀತಿಯಾಗಿ ಚಾಮರಾಜಸಾಗರ ವಾಟರ್ ವರ್ಕ್ಸ್ ಸಂಬಂಧದಲ್ಲಿಯೂ ಕೇಳಿದ್ದಾರೆ, ಈ ರೀತಿಯಾಗಿ accounting ಇಟ್ಟುಕೊಂಡು ಬಂದಿದ್ದಾರೆ. ಈ ಎರಡು head of accountsಗಳಲ್ಲೂ ಇರತಕ್ಕ expenditure ನೋಡಿದರೆ ಎಷ್ಟಾಗುತ್ತದೆಯೋ ಅದನ್ನು ತೆಗೆದುಕೊಂಡು ಅದರ percentageಲೆಕ್ಕ ಹಾಕಿದರೆ, ಅರ್ಧ ಅಥವಾ ಒಂದು per cent ಬರುತ್ತ ದೆಂದು ಏನು ಹೇಳುತ್ತಾರೋ ಅದೂ ಬರುವುದಿಲ್ಲ ವೆಂದು ಸಮರ್ಥನೆ ಮಾಡುತ್ತಿದ್ದೇನೆ. ಹೀಗೆ ದೊಡ್ಡ ದೊಡ್ಡ ಜಲಾಶಯಗಳನ್ನು one per cent ಬರದೇ ಇದ್ದರೂ ಕೆಲಸ ಮಾಡಿ ಇಷ್ಟೊಂದು ಹಣವನ್ನು ಖರ್ಚು ಮಾಡುತ್ತಿರುವಾಗ, ಹೀಗೆಯೇ ಸಣ್ಣ ಪಟ್ಟ ಕೆರೆ ಕೆಲಸ ಗಳನ್ನು, ನಾವು ಆಗಿಂದಾಗ್ಗೆ ಈ ಸಭೆಯಲ್ಲಿ ಒತ್ತಾಯ ಮಾಡುತ್ತಿದ್ದರೂ ಕೂಡ ಸರ್ಕಾರದವರು ಇದಕ್ಕೆ ವರ್ಷೇ ವರ್ಷೇ ದುಡ್ಡನ್ನು ಹೆಚ್ಚಾಗಿ ಒದಗಿಸುವುದಕ್ಕೆ ಬದಲಾಗಿ ಕಡಿಮೆ ಒದಗಿಸುತ್ತಿರತಕ್ಕದು ಸರಿಯಾದ ನೀತಿಯಲ್ಲ. ಮತ್ತು ಈ percentage ಇಷ್ಟೇ ಪ್ರಮಾಣದಲ್ಲಿ ಬಂದರೆ ಮಾತ್ರ ಕೆಲಸವನ್ನು ಮಾಡಿಸುತ್ತೇವೆ, ಹಾಗೆ ಬರದೆ ಹೋದರೆ ಮಾಡಿಸುವುದಿಲ್ಲವೆಂದು ಹೇಳಿರುವುದು ಕೂಡ ಸರಿಯಾದದ್ದಲ್ಲವೆಂದು ನಾನು ಹೇಳುತ್ತೇನೆ. ಕೆರೆ ರಿಪೇರಿಯಾಗಬೇಕು ಎಂದು ಹಲವಾರು ಅರ್ಜಿಗ ಳನ್ನು ಕೊಟ್ಟರೆ, ಅನೇಕ ಸಂದರ್ಭಗಳಲ್ಲಿ ಸರ್ಕಾರದ ವರು ಒಂದು ನಿಗದಿ ಮಾಡಿಕೊಂಡಿರುವ percentage

ಬರುವುದಿಲ್ಲವೆಂದು ಕೈಬಿಡುವಾಗ, ಶೇಕಡ 5, ಶೇಕಡ 10 ಬರುವ ಹಾಗೆ ದುಡ್ಡು ಕೊಡುತ್ತೇವೆ, ಎಕರೆಗೆ 10-15 ರೂಪಾಯಿ ವಾಟರ್ ರೇಟ್ ಕೊಡುತ್ತೇವೆಂದೂ, ಆವಶ್ಯಕತೆ ಬಹಳವಾಗಿದ್ದರೆ ಇನ್ನೂ ಸ್ವಲ್ಪ ಹಣವನ್ನೂ ಕೊಡಬೇಕೆಂದು ಒತ್ತಾಯ ಮಾಡಿದರೂ ಕೊಡುತ್ತೇವೆಂದೂ ನಾನು ಇದೇ ಮಾನ್ಯ ಸಭೆಯಲ್ಲಿ ಒಂದು ಕೆರೆಯ ವಿಚಾರವಾಗಿ interpellation 1948ರಲ್ಲಿ ಕಳುಹಿಸಿದ್ದೆ. 1956ನೆಯ ಇಸವಿಯಲ್ಲಿ ಸಹ ಇನ್ನೂ ಆ ಕೆಲಸವನ್ನು ತೆಗೆದುಕೊಂಡಿಲ್ಲ. ಈಗ ತೆಗೆದುಕೊಳ್ಳುತ್ತೇವೆಂದು ಉತ್ತರ ಕೊಟ್ಟರು. ಹೇಗೆ ಸಣ್ಣ ಪುಟ್ಟ ಕಾಮಗಾರಿಗಳ ವಿಚಾರದಲ್ಲಿ, ಕೆರೆಗಳ ವಿಚಾರದಲ್ಲಿ, ಜನರು ಯಾವ ಮಟ್ಟದಲ್ಲಿ ಕೆಲಸವಾಗಬೇಕು, ತೀವ್ರವಾಗಿ ಆಗಬೇಕು ಎಂದು ನಿರೀಕ್ಷೆ ಮಾಡುತ್ತಾರೆಯೋ ಆ ಮಟ್ಟದಲ್ಲಿ ಈ ಇಲಾಖೆಯಲ್ಲಿ ನಡೆಯದೆ, ಉದಾಸೀನ ಭಾವದಿಂದ ಕೂಡಿಇದ್ದ ಹಾಗೆ ಕಾಣುತ್ತದೆ. ಇದು ತಪ್ಪಬೇಕು. ಸರ್ಕಾರದವರು ಇದಕ್ಕೆ ಹೆಚ್ಚಿನ ಗಮನ ಕೊಡಬೇಕು ಕೆರೆಗಳನ್ನು ರಿಪೇರಿ ಮಾಡಿಸುವುದಕ್ಕೆ ಗೊತ್ತಾದ ಪ್ರಮಾಣದಲ್ಲಿ ಪ್ರತಿಫಲ ಬಂದರೆ ಕೆಲಸ ತೆಗೆದುಕೊಳ್ಳಿ, ಇಲ್ಲದಿದ್ದರೆ ತೆಗೆದುಕೊಳ್ಳಬೇಡಿ ಎನ್ನುವ ನೀತಿಯನ್ನು ಬದಲಾವಣೆ ಮಾಡಬೇಕು. ಅನೇಕ ಸಂದರ್ಭಗಳಲ್ಲಿ, ಒಂದು ಹಳ್ಳಿಯಲ್ಲಿ, ಅದರಲ್ಲೂ ಮಲೆನಾಡು ಪ್ರದೇಶಗಳಲ್ಲಿ ಕೆರೆ ರಿಪೇರಿಯಾಗಬೇಕಾಗಿರುತ್ತದೆ. ಕಾರಣಾಂತರದಿಂದ ಅಲ್ಲಿ ಜನಸಂಖ್ಯೆ ಕಡಿಮೆಯಾಗಿರುತ್ತದೆ. ಅಂಥ ಒಂದು ಊರಿನಲ್ಲಿ ಕೆರೆ ರಿಪೇರಿಯಾಗಬೇಕಾದರೆ, ಸರ್ಕಾರದವರು ಹಣ ಖರ್ಚುಮಾಡುವಾಗ ಇಷ್ಟೇ percentage ಬರಬೇಕು ಎಂದು ಒತ್ತಾಯ ಮಾಡುವುದಾದರೆ ಆ ಜನರಿಗೆ ನಿಗದಿಯಾದ percentage ಪ್ರಕಾರ ಪ್ರತಿಫಲ ಬರುವ ಹಾಗೆ ದುಡ್ಡು ಕೊಡುವುದಕ್ಕೆ ಕಷ್ಟವಾಗಿರುತ್ತದೆ. ಅಂಥ ಸಂದರ್ಭಗಳಲ್ಲಿ, ಐದು ಸಾವಿರ ರೂಪಾಯಿಗಳ, ಹತ್ತು ಸಾವಿರ ರೂಪಾಯಿಗಳ ಕೆಲಸ ತೆಗೆದುಕೊಳ್ಳುವುದಿಲ್ಲವೆಂದರೆ ಬಹಳ ತೊಂದರೆಯಾಗುತ್ತದೆ. ಅಲ್ಲಿರುವ ಜನರು ಆರ್ಥಿಕಾಭಿವೃದ್ಧಿ ಹೊಂದುವುದಕ್ಕೆ ಅವಕಾಶವಾಗುವುದಿಲ್ಲ. ಆದುದರಿಂದ ತಾವು ಇಷ್ಟೇ percentage of return ಬರಬೇಕೆಂದು ಕಡ್ಡಾಯ ಮಾಡುವುದು ಒಳ್ಳೆಯದಲ್ಲ. ದೊಡ್ಡ ದೊಡ್ಡ ಜಲಾಶಯಗಳನ್ನು ಕಟ್ಟಿಸಿ, ಎಷ್ಟೋ ನಾಲೆಗಳನ್ನೂ ಕಟ್ಟಿಸಿಕೊಟ್ಟಿರುವಾಗ ಹಿಂದೆ ಯಾವುದೋ ಕಾಲದಲ್ಲಿ ಹಾಕಿದ್ದ water rate ಏನಿದೆಯೋ ಅದನ್ನೇ ಮುಂದುವರಿಸಿಕೊಂಡು ಬರುತ್ತಿದ್ದಾರೆ. ಅದೇ ಸಣ್ಣ ಪುಟ್ಟ ಕೆರೆಗಳನ್ನು ಕಟ್ಟಿಸಿಕೊಡಿ ಎಂದು ಕೇಳಿದರೆ ಖರ್ಚಿಗೆ ಸರಿಯಾದ ದರದಲ್ಲಿ ಪ್ರತಿಫಲ ಬರುವುದಿಲ್ಲವಾದ್ದರಿಂದ ಒಂದು ಎಕರೆಗೆ 10ರೂಪಾಯಿ, 15 ರೂಪಾಯಿ ಕೊಡುವುದಕ್ಕೆ ಒಪ್ಪಿಕೊಳ್ಳಿ ಎಂದು ಹೇಳುತ್ತಾರೆ. ಕೆರೆ ಕೆಳಗೆ ಜಮೀನಿರತಕ್ಕ ರೈತರು ಒಂದು ಎಕರೆಗೆ 10-15 ರೂಪಾಯಿ ಕೊಡುವುದಕ್ಕೆ ಒಪ್ಪಿಕೊಳ್ಳಬೇಕಾದರೆ ವರ್ಷದಲ್ಲಿ ಮುನ್ನೂರ ಅರವತ್ತೈದು ದಿನಗಳೂ ನೀರನ್ನು ಗ್ಯಾರಂಟಿಯಾಗಿ ಕೊಡತಕ್ಕ ಕ್ಷೇತ್ರದಲ್ಲಿ ಯಾವರೀತಿಯ ಕಂಟ್ರಿಬ್ಯೂಷನ್ ಮತ್ತು ವಾಟರ್ ರೇಟ್ ವಸೂಲ್ಮಾಡುತ್ತಿದ್ದಾರೆಂಬುದು ತೀವ್ರವಾಗಿ ಯೋಚನೆ ಮಾಡಬೇಕಾದ ವಿಷಯ.

ಹುಣಸೂರು ತಾಲ್ಲೂಕು, ಹನಗೋಡು ಬಳಿ ಒಂದು ನಾಲೆ (Channel) ಇದೆ. ಲಕ್ಷ್ಮಣ ತೀರ್ಥ ನದಿಗೆ ಅಣೆಕಟ್ಟು ಕಟ್ಟಿ ಈ ನಾಲೆಯನ್ನು ತೆಗೆದಿದ್ದಾರೆ. ಈ ನಾಲೆಯ ಕೆಳಗೆ ಒಟ್ಟು ಎಂಟು ಸಾವಿರ ಎಕರೆ ಪ್ರದೇಶ ನೀರಾವರಿಯಲ್ಲಿದೆ. ಈ ಅಣೆಕಟ್ಟನ್ನು ಕಟ್ಟಿದ್ದು ಬಹಳ ಹಿಂದಿನ ಕಾಲದಲ್ಲಿ. ಶಾಸನಗಳಿಂದ ನಮಗೆ ಗೊತ್ತಾಗುವಂತೆ ಸುಮಾರು 800-900 ವರ್ಷಗಳಾಗಿವೆ ಈ ಅಣೆಕಟ್ಟನ್ನು ಕಟ್ಟಿ ಎಂದು ಹೇಳುತ್ತಾರೆ. ಈ ಅಣೆಕಟ್ಟಿನಿಂದ ನಾಲೆಗಳು ತೀರ ಕಾಡು ಪ್ರದೇಶದಲ್ಲಿ ಬರುವ ಕಾರಣ, ನಾಲೆಯ ದಡದ ಮೇಲೆ ದಟ್ಟವಾದ ಕಾಡು ಬೆಳೆದು, ಕಾಡು ಮೃಗಗಳ ಕಾಟ ಜಾಸ್ತಿಯಾಗಿ, ಗದ್ದೆಗಳನ್ನು ಮಾಡುವುದಕ್ಕೆ ಜನರು ಹೋಗಲು ಬಹಳ ತೊಂದರೆಯಾಗಿ, ಇವು ಕ್ಷೀಣ ದೆಸೆಗೆ ಬರುವ ಸ್ಥಿತಿಯಲ್ಲಿತ್ತು. ಆದರೆ 1948 ನೆ ಇಸವಿಯಿಂದೀಚೆಗೆ ನಡೆದಂಥ Grow More Food Compaignನಲ್ಲಿ ಹಣವನ್ನು ಇಂಥ ಕೆಲಸಗಳಿಗೆ ಒದಗಿಸಿದ ಕಾಲದಲ್ಲಿ ಹತ್ತಾರು ಲಕ್ಷ ರೂಪಾಯಿಗಳನ್ನು ಸರ್ಕಾರದವರು ಖರ್ಚುಮಾಡಿ ಈ ನಾಲೆಗಳನ್ನು ರಿಪೇರಿಮಾಡಿ, ನಾಲೆಗಳ ಮೇಲೆ ಬೆಳೆದಿದ್ದ ಕಾಡನ್ನು ಕಡಿದು, ರಸ್ತೆಗಳನ್ನೂ ಕೂಡ ನಿರ್ಮಾಣಮಾಡಿ, ಯಥೇಚ್ಛವಾಗಿ ದುಡ್ಡು ಖರ್ಚುಮಾಡಿ ಉತ್ತಮ ಸ್ಥಿತಿಗೆ ತಂದರು. ಆದರೆ ವರ್ಷೇ ವರ್ಷೇ ನಾಲಾ ಪ್ರದೇಶಗಳಲ್ಲಿ maintenence repairs ಎಂದು annual repairsಗಾಗಿ ಏನು ಖರ್ಚುಮಾಡುತ್ತಿದ್ದಾರೋ ಅಂಥ ಯಾವ ಒಂದು return ಕೂಡ ನಾಲ್ಕೈದು ವರ್ಷಗಳಿಂದ ಈ ಪ್ರದೇಶದಲ್ಲಿ ನಡೆಯುತ್ತಿಲ್ಲ. ಒಂದು ಮೊತ್ತದಲ್ಲಿ Grow More Food Scheme ನಲ್ಲಿ ಏನು ಖರ್ಚು ಮಾಡಿದರೋ ಅದು ಬಿಟ್ಟರೆ ನಾಲೆಗಳ ರಿಪೇರಿಗೆ ಮತ್ತು ಅದಕ್ಕೆ ಆಗಬೇಕಾದ ಕೆಲಸಕಾರ್ಯಗಳಿಗೆ ಹಣವನ್ನು ಒದಗಿಸಿಲ್ಲ. ಹಿಂದೆ ಮಾಡಿದ ಕೆಲಸವೆಲ್ಲ ಈಗ ಕ್ಷೀಣ ದೆಸೆಗೆ ಬರುತ್ತಿದೆ. ರಸ್ತೆಗಳಲ್ಲೆಲ್ಲ ಕಾಡು ಬೆಳೆಯುತ್ತಿದೆ. ನಾಲೆಗಳ ದಡಗಳ ಮೇಲೂ ಕಾಡು ಬೆಳೆಯುವುದಕ್ಕೆ ಪ್ರಾರಂಭವಾಗಿದೆ. ಬಡ್ಜೆಟ್‌ನಲ್ಲಿ ನೋಡಿದರೂannual repairs ಮಾಡುವುದಕ್ಕೆ ಹಣವನ್ನೊದಗಿಸಿಲ್ಲ. ಆದುದರಿಂದ ನಾನು ಸರ್ಕಾರಕ್ಕೆ ಸಲಹೆ ಮಾಡುವುದೇನೆಂದರೆ, ಈಗ ಒಂದು ಪ್ರಾಜೆಕ್ಟ್ ಕೂಡ ಅಲ್ಲಿ ಆಗುತ್ತಿದೆ. ಕೆಂಚನಗೆರೆ ಪ್ರಾಜೆಕ್ಟ್ ಕೆಲಸ ನಡೆಯುತ್ತಿದೆ. ಇದರಿಂದ ಒಂದು ಸಾವಿರ ಎಕರೆ ಜಮೀನು ಅಚ್ಚುಕಟ್ಟಿಗೆ ಒಳಪಡುವ ಸಂದರ್ಭವಿರುವಾಗ 8—10 ಸಾವಿರ ಎಕರೆ ಜಮೀನು ನೀರಾವರಿಯಿಂದ ಸಾಗುವಳಿಯಾಗುವ ಸಂದರ್ಭದಲ್ಲಿ ಸರ್ಕಾರದವರು ನಾಲೆಗಳನ್ನು maintain ಮಾಡುವುದಕ್ಕೆ annual repairs ಗೋಸ್ಕರವಾಗಿ ಒಂದು ಮೊತ್ತವನ್ನು ಒದಗಿಸುವುದು ಸೂಕ್ತವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

11 A.M.

*ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ಮೊದಲು ಈ ಖೋತಾ ನಿರ್ಣಯಗಳು ಬಂದಾಗ್ಗೆ ಈ ಸಭೆಯಲ್ಲಿ ಆಯಾ ಇಲಾಖಾ ಮುಖ್ಯಾಧಿಕಾರಿಗಳೂ ಕೂಡ ಬಂದು ಹಾಜರಿರುತ್ತಿದ್ದರು. ಈ ಇಲಾಖೆಯ 7½ ಕೋಟಿ ರೂಪಾಯಿಗಳ ಡಿಮ್ಯಾಂಡನ್ನು ಈಗ ನಾವು ಅಂಗೀಕಾರ ಮಾಡಬೇಕಾಗಿರುವಾಗ ಇಲಾಖೆಯಲ್ಲಿ ಇಬ್ಬರು ಚೀಫ್ ಇಂಜನಿಯರುಗಳಿದ್ದರೂ ಒಬ್ಬರೂ ಕೂಡ ಇಲ್ಲಿಲ್ಲದಿರುವುದು ಬಹಳ ಶೋಚನೀಯ. ಅವರು ಇಲ್ಲಿದ್ದರೆ ಇಲ್ಲಿನ ಚರ್ಚೆ ಯಾವ ರೀತಿಯಲ್ಲಿ ನಡೆಯುತ್ತಿದೆ, ಜನರ ಕುಂದು ಕೊರತೆಯೇನಿದೆ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಅವಕಾಶವಾಗುತ್ತಿತ್ತು. ಮುಂದಾದರೂ ಅವರು ಅವರ ಇಲಾಖೆಯ ವಿಷಯ ಚರ್ಚೆಯಾಗುವಾಗ ಹಾಜರಿರಬೇಕಾದದ್ದು ಆವಶ್ಯಕವೆಂದು ಸಲಹೆ ಮಾಡುತ್ತೇನೆ.

(ಶ್ರೀ ಬಿ. ಹುಚ್ಚೇಗೌಡ.)

ನಮ್ಮ ದೇಶದಲ್ಲಿ ಸರ್ವತೋಮುಖವಾದ ಪ್ರಗತಿಯಾಗಬೇಕಾದರೆ ನಮ್ಮಲ್ಲಿರುವ ಶೇಕಡ 80 ಮಂದಿ ವ್ಯವಸಾಯಗಾರರ ಮೇಲ್ಮೆಯನ್ನು ಸಾಧಿಸಬೇಕು. ಅದಕ್ಕೆ ಮುಖ್ಯವಾಗಿ ಬೇಕಾದ ವ್ಯವಸಾಯಗಾರರ ಅರ್ಥಿಕಾಭಿವೃದ್ಧಿಯಾಗಬೇಕಾದರೆ ಮುಖ್ಯವಾಗಿ ನೀರಾವರಿ ಸೌಕರ್ಯ ಹೆಚ್ಚಬೇಕು. ಇದರಲ್ಲಿರುವ ಕುಂದುಕೊರತೆಗಳನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ದೊಡ್ಡ ದೊಡ್ಡ ಜಲಾಶಯ ಕಟ್ಟಬೇಕಾದ ಅವಶ್ಯಕತೆಯಿದೆ, ಆದರೆ ದೊಡ್ಡ ಜಲಾಶಯಗಳು ಕೇವಲ ಕೆಲವು ಪ್ರದೇಶದ ಜನರಿಗೆ ಮಾತ್ರ ಸೌಕರ್ಯವನ್ನೊದಗಿಸುತ್ತವೆ. ಅದರ ಜೊತೆಗೆ ಎಲ್ಲರಿಗೂ ಸಹಾಯವಾಗುವಂತೆ ಹಿಂದಿನಿಂದಲೂ ಇರುವ ಕೆರೆ ಕಟ್ಟೆ, ಮೈನರ್ ಕೆರೆ ಮುಂತಾದವುಗಳ ದುರಸ್ತಿ ಕೂಡ ಬಹಳ ಮುಖ್ಯವಾಗಿದೆ. ನಮ್ಮ ದೇಶದಲ್ಲಿದ್ದ ಸುಮಾರು 30 ಸಾವಿರ ಎಕರೆಗಳಲ್ಲಿ ಅನೇಕ ಕೆರೆಗಳು ನಾದುರಸ್ತಾಗಿ ಕೇವಲ ಆರುಸಾವಿರ ಕೆರೆಗಳು ಮಟ್ಟಿಗೆ ಸರಿಯಾದ ಸ್ಥಿತಿಯಲ್ಲಿ ತಕ್ಕಮಟ್ಟಿಗಿವೆ. ಅವೂ ಕೂಡ ಕೆಲವಕ್ಕೆ ತೂಬು ಸರಿಯಾಗಿಲ್ಲದೆ, ಕೋಡಿ ಸರಿಯಾಗಿಲ್ಲದೆ, ಏರಿ ನಾದುರಸ್ತಾಗಿ, ಕಾಲುವೆ ಸರಿಯಾಗಿಲ್ಲದೆ, ಸರಿಯಾಗಿ ನೀರು ಬಾರದೆ ಹೀಗೆ ಒಂದಲ್ಲ ಒಂದು ವಿಧದಲ್ಲಿ ನಾದುರಸ್ತಾಗಿ ಪೂರ್ಣವಾಗಿ ಸಹಾಯಕಾರಿಯಾಗಿಲ್ಲ. ಅದಕೆ ಕಾರಣ ಇಲಾಖೆ ದಕ್ಷತೆ ಕಡಮೆಯಾಗಿರುವುದು. ಈ ಕೆರೆಗಳು ವರ್ಷೇ ವರ್ಷೇ ತನಿಖೆ ಮಾಡಿ ಅವು ಯಾವಸ್ಥಿತಿಯಲ್ಲಿವೆಯೆಂಬುದನ್ನು ಅಧಿಕಾರಿಗಳು ಇಲಾಖೆಗೆ ವರದಿ ಮಾಡುವುದಿಲ್ಲ. ಬೇಕಾದ್ದನ್ನು ನೋಡುತ್ತಾರೆ, ಬಾಕಿಯಾದ್ದನ್ನು ಆಗಾಗ್ಗೆ ಅಜಮಾಯಿಷಿ ಮಾಡಿ ಲೋಪದೋಷಗಳನ್ನು ಸರಿಪಡಿಸುವುದಿಲ್ಲ. ಇದರಿಂದ ಬಹಳ ಮಟ್ಟಿಗೆ ಅನಾನುಕೂಲ. ಕೆರೆಯಲ್ಲಿ ಸಾಕಷ್ಟು ನೀರು ಶೇಖರಣೆಯಾಗದೆ ಫಸಲು ಒಣಗಿ ವರ್ಷವೆಲ್ಲಾ ಕಷ್ಟಪಟ್ಟಿದ್ದು ವ್ಯರ್ಥವಾಗುತ್ತಿದೆ. ಇಂಥ ನ್ಯೂನತೆಗಳನ್ನು ಸರಿಪಡಿಸಬೇಕಾದದ್ದು ಅವಶ್ಯಕ. ಇಂಥ ಪ್ರಾಮುಖ್ಯ ವಿಚಾರದಲ್ಲಿ ಬಡ್ಜೆಟ್ ಭಾಷಣ ಮಾಡುವಾಗ ಮುಖ್ಯಮಂತ್ರಿಗಳು ಒಂದು ಶಬ್ದವನ್ನೂ ಸಹ ಹೇಳಿಲ್ಲ. ಮೈನರ್ ಕೆರಗಳಿಗೆ ಹಿಂದೆ ಎಷ್ಟೋ ಪ್ರಾಮುಖ್ಯತೆ ಕೊಡುತ್ತಿದ್ದರು, ಈಗ್ಗ ಹಾಗೆ ಕೊಡುತ್ತಿಲ್ಲ. ಅದರಲ್ಲೂ ಈ ಸಾರಿ ಕ್ಯಾಪಿಟಲ್ ಅಕೌಂಟಿಗೆ ಕೆಲವನ್ನು ಹಾಕುತ್ತಾರೆ, ಪ್ರೊಡಕ್ಟಿವ್ ವರ್ಕ್ಸ್ ಸೇರಿಸುತ್ತಿಲ್ಲ. ಈ ವರ್ಷ ಐದು ಲಕ್ಷ ಮಾತ್ರ ಬಡ್ಜೆಟ್ಟಿನಲ್ಲಿ ಒದಗಿಸಿದ್ದಾರೆ. ಕಳೆದ ಐದು ವರ್ಷಗಳಿಂದಲೂ ಕೂಡ ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸುಮಾರು 75 ಲಕ್ಷ ರೂಪಾಯಿಗಳನ್ನು ಒದಗಿಸಿ ವರ್ಷಕ್ಕೆ 15 ಲಕ್ಷದಂತೆ ಖರ್ಚು ಮಾಡುತ್ತಿದ್ದಾರೆ. 15 ಲಕ್ಷಕ್ಕಿಂತ ಯಾವಾಗಲೂ ಹೆಚ್ಚಾಗಿ ಖರ್ಚುಮಾಡಿಲ್ಲ. ದೇಶದಲ್ಲಿ ಕನಿಷ್ಠ ಪಕ್ಷ 15 ಸಾವಿರ ಕೆರೆಗಳನ್ನು ದುರಸ್ತು ಮಾಡಬೇಕಾಗಿರುವಾಗ ವರ್ಷಕ್ಕೆ 100-124-190 ಕೆರೆಗಳನ್ನು ಮಾತ್ರ ದುರಸ್ತು ಮಾಡುತ್ತಾಬಂದರೆ ಯಾವ ಕಾಲಕ್ಕೆ ಎಲ್ಲಾ ರಿಪೇರಿಯಾಗುವುದು ? 100 ವರ್ಷವಾದರೂ ಮಾಡುವುದಕ್ಕಾಗುವುದಿಲ್ಲ. ಹಿಂದೆ 1,500 ಕೆರೆಗಳನ್ನು ಐದು ವರ್ಷಗಳಲ್ಲಿ ದುರಸ್ತು ಮಾಡುವುದಾಗಿ ಹೇಳಿ 1,000 ಕೆರೆಗಳನ್ನು ಮಾತ್ರ ದುರಸ್ತು ಮಾಡಿದ್ದಾರೆ. ಹೀಗೆ ವರ್ಷಕ್ಕೆ 300 ಕೆರೆಗಳನ್ನು ದುರಸ್ತುಮಾಡುತ್ತೇವೆಂದರೆ 200ನ್ನು ಮಾತ್ರ ಮಾಡುತ್ತಾರೆಂದು ಹೇಳಬಹುದು. ಅದೂ ಅಲ್ಲದೆ ಮೈನರ್ ಕೆರೆಗಳ ಅವಶ್ಯಕತೆ ಎಷ್ಟಿದೆಯೆಂದರೆ ಅವು ದೇಶದಲ್ಲಿ ಪ್ರತಿಯೊಬ್ಬ ರೈತನಿಗೂ ಕೂಡ ಉಪಯೋಗವಾಗತಕ್ಕವು. ಈಗತಾನೆ ಉತ್ಪತ್ತಿ ಎಷ್ಟೆಂಬುದನ್ನು ಶ್ರೀ ದೇವರಾಜ ಅರಸ್‌ರವರು ಹೇಳಿದ್ದಾರೆ. ಬರೀ ದೊಡ್ಡ ಕೆರೆಗಳಲ್ಲೇ ಉತ್ಪತ್ತಿಯಿದೆಯೆಂದು ಭಾವಿಸ ಬಾರದು. ಕೆ.ಆರ್.ಎಸ್.ನಲ್ಲಿ ಶೇಕಡ .8 ಉತ್ಪತ್ತಿ ಬರುತ್ತದೆಂದು ಹೇಳಿದರೆ ಹೇಗೆ ? ಆಕ್ಚುಯಲ್ ಅಕೌಂಟ್ಸ್ ತೆಗೆದುಕೊಂಡಿಲ್ಲ. 1954-55ರಲ್ಲಿ ಎಂಟು ಲಕ್ಷದ 81 ಸಾವಿರ ರೂಪಾಯಿಗಳ ಉತ್ಪತ್ತಿಯಿದೆ. ಇದು ಶೇಕಡ .8 ಕ್ಕಿಂತ ಕಡಮೆ ; ಒಂಬತ್ತು ಲಕ್ಷ ಚಿಲ್ಲರೆ ಖರ್ಚು, ಇದರಿಂದ ಪರಿಸ್ಥಿತಿ ಹೇಗಿದೆಯೆಂಬುದನ್ನು ಯೋಚನೆಮಾಡಬೇಕು. ಬಡ್ಜೆಟ್ ಅಂದಾಜಿನ ಪ್ರಕಾರ ಈ ಬಾಬಿನಲ್ಲಿ 12 ಲಕ್ಷ 10 ಸಾವಿರ ರೂಪಾಯಿಗಳ ಉತ್ಪತ್ತಿ, ಎಂಟು ಲಕ್ಷ 90 ಸಾವಿರ ರೂಪಾಯಿಗಳ ಖರ್ಚು ಇದೆ. ರಿವೈಸ್ಡ್ ಎಸ್ಟಿಮೇಟ್ ಪ್ರಕಾರ ಒಂಬತ್ತು ಲಕ್ಷ ರೂಪಾಯಿಗಳ ಉತ್ಪತ್ತಿ 10 ಲಕ್ಷ ರೂಪಾಯಿಗಳ ಖರ್ಚು ಇದೆ; ಇದು ಖೋತಾ ಬಡ್ಜೆಟ್ಟಾಗಿದೆ, ಅಂದರೆ ಶೇಕಡ .8 ಬರುತ್ತದೆ. ಈ ಬಡ್ಜೆಟ್ ಪ್ರಕಾರ ಒಂಬತ್ತು ಲಕ್ಷ 41 ಸಾವಿರ ರೂಪಾಯಿಗಳ ಖರ್ಚು, 10 ಲಕ್ಷ 60 ಸಾವಿರ ರೂಪಾಯಿಗಳ ಆದಾಯವಿರುವುದನ್ನು ನೋಡಿದರೆ ಸುಮಾರು ಎರಡು ಲಕ್ಷ ರೂಪಾಯಿಗಳು ಒಳಕ್ಕೆ ಬರುತ್ತದೆಂದು ಹೇಳಬಹುದು. ಹೀಗೆ ಹೇಳುವಾಗ ಬರೀ ಉತ್ಪತ್ತಿ ಮಾಡಬೇಕೆಂದು ಹೇಳುವುದಿಲ್ಲ. ನೀರಾವರಿ ಸೌಕರ್ಯ ಮಾಡಬೇಕಾದದ್ದು ಮುಖ್ಯ. ಸಕ್ಕರೆ ಕಾರ್ಖಾನೆಗೆ ಬರೀ ಕಬ್ಬಿನಿಂದ 12 ಲಕ್ಷ ತೆರಿಗೆ ಬರುತ್ತದೆ. ಇದರಲ್ಲಿ ಕೋಟ್ಯಂತರ ರೂಪಾಯಿಗಳ ಆದಾಯವಿದೆ. ಜನರ ಆರ್ಥಿಕ ಪರಿಸ್ಥಿತಿ ಈಗ ಹೇಗಿದೆ, ಹಿಂದೆ ಹೇಗಿತ್ತು ಎಂಬುದನ್ನು ಊಹೆ ಮಾಡಬಹುದು. ಗ್ರಾಮಾಂತರ ಪ್ರದೇಶಗಳಲ್ಲಿ ರೈತರ ಆರ್ಥಿಕ ಸ್ಥಿತಿ ಉತ್ತಮವಾಗಬೇಕಾದರೆ, ಇಡೀ ದೇಶದ ಪ್ರಗತಿಯಾಗಬೇಕಾದರೆ, ಮೈನರ್ ಕೆರೆಗಳ ದುರಸ್ತಿ ಮಾಡಬೇಕಾದದ್ದು ಮುಖ್ಯ. ಇಷ್ಟೇ ಅಲ್ಲದೆ ಪಿಕಪ್ ಛಾನಲ್ ಅಣೆಕಟ್ಟು ಮುಂತಾದುವನ್ನೂ ದುರಸ್ತಿ ಮಾಡುವುದೂ ಮುಖ್ಯ. ಇಂಥ ವಿಚಾರಗಳನ್ನು ಅನೇಕವೇಳೆ ಗಮನಕ್ಕೆ ತಂದರೂ ಕೂಡ ಅವಕ್ಕೆಗಮನಕೊಟ್ಟಿಲ್ಲ. ಉದಾಹರಣೆ ಹೇಳುತ್ತೇನೆ. ತುರುವೇಕೆರೆ ತಾಲ್ಲೂಕಿನಲ್ಲಿಹಿತ್ತಲಕೊಪ್ಪದ ಕೆರೆಯ ಕೆಲಸ ಈ ದಿವಸದವರೆಗೂ ಪೂರೈಸಿಲ್ಲ. 40-50 ಸಾವಿರ ರೂಪಾಯಿಗಳಿಗೆ ಎಸ್ಟಿಮೇಟ್ ಆಗಿತ್ತು. ಅಲ್ಲಿಗೇ ಬಿಡಬೇಕೆಂದು ಯೋಚನೆಮಾಡುತ್ತಿದ್ದಾರೆಂದು ತಿಳಿದುಬಂದಿದೆ. ಇನ್ನೊಂದು, ಕೆಮ್ಮನಹಳ್ಳಿ ಕೆರೆ 1926ರಲ್ಲಿ ಜೀರ್ಣೋದ್ಧಾರವಾಯಿತು. ಈ ದಿವಸದವರೆಗೂ ಕಾಲುವೆಯಾಗಲಿ ಅಥವಾ ಅಚ್ಚುಕಟ್ಟಾಗಲಿ ನಿರ್ದೇಶವಾಗಿಲ್ಲ. ಹಂಗಾಮಿ ಕಂದಾಯ ಕೊಡುವುದು, ನೀರು ತೆಗೆದುಕೊಳ್ಳುವುದು ಹೀಗಿದೆ. ಬಗರ್‌ಹುಕುಂ ನೀರು ತೆಗೆದುಕೊಂಡರೆಂದು ಎಂಟರಷ್ಟು ಕಂದಾಯ ಹಾಕಲು ಅವಕಾಶವಿದೆ. ಎಷ್ಟು ಬೇಕಾದರೂ ಹಾಕಬಹುದು. ಈ ದಿವಸದವರೆಗೂ ಇದೇ ರೀತಿಯಿದೆ. ಅಚ್ಚುಕಟ್ಟು ನಿಷ್ಕರ್ಷೆ ಮಾಡಿ ಕಾಲುವೆಮಾಡಿ ಎಂದು ಹೇಳಿದರೆ, ಲೆವಲಿಂಗ್ ಇನ್ಸ್ಟ್ರುಮೆಂಟ್ ತರುವುದು ತೆಗೆದುಕೊಂಡು ಹೋಗುವುದು ಇಷ್ಟರಲ್ಲೇ ಆಗಿದೆ. ಆದ್ದರಿಂದ ಇದರಿಂದ ಸೌಕರ್ಯವಾಗುವ ಯೋಚನೆ ಬಿಟ್ಟೆವು. ಕೆರೆ ಕಟ್ಟಿ 1926ರಿಂದ ಇಲ್ಲಿಯವರೆಗೆ 30 ವರ್ಷಗಳಾಗಿವೆ. ಈ ದಿವಸದವರೆಗೂ ಅಚ್ಚುಕಟ್ಟನ್ನು ನಿಗದಿಮಾಡಿ ಕಾಲುವೆ ತೆಗೆಯಲು ಜಾಗವನ್ನೂ ಸಹ ಮಾರ್ಕ್ ಮಾಡಿಲ್ಲ. ರೈತರು ಇಷ್ಟಬಂದ ಹಾಗೆ ನೀರನ್ನು ತೆಗೆದುಕೊಳ್ಳುತ್ತಿದ್ದಾರೆ. ಮಲ್ಲಿದೇವರಹಳ್ಳಿಯಲ್ಲಿ ಒಂದು ಅಣೆಕಟ್ಟು ಕಟ್ಟಬೇಕೆಂದು ಕಳೆದ ಬಡ್ಜೆಟ್ ಅಧಿವೇಶನದಲ್ಲಿ 462ನೆಯ

ನಂಬರಿನ ಪ್ರಶ್ನೆ ಹಾಕಿದ್ದೆ. ಚೀಫ್ ಇಂಜನಿಯರು ಸರಿಶೀಲಿಸುತ್ತೇವೆಂದು ಹೇಳಿದ್ದರು. ಪುನಃ ಅಕ್ಟೋಬರ್ ಅಧಿವೇಶನದಲ್ಲಿ 689ನೆಯ ಪ್ರಶ್ನೆ ಹಾಕಿದೆ. ಅದಕ್ಕೆ ಆ ಅಧಿವೇಶನ ಮುಗಿದಮೇಲೆ ಉತ್ತರಕೊಟ್ಟರು. ಅದು ಈ ರೀತಿಯಿದೆ :—

> "This matter would be investigated again by the Chief Engineer."

'The matter would be investigated' ಎಂದು ಹೇಳಿದ್ದರೂ ಈ ದಿವಸದವರೆಗೂ ಏನೂ ಮಾಡಿಲ್ಲ. ಹೀಗಾದರೆ ಇಲಾಖೆ ಎಷ್ಟುಮಟ್ಟಿಗೆ ಜನರಿಗೆ ಸೌಕರ್ಯ ನೀಡುತ್ತದೆಯೆಂಬುದನ್ನು ಯೋಚನೆಮಾಡಬಹುದು. ಆದುದರಿಂದ ಈ ದೇಶಾಭಿವೃದ್ಧಿಗೆ ಅನುಕೂಲವಾದಂಥ ಈ ಬಾಬಿಗೆ ಕೊನೆಯಪಕ್ಷ ತಾವು ಒಂದು ಸ್ಕೀಮು ಹಾಕಿಕೊಂಡು ಈ 15 ಸಾವಿರ ಕೆರೆಗಳನ್ನೂ 15 ವರ್ಷಗಳಲ್ಲಿಲ್ಲದಿದ್ದರೆ 30 ವರ್ಷಗಳಲ್ಲಾದರೂ ರಿಪೇರಿ ಮಾಡಿಸಲೇಬೇಕು. ಆದರೆ ತಾವು ಈ ಬಾಬಿಗೆ ಈಗ ಒದಗಿಸಿರತಕ್ಕ 15 ಲಕ್ಷ ರೂಪಾಯಿಗಳ ನಿಧಿ ಎಳ್ಳಷ್ಟೂ ಸಾಲದು. ಇದನ್ನು ಇನ್ನೂ ಹೆಚ್ಚಿಸಬೇಕೆಂದು ಹೇಳುತ್ತೇನೆ. ಇನ್ನು ಈ ಅಸಿಸ್ಟೆಂಟ್ ಇಂಜಿನಿಯರುಗಳ ನೇಮಕದ ವಿಚಾರ . . . .

Mr. SPEAKER.—I have no objection if the Hon'ble Member speaks of the capabilities of the Engineers, but not about the entertainment of Probationers as such.

ಶ್ರೀ ಜಿ. ಪುಟ್ಟಸ್ವಾಮಿ (ಚಿಕ್ಕಮಗಳೂರು—ಅನುಸೂಚಿತ ಜಾತಿಗಳು).—ಸ್ವಾಮಿ, ಸರ್ಕಾರದವರು ಈಗ ಸಭೆಯಮುಂದೆ ಮಂಡಿಸಿರತಕ್ಕ ಮನವಿಗಳನ್ನು ಅನುಮೋದಿಸುತ್ತ ಒಂದೆರಡು ವಿಷಯಗಳ ಕಡೆಗೆ ಸರ್ಕಾರದವರ ಗಮನವನ್ನು ಸೆಳೆಯಲಿಚ್ಛಿಸುತ್ತೇನೆ.

ನಮ್ಮ ಮಲೆನಾಡಿನಲ್ಲಿ ಅದರಲ್ಲೂ ಚಿಕ್ಕಮಗಳೂರು ಜಿಲ್ಲೆಯಲ್ಲಿ ಈ ಹಿಂದಿನ ವರ್ಷ ಅತಿವೃಷ್ಟಿಯಾಗಿ ಅಲ್ಲಿ ಹಿಂದೆ ಕಟ್ಟಿಸಲಾಗಿದ್ದ ಅನೇಕ ಕೆರೆಗಳ ಏರಿಗಳು, ಕೋಡಿ, ತೂಬುಗಳು ಇತ್ಯಾದಿಗಳೆಲ್ಲಾ ಒಡೆದು ಹೋಗಿರುತ್ತವೆ. ಈ ರೀತಿ ಒಡೆದು ಹೋಗಿರತಕ್ಕಂಥಾ ಕೆರೆಗಳನ್ನು ಬೇಗ ದುರಸ್ತಿ ಮಾಡಿಕೊಡಿ ಎಂಬುದಾಗಿ ಅಲ್ಲಿಯ ರೈತರು ಅಲ್ಲಿರತಕ್ಕ ಇಂಜಿನಿಯರಿಂಗ್ ಇಲಾಖೆಯ ಎಗ್ಸಿಕ್ಯುಟೀವ್ ಇಂಜಿನಿಯರಿಗೆ ಅರ್ಜಿ ಗುಜರಾಯಿಸಿಕೊಂಡರು. ಅದಕ್ಕೆ ಉತ್ತರವಾಗಿ ಅವರು ನೀವು ಈ ಅರ್ಜಿಗಳನ್ನೆಲ್ಲಾ ನೇರವಾಗಿ ಮಂತ್ರಿಗಳಿಗೇ ಕೊಟ್ಟು ಅಲ್ಲಿಂದ ಇವುಗಳ ರಿಪೇರಿ ಬಗ್ಗೆ ಮಂಜೂರಾತಿಯನ್ನು ಪಡೆದುಕೊಂಡು ಬಂದ ಪಕ್ಷದಲ್ಲಿ ಆಗ ನಾವು ಈ ಕಾರ್ಯಗಳನ್ನು ಕೈಗೊಳ್ಳಬಹುದೇ ಹೊರತು, ಈಗ ಸದ್ಯಕ್ಕೆ ನಮ್ಮಲ್ಲಿ ಯಾವ ಹಣವೂ ಇರುವುದಿಲ್ಲ. ಆದುದರಿಂದ ನಾವು ಈ ಕೆಲಸಗಳನ್ನು ಕೈಗೊಳ್ಳಲು ಸಾಧ್ಯವಿಲ್ಲ ಎಂದು ತಿಳಿಸುತ್ತಿದ್ದಾರೆ. ಹೀಗೆ ರೈತರಿಗೆ ನೇರವಾಗಿ ಮಂತ್ರಿಗಳಿಗೇ ಅರ್ಜಿ ಬರೆದುಕೊಂಡು ಅವರ ಕೆರೆಗಳನ್ನು ದುರಸ್ತಿಮಾಡಿಕೊಳ್ಳುವಷ್ಟು ಚೈತನ್ಯವಿದ್ದಿದ್ದರೆ ಇವರು ಇರಬೇಕಾದ ಆವಶ್ಯಕತೆ ಏನಿತ್ತೋ ಅದು ನನಗೆ ಗೊತ್ತಾಗುತ್ತಿಲ್ಲ. ಆ ರೀತಿಯಾಗಿ ಅವರಲ್ಲಿ ಹಣವಿಲ್ಲದಿದ್ದರೆ ಅವರು ಇಷ್ಟು ಕೆಲಸಗಳನ್ನು ಇಲ್ಲಿ ನಡೆಸಬೇಕಾಗಿದೆ. ಅದಕ್ಕೆಲ್ಲಾ ಇಷ್ಟು ಹಣ ಬೇಕಾಗುತ್ತದೆ ಎಂದು ಸರ್ಕಾರಕ್ಕೆ ಒಂದು ವರದಿ ಕಳುಹಿಸಿ, ಅವರು ಶಿಫಾರ್ಸುಮಾಡಿ ಹಣವನ್ನು ಬರುಮಾಡಿಕೊಳ್ಳಬೇಕಾದುದು ಅವರ ಕರ್ತವ್ಯ. ಆ ಮಲೆನಾಡಿನಲ್ಲಿ ಯಾವತ್ತೂ ಈ ಅತಿವೃಷ್ಟಿ ಎನ್ನುವುದು ಇದ್ದದ್ದೇ. ಈ ವಿಚಾರ ನಮ್ಮ ಅಧ್ಯಕ್ಷರಿಗೂ ಚೆನ್ನಾಗಿ ಗೊತ್ತಿದೆ. ಹಾಗೆ ಇಲಾಖೆಯವರಲ್ಲಿ ಹಣವಿಲ್ಲದಿದ್ದರೆ ಅವರು ಸರ್ಕಾರಕ್ಕೆ ಬರೆದು ತರಿಸಿಕೊಳ್ಳಬೇಕು. ರೈತರಿಗೆ ಅನುಕೂಲ ಕಲ್ಪಿಸುವುದಕ್ಕಾಗಿಯೇ ಇವರು ಇರುವುದು. ಈ ರೀತಿ ಸರ್ಕಾರದವರು ಮಲೆನಾಡಿನವರಿಗೊಂದು ವಿಶೇಷ ರಿಯಾಯಿತಿ ತೋರಿಸದೆ ಹೋದರೆ ದೇಶದಲ್ಲಿ ಮುಂದಕ್ಕೆ ಪುನಃ ಈ ಆಹಾರದ ಕೊರತೆ ತಲೆದೋರಬಹುದು. ಆದಕಾರಣ ತಾವು ಮಲೆನಾಡು ಕೆರೆಗಳ ಅಭಿವೃದ್ಧಿಗಾಗಿ ಜಾಸ್ತಿ ಹಣವನ್ನೊದಗಿಸಬೇಕೆಂದು ಹೇಳುತ್ತೇನೆ. ಏರಿ ಎತ್ತರಿಸುವುದಕ್ಕೂ, ಕೋಡಿ ರಿಪೇರಿಗೂ ಈಗ ಹಣವನ್ನು ವಿಶೇಷವಾಗಿ ಖರ್ಚುಮಾಡುತ್ತಿದ್ದಾರೆ. ಆದರೆ ಹೂಳು ತೆಗೆಸುವುದಕ್ಕೆ ಹಣವನ್ನು ಅಷ್ಟಾಗಿ ಖರ್ಚು ಮಾಡುತ್ತಿಲ್ಲ. ಭಾರಿ ಜಲಾಶಯಗಳ ವಿಚಾರ ಹಾಗಿರಲಿ. ಆದರೆ ನಮ್ಮ ಚಿಕ್ಕಮಗಳೂರು ಜಿಲ್ಲೆಯನ್ನು ಅಲ್ಲಿಯ ಜನರು ತಬ್ಬಲಿ-ಜಿಲ್ಲೆ ಎಂದು ಹೇಳುತ್ತಿದ್ದಾರೆ. ಆ ಜಿಲ್ಲೆಗೊಂದು ಭಾರಿ ಜಲಾಶಯವಿಲ್ಲ. ಯಾವ ವಿಚಾರದಲ್ಲೂ ಆ ಜಿಲ್ಲೆಯ ಬಗ್ಗೆ ತಿರಸ್ಕಾರ ಭಾವನೆಯನ್ನು ತೋರಿಸುತ್ತಿದ್ದಾರೆಂಬುದಾಗಿ ಆ ಜನರಲ್ಲೊಂದು ಭಾವನೆ ಹುಟ್ಟಿದೆ. ಆದರೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ನೀರಿನ ಸೌಕರ್ಯ ಯಥೇಷ್ಟವಾಗಿದೆ. ಚಿಕ್ಕಮಗಳೂರು ಸಮೀಪದಲ್ಲೇ ಹೊನ್ನಮ್ಮನಹಳ್ಳ ಎಂದು ಇದೆ. ನದಿಯ ನೀರೆಲ್ಲ ಈ ದಿವಸ ವ್ಯರ್ಥವಾಗಿ ಪೋಲಾಗಿ ಹೋಗುತ್ತಿದೆ. ಅಲ್ಲಿ ಒಂದು ಜಲಾಶಯವನ್ನು ನಿರ್ಮಾಣಮಾಡಬೇಕೆಂದು ಜನರು ಬಹಳ ವರ್ಷಗಳಿಂದಲೂ ಕೇಳಿಕೊಳ್ಳುತ್ತಿದ್ದಾರೆ. ಅಲ್ಲಿ ಒಂದು ಜಲಾಶಯವನ್ನು ನಿರ್ಮಾಣಮಾಡಿದರೆ ಸಾವಿರಾರು ಎಕರೆ ಜಮೀನು ತರಿ ಸಾಗುವಳಿಗೆ ಬರುತ್ತದೆ. ಇದೇ ರೀತಿ ಆ ಚಿಕ್ಕಮಗಳೂರು ಸಮೀಪದಲ್ಲೇ ಒಂದು ಲಕ್ಯ ಹೋಬಳಿ ಎಂದು ಇದೆ. ಅದಕ್ಕೆ ಏನೇನೂ ನೀರಿನ ಆಶ್ರಯವಿಲ್ಲ. ಅಲ್ಲೆಲ್ಲಾ ಬರಿ ಖುಷ್ಕಿ ಜಮೀನಿರುತ್ತದೆ. ಆ ಹೋಬಳಿಗೊಂದು ಜಲಾಶಯದ ಏರ್ಪಾಡುಮಾಡಿಕೊಡಬೇಕೆಂದು ಬಾಗುಮನೆ ಶ್ರೀ ದೇವೇಗೌಡರು ಸುಮಾರು 20-30 ವರ್ಷಗಳಿಂದ ಕೇಳುತ್ತಲೆ ಇದ್ದಾರೆ. ಹಾಗೆ ಅಲ್ಲಿ ಯಾವ ಜಲಾಶಯವನ್ನೂ ನಿರ್ಮಾಣಮಾಡುವುದಕ್ಕೆ ಸಾಧ್ಯವಿಲ್ಲವೆಂಬುದಾಗಿ ಕಂಡುಬಂದ ಪಕ್ಷದಲ್ಲಿ ಅಯ್ಯನಕೆರೆಯಿಂದಲಾದರೂ ಅಲ್ಲಿಗೆ ಒಂದು ನಾಲೆಯ ಮೂಲಕ ನೀರನ್ನೊದಗಿಸಿಕೊಡಿ ಎಂದು ಅಂಗಲಾಚಿ ಕೇಳಿಕೊಳ್ಳುತ್ತಿದ್ದಾರೆ. ಆದರೂ ಅಲ್ಲಿಯ ಜನರ ಕುಂದುಕೊರತೆಗಳನ್ನು ನಿವಾರಣೆ ಮಾಡಲು ಸರ್ಕಾರ ಈವರೆಗೆ ಯಾವ ಪ್ರಯತ್ನಗಳನ್ನೂ ಮಾಡಿಲ್ಲ. ಸರ್ಕಾರದವರು ಈ ರೀತಿಯ ಮನೋಭಾವನೆ ತಾಳಿದರೆ ಜನರು ನಿರಾಶರಾಗುತ್ತಾರೆ. ದೇಶದ ಅಭಿವೃದ್ಧಿಗೆ ಬಹಳ ಅಡಚಣೆಯುಂಟಾಗುತ್ತದೆ. ಈ ದಿವಸ ನಾವೆಲ್ಲರೂ ಸ್ವಾತಂತ್ರ ಭಾರತದಲ್ಲಿದ್ದೇವೆ. ಎಲ್ಲರಿಗೂ ಒಂದು ಸಮಾನಾವಕಾಶದ ಹಕ್ಕಿದೆ. ಇದಕ್ಕನುಸಾರವಾಗಿ ತಾವು ಇತರ ಕಡೆಗಳಿಗೆ ಅನುಕೂಲಗಳನ್ನು ಕಲ್ಪಿಸಿಕೊಡುತ್ತಿರುವಂತೆ ಇಲ್ಲಿಗೂ ಕಲ್ಪಿಸಿಕೊಡಬೇಕಾದ್ದು ಆದ್ಯ ಕರ್ತವ್ಯ. ಆದರೆ ಮಲೆನಾಡಿಗೆ ಎಲ್ಲ ಪ್ರದೇಶಕ್ಕಿಂತಲೂ ಹೆಚ್ಚು ರಕ್ಷಣೆಯನ್ನು ಕೊಡಬೇಕಾಗಿದೆ. ಈ ಪ್ರದೇಶದಲ್ಲಿ ನೀರಿನ ಅನುಕೂಲ ಹೆಚ್ಚಾಗಿದೆ. ಈ ಪ್ರದೇಶವನ್ನು ಉತ್ತಮ ಸ್ಥಿತಿಗೆ ಬೇಗ ತರುವಂಥ ಅವಕಾಶವಿದೆ. ಸರ್ಕಾರದವರು ಈಗಲಾದರೂ ನಾನು ಹೇಳತಕ್ಕಂಥಾ ಹೊನ್ನಮ್ಮನ ಹಳ್ಳದ ವಿಚಾರದಲ್ಲಿ ಸರಿಯಾದ ತನಿಖೆ ನಡೆಸಿ ಜನರಿಗೆ ಉಪಕಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮಲೆನಾಡಿನಲ್ಲಿ ಅನೇಕ ಕೆರೆಗಳು ಒಡೆದುಹೋಗಿವೆ. ಅವುಗಳನ್ನು

(ಶ್ರೀ ಜಿ. ಪುಟ್ಟಸ್ವಾಮಿ)

ಜೀರ್ಣೋದ್ಧಾರಗೊಳಿಸಲು ತಾವು ಹೆಚ್ಚು ಹೆಚ್ಚು ಹಣವನ್ನೊದಗಿಸಬೇಕೆಂದೂ ತಿಳಿಸಿ ಕೇಳುತ್ತೇನೆ. ಹಾಗೆಯೆ ಚಿಕ್ಕಮಗಳೂರು ತಾಲ್ಲೂಕ್ ಲಕ್ಯ ಹೋಬಳಿ ಈಶ್ವರಳ್ಳಿಗೆ ನಾಲೆಯನ್ನು ಏರ್ಪಡಿಸಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಆರ್. ಮುನಿಸ್ವಾಮಯ್ಯ (ಬೆಂಗಳೂರು ದಕ್ಷಿಣ—ಅನುಸೂಚಿತ ಜಾತಿಗಳು).—ಸ್ವಾಮಿ, ಈಗಾಗಲೇ ಅನೇಕ ಮಾನ್ಯ ಸದಸ್ಯರು ಮಾತನಾಡಿರುತ್ತಾರೆ. ಇವರಾದರೂ ಹಾಗೆ ಮಾತನಾಡುತ್ತ ಈ ದಿವಸ ಅನೇಕ ಕೆರೆಗಳು ರಿಪೇರಿ ಆಗದೆ ಹಾಗೆ ನಿಂತಿರುತ್ತವೆಂದೂ, ಮತ್ತೆ ಅನೇಕ ಕೆರೆಗಳಲ್ಲಿ ಹೂಳು ತೆಗೆಯುವ ಕೆಲಸ ನಡೆದಿಲ್ಲವೆಂಬ ಅಂಶಗಳನ್ನೇ ತಿಳಿಸಿದ್ದಾರೆ. ಹೀಗೆ ಈ ರಿಪೇರಿ ಮತ್ತು ಹೂಳು ತೆಗೆಸುವ ಕೆಲಸ ಕಾರ್ಯಗಳು ಮುಲ್ಕ ಬೀಳುತ್ತಿರುವುದನ್ನು ನೋಡಿದರೆ ಈ ಇಂಜಿನಿಯರಿಂಗ್ ಇಲಾಖೆಯಲ್ಲಿ ಈ ದಿವಸ ಸಾಕಷ್ಟು ಸಿಬ್ಬಂದಿಯಿಲ್ಲವೆಂಬುದು ಕಂಡುಬರುತ್ತಿದೆ. ಈ ಕೆರೆಗಳನ್ನು ಸರ್ವೆ ಮಾಡಲು ಸಾಕಷ್ಟು ಟೆಕ್ನಿಕಲ್ ಸಿಬ್ಬಂದಿಯಿರುವುದಿಲ್ಲ. ಈಗಿರತಕ್ಕ ಶಿಬ್ಬಂದಿ ಸಾಲದು. ಈಗಿರತಕ್ಕ ಸಿಬ್ಬಂದಿಯೇ ಈ ಎಲ್ಲ ಕೆರೆಗಳನ್ನೂ ತಿರುಗಿಕೊಂಡು ಸರ್ವೆ ಮಾಡಿ ಅನಂತರ ಅವುಗಳ ಬಗ್ಗೆ ಅಂದಾಜುಗಳನ್ನು ತಯಾರಿಸಲ ಅವರಿಗೆ ಕಾಲವಿಲ್ಲ. ಆದರೆ ನಮ್ಮ ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಕೆಲಸಮಾಡುತ್ತಿರುವ ಇಂಜಿನಿಯರಿಂಗ್ ಇಲಾಖೆ ಬಹಳ ಶ್ರದ್ಧೆಯಿಂದ ಕೆಲಸ ಮಾಡುತ್ತಿದೆ. ಈಗಿರತಕ್ಕಂಥ ಚೀಫ್ ಇಂಜಿನಿಯರೂ, ಸೂಪರಿಂಟೆಂಡೆಂಟ್ ಇಂಜಿನಿಯರೂ ಮತ್ತು ಬೆಂಗಳೂರು ಎಗ್ಜಿಕ್ಯುಟೀವ್ ಇಂಜಿನಿಯರೂ ಬಹಳ ಕೆಲಸಗಳನ್ನು ಶ್ರದ್ಧೆವಹಿಸಿ ಒಂದು ಶಿಸ್ತಿನಿಂದ ನಡೆಸಿಕೊಂಡು ಬರುತ್ತಿದ್ದಾರೆ. ತತ್ರಾಪಿ ನಮ್ಮ ಬೆಂಗಳೂರು ಜಿಲ್ಲೆಯ ಇಂಜಿನಿಯರ್ ಅವರು ಹಗಲೂ ರಾತ್ರಿ ಸಂಚಾರ ಮಾಡಿ ಎಲ್ಲೆಲ್ಲಿ ಏನೇನು ಕೆಲಸಗಳು ನಡೆಯಬೇಕೆಂಬುದನ್ನು ನೋಡಿ ಅದಕ್ಕನುಸಾರವಾಗಿ ಕೆಲಸ ನಡೆಸುತ್ತಿದ್ದಾರೆ. ಆದರೆ ಎಸ್ಟಿಮೇಟ್, ಸರ್ವೆ ಇತ್ಯಾದಿ ಕೆಲಸಗಳನ್ನು ಸರಿಯಾಗಿ ಸ್ಕ್ರೂಟಿನಿ ಮಾಡಿ ಕೆಲಸವನ್ನು ಮುಂದುವರಿಸಲು ತಕ್ಕಷ್ಟು ಟೆಕ್ನಿಕಲ್ ಸಿಬ್ಬಂದಿಯಿಲ್ಲದೆ ಈ ಕೆಲಸಗಳು ಈ ದಿವಸ ಬಹಳವಾಗಿ ಮೂಲೆಗೆ ಬೀಳಲು ಕಾರಣವಾಗುತ್ತಿದೆ. ನಮ್ಮ ಬೆಂಗಳೂರು ಡಿವಿಜನ್ನಲ್ಲಿ ಒಂದು ಡ್ರಾಫ್ಟ್ಸ್‌ಮನ್ ಬ್ರಾಂಚ್ ಇದೆ. ಆದರೆ ಅಲ್ಲಿ ಸಾಕಷ್ಟು ಡ್ರಾಫ್ಟ್ಸ್‌ಮನ್‌ಗಳಿಲ್ಲ. ಪ್ಲಾನುಗಳನ್ನು ಸ್ಕ್ರೂಟಿನಿ ಮಾಡತಕ್ಕಂಥ ಸಬ್ ಓವರ್‌ಸೀಯರುಗಳಿಲ್ಲ. ಹೀಗಾಗಿ ತಯಾರಿಸಿದ ಎಸ್ಟಿಮೇಟುಗಳನ್ನು ಸ್ಕ್ರೂಟಿನಿ ಮಾಡುವುದು ತಡವಾಗುತ್ತಿರುವುದರಿಂದ ಈ ಹಣ ಬಹಳವಾಗಿ ಲ್ಯಾಪ್ಸ್ ಆಗುವುದಕ್ಕೆ ಕಾರಣವಾಗಿದೆ. ಅದಕ್ಕೋಸ್ಕರವಾಗಿ ಇಲ್ಲಿಗೆ ಒಂದು ವರ್ಷಕ್ಕೆ ಮುಂಚೆ ಸಬ್-ಓವರ್‌ಸೀಯರ್ಸ್‌ಗಳು ಯಾರು ಯಾರು ರಿಟೈರಾಗಿದ್ದಾರೋ ಅಂಥವರನ್ನು ಪುನಃ ಸರ್ವೀಸಿಗೆ ತೆಗೆದುಕೊಂಡು ಈ ಮುಲ್ಕ ನಿಂತಿರತಕ್ಕಂಥ ಅಂದಾಜುಗಳನ್ನೆಲ್ಲಾ ಸ್ಕ್ರೂಟಿನಿ ಮಾಡಿಸಿದರೆ ಅವು ಬೇಗ ಮಂಜೂರಾಗಲು ಒಂದು ಅವಕಾಶ ಸಿಕ್ಕಬಹುದೆಂದು ನಾನು ತಮಗೆ ಈ ಸಂದರ್ಭದಲ್ಲಿ ಈ ಒಂದು ಸಲಹೆಮಾಡುತ್ತೇನೆ.

ಇನ್ನು ಕೆಲವು ಹಳ್ಳಿಗಳಲ್ಲಿ ಕೆರೆಗಳಿಗೆ ತೂಬು, ಕೋಡಿ ಇತ್ಯಾದಿ ಬಾಬುಗಳ ರಿಪೇರಿ ಕೆಲಸ ಆಗಬೇಕಾಗಿದೆ. ಇದಕ್ಕಾಗಿ ಈ ದಿವಸ ಆ ರೆವಿನ್ಯೂ ಇಲಾಖೆಗೂ ಮತ್ತು P.W.D. ಇಲಾಖೆಗೂ ಪತ್ರ ವ್ಯವಹಾರ ಮಾತ್ರ ವಿಶೇಷವಾಗಿ ನಡೆಯುತ್ತಿದೆ. ಆದರೆ ಕೆಲಸ ಮಾತ್ರ ನಡೆಯುತ್ತಿಲ್ಲ. . ಇದಕ್ಕಾಗಿಯೇ ನಾನು ಆ ಸಿಬ್ಬಂದಿಯನ್ನು ಹೆಚ್ಚುಮಾಡಬೇಕೆಂದು ಹೇಳುತ್ತಿದ್ದೇನೆ. ಇನ್ನು ಬೆಟ್ಟಕೋಟೆ ಕೆರೆ ಕಾಲುವೆ ಸಂಪೂರ್ಣವಾಗಿ ಮುಚ್ಚಿಹೋಗಿದೆ.. ಅನೇಕ ವರ್ಷಗಳಿಂದ ನಾಲೆಯ ಕಾಂಗಾರಿಯೇ ನಡೆದಿಲ್ಲ. ನಾಲೆಯ ಪ್ರದೇಶವನ್ನೆಲ್ಲಾ ಜನರು ಸಾಗುವಳಿಗೆ ಆಕ್ರಮಿಸಿಕೊಂಡು ಬಿಟ್ಟಿದ್ದಾರೆ. ಈ ವಿಚಾರವನ್ನು ಪರಾಂಬರಿಸಲು ಸಾಕಷ್ಟು ಸಿಬ್ಬಂದಿ ಇಲ್ಲದ್ದರಿಂದ ಈ ಕಾಲುವೆ ಕಾಮಗಾರಿ ನಡೆಯದೆ ಇದ್ದುದರಿಂದ ಈ ದಿವಸ ಅಲ್ಲಿ ಈ ಕಾಲುವೆಯೇ ಇಲ್ಲದೋಪಾದಿಯಲ್ಲಿ ಮುಚ್ಚಿಹೋಗಿದೆ. ಆ ಕೆರೆಯ ನೀರೆಲ್ಲಾ ಬೇರೆ ರೈತರ ಸಾಗುವಳಿ ಜಮೀನಿನಮೇಲೆ ನುಗ್ಗಿ ಹರಿಯುತ್ತಿದೆ. ಈ ವಿಚಾರಕ್ಕೆ ಸರ್ಕಾರದವರು ಕೂಡಲೆ ಗಮನಕೊಡಬೇಕೆಂದು ಕೋರುತ್ತೇನೆ. ಇದೇ ರೀತಿಯಾಗಿ ದೊಡ್ಡಬಳ್ಳಾಪುರದ ತಾಲ್ಲೂಕಿನಲ್ಲಿ ಕಸಬಾ ಹೋಬಳಿಯಲ್ಲಿ ತಳಗುವಾರ ಕೆರೆಯ ಕೋಡಿ ಒಡೆದುಹೋಗಿದೆ. ಈ ಕೆರೆಯ ಕೋಡಿಯನ್ನು ಎತ್ತರಿಸಿ ಇದನ್ನು ಕೂಡಲೆ ಜೀರ್ಣೋದ್ಧಾರ ಮಾಡುವುದಕ್ಕೆ ಪ್ರಯತ್ನಮಾಡಬೇಕು. ಇನ್ನು ಜಿ.ಎಂ.ಎಫ್. ಯೋಜನೆಯ ಸಂಬಂಧದಲ್ಲಿ ಅನೇಕ ಕೆರೆ ಅಂಗಳಗಳನ್ನು ಸಾಗುವಳಿಗೆ ಕೊಡಲಾಗಿತ್ತು. ಹೀಗೆ ಹಂಗಾಮಿ ಸಾಗುವಳಿಗೆ ಕೊಟ್ಟಿದ್ದ ಜಮೀನನ್ನು ಆ ರೈತರು ಸಾಗುವಳಿ ಮಾಡುತ್ತಿರುವುದರಿಂದ ಕೆರೆಯಲ್ಲಿ ಬೇಗ ಹೂಳು ತೂಬು ತುಂಬಿಕೊಳ್ಳಲು ಅವಕಾಶವಾಗಿರುತ್ತದೆ. ಆದುದರಿಂದ ಹೀಗೆ ಹಂಗಾಮಿ ಸಾಗುವಳಿಗೆ ಕೊಡಲಾಗಿದ್ದಂಥ ಕೆರೆ ಅಂಗಳಗಳನ್ನೆಲ್ಲಾ ಕೂಡಲೆ ಸರ್ಕಾರದವರು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನ

ಕೆರೆ ಕೋಡಿಯನ್ನು ಎತ್ತರಿಸಿ, ಮೆಕ್ಕಲು ಮಣ್ಣನ್ನು ತೆಗೆಸಬೇಕೆಂದು ಹೇಳುತ್ತೇನೆ.

ದೇವನಹಳ್ಳಿ ತಟ್ಟಮಾಚನ ಹಳ್ಳಿ ಕೆರೆಗೆ ಫೀಡರ್ ಚಾನಲ್ ಮಾಡಿಸಬೇಕೆಂದು ಹತ್ತಾರು ವರ್ಷಗಳಿಂದ ಕೇಳುತ್ತಾ ಇದ್ದಾರೆ. ಸರ್ವೇ ನಡೆದಿಲ್ಲ. ಈ ಬಗ್ಗೆ ಇಲಾಖೆಯವರಿಗೆ ಎಚ್ಚರಿಕೆ ಕೊಟ್ಟು ಜಾಗ್ರತೆ ಕೆಲಸ ಮಾಡಿಸಬೇಕಾಗಿ ಹೇಳುತ್ತೇನೆ.

ಕುಂದಾಣ ಹೋಬಳಿಯ ಸೋಲೂರು ಕೆರೆಗೆ ಬೇಕಾದಷ್ಟು ರಿಪೇರಿ, ಕೆಲಸ ಮಾಡಿಸಬೇಕಾಗಿದೆ. ಈ ಸಂಬಂಧವಾಗಿ ಎಷ್ಟೋ ಅರ್ಜಿಗಳನ್ನು ಹಾಕಿದರೂ ಕೂಡ ಅವೆಲ್ಲಾ ರೆಕಾರ್ಡ್ ರೂಪದಲ್ಲಿ ಇದೆಯೋ ಹೊರತು ಯಾವ ಕೆಲಸವೂ ಕೂಡ ಕಾರ್ಯತಃ ಜರುಗುತ್ತಾ ಇಲ್ಲ. ಪತ್ರವ್ಯವಹಾರ ಕಡಿಮೆ ಮಾಡಿ ಕೆಲಸ ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಈ ಬಗ್ಗೆ ಪರಿಶೀಲನೆ ಮಾಡಲು ಒಂದು ಸಮಿತಿಯನ್ನಾದರೂ ನೇಮಕ ಮಾಡಬೇಕೆಂದು ಹೇಳುತ್ತೇನೆ.

ಬೆಂಗಳೂರು ಉತ್ತರ ತಾಲ್ಲೂಕು, ದೇವನಹಳ್ಳಿ ತಾಲ್ಲೂಕುಗಳಲ್ಲಿ ಇನಾಂತಿ ಗ್ರಾಮಗಳು ಇವೆ. ಅಲ್ಲಿ ಜನಗಳಿಗೆ ಇನಾಂದಾರರು ಬಹಳ ತೊಂದರೆ ಕೊಡುತ್ತಾ ಇದ್ದಾರೆ. ಆದಷ್ಟು ಜಾಗ್ರತೆ ಸರ್ವೇ ಮಾಡಿಸಿ ಭೂಮಿಯನ್ನು ಸರಿಯಾಗಿ ಹಂಚಿಕೆ ಮಾಡಬೇಕು.

ಯಶವಂತಪುರದ ಹೋಬಳಿ ಕಾಮಾಕ್ಷಿ ಪಾಳ್ಯದ ಹತ್ತಿರ ನೀರು ಯಾವಾಗಲೂ ಹರಿದು ಹೋಗುತ್ತದೆ. ಅಲ್ಲಿ ಒಂದು ಸಣ್ಣ ಕಟ್ಟೆ ಹಾಕಿಕೊಟ್ಟರೆ, ಅದರ ಹಿಂದೆ 120 ಎಕರೆಯಷ್ಟು ವ್ಯವಸಾಯದ ನೀರಾವರಿಯಾಗುತ್ತದೆ. ಆದ್ದರಿಂದ ಈ ಕೆಲಸವನ್ನು ದಯವಿಟ್ಟು ನೆರವೇರಿಸಿಕೊಡಬೇಕೆಂದು ಹೇಳುತ್ತೇನೆ.

ನಾಗವಾರ ಬೆಂಗಳೂರು ಕಸಬಾ ಹೋಬಳಿಯಲ್ಲಿ ಟ್ಯಾನರಿ ಕೆಲಸ ನಡೆಯುತ್ತಾ ಇದೆ. ಚರ್ಮ ಹದ ಮಾಡುವವರು ವಿಪರೀತವಾಗಿ ಉಪ್ಪನ್ನು ಉಪಯೋ

ಗಿಸಿ ಚರ್ಮ ಹದ ಮಾಡುತ್ತಾರೆ. ಚರ್ಮವನ್ನು ಶುಚಿ ಮಾಡುವುದಕ್ಕೆ ಉಪಯೋಗಿಸಿದ ನೀರನ್ನೆಲ್ಲಾ ನಾಗವಾರ ಕೆರೆಗೆ ಬಿಡುತ್ತಾರೆ. ಈ ರೀತಿಯಾಗಿ ಅಲ್ಲಿ ರೊಚ್ಚು, ಧುರ್ವಾಸನೆ ವಿಪರೀತವಾಗಿದೆ. ಅದೂ ಅಲ್ಲದೆ ಭೂಮಿಯೆಲ್ಲಾ ಚೌಳು ಹಿಡಿದು ಭೂಮಿಯಲ್ಲಿ ಸಾರ ಇಲ್ಲದೆ ಬೆಳೆಯಲ್ಲಾ ಹೋಗಿ ರೈತರಿಗೆ ಬಹಳ ತೊಂದರೆಯಾಗಿದೆ. ಆ ನೀರನ್ನು ಇನ್ನೊಂದು ಕಡೆಗೆ ತಿರುಗಿಸಬೇಕು ಇಲ್ಲದೇ ಇದ್ದರೆ ಅಲ್ಲಿನ ಭೂಮಿಯೆಲ್ಲಾ ಉಪ್ಪು ತಿಂದು ಹೋಗಿರುವುದರಿಂದ ಕಂದಾಯವನ್ನು ಬಹುಮಟ್ಟಿಗೆ ಕಡಿಮೆ ಮಾಡಿಕೊಡಬೇಕೆಂದು ಹೇಳುತ್ತೇನೆ.

* Sri H. C. LINGA REDDY (Malur).—I wish to speak only with regard to major tanks and compensation that is provided for being paid to landholders. With regard to tanks, I had put a question about major tanks, that is, under Demand No. 39A, in Malur Taluk. Unfortunately I was not present at the time to put supplementaries. The answer given was that the number of major tanks in Malur Taluk is 40 and the number that required repairs is 35 and the number of tanks that were repaired in the last three years is five. If this should be the state of affairs, I am afraid that something is wrong with the P. W. Department. If this should be the case with regard to major tanks, the position about minor tanks is worse. Though representations have been made on a number of occasions to the Government that the repair of these tanks has to be undertaken on a planned basis, for one reason or other, there is a good deal of delay and the repair of these tanks has not been attended to. I request the Government to take speedy steps and have these tanks repaired. After all, the availability of a very good tank to a village is an important factor. If there is water in the tank there will be water in the wells and the people of the village will be in a position to get paddy and ragi and also can grow vegetable and all that in the village. Therefore, though we have been demanding that the repairs of these major and minor tanks have to be undertaken on a planned basis, Government have not been in a position to give attention to it. It is very necessary that a survey is made of all the tanks, both major and minor and sufficient amount is provided for it. I find from the budget proposals that last year Rs. 19 lakhs had been spent and for this year only Rs. 14 lakhs. I think it is necessary to find out how many tanks require repairs and suitably the provision has to be enhanced.

About compensation to be paid to landholders, only Rs. 5,000 has been provided for it. I do not know whether this is a token provision or whether the Government will be in a position to put into force the Inams Abolition Acts, concerning Personal as well as Religious inams. To a question put by my friend Sri Papanna the answer given is that it is likely that it may take five years to put into force the Inam Abolition Acts. There was an agitation and a committee was appointed. It made a report and even the previous Government had brought forward a Bill and it was about to be passed; but later we passed the Bill and the Bill got stuck up with the India Government and only a year ago the President gave his consent and for the last one year it is pending with the Government. No action has been taken at all to put the Acts into force. What exactly is happening in the villages I am afraid the Government will not be in a position to know. Lands are being sold by the Inamdars to the raiyats at various rates. I request the Government to have survey and settlement introduced in the inam villages and put the two Acts into force. It is something like looking after the stables after the horse is stolen away. Just to bring to the notice of the Government the hardships of the tenants we agitated all these years that these two Acts should be put into force immedeiately. I am afraid the Government are not in a position to put these two Acts into practice and save the tenants from harassment. And sufficient compensation has not been provided at all in the Budget. I urge the Government to come to the rescue of the tenants by putting these two Acts into practice immediately.

11-30 A.M.

ಶ್ರೀ ಡಿ. ಎಂ. ಗೋವಿಂದರಾಜು (ನೆಲಮಂಗಲ).—ಮೈಸೂರು ಸಂಸ್ಥಾನದಲ್ಲಿನ ಮೈನರ್ ಕೆರೆಗಳ ಜೀರ್ಣೋದ್ಧಾರದ ವಿಷಯದಲ್ಲಿ ಮಾನ್ಯ

(ಶ್ರೀ ಡಿ. ಎಂ. ಗೋವಿಂದರಾಜು.)

ಸ್ನೇಹಿತರನೇಕರು ಅನೇಕ ವಿಷಯಗಳನ್ನು ಹೇಳಿದ್ದಾರೆ. ಮುಖ್ಯವಾಗಿ ಈಗ ನಮ್ಮ ದೇಶದಲ್ಲಿ ಎಷ್ಟರಮಟ್ಟಿನ ಕೆಲಸ ನಡೆದಿದೆ, ಇನ್ನೂ ಎಷ್ಟು ಕೆಲಸಗಳು ಆಗಬೇಕಾಗಿವೆಯೆಂಬುದನ್ನು ನೋಡಿದರೆ, ಈ ಇಲಾಖೆಯ ಕೆಲಸ ಬಹಳ ಆಶಾದಾಯಕವಾಗಿದೆ. ಆದರಲ್ಲೂ ಬೆಂಗಳೂರು, ತುಮಕೂರು ಮುಂತಾದ ಕೆಲವು ಡಿಸ್ಟ್ರಿಕ್ಟುಗಳು ಮಳೆಯ ನೀರಿನ ಆಧಾರದ ಮೇಲೆಯೇ ನಿಂತಿರುವುವುಗಳಾಗಿ ಅಲ್ಲಿನ ಕೆರೆಗಳಿಗೆ ನೀರು ಬಂದರೆ ಫಲ ಉಂಟು ಇಲ್ಲದಿದ್ದರೆ ಇಲ್ಲವಾಗಿದೆ. ಆದ್ದರಿಂದ ಈ ಡಿಸ್ಟ್ರಿಕ್ಟುಗಳ ಮೈನರ್ ಕೆರೆಗಳ ಜೀರ್ಣೋದ್ಧಾರದ ವಿಷಯದಲ್ಲಿ ಸರ್ಕಾರದವರು ಹೆಚ್ಚಿನ ನಿಗಾ ಕೊಡಬೇಕಾದದ್ದು ಅವರ ಮುಖ್ಯ ಕರ್ತವ್ಯವಾಗಿದೆ.

ಆಮೇಲೆ, ನಮ್ಮ ಮೈಸೂರು ದೇಶದಲ್ಲಿನ ಮೇಜರ್ ಕೆರೆಗಳ ಹಿಂದುಗಡೆ ನೀರಿನ ಸರಬರಾಯಿ ಒಂದು ವ್ಯವಸ್ಥಾರೂಪವಾಗಿ ನಡೆಯುತ್ತಿಲ್ಲ. ಹೀಗಾಗಿ leakageಗೆ ಅವಕಾಶವಾಗಿ ಒಂದು ವರ್ಷಕ್ಕೆ ಆಗುವಷ್ಟು ನೀರಿದ್ದರೂ ಅರ್ಧ ಬೆಳೆಗೂ ಕೂಡ ನೀರು ಒದಗುತ್ತಿಲ್ಲ. ಈ ಕಷ್ಟವನ್ನು ಪರಿಹರಿಸಬೇಕಾದರೆ ಎಲ್ಲಾ ಮೇಜರ್ ಕೆರೆಗಳಿಗೂ ಸರಿಯಾದ Nala systemನ್ನು ತರಬೇಕು. ಕೆರೆಗಳನ್ನು ರಿಪೇರಿಮಾಡುವುದು ಎಷ್ಟು ಮುಖ್ಯವೋ ಅದಕ್ಕಿಂತ ಹೆಚ್ಚಿಗೆ ಒಳ್ಳೆಯ ನಾಲಾ ಪದ್ಧತಿಯನ್ನು ತರುವುದೂ ಅಷ್ಟೇ ಮುಖ್ಯವೆಂದು ಹೇಳುತ್ತೇನೆ.

ಹೊಸದಾಗಿ ಕೆರೆಗಳನ್ನು ನಿರ್ಮಾಣ ಮಾಡುವ ಕೆಲಸವೂ ಬಹಳವಾಗಿ ಆಗಬೇಕಾಗಿದೆ. ಎಷ್ಟೋ ಕಡೆ ಅಕ್ಕಿಯನ್ನು ನೋಡುವುದೇ ಕಷ್ಟವಾಗಿದೆ. ಆದ್ದರಿಂದ ಕೆರೆಗಳನ್ನು ಹೊಸದಾಗಿ ತೆಗೆದುಕೊಳ್ಳುವುದರಲ್ಲಿ ಇಷ್ಟೇ ಶೇಕಡವಾರು ಆದಾಯ ಬರುತ್ತಿರಬೇಕೆಂದು ನಿಗದಿ ಮಾಡದೆ ಕೆಲಸಗಳನ್ನು ತೆಗೆದುಕೊಳ್ಳಬೇಕಾಗಿದೆ. ಜನರ ಕಷ್ಟವನ್ನು ನೋಡಿ ಕೆರೆಗಳೇ ಯಾವುದೂ ಇಲ್ಲದಿರುವ ಭಾಗಗಳಲ್ಲಿ ಉದಾರವಾಗಿ ಕೆರೆಗಳನ್ನು ಕೊಡುವ ಮನೋಭಾವವನ್ನು ಸರ್ಕಾರದವರು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ನಮ್ಮ ಕಡೆ ನೆಲಮಂಗಲ, ಮಾಗಡಿ, ದೊಡ್ಡಬಳ್ಳಾಪುರ ತಾಲ್ಲೂಕುಗಳಲ್ಲಿ ಮಳೆ ಬಹಳ ಕಡಿಮೆಯಾಗಿದೆ. ಅಂಥ ಕಡೆಗಳಲ್ಲಿ ಮುಖ್ಯವಾಗಿ ಕೆರೆಗಳನ್ನು ರಿಪೇರಿಮಾಡುವುದನ್ನೂ ಹೊಸ ಕೆರೆಗಳನ್ನು ಕಟ್ಟುವುದನ್ನೂ ಕೈಕೊಳ್ಳಬೇಕಾಗಿದೆ. ಹಾಗೆ ರಿಪೇರಿಯಾಗಬೇಕಾಗಿರುವ ಕೆರೆಗಳಲ್ಲಿ ನಮ್ಮ ಕಡೆಯಲ್ಲಿ ನೆಲಮಂಗಲದ ತಾಲ್ಲೂಕು ಮದಗದ ಕೆರೆ ಒಂದಾಗಿದೆ. ಬಹಳ ಹಿಂದಿನ ಕಾಲದ ಕೆರೆ; ಒಡೆದು ಹೋಗಿ ಅನೇಕ ವರ್ಷಗಳಾಗಿವೆ. ಆ ಪ್ರಾಂತ್ಯದ ರೈತರು ಅದನ್ನು ಕಟ್ಟಿಸಿಕೊಡಬೇಕೆಂದು ಪದೇ ಪದೇ ಅರ್ಜಿ ಕೊಡುತ್ತಿದ್ದಾರೆ. ಈ ಸಭೆಯಲ್ಲಿಯೂ ಸಹ 20 ವರ್ಷಗಳಿಂದ ಚರ್ಚೆಯಾಗುತ್ತಿದೆ. ಇಷ್ಟು ದಿವಸಗಳಾದರೂ ಕಟ್ಟದೆ ಹಾಗೆಯೇ ನಿಂತಿದೆ. ಎಸ್ಟಿಮೇಟುಗಳನ್ನು ಮಾಡಿಸಿದೆಯೆಂದು ಹೇಳುತ್ತಾರೆ, ಮತ್ತೆ ಹಿಂದಕ್ಕೆ ತಳ್ಳುತ್ತಾರೆ. ಎಸ್ಟಿಮೇಟುಗಳನ್ನು ಮಂಜೂರು ಮಾಡುವುದರಲ್ಲಿ ಯಾವುದಾದರೊಂದು ತತ್ವವಿಟ್ಟುಕೊಂಡಿರಬೇಕು. ಈಗೇನಿದ್ದರೂ, ಎಸ್ಟಿಮೇಟ್ ಆದ ಮೇಲೆಯೂ ಯಾರಾದರೂ interested ಪಾರ್ಟಿಗಳವರು ಸರ್ಕಾರದವರಲ್ಲಿಗೆ ಹೋಗಿ ಪದೇ ಪದೇ ಒತ್ತಾಯ ಮಾಡಿದರೆ ಜಾಗ್ರತೆ ಮಂಜೂರಾಗುತ್ತದೆ, ಇಲ್ಲದಿದ್ದರೆ ಮಂಜೂರಾಗದೇ ಕೊಳೆಯುತ್ತಾ ಬಿದ್ದಿರುತ್ತದೆ ಮತ್ತು ವಾಪಸು ಹೊರಟು ಹೋಗುತ್ತದೆ. ಈಗಲಾದರೂ ನೆಲಮಂಗಲದ ತಾಲ್ಲೂಕಿನ ಮದಗದ ಕೆರೆಯ ಎಸ್ಟಿಮೇಟನ್ನು ಜಾಗ್ರತೆ ತರಿಸಿಕೊಂಡು ಈ ಸಾಲಿನ ಬಡ್ಜೆಟ್ಟಿನಲ್ಲಿ ಅದಕ್ಕೆ ಹಣವನ್ನು ಒದಗಿಸಿ ರೈತರಿಗೆ ಅನುಕೂಲಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇದೇರೀತಿ ಮೊಸರಹಳ್ಳಿಯ ಪ್ರಾಜೆಕ್ಟು ಉಳಿದಿದೆ. ಹತ್ತಿಪ್ಪತ್ತು ವರುಷಗಳ ಹಿಂದೆಯೇ ಅದರ ಸರ್ವೆ ಆಗಿದೆ. ಈಗ ಆ ಎಸ್ಟಿಮೇಟಿನ ಗತಿಯೇನಾಯಿತೋ ಗೊತ್ತಿಲ್ಲ. ಈ ಪ್ರಾಜೆಕ್ಟನ್ನು ಕೈಕೊಂಡರೆ ನೆಲಮಂಗಲ ತಾಲ್ಲೂಕಿನಲ್ಲಿ 2,000 ಎಕರೆಗಳು ಸಾಗುವಳಿಗೆ ಬರುತ್ತವೆ. ನಾಲ್ಕೈದು ವರ್ಷಗಳಿಂದಲೂ ಇದನ್ನು ಒತ್ತಾಯ ಮಾಡುತ್ತಿದ್ದೇವೆ. ಈ ವರ್ಷವಾದರೂ ಇದನ್ನು ಕೈಗೊಳ್ಳಬೇಕೆಂದು ಹೇಳುತ್ತೇನೆ. ಗೊಲ್ಲಹಳ್ಳಿ ಕೆರೆ ಕೂಡ ನೆಲಮಂಗಲ ತಾಲ್ಲೂಕಿನಲ್ಲಿದೆ. ಇದಕ್ಕೂ ಎಸ್ಟಿಮೇಟ್ ಆಗಿದೆ. ಇದನ್ನು ಜಾಗ್ರತೆ ಮಂಜೂರುಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಒಟ್ಟಿನಲ್ಲಿ ಹೇಳುವುದಾದದರೆ ಇಂಜಿನಿಯರಿಂಗ್ ಇಲಾಖೆಯಲ್ಲಿ ಯಾವ ಕೆಲಸ ಕಾರ್ಯಗಳೂ ವ್ಯವಸ್ಥಿತ ರೀತಿಯಲ್ಲಿ ನಡೆಯುವಂತೆ ಮಾಡಬೇಕಾದದ್ದು ಮುಖ್ಯ. ಎಸ್ಟಿಮೇಟ್ ಆದಮೇಲೆ ಇಷ್ಟೇ ದಿವಸದಲ್ಲಿ ಆ ಕೆಲಸವನ್ನು ಮಾಡಲೇಬೇಕೆಂದು ಒಂದು ನಿಯಮವಿದ್ದರೆ ಒಳ್ಳೆಯದು. ಆದ್ದರಿಂದ ಇಂಜಿನಿಯರಿಂಗ್ ಇಲಾಖೆಯಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡಿ, ಆ ಮೂಲಕ ರೈತಾಪಿ ಜನರಿಗೆ ಇರತಕ್ಕ ಕುಂದುಕೊರತೆಗಳನ್ನು ಜಾಗ್ರತೆ ಪರಿಹಾರಮಾಡುವುದಕ್ಕೆ ಅವಶ್ಯಕವಾದ ಕಾರ್ಯಕ್ರಮಗಳನ್ನು ತೆಗೆದು ಕೊಳ್ಳುವುದು ಬಹಳ ಮುಖ್ಯವಾದುದು. ಸರ್ಕಾರದವರು ಇದನ್ನು ಗಮನಿಸುವರೆಂದು ನಂಬಿದ್ದೇನೆ.

*ಶ್ರೀ ಟಿ. ಜಿ. ತಿಮ್ಮೇಗೌಡ (ತಿಪಟೂರು).—ಸ್ವಾಮಿ, ತಿಪಟೂರು ತಾಲ್ಲೂಕಿನ ನೊಣವಿನಕೆರೆಯನ್ನು ಜೀರ್ಣೋದ್ಧಾರಮಾಡಬೇಕೆಂದು ಅನೇಕ ಸಾರಿ ಮನವಿಮಾಡಿಕೊಂಡಿದ್ದರೂ ಇದುವರೆಗೂ ಸರ್ಕಾರದವರು ಮನಸ್ಸು ಮಾಡಿಲ್ಲ. ತಿಪಟೂರು ತಾಲ್ಲೂಕಿನಲ್ಲಿ ದುರಸ್ತಾಗಬೇಕಾಗಿರುವ ಅನೇಕ ಚಿಕ್ಕ ಚಿಕ್ಕ ಕೆರೆಗಳಿದ್ದರೂ ಒಂದನ್ನಾದರೂ ಸರ್ಕಾರದವರು ಮಾಡಿದ್ದಾರೆಯೇ? ನೊಣವಿನ ಕೆರೆಯ ವಿಚಾರದಲ್ಲಂತೂ ಅನೇಕ ಪ್ರಶ್ನೆಗಳನ್ನು ಈ ಸಭೆಯಲ್ಲಿ ಕೇಳಿದ್ದೇವೆ. ಮಾನ್ಯ ಸಚಿವರು ಅವುಗಳಿಗೆ ಉತ್ತರ ಕೊಡುವಾಗ, ಈ ಕೆರೆಯನ್ನು ಜೀರ್ಣೋದ್ಧಾರ ಮಾಡುವುದರಿಂದ ಅದರ ಕೆಳಗಿನ ಕೆರೆಗಳಿಗೆಲ್ಲಾ ತೊಂದರೆಯಾಗುತ್ತದೆಂದು ಜವಾಬು ಕೊಟ್ಟರು. ಆದರೆ ಈ ಕಾಮಗಾರಿಯನ್ನು ಕೈಗೊಳ್ಳುವುದರಿಂದ ಸುಮಾರು ಎಂಟು ಹಳ್ಳಿಗಳಿಗೆ ನೀರು ವಸತಿ ಕಲ್ಪಿಸಿಕೊಟ್ಟಂತಾಗುತ್ತದೆ. ಇದರ ಮೇಲೆ 40,000 ರೂಪಾಯಿಗಳ ಎಸ್ಟಿಮೇಟ್ ಕೂಡ ಆಗಿದೆ. ಇಷ್ಟೆಲ್ಲ ಆಗಿದ್ದರೂ, ಇದು ಒಡೆದು ಹೋಗಿ 25-30 ವರ್ಷಗಳಾದರೂ ಕೂಡ ಸರ್ಕಾರದವರು ಗಮನ ಕೊಟ್ಟಿಲ್ಲ. ಈ ಕೆರೆಯ ಹಿಂದೆ ತರೀ ಜಮೀನುಗಳಲ್ಲದೆ, ಬಾಗಾಯಿತು ಜಮೀನುಗಳೂ ಬಹಳವಾಗಿವೆ. ಊರ ಮುಂಭಾಗದಲ್ಲಿದ್ದು ಆ ನಾಲ್ಕಾರು ಹಳ್ಳಿಗಳ ದನಕರುಗಳಿಗೂ ಕುಡಿಯುವ ನೀರಿಗೆ ಆಧಾರವಾಗಿದೆ ಈ ಕೆರೆ. ಆದ್ದರಿಂದ ಸರ್ಕಾರದವರು ಆದಷ್ಟು ಈ ಕಾಮಗಾರಿಯನ್ನು ಕೈಕೊಳ್ಳಬೇಕೆಂದು ಒತ್ತಾಯಮಾಡುತ್ತೇನೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ).—ಸ್ವಾಮಿ, ಕಂಟ್ರಿಬ್ಯೂಷನ್ ಮತ್ತು ವಾಟರ್‌ರೇಟ್ ಎನ್‌ಕ್ವೈರಿ ಕಮಿಟಿಯೆಂದು ಒಂದು ಕಮಿಟಿಯನ್ನು ಸರ್ಕಾರದವರು ಈಗ ಒಂದು ವರ್ಷದ ಕೆಳಗೆ ಏರ್ಪಾಡು ಮಾಡಿದ್ದರು. ಈಗಿರುವ ಪ್ರಕಾರ ಮಳೆಯಿಂದ ಬೆಳೆ ಮಾಡತಕ್ಕ ಪ್ರದೇಶಕ್ಕೆ ಒಂದು ದರ, ಕೆರೆಯ ನೀರಿನಿಂದ ಬೆಳೆಮಾಡತಕ್ಕ ಪ್ರದೇಶಕ್ಕೆ ಒಂದು ದರ, ನಾಲೆಯ ನೀರಿನಿಂದ ಬೆಳೆಯತಕ್ಕ ಪ್ರದೇಶಕ್ಕೆ ಒಂದು ದರ ಎಂದು

ವಿಧಾಯಕವಾಗಿದೆ. ಹೀಗಿದ್ದು, ಅನುಸಾರವಾಗಿ ಕಂದಾಯವನ್ನು ವಸೂಲಿ ಮಾಡುತ್ತಿದ್ದಾರೆಯೇ ಹೊರತು, ಅದಕ್ಕನುಗುಣವಾಗಿ ರೈತರಿಗೆ ಅನುಕೂಲ ದೊರೆಯುತ್ತಿದೆಯೇ ಎಂಬುದನ್ನು ಸರ್ಕಾರದವರು ನೋಡಿಲ್ಲ. ಈಗ 20 ವರ್ಷಗಳಿಂದ ನೋಡುವುದಾದರೆ, ಸರ್ಕಾರದವರು ಹೊಸದಾಗಿ 10 ಕೆರೆಗಳನ್ನು ಕೂಡ ಮಾಡಿಲ್ಲ. ಹಿಂದಿನ ಕಾಲದಲ್ಲಿ ಪಾಳೆಯಗಾರರು ಜನರ ಸಹಾಯದಿಂದ 25,000 ಕೆರೆಗಳನ್ನು ಕಟ್ಟಿರುವಾಗ, ಅವುಗಳನ್ನು ಸರಿಯಾಗಿ ರಿಪೇರಿ ಮಾಡುವುದಕ್ಕೂ ಕೂಡ ನಮ್ಮ ಸರ್ಕಾರದವರು ಗಮನ ಕೊಟ್ಟಿಲ್ಲವಲ್ಲ ಎಂದು ನಾನು ವಿಷಾದಿಸುತ್ತೇನೆ. 20-30 ವರ್ಷಗಳಿಂದ ಕೆರೆ ನಾದುರಸ್ತು ಆಗಿದ್ದರೂ ಕಂದಾಯವನ್ನು ಮಾತ್ರ ತೆಗೆದುಕೊಳ್ಳುತ್ತಿದ್ದೀರಿ. ಹೊಸದಾಗಿ ರಿಪೇರಿ ಮಾಡಿ ಎಂದು ಹೇಳಿದರೆ ವಾಟರ್ ರೇಟ್ ಕೊಡಬೇಕೆಂದು ಆರ್ಡರ್ ಬೇರೆ ಮಾಡಿದ್ದೀರಿ. ಇದು ತುಂಬ ಅನ್ಯಾಯವೆಂದು ಹೇಳಿದ ಮೇಲೆ ಇದಕ್ಕೊಂದು ಎಕ್ಸ್‌ಕ್ವೈರಿ ಕಮಿಟಿಯನ್ನು ಮಾಡಿದರು. ಆ ಕಮಿಟಿಯವರು ಶ್ರಮವಹಿಸಿ ಪರಿಶೀಲನೆ ಮಾಡಿ ಒಂದು ವರದಿಯನ್ನೊಪ್ಪಿಸಿದರೂ ಅದನ್ನೂ ಕೂಡ ಇದುವರೆಗೂ ಸರ್ಕಾರದವರು ಪರಿಶೀಲನೆ ಮಾಡಿಲ್ಲ. ಕಾರಣವೇನೋ ಗೊತ್ತಿಲ್ಲ. ಒಂದು ಕೆರೆಯ ರಿಪೇರಿಗೆ 10,000 ರೂಪಾಯಿಗಳು ಬೇಕೆಂದು ಹೇಳಿ 100-150 ರೂಪಾಯಿಗಳ ಕಂಟ್ರಿಬ್ಯೂಷನ್ ಕೊಡಬೇಕೆಂದು ಹೇಳಿದರೆ ಹೇಗೆ? ಮಳೆ ತರಿ ಜಮೀನಿಗೆ 2-0-0 ಕಂದಾಯ ಇದೆ, ಕೆರೆಯಿಂದ ಪೈರು ಮಾಡುವವರೂ ಐದು ರೂಪಾಯಿಗಳಂತೆ ಕೊಡಬೇಕೆಂದು ಇರುವಾಗ, ನೀರುನಿಲ್ಲುವುದಿಲ್ಲ ರಿಪೇರಿ ಮಾಡಿಸಿ ಎಂದು ಕೇಳಿದರೆ, ಅದಕ್ಕೆ ಮತ್ತೆ ವಾಟರ್ ರೇಟ್ ಮತ್ತು ಕಾಂಟ್ರಿಬ್ಯೂಷನ್ ಕೊಡಬೇಕೆಂದರೆ ಎಷ್ಟು ಅನ್ಯಾಯ!

ಈ ವರದಿಯಲ್ಲಿ ಏನಿದೆ ಎಂದು ಸರಕಾರದವರು ಪರಿಶೀಲನೆ ಮಾಡಿ, ಆದಷ್ಟು ಬೇಗ ವರದಿಗೆ ಒಪ್ಪಿಗೆ ಕೊಟ್ಟರೆ ಬಹಳ ಜನಗಳಿಗೆ ಅನುಕೂಲವಾಗುತ್ತದೆ ಎಂಬ ವಿಷಯವನ್ನು ತಮ್ಮ ಮುಂದೆ ಹೇಳುತ್ತೇನೆ. 20-30-40 ವರ್ಷಗಳ ಕೆಳಗೆ breach ಆಗಿರುವ ಕೆರೆಗಳು 150 ಇರಬಹುದು. ನಮ್ಮ ತಾಲ್ಲೂಕಿನಲ್ಲಿ 3-4 ಇವೆ. ನೀರು ಕೊಡುತ್ತೇವೆ ಎಂದು ಹೇಳಿ, ಕಂದಾಯ ತೆಗೆದುಕೊಳ್ಳುತ್ತಲೇ ಇದ್ದಾರೆ. ಇಷ್ಟು ವರ್ಷಗಳಿಂದ ಕಂದಾಯ ಕೊಟ್ಟರತಕ್ಕ ಹಣದಿಂದ ಕೆರೆಗಳನ್ನು ರಿಪೇರಿ ಮಾಡಿದ್ದರೆ, ಎಷ್ಟೋ ಅನುಕೂಲವಾಗುತ್ತಿತ್ತು. ಶಿವಮೊಗ್ಗದಲ್ಲಿ ತುಂಗಾ ಅಣೆಕಟ್ಟು ಇದೆ. 40-50 ಮೈಲಿಗಳ ದೂರಕ್ಕೆ ಇದರಿಂದ ನೀರಿನ ಅನುಕೂಲವಾಗುತ್ತದೆ. ನದಿಯ ಪಕ್ಕದಲ್ಲಿ ಒಂದು ಮೈಲಿಯ ಆವರಣದಲ್ಲಿ ಮಾತ್ರ ಉಪಯೋಗವಾಗುತ್ತದೆ. ಅಲ್ಲಿಂದ ಆಚೆ ಇರುವ ಜಮೀನುಗಳಿಗೆ ಉಪಯೋಗವಾಗುತ್ತಾ ಇಲ್ಲ. ಕಾನೆಹಳ್ಳ ಮತ್ತು ಬುತ್ತಿಹಳ್ಳ, ಇನ್ನೂ ಅನೇಕ ಹಳ್ಳಗಳಿವೆ. ಹಳ್ಳಗಳಿಗೆ ಒಂದೊಂದು ಅಣೆಕಟ್ಟು ಕಟ್ಟಿದರೆ ನೀರು ನಿಂತು 2-3 ಸಾವಿರ ಎಕರೆ ಜಮೀನು ಸಾಗುವಳಿ ಆಗುತ್ತದೆ ಇದು P.W.D.ಗೆ ಗೊತ್ತಿದೆ. ಕಾನೆಹಳ್ಳಕ್ಕೆ ಒಂದು reservoirನ್ನು ಕಟ್ಟಿದರೆ ಅಲ್ಲಿನ ಪ್ರದೇಶಗಳಿಗೆ ಅನುಕೂಲವಾಗುತ್ತದೆ. 30-40 ಚದುರ ಮೈಲಿ ವಿಸ್ತೀರ್ಣದಲ್ಲಿ (catchment area) ಮಳೆ ಬಿದ್ದು reservoir ಆಗುತ್ತದೆ. 5 ಸಾವಿರ ಎಕರೆ ಜಮೀನು ಸಾಗುವಳಿ ಆಗುತ್ತದೆ ಎಂದು ಅಲ್ಲಿರುವ ಅನುಭವಶಾಲಿಗಳು ಹೇಳುತ್ತಿದ್ದಾರೆ. ಹನಗೆರೆ ರೇಂಜಿನಬಳಿ ಬುತ್ತಿ ಹಳ್ಳಕ್ಕೆಬರುವನೀರು ವಿನಾಕಾರಣ ಉಪಯೋಗವಾಗದೆ ಹೋಗುತ್ತದೆ. ಅಲ್ಲಿ ಸಣ್ಣಸಣ್ಣ ಅಣೆಕಟ್ಟನ್ನು ಕಟ್ಟಿ ಹೊಸಕೆರೆಗೆ ಬಿಡುವುದರಿಂದ 1,500 ಎಕರೆಗಳ ಜಮೀನು ನೀರಾವರಿಗೆ ಬರುತ್ತದೆ. ಶಿವಮೊಗ್ಗ ತಾಲ್ಲೂಕಿನಲ್ಲಿ 75 ಸಾವಿರ ಎಕರೆ ಜಮೀನು ಸಾಗುವಳಿಗೆ ಯೋಗ್ಯವಾದುದ್ದು ಇದೆ. ನೀರಿನ ಅನುಕೂಲತೆ ಇಲ್ಲ ಇಲ್ಲದೆ 20 ಹಳ್ಳಿಗಳ ಜನಗಳು ಬೇರೆ ಊರಿಗೆ ಹೋಗುತ್ತಾರೆ, ಹಳ್ಳಿಗಳು ಬೇಚರಾಕ್ ಆಗಿವೆ, ಸಾಗುವಳಿ ನಿಂತು ಹೋಗಿದೆ. ಅಲ್ಲಿರುವ ಕೆರೆಗಳನ್ನು ಜೀರ್ಣೋದ್ಧಾರಮಾಡಿ, ಹಳ್ಳಗಳಿಗೆ ಅಣೆಕಟ್ಟನ್ನು ಕಟ್ಟಿದರೆ, 6 ಸಾವಿರ ಎಕರೆ ಜಮೀನು ಸಾಗುವಳಿಯಾಗುತ್ತದೆ. 12 ಮೈಲಿಗಳ ದೂರದಲ್ಲಿ 45" ಮಳೆ ಬರುತ್ತದೆ. ಆ 40-50" ಮಳೆನೀರನ್ನು ಉಪಯೋಗ ಮಾಡಿ ಅಲ್ಲಿನ ಹಳ್ಳಿಗಳಿಗೆ ಅನುಕೂಲ ಮಾಡುವುದು ಸರ್ಕಾರದವರ ಮೊದಲನೆ ಕರ್ತವ್ಯವಾಗಿದೆ. ಆದಷ್ಟು ಬೇಗನೆ ಇದನ್ನು ಗಮನಕ್ಕೆ ತೆಗೆದುಕೊಂಡು ಸರಕಾರದವರು ಹಳ್ಳಗಳಿಗೆ ಒಡ್ಡು ಕಟ್ಟುವುದಕ್ಕೆ ಪ್ರಯತ್ನಪಡುತ್ತಾರೆಂದು ಹೇಳಿ ನನ್ನ ಈ ಒಂದೆರಡು ಮಾತುಗಳನ್ನು ಮುಗಿಸುತ್ತೇನೆ.

*ಶ್ರೀ ಎಸ್. ಸಿ. ನಾಗಯ್ಯರೆಡ್ಡಿ (ಗೌರಿಬಿದನೂರು).—ಸ್ವಾಮಿ, ಶ್ರೀ ಲಿಂಗಾರೆಡ್ಡಿಯವರು ಮಾತನಾಡಿದ ಮೇಲೆ ನಾನು ಮಾತನಾಡುವುದು ಅವಶ್ಯಕವಿಲ್ಲವೆಂದು ತಿಳಿದುಕೊಂಡಿದ್ದೆ. ಅವರು ಬೇರೆ ವಿಷಯ ಮಾತನಾಡಿದರು. ಆದ್ದರಿಂದ ನಾನು ಒಂದು ಮುಖ್ಯವಾದ ವಿಷಯವನ್ನು ಹೇಳಬೇಕಾಗಿದೆ. ಆದರೆ ನಮ್ಮ ಸರ್ಕಾರದವರ ಮುಂದೆ ಹೇಳಿ ಉಪಯೋಗವಿಲ್ಲ ಎಂಬುದು ಗೊತ್ತಿದೆ. ಆದರೂ ಕೂಡ ಬೇರೆ ಸರ್ಕಾರದವರು ನಮ್ಮ ಅಭಿಪ್ರಾಯವೇನಿದೆ, ನಮ್ಮ ನಿಲುವು ಏನಿದೆ ಎಂಬುದನ್ನು ತಿಳಿದುಕೊಳ್ಳಬಹುದೆಂಬ ಉದ್ದೇಶದಿಂದ ನಾನು ಇಲ್ಲಿ ಮಾತನಾಡಬೇಕಾಗಿದೆ.

Mr. SPEAKER.—While the Hon'ble Member makes a speech, he should not cast aspersions against other State Governments.

ಶ್ರೀ ಎಸ್. ಸಿ. ನಾಗಯ್ಯರೆಡ್ಡಿ.—ವಿಷಯ ಮಾತ್ರ ಹೇಳುತ್ತೇನೆ. 1892 ನೇ ಇಸವಿಯಲ್ಲಿ ಮದರಾಸ್ ಸರ್ಕಾರಕ್ಕೂ ನಮಗೂ ಒಂದು ಮುಚ್ಚಳಿಕೆ ಆಯಿತು. ಈಗ್ಗೆ 63-64 ವರ್ಷಗಳಾದುವು. ಆಗ ಇದ್ದ ಗೌರ್ನರು, ಇಲ್ಲಿ ಇದ್ದ ಚೀಫ್ ಇಂಜನಿಯರ್ ಸ್ನೇಹಿತರಾದ್ದರಿಂದ ಒಂದು ಕರಾರನ್ನು ಮಾಡಿಕೊಂಡಿದ್ದರು. ಅದರಿಂದ ಮೈಸೂರು ಸರ್ಕಾರವನ್ನು ಮಾರಿಕೊಂಡಿದ್ದಾರೆ ಎಂದರೆ ತಪ್ಪಾಗುವುದಿಲ್ಲ. 30 ಮೈಲಿ ದೂರದಲ್ಲಿ ಪಾಲಾರ್, ಚಿತ್ರಾವತಿ, ಪೆನ್ನಾರ್ ನದಿಗಳಿಗೆ ಅಣೆಕಟ್ಟುಗಳನ್ನು ಅವರ ರಾಜ್ಯದಲ್ಲಿ ಒಂದು ಸಾವಿರ ಮೈಲಿಗಳವರೆಗೂ 30 ಮೈಲಿ ಬಿಟ್ಟು ಆಚೆ ಕಟ್ಟಿಕೊಳ್ಳಬಹುದು. ಆ ಕಾಲದಲ್ಲಿ ಬಹಳ ಅನ್ಯಾಯವಾಗಿದೆ. ಈಚೆಗೆ ನಮ್ಮ ಸರ್ಕಾರದವರು agreement ನ್ನು revise ಮಾಡಿಕೊಳ್ಳಬೇಕೆಂದು ಮಾಡಿದರು. ಹಾಗೆ ಮಾಡಿಕೊಳ್ಳುವಾಗ 30 ಸಾವಿರ unit limit ಅವರಿಗೆ 3 ಸಾವಿರ unit limit ನಮಗೆ ಬರುವ ವಿಷಯವನ್ನು ಯೋಚನೆ ಮಾಡಬೇಕು. ಪೆನ್ನಾರ್ ವಿಷಯ ಹೇಳುತ್ತೇನೆ. ಮೂರು ಸಾವಿರ ಯೂನಿಟ್ ಬಗ್ಗೆ ಚಾನಲ್ ಮಾಡಿಕೊಂಡು ಆ ಮೂಲಕ ಕೆರೆಗಳಿಗೆ ನೀರು ತೆಗೆದುಕೊಳ್ಳಬೇಕೆಂದು ಮಾಡಿದರು. ಅವರು ನಮ್ಮ areaದಲ್ಲಿ 30 ಮೈಲಿಯೊಳಗೆ ಒಂದು ಅಣೆಕಟ್ಟನ್ನು ಕಟ್ಟಿಕೊಳ್ಳಬಹುದು ಎಂದು ಮಾಡಿದರು. Draft ಬರೆಯುವ ಸ್ಥಿತಿಯಲ್ಲಿತ್ತು. ನಮ್ಮ ಸರ್ಕಾರದವರು ಡ್ರಾಫ್ಟಿಗೆ ರುಜು ಹಾಕಿಲ್ಲ. ಅವರು ಹಿಂದೂಪುರದ ಹತ್ತಿರ ಪೆನ್ನಾರ್ ಕುಮುದ್ವತಿಗೆ

(ಶ್ರೀ ಎಲ್. ಸಿ. ನಾಗಯ್ಯರೆಡ್ಡಿ.)

8-10 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಒಂದು ಅಣೆಕಟ್ಟನ್ನು ಕಟ್ಟಿದರು. 20 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಒಂದೆರಡು ಫೀಡರ್ ಚಾನಲ್‌ಗಳನ್ನು ಕಟ್ಟಿಕೊಂಡರು. ನದಿಗೆ ಅಡ್ಡ ಹಾಕಿದ್ರೇ ಆದರೆ ಅವರಿಗೆ ಒಂದು ತೊಟ್ಟು ನೀರು ಕೂಡ ಹೋಗುವುದಿಲ್ಲ, ಆದ್ದರಿಂದ ನಿಮ್ಮ draftಗೆ ಒಪ್ಪುವುದಿಲ್ಲ ಎಂದು ಹೇಳಿದರು. ನಮ್ಮ ಸರ್ಕಾರದವರು ಅದನ್ನು ಕಿವಿಗೆ ಹಾಕಿಕೊಳ್ಳಲಿಲ್ಲ. ಅವರು ಮಾತ್ರ ಕಟ್ಟಿಕೊಂಡರು. ಅವರು ಯಾವ ಆಧಾರದ ಮೇಲೆ ಕಟ್ಟಿರುವುದು! ನಮಗೆ 3 ಸಾವಿರ ಯೂನಿಟ್ಸ್, ಅವರಿಗೆ 30 ಸಾವಿರ ಯೂನಿಟ್ಸ್. ನಮ್ಮ ಕೇವಲ 3 ಸಾವಿರ ಯೂನಿಟ್ಸಿಗೂ ಅಣೆಕಟ್ಟನ್ನು ಕಟ್ಟಿಕೊಡಲಿಲ್ಲ. ಈ ವಿಷಯದಲ್ಲಿ ನಮ್ಮ ಸರ್ಕಾರದವರು ಕರ್ತವ್ಯಭ್ರಷ್ಟರಾಗಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಅವರಿಗೆ ತಿಳಿದುಕೊಳ್ಳುವ ಯೋಗ್ಯತೆ ಇಲ್ಲ. ಅವರು ಮಾತ್ರ ಕಟ್ಟಿಕೊಳ್ಳಬಹುದು. ನಾವು ಕಟ್ಟಿಕೊಳ್ಳುವುದಕ್ಕೆ ಪ್ರಯತ್ನಪಟ್ಟಾಗ, ಚಿಂತಾಮಣಿಯ ಹತ್ತಿರವಿರುವ ಒಂದು ಹಳ್ಳಿಯಿಂದ 50 ಮೈಲಿ ದೂರದಿಂದ 500 ಜನಗಳು ಬಂದು ಅದನ್ನು ಕಿತ್ತುಹಾಕಿದರು. ನಮಗೆ ಅಣೆಕಟ್ಟನ್ನು ಕಟ್ಟಿ ನೀರು ಕೊಡುವ ಯೋಗ್ಯತೆ ಇಲ್ಲ. ಅದಕ್ಕೋಸ್ಕರ ಸರ್ಕಾರದವರು ಏತಕ್ಕೋಸ್ಕರ ಹೀಗೆ ಮಾಡಿದರು ಎಂಬುದಕ್ಕೆ explanation ಕೊಡಲಿ. ಚಿತ್ರಾವತಿಗೂ ಹೀಗೆಯೇ ಮಾಡಿದ್ದಾರೆ. ಪಾಲಾರ್ ವಿಚಾರ ಇನ್ನೂ ವಿಚಿತ್ರ. ಶ್ರೀ ಹನುಮಂತಯ್ಯನವರು ಮುಖ್ಯ ಮಂತ್ರಿಗಳಾದ ಮೇಲೆ ಅವರು ಈ ರಿಕಾರ್ಡನ್ನು ತೆಗೆಸಿ ಇದನ್ನು ಮಾಡಿಸಿದ್ದಾರೆ ಎಂಬುದು ಗೊತ್ತಿಲ್ಲ. ಐದು ವರ್ಷಗಳಿಂದ ಇಲ್ಲದೇ ಇದ್ದುದು, ಈ ಮಂತ್ರಿಮಂಡಲದವರು ಕೋಲಾರ ಡಿಸ್ಟ್ರಿಕ್ಟಿನಲ್ಲಿ ಏನು ಮಾಡುತ್ತಾರೆ ಎಂಬುದು ನನ್ನಗಂತೂ ಅನುಮಾನವಾಗುತ್ತದೆ. ಪಾಲಾರ್ basins ನಲ್ಲಿ ಸಾವಿರ ಕೆರೆಗಳಿವೆ. ಈಚೆಗೆ ಅವು silt ಆಗಿವೆ. ಆದ್ದರಿಂದ 60 ಸಾವಿರ ಎಕರೆ ಜಮೀನಿನಲ್ಲಿ 40 ಸಾವಿರ ಎಕರೆ ಜಮೀನಿಗೆ ನೀರು ಸಿಕ್ಕುತ್ತಾ ಇಲ್ಲ. ಅವರಿಂದ ನಮಗೆ ಅನ್ಯಾಯವಾಗಿದೆ ಎಂದು ಹೇಳುತ್ತಿದ್ದರೂ ಸರ್ಕಾರದವರು ಸುಮ್ಮನೆ ಇರುತ್ತಾರೆ. ಇದರಲ್ಲಿ sinister motive ಇದೆ. ತಾವು ಸುಮ್ಮನೆ ಇದ್ದರೂ ನಾವೇನೂ ಬಿಡುವುದಿಲ್ಲ, ಮದರಾಸ್ ಸರ್ಕಾರ, ಆಂಧ್ರ ಸರ್ಕಾರ, ಎಲ್ಲಾ ಬಂದರೂ resist ಮಾಡುವ ಶಕ್ತಿ ನಮಗೆ ಇದೆ. ನಾವು ಮಾಡುತ್ತೇವೆ. ಸರ್ಕಾರ ಏತಕ್ಕೋಸ್ಕರ ಕರ್ತವ್ಯ ಭ್ರಷ್ಟರಾದರು ಎಂಬುದು ಗೊತ್ತಾಗುತ್ತಾ ಇಲ್ಲ. ರಾಮಸಾಗರ, ಬೇತಮಂಗಲ, ಮುದುವಾಡಿ ಮುಂತಾದ ಗ್ರಾಮಗಳ ದೊಡ್ಡ ದೊಡ್ಡ ಕೆರೆಗಳು silt ಆಗಿ ಮುಕ್ಕಾಲು ಭಾಗ ನೀರು ನಿಲ್ಲುವುದಿಲ್ಲ, ನಮಗೆ ಎಷ್ಟು silt ಆಗಿದೆಯೋ - ನಮಗೆ ಎಷ್ಟು ನೀರು ಕಮ್ಮಿ ಬಿದ್ದಿದೆಯೋ ಅದನ್ನು ಮೊದಲು ಸರ್ಕಾರದವರು ಅಂದಾಜುಮಾಡಿ, wast weirನ್ನು ಹೆಚ್ಚಿಸಿ, ನೀರನ್ನು ಮೊದಲಿದ್ದ ಹಾಗೆ ನಿಲ್ಲಿಸಬೇಕು. ಹೇಗಿದ್ದರೂ ಕೆಟ್ಟ ಹೆಸರು ಬಂದಿದೆ. ಕೆಟ್ಟ ಹೆಸರೇ ಇರಲಿ. ಕೃಷ್ಣರಾಜ ಸಾಗರದಲ್ಲಿ ನೀರನ್ನು ಅನಾವಶ್ಯಕವಾಗಿ ನಿಲ್ಲಿಸಿದರು ಎಂದು ಅವರ complaint. ಖಂಡಿತವಾಗಿಯೂ ನಮಗೆ ಬರುವ ⅓ ಭಾಗ ನೀರಿನಷ್ಟು ಮದರಾಸ್ ಸರ್ಕಾರಕ್ಕೆ ಹೋಗುತ್ತದೆ. ಎಲ್ಲಾ ಭಾಗದ ನೀರೂ ಆಂಧ್ರ ದೇಶಕ್ಕೆ ಹೋಗುತ್ತದೆ. ಶ್ರೀ ಸುಂದರಯ್ಯನವರು ಎಲ್ಲಾ ತೆಲುಗು ರಾಜ್ಯ, ಕೋಲಾರವನ್ನು ನಮ್ಮ ಆಂಧ್ರಕ್ಕೆ ಸೇರಿಸಿ ಎಂದು ಹೇಳುತ್ತಿದ್ದಾರೆ. ಎಲ್ಲರೂ ತೆಲುಗರೇ. ನಮಗೆ ಕೊಡತಕ್ಕ ಭಾಗ ಕೊಡಲಿ 30 ಸಾವಿರ ಯೂನಿಟ್ಸನ್ನು ಅವರು ಪೆನ್ನಾರ್‌ನಲ್ಲಿಟ್ಟುಕೊಂಡು ನಮಗೆ 3 ಸಾವಿರ ಯೂನಿಟ್ಸಿಗೂ ಅವಕಾಶವಿಲ್ಲದೆ ನದಿಯ ನೀರು ಒಂದೇ ಸಮನೆ ಅಲ್ಲಿಗೆ ಹೋಗುತ್ತಿದೆ. 2-3 ಮೈಲಿಗಳ ದೂರದಲ್ಲಿ ನೀರು ನಿಲ್ಲಿಸುವುದಕ್ಕೆ ಸಾಧ್ಯವಿದೆ. ಬೇಕಾದರೆ ಈ ಕೆಲಸವನ್ನು ನಾಳೆಯೇ ತೆಗೆದುಕೊಳ್ಳಬಹುದು. ಅವರು ಎರಡು ಅಣೆಕಟ್ಟುಗಳನ್ನು ನಮ್ಮ ಕರಾರು ಮೀರಿ ಕಟ್ಟಿದ್ದಾರೆ. ಆದ್ದರಿಂದ ಈ ಎರಡು ವಿಷಯಗಳಲ್ಲೂ ನಮ್ಮ ಸರ್ಕಾರದವರು ಕರ್ತವ್ಯ ಭ್ರಷ್ಟರಾಗಿದ್ದಾರೆ. ಅದನ್ನು ಸರಿಪಡಿಸಬೇಕು. ಅವರ ಮೇಲೆ ಜವಾಬ್ದಾರಿ ಇದೆ. ವ್ಯತ್ಯಾಸವಾದರೆ, they will be liable to be removed. They will be impeached.

ಶ್ರೀ ಕೆ. ಪ್ರಭಾಕರ್ (ನೆಲಮಂಗಲ-ಅನುಸೂಚಿತ ಜಾತಿಗಳು).—ಸ್ವಾಮಿ, ಪಬ್ಲಿಕ್ ವರ್ಕ್ಸ್ ಇಲಾಖೆಯ ವಿಚಾರ ಬಂದಾಗಲೆಲ್ಲಾ ಈ ಇಲಾಖೆ ಬಹಳ ಹೆಚ್ಚು ಹಣವನ್ನು ಖರ್ಚು ಮಾಡುವ ಇಲಾಖೆಯೆಂದು ಹೇಳಿದ ಕೂಡಲೆ ಎಲ್ಲರ ದೃಷ್ಟಿಯೂ ಈ ಕಡೆ ಹೋಗುವುದು ಸಹಜ. ರೈತರ ಏಳಿಗೆಯಾಗಿ ದೇಶದಲ್ಲಿ ಉತ್ಪತ್ತಿ ಜಾಸ್ತಿಯಾಗಬೇಕೆಂದರೆ, ಪಬ್ಲಿಕ್ ವರ್ಕ್ಸ್ ಇಲಾಖೆಯಿಂದ. ಆದುದರಿಂದ ಇದು ಎಷ್ಟು ದಕ್ಷತೆಯಿಂದ ಕೆಲಸ ಮಾಡಬೇಕೆಂದು ನಾವು ಹಾರೈಸುತ್ತೇವೋ ಅಷ್ಟುಮಟ್ಟಿಗೆ ಅದು ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ನೀರಾವರಿ ಜಾಸ್ತಿಯಾಗಬೇಕು, ಕೆರೆಗಳು ಜಾಸ್ತಿಯಾಗಬೇಕು ಎಂದು ಹೇಳಿ ಹೆಚ್ಚು ಹಣವನ್ನೊದಗಿಸುವಾಗ, ಈ ಇಲಾಖೆಯ personel ಅಥವಾ ಅಧಿಕಾರಿ ವರ್ಗ ಹೇಗಿದೆ, ಅವರಿಗೇನು ಕಷ್ಟವಿದೆ, ಹೇಗೆ ಇದನ್ನು ಪುನರ್‌ವ್ಯವಸ್ಥೆ ಮಾಡಬೇಕು ಎಂಬುದಕ್ಕೂ ಸರ್ಕಾರ ಹೆಚ್ಚು ನಿಗಾ ಕೊಡಬೇಕು. ಯೋಜನೆಗಳ ವಿಚಾರದಲ್ಲಿ ಮಾತನಾಡುವಾಗ, ಇದು ಚೆನ್ನಾಗಿಲ್ಲ, ಅದು ಚೆನ್ನಾಗಿಲ್ಲವೆಂದು ಹೇಳುವಾಗ, ಒಳಗಿದ್ದು ಕೆಲಸ ಮಾಡುವವರು, ಅಡಿಗೆ ಮನೆಯಲ್ಲಿದ್ದುಕೊಂಡು ಅಡಿಗೆ ಮಾಡುವವರ ಹಾಗೆ, ಇಲ್ಲಿ ಕೆಲಸಮಾಡಿ ಹಣ ಖರ್ಚು ಮಾಡುವವರಾದ ಅಧಿಕಾರ ವರ್ಗಕ್ಕೆ ಏನು ಕಷ್ಟವಿದೆ ಎನ್ನುವುದನ್ನೂ ವಿಚಾರ ಮಾಡಬೇಕು. ಹಿಂದೆ ಶ್ರೀ ಮರಿಯಪ್ಪನವರು ಮಂತ್ರಿಗಳಾಗಿದ್ದ ಕಾಲದಲ್ಲಿ ಈ ಪಬ್ಲಿಕ್ ವರ್ಕ್ಸ್ ಇಲಾಖೆಯನ್ನು ಪುನರ್‌ವ್ಯವಸ್ಥೆ ಮಾಡಬೇಕು ಎಂದು ಪ್ರಾರಂಭ ಮಾಡಿದರು. ಆದರೆ ಆಮೇಲೆ ಇದು ಹೆಚ್ಚು ಮುಂದುವರಿಯಲಿಲ್ಲ, ಈ ಯೋಜನೆಯನ್ನು ಕುಂಠಿತ ಮಾಡಿದರು.

ನಾನು ಹಿಂದೆ ಅನೇಕ ವೇಳೆ ಹೇಳಿದ್ದೇನೆ, ಕೆರೆಗಳು ಮತ್ತು ನೀರಾವರಿ ಯೋಜನೆಗಳಿಗೆ ಸ್ಪೆಷಲ್ ಇಂಜಿನಿಯರನ್ನು ಹಾಕಬೇಕು. ಸ್ಥೂಲವಾಗಿ ಯೋಚನೆ ಮಾಡಿದರೆ, ಇದರಲ್ಲಿ ಮೇಜರ್, ಮೈನರ್, ಕಟ್ಟಡಗಳು, ನಾಲೆಗಳು, ಕೆರೆಗಳು ಈ ಕೆಲಸಗಳನ್ನು ವಿಭಾಗಮಾಡಿ, ಒಂದೊಂದರ ಜವಾಬ್ದಾರಿ ಒಬ್ಬೊಬ್ಬರಲ್ಲಿರಬೇಕು. ತೂಬಿಲ್ಲದೇಯಿರುವ ಕೆರೆ, ಚಿಕ್ಕ ಚಿಕ್ಕ ರಿಪೇರಿ ಇವುಗಳನ್ನು ಬೇರೆ ಮಾಡಬೇಕು. ಈಗ ಇದನ್ನೆಲ್ಲಾ ಒಂದು hotch-potch methodsನಲ್ಲಿ ಮಾಡಲಾಗುತ್ತಿದೆ. ಆ ಇಲಾಖೆಯಲ್ಲಿ ಟ್ಯಾಂಕ್ ರಿಜಿಸ್ಟರ್ ನೋಡಿ ಹೇಳಿ ಎಂದು ಯಾವುದಾದರೂ ಕೆರೆಯ ವಿಷಯ ಕೇಳಿದರೆ, ಅದರಲ್ಲಿ ಟಿಪ್ಪುಸುಲ್ತಾನ್ ಕಾಲದಲ್ಲಿ, ಮಾಗಡಿ ಕೆಂಪೇಗೌಡನ ಕಾಲದಲ್ಲಿ ಆದ ಕೆರೆ ಎಂದು ಏನೇನೊ ಇದೆ, ಗೊತ್ತಾಗುವುದಿಲ್ಲ

ಎಂದು ಹೇಳುತ್ತಾನೆ. ಆ ರಿಜಿಸ್ಟರು ಹೀಗಿರುವುದರಿಂದ ಈ ಹೊತ್ತು ಆ ಇಲಾಖೆಯಲ್ಲಿ ಕೆಲಸ ಮಾಡುವವರನ್ನು ದೂರಿ ಪ್ರಯೋಜನವಿಲ್ಲ. ಈ ಪರಿಸ್ಥಿತಿ ಏಕೆ ಉಂಟಾಯಿತು ಎಂಬುದನ್ನು ಪರೀಕ್ಷಿಸಿ ನೋಡಿ ಸರಿಮಾಡುವುದಕ್ಕೆ ಆ ಇಲಾಖೆಗೆ ಸಹಾಯ ಮಾಡಬೇಕು.

ಇನ್ನೊಂದು ವಿಷಯ. 'ಷೆಡ್ಯೂಲ್ಡ್ ರೇಟ್ಸ್' ಎಂದಿದೆ. ಇದನ್ನು ಯಾವ ಆಧಾರದ ಮೇಲೆ ಮಾಡುತ್ತಾರೋ ಗೊತ್ತಿಲ್ಲ. ಮಾರ್ಕೆಟ್ ರೇಟುಗಳಿಗೂ ಇವಕ್ಕೂ ಏನು ಸಂಬಂಧವಿದೆ, ಯಾರನ್ನು ಕೇಳಿ ಮಾಡುತ್ತಾರೆ, ಅಥವಾ ಫಾರಿನ್ ಎಕ್ಸ್‌ಪರ್ಟ್ಸ್‌ನ್ನು ಏನಾದರೂ ಕೇಳಿ ಮಾಡುತ್ತಾರೆಯೋ? ಅಥವ ಕಂಟ್ರಾಕ್ಟರುಗಳ ಕಷ್ಟ ಸುಖಗಳನ್ನು ತಿಳಿದುಕೊಂಡು, ಅವರ ಕಷ್ಟದ ಮೇಲೆ ತೀರ್ಮಾನ ಮಾಡುತ್ತಾರೆಯೆ, ಮಾರ್ಕೆಟ್ ಬೆಲೆಗಳ ಮೇಲೆ ನಿರ್ಧಾರ ಮಾಡುತ್ತಾರೆಯೆ ಎಂಬುದು ಗೊತ್ತಿಲ್ಲ. ಈ ಷೆಡ್ಯೂಲ್ಡ್ ರೇಟುಗಳು ಆಡಿಟ್‌ಗೆ ಸಿಕ್ಕುವುದಿಲ್ಲ. ಆದುದರಿಂದ ಇದನ್ನು ಪರಿಶೀಲಿಸಿ ಇದೂ ಆಡಿಟ್‌ಗೆ ಸಿಕ್ಕುವ ಹಾಗೆ ಮಾಡಿ, ಈ ರೇಟು ಗೊತ್ತುಮಾಡುವುದು ಸರಿಯೇ ಇಲ್ಲವೇ, ನ್ಯಾಯವೇ ಅನ್ಯಾಯವೆ ಎಂಬುದನ್ನು ತಿಳಿದುಕೊಳ್ಳಬೇಕು. ಇದು ಟೆಕ್ನಿಕಲ್ ಎಂದು ಹೇಳಬಹುದು, ಭಯಪಡಬಹುದು; ಇದಕ್ಕವಕಾಶವಿಲ್ಲ. ಇದಕ್ಕೆ ಸರ್ಕಾರ ನಿಗಾ ಕೊಡಬೇಕು.

ಸ್ಥಳೀಯ ಕಷ್ಟನಿಷ್ಠುರಗಳನ್ನು ಸರ್ಕಾರಕ್ಕೆ ಹೇಳುವುದು ಖೋತಾ ಸೂಚನೆಗಳನ್ನು ಚರ್ಚಿಸುವ ಕಾಲದಲ್ಲಿ ಸ್ವಾಭಾವಿಕ. ನಮ್ಮ ತಾಲ್ಲೂಕಿನ ಕೆಲವು ತೊಂದರೆಗಳನ್ನು ಹೇಳಿರುವುದಕ್ಕಾಗಿ ಶ್ರೀಮಾನ್ ಗೋವಿಂದರಾಜ್ ಅವರನ್ನು ವಂದಿಸಬೇಕಾಗಿದೆ. ಕೆಲವು ವಿಚಾರಗಳನ್ನು ಮೂರು ನಾಲ್ಕು ವರ್ಷಗಳಿಂದ ಸರ್ಕಾರದ ಗಮನಕ್ಕೆ ನಾನೂ ಅವರೂ ತರುತ್ತಿದ್ದೇವೆ. ಒಂದು ಉದಾಹರಣೆಯನ್ನು ಹೇಳಿದರೆ ನಮ್ಮ ಕಷ್ಟ ಸರ್ಕಾರಕ್ಕೆ ಕೈಗನ್ನಡಿಯ ಹಾಗೆ ತಿಳಿಯಬಹುದು. ನೆಲಮಂಗಲ ತಾಲ್ಲೂಕು ಮೈದಾನಪ್ರದೇಶ. ಅಲ್ಲಿ ಕೆರೆಗಳು ಹೆಚ್ಚಾಗಿಲ್ಲ, ನದಿಯ ವ್ಯಾಲಿ ಕೂಡ ಇಲ್ಲ. ಮಾಗಡಿ ತಾಲ್ಲೂಕಿನಲ್ಲೇನೋ ಪ್ರಕೃತಿ ಸೌಲಭ್ಯಗಳಿವೆ, ಅಲ್ಲಿನವರಿಗೆ ಅದರಿಂದ ಸಹಾಯವಾಗಿದೆ. ನೆಲಮಂಗಲ ತಾಲ್ಲೂಕಿನಲ್ಲಿರುವ ಅಲ್ಪಸ್ವಲ್ಪ ಕೆರೆಗಳೂ ಹೂಳು ತುಂಬಿಕೊಂಡಿವೆ. ಇವುಗಳ ಹೂಳು ತೆಗೆಸಿಕೊಡಿ ಎಂದು ಸರ್ಕಾರವನ್ನು ಕೇಳುತ್ತಿದ್ದೇವೆ. ಕುಮುದ್ವತಿ ವ್ಯಾಲಿ ಒಂದುವಿನಾ ನೆಲಮಂಗಲ ತಾಲ್ಲೂಕಿನಲ್ಲಿ ಬೇರಾವ ಪ್ರಕೃತಿಯ ಸಹಾಯವೂ ಇಲ್ಲ. 1900ನೆಯ ಇಸವಿಯಲ್ಲಿ ವಿಶ್ವೇಶ್ವರಯ್ಯನವರ ಕಾಲದಲ್ಲಿ ವಿಕ್ಟೋರಿಯಾ ಆಸ್ಪತ್ರೆಯನ್ನು ಕಟ್ಟುವುದಕ್ಕೆ ಪ್ರಾರಂಭ ಮಾಡಿದಕಾಲದಲ್ಲಿ ಕುಮುದ್ವತಿಗೆ ಕಟ್ಟೆಕಟ್ಟಬೇಕೆಂದು ಹತ್ತಾರು ಸಾವಿರ ರೂಪಾಯಿ ಖರ್ಚು ಮಾಡಿ ಬೆಂಚ್ ಮಾರ್ಕ್ ಸ್ಟೋನ್ಸ್ ಹಾಕಿಬಿಟ್ಟಿದ್ದಾರೆ. ಮುಂದೆ ಸರ್ಕಾರ, ಅಂದರೆ, ದಿವಾನರುಗಳು ಬದಲಾವಣೆ ಆಗುವುದರಲ್ಲಿ ಅದನ್ನು ಅಲ್ಲಿಗೇ ಕೈಬಿಟ್ಟರು. ಸುಮಾರು ಎರಡುಲಕ್ಷಕ್ಕೆ ಯೋಜನೆ ಮಾಡಿದ್ದರು. ಕೊನೆಗೆ ಅದೇನಾಯಿತು ಎನ್ನುವುದರ ಬಗ್ಗೆ ಆ ಇಲಾಖೆಯಲ್ಲಿ ರಿಕಾರ್ಡುಗಳು ಕೂಡ ಸಿಕ್ಕುವುದಿಲ್ಲ. ಅದನ್ನು ಸರ್ವೆಮಾಡಿದವರು ನಿಮ್ಮ ಹಳ್ಳಿಯಲ್ಲಿ ಕ್ಯಾಂಪ್ ಮಾಡಿದ್ದಾಗ, ಒಂದು ಅಂಗಡಿಯಲ್ಲಿ ಸಾಮಾನನ್ನು ತೆಗೆದುಕೊಂಡಿದ್ದರು. ಆ ಅಂಗಡಿಯವನ ಲೆಕ್ಕದ ಪುಸ್ತಕದಲ್ಲಿ ಆ ತಾರೀಖು ಸಿಕ್ಕಿತು. ಅದನ್ನು ನೋಡಿ ನಾನು ಶಾನುಭೋಗರಲ್ಲಿ ವಿಚಾರಿಸಿ ತಾರೀಖು ಮುಂತಾದ ಕೆಲವು ವಿವರಗಳನ್ನು ಹುಡುಕಿ, ಅದನ್ನು ಸರ್ಕಾರದ ಗಮನಕ್ಕೆ ತಂದೆ. ಆಮೇಲೆ ಎಗ್ಸಿಕ್ಯುಟಿವ್ ಇಂಜಿನಿಯರನ್ನು ಕರೆದುಕೊಂಡು ಹೋಗಿ ಹುಡುಕಲು ಆ ಬೆಂಚ್ ಮಾರ್ಕ್ ಕಲ್ಲುಗಳೂ ಸಿಕ್ಕಿದವು. ಆ ಕಲ್ಲಿನ ಆಧಾರದ ಮೇಲೆ ಖೋತಾ ಸೂಚನೆ, ನಿರ್ಣಯ, ಪ್ರಶ್ನೆಗಳನ್ನು ಕಳುಹಿಸಿ, ನಿಜಾಂಶವನ್ನು ತಿಳಿಯಲು ಸರ್ಕಾರವನ್ನು ಒತ್ತಾಯಮಾಡಿದೆವು. ಸಂಬಂಧಪಟ್ಟ ಮಂತ್ರಿಗಳು ಅದನ್ನು ಪರಿಶೀಲನೆ ಮಾಡುತ್ತೇವೆಂದು ಆಶ್ವಾಸನೆ ಕೊಟ್ಟರು, ಒಪ್ಪಿಕೊಂಡರು, ಇಲ್ಲವೆಂದು ಹೇಳಲಿಲ್ಲ. ಈ ಯೋಜನೆಯನ್ನು ಕಾರ್ಯಗತ ಮಾಡಿದರೆ, ನೆಲಮಂಗಲ ತಾಲ್ಲೂಕಿನಲ್ಲಿ ಸಾವಿರ ಎಕರೆ ಮತ್ತು ಮಾಗಡಿ ತಾಲ್ಲೂಕಿನಲ್ಲಿ ಎಂಟುನೂರು ಎಕರೆಯಷ್ಟು ಜಮೀನು ತರಿಯಾಗುವ ಸಂಭವವಿದೆ. ನಮ್ಮ ತಾಲ್ಲೂಕಿನಲ್ಲಿ ಇಂಥ ಸೌಲಭ್ಯ ಇನ್ನಾವುದೂ ಇಲ್ಲ. ಸಾವಿರಾರು ರೈತರಿಗೆ ಇದರಿಂದ ಸಹಾಯವಾಗುವುದರಿಂದ ಇದನ್ನು ಇಷ್ಟು ಒತ್ತಾಯಮಾಡುತ್ತಿದ್ದೇವೆ. ತಿಪ್ಪಗೊಂಡನಹಳ್ಳಿ ಕೆರೆಗೆ ಇದು ಒಂಬತ್ತು ಹತ್ತು ಮೈಲಿ ದೂರದಲ್ಲಿದೆ. ಈಗ ತಿಪ್ಪಗೊಂಡನಹಳ್ಳಿ ಕೆರೆಗೆ 'ಸಿಲ್ಟ್‌ಡ್ಯಾಮ್' ಕಟ್ಟಬೇಕೆಂದೂ ಅದನ್ನು ಕಟ್ಟದಿದ್ದರೆ ಅದು ಹೂಳು ತುಂಬುತ್ತದೆಂದೂ ಹೇಳುತ್ತಾರೆ. ಇದನ್ನು ಕಟ್ಟಿದರೆ ಸಿಲ್ಟ್‌ಡ್ಯಾಮ್ ಬೇಕಾಗುವುದಿಲ್ಲ. ಈ ದೃಷ್ಟಿಯಿಂದ ಕೂಡ ಇದನ್ನು ಕಟ್ಟಬೇಕು. ಆ ಸ್ಥಳದ ಕೆಲವರು ಕಟ್ಟಕೂಡದೆಂದು ಹೇಳುತ್ತಾರೆ. ಬೆಂಗಳೂರು ನೀರು ಸರಬರಾಯಿ ಇಲಾಖೆಯವರು ಎಲ್ಲಿ ಕಟ್ಟಬೇಕೆಂದು ಹೇಳುತ್ತಾರೋ ಆ ಸ್ಥಳದಲ್ಲಿ ರೈತರ ಸಮ್ಮೇಳನ ಕರೆದು ಇದರ ಪರ ಮತ್ತು ವಿರೋಧವಿರುವ ರೈತರನ್ನು ಸೇರಿಸಿ, ಒಂದು ನಿರ್ಣಯಕ್ಕೆ ಬರುವಂತೆ ಮಾಡುತ್ತೇನೆಂದು ಪಬ್ಲಿಕ್ ವರ್ಕ್ಸ್ ಮಂತ್ರಿಗಳೂ ಹೇಳಿದರು. ಆ ಯೋಜನೆ ಈಗ ಪ್ರಾಜೆಕ್ಟ್ ಸೆಕ್ಷನಲ್ಲಿದೆಯೆಂದು ಕೇಳಿದೆ. ಅವರು ಇದಕ್ಕೆ ಖರ್ಚು ಹೆಚ್ಚೆಂದು ಅಭಿಪ್ರಾಯ ಕೊಡುತ್ತಾರೋ ಏನೋ ತಿಳಿಯದು. ಏನೇ ಆದರೂ ಅದನ್ನು ಮಾಡದೇಯಿದ್ದರೆ ಅಲ್ಲಿನ ರೈತರು ತಂಡೋಪತಂಡವಾಗಿ ಅಠಾರ ಕಛೇರಿಯ ಮುಂದೆ ಬಂದು ನಿಲ್ಲುತ್ತಾರೆ.

12 NOON.

ನಾನು ಹೇಳುವುದೇನೆಂದರೆ ಇಷ್ಟು ದರದು ಆ ಕೆರೆಗೆ ಇದೆ. ಆದುದರಿಂದ ಇದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ ಇದರ ಬಗ್ಗೆ ಒಂದು ತೀರ್ಮಾನಕ್ಕೆ ಬರಬೇಕು ಎಂದು ಹೇಳುತ್ತೇನೆ. ಈ ಕೆರೆಯನ್ನು ಕಟ್ಟಿದರೆ ಬೆಂಗಳೂರಿಗೆ ನೀರು ಸರಬರಾಯಿ ವ್ಯವಸ್ಥೆ ಸರಿಯಾಗಿ ಆಗುವುದಿಲ್ಲವೆಂದರೆ ಇದು ನನಗೇ ಅರ್ಥವಾಗುವುದಿಲ್ಲ. ಏಕೆಂದರೆ ತಿಪ್ಪಗೊಂಡನಹಳ್ಳಿ ಕೆರೆ ತುಂಬಿ, ಅದರ ಕೆಳಗೆ ಒಂದು ಕೆರೆ ಕಟ್ಟಿದರೆ, ಅದಕ್ಕೂ ನೀರು ಉಳಿಯುತ್ತದೆಂದು ಹೇಳುತ್ತಾರೆ. ಆದರೆ, ಇದಕ್ಕೆ ಮೇಲ್ಗಡೆ ಒಂದು ಕೆರೆಯನ್ನು ಕಟ್ಟಿ ಆದರ ನೀರನ್ನು ಉಪಯೋಗಿಸಿಕೊಳ್ಳುವುದಾದರೆ, ಬೆಂಗಳೂರಿಗೆ ನೀರು ಸರಬರಾಯಿ ಮಾಡಲು ತೊಂದರೆಯಾಗುತ್ತದೆಂದು ಹೇಳುತ್ತಾರೆ. ಇದು ಯಾಕೋ ಗೊತ್ತಾಗಲಿಲ್ಲ. ಆದುದರಿಂದ ಸರ್ಕಾರದವರು ಎಲ್ಲ ವಿಷಯಗಳನ್ನು ಪರಿಶೀಲಿಸಿ ಈ ಒಂದು ಕೆರೆಯನ್ನು ಕಟ್ಟಿಸಿಕೊಟ್ಟು ಉಪಕಾರ ಮಾಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಲ್. ಸಿದ್ದಪ್ಪ (ಚನ್ನಗಿರಿ).—ಸ್ವಾಮಿ, ಈ ಡಿಮ್ಯಾಂಡಿನ ಮೇಲೆ ಮಾತನಾಡುವುದಕ್ಕೆ ಮುಂಚೆ ಒಂದು ವಿಷಯವನ್ನು ತಮ್ಮ ಅವಗಾಹನೆಗೆ ತರಬೇಕೆಂದು ನನ್ನ ಅಭಿಲಾಷೆ. ಹಿಂದಿನ ಪ್ರೊಸೀಡಿಂಗ್ಸ್

(ಶ್ರೀ ಎಲ್. ಸಿದ್ದಪ್ಪ.)

ನಲ್ಲಿ ಇಂಡೆಕ್ಸ್ ಇರುತ್ತಿತ್ತು, ಎಂದರೆ ರೆಫರೆನ್ಸ್ ನೋಡಿಕೊಳ್ಳುವುದಕ್ಕೆ ಒಂದು ಅನುಕೂಲವಿತ್ತು. ಇತ್ತೀಚೆಗೆ ಬರತಕ್ಕ ಪ್ರೊಸೀಡಿಂಗ್ಸ್‌ನಲ್ಲಿ ಇಂಡೆಕ್ಸ್ ಇಲ್ಲದೆ ಇರುವುದರಿಂದ ನಾವು ಹಿಂದಿನ ಪ್ರೊಸೀಡಿಂಗ್ಸ್‌ನಲ್ಲಿ ರೆಫರೆನ್ಸ್ ನೋಡಬೇಕಾದರೆ ಪ್ರತಿಯೊಂದು ದಿವಸದ ಪ್ರೊಸೀಡಿಂಗ್ಸ್ ನೋಡಬೇಕು. ಆದುದರಿಂದ ದಯವಿಟ್ಟು ಇಂಡೆಕ್ಸ್ ಇರುವ ಹಾಗೆ ಪ್ರೊಸೀಡಿಂಗ್ಸ್ ಪ್ರಿಂಟ್ ಮಾಡಿಸಿ ಕೊಡುವುದಕ್ಕೆ ತಕ್ಕ ಏರ್ಪಾಡು ಮಾಡಬೇಕು.

ಇನ್ನು ಈ ಡಿಮ್ಯಾಂಡಿನ ಮೇಲೆ ಮಾತನಾಡುತ್ತ ಒಂದು ವಿಷಯವನ್ನು ಸರ್ಕಾರದ ಅವಗಾಹನೆಗೆ ತರುವುದಕ್ಕೆ ಇಷ್ಟಪಡುತ್ತೇನೆ. ಚನ್ನಗಿರಿ ತಾಲ್ಲೂಕು ಮಾವಿನಹೊಳೆ ಪ್ರಾಜೆಕ್ಟ್ ವಿಚಾರವಾಗಿ ಸುಮಾರು ಮೂರು-ನಾಲ್ಕುಸಲ ಈ ಸಭೆಯಲ್ಲಿ ಪ್ರಸ್ತಾಪ ಮಾಡಿದೆ. ಈ ಪ್ರಾಜೆಕ್ಟ್ 1948ನೆಯ ಇಸವಿ ಡಿಸೆಂಬರು ೧ ದನೇ ತಾರೀಖು ಮಂಜೂರಾಯಿತು. 1952ನೆಯ ಇಸವಿಯಲ್ಲಿ ಅಕ್ಟೋಬರು ಅಧಿವೇಶನದಲ್ಲಿ ಒಂದು ಪ್ರಶ್ನೆ ಕೇಳಿದ್ದಕ್ಕೆ ಉತ್ತರ ಕೊಡುತ್ತ ಈ ಪ್ರಾಜೆಕ್ಟ್ 1948ನೆಯ ಇಸವಿ ಡಿಸೆಂಬರು ಮಾಹೆ ಒಂದನೆಯ ತಾರೀಖು ಮಂಜೂರಾಯಿತು ಎಂದು ತಿಳಿಸಿದರು. ಸರ್ಕಾರದವರು ಇದನ್ನು ಮಂಜೂರು ಮಾಡಿರಬೇಕಾದರೆ ನನಗೆ ತಿಳಿದ ಮಟ್ಟಿಗೆ ಎಲ್ಲವನ್ನೂ ಪರಿಶೀಲನೆ ಮಾಡಿ ಸಾಧ್ಯವಿದೆ ಎಂದು ಕಂಡು ಬಂದಮೇಲೆಯೇ ಮಾಡಿರುತ್ತಾರೆ. 1950-51ರಲ್ಲಿ ಬಡ್ಜೆಟ್ಟಿನಲ್ಲಿ 30 ಸಾವಿರ ರೂಪಾಯಿಗಳನ್ನು ಒದಗಿಸಿದರು. 1951-52ರಲ್ಲಿ ಪುನಃ 50 ಸಾವಿರ ರೂಪಾಯಿಗಳನ್ನು ಒದಗಿಸಲಾಯಿತೆಂದು ಹೇಳಿದರು. ಹಣವನ್ನು ಬಡ್ಜೆಟ್ಟಿನಲ್ಲಿ ಒದಗಿಸಿದ್ದೇ ಹೊರತು ಕೆಲಸವಾಗಲಿಲ್ಲ. ಯಾಕೆ ಕೆಲಸ ಮಾಡಲಿಲ್ಲವೆಂದರೆ ಈ ನದಿಯೊಳಗೆ ನೀರು ಕಡಿಮೆ ಇರುವುದರಿಂದ ಕೆಲಸ ಪ್ರಾರಂಭ ಮಾಡಲಿಲ್ಲವೆಂದು ಹೇಳಿದರು. 1953-54ನೆ ಸಾಲಿನಲ್ಲಿ ಇದೇ ವಿಷಯದಲ್ಲಿ ಒಂದು ಪ್ರಶ್ನೆ ಹಾಕಿದೆ. ಅದಕ್ಕೆ ಜವಾಬು ಕೊಡುವಾಗ ಇಲ್ಲಿಂದ ಕೆಳಗೆ ಸೂಳೆ ಕೆರೆಗೆ ನೀರು ಹೋಗುತ್ತದೆ, ಇಲ್ಲಿ ಒಂದು ಪ್ರಾಜೆಕ್ಟನ್ನು ಕಟ್ಟಿದರೆ ಸೂಳೆ ಕೆರೆಗೆ ನೀರು ಕಡಿಮೆಯಾಗುತ್ತದೆ ಎಂದು ಇದನ್ನು ತೆಗೆದುಕೊಳ್ಳಲಿಲ್ಲವೆಂದು ಹೇಳಿದರು. 1955ನೆ ಇಸವಿಯಲ್ಲಿ ಅಂದರೆ ಕಳೆದ ವರ್ಷ ಒಂದು ಇಂಟರ್‌ಪೆಲ್ಲೇಷನ್‌ಗೆ ಜವಾಬು ಕೊಡುತ್ತ ಭದ್ರ ರಿಸರ್ವಾಯರ್ ಪ್ರಾಜೆಕ್ಟಿನಿಂದ ಈ area serve ಆಗುತ್ತದೆ ಆದುದರಿಂದ ಇದನ್ನು ತೆಗೆದುಕೊಳ್ಳಲಿಲ್ಲವೆಂದು ಹೇಳಿದರು. ಒಂದೊಂದು ಸಲ ಕೇಳಿದಾಗಲೂ ಕೂಡ ಒಂದೊಂದು ರೀತಿಯಲ್ಲಿ ಜವಾಬು ಕೊಟ್ಟಿರುತ್ತಾರೆ ಎಂದು ಮರಾಮತ್ತು ಶಾಖೆಯ ಮಂತ್ರಿಗಳಿಗೆ ಪತ್ರ ಬರೆದು ಮಂತ್ರಿಗಳ ಛೇಂಬರಿನಲ್ಲಿ ಒಂದು ಮೀಟಿಂಗ್ ಮಾಡಿ ಚೀಫ್ ಇಂಜಿನಿಯರ್‌ರವರನ್ನು ಕರೆಸಿ, ಪಬ್ಲಿಕ್ ವರ್ಕ್ಸ್ ಸೆಕ್ರೆಟರಿಯವರನ್ನು ಇಟ್ಟುಕೊಂಡರೆ ನಾನೂ ಬರುತ್ತೇನೆ, ವಿಚಾರ ಮಾಡೋಣವೆಂದು ತಿಳಿಸಿದೆ. ಅದಕ್ಕೆ ಸುಮಾರು 8-10 ತಿಂಗಳ ಕೆಳಗೆ ಪಬ್ಲಿಕ್ ವರ್ಕ್ಸ್ ಸೆಕ್ರೆಟರಿಯವರಿಂದ ಜವಾಬು ಬಂತು. ಅದರಲ್ಲಿ ಪ್ರಾಜೆಕ್ಟನ್ನು ಪುನಃ ಚೀಫ್ ಇಂಜಿನಿಯರ್‌ರವರಿಗೆ ಕಳುಹಿಸಿದ್ದೇವೆ. ಈಗಿನ ತತ್ಕಾಲದ ಪರಿಸ್ಥಿತಿಗೆ ಅನುಸರಿಸಿ, ಎಸ್ಟಿಮೇಟು ರಿವೈಸ್ ಮಾಡಬೇಕೆಂದು ಕಳುಹಿಸಿದ್ದೇವೆ. ಅದು ಬಂದನಂತರ ಒಂದು ಮೀಟಿಂಗ್ ಮಾಡುವುದು ಸೂಕ್ತವೇ ಹೊರತು ಈಗಲೇ ಒಂದು ಮೀಟಿಂಗ್ ಕರೆಯುವುದು ಅನಾವಶ್ಯಕವೆಂದು ಅಭಿಪ್ರಾಯವನ್ನು ತಿಳಿಸಿದ್ದರು. ಅದನ್ನು ನಾನೂ ಒಪ್ಪಿಕೊಂಡೆ. ಮೊದಲನೆ ಪಾಂಚವಾರ್ಷಿಕ ಯೋಜನೆಯಲ್ಲಿ ಈ ಪ್ರಾಜೆಕ್ಟು ಸೇರಿತು. ಅದರಲ್ಲಿ ಸೇರಿದ್ದರಿಂದ ಈ ಪ್ರಾಜೆಕ್ಟ್ ತೆಗೆದುಕೊಂಡು ಮುಗಿಸುತ್ತಾರೆ ಎಂಬ ಭರವಸೆ ಇತ್ತು. ಈಗ ಮೊದಲನೆ ಪಾಂಚವಾರ್ಷಿಕ ಯೋಜನೆ ಮುಗಿಯಿತು. ಆದರೆ ಕೆಲಸವನ್ನು ತೆಗೆದುಕೊಳ್ಳಲಿಲ್ಲ. ಪುನಃ ಪರಿಶೀಲನೆ ಮಾಡಿಸಿ ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿಯಾದರೂ ಸೇರಿಸಿದ್ದಾರೆಯೇ ಎಂದರೆ ಅದರಲ್ಲಿಯೂ ಸಹ ಇಲ್ಲ. ಯಾತಕ್ಕೆ ಹೀಗಾಯಿತು ಎನ್ನುವುದು ಗೊತ್ತಾಗಲಿಲ್ಲ. ಚನ್ನಗಿರಿ ತಾಲ್ಲೂಕಿನಲ್ಲಿ ಭದ್ರ ರಿಸರ್ವಾಯರಿನ ನಾಲೆ ಹೋಗುತ್ತಿದ್ದರೂ ಕೂಡ ತಮಗೆ ಗೊತ್ತಿರುವಹಾಗೆ ಕಸಬ ಮತ್ತು ಉಬ್ರಾಣಿ ಹೋಬಳಿಗಳಿಗೆ ಅದರಿಂದ ಪ್ರಯೋಜನವಾಗುವುದಿಲ್ಲ. ಸಂತೆಬೆನ್ನೂರು ಮತ್ತು ಬಸವಾಪಟ್ಟಣ ಹೋಬಳಿಗಳಿಗೆ ಮತ್ತು ಕಸಬ ಹೋಬಳಿಯ ಮೂರು ನಾಲ್ಕು ಗ್ರಾಮಗಳಿಗೆ ಮಾತ್ರ ಅನುಕೂಲವಾಗುತ್ತದೆ. ಈ ದೃಷ್ಟಿಯಿಂದ ಮಾವಿನ ಹೊಳೆ ಪ್ರಾಜೆಕ್ಟನ್ನು ತೆಗೆದುಕೊಳ್ಳಬೇಕೆಂದು ಸುಮಾರು 10-15 ವರ್ಷಗಳಿಂದ ಪತ್ರವ್ಯವಹಾರ ನಡೆದು, ಪ್ರಾಜೆಕ್ಟನ್ನು ಸರ್ಕಾರಕ್ಕೆ ಕಳುಹಿಸಿ ಎಂಟು ವರ್ಷಗಳ ಹಿಂದೆಯೇ ಮಂಜೂರಾಗಿ, ನಂತರ ಎರಡು ವರ್ಷಗಳು ಹಣವನ್ನು ಬಡ್ಜೆಟ್ಟಿನಲ್ಲಿ ಒದಗಿಸಿದ್ದರೂ ಸಹ ಕೆಲಸವನ್ನು ತೆಗೆದುಕೊಳ್ಳದೆ ಇರುವುದನ್ನು ನೋಡಿದರೆ ಬಹಳ ಆಶ್ಚರ್ಯವಾಯಿತು. ಅಲ್ಲಿಂದೀಚೆಗೆ ಇದನ್ನು ಯಾಕೆ ತೆಗೆದುಕೊಳ್ಳಲಿಲ್ಲವೆಂದು ಕೇಳಿದ್ದಕ್ಕೆ ಒಂದೊಂದು ಸಲ ಒಂದೊಂದು ರೀತಿಯ ಜವಾಬು ಕೊಡುತ್ತಿರುವುದು ತುಂಬ ವಿಷಾದವಾದ ಸಂಗತಿ. ಈಗಲಾದರೂ ಈ ಪ್ರಾಜೆಕ್ಟಿಗೆ ಹೆಚ್ಚು ಗಮನಕೊಟ್ಟು, ಪರಿಶೀಲನೆ ಮಾಡುವ ಹಾಗಿದ್ದರೆ ಪರಿಶೀಲನೆ ಮಾಡಿಸಿ, ಹಿಂದೆ ತಯಾರು ಮಾಡಿರುವ ಅಂದಾಜುಗಳನ್ನು ಬೇಕಾದರೆ ರಿವೈಸ್ ಮಾಡಿಸಿ ಈ ಕೆಲಸವನ್ನು ಕೂಡಲೇ ಮಾಡಿಸಿಕೊಡಬೇಕೆಂದು ಮಾತ್ರ ಪ್ರಾರ್ಥಿಸುತ್ತೇನೆ.

ಶ್ರೀ ಕೆ. ಕೊಟ್ರ ಬಸವನಗೌಡ (ಕೂಡ್ಲಿಗಿ).—ಸ್ವಾಮಿ, ನೀರಾವರಿ ಮನವಿಯ ಸಂದರ್ಭದಲ್ಲಿ ನಾನು ಒಂದೆರಡು ವಿಷಯಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಬಳ್ಳಾರಿ ಜಿಲ್ಲೆಯಲ್ಲಿ ಇರಿಗೇಷನ್ ಆಕ್ಟನ್ನು ಜಾರಿಗೆ ತಂದಿದ್ದಾರೆ. ಈ ಆಕ್ಟ್ ಪ್ರಕಾರ ಕೆರೆಗಳ ರಿಪೇರಿ ಮಾಡಿದರೆ ಅದರಲ್ಲಿ ಅರ್ಧ ಭಾಗವನ್ನು ಸರ್ಕಾರದವರೂ ಮತ್ತು ಇನ್ನು ಅರ್ಧ ಭಾಗವನ್ನು ರೈತರೂ ಕೊಡಬೇಕು. ಮತ್ತು ನೀರು ಸರದಿ ಸಹ ಕೊಡಬೇಕು. ಕೆರೆ ರಿಪೇರಿಗೆ ಎಷ್ಟು ಖರ್ಚಾಗುತ್ತದೆಯೋ ಅದರ ಮೇಲೆ ಶೇಕಡ 3-ಶೇಕಡ 4 ಪ್ರತಿಫಲ ಬರುವ ಹಾಗೆ ಮಾಡುತ್ತಾರೆ. ಆದರೆ ಬಳ್ಳಾರಿ ಜಿಲ್ಲೆಯಲ್ಲಿ ಇದುವರೆಗೂ ಈ ರೀತಿಯ ಅಭ್ಯಾಸವಿಲ್ಲ. ಸರ್ಕಾರದವರೇ ರಿಪೇರಿ ಮಾಡುತ್ತಾರೆಯೇ ಹೊರತು ರೈತರಿಂದ ತೆಗೆದುಕೊಳ್ಳುವ ಪದ್ಧತಿ ಇರಲಿಲ್ಲ. ಈಗ ಮೈಸೂರು ಇರಿಗೇಷನ್ ಆಕ್ಟ್ ಬಳ್ಳಾರಿಗೆ ಅನ್ವಯಿಸಿರುವುದರಿಂದ ಬಹಳ ತೊಂದರೆಯಾಗಿದೆ. ಇದನ್ನು ಕೊಡುವುದಕ್ಕೆ ಚಿಂತಿಸುವುದಿಲ್ಲ. ಆದರೆ ತಮಗೆ ಹಣ ಬರುವ ಬಾಬುಗಳಿಗೆಲ್ಲ ಒಂದು ಕಾನೂನು, ತಾವು ಕೊಡಬೇಕಾದ್ದಕ್ಕೆ ಮತ್ತೊಂದು ಕಾನೂನು, ಹೀಗೆ ಮದರಾಸು ಮತ್ತು ಮೈಸೂರು ಕಾನೂನುಗಳನ್ನು ಸರ್ಕಾರಕ್ಕೆ ಅನುಕೂಲವಿರುವ ರೀತಿಯಲ್ಲಿ ಜಾರಿಯಲ್ಲಿಟ್ಟಿದ್ದಾರೆ. ಇದು ಸರಿಯಲ್ಲವೆಂದು ಹೇಳುತ್ತೇನೆ. ತಾವು ಬೇಕಾದರೆ ಎಲ್ಲ ಮೈಸೂರು ಆಕ್ಟ್‌ಗಳನ್ನೂ ಜಾರಿಗೆ ತಂದು ತಕ್ಷಣ ಮದರಾಸು ಆಕ್ಟ್‌ಗಳನ್ನು

ರದ್ದುಮಾಡಿ, ಅಥವಾ ಮದರಾಸು ಆಕ್ಟ್‌ಗಳನ್ನೇ ಮುಂದುವರಿಸಿಕೊಂಡು ಬನ್ನಿ. ತಾವು ಮದರಾಸು ಕಾನೂನುಗಳನ್ನೂ ಕೆಲವನ್ನೂ, ಮೈಸೂರು ಕಾನೂನು ಗಳನ್ನು ಕೆಲವನ್ನೂ ಜಾರಿಯಲ್ಲಿಟ್ಟಿರುವುದರಿಂದ ಅಲ್ಲಿ ಕೆಲಸ ಮಾಡುವ ಅಧಿಕಾರಿಗಳಿಗೇ ಕನ್‌ಫ್ಯೂಸ್ ಆಗಿದೆ. ಒಂದು ಆರ್ಡರ್ ಕೊಡಬೇಕಾದರೆ ಒಂದು ಸಲ ಮೈಸೂರು ಆಕ್ಟ್ ಎಂದು ಹೇಳುತ್ತಾರೆ. ಮತ್ತೊಂದು ಸಲ ಅಂಥದೇ ಸನ್ನಿವೇಶದಲ್ಲಿ ಮದ ರಾಸು ಆಕ್ಟ್ ಎಂದು ಹೇಳುತ್ತಾರೆ. ಈ ರೀತಿಯಾಗಿ ಅವರಿಗೆ ಕನ್‌ಫ್ಯೂಷನ್ ಆಗಿ ಆಡಳಿತದ ತೊಂದರೆ ಬಹಳ ಇವೆ. ಆದುದರಿಂದ ಮೈಸೂರು ಆಕ್ಟ್‌ಗಳನ್ನೆಲ್ಲ ವಾಪಸು ತೆಗೆದುಕೊಂಡು ಮದರಾಸು ಆಕ್ಟ್‌ಗಳನ್ನು ಮುಂದುವರಿಸಿ ಅಥವಾ ಎಲ್ಲ ಮೈಸೂರು ಆಕ್ಟ್ ಗಳನ್ನೂ ಇಟ್ಟುಕೊಳ್ಳಿ. ಯಾವ ರೀತಿಯಾದರೂ ನಮಗೆ ಸಮ್ಮತಿಯುಂಟು.

ನಮ್ಮಲ್ಲಿ ಒಂದು ಕೆರೆಯ ರಿಪೇರಿಯಾಗಬೇಕಾಗಿತ್ತು. ಅದಕ್ಕೆ ಫೀಡರ್ ಚಾನಲ್ ಸರಿಯಿಲ್ಲ, ಸ್ಲೂಯಿಸ್ ಇಲ್ಲ, ಕೆರೆ ಸರಿಯಾಗಿ ತುಂಬುವುದಿಲ್ಲ. ಮೂರು ನಾಲ್ಕು ವರ್ಷಗಳಿಗೆ ಒಂದು ಸಲ ಮಾತ್ರ ತುಂಬುತ್ತಿತ್ತು. ಅದಕ್ಕೋಸ್ಕರ ಕೆರೆಯನ್ನು ರಿಪೇರಿ ಮಾಡಬೇಕು ಎಂದೆವು. ಅದಕ್ಕೆ ಸುಮಾರು ಒಂದು ಲಕ್ಷ ರೂಪಾಯಿ ಗಳ ಅಂದಾಜು ಮಾಡಿದರು. ಅದರಲ್ಲಿ ಅರ್ಧ ಭಾಗ ವನ್ನು ಕಂಟ್ರಿಬ್ಯೂಷನ್ ಕೊಡಬೇಕು ಎಂದರು. ಆವಾಗ ಒತ್ತಾಯಮಾಡಿ ಶೇಕಡ 25ಕ್ಕೆ ಒಪ್ಪಿಸಿದೆವು. ಇದರ ಜೊತೆಗೆ water rate ಪ್ರತಿ ವರ್ಷವೂ ಕೊಡ ಬೇಕು ಎಂದು ತಿಳಿಸಿದರು. Water rate ಕೊಡು ವುದು ಕಷ್ಟ, ಯಾಕೆಂದರೆ ನಮ್ಮಲ್ಲಿ ಲ್ಯಾಂಡ್ ರೆವಿನ್ಯೂ ಮದರಾಸು ರೂಲ್ಸ್ ಪ್ರಕಾರ ಬಹಳ ಜಾಸ್ತಿ ಇದೆ. ಎಕರೆಗೆ 10-12 ರೂಪಾಯಿಗಳು ಕಂದಾಯವನ್ನು ಪ್ರತಿ ವರ್ಷವೂ ಕೊಡಬೇಕು. ನಮ್ಮ ಕಡೆ ಕೆರೆಗಳು ಮೂರು ವರ್ಷಕ್ಕೆ ಒಂದು ಸಲ ತುಂಬುತ್ತವೆ. ಪ್ರತಿ ವರ್ಷ ಅರ್ಧ ಕೆರೆ ತುಂಬಿದರೂ ಸಹ ನಾಲ್ಕಾಣೆ ಬೆಳೆ ಅಥವ, ಎಂಟಾಣೆ ಬೆಳೆಗಿಂತಲೂ ಕಡಿಮೆ ಬಂದರೆ ಪ್ರತಿಯೊಂದು ವಿವರಗಳನ್ನೂ ಬರೆಯಬೇಕು. ಆದರೆ ಈ ಲೆಕ್ಕಗಳನ್ನು ಶ್ಯಾನುಭೋಗರು ಮನೆಯಲ್ಲಿ ಕುಳಿತು ಎಂಟಾಣೆ ಮೇಲ್ಪಟ್ಟು ಬೆಳೆಯಾಯಿತೆಂದು ಬರೆಯು ತ್ತಾರೆ. ಇದರಿಂದ ಭೂಕಂದಾಯ ಕೊಡುವುದು ಮಾತ್ರ ತಪ್ಪುವುದಿಲ್ಲ. ನಮಗೆ ರಿಟರ್ನ್ಸ್ ಮಾತ್ರ ಏನೂ ಇರುವುದಿಲ್ಲ. ಅದೇ ಸರ್ಕಾರದವರು ಹಣ ಖರ್ಚು ಮಾಡಬೇಕಾದರೆ ಇಷ್ಟೇ ರಿಟರ್ನ್ಸ್ ಇರಬೇಕು ಎನ್ನುವುದು ಬಹಳ ಅನ್ಯಾಯವಾದದ್ದು. ಕೆರೆಗಳ ಅಂದಾಜ ಮೇಲೆ ಕಂಟ್ರಿಬ್ಯೂಷನ್ ಕೊಡಬೇಕು, ಆ ಕಡೆ ನೀರು/ನರದಿ ಕೊಡಬೇಕು ಮತ್ತು ಲ್ಯಾಂಡ್ ರೆವಿನ್ಯೂ ಮದರಾಸ್ ರೇಟ್ ಪ್ರಕಾರ ಕೊಡಬೇಕು. ಇದು ಯಾವ ನ್ಯಾಯ? ಮೈಸೂರು ರೇಟ್ ಪ್ರಕಾರ ಕಂದಾಯ ಮಾಡಿ, ನಾವು ಕಂಟ್ರಿಬ್ಯೂಷನ್ ವಗ್ಗೈರೆ ಕೊಡಲು ಸಿದ್ಧರಾಗಿದ್ದೇವೆ. ಆಕಡೆ ಮದರಾಸ್ ಆಕ್ಟ್ ಇಲ್ಲ, ಈಕಡೆ ಮೈಸೂರು ಆಕ್ಟ್ ಇಲ್ಲ, ಹೀಗೆ ಏನೋ ಒಂದು ರೀತಿಯಾಗಿ ಎರಡೂವರೆ ವರ್ಷಗಳಿಂದ ಕಷ್ಟಪಟ್ಟಿದ್ದೇ ಸಾಕು. ಇನ್ನು ಮುಂದಾದರೂ ಈ ರೀತಿಯ ತೊಂದರೆಯನ್ನು ತಪ್ಪಿಸಬೇಕೆಂದು ಹೇಳುತ್ತೇನೆ.

ಇನ್ನೊಂದು ವಿಷಯ. ಕೊಟ್ಟೂರು ಕೆರೆ ಬಗ್ಗೆ ಒಂದು ಲಕ್ಷ ಚಿಲ್ಲರೆ ರೂಪಾಯಿಗಳಿಗೆ ಅಂದಾಜಾಗಿದೆ. ಅದರ ಅಚ್ಚುಕಟ್ಟು 800 ಎಕರೆಯಿದೆ ; ರಿಪೇರಿ ಮಾಡಿ ದರೆ 400 ಎಕರೆ ಅಚ್ಚುಕಟ್ಟು ಜಾಸ್ತಿಯಾಗುತ್ತದೆ. ನಾವು ಪ್ರತಿ ವರ್ಷ 8-10 ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟು ಕಂದಾಯ ಕೊಡುತ್ತಿದ್ದೇವೆ. ಈ ಕೆರೆ ಬಹಳ ಹಿಂದೆಯೇ ಕಟ್ಟಿದ್ದು. ಹೊಸದಾಗಿ ಅಚ್ಚುಕಟ್ಟಿಗೆ ಬರುವುದಕ್ಕೆ ಮೈಸೂರು ಆಕ್ಟ್ ಪ್ರಕಾರ ಕಂಟ್ರಿ ಬ್ಯೂಷನ್ ಕೇಳಿದ್ದಾರೆ, ವಾಟರ್ ರೇಟ್ ಕೇಳಿದ್ದಾರೆ. ಅದರ ದರವನ್ನು ಮೈಸೂರು ಆಕ್ಟ್ ಪ್ರಕಾರ ರಿವೈಸ್ ಮಾಡಬೇಕು. ಒಟ್ಟು 1,200 ಎಕರೆ ಸರಿಯಾಗು ವುದರಿಂದ ಜಾಗ್ರತೆ ಈ ಕೆಲಸವಾಗಬೇಕು. ನಮ್ಮಲ್ಲಿ ಬಹಳ ಕೆರೆ ರಿಪೇರಿಯಾಗಿಲ್ಲ. ಅವನ್ನು ಜಾಗ್ರತೆ ರಿಪೇರಿಮಾಡಿ ಜನರಿಗೆ ಸಹಾಯ ಮಾಡಬೇಕು.

*ಶ್ರೀ ಎಚ್. ಹುಚ್ಚಮಾಸ್ತಿಗೌಡ (ಹುಲಿಯೂರು ದುರ್ಗ).—ಸ್ವಾಮಿ, ಈ ಸಭೆಯ ಮಾನ್ಯ ಸದಸ್ಯರು ಡಿಮ್ಯಾಂಡಿನ ಮೇಲಾಗಲಿ ಅಥವಾ ಬಡ್ಜೆಟ್ಟಿನ ಮೇಲಾ ಗಲಿ ಮಾತನಾಡಿ ಅಭಿಪ್ರಾಯಗಳನ್ನು ಕೊಟ್ಟರೆ ಮಂತ್ರಿಗಳು ಅದನ್ನು ನೋಟ್ ಮಾಡಿಕೊಂಡು ಉತ್ತರ ಕೊಡುತ್ತಾರೆ, ಮುಂದೆ ನಾವು ಹೇಳಿದ ಕೆಲಸ ವಾಗಿ ನಮ್ಮ ಕಷ್ಟ ಪರಿಹಾರವಾಗುತ್ತದೆ ಎಂಬ ದೃಷ್ಟಿಯಿಂದ ನಾವು ಮಾತನಾಡುತ್ತೇವೆ. ಇದನ್ನು ಸರ್ಕಾರದವರು ಗಮನದಲ್ಲಿಟ್ಟುಕೊಳ್ಳಬೇಕು ಎಂದು ಮೊದಲು ತಿಳಿಸಿ ನನ್ನ ಭಾಷಣವನ್ನು ಪ್ರಾರಂಭಿ ಸುತ್ತೇನೆ.

Sri H. M. CHANNABASAPPA (Minister for Industries).—I would like to submit that I am noting down every point raised by Hon'ble member and getting information on those points so that I may give them a convincing reply.

ಶ್ರೀ ಎಚ್. ಹುಚ್ಚಮಾಸ್ತಿಗೌಡ —ಈ ಸಭೆ ಸಾಮಾನ್ಯವಾಗಿ ಆ ರೀತಿ ಆಗಬೇಕೆಂದು ಕೇಳು ವುದನ್ನು ನಾನು ಹೇಳಿದೆ. ಮರಾಮತ್ ಇಲಾಖೆ ಯಲ್ಲಿ ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ವರ್ಷೇ ವರ್ಷೆ 1951-1952 ನೆಯ ಸಾಲಿನಿಂದ ನಾಲ್ಕು ಕೋಟಿ ರೂಪಾಯಿಗಳನ್ನು ಖರ್ಚುಮಾಡು ತ್ತಿದ್ದರೆ 1956-57ಕ್ಕೆ 12 ಕೋಟಿ ರೂಪಾಯಿಗಳು ಖರ್ಚಾಗುತ್ತದೆ. ಇಷ್ಟು ಕೋಟ್ಯಾಂತರ ರೂಪಾಯಿ ಖರ್ಚು ಮಾಡುವ ಇಲಾಖೆಯಲ್ಲಿ ಅಧಿಕಾರಿಗಳು ಮೇಲ್ಪಟ್ಟದವರಾಗಿರಬೇಕು, ಪ್ರಾಮಾಣಿಕತೆಯಿಂದ ಕೆಲಸ ಮಾಡುವವರಾಗಬೇಕು, ದಕ್ಷತೆಯುಳ್ಳವರಾಗಿರ ಬೇಕು ಎಂಬುದು ನಮ್ಮ ನಿರೀಕ್ಷೆ. ಆ ರೀತಿಯಾಗಿಲ್ಲ ದಿದ್ದರೆ ಸಮರ್ಪಕವಾಗಿ ಖಂಡಿತ ಕೆಲಸವಾಗುವುದಿಲ್ಲ. ಇಷ್ಟು ಹಣ ಖರ್ಚಾಗುವುದಕ್ಕೆ ಲೆಕ್ಕ ಕಾಣಬಹುದು. ಆದರೆ ಪ್ರಾಮಾಣಿಕತನದಿಂದ ಕೆಲಸವಾಗಿದೆಯೆ' ರೈತರಿಗೆ ನಿಜವಾಗಿಯೂ ಉಪಕಾರವಾಗಿದೆಯೆ, ಹೆಚ್ಚಾಗಿ ಲಾಭಕರವಾಗಿದೆಯೆ ಎಂಬುದನ್ನು ಗಮನಿಸ ಬೇಕು. ಈ ಇಲಾಖೆ ಕೆಲಸ ಕಾರ್ಯ ನಡೆಯುವಾಗ ಏನು ನ್ಯೂನತೆ ಕಂಡುಬರುತ್ತಿದೆಯೆಂಬುದನ್ನು ಹಿಂದಿನಿಂದ ಈ ಸಭೆಯ ಮಾನ್ಯ ಸದಸ್ಯರಾಗಲಿ, ರೈತ ರಾಗಲಿ ಇತರೆ ಮುಖಂಡರಾಗಲಿ ಸರ್ಕಾರದ ಗಮ ನಕ್ಕೆ ತಂದಾಗ ಅವನ್ನು ಸರಿಪಡಿಸದೆ ಹೋದರೆ ನಮ್ಮ ಸಲಹೆಗಳು, ಅನುಭವಗಳು ಎಲ್ಲವೂ ವ್ಯರ್ಥವಾಗಿ ಈ ಇಲಾಖೆಯಲ್ಲಿರುವ ನ್ಯೂನತೆ ಮುಂದುವರಿದುಕೊಂಡು ಹೋಗುತ್ತದೆ. ಇದಕ್ಕೆ ಅವಕಾಶ ಕೊಡಬಾರದು ಎಂದು ಮೊಟ್ಟ ಮೊದಲೇ ಸೂಚನೆ ಮಾಡುತ್ತೇನೆ.

ಇನ್ನು ಒಂದೆರಡು ಇಂಥ ನ್ಯೂನತೆಗಳನ್ನು ಈ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಯಾವು ದಾದರೂ ಒಂದು ಅಂದಾಜು ಮಂಜೂರಾದರೆ ಆ ಕೆಲಸಕ್ಕೆ ಸಿಬ್ಬಂದಿಯನ್ನು ಹೊಸದಾಗಿ ಒದಗಿಸು ತ್ತಾರೆ. ಆ ಸಿಬ್ಬಂದಿಯನ್ನು ಬೇರೆ ಕೆಲಸಕ್ಕೆ

(ಶ್ರೀ ಎಚ್. ಹುಚ್ಚಮಾಸ್ತಿಗೌಡ)

ಉಪಯೋಗಿಸುವುದು ಇನ್ನೊಂದು ಕೆಲಸಕ್ಕೆ ಒದಗಿಸಿದ್ದುದನ್ನು ಮತ್ತೊಂದು ಕೆಲಸಕ್ಕೆ ಉಪಯೋಗಿಸುವುದು ಹೊಸದಾಗಿ ಲಾರಿ ಕೊಟ್ಟರೆ, ಸಾಮಾನು ಕೊಟ್ಟರೆ ಅದನ್ನು ಬೇರೆ ಕೆಲಸಕ್ಕೆ ಉಪಯೋಗಿಸುವುದು, ಹೀಗೆ ಇಲ್ಲಿ ಒಂದು ಕೆಲಸಕ್ಕೆ ಒದಗಿಸಿದ್ದನ್ನು ಮತ್ತೊಂದು ಕೆಲಸಕ್ಕೆ ಉಪಯೋಗಿಸುವ ಪದ್ಧತಿಯಿದೆ. ಇದನ್ನು ಮೊಟ್ಟ ಮೊದಲು ತಪ್ಪಿಸಬೇಕೆಂದು ಸಲಹೆ ಮಾಡುತ್ತೇನೆ. ಯಾವುದೋ ಒಂದು ಸಬ್-ಡಿವಿಜನ್‌ಗೆ ಸಿಬ್ಬಂದಿ ಕೊಟ್ಟರೆ ಬೇರೆ ಕಡೆ ಅವರಿಂದ ಕೆಲಸ ಮಾಡಿಸುವುದು, ಸಾಮಾನು ಒಂದು ಕಡೆಗೆ ಕೊಟ್ಟರೆ ಬೇರೆ ಕಡೆ ಅದನ್ನು ಉಪಯೋಗಿಸಿಕೊಳ್ಳುತ್ತಿರುವುದು ಕಡ್ಡಾಯವಾಗಿ ತಪ್ಪುವುದಕ್ಕೆ ಅವಕಾಶ ಮಾಡಬೇಕು. ಇದು ಅನಿವಾರ್ಯವೆಂದು ಭಾವಿಸುವುದಿಲ್ಲ. ಯಾವ ಕೆಲಸಕ್ಕೆ ಎಷ್ಟು ಅವಶ್ಯಕವೋ ಅಷ್ಟು ಸಿಬ್ಬಂದಿಯನ್ನು ಮಂಜೂರು ಮಾಡಿಸಿಕೊಂಡ ಮೇಲೆ ಅಲ್ಲೇ ಅದಕ್ಕೆ ಸಂಬಳ ಕೊಟ್ಟು ಕೆಲಸ ಮಾಡಿಸಬೇಕು, ಬೇರೆ ಕಡೆ ಅದಕ್ಕೆ ಕೆಲಸ ಕೊಡಬಾರದು ಎಂದು ಸಲಹೆ ಮಾಡುತ್ತೇನೆ.

ಇನ್ನು ಟೆಂಡರು ಹಾಕುವಾಗ ಸಾವಿರ ರೂಪಾಯಿಗೆ ಮೇಲ್ಪಟ್ಟ ಕೆಲಸವನ್ನು ಟೆಂಡರು ಮೂಲಕ ಕೊಡಬೇಕೆಂಬ ಆಜ್ಞೆಯಿದೆ. ಆದರೆ ಯಾವ ಸಬ್-ಡಿವಿಜನ್ ಅಥವಾ ಡಿವಿಜನ್ ನೋಡಿದರೂ ನೂರಾರು ಕೆಲಸ ಸಾವಿರ ರೂಪಾಯಿಗೆ ಮೇಲ್ಪಟ್ಟು ಇರುವುದು ಟೆಂಡರಿಲ್ಲದೆ ವಹಿಸಲ್ಪಡುವುದು ತಪ್ಪಿಲ್ಲ. ಇದನ್ನು ಕಡ್ಡಾಯವಾಗಿ ನಿಲ್ಲಿಸಿ ಆಜ್ಞೆಯನ್ನು ಪಾಲಿಸಬೇಕೆಂದು ಹೋದ ಸಲ ಬಡ್ಜೆಟ್ ಅಧಿವೇಶನದಲ್ಲಿ ಒಂದು ಪ್ರಶ್ನೆ ಕಳುಹಿಸಿದ್ದೆ. ತುಮಕೂರು ಡಿಸ್ಟ್ರಿಕ್ಟ್ ಒಂದರಲ್ಲೇ ಇಂಥ ನೂರಾರು ಕೆಲಸ ಟೆಂಡರಿಲ್ಲದೆ ಕೊಟ್ಟಿರುವ ಉದಾಹರಣೆಗಳಿವೆ. ಇದರ ಉದ್ದೇಶವೇನು ? ಲೋಪದೋಷವಿರಬಾರದು, ಮಿತವ್ಯಯ ಮಾಡಬೇಕು, ಮೋಸವಾಗಬಾರದು ಎಂಬ ಉದ್ದೇಶದಿಂದ ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟ ಕೆಲಸ ಟೆಂಡರು ಮೂಲಕ ಕೊಡಬೇಕೆಂದು ಹೇಳಿರುವಾಗ ಟೆಂಡರು ಕರೆಯದೆ ಅವನ್ನೇಕೆ ಕೊಡಬೇಕು ! ಆರ್ಡರನ್ನು ಕಡ್ಡಾಯಮಾಡಿ ಸರ್ಕಾರದವರು ಈಗ ನಡೆಯುತ್ತಿರುವ ಲೋಪವನ್ನು ತಪ್ಪಿಸದಿದ್ದರೆ ಉದ್ದೇಶ ಸಾರ್ಥಕವಾಗುವುದಿಲ್ಲ. ಟೆಂಡರಿಲ್ಲದೆ ಯಾರಾದರೂ ಆ ಕೆಲಸ ಕೊಟ್ಟರೆ ಅಂಥವರಿಗೆ ಸರ್ಕಾರ ಶಿಕ್ಷೆ ಮಾಡಬೇಕು, ಇರುವ ಆರ್ಡರನ್ನು ಪಾಲಿಸಬೇಕು ಎಂದು ತಿಳಿಸುವುದಕ್ಕೆ ಈ ಸಂದರ್ಭದಲ್ಲಿ ಇಷ್ಟಪಡುತ್ತೇನೆ.

ಟೆಂಡರು ಕರೆದಮೇಲೆ ಅದನ್ನು ವಿಲೆಮಾಡುವುದರಲ್ಲಿ ಬಹಳ ದೋಷವಿದೆ. ಹೋದ ಸಲ ನಮ್ಮ ತಾಲ್ಲೂಕಿಗೂ ಮಧ್ದೂರು ತಾಲ್ಲೂಕಿಗೂ ಮಧ್ಯೆ ಶಿಂಷಾ ನದಿಗೆ ಕೌಡ್ಲೆ ಹತ್ತಿರ ಸೇತುವೆ ಕಟ್ಟಲು ನಾಲ್ಕು ಲಕ್ಷ ರೂಪಾಯಿಗಳ ಕೆಲಸಕ್ಕೆ ಟೆಂಡರು ಕರೆದರು. ಟೆಂಡರು ಒಡೆಯುವಾಗ ಏನಾಯಿತೆಂದರೆ ಎಗ್ಸಿಕ್ಯುಟಿವ್ ಇಂಜನಿಯರ ಆಫೀಸಿನಲ್ಲಿ ಒಂದು ಕಡೆ ಟೆಂಡರ್ ಪೇಪರ್ ಮೇಲೆ ಬ್ಲೇಡಿನಲ್ಲೋ ಅಥವಾ ಬೇರೆ ಏತರಲ್ಲೋ ಕೆರೆದು ತಿದ್ದಿದರು. ಆಮೇಲೆ ಸರ್ಕಾರಕ್ಕೆ ಅದು ಬಂತು. ವರ್ತಮಾನ ಗೊತ್ತಾಯಿತು. ಮಂತ್ರಿಗಳ ಬಳಿಗೆ ಆ ಪೇಪರ್ ಬರುವವರೆಗೆ ಈ ವಿಷಯ ಯಾರಿಗೂ ನಾನು ಹೇಳಲಿಲ್ಲ. ಮಂತ್ರಿಗಳಲ್ಲಿಗೆ ಬಂದಾಗ ಹೇಳಿದೆ. ಅವರು ಅದು ನಿಜವೆಂದು ಒಪ್ಪಿಕೊಂಡು ಮತ್ತೆ ಟೆಂಡರು ಕರೆದರು. ಆಗ 70 ಸಾವಿರ ರೂಪಾಯಿ ಕಡಮೆಯಾಗಿ ಟೆಂಡರು ಬಂತು. ಒಂದು ಟೆಂಡರಿನಲ್ಲಿ ಎಗ್ಸಿಕ್ಯುಟಿವ್ ಇಂಜನಿಯರ ಆಫೀಸಿನಲ್ಲೂ ಸಹ ಇಂಥ ಮೋಸವಾಗಿ 70 ಸಾವಿರ ರೂಪಾಯಿ ಕಡಮೆ ಬಂದಿರುವುದು ಗೊತ್ತಿದ್ದರೂ ಸಂಬಂಧಪಟ್ಟ ಅಧಿಕಾರಿಗಳ ಮೇಲೇಕೆ ಕಾರ್ಯಕ್ರಮ ತೆಗೆದುಕೊಂಡಿಲ್ಲ ? ಈ ರೀತಿ ಒಂದೊಂದು ಇಂಥ ಕೆಲಸ, ಅಗಾಧವಾದ ಅಪರಾಧ ನಡೆದಿರುವುದು ಸರ್ಕಾರದ ಕಣ್ಣಿಗೆ ಕಂಡರೂ ಸೂಕ್ತವಾದ ಕಾರ್ಯಕ್ರಮ ತೆಗೆದುಕೊಂಡು ಸಂಬಂಧಪಟ್ಟ ಅಧಿಕಾರಿಗಳಲ್ಲಿಯಾರು ಈ ತಪ್ಪು ಮಾಡಿದ್ದಾರೆಂದು ಪತ್ತೆಮಾಡಿ ಶಿಕ್ಷೆ ಮಾಡದಿದ್ದರೆ 12 ಕೋಟಿ ರೂಪಾಯಿಗಳು ಖರ್ಚಾಗುವ ಕಡೆ ಎಷ್ಟು ಹೋಗುತ್ತದೆಂದು ಅಳತೆ ಮಾಡುವುದಕ್ಕಾಗುವುದಿಲ್ಲ, ಅದು ಹಿಡಿತಕ್ಕೆ ಸಿಕ್ಕುವುದಿಲ್ಲ, ಈ 12 ಕೋಟಿ ರೂಪಾಯಿಗಳ ಸಹಾಯ ಪ್ರಜೆಗಳಿಗೆ ದೊರೆಯುವುದಿಲ್ಲ.

ಇನ್ನು ಕೆಲವು ಸಬ್-ಡಿವಿಜನ್‌ಗಳಲ್ಲಿ ಕೆಲಸ ನಡೆಯುವ ವಿಷಯ ತೆಗೆದುಕೊಂಡರೆ ಕೆಲವು ಕಡೆ ಒಂದು ತಿಂಗಳಿಗೆ ಎರಡು ಸಾವಿರ ರೂಪಾಯಿಗಳು ಕೂಡ ಖರ್ಚಾಗುವುದಿಲ್ಲ, ಕೆಲವು ಕಡೆ 40-50-60 ಸಾವಿರ ರೂಪಾಯಿಗಳ ಖರ್ಚಿದೆ. ಆದರೂ ಎರಡು ಸಾವಿರ ರೂಪಾಯಿಗಳಿಗಾಗಿಯೇ ಒಂದು ಸಬ್-ಡಿವಿಜನ್ ಮುಂದುವರಿಸುತ್ತಿದ್ದಾರೆ. ಇನ್ನು ಕೆಲವು ಕಡೆ ಹೆಚ್ಚು ಕೆಲಸ ಚೆನ್ನಾಗಿ ನಡೆದರೂ ಅಧಿಕಾರಿಗಳಿಗೆ ನಿರುತ್ಸಾಹವುಂಟಾಗುವ ಹಾಗೇಕೆ ಮಾಡುತ್ತಾರೋ ಗೊತ್ತಾಗುವುದಿಲ್ಲ. ಇಲಾಖೆ ಅಧಿಕಾರಿಗಳು ಸಾಮಾನ್ಯವಾಗಿ ಒಂದು ಸಬ್-ಡಿವಿಜನ್‌ನಲ್ಲಿ ಇಷ್ಟು ಕೆಲಸ ಮಾಡುವುದುವುಕ್ಕೆ ಸಾಧ್ಯವೆಂದು ಹೇಳಿ ದಕ್ಷತೆಯನ್ನು ತೋರಿಸುವುದಕ್ಕೆ ನಿರುತ್ಸಾಹವಾಗುವಂತೆ ಮಾಡಬಾರದು. ಎರಡು ಸಾವಿರ ರೂಪಾಯಿ ಕೆಲಸ ನಡೆಯುವ ಸಬ್-ಡಿವಿಜನ್ ಹೆಚ್ಚಾಗಿದ್ದರೆ ಅನೇಕರಿಗೆ ಕೆಲಸವಿರುತ್ತದೆ, ಅಸಿಸ್ಟೆಂಟ್ ಇಂಜನಿಯರಾಗಲು ಅವಕಾಶವಿರುತ್ತದೆಂದು ಅವನ್ನು ಮುಂದುವರಿಸಬಾರದು. ಸರ್ಕಾರದವರು ಕೂಡಲೆ ಯಾವಯಾವ ಸಬ್-ಡಿವಿಜನ್ನಿಗೆ ಎಷ್ಟು ಕೆಲಸವಿದೆ, ಅದನ್ನು ಮುಂದುವರೆಸುವುದು ಅಗತ್ಯವೆ, ಇಲ್ಲವೆ ಎಂದು ಬಡ್ಜೆಟ್ ಅಧಿವೇಶನಕ್ಕೆ ಪೂರ್ವಭಾವಿಯಾಗಿ ಆಯಾ ವರ್ಷ ಯಾವಯಾವ ಸಬ್-ಡಿವಿಜನ್ ಇರುವುದು ಆವಶ್ಯಕ ಎಂದು ಇಲಾಖೆಯಿಂದ ವರದಿ ತರಿಸಿ ವಜಾ ಮಾಡಬೇಕಾದದ್ದನ್ನು ವಜಾ ಮಾಡಿ ಮುಂದುವರಿಸಬೇಕಾದದ್ದನ್ನು ಮುಂದುವರಿಸಿ ಅದಕ್ಕೆ ತಕ್ಕಂತೆ ಬಡ್ಜೆಟ್ಟಿನಲ್ಲಿ ಹಣ ಒದಗಿಸುವ ಏರ್ಪಾಡು ಪ್ರತಿ ವರ್ಷ ನಡೆಯುವುದು ಬಹಳ ಅಗತ್ಯ.

ಸ್ವಾಮಿ, ಇನ್ನು ಈ ದೊಡ್ಡ ದೊಡ್ಡ ಜಲಾಶಯಗಳನ್ನು ಕಟ್ಟುತ್ತಿರುವಕಡೆಗಳಲ್ಲಿ ಆ ಜಮೀನು ಮುಳುಗಡೆ, ಗ್ರಾಮಗಳು ಮುಳುಗಡೆ ಆಗತಕ್ಕಂಥ ಸಂದರ್ಭಗಳಲ್ಲಿ ಆ ಜನರಿಗೆ ಅಲ್ಲಿ ನೀರುನಿಲ್ಲುವುದಕ್ಕೆ ಮುಂಚಿತವಾಗಿಯೇ ಅವರಿಗೆ ನೆಲಸಲು ಬೇರೆ ಸ್ಥಳಗಳನ್ನೂ ಮತ್ತು ಮನೆಗಳನ್ನೂ ಕಟ್ಟಿಕೊಳ್ಳಲು ಅವರಿಗೆ ಸೂಕ್ತ ಪರಿಹಾರ ದ್ರವ್ಯವನ್ನು ಅತಿ ಜರೂರಾಗಿ ಕೊಡತಕ್ಕದ್ದು ತೀರಾ ಅಗತ್ಯ. ಆ ರೈತಾಪಿ ಜನರು ಅಲ್ಲಿ ತಮಗಿದ್ದಂಥ ಜಮೀನು, ಆಸ್ತಿಪಾಸ್ತಿಗಳನ್ನೆಲ್ಲಾ ನೀರು ಮುಳುಗಡೆ ಮಾಡಿಕೊಂಡು ಅವರು ಕಷ್ಟಗಳನ್ನು ಅನುಭವಿಸುತ್ತಿರುವಾಗ ಅವರ ಪಕ್ಕದಲ್ಲಿ ಬೇರೆ ಜನರು ಸುಖಪಡುತ್ತಿರುವುದನ್ನು ಆ ಜನರು ನೋಡಿ ಅನುಭವಿಸುತ್ತಿರುವಂಥ ಅವರ ವ್ಯಥೆಯನ್ನು ಹೇಳತೀರದಾಗಿದೆ. ಅವರನ್ನು ಆ ಸ್ಥಿತಿಯಲ್ಲಿ ನೋಡುವುವುದಕ್ಕೆ ನಮಗೇ ತುಂಬ ಕಷ್ಟವಾಗಿದೆ. ಕಪ್ಪರಾಜಸಾಗರ ಜಲಾಶಯವನ್ನು ಕಟ್ಟಿ ಇಲ್ಲಿಗೆ ಎಷ್ಟೋ ವರ್ಷಗಳಾದವು. ಆದರೆ ಇನ್ನೂ ಈ ಹೊತ್ತಿನವರೆಗೂ ಕೂಡ ಕೆಲವರಿಗೆ ಆ ಜಮೀನು ಮುಳುಗಡೆಯಾದ

ಬಗ್ಗೆ ಅವರಿಗೆ ಸಲ್ಲಬೇಕಾದ ಪರಿಹಾರ ದೊರೆತಿಲ್ಲ. ಅನೇಕರಿಗಿನ್ನೂ ಆ ಲೆಕ್ಕದ ಪ್ರಕಾರ ಕೊಡಬೇಕಾದ್ದು ಹಾಗೆ ಮುಲ್ಕ ನಿಂತು ಬಂದಿರುವುದಾಗಿ ನಾನು ಕೇಳುತ್ತಿದ್ದೇನೆ. ಇನ್ನು ಹೀಗೆಯೇ ಆ ಮಾರ್ಕೋನಹಳ್ಳಿ ಜಲಾಶಯವನ್ನು ಕಟ್ಟಿ ಇಲ್ಲಿಗೆ 14 ವರ್ಷಗಳ ಮೇಲಾಯಿತು. ಆ ಮುಳುಗಡೆಯಾದ ಜಮೀನಿನ ಬಗ್ಗೆ ಜನರಿಗೆ ಪಾವತಿಯಾಗಬೇಕಾದಂಥ ಆ ಪರಿಹಾರದ ಬಗ್ಗೆ ಹಿಂದಿನ ಬಡ್ಜೆಟ್ಟಿನಲ್ಲಿ 4 ಲಕ್ಷ 60 ಸಾವಿರ ರೂಪಾಯಿಗಳನ್ನು ಒದಗಿಸಲಾಗಿದ್ದಿತು. ಆದರೆ ಈವರೆಗೆ ಆ ರೀತಿ ಪಾವತಿ ಮಾಡಿರತಕ್ಕ ಹಣ ಕೇವಲ 56 ಸಾವಿರ ರೂಪಾಯಿಗಳು ಮಾತ್ರ. ಹಾಗೆ ಜಮೀನು ಮತ್ತು ಗ್ರಾಮಗಳು ಮುಳುಗಡೆಯಾದಂಥ ಜನರಿಗೆ ಆ ಕೂಡಲೇ ಅವರಿಗೆ ಅತ್ಯಗತ್ಯವಾಗಿ ಬೇಕಾಗಿರತಕ್ಕಂಥ ಕುಡಿಯುವ ನೀರಿನ ಬಾವಿ, ವಾಸಕ್ಕೆ ಮನೆ ಇತ್ಯಾದಿ ಅನುಕೂಲಗಳನ್ನು ಕಲ್ಪಿಸಿಕೊಡದೆ ಹೋದರೆ ಅವರು ಅನುಭವಿಸುತ್ತಿರತಕ್ಕಂಥ ಕಷ್ಟಪಡತಕ್ಕ ಯಾತನೆ ಅದನ್ನು ಅನುಭವಿಸುತ್ತಿರುವವರಿಗೆ ಗೊತ್ತೇ ವಿನಃ ಇಲ್ಲಿ ಹೊರಗಡೆ ಹಾಯಾಗಿ ಕುಳಿತುಕೊಂಡು ಸಾವಿರ ರೂಪಾಯಿ ಸಂಬಳ ಪಡೆಯುತ್ತಿರುವಂಥ ಅಧಿಕಾರಿಗಳಿಗಾಗಲಿ ಅಥವಾ ಮಂತ್ರಿಗಳಿಗಾಗಲಿ ಆ ಕಷ್ಟಗಳು ಗೊತ್ತಾಗುವುದಿಲ್ಲ. ಅಂತೂ ಈಗಲಾದರೂ ಇಲ್ಲಿಯವರೆಗೆ ಆದದ್ದಾಯಿತು, ಹೀಗೆ ನೀರು ಮುಳುಗಡೆ ಆಗತಕ್ಕಂಥ ಜಮೀನಿನ ಮಾಲೀಕರುಗಳಿಗೆ ಆ ಕೆರೆಗಳಲ್ಲಿ ನೀರು ನಿಲ್ಲುವ ಪೂರ್ವಭಾವಿಯಲ್ಲೇ ಅವರಿಗೆ ಸಲ್ಲಬೇಕಾದ ಅನುಕೂಲಗಳನ್ನು ಕಲ್ಪಿಸಬೇಕು, ಅವರಿಗೆ ಲಭಿಸಬೇಕಾದ ಪರಿಹಾರ ಧನ ಅವರಿಗೆ ದೊರೆಯುವಹಾಗೆ ಕೆಲಸಗಳನ್ನು ಬೇಗ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಈ ಕೆರೆಗಳನ್ನು ಕೆಲವು ಕಡೆ ಕಟ್ಟಿದನಂತರ ಅಲ್ಲಿಯ ಜನರಿಗೆ ತಿರುಗಾಡಲು ಯಾವ ರಸ್ತೆಗಳೂ ಇರುವುದಿಲ್ಲವೆಂದು ಈಗಾಗಲೇ ಶ್ರೀ ಮಾಧವಾಚಾರ್ ಅವರು ಹೇಳಿದರು. ಯಾವ ಒಂದು ಊರಿಗೆ ಹೋಗುವುದಕ್ಕಾಗಲಿ ಅಥವಾ ರೈತಾಪಿ ಜನರಿಗೆ ವ್ಯವಸಾಯ ಸಂಬಂಧದಲ್ಲಿ ತಿರುಗಾಡಲು ಅಂಥ ಕೆರೆಗಳನ್ನು ಕಟ್ಟತಕ್ಕ ಪ್ರದೇಶದಲ್ಲಿ ಸರ್ಕಾರದವರೇ ಆ ರಸ್ತೆಗಳನ್ನು ಮಾಡಿಸಿ ಕೊಡಬೇಕು ಎಂಬುದಾಗಿ ಇರಿಗೇಷನ್ ಆಕ್ಟಿನಲ್ಲಿ ಒಂದು ಪ್ರಾವಿಜನ್ ಕೂಡ ಇದೆ. ಆದರೆ ಈ ದಿವಸ ಅಂಥ ಪ್ರಾಜೆಕ್ಟುಗಳನ್ನು ನಿರ್ಮಾಣ ಮಾಡತಕ್ಕ ಸಂದರ್ಭಗಳಲ್ಲಿ ಆ ರಸ್ತೆಗಳನ್ನು ನಿರ್ಮಾಣ ಮಾಡತಕ್ಕ ಬಗ್ಗೆ ಬಡ್ಜೆಟ್ಟಿನಲ್ಲಿ ಈ ಹಣವನ್ನು ಸೇರಿಸುತ್ತಿಲ್ಲ. ಆದರೆ ಆ ರಸ್ತೆಗಳನ್ನು ಇವರು ಇಂದಲ್ಲ ನಾಳೆಯಾದರೂ ಮಾಡಿಸಲೇ ಬೇಕಾಗಿರುತ್ತದೆ. ಆದರೆ ಮೊದಲೇ ಅಲ್ಲಿ ಈ ರಸ್ತೆಗಳನ್ನು ಮಾಡಿಸುವುದು ಸುಲಭ. ಅಲ್ಲಿ ಗದ್ದೆಗಳನ್ನು ಮಾಡಿದ ತರುವಾಯ, ಕಾಲುವೆಗಳನ್ನು ಅಗೆದನಂತರ ಈ ರಸ್ತೆಗಳನ್ನು ಮಾಡಿಸಬೇಕು ಎಂದರೆ ಒಂದಕ್ಕೆ ಹತ್ತರಷ್ಟು ಖರ್ಚು ಜಾಸ್ತಿಯಾಗುತ್ತದೆ. ಆದುದರಿಂದ ಇನ್ನು ಮುಂದಕ್ಕೆ ಈ ಇರಿಗೇಷನ್ ಟ್ರ್ಯಾಕ್ಟ್ಸ್‌ಗಳನ್ನು ಮಾಡಲು ಆಯಾ ಪ್ರಾಜೆಕ್ಟಿನ ಬಡ್ಜೆಟ್ಟಿನಲ್ಲೇ ಈ ಒಂದು ಐಟಮ್ಮನ್ನು ಸೇರಿಸತಕ್ಕಂಥ ಒಂದು ವ್ಯವಸ್ಥೆ ಆಗಬೇಕಾದದ್ದು ಸೂಕ್ತ ಎಂದು ಹೇಳುತ್ತೇನೆ.

ಇನ್ನು ಈ ಅಂದಾಜುಗಳನ್ನು ರಿವೈಜ್ ಮಾಡತಕ್ಕಂಥಾದ್ದು ಒಂದು ದೊಡ್ಡ ವಿಚಾರ. ಹಿಂದೆ ನಮ್ಮ ಶ್ರೀ ಎಲ್. ಸಿದ್ದಪ್ಪನವರು ಮಂತ್ರಿಗಳಾಗಿದ್ದ ಕಾಲದಲ್ಲಿ 73 ಸಾವಿರ ರೂಪಾಯಿಗಳಿಗೆ ಒಂದು ಅಣೆಯನ್ನು ಮಂಜೂರು ಮಾಡಿದ್ದರು. ಆ ಅಂದಾಜನ್ನು ಪುನಃ ರಿವೈಜ್ ಮಾಡಲಾಯಿತು. ಎಷ್ಟಕ್ಕೆ ಎಂದರೆ ಒಂದು ಲಕ್ಷ 75 ಸಾವಿರ ರೂಪಾಯಿಗಳಿಗೆ ಆದು ರಿವೈಜ್ ಆಯಿತು. ಮೊನ್ನೆ ಕೂಡ ಇಂಥಾದ್ದೇ ಒಂದು ವಿಚಾರ ನಡೆಯುವುದರಲ್ಲಿತ್ತು. ಆದರೆ ನಾವು ಆ ವಿಚಾರವನ್ನು ಕಾಲಕ್ಕೆ ಸರಿಯಾಗಿ ಸರ್ಕಾರದವರ ಗಮನಕ್ಕೆ ತಂದೆವು. ಹಾಗೆ ಮಾಡಿದ್ದರಿಂದ 34 ಸಾವಿರಕ್ಕೆ ಆಗುತ್ತಿದ್ದಂಥ ಅಂದಾಜು 24 ಸಾವಿರಕ್ಕೆ ಇಳಿಯಿತು. ಈ ದಿವಸ 60-70 ಸಾವಿರ ರೂಪಾಯಿಗಳಲ್ಲಿ ಆಗತಕ್ಕಂಥ ಯಾವುದಾದರೂ ಒಂದು ಕೆಲಸವನ್ನು ಕಂಟ್ರಾಕ್ಟರಿಗೆ ಒಪ್ಪಿಸಿದರೆ ಆತನು ಬೇಗ ಕೆಲಸವನ್ನೇ ನಡೆಸುವುದಿಲ್ಲ. ಏತಕ್ಕಾಗಿ ಹೀಗೆ ನಿಧಾನ ಮಾಡುತ್ತಿದ್ದೀಯೆಂದು ಕೇಳಿದರೆ ಈ ಅಂದಾಜುಗಳು ಇನ್ನೂ ರಿವೈಜ್ ಆಗಿಲ್ಲ ಅದಕ್ಕಾಗಿ ಕಾಯುತ್ತಿದ್ದೇನೆ ಎಂದು ಹೇಳುತ್ತಾನೆ. ಇಲಾಖೆಯನ್ನು ನೀವು ಮೊದಲೇ ಏತಕ್ಕಾಗಿ ಆ ಅಂದಾಜನ್ನು ರೆವ್ಯೂ ಮಾಡಲಿಲ್ಲ ಎಂದು ಕೇಳಿದರೆ ಅವರು ಅದಕ್ಕೇನೋ ಒಂದು ಕಾರಣ ಹೇಳಿಬಿಡುತ್ತಾರೆ. ಹೀಗೆಲ್ಲಾ ಮಾಡುವುದು ಸರಿಯಲ್ಲ. ಈ ಪ್ರಾಜೆಕ್ಟ್ ಕೆಲಸಗಳನ್ನು ಮಂಜೂರು ಮಾಡುವಾಗಲೇ ಅದರ ಜೊತೆಯಲ್ಲೇ ಮೂಡಬಾಯಿ, ಇತ್ಯಾದಿಗಳ ಅಂದಾಜನ್ನು ಸೇರಿಸಿ ಒಟ್ಟಿಗೆ ಮಾಡತಕ್ಕದ್ದು ಅಗತ್ಯ, ಪ್ರತಿಯೊಂದು ಐಟಂಗೂ ಒಂದೊಂದಾವರ್ತಿ ಅಂದಾಜು ತಯಾರಿಸುವುದರಿಂದ ಪುನಃ ವೆಚ್ಚ ಹೆಚ್ಚಾಗುತ್ತದೆ. ಹಾಗೆ ಒಂದಾವರ್ತಿ ತಯಾರಿಸಿದ ಅಂದಾಜನ್ನು ಪುನಃಬದಲಾಯಿಸಬಾರದು. ತಯಾರು ಮಾಡುವಾಗಲೇ ಆಗಿನ ದರ ಇತ್ಯಾದಿಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಅದನ್ನು ಮಂಜೂರು ಮಾಡುವುದು ಅತ್ಯಗತ್ಯ. ಒಂದುಸಲ ಮಂಜೂರಾದ ಅಂದಾಜನ್ನು ಮತ್ತೆ ಒಂದುಸಲ ಪುನಃ ಇನ್ನೊಂದು ಸಲ ಹೀಗೆಲ್ಲಾ ರಿವೈಸ್ ಮಾಡುತ್ತಿರುವುದರಲ್ಲಿ ಏನೋ ಒಂದು ದುರುದ್ದೇಶವಿದೆ ಎಂಬುದನ್ನು ಸರ್ಕಾರದವರು ಗಮನವಿಟ್ಟು ನೋಡಬೇಕಾದದ್ದು ಅಗತ್ಯವೆಂದು ಹೇಳುತ್ತೇನೆ. ಇನ್ನು ಕೆಲವು ಕಡೆ ಈ ಮೂಡಬಾಯಿಗಳನ್ನು ಇಡತಕ್ಕ ಸಂದರ್ಭದಲ್ಲಿ ಅದೇನು ಗುಂಡಾಗಿರಬೇಕೇ ಅಥವಾ ಚಚ್ಚೌಕವಾಗಿರಬೇಕೇ ಎಂಬುದನ್ನು ಪರೀಕ್ಷೆ ಮಾಡುವುದಕ್ಕೆ ಒಂದು ಸಾವಿರ ರೂಪಾಯಿಗಳನ್ನು ವೆಚ್ಚ ಮಾಡಿದ್ದಾರೆ. ಹೀಗೆ ಈ ಇಲಾಖೆಯವರು ಆಚರಣೆಯಲ್ಲಿ ತಂದಿರತಕ್ಕಂಥ ಕೆಲವು ದುರಭ್ಯಾಸಗಳನ್ನು ಬೇಗ ತಪ್ಪಿಸಬೇಕೆಂದು ನಾನು ಇಷ್ಟಪಡುತ್ತೇನೆ.

ಇನ್ನು ಈ ಎಕರೇಜ್ ಸೆಸ್ಸನ್ನು ತೆಗೆದುಕೊಳ್ಳುವ ವಿಚಾರ: 1900-1901ನೆಯ ಇಸವಿಯಲ್ಲಿ ಒಂದು ಅಣೆಯನ್ನು ಕಟ್ಟಲಾಗಿದೆ. ಅದರ ಕೆಳಗೆ 7-8 ಎಕರೆ ತರೀ ಜಮೀನಿದೆ. ಅಲ್ಲಿ ಈ ದಿವಸ ಕೂಡ ಎಕರೆ ಒಂದಕ್ಕೆ ಎಂಟು ಆಣೆ ಪ್ರಕಾರ ಸೆಸ್ಸನ್ನು ವಸೂಲ್ಮಾಡುತ್ತಿದ್ದಾರೆ. ಈ ರೀತಿ ಮಾಡಬೇಕೆಂಬುದಾಗಿ ಏನಾದರೂ ಒಂದು ಸರ್ಕಾರಿ ಹುಕುಂ ಇದೆಯೇ ಎಂದು ಕೇಳುತ್ತೇನೆ? ಆದರೆ ಇದರ ಮೈಂಟನೆನ್ಸ್ ಜವಾಬ್ದಾರಿ ಸರ್ಕಾರಕ್ಕೆ ಸೇರಿರುತ್ತದೆ. ಇದು ನಮ್ಮ ಬದುಕು, ಇದರ ನಿಗಾವಣೆ ನಮಗೆ ಸೇರಿದ್ದು ಎನ್ನುವುದನ್ನು ಸರ್ಕಾರದ ಗಮನಕ್ಕೇ ಬಂದಹಾಗೆ ಕಾಣುವುದಿಲ್ಲ. ಇದರ ದುರಸ್ತಿ ವಿಚಾರ ಇತ್ಯಾದಿಗಳ ಬಗ್ಗೆ ಸಂಬಂಧಪಟ್ಟ ಇಂಜಿನಿಯರ್ ಅಧಿಕಾರಿಗಳಿಗೆ ತಿಳಿಸಿದ್ದಾಯಿತು. ಆದರೆ ಆ ಕೆಲಸವಿನ್ನೂ ಆಗಿಲ್ಲ.

ಇನ್ನು ಈ ಮೊದಲನೆಯ ಪಂಚವಾರ್ಷಿಕ ಯೋಜನೆ ಬಗ್ಗೆ ಶಿಂಷಾ ವ್ಯಾಲಿ ವಿಚಾರದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಈ ವ್ಯಾಲಿಯನ್ನು ಪೂರ್ಣವಾಗಿ ಡೆವಲಪ್ ಮಾಡುವುದಕ್ಕೆ

(ಶ್ರೀ ಎಚ್. ಹುಚ್ಚಮಾಸ್ತಿಗೌಡ.)

ಅವಕಾಶವಿದೆ. ಅಲ್ಲಿ ಒಂದು ಅಣೆಕಟ್ಟನ್ನು ಹಾಕುವುದಕ್ಕೆ ಅವಕಾಶವಿದೆ. ಈ ದಿವಸ ಅಲ್ಲಿ ನೀರೆಲ್ಲಾ ವ್ಯಥಾ ಪೋಲಾಗಿ ಹೋಗುತ್ತಿದೆ. ಆದುದರಿಂದ ಆ ನೀರನ್ನು ಉಪಯೋಗಿಸಿಕೊಳ್ಳಲು ಸರ್ಕಾರದವರಿಗೆ ಅವಕಾಶವಿದೆ. ಆ ನದಿ ಯಾವ ಒಪ್ಪಂದಗಳಿಗೂ ಒಳಪಟ್ಟಿಲ್ಲ. ಅದು ಷೆಡ್ಯೂಲ್ಡ್ ರಿವರ್‌ಗಳ ಪಟ್ಟಿಗೆ ಸೇರಿರುವುದಿಲ್ಲ. ಆದಕಾರಣ ಈ ವ್ಯಾಲಿಯನ್ನು ಡೆವಲಪ್ ಮಾಡಿ ಅಲ್ಲಿ ಒಂದು ಅಣೆಕಟ್ಟನ್ನು ಹಾಕಬೇಕೆಂದು ಮೊದಲಿಂದಲೂ ಕೇಳುತ್ತಿದ್ದೇವೆ. ಆದರೆ ಆ ಕೆಲಸವಿನ್ನೂ ಆಗಿಲ್ಲ. ಮೊದಲನೆ ಪಾಂಚವಾರ್ಷಿಕ ಯೋಜನೆ ಮುಕ್ತಾಯವಾಯಿತು. ಆ ವಿಷಯವನ್ನು ಸರ್ಕಾರದವರು ಇನ್ನೂ ವಿಮರ್ಶೆ ಮಾಡಿಲ್ಲ. ಶ್ರೀ ಎಚ್. ಕೆ. ವೀರಣ್ಣಗೌಡರು ಅವರ ಭಾಷಣದಲ್ಲಿ ಒಂದು ಅಂಶವನ್ನು ತಿಳಿಸಬೇಕಾಗಿತ್ತು. ಆದರೆ ಅವರು ಅದನ್ನು ಮರೆತು ಕೈಬಿಟ್ಟಿದ್ದಾರೆ. ಈ ಮಾರ್ಕೋನಹಳ್ಳಿ ಕೆರೆಯ ಬೈಲಿನಿಂದ ಬರುತ್ತಿರುವ ಜೌಗು ನೀರು ಆ ಷಿಂಷಾ ನದಿಯ ಪಕ್ಕದಲ್ಲಿರುವ ನಾಲೆ ಎಂಬ ಸ್ಥಳದಲ್ಲಿ ಬಂದು ಆ ನದಿಗೆ ಸೇರುತ್ತದೆ. ಆ ಸ್ಥಳದಲ್ಲಿ ಒಂದು ಕೆರೆಯನ್ನು ಕಟ್ಟಿದರೆ ಆ ನೀರನ್ನೆಲ್ಲಾ ಉಪಯೋಗಿಸಿಕೊಳ್ಳಲು ಅವಕಾಶವಾಗುತ್ತದೆ. ಆದುದರಿಂದ ಅಲ್ಲಿ ಶಿಂಷಾ ನದಿಗೆ ಒಂದು ಪಿಕ್-ಅಪ್ಪನ್ನಾದರೂ ಕಟ್ಟತಕ್ಕದ್ದು ಅಗತ್ಯ. ಹಾಗೆ ಅಲ್ಲಿ ಅದನ್ನು ಕಟ್ಟಲು ಎಷ್ಟರ ಮಟ್ಟಿಗೆ ಸಾಧ್ಯಾಸಾಧ್ಯತೆ ಇದೆ ಎಂಬುದನ್ನಾದರೂ ನೋಡಿ ಎಂದು ನಾವು ಎಷ್ಟೋ ವೇಳೆ ಮನವಿ ಮಾಡಿಕೊಂಡಿದ್ದಾಯಿತು. ಆದರೆ ಅದಕ್ಕೆ ಗಮನಕೊಟ್ಟಿಲ್ಲ. ಈ ದಿವಸ ಆ ಮಾರ್ಕೋನಹಳ್ಳಿ ಕೆರೆಯಲ್ಲಿ ನಿಲ್ಲುವ ನೀರಿನ ಪ್ರಮಾಣ ಎಷ್ಟೆಂದರೆ 8,500 ಯೂನಿಟ್‌ಗಳು. ಇಷ್ಟು ನೀರು ಆ ಕೆರೆಗೆ ಹಿಡಿಸುತ್ತದೆ ಎಂದು ಹೇಳಿ ಅದನ್ನು ಕಟ್ಟಿದ್ದಾರೆ. ಆದರೆ ಈಗಾಗಲೇ ಆ ಕೆರೆಯ ಕೆಳಗೆ 12 ಸಾವಿರ ಎಕರೆ ತರೀ ಸಾಗುವಳಿ ಜಮೀನಾಗಿದೆ. ಈ ಅಚ್ಚುಕಟ್ಟಿಗೆ ಆ ನೀರು ಸಾಕಾಗುವುದಿಲ್ಲ. ಅದಕ್ಕಾಗಿ ಈಗಾಗಲೇ ಈ ವರ್ಷ ಆಗಸ್ಟ್ ತಿಂಗಳಿನಿಂದ—ಸೆಪ್ಟೆಂಬರ್ ತಿಂಗಳವರೆಗೆ ಇಂಟರ್‌ಮಿಟೆಂಟ್ ವಾಟರ್ ಸಪ್ಲೈ ಕೊಡುತ್ತಿದ್ದಾರೆ. ತಾವು ಇದನ್ನು ತಪ್ಪಿಸಬೇಕು. ಇದರಲ್ಲಿ ನೀರು ವ್ಯಯವಾಗದಂತೆ ಮಾಡಬೇಕಾಗಿದ್ದರೆ ಆ ಮಡಬಾಯಿಗಳನ್ನು ಬಂದೋಬಸ್ತಾಗಿ ಕಟ್ಟಬೇಕು. ಅದಕ್ಕಾಗಿ ಕಳೆದ ಎರಡು-ಮೂರು ವರ್ಷಗಳ ಬಡ್ಜೆಟ್ಟಿನಲ್ಲೂ ಹಣ ಒದಗಿಸಲಾಗಿದ್ದಿತು. ಆದರೆ ಈ ವರ್ಷ ಆ ಹಣವನ್ನು ಬಡ್ಜೆಟ್ಟಿನಲ್ಲಿ ಒದಗಿಸಿಲ್ಲ. ಇದರಿಂದ ಆ ಮಾರ್ಕೋನಹಳ್ಳಿ ಕೆರೆ ಕೆಳಗಿನ 12 ಸಾವಿರ ಎಕರೆ ಅಚ್ಚುಕಟ್ಟಿಗೂ ನೀರು ಸರಬರಾಯಿ ಆಗಲು ಬಹಳ ತೊಂದರೆಯಾಗುತ್ತಿದೆ. ಈ ಕಷ್ಟ ನಿವಾರಣೆಗೋಸ್ಕರವಾಗಿ ಬರಲಿರುವ ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಾದರೂ ಮಾನ್ಯ ಮಂತ್ರಿಗಳು ಈ ಕೆಲಸವನ್ನು ಪೂರ್ವಭಾವಿಯಾಗಿಯೇ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

12-30 P.M.

ಇನ್ನೊಂದು ವಿಷಯ ಹೇಳಬೇಕಾಗಿದೆ. ವಿಶ್ವೇಶ್ವರಯ್ಯ ನಾಲೆಯ ಕಡೆ ಭಾಗದ ಕೆಲವು ಗ್ರಾಮಗಳು ಇವೆ. ಅವು ಮದ್ದೂರು ತಾಲ್ಲೂಕಿನ ಗ್ರಾಮಗಳು. ಆ ಗ್ರಾಮಗಳಿಗೆ ನೀರು ಒದಗದೆ ವರ್ಷೇ ವರ್ಷೇ ಬಹಳ ತೊಂದರೆಯಾಗುತ್ತಾ ಇದೆ. ಪ್ರತಿ ವರ್ಷವೂ ಅಲ್ಪ ಸ್ವಲ್ಪ ನಷ್ಟವಾಗುತ್ತಾ ಇದೆ. ಇದು ಸರಿಯಾಗಬೇಕಾದರೆ ಚಿಕ್ಕ ತೊರೆ ಎಂದು ಇದೆ ಅದರ ಹತ್ತಿರ ಒಂದು ಕಾಲುವೆ ತೆಗೆದರೆ ಮತ್ತೊಂದು ಸಾವಿರ ಎಕರೆಗೆ ಆಗುವಷ್ಟು ನೀರು ನಿಲ್ಲುತ್ತದೆ. ಅದನ್ನು ವಿಶ್ವೇಶ್ವರಯ್ಯ ನಾಲೆಯ ಕಡೆಯ ಭಾಗದ ಕೆಲವು ಜಮೀನುಗಳಿಗೆ ಉಪಯೋಗಿಸಿಕೊಳ್ಳಲು ಅವಕಾಶವಾಗುತ್ತದೆ. ಹೀಗೆ ಶಿಂಷಾವ್ಯಾಲಿಯಲ್ಲಿರತಕ್ಕ ಅನೇಕ ಪಿಕ್‌ಅಪ್ ಮತ್ತು ಕೆರೆಗಳನ್ನು ಕಟ್ಟುವುದರಿಂದ ಶಿಂಷಾ ವ್ಯಾಲಿ ಸಂಪೂರ್ಣವಾಗಿ ಅಭಿವೃದ್ಧಿ ಹೊಂದಿ ಹೆಚ್ಚು ಪ್ರಯೋಜನವಾಗುತ್ತದೆ. ಸರ್ಕಾರದವರು ಇದಕ್ಕೆ ಸೂಕ್ತವಾದ ಕಾರ್ಯ ಕ್ರಮಗಳನ್ನೆಲ್ಲಾ ಮಾಡಬೇಕೆಂದು ಹೇಳಿ ಸಲಹೆ ಮಾಡಲಿಕ್ಕೆ ಇಷ್ಟಪಡುತ್ತೇನೆ.

*ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಸ್ವಾಮಿ, ಇದುವರೆಗೂ ಈ ಡಿಮ್ಯಾಂಡಿನ ವಿಷಯವಾಗಿ ಮಾನ್ಯ ಸದಸ್ಯರು ಅನೇಕ ವಿಷಯಗಳನ್ನು ತಮ್ಮ ಗಮನಕ್ಕೆ ತಂದಿದ್ದಾರೆ. ನಾನಾದರೋ ಸುಮಾರು ನಾಲ್ಕು ವರ್ಷಗಳಿಂದೀಚೆಗೆ ಈ ಪಿ. ಡಬ್ಲ್ಯು. ಡಿ. ಇಲಾಖೆಯಲ್ಲಿ ಹೆಚ್ಚಿನ ಕೆಲಸ ನಡೆದಿದೆ, ಹೆಚ್ಚಿನ ಕೆಲಸ ನಡೆದು ಅದರಿಂದ ನಮಗೆ ಆಹಾರ ಉತ್ಪತ್ತಿಯೂ ಕೂಡ ಜಾಸ್ತಿಯಾಗಿದೆ ಎಂಬುದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಹಿಂದೆ ಈ ಮಾನ್ಯ ಸಭೆಯ ಅನೇಕ ಮಾನ್ಯ ಸದಸ್ಯರು ಆಪ್ಪಣೆ ಕೊಡಿಸಿದ್ದಾರೆ; ಏನೆಂದರೆ, ಅನೇಕ ಕಡೆ ಸರ್ವೇ ಆದಂಥಾ ಕೆಲಸ ಕಾರ್ಯಗಳು ಮತ್ತು ಮಾಡಬೇಕಾದ ಕೆಲಸ ಕಾರ್ಯಗಳು ಹತ್ತಾರು ವರ್ಷಗಳಾಗಿ ಅಂದಾಜ ತಯಾರಾಗಿದ್ದರೂ ಕೂಡ ಅವನ್ನು ಗಮನಿಸಿಲ್ಲ ಎಂದು. ಅದರಿಂದಾಗಿ ನಮ್ಮಂಥಾ ಮಾನ್ಯ ಸದಸ್ಯರು ಕೆಲವು ಹೊಸ ಕೆರೆಗಳನ್ನು ಕಟ್ಟಬೇಕೆಂಬ ತತ್ಕಾಲಿಕವಾದ ಬೇಡಿಕೆಗಳನ್ನು ಇಡತಕ್ಕ ಸನ್ನಿವೇಶಗಳೊದಗುವುದರಿಂದ ಆ ಹಿಂದಿನ ಏನು ಒಂದು ಪದ್ಧತಿ ಇದೆ ಅದನ್ನು ಸ್ವಲ್ಪ ನಿಲ್ಲಿಸುವ ಮನೋಭಾವವನ್ನು ಉಂಟು ಮಾಡಿಕೊಳ್ಳುವುದು ಒಳ್ಳೆಯದು ಎಂದು ನಾನು ತಿಳಿದುಕೊಂಡಿದ್ದೇನೆ. ಮೈಸೂರು ಸಂಸ್ಥಾನದ ಪಿ. ಡಬ್ಲ್ಯು. ಡಿ. ಇಲಾಖೆಯವರು ದಕ್ಷತೆಯಿಂದ ಕೆಲಸ ಮಾಡುತ್ತಾರೆ. ಅವರ ದಕ್ಷತೆಯಿಂದಲೇ ಪಿ. ಡಬ್ಲ್ಯು. ಡಿ. ಇಲಾಖೆಯ ಕೆಲಸ ಕಾರ್ಯಗಳು ನಡೆಯುತ್ತಾ ಇವೆ ಎಂಬುವುದನ್ನು ಮಾನ್ಯ ಸಭೆಯ ಅನೇಕ ಸದಸ್ಯರು ಮತ್ತು ನಾನೂ ಕೂಡ ಮನಂಗಂಡಿದ್ದೇನೆ.

ಟೆಂಡರ್ ವಿಲೇವಾರಿ ವಿಚಾರದಲ್ಲಿ ಶ್ರೀಮಾನ್ ಹುಚ್ಚಮಾಸ್ತಿ ಗೌಡರು ಅಪ್ಪಣೆ ಕೊಡಿಸಿದರು ಟೆಂಡರ್ ಕೊಟ್ಟಾಗ ಕವರ್ ಮೇಲೆ ಬ್ಲೇಡ್‌ನಿಂದ ಕೆರೆದು ಅಳಿಸಿದ್ದರು ಅದು ಸರ್ಕಾರಕ್ಕೆ ತಿಳಿದ ಮೇಲೆ ರೀಟೆಂಡರ್ ಕರೆದಾಗ 70 ಸಾವಿರ ರೂಪಾಯಿ ಕಮ್ಮಿ ಆಗಿ ಬಂತು ಎಂದು ಹೇಳಿದರು. ಅನೇಕ ವೇಳೆ ಕಂಟ್ರಾಕ್ಟರುಗಳೇ ಆ ರೀತಿ ಕೆರೆಯುವುದುಂಟು; ನಮ್ಮ ತಾಲ್ಲೂಕಿನಲ್ಲಿ ಆ ರೀತಿ ಆಗಿರುವುದನ್ನು ನಾನು ನೋಡಿದ್ದೇನೆ. ಶ್ರೀ ಹುಚ್ಚಮಾಸ್ತಿಗೌಡರು ಹೇಳಿದ ಶೈಲಿಯಲ್ಲಿ ನಾನು ಹೇಳುವುದಿಲ್ಲ. ನನ್ನ ಶೈಲಿಯಲ್ಲೇ ನಾನು ಹೇಳುವುದಕ್ಕೆ ಪ್ರಯತ್ನಪಡುತ್ತೇನೆ.

ಅಧ್ಯಕ್ಷರೇ, ಈಗ ಮೈನರ್, ಮತ್ತು ಮೇಜರ್ ಕೆರೆಗಳ ಜೀರ್ಣೋದ್ಧಾರದ ವಿಷಯದಲ್ಲಿ ಸರ್ಕಾರದವರು ಒದಗಿಸಿರತಕ್ಕ ಮೊಬಲಗು ಬಹಳ ಕಮ್ಮಿ. ಕೆಲಸ ಬಹಳ ಹೆಚ್ಚಿನ ಮಟ್ಟದಲ್ಲಿ ನಡೆದಿಲ್ಲ. ಇನ್ನೂ ಹೆಚ್ಚಿನ ಮಟ್ಟದಲ್ಲಿ ನಡೆಯುವಂತಾಗಲು ಹೆಚ್ಚಿನ ಮೊಬಲಗನ್ನು ಒದಗಿಸಬೇಕೆಂದು ಹೇಳಿ ಒತ್ತಾಯ ಪಡಿಸುತ್ತೇನೆ. ಮಾಗಡಿ ತಾಲ್ಲೂಕಿನಲ್ಲಿ ಕೆಲವು ಕೆಲಸಗಳು ಅಗತ್ಯವಾಗಿ ಆಗಬೇಕಾಗಿವೆ. ಮಾಗಡಿ ತಾಲ್ಲೂಕು ಬಹಳ ಬೆಟ್ಟ ಮತ್ತು, ಗುಡ್ಡಗಳಿಂದ ಕೂಡಿದ

ತಾಲ್ಲೂಕು. ಹೆಚ್ಚಿನ ನಾಲೆಗಳಾಗಲೀ ಹೆಚ್ಚಿನ ಕಾಲುವೆಗಳಾಗಲೀ, ಹೆಚ್ಚಿನ ಜಲಾಶಯಗಳಾಗಲೀ ಅಲ್ಲಿ ಇಲ್ಲ ಎಂಬುದು ಸರ್ಕಾರದವರಿಗೂ ಮಾನ್ಯಸಭೆಗೂ ಗೊತ್ತಿರತಕ್ಕ ವಿಷಯ ಕೆಲವು ಪಿಕ್‌ಅಪ್‌ಗಳನ್ನು ಹಾಕುವುದರ ಮೂಲಕ, ಕೆರೆಗಳನ್ನು ಜೀರ್ಣೋದ್ಧಾರ ಮಾಡುವುದರ ಮೂಲಕ ಈ ಮಾಗಡಿ ತಾಲ್ಲೂಕಿನಲ್ಲಿ ಕೆಲವು ಅನುಕೂಲಗಳನ್ನು ಮಾಡುವುದಕ್ಕೆ ಅವಕಾಶವಿದೆ.

ನನ್ನ ತಾಲ್ಲೂಕಿಗೆ ಸಂಬಂಧಪಟ್ಟಂತೆ, ಹೊಸಕೆರೆ ವಿಷಯದಲ್ಲಿ ಒಂದು ಎಸ್ಟಿಮೇಟ್ ಕೂಡ ಆಗಿದೆ. ಮೋಟಗಾನಹಳ್ಳಿಯ ಹತ್ತಿರ ಹರಿಯುವ ಹಳ್ಳಕ್ಕೆ ಸಿದ್ದೇಶ್ವರಸ್ವಾಮಿ ದೇವಸ್ಥಾನದ ಹತ್ತಿರ ಒಂದು ಪಿಕ್-ಅಫ್ ಹಾಕಬೇಕೆಂದು ಹೇಳುತ್ತೇನೆ. ಇದಲ್ಲದೆ, ಮಾಗಡಿ ತಾಲ್ಲೂಕಿನ ಇನ್ನೂ ಅನೇಕ ಕೆರೆಗಳು ಜೀರ್ಣೋದ್ಧಾರವಾಗಬೇಕಾಗಿವೆ. ಆ ತಾಲ್ಲೂಕಿನಲ್ಲಿರುವ 24 ಮೇಜರ್ ಮತ್ತು 224 ಮೈನರ್ ಕೆರೆಗಳ ಪೈಕಿ ಕೇವಲ 100 ಕೆರೆಗಳು ಜೀರ್ಣೋದ್ಧಾರವಾಗಿ ಇನ್ನೂ 124 ಕೆರೆಗಳು ಹಾಗೆಯೇ ಇವೆ. ಕೆಲವು ಮಾನ್ಯಸ್ನೇಹಿತರು ಡಿ-ಸಿಲ್ಟ್ ಮಾಡಿಸಬೇಕೆಂದು ಸಲಹೆ ಮಾಡಿದರು. ಬೆಂಗಳೂರು ಡಿಸ್ಟ್ರಿಕ್ಟಿನ ದಾಸರಹಳ್ಳಿಯ ಹತ್ತಿರ ಡಿ-ಸಿಲ್ಟ್‌ಮಾಡಿ ಎಷ್ಟು ಅನರ್ಥವಾಯಿತು, ಎಷ್ಟು ಹಣ ಖರ್ಚಾಯಿತೆಂದು ನೋಡಿ. ಸರಿಯಾಗಿ ನೋಡಿದಲ್ಲಿ, ಡಿಸಿಲ್ಟ್ ಮಾಡುವುದಕ್ಕೆ ತಗಲುವ ಹಣದಲ್ಲಿ ಒಂದು ಹೊಸಕೆರೆಯನ್ನೇ ಕಟ್ಟಿಸಬಹುದು. ಸರ್ಕಾರದವರು ಇದನ್ನು ಗಮನಿಸಬೇಕು.

ಆಮೇಲೆ, ಮಾನ್ಯ ನಾಗಯ್ಯರೆಡ್ಡಿಯವರು ಮಾತನಾಡುತ್ತಾ ಒಂದು ವಿಷಯವನ್ನು ಅಪ್ಪಣೆ ಕೊಡಿಸಿದರು. ಸರ್ಕಾರದವರು ಸರಿಯಾಗಿ ಕೆಲಸ ನಡೆಸುತ್ತಿಲ್ಲವೆಂದು ಆಕ್ಷೇಪಿಸಿದರು. ಆದರೆ ವಾಸ್ತವವಾಗಿ ನೋಡಿದರೆ ಕೋಲಾರ ಜಿಲ್ಲೆಯಲ್ಲಿ ಹೆಚ್ಚಿನಮಟ್ಟದ ನೀರಾವರೀ ಕಾಮಗಾರಿಗಳು ನಡೆದಿವೆ. ಈಗ ಸುಮಾರು ಎಂಟು ವರ್ಷಗಳಿಂದ ಸಂಸ್ಥಾನದ ಎಲ್ಲಾ ಡಿಸ್ಟ್ರಿಕ್ಟ್‌ಗಳಿಗೂ ಖರ್ಚು ಮಾಡಿರುವ ಹಣವನ್ನು ನೋಡಿದರೆ, ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಕೆಲಸ ನಡೆದಿದೆಯೆಂದು ಗೊತ್ತಾಗುತ್ತದೆ. ಆದರೂ ಆ ಡಿಸ್ಟ್ರಿಕ್ಟಿನಲ್ಲಿ ಇನ್ನೂ ಮಾಡತಕ್ಕ ಕೆಲಸ ಉಳಿದಿದೆಯೆಂಬುದೇನೋ ವಾಸ್ತವಾಂಶ. ಮಾನ್ಯ ಶ್ರೀ ನಾಗಯ್ಯರೆಡ್ಡಿಯವರು ಬಹಳ ಪ್ರಾಮುಖ್ಯವಾದ ಸ್ಥಾನಗಳಲ್ಲಿ ಕೆಲಸ ಮಾಡಿದವರು; ಅವರಿಗೆ ದೇಶದ ಆಗುಹೋಗುಗಳೆಲ್ಲವೂ ಗೊತ್ತು. ಅಂಥವರಿಗೆ ಯಾವ ಯಾವ ಭಾಗಗಳಲ್ಲಿ ಎಷ್ಟೆಷ್ಟು ಕೆಲಸವಾಗಬೇಕಾಗಿದೆಯೆಂಬುದು ತಿಳಿದೇ ಇದೆ. ಇಷ್ಟು ಮಾತ್ರ ಅವರು ಮಾಡಿದ ಆರೋಪಣೆಯ ವಿಷಯವಾಗಿ ಹೇಳಿ, ನಾನು ನಮ್ಮ ಮಾಗಡಿ ತಾಲ್ಲೂಕಿನಲ್ಲಿ ಆಗಬೇಕಾದ ಕೆಲಸಗಳ ಕಡೆಗೆ ತಮ್ಮ ಗಮನವನ್ನು ಸೆಳೆಯಬಯಸುತ್ತೇನೆ. ಅನೇಕವಾಗಿ ಜೀರ್ಣೋದ್ಧಾರ ಮಾಡಬೇಕಾದ, ಪಿಕ್ ಅಪ್ ವರ್ಕ್‌ಗಳನ್ನು ಕೈಕೊಳ್ಳಬೇಕಾದ ಕೆಲಸವು ಉಳಿದಿವೆ. ಶ್ರೀಮಾನ್ ಮರಿಯಪ್ಪನವರು ಮಂತ್ರಿಗಳಾಗಿದ್ದಾಗ ಪದೇ ಪದೇ ನಮ್ಮ ತಾಲ್ಲೂಕಿಗೆ ಗಮನ ಕೊಟ್ಟು ಸಹಾಯ ಮಾಡಿದ್ದಾರೆ. ಅವರಿಗೆ ನಮ್ಮ ತಾಲ್ಲೂಕಿನ ಪರವಾಗಿ ನಾನು ಕೃತಜ್ಞತೆಗಳನ್ನು ಅರ್ಪಿಸಬೇಕಾಗಿದೆ. ಏಕೆಂದರೆ ಬಹಳ ಕಷ್ಟದೆಶೆಯಲ್ಲಿದ್ದಾಗ, ಒಂದು ಸೇರು ಅಕ್ಕಿ ಬೇಕಾಗಿದ್ದರೆ ಮನೆಯಲ್ಲಿರುವ ಒಡವೆಗಳನ್ನು ಗಿರವಿಯಿಟ್ಟು ತರುವ ದುರ್ದೆಶೆಯಲ್ಲಿದ್ದಾಗ ಆಗ್ಗೆ ಮಂತ್ರಿಗಳಾದ ಶ್ರೀಮಾನ್ ಮರಿಯಪ್ಪನವರು ಮಾಗಡಿ ತಾಲ್ಲೂಕಿಗೆ ಬಂದು ಈಗ ವಿಧಾನ ಸೌಧದ ಕಟ್ಟಡದ ಮುಂದೆ ಕೆಲಸ ಮಾಡುತ್ತಿರುವ ಅಮೋಘವಾದ ಯಂತ್ರಗಳನ್ನು ಕಳುಹಿಸಿಕೊಟ್ಟು ಬಹಳ ಸಹಾಯ ಮಾಡಿದ್ದಾರೆ. ಅಂಥ ಸಹಾಯ ಮಾಡಿದವರನ್ನು ಕೃತಜ್ಞತೆಯಿಂದ ಸ್ಮರಿಸಿಕೊಳ್ಳುವುದು ನಮ್ಮ ಕರ್ತವ್ಯ. ಉಳಿದಿರುವ ಇನ್ನೂ ಅನೇಕ ಕೆಲಸಗಳನ್ನೂ ಈ ಇಲಾಖೆಯವರು ದಕ್ಷತೆಯಿಂದ ಮಾಡುತ್ತಾರೆಂದು ನಂಬಿದ್ದೇನೆ. ದಕ್ಷತೆಯಿಂದ ಮಾಡಲೆಂದು ಹೇಳಿದ ಮಾತ್ರಕ್ಕೆ ಈಗ ದಕ್ಷತೆಯಿಂದ ಕೆಲಸ ಮಾಡುತ್ತಿಲ್ಲವೆಂದು ನನ್ನ ಭಾವನೆಯಲ್ಲ, ಮೈಸೂರು ಸಂಸ್ಥಾನದ ಎಂಜಿನಿಯರುಗಳು ದಕ್ಷರೆಂದು ಇತರೇ ಸಂಸ್ಥಾನಗಳವರು ನಮ್ಮವರನ್ನು ಕರೆದುಕೊಂಡು ಹೋಗುತ್ತಿರುವಾಗ ನಮ್ಮಲ್ಲಿ ದಕ್ಷತೆಯಿಲ್ಲವೆಂದರೆ ನಾನು ಒಪ್ಪುವುದಿಲ್ಲ. ದಕ್ಷತೆಯಿಲ್ಲದವರು ಎಲ್ಲಿಯೋ 15-20 ಜನರಿರಬಹುದು. ಎಂದ ಮಾತ್ರಕ್ಕೆ ಸಾರ್ವತ್ರಿಕವಾಗಿ ಇಲಾಖೆಯವರೆಲ್ಲರೂ ದಕ್ಷತೆಯಿಲ್ಲದವರೆಂದು ಹೇಳುವುದು ಸರಿಯಲ್ಲ. ಆದ್ದರಿಂದ ನಾನು ಹೇಳಿದ ನಾಲ್ಕಾರು ಕೆಲಸಗಳನ್ನು ಆದಷ್ಟು ಬೇಗ ಮಾಡಿಸಿಕೊಡಬೇಕೆಂದು ಹೇಳಿ ಮುಗಿಸುತ್ತೇನೆ.

*ಶ್ರೀ ಬಿ. ರಾಚಯ್ಯ (ಎಳಂದೂರು—ಅನುಸೂಚಿತ ಜಾತಿಗಳು).— ಈ ಡಿಮ್ಯಾಂಡ್ ಮನವಿ ಸಂಬಂಧದಲ್ಲಿ ನನ್ನ ಕ್ಷೇತ್ರದಲ್ಲಿ ಆಗಬೇಕಾಗಿರತಕ್ಕ ನೀರಾವರಿ ಕೆಲಸ ಕಾರ್ಯಗಳನ್ನು ಈ ಮಾನ್ಯ ಸಭೆಯ ಗಮನಕ್ಕೆ ತರಬೇಕು ಎಂದು ಇಚ್ಛಿಸುತ್ತೇನೆ. ಚಾಮರಾಜನಗರದಲ್ಲಿ ಸುವರ್ಣಾವತಿ ಎಂಬ ನದಿಯು ಹರಿಯುವುದು ಎಲ್ಲರಿಗೂ ಗೊತ್ತಿದೆ. ಅದು ಸುಮಾರು 40 ಮೈಲಿ ಉದ್ದದಲ್ಲಿ 30 ಮೈಲಿ ಉದ್ದ ನಮ್ಮ ಸಂಸ್ಥಾನದಲ್ಲಿ ಇನ್ನು 10 ಮೈಲಿ, ಬೇರೆ ಪ್ರಾಂತ್ಯದಲ್ಲಿ ಅಂದರೆ ಮದರಾಸ್ ಪ್ರಾಂತದಲ್ಲಿ ಹರಿಯುತ್ತದೆ. ಚಿಕ್ಕಹೊಳೆ, ದೊಡ್ಡಹೊಳೆ, ಸೇರಿ ಸುವರ್ಣಾವತಿ ನದಿಯಾಗಿದೆ. ಚಿಕ್ಕಹೊಳೆಗೆ ಸೇತುವೆ ಕಟ್ಟಬೇಕೆಂದು ಎರಡನೆ ಪಾಂಚವಾರ್ಷಿಕ ಯೋಜನೆಯಲ್ಲಿ ಅಂದಾಜು ತಯಾರುಮಾಡಿ, ಈ ವರ್ಷ ಬಡ್ಜೆಟ್ಟಿನಲ್ಲಿ ಕೂಡ, ಹಣವನ್ನು ಸರಕಾರದವರು ಒದಗಿಸಿದ್ದಾರೆ, ಅದಕ್ಕಾಗಿ ಸರಕಾರಕ್ಕೆ ಕೃತಜ್ಞರಾಗಿದ್ದೇವೆ, ಆದರೆ ನನ್ನಲ್ಲಿ ಶಂಕೆ ಇದೆ. ಸತ್ಯಮಂಗಲ—ಚಾಮರಾಜನಗರ ರೈಲ್ವೆ ಲೈನನ್ನು ಮೊದಲನೆ ಪಾಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿರುವುದನ್ನು ಎರಡನೇ ಪಾಂಚವಾರ್ಷಿಕ ಯೋಜನೆಯಲ್ಲಿ ಕೈಬಿಟ್ಟಿದ್ದಾರೆ. ಹಾಗೆಯೇ ಅದರಗತಿ ಇದಕ್ಕೆ ಬಾರದೆ ಇರಲಿ. ವರ್ಷವೇ ಇದನ್ನು ಕಾರ್ಯರೂಪಕ್ಕೆ ತರಬೇಕು ಎಂದು ಬಯಸುತ್ತೇನೆ. ಸುವರ್ಣಾವತಿಯಲ್ಲಿ ಬ್ರ್ಯಾಂಚ್ ಚಾನಲ್ಸ್ ಏಳು ಇವೆ. ಅದಕ್ಕೆ ಸಂಬಂಧಪಟ್ಟ 3 ಕೆರೆಗಳಿವೆ. ಒಟ್ಟು ಸುವರ್ಣಾವತಿ ನದಿಯಿಂದ ಆಸರೆ ಇರತಕ್ಕ ಕೆರೆಗಳು ಮತ್ತು ನಾಲೆಗಳ ಕೆಳಗೆ 13 ಸಾವಿರ ಎಕರೆ ಇದೆ. ಚಿಕ್ಕಹೊಳೆ ಪ್ರಾಜೆಕ್ಟ್ ಮಾಡುವುದರಿಂದ ಎರಡು ಸಾವಿರ ಎಕರೆ ಹೆಚ್ಚಿಗೆ ಸಾಗುವಳಿ ಮಾಡಿದ ಹಾಗಾಗುತ್ತದೆ. ಆದಷ್ಟು ಬೇಗ ಇದರ ಕೆಲಸವನ್ನು ಪ್ರಾರಂಭ ಮಾಡಬೇಕು ಎಂದು ಹೇಳುತ್ತೇನೆ. ಬ್ರಾಂಚ್ ಚಾನಲ್‌ಗಳಿಗೆ ನಾಲೆಗಳನ್ನು ತೆಗೆಸಬೇಕೆಂದು ಪ್ರತಿಸಾರಿಯೂ ಸರ್ಕಾರದವರಿಗೆ ಮನವಿ ಮಾಡಿರುತ್ತೇನೆ. ಇದರಮೇಲೆ ಅಂದಾಜು ತಯಾರುಮಾಡಿ ಸರ್ಕಾರಕ್ಕೆ ಬಂದಿದೆ. ಒಂದು ಅಂದಾಜನ್ನು ಬಡ್ಜೆಟ್ಟಿನಲ್ಲಿ ಸೇರಿಸಿದ್ದಾರೆ. ಇನ್ನೂ ಆರು ಅಂದಾಜುಗಳಿವೆ. ಪ್ರತಿಯೊಂದು ಬ್ರಷ್‌ವುಡ್ ನಾಲೆಗಳಿಗೆ 12-13 ಸಾವಿರ ರೂಪಾಯಿಗಳ ಖರ್ಚು ಅಂದಾಜು ಆಗಿದೆ. ಅವೆಲ್ಲವನ್ನೂ ಮಾಡಿಸಿಕೊಡಬೇಕು ಎಂದು ಸರಕಾರದವರನ್ನು ಕೇಳಿ ಕೊಳ್ಳುತ್ತೇನೆ. ಯಳಂದೂರು ಜಹಗೀರು ತಾಲ್ಲೂಕ್ ಎಂಬುದು ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಿದೆ. ಜಹಗೀರು ತಾಲ್ಲೂಕಿನಲ್ಲಿ ಕೆರೆಗಳನ್ನೂ, ನಾಲೆಗಳನ್ನು ರಿಪೇರಿ ಮಾಡಬೇಕಾಗಿದ್ದರೆ ಅವುಗಳನ್ನು ಜಹಗೀರಿ ಫಂಡಿನಿಂದ ಮಾಡಬೇಕು. ಸರ

(ಶ್ರೀ ಬಿ. ರಾಚಯ್ಯ)

ಕಾರದವರು ಯಾವರೀತಿಯಲ್ಲೂ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿದರು. ಆದಾಗ್ಯೂ ಕೂಡ ಕಳೆದವರ್ಷ ಜಹಗೀರು ಒಂದು ಸಬ್‌ಡಿವಿಜನ್ ತೆಗೆದು ಅದಕ್ಕಾಗಿ 3 ವರ್ಷಗಳಿಂದ ಅಂದಾಜು ತಯಾರು ಮಾಡಿದ್ದಾರೆ. ಸುಮಾರು 10 ಲಕ್ಷ ರೂಪಾಯಿಗಳು ಅಂದಾಜು ಆಗಿದೆ. ಅಂದಾಜನ್ನು ಮಂಜೂರು ಮಾಡುತ್ತೇವೆ ಎಂದು ಇಲ್ಲಿ ಎರಡು ಸಾರಿ ಮಂತ್ರಿಗಳು ಭರವಸೆ ಕೊಟ್ಟಿದ್ದಾರೆ. ಅದರಮೇಲೆ ಒಂದು ಲಕ್ಷ ರೂಪಾಯಿಗಳನ್ನು ಕಳೆದ ವರ್ಷ ಈ ಕೆರೆಗಳ ರಿಪೇರಿಗಾಗಿ, ನಾಲೆಗಳ ರಿಪೇರಿಗಾಗಿ ಕೊಟ್ಟಿದ್ದಾರೆ. ಈಗ ಜಹಗೀರು ಫಂಡಿನಲ್ಲಿ ದುಡ್ಡು ಇಲ್ಲದೆ, ಕೆಲಸಗಳನ್ನು ನಿಲ್ಲಿಸಿದ್ದಾರೆ, ಸಬ್ ಡಿವಿಜನ್ ತೆಗೆದು ಹಾಕುತ್ತೇವೆ ಎಂದು ಹೇಳಿದ್ದಾರೆ. ಮೊದಲು ಸರ್ಕಾರದವರು ಮೂರು ವರ್ಷಗಳಲ್ಲಿ ಎಲ್ಲಾ ಕೆರೆಗಳನ್ನೂ ಮತ್ತು ನಾಲೆಗಳನ್ನೂ ಜಹಗೀರು ಫಂಡಿನಿಂದಾಗಲಿ, ಸರಕಾರದ ಫಂಡಿನಿಂದಾಗಲಿ ರಿಪೇರಿ ಮಾಡಿಕೊಡುತ್ತೇವೆ ಎಂದು ಹೇಳಿದ್ದರು. ಜಹಗೀರುದಾರರು ಏನು ಕರ್ತವ್ಯಮಾಡಬೇಕೋ ಅದನ್ನು ಮಾಡದೇ ಇರುವ ಪ್ರಯುಕ್ತ, ಜಹಗೀರು ಫಂಡಿನಿಂದ ಹೆಚ್ಚಿಗೆ ದುಡ್ಡನ್ನು ತಮ್ಮ ಸ್ವಂತ ಉಪಯೋಗಕ್ಕೆ ಉಪಯೋಗಿಸಿಕೊಳ್ಳಲು ಅವಕಾಶವಾಯಿತು. ಮಾನ್ಯ ಮಿತ್ರರಾದ ಶ್ರೀ ಮರಿಯಪ್ಪನವರು ಮಂತ್ರಿಗಳಾಗಿದ್ದ ಕಾಲದಲ್ಲಿ ಈ ತಾಲ್ಲೂಕಿನಮೇಲೆ ಅವರ ಕಣ್ಣು ಬಿದ್ದು ಇಲ್ಲಿನ ಕೆರೆಗಳ ಜೀರ್ಣೋದ್ಧಾರ ಮತ್ತು ನಾಲೆಗಳನ್ನು ತೆಗೆಸುವ ಕೆಲಸವನ್ನು ಮಾಡಲು ಹೆಚ್ಚು ಆಹಾರ ಬೆಳೆ ಬೆಳೆಯುವ ಸ್ಕೀಮಿನಿಂದ ಹಣವನ್ನು ಕೊಟ್ಟಿದ್ದರಿಂದ ಆ ಜಹಗೀರು ತಾಲ್ಲೂಕಿನಲ್ಲಿ ಕೆರೆಗಳಿವೆ, ನಾಲೆಗಳಿವೆ ಎಂಬುದು ಸರ್ಕಾರದ ಗಮನಕ್ಕೆ ಬಂತು. ಇದಕ್ಕಾಗಿ ಶ್ರೀ ಮರಿಯಪ್ಪನವರಿಗೆ ಈ ತಾಲ್ಲೂಕಿನ ಪರವಾಗಿ ವಂದನೆಗಳನ್ನು ಸಲ್ಲಿಸಬೇಕಾಗಿದೆ, 10 ಲಕ್ಷದ ಸ್ಕೀಮಿಗೆ ಈ ವರ್ಷ ಏನು ಹಣವನ್ನೂ ಬಡ್ಜೆಟ್ಟಿನಲ್ಲಿ ಒದಗಿಸಿಲ್ಲ. ಈ ಡಿವಿಜನ್ ಕೂಡ ತೆಗೆದು ಬಿಟ್ಟಿದ್ದಾರೆ ಎಂಬ ವಿಷಯ ಮೊನ್ನೆ ತಾನೇ ತಿಳಿದು ಬಂತು. ಸರಕಾರದವರು ಜಹಗೀರು ರದ್ದು ಆಗುವವರೆಗೆ ಕೂಡ, ನಾಲೆ ರಿಪೇರಿ ಆಗ ಕೂಡದೆಂದು ಮನಸ್ಸು ಮಾಡಿದರೆ ಅಲ್ಲಿಗೆ ರೈತರು ಅನ್ನವಿಲ್ಲದೆ ಕಷ್ಟಪಡಬೇಕಾಗುತ್ತದೆ. ಈ ದೃಷ್ಟಿಯಿಂದ ಸರಕಾರದವರು, ಜಹಗೀರುದಾರರು ಇನ್ನು ಮುಂದೆ ಆ ಫಂಡಿನಿಂದ ಡ್ರಾ ಮಾಡದೇ ಇರುವಹಾಗೆ ಒಂದು ಆರ್ಡರನ್ನು ಮಾಡಬೇಕು. ಸರ್ಕಾರದವರು ಸಾಲಕೊಟ್ಟು ಈ ಕೆಲಸಕಾರ್ಯಗಳನ್ನು ನಡೆಸಿಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಶಿವನಂಜೇಗೌಡ (ಮೈಸೂರು ತಾಲ್ಲೂಕು).--ಸ್ವಾಮಿ, ಈ ಖೋತಾ ಸೂಚನೆಯಮೇಲೆ ಎರಡು ಮಾತುಗಳನ್ನು ಹೇಳಲು ಮನಸ್ಸು ಮಾಡಿದ್ದೇನೆ. ನಮ್ಮ ಮೈಸೂರು ತಾಲ್ಲೂಕಿನಲ್ಲಿ ಎಣ್ಣೆಹೊಳೆ ಅಣೆಕಟ್ಟುವ ವಿಚಾರದಲ್ಲಿ ಬಹಳ ಹಿಂದಿನ ಸರ್ಕಾರ ಒಂದು ಅಂದಾಜು ಮಾಡಿ ಅದು ಅಲ್ಲಿಗೇ ನಿಂತು ಹೋಯಿತು. ಈಚೆಗೆ ನಾವು ಚುನಾಯಿತರಾಗಿಬಂದಾಗಿನಿಂದಲೂ ಈ ಅಣೆಕಟ್ಟು ಕಟ್ಟಿಸಬೇಕೆಂದು ಪ್ರಯತ್ನ ಪಡುತ್ತಿದ್ದೇನೆ. ನನ್ನ ಪ್ರಯತ್ನ ಎಂಥಾದ್ದು ಎಂದರೆ, ಕಟ್ಟಬೇಕೆಂದು ಹೇಳುವುದಷ್ಟೇ ಅಲ್ಲ ಆ ಸ್ಥಳದ ಇಂಜಿನಿಯರಿಂದ ಹಿಡಿದು ಚೀಫ್ ಇಂಜಿನಿಯರವರೆಗೆ ತಿಂಗಳಿಗೊಂದು ಸಾರಿ ಎರಡು ತಿಂಗಳಿಗೊಂದು ಸಾರಿ ಹೇಳುತ್ತಾ ಬಂದಿದ್ದೇನೆ. ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಮಾಡುತ್ತೇವೆಂದು ಹೇಳಿದರು. ಅಂದಾಜು ತಯಾರಾಗಿ, ಹೋದ ವರ್ಷ 20 ಸಾವಿರ ರೂಪಾಯಿ ಇದಕ್ಕೆ ಕೊಡಬೇಕೆಂದಿತ್ತು, ಆದರೆ ಅಂದಾಜು ಮಂಜೂರಾಗಿರಲಿಲ್ಲ. ಆಮೇಲೆ ಚೀಫ್ ಇಂಜಿನಿಯರಲ್ಲಿ ಹೋಗಿ ಹೇಳಿಕೊಂಡೆ. ಆ ಪ್ರದೇಶದಲ್ಲಿ ಮಳೆ ಬೆಳೆಯಿಲ್ಲದೆ ಆ ಹೋಬಳಿಯ ಜನಕ್ಕೆ ಅನ್ನವಿಲ್ಲ, ಹಿಟ್ಟಿಲ್ಲ, ಅಂಬಲಿಕೂಡ ಇಲ್ಲವಾಗಿದೆ ಎಂದು ಹೇಳಿದೆ. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಖಂಡಿತ ಮಾಡುತ್ತೇವೆಂದು ಹೇಳಿದರು. ಈ ವರ್ಷ ಸಂಬಂಧಪಟ್ಟ ಮಂತ್ರಿಗಳನ್ನು ಸ್ಥಳಕ್ಕೆ ಕರೆದುಕೊಂಡು ಹೋಗಿ ತೋರಿಸಿ ತಕ್ಷಣ ತೆಗೆದುಕೊಳ್ಳಬೇಕೆಂದು ಕೇಳಿಕೊಂಡದ್ದಾಯಿತು, ಅವರೂ ಒಪ್ಪಿದರು. ಈಗ ಏನಾಗಿದೆಯೆಂದರೆ, ಆ ಅಂದಾಜು ಮೈಸೂರಿನಿಂದ ಬೆಂಗಳೂರಿಗೆ ಬರುತ್ತದೆ ಮತ್ತೆ ಏನೋ ಅಬ್‌ಜೆಕ್ಷನ್ ಆಗಿ ಹಿಂದಕ್ಕೆ ಹೋಗುತ್ತದೆ. ಅಸೆಂಬ್ಲಿ ಸಭೆಯ ಈ ಅಧಿವೇಶನದ ಕಾಲಕ್ಕೆ ಆಗಬಹುದೆಂದು ಸುಮ್ಮನೆ ಇದ್ದೆ. ಚೀಫ್ ಇಂಜಿನಿಯರು ಮಾಡಿಸುತ್ತೇವೆಂದು ಹೇಳಿದರು, ಸುಮ್ಮನೆ ಇದ್ದೆ. ಮೈಸೂರಿನಲ್ಲಿ ಅಸೆಂಬ್ಲಿ ನಡೆಯುತ್ತಿದ್ದಾಗ ನೋಡಿದೆ, ಆಗ ಅದು ಎಗ್ಸಿಕ್ಯೂಟಿವ್ ಇಂಜಿನಿಯರ ಕಚೇರಿಯಲ್ಲಿತ್ತು. ಏನೋ ಟೆಕ್ನಿಕಲ್ ಅಬ್‌ಜೆಕ್ಷನ್ ಆಗಿ ಬಂದಿದೆ ಎಂದು ಹೇಳಿದರು. ಪುನಃ ಚೀಫ್ ಇಂಜಿನಿಯರ ಕಚೇರಿಗೆ ಹೋಗಿವೆ, ಈಗ ಸಂಬಂಧಪಟ್ಟ ಮಂತ್ರಿಗಳಿಗೆ ಹೇಳಿದ್ದೇನೆ, ನೋಡೋಣ. ಅಂದಾಜು ತಯಾರು ಮಾಡಿ ಅದನ್ನು ಮುಂಜೂರಾತಿಗೆ ಸರ್ಕಾರಕ್ಕೆ ಕಳುಹಿಸಲು ಮೂರು ವರ್ಷ ಆಗ ಬೇಕೆ ? ಇನ್ನೂ ಸರ್ಕಾರಕ್ಕೆ ಕಳುಹಿಸಿಲ್ಲ. ಪ್ರಜಾಪ್ರಭುತ್ವಯುಗದಲ್ಲಿ ಈಗಿರತಕ್ಕ ಮಂತ್ರಿಗಳಿಗೂ ಸದಸ್ಯರಿಗೂ, ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೂ ಹೊಂದಾಣಿಕೆ ಇರಬೇಡವೆ ! ಹಿಂದೆ ಸರಿಯಾಗಿರಲಿಲ್ಲ ; ಈಗ ಒಳ್ಳೆಯ ಸರ್ಕಾರ, ಜನಗಳ ಸರ್ಕಾರ ಬಂತು, ಪ್ರಜಾಪ್ರತಿನಿಧಿಗಳು ಹೇಳಿದರೆ ಕೆಲಸಗಳು ತಕ್ಷಣ ಆಗುತ್ತವೆ ಎಂದ ಹೇಳುವ ಕಾಲದಲ್ಲಿ ಹೀಗೆ ಮಾಡಿದರೆ ಜನ ಏನೆಂದು ಕೊಳ್ಳುತ್ತಾರೆ ? ನನಗೆ ಓಟು ಕೊಟ್ಟು ಕಳುಹಿಸಿರುವ ಲಕ್ಷಾಂತರ 'ಜನ ಇವನಿಗೆ ಓಟು ಕೊಟ್ಟು ಚುನಾಯಿಸಿ ಕಳುಹಿಸಿದೆವು, ಇವನೇನು ಹೋಗಿ ಮಂಟ್ಯಾಕಿದ್ದ, ನಾಳೆ ಇವನು ಚುನಾವಣೆಗೆ ನಿಂತರೆ ಇವನಿಗೆ ಓಟು ಕೊಡುವುದು ಬೇಡ, ಇನ್ನೊಬ್ಬನಿಗೆ ಕೊಡಬೇಕು' ಎಂದು ಹೇಳುತ್ತಾರೆ. ಪ್ರಜಾ ಪ್ರಭುತ್ವದಲ್ಲಿ ಹೀಗಾಗಬಹುದೆ ? ಮಂತ್ರಿಗಳನ್ನಾಗಲಿ ' ಚೀಫ್ ಇಂಜನಿಯರನ್ನಾಗಲೀ ನಾವು ನೋಡದೆ, ಈ ವಿಷಯ ಕೇಳದೇ ಇದ್ದಿದ್ದರೆ ಆಗ ನಮ್ಮ ತಪ್ಪೆಂದು ಹೇಳಬಹುದು. ಯಾರೋ ಹೇಳುತ್ತಿದ್ದರು ' ಈ ಗೌಡರು ಸುಮ್ಮನೆ ಕೂಗಾಡುತ್ತಾರೆ, ಇವರಿಗೆ ಕೆಲಸ ಮಾಡಿಸಿಕೊಳ್ಳುವುದಕ್ಕೆ ಗೊತ್ತಿಲ್ಲ' ಎಂದು ಹೇಳುತ್ತಿದ್ದರು. ಇದಕ್ಕೇನು ಮಾಡುವುದು ? ಚೀಫ್ ಇಂಜಿನಿಯರು, ಎಗ್ಸಿಕ್ಯೂಟಿವ್ ಇಂಜಿನಿಯರು, ಮಿನಿಸ್ಟರು ಎಲ್ಲರಿಗೂ ಹೇಳುತ್ತಿರುತ್ತೇನೆ ಮಂತ್ರಿಗಳಿಗೆ ಮೂರು ದಿನಕ್ಕೊಂದು ಸಾರಿ ಹೇಳುತ್ತೇನೆ ಇಷ್ಟಾದರೂ ಕೆಲಸ ಆಗದೇ ಹೋದರೆ ಇನ್ನೇನು ಮಾಡುವುದು ? ಹೋದ ವರ್ಷ ಈ ವರ್ಷ ಇಪ್ಪತ್ತು ಸಾವಿರ ಖರ್ಚು ಮಾಡುತ್ತೇವೆಂದರು, ಮಾಡಲಿಲ್ಲ. ಆಗಿಹೋಯಿತು ಇದರ ಗತಿ ! ಈಗ ಅಂದಾಜು ಮಂಜೂರಾಗಲಿ ಮಾಡುತ್ತೇವೆಂದು ಹೇಳುತ್ತಾರೆ, ನೋಡೋಣ ಏನು ಮಾಡುತ್ತಾರೋ. ಒಡೆಯನ ಕಟ್ಟೆಯ ವಿಷಯವೂ ಹೀಗಾಗಿದೆ. ಈ ವರ್ಷವೇ ಪೂರೈಸದೆ ಇದ್ದರೆ ಬಹಳ ಕಷ್ಟಕ್ಕೆ ಈಡಾಗುತ್ತಾರೆ. ಸಾವಿರಾರು ಎಕರೆಗಳು ಅಚ್ಚುಕಟ್ಟಾಗುವುದರಿಂದ ಜನರಿಗೆ ಸಹಾಯವಾಗುತ್ತದೆ. ಆದುದರಿಂದ ಇದನ್ನು ಮಾಡಿಕೊಡಬೇಕು ಎಂದು ಹೇಳುತ್ತಿದ್ದೇನೆ.

ಇನ್ನೊಂದು ವಿಚಾರವೇನೆಂದರೆ ಇದೇ ತಾಲ್ಲೂಕಿಗೆ ಸಂಬಂಧಪಟ್ಟಂತೆ ಮತ್ತೂರು, ಕಲ್ಲಹಳ್ಳಿ ಗ್ರಾಮಗಳಿವೆ. ಇದು ಒಂದು ಕೊನೆಯ ಬಾರ್ಡರ್‌ನಲ್ಲಿದೆ. ಅಲ್ಲಿ ಜನರಿಗೆ ಜೀವನಕ್ಕೆ ಮಾರ್ಗವಿಲ್ಲ. ಅದರ ಬಳಿ ಬಡವಿನ ಕಟ್ಟೆ ಕೆಲಸಕ್ಕೆ ಎರಡು ಲಕ್ಷ ರೂಪಾಯಿ ಅಂದಾಜು ತಯಾರಾಗಿದೆ. ಈ ವಿಷಯವಾಗಿ ಹೋದ ಸಾರಿ ಒಂದು ಪ್ರಶ್ನೆ ಸಹ ಕೇಳಿದ್ದೆ. ಅಲ್ಲಿಗೆ ಒಬ್ಬ ಇಂಜಿನಿಯರು ಬಂದಿದ್ದಾರೆ. ಅವರಿಗೆ ಮತ್ತೂರು ಕಲ್ಲಹಳ್ಳಿ ಎನ್ನುವುದೇ ಗೊತ್ತಿಲ್ಲ. ಕೆರೆ ಕಟ್ಟಲು ಅಂದಾಜಾಗಿದೆ; ಅವರಿಗೆ ರಿಕಾರ್ಡುಗಳೇ ಸಿಕ್ಕುತ್ತಿಲ್ಲ. ನನ್ನ ಹತ್ತಿರ ಬಂದು ಮತ್ತೂರು ಕಲ್ಲಹಳ್ಳಿ ಎಲ್ಲಿದೆ ಗೌಡರೇ ಎಂದು ಕೇಳಿದರು. ನಾನು ಅವರನ್ನು ಕುರಿತು ನೀವು ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಇಂಜಿನಿಯರ್ ಆಗಿದ್ದಿರಿ ನಿಮಗೆ ಗೊತ್ತಿಲ್ಲವೇ ಎಂದು ಕೇಳಿದೆ. ಅದಕ್ಕೆ ಅವರಿಂದ ಜವಾಬು ಬರಲಿಲ್ಲ.

ಹೆಗ್ಗಡದೇವನ ಕೋಟೆ ತಾಲ್ಲೂಕು, ಕಲಿಯೂರು ಗ್ರಾಮದಲ್ಲಿ 12 ಭಾವಿಗಳಿವೆ. ಒಂದರಲ್ಲೂ ಕುಡಿಯುವುದಕ್ಕೆ ನೀರಿಲ್ಲ. ಹಿಂದೆ ಅಲ್ಲಿ 700 ಮನೆಗಳಿದ್ದುದು ಈಗ 80 ಮನೆಗಳು ಮಾತ್ರ ಉಳಿದಿವೆ. ಈ ಗ್ರಾಮದ ಹತ್ತಿರ ನಂಜನ ಹಳ್ಳಿ ಕೆರೆ ಇದೆ. ಆನೆಗಳು ಬಂದು ಆ ನೀರನ್ನೆಲ್ಲ ಕಲಕಿಬಿಡುತ್ತವೆ. ನೀರು ಮಂದವಾಗಿ ಬಗ್ಗಡವಾಗಿರುತ್ತದೆ. ಕೆರೆಯಿಂದ ಈ ನೀರನ್ನು ಗಾಡಿಗಳಲ್ಲಿ ತಂದು ಕುಡಿಯುತ್ತಾರೆ. ಬೆಳಿಗ್ಗೆ 9 ಗಂಟೆಯವರೆಗೂ ಮಲಗಿದ್ದು ಬಿಸಿಲು ಬಂದಮೇಲೆ ವ್ಯವಸಾಯಕ್ಕೆ ಹೋಗುತ್ತಾರೆ. ಬಗ್ಗಡದ ನೀರನ್ನು ಕುಡಿದೂ ಕುಡಿದೂ ಜನರು ಈ ರೀತಿ ಸೋಮಾರಿಗಳಾಗಿದ್ದಾರೆ.

ಪಡುವ ಕೋಟೆ ಕೆರೆಗೆ ಒಂದು ಪಿಕ್ ಅಪ್ ನಾಲೆ ತೆಗೆದುಕೊಂಡು ಬರಬೇಕೆಂಬ ವಿಷಯದಲ್ಲಿ ರೆವೆನ್ಯೂ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಮೈಸೂರು ಜಿಲ್ಲೆಯಲ್ಲಿ ಒಂದು ಮೀಟಿಂಗ್ ನಡೆಯಿತು. ಅದಕ್ಕೆ ಒಂದು ಲಕ್ಷ ಇಪ್ಪತ್ತುಸಾವಿರ ರೂಪಾಯಿ ಖರ್ಚಾಗುತ್ತದೆಂದರು. ಇಂಜಿನಿಯರ್‌ರವರು 50 ಎಕರೆ ಜಮೀನು ಅಚ್ಚುಕಟ್ಟಿಗೆ ಬಂದು ನೀರಾವರಿಯಾಗುತ್ತದೆಂದು ತಿಳಿಸಿದರು. ಈ ವಿಚಾರವನ್ನು ಸರ್ಕಾರದ ಗಮನಕ್ಕೂ ತಂದೆವು.

ನಾನು ಮೇಲೆ ಹೇಳಿರುವ ಕೆಲಸಗಳನ್ನೆಲ್ಲ ಸರ್ಕಾರದವರು ತೆಗೆದುಕೊಂಡು ಅವುಗಳನ್ನು ಈ ವರ್ಷವೇ ಮಾಡಿಕೊಟ್ಟರೆ ಬಹಳ ಒಳ್ಳೆಯದಾಗುತ್ತದೆಂದು ಹೇಳುತ್ತೇನೆ. ಈ ಕೆಲಸಗಳನ್ನು ಖಂಡಿತವಾಗಿಯೂ ಮಾಡಿಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

* ಶ್ರೀ ವಿ. ವೆಂಕಟಪ್ಪ (ಚನ್ನಪಟ್ಟಣ).—ಸ್ವಾಮಿ, ಬಡ್ಜೆಟ್ಟಿನ ವಿಷಯದಲ್ಲಿ ನಾನು ಹಿಂದೆ "ಜಗ್ಲರಿ ಫಿಗರ್ಸ್" ಎಂದು ಹೇಳುತ್ತಿದ್ದೆ. ಆ ಮಾತು ಬಹುಶಃ ಪಬ್ಲಿಕ್ ವರ್ಕ್ಸ್ ಇಲಾಖೆಗೆ ಸಂಬಂಧಪಟ್ಟಂಥ ಅಂಕಿಗಳಿಗೆ ಹೇಳಬಹುದೆಂದು ತೋರುತ್ತದೆ. ಶ್ರೀ ದೇವರಾಜಅರಸ್ ಅವರು ರಾತ್ರಿ ಎಲ್ಲ ಕಣ್ಣಿಗೆ ಎಣ್ಣೆ ಬಿಟ್ಟು ನೋಡಿದರೂ ಸರಿಯಾಗಿ ಗೊತ್ತಾಗಲಿಲ್ಲವೆಂದು ಹೇಳಿದರು. ನಾನೇನೂ ಕಣ್ಣಿಗೆ ಎಣ್ಣೆ ಬಿಟ್ಟು ನೋಡಲಿಲ್ಲ. ಬರೀ ಕನ್ನಡಕ ಹಾಕಿಕೊಂಡು ನೋಡಿದೆ. ಆದರೆ ಯಾವಯಾವುವು ಎಲ್ಲೆಲ್ಲಿವೆ ಎಂದು ಕಂಡುಹಿಡಿಯುವುದು ಕಷ್ಟ ಮತ್ತು ಕೆಲವಕ್ಕೆ ವಿವರಗಳು ಎಲ್ಲಿವೆ ಎಂದು ಸಿಕ್ಕುವಹಾಗಿಲ್ಲ. ಮೊದಲು ಬಡ್ಜೆಟ್ಟಿನಲ್ಲಿ ಪೇಜುಗಳನ್ನು ನಮೂದಿಸುತ್ತಿದ್ದರು. ಒಟ್ಟಿಗೆ ಮೊತ್ತವನ್ನು ಹಾಕಿ, ಅದರ ಪಕ್ಕದಲ್ಲಿ ಇಂಥಿಂಥ ಪುಟಗಳಲ್ಲಿ ವಿವರಗಳು ಸಿಕ್ಕುತ್ತವೆ ಎಂದು ನಮೂದು ಮಾಡುತ್ತಿದ್ದರು. ಈವಾಗ ವಿವರಗಳನ್ನೆಲ್ಲ ಬೇರೆ ಬೇರೆ ಕಡೆ ಕೊಡುತ್ತಿದ್ದಾರೆ ಮತ್ತು ಇವನ್ನು ಹುಡುಕುವುದು ಕಷ್ಟವಾದ ಕೆಲಸ. ಈಗ 1,00,65,000 ರೂಪಾಯಿಗಳನ್ನು ಒದಗಿಸಿದ್ದಾರೆ. ಮಾಡಿದ್ದಾರೆ. ಅದರ ವಿವರಗಳು ಎಲ್ಲಿವೆ ಎಂದು ನೋಡಿದರೆ ಸುಲಭವಾಗಿ ದೊರೆಯುವುದಿಲ್ಲ. 70—80 ಲಕ್ಷ ರೂಪಾಯಿಗಳಿಗೆ ತಪಶೀಲು ಎಲ್ಲಾದರೂ ಸಿಕ್ಕುತ್ತದೆಯೇನೋ ಎಂದು ಹುಡುಕಿದರೆ ಎಲ್ಲೂ ಸಿಕ್ಕಲಿಲ್ಲ. ಹೀಗೆ ಎಷ್ಟೋ ಕೆಲಸಗಳಿಗೆ ತಪಶೀಲು ಕೊಟ್ಟಿಲ್ಲ. ಲಂಪ್‌ಸಂ ಹಣ ಒದಗಿಸಿದ್ದಾರೆ. ಇದರ ಉದ್ದೇಶವೇನು ? ಯಾರುಯಾರಿಗೆ ಬೇಕೋ ಅವರಿಗೆ ಅವರು ಕೇಳಿದಾಗ ಮಂಜೂರು ಮಾಡುವುದಕ್ಕೆ ಅನುಕೂಲವಾಗುತ್ತದೆಂದು ಹೀಗೆ ಮಾಡಿರಬಹುದೆಂದು ನನಗೆ ತೋರುತ್ತದೆ. ತಪಶೀಲು ಪತ್ತೆಯಾದರೆ ಹಾಗೆ ಮಾಡುವುದು ಕಷ್ಟ. ಆದ್ದರಿಂದ ಹೀಗೆ ಮಾಡಿಕೊಂಡಿರಬಹುದು. ಪಕ್ಷಪಾತ ನೀತಿ ಎಂದು ಈಗೇನು ಹೇಳುತ್ತಿದ್ದೇವೋ ಅದನ್ನು ಮುಂದುವರಿಸುವುದಕ್ಕೆ ಅವಕಾಶ ಏನೇನು ಬೇಕೋ ಅದನ್ನು ಸ್ವಲ್ಪಮಟ್ಟಿಗೆ ಮಾಡಿಕೊಂಡಿದ್ದಾರೆಂದು ಹೇಳಿದರೆ ತಪ್ಪಾಗಲಾರದು.

ಕಣ್ವ ರಿಸರ್ವಾಯರ್‌ನಲ್ಲಿ ನೀರು ಸಾಲುವುದಿಲ್ಲ, ಅದಕ್ಕೆ ಯಾವುದಾದರೂ ರೀತಿಯಲ್ಲಿ ಅರ್ಕಾವತಿಯಿಂದ ನೀರನ್ನೊದಗಿಸುವುದಕ್ಕೆ ಸಾಧ್ಯ, ಅಣೆಕಟ್ಟು ಕಟ್ಟಿ ಒದಗಿಸಿ ಎಂದು ಬಹಳ ದಿವಸಗಳಿಂದ ಹೇಳುತ್ತಿದ್ದೆವು. ಮುಖ್ಯ ಮಂತ್ರಿಗಳು ಹೋದ ವರ್ಷ ಲೆವಲ್ ಸ್ವಲ್ಪ ಪರ್ಮಿಟ್ ಮಾಡುವುದಿಲ್ಲ ಎಂದು ಇಂಜನಿಯರು ಹೇಳುತ್ತಾರೆ, ಅದಾಗುವುದಾದರೆ 10 ಲಕ್ಷ ರೂಪಾಯಿಗಳು ಖರ್ಚಾದರೂ ಪರವಾಗಿಲ್ಲ, ಮಾಡಿಸೋಣ ಎಂದು ಹೇಳಿದರು. ಆಮೇಲೆ ಒಂದು ಇನ್‌ವೆಸ್ಟಿಗೇಷನ್ ಮಾಡಿ ಮಾರಿಹಳ್ಳವೆಂಬ ಒಂದು ಹಳ್ಳವಿದೆ, ಅದನ್ನು ತಿರುಗಿಸಬಹುದು, ಅದು ಬಹಳ ದೊಡ್ಡದಲ್ಲ, ಸಾಮಾನ್ಯವಾದ ಹಳ್ಳ, ಆದುದರಿಂದ ಸ್ವಲ್ಪ ಹೆಚ್ಚು ಕಡಮೆ ಒಂದು ಬೆಳೆಗೆ ಎಷ್ಟು ಬೇಕೋ ಅಷ್ಟು ನೀರು 300 ಯೂನಿಟ್ಟೋ ಏನೋ ಬರುವುದಕ್ಕೆ ಅವಕಾಶವಿದೆ, ಅದರಲ್ಲಿ 100 ಯೂನಿಟ್ಟಾದರೂ ಬರುತ್ತದೆ, ಅದರಿಂದ ಸ್ವಲ್ಪ ಹೆಚ್ಚು ಕಡಮೆ ನೀರು ಬರುವುದು ಸಾಕಾಗಬಹುದು ಎಂದು ಒಂದು ರಫ್ ಎಸ್ಟಿಮೇಟ್ ಮಾಡಿ, ಅದಕ್ಕೆ 5 ಲಕ್ಷ ರೂಪಾಯಿಗಳಾಗಬಹುದೆಂದು ಹೇಳಿದರು. ಆಗಲಿ ಎಂದು ಹೇಳಿದ ಮೇಲೆ ಗೆಜೆಟ್ಟಿನಲ್ಲಿ ಈ ರೀತಿ ಕೆಲಸ ತೆಗೆದು ಕೊಂಡಿದೆ, ಇದರ ಕೆಳಗಿರುವ ರೈತರು ಹೆಚ್ಚು ಕಾಂಟ್ರಿಬ್ಯೂಷನ್ ಮತ್ತು ವಾಟರ್ ರೇಟ್ ಇಷ್ಟು ಕೊಡಬೇಕು, ಇದಕ್ಕೆ ಅಕ್ಷೇಪಣೆಯೇನಾದರೂ ಇದ್ದರೆ ಹೇಳಿಕೊಳ್ಳಬಹುದು. ಇಷ್ಟುದಿವಸ ಅವಕಾಶವಿದೆ ಎಂದು ಪಬ್ಲಿಷ್ ಮಾಡಿದರು. ರೈತರು ಕೆಲವರು ಸಂಬಂಧಪಟ್ಟ ಮಂತ್ರಿಗಳ ಬಳಿ ಹೋಗಿ ಹೆಚ್ಚು ಕಾಂಟ್ರಿಬ್ಯೂಷನ್ ಇದಕ್ಕೆ ಬೇಕಾದರೆ ಕೊಡೋಣ, ಮೊದಲು ನಾವು ಕೊಟ್ಟಿರುವುದು 150 ರೂಪಾಯಿ, ಈಗ 175ರೂಪಾಯಿ ಕೇಳುತ್ತಿದ್ದಾರೆ, ಅದು ಹೆಚ್ಚಾಗಬಹುದು, ಸ್ವಲ್ಪ ಯೋಚನೆ ಮಾಡಿ ಎಂದು ಹೇಳಿಕೊಂಡರು. ಅವರು ಇಂಜನಿಯರುಗಳನ್ನು ಎದುರಿನಲ್ಲಿಟ್ಟುಕೊಂಡು ನೀವು ಫೈನಲ್ ಎಸ್ಟಿಮೇಟ್ ಮಾಡಿದ್ದೀರಾ ಎಂದು ಕೇಳಲು ಇಲ್ಲವೆಂದು ಹೇಳಿದರು. ಮಾಡದೇನೆ ಈ ದರವನ್ನು ನಿಗದಿ ಮಾಡುವುದು ಕಷ್ಟ, ಫೈನಲ್ ಎಸ್ಟಿಮೇಟ್ ಮಾಡಿ ಕಳುಹಿಸಿ, ಸರ್ಕಾರದವರು ಎಷ್ಟುಕೊಡಬೇಕೆಂದು ನಿರ್ಧರಿಸುತ್ತಾರೆ ಎಂದು ಹೇಳಿದರು. ಈಗ ಈ ಕೆಲಸವನ್ನು ಕೈಬಿಟ್ಟಿದ್ದಾರೆಂಬ ಸಮಾಚಾರವಿದೆ; ಇದಕ್ಕೆ ಸಂಬಂಧಪಟ್ಟಹಾಗೆ ಹಣವನ್ನೇನೂ ಒದಗಿಸಿದಂತೆ ಕಾಣುವುದಿಲ್ಲ. ಐದು ಲಕ್ಷ ರೂಪಾಯಿ ಒಂದು ಕಡೆ, ಒಂದು ಲಕ್ಷ ಚಿಲ್ಲರೆ ರೂಪಾಯಿ ಒಂದು ಕಡೆ ಅರ್ಕಾವತಿ ಪ್ರಾಜೆಕ್ಟಿಗೆ ಎಂದು ತೋರಿಸಿದ್ದಾರೆ. ತಪಶೀಲು ಸಿಕ್ಕಲಿಲ್ಲ.

(ಶ್ರೀ ವಿ. ವೆಂಕಟಪ್ಪ)

ಎರಡು ಕಡೆ ಮಾತ್ರ ಹಣ ಒದಗಿಸಿದ್ದಾರೆ. ಹೀಗೆ ಎರಡು ಕಡೆ ಏಕೆ ಹಾಕಿದರೋ ಗೊತ್ತಿಲ್ಲ. ಈ ರಿಸರ್ವಾಯರ್ ಆದಾಗಿನಿಂದ ಇದುವರೆಗೂ ರೈತರಿಗೆ ನೀರು ಸಾಕಾಗದೆ ಬಹಳವಾಗಿ ತೊಂದರೆಪಟ್ಟಿದ್ದಾರೆ. ಅನೇಕ ವೇಳೆ ನೀರು ಸಾಕಾಗುವುದಿಲ್ಲವೆಂಬುದನ್ನು ಇಂಜನಿಯರೇ ಒಪ್ಪಿಕೊಂಡಿದ್ದಾರೆ. ಆದ್ದರಿಂದ ಇದು ಸರಿಯಾಗಿ ನಡೆಯಬೇಕಾದರೆ, ರೈತರಿಗೆ ಇದರಿಂದ ಉಪಕಾರವಾಗಬೇಕಾದರೆ, ಈ ಕೆಲಸವನ್ನು ಸರ್ಕಾರದವರು ಮನಸ್ಸು ಮಾಡಿ ಹೇಗಾದರೂ ಮಾಡಿಕೊಡಬೇಕು.

1 P.M.

ಈಗ ಈ ಗ್ರಾಮದ ಸುತ್ತಲೂ ನೀರು ಇರುತ್ತದೆ. ಆದುದರಿಂದ ಅಲ್ಲಿ ರಸ್ತೆಯನ್ನು ಮಾಡಿಸಿಕೊಡಬೇಕಾದುದು ಸರ್ಕಾರದವರ ಜವಾಬ್ದಾರಿ ಎನ್ನುವುದು ಗೊತ್ತಾಗಿದೆ. ಹಿಂದೆ ಶ್ರೀ ಎಲ್. ಸಿದ್ದಪ್ಪನವರು ಮಂತ್ರಿಗಳಾಗಿದ್ದ ಕಾಲದಿಂದಲೂ ಈ ಕೆಲಸ ನಡೆಯುತ್ತಲೇ ಇದೆ. ಶ್ರೀ ಎಲ್. ಸಿದ್ದಪ್ಪನವರೂ ಕೂಡ ಅಲ್ಲಿಗೆ ಒಂದಾವರ್ತಿ ಬಂದು ಹೋಗಿದ್ದಾರೆ. ಇವರಾದ ಮೇಲೆ ಮತ್ತೂ ಒಬ್ಬ ಮಂತ್ರಿಗಳು ಅಲ್ಲಿಗೆ ಬಂದು ಹೋಗಿದ್ದಾರೆ. ಆದರೆ ಅಲ್ಲಿ ಆ ರಸ್ತೆ ಮಾತ್ರ ಇನ್ನೂ ಆಗಿಲ್ಲ. ಆ ಊರು ಪಕ್ಕದಲ್ಲೇ ಆದಿಕರ್ಣಾಟಕ ಕೇರಿಯಿದೆ. ಅಲ್ಲಿ ಆಗಬೇಕಾಗಿರತಕ್ಕ ರಸ್ತೆಯೆಲ್ಲಾ ಕೇವಲ ಆರು ಫರ್ಲಾಂಗ್ ಮಾತ್ರ. ಆದರೆ ಆ ರಸ್ತೆ ಇನ್ನೂ ಆಗದೆ ಇರುವುದರಿಂದ ಆ ಊರಿನ ಜನರು ಸುತ್ತಿಕೊಂಡು, ಸಾಮಾನುಗಳನ್ನು ಹೊತ್ತುಕೊಂಡು ಓಡಾಡಬೇಕಾಗಿದೆ. ಅಲ್ಲಿ ಈ ದಿವಸ ಈ ಗಾಡಿ—ಎತ್ತುಗಳೂ ಕೂಡ ಹೋಗುವುದಕ್ಕೆ ಅವಕಾಶವಿಲ್ಲ. ಈ ಹಿಂದೆ ಈ ರಸ್ತೆಗೆ 3 ಸಾವಿರ ರೂಪಾಯಿಗಳ ಅಂದಾಜು ಆಗಿತ್ತು. ಈಗ ಅದು ಆರು ಸಾವಿರ ರೂಪಾಯಿಗಳಿಗೆ ರಿವೈಜ್ ಆಗಿದೆ. ಇದುವರೆಗಿನ್ನೂ ಆ ಕೆಲಸವನ್ನ ಮಾತ್ರ ಕೈಗೊಂಡಿಲ್ಲ. ಆದರೆ ಅಲ್ಲಿ ಈ ರಸ್ತೆಗೋಸ್ಕರವಾಗಿ ಜಮೀನನ್ನು ಬೇರೆ ಅಕ್ವಯರ್ ಮಾಡಿಕೊಂಡಿದ್ದಾರೆ. ಆದರೆ ಅವರಿಗೆ ಆ ಪರಿಹಾರ ದ್ರವ್ಯವನ್ನಿನ್ನೂ ಕೊಟ್ಟಿಲ್ಲ. ಅತ್ತಲಾಗಿ ಆ ಜಮೀನನ್ನು ಆ ಅಚ್ಚುಕಟ್ಟುದಾರರಿಗಾದರೂ ಉತ್ತುಕೊಳ್ಳಲು ಬಿಟ್ಟುಕೊಡುತ್ತಾ ಇಲ್ಲ. ಇತ್ತಲಾಗಿ ಇವರು ಅಲ್ಲಿ ರಸ್ತೆಯನ್ನೂ ಮಾಡುತ್ತಿಲ್ಲ. ಅಂತೂ ಇಂತೂ ಅಷ್ಟು ಜಮೀನು ಅಲ್ಲಿ ಈ ದಿವಸ ಪಾಳು ಬಿದ್ದಿದೆ. ರೈತರಿಗೆ ಅದರಿಂದ ಲುಕ್ಸಾನಾಗುತ್ತಿದೆ. ಇದೇ ರೀತಿಯಾಗಿ ಮತ್ತೊಂದು ಕಡೆ ಕಣ್ವಾನದಿಗೆ ಸಂಬಂಧಪಟ್ಟ ಹಾಗೆ ಜಮೀನನ್ನು ಮಾತ್ರ ಅಕ್ವಯರ್ ಮಾಡಿಕೊಂಡಿದ್ದಾರೆ. ಮಾಡಬೇಕಾಗಿದ್ದ ಕೆಲಸವನ್ನು ಮಾತ್ರ ಮಾಡಿಲ್ಲ. ರೈತರಿಗೆ ದುಡ್ಡನ್ನು ಕೊಟ್ಟಿಲ್ಲ. ಅತ್ತಲಾಗಿ ಅವರಿಗೆ ಅಲ್ಲಿ ವ್ಯವಸಾಯ ಮಾಡಲಿಕ್ಕೂ ಅವಕಾಶವಿಲ್ಲ. ಇವರು ರಸ್ತೆಯನ್ನೂ ಕೂಡ ಮಾಡಿರುವುದಿಲ್ಲ. ಈ ಇಂಜಿನಿಯರ್ ಅವರುಗಳು ತಿರುಗಾಡಲು ತಮಗೆ ಬೇಕಾದಂಥ ರಸ್ತೆಗಳನ್ನು ಮಾತ್ರ ಬೇಗ ಮಾಡಿಕೊಳ್ಳುತ್ತಿದ್ದಾರೆ. ಆದರೆ ಈ ರೈತನಿಗಾಗಿ ಮಾಡಬೇಕಾದ ರಸ್ತೆಗಳು ಪ್ರಾರಂಭವಾಗಿ ಅಲ್ಲಿಗೇ ನಿಂತುಹೋಗಿಬಿಡುತ್ತವೆ. ಇದೇ ರೀತಿಯಾಗಿ ನೇರಲೂರು ಹತ್ತಿರ ಒಂದು ಗ್ರಾಮಕ್ಕೆ ಯಾವ ನೀರಿನ ಆಸರೆಯೂ ಇಲ್ಲ. ಅಲ್ಲಿಗೆ ಒಂದಾವರ್ತಿ ಹಿಂದೆ ಮಂತ್ರಿಗಳಾಗಿದ್ದಂಥ ಶ್ರೀ ಎಚ್. ಸಿದ್ದಯ್ಯನವರು ಬಂದು ನೋಡಿಕೊಂಡು ಹೋಗಿದ್ದರು. ಅವರು ಆ ಪ್ರದೇಶಕ್ಕೆ ಅನುಕೂಲವಾಗುವಂತೆ ಒಂದು ಕೆರೆಯ ಅಂದಾಜನ್ನೇನೋ ತಯಾರಿಸುವಂತೆ ಕೆಲಸ ನಡೆಸಿದರು. ಆದರೆ ಇತ್ತೀಚೆಗೆ ಆ ಕೆರೆಯನ್ನು ಅಲ್ಲಿ ಕಟ್ಟುವುದರಿಂದ ಸರ್ಕಾರಕ್ಕೆ ನಿರೀಕ್ಷಿಸುವಷ್ಟು ಉತ್ಪತ್ತಿ ಬರುವುದಿಲ್ಲವೆಂಬ ಕಾರಣದಿಂದ ಈಚೆಗೆ ಅದರ ಮಾತೇ ನಿಂತುಹೋಗಿದೆ. ಇನ್ನು ಶ್ರೀ ಟಿ. ಮರಿಯಪ್ಪನವರ ಕಾಲದಲ್ಲೂ ಒಂದು ವಿಚಾರ ಹೀಗೆ ಆಯಿತು. ಅಲ್ಲಿ ಕದುರುವೊಗೆ ಎಂಬ ಗ್ರಾಮದ ಕೆರೆಯಿದೆ. ಈ ದಿವಸ ಆ ಕೆರೆಗೆ ಇಟ್ಟಿರತಕ್ಕ ತೂಬನ್ನು ಇನ್ನೂ ಸ್ವಲ್ಪ ಕೆಳಕ್ಕೆ ತಗ್ಗಿಸಿ ಕೊಡಿ, ಅದರಿಂದ ವ್ಯವಸಾಯಕ್ಕೆ ಹೆಚ್ಚು ಅನುಕೂಲವಾಗುತ್ತದೆ ಎಂದು ಅಲ್ಲಿನ ರೈತರೆಲ್ಲಾ ಕೇಳಿಕೊಳ್ಳುತ್ತಿದ್ದಾರೆ. ಹೀಗೆ ತೂಬನ್ನು ಸ್ವಲ್ಪ ತಗ್ಗಿನ ಮಟ್ಟಕ್ಕೆ ಇಳಿಸಿದರೆ ಅವರಿಗೆ ಎರಡು ತಿಂಗಳು ಹೆಚ್ಚಾಗಿ ಆ ನೀರು ಸರಬರಾಯಿ ಆಗುತ್ತದೆ ಎಂದು ಶ್ರೀ ಮರಿಯಪ್ಪನವರ ಕಾಲದಿಂದಲೂ ಕೇಳುತ್ತಿದ್ದಾರೆ. ಶ್ರೀ ಮರಿಯಪ್ಪನವರು ಮಂತ್ರಿ ಪದವಿಯನ್ನು ಬಿಟ್ಟು ಎಷ್ಟು ವರ್ಷಗಳಾದುವು ? ಆದರೆ ಆ ಕೆಲಸವಿನ್ನೂ ಆಗಿಲ್ಲ. ಆದರೆ ಈಗ ಇರತಕ್ಕ ಆ ತೂಬಾದರೋ ಬಹಳ ಶಿಥಿಲವಾಗಿದೆ. ಅದಕ್ಕೆ 2–3 ಸಲ ಈಗಾಗಲೇ ರಿಪೇರಿ ಬೇರೆ ಆಗಿದೆ. ಆದರೆ ನೀರು ಮಾತ್ರ ಇನ್ನೂ ಧಾರಾಳವಾಗಿ ಹೋಗುತ್ತಲೇ ಇದೆ. ಅಲ್ಲಿ ಎರಡು ಬೆಳೆಗೆ ನೀರು ಕೊಡುತ್ತೇವೆಂದು ಹೇಳಿದ್ದರು. ಈಗ ಒಂದು ಬೆಳೆಗೂ ಸಹ ನೀರು ಸಾಕಾಗುತ್ತಿಲ್ಲ. ಈ ದಿವಸ ಇದೇ ರೀತಿಯಾಗಿ ಎಲ್ಲಾ ಕೆರೆಗಳ ತೂಬಿನಲ್ಲೂ ನೀರು ವೇಸ್ಟಾಗಿ ಹೋಗುತ್ತಿದೆ. ಹಿಂದಿನ ಕಾಲದಲ್ಲಿ ಈ ತೂಬುಗಳಿಗೆ ಕೊಂತ ಎಂದು ಹಾಕುತ್ತಿದ್ದರು. ಆಗ ಒಂದು ತೊಟ್ಟು ನೀರೂ ಸಹ ಪೋಲಾಗುತ್ತಿರಲಿಲ್ಲ. ಆದರೆ ಈ ದಿವಸ ಈ ವಿಧಾನ ಸರಿಯಾಗಿಲ್ಲ. ಈ ತೂಬುಗಳನ್ನು ಎಷ್ಟು ದಿವಸಗಳಾದರೂ ಕೆಟ್ಟುಹೋಗದಂತೆ ಬಹಳ ಬಂದೋಬಸ್ತಾಗಿ, ಭದ್ರವಾಗಿರುವಂತೆ, ಶಾಶ್ವತವಾಗಿರುವಂತೆ ಮಾಡುತ್ತೇವೆಂದು ಈ ತೂಬುಗಳಿಗೆಲ್ಲಾ ದೊಡ್ಡ ದೊಡ್ಡ ಗೇಟುಗಳನ್ನು ಇಡುವುದಕ್ಕೆ ಪ್ರಾರಂಭಿಸಿದ್ದಾರೆ. ಈ ವಿಧಾನದಲ್ಲಿ ವಿಶೇಷ ನೀರು ಲೀಕಾಗುತ್ತಿದೆ. ಆ ಕಣ್ವಾಕ್ಕೂ ಕೂಡ ಈಗ ಇದೇ ರೀತಿ ಗೇಟುಗಳನ್ನು ಇಟ್ಟಿದ್ದಾರೆ. ಅವುಗಳನ್ನು ಪೂರ್ತಿಯಾಗಿ ಮುಚ್ಚಿದ್ದರೂ ಒಂದು ತೂಬಿನಲ್ಲಿ ಹೋಗುವಷ್ಟು ನೀರು ಸದಾ ಹೋಗಿಯೇ ಹೋಗುತ್ತಿದೆ. . . .

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದನ್ನು ಫೂಲ್ ಪ್ರೂಫ್ ಮೆಥೆಡ್ ಎಂದು ಕರೆಯುತ್ತಾರೆ.

ಶ್ರೀ ವಿ. ವೆಂಕಟಪ್ಪ.—ಇಲ್ಲಿಯವರೆಗೂ ನಮ್ಮ ತಾಲ್ಲೂಕಿನಲ್ಲಿ ಇಂಥಾ ಸಣ್ಣ ಪುಟ್ಟ ಕೆಲಸಗಳನ್ನಾದರೂ ಮಾಡಿಸಿಕೊಟ್ಟಿಲ್ಲ. ಬಹುಶಃ ಈಗಲಾದರೂ ಮನಸ್ಸು ಮಾಡುತ್ತಾರೆಂದು ಭಾವಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

*ಶ್ರೀ ಬಿ. ಪಿ. ನಾಗರಾಜಮೂರ್ತಿ (ಮಳವಳ್ಳಿ).—ಸ್ವಾಮಿ, ನಮ್ಮ ಮಳವಳ್ಳಿ ತಾಲ್ಲೂಕಿನ ಎರಡು ಹೋಬಳಿಗಳು ಮತ್ತು ಮಾನ್ಯ ಮಿತ್ರರಾದ ಶ್ರೀನಿವಾಸ ಅಯ್ಯಂಗಾರ್ಯರ ತಾಲ್ಲೂಕಿನಲ್ಲಿ ಒಂದು ಹೋಬಳಿ ಈ ಮೂರು ಹೋಬಳಿಗಳು ವಿಶ್ವೇಶ್ವರಯ್ಯ ನಾಲಾ ಪ್ರದೇಶಕ್ಕೆ ಒಳಪಟ್ಟಿವೆ. ಆದರೆ ವಿಶ್ವೇಶ್ವರಯ್ಯ ನಾಲೆಯ ಪ್ರಯೋಜನವನ್ನು ಎಷ್ಟುಮಟ್ಟಿಗೆ ಆ ಪ್ರದೇಶದವರು ಪಡೆಯುತ್ತಾ ಇದ್ದಾರೆ ಎಂದರೆ ಶ್ರೀಮಾನ್ ಶ್ರೀನಿವಾಸಯ್ಯಂಗಾರ್ಯರ ತಾಲ್ಲೂಕಿನಲ್ಲಿ ಬರುವ ನಾಲೆಯಿಂದ ಏನೂ ಉಪಯೋಗ ಪಡೆಯುವ ಪರಿಸ್ಥಿತಿ ಇಲ್ಲ. ಮಳವಳ್ಳಿಯಲ್ಲಿ ಬರುವ ನಾಲೆಯ ನೀರು ಯಾವುದಕ್ಕೂ ಸಾಲದು. ಲಾಗಾಯ್ತಿನಿಂದ ಮಾನ್ಯ ಸಭೆಯ ಸದಸ್ಯರು ಈ ಸಭೆಯಲ್ಲೂ ಮತ್ತು ಮಾನ್ಯ ಮಂತ್ರಿಗಳು

ಆ ಪ್ರಾಂತ್ಯದಲ್ಲಿ ಸಂಚಾರ ಮಾಡಿದ ಕಾಲದಲ್ಲೂ ನಿರಂತರವಾಗಿ ಮೊರೆಯಿಟ್ಟುಕೊಂಡು ಬಂದಿದ್ದೇವೆ. ಆದಾಗ್ಯೂ ಕೂಡ, ಏನೂ ಮಾಡಿಲ್ಲ ಎಂಬ ಅಪವಾದನೆಯನ್ನು ಮಾಡುತ್ತಾ ಇಲ್ಲ. ಶ್ರೀಮಾನ್ ಮರಿಯಪ್ಪನವರ ಕಾಲದಲ್ಲಿ ಹೆಬ್ಬಳ್ಳ ಪಿಕ್‌ಅಪ್ ನಾಲೆಯ ಕೆಲಸ ಪ್ರಾರಂಭ ಮಾಡಿ ಮಂಜಪ್ಪನವರ ಕಾಲದಲ್ಲಿ ಮುಕ್ತಾಯ ಮಾಡಿದ್ದಾರೆ. ಈ ಒಂದು ಪಿಕ್‌ಅಪ್ ನಾಲೆಯ ಸಹಾಯವನ್ನು ಬಿಟ್ಟರೆ ಬೇರೆ ಪ್ರದೇಶದಲ್ಲಿ ನಿರೀಕ್ಷಿಸಿದ ಮಟ್ಟದಲ್ಲಿ ಸಹಾಯ ದೊರಕಿಲ್ಲ. ಇನ್ನೂ ಕೂಡ ಅನೇಕ ಪಿಕ್‌ಅಪ್ ನಾಲೆಗಳನ್ನು ಮಾಡಿ ಸಹಾಯವನ್ನು ಕೊಡುವುದಕ್ಕೆ ಅವಕಾಶವಿದ್ದಾಗ್ಯೂ ಕೂಡ ಅದೇಕೆ ಈ ರೀತಿ ನಿಧಾನವಾಗುತ್ತಿದೆ ? ಈಗ ಈ ಇಲಾಖೆಯ ಅಧಿಕಾರವನ್ನು ವಹಿಸಿಕೊಂಡಿರತಕ್ಕ ಮಾನ್ಯ ಮಂತ್ರಿಗಳೂ ಕೂಡ ಕಾಂಗ್ರೆಸ್ ಮಂತ್ರಿಗಳಾಗಿ ಆ ತಾಲ್ಲೂಕಿನಲ್ಲಿ ಸಂಚಾರ ಮಾಡಿದಾಗ ಇದನ್ನು ಅವರೇ ಖುದ್ದಾಗಿ ನೋಡಿದ್ದಾರೆ. ಎಷ್ಟುಮಟ್ಟಿಗೆ ಜನಗಳಿಗೆ ಕಷ್ಟ ಇದೆ ಎಂಬುದನ್ನು ಅವರು ಅರಿತಿದ್ದಾರೆ. ಈ ಎರಡು ಹೋಬಳಿಗಳಲ್ಲಿ ಈಗಿರತಕ್ಕ ಕಷ್ಟವನ್ನು ನಿವಾರಣೆ ಮಾಡಲು ಈಗಾಗಲೇ ಸರ್ಕಾರದ ಮುಂದೆ ಅನೇಕ ಪ್ರಪೋಸಲ್‌ಗಳು ಬಂದಿವೆ. ಅವನ್ನು ಆದಷ್ಟು ಜಾಗ್ರತೆ ನೆರವೇರಿಸಿದರೆ ಹೆಚ್ಚಿನ ಸಹಾಯವಾಗುತ್ತದೆ. ಹಲಗೂರು ಮತ್ತು ಕೊಪ್ಪಗೌಡನಪುರದ ಹೋಬಳಿಗಳಲ್ಲಿ ಮೊಟ್ಟಮೊದಲು ವಿಶ್ವೇಶ್ವರಯ್ಯ ನಾಲೆಯಿಂದ ನೀರು ಒದಗುತ್ತದೆ ಎಂದು ನಾವು ನಿರೀಕ್ಷಿಸಿದ್ದೆವು. ದುರಾದೃಷ್ಟವಶಾತ್ ಒಂದು ಎಕರೆಯಷ್ಟು ನೀರು ಒದಗಿಸುವುದಕ್ಕೂ ಕೂಡ ಆ ನಾಲೆಗಳಲ್ಲಿ ನೀರು ಇಲ್ಲ. ಕೃಷ್ಣರಾಜಸಾಗರದಲ್ಲಿ ನೀರಿನ ಅಭಾವವುಂಟಾಗಿರುವುದರಿಂದ ಇಲ್ಲಿಯವರೆಗೆ ನೀರು ಒದಗಿಸುವುದಕ್ಕಾಗಿಲ್ಲ ಎಂಬ ಒಂದು ಮಾತನ್ನು ಹೇಳಿಕೊಂಡು ಬರುತ್ತಾ ಇದ್ದಾರೆ. ನಾಲೆಯ ನೀರು ಒದಗಿಸುವುದಕ್ಕಾಗದಿದ್ದರೆ ಹೋಗಲಿ, ಆ ಹೋಬಳಿಗಳಲ್ಲಿ ಕೆರೆಗಳನ್ನಾದರೂ ಕಟ್ಟಿ ನೀರಾವರಿ ಸೌಕರ್ಯವನ್ನೊದಗಿಸಿ ಎಂದರೆ ಅದಕ್ಕೂ ಸಾಧ್ಯವಾಗುತ್ತದೆಯೋ ಇಲ್ಲವೋ ಎನ್ನುತ್ತಾರೆ. ಎಷ್ಟು ವಿಧವಾಗಿ ಮೊರೆ ಇಟ್ಟುಕೊಂಡರೂ ಕೂಡ ಸರ್ಕಾರ ಇದುವರೆಗೂ ಯಾವ ವಿಧವಾದ ಯೋಜನೆಯನ್ನಾಗಲೀ, ಸರ್ವೆಯನ್ನಾಗಲೀ ಮಾಡಿಲ್ಲ.

ಮತ್ತೊಂದು—ಭೀಮಾನದಿ ಪ್ರಾಜೆಕ್ಟು. ಶಿಂಷಾ ನದಿಗೆ ಗುಂಟೂರಿನ ಹತ್ತಿರ ಅಣೆ ಕಟ್ಟು ಕಟ್ಟಬೇಕೆಂದು ಒಂದು ಎಸ್ಟಿಮೇಟ್ ಮಾಡಿದ್ದಾರೆ. ದುರದೃಷ್ಟವಶಾತ್ ಇದು ಪಂಚವಾರ್ಷಿಕ ಯೋಜನೆಯಲ್ಲಿ ನಿಂತಿದೆ. ಆಮೇಲೆ ನಿಟ್ಟೂರು ಕೆರೆ, ಹಲಗೂರು ಕೆರೆ ಎಂಬ ಎರಡು ಕೆರೆಗಳಿವೆ. ಮರುಭೂಮಿಯಲ್ಲಿ ಓಯಸಿಸ್ ಇದ್ದಹಾಗೆ ಈ ಕೆರೆಗಳು ನಿಂತಿವೆ. ಹಲಗೂರು ಕೆರೆಯಲ್ಲಿ ನೀರು ಜಿನಿಗಿ ಕೋಡಿ ಒಡೆದು ನೀರೆಲ್ಲಾ ಹೋಗುತ್ತಿದೆ. ಇದನ್ನು ಸರಿಮಾಡಿಸಿಕೊಡಬೇಕೆಂದು ಎಷ್ಟು ಕೇಳಿಕೊಂಡರೂ ಪ್ರಯತ್ನ ಕೂಡ ಮಾಡಿಲ್ಲ. ನಿಟ್ಟೂರಿನ ಕೆರೆ ಕೂಡ ಒಂದು ದೊಡ್ಡ ಕೆರೆ. ಅದರ ಕೋಡಿಯನ್ನು ಎತ್ತರಿಸಿ ಹೆಚ್ಚು ನೀರನ್ನು ಒದಗಿಸುವುದಕ್ಕೆ ಅವಕಾಶ ಮಾಡಿಕೊಡಿಯೆಂದು ಎಷ್ಟು ಹೇಳಿದರೂ ಮಾಡಿಲ್ಲ. ಕೋಡಿಯನ್ನು ಎತ್ತರಿಸುವುದಕ್ಕೆ ಕಾರ್ಯಕ್ರಮವನ್ನು ಕೈಕೊಳ್ಳುವುದನ್ನು ಬಿಟ್ಟು ಅಲ್ಲಿ water spreadನ ಹೊರಗಡೆಯಿರುವ ಜಮೀನುಗಳನ್ನು ಹಂಗಾಮಿ ಸಾಗುವಳಿಗೂ ಕೊಟ್ಟು, ಅವರು ಉತ್ತು ಉತ್ತು ಕೆರೆಯನ್ನೆಲ್ಲಾ ಹಾಳುಮಾಡಿ ನೀರು ಹಾಲ ಇರುವ ಜಮೀನುಗಳಿಗೂ ಸಾಕಾಗುವುದಿಲ್ಲವಾಗಿದೆ. ಈ ಬಗ್ಗೆ ಯಾವಾಗ ಕೇಳಿದರೂ ಇಂಜಿನಿಯರಿಗೆ ಕಳುಹಿಸಿದ್ದೇವೆ, ಎಸ್ಟಿಮೇಟ್ ಬಂದಿಲ್ಲವೆಂದು ಉತ್ತರ ಹೇಳುತ್ತಿದ್ದಾರೆಯೇ ಹೊರತು ಯಾವ ಕಾರ್ಯಕ್ರಮವನ್ನೂ ಕೈಕೊಂಡಿಲ್ಲ. ಹಾಗೆಯೇ ಗೊಪ್ಪಗೋಡನಪುರದ ಹೋಬಳಿಯಲ್ಲಿ ಹಂದಿಹಳ್ಳ ಎಂಬ ಹಳ್ಳಕ್ಕೆ ಒಂದು ಅಣೆಕಟ್ಟನ್ನು ಕಟ್ಟಬೇಕೆಂದು ಕೇಳುತ್ತಲಿದ್ದೇವೆ. ಅದನ್ನೂ ಮಾಡಿಲ್ಲ. ಹೊನಗಳ್ಳಿ ಎಂಬಲ್ಲಿ ಒಂದು ಹಳ್ಳವಿದೆ. ಬೇಸಗೆ ಕಾಲದಲ್ಲಿ ಅಲ್ಲಿ ನೀರು ಹರಿಯುತ್ತಿರುತ್ತದೆ. ಸಂಬಂಧಪಟ್ಟ ಎಂಜಿನಿಯರುಗಳನ್ನೂ, ಅಸಿಸ್ಟೆಂಟ್ ಎಂಜಿನಿಯರುಗಳನ್ನೂ ಅಲ್ಲಿಗೆ ಕರೆದುಕೊಂಡು ಹೋಗಿ ಖುದ್ದು ತೋರಿಸಿದ್ದೇವೆ. 10,000 ರೂಪಾಯಿಗಳಲ್ಲಾಗುವ ಸಣ್ಣ ಕೆಲಸ ಇದು. ಮಾಡಿದರೆ ಎಷ್ಟೋ ಸಹಾಯವಾಗುತ್ತದೆ. ಮಾಧವಮಂತ್ರಿ ಅಣೆಕಟ್ಟಿನಿಂದ ಬೆಳಕವಾಡಿಗೆ ನೀರು ಒದಗಿಸಬಹುದು. ಇದನ್ನು ಮಾಡಿ ಆ ಜನರ ಕಷ್ಟವನ್ನು ನೀಗಿಸಲೆಂದರೂ ಸರ್ಕಾರದವರಿಗೆ ಮನಸ್ಸು ಬಂದಿಲ್ಲ. ಈಗ ಹೊಸದಾಗಿ ಅಧಿಕಾರವನ್ನು ವಹಿಸಿಕೊಂಡಿರುವ ಮಾನ್ಯ ಮಂತ್ರಿಗಳಾದರೂ ತಾವೇ ಖುದ್ದಾಗಿ ನೋಡಿರುವ ಈ ಕೆಲಸಗಳನ್ನು ಉತ್ಸಾಹದಿಂದ ಮಾಡಿ ಆ ಜನರ ಕಷ್ಟವನ್ನು ಬಗೆಹರಿಸುತ್ತಾರೆಂದು ನಂಬಿದ್ದೇನೆ.

ಶ್ರೀ ಬಿ. ಟಿ. ಕೆಂಪರಾಜ್ (ಬೆಂಗಳೂರು, ದಕ್ಷಿಣ—ಅನುಸೂಚಿತ ಜಾತಿಗಳು).—ಸ್ವಾಮಿ, ಮೈಸೂರು ಸಂಸ್ಥಾನದಲ್ಲಿ ಸುಮಾರು 2000 ಜೋಡಿ ಇನಾಂತಿ ಗ್ರಾಮಗಳಿವೆ. ಇವುಗಳಲ್ಲಿ ಕೇವಲ 700 ಗ್ರಾಮಗಳು ಮಾತ್ರ ಸರ್ವೆಯಾಗಿವೆ. ಸರ್ವೆಯಾಗದಿರುವ ಮಿಕ್ಕ ಗ್ರಾಮಗಳ ಸ್ಥಿತಿಯನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಸರ್ಕಾರದವರು ಏನಾದರೊಂದು ಶೀಘ್ರವಾದ ಕಾರ್ಯಕ್ರಮವನ್ನು ಹಾಕಿಕೊಂಡು ಈ ಜೋಡಿ ಇನಾಂತಿಗ್ರಾಮಗಳಲ್ಲಿರತಕ್ಕ ಕೆರೆಗಳನ್ನು ದುರಸ್ತು ಮಾಡಿಸಿಕೊಡುವುದು ಬಹಳ ಅವಶ್ಯಕ.

ಆಮೇಲೆ, ಈ ಮಾನ್ಯ ಸಭೆಯ ಅನೇಕ ಸದಸ್ಯರು ಮರಾಮತ್ತು ಇಲಾಖೆಯ ಕೆಲಸ ಕಾರ್ಯಗಳ ಬಗ್ಗೆ ಅನೇಕ ಟೀಕೆ ಟಿಪ್ಪಣಿಗಳನ್ನು ಮಾಡಿದ್ದಾರೆ. ಈ ಇಲಾಖೆಯಲ್ಲಿ ಕೆಲಸಕಾರ್ಯಗಳನ್ನು ನಡೆಸುತ್ತಿರುವ ಕ್ರಮ ಬಹಳ ದಿವಸಗಳಿಂದ ನಡೆಸಿಕೊಂಡು ಬಂದಿರುವ ಕ್ರಮವಾಗಿದೆ. ಇದನ್ನು ಪುನರ್ವ್ಯವಸ್ಥೆಮಾಡುವುದು ಅತ್ಯಾವಶ್ಯಕ. ಅದಕ್ಕಾಗಿ ಸರ್ಕಾರದವರು ಒಂದು ಸಮಿತಿಯನ್ನು ನೇಮಿಸಿ ಈ ಇಲಾಖೆಯ ಕೆಲಸ ಕಾರ್ಯಗಳು ಬೇಗ ನಡೆಯಬೇಕಾದರೆ ಏನು ಮಾಡಬೇಕೆಂಬುದನ್ನು ಕಂಡುಹಿಡಿಯುವುದು ಅವಶ್ಯಕ. ಏಕೆಂದರೆ ಈ ಇಲಾಖೆಯಲ್ಲಿ ಕೆಲಸಗಳು ಬಹಳ ನಿಧಾನವಾಗಿ ಆಗುತ್ತಾ ವರ್ಷಾನುಗಟ್ಟಲೆ ರಿಕಾರ್ಡುಗಳು ಕೊಳೆಯುತ್ತಾ ಬಿದ್ದಿರುವುದು ಸರ್ವಸಾಧಾರಣವಾಗಿಬಿಟ್ಟಿದೆ. ಯಾವ ಕೆಲಸಕ್ಕೂ ಮಧ್ಯೆಮಧ್ಯೆ Technical defects ಎಂದು ತೆಗೆದು ರಿಕಾರ್ಡುಗಳು ಹಿಂದೆ ಬಿದ್ದುಹೋಗುತ್ತವೆ. ಆದ್ದರಿಂದ ತ್ವರಿತವಾಗಿ ಕೆಲಸಗಳಾಗದಿರುವುದಕ್ಕೆ ಎಲ್ಲಿ ಏನು ತೊಂದರೆಯಿದೆಯೆಂಬುದನ್ನು ಕಂಡುಹಿಡಿಯುವುದು ಸೂಕ್ತವೆಂದು ಹೇಳಿ, ಸರ್ಕಾರದವರು ಈ ಇಲಾಖೆಗೆ ಒದಗಿಸಿರುವ ಹಣ ಬಹಳ ಸಾಲದೆಂದು ಹೇಳಬಯಸುತ್ತೇನೆ. ಕೆಲಸಗಳು ಜಾಸ್ತಿಯಾಗಿ ಬೆಳೆಯುತ್ತಲಿರುವ ಈ ಕಾಲದಲ್ಲಿ ಸಾಕಾದಷ್ಟು ಹಣವನ್ನು ಒದಗಿಸದೆ ಹೋದರೆ ಜನರ ಆಶೋತ್ತರಗಳನ್ನು ಪೂರೈಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಈ ಬಾಬಿಗೆ ಮತ್ತಷ್ಟು ಹಣವನ್ನು ಒದಗಿಸುವುದು ಅಗತ್ಯವೆಂದು ಹೇಳಿ ನನ್ನಮಾತನ್ನು ಮುಗಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನಪ್ಪಗೌಡ (ಸೊರಬ-ಷಿಕಾರಿಪುರ).—ಸ್ವಾಮಿ, ಎಲ್ಲಾ ಚರ್ಚೆಗಳು ಜಮಾಬಂದಿ ಕಾಲದಲ್ಲಿ, ಅರ್ಜಿ ಕೊಡುವುದು ಅದಕ್ಕೆ ಉತ್ತರ ಕೊಟ್ಟ ಹಾಗೆ ವರ್ಷೇ ವರ್ಷೇ ನಾವು ಕೇಳಿದ್ದು ತಾವು ಹೇಳುವುದು ಈ ರೀತಿಯಾಗುತ್ತದೆ. ಸೊರಬ ತಾಲ್ಲೂಕಿನ ಒಂದೆರಡು ವಿಚಾರ ಮಾತ್ರ ಹೇಳುತ್ತೇನೆ. 1920ನೇ ಇಸವಿಯೊಳಗೆ ದಂಡಾವತಿ ಪ್ರಾಜೆಕ್ಟ್ ಅಂದಾಜು ಆಗಿತ್ತು. ಸೊರಬ ತಾಲ್ಲೂಕಿನಲ್ಲಿ ಸಂಸ್ಥಾನದ 1/8 ಭಾಗದಷ್ಟು ಬೆಳೆಯುತ್ತಿದ್ದಾರೆ. ಸಂಸ್ಥಾನದೊಳಗೆ 16 ಲಕ್ಷ procurement ಆದರೆ, ನಮ್ಮ ಒಂದು ತಾಲ್ಲೂಕಿನಲ್ಲಿ ಎರಡುಲಕ್ಷ ಕೊಟ್ಟಿದೆ. ಅಲ್ಲಿ Commercial crops ಬೆಳೆಯುವ ಸೌಕರ್ಯ ಬೇರೆ ಯಾವುದೂ ಇಲ್ಲ. ಈಗ ಒಂದು project ಆದರೆ, ರೈತರು ಉದ್ಧಾರವಾಗುತ್ತಾರೆ ಎಂದು ತಮ್ಮನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದು ಅಂತಹ ಪ್ರಾಜೆಕ್ಟು. ಇದರಿಂದ ಉಪಯೋಗವಾಗುತ್ತದೆ. ಆಕಡೆ ದೃಷ್ಟಿ ಕಮ್ಮಿ ಮಾಡಿರಬಹುದು. ಮಾನ್ಯ ಅಧ್ಯಕ್ಷರಿಗೂ, ಅಲ್ಲಿನ ವಿದ್ಯಮಾನಗಳು ಗೊತ್ತು. ಅಲ್ಲಿ ದೊಡ್ಡ ದೊಡ್ಡ ಕೆರೆಗಳ ಕಾಮಗಾರಿಗಳು ಆಗುವುದಕ್ಕೆ ಅವಕಾಶವಿಲ್ಲ. ರೈತರಿಗೆ ಬಹಳ ತೊಂದರೆ ಇದೆ. ಸರ್ವಸಾಮಾನ್ಯವಾಗಿ ಪ್ರಾಜೆಕ್ಟುನೊಳಗೆ 15 ಸಾವಿರಕ್ಕಿಂತ ಹೆಚ್ಚಿಗೆ ಬೇಕಾಗುವ ಕೆರೆಗಳು ಯಾವುದೂ ಮಾಡಿಲ್ಲವೆಂದು ತಮಗೆ ತಿಳಿಸುತ್ತೇನೆ. 2,000 ಕೆರೆಗಳಲ್ಲಿ 600 ಕೆರೆಗಳ ಕಾಮಗಾರಿಗಳು ಮಾತ್ರ ಆಗಿರಬಹುದು. ಇದು ಸಂಸ್ಥಾನದ ಕೊನೆಯ ತಾಲ್ಲೂಕು ಆಗಿದೆ. ಆದ್ದರಿಂದ ತಮ್ಮ ಗಮನಕ್ಕೆ ಬರುವ ಪರಿಸ್ಥಿತಿ ಇರುವುದಿಲ್ಲ. ಅನ್ನವಟ್ಟಿ ಹೋಬಳಿಯಲ್ಲಿ ತತ್ತಾವುಗ್ರಾಮದಲ್ಲಿ ಒಂದು ಕೆರೆ ಇದೆ. ಇದನ್ನು ರಿಪೇರಿ ಮಾಡಿಸಲು ಗ್ರಾಮವಾಸಿಗಳು ಮಂತ್ರಿಗಳಿಗೆ ಅರ್ಜಿಯನ್ನು ಕೊಟ್ಟು 20 ವರ್ಷಗಳಾಯಿತು. ಇದಕ್ಕೆ ಅಂದಾಜು ತಯಾರಾಗಿದೆ ಎಂದು ಹೇಳುತ್ತಾರೆಯೇ ಹೊರತು ಕೆಲಸ ಇನ್ನೂ ತೆಗೆದುಕೊಂಡಿಲ್ಲ. ಮೊದಲಿನಿಂದಲೂ ಇದು ಹಿಂದುಳಿದ ತಾಲ್ಲೂಕು. ಆದ್ದರಿಂದ ದಂಡಾವತಿ ಪ್ರಾಜೆಕ್ಟನ್ನು ಮುಂದಿನ ವರ್ಷವಾದರೂ ತೆಗೆದುಕೊಳ್ಳಬೇಕು. ಈಗ ಐದೈದು ವರ್ಷಗಳಿಗೆ limit ಇಟ್ಟುಕೊಂಡು ಕೆಲಸ ಮಾಡುತ್ತಾ ಇರುವುದರಿಂದ ಇನ್ನುಮುಂದೆ 10 ವರ್ಷಗಳ limit ಬರಬಹುದು. ಈರೀತಿ 10ನೇ ವರ್ಷಕ್ಕೆ ಮುಂದೆ ಹಾಕುತ್ತಾ ಹೋದರೆ ಜನಗಳಿಗೆ ತೊಂದರೆಯಾಗುತ್ತದೆ. ಆದಕಾರಣ ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ಇದನ್ನು ಸೇರಿಸಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಅಂಜನಾಪುರ ಕೆರೆ ಕೋಡಿಯನ್ನು ಮೂರು ಅಡಿ ಎತ್ತರಿಸಿ ನೀರನ್ನು ಸೇರಿಸಿಕೊಂಡಿದ್ದರೆ ಬೇಸಿಗೆ ಕಾಲದೊಳಗೆ ಹೆಚ್ಚಿನ ಉಪಯೋಗವಾಗುತ್ತದೆ. ಇದರಿಂದ ಯಾವ ತರಹ ಲುಕ್ಸಾನೂ ಇಲ್ಲ. ಯಾವ ಗ್ರಾಮವೂ ಮುಳುಗಡೆಯಾಗುವುದಿಲ್ಲ. ಅದು ಬಹಳ ಉಪಯುಕ್ತವಾದುದು. ಅಂಬಳಿಗೊಳ ಪ್ರಾಜೆಕ್ಟು ತೆಗೆದುಕೊಂಡು ಕೆಲಸ ಸಾಧ್ಯವಾದ ಮಟ್ಟಿಗೂ ನಡೆಯುತ್ತಾ ಇದೆ. ಅದರ ಏರಿ ಎತ್ತರಿಸಿ ಹೆಚ್ಚು ನೀರು ನಿಲ್ಲುವಂತೆ ಮಾಡಿದರೆ, ಹೆಚ್ಚು ಜನಗಳಿಗೆ ಅನುಕೂಲವಾಗುತ್ತದೆ. ಹೆಚ್ಚು ನೀರು ನಿಲ್ಲಬಾರದು ಎಂಬ ಉದ್ದೇಶದಿಂದ ಕೋಡಿ ತಗ್ಗಿಸುತ್ತಾರೆ. ನೀರು ಹೆಚ್ಚು ನಿಲ್ಲುವುದಕ್ಕೆ ಅವಕಾಶವಿದೆ. ಷಿಕಾರಿಪುರದಲ್ಲಿ ಒಂದು ಬೆಂಗಾಡು ಹೊಸೂರು ಹೋಬಳಿ ಇದೆ. ವರ್ಷೇ ವರ್ಷೇ ಇಲ್ಲಿ ಪೈರು ಆಗುವುದಿಲ್ಲ. ನೀರು ಇಲ್ಲಿಗೆ ಹೋಗಬಹುದು. ಕಮಿಟಿಯವರು ಹೋಗಿ ನೋಡಿದ್ದಾರೆ. ಈ ಬಗ್ಗೆ ನಾನು ಪ್ರಶ್ನೆ ಕೇಳಿದ್ದೇನೆ. ಅದಕ್ಕೆ ಸರಿಯಾದ ಉತ್ತರ ದೊರೆಯಲಿಲ್ಲ. ಆ ಕಮಿಟಿಯ ಅಭಿಪ್ರಾಯವನ್ನು ಮನಸ್ಸಿನಲ್ಲಿಟ್ಟುಕೊಂಡು ಏರಿಯನ್ನು ಏರಿಸಬೇಕು. ಆಗ ಅಲ್ಲಿಗೆ ನೀರು ಒದಗುತ್ತದೆ.

*ಶ್ರೀ ಎ. ಜಿ. ರಾಮಚಂದ್ರರಾವ್ (ನ್ಯಾಯಾಂಗ ಮತ್ತು ವಿದ್ಯಾ ಇಲಾಖೆಗಳ ಮಂತ್ರಿಗಳು).—ಡಿಮ್ಯಾಂಡ್ ನಂಬರ್ 39 (a) ವಿಷಯದಲ್ಲಿ ನಾಲ್ಕು ಮಾತುಗಳನ್ನು ಮಾತ್ರ ಹೇಳುತ್ತೇನೆ. Personal and Miscellaneous Inams rules final ಆಗಿ publicationಗೆ ಕೊಟ್ಟಿದೆ. Religious and Charitable Inams ವಿಷಯದಲ್ಲಿ final ಆಗಿ ರೂಲ್ಸ್ draft ಆಗುತ್ತಾ ಇದೆ. ಈ ಕಾನೂನನ್ನು ಬಹಳ ಜಾಗ್ರತೆ ಜಾರಿಗೆ ಕೊಡುವುದಕ್ಕೆ rules ಅವಶ್ಯಕ. ಅದಕ್ಕೆ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಜೊತೆಗೆ ಇನ್ನೂ ಕೆಲಸಗಳನ್ನು ಮುಂದುವರಿಸುವುದಕ್ಕೆ ಮತ್ತು ಅದರ ವ್ಯಾಪ್ತಿ ತೀರ್ಮಾನ ಮಾಡುವುದಕ್ಕೆ ಒಬ್ಬರು ಸ್ಪೆಷಲ್ ಡೆಪ್ಯುಟಿ ಕಮಿಷನರು, ಮೂರುಜನ ಅಮಲ್ದಾರರು ಮತ್ತು ಅದಕ್ಕೆ ತಕ್ಕ ಸಿಬ್ಬಂದಿ ಏರ್ಪಾಡು ಮಾಡಿದೆ. ಇದರ ಜೊತೆಯಲ್ಲಿ ಸರ್ವೆ ಮತ್ತು ಸೆಟಲ್‌ಮೆಂಟ್ ಮಾಡುವುದಕ್ಕೋಸ್ಕರ ಹೊಸದಾಗಿ ಅಮಲ್ದಾರರು ಮತ್ತು ಸಿಬ್ಬಂದಿಯನ್ನು 17ನೇ ತಾರೀಖಿನೊಳಗೆ ಮೊಕರೂರು ಮಾಡಿದೆ. ಎಲ್ಲೆಲ್ಲಿ ಇನಾಂ ಗ್ರಾಮಗಳು ಸರ್ವೆ ಆಗಿವೆಯೋ ಅಲ್ಲಿ ಫೋಡ ಕೆಲಸ ಮಾಡುವುದಕ್ಕೆ ಸೂಕ್ತಕಾರ್ಯಕ್ರಮ ತೆಗೆದುಕೊಂಡಿದೆ. ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಟೆನೆಂಟ್‌ಗಳಿಗೆ ತೊಂದರೆಯಾಗಬಾರದೆಂದು Alienated Villages (Protection of Tenants and Miscellaneous Provisions Amendment) Act ಇದೇ ಡಿಸೆಂಬರಿಗೆ ಪೂರೈಸಿತು. ಆದಕಾರಣ ಅದನ್ನು ಆರ್ಡಿನೆನ್ಸ್ ಮೂಲಕ ಮುಂದುವರಿಸಿ ಈಗ ಈ ಅಧಿವೇಶನದಲ್ಲಿ ಕಾನೂನು ಮಾಡಿದ್ದೇವೆ. ಬಡ್ಜೆಟ್ಟಿನಲ್ಲಿ ಈ ಬಗ್ಗೆ ಹಣವನ್ನೊದಗಿಸಿಲ್ಲವೆಂದು ಆಕ್ಷೇಪಣೆ ಬಂತು. ಈ ಕಾನೂನಿನ ಸಂಬಂಧವಾಗಿ ರೂಲ್ಸ್ ಮಾಡಬೇಕಾಗಿತ್ತು. ಅದೂ ಆಗುತ್ತಿದೆ. ಪೂರ್ತಿಯಾಗುವುದರಲ್ಲಿದೆ. ಈ ಕೆಲಸ ಮುಗಿಯುವ ಹೊತ್ತಿಗೆ, ಅಕ್ಟೋಬರ್ ತಿಂಗಳಿನಲ್ಲಿ ಎಷ್ಟುಹಣ ಬೇಕಾಗುತ್ತದೆಂಬುದನ್ನು ನೋಡಿ, ಅದಕ್ಕೆ ಮಂಜೂರಾತಿ ಪಡೆಯುತ್ತೇವೆ, ತೊಂದರೆಯೇನೂ ಇಲ್ಲ. ಆದುದರಿಂದ ಈ ಡಿಮ್ಯಾಂಡಿಗೆ ಬೆಂಬಲ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ . ಕೆ. ಪ್ರಭಾಕರ್.—ಇನಾಂ ರದ್ದಿಯಾತಿ ಕಾನೂನಿಗೆ ರೂಲ್ಸ್ ತಯಾರಾಗುತ್ತಿವೆ ಎಂದು ಬಹಳ ದಿವಸಗಳಿಂದಲೂ ಹೇಳುತ್ತಿದ್ದೀರಿ. ಆದಷ್ಟು ಬೇಗ ಅದರ ಕೆಲಸವನ್ನು ಮುಗಿಸಬೇಕೆಂದು ಸೂಚಿಸುತ್ತೇನೆ.

*ಶ್ರೀ ಎಚ್. ಎಂ. ಚನ್ನಬಸಪ್ಪ (ಕೈಗಾರಿಕೆ ಶಾಖೆಯ ಮಂತ್ರಿಗಳು).—ಏಳು ಕೋಟಿ ಚಿಲ್ಲರೆಯಷ್ಟು ಹಣವನ್ನು ಕೆರೆಗಳು ಮತ್ತು ಇತರ ನೀರಾವರಿ ಕಾಮಗಾರಿಗಳ ಬಗ್ಗೆ ಕೊಡತಕ್ಕ ವಿಷಯದಲ್ಲಿ ಬಹಳ ವಿಪುಲವಾಗಿ ಚರ್ಚೆ ನಡೆದಿದೆ. ಮಾನ್ಯಸದಸ್ಯರನೇಕರು ಬಹಳ ಉಪಯುಕ್ತ ಸಲಹೆಗಳನ್ನು ಕೊಟ್ಟಿದ್ದಾರೆ. ಅಲ್ಲದೆ, ಅನೇಕ ಕೆಲಸಕಾರ್ಯಗಳು ನಿರೀಕ್ಷಿಸಿದ ಪ್ರಮಾಣದಲ್ಲಿ ನಡೆದಿಲ್ಲವೆಂದು ಹೇಳಿ ಅತೃಪ್ತಿಯನ್ನು ಸೂಚಿಸಿದ್ದಾರೆ. ಇನ್ನು ಕೆಲವರು ಅನೇಕ ಕೆಲಸಗಳು ಚೆನ್ನಾಗಿ ನಡೆದಿರುವ ಬಗ್ಗೆ ಸಹಾನುಭೂತಿಯನ್ನೂ ಸಂತೋಷವನ್ನೂ ವ್ಯಕ್ತಪಡಿಸಿದ್ದಾರೆ. ಮಾನ್ಯ ಸದಸ್ಯರು ಹೇಳಿರತಕ್ಕ ಎಲ್ಲಾ ಅಂಶಗಳನ್ನೂ ನಾನು ಬಹಳ ಕುತೂಹಲದಿಂದ ಕೇಳಿದೆ. ಇದರಲ್ಲಿ ಕೆಲವು

ಸಣ್ಣ ಪುಟ್ಟ ಕೆರೆಗಳ ದುರಸ್ತಿನ ಸಂಬಂಧದಲ್ಲಿ, ಸ್ಥಳೀಯ ವಿಷಯಗಳಲ್ಲಿ ಪ್ರಸ್ತಾಪ ಮಾಡಿದರು; ಕೆಲವರು ನೀತಿಯ ವಿಷಯ ಪ್ರಸ್ತಾಪ ಮಾಡಿದರು. ಅವರು ಹೇಳಿರತಕ್ಕ ಎಲ್ಲ ವಿಷಯಗಳಿಗೂ ಉತ್ತರ ಕೊಡುವುದಕ್ಕೆ ಸಾಧ್ಯವಿಲ್ಲದಿದ್ದರೂ ಕೆಲವು ಮುಖ್ಯ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡುವುದು ಆವಶ್ಯಕ. ಇನ್ನು ಕೆಲವು ಸದಸ್ಯರು ಪ್ರಸ್ತಾಪ ಮಾಡಿದ ವಿಷಯಗಳ ಬಗ್ಗೆ ನಾನು ಪ್ರಸ್ತಾಪ ಮಾಡದೇ ಬಿಟ್ಟು ಹೋದರೆ, ಅಂಥ ವಿಷಯಗಳ ಬಗ್ಗೆ ಈ ಅಧಿವೇಶನ ಕಳೆದ ಹದಿನೈದು ದಿವಸಗಳಲ್ಲಿ ಅವರು ಸೂಚಿಸಿದ ವಿಷಯದಲ್ಲಿ ಸರ್ಕಾರದ ಅಭಿಪ್ರಾಯವೇನು, ಅದು ಯಾವ ಮಟ್ಟದಲ್ಲಿದೆ, ಸಾಧ್ಯವೆ ಅಥವಾ ಅಸಾಧ್ಯವೆ, ಹಾಗಿದ್ದರೆ ಏನು ಕಾರಣ ಎಂಬುದಕ್ಕೆ ಮಾನ್ಯ ಸದಸ್ಯರಿಗೆ ಉತ್ತರ ಕೊಡುವುದಕ್ಕೆ ಒಪ್ಪಿಕೊಳ್ಳುತ್ತೇನೆ. ಆದುದರಿಂದ, ಮುಖ್ಯವಾಗಿ ತಕ್ಷಣದಲ್ಲಿ ಈಗ ಜ್ಞಾಪಕಕ್ಕೆ ಬರುವ ವಿಷಯಗಳನ್ನು ಮಾತ್ರ ಪ್ರಸ್ತಾಪಿಸುತ್ತೇನೆ. ಮಾವಿನ ಹೊಳೆ ವಿಷಯದಲ್ಲಿ ಶ್ರೀ ಎಲ್. ಸಿದ್ದಪ್ಪನವರು ಹೇಳಿದರು. ಇನ್ನೊಂದು ಗಾಡಿನ ಕಟ್ಟೆಯ ವಿಷಯವನ್ನೂ ಪ್ರಸ್ತಾಪ ಮಾಡಿದರು. ಶ್ರೀ ಹುಚ್ಚೇಗೌಡರು ಹಿತ್ತಲಕೊಪ್ಪಲುಕೆರೆ ವಿಷಯ ಪ್ರಸ್ತಾಪ ಮಾಡಿದರು. ಶ್ರೀ ನಾಗರಾಜ ಮೂರ್ತಿಯವರು ಟಿ.-ನರಸೀಪುರದ ಕೊನೆಯ ಹಂತದಲ್ಲಿರುವ ಜಮೀನುಗಳಿಗೆ ನೀರು ಸರಬರಾಯಿ ಆಗದೇಯಿರುವುದಕ್ಕಾಗಿ ಅತೃಪ್ತಿಯನ್ನು ವ್ಯಕ್ತಪಡಿಸಿದರು. ಮತ್ತೆ ಮಾನ್ಯ ವೆಂಕಟಪ್ಪನವರು ಕಣ್ವ ಕೆರೆಗೆ ನೀರು ಸರಬರಾಯಿ ಆಗತಕ್ಕದ್ದಕ್ಕೆ ಕಷ್ಟವಾಗಿದೆ ಎಂದು ಹೇಳಿದರು. ನಾನು ಇವುಗಳಲ್ಲಿ ಮುಖ್ಯವಾದವುಗಳನ್ನು ಮಾತ್ರ ತೆಗೆದುಕೊಂಡು ತಮಗೆ ಸರ್ಕಾರದ ಅಭಿಪ್ರಾಯ ವೇನೆಂಬುದನ್ನು ತಿಳಿಸುತ್ತೇನೆ.

ಈ ಬಡ್ಜೆಟ್ ಅಷ್ಟು ತೃಪ್ತಿಕರವಾಗಿಲ್ಲ, ಅಂಕಿಅಂಶಗಳನ್ನು 'ಜಗ್ಲರಿ' ಮಾಡಿದ್ದಾರೆ, ಸುಲಭವಾಗಿ ತಿಳಿಯುವ ರೀತಿಯಲ್ಲಿ ಮಾಡಿಲ್ಲವೆಂದು ಮಾನ್ಯ ದೇವರಾಜ ಅರಸ್‌ರವರೂ ಮತ್ತು ಮಾನ್ಯ ವೆಂಕಟಪ್ಪನವರೂ ತಿಳಿಸಿದರು. ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಈಗ ಮಾಡಿರುವ ಬಡ್ಜೆಟ್ ಬಹಳ ಸುಲಭವಾದದ್ದು. ಅದನ್ನು ವಿವರಿಸಿದ ಮೇಲೆ ತಮಗೇ ಗೊತ್ತಾಗುತ್ತದೆ. ಈಗ ಜಾರಿಗೆ ತಂದಿರುವ ಹೊಸಪದ್ಧತಿಗೂ, ಹಿಂದಿನ ಪದ್ಧತಿಗೂ ಸ್ವಲ್ಪ ವ್ಯತ್ಯಾಸವಿದೆ. ಹೋದವರ್ಷವಿದ್ದ ಪದ್ಧತಿಗೂ, ಈ ವರ್ಷದ ಪದ್ಧತಿಗೂ ಒಂದು ವ್ಯತ್ಯಾಸವಿದೆ. I.N.E.D. 18, ಎನ್ನುವುದು, 19 ಮತ್ತು 68 ಇವೆಲ್ಲವೂ expenditure head ಅಂದರೆ ಬರೀ ಖರ್ಚು ಬಾಬು ಎಂದು ಮತ್ತು I.N.E.D. 17 ಎನ್ನುವುದು ಆದಾಯ ಬಾಬು ಎಂದೂ ತಿಳಿಯಬೇಕು. Revenue ಮತ್ತು Capital expenditure ಇರತಕ್ಕ Krishnarajasagara, Kolar Gold Fields Water Works, Chamarajasagara Water Works, Vani Vilas Water Works ಇವೆಲ್ಲವೂ ಈ ಬಾಬಿನಲ್ಲಿ ಬರುತ್ತವೆ.

ಇದುವರೆಗಿನ ಪದ್ಧತಿಯಲ್ಲಿ I.N.E.D. 18 ರಲ್ಲಿ 50 ಸಾವಿರ ರೂಪಾಯಿಗಳಿಗೆ ಕೆಳಪಟ್ಟಂಥ ಕೆಲಸ ಕಾರ್ಯಗಳಿರಬೇಕೆಂದೂ, 19 ರಲ್ಲಿ 50 ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟು ಐದು ಲಕ್ಷ ರೂಪಾಯಿಗಳಿಗೆ ಒಳಪಟ್ಟಂಥ ಕೆಲಸಕಾರ್ಯಗಳೂ, 68ರಲ್ಲಿ ಐದು ಲಕ್ಷಕ್ಕೆ ಮೇಲ್ಪಟ್ಟ ಎಲ್ಲ ಕೆಲಸಕಾರ್ಯಗಳೂ ಇರಬೇಕೆಂದೂ ವಿಧಾಯಕವಾಗಿತ್ತು. ಈಗ 19 ರಲ್ಲಿ 50 ಸಾವಿರ ರೂಪಾಯಿಗಳಿಗೆ ಮೀರಿ ಐದು ಲಕ್ಷಕ್ಕೆ ಒಳಪಟ್ಟ ಕೆಲಸಕಾರ್ಯಗಳು ಇನ್ನುಮುಂದೆ ಇದರಿಂದ ತಪ್ಪಿ it may be merged in I.N.E.D. 68 ಎಂದು ಒಂದು ಬದಲಾವಣೆ ಮಾಡಿದ್ದಾರೆ. I.N.E.D. 18 ರಲ್ಲಿ ಒಂದು ಬದಲಾವಣೆ ಮಾಡಿದ್ದಾರೆ. 20 ಸಾವಿರ ರೂಪಾಯಿಗಳಿಗೆ ಕೆಳಪಟ್ಟ ಕೆಲಸಗಳೆಲ್ಲ I.N.E.D 18 ರಲ್ಲಿಯೇ ಇರುತ್ತದೆ. 20 ಸಾವಿರಕ್ಕೆ ಮೇಲ್ಪಟ್ಟವೆಲ್ಲ I.N.E.D. 68 (A) ನಲ್ಲಿ ಅಂದರೆ 20 ಸಾವಿರಕ್ಕೆ ಮೇಲ್ಪಟ್ಟು 50 ಸಾವಿರಕ್ಕೆ ಒಳಗಿರುವ ಕೆಲಸಗಳೆಲ್ಲ ಇದರಲ್ಲಿ ಬರುತ್ತವೆ. ಈಗ ಬಹಳ ಸುಲಭವಾಗಿ ತಿಳಿಯುತ್ತದೆಂದು ಕಾಣುತ್ತದೆ. ಆದುದರಿಂದ I.N.E.D. XVII ರಲ್ಲಿ Krishnarajasagar, Kolar Gold Fields, Chamarajasagar and Vani Vilas Water Works ಬರುತ್ತವೆ. I.N.E.D. 18 ರಲ್ಲಿ ನೀರಾವರಿ ಕಾಮಗಾರಿಗಳಿಗೆ ಸಂಬಂಧಪಟ್ಟಂಥ 20 ಸಾವಿರ ರೂಪಾಯಿಗಳಿಗೆ ಕೆಳಪಟ್ಟ ಕಾರ್ಯಗಳು ಬರುತ್ತವೆ I.N.E.D. 68-A ನಲ್ಲಿ 20 ಸಾವಿರಕ್ಕೆ ಮೇಲ್ಪಟ್ಟ ಮತ್ತು 50 ಸಾವಿರ ರೂಪಾಯಿಗಳಿಗೆ ಕೆಳಪಟ್ಟ ಎಲ್ಲ ಕೆಲಸಗಳೂ ಬರುತ್ತವೆ. ಮತ್ತು I.N.E.D. ನಲ್ಲಿ 50 ಸಾವಿರಕ್ಕೆ ಮೇಲ್ಪಟ್ಟ ಕೆಲಸಗಳೆಲ್ಲ ಬರುತ್ತವೆ. ಆದುದರಿಂದ ನಿಮ್ಮಗಳಿಗೆ ಸಂಬಂಧಪಟ್ಟ ಕೆಲಸ ಯಾವುದು ಎಂದು ತಿಳಿದರೆ ಅದನ್ನು ಯಾವ 'ಹೆಡ್'ನಲ್ಲಿ ನೋಡಬೇಕು ಎನ್ನುವುದು ಸುಲಭವಾಗಿ ತಿಳಿಯುತ್ತದೆ. ಇಷ್ಟು ವಿವರಣೆಯನ್ನು ಕೊಟ್ಟಮೇಲೆ ಇದು ಜಗ್ಲರಿಯಲ್ಲವೆಂದು ಮಾನ್ಯಸ್ನೇಹಿತರು ಒಪ್ಪಿಕೊಳ್ಳುತ್ತಾರೆಂದು ತಿಳಿದುಕೊಂಡಿದ್ದೇನೆ.

ಇದರಲ್ಲಿ ಕೆಲವು ಮಾನ್ಯಸದಸ್ಯರು ತಾವು ಹೇಳಿದಂಥ ಕೆಲಸಕಾರ್ಯಗಳನ್ನು ಕಾರ್ಯಗತ ಮಾಡಲು ಸೇರಿಸಿಲ್ಲವೆಂದು ಟೀಕೆ ಮಾಡಿದರು. ಶ್ರೀ ಹುಚ್ಚಮಾಸ್ತಿ ಗೌಡರು ಮಂಗಳ ಪ್ರಾಜೆಕ್ಟ್ ಸೇರಿಸಿಲ್ಲವೆಂದರು. ಶ್ರೀ ಶಿವನಂಜೇಗೌಡರು ಮೈಸೂರಿನಲ್ಲಿ ಎಣ್ಣೆಹೊಳೆ ಪ್ರಾಜೆಕ್ಟ್ ಸೇರಿಸಿಲ್ಲವೆಂದು ಆಕ್ಷೇಪಣೆ ಮಾಡಿದರು. ಮತ್ತು ಹಂದಿಹಳ್ಳ ಪ್ರಾಜೆಕ್ಟ್ ಸೇರಲಿಲ್ಲವೆಂದು ಶ್ರೀ ಬಿ. ಪಿ. ನಾಗರಾಜಮೂರ್ತಿಗಳು ಹೇಳಿದರು. ಶ್ರೀ ನಾಗರಾಜಮೂರ್ತಿಗಳವರ ಗಮನವನ್ನು ಎರಡನೆ ವಾಲ್ಯೂಂ 107ನೆ ಪುಟಕ್ಕೆ ಸೆಳೆಯುತ್ತೇನೆ. ಅದರಲ್ಲಿ ಹಂದಿಹಳ್ಳ ಪ್ರಾಜೆಕ್ಟಿಗೆ ಹಣ ಒದಗಿಸಿರುವುದನ್ನು ಅವರು ನೋಡಬಹುದು. ಮತ್ತೆ ಶ್ರೀ ಶಿವನಂಜೇಗೌಡರು 142ನೆ ಪುಟವನ್ನು ನೋಡಿದರೆ ಅಲ್ಲಿ ಅವರ ಎಣ್ಣೆಹೊಳೆ ಪ್ರಾಜೆಕ್ಟ್‌ಗೆ ಹಣ ಒದಗಿಸಿರುವುದನ್ನು ತಾವು ನೋಡಬಹುದು. ಶ್ರೀ ಹುಚ್ಚಮಾಸ್ತಿ ಗೌಡರು ನಾಗಿನಿ ನದಿಗೆ ಅಡ್ಡಕಟ್ಟೆ ಹಾಕಿ ಮಂಗಳ ಪ್ರಾಜೆಕ್ಟ್ ಕೆಲಸಮಾಡುವುದನ್ನು ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸದಿರುವುದು ಬಹಳ ಅನ್ಯಾಯ ಮಾಡಿದ ಹಾಗಾಗಿದೆ ಎಂದು ಹೇಳಿದರು. ಅನ್ಯಾಯ ಮಾಡಕೂಡದೆಂದು ಬಡ್ಜೆಟ್ ಎಸ್ಟಿಮೇಟಿನ 143ನೆಯ ಪುಟದಲ್ಲಿ "Constructing a dam across the River Nagini at Mangala in Tumkur Taluk" ಎಂಬುದಕ್ಕೆ 1956-57ನೆಯ ಸಾಲಿನಲ್ಲಿ 5,000 ರೂಪಾಯಿಗಳನ್ನು ಒದಗಿಸಿದ್ದೇವೆ.

1-30 P.M.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಇದನ್ನು ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಏಕೆ ಸೇರಿಸಿಲ್ಲ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಎಲ್ಲೋ ಸೇರಿಸಿರಲಿ, ನಿಮಗೆ ಕೆಲಸವಾದರೆ ಸರಿ. ಮಾನ್ಯಸದಸ್ಯರು ಬಡ್ಜೆಟ್ ಅಂಕಿಅಂಶ ಎಲ್ಲಿದೆಯೆಂಬುದು ಗೊತ್ತಾಗಲಿಲ್ಲವೆಂಬ ಕಾರಣದಿಂದ ಟೀಕೆಟಿಪ್ಪಣಿಗಳನ್ನು ಮಾಡುವುದಕ್ಕೆ ಅವಕಾಶವಾಯಿತೆಂಬುದನ್ನು ಗಮನಕ್ಕೆ ತರಲು ಇದನ್ನು ಹೇಳಿದೆನೇ ಹೊರತು ಮತ್ತೇನೂ ಅಲ್ಲ. ಶ್ರೀ ಚಿಕ್ಕಲಿಂಗಯ್ಯನವರು ಪ್ರಾರಂಭದಲ್ಲಿ ಟ್ಯಾಂಕ್ ಪಂಚಾಯಿತ್ ಸಿಸ್ಟಂ ಜಾರಿಗೆ ತರಬೇಕು, ಸಾಮಾನ್ಯವಾಗಿ ನಾಲೆ ಮತ್ತು ಹಿಕ್ಕಲು ಕೆಲಸಕಾರ್ಯ ಸರ್ಕಾರವೇ ನೋಡಿಕೊಳ್ಳಬೇಕು ಎಂದು ಹೇಳಿದರು. ಟ್ಯಾಂಕ್ ಪಂಚಾಯಿತ್ ಸಿಸ್ಟಂ ಇರಬೇಕೆಂಬುದು ಟ್ಯಾಂಕ್ ಪಂಚಾಯಿತ್ ಆಕ್ಟಿನಲ್ಲೇ ವಿಧಾಯಕವಾಗಿದೆ. ಮೂಲದಲ್ಲಿ ನೋಡಿದರೆ ಹಳ್ಳಿಯ ಜನರು ಮತ್ತು ಪಂಚಾಯಿತಿಯವರು ಅದನ್ನು ಕೊಡಿ ಎಂದು ಕೇಳಿದರೆ ಸರ್ಕಾರ ವಿಧಾಯಕ ಮಾಡಬೇಕೆಂದು ಕರ್ತವ್ಯವನ್ನು ವಿಧಾಯಕ ಮಾಡಿದೆ, ಗ್ರಾಮಾಂತರಗಳಲ್ಲಿ ಕೆರೆಯ ಕೆಳಗಿರುವ ರೈತರು ಬೇಕೆಂದು ಅಭಿಪ್ರಾಯಪಟ್ಟರೆ ಆಗ ಸರ್ಕಾರದವರು ಟ್ಯಾಂಕ್ ಪಂಚಾಯಿತಿ ಮಾಡಬೇಕೆಂದು ವಿಧಾಯಕವಾಗಿದೆ. ಆಮೇಲೆ ಸಣ್ಣ ಪುಟ್ಟ ಕೈನಾಲೆಗಳ ಆಡಳಿತವನ್ನೆಲ್ಲಾ ಸರ್ಕಾರದವರೇ ವಹಿಸಿಕೊಳ್ಳಬೇಕೆಂದು ಸಾಮಾನ್ಯವಾಗಿ ಅನೇಕ ಸದಸ್ಯರು ಅನೇಕವೇಳೆ ಹೇಳಿದ್ದಾರೆ. ಆದರೆ ಇದು ಸಾಧ್ಯವೆ ಎಂದು ಸ್ವಲ್ಪ ಕೂಲಂಕಷವಾಗಿ ಪರಿಶೀಲಿಸಬೇಕಾದದ್ದು ಬಹಳ ಆವಶ್ಯಕ. ನಾಲೆಗಳ ಪೈಕಿ ಮೂರು ತರಹ ನಾಲೆಗಳಿವೆ. ಮೇನ್ ಅಂದರೆ ಮುಖ್ಯನಾಲೆ, ಡಿಸ್ಟ್ರಿಬ್ಯೂಟರೀಸ್ ಅಂದರೆ ಕೈನಾಲೆ, ಆಮೇಲೆ ಹಿಕ್ಕಲು—ಹೀಗೆ ಮೂರು ವಿಧವಿದೆ. ನಾಲೆಗಳು ಪ್ರಾರಂಭವಾಗುವಾಗ ಹಿಕ್ಕಲೂ ಆಗುತ್ತದೆ. ಸರ್ಕಾರದವರು ದೊಡ್ಡ ನಾಲೆ ನೋಡಿಕೊಳ್ಳಬೇಕು, ಒಂದೊಂದು ದೊಡ್ಡ ದೊಡ್ಡ ಕಾಂಗಾರಿಗಳಲ್ಲೂ ಡಿಸ್ಟ್ರಿಬ್ಯೂಟರಿ ನಾಲೆಗಳನ್ನು ಮೇಂಟೈನ್ ಮಾಡಬೇಕು ಮತ್ತು ಪ್ರತಿಯೊಬ್ಬನ ಗದ್ದೆಗೂ ಹೋಗುವ ಹಿಕ್ಕಲುಗಳನ್ನೆಲ್ಲಾ ಮೇಂಟೈನ್ ಮಾಡಬೇಕು ಎಂಬುದು ಸಾಧ್ಯವೇ ಇಲ್ಲವೆಂಬುದನ್ನು ತಾವು ಒಪ್ಪಿಕೊಳ್ಳಬೇಕು. ಆದ್ದರಿಂದ ಆ ವಿಷಯ ತಾವು ಒಪ್ಪಿಕೊಂಡಮೇಲೆ ಬಿಟ್ಟುಬಿಡೋಣ.

ಶ್ರೀ ಮೂಡಲಗಿರಿಗೌಡರು ಕೆರೆಕಾಂಗಾರಿ ಬಹಳ ತಡವಾಗುತ್ತಿದೆ, ಸರ್ಕಾರದವರು ರಿಟರ್ನ್ ನೋಡುವುದು ಅನಾವಶ್ಯಕ, ವ್ಯಾಪಾರ ದೃಷ್ಟಿಯಿಂದ ನೋಡಕೂಡದು ಎಂದು ಹೇಳಿದರು. ಇದೇ ಅಂಶವನ್ನು ಅನೇಕ ಸದಸ್ಯರು ವಾದಿಸಿದರು. ಈ ವಿಚಾರದಲ್ಲಿ ಒಂದಂಶವನ್ನು ಸಭೆಯ ಮುಂದಿಡುತ್ತೇನೆ. ಈ ಕೆಲಸ ಬಹಳ ಅಗಾಧವಾದುದು. ಈಗ ನಮ್ಮ ಮುಂದಿರುವ ಸಮಸ್ಯೆ ಏನೆಂದರೆ: ಸುಮಾರು 22,176 ಮೈನರ್ ಕೆರೆಗಳಿವೆ, 2,705 ಮೇಜರ್ ಕೆರೆಗಳಿವೆ. ಪೂರ್ವದಲ್ಲಿ ಜನರು ಉತ್ಸಾಹದಿಂದ ಕೆರೆಕಟ್ಟಿದರು. ಈಗ ಅವೆಲ್ಲವನ್ನೂ ಮೇಂಟೈನ್ ಮಾಡಿ ಜನರಿಗೆ ಸಹಾಯವನ್ನೊದಗಿಸುವುದು ನಮ್ಮ ಜವಾಬ್ದಾರಿಯಾಗಿದೆ. ಈ 22,176 ಕೆರೆಗಳನ್ನೂ ಜೀರ್ಣೋದ್ಧಾರಮಾಡಿ ಅದರಿಂದ ಜನರಿಗೆ ಅನುಕೂಲವನ್ನುಂಟುಮಾಡಬೇಕೆಂಬ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲ. ಜೊತೆಗೆ ಮೇಜರ್ ಕೆರೆಗಳಿವೆ. ಅವನ್ನು ಯಾವ ರೀತಿ ನೋಡಿಕೊಳ್ಳಬೇಕೆಂಬುದೇ ದೊಡ್ಡ ಸಮಸ್ಯೆಯಾಗಿದೆ. ಈಗ ನಮ್ಮ ಆಸೆ ಬಹಳ ವೇಗವಾಗಿ ಬೆಳೆಯುತ್ತಿದೆ. ಆದರೆ ಅದನ್ನು ಪೂರೈಸುವ ಶಕ್ತಿ ನಿರ್ದಿಷ್ಟವಾಗಿದೆ. ಇದನ್ನು ಒಪ್ಪಿ ಪರಿಶೀಲಿಸುವುದು ಅಸಾಧ್ಯವಾಗಿದೆ. ಈ 22,176 ಕೆರೆಗಳನ್ನೂ ಏಕಕಾಲದಲ್ಲಿ ಇಂಜನಿಯರುಗಳಿಂದ ಜೀರ್ಣೋದ್ಧಾರ ಮಾಡಿಸಬೇಕು, ರಿಪೇರಿ ಮಾಡಿಸಬೇಕು ಎಂದು ಯೋಚನೆ ಮಾಡಿದರೆ ಅದಕ್ಕೆ ಹಣದ ಶಕ್ತಿ ಎಷ್ಟು ಬೇಕು ಮತ್ತು ಸಿಬ್ಬಂದಿ ಶಕ್ತಿ ಎಷ್ಟು ಬೇಕು ಎಂಬುದನ್ನೆಲ್ಲಾ ನೋಡಿಕೊಂಡು ಕೆಲಸ ಮಾಡಬೇಕು. ಅದರ ಜೊತೆಗೆ ಯಾವಯಾವ ಕೆರೆಯಿಂದ ಎಷ್ಟು ಮಟ್ಟಿಗೆ ಪ್ರಯೋಜನವಾಗುತ್ತದೆಂಬುದನ್ನೂ ದೃಷ್ಟಿಯಲ್ಲಿಟ್ಟು ಮಾಡಬೇಕು. ಹಾಗೆ ಮಾಡುವಾಗ ಯಾವ ಕೆರೆ ಜೀರ್ಣೋದ್ಧಾರ ಮಾಡುವುದರಿಂದ ಹೆಚ್ಚಿನ ಸಹಾಯವಾಗುತ್ತದೆಂದು ವಿಚಾರಮಾಡಿ ಅದಕ್ಕೆ ಹೆಚ್ಚಿನ ಪ್ರಾಧಾನ್ಯತೆ ಕೊಡಬೇಕೆಂಬ ವಿಷಯದಲ್ಲಿ ಭಿನ್ನಾಭಿಪ್ರಾಯಕ್ಕೆ ಅವಕಾಶವಿಲ್ಲ.

ಆದುದರಿಂದ ಈ ಒಂದು ವಿಷಯವನ್ನು ನಾನ ಒಪ್ಪಿಕೊಳ್ಳುತ್ತೇನೆ. ಆದರೆ ಯಾವ ಯಾವ ಕೆರೆಗಳನ್ನು ಮೊದಲು ಕೈಗೊಂಡರೆ ಕಡಮೆ ವೆಚ್ಚದಲ್ಲಿ ದೇಶಕ್ಕೆ ಹೆಚ್ಚು ಪ್ರಯೋಜನ ಲಭಿಸುತ್ತದೋ ಅಂಥ ಕೆರೆಗಳನ್ನು ಮೊದಲು ಜೀರ್ಣೋದ್ಧಾರ ಮಾಡತಕ್ಕದ್ದು ಉಚಿತವಾದದ್ದು ಎಂದು ಹೇಳಿದರೆ ಅದನ್ನು ತಾವೆಲ್ಲರೂ ಒಪ್ಪಿಕೊಳ್ಳುತ್ತೀರಿ ಎಂದು ನಾನು ನಂಬಿದ್ದೇನೆ. ಈ ವಿಚಾರಗಳ ಬಗ್ಗೆ ಒಂದು ಸಮಿತಿಯನ್ನೂ ಕೂಡ ಮಾಡಲಾಗಿತ್ತು. ಅವರು ದೇಶದಲ್ಲಿ ರಿಪೇರಿಯಾಗತಕ್ಕಂಥ ಕೆರೆಗಳ ಸಂಖ್ಯೆ ಎಷ್ಟಿದೆ ಆ ಕಾರ್ಯಗಳನ್ನು ಕೈಗೊಂಡರೆ ಅಲ್ಲಿ ಏನು ನೀರು ಸರದಿ ಹಾಕಬೇಕು, ಆ ಬಗ್ಗೆ ಸರ್ಕಾರದ ಭಾಗ ಎಷ್ಟು ರೈತರ ಭಾಗ ಎಷ್ಟು ಇರಬೇಕೆಂಬುದನ್ನು ತಿಳಿಸಿದ್ದಾರೆ. ನಾವು ಈಗ ಅದರ ಪ್ರಕಾರವೇ ಕೆಲಸ ನಡೆಸುತ್ತಿದ್ದೇವೆ. ಆದರೆ ಶ್ರೀ ನಾಗಪ್ಪಶೆಟ್ಟರು ಆ ನಿಯಮಗಳನ್ನು ಅಷ್ಟು ಕಟ್ಟುನಿಟ್ಟಾಗಿ ಪಾಲಿಸಬೇಕಾಗಿಲ್ಲವೆಂದು ವಾದ ಮಾಡಿದರು. ಆದರೆ ಆ ಸಮಿತಿಯವರ ಶಿಫಾರ್ಸುಗಳನ್ನು ಬಿಟ್ಟುಬಿಟ್ಟು ಕೆಲಸ ಮಾಡಬಹುದೆಂದು ಈ ಮಾನ್ಯ ಸಭೆಯು ತೀರ್ಮಾನ ಮಾಡುವ ಪಕ್ಷಕ್ಕೆ ನಾವು ಅದಕ್ಕೂ ಸಿದ್ಧರಾಗಿದ್ದೇವೆ. ಆದರೆ ಈಗ ಕೈಗೊಳ್ಳಬೇಕೆಂದಿರುವ ಸ್ಕೀಮುಗಳಲ್ಲಿ ಯಾವಯಾವವುಗಳಿಗೆ ಐವತ್ತು ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟು ಅಂದಾಜು ಆಗಿರುತ್ತವೆಯೋ ಅಂಥವುಗಳಿಂದ ಶೇಕಡಾ ಮೂರರಹಾಗೆ ಉತ್ಪತ್ತಿ ಬರಬೇಕೆಂದೂ, ಇನ್ನು ಈ ಐವತ್ತು ಸಾವಿರ ರೂಪಾಯಿಗಳಿಗೆ ಕಡಮೆ ಅಂದಾಜಾಗಿರತಕ್ಕ ಯೋಜನೆಗಳ ಬಗ್ಗೆ ಕೊನೆಯ ಪಕ್ಷ ಶೇಕಡ ಎರಡಷ್ಟಾದರೂ ಉತ್ಪತ್ತಿ ಬರಲೇಬೇಕೆಂದ ತೀರ್ಮಾನ ಮಾಡಲಾಗಿದೆ. ಆ ಸಮಿತಿಯವರ ಶಿಫಾರ್ಸು ಪ್ರಕಾರ ಐವತ್ತು ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟ ಕೆಲಸಗಳಲ್ಲಿ ಈ ಕಾಂಟ್ರಿಬ್ಯೂಷನ್ ಮೊಬಲಗಿನ ಪರಮಾವಧಿ ಆರುನೂರು ರೂಪಾಯಿಗಳಿರಬೇಕೆಂದೂ ಕನಿಷ್ಠ ಪರಿಮಿತಿ ಮುನ್ನೂರು ರೂಪಾಯಿಗಳೆಂದೂ ಐವತ್ತು ಸಾವಿರಕ್ಕೆ ಕೆಳಪಟ್ಟ ಕಾಂಗಾರಿಗಳ ಬಗ್ಗೆ ಈ ಕಂಟ್ರಿಬ್ಯೂಷನ್ ಮೊಬಲಗಿನ ಮ್ಯಾಗ್ಸಿಮಂ ಮುನ್ನೂರು ರೂಪಾಯಿಗಳು, ಮಿನಿಮಂ ಎಪ್ಪತ್ತೈದು ರೂಪಾಯಿಗಳೆಂದೂ ತಿಳಿಸಲಾಗಿದೆ. ಎರಡುಸಾವಿರದ ಐನೂರು ರೂಪಾಯಿಗಳ ಕೆಳಪಟ್ಟ ಕೆಲಸಗಳಲ್ಲಿ ಯಾವ ಕಂಟ್ರಿಬ್ಯೂಷನನ್ನೂ ತೆಗೆದುಕೊಳ್ಳಬೇಕಾಗಿಲ್ಲವೆಂದು ಶಿಫಾರ್ಸು ಮಾಡಿದ್ದಾರೆ. ನೀರು ಸರದಿ ವಿಚಾರದಲ್ಲಿ ಮ್ಯಾಗ್ಸಿಮಂ ಮೂವತ್ತು ರೂಪಾಯಿಗಳೆಂದೂ, ಮಿನಿಮಂ ಹತ್ತು ರೂಪಾಯಿಗಳೆಂದೂ ನಿಗದಿಯಾಗಿದೆ. ಈಗ ಸರ್ಕಾರದವರು ಆ ಶಿಫಾರ್ಸುಗಳನ್ನೆಲ್ಲಾ ಪರಿಶೀಲನೆ ಮಾಡುತ್ತಿದ್ದಾರೆ. ಈ ದಿವಸ ಅವರು ಹೇಳಿರತಕ್ಕ ಶಿಫಾರ್ಸುಗಳನ್ನು ಸರ್ಕಾರ ಒಪ್ಪಿಕೊಳ್ಳುವ ಪಕ್ಷಕ್ಕೆ ಶೇಕಡ ಎರಡಷ್ಟಕ್ಕಿಂತಲೂ ಕಡಮೆ ಉತ್ಪತ್ತಿ ಬರತಕ್ಕಂಥ ಕೆರೆಗಳ ಕಾಮಗಾರಿಗಳನ್ನೆಲ್ಲಾ

ನಾವು ಕೈಗೊಳ್ಳಬೇಕಾಗುತ್ತದೆ. ಇನ್ನು ಇದರ ಜೊತೆಗೆ ಆ ಕುಗ್ರಾಮವಿರತಕ್ಕಂಥ ಪ್ರದೇಶಗಳಲ್ಲಿ ಕೆರೆಗಳ ಕೆಲಸವನ್ನು ಬೇರೆ ಕೈಗೊಳ್ಳಬೇಕಾಗಿರುತ್ತದೆ. ಈಗ ತಾವು ಹೇಳಿರತಕ್ಕಂಥ ಉತ್ತಮ ಸಲಹೆಗಳನ್ನೆಲ್ಲಾ ಸರ್ಕಾರದವರು ತಮ್ಮ ಗಮನದಲ್ಲಿಟ್ಟುಕೊಂಡು ಸಾಧ್ಯವಾದಷ್ಟುಗೂ ಅವುಗಳಿಗೆ ಬೆಂಬಲ ನೀಡಲು ಪ್ರಯತ್ನಪಡುತ್ತಾರೆಂದು ಭರವಸೆಯನ್ನು ತಮಗೆಲ್ಲಾ ನಾನು ಈ ಸಂದರ್ಭದಲ್ಲಿ ಕೊಡಬಲ್ಲೆನು. ಇನ್ನು ಅನೇಕ ಮಾನ್ಯ ಸದಸ್ಯರು ಈ ರೆಸ್ಟೊರೇಷನ್ ಕೆಲಸ ಕಾರ್ಯಗಳು ಬಹಳ ನಿಧಾನವಾಗುತ್ತಿವೆ ಎಂದು ಟೀಕೆ ಮಾಡಿದ್ದಾರೆ. ನಿಜ. ಈ ವಿಷಯದಲ್ಲಿ ಸ್ವಲ್ಪ ಮಟ್ಟಿಗೆ ನಾವೂ ಕೂಡ ಒಪ್ಪಿಕೊಳ್ಳಲೇ ಬೇಕಾಗಿದೆ. ಹೀಗೆ ನಿಧಾನವಾಗುವುದಕ್ಕೆ ಕೆಲವು ಕಡೆ ಒಳ್ಳೆ ಕಾರಣಗಳಿದ್ದು ಅಂಥ ಸಂದರ್ಭಗಳಲ್ಲಿ ನಿಧಾನವಾಗಿದ್ದರೆ ಅವುಗಳ ಬಗ್ಗೆ ಮಾಡತಕ್ಕ ಟೀಕೆ, ಟೀಕೆಯಾಗುವುದಿಲ್ಲ. ಆದರೆ ಎಲ್ಲಿ ಆಗಬೇಕಾದ ಕೆಲಸಗಳು ಯಾವ ಅಡ್ಡಿ ಅಡಚಣೆಗಳಿಲ್ಲದಿದ್ದರೂ, ವಿನಾಕಾರಣ ನಿಧಾನವಾಗಿದ್ದರೆ ಆಗ ತಮ್ಮ ಟೀಕೆಗಳು ಸಕಾರಣವಾಗಿರುತ್ತವೆ. ಆದರೆ ಅಂಥ ಟೀಕೆಗಳಿಗೆ ಅಷ್ಟಾಗಿ ಅವಕಾಶವಿಲ್ಲ. ಏನೋ ಅಪ್ಪಿ ತಪ್ಪಿ ಅಂಥ ಸಂದರ್ಭಗಳು ಒಂದೆರಡಿರಬಹುದು. ಆದಾಗ್ಯೂ ಅದಕ್ಕೆ ಅವಕಾಶ ಕೊಡದಂತೆ ಕೆಲಸ ನಡೆಸಬೇಕಾದದ್ದು ಸರ್ಕಾರದವರ ಕರ್ತವ್ಯ. ನಾವು ಸಾಧ್ಯವಾದ ಮಟ್ಟಿಗೂ ನಮ್ಮ ಜವಾಬ್ದಾರಿಯನ್ನು ಟೀಕೆಗಳಿಗೆ ಅವಕಾಶ ಕೊಡದಂತೆ ನಿರ್ವಹಿಸಿಕೊಂಡು ಬರಬೇಕೆಂಬ ಆಶೆ ಆಕಾಂಕ್ಷೆಗಳು ನಿಮಗಿರುವಂತೆ ನಮಗೂ ಇರುತ್ತವೆ. ಆದರೆ ತಾವು ಈ ರೀತಿ ಚರ್ಚೆ ನಡೆಸಬೇಕಾದದ್ದು ಅವಶ್ಯಕ. ಆದರೆ ನಮ್ಮ ಇಲಾಖಾ ಅಧಿಕಾರಿಗಳು ಎಲ್ಲ ಕಾಲಗಳಲ್ಲೂ, ಎಲ್ಲಾ ಕಾರ್ಯಗಳನ್ನೂ ಸರ್ವ ಸಮರ್ಪಕವಾಗಿರುವಂತೆ ಮಾಡಬೇಕೆಂದರೆ ಬಹಳ ಕಷ್ಟವಿದೆ. ಈ ಪ್ರಾಜೆಕ್ಟುಗಳ ವಿಚಾರದಲ್ಲಿ ನಮ್ಮ ಇಂಜಿನಿಯರ್ ಅವರಿಗೆ ಅನೇಕ ಸಂದರ್ಭಗಳಲ್ಲಿ ತಪ್ಪು ಅಭಿಪ್ರಾಯಗಳು ಬಂದುಬಿಡುತ್ತವೆ. ಆದಕಾರಣ ಅವರು ಈ ಕಾರ್ಯಗಳನ್ನು ಆತುರ ಆತುರವಾಗಿ ನಡೆಸಲು ಸಾಧ್ಯವಿಲ್ಲ. ಹಾಗೆ ಈ ಪ್ರಾಜೆಕ್ಟುಗಳ ವಿಚಾರದಲ್ಲಿ ಆತುರದಿಂದ ವರ್ತಿಸಿದರೆ ನಮ್ಮ ದೇಶದ ಹಣ ನಷ್ಟವಾಗುವುದಕ್ಕೆ ಅವಕಾಶವಾಗಬಹುದು. ಆದಕಾರಣ ಈ ನೀರಾವರಿ ಕಾಮಗಾರಿಗಳ ಬಗ್ಗೆ ಕೊಂಚ ನಿಧಾನವಾಗಿ ಆದರೂ ಅದನ್ನು ತಾವು ಗಮನಿಸಬಾರದು. ಇದು ದೇಶದ ಹಿತದೃಷ್ಟಿಯಿಂದ ಮಾಡತಕ್ಕದ್ದೇ ಶಿವಾಯಿ ಅನ್ಯಥಾ ದುರುದ್ದೇಶದಿಂದ ಅಲ್ಲ ಎಂಬುದಾಗಿ ಹೇಳಿದರೆ ಈ ಅಂಶವನ್ನು ಮಾನ್ಯ ಸದಸ್ಯರೆಲ್ಲರೂ ಒಪ್ಪಿಕೊಳ್ಳುತ್ತಾರೆಂದು ನಾನು ನಂಬಿದ್ದೇನೆ. ಇನ್ನು ಈ ಕೆರೆಗಳ ಸಣ್ಣ ಪುಟ್ಟ ಕಾಂಗಾರಿಗಳು ಎಂದರೆ ಈ ಕೋಡಿ ಎತ್ತರಿಸುವುದು, ತೂಬುಗಳ ರಿಪೇರಿ ಇತ್ಯಾದಿಗಳ ಬಗ್ಗೆ ಬೇರೆ ಬೇರೆ ಅಂದಾಜು ಮಾಡಿ ಅವುಗಳನ್ನು ಪುನಃ ರಿವೈಜ್ ಮಾಡತಕ್ಕದ್ದು ಸರಿಯಲ್ಲ ಎಂದು ಹೇಳಿದರು. ಹೀಗೊಂದು ವೇಳೆ ನಾನು ಹೇಳಲಿ, ತಾವು ಹೇಳಲಿ, ಯಾರು ಹೇಳಿದರೂ ಸರಿಯೇ, ನನ್ನ ಮುಂದೆ ಅನೇಕ ದೃಷ್ಟಾಂತಗಳಿವೆ, ಆತುರ ಆತುರವಾಗಿ ಪ್ರಾಜೆಕ್ಟುಗಳನ್ನು ತಯಾರುಮಾಡಿ, ಹಣ ಖರ್ಚುಮಾಡಿ ಅಪ್ರಯೋಜಕವಾಗಿರುವುದು ಅಥವಾ ನಿರೀಕ್ಷಿಸಿದಷ್ಟು ಪ್ರಯೋಜನವಾಗದೆ ಇರುವ ನಿದರ್ಶನಗಳು ಅನೇಕವಿವೆ. ಆದ್ದರಿಂದ ಈ ವಿಷಯದಲ್ಲಿ ಸಾಧ್ಯವಾದ ಮಟ್ಟಿಗೂ ಎಲ್ಲೆಲ್ಲಿ ಕಮ್ಮಿಮಾಡಬಹುದು, ಯಾವಯಾವ ರೀತಿ ಕಮ್ಮಿಮಾಡಬಹುದು ಎಂಬುದನ್ನು ಯೋಚನೆ ಮಾಡಿ, ಮಾನ್ಯ ಸದಸ್ಯರು ಬಹಳ ಬೇಗ, ಬಹಳ ಯಶಸ್ವಿಯಾಗಿ, ದಕ್ಷತೆಯಿಂದ ನಡೆಯಬೇಕೆಂಬ ವಿಷಯದಲ್ಲಿ ಏನೇನು ಸಲಹೆ ಮಾಡಿದ್ದಾರೆಯೋ ಅವುಗಳನ್ನೆಲ್ಲಾ ದೃಷ್ಟಿಯಲ್ಲಿಟ್ಟುಕೊಂಡು ಈ ಪ್ರಾಜೆಕ್ಟುಗಳನ್ನು ಆದಷ್ಟು ಕಡಮ್ಮೆ ಕಾಲದಲ್ಲಿ ಸಮಗ್ರ ದೃಷ್ಟಿಯನ್ನಿಟ್ಟುಕೊಂಡು ರಿವೈಸ್ಡ್ ಪ್ರಪೋಸಲ್ಲು, ಎಸ್ಟಿಮೇಟ್ಸು ಬರದಂತೆ ಮಾಡಿಕಳುಹಿಸಬೇಕೆಂದು ಅಧಿಕಾರಿಗಳಿಗೆ ಆಜ್ಞೆ ಮಾಡುತ್ತೇವೆ. ಅಷ್ಟೇ ಅಲ್ಲ. ಈ ಆಜ್ಞೆಯನ್ನು ಸರಿಯಾಗಿ ಜಾರಿಗೆ ತರುವ ರೀತಿಯಲ್ಲಿ ವ್ಯವಸ್ಥೆ ಮಾಡುವುದಕ್ಕೆ ಸರ್ವ ಪ್ರಯತ್ನವನ್ನೂ ಮಾಡುತ್ತೇವೆ ಎಂದು ತಮಗೆ ಭರವಸೆ ಕೊಡುತ್ತೇನೆ.

Sri G. DUGGAPPA.—Is it not a fact that the members are enrolled from all the hobli and the taluk, and the Society has been registered according to the Co-operative Societies Act and that the Secretary is the Inspector of Societies, who is a Government servant?

Dr. R. NAGAN GOWDA.—Probably so, Sir.

Sri. G. DUGGAPPA.—Will the Government at least help the Co-operative Society?

Mr. SPEAKER.—They have already said that if any concrete proposal is placed before the Government, they are going to consider the same.

Sri G. DUGGAPPA.—If they are forming a committee to go into the question, may I ask the concerned Minister whether he will consider this question sympathetically?

Dr. R. NAGAN GOWDA.—If a proposal comes, we will consider it favourably.

Water Supply and Drainage Schemes for Municipalities in Chitaldrug District.

Q.—165. Sri Mulka GOVINDA REDDY (Chitaldrug).—

Will the Government be pleased to state:—

(*a*) whether water supply and drainage schemes sanctioned for municipalities in Chitaldrug District have been completed;

(*b*) if not, at what stage they are pending;

(*c*) when they are expected to be completed?

A.—Sri T. CHANNIAH (Minister for Public Health and Local Self-Government).—

(*a*) (*i*) *Water Supply Works*:

Completed—

1. Molakalmuru
2. Jagalur
3. Mayakonda
4. Holalkere
5. Harihar

Under progress—

1. Chitaldrug
2. Challakere
3. Naikanahatti
4. Thuruvanur
5. Hosadurga
6 Davanagere

(*ii*) *Drainage Works*:

Complete—

1. Chitaldrug (1st stage completed).
2. Hosadurga (1st stage completed).

Incompleted—

Davanagere.

(*b*) *Vide* Statement appended below.

(*c*) All the Water Supply Works are proposed to be completed during 1956-57.

Statement showing the list of Water Supply Works and Drainage Works and their stages of progress.

Name of the works	Amount of estimate	Outlay to-date	Stage of progress
	Rs.	Rs.	
1. Improvements of water supply at Chitaldrug (Second Stage).	4,60,000	1,89,917	Required materials have been collected fully. Laying pipe line from Voddu to Jewell filter is completed. R. C. C. Overhead tank staging is completed. Laying sub-lines is also nearing completion.
2. Water Supply to Challakere (New Works).	3,68,000	19,707	Construction of slump-pit, pump house, quarters are almost completed. Sinking bore-wells are under progress.
3. Water Supply to Naikanahatty (New Works).	72,100	...	Sinking bore-wells is in progress which is started recently.
4. Improvements to water supply at Turuvanoor. (Second Stage).	99,000	49,763	Construction of pump house is completed. R.C.C. Overhead tank, raising and distribution mains works are nearing completion.
5. Water Supply to Hosadurga Town.	4,00,000	2,87,399	'C' Class pipes are yet to be received.
6. Water Supply Scheme of Davanagere City.	22,16,250	9,65,014	50 per cent of pipe line required for raising main is received. On receipt of specials, the laying of raising mains will be taken up.
DRAINAGE SCHEME			
Underground Drainage to Davangere City.	10,23,000	2,60,000	The work was being executed by the Municipality and recently it is taken by the Public Works Department.

Sri Mulka GOVINDA REDDY.—May I know when these schemes were sanctioned by the Government ?

Sri T. CHANNIAH.—They were not sanctioned on the same date, but on different dates and in different years. The exact dates of sanction cannot be stated now.

Sri Mulka GOVINDA REDDY.—Is it not a fact that there has been inordinate delay in executing these works ?

Sri T. CHANNIAH.—No. There has been no avoidable delay. Some works could not be completed for want of Pipes and Machinery. The delay is on account of that. As soon as pipes and the required machinery are supplied, these works will be completed.

Sri Mulka GOVINDA REDDY.—In answer to question (c), you have stated that "all the water supply works are proposed to be completed during 1956-57 ". What arrangements have the Government made for supplying the required materials for completion of these works ?

Sri T. CHANNIAH.—The Superintending Engineer of the Sanitary Circle has addressed the Vice-Chairman of the Mysore Iron and Steel Works that arrangements might be made for the supply of water as early as practicable to the Municipalities so that the execution of the work may be facilitated. Since the Iron Works is not in a position to supply all the pipes required by us the works, to some extent, have not progressed.

Sri Mulka GOVINDA REDDY.—Out of Rs. 22,16,250 being the estimate for water supply to Davangere, only 9 lakhs and odd has been spent. Is it possible for Government to complete the remaining work costing Rs. 11 lakhs and odd this year ?

Sri T. CHANNIAH.—It will be taken up next year and continued.

Sri Mulka GOVINDA REDDY.—You have stated that the first stage drainage work for Chitaldrug is completed. May I know when the second stage of the work will be taken up and what the estimate is ?

Sri T. CHANNIAH.—We have sanctioned Rs. 6 lakhs for completing the drainage work. After completing the first stage of the scheme, the second stage will be taken up.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ದಾವಣಗೆರೆ ನಗರದಲ್ಲಿ ನೀರಿಗೆ ಬಹಳ ತೊಂದರೆಯಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಅಲ್ಲಿ ನೀರಿನ ಅಭಾವವಿದೆಯೆಂಬುದು ಬಂದಿದೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಇದನ್ನು ನಿವಾರಿಸಲು ಏನು ಕಾರ್ಯಕ್ರಮ ಕೈಗೊಂಡಿದ್ದೀರಿ ?

ಅಧ್ಯಕ್ಷರು.—ಪ್ರಯತ್ನ ಮಾಡುತ್ತಿದ್ದಾರೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಎಷ್ಟು ದಿವಸದಲ್ಲಿ ಈ ಕೆಲಸ ಮುಗಿಯುತ್ತದೆ ಎಂದು ಕೇಳಿದರೆ, ಇನ್ನೂ ಮೂರು ವರ್ಷವಾಗುತ್ತದೆಂದು ಹೋದಸಾರಿ ಹೇಳಿದರು, ಈಗ ಸರ್ಕಾರದವರು ಏನು ಹೇಳುತ್ತಾರೆ ?

ಶ್ರೀ ಟಿ. ಚನ್ನಯ್ಯ.—ಈಗ ಹರಿಹರದಿಂದ main pipe line ಅರ್ಧ ದಾರಿಯವರೆಗೂ ಹಾಕಲಾಗಿದೆ. ಪೈಪುಗಳು ಒದಗಿದನಂತರ ಉಳಿದ ಅರ್ಧವನ್ನು ಪೂರೈಸಲಾಗುವುದು, ಇದನ್ನು ಹಾಕಿದ ತಕ್ಷಣ ಸಿಟಿಗೆ ಸಾಕಾದಷ್ಟು ನೀರನ್ನೊದಗಿಸುವುದಕ್ಕೆ ತಕ್ಕ ಏರ್ಪಾಡು ಮಾಡುತ್ತೇವೆ. ಸ್ವಲ್ಪ ನಿಧಾನವಾಗುತ್ತದೆ.

12-30 P.M.

District Boards (Reconstitution).

Q.—276. Sri Mali MARIYAPPA (Pavagada).—

Will the Government be pleased to state :—

when the various District Boards of the State will be reconstituted ?

A.—Sri T. CHANNIAH (Minister for Public Health and Local Self-Government).—

As the formation of the State of Greater Mysore or Dakshina Pradesh is imminent and there is a large measure of divergence, not only in the pattern of the District Boards but also in respect of their duties, functions and finances in the several administrative units to be integrated in the New State, Government consider it desirable to take up the elections after a stage is reached in regard to this matter.

ಶ್ರೀ ಮಾಲ ಮರಿಯಪ್ಪ.—States Re-organisation ಆದಮೇಲೆ ಈ ಪ್ರಶ್ನೆಯನ್ನು ತೆಗೆದುಕೊಳ್ಳುತ್ತೇವೆಂದು ಹೇಳೋಣವಾಗಿದೆ. ಸಾರ್ವತ್ರಿಕ ಚುನಾವಣೆಗಳಾಗುವುದಕ್ಕೆ ಮುಂಚೆ ಜಿಲ್ಲಾ ಬೋರ್ಡುಗಳನ್ನು ಪುನರ್ರಚನೆ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಅಥವ ಪ್ರಾಂತ ಏಂಗಡಣೆಯಾದ ಮೇಲೆ ಈ ಪ್ರಶ್ನೆಯನ್ನು ತೆಗೆದುಕೊಳ್ಳುತ್ತೀರಾ ?

Sri T. CHANNIAH—It is too early to say. Government have not yet taken a decision whether to conduct the district board elections before or after the general election.

ಶ್ರೀ ಮಾಲ ಮರಿಯಪ್ಪ.—ಇಷ್ಟು ಅನಿಶ್ಚಿತವಾಗಿರುವುದರಿಂದ ಸಾರ್ವಜನಿಕ ಪ್ರತಿನಿಧಿಗಳ ಸಹಕಾರ ಮತ್ತು ಸಲಹೆಗಳನ್ನು ಪಡೆಯುವುದಕ್ಕೆ ಸಮಿತಿಗಳನ್ನೇನಾದರೂ ರಚಿಸಲು ಆಲೋಚನೆ ಮಾಡಿದ್ದೀರಾ ?

ಶ್ರೀ ಟಿ. ಚನ್ನಯ್ಯ.—ಚುನಾವಣೆಗಳು ಆಗುವವರೆಗೂ ಕಮಿಟಿಗಳನ್ನು ರಚನೆಮಾಡಬೇಕೆಂದು ಯೋಚಿಸಲಾಗಿದೆ ?

ಶ್ರೀ ಮಾಲ ಮರಿಯಪ್ಪ.—ಈ ಕಮಿಟಿಗಳನ್ನು ರಚನೆಮಾಡುವುದಕ್ಕೆ ಸುಮಾರು ಎಷ್ಟು ತಿಂಗಳಾಗಬಹುದು ?

ಶ್ರೀ ಟಿ. ಚನ್ನಯ್ಯ.—ಜಾಗ್ರತೆಯಾಗಿ ಮಾಡುತ್ತೇವೆ.

ಶ್ರೀ ಬಿ. ಚಿಕ್ಕಣ್ಣ.—ವಿಶಾಲ ಮೈಸೂರಾದಮೇಲೆ ಜಿಲ್ಲೆಗಳನ್ನು ದೊಡ್ಡದು ಮಾಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಅದನ್ನೂ ಕೂಡ ನಾವು ಯೋಚನೆ ಮಾಡಬೇಕಾಗುತ್ತದೆ.

Causeway near Boothakatnahalli in Sira-Changavara Road.

Q.—362. Sri B. N. RAME GOWDA (Sira).—

Will the Government be pleased to state :—

(*a*) whether any representation has been made to build a causeway near Boothakatnahalli in Sira-Changavara Road ;

(*b*) the action so far taken to build the causeway ?

A.—Sri T. CHANNIAH (Minister for Public Health and Local Self-Government).—

(*a*) No.

(*b*) Does not arise.

ಶ್ರೀ ಬಿ. ಎನ್. ರಾಮೇಗೌಡ.—ಈ ಕಾಸ್-ವೇ ಕೆಲಸ ಜಿಲ್ಲಾ ಬೋರ್ಡಿಗೆ ಸೇರಿದ್ದೋ ಅಥವ ಪಬ್ಲಿಕ್ ವರ್ಕ್ಸು ಇಲಾಖೆಗೆ ಸೇರಿದ್ದೋ ?

ಶ್ರೀ ಟಿ. ಚನ್ನಯ್ಯ.—ಜಿಲ್ಲಾ ಬೋರ್ಡಿಗೆ ಸೇರಿದ್ದು.

ಶ್ರೀ ಬಿ. ಎನ್. ರಾಮೇಗೌಡ.—ಜಿಲ್ಲಾ ಬೋರ್ಡಿನಲ್ಲಿ ಜಾಸ್ತಿ funds ಇಲ್ಲದೆ ಇರುವುದರಿಂದ, ಈ ಕೆಲಸ ಮಾಡಬೇಕಾದರೆ ಬಹಳ ಖರ್ಚಾಗುತ್ತದೆಂದು ಏನಾದರೂ ಸಮಾಚಾರ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಸೇತುವೆಯನ್ನು ಕಟ್ಟುವುದಕ್ಕೆ ಬಹಳ ಹಣ ಖರ್ಚಾಗುತ್ತದೆಂದು ಆ ಕೆಲಸವನ್ನು ತೆಗೆದುಕೊಳ್ಳಲಿಲ್ಲ. ಆದರೆ causeway ಕಟ್ಟತಕ್ಕ ವಿಚಾರದಲ್ಲಿ ಕಡಿಮೆ ಹಣದಲ್ಲಿ ಕಟ್ಟಿಕೊಳ್ಳುವುದಕ್ಕೆ ಸಾಧ್ಯ. ಆ ಕೆಲಸವನ್ನು ಮಾಡುವುದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತದೆ.

Government witnesses (Payment of batta).

Q.—76. Sri Kotra BASAVANA GOUD (Kudligi).—

Will the Government be pleased to state :—

whether it is a fact that batta is not paid to witnesses in prosecutions launched by the Government ?

A.—Sri A. G. RAMACHANDRA RAO (Minister for Law and Education).—

Attendance of complainants and witnesses at the Criminal Courts being a public duty, payment is made, in accordance with the Rules of Practice, to such of those as are poor or to those who have been put to considerable expense in attending the Court. Batta is not generally paid to all witnesses attending the Criminal Courts.

ಶ್ರೀ ಕೊಟ್ರಬಸವನ ಗೌಡ.—ನನ್ನ ಪ್ರಶ್ನೆಗೆ ಉತ್ತರವಾಗಿ "ಇಲ್ಲವೆಂದು" ಹೇಳಿದ್ದೀರಿ. ಅಕ್ಕಪಕ್ಕದ ಪ್ರಾಂತಗಳಲ್ಲಿ ಯಾವ ರೀತಿ ಇದೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

*ಶ್ರೀ ಎ. ಜಿ. ರಾಮಚಂದ್ರರಾವ್.—ಬಂದಿದೆ.

ಶ್ರೀ ಕೊಟ್ರ ಬಸವನ ಗೌಡ.—ಅಲ್ಲಿರುವ ವ್ಯವಸ್ಥೆ ಯೇನು ?

Sri A. G. RAMACHANDRA RAO.—Madras rules are different from Mysore rules. ಅಲ್ಲಿ ಮ್ಯಾಜಿಸ್ಟ್ರೇಟರ discretionಗೆ ಬಿಟ್ಟಿದ್ದಾರೆ.

ಶ್ರೀ ಕೊಟ್ರಬಸವನ ಗೌಡ.—ಅಲ್ಲಿ ಟಿ. ಎ. ಕೊಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಂದಿದೆ.

ಅಧ್ಯಕ್ಷರು.—ಅಲ್ಲಿಯ ರೂಲ್ಸ್ ಬೇರೆ. ಅಲ್ಲಿ ಮ್ಯಾಜಿಸ್ಟ್ರೇಟರುಗಳ ಇಷ್ಟಕ್ಕೆ ಬಿಟ್ಟಿದ್ದಾರೆಂದು ಹೇಳಿದ್ದಾರೆ.

ಶ್ರೀ ಕೊಟ್ರಬಸವನ ಗೌಡ.—ಹಾಗಾದರೆ ಸಾಕ್ಷಿಗಳು ಸ್ವಂತ ಖರ್ಚಿನಿಂದ ಬರಬೇಕಾದರೆ ಬಹಳ ತೊಂದರೆಯಾಗುತ್ತದೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮೈಸೂರು ರೂಲ್ಸ್ ಪ್ರಕಾರ ಇದು ಒಂದು public duty. ಅದನ್ನು ಮಾಡಬೇಕು ಎನ್ನುವುದೇ ಉದ್ದೇಶ. ಬಡವರಿಗೆ ಮತ್ತು ಬಹಳ ತೊಂದರೆಯಾಗತಕ್ಕವರಿಗೆ ಈ ರೀತಿ ಟಿ.ಎ. ಕೊಡುವುದಕ್ಕೆ ಮೈಸೂರಿನಲ್ಲಿಯೂ ಅವಕಾಶವಿದೆ.

ಶ್ರೀ ಕೊಟ್ರಬಸವನ ಗೌಡ.—ಸಾಕ್ಷಿ ಹೇಳುವುದಕ್ಕೆ ಬರುವ ಜನರು ಸ್ವಂತ ಖರ್ಚಿನಿಂದ ಬರುವಷ್ಟುಮಟ್ಟಿಗೆ ತಿಳುವಳಿಕೆಯನ್ನು ಹೊಂದಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇದುವರೆಗೂ ಮೈಸೂರಿನಲ್ಲಿ ಈ ತರಹ ತೊಂದರೆಯಾಗಿಲ್ಲ.

ಶ್ರೀ ಕೊಟ್ರಬಸವನ ಗೌಡ.—ಹಾಗೆ ಬರುವವರು ಪೋಲೀಸಿನವರ ಒತ್ತಡದ ಮೇಲೆ ಬರುತ್ತಾರಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದಕ್ಕೆ ವಿರೋಧವಾಗಿದೆ. ಇದು ಒಂದು ಕರ್ತವ್ಯವೆಂದು ಭಾವಿಸಿ ಜನರು ಬರುತ್ತಾರೆ.

ಶ್ರೀ ಕೊಟ್ರಬಸವನ ಗೌಡ.—ಡ್ಯೂಟಿ ಎಂದು ಭಾವಿಸಿ ಸಾಮಾನ್ಯ ಜನರು ಸಾರ್ವಜನಿಕ ಕೆಲಸಗಳಿಗೆ ಬರಬೇಕಾದರೆ ಮಂತ್ರಿಗಳು ತಾವು ಪ್ರವಾಸ ಮಾಡುವುದಕ್ಕೆ ತೆಗೆದುಕೊಳ್ಳುವ ಟಿ.ಎ. ಮತ್ತು ಡಿ.ಎ. ಬಿಟ್ಟು ಬಿಡಬೇಕಾದದ್ದು ನ್ಯಾಯುವಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದಕ್ಕೂ ಇದಕ್ಕೂ ಹೋಲಿಕೆ ಮಾಡುವುದಕ್ಕಾಗುವುದಿಲ್ಲ.

Sri H. C. LINGA REDDY.—Has it come to the notice of the Government that many Government cases are failing because witnesses are not paid batta?

Sri A. G. RAMACHANDRA RAO.—No, Sir.

Sri H. C. LINGA REDDY.—Has it come to the notice of the Government that the Police are finding it difficult to produce witnesses to prove their case because witnesses are not paid batta?

Sri A. G. RAMACHANDRA RAO.—No, Sir.

ಶ್ರೀ ಎಸ್. ಸಿದ್ದಪ್ಪ.—ಕ್ರಿಮಿನಲ್ ಕೋರ್ಟುಗಳಲ್ಲಿ ಸಾಕ್ಷಿಗಳು. ರುಜುವಾತು ಕೊಡುವುದಕ್ಕೆ ಸರಿಯಾಗಿ ಬರದೆ ಇರುವುದರಿಂದ ಕಕ್ಷಿಗಾರರು ಕಾದು ವಾಪಸು ಹೋಗಬೇಕಾಗುತ್ತದೆ. ಇದರಿಂದ ರೈತರಿಗೂ ಮತ್ತು ಇತರರಿಗೂ ಅನಾನುಕೂಲವಾಗಿ ತೊಂದರೆಯಾಗುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಎಸ್. ಸಿದ್ದಪ್ಪ.—ಈ ವಿಷಯುವನ್ನು ಅನೇಕ ಸಾರಿ ಈ ಸಭೆಯಲ್ಲಿ ಸರ್ಕಾರದವರ ಗಮನಕ್ಕೆ ತಂದು ಸಾಕ್ಷಿಗಳಿಗೂ ಕೂಡ ಇತರರಿಗೆ ಕೊಟ್ಟ ಹಾಗೆ ಭತ್ಯ ಕೊಡಬೇಕು ಎಂದು ಒತ್ತಾಯ ಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ರೀತಿ ಬಂದಿದೆ. ಅದಕ್ಕೆ ಜವಾಬನ್ನೂ ಕೊಡಲಾಗಿದೆ.

ಶ್ರೀ ಎಸ್. ಸಿದ್ದಪ್ಪ.—ಇದರಿಂದ ಕ್ರಿಮಿನಲ್ ಕೇಸುಗಳು ವಿಲೇವಾರಿ ನಿಧಾನವಾಗಿ ಜನರಿಗೆ ತೊಂದರೆಯಾಗಿರುವುದು ತಮ್ಮ ಗಮನಕ್ಕೆ ಬಂದಿಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ತೊಂದರೆಯಾಗಿಲ್ಲವೆಂದು ಸರ್ಕಾರದ ಭಾವನೆ.

Labour Housing Corporation.

Q.—292. Sri V. M. MASCARENHAS (St. John's Hill).—

Will the Government be pleased to state:—

(*a*) when the Labour Housing Corporation was formed;

(*b*) the houses constructed by it and their total cost during each year;

(*c*) the establishment charges incurred annually since the formation of the Corporation;

(*d*) if this Corporation has now been entrusted with the task of constructing houses for Low Income Groups;

(*e*) if so, the general principles followed by the Corporation in securing owners?

A.—Sri A. G. RAMACHANDRA RAO (Minister for Law and Education).—

(*a*) On 9th August 1952.

(*b*) (i) 2,174.

(ii) The total cost for each year is as follows:—

Year.		*Amount.*
		Rs.
1953-54	...	11,41,816
1954-55	...	39,79,600
1955-56	...	13,20,797
		(Up to December 1955).

(*c*)

		Rs.
1953-54	...	20,654
1954-55	...	74,408
1955-56	...	76,892

(*d*) Yes.

(*e*) The following conditions should be fulfilled:—

(*i*) That the party comes within the purview of the scheme.

(*ii*) That the party owns no house.

(*iii*) That the party has the ability to pay the initial deposit of 20 per cent of the cost.

(*iv*) That the party has the capacity to repay the loan.

Sri V. M. MASCARENHAS.—Sir, in reply to my question (*b*) you have given the cost of construction. Is this entirely the Central Government's contribution or has the Mysore Government any quota of contribution in this?

*Sri A. G. RAMACHANDRA RAO.—Sir, the question relates to Labour Housing Corporation which till now was dealing with Industrial Labour and all these amounts are from the Central Government.

Sri V. M. MASCARENHAS.—What is the reason for the poor out-turn during the year 1955-56 ?

Mr. SPEAKER.—The figures given are only up to December 1955.

Sri V. M. MASCARENHAS.—Even then, proportionately the figures for 1955-56 are not even half of 1954-55 ?

Sri A. G. RAMACHANDRA RAO.—Sir, it cannot be taken like that, because the Hon'ble Member knows that the bills get settled during the last quarter mostly.

Sri V. M. MASCARENHAS.—Who determines the programme of the Corporation ?

Sri A. G. RAMACHANDRA RAO.—The programme is chalked out by the Corporation and it is sent to the Union Government through the local Government and all the three will decide the matter.

Sri V. M. MASCARENHAS.—Under (ಇ), I want to know whether it has come to the notice of the Government that there are very many irregularities in this new Low Income Group Housing Corporation and sites have been given to practically one family and groups of families ?

Sri A. G. RAMACHANDRA RAO.—No information on that or complaint has been received by the Government.

Sri V. M. MASCARENHAS.—If complaints are sent to you will you please take action ?

Sri A. G. RAMACHANDRA RAO.—Surely.

ಶ್ರೀ ಎಸ್. ಸಿದ್ದಪ್ಪ.—ಗೃಹವಸತಿಗಳನ್ನು ಕಲ್ಪಿಸುವುದಕ್ಕೋಸ್ಕರ ಸರ್ಕಾರದವರು ನಿರ್ದಿಷ್ಟವಾದ ಒಂದು ಯೋಜನೆಯನ್ನೇನಾದರೂ ಕೈಗೊಂಡಿದ್ದಾರೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೈಗೊಳ್ಳಲಾಗಿದೆ. ಅದನ್ನು ಸಭೆಯ ಮುಂದೆ ಆಗಾಗ ಪ್ರಶ್ನೆ ಕೇಳಿದಾಗ ಇಡಲಾಗಿದೆ.

ಶ್ರೀ ಎಸ್. ಸಿದ್ದಪ್ಪ.—ಗೃಹಗಳನ್ನು ಕಟ್ಟುವುದಕ್ಕೆ ಬೇಕಾದ ಕಬ್ಬಿಣ, ಸಿಮೆಂಟ್, ಸಾಗುವಾನಿ ಮರ ಇತ್ಯಾದಿಗಳನ್ನು ಬಡ ನೌಕರರಿಗೆ ಸರ್ಕಾರದವರು ನಿರ್ದಿಷ್ಟವಾದ ಬೆಲೆಗೆ ಒದಗಿಸಿರುವುದರಿಂದ ಮನೆಗಳನ್ನು ಕಟ್ಟಲು ಆಗುವ ಖರ್ಚು ಈಗ ಆಗುತ್ತಿರುವುದಕ್ಕಿಂತಲೂ ಕಡಮೆಯಾಗುತ್ತದೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮಾನ್ಯ ಸದಸ್ಯರು ಬಹುಶಃ ಪ್ರತಿಯೊಬ್ಬರೂ ಸಾಲ ತೆಗೆದುಕೊಂಡು ಮನೆಗಳನ್ನು ಕಟ್ಟಿಸುತ್ತಿದ್ದಾರೆಂದು ತಿಳಿದುಕೊಂಡಿರಬಹುದು. ಆದರೆ ಮನೆಗಳನ್ನು ಸಹಕಾರ ಸಂಘಗಳೂ, ಲೇಬರ್ ಹೌಸಿಂಗ್ ಕಾರ್ಪೊರೇಷನ್‌ನವರೂ ಮತ್ತು ಸರ್ಕಾರದವರೂ ಕಟ್ಟಿಸುತ್ತಿದ್ದಾರೆ. ಈ ಸಂಸ್ಥೆಗಳು ಕಟ್ಟುತ್ತ ಇರುವುದರಿಂದ ರಿಯಾಯಿತಿ ದರದಲ್ಲಿ ಮನೆಗಳನ್ನು ಕಟ್ಟಿಸಿ ಒದಗಿಸಲಾಗುತ್ತದೆ.

ಶ್ರೀ ಎಸ್. ಸಿದ್ದಪ್ಪ.—ಮಾನ್ಯ ಮಂತ್ರಿಗಳು ಅಪ್ಪಣೆ ಕೊಡಿಸಿದ್ದು ಅರ್ಥವಾಯಿತು. ಆದರೆ ಮನೆ ಕಟ್ಟುವ ಕೆಲಸವನ್ನು ಕಂಟ್ರಾಕ್ಟರುಗಳಿಗೆ ಕೊಡುವುದರ ಮೂಲಕ ಬಡ ನೌಕರರಿಗೆ ಲುಕ್ಸಾನು ಜಾಸ್ತಿಯಾಗುವುದರಿಂದ ಮನೆಗಳನ್ನು ಅವರೇ ಕಟ್ಟಿಕೊಳ್ಳುವುದಕ್ಕೆ ಅವಕಾಶ ಕೊಟ್ಟು ಕಬ್ಬಿಣ, ಸಿಮೆಂಟ್, ಮರ ಇತ್ಯಾದಿಗಳನ್ನು ಸರ್ಕಾರದವರು ರಿಯಾಯಿತಿ ದರದಲ್ಲಿ ಕೊಡಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನು ಪರಿಶೀಲನೆ ಮಾಡಬೇಕು.

ಶ್ರೀ ಎಸ್. ಸಿದ್ದಪ್ಪ.—ಈ ಯೋಜನೆಯನ್ನು ನಮ್ಮ ಸಂಸ್ಥಾನದಲ್ಲಿ ಕೈಗೊಂಡು ಎಷ್ಟು ವರ್ಷಗಳಾದವು ?

ಶ್ರೀ ಎ. ಜಿ. ರಾಮಚಂದ್ರರಾವ್.—Low Income Group ಯೋಜನೆಯನ್ನು ಈ ವರ್ಷವೇ ತೆಗೆದುಕೊಂಡಿರುವುದು.

ಶ್ರೀ ಎಸ್. ಸಿದ್ದಪ್ಪ.—ಇಂಥಾ ಯೋಜನೆಯಿಂದ ಅನುಕೂಲವಾಗಬೇಕಾದರೆ ಪ್ರತಿವರ್ಷವೂ ಈ ಕೆಲಸವನ್ನು ತೆಗೆದುಕೊಂಡು ಬಡವರಿಗೆ ಮನೆಗಳನ್ನು ಕಟ್ಟಿಸಿಕೊಡಬೇಕು ಎನ್ನುವ ವಿಚಾರದಲ್ಲಿ ತಮ್ಮ ಖಚಿತವಾದ ಅಭಿಪ್ರಾಯವನ್ನು ತಿಳಿಸುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಈ ಯೋಜನೆಯನ್ನು ಮುಂದುವರಿಸಿಕೊಂಡು ಹೋಗಿ ಇನ್ನೂ ಹೆಚ್ಚಿನ ರೀತಿಯಲ್ಲಿ ವ್ಯವಸ್ಥೆ ಮಾಡಬೇಕೆಂಬುದೇ ಸರ್ಕಾರದ ಆಶಯ.

ಶ್ರೀ ವಿ. ವೆಂಕಟಪ್ಪ.—ಮಿಲ್ ಕೆಲಸಗಾರರಿಗೆ ಮನೆ ಕಟ್ಟಿಸುವಾಗ ಮಿಲ್ ಮಾಲೀಕರೇನಾದರೂ ಕಾಂಟ್ರಿಬ್ಯೂಷನ್ ಕೊಡುತ್ತಾರೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—655 ಮನೆಗಳು ಎಲ್ಲೆಲ್ಲಿ ಕಟ್ಟಲ್ಪಡುತ್ತಿವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬೆಂಗಳೂರು ಸಿಟಿಯಲ್ಲಿ 300, ಮೈಸೂರು ಸಿಟಿಯಲ್ಲಿ 50, ಶಿವಮೊಗ್ಗಾದಲ್ಲಿ 70, ಸಹಕಾರ ಸಂಘಗಳ ಮೂಲಕ 235, ಹೀಗೆ ಒಟ್ಟು 655 ಮನೆಗಳು ಕಟ್ಟಲ್ಪಡುತ್ತಿವೆ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಮೈಸೂರು ಸಿಟಿಯಲ್ಲಿ ಯಾವ ಏಜೆನ್ಸಿ ಮೂಲಕ ಇವು ಕಟ್ಟಲ್ಪಡುತ್ತಿವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಟ್ರಸ್ಟ್ ಬೋರ್ಡ್ ಮೂಲಕ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಹಾಗಾದರೆ ಟ್ರಸ್ಟ್ ಬೋರ್ಡ್ ಇರುವ ಕಡೆ ಮಾತ್ರ ಕಟ್ಟುತ್ತಿರುವುದರಿಂದ ಬಾಕಿ ಕಡೆ ಈ ಕೆಲಸ ತೆಗೆದುಕೊಂಡಿಲ್ಲವಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಶಿವಮೊಗ್ಗಾದಲ್ಲಿ ಮುನಿಸಿಪಾಲಿಟಿ ಈ ಕೆಲಸ ಮಾಡುತ್ತಿದೆ. ಅಲ್ಲಿ ಟ್ರಸ್ಟ್ ಬೋರ್ಡಿಲ್ಲ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಸಿಟಿ ಮತ್ತು ಟೌನುಗಳಲ್ಲಲ್ಲದೆ ಬೇರೆ ಕಡೆ ಈ ಕೆಲಸ ತೆಗೆದುಕೊಳ್ಳಲು ಯೋಚನೆ ಮಾಡಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಲೋ ಇನ್ಕಂ ಗ್ರೂಪ್ ಸ್ಕೀಂ ರೂರಲ್ ಪಾರ್ಟ್ಸ್‌ಗೆ ಅನ್ವಯಿಸುವುದಿಲ್ಲವೆಂಬುದನ್ನು ಯೋಚನೆ ಮಾಡಿ ಎರಡು ಲಕ್ಷ ರೂಪಾಯಿಗಳನ್ನು ಸಹಕಾರ ಸಂಘಗಳಿಗೆ ಕೊಟ್ಟಿದೆ, ಕೆಲಸ ಪ್ರಾರಂಭವಾಗಿದೆ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಟೌನುಗಳಲ್ಲಿ ಮುನಿಸಿಪಾಲಿಟಿಯವರು ಕೊ-ಆಪರೇಟಿವ್ ಸೊಸೈಟಿಗಳಿಗೂ, ಲೋ ಇನ್ಕಂ ಅಫಿಷಿಯಲ್ಸ್‌ಗೂ ಸೈಟುಗಳನ್ನು ಕೊಡುವುದಕ್ಕೆ ಏರ್ಪಾಡು ಮಾಡಿದ್ದಾರೆಯೋ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮಾಡಿದೆ ; ಟ್ರಸ್ಟ್‌ಬೋರ್ಡಿಗೆ ಮತ್ತು ಮುನಿಸಿಪಾಲಿಟಿಗೆ ಪ್ರಾಕ್ಟಿಕಲಿ ಅಟ್ ಕಾಸ್ಟ್ ಪ್ರೈಸ್ ಕೊಡುತಿದ್ದಾರೆ.

Sri D. VENKATESH.—May I know out of these 2,174 houses built for workers at Rajaji Nagar and various other places, how many houses have been occupied by workers ?

Sri A. G. RAMACHANDRA RAO.—I want notice.

Sri D. VENKATESH.—Will the Government expedite the matter of giving such of the unoccupied houses to the workers ?

Sri A. G. RAMACHANDRA RAO.—I do not think there is any delay on the part of the Government to give the houses to the workers.

Sri D. VENKATESH.—May I bring it to the notice of the Hon'ble Minister that even though the deposit amount is paid and they are ready to occupy, so far they have not been given the houses for occupation ?

Sri A. G. RAMACHANDRA RAO.—That is not the reason ; the reason is that they want to let it out.

Sri D. VENKATESH.—That is not the reason Sir. Will the Government examine the question ?

Sri A. G. RAMACHANDRA RAO.—Yes Sir ; if the Hon'ble Member gives me more details, I will get it examined.

Sri D. VENKATESH.—Is it not a fact that not providing electric light and water tap has made the workers unable to occupy the houses ?

Sri A. G. RAMACHANDRA RAO.—Yes, there is that difficulty which we are trying to solve.

ಶ್ರೀ ಆರ್. ಅನಂತರಾಮನ್.—ಈಗ ಜಯನಗರದಲ್ಲಿ ಕೂಲಿಗಾರರಿಗೆ ಮನೆ ಕೊಡಬೇಕೆಂದಿರುವುದು ಕಂತಿನ ಮೇಲೋ ಅಥವಾ ಒಂದೇ ಸಲ ಹಣ ಕೊಡಬೇಕೋ ?

ಶ್ರೀ ಎ. ಜಿ. ರಾಮಚಂದ್ರರಾವ್.—ಕಂತಿನ ಮೇಲೆ.

ಶ್ರೀ ಆರ್. ಅನಂತರಾಮನ್.—ಎಷ್ಟು ಕಂತಿನಲ್ಲಿ ಕೊಡಬೇಕು ?

ಶ್ರೀ ಎ. ಜಿ. ರಾಮಚಂದ್ರರಾವ್.—ಜ್ಞಾಪಕವಿಲ್ಲ. ವಿಚಾರಿಸಿ ಹೇಳುತ್ತೇನೆ.

Sri R. ANANTARAMAN.—Is it not better if they are given on easy instalments ?

Sri A. G. RAMACHANDRA RAO.—Yes ; that has been provided.

Sri M. PALANIYAPPAN.—May I know the total amount sanctioned for 1955-56 ?

Sri A. G. RAMACHANDRA RAO.—I have got to ascertain and inform.

Sri M. PALANIYAPPAN.—Will the Government assure that the remaining amount also is spent this year ?

Sri A. G. RAMACHANDRA RAO.—We will do our best in the matter.

Sri M. PALANIYAPPAN.—Is it not a fact that the houses constructed for the low income groups are not strong enough and up to the standard ?

Sri A. G. RAMACHANDRA RAO.—No, Sir ; on the other hand, I hear that the houses are better.

Sri M. PALANIYAPPAN.—Is it not better that cash loans are granted to the parties and allow them to build their own houses ?

Sri A. G. RAMACHANDRA RAO.—I am afraid, the cost will go up.

Sri M. PALANIYAPPAN.—If cash loans are given to the parties, will it not enable them to construct their houses as they desire, using better materials ?

Sri A. G. RAMACHANDRA RAO.—As I have said already, that will be examined.

Sri P. M. SWAMIDURAI.—I want to know whether the Government have given their approval for constructing fifty houses for the industrial labour at K.G.F. ?

Sri A. G. RAMACHANDRA RAO.—It is under consideration of the Government.

Sri P. M. SWAMIDURAI.—Will they expedite the matter because the Corporation is very anxious to build houses, particularly at K.G.F.

Sri A. G. RAMACHANDRA RAO.—Yes.

ಶ್ರೀ ಎಸ್. ಗೋಪಾಲಗೌಡ.—ಮನೆಗಳು ವಾಸಕ್ಕೆ ದೊರೆಯದಿರುವ ಹಳ್ಳಿಗಳಲ್ಲಿ, ಆಸ್ಪತ್ರೆಯಿದ್ದರೂ ಡಾಕ್ಟರುಗಳಿಗೆ ಮನೆಯಿಲ್ಲದಿರುವ ಕಡೆ, ಉಪಾಧ್ಯಾಯರುಗಳಿಗೆ ಮನೆಯಿಲ್ಲದಿರುವ ಸ್ಥಳಗಳಲ್ಲಿ ಮನೆ

ಗಳನ್ನು ಕಟ್ಟಿಸಲು ಈ ಯೋಜನೆಯಲ್ಲಿ ಅವಕಾಶಮಾಡಿದ್ದೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಮನೆ ಕಟ್ಟಿಕೊಳ್ಳಬೇಕೆಂದು ಬಂದರೆ ಈ ಸ್ಕೀಮಿನಲ್ಲಿ ಅವಕಾಶವಿದೆ.

ಶ್ರೀ ಎಸ್. ಗೋಪಾಲಗೌಡ—ಹಾಗಲ್ಲ. ಒಂದು ಊರಿನಲ್ಲಿ ಆಸ್ಪತ್ರೆಯಿರುತ್ತದೆ, ಡಾಕ್ಟರಿಗೆ ವಾಸಕ್ಕೆ ಮನೆಯಿರುವುದಿಲ್ಲ. ಅಂಥ ಸ್ಥಳಗಳೆಷ್ಟಿವೆಯೆಂಬುದನ್ನು ನೋಡಿದ್ದೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಸರ್ಕಾರದವರು ಬೇಕಾದರೆ ಕಟ್ಟಿಸಬಹುದು. ಅದಕ್ಕೆ ಈ ಸ್ಕೀಮು ಅನ್ವಯಿಸುವುದಿಲ್ಲ.

Kanva Reservoir (Feeding from Mari Halla).

Q.—234. Sri V. VENKATAPPA (Channapatna).—

Will the Government be pleased to state :—

(*a*) whether it is not a fact that the Government have approved of the scheme for feeding Kanva Reservoir from Mari Halla;

(*b*) what is the preliminary estimate of the scheme;

(*c*) whether the final estimate is made and when the work will be taken up?

A.—Sri H. M. CHANNABASAPPA (Minister for Industries).—

(*a*) No.

(*b*) Rs. 5·5 lakhs.

(*c*) Not yet; the question of taking up the work will arise after the final estimate is prepared and sanctioned.

ಶ್ರೀ ವಿ. ವೆಂಕಟಪ್ಪ.—ಈ ವಿಚಾರದಲ್ಲಿ ಒಂದು ಗೆಜೆಟ್ ನೋಟಿಫಿಕೇಷನ್ ಆಗಿ ರೈತರು ಹೆಚ್ಚಾಗಿ ಕಾಂಟ್ರಿಬ್ಯೂಷನ್ ಮತ್ತು ವಾಟರ್ ರೇಟ್ ಕೊಡುವುದಕ್ಕೆ ಮುಚ್ಚಳಿಕೆ ಬರೆದುಕೊಡಬೇಕೆಂದು ಕೇಳಿಲ್ಲವೇ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಕೇಳಿದೆ.

ಶ್ರೀ ವಿ. ವೆಂಕಟಪ್ಪ.—ಮೊದಲನೆಯ ಪ್ರಶ್ನೆಯಲ್ಲಿ ಸರ್ಕಾರ ಅನುಮೋದಿಸಿಲ್ಲವೇ ಎಂದು ಕೇಳಿದ್ದಕ್ಕೆ ಇಲ್ಲವೆಂದು ಹೇಳಿರುವುದೇಕೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ತಮ್ಮ ಪ್ರಶ್ನೆ

> "whether it is not a fact that the Government have approved of the scheme for feeding Kanva Reservoir from Mari Halla"

ಎಂಬುದಾಗಿರುವುದರಿಂದ ಅದು approve ಆಗಿಲ್ಲವೆಂದು ಹೇಳಿದೆ.

ಶ್ರೀ ವಿ. ವೆಂಕಟಪ್ಪ.—Approve ಆಗದೆ ಗೆಜೆಟ್ ನೋಟಿಫಿಕೇಷನ್ ಮಾಡುತ್ತಾರೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಗೆಜೆಟ್ ನೋಟಿಫಿಕೇಷನ್ ಮಾಡಿ ರೈತರು ಹೆಚ್ಚಾದ ಕಾಂಟ್ರಿಬ್ಯೂಷನ್ ಮತ್ತು ವಾಟರ್ ರೇಟ್ ಕೊಡಲು ಒಪ್ಪುವರೇ, ಅವರಿಗೆ ಸಾಧ್ಯವೇ, ತಕರಾರೇನಾದರೂ ಇದೆಯೇ ಎಂದು ವಿಚಾರಿಸಿ ಆಮೇಲೆ ನಾವು ಮಂಜೂರು ಮಾಡಬೇಕು.

ಶ್ರೀ ವಿ. ವೆಂಕಟಪ್ಪ.—ಹಾಗಾದರೆ ಮಂಜೂರು ಮಾಡುವುದಕ್ಕೇನು ಕಾರ್ಯಕ್ರಮ ಕೈಕೊಳ್ಳಲಾಗಿದೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಂಜೂರಾಗುವುದಕ್ಕೆ ಕೆಲವು ತೊಂದರೆಗಳಿವೆ. ರೈತರು ಕಾಂಟ್ರಿಬ್ಯೂಷನ್ ಮತ್ತು ವಾಟರ್ ರೇಟ್ ಕೊಡುವುದಿಲ್ಲವೆಂದು ತಕರಾರು ಮಾಡಿರುವುದು ಒಂದು ಕಾರಣ. ಮತ್ತೊಂದು ಅರ್ಕಾವತಿ ವ್ಯಾಲಿ ನೀರನ್ನು, ಅಲ್ಲಿಯೇ ಜಮೀನು ಸಿದ್ಧವಾಗಿರುವಾಗ ಅದನ್ನು ಬಿಟ್ಟು, ಇನ್ನೊಂದು ವ್ಯಾಲಿಗೆ ಡೈವರ್ಟ್ ಮಾಡುವುದು ನೀತಿಯುತವಾಗಿದೆಯೇ ಎಂಬುದನ್ನು ಪರ್ಯಾಲೋಚಿಸಬೇಕಾದ್ದು.

ಶ್ರೀ ವಿ. ವೆಂಕಟಪ್ಪ.—ಅಂದಾಜು 505 ಲಕ್ಷ ರೂಪಾಯಿಗಳಿಗೆ ತಯಾರಾಗಿರುವುದರಿಂದ ಪರ್ಯಾಲೋಚಿಸುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಂದಾಜು 5·5 ಲಕ್ಷ ರೂಪಾಯಿಗಳಿಗೆ ತಯಾರಾಗಿರುವುದು, 505 ಲಕ್ಷಕ್ಕಲ್ಲ. ಅಂದಾಜು ತಯಾರಾಗಬೇಕೆಂದು ಹೇಳಿದಮೇಲೆ ರಿಸರ್ವಾಯರ್‌ಗೆ ಅಂದಾಜು ಮಾಡಲಾಯಿತು. ಅದನ್ನು ಮಂಜೂರುಮಾಡುವಾಗ ಸಾಧಕ ಬಾಧಕ, ಕಷ್ಟನಷ್ಟ ಪರಿಶೀಲಿಸಿ ಆಮೇಲೆ ಮಂಜೂರು ಮಾಡಬೇಕು.

ಶ್ರೀ ವಿ. ವೆಂಕಟಪ್ಪ.—ಈ ಕೆಲಸ ತೆಗೆದುಕೊಳ್ಳಲು ಏರ್ಪಾಡುಮಾಡುತ್ತೇವೆ, 10 ಲಕ್ಷ ರೂಪಾಯಿಗಳು ಖರ್ಚಾದರೂ ಪರವಾಗಿಲ್ಲ ಎಂದು ಮುಖ್ಯಮಂತ್ರಿಗಳು ಹೋದಸಲ ಹೇಳಲಿಲ್ಲವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ನನಗೆ ಗೊತ್ತಿಲ್ಲ.

Reservoir near Thimmammanahalli (Construction).

Q.—269. Sri MALI MARIAPPA (Pavagada).—

Will the Government be pleased to state :—

(*a*) whether an estimate for constructing a reservoir near Thimmammanahalli, Nagalmadike Hobli, Pavagada Taluk is prepared;

(*b*) whether the same is included in the Second Five-Year Plan?

A.—Sri H. M. CHANNABASAPPA (Minister for Industries).—

(*a*) Yes.

(*b*) No.

ಶ್ರೀ ಮಾಲಿ ಮರಿಯಪ್ಪ.—ಅಂದಾಜನ್ನು ಎಷ್ಟು ಮೊತ್ತಕ್ಕೆ ಮಾಡಿದ್ದೀರಿ?

*ಶ್ರೀ ಎಚ್. ಎಂ. ಚನ್ನಬಸಪ್ಪ.—12 ಲಕ್ಷ ರೂಪಾಯಿಗಳಿಗೆ.

ಶ್ರೀ ಮಾಲಿ ಮರಿಯಪ್ಪ.—ಸುಮಾರು ಎಷ್ಟು ಎಕರೆ ಅಚ್ಚುಕಟ್ಟಾಗುತ್ತದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಂದು ಸಾವಿರ ಎಕರೆ.

ಶ್ರೀ ಮಾಲಿ ಮರಿಯಪ್ಪ.—ಈಗ ಸುಮಾರು ನಾಲ್ಕು ವರ್ಷಗಳಿಂದ ಆ ಕಡೆಯ ರೈತರು ಇದು ಅಗತ್ಯವಾಗಿ ಆಗಬೇಕೆಂದು ಆಗಾಗ್ಗೆ ಕೇಳುತ್ತಿದ್ದಾರಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆಗಬೇಕೆಂದು ಒತ್ತಾಯಮಾಡುತ್ತಿರುವುದು ನಿಜ.

ಶ್ರೀ ಮಾಲಿ ಮರಿಯಪ್ಪ.—ಇದನ್ನು ಬಹಳ ಹೆಚ್ಚಿನ ಮಟ್ಟದ್ದಾಗಿರುವುದರಿಂದ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲು ಅನಿವಾರ್ಯವೇನಿತ್ತು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಎರಡುಮೂರು ಅನಿವಾರ್ಯವಿದೆ. ಒಂದು ಇದಕ್ಕಿಂತಲೂ ಕೂಡ ಇನ್ನೂ ಹೆಚ್ಚು ಪ್ರಯಾರಿಟಿಯಿರುವ ಕೆಲಸಗಳನ್ನು ದೃಷ್ಟಿಯಲ್ಲಿಟ್ಟಿರುವುದು, ಇನ್ನೊಂದು ಟಾರ್ಜೆಟ್ ನಿಗದಿ ಆಗದಿರುವುದು ಮತ್ತು ಮೂರನೆಯದು ನದಿಯಲ್ಲಿ 60 ಕ್ಯೂಸೆಕ್ಸ್ ನೀರು ಬಂದರೆ ಸಾಧ್ಯ, ಇಲ್ಲದಿದ್ದರೆ ಸಾಧ್ಯವಿಲ್ಲ ಎಂಬುದು. ಇಷ್ಟು ನೀರು ಬರುತ್ತದೆಯೋ, ಇಲ್ಲವೇ ಎಂದು ಒಂದು ವರ್ಷ ಕಾದುನೋಡಿ ಪರಿಶೀಲಿಸಿ ಮಂಜೂರುಮಾಡಬೇಕು.

ಶ್ರೀ ಮಾಲಿ ಮರಿಯಪ್ಪ.—60 ಕ್ಯೂಸೆಕ್ಸ್‌ಗಿಂತ ಕಡಮೆ ಬಂದರೆ ಕ್ಯಪಾಸಿಟಿ ಕಡಮೆಮಾಡಿ ಕಟ್ಟಬಹುದಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದನ್ನು ಪರಿಶೀಲಿಸಬಹುದು.

ಶ್ರೀ ಮಾಲಿ ಮರಿಯಪ್ಪ.—ತಾವು ಹೇಳಿದ ಇನ್ನೊಂದು ಅನಿವಾರ್ಯ ರೈತರು ಹೆಚ್ಚು ಕಾಂಟ್ರಿಬ್ಯೂಷನ್ ಕೊಡಬೇಕೆಂದು. ಅದಕ್ಕೆ ಸಿದ್ಧವಾಗಿದ್ದರೆ ಪರಿಶೀಲಿಸುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಗತ್ಯವಾಗಿ ಆಗಬಹುದು.

Honnemaradu Hydro-Electric Project.

Q.—36. Sri A. V. NARASIMHA REDDY (Bangalore South).—

Will the Government be pleased to state :—

(*a*) whether they have taken up the construction of the Hydro-Electric Project at Honnemaradu ;

(*b*) (*i*) whether an estimate is prepared for the same ;

(*ii*) if the answer is in the affirmative, the total cost of the estimate and the time required for construction ?

A.—Sri H. M. CHANNABASAPPA (Minister for Industries).—

(*a*) Preliminary work on the project has been started.

(*b*) (*i*) Yes.

(*ii*) Rs. 3,945 lakhs. The first stage of the project with one unit of 71,000 K.W. is expected to be completed by the close of the Second Five-Year Plan. No date can now be set for the completion of the whole scheme.

Sri A. V. NARASIMHA REDDY.—What is the cost that you will have to incur at the first stage of the implementation of this project ?

*Sri H. M. CHANNABASAPPA.—Rs. 22·97 crores.

Sri A. V. NARASIMHA REDDY.—In view of the acute shortage of power in the State, will the Government expedite this matter and see that the first stage of the project is completed within two years ?

Sri H. M. CHANNABASAPPA.—It is an impossibility.

Sri A. V. NARASIMHA REDDY.—What are the difficulties in the way ?

Sri H. M. CHANNABASAPPA.—To spend Rs. 22·97 crores within five years means spending at least Rs. 1¼ lakhs per day within six hours. You can yourself calculate the amount of money that will have to be spent within a day, if the first stage is to be completed in two years.

Sri A. V. NARASIMHA REDDY.—When was this estimate finalised ?

Sri H. M. CHANNABASAPPA.—The estimate was finalised and included in the Second Five-Year Plan.

Sri A. V. NARASIMHA REDDY.—Why was it not included even at the closure of the First Five-Year Plan ?

Sri H. M. CHANNABASAPPA.—Until it was approved by the Planning Commission, we could not take up the works.

Sri A. V. NARASIMHA REDDY.—When was it approved ?

Sri H. M. CHANNABASAPPA.—Very recently.

Sri A. V. NARASIMHA REDDY.—Has not the Central Planning Commission advanced some loan for some of the electric projects in the State previously during the First Five-Year Plan ?

Sri H. M. CHANNABASAPPA.—Not for this project anyway.

Sri M. PALANIYAPPAN.—Have you got money to complete the first stage within five years ?

Sri H. M. CHANNABASAPPA.—We have.

QUESTIONS FOR ANSWERS ON THE DAY

(but not taken up).

Minor Forest Produce.

Q.—24. Sri B. N. BORANNA GOWDA (Belur).—

Will the Government be pleased to state:—

(*a*) the amount that the Forest Department is realising under the following heads:—

(i) by gaulnuts, (ii) by soapnut, (iii) soapnut (antuvala);

(*b*) the procedure that the Forest Department is following regarding sales so far as these minor produces are concerned;

(*c*) whether it is a fact that these produces are sold by public auction;

(*d*) whether it is a fact that each district is made a unit regarding these sales (districtwar income figures itemwar may be furnished for the last two years)?

A.—Dr. R. NAGAN GOWDA (Minister for Agriculture).—

(*a*) As these items are not sold individually no details of receipt from each of the three items are available.

(*b*) The above three items along with other Minor Forest Produce is sold in public auction.

(*c*) Yes.

(*d*) Itemwar figures are not maintained. Districtwar figures are furnished below:—

Name of the Forest Division.		*Revenue for 1953-54.* Rs.	a.	p.
Bangalore	...	14,617	5	0
Kolar	...	50,216	9	3
Tumkur	...	62,952	9	4
Mysore	...	22,929	2	0
Shimoga	...	5,989	11	9
Chikmagalur	...	5,525	12	0
Chitaldrug	...	76,700	1	2
Hassan	...	13,062	7	0
Bhadravathi	...	2,079	13	8
Sagar	...	19,500	3	6
Bellary	...	13,117	12	0
Total Rs.	...	2,86,691	6	8

Name of the Forest Division.		*Revenue for 1954-55.* Rs.	a.	p.
Bangalore	...	29,770	0	3
Kolar	...	83,828	3	6
Tumkur	...	64,359	6	9
Mysore	...	61,877	0	0
Shimoga	...	13,150	11	0
Chikmagalur	...	9,441	8	0
Chitaldrug	...	93,219	8	0
Hassan	...	25,788	12	0
Bhadravathi	..	3,916	11	4
Sagar	...	56,371	1	0
Bellary	...	20,522	6	9
Total Rs.	...	4,62,245	4	7

Medium term loans to Raiyats.

Q.—117. Sri G. A. THIMMAPPA GOWDA (Arkalgud).—

Will the Government be pleased to state:—

(*a*) whether they have asked the Reserve Bank of India for any financial assistance towards the medium term loans for distribution to the agriculturists through the Apex and District Banks;

(*b*) if so, the amount that has been received by them from the Reserve Bank?

A.—Dr. R. NAGAN GOWDA (Minister for Agriculture).—

(*a*) and (*b*) This is under examination.

Water Rate in Visvesvaraya Canal Area.

Q.—174. Sri B. P. NAGARAJA MURTHY (Malavalli).—

Will the Government be pleased to state:—

(*a*) since how long the landholders under V.C. area are paying uniform water rate irrespective of the nature of crop they raise;

(*b*) whether there is any agitation on behalf of the landholders to change this system; if so, since how long;

(*c*) the action taken by them so far?

A.—Sri A. G. RAMACHANDRA RAO (Minister for Law and Education).—

(*a*) A uniform water rate is being levied irrespective of the nature of crop they raise, from the inception of Visvesvaraya Canal.

(*b*) No.

(*c*) Does not arise in view of reply to clause (*b*).

Villages without wells in Gudibanda and Bagepalli Taluks.

Q.—194. Sri B. V. NARAYANA REDDY (Bagepalli-Gudibanda).—

Will the Government be pleased to state :—

whether all the villages in Gudibanda and Bagepalli Taluks are provided with wells ; if not, how many are not provided with wells and the names of those villages ?

A.—Sri T. CHANNIAH (Minister for Public Health and Local Self-Government).—

No. Thirty-one villages in Bagepalli Taluk and three villages in Gudibanda Taluk are not provided with wells.

Vide Statement 'A' appended below.

Names of villages which have not been provided with Drinking Water Wells in Bagepalli and Gudibanda Taluks.

Names of Villages in Bagepalli Taluk.

1	Kolimpalli	17	Mummadivaripalli
2	Gujjepalli	18	Maraganakunte
3	Ramanoddapalli	19	Thimmanapalli
4	Cheruvumundrapalli	20	Pattapalya
5	Hosahudya	21	Sugnampalli
6	Ramaswamipalli	22	Vasanthapur
7	Narayanaswamipalli	23	Kadivannagarikote
8	Chinnaobiayagaripalli	24	Kodamvaripalli
9	Puttapartti	25	Musaliganapalli
10	Gundlupalli	26	Basettipalli
11	Srinivasapur	27	Neeragantapalli
12	Thumakalapalli	28	Karakur
13	Boyipalli	29	Gantamvaripalli
14	Kachapura	30	Devaraddipalli
15	Maddepalli	31	Gangareddipalli
16	Sajjupalli		

Gudibanda Taluk

1. Amani Byrasagara
2. Kantharlahalli
3. Jodi Somalapur

Honnemaradu Project.

Q.—198. Sri B. V. NARAYANA REDDY (Bagepally-Gudibanda).—

Will the Government be pleased to state :—

(*a*) the estimate for Honnemaradu Project ;

(*b*) whether the work has been taken up ;

(*c*) what is the power generated ;

(*d*) when is it expected to be completed ?

A.—Sri H. M. CHANNABASAPPA (Minister for Industries).—

(*a*) Rs. 3,945 lakhs.

(*b*) Preliminary work on the Project has been taken up.

(*c*) The ultimate installed capacity is 7,10,000 K.W.

(*d*) The first stage with one unit of 71,000 K.W. is expected to be completed by the close of the Second Five-Year Plan. No date can now be set for the completion of the whole scheme.

District Boards (Election).

Q.—407. Sri M. LINGANNA (Nanjangud).—

Will the Government be pleased to state :—

(*a*) since how many years ago the District Boards have been abolished ;

(*b*) why and what are the reasons for not having conducted the District Board Elections ?

A.—Sri T. CHANNIAH (Minister for Public Health and Local Self-Government).—

(*a*) The term of office of the members of the District Boards expired on 1st March 1954.

(*b*) As the formation of the State of Greater Mysore or Dakshina Pradesh is imminent and there is a large measure of divergence not only in the pattern of the District Boards but also in respect of their duties, functions and finances in the several administrative units to be integrated in the New State, Government think it desirable to take up the elections after a stage is reached in regard to this matter.

Roads in Arasikere Taluk.

Q.—445. Sri K. PANCHAKSHARIAH (Arsikere).—

Will the Government be pleased to state :—

the several funds and the extent of money spent under each fund for roads in Arsikere Taluk during the years 1952-53, 1953-54 and 1954-55 ?

A.—Sri T. CHANNIAH (Minister for Public Health and Local Self-Government).—

(1) From the District Board Funds:

	Rs.	a.	p.
1952-53	16,847	0	0
1953-54	18,311	8	0
1954-55	25,578	8	0
Total	60,737	0	0

(2) From the Inter-Village Communication Funds :

1952-53	4,697	9	0
1953-54	Nil		
1954-55	Nil		
Total	4,697	9	0

(3) From the Land Revenue Assignment Funds :

1952-53	Nil		
1953-54	Nil		
1954-55	411	0	0
Total	411	0	0

Project at Bidarahally, Heggadadevankote Taluk.

Q.—534. Sri H. K. SIVARUDRAPPA (Gundlupet-Heggadadevankote).—

Will the Government be pleased to state :—

(*a*) whether they have decided to construct any project at Bidarahally in Heggadadevankote Taluk ;

(*b*) whether it has not been brought to their notice through deputations and representations that the construction of the said project would be disadvantageous to the people of the concerned taluk and therefore it should be stopped ;

(*c*) whether they have examined their requests; if so, their decision thereon ?

A.—Sri H. M. CHANNABASAPPA (Minister for Industries).—

(*a*) Yes.

(*b*) Representations have been received.

(*c*) Yes ; it has been decided to take up the project under the Second Plan.

Housing Scheme for Low-paid Officials.

Q.—617. Sri S. SIDDAPPA (Magadi).—

Will the Government be pleased to state :—

(*a*) whether they have undertaken any housing scheme to provide housing

(SRI S. SIDDAPPA.)
facilities to the low-paid Government servants;

(*b*) if so, the number of houses constructed;

(*c*) whether the cost of sites has been kept down so as to be within the reach of these poor officials?

A.—Sri A. G. RAMACHANDRA RAO (Minister for Law and Education).—

(*a*) Yes.

(*b*) None; but 655 houses are under construction for Government servants and others.

(*c*) The sites are allotted at cost price.

Halase Anecut, Mudigere Taluk (extra land revenue levied for atchkat lands).

Q.—636. Sri G. PUTTASWAMY (Chikmagalur Mudigere—Scheduled Castes).—

Will the Government be pleased to state :—

(*a*) whether it has come to their notice that an extra land revenue of Rs. 5 per acre is being levied on the lands coming under the atchkat of Halase Anecut in Mudigere Taluk even though no summer crops are grown;

(*b*) if so, the reason for the same?

A.—Sri A. G. RAMACHANDRA RAO (Minister for Law and Education).—

(*a*) No.

(*b*) Does not arise in view of answer to item (*a*) above.

BUDGET FOR 1956-57—DEMAND FOR GRANTS.

Mr. SPEAKER.—Now demands; we have got three demands for to-day—demand; No. 29, No, 41-A and 45. Demand, No 29,41 A can be taken up and discussed together and for these two Demands, discussion can go on till 4 O'clock and one hour will be spared for the other Demand.

Sri A. BHEEMAPPA NAIK (Molakalmuru).— Would it not be better that each Demand is given specifically some time. Otherwise, what happens is, so many Demands will be lost sight of and on one Demand we may go on talking. I would suggest that for each Demand some time may be allotted and each Demand discussed threadbare.

Sri V. M. MASCARENHAS (St. John's Hill).— The first two can be clubbed together.

Sri G. DUGGAPPA (Holalkere—Scheduled Castes).—Before the Demands are taken up, I have got a representation to make. For this session, I have sent one interpellation about the Mysore Kirloskar, Ltd., Harihar, about the site plan that the Government santioned for them, the share capital, the Government representation there, the Mysore people working in that factory, all these things. Up till now the interpellation has not seen the light of the day and I am afraid Government will not even take interest in collecting the required information from that factory. I understand the Factory people are not willing to supply the answers required. I seek the protection of the Chair to direct the Government to inquire and ascertain why the matter was delayed, why the Factory people are hesitating and not willing to supply the answers required for the questions asked and who is the person responsible. And if there is any officer responsible for the delay in getting these answers. I would request the Chair to direct the Government suitably.

Mr. SPEAKER.—Not only for this question, we have not received replies for a large number of questions. We have reminded the Government to get the replies early.

Sri G. DUGGAPPA.—Even for the questions tabled by me during the last session, I have not received answers. That is why I am making a special representation.

DEMAND No. 29—CIVIL WORKS
50. CIVIL WORKS

Mr. SPEAKER.—I will move demand No. 29, but Demands Nos. 29

and 41-A may be discussed together.
Motion moved :

"That a sum not exceeding Rs. 5,01,90,281 be granted to the Government to defray the charges which will come in course of payment during the year ending 31st day of March 1957, in respect of "Civil Works."

*ಶ್ರೀ ವಿ. ಆರ್. ನಾಯ್ಡು (ಮಲ್ಲೇಶ್ವರಂ)—ಸ್ವಾಮಿ, ನಮ್ಮ ಬೆಂಗಳೂರು ಸಿಟಿಯಲ್ಲಿ ಸುಬೇದಾರ್ ಛತ್ರಂ ರೋಡಿನಲ್ಲಿ—ಶೇಷಾದ್ರಿಪುರದ ಕಡೆಗೆ ಹೋಗು ವಾಗ ಅಲ್ಲಿ ಒಂದು ಮದರಾಸ್ ರೈಲ್ವೆ ಲೆವಲ್ ಕ್ರಾಸಿಂಗ್ ಗೇಟ್ ಇದೆ. ಆ ಪ್ರದೇಶದಲ್ಲಿ ಈ ರೈಲ್ವೆ ಗೇಟ್ ಇರುವುದರಿಂದ ಅಲ್ಲಿಯ ವಾಹನ ಸಂಚಾರಕ್ಕೆ ತುಂಬ ಕಷ್ಟವಾಗಿದೆ. ಅದು ಮದರಾಸ್ ರೈಲ್ವೆ ಬ್ರಾಡ್‌ಗೇಜ್ ಲೈನ್. ರೈಲುಗಳ ಮತ್ತು ಗೂಡ್ಸ್ ಗಾಡಿಗಳ ಹಾಗೂ ಎಂಜಿನ್‌ಗಳ ತಿರುಗಾಟ ಜಾಸ್ತಿ ಆಗಿದೆ. ದಿವಸಕ್ಕೆ ಸರಾಸರಿ 20-30 ಗೂಡ್ಸ್ ಟ್ರೈನುಗಳು ತಿರುಗಾಡುತ್ತವೆ. ಇದರ ಜೊತೆಗೆ ಪ್ರಯಾಣಿಕರ ರೈಲುಗಳು ಬೇರೆ. ಹೀಗಾಗಿ ಆ ರೈಲ್ವೆ ಗೇಟು ಯಾವಾಗ್ಲೂ ಬಂದಾಗಿ ಜನರ ಮತ್ತು ವಾಹನಗಳ ತಿರುಗಾಟಕ್ಕೆ ತುಂಬ ತೊಂದರೆಯಾಗಿದೆ. ಈ ಹಿಂದೆ ಒಂದಾವರ್ತಿ ನಮ್ಮ ಕಾರ್ಪೊರೇಷನ್ನಿನವರೂ ಸಹ ಐವತ್ತು ಲಕ್ಷ ರೂಪಾಯಿಗಳಲ್ಲಿ ಅಲ್ಲಿ ಒಂದು ಓವರ್ ಬ್ರಿಡ್ಜನ್ನು ಕಟ್ಟತಕ್ಕ ಬಗ್ಗೆ ಅಂದಾಜು ತಯಾರಿಸಿದರು. ಬಹುಶಃ ಅವರು ಅಂದಾಜನ್ನು ಸರ್ಕಾರಕ್ಕೆ ಕಳುಹಿಸಿ ಕೊಟ್ಟಿರಬಹುದು. ಆ ಸ್ಥಳದಲ್ಲಿ ಒಂದು ಓವರ್ ಬ್ರಿಡ್ಜಿನ ಅಗತ್ಯ ಬಹಳವಾಗಿದೆಯೆಂದು ಅನೇಕ ವರ್ಷಗಳಿಂದ ಅಲ್ಲಿಯ ಜನರು ಒತ್ತಾಯ ಪಡಿಸುತ್ತಿದ್ದಾರೆ. ಅನೇಕ ಸಂದರ್ಭಗಳಲ್ಲಿ ಆ ಪ್ರದೇಶದಲ್ಲಿ ವಾಸಮಾಡ ತಕ್ಕ ಜನರು ತ್ವರಿತವಾಗಿ ಆಸ್ಪತ್ರೆ, ಸ್ಕೂಲು, ಕೋರ್ಟು ಕಛೇರಿ ಇತ್ಯಾದಿಗಳಿಗೆ ಹೋಗಬೇಕಾಗಿರುತ್ತದೆ. ಅಂಥಾ ಕಾಲದಲ್ಲಿ ಆ ಗೇಟು ಹಾಕಲ್ಪಟ್ಟು ದಿನದ 24 ಗಂಟೆಗಳ ಕಾಲದಲ್ಲಿ ಸುಮಾರು 12 ಗಂಟೆಗಳ ಕಾಲ ಮುಚ್ಚಲ್ಪಟ್ಟಿರುತ್ತದೆ. ಇದರಿಂದ ಜನರಿಗೆ ತುಂಬ ತೊಂದರೆಯಾಗಿದೆ. ಈ ವಿಚಾರಕ್ಕೆ ಸರ್ಕಾರದವರು ಕೂಡಲೆ ಗಮನ ಕೊಟ್ಟು ಆ ಶೇಷಾದ್ರಿಪುರಂ ನಿವಾಸಿಗಳಿಗೂ, ಮಲ್ಲೇಶ್ವರ, ಶ್ರೀರಾಂಪುರ ಇತ್ಯಾದಿ ಜನರಿಗೆ ಅನುಕೂಲವಾಗಿ ಓಡಾಡಲು ಅವಕಾಶವಿರುವಂತೆ ಅಲ್ಲಿ ಒಂದು ರೈಲ್ವೆ ಓವರ್ ಬ್ರಿಡ್ಜನ್ನು ನಿರ್ಮಾಣಮಾಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ. ಅಲ್ಲದೆ ಅಲ್ಲಿ ಅನೇಕ ಕೈಗಾರಿಕೆಗಳು ಬೇರೆ ನಡೆಯುತ್ತವೆ. ಆದಕಾರಣ ಸರ್ಕಾರದವರು ಈ ವಿಚಾರಕ್ಕೆ ಕೂಡಲೆ ಗಮನ ಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

1 P.M.

*ಶ್ರೀ ಎಸ್. ಗೋಪಾಲಗೌಡ (ಸಾಗರ—ಹೊಸನಗರ).—ಸ್ವಾಮಿ, ಈಗ ಸಭೆಯ ಮುಂದೆ ಸರ್ಕಾರದವರು ಮಂಡಿಸಿರತಕ್ಕ ಈ ಸಿವಿಲ್‌ವರ್ಕ್ಸ್‌ಗೆ ಸಂಬಂಧಪಟ್ಟ ಹಾಗೆ ಒಂದು ಡಿಮ್ಯಾಂಡ್ ಮತ್ತು ಕ್ಯಾಪಿಟಲ್ ಅಕೌಂಟ್ ಆಫ್ ಸಿವಿಲ್ ವರ್ಕ್ಸ್ ಎಂಬ ಮತ್ತೊಂದು ಡಿಮ್ಯಾಂಡ್ ಈ ಎರಡು ಡಿಮ್ಯಾಂಡುಗಳ ಮೇಲೆ ಈಗ ಮಾತನಾಡಬೇಕಾಗಿದೆ. ಈ ಎರಡು ಡಿಮ್ಯಾಂಡ್‌ಗಳಿಗೆ ಸಂಬಂಧಪಟ್ಟಹಾಗೆ ಸೂಚಿಸಿರತಕ್ಕ ಮೊಬಲಗು 7 ಕೋಟಿ 27ಲಕ್ಷ 58 ಸಾವಿರದ 981 ರೂಪಾಯಿಗಳಾಗುತ್ತವೆ. ಈ ಮೊಬಲಗಿಗೆ ಸಂಬಂಧಪಟ್ಟ ಎಲ್ಲಾ ವಿಚಾರಗಳನ್ನೂ ಐದು ನಿಮಿಷದಲ್ಲಿ ವಿಮರ್ಶೆಮಾಡಬೇಕು ಎಂದರೆ ಎಷ್ಟು ಕಷ್ಟವಾಗುತ್ತದೆ ಎನ್ನುವುದು ಈ ಮಾನ್ಯ ಸಭೆಯ ಎಲ್ಲ ಸದಸ್ಯರಿಗೂ ತಿಳಿದಿರತಕ್ಕದ್ದೇ ಆಗಿದೆ. ಆದಕಾರಣ ಈ ನೀತಿಯ ಬಗ್ಗೆ ಈಗ ಮಾತನಾಡಬೇಕೆಂದಿದ್ದೇನೆ. ನಮ್ಮ ದೇಶಕ್ಕೆ ಸ್ವತಂತ್ರ್ಯ ಬಂದ ಮೇಲೆ ಕಾಂಗ್ರೆಸ್ಸಿನ ಆಡಳಿತ ವರ್ಗ ಎನ್ನತಕ್ಕದ್ದು ಒಂದು ಹೊಸದಾಗಿ ಸೃಷ್ಟಿ ಆಯಿತು. ಹೀಗೆ ಸ್ವಾತಂತ್ರ್ಯ ಬಂದ ಮೇಲೆ ಸೃಷ್ಟಿಯಾದಂಥ ಹೊಸ ವಿಷಯಗಳಲ್ಲಿ ಕಾಂಗ್ರೆಸ್ ಆಡಳಿತ ಮೊದಲನೆಯದು. ಈಗ ಅದರ ಹಿಂದೆಯೇ ಈ ಕಂಟ್ರಾಕ್ಟರುಗಳ ವರ್ಗ ಎನ್ನುವುದಾಗಿ ಒಂದು ಸ್ಥಾಪಿತವಾಗಿದೆ. ಕಂಟ್ರಾಕ್ಟುಗಳನ್ನು ಕೊಡುವಾಗಲೂ ಕೂಡ ಕಾಂಗ್ರೆಸ್ಸಿನವರಿಗೇ ಉತ್ತೇಜನ ಕೊಡುತ್ತಾ ಇದ್ದಾರೆ. ಕೊಡಬಾರದು ಎಂಬ ನಿಯಮವೇನೂ ಇಲ್ಲ. ಕಾಂಗ್ರೆಸ್ಸಿಗೆ ಸೇರಿದರೆ ಕಟ್ರ್ಯಾಂಕ್ಟ್ ಮಾಡಬಾರದು ಎಂದು ಏನೂ ಇಲ್ಲ. ಆದರೆ ಈ ನೀತಿಯಲ್ಲಿ, ಅಧಿಕಾರಿಗಳಿಗೆ, ಯಾವರೀತಿ ಪಿಡುಗು ಉಂಟಾಗುತ್ತದೆ ಎಂಬುವುದನ್ನು ಮಾತ್ರ ವ್ಯವಸ್ಥೆಯ ದೃಷ್ಟಿಯಿಂದ ಸರ್ಕಾರ ಮತ್ತು ದೇಶದ ಜನತೆ ಪರಿಶೀಲನೆ ಮಾಡಬೇಕು. ಇಂಥ ಒಂದು ಹೊಸ ಕಂಟ್ರಾಕ್ಟರುಗಳ ವರ್ಗ ದೇಶದ ಎಲ್ಲ ಕಡೆಯೂ ಬೆಳೆದು ಬರುತ್ತಾ ಇದೆ. ಇದಕ್ಕೆ ಮೊದಲನೆ ಕಾರಣ ಹೆಚ್ಚು ಹೆಚ್ಚು ಹಣವನ್ನು ಅಭಿವೃದ್ಧಿ ಕಾರ್ಯಗಳಿಗೆ ಈ ಪಬ್ಲಿಕ್ ವರ್ಕ್ಸ್ ಇಲಾಖೆಯ ಮುಖಾಂತರ ಖರ್ಚು ಮಾಡಬೇಕಾಗಿ ಬಂದದ್ದೇ ಆಗಿದೆ. ಇಷ್ಟು ಹಣವನ್ನು ಖರ್ಚು ಮಾಡತಕ್ಕ ವ್ಯವಸ್ಥೆಗೆ ಸಾಕಾದಷ್ಟು ಸಂಖ್ಯೆಯಲ್ಲಿ ಕಂಟ್ರಾಕ್ಟರುಗಳು ಇಲ್ಲದೇ ಇದ್ದದ್ದು ಈ ರೀತಿ ಹೊಸ ಹೊಸ ಕಂಟ್ರಾಕ್ಟರುಗಳು ಬರುವುದಕ್ಕೆ ಮುಖ್ಯ ಕಾರಣ. ಇದರಲ್ಲಿ ಕಾಂಗ್ರೆಸ್ಸಿನಲ್ಲಿ ಪ್ರಭಾವವನ್ನು ಇಟ್ಟುಕೊಂಡಿರುವ ಈ ಕಂಟ್ರಾಕ್ಟರುಗಳಿಗೆ ಅವರಿಗೆ ಸಂಬಂಧಪಟ್ಟ ಜನರನ್ನು ನಿಯಮಿಸತಕ್ಕದ್ದು ಒಂದು ರೀತಿಯಲ್ಲಿ ಬೆಳೆದು ಬಂದಿದೆ. ಇದರಿಂದ ಹೆಚ್ಚಿನ ಹಾನಿ ದೇಶಕ್ಕೆ ಉಂಟಾಗಿದೆ ಎಂದು ಹೇಳಿ ನಮಗೆ ತಿಳಿದು ಬಂದಿದೆ. ಕಾರಣ ಇಷ್ಟೆ. ಮೊದಲನೆಯದು ಈ ಇಲಾಖೆ ಲಂಚಕ್ಕೆ ತವರುಮನೆಯಾಗಿದೆ ಎಂದು ಹೇಳಿ ಅನೇಕ ವರ್ಷಗಳಿಂದ ಟೀಕೆ ಮಾಡುತ್ತಾ ಇರುವುದು ಕೆಲವರಿಗೆ ಗೊತ್ತಿದೆ ಎಂದು ಅಲ್ಲ, ಅಥವಾ ಜವಾಬ್ದಾರಿ ಇಲ್ಲದೇ ಇರುವ ಜನರು ಟೀಕೆ ಮಾಡಿದ್ದಾರೆ ಎಂದು ಅಲ್ಲ, ರಾಜಗೋಪಾಲಾಚಾರ್ಯರವರಂಥವರೇ ಈ ಪಬ್ಲಿಕ್ ವರ್ಕ್ಸ್ ಇಲಾಖೆ ಎನ್ನುವುದು ದೇಶದ ಎರಡನೆಯ ಶತ್ರು ಎಂದು ಹೇಳಿದ್ದಾರೆ. ಅದರಿಂದ ಏನು ಅರ್ಥವಾಗುತ್ತದೆ ಎಂದರೆ ಈ ಇಲಾಖೆಯಲ್ಲಿ ಸಾರ್ವಜನಿಕ ಹಣ ವೆಚ್ಚು ವಾಗುವ ಸಂದರ್ಭದಲ್ಲಿ ಮೊದಲನೆಯದಾಗಿ ಅದಕ್ಕೆ ಸಂಬಂಧಪಟ್ಟ ಅಧಿಕಾರ ವರ್ಗ ಹೆಚ್ಚಿನ ಜವಾಬ್ದಾರಿಯನ್ನು ಹೊಂದಿರತಕ್ಕದ್ದು, ಎರಡನೆಯದಾಗಿ ಅದಕ್ಕೆ ಸಂಬಂಧಪಟ್ಟ ಹಾಗೆ ಕಂಟ್ರಾಕ್ಟುಗಳನ್ನು ಹಿಡಿದು ಹಣವನ್ನು ಖರ್ಚು ಮಾಡುವುದಕ್ಕೆ ಮತ್ತು ಕೆಲಸವನ್ನು ಪೂರೈಸುವುದಕ್ಕೆ ಜವಾಬ್ದಾರಿಯನ್ನು ಹೊತ್ತಿರತಕ್ಕ ಕಂಟ್ರಾಕ್ಟರುಗಳು. ಇವರಿಬ್ಬರೂ ಪ್ರಾಮಾಣಿಕತೆಯಿಂದ ವರ್ತಿಸದೇ ಹೋದದ್ದಲ್ಲಿ ದೇಶದ ಹಣ ಕೋಟ್ಯನುಕೋಟಿ ರೂಪಾಯಿಗಳನ್ನು ಖರ್ಚುಮಾಡುವಾಗ ಖರ್ಚಾಗುವುದು ಮಾತ್ರವೇ ಅಲ್ಲ, ಹೆಚ್ಚಿನ ಹಣದ ದುರುಪಯೋಗ ನಡೆಯುವುದಕ್ಕೆ ಅವಕಾಶವಿದೆ. ಆ ರೀತಿಯಾಗಿ ನಡೆದು ಕೊಂಡು ಹೋಗುತ್ತಿದೆ. ಅದನ್ನು ತಡೆಗಟ್ಟುವುದಕ್ಕೆ, ಆ ರೀತಿ ದೇಶದ ಹಣ ಪೋಲಾಗದೇ ಇರುವ

(ಶ್ರೀ ಎಸ್. ಗೋಪಾಲಗೌಡ.)

ರೀತಿಯಲ್ಲಿ ನಡೆಸಿಕೊಂಡು ಹೋಗುವುದಕ್ಕೆ ಕಾಂಗ್ರೆಸ್ ಹೆಚ್ಚಿನ ಒಂದು ಕಾರ್ಯಕ್ರಮವನ್ನು ಕೈಕೊಳ್ಳುತ್ತದೆ ಎಂದು ನಾನು ಆಶಿಸಿದ್ದೇನೆ. ಹಿಂದೆ ಒಮ್ಮೆ ಶ್ರೀಮಾನ್ ಕಡಿದಾಳ್ ಮಂಜಪ್ಪನವರು, ಇವೊತ್ತು ಪಬ್ಲಿಕ್‌ವರ್ಕ್ಸ್ ಖಾತೆಯನ್ನು ನಡೆಸಿಕೊಂಡು ಹೋಗುತ್ತಾ ಇರುವವರು 6 ತಿಂಗಳುಗಳಲ್ಲಿ ನಾನು ಈ ಇಲಾಖೆಯಲ್ಲಿರುವ ಲಂಚ ಪ್ರವೃತ್ತಿಯನ್ನು ತಡೆಗಟ್ಟ ಬಲ್ಲೆ ಎಂದು ಹೇಳಿದ್ದರು. ಆಗ ಅವರು ಮಂತ್ರಿ ಆಗಿರಲಿಲ್ಲ. ಈಗ ಅವರ ಅನುಭವ ಕೇಳಿದರೆ, ನಾನು ಮಾಡುವ ಪ್ರಯತ್ನ ಮಾಡಿದೆ ಆದರೆ ಇದರಲ್ಲಿ ಪೂರ್ತಿ ಯಶಸ್ವಿಯಾಗುವುದಕ್ಕೆ ಸಾಧ್ಯವಾಗಲಿಲ್ಲ, ಪ್ರಾಮಾಣಿಕತೆ ಎಲ್ಲಾ ಕಡೆಯೂ ಹೆಚ್ಚಬೇಕು, ಕಂಟ್ರಾಕ್ಟರುಗಳಲ್ಲಿ ಮೊದಲು ಪ್ರಾಮಾಣಿಕತೆ ಬರಬೇಕು, ಆಮೇಲೆ ನಾವು ನಮ್ಮ ಸಿಬ್ಬಂದಿಯಲ್ಲಿ ಪ್ರಾಮಾಣಿಕತೆಯನ್ನು ತರುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಇಂಥ ಸಂದರ್ಭದಲ್ಲಿ ಕಂಟ್ರಾಕ್ಟರುಗಳಾಗಿರತಕ್ಕವರ ಮೇಲೆ ಕಾನೂನಿನ ಪರಿಮಿತಿಯಲ್ಲಿ ಈಗಿರತಕ್ಕ ಕೆಲವು ಹಿಡಿತಗಳನ್ನು ಬಿಟ್ಟರೆ, ಬೇರೆ ಹಿಡಿತಗಳು ಇಲ್ಲ, ಜೊತೆಗೆ ಇಂಥ ಕಂಟ್ರಾಕ್ಟರುಗಳು ಮಂತ್ರಿಗಳ ಸಂಬಂಧಿಕರೋ ಅಥವಾ ಪರಿಚಯಸ್ಥರೋ ಅಥವಾ ಆಡಳಿತ ವರ್ಗದಲ್ಲಿ ಪ್ರಭಾವವನ್ನು ಬೆಳೆಸಿಕೊಂಡಿರತಕ್ಕ ಮಹನೀಯರೋ ಆಗಿದ್ದ ಪಕ್ಷದಲ್ಲಿ ಸಂಬಂಧಪಟ್ಟ ಇಲಾಖೆಯ ನೌಕರರ ಮನೋಭಾವ ಯಾವರೀತಿ ಆಗುತ್ತದೆ ಎನ್ನುವುದು ಬಹಳ ಗಹನವಾದ ವಿಷಯ. ಈ ಕಂಟ್ರಾಕ್ಟರುಗಳು ಅಂದಾಜುಗಳನ್ನು ತಯಾರು ಮಾಡಿದ ಮೇಲೂ ಕೂಡ ಬದಲಾವಣೆಗಳನ್ನು ಮಾಡಿಸಿರತಕ್ಕ ನೂರಾರು ಉದಾಹರಣೆಗಳನ್ನು ಕೊಡಬಲ್ಲೆ. ಆಸ್ಪತ್ರೆ ಕಟ್ಟಡಕ್ಕಾಗಲಿ, ರಸ್ತೆಗಾಗಲಿ ಅಥವಾ ಇನ್ನಾವುದಾದರೂ ಸೇತುವೆಗಾಗಲಿ ಇಲಾಖೆಯ ಮುಖಾಂತರ ಖರ್ಚು ಹಾಕಿಸಿಕೊಂಡು, ಅದೂ ಹೇಗೆ ಮಂತ್ರಿಗಳನ್ನು ಪ್ರಭಾವಕ್ಕೆ ಒಳಗುಮಾಡಿ ಅಥವಾ ಅವರಿಗೆ ಬೇರೆ ಯಾವರೀತಿಯಲ್ಲೋ ಸೇವೆಯನ್ನು ಮಾಡಿ ಆ ಕೆಲಸ ಬಂದ ಮೇಲೆ ಆ ಕೆಲಸದ ಕಂಟ್ರಾಕ್ಟಿಗೂ ಕೂಡ ಪ್ರಯತ್ನ ಮಾಡಿ, ಟೆಂಡರ್, ಎಸ್ಟಿಮೇಟ್ ಇದೆ ಎಂದು ಇಲ್ಲ, ಇಲ್ಲ ಎಂದು ಇಲ್ಲ ಅಂಥ ಒಂದು ಸನ್ನಿವೇಶವನ್ನು ನಿರ್ಮಾಣ ಮಾಡಿ—(ಕೆಲವು ಸಂದರ್ಭಗಳಲ್ಲಿ ಅವರಿಗೇ ಆ ಕಂಟ್ರಾಕ್ಟುಗಳು ದೊರೆಯದೇ ಇರತಕ್ಕ ಸಂದರ್ಭವೂ ಇದೆ; ಆಗ ಬೇರೆ ಯಾರೂ ತೆಗೆದುಕೊಳ್ಳದಿದ್ದರೆ ಆ ಕಾರ್ಯ ಆಗದೇ ಇರತಕ್ಕ ಸಂದರ್ಭವೂ ಇದೆ. ಅಂತಹವರ ಕೇಸುಗಳನ್ನು ಬಿಟ್ಟುಬಿಡಬಹುದು)—ತಾನೇ ಮಾಡದೇ ಇದ್ದರೂ ತನ್ನ ಸೂಚನೆ ಪ್ರಕಾರ, ತನ್ನ ಪ್ರಭಾವದ ಅಡಿಯಲ್ಲೇ ಕೆಲಸಮಾಡತಕ್ಕವರನ್ನು ಇವತ್ತು ನಾವು ನೋಡಬಹುದು. ಇದರಿಂದ ಏನಾಗುತ್ತದೆ? ಇಷ್ಟು ಅಂದಾಜಿನ ಕಟ್ಟಡ ಆಗಬೇಕೆಂದು ಕ್ರಮವಾಗಿ ಕೆಲಸ ಆರಂಭವಾಗಿ ಮೂರು ತಿಂಗಳುಗಳು ಆಗುವುದಕ್ಕಿಲ್ಲ ಮತ್ತೆ ಎಸ್ಟಿಮೇಟನ್ನು ಬದಲಾಯಿಸಿರುವುದ ಮತ್ತೆ ಬದಲಾಯಿಸುವುದು ಈ ರೀತಿ ಎಸ್ಟಿಮೇಟೆಡ್ ಕಾಸ್ಟ್ ಒಂದಕ್ಕೆ ಮೂರಷ್ಟಾಗಿ 20 ಸಾವಿರದ ಅಂದಾಜು 70 ಸಾವಿರಕ್ಕೆ ಹೋಗುವುದು ಇದೆ. ಈ ಇಲಾಖೆಯಲ್ಲಿ ಪ್ರತಿಯೊಂದು ಅಂಶವನ್ನೂ ನೋಡುತ್ತಾ ಬಂದರೆ ಇದು ನಿಮ್ಮ ಕಣ್ಣಿಗೆ ಕಾಣುತ್ತದೆ. ಇದಕ್ಕೆ ಮಾರ್ಜಿನ್ ಕೊಡುವುದಕ್ಕೆ ಸಿದ್ಧವಾಗಿದ್ದೇನೆ. ಒಂದು ಲಕ್ಷ ಎಸ್ಟಿಮೇಟ್ ಆದರೆ ಒಂದು ಲಕ್ಷ ಇವತ್ತು ಸಾವಿರ ರೂಪಾಯಿ ಖರ್ಚಾಗಬಹುದು. ಅಷ್ಟು ಮಾರ್ಜಿನ್ ಬಿಡಬಹುದು. ಒಂದೂವರೆ ಲಕ್ಷ ಎರಡು ಲಕ್ಷದವರೆಗೂ ಹೋಗುವಷ್ಟು ಎಸ್ಟಿಮೇಟ್ ಆದರೆ ಅದನ್ನು ಎಸ್ಟಿಮೇಟು ಎಂದು ಕರೆಯುವುದಕ್ಕೇ ಸಾಧ್ಯವಿಲ್ಲ. ಇದು ಆ ಪ್ರಭಾವದಿಂದಲೇ ಆಗುವುದಕ್ಕೆ ಸಾಧ್ಯ ಎನ್ನುವುದನ್ನು ನಾವು ಒಪ್ಪಿಕೊಳ್ಳಬೇಕು. ಕಂಟ್ರಾಕ್ಟರುಗಳು ಎಸ್ಟಿಮೇಟಿನಲ್ಲಿ ಕೊಟ್ಟಿರತಕ್ಕ ಸ್ಪೆಸಿಫಿಕೇಷನ್ನಿನಂತೆ ಮಾಡದೆ ತಪ್ಪು ಮಾಡಿದ್ದಾಗ್ಯೂ ಕೂಡ ಫೈನಲ್ ಬಿಲ್ ಹೋಗುವಾಗ ಈ ಮಹನೀಯರು ಹೋಗಿ ಇಂಜನಿಯರ ಆಫೀಸಿನಲ್ಲಿ ಕುಳಿತುಕೊಂಡು, ಸ್ವಾಮಿ 'ಫೈನಲ್ ಬಿಲ್ ಮಾಡಿಸಿಕೊಡಿ' ಎಂದು ಹೇಳಿಕೊಂಡು ಬೆಂಗಳೂರಿನ ಚೀಫ್ ಇಂಜನಿಯರ ಆಫೀಸಿನಲ್ಲಿ ಜೊತೆಗೆ ಮೂರು ನಾಲ್ಕು ಜನರನ್ನು ಸೇರಿಸಿಕೊಂಡು ತಿರುಗಾಡುತ್ತಿರುತ್ತಾರೆ. ಈ ರೀತಿಯಲ್ಲಿ ಕೆಲಸ ನಡೆದರೆ. . . .

ಒಬ್ಬ ಸದಸ್ಯರು.—ಯಾರು ಆ ರೀತಿ ಮಾಡುತ್ತಾ ಇದ್ದಾರೆ?

ಶ್ರೀ ಎಸ್. ಗೋಪಾಲಗೌಡ.—ಯಾರು ಎನ್ನುವುದನ್ನು ಮೊದಲೇ ಹೇಳಿದೆ. ಕಂಟ್ರಾಕ್ಟರುಗಳು ಮತ್ತು ಅವರಿಗೆ ಬೆಂಬಲ ಕೊಡತಕ್ಕವರು, ಹಣ ಒದಗಿಸತಕ್ಕವರು, ಅವರು ಬಹಳ ಮುತುವರ್ಜಿವಹಿಸಿ ಇದು ನಮ್ಮ ಕೆಲಸ, ನಮ್ಮ ಊರಿನ ಕೆಲಸ, ಆಗಲೇಬೇಕು, ಬಹಳ ಫಾಯಿದೆ ಇದೆ ಎಂದು ಹೇಳಿ ಮನವಿಗಳನ್ನು ಸರ್ಕಾರದ ಮುಂದೆ ಇಟ್ಟು ಕೆಲಸಗಳನ್ನು ಮಂಜೂರು ಮಾಡಿಸಿಕೊಂಡು ಹೋಗತಕ್ಕ ಮಹನೀಯರು ಇದ್ದಾರೆ. ಅಂಥ ಸಂದರ್ಭದಲ್ಲಿ ನೌಕರರ ಪ್ರಾಮಾಣಿಕತೆ ಹೆಚ್ಚಾಗಬೇಕು ಎಂದು ನಾವು ಭಾಷಣ ಮಾಡುವುದಾಗಲಿ ಆಗ್ರಹ ಮಾಡುವುದಾಗಲಿ ಯಾವ ಪ್ರಯೋಜನವನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತದೆ? ಆದ್ದರಿಂದ ಇವೊತ್ತು ಈ ಇಲಾಖೆ ಪಂಚವಾರ್ಷಿಕ ಯೋಜನೆ ಬಂದಮೇಲೆ ಒಂದಕ್ಕೆ ನಾಲ್ಕರಷ್ಟು ವಿಸ್ತರಿಸಿದೆ, ಈ ಸಂಸ್ಥಾನದ ಒಟ್ಟು ಬಡ್ಜೆಟ್ಟಿನಲ್ಲಿ ಶೇಕಡ 10 ರಷ್ಟು ಹಣ ಈ ಇಲಾಖೆಯ ಮುಖಾಂತರ ಖರ್ಚಾಗುತ್ತಿದೆ.

ನಾನು ಈ ನಾಲ್ಕು ವರ್ಷಗಳಿಂದಲೂ ಈ ರೀತಿ ಟೀಕೆ ಮಾಡುವ ಒಂದು ಅಸಹ್ಯವಾದ ಕೆಲಸವನ್ನು ಮಾಡುತ್ತಾ ಬಂದಿದ್ದೇನೆ! ಹಣ ಪೋಲಾಗುತ್ತಿದೆ, ಅದನ್ನು ತಡೆಯಬೇಕು ಆ ಇಲಾಖೆಯಲ್ಲಿ ಪ್ರಾಮಾಣಿಕತೆಯನ್ನುಂಟುಮಾಡಿ ಎಂದು ಹೇಳುತ್ತಲೇ ಇದ್ದೇನೆ. ಆದರೆ ಅದು ಇನ್ನೂ ಸಾಧ್ಯವಾಗಿಲ್ಲ. ಅದನ್ನು ಯಾವ ರೀತಿ ಮಾಡಬೇಕೆಂದು ಕೆಲವು ಸಲಹೆಗಳನ್ನೂ ಸಹ ನಾನು ಕೊಟ್ಟಿದ್ದೆ. ಬೇರೆ ಕಡೆಗಳಲ್ಲಿ ಕಂಟ್ರಾಕ್ಟರುಗಳನ್ನು ರಿಜಿಸ್ಟರ್ ಮಾಡುವ ಪದ್ಧತಿಯಿದೆ. ಅದೇ ರೀತಿ ಇಲ್ಲಿಯೂ ರಿಜಿಸ್ಟರ್ ಮಾಡಿಸಿಯೆಂದು ಹೇಳಿದರೂ ಆ ರೀತಿ ಮಾಡಿಸಿಲ್ಲ. ಇದರಿಂದ ಕೆಲವು ತೊಂದರೆಗಳೇನೋ ಇರಬಹುದು. ಆದರೂ ಅವರಮೇಲೆ ಹಿಡಿತವನ್ನಿಟ್ಟುಕೊಳ್ಳುವುದಕ್ಕೆ ಇದರಿಂದ ಸಾಧ್ಯವಾಗುತ್ತದೆ. ಇದು ಒಂದು ಲೋಪ.

ಇನ್ನೊಂದೇನೆಂದರೆ, ಇಂಜನಿಯರಿಂಗ್ ಇಲಾಖೆಯವರು ತಮ್ಮ ಕೆಲಸವನ್ನು ಸರಿಯಾಗಿ ಮಾಡಿಲ್ಲ. ಒಬ್ಬ ಕಂಟ್ರಾಕ್ಟರನನ್ನು ಅವನು ಕಂಟ್ರಾಕ್ಟರಾಗುವುದಕ್ಕೆ ಅನರ್ಹನೆಂದು ಹೇಳಿದಮೇಲೆಯೂ, ಅವನು ಇನ್ನೊಂದು ಡಿವಿಜನ್ನಿಗೆ ಹೋಗಿ ಆರಾಮವಾಗಿ ಕೆಲಸ ಮಾಡಿಕೊಂಡಿರುವ ನಿದರ್ಶನಗಳಿವೆ. ಆತನು ಅಲ್ಲಿ ಹೋಗಿ, ತನ್ನನ್ನು ಅಪಾದಿಸಿದ ಎಂಜಿನಿಯರು ಬೇರೆ ಜಾತಿಯವನು, ಬೇರೆ ಊರಿನವನಾಗಿದ್ದರಿಂದ ಹಾಗೆ ಮಾಡಿದನೆಂದು ದೂರಿಕೊಂಡು ಬೇರೆ ಎಂಜಿನಿಯರ ಹತ್ತಿರ ಕಂಟ್ರಾಕ್ಟನ್ನು ಪಡೆದು ಸುಖದಿಂದ ಸಿಮೆಂಟಿನ ಮನೆಯನ್ನು ಮಾಡಿಕೊಂಡಿರುತ್ತಾನೆ.

ಇಂಥ ಕಂಟ್ರಾಕ್ಟರುಗಳು ಎಷ್ಟೋ ಜನ ಇದ್ದಾರೆ. ಇಂಥದನ್ನೆಲ್ಲಾ ನಮ್ಮ ಸರ್ಕಾರ ನೋಡಿಕೊಂಡು ಕಣ್ಣುಮುಚ್ಚಿಕೊಂಡು ಕುಳಿತಿದೆ! ಇದರಿಂದಾಗಿ ತಿಳಿಯದ ಜನರು ಎಲ್ಲರೂ ಒಂದೇ ಎಂದು ತೀರ್ಮಾನಕ್ಕೆ ಬರುತ್ತಾರೆ. ಆದ್ದರಿಂದ ಕಂಟ್ರಾಕ್ಟರುಗಳನ್ನು ರಿಜಿಸ್ಟರ್ ಮಾಡುವ ಪದ್ಧತಿಯನ್ನು ಜಾರಿಗೆ ತರುವುದು ಮುಖ್ಯ, ಅದರಲ್ಲಿ a, b, c, d, ಎಂದು 10,000, 20,000, ಒಂದು ಲಕ್ಷ, ಎರಡು ಲಕ್ಷ ಈ ಪ್ರಕಾರ ಆಯಾ ಕಂಟ್ರಾಕ್ಟರುಗಳ ಬಂಡವಾಳಕ್ಕನುಗುಣವಾಗಿ ಗೊತ್ತುಮಾಡಬೇಕು.

ಇನ್ನೊಂದೇನೆಂದರೆ, ಈ ಇಲಾಖೆಯನ್ನು ಪುನಃ ರಚಿಸಬೇಕೆಂದು ಸಮಿತಿಯವರು ಸಲಹೆ ಮಾಡಿದ್ದರು. ಈ ವರ್ಷವೂ ಕೂಡ ಅದನ್ನು ಪೂರ್ಣವಾಗಿ ಕಾರ್ಯಗತ ಮಾಡಲಿಲ್ಲ. ಕೆಲವು ಅಂಶಗಳಲ್ಲಿ ಮಾತ್ರ Re-organise ಮಾಡಿದಂತೆ ಮಾಡಿ ಅಲ್ಲಿಗೇ ಬಿಟ್ಟರು. ಇನ್ನಾದರೂ ಇದಕ್ಕೆ ಗಮನಕೊಟ್ಟು ಪುನರ್ರಚನೆ ಮಾಡುವುದು ಅಗತ್ಯ. ಈ ಹೊತ್ತು ಎಷ್ಟೋ ಸಂದರ್ಭಗಳಲ್ಲಿ ಎಸ್ಟಿಮೇಟ್ ಮಾಡತಕ್ಕವರು, ಸೂಪರ್ ವೈಸ್ ಮಾಡತಕ್ಕವರು ಕೊನೆಗೆ ಬಿಲ್ಲನ್ನು ಮಂಜೂರು ಮಾಡತಕ್ಕವರು ಎಲ್ಲರೂ ಒಬ್ಬರೇ ಅಧಿಕಾರಿಗಳು ಆಗಿರುತ್ತಾರೆ. ಈ ಎಲ್ಲ ಅಧಿಕಾರಗಳೂ ಒಬ್ಬರಲ್ಲಿಯೇ ಇರುತ್ತವೆ. ಇದನ್ನು ಬೇರ್ಪಡಿಸಬೇಕು. ಎಸ್ಟಿಮೇಟ್ ಮಾಡುವವರು ಒಬ್ಬರಾಗಿದ್ದರೆ ಅದನ್ನು ಮಂಜೂರು ಮಾಡುವವರು ಮತ್ತೊಬ್ಬರಿರಬೇಕು. ಇಲ್ಲದಿದ್ದರೆ ಮೇಲ್ಗಡೆ vigilance ಇರುವುದಿಲ್ಲ. ಕೆಲಸವನ್ನು ತನಿಖೆ ಮಾಡುವ ವಿಷಯದಲ್ಲಾಗಲಿ, ಸಾಮಾನುಸರಂಜಾಮುಗಳನ್ನು ನೋಡಿಕೊಳ್ಳುವ ವಿಷಯದಲ್ಲಾಗಲೀ, ಹೆಚ್ಚಿನ ಗಮನ ಕೊಡದೆ ಹೋದರೆ ಏನು ಪ್ರಯೋಜನ? ಎಲ್ಲವೂ ಆಗಿ ಹೋದ ಮೇಲೆ ನೋಡಿದರೆ ತಾನೇ ಏನು ಮಾಡಲು ಸಾಧ್ಯ? ನನಗೆ ತಿಳಿಯಬಂತು, ತುಂಗಾ ಜಲಾಶಯವನ್ನು ಸರ್ಕಾರದ ಚೀಫ್ ಆರ್ಕಿಟೆಕ್ಟ್‌ರವರು ನೋಡಲು ಹೋದಾಗ, ಅದನ್ನೇಕೆ ಡೊಂಕಾಗಿ ಕಟ್ಟಿದ್ದಾರೆಂದು ಪ್ರಶ್ನಿಸಿದರಂತೆ. ಹಾಗೆ ಹೇಳಿದ್ದರಿಂದ ಏನು ಪ್ರಯೋಜನವಾದೀತು? ಎಷ್ಟೋವೇಳೆ ಸ್ಪೆಸಿಫಿಕೇಷನ್ನಿಗೆ ಸರಿಯಾಗಿ ಕೆಲಸವೇ ನಡೆದಿರುವುದಿಲ್ಲ. ಹಳೆಯ ಕೆಲಸಗಳ ವಿಚಾರವಿರಲಿ, ಇತ್ತೀಚೆಗೆ ನಡೆದ ಅನೇಕ ಕಟ್ಟಡದ ಕೆಲಸಗಳಲ್ಲಿಯೂ ಕೂಡ ಅಲ್ಲಿ ಹಾಕಿರುವ ಬಾಗಿಲುಗಳೇ ಕಿತ್ತುಹೋಗಿರುವುದನ್ನು ನಾನು ತೋರಿಸಬಲ್ಲೆ. ಸಿಮೆಂಟ್ ಕಾಂಕ್ರೀಟ್ ಎಲ್ಲಾ ಬಿರುಕು ಬಿಟ್ಟಿದೆ. ಈ ರೀತಿ ಕೆಲಸಗಳು ನಡೆದರೆ ಅದಕ್ಕೆ ಯಾರು ಜವಾಬ್ದಾರರು? ಹಣ ಟ್ರೆಜರಿಯಿಂದ ಹೊರಗೆ ಹೋದಮೇಲೆ ಪುನಃ ನಮ್ಮ ಕೈಗೆ ಸಿಕ್ಕುತ್ತದೆಯೇ? ಆದ್ದರಿಂದಲೇ ನಾನು ಮೊದಲಿನಿಂದಲೂ ಈ ಇಲಾಖೆಯನ್ನು ಪುನರ್ರಚಿಸಬೇಕೆಂದು ಹೇಳುತ್ತಿದ್ದೇನೆ. ನಾನು ಹೇಳುವುದೆಲ್ಲಾ ಅರಣ್ಯರೋದನವಾಗಿದೆ. ಇಂಥ ಪರಿಸ್ಥಿತಿಯಿರುವಾಗ ಈ ಇಲಾಖೆಯನ್ನು ಸುಧಾರಿಸಿ ಅದನ್ನು ಪ್ರಾಮಾಣಿಕವಾದ ರೀತಿಯಲ್ಲಿ ನಡೆಯುವಂತೆ ಮಾಡಬೇಕೆಂಬುದು ನನ್ನ ಆಶಯ.

ಇನ್ನು ನಮ್ಮ ಊರಿಗೆ ಸಂಬಂಧಪಟ್ಟಹಾಗೆ ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ. ನಾನು ಈಗ ತಾನೆ ಕಟ್ಟಡಗಳ ವಿಷಯವಾಗಿ ವಿದ್ಯಾಮಂತ್ರಿಗಳನ್ನು ಕೇಳಿದೆ. ಎಷ್ಟೋ ಕಡೆಗಳಲ್ಲಿ ಸರ್ಕಾರದವರು ಆಸ್ಪತ್ರೆಗಳನ್ನು ಕಟ್ಟಿಸಿದ್ದಾರೆ. ಆದರೆ ಈ ವಿಷಯದಲ್ಲಿ ಅವರ ನೀತಿ ಒಂದೊಂದು ಸಂದರ್ಭಕ್ಕೆ ಒಂದೊಂದು ರೀತಿಯಲ್ಲಿ ಬದಲಾಯಿಸುತ್ತಿರುವಂತೆ ಕಾಣುತ್ತದೆ. ಕೆಲವು ಕಡೆ ಅರ್ಧ ಹಣ ಕೊಡಬೇಕೆಂದು ಹೇಳುತ್ತಾರೆ. ಇನ್ನು ಕೆಲವು ಕಡೆ ಕಟ್ಟಡವನ್ನು ಕಟ್ಟಿಕೊಟ್ಟರೆ ಆಸ್ಪತ್ರೆಯನ್ನು ಮಂಜೂರುಮಾಡುತ್ತೇವೆ ಎನ್ನುತ್ತಾರೆ. ಇನ್ನು ಕೆಲವು ಕಡೆಗಳಲ್ಲಿ ಎಲ್ಲವನ್ನೂ ತಾವೇ ಹಾಕಿಕೊಂಡು ಆಸ್ಪತ್ರೆಯನ್ನು ಕಟ್ಟಿಸಿಕೊಡುತ್ತಾರೆ. ಹೀಗೆ ಒಂದೊಂದು ಕಡೆ ಒಂದೊಂದು ನೀತಿಯನ್ನು ಅನುಸರಿಸಿ ಆಸ್ಪತ್ರೆಗಳನ್ನು ಕೊಡುವುದಾಗಿದೆ. ಇಷ್ಟೆಲ್ಲಾ ಆದಮೇಲೆಯೂ, ಅಲ್ಲಿನ ಡಾಕ್ಟರುಗಳು ನೆಮ್ಮದಿಯಿಂದ ಕೆಲಸ ಮಾಡುವಂತಿಲ್ಲ. ಆ ಡಾಕ್ಟರುಗಳಿಗೆ ಮನೆಗಳನ್ನು ಸರ್ಕಾರದವರೂ ಕಟ್ಟಿಸಿಕೊಟ್ಟಿಲ್ಲ, ಅಲ್ಲಿನ ಜನರೂ ಕಟ್ಟಿಸಿಕೊಟ್ಟಿಲ್ಲ. ಹಳ್ಳಿಗಳಲ್ಲಿ ಮನೆಗಳಿಗೆ ಅಭಾವವೆಂಬುದು ತಮಗೆ ಗೊತ್ತೇಇದೆ. ಅಸುಗೋಡು ಎಂಬಲ್ಲಿನ ಡಾಕ್ಟರು ತಮಗೆ ಮನೆಯಿಲ್ಲವೆಂದು ಪದೇ ಪದೇ ಬರೆಯುತ್ತಿದ್ದಾರೆ. ಅಂಥ ಕಡೆ ಮನೆಗಳ ಏರ್ಪಾಡು ಮಾಡಿಕೊಡದೆ ಹೋದರೆ ಏನು ಮಾಡುವುದು? ಅದರಲ್ಲೂ ಜಾತೀಯತೆಯಿರುವ ಗ್ರಾಮಗಳಲ್ಲಿ ಹರಿಜನ ಡಾಕ್ಟರುಗಳು ಹೋದರಂತೂ ನೀರುಸಿಕ್ಕುವುದೂ ಕಷ್ಟವಾಗಿರುತ್ತದೆ. ಒಂದು ಹೋಟಲುಕೂಡ ಅಲ್ಲಿರುವುದಿಲ್ಲ. ಮರದಡಿಯಲ್ಲಿ ಅನ್ನ ಬೇಯಿಸಿಕೊಂಡು ಕಾಲಹಾಕುತ್ತಿರುತ್ತಾನೆ. ಹೀಗಾದರೆ ಆತನು ಕೆಲಸ ಮಾಡುವುದು ಹೇಗೆ? ಆಸ್ಪತ್ರೆ ಎಷ್ಟು ಅವಶ್ಯಕವೋ, ಅಲ್ಲಿನ ಅಧಿಕಾರಿಗಳಿಗೆ ಮನೆಗಳನ್ನು ಕಟ್ಟಿಸಿಕೊಡುವುದೂ ಅಷ್ಟೇ ಅವಶ್ಯಕವೆನಿಸುತ್ತದೆ. ಆದ್ದರಿಂದ ತಾವು ಯೋಜನೆಗಳನ್ನು ತಯಾರು ಮಾಡುವಾಗ ಅದಕ್ಕೆ ಸಂಬಂಧಪಟ್ಟಂತೆ ಇರುವ ಮುಖ್ಯ ಅವಶ್ಯಕತೆಗಳೇನು ಎಂಬುದನ್ನು ತಿಳಿದು ಮಾಡಬೇಕೇ ಹೊರತು ಸುಮ್ಮನೆ ಪ್ರಭಾವಯುತರಾದ ಜನರು ಬಂದು ಏನೇನು ಬೇಕೆಂದು ಹೇಳಿದರೂ ಮಾಡುವುದು, ಯಾರೋ ಒಬ್ಬರ ಮಾತಿನಮೇಲೆ ಟಿ.ಬಿ ಗಳನ್ನು ಕಟ್ಟುವುದೇ ಆಗಲಿ, ಅವರ ಮನೆಯ ಮುಂದೆ ಟಾರ್ ರೋಡ್ ಹಾಕಿಸುವುದೇ ಆಗಲಿ, ಯಾವುದೇ ಒಂದು ಕಮ್ಯುನಿಟಿಯವರಿಗಾಗಿ ಹೈಸ್ಕೂಲು ಕಟ್ಟಿಸುವುದು, ಹೋಬಳಿಯಲ್ಲಿ ಶೇಕಡ 90 ಭಾಗ ಕೆಲಸವೆಲ್ಲವನ್ನೂ ಯಾರೋ ಒಬ್ಬ ಗಣ್ಯ ವ್ಯಕ್ತಿಯ ಮನೆಯ ಮುಂದೆ ಮಾಡಿ, ಬಾಕಿ ಹಳ್ಳಿಗಳಲ್ಲಿ 2,000, 3,000 ಜನರಿದ್ದರೂ ಒಂದು ಸ್ಕೂಲನ್ನಾಗಲಿ, ಒಂದು ಕಟ್ಟಡದ ರಿಪೇರಿಯನ್ನಾಗಲಿ, ಅಥವಾ ಇನ್ನಾವ ಅಭಿವೃದ್ಧಿ ಕಾರ್ಯವನ್ನೇ ಆಗಲಿ ಮಾಡದೆ ಇರುವುದು ಸರಿಯಲ್ಲ. ಇಂಥ ಹಳ್ಳಿಗಳನ್ನು ನೂರಾರು ಬೇಕಾದರೂ ನಾನು ಹೇಳಬಲ್ಲೆ. ಈ ರೀತಿಯಾಗಿ ಕೆಲಸಗಳು ನಡೆದರೆ ಅದೊಂದು ಯೋಜನಾ ಬದ್ಧವಾದ ಕಾರ್ಯಕ್ರಮವಾಗಿ ಪಂಚವಾರ್ಷಿಕ ಯೋಜನೆಯೆಂದೆನಿಸಿಕೊಳ್ಳುವುದಿಲ್ಲ. ದೇಶದ ಮುಂದೆ ಇರತಕ್ಕ ಯೋಜನೆಗಳೇ ಬೇರೆಯಾಗಿರುತ್ತವೆ, ಅಲ್ಲಿ ಆಗಿರತಕ್ಕ ಕೆಲಸಗಳೇ ಬೇರೆಯಾಗಿರುತ್ತವೆ. ಈ ರೀತಿ ಆಗಬಾರದೆಂಬುದು ನನ್ನ ಆಶಯ. ಇನ್ನು ಕೆಲವು ರಸ್ತೆಗಳ ಮತ್ತು ಸೇತುವೆಗಳ ವಿಚಾರ ಹೇಳಬೇಕೆಂದಿದ್ದೇನೆ. ನಾನು ಕೆಲವು ಕಡೆ ಹೋದಾಗ ಜನರು ಹೇಳಿದ್ದನ್ನು ಹೇಳುತ್ತೇನೆ. ಮಲೆನಾಡಿನ ಕಡೆ ಸರ್ಕಾರದವರು ಹಣ ಖರ್ಚುಮಾಡಿ ಕೆಲವು ರಸ್ತೆಗಳನ್ನು ಮಾಡಿಸಿ ಕೊಟ್ಟಿದ್ದಾರೆ. ಆದರೆ ಡಿಸ್ಟ್ರಿಕ್ಟ್ ಬೋರ್ಡುಗಳು ಈಗ ಇಲ್ಲದೆ ಇರುವುದರಿಂದ ಅವುಗಳನ್ನು ನೋಡಿಕೊಳ್ಳುವವರೇ ಇಲ್ಲವಾಗಿದೆ. ವಿಲೇಜ್ ಪಂಚಾಯಿತಿಗಳಿಗೂ ಕೂಡ ತಾವು ಹೆಚ್ಚಿನ ಹಣವನ್ನು ತಮಗೆ ಬರುವ ರೆವಿನ್ಯೂನಲ್ಲಿ ಬಿಟ್ಟುಕೊಡದಿರುವುದರಿಂದ ಅವುಗಳೂ ಈ ರಸ್ತೆಗಳನ್ನು maintain ಮಾಡತಕ್ಕ ಸ್ಥಿತಿಯಲ್ಲಿಲ್ಲ. ಹೀಗಾಗಿ ಈ ರಸ್ತೆಗಳಿಗೆ ಹಾಕಿರುವ ಹಣ ವ್ಯರ್ಥವಾಗಿದೆ. ಇದಕ್ಕೆ ತಾವು ಗಮನ ಕೊಡಬೇಕು. ಈಗಾಗಲೇ ಅನೇಕ ಮಾನ್ಯ

(ಶ್ರೀ ಎಸ್. ಗೋಪಾಲಗೌಡ.)

ಸದಸ್ಯರು ಈ ವಿಷಯದಲ್ಲಿ ಸಲಹೆಗಳನ್ನು ಕೊಟ್ಟಿದ್ದಾರೆ. ಸರ್ಕಾರದವರು ಈ ಬಗ್ಗೆ ಹೆಚ್ಚಿನ ಗಮನಕೊಟ್ಟು ಈಗ ಖರ್ಚುಮಾಡಿರುವ ದುಡ್ಡು ವ್ಯರ್ಥವಾಗದ ಹಾಗೆ ಮಾಡುವುದಕ್ಕೆ ಪ್ರಯತ್ನಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಕೆಲವು ರಸ್ತೆಗುರುತು ಹಾಕಿದ್ದೇನೆ. Cut motions move ಮಾಡಿಲ್ಲ, move ಮಾಡಿರುವ ಖೋತಾ ಸೂಚನೆಗಳುಕೂಡ ಏನಾಗುತ್ತವೊ ಎಂಬ ಅನುಮಾನ ಬಂದಿದೆ. ಕೆಲವು ರಸ್ತೆಗಳ ಹೆಸರನ್ನು ಹೇಳುತ್ತೇನೆ. ಅಮುನೋಣಬೂರು-ರಾವೆ, ಆರಗ-ನಗರ, ಏಡೂರು-ಬೇಗುವಳ್ಳಿ, ಏಡೂರು-ನಿಡುಗೋಡು, ಏಡೂರು-ಗುಬ್ಬಿಗ, ಹಾರೋಕಣ-ಹುಲಿಕಲ್ಲು, ಗೇಣಸಿನಕುಣಿ-ಕಣಿಕೆಬ್ಬೈಲು—ರಸ್ತೆಗಳಾಗಿವೆ. ಹೊನ್ನೇಮರಡು ಪ್ರಾಜೆಕ್ಟು ಕೊಡುವುದರಿಂದ ಅಲ್ಲಿ ಕೆಲವು ರಸ್ತೆಗಳನ್ನು ಮುಂದಿನ ದೃಷ್ಟಿಯಿಂದ ಏರ್ಪಾಡು ಮಾಡಬೇಕಾಗಿದೆ. ಇವೊತ್ತು ನಗರದ ಹತ್ತಿರ ಎರಡು ರಸ್ತೆಗಳಿವೆ, ಅವು ಹುಲಿಕಲ್ಲು, ಶಿವಮೊಗ್ಗಾ ರಸ್ತೆಗಳು ಅವು ನಾದುರಸ್ತು ಆಗಿ ಬಿದ್ದುಹೋಗವ ಸ್ಥಿತಿಯಲ್ಲಿವೆ. ಕೆಳಗೆ ನದಿಯಿಂದ ಇಳಿದು ಹೋಗುತ್ತಿದ್ದಾರೆ. ಆದಕಾರಣ ಬಹಳ ಜಾಗ್ರತೆಯಾಗಿ ಎರಡು ಸೇತುವೆಗಳನ್ನು ಏರ್ಪಾಡು ಮಾಡುವುದು ಸೂಕ್ತ. ಬಡ್ಜೆಟ್ಟನ್ನು ನೋಡುತ್ತಿದ್ದೇವೆ. ಪಾಂಚವಾರ್ಷಿಕ ಯೋಜನೆಯಮೇಲೆ ಹೋದ curve ಒಂದೇ ಸಲ ಕೆಳಗೆ ಬಂದಿದೆ. ಹೊಸ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ನಮ್ಮಲ್ಲಿ ಹಣವಿಲ್ಲ ಎಂದು oral ಆಗಿ ನಮ್ಮ ಕಡೆ ಡಿವಿಜನಿಗೆ instruction ಕೊಟ್ಟಿದ್ದಾರೆ ಎಂದು ಕೇಳಿದ್ದೇನೆ. ಪ್ರಚಾರದಲ್ಲಿ ಬಹಳ ಕೆಲಸ ನಡೆಯುತ್ತಿದೆ ಎಂದು ಜನರಿಗೆ ಕೇಳಿಬರುತ್ತಿದೆ. ಕಾರ್ಯತಃ ಏನು ಕೆಲಸ ಮಾಡಿದ್ದಾರೆ ಎಂದು ನೋಡಿದರೆ, ಈ ವರ್ಷ ಒದಗಿಸಿರುವ ಹಣ ಸೇತುವೆಗಳಿಗಾಗಲಿ, ರಸ್ತೆಗಳಿಗಾಗಲಿ ಬಹಳ ಕಮ್ಮಿ. ಬಹುಶಃ ಸರ್ಕಾರದವರು ಕೆಲಸಗಳನ್ನು ಆರಂಭಮಾಡುವುದಿಲ್ಲ ಎಂದು ಕಾಣಿಸುತ್ತದೆ. ನಗರದ ಸೇತುವೆಗಳು ಬಹಳ ಅಗತ್ಯವಾಗಬೇಕು. ದಕ್ಷಿಣ ಕನ್ನಡ ಜಿಲ್ಲೆಗೆ ಶಿವಮೊಗ್ಗದಿಂದ ದೊಡ್ಡ ರಸ್ತೆಯಲ್ಲಿ ಇದು ಬರುವುದರಿಂದ ಆ ರಸ್ತೆಯನ್ನು ರಿಪೇರಿ ಮಾಡುವುದನ್ನು ಸರ್ಕಾರದವರು ತೀವ್ರವಾಗಿ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಕೋಣಂದೂರಿನಿಂದ ಆರಗ, ಕೊಳವಳ್ಳಿ, ಮೂರು ಕೈಸುಂಕದ ಕಟ್ಟೆಗೆ ಸೇರಿರತಕ್ಕ ರಸ್ತೆ, ಏಡೂರು-ಹುಲಿಕಲ್ಲುರಸ್ತೆ, ಗೇಣಸಿನ ಕುಣಿ-ಕಣಿಕಬ್ಬೈಲು, ಈ ರಸ್ತೆ ಮುಳುಗಡೆಯಾಗುವ ಪ್ರದೇಶದಲ್ಲಿ, ಹಿಂದೆ ಒಂದು ಸಲ ನಾನು ಮುಖ್ಯಮಂತ್ರಿಗಳನ್ನು ಕೇಳಿದಾಗ ಅಲ್ಲಿ ಒಂಧು ರಸ್ತೆ ಮಾಡಿಸುತ್ತೇವೆ ಎಂದರು ಹಿಂದೆ ಆ ಸಂದರ್ಭದಲ್ಲಿದ್ದ ಜಿಲ್ಲಾಧಿಕಾರಿಗಳು ಹೋಗಿ ಅಂದಾಜು ಮಾಡಿದರ . ಅದು ಮುಳುಗಿಹೋಗುವ ಪ್ರದೇಶವಾದರೂ ಅಲ್ಲಿ ಜನರಿದ್ದಾರೆ. ಕಂದಾಯ ಸ್ವಲ್ಪ ಬರುತ್ತದೆ. ಪೂರ್ತಿಯಾಗಿ ಹೊನ್ನೇಮರಡು ಆದಮೇಲೆ ಬಹುಭಾಗ ಮುಳುಗಿಹೋಗುತ್ತದೆ. ಆ ಪ್ರದೇಶದಿಂದ ಜನರನ್ನು ಕರೆದುಕೊಂಡು ಬೇರೆ ಕಡೆ ಅವರಿಗೆ ಪುನರ್ವ್ಯವಸ್ಥೆ ಮಾಡಿಲ್ಲ. ಅಲ್ಲಿ ಅಜೂಬಾಜು ಸುತ್ತು ನೀರುಬಿಟ್ಟು ರಸ್ತೆ ಇಲ್ಲದಹಾಗೆ ಮಾಡಿದ್ದಾರೆ. ಎರಡು-ಮೂರು ಲಕ್ಷ ರೂಪಾಯಿಗಳು ಖರ್ಚಾದರೂ ಕೂಡ ಪರವಾಇಲ್ಲ. ಹೊನ್ನೇಮರಡು ಪೂರ್ತಿಯಾಗುವ ಹೊತ್ತಿಗೆ ಎಂಟು-ಹತ್ತು ವರ್ಷಗಳಾಗುತ್ತವೆ. ಅಲ್ಲಿಯತನಕ ಜನಗಳಿಗೆ ಅನುಕೂಲ ಮಾಡಿಕೊಡಬೇಕು. ಇಲ್ಲಿರುವ ಹೆನ್ನಾರಪೇಟೆ ರಸ್ತೆ, ಭಟ್ಕಲ್ ರೋಡಿಗೆ ಸೇರಿರತಕ್ಕ ರಸ್ತೆ ಆಗಿದೆ. ಏನಾದರೂ ಮಾಡಿ, ನಾಗರೀಕ ಪ್ರಪಂಚದ ಜೊತೆಗೆ ಸಂಬಂಧ ಇಟ್ಟುಕೊಳ್ಳುವ ರೀತಿಯಲ್ಲಿ ಸರ್ಕಾರದವರು ಪ್ರಯತ್ನ ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಸರ್ಕಾರದವರು ಮಾವಿನ ಹೊಳೆ ದೊಡ್ಡ ಸೇತುವೆಯನ್ನು ಕಟ್ಟಿಸುತ್ತಾರೆ ಎಂದು ಕೇಳಿದೆ. ಅದೂ ಕೂಡ ಕೆಲಸ ಪ್ರಾರಂಭವಾಗಿದೆಯೋ ಏನೋ ಗೊತ್ತಿಲ್ಲ. ಮಲೆನಾಡಿನಲ್ಲಿ ಹೊಸದಾಗಿ ಮಾಡಿದ ರಸ್ತೆಗಳಲ್ಲಿ ಮಳೆ ಬಂದರೆ ರಸ್ತೆ ಹಾಗೆಯೇ ಹಳ್ಳವಾಗುತ್ತದೆ. ಅಂತಹ ರಸ್ತೆಗಳಿಗೆ ಜಲ್ಲಿಯನ್ನು ಹಾಕಿಸಿ ಸ್ವಲ್ಪಮಟ್ಟಿಗೆ ಚೆನ್ನಾಗಿರುವ ಹಾಗೆ ಮಾಡಬೇಕು. ಆರಗ-ಶಂಕರವಳ್ಳಿ ರಸ್ತೆಗೆ ಜಲ್ಲಿ ಹಾಕಬೇಕು. ಅದನ್ನು ಇನ್ನೂ ಮಾಡಿಲ್ಲ. ರಸ್ತೆಗಳಿಗೆ ಎಷ್ಟು ಹಣ ಖರ್ಚುಮಾಡಿದರೂ ಅದರಿಂದ ಪೂರ್ತಿ ಉಪಯೋಗವಾಗುವುದಿಲ್ಲ. ಸರಿಯಾಗಿ ಜಲ್ಲಿಯನ್ನು ಹಾಕಿ maintenance ಮಾಡಿಕೊಂಡು ಹೋಗುವುದಕ್ಕೆ ವ್ಯವಸ್ಥೆ ಮಾಡದೆ ಹೋದರೆ ರಸ್ತೆಗಳು ಸರಿಹೋಗುವುದಿಲ್ಲ. ಈ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಮೊದಲನೆಯದಾಗಿ ಹಣ ಖರ್ಚಾಗುವ ವಿಷಯದಲ್ಲಿ ಸರ್ಕಾರದವರು ಒಂದು ಸರಿಯಾದ ನೀತಿಯನ್ನು ತಮ್ಮ ಹಿತದೃಷ್ಟಿಯಿಂದಲೂ ಮತ್ತು ದೇಶದ ಹಿತದೃಷ್ಟಿಯಿಂದಲೂ ಅನುಸರಿಸುವುದು ಬಹಳ ಸೂಕ್ತ. ಇಲ್ಲದಿದ್ದರೆ ಅದು ಮುಂದೆ ಅನರ್ಥಕ್ಕೆ ಎಡೆಕೊಡುತ್ತದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಬಿ. ಮಾಧವಾಚಾರ್ (ಭದ್ರಾವತಿ).—ಸಿವಿಲ್ ಕಾಮಗಾರಿ ಬೇಡಿಕೆಯನ್ನು ಸ್ವಾಗತಿಸುತ್ತಾ ನಾನು ಭಧ್ರಾವತಿಗೆ ಸಂಬಂಧಪಟ್ಟ ಕೆಲವು ಕುಂದುಕೊರತೆಗಳನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಭದ್ರಾವತಿ ಬರ್ಮಿಂಗ್‌ಹ್ಯಾಂ ಎನ್ನುವ ಪ್ರಸಿದ್ಧಿ ಪಡೆದಿದೆ. ಆದರೆ ಪ್ರತ್ಯಕ್ಷವಾಗಿ ತಾವು ಸಂಜೆ ಭದ್ರಾವತಿ ನಗರವನ್ನು ಹಾದುಹೋದರೆ ಆ ಊರಿಗೆ ಎಷ್ಟು ಸುಧಾರಣೆ ಇನ್ನೂ ಆಗಬೇಕಾಗಿದೆ, ಪ್ರಯಾಣ ಎಷ್ಟು ಕಷ್ಟವಾಗಿದೆ ಎನ್ನುವುದು ತಮಗೆ ಅರ್ಥವಾಗುತ್ತದೆ. ಭದ್ರಾವತಿ 40 ಸಾವಿರ ಜನಸಂಖ್ಯೆಯಿಂದ ಕೂಡಿದ ಊರು. ಇಷ್ಟು ಜನಗಳಿಗೂ ಹಳೆ ಊರಿನಿಂದ ಹೊಸ ಊರಿಗೆ ತಿರುಗಾಡುವುದಕ್ಕೆ ಇರುವುದು ಒಂದೇ ರಸ್ತೆ. ಈ ರಸ್ತೆಯಲ್ಲೇ ಊರಿನ ಜನರೆಲ್ಲರೂ ಸಂಚಾರ ಮಾಡಬೇಕಾಗುವುದರಿಂದ ಬಹಳ ಜನಗಳ ಒತ್ತಡದಿಂದ ವಾಹನಗಳ ಸಂಚಾರವು ಕಷ್ಟವಾಗುತ್ತದೆ. ಅದಕ್ಕೋಸ್ಕರ ಭದ್ರಾನದಿ ದಾಟಿದ ಮೇಲೆ B. H. ರಸ್ತೆಗೆ Parallel ಆಗಿ ಪ್ರತಿಯಾಗಿ ಇನ್ನೊಂದು ರಸ್ತೆಯನ್ನು ರಚಿಸಬೇಕೆಂದು ಪೌರಸಭೆಯವರು 60 ಅಡಿ ಜಾಗವನ್ನು ಕುಲ್ಲಾಪಡಿಸಿ ಇಟ್ಟಿದ್ದಾರೆ. ರಸ್ತೆ ನಿರ್ಮಾಣ ಮಾಡುವ ಕೆಲಸ ಪೌರಸಭೆ ಮಾಡತಕ್ಕ ಕೆಲಸವಲ್ಲ. ಅದನ್ನು P.W.D. ಇಲಾಖೆಯವರು ಮಾಡಬೇಕಾಗಿದೆಯೇ ಅದು ಸ್ಥಳೀಯ ಸಂಸ್ಥೆಗಳಿಂದ ಸಾಧ್ಯವಾಗುವ ಕೆಲಸವಲ್ಲ. ವರ್ಷಕ್ಕೊಮ್ಮೆ 5-6 ಸಾರಿ ಅಪಘಾತಗಳು ಸಂಭವಿಸಿ, ಮಕ್ಕಳು, ದೊಡ್ಡವರು, ಅಶಕ್ತರು, ಮುದುಕರು ಪ್ರಾಣವನ್ನು ಕಳೆದುಕೊಳ್ಳುವ ಸಂದರ್ಭಗಳು ಬೇಕಾದಷ್ಟು ಇವೆ. ಆದ್ದರಿಂದ ಜನಗಳಿಗೆ ಅನುಕೂಲ ಮಾಡುವುದಕ್ಕೋಸ್ಕರ B. H. Roadಗೆ ಪ್ರತಿಯಾಗಿ ನೇರವಾಗಿ ಇನ್ನೊಂದು ರಸ್ತೆಯನ್ನು ಪ್ರಾರಂಭ ಮಾಡಬೇಕು. ಹಾಗೆಯೇ ಇನ್ನೊಂದು ಕಾಲು ಸೇತುವೆಯನ್ನು ಭದ್ರಾನದಿಗೆ ಹಳೆ ಊರಿಗೂ ಹೊಸ ಊರಿಗೂ ನಡುವೆ ನಿರ್ಮಾಣ ಮಾಡುವುದು ಅವಶ್ಯಕ, ಅದಲ್ಲದೆ ಭದ್ರಾವತಿಯ ಹಳೆ ಊರಿನಲ್ಲಿ ನೀರಿನ ಅಭಾವ ಜಾಸ್ತಿಯಾಗಿದೆ. ಸರ್ಕಾರದವರು ಈ ನಗರದಲ್ಲಿ ನೀರಿನ ಸರಬರಾಯಿಯನ್ನು

ಉತ್ತಮಪಡಿಸುವುದಕ್ಕೆ ಲಕ್ಷಾಂತರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಟೆಂಡರು ಕರೆದು 1½ ವರ್ಷವಾದರೂ ಕೂಡ ಇವೊತ್ತಿನವರೆಗೂ ಟ್ಯಾಂಕ್ contract ತೆಗೆದುಕೊಂಡಿರುವವರು ಕೆಲಸ ಪ್ರಾರಂಭ ಮಾಡಲಿಲ್ಲ. ಏತಕ್ಕೋಸ್ಕರ ನಿಧಾನವಾಗಿದೆಯೋ ಗೊತ್ತಿಲ್ಲ. ಆ ಕೆಲಸವನ್ನು ಕೂಡಲೆ ಪ್ರಾರಂಭ ಮಾಡಿ ಹಳೆಯ ನಗರದಲ್ಲಿ ನೀರಿನ ಅಭಾವ ಕಡಿಮೆಯಾಗುವಂತೆ ಕೆಲಸ ಮಾಡಬೇಕು ಎಂದು ನಾನು ಸಲಹೆ ಮಾಡುತ್ತೇನೆ. ಇಲ್ಲಿರತಕ್ಕ ಪ್ರೈಮರಿ ಸ್ಕೂಲುಗಳಲ್ಲಿ, ನ್ಯೂ ಟೈಪ್ ಮಿಡ್ಲ್ ಸ್ಕೂಲುಗಳಲ್ಲಿ, 400-500 ವಿದ್ಯಾರ್ಥಿಗಳು ಇದ್ದು ಪಾಠ ಪ್ರವಚನ ನಡೆಸುವುದು ಕಷ್ಟವಾಗುತ್ತದೆ. ಆ ಕಟ್ಟಡಗಳನ್ನು ಸೂಕ್ತ ಬದಲಾವಣೆ ಮಾಡುವುದು ಅತ್ಯಗತ್ಯವಾಗಿದೆ. ತಾಲ್ಲೂಕ್ ಆಫೀಸು, ಹಿಂದೆ ಕಂಟ್ರೋಲ್ ಇದ್ದ ಕಾಲದಲ್ಲಿ, food godown ಆಗಿತ್ತು. ಆ ಕಟ್ಟಡದಲ್ಲಿ ತಾಲ್ಲೂಕ್ ಆಫೀಸನ್ನು ನಡೆಸಿಕೊಂಡು ಬರುತ್ತಿದ್ದಾರೆ. ಹೊಸ ತಾಲ್ಲೂಕ್ ಆಫೀಸನ್ನೂ ಮತ್ತು ಮುನ್‌ಸೀಫ್ ಕೋರ್ಟನ್ನೂ ಸರಕಾರದವರು ಮಂಜೂರು ಮಾಡಿದ್ದಾರೆಂದು ಕೇಳಿದ್ದೇನೆ. ಬಹಳ ಕಷ್ಟಪಟ್ಟು ಈ ಕಟ್ಟಡಕ್ಕೋಸ್ಕರ ಹಳೆ ಊರಿನಲ್ಲಿ ಕೆಲವು ಸೈಟುಗಳನ್ನು ಇಲಾಖೆಯವರ ವಶಕ್ಕೆ ಬಿಡಿಸಿ ಕೊಟ್ಟಿದ್ದಾರೆ. ಕಟ್ಟಡದ ಕೆಲಸಕ್ಕಾಗಿ ಟೆಂಡರು ವಗೈರೆ ಕಾರ್ಯಕ್ರಮ ಏನೂ ನಡೆದಂತೆ ಇಲ್ಲ. ಅದನ್ನು ತ್ವರಿತಗೊಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ರಸ್ತೆಗಳ ವಿಚಾರದಲ್ಲಿ ಬಾಳೆಹೊನ್ನೂರು—ಅನವೇರಿ ರಸ್ತೆಯಲ್ಲಿ ಸಾವಿರ ಜನಸಂಖ್ಯೆ ಮೇಲೆ ಇರುವ ನೂರಾರು ಗ್ರಾಮಗಳಿಗೆ ಡಿಸ್ಟ್ರಿಕ್ಟ್ ಬೋರ್ಡಿನವರು ರಸ್ತೆ ಮಾಡಿಸಿದ್ದಾರೆ. ಅವುಗಳಿಗೆ ಕಾಮಗಾರಿ ಇಲ್ಲದಂತೆ ಆಗಿದೆ. ಆದ್ದರಿಂದ ಜಿಲ್ಲಾ ಕಾಮಗಾರಿ ಕೆಲಸವನ್ನು ಈ ಸಾಲಿನಲ್ಲಿ ಮಾಡಿಸಿಕೊಡಬೇಕು. ಎಂದು ಹೇಳುತ್ತೇನೆ. ಹಾಗೆಯೇ ಮಲೆನಾಡಿನಲ್ಲಿ ಅನೇಕ ರಸ್ತೆಗಳನ್ನು ಈ ಸಾರಿ ಬಡ್ಜೆಟ್ಟಿನಲ್ಲಿ ಸೇರಿಸುತ್ತಾರೆ ಎನ್ನುವ ನಿರೀಕ್ಷಣೆ ಇದೆ. ಅದನ್ನು ಏತಕ್ಕೆ ತೆಗೆದುಕೊಳ್ಳುವುದಿಲ್ಲವೋ ಗೊತ್ತಿಲ್ಲ. ಕಳೆದ ಸಾರಿ ಮಂತ್ರಿಗಳು ಪ್ರವಾಸ ಮಾಡಿದಾಗ ಶಿವಮೊಗ್ಗಾ ಬಾಳೆಬರೆ ಮಾರ್ಗದ inter-provincial ರಸ್ತೆಗೆ ತಕ್ಷಣ ಟಾರ್ ಮಾಡಿಸುತ್ತೇವೆ ಎಂದು ಹೇಳಿದರು.

1-30 P.M.

ಆ ರಸ್ತೆಯಲ್ಲಿ ಗಂಗೊಳ್ಳಿ ಬಂದರಿನಿಂದಲೂ ಇತರ ಕಡೆಗಳಿಂದಲೂ ಬರತಕ್ಕ ನೂರಾರು ಲಾರಿಗಳ ಸಂಚಾರವಿದೆ. ಅದಕ್ಕೆ ಟಾರು ಮಾಡಿದ್ದಾರೆ. ಆದರೆ ಶಿವಮೊಗ್ಗದಿಂದ ಬಾಳೆಬರೆಗೆ ಬರುವ ರಸ್ತೆಯನ್ನು ಸೇರಿಸಿಲ್ಲ. ಟಾರು ಹಾಕಿಸುವ ಕಾರ್ಯಕ್ರಮವನ್ನು ಕೈಗೊಂಡು ಮುಂದುವರಿಯುತ್ತಿದ್ದಾರೆ. ಶಿವಮೊಗ್ಗದಿಂದ ಹುಲಿಕಲ್ಲು, ಬಾಳೆಬರೆ ಮಾರ್ಗವಾಗಿ ದಕ್ಷಿಣ ಕನ್ನಡಕ್ಕೆ ಹೋಗುವ ರಸ್ತೆ ಬಾಳೆಬರೆ, ಆಗುಂಬೆ, ಚಾರ್ಮಾಡಿ, ಬಿಸಲೆ ಈ ನಾಲ್ಕು ರಸ್ತೆಗಳಿಗೂ ಟಾರು ಹಾಕುವುದಕ್ಕೆ ಮೈಸೂರು ಸರ್ಕಾರದವರು ಪ್ರಯತ್ನ ಮಾಡುತ್ತಿದ್ದಾರೆ. ಮದರಾಸು ಸರ್ಕಾರದವರೂ ಮೈಸೂರಿಗೆ ಸೇರುವ ಭಾಗದಲ್ಲಿ ಒಳ್ಳೆಯ ರಸ್ತೆಯಾಗಬೇಕೆಂದು ಅದಕ್ಕೆ ಟಾರ್ ಮಾಡಿಸಬೇಕೆಂದು ಹೇಳುತ್ತೇನೆ. ಇಷ್ಟು ಭದ್ರಾವತಿಗೆ ಸಂಬಂಧಪಟ್ಟಂತೆ ನಮೂದು ಮಾಡಿರುವ ರಸ್ತೆಗಳ ಕೆಲಸಗಳನ್ನು ಪೂರೈಸಿ ಕೊಡಬೇಕು.

ಭದ್ರಾವತಿಯಲ್ಲಿ ಕಾರ್ಖಾನೆಗಳ ನೀರನ್ನು ಬಿಟ್ಟು ನದಿ ನೀರು ಕೆಟ್ಟುಹೋಗಿ ಜನರು ಸ್ನಾನ ಮಾಡುವುದಕ್ಕೆ ಅನಾನುಕೂಲವಾಗಿರುವುದರಿಂದ ಅಲ್ಲಿ ಒಂದು (Swimming pool, ಈಜುವ ಕೊಳವನ್ನು ಮಾಡಿಸಿ ಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Sri V. M. MASCARENHAS (St. Jhon's Hill).—Mr. Speaker, my Hon'ble friend Sri Gopala Gowda has made a number of important observations on the Public Works Department, which I think require very careful consideration at the hands of the Government. This is one of the departments, Sir, which has been severely criticised in this House year after year by both the Opposition and the Treasury Benches. It is equally true to say that the Government has practically done nothing to meet these observations from both sides. I give you one single instance. Three years ago, there were breaches in Sangenahalli and Thuppadhalli tanks, bringing a total loss of nearly 37 lakhs of rupees to the State of Mysore. The uproar was so great that the Government immediately appointed a committee consisting of three persons to go into the matter. A report immediately was turned out by these three gentlemen who constituted the committee. Till today the Government has not told us what action has been taken on that report and I come to understand that the only action taken was that the Superintending Engineer was promoted as Chief Engineer.

A MEMBER.—Who was resposible.

Sri V. M. MASCARENHAS.—Yes. If this is the kind of action that the Government takes against those officers of the P.W.D., I would straightaway say that every officer of the P.W.D. will make a large number of mistakes, because that is the only way in which he gets salvation. How long shall this state of affairs continue? This is the largest spending department of the Government. If the activities of the department are not controlled in every sense by the Government, if a careful watch of the moneys which we borrow from the Government of India or from the public at fairly high rates of interest is not kept, what is the future for this State? I only hope that this interim minister—you should not misunderstand the words interim minister—is bent upon seeing that inefficiency everywhere and at every

(SRI V. M. MASCARENHAS.)

level is put down at any cost. I sincerely hope that he will take every possible step to see that these fossilised customs in this department are not only rooted out, but perhaps a few fossilised officers are also dispensed with thereby setting an example to the other members of the department that no more shall the Government tolerate inefficiency, sluggishness and corruption.

*ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಸ್ವಾಮಿ, ಈ ಇಲಾಖೆಯಿಂದ ವರ್ಷವರ್ಷವೂ ಸುಮಾರು ಹತ್ತುಹನ್ನೆರಡು ಕೋಟಿ ರೂಪಾಯಿ ಖರ್ಚಾಗುತ್ತಿದೆ. ಬಹುಶಃ ಈ ಸಾಲಿನಲ್ಲಿಯೂ ಕೂಡ ಸುಮಾರು ಹನ್ನೆರಡು ಕೋಟಿ ರೂಪಾಯಿಗಳನ್ನು ಈ ಮರಾಮತ್ತು ಇಲಾಖೆಯ ಮೂಲಕ ಖರ್ಚು ಮಾಡಬೇಕೆಂದು ಅಂದಾಜು ಮಾಡಲಾಗಿದೆ. ಮಾನ್ಯ ಸ್ನೇಹಿತರು ಶ್ರೀಮಾನ್ ಮ್ಯಾಸ್ಕರೇನ್ಹ್ಯಾಸ್‌ರವರು ಈ ಇಲಾಖೆಯ ವಿಚಾರವನ್ನು ಹೇಳಿದರು. ಅಲ್ಲದೆ ಈ ಇಲಾಖೆಯ ವಿಚಾರವಾಗಿ ಆಗಿಂದಾಗ್ಗೆ ಅನೇಕ ಟೀಕೆಗಳು ಬರುತ್ತಿವೆ; ಇದರ ಪರಿಣಾಮ ಇನ್ನೂ ಯಾವ ರೀತಿಯಲ್ಲೂ ಕಂಡುಬರುತ್ತಿಲ್ಲ. ಈ ಸಂದರ್ಭದಲ್ಲಿ ಸಭೆಯ ಗಮನವನ್ನು ಒಂದು ವಿಷಯಕ್ಕೆ ಸೆಳೆಯಬೇಕಾಗಿದೆ. ಈ ಸಭೆಯವರು ಒಂದು ಅಂದಾಜು ಸಮಿತಿ (Estimates Committee) ಮಾಡಿ, ಆ ಸಮಿತಿಯ ವರದಿ ಕೂಡ ಈ ಸಭೆಗೆ ಬಂದಿದೆ. ಆ ವರದಿಯಲ್ಲಿ ನಮೂದಾಗಿರುವ ಒಂದೆರಡು ವಿಷಯಗಳನ್ನು ಸಭೆಯ ಗಮನಕ್ಕೆ ತರಬೇಕೆಂದು ಇಷ್ಟಪಡುತ್ತೇನೆ. 1954 ನೆಯ ಇಸವಿಯ ವರದಿಯಲ್ಲಿ, ಅಂದಾಜು ಸಮಿತಿಯವರು ಈ ಮರಾಮತ್ ಇಲಾಖೆ ಒಂದನ್ನೇ ತೆಗೆದುಕೊಂಡು, ಇದರ ಕೆಲಸ ಕಾರ್ಯಗಳನ್ನು ಕೂಲಂಕಷವಾಗಿ ವಿಮರ್ಶೆ ಮಾಡಿ ಸಭೆಗೆ ಒಪ್ಪಿಸಿದರು. ಈ ವರದಿಯಲ್ಲಿ ಮಾನ್ಯ ಸ್ನೇಹಿತರಾದ ಶ್ರೀ ಗೋಪಾಲಗೌಡರು ಹೇಳಿದ ವಿಷಯ ಪ್ರಸ್ತಾಪವಾಗಿದೆ. ಈ ಕಂಟ್ರಾಕ್ಟರುಗಳು ಲೈಸೆನ್ಸ್ಡ್ ಕಂಟ್ರಾಕ್ಟರುಗಳಾಗಬೇಕೆಂದು ವರದಿಯಲ್ಲಿ ಶಿಫಾರಸು ಮಾಡಿದ್ದಾರೆ. ಕೆಲಸ ಕಾರ್ಯಗಳು ಬೇಗ ನಡೆಯಲು ಯಾವ ಯಾವ ರೀತಿ ನಡೆಯಬೇಕೆಂಬ ಬಗ್ಗೆ ವಿಮರ್ಶೆ ಮಾಡಿದ್ದಾರೆ. ಇದರ ಜೊತೆಗೆ ಮುಂದೆ ನಡೆಯತಕ್ಕ ರಸ್ತೆ ಕೆಲಸಗಳು, ಸೇತುವೆ ಕೆಲಸಗಳು, ಕಟ್ಟಡಗಳು, ಇವೆಲ್ಲದರಲ್ಲಿಯೂ ಈಗ ಹಾಲಿ ಇರತಕ್ಕ ಪದ್ಧತಿಯಲ್ಲಿ ಒಂದು ನ್ಯೂನತೆ ಕಂಡುಬರುತ್ತದೆ. ಆ ನ್ಯೂನತೆಯೇನೆಂದರೆ, ಯಾವುದಾದರೂ ಒಂದು ಡಿವಿಜನ್ ಅಥವಾ ಸಬ್‌ಡಿವಿಜನ್ನಿನಲ್ಲಿ ಆಗಲಿ ಒಂದು ಸೇತುವೆ ಕೆಲಸ ಅಥವಾ ಕಟ್ಟಡದ ಕೆಲಸ ನಡೆದರೆ, ಅದು ಪೂರೈಸಿದ ಮೇಲೆ ಆ ಕೆಲಸ ನಡೆಯುವುದಕ್ಕೆ ಸಂಬಂಧಪಟ್ಟ ಇಂಜಿನಿಯರು ಯಾರಾರಿದ್ದರು, ಅಸಿಸ್ಟೆಂಟ್ ಇಂಜಿನಿಯರು ಯಾರಾರಿದ್ದರು, ಎಗ್ಸಿಕ್ಯೂಟಿವ್ ಇಂಜಿನಿಯರಾರಾರಿದ್ದರು ಎಂಬುದಕ್ಕೆ ಒಂದು ರಿಜಿಸ್ಟರಿರಬೇಕು. ಕಟ್ಟಡವಾಗಲಿ ಸೇತುವೆಯಾಗಲಿ 'ಕ್ರ್ಯಾಕ್' ಬಂದು ಕೆಲಸ ಚೆನ್ನಾಗಿಲ್ಲವೆಂದು ಹೇಳುವುದಾದರೆ, ಇದಕ್ಕೆ ಯಾರು ಜವಾಬ್ದಾರರು ಎಂಬುದು ಗೊತ್ತಾಗುತ್ತದೆ. ಈ ರೀತಿ ಒಂದು ರಿಜಿಸ್ಟರು ಆಯಾ ಕಟ್ಟಡಕ್ಕೂ ಸೇತುವೆಗೂ ಸಂಬಂಧಪಟ್ಟಂತೆ ಇಡಬೇಕು. ಯಾರು ಯಾರು ಕೆಲಸ ಮಾಡಿದರು, ಎಗ್ಸಿಕ್ಯೂಟಿವ್ ಇಂಜಿನಿಯರು, ಅಸಿಸ್ಟೆಂಟ್ ಇಂಜಿನಿಯರು, ಓವರ್ಸಿಯರು, ಸಬ್ ಓವರ್ಸಿಯರುಗಳು, ಕೆಲಸ ಮಾಡಿಸಿದವರು ಯಾರು ಅಳತೆ ತೆಗೆದುಕೊಂಡವರು ಯಾರು, ಬಿಲ್‌ಪಾಸು ಮಾಡಿದವರು ಯಾರು ಎಂಬ ಚರಿತ್ರೆಯನ್ನು ಕೊಟ್ಟು ರಿಜಿಸ್ಟರನ್ನಿಡುವುದು ಸೂಕ್ತವೆಂದು ಸಮಿತಿಯವರು ಸಲಹೆ ಮಾಡಿದ್ದಾರೆ. ಈ ರೀತಿ ಮಾಡಿದರೆ, ಯಾವುದಾದರೂ ಕಟ್ಟಡಕಟ್ಟಿಸಿದ ಸ್ವಲ್ಪ ದಿವಸದಲ್ಲೇ ಅದಕ್ಕೆ ಅಪಾಯವುಂಟಾದರೆ, ಅಥವಾ ಆಮೇಲೆ ಅದನ್ನು ಪರೀಕ್ಷೆ ಮಾಡಿದಾಗ ಅದಕ್ಕೆ ಉಪಯೋಗಿಸಿರುವ ಪದಾರ್ಥಗಳು ಕೆಟ್ಟದ್ದೆಂದು ಕಂಡುಬಂದರೆ, ಈಗ ಕಂಟ್ರಾಕ್ಟರುಗಳ ಮೇಲೆ ದೂರು ಹಾಕುತ್ತಾರೆ, ಅಥವಾ ಸಬ್‌ಓವರ್ಸಿಯರ ಮೇಲೆ ಹಾಕುತ್ತಾರೆ. ಇದಕ್ಕಿಂತ ಹೆಚ್ಚು ಪರಿಣಾಮಕಾರಿಯಾಗಿ ಮಾಡಬೇಕಾದರೆ, ಸಂಬಂಧಪಟ್ಟ ಅಸಿಸ್ಟೆಂಟ್ ಇಂಜಿನಿಯರು, ಎಗ್ಸಿಕ್ಯೂಟಿವ್ ಇಂಜಿನಿಯರನ್ನು ಹಿಡಿದು ಅವರಿಗೆ ಶಿಕ್ಷೆ ಮಾಡಿದರೆ, ಈ ಕೆಲಸ ಕಾರ್ಯಗಳು ಬಹುಶಃ ದಕ್ಷತೆಯಿಂದ ನಡೆಯುತ್ತವೆ. ಇದೊಂದು ಸುಲಭ ಮಾರ್ಗ, ಈ ರೀತಿ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ನಮ್ಮ ಮುಂದಿರತಕ್ಕ ಬೇಡಿಕೆಗಳಲ್ಲಿ Communications, ರಸ್ತೆಗಳಿಗೆ ಮತ್ತು ಕಟ್ಟಡಗಳಿಗೆ ಈ ಸಾಲಿನಲ್ಲಿ ಯಥೇಚ್ಛವಾಗಿ ಹಣವನ್ನು ಒದಗಿಸಿಕೊಂಡಿದ್ದಾರೆ. ಅದರಲ್ಲಿಯೂ ರಸ್ತೆಗಳ ಕೆಲಸಕ್ಕೆ ಹೋದ ಸಾಲಿಗಿಂತಲೂ ಹೆಚ್ಚಾಗಿ ಒದಗಿಸಿಕೊಂಡಿದ್ದಾರೆ. ಈ ಸಾಲಿನಲ್ಲಿ "50-Civil Works"ನಲ್ಲಿ 1,11,95,000 ರೂಪಾಯಿಗಳನ್ನು ಆಯವ್ಯಯದ ಅಂದಾಜಿನಲ್ಲಿ ಒದಗಿಸಿದ್ದಾರೆ. ಹಿಂದಿನ ಸಾಲಿನಲ್ಲಿ ಆಯವ್ಯಯದ ಅಂದಾಜು ಪ್ರಕಾರ 61,48,000 ರೂಪಾಯಿಗಳು ಮಾತ್ರವಿತ್ತು. ಅದೇ ರೀತಿಯಾಗಿ Demand No. 41 'A'ನಲ್ಲಿ ಒಟ್ಟು 2,25,68,7,00 ರೂಪಾಯಿಗಳನ್ನು ಒದಗಿಸಿಕೊಂಡಿದ್ದಾರೆ. ಯಥೇಚ್ಛವಾಗಿ ಹಣವೇನೋ ರಸ್ತೆಗಳ ನಿರ್ಮಾಣಕ್ಕೆ, ಸೇತುವೆಗಳ ನಿರ್ಮಾಣಕ್ಕೆ, ಮತ್ತು ಕಟ್ಟಡಗಳಿಗೆ ಖರ್ಚಾಗುತ್ತಿದೆ. ಆದರೆ ಈ ಸಂದರ್ಭದಲ್ಲಿ ಸರ್ಕಾರದವರ ಗಮನಕ್ಕೆ ಒಂದು ವಿಷಯವನ್ನು ತರಬೇಕೆಂದು ಬಯಸುತ್ತೇನೆ. ಅದೇನೆಂದರೆ ಎಷ್ಟೋ ಹಣ, ಕೋಟಿಗಟ್ಟಲೆ ಹಣ, ಈ ರಸ್ತೆಗಳ ರಿಪೇರಿಗೆ, ನಿರ್ಮಾಣಕ್ಕೆ ಖರ್ಚಾಗುತ್ತಿದ್ದರೂ ಕೂಡ ಮಲೆನಾಡು ಪ್ರದೇಶಗಳಲ್ಲಿ ಸರ್ವೇಸಾಧಾರಣವಾಗಿ ಎಲ್ಲಾ ಭಾಗಗಳಲ್ಲಿಯೂ, ಹಳ್ಳಿಯಿಂದ ಹಳ್ಳಿಗೆ ತಿರುಗಾಡಬೇಕಾದ ರಸ್ತೆಗಳ ವಿಚಾರ ಬಹಳ ಶೋಚನೀಯವಾಗಿ ಉಳಿದಿದೆ. ಮತ್ತು ಅದಕ್ಕೆ ಸಾಕಷ್ಟು ಗಮನವನ್ನು ಸರ್ಕಾರದವರು ಕೊಡುತ್ತಿಲ್ಲವೆಂದರೆ ಅದು ತಪ್ಪಾಗಲಾರದು. ಈಗ ರಸ್ತೆ ರಿಪೇರಿಗೆ, ಹೊಸ ರಸ್ತೆಗಳ ನಿರ್ಮಾಣಕ್ಕೆ ಮತ್ತು ಸಿಮೆಂಟ್ ಕಾಂಕ್ರೀಟ್ ಮಾಡುವುದಕ್ಕೆ ಬಹುಭಾಗದ ಹಣ ಖರ್ಚಾಗುತ್ತದೆ. ಆ ಖರ್ಚಿನಲ್ಲಿಯೂ ಕೂಡ ರಿಪೇರಿಗಾಗಿ ವಿನಿಯೋಗಿಸುತ್ತಿರುವ ಹಣಕ್ಕೆ ಸಂಪೂರ್ಣ ಪ್ರತಿಫಲ ಬರುತ್ತಿಲ್ಲ. ಮತ್ತು ಸಿಮೆಂಟ್ ಕಾಂಕ್ರೀಟ್ ರಸ್ತೆಗಳ ನಿರ್ಮಾಣಕ್ಕೋಸ್ಕರವಾಗಿ ಲಕ್ಷಾಂತರ ರೂಪಾಯಿಗಳು ಈಗ ನಾಲ್ಕೈದು ವರ್ಷಗಳಿಂದ ಯಥೇಚ್ಛವಾಗಿ ಖರ್ಚು ಮಾಡಿಕೊಂಡು ಬಂದಿದ್ದಾರೆ. ಈ ಹಣವನ್ನೆಲ್ಲ ಹಳ್ಳಿಯಿಂದ ಹಳ್ಳಿಗೆ ತಿರುಗಾಡುವುದಕ್ಕೆ, inter—village communication roads ಎಂದು ಏನು ಹೇಳುತ್ತೇವೆಯೋ ಆ ರಸ್ತೆಗಳನ್ನು ನಿರ್ಮಾಣ ಮಾಡುವುದಕ್ಕೆ, ಅವುಗಳನ್ನು ರಿಪೇರಿ ಮಾಡುವುದಕ್ಕೆ ಅವುಗಳನ್ನು maintain ಮಾಡುವುದಕ್ಕೆ ಖರ್ಚು ಮಾಡಿಕೊಂಡು

ಬಂದಿದ್ದರೆ ಚೆನ್ನಾಗಿತ್ತು. State Fund Roads ಮಾತ್ರ ತೆಗೆದುಕೊಂಡು ಅವುಗಳ ಕೆಲಸ ಕಾರ್ಯಗಳನ್ನು ಸರ್ಕಾರದವರು ಮಾಡುತ್ತಿದ್ದಾರೆ; ಹಳ್ಳಿಯಿಂದ ಹಳ್ಳಿಗೆ ಹೋಗತಕ್ಕ ರಸ್ತೆಗಳ ನಿರ್ಮಾಣ, ರಿಪೇರಿ ಇತ್ಯಾದಿ ಎಲ್ಲವೂ Local Bodiesಗೆ ಸಂಬಂಧಪಟ್ಟದು, ಅವರೇ ಮಾಡಬೇಕು, ಆದುದರಿಂದ ಈ ರಸ್ತೆಗಳ ಜವಾಬ್ದಾರಿ ನಮ್ಮದಲ್ಲ ಎಂಬ ಒಂದು ದೃಷ್ಟಿಯಿಂದ ಮಾತನಾಡುತ್ತಾರೆ. ಸರ್ಕಾರದವರು ಅನೇಕ ಸಾರಿ ಈ ಜವಾಬು ಕೊಟ್ಟಿದ್ದಾರೆ. ನಮ್ಮ ದೇಶದಲ್ಲಿರತಕ್ಕ ಎಲ್ಲ ರಸ್ತೆಗಳನ್ನೂ ನೋಡಿಕೊಳ್ಳುವುದಕ್ಕೆ ಮೂರು ಏಜೆನ್ಸಿಗಳಿವೆ. ಒಂದು State Government. ಮತ್ತೊಂದು ಡಿಸ್ಟ್ರಿಕ್ಟ್‌ಬೋರ್ಡ್ ಮತ್ತೊಂದು ವಿಲೇಜ್ ಪಂಚಾಯಿತಿ. ವಿಲೇಜ್ ಪಂಚಾಯಿತಿಗಳ ವಿಚಾರ ತೆಗೆದುಕೊಂಡರೆ, ಪಂಚಾಯಿತಿಗಳಲ್ಲಿ ಸಾಕಷ್ಟು ದುಡ್ಡಿಲ್ಲವೆನ್ನುವುದು ಸರ್ವವಿದಿತವಾದ ವಿಚಾರ. ಒಂದು ರಸ್ತೆಯನ್ನು ನಿರ್ಮಾಣ ಮಾಡುವುದಾಗಲಿ, ನಿರ್ಮಾಣ ಮಾಡಿದ ರಸ್ತೆಗಳನ್ನು ರಿಪೇರಿ ಮಾಡುವುದಾಗಲಿ ಪಂಚಾಯಿತಿಗಳಿಂದ ಸಾಧ್ಯವಾಗದ ಕೆಲಸ. ಜಿಲ್ಲಾಬೋರ್ಡು ವಿಷಯವನ್ನು ತೆಗೆದುಕೊಂಡರೆ ಜಿಲ್ಲಾ ಬೋರ್ಡಿಗೆ 1952 ನೆಯ ಇನಾಮ್ ಆಕ್ಟ್ ಪ್ರಕಾರ ಭೂಕಂದಾಯದಲ್ಲಿ ಶೇಕಡ 12½ ಕೊಡಬೇಕೆಂದು ತೀರ್ಮಾನವಾದ ಮೇಲೆ, ಶೇಕಡ 12½ ಹಣವನ್ನು, ಅಂದರೆ, ಸುಮಾರು 12½ ಲಕ್ಷ ರೂಪಾಯಿಗಳನ್ನು ನಾವು ಜಿಲ್ಲಾಬೋರ್ಡ್‌ಗಳಿಗೆ ಕೊಡುತ್ತಿದ್ದೇವೆ. ಅದರ ಜೊತೆಗೆ ಈಗ ನೂರಾರು ಮೈಲಿಗಳ ರಸ್ತೆಯನ್ನು ಜಿಲ್ಲಾಬೋರ್ಡಿನಿಂದ ಸರ್ಕಾರದವರು ತಮ್ಮ State Fund Roads maintenanceಗೆ ಎಂದು ತೆಗೆದುಕೊಂಡಿದ್ದಾರೆ. ಆದ್ದರಿಂದ ಈ inter—Village Communication Roads ಎಲ್ಲವನ್ನೂ ಜಿಲ್ಲಾ ಬೋರ್ಡಿನವರೇ ನೋಡಿ ಕೊಳ್ಳಬೇಕು ಮುಂತಾಗಿ ಹೇಳುತ್ತಿದ್ದಾರೆ ಆದರೆ ಈಗ ಅಲ್ಲಿಯ ಪರಿಸ್ಥಿತಿ ಹೇಗಿದೆ ಎಂದರೆ ಜಿಲ್ಲಾ ಬೋರ್ಡುಗಳಲ್ಲಿ ಹಣವಿಲ್ಲದೆ, ಅವರು ಇದುವರೆಗೂ ಮಾಡಿಕೊಂಡು ಬಂದಿದ್ದ ರಸ್ತೆಗಳನ್ನು ರಿಪೇರಿ ಮಾಡುವುದಕ್ಕೆ ಕೂಡ ಸಾಧ್ಯವಿಲ್ಲದೆ ಆಗಿದೆ. ಇಂಥ ಪರಿಸ್ಥಿತಿಗೆ ಜಿಲ್ಲಾ ಬೋರ್ಡುಗಳು ಬಂದಿವೆ. ಸರ್ಕಾರದಿಂದ ಕೊಡತಕ್ಕ ಸುಮಾರು 12½ ಲಕ್ಷ ರೂಪಾಯಿಗಳನ್ನು ಯಾವ ರೀತಿಯಾಗಿ ಕೊಡುತ್ತಿದ್ದಾರೆಂದರೆ ಇದರಲ್ಲಿ 6¼ ಲಕ್ಷ ರೂಪಾಯಿಗಳನ್ನು ಜಿಲ್ಲಾ ಬೋರ್ಡಿಗೆ ದಾಮಾಷಾ ಪ್ರಕಾರ ಹಂಚುತ್ತಿದ್ದಾರೆ. ಉಳಿದ 6¼ ಲಕ್ಷ ರೂಪಾಯಿಗಳನ್ನು ಗ್ರ್ಯಾಂಟ್ ಕೊಟ್ಟ ಹಾಗೆ, ಎಂದರೆ, ಎಲ್ಲಾ ಜಿಲ್ಲಾ ಬೋರ್ಡುಗಳಿಗೂ ಒಂದೇ ಸಮವಾಗಿ ಹಂಚದೆ, ಯಾವ ಯಾವ ಜಿಲ್ಲಾ ಬೋರ್ಡುಗಳಿಗೆ ಎಕ್ಸೈಜ್ ಬಾಬಿನಿಂದ ಬರತಕ್ಕ ಆದಾಯವು ನಿಂತುಹೋಗಿದೆಯೋ ಅಂಥ ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಕೆಲವು ಸಂದರ್ಭಗಳಲ್ಲಿ ಹೆಚ್ಚು ಕೊಡುವುದು, ಇನ್ನು ಕೆಲವು ಸಂದರ್ಭಗಳಲ್ಲಿ ಕಡಮೆ ಕೊಡುವುದು ಹೀಗೆ ಆಯಾ ಜಿಲ್ಲಾ ಬೋರ್ಡಿನ ಸ್ಥಿತಿಗತಿಗಳನ್ನನುಸರಿಸಿ ಹಂಚಿಕೆ ಮಾಡಿಕೊಂಡು ಬರುತ್ತಿದ್ದಾರೆ. ಹೀಗಿರುವಾಗ ಅನೇಕ ಜಿಲ್ಲಾ ಬೋರ್ಡುಗಳಲ್ಲಿ ಶೇಕಡ 12½ ಪ್ರಕಾರ ಹಣವನ್ನು ಒಂದೇ ಸಮನೆ ಕೊಡುತ್ತ ಬರದೆ ಇರುವ ಕಾರಣ ಅವರು ರಸ್ತೆ ಕೆಲಸಗಳನ್ನು ಮಾಡಿಸದೆ ಸಂಪೂರ್ಣವಾಗಿ ನಿಂತುಹೋಗಿದೆ. ಹೊಸ ರಸ್ತೆಗಳನ್ನು ನಿರ್ಮಾಣ ಮಾಡದೆ ಇದ್ದರೆ ಹೋಗಲಿ, ಈಗಾಗಲೆ ನಿರ್ಮಾಣ ಮಾಡಿರತಕ್ಕ ರಸ್ತೆಗಳನ್ನು ರಿಪೇರಿ ಮಾಡುವುದಕ್ಕೆ ಕೂಡ ಸಾಧ್ಯವಿವಾಗುತ್ತಿಲ್ಲ.

ಮೈಸೂರು ಜಿಲ್ಲೆಯಲ್ಲಿ ನನಗೆ ತಿಳಿದಿರುವ ಮಟ್ಟಿಗೆ ಕೆಲವು ಮೈಲಿಗಳ ರಸ್ತೆ ನಿರ್ಮಾಣವಾಗಿತ್ತು. ಅದನ್ನು ನೋಡುವವರೇ ಇಲ್ಲದೆ ಅಕ್ಕಪಕ್ಕದ ಜಮೀನ್ದಾರರು ರಸ್ತೆಯನ್ನು ಉತ್ತು ರಸ್ತೆಯೇ ಇಲ್ಲದಂತೆ ಮಾಡಿದ್ದಾರೆ. ಮಾನ್ಯ ಮಂತ್ರಿಗಳು ಮೈಸೂರು ಜಿಲ್ಲಾ ಬೋರ್ಡ್ ಅಧ್ಯಕ್ಷರಾಗಿದ್ದಾಗ ಈ ರಸ್ತೆಯನ್ನು ನಿರ್ಮಾಣ ಮಾಡಿಸಿದ್ದರು. ಮೈಲಿ ಮತ್ತು ಫರ್ಲಾಂಗ್-ಕಲ್ಲುಗಳನ್ನು ಸಹ ಗುರಿತಿಗಾಗಿ ನಡೆಸಿದರು. ಈಗ ಹಾಲಿ ಮೈಲಿ ಕಲ್ಲು ಮತ್ತು ಫರ್ಲಾಂಗು ಕಲ್ಲುಗಳು ಇನ್ನೂ ಉಳಿದಿವೆ. ಇವುಗಳಿಂದ ಇಂಥಕಡೆ ಜಿಲ್ಲಾ ಬೋರ್ಡು ರಸ್ತೆ ಇತ್ತೆಂದು ಭಾಸವಾಗುತ್ತದೆ. ಜಿಲ್ಲಾ ಬೋರ್ಡುಗಳಲ್ಲಿ ದುಡ್ಡಿಲ್ಲದೆ ಈ ರಸ್ತೆಗಳೆಲ್ಲ ಹಾಳು ಬಿದ್ದಿವೆ. ಜೊತೆಗೆ ಅಲ್ಪ ಸ್ವಲ್ಪ ಹಣ ಒದಗಿಸುವುದನ್ನೂ ಯಾವ ರೀತಿ ಖರ್ಚು ಮಾಡುತ್ತಾರೆಂದರೆ ಅದು ಮತ್ತೂ ವಿಚಿತ್ರವಾದ ಸಂಗತಿ. ಹಣವನ್ನು 500 ರೂಪಾಯಿ, ಒಂದು ಸಾವಿರ ರೂಪಾಯಿ ಪ್ರಕಾರ ಒಂದೊಂದು ರಸ್ತೆಗೂ ಹಂಚುತ್ತಾರೆ. 5 ಮೈಲಿ ಇರುವ ರಸ್ತೆಯಲ್ಲಿ ಯಾರೂ ಹೋಗಿ ನೋಡುವುದಕ್ಕೆ ಸಾಧ್ಯವಿಲ್ಲದೆ ಇರುವ ಕಡೆಗಳಲ್ಲಿ District Board overseer ಮತ್ತು contractor ಸೇರಿಕೊಂಡು, ಕೆಲಸ ಮಾಡಿದ್ದೇವೆಂದು ಹೇಳಿ ಹಣವನ್ನೆಲ್ಲಾ ಖರ್ಚುಮಾಡಿ, ಆ ವರ್ಷದ ಕೆಲಸ ಪೂರೈಸಿತೆಂದು ಮುಗಿಸುತ್ತಾರೆ. ಇದರಿಂದ ಏನಾಗುತ್ತದೆಂದರೆ ಒಂದು ಕಡೆ ಅಲ್ಪಸ್ವಲ್ಪ ಹಣವನ್ನು ಒದಗಿಸುತ್ತಿರುವುದರ ಪ್ರತಿಫಲ ಸರಿಯಾಗಿ ದೊರೆಯುತ್ತಿಲ್ಲ; ಮತ್ತೊಂದು ಕಡೆ ಹಣವನ್ನು ಪೋಲು ಮಾಡಿಕೊಂಡು ತಿನ್ನುವವರಿಗೆ ಅವಕಾಶವಾಗಿರುವುದಲ್ಲದೆ ಸಂಪೂರ್ಣವಾಗಿ ಕೆಲಸ ಮಾಡದೆ ಅಲ್ಪ ಸ್ವಲ್ಪ ಮಣ್ಣು ಹಾಕಿ ಬಿಟ್ಟುಬಿಡುತ್ತಾರೆ. ಆದರೆ ಮಳೆಗಾಲ ಬಂದಾಗ ಮಾಡಿರುವ ಮಣ್ಣು ಕೆಲಸವೂ ಪೂರ್ತಿಯಾಗಿ ಕೊಚ್ಚಿ ಹೋಗುತ್ತದೆ. ಹೀಗೆ ಅಲ್ಪಸ್ವಲ್ಪ ಹಣ ಖರ್ಚು ಮಾಡುವುದರಿಂದ ಪ್ರತಿಫಲ ಎಳ್ಳಷ್ಟೂ ದೊರೆಯುತ್ತಿಲ್ಲ. ವರ್ಷೇ ವರ್ಷೇ ಹಣ ಪೋಲಾಗಿ ಜನತೆಗೆ ಏನೂ ಪ್ರಯೋಜನವಾಗುತ್ತಿಲ್ಲ.

ಸರ್ಕಾರದವರು ಇತ್ತೀಚೆಗೆ ಜಿಲ್ಲಾ ಬೋರ್ಡುಗಳಿಂದ ಸುಮಾರು 700 ಮೈಲಿಗಳ ರಸ್ತೆಯನ್ನು ಇಡೀ ಸಂಸ್ಥಾನದಲ್ಲಿ State Fund Road ಆಗಿ ತೆಗೆದುಕೊಂಡರು. ಆದರೆ State Fund Road ಎಂದು ಹೊಸದಾಗಿ ತೆಗೆದುಕೊಂಡಿರತಕ್ಕ ರಸ್ತೆಗಳ ಸ್ಥಿತಿಗತಿಗಳು ಕೂಡ ಸ್ವಲ್ಪ ಹೆಚ್ಚು ಕಡಿಮೆ ಜಿಲ್ಲಾ ಬೋರ್ಡು ರಸ್ತೆ ಸ್ಥಿತಿಗತಿಗಳು ಹೇಗಿದೆಯೋ ಹಾಗೆಯೇ ಇದೆ. ಸರ್ಕಾರದವರು ಹಿಂದಿನಿಂದಲೂ ಇದ್ದ ಭಾಟಾ ಮಾರ್ಗಗಳು ಅಂದರೆ State Fund Roads Grade No. I ರಸ್ತೆಗಳಿಗೆ asphalting, cement concreting ಮಾಡಿಸುವುದಕ್ಕೆ ಹಣವನ್ನು ಖರ್ಚು ಮಾಡುತ್ತಿರುವ ಕಾಲದಲ್ಲಿ ಜಿಲ್ಲಾ ಬೋರ್ಡಿನಿಂದ ತೆಗೆದುಕೊಂಡಿರುವ ರಸ್ತೆಗಳನ್ನು ಸಮರ್ಪಕವಾದ ರೀತಿಯಲ್ಲಿ maintain ಮಾಡುತ್ತಿಲ್ಲ. ಹೀಗಿರುವುದರಿಂದ ಹಳ್ಳಿಯಿಂದ ಹಳ್ಳಿಗೆ ರಸ್ತೆಗಳಾಗಬೇಕಾದರೆ—ಯಾವ ಏಜೆನ್ಸಿಯಿಂದಲಾದರೂ ಮಾಡಿಸಿ, ಅದು ಮುಖ್ಯವಲ್ಲ—ಒಂದುವೇಳೆ ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಹೆಚ್ಚಾಗಿ ಹಣ ಕೊಡಿ, ಅವರೇ ಬೇಕಾದರೂ ಮಾಡಿಸಲಿ, ಪಂಚಾಯಿತಿಗೆ ಹೆಚ್ಚಾಗಿ ಹಣಕೊಟ್ಟು ಅವರಿಂದ ಬೇಕಾದರೂ ಮಾಡಿಸಿ, ಹಾಗಿಲ್ಲದಿದ್ದರೆ ಸರ್ಕಾರದವರೇ ನೇರವಾಗಿ ಇನ್ನೂ ಹೆಚ್ಚು ರಸ್ತೆಗಳನ್ನು ಸ್ಟೇಟ್ ಫಂಡ್ ರಸ್ತೆಗಳೆಂದು ಮಾಡಿ ತಾವೇ ಹೊಸ ರಸ್ತೆ ನಿರ್ಮಾಣಮಾಡುವುದನ್ನು ಮತ್ತು ಮೇಟೆನ್ಸ್

(ಶ್ರೀ ಡಿ. ದೇವರಾಜ ಅರಸ್).

ಮಾಡುವ ಕೆಲಸವನ್ನು ವಹಿಸಿಕೊಳ್ಳಬೇಕು ಎಂದು ಸಲಹೆ ಮಾಡುತ್ತೇನೆ. ಇದಕ್ಕೆ ನಮ್ಮಲ್ಲಿ ಹಣವಿಲ್ಲವೆಂದು ಹೇಳುತ್ತಾರೆ. ನಾನು ಸರ್ಕಾರವನ್ನು ಒಂದು ವಿಷಯ ದಲ್ಲಿ ಪ್ರಶ್ನೆ ಮಾಡಬೇಕಾಗಿದೆ. 1952ರಿಂದ ಈಚೆಗೆ ಸಿಮೆಂಟ್ ಕಾಂಕ್ರೀಟ್ ಮಾಡುವುದಕ್ಕೆ ಎಷ್ಟು ಲಕ್ಷ ರೂಪಾಯಿಗಳು ಖರ್ಚಾಗಿವೆ? ಒಂದು ಮೈಲಿಗೆ ಸುಮಾರು 75-80 ಸಾವಿರ ರೂಪಾಯಿಗಳು ಖರ್ಚಾಗುತ್ತಿವೆಯೆಂದು ಕೇಳುತ್ತೇನೆ. ಕಾಂಕ್ರೀಟ್ ಮಾಡುವುದಕ್ಕೆ ಬದಲಾಗಿ ಆಸ್ಫಾಲ್ಟಿಂಗ್ ಮಾಡಿದ್ದರೆ ಮೈಲಿಗೆ ಸುಮಾರು 18 ಸಾವಿರ ಅಥವಾ 20 ಸಾವಿರ ರೂಪಾಯಿ ಖರ್ಚಾಗುತ್ತದೆ. ಸಿಮೆಂಟ್ ಕಾಂಕ್ರೀಟ್ ಮಾಡಿರತಕ್ಕ ಒಂದು ಮೈಲಿ ರಸ್ತೆಯ ಆಯುಷ್-ಪ್ರಮಾಣ ಎಷ್ಟಿದೆಯೆಂದರೆ ಸುಮಾರು 30 ವರ್ಷವೆಂದು ಹೇಳುತ್ತಾರೆ. ಇದರ ಲೆಕ್ಕ ತೆಗೆದುಕೊಳ್ಳೋಣ. ಒಂದು ಕಡೆ ಸಿಮೆಂಟ್ ಕಾಂಕ್ರೀಟ್ ರಸ್ತೆ, ಇನ್ನೊಂದು ಕಡೆ ಆಸ್ಫಾಲ್ಟಿಂಗ್ ಮಾಡಿರುವ ರಸ್ತೆ ಇದೆ. ಆಸ್ಫಾಲ್ಟ್ ಮಾಡುವುದಕ್ಕೆ ಕ್ಯಾಪಿಟಲ್ ಇನ್‌ವೆಸ್ಟ್‌ಮೆಂಟ್ ಒಂದು ಮೈಲಿಗೆ 20 ಸಾವಿರ ರೂಪಾಯಿ, ಸಿಮೆಂಟ್ ಕಾಂಕ್ರೀಟ್ ಮಾಡುವುದಕ್ಕೆ ಒಂದು ಮೈಲಿಗೆ 65 ಅಥವಾ 70 ಸಾವಿರ ರೂಪಾಯಿ ಇಟ್ಟು ಕೊಳ್ಳಬೇಕಾಗುತ್ತದೆ. 70 ಸಾವಿರ ರೂಪಾಯಿ ಖರ್ಚುಮಾಡಿರುವುದಕ್ಕೆ 30 ವರ್ಷ ಆಯುಸ್ಸು, ಆಸ್ಫಾಲ್ಟ್ ಮಾಡಿರುವ ಒಂದು ಮೈಲಿ ರಸ್ತೆಗೆ 10 ವರ್ಷ ಆಯುಸ್ಸು. ಇದು ಲೆಕ್ಕ ಹಾಕಿದರೆ 30 ವರ್ಷ ಆಯುಸ್ಸು ಆಸ್ಫಾಲ್ಟ್ ರಸ್ತೆಗೆ ಬರಬೇಕಾದರೆ ಒಂದು ಸಲಕ್ಕೆ 3) ಸಾವಿರ ರೂಪಾಯಿನಂತೆ 3 ಸಾರಿ ಖರ್ಚು ಮಾಡಬೇಕಾಗುತ್ತದೆ; ಸಿಮೆಂಟ್ ಕಾಂಕ್ರೀಟ್ ಮಾಡುವುದಕ್ಕೆಷ್ಟು ಖರ್ಚಾಗುತ್ತದೆಯೋ ಅಷ್ಟು ಹಣ ಮೂರು ಅವಧಿಗಳಲ್ಲಿ ಖರ್ಚುಮಾಡಿದರೆ 30 ವರ್ಷ ಬಾಳಿಕೆ ಬರುವಹಾಗೆ ಒಂದು ಮೈಲಿ ಆಸ್ಫಾಲ್ಟ್ ರಸ್ತೆ ಕೂಡ ಮಾಡಬಹುದು. ಹಾಗೆಂದಮೇಲೆ ಕ್ಯಾಪಿಟಲ್ ಇನ್‌ವೆಸ್ಟ್‌ಮೆಂಟ್ ಏಕದಂ ಒಂದು ಮೈಲಿಗೆ 70 ಸಾವಿರ ರೂಪಾಯಿ ಖರ್ಚುಮಾಡುವುದಕ್ಕೂ 10-10 ವರ್ಷಗಳ ಅವಧಿಯಲ್ಲಿ 20 ಸಾವಿರ ರೂಪಾಯಿ ಖರ್ಚು ಮಾಡುವುದಕ್ಕೂ ವ್ಯತ್ಯಾಸವಿದೆಯೆಂದು ತಾವು ಒಪ್ಪೋ ಒಪ್ಪುತ್ತೀರಿ.

ಅಧ್ಯಕ್ಷರು.—ಈಗ ಸಿಮೆಂಟ್ ಕಾಂಕ್ರೀಟ್ ಮಾಡುವುದನ್ನು ನಿಲ್ಲಿಸಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ನಿಲ್ಲಿಸಿದ್ದರೆ ಸಂತೋಷ, ನಿಲ್ಲಿಸಿ ಎಂದೇ ನಾನು ಹೇಳುತ್ತಿರುವುದು. ಈ ಹಣವನ್ನು ಹಳ್ಳಿಗಳ ಕಡೆ ರಸ್ತೆ ಮಾಡುವುದಕ್ಕೇಕೆ ಉಪಯೋಗಿಸಬಾರದು? ಈಗ ರೂರಲ್ ಡೆವಲಪ್‌ಮೆಂಟ್ ಹೆಡ್‌ನಲ್ಲಿ ರಸ್ತೆಗಳಿಗೆ ಮೂರು ಕಾಸೂ ಇಲ್ಲ, ನೀರು ಸರಬರಾಯಿಗೆ ಮಾತ್ರ ಇದೆ. ಇಂಟರ್ ವಿಲೇಜ್ ಕಮ್ಯೂನಿಕೇಷನ್ ಫಂಡಿಗೆ 50 ಸಾವಿರ ರೂಪಾಯಿಗಳವರೆಗೆ ಒದಗಿಸಿ 20-25 ಸಾವಿರ ರೂಪಾಯಿಗಳು ಖರ್ಚಾಗುತ್ತಿತ್ತು. ಡಿಸ್ಟ್ರಿಕ್ಟ್ ಬೋರ್ಡುಗಳು ಹಣ ಖರ್ಚುಮಾಡಿ ರಸ್ತೆ ಮಾಡುತ್ತವೆಯೋ ಎಂದರೆ ಈಗ ಡಿಸ್ಟ್ರಿಕ್ಟ್ ಬೋರ್ಡುಗಳಲ್ಲಿ ಹಣದ ಅಭಾವ ವಿಪರೀತವಾಗಿದೆ, ಗ್ರಾಮಪಂಚಾಯಿತಿಗೂ ಕೂಡ ಮಾಡುವುದಕ್ಕೆ ಸಾಧ್ಯವಿಲ್ಲ. ಹೀಗಿರುವಾಗ ಹಳ್ಳಿಯಿಂದ ಹಳ್ಳಿಗೆ ಹೋಗುವ ರಸ್ತೆ ಮಾಡಬೇಕಾದರೆ ಏನು ಮಾಡಬೇಕೆಂದು ಸರ್ಕಾರದವರು ತೀವ್ರವಾಗಿ ಯೋಚನೆಮಾಡ ಬೇಕು; ಹಣವಿಲ್ಲವೆಂದು ಹೇಳಿದರೆ ಸಾಲದು, ಹಣ ಒದಗಿಸುವುದಕ್ಕೆ ಈಗ ನಮ್ಮ ಮುಂದಿರುವ ಬಡ್ಜೆಟ್ಟಿನಲ್ಲಿ ಸಾಧ್ಯವಿದೆ, ಸಿಮೆಂಟ್ ಕಾಂಕ್ರೀಟ್ ಮಾಡುವುದಕ್ಕೆ ಬದಲಾಗಿ ಆಸ್ಫಾಲ್ಟ್ ಬೇಕಾದರೆ ಮಾಡಿ, ಅದರಿಂದ ಉಳಿಯುವ ಹಣವನ್ನು ಹಳ್ಳಿಗಳಲ್ಲಿ ರಸ್ತೆ ನಿರ್ಮಾಣಮಾಡುವುದಕ್ಕೆ ಮತ್ತು ಈಗ ಸಾಮಾನ್ಯವಾಗಿ ಹೇಳುತ್ತಿರುವ ರಸ್ತೆ ರಿಪೇರಿಗೆ ಖರ್ಚು ಮಾಡಿ ಎಂದು ಮನವಿ ಮಾಡಿಕೊಳ್ಳುತ್ತೇನೆ.

ಕೊನೆಯದಾಗಿ ಕಟ್ಟಡಗಳ ವಿಚಾರದಲ್ಲಿ ಅನುಸರಿಸುತ್ತಿರುವ ನೀತಿಯ ಬಗ್ಗೆ ಒಂದೆರಡು ಮಾತನ್ನಾಡಬೇಕಾಗಿದೆ. ಮೊದಲನೆಯದಾಗಿ ಪ್ರೈಮರಿ ಸ್ಕೂಲು ಕಟ್ಟಡಗಳ ವಿಚಾರ ನೋಡೋಣ. ನಾನು ಈಗಾಗಲೆ ಎರಡು ಸಂದರ್ಭಗಳಲ್ಲಿ ಪ್ರೈಮರಿ ಸ್ಕೂಲು ಕಟ್ಟಡಗಳನ್ನು ಮಾಡಬೇಕಾದರೆ ಸರ್ಕಾರದವರು ಈಗ ಹೊಸದಾಗಿ ಮಾಡಿರತಕ್ಕ ಒಂದು ಆಜ್ಞೆಯ ವಿಚಾರದಲ್ಲಿ ಪ್ರಸ್ತಾಪಮಾಡಿದ್ದೇನೆ. ಅದನ್ನೇ ಮತ್ತೆ ಸರ್ಕಾರದಲ್ಲಿ ಒತ್ತಿ ಹೇಳಬೇಕೆಂದು ಅಪೇಕ್ಷೆಪಡುತ್ತೇನೆ. ಅದೇನೆಂದರೆ ದೇಶಾದ್ಯಂತ ಕಂಪಲ್ಸರಿ ಎಜುಕೇಷನ್ ಕೊಡಬೇಕೆಂಬುದು ಸರ್ಕಾರದ ಜವಾಬ್ದಾರಿಯೆಂಬುದನ್ನು ರಾಜ್ಯಾಂಗದಲ್ಲಿ ಒಪ್ಪಿಕೊಂಡಿದ್ದೇವೆ. ಈಗ ಮುಂದುವರಿಯುತ್ತಿರುವ ಮಾರ್ಗದ ಪ್ರಕಾರ, ನೀತಿಯ ಪ್ರಕಾರ 30 ವರ್ಷಗಳಾದರೂ ಕಾನ್ಸಿಟ್ಯೂಷನ್ ಅಬ್ಲಿಗೇಷನ್ ಪೂರೈಸುವುದಕ್ಕಾಗುವುದಿಲ್ಲ. ಏಕೆಂದರೆ ಒಂದು ಊರಿನಲ್ಲಿ ಒಂದು ಸ್ಕೂಲು ಕಟ್ಟಬೇಕಾದರೆ 15 ಅಡಿ 20 ಅಡಿ ಇರುವ ಕಟ್ಟಡಕ್ಕೆ $2\frac{1}{2}$ ಸಾವಿರ ರೂಪಾಯಿಗಳ ಖರ್ಚಿದೆ. ಈಗ ಹೊಸ ಮಾದರಿಯಲ್ಲಿ ಕಡಮೆ ಖರ್ಚಿನಿಂದ ಕಟ್ಟಬಹುದು ಎಂದು 1,500 ರೂಪಾಯಿಗಳ ಸ್ಕೀಂ ಇದೆ. 1,500 ಅಥವಾ $2\frac{1}{2}$ ಸಾವಿರ ರೂಪಾಯಿಗಳಲ್ಲಿ ಒಂದು ಊರಿನಲ್ಲಿ ಇಂಥ ಸ್ಕೂಲು ಕಟ್ಟಿದರೆ ಇನ್ನು ಐದು ವರ್ಷಗಳಲ್ಲಿ ಇನ್ನೊಂದು ಕಟ್ಟಡ ಕಟ್ಟಬೇಕಾಗುತ್ತದೆ; ಜನಸಂಖ್ಯೆ ಹೆಚ್ಚಿ 25 ಹುಡುಗರಿರುವ ಕಡೆ 50 ಹುಡುಗರಾದಾಗ ಸ್ಥಳ ಸಾಕಾಗುವುದಿಲ್ಲ. ಈಗ ಒಂದೊಂದು ರೂಮಿರುವುದನ್ನು ದ್ವಿಗುಣ ಮಾಡಬೇಕಾದ ಸಂದರ್ಭ ಬಂದಿದೆ. ಇದಕ್ಕೆ ಹಣ ಬೇಕಲ್ಲವೆ? ಆದ್ದರಿಂದ ಹೊಸದಾಗಿ ಮಾಡುವುದಕ್ಕೆ ಹಣ ಕೊಡುತ್ತೀರಾ? ಈ ರೀತಿಯಾಗಿ ಗೊಂದಲವಾಗಿರುವಾಗ ಎಲ್ಲ ಹಳ್ಳಿಗಳಲ್ಲೂ ಒಂದು ಪ್ರೈಮರಿ ಸ್ಕೂಲಿನ ಆವಶ್ಯಕತೆ ಪೂರೈಸುವುದಕ್ಕೆ ಈಗ ಸರ್ಕಾರದವರು ಹಾಕಿಕೊಂಡು ಹೋಗುತ್ತಿರುವ ಮಾರ್ಗದಲ್ಲಿ ಖಂಡಿತ ಸಾಧ್ಯವಿಲ್ಲ. ಇದಕ್ಕೆ ಸಲಹೆ ಇಷ್ಟೆ. ಸರ್ಕಾರದವರು ಪ್ರೈಮರಿ ಸ್ಕೂಲು ಕಟ್ಟಡಗಳಿಗೆ ಹಿಂದೆ ಒದಗಿಸುತ್ತಿದ್ದ ಹಾಗೆ ಒಂದು ಸಾವಿರ-ಎರಡು ಸಾವಿರ ರೂಪಾಯಿಗಳನ್ನೊದಗಿಸಿ ಸದ್ಯದಲ್ಲಿ 500 ರೂಪಾಯಿಗಳನ್ನು ಮಾತ್ರ ಕೊಡುತ್ತೇವೆ, ಬಾಕಿ ಒಂದು ಸಾವಿರ ರೂಪಾಯಿಗಳಿಗೆ ನೀವು 9 ಅಂಗುಲದ ಗೋಡೆ ಹಾಕಿ ಅಸ್‌ಬೆಸ್ಟಾಸ್ ಮೇಲ್ಛಾವಣಿ ಹಾಕಿ, ನಾವು ಹೇಳಿದ ದಾಮಾಷಾ ಪ್ರಕಾರ ಸಿಮೆಂಟ್ ಉಪಯೋಗಿಸಿ ಕಟ್ಟಡ ಕಟ್ಟಿ, 500 ರೂಪಾಯಿಗಳಮೇಲೆ ಕೊಡುವುದಕ್ಕೆ ಸಾಧ್ಯವಿಲ್ಲ, ಸುಲಭದಲ್ಲಿ ನಾವು ಹೇಳಿದಂತೆ ಮಾಡಿದರೆ ಆಗುತ್ತದೆ ಎಂದು ಹೊಸದಾಗಿ ಕಾನೂನು ಮಾಡಿ. ಈಗ ಅನೇಕ ಸ್ಥಳಗಳಲ್ಲಿ ಹೊಸದಾಗಿ ಸರ್ಕಾರದವರು ಮಾಡಿರುವ ಆಜ್ಞೆಯ ಪ್ರಕಾರ ಸ್ಕೂಲು ಕಟ್ಟುವುದಕ್ಕೆ ಅನೇಕರು ಒಪ್ಪುತ್ತಿಲ್ಲ. ಏಕೆಂದರೆ ಈ ರೀತಿಯಾದ ಕಟ್ಟಡ ಕಟ್ಟಿದರೆ ಬಹಳದಿವಸ ನಿಲ್ಲುವುದಿಲ್ಲವೆಂಬುದು ಅವರಿಗೆ ಗೊತ್ತಿದೆ. ಹಲವರಿಗೆ ಹಾರ್ಸ್ ಸೆನ್ಸ್ ಇದೆ. ಇಂಜನಿಯರುಗಳಷ್ಟು ವಿದ್ಯೆ ಕಲಿತಿಲ್ಲದಿದ್ದರೂ ಈ ರೀತಿ ಮನೆ ಕಟ್ಟಿದರೆ 10 ವರ್ಷ ಕೂಡ ಬಾಳಿಕೆ ಬರುವುದಿಲ್ಲವೆಂಬುದು ಅವರಿಗೆ ಚೆನ್ನಾಗಿ ಗೊತ್ತು, ಅದಕ್ಕೇ ಅವರು ನೀವು ಮೊದಲಿದ್ದಹಾಗೆ ಕಟ್ಟಿಸಿ, ಹೊಸಮಾದರಿ ಬೇಡ ಎಂದು ಹೇಳುತ್ತಿರುವುದು.

ಸ್ಕೂಲಿಲ್ಲದಿದ್ದರೂ ಪರವಾಗಿಲ್ಲ, ಹೊಸ ಮಾದರಿ ಬೇಡ ಎಂದು ಹೇಳುವ ಉದಾಹರಣೆಗಳು ಅನೇಕವಾಗಿವೆ. ಮಾನ್ಯ ಮಂತ್ರಿಗಳಿಗೂ ಅನೇಕರು ದೂರು ಕೊಟ್ಟಿರುವುದು ನನಗೆ ಗೊತ್ತಿದೆ.

2 P.M.

ಆದುದರಿಂದ ಈ ಆರ್ಡರನ್ನು ಬದಲಾವಣೆ ಮಾಡಬೇಕೆಂದು ಹೇಳುತ್ತೇನೆ. ಆದರೆ ಹೀಗೆ ಮಾಡುವುದಕ್ಕೆ ಬದಲಾಗಿ ಇನ್ನೊಂದು ರೀತಿ ಮಾಡಬಹುದು. ಈ ದಿವಸ ಸರ್ಕಾರದವರು ಒಂದು ಪಾಠಶಾಲೆಯ ಕಟ್ಟಡಕ್ಕೆ ಎರಡೂವರೆ ಸಾವಿರ ರೂಪಾಯಿಗಳನ್ನು ಒದಗಿಸುವುದಕ್ಕೆ ಬದಲಾಗಿ ಸರ್ಕಾರದವರು 500 ರೂಪಾಯಿಗಳನ್ನು ಕೊಟ್ಟರೆ ಸಾಕು. ಆ ಮೊಬಲಗಿನಲ್ಲೇ ಒಂದು ಪಾಠಶಾಲೆಯ ಕಟ್ಟಡವನ್ನು ಕಟ್ಟಿಸುವುದಕ್ಕೆ ಸಾಧ್ಯವಿದೆ ಎಂದು ಅಲ್ಲಿಯ ಜನರು ಹೇಳುತ್ತಿದ್ದಾರೆ. ಅದು ಹೇಗೆ ಸಾಧ್ಯವಾಗುತ್ತದೆಂದು ತಾವು ಕೇಳಬಹುದು. ಆ ಜನರೇ ಒಂದು ರೀತಿಯ ಸ್ಪೆಸಿಫಿಕೇಷನ್ ಇಟ್ಟುಕೊಂಡಿದ್ದಾರೆ. ತಾವು ಹೇಳುವ ರೀತಿ ಒಂಬತ್ತು ಇಂಚಿನ ಗೋಡೆಗಳನ್ನು ಹಾಕುವುದಕ್ಕೆ ಬದಲಾಗಿ, ಈ ದಿವಸ ಸರ್ಕಾರದವರು ಖರ್ಚುಮಾಡತಕ್ಕ ಮೊಬಲಗಿಗಿಂತ ಕಡಮೆ ಖರ್ಚಿನಲ್ಲಿ ಆಯಾ ಹಳ್ಳಿಗಳಲ್ಲೆ ಒದಗಬಹುದಾದಂಥ ಮರದ ಸಾಮಾನುಗಳನ್ನು ಅವರೇ ಜೋಡಿಸಿಕೊಂಡು, ಸರ್ಕಾರದವರು ಎರಡು ಸಾವಿರ ರೂಪಾಯಿಗಳಲ್ಲಿ ಕಟ್ಟಿಸತಕ್ಕಂಥ ಒಂದು ರೂಮಿಗೆ ಬದಲಾಗಿ ಎರಡು ರೂಮುಗಳಿರತಕ್ಕಂಥ ಕಟ್ಟಡವನ್ನು ಕೇವಲ ಒಂದೇ ಸಾವಿರದಲ್ಲಿ ಕಟ್ಟಿಸಲು ಸಾಧ್ಯವಿದೆಯೆಂದು ಹೇಳುತ್ತಿದ್ದಾರೆ. ಈ ದಿವಸ ಆ ಹಳ್ಳಿಗಳ ಕಡೆ ಬಹಳ ಬಾಳಿಕೆ ಬರತಕ್ಕಂಥ ಹಲಸು, ಬೇವು, ನೇರಳೆ ಇತ್ಯಾದಿ ಮರಗಳು ಇವೆ. ಈ ಮರಗಳಿಂದ ಆ ಕಟ್ಟಡಕ್ಕೆ ಬೇಕಾಗುವಂಥಾ ಮರದ ಸಾಮಾನುಗಳನ್ನು, ಎಂದರೆ, ಕಿಟಕಿ, ಬಾಗಿಲು ವಗೈರೆ ಸಾಮಾನುಗಳನ್ನು ನಾವೇ ಒದಗಿಸಿಕೊಳ್ಳುತ್ತೇವೆ, ಒಂದು ರೂಮಿಗೆ ಬದಲಾಗಿ ಎರಡು ರೂಮುಗಳಷ್ಟು ಹೆಚ್ಚು ವಿಸ್ತೀರ್ಣವಿರುವಂಥ ಕಟ್ಟಡವನ್ನು ಆ ಹಳ್ಳಿ ಜನರ ಸ್ಪೆಸಿಫಿಕೇಷನ್ ಪ್ರಕಾರ ನಾವೇ ಕಟ್ಟಿಸಿಕೊಳ್ಳುತ್ತೇವೆ, ಆದರೆ ಈ ಕಟ್ಟಡಗಳ ಮೇಲ್ಛಾವಣಿಗೆ ಅಗತ್ಯವಾಗಿ ಬೇಕಾದಂಥ ಖರ್ಚಿಗಾಗಿ ಸರ್ಕಾರದವರು 500 ರೂಪಾಯಿಗಳನ್ನು ಕೊಟ್ಟರೆ ಸಾಕು, ಆ ಕಟ್ಟಡವನ್ನು ನಾವೇ ಕಟ್ಟಿಸಿಕೊಳ್ಳುತ್ತೇವೆಂದು ಅಲ್ಲಿಯ ಜನರು ಕೇಳುತ್ತಿದ್ದಾರೆ. ಈ ರೀತಿ ಸರ್ಕಾರದವರು ಮಾಡಲು ಒಪ್ಪಿಕೊಂಡ ಪಕ್ಷದಲ್ಲಿ ಇನ್ನು ಮೂರು-ನಾಲ್ಕು ವರ್ಷಗಳಲ್ಲೇ ನಮ್ಮ ಸಂಸ್ಥಾನಾದ್ಯಂತ ಆಗ ಬೇಕಾಗಿರುವಂಥಾ ಎಲ್ಲಾ ಪ್ರೈಮರಿ ಸ್ಕೂಲು ಕಟ್ಟಡಗಳನ್ನೂ ಕಟ್ಟಿಸಿಕೊಡಲು ಸಾಧ್ಯವಾಗುತ್ತದೆಯೆಂದು ನಾನು ತಿಳಿಸಲಿಚ್ಛಿಸುತ್ತೇನೆ.

ಇನ್ನು ಹೈಸ್ಕೂಲು ಕಟ್ಟಡಗಳ ವಿಚಾರ ತೆಗೆದುಕೊಂಡರೆ ಆಯಾ ಸ್ಥಳದ ಜನರು ಒಂದು ಕಟ್ಟಡಕ್ಕೆ ಅಂದಾಜ 60 ಸಾವಿರ ರೂಪಾಯಿಗಳು ಬೇಕಾಗುತ್ತದೆಂದು ಕಂಡುಬಂದರೆ ಆ ಸ್ಥಳದ ಜನರು ಆ ಕಟ್ಟಡದ ಬಗ್ಗೆ 20 ಸಾವಿರವೋ ಅಥವಾ 25 ಸಾವಿರವೋ ಅಥವಾ 30 ಸಾವಿರವೋ,—ಅದು ನನಗೆ ಖಚಿತವಾಗಿ ಇಷ್ಟೇ ಎಂಬುದು ಗೊತ್ತಿಲ್ಲ,—ಅಷ್ಟು ಮೊಬಲಗನ್ನು ಆ ಸಂಬಂಧಪಟ್ಟ ಜನರು ವಸೂಲುಮಾಡಿ ಸರ್ಕಾರದಲ್ಲಿ ಠೇವಣಿಯಾಗಿ ಇಡಬೇಕೆಂದು ಹೇಳುತ್ತಿದ್ದಾರೆ. ಆ ಕಟ್ಟಡದ ಬಗ್ಗೆ ಇನ್ನುಳಿದ ಖರ್ಚನ್ನು ಸರ್ಕಾರದವರು ವಹಿಸಿಕೊಳ್ಳುತ್ತಾರೆಂಬುದಾಗಿ ಗೊತ್ತಾಗಿದೆ. ಈಗ ಇಂಥ ಒಂದು ಪಾಲಿಸಿ ಇದ್ದ ಹಾಗೆ ಕಾಣುತ್ತಿದೆ. ಆದರೆ ಈ ಕಟ್ಟಡದ ಸಂಬಂಧದಲ್ಲಿ ಆ ಜನರು ಏನಾದರೂ ಅಷ್ಟಿಷ್ಟು ಮೊಬಲಗನ್ನು ಸರ್ಕಾರದಲ್ಲಿ ಡಿಪಾಜಿಟ್ ಮಾಡಿ ನೀವು ಕಾರ್ಯವನ್ನು ಕೈಗೊಳ್ಳಿ ಎಂದು ಹೇಳಿದರೆ ಆ ಹಳ್ಳಿಯ ಜನರು ತಮ್ಮ ಭಾಗದ ಸಂಪೂರ್ಣ ಹಣವನ್ನು ಮುಂಗಡವಾಗಿ ಕೊಡದೆ ಹೋದ ಪಕ್ಷದಲ್ಲಿ ಸರ್ಕಾರದವರು ಆ ಸ್ಕೂಲಿನ ವಿಚಾರಕ್ಕೇ ಕೈಹಾಕುವುದಿಲ್ಲ. "ನೀವು ನಿಮ್ಮ ಭಾಗದ ದುಡ್ಡನ್ನು ಕೊಟ್ಟಿಲ್ಲ. ಅದಕ್ಕೋಸ್ಕರವಾಗಿ ನಾವು ಆ ಕಟ್ಟಡದ ಕೆಲಸಕ್ಕೆ ಕೈ ಹಾಕಲು ಸಾಧ್ಯವಿಲ್ಲ" ಎಂಬುದಾಗಿ ಹೇಳುತ್ತಿದ್ದಾರೆ. ಹೀಗಾಗಿ ಈ ದಿವಸ ಅನೇಕ ಕಡೆಗಳಲ್ಲಿ ಅರ್ಧಂಬರ್ಧ ಕೆಲಸನಡೆದಿರತಕ್ಕ ಕಟ್ಟಡಗಳು ಕೂಡಹಾಗೆಯೇ ನಿಂತು ಹೋಗಿರುತ್ತವೆಂದು ನಾನು ಹೇಳುತ್ತಿದ್ದೇನೆ. ಹೀಗೆ ಹತ್ತು ವರ್ಷಗಳಾದರೂ ಒಂದು ಕಟ್ಟಡವನ್ನು ಪೂರ್ತಿ ಮಾಡುವುದಕ್ಕೆ ಆಗದೆ ಇರುವಾಗ, ಹಳ್ಳಿ ಜನರಿಗೆ ಕಡ್ಡಾಯಮಾಡಿ ನೀವು 25 ಸಾವಿರ ರೂಪಾಯಿಗಳನ್ನು ಕೊಡಲೇಬೇಕೆಂದು ಒತ್ತಾಯ ಮಾಡುವುದಕ್ಕೆ ಬದಲಾಗಿ ಅವರಿಗೆ ಸಾಧ್ಯವಿದ್ದಷ್ಟು, 10 ಸಾವಿರ ರೂಪಾಯಿಗಳನ್ನು ಕೊಟ್ಟರೂಸಾಕು, ನೀವು ಅಷ್ಟರಲ್ಲೇ ಆ ಮೊಬಲಗಿಗೆ ನಿಮ್ಮ ಕೋಟಾ ಹಾಕಿ ಆ 40 ಸಾವಿರ ರೂಪಾಯಿಗಳಲ್ಲೇ ಎಷ್ಟು ಕಟ್ಟಡ ಕಟ್ಟಿಸಲು ಸಾಧ್ಯವಾಗುತ್ತದೆಯೋ ಅಷ್ಟನ್ನೇ ಆದರೂ ಕಟ್ಟಿಸಿಕೊಡಬೇಕೆಂದು ಹೇಳುತ್ತೇನೆ. ತಾವು ದೊಡ್ಡ ಸ್ಕೀಮು ಹಾಕಿಕೊಂಡು 10 ರೂಮುಗಳನ್ನು ಕಟ್ಟುವ ಕಡೆ ನಾಲ್ಕು ರೂಮುಗಳನ್ನೇ ಕಟ್ಟಿಸಿದರೂ ಸಾಕು. ತಾವು ಈ ರೂಲ್ಸುಗಳನ್ನೇ ಅನುಸರಿಸುತ್ತಾ ಹೋದರೆ ನೂರು ವರ್ಷಗಳಾದರೂ ಈ ಕಟ್ಟಡಗಳು ಒಂದೂ ಆಗುವುದಿಲ್ಲ. ಅವರಿಗೆ ನೀವು ಕೇಳುವಷ್ಟು ದುಡ್ಡನ್ನು ಕೊಡುವುದಕ್ಕೂ ಆಗುವುದಿಲ್ಲ. ಆದಕಾರಣ ತಾವು ಈ ಒಂದು ಹೊಸ ಪದ್ಧತಿಯನ್ನು ಅನುಸರಿಸಿದರೆ ತಾವು ಎಲ್ಲ ಕಡೆಗೂ ಈ ಸ್ಕೂಲುಗಳನ್ನು ಒದಗಿಸಲು ಸಾಧ್ಯವಾಗುತ್ತದೆಂದು ನಾನು ಸಲಹೆಮಾಡುತ್ತೇನೆ.

ಶ್ರೀ ಆರ್. ಮುನಿಸ್ವಾಮಯ್ಯ (ಬೆಂಗಳೂರು ಉತ್ತರ—ಅನುಸೂಚಿತ ಜಾತಿಗಳು).—ಸ್ವಾಮಿ, ಬೆಂಗಳೂರು ಉತ್ತರ ತಾಲ್ಲೂಕು ಯಲಹಂಕದಲ್ಲಿ ಕುಡಿಯುವ ನೀರಿನ ಏರ್ಪಾಡನ್ನು ಮಾಡುವುದಕ್ಕಾಗಿ ಕೆಲವು ವರ್ಷಗಳ ಹಿಂದೆ ಅಂದಾಜು ತಯಾರಾಗಿ ಅನಂತರ ಅಲ್ಲಿ ಬೋರ್‌ವೆಲ್ ಕೂಡ ಆಗಿ ಈಗ ಮುಂದಿನ ಕೆಲಸಗಳು ನಡೆಯದೆ ಆ ಬಾವಿ ಹಾಗೆಯೇ ಉಪಯೋಗಕ್ಕೆ ಬಾರದಂತೆ ಬಿದ್ದಿದೆ. ಆ ಬಾವಿಗೆ ಪೈಪು ಇತ್ಯಾದಿಗಳನ್ನು ಹಾಕತಕ್ಕ ಕಾರ್ಯವನ್ನು ಬಹಳ ದಿವಸಗಳಿಂದಲೂ ಕೈಗೊಂಡಿಲ್ಲ. ಅಲ್ಲಿಯ ಜನರೂ ಮತ್ತು ನಾನೂ ಸಹ ಎಷ್ಟೋ ಸಲ ಆ ಸಂಬಂಧಪಟ್ಟ ಅಧಿಕಾರಿಗಳ ಬಳಿ ಹೋಗಿ ಹೇಳಿಕೊಂಡಿದ್ದಾಯಿತು. ಆದರೆ ಅವರು ಒಂದು ಸಲ ಆ ಕೆಲಸಕ್ಕೆ ಫಂಡ್ಸ್ ಇಲ್ಲ ಎಂದು ಹೇಳುತ್ತಾರೆ, ಮತ್ತೊಂದು ಸಲ ಸಿಬ್ಬಂದಿ ಇಲ್ಲವೆಂದೂ, ಇನ್ನೊಂದುಸಲ ಪೈಪುಗಳಿನ್ನೂ ಬಂದಿಲ್ಲವೆಂದೂ ಹೇಳುತ್ತಿದ್ದಾರೆ. ಆದಕಾರಣ ಈಗಲಾದರೂ ಸರ್ಕಾರದವರು ಈ ವಿಚಾರಕ್ಕೆ ಗಮನಕೊಟ್ಟು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ತಿಳುವಳಿಕೆ ಕೊಟ್ಟು, ಹಾಗೆ ಕೆಲಸ ನಿಧಾನವಾಗುವುದಕ್ಕೆ ಕಾರಣವೇನೆಂಬುದನ್ನು ತನಿಖೆಮಾಡಿ, ಹಾಗೆ ಕೆಲಸವನ್ನು ನಿಧಾನ ಮಾಡಿದವರ ವಿಚಾರದಲ್ಲಿ ಸೂಕ್ತಕ್ರಮ ಕೈಗೊಂಡು ಆ ಕಾರ್ಯವನ್ನು ಬೇಗ ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಯಲಹಂಕ ಮಿಡ್ಲ್ ಸ್ಕೂಲಿನ ವಿಚಾರ. ಅಲ್ಲಿ ಆ ಮಿಡ್ಲ್ ಸ್ಕೂಲಿಗಾಗಿ ಒಂದು ಕಟ್ಟಡವನ್ನು

(ಶ್ರೀ ಆರ್. ಮುನಿಸ್ವಾಮಯ್ಯ.)

ಕಟ್ಟಿಸಿಕೊಡಬೇಕೆಂಬುದಾಗಿ ಅಲ್ಲಿನ ಜನಗಳು ಸುಮಾರು 12 ವರ್ಷಗಳಿಂದಲೂ ಒಂದೇ ಸಮವಾಗಿ ಅರಿಕೆ ಮಾಡಿಕೊಳ್ಳುತ್ತಿದ್ದಾರೆ. ಈಗ ಹಾಲ ಅಲ್ಲಿ ನಡೆಯುತ್ತಿರುವ ಮಿಡ್ಲ್ ಸ್ಕೂಲು ಅಲ್ಲಿರತಕ್ಕ ಮುಸಾಫರ್ ಖಾನೆಯಲ್ಲಿ ನಡೆಯುತ್ತದೆ. ಅದರಲ್ಲಿ ಕೇವಲ ಎರಡು ರೂಮುಗಳು ಮಾತ್ರ ಇವೆ. 600 ಜನ ಹುಡುಗರು ಓದುತ್ತಿದ್ದಾರೆ. ಅಲ್ಲಿ ಹುಡುಗರಿಗೆ ಕುಳಿತುಕೊಳ್ಳುವುದಕ್ಕೂ ಕೂಡ ಸ್ಥಳವಿಲ್ಲ. ಈಗಾಗಲೇ ಅಲ್ಲಿ ಸ್ಕೂಲನ್ನು ಸ್ಥಾಪನೆ ಮಾಡತಕ್ಕ ಸಂಬಂಧದಲ್ಲಿ ಒಂದು ಅಂದಾಜ ಕೂಡ ತಯಾರಾಗಿ ಅಲ್ಲಿಯ ಮುನಿಸಿಪಾಲಿಟಿಯವರು ಸುಮಾರು 4½ ಎಕರೆಯಷ್ಟು ಜಮೀನನ್ನು ಕೂಡ ಈ ಕಟ್ಟಡಕ್ಕಾಗಿ ದಾನ ಮಾಡಿದ್ದಾರೆ. ಆ ಜಮೀನನ್ನು ಸರ್ಕಾರದವರು ತಮ್ಮ ವಶಕ್ಕೆ ತೆಗೆದುಕೊಂಡು ಆ ಬಗ್ಗೆ ಟೆಂಡರನ್ನು ಕರೆದು ಕೆಲಸವನ್ನು ಕೂಡ ಪ್ರಾರಂಭಿಸಿದ್ದರು. ಆದರೆ ಅದನ್ನು ಏಕೋ ಏನೋ ಹಠಾತ್ತಾಗಿ ನಿಲ್ಲಿಸಿಬಿಟ್ಟರು. ಪುನಃ ಇನ್ನೊಂದು ಸಲ ಟೆಂಡರನ್ನು ಕರೆದಿದ್ದರು. ಆದರೆ ಆ ಕೆಲಸ ಮಾತ್ರ ಮುಂದುವರಿಯದೆ ಇನ್ನೂ ಹಾಗೆಯೇ ನಿಂತಿರುತ್ತದೆ. ಆದುದರಿಂದ ಸರ್ಕಾರದವರು ಈ ವಿಚಾರಕ್ಕೆ ಕೂಡಲೆ ನಿಗಾಕೊಡಬೇಕೆಂದು ಅರಿಕೆಮಾಡಿಕೊಳ್ಳುತ್ತೇನೆ. ಮತ್ತು ಈ ಕೆಲಸಕ್ಕೆ ಸಂಬಂಧಪಟ್ಟವರಿಗೆ ಸೂಕ್ತ ತಿಳಿವಳಿಕೆ ಕೊಡಬೇಕೆಂದು ಹೇಳುತ್ತೇನೆ. ಇನ್ನೊಂದು ಸ್ಕೂಲಿನ ವಿಚಾರ ಇದೇ ರೀತಿಯಾಗಿ ಆಗಿದೆ. ಅದು ಬೆಂಗಳೂರು-ತುಮಕೂರು ರೋಡಿನಲ್ಲಿ ಐದು ಮೈಲಿ ದೂರದಲ್ಲಿದೆ. ಆ ಗ್ರಾಮಕ್ಕೆ ಮೈಸೂರ್ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಎಸ್. ಚನ್ನಯ್ಯನವರು ಬಂದು ಆ ಕಟ್ಟಡದ ಶಂಕುಸ್ಥಾಪನೆ ಮಾಡಿ ಬಂದಿದ್ದಾರೆ. ಆ ಬಗ್ಗೆ 9 ಸಾವಿರ ರೂಪಾಯಿಗಳಲ್ಲಿ ಒಂದು ಕಟ್ಟಡ ಕಟ್ಟಿಸಲು ಪ್ರಾರಂಭಮಾಡಿ ಈಗಾಗಲೇ ಆ ಕೆಲಸ ಬೇಸ್‌ಮೆಂಟ್ ತನಕ ಬಂದು ಅಲ್ಲಿಯವರೆಗೆ ಕಲ್ಲುಕಟ್ಟಡ ಕಟ್ಟಿದ್ದಾರೆ. ಈ ಕಟ್ಟಡದ ವೆಚ್ಚದ ಬಗ್ಗೆ ಜನರು ಒಂದು ಭಾಗವನ್ನೂ ಸರ್ಕಾರದವರು ಮೂರು ಭಾಗವನ್ನೂ ಹಾಕಬೇಕೆಂಬುದಾಗಿತ್ತು. ಈಗ ಆ ಜನರು ಸರ್ಕಾರದವರು ಕೊಡಬೇಕಾದ ¾ ಭಾಗದ ಹಣವನ್ನು ಕೊಡಿ ಎಂದು ಕೇಳಿದರೆ ಸರ್ಕಾರದವರು ನೀವು ಕೊಡಬೇಕಾದ ಹಣವನ್ನು ಡಿಪಾಜಿಟ್‌ಮಾಡಿ, ನೀವು ಅಲ್ಲಿ ಆ ರೀತಿ ಯಾವ ಕಟ್ಟಡವನ್ನೂ ಕಟ್ಟಬೇಕಾದ್ದಿಲ್ಲ ಎಂದು ಹೇಳುತ್ತಿದ್ದಾರೆ. ಆದರೆ ಇವರು ಹಾಗೆ ಹೇಳುತ್ತಿರುವುದು ನ್ಯಾಯವಲ್ಲವೆಂದು ಕಾಣುತ್ತದೆ. ಇವರು ಕೊಡತಕ್ಕ ಹಣವನ್ನು ಕೊಟ್ಟರೆ ಸಾಕು. ಅಲ್ಲಿ ಈಗಾಗಲೇ ಆ ಜನರು ಮೂರು ನಾಲ್ಕು ರಸ್ತೆ ಕೆಲಸಗಳನ್ನೂ ಕೂಡ ಮಾಡಿಸಿರುತ್ತಾರೆ. ಆದಕಾರಣ ಆ ಕಟ್ಟಡವನ್ನು ಅಲ್ಲಿಯ ರೈತರೇ ಕಟ್ಟಿಸಿಕೊಳ್ಳುವಹಾಗೆ ಮಾಡಿದರೆ ಅನುಕೂಲವಾಗುತ್ತದೆ. ಈಗಾಗಲೇ ಶ್ರೀಮಾನ್ ದೇವರಾಜಅರಸ್ ಅವರು ಹೇಳಿದ ಹಾಗೆ, ಸರ್ಕಾರದವರು ತಾವು ಮಾಡತಕ್ಕ ರೂಲ್ಸು-ಕಾನೂನು, ನಿಬಂಧನೆಗಳನ್ನು ಯಾವತ್ತೂ ಜನರಿಗೆ ಅನುಕೂಲವಾಗತಕ್ಕ ರೀತಿಯಲ್ಲಿ ರಚಿಸಬೇಕು. ಆದರೆ ಈಗ ಹಾಗೆ ಅನುಕೂಲವಿಲ್ಲದೆ ಇರತಕ್ಕಂಥ ರೂಲ್ಸುಗಳನ್ನು ಸ್ವಲ್ಪಮಟ್ಟಿಗೆ ಬದಲಾವಣೆ ಮಾಡತಕ್ಕದ್ದು ಅಗತ್ಯ. ಹೀಗೆ ಮಾಡದೆಹೋದರೆ ಸಾರ್ವಜನಿಕರಿಗೆ ದೊರೆಯತಕ್ಕ ಅನುಕೂಲತೆಗಳು ತಪ್ಪಿಹೋಗಿ, ಈ ಬಾಬಿನಲ್ಲಿ ತೆಗೆದಿಟ್ಟಿರತಕ್ಕ ಹಣ ಲ್ಯಾಪ್ಸಾಗಿ ಹೋಗುತ್ತದೆ. ಆದುದರಿಂದ ಸರ್ಕಾರದವರು ಈ ವಿಚಾರಕ್ಕೆ ಗಮನವನ್ನು ಕೂಡಲೆ ಕೊಡಬೇಕೆಂದು ಅರಿಕೆಮಾಡಿಕೊಳ್ಳುತ್ತೇನೆ.

ಇನ್ನು ದೇವನಹಳ್ಳಿ ಟೌನಿನಲ್ಲಿ ಒಂದು ಪ್ರವಾಸಿ ಮಂದಿರವಿದೆ. ಇದು ಬೆಂಗಳೂರಿಂದ-ನಂದಿ ಬೆಟ್ಟಕ್ಕೆ ಹೋಗತಕ್ಕ ರಸ್ತೆಯಲ್ಲಿ ಮಧ್ಯದಾರಿಯಲ್ಲಿದೆ. ನಂದಿಗೆ ಹೋಗತಕ್ಕ ಮತ್ತು ನಂದಿಕಡೆಯಿಂದ ಬರತಕ್ಕ ಪ್ರಯಾಣಿಕರು ಈ ಪ್ರವಾಸಿ ಮಂದಿರದಲ್ಲಿ ಸ್ವಲ್ಪ ಹೊತ್ತು ತಂಗಿದ್ದು ವಿಶ್ರಾಂತಿಪಡೆದು ಅನಂತರ ಮುಂದಕ್ಕೆ ಪ್ರಯಾಣ ಮಾಡುತ್ತಾರೆ. ಈ ಪ್ರವಾಸಿ ಮಂದಿರಕ್ಕೆ ಈ ದಿವಸ ಸಾಕಷ್ಟು ಕುರ್ಚಿಗಳಿಲ್ಲ. ಇಲ್ಲಿ ಸ್ಥಳವಸತಿಕೂಡ ಸಾಲದು. ಆದುದರಿಂದ ಈ ಪ್ರವಾಸಿ ಮಂದಿರದ ಕಟ್ಟಡಕ್ಕೆ ಮತ್ತೆರಡು ರೂಮುಗಳನ್ನು ಕಟ್ಟಿಸಬೇಕೆಂದೂ, ಈ ಮಂದಿರಕ್ಕೆ ಇನ್ನೂ ಒಂದು ಡಜನ್ ಬೆತ್ತದ ಕುರ್ಚಿಗಳನ್ನು ಸರಬರಾಯಿ ಮಾಡತಕ್ಕದ್ದು ಅತ್ಯವಶ್ಯಕವೆಂದೂ ತಿಳಿಸುತ್ತೇನೆ.

ಇನ್ನು ಇದೇ ರೀತಿ ಬೆಂಗಳೂರು ಉತ್ತರ ತಾಲ್ಲೂಕು ಹೆಸರಘಟ್ಟದಲ್ಲಿರತಕ್ಕ ಪ್ರವಾಸಿ ಮಂದಿರಕ್ಕೆ ಕೇವಲ ಎರಡು ರೂಮುಗಳು ಮಾತ್ರ ಇವೆ. ಇಲ್ಲಿಗೆ ಬಂದುಹೋಗತಕ್ಕ ಜನ ಸಂಚಾರಣೆ ವಿಪರೀತ ಜಾಸ್ತಿಯಾಗಿದೆ. ಆದುದರಿಂದ ಈ ಪ್ರವಾಸಿ ಮಂದಿರಕ್ಕೂ ಕೂಡ ಇನ್ನೆರಡು ರೂಮುಗಳನ್ನಾದರೂ ಸೇರಿಸಿ ಇದನ್ನು ವಿಸ್ತರಿಸಿಕೊಡಬೇಕು.

ಈಗ ದೇವನಹಳ್ಳಿ ತಾಲ್ಲೂಕಿಗೂ ಮತ್ತು ಹೊಸಕೋಟೆ ತಾಲ್ಲೂಕಿಗೂ ಮಧ್ಯೆ ಬಾಲೇಪುರದ ಬಳಿ ದಕ್ಷಿಣ ಪಿನಾಕಿನಿ ನದಿಗೆ ಅಡ್ಡವಾಗಿ ಒಂದು ಸೇತುವೆ ಕಟ್ಟಿಸಿಕೊಡಿ ಎಂದು ಅಲ್ಲಿಯ ಜನರು ಬಹಳ ವರ್ಷಗಳಿಂದಲೂ ಕೇಳಿಕೊಳ್ಳುತ್ತಿದ್ದಾರೆ. ಬೆಂಗಳೂರು ಎಗ್ಸಿಕ್ಯುಟಿವ್ ಇಂಜನಿಯರೂ ಸಹ ಆ ಸ್ಥಳಕ್ಕೆಹೋಗಿ ಆ ಸ್ಥಳ ಪರೀಕ್ಷೆಯನ್ನೂ ಮಾಡಿಕೊಂಡು ಬಂದಿರುತ್ತಾರೆ. ಬೆಂಗಳೂರಿನ ನಂ. 1 ಸಬ್-ಡಿವಿಜನ್ ಇಂಜನಿಯರೂ ಮತ್ತು ದೊಡ್ಡಬಳ್ಳಾಪುರದ ಸಬ್-ಡಿವಿಜನ್ ಇಂಜನಿಯರವರೂ ಆ ಸ್ಥಳ ಪರೀಕ್ಷೆ ಮಾಡಿಕೊಂಡು ಬಂದಿರುತ್ತಾರೆ. ಈ ಬಗ್ಗೆ ಒಂದು ಎಸ್ಟಿಮೇಟನ್ನು ಕೂಡ ತಯಾರು ಮಾಡಲಾಗಿತ್ತು. ಟೆಂಡರ್ ಸಹ ಕರೆದಿದ್ದರು. ಪುನಃ ಅದೇನು ಕಾರಣದಿಂದಲೋ ಮತ್ತೊಂದು ಸಾರ್ತಿ ಟೆಂಡರ್ ಕರೆದಿದ್ದಾರೆ. ಆದರೂ ಆ ಕೆಲಸವನ್ನು ಮಾತ್ರ ಇನ್ನೂ ಪ್ರಾರಂಭಿಸಿರುವುದಿಲ್ಲ. ಹಾಗೆ ನಿಲ್ಲಿಸಿಬಿಟ್ಟಿದ್ದಾರೆ. ಆ ನದಿಯಲ್ಲಿ ನೀರಿನ ಶೆಳೆತ ಹೆಚ್ಚಾಗಿರುತ್ತದೆ. ಆದರೆ ಈಗ ಅಲ್ಲಿ ಒಂದು ಜಿಲ್ಲಾ ಬೋರ್ಡು ರಸ್ತೆಯಿರುತ್ತದೆ. ಜನ ಸಂಚಾರಕ್ಕೆ ತುಂಬಾ ತೊಂದರೆಯಿದೆ. ಆದಕಾರಣ ಸರ್ಕಾರದವರು ಈ ಕೆಲಸಕ್ಕೆ ಕೂಡಲೆ ಗಮನಕೊಡಬೇಕು. ಈಗ ಕರೆದಿರುವ ಟೆಂಡರನ್ನೇ ಅಂಗೀಕಾರಮಾಡಿ, ಇಲ್ಲವೇ ಜಾಗ್ರತೆ ಬೇರೆ ಒಂದು ಟೆಂಡರನ್ನಾದರೂ ಕರೆದು ಮಳೆಗಾಲ ಪ್ರಾರಂಭವಾಗುವುದಕ್ಕೆ ಮುಂಚಿತವಾಗಿಯೇ ಆ ಸೇತುವೆ ಕಟ್ಟಿಸಿಕೊಡಬೇಕೆಂದು ಕೋರುತ್ತೇನೆ.

ಸ್ವಾಮಿ, ಮಿಂಟೋ ಆಸ್ಪತ್ರೆಯಲ್ಲಿ ಬಹಳ ಜನ ರೋಗಿಗಳು ಟ್ರೀಟ್‌ಮೆಂಟ್ ತೆಗೆದುಕೊಳ್ಳುತ್ತಾ ಇದ್ದಾರೆ. ಮೊದಲು ಹತ್ತಾರುಜನರು ಮಾತ್ರ ಹೋಗುತ್ತಿದ್ದರು. ಈಗ ಸಾವಿರಾರು ಜನ ಕಣ್ಣಾಸ್ಪತ್ರೆಗೆ ಬರುತ್ತಾರೆ ಎಂದು ಕೇಳಿದ್ದೇನೆ. ಈಗಿರತಕ್ಕ ಡಾ|| ನಂಜಪ್ಪನವರು ಅಲ್ಲಿಗೆ ವರ್ಗವಾಗಿ ಬಂದ ಮೇಲೆ ಬಹಳ ಜನ ರೋಗಿಗಳು ಬಂದು ಔಷಧೋಪಚಾರ ಪಡೆಯುತ್ತಿದ್ದಾರೆ. ಆದರೆ ಇನ್‌ಪೇಷಂಟಾಗಿರುವುದಕ್ಕೆ ಸ್ಥಳವಿಲ್ಲ. ಔಟ್‌ಪೇಷಂಟ್ ವಾರ್ಡ್ ಇರುವುದೂ ಕೂಡ ಸಾಲದು. ಆದ್ದರಿಂದ ಒಂದು ಔಟ್ ಪೇಷಂಟ್ ವಾರ್ಡನ್ನು ಕೂಡಲೆ ಕಟ್ಟಬೇಕೆಂದು ಹೇಳುತ್ತೇನೆ ಮತ್ತು, ಈಗಿರತಕ್ಕ ಹಗ್ಗದಿಂದ ಎಳೆಯುತಕ್ಕ

ಲಿಫ್ಟ್ ಏನಿದೆ ಅದನ್ನು ಎಲೆಕ್ಟ್ರಿಕ್ ಲಿಫ್ಟ್ ಆಗಿ ಮಾಡಿಸಿಕೊಡಬೇಕೆಂದು ಹೇಳುತ್ತೇನೆ.

ಬೆಂಗಳೂರು ಉತ್ತರ ತಾಲ್ಲೂಕು ದೇವರಜೀವನಹಳ್ಳಿಯಲ್ಲಿ ಜನ ಸಂಖ್ಯೆಯು ಒತ್ತಡ ಬಹಳ ಜಾಸ್ತಿಯಾಗಿದೆ. ಅಲ್ಲಿರತಕ್ಕ ಸ್ಕೂಲಿನ ಕಟ್ಟಡ ಬಹಳ ಚಿಕ್ಕದು, ಸಾವಿರಾರುಜನ ಹುಡುಗರಿದ್ದರೂ ಆ ಸ್ಕೂಲಿನಲ್ಲಿ ಮಾತ್ರ 60 ಜನ ಹುಡುಗರು ಇದ್ದಾರೆ. ಆದ್ದರಿಂದ 300 ಜನ ಹುಡುಗರು ಓದುವುದಕ್ಕೆ ಅವಕಾಶವಾಗುವಂತೆ ಒಂದು ಸ್ಕೂಲ್ ಕಟ್ಟಡ ಕಟ್ಟಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

*ಶ್ರೀ ಟಿ. ಜಿ. ತಿಮ್ಮೇಗೌಡ (ತಿಪಟೂರು).—ಸ್ವಾಮಿ, ತಿಪಟೂರು ವ್ಯಾಪಾರಕೇಂದ್ರ ಮತ್ತು ಮುನ್ಸೀಫ್ ಮ್ಯಾಜಿಸ್ಟ್ರೇಟ್ ಕೋರ್ಟ್ ಇರುವ ಸ್ಥಳವಾಗಿದ್ದು ಪ್ರತಿದಿನಸವೂ ನಮ್ಮ ರೈತ ಬಾಂಧವರು ತಿಪಟೂರಿಗೆ ಬರಬೇಕಾಗಿದೆ. ಆದ್ದರಿಂದ ಹಳ್ಳಿಗಾಡುಗಳಿಂದ ಈ ಟೌನಿಗೆ ಬರತಕ್ಕ ಪಂಚಾಯ್ತಿ ರಸ್ತೆ, ಡಿಸ್ಟ್ರಿಕ್ಟ್ ಬೋರ್ಡ್ ರಸ್ತೆ ಇವುಗಳನ್ನೆಲ್ಲಾ ಪಬ್ಲಿಕ್‌ವರ್ಕ್ಸ್ ಇಲಾಖೆಯವರಿಗೇ ಸೇರಿಸಿ ರಸ್ತೆ ಕಾಂಗಾರಿ ಕೆಲಸವನ್ನು ಕಾರ್ಯಗತ ಮಾಡಬೇಕೆಂದು ಪ್ರಾರ್ಥಿಸುತ್ತೇನೆ. ಏಕೆಂದರೆ ಈ ರಸ್ತೆಗಳ ರಿಪೇರಿ ಅನೇಕ ವರ್ಷಗಳಿಂದ ಆಗಿಲ್ಲ.

ಮೊದಲು ತಿಪಟೂರು ಮುನ್ಸೀಫ್-ಮ್ಯಾಜಿಸ್ಟ್ರೇಟ್ ಕೋರ್ಟೂ ಮತ್ತು ಮೊದಲನೆ ಮ್ಯಾಜಿಸ್ಟ್ರೇಟ್ ಕೋರ್ಟೂ ಬೇರೆ ಬೇರೆಯಾಗಿದ್ದವು. ಈಗ ಸುಮಾರು 12-15 ವರ್ಷಗಳಿಂದಲೂ ಒಂದೇ ಆಗಿ ಈ ಮುನ್ಸೀಫ್ ಮ್ಯಾಜಿಸ್ಟ್ರೇಟ್ ಕೋರ್ಟಿಗೆ 25 ಸಾವಿರ ರೂಪಾಯಿಗಳವರೆಗೂ ಬಾಡಿಗೆಯನ್ನು ಕೊಟ್ಟಿರುತ್ತಾರೆ. ಅದಕ್ಕೆ ಈ ಸಭೆಯಲ್ಲಿ ಮನವಿಮಾಡಿಕೊಳ್ಳುವುದೇನೆಂದರೆ ಸುಮಾರು 25 ಸಾವಿರ ರೂಪಾಯಿಗಳ ಬಾಡಿಗೆ ಕೊಡುವುದಕ್ಕೆ ಬದಲಾಗಿ ಮೊದಲೇ ಕಟ್ಟಡ ಕಟ್ಟಿಸಿದ್ದರೆ ಆ ದುಡ್ಡು ಉಳಿಯುತ್ತಾ ಇತ್ತು. ಆದ್ದರಿಂದ ಈಗಲಾದರೂ ತಿಪಟೂರು ಮುನ್ಸೀಫ್-ಮ್ಯಾಜಿಸ್ಟ್ರೇಟ್ ಕೋರ್ಟಿಗೆ ಕೂಡಲೇ ಕಟ್ಟಡ ಕಟ್ಟಿಸಿಕೊಡಬೇಕೆಂದು ಪ್ರಾರ್ಥಿಸುತ್ತೇನೆ. ಈಗಿರತಕ್ಕ ಕಟ್ಟಡದಲ್ಲಿ ಸ್ಥಳವಸತಿ ಬಹಳ ಕಡಿಮೆ. ರೈತಬಾಂಧವರು ಕೋರ್ಟಿಗೆ ಬರತಕ್ಕವರಿಗೆ ಕುಳಿತುಕೊಳ್ಳುವುದಕ್ಕೆ ನಿಂತುಕೊಳ್ಳಲಿಕ್ಕೆ ಸ್ಥಳ ಇರುವುದಿಲ್ಲ. ಈ ಕಾರಣಗಳಿಂದ ಕೂಡಲೇ ಕಟ್ಟಡ ಕಟ್ಟಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇದಕ್ಕೆ ತಿಪಟೂರು ಟೌನ್ ಮುನಿಸಿಪಾಲಿಟಿಯವರು ಸುಮಾರು 20-30 ಎಕರೆಯಷ್ಟು ಜಮೀನನ್ನು ಅಕ್ವೈರ್ ಮಾಡಿಕೊಂಡು ರಿಸರ್ವ್ ಆಗಿಟ್ಟಿದ್ದಾರೆ.

ತಿಪಟೂರು ತಾಲ್ಲೂಕು ನೊಣವಿನಕೆರೆ ಏರಿಯನ್ನು ವಿಸ್ತರಿಸಬೇಕೆಂದು ಅನೇಕ ಸಾರಿ ಈ ಮಾನ್ಯ ಸಭೆಯಲ್ಲಿ ಕೇಳಿದ್ದೇನೆ. ಅಲ್ಲಿ ರಸ್ತೆ ಬಹಳ ಚಿಕ್ಕದಾಗಿದ್ದು ಅನೇಕ ಬಸ್ಸುಗಳು ಮತ್ತು ಗಾಡಿಗಳು ತಿರುಗಾಡುವಾಗ ಸ್ಥಳವಿಲ್ಲದೆ ಅಪಾಯಕರವಾದ ಘಟನೆಗಳು ಸಂಭವಿಸಿ, ಗಾಡಿಗಳು, ಮೋಟಾರುಗಳು ಕೆರೆಯಲ್ಲಿ ಬಿದ್ದಿರುವ ಅನೇಕ ಸಂದರ್ಭಗಳು ಇವೆ. ಆದ್ದರಿಂದ ಈ ಕೆರೆ ಏರಿಯನ್ನು ಮೊದಲು ವಿಸ್ತರಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಆ ರೀತಿ ವಿಸ್ತರಿಸಿ ಅದರ ಪಕ್ಕದಲ್ಲಿ ಕಬ್ಬಿಣದ ಕಂಬಿಗಳನ್ನು ಹಾಕಬೇಕೆಂದು ಕೇಳಿಕೊಳ್ಳುತ್ತೇನೆ.

ತಿಪಟೂರು ತಾಲ್ಲೂಕಿನ ಹೊನ್ನವಳ್ಳಿ ಗ್ರಾಮದ ಹೊಸ ಪಟ್ಟಣದ ಹತ್ತಿರ ಊರಿನ ಮುಂಭಾಗದಲ್ಲಿ ಒಂದು ಹಳ್ಳ ಇದೆ. ಆ ಹಳ್ಳಕ್ಕೆ ಸೇತುವೆ ಕಟ್ಟಿಸಬೇಕೆಂದು ಅನೇಕಸಾರಿ ರೈತ ಬಾಂಧವರು ಡಿಸ್ಟ್ರಿಕ್ಟ್ ಬೋರ್ಡಿನವರನ್ನು ಸಹ ಕೇಳಿಕೊಂಡರು. ಈಗಾಗಲೇ ಸುಮಾರು ಹತ್ತು ವರ್ಷ ಆಗಿದೆ, ಆದರೂ ಕೂಡ ಇನ್ನೂ ಕಾರ್ಯಗತವಾಗಿಲ್ಲ. ಆದ್ದರಿಂದ ಆ ಸೇತುವೆಯನ್ನು ಕಟ್ಟಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ತಿಪಟೂರು ತಾಲ್ಲೂಕು ಬೊಮ್ಮಲಾಪುರದ ಕಡೆಗೆ ಹೋಗುವ ಪಂಚಾಯಿತಿ ರಸ್ತೆಯನ್ನು ಸೇರುವ ಬೊಮ್ಮಲಾಪುರ ಕೆರೆಯ ಅಂಗಳದಲ್ಲಿ ಒಂದು ಸೇತುವೆ ಅವಶ್ಯಕವಾಗಿ ಆಗಬೇಕಾಗಿದೆ. ಈ ಸೇತುವೆಯನ್ನು ಕೂಡಲೇ ಕಟ್ಟಿಸಬೇಕಾಗಿ ಕೇಳಿಕೊಳ್ಳುತ್ತೇನೆ. ಕೊನೆಯದಾಗಿ ತಿಪಟೂರು ಟೌನಿನ ರಸ್ತೆಗಳನ್ನು ಪಬ್ಲಿಕ್ ವರ್ಕ್ಸ್ ಇಲಾಖೆಯವರೇ ಸೇರಿಸಿಕೊಂಡು ಕಾರ್ಯಗತಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ (ಚಿಕ್ಕಮಗಳೂರು-ಮೂಡಿಗೆರೆ—ಅನುಸೂಚಿತ ಜಾತಿಗಳು).—ಸ್ವಾಮಿ, ಮಾನ್ಯ ಅಧ್ಯಕ್ಷರೆ, ಈಗ ನಮ್ಮ ಮುಂದೆ ಇರುವ ಈ ಖೋತಾ ನಿರ್ಣಯವನ್ನು ಅನುಮೋದಿಸುತ್ತೇನೆ. ಚಿಕ್ಕಮಗಳೂರು ರಸ್ತೆಯಲ್ಲಿ ಸಿಮೆಂಟ್ ರಸ್ತೆ ಆಗುತ್ತಾ ಇದೆ. ಐದು ಮೈಲಿಗಳನ್ನು ಒಂದು ಕಡೆಯಿಂದಲೂ, ಇನ್ನೊಂದು 5 ಮೈಲಿಗಳನ್ನು ಇನ್ನೊಂದು ಕಡೆಯಿಂದಲೂ ಪ್ರಾರಂಭ ಮಾಡಿದ್ದಾರೆ. ಈ ಸಿಮೆಂಟ್ ರಸ್ತೆಗಳು ಈಗ ಆಗುತ್ತಿರುವ ಸ್ಥಿತಿಯನ್ನು ನೋಡಿದರೆ ಎಷ್ಟು ವರ್ಷ ಅವು ಬಾಳಿಕೆ ಬರುತ್ತವೆ ಎಂಬ ನಿರೀಕ್ಷೆ ಇದೆಯೋ ಅಷ್ಟು ವರ್ಷ ಬರುವುದಿಲ್ಲವೋ ಏನೋ ಎಂದು ನನಗೆ ಶಂಕೆಯಾಗಿದೆ. ಏಕೆಂದರೆ ಎಷ್ಟು ಮುತುವರ್ಜಿಯಿಂದ, ಶ್ರದ್ಧೆಯಿಂದ ಮಾಡಬೇಕೋ, ಎಷ್ಟು ಪ್ರಮಾಣದಲ್ಲಿ ಸಿಮೆಂಟು ಮುಂತಾದ ಸಾಮಾನುಗಳನ್ನು ಉಪಯೋಗಿಸಬೇಕೋ ಅಷ್ಟು ಪ್ರಮಾಣದಲ್ಲಿ ಸಾಮಾನುಗಳನ್ನು ಉಪಯೋಗಿಸುತ್ತಾ ಇಲ್ಲ ಎಂಬುದು ನಮ್ಮ ಗಮನಕ್ಕೆ ಬಂದಿದೆ. ಸಿಮೆಂಟ್ ರಸ್ತೆಯನ್ನು ಮಾಡುವಾಗಲೇ ಅದರ ಪಕ್ಕದಲ್ಲಿ ಮಾಡಬೇಕಾದ ರಸ್ತೆ ಕಾಂಗಾರಿಯನ್ನು ಕೂಡ ಮಾಡಿದ್ದರೆ ಅನುಕೂಲವಾಗಿತ್ತು. ಸಿಮೆಂಟ್ ರಸ್ತೆ ಕೇವಲ 12 ಅಡಿ ಇರುವುದರಿಂದ ಅಲ್ಲಿ ಒಂದು ಬಸ್ಸು ಹೋದರೆ ಇನ್ನೊಂದು ಬಸ್ಸು ಬರುವುದಕ್ಕೆ ಕಷ್ಟವಾಗುತ್ತದೆ. ಅಲ್ಲದೆ ಜನರ ಸಂಚಾರಕ್ಕೂ ಕೂಡ ಬಹಳ ಅಡಚಣೆಯಾಗುತ್ತದೆ. ಆದ್ದರಿಂದ ಸಿಮೆಂಟ್ ರಸ್ತೆ ಮಾಡುವ ಕಾಲದಲ್ಲೇ ಸಿಮೆಂಟ್ ರಸ್ತೆಯ ಅಕ್ಕ ಪಕ್ಕದಲ್ಲಿ ರಸ್ತೆಯನ್ನು ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಈಗ ಸಿಮೆಂಟ್ ರಸ್ತೆಗಳನ್ನು ಮಾಡುತ್ತಿರುವ ವೇಗದಲ್ಲಿ ವರ್ಷಕ್ಕೆ 10 ಮೈಲಿಯಂತೆ ಮಾಡಿದರೆ 70-80 ಮೈಲಿ ಇರತಕ್ಕ ರಸ್ತೆಗಳನ್ನು ಪೂರ್ತಿ ಸಿಮೆಂಟ್ ರಸ್ತೆಗಳನ್ನಾಗಿ ಮಾಡಬೇಕಾದರೆ 7-8 ವರ್ಷಗಳಾದರೂ ಬೇಕಾಗಬಹುದು. ಅಷ್ಟೇ ಅಲ್ಲದೆ ಈ ರಸ್ತೆಗಳನ್ನು ಸಿಮೆಂಟ್ ರಸ್ತೆಗಳನ್ನಾಗಿಯೋ ಟಾರು ರಸ್ತೆಗಳನ್ನಾಗಿಯೋ ಮಾಡಲಾಗುತ್ತದೆ ಎಂಬ ನಿರೀಕ್ಷಣೆಯಿಂದ annual ರಿಪೇರಿ ಸಹ ತೃಪ್ತಿಕರವಾಗಿ ಮಾಡದೇ ಇದ್ದಾರೆ ಎಂದು ಹೇಳದೇ ವಿಧಿಯಿಲ್ಲ. Annual Grant ಮಲೆನಾಡಿಗೆ ಹೆಚ್ಚಾಗಿ ಕೊಡುವುದಕ್ಕೆ ಏರ್ಪಾಡು ಮಾಡುವುದಲ್ಲದೇ ಈಗ ದುರಸ್ತಾಗದೇ ಇರುವ ರಸ್ತೆಗಳನ್ನು ಟಾರ್ ರಸ್ತೆಗಳನ್ನಾಗಿ ಯಾರಾದರೂ ಮಾಡಿದರೆ ಪ್ರಯಾಣಕ್ಕೆ ಅನುಕೂಲವಾಗುತ್ತದೆ. ಚಿಕ್ಕಮಗಳೂರು ಮಾರ್ಗವಾಗಿ ಅನೇಕ ಕಡೆಗಳಿಂದ ಧರ್ಮಸ್ಥಳಕ್ಕೆ ಹೋಗುವ ಪ್ರಯಾಣಿಕರು ಬಹಳವಾಗಿ ಇರುತ್ತಾರೆ. ಕಡೂರು-ಮಂಗಳೂರು ರಸ್ತೆಯಲ್ಲಿ 8-10 ಬಸ್ಸುಗಳು ಓಡಾಡುತ್ತಾ ಇದ್ದರೂ ಕೂಡ ಅನೇಕ ವೇಳೆ ಬಸ್ಸಿನಲ್ಲಿ ಸ್ಥಳ ಸಿಕ್ಕದೇ ಇರುವ ಸಂದರ್ಭಗಳೂ ಉಂಟು, ಆದ್ದರಿಂದ ಈ ರಸ್ತೆಗಳ ಸ್ಥಿತಿ ಪ್ರಯಾಣಕ್ಕೆ

(ಶ್ರೀ ಜಿ. ಪುಟ್ಟಸ್ವಾಮಿ.)

ಬಹಳ ಅನಾನುಕೂಲವಾಗಿರುವುದರಿಂದ ಗರ್ಭಿಣಿ ಹೆಂಗಸರು ಬಸ್ಸಿನಲ್ಲಿ ಪ್ರಯಾಣ ಮಾಡಿದರೆ ಎಲ್ಲಿ ಗರ್ಭ ಪಾತವಾಗುತ್ತದೋ ಎಂಬ ಹೆದರಿಕೆಯಿಂದ ಗರ್ಭಿಣಿಯರು ಪ್ರಯಾಣ ಮಾಡುವುದು ಕಡಿಮೆಯಾಗಿದೆ. ಇಂಥ ರಸ್ತೆಗಳನ್ನು ಸರಿಯಾದ ಸ್ಥಿತಿಯಲ್ಲಿಡುವುದು ಸರ್ಕಾರದವರ ಪ್ರಥಮ ಕರ್ತವ್ಯ. ಆದಕಾರಣ ಈ ಇಲಾಖೆಗೆ ಹೆಚ್ಚು ಹಣ ಕೊಡಬೇಕಾದದ್ದು, ಅದರಲ್ಲೂ ಮಲೆನಾಡಿಗೆ ಹೆಚ್ಚಿಗೆ ವಿನಿಯೋಗಿಸಬೇಕಾದದ್ದು, ಅವಶ್ಯಕ. ಜೊತೆಗೆ ಮಂತ್ರಿಗಳು Chief Engineer ರವರು ಹೋಗಿ ಆಗಾಗ್ಗೆ ಈ ರಸ್ತೆಗಳನ್ನು ಅಜಮಾಯಿಷಿ ಮಾಡಬೇಕೆಂದು ಹೇಳುತ್ತೇನೆ. ಆಗ ರಸ್ತೆಯಲ್ಲಿ ಎಷ್ಟು ಕೊರಕಲುಗಳು ಬಿದ್ದಿರುತ್ತವೆಂಬುದು ಅವರಿಗೇ ಮನವರಿಕೆಯಾಗುತ್ತದೆ. ರಸ್ತೆಗಳಲ್ಲಿ ಯಾವಾಗ ನೋಡಿದರೂ ಜಲ್ಲಿ ಮಾತ್ರ ಬಿದ್ದಿರುತ್ತದೆ. ಯಾವಾಗ ರಸ್ತೆಗಳಿಗೆ ರಿಪೇರಿಯಾಯಿತು, ಅಥವಾ ಯಾವಾಗ ಆಗುತ್ತದೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಆದಕಾರಣ ಸರ್ಕಾರದವರು ಹೆಚ್ಚಿಗೆ ಗ್ರ್ಯಾಂಟ್ ಕೊಡುವುದರ ಜೊತೆಗೆ ವಿಶೇಷ ನಿಗಾ ಕೊಟ್ಟು ಇವುಗಳನ್ನು ರಿಪೇರಿ ಮಾಡಿಸುವುದಕ್ಕೆ ಮೊದಲು ಪ್ರಯತ್ನಿಸಬೇಕು. ಜಿಲ್ಲಾ ಬೋರ್ಡ್ ರಸ್ತೆಗಳನ್ನು ಪಿ.ಡಬ್ಲ್ಯು.ಡಿ. ಇಲಾಖೆಯವರು ಈಚೆಗೆ ವಹಿಸಿಕೊಂಡಿದ್ದಾರೆಂದು ಕೇಳಿದ್ದೇನೆ. ಅವರು ವಹಿಸಿಕೊಂಡ ಮೇಲಂತೂ ಈ ರಸ್ತೆಗಳು ಇನ್ನೂ ಕೆಟ್ಟುಹೋಗಿವೆ. ಯಾವಾಗ ಕೇಳಿದರೂ ಗ್ರ್ಯಾಂಟಿಲ್ಲವೆಂದು ಹೇಳುತ್ತಾರೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಂದು ಸೇತುವೆ ಕಟ್ಟಲಿಕ್ಕೆ ಈಗ ಸುಮಾರು 10 ವರುಷಗಳ ಹಿಂದೆಯೇ ಎಸ್ಟಿಮೇಟ್ ಆಯಿತು. ಇನ್ನೂ ಅದನ್ನು ಮಾಡಿಸಿ ಎಂದರೆ ಗ್ರ್ಯಾಂಟ್ ಇಲ್ಲವೆನ್ನುತ್ತಾರೆ. ಇದಕ್ಕೆ ಆಡಳಿತದಲ್ಲಿ ದಕ್ಷತೆಯಿಲ್ಲವೆಂದು ಹೇಳಬೇಕೇ? ಆದ್ದರಿಂದ ತಾವು ಏಕೆ ಹೀಗೆ ನಿಧಾನವಾಗುತ್ತದೆಂದು ನೋಡಬೇಕು. ಮಾನ್ಯ ಮಂತ್ರಿಗಳೇನೋ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಆದರೂ ನಾವು ನಿರೀಕ್ಷಣೆ ಮಾಡಿದಷ್ಟು ಮಾಡಿಲ್ಲ.

ಇನ್ನು ಕಟ್ಟಡಗಳ ವಿಚಾರದಲ್ಲಿ ಒಂದು ಮಾತು ಹೇಳುತ್ತೇನೆ. ಮಲೆನಾಡಿನ ಕಡೆಯಿರುವ ಅನೇಕ ಬಿಲ್ಡಿಂಗ್‌ಗಳನ್ನು ನೋಡಿದರೆ ಜೋರಾಗಿ ಒಮ್ಮೆ ಮಳೆ ಬಂದರೆ ಬಿದ್ದು ಹೋಗುವಂತಿವೆ. 20-30 ವರ್ಷಗಳ ಹಳೆಯ ಕಟ್ಟಡಗಳಾಗಿರುತ್ತವೆ. ಇಲಾಖೆಯವರು ಮಾತ್ರ ಬಂದೋಬಸ್ತಾಗಿವೆಯೆಂದು certificate ಕೊಟ್ಟಿರುತ್ತಾರೆ. ಅಂಥವು ಎಷ್ಟೋ ಮಳೆ ಬಂದಾಗ ಅರ್ಧಕ್ಕರ್ಧಕ್ಕೆ ಬಿದ್ದು ಹೋಗಿವೆ. ಇಂಥವುಗಳನ್ನು ಇಲಾಖೆಯವರು ಸರಿಯಾಗಿ ನೋಡಿಕೊಳ್ಳಬೇಕು. ಈಗ ಎರಡು ವರ್ಷಗಳ ಹಿಂದೆ ಮಳೆ ಬಹಳ ಬಂದಾಗ ಅನೇಕ ಸ್ಕೂಲು ಕಟ್ಟಡಗಳು ಬಿರುಕು ಬಿಟ್ಟಿದ್ದುವು. ಯಾವಾಗ ಕಟ್ಟಡ ಬೀಳುತ್ತವೆಯೋ ಎಂಬ ಭಯದಿಂದ ವಿದ್ಯಾರ್ಥಿ ಜನಗಳೂ ಹೆದರಿ ಎಷ್ಟೋ ಕಟ್ಟಡಗಳನ್ನು ಖಾಲಿ ಮಾಡಿದ್ದರು. ಇಂಥ ಬಿಲ್ಡಿಂಗುಗಳ ವಿಚಾರದಲ್ಲಿ ನಿಗಾತೆಗೆದುಕೊಂಡು ಸರಿಯಾದ ಬಂದೋಬಸ್ತು ಮಾಡುವುದು ಅವಶ್ಯಕವೆಂದು ಹೇಳುತ್ತೇನೆ.

ಆಮೇಲೆ, ಬಿಲ್ಡಿಂಗುಗಳನ್ನು ರಿಪೇರಿ ಮಾಡುವುದಕ್ಕೆ ಕೊಡುವುದರಲ್ಲಿ ಸಾಮಾನ್ಯವಾಗಿ ಯಾರು ಬಿಲ್ಡಿಂಗ್ ಕಟ್ಟಿರುತ್ತಾರೋ ಅವರಿಗೇ annual ರಿಪೇರಿಗೆ ಕೊಡುವ ಪದ್ಧತಿಯಿದೆ. ಈ ರೀತಿ ಕೊಡುವುದರಿಂದ ಅವರು ಸರಿಯಾಗಿ ಮಾಡುತ್ತಾರೋ ಇಲ್ಲವೋ ಎಂಬ ಅನುಮಾನವಿದೆ. ಏಕೆಂದರೆ, ರಿಪೇರಿ ಮಾಡಿದೆಯೆಂದು ಅವರು ಹೇಳುತ್ತಾರೆ, ಕಟ್ಟಡಗಳನ್ನು ನೋಡಿದರೆ ಮಾತ್ರ ಮೊದಲಿದ್ದಂತೆಯೇ ಇರುತ್ತವೆ. ಆದ್ದರಿಂದ ಬಿಲ್ಡಿಂಗುಗಳನ್ನು ರಿಪೇರಿಗೆ ಕೊಡುವ ಪದ್ಧತಿಯನ್ನು ಬದಲಾವಣೆ ಮಾಡಬೇಕು. ಕೆಲವು ಈ ಸಭೆಯ ಮಾನ್ಯ ಸದಸ್ಯರು ಕಂಟ್ರಾಕ್ಟರುಗಳನ್ನು ರಿಜಿಸ್ಟರ್ ಮಾಡಿಸಿ, ರಿಜಿಸ್ಟರ್ ಆಗಿರುವ ಕಂಟ್ರಾಕ್ಟರುಗಳಿಗೇ ಕೊಡಬೇಕೆಂದು ಹೇಳಿದರು. ಹೀಗೆ ಮಾಡಿದರೆ ಸಣ್ಣಪುಟ್ಟ ಕಂಟ್ರಾಕ್ಟರುಗಳು ಎಲ್ಲಿ ಬಿಟ್ಟು ಹೋಗುತ್ತಾರೋ ಎಂಬ ಹೆದರಿಕೆಯಿದೆ. ಬಡವರಿಗೆ ಬಲ್ಲದರಿಗೆ ಎಲ್ಲರಿಗೂ ಅವಕಾಶ ಸಿಕ್ಕುವಂತಿರಬೇಕು. ಯಾರು ಯಾರು ಕಂಟ್ರಾಕ್ಟ್ ಮಾಡುವುದಕ್ಕೆ ಮುಂದೆ ಬರುತ್ತಾರೋ ಅವರಿಗೆಲ್ಲರಿಗೂ ಕೊಡಬೇಕಾದದ್ದು ನ್ಯಾಯ. ಇದರಲ್ಲಿ ಕೋಮುವಾರು ಭಾವನೆಗೆ ಅವಕಾಶವಿರಕೂಡದು. ಆದರೆ ಸಮಾನಾವಕಾಶವಿರಬೇಕು. ಆದ್ದರಿಂದ ಸರ್ಕಾರದವರು ತನಿಖೆ ಮಾಡಿ ಯಾರುಯಾರು ಕಾಂಟ್ರಾಕ್ಟ್ ಕೇಳುತ್ತಾರೋ ಅವರೆಲ್ಲರಿಗೂ ಸಿಕ್ಕುತ್ತಿದೆಯೋ ಎಲ್ಲ ಕೋಮಿನವರಿಗೂ ಸಮಾನಾವಕಾಶ ದೊರೆತಿದೆಯೋ ಎಂಬುದನ್ನು ನೋಡಬೇಕು.

ಸಣ್ಣ ಪುಟ್ಟ ಸೇತುವೆಗಳ ವಿಚಾರದಲ್ಲಿ ಹೆಚ್ಚು ನಿಗಾ ಕೊಡುತ್ತಿಲ್ಲ. ಮಲೆನಾಡುಗಳಲ್ಲಿ ಸಣ್ಣಪುಟ್ಟ ಸೇತುವೆಗಳು ನೂರಾರು ಆಗಬೇಕಾಗಿವೆ. ಸರಿಯಾದ ಸೇತುವೆಗಳಿಲ್ಲದೆ ಮಲೆನಾಡಿನಲ್ಲಿ ಬಹಳ ಕಷ್ಟವಾಗಿರುತ್ತದೆ. ಅನೇಕ ವೇಳೆ ಪ್ರಯಾಣವೇ ನಿಂತು ಹೋಗುತ್ತದೆ. ಆದ್ದರಿಂದ ಇಂಥ ಸೇತುವೆಗಳಿಗಾಗಿ ಹೆಚ್ಚಿನ ಗ್ರ್ಯಾಂಟ್ ಕೊಡಬೇಕೆಂದು ಹೇಳುತ್ತೇನೆ. ಚಿಕ್ಕಮಗಳೂರು ಟೌನಿನ ಪಕ್ಕದಲ್ಲೇ ಯಗಚಿಹಳ್ಳ ಹರಿಯುತ್ತದೆ. ಆ ಹೊಳೆಯಲ್ಲಿ ನೀರು ಹೆಚ್ಚಾಗಿ ಬಂದಾಗ ಉಪ್ಪಳ್ಳಿ, ನೆಲ್ಲೂರು ಮೊದಲಾದ ಹಳ್ಳಿಗಳಿಗೆ ಹೋಗುವುದೇ ಬಹಳ ದುಸ್ತರವಾಗುತ್ತದೆ. ಇಂಥ ಸೇತುವೆಗಳನ್ನು ಮಾಡಿಸಿ ಕೊಡುವುದು ಬಹಳ ಅವಶ್ಯಕ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ).—ಸ್ವಾಮಿ, ಪಿ.ಡಬ್ಲ್ಯು. ಇಲಾಖೆಯವರು ವಿದ್ಯಾಭ್ಯಾಸ ಇಲಾಖೆಯ ಮತ್ತು ಪಶುವೈದ್ಯ ಇಲಾಖೆಯ ಕಟ್ಟಡಗಳನ್ನು ಕಟ್ಟಿಸುತ್ತಾರೆ. ಆದರೆ ಈ ಕಟ್ಟಡಗಳಿಗೆ ಹಣ ತೆಗೆದುಕೊಳ್ಳುವುದರಲ್ಲಿ ಅಂದಾಜು ಹಣದ ಮೇಲೆ ಶೇಕಡ 10 ರಷ್ಟು ಹಾಕಿ ವಸೂಲು ಮಾಡುತ್ತಾರೆ. ಈ ವರ್ಷದ ಬಡ್ಜೆಟ್ಟಿನಲ್ಲಿ 118 ನೆಯ ಪುಟದಲ್ಲಿ ನೋಡುವುದಾದರೆ 112 ಲಕ್ಷ ರೂಪಾಯಿಗಳನ್ನು ಈ ರೀತಿ ಇತರ ಡಿಪಾರ್ಟ್‌ಮೆಂಟುಗಳ ಕಟ್ಟಡಗಳಿಗೆ ಖರ್ಚು ಮಾಡುವುದಾಗಿ ಹೇಳಿದ್ದಾರೆ. ಆಯಾ ಇಲಾಖೆಯವರ ಹಣದಲ್ಲಿ P.W. ಇಲಾಖೆಯವರು ಕಟ್ಟಡಗಳನ್ನು ಕಟ್ಟಿಸಿದರೂ ಸೂಪರ್‌ವಿಷನ್ ಛಾರ್ಜ್ ಎಂದು ಶೇಕಡ 10 ಸೇರಿಸಿ ತೆಗೆದುಕೊಳ್ಳುತ್ತಾರೆ. ಪಿ.ಡಬ್ಲ್ಯು ಇಲಾಖೆಯವರಿಗೂ ಸರ್ಕಾರದವರೇ ಬಡ್ಜೆಟ್ಟಿನಲ್ಲಿ ಹಣ ಒದಗಿಸಿ ಸಂಬಳ ಸಾರಿಗೆಗಳನ್ನು ಕೊಡುತ್ತಿದ್ದರೂ ಈ ಪ್ರಕಾರ ಶೇಕಡ 10ನ್ನು ಸೇರಿಸಿ ಖರ್ಚು ಮಾಡುವುದು ಸರಿಯಲ್ಲ. ಇತ್ತ ಇದು P.W. ಇಲಾಖೆಯಲ್ಲೂ savings ಆಗಿರುವುದಿಲ್ಲ. ಇದಕ್ಕಾಗಿಯೇ ಬೇರೆ ಸಿಬ್ಬಂದಿಯನ್ನು ನೇಮಿಸಿರುವುದಾಗಿ ಹೇಳಿದ್ದಾರೆ. ಸೂಪರ್‌ವಿಷನ್ ಛಾರ್ಜ್ ಹಾಕದೆ ಈ ಕಟ್ಟಡಗಳನ್ನು ಕಟ್ಟಿಸುವುದಕ್ಕಾಗುವುದಿಲ್ಲವೇ? ಏನೇ ಆಗಲಿ ಸರ್ಕಾರಿ ಕಟ್ಟಡಗಳನ್ನು ಕಟ್ಟಿಸುವುದಕ್ಕೇ ಸೂಪರ್‌ವಿಷನ್ ಛಾರ್ಜಸ್‌ಗಳನ್ನು ತೆಗೆದುಕೊಳ್ಳುವುದು ಸರಿಯಲ್ಲವೆಂದು ಹೇಳುತ್ತೇನೆ.

Concrete worksನ್ನು ತೆಗೆದುಕೊಳ್ಳುವುದರಲ್ಲಿ ಹೋದ ವರ್ಷ ಒಂದು ಪ್ರಶ್ನೆ ಹಾಕಿ ಎಲ್ಲಾ ಸಂದರ್ಭಗಳಲ್ಲಿಯೂ ಎಸ್ಟಿಮೇಟು ಮತ್ತು final estimate ಗಳನ್ನು ತಿಳಿಸಬೇಕೆಂದು ಕೇಳಿದ್ದಕ್ಕೆ ಉತ್ತರ

ಕೊಡುತ್ತಾ, ಒಂದೊಂದು ಕಡೆಯಲ್ಲಿ ಚದರಡಿಗೆ 2-8-0 ರೂಪಾಯಿ ಎಸ್ಟಿಮೇಟ್ ಮಾಡಿ ಕೊನೆಗೆ 1-14-0ಗೆ ಕೆಲಸ ಮಾಡಿಸಿದ್ದಾರೆ; ನಂಜನಗೂಡ್ ಸಬ್-ಡಿವಿಜನ್‌ನಲ್ಲಿ 2 ರೂಪಾಯಿ 7 ಆಣೆ 3 ಕಾಸಿಗೆ ಎಸ್ಟಿಮೇಟ್ ಕೊಟ್ಟು ಕೊನೆಗೆ 1 ರೂಪಾಯಿ 12 ಆಣೆಗೆ 9 ಕಾಸಿಗೆ ಕೆಲಸ ಮಾಡಿಸಿದ್ದಾರೆ. ಹೀಗೆ ಈ ಇಲಾಖೆಯವರು ಬೇಕೆಂತಲೇ ತಾವೇ ಹೆಚ್ಚಿಗೆ ಎಸ್ಟಿಮೇಟ್ ಕೊಟ್ಟು, ಕಂಟ್ರಾಕ್ಟರುಗಳಿಗೆ ಕೆಲಸ ಕೊಡುವುದಕ್ಕೆ ಬದಲು ತಾವೇ ಅಮಾನಿ ಮಾಡಿಸಿದ್ದರಿಂದ ಉಳಿತಾಯ ಮಾಡಿರುವುದಾಗಿ ತೋರಿಸುತ್ತಾರೆ. ಹೀಗೆ ಹೆಚ್ಚಿಗೆ ಎಸ್ಟಿಮೇಟ್ ಮಾಡಿ ಟೆಂಡರ್ ಕರೆಯುವುದು, ಕೊನೆಗೆ ತಾವೇ ಮಾಡಿಸಿ ಚದರಡಿಗೆ 10 ಆಣೆ-12 ಆಣೆ ಉಳಿತಾಯ ಮಾಡಿದ್ದೇವೆನ್ನುವುದು ಈ ಇಲಾಖೆಯಲ್ಲಿ ಸ್ವಾಭಾವಿಕವಾಗಿರುತ್ತದೆ. ಸಿಮೆಂಟಿನ ಬೆಲೆ, ಲೇಬರ್ ಬೆಲೆ ಮುಂತಾದುವೆಲ್ಲವೂ ಇವರು ಎಸ್ಟಿಮೇಟ್ ಮಾಡುವ ಕಾಲದಲ್ಲಿಯೂ, ಕೆಲಸ ಮಾಡಿಸುವ ಕಾಲದಲ್ಲಿಯೂ ಒಂದೇ ಇರುತ್ತವೆ ಹೀಗಿದ್ದರೂ ಮುಂಚಿನ ಎಸ್ಟಿಮೇಟು ಏತಕ್ಕೆ ಹೆಚ್ಚಿಗೆ ತೋರಿಸಿರುತ್ತಾರೋ ಗೊತ್ತಿಲ್ಲ. ಮೊದಲೇ ಸರಿಯಾದ ಎಸ್ಟಿಮೇಟ್ ಮಾಡಿಸಿ, ಅದರ ಮೇಲೆ ತಮ್ಮ water carrier ಮುಂತಾದ ಯಂತ್ರ ಸಾಮುಗ್ರಿಗಳನ್ನಿಟ್ಟುಕೊಂಡು ಉಳಿತಾಯ ಮಾಡುವುದಕ್ಕೆ ಬದಲು, ಇವರು ಈ ರೀತಿ ಮಾಡುತ್ತಿರುವುದನ್ನು ನೋಡಿದರೆ ಏನೋ ಇವರ ಕಾರ್ಯಕ್ರಮದಲ್ಲಿ ಲೋಪವಿದೆಯೆಂದು ತೋರುತ್ತದೆ.

2-30 P.M.

ಕಟ್ಟಡಗಳಿಗೆ ಸುಣ್ಣ ಹೊಡೆಯುವ ಪದ್ಧತಿ ಎಲ್ಲ ಕಡೆಯೂ ಇದೆ. ಕಂಟ್ರಾಕ್ಟುದಾರರು ವರ್ಷಕ್ಕೆ ಒಂದು ಸಲ ಸುಣ್ಣ ಹೊಡೆಯದೆ ಮನೆಯಲ್ಲಿ ಕುಳಿತುಕೊಂಡು ಬಿಲ್ ಮಾಡಿ ಹಣ ತೆಗೆದುಕೊಳ್ಳುವ ಪದ್ಧತಿ ಇದೆ. ಎಷ್ಟೋ ಕಟ್ಟಡಗಳಿಗೆ ಸುಣ್ಣ ಹೊಡೆದಿರುವ ಹಾಗೆ ಕಾಣುವುದಿಲ್ಲ. ಯಾರಾದರೂ ಮಂತ್ರಿಗಳು ಬರುತ್ತಾರೆ ಎಂದರೆ ಒಂದು ತಿಂಗಳ ಹಿಂದೆ ಸುಣ್ಣ ಹೊಡೆಯುವ ಪದ್ಧತಿಯನ್ನು ಇಟ್ಟುಕೊಂಡಿದ್ದಾರೆ. ಯಾವಾಗ ಸರ್ಕಾರೀ ಅಧಿಕಾರಿಗಳು ಬರುವುದಿಲ್ಲವೋ, ಅಲ್ಲಿನ ಗೋಡೆಗಳು ಸುಣ್ಣ ಕಾಣುವುದಿಲ್ಲ. ಹಣ ಎಲ್ಲಿಗೆ ಹೋಗುತ್ತದೆ ಎಂಬುದು ಗೊತ್ತಾಗುವುದಿಲ್ಲ. ರಸ್ತೆಗಳಲ್ಲಿ culvert ಗಳಿಗೆ ಇಟ್ಟಿಗೆ ಗೋಡೆಗಳನ್ನು ಕಟ್ಟುತ್ತಾರೆ. ಅವು ಮೂರು ತಿಂಗಳು ಕೂಡ ಇರುವುದಿಲ್ಲ. ಪ್ರತಿವರ್ಷವೂ culvertಗಳಿಗೆ ರಿಪೇರಿ ಇದ್ದೇ ಇರುತ್ತದೆ. ಹಿಂದಿನ ಕಾಲದಲ್ಲಿ ಸಣ್ಣ ಸಣ್ಣ ಸೇತುವೆಗಳನ್ನು ಕಟ್ಟಿದರೆ 50 ವರ್ಷಗಳವರೆಗೂ ರಿಪೇರಿ ಕಂಡುಬರುವುದಿಲ್ಲ. ಈ ಸಿಮೆಂಟಿನ ಕಾಲದಲ್ಲಿ, concreteನ ಕಾಲದಲ್ಲಿ ಕಟ್ಟತಕ್ಕ ಸೇತುವೆಗಳು 3-6 ತಿಂಗಳುಗಳಲ್ಲಿಯೇ ಕೆಟ್ಟು ಹೋಗುತ್ತವೆ. ಇದು ಬಹಳ ಶೋಚನೀಯ ಎಂದು ಹೇಳುತ್ತೇನೆ. ಶಿವಮೊಗ್ಗಾದಲ್ಲಿ drainage water works ಗೋಸ್ಕರ ಸುಮಾರು ಐದು ಲಕ್ಷ ರೂಪಾಯಿಗಳ ಒಂದು ಅಂದಾಜು ತಯಾರು ಮಾಡಿದರು. ಏಳುವರ್ಷಗಳ ಕೆಳಗೆ ಐದು ಲಕ್ಷ 40 ಸಾವಿರಕ್ಕೆ ಅಂದಾಜು ಆಗಿ, drainge works ಪ್ರಾರಂಭಮಾಡಿದರು. ಒಂದೆರಡು ವರ್ಷ ಆಗುವುದರೊಳಗೆ 11 ಲಕ್ಷ 49 ಸಾವಿರ ರೂಪಾಯಿಗೆ revised estimate ಆಯಿತು. ಮೊದಲು ಅಂದಾಜನ್ನು ತಯಾರು ಮಾಡಿದವರು ಅವರಿಗೆ ಸರಿಯಾದ ಜ್ಞಾನವಿರಲಿಲ್ಲವೇ? ಹಣವನ್ನು ಮುನಿಸಿಪಾಲಟಿಯವರು ಹೇಗೆ ಕೊಡಬೇಕು ಎಂಬುದನ್ನು ಪರಿಶೀಲನೆ ಮಾಡಿದ್ದಾರೆಯೋ? ಅಂದಾಜು ಮಂಜೂರು ಆಗಬೇಕು ಎಂಬ ಉದ್ದೇಶದಿಂದ ಕಮ್ಮಿ ಅಂದಾಜು ಮಾಡಿ, ಪೌರಸಭೆಯಲ್ಲಿ ಹಣ ಇರುತ್ತದೋ ಇಲ್ಲವೋ ನೋಡದೆ ಮಾರನೆಯ ವರ್ಷವೇ ಒಂದಕ್ಕೆರಡರಷ್ಟು revised estimate ಮಾಡಿ ಕೆಲಸವಾಗದ ಹಾಗೆ ಮಾಡುತ್ತಾರೆ. ಈಗ ಏಳು ವರ್ಷಗಳಾದುವು. ಒಂದು ಕಡೆ ದೊಡ್ಡ ಪೈಪ್‌ಲೈನ್ ಹಾಕಿದ್ದಾರೆ. ಈಗ ಆಗಿರತಕ್ಕ ಕೆಲಸ ಇಷ್ಟೇ. ಆರು ಲಕ್ಷ ರೂಪಾಯಿಗಳ ಹಣ ಖರ್ಚಾಗಿದೆ ಎಂದು ಹೇಳುತ್ತಾರೆ. Main lineಗೆ ಸಣ್ಣ ಸಣ್ಣ sub-lineಗಳನ್ನು ಕೊಟ್ಟಿದ್ದಾರೆ. Septic tank ಮಾಡಿಲ್ಲ. Pump-house ಮಾಡಿಲ್ಲ. House connection ಕೊಟ್ಟಿಲ್ಲ. Main line ಒಂದು ವಿನಾ ಇನ್ನಾವ ಕೆಲಸವೂ ಆಗಿಲ್ಲ. ಏಳು ವರ್ಷಗಳಿಂದ ಹಾಗೆಯೇ ಇಟ್ಟಿದ್ದಾರೆ. ಮಾನ್ಯ ಮಂತ್ರಿಗಳು septic tank ಆಗಿದೆ, ಜಮೀನು acquire ಆಗಿದೆ ಎಂದು ಹೇಳಿದರು. ಜಮೀನು ಅಕ್ವೈರ್ ಆಗಿಲ್ಲ ಕಂಟ್ರಾಕ್ಟುದಾರರಿಗೆ ಕಂಟ್ರಾಕ್ಟು ಕೊಟ್ಟಿಲ್ಲ. ಪೈಪ್‌ಲೈನ್ ಇಲ್ಲ. ಇಲ್ಲಿ ಆಗಿರುವ ಕೆಲಸ ನೋಡಿದರೆ, ರಸ್ತೆಗಳಲ್ಲಿ ಅನೇಕ ತೊಂದರೆಗಳು ಆಗಿವೆ. ಬಹು ಹಣವನ್ನು ರಸ್ತೆಗಾಗಿ ಖರ್ಚುಮಾಡಿದ್ದಾರೆ. ಇನ್ನೂ underground drainage works ಮುಗಿಸಲು 10-20 ವರ್ಷಗಳಾಗುತ್ತವೆಯೋ ಎಂದು ಕನಸು ಕಾಣುವ ಪರಿಸ್ಥಿತಿ ಇದೆ. ಸರಕಾರದವರು ಈ ಯೋಜನೆಯನ್ನು ಖಂಡಿತವಾಗಿ ಎರಡು ವರ್ಷಗಳಲ್ಲಾದರೂ ಕಾರ್ಯಗತ ಮಾಡಬೇಕೆಂದು ಹೇಳುತ್ತೇನೆ. Water works ಏರ್ಪಾಡಿಗೆ ಎಂಟು ಲಕ್ಷ ರೂಪಾಯಿಗಳನ್ನು ಅಂದಾಜು ಮಾಡಿದ್ದಾರೆ. ಎರಡು ಮೂರು ವರ್ಷಗಳಲ್ಲಿ revised estimate 15 ಲಕ್ಷ ರೂಪಾಯಿಗಳಿಗೆ ಆಗಿದೆ. P.W. ಇಲಾಖೆಯವರೂ ಈ ರೀತಿಯಾಗಿಯೇ revised estimate ಮಾಡುತ್ತಾರೆ. ಇದಕ್ಕೆ ಬಡ್ಡಿ ಹಣ ಕೊಡುವುದೇ ಆಗಿದೆ. ಆರು ವರ್ಷಗಳಿಂದ ಕೆಲಸ ನಡೆಯುತ್ತಿದೆ ಎಂದು ಹೇಳುತ್ತಾರೆ. ಎಷ್ಟು ವರ್ಷಗಳಿಗೆ water supply scheme ಮುಗಿಯುತ್ತದೋ ಗೊತ್ತಿಲ್ಲ. ಹಿಂದಿನ ಸರ್ಕಾರದವರು ಇದಕ್ಕಾಗಿ ಮೂರು ಲಕ್ಷ ರೂಪಾಯಿಗಳನ್ನು ಗ್ರ್ಯಾಂಟು ರೂಪವಾಗಿ ಕೊಟ್ಟರು. ಈ ಸರ್ಕಾರ ಗ್ರ್ಯಾಂಟ್ ಕೊಡುವುದಿಲ್ಲವೆಂದು ರದ್ದುಪಡಿಸಿ, ಸಾಲ ಮಂಜೂರು ಮಾಡಿತು. ಆದರೂ ಕೆಲಸ ಆಗದೇ ಇರುವುದರಿಂದ ಸಾಲದ ಹೊರೆ ಮಾತ್ರ ಹಾಕಿದ ಹಾಗೆ ಆಯಿತು. ಕುಂಸಿಯಲ್ಲಿ ನಾಲ್ಕು ವರ್ಷಗಳ ಕೆಳಗೆ drainage ಮತ್ತು water worksಗೆ ಅಂದಾಜು ಮಂಜೂರು ಆಗಿ ಕೆಲಸವೇ ನಡೆಯಲಿಲ್ಲ P.W. ಇಲಾಖೆಯವರು ಕಾರ್ಯಕ್ರಮ ಕೈಗೊಂಡಿಲ್ಲ. ಆ ಪಟ್ಟಣದವರು ಅನೇಕ ತೊಂದರೆಗಳಿಗೆ ಈಡಾಗಿದ್ದಾರೆ. ಈ ವರ್ಷದಲ್ಲಿ ಕೆಲಸ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ರಸ್ತೆಗಳ ವಿಚಾರದಲ್ಲಿ ಹೇಳುವುದಾದರೆ ಆಗುಂಬೆ-ಹರಿಹರ ಮಾಲೂರು ಮಾರ್ಗ ಹೊಸದಾಗಿ ಒಂದು ರಸ್ತೆ ಮಾಡಿದ್ದಾರೆ. ಆಗುಂಬೆ-ಹರಿಹರಕ್ಕೆ ಈ ರಸ್ತೆಯಲ್ಲಿ 10 ಮೈಲಿ ದೂರ ಕಡಿಮೆಯಾಗುತ್ತದೆ. ಕೆಲವು ರಸ್ತೆಗಳಲ್ಲಿ ಜಲ್ಲಿ ಹಾಕಿಲ್ಲ. ಸಣ್ಣ ಸಣ್ಣ culvertಗಳನ್ನು ಇನ್ನೂ ಮಾಡಬೇಕು. ರಸ್ತೆಗಳಿಗೆ ಜಲ್ಲಿ ಹಾಕುವುದರಿಂದ ಹಿಂದೆ ಬಿದ್ದಿರುವ ಪ್ರದೇಶ ಮುಂದೆ ಬರುತ್ತದೆ. 4-5 ಸಾವಿರ ಎಕರೆ ಜಮೀನು ಸಾಗುವಳಿಗೆ ಬರುತ್ತದೆ. ಶಿವಮೊಗ್ಗಾ-ಆಗುಂಬೆ ರಸ್ತೆಯಲ್ಲಿ ಮೂರು ಸೇತುವೆಗಳನ್ನು ಕಟ್ಟುವುದಕ್ಕೋಸ್ಕರ ಬಡ್ಜೆಟ್ಟನಲ್ಲಿ ಹಣವನ್ನು ಒದಗಿಸಿದ್ದಾರೆ. ಶಿಕಾರಿಪುರ-ಶಿವಮೊಗ್ಗಾಕ್ಕೆ

(ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.)

ಹೊಸ ಭಾಟಾ ಮಾರ್ಗ ಆಗುವುದು ಏಳು ಮೈಲಿ ಉದ್ದ ಕಮ್ಮಿಯಾಗುತ್ತದೆ. ಶಿವಮೊಗ್ಗಾ ಜಿಲ್ಲಾಧಿಕಾರಿಗಳ ಡಿಸ್ಟ್ರಿಕ್ಟ್ ಆಫೀಸಿಗೆ 105 ವರ್ಷಗಳ ವಯಸ್ಸಾಗಿದೆ. ಬೊಂಬಾಯಿಯಲ್ಲಿ ಕಟ್ಟಡಕ್ಕೆ 100 ವರ್ಷ ವಯಸ್ಸು ಆದರೆ ಆ ಕಟ್ಟಡವನ್ನು demolish ಮಾಡುತ್ತಾರೆ. ಇಲ್ಲಿ ಡಿಸ್ಟ್ರಿಕ್ಟ್ ಆಫೀಸಿನಲ್ಲಿ clerks ಪ್ರಾಣವನ್ನು ಕೈಯ್ಯಲ್ಲಿ ಹಿಡಿದುಕೊಂಡು ಕೆಲಸ ಮಾಡುತ್ತಾ ಇರುತ್ತಾರೆ. ಮೇಲೆ ನೋಡಿದರೆ rafters ಅಲ್ಲಾಡುತ್ತವೆ. ಮೇಲೆ ಕೂತಿರುವವರೂ ಹೆದರುತ್ತಾರೆ. ಕೆಳಗೆ ಕೂತಿರುವವರೂ ಹೆದರುತ್ತಾರೆ. ಈ ವಿಷಯ ಅಧ್ಯಕ್ಷರಿಗೂ ಗೊತ್ತಿದೆ. ಮೇಲ್ಛಾವಣಿ ಹಾಕಿ ಸುಮಾರು 105 ವರ್ಷಗಳಾಗಿದೆ ಕಟ್ಟಡ ನೋಡಿದರೆ ಗೊತ್ತಾಗುತ್ತದೆ. ಆದ್ದರಿಂದ ಈ ಕಟ್ಟಡವನ್ನು ಆದಷ್ಟು ಬೇಗನೆ ಹೊಸದಾಗಿ ಕಟ್ಟಿಸಬೇಕು. ಮತ್ತು ಅಲ್ಲಿಯವರೆಗೆ ಈ ಕಟ್ಟಡಕ್ಕೆ ಸರಿಯಾದ iron girders ಹಾಕಿ ಸರಿಪಡಿಸಬೇಕೆಂದು ಹೇಳುತ್ತೇನೆ.

ಶ್ರೀ ಡಿ. ಎಂ. ಗೋವಿಂದರಾಜು (ನೆಲಮಂಗಲ).—ಮಾನ್ಯ ಅಧ್ಯಕ್ಷರೆ, ನೆಲಮಂಗಲ ತಾಲ್ಲೂಕು ಸೊಂಡೆಕೊಪ್ಪದ ಬಳಿಯಲ್ಲಿ ಅರ್ಕಾವತಿ ನದಿಗೆ ಒಂದು ಸೇತುವೆ ಕಟ್ಟಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಎರಡು ಮೂರು ವರ್ಷಗಳಿಂದ ಇನ್ನೂ ಈ ಕೆಲಸಕ್ಕೆ ಅಂದಾಜು ಮಂಜೂರಾಗಿದೆಯೋ ಇಲ್ಲವೋ ಗೊತ್ತಿಲ್ಲ ಅದು ಮುಖ್ಯವಾದ ರಸ್ತೆ. ಸುಮಾರು ಎರಡು ಮೂರು ಬಸ್ಸುಗಳು ಓಡಾಡುತ್ತವೆ. ಆದ್ದರಿಂದ ಆದಷ್ಟು ಜಾಗ್ರತೆ ಆ ಸೇತುವೆಯನ್ನು ಕಟ್ಟಬೇಕು. ಇನ್ನೊಂದು ನಮ್ಮ ತಾಲ್ಲೂಕಿನಲ್ಲಿ ಮಡಲಕೋಟೆಯ ಬಳಿ ಕುಮುದ್ವತೀ ನದಿಗೆ ಸೇತುವೆಯನ್ನು ಕಟ್ಟಿಸಬೇಕು. ಮಳೆಗಾಲದಲ್ಲಿ ಮೂರು ನಾಲ್ಕು ತಿಂಗಳು ನೀರು ನಿಂತುಹೋಗಿ ಜನರು ಓಡಾಡುವುದಕ್ಕೆ ಬಹಳ ಕಷ್ಟವಾಗುತ್ತದೆ. ಕುಮುದ್ವತೀ ನದಿಗೆ ಸೇತುವೆ ಕಟ್ಟಬೇಕಾದುದು ಬಹಳ ಪ್ರಾಮುಖ್ಯ. ಅದೂ ಅಲ್ಲದೆ ಈಗ ನಮ್ಮ ತಾಲ್ಲೂಕಿನಲ್ಲಿ ಶಿವಗಂಗೆ ಗ್ರಾಮವಿದೆ. ಅದು ಬಹಳ ಪವಿತ್ರವಾದ ಕ್ಷೇತ್ರ. ಆ ಕ್ಷೇತ್ರ ಗುಡೇಮಾರನಹಳ್ಳಿಗೆ ಹತ್ತು ಮೈಲಿಯಾಗುತ್ತದೆ. ಎರಡು ಮೂರು ಬಸ್ಸುಗಳು ಓಡಾಡುತ್ತವೆ. ಅದು ಬಹಳಜನ ತಿರುಗಾಡುವಸ್ಥಳ. ನೂರಾರು ಗ್ರಾಮದ ನಿವಾಸಿಗಳು ಆದೇ ರಸ್ತೆಯಲ್ಲಿ ಓಡಾಡಬೇಕಾಗಿದೆ. ಈಗ ಅದು ಡಿಸ್ಟ್ರಿಕ್ಟ್ ಬೋರ್ಡ್ ರಸ್ತೆಯಾಗಿದೆ. P.W.D. ರಸ್ತೆಯನ್ನಾಗಿ ಸೇರಿಸಿಕೊಳ್ಳಬೇಕು ಎಂದು ಎರಡು ಮೂರು ವರ್ಷಗಳಿಂದ ಕೇಳಿದ ಮೇಲೆ ಹೋದ ವರ್ಷವೇ ಇದನ್ನು P.W.D. ರಸ್ತೆಯನ್ನಾಗಿ ಮಾಡುತ್ತೇವೆ ಎಂಬುದಾಗಿ ಭರವಸೆಕೊಟ್ಟರು. ಆದರೂ ಇನ್ನೂ ಅದು P.W.D. ರಸ್ತೆಯಾಗಲಿಲ್ಲ. ಆದ್ದರಿಂದ ಆದಷ್ಟು ಜಾಗ್ರತೆಯಾಗಿ ಶಿವಗಂಗೆ—ಗುಡೇಮಾರನಹಳ್ಳಿ ರಸ್ತೆಯನ್ನು P.W.D. ರಸ್ತೆಯನ್ನಾಗಿ convert ಮಾಡಬೇಕು. ಬಸ್ಸು ನೆಲಮಂಗಲದಿಂದ ಬೆಂಗಳೂರಿಗೆ direct ಆಗಿ ಬರುವುದಿಲ್ಲ. ಪ್ರತಿಯೊಂದು ಬಸ್ಸೂ ಸೊಂಡೇಕೊಪ್ಪ—ತಾವರೇಕೆರೆ ಮಾರ್ಗವಾಗಿ ಬೆಂಗಳೂರಿಗೆ ಬರುವ ಅವಕಾಶವಿದೆ. ಈ ರಸ್ತೆಯನ್ನು P. W. D. ಗೆ ಸೇರಿಸಿಕೊಳ್ಳಬೇಕು ಎಂದು ಒತ್ತಾಯಮಾಡಿದ್ದಾರೆ. ಏಳು ಎಂಟು ಬಸ್ಸುಗಳು ಇರುವುದರಿಂದ P.W.D.ಗೆ ಸೇರಿಸಿಕೊಳ್ಳುತ್ತೇವೆ ಎಂದು ಭರವಸೆ ಕೊಟ್ಟಿದ್ದಾರೆ. ಇದುವರೆಗೂ ಯಾವ ಕಾರ್ಯಕ್ರಮಗಳನ್ನೂ ತೆಗೆದುಕೊಂಡಿಲ್ಲ. ಆದಷ್ಟು ಜಾಗ್ರತೆ ನೆಲಮಂಗಲ—ಸೊಂಡೇಕೊಪ್ಪ—ತಾವರೇಕೆರೆರಸ್ತೆಯನ್ನು P.W.D. ಯವರು ತೆಗೆದುಕೊಳ್ಳಬೇಕಾದುದು ಅಗತ್ಯ. ಈ ತಾಲ್ಲೂಕಿನಲ್ಲಿ famine relief works ನಲ್ಲಿ ಅನೇಕ ರಸ್ತೆಗಳನ್ನು ಮಾಡಿದ್ದಾರೆ. ಸುಮಾರು ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿ, ಮಾಡಿರುವ ರಸ್ತೆಗಳನ್ನು ನೋಡಿದರೆ, ಅಷ್ಟು ದುಡ್ಡು ಖರ್ಚುಮಾಡಿರುವುದು ಖಂಡಿತವಾಗಿ ನೀರಿನ ಪಾಲು ಆಯಿತು ಎಂದು ಹೇಳಿದರೆ ಅದು ಅಷ್ಟು ಅತಿಶಯೋಕ್ತಿಯಲ್ಲ. ಆ ರಸ್ತೆಗಳನ್ನು P. W. D. ಅಥವಾ ಡಿಸ್ಟ್ರಿಕ್ಟ್ ಬೋರ್ಡು ವಹಿಸಿಕೊಂಡು maintain ಮಾಡಬೇಕಾದುದು ಬಹಳ ಮುಖ್ಯ. ಮಣ್ಣಿ ಬರಗೂರು ರೋಡ್, ಮಾಕನಕುಪ್ಪೆ ಲಕ್ಷ್ಮಣಪುರ ರೋಡ್, ಕುಂಟಬೊಮ್ಮನಹಳ್ಳಿ—ಮರಳಕುಂಟೆ ಬೆಣಚನಹಳ್ಳಿ ರೋಡ್, ಹೊನ್ನೇನಹಳ್ಳಿ,—ಶ್ರೀಪತಿಹಳ್ಳಿ, ಬೀರಾಸಾಗರ ರೋಡ್, ಮತ್ತು ದಾಬಸ್‌ಪೇಟೆ—ಅಗಲಕುಪ್ಪೆ—ನಿಜಗಲ್ ರೋಡ್—ಹೀಗೆ ಅನೇಕ ರಸ್ತೆಗಳು ರಿಲೀಫ್ ವರ್ಕ್ಸ್‌ನಿಂದ ಆಗಿವೆ. Relief works ನಲ್ಲಿ ಯಾವ ಯಾವ ರಸ್ತೆಗಳು ಇವೆಯೋ, ಆ ರಸ್ತೆಗಳೆಲ್ಲವನ್ನೂ ಕೂಡ ಸರ್ಕಾರದವರು maintain ಮಾಡಿದರೆ ಖಂಡಿತ ಬಹಳ ಅನುಕೂಲ. ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ.

ಮುಖ್ಯವಾಗಿ ಈಗ ಸಿಮೆಂಟ್ ರಸ್ತೆಗಳಿಗೆ ವಿಪರೀತ ಹಣವನ್ನು ಖರ್ಚು ಮಾಡಲಾಗುತ್ತಿದೆ. ಇದನ್ನು ಆದಷ್ಟು ಕಡಮೆ ಮಾಡಿ, ಗ್ರಾಮಾಂತರ ರಸ್ತೆಗಳು ಹೆಚ್ಚು ಅವಶ್ಯಕವಾಗಿರುವುದರಿಂದ ಹಳ್ಳಿಗಳ ರಸ್ತೆಗಳ ಕಡೆ ಗಮನ ಕೊಡಬೇಕು. ಇದಕ್ಕೆ ಹೆಚ್ಚು ಹಣ ಕೊಟ್ಟು ಇವುಗಳನ್ನು ಮಾಡಿಸಬೇಕಾದುದು ಅಗತ್ಯವೆಂದು ಒತ್ತಿ ಹೇಳುತ್ತೇನೆ.

ನಮ್ಮ ತಾಲ್ಲೂಕಿನಲ್ಲಿ ಅನೇಕ ಸ್ಕೂಲುಗಳಿಗೆ ಕಟ್ಟಡಗಳಿಲ್ಲ. ಡೊನೇಷನ್ ಕೊಟ್ಟರೂ ಕಟ್ಟಿಲ್ಲ. ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿಯೂ ಇದೇ ಪರಿಸ್ಥಿತಿ ಇದೆ. ಎಲ್ಲೆಲ್ಲಿ ಡೊನೇಷನ್ ಕೊಟ್ಟಿದ್ದಾರೋ ಅಂಥಾ ಕಡೆಗಳಲ್ಲಾದರೂ ಆದಷ್ಟು ಜಾಗ್ರತೆ ಸ್ಕೂಲು ಕಟ್ಟಡಗಳನ್ನು ಕಟ್ಟಿಸಿಕೊಡಬೇಕು. ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಕಾಡತಿಮ್ಮಾರು ಗ್ರಾಮದ ಎಲ್. ಟಿ. ಎಂ. ಸ್ಕೂಲಿದೆ. ಅಲ್ಲಿಯ ಜನರು ಉದಾರವಾಗಿ ಸಾವಿರಾರು ರೂಪಾಯಿ ಡೊನೇಷನ್ ಕೊಟ್ಟು ಹತ್ತು ಹನ್ನೆರಡು ವರ್ಷಗಳಾದರೂ ಅದಕ್ಕೆ ಕಟ್ಟಡವಿಲ್ಲ. ಇದನ್ನು ಕಟ್ಟಿಸುವುದು ಅವಶ್ಯಕ.

ಇನ್ನೊಂದು ವಿಷಯ: ತ್ಯಾಮಗೊಂಡ್ಲು ತುಮಕೂರು—ಬೆಂಗಳೂರು ರಸ್ತೆಯ ಡಿವಿಯೇಷನ್ ರಸ್ತೆಯ ಮಧ್ಯದಲ್ಲಿದೆ. ಅಲ್ಲಿ ಏಳೆಂಟು ಸಾವಿರ ಪ್ರಜಾಸಂಖ್ಯೆಯಿದೆ, ದೊಡ್ಡ ಗ್ರಾಮ, ವ್ಯಾಪಾರಸ್ಥಳ ಮತ್ತು ಅನೇಕ ಅಧಿಕಾರಿಗಳು ಆಗಾಗ ಅಲ್ಲಿಗೆ ಬರುತ್ತಿರುತ್ತಾರೆ. ಅವರಿಗೆ ಇಳಿದುಕೊಳ್ಳಲು ಸ್ಥಳವಿಲ್ಲದೆ ಬಹಳ ಕಷ್ಟವಾಗಿದೆ. ಆದಕಾರಣ ಅಲ್ಲಿ ಒಂದು ಟಿ. ಬಿ. ಅಥವಾ 'ರೆಸ್ಟ್ ಹೌಸ್' ಕಟ್ಟಿಸಿಕೊಡಬೇಕೆಂದು ಅನೇಕ ಸಲ ಪ್ರಾರ್ಥನೆ ಮಾಡಿಕೊಂಡಿದ್ದೇವೆ. ಮುಖ್ಯ ಮಂತ್ರಿಗಳು ಅಲ್ಲಿಗೆ ಬಂದಿದ್ದಾಗ, ಅಲ್ಲಿಗೆ ಟಿ. ಬಿ. ಅವಶ್ಯಕತೆಯಿದೆ, ಜಾಗ್ರತೆ ಮಾಡಿಸಿಕೊಡುತ್ತೇವೆಂದು ಭರವಸೆ ಕೊಟ್ಟಿದ್ದರು. ಆದರೆ ಇದುವರೆಗೆ ಯಾವುದೂ ಆಗಿಲ್ಲ. ಯಾರಾದರೂ ಅಲ್ಲಿಗೆ ಬಂದರೆ ಇಳಿದುಕೊಳ್ಳಲು ಸ್ಥಳವಿಲ್ಲ. ಜಾಗ್ರತೆ ಟಿ.ಬಿ. ಕಟ್ಟಿಸಿಕೊಟ್ಟರೆ ಅನುಕೂಲವಾಗುತ್ತದೆ. ಕಡ್ಡಾಯವಾಗಿ ಇದನ್ನು ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ನಮ್ಮ ತಾಲ್ಲೂಕಿನಲ್ಲಿ ಮಣ್ಣೇಕೆರೆ ಎಂಬ ಮೇಜರ್ ಕೆರೆ ಇದೆ. ಅದರ ಕೆಳಗೆ ನಾನೂರು ಐನೂರು ಎಕರೆ ಅಚ್ಚುಕಟ್ಟಿದೆ. ಆ ಕೆರೆಯ ಏರಿಯ ಮೇಲೆ ರಸ್ತೆ ಹೋಗಬೇಕು. ಸುಮಾರು ಒಂದು ಕಡೆಯಿಂದ

ಒಂದು ಗಾಡಿ ಬರುತ್ತಿದ್ದರೆ ಇನ್ನೊಂದು ಕಡೆ ಬರುವ ಗಾಡಿ ಅದು ಈ ಕಡೆ ಬರುವವರೆಗೂ ನಿಂತಿರಬೇಕು, ಇಲ್ಲದಿದ್ದರೆ ಹಿಂದಕ್ಕೆ ಹೋಗಬೇಕು. ಏಕೆಂದರೆ ಏರಿಯ ಅಗಲ ಬಹಳ ಚಿಕ್ಕದು. ಆದಕಾರಣ ಈ ಏರಿಯನ್ನು ಅಗಲ ಮಾಡಬೇಕು. ಇದನ್ನು ಮಾಡಬೇಕೆಂದು ಹಿಂದೆಯೇ ಸರ್ಕಾರವನ್ನು ಪ್ರಾರ್ಥಿಸಿದ್ದೇವೆ. ಇದಕ್ಕೆ ಅಂದಾಜು ಕೂಡ ಆಗಿತ್ತು; ಆದರೆ ಏನು ಕಾರ್ಯ ಕ್ರಮವನ್ನೂ ತೆಗೆದುಕೊಂಡಿಲ್ಲ. ಇದನ್ನು ತಕ್ಷಣ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನಪ್ಪಗೌಡ (ಸೊರಬ—ಷಿಕಾರಿಪುರ).—ಸ್ವಾಮಿ, ಈ ಡಿಮ್ಯಾಂಡ್ ಮನವಿಯನ್ನನು ಮೋದಿಸುತ್ತಾ ಕೆಲವು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. ಶಿವಮೊಗ್ಗ-ಹುಬ್ಬಳ್ಳಿ ರಸ್ತೆಯಲ್ಲಿ ಗೊಂದಿಮಾವಿನ ಹೊಳೆಗೆ ಒಂದು ಸೇತುವೆ ಆಗಬೇಕೆಂದು ಮೈಸೂರಿನಲ್ಲಿ ಪ್ರಜಾಪ್ರತಿನಿಧಿ ಸಭೆ ಹುಟ್ಟಿದಾಗಿನಿಂದಲೂ ಪ್ರತಿವರ್ಷವೂ ಕೇಳುತ್ತಿದ್ದಾರೆ. ನಡೆವಳಿಕೆಗಳ ವರದಿಯನ್ನು ನೋಡಿದರೆ ಗೊತ್ತಾಗುತ್ತದೆ. ಈ ಸೇತುವೆ ಕಟ್ಟುವುದಕ್ಕೆ ಸೈಟಿನ ವಿಷಯದಲ್ಲಿ ಭಿನ್ನಾಭಿಪ್ರಾಯವಿದೆ. ಇದನ್ನು ನೋಡಿ ತೀರ್ಮಾನಿಸಿ ಈ ಸೇತುವೆ ಕಟ್ಟಿಸಿ ಅಲ್ಲಿನ ಜನರಿಗೆ ಅನುಕೂಲ ಮಾಡಿ ಕೊಡಬೇಕು. ಹುಬಳ್ಳಿಗೆ ಇದೇ ಬಹಳ ಹತ್ತಿರದ ಮಾರ್ಗ; ಶಿವಮೊಗ್ಗದಿಂದ 120 ಮೈಲಿಯಾಗುತ್ತದೆ. ಇಲ್ಲಿ ಸೇತುವೆಯ ಅವಶ್ಯಕತೆ ಇದೆ. ಆದುದರಿಂದ ಈಗಲಾದರೂ ದಯೆಯಿಟ್ಟು ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿ ಈ ಕೆಲಸವನ್ನು ಪೂರೈಸಬೇಕು. ಪ್ಲಾನಿಂಗ್ ಕಮಿಷನ್ ಸದಸ್ಯರಾದ ಶ್ರೀ ರಾಮಮೂರ್ತಿಯವರು ಅಲ್ಲಿಗೆ ಬಂದಿದ್ದಾಗ ಈ ಬೇಡಿಕೆಯನ್ನು ಅವರ ಮುಂದಿಟ್ಟೆವು. ಆದರೂ ಇದನ್ನು ಯೋಜನೆಯಲ್ಲಿ ಸೇರಿಸಿಲ್ಲ. ಗೊಂದಿಹೊಳೆ ಧಾರವಾಡಕ್ಕೆ ಸೇರಿದೆಯೆಂದು ಇತ್ಯರ್ಥವಾಗಿಲ್ಲವಾದುದರಿಂದ, ತಜ್ಞರ ಅಭಿಪ್ರಾಯ ತೆಗೆದುಕೊಂಡು, ಯಾವುದಾದರೂ ಒಂದು ಕಡೆ ಸೈಟನ್ನು ಗೊತ್ತು ಮಾಡಿ ಇದನ್ನು ಕಾರ್ಯಗತ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಸೊರಬ-ಸಿದ್ದಾಪುರ ರಸ್ತೆಯಲ್ಲಿ ಚಂದ್ರಗುತ್ತಿ ಹೋಬಳಿ ಇದೆ. ಅದು ನಮ್ಮ ತಾಲ್ಲೂಕಿಗೆ ಕೊನೆಯ ಹೋಬಳಿ. ಅಲ್ಲಿಗೆ ಮಾನ್ಯ ಮಂತ್ರಿಗಳು ಹೋಗಿಲ್ಲ ಅದು ಬಹಳ ಹಿಂದುಳಿದ ಪ್ರದೇಶ. ಬಹಳ ಹಳೆಯ ಕಾಲದಲ್ಲಿ ಒಂದು ಪದಾರ್ಥ ಕೊಟ್ಟು ಇನ್ನೊಂದು ಪದಾರ್ಥವನ್ನು ತೆಗೆದುಕೊಳ್ಳುತ್ತಿದ್ದ ವ್ಯಾಪಾರ ಅಲ್ಲಿ ಈಗಲೂ ನಡೆಯುತ್ತಿದೆ. ಅಲ್ಲಿ ಜೋಳದ ಗುಡ್ಡೆಯ ಹತ್ತಿರ ಒಂದು ಸೇತುವೆ ಕಟ್ಟಬೇಕು.

ಷಿಕಾರಿಪುರ ತಾಲ್ಲೂಕು ಈಸೂರಿನ ಹತ್ತಿರ ಕುಮುದ್ವತಿ ನದಿಗೆ ಒಂದು ಸೇತುವೆ ಆಗಬೇಕೆಂದು ಬಹಳ ದಿವಸಗಳಿಂದ ಜನರು ಬೇಡಿಕೆಯನ್ನಿಡುತ್ತಿದ್ದಾರೆ. ಅದನ್ನು ಕೂಡಲೆ ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡಬೇಕು.

ಹೊಸನಗರದ ಹತ್ತಿರ ಕುಮುದ್ವತಿಗೆ ಸೇತುವೆ ಕಟ್ಟಬೇಕೆಂದು ನಾಲ್ಕು ವರ್ಷದ ಹಿಂದೆ ಪ್ರಾರಂಭಿಸಿದರು. ಆದರೂ ಇನ್ನೂ ಅಂದಾಜಾಗಿಲ್ಲ, ಇದನ್ನೂ ಮಾಡಬೇಕು. ಹೊಸನಗರ—ಆನಂದಾಪುರದ ರಸ್ತೆಯ ಹತ್ತಿರ ಒಂದು ಸೇತುವೆ ಕೆಲಸವನ್ನು ಪ್ರಾರಂಭಿಸಿ ನಿಲ್ಲಿಸಿದ್ದಾರೆ. ಒಬ್ಬ ಕಂಟ್ರಾಕ್ಟರಿಗೆ ಕೊಟ್ಟಿದ್ದೆವು, ಅವರು ಬಿಟ್ಟುಬಿಟ್ಟರ ಎಂದು ಇಲಾಖೆಯವರು ಹೇಳುತ್ತಾರೆ. ಅರ್ಧದಲ್ಲಿ ನಿಂತು ಹೋಗಿದೆ . . . .

ಅಧ್ಯಕ್ಷರು.—ಎರಡು ಮೂರು ಹೇಳಿದರೆ ಮಾಡುತ್ತಾರೆ, ಇಷ್ಟೊಂದು ಹೇಳಿದರೆ ಹೇಗೆ?

ಶ್ರೀ ಮಲ್ಲಿಕಾರ್ಜುನಪ್ಪಗೌಡ.—ಬಹಳ ಹೇಳಿದರೆ ಒಂದೆರಡಾದರೂ ಮಾಡುತ್ತಾರೆಂದು ನಂಬಿಕೆ. ಮಲೆನಾಡಿನಲ್ಲಿ ಸಣ್ಣಸಣ್ಣ ಹಳ್ಳಿಗಳಿಗೆ, ಸೇತುವೆಗಳನ್ನು ಕಟ್ಟಿದರೆ, ಮಳೆಗಾಲದಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ತಿರುಗಾಡುವ ಜನರಿಗಾಗುತ್ತಿರುವ ತೊಂದರೆ ತಪ್ಪುತ್ತದೆ.

ಕಟ್ಟಡಗಳ ವಿಚಾರದಲ್ಲಿ, ಷಿಕಾರಿಪುರ ತಾಲ್ಲೂಕು ಹಿತ್ತಲದಲ್ಲಿ ಒಂದು ಜಾನುವಾರು ಆಸ್ಪತ್ರೆ ಕಟ್ಟಬೇಕೆಂದು ಅಲ್ಲಿನ ಜನರು ಹಣ ಕಟ್ಟಿ ನಾಲ್ಕು ವರ್ಷವಾಯಿತು ; ಆ ಕಟ್ಟಡ ಆಗಬೇಕೆಂದು ಕೇಳುತ್ತಿದ್ದಾರೆ. ಇದಕ್ಕೆ ಗಮನ ಕೊಟ್ಟು, ಇದು ಬಹಳ ಹಿಂದುಳಿದ ತಾಲ್ಲೂಕಾಗಿರುವುದರಿಂದ ಇದನ್ನು ಮಾಡಿಕೊಡಬೇಕೆಂದು ಪ್ರಾರ್ಥಿಸುತ್ತೇನೆ.

*ಶ್ರೀ ಕೆ. ಲಕ್ಕಪ್ಪ (ಚನ್ನರಾಯಪಟ್ಟಣ).—ಸ್ವಾಮಿ, ಬಹಳ ಕಾಲದಿಂದ ಮೂಲೆಗೆ ಬಿದ್ದಿರುವ ರಸ್ತೆಯ ವಿಚಾರವನ್ನು ಪ್ರಸ್ತಾಪ ಮಾಡಬೇಕೆಂದು ನಿಂತಿದ್ದೇನೆ. ನಾನು ಮಾತನಾಡಬಾರದೆಂದು ಕುಳಿತಿದ್ದೆ. ಆದರೆ ಮಂತ್ರಿಗಳು ಬಹಳ ಆಸಕ್ತಿಯಿಂದ ಸದಸ್ಯರು ಹೇಳುವ ವಿಷಯಗಳನ್ನು ಗುರುತು ಹಾಕಿಕೊಳ್ಳುತ್ತಿದ್ದಾರೆ, ಆದಕಾರಣ ಧೈರ್ಯಮಾಡಿ ಮಾತನಾಡಲು ನಿಂತಿದ್ದೇನೆ. ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಹಿರೇಸಾವೆಯಿಂದ ನೊಣವಿನಕೆರೆಗೆ ರಸ್ತೆ ಹಾಕಬೇಕೆಂದು ಬಹಳ ವರ್ಷಗಳಿಂದ ಜನರು ಜಿಲ್ಲಾಬೋರ್ಡನ್ನು ಕೇಳಿಕೊಳ್ಳುತ್ತಿದ್ದರು. ಅದರ ಫಲವಾಗಿ ಜಿಲ್ಲಾಬೋರ್ಡಿನವರು ಆ ರಸ್ತೆಯ ಅವಶ್ಯಕತೆಯನ್ನು ಮನಗಂಡು ಸುಮಾರು ಹದಿನೈದು ವರ್ಷಗಳ ಕೆಳಗೆ ಮೂರು ಮೈಲಿ ಫಾಸಲೆ ರಸ್ತೆಮಾಡಿ, ಮುಂದೆ ಮಾಡಲು ಶಕ್ತಿಯಿಲ್ಲದೆ ಕಾರಣಾಂತರದಿಂದ ಕೈಬಿಟ್ಟರು. ಆಮೇಲೆ ಸರ್ಕಾರದಲ್ಲಿ ಅವರು ಮನವಿ ಮಾಡಿಕೊಂಡರು, ಅನೇಕಸಾರಿ ಖುದ್ದುಬಂದು ಸರ್ಕಾರದವರನ್ನು ಕಂಡರು. ನಾನು ಕೂಡ ಅನೇಕಸಾರಿ ಪ್ರಶ್ನೆಗಳನ್ನೂ ಹಾಕಿ ಕೇಳಿಕೊಂಡಿದ್ದೇನೆ. ಮುಖ್ಯಮಂತ್ರಿಗಳನ್ನೂ, ಹಿಂದೆ ಮಂತ್ರಿಗಳಾಗಿದ್ದ ಶ್ರೀ ದಾಸಪ್ಪನವರನ್ನೂ ಕಡಿದಾಳ್ ಮಂಜಪ್ಪನವರನ್ನೂ ಕಂಡಾಗ, ಇದನ್ನು ಶೀಘ್ರದಲ್ಲಿ ಮಾಡುವುದಕ್ಕೆ ಪ್ರಯತ್ನಮಾಡುತ್ತೇವೆಂದು ಹೇಳಿದರು.

ಅದರ ಪ್ರತಿಫಲವಾಗಿ ಈಗ್ಗೆ ಮೂರು ವರ್ಷಗಳ ಹಿಂದೆ ಟೋಕನ್ ಗ್ರ್ಯಾಂಟ್ ಆಗಿ 25 ಸಾವಿರ ರೂಪಾಯಿಗಳನ್ನು ಬಡ್ಜೆಟ್ಟಿನಲ್ಲಿ ಒದಗಿಸಿದ್ದರು. ಆದರೆ ಕೆಲವು ಕಾರಣಗಳಿಂದ, ಅಂದರೆ, ಮುಖ್ಯವಾಗಿ ಆ ರಸ್ತೆಯನ್ನು Central Government Road fund ನಿಂದ ತೆಗೆದುಕೊಳ್ಳಬೇಕೆಂದು ಯೋಚನೆಮಾಡಿ ಆ ಫಂಡಿನಿಂದ ಮಂಜೂರ್ಮಾಡಿದರು. ಒಂದು ವರ್ಷ ಕಳೆದ ಮೇಲೆ ಆ ಎಸ್ಟಿಮೇಟ್ ಪ್ರಕಾರ ಕೇವಲ 25 ಸಾವಿರ ರೂಪಾಯಿಗಳಿಗೆ ರಸ್ತೆಯನ್ನು ಮಾಡಿಸುವುದಕ್ಕಾಗುವುದಿಲ್ಲ, ಬೇರೆ revised estimateಮಾಡಿ ಕಳುಹಿಸಿ ಎಂದು ನಮ್ಮ ಜಿಲ್ಲೆಯ ಎಕ್ಸಿಕ್ಯೂಟಿವ್ ಇಂಜಿನಿಯರಿಗೆ ಕಳುಹಿಸಿದರು. ಅವರು ಅದಕ್ಕೆ re-estimateಮಾಡಿ ಸುಮಾರು ಒಂದು ಲಕ್ಷ ರೂಪಾಯಿ ಬೇಕಾಗುತ್ತದೆಂದು ಕಳುಹಿಸಿದರು. ಮೊದಲು 25 ಸಾವಿರ ರೂಪಾಯಿಗಳಿಗೆ ಮಂಜೂರಾಗಿದ್ದುದು ಈಗ ಒಂದು ಲಕ್ಷಕ್ಕೆ ಅಂದಾಜಾಗಿದೆ. ಇದನ್ನು ಕೇಂದ್ರ ಸರ್ಕಾರದವರು ಕೊಡಬೇಕೆಂದು ಯೋಚನೆಮಾಡಿ, Revised Estimate ಮಂಜೂರ್ಮಾಡಿ ಎಂದು ಕೇಂದ್ರ ಸರ್ಕಾರಕ್ಕೆ ಬರೆದರು. ಆದರೆ ಕೇಂದ್ರದವರು ಮೊದಲು 25 ಸಾವಿರ ರೂಪಾಯಿಗಳ ಅಂದಾಜು ಆಗಿದ್ದುದು ಈಗ ಒಂದು ಲಕ್ಷ ರೂಪಾಯಿಗಳಿಗೆ ಮಾಡಿ ಕಳುಹಿಸಿದ್ದೀರಿ. ಇದನ್ನು ಮಂಜೂರ್ಮಾಡುವುದಕ್ಕಾಗ ವುದಿಲ್ಲವೆಂದ•

(ಶ್ರೀ ಕೆ. ಲಕ್ಕಪ್ಪ.)

ಹೇಳಿದರು. ಆ ಕಾರಣದಿಂದ ಈ ರಸ್ತೆಯ ಕೆಲಸ ಅಲ್ಲಿಗೇ ನಿಂತುಬಿಟ್ಟಿತು. Central Government fundನಿಂದ ಮಾಡುವುದಕ್ಕೆ ಸಾಧ್ಯವಿಲ್ಲದೆ ಇದ್ದರೆ ನಮ್ಮ ಸರ್ಕಾರದ ಹಣದಿಂದಲೇ ಕಾರ್ಯಗತಮಾಡಬೇಕೆಂದು ಅನೇಕ ಸಂದರ್ಭಗಳಲ್ಲಿ ಒತ್ತಾಯಮಾಡಿದೆ. ಸರ್ಕಾರದವರು ಈ ಕೆಲಸವನ್ನು ತೆಗೆದುಕೊಳ್ಳಬೇಕೆಂಬ ಉದಾರ ಭಾವನೆಯಿಂದ ಇದ್ದರು. ಅಷ್ಟರಲ್ಲಿ road re-classification ಪ್ರಕಾರ ಅದನ್ನು ಜಿಲ್ಲಾ ಬೋರ್ಡು ರಸ್ತೆಯನ್ನಾಗಿ ಮಾಡಿದರು ಜಿಲ್ಲಾ ಬೋರ್ಡು ರಸ್ತೆಗಳನ್ನು ಜಿಲ್ಲಾಬೋರ್ಡಿನವರೇ ಮಾಡಬೇಕು, ಸರ್ಕಾರದವರು ಮಾಡುವುದಿಲ್ಲ ಎಂಬ ಒಂದು ನೀತಿಯಮೇಲೆ ಈ ರಸ್ತೆಯನ್ನು ಜಿಲ್ಲಾಬೋರ್ಡಿನವರು ಮಾಡಬೇಕು ಎಂದು ಅವರಿಗೆ ಬರೆದರು. ಈ ರಸ್ತೆಯಲ್ಲಿ ಕೆಲವು ಭಾಗ ತುಮಕೂರು ಜಿಲ್ಲಾಬೋರ್ಡಿಗೂ, ಕೆಲವುಭಾಗ ಹಾಸನ ಜಿಲ್ಲಾಬೋರ್ಡಿಗೂ ಸೇರುತ್ತದೆ. ತುಮಕೂರು ಜಿಲ್ಲಾಬೋರ್ಡಿನವರು ನಮ್ಮ ಭಾಗದಲ್ಲಿ ನಮ್ಮ ಎಲ್ಲೆಯವರೆಗೆ ಆಗತಕ್ಕ ರಸ್ತೆಯನ್ನು ಮಾಡಿದ್ದೇವೆ, ಉಳಿದಭಾಗದ ರಸ್ತೆಯು ಹಾಸನ ಜಿಲ್ಲಾ ಬೋರ್ಡಿನವರ ಎಲ್ಲೆಯೊಳಗೆ ಬರುವುದರಿಂದ ಹಾಸನ ಜಿಲ್ಲಾಬೋರ್ಡಿನವರು ಮಾಡಬೇಕೆಂದು ಬರೆದರು. ಅದಕ್ಕೆ ಹಾಸನ ಜಿಲ್ಲಾಬೋರ್ಡಿನವರು ಈ ರಸ್ತೆಯನ್ನು ಮಾಡಿಸುವ ಅವಶ್ಯಕತೆ ಇದೆ, ಆದರೆ ನಮ್ಮಲ್ಲಿ ಇದಕ್ಕೆ ಖರ್ಚುಮಾಡಲು ದುಡ್ಡಿಲ್ಲವಾದುದರಿಂದ ತೆಗೆದುಕೊಳ್ಳುವುದಕ್ಕಾಗುವುದಿಲ್ಲವೆಂದು ಬರೆದರು. ಹೀಗಾಗಿ ಆ ರಸ್ತೆಯು ಅಷ್ಟಕ್ಕೇ ನಿಂತಿದೆ. ಹಾಸನ ಬೌಂಡರಿಯೊಳಗೆ ಐದಾರು ಮೈಲಿಗಳ ರಸ್ತೆಯಾಗಬೇಕು. ಇದಕ್ಕೆ ಒಂದು ರಿವೈಸ್ಡ್ ಅಂದಾಜುಮಾಡಿ ಕಳುಹಿಸಿ ಎಂದು ಈಗ ಎಕ್ಸಿಕ್ಯೂಟಿವ್ ಇಂಜಿನಿಯರ್ ಆಫೀಸಿಗೆ ಕಳುಹಿಸಿದ್ದಾರೆ. ಅಲ್ಲಿ ಅವರು ಹೋಗಿ ಸರ್ವೆಮಾಡಿ, ಅಂದಾಜುತಯಾರ್ಮಾಡಿ, ಸೂಪರಿಂಟೆಂಡಿಂಗ್ ಇಂಜಿನಿಯರ್ ಅವರ ಆಫೀಸಿಗೆ ಕಳುಹಿಸಿ ಸುಮಾರು ಆರು ತಿಂಗಳಾಯಿತು. ಇನ್ನೂ ಅಲ್ಲೇ ಇದೆ. ನಾನು ಇಲ್ಲಿಗೆ ಈ ಅಧಿವೇಶನಕ್ಕೆ ಬಂದಮೇಲೆ ಚೀಫ್ ಇಂಜಿನಿಯರ್ ಅವರ ಆಫೀಸಿಗೆ ಎರಡು ಮೂರು ಸಲ ಹೋಗಿ ವಿಚಾರಿಸಿದ್ದರಮೇಲೆ ಜಾಗ್ರತೆಯಾಗಿ ಈ ಅಂದಾಜನ್ನು ತರಿಸಿಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಅದು ಇನ್ನೂ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ದಯವಿಟ್ಟು ಈ ರಸ್ತೆಯ ಅಂದಾಜನ್ನು ಈಗಲಾದರೂ ಕೂಡಲೇ ಮಂಜೂರ್ಮಾಡಿ, ರಸ್ತೆಯ ಕೆಲಸವನ್ನು ಕಾರ್ಯಗತ ಮಾಡಿಕೊಡಬೇಕೆಂದು ಹೇಳಿ ನನ್ನ ಭಾಷಣವನ್ನು ನಿಲ್ಲಿಸುತ್ತೇನೆ.

*ಶ್ರೀ ಬಿ. ವೈ. ನೀಲೇಗೌಡ (ಪಾಂಡವಪುರ).—ಸ್ವಾಮಿ, ನಾನು ಇಷ್ಟು ಸದಸ್ಯರ ಕಾಲವನ್ನು ಹೆಚ್ಚಾಗಿ ತೆಗೆದುಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. ಆದರೆ ಈ ಮಾನ್ಯ ಸಭೆಯಲ್ಲಿ ನಮ್ಮ ಜಿಲ್ಲೆಗೆ ಸಂಬಂಧಪಟ್ಟ ಒಂದು ರಸ್ತೆಯ ವಿಚಾರವಾಗಿ ನಮಗಿರತಕ್ಕ ತೊಂದರೆಯನ್ನು ತಿಳಿಸಿದರೆ, ಆ ಕೊರತೆಯನ್ನು ನಿವಾರಣೆ ಮಾಡುತ್ತಾರೆಂಬ ನಂಬಿಕೆ ಮತ್ತು ಆಶೆಯಿಂದ ಸರ್ಕಾರದವರಿಗೆ ಒಂದೆರಡು ವಿಷಯಗಳನ್ನು ತಿಳಿಸಬಯಸುತ್ತೇನೆ. ನಮ್ಮ ತಾಲ್ಲೂಕಿನಿಂದ ಕೃಷ್ಣರಾಜಪೇಟೆಗೆ ಒಂದುರಸ್ತೆ, L.C.K. Road ಎಂದಿದೆ. ಇದನ್ನು ಮುಳುಗಡೆಯಾದ ರೈತರ ಅನುಕೂಲಕ್ಕಾಗಿ 1935ನೆ ಇಸವಿಯಲ್ಲಿ ಮಾಡಿದರು. ಈ L.C.K. ರಸ್ತೆಯನ್ನು ಮಾಡಿದಮೇಲೆ ಅದು ಪಬ್ಲಿಕ್ ವರ್ಕ್ಸ್ ಇಲಾಖೆಗೆ ಸೇರಿದ್ದೇ ಅಥವ ಜಿಲ್ಲಾಬೋರ್ಡಿಗೆ ಸೇರಿದ್ದೇ ಎಂಬ ವಾದದಲ್ಲಿಯೇ 1951-52ನೆಯ ಇಸವಿಯವರೆಗೂ ಕೂಡ ಯಾವ ವಿಧವಾದ ರಿಪೇರಿಯನ್ನೂ ಮಾಡಿಸಲಿಲ್ಲ. ಆಮೇಲೆ 1952ನೆಯ ಇಸವಿಯ ಕೊನೆಯಲ್ಲಿ ಇದನ್ನು ಮೂರನೆ ತರಗತಿಯ State Fund Road ಎಂದು ವಿಂಗಡಿಸಿದರು. ಇದಕ್ಕೆ ಮೈಲಿಗೆ ಸುಮಾರು 200 ರೂಪಾಯಿ ರಿಪೇರಿಗೆ ಕೊಡುತ್ತಾರೆ. ಇದಕ್ಕೆ ಬಹಳ ವರ್ಷಗಳಿಂದಲೂ ರಿಪೇರಿಯಾಗದೆ ಇರುವುದರಿಂದ ರಸ್ತೆ ಬಹಳ ಕೆಟ್ಟುಹೋಗಿ ಅದು ರಸ್ತೆಯೂ ಅಲ್ಲ, ಕಾಡೂ ಅಲ್ಲ ಎನ್ನುವ ಪರಿಸ್ಥಿತಿಗೆ ಬಂದಿದೆ. ಇದನ್ನು ಆಗಿನಿಂದಲೂ ಯಾರಿಗೆ ಹೇಳಿಕೊಂಡರೂ ಕೂಡ ಅವರ ಗಮನ ಈ ರಸ್ತೆಯ ಕಡೆ ಹೋಗಿಲ್ಲ.

ಈ ರಸ್ತೆಗೆ ಅಡ್ಡಲಾಗಿ ಒಂದು ದೊಡ್ಡ ಹಳ್ಳವಿದೆ. ಈ ಮಾರ್ಗದಲ್ಲಿ ಒಂದು ಬಸ್ಸು ಓಡಾಡುತ್ತದೆ. ಬಸ್ಸು ಈ ಹಳ್ಳವಿರುವ ಸ್ಥಳಕ್ಕೆ ಸುಮಾರು ರಾತ್ರಿ ಒಂಭತ್ತು ಘಂಟೆಗೆ ಬರುತ್ತದೆ. ಕೆಲವುವೇಳೆ ಬಸ್ಸು ಅಲ್ಲಿಯೇ ನಿಂತು ಹೆಂಗಸರು ಮಕ್ಕಳಾದಿಯಾಗಿ ಬಸ್ಸಿನಲ್ಲಿ ಪ್ರಯಾಣ ಮಾಡುವವರು ರಾತ್ರಿಯೆಲ್ಲ ಅಲ್ಲಿಯೇ ಇರಬೇಕಾದ ಸನ್ನಿವೇಶ ಬಂದಿದೆ. ನಾನು ಎಷ್ಟೋಸಲ ಇದರ ಬಗ್ಗೆ ಸರ್ಕಾರಕ್ಕೆ ತಿಳಿಸಿದ್ದೇನೆ ಮತ್ತು ಸ್ಥಳದ ಅಧಿಕಾರಿಗಳಿಗೂ ತಿಳಿಸಿದ್ದೇನೆ. ಆದರೂ ಕೂಡ ಯಾವಕಾರಣದಿಂದಲೋ ಇದರಕಡೆ ಹೆಚ್ಚು ಗಮನ ಕೊಟ್ಟಿಲ್ಲ. ಈಗಲಾದರೂ ಸರ್ಕಾರದವರು ಈ ಹಳ್ಳಕ್ಕೆ ಒಂದು ಸೇತುವೆಯನ್ನು ಮಾಡಿಸಿಕೊಡಬೇಕೆಂದು ಹೇಳುತ್ತೇನೆ.

*ಶ್ರೀ ಬಿ. ವಿ. ನಾರಾಯಣರೆಡ್ಡಿ (ಬಾಗೇಪಲ್ಲಿ—ಗುಡಿಬಂಡ).—ಸ್ವಾಮಿ, ನಾನು ಇಲ್ಲಿಗೆ ಬಂದಾಗಿನಿಂದಲೂ ಬಾಗೇಪಲ್ಲಿ ತಾಲ್ಲೂಕಿನಲ್ಲಿ ಚಿತ್ರಾವತಿನದಿಗೆ ಒಂದು ಸೇತುವೆಯನ್ನು ಕಟ್ಟಬೇಕೆಂದು ಹೇಳುತ್ತಿದ್ದರೂ ಇದುವರೆಗೂ ಯಾರೂ ಅಲ್ಲಿ ಒಂದು ಸೇತುವೆಯನ್ನು ಕಟ್ಟಿಸಿ ಕೊಡಲಿಲ್ಲ. ಇದನ್ನೆಲ್ಲ ನೋಡಿದರೆ ಸರ್ಕಾರದಲ್ಲಿ ಮಂತ್ರಿಗಳೂ, ಮತ್ತು ಇಲಾಖೆಗಳೂ ಇವೆಯೋ ಇಲ್ಲವೋ ಗೊತ್ತಿಲ್ಲ. ಜನರಿಗೆ ಉಪಯೋಗವಾಗತಕ್ಕ ಇಷ್ಟು ಸಣ್ಣಕೆಲಸವನ್ನು ಮಾಡಿಸದೆ ಇದ್ದಮೇಲೆ ಮಂತ್ರಿಗಳು ಈ ಸಭೆಯಲ್ಲಿ ಯಾತಕ್ಕೆ ಕುಳಿತುಕೊಳ್ಳುತ್ತಾರೆಯೋ ಗೊತ್ತಿಲ್ಲ. ಮಂತ್ರಿಗಳು promise ಮಾಡುತ್ತಾರೆ, ಆಮೇಲೆ ಅವರೇ ಅದನ್ನು break ಮಾಡುತ್ತಾರೆ. ಇವರೆಲ್ಲ ಯಾಕೆ ಈ ರೀತಿ ಮಾಡುತ್ತಾರೆ ಎನ್ನುವುದು ಕೂಡ ಗೊತ್ತಿಲ್ಲ. ನಮ್ಮ ಬಾಗೇಪಲ್ಲಿ ತಾಲ್ಲೂಕು ಒಂದು peculiar taluk. ಭಾಷಾ ದೃಷ್ಟಿಯಿಂದ ನೋಡಿದರೆ ನಮ್ಮ ದೃಷ್ಟಿಗೆ ಅದು peculiar ಆಗಿ ಕಾಣುತ್ತದೆ. ನೀವು ಕನ್ನಡ ಮಾತನಾಡುತ್ತೀರಿ, ನಾವು ತೆಲುಗು ಮಾತನಾಡುತ್ತೇವೆ. ಆ ತಾಲ್ಲೂಕಿನ 77 ಸಾವಿರ ಪ್ರಜಾಸಂಖ್ಯೆಯಲ್ಲಿ ಸುಮಾರು 200 ಜನ ಕನ್ನಡ ಭಾಷೆಯನ್ನಾಡಬಹುದು, ಅಷ್ಟೇ. ಇನ್ನೊಂದು ವಿಚಾರವೆಂದರೆ ಯಾವ ವಿಷಯದಲ್ಲಿ ನೋಡಿದರೂ ಸಹ ನಮಗೆ ಬೇಕಾದ ಸೌಲಭ್ಯಗಳನ್ನು ಒದಗಿಸುತ್ತಿಲ್ಲ. ವಿದ್ಯುಚ್ಛಕ್ತಿ ಮೊದಲೇ ಇಲ್ಲ, ರಸ್ತೆಗಳು ಅಷ್ಟಕ್ಕೂ ಇಲ್ಲ. ರೆವೆನ್ಯೂ ಇಲಾಖೆಯವರು ಮಾತ್ರ ಕಂದಾಯವನ್ನು ವಸೂಲ್ಮಾಡುತ್ತಾರೆ. ನಮಗೆ ಯಾವ ಸೌಕರ್ಯಗಳನ್ನೂ ಒದಗಿಸದೆ ಇರುವ ಕಾರಣ No tax campaign ಯಾಕೆ ಪ್ರಾರಂಭ ಮಾಡಬಾರದು ಎಂದು ಯೋಚನೆಮಾಡುತ್ತಿದ್ದೇನೆ. ನಮ್ಮ ಹತ್ತಿರ ಕಂದಾಯದ ರೂಪದಲ್ಲಿ ಹಣವನ್ನು ವಸೂಲ್ಮಾಡಿ ನಮಗೆ ಆಗಬೇಕಾಗಿರುವ ಯಾವ ಕೆಲಸಗಳನ್ನೂ ಮಾಡಿಕೊಡದೆ ಇರುವುದನ್ನು ನೋಡಿದರೆ ಇವರು ಯಾಕೆ ಈ ರೀತಿ ಮಾಡುತ್ತಾರೆನ್ನಿಸುತ್ತದೆ.

ಬಾಗೇಪಲ್ಲಿಗೆ ಬರಬೇಕಾದರೆ ಚಿಕ್ಕಬಳ್ಳಾಪುರದಿಂದ ಬಂದರೆ ಚಿತ್ರಾವತಿನದಿ ಸಿಕ್ಕುತ್ತದೆ. ಚಿಂತಾಮಣಿ

ಕಡೆಯಿಂದ ಬಂದರೆ ಪಾಪಘ್ನಿನದಿ ಸಿಕ್ಕುತ್ತದೆ. ಈ ಎರಡು ನದಿಗಳಿಗೂ ಸೇತುವೆಗಳಿಲ್ಲ. ಮಳೆಗಾಲದಲ್ಲಿಂತೂ ಈ ನದಿಗಳನ್ನು ದಾಟುವುದಕ್ಕೆ ಬಹಳ ಕಷ್ಟವಾಗುತ್ತದೆ. ಮಾನ್ಯಮಂತ್ರಿಗಳು ಒಂದು high level causeway ಕಟ್ಟಲು 75 ಸಾವಿರ ರೂಪಾಯಿಗಳು ಮಂಜೂರಾಗಿದೆ ಎಂದು ಹೇಳಿದರು. ಆದರೆ ಕಾರ್ಯ ಮಾತ್ರ ಆಗಿಲ್ಲ.

ತಿರುಮಣಿ ಅಣೆಕಟ್ಟನ್ನು ಕಟ್ಟಲು ಮೊದಲನೆಯ ಪಾಂಚವಾರ್ಷಿಕ ಯೋಜನೆಯಲ್ಲಿ 3½ ಲಕ್ಷಕ್ಕೆ ಅಂದಾಜುಮಾಡಿದ್ದೇವೆಂದು ಮಾನ್ಯ ಕಡಿದಾಳ್‌ಮಂಜಪ್ಪನವರು ಹೇಳಿದ್ದರು. ಈ ಸಂಬಂಧದ ಮಾತುಕತೆಗಳಿಗೆ ನನ್ನನ್ನು ಆಂಧ್ರ ಸರ್ಕಾರದವರ ಬಳಿಗೆ ಕಳುಹಿಸುವುದಾಗಿ ಹೇಳಿದ್ದರು. ಈಗ ನೋಡಿದರೆ ಅದು ಮೊದಲನೆಯ ಪಾಂಚವಾರ್ಷಿಕ ಯೋಜನೆಯಲ್ಲಿಯೂ ಇಲ್ಲ. ಎರಡನೆಯ ಯೋಜನೆಯಲ್ಲೂ ಇಲ್ಲ. ಹೀಗೆ ಬಾಯಲ್ಲಿ ಒಂದು ಹೇಳುತ್ತಾರೆ, ಕಾರ್ಯದಲ್ಲಿ ಒಂದು ಮಾಡುತ್ತಾರೆ. ನಾನು ಖಂಡಿತವಾಗಿ ಹೇಳಬೇಕಾದರೆ ಈಗಿನ ಸರ್ಕಾರದ ಕೈಯಲ್ಲಿ ಏನೂ ಆಗುವುದಿಲ್ಲ. ಇಂಥ ಸರ್ಕಾರವನ್ನು ಉರುಳಿಸಬೇಕು. ಇವರಿಗೆ ಯೋಗ್ಯತೆ ಇದ್ದರೆ ಯಾವುದಾದರೂ ಕೆಲಸ ಮಾಡುತ್ತೇವೆಂದು ಬಾಯಲ್ಲಿ ಹೇಳಿದರೆ ಅದನ್ನು ಮಾಡಬೇಕು. ಹೇಳುವುದೇ ಒಂದು, ಮಾಡುವುದೇ ಒಂದು.

ಒಂದು ಭಾಗದಲ್ಲಿ 375 ಪಂಪ್‌ಸೆಟ್ಟುಗಳನ್ನು ಕೊಡುವುದು ಮತ್ತೊಂದು ಭಾಗದಲ್ಲಿ 12 ಕೂಡ ಕೊಡದೆ ಇರುವುದು ನ್ಯಾಯವಲ್ಲ. ಇವರು ಕಾಂಗ್ರೆಸ್ ಸಂಸ್ಥೆಗೆ ಸೇರಿದವರಂತೆ. ಇಂಥವರ ಬಾಯಲ್ಲಿ ಬರುವುದೇ ಬೇರೆ, ಕೈಯಲ್ಲಿ ಮಾಡುವುದೇ ಬೇರೆ. 21 ಜನರು ನಮ್ಮ ಕಡೆ ಇದ್ದಿದ್ದರೆ ಈ ಸರ್ಕಾರವನ್ನು ಉರುಳಿಸಿ ಮನೆಗೆ ಕಳುಹಿಸುತ್ತಿದ್ದೆ. ಮುಖ್ಯಮಂತ್ರಿಗಳು ವಿರೋಧಪಕ್ಷದ ನಾಯಕರನ್ನು ತಮ್ಮ ಸಂಗಡ ಪ್ರವಾಸಗಳಿಗೆ ಕರೆದುಕೊಂಡು ಹೋಗಿ ಅವರನ್ನು ತಮ್ಮ ಕಡೆಗೆ ಒಲಿಸಿಕೊಳ್ಳುತ್ತಿದ್ದಾರೆ. ಇವರು ಓಟು ಪಡೆಯಲು ಕಾಂಗ್ರೆಸ್ ಸಂಸ್ಥೆಯ ಹೆಸರನ್ನು ಹೇಳಿಕೊಂಡು, ದೊಡ್ಡದೊಡ್ಡ ನಾಯಕರುಗಳಿಂದ ಹೇಳಿಕೆಗಳನ್ನು ಕೊಡಿಸಿ, ತಮ್ಮ ಕೆಲಸವನ್ನು ಮಾಡಿಕೊಳ್ಳುತ್ತಿದ್ದಾರೆ.

ವಿಧಾನಸೌಧಕ್ಕೆ ಆರು ಲಕ್ಷ ರೂಪಾಯಿ ಹಾಳಾಯಿತು. ಶ್ರೀ ನಂಜಪ್ಪನವರು 5-6 ಸಾವಿರ ರೂಪಾಯಿ ನುಂಗಿದರೆಂದು ಜನ ಹೇಳುತ್ತಾರೆ. ಈ ರೀತಿ ಬಡಬೋರೇಗೌಡನ ಹೆಸರು ಹೇಳಿಕೊಂಡು ಓಟು ತೆಗೆದುಕೊಂಡು ಬಂದು ಇಲ್ಲಿ ಕುಳಿತುಕೊಂಡು ದರ್ಬಾರು ಮಾಡುತ್ತಿದ್ದಾರೆ. ಬೋರೇಗೌಡನಿಗೆ ಇದರಿಂದ ಮೂರು ಕಾಸಿನ ಪ್ರಯೋಜನ ಕೂಡ ಇಲ್ಲ. ಮೆಟರ್ನಿಟಿವಾರ್ಡು ಕೊಡುತ್ತೇವೆಂದು ಹೇಳಿ ಒಂದೂ ಕೊಟ್ಟಿಲ್ಲ. ಕೇಳಿದರೆ ಪಬ್ಲಿಕ್‌ವರ್ಕ್ಸ್ ಇಲಾಖೆ ಕೇಳಿ ಎಂದು ಹೇಳುತ್ತಾರೆ. ಅವರನ್ನು ಕೇಳಿದರೆ ಬಿಲ್ಡಾಗಿಲ್ಲವೆಂದು ಹೇಳುತ್ತಾರೆ. ಈ ಇಲಾಖೆ ಯಾರ ಕೈಲಿದೆ? ಮಂತ್ರಿಗಳ ಕೈಲಿರುವಾಗ ಅವರು ನೋಡಬೇಡವೆ?

Sri T. N. MUDALAGIRI GOWDA (Kunigal).—On a point of order, Sir. The member is not speaking on the relevant Demand. He should be asked to confine himself to the Demand under consideration.

Sri B. V. NARAYANA REDDY.—Yes. This work was promised to be taken up on several occasions but nothing has been done yet. What is wrong with the Minister? Government is well aware that in rainy season, it would not be possible even to get the post to Bagepalli; swimmers have to cross the stream and get the post. Therefore, a High Level Causeway, as promised several times, may be constructed early and thereby let the Government fulfil their promise.

Mr. SPEAKER.—The House will now adjourn for lunch and meet at 3-30.

The House adjourned for Lunch at Three of the Clock and reassembled at Thirty Minutes past Three of the Clock.

[MR. DEPUTY SPEAKER in the Chair].

*ಶ್ರೀ ಎಚ್. ಎಂ. ಚನ್ನಬಸಪ್ಪ (ಕೈಗಾರಿಕಾ ಶಾಖೆಯ ಮಂತ್ರಿಗಳು).—ಸ್ವಾಮಿ, 50 ಸಿವಿಲ್ ವರ್ಕ್ಸ್ ಮತ್ತು 81 ಕ್ಯಾಪಿಟಲ್ ಅಕೌಂಟ್ ಆಫ್ ಸಿವಿಲ್ ವರ್ಕ್ಸ್ ಇವೆರಡರ ಬಗ್ಗೆ ಸುಮಾರು 7,27,58,981 ರೂಪಾಯಿಗಳ ಡಿಮ್ಯಾಂಡನ್ನು ಸಭೆಯ ಮುಂದೆ ಇಟ್ಟಮೇಲೆ ಮಾನ್ಯ ಸದಸ್ಯರು ಅದರ ಸಂಬಂಧವಾಗಿ ಮಾತನಾಡುತ್ತಾ ಅನೇಕ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಪಬ್ಲಿಕ್ ವರ್ಕ್ಸ್ ಇಲಾಖೆ ಬಹಳ ಮುಖ್ಯವಾದ ಇಲಾಖೆ. ಈ ಪಬ್ಲಿಕ್‌ವರ್ಕ್ಸ್ ಇಲಾಖೆಯಲ್ಲಿ ಸುಮಾರು 1951ನೆಯ ಇಸವಿಯಿಂದ ನಡೆದಿರತಕ್ಕ ಕೆಲಸಕಾರ್ಯವನ್ನು ತಾವು ಸ್ವಲ್ಪ ಪರಿಶೀಲಿಸಿದರೆ ಎಷ್ಟು ಪ್ರಮಾಣದಲ್ಲಿ ಕೆಲಸಕಾರ್ಯಗಳು ಹೆಚ್ಚಾಗಿವೆಯೆಂಬುದು ಗೊತ್ತಾಗುತ್ತದೆ. ಪಬ್ಲಿಕ್‌ವರ್ಕ್ಸ್ ಇಲಾಖೆಯಲ್ಲಿ ಏನೇನು ಕೆಲಸ ಕಾರ್ಯಗಳು ಸುಮಾರು ನಾಲ್ಕೈದು ವರ್ಷಗಳಿಂದ ನಡೆಯುತ್ತಿವೆಯೆಂಬ ಬಗ್ಗೆ ತಮಗೆ ಒಂದು ವರದಿ ಕೊಟ್ಟಿದೆ. ಆ ವರದಿಯಲ್ಲಿರುವ ಅಂಕಿ ಅಂಶಗಳನ್ನು ತಾವು ನೋಡಿದರೆ ಈಗ ಸುಮಾರು ಐದಾರು ವರ್ಷಗಳಿಂದ ಬಹಳ ಹೆಚ್ಚಿನ ಪ್ರಮಾಣದಲ್ಲಿ ಈ ಇಲಾಖೆಯ ಕೆಲಸ ಬೆಳೆದಿದ್ದೆಯೆಂಬುದು ಗೊತ್ತಾಗುತ್ತದೆ. 1951-52ನೆಯ ಸಾಲಿನಲ್ಲಿ, 4,42,50.062 ರೂಪಾಯಿಗಳು, 1952-53 ರಲ್ಲಿ ನಾಲ್ಕೂವರೆ ಕೋಟಿ ರೂಪಾಯಿಗಳು, 1953-54 ರಲ್ಲಿ 5 ಕೋಟಿ 29 ಲಕ್ಷ ರೂಪಾಯಿಗಳು, 1954-55 ರಲ್ಲಿ ಎಂಟು ಕೋಟಿ ಹದಿನಾಲ್ಕು ಲಕ್ಷ ರೂಪಾಯಿಗಳೂ, 1955-56 ರಲ್ಲಿ 12 ಕೋಟಿ 50 ಲಕ್ಷ ರೂಪಾಯಿಗಳು ಈ ರೀತಿ ಪಬ್ಲಿಕ್‌ವರ್ಕ್ಸ್ ಇಲಾಖೆಯಲ್ಲಿ ಕೆಲಸವಾಯಿತು. ಈಗ ಐದು ವರ್ಷಗಳಲ್ಲಿ ಸುಮಾರು ಮೂರರಷ್ಟು ಕೆಲಸ ಹೆಚ್ಚಿದೆ. ಕೇವಲ 4 ಕೋಟಿ 42 ಲಕ್ಷ ರೂಪಾಯಿಗಳ ಕೆಲಸವಿದ್ದುದು 12½ ಕೋಟಿ ರೂಪಾಯಿಗಳಿಗೇರಿ ಕೋಟಿಗಟ್ಟಲೆ ಈ ಇಲಾಖೆಯ ಕೆಲಸ ಕಾರ್ಯ ಹೆಚ್ಚಾಗುತ್ತದೆ.

ಆದರೆ ತಾವುಗಳೆಲ್ಲರೂ ಒಂದು ಅಂಶವನ್ನು ನೋಡುವುದಾದರೆ ಈ ಕೆಲಸಗಳ ಒತ್ತಡದ ಪ್ರಮಾಣ

(ಶ್ರೀ ಎಚ್. ಎಂ. ಚನ್ನಬಸಪ್ಪ.)

ವೆಷ್ಟು ಹೆಚ್ಚಾಗಿದೆ ಎನ್ನುವುದು ತಮಗೆಲ್ಲಾ ಗೊತ್ತಾಗುತ್ತದೆ. ಈ ಮೈನರ್ ಟ್ಯಾಂಕುಗಳ ರೆಸ್ಟೋರೇಷನ್ ಬಗ್ಗೆ ಸರ್ಕಾರ 1951-52ರಲ್ಲಿ ಖರ್ಚು ಮಾಡಿದತಕ್ಕ ಮೊಬಲಗು 12,38,023 ರೂಪಾಯಿ; ಆದರೆ 1955-56ರಲ್ಲಿ 21,45,000 ರೂಪಾಯಿ ಗ್ರಾಂಟನ್ನು ಒದಗಿಸಲಾಗಿದೆ. ಇಷ್ಟು ಮೊಬಲಗು ಖರ್ಚಾಗಿದೆ. ನಾನು ಈಗಾಗಲೆ ಹಿಂದೆ ಹೇಳಿದ್ದುದಕ್ಕೆ 25 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ.

Mr. DEPUTY SPEAKER.—That is correct.

Sri H. M. CHANNABASAPPA.—I am submitting that the work that is being discharged by this department on all accounts has increased very much. ಹೀಗೆ ಕೆರೆಗಳ ಜೀರ್ಣೋದ್ಧಾರದ ಬಗ್ಗೆ ಹಣ ಖರ್ಚಾಗಿದೆ. ಇನ್ನು ಕಟ್ಟಡಗಳ ಬಗ್ಗೆ ಖರ್ಚಾಗಿರತಕ್ಕ ಮೊಬಲಗು ಎಷ್ಟಾಗಿರುತ್ತದೆ ಎಂಬುದನ್ನು ತಿಳಿಸುತ್ತೇನೆ. 1951-52ರಲ್ಲಿ 34·26 ಲಕ್ಷ ರೂಪಾಯಿಗಳು ಖರ್ಚಾಗಿವೆ. 1952-53 ರಲ್ಲಿ 38·58 ಲಕ್ಷ ರೂಪಾಯಿಗಳು ಖರ್ಚಾಗಿವೆ. 1953-54 ರಲ್ಲಿ 54·70 ಲಕ್ಷ ರೂಪಾಯಿಗಳೂ, 1954-55 ರಲ್ಲಿ 84·71 ಲಕ್ಷ ರೂಪಾಯಿಗಳೂ, 1955-56 ರಲ್ಲಿ 129·41 ಲಕ್ಷ ರೂಪಾಯಿಗಳೂ ಖರ್ಚಾಗಿದೆ. ಇಷ್ಟು ಮೊಬಲಗಿನ ಕಟ್ಟಡದ ಕೆಲಸಗಳು ನಡೆಯುತ್ತಿವೆ. ಈ ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಈ ದಿವಸ ಇಷ್ಟು ಕೆಲಸ ಕಾರ್ಯಗಳು ಎಂದರೆ ಕೆರೆ-ಕಟ್ಟಡಗಳ ವಿಚಾರದಲ್ಲಿ ನಡೆಯುತ್ತಿವೆ ಎಂಬ ಅಂಕಿ ಅಂಶಗಳನ್ನು ನಾನು ಈಗ ತಮ್ಮ ಮುಂದಿಟ್ಟಿರತಕ್ಕ ಉದ್ದೇಶ ಏನೆಂದರೆ, ಈ ಇಲಾಖೆಯಲ್ಲಿ ಎಷ್ಟರಮಟ್ಟಿಗೆ ಕೆಲಸದ ಒತ್ತಡ ಹೆಚ್ಚಾಗಿದೆ ಎಂಬುದನ್ನು ತಮಗೆಲ್ಲರಿಗೂ ತಿಳಿಸಬೇಕೆಂಬ ಉದ್ದೇಶದಿಂದ ನಾನೀಗ ಈ ಅಂಕಿ ಅಂಶಗಳನ್ನೆಲ್ಲಾ ತಮ್ಮ ಮುಂದೆ ಇಟ್ಟಿದ್ದೇನೆ. ಹೀಗೆ ಕೋಟ್ಯಂತರ ರೂಪಾಯಿಗಳ ಕೆಲಸ ಕಾರ್ಯಗಳು ನಡೆಯುತ್ತಿರುವ ಕಡೆ ಎಷ್ಟೋ ಅಲ್ಲಿ-ಇಲ್ಲಿ ಕೆಲವು ಲೋಪದೋಷಗಳುಂಟಾಗುತ್ತವೆ. ಆದರೆ ಎಲ್ಲಾ ಕಡೆಗಳಲ್ಲಿಯೂ ಈ ಕಾರ್ಯಗಳು ಎಲ್ಲಾ ಜನರೂ ಒಪ್ಪತಕ್ಕ ರೀತಿಯಲ್ಲಿ ಅಷ್ಟು ಸಮರ್ಪಕವಾಗಿ ನಡೆಯುತ್ತಿವೆಯೆಂದು ಹೇಳುವುದಕ್ಕಾಗುವುದಿಲ್ಲ. ಆದರೆ ಈ ಕೆಲಸ ಕಾರ್ಯಗಳೆಲ್ಲಾ ಎಷ್ಟರಮಟ್ಟಿಗೆ ಆ ಒಂದು ದೇಶಭಕ್ತಿ, ರಾಷ್ಟ್ರಪ್ರೇಮಗಳಿಂದ ನಡೆಸಬೇಕೆಂಬ ಕಾತರತೆ ಮತ್ತು ಕುತೂಹಲಗಳು ತಮಗೆಲ್ಲರಿಗೂ ಇರುತ್ತವೆಯೋ ಅಷ್ಟೇ ಕಾತರತೆ—ಕುತೂಹಲಗಳು ಸರ್ಕಾರದವರಿಗೂ ಇರುತ್ತವೆಂದು ಹೇಳಿದರೆ ಇದನ್ನು ತಾವೆಲ್ಲರೂ ಒಪ್ಪಲೇಬೇಕು. ಈ ಪಬ್ಲಿಕ್ ವರ್ಕ್ಸ್ ಇಲಾಖೆಯೆನ್ನುವುದಾದರೋ ಹಣಕಾಸನ್ನು ಖರ್ಚು ಮಾಡತಕ್ಕಂಥ ಇಲಾಖೆ. ಈ ಇಲಾಖೆ ವರ್ಷಂಪ್ರತಿ 12 ಕೋಟಿ ರೂಪಾಯಿಗಳಿಗೂ ಮೀರಿ ಖರ್ಚುಮಾಡುತ್ತಿದೆ. ಆದುದರಿಂದ ಲೆಕ್ಕಾಚಾರಗಳ ವಿಲೇವಾರಿ ಮತ್ತು ಕೆಲಸಗಳನ್ನು ಎಷ್ಟು ವಿತರಣೆಯಿಂದ ನಡೆಸಿಕೊಂಡು ಹೋಗಬೇಕು ಎಂಬೀ ವಿಚಾರಗಳಲ್ಲಿ ಈ ಇಲಾಖೆಗೆ ಬಹಳಮಟ್ಟಿನ ಜವಾಬ್ದಾರಿಯಿರಬೇಕು. ಈ ಇಲಾಖೆಯಲ್ಲೂ ವಿತರಣೆಯಿಂದ, ದಕ್ಷತೆಯಿಂದ, ಧರ್ಮ ದೃಷ್ಟಿಯಿಂದ ಕೆಲಸ ಮಾಡತಕ್ಕಂಥ ಜನರು ಎಷ್ಟಿದ್ದಾರೆ, ದೇಶದಲ್ಲಿ ವಾತಾವರಣ ಯಾವ ರೀತಿಯಿದೆ, ಎಲ್ಲೆಲ್ಲಿ ಏನೇನು ಬಂದೋಬಸ್ತಾಗಬೇಕು, ಯಾವ ಯಾವ ಕೆಲಸಗಳನ್ನು ಎಷ್ಟೆಷ್ಟು ಪರಿಶೀಲನೆ ಮಾಡಿ ಕೈಗೊಳ್ಳಬೇಕು, ಎಂಬುದನ್ನು ಗಮನಿಸಿ ಕೆಲಸ ಕಾರ್ಯಗಳನ್ನು ಮಾಡಬೇಕಾಗಿದೆ. ಸಾರ್ವಜನಿಕರ ಹಣ ದುರ್ವ್ಯಯ, ದುರ್ವಿನಿಯೋಗ ಆಗದೆ ಇರುವಂತೆ ಎಲ್ಲಾ ಅಂಶಗಳನ್ನು ಒಂದು ವಿಚಕ್ಷಣೆಯಿಂದ ನೋಡಿಕೊಂಡು ಈ ಕೆಲಸಕಾರ್ಯಗಳನ್ನು ನಡೆಸತಕ್ಕ ವಿಚಾರದಲ್ಲಿ ಕೇವಲ ಸರ್ಕಾರದ ಪ್ರಯತ್ನ ಒಂದೇ ಏನೂ ಮಾಡಲಾರದು. ಈ ವಿಚಾರದಲ್ಲಿ ಸಾರ್ವಜನಿಕರ ನೆರವು ಬಹಳ ಅಗತ್ಯವಾಗಿದೆ. ಆದರೆ ಈ ಇಲಾಖೆಯ ಆಡಳಿತದ ಬಗ್ಗೆ ಶ್ರೀಮಾನ್ ಗೋಪಾಲಗೌಡರು ಕೆಲವು ಟೀಕೆ-ಟಿಪ್ಪಣಿಗಳನ್ನು ಮಾಡಿದರು. ಮತ್ತೆ ಕೆಲವು ಸಲಹೆಗಳನ್ನೂ ಮಾಡಿದ್ದಾರೆ. ಶ್ರೀ ಮ್ಯಾಸ್ಕರನ್‌ಹ್ಯಾಸ್‌ರವರೂ ಇದೇ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಶ್ರೀ ಗೋಪಾಲಗೌಡರು ಕೆಲವು ನ್ಯೂನತೆಗಳನ್ನೇನೋ ಹೇಳಿದರು. ಆದರೆ ಅಷ್ಟು ಹೇಳಿದರೆ ಏನೂ ಸಾಲದು. ಹಾಗೆ ಸುಮ್ಮನೆ ಟೀಕೆ ಮಾಡತಕ್ಕದ್ದು ಅಷ್ಟೇನೂ ಪ್ರಾಮುಖ್ಯವಾದದ್ದಲ್ಲ. ಆ ರೀತಿ ಅಧಿಕಾರಿಗಳನ್ನು ಅಡ್ಡದಾರಿಗೆಳೆಯತಕ್ಕ ಮಾರ್ಗಕ್ಕೆ ಸಾರ್ವಜನಿಕರು ಪ್ರವೇಶಿಸಬಾರದು. ಆದರೆ ಹೀಗೆ ಕೆಲವು ಸಾರ್ವಜನಿಕರೂ ಮತ್ತು ಇತರರೂ ಪ್ರವೇಶಿಸುತ್ತಿದ್ದಾರೆಂದು ಹೇಳಿದ್ದಾರೆ. ಆದರೆ ಹೀಗೆ ಸಾರ್ವಜನಿಕರು ವರ್ತಿಸಿದಲ್ಲಿ ಅದು ಸರ್ಕಾರಿ ಅಧಿಕಾರಿವರ್ಗದವರ ತಪ್ಪಲ್ಲ. ಹಾಗೊಂದುವೇಳೆ ಉದ್ದೇಶಪೂರ್ವಕವಾಗಿ ಅಧಿಕಾರಿಗಳು ತಮ್ಮ ಆಡಳಿತದಲ್ಲಿ ರೂಲ್ಸಿಗೆ ವಿರುದ್ಧವಾಗಿ ವರ್ತಿಸುತ್ತಿದ್ದಾರೆ ಮತ್ತು ಅವರಲ್ಲಿ ಅಂಥ ಒಂದು ದಕ್ಷತೆ ಆ ಕಾರ್ಯ ನಡೆಸಲು ಇಲ್ಲವೆಂಬುದಾಗಿ ತಿಳಿದುಬಂದ ಪಕ್ಷದಲ್ಲಿ, ಅವರು ಆ ರೀತಿ ಅಡ್ಡದಾರಿಯಲ್ಲಿ ಪ್ರವೇಶಮಾಡದಿರುವಂತೆ ಒಂದು ಬಿಗಿಯಾದ ವಾತಾವರಣವನ್ನು ಕಲ್ಪಿಸಿ, ಆ ಕೆಲಸಕಾರ್ಯಗಳು ನಿಷ್ಕಳಂಕವಾದ ರೀತಿಯಲ್ಲಿ ನಡೆಯುವಂತೆ ಅವಕಾಶ ಕಲ್ಪಿಸತಕ್ಕದ್ದು ನಮ್ಮ ಮತ್ತು ಮುಖಂಡರುಗಳಾದಂಥ ತಮ್ಮೆಲ್ಲರ ಕರ್ತವ್ಯವಾಗಿದೆ. ಹೀಗೆ ಈ ಲಂಚ ರುಷುವತ್ತುಗಳು ದೇಶದಲ್ಲಿ ಇಲ್ಲದಂತೆ ಸಾರ್ವಜನಿಕರ ಕೆಲಸ ಕಾರ್ಯಗಳು ಸತ್ಯ ಧರ್ಮ ನೀತಿಗಳಿಂದ ನಡೆಯುವಂತೆ ಮಾಡತಕ್ಕದ್ದು ಕೇವಲ ಸರ್ಕಾರದವರ ಕರ್ತವ್ಯ ಮಾತ್ರವೇ ಅಲ್ಲ, ಇದು ಪ್ರಜೆಗಳೆಲ್ಲರ ಕರ್ತವ್ಯವೂ ಆಗಿದೆ. ಅವರು ಹೇಳಿದಂಥ ವಿಷಯಗಳನ್ನೆಲ್ಲಾ ಬಹಳ ಆಸಕ್ತಿಯಿಂದ ನಾನು ಕೇಳಿದೆನು. ಆದರೆ ಅಂಥ ಅನೀತಿವಂತರು ಮೂರು-ನಾಲ್ಕು ಜನರು ಹೀಗೆ ಕೋಟ್ಯಂತರ ರೂಪಾಯಿಗಳ ವ್ಯವಹಾರ ನಡೆಯುತ್ತಿರುವ ಕಡೆ ಇದ್ದರೂ ಇರಬಹುದು. ಆದರೆ ಸತ್ಯ ಧರ್ಮ ನೀತಿಗಳಿಂದ ನಡೆಯತಕ್ಕಂಥ ಅಧಿಕಾರಿಗಳು ಸಹಸ್ರಾರು ಮಂದಿ ಇದ್ದಾರೆ. ಪ್ರಜಾಪ್ರತಿನಿಧಿಗಳಾದ ತಮ್ಮಂಥವರೇ ಕಣ್ಣಾರೆ ಕಂಡ ವಿಚಾರಗಳನ್ನು ನಮ್ಮ ಮುಂದೆ ತಿಳಿಸುವುದಕ್ಕೂ, ಸತ್ಯವಾದಂಥ ವಿಚಾರಗಳನ್ನು ಹೇಳುವುದಕ್ಕೂ ನೀವೇ ಹಿಂದು ಮುಂದು ನೋಡುತ್ತಿದ್ದರೆ ಇನ್ನು ಸರ್ಕಾರದವರಾದರೂ ಈ ಸತ್ಯ ಧರ್ಮಗಳನ್ನು ದೇಶದಲ್ಲಿ ನೆಲಸುವಂತೆ ಮಾಡಲು ಹೇಗೆತಾನೆ ಸಾಧ್ಯವಾಗುತ್ತದೆ? ಇಂಥಿಂಥ ಕಡೆ ದೇಶದಲ್ಲಿ ಹೀಗೀಗೆ ನಡೆಯುತ್ತಿದೆ, ಇಂಥಿಂಥ ಕಡೆ ಇಂಥಿಂಥ ಅನ್ಯಾಯಗಳು ನಡೆಯುತ್ತಿವೆ ಎಂಬುದಾಗಿ ನೀವು ನಿಷ್ಪಕ್ಷಪಾತ ಭಾವನೆಯಿಂದ ಜನರ ಎದುರಿನಲ್ಲಿ ಹೇಳುವ ಪಕ್ಷಕ್ಕೆ ಅಂಥ ಅಧಿಕಾರಿಗಳನ್ನು ಆ ಕೂಡಲೆ ಶಿಕ್ಷೆಗೊಳಪಡಿಸಲು ಸರ್ಕಾರದವರು ಎಂದಿಗೂ ಹಿಂಜರಿಯುವುದಿಲ್ಲ. ಸರ್ಕಾರದವರು ಸದಾ ಸೂಕ್ತ ಕಾರ್ಯಕ್ರಮ ಕೈಗೊಳ್ಳಲು ಸಿದ್ಧರಾಗಿದ್ದಾರೆ. ಆದರೆ ಈ ಮಾನ್ಯ ಸಭೆಯ ಸದಸ್ಯರಾದಂಥ

ತಾವುಗಳೇ, ದೇಶದ ಪ್ರತಿನಿಧಿಗಳಾದಂಥ ನೀವುಗಳೇ ಹೀಗೆ ಕಂಡದ್ದನ್ನು ಕಂಡಹಾಗೆ ತಿಳಿಸಿ ಆ ತಪ್ಪಿತಸ್ಥರನ್ನು ಶಿಕ್ಷೆಗೆ ಒಳಪಡಿಸದೆ ಹೋದರೆ—ಇಂಥ ಕಾರ್ಯಕ್ಕೆ ತಾವುಗಳೇ ಹಿಂದಕ್ಕೆ ಸರಿದ ಪಕ್ಷದಲ್ಲಿ ಇನ್ನು ಆ ಅವಿದ್ಯಾವಂತರಾದ ಹಳ್ಳಿಯ ಜನರು ಇದ್ದುದ್ದನ್ನು ಇದ್ದಹಾಗೆ ಸರ್ಕಾರದವರ ಮುಂದೆ ಹೇಳುವುದಕ್ಕೆ ಸಾಧ್ಯವಿದೆಯೇ ಎಂಬುದನ್ನು ತಾವೇ ಹೇಳಬೇಕು.

ಶ್ರೀ ಎಸ್. ಗೋಪಾಲಗೌಡ.—ತಾವು ಹಾಗೆ ಬೇಕೆಂದು ಅಪೇಕ್ಷಿಸುವುದಾದರೆ ನಾನು ಸಿದ್ಧಪಡಿಸಿಟ್ಟುಕೊಂಡಿರುವ 300 ಜನರ ಒಂದು ಪಟ್ಟಿಯೇ ಇದೆ. ನಾನು ಅದನ್ನು ತಾವು ಯಾವಾಗಬೇಕೆಂದರೆ ಆಗ ಕೊಡುವುದಕ್ಕೆ ಸಿದ್ಧವಾಗಿದ್ದೇನೆ.

Sri H. M. CHANNABASAPPA.—I shall be very happy, I shall be exceedingly grateful to the Hon'ble Members of this House and also grateful to anyboby who is prepared to furnish me whatever information he has got and which goes to help to verify the administration and I should like to express my gratitude to such of those people as will be helpful in that direction. ಆದುದರಿಂದ ಈ ಅನೀತಿಯ ವಿಚಾರ ಎಲ್ಲಕಡೆಗಳಲ್ಲೂ ಇದೆ ಎಂದು ಹೇಳುವುದನ್ನು ಬಹುಶಃ ತಾವೂ ಒಪ್ಪಲಾರಿರಿ, ಅದನ್ನು ನಾವೂ ಕೂಡ ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ದೇಶದಲ್ಲಿ ಎಷ್ಟೋಕಡೆ ಸತ್ಯ ಧರ್ಮಗಳಿಂದ ಕೆಲಸ ಮಾಡತಕ್ಕಂಥ ಜನರಿದ್ದಾರೆ. ಅದೇ ರೀತಿ ನಮ್ಮಲ್ಲಿಯೂ ಅಷ್ಟೆ ಆ ಸತ್ಯ ಧರ್ಮ ಗಳಿಂದ ಕೆಲಸ ಮಾಡತಕ್ಕ ಜನರಿರುತ್ತಾರೆ. ಆದರೆ ಇದರಲ್ಲಿ ಕೆಲವರು ಸ್ವಾರ್ಥಿಗಳು ಅಥವಾ ಮತ್ತೆ ಯಾವ ಕಾರಣದಿಂದಲಾದರೂ ಪ್ರತಿಫಲಾಪೇಕ್ಷೆ ಮಾಡಿ, ಅದರ ಉದ್ದೇಶಕ್ಕಾಗಿ ಕೆಲಸಗಳು ತಡವಾಗಿ ನಡೆಯುವಂತೆ ಅದರ ಬಗ್ಗೆ ಅಡ್ಡಿ ಆತಂಕಗಳನ್ನುಂಟುಮಾಡತಕ್ಕಂಥ ಕೆಲವರು ಇದ್ದರೂ ಇರಬಹುದು. ಅದೇನೂ ಅಂಥ ಒಂದು ಆಶ್ಚರ್ಯದ ವಿಷಯವಲ್ಲ. ಅಂಥವರ ವಿಷಯದಲ್ಲಿ ಶಿಕ್ಷೆ ವಿಧಿಸಲು ಯಾವ ಅಭ್ಯಂತರವೂ ಇಲ್ಲ. ಅದಕ್ಕೂ ಒಂದು ವೇಳೆ ಅವರು ಆ ಶಿಕ್ಷೆಯ ಪರಿಣಾಮದಿಂದ ಎಚ್ಚರಗೊಂಡು ಉತ್ತಮದಾರಿಗೆ ಬಾರದೆ ಹೋದ ಸಂದರ್ಭಗಳೇನಾದರೂ ಕಂಡುಬಂದರೆ ಅಂಥವರನ್ನು ಕೆಲಸದಿಂದಲೇ ಬರ್‌ತರ್ಫ್ ಕೂಡ ಮಾಡುವುದಕ್ಕೆ ಸರ್ಕಾರದವರು ಸಿದ್ಧವಾಗಿದ್ದಾರೆ. ಹೀಗೆ ಮಾಡದೆ ಹೋದರೆ ಕೆಲಸ ಕಾರ್ಯಗಳು ಸತ್ಯಧರ್ಮದಿಂದ ನಡೆಯಲು ಸಾಧ್ಯವಿರುವುದಿಲ್ಲ. ದೇಶಾಭ್ಯುದಯದ ಕೆಲಸಗಳು ಬಹಳ ಹದಗೆಟ್ಟು ಹೋಗುತ್ತವೆ. ಆದರೆ ಒಂದು ಅಂಶವನ್ನು ತಿಳಿಸಬೇಕಾಗಿದೆ. ಮೈಸೂರು ದೇಶದಲ್ಲಿ ಇತರ ಎಲ್ಲಾ ಸಂಸ್ಥಾನಗಳಲ್ಲಿರತಕ್ಕಂಥ ಅಧಿಕಾರಿಗಳಿಗಿಂತಲೂ ಹೆಚ್ಚು ದಕ್ಷರಾದಂಥ ಅಧಿಕಾರಿಗಳು ಇಲ್ಲಿರುತ್ತಾರೆಂದು ಹೇಳಿದರೆ ಅತಿಶಯೋಕ್ತಿಯಲ್ಲವೆಂಬುದನ್ನು ತಾವೆಲ್ಲರೂ ಒಪ್ಪುತ್ತೀರೆಂದು ನಂಬಿದ್ದೇನೆ. ಈ ವಿಚಾರವನ್ನು ನಾನೊಬ್ಬನು ಹೇಳುವುದೇನು ಇಡೀ ದೇಶವೇ ಹೇಳುತ್ತಿದೆ. ಆದರೆ ಇತ್ತೀಚೆಗೆ ದೇಶಾದ್ಯಂತವೂ ಆಹಾರ ಹತೋಟಿ ಆಜ್ಞೆಗಳು ಬಂದಮೇಲೆ ಈ ಅಧಿಕಾರಿಗಳ ಕ್ಷೇತ್ರದಲ್ಲೂ ಮತ್ತು ಸಾರ್ವಜನಿಕ ಕ್ಷೇತ್ರದಲ್ಲೂ ಈ ಸತ್ಯಧರ್ಮಗಳು ಬಹಳ ಮಟ್ಟಿಗೆ ಸಡಿಲವಾಗುತ್ತಾ ಬಂದಿವೆ. ಆದುದರಿಂದ ಈ ಸಾರ್ವಜನಿಕ ಕೆಲಸಕಾರ್ಯಗಳು ಸತ್ಯಧರ್ಮದಿಂದ ನಡೆಯಬೇಕಾಗಿದ್ದರೆ ಸರ್ಕಾರದವರು ಯಾವತ್ತೂ ಇದಕ್ಕೆ ಹಿಂಜರಿಯುವುದಿಲ್ಲ. ಇದಕ್ಕೋಸ್ಕರವೇ ಈಗ ಆಂಟಿಕರಪ್ಷನ್ ಮತ್ತು ಎಫಿಷಿಯನ್ಸಿ ಆಡಿಟ್ ಇಲಾಖೆಗಳನ್ನಿಟ್ಟು ಕೆಲಸ ನಡೆಸುತ್ತಿದ್ದೇವೆ. ಈಗ ಈ ಇಲಾಖೆಗಳನ್ನು ಇನ್ನೂ ಸ್ವಲ್ಪ ಮಟ್ಟಿಗೆ ಬಿಗಿಮಾಡಿ, ಬಲಪಡಿಸಿ, ಕೆಲಸ ನಡೆಸಲಾಗುತ್ತದೆ. ಇನ್ನು ಈ ಇಲಾಖೆಗಳ ಜೊತೆಗೆ ಒಂದು ಇಂಟೆಲಿಜನ್ಸ್ ಇಲಾಖೆಯನ್ನು ಕೂಡ ಇಟ್ಟು ಅಕ್ರಮ-ಅನೀತಿಯಿಂದ ನಡೆಸತಕ್ಕಂಥವರನ್ನು ಹಿಡಿದು ಅವರ ತಪ್ಪುಗಳನ್ನು ಸಾಬೀತು ಮಾಡಿ ಅವರನ್ನು ಶಿಕ್ಷೆಗೊಳಪಡಿಸತಕ್ಕಂಥ ಒಂದು ವಿಧಾನವನ್ನು ಸರ್ಕಾರದವರು ತೀವ್ರವಾಗಿ ಆಲೋಚನೆ ಮಾಡುತ್ತಿದ್ದಾರೆ. ಅಂತೂ ಹೀಗೆಲ್ಲಾ ಈ ವಿಷಯದಲ್ಲಿ ಸರ್ಕಾರದವರು ಹೆಚ್ಚು ಉತ್ಸಾಹದಿಂದ ಈ ಅನೀತಿಯುತವಾದ ಕಾರ್ಯಗಳನ್ನು ಮಟ್ಟಹಾಕಲು ಸರ್ವ ಪ್ರಯತ್ನಗಳನ್ನೂ ನಡೆಸುತ್ತಿದ್ದೇವೆ. ಆದರೆ ನಮ್ಮ ಅಹವಾಲನ್ನು ಸರ್ಕಾರದವರ ಮುಂದೆ ಇಟ್ಟಿದ್ದೇವೆಂದು ಹೇಳಿ ಜನರು ಕೈಕಟ್ಟಿ ಕುಳಿತುಕೊಂಡರೆ ಆಗ ಸರ್ಕಾರ ನಿಸ್ಸಹಾಯಕವಾಗುತ್ತದೆ. ಸರ್ಕಾರದವರು ಇಂಥ ವಿಚಾರದಲ್ಲಿ ಎಷ್ಟು ಆಸಕ್ತಿವಹಿಸುತ್ತಾರೋ ಅದಕ್ಕೂ ಮಿಗಿಲಾದಂಥ ಆಸಕ್ತಿಯನ್ನು ಮಾನ್ಯ ಸಾರ್ವಜನಿಕರು ಈ ಬಗ್ಗೆ ವಹಿಸಿ, ಈ ಕೆಲಸಗಳೆಲ್ಲಾ ಒಂದು ಆದರ್ಶಮಟ್ಟದಲ್ಲಿ ಮುಂದುವರಿಯುವಂತೆ ಸರ್ಕಾರದವರಿಗೆ ನೆರವಾಗಬೇಕೆಂದು ದೇಶದ ಮುಖಂಡರಾದ ತಮ್ಮೆಲ್ಲರಲ್ಲೂ ನಾನು ಈ ಸಂದರ್ಭದಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಇನ್ನು ಈ ಕಂಟ್ರಾಕ್ಟರುಗಳನ್ನು, ಲೈಸೆನ್ಸ್ಡ್ ಕಂಟ್ರಾಕ್ಟರುಗಳನ್ನಾಗಿ ಮಾಡಬೇಕೆಂಬ ವಿಷಯದಲ್ಲಿ ಸರ್ಕಾರದವರಿಗೆ ಉತ್ಸುಕತೆ ಇದೆ. ಈ ವಿಷಯದಲ್ಲಿ ಒಂದು ಬಿಲ್ ತಯಾರಾಗಿ ಸ್ಕ್ರೂಟಿನೈಸಿಂಗ್ ಕಮಿಟಿಯ ಮುಂದೆ ಸ್ಕ್ರೂಟಿನೈಸ್ ಆಗುತ್ತಾ ಇದೆ. ಇನ್ನು ಕೆಲವು ದಿನಗಳಲ್ಲೇ ಆ ಬಿಲ್ಲು ಬರುತ್ತದೆ. ಬಂದರೂ ಕೂಡ ಅದರಲ್ಲೂ ಕಷ್ಟ ಸುಖ ಇದೆ ಕೆಲವು ಕಂಟ್ರ್ಯಾಕ್ಟ್ ಕೆಲಸಗಾರರಿಗೆ ಬಿಟ್ಟು ಬಡವರು ಬಗ್ಗರಿಗೆ ಅವಕಾಶವಿಲ್ಲ ಎಂದು ಹೇಳಿರತಕ್ಕ ಜನರು ಅನೇಕರಿರುತ್ತಾರೆ. ಆದರೆ ಒಂದು ವಿಷಯವನ್ನು ಮಾತ್ರ ಮನಗಾಣಬೇಕು. ಕಂಟ್ರಾಕ್ಟ್ ಕೆಲಸ ಮಾಡತಕ್ಕವರಿಗೆ ತಕ್ಕ ಆರ್ಥಿಕ ಶಕ್ತಿಯು ಇರಬೇಕು ಮತ್ತು ಅವರಿಗೆ ಸ್ವಲ್ಪ ಜವಾಬ್ದಾರಿಯೂ ಇರಬೇಕು. ಅಂಥವರಿಗೆ ಲೈಸೆನ್ಸ್ ಕೊಟ್ಟು, ಅಂಥವರಿಂದ ಕೆಲಸ ತೆಗೆದುಕೊಂಡು, ತಪ್ಪು ಮಾಡಿದ ಪಕ್ಷದಲ್ಲಿ ಆ ತಪ್ಪಿಗೆ ತಕ್ಕ ಶಿಕ್ಷೆ ಮಾಡತಕ್ಕ ವ್ಯವಸ್ಥೆಯೂ ಕೂಡ ಇರಬೇಕು. ಈ ಬಗ್ಗೆ ಸೂಕ್ತ ಕಾರ್ಯಕ್ರಮವನ್ನು ಆದಷ್ಟು ಜಾಗ್ರತೆ ತೆಗೆದುಕೊಳ್ಳುತ್ತೇವೆ. I am not very particular about personalities. But if anything is done by any one so as to undermine the interests of the people and against the rules, he will come to trouble. It is for you therefore to help in investigation and bring them to book.

ಕೆಲವು ಮಾನ್ಯ ಸದಸ್ಯರು ಬಹುಶಃ ಈ ಬಡ್ಜೆಟ್ಟನ್ನು ಕೂಲಂಕಷವಾಗಿ ನೋಡಿಲ್ಲ ಎಂದು ಕಾಣುತ್ತದೆ. ಶ್ರೀ ಮಾಧವಾಚಾರ್‌ರವರು ಕೆಲವು ರಸ್ತೆಗಳನ್ನು ಆಸ್‌ಫಾಲ್ಟ್ ಮಾಡಬೇಕೆಂದು ಹೇಳಿದರು

(SRI H. M. CHANNABASAPPA.)

ಅದರ ಅಂದಾಜನ್ನು ಮಾಡಿ ಕೆಲಸ ತೆಗೆದುಕೊಳ್ಳುವುದಕ್ಕೆ ಹಣವನ್ನು ಒದಗಿಸಿದ್ದೇವೆ. 152ನೇ ಪುಟದಲ್ಲಿ ನೋಡಿದರೆ ಗೊತ್ತಾಗುತ್ತದೆ.

ಶ್ರೀ ಬಿ. ವಿ. ನಾರಾಯಣರೆಡ್ಡಿಯವರು ತಮಗೆಲ್ಲರಿಗೂ ಗೊತ್ತಿರುವಂತೆ ಬಹಳ ಉದ್ವೇಗದಿಂದ ಚಿತ್ರಾವತಿನದಿಗೆ ಅಡ್ಡವಾಗಿ ಸೇತುವೆ ಕಟ್ಟುವುದಕ್ಕೆ ಹಣ ಮಂಜೂರು ಮಾಡಿಲ್ಲ ಎಂದು ಹೇಳಿದರು. ಅವರು ಈ ಬಡ್ಜೆಟ್ ಪುಸ್ತಕವನ್ನು ನೋಡಲಿಲ್ಲ ಎಂದು ಕಾಣುತ್ತದೆ. ಅದಕ್ಕೂ ಸಹ ಹಣ ಒದಗಿಸಿದ್ದೇವೆ.

Sri Mulka GOVINDA REDDY (Chitaldrug).—It is being included in the Budget, but the work is not being carried out.

ಶ್ರೀ ಎಚ್. ಎಂ. ಚನ್ನಬಸಪ್ಪ.—ಆಮೇಲೆ ಶ್ರೀ ಮಲ್ಲಿಕಾರ್ಜುನಪ್ಪಗೌಡರ ಚಂದ್ರಗುತ್ತಿ ಹತ್ತಿರ ಸೇತುವೆ ಕಟ್ಟಬೇಕೆಂದು ಹೇಳಿದರು. ಅದಕ್ಕೆ ಸಹ ಒದಗಿಸಿದ್ದೇವೆ. 139ನೇ ಪುಟವನ್ನು ನೋಡಿದರೆ ಗೊತ್ತಾಗುತ್ತದೆ.

ಅನೇಕ ಮಾನ್ಯ ಸದಸ್ಯರು ಹಣ ಒದಗಿಸಿದ್ದರೂ ಕೂಡ ಕೆಲಸ ಆಗುತ್ತಿಲ್ಲ ಎಂಬುದನ್ನು ಗಮನಿಸಿಯೇ ಪ್ರಶ್ನೆಗಳನ್ನು ಕೇಳಿರುತ್ತಾರೆ. ಈಗ ಯಾವಯಾವುದಕ್ಕೆ ಒದಗಿಸಿದ್ದೇವೋ ಅವುಗಳನ್ನೆಲ್ಲಾ ಅತ್ಯವಶ್ಯಕವಾಗಿ ತೆಗೆದುಕೊಳ್ಳಬೇಕೆಂಬ ಆಶೆಯಿಂದಲೇ ಒದಗಿಸಿದ್ದೇವೆ. ಅನೇಕ ಕೆಲಸಕಾರ್ಯಗಳು ಮಂಜೂರಾಗಬೇಕು. ಇನ್ನೂ ಕೆಲವು ಕೆಲಸಗಳು ಇವೊತ್ತು ನಾಳೆ ಮಂಜೂರಾತಿ ಆಗುವ ಸ್ಥಿತಿಯಲ್ಲಿದೆ. ಪ್ರಾಸ್ಪೆಕ್ಟೀವ್ ಪ್ರಾಜೆಕ್ಟುಗಳನ್ನು ಕೂಡ ಸೇರಿಸಿದ್ದೇವೆ. ಕಾರಣಾಂತರಗಳಿಂದ ಆ ಪ್ರಾಜೆಕ್ಟುಗಳು ಆಗುವುದರೊಳಗೆ ಯಾವುದಾದರೂ ಅಡ್ಡಿ ಆತಂಕಗಳು ಬಂದರೆ ಅಂಥವು ಮಾತ್ರ ನಿಧಾನವಾಗುತ್ತವೆಯೇ ಹೊರತು ಅಡ್ಡಿ ಆತಂಕ ಇಲ್ಲದೇ ಇದ್ದರೆ ಹಣವನ್ನು ಒದಗಿಸಿದ ಮೇಲೆ ಖರ್ಚುಮಾಡುವ ಬಗ್ಗೆ ಆತುರವಾಗಿದ್ದೇವೆ. ಆದುದರಿಂದ ಸಾಧ್ಯವಾದಷ್ಟು ಪ್ರಯತ್ನ ಮಾಡಿ ಯಾವಯಾವ ಕೆಲಸಗಳಿಗೆ ಹಣ ಒದಗಿಸಿದ್ದೇವೆಯೋ ಆಯಾ ಹಣ ಆಯಾ ಬಾಬುಗಳಿಗೆ, ಖರ್ಚಾಗುವ ರೀತಿಯಲ್ಲಿ ಖಂಡಿತವಾಗಿಯೂ ವ್ಯವಸ್ಥೆ ಮಾಡುತ್ತೇವೆಂದು ಹೇಳಿ ಅರಿಕೆ ಮಾಡುತ್ತೇನೆ.

ಇನ್ನೊಂದು ವಿಷಯ ಹೇಳಿದರು. ಈ ಇಲಾಖೆಯಲ್ಲಿ ಎರಡು ಕೆರೆಗಳು ಒಡೆದುಹೋದಕಾಲದಲ್ಲಿ ಆ ಬಗ್ಗೆ ಅಧಿಕಾರಿಗಳ ಮೇಲೆ ಕಾರ್ಯಕ್ರಮವನ್ನು ತೆಗೆದುಕೊಳ್ಳಲಿಲ್ಲ ಎಂದು ಆಪಾದನೆ ಮಾಡಿದರು.

ಶ್ರೀ ಜೆ. ಮಹಮ್ಮದ್ ಇಮಾಂ (ಜಗಳೂರು).—ಕಾರ್ಯಕ್ರಮ ತೆಗೆದುಕೊಂಡಿದ್ದೀರಿ.

ಶ್ರೀ ಎಚ್. ಎಂ. ಚನ್ನಬಸಪ್ಪ.—ತಪ್ಪುಮಾಡಿದವದವರಿಗೆ ಶಿಕ್ಷೆ ಮಾಡತಕ್ಕ ವಿಚಾರದಲ್ಲಿ ಕಾರ್ಯಕ್ರಮ ತೆಗೆದುಕೊಳ್ಳಲಿಲ್ಲ ಎಂದು ಟೀಕೆ ಮಾಡಿದರು. ತಪ್ಪು ಮಾಡಿದವರಿಗೆ ಶಿಕ್ಷೆ ಮಾಡಬೇಕೆಂಬ ವಿಷಯದಲ್ಲಿ ಮೊದಲೇ ಹೇಳಿದಂತೆ ನಮಗೆ ಆಸಕ್ತಿ ಇದೆ, ತಪ್ಪು ಮಾಡಿದವರಿಗೆ ಶಿಕ್ಷೆ ಮಾಡುವುದಕ್ಕೂ ಕೂಡ ಕಾನೂನಿನಲ್ಲಿ ವಿಧಾಯಕವಾದ ರೀತಿಯಲ್ಲಿ ಮಾಡಬೇಕೇ ಹೊರತು ಕಾನೂನಿನ ವ್ಯಾಪ್ತಿ ಮೀರಿಹೋಗಿ ಮಾಡುವುದಕ್ಕಾಗುವುದಿಲ್ಲ. 320-(3) (c) ಪ್ರಕಾರ ಯಾವ ಅಧಿಕಾರಿಗೆ ಶಿಕ್ಷೆ ಮಾಡಬೇಕಾದರೂ ಕೂಡ ಪಬ್ಲಿಕ್ ಸರ್ವೀಸ್ ಕಮಿಷನರನ್ನೂ ಕನ್ಸಲ್ಟ್ ಮಾಡಬೇಕೆಂದು ವಿಧಾಯಕವಾಗಿದೆ.

ಶ್ರೀ ಎಲ್. ಸಿದ್ದಪ್ಪ (ಚನ್ನಗಿರಿ).—ಮಾಡಬೇಡಿ ಎಂದು ಯಾರು ಹೇಳುತ್ತಾರೆ?

Sri H. M. CHANNABASAPPA.—According to article 323 of the Constitution. . . .

(*Sri L. Siddappa interrupted*)

Sri H. M. CHANNABASAPPA.—I am not going to allow even one single point unanswered. You please wait. Why don't you have some patience?

Mr. DEPUTY SPEAKER.—Well, this practice is really very bad—members interrupting the Minister and the Minister himself replying, these being done without taking the permission of Chair. Whether it is the Minister or the members, they must take the permission of the Chair before interrupting. The Minister cannot go on answering side talks. That will interfere with his own time.

Sri H. M. CHANNABASAPPA.—I would like to submit that it is one of the practices in Parliament and a parliamentary procedure for a member to interject and the Minister concerned to answer.

Mr. DEPUTY SPEAKER.—But that is done with the permission of the Chair. If it is not so, it is not a healthy practice.

Sri J. MOHAMED IMAM.—If you permit me, I want this matter to be cleared so that we may not commit mistakes. I understand that the Chair's ruling is that for every interruption permission should be obtained beforehand. If that is the ruling of the Chair as I have understood it, I wish to say this. Interruptions come all at once, spontaneously and they do not give notice even to ourselves. I wish to point out that some slight interjections without allowing the speaker to lose the trend of his reply is permissible even in the Parliament.

Mr. DEPUTY SPEAKER.—Interjection is different from interruption. And interjections too have got their own limits. So also interruptions. If there are too many interjections and interruptions, I think that ought not

to be permitted. And if it is the desire of Hon'ble Members to interrupt at any particular stage, well, the Chair will automatically give permission. There need be absolutely no doubt about it. But there must be a healthy tradition built up in this House.

ಶ್ರೀ ಎಚ್. ಕೆ. ವೀರಣ್ಣಗೌಡ(ಮದ್ದೂರು).— ತಾವು ಅಪ್ಪಣೆ ಕೊಟ್ಟರೆ ಒಂದು ವಿಷಯ ಅರಿಕೆ ಮಾಡಿಕೊಳ್ಳುತ್ತೇನೆ. ಸದಸ್ಯರಾಗಲಿ, ಮಂತ್ರಿಗಳಾಗಲಿ ಮಾತನಾಡುತ್ತಾಯಿರುವಾಗ ಪ್ರಶ್ನೆ ಹಾಕುವುದು, ಟೀಕೆ ಮಾಡುವುದು ಸ್ವಾಭಾವಿಕವಾಗಿ ಬಂದಿದೆ. ನಾನು ಹೀಗೆ ಟೀಕೆ ಮಾಡುತ್ತೇನೆ ಅಪ್ಪಣೆ ಕೊಡುತ್ತೀರಾ ಇಲ್ಲವೇ ಎಂದು ಕೇಳುವಷ್ಟು ಹೊತ್ತಿಗೆ ಉತ್ತರ ಕೊಡುತ್ತಿರುವವರು ಬಹಳ ದೂರ ಹೊರಟು ಹೋಗಿರುತ್ತಾರೆ. ಈಗ ಪ್ರಶ್ನೆ ಮಾಡುವವರು ಸಾಮಾನ್ಯವಾಗಿ ಎದ್ದು ನಿಂತುಕೊಂಡು ಕೂಡ ಕೇಳುವುದಿಲ್ಲ. ಕುಳಿತುಕೊಂಡೇ ಕೇಳುವುದು ಸ್ವಾಭಾವಿಕವಾಗಿ ಬಂದಿದೆ. ಇದು Healthy practiceಅಲ್ಲ ಎಂದರೆ ಇದೇ ಒಂದು ಪ್ರಿಸಿಡೆಂಟ್ ಆಗುತ್ತದೆ. ಇದು ಸರಿಯಲ್ಲ ಎಂಬು ನನ್ನ ಅಭಿಪ್ರಾಯ.

Sri A. G. RAMACHANDRA RAO (Minister for Law and Education).—There will be interjections, interruptions seeking information and interruptions as such. If there are interjections, it is not wrong unless there are too many. If there are questions seeking information, unless they are abnormal, they may be all right. But interruptions just to create some trouble is not good.

Sri J. MOHAMED IMAM.—You cannot attribute motives like that.

Mr. DEPUTY SPEAKER.—Unless there are too many, I am not going to interfere. But the thing is this. For example Sri L. Siddappa said something to which the Hon'ble Minister said something and I did not hear what he said. Such things will again create complications. I am not anxious to interfere with interjections or interruptions.

4 P.M.

Sri Mulka GOVINDA REDDY.—Interrupting a speaker or interjecting a member is one of the recognised parliamentary practices available not only in the Parliament but also in this House. We have been doing it. Unless there are interruptions or interjections, the debate will not be lively.

Mr. DEPUTY SPEAKER.—I do not totally deny the interruptions or interjections, but there must be some limit for them.

Sri H. M. CHANNABASAPPA.—I would like to draw the attention of the Hon'ble members to article 320 (3) (c) which reads as follows.—

> "The Union Public Service Commission or the State Public Service Commission, as the case may be, shall be consulted—
>
> on all disciplinary matters affecting a person serving under the Government of India or the Government of a State in a civil capacity, including memorials or petitions relating to such matters ;"

ಈ ಅಧಿಕಾರಿಗಳ ಬಗ್ಗೆ ತಮ್ಮ ಅಭಿಪ್ರಾಯವನ್ನು ಕಳುಹಿಸಬೇಕೆಂದು ಹೇಳಿ 1955ನೆಯ ಇಸವಿಯಲ್ಲಿ ಪಿ.ಎಸ್.ಸಿ.ಗೆ ಕಳುಹಿಸಿದರು. ಸರ್ಕಾರದ ಪರವಾಗಿ ಹೇಳುವುದಾದರೆ ನಾವು ಪಿ.ಎಸ್.ಸಿ.ಅವರು ಈ ರಿಪೋರ್ಟಿನಮೇಲೆ ತಮ್ಮ ಅಭಿಪ್ರಾಯವನ್ನು ಹೇಳಿದ ಹೊರತು ಯಾವ ಕಾರ್ಯಕ್ರಮವನ್ನು ತೆಗೆದು ಕೊಳ್ಳುವುದಕ್ಕೂ ಸಾಧ್ಯವಿಲ್ಲ.

Sri H. K. VEERANNA GOWDH.—When a man's character is under question, when there is a report against him and when that report is pending before the Government, unless that is settled, how are the Government justified in giving promotion to such an officer ?

Sri H. M. CHANNABASAPPA.—I beg to submit through you to the Hon'ble Member, that unless and until that officer is proved guilty, we have got to treat him as an honest officer and we have to give all the benefits which are due to him in the normal course of his duties. If he is found guilty, we shall punish him according to rules.

Mr. DEPUTY SPEAKER.—The time is up.

The question is :

> "That a sum not exceeding Rs. 5,01,90,281 be granted to the Government to defray the charges which will come in course of payment during the year ending 31st day of March 1957, in respect of 'Civil Works' ".

The motion was adopted.

DEMAND No. 41. A—CAPITAL OUTLAY ON CIVIL WORKS.

81. CAPITAL ACCOUNT OF CIVIL WORKS.

Mr. DEPUTY SPEAKER.—The question is :

"That a sum not exceeding Rs. 2,25,68,700 be granted to the Government to defray the charges which will come in course of payment during the year ending 31st day of March 1957, in respect of 'Capital Account of Civil Works'".

The motion was adopted.

DEMAND No. 45—ADVANCES AND LOANS.

P. LOANS AND ADVANCES BY THE STATE GOVERNMENT.

Mr. DEPUTY SPEAKER.—Motion moved.—

"That a sum not exceeding Rs. 3,12,86,000 be granted to the Government to defray the charges which will come in course of payment during the year ending 31st day of March 1957, in respect of 'Loans and Advances by the State Government'".

The time fixed for this demand is 5 O'clock. The Hon'ble Minister will require about 15 minutes to reply to the debate.

Sri A. G. RAMACHANDRA RAO (Minister for Law and Education).—There are two parts covered in this Demand, Sir. I think two Ministers will have to reply. 15 minutes will be required for answering the points.

Mr. DEPUTY SPEAKER.—So, only 45 minutes are available for the Hon'ble Members to speak.

*Sri H. C. LINGA REDDY (Malur).—While supporting this Demand (P. Loans and Advances by the State Government), I would like to make some suggestions for the Government. I had tabled three cut motions and the points covered by these cut motions, I would just like to say a few words about each one of them. The first point is, that the various loans issued by various agencies have to be consolidated and there should be one common agency to dispose of all the loans. There is the Revenue Department dealing with the Land Improvement Loans, takavi loans, the subsidy well loans and certain other loans. There is the Industrial Department dealing with the State Industries Aid loan and also there is the V.D. Scheme. There are various schemes in the various taluks dealing with industrial loans. So far as the Revenue Department is concerned, it deals with the grant of Land Improvement and Takavi loans. After all the amount allotted for the whole State is about Rs. 10 lakhs. This amount is very meagre. At the taluk and sub-division levels alone certain amounts will be disposed of and at the Deputy Commissioner's and the Revenue Commissioner's and at the Government's level certain amounts will be disposed of; but the parties will have to put in applications and wait for a very long time for getting the loans sanctioned. It is unfortunate that many applicants will not receive the benefit of these loans early. There is a good deal of delay in the disposal of loan applications.

Again, Sir, there is the Land Mortgage Bank that has been dealing with the long term loans; and there is the District Co-operative Bank that deals with the short term loans and the Land Mortgage Banks take a good deal of time in disposing of the applications. The primary societies at the taluk level take about five or six months and the Central Co-operative Bank at Bangalore take a good deal of time—in calling for good many documents, they raise a number of queries and sometimes they take about two to three years in disposing of the applications. But the District Co-operative Banks dealing with the short term credit, they have been very quickly disposing of the loans, because the primary societies recommend for loans and the District Central Co-operative Bank easily dispose of the loans after satisfying that there is sufficient security; but in the case of Land Mortgage Banks, there is a good deal of delay because

the primary societies take their own time and the Central Bank at Bangalore takes a very long time and parties very often have got to travel long distances to come to Bangalore and have their papers looked into before they get their loans sanctioned. I would therefore suggest to the Government to have a plan worked out that all these loans are brought under one common agency like the District Co-operative Bank which is now dealing with the short term credit loans; they have been very expeditiously disposing of the loan applications and even recoveries are very good. Similarly, if there should be a District Co-operative Bank dealing with the long term loan also, I think, of the same type we have for the disposal of the short term credit loan, it will be good. A Committee has to be set up by the Government or the Government have got to take the opinion of the Experts in this matter. And if the disposal of these loans is entrusted to a Central Bank at the district headquarters, the Central Bank at Bangalore may be the agency of approval for this purpose just as the short term credit is practically disposed of by the District Co-operative Bank subject to the approval by the Apex Bank. Under the auspices of the Co-operative Department, they need not have so it much powers; its powers and functions may be decentralised and all powers be entrusted to a bank at the District level and the powers of this Revenue Department and the Industries Departments dealing with the short term credit and the long term credit and other kinds of loans may be transferred to the District Bank. Thereby a good deal of duplication of work could be avoided. We will be able to know as to which party is in receipt of such benefits. There is a possibility of the loans being misused, and if there is one common agency at the District level, they can find out who exactly is the applicant and whether he has taken industrial loan or a loan from the V.D. or a loan from the Central Co-operative Bank. I would like to mention another point, Sir. I am glad that the Government have decided to give land improvement loans through the Land Mortgage Banks. The Land Mortgage Banks hitherto were issuing loans only to clear all arrears of debts. Hereafter, the Government will be going to the aid of the raiyat population and they will be helping them for the improvement of their lands by giving them land improvement loans. But the loans given by the Government under the scheme of land improvement carry an interest of only about 4 to 5 per cent, while the Land Mortgage Bank loans will carry an interest of 6½ per cent which was hitherto 7½ per cent. The interest will be very heavy. What I am given to understand is, the State Government gives a subsidy to the extent of about 2 or 3 per cent. Just as the State Government are giving land improvement loans to the raiyats at the rate of 4 or 5 per cent, even here also I request them to give a subsidy to cover the difference in the interest. Again, Sir, the land mortgage societies have been collecting instalments from their loanees irrespective of the fact whether there is famine, or good crops or good harvests or not. During times of famine or scarcity, it is very necessary that the Government should allow them to pay the amount within two or three years. They should give them some time; they should suspend the question of collection of instalments and postpone the instalments, since similar practice is in vogue in Madras. With these observations, I support this Demand and request the Government to concede all these points.

*ಶ್ರೀ ಡಿ. ದೇವರಾಜ್ ಅರಸ್ (ಹುಣಸೂರು).—ಸ್ವಾಮಿ, ಈ ಡಿಮ್ಯಾಂಡಿನ ವಿಚಾರವಾಗಿ ಮಾನ್ಯ ಶ್ರೀ ಲಿಂಗಾರೆಡ್ಡಿಯವರು ಹೇಳಿದಂಥ ಸಲಹೆಗಳನ್ನು ಅನುಮೋದಿಸುತ್ತಾ ಒಂದು ವಿಷಯದಲ್ಲಿ ಮಾತ್ರ ಅವರು ಹೇಳುವುದು ಅಷ್ಟು ಸೂಕ್ತವಲ್ಲವೋ ಏನೋ ಎಂದು ಭಾವಿಸುತ್ತೇನೆ. ಅದು ಏನು ಎಂದರೆ ಜಮೀನು ಅಡಮಾನದ ಬ್ಯಾಂಕುಗಳು ಸಾಲವನ್ನು ಈಗ ಕೊಡುತ್ತಾ ಇರತಕ್ಕ ಪದ್ಧತಿ. ಬೆಂಗಳೂರಿನಲ್ಲಿರತಕ್ಕ ಅಪೆಕ್ ಬ್ಯಾಂಕ್, ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ನೇರವಾಗಿ ಪ್ರೈಮರಿ ಸೊಸೈಟಿಗಳಿಗೆ ಸಾಲ ಕೊಡುತ್ತಾರೆ. ಅದರಿಂದ ಪ್ರೈಮರಿ ಸೊಸೈಟಿಗಳಿಗೆ ಸಂಬಂಧಪಟ್ಟ ಷೇರುದಾರರಿಗೆ ಸಾಲ ಸಿಕ್ಕುವ ಪದ್ಧತಿ ಇದೆ. ಈ ಮಧ್ಯೆ ಅವರು ಒಂದು ಡಿಸ್ಟ್ರಿಕ್ಟ್ ಲೆವಲ್‌ನಲ್ಲಿ ಜಿಲ್ಲಾ ಬ್ಯಾಂಕ್ಸ್ ಮಾಡಬೇಕೆಂದು ಒಂದು ಸಲಹೆಯನ್ನು ಕೊಡುತ್ತಿದ್ದಾರೆ. ಅದನ್ನು ಸ್ವಲ್ಪ ವಿಚಾರ ಮಾಡಿ ನೋಡಿದರೆ ಒಂದು ಕಷ್ಟವಾಗುತ್ತದೆ.

(ಶ್ರೀ ಡಿ. ದೇವರಾಜ ಅರಸ್.)

ಡಿಸ್ಟ್ರಿಕ್ಟ್ ಲೆವಲ್‌ನಲ್ಲಿ ಪುನಃ ಇನ್ನೊಂದು ಸಿಬ್ಬಂದಿ ಇಟ್ಟಾಗ, ಆ ಸಿಬ್ಬಂದಿಗೆ ಹೆಚ್ಚಾಗಿ ದುಡ್ಡು ಖರ್ಚುಮಾಡಬೇಕಾಗಿ ಬಂದರೆ, ಈಗ ಕೊಡುವ ಬಡ್ಡಿ ದರವನ್ನು ಹೆಚ್ಚಿಸಿ ನಾವು ರೈತರಿಗೆ ಸಾಲ ಕೊಡಬೇಕಾಗಿ ಬರುತ್ತದೆ. ಇದನ್ನು ಗಮನದಲ್ಲಿಟ್ಟುಕೊಳ್ಳುವುದಾದರೆ, ಡಿಸ್ಟ್ರಿಕ್ಟ್ ಲೆವಲ್ ಒಂದು ಬ್ಯಾಂಕ್ ಸ್ಟೇಟ್ ಲೆವಲ್ ಒಂದು ಬ್ಯಾಂಕ್—ಹೀಗೆ ಮಾಡುವುದು ಅಷ್ಟು ಸಾಧುವಾದುದಲ್ಲ. ಈಗ ಸ್ಟೇಟ್ ಲೆವಲ್ ಕೊಡುತ್ತಾ ಇರುವ ಅಪೆಕ್ಸ್ ಬ್ಯಾಂಕ್ 10 ಸಾವಿರ ರೂಪಾಯಿ ಸಾಲ ಕೊಡುತ್ತಾರೆ. ಡಿಸ್ಟ್ರಿಕ್ಟ್ ಲೆವಲ್‌ನಲ್ಲಿ 10 ಸಾವಿರ ರೂಪಾಯಿಗಳನ್ನು ನೇರವಾಗಿ ಸಾಲ ಕೇಳುವವರಿಗೆ ಕೊಡಿ ಎಂದು ಹೇಳಿದರೆ ಕಷ್ಟವಾಗುತ್ತದೆ. ಹಾಗೆಮಾಡದೆ, ನಾಲ್ಕೈದು ಸಾವಿರಕ್ಕೆ ಒಂದು ಮಟ್ಟ, ಸ್ಟೇಟ್ ಲೆವಲ್‌ನಲ್ಲಿ ಒಂದು ಮಟ್ಟ, ತಾಲ್ಲೂಕ್ ಲೆವಲ್‌ನಲ್ಲಿ ಇನ್ನೊಂದು ಮಟ್ಟ, ಈ ರೀತಿ ಏಜೆನ್ಸಿಗಳನ್ನು ಜಾಸ್ತಿಯಾಗಿ ಸೃಷ್ಟಿ ಮಾಡಿಕೊಂಡು ಹೋಗುವುದು ಸಾಧುವಾದುದಲ್ಲ. ಬಟ್ಟನಲ್ಲಿ ಒಂದು ಮಾತು ಅವರು ಹೇಳಿದರು. ರೈತರಿಗೆ ಸಾಲವನ್ನು ಹಂಚತಕ್ಕ ಏಜೆನ್ಸಿ ಬೇಕಾದಷ್ಟು ಆಗಿವೆ. ತಕಾವಿ ಸಾಲ, ಲ್ಯಾಂಡ್ ಮಾರ್ಟ್‌ಗೇಜ್ ಲೋನ್ ಹಂಚುವುದಕ್ಕೆ ರೆವಿನ್ಯೂ ಅಧಿಕಾರಿಗಳು ಒಂದು ಕಡೆ ರೂರಲ್ ಇಂಡಸ್ಟ್ರಿಯಲ್ ಸ್ಕೀಂ ಸಾಲವನ್ನು ಹಂಚುವುದಕ್ಕೆ ಮತ್ತೊಂದು ಏಜೆನ್ಸಿ ಆಮೇಲೆ ಕೋಆಪರೇಟೀವ್ ಡಿಪಾರ್ಟ್‌ಮೆಂಟ್ ಒಂದು, ಮತ್ತು ಹೊಸದಾಗಿ ಸಂಸ್ಥಾನಾಮಳೆ ಸ್ಥಾಪನೆಯಾಗಿರತಕ್ಕ ಅಲ್ಪಕಾಲಾವಧಿ ಸಾಲ ಹಂಚುವ ಏಜೆನ್ಸಿ ಒಂದು, ಹೀಗೆ 5-6 ಏಜೆನ್ಸೀಸ್ ಆಗಿಬಿಟ್ಟು ನಮ್ಮ ರೈತರಿಗೆ ಸಾಲ ತೆಗೆದುಕೊಳ್ಳುವುದಕ್ಕೆ ಯಾರ ಹತ್ತಿರ ಯಾವುದು ಸಾಲ ತೆಗೆದುಕೊಳ್ಳಬೇಕು ಎಂದು ಒಂದು ಕನ್‌ಫ್ಯೂಷನ್ ಆಗಿದೆ. ಈಗ ಅಲ್ಪಕಾಲಾವಧಿ ಸಾಲ ಕೊಡುವುದಕ್ಕೋಸ್ಕರ ಎಲ್ಲಾ ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರ್ಸ್‌ಗಳಲ್ಲಿ ಡಿಸ್ಟ್ರಿಕ್ಟ್ ಬ್ಯಾಂಕ್‌ಗಳನ್ನು ಮಾಡಿದ್ದಾರೆ. ಡಿಸ್ಟ್ರಿಕ್ಟ್ ಬ್ಯಾಂಕ್ ಅಲ್ಪಕಾಲಾವಧಿ ಸಾಲ ಕೊಡುವುದರ ಜೊತೆಗೆ ಮಿಡ್ಲ್ ಟರ್ಮ್ ಲೋನ್ಸ್ ಕೊಡಬೇಕೆಂಧು ಮಾಡಿಕೊಂಡಿದ್ದಾರೆ. ಒಂದು ವೇಳೆ ಡಿಸ್ಟ್ರಿಕ್ಟ್ ಬ್ಯಾಂಕಿನಿಂದ ಮಿಡ್ಲ್ ಟರ್ಮ್ ಲೋನ್ಸ್ ಕೊಡುವುದು ಜಾರಿಗೆ ಬಂದಿದ್ದೇ ಆದರೆ, ಈಗ ಅಪೆಕ್ಸ್ ಬ್ಯಾಂಕಿಗೆ ಇರುವ ಹೊರೆ ಸ್ವಲ್ಪಮಟ್ಟಿಗೆ ಕಡಿಮೆಯಾಗಬಹುದು ಎಂದು ಊಹೆ ಮಾಡಬಹುದು. ಆದುದರಿಂದ ಸರ್ಕಾರದಿಂದ ಕೊಡತಕ್ಕ ಸಾಲಗಳು ಜಮೀನು ಆಬಾದು ಸಾಲ, ತಕಾವಿಸಾಲ, ಇತ್ಯಾದಿ, ಇತ್ಯಾದಿ ಸಾಲಗಳನ್ನು ನೀವು ಏನು ಕೊಡುತ್ತೀರೋ ಅವನ್ನು ಒಂದುವೇಳೆ ಸಾಧ್ಯವಾದರೆ ಮತ್ತು ಅಪೆಕ್ಸ್ ಬ್ಯಾಂಕಿನಿಂದ ಕೊಡುವ ಸಾಲಗಳನ್ನು ಡಿಸ್ಟ್ರಿಕ್ಟ್ ಬ್ಯಾಂಕು ಮೂಲಕ ಕೊಡುವುದಾದರೆ, ಡಿಸ್ಟ್ರಿಕ್ಟ್ ಬ್ಯಾಂಕ್ ಬಹಳ ಚೆನ್ನಾಗಿ ಕೆಲಸಮಾಡಿ ಬಹುಬೇಗ ಸಾಲವನ್ನು ಹಂಚುತ್ತಾರೆ. ಸಾಲ ವಸೂಲ ಕೂಡ ಜಾಗ್ರತೆ ಆಗುತ್ತದೆ. ಆದ್ದರಿಂದ ಎಲ್ಲಾ ಕಡೆಗಳಿಂದಲೂ ತೆಗೆದುಕೊಳ್ಳುವ ಸಾಲದ ದುಡ್ಡನ್ನು ಆ ಬ್ಯಾಂಕಿನ ಮುಖಾಂತರ ಕೊಡುವುದಾದರೆ ಹೆಚ್ಚಿಗೆ ಫಲಕಾರಿಯಾಗುತ್ತದೆ. ಏಜೆನ್ಸಿ ಸೃಷ್ಟಿ ಮಾಡಿದಂತಾಗುವುದಿಲ್ಲ. ರೈತರಿಗೆ ನೇರವಾಗಿ ಬೇಗ ಸಾಲಗಳು ಸಿಕ್ಕುತ್ತವೆ. ಈ ರೀತಿ ಒಂದು ಸಲಹೆಯನ್ನು ಸರ್ಕಾರದವರು ತೀವ್ರವಾಗಿ ಯೋಚನೆ ಮಾಡುವುದು ಅಗತ್ಯ ಎಂದು ಹೇಳಿ ನಾನು ಈ ಮನವಿಯನ್ನು ಪುಷ್ಟೀಕರಿಸುತ್ತೇನೆ.

*ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ-ಅನುಸೂಚಿತ ಜಾತಿಗಳು).—ಸ್ವಾಮಿ, ಶ್ರೀ ಲಿಂಗಾರೆಡ್ಡಿಯವರು ಮತ್ತು ಶ್ರೀ ದೇವರಾಜ್ ಅರಸು ಅವರು. ರೈತರಿಗೆ ಸಾಲಗಳನ್ನು ಡಿಸ್ಟ್ರಿಕ್ಟ್ ಬ್ಯಾಂಕ್ ಮೂಲಕ ಕೊಡುವುದು ಸೂಕ್ತ ಎಂದು ಈಗ ತಾನೇ ಹೇಳಿದರು. ಆದರೆ ನನಗೆ ತಿಳಿದಮಟ್ಟಿಗೆ ಸರ್ಕಾರದಿಂದ ಸಾಲಗಳನ್ನು ಕೊಡುವುದು ನಾನಾತರಹವಾಗಿವೆ. ಕೆಲವು ಸ್ಟ್ಯಾಟ್ಯುಟರಿ ಆಫೀಸರುಗಳು ಕೊಡುವ ಸಾಲಗಳಿವೆ. ಅವು ಯಾವುವೆಂದರೆ, ಜಮೀನು ಆಬಾದು ಸಾಲ ತಕಾವಿ ಸಾಲ, Accidental fire loan ಇತ್ಯಾದಿ.—Statutory officers, ಎಂದರೆ Deputy Commissioners, Amildars, Sub-Division Officers, Revenue Commissioner and Government. ಇವರು Statutory Powers ಪ್ರಕಾರ ಎಷ್ಟೆಷ್ಟು ಕೊಡಬಹುದು ಎಂದು ಹಣವನ್ನು ನಿಗದಿಮಾಡಿ ಕೊಡತಕ್ಕ ಸಾಲಗಳು. ಇವು ರೈತರಿಗೆ ವರ್ಷವರ್ಷದ ಪರಿಸ್ಥಿತಿ ಮೇಲೆ ಕೊಡುವ ಸಾಲ. ತಕಾವಿಸಾಲ ಕೊಡುವುದಕ್ಕೆ rules and regulations ಇವೆ. ಅದಕ್ಕೆ ಅಗತಕ್ಕ ರಿಕಾರ್ಡು ಬೇರೆ. ಜಮೀನು ಆಬಾದು ಸಾಲಕ್ಕೆ ಆಗತಕ್ಕ ರೆಕಾರ್ಡ್ಸ್ ಬೇರೆ. ಈ ರೀತಿ ನಾನಾತರಹವಿದೆ. ಇನ್ನು ಎತ್ತುಗಳನ್ನು ತೆಗೆದುಕೊಳ್ಳುವುದಕ್ಕೆ: ಗೊಬ್ಬರ, ಬಿತ್ತನೆಬೀಜ, ಮುಂತಾದುವನ್ನು ಕೊಂಡುಕೊಳ್ಳುವುದಕ್ಕೆ ರೆವಿನ್ಯೂ ರೂಲ್ಸ್‌ಗೆ ಸಂಬಂಧಪಟ್ಟ ಸಾಲಗಳು ಇವೆ. ಆದರೆ ಲ್ಯಾಂಡ್ ಮಾರ್ಟ್‌ಗೇಜ್ ಸೊಸೈಟಿಗಳು ಮತ್ತು ಕೋ-ಆಪರೇಟಿವ್ ಸೊಸೈಟಿಗಳು ಇವುಗಳ ಮೂಲಕ ಕೊಡತಕ್ಕ ಸಾಲಗಳೇ ಬೇರೆ. ಒಂದಕ್ಕೊಂದಕ್ಕೆ ಒಂದುಗೂಡಿಸಿ ಅದಕ್ಕೋಸ್ಕರ ಒಂದು ಸಮಿತಿಯನ್ನು ನೇಮಕಮಾಡುವುದು, ಈ ಕಾನೂನಿಗೆ ಅನ್ವಯಿಸುವ ಹಾಗೆ ಕಾಣುವುದಿಲ್ಲ. Legislature ಕಾನೂನು ತಿದ್ದುಪಡಿ ಆಗದ ಹೊರತು ಇದು ಸಾಧ್ಯವಿಲ್ಲವೆಂದು ತಿಳಿದುಕೊಂಡಿದ್ದೇನೆ. ಒಂದೊಂದು ಸಾಲಕ್ಕೆ ಒಂದೊಂದು ತರಹ ರೂಲ್ಸ್ ಇದೆ. ಕೋ-ಆಪರೇಟಿವ್ ಸೊಸೈಟಿಗಳಿಗೆ ಬೈಲಾಸ್ ಇವೆ. ಯಾವ ಆಸ್ತಿಯನ್ನು ಮಾರ್ಟಗೇಜ್ ಮಾಡಬೇಕು; ಯಾವಾಗ ಸಾಲವನ್ನು ವಾಪಸು ಫಾವತಿ ಮಾಡಬೇಕು; ಕೊಡತಕ್ಕ ಪೀನಲ್ ಇಂಟೆರೆಸ್ಟ್ ಯಾವುದು ಎಂಬುದಕ್ಕೆ ಬೈಲಾಗಳಿವೆ. ಈ ರೀತಿ ಕಂಡೀಷನ್ ಮೇಲೆ ಕೊಡುವ ಸಾಲಕ್ಕೂ, ಸ್ಟ್ಯಾಟ್ಯುಟರಿಬಾಡೀಸ್ ಮಂಜೂರು ಮಾಡುವ ಸಾಲಕ್ಕೂ ಅರ್ಥಾರ್ಥ ಸಂಬಂಧವಿಲ್ಲ. ತಕಾವಿಸಾಲ, ಜಮೀನು ಆಬಾದು ಸಾಲ – ಇವೆಲ್ಲಕ್ಕೂ ಕಮಿಟಿ ಏತಕ್ಕೆ ಮಾಡಬೇಕು ಎಂದು ನನಗೆ ಅರ್ಥವಾಗುವುದಿಲ್ಲ. ಡಿಸ್ಟ್ರಿಕ್ಟ್ ಬ್ಯಾಂಕ್ ಒಂದು ವೇಳೆ ಸಾಲ ಕೊಡುವ ಪಕ್ಷದಲ್ಲಿ ಸರಕಾರದ ಕೋಟಾ ಕೊಟ್ಟರೆ, ಆಗ ಸಾಲಗಳನ್ನು ಅಡ್ಮಿನಿಸ್ಟರ್ ಮಾಡುವ ಬಾಡಿ ಬೇರೆಯಾಗುತ್ತದೆ. ರೂಲ್ಸ್ ಮತ್ತು ರೆಗ್ಯುಲೇಷನ್ಸ್ ಯಾವುದು ಮಾಡಿಕೊಂಡಿರುತ್ತಾರೋ, ಅದರಂತೆ ಹೋಗಬೇಕಾಗುತ್ತದೆ.' ಆಕ್ಟ್‌ನಲ್ಲಿರುವ ರೂಲ್ಸ್‌ಗಳಂತೆ ತೀರ್ಮಾನ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ಇವೆಲ್ಲವನ್ನೂ ಅವರು ಹೇಳಿದಂತೆ ಒಟ್ಟಿಗೆ ಸೇರಿಸಬಾರದು. ವಿಶ್ವೇಶ್ವರಯ್ಯ ಗ್ರಾಮ ಕೈಗಾರಿಕೆ ಯೋಜನೆಯಲ್ಲಿ ಸಾಲಗಳನ್ನು ಕೈಗಾರಿಕೆ ಇಲಾಖೆಯವರು ಕೊಡುತ್ತಿದ್ದಾರೆ. ಇದೇ ಬೇರೆ, Short term loans, Long term loans, ಮತ್ತು Medium term loans ಇವುಗಳೇ ಬೇರೆ. ಇದಕ್ಕಾಗಿ ಡಿಸ್ಟ್ರಿಕ್ಟ್ ಬ್ಯಾಂಕುಗಳನ್ನು ಮಾಡಿ ಅವು

ಗಳ ಮೂಲಕ ಸಾಲ ಕೊಡುತ್ತಾರೆ. ಆರು ತಿಂಗಳು ಒಂಭತ್ತು ತಿಂಗಳೊಳಗೆ ವಾಪಸು ಕೊಡುವಂತೆ ರೈತರಿಗೆ ವ್ಯವಸಾಯ ಕಾಲದಲ್ಲಿ ಅನುಕೂಲ ಮಾಡಬೇಕೆಂದು ಈ ಸಾಲಗಳನ್ನು ಕೊಡುತ್ತಾರೆ, ರಿಜರ್ವ್ ಬ್ಯಾಂಕು, ಡಿಸ್ಟ್ರಿಕ್ಟ್ ಬ್ಯಾಂಕುಗಳಿಂದ ಇದಕ್ಕೆ ಹಣ ಕೊಡುವುದು. ಹೀಗಿರುವಾಗ ಇವೆಲ್ಲಕ್ಕೂ ಒಂದು ಸಮಿತಿ ಮಾಡಿ, ಅದರ ಮೂಲಕ ಕೊಡುವುದೆಂದರೆ ಹೇಗೆ?

Sri H. C. LINGA REDDY.—On a point of clarification, Sir. My Hon'ble friend has a mistaken impression of what I said. I suggested that an expert Committee may go into the matter so that all these things may be consolidated and not an agency to be created to deal with all kinds of loans. I did not say that the Committee should dispose of loans.

ಶ್ರೀ ಎಂ. ಚಿಕ್ಕಲಿಂಗಯ್ಯ.—ಡಿಸ್ಟ್ರಿಕ್ಟ್ ಕೋ-ಆಪರೇಟಿವ್ ಬ್ಯಾಂಕುಗಳಿವೆ, ಅಲ್ಲದೆ ಡಿಸ್ಟ್ರಿಕ್ಟ್ ಬ್ಯಾಂಕುಗಳನ್ನು ಹೊಸದಾಗಿ ಮಾಡಿಕೊಂಡು ರಿಜರ್ವ್ ಬ್ಯಾಂಕಿನಿಂದ ಸಾಲ ಪಡೆದು ಈ ಡಿಸ್ಟ್ರಿಕ್ಟ್ ಬ್ಯಾಂಕುಗಳ ಮೂಲಕ ಸಾಲ ಕೊಡುವುದಕ್ಕೆ ಏರ್ಪಾಡು ಮಾಡಿದ್ದಾರೆ. ತಾಲ್ಲೂಕು ಸಹಕಾರ ಸಂಘಗಳ ಮೂಲಕ ಸಾಲ ಕೊಡುತ್ತಾರೆ. Statutory ಸಾಲಕ್ಕೂ ಸಹಕಾರ ಸಂಘಗಳು ಬೈಲಾ ಪ್ರಕಾರ ಕೊಡತಕ್ಕ ಸಾಲಕ್ಕೂ ಸಂಬಂಧವಿಲ್ಲ. ಹೀಗಿರುವಾಗ ಎಲ್ಲವನ್ನೂ ಸೇರಿಸಿ ಒಂದು ಸಮಿತಿಯನ್ನು ಮಾಡಿ ಕೊಡುವುದೆಂದರೆ ಬಹಳ ಕಷ್ಟ, ಇದರಲ್ಲಿ ನಾನಾ ತೊಂದರೆಗಳು ಬರುತ್ತವೆ. ತಕಾವಿ, ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನ್ ಇವು statutory ಸಾಲಗಳು. ಅಧಿಕಾರಿಗಳಿಂದ ಸೂಕ್ತ ಸಲಹೆ ಪಡೆದು ರೈತರಿಗೆ ಸಕಾಲದಲ್ಲಿ ಇವು ಸಿಕ್ಕುವಂತೆ ಮಾಡಬೇಕು, ಅಲ್ಲದೆ ಈ ಸಾಲಗಳು ರೈತರಿಗೆ ಕಡಮೆ ಬಡ್ಡಿಯಲ್ಲಿ ಸಿಕ್ಕಬೇಕು. ಆದರೆ ಈಗ ತಕಾವಿ ಮತ್ತು ಲ್ಯಾಂಡ್ ಇಂಪ್ರೂವ್‌ಮೆಂಟ್ ಸಾಲಗಳು ಬಡವರಿಗೆ ಸಿಕ್ಕುತ್ತಿಲ್ಲ, ಪ್ರಭಾವಶಾಲಿಗಳಾದ ಜನರಿಗೆ ಸಿಕ್ಕುತ್ತಿವೆ. ಡೆಪ್ಯುಟಿ ಕಮಿಷನರು, ಸಬ್ ಡಿವಿಜನ್ ಆಫೀಸರು, ಅಮಲ್ದಾರರು ಇವರಿಗೆ ಇಷ್ಟಿಷ್ಟು ಸಾಲದವರೆಗೆ ಕೊಡಬಹುದೆಂದು ಅಧಿಕಾರವಿದೆ. ಮುಖ್ಯವಾಗಿ ಬಡರೈತರಿಗೆ ಈ ಸಾಲಗಳು ಸಿಕ್ಕಬೇಕು. ಡಿಸ್ಟ್ರಿಕ್ಟ್ ಬ್ಯಾಂಕು, ಸಹಕಾರ ಸಂಘ ಮುಂತಾದುವುಗಳಲ್ಲಿ ರೈತರಿಗೆ ಸಾಲ ಸಿಕ್ಕಬೇಕಾದರೆ ಕಷ್ಟವಾಗುತ್ತದೆ. ಸರ್ಕಾರದ ಮೂಲಕ ಕೊಡುವ ಸಾಲಗಳೇನಿವೆಯೋ ಅವುಗಳನ್ನು, ಅಧಿಕಾರಿಗಳಿಗೆ ಸೂಕ್ತ ಸಲಹೆ ಕೊಟ್ಟು ಬಡವರಿಗೆ ಕೊಡಬೇಕು. ಬ್ಯಾಂಕುಗಳ ಮೂಲಕ ರೈತರಿಗೆ ಕೊಡುವ ಅಲ್ಪ ಕಾಲಾವಧಿಯ ಸಾಲವನ್ನು ಜನವರಿಯಲ್ಲಿ ತೆಗೆದುಕೊಂಡರೆ ಅವರು ಮಾರ್ಚಿಯೊಳಗೆ ಬಡ್ಡಿ ಸೇರಿಸಿ ವಾಪಸು ಕೊಡಬೇಕಾಗುತ್ತದೆ. ಆದಕಾರಣ ನಾನು ಸೂಚಿಸಿರುವ ರೀತಿ ಸರ್ಕಾರ ಕೊಡುವ ಸಾಲವನ್ನು ಹೆಚ್ಚು ಕೊಟ್ಟು ಸಹಾಯ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಒಟ್ಟಿನಲ್ಲಿ ಎಲ್ಲವನ್ನೂ ಸೇರಿಸಿ ಸಮಿತಿಯನ್ನು ಮಾಡುವುದು ಸೂಕ್ತವಲ್ಲ ಮತ್ತು ಕಾನೂನಿಗೆ ವಿರೋಧವಾಗುತ್ತದೆ.

*ಶ್ರೀ ಕೆ. ವಿ. ಬೈರೇಗೌಡ (ಬೆಂಗಳೂರು-ಉತ್ತರ).—ಶ್ರೀ ದೇವರಾಜ ಅರಸಿನವರು ಏನು ಹೇಳಿದರೋ ಅದು ಅನುಭವದ ವಿಷಯ. ಶ್ರೀಮಾನ್ ಚಿಕ್ಕಲಿಂಗಯ್ಯನವರು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ. ಸಮಿತಿಗೆ ಸಾಲ ಕೊಡುವ ಅಧಿಕಾರ ಕೊಡಬೇಕೆಂದು ಹೇಳಲಿಲ್ಲ. ಸಾಲ ಕೊಡುವುದರಲ್ಲಿ ನಾಲ್ಕಾರು ತೊಡಕುಗಳಿರುವುದರಿಂದ ಅದು ಸರಿಯಾಗಿ ನಡೆಯುತ್ತಿಲ್ಲ. ಉದಾಹರಣೆಗೆ, ತಕಾವಿ ಲೋನ್ ಮತ್ತು ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನ್ ಇವುಗಳನ್ನು ಕೊಡುವಾಗ ಅಧಿಕಾರಿಗಳ personal responsibility ಇರುವುದರಿಂದ, ಅವರು ಸರಿಯಾಗಿ ಕೊಡುತ್ತಿಲ್ಲ. ಬಡವರಿಗೆ ಕೊಡಬೇಕಾದರೆ ಇರುವ ಕಷ್ಟವೂ ಇದೇ. ಬಡವರಿಗೆ ಕೊಟ್ಟರೆ ಹಣ ವಾಪಸು ಬರುತ್ತದೆಯೋ ಇಲ್ಲವೋ ಎಂಬ ಅನುಮಾನದಿಂದ ಬೇಗ ಅವರಿಗೆ ಕೊಡುವುದಿಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—Personal responsibility ಇರುವುದರಿಂದ ಅಧಿಕಾರಿಗಳು ಹೇಗೆ ಹಿಂದೆಗೆಯುತ್ತಾರೋ, ಸಮಿತಿ ಮಾಡಿದರೂ ಅವರಿಗೂ ಇದೇ ಅನುಮಾನವುಂಟಾಗುತ್ತದೆ.

Sri D. DEVARAJ URS.—He is insisting on that point of a Committee. It was suggested that a Committee should go into the question of consolidating all these agencies and not that the Committee itself should be disbursing loans.

ಶ್ರೀ ಕೆ. ವಿ. ಬೈರೇಗೌಡ.—ಇಲಾಖೆಯ ಅಧಿಕಾರಿಗಳು ಕೊಡತಕ್ಕ ತಕಾವಿ ಮತ್ತು ಲ್ಯಾಂಡ್ ಇಂಪ್ರೂವ್‌ಮೆಂಟ್ ಸಾಲಗಳಲ್ಲಿ ಒಂದು ತೊಂದರೆಯಿದೆ. ಮೈಸೂರು ಸಂಸ್ಥಾನದಲ್ಲಿ ಸರ್ವೆ ಆಗದೇಯಿರುವ ಜೋಡಿ ಇನಾಮ್ ಗ್ರಾಮಗಳಲ್ಲಿ ರೈತರಿಗೆ ಸಾಲ ಸಿಕ್ಕುವುದು ಕಷ್ಟವಾಗಿದೆ; ಸಿಕ್ಕುವುದಿಲ್ಲ, ಸರ್ವೆ ಆಗಿರುವ ಗ್ರಾಮಗಳು ಡಿಸ್ಟ್ರಿಕ್ಟಿಗೆ ನಾಲ್ಕಾರು ಸಿಕ್ಕಬಹುದು. ಇನ್ನೂ ಅನೇಕ ಗ್ರಾಮಗಳು ಸರ್ವೆ ಆಗಿಲ್ಲ, ಅಲ್ಲಿ ರೈತರಿಗೆ ಕಷ್ಟ. ಸರ್ವೆ ಆಗದೇಯಿರುವುದರಿಂದ ಅವರಿಗೆ ಸಾಲ ದೊರಕುತ್ತಿಲ್ಲ. ಮದರಾಸ್ ಸರ್ಕಾರದಲ್ಲಿ ಸಾಲ ಯಾರಿಗಾದರೂ ಕೊಡಬೇಕೆಂದು ಅರ್ಜಿ ಹಾಕಿಕೊಂಡರೆ, ಇಂಥವರು ಸಾಲ ಕೇಳುತ್ತಾರೆಂದು ಗೆಜೆಟ್ಟಿನಲ್ಲಿ ಪ್ರಕಟಣೆ ಮಾಡುತ್ತಾರೆ; ಅದಕ್ಕೆ ಯಾವ ತಕರಾರೂ ಬಾರದಿದ್ದರೆ ಆಗ ಸಾಲ ಮಂಜೂರು ಮಾಡುತ್ತಾರೆ. ಇಲ್ಲಿಯೂ ಆ ರೀತಿ ಮಾಡಿ, ಸರ್ವೆ ಆಗದೇಯಿರುವ ಗ್ರಾಮಗಳ ರೈತರಿಗೂ ಜೋಡಿ ಗ್ರಾಮಗಳ ರೈತರಿಗೂ ಅನುಕೂಲ ಮಾಡಬೇಕೆಂದೂ, ಅವರಿಗೆ ಸುಲಭವಾಗಿ ಸಾಲ ಸಿಕ್ಕುವಂತೆ ಮಾಡಬೇಕೆಂದೂ ಸಲಹೆ ಮಾಡುತ್ತೇನೆ.

ಶ್ರೀ ಬಿ. ಟಿ. ಕೆಂಪರಾಜ್ (ಬೆಂಗಳೂರು ದಕ್ಷಿಣ-ಅನುಸೂಚಿತ ಜಾತಿಗಳು).—ಈಗಾಗಲೇ ನಮ್ಮ ಸ್ನೇಹಿತರು ಕೆಲವು ಸೂಚನೆಗಳನ್ನು ಕೊಟ್ಟಿದ್ದಾರೆ. ಮುಖ್ಯವಾಗಿ, ಬಡವರು ಮತ್ತು ನಿಮ್ನ ಪಂಗಡದವರಿಗೆ ತಕಾವಿ ಸಾಲ ಮತ್ತು ಲ್ಯಾಂಡ್ ಇಂಪ್ರೂವ್‌ಮೆಂಟ್ ಸಾಲ ಬೆಂಗಳೂರು ಜಿಲ್ಲೆಯಲ್ಲಿ ಒಬ್ಬರಿಗೂ ಸಿಕ್ಕಿಲ್ಲವೆಂದು ಹೇಳಿದರೆ ಉತ್ಪ್ರೇಕ್ಷೆಯಲ್ಲ. ಇದಕ್ಕೆ ಕಾರಣ, ಅಧಿಕಾರಿಗಳ personal responsibility ಇರುವುದು. ನನಗೆ ಗೊತ್ತಿರುವ ಹಾಗೆ, ಕೆಲವರು ಸಾಲ ಬೇಕೆಂದು ಕೇಳಿದ ಮೇಲೆ, ಅವರಿಂದ ಅರ್ಜಿ ಹಾಕಿಸಿದ ಮೇಲೆ, ಅಮಲ್ದಾರರಲ್ಲಿಗೆ ಖುದ್ದು ಹೋದಾಗ ಆ ಅರ್ಜಿದಾರರಿಗೆ ಸಾಲ ಕೊಡಲು ಶಿಫಾರಸು ಮಾಡುವುದಕ್ಕಾಗುವುದಿಲ್ಲ, ಅವರ ಜಮೀನಿನ ಸೆಕ್ಯೂರಿಟಿ ಸರಿಯಾಗಿಲ್ಲ ಎಂದು ಹೇಳಿದುದು ನನ್ನ ಅನುಭವಕ್ಕೆ ಬಂದಿದೆ. ಆದುದರಿಂದ personal

(ಶ್ರೀ ಬಿ. ಟಿ. ಕೆಂಪರಾಜ್)

responsibility of the officer ಎಂದು ಏನು ಒಂದು ಕಲಮು ಇದೆಯೋ ಅದನ್ನು ಬದಲಾವಣೆ ಮಾಡಬೇಕು. ಉದಾಹರಣೆಗೆ ಹರಿಜನರಿಗೆ ಎರಡೆಕರೆ ಜಮೀನನ್ನು ಮುಫತ್ತಾಗಿ ಸರ್ಕಾರ ಕೊಡುತ್ತಾರೆ. ಅವರು ಅದನ್ನು ಸಾಗುಮಾಡಲು ಎತ್ತುಗಳನ್ನೂ ಬೀಜವನ್ನೂ ಕೊಂಡುಕೊಳ್ಳಲು ಸಾಲಕ್ಕಾಗಿ ಅರ್ಜಿ ಹಾಕುತ್ತಾರೆ. ಇಂಥ ಜಮೀನಿಗೆ ರೆವಿನ್ಯೂ ಇನ್ಸ್‌ಪೆಕ್ಟರು ಬೆಲೆ ಕಟ್ಟುವುದಿಲ್ಲ. ಕಟ್ಟಿದರೂ ಹತ್ತು ರೂಪಾಯಿ ಕಟ್ಟುತ್ತಾರೆ. ಎತ್ತುಗಳನ್ನು ಕೊಂಡುಕೊಳ್ಳಬೇಕಾದರೆ 250-300 ರೂಪಾಯಿ ಸಾಲ ಬೇಕಾಗುತ್ತದೆ. ಅಂಥ ಸಮಯದಲ್ಲಿ ಸಾಲ ಸಿಕ್ಕುವುದಿಲ್ಲ. ಹೀಗೆ ಯಾವಾಗ ಸಾಲ ಸಿಕ್ಕುವುದಿಲ್ಲವೋ ಆಗ ಅವನು ತನ್ನ ಜಮೀನನ್ನು ಮಾರಬೇಕಾಗುತ್ತದೆ. ಜಮೀನು ಕೈತಪ್ಪಿ ಹೋಗುತ್ತದೆ. ಹೀಗಾಗಿ ಸಾಲಗಳನ್ನು ಮಂಜೂರು ಮಾಡುವುದಕ್ಕೆ ಏನು ಹಣ ಒದಗಿಸಿಕೊಂಡಿದ್ದಾರೋ, ಯಾರಿಗೆ ಸಿಕ್ಕಬೇಕೋ ಅಂಥವರಿಗೆ ಸಿಕ್ಕದೆ ದೊಡ್ಡವರಿಗೆ ಸಿಕ್ಕುತ್ತದೆ. ಇದನ್ನು ಸರಿಮಾಡಬೇಕು.

ಎರಡನೆಯದಾಗಿ, ಲ್ಯಾಂಡ್ ಮಾರ್ಟ್‌ಗೇಜ್ ಲೋನ್ ಸಿಕ್ಕುವುದು ಬಹಳ ಕಷ್ಟ. ರಿಕಾರ್ಡ್ಸ್ build up ಮಾಡಲು ಒಂದು ಕ್ರಮವನ್ನು ಇಟ್ಟುಕೊಂಡಿದ್ದಾರೆ. ಈ ಕ್ರಮವನ್ನನುಸರಿಸಬೇಕಾದರೆ ಎಷ್ಟೋ ವರ್ಷವಾಗುತ್ತದೆ. ಆದರೂ ಸಾಲ ಎಷ್ಟೋ ವೇಳೆ ಮಂಜೂರಾಗುವುದಿಲ್ಲ. ಮುಲ್ಕಿ ಬಿದ್ದು ಅನೇಕ ವರ್ಷವಾದ ಮೇಲೆ, ಕೊಡುವುದಿಲ್ಲವೆಂದು ತಿಳಿಸುತ್ತಾರೆ. ಇದಕ್ಕೆ ಬೇಕಾದಷ್ಟು ಉದಾಹರಣೆಗಳನ್ನು ಕೊಡಬಲ್ಲೆ. ಇಂಥಾ ಸಾಲಗಳು ಜಾಗ್ರತೆ ವಿಲೇಯಾಗುವುದಕ್ಕೆ ಸರಿಯಾದ ಕ್ರಮ ತೆಗೆದುಕೊಳ್ಳಬೇಕು. ಈಗ ಜಾರಿಯಲ್ಲಿರುವ ಕಾನೂನು ಅಥವಾ ನಿಬಂಧನೆಗಳನ್ನು ಬದಲಾವಣೆ ಮಾಡಲು ಸೂಕ್ತ ಕ್ರಮ ಕೈಗೊಂಡರೆ, ಈ ಸಾಲಗಳನ್ನು ಕೊಡುವ ಉದ್ದೇಶವೇನಿದೆಯೋ ಅದು ಸಫಲವಾಗುತ್ತದೆಂದು ಹೇಳುತ್ತೇನೆ.

4-30 P.M.

*ಶ್ರೀ ಜಿ. ಪಾಪಣ್ಣ (ಶಿಡ್ಲಘಟ್ಟ-ಚಿಕ್ಕಬಳ್ಳಾಪುರ).—ಸ್ವಾಮಿ, ಶ್ರೀ ಬೈರೇಗೌಡರು ಈಗತಾನೆ ಕೆಲವು ವಿಷಯಗಳನ್ನು ಹೇಳಿದ್ದಾರೆ. ನಾನು ಜೋಡಿ ಗ್ರಾಮದರೈತರುಗಳ ಸಂಬಂಧದಲ್ಲಿ ಒಂದೆರಡುಮಾತುಗಳನ್ನು ಹೇಳುತ್ತೇನೆ. ಜೋಡಿ ಗ್ರಾಮಗಳಲ್ಲಿರುವ ರೈತರಿಗೆ ಸರ್ಕಾರದಿಂದ ಸಾಲಸಿಕ್ಕದೆ ಇದೆ. ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ರಿಸರ್ವ್ ಬ್ಯಾಂಕಿನವರು ರೈತರಿಗಿರುವ ಸಾಲದಲ್ಲಿ ಶೇಕಡ ಹದಿನಾರರಷ್ಟು ಭಾಗವನ್ನು ರೈತರಿಗೆ ಕಡಿಮೆ ದರದಲ್ಲಿ ಸಾಲವಾಗಿ ಕೊಡುವುದಕ್ಕೆ ಅವಕಾಶವನ್ನು ಕಲ್ಪಿಸಿದ್ದಾರೆ. ಸಂಸ್ಥಾನ ಸರ್ಕಾರದವರೂ ಕೂಡ ಸಾಲವನ್ನು ಕೊಡುತ್ತಾರೆ. ಏನಾದರೂ ಕೂಡ ಜೋಡಿ ಗ್ರಾಮಗಳಲ್ಲಿರುವ ರೈತರಿಗೆ ಈ ಸಾಲ ಸಿಕ್ಕುತ್ತಿಲ್ಲ. ಜೋಡಿ ಗ್ರಾಮಗಳಲ್ಲಿರುವ ರೈತನು ಸಾಲಕ್ಕೆ ಅರ್ಜಿ ಕೊಟ್ಟರೆ ಅವರಿಗೆ ಯಾವ ಆಧಾರದಮೇಲೆ ಸಾಲ ಕೊಡುವುದು ಎಂಬ ಕಾರಣದಿಂದ ಸಾಲ ದೊರೆಯುತ್ತಿಲ್ಲ. ಈ ಜೋಡಿಗ್ರಾಮಗಳ ರೈತರಿಗೂ ಸಹ ಸಾಲ ದೊರೆಯುವಂತೆ ಸರ್ಕಾರದವರು ಏನಾದರೂ ಏರ್ಪಾಡು ಮಾಡಬೇಕು. ಮದರಾಸಿನಲ್ಲಿ ಇಂಥ ಪದ್ಧತಿ ಇದೆ ಎಂದು ಮಾನ್ಯ ಮಿತ್ರರೊಬ್ಬರು ಹೇಳಿದರು.

ನನ್ನ ಪ್ರಶ್ನೆಯೊಂದಕ್ಕೆ ಉತ್ತರ ಕೊಡುತ್ತ ಮಾನ್ಯ ಮಂತ್ರಿಗಳು ಜೋಡಿ ಗ್ರಾಮಗಳ ಸಮಸ್ಯೆಯು ಬಗೆಹರಿಯಬೇಕಾದರೆ ಇನ್ನು ಐದು ವರ್ಷಗಳಾದರೂ ಬೇಕು ಎಂದು ತಿಳಿಸಿದ್ದಾರೆ. ಜೋಡಿಗ್ರಾಮಗಳ ರದ್ದಿಯಾತಿ ಆಕ್ಟ್‌ನಿಂದ ಈ ಗ್ರಾಮಗಳ ರೈತರಿಗೆ ಈಗ ಸದ್ಯಕ್ಕೆ ಮುಕ್ತಿ ದೊರಕುವಹಾಗಿಲ್ಲ. ಪರಿಸ್ಥಿತಿ ಹೀಗಿರುವುದರಿಂದ, ರೈತರಿಗೆ ದೊರಕಬೇಕಾದ ಸೌಲಭ್ಯಗಳನ್ನು ತಪ್ಪಿಸಿದರೆ ಜೋಡಿ ಗ್ರಾಮಗಳ ರೈತರು ಬಹಳ ಹಿಂದುಳಿಯಬೇಕಾಗುತ್ತದೆ. ಅದಕ್ಕೋಸ್ಕರ ಜೋಡಿಗ್ರಾಮಗಳ ರೈತರಿಗೂ ಸಹ ಸಾಲ ದೊರೆಯುವುದಕ್ಕೆ ಈ ಏರ್ಪಾಡಿನಲ್ಲಿ ಆಗಲಿ, ಅಥವಾ ಮತ್ತೆ ಬೇರೆ ಯಾವುದಾದರೂ ಏರ್ಪಾಡಿನಲ್ಲಿ ಆಗಲಿ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ.

*Sri Mulka GOVINDA REDDY (Chitaldrug).—I oppose this Demand, Sir. Criticisms have already been levelled against the way in which these schemes are put into operation. Some of the schemes that have been formulated by Government and undertaken by them are really worthy of praise. But unfortunately, while implementing these schemes, not only there is inordinate delay, but all sorts of mal-practices have been also allowed to creep in, so much so, the raiyats and those who want loans from Government have not been benefited to the extent that Government expects them to be benefited. Regarding the applications for loans from the Land Mortgage Banks, many a time, unnecessary queries have been raised and the correspondence is prolonged and by the time the loanee gets the amount, he will have spent considerable amounts in making trips to, Bangalore. Again, Sir, regarding the loans for electrical pumps, unnecessarily queries are raised. Correspondence is prolonged, objections are taken to, so much so, those who want to get electrical pumps installed, will have incurred considerable amount in putting up a pump-house, in investing monies on other things. The Department concerned, makes inordinate delay in sanctioning these loans.

Coming to the loans for housing schemes for the low income groups, Sir, the Government have sanctioned about 35 lakhs to be distributed through the Provincial House Building Corporation. Whenever objection is raised and it is brought to the notice of the concerned authorities in the House Building Corporation, they say that they are inadequately staffed. They say that representations have been made to Government that some more hands may

* ಶ್ರೀ ಬಿ. ಮಾಧವಾಚಾರ್ (ಭದ್ರಾವತಿ).—ಸ್ವಾಮಿ, ವಿವಿಧ ಬಾಬುಗಳ ಬಗ್ಗೆ ಮಂಡಿಸಿರತಕ್ಕ ಡಿಮ್ಯಾಂಡನ್ನು ಸ್ವಾಗತಿಸುತ್ತ ಒಂದಂಶದ ಕಡೆಗೆ ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ. ಮೈಸೂರು ಸಂಸ್ಥಾನದಲ್ಲಿನ ಭಿಕ್ಷುಕರ ಸಮಸ್ಯೆ ಕುರಿತು ಕೆಲವು ವಿಷಯಗಳನ್ನು ಹೇಳುತ್ತೇನೆ. ಹಿಂದೆ ಶ್ರೀ ಡಿ. ಎಚ್. ಚಂದ್ರಶೇಖರಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಿದರು. ಆ ಸಮಿತಿಯವರು ನಾನಾ ವಿಧವಾದ ಪ್ರಶ್ನಾವಳಿಗಳ ಮೂಲಕ ಸಂಸ್ಥಾನದ ಅನೇಕ ಜನ ತಜ್ಞರ ಅಭಿಪ್ರಾಯವನ್ನು ಸಂಗ್ರಹಿಸಿ ಅವುಗಳಲ್ಲಿ ಕೆಲವನ್ನು ಐದಾರು ವರ್ಷಗಳ ಹಿಂದೆ ಶಿಫಾರಸು ಮಾಡಿದರು. ಆಗ ಸರ್ಕಾರದವರ ಲಕ್ಷ್ಯ ಭಿಕ್ಷುಕರ ಕಡೆ ಬಿದ್ದು ಇಂದಲ್ಲದಿದ್ದರೆ ನಾಳೆ ಭಿಕ್ಷಾಟನೆಯನ್ನು ಸಂಪೂರ್ಣವಾಗಿ ನಿರೋಧಗೊಳಿಸಬಹುದೆಂದು ಭಾವಿಸಿದೆವು. ಹಾಗೆ ಭಿಕ್ಷಾಟನೆಯನ್ನು ನಿರೋಧಗೊಳಿಸುವ ಸಂದರ್ಭದಲ್ಲಿ ಕಾರಣಾಂತರದಿಂದ ಭಿಕ್ಷಾಟನೆ ವೃತ್ತಿಯಲ್ಲಿ ತೊಡಗಿರತಕ್ಕ ಸಹೋದರ ಸಹೋದರಿಯರ ಮತ್ತು ಮಕ್ಕಳ ಯೋಗಕ್ಷೇಮವನ್ನು ನೋಡಿ ಅವರನ್ನು ಈ ವೃತ್ತಿಯಿಂದ ತಪ್ಪಿಸುವುದು ಅಗತ್ಯವೆಂದು ಭಾವಿಸಿ ಬೆಂಗಳೂರು ನಗರದಲ್ಲಿ ಒಂದು ಪರಿಹಾರ ಕೇಂದ್ರವನ್ನು ಕೂಡ ಪ್ರಾರಂಭಿಸಿದರು. ಆದರೆ ಆ ಕೆಲಸ ಅಷ್ಟಕ್ಕೆ ನಿಲ್ಲಬಾರದಾಗಿತ್ತು. ನಾವು ಪ್ರತಿವರ್ಷದ ಬಡ್ಜೆಟ್ಟನ್ನೂ ನೋಡಿದರೆ, ಕೇವಲ ಒಂದು ಲಕ್ಷ ರೂಪಾಯಿಗಳನ್ನು ಇದಕ್ಕಾಗಿ ಒದಗಿಸುತ್ತಿದ್ದಾರೆ. ಈಗ ನಾವು ಒಂದು ಸಮತಾವಾದ ಮಾದರಿಯ ಸಮಾಜ ಧ್ಯೇಯವನ್ನು ಅಂಗೀಕರಿಸಿದ ಮೇಲಂತೂ ಈ ವಿಧವಾದ ನಿರ್ಗತಿಕರಾದ ಜನಗಳು ಎಲ್ಲೆಲ್ಲೂ ನಮ್ಮ ದೃಷ್ಟಿಗೆ ಹೆಚ್ಚಾಗಿ ಬೀಳಬೇಕಾಗಿದೆ. ಅವರ ಯೋಗಕ್ಷೇಮದ ಕಡೆ ನಾವು ಬಹಳ ಶ್ರಮಿಸಬೇಕಾಗಿದೆ. ಯಾವ ಕಾರಣಕ್ಕೋಸ್ಕರ ಅವರುಗಳು ಭಿಕ್ಷಾಟನೆಗೆ ತೊಡಗಿದರು ಎಂಬುದನ್ನು ನಾವುಗಳು ತಿಳಿದು ಅಂಥ ಕಾರಣಗಳನ್ನು ಬಗೆಹರಿಸುವ ಕಾರ್ಯದಲ್ಲಿ ನಮ್ಮ ಸರ್ಕಾರದವರು ಕೊಡುಗೈಯಿಂದ ಮುಂದೆ ಬರುವುದಿಲ್ಲವೋ ಅಲ್ಲಿಯವರೆಗೆ ನಾವು ಭಿಕ್ಷಾಟನೆಯನ್ನು ಪೂರ್ಣವಾಗಿ ನಿರೋಧಗೊಳಿಸುವುದಕ್ಕೆ ಶಕ್ತರಾಗುವುದಿಲ್ಲ; ಅಲ್ಲಿಯವರೆಗೂ ನಮ್ಮ ಸಮತಾವಾದ ಮಾದರಿಯ ಸಮಾಜದ ಧ್ಯೇಯವನ್ನು ನಾವು ಕಾರ್ಯರೂಪಕ್ಕೆ ತಂದಂತಾಗುವುದಿಲ್ಲ. ಆದುದರಿಂದ ಈ ವರ್ಷ ಅಗತ್ಯವಾಗಿ ಹೆಚ್ಚು ಹಣವನ್ನು ಒದಗಿಸಬೇಕಾದದ್ದು ಕರ್ತವ್ಯ. ಈ ಭಿಕ್ಷಾಟನೆಯನ್ನು ನಿರೋಧಗೊಳಿಸತಕ್ಕ ಕಾರ್ಯಕ್ಕೆ ಸಾಕಷ್ಟು ಹಣವನ್ನು ಈ ಆಯವ್ಯಯ ಪಟ್ಟಿಯಲ್ಲಿ ಒದಗಿಸಿಲ್ಲವೆನ್ನುವುದನ್ನು ಮಾತ್ರ ಖಂಡಿತವಾಗಿ ಹೇಳಬಹುದು.

(ಶ್ರೀ ಬಿ. ಮಾಧವಾಚಾರ್.)

ಎರಡನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ಈ ರೀತಿ ಅನೇಕ ಕಾರ್ಯಗಳಿಗಾಗಿ ಹೆಚ್ಚಿನ ಹಣವನ್ನು ಕೇಂದ್ರ ಸರ್ಕಾರದವರು ಕೂಡ ಒದಗಿಸಿರುವುದು ಕಾಣಬರುತ್ತದೆ. ಲಕ್ನೋ, ಮದರಾಸ್, ಮುಂತಾದ ಕಡೆಗಳಲ್ಲಿ ಈ ಭಿಕ್ಷಾಟನೆ ನಿರೋಧದ ಬಗ್ಗೆ ತೀವ್ರವಾದ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿದ್ದಾರೆ. ಸಮಿತಿಯವರು ಮಾಡಿರುವ ಶಿಫಾರಸುಗಳು ನನಗೆ ಗೊತ್ತಿಲ್ಲ. ನನ್ನ ಒಂದು ಪ್ರಶ್ನೆಗೆ ಉತ್ತರವಾಗಿ ಸಮಿತಿಯವರ ಶಿಫಾರಸುಗಳು ಕಾರ್ಯಾಚರಣೆಯಲ್ಲಿವೆ ಎಂದು ಮಾತ್ರ ಹೇಳಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಸಂಸ್ಥಾನದಲ್ಲಿ ಎಲ್ಲ ಜಿಲ್ಲಾ ಹೆಡ್‌ಕ್ವಾರ್ಟರುಗಳಲ್ಲಿ, ಏಕೆ—ತಾಲ್ಲೂಕು ಹೆಡ್‌ಕ್ವಾರ್ಟರುಗಳಲ್ಲಿಯೂ ಕೂಡ, ಪರಿಹಾರ ಕೇಂದ್ರಗಳನ್ನು ತೆರೆದು, ಅಲ್ಲಿ ಭಿಕ್ಷಾಟನೆ ಮಾಡತಕ್ಕವರನ್ನು ಬಲಾತ್ಕಾರವಾಗಿ ತೆಗೆದುಕೊಂಡು ಹೋಗಿ ಆ ಕೇಂದ್ರಗಳಲ್ಲಿಟ್ಟು, ಅವರಿಗೆ ವೃತ್ತಿ ಶಿಕ್ಷಣಗಳನ್ನು ಕೊಡಬೇಕು. ಅಂಗಹೀನರಾದವರಿಗೆ ಜಿಲ್ಲಾ ಕೇಂದ್ರಗಳಲ್ಲಿ ಅಥವಾ ಸಂಸ್ಥಾನದಲ್ಲಿ ಕೆಲವಾರು ಪ್ರದೇಶಗಳಲ್ಲಿ ಪರಿಹಾರ ಕೇಂದ್ರಗಳನ್ನು ತೆರೆದು, ಅವರನ್ನು ಅಂಥ ಕೇಂದ್ರಗಳಲ್ಲಿ ಕಾಪಾಡುವ ವ್ಯವಸ್ಥೆಯನ್ನು ಮಾಡಬೇಕು. ಈ ಕಾರ್ಯಗಳಿಗೆ ಪೌರಸಭೆಗಳ, ಸ್ಥಳೀಯಸಂಸ್ಥೆಗಳ ಅಗತ್ಯವಿದ್ದಲ್ಲಿ ಸೇವಾಶ್ರಮಗಳು ಮತ್ತು ಇತರ ಕ್ಷೇತ್ರಗಳ ಸಹಕಾರ ಪಡೆದು ಸಂಸ್ಥಾನಗಳಲ್ಲಿ ಒಂದು ಮಾದರಿಯಾಗುವ ರೀತಿಯಲ್ಲಿ, ಮೈಸೂರು ಸಂಸ್ಥಾನ ಅನೇಕ ಕೆಲಸಕಾರ್ಯಗಳಲ್ಲಿ 'ಮಾದರಿ ಸಂಸ್ಥಾನ' ವೆಂದು ಕೀರ್ತಿಯನ್ನುಗಳಿಸಿದಂತೆ ಈ ಭಿಕ್ಷಾಟನೆಯ ನಿರೋಧ ಶಾಸನದ ಕಾರ್ಯಾಚರಣೆಯಲ್ಲಿ ಕೂಡ ಬಹಳ ಮುಂದುವರಿದ ರೀತಿಯಲ್ಲಿ ಈ ಪ್ರಶ್ನೆಯನ್ನು ಬಗೆ ಹರಿಸಿದ ಕೀರ್ತಿಯನ್ನು ಗಳಿಸುವುದಕ್ಕೆ ಸಹಾಯಕವಾಗುವಂತೆ, ನಮ್ಮ ಸರ್ಕಾರದವರು ವ್ಯವಸ್ಥೆಯನ್ನು ಮಾಡಬೇಕೆಂದು ಆಶಿಸಿ ನನ್ನ ಎರಡು ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಪಿ. ಆರ್. ರಾಮಯ್ಯ (ಬಸವನಗುಡಿ).—ಸ್ವಾಮಿ, ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಕೆಲಸ ಮಾಡತಕ್ಕ ರೀತಿಯ ವಿಷಯವಾಗಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಎಂಬುದು ಈಚೆಗೆ ನೇಮಕವಾದ ಒಂದು ಸಂಸ್ಥೆ. ಅದರಲ್ಲಿ ಪ್ರತಿ ತಿಂಗಳೂ ಕೆಲಸಗಳನ್ನು ಕೊಡುತ್ತಾರೆ. ಇಷ್ಟು ಜನ ಕೆಲಸವಿಲ್ಲದವರು ತಮ್ಮ ಹೆಸರುಗಳನ್ನು ರಿಜಿಸ್ಟರು ಮಾಡಿಸಿಕೊಂಡರು, ಇಷ್ಟು ಜನರಿಗೆ ಕೆಲಸ ಸಿಕ್ಕಿದೆ ಎಂದು ಆಗಾಗ್ಗೆ ತಿಳಿಸುತ್ತಾರೆ. ಆದರೆ ಅದನ್ನು ನೋಡಿದರೆ ನಮ್ಮ ದೇಶದಲ್ಲಿ ಇಷ್ಟು ಕಡಮೆ ಕೆಲಸವಿಲ್ಲದಿರುವವರಿದ್ದಾರೆಯೆ ಎಂದು ಅನುಮಾನ ಬರುತ್ತದೆ. ಈ ಅಂಕಿಅಂಶ ಸರಿಯಾಗಿರುವಂತೆ ಕಂಡು ಬರುತ್ತಿಲ್ಲ. ಆದ್ದರಿಂದ ನಿಜವಾದ ಲೆಕ್ಕ ಸರಿಯಾಗಿ ಕೊಡಬೇಕಾದರೆ ಯಾವರೀತಿ ಈ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ರಚನೆಯನ್ನು ಬದಲಾಯಿಸಬೇಕೆಂಬುದನ್ನು ಯೋಚನೆ ಮಾಡಬೇಕಾಗಿದೆ.

ಇನ್ನೊಂದು ವಿಷಯ ಈ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಲ್ಲಿ ಕೆಲಸವಿಲ್ಲದಿರುವವರು ಹೋಗಿ ತಮ್ಮ ಹೆಸರನ್ನು ರಿಜಿಸ್ಟರು ಮಾಡಿಸಿಕೊಳ್ಳುತ್ತಾರೆ. ಆದರೆ ಇದೇ ರೀತಿಯಲ್ಲಿ ಕೈಗಾರಿಕಾ ಸಂಸ್ಥೆಗಳಲ್ಲೂ ಇಷ್ಟು ಕೆಲಸ ಖಾಲಿಯಾದುವು, ಇಷ್ಟು ಕೆಲಸಗಳಿಗೆ ಇಷ್ಟು ಜನರನ್ನು ಸೇರಿಸಬೇಕಾಗುತ್ತದೆ ಎಂಬ ಲೆಕ್ಕವನ್ನು ಜನರಿಗೆ ಗೊತ್ತಾಗುವ ರೀತಿಯಲ್ಲಿ ತಿಳಿಸಬೇಕು. ಅದು ಈಗ ಈ ರೀತಿ ಆಗುತ್ತಿಲ್ಲ. ಒಂದು ತರಹ ಲೆಕ್ಕ ಮಾತ್ರ ಸಿಕ್ಕುತ್ತಿದೆ. ಎಷ್ಟು ಕೆಲಸ ಸಿಕ್ಕುತ್ತದೆಂಬುದಕ್ಕೆ ಈಗ ಲೆಕ್ಕ ದೊರೆಯುತ್ತಿಲ್ಲ.

ಮತ್ತೊಂದು ಮೈಸೂರಿನಲ್ಲಿರುವ ಕೈಗಾರಿಕಾ ಸಂಸ್ಥೆಗಳಲ್ಲಿ, ಬೆಂಗಳೂರಿನಲ್ಲಿರುವ ಕೈಗಾರಿಕಾ ಸಂಸ್ಥೆಗಳಲ್ಲಿ ಯಾರನ್ನು ನೇಮಕಮಾಡಬೇಕೆಂಬುದಕ್ಕೆ ಏನಾದರೂ ನಿಬಂಧನೆಯಿದೆಯೆ ? ನಮ್ಮ ಮೈಸೂರು ಸಂಸ್ಥಾನದಲ್ಲಿರುವ ಇಷ್ಟು ಜನರನ್ನು ತೆಗೆದುಕೊಳ್ಳಬೇಕು, ಇಷ್ಟು ಜನ ಮೈಸೂರಿನವರಾಗಿರಬೇಕು ಎಂದು ಯಾವ ನಿಬಂಧನೆಯೂ ಇಲ್ಲ. ಸಾಮಾನ್ಯವಾಗಿ ಬೆಂಗಳೂರಿನಲ್ಲಿ ದೊಡ್ಡ ಕೈಗಾರಿಕೆಗಳಿವೆ. ಅವುಗಳಲ್ಲಿ ಬೆಂಗಳೂರು ಸಿಟಿಯವರಿಗೆ ಮತ್ತು ಮೈಸೂರು ಸಂಸ್ಥಾನದವರಿಗೆ ಸ್ವಲ್ಪ ಮಟ್ಟಿಗಾದರೂ ಕೆಲಸ ದೊರೆತು ಅವರ ನಿರುದ್ಯೋಗ ಸಮಸ್ಯೆ ಪರಿಹಾರವಾಗಬೇಕೆಂದು ನಿರೀಕ್ಷೆ ಮಾಡುವುದು ಸಹಜವಾಗಿಯೇ ಇದೆ. ಹಿಂದೂಸ್ತಾನ್ ವಿಮಾನ ಕಾರ್ಖಾನೆಯಲ್ಲಾಗಲಿ, ಟೆಲಿಫೋನ್ ಕಾರ್ಖಾನೆಯಲ್ಲಾಗಲಿ, ಭಾರತ್ ಎಲೆಕ್ಟ್ರಾನಿಕ್ಸ್‌ನಲ್ಲಾಗಲಿ, ಇಂಥ ಸಂಸ್ಥೆಗಳಲ್ಲಾಗಲಿ ಮೈಸೂರಿನ ಎಷ್ಟು ನಿರುದ್ಯೋಗಿಗಳಿಗೆ ಗೌರವ ಸಿಕ್ಕುತ್ತಿದ, ಎಷ್ಟು ಮಟ್ಟಿಗೆ ಕೆಲಸ ಸಿಕ್ಕುತ್ತಿದೆ ಎಂಬ ವಿಷಯವನ್ನು ಗಮನಿಸಿ ಸರ್ಕಾರ ಏನೂ ಏರ್ಪಾಡು ಮಾಡಿಲ್ಲ. ಈ ವಿಷಯದಲ್ಲಿ ನಮ್ಮ ದೇಶದವರ ಹಿತವನ್ನು ರಕ್ಷಣೆ ಮಾಡುವುದು ಸರ್ಕಾರದ ಕರ್ತವ್ಯ. ಆದ್ದರಿಂದ ಅವರು ಈ ವಿಷಯದಲ್ಲಿ ಇಂಡಿಯಾ ಸರ್ಕಾರದೊಂದಿಗೆ ಒಂದು ರೀತಿಯಾದ ವಿಚಾರವಿನಿಮಯ ಮಾಡಿಕೊಂಡು ಯಾವರೀತಿಯಾಗಿ ಮೈಸೂರಿನವರಿಗೆ,—ಅರ್ಹರಾದವರನ್ನು ತೆಗೆದುಕೊಳ್ಳಲಿ, ಅನರ್ಹರನ್ನು ತೆಗೆದುಕೊಳ್ಳಬೇಕಾಗಿಲ್ಲ—ಅರ್ಹರಾದವರಿಗೆ ಸಾಕಾದಷ್ಟು ಸ್ಥಾನ ದೊರೆಯುವಂತೆ ಮಾಡಬೇಕು ಎಂದು ಸ್ವಲ್ಪ ಯೋಚನೆಮಾಡಿ ಏರ್ಪಾಡು ಮಾಡಬೇಕೆಂದು ಸೂಚಿಸುತ್ತೇನೆ.

ಇನ್ನು ಭಿಕ್ಷುಕರ ಕಾಲೊನಿ ವಿಚಾರ ನೋಡೋಣ. ಅದನ್ನು ವಜಾ ಮಾಡಿದರೆ ನಮಗೆ ಒಂದು ಲಕ್ಷವೋ ಏನೋ ಉಳಿಯುತ್ತದೆ. ಬೆಂಗಳೂರು ಸಿಟಿಯಲ್ಲಿ ಭಿಕ್ಷುಕರ ಭಿಕ್ಷಾವೃತ್ತಿಯನ್ನು ಹೋಗಲಾಡಿಸುವುದಕ್ಕೆ ಮಾಗಡಿ ರಸ್ತೆಯಲ್ಲಿ ಒಂದು ಆಲಯವನ್ನು ಮಾಡಿದ್ದಾರೆ. ಮತ್ತು ಅಲ್ಲಿ ಕೆಲವರನ್ನು ಈಗ ಇಡುತ್ತಾರೆ. ಆದರೆ ಅಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳಾಗಲಿ ಅಥವಾ ಮೇಲ್ವಿಚಾರಣೆ ನೋಡಿಕೊಳ್ಳುವ ಕಾರ್ಯದರ್ಶಿಗಳಾಗಲಿ ಅಥವಾ ಮಂತ್ರಿಗಳಾಗಲಿ ಅಲ್ಲಿನ ಕೆಲಸ ನೋಡಿ ಅದಕ್ಕಾಗಿ ಖರ್ಚಾಗುತ್ತಿರುವುದು ಸಾರ್ಥಕವಾಗುತ್ತಿದೆಯೇ ಎಂದು ನೋಡಿದ್ದಾರೆಯೆ! ಬೆಂಗಳೂರಿನಲ್ಲಿ ಈ ಭಿಕ್ಷಾವೃತ್ತಿ ಮಾಯವಾಗಿಲ್ಲ, ಮನೆಗಳಲ್ಲಿ ಭಿಕ್ಷುಕರು ಬಂದು ಕಾಟವನ್ನುಂಟು ಮಾಡುವುದು ತಪ್ಪಿಲ್ಲ, ಮತ್ತು ಭಿಕ್ಷುಕರು ಕಾಲೊನಿಗೆ ಹೋಗಿ ಅಲ್ಲಿ ಸಂತೋಷದಿಂದ ಇದ್ದರೆ, ಪರವಾಗಿಲ್ಲ, ಒಂದು ತರಹ ವ್ಯವಸ್ಥೆ ಮಾಡಿದ್ದಾರೆ ಎಂದು ಹೇಳಬಹುದು ; ಆದರೆಹಾಗೆ ಹೇಳುವ ಹಾಗಿಲ್ಲ. ಅವರಿಗೂ ತೃಪ್ತಿಯಿಲ್ಲ. ಒಂದೊಂದು ಸಾರಿ ವ್ಯಾನ್ ತಂದು ನಾಯಿಗಳನ್ನು ಹಿಡಿದುಕೊಂಡು ಹೋಗುವಹಾಗೆ ಭಿಕ್ಷುಕರನ್ನು ಹಿಡಿದು ಅದರಲ್ಲಿ ತುಂಬಿಕೊಂಡು ಹೋಗುತ್ತಾರೆ. ಪುನಃ ಆ ಭಿಕ್ಷುಕರು ಬೀದಿಗೆ ವಾಪಸು ಬರುತ್ತಾರೆ. ಈ ಸಂದರ್ಭದಲ್ಲಿ ಒಂದು ತಮಾಷೆ ನಡೆದುದನ್ನು ಹೇಳುತ್ತೇನೆ. ನಮ್ಮಲ್ಲಿ ಭಿಕ್ಷಾವೃತ್ತಿಯೆಂಬುದು ಮತಕ್ಕೆ ಸಂಬಂಧಪಟ್ಟ ಪ್ರಶ್ನೆಯಾಗಿದೆ. ಅದು ಬರೀ ನಿರುದ್ಯೋಗಕ್ಕೆ ಸಂಬಂಧಪಟ್ಟಿರುವ ಪ್ರಶ್ನೆಯಲ್ಲ. ಒಂದು ಶ್ರಾವಣ ಶನಿವಾರದ ದಿನ ಎರಡು ಚಿಕ್ಕ ಹುಡುಗರಿಗೆ ನಾಮ ಹಾಕಿ ಕೈಗೆ ಪಾತ್ರೆಕೊಟ್ಟು ಕಳುಹಿಸಿದರು.

ಅವರಿಬ್ಬರೂ 'ಶ್ರೀನಿವಾಸಾಯ ಮಂಗಳಂ' ಎಂದು ಹೇಳಿಕೊಂಡು ಮನೆಗೆ ಹೋಗುತ್ತಿದ್ದರು. ಆಗ ವ್ಯಾನ್ ಬಂದು ಭಿಕ್ಷುಕರನ್ನು ಕರೆದುಕೊಂಡು ಹೋಗುವಂತೆ ಆ ಹುಡುಗರನ್ನು ಕರೆದುಕೊಂಡು ಹೋಯಿತು. ಈ ರೀತಿಯಾಗಿ ಮಕ್ಕಳು ಮನೆಗೆ ಬಾರದೆ ತಂದೆ ತಾಯಿ ಗಳಿಗೆ ಯೋಚನೆಯಾಯಿತು, ಮಕ್ಕಳೂ ಹೋದರು, ಪಾತ್ರೆಯೂ ಸಹ ಹೋಯಿತು. ಕಡೆಗೆ ಅವರು ವಾಪಸುಬಂದರು. ಹೀಗೆ ನಮ್ಮ ದೇಶದಲ್ಲಿ ಸನ್ಯಾಸಿ ಗಳು, ಬೈರಾಗಿಗಳು, ಮತ ಸಂಪ್ರದಾಯ ಉಳ್ಳವರು ಆಗಾಗ್ಗೆ ಭಿಕ್ಷಾವೃತ್ತಿಯನ್ನು ನಡೆಸುತ್ತಾರೆ. ಇದನ್ನು ಕಾನೂನು ಮಾಡಿ ತಪ್ಪಿಸುವುದಕ್ಕಾಗುವುದಿಲ್ಲ. ಅದರಲ್ಲೂ ಹಿಂದೂ ಮತ್ತು ಮುಸ್ಲಿಂ ಸಮಾಜದಲ್ಲಿ ಇದು ಜಾಸ್ತಿ. ಮಹಮದೀಯರಲ್ಲಿ ಭಿಕ್ಷುಕರಿಗೆ ಸಹಾಯ ಮಾಡುವುದು, ಧರ್ಮ ಮಾಡುವುದು ಕಡ್ಡಾಯವಾಗಿದೆ. ಆದ್ದರಿಂದ ನಮ್ಮ ದೇಶದಲ್ಲಿ ಬೆಂಗಳೂರಿನಲ್ಲಿ ಮಾಡಿರುವ ರೀತಿಯಲ್ಲಿ ಒಂದು ಭಿಕ್ಷು ಕರ ಆಲಯವನ್ನು ತೆರೆದು ಭಿಕ್ಷಾವೃತ್ತಿಯನ್ನು ನಿರ್ಮೂಲ ಮಾಡುವುದಕ್ಕಾಗುವುದಿಲ್ಲ. ಇದಕ್ಕೆ ನನ್ನ ಸಲಹೆ, ಈ ರೀತಿ ಭಿಕ್ಷುಕರ ಆಲಯಗಳನ್ನು ನಡೆಸದೆ ಅನಾಥಾಶ್ರಮಗಳು, ಅಬಲಾಶ್ರಮಗಳು ಇಂಥವು ಗಳೇನಿವೆಯೋ ಅವುಗಳಿಗೆ ಗ್ರ್ಯಾಂಟು ಕೊಟ್ಟು ವಿವೇ ಚನೆಯಿಂದ ಈ ವೃತ್ತಿಗೆ ತಡೆ ಮಾಡಬೇಕು. ಸರ್ಕಾರ ದಿಂದ ನಿರರ್ಥಕವಾಗಿ ಹಣ ಖರ್ಚುಮಾಡಿ ಸಮಾಜ ದಲ್ಲಿರುವ ಲೋಪದೋಷಗಳನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲದಂಥ ಈಗ ಮಾಡಿರುವ ಏರ್ಪಾಡು ಸರಿ ಯಲ್ಲ. ಇದನ್ನು ಬದಲಾಯಿಸಬೇಕು.

ಇನ್ನೊಂದು ವಿಷಯವೇನೆಂದರೆ, ನಮ್ಮ ದೇಶದಲ್ಲಿ ಬಡತನ ಬಹಳವಾಗಿದೆ. ಅದನ್ನು ಹೋಗಲಾಡಿಸು ವುದಕ್ಕೆ ಮತ್ತು ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸುವುದಕ್ಕೆ ಸರಿಯಾದ ಏರ್ಪಾಡು ಮಾಡಿದರೆ ಬಹಳಮಟ್ಟಿಗೆ ಭಿಕ್ಷಾವೃತ್ತಿ ತಪ್ಪುತ್ತದೆ. ಈಗ ಸೋಷಿ ಯಲಿಸ್ಟಿಕ್ ಪ್ಯಾಟರ್ನ್ ಆಫ್ ಸೊಸೈಟಿ ಸ್ಥಾಪನೆ ಮಾಡಬೇಕೆಂದು ಹೇಳುತ್ತಿದ್ದೇವೆ. ಆ ಸೊಸೈಟಿ ಸ್ಥಾಪನೆಯಾದಾಗ ಅದರಲ್ಲಿ ಭಿಕ್ಷಾವೃತ್ತಿಗೆ ಯಾವ ಸ್ಥಾನವಿದೆಯೆಂದು ಯೋಚನೆ ಮಾಡಬಹುದು. ಈಗ ಸೋಷಿಯಲಿಸ್ಟಿಕ್ ಪ್ಯಾಟರ್ನ್ ಆಫ್ ಸೊಸೈಟಿ ಬರು ವುದಕ್ಕೆ ಬಹಳ ಕಾಲವಿದೆ. ಅದು ಬರುವುದಕ್ಕೆ ಮುಂಚೆ ಭಿಕ್ಷಾವೃತ್ತಿ ತಡೆಯಬೇಕಾದರೆ ಹೆಚ್ಚು ಪರಿಣಾಮ ಕಾರಿಯಾದ ಕಾರ್ಯವನ್ನು ಸಾರ್ವಜನಿಕರ ಸಹಕಾರ ಪಡೆದು ಮಾಡಬೇಕಾಗುತ್ತದೆ ಎಂಬುದಾಗಿ ನಾನು ಸಲಹೆ ಮಾಡುತ್ತೇನೆ.

Resignation of a Member.

Mr. SPEAKER.—Before the House adjourns for lunch, I want to make an announcement—an unpleasent announcement no doubt.

As required under rule 177, the Chair desires to announce that Sri Gangappa, a member representing Bellary, has resigned his seat in the Assembly.

Now the House will rise for lunch and meet again at 3-30 P.M.

The House adjourned at Three of the Clock and re-assembled after Lunch at Thirty-six Minutes past Three of the Clock.

[MR. DEPUTY SPEAKER in the Chair]

ಶ್ರೀ ಆರ್. ಮುನಿಸ್ವಾಮಯ್ಯ (ಬೆಂಗಳೂರು-ಉತ್ತರ-ಅನುಸೂಚಿತ ಜಾತಿಗಳು).—ಸ್ವಾಮಿ, ನಾನು ನಮ್ಮ ಮೈಸೂರು ಸರ್ಕಾರದ ಈ ಸ್ಟೋರ್ಸ್ ಪರ್ಚೇಸ್ ಕಮಿಟಿಯ ವಿಚಾರವಾಗಿ ಒಂದೆರಡು ಅಂಶಗಳನ್ನು ಈಗ ಈ ಮಾನ್ಯಸಭೆಯ ಗಮನಕ್ಕೆ ತರಬೇಕೆಂದು ಬಯಸಿದ್ದೇನೆ. ಈ ದಿವಸ ಮೈಸೂರು ದೇಶದಲ್ಲಿರತಕ್ಕಂಥ ನಮ್ಮ ನಾನಾ ಇಲಾಖೆಗಳಿಗೆ ಬೇಕಾಗತಕ್ಕ ಸಾಮಾನುಗಳನ್ನು ಕೊಂಡುಕೊಳ್ಳ ಬೇಕಾಗಿದ್ದರೆ ಆ ಸಾಮಾನುಗಳ ಬಗ್ಗೆ ಟೆಂಡರು ಗಳನ್ನು ಕರೆದು ಆ ಸಾಮಾನುಗಳನ್ನು ಯಾವ ಕಂಪೆನಿ ಯವರು ಇಲ್ಲವೇ ಯಾವ ಫರ್ಮುಗಳವರು ಇತರ ಉದ್ಯಮಗಳವರ ಬೆಲೆಗಿಂತ ಕಡಮೆ ದರದಲ್ಲಿ ಒದಗಿ ಸುತ್ತಾರೋ ಅಂಥವರಿಂದ ಕೊಂಡುಕೊಳ್ಳಬೇಕೆಂದು ಒಂದು ವಿಧಾಯಕ ಮಾಡಿದ್ದಾರೆ. ಆದರೆ ಈ ದಿವಸ ಕೆಲವು ಇಲಾಖೆಗಳು ತಮಗೆ ಬೇಕಾಗುವಂಥಸಾಮಾನು ಗಳನ್ನು ಕೊಂಡುಕೊಳ್ಳುವಾಗ ಈ ರೀತಿ ಯಾವ ಟೆಂಡರುಗಳನ್ನೂ S.P.C. ಮೂಲಕ ಕರೆಯದೆ ಹಾಗೆ ಆ ಇಲಾಖೆಯರೇ ನೇರವಾಗಿ ಟೆಂಡರ್ ಕರೆದು ಸಾಮಾನು ಗಳನ್ನು ಕೊಂಡುಕೊಳ್ಳುತ್ತಿದ್ದಾರೆ. ಆದರೆ ಅನೇಕ ಸಂದರ್ಭಗಳಲ್ಲಿ ಈ ಸಾಮಾನುಗಳನ್ನು ಇಲಾಖೆ ಯವರೇ ನೇರವಾಗಿ ಕೊಳ್ಳದೆ ಅವುಗಳನ್ನು ವಿಧಾಯಕ ವಾಗಿರತಕ್ಕ ರೀತಿಯಲ್ಲಿ S.P.C. ಮೂಲಕ ಟೆಂಡರ್ ಕರೆದು ಕೊಂಡುಕೊಂಡರೆ ಇಲಾಖೆಯವರು ಕರೆಯ ತಕ್ಕ ಟೆಂಡರ್ ಬೆಲೆಗಿಂತಲೂ S.P.C. ಟೆಂಡರಿನ ಬೆಲೆಗಳು ಜಾಸ್ತಿ ಇರುತ್ತವೆ. ಉದಾಹರಣೆಗೆ ಹೇಳುವುದಾದರೆ ಒಂದಾವರ್ತಿ ಎಲೆಕ್ಟ್ರಿಕಲ್ ಇಲಾಖೆಗೆ ಕೆಲವು ಕಂಬಗಳು ಬೇಕಾಗಿತ್ತು. ಆಗ ಈ ಇಲಾಖೆಯವರೇ ನೇರವಾಗಿ ಟೆಂಡರುಗಳನ್ನು ಕರೆದರು. ಆಗ 25 ರೂಪಾಯಿಗಳಿಗೆ ಒಂದು ಕಂಬ ವನ್ನು ಸರಬರಾಯಿ ಮಾಡುತ್ತೇವೆಂದು ಟೆಂಡರುಗಳು ಬಂದವು. ಅದೇ ಕಂಬಗಳ ಬಗ್ಗೆ ಮತ್ತೊಂದು ಕಡೆ ಯಲ್ಲಿ ಈ S.P.C. ಮೂಲಕವೂ ಟೆಂಡರುಗಳನ್ನು ಕರೆಯಲಾಗಿತ್ತು. ಆದರೆ ಇಲಾಖೆಯವರು ಕರೆದಿದ್ದ ಟೆಂಡರುಗಳ ಪ್ರಕಾರ 25 ರೂಪಾಯಿಗಳಿಗೇ ದೊರೆಯುತ್ತಿದ್ದಂಥ ಕಂಬಗಳನ್ನು S.P.C. ಟೆಂಡರುಗಳ ಪ್ರಕಾರ 28 ರೂಪಾಯಿಗಳಿಗೊಂದು ಕಂಬದಂತೆ ಕೊಳ್ಳಬೇಕಾಯಿತು. ಹೀಗೆ S.P.C. ಟೆಂಡರ್ ಪ್ರಕಾರ ಒಂದೊಂದು ಕಂಬಕ್ಕೂ ಮೂರು ರೂಪಾಯಿಗಳನ್ನು ಹೆಚ್ಚಿಗೆ ಕೊಡಬೇಕಾಗಿ ಬಂತು. ಈ ವಿಧಾನದಲ್ಲಿ ಕಾಲಹರಣೆಯೂ ಆಗಿ ಒಂದು ತಿಂಗಳೊಳಗೆ ಆಗತಕ್ಕಂಥ ಕೆಲಸಕ್ಕೆ ಒಂದು ವರ್ಷ ಹಿಡಿಯಿತು. ಹೀಗೆ ಕಾಲಮೀರಿ ಹೋದದ್ದರಿಂದ ಆ ಹಣವೂ ಲ್ಯಾಪ್ಸಾಗಿ ಹೋಯಿತು. ಕೊನೆಗೆ ಆ ಕೆಲ

(ಶ್ರೀ ಆರ್. ಮುನಿಸ್ವಾಮಯ್ಯ.)

ಸವೂ ನಿಂತುಹೋಗುವ ಹಾಗಾಯಿತು. ಆದುದರಿಂದ ಇನ್ನು ಮುಂದಕ್ಕೆ ಯಾವ ವಿಧಾನದಲ್ಲಿ ಸಾಮಾನುಗಳು ಜಾಗ್ರತೆ ದೊರೆಯುತ್ತವೆಯೋ, ಎಂದರೆ, ಕಡಮೆ ಬೆಲೆಯಲ್ಲಿ ಇಲಾಖೆಯವರೇ ನೇರವಾಗಿ ಕರೆದ ಟೆಂಡರುಗಳು ಆ S.P.C. ಇಲಾಖೆಯರ ಟೆಂಡರ್‌ಗಳಿಗಿಂತ ಕಡಮೆ ದರದಲ್ಲಿ ಜಾಗ್ರತೆ ಸಾಮಾನುಗಳು ದೊರೆಯುವ ಪಕ್ಷಕ್ಕೆ ಈ S.P.C. ಮೂಲಕವೇ ಸಾಮಾನುಗಳನ್ನು ತರಿಸಿಕೊಳ್ಳಬೇಕೆಂಬ ನಿರ್ಬಂಧವನ್ನು ಸಡಿಲಮಾಡಿ, ಕಡಮೆ ಬೆಲೆಯಲ್ಲಿ ಯಾರು ಸಾಮಾನುಗಳನ್ನು ಒದಗಿಸುತ್ತಾರೋ ಅವರ ಮೂಲಕ ತೆಗೆದುಕೊಳ್ಳುವಂತೆ ಒಂದು ಏರ್ಪಾಡು ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಈ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ಇಲಾಖೆಯ ವಿಚಾರದಲ್ಲಿ ಎರಡು ಮಾತುಗಳನ್ನು ಹೇಳಬೇಕಾಗಿದೆ. ಈ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ಇಲಾಖೆಯನ್ನು ಮೈಸೂರು ಸರ್ಕಾರ ಸಂಬಳ ಸಾರಿಗೆಗಳನ್ನು ಕೊಟ್ಟು ಇಟ್ಟುಕೊಂಡಿದೆ. ಸಹಸ್ರಾರು ಜನರು ಪ್ರತಿವರ್ಷವೂ ತಮ್ಮ ಹೆಸರುಗಳನ್ನು ಈ ಇಲಾಖೆಯಲ್ಲಿ ರಿಜಿಸ್ಟರ್ ಮಾಡಿಸುತ್ತಲೇ ಇದ್ದಾರೆ. ಕೆಲವರು ಪ್ರತಿವರ್ಷವೂ ತಮ್ಮ ಹೆಸರುಗಳನ್ನು ರಿನ್ಯೂ ಮಾಡಿಸಿಕೊಳ್ಳುತ್ತಲೇ ಇದ್ದಾರೆ. ಆದರೆ ಈ ತಹಲ್‌ವರೆಗೂ ಈ ಎಕ್ಸ್‌ಛೇಂಜ್ ಇಲಾಖೆಯವರು ಯಾರಿಗೇ ಆಗಲಿ ಯಾವ ಸರ್ಕಾರಿ ನೌಕರಿಗಳನ್ನೇ ಆಗಲಿ ಅಥವಾ ಬೇರೆ ಈ ಕೈಗಾರಿಕಾ ಕ್ಷೇತ್ರದಲ್ಲೇ ಆಗಲಿ ಯಾರಿಗೂ ಯಾವ ನೌಕರಿಗಳನ್ನೂ ದೊರಕಿಸಿ ಕೊಟ್ಟಿರುವಂತೆ ಕಂಡುಬರುವುದಿಲ್ಲ. ಇಷ್ಟೇ ಅಲ್ಲದೆ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ಇಲಾಖೆ ಮೂಲಕ ಹೋಗತಕ್ಕ ಜನರನ್ನು ಎಲ್ಲಿಯೂ ಕೆಲಸಕ್ಕೆ ಸೇರಿಸಿ ಕೊಳ್ಳುತ್ತಿಲ್ಲವೆಂಬ ದೂರು ಎಲ್ಲೆಲ್ಲಿಯೂ ಹರಡುತ್ತಿದೆ. ಈ ಇಲಾಖೆಯಲ್ಲಿ ಎಷ್ಟು ಜನರು ತಮ್ಮ ಹೆಸರುಗಳನ್ನು ರಿಜಿಸ್ಟರ್ ಮಾಡಿಸಿರುತ್ತಾರೆ, ಈ ಪೈಕಿ ಎಷ್ಟು ಜನರಿಗೆ ಉದ್ಯೋಗಗಳು ದೊರೆತಿವೆ, ಆ ಉದ್ಯೋಗಗಳು ಯಾವ ಯಾವ ಇಲಾಖೆಗಳಲ್ಲಿ ದೊರೆತಿರುತ್ತವೆ, ಇದರ ಕಾರ್ಯಕಲಾಪಗಳು ಯಾವ ರೀತಿ ಜರುಗುತ್ತಿವೆ ಎನ್ನತಕ್ಕವಿಚಾರಗಳಿಗೆಲ್ಲಾ ಈ ಇಲಾಖೆಯವರು ಕೂಡಲೆ ಒಂದುವರದಿಯನ್ನು ಒಪ್ಪಿಸುವಂತೆ ಸರ್ಕಾರದವರು ಈ ಇಲಾಖೆಗೆ ಒತ್ತಾಯ ಪಡಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಭಾರತ್ ಎಲೆಕ್ಟ್ರಾನಿಕ್ಸ್, ಹಿಂದೂಸ್ತಾನ್ ಮೆಷೀನ್ ಟೂಲ್ಸ್ ಫ್ಯಾಕ್ಟರಿ, ಇಂಡಿಯನ್ ಟೆಲಫೋನ್ ಇಂಡಸ್ಟ್ರೀಸ್ ಹೀಗೆ ಬೇಕಾದಷ್ಟು ಕೈಗಾರಿಕೆಗಳು ಇವೆ. ಅಲ್ಲಿ ಮೈಸೂರು ದೇಶದವರನ್ನು ಸೇರಿಸುವುದಿಲ್ಲ, ಬೇರೆಯವರನ್ನೇ ಸೇರಿಸಿಕೊಳ್ಳುತ್ತಾರೆ, ಮೈಸೂರು ದೇಶದವರು ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ಮೂಲಕ ಹೋದರೆ ಕೆಲಸ ಸಿಕ್ಕುತ್ತದೆ ಎಂದು ಹೇಳಿ ಅವರ ಹೆಸರನ್ನು ರಿಜಿಸ್ಟರ್ ಮಾಡಿಸಿ ವರ್ಷಾನುಗಟ್ಟಲೆಯಿಂದ ಕಾದುಕೊಂಡಿದ್ದಾರೆ. ಆದ್ದರಿಂದ ಆ ಕೈಗಾರಿಕೆಗಳಲ್ಲಿ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನಲ್ಲಿ ರಿಜಿಸ್ಟರ್ ಮಾಡಿರುವವರನ್ನೇ ತೆಗೆದುಕೊಳ್ಳಬೇಕೆಂದು ಒತ್ತಾಯಮಾಡುತ್ತೇನೆ.

ಭಿಕ್ಷುಕರ ವಿಷಯ ಹೇಳುವುದಾದರೆ, ಬೆಂಗಳೂರಿನಲ್ಲಿ ಭಿಕ್ಷುಕರು ಪ್ರತಿದಿನ ಹೆಚ್ಚು ಹೆಚ್ಚಾಗಿ ಕಾಣುತ್ತಾ ಇದ್ದಾರೆ. ಬೆಂಗಳೂರು ಮೈಸೂರಿನಂಥ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಭಿಕ್ಷುಕರಿಗೆ ಏನೇನು ಅನುಕೂಲ ಮಾಡಿಕೊಡಬೇಕು, ಯಾವ ರೀತಿ ಮಾಡಿದರೆ ಭಿಕ್ಷುಕರು ಕಡಿಮೆಯಾಗುತ್ತಾರೆ ಎಂಬುದನ್ನು ಪರ್ಯಾಲೋಚನೆ ಮಾಡಲು ಒಂದು ಸಮಿತಿಯನ್ನು ಏರ್ಪಾಡು ಮಾಡಿದ್ದಾರೆ. ಈ ಸಮಿತಿಯಲ್ಲಿ ಭಿಕ್ಷುಕರ ಕಾಲೋನಿಯನ್ನು ವಿಸ್ತಾರ ಮಾಡಬೇಕು. ಅವರಿಂದ ವ್ಯವಸಾಯವನ್ನು ಮಾಡಿಸಬೇಕು, ತೋಟದ ಕೆಲಸ ಮಾಡಿಸಬೇಕು, ಅವರಿಗೆ ಬಟ್ಟೆ ನೇಯುವುದನ್ನು ಕಲಿಸಬೇಕು, ಬಟ್ಟೆ ಹೊಲಿಯುವುದನ್ನು ಕಲಿಸಬೇಕು, ಕೋಳಿಗಳನ್ನು ಸಾಕುವುದಕ್ಕೆ ಏರ್ಪಾಡು ಮಾಡಬೇಕು ಎಂಬ ಸ್ಕೀಂಗಳು ಇವೆ. ಆದರೆ ಇವನ್ನು ಜಾಗ್ರತೆ ಕಾರ್ಯಗತ ಮಾಡಿಲ್ಲ. ಬೆಂಗಳೂರಿನಲ್ಲಿರತಕ್ಕ ಭಿಕ್ಷುಕರನ್ನು, ಭಿಕ್ಷುಕರ ಮೋಟಾರಿನಲ್ಲಿ ಕರೆದುಕೊಂಡು ಹೋಗುತ್ತಾರೆ, ಹೋದ ಮೇಲೆ ಒಂದು ದಿವಸ ಅಥವಾ ಎರಡು ದಿವಸದೊಳಗೇ ಅವರನ್ನು ಬಿಟ್ಟುಬಿಡುತ್ತಾರೆ. ಅವರು ಪುನಃ ಬಂದು ಭಿಕ್ಷೆ ಮಾಡುತ್ತಾರೆ, ಪುನಃ ವ್ಯಾನ್ ಬರುತ್ತವೆ, ಪುನಃ ಕರೆದುಕೊಂಡು ಹೋಗುತ್ತಾರೆ ಬಿಟ್ಟುಬಿಡುತ್ತಾರೆ, ಹೀಗಾಗುತ್ತಿದೆ. ಇದಕ್ಕೆ ಸರಿಯಾದ ರೀತಿಯಲ್ಲಿ ಏರ್ಪಾಡು ಮಾಡದೇ ಹೋದಪಕ್ಷದಲ್ಲಿ ಭಿಕ್ಷುಕರನ್ನು ತಡೆಗಟ್ಟುವುದಕ್ಕೆ ಇಟ್ಟಂಥ ಸಿಬ್ಬಂದಿಗೆ ಕೊಟ್ಟ ಸಂಬಳ ವ್ಯರ್ಥವಾಗುವುದೂ ಅಲ್ಲದೆ ಭಿಕ್ಷುಕರೂ ಕಡಿಮೆ ಆಗುವುದಿಲ್ಲ. ಇದಕ್ಕೆ ಏನು ಮಾಡಬೇಕೆಂದರೆ, ಪ್ರತಿಯೊಂದು ವಾರ್ಡಿನಲ್ಲೂ ಕಾರ್ಪೊರೇಷನ್ ಮೆಂಬರುಗಳನ್ನು ಸೇರಿಸಿ ಹತ್ತು ಜನ ಮೆಂಬರುಗಳನ್ನೊಳಗೊಂಡ ಒಂದು ಸಮಿತಿಯನ್ನು ಏರ್ಪಾಡುಮಾಡಿ ಆ ಸಮಿತಿ, ಭಾರತ ಸೇವಾದಳ, ಸ್ಕೌಟ್ಸ್ ಮತ್ತು ಭಾರತ ಸೇವಕ ಸಮಾಜ ಇಂಥ ಸಂಸ್ಥೆಗಳ ಸಹಾಯವನ್ನು ಪಡೆದು ಭಿಕ್ಷುಕರು ಅಲ್ಲಿ ಸಂಚಾರ ಮಾಡದಂತೆ ತಡೆಯುವುದಕ್ಕೂ ಕಾಯುವುದಕ್ಕೂ ವ್ಯವಸ್ಥೆ ಮಾಡಬೇಕು. ಈ ರೀತಿ ನಾವು ಊರಿನಲ್ಲಿ ಭಿಕ್ಷುಕರು ತಿರುಗಾಡದಂತೆ ಮಾಡುವುದಕ್ಕೂ, ತಿರುಗಾಡುತ್ತಿರುವ ಭಿಕ್ಷುಕರನ್ನು ಸುಲಭವಾಗಿ ಹಿಂದಕ್ಕೆ ಕಳುಹಿಸುವುದಕ್ಕೂ ತಕ್ಕ ವ್ಯವಸ್ಥೆ ಮಾಡಬಹುದು ಎಂದು ಹೇಳುತ್ತೇನೆ.

ಇದು ಬರೀ ಪಟ್ಟಣಗಳಲ್ಲಿ ಅಷ್ಟೇ ಅಲ್ಲ ತಾಲ್ಲೂಕುಗಳಲ್ಲೂ ಕೂಡ ಇದೇ ಪರಿಸ್ಥಿತಿ ಇದೆ. ಈ ಹಳ್ಳಿಯಲ್ಲಿ ಬಿಟ್ಟರೆ ಪಕ್ಕದ ಹಳ್ಳಿಗೆ ಹೋಗುತ್ತಾರೆ. ಆದ್ದರಿಂದ ತಾಲ್ಲೂಕಿನಲ್ಲೂ ಸಹ ಒಂದೊಂದು ಭಿಕ್ಷುಕರ ಪರಿಹಾರ ಸಮಿತಿಯನ್ನು ಇಟ್ಟುಕೊಂಡು, ಆಯಾ ತಾಲ್ಲೂಕಿನ ಅಮಲ್ದಾರರನ್ನು ಚೇರ್‌ಮನ್‌ರಾಗಿ ಮಾಡಿ, ಹೋಬಳಿಗಳ ಸಮಿತಿಗಳನ್ನೂ ಮಾಡುವುದಲ್ಲದೆ ಮುನಿಸಿಪಲ್ ಕೌನ್ಸಿಲರ್‌ಗಳು ಮತ್ತು ಮುನಿಸಿಪಲ್ ಪ್ರೆಸಿಡೆಂಟರ ಒಂದೊಂದು ಸಮಿತಿಯನ್ನು ಮಾಡಿ ಭಿಕ್ಷುಕರು ಬರದಂತೆ ತಕ್ಕ ವ್ಯವಸ್ಥೆ ಮಾಡಬೇಕು. ಇದರಿಂದ ಸರ್ಕಾರದವರಿಗೆ ಹೆಚ್ಚು ವೆಚ್ಚವಿಲ್ಲದೆ ಭಿಕ್ಷುಕರನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈಗ ಸಾಧಾರಣವಾಗಿ ಯಾರಾದರೂ ಒಬ್ಬ ಭಿಕ್ಷುಕನನ್ನು ಗಟ್ಟಿಮುಟ್ಟಾಗಿದ್ದೀಯೆ, ಏಕಯ್ಯಾ ಭಿಕ್ಷಕ್ಕೆ ಬರುತ್ತೀಯಾ ಎಂದರೆ ನೀವು ಕೊಡದಿದ್ದರೆ ಚಿಂತೆ ಇಲ್ಲ ಇನ್ನೊಬ್ಬರು ಕೊಡುತ್ತಾರೆ ಎಂದು ಹೇಳುತ್ತಾನೆ. ಯಾರೂ ಕೊಡದಿದ್ದರೆ ಏನುಮಾಡುತ್ತೀಯಾ ಎಂದರೆ ನನ್ನ ಅದೃಷ್ಟ ಎನ್ನುತ್ತಾನೆ. ಕೊನೆಗೆ ಎಲ್ಲೂ ಸಿಕ್ಕದೆ ಎಂಜಲು ಎಲೆಯಲ್ಲಿ ಸಿಕ್ಕಿದ ಆಹಾರವನ್ನು ತಿಂದು ಸಮಾಜದ ನೀತಿಯನ್ನೇ ಹಾಳುಮಾಡುತ್ತಾ ಇದ್ದಾರೆ. ಈ ಭಿಕ್ಷುಕರನ್ನು ತಡೆಯುವುದಕ್ಕೆ ಸರ್ಕಾರದವರು ಹೆಚ್ಚು ಭಾರವನ್ನು ಹೊತ್ತುಕೊಳ್ಳದೇ ಖಾಸಗೀ ಮನುಷ್ಯರಿಗೇ ಈ ಜವಾಬ್ದಾರಿಯನ್ನು ಹೆಚ್ಚಾಗಿ ವಹಿಸಬೇಕೆಂದು ಹೇಳುತ್ತೇನೆ.

ಈ ಭಿಕ್ಷುಕರೆಲ್ಲಾ ನಾವು ಲೆಕ್ಕಾಹಾಕಿ ನೋಡಿದರೆ ಲೆಕ್ಕಕ್ಕೆ ಸಿಕ್ಕದಹಾಗೆ ಹೆಚ್ಚುತ್ತಿದ್ದಾರೆ. ಈಚೆಗೆ ಸಿಕ್ಕ

ತಕ್ಕವರು ಆಂಧ್ರ ದೇಶದವರು ಅಥವಾ ತಮಿಳುನಾಡಿನವರು. ತಮಿಳುನಾಡಿನಿಂದ ಮತ್ತು ಆಂಧ್ರದಿಂದ ಪ್ರತಿ ದಿನವೂ ಬರುತ್ತಾ ಇರುವ ಹೊಸ ಭಿಕ್ಷುಕರನ್ನೂ ಕಾಣುತ್ತಾ ಇದ್ದೇವೆ. ಒಂದುವೇಳೆ ಈ ಭಿಕ್ಷುಕರನ್ನು ಹಿಡಿದುಕೊಂಡುಹೋಗಿ ದೂರ ಬಿಟ್ಟರೆ ಕೆಲವುಕಾಲದ ಮೇಲೆ ಅವರು ಪುನಃ ನಮ್ಮ ದೇಶಕ್ಕೆ ಬರುತ್ತಾರೆ. ಆದ್ದರಿಂದ ಸರ್ಕಾರದವರಿಗೆ ವೆಚ್ಚವಾಯಿತೇ ಹೊರತು ಅನುಕೂಲವಾಗಲಿಲ್ಲ. ಆದ್ದರಿಂದ ಅವರನ್ನು ಹಿಡಿದು ತಕ್ಷಣ ನಮ್ಮ ಮೈಸೂರು ದೇಶದ ಗಡಿಯಿಂದ ಆಚೆಗೆ ಸಾಗಿಸಿ ಆ ಸರ್ಕಾರಗಳ ವಶಕ್ಕೆ ಕೊಟ್ಟರೆ ಒಳ್ಳೆಯದಾಗುತ್ತದೆ ಪುನಃ ಬರುವುದಿಲ್ಲ ಎಂದು ಕಾಣುತ್ತದೆ. ಆ ಸರ್ಕಾರಗಳ ಸಂಗಡ ವ್ಯವಹಾರನಡೆಸಬೇಕೆಂದು ಕೋರುತ್ತೇನೆ. ಹೀಗೆ ಮಾಡುವುದರಿಂದ ಭಿಕ್ಷುಕರ ಕಾಲೊನಿಯಲ್ಲಿ ಅವರನ್ನಿಟ್ಟುಕೊಂಡು ಅವರಿಗೆ ಅನ್ನ ಆಹಾರಕೊಟ್ಟು, ಅದಕ್ಕೆ ಸಿಬ್ಬಂದಿ, ಮೋಟಾರು ಇವುಗಳಿಗೆಲ್ಲಾ ಖರ್ಚುಮಾಡುವುದೂ ಸಹ ಉಳಿಯುತ್ತದೆ. ಹೊರಗಡೆಗೇ ಅವರನ್ನು ಸಾಗಿಸುವುದು ಸೂಕ್ತವಾಗಿದೆ. ಅದಕ್ಕೆ ಸರ್ಕಾರದವರು ಯೋಚನೆಮಾಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Sri V. M. MASCARENHAS (St. John's Hill).—Mr. Speaker, a few friends have passed funny remarks on the Employment Exchange and on the mode of recruitment in some of the Central Government owned factories round about Bangalore. They have entirely forgotten the fact that these big industrial undertakings are owned and managed by the Government of India and over which the Government of Mysore have absolutely no kind of control. When this is the fundamental fact,—and this is forgotten,—it is not possible for this Government to exercise any kind of pressure or influence on them when the personnel is being taken or recruited.

There is another important factor which has been forgotten. These are highly technical undertakings and the men they recruit are invariably technical men who are not to be found generally in the Employment Exchange. These are all young men who have got a special mechanical training, who go to the spot for a test and then alone do the Electronics or the H.M.T. take them. Certainly therefore the men registered in the Employment Exchange are not the kind that can fit in either in the Electronics or the H.M.T. straightaway. Therefore to say that Mysoreans are neglected, that Mysore young men have no chance in those concerns would not be fair and just.

And as far as the Aircraft is concerned, records go to show that more than 30 per cent of the staff are Mysoreans and therefore there should be no cause for any kind of grievance.

Comments have also been made on the Stores Purchase Committee. My friend Sri Mulka Govinda Reddy made a few half—truths. Half—truths in my opinion are sometimes worse than untruths. He said that last year the cots supplied to the Medical Department were not of the right type, that in some hospitals they were accepted and in some not, because influence was used. I should like to bring to his notice that the entire consignment was rejected and that I had put in a short notice question in that connection. If he is now under the impression that these cots, in spite of being not according to the specifications, were accepted, I should like to correct him.

Sri Mulka GOVINDA REDDY.—On a point of personal explanation. What I said was that the cots supplied by a particular contractor were rejected and he was black-listed and the same type of cots supplied by another contractor were accepted and he has been okayed.

Sri V. M. MASCARENHAS.—Again fresh tender was called for. The Stores Purchase Committee examined the cots and then alone they were accepted. So, to say that the two sets of cots were identical is not correct from the standpoint of fact.

It has also been said that the Stores Purchase Committee is a very dilatory institution doing great harm to the various departments and thereby causing even lapse of grants to the departments. If my friend Sri Mulka Govinda Reddy had tried to ascertain the truth, the blame perhaps would lie at the doors of the departments concerned. It is not uncommon for the Stores Purchase Committee to see that indents are placed for articles as late as January or February of the year, the departments knowing very well that within the next two months the financial year ends. Innumerable reminders are given to the Departmental heads which are not heeded to. I would suggest that the Government should not blame so much the Stores Purchase Committee as the Departmental heads who, in spite of

(SRI V. M. MASCARENHAS.)

reminders issued to them, did not care either to see the specifications or to make their specific recommendations on the tenders and on the rates received. I do not know where my friend Sri Muniswamy has got those peculiar incidents of getting a pole for Rs. 25 by the Chief Electrical Engineer and Stores Purchase Committee getting the same poles at Rs. 28 each. I cannot understand how a contractor who could have given a pole for Rs. 25 could quote Rs 3 more to the Stores Purchase Committee. The Stores Purchase Committee is not a charitable institution to give Rs. 3 more to the contractor. I think there is something much more than what has been expressed. But in any case, I would like to mention that the Stores Purchase Committee now at least is trying its utmost to do the best service to the departments. And as far as I know it is doing it. If there are any flaws, the Departments are as much to be blamed as the Stores Purchase Committee.

(Sri U. M. Madappa rose).

Mr. DEPUTY SPEAKER.—The time fixed for this Demand is up to 4 o'clock and the Minister has to reply now. We have got less than 10 minutes. What can I do ? I have got to call upon the Minister to answer. I cannot help it. I know it is the most unpleasant duty to restrict the speakers. Since the time has already been fixed up, I cannot help it now. Now the Minister will answer.

*ಡಾ॥ ಆರ್. ನಾಗನಗೌಡ (ವ್ಯವಸಾಯ ಇಲಾಖೆಯ ಮಂತ್ರಿಗಳು).—ಸ್ವಾಮಿ, ಭಿಕ್ಷುಕರ ವಿಷಯವಾಗಿ ಕೆಲವು ಅಂಶಗಳನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಹಾಲಿ ಅಲ್ಲಿ 160 ಜನರನ್ನು ಇಟ್ಟು ಕೊಳ್ಳುವುದಕ್ಕೆ ಏರ್ಪಾಡಿದೆ. ಇದಕ್ಕೆ ಸಂಬಂಧ ಪಟ್ಟಂತೆ ನೇಮಕವಾಗಿದ್ದ ಸಬ್ ಕಮಿಟಿಯವರು ಒಂದು ವರದಿಯನ್ನು ಒಪ್ಪಿಸಿ 1,600 ಮಂದಿ ಭಿಕ್ಷುಕ ರನ್ನಿಟ್ಟುಕೊಳ್ಳುವುದಕ್ಕೆ ಅವಕಾಶ ಮಾಡಬೇಕೆಂದು ಸಲಹೆ ಮಾಡಿದ್ದಾರೆ. ಇದರ ಬಗ್ಗೆ ನಾವೇನೂ ಇನ್ನೂ ತೀರ್ಮಾನಮಾಡಿಲ್ಲ. ಅವರ ವರದಿ ಈಗ ನಮ್ಮ ಮುಂದಿದೆ. ಕಳೆದ ನಾಲ್ಕೈದು ವರುಷಗ ಳಿಂದಲೂ ಇಷ್ಟೇ ಲಕ್ಷ ರೂಪಾಯಿಗಳನ್ನು ಸರ್ಕಾರ ದವರು ಒದಗಿಸಿಕೊಂಡಿದ್ದಾರೆಂದು ಮಾನ್ಯ ಸದಸ್ಯರು ಹೇಳಿದರು. . . .

ಶ್ರೀ ಬಿ. ಟಿ. ಕೆಂಪರಾಜ್.—ಭಿಕ್ಷುಕರಿಗಾಗಿ ಕೆಲಸ ಮಾಡುವ ಈ ಇಲಾಖೆಯ ಜನ ಭಿಕ್ಷುಕರನ್ನು ಹಿಡಿದು ಕೊಂಡು ಅವರು ಇಟ್ಟುಕೊಂಡಿರುವ ದುಡ್ಡನ್ನು ಕಿತ್ತು ಕೊಂಡು ಓಡಿಸಿರುವ ಸಂದರ್ಭಗಳಿದ್ದರೆ ದಯವಿಟ್ಟು ತಿಳಿಸಬೇಕು.

*Sri H. M. CHANNABASAPPA (Minister for Industries).—I would like to submit one point to the Chair. You were pleased to say that the Government has got to reply within 4 o'clock ; and the points raised by the Hon'ble Members are so many and the (Dr. R. Nagan Gowda) has got to answer some of the points made out by the Hon'ble Members and I will have to answer some of them. Well, is there any constitutional difficulty in extending the time limit ? If there is constitutional difficulty, I have no objection to stick up to the time limit. But if there is no difficulty, I wish, the Chair will kindly permit the Government to have a little more time for answering those points.

Mr. DEPUTY SPEAKER.—We could get over that constitutional difficulty if the House is prepared to revise that decision. But there is another Demand for which one hour is fixed *i.e.*, between 4 to 5, that has to be completed.

Sri H. M. CHANNABASAPPA.—Government would not propose to take much time. But anyway, the Government has a responsibility to answer the points raised by the Hon'ble Members.

Mr. DEPUTY SPEAKER.—If the House has no objection, I will allow the Hon'ble Minister to reply till 4-15 P.M. Would that be allright ?

MEMBERS.—Yes, Sir.

Mr. DEPUTY SPEAKER.—Till 4-15 P.M. the Minister will reply.

*ಡಾ॥ ಆರ್. ನಾಗನಗೌಡ.—ಆ ಸಮಿತಿಯ ವರದಿಯ ಪ್ರಕಾರ ನಾವು ಖರ್ಚು ಮಾಡಬೇಕೆಂದರೆ non-recurring ಖರ್ಚೇ 5,70,000 ರೂಪಾಯಿ ಗಳಾಗುತ್ತದೆ. ಜೊತೆಗೆ recurring ಖರ್ಚು 3,69,000 ರೂಪಾಯಿಗಳವರೆಗೂ ಆಗುತ್ತದೆ. ಇದರಲ್ಲಿ ಇನ್ನೊಂದು ವಿಷಯ ಬೇರೆಯಿದೆ. ಈ ಬಗ್ಗೆ ಸ್ಥಳೀಯ ಸಂಸ್ಥೆಗಳಿಂದ ಬಹಳ ಮಟ್ಟಿಗೆ ಕಾಂಟ್ರಿಬ್ಯೂಷನ್ ಕೊಡಬೇಕಾಗಿ ಬರುತ್ತದೆ. ಒಂದು ವೇಳೆ ಆ ಹಣ ಬಂದರೂ ಕೂಡ ನಾವು ಮಾಡುವುದ ಕ್ಕಾಗುತ್ತದೆಯೋ ಎಂದು ಸರ್ಕಾರದವರು ಸಮಾ ಲೋಚನೆ ಮಾಡುತ್ತಿದ್ದಾರೆ.

ಮತ್ತೊಂದು ವಿಷಯ ಮಾನ್ಯ ಸದಸ್ಯರು ಹೇಳಿ ದರು. ಭಿಕ್ಷುಕರೆಲ್ಲರನ್ನೂ ತೆಗೆದುಕೊಂಡು ಹೋಗಿ ಗಡೀಪಾರು ಮಾಡಬೇಕೆಂದು ಹೇಳಿದರು. Constitution ಪ್ರಕಾರ ಅವರನ್ನು ನಮ್ಮ State ಹೊರಗೆ

ಕಳುಹಿಸುವುದಕ್ಕೆ ಸಾಧ್ಯವಿಲ್ಲವೆಂದು ತಮಗೆಲ್ಲಾ ಗೊತ್ತಿದೆ.

ಶ್ರೀ ರಾಮಯ್ಯನವರು ಮಾತನಾಡುತ್ತಾ ಈ ಸಮಸ್ಯೆಯಲ್ಲಿರುವ ಕಷ್ಟಗಳನ್ನೆಲ್ಲಾ ಹೇಳಿ, ಇದಕ್ಕೆ ಯಾವುದಾದರೊಂದು ಪರಿಣಾಮಕರವಾದ ಪದ್ಧತಿಯನ್ನೂ ಏರ್ಪಾಡನ್ನೂ ಮಾಡಬೇಕೆಂದು ಹೇಳಿದರು. ಅವರು ಹೇಳಿದ ಕಷ್ಟಗಳು ವಾಸ್ತವ. ಆದರೂ, ಈಗ ಸ್ವಲ್ಪ ಮಟ್ಟಿಗೆ ಭಿಕ್ಷುಕರ ಕಾಟ ಬೆಂಗಳೂರಿನಲ್ಲಿ ಕಡಮೆಯಾಗಿದೆಯೆನ್ನಬಹುದು. ಇತರ ಊರುಗಳಲ್ಲಿ ಇನ್ನೂ ಹೆಚ್ಚಿಗೆ ಇದೆ. ಭಿಕ್ಷುಕರಿಗೆ ಇಲ್ಲಿಗೆ ಬರುವುದಕ್ಕೆ ಭಯವಂತೂ ಇದೆ. ಇಲ್ಲಿಗೆ ಬಂದು ಭಿಕ್ಷವನ್ನು ಬೇಡಿದರೆ ಹಿಡಿದುಕೊಳ್ಳುತ್ತಾರೆ ಎಂಬ ಭಯವಿದೆ. ಈ ಕಾಲೊನಿಗೆ ಅವರನ್ನು ಕರೆದುಕೊಂಡು ಹೋದರೆ, ಅಲ್ಲಿ ಅವರಿಗೆ ಸ್ವಲ್ಪಮಟ್ಟಿಗೆ ವಿದ್ಯೆ, ಟೈಲರಿಂಗ್ ಮತ್ತಿತರ ವಿಷಯಗಳನ್ನು ಬೋಧನೆ ಮಾಡುವುದಕ್ಕೆ ಏರ್ಪಾಡು ಮಾಡಿದ್ದೇವೆ. ಶ್ರೀ ಬಿ. ಟಿ. ಕೆಂಪರಾಜ್‌ರವರು ಹೇಳಿದ ವಿಷಯದಲ್ಲಿ ನಾನು ಅಲ್ಲಿನ ವಾರ್ಡರುಗಳು ಮತ್ತು ಇತರ ಸೇವಕರುಗಳಿಗೆ strict instruction ಕೊಟ್ಟು ಭಿಕ್ಷುಕರಿಂದ ದುಡ್ಡು ಮುಂತಾದುವುಗಳನ್ನು ತೆಗೆದುಕೊಳ್ಳಕೂಡದು, ಬಂದಿದ್ದನ್ನೆಲ್ಲಾ ಕೂಡಲೆ ತಿಳಿಸಬೇಕು ಎಂದು ಸೂಚನೆ ಕೊಟ್ಟಿದ್ದೇವೆ. ಶ್ರೀ ರಾಮಯ್ಯನವರು ಕೆಲವು ಆಶ್ರಮಗಳಿಗೆ ಸಹಾಯ ಮಾಡಬೇಕೆಂದು ಹೇಳಿದರು. ಅದು ಯೋಚನೆ ಮಾಡಬೇಕಾದ ವಿಷಯ. ಶ್ರೀ ಮಾಧವಾಚಾರ್‌ಅವರು ವಾರ್ಡ್‌ಗಳ ವಿಷಯದಲ್ಲಿ ಹೇಳಿದ್ದನ್ನು ಪರ್ಯಾಲೋಚನೆ ಮಾಡಬೇಕೆಂದಿದ್ದೇವೆ. ಶ್ರೀ ಮುಲ್ಕ ಗೋವಿಂದರೆಡ್ಡಿಯವರು Land Colonisation ವಿಚಾರವಾಗಿ ಮಾತನಾಡುತ್ತಾ ವಿಶ್ವೇಶ್ವರಯ್ಯ ನಾಲಾ ಕೆಳಗೆ 16 ವರ್ಷಗಳ ಹಿಂದೆ colonisation ಮಾಡಿದ್ದರೂ ಅದರಲ್ಲಿ ಇನ್ನೂ ಪರಿಣಾಮಕರವಾದ ಏರ್ಪಾಡನ್ನು ಮಾಡಿಲ್ಲವೆಂದು ಹೇಳಿದರು ನನಗೆ ತಿಳಿದ ಮಟ್ಟಿಗೆ ಯಾವ ಯಾವ ಅನುಕೂಲಗಳು ಬೇಕೋ ಅದನ್ನೆಲ್ಲಾ ಮಾಡಿದ್ದೇವೆ. ಯಾರು ಅಲ್ಲಿಯೇ ಇದ್ದುಕೊಂಡು ವ್ಯವಸಾಯ ಮಾಡುವುದಕ್ಕೆ ಸಿದ್ಧವಾಗಿದ್ದಾರೋ ಅವರಿಗೆ ಕಾಲೊನಿಯಿಂದ ಲಾಭವಾಗಿದೆ. ಯಾರು ಅಲ್ಲಿರುವುದಕ್ಕೆ ಏರ್ಪಾಡು ಮಾಡಿಕೊಂಡಿಲ್ಲವೊ ಅವರಿಗೆ ಅನುಕೂಲವಾಗಿಲ್ಲ ಅಷ್ಟೆ. ಈಗ ಎರಡು ವರ್ಷಗಳ ಹಿಂದೆ ಒಂದು ಕಮಿಟಿ ಮಾಡಿ ಅಲ್ಲಿನ ವ್ಯವಸಾಯಗಾರರಿಗೆ ಪಟ್ಟೆಗಳನ್ನು ಮಾಡಿಕೊಡುವುದಕ್ಕೆ ಏರ್ಪಾಡು ಮಾಡಿದ್ದೇವೆ. ಆದ್ದರಿಂದ ಅವರಿಗೆ ಎಲ್ಲಾ ವಿಧವಾದ ಏರ್ಪಾಡುಗಳನ್ನು ಮಾಡಿದ್ದಾರೆಂಬುದೇ ಸರ್ಕಾರದವರ ಅಭಿಪ್ರಾಯ.

*ಶ್ರೀ ಎಚ್. ಎಂ. ಚನ್ನಬಸಪ್ಪ.—ಸ್ವಾಮಿ, ಸ್ಟೋರ್ಸ್ ಪರ್ಚೇಸು ಕಮಿಟಿಯ ಕೆಲಸ ಕಾರ್ಯಗಳನ್ನೂ ಮತ್ತು Employment Exchange ನ ಕೆಲಸ ಕಾರ್ಯಗಳನ್ನೂ ಮಾನ್ಯ ಸ್ನೇಹಿತರು ಪ್ರಸ್ತಾಪ ಮಾಡಿದ್ದಾರೆ. Employment Exchange ನ ವಿಷಯದಲ್ಲಿ ಎತ್ತಿದಂಥ ಆಕ್ಷೇಪಣೆಗಳಿಗೆಶ್ರೀ ಮ್ಯಾಸ್ಕರ್‍ಯಾನ್ಸ್‌ಅವರು ಆಗಲೇ ಉತ್ತರಕೊಟ್ಟಿದ್ದಾರೆ. ಇದು ಇಂಡಿಯಾ ಸರ್ಕಾರದಿಂದ ನಡೆಸಲ್ಪಡುತ್ತಿರತಕ್ಕಂಥಾದ್ದು. ಮೈಸೂರು ಸರ್ಕಾರದವರೇನಿದ್ದರೂ ಶೇಕಡ 40ರಷ್ಟು Establishment charges ಮಾತ್ರ ಕೊಡುತ್ತೇವೆ. ಅಷ್ಟೆ.

4 P.M.

ಈಗ ಅವರು ಹೇಳಿದಂಥ Employment Exchange ನಲ್ಲಿ ಸುಮಾರು 20,917 ಜನರು ಅರ್ಜಿ ಹಾಕಿದರು. 1,243 ಜನರಿಗೆ ಕೆಲಸ ಕೊಟ್ಟರು. I.T.I. ಮತ್ತು ಹಿಂದೂಸ್ತಾನ್ ಏರ್‌ಕ್ರಾಫ್ಟ್‌ನಲ್ಲಿ ಕೆಲಸ ದೊರಕುವುದಿಲ್ಲ ಎನ್ನುವ ಆಕ್ಷೇಪಣೆ ಎತ್ತಿದರು. ಮತ್ತು ಮೈಸೂರು ಸರ್ಕಾರದವರು ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಂಡಿಲ್ಲ ಎಂದು ಹೇಳಿದರು. Bharat Electronics, Hindustan Aircraft, Telephone Industries, Machine Tools, ಇವೆಲ್ಲಾ ಭಾರತ ಸರ್ಕಾರದವರು ಸ್ಥಾಪನೆ ಮಾಡಿದಂಥವು. ಇಲ್ಲಿ ಬೇಕಾದಂಥವರು ಎರಡು ತರಹ ಜನಗಳು. ಒಂದು Technical Personnel, ಎರಡನೆಯದು Unskilled labourers. Unskilled labourers ಮೈಸೂರು ಸಂಸ್ಥಾನದಿಂದ supply ಆಗುತ್ತಿದ್ದಾರೆ. Skilled labourers ಎಲ್ಲಿ ಇದ್ದರೆ ಅಲ್ಲಿಂದ ಕರೆಸಿಕೊಂಡು ಕೆಲಸ ಮಾಡದೆ ಹೋದರೆ ಅವರಿಗೆ ತೊಂದರೆಯಾಗುತ್ತದೆ. ಈ ವಿಷಯದಲ್ಲಿ ಭಾರತ ಸರ್ಕಾರದವರೊಡನೆ ಮತ್ತು ಕೈಗಾರಿಕೆಗಳ ಮ್ಯಾನೇಜ್‌ಮೆಂಟಿನವರೊಡನೆ ಪ್ರಸ್ತಾಪ ಮಾಡಿ, ಸಾಧ್ಯವಾದಷ್ಟು ಪ್ರಯತ್ನ ಮಾಡಿ, ಮೈಸೂರು ಸಂಸ್ಥಾನದ ಜನಗಳಿಗೆ ಕೆಲಸ ಕೊಡಬೇಕೆಂದು ಒತ್ತಾಯ ಮಾಡುತ್ತಿದ್ದೇವೆ. ಅದರ ಬಗ್ಗೆ ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ ಪುರಸ್ಕಾರ ಕೊಡಬೇಕೆಂದು ಹೆಚ್ಚಿನ ಪ್ರಮಾಣದಲ್ಲಿ ಒತ್ತಾಯ ಮಾಡುತ್ತಿದ್ದೇವೆ. ಈ ಬಗ್ಗೆ ಆ ಸರ್ಕಾರಕ್ಕೂ ನಮಗೂ ಭಿನ್ನಾಭಿಪ್ರಾಯವಿಲ್ಲ. ಸಾಧ್ಯವಾದಷ್ಟು ಪ್ರಯತ್ನಮಾಡಿ ನಮ್ಮ ಜನಗಳಿಗೆ ಕೆಲಸಗಳನ್ನು ಒದಗಿಸಿಕೊಟ್ಟಿದ್ದೇವೆ. ಇನ್ನೂ ಹೆಚ್ಚಿಗೆ ಕೆಲಸಗಳನ್ನು ಒದಗಿಸುವುದಕ್ಕೆ ತಕ್ಕ ಕ್ರಮವನ್ನು ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಪಿ. ಆರ್. ರಾಮಯ್ಯ.—Apprentice ಗಳನ್ನು ತೆಗೆದುಕೊಳ್ಳುವ ವಿಷಯದಲ್ಲಿ ಏರ್ಪಾಡು ಇದೆಯೇ? ಹಾಗಿದ್ದರೆ ಮೈಸೂರಿನವರನ್ನು apprentice ಗಳನ್ನಾಗಿ ಏತಕ್ಕೆ ತೆಗೆದುಕೊಳ್ಳಬಾರದು ?

ಶ್ರೀ ಎಚ್. ಎಂ. ಚನ್ನಬಸಪ್ಪ — Apprentice ಗಳನ್ನು ತೆಗೆದುಕೊಳ್ಳುವ ವಿಷಯದಲ್ಲಿ ಯಾವ ರೀತಿ ಪ್ರೊಬೇಷನರುಗಳನ್ನು ತೆಗೆದುಕೊಳ್ಳಬೇಕಾದರೆ ಕಮಿಟಿ ಏರ್ಪಾಡುಮಾಡಿ interview ಮಾಡಿ ಯಾರು ಸೂಕ್ತವೆಂದು ಕಂಡುಬರುತ್ತಾರೋ, ಅದೇ ರೀತಿ ಅವರು ತೆಗೆದುಕೊಳ್ಳುತ್ತಾರೆ. ಹೀಗೆಯೇ ಮಾಡಬೇಕು ಎಂದು ಆಜ್ಞೆ ಮಾಡುವ ಸ್ಥಿತಿಯಲ್ಲಿಲ್ಲ. ಸಾಧ್ಯವಾದಷ್ಟು ಅವರೂ ನಾವೂ ಹೊಂದಿಕೊಂಡು ಉಭಯತ್ರರ ಹಿತವನ್ನೂ ಸಾಧಿಸುವ ಸ್ಥಿತಿಯಲ್ಲಿ ಕೆಲಸ ಮಾಡಿಕೊಂಡು ಹೋಗಬೇಕಾಗಿದೆಯೇ ಹೊರತು ಈ ರೀತಿ ಮಾಡಬೇಕು ಎಂದು ಹೇಳುವುದು ಕಷ್ಟವಾಗುತ್ತದೆ.

Sri V. M. MASCARENHAS.—May I say a few words ? With this very object, the Government of India are running a Training Institute in the High Grounds and they are opening new courses of study so that young men trained there may fit themselves into these various factories. We have already selected two batches of young men with the distinct understanding that these boys who undergo training there should automatically get into either Bharat Electronics or Aircraft or some other Central Government concern. Most of

(SRI V. M. MASCARENHAS.)

these young men are Mysoreans and there is a distinct understanding that during the next three years 300 young men who are trained here would be taken to these various factories. That is done according to a scheduled plan.

ಶ್ರೀ ಎಚ್. ಎಂ. ಚನ್ನಬಸಪ್ಪ.—ಶ್ರೀ ವಿ. ಆರ್. ನಾಯ್ಡುರವರು ಕೆಲವು ಸಂಸ್ಥೆಗಳಿಗೆ ಹೆಚ್ಚಿನ ಸಹಾಯವಾಗಬೇಕೆಂದು ಒತ್ತಾಯಪಡಿಸಿದರು. ಅದರಲ್ಲೂ, ವಿಲ್ಸನ್‌ಗಾರ್ಡನ್‌ನಲ್ಲಿರುವ ಅನಾಥ ಶಿಶು ಸೇವಾಶ್ರಮಕ್ಕೆ ಸಹಾಯವಾಗಬೇಕು ಎಂದು ಹೇಳಿದರು. ನನಗೆ ತಿಳಿದಿರುವ ಹಾಗೆ ಈ ಆಶ್ರಮದಲ್ಲಿರುವ ಪ್ರತಿಯೊಬ್ಬ ಅನಾಥನಿಗೂ ತಿಂಗಳಿಗೆ ಐದು ರೂಪಾಯಿನಂತೆ 132 ರೂಪಾಯಿ ಗ್ರಾಂಟು ಸಹ ಕೊಡುತ್ತಿದ್ದೇವೆ. ಅದಕ್ಕಿಂತ ಹೆಚ್ಚಿಗೆ ಬೇಕು ಎಂದರೆ ಮಾನ್ಯ ಸದಸ್ಯರು Director of Public Instruction ಅವರನ್ನು ಕಂಡು ಮಾತನಾಡಿದರೆ ಹೆಚ್ಚಿನ ಸಹಾಯಕ್ಕೆ ರೂಲ್ಸಿಗೆ ಒಳಪಟ್ಟು ಅವಕಾಶವಿದ್ದರೆ, ಅವರು ಕೊಡುತ್ತಾರೆ. ಇತರ ಸಂಸ್ಥೆಗಳಿಗೆ ಸಹಾಯ ಬೇಕು ಎಂದು ಹೇಳಿದ್ದಾರೆ. ಸಹಾಯದ್ರವ್ಯವನ್ನು ಕೊಡುವುದಕ್ಕೆ ತಕ್ಕ ವ್ಯವಸ್ಥೆ ಮಾಡಿದ್ದೇವೆ. ರೂಲ್ಸ್‌ಗಳನ್ನೂ ವಿಧಾಯಕ ಮಾಡಿದ್ದೇವೆ. ಇದರಿಂದ ಸಹಾಯವನ್ನು ಪಡೆಯುವುದಕ್ಕೆ ಅಭ್ಯಂತರವಿಲ್ಲ.

Stores Purchase Committee ವಿಚಾರದಲ್ಲಿ ಕೆಲವು ಮಾನ್ಯ ಸದಸ್ಯರು ಸ್ವಲ್ಪ ಮಟ್ಟಿಗೆ ಪ್ರಸ್ತಾಪ ಮಾಡಿದರು. ಆದರೆ ಕೆಲಸ ಬಹಳ ಹೆಚ್ಚಿನ ಪ್ರಮಾಣದಲ್ಲಿ ಈಗ ನಡೆಯುತ್ತಿದೆ. ಅದರಲ್ಲೂ ಇತ್ತೀಚೆಗೆ ನಮ್ಮ ಕೈಗಾರಿಕೋದ್ಯಮಗಳು ಹೆಚ್ಚಿದಂತೆಲ್ಲಾ Stores Purchase Committeeಯ ಕೆಲಸ ಕಾರ್ಯಗಳು ಹೆಚ್ಚಾಗುತ್ತಿವೆ. 1953-54ನೇ ಸಾಲಿನಲ್ಲಿ ಎರಡು ಕೋಟಿ 58 ಲಕ್ಷ ರೂಪಾಯಿಗಳಷ್ಟು ಸಾಮಾನುಗಳನ್ನು ಅವರ ಮುಖೇನ ಸರ್ಕಾರ ತರಿಸಬೇಕಾಯಿತು. ಅದೇ 1954-55ನೇ ಸಾಲಿನಲ್ಲಿ ಮೂರು ಕೋಟಿ 21 ಲಕ್ಷ ರೂಪಾಯಿಗಳಷ್ಟು ಸಾಮಾನುಗಳನ್ನು ತರಿಸಬೇಕಾಯಿತು. ಮತ್ತೆ ಈ ವರ್ಷ ಈಗಾಗಲೇ ಎರಡು ಕೋಟಿ 87 ಲಕ್ಷದಷ್ಟು ಸಾಮಾನುಗಳನ್ನು 28-2-1956ರವರೆಗೆ ತರಿಸಿದೆ. ಏತಕ್ಕೋಸ್ಕರ ಅಂಕಿ ಅಂಶವನ್ನು ಕೊಟ್ಟೆ ಎಂದರೆ, ಇಷ್ಟು ಭಾರಿ ಪ್ರಮಾಣದಲ್ಲಿ ಸಾಮಾನುಗಳು ಸರಬರಾಜು ಆಗಬೇಕು. ಭರತಖಂಡದಲ್ಲಿ ಸರಬರಾಜು ಆಗುವುದು ಕೆಲವು, ಇತರ ನಾನಾ ದೇಶಗಳಿಂದ ಸರಬರಾಜು ಆಗತಕ್ಕವು ಕೆಲವು ಇವೆ. ಇಲ್ಲಿಂದ indent ಹೋದ ಮೇಲೆ ಎಲ್ಲೆಲ್ಲಿ ಯಾವಯಾವ specifications ಇವೆ ಎಂಬುದನ್ನು ಪರಿಶೀಲನೆ ಮಾಡಿ, ಹೊರಗಡೆ firmsನಿಂದ quotations ತರಿಸಿ, comparative statement ಹಾಕಿ ಯಾವುದು ಅದರಲ್ಲಿ quality ಉತ್ತಮವಾಗಿದೆ ಮತ್ತು ಕಡಮೆ ಖರ್ಚಿನಲ್ಲಿ ಆಗುತ್ತದೆ ಎಂಬುದನ್ನು ನಿರ್ಧಾರ ಮಾಡಬೇಕು. ಅಕಸ್ಮಾತ್ತಾಗಿ ಕಳುಹಿಸುವ specification ಸಿಕ್ಕದೆ ಹೋದ ಪಕ್ಷದಲ್ಲಿ ಆಗ್ಗೆ ಇಲಾಖೆಯನ್ನು ಪುನಃ ಕೇಳಬೇಕಾಗಿ ಬರುತ್ತದೆ. ಕಾಗದ ಪತ್ರಗಳು S.P.C. Departmentನಿಂದ ಪುನಃ ಹೋಗಿ specification ನಿರ್ಧಾರವಾಗುವುದಕ್ಕೆ ಒಂದೊಂದು ಸಲ ಹೆಚ್ಚು ಕಾಲ ತೆಗೆದುಕೊಳ್ಳುತ್ತದೆ. ಇಂಡಿಯಾ ದೇಶದ ಹೊರಗಡೆಯಿಂದ ತರಿಸತಕ್ಕ ಸಾಮಾನುಗಳ ವಿಷಯದಲ್ಲಿ ಸ್ವಲ್ಪ ಹೆಚ್ಚಿಗೆ ಕಾಲವನ್ನು ತೆಗೆದುಕೊಳ್ಳುವುದು ಅನಿವಾರ್ಯ. ಒಟ್ಟಿನಲ್ಲಿ Stores Purchase Committee ಸರ್ವಪ್ರಯತ್ನ ಮಾಡುತ್ತಿದೆ. ಅದರಲ್ಲೂ ನಮಗೆ ಅವಶ್ಯಕವಾದ ಪದಾರ್ಥಗಳನ್ನು ಬಹಳ ಕಡಮೆ ಬೆಲೆಯಲ್ಲಿ ತರಿಸಿಕೊಟ್ಟಿದ್ದಾರೆ. ಒಂದೊಂದು ವೇಳೆ ನಿಧಾನವಾಗತಕ್ಕ ಪ್ರಸಂಗ ಬರುತ್ತದೆ. ನನಗೆ ತಿಳಿದ ಮಟ್ಟಿಗೆ ನಿಧಾನವಾಗುವುದು ಅನಿವಾರ್ಯ. ಏತಕ್ಕೋಸ್ಕರ ನಿಧಾನವಾಯಿತು ಎಂದು ಸರ್ಕಾರದವರೂ ಕೂಡ ಕೇಳಿದ್ದಾರೆ. ನನಗೆ ಗೊತ್ತಿರುವ ಮಟ್ಟಿಗೆ Stores Purchase Committee ಯಲ್ಲಿ ನಿಧಾನವಾಗಿಲ್ಲ. Indent ಕಳುಹಿಸುವುದು ತಡ ಆಗುತ್ತದೆ. ತಡ ಏತಕ್ಕೆ ಆಗುತ್ತದೆ ಎಂಬುದನ್ನು ಪರಿಶೀಲನೆ ಮಾಡಬೇಕಾಗುತ್ತದೆ. ಹೆಚ್ಚಿಗೆ ಹಣ ಒದಗಿಸುವುದು ಮತ್ತು ಅದು ಮಂಜೂರು ಆಗುವುದು—ಇವಕ್ಕೆ ಕಾಲ ಬೇಕಾಗುತ್ತದೆ, ಒಟ್ಟಿನಲ್ಲಿ Stores Purchase Committeeಯ ಕೆಲಸ ಕಾರ್ಯಗಳು ಹೆಚ್ಚಿನ ದಕ್ಷತೆಯಿಂದ, ದೇಶದ ಹಿತದೃಷ್ಟಿಯಿಂದ ನಡೆಯಬೇಕು ಎನ್ನುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಶ್ರೀ ಮುನಿಸ್ವಾಮಯ್ಯನವರು ಒಂದು ವಿಷಯ ಹೇಳಿದರು. ಬಹುಶಃ ಅದು ಸರಿಯಲ್ಲ ಎಂದು ನನ್ನ ಅಭಿಪ್ರಾಯ.

ಶ್ರೀ ಆರ್. ಮುನಿಸ್ವಾಮಯ್ಯ.—ಪರೀಕ್ಷೆ ಮಾಡಿದ್ದೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ವಿದ್ಯುಚ್ಛಕ್ತಿ ಸಂಬಂಧದಲ್ಲಿ charcoal ಬೇಕಾಗಿತ್ತು. ಅದು ನಮಗೆ ದೊರಕಲಿಲ್ಲ, ಅದನ್ನು ನಾವು ತರಿಸಲೂ ಇಲ್ಲ, quotations call for ಮಾಡಿರಬಹುದು. ಆದರೆ ಪದಾರ್ಥವೇ ನಮಗೆ ಸಿಕ್ಕಲಿಲ್ಲ. ನಾವು ಅದನ್ನು ತರಿಸಲಿಲ್ಲ. ಈ ಬಗ್ಗೆ Stores Purchase Committee ಅಥವಾ ಇನ್ನು ಯಾರೇ ಆಗಲಿ ಆಪಾದನೆಗೆ ಕಾರಣರಲ್ಲ. Stores Purchase Committeeಯ ಕೆಲಸಕಾರ್ಯಗಳು ಇನ್ನೂ ಹೆಚ್ಚಿನ ದಕ್ಷತೆಯಿಂದ ನಡೆಯಬೇಕು, ಅವಶ್ಯಕವಾದ ಪದಾರ್ಥಗಳು ಕಡಿಮೆ ಬೆಲೆಯಲ್ಲಿ ದೊರಕುವುದಕ್ಕೆ ಯಾವ ರೀತಿ ಉತ್ತಮಪಡಿಸಬೇಕು ಎಂಬುದನ್ನು ಯೋಚನೆ ಮಾಡಿ ಅದನ್ನು ಕೂಡ ಉತ್ತಮಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

MR. DEPUTY SPEAKER.—The question is :

"That a sum not exceeding Rs. 27,25,500 be granted to the Government to defray the charges which will come in course of payment during the year ending 31st day of March 1957 in respect of Miscellaneous."

The motion was adopted.

DEMAND No. 44—SCHEMES CONNECTED WITH STATE TRADING.

85—A. CAPITAL OUTLAY ON STATE SCHEMES OF GOVERNMENT TRADING.

MR. DEPUTY SPEAKER.—Motion moved :

"That a sum not exceeding Rs. 64,75,100 be granted to the

Government to defray the charges which will come in course of payment during the year ending 31st day of March 1957, in respect of "Capital Outlay on State Schemes of Government Trading'."

*Sri Mulka GOVINDA REDDY (Chitaldrug).—Sir, I oppose the demand under the head "Capital Outlay on State Schemes of Government Trading for Rs. 64,75,100." Sir, after the controls were introduced in Mysore State, much of the trading in foodgrains was undertaken by the Government of Mysore. It is nearly three or four years since the controls have been abolished. Food Assistants working in districts have been replaced and they have been entrusted with some other work. But a skeleton food department is still going on. To what extent Government have incurred loss in this State trading and to what extent they have been able to fix up the guilt on the culprits and to what extent they have settled the claims is still a mystery. There are instances where claims have not been settled for having transported foodgrains from depot to depot. There are instances where there were many misappropriations and defalcations. There were instances where food articles had disappeared from godowns. I would like to know from the Governmemt what action they have taken and when they are going to finally settle the accounts of this department and close it down. I therefore oppose this demand.

*ಶ್ರೀ ಯು.ಎಂ. ಮಾದಪ್ಪ (ಚಾಮರಾಜನಗರ).—ಸ್ವಾಮಿ, ಆಹಾರಾಭಾವದ ಕಾಲದಲ್ಲಿ ಈ ಉದ್ಯಮವನ್ನು ಸರ್ಕಾರ ಕೈಗೊಂಡಿತು. ಆಹಾರಾಭಾವವಿಲ್ಲದೇಯಿರುವ ಕಾಲದಲ್ಲಿ ಈ ಇಲಾಖೆಯನ್ನು ಮುಚ್ಚುತ್ತೇವೆಂದು ನಾಲ್ಕು ವರ್ಷಗಳಿಂದ ಘೋಷಣೆ ಮಾಡುತ್ತಿದ್ದಾರೆ. ನಾಲ್ಕು ವರ್ಷಗಳಿಂದ ಈ ಲೆಕ್ಕಾಚಾರದ ಸಮಸ್ಯೆ ಇವರ ತಲೆಗೆ ಹಿಡಿದಿಲ್ಲವೆ? ಪ್ರತಿ ಜಿಲ್ಲಾ ಹೆಡ್ ಕ್ವಾರ್ಟರಿನಲ್ಲಿಯೂ ಲೆಕ್ಕದ ಪರಿಶೀಲನೆ ನಡೆಯುತ್ತಿದೆ. ನನಗೆ ಇದರ ಚರಿತ್ರೆ ಗೊತ್ತಿದೆ. ಈ ಇಲಾಖೆಯಲ್ಲಿರತಕ್ಕ ಅಧಿಕಾರಿಗಳು ಆದಷ್ಟು ದಿವಸ ಈ ಇಲಾಖೆ ಇರಲೆಂಬ ದೃಷ್ಟಿಯಿಂದ ಸರಿಯಾಗಿ ಲೆಕ್ಕಪತ್ರಗಳನ್ನು ಒದಗಿಸುತ್ತಿಲ್ಲ, ಸರಿಯಾಗಿ ಲೆಕ್ಕದಲ್ಲಿ ಅಂಕಿಗಳನ್ನು ಕೂಡುವುದಕ್ಕೂ ಕಷ್ಟಪಡದೆ, ಪುನಃ remarks ಆಗಿ ಬರಲಿ ನೋಡೋಣ ಎಂದು ತಡಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆಂದು ನನಗೆ ತಿಳಿದುಬಂದಿದೆ. ಈ ಲೆಕ್ಕ ಪತ್ರವನ್ನು ಸರಿಮಾಡಬೇಕೆಂಬ ಪ್ರಯತ್ನಕ್ಕೇ ಖರ್ಚು ಜಾಸ್ತಿಯಾಗುತ್ತಿದೆ. ಈ ರೀತಿ ಇದನ್ನು ಸರಿಪಡಿಸುವುದಕ್ಕೆ ಪ್ರಯತ್ನಪಡುವ ಬದಲು, ಮೊದಲು ಅಲ್ಲಿರತಕ್ಕ ಲೆಕ್ಕ ಪತ್ರಗಳನ್ನು ಸೆಕ್ರೆಟೇರಿಯಟ್ಟಿಗೇ ತರಿಸಿಕೊಂಡು, ಇಲ್ಲೇ ಒಬ್ಬ ಅಧಿಕಾರಿಯನ್ನಿಟ್ಟುಕೊಂಡು ಕೆಲಸ ಮಾಡುವುದು ಉತ್ತಮ. ಈಗಲೂ ಫುಡ್ ಅಸಿಸ್ಟೆಂಟ್‌ಗಳು ಜಿಲ್ಲೆಗಳಲ್ಲಿದ್ದಾರೆ. ಹೀಗೆಯೇ ಕೆಲಸ ಮಾಡಿದರೆ ಇನ್ನೂ ಹತ್ತು ವರ್ಷಗಳಾದರೂ ಇದು ಮುಗಿಯುವುದಿಲ್ಲ. ಇಲ್ಲೇ ಒಬ್ಬ ಫುಡ್ ಅಸಿಸ್ಟೆಂಟನ್ನಿಟ್ಟುಕೊಂಡು, ಸೆಕ್ರೆಟೇರಿಯಟ್ಟಿಗೇ ಸೇರಿಸಿ, ಆದಷ್ಟು ಬೇಗ ಈ ಇಲಾಖೆಯನ್ನು ಮುಚ್ಚಬೇಕೆಂದು ಸರ್ಕಾರ ಶಪಥ ಮಾಡದೇಯಿದ್ದರೆ, ಈ ಕೆಲಸವಾಗುವುದಿಲ್ಲ. ಜಾಗ್ರತೆ ಮಾಡಬೇಕು. ಇಲ್ಲದಿದ್ದರೆ ಬಡ್ಜೆಟ್ಟಿನಲ್ಲಿ ಸರಿಯಾಗಿ ಲೆಕ್ಕ ಸಿಕ್ಕುವುದಿಲ್ಲ. ಪ್ರತಿವರ್ಷವೂ 64,75,100 ರೂಪಾಯಿ ತೋರಿಸುತ್ತಿದ್ದಾರೆ. ಇದು ಯಾವ ಲೆಕ್ಕ ಎಂದು ಕಂಡುಹಿಡಿಯುವುದಕ್ಕೆ ಶ್ರಮಪಡುವ ಬದಲು, ಸರಿಯಾಗಿ ಲೆಕ್ಕ ಸಿಕ್ಕುವ ದೃಷ್ಟಿಯಿಂದ ನಾನು ಹೇಳಿದ ರೀತಿ ಮಾಡಿ, ಜಾಗ್ರತೆ ಲೆಕ್ಕವನ್ನೊದಗಿಸಬೇಕೆಂದು ಸೂಚಿಸುತ್ತೇನೆ.

ಶ್ರೀ ಆರ್. ಮುನಿಸ್ವಾಮಯ್ಯ (ಬೆಂಗಳೂರು ಉತ್ತರ—ಅನುಸೂಚಿತ ಜಾತಿಗಳು).—ಸ್ವಾಮಿ, ಈ 44ನೆಯ ಡಿಮ್ಯಾಂಡಿನಲ್ಲಿ ಕೇಳಿರುವ ಹಣದ ಸಂಬಂಧವಾಗಿ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಶ್ರೀ ಮಾದಪ್ಪನವರು ಹೇಳಿದ ಹಾಗೆ, ಆಹಾರ ಅಭಾವವಿದ್ದ ಕಾಲದಲ್ಲಿ ಪ್ರಾರಂಭವಾದ ಈ ಇಲಾಖೆಗೆ ಈ ಕಾಲದಲ್ಲಿಯೂ ಹಣವನ್ನೊದಗಿಸಿರುವುದನ್ನು ನೋಡಿದರೆ, ದೇಶದಲ್ಲಿ ಇನ್ನೂ ಆಹಾರಾಭಾವವಿದೆಯೋ ಏನೋ, ಇನ್ನೂ ಹತ್ತಾರು ವರ್ಷಕಾಲ ಇದನ್ನು ನಡೆಸಿಕೊಂಡುಬರಬೇಕೋ ಏನೋ ಎಂದು ಅಲ್ಲಿನ ಅಧಿಕಾರಿಗಳೂ ನೌಕರರೂ ಯೋಚನೆಮಾಡುತ್ತಿರುವ ಹಾಗೆ ಕಾಣುತ್ತದೆ. ಯಾವುದೋ ಒಂದು ಲೆಕ್ಕವನ್ನಿಟ್ಟುಕೊಂಡು, ಏನೋ ಒಂದು ರೀತಿಯಲ್ಲಿ ಅವರು ಕಾಲ ಕಳೆಯುತ್ತಿದ್ದಾರೆಂದು ಕಾಣುತ್ತದೆ. ನಿಜವಾಗಿಯೂ ಅವರು ತಮ್ಮ ಮನಸ್ಸನ್ನು ಈ ಲೆಕ್ಕಪತ್ರಗಳ ಮೇಲಿಟ್ಟು ಕೆಲಸವನ್ನು ನಡೆಸುತ್ತಿಲ್ಲವೆಂಬುದು ವ್ಯಕ್ತವಾಗುತ್ತದೆ. ನಾವು ಈ ಇಲಾಖೆಯನ್ನು ಜಾಗ್ರತೆ ಮುಚ್ಚಬೇಕು, ಲೆಕ್ಕಪತ್ರಗಳನ್ನು ಜಾಗ್ರತೆ ಕೊಡಬೇಕು ಎಂದು ಅವರು ಮನಸ್ಸು ಮಾಡಿದ್ದರೆ, ಈ ಕೆಲಸ ಕಾರ್ಯಗಳು ಮುಗಿದು ಆರು ತಿಂಗಳಾಗಿರಬೇಕಾಗಿತ್ತು. ಆದರೆ ಆ ನೌಕರರಿಗೆ ಇನ್ನೂ ಕೆಲವು ಕಾಲ ಸಂಬಳಗಳನ್ನು ಕೊಟ್ಟು ಇಟ್ಟುಕೊಳ್ಳಬೇಕೆಂದಿದ್ದರೆ ಹೀಗೆ ಮಾಡಬಹುದು. ಹೀಗೆ ಮಾಡಿದರೆ, ದೇಶದ ಹಣ ವ್ಯರ್ಥವಾಗುವುದಕ್ಕವಕಾಶವಾಗುತ್ತದೆಂದು ಸಂಬಂಧಪಟ್ಟ ಮಂತ್ರಿಗಳಿಗೆ ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಮಂತ್ರಿಗಳು ತಾವೇ ಆಸಕ್ತಿ ವಹಿಸಿ ಲೆಕ್ಕಗಳನ್ನು ಮುಗಿಸಿ ಈ ಇಲಾಖೆಯನ್ನು ಜಾಗ್ರತೆ ಮುಚ್ಚಬೇಕು. ಮುಂದಿನ ಬಡ್ಜೆಟ್ಟಿನಲ್ಲಾದರೂ ಈ ಇಲಾಖೆಯ ಲೆಕ್ಕಗಳು ಬರಬಾರದೆಂದು ಹೇಳುತ್ತೇನೆ.

1951ನೆಯ ಇಸವಿ ನವೆಂಬರ್‌ನಿಂದ 1952ನೇ ಇಸವಿಯವರೆಗೆ ರೆಡ್‌ಕ್ರಾಸ್ ಸಂಸ್ಥೆಯವರು ಸಾವಿರಾರು ಪಲ್ಲ ಗೋಧಿಯನ್ನು ರಷ್ಯಾ ದೇಶದಿಂದ ತರಿಸಿ, ತಾವು ಇಟ್ಟುಕೊಳ್ಳುವುದಕ್ಕೆ ಸ್ಥಳವಿಲ್ಲದೆ ಸರ್ಕಾರದ ಸೆಂಟ್ರಲ್ ಗೋಡೌನಿನಲ್ಲಿಟ್ಟರು. ಮಳೆಯಿಲ್ಲದ ಕಾಲದಲ್ಲಿ ರಿಲೀಫ್ ಕಾರ್ಯಗಳನ್ನು ಕೊಟ್ಟು ಬಡವರಿಗೆ ದವಸ ಕೊಡುತ್ತಿದ್ದರು. ಕೆಲವು ಸಾವಿರ ಪಲ್ಲಗಳನ್ನು ಇದೇ ಗೋಡೌನಿನಿಂದ ತೆಗೆದುಕೊಂಡುಹೋಗಿ ಕೆಲಸ ಮಾಡುವವರಿಗೆ ಕೂಲಿಯ ರೂಪದಲ್ಲಿ ಒದಗಿಸಿದರು. ಇನ್ನೂ ಸಾವಿರಾರು ಪಲ್ಲ ಈ ಗೋಡೌನಿನಲ್ಲಿದೆ. ಆ ಸಂಸ್ಥೆ

(ಶ್ರೀ ಆರ್. ಮುನಿಸ್ವಾಮಯ್ಯ)

ಯವರು ಇನ್ನುಳಿದಿರುವ ಗೋಧಿಯನ್ನು ನಮಗೆ ಕೊಟ್ಟುಬಿಡಿ, ಬಡವರಿಗೆ ಮತ್ತು ರಿಲೀಫ್ ಕೆಲಸ ಮಾಡಿರುವವರಿಗೆ ಕೊಡಬೇಕು, ಇನ್ನೂ ಅನೇಕ ಕೆಲಸಗಳನ್ನು ಮಾಡಿಸಬೇಕಾಗಿದೆ, ಕೂಲಿಯನ್ನು ದವಸದ ರೂಪದಲ್ಲಿ ಕೊಡುವುದರಿಂದ ಹೆಚ್ಚಿನ ಸೇವೆ ಸಲ್ಲಿಸಬಹುದೆಂದು ಹೇಳಿ ಪತ್ರ ವ್ಯವಹಾರ ನಡೆಸುತ್ತಿದ್ದಾರೆ. ಆದರೆ ಆಹಾರ ಇಲಾಖೆ ಸರಿಯಾದ ಉತ್ತರ ಕೊಡಲಿಲ್ಲ. ನೋಡುತ್ತೇವೆ, ಲೆಕ್ಕ ಸರಿಯಾಗಿ ನೋಡಲು ಸಾಕಷ್ಟು ಸಿಬ್ಬಂದಿಯಿಲ್ಲವೆಂದು ಹೇಳುತ್ತಿದ್ದಾರೆ. ಸಾವಿರಾರು ಪಲ್ಲ ಗೋಧಿಯ ಲೆಕ್ಕ ಸಿಕ್ಕದೇ ಹೋದರೆ, ಇನ್ನು ಸರ್ಕಾರದಿಂದ ನೇರವಾಗಿ ವ್ಯವಹಾರ ಮಾಡಿರತಕ್ಕ ಎಷ್ಟೋ ದವಸ ಧಾನ್ಯ ಹೀಗೆ ಪೋಲಾಗಿರಬಹುದೆಂದು ಊಹೆ ಮಾಡಬೇಕಾಗಿದೆ. ಇಂಥ ವಿಷಯದಲ್ಲಿ ಯಾರೊಬ್ಬರಮೇಲೂ ಜವಾಬ್ದಾರಿಯನ್ನು ಹಾಕದೇ ಇದ್ದರೆ, ಸಂಬಂಧಪಟ್ಟ ಅಧಿಕಾರಿಗಳನ್ನು ಜವಾಬ್ದಾರಿಗೆ ಸಿಕ್ಕಿಸಿ ನಷ್ಟವಾಗಿರುವ ಹಣವನ್ನೂ ದವಸವನ್ನೂ ಪುನಃ ಪಡೆಯುವುದಕ್ಕೆ ಪ್ರಯತ್ನಮಾಡದೇ ಹೋದರೆ ಸರ್ಕಾರ ತಾತ್ಸಾರವಾಗಿ ನಡೆದುಕೊಂಡಿದ್ದಾರೆಂದು ಯೋಚನೆ ಮಾಡಬೇಕಾಗುತ್ತದೆ. ಹೀಗೆಯೇ ಕೆಲವು ಕಾಲ ಕಳೆದರೆ ಈ ಹಣ write off ಆಗಿ ಹಣವೂ ದವಸವೂ ಹೋದಂತಾಗುತ್ತದೆ. ಈ ಇಲಾಖೆಯಲ್ಲಿರುವವರು ಇನ್ನೂ ಬಲವಾಗಿ ದೊಡ್ಡ ದೊಡ್ಡ ಅಧಿಕಾರಿಗಳಾಗಿ ರಿಟೈರ್ ಆಗಿ ಸುಖವಾಗಿರುತ್ತಾರೆ. ಹೀಗೆ ನಡೆಯುವುದಕ್ಕೆ ಬಿಡಬಾರದು. ಜಾಗ್ರತೆ ರೆಡ್‌ಕ್ರಾಸ್ ಸಂಸ್ಥೆಯಿಂದ ಬಂದಿರುವ ಗೋಧಿ ಎಷ್ಟಿದೆಯೋ ಅದನ್ನಾದರೂ ಒಂದು ತಿಂಗಳೊಳಗೆ ಲೆಕ್ಕ ಕೊಡುವಂತೆ ಮಂತ್ರಿಗಳು ಏರ್ಪಾಡು ಮಾಡಬೇಕು. ದವಸವಿಲ್ಲದೇ ಹೋದರೆ ಎಷ್ಟು ರೂಪಾಯಿನ ಗೋಧಿಯನ್ನಿಟ್ಟಿದ್ದರು, ಎಷ್ಟಿದೆ ಎಂಬುದನ್ನು ಲೆಕ್ಕ ಮಾಡಿಸಿ ಆ ಸಂಸ್ಥೆಗೆ ಕೊಟ್ಟು ಜನರಿಗೆ ಆ ಸಂಸ್ಥೆಯಿಂದ ಸಹಾಯವಾಗುವ ಹಾಗೆ ಮಾಡಬೇಕೆಂದು ಹೇಳುತ್ತೇನೆ. ಆ ಇಲಾಖೆಯಲ್ಲಿ ನಡೆಯತಕ್ಕ ಕೆಲಸವನ್ನು ಇನ್ನೂ ಹೆಚ್ಚು ಶ್ರದ್ಧೆಯಿಂದ ನಡೆಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಈಗ ಆಗಿರುವ ನಷ್ಟಕ್ಕೆ ಯಾರು ಯಾರು ಜವಾಬ್ದಾರರೆಂಬುದನ್ನು ಗೊತ್ತುಮಾಡಬೇಕು. ಹಿಂದೆ ಇದ್ದ ಅಧಿಕಾರಿಗಳು ಕಾರಣರಾಗಿರಬಹುದು, ಅವರಿಗಿಂತ ಹಿಂದಿದ್ದವರು ಜವಾಬ್ದಾರರಾಗಿರಬಹುದು. ಯಾವ ಯಾವ ಕಾಲದಲ್ಲಿ ನಷ್ಟವಾಗಿದೆ, ಎಷ್ಟೆಷ್ಟು ನಷ್ಟವಾಗಿದೆ ಎಂಬುದನ್ನೆಲ್ಲಾ ತಿಳಿದು ಆಯಾ ಅಧಿಕಾರಿಗಳಮೇಲೆ ಹಾಕಿ, ಉಂಟಾಗಿರುವ ನಷ್ಟವನ್ನು ಅವರಿಂದ ವಸೂಲು ಮಾಡಬೇಕೆಂದು ಹೇಳಿ ಈ ಡಿಮ್ಯಾಂಡನ್ನು ಸಮರ್ಥನೆ ಮಾಡುತ್ತೇನೆ.

*ಶ್ರೀ ಎ. ಭೀಮಪ್ಪನಾಯಕ್ (ಮೊಳಕಾಲ್ಮುರು).—ಆಹಾರದ ಇಲಾಖೆಯನ್ನು ಇನ್ನೂ ಉಳಿಸಿಕೊಂಡು ಹೋಗುವುದನ್ನು ನಾನು ಒಪ್ಪುವುದಿಲ್ಲ. ಈ ಇಲಾಖೆಯಲ್ಲಿ ಈಗ ಲೆಕ್ಕ ತನಿಖೆ ಮಾಡುವ ಕೆಲಸವೊಂದು ಉಳಿದಿದೆಯೇ ಹೊರತು ಈ ಇಲಾಖೆಯ ಅಗತ್ಯ ಉಳಿದಿಲ್ಲ. ಆದುದರಿಂದ ಲೆಕ್ಕಗಳನ್ನು ತನಿಖೆ ಮಾಡುವ ಕೆಲಸವನ್ನು ಆಡಿಟ್ ಇಲಾಖೆಗೆ ವಹಿಸಲಿ. ಈ ಇಲಾಖೆಗೆ ಸಂಬಂಧಿಸಿದ ಕಾರ್ಯಗಳೇನಾದರೂ ಇದ್ದಲ್ಲಿ ಜಿಲ್ಲಾಧಿಕಾರಿಗಳು ಸಬ್‌ಡಿವಿಜನ್ ಅಧಿಕಾರಿಗಳು ಮತ್ತು ಅಮಲ್ದಾರರುಗಳು ಇವರಿಗೆಲ್ಲ ಹಂಚಿ ಈ ಆಹಾರ ಇಲಾಖೆಯನ್ನು ಸಂಪೂರ್ಣವಾಗಿ ಮುಚ್ಚುವುದು ಒಳ್ಳೆಯದು. ಲೆಕ್ಕ ಕೊಡಬೇಕು' ಎನ್ನುವುದರಲ್ಲಿ ಎರಡು ಭಾಗವಿದೆ. ಕೆಲವರನ್ನು ಹೊಸದಾಗಿ ಈ ಇಲಾಖೆಗೆ ನೇಮಿಸಿಕೊಂಡರು. ಅವರನ್ನೆಲ್ಲ ಈಗ ಕೆಲಸದಿಂದ ತೆಗೆದುಹಾಕಿದ್ದಾರೆ. ಅಂಥವರುಗಳಿಂದ ಹಣ ವಸೂಲಾಗಬೇಕಾಗಿದೆ ಎಂದು ಹೇಳಿದ್ದಾರೆ. ಆದರೆ ಅವರನ್ನೆಲ್ಲ ಯಾವಾಗ ಕೆಲಸದಿಂದ ಹೊಡೆದೋಡಿಸಿದರೋ, ಆಗ ಅವರೆಲ್ಲ 'ತಾವು ಏನು ತಿಂದುಹಾಕಿದ್ದೇವೆಯೋ ಅಷ್ಟೇ ಆಯಿತು' ಎಂದು ಹೊರಟುಹೋಗಿದ್ದಾರೆಯೇ ಹೊರತು ಅವರಿಂದ recover ಆಗುತ್ತದೆಂದು ನನಗೆ ನಂಬಿಕೆ ಇಲ್ಲ. ಅವರಿಂದ ಹಣ ಬರುತ್ತದೆ ಎಂದು ಲೆಕ್ಕದಲ್ಲಿ ತೋರಿಸುವುದಕ್ಕಿಂತ ಇನ್ನೇನೂ ಬರುವುದಿಲ್ಲವೆಂದು ಹೇಳುವುದು ಒಳ್ಳೆಯದು ಎಂದು ಭಾವಿಸುತ್ತೇನೆ. ಇನ್ನೊಂದು ವಿಷಯವೆಂದರೆ, ಸರ್ಕಾರಿ ನೌಕರರನ್ನು ಬೇರೆ ಬೇರೆ ಇಲಾಖೆಗಳಿಂದ ಈ ಆಹಾರ ಇಲಾಖೆಗೆ depute ಮಾಡಿಕೊಂಡು ಅವರಿಂದ ಕೆಲಸ ಕಾರ್ಯಗಳನ್ನು ನಡೆಸುತ್ತಿದ್ದರು. ಅದರಲ್ಲಿ ಕೆಲವರು ನಿಜವಾಗಿ ನ್ಯಾಯಾನ್ಯಾಯಗಳನ್ನು ನೋಡಿಕೊಂಡು ವರ್ತಿಸುತ್ತಿದ್ದರು. ಅನೇಕ ಸಂದರ್ಭಗಳಲ್ಲಿ ಇಂಥವರು ದಕ್ಷತೆಯಿಂದಲೂ ಮತ್ತು ನ್ಯಾಯದಿಂದಲೂ ಕೆಲಸ ಮಾಡುತ್ತಿದ್ದರು. ಆದರೆ ಹೆಗ್ಗಣಗಳು ಕೆಲವು ಇದ್ದುವು. ಅವು ಬಹಳಮಟ್ಟಿಗೆ ಮಾಗಿಸಿವೆ. ರೈಲ್ವೆ ಸ್ಟೇಷನ್‌ನಲ್ಲಿ ಹೆಗ್ಗಣಗಳು, ಗೋಡೌನಿನಲ್ಲಿ ಹೆಗ್ಗಣಗಳು ಮತ್ತು ಅಧಿಕಾರಿಗಳೂ ಸಹ ಹೆಗ್ಗಣಗಳಾಗಿ ಪರಿಣಮಿಸಿದ್ದರು. ಅಕ್ಕಿಯ ಕೊರತೆ ಇದ್ದು, ಅಕ್ಕಿ ಸಿಕ್ಕದೆ ಇದ್ದಾಗ ಆಹಾರ ಇಲಾಖೆಯಲ್ಲಿ ಹೋಗಿ ಕೆಲವರು ಸೇರಿಕೊಂಡರು. ಅವರಲ್ಲಿ ಕೆಲವರು ಸಾಹೇಬರಿಗೆ ಎಂದು ಐವತ್ತು ಸೇರು ಅಕ್ಕಿ ಕಳುಹಿಸಿಕೊಟ್ಟು ಅದರ ಪ್ರತಿಫಲವನ್ನು ತಾವೇ ಅನುಭವಿಸಿದವರೂ ಇದ್ದಾರೆ. ಕೆಲವು ಕಡೆ ಅನೇಕರು ತಿಂದೂ ಇದ್ದಾರೆ. ಯಾಕೆಂದರೆ ಆ ಕಾಲ ಹಾಗಿತ್ತು. ಈ ರೀತಿ ತಿಂದು ಹಾಕಿರುವವರಿಂದ ಏನಾದರೂ ಬರುತ್ತದೆಯೇ? ಬರುವ ಹಾಗಿದ್ದರೆ ಎಷ್ಟು ಬರುತ್ತದೆ? ಎಂದು ನೋಡಬೇಕು. ಹಾಗೆ ಮಾಡದೆ ಈ ಇಲಾಖೆಯನ್ನು ಮುಂದುವರಿಸಿಕೊಂಡು ಹೋದರೆ ಈಗ ಆಗಿರತಕ್ಕ ಲುಕ್ಸಾನು ಜೊತೆಗೆ ಇನ್ನೂ ಸ್ವಲ್ಪ ಲುಕ್ಸಾನು ಮಾಡದಹಾಗಾಗುತ್ತದೆಯೇ ಹೊರತು ಬಾಕಿ ಇರುವುದನ್ನು ವಸೂಲ್ಮಾಡಿಕೊಳ್ಳುತ್ತೇವೆ ಎಂದರೆ ಅದು ಆಗದ ವಿಷಯವೆಂದು ನನ್ನ ಭಾವನೆ. Recover ಮಾಡುವುದರಲ್ಲಿ ಎಷ್ಟು ಸಾಧ್ಯವೋ ಅಷ್ಟನ್ನೂ recover ಮಾಡುವುದಕ್ಕೆ ಆಡಿಟ್ ಇಲಾಖೆಗೇ ವಹಿಸಿ ಅಥವಾ ಬೇರೆ ಇಲಾಖೆಗೆ ವಹಿಸಿ. ಆ ರೀತಿ ಮಾಡದೆ ಈ ಇಲಾಖೆಯನ್ನು ಯಾಕೆ ಉಳಿಸಿಕೊಂಡು ಹೋಗಬೇಕು ? ಆದುದರಿಂದ ಈ ಇಲಾಖೆಯನ್ನು ತಕ್ಷಣ ನಿಲ್ಲಿಸಬೇಕು. 1956ನೇ ಏಪ್ರಿಲ್ ಒಂದನೇ ತಾರೀಖಿನಿಂದಲಾದರೂ ನಿಲ್ಲಿಸಿದರೆ ಒಂದು ವಿಧದಲ್ಲಿ ದೇಶಕ್ಕೆ ಉಳಿತಾಯವಾಗುತ್ತದೆ. ಇಲಾಖೆಗೆ ಬರಬೇಕಾಗಿರುವ ಹಣದಲ್ಲಿ ವಸೂಲ್ಮಾಡಬಹುದಾದದಷ್ಟು ವಸೂಲ್ಮಾಡಲು ಸಾಧ್ಯವಿಲ್ಲದ್ದೆಷ್ಟು ಎಂಬುದನ್ನು ತಿಳಿಯಲು ಬೇಕಾದರೆ ಅಧಿಕಾರಿಗಳನ್ನೊಳಗೊಂಡ ಒಂದು ಸಮಿತಿಯನ್ನು ಮಾಡಿ ಅವರ ಸಲಹೆಗಳನ್ನು ಮುಂದಿನ ವರ್ಷ ಈ ಸಭೆಯ ಮುಂದೆ ಇಡಿ. ಹೀಗೆ ಮಾಡಿ ಖರ್ಚುವೆಚ್ಚಗಳನ್ನು ಕಡಿಮೆ ಮಾಡಿದರೆ ದೇಶಕ್ಕೆ ಉಪಕಾರವಾಗುತ್ತದೆಂದು ನನ್ನ ಭಾವನೆ.

ಶ್ರೀ. ಎಸ್. ಸಿದ್ದಪ್ಪ (ಮಾಗಡಿ).—ಸ್ವಾಮಿ, ಶ್ರೀಮಾನ್ ಭೀಮಪ್ಪನಾಯಕರು ಮಾತನಾಡುತ್ತ ಆಹಾರ ಇಲಾಖೆಯನ್ನು ಮುಂದುವರಿಸುವುದರಿಂದ ಪ್ರಯೋಜನವಿಲ್ಲ ಸರ್ಕಾರಕ್ಕೆ ಬಹಳ ನಷ್ಟವಾಗುತ್ತದೆಂದು ಅಪ್ಪಣೆ ಕೊಡಿಸಿದರು. ನಾನು ಕೂಡ ಅದನ್ನು ಸಮರ್ಥನೆ ಮಾಡುತ್ತ ಕೆಲವು ವಿಷಯಗಳನ್ನು ಹೇಳುವುದಕ್ಕೆ ಪ್ರಯತ್ನಪಡುತ್ತೇನೆ. ಆಹಾರದ ಇಲಾಖೆ

ಯಲ್ಲಿ 1945ನೆ ಇಸವಿಯಿಂದ 1955ನೆ ಇಸವಿಯವರೆಗೂ ಅಧಿಕಾರಿಗಳು ಏನೇನು ಕೆಲಸ ಕಾರ್ಯಗಳನ್ನು ಮಾಡಿದ್ದಾರೆ, ಯಾರ ಯಾರ ಕಾಲದಲ್ಲಿ ಏನೇನು ಅನ್ಯಾಯಗಳು ನಡೆದಿವೆ ಇದನ್ನೆಲ್ಲ ಸರ್ಕಾರದವರು ಕಂಡುಹಿಡಿದು ಅಂಥವರುಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಂಡರೆ ಒಂದು ಭದ್ರತೆ ಇರುತ್ತದೆ. ಸರ್ಕಾರದವರು ತಿಳಿದೂ ತಿಳಿಯದವರಂತೆ ಕೈಬಿಟ್ಟರೆ ಇಂಥ ಅನ್ಯಾಯಗಳು ಪ್ರತಿಯೊಂದು ಸಂದರ್ಭದಲ್ಲಿಯೂ ನಡೆಯುವುದಕ್ಕೆ ಅವಕಾಶವಾಗುತ್ತದೆ. ಮೈಸೂರು ಸಂಸ್ಥಾನದಲ್ಲಿರತಕ್ಕ ಎಲ್ಲ ಜಿಲ್ಲೆಗಳಲ್ಲಿಯೂ ಆಹಾರದ ಇಲಾಖೆ ಇದೆ. ಇದರ ವಿಚಾರದಲ್ಲಿ ನನಗೆ ತಿಳಿದ ಮಟ್ಟಿಗೆ, ಸರ್ಕಾರದವರು ತೊಂದರೆ ಮಾಡಿದ್ದಾರೆಂದು ಭಾವಿಸುತ್ತೇನೆ. ಸಂಸ್ಥಾನದಲ್ಲಿ ಉತ್ಪತ್ತಿಯಾಗಿರತಕ್ಕ ಆಹಾರ ಪದಾರ್ಥಗಳಲ್ಲಿ ಬಹುಮಟ್ಟಿಗೆ ಸಂಸ್ಥಾನದಿಂದ ಹೊರಗಡೆ ಹೋಯಿತು. ಭತ್ತ ಮತ್ತು ರಾಗಿ ಧಾರಣೆ ಕಳೆದ ವರ್ಷಕ್ಕಿಂತ ಜಾಸ್ತಿಯಾಗುತ್ತಿದೆ. ರಾಗಿ ಮತ್ತು ಭತ್ತ ನಮ್ಮ ಸಂಸ್ಥಾನಕ್ಕೆ ಆಗಬೇಕಾದಷ್ಟನ್ನೂ ನಮ್ಮಲ್ಲಿ ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕಾಗಿತ್ತು. ಯಾವಕಾರಣದಿಂದಲೋ ಆದರ ಕಡೆ ಹೆಚ್ಚಾಗಿ ಗಮನಕೊಡಲಿಲ್ಲವೆಂದು ಭಾವಿಸುತ್ತೇನೆ. ಆದುದರಿಂದ ಪ್ರತಿನಿತ್ಯ ಬೇಕಾಗುವ ಆಹಾರದ ಬೆಲೆ ಜಾಸ್ತಿಯಾಗಿ ಜನರಿಗೆ ಬಹಳ ತೊಂದರೆಯಾಗಿದೆ. ಹೊಸ ಬೆಳೆಗಳು ಬರಬೇಕಾದರೆ ಇನ್ನೂ ಒಂಭತ್ತು ತಿಂಗಳಾಗಬೇಕು. ಇಂಥದರಲ್ಲಿ ಈಗಾಗಲೇ ರಾಗಿ ಬೆಲೆ 22-23ರೂಪಾಯಿಗಳಿದೆ ಮತ್ತು ಭತ್ತದ ಧಾರಣೆ 25-26ರೂಪಾಯಿಗಳಾಗಿದೆ. ಆದುಗರಿಂದ ನಮ್ಮ ಸಂಸ್ಥಾನದಲ್ಲಿ ಉತ್ಪತ್ತಿಯಾದ ಆಹಾರ ಪದಾರ್ಥಗಳು ಹೊರಗಡೆಗೆ ಹೋಗುವುದಕ್ಕೆ ಅವಕಾಶ ಕೊಡಬಾರದಾಗಿತ್ತು ಎಂದು ಹೇಳುತ್ತೇನೆ. ಸರ್ಕಾರದವರು ಈಗಲಾದರೂ ಮೈಸೂರು ಸಂಸ್ಥಾನಕ್ಕೆ ಆಗುವಷ್ಟು ಆಹಾರ ಧಾನ್ಯವನ್ನು ಭದ್ರತೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ನಮ್ಮ ಸಂಸ್ಥಾನವು ಇನ್ನೂ ವಿಶಾಲವಾಗುವ ಸನ್ನಿವೇಶ ವಿರುವುದರಿಂದ ಸುಮಾರು ಎರಡೂವರೆ ಕೋಟಿ ಪ್ರಜಾಸಂಖ್ಯೆಗೆ ಆಹಾರ ಧಾನ್ಯಗಳನ್ನು ಒದಗಿಸತಕ್ಕ ಜವಾಬ್ದಾರಿ ನಮ್ಮ ಸರ್ಕಾರದ ಮೇಲೆ ಇದೆ. ಅದಕ್ಕಾಗಿ ಸರ್ಕಾರದವರು ಆಹಾರ ಧಾನ್ಯಗಳನ್ನು ಸ್ವಲ್ಪ ವ್ಯವಸ್ಥಿತ ರೀತಿಯಲ್ಲಿ ಸಂಸ್ಥಾನಕ್ಕಾಗುವಷ್ಟನ್ನು ಮೀಸಲಾಗಿಡುವುದಕ್ಕೆ ಪ್ರಯತ್ನ ಮಾಡಬೇಕು.

ಕಂಟ್ರೋಲು ಜಾರಿಯಲ್ಲಿದ್ದ ಕಾಲದಲ್ಲಿ ಆಹಾರದ ಹಂಚಿಕೆ ವ್ಯವಸ್ಥೆಗೋಸ್ಕರ ಡಿಪೋಗಳನ್ನು ಮಾಡಿದ್ದರು. ಆ ಡಿಪೋಗಳಲ್ಲಿ ನಡೆದಿರತಕ್ಕ ಅನ್ಯಾಯ ಮತ್ತು ಅಕ್ರಮಗಳನ್ನು ಚೆನ್ನಾಗಿ ಪರಿಶೀಲನೆ ಮಾಡಿ, ಯಾರು ಯಾರು ಈರೀತಿ ಮಾಡಿದ್ದಾರೆಯೋ ಅವರುಗಳ ಮೇಲೆ, ಖಾಸಗಿಯವರಾಗಲಿ ಅಧಿಕಾರ ವರ್ಗದವರಾಗಲಿ, ಅವರ ಮೇಲೆ ಸೂಕ್ತ ಕ್ರಮಗಳನ್ನು ಕೈಗೊಂಡು ಸರ್ಕಾರದಲ್ಲಿ ಭದ್ರತೆ ನೆಲಸುವಂತೆ ಮಾಡಬೇಕು ಎಂದು ಈ ಡಿಮ್ಯಾಂಡನ್ನು ಸಮರ್ಥನೆ ಮಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಎಚ್. ಎಂ. ಚನ್ನಬಸಪ್ಪ (ಕೈಗಾರಿಕಾ ಶಾಖೆಯ ಮಂತ್ರಿಗಳು).—ಸ್ವಾಮಿ, ಕಂಟ್ರೋಲು ಜಾರಿಯಲ್ಲಿದ್ದ ಕಾಲದ ಆಹಾರ ಇಲಾಖೆಯ ಲೆಕ್ಕ ಪತ್ರಗಳ ವಿಷಯವನ್ನು ಈಗ ಪ್ರಸ್ತಾಪ ಮಾಡುತ್ತ ಶ್ರೀಮಾನ್ ಭೀಮಪ್ಪನಾಯಕರು ಆದಷ್ಟು ಬೇಗ ಇಲಾಖೆಯನ್ನು ಮುಚ್ಚಿಬಿಡಿ ಎಂದು ಸಲಹೆ ಮಾಡಿದ್ದಾರೆ. ಅದಕ್ಕಿಂತ ಉತ್ತಮವಾದ ಸಲಹೆಯನ್ನು ನಾನು ಮಾಡುವುದಕ್ಕೆ ಶಕ್ತನಾಗಿಲ್ಲ. ಆದಷ್ಟು ಬೇಗ ಈ ಇಲಾಖೆಯನ್ನು ಮುಚ್ಚಿಬಿಡಬೇಕೆನ್ನುವುದು ವಾಸ್ತವವಾಗಿಯೂ ನಿಜ. ಸುಮಾರು 12ವರ್ಷಗಳ ಕಾಲದ ಕಂಟ್ರೋಲ್ ಲೆಕ್ಕ ಪತ್ರಗಳಿಂದ ನಮಗೆ ಸುಮಾರು 11,15,00,000 ರೂಪಾಯಿಗಳ ನಷ್ಟವಾಗಿದೆ. ಅಂದಮೇಲೆ ಇನ್ನೂ ವ್ಯವಹಾರಗಳು ಎಷ್ಟು ನಡೆದಿರಬೇಕು ಎಂಬುದನ್ನು ತಾವೇ ಯೋಚನೆ ಮಾಡಬೇಕು. ಇದರಲ್ಲಿ 2,28,00,000 ರೂಪಾಯಿಗಳನ್ನು ಭಾರತ ಸರ್ಕಾರದವರು ಕೊಟ್ಟರೆ ಉಳಿಕೆಯಾದ 8,87,00,000 ರೂಪಾಯಿಗಳು ಮೈಸೂರು ಸಂಸ್ಥಾನಕ್ಕೆ ಅನ್ವಯಿಸುವ ನಷ್ಟವಾಗಿದೆ. ಆದುದರಿಂದ ಬಹಳ ಭಾರಿ ಪ್ರಮಾಣದಲ್ಲಿ ಈ ವ್ಯವಹಾರಗಳು ನಡೆದಿವೆ. ಅದು ಯಾವರೀತಿ ನಡೆಯಿತೆಂದರೆ ಈಗ ಯಾವರೀತಿ ಪರಿಶೀಲನೆ ಮಾಡಿ ಕೆಲಸ ಕಾರ್ಯಗಳು ನಡೆಯುತ್ತವೆಯೋ ಆರೀತಿ ನಡೆಯುತ್ತಿರಲಿಲ್ಲ. ಆಹಾರ ದವಸಗಳನ್ನು ಜನಗಳಿಗೆ ಒದಗಿಸಿ ಅವರ ಪ್ರಾಣಗಳನ್ನು ಕಾಪಾಡಬೇಕು ಎಂಬ ಒಂದೇ ಒಂದು ತತ್ವದ ಮೇಲೆ ನಡೆಯುತ್ತಿತ್ತು. ಆಗ ಇಟ್ಟಿದ್ದ ಲೆಕ್ಕ ಪತ್ರಗಳೆಲ್ಲವನ್ನು ಪರಿಶೋಧನೆ ಮಾಡಿ ಯಾವುದ ಸರಿ, ಯಾವುದು ಸರಿಯಲ್ಲ, ಎಂಬುದನ್ನು ನಿರ್ಧರಿಸಿ the matter of setting right. ಕಾರ್ಯ ಮಾತ್ರ ಈಗ ಉಳಿದಿದೆ. ನನಗೆ ಈಗ ತಿಳಿದಿರುವಂತೆ 1-2-1956ರಲ್ಲಿ ಇನ್ನು audit objection ನಲ್ಲಿರತಕ್ಕದ್ದು 98,88,881 ರೂಪಾಯಿಗಳು. ಈಗ ತಾವುಗಳು ಯಾರು ಯಾರು ಇದಕ್ಕೆ ಜವಾಬ್ದಾರರೆಂದು ಪತ್ತೆ ಹಚ್ಚಿ ಅವರಿಗೆ ಶಿಕ್ಷೆಮಾಡಬೇಕೆಂದು ಹೇಳಿದಿರಿ. ಅದನ್ನು ಆವಾಗಲೇ ಮಾಡಿದೆ. ಎಷ್ಟೋ ಜನರ ಮೇಲೆ ಕಾರ್ಯಕ್ರಮಗಳನ್ನು ತೆಗೆದುಕೊಂಡು ರುಜುವಾತಾಗಿರತಕ್ಕ ಕೇಸುಗಳನ್ನು ಕಳುಹಿಸಿದ್ದಾರೆ. ಅದರ ಮೇಲೆ ಸರ್ಕಾರದವರು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಈಗ ಸರ್ಕಾರದವರ ಮುಂದೆ ಕೆಲವರ ಬಗ್ಗೆ ಕ್ರಮ ತೆಗೆದುಕೊಳ್ಳತಕ್ಕ ಕೇಸುಗಳಿದ್ದು ಅವು ಪಬ್ಲಿಕ್ ಸರ್ವಿಸ್ ಕಮಿಷನ್‌ಗೆ ಹೋಗಿ ಅಲ್ಲಿ pending ನಲ್ಲಿವೆ. ಅವುಗಳ ಬಗ್ಗೆಕೂಡ ಕಾರ್ಯಕ್ರಮ ತೆಗೆದು ಕೊಳ್ಳುತ್ತೇವೆ. ಆದರೆ audit objection ಗಳಿಗೆ ಸರಿಯಾಗಿ ಉತ್ತರ ಕೊಟ್ಟು ಲೆಕ್ಕ ಪತ್ರಗಳನ್ನು ಸರಿಪಡಿಸತಕ್ಕ ಕೆಲಸ ಮಾತ್ರವೇ ಉಳಿದಿರತಕ್ಕದ್ದು.

4-30 P.M.

ಈ ಲೆಕ್ಕ ಪತ್ರಗಳನ್ನು ಸರಿಪಡಿಸದೆ ಈ ಇಲಾಖೆಯನ್ನು ತೆಗೆಯುವುದಕ್ಕಾಗುವುದಿಲ್ಲ. ಲೆಕ್ಕ ಪತ್ರ ಸರಿಪಡಿಸುವುದಕ್ಕೆ ಬೇಕಾಗುವಷ್ಟು ಸಿಬ್ಬಂದಿಯನ್ನಾದರೂ ಇಟ್ಟಿರಬೇಕು. ಅವರು ಯಾವ ಹೆಡ್ಡಿಗೆ ಛಾರ್ಜ್ ಆಗಬೇಕೆಂಬುದನ್ನು ನೋಡಿ ಪೂರ್ಣವಾಗಿ ಲೆಕ್ಕ ಪತ್ರ ಸರಿಪಡಿಸಿದ ಮೇಲೆ ಈ ಇಲಾಖೆಯನ್ನು ತೆಗೆಯಬೇಕಾಗುತ್ತದೆ. ಅನಾವಶ್ಯಕವಾಗಿ ಈ ಬಗ್ಗೆ ಹಣವನ್ನು ಖರ್ಚು ಮಾಡಬೇಕೆಂಬ ಆಶೆಯಿಲ್ಲ. ಅದರಲ್ಲೂ ವೈಯಕ್ತಿಕವಾಗಿ ನಾನು ಈ ಸಭೆಯಲ್ಲಿ ಎಷ್ಟೋಸಲ ಆಹಾರ ಇಲಾಖೆ ಲೆಕ್ಕ ಪತ್ರ ಆದಷ್ಟು ಬೇಗ ಸರಿಪಡಿಸಬೇಕು. ಫುಡ್ ಕಂಟ್ರೋಲ್ ಹೋಗಬೇಕು ಎಂದು ಪ್ರತಿಪಾದನೆ ಮಾಡಿದ್ದೇನೆ.

ಶ್ರೀ ಯು. ಎಂ. ಮಾದಪ್ಪ.—ಎಲ್ಲಾ ಜಿಲ್ಲೆಗಳ ಲೆಕ್ಕವನ್ನೂ ಕ್ರೋಡೀಕರಿಸಿ ಒಂದು ಕಡೆ ಸರಿಪಡಿಸುವುದಕ್ಕೆ ಸಾಧ್ಯವಿಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಾಗಾಗಬೇಕೆಂದು ಹೇಳುವುದಕ್ಕೆ ನಾವು ಆಶೆಪಡುತ್ತೇವೆ. ಈ ಇಲಾಖೆಯನ್ನು ತೆಗೆಯಬೇಕು, ಲೆಕ್ಕ ಪತ್ರ ಸರಿಪಡಿಸಬೇಕು, ಮುಂದೆ ಇದು ಇರಬಾರದು ಎಂದು ಹೇಳುವುದನ್ನು ಒಪ್ಪುತ್ತೇವೆ. ಈ ವಿಷಯದಲ್ಲಿ ನನಗೂ ತಮಗೂ ಭಿನ್ನಾಭಿಪ್ರಾಯವಿಲ್ಲ. ಆದರೆ ಈ ಕಾರ್ಯಕ್ರಮ ಹೇಗೆ ಮಾಡಬೇಕೆಂಬುದನ್ನು ಪರಿಣತರನ್ನು ಕೇಳಿ ಅವರು ಸೂಚಿಸುವುದಕ್ಕೆ ಅನುಗುಣವಾಗಿ ವ್ಯವಸ್ಥೆಮಾಡಬೇಕು. ಅನಿವಾರ್ಯವಾಗಿ ಎಷ್ಟು ಬೇಕೋ ಅಷ್ಟು ಮಾತ್ರ ಖರ್ಚುಮಾಡುತ್ತೇವೆಯೇ ವಿನಾ ಅದಕ್ಕಿಂತ ಒಂದು ಕಾಸು ಕೂಡ ಹೆಚ್ಚಾಗಿ ಖರ್ಚುಮಾಡುವುದಿಲ್ಲ.

Sri K. PATTABHIRAMAN (Kolar).—I want one information from the Hon'ble Minister. Is it not true that even from the taluk level you are maintaining a staff and is it really necessary that from the taluk level onwards you must maintain the entire staff to answer, perhaps, one audit objection in thirty days ?

Sri H. M. CHANNABASAPPA.—I quite appreciate the spirit in which the suggestion has been made. Offhand I cannot tell the Hon'ble member as to how many officers have been appointed in District Headquarters, in Taluk Headquarters and at the State level. But, I am one with him to see that the staff is minimised and I assure that only such staff as is absolutely necessary will be appointed and to see that this Head is wiped off from the Budget. With these remarks, I request the House to kindly approve this Demand.

Mr. DEPUTY SPEAKER.—The question is :

"That a sum not exceeding Rs. 64,75,100 be granted to the Government to defray the charges which will come in course of payment during the year ending 31st day of March 1957, in respect of 'Capital Outlay on State Schemes of Government Trading'."

The motion was adopted.

Mr. DEPUTY SPEAKER.—the House will now adjourn and meet tomorrow at 12 o'clock.

The House adjourned at Thirty-two Minutes past Four of the Clock to meet at Twelve of the Clock on Thursday, 29th March 1956.

WD 2896—GPB—550—19-7-56

KSA LIBRARY, B'lore
B004725
328.32402 548 LAD,1956
JJ32